




ವಿಶ್ವಪ್ರಭೆ



ಶ್ರೀ ಜಗದ್ಗುರು ಮು



ವಿರಮಠ, ಹುಬ್ಬಳ್ಳಿ



ಶ್ರೀ ಜಗದ್ಗುರು ಮೂರುಸಾವಿರಮಠ ಗ್ರಂಥಮಾಲೆ ೩೧೯

ವಿಶ್ವಪ್ರಭೆ

ಶ್ರೀ ಜಗದ್ಗುರು ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳ
ಮಹಾಭಿನಂದನ ಗ್ರಂಥ

ಸಂಪುಟ-೨; ಭಾಗ-೧

ಸಂಪಾದಕರು:

ಪ್ರೊ. ಜಿ. ಎಚ್. ಹನ್ನೆರಡುಮಠ

ಪ್ರಕಾಶಕರು:

ಶ್ರೀ ಜಗದ್ಗುರು ಗಂಗಾಧರ ಧರ್ಮಪ್ರಚಾರಕ ಮಂಡಳಿ
ಮೂರುಸಾವಿರಮಠ ಹುಬ್ಬಳ್ಳಿ

VISHVAPRABHE:

an Anthology of Miscellaneous Writings of SHREE MOOJAGAM; (one of the anthologies in MOOJAGAM MAHABHINANDANA SAMPUTA-Vol. II Part I) Edited by Prof. G. H. Hanneradumath, Published by Shri Jagadguru Gangadhara Dharma-pracharaka Mandali Moorusaviramath Hubli-20.

Pages : 8 + 1056

Printed at:

Twaritha Mudranalaya, Near Kumbaragaradi, Gangapurpeth Gadag

ಬೆಲೆ: ೫೦೦-೦೦

(ಭಾಗ ೧-೨ ಸೇರಿ; ಎರಡೂ ಕೆಲಿಕೊ ಬೈಂಡ್)

1991

ಮುದ್ರಣ:

ಕುಂಬಾರಗರಡಿ ಹತ್ತಿರ, ಗಂಗಾಪೂರ ಓಣಿ,
ತ್ವರಿತ ಮುದ್ರಣಾಲಯ ಗದಗ-582 101

ಮುದ್ರಣದ ಅವಧಿ
ಎರಡು ತಿಂಗಳು

ಸಂಪಾದನೆ

"ಚಿತ್ಪ್ರಭೆ"ಯಿಂದ "ವಿಶ್ವಪ್ರಭೆ"ಯವರೆಗೆ ಪೂಜ್ಯ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳವರ ಸಾಹಸ-ಸಾಧನೆ-ಸಂಪಾದನೆಗಳ ಯಾತ್ರೆ ಒಂದು ಅದ್ಭುತ ನಿದರ್ಶನ. ಒಂದು ವ್ಯಕ್ತಿ ಸಂಪುಟದಲ್ಲಿ ಬೃಹತ್ ಬದುಕಿನ ವಿಹಂಗಮಾವಲೋಕನದ ವ್ಯಾಪ್ತಿ-ದೀಪ್ತಿಗಳು ತುಂಬಿರುವದು ಪ್ರತ್ಯಕ್ಷ ಪವಾಡ! ನೂರು ವ್ಯಕ್ತಿಗಳು ಮಾಡಲಾರದ ಸಹಸ್ರಮುಖಿ ಕಾರ್ಯರಂಗದ ಈ ಕಾಯಕತೋರಣ ಓರಣಗೊಂಡಿರುವದು ಇಲ್ಲಿ....ಈ "ಮೂಜಗಂ" ಮಹಾವ್ಯಕ್ತಿತ್ವದಲ್ಲಿ!!

"ವಿಶ್ವಪ್ರಭೆ" ಕನ್ನಡ ಸಾಹಿತ್ಯದ ಸಂಪಾದನೆಯ ಗ್ರಂಥಗಳಲ್ಲಿ ತನ್ನತನದ ವಿಶಿಷ್ಟವಾದ ಪದರು-ಪಡಸಾಲೆಗಳನ್ನು ಪಡೆದಿದ್ದು; ಒಟ್ಟು ಮೂರು ಬೃಹತ್ ಸಂಪುಟಗಳಲ್ಲಿ; ಅಂದಾಜು ೩೫೦೦ ಪುಟಗಳಲ್ಲಿ ಇದರ ನಿರ್ಮಾಣ ಪೂರ್ಣಗೊಳ್ಳಲಿದೆ. ಈ ಮೂರು ಸಂಪುಟಗಳಲ್ಲಿ ಪೂಜ್ಯ ಜಗದ್ಗುರುಗಳ ಸಮಗ್ರ ಸಾಹಿತ್ಯ ಕೃತಿಗಳನ್ನು ಇದೀಗ ಒಂದೆಡೆಗೆ ದೊರೆಯುವಂತೆ ಸಂಯೋಜಿಸಿದ್ದು, ತಮ್ಮ ಕೈಗೆ ನೀಡಲು ಸಂತಸವಾಗುತ್ತಿದೆ. ತ್ವರಿತ ಮುದ್ರಣಾಲಯದ ಶ್ರೀ ಫ. ಶಿ. ಭಾಂಡಗೆಯವರ ಮುನ್ನೆಚ್ಚರಿಕೆಯ ನೆರವು ಇಲ್ಲದಿದ್ದರೆ ಇಷ್ಟೊಂದು ಬೃಹತ್ ಗ್ರಂಥವನ್ನು ಅಲ್ಪಕಾಲದಲ್ಲಿ ಅಚ್ಚು ಹಾಕಿ ನಿಮ್ಮ ಕೈಗೆ ಕೊಡಲು ಅಸಾಧ್ಯವಾಗಿತ್ತು. ಶ್ರೀ ಫ. ಶಿ. ಭಾಂಡಗೆಯವರು ಈ ಮೂರು ಸಂಪುಟಗಳ ಕರಾರುವಾಕ್ಕಾದ, ಅಚ್ಚುಕಟ್ಟಾದ ಮುದ್ರಣಕ್ಕಾಗಿ ತಮ್ಮ ಏನೆಲ್ಲ ಶಕ್ತಿ-ಯುಕ್ತಿಗಳನ್ನು ಸಮರ್ಪಿಸಿದ್ದಾರೆ. ನಮ್ಮೊಂದಿಗೆ ಅವರು ಹೆಗಲಿಗೆ ಹೆಗಲು ಕೊಟ್ಟು ಗ್ರಂಥದ ಮಹಾಸೃಷ್ಟಿಗೆ ದುಡಿದಿದ್ದಾರೆ.

ಪೂಜ್ಯ ಜಗದ್ಗುರು ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳು ಹುಟ್ಟು ಕವಿಗಳು ಹಾಗೂ ಚಿಂತನಶೀಲರು. ಅವರ ಎಡೆಬಿಡದ ಕಾರ್ಯರಂಗದ ಮಧ್ಯದಲ್ಲೂ ಸಿಡಿದು ಬಂದಿರುವ ಅಂದಾಜು ೩೦ ಗ್ರಂಥಗಳಲ್ಲಿ ಕೆಲವು ಕಾಲಕೋಶದಲ್ಲಿ ಕಳೆದು ಹೋಗಿವೆ. ನಮಗೆ ಲಭ್ಯವಾದ ೨೪ ಗ್ರಂಥಗಳನ್ನು ಇಲ್ಲಿ ನಿಮ್ಮ ಕೈಗೆ ಕೊಡುತ್ತಿದ್ದೇವೆ. ಗದ್ಯ-ಪದ್ಯ-ಉಪನ್ಯಾಸ-ಉಪದೇಶ-ಆಶೀರ್ವಾಣಿಗಳ ಮೂಲಕ ತನ್ನ ಪಾತಳಿಯನ್ನು ಕಂಡುಕೊಂಡ ಜಗದ್ಗುರುಗಳ ಸಾಹಿತ್ಯ ಅವರ ತೀರ ಇತ್ತೀಚಿನ "ಪೂರ್ಣಜ್ಞ

ವಚನಗಳ" ಮೂಲಕವಾಗಿ ಹೊಸ ತಿರುವು–ಹೊಸ ಗಡುವು ಪಡೆದಿದೆ. ಈ ಕೃತಿಗಳಲ್ಲಿ ಮೂರುಸಾವಿರಕ್ಕೂ ಅಧಿಕವಾದ ಅವರ ಪೂರ್ಣಜ್ಞ ವಚನ ಗಳನ್ನು ಅಡಕಗೊಳಿಸಿರುವದು ನಮ್ಮ ಒಂದು ಸಾಹಸವೇ ಎಂದು ಹೇಳ ಬಹುದು. ಯಾಕೆಂದರೆ ಪೂರ್ಣಜ್ಞ ವಚನಗಳೆ ಶ್ರೀ ಮೂಜಗಂ ಅವರ ಸಾಹಿತ್ಯ ಸಮಾರಾಧನೆಯ ವಿಶೇಷ ಹಬ್ಬದೂಟವಾಗಿದ್ದು ಅವನ್ನು ಕೈ ಬಿಟ್ಟರೆ ಮೂಲ ಜೀವಾಳವನ್ನೇ ಕೈಬಿಟ್ಟಂತೆ ಎಂಬ ವಿಚಾರ ನಮ್ಮದಾಗಿತ್ತು. ಈ ದಿಶೆಯಲ್ಲಿ ನಾವು ಮುನ್ನುಗ್ಗಿದಾಗ ಈ ಸಂಭಾವನೆಯ ಎರಡನೇ ಗ್ರಂಥ ಸಂಪುಟವೇ ಇಪ್ಪತ್ತೈದು ನೂರು ಪುಟ ದಾಟಿರುವದರಿಂದ ಇದನ್ನು ಭಾಗ–೧ ಭಾಗ–೨ ಹೀಗೆ ಎರಡು ಭಾಗಗಳಲ್ಲಿ ತರುವದು ಅನಿವಾರ್ಯವಾಯಿತು.

"ವಿಶ್ವಪ್ರಭೆ"ಯ ಇನ್ನೆರಡು ಸಂಪುಟಗಳಲ್ಲಿ (ಸಂಪುಟ–೧ ಮತ್ತು ಸಂಪುಟ–೩) ನಾಡಿನ ಹಿರಿಯ ಲೇಖಕರ ಪ್ರಜ್ಞಾಪೂರ್ಣ ಲೇಖನಗಳ ದೊಡ್ಡ ವನಭೋಜನವೆ ತಮಗೆ ಕಾಯ್ದಿದೆ. ಮೊದಲನೆ ಸಂಪುಟದಲ್ಲಿ ಜಗದ್ಗುರುಗಳ ಬೆಳಗು-ಬೈಗುಗಳನ್ನು ಸಮೀಪದಿಂದ ಕಂಡವರಿಂದ ಲೇಖನ ಗಳನ್ನು ಸಂಕಲಿಸಲಾಗಿದೆ. ಜೊತೆಗೆ ಚಿಂತನಪರ ಲೇಖನಗಳ ಸಂಗ್ರಹವನ್ನು ಅಡಕಗೊಳಿಸಿದ್ದೇವೆ. ಮೂರನೆಯ ಸಂಪಾದನೆಯ ಸಂಪುಟದಲ್ಲಿ ಸರ್ವ ಧರ್ಮಗಳ ಸಿದ್ಧಾಂತದ ಸಾರದರ್ಶನವನ್ನು ಪರಿಣತರಿಂದ ಬರೆಸಿ ಮುದ್ರಿಸ ಲಾಗುತ್ತಿದೆ.

ತಾವು ಈ ಮಹಾನ್ ಗ್ರಂಥ ಶ್ರೇಣಿಗಳ ಪರ್ವತ ಪಂಕ್ತಿಯಲ್ಲಿ ಪ್ರೀತಿ ಯಿಂದ ವಿಹರಿಸುತ್ತೀರೆಂದು ಅಭಿಮಾನದಿಂದ ನಂಬುತ್ತೇವೆ. ಈ ಮಹಾ ಸಂಪುಟ ಪ್ರಕಟವಾಗಲು ನೆರವು ನೀಡಿದ ಅಭಿನಂದನ ಸಮಿತಿಯ ಪ್ರಕಾಶಕ ರಿಗೂ ಹಾಗೂ ಸಂಪೂರ್ಣ ಜವಾಬ್ದಾರಿ ವಹಿಸಿ ಓರಣವಾಗಿ ಅಚ್ಚುಗೊಳಿ ಸಿದ ತ್ವರಿತ ಮುದ್ರಣಾಲಯದ ಶ್ರೀ ಫ. ಶಿ. ಭಾಂಡಗೆ ಅವರಿಗೂ ಕೃತಜ್ಞತೆ ಸಲ್ಲಿಸುತ್ತೇವೆ.

೧೫–೮–೧೯೯೧ —ಪ್ರೊ. ಜಿ. ಎಚ್. ಹನ್ನೆರಡುಮಠ

ಪ್ರಕಾಶನ

ಪೂಜ್ಯ ಜಗದ್ಗುರುಗಳ ಗ್ರಂಥಗಳು ಎಷ್ಟು? ಕಳೆದುಹೋದ ಗ್ರಂಥಗಳೆಷ್ಟು? ಉಳಿದ ಗ್ರಂಥಗಳೆಷ್ಟು?....ಮುಂತಾದ ಸಮಸ್ಯೆಗಳು ನಮ್ಮನ್ನು ಕಾಡುತ್ತಿದ್ದವು. ಜೊತೆಗೆ; ಜಗದ್ಗುರುಗಳ ಮುದ್ರಿತ ಗ್ರಂಥಗಳು ಕೂಡಾ ಕೆಲಕೆಲವು ಪ್ರತಿ ತೀರಿ ಹೋಗಿ, ಮಠದಲ್ಲಿಯೇ ಒಂದು ಪ್ರತಿ ಕೂಡ ಉಳಿಯದ ಪರಿಸ್ಥಿತಿ ಉಂಟಾಯಿತು. ಕೆಲವು ಪುಸ್ತಕಗಳಿಗಾಗಿ ಕರ್ನಾಟಕದ ಮಠಗಳಲ್ಲಿ ಹುಡುಕಾಡಿಸಬೇಕಾಯಿತು. ಈ ಮಧ್ಯದಲ್ಲಿ ಪೂಜ್ಯ ಜಗದ್ಗುರುಗಳ ಸಮಸ್ತ ಕೃತಿಗಳನ್ನು ಒಂದೆಡೆ ಕಾಣುವ ಬೇಡಿಕೆ ಭಕ್ತರಿಂದ ಮೇಲಿಂದ ಮೇಲೆ ಬರುತ್ತಲೇ ಇತ್ತು. ಈ ಎಲ್ಲಾ ಗ್ರಂಥಗಳನ್ನು ಒಂದೇ ಬೃಹತ್ ಹೆಬ್ಬೊತ್ತಿಗೆಯಲ್ಲಿ ತರುವ ದೊಡ್ಡ ಸಾಹಸವನ್ನು ಯಾರಿಗೆ ಒಪ್ಪಿಸುವದೆಂಬ ಸಮಸ್ಯೆಯೂ ಬಂತು. ಪೂಜ್ಯ ಜಗದ್ಗುರುಗಳೊಂದಿಗೆ ಮೂವತ್ತು ವರ್ಷ ಹತ್ತಿರದ ಒಡನಾಟವಿರುವ ಪ್ರೊ. ಜಿ. ಎಚ್. ಹನ್ನೆರಡುಮಠ ಅವರೇ ಈ ಕಾರ್ಯಮಾಡಲು ಸರ್ವಸಮರ್ಥರೆಂಬುದು ನಮಗೆ ಖಾತ್ರಿ ಆಯಿತು. ಹನ್ನೆರಡುಮಠರು ಸ್ವತಃ ಕವಿಗಳಿದ್ದು ಹೆಸರಾಂತ ಸಾಹಿತಿಗಳಿರುವದು ತಮಗೆಲ್ಲ ವಿದಿತ ಸಂಗತಿ. ಅವರು ಸಂಪಾದಿಸಿದ "ಚಿತ್ರಭೆ" ಹಾಗೂ "ರಜತದೀಪ್ತಿ"ಗಳು ಈಗಾಗಲೇ ಬಹುಜನರ ಪ್ರೀತಿ ಸಂಪಾದಿಸಿವೆ. ಆದ್ದರಿಂದ ಈ ಮಹಾಕೃತಿಯ ಸಂಪಾದನೆಯ ಹೊಣೆಗಾರಿಕೆಯನ್ನು ಅವರ ಮೇಲೆ ಹೊರಿಸಲಾಯಿತು. ಜಗದ್ಗುರುಗಳ ಎಲ್ಲ ಗ್ರಂಥಗಳನ್ನು ಒಂದೆಡೆಯಲ್ಲಿ ಸಮಗ್ರವಾಗಿ ಮುದ್ರಿಸಲು ಪೂಜ್ಯ ಜಗದ್ಗುರುಗಳ ಸಮ್ಮತಿಯನ್ನೂ ನಾವು ಪಡೆದೆವು. ಇದೀಗ ಎಲ್ಲ ಕೃತಿಗಳನ್ನು ಒಂದೆಡೆ ನೋಡಬೇಕೆಂಬ ಓದುಗರ ಲವಲವಿಕೆ ಇಲ್ಲಿ ಏರ್ಪಟ್ಟಿದೆ.

ಪ್ರೊ. ಹನ್ನೆರಡುಮಠ ಅವರು ಈ ಸಮಗ್ರ ಸಂಪುಟಕ್ಕೆ ಆರಂಭದಲ್ಲಿ ಪೂಜ್ಯ ಜಗದ್ಗುರುಗಳ ಸಮಸ್ತ ಕೃತಿಗಳ ಪರಿಚಯ ನೀಡುವ ಅತ್ಯುಪಯುಕ್ತವಾದ ಒಂದು ಸಂಗ್ರಾಹ್ಯ ವಿಮರ್ಶೆ ಬರೆದಿದ್ದಾರೆ. ಅಷ್ಟೇ ಅಲ್ಲ; ಈ ಮಹಾಸಂಪುಟದ ಕೊನೆಯಲ್ಲಿ ಆಯಾ ಗ್ರಂಥಗಳ ಬಗೆಗೆ ನಾನಾ ವಿಮರ್ಶಕ ವಿದ್ವಾಂಸರು ಬರೆದ ಲೇಖನಗಳನ್ನು ಪ್ರಕಟಿಸಲಾಗಿದೆ. ಹೀಗೆ ಈ ಸಮಗ್ರ ಸಾಹಿತ್ಯ ಸಂಪುಟವು ಸಂಪೂರ್ಣ ಸಾಹಿತ್ಯ ಮುದ್ರಣದೊಂದಿಗೆ, ಸಮಗ್ರ

ವಿಮರ್ಶೆಯನ್ನೂ, ಬಿಡಿವಿಮರ್ಶೆಯನ್ನೂ ಪಡೆದು ತನ್ನ ವೈಶಿಷ್ಟ್ಯವನ್ನು ಮೆರೆದಿದೆ. ನಾಡಿನ ಸಮಸ್ತ ಅಭಿಮಾನಿ ಓದುಗರು ಈ ಸಮಗ್ರ ಸಾಹಿತ್ಯ ಸಂಪುಟವನ್ನು ಪ್ರೀತಿಯಿಂದ ಸ್ವೀಕರಿಸುವಂತಾಗಲಿ.

ಪೂಜ್ಯ ಜಗದ್ಗುರುಗಳವರ ಷಷ್ಟ್ಯಬ್ದಿ ಪೂರ್ತಿ ಸಮಾರಂಭ ಸಮಿತಿಯವರು ಈ ಸಮಗ್ರ ಸಾಹಿತ್ಯ ಸಂಪುಟವನ್ನು ಮಹಾಭಿನಂದನ ಸಂಪುಟದ ಎರಡನೆಯ ಭಾಗವಾಗಿ ಮುದ್ರಿಸಲು ಅನುಮತಿಸಿದ್ದಕ್ಕೆ ಅವರಿಗೆ ನಮ್ಮ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ. ಗ್ರಂಥವನ್ನು ಸುಂದರವಾಗಿಯೂ ಚೊಕ್ಕಟವಾಗಿಯೂ ಸಕಾಲದಲ್ಲಿ ಮುದ್ರಿಸಿದ ತ್ವರಿತ ಮುದ್ರಣಾಲಯದ ಶ್ರೀ ಫ. ಶಿ. ಭಾಂಡಗೆ ಅವರಿಗೂ ಅಭಿನಂದನೆ ಸಲ್ಲಿಸುತ್ತೇವೆ.

ಈ ಹೆಬ್ಬೊತ್ತಿಗೆ ನಿಮ್ಮ ಮನೆ ಬೆಳಗಲಿ, ಮನ ಬೆಳಗಲಿ ಎಂದು ಹೃದಯಾರೆ ಹಾರೈಸುತ್ತೇವೆ.

ಅಧ್ಯಕ್ಷರು

೨-೯-೧೯೯೧

ಶ್ರೀ ಜಗದ್ಗುರು ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳವರ ಷಷ್ಟ್ಯಬ್ದಿ ಸಮಿತಿ

ಪರಿವಿಡಿ

ಶ್ರೀ ಮೂಜಗಂ ಸಮಗ್ರ ಸಾಹಿತ್ಯಾಧ್ಯಯನ: ಸಾರದರ್ಶನ ೧
೧) ಮೊಗ್ಗೆಯ ಮಾಲೆ ೭೧
೨) ಹಾವೇರಿ ಶ್ರೀ ಶಿವಬಸವೇಶ್ವರ ಅಷ್ಟೋತ್ತರ ಶತನಾಮಾವಳಿ ೧೧೩
೩) ಚಿತ್ತರಗಿ–ಇಲಕಲ್ಲ ಶ್ರೀ ವಿಜಯಮಹಾಂತೇಶ್ವರ ಲಾವಣಿ ೧೨೯
೪) ಅಥಣಿ ಶ್ರೀ ಮರುಳಸಿದ್ಧೇಶ್ವರ ಅಷ್ಟೋತ್ತರ ಶತನಾಮಾವಳಿ ೧೫೫
೫) ಸವದತ್ತಿ ಅಪ್ಪಯ್ಯಸ್ವಾಮಿಗಳ ಜೀವನ ಚರಿತ್ರೆ ೧೭೩
೬) ಪಥಿಕ ೨೨೧
೭) ಪೂಮಾಲೆ ೩೦೩
೮) ಜೀವನ ವಿಕಾಸ ೩೪೧
೯) ಆಶೀರ್ವಾಣಿ ಭಾಗ–ಒಂದು ೩೮೭
೧೦) ಹೊಂಗಿರಣ ೫೬೭
೧೧) ಗುರುಸಿದ್ಧೇಶ್ವರ ಶತನಾಮಾವಳಿ ೬೨೯
೧೨) ಚಿತ್ಸುಮನ ೬೪೫
೧೩) ಅಮೃತ ಬಿಂದು ೭೭೩
೧೪) ಯುಗಗಪ್ರರುಷ ಯೋಗಿಕುಮಾರ ೮೦೫
೧೫) ಪರಮಪ್ರಸಾದಿ ಮರುಳಶಂಕರದೇವ ೮೮೫
೧೬) ಹಾರ್ಟ್ಸ್ ಬ್ಲಾಸಮ್ಸ್: ಇಂಗ್ಲೀಷ್ ೯೧೫
೧೭) ಶಿವಯೋಗಮಂದಿರ ೧೦೩೧

ಶ್ರೀ ಮೂಜಗಂ ಸಮಗ್ರ ಸಾಹಿತ್ಯಾಧ್ಯಯನ: ಸಾರದರ್ಶನ

—ಪ್ರೊ. ಜಿ ಎಚ್. ಹನ್ನೆರಡುಮಠ

ಒಂದು ದಾಖಲೆ

೧೨ ನೆಯ ಶತಮಾನವು ಶರಣ ವಾಙ್ಮಯೇತಿಹಾಸದಲ್ಲಿ ಸಾಹಿತ್ಯಕ್ರಾಂತಿಯ ಮೊದಲ ಘಟ್ಟವಾದರೆ; ೧೫ ನೆಯ ಶತಮಾನವು ಶರಣ ಸಾಹಿತ್ಯದ ಮರು ಕ್ರಾಂತಿಯ ಘಟ್ಟವಾದರೆ: ೨೦ ನೆಯ ಶತಮಾನವು ಸಮಗ್ರ ಶರಣಸಾಹಿತ್ಯದ ಪುನರ್ನವೀಕರಣದ ತೃತೀಯ ಮಹತ್ವದ ಘಟ್ಟ (The third stage of total renovation and revivification of sharana Literature) ಆಗಿದೆ. ಸ್ವಾತಂತ್ರ್ಯೋತ್ತರ ಕಾಲೀನ ಈ ಸಮಗ್ರ ಸಮನ್ವಯ ಕ್ರಾಂತಿ ಬಹುಮುಖ ವಾಗಿದ್ದು: ಸಂಪಾದನೆ–ಸಂಶೋಧನೆ–ಪ್ರಾಚೀನ ಗ್ರಂಥಗಳ ಪರಿಶೋಧನೆ–ಪ್ರಕಟಣೆ–ಚಿಂತನೆ–ತೌಲನಿಕ ಅಧ್ಯಯನ–ನೂತನ ವಚನ ಸೃಷ್ಟಿ–ನೂತನ ಕಾವ್ಯ ಸೃಷ್ಟಿ–ಕಥೆ ಕಾದಂಬರಿ ನಾಟಕ ಭಾವಗೀತೆಗಳ ರಚನೆ–ಸಂಸ್ಕೃತ ಶರಣಸಾಹಿತ್ಯಾಧ್ಯಯನ–ವೀರಶೈವ ಸಾಹಿತ್ಯ ಮೂಲದ ಐತಿಹಾಸಿಕ ವಿಶ್ಲೇಷಣೆಯ ಬಿರುಸಿನ ಹಾಗೂ ತುರುಸಿನ ವಿಚಾರಚರ್ಚೆ– ಇಂಗ್ಲೀಷ ಫ್ರೆಂಚ, ಜರ್ಮನಿ, ರಶಿಯನ್, ಹಿಂದಿ, ಮರಾಠಿ, ಬಂಗಾಲಿ, ತೆಲಗು, ತಮಿಳು ಇತ್ಯಾದಿ ಭಾಷೆಗಳಿಗೆ ಶರಣ ಸಾಹಿತ್ಯದ ತರ್ಜುಮೆ ಅಂತರ್ರಾಜ್ಯ ಹಾಗೂ ಅಂತರ್ರಾಷ್ಟ್ರೀಯ ಮಟ್ಟದಲ್ಲಿ ಪ್ರಚಾರ–ಪ್ರಸಾರ ಮುಂತಾದ ನೂರೆಂಟು ಮುಖಗಳಲ್ಲಿ ಹೊಳೆಯಾಗಿ ಹರಿದಿದೆ, ತಡಸಲಾಗಿ ಸುರಿದಿದೆ. ಈ ಎಲ್ಲಾ ಪ್ರಕಾರ–ಪ್ರಭೇದಗಳಲ್ಲಿಯೂ ಶ್ರೀ ಜಗದ್ಗುರು

ಮೂರುಸಾವಿರಮಠ ಕರ್ನಾಟಕದ ವಿಶ್ವವಿದ್ಯಾಲಯಗಳೊಂದಿಗೆ ಸರಿಸಮನಾಗಿ ನಿಂತು ಸಾಹಿತ್ಯಪ್ರಸಾರ ಕೈಕೊಂಡಿರುವದು ಎದ್ದುಕಾಣುವ ವೈಶಿಷ್ಟ್ಯ; ಮಾತ್ರವಲ್ಲದೆ, ಪೂಜ್ಯ ಶ್ರೀ ಮನ್ಮಹಾರಾಜ ನಿರಂಜನ ಜಗದ್ಗುರು ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳವರು ಇಂತಹ ೨೦೦ ಗ್ರಂಥಗಳ ಪ್ರಕಟಣೆಯ ಮಹಾಸಾಹಸಕ್ಕೆ ಕೈಹಾಕಿರುವದಲ್ಲದೆ; ಈ ವರೆಗೆ ಅವರ ಪೀಠಾರೋಹಣದ ೩೦ ವರ್ಷಗಳಲ್ಲಿ ಅಂದಾಜು ೬೦-೭೦ ಲಕ್ಷ ರೂಪಾಯಿ ಈ ಕಾರ್ಯಕ್ಕೆ ತೊಡಗಿಸಿರುವದು ಒಂದು ಐತಿಹಾಸಿಕ ದಾಖಲೆ!

"ಮೂಜಗಂ" ಸಾಹಿತ್ಯ ಸಮಾರಾಧನೆ

ಪೂಜ್ಯ ಜಗದ್ಗುರುಗಳು ಸ್ವಯಂ ಕವಿಮನೋಭಾವನೆಯುಳ್ಳವರೂ, ಸೃಜನಶೀಲ ಚಿಂತನಶೀಲ ಸಾಹಿತ್ಯ ರಚನೆಯಲ್ಲಿ ಸದಭಿಲಾಷಿಗಳೂ ಆಗಿರುವದು ಸಂತೋಷ. "ಮೂಜಗಂ" ಕಾವ್ಯನಾಮದ ಅಡಿಯಲ್ಲಿ ಅವರು ಬರೆದ ಸಾಹಿತ್ಯ ಅವರದೇ ಆದ ಸುಲಲಿತ ಸಂಪನ್ನ ತಿಳಿಭಾಷೆಯ ಚಲುವನ್ನು ಸಂಪಾದಿಸಿದ್ದನ್ನು ಕನ್ನಡನಾಡಿನ ಹಲವರು ವಿದ್ವಾಂಸರು ಗುರುತಿಸಿದ್ದಾರೆ. ಈ ಸಂಪಾದನೆಯ ಸಂಪುಟದಲ್ಲಿ "ಮೂಜಗಂ" [= ಮೂರುಸಾವಿರಮಠದ ಶ್ರೀ ಜಗದ್ಗುರು ಗಂಗಾಧರ ರಾಜಯೋಗೀಂದ್ರರು] ಅವರ ಸಾಹಿತ್ಯ ನಿರ್ಮಿತಿಯ "ಸಂಗ್ರಾಹ್ಯ ವಿಮರ್ಶೆ" ಮತ್ತು "ಸಾಹಿತ್ಯ ಸಂಗ್ರಹ"ಕ್ಕೆ ಮುಖ್ಯಗಮನ ನೀಡಲಾಗಿದೆ. ಕಾರಣ; ಅವರ ಸಮಗ್ರ ಸಾಹಿತ್ಯವನ್ನು ಒಟ್ಟಾರೆ ಒಂದೆಡೆಗೆ ನೋಡಬಯಸಿದ ನೂರಾರು ಓದುಗರ ಒಲವಿನ ಕೋರಿಕೆಯ ಮೇರೆಗೆ ಇಂಥದೊಂದು ಸಂಪುಟ ಹೊರತರುವದು ಅನಿವಾರ್ಯವಾಯಿತು.

ಮೂರು ಘಟ್ಟಗಳಲ್ಲಿ ಸಾಹಿತ್ಯಬೆಟ್ಟ

ಪೂಜ್ಯ ಜಗದ್ಗುರುಗಳವರ ಸಾಹಿತ್ಯವನ್ನು ಮೂರು ಘಟ್ಟಗಳಲ್ಲಿ ಸ್ಥೂಲವಾಗಿ ಪರಾಮರ್ಶಿಸಬಹುದೆಂದು ತೋರುತ್ತದೆ.

ಮೊದಲ ಘಟ್ಟದಲ್ಲಿ ಪೂಜ್ಯ ಜಗದ್ಗುರುಗಳು ಇನ್ನೂ ಸಾಧಕ ಜೀವನದಲ್ಲಿ ಮಲಪ್ರಭಾತೀರದ ಶಿವಯೋಗಮಂದಿರದ ವಟುವಾಗಿಯೂ; ಅನಂತರ ಗಂಗಾತೀರದ ಕಾಶಿಯ ಪ್ರೌಢ ವಿದ್ಯಾರ್ಥಿಯಾಗಿಯೂ ಅಧ್ಯಯನ ಮಾಡುವಾಗಿನ ಅನಿರ್ಬಂಧಿತ ಮುಕ್ತ ಸಾಹಿತ್ಯರಚನೆ ಹವಣಾಗಿ. ಅವರ ಮುಂದಿನ ಸಾಹಿತ್ಯ ಪ್ರಕಾರಗಳಲ್ಲಿ ಬರುವ ವಚನ, ಚಿಂತನೆ, ಹೋರಾಟ, ಸ್ವಪ್ನ,

ಕಳವಳ, ಸಾಮಾಜಿಕ ಸಾಹಸಗಳ ಯಾವ ಛಾಯೆಯೂ ಇರದೇ ಇದೊಂದು ತಿಳಿನೀರಿನ ಮಾನಸಸರೋವರವಾಗಿರುವದು ಈ ಸಾಹಿತ್ಯ ಪ್ರಕಾರದ ತನ್ನತನ!

ಎರಡನೆಯ ಘಟ್ಟದಲ್ಲಿ ಪೂಜ್ಯರು ಹುಬ್ಬಳ್ಳಿ ಮೂರುಸಾವಿರಮಠದ ಪೀಠಾಧಿಪತಿಗಳಾದ ನಂತರ (೧೯೫೮) ಬಂದ; ಮೊದಲ ಘಟ್ಟಕ್ಕಿಂತ ತೀರಾ ಭಿನ್ನವಾದ; ಚಿಂತನಪ್ರಧಾನವಾದ ಇನ್ನೊಂದು ಸಾಹಿತ್ಯ ನಿರ್ಮಿತಿಯ ವಾತಾವರಣ. ಇದನ್ನು ಅವರ ಸಿಂಹಾಸನಾರೋಹಣದಿಂದ (೧೯೫೮) ಹಿಡಿದು ೨೫ ನೆಯ ಪೀಠಾರೋಹಣದ ವರೆಗಿನ ೨೯ ವರ್ಷಗಳ (೧೯೮೭) ನಿಡಿದಾದ ದಾರಿಯಲ್ಲಿ ಕಂಡರಿಯಬಹುದು.[೧] ಇಲ್ಲೆಲ್ಲಾ ಸ್ವಾಭಾವಿಕವಾಗಿ ಅವರ ಲೋಕಾನುಭವದ, ಲೋಕಸಮಸ್ಯೆಗಳ, ಮಾನವಸಮಸ್ಯೆಗಳ ಹಾಸು-ಹೊಕ್ಕುಗಳಿಂದ ಗಟ್ಟಿ ನೇಯ್ಗೆಯ ನಿರಿಗೆಗಳಿವೆ.

ಮೂರನೆಯ ಮಹತ್ವದ ಘಟ್ಟವೆಂದರೆ; ನಾನು ವಿಶೇಷವಾಗಿ ಗುರುತಿಸಲು ಅಪೇಕ್ಷಿಸಿರುವಂತೆ; ಅವರ ಸಾವಿರ ಅನುಭವಗಳ ಪರಾಕಾಷ್ಠೆಯ ಪಾಕಗೊಂಡ "ಪೂರ್ಣಜ್ಞ" ಘಟ್ಟ! ಇದು ಖಂಡಿತವಾಗಿಯೂ "ಸರ್ವಜ್ಞ"ನ ಅನುಕರಣೆಯಾದ "ಪೂರ್ಣಜ್ಞ" ಆಗಿರದೇ; ಈ ಪೂರ್ಣಜ್ಞತ್ವದಲ್ಲಿ ಅವರ ಪುಟಿದೇಳುತ್ತಿರುವ ಸಮಗ್ರ ಜೀವನದ ಸಾವಿರಾರು ಸಮ-ವಿಷಮ ಅನುಭವಗಳ, ದ್ವಂದ್ವಗಳ, ಹೋರಾಟಗಳ, ಸೋಲು-ಗೆಲವುಗಳ, ನಿರಂತರಾನ್ವೇಷಣೆಯ ಕ್ರಿಯಾಶೀಲ ಅಭಿವ್ಯಕ್ತಿಯಾಗಿದೆ. ಅವರ ಸೋಲು-ಗೆಲುವುಗಳಲ್ಲಿ ಕೊನೆಗೆ ನಿಲ್ಲುವದು ಗೆಲುವೊಂದೇ; ಸಮ-ವಿಷಮಗಳಲ್ಲಿ ಕೊನೆಗೆ ಗೆಲ್ಲುವದು ಸಮರಸವೊಂದೇ! ಇದು ಅವರ ಸಾಹಿತ್ಯವೈಶಿಷ್ಟ್ಯವೂ ಅಹುದು, ಜೀವನ ವೈಶಿಷ್ಟ್ಯವೂ ಅಹುದು!!

ಈ ಮೂರು ಘಟ್ಟಗಳ ಅಟ್ಟದಲ್ಲಿ ಅವರ ಹಿರಿಯ ಸಾಹಿತ್ಯ ಚೇತನ ಚೌಕಟ್ಟು ಪಡೆದಿದೆ. ಈ ನಿಟ್ಟಿನಲ್ಲಿ ಅವರ ಈ ಸಾಹಿತ್ಯ ಚಿಂತನಕ್ಕೆ ಸನ್ನ ದಾರಿ ಕಂಡುಕೊಳ್ಳಲು ನಾನು ಪ್ರಾಮಾಣಿಕವಾಗಿ ಇಲ್ಲಿ ನಾನು ಪ್ರಯತ್ನಿಸಲು ಅಪೇಕ್ಷಿಸಿದ್ದೇನೆ.

ಮಲಪ್ರಭಾ ತೀರದಿಂದ ಗಂಗಾತೀರದವರೆಗೆ

ವಿಚಿತ್ರವೆಂದರೆ ಜಗದ್ಗುರುಗಳವರಿಗೆ ತಮ್ಮ ತಾಯಿ ಹೇಗಿದ್ದಳೋ, ಅವಳ ಬಣ್ಣ ಹೇಗಿತ್ತೋ, ಅವಳು ಹೇಗೆ ಉಡಿಸಿ-ತೊಡಿಸುತ್ತಿದ್ದಳೋ ಇದರ ಬಗ್ಗೆ

---

೧ ಇವರ ೨೫ ನೆಯ ಪೀಠಾರೋಹಣೋತ್ಸವವನ್ನು ಅಂದಿನ ಕಾಲಮಾನ ಪರಿಸ್ಥಿತಿಗಳನ್ನು ನೋಡಿಕೊಂಡು ೨೯ ನೆಯ ವರ್ಷ ೧೯೮೭ ರಲ್ಲಿ ಸಮಸ್ತ ಸದ್ಭಕ್ತರು ನೆರವೇರಿಸಿದರು.

ಒಂದು ಕೂದಲೆಳೆಯಷ್ಟೂ ನೆನಪಿಲ್ಲ! ತಾಯಿ ಚನ್ನಮ್ಮ ಅವರ ಜೀವನ ಸಂಪುಟದಿಂದ ನಾಮಾವಶೇಷವಾಗಿ ಹೋಗಿದ್ದರೂ ಆ "ತಾಯ್ತನ" ಇವರ ಜೀವನದ ತುಂಬ ತೊಟ್ಟಿಲಾಗಿ ತೂಗಿದೆ. ತಂದೆ ಮರುಳಸಿದ್ಧಯ್ಯ ಮರುಳನೋ ಸಿದ್ಧನೋ ಯಾರು ಬಲ್ಲರು? ಕಾರಣ; ಈ ಮಹಾಂತಮರಿ (ಜಗದ್ಗುರುಗಳ ಮೊದಲ ಹೆಸರು) ಕೇವಲ ನಾಲ್ಕುವರ್ಷದ ಕಂದವ್ವೆಯಾಗಿರುವಾಗ ಆ ತಾಯಿ-ತಂದೆಗಳು ಈ ಹಸುಳೆಯನ್ನು ಶಿವಯೋಗಮಂದಿರದಲ್ಲಿ ಬಿಟ್ಟು, ಹೋಗುವಾಗ ಆ ಗುಪ್ತ ಚೇತನಗಳು ಅದೆಷ್ಟು ಅತ್ತಿರಲಿಕ್ಕಿಲ್ಲ! ಅವರ ಕಣ್ಣೀರಿನ ಕೋಡಿಯಿಂದ ಶಿವಯೋಗ ಮಂದಿರದ ಗುಡ್ಡ-ಬೆಟ್ಟ-ಹಸಿರು-ಹೂವು-ಹೊಳೆಗಳು ಅದೆಷ್ಟು ಮಲಮಲ ಮರುಗಿರಲಿಕ್ಕಿಲ್ಲ!! ಆದರೆ ಜಗದ್ಗುರುಗಳಿಗೆ ಆ ತಾಯ್ತನದ ತೊಟ್ಟಿಲು-ಬಟ್ಟಲು, ತಂದೆತನದ-ಗುಡಿಸಲು-ತಡಸಲು ಒಂದೂ ನೆನೆಪಿಲ್ಲ!!! ಇವರನ್ನು ಮಂದಿರಕ್ಕೆ ಬಿಟ್ಟು ಹೋದ ಅಲ್ಪಕಾಲದಲ್ಲೇ ಅವರಿಬ್ಬರೂ ಶಿವಾಧೀನರಾದದ್ದು ವಿಚಿತ್ರವೇ ಸೈ. ಅವರು ಸತ್ತುಹೋದುದೂ ಇವರಿಗೆ ಗೊತ್ತಿಲ್ಲ. ಎಂಥಾ ವಿಚಿತ್ರ ವೈರಾಗ್ಯದ ದಾರಿಯಲ್ಲಿ ಈ ಮುಗ್ಧ ಮಗು ನಡೆದು ಹೋಗುವಂತಾಯಿತಲ್ಲಾ? ಬಹುಶಃ ಈ ಮಗುವಿನ ನೆನಪಿನ ಪಟ್ಟಿಯಿಂದ ಆ ಮಹಾಚೇತನಗಳು ಹೇಳ ಹೆಸರಿಲ್ಲದಂತೆ ಹೋದರೂ; ಆ ತಾಯ್ತನದ "ತಂಪು" ತಂದೆತನದ "ಚಿಂತನೆ"ಗಳು ಪೂಜ್ಯ ಜಗದ್ಗುರುಗಳ ಸಮಗ್ರ ಸಾಹಿತ್ಯದ ಪುಟಪುಟಗಳಲ್ಲೂ ಅಡಗಿ ಕೂತಿರುವದನ್ನು ನಾವು ಖಂಡಿತಾ ಗಮನಿಸಬಹುದು. ಚೈತನ್ಯಕ್ಕೆ ಸಾವುಂಟೆ? ಆತ್ಮಗಳಿಗೆ ಅರುಪಿಕೆ ಉಂಟೆ?

ಮಲಪ್ರಭಾ ತೀರದ "ಶಿವಯೋಗ ಮಂದಿರ"ದ ಸಾಧಕ ವಟು ಜೀವನದಿಂದ ಹಿಡಿದು ಗಂಗಾತೀರದ ಕಾಶಿಯ ಪ್ರಬುದ್ಧ ಅಧ್ಯಯನ ವೇದಿಕೆಯವರೆಗೆ ಶ್ರೀ "ಮೂಜಗಂ" ಅವರ ಸಾಹಿತ್ಯ ರಚನೆಗಳನ್ನು ಇಲ್ಲಿ ಒಂದೊಂದಾಗಿ ಗುರುತಿಸುವ, ಗಮನಿಸುವ ಪ್ರಯತ್ನ ಮಾಡಲಾಗಿದೆ. ಈ ದಾರಿಯಲ್ಲಿ ಈ ಸಂಪಾದಕ ಸಂಪೂರ್ಣವಾಗಿ ತನ್ನ ಅಭಿಪ್ರಾಯಗಳನ್ನು ಮಾತ್ರವೇ ಕೊಡುವ ಸ್ವಾರ್ಥಕ್ಕೆ ಹೋಗದೆ: ಕನ್ನಡನಾಡಿನ ಅನೇಕಾನೇಕ ವಿದ್ವಾಂಸರು ಕಾಲಕಾಲಕ್ಕೆ ಜಗದ್ಗುರುಗಳ ಸಾಹಿತ್ಯದ ಬಗ್ಗೆ ನೀಡಿದ ಅಭಿಪ್ರಾಯ ವಿಮರ್ಶೆಗಳ ಕಡೆಗೆ ಹೆಚ್ಚು ಪ್ರಾಶಸ್ತ್ಯ ನೀಡಿ; ಈ ಸಂಪುಟಕ್ಕೆ ಹೆಚ್ಚು ಗಾಂಭೀರ್ಯ ಬರುವಂತೆ ಯತ್ನಿಸಿರುವದನ್ನು ಸಮಸ್ತರು ಗಮನಿಸಬಹುದು. ಇಲ್ಲಿ ಒಂದೊಂದಾಗಿ ಆ ಪುಸ್ತಕಗಳ ಸಂಕ್ಷಿಪ್ತ ಸಾರಪರಿಚಯವನ್ನು ನೀಡಲಾಗುವದು. ಗ್ರಂಥ ವ್ಯಾಪ್ತಿಯ ಭಯದಿಂದ ಸಂಗ್ರಹದಲ್ಲಿ ಸಮಗ್ರವನ್ನು ಕಾಣುವ ಸಾಹಸ ಇಲ್ಲಿ ಮಾಡಲಾಗಿದೆ.

ಲಲಿತ ಲಾವಣ್ಯದ ಚೆಲುವು
"ಶ್ರೀ ವಿಜಯ ಮಹಾಂತೇಶ ಲಾವಣಿ"

ಹಿರಿಯ ಕವಿಚೇತನ ಡಾ. ಡಿ. ಎಸ್. ಕರ್ಕಿಯವರು ಗಮನಿಸಿದ ಈ ಮಾತುಗಳನ್ನು ಇಲ್ಲಿ ಯಾರೂ ಮರೆಯುವಂತಿಲ್ಲ.

"ಹುಬ್ಬಳ್ಳಿಯ ಮೂರುಸಾವಿರಮಠದ ಶ್ರೀ ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳವರು ಕಾವ್ಯರಚನೆಯಲ್ಲಿ ತುಂಬಾ ಅಭಿರುಚಿ ಆಸಕ್ತಿಗಳನ್ನೂ ತಳೆದವರು. ಅವರ ಕಾವ್ಯರಚನೆ ಎಳವಯದಲ್ಲಿಯೇ ಆರಂಭವಾಯಿತು. ಶಿವಯೋಗ ಮಂದಿರದಲ್ಲಿ ವಟುವಾಗಿ ಅಧ್ಯಯನ ಮಾಡುತ್ತಿರುವಾಗಲೇ ಅವರು ಕವಿತೆಯ ರಚನೆಗೆ ತೊಡಗಿದರು. ಆಗ ಅವರು ಬರೆಯುತ್ತಿದ್ದುದು 'ಮಹಾಂತದೇವರು' ಎಂಬ ಹೆಸರಿನಲ್ಲಿ. ಅವರ ಪ್ರಪ್ರಥಮ ಪ್ರಕಟಿತ ಕವಿತೆ 'ಶ್ರೀ ವಿಜಯಮಹಾಂತೇಶ ಲಾವಣಿ.' ಆ ಲಾವಣ್ಯಮಯವಾದ ಲಾವಣಿಗೆ ಮುನ್ನುಡಿ ಬರೆಯುತ್ತ 'ಇವರು ಇಂಥ ಚಿಕ್ಕ ವಯಸ್ಸಿನಲ್ಲಿ ಇಂಥ ಸಾಹಸ ಮಾಡಿದ್ದು ನೋಡಿದರೆ ಇವರು ಸನಿಹದಲ್ಲಿ ಗಣ್ಯ ಸಾಹಿತಿಗಳಾಗುವುರೆಂಬುದು ನಿಸ್ಸಂದೇಹವು' ಎಂದು ಮುನ್ನುಡಿ ಬರೆದವರು[೧] ಆಗ ಹೇಳಿದ ಮಾತನ್ನು ಇಲ್ಲಿ ಗಮನಿಸಬೇಕು. ಆ ಮಾತು ಈಗ ಸತ್ಯವಾಗಿ ಪರಿಣಮಿಸಿದೆ. ....ಇಲ್ಲಿ ಗಮನಿಸಬೇಕಾದ ಮಾತೆಂದರೆ ಆಗಿನ ಆ ಎಳೆವಯದ ಮಹಾಂತದೇವರ ಹೃದಯದಲ್ಲಿ ವಾಸಮಾಡಿದ್ದ ಆ ಎಳೆ ಕವಿಯ ಬೆಳವಣಿಗೆಗೆ ತಕ್ಕ ಪರಿಸರ ದೊರೆಯಿತೆಂಬುದು. ಬೆಳೆಯುವ ಎಳೆ ಜೀವಕ್ಕೆ ಒಳ್ಳೆಯ ಪರಿಸರದಿಂದ ತುಂಬ ಅನುಕೂಲವಾಗುತ್ತದೆ. ಈ ಕವಿಯ ಚಿತ್ತ ಅರಳಿದುದು ಶಿವಯೋಗಮಂದಿರದ ಶುದ್ಧವೂ, ಚೇತೋಹಾರಿಯೂ ಆದ ವಾತಾವರಣದಲ್ಲಿ. ಶಿವಯೋಗಮಂದಿರದ ವಟು ವಿದ್ಯಾರ್ಥಿಯಾಗಿ ಅಧ್ಯಯನ ಮಾಡುವ ಯೋಗ ಅವರಿಗೆ ಒಂದು ಸುಯೋಗವಾಗಿ ಪರಿಣಮಿಸಿತು. ಮಲಯ ಪ್ರಭೆಯ ಸೊಗಸಾದ ತೀರ ಪ್ರದೇಶದಲ್ಲಿ ನೆಲಸಿದ ಶಿವಯೋಗಮಂದಿರವು ಪ್ರಕೃತಿ ಸೌಂದರ್ಯದ ನೆಲವೀಡೂ ಆಗಿದೆ. ಹೊಳೆ ಅಲ್ಲಿ ಅಂದವಾಗಿ ಹರಿದಿದೆ; ಸಲಿಲ ನಿನಾದದೊಡನೆ ಹರಿಯುತ್ತಿದೆ. ತೀರದ ಆಚೆ ಈಚೆ ಹಸಿರು ಮುರಿಸುವ ಪುಟ್ಟ ಗಿಡ ಬಳ್ಳಿಗಳ ಚೆಲುವಾದ ನೋಟವನ್ನೊಳಗೊಂಡ ಮಲೆ ಮಲೆಗಳು ಶಿವಯೋಗ ಮಂದಿರದ ಕ್ಷೇತ್ರವನ್ನೂ ಸುತ್ತುವರಿದು ಮನೋಹರವಾದ ನಿಸರ್ಗದ ದೃಶ್ಯಗಳನ್ನೂ ನಿರ್ಮಿಸಿವೆ. ಸನಿಹದಲ್ಲಿ ಒಂದೆಡೆಗೆ ಪ್ರಕೃತಿರಮ್ಯವಾದ ಮಹಾಕೂಟದ ಕ್ಷೇತ್ರ. ಇನ್ನೊಂದೆಡೆಗೆ ಬನದಬನದವೆಂಬಂತಿರುವ ಬನಶಂಕರಿಯ ರಮಣೀಯ

---

೧ ಮುನ್ನುಡಿ: ಶ್ರೀ ವಿಜಯ ಮಹಾಂತೇಶ ಲಾವಣಿ: ಫಕೀರಪ್ಪ ಬಸಪ್ಪ ಕುಲಕರ್ಣಿ ಸಬ್‌ರಜಿಸ್ಟ್ರಾರ: ಹುನಗುಂದ.

ಕ್ಷೇತ್ರ. ಅನತಿದೂರದಲ್ಲಿಯೇ ಬಾದಾಮಿಯ ಸುವಿಖ್ಯಾತ ಗುಹಾದೇವಾಲಯಗಳು. ಅದರಂತೆ ಶಿಲ್ಪಕ್ಕೆ ಪ್ರಸಿದ್ಧವಾದ ಪಟ್ಟದಕಲ್ಲೂ ದೂರವಿಲ್ಲ. ಸುಪ್ತ ಕಾವ್ಯ ಶಕ್ತಿಯನ್ನು ಜಾಗೃತಗೊಳಿಸಲು ತಕ್ಕ ಸನ್ನಿವೇಶ ಶಿವಯೋಗಮಂದಿರ. ಸರಿ; ಕಾವ್ಯ ಶಕ್ತಿ ಜಾಗ್ರೃತವಾಯಿತು. ಅದಕ್ಕೆ ಗುರುಭಕ್ತಿ ಕೂಡಿತು. ಶ್ರೀ ವಿಜಯ ಮಹಂತೇಶ ಲಾವಣಿ ರಚನೆಗೊಂಡು ಪ್ರಕಾಶನ ಪಡೆಯಿತು–ಶಿವಯೋಗ ಮಂದಿರದಲ್ಲಿ ೧೯೪೪ ರಲ್ಲಿ."೧

ವಯೋಧರ್ಮಕ್ಕೆ ಸಂಗತವಾಗಿ ಈ ಲಾವಣಿ ನೀತಿಪ್ರಧಾನವೂ, ಭಕ್ತಿ ಭಾವಗಳ ಆಡುಂಬೊಲವೂ ಆಗಿದೆ. ಜಾನಪದ ನುಡಿಗಟ್ಟಿನೊಂದಿಗೆ ಪ್ರೌಢ ಸಂಸ್ಕೃತ ಪದಗಳ ಸಮ್ಮಿಶ್ರಣ ಅಂದಿನ ಶಿಕ್ಷಣದ ಅಭಿವ್ಯಕ್ತಿಯಾಗಿದೆ. ಈ ಲಾವಣಿಯಲ್ಲಿ ಉದಿತೋದಿತವಾಗುತ್ತಿರುವ, ಹೊಸ ರೂಪಾವೇಶ ಪಡೆಯುತ್ತಿರುವ ಓರ್ವ ಜ್ವಲಂತ ಸಾಧಕನ ಭಾವತನಿರಸ ಹರಿದಿದೆ. ಕೆಲ ಸಾಲುಗಳನ್ನು ಗಮನಿಸಬಹುದು:

ದುರ್ಜನ ಸಂಗವು ಕಜ್ಜಿಯ ಬಗೆಯೊಳ್ ಕಷ್ಟವ ಕೊಡುವದು ಅವನೆಂದು||
ದುರ್ಜನ ಸಂಗಕ್ಕಿಂತಲು ಹೆಚ್ಚಿಗೆ ಒಬ್ಬನೆ ಇರುವದೆ ಲೇಸೆಂದ||
ಕುಣಿಯುತ ಮಣಿಯುತ ತಣಿಯುತ ನುತಿಸುತ ನಮಿಸುವ
ಲಿಂಗಕೆ ಬಲುಮುದದಿ||
ಹುಲಿಗಳು ಕರಡಿಗಳು ಇರುತಿಹವೆಂದರೆ ತಪವೇ ಧನವಾಗಿರುವರ್ಗೆ||
ಮಲ ಪಲ್ಲೆಯು ತೆರದೋಗುವವೈ ಶಾಂತಿ ಪ್ರಧಾನವಿರುವರ್ಗೆ||
ಲಿಂಗದ ಸುಖವೇ ಲಿಂಗದ ರತಿಯೇ ಲಿಂಗದ ನುಡಿಯೆ ನುಡಿಯಾಯ್ತು||
ಲಿಂಗಯ್ಯಾಂಗವ ನೋಡುವ ಲಿಂಗದ ಚಿತ್ಕಳೆ ಹಿರಿಯಾಯ್ತು||

ಪ್ರೊ. ಎಸ್. ಕೆ. ಕುಲಕರ್ಣಿಯವರು ಈ ಲಾವಣಿಯ ಲಾಲಿತ್ಯವನ್ನು ಹೀಗೆ ಗುರುತಿಸುತ್ತಾರೆ:

"ಲಾವಣಿಯುದ್ದಕ್ಕೂ ಜಾಲ ಲಾವಣಿಕಾರರು ಬಳಸಿದ ಭಾಷೆ ಮಹಾಮಹಿಮನ ಚರಿತ್ರೆಯನ್ನು ಮನಮುಟ್ಟುವಂತೆ ಚಿತ್ರಿಸುವಲ್ಲಿ ಫಲಕಾರಿಯಾಗಿದೆ. ಸರಳ ಶೈಲಿ, ಜನಪದ ಮಾದರಿ ಮತ್ತು ಲಾವಣಿಯ ತಾಳ ಮೇಳ ಇವೆಲ್ಲವೂ ಶ್ರೋತೃಗಳಿಗೆ ಪರಿಣಾಮ ಬೀರದೇ ಇರಲಾರವೆಂದು ಹೇಳಬಹುದು.... ಸಾಹಿತ್ಯದ ಅಳಿವನ್ನು ಉಳಿವಿನಲ್ಲಿ ಚೇತರಿಸಿದ ಶ್ರೀ ವಿಜಯ ಮಹಾಂತೇಶ್ವರ ಲಾವಣಿ, ಕನ್ನಡ ಲಾವಣಿ ಸಾಹಿತ್ಯದಲ್ಲಿ ತನ್ನ ವಿಶಿಷ್ಟ ಸ್ಥಾನ ಪಡೆದಿದೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ."೨

೧ ಚಿತ್ರುಫೆ: ಪುಟ ೨೨೩, ೨೨೪: ಡಾ. ಡಿ. ಎಸ್. ಕರ್ಕಿ.
೨ ಚಿತ್ರುಫೆ: ಪುಟ–೨೧೪.

ಉತ್ಸಾಹ ರಗಳೆಯ ಕಸುವಿನ ಕುಣಿತ: "ಶ್ರೀ ಮರುಳಸಿದ್ಧೇಶ್ವರ ಅಷ್ಟೋತ್ತರ ಶತನಾಮಾವಳಿ"

ಹಿಂದಿನ ಲಾವಣಿಗಿಂತ ಇಲ್ಲಿ ಒಂದು ಸ್ಪಷ್ಟವಾದ ಪ್ರಗತಿಯ ಹೆಜ್ಜೆ ಗಮನಿಸ ಬಹುದು; ಅದೆಂದರೆ ಉತ್ಸಾಹ ರಗಳೆಯ ಕಸುವಿನ ಓಟದಲ್ಲಿ ಪದಗಳು ತಾಳಕ್ಕೆ ಮೇಳವಾಗಿ ಜೊತೆಗೂಡಿರುವದು. ಪ್ರಾಂಜಲ ಭಕ್ತಿ, ನೀತಿ ನಿಷ್ಠೆಗಳು ಈ ಹೊಸ ಛಂದೋವಿನ್ಯಾಸದ ಸಡಗರದಲ್ಲಿ ಸಮತೂಕ ಪಡೆದಿವೆ.

ಪ್ರೊ. ಕೆ. ಎ. ಬನ್ನಿಟ್ಟಿಯವರು ಈ ನಾಮಾವಳಿಯ ಶಕ್ತಿ-ಶಿಸ್ತುಗಳ ಕೇಂದ್ರೀಕರಣ ಕಲೆಯನ್ನು ಕುರಿತು ಹೀಗೆ ಅಭಿಪ್ರಾಯ ತಾಳಿದ್ದಾರೆ:

"ಗದ್ಯದಲ್ಲಿ ಸಾವಿರ ಪುಟಗಳಲ್ಲಿ ಬರೆದಿಡಬಹುದಾದ್ದನ್ನು ಕವಿಯು ಪದ್ಯದಲ್ಲಿ ಸೂಚ್ಯವಾಗಿ; ಪ್ರತಿಮೆ, ಸಂಕೇತ, ಧ್ವನಿ, ಅಲಂಕಾರಗಳ ಮುಖಾಂತರ ಸಂಕ್ಷೇಪ ವಾಗಿ ನೂರಾರೇ ಸಾಲುಗಳಲ್ಲಿ ಬರೆಯಲು ಸಾಧ್ಯ. ಈ ಮಾತಿಗೆ ಮಹಾಂತದೇವರು ಬರೆದ ಈ ನಾಮಾವಳಿಯೇ ಸಾಕ್ಷಿ."೧

ಅವರಿನ್ನೂ ಮುಂದುವರೆದು ಶ್ಲಾಘಿಸಿದ್ದಾರೆ:

"ಈ ನಾಮಾವಳಿಯ ಭಾಷಾಶೈಲಿಯನ್ನು ಗಮನಿಸಿದಾಗ; ಬಳ್ಳಿಗೆ ಎಲೆ, ಹೂ, ಕಾಯಿ ಎಷ್ಟು ಸಹಜವಾಗಿ ಮೂಡಿಬರುವವೋ ಹಾಗೆ ಶ್ರೀಗಳಿಗೆ ಕಾವ್ಯ ಪ್ರತಿಭೆಯ ಅಭಿವ್ಯಕ್ತಿ ಉದಯವಾಗಿದೆ ಎಂಬುದಕ್ಕೆ ಕೆಳಗಿನ ಸಾಲುಗಳಲ್ಲಿ ಕಂಡು ಬರುವದು."

"ಬಡವ ನಾನು ಒಡೆಯ ನೀನು ನೀಡು ಮತಿಯ ಮರಳಸಿದ್ಧ"
"ಹೃದಯ ಗೃಹಕೆ ದೀಪವಿರದೆ ಕೊರಗುತಿರುವೆ ಮರುಳಸಿದ್ಧ"
"ಕಾಡಿ ಕಾಡಿ ದೂಡುತಿಹುದು ಮಾಯೆಯೆನ್ನ ಮರುಳಸಿದ್ಧ"
"ಹುಟ್ಟಿ ಹುಟ್ಟಿ ಸಾವುದನ್ನು ತಪ್ಪಿಸೆನಗೆ ಮರುಳಸಿದ್ಧ"೨

ಡಾ. ಡಿ. ಎಸ್. ಕರ್ಕಿಯವರು ಪೂಜ್ಯರ ಲಾವಣಿ ಹಾಗೂ ನಾಮಾವಳಿ ಗಳಲ್ಲಿ ಉತ್ಸಾಹ ರಗಳೆಯ ಲಯಗಳನ್ನು ಸೊಗಸಾಗಿ ಗುರುತಿಸಿದ್ದಾರೆ:

"ಶ್ರೀ ವಿಜಯ ಮಹಾಂತೇಶ ಲಾವಣಿಯಲ್ಲಿ ಅಂದಿನ ಉದಯೋನ್ಮುಖ ಕವಿ ಮಹಾಂತದೇವರು ತೋರಿದ ಮಂದಾನಿಲ ಗತಿಯ ಸರಳತೆ ಹಾಗು ಸುಗಮತೆ ಗಳನ್ನು ಮುಂದೆ ಅವರು ಮರುಳಸಿದ್ಧೇಶ್ವರ ಅಷ್ಟೋತ್ತರ ಶತನಾಮಾವಳಿಯಲ್ಲಿ ಹಾಗು ಶಿವಾನುಭವೇಶ್ವರ ಅಷ್ಟೋತ್ತರ ಶತನಾಮಾವಳಿಯಲ್ಲಿ ಉತ್ಸಾಹ ಗತಿಯ

೧ ಚಿತ್ಪ್ರಭೆ: ಪುಟ ೨೮೭,
೨ ಚಿತ್ಪ್ರಭೆ: ಪುಟ ೨೮೮.

ಮೂಲಕ ತೋರಿದ್ದುಂಟು. ಅಗುಳಿನ ಮೇಲಿಂದ ಅನ್ನದ ಪರೀಕ್ಷೆ ಮಾಡಬಹುದು."

"ಬಾಲಲೀಲೆ ತೋರ್ದು ಜನಕೆ ಮೋದವಿತ್ತ ಮರುಳಸಿದ್ಧ
ಫಾಲನಯನ ನೆನಹಿನಲ್ಲಿ ಕಾಲ ಕಳೆದ ಮರುಳಸಿದ್ಧ"

—ಮರುಳಸಿದ್ಧೇಶ್ವರ ಅ.ಶ.

"ದಾರಿತಪ್ಪಿ ನಡೆವರನ್ನು ಕಂಡು ನೊಂದ ಶಿವನೆ ಬಸವ"
"ದಾರಿ ತೋರಿ ಬೆಳಕ ನೀಡಿ ಕಳೆಯುತ್ತ ಶಿವನೆ ಬಸವ"

—ಶ್ರೀ ಶಿವಬಸವೇಶ್ವರ ಅ.ಶ.

"ಮೂರು ಮೂರು ಮಾತ್ರೆಗಳ ಎಂಟೆಂಟು ಗುಣಗಳು ಈ ಚರಣಗಳಲ್ಲಿ ಸರಾಗವಾಗಿ ಈ ಉತ್ಸಾಹ ಲಯದಲ್ಲಿ ನುಡಿಯುತ್ತವೆ ಎಂಬುದನ್ನು ಅರಿಯಬಹುದು."೧

ಕರಿಯನ್ನು ಕನ್ನಡಿಯಲ್ಲಿ ತೋರಿದ: "ಶಿವಬಸವೇಶ್ವರ ನಾಮಾವಳಿ"

ಲಿಂಗೈಕ್ಯ ಹಾವೇರಿ ಶ್ರೀ ಶಿವಬಸವಸ್ವಾಮಿಗಳ ತಪೋವನದ ಪಾವನ ಪರಿಸರ ಜಗದ್ಗುರುಗಳಿಗೆ ಮುಂದಿರದ ವಟುಜೀವನದಲ್ಲಿ ದೊರೆತಿರುವದಕ್ಕೆ ಈ ನಾಮಾವಳಿ ಸಾಕ್ಷಿ ನೀಡುತ್ತದೆ. ಪರಿಸರ ಕವಿಯ ನಿರರ್ಗಳ ರಗಳೆಯ ಭಾವ ನಿರ್ಭರ ಸೊಗಸು ಇಲ್ಲಿ ದಾಂಗುಡಿ ಇಟ್ಟಿದೆ. ಪ್ರತಿಚರಣದ ಅಂತ್ಯದಲ್ಲಿ ಬರುವ 'ಶಿವನೆ ಬಸವ' ಚರಣಾಂತ್ಯ ಭಕ್ತಿಪ್ರೇರಕವೂ, ಭಾವಪೂರಕವೂ ಆಗಿ ಬಂದಿದೆ:

ಶಿವನ ಯೋಗ ಮಾಡಿ ನಿರುತ ಸುಖವ ಪಡೆದ ಶಿವನೆ ಬಸವ।
ಯೋಗದಿಂದ ದಿವ್ಯತೇಜನಾಗಿ ಮೆರೆದ ಶಿವನೆ ಬಸವ॥
ತ್ಯಾಗ ಮೂರ್ತಿ ನಿನ್ನ ಕೀರ್ತಿ ಪೇಳಲಳವೆ ಶಿವನೆ ಬಸವ।....
ತಿಳಿಸು ಯೋಗ ಮುಕುತಿ ದಾರಿ ಅಪ್ಪನೆನಗೆ ಶಿವನೆ ಬಸವ।
ತಾಯಿ ತಂದೆ ಬಂಧು ಬಳಗ ನೀನೆ ಎನಗೆ ಶಿವನೆ ಬಸವ॥....
ಜ್ಞಾನ ನೇತ್ರ ದಿವ್ಯಗಾತ್ರ ವಿನುತ ಪಾತ್ರ ಶಿವನೆ ಬಸವ।
ಧ್ಯಾನಮೂರ್ತಿ ಧವಲ ಕೀರ್ತಿ ಪರಂಜ್ಯೋತಿ ಶಿವನೆ ಬಸವ॥....

ಪ್ರೊ. ಜಿ. ಎಂ. ತೇಗಡಿ ಅವರು ಈ ನಾಮಾವಳಿಯ ಸಹಜ ಸೊಬಗಿನ ಭಕ್ತಿ ಬಂಧುರತೆಯನ್ನು ಸಮರ್ಪಕವಾಗಿ ಗುರುತಿಸಿದ್ದಾರೆ:

೧ ಚಿತ್ಪ್ರಭೆ: ಪುಟ ೨೨೪, ೨೨೫.

"ಶಿವಬಸವ ಸ್ವಾಮಿಗಳ ನಿತಾಂತವಾದ ದಿವ್ಯ ವ್ಯಕ್ತಿತ್ವ, ಸಹಜ ಭಕ್ತರಾದ ಮಹಾಂತದೇವರ ಅಂತರಂಗದಲ್ಲಿ ಭಾವತರಂಗಗಳನ್ನು ಎಬ್ಬಿಸಿವೆ. ಆ ಭಾವಶಕ್ತಿ, ಕಾವ್ಯಶಕ್ತಿ, ಶರಣಭಕ್ತಿಗಳು ಮುಪ್ಪುರಿಗೊಂಡು ಈ ನಾಮಮಾಲೆಯಲ್ಲಿ ಸ್ವಾಮಿಗಳ ಭವ್ಯ ಜೀವನ ಮೂಡಿನಿಂದಿದೆ. ಮಹಾಂತದೇವರು, ಅನುಭಾವಿಗಳಾದ ಶಿವಬಸವ ಸ್ವಾಮಿಗಳ ಆಧ್ಯಾತ್ಮಿಕ ಸಾಧನೆಯ ಎತ್ತರಬಿತ್ತರಗಳೊಂದಿಗೆ, ಅವರ ಜೀವನದ ಸಕಲ ಸನ್ನಿವೇಶಗಳನ್ನು 'ಕರಿಯನ್ನು ಕನ್ನಡಿಯಲ್ಲಿ ತೋರುವಂತೆ' ಕಿರುಕೃತಿಯಾದ 'ನಾಮಾವಳಿ' ಯಲ್ಲಿಕಲಾತ್ಮಕವಾಗಿ ಸಮಾವೇಶಗೊಳಿಸಿದ್ದಾರೆ. ಇಲ್ಲಿ ಮಹಾಕವಿಯ ಉಜ್ವಲ ಕಲ್ಪನಾಶಕ್ತಿ, ಉದಾತ್ತ ದರ್ಶನ ಶಕ್ತಿಗಳು ಪ್ರಕಟವಾಗದಿದ್ದರೂ, ಸಹಜ ಕವಿತ್ವಕಮನೀಯವಾಗಿ ಕಂಗೊಳಿಸಿದೆ. ಸೊಗಸಾದ ಬಂಧುರ ಶೈಲಿ, ಪ್ರಾಸಾದಿಕ ಸರಳ ಭಾಷೆ, ತಾಳಬದ್ಧ ನಾದ ಮಾಧುರ್ಯ ಈ ಕೃತಿಯ ಕಳೆಯನ್ನು ಹೆಚ್ಚಿಸಿವೆ. ಪ್ರತಿ ಚರಣದ ಕೊನೆಗೆ ಬರುವ 'ಶಿವನೆ ಬಸವ' ಶಬ್ದದ ಪುನರಾವೃತ್ತಿ, ಶ್ರದ್ಧೆಯಿಂದ ಈ ನಾಮಾವಳಿಯನ್ನು ಪಠಿಸುವ ಸದ್ಭಕ್ತನ ಕರ್ಣಾನಂದಕ್ಕೆ ಕಾರಣವಾಗಿದೆ. ಮಹಾನುಭಾವಿಯ ಚರಿತ್ರೆ ಹಾಸು ಹೊಕ್ಕಾಗಿ ಹೆಣೆದುಕೊಂಡಿರುವದರಿಂದ ನಾಮಸ್ಮರಣೆಯಲ್ಲಿ ಮಗ್ನನಾದ ಭಕ್ತನ ಮನಃಪಟಲದ ಮೇಲೆ ಶಿವಬಸವ ಸ್ವಾಮಿಗಳ ಮೂರ್ತಿ ಸ್ವರೂಪ ಮೂಡಿನಿಲ್ಲುತ್ತದೆ."[೧]

ಕಂಪುಗುವ ಕಂದಪದ್ಯಗಳ ಮಾಲೆ: "ಪೂಮಾಲೆ"

ಉತ್ಸವರಗಳೆ ಕವಿಗೆ ನಾಮಾವಳಿಯಲ್ಲಿ ಒಲಿದು ಬಂದಂತೆ; 'ಪೂಮಾಲೆ' ಯಲ್ಲಿ ಕಂದಪದ್ಯ ಕಂಪುಗುವ ಪೂಮಾಲೆ ಹಾಕಿದೆ. ಇಡಿಕಾವ್ಯವನ್ನೇ ಬಿಡಿಬಿಡಿಯ ಕಂದಪದ್ಯಗಳಲ್ಲಿ ತೋರಣಗೊಳಿಸಲಾಗಿದೆ. 'ಮಹಾಂತ ದೇವರು' ಕಾಶಿಯಲ್ಲಿ ಪ್ರೌಢವ್ಯಾಸಂಗ ನಿರತರಾಗಿ; 'ಸಾಹಿತ್ಯರತ್ನ' ಮುಂತಾದ ಪದವಿಗಳನ್ನು ಸಂಪಾದಿಸಿದ ಪ್ರಬುದ್ಧ ಸ್ಥಿತಿಯಲ್ಲಿ ಈ ಕೃತಿ ಮೈದಾಳಿದೆ. ಇದರಲ್ಲಿ ೯೪ ಕಂದ ಪದ್ಯಗಳ ಸಂಯೋಜನೆ ಇದೆ. ಭಾವನೆಗೆ ತಕ್ಕಂತೆ ಮೇಳವಿಸಿದ ಈ "ಕಂದಂಗಳ್ ತನಿರಸಮುಕ್ಕಂದಂಗಳ್" ಎಂದು ಡಾ. ಡಿ. ಎಸ್. ಕರ್ಕಿ ಅವರು "ಪೂಮಾಲೆ"ಯ ಸೊಗಸನ್ನು ಸಾಧಾರಪಡಿಸಿದ್ದಾರೆ:

"ಪೂಮಾಲೆಯ ಮೊದಲಿನ ಹದಿನಾರು ಪದ್ಯಗಳು ಗುರುವಿನ ಮಹತಿಯನ್ನು ಕುರಿತು ಗುರುವಿನ ಅಡಿಗೆ ಸಲ್ಲಿಸಿದ ಪದ್ಯಪುಷ್ಪಗಳು. ಮುಂದಣ ಕೆಲವು ಪದ್ಯಗಳು

೧ ವಿಶ್ವಪ್ರಭೆ: ಪುಟ–೨೭೨

ಲಿಂಗದ ಹಾಗೂ ಜಂಗಮದ ಮಹತಿಗೆ ಮೀಸಲಾಗಿದ್ದ ಬಗೆಯನ್ನು ಸದ್ಭಾವದತ್ತ ಸುಳಿಯಿಸುತ್ತದೆ. ಆರಾಧನೆಯಲ್ಲಿ ಧ್ಯಾನ ಮುಖ್ಯ, ಧ್ಯಾನದ ರೀತಿಯನ್ನು ಸುಳುಹುಗಾಣಿಸುತ್ತ 'ಮನದೊಳ್ ನೆನೆಯುವ ಮನುಜಗೆ ಮನೆಯೇಂ ಮಠವೇಂ?' ಎಂದು ಹೇಳಿದ ನುಡಿ ಮನಸ್ಸನ್ನು ಹಿಡಿಯದಿರದು."

"ಪೂಮಾಲೆಯಲ್ಲಿ ಆ ತರುವಾಯ ಪವಣಿಕೆಗೊಂಡ ಕಂದ ಕುಸುಮಗಳು ನೀತಿ ನೈರ್ಮಲ್ಯಗಳ ಸುವಾಸನೆಯನ್ನು ಸೂಸಿವೆ. ದೇವಾರಾಧನೆಯಲ್ಲಿ ಚಿತ್ತ ವೊಂದಾಗುವುದಲ್ಲಿ ಧ್ಯಾನ ಮುಖ್ಯ ಎಂಬುದನ್ನು ಮನಮುಟ್ಟುವಂತೆ ಹೇಳಿದ್ದಾರೆ ಕವಿ. 'ಚಿತ್ತವು ನಿಲ್ಲದೆ ದೇವರ ಹತ್ತಿರ ಕುಳ್ಳಿರ್ದು ಹೆಚ್ಚು ಪೂಜೆ ಮಾಡಿದರೆ ಅದು ಕೃತ್ರಿಮ ಪೂಜೆ'. ಬಣ್ಣದ ಮಾತಿನಿಂ ಭಕ್ತಿ ಸಾಧ್ಯವಾಗದು ಎಂಬ ಅಭಿಪ್ರಾಯವು ಕೆಳಗಣ ಕಂದದಲ್ಲಿ ಚೆನ್ನಾಗಿ ಮನಂಬುಗುವಂತೆ ವ್ಯಕ್ತವಾಗಿದೆ...."

"ಕಣ್ಣಿನ ಕೊನೆಯೊಳಗಿರುತಿಹ
ಬಣ್ಣದ ಪಕ್ಷಿಯನು ಹಿಡಿದು ಕಟ್ಟುವರಾರೈ
ಅಣ್ಣಗಳೇ ಪೇಳಿರಿ ಬರಿ
ಬಣ್ಣದ ಮಾತಿನೊಳು ಸಾಧ್ಯವಾಗುವದಲ್ಲೈ॥"

"ಇಗೋ ಈ ಮುಂದಣ ಪದ್ಯ ಶಾಂತಿ ಸುಖದ ತಿರುಳನ್ನೇ ಚಿತ್ತದ ಮುಂದೆ ಎತ್ತಿಹಿಡಿದಂತಿದೆ."

"ಮನದೊಳ್ ಸಮತೆಯುದಳವಡೆ
ಮನೆ ಮಾಡಿಹುದಯ್ಯ ಶಾಂತಿ ಸುಖ ಸಂಪದವು
ಘನವಾದ ಸುಧೆಯ ಸೇವನೆ
ಯನುಕೂಲಿಸಿದಂಗೆ ಹಸಿವು ಬಾಧಿಪ್ಪದೆಂತೈ"

"ಕಂದವೆಂಬುದು ಹಳೆಯ ಛಂದೋಬಂಧ; ಆದರೇನು ಅದನ್ನು ಚೆನ್ನಾಗಿ ಪ್ರಯೋಗಿಸಿದರೆ ಅದು ಯಾವಾಗಲೂ ಹೊಸ ಆನಂದವನ್ನು ನೀಡಬಲ್ಲುದೆಂಬುದಕ್ಕೆ ಮಹಾಂತದೇವ ಗಂಗಾಧರ ಜಗದ್ಗುರುಗಳ ಪೂಮಾಲೆ ಸಾಕ್ಷಿಯಾಗಿದೆ ಎಂದು ಹೇಳಬಹುದು. ಪೂಮಾಲೆಯ ಕಂದಪುಷ್ಪಗಳು ಅಷ್ಟೊಂದು ಸೊಗಸಾಗಿವೆ; ಸದ್ಭಾವಯುಕ್ತವಾಗಿವೆ; ಸ್ವಾಗತಾರ್ಹವಾಗಿವೆ."೧

ಡಾ. ಎಸ್. ಎಂ. ವೃಷಭೇಂದ್ರ ಸ್ವಾಮಿಗಳು ಗುರುತಿಸುವಂತೆ:–"ದೇಸಿಯ ರಮ್ಯತೆ, ಹಾಗೆಯೇ ಸಂಸ್ಕೃತ ನುಡಿಯ ಹದ, ಈ ಪೂಮಾಲೆಯ ಶೈಲಿಗೆ ಒಂದು 'ಹದವಾದ ಪಾಕ'ವನ್ನೊದಗಿಸಿವೆ. ಧರ್ಮದ ಮರ್ಮ, ನೀತಿಯ ರೀತಿ, ನಡೆವಳಿಕೆಯ ಮಾರ್ಗದರ್ಶನ ಹಾಗೂ ಮಾನವ ಜನ್ಮದ ಪರಮ ಗುರಿಯನ್ನು ಈ

೧ ಚಿತ್ರಭೆ: ಪುಟ–೨೨೬, ೨೨೭

ಪೂಮಾಲೆಯ 'ನರುಗಂಪಿ'ನ ಪರವಿನಲ್ಲಿ ಕಾಣಬಹುದಾಗಿದೆ."೧ ಶ್ರೀ ಜ. ಚ. ನಿ. ಯವರು ಇವಕ್ಕೆ ಮುನ್ನುಡಿ ಬರೆಯುತ್ತ—"ಇದನ್ನು ಕಟ್ಟಿದ ಕವಿ ಒಳ್ಳೆಯ ಮಾಲೆಗಾರ....ಮಾಲೆಯನ್ನು ಮಾರಿ ಹಣ ಗಳಿಸುವ ಮಾಲೆಗಾರನಲ್ಲ, ತನ್ನ ಗುರುವಿನಲ್ಲಿ ತನಗಿರುವ ಭಕ್ತಿಯನ್ನು ಭಾವವನ್ನು ಈ ಪದ್ಯದ ಮೂಲಕ ಸಾರಿದ್ದಾನೆ" ಎಂದಿದ್ದಾರೆ.

ಜಗದ್ಗುರುವಾಗಿ ಆಯ್ಕೆಯಾಗುವ ಪೂರ್ವದಲ್ಲಿ ೧೯೫೪ ರ ಸುಮಾರಿಗೆ ಚಿತ್ತರಗಿಯ "ವಿಜಯಮಹಾಂತ ದೇವ"ರಾಗಿದ್ದ ಇವರ ಪ್ರೌಢವ್ಯಾಸಂಗ ಪ್ರಭೆಯು ಸಾಕ್ಷಿಯಾಗಿ "ಪೂಮಾಲೆ" ಜ್ಞಾನಕ್ಕೆ ಚಲುವಿನ ಬಳ್ಳಿ ಕಟ್ಟಿ ಗಂಧವಾಹಕವಾಗಿ ರಾರಾಜಿಸಿದೆ. ೨೫ ವರ್ಷಗಳ ಯೌವನದಲ್ಲಿ ಇವರ ಮನಸ್ಥಿತಿ ಎಷ್ಟೊಂದು ಭಕ್ತಿ ನಿರ್ಭರವೂ ನೀತಿಸಾಕ್ಷಿಕವೂ ಆಗಿತ್ತೆಂಬುದಕ್ಕೆ ಪೂಮಾಲೆ ಪ್ರಸನ್ನ ಸಾಕ್ಷಿ.

ಚಿತ್ತರಗಿ ಚಿತ್ತವೇ ಚಿತ್ರವಾಗಿ ಮೂಡಿದ: "ಪಥಿಕ"

ಶಿವನ ಪುಟ್ಟಿಯೊಂದಿಗೆ ಆತ್ಮದೀಪದ ಹೂಬುಟ್ಟಿ ಪಥಿಕನಾಗಿ ಏರಿದೆ, ವಿಶಾಲ ಗಗನಾಂಗಣದಲ್ಲಿ ಮೊದಲ ಕಿರಣಗಳನ್ನು ತೂರಿದೆ "ಪಥಿಕ"ದಲ್ಲಿ:

ಹೃದಯಾಕಾಶದಿ ಏರಿಸುಪುಟ್ಟಿ
ಅದರೋಳ್ ಸುಜ್ಞಾನ ದೀಪವನಿಟ್ಟು
ಮುತ್ತಿದ ಕತ್ತಲೆ ಮೊತ್ತವನಟ್ಟಿ
ಸುತ್ತುತ ಬರುತಿಹ ಗಾಳಿಯ ಕಟ್ಟಿ||
ನಭದಲಿ ಬೆಳಗಲಿ ಚಿನ್ಮಯ ಕಿರಣ
ತುಂಬಲಿ ಪುಟ್ಟಿಯು ದೇವರ ಸ್ಮರಣ
ಆಗಲಿ ಜನನದ ಮರಣದ ಹರಣ
ಇಂತೇರಿಸು ಶಿವಪುಟ್ಟಿಯ ಜಾಣ||

"'ಪಥಿಕ'....ಮೂಡಿ ಬಂದಾಗ ಕವಿ ಇನ್ನೂ ಚಿತ್ತರಗಿಯ ಮಹಾಂತದೇವ ರಾಗಿದ್ದರು. ಅಂದಿನ ಅವರ ಚಿತ್ತರಗಿಯ ಚಿತ್ತವೇ ಚಿತ್ರವಾಗಿ ಮೂಡಿದೆ 'ಪಥಿಕ'ದ ಕವಿತೆಗಳಲ್ಲಿ—ಎಂದು ಹೇಳಬಹುದು. ಪಥಿಕ ಕವನ ಸಂಗ್ರಹ ಪುಸ್ತಕದ ಮೇಲುಹೊದಿಕೆ ಪಥಿಕ ಸಾಗಿದ ಪಥವನ್ನು ಅಂಥವಾಗಿ ಸುಳುಹುಗಾಣಿಸಿದೆ. ಬೆಟ್ಟದ ಮೇಲೆ ಆಗ ಮೂಡುವ ಸೂರ್ಯ, ದಾರಿಯ ಆಚೆ ಈಚೆಯ ಎತ್ತರದ ಮರಗಳು, ಬೆಟ್ಟಬೆಟ್ಟಗಳ ಓರೆಪೆರಿ ಹೋಗುವಂತಹ ದಾರಿ, ಪ್ರಶಾಂತ ವಾತಾವರಣ

೧ ಚಿತ್ಪ್ರಭೆ: ಪುಟ—೨೪೯

ವನ್ನು ಸೂಚಿಸುವ ಹಂಸರ–ಇವೆಲ್ಲ ಸಮುಚಿತವಾಗಿ ರೇಖೆಗೊಂಡಿವೆ....'ಪಥಿಕ'ದ ಕವಿತೆಗಳಲ್ಲಿ ಭಾವಕ್ಕೆ ತಕ್ಕ ಛಂದಸ್ಸು ಹೊಂದಿಕೊಂಡಿವೆ ಎಂಬ ಮಾತನ್ನು ಮೊದಲು ಹೇಳಬಹುದು–'ಲಲಿತಪದ'ವನ್ನು ಈ ಕವಿತೆಗಳು ವಿಶೇಷವಾಗಿ ಒಳಗೊಂಡಿವೆ. ಮಂದಾನಿಲ ಉತ್ಸಾಹ ಲಯಗಳೂ ಅಲ್ಲಲ್ಲಿ ಸ್ಪಂದಿಸಿವೆ."೧

ಶ್ರೀ ಸ. ಸ. ಮಾಳವಾಡ ಅವರು 'ಪಥಿಕ'ದ ಐತಿಹಾಸಿಕತೆಯೊಂದಿಗೆ ಭವಿಷ್ಯದ ಪಥವನ್ನೂ ಗುರುತಿಸಿದ್ದಾರೆ: "'ಪಥಿಕ' ಕವನ ಸಂಕಲನವು ೧೯೫೮ ರಲ್ಲಿ ಪ್ರಕಟವಾಗಿದ್ದರೂ ಅದರಲ್ಲಿಯ ಕವನಗಳ ರಚನೆಯು ಕಾಲ ೧೯೫೦ಕ್ಕೆ ಪೂರ್ವದ್ದೆಂದು ತೋರುತ್ತದೆ. ಅಂತೆಯೇ ಆ ಕವನಗಳಲ್ಲಿ ನವೋದಯ ಕಾಲದ ದೃಷ್ಟಿ ಸ್ಪಷ್ಟವಾಗಿದೆ.......ಮಾನವನು ಪರಮಸತ್ಯದ ಯಾತ್ರಿಕನೇ ಅಹುದು. (A Pilgrim of ever lasting truth - Sri Aurobindo) ಆದರೆ ಈ ದೃಷ್ಟಿಯು ಬಹು ಜನರಿಗೆ ಇಲ್ಲವೆ ಬೇಗನೇ ಮೂಡಿ ಬರುವದಿಲ್ಲ. ಅಂತೆಯೆ ಅವರಿಗೆ ಬಾಳು ಗೋಳಿನ ಸಂತೆಯಾಗುವದು. 'ಪಥಿಕ' ಸಂಕಲನದ ಕವಿಗೆ ಮಾತ್ರ ಚಿಕ್ಕವಯಸ್ಸಿನಲ್ಲಿಯೇ ಈ ದೃಷ್ಟಿ ಮೂಡಿಬಂದಿದೆ. ಅಂದು ಅದು ಬೆಳೆಯುವ ಚೇತನದ ಗುರುತಾಗಿ ಕಂಡು ಬಂದಿತು. ಆಗ ಕಂಡು ಬಂದ ಗುರುತು ಈಗ ಫಲಪ್ರದವಾಗಿ ಕಾಣುತ್ತಿದೆ.....'ಪಥಿಕ' ಸಂಕಲನದ ಕವಿತೆಗಳ ರಚನೆಯ ಕಾಲದಿಂದ ಅವರು ಈಗ ಬಹು ಮುಂದೆ ಸಾಗಿದ್ದಾರೆ. ನಮ್ಮ ನಾಡಿನ 'ಮಹಾಪಥಿಕ' ಆಗಿದ್ದಾರೆ."೨

ಈ ಸಂಕಲನದಲ್ಲಿ ನಾಲ್ವತ್ತು ಪದ್ಯಗಳಿದ್ದು–ಆಯ್ಕೆಯಲ್ಲಿ ವೈವಿಧ್ಯತೆ ಇದ್ದರೂ ಆದರ್ಶದತ್ತ ನೆಟ್ಟನೋಟ, ಆಧ್ಯಾತ್ಮದಲ್ಲಿ ನಿಂತ ಭಾವ ಎಲ್ಲದರಲ್ಲೂ ಸ್ಥಾಯಿ ಆಗಿವೆ. ಆತ್ಮ ಜಾಗೃತಿಯತ್ತ ಕವಿಮನೋಭಾವ ಪ್ರಕಂಪಿಸಿದೆ–

"ಸಾಕಿನ್ನು ಎದ್ದೇಳಿ ಮೋಹನಿದ್ರೆಯ ಬಿಟ್ಟು
ಹೊರಬನ್ನಿ ಭರದಿಂದ ಜ್ಞಾನವಸ್ತ್ರವನುಟ್ಟು
ಮನದೊಳಗೆ ತುಂಬಿರುವ ಕಾಮದಾಸೆಯಸುಟ್ಟು
ತನುವಿನೊಳಗೆ ಹೊಕ್ಕಿರುವ ಭ್ರಾಂತಿಯನು ಬಿಟ್ಟು....
ತೆರೆಯಿರೈ ಒಳಗಣ್ಣು ಹರಿಯಿರೈ ಹಗ್ಗವನು
ಮುರಿಯಿರೈ ಮದವನ್ನು ತರಿಯಿರೈ ಶೋಕವನು
ಅರಿಯಿರೈ ಮುಂದಿನ ಹಿರಿಗುರಿಯ ದಾರಿಯನು" (ಉತ್ತಿಷ್ಠತ)

---

೧ ಚಿತ್ತಭೆ: ಜಗದ್ಗುರು ಗಂಗಾಧರ ಕವಿ: ಡಾ. ಬಿ. ಎಸ್. ಕರ್ಕಿ: ಪುಟ –೨೨೭–೨೨೮

೨ ಚಿತ್ರಭೆ: 'ಪಥಿಕ'ದ ನೆನಹು: ಪು: ೨೩೭–೨೩೮

ಈ ಪಥಿಕನ ಆಂತರಂಗಿಕ ಜ್ವಲಂತ ಪ್ರಜ್ಞೆ ಗಮನಿಸಿರಿ–

"ವಿಜಯ ಪಡೆಯದ ಮನುಜ
ಒಣಗಿರ್ಪ ಎಲೆಯಂತೆ
ಬತ್ತಿರುವ ಕೆರೆಯಂತೆ
ಒಡೆದ ಕನ್ನಡಿಯಂತೆ"- (ಶಮಿಸಮರ್ಪಣ)

ದಾರಿ ದೂರದೂರ. ಭಗವಂತನ ಕೃಪೆ ಪ್ರಾಣಕ್ಕಿಂತಲೂ ಪ್ರಿಯ. ಕಣ್ತೆರೆದು, ಹೃದಯ ತೆರೆದು ಹಾಡುವ ಹಾಡಿನಲ್ಲಿ ಈ ಆಹ್ವಾನವನ್ನು ಕಾಣಬಹುದು–

"ಬಾಗಿಲವ ತೆರೆದಿರುವೆ ಬಾ ಬೇಗ ಗುರುವೆ
ದಾರಿಯನು ನೋಡುತ್ತ ಕುಳಿತಿರುವೆ ಬಾ....
ಹೃದಯ ಮಂಟಪವೆನ್ನ ಚಿಚ್ಚರಣ ಕಿರಣಗಳ
ಹರಡುತ್ತ ಕತ್ತಲೆಯ ನಶಿಸುತ್ತ ಬಾ ಬಾ" (ಆಹ್ವಾನ)

ಇಂಥ ಮೇಲೇಳುವ ಚೇತನಕ್ಕೆ ಪ್ರೋತ್ಸಾಹವಿಲ್ಲನೆ ಫಲಶ್ರುತಿ ಇಲ್ಲ. ಪಯಣಿಗ ಪ್ರೋತ್ಸಾಹವಿಲ್ಲದೆ ದಣಿದು ಹೋಗುತ್ತಾನೆ.

"ಪ್ರೋತ್ಸಾಹವಿಲ್ಲದಲೆ
ವಾಸಿಸುವ ಆ ಬಾಳು
ರಸವಿರದ ಪಟ್ಟಣವಲ್ಲವೇ?" (–ಪ್ರೋತ್ಸಾಹ)
"ಪ್ರೇರಣೆಯೆ! ಧಾರುಣಿಗೆ ಚೇತನವ ಕೊಡುತಿಹುದು
ಪಥಿಕಂಗೆ ದಾರಿಯನು ತೋರಿ ಸುಖನೀಡುವುದು" (–ಪ್ರೇರಣೆಗೆ)

ಪಥಿಕ ಕಂಡುಕೊಂಡ ದರ್ಶನಗಳು ಹಲವು. ದೂರದ ಪಯಣ ತೋರಿದ ಬಹುಮುಖ ಅನುಭವಗಳು ಅನೇಕ. ಆ ಕಾಲದಲ್ಲಿ ಸ್ಪಂದಿಸಿದ ತರುಣಕವಿ ಮನೋಭಾವ ಎನಿತೊಂದು ದಿವ್ಯೋಜ್ವಲವಾಗಿತ್ತೆಂಬುದಕ್ಕೆ ಇಲ್ಲಿ ನಿದರ್ಶನಗಳಿವೆ. "ಈ ಭಾವಗೀತೆಗಳು ವಿವಿಧ ವಿಷಯಗಳನ್ನೊಳಗೊಂಡಿವೆ. ಸ್ವಾತಂತ್ರ್ಯ ಗೀತ, ವಿಜಯಗೀತ, ಆಹ್ವಾನ, ನಿಶೆಗೆ, ಪೊಟ್ಟೆ ಹೊಡೆವವ, ಶಿವಯೋಗ ಮಂದಿರ, ಮರೆಯಾದ ಮಹಾತ್ಮ, ಕವಿ, ನಾವಿಕನನ್ನು ಕುರಿತು, ಸುಕುಮಾರನಿಗೆ, ಕವಿ ಸಮರ್ಪಣ, ಉತ್ತಿಷ್ಠತ, ಪ್ರೇರಣೆಗೆ, ಹೀಗೆ ವಿವಿಧ ವಿಷಯಗಳನ್ನು ಕುರಿತು ಬರೆದ ಕವನಗಳು 'ಪಥಿಕ'ನ ದಾರಿಯಲ್ಲಿ ಕೂಡಿಬಂದಿವೆ. 'ಶಿವಯೋಗಮಂದಿರ' ಎಂಬ ಕವಿತೆಯಲ್ಲಿ ಹೃದಯವೆಂಬ ಶಿವಯೋಗಮಂದಿರವ ಬಾಗಿಲು ತೆರೆದುದನ್ನು ಕಾಣುತ್ತೇವೆ. 'ನಾವಿಕ' ಎಂಬ ಕವಿತೆಯಲ್ಲಿ ನಾವಿಕನಲ್ಲಿ ನಂಬಿಗೆಯನ್ನು ಇಟ್ಟ ಶರಣನನ್ನು ಕಾಣುತ್ತೇವೆ. 'ಸುಕುಮಾರ'ನಲ್ಲಿ ಸನ್ಮಾರ್ಗ ದೀಪಕನನ್ನು ಸಂದರ್ಶಿಸು ತ್ತೇವೆ. ಶಮಿ ಸಮರ್ಪಣದಲ್ಲಿ ಸುಜ್ಞಾನದ ಸುವರ್ಣವನ್ನು ವಿನಿಮಯಮಾಡುವ

ಸದ್ಭಕ್ತನು ಸುಳುಹುದೋರಿದ್ದಾನೆ. ಚಂದ್ರನಂತೆ ತಂಪು ತಳೆದು, ಸೂರ್ಯನಂತೆ ದೀಪ್ತಿಪಡೆದು ಸಲಿಲದಂತೆ ಸರಸವಾಗಿ ಕಾಣುವ ಕವಿಯ ದೃಷ್ಟಿ 'ಕವಿ' ಎಂಬ ಕವನದಲ್ಲಿ ಅರಳಿದೆ. ಹೃದಯವೆಂಬ ಭಾವಿಯನ್ನು ಸ್ವಚ್ಛ ಮಾಡುವ ನೇಗಿಲ ಯೋಗಿ ಹೊಟ್ಟೆ ಹೊಡೆವವನಿಗೆ ಎಂಬ ಅನುಭವ ಪರವಾದ ಪದದಲ್ಲಿ ದರ್ಶನ ಕೊಡುತ್ತಾನೆ. 'ಬಾಗಿಲನು ತೆರೆದಿರುವೆ ಬಾ ಬೇಗ ಓ ಗುರುವೆ' ಎಂದು ಮೊದಲಾಗುವ 'ಆಹ್ವಾನ' ಎಂಬ ಕವಿತೆಯಲ್ಲಿ ಭಕ್ತಿಭಾವ ಹುರಿಗೊಂಡು ನಿಂತಿದೆ. ನಂಬಿ ಕರೆವ ಕರೆ ಇಲ್ಲಿ ಸ್ವರವೆತ್ತಿದೆ. ಕವಿ ಇಲ್ಲಿ ಶಿವನನ್ನು ಹೃದಯ ಮಂಟಪಕ್ಕೆ ಆಹ್ವಾನಿಸಿದ್ದಾನೆ. 'ಬಳಲುತಿಹ ಬಡವರಿಗೆ ಆಹಾರದಾನಂದ ದೊರೆತಾಗ ನಿಜವಾದ ಸಂಪೂರ್ಣ ಸ್ವಾತಂತ್ರ್ಯ' ಎಂಬ ಉದ್ಗಾರ 'ಸ್ವಾತಂತ್ರ್ಯ' ಎಂಬ ಕವಿತೆಯಲ್ಲಿ ಕರುಣೆಯೊಂದಿಗೆ ಹೊರಹೊಮ್ಮಿದೆ. ಕವಿತೆ ತನಗೆ ಬರೀ ಆನಂದವನ್ನುಂಟು ಮಾಡಿದರೆ ಸಾಲದು ಜನ ಬದುಕಬೇಕೆಂಬ ನಿಸ್ವಾರ್ಥಭಾವವು ಮೂಡಿ ಬರಬೇಕು–ಎಂಬುದನ್ನು ಈ ಸಂಗ್ರಹದ ಒಂದೆರಡು ಕವಿತೆಗಳು ಸುಳುಹುಗಾಣಿಸಿವೆ. ಜಗದ್ಗುರು ಗಂಗಾಧರ ಕವಿಗಳಿಂದ ಹೀಗೆ ಕಾವ್ಯ ಗಂಗಾಧಾರೆ ಹೊನಲಾಗಿ ಹರಿದಿದೆ."೧

ಗದ್ಯದ ಪ್ರಥಮ ಕೃತಿ:
"ಅಪ್ಪಯ್ಯಸ್ವಾಮಿಗಳ ಚರಿತೆ"

"ಸದ್ಯದ ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳವರು ಮೂರುಸಾವಿರಮಠ ಹುಬ್ಬಳ್ಳಿ. ತಾವು ಇಲಕಲ್ಲದ ಮಹಾಂತದೇವರು ಆದಾಗ್ಗೆ ಬರೆದ ಅವರ ಗದ್ಯದ ಪ್ರಥಮ ಕೃತಿಯಿದು ಈ ಹೊಳಿಕೆಯಲ್ಲಿಯೇ ಅವರ ಸಾಹಿತ್ಯ ಪ್ರಭುತ್ವ ಮಿಂಚನ್ನು ಕಾಣಬಹುದು. ಈ ಪುಸ್ತಕದ ವೈಶಿಷ್ಟ್ಯವೆಂದರೆ ಇವರಲ್ಲಿ ಒಬ್ಬ ಸ್ವಾಮಿಯವರು ಮತ್ತೊಬ್ಬ ಸ್ವಾಮಿಯವರ ಜೀವನ ಚರಿತೆ ಬರೆದುದು. ಪೂಜ್ಯವನ್ನು ಕಲ್ಪಿಸುವದು ಪೂಜ್ಯರಿಗೆ ಸಾಧ್ಯವು. ಮಹಿಮೆಯನ್ನು ಕಾಣುವುದು ಮಹಾತ್ಮರಿಗೆ ಶಕ್ಯವು. ವಿಜಾಪುರ ಜಿಲ್ಲೆಯ ಆಗ್ನೇಯ ಮೂಲೆಯಲ್ಲಿರುವ ಇಲಕಲ್ಲ ಮಠದ ಆಗಿನ ಶ್ರೀ ಮಹಾಂತದೇವರು ಬೆಳಗಾವಿ ಜಿಲ್ಲೆಯ ಆಗ್ನೇಯ ಮೂಲೆಯಲ್ಲಿಯ ಸವದತ್ತಿ ಕಲ್ಮಠದ ಲಿಂ. ಶ್ರೀ ಮ. ನಿ. ಪ್ರ. ಅಪ್ಪಯ್ಯಸ್ವಾಮಿಗಳ ಬಗೆಗೆ ಬರೆದ ಜೀವನ ಚರಿತೆಯಿದು."೨

---

೧ ಉದ್ಧೃತ: ಜಗದ್ಗುರು ಗಂಗಾಧರ ಕವಿ: ಡಾ. ವಿ.ಎಸ್. ಕರ್ಕಿ. ಪು. ೨೨೯
೨ ಉದ್ಧೃತ: ಅಪ್ಪಯ್ಯ ಸ್ವಾಮಿಗಳ ಚರಿತೆ: ಡಾ. ವಸಂತ ಪಾಟೀಲ. ಪು–೨೯೯.

ಕಾಶಿಯ ಅಧ್ಯಯನ ಕಾಲವಲ್ಲಿ ವಿಜಯ ಮಹಾಂತ ದೇವರಿಗೆ (ಜಗದ್ಗುರುಗಳಿಗೆ) ಸ್ವಾಭಾವಿಕವಾಗಿ ಶ್ರೀ ರಾಮಕೃಷ್ಣ ಪರಮಹಂಸರ, ಸ್ವಾಮಿ ವಿವೇಕಾನಂದರ ಕವಿ ರವೀಂದ್ರರ ಹಾಗೂ ಮಹಾತ್ಮಾ ಗಾಂಧೀಜಿಯವರ ಜೀವನ ಚರಿತ್ರ ಗ್ರಂಥಗಳು ತುಂಬ ಪ್ರಭಾವ ಬೀರಿದವು. ಉತ್ತರ ಭಾರತದ ಮಹಂತರ ಬದುಕಿನ ಒಳಪುಟಗಳನ್ನು ನಾಡಿಗೆ ಬಿತ್ತರಿಸುವ ವಾಹಕ ಶಕ್ತಿಯಾಗಿ ನೂರಾರು ಚರಿತ್ರ ಗ್ರಂಥಗಳು ಗದ್ಯದಲ್ಲಿ ಕಾರ್ಯೋನ್ಮುಖವಾಗಿದ್ದವು. ಅವುಗಳ ನಿಕಟ ಅಧ್ಯಯನ ಅನುಸಂಧಾನ ಅನುಭವಗಳ ದಾರಿಯಲ್ಲಿ ಮಹಾಂತದೇವರು ಮೈದುಂಬಿದಾಗ; ತಮ್ಮವರೇ ಆದ ಕರ್ನಾಟಕದ ಹಿರಿಯ ಚೇತನಗಳನ್ನು ಮರೆಯಲೆಂತು ಸಾಧ್ಯ? ಹಾನಗಲ್ಲ ಕುಮಾರ ಸ್ವಾಮಿಗಳು, ಚಿತ್ತರಗಿ ವಿಜಯ ಮಹಾಂತಸ್ವಾಮಿಗಳು, ಹಾವೇರಿ ಶಿವಬಸವ ಸ್ವಾಮಿಗಳು, ಸವದತ್ತಿ ಅಪ್ಪಯ್ಯ ಸ್ವಾಮಿಗಳು, ಹುಬ್ಬಳ್ಳಿ ಗುರುಸಿದ್ಧರಾಜ ಯತೀಂದ್ರರು ಮುಂತಾದವರ ಬದುಕಿನ ಶ್ರೀಮಹಾ ಸಂಪುಟಗಳು ಇವರ ಅಂತರಂಗದ ಪುಟಪುಟದಲ್ಲಿ ಕುಣಿದಾಡಿದವು. ಇದರ ಫಲವೇ 'ಶ್ರೀ ಅಪ್ಪಯ್ಯ ಸ್ವಾಮಿಗಳ ಜೀವನ ಚರಿತ್ರೆ'. ೧೯೫೦ ರಲ್ಲಿ ಪ್ರಥಮ ಆವೃತ್ತಿಯಾಗಿ ಪ್ರಕಟವಾದ ಈ ೬೪ ಪುಟಗಳ ಚಿಕ್ಕಪುಸ್ತಕಕ್ಕೆ ಮುನ್ನುಡಿ ಬರೆಯುತ್ತ ಕವಿ ಎಸ್.ಡಿ. ಇಂಚಲ ಅವರು ಹೀಗೆ ಬರೆದಿದ್ದಾರೆ:

"ಅಪ್ಪಯ್ಯ ಶಿವಯೋಗಿಗಳ ಸಮಗ್ರವಾದ ಜೀವನವು ಸಂಕ್ಷೇಪವಾಗಿ ಇಲ್ಲಿ ಚಿತ್ರಿತವಾಗಿವೆಯಾದರೂ, ಹಸಿರು ಹುಲ್ಲಿನ ಎಸೆಯುವ ಮಂಜಿನ ಹನಿಯೊಂದರಲ್ಲಿ ಚಿತ್ರಿಸಲ್ಪಟ್ಟ ವಿಶ್ವದ ಚಿತ್ರದಂತೆ ನಿಸರ್ಗ ಸಹಜವಾಗಿದೆ; ಪರಿಪೂರ್ಣವಾಗಿದೆ. ಹನಿಯು ಸಣ್ಣದಾಗಿದ್ದರೂ ಅಲ್ಲಿ ತೋರುವ ಚಿತ್ರ ವಿಶ್ವದ ವಿರಾಟ ಚಿತ್ರ. ಹಾಗೆಯೇ, ಈ ಚಿಕ್ಕ ಹೊತ್ತಿಗೆಯಲ್ಲಿ ಶಿವಯೋಗಿಗಳ ಭವ್ಯ ಜೀವನದ ದಿವ್ಯವಾದ ಪ್ರತಿಬಿಂಬವಿದೆ."[೧]

ಲೇಖಕರ ಜೀವನದ ಬೆಳವಣಿಗೆಗೂ ಹಾಗೂ ಅಪ್ಪಯ್ಯ ಸ್ವಾಮಿಗಳ ಬದುಕಿನ ಬೆಳಕಿಗೂ ಸಾಮ್ಯಗುಣಗಳನ್ನು ಕಂಡುಕೊಂಡ ಶ್ರೀ ಎಸ್. ಡಿ. ಇಂಚಲ ಅವರು ಮುನ್ನುಡಿಯಲ್ಲಿ ಇನ್ನೂ ಹೇಳುತ್ತಾರೆ—

"ಲೇಖಕರ ಲೇಖಣಿಯು ಸತ್ವಯುತವಾಗಿ ಮುಂದುವರೆಯುತ್ತದೆ. ಶೈಲಿ ಸರಳವಾಗಿದೆ. ವಿಚಾರ ವೈವಿಧ್ಯಪೂರ್ಣವಾಗಿ ವಹಿಸುತ್ತದೆ. ಆ ಶಿವಯೋಗ ಸಾಧನೆಯ ಅಂತರ್ಮುಖದ ಚಿತ್ರ ಆಕರ್ಷಕವಾದ ರೀತಿಯಲ್ಲಿ ವರ್ಣಿಸಲಾಗಿದೆ. ಆತ್ಮಜ್ಞಾನದ ಆಳವು ಅಳವುಗಳನ್ನು ಆಚಾರ ಅನುಷ್ಠಾನಗಳನ್ನು ತಮ್ಮ ಅನುಭವದ ಒರೆಗಲ್ಲಿಗೆ ಹಚ್ಚಿ ಅಧಿಕೃತವಾಗಿ ಆವೇಶಪೂರ್ವಕವಾಗಿ ಬರೆಯಲ್ಪಟ್ಟಂತೆ ಅನಿಸು

೧. ಶ್ರೀ ಅಪ್ಪಯ್ಯಸ್ವಾಮಿಗಳ ಜೀವನ ಚರಿತ್ರೆ: ಮುನ್ನುಡಿ. ಪು–೬,೭

ತ್ತದೆ. ಅದು ಲೇಖಕರ ಆತ್ಮಸಂಶೋಧನೆಯ ಸ್ವಾನುಭವದ ಪ್ರತಿಬಿಂಬವಾಗಿದೆ ಯೆಂದು ಹೇಳಬಹುದು."೧

ಈ ಕೃತಿಯ ಗದ್ಯಶೈಲಿ ಹಿತವಾಗಿದೆ, ಮಿತವಾಗಿದೆ. ಸಂಸ್ಕೃತ ಭಾಷಾ ಪಂಡಿತರಾದ ಕಾಲದಲ್ಲಿ ಲೇಖಕರು ಇದನ್ನು ಬರೆದಿದ್ದರೂ ದೇಶಿ ಕನ್ನಡದ ಪದ–ಹೊಗರು–ಹಗುರು ಇಲ್ಲಿ ಎದ್ದು ಕಾಣುತ್ತದೆ. ಅಲ್ಲಲ್ಲಿ ಔಚಿತ್ಯಪೂರ್ಣವಾಗಿ ಸಂಸ್ಕೃತ ಪದಗಳು ಸಾಮರಸ್ಯ ಪಡೆದಿವೆ. ಮಾದರಿಗಾಗಿ ಕೆಲ ಸಾಲುಗಳನ್ನು ಪರಿಗಣಿಸಬಹುದು.

"… ಪಕ್ಷಿಗಳೆಲ್ಲವೂ ಕಿಲಕಿಲ ಧ್ವನಿಯನ್ನು ತೊರೆದು, ಮೌನವನಾಂತು ಸೂರ್ಯೋದಯವನ್ನೇ ಚಿಂತಿಸುತ್ತಿದ್ದವು. ಕನ್ನಡಾಂಬೆ ಹಸುರು ಸೀರೆಯನ್ನುಟ್ಟು ಕೊಂಡು ಶೋಭೆಯುಳ್ಳವಳಾಗಿ ಮೆರೆಯುವ ಆಶೆ ಹಿರಿದಾಗಿತ್ತು….ನಾಡಿನ ಮೂಲೆ ಮೂಲೆಯೂ ಹಾಹಾಕಾರ. ಹಸಿವೆಯನ್ನು ಕಳೆದು ಸುಖ ಸಾಮ್ರಾಜ್ಯದಲ್ಲಿ ಕುಳ್ಳಿರಿಸುವವರನ್ನು ಜನಸಂದೋಹವು ನಿರೀಕ್ಷಿಸುತ್ತಿತ್ತು. ತ್ಯಾಗಯೋಗಗಳ ಶಕ್ತಿ ಗಳು ಅಳಿಯುತ್ತಿದ್ದವು… ಸೂರ್ಯೋದಯವಾಯ್ತು. ಹಾಹಾಕಾರದ ಹುಬ್ಬಿಕೆ ಗಳು ನಾಶವಾಗಹತ್ತಿದವು. ರಾಜಸ ತಾಮಸ ಗುಣಗಳು ದಿಕ್ಕೆಟ್ಟು ಓಡಹತ್ತಿದವು. ಜೀವಗುಣಗಳು ಹೋಗಿ ದೇವಗುಣಗಳು ಪ್ರತಿಯೊಬ್ಬರಲ್ಲಿಯೂ ಉದ್ಭೂತ ವಾಗಲು ಪ್ರಾರಂಭಿಸಿದವು."೨

ಅಪ್ಪಯ್ಯ ಸ್ವಾಮಿಗಳ ಬಾಲ್ಯಲೀಲೆ, ಬಿದರಿ ಕುಮಾರಸ್ವಾಮಿಗಳ ಪ್ರಭಾವ, ಶಿವಯೋಗಮಂದಿರಕ್ಕೆ ಪ್ರಯಾಣ, ಮಲಪ್ರಭಾ ತಟದಲ್ಲಿ ಪಟುಜೀವನ ತಪಸ್ಸು, ಲೋಕಸೇವೆ ಮುಂತಾಗಿ ಈ ಸಹಜ ಗದ್ಯ ಹಂತ ಹಂತವಾಗಿ, ಓದುಗರನ್ನು ಎಲ್ಲಿಯೂ ನಿಲ್ಲಿಸಗೊಡದೆ, ಸೊಗಸಾಗಿ ಕರೆದೊಯ್ಯುತ್ತದೆ. ಪೂಜ್ಯ ಜಗದ್ಗುರುಗಳ ಇತ್ತೀಚಿನ ಗದ್ಯ ಸಾಹಿತ್ಯದ ವಿಶಿಷ್ಟ ಮಾದರಿಯ ಬರಹದ ಕುರುಹುಗಳನ್ನು ಇಲ್ಲಿಯೇ ಕಾಣಬಹುದು.

ಶಿವಚೇತನಕ್ಕೆ ಕವಿಚೇತನದ ಮೊದಲಮಾಲೆ: "ಮೊಗ್ಗೆಯ ಮಾಲೆ"

"ಬನ್ನದಿ ಬಳಲುವ ಕನ್ನಡ ಕುವರರ
ಅನ್ನವನೀಯುತ ಪೊರೆದಿರೋ ಶಿವ|

೧ ಶ್ರೀ ಅಪ್ಪಯ್ಯಸ್ವಾಮಿಗಳ ಜೀವನ ಚರಿತ್ರೆ: ಮುನ್ನುಡಿ. ಪು–೮
೨ ಶ್ರೀ ಅಪ್ಪಯ್ಯಸ್ವಾಮಿಗಳ ಜೀವನ ಚರಿತ್ರೆ: ಪು: ೧, ೨

ಎನ್ನಯಭಕುತಿಯು 'ಮೊಗ್ಗೆಯ ಮಾಲೆ'ಯ
ನಿನ್ನಯ ಪಾದಕೆ ಅರ್ಪಿಸುವೆ||"

ಎಂದು 'ಮೊಗ್ಗೆಯ ಮಾಲೆ'ಯನ್ನು ಮಹಂತದೇವರು ಕುಮಾರಯೋಗಿಗೆ ಸಮರ್ಪಿಸಿದ್ದಾರೆ. ಉತ್ಕಟ ಶ್ರದ್ಧೆ, ಪ್ರಜ್ಞಾಪೂರ್ಣಭಕ್ತಿ, ಕವಿವಾಣಿಯ ಚಲುವಿನಲ್ಲಿ ಇವರು ಜಗದ್ಗುರು ಪೀಠಾರೋಹಣ ಪೂರ್ವದಲ್ಲಿ ಬರೆದ ಸಾಹಿತ್ಯ ಕೃತಿಗಳಲ್ಲಿ ಕೊನೆಯ ಹಂತದಲ್ಲಿ ಇದೂ ಒಂದು. ಕಾವ್ಯಾತ್ಮ ಚೇತನವೇ ಗಿಳಿಯಾಗಿ, ಜೀವಾತ್ಮ ಚೇತನದ ಹೂದೋಟದಲ್ಲಿ, ಮೊಗ್ಗಿನಿಂದ ಮೊಗ್ಗಿಗೆ ಹಿಗ್ಗಿನಿಂದ ಹಾರಿದೆ ಕವಿಮನ ಇಲ್ಲಿ. ಇವರ 'ಪೂಮಾಲೆ'ಗೆ ಪೂರ್ವರಂಗವಾಗಿ 'ಮೊಗ್ಗೆಯ ಮಾಲೆ' ಮೂಡಿಬಂದಿದೆ.

"ಭವರೋಗ ವೈದ್ಯನೆ
ಭವಬಂಧನದಿ ಬಳಲಿ
ಬೆಂಡಾದ ಮಾನವರ
ನುದ್ಧರಿಸ ಬಾ ಬಾ||"

ಎಂಬ ಪ್ರಾರ್ಥನೆಯಲ್ಲಿ ಜಗದ ಸೊಗದ ಕನಸು ಕಾಣಲಾಗಿದೆ. ಪ್ರಟ್ಟ ಕವಿತೆಗಳ ಹೂಬುಟ್ಟಿಯ ಮೊಗ್ಗುಗಳು ಭವಿಷ್ಯದ ಭಾವಪ್ರಕಾಶನಕ್ಕೆ ನಾಂದಿಯಾಗಿವೆ.

"ಬೆಂದ ಜನಗಳಿಗೆಲ್ಲ ಮುತ್ತಿನಂತಹ ವಚನ
ಅಂದದಿಂದಲಿ ಪೇಳ್ದ ಸತ್ಯಶರಣರ ಬೀಡು
ಚಂದ್ರಶೇಖರನನ್ನು ಬೇಗನೊಲಿಸುವ ನಾಡು
ಕಂದ "ಮಹಂತ"ನು ಬರೆದ ಭಕುತಿಯಿಂದೀಪಾಡು"

—ಈ ಕಂದ ಮಹಂತನ ಹಾರೈಕೆ ಹಿರಿದಾಗಿದೆ. 'ಬೆಂದ ಜನಗಳಿಗೆಲ್ಲ ಮುತ್ತಿನಂತಹ ವಚನ' ನೀಡಲು ಲವಲವಿಸಿದೆ.

"ನೆಲದ ಮರೆಯ ಹೇಮದಂತೆ
ಫಲದ ಮರೆಯ ರುಚಿಯಂತೆ
ತಿಲದ ಮರೆಯ ತೈಲದಂತೆ
ಜಲದ ಮರೆಯ ಅನಲದಂತೆ"

ಈ ಕಂದನ ಮರೆಯ ಕವಿತಾ ಹೊನಲು ಆವಿರ್ಭೂತವಾಗಲು ಆಸರೆ ಬೇಡಿದೆ. ಆಗ—

"ಬಸವ ನಾಮವೆಮಗೆ ಜಪವು
ಬಸವ ನಾಮವೆಮಗೆ ತಪವು
ಬಸವ ಬಸವನೆಂಬುದದುವೆ

ಅಮೃತ ಧಾರೆಯು
ಬಸವನಾಮ ಮಹಿಮೆಯಿಂದ
ಮುಕ್ತಿದೊರೆವುದು"

ಬಸವನಾಮದಿಂದ ಶಿವನನ್ನು ನಿಲುಕುವ ಅಖಂಡ ವಿಶ್ವಾಸವಿದೆ. ಇಲ್ಲಿಯ 'ಒಂದು ಗಿಳಿ' 'ಶರಣರ ತೋಟ' 'ಪ್ರಾರ್ಥನೆ' 'ಕುಮಾರನ ಕರೆ' 'ಗುರುವಂದನಂ' 'ಕರುನಾಡ ಗೀತೆ' 'ಕಣ್ಮರೆಯಾದ ಯತಿತಿಲಕ' 'ಕವಿರತ್ನ' 'ಆಶೀರ್ವದಿಸು' 'ಮೊಗ್ಗೆಯ ಬೇಡಿಕೆ' ಮುಂತಾದ ಗೀತೆಗಳಲ್ಲಿ ಈ ಮಗುಭಾವ, ಶಿವಾನುಭವದ ಶೈಶವ ದಾಹ ಉನ್ಮೀಲಿತವಾಗಿವೆ. "ಮೊಗ್ಗೆಯ ಮಾಲೆಯಲ್ಲಿ ಹಳಗನ್ನಡ ಶೈಲಿಯಿದೆ, ನವೀನ ಛಂದವಿದೆ, ಶಿಥಿಲವಲ್ಲದ ಬಂಧವಿದೆ, ಪರಿಣತ ಪದಪುಂಜವಿದೆ, ಚಿತ್ರವನ್ನು ಆಕರ್ಷಿಸುವ ನಿರೂಪಣೆಯಿದೆ. ಹೃದಯಕ್ಕೆ ನಿರ್ಮಲತೆಯನ್ನು ತರುವ ಪ್ರಾಸಾದಿಕತೆಯಿದೆ. ಆ ಚಿದಾನಂದವನ್ನು ಚಿತ್ರೀಕರಿಸುವ ಚತುರತೆ ಮಾತಿಗೆ ಮೀರಿದುದಾಗಿದೆ. ಕವಿಯೆ ರಸಋಷಿಯಾಗಿ ಬಾಳುವನು; ಬದುಕುವನು ಕಾವ್ಯಮಯ ತಪವನ್ನಾಚರಿಸುತ್ತ ಎಂಬುದನ್ನು ಕಾಣಬೇಕಾದರೆ ಕವಿಯ ಕಾವ್ಯ ಕಲ್ಪನೆಯನ್ನು ಕಂಡುಂಡು ಅನುಭವಿಸಬೇಕಾದರೆ ಈ ಕೃತಿಯನ್ನು ಓದಿನೋಡಿಯಾಗಬೇಕು. ಕಾವ್ಯದುದ್ದಕ್ಕೂ ಅನುಭಾವ ರಸಗಂಗೆಯಾಗಿ ಹರಿದಿದೆ.... ಶಿವಯೋಗಮಂದಿರದ ಮಹಾಂತದೇವರು ಕನ್ನಡದ ಉತ್ತಮ ಸಾಹಿತಿ ಉನ್ನತ ಕವಿ ಎನ್ನುವದಕ್ಕೆ ನಿದರ್ಶನ ಈ ಕೃತಿ"[೧]

ಕನ್ನಡ ಕವಿಯ ಆಂಗ್ಲ ಸಾಹಿತ್ಯದ ಮೊದಲ ತೆನೆ: "Yogiraj of Karnatak"

ಕಾಶಿಯಲ್ಲಿ ಮಹಾಂತದೇವರ ಸಂಸ್ಕೃತ ವ್ಯಾಸಂಗ ಮಾರ್ಗದಲ್ಲಿ ಇಂಗ್ಲೀಷ ಅಧ್ಯಯನ ಜಿಜ್ಞಾಸೆ ನಿಲ್ಲಲಿಲ್ಲ. ಇದ್ದಬಿದ್ದ ಶಕ್ತಿಯನ್ನೆಲ್ಲ ಸಂಗ್ರಹಿಸಿ ಇಂಟರ್ ಮೀಡಿಯೆಟ್ ವರೆಗೆ ಓದಿದರು. ಅಷ್ಟರಲ್ಲಿ ಹುಬ್ಬಳ್ಳಿ ಜಗದ್ಗುರು ಪೀಠದ ಕರೆ ಬಂದುದರಿಂದ ಡಿಗ್ರಿಯ ಪರ್ಜಿಗಾಗಿ ಕಾಯದೆ ಕನ್ನಡ ನಾಡಿಗೆ ಬಂದರು. ಡಿಗ್ರಿ ದೊರೆಯದಿದ್ದರೂ ಅಧ್ಯಯನ ನಿಲ್ಲಲಿಲ್ಲ. ಕಾಶಿಯ ವಿದ್ಯಾರ್ಥಿದೆಶೆಯ ಕೊನೆಯ ಸಾಹಸ ಈ ಇಂಗ್ಲೀಷ ಜೀವಚರಿತ್ರೆ ಪುಸ್ತಕದ ರೂಪದಲ್ಲಿ ಮೂಡಿಬಂತು. ಇಂಗ್ಲೀಷಿನಲ್ಲಿ 'ನಾನೂ ಬರೆಯುತ್ತೇನೆ' ಎಂಬ ಅವರ ಮನೀಷೆ ಮೂರ್ತಗೊಂಡಿತು. ಕನ್ನಡ, ಸಂಸ್ಕೃತ, ಹಿಂದಿ, ಇಂಗ್ಲೀಷ ಭಾಷೆಗಳಲ್ಲಿ ಲಘು ಲೇಖನ-ಕವನ-ಕಿರುನಾಟಕಗಳನ್ನು ಬರೆದರು. ಅವುಗಳಲ್ಲಿ ಬಹುಪಾಲು ನಾಶವಾದವು.

---

೧ ಚಿತ್ತಘೆ: 'ಮೊಗ್ಗೆಯ ಮಾಲೆ': ಎ. ಎಸ್. ಹೂಗಾರ: ಪು–೨೭೫ ೨೭೬

ಆಳಿದುಳಿದು ಕೊಂಡುಬಂದ "Yogiraj of Karnatak" ಎಂಬ ತೃಟಿತಮುದ್ರಿತ ಕಿರುಹೊತ್ತಿಗೆ ದೊರೆತಿದೆ. ಇದು ಚರಿತ್ರಾತ್ಮಕ ಲೇಖನವಾಗಿದ್ದು ಪುಸ್ತಿಕೆಯ ರೂಪ ಪಡೆದಿದೆ. ಹಾನಗಲ್ಲ ಕುಮಾರಸ್ವಾಮಿಗಳ ಜೀವನ ದರ್ಶನವನ್ನು ಹೊರನಾಡಿನ; ಮುಖ್ಯವಾಗಿ ಉತ್ತರ ಭಾರತದ ಆಂಗ್ಲ ಅಭ್ಯಾಸಿಗಳಿಗೆ ತಿಳಿಯ ಹೇಳುವ ತಿಳಿ ಭಾವನೆಯ ಯತ್ನದಲ್ಲಿ ಈ ಲೇಖನ ಬಂದಿದೆ. ಈ ಇಂಗ್ಲೀಷ ಗದ್ಯಲೇಖನದ ಗುಣವಿಮರ್ಶೆಯನ್ನಿಲ್ಲಿ ಮಾಡುವದು ಅಪ್ರಸ್ತುತ. ಕಾರಣ ತೀರಾ ಎಳೆವಯಸ್ಸಿನ ವಿದ್ಯಾರ್ಥಿ ಜೀವನದ ಪ್ರಾಪ್ತ ಆಂಗ್ಲ ಜ್ಞಾನದಿಂದ ಇಲ್ಲಿಯ ಸಾಲುಗಳು ಸಡಿಲು ಸಡಿಲಾಗಿ ಸಿದ್ಧವಾಗಿವೆ. ಇಲ್ಲಿ ಪ್ರಬುದ್ಧತೆ ಮುಖ್ಯವಲ್ಲ; ಮುಗ್ಧತೆ ಮುಖ್ಯ. ಕಿರಿಯ ವಯಸ್ಸಿನಲ್ಲಿ ಹಿರಿಯ ಚೇತನದ ಪರಿಚಯವೊಂದನ್ನು ಪೊರನಾಡಿಗೆ ನೀಡ ಬಯಸಿದ ಹವಣು ಇಲ್ಲಿ ಗಮನಾರ್ಹವಾಗಿದೆ.

ಪ್ರಯೋಗ ರಂಗವಾಗಿರುವ
ಪೂರ್ವರಂಗದ ಪ್ರಶಾಂತ ಸರೋವರ

'ವಿಜಯಮಹಾಂತ ಲಾವಣಿ', 'ಮರುಳಸಿದ್ಧೇಶ್ವರ ನಾಮಾವಳಿ', 'ಶಿವ ಬಸವೇಶ್ವರ ನಾಮಾವಳಿ', 'ಪೂಮಾಲೆ', 'ಪಥಿಕ', 'ಅಪ್ಪಯ್ಯ ಸ್ವಾಮಿಗಳ ಚರಿತೆ', 'ಮೊಗ್ಗೆಯಮಾಲೆ','ಯೋಗಿರಾಜ ಆಫ್ ಕರ್ನಾಟಕ'(Yogiraj of Karnatak)-ಇಷ್ಟಕ್ಕೆ "ಶ್ರೀಮೂಜಗಂ" ಸಾಹಿತ್ಯಾಧ್ಯಯನ ವೇದಿಕೆಯ ಪೂರ್ವರಂಗ ಪರಿಸಮಾಪ್ತಿ ಯಾದಂತೆ! ಈ ಪೂರ್ವರಂಗವು ಅವರ ಮುಂದಿನ ವಿಶಾಲಸಾಹಿತ್ಯ ರಚನೆಗಳಿಗೆ ಪ್ರಯೋಗರಂಗವಾಯಿತು. ಇಲ್ಲಿಯೇ ಅವರ ಕಾವ್ಯಾಸ್ತ್ರಗಳು ಪರಿತನುರಿತಗೊಂಡವು. ಗದ್ಯ-ಪದ್ಯಗಳ ಓಘಗಳು ನಿರ್ಮಿತವಾದವು. ಈ ಪೂರ್ವರಂಗವು ಮುಂದಿನ ಸಾಹಿತ್ಯಕ್ಕೆ ಕೇವಲ ಪ್ರಯೋಗ ರಂಗವಾಗದೇ; ತನ್ನತನದ ಪ್ರತ್ಯೇಕ ವೈಶಿಷ್ಟ್ಯತೆ ಯನ್ನು ಕಾಯ್ದುಕೊಂಡಿದೆ. ಈ ಮೊದಲಗಟ್ಟದ ಬೆಟ್ಟದಲ್ಲಿ ಬಾಲ ಕವಿಚೇತನ ಸ್ವತಂತ್ರ ಕೋಗಿಲೆಯಾಗಿ ಹಾರಿದೆ, ಹಾಡಿದೆ. ಇಲ್ಲಿ ದುಗುಡವಿಲ್ಲ, ದುಮ್ಮಾನವಿಲ್ಲ, ಆಧುನಿಕ ಜಗತ್ತಿನ ಸುಗ್ಗಾನೆಗ್ಗುಗಳು (Stress and strain) ಇಲ್ಲ. ಇಲ್ಲಿ ಶಾಂತಿ ಸಹಜವಾಗಿದೆ; ಅಲ್ಲಿ ಶಾಂತಿ ಕಸರತ್ತಾಗಿದೆ. ಯಾವ ಜವಾಬ್ದಾರಿಗಳೂ ಇಲ್ಲದ ಈ ಮುಗ್ಧ ವಿದ್ಯಾರ್ಥಿ ಜೀವನದ ಹರಹು ಹಸನಾಗಿದೆ. ಭವಿಷ್ಯ ಜೀವನದ ಭಾರಿ ಜವಾಬ್ದಾರಿಗಳ ಸಾವಿರ ಲಕ್ಷ ಚಿಂತೆಗಳ ಸಂತಿ ಇಲ್ಲಿಲ್ಲ. ಈ ದೃಷ್ಟಿಯಿಂದ ಪೂಜ್ಯ ಜಗದ್ಗುರುಗಳ ಸಾಹಿತ್ಯ ರಸವಾಹಿನಿಯ ಈ ಪೂರ್ವರಂಗವೂ ಪ್ರಯೋಗ ರಂಗ ವಾಗಿರುವದು ನಿಜವಾದರೂ; ಇದಕ್ಕೆ ತನ್ನತನದ ಧ್ವನಿಯಿದೆ, ತನ್ನತನದ ಹೊನಲಿದೆ.

ದಾರ್ಶನಿಕ ಕವನ ರೂಪಕ:
"ರತ್ನಪಕ್ಷಿ"

ಸಾಹಿತ್ಯ ವಿಕಾಸದ ಪ್ರಯೋಗರಂಗ ಮುಗಿದು ಪ್ರಬುದ್ಧರಂಗ ತೋರಿ ಬಂದುದು "ರತ್ನಪಕ್ಷಿ"ಯ ಶ್ರೀದರ್ಶನದಿಂದ. ಪಕ್ಷಿ ರೂಪಕದಲ್ಲಿ ಆತ್ಮಪಕ್ಷಿ ಹಾರಿ ಬಂದಿದೆ:

ಹಾರುತಿಹುದು ರತ್ನಪಕ್ಷಿ
ಕೋರುತಿಹುದು ಆತ್ಮಸಾಕ್ಷಿ
ಗರಿಗೆದರಿ ಗಿರಿಯೇರಿ
ಕರೆಯುವದು ಗುರಿತೋರಿ||

ಹಾರುತಿದೆ ಚಿತ್ಪಕ್ಷಿ
ವ್ಯೋಮದಲಿ ತಿರುತಿರುಗಿ
ಕೊಳೆ ಕಳೆದು ನಿಶೆ ತೊಲಗಿ
ಬೆಳಗು ಬರೆ ಚಿರಮೋಕ್ಷ||

ಜೀವನ ವ್ಯೋಮದಲ್ಲಿ ಜೀವಪಕ್ಷಿ ಸತ್ಯಶಿವನ ಲಿಂಗರಸದ ತೋಟದತ್ತ ಅಪ್ಪಟ ಹಸಿವೆ (aspiration) ಯಿಂದ ಸಾಗುತ್ತಿದೆ. ಸದಾ ಅನ್ವೇಷಣೆ (Search for Truth) ಈ ರತ್ನಪಕ್ಷಿಯ ಕಾತರದ ಕೂಗಾಗಿದೆ. ರತ್ನಪಕ್ಷಿಯು ನಮ್ಮ ಜ್ಞಾನಪದ ಮಾನಸ ಮಂದಿರದಲ್ಲಿ ಮರೆಯಲಾರದ ಶುಭದ ಕುರುಹು. ರತ್ನವು ಆತ್ಮಾನಂದಾದೀಪಕ್ಕೆ ಸುಂದರ ನೆನಪು. ಬದುಕಿನ ಬೇಗುದಿಗಳಲ್ಲಿ ಪಂಜಾದ ಆತ್ಮ ಜ್ಯೋತ್ಯಾಗ್ನಿಯಾಗಿ ಚಿನ್ಮಯ ರತ್ನವಾದ ಆತ್ಮೋನ್ನತಿ (Transformation of Soul) ಯ ದಾರಿ ಈ ನೀಳ್ಗವಿತೆಯ ವಾಹಿನಿಯಾಗಿದೆ. ಆತ್ಮಾನುಭೂತಿ (Self-realisation) ಯಿಂದಲೇ ಈಶ್ವರಾನುಭೂತಿ (God-realisation) ಸಾಧ್ಯವೆಂಬುದು ಈ ಪ್ರಬುದ್ಧ ಯೋಗಿಗೆ ಗೊತ್ತಿರುವ ಗುರಿ.

ನೋಡಿದೊಡೆ ರತ್ನಪಕ್ಷಿ
ಯೋಡುವವು ಪಾಪಗಳು
ಪೇಳುವರು ಬಲ್ಲವರು
ತೆರೆಯುವುದು ಅಂತಶ್ಚಕ್ಷು||

ಅಂತರಂಗದ ಅರುಹಿನ ಕಣ್ಣು ತೆರೆದಿದೆ. ಶ್ರೀಶೈಲತೋಟದ ಅವಿಮುಕ್ತ ತ್ರಿಕೂಟವತ್ತ ಈ ಪಕ್ಷಿ ರಸಋಷಿಯಾಗಿ ವಿಹಂಗಮಾವಲೋಕನದಿಂದ ನೆಗೆಯುತ್ತಿದೆ. ಡಾ. ಜ. ಚ. ನಿ. ಯವರು ಶಿವಯೋಗ ದರ್ಶನದ ಅನುಭಾವ ಗೀತೆಗೆ ನೀಡಿದ ದಾರ್ಶನಿಕ ವಿಶ್ಲೇಷಣೆ ಇಲ್ಲಿ ಗಮನಿಸಿರಿ:

"'ರತ್ನಪಕ್ಷಿ' ಇದೊಂದು 'ಶ್ರೀಮೂಜಗಂ' ಅವರ ಭಾವಗೀತ....ಕವಿಗುರು ತನ್ನ ಹೊರನೋಟವನ್ನು ಒಳನೋಟವನ್ನಾಗಿರಿಸಿದ್ದಾರೆ. ರತ್ನಪಕ್ಷಿಯನ್ನು ಕಂಡ ಇವರ ಅಕ್ಷಿ ಅದೊಂದು ಅಂತರಾಕ್ಷಿ....ಬಾಳಿಗೆ ಬೆಳಕನ್ನು ತರುವ ಅರಿವಿಗಿಂತ ಬೇರಿಲ್ಲ ರತ್ನ; ಬೇರಿಲ್ಲ ಯತ್ನ....ಅದು ಹಾರುತಿಹುದು. ಎಲ್ಲಿಗೆ? ಪ್ರಪಂಚದಿಂದ ಪರಮಾರ್ಥದತ್ತ! ನೆಲದಿಂದ ಮುಗಿಲಿನತ್ತ!! ಆಧಾರದಿಂದ ಆಜ್ಞೇಯದತ್ತ, ಸಹಸ್ರಾರದತ್ತ, ಶಿಖಾಚಕ್ರದತ್ತ!!! ಅದು ಕೋರುವದು ಆತ್ಮ ಸಾಕ್ಷಿಯನ್ನು, ಸತ್ಯ ಸಾಕ್ಷಿಯನ್ನು....ಆತ್ಮ ಸಾಕ್ಷಿಗಿಂತ ಅತ್ಯಧಿಕ ಸಾಕ್ಷಿಯಿಲ್ಲ....ಬನದ ಹಕ್ಕಿ ಮನದ ಹಕ್ಕಿಯಾಗಿ ರೂಪಗೊಂಡಿದೆ. ನಿಜಕಂಡ ನಿಜಗುಣ ಶಿವಯೋಗಿಗೆ ಕೋಗಿಲೆ ಮನವಾಗಿ ರೂಪಗೊಂಡಿದ್ದರೆ ಈ ಶ್ರೀಮೂಜಗಂ ಅವರಿಗೆ ರಸ್ನವೆಳಗಿನ ಜ್ಞಾನವಾಗಿ ರೂಪುಗೊಂಡು ದೃಷ್ಟಾಂತ ದಿವ್ಯತೆಗೇರಿದೆ. ವಿಹಗವಾಗಿ ವಿಹರಿಸುತಿದೆ":

"ಮೇಲೊಮ್ಮೆ ಕೆಳಗೊಮ್ಮೆ
ಹಾರುವುದು ಭಯಗೊಂಡು
ತರುಗಳಿರುವ ಗುಂಪಿನೊಳು
ಕೂಡ್ರುವದು ಒಮ್ಮೊಮ್ಮೆ॥

"....ಇದು ನಿಸರ್ಗ ನಿಯತಿ! ಜಗಚಕ್ಷುವಾದ ರವಿ ನಿಚ್ಚ ಏರಿ ಇಳಿಯುತ್ತಾನೆ. ಅಂತೆಯೆ ಪಕ್ಕಿಯೂ ಏರಿ ಇಳಿಯುತ್ತದೆ,....ಅದೋ ನೋಡಿ; 'ತರುಗಳಿರುವ ಗುಂಪಿನೊಳು ಕೂಡ್ರುವುದು ಒಮ್ಮೊಮ್ಮೆ!'....ರತ್ನಪಕ್ಷಿ ತನ್ನ ಎತ್ತರವ ಗುರಿಯನ್ನು ಮರೆತಿಲ್ಲ, ಮರತು ಕುಳಿತಿಲ್ಲ."

ತೋರುವುದು ಬಣ್ಣವನು
ಕೌದ್ರವನು ನಶಿಸುವುದು
ನರರಿದನು ನೋಡುವರು
ಮರವೆಯನು ಕಳೆಯುವರು

"....ಜ್ಞಾನ ದರ್ಶನೋಚಿತ ತಾನೆ? ಅಂತೆಯೆ ನರರಿದನು ನೋಡುವರು. ಮರವೆಯನು ಕಳೆಯುವರು. ಜ್ಞಾನವನ್ನು ಕಂಡ ಬಳಿಕ ಅಜ್ಞಾನವುಳಿಯುವದು ಹೇಗೆ? ಅರಿವು ಮರವೆಯ ವೈರಿ....ಈ ಕವನದುದ್ದಕ್ಕೂ ಕವಿಯ ಅಂತರ್ದೃಷ್ಟಿಯನ್ನು ದೃಷ್ಟಿಸುತ್ತೇವೆ, ಭಾವಸೌಂದರ್ಯವನ್ನು ಕಾಣುತ್ತೇವೆ. ರಸಮಾಧುರ್ಯವನ್ನು ರುಚಿಸುತ್ತೇವೆ."೧

ಶ್ರೀಮೂಜಗಂ ಅವರ ಒಂದು ಕವನ ಒಂದು ಇಡಿಯಾದ ದಾರ್ಶನಿಕ ಪರಾಮರ್ಶೆಗೆ ಈಡಾಗಿರುವದು ಇದು ಮೊದಲ ಬಾರಿ.

---

೧ ಚಿತ್ಪ್ರಭೆ: ರತ್ನಪಕ್ಷಿ ಕವನ ಕುರಿತು: ಡಾ. ಜ. ಚ. ನಿ. : ಪು. ೨೩೧ ರಿಂದ ೨೩೬

ಕಾವ್ಯಲಿಂಗಕ್ಕೆ ಚಿಂತನಗದ್ಯದ ಮೊದಲ ಅಭಿಷೇಕ: "ಆಶೀರ್ವಾಣಿ" [ಭಾಗ-೧]

"ಮೂಜಗಂ" ಸಾಹಿತ್ಯ ಚಿಂತನ ಗದ್ಯಾತ್ಮಕವಾಗಿ ತನ್ನ ಭಾವ-ಭಾಷೆ-ಅಭಿವ್ಯಕ್ತಿಗಳ ಸುಸ್ಪಷ್ಟ ನಿಲುವು ಪಡೆದುದು "ಆಶೀರ್ವಾಣಿ"ಯಲ್ಲಿ. ಭಾಷೆ ಪ್ರೌಢ ಮಾತ್ರವಲ್ಲ; ಸರಳವಾಗಿದೆ. ಭಾವಗಹನ ಮಾತ್ರವಲ್ಲ;ಸಹಜವಾಗಿದೆ. ಇಲ್ಲಿರುವ ೪೯ ಉಪನ್ಯಾಸಗಳ ಹರವು ಕೂಡಾ ವೈವಿಧ್ಯಮಯ. ಸಾಹಿತ್ಯ, ಸಮಾಜ, ಸಂಸ್ಕೃತಿ, ಕಲೆ, ಧರ್ಮಸಮನ್ವಯ, ಕಾಯಕ, ದೇಶಭಕ್ತಿ, ಒಗ್ಗಟ್ಟು, ರಸದರ್ಶನ, ಋಷಿದರ್ಶನ, ಶಿವದರ್ಶನ ಮುಂತಾಗಿ ಅಂಗಲಾಗಿದೆ.

ಸರಳತೆ, ಸುಲಲಿತತೆ, ಸಂಪ್ರೀತಿ ಮೂಜಗಂ ಗದ್ಯಸಾಹಿತ್ಯದ ಮುಖ್ಯ ಲಕ್ಷಣ. ಈ ಗದ್ಯಕ್ಕೆ ಒಂದೆಡೆ 'ದರ್ಶನ ಪ್ರಜ್ಞೆ' ಇನ್ನೊಂದೆಡೆ 'ಸೌಂದರ್ಯ ಪ್ರಜ್ಞೆ' ಇರುವದು ಎದ್ದು ತೋರುತ್ತದೆ. ಅವರ 'ಸೌಂದರ್ಯ ಮತ್ತು ಕಲೆ', 'ಶ್ರೀನಿಜಗುಣ ಶಿವಯೋಗಿ', 'ಅಣ್ಣನ ಅನುಭಾವ ಕ್ರಾಂತಿ', 'ಶೀಲವೇ ಧರ್ಮ', 'ರಾಮಕೃಷ್ಣ ಪರಮಹಂಸರು', 'ಜಾಗತಿಕ ಶಾಂತಿಗೆ ವೀರಶೈವ ದರ್ಶನದ ಕೊಡುಗೆ', 'ಸ್ತ್ರೀಶಿಕ್ಷಣ', 'ಧ್ಯಾನಯೋಗ', 'ಭಗವಾನ್ ಬುದ್ಧ', 'ಭಾಷಾ ಬಾಂಧವ್ಯ' ಮುಂತಾದ ಲೇಖನಗಳಲ್ಲಿ ಈ ಅಗ್ರಶೈಲಿಯ ಲಕ್ಷಣಗಳನ್ನು ಗುರುತಿಸ ಬಹುದು.

"ಯಾತರದು ಹೂವೇನು ನಾತರವು ಸಾಲದೆ? -ಎಂಬ ಸರ್ವಜ್ಞನ ಲೋಕೋಕ್ತಿಯಂತೆ ಶ್ರೀಗಳು ತಾವು ಕಂಡುಂಡಂತೆ ಸಮಾಜದ ಸಣ್ಣದೃಷ್ಟಿ, ಸಂಕುಚಿತ ಮನೋಭಾವನೆಗಳಿಗೆ ತಕ್ಕ ಪರಿಹಾರವನ್ನು ಒದಗಿಸಿದ್ದಾರೆ. 'ನೀತಿ ಮತ್ತು ಸಮಾಜ', 'ಶಿಸ್ತು ಸಂಯಮ', 'ಸ್ವಾತಂತ್ರ್ಯ ರಕ್ಷಣೆ', 'ಅವಿಭಕ್ತಂ ವಿಭಕ್ತೇಷು', 'ಜಾತೀಯತೆಯ ಐಕ್ಯ', 'ಒಳಪಂಗಡಗಳು ಒಂದಾಗಬೇಕು', 'ಸ್ತ್ರೀ ಶಿಕ್ಷಣ' ಹಾಗೂ 'ಭಾಷಾಬಾಂಧವ್ಯ' -ಈ ಲೇಖನಗಳು ನಿಜಕ್ಕೂ ವಿಚಾರಾರ್ಹವಾಗಿವೆ. ....ಶ್ರೀಗಳ ದೃಷ್ಟಿ ವೈಯಕ್ತಿಕವಾಗಿರದೆ ಅದು ಸಾರ್ವತ್ರಿಕವಾಗಿದೆ.... ರಸವಿಲ್ಲದ ಹಣ್ಣಿನಂತೆ ನಮ್ಮ ಬಾಳು ನಿಸ್ಸತ್ವವಾಗಬಾರದೆಂಬುದು ಅವರ ಮತ. ಹೀಗೆ ಶ್ರೀಗಳವರ "ಆಶೀರ್ವಾಣಿ"; ಧರ್ಮ, ಆಧ್ಯಾತ್ಮ, ಸಾಹಿತ್ಯ, ಕಲೆ, ಸಂಸ್ಕೃತಿ, ಸಮಾಜ ಜೀವನ ಮತ್ತು ಹಲವಾರು ಪುಣ್ಯಜೀವಿಗಳ ಜೀವನಾದರ್ಶ ಸಿದ್ಧಿಗಳನ್ನೆಲ್ಲ ಗರ್ಭೀಕರಿಸಿಕೊಂಡು, ತನ್ನದೆ ಆದ ವೈಶಿಷ್ಟ್ಯದಿಂದ ಮೆರೆದಿದೆ. ಧರ್ಮ ಮತ್ತು ಸಾಹಿತ್ಯ ಎರಡನ್ನೂ ಒಂದುಗೂಡಿಸಿಕೊಂಡ ಭಾಷೆ, ಭಾವನೆ

ಗಳನ್ನು ನಿರಾಯಾಸವಾಗಿ ಧ್ವನಿಸುತ್ತದೆ. ಶ್ರೀಗಳ ಅಭ್ಯಾಸ, ಅನುಭವ, ಚಿಂತನ-ಮಂಥನಗಳಿಗೆ ಸಾಕ್ಷಿ ನುಡಿಯುತ್ತಿದೆ ಈ ಗ್ರಂಥ."[೧]

"'ಆಶೀರ್ವಾಣಿ' ಪೂಜ್ಯ ಜಗದ್ಗುರುಗಳ ವಾಙ್ಮಯ ತಪಸಿದ್ಧಿಯ ಸಂಕೇತವಾಗಿದೆ" ಎಂದು ಶ್ರೀ ಎನ್. ಕೆ. ಕುಲಕರ್ಣಿಯವರು ಅಭಿಪ್ರಾಯ ತಾಳಿದ್ದಾರೆ.[೨]

ಡಾ. ಎಚ್. ತಿಪ್ಪೇರುದ್ರಸ್ವಾಮಿಗಳು ಈ ಗ್ರಂಥಕ್ಕೆ ಮುನ್ನುಡಿ ಬರೆಯುತ್ತ ಮಾರ್ಮಿಕವಾಗಿ ಹೀಗೆ ಹೇಳಿದ್ದಾರೆ: "ಒಂದು ಮಾತಿನಲ್ಲಿ ಹೇಳಬಹುದಾದರೆ ಇಲ್ಲಿನ ಭಾಷಣಗಳಲ್ಲಿ ಅಧ್ಯಯನ, ಚಿಂತನ, ನಿರೂಪಣಾ ಸಾಮರ್ಥ್ಯಗಳು ಮುಪ್ಪುರಿಗೊಂಡಿವೆ. ಭಾಷೆ ಸರಳವಾಗಿದೆ, ಅರ್ಥಗರ್ಭಿತವಾಗಿದೆ; ನೇರವಾಗಿ ಮನಮುಟ್ಟುವಂತಿದೆ. ಸೂತ್ರ ರೂಪವಾದ ಅನೇಕ ಮಾತುಗಳು ಮತ್ತೆ ಮತ್ತೆ ಮನನ ಮಾಡುವಂತಿವೆ. ಉದಾಹರಣೆಗಾಗಿ: 'ಮನುಷ್ಯನಿಗೆ ವ್ಯಕ್ತಿತ್ವವೆಲ್ಲಿಂದ ದೊರೆಯುತ್ತದೆಂಬುದನ್ನು ಕೇಳಿದರೆ ಚಾರಿತ್ರ್ಯ ಬಲದಿಂದ ಎಂದು ಹೇಳಬಹುದು', 'ವಿಚಾರದ ತೆರೆಗಳು ವಿದ್ಯುತ್ತಿನ ತೆರೆಗಳಂತೆ ಅತ್ಯಂತ ಶಕ್ತಿಶಾಲಿಗಳಾಗಿವೆ', 'ಅಕಲ್ಯಾಣದಿಂದ ಕಲ್ಯಾಣದ ಭೂಮಿಯವರೆಗೂ ಮುಟ್ಟಿಸಿ ಚಿರಶಾಂತಿಯನ್ನೀಯುವ ವೃತ್ತಿಯನ್ನೇ ನಾವು 'ದೀಪ್ತಿ' ಎಂದು ಕರೆಯುವುದು', 'ಸಾಹಿತ್ಯದಲ್ಲಿ ಮನೋವಿಜ್ಞಾನವು ಕ್ಷೀರದಲ್ಲಿ ನವನೀತದಂತೆ ಕೂಡಿಕೊಂಡಿದೆ', 'ಅಕ್ಷರಜ್ಞಾನ ಬೆಳೆದಂತೆ ಅಂತರ್ಜ್ಞಾನ ಬೆಳೆದು ಸ್ವಾವಲಂಬನ ಜೀವನವನ್ನು ಸಾಗಿಸುವ ಹೊಣೆ ಹೊತ್ತುಕೊಳ್ಳುವ ಶಕ್ತಿ ಸಂಪನ್ನರಾಗಬೇಕು', 'ಬರೀ ವಿಚಾರವೇ ಬಾಳಿನಲ್ಲಿ ಸಾಲದು, ಆಚಾರವೂ ಕೃತಿಯಲ್ಲಿ ಇಳಿದಾಗ ಮಾತ್ರ ಪರಿಪೂರ್ಣ ಜೀವನ', 'ಯಾರ ಭಾವನೆ ಪರಿಪಕ್ವವಾಗಿ ಆತ್ಮ ಸಿದ್ಧಿ ಮತ್ತು ಸಮಾಜ ಸೇವೆಯತ್ತ ಹರಿದಾಡುತ್ತದೆಯೋ ಅಂಥವರು ಶರಣರು' –ಇಂತಹ ಅನೇಕ ಮಾತುಗಳನ್ನು ಎತ್ತಿ ತೋರಿಸಬಹುದು."[೩]

ಆಕಾಶವಾಣಿ; ಧಾರವಾಡದಿಂದ "ಆಶೀರ್ವಾಣಿ" ಕುರಿತು ತಮ್ಮ ವಿಮರ್ಶನ ಲೇಖನ ಮಂಡಿಸುತ್ತ ಪ್ರೊ. ಪಿ. ಕೆ. ಭಾಗೋಜಿಯವರು ಹೀಗೆ ಅಭಿಪ್ರಾಯ ತಾಳಿದ್ದಾರೆ "ಧರ್ಮದ ನಿಜಸ್ವರೂಪ ದರ್ಶನ ಮಾಡಿಸುವ ಭಾಷಣಗಳು ಇಲ್ಲಿ ಪೋಣಿಸಲ್ಪಟ್ಟಿವೆ. ಇಲ್ಲಿ ಆಧುನಿಕ ವಿಜ್ಞಾನ ದೃಷ್ಟಿಯು ಮೆಚ್ಚುವ, ಮುಚ್ಚಿ ಅಮುದನ್ನುವ ಸತ್ಯದರ್ಶನವಿದೆ. ವಿಚಾರಶೀಲತೆ ಕೇಳುಗರ ಮನದಲ್ಲಿ ಸ್ವತಂತ್ರ ವಿಚಾರಶೀಲತೆಯನ್ನು ಬೆಳೆಸುತ್ತದೆ. ಪರಂಪರಾಗತದ ಭಾವವೆಂದು ಅದಕ್ಕೇ

೧ ಡಾ. ಆರ್. ಸಿ. ಹಿರೇಮಠ: "ಆಶೀರ್ವಾಣಿ ಕುರಿತು": ಚಿತ್ರಭೆ ಪು. ೨೪೬

೨ ಶ್ರೀ ಎನ್. ಕೆ. ಕುಲಕರ್ಣಿ: "ಪೂಜ್ಯ ಜಗದ್ಗುರುಗಳ ವಾಙ್ಮಯ ತಪಃಫಲ ಆಶೀರ್ವಾಣಿ": ೨೫೫

೩ ಡಾ. ಎಚ್. ತಿಪ್ಪೇರುದ್ರಸ್ವಾಮಿ. ಮುನ್ನುಡಿ: ಆಶೀರ್ವಾಣಿ: ಪುಟ. ೩

ಅಂಟಿಕೊಳ್ಳುವ ರೀತಿಯನ್ನು ದೂರವಿಟ್ಟು, ಆತ್ಮ ನಿರೀಕ್ಷಣೆಯಿಂದ ಆತ್ಮಜಾಗ್ರತಿಯನ್ನುಂಟು ಮಾಡುವ ವಿಚಾರದ ವಿಚಾರ ಪ್ರಗಲ್ಭತೆಯಿದೆ. ಸಾಮಾಜಿಕ, ಸಾಹಿತ್ಯಿಕ, ಶೈಕ್ಷಣಿಕ, ಧಾರ್ಮಿಕ ರಂಗಗಳಲ್ಲಿ ಅದ್ಭುತ ಕಾರ್ಯವನ್ನು ಮಾಡಿರುವ ಶ್ರೀ ಶ್ರೀ ಜಗದ್ಗುರುಗಳವರು ತಮ್ಮ ಅಧ್ಯಯನ, ಚಿಂತನ, ಸಮದೃಷ್ಟಿ, ವಿಶಾಲ ಮನೋಭಾವನೆಗಳಿಂದ ಇಂದಿನ ಸ್ಥಿತಿಗತಿಗಳನ್ನು ಗುರುತಿಸಿ, ಅದಕ್ಕನುಗುಣವಾದ ರೀತಿಯಲ್ಲಿ ವ್ಯಕ್ತಿ ಸಮಾಜಗಳ ಜೀವನದಲ್ಲಿ ನೀತಿ–ಧರ್ಮಗಳನ್ನು ರೂಪಿಸಲು ಸಹಾಯವಾಗುವ ಸಂದೇಶಗಳನ್ನು ನೀಡಿದ್ದಾರೆ. ಅವರ ಪ್ರತಿಭಾಪೂರ್ಣ ವ್ಯಕ್ತಿತ್ವವು ಧರ್ಮಪೀಠದಲ್ಲಿ ಅರಳಿ ಈ 'ಆಶೀರ್ವಾಣಿ'ಯ ರೂಪದ ಪರಿಮಳವನ್ನು ತುಂಬೆಲ್ಲ ಹರಡಿದೆ. ರಸಜ್ಞತೆ, ದಾರ್ಶನಿಕತೆಗಳ ದಿವ್ಯಸಂಗಮವಿಲ್ಲದೆ."[೧]

ಆಶೀರ್ವಾಣಿ: ಭಾಗ: ೧ರಲ್ಲಿ ಮುಖ್ಯವಾಗಿ ಆಕಾಶವಾಣಿ (ಧಾರವಾಡ: ಗುಲಬರ್ಗ: ಬೆಂಗಳೂರ) ಮೂಲಕ ಬಿತ್ತರಿಸಿದ ಇಪ್ಪತ್ತು ಭಾಷಣಗಳು, ಶಿವಯೋಗಮಂದಿರದಲ್ಲಿ ನೀಡಿದ ನಾಲ್ಕು ಉಪನ್ಯಾಸಗಳು, ವಿವಿಧ ಶಿವಾನುಭವ ಸಮ್ಮೇಲನಗಳಲ್ಲಿ ಕೊಡಮಾಡಿದ ಮೂರು ವ್ಯಾಖ್ಯಾನಗಳು, ಬಸವಸಮಿತಿಯ ಕಾರ್ಯಕ್ರಮಗಳಲ್ಲಿ ನಿರೂಪಿಸಿದ ಎರಡು ಭಾಷಣಗಳು, ಬಸವಣ್ಣನವರ ಎಂಟನೆಯ ಶತಮಾನೋತ್ಸವದ ಎರಡು ವ್ಯಾಖ್ಯಾನಗಳು, ದಿಲ್ಲಿ ವಿಶ್ವಧರ್ಮಗಳ ಶಾಂತಿ ಪರಿಷತ್ತಿನಲ್ಲಿ, ಸರ್ವಧರ್ಮಗಳ ಸಮ್ಮೇಲನದಲ್ಲಿ, ಅಕ್ಕನಬಳಗ, ಕುಮಾರಶಿವಯೋಗಿ ಸಂಘ, ಮಹಿಳಾ ಕಾಲೇಜು, ಗೀತಾಜ್ಞಾನ ಯಜ್ಞದಲ್ಲಿ, ಬೌದ್ಧ ವಿಹಾರ ಮಂದಿರದಲ್ಲಿ ಒಂದೊಂದು ಉಪನ್ಯಾಸಗಳು: ಹೀಗೆ ಒಟ್ಟು ಮೂವತ್ತೊಂಬತ್ತು ಭಾಷಣಗಳ ಸಂಗ್ರಹವಿದೆ. ಈ ಪುಸ್ತಕ ಭಾರಿ ಜನಪ್ರಿಯತೆಯನ್ನು ಸಂಪಾದಿಸಿ ಇದರ ಮರುಮುದ್ರಣಗಳೂ ಮುಗಿದು ಹೋಗಿರುವದಕ್ಕೆ ಇದರ ಸರ್ವ ಗುಣ–ಧರ್ಮ–ವಿಚಾರಗಳ ಗುಣಗ್ರಾಹಿತ್ವವೇ ಮುಖ್ಯ ಕಾರಣವೆಂಬುದನ್ನು ಮರೆಯುವಂತಿಲ್ಲ.

ವಿಶ್ವಮಾನವತೆಯತ್ತ ಕೈಬೀಸಿ ಕರೆದ: "ಆಶೀರ್ವಾಣಿ" [ಭಾಗ–೨]

೧೯೭೧ ರಲ್ಲಿ "ಆಶೀರ್ವಾಣಿ" ಭಾಗ–೧ ಬಂದನಂತರ ಅದಕ್ಕೆ ಓದುಗರ ಸೂಕುಸುಗ್ಗಲು ದೊರೆಯಿತು. ಜಗದ್ಗುರುಗಳ ಪುಸ್ತಕಗಳಲ್ಲಿ ಹೆಚ್ಚು ಜನಪ್ರಿಯವಾದುದೆಂದು ಹೆಸರು ಗಳಿಸಿತು. ತತ್ಪರಿಣಾಮವಾಗಿ ಅನೇಕರು ಇದೇ ಬಗೆಯ

---

೧ ಪ್ರೊ. ಪಿ. ಕೆ. ಖಾಗೋಜಿ: ಆಶೀರ್ವಾಣಿ: ಚಿತ್ರುಫ: ಪು. ೨೬೦

ಆಶೀರ್ವಾಣಿಯನ್ನು ಎರಡನೇ ಭಾಗವಲ್ಲಿ ತರಲು ಕೇಳಿಕೊಂಡರು. ಅದು ಅವಶ್ಯಕವೂ ಇತ್ತು. ೧೯೭೧ ರಿಂದ ೧೯೮೧ ರ ವರೆಗಿನ ದಶಕದ ಕಾಲವಲ್ಲಿ ಮತ್ತೆ ಅನೇಕ ಭಾಷಣಗಳು, ಬಿಡಿಲೇಖನಗಳು ಪ್ರಕಟನೆಗೆ ಕಾಯುತ್ತಿದ್ದವು. ತತ್ಪರಿಣಾಮ ವಾಗಿ ೧೯೮೨ ರಲ್ಲಿ ಬಂದ ಈ ಎರಡನೆಯ ಭಾಗದಲ್ಲಿ; ಆರು ಆಕಾಶವಾಣಿ ಭಾಷಣಗಳು, ೩೨ ಲೇಖನಗಳು ಸೇರ್ಪಡೆಗೊಂಡವು. 'ವಿಶ್ವಮಾನವನೆಡೆಗೆ', 'ವಿಶ್ವ ಮಾನವ ಬಾಪೂಜಿ', 'ವಿಶ್ವವಿಭೂತಿ ಬಸವಣ್ಣನವರು', 'ಡಾ. ಹೋಮರ್ ಎ. ಜಾಕ್ ಅವರೊಡನೆ' ಮುಂತಾದ ಲೇಖನಗಳು ಇವರ ವಿಶಾಲಗೊಳ್ಳುತ್ತಿರುವ ವಿಶ್ವಮಾನ್ಯವಾಗುತ್ತಿರುವ ದೃಷ್ಟಿಯ ಸಾಹಿತ್ಯಿಕ ಲಕ್ಷಣಗಳಾಗಿವೆ. ಗದ್ಯಶೈಲಿಯಲ್ಲಿ ಇನ್ನಿಷ್ಟು ಸರಳತೆ, ಮಧುರತೆ, ಅರ್ಥಶಕ್ತಿ, ಚಿಂತನ ಚಲುವುಗಳು ಸ್ವಾಭಾವಿಕವಾಗಿ ಪಡೆಯಿಕ್ಕವೆ. ಅಲ್ಲದೆ 'ಭಾರತ ಹಾಗೂ ವೈವಿಧ್ಯತೆ', 'ರಾಮಚರಿತ ಮಾನಸವು ಚಿತ್ರಿಸುವ ಸಂಸ್ಕೃತಿ', 'ಕರ್ನಾಟಕ ರಾಜ್ಯೋತ್ಸವ', 'ಕಾಳಿದಾಸನ ಉಪಮೆಗಳು', 'ಕನ್ನಡ ಪತ್ರಿಕೋದ್ಯಮದ ಬೆಳವಣಿಗೆ' ಮುಂತಾದೆಡೆಯಲ್ಲಿ ಇವರು ದೇಶೀಯತೆಯ ಸಾಂಸ್ಕೃತಿಕ ಸೊಗಡನ್ನು ಮರೆತಿಲ್ಲವೆಂಬುದು ಖಚಿತವಾಗುತ್ತದೆ. 'ದೃಷ್ಟಿಯೋಗ', 'ಆತ್ಮಶ್ರೀ', 'ವೀರಶೈವ ದರ್ಶನ' ಗಳಲ್ಲಿ ಆಂತರಂಗಿಕ ಯೋಗಪ್ರಜ್ಞೆ ಕಾರ್ಯಗೈದಿದೆ. ಜಾತೀಯತೆಯನ್ನು ಮೀರಿದ ಮತಾತೀತ ಭಾವನೆ, ಒಮ್ಮುಖವಾಗಿರದ ವೈವಿಧ್ಯತೆ, ಬಂಧಿತವಾಗಿರದ ಬಹುಮುಖತೆ ಇಲ್ಲಿ ಎದ್ದು ಕಾಣುವ ಗುಣ.

"ಡಾ. ಬಿ. ವ್ಹಿ. ಯಕ್ಕುಂಡಿಮಠ ಅವರು ಷಷ್ಠ್ಯಬ್ಧಿ ಸಂಪುಟದಲ್ಲಿ ವಿಮರ್ಶಿ ಸುತ್ತ ಈ ಕೃತಿಯನ್ನು ಮೆಚ್ಚಿಕೊಂಡ ಮಾತಿದು:– "ಸನಾತನ ಧರ್ಮವಿಚಾರಿ ಗಳಾದ ಶ್ರೀಗಳವರು ಆಧುನಿಕ ದೃಷ್ಟಿಯನ್ನು ಗಮನದಲ್ಲಿರಿಸಿಕೊಂಡು, ಸಮಕಾಲೀನ ಸಮಾಜದ ಅಭ್ಯುದಯದ ಆವಶ್ಯಕತೆಗಳನ್ನು ಅರಿತು ಅನುಭವ ಪೂರ್ಣ ವಿಚಾರಗಳನ್ನು ಮಂಡಿಸಿ, ಬದುಕಿಗೆ ಹೊಸ ಆಯಾಮ ಕಲ್ಪಿಸಿಕೊಟ್ಟಿರು ವರು. ನಮ್ಮದು ಜಾತ್ಯತೀತ ಸಮಾಜ, ಸರ್ವಧರ್ಮಗಳ ಬೀಡು ನಮ್ಮ ಭಾರತ ಎಂಬ ಬರೀ ಒಣ ಮಾತುಗಳನ್ನು ಹೇಳದೆ ಇವುಗಳನ್ನು ಕಾರ್ಯರೂಪದಲ್ಲಿ ತಂದು; ವಿಶ್ವಪ್ರೇಮ, ವಿಶ್ವಶಾಂತಿಯನ್ನು ಸ್ಥಾಪಿಸುವಲ್ಲಿ ಪ್ರವೃತ್ತರಾಗಬೇಕೆಂಬ ಕಳಕಳಿಯ ಹಿತನುಡಿಯನ್ನಾಡಿರುವರು."

ಡಾ. ಡಿ. ಎಸ್. ಕರ್ಕಿಯವರು ಈ ಗ್ರಂಥಕ್ಕೆ ಮುನ್ನುಡಿ ಬರೆಯುತ್ತ ತಿಳಿಸಿ ದ್ದಾರೆ:– "ಈ ಎಲ್ಲ ವಿಚಾರಾತ್ಮಕ ಲೇಖನಗಳಲ್ಲಿ ಸದ್ಭಾವ ಸದ್ಬುದ್ಧಿಗಳ ಹೃದ್ಯವಾದ ಮೇಳವನ್ನು ನಾವು ಗುರುತಿಸಬಹುದಾಗಿದೆ....ವಿಚಾರಗಳ ನಿರೂಪಣೆಗೆ ಅನುರೂಪವಾದ ಭಾಷಾಶೈಲಿ ಇಲ್ಲಿ ಒಡಗೂಡಿ ಬಂದುದು ಒಂದು ವಿಶೇಷ. ವಿಷಯ–ವಿವೇಚನೆಗೆ ತಕ್ಕಂತೆ ಈ 'ಆಶೀರ್ವಾಣಿ'ಯ ಭಾಷಾಶೈಲಿ ಸುಸ್ಪಷ್ಟವೂ

ಬಂಧುರವೂ ಆದ ಗುಣವನ್ನೊಳಕೊಂಡಿದೆ. ಸತ್ವಯುಕ್ತವಾಗಿರುವಂತೆ ಸಲ್ಲಲಿತವೂ ಆಗಿದೆ. ಇಲ್ಲಿಯ ಸುವಿಚಾರಗಳ ಹಾಗೂ ಅವುಗಳ ನಿರೂಪಣೆಯ ಸವಿಧನಿಯನ್ನೂ ಶುಚಿ ರುಚಿಯನ್ನೂ ಓದುಗರು ಅನುಭವಿಸಿ ಅರಿಯಬಹುದಾಗಿದೆ"೧

"ನಮ್ಮ ಸನಾತನ ಧರ್ಮದ ಶಕ್ತಿಯುತವಾದ ಶ್ರೀಮಂತ ಪರಂಪರೆಯನ್ನು ಸಕ್ರಿಯಾತ್ಮಕವಾಗಿ ಅರಗಿಸಿಕೊಂಡ ಶ್ರೀ ಜಗದ್ಗುರುಗಳವರ ಆಧುನಿಕ ದೃಷ್ಟಿ ಇಂದಿನ ವಿಚಾರವಂತರನ್ನೂ ಮುಟ್ಟಬಲ್ಲುದು. ಆದುದರಿಂದಲೇ 'ಆಶೀರ್ವಾಣಿ' ವಿಚಾರವಾಣಿಯೂ ಆಗಿ ಪರಿಣಮಿಸಿದೆ"– ಎಂದು ಡಾ. ತಿಪ್ಪೇರುದ್ರಸ್ವಾಮಿಗಳು ಈ ಗ್ರಂಥದ ಮೊದಲ ಭಾಗಕ್ಕೆ ಬರೆದ ಮುನ್ನುಡಿಯ ಮಾತು; ಈ ಎರಡನೆಯ ಭಾಗಕ್ಕೂ ಅಷ್ಟೇ ಸಮರ್ಥವಾಗಿ ಸಲ್ಲುತ್ತದೆಯೆಂದು ಧೈರ್ಯದಿಂದ ಹೇಳಬಹುದಾಗಿದೆ.

"ಸಮಾಜವು ಒಡೆದ ಗಡಿಗೆಯಂತಾಗಿರುವದಯ್ಯಾ" ಎಂದು ಹಾಡಿದ ವಚನ ಗೀತ: "ಚಿತ್ಸುಮನ"

"ಭ್ರೂಲತಾ ಪ್ರಾಂಶ ಕರ್ತೃ ಜಗದ್ಗುರು ಗುರುಸಿದ್ಧೇಶ್ವರಾ" ಅಂಕಿತದಲ್ಲಿ ಜಗದ್ಗುರುಗಳು ಕೆಲವರ್ಷಗಳಿಂದ ಬರೆದ ವಚನಗಳು ೧೯೭೩ ರಲ್ಲಿ ಪ್ರಥಮ ಮುದ್ರಣ ಕಂಡು, ಅನಂತರ ೧೯೭೭ ಮತ್ತು ೧೯೮೩ ರಲ್ಲಿ ದ್ವಿತೀಯ–ತೃತೀಯ ಮುದ್ರಣಗೊಂಡಿರುವದು ಈ ಕೃತಿಯ ಜನಪ್ರಿಯತೆಗೆ ಸಾಕ್ಷಿ. ಅಲ್ಲದೇ ಇದೇ ಪುಸ್ತಕದ ಪ್ರಭಾವದಲ್ಲಿ ರಚಿತವಾದ ಇಂಗ್ಲೀಷ ಅನುವಾದವಾದ "Hearts Blossoms" ಕೃತಿ ಬ್ರುಸೆಲ್ಸ್ (Brussels) ದೇಶದ ಲ್ಯೂವೆನ್ (Leuven) ದಲ್ಲಿ ಡಾ. ಹೋಮರ ಎ. ಜಾಕ ಅವರಿಂದ ಬಿಡುಗಡೆಯಾಯಿತು.೨ ಕನ್ನಡದ ಕೆಲವು ವಚನಗಳನ್ನು ಇಂಗ್ಲೀಷಿಗೆ ತರ್ಜುಮೆ ಮಾಡಿದವರು ಪ್ರೊ. ಮೆನೆಝಿಸ್ ಮತ್ತು ಎಸ್. ಎಂ. ಅಂಗಡಿಯವರು. ಇವೆಲ್ಲಾ ಈ ಪುಸ್ತಕದ ಇತಿಹಾಸವನ್ನು ಗಮನಿಸಿದರೆ ರೋಮಾಂಚನವಾಗುತ್ತದೆ. ಈ ನಿಟ್ಟಿನಲ್ಲಿ "ಹೃದಯ ಪುಷ್ಪ"ಗಳಿಗೂ "ಚಿತ್ಸುಮನ"ದ ವಚನಗಳಿಗೂ ಸಮೀಪ ಸಂಬಂಧವನ್ನು ಗುರುತಿಸಬಹುದು.

ಡಾ. ಆರ್. ಸಿ. ಹಿರೇಮಠರು ಈ ಕೃತಿಯ ಬಗೆಗೆ ಅಭಿಮಾನದಿಂದ ಮುನ್ನುಡಿ ಬರೆಯುತ್ತ: ೨೦ನೆಯ ಶತಮಾನದ ವಚನಕಾರರ ಸಾಲಿನಲ್ಲಿ ಶ್ರೀ ಮೂಜಗಂ ಅವರು ಶ್ರೇಷ್ಠರಾಗಿದ್ದಾರೆಂದು ಸಾರಿದ್ದಾರೆ: "ವಚನ

೧ ಡಾ. ಡಿ. ಎಸ್. ಕರ್ಕಿ: ಮುನ್ನುಡಿ: ಆಶೀರ್ವಾಣಿ: ಭಾಗ -೨: ಪುಟ ೪
೨ ಈ ಸಮಾರಂಭದ ವಿವರವಾದ ವರದಿಯನ್ನು ಇದೇ ಲೇಖಕರ "ಪೂರ್ಣಜ್ಞ ಗಂಗಾಧರ" ದಲ್ಲಿ ಗಮನಿಸಬಹುದು.

ಭಾಂಡಾರದ ಶಾಂತರಸರು ಇದೀಗ ತಮ್ಮ ಅಸಂಖ್ಯಾತ ವಚನಕಾರರ ಭಾಂಡಾರದಲ್ಲಿ ಶ್ರೀ ಮೂಜಗಂ ಈ ಪೆಸರನ್ನು ಸೇರಿಸಿಕೊಳ್ಳಬೇಕಾಗುತ್ತದೆ. ಅಲೇಖನಾದ ಶೂನ್ಯದಲ್ಲಿ ಅವರ ಪರವಾಗಿ ನಾವೇ ಇಂದು ಆ ಕಾರ್ಯವನ್ನು ಪೂರೈಸಲೆ ಬೇಕಾಗಿದೆ."೧

ಈ ಮಾತು ಸಾಮಾನ್ಯವಲ್ಲ. ೨೦ನೆಯ ಶತಮಾನದ ವಚನಕಾರರಲ್ಲಿ ಶ್ರೀ ಮೂಜಗಂ ಅವರಿಗೆ ವಿಶಿಷ್ಟ ಸ್ಥಾನವಿದೆ; ಕಾರಣ ಇವರು ತಾವು ವಚನಗಳನ್ನು ಬರೆಯುವದರೊಂದಿಗೆ ಅನೇಕರ ವಚನಗಳನ್ನು ಪ್ರಕಟಗೊಳಿಸಿದರು (ಉದಾ:- ಸಂಗಮನಾಥನ ವಚನಗಳು); ಅಲ್ಲದೆ ೧೨ನೆಯ ಶತಮಾನದ ವಚನಕಾರರ ವಚನಗಳನ್ನು ಲಕ್ಷಾಂತರ ವೆಚ್ಚದಿಂದ ಪ್ರಕಟಿಸಿ ಪ್ರಸಾರಗೊಳಿಸಿದರು. ವಚನಕಾರರಾಗಿ ಅವರ ಸ್ಥಾನ "ಚಿತ್ಸುಮನ"ದಲ್ಲಿ ಒಳ್ಳೆಯ ಪಾತ್ರತ್ವ ಪಡೆದುಕೊಂಡಿದೆ. ೧೨ನೆಯ ಶತಮಾನದ ವಚನಗಳ ವಾತಾವರಣಕ್ಕೂ ೨೦ನೆಯ ಶತಮಾನದ ವಚನ ವ್ಯಾಪ್ತಿಗೂ ಸೂಕ್ಷ್ಮವ್ಯತ್ಯಾಸಗಳೂ ಯುಗಧರ್ಮದ ಅಭಿವ್ಯಕ್ತಿಯೂ ಇರುವದನ್ನು ಇಲ್ಲಿ ಗಮನಿಸಬಹುದು:

"ಸಮಾಜವು ಒಡೆದ ಗಡಿಗೆಯಂತಾಗಿಹುದಯ್ಯಾ
ಸಮಾಜವು ಬಲವಿಲ್ಲದ ರೋಗಿಯಂತಾಗಿಹುದಯ್ಯಾ
ಸಮಾಜವು ತಂತಿಯಿಲ್ಲದ ವೀಣೆಯಂತಾಗಿಹುದಯ್ಯಾ
ಸಮಾಜವು ಧೂಳು ಮುಸುಕಿದ ಕನ್ನಡಿಯಂತಾಗಿಹುದಯ್ಯಾ
ಇದು ಕಾರಣ,
ಒಲವು ಒಗ್ಗಟ್ಟಿಲ್ಲದ ಸಮಾಜವು
ಬರಿ ಮಾತಿಗರ ಮಾಲೆಯಾಗಿಹುದು ನೋಡಾ.
ಭೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ" ॥ ೧೦೨ ॥

ಈ ಸಮಾಜದ ಒಡಕಿಗೆ-ಕೆಡಕಿಗೆ ಕಾರಣವಾದ ಕೆಲವರ ಪೈಪೋಟಿ, ಮತ್ಸರಗಳ ವ್ಯಕ್ತಿಗತ ಸ್ವಭಾವಗಳೇ ಕಾರಣವೆಂಬುದನ್ನು ಇನ್ನೊಂದು ವಚನ ನಿರ್ದೇಶಿಸುತ್ತದೆ:

"ನಾ ಹೆಚ್ಚು, ನೀ ಹೆಚ್ಚು ಎನ್ನುವುದೆ
ಗುರುವಿರಕ್ತರ ಮಂತ್ರವಾಗಬಾರದು, ನೋಡಾ!
ಹೆಚ್ಚಿನ ಹೆಚ್ಚಳವರಿಯದೆ
ಇಚ್ಛೆಗೆ ಬಂದಂತೆ ಮೆರೆವುದ

೧ ಡಾ. ಆರ್. ಸಿ. ಹಿರೇಮಠ : ಚಿತ್ಸುಮನ : ಮುನ್ನುಡಿ : ಪುಟ-೧

ತಂತ್ರವಾಗಬಾರದು, ನೋಡಾ!
ಆತ್ಮ ಸೌಂದರ್ಯವನು ಗಳಿಸದೆ,
ಸಮಾಜ ಹಿತಚಿಂತನೆಗೆಳಿಸದೆ,
ಬರೀ ಅಹಂಕಾರದ ಗಿರಿಯನೇರಿ ಕುಳಿತವರ
ಕಣ್ಣೆತ್ತಿ ನೋಡೆನೆಯ್ಯಾ
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ" || ೬೮ ||

ಇದಲ್ಲದೆ ಶ್ರೀ ಮೂಜಗಂ ವಚನಕಾರರಿಗೆ ಜಗದ್ಗುರು ಜೀವದ ಬದುಕು ಸುಖವಾದ ಜೀವವಾಗಿಲ್ಲ, ತೊಂದರೆಗಳು, ತಾಪತ್ರಯಗಳು ಗುಂಪು ಗುಂಪಾಗಿ ಕಾಡಿವೆ ಎಂಬುದಕ್ಕೆ ಕೆಳಗಿನ ವಚನ ಸಾಕ್ಷಿ ಹೇಳುತ್ತದೆ:

ಕಾಡುವವರು ಕಾಡಲಿ!
ಬೇಡುವವರು ಬೇಡಲಿ!
ಓಡುವವರು ಓಡಲಿ!
ನೀಡುವವರು ನೀಡಲಿ!
ತೀಡುವವರು ತೀಡಲಿ!
ಕೂಡುವವರು ಕೂಡಲಿ!
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ,
ನಿನ್ನಡಿಯ ಪಿಡಿಯುವದೊಂದೆ, ಸದಾ
ನನ್ನ ಸ್ಮರಣೆಯಲ್ಲಿರಲಿ || ೪೨ ||

ಶ್ರೀ ಮೂಜಗಂ ಅವರ ಅಂತರಂಗದ ಪ್ರಧಾನಸ್ತ್ರಯು ಸಾಹಿತ್ಯ. ಸಾಹಿತ್ಯವೆಂದರೆ ಅದೊಂದು ಅಂತರಾತ್ಮನ ವ್ಯಕ್ತಿತ್ವವೆಂದು ನಂಬಿದವರು ಅವರು. ಕೇವಲ ಶಬ್ದದ ಕುಣಿತವಾಗಲಿ, ಕಲ್ಪನೆಯ ಹಾರಾಟವಾಗಲಿ, ಬುದ್ಧಿಯ ವ್ಯಾಯಾಮವಾಗಲಿ ಸಾಹಿತ್ಯವಲ್ಲ. ರಸಾತ್ಮಕವೂ, ಅನುಭವ-ಅನುಭಾವಗಳ (ಮೃತಪಾಕವೂ ಆದಾಗಲೇ ಅದು ಸಾಹಿತ್ಯವೆಂಬ ಸಾಂಸ್ಕೃತಿಕ ಪರಂಪರೆಯ ವ್ಯಾಖ್ಯೆ ಈ ವಚನದಲ್ಲಿದೆ:

"ಸಾಹಿತ್ಯವೆಂದರೆ ಶಬ್ದದ ಪೋಣಿಕೆಯಲ್ಲ,
ಸಾಹಿತ್ಯವೆಂದರೆ ಕಲ್ಪನೆಯ ರೆಕ್ಕೆಯಲ್ಲ,
ಸಾಹಿತ್ಯವೆಂದರೆ ಶುಷ್ಕ ಭೂಮಿಯಲ್ಲ,
ಸಾಹಿತ್ಯವೆಂದರೆ ಬರಿಯ ಬುದ್ಧಿಯ ಬುಗ್ಗೆಯಲ್ಲ,

ನಿಜ ಸಾಹಿತ್ಯವೆಂದರೆ;
ಸರ್ವರಸ ಪರಿಪೂರ್ಣ,
ಸದ್‌ಭಾವ ವಿಸ್ತೀರ್ಣ,
ಅನುಭವ–ಅನುಭಾವಗಳ ಅಮೃತಪಾಕ, ನೋಡಾ!
ನಮ್ಮ ಭ್ರೂಲತಾಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ" ॥ ೯೪ ॥

ಅನುಭವ–ಅನುಭಾವಗಳ ಅಮೃತಪಾಕವೇ ಸಾಹಿತ್ಯವೆಂಬುದು ಶ್ರೀಮೂಜಗಂ ಅವರು "ಚಿತ್ಸುಮನ"ದ ಮೂಲಕ ನೀಡಿದ ಸಂದೇಶವಾಗಿದೆ.

ಪ್ರೊ. ಎಸ್. ಕೌಜಲಗಿಯವರು ಈ ಕೃತಿಯ ವಿಮರ್ಶೆಮಾಡುತ್ತ ಹೇಳುವ ಮಾತುಗಳು ಗಮನಾರ್ಹವಾಗಿವೆ:

"ಚಿತ್‌ಸುಮನದ ವಚನಗಳಲ್ಲಿ ಬಸವಣ್ಣನವರ ವಚನಗಳಲ್ಲಿಯ ಸರಳತೆ ವ್ಯವಹಾರಿಕತೆ ಇದೆ. ಮಹಾದೇವಿಯಕ್ಕನ ವಚನಗಳ ಭಾವಸೌಂದರ್ಯ ಕಲಾತ್ಮಕತೆಯಿದೆ. ಅಂಬಿಗರ ಚೌಡಯ್ಯನ ವಚನಗಳ ಖಂಡಿತವಾದಿತ್ವ, ಅಲ್ಲಮನ ಅನುಭಾವ ಸಮ್ಮಿಳಿತವಾಗಿರುವದರಿಂದ ಹೃದಯಕ್ಕೆ ತಂಪನ್ನೀಯುವ ಗುಣಪೊಂದಿವೆ. ಕೃತಕತೆಗೆ ಎಡೆಯಿಲ್ಲದೆ ಸಹಜತೆ ಮೈವೆತ್ತಿದೆ. ಯಾರ ಸ್ತುತಿ ನಿಂದೆಗೆ ಹಿಗ್ಗದೆ ಕುಗ್ಗದೆ ನಿಷ್ಠೆಯಿಂದ ಕಾವ್ಯಾರಾಧನೆಯಲ್ಲಿ ತೊಡಗಿದ್ದಾರೆ."

ಅನುಭವಾಮೃತ : ಜೀವನಾಮೃತ
ತುಂಬಿ ತುಳುಕಿದ : "ಅಮೃತಬಿಂದು"

ಸಂಸ್ಕೃತದ ಸೂಕ್ತಿಗಳೇ ಇಲ್ಲಿಯ ಅಮೃತಬಿಂದುಗಳು: ಕನ್ನಡದ ಅಂಗಳದಲ್ಲಿ ಚಲ್ಲವರಿದಿವೆ; 'ಪರಂಜ್ಯೋತಿ'ಯ ಹೂದೋಟದಲ್ಲಿ! ಸಂಸ್ಕೃತವಾಙ್ಮಯದ ಆಳವಾದ ಅಧ್ಯಯನ; ಅಲ್ಲಿಯ ಅಮೃತಬಿಂದುಗಳನ್ನು ಎತ್ತಿತಂದು ಇಲ್ಲಿಯ ಜ್ಞಾನಮಾನಸ ಸರೋವರದಲ್ಲಿ ತೇಲಿಬಿಡುವದೇ ಇಲ್ಲಿಯ ಆಶಯ. ಶ್ರೀಮೂಜಗಂ ಅವರ ಅಗಾಧ ಸಂಸ್ಕೃತ ಪಾಂಡಿತ್ಯ ಒಂದೆಡೆಗೆ, ಅಪಾರ ಕನ್ನಡದ ಪ್ರೀತಿ ಇನ್ನೊಂದೆಡೆಗೆ; "ಅಮೃತಬಿಂದು"ವಿನಲ್ಲಿ ಚಿಂತನದ ಸೇತುವೆ ಕಟ್ಟಿವೆ. ಇಪ್ಪತ್ತು ಉಕ್ತಿಗಳನ್ನು ಆಯ್ಕೆಮಾಡಿ, ಇಲ್ಲಿ: ಸರಳ ಸುಲಲಿತ ನುಡಿಗಟ್ಟಿನಲ್ಲಿ, ವಿವರಿಸಲಾಗಿದೆ. ಉದಾ:–'ತಮಸೋಮಾ ಜ್ಯೋತಿರ್ಗಮಯ', 'ವಸುಧೈವ ಕುಟುಂಬಕಂ', 'ಯೋಗಶ್ಚಿತ್ತ ವೃತ್ತಿ ನಿರೋಧಃ', 'ಲಿಂಗಮಧ್ಯೇ ಜಗತ್ಸರ್ವಂ', 'ಮಾನವಃ ಶಿವಯೋಗೇನ ಶಿವೋ ಭವತಿ ಕೇವಲಂ', 'ಬುದ್ಧಿನಾಶಾತ್ ಪ್ರಣಶ್ಯತಿ'

‘ಅಹಿಂಸಾ ಪರಮೋ ಧರ್ಮಃ’, ‘ಸರ್ವೇಜನಾಃ ಸುಖಿನೋಭವಂತು’, ‘ಧರ್ಮೋ ರಕ್ಷತಿ ರಕ್ಷಿತಃ’, ‘ಸತ್ಯಮೇವ ಜಯತೆ ನಾನೃತಂ’, ‘ಮಹಾಜನೋಯೇನ ಗತಃ ಸ ಪಂಥಾಃ’, ‘ಧ್ಯಾನಂ ನಿರ್ವಿಷಯಂ ಮನಃ’, ‘ನಹಿ ಜ್ಞಾನೇನ ಸದೃಶಂ’, ‘ಉದ್ಯೋಗಿನಂ ಪುರುಷಸಿಂಹ ಮುಪೈತಿ ಲಕ್ಷ್ಮೀಃ’, ‘ಶರೀರ ಮಾಧ್ಯಂ ಖಲು ಧರ್ಮ ಸಾಧನಂ’ ಇಂಥ ಅಮೃತೋಕ್ತಿಗಳು ಯಾರಿಗೆ ಬೇಡ! ಕನ್ನಡದ ಮಾಧ್ಯಮದಲ್ಲಿ ಹಿತಮಿತವಾಗಿ ನೀಡಿದ ವಿವರಣೆ ಚನ್ನಾಗಿದೆ.

ಡಾ. ವಸಂತ ಪಾಟೀಲರು– “ಪ್ರತಿಬಿಂದು ಅಮೃತಬಿಂದು, ಸ್ವತಃ ಸ್ವಾದಿಸಿದವರಿಗೆ ಇದರ ಸಿಹಿ, ಸತ್ವದ ಅರಿವಾಗುವುದು. ಆಗ್ಗೆ ಲೇಖಕರ ಶ್ರಮ ಸಾರ್ಥಕವಾಗುವುದು. ಘನ ಉದ್ದೇಶ ಈಡೇರುವುದು. ಇಲ್ಲಿಯ ಅಮೃತ ಬಿಂದುಗಳು ಮಾನವ ಜೀವನದ ಸಫಲತೆಯತ್ತ ಹನಿಯುತ್ತಿರುವವು” ಎಂದು ಹೇಳಿದ್ದಾರೆ.[೧]

ಮರೆಯಲಾರದ ನೆನಪುಗಳ ಶಬ್ದಮಾಲೆ: “ಯುಗಪುರುಷ ಯೋಗಿಕುಮಾರ”

ಶಿವಯೋಗಮಂದಿರದ ಮಧುರ ನೆನಪುಗಳು ಕೇವಲ ನೆನಪುಗಳಾಗಿ ಉಳಿಯದೇ; “ಕುಮಾರೇಶ್ವರ ಶಿವಯೋಗಿ ಸಂಘ”ದ ಮೂಲಕ ಹಾಗೂ ನೂರಾರು ಗ್ರಂಥಗಳ ಪ್ರಕಾಶನದ ಮೂಲಕ ಕ್ರಿಯಾತ್ಮಕವಾಗಿ ಫಲೀಭೂತ ವಾಯಿತು. ಆ ಚೈತನ್ಯಾತ್ಮಕ ಅರುಹಿನ ಕುರುಹಾಗಿ “ಯುಗಪುರುಷ ಯೋಗಿ ಕುಮಾರ” ಮೂಡಿಬಂದಿದೆ: “ಸಂಸ್ಕೃತಿ ಪ್ರಸಾರೋಪನ್ಯಾಸ ಗ್ರಂಥಮಾಲೆ”ಯ ಪ್ರಥಮ ಪುಷ್ಪವಾಗಿ!

ಪೂಜ್ಯ ಜಗದ್ಗುರುಗಳ ಅಂತರಾತ್ಮದ ದಲದಲಗಳನ್ನು ಬಿಡಿಸಿ ನೋಡಿದರೆ ಕಾಣಬರುವದು ಯುಗಪುರುಷ ಯೋಗಿಕುಮಾರನ ಶ್ರೀದರ್ಶನ: ಶುಭ ದರ್ಶನ. ಸಮಾಜ ಸಮಾಜವೆಂದು ಪರಿತಪಿಸಿದ ಹಾನಗಲ್ಲ ಕುಮಾರಸ್ವಾಮಿಗಳು ವೀರಶೈವ ಧರ್ಮದ ಪುನರುದ್ಧಾರಕ್ಕಾಗಿ ೨೦ನೆಯ ಶತಮಾನದ ಆದಿಕಾಲಭಾಗ ದಲ್ಲಿ ಪ್ರಯತ್ನಿಸಿದರು. ಸತ್ಯವೇ ಶಿವದರ್ಶನ, ಶಿವದರ್ಶನವೇ ವೀರಶೈವದ ನೆಲೆಸೆಲೆಯೆಂದು ತಿಳಿದ ಅವರು ಮಲಪಹಾರಿಣಿ ತೀರದಲ್ಲಿ ಶಿವಯೋಗಮಂದಿರ ಸಂಸ್ಥೆಯನ್ನು ಸ್ಥಾಪಿಸಿ, ಲೋಕೋತ್ತರವಾಗಿ ಬೆಳಗಿಸಲು ಉದ್ಯುಕ್ತರಾದರು.

---

೧ ಡಾ. ವಸಂತ ಪಾಟೀಲ: ‘ಅಮೃತಬಿಂದು ಒಂದು ಅಂತರಂಗದ ಅವಲೋಕನ’: ಮಹಾಭಿನಂದನ ಸಂಪುಟ.

ವ್ಯಕ್ತಿಪೂಜೆಗಿಂತಲೂ ತತ್ವಪೂಜೆಯನ್ನು ನಂಬಿ, ಶಿವನ ನೆನಹಿನ ಶಿವಯೋಗ ಮಂದಿರದ ಯೋಗಧಾಮವನ್ನು ಬೆಳೆಸಿದರು. ಮಲಪ್ರಭೆಗೆ ತನ್ನದೇ ಆದ ಶಿವಪ್ರಭೆಯು ಶೃಂಗಾರ ತಂದರು. ಶಿವನ ಸತ್ಯ ಸುಂದರ ಪರಿಜ್ಞಾನವಿಲ್ಲದೇ ಶಿವಯೋಗಮಂದಿರವಿಲ್ಲ. "ತಂದೆ ನೀನು ತಾಯಿ ನೀನು ಬಂಧು ನೀನು ಬಳಗ ನೀನು, ನೀನಲ್ಲದೆ ಮತ್ತಾರೂ ಇಲ್ಲವಯ್ಯಾ" ಎಂಬ ಬಸವ ವಚನವನ್ನು ಅಖಂಡವಾಗಿ ನಂಬಿ ನೈಷ್ಠಿಕ ಯೋಗಿಗಳಾಗಿ ಬೆಳೆದರು, ಬೆಳಗಿಸಿದರು. ಆ ಶಿವಪ್ರಭೆಯು ಪ್ರಸನ್ನ ವಾತಾವರಣದಲ್ಲಿ ಬೆಳೆದ ಶ್ರೀಮೂಜಗಂ ಅವರು ಇಲ್ಲಿ ಭಾವಪೂರ್ಣವಾದ ಶಕ್ತಿಶಾಲಿ ಭಾಷೆಯಲ್ಲಿ ಯುಗಪ್ರುರುಷನ ಜೀವನವೃತ್ತಾಂತ ನೀಡಿದ್ದಾರೆ. ಪದ ಪದದಲ್ಲೂ ಇವರ ಅಪಾರ ಪ್ರೀತಿ, ಅಪಾರ ಅಭಿಮಾನಗಳು ಜ್ವಲಂತವಾಗಿ ಎದ್ದು ಕಾಣುತ್ತವೆ. ಉದಾಹರಣೆಗೆ ಗಮನಿಸಿರಿ.... ಶ್ರೀಮೂಜಗಂ ಅವರ ಗದ್ಯ ಶೈಲಿಯ ನಿರರ್ಗಳವಾದ ಹಾಗೂ ಭಾವಪೂರ್ಣ ಕಥಾನಕ ಓಟಕ್ಕೂ ಇದು ನಿದರ್ಶನ:

"....ಅವರಲ್ಲಿ ಭಾವಶುದ್ಧಿ ಇದ್ದುದಕ್ಕಾಗಿಯೇ ಜಗತ್ತು ಅವರಿಗೆ ಬಾಗುತ್ತದೆ. ಸಾಧಕರಿಗೆ ಅವರು ದಾರಿದೀಪವಾಗಿದ್ದಾರೆ; ಕುರುಡರಿಗೆ ಕೈಗೋಲಾಗಿದ್ದಾರೆ. ಅವರ ಆ ಶಕ್ತಿ-ಸ್ಫುರಿತ ವಚನ ರಾಶಿಯು....ಬಾಳ-ಬಂಡಿಗೆ ಕಡೆಗೀಲಾಗುತ್ತದೆ, ಎಡರಡಸಿದ ವೇಳೆಯೊಳು ಧೈರ್ಯವನ್ನು ನೀಡುತ್ತದೆ... ಮಾನವನಿಗೆ ತಾಮಸೀಯ ಭಾವನೆಯು ನಶಿಸಿ, ಮತ್ತೊಂದು ಈಶ್ವರೀಯ ಶಕ್ತಿಯನ್ನು ಪಡೆದಂತೆ ಸ್ಪಷ್ಟವಾಗಿ ಭಾಸವಾಗುತ್ತದೆ; ಪರಮಾತ್ಮನ ಪರಿಜ್ಞಾನಕ್ಕಿಂತಲೂ ಮತ್ತೊಂದು ಜ್ಞಾನವಿಲ್ಲೆಂದು ಮನಸ್ಸಿಗೆ ವೇದ್ಯವಾಗುತ್ತದೆ."೧

"ಮಠಗಳು ಮಹದರಿವಿನ ಬೆಳಕನ್ನೀಯುವ ದೀಪಸ್ತಂಭಗಳು, ಚಿತ್ತ ಚಾಂಚಲ್ಯವನ್ನು ದೂರಮಾಡುವ ಶಾಂತಿಧಾಮಗಳು, ತಪೋವೈಭವದೊಡನೆ ಶಿವಯೋಗ ಶಕ್ತಿಯನ್ನು ನೀಡಿ ಪರಿಶುದ್ಧಗೊಳಿಸುವ ಜ್ಞಾನಸದಾಗರಗಳು, ನಾಸ್ತಿಕತೆಯನ್ನು ಹೊಡೆದೋಡಿಸಿ ಮಾನವತೆಯನ್ನು ಬಿತ್ತಿ ಸಂಸಾರ ಸಾಗರದಲ್ಲಿ ಬಿದ್ದು ಬಳಲುವ ವ್ಯಕ್ತಿಗಳಿಗೆ ಕಲ್ಪತರುಗಳು.....ವಿಶ್ವಶಾಂತಿಯನ್ನು ಬೀರುವ.... ಕೇಂದ್ರ ಬಿಂದುಗಳು, ಧ್ಯಾನ ಧಾಮಗಳು."೨

ಜಗದ್ಗುರುಗಳವರ ವಿಶ್ವವಿಶಾಲ ಭಾವನೆಗೆ ಕೆಳಗಿನ ಸಾಲುಗಳು ಅಪ್ರತ್ಯಕ್ಷ ಸಾಕ್ಷಿ:

"೧೨ನೆಯ ಶತಮಾನದಲ್ಲಿ ಮಹಾತ್ಮ ಬಸವಣ್ಣನವರು ಅನುಭವಮಂಟಪ

೧ ಯುಗಪುರುಷ ಯೋಗಿಕುಮಾರ : ಪುಟ-೭, ೮.
೨ ಅದೇ : ಪುಟ-೪೯

ರಚಿಸಿದಂತೆ, ವಿಶ್ವಕವಿ ರವೀಂದ್ರನಾಥ ಠಾಕೂರರು ಶಾಂತಿಸಾಧಕರಿಗೆ ಶಾಂತಿ ನಿಕೇತನ ನಿರ್ಮಿಸಿದಂತೆ, ವಿವೇಕಾನಂದರು ಧರ್ಮ ಪ್ರಚಾರ ಮಾಡಲು ರಾಮ ಕೃಷ್ಣಾ ಶ್ರಮವನ್ನು ಸ್ಥಾಪಿಸಿದಂತೆ, ಮಹಾತ್ಮಾಗಾಂಧೀಜಿಯವರು ಭಾರತದ ಕಲ್ಯಾಣಕ್ಕಾಗಿ ಪರಿಶ್ರಮ ವಹಿಸಿದಂತೆ....ಮಾನವರನ್ನು ಮಾದೇವರನ್ನಾಗಿ ಮಾಡಲು ಶಿವಯೋಗಮಂದಿರವನ್ನು ಸ್ಥಾಪಿಸಿ, ಜನಾಂಗದಲ್ಲಿ ನೂತನ ಚೇತನ ವನ್ನು ನೀಡಿದ ಹಾನಗಲ್ಲ ಕುಮಾರಶಿವಯೋಗಿಗಳು ಯುಗಪುರುಷರಲ್ಲದೆ ಮತ್ತೇನು? ಯುಗಪುರುಷರೂ ಅಹುದು, ಕಾರಣಿಕ ಪುರುಷರೂ ಅಹುದು. ಅಷ್ಟೇ ಅಲ್ಲ, ಇತಿಹಾಸ ಪುರುಷರೂ ಅಹುದು."[೧]

ಗದ್ಯದಲ್ಲಿ ಹಾನಗಲ್ಲ ಕುಮಾರಸ್ವಾಮಿಗಳ ಜೀವನವನ್ನು ಹಿಡಿದಿಟ್ಟ ಜಗದ್ಗುರುಗಳು ಒಂದೇ ಒಂದು ಸರಳ ವಚನದಲ್ಲಿ ಅವರ ಸಮಗ್ರ ಜೀವನವನ್ನೇ ಕನ್ನಡಿಗೊಳಿಸಿದ್ದಾರೆ. ಇಲ್ಲಿದೆ ನೋಡಿ ಆ ವಚನ:

"ಜೋಯಿಸರ ಹರಳಳ್ಳಿಯಲಿ ಜನಿಸಿ,
ಮಾಯಾ–ಮೋಹವ ತ್ಯಜಿಸಿ,
ಶಂಭುಲಿಂಗ ಬೆಟ್ಟದೊಳು ತಪಿಸಿ,
ಷಟ್‌ಶಾಸ್ತ್ರವನಭ್ಯಸಿಸಿ,
ಆತ್ಮಜ್ಞಾನದ ಪರಿಯನರಿದು ಕೊಂಡನಯ್ಯಾ ತಾನು!
ಯೆಳೆಂದೂರು ಯತಿಗಳ ಪಡೆದು,
ಮನಮುಟ್ಟಿ ಸೇವೆಯಗೈದು,
ಭವಬೀಜಂಗಳ ಹುರಿದು,
ಷಟ್‌ಸ್ಥಲ ತತ್ತ್ವವ ತಿಳಿದು,
ಶಿವಾನುಭವದ ಸಾರವ ಸವಿದು,
ಯೋಗವಿದ್ಯೆಯೊಳು ಪರಿಪೂರ್ಣನಾದನಯ್ಯ, ತಾನು!
ಬಿದರೆ ಕುಮಾರಸ್ವಾಮಿಗಳಿಂದ
ಚಿನ್ಮಯಾನುಗ್ರಹವ ಪಡೆದು,
ಹಾನುಗಲ್ಲ ವಿರಕ್ತಮಠಕ್ಕಧಿಪತಿಯಾಗಿ,
ವಿರಕ್ತರಿಗೆ ತಾ ಶಿಖಾಮಣಿಯಾಗಿ,
ಮಠದ ಪ್ರಭಾವವ ಬೆಳಗಿಸಿದನಯ್ಯ ತಾನು!
ದೇಶ ಸೇವೆಯೇ ಈಶ್ವರ ಸೇವೆಯೆಂದು,
ಧರ್ಮಧುರೀಣರಿಂದನುಮತಿ ಪಡೆದು,

೧ ಅದೇ : ಪುಟ–೧೧೯, ೧೨೦

ಅಖಿಲ ಭಾರತ ವೀರಶೈವ ನಾಮದ
ಮಹಾಸಭೆಯ ಸಂಸ್ಥಾಪಿಸಿದನಯ್ಯ ತಾನು!
ವೈರಾಗ್ಯದ ಮಲ್ಲಣಾರ್ಯರ
ಮನದಿಚ್ಛೆಯಂ ಪೂರೈಸಲು,
ಶೀಲ ಸಂಸ್ಕೃತಿಯನುಳಿಸಲು,
ಶೂಲಪಾಣಿಯ ಸ್ಮರಿಸಲು,
ಯೋಗ ವಿದ್ಯೆಯ ಬೆಳೆಸಲು,
ತ್ಯಾಗ ಬುದ್ಧಿಯ ಕಲಿಸಲು,
ಗುರು–ವಿರಕ್ತರೊಳು
ಭಾವೈಕ್ಯ ಬಲಿಸಲು,
ಚಿತ್ತರಗಿ ಚಿಜ್ಜ್ಯೋತಿ–
ವಿಜಯ ಮಹಾಂತೇಶನು
ತೋರಿಸಿದ ತಾಣದೊಳು
ಶಿವಯೋಗಮಂದಿರವ ಸ್ಥಾಪಿಸಿದನಯ್ಯ ತಾನು!
ವಿರಕ್ತಿಯಲ್ಲಿ ಅಲ್ಲಮಪ್ರಭುವಾಗಿ,
ಜ್ಞಾನದಲ್ಲಿ ಚನ್ನಬಸವಣ್ಣನಾಗಿ,
ಭಕ್ತಿಯಲ್ಲಿ ಬಸವಣ್ಣನಾಗಿ,
ಇಪ್ಪತ್ತನೆಯ ಶತಮಾನದ ಯುಗಪುರುಷನಾಗಿ,
ಸಮಾಜವನುದ್ಧರಿಸಿ,
ಜನ ಜಾಗೃತಿಗೈದ ದಯಾಮೂರ್ತಿ ತಾನಯ್ಯ!!
ಇದುವೆ ಹಾನುಗಲ್ ಕುಮಾರೇಶನ
ಮಹಾಮಹಿಮೆ ಕೇಳಿರಯ್ಯ!
ಭ್ರೂಲತಾಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ"೧

ಶ್ರೀ ದ. ಲ. ಕೆರೂರ ಅವರ ಮಾತಿನಲ್ಲಿ ಶ್ರೀಮೂಜಗಂ ಶೈಲಿಯ ಗುಣ ಗಾನವನ್ನು ಕೇಳಲೇಬೇಕು:

"…………ಸುಲಿದ ಬಾಳೆಯ ಹಣ್ಣಿನಂದದಿ ಲಲಿತವಹ ಕನ್ನಡದಲ್ಲಿ ಶ್ರೀಮೂಜಗಂರು ಶ್ರೀ ಕುಮಾರೇಶನ ಬಾಳನ್ನು ಚಿತ್ರಿಸಿದ್ದಾರೆ. ಅಂದರೆ ಜನ ಸಾಮಾನ್ಯರೂ ಸುಲಭದಲ್ಲಿ ಅರಿತು ಆನಂದಿಸುವಂತಾಗಬೇಕು ಎಂಬುದೇ ಇವರ

೧ ಅದೇ: ಪುಟ: ೧ ಮತ್ತು ೨

ಉದ್ದೇಶ. ಸ್ಥಿತಿ-ಗತಿಗಳನ್ನೂ ಪರಿಸರ ಪ್ರಸಂಗಗಳನ್ನೂ ಕಣ್ಣೆದುರಿಗೆ ಕಟ್ಟುವಂತೆ ಯಥಾವತ್ತಾಗಿ ಚಿತ್ರಿಸುವಲ್ಲಿ ಶ್ರೀಮೂಜಗಂ ಎತ್ತಿದ ಕೈ. ಒಂದು ಮಾತನ್ನು ಬಿಡಿ ಬಿಡಿಸಿ ಹತ್ತು ಮಾತುಗಳಿಂದ ಬಿಂಬಿಸಿ ಹೇಳುವ ಕೌಶಲ ಇವರಿಗೆ ಕರಗತ.... ಇತ್ತೀಚೆಗೆ ಅವರು ಪ್ರಾರಂಭಿಸಿರುವ ಪೂರ್ಣಜ್ಞಾನ ವಚನಗಳು ತಮ್ಮ ವೈಶಿಷ್ಟ್ಯದಿಂದ ಗಮನಾರ್ಹವಾಗಿವೆ. ತ್ರಿಪದಿ ರಚನೆಯಲ್ಲಿ, ಗುಣಗಾತ್ರಗಳೆರಡರಲ್ಲೂ ಸರ್ವಜ್ಞನನ್ನು ಮೀರಿಸುವಂತಿದೆ ಅವರು"[೧].

ಮೂಜಗಂ ಗದ್ಯದ ಇನ್ನೊಂದು ಹೆಜ್ಜೆ: "ಶಿವಯೋಗಮಂದಿರ"

"೭೦ ವರ್ಷಗಳ ಹಿಂದಿನ ಮಾತು.... ಕೈಕಾಲು ಕಣ್ಣುಗಳಿಲ್ಲದ ಕಂದನಂತಾಗಿತ್ತು ವೀರಶೈವ ಸಮಾಜ"[೨].

"ಎಳೆಮಕ್ಕಳ ತಿಳಿಮನಸ್ಸಿನಲ್ಲಿ ಶಿವಯೋಗವನ್ನು ಎರಕೆ ಹೊಯ್ದು ಅವರನ್ನು ಮಂಗಳಮೂರ್ತಿಗಳನ್ನಾಗಿ, ಶಿವಯೋಗಿಗಳನ್ನಾಗಿ, ಸಮಾಜ ಸುಧಾರಕರನ್ನಾಗಿ ಮಾಡುವ, ಆಧ್ಯಾತ್ಮಿಕ ಶಕ್ತಿಗೆ ಕೇಂದ್ರವಾಗುವಂತಹ ಸಂಸ್ಥೆಯ ಉದಯ ಅಂದು ಬೇಕಾಗಿತ್ತು. ಅಗತ್ಯವೂ ಇತ್ತು."[೩]

ಹೀಗೆ ಹೃದಯಸ್ಪರ್ಶಿ ಗದ್ಯ ಮಾತುಗಳಿಂದ ಆರಂಭವಾಗುತ್ತವೆ ಈ ಪುಟ್ಟ ಗಾತ್ರದ ಕೈಪಿಡಿ ಕೃತಿ. "ಯುಗಪುರುಷ ಯೋಗಿಕುಮಾರ"ದ ಪ್ರತಿಧ್ವನಿ ಇಲ್ಲಿಯ ಪುಟ ಪುಟಗಳಲ್ಲೂ ಅನುರಣಿಸಿದೆ.

ಹಾನಗಲ್ಲ ಕುಮಾರಸ್ವಾಮಿಗಳ ಕಲ್ಪನೆಯ ಕೂಸಾದ ಶಿವಯೋಗಮಂದಿರ ಆಧ್ಯಾತ್ಮಿಕ ಸಾಧಕ ವಟುಗಳ ನಂದನವಾಗಿಯೂ ರೂಪಿತವಾಗಿದೆ. ಈ ಬೆಳುವಲದ ಚಲುವಿನಿಂದ ಹುಬ್ಬಳ್ಳಿ ಮಹಾನಗರಕ್ಕೆ ಹಾರಿಬಂದ ಕಾವ್ಯಚೇತನ ಮೂಜಗಂ ಅವರಿಗೆ ಶಿವಯೋಗಮಂದಿರವನ್ನು ಮರೆಯುವದು ಅಸಾಧ್ಯ, ಅಸಂಭವ. ಈ ಕೃತಿಯ ಪುಟ ಪುಟದಲ್ಲೂ ಅವರ ಪ್ರೀತಿ ರಸರೂಪತಳೊಟ್ಟು ನಿಂದಿದೆ. ಹುಬ್ಬಳ್ಳಿಯಲ್ಲಿದ್ದರೂ ಶಿವಯೋಗಮಂದಿರದ ಹಸಿರು-ಹೂವು-ಚಲುವು ಕಾವ್ಯಮಯವಾಗಿ ಮುನ್ನಡೆದಿವೆ.

ಶಿವಯೋಗಮಂದಿರ ಸ್ಥಾಪನೆಯ ಮುಖ್ಯ ಉದ್ದೇಶಗಳನ್ನು "ಶ್ರೀಮದ್ವೀರ

---

೧ ಪ. ಬ ಕಿರೂರ: "ಯುಗಪುರುಷ ಯೋಗಿಕುಮಾರ"
ಮಹಾಭಿನಂದನ ಸಂಪುಟ : ಭಾಗ-೨

೨ ಶಿವಯೋಗಮಂದಿರ: ಪುಟ: ೬

೩ ಶಿವಯೋಗಮಂದಿರ: ಪುಟ: ೬, ೭

ಶೈವ ಶಿವಯೋಗಮಂದಿರದ ಪ್ರಥಮ ರಿಪೋರ್ಟ-೧೯೧೧" ರಿಂದ ಆಯ್ದು ಇಲ್ಲಿ ಕೊಟ್ಟಿರುವದು ತುಂಬ ಅನುಕೂಲವಾಗಿದೆ. ಇದರಲ್ಲಿ ಇಲ್ಲಿಯ ಸಾಧಕ ವಿದ್ಯಾರ್ಥಿಗಳಿಗೆ ತುಲನಾತ್ಮಕ ದೃಷ್ಟಿಯಿಂದ ದ್ವೈತ, ಅದ್ವೈತ ವಿಶಿಷ್ಟಾದ್ವೈತ ಮುಂತಾದ ಇತರ ವೈದಿಕ ಮತಗಳ ಜ್ಞಾನವನ್ನು ಮಾಡಿಕೊಡುವ; ಹಾಗೂ ಸ್ವಮತ, ಪರಮತ ಧಾರ್ಮಿಕ ಹಾಗೂ ತಾತ್ವಿಕ ಹಸ್ತಲಿಖಿತ ತಾಡವೋಲೆ ಮುಂತಾದ ಗ್ರಂಥಗಳ ಸಂಗ್ರಹಾಲಯವನ್ನು ಸ್ಥಾಪಿಸುವದೂ ಒಳಗೊಂಡಿದೆ. ಅಲ್ಲದೆ ಸಾಮಾನ್ಯ ಉದ್ದೇಶದಲ್ಲಿ ಕೆಳಗಿನ ಉದ್ದೇಶವೂ ಉಲ್ಲೆಖಿತವಾಗಿದೆ:

"ಹಿಂದುಸ್ತಾನದ ಆಯಾಯ ಭಾಗಗಳಲ್ಲಿ ಮತ್ತು ಇಂಗ್ಲಂಡ, ಅಮೇರಿಕಾ, ಜರ್ಮನಿ, ಫ್ರಾನ್ಸ್ ಮುಂತಾದ ಪರರಾಷ್ಟ್ರಗಳಲ್ಲಿ ಆಗಾಗ್ಗೆ ಕೊಡುವ ಧಾರ್ಮಿಕ ಪರಿಷತ್ತುಗಳಿಗೆ ಹಾಗೂ ಅಲ್ಲಿರುವ ಧಾರ್ಮಿಕ ಸಂಸ್ಥೆಗಳಿಗೆ ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತದ ತತ್ವಗಳನ್ನು ಪ್ರಸಾರ ಮಾಡುವದಕ್ಕೋಸ್ಕರ ಈ ಸಂಸ್ಥೆಯುವತಿಯಿಂದ ಪ್ರತಿನಿಧಿಗಳನ್ನು ಅಥವಾ ಲೇಖನಗಳನ್ನು ಕಳುಹಿಸುವದು ಮತ್ತು ಹೋಗಲಿಚ್ಛಿಸುವ ಯೋಗ್ಯ ಜನರಿಗೆ ಸಾಧ್ಯವಿದ್ದಮಟ್ಟಿಗೆ ಅನುಕೂಲವರಿತು ಅನುಕೂಲತೆಗಳನ್ನು ಒದಗಿಸಿಕೊಡುವದು".

೧೯೧೧ ರಷ್ಟು ಪೂರ್ವದ ಹಾನಗಲ್ಲ ಕುಮಾರ ಮಹಾಸ್ವಾಮಿಗಳ ಈ ಯೋಜನೆಯನ್ನು ಶ್ರೀ ಜಗದ್ಗುರುಗಳವರು ಅಕ್ಷರಶಃ ಪೂರೈಸಿರುವದಕ್ಕೆ ಇದು ಸಾಕ್ಷಿ. ಪೂರ್ವರಾಷ್ಟ್ರ ಹಾಗೂ ಪಶ್ಚಿಮ ರಾಷ್ಟ್ರಗಳ ೧೪ ದೇಶಗಳಲ್ಲಿ ಅವರು ಶರಣ ಸಂಪತ್ತನ್ನು ಬಿತ್ತರಿಸಿ ಬಂದಿರುವದು ಈ ಉದ್ದೇಶದ ಫಲಪ್ರಾಪ್ತಿ ಎಂದೇ ತಿಳಿಯಬಹುದು.

ಹನಿರಸದಲ್ಲಿ ಜೀವನದ ತನಿರಸ ತುಂಬಿದ: "ಜೇನಹನಿ"

ಬಿಡಿ ಮಾತಿನಲ್ಲಿ ಇಡಿ ಮಾತನ್ನು ತುಂಬುವ ವಿಶಿಷ್ಟ ಕಲೆ ಶ್ರೀಮೂಜಗಂ ಅವರಿಗೆ ಕರಗತವೆಂಬುದಕ್ಕೆ 'ಜೇನಹನಿ' ಸಾಕ್ಷಿ ನೀಡುತ್ತದೆ. "ಕರ್ಮವೀರ" ವಾರ ಪತ್ರಿಕೆಗಳಿಗೆ ಬರೆದ ಕಿರು ಲೇಖನಗಳನ್ನು ಇಲ್ಲಿ ಸಂಗ್ರಹಿಸಲಾಗಿದೆ. ಸಂಸ್ಕೃತದ ಸುಭಾಷಿತಗಳು, ಶರಣರ ವಚನಗಳು ಹಾಗೂ ಸ್ವಾನುಭಾವದ ತ್ರಿವಳಿ ಇಲ್ಲಿದೆ. ಎಂದಿನಂತೆ ಪುಟ್ಟ ವಾಕ್ಯಗಳಲ್ಲಿ ಅರ್ಥವಿಸ್ತಾರ ಹೆಣೆಯುವ ಸಹಜ ಜಾಣ್ಮೆ ಇಲ್ಲಿ ಪ್ರಕಟಗೊಂಡಿದೆ. ಪ್ರೊ. ಮಲ್ಲಿಕಾರ್ಜುನ ಹಿರೇಮಠ ಅವರು ಕೆಳಗಿನ ಲೇಖನದಲ್ಲಿ 'ಜೇನಹನಿ'ಯ ಪದರು ಪದರುಗಳನ್ನು ಬಿಚ್ಚಿ ಬಿಡಿಸಿದ್ದಾರೆ:

"ವ್ಯಕ್ತಿತ್ವ ವಿಕಾಸಕ್ಕೆ ಬೇಕಾಗಿರುವ ಅಂಶಗಳು, ಬದುಕಿನಲ್ಲಿ ಅಗತ್ಯವಾಗಿರ

ಬೇಕಾದ ನೀತಿನಿಯಮಗಳು ಹಾಗೂ ಆದರ್ಶಗಳನ್ನು ಕುರಿತು 'ಮೂಜಗಂ' ಇಲ್ಲಿ ಚಿಂತನ ನಡೆಯಿಸಿದ್ದಾರೆ. 'ಆತ್ಮಶೋಧನೆ' ಎಂಬ ಮೊದಲ ಬರಹದಲ್ಲಿ 'ಮಜ್ಜಿಗೆ ಕಡೆದಂತೆ ಬೆಣ್ಣೆ ಹೊರಡುವಂತೆ ಚಿಂತನ ಮಂಥನ ಗೈದರೆ ತತ್ವದ ಬೆಣ್ಣೆ ಹೊರಟು ವಿಚಾರಶಕ್ತಿ ಜಾಗೃತವಾಗುವದು' ಎನ್ನುತ್ತ ಇದು ಆಚಾರಕ್ಕೆ ಪ್ರೇರಕವಾಗಬೇಕು ಎಂದು ಅಭಿಪ್ರಾಯಪಡುತ್ತಾರೆ. ಇದಕ್ಕಾಗಿ ಶ್ರವಣ, ಮನನ, ನಿಧಿಧ್ಯಾಸ ಅಗತ್ಯ ಎಂಬ ನಿಲುವು ತಳೆಯುತ್ತಾರೆ. 'ಕಾಯಕವೇ ಕೈಲಾಸ'ದಲ್ಲಿ 'ಕಾಯಕದಲ್ಲಿ ನಿರತ ನಾದೊಡೆ ಗುರುದರ್ಶನವಾದರೂ ಮರೆಯಬೇಕು' ಎಂಬ ಶರಣರ ನಿಲುವನ್ನು ಬಲವಾಗಿ ಸಮರ್ಥಿಸುತ್ತಾರೆ. 'ಹುತ್ತವ ಬಡಿದೊಡೆ ಹಾವು ಸಾಯಬಲ್ಲುದೆ' ಎಂಬುದರಲ್ಲಿ ಅಂತರಂಗ ಶುದ್ಧಿಯ ಅವಶ್ಯಕತೆಯನ್ನು ಒಂದು ದೃಷ್ಟಾಂತದ ಮೂಲಕ ವಿವೇಚಿಸಿದ್ದಾರೆ. 'ಕರುಣವಿರಲಿ ಜೀವರೋಳು' 'ಕ್ಷಮೆ' ಬರಹಗಳಲ್ಲಿ ಈ ಎರಡೂ ಮೌಲ್ಯಗಳು ಮಾನವನನ್ನು ದೇವತ್ವಕ್ಕೆ ಒಯ್ಯುವಂಥವು, ಬದುಕನ್ನು ಸಹ್ಯ ಹಾಗೂ ಮಾರ್ದವಗೊಳಿಸುವಂಥವು ಎಂಬುದಾಗಿ ವಿವರಿಸಿದ್ದಾರೆ... ಈ ಎಲ್ಲ ಬರಹಗಳ ಹಿಂದಿರುವ ಶ್ರೀಗಳವರ ಸಂಸ್ಕೃತ ಮನಸ್ಸು ಅವರ ಅನುಭವ ಹಾಗೂ ಅನುಭಾವ ಕೂಡ ನಮ್ಮ ಅರಿವಿಗೆ ಬರುತ್ತವೆ. ಅವರ ವಿಶಾಲ ಮನೋಭಾವ, ರಾಷ್ಟ್ರೀಯ ಸಮಗ್ರತೆಯ ಕಲ್ಪನೆ, ಧರ್ಮದ ಅಂತಃಸತ್ವದ ಅರಿವು ಇಲ್ಲಿ ಗಮನಸೆಳೆಯುತ್ತವೆ. ....ಈ ಪುಸ್ತಿಕೆಗೆ 'ಜೇನಹನಿ' ಎಂಬ ಶೀರ್ಷಿಕೆ ಕೊಡುವಲ್ಲಿ ಕೂಡ ಅವರ ಸೃಜನತೆಯ ಸ್ಪರ್ಶವಿದೆ. ಕಿರಿದರಲ್ಲಿ ಹಿರಿದಾದುದನ್ನು ಹಿಡಿವತವಕ ಇಲ್ಲಿದೆ, ಸುಲಭವಾಗಿ ಅತ್ಯಂತ ಸಾಮಾನ್ಯ ಓದುಗನಿಗೆ ಗ್ರಾಹ್ಯವಾಗ ಬೇಕೆಂಬ ಧೋರಣೆ ಇದೆ. ಧರ್ಮ, ಸಂಸ್ಕೃತಿ ಹಾಗೂ ಜೀವನ ಮೌಲ್ಯಗಳ ಬಗ್ಗೆ ಒಂದು ಹಿರಿಯ ಜೀವದ ಕಳಕಳಿ ವೇದ್ಯವಾಗುತ್ತದೆ. ನಮ್ಮ ಬಾಳಿಗೆ ಬೇಕಾಗ ಬಲ್ಲ ನುಡಿಮುತ್ತುಗಳನ್ನು ಈ ಪುಸ್ತಿಕೆ ಒಳಗೊಂಡಿದೆ"೧.

ಹಿಂದಿ ವಾಙ್ಮಯಕ್ಕೊಂದು ಮೂಜಗಂ ಕೊಡುಗೆ: "ವಿವಿಧತಾ ಮೆ ಏಕತಾ"

ಕಾಶಿ-ಕಲಕತ್ತೆಯಲ್ಲಿನ ಅಧ್ಯಯನ ಶ್ರೀ ಮೂಜಗಂ ವ್ಯಕ್ತಿತ್ವವನ್ನು ಬಹು ಭಾಷಾಮುಖಿಯಾಗಿ ರೂಪಿಸಿತೆಂಬುದಕ್ಕೆ 'ವಿವಿಧತಾ ಮೆ ಏಕತಾ' ಒಂದು ಸುಂದರ ಸಾಧಾರ. ಕನ್ನಡ-ಇಂಗ್ಲೀಷ-ಸಂಸ್ಕೃತ-ಹಿಂದಿಯಲ್ಲಿ ಅವರ ಅಧ್ಯಯನ-ಉಪನ್ಯಾಸ-ರಚನಾಶಕ್ತಿ ರೂಪಿತಗೊಂಡವು. ಶ್ರೀ ಜಗದ್ಗುರುಗಳು ಅನೇಕ

---

೧ 'ಜೇನಹನಿ': ಪ್ರೊ. ಮಲ್ಲಿಕಾರ್ಜುನ ಹಿರೇಮಠ: ಪುಷ್ಪಾಭಿನಂದನ ಸಂಪುಟ ; ಭಾಗ-೨

ಪ್ರಥಮ ದರ್ಜೆಯ ಸಭೆಗಳಲ್ಲಿ, ವಿದ್ವಜ್ಜನ ಗೋಷ್ಠಿಗಳಲ್ಲಿ ಉಪನ್ಯಾಸಿಸಿದ ಹಿಂದಿ ಉಪನ್ಯಾಸಗಳ ಸಂಗ್ರಹವೇ ಈ ಕೃತಿ. ಹೀಗಾಗಿ ಇದು ಅವರ ಪ್ರಥಮ ಹಿಂದಿ ಕೃತಿಯಾದರೂ (ಸದ್ಯಕ್ಕೆ ಏಕೈಕ ಹಿಂದಿ ಕೃತಿ) ಪ್ರೌಢವಾಗಿದೆ. ಅವರ ಆಳವಾದ ಸಂಸ್ಕೃತಾಧ್ಯಯನ, ಕನ್ನಡದ ಒಳಾಂಗಣದ ಅರಿವು, ವಿಪುಲವಾದ ಜೀವನಾನುಭವಗಳು ಇಲ್ಲಿ ಅರ್ಥಪಾಕಗೊಂಡಿವೆ. ೧೯೮೨ ರಲ್ಲಿ ಪ್ರಕಟಗೊಂಡ ಈ ಕೃತಿಯಲ್ಲಿ ತತ್ಪೂರ್ವದ ಒಂದು ದಶಕಕ್ಕಿಂತಲೂ ಹೆಚ್ಚಿನ ಕಾಲದ ಉಪನ್ಯಾಸಗಳು ಅಡಕವಾಗಿವೆ. 'ವಿವಿಧತೆಯಲ್ಲಿ ಏಕತೆ' (ವಿವಿಧತಾ ಮೇ ಏಕತಾ), 'ಸಾಮಾಜಿಕ ಜೀವನದಲ್ಲಿ ಧರ್ಮದ ಮಹತ್ವ' (ಸಾಮಾಜಿಕ ಜೀವನ ಮೇ ಧರ್ಮ ಕಾ ಮಹತ್ವ), 'ವಿಶ್ವ ಶಾಂತಿಗೆ ವೀರಶೈವದ ಕೊಡುಗೆ' (ವಿಶ್ವಶಾಂತಿ ಮೇ ವೀರಶೈವ ಧರ್ಮ ಕೀ ದೇನ), 'ಅಣುವ್ರತ ಆಂದೋಲನ', 'ಬುದ್ಧ ಮತ್ತು ಬಸವ' (ಬುದ್ಧ ಔರ ಬಸವ), 'ಬಸವ ಮತ್ತು ಅಕ್ಕಮಹಾದೇವಿ' (ಬಸವೇಶ್ವರ ಔರ ಅಕ್ಕಮಹಾದೇವಿ), 'ಸರ್ವ ಧರ್ಮ ಸಮದರ್ಶನ' (ಸರ್ವಧರ್ಮ ಸಮನ್ವಯ ದೃಷ್ಟಿ), 'ಹಿಂದಿಯ ಆವಶ್ಯಕತೆ' (ಹಿಂದೀ ಕೀ ಆವಶ್ಯಕತಾ)– ಹೀಗೆ ಎಂಟು ಉಪನ್ಯಾಸಗಳ ಔಚಿತ್ಯಪೂರ್ಣ ಸಂಕಲನವಿದೆ. ಈ ಕೃತಿಯ ಆತ್ಮೀಯ ಅವಲೋಕನ ಗೈದ ಹಿಂದಿ ವಿದ್ವಾಂಸರಾದ ಡಾ. ಬಿ. ಎಫ್. ಹಸರಾಣಿ ಅವರ ಮಾತಿನಲ್ಲಿ ಈ ಕೃತಿಯ ಅಂತರ್ದರ್ಶನವನ್ನು ಕಂಡುಕೊಳ್ಳುವದು ಸೂಕ್ತ:

"........ಪರಮ ಪೂಜ್ಯ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಶ್ರೀ ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳು ಮೂರುಸಾವಿರಮಠ ಹುಬ್ಬಳ್ಳಿ ಅವರು ಅನೇಕ ರಾಷ್ಟ್ರೀಯ ಅಂತರ್ರಾಷ್ಟ್ರೀಯ ಮಟ್ಟದ ಸರ್ವಧರ್ಮ ಸಮ್ಮೇಲನಗಳಲ್ಲಿ, ಅಧಿವೇಶನಗಳಲ್ಲಿ ಭಾಗವಹಿಸಿ ಹಿಂದಿಯಲ್ಲಿ ಹಲವಾರು ವಿದ್ವತ್ಪೂರ್ಣವಾದ, ಉದ್ಬೋಧಕವಾದ ಉಪನ್ಯಾಸಗಳನ್ನು ನೀಡಿ ವಿಚಾರ ಕ್ರಾಂತಿಯ ಕಹಳೆಯನ್ನೂದಿದ್ದಾರೆ. ಪೂಜ್ಯ ಶ್ರೀಗಳವರ ಇಂತಹ ಎಂಟು ಪ್ರಾತಿನಿಧಿಕ ಉಪನ್ಯಾಸಗಳ ಸಂಗ್ರಹ ಈ ಗ್ರಂಥ. ಅವುಗಳಲ್ಲಿ ಮೂಡಿಬಂದಿರುವ ರಾಷ್ಟ್ರೀಯ ಏಕತೆ, ಸಾಮಾಜಿಕ ಜೀವನದಲ್ಲಿ ಧರ್ಮದ ಪಾತ್ರ, ಸರ್ವಧರ್ಮ ಸಮನ್ವಯ, ವಿಶ್ವಶಾಂತಿ ಮತ್ತು ವಿಶ್ವಕಲ್ಯಾಣಕ್ಕೆ ಜೈನ ಬೌದ್ಧ ವೀರಶೈವ ಧರ್ಮ ಹಾಗೂ ದರ್ಶನಗಳ ಕೊಡುಗೆ, ಕನ್ನಡ ನಾಡು–ನುಡಿ, ಕರ್ನಾಟಕದ ಸಂಸ್ಕೃತಿ–ಸಭ್ಯತೆ, ಶರಣ ಸಾಹಿತ್ಯ–ಸಂಸ್ಕೃತಿಗಳ ಹಿರಿಮೆ–ಗರಿಮೆ, ಶರಣ–ಶರಣೆಯರ, ಜೈನ ಆಚಾರ್ಯರ ವಿಶುದ್ಧ ಜೀವನ–ದರ್ಶನ, ಮಹಾತ್ಮಾ ಗಾಂಧೀಜಿ, ವಿನೋಬಾ

ಭಾವೆ, ದಲಾಯಿ ಲಾಮಾರಂತಹರ ಜೀವನ ಯಜ್ಞ ಮುಂತಾದ ವಿವಿಧ ವಿಷಯ ಗಳ ಸಿಂಹಾವಲೋಕನ ಪ್ರಸ್ತುತ ಲೇಖನದ ಪ್ರತಿಪಾದ್ಯ ವಿಷಯ."[೧]

"ಆರ್ಯ ದ್ರಾವಿಡರಲ್ಲಿ ಹುಟ್ಟಿಕೊಂಡ ಮತಭೇದ, ಜೈನ ಬೌದ್ಧರ ಕಾಲದ ಧಾರ್ಮಿಕ ಅಸಮತೋಲನ, ಭಯಾನಕ ಯುದ್ಧಗಳು, ವಿದೇಶಿಯರ ಆಗಮನ, ಪರಧರ್ಮಗಳ ಪ್ರಚಾರ, ಪಶ್ಚಿಮೀ ಪ್ರಭಾವದಿಂದ ಭಾರತೀಯ ಸಂಸ್ಕೃತಿಯ ಅಧೋಗತಿ ಮುಂತಾದ ಅಘಟಿತ ಘಟನೆಗಳಿಂದ ಭಾರತದಲ್ಲಿ ಸಾಮಾಜಿಕ, ಧಾರ್ಮಿಕ, ರಾಜಕೀಯ, ಸಾಂಸ್ಕೃತಿಕ, ಸಾಹಿತ್ಯಿಕ, ಕಲಾತ್ಮಕ, ವೈಚಾರಿಕ ಹಾಗೂ ಭಾಷಾ ಕ್ಷೇತ್ರಗಳಲ್ಲಿ ಕಲ್ಪನಾತೀತವಾದ ವಿವಿಧತೆ ಉಂಟಾಗುವದು ಸಹಜ. ಭಾರತ ದಲ್ಲಿ ಯಾವ ವಿಷಯದಲ್ಲಿಯೂ ತನ್ನದೇ ಆದ ಏಕೈಕ ಮಾರ್ಗವಿಲ್ಲ. ಹಲವು ಹದಿನೆಂಟು ಮಾರ್ಗಗಳು. ವ್ಯಕ್ತಿ-ವ್ಯಕ್ತಿಯಲ್ಲಿ, ಧರ್ಮಗಳಲ್ಲಿ ಪರಸ್ಪರ ಅಂತಃಕಲಹ, ಭಿನ್ನ ಭಿನ್ನ ಧರ್ಮಾಚರಣೆಗಳು, ತಿನ್ನುಣ್ಣುವದರಲ್ಲಿ ಅನೈಕ್ಯತೆ, ವರ್ಗಭೇದ, ಶೋಷಣೆ ಇವು ವಿವಿಧತೆಯ ಮೂಲ ಕಾರಣಗಳು.... ಇಂದಿನ ಮೌಲ್ಯರಹಿತ ರಾಜಕೀಯದಿಂದ ರಾಷ್ಟ್ರೀಯ ಏಕತೆಯ ಸಾಧನೆಗೆ ವಜ್ರಾಘಾತ ವಾಗುತ್ತಲಿದೆ. ಭಾರತದ ವಿವಿಧ ಭಾಷೆಗಳು ಸಾಹಿತ್ಯ ಕಲೆ ಸಂಸ್ಕೃತಿ ವಿವಿಧ ಸಮಾಜ-ಪದ್ಧತಿಗಳ ಪ್ರಭಾವದಿಂದ ಭಾರತೀಯ ಸಂಸ್ಕೃತಿಯ ಸೌಷ್ಠವ-ಉತ್ತರೋತ್ತರ ವಿಕಾಸ ಹೊಂದುವಂತಾದರೆ ಭಾರತದ ವಿವಿಧತೆ ಒಂದು ವರದಾನ ವಾಗಿ ಪರಿಣಮಿಸುವದೆಂದು ಹೇಳುತ್ತ ಪೂಜ್ಯ ಶ್ರೀಗಳವರು ಭಾರತದ ವಿವಿಧತೆ ಯಲ್ಲಿ ಏಕತೆಯನ್ನು ಸಾಧಿಸುವ ಕಷ್ಟ ಸಾಧ್ಯ ಕಾರ್ಯದಲ್ಲಿ ಯಶಸ್ಸು ಗಳಿಸಲು ತಮ್ಮವೇ ಆದ ಪ್ರಧಾನಿಕ ವಿಚಾರಗಳ ಪ್ರಸಾದ ನೀಡಿ ತಮ್ಮ ಅತ್ಯುಚ್ಚ ವಿಚಾರ ವಂತಿಕೆ ಹಾಗೂ ಚಿಂತನ ಶಕ್ತಿಯನ್ನು ಪ್ರಮಾಣೀಕರಿಸಿದ್ದಾರೆ.... ಒಟ್ಟಿನಲ್ಲಿ 'ವಿವಿಧತಾ ಮೆ ಏಕತಾ' ಗ್ರಂಥ ರಚನೆ ಮಾನವನ ದುಃಖ ವಿಮೋಚನೆ, ವಿಶ್ವ ಶಾಂತಿ, ವಿಶ್ವಕಲ್ಯಾಣದ ಮಾರ್ಗೋಪಾಯಗಳನ್ನು ಕಂಡುಕೊಳ್ಳುವ ಒಂದು ಸಾತ್ವಿಕ ಪ್ರಯತ್ನವಾಗಿದೆ. ಈ ಬಗ್ಗೆ ಪೂಜ್ಯ ಶ್ರೀಗಳವರು ಅತ್ಯಂತ ಕಳಕಳಿ ಯಿಂದ ವಿಶ್ವದ ಧರ್ಮ ಗುರುಗಳಿಗೆ ಸೂಕ್ತ ಸಲಹೆ-ಸೂಚನೆಗಳನ್ನಿತ್ತು ಎಚ್ಚರಿಸಿ ದ್ದಾರೆ. ಇಂದು ಜಗತ್ತಿನಾದ್ಯಂತ ಯುದ್ಧ ರಕ್ಕಸ ರಕ್ತದಾಹದಿಂದ ಕುಣಿದು ಕುಪ್ಪಳಿಸುತ್ತ ತನ್ನ ಕದಂಭ ಬಾಹುಗಳಿಂದ ಮನುಕುಲವನ್ನೇ ಸಂಹರಿಸಿ ಕುಚೇಷ್ಟೆ ಮಾಡುತ್ತಿರುವಾಗ ವಿಶ್ವದ ಧರ್ಮಗುರುಗಳು ನಿಷ್ಕ್ರಿಯರಾಗಿ ಕುಳಿತುಕೊಳ್ಳದೆ ಒಂದೆಡೆ ಸೇರಬೇಕು. ಅಂತರ್ರಾಷ್ಟ್ರೀಯ ಸರ್ವಧರ್ಮ ಸಮ್ಮೇಲನಗಳ ವೇದಿಕೆಯ ಮೇಲೆ ಮಾನವನ ದುಃಖ-ವಿಮೋಚನೆ, ವಿಶ್ವಶಾಂತಿ, ವಿಶ್ವಕಲ್ಯಾಣದ ಬಗ್ಗೆ

೧ ವಿವಿಧತಾ ಮೇ ಏಕತಾ: ಡಾ. ಬಿ. ಎಫ್. ಹಸರಾಣಿ, ಎಂ.ಎ., ಪಿಎಚ್.ಡಿ.: ಮಹಾಭಿನಂದನ ಸಂಪುಟ: ಭಾಗ-೨.

ಆಳವಾಗಿ ಚರ್ಚಿಸಿ ಸೂಕ್ತ ಪರಿಹಾರೋಪಾಯಗಳನ್ನು, ಸುಖ–ಶಾಂತಿಯ ಸಂದೇಶಗಳನ್ನೂ ಧರ್ಮ–ಜ್ಞಾನದ ಜ್ಯೋತಿ ಬೆಳಗುವದರ ಮೂಲಕ ವಿಶ್ವದ ಮೂಲೆ ಮೂಲೆಗೂ ಮುಟ್ಟಿಸಬೇಕು. ಧಾರ್ಮಿಕ ಆಧ್ಯಾತ್ಮಿಕ ಜ್ಞಾನ ಜ್ಯೋತಿಯ ಬೆಳಕಿನಲ್ಲಿ ವ್ಯಕ್ತಿ ಸಮಾಜ ರಾಷ್ಟ್ರ ಹಾಗೂ ವಿಶ್ವಶಾಂತಿ ಸಮಾಧಾನದ ಉಸಿರು ಬಿಡುವಂತಾಗಬೇಕು ಎಂದು ಸಮಸ್ತ ವಿಶ್ವಕ್ಕೆ ಕರೆಕೊಡುತ್ತ ಪೂಜ್ಯ ಶ್ರೀಗಳವರು ಭಾರತದ 'ವಸುಧೈವ ಕುಟುಂಬಕಮ್' ಎಂಬ ಸಮಷ್ಟಿ ತತ್ವವನ್ನು ಪ್ರಸರುಚ್ಚರಿಸಿದ್ದಾರೆ."೧

ಲಲಿತ ಗದ್ಯದಲ್ಲಿ ಅನುಭಾವ ಪ್ರಭೆ:
"ಚಿತ್‌ಕಿರಣ"

"ಪರಂಜ್ಯೋತಿ" ಪತ್ರಿಕೆಗಾಗಿ ಪ್ರತಿತಿಂಗಳು ತಪ್ಪದೆ ಬರೆದ ನೂರಕ್ಕೂ ಮೇಲ್ಪಟ್ಟ ಆಶೀರ್ವಾಣಿಗಳ ಸುಂದರ ಸಂಗಮವೇ "ಚಿತ್‌ಕಿರಣ". ಸ್ವಾಭಾವಿಕವಾಗಿ ಅನೇಕ ತಿಂಗಳುಗಳ; ಅದೇಕೆ, ಅನೇಕ ವರ್ಷಗಳ ವಿಚಾರ ವಾಹಿನಿಯ ನಿರಂತರ ಪ್ರವಾಹದ ಒಂದು ಗದ್ಯಕಾವ್ಯದ ಓಟವನ್ನು ಇಲ್ಲಿ ಹತ್ತಿರದಿಂದ ನೋಡಬಹುದು. ಈ ಎಲ್ಲ ಆಶೀರ್ವಾಣಿಗಳಿಗೂ ತಲೆಬರಹವಾಗಿ ಒಂದೊಂದು ಸಂಸ್ಕೃತ ಸೂಕ್ತಿಗಳು ಬಂದರೂ ಅವುಗಳ ವಿಶ್ಲೇಷಣೆ ಕನ್ನಡದ ಕಣದಲ್ಲಿ ಆಗಿದೆ. ಇದೊಂದು ಜೀವನಾನುಭವದ ಕಣಜ. ಆಳವಾದ ಚಿಂತನದ ಅರವಟಿಗೆ. ವಿಶಾಲವಾದ ದರ್ಶನ ಪ್ರಜ್ಞೆಯ ಪ್ರತೀಕ. ಇದು ಸತ್ಯವಾಗಿಯೂ ಮೂಜಗಂ ಮನೋಭಾವಕ್ಕೆ ಹಿಡಿದ ಗದ್ಯ ಚೌಕಟ್ಟಿನ ಸುಂದರ ಕನ್ನಡಿ. ಇಲ್ಲಿ ಅವರ ಅಂತರಂಗದ ಆಲೋಚನೆಯ ಸರಮಾಲೆಯನ್ನು ಶಬ್ದಮಾಲೆಯಲ್ಲಿ ಗುರುತಿಸಬಹುದು, ಗಮನಿಸಬಹುದು, ಆಸ್ವಾದಿಸಬಹುದು. ಇದೊಂದು ಸ್ವಾನುಭಾವದ ಅನುಭವಾಮೃತ; ಮುಳುಗಿದಷ್ಟು ಆಳ, ಈಜಿದಷ್ಟು ವಿಶಾಲ. ಉದಾಹರಣೆಗೆ ಇಲ್ಲಿಯ ಸಂಸ್ಕೃತ ಉಕ್ತಿಗಳ ಸೊಗಸನ್ನೇ ಸವಿಯಬಹುದು:

'ಸಮತ್ವಂ ಯೋಗಂ ಉಚ್ಯತೇ'
'ಸರ್ವೇ ಮಾನವಾಃ ಸಹೋದರಾಃ'
'ಕಾಯಕ ಏವ ಕೈಲಾಸಃ'
'ಸತ್ಯಂ ವದ ಧರ್ಮಂ ಚರ'
'ದರಿದ್ರದೇವೋ ಭವ'

---

೧ 'ವಿವಿಧತಾ ಮೇ ಏಕತಾ': ಡಾ. ಬಿ. ಎಫ್. ಹಸರಾಣಿ: ಮಹಾಭಿನಂದನ ಸಂಪುಟ: ಭಾಗ-೨.

'ಏಕೋ ರಸಃ ಕರುಣ ಏವ'
'ಮಾಮೇಕಂ ಶರಣಂ ವ್ರಜ'
'ಉದ್ಯೋಗಿನಂ ಪುರುಷಸಿಂಹಮುಪೈತಿ ಲಕ್ಷ್ಮೀಃ'
'ಆಶಾ ಹಿ ಪರಮಂ ದುಃಖಂ'
'ಪ್ರವಾಸೋ ಜ್ಞಾನಸಾಧನಂ'
'ಲಿಂಗ ಬಾಹ್ಯಾತ್ ಪರಂ ನಾಸ್ತಿ'
'ಮಾನವಃ ಶಿವಯೋಗೇನ ಶಿವೋ ಭವತಿ ಕೇವಲಂ' ಇತ್ಯಾದಿ.

ಇಲ್ಲೆಲ್ಲ; ಸಂಸ್ಕೃತ ಶ್ಲೋಕ ಕಾಂಡಗಳನ್ನು ಒಡಿದು ಸರಳವಾದ ಕನ್ನಡದಲ್ಲಿ ಅರ್ಥವ್ಯಾಪ್ತಿಗಳನ್ನು ಕಂಡುಕೊಳ್ಳಲಾಗಿದೆ. ಇವರ ಹೃದ್ಯವಾದ ಕೆಲವು ಕನ್ನಡದ ವಾಕ್ಯಗಳಲ್ಲಿ ತುಂಬಿದ ಭಾವದ ತಂಪನ್ನೂ ಅನುಭವಿಸಬಹುದು:

"ರಸವಿದ್ದ ಹಣ್ಣು ಸುಂದರವಿದ್ದಂತೆ ಕರುಣಾರಸಭರಿತ ಜೀವನ ಸುಂದರ ಹಾಗೂ ಬಂಧುರವಿರುತ್ತದೆ."

"ಪ್ರಶಂಸೆಯೆಂಬುದು ಸುಗಂಧ ಗುಳಿಗೆ ಇದ್ದ ಹಾಗೆ. ಮೂಸಿದರೆ ಸುಖ. ನುಂಗಿದರೆ ವಿಷ."

"ಪ್ರತಿಯೊಂದು ಚಲನೆಯ ಹಿಂದೆಯೂ ಒಂದು ಮೌನವಿದೆ; ಆ ಮೌನಕ್ಕೆ ನೀನು ಸಿದ್ಧನಾಗು."

"ಕರುಣಾಜಲದಿಂದ ಮತ್ಸರಾಗ್ನಿ ಆರುತ್ತದೆ. ಜಾತಿ ದ್ವೇಷಗಳು ದೂರ ವಾಗುತ್ತವೆ."

"ವೈರತ್ವವನ್ನು ಸಾಧಿಸುತ್ತ ಸಮಾಜಾಭಿಮಾನ ಶೂನ್ಯರಾದರೆ, ಸಮಾಜವು ಒಡೆದ ಗಡಿಗೆಯಂತಾಗುತ್ತದೆ. ಬಲವಿಲ್ಲದ ರೋಗಿಯಂತಾಗುತ್ತದೆ. ತಂತಿ ಯಿಲ್ಲದ ವೀಣೆಯಂತಾಗುತ್ತದೆ. ಧೂಳು ಮುಸುಕಿದ ಕನ್ನಡಿಯಂತಾಗುತ್ತದೆ."

"ಸುಖವು ಚಿನ್ನದ ಸಂಕೋಲೆಯಾದರೆ ದುಃಖವು ಕಬ್ಬಿಣದ ಸಂಕೋಲೆ."

"ಬುದ್ಧಿಯಲ್ಲಿಯೂ ಸುಬುದ್ಧಿ ಮತ್ತು ದುರ್ಬುದ್ಧಿ ಎರಡು ತೆರ. ಸುಬುದ್ಧಿಯು ಮಾನವನನ್ನು ಮೇಲಕ್ಕೆತ್ತುತ್ತದೆ. ದುರ್ಬುದ್ಧಿಯು ಕೆಳಗಿಳಿಸುತ್ತದೆ."

ದ. ಲ.ಕೆರೂರ ಅವರು ಈ ಹೊತ್ತಿಗೆಗೆ ಮುನ್ನುಡಿ ಬರೆಯುತ್ತ ಗುಣಗ್ರಹಣ ಮಾಡಿದ್ದಾರೆ: " 'ಚಿತ್‌ಕರಣ'ದಂಥ ಒಂದು ಒಳ್ಳೆಯ ಕೃತಿಯ ಕುರಿತು ನಾಲ್ಕು ಮಾತುಗಳನ್ನು ಬರೆಯುವ ಅವಕಾಶ ದೊರೆಯುವದೂ ಒಂದು ಸುಯೋಗ.... ಶ್ರೀ ಮೂಜಗಂ ಅವರನ್ನು ಸಮೀಪದಿಂದ ಕಾಣುವ ಅವಕಾಶ ನನಗೆ ಒಂದು ಕಾಲುಶತಮಾನದಿಂದ ದೊರಕಿದೆ. ಅವರ ಬಹುಮುಖ ಪ್ರತಿಭೆ ಮೆಚ್ಚಬೇಕಾ ದುದು. ಒಂದು ಧಾರ್ಮಿಕ ಪೀಠದ ಅಧಿಕಾರಿಗಳಾಗಿದ್ದುಕೊಂಡು ಅವರು ತಮ್ಮ

ಪೀಠದ ಕರ್ತೃವ್ಯದ ನಿರ್ವಹಣೆಯ ಜೊತೆಗೆ ಲೋಕ ಸಂಗ್ರಹ ಕಾರ್ಯವನ್ನೂ ನಡೆಸಿಕೊಂಡು ಬಂದಿರುವದು ಅವರನ್ನು ಜನಪ್ರಿಯರನ್ನಾಗಿಸಿದೆ....ಒಂದು ತಪಕ್ಕಿಂತಲೂ ಹೆಚ್ಚು ಕಾಲ ಈ ಕಾರ್ಯ ನಡೆಸಿಕೊಂಡು ಬಂದನಂತರ ಶ್ರೀಜಗದ್ಗುರುಗಳು ಇತ್ತೀಚೆಗೆ–'ಇನ್ನು ಸಿದ್ಧರಾಮನ ಈ ಕಾರ್ಯ ಸಾಕು, ಸಾಹಿತ್ಯದತ್ತ ಗಮನಹರಿಸಬೇಕು' ಎಂದು ಹೇಳುತ್ತ ಬಂದಿದ್ದಾರೆ....ಮಾನವನ ಮರವೆಯನ್ನು ನಿವಾರಿಸಿ, ಅರಿವಿನ ಬೆಳಕನ್ನು ಮೂಡಿಸಲೆಂದು ಬಂದ ಈ ಚಿತ್‌ಕಿರಣ ಸಕಲರ ಬಾಳಬಟ್ಟೆಗೆ ದಾರಿದೀಪವಾಗಿದೆ ಎಂದು ಧಾರಾಳವಾಗಿ ಹೇಳಬೇಕಾಗಿದೆ....ಸಮಾಜದಲ್ಲಿ ಎಷ್ಟು ವ್ಯಕ್ತಿಗಳೊ ಅಷ್ಟು ಸಮಸ್ಯೆಗಳು....ಅಂಥ ಪರಿಹಾರವನ್ನು ಕಂಡುಹಿಡಿಯಲು ಇಲ್ಲಿ ಪ್ರಯತ್ನ ನಡೆದಿದೆ....ಸಮಾಜದ ಅಂಕು ಡೊಂಕುಗಳನ್ನು ಕಂಡು ಅವರ ಮನಸ್ಸು ಕಳವಳಗೊಂಡಿದೆ. ಅಹಂಮನ್ಯ ವ್ಯಕ್ತಿಗಳ ಬಗ್ಗೆ ಅವರಲ್ಲಿ ಕೋಪದ ಬದಲು ಅನುಕಂಪ ಇದೆ....ಶ್ರೀ ಮೂಜಗಂ ಅವರ ಈ ಕಿರಣಗಳ ಬೆಳಕಿನಲ್ಲಿ ವಾಚಕರ ಭ್ರಮೆ ದೂರಾಗಿ ಲೋಕಾನುಭವ ಹೆಚ್ಚಿ, ಸರಿಯಾದ ಅರಿವು ಮೂಡಿ ಜೀವನ ಮಾರ್ಗ ಸುಗಮವಾಗಬಲ್ಲದು. ಸಾಕಷ್ಟು ಸಾಧಾರವಾಗಿ ಆದರೂ ಲಲಿತವಹ ಕನ್ನಡದಲ್ಲಿ ಮೂಡಿಬಂದಿರುವ ಚಿತ್‌ಕಿರಣ ಕನ್ನಡಿಗರನ್ನು ಒಳ್ಳೆಯ ದಾರಿಯಲ್ಲಿ ನಡೆಸಿಕೊಂಡು ಹೋಗಲು ಬಂದಿರುವ ಸುಂದರ ಕೃತಿ."೧

ತತ್ವ ಚಿಂತನೆಗಳ ದೀಪಮಾಲೆ:
"ಹೊಂಗಿರಣ"

"ಚಿತ್‌ಕಿರಣ"ದಂತೆ ಜನಪ್ರಿಯತೆ ಸಂಪಾದಿಸಿದ ಇನ್ನೊಂದು ಕೃತಿ "ಹೊಂಗಿರಣ". ೧೯೭೨ ರಷ್ಟು ಪೂರ್ವದಲ್ಲೇ ಬಂದ ಈ ಕೈಹೊತ್ತಿಗೆಯಲ್ಲಿ ಒಟ್ಟು ೨೩ ಸಂಸ್ಕೃತ ಸೂಕ್ತಿಗಳಿಗೆ ಕನ್ನಡದಲ್ಲಿ ಅರ್ಥದೀಪ್ತಿ ನೀಡಲಾಗಿದ್ದು; "ಆಕಾಶವಾಣಿ"ಯಿಂದ ಪ್ರಸಾರವಾದ ನಾಲ್ಕು ಹಿತಮಾತುಗಳೂ ಅಂತ್ಯದಲ್ಲಿ ಅಡಕವಾಗಿವೆ. ಸಂಸ್ಕೃತದ ಸೂಳ್ನುಡಿಗಳಿಗೆ ಕನ್ನಡದ ಅರ್ಥವ್ಯಾಪ್ತಿಯ ಪರಿವೇಶ ನೀಡಿ; ಸಹಜ–ಸರಲ–ಸುಲಭ ಶೈಲಿಯಲ್ಲಿ ವಿವರಣೆ ನೀಡಿರುವದು ಈ ಕೃತಿಯ ಜನಪ್ರಿಯತೆಗೆ ಸಾಕ್ಷಿ. ಇವರು ಆಯ್ಕೆಮಾಡಿರುವ ಸಂಸ್ಕೃತದ ಸಾರ ವಾಕ್ಯಗಳೇ ಅರುಹಿನ ಭಟ್ಟಿಗಳಾಗಿವೆ:

"ತೇನವಿನಾ ತೃಣಮಪಿ ನ ಚಲತಿ"
"ವಿದ್ಯಾದದಾತಿ ವಿನಯಂ"
"ಸರ್ವೇಂದ್ರಿಯಾಣಾಂ ನಯನಂ ಪ್ರಧಾನಂ"

೧ ದ. ಲ. ಕೆರೂರ: ಮುನ್ನುಡಿ: 'ಚಿತ್‌ಕಿರಣ': ಪುಟ-೧.೨.೩

"ರಸಸಿದ್ಧಾಃ ಕವೀಶ್ವರಾಃ"
"ಅಶಾಂತಸ್ಯ ಕುತಃ ಸುಖಮ್"
"ನಾನ್ನಷಿಃ ಕುರುತೇ ಕಾವ್ಯಂ"

ಇವೆಲ್ಲಾ ಅರ್ಥಸಾಗರಗಳು. ಮುಳುಗಿದಷ್ಟೂ ಆಳ, ಈಜಿದಷ್ಟೂ ವಿಶಾಲ. ಸಂಸ್ಕೃತ ವಾಙ್ಮಯ ಅತ್ತ, ವಚನ ವಾಙ್ಮಯ ಇತ್ತ; ಈ ಎರಡೂ ಶ್ರೀಮಂತ ಜ್ಞಾನಭಾರತಿ-ಅನುಭಾವ ಕನ್ನಡತಿಯರ ಸಮರಸ ಸೇತುವೆಯಾಗಿ ಶ್ರೀಮೂಜಗಂ ಕಾರ್ಯಮಾಡಿದ್ದಾರೆ. ಇದು ಸಂಸ್ಕೃತ ವಾಙ್ಮಯಕ್ಕೆ ಕನ್ನಡದ ಕನ್ನಡಿಯಲ್ಲಿ ಹಿಡಿದ ಪುಟ್ಟ ಕನ್ನಡಿ. ಇಲ್ಲಿಯ ಹಿತಮಿತವಾದ ಗದ್ಯದ ಸಂಪತ್ತಿಗೆ ಒಂದೆರಡು ನಿದರ್ಶನಗಳನ್ನು ಗಮನಿಸಿರಿ:

"ತಾಮಸೀಯ ಆಹಾರದಿಂದ ದೇಹ ಬಲವು ಬೆಳೆದರೆ, ಸಾತ್ವಿಕ ಆಹಾರದಿಂದ ಆತ್ಮದಲ್ಲಿ ದಿವ್ಯ ತೇಜಸ್ಸು ಹೊಳೆಯುವದು"

"ಅಂಗವೆಂಬ ಭೂಮಿಯಲ್ಲಿ ಲಿಂಗವೆಂಬ ಬೆಳೆಯಾಗುತ್ತದೆ"

"ಭಾವ ಭೂಮಿಯ ಮೇಲೆ ಏಕತೆಯ ಕಾಳುಗಳನ್ನು ಬಿತ್ತಿ ಪ್ರೇಮವೆಂಬ ಸಿಹಿ ನೀರನ್ನು ಹಾಕಿ ಬೆಳೆದರೆ ರಾಷ್ಟ್ರದ ಶಕ್ತಿ ನೂರ್ಮಡಿ ಹೆಚ್ಚಾಗಿ ಸೌಗಂಧ ಬೀರಬಲ್ಲವು"

"ಮುಕ್ಕಣ್ಣ ನೊಲಿಸಲು ಕಣ್ಣು ಮೂಲ ಕಾರಣ"

"ಮಾತಿನಿಂದ ಕಲಹ ಬೆಳೆದಷ್ಟು ಮೌನದಿಂದ ಬೆಳೆಯಲಾರದು"

ಈ ಪುಟ್ಟ ಪುಸ್ತಕಕ್ಕೆ ಮುನ್ನುಡಿ ಬರೆದ ಡಾ. ಡಿ. ಎಸ್. ಕರ್ಕಿಯವರ ಮಾತುಗಳನ್ನು ಕೇಳಬಹುದು:

"ಹೊಂಗಿರಣ" ಎಂಬ ಈ ಕಿರುಹೊತ್ತಿಗೆ ಮೂರು ಸಾವಿರಮಠದ ಪೂಜ್ಯ ಜಗದ್ಗುರು ಗಂಗಾಧರ ರಾಜಯೋಗೀಂದ್ರರ ತತ್ವ ಚಿಂತನಗಳ ಮಾಲೆ; ಜೀವನ ತತ್ವಗಳ ದೀಪಮಾಲೆ....ಇದೊಂದು ಚಿಂತನಶೀಲ ಚಿತ್ತದ ಭಾವತರಂಗಮಾಲೆ ಎಂದು ಹೇಳಿದರೆ ಸರಿಯಾದೀತು....ಸಂಸ್ಕೃತ ಸುಭಾಷಿತಗಳಲ್ಲಿ ಹುದುಗಿದ ಹುರುಳನ್ನು ವಿವರವಾಗಿ ತಿಳಿಯಪಡಿಸುವ ಸಂದರ್ಭಗಳಲ್ಲಿ ಜಗದ್ಗುರುಗಳು ತತ್ಸಮಾನವಾದ ಕೆಲವು ಕನ್ನಡ ನುಡಿಮುತ್ತುಗಳನ್ನು ಕನ್ನಡ ಸಾಹಿತ್ಯದ ಸಂಪದವನ್ನು ಮನದಮುರು ಎತ್ತಿ ಹಿಡಿಯುವಂತೆ ಜೇನು ಮಾತುಗಳ ಸರಣಿಯ ಸರದಲ್ಲಿ ಪವಣಿಸಿದ ಬಗೆ ಬಿಗಿಗೊಳಿಸುವಂಥದು....ಹೊಂಗಿರಣದಲ್ಲಿ ತತ್ತ್ವ ಚಿಂತನವಿದೆ; ವಿಚಾರ ಮಂಥನವಿದೆ; ಅನುಭಾವದ ಸ್ಫುರಣವಿದೆ.೧

೧ ಡಾ. ಡಿ. ಎಸ್. ಕರ್ಕಿ "ಹೊಂಗಿರಣ": ಮುನ್ನುಡಿ: ಪುಟ-೧ ರಿಂದ ೯

ಚೇತನವೇ 'ಹೂ': ಚಿಂತನವೇ 'ಬಳ್ಳಿ' ಅದೇ "ಹೂಬಳ್ಳಿ"

"ಪೊಂಗಿರಣ", "ಚಿತ್‌ಕಿರಣ"ಗಳ ಚಿಂತನಶೀಲ ವಿಶಿಷ್ಟಮಾಲೆಯಲ್ಲಿ ಮೂಡಿ ಬಂದ ಇನ್ನಷ್ಟು ಪ್ರೌಢ-ಪರಿಣತ ಕೃತಿ: ೧೯೮೬ ರಲ್ಲಿ ಪ್ರೈದಾಳಿದ "ಹೂಬಳ್ಳಿ". ಈ ಓಘದ ಸಾಹಿತ್ಯ ನಿರ್ಮಿತಿಯ ದಾರಿಯಲ್ಲಿ ಶ್ರೀಮೂಜಗಂ ಇನ್ನಷ್ಟು ಸ್ಥಾಯಿಯಾಗುತ್ತಿರುವದಕ್ಕೆ ಈ ಕೃತಿ ಸಾಕ್ಷಿ. ಎರಡು ದಶಕಗಳ ಪೀಠಾರೋಪಣೋತ್ತರದ ಬದುಕಿನಲ್ಲಿ ಉಸಿರಾಡಿಸಲೂ ಸಮಯವಿಲ್ಲದ ಸಾವಿರಾರು ಕೆಲಸ ಕಾರ್ಯಗಳಲ್ಲಿ ಇಂಥ ಚಿಂತನಶೀಲ-ವಿಚಾರಶೀಲ ಸಾಹಿತ್ಯ ಬರೆದಿರುವದು ಅಚ್ಚರಿ. ಈ ಬಗೆಯ ಸಾಹಿತ್ಯ ನಿರ್ಮಿತಿಗೆ "ಪರಂಜ್ಯೋತಿ" ಭದ್ರ ನೆಲೆಗಟ್ಟಾಯಿತು. ಸಂಸ್ಕೃತದ ಸಾರೋಕ್ತಿಗಳಿಗೆ ಕನ್ನಡದ ಸಾರೋಟು ಭಾಷಾಮಾಧ್ಯಮ ಒದಗಿಸಿತು. ಉಭಯ ಭಾಷೆಗಳಲ್ಲಿ ಶ್ರೀಗಳಿಗಿರುವ ಸಮಾನ ಅಧ್ಯಯನ ಬಲವೇ ಈ ನಿಟ್ಟಿನ ಸಾಹಿತ್ಯಕ್ಕೆ ಹಾಲು ನೈವೇದ್ಯ ನೀಡಿದೆ. ಮೂಲತಃ ಇಲ್ಲಿಯ ಜಿಜ್ಞಾಸೆ ಕಾವ್ಯ-ಸಿದ್ಧಾಂತ-ಸಮಾಜ-ಶಾಂತಿ-ವಿಶ್ವಪ್ರೇಮಗಳ ಪಂಚ ದೀಪಗಳಿಂದ ಪಂಚಾರತಿಯಾಗಿದೆ. ಇಲ್ಲಿರುವ ಸಂಸ್ಕೃತ ಸಾರೋಕ್ತಿಗಳು ಗಮನಾರ್ಹ:

"ಮಾನವಃ ಶಿವಯೋಗೇನ ಶಿವೋಭವತಿ ಕೇವಲಂ"
"ಸದಾ ಸಮಾಜ ಸೇವಾಯಾಂ ಸಾಂತ್ವನಂ ಪರಮಂ ಮತಂ"
"ಸರ್ವೇ ಮಾನವಾಃ ಸಹೋದರಾಃ"
"ಅಶಾಂತಸ್ಯ ಕುತಃ ಸುಖಮ್"
"ಸಂಘೇಶಕ್ತಿಃ ಕತೌಯುಗೇ"
"ಯದ್ಭಾವಸ್ತದ್ಭವತಿ"
"ಆಹಾರ ಶುದ್ಧೌ ಸತ್ವ ಶುದ್ಧಿಃ"
"ಧರ್ಮಸ್ಯ ಮೂಲಂ ಅರ್ಥಃ"
"ದರಿದ್ರ ದೇವೋ ಭವ"
"ಪ್ರೇಮ ಏವ ಮಹೇಶ್ವರಃ"
"ಯದ್ಯತ್ಕರೋಮಿ ತತ್ತದಖಿಲಂ ಶಂಭೋತವಾರಾಧನಂ"

ಪ್ರತಿಯೊಂದು ಸೂಕ್ತಿಸಾರವನ್ನು ಓದಿ ಆನಂದಿಸುವಂತಿವೆ. ಅಲ್ಲಿರುವ ಸರಳತೆ ಹಾಗೂ ನಮ್ಮತನ ಕೈಬೀಸಿ ಕರೆಯುತ್ತವೆ. ಈ ಮಾತುಗಳು ನಮ್ಮವಾಗುತ್ತವೆ. ಉದಾ:

"ಮಠಾಧೀಶ್ವರರೆಂದ ಮಾತ್ರಕ್ಕೆ ನಮ್ಮಷ್ಟಕ್ಕೆ ನಾವೇ ಸುಮ್ಮನೆ ಕುಳಿತುಕೊಂಡು ಜೀವನ ಸಾಗಿಸುವದು ಇದೀಗ ಸರಿಯೆನಿಸದು"

"ಉರಿಬರಲಿ ಸಿರಿಬರಲಿ ಸರ್ವಸ್ವವನ್ನು ಸರ್ವಾಂತರ್ಯಾಮಿಗೆ ಸಮರ್ಪಿಸಿ ಸಮಾಜ ಸೇವಕರೀಗ ಕಾರ್ಯಮಾಡಬೇಕಾಗಿದೆ, ಬೆಳಕಿನತ್ತ ಸಾಗಬೇಕಾಗಿದೆ"

"ಧರ್ಮ ಬದುಕಿನ ಬೇರು ಎನಿಸಿದರೆ ಅರ್ಥವು ಚಿಗುರುವಹೂವು"

"ಇದೀಗ ಬೇಕಾಗಿರುವದು ಮೊದಲು ಅನ್ನ, ನಂತರ ತತ್ವ"

"ಹಾಲನೆರೆದರೆ ಹಾವಿನ ನಂಜು ಸವಿಯಾಗದು. ಹೊರಗಣ ವಿದ್ಯೆಯಿಂದ ಹೃದಯ ಶುದ್ಧಿಯಾಗದು. ಅಧಿಕಾರ ಸ್ಥಾನಮಾನಗಳಿಂದ ಭಾವ ಶುದ್ಧಿಯಾಗದು"

"ಮೈಗೆ ಕೈಗಳಂತೆ, ಕಣ್ಣುಗಳಿಗೆ ರೆಪ್ಪೆಗಳಂತೆ, ಯೋಚನೆಯಿಲ್ಲದೆ ಹಿತ ಬಯಸುತ್ತಾರೆಯೋ ಅವರೇ ನಿಜವಾದ ಬಂಧುಗಳು"

ಹೀಗೆ ಬದುಕನ್ನು ಹತ್ತಿರದಿಂದ ನೋಡುವ, ತೋರುವ ಕಲೆ ಇಲ್ಲಿ ಕರಗತವಾಗಿದೆ. ಎತ್ತರದ ತತ್ವಗಳು ಇಲ್ಲಿ ನಡುಮನೆಯ ಮಾತಾಗಿವೆ. "ಇದರಲ್ಲಿ ಮೂಡಿ ಬಂದ ಹೇಳಿಕೆಗಳು ಕೇವಲ ಹೇಳಿಕೆಗಳಲ್ಲ, ಹೃದಯಾಂತರಾಳದಿಂದ ಹೊರಹೊಮ್ಮಿದ ಭಾವಪೂರ್ಣವಾದ ವಿವೇಕ ದೀಧಿತಿಗಳು"[೧] "ಅನೇಕ ವಾಕ್ಯಗಳು ಕಾವ್ಯ–ಶೃತಿ–ಸ್ಮೃತಿಗಳ ಆಕರದಿಂದ ಉದಾಹೃತವಾಗಿವೆ. ಚಿತ್ತಶುದ್ಧಿ, ಸಂಯಮ, ಸತ್ಯ–ಧರ್ಮ–ಶಾಂತಿ–ಸುಖ ಇತ್ಯಾದಿ ವಿಷಯಗಳ ಅನ್ಯೋನ್ಯ ಅನುಬಂಧವನ್ನು ಪೂಜ್ಯರು ಮನಂಬುಗುವಂತೆ ತಿಳಿಸಿದ್ದಾರೆ."[೨]

"Heart's Blossoms"
ಒಂದು ಕ್ಷಿಪ್ರ ಅಧ್ಯಯನ

ಶ್ರೀಮೂಜಗಂ ಅವರು ನಾನಾ ಸಂದರ್ಭಗಳಲ್ಲಿ ಬರೆದ ಕನ್ನಡದ ವಚನಗಳನ್ನು ಆಂಗ್ಲ ಲೋಕಕ್ಕೆ ಪರಿಚಯಿಸುವ ಮೊದಲ ಸಾಹಸ ಮಾಡಿದವರು ಶ್ರೀ ಎಸ್. ಎಂ. ಅಂಗಡಿಯವರು. ಅವರು ಈ ಜವಾಬ್ದಾರಿಯ ಕೆಲಸವನ್ನು ಕೇವಲ ತಮ್ಮ ಮೇಲೆಯೇ ಹೊತ್ತುಕೊಳ್ಳದೇ; ಆಂಗ್ಲ ಭಾಷಾಮಾಧ್ಯಮಕ್ಕೆ ಕನ್ನಡದ ವಚನದ ನುಡಿಗಟ್ಟುಗಳನ್ನು ಅಳವಡಿಸಲು ಪ್ರೊ. ಅರ್ಮ್ಯಾಂಡೊ ಮೆನೆಝಿಸ್ (Prof Armando Menezes) ಅವರ ನೆರವನ್ನು ಪಡೆದರು. ಉಭಯ ವಿದ್ವಾಂಸರಿಂದ ಹೀಗೆ ಅನುವಾದ ಕಂಡ ವಚನಗಳು ೧೯೭೪ ರಲ್ಲಿ ಪ್ರಕಟಗೊಂಡುದು ಮಾತ್ರವಲ್ಲದೆ; ಬೆಲ್ಜಿಯಂ ದೇಶದ ಲ್ಯೂವೆನ್ (Leuven) ದಲ್ಲಿ ನೆರವೇರಿದ "ದ್ವಿತೀಯ ವಿಶ್ವಧರ್ಮಗಳ ಶಾಂತಿ ಪರಿಷತ್ತಿ"ನಲ್ಲಿ (Second world Conference on Religion and Peace) ದಿ. ೩೧.೮. ೧೯೭೪ ರಂದು;

---

೧ ಪ್ರೊ. ಎ. ಎಲ್. ಹಿರೇಮಠ : "ಹೂಬಳ್ಳಿ" : ಗ್ರಂಥಪರಿಚಯ ಪುಟ-೭

೨ ಅದೇ ಪುಟ - ೫

WCRP ಯ (World Conference on Religion and Peace) ಪ್ರಧಾನ ಕಾರ್ಯದರ್ಶಿಗಳಾದ ಡಾ. ಹೋಮರ ಎ. ಜಾಕ್ (Dr. Homer A. Jack) ಅವರಿಂದ ಬಿಡುಗಡೆಯ ಭಾಗ್ಯ ಪಡೆದುದು ಕರ್ನಾಟಕದ ಮಠಾಧಿಪತಿಗಳ ಇತಿಹಾಸದಲ್ಲಿಯೇ ಒಂದು ಹೊಸ ಸಾಧನೆ. ವೀರಶೈವ ಪಾರಿಭಾಷಿಕ ಪದಗಳಿಗೆ ಇಲ್ಲಿ ಗ್ರಂಥದ ಕೊನೆಗೆ ನೀಡಿರುವ ವಿವರಣೆಯಿಂದ ವಿದೇಶಿ ಅಭ್ಯಾಸುಗಳಿಗೆ ಪ್ರವೇಶಾರ್ಹತೆ ನೀಡುತ್ತದೆ. ಈ ಸಂಕಲನದಲ್ಲಿ ಶ್ರೀಮೂಜಗಂ ಅವರ ಆರಂಭಿಕ ಜೀವನದಲ್ಲಿ ಬರೆದ ಹಾಗೂ ಪ್ರಬುದ್ಧ ಜೀವನದಲ್ಲಿ ವಿರಚಿಸಿದ ವಚನಗಳೆಲ್ಲದರ ಅನುವಾದವಿದೆ. ಈ ಅನುವಾದಿತ ವಚನಗಳ ಮೂಲ ಕನ್ನಡದ ವಚನಗಳ ಪ್ರತ್ಯೇಕ ಸಂಕಲನ ಬಂದಿಲ್ಲವಾದುದರಿಂದ, ಮೂಲ ವಚನಕ್ಕೂ ಅನುವಾದಿತ ವಚನಕ್ಕೂ ತಾಳೆ ಹಚ್ಚುವ ಸಾಧ್ಯತೆ ಇಲ್ಲಿ ಇಲ್ಲ. ಆದರೆ ಅನುವಾದಕರಲ್ಲಿ ಒಬ್ಬರು (ಅಂಗಡಿ) ಉಭಯ ಭಾಷಾ ಪರಿಶ್ರಮಿಗಳೂ ಹಾಗೂ ಇನ್ನೊಬ್ಬರು (ಮೆನೆರ್ಝಿಸ್) ಆಂಗ್ಲ ಭಾಷೆಯ ಪ್ರಥಮ ದರ್ಜೆಯ ಪಂಡಿತರು ಇರುವದರಿಂದ ಈ ವಚನಗಳ ಅನುವಾದದ ಪ್ರಾಮಾಣಿಕ ಪ್ರಯತ್ನವನ್ನು ಆಧಾರ ರಹಿತವಾಗಿಯೂ ಮೆಚ್ಚಿಕೊಳ್ಳಬಹುದಾಗಿದೆ. ಮುಖ್ಯವಾಗಿ ಈ ವಚನಗಳಲ್ಲಿ ಮೇಲಿಂದ ಮೇಲೆ ಹೃದಯದ ಸಂಬಂಧಿಯಾದ ಉಲ್ಲೇಖಗಳು ವಿಪುಲವಾಗಿ ಬಂದಿರುವದರಿಂದ ಇದಕ್ಕೆ "Heart's Blossoms" ಎಂದು ಕರೆದಿರುವದು ಅರ್ಥಪೂರ್ಣವೇ ಆಗಿದೆ. ಹೃದಯವು ಅನುಕಂಪೆಯ ಆಗರ, ಆಶೆಗಳ ಹೂಬುಟ್ಟಿ. ಸಾಹಿತ್ಯ ದೇಗುಲದ ನಿರ್ಮಿತಿಗೆ ಹೃದಯದ ಐಶ್ವರ್ಯವೇ ಮೂಲ,

"Behold, the mind desires
To build the temple of literature
with the heart's riches"೧

ಹೃದಯವು ಕರುಣೆ, ಅನುಕಂಪೆಗಳ ಆಡುಂಬೊಲವಾಗಿದೆ. ಅನುಕಂಪೆ ಇಲ್ಲದ ಸಾವಿರ ಮಾತುಗಳೂ ಜೊಳ್ಳುಗಾಳು ಎಂದು ಶ್ರೀಮೂಜಗಂ ಹಾಡಿದ್ದಾರೆ:

"A thousand words without
A sense of sympathy is as
A hollow seed, mere chaff...."೨

ಶಾಂತಿಯು ಜೀವನದ ಜೀವಾಳ. ಶಾಂತಿ ಇಲ್ಲದ ವ್ಯಕ್ತಿಯಾಗಲಿ, ರಾಷ್ಟ್ರವಾಗಲಿ ನೀರಿಲ್ಲದ ಬಾವಿಯಂತೆ. ಶಾಂತಿ ಇಲ್ಲದ ಧರ್ಮವಿಲ್ಲ, ಧರ್ಮವಿಲ್ಲದ ಶಾಂತಿಯಿಲ್ಲ! ಎರಡೂ ಅಂತರಾಳದಲ್ಲಿ ಹಾಸುಹೊಕ್ಕಾಗಿರುತ್ತವೆ:

---

೧ Heart's Blossoms: About the Author ix
೨ Heart's Blossoms: About the Author: x

"A person without peace,
A nation without peace,
Is useless like a well
That has no water!
Religion without peace,
And peace without religion;
Are interwoven mutually,
Like warp and woof, look you,
Lord of the blossoming-creeper town
World-teacher, Founder Gurusiddesvara!"[೧]

ಗಂಡ-ಹೆಂಡಿರ ನಡುವಿನ ಮಮತೆಯ ಮಧುರ ಬಾಂಧವ್ಯವನ್ನು ಶಿವ ಮೆಚ್ಚುತ್ತಾನೆ. ದಂಪತಿಗಳು ಪರಸ್ಪರರನ್ನು ಅಗಲದೇ ಜೀವವೃಕ್ಷದಲ್ಲಿ ಸಾಂಗತ್ಯವನ್ನು ತುಂಬಬಲ್ಲರು:

"A wife must never leave
Her husband, so shall Sive approve,
A life of harmone between
Husband and wife bears fruit
For the world's tree, look you,
Lord of the blossoming-creeper town,
World-teacher Founder Gurusiddhesvara![೨]

ಈ ಜೀವನವೊಂದು ಅನಂತ ಸಾಗರ. ಆಳ ಅಗಲಗಳು ಅರಿತಕ್ಕೆ ನಿಲುಕವು. ತೆರೆ-ಹೆದ್ದೊರೆ-ನೊರೆಗುಳ್ಳಿ ಕಾಡುವವು-ಕಾಣದಾಗುವವು. ಬಾಹುವಿನಲ್ಲಿ ಬಲವಿರುವವರೆಗೆ ಈಜುತ್ತೇನೆ. ಸಾಗರದ ಆ ದಂಡೆಗೆ ಸಾಗಿಸು ತಂದೆ. ನನ್ನ ಕೂಗು ಕೇಳು ತಂದೆ:

"This life is a vast ocean; difficult
To measure its depths;
The waves come and they dash;
The bubbles, like the waves,
Vanish within the winking of the eye.
Tasting this ocean's bitter and its sweet,
I swim and swim until

---

೧ Heart's Blossoms: Page–62
೨ Heart's Blossoms: Page-81

My strength is spent.
Take me across to the ocean's other shore
I cry and pray to thee,
Lord of the blossoming-creeper town,
World-taacher, Founder Gurusiddhesvara!"೧

ಭಾಷೆಯೊಂದು ಉಡುಗೊರೆ. ಲಿಂಗಕ್ಕೆ ಲಿಂಗದ ಕಂತಿಯಿದ್ದಂತೆ, ಭಾವನೆಗಳಿಗೆ ಭಾಷೆಯೊಂದು ಸುಂದರ ಆಚ್ಛಾದನ. ಅದೇರೀತಿ; ಜ್ಞಾನವು ಆತ್ಮದ ಉಡುಗೊರೆಯಾಗಿದೆ;

"Language is garment of the heart,
As cloth is garment for the body,
And coating for the Linga;
Knowledge is garment for the soul"೨

ಹೃದಯವೇ ಹೂವರಳಿನಿಂದ ಬಳ್ಳಿ. ಆತ್ಮ ಚೈತನ್ಯವೇ ಕೋಗಿಲೆ. ಆ ಕೂಜನದಲ್ಲಿ ನೆನಪು ತುಂಬಿದೆ. ಪ್ರೇಮೋನ್ಮಾದ ಪ್ರಾದುರ್ಭವಿಸಿದೆ:

"Within the blossoming creeper of the heart,
Behold, the spirit's cuckoo coos;
It yearns for the sweet taste
Of meditation's essence; and
It is a loding for the spirt's light
Dwelling in the ecstasy of love.
O my beloved cuckoo-bird,
Grant that I fly
Ever toward thee!"೩

ಲ್ಯೂವೆನ್ನಿನಲ್ಲಿ ಈ ಕೃತಿಯ ಬಿಡುಗಡೆ ಸಮಾರಂಭದಲ್ಲಿ ಡಾ. ಹೋಮರ ಎ. ಜಾಕ್ (Dr. Hemer A. Jack) ಹಾಗೂ ಡಾ.ಡಾನಾ ಲ್ಯೂಕ್ಲೀನ್ ಗ್ರೀಲೆ (Dr. Dana Mclean Greeley) ಅವರು ಮಾತನಾಡಿದರು. ಮಾತ್ರವಲ್ಲ; ಡಾ. ಗ್ರೀಲೆ ಅವರು ಈ ಗ್ರಂಥದ ಬಗ್ಗೆ ಲಿಖಿತದಲ್ಲಿ ನೀಡಿದ ಅಭಿಪ್ರಾಯ ಇಂತಿದೆ:

"A very beautiful and inspiring book with real spiri-

---

೧ Heatr's Blossoms: Page 33

೨ Heart's Blossoms: Page-42

೩ Heart's Blossoms: Page-6

tual sensitivity is the new volume titled 'Hearts Blossoms'''[೧]

ಈ ಸಮಾರಂಭಕ್ಕೆ ಆಗಮಿಸಿದ ಕರಾಚಿ ವಿಶ್ವವಿದ್ಯಾಲಯದ ಉಪಕುಲಪತಿ 'ಮೊಹಮ್ಮದ ಹುಸೇನ' ಅವರು ನೀಡಿದ ಲಿಖಿತ ಅಭಿಪ್ರಾಯ ಕೆಳಗಿನಂತಿದೆ:

"In the name of Allah; I have read with great. interest the collection of poems of Srimanmaharaj Niranjana Jagadguru Gangadhara Rajayogeendra Mahaswamiji of Moorusavirmath in English translation entitled 'Heart's Blossoms'. I found in this beautiful book not only sweet specimen of excellent poetry but also many a word of wisdom which could only come from a person who could give deep thought to problems of life and morality"[೨]

ಪ್ರವಾಸ ಕಥನದಲ್ಲೊಂದು ಪ್ರಬುದ್ಧ ಪ್ರವೇಶ: "ನಮ್ಮ ವಿದೇಶ ಯಾತ್ರೆ"

ಪೂರ್ವರಾಷ್ಟ್ರಗಳಾದ ಜಪಾನ, ಹಾಂಗ್‌ಕಾಂಗ್, ಜಕಾರ್ತಾ, ಸಿಂಗಾಪೂರ, ಥೈಲ್ಯಾಂಡಗಳಿಗೆ (೧೯೭೦); ಹಾಗೂ ಪಶ್ಚಿಮ ರಾಷ್ಟ್ರಗಳಾದ ಬೆಲ್ಜಿಯಂ, ಇಂಗ್ಲೆಂಡ, ಫ್ರಾನ್ಸ, ಜರ್ಮನಿ, ಇಟಲಿ, ಸ್ವಿಟ್ಝರ್ಲ್ಯಾಂಡಗಳಿಗೆ (೧೯೭೪) ಜಗದ್ಗುರುಗಳು ಸಂದರ್ಶನ ನೀಡಿದ್ದು "ಸರ್ವಧರ್ಮಗಳ ವಿಶ್ವಶಾಂತಿ ಸಮ್ಮೇಲನದ" (World Conference on Religion and Peace)ಆಮಂತ್ರಣದಮೇರೆಗೆ ನಿವೃತ್ತ ರಾಜ್ಯಪಾಲ ರಂಗನಾಥ ದಿವಾಕರ ಅವರ ಒತ್ತಾಯ, ಡಾ|| ರಾಧಾಕೃಷ್ಣನ್ ಅವರ ಆಪ್ಕೆ ಹಾಗೂ WCRPಯ (World Conference on Religion and Peace) ಪ್ರಧಾನ ಕಾರ್ಯದರ್ಶಿಗಳಾದ ಡಾ|| ಹೋಮರ ಎ. ಜಾಕ್ (Dr. Hamer A. Jack) ಅವರ ಆಮಂತ್ರಣಗಳ ಮೇರೆಗೆ; ಕರ್ನಾಟಕದ ಮಠಾಧಿಪತಿಗಳ ಇತಿಹಾಸದಲ್ಲಿ ಪ್ರಪ್ರಥಮ ಬಾರಿಗೆ ವಿಮಾನೋಡ್ಡಾಣ ಗೈದು ಕಡಲಿನಾಚೆಯ ಮಡಿಲಿಗೆ ಮೊದಲಬಾರಿಗೆ ಇಳಿದವರು ಗಂಗಾಧರ ರಾಜ ಯೋಗೀಂದ್ರರು. ಜಪಾನಿನ ಕ್ಯೋಟೋ (Kyo to) ದ ಪ್ರಥಮ ಅಂತರಾಷ್ಟ್ರೀಯ ಶಾಂತಿಪರಿಷತ್ತಿನಿಂದ (೧೯೭೦) ಪ್ರಭಾವಿತರಾದ ಡಾ|| ಹೋಮರ ಎ. ಜಾಕ್ ಅವರು ಬೆಲ್ಜಿಯಂ ನ ರಾಜಧಾನಿ ಬ್ರುಸೆಲ್ಸ್ (Brussels) ದಲ್ಲಿ ನೆರವೇರಿದ

೧ ನಮ್ಮ ವಿದೇಶಯಾತ್ರೆ: ಪುಟ: ೯೩

೨ ನಮ್ಮ ವಿದೇಶ ಯಾತ್ರೆ: ಪುಟ: ೯೩,೯೪

ದ್ವಿತೀಯ ಅಂತರ್ರಾಷ್ಟ್ರೀಯ ಶಾಂತಿ ಪರಿಷತ್ತಿನ (೧೯೭೪) ಕೇಂದ್ರ ಕಾರ್ಯಕಾರಿ ಮಂಡಲಿಯ ಸದಸ್ಯರನ್ನಾಗಿ ಜಗದ್ಗುರುಗಳನ್ನು ಆಯ್ಕೆ ಮಾಡಿದರು. ಈ ಪೃಥ್ವಿ ಪ್ರವಾಸದ ಸಂದರ್ಭದಲ್ಲಿ ಜಗದ್ಗುರುಗಳು ಕಂಡುಬಂದ ಹತ್ತಾರು ರಾಷ್ಟ್ರಗಳ ದರ್ಶನೀಯ ಸ್ಥಳಗಳ ವೀಕ್ಷಣೆ, ಆಯಾದೇಶಗಳ ಸಾಂಸ್ಕೃತಿಕ ವಿಶ್ಲೇಷಣೆಗಳ, ಸಾಹಿತ್ಯ–ಧರ್ಮ–ಕಲೆ–ಜನಜೀವನದ ಅಧ್ಯಯನದ ಸುಂದರವಾದ ಚಿತ್ರಣವುಳ್ಳ ೨೧೪ ಪುಟಗಳ ಈ ಗ್ರಂಥ ಅಭ್ಯಾಸಿಗಳಿಗೆ ತುಂಬ ಅನುಕೂಲತೆ ನೀಡುವ ಕೃತಿಯಾಗಿದೆ. ಅಲ್ಲಲ್ಲಿ ಬರುವ ಹೂಬೇ ಹೂಬಾದ ವರ್ಣನೆಗಳು, ವಾತಾವರಣದ ಅನುಭೂತಿಗಳು ನಮ್ಮನ್ನು ಅದೇ ಸ್ಥಳದಲ್ಲಿ ನಿಲ್ಲಿಸಿದ ಅನುಭವ ನೀಡುತ್ತವೆ. ಎಲ್ಲಿಯೂ ನೀರಸತೆ ಕಾಲಿಡುವದಿಲ್ಲ. ಧರ್ಮದೊಂದಿಗೆ ಜೀವನವನ್ನೂ, ಕಲಾ ವೈವಿಧ್ಯವನ್ನೂ ಸವಿವರವಾಗಿ ಸಸ್ನೇಹಪರ ಭಾಷೆಯಲ್ಲಿ ಕಥಿಸಿದ ಈ ಕೃತಿ ಕಾಲೇಜು ವಿದ್ಯಾರ್ಥಿಗಳಿಗೆ ಪಠ್ಯವಾಗಬಲ್ಲ ಅಧ್ಯಯನಶೀಲತೆಯನ್ನು ಒದಗಿಸುತ್ತದೆ.

ಕರ್ನಾಟಕ ವಿಶ್ವವಿದ್ಯಾಲಯದ ಅಂದಿನ ಕುಲಪತಿ ಸದಾಶಿವ ಒಡೆಯರ ಅವರು ಈ ಗ್ರಂಥಕ್ಕೆ ಬರೆದ ಮುನ್ನುಡಿಯ ಮಾತುಗಳನ್ನು ಪರಿವೀಕ್ಷಿಸಬಹುದು:

“ವಿಶ್ವಶಾಂತಿಗೆ ಚೈತ್ರಯಾತ್ರೆ ಕೈಕೊಂಡ ಶ್ರೀಗಳು ವಿದೇಶ ಯಾತ್ರೆಯನ್ನು ಯಶಸ್ವಿಯಾಗಿ ಪೂರೈಸಿದ ಪಂಚಯಾತ್ಮಕ ವಿವರಣೆಯನ್ನು ಕೊಡುತ್ತ, ನಮ್ಮನ್ನೂ ತಮ್ಮ ಜೊತೆಗಾರರಂತೆ ಮುಂದೆ ಮುಂದೆ ಸಾಗಿಸಿಕೊಂಡು ಹೋಗುತ್ತಾರೆ. ಎರಡನೆಯ ವಿಶ್ವಸಮರದಲ್ಲಿ ಬಾಂಬ ದಾಳಿಯಿಂದ ನೆಲಸಮವಾಗಿದ್ದ ಆದರೆ ಇಂದು ವಿಶ್ವರಂಗದ ಭವ್ಯ ರಾಷ್ಟ್ರವೆಂದು ತನ್ನ ಪ್ರಾಮಾಣಿಕ ಸೇವೆ, ಸತತೋದ್ಯೋಗ, ರಾಷ್ಟ್ರಭಕ್ತಿ, ವಿಜ್ಞಾನ, ಅಂತರ್ ಜ್ಞಾನಗಳ ಆಸಕ್ತಿಯಿಂದ ಶರವೇಗದಿಂದ ರೂಪಗೊಳ್ಳುತ್ತಿರುವ ಜಪಾನ ದೇಶದ ಯಾತ್ರೆಯನ್ನು ಸುಂದರವಾಗಿ ಶ್ರೀಗಳು ಚಿತ್ರಿಸಿದ್ದಾರೆ. ಯಾವುದೇ ತರತಮಕ್ಕೆ ಭೇದಭಾವಕ್ಕೆ ಬೆಲೆ ಕೊಡದ, ಕನಿಷ್ಟ–ಗರಿಷ್ಟ, ಮೇಲೆ–ಕೆಳಗೆ, ಹೆಚ್ಚು–ಕಡಿಮೆ ಎಂಬ ಅಲ್ಪ ವಿಚಾರಗಳಿಗೆ ಆಸ್ಪದವಿಲ್ಲದ, ಹಿಂದೂ, ಜೈನ, ಸೀಖ, ಬೌದ್ಧ, ಕ್ರಿಶ್ಚಿಯನ್, ಮುಸ್ಲಿಂ, ಬಹಾಯಿ, ಫಾರಸಿ, ಸಿಂಟೋ, ಜ್ಯೂ, ಕನ್‌ಫ್ಯೂಶಿಯಸ್ ಮುಂತಾದ ಭಿನ್ನ ಭಿನ್ನ ಧರ್ಮದವರು ತಮ್ಮ ಪ್ರಭೇದಗಳನ್ನು ತೊರೆದು, ವಿಶ್ವಮಾನವ ಧರ್ಮದ ಸರ್ವೋತ್ತಮ ಧ್ಯೇಯವನ್ನು ಚರ್ಚಿಸಿ ಶಾಂತಿಯನ್ನು ಪ್ರಸ್ತಾಪಿಸಲು ಒಂದೆಡೆ ಸೇರಿದ ಅಪ್ರತಿಮ ಸಮ್ಮೇಲನ–‘ವಿಶ್ವ ಧರ್ಮ ಮತ್ತು ಶಾಂತಿ ಪರಿಷತ್ತು’ ಯಶಸ್ವಿಯಾಗಿ ಜರುಗಿದ ನೈಜ ವಿವರಣೆಯನ್ನು ಅವರು ಸೊಗಸಾಗಿ ಚಿತ್ರಿಸಿದ್ದಾರೆ.....‘ನಾವು ಪರಸ್ಪರ ಸಹಾಯ ಸಹಕಾರಗಳ ಸಿದ್ಧಾಂತಗಳನ್ನು ಮರೆತು ಬಿಟ್ಟಿದ್ದೇವೆ. ಸಮಗ್ರ ಪೃಥ್ವಿಯೇ ನಮ್ಮ ಮನೆ ಹಾಗೂ ಮಾನವ ಮಾತ್ರರೆಲ್ಲರೂ ಸಹೋದರ ಸಹೋದರಿಯರು; ಎಂಬ ಮೂಲತತ್ತ್ವ

ವನ್ನೇ ನಿರ್ಲಕ್ಷಿಸಿದ್ದೇವೆ' ಮುಂತಾಗಿ ಆ ಪರಿಷತ್ತಿನಲ್ಲಿ ಹೇಳಿದ ಅವರ ಮಾತುಗಳು ಚಿಂತನಶೀಲವಾಗಿವೆ."೧

ಡಾ. ಎಚ್. ತಿಪ್ಪೇರುದ್ರಸ್ವಾಮಿಗಳು ಈ ಕೃತಿಯ ವಿಶಿಷ್ಟತೆಯ ಬಗೆಗೆ ಹೀಗೆ ಹೇಳುತ್ತಾರೆ:

"ಕನ್ನಡದಲ್ಲಿ ಪ್ರವಾಸ ಸಾಹಿತ್ಯ ತಕ್ಕಮಟ್ಟಿಗೆ ವಿಪುಲವಾಗಿಯೇ ಬೆಳೆದಿದೆ. ಅದರಲ್ಲಿ 'ಮೂಜಗಂ'ರವರ ಈ ಕೃತಿ ಒಂದು ವಿಶಿಷ್ಟ ಸ್ಥಾನವನ್ನು ಪಡೆಯುತ್ತದೆ. ಸಾಮಾನ್ಯವಾಗಿ ಇದುವರೆಗಿನ ನಮ್ಮ ಪ್ರವಾಸ ಸಾಹಿತ್ಯದಲ್ಲಿ ಬಹುಪಾಲು ಅಳಿಯನ ಇಲ್ಲವೇ ಮಗನ ಮನೆಯಲ್ಲಿ ಕುಳಿತು, ಆಯಾದೇಶದ ಯಾವುದೋ ಒಂದು ಸ್ಥಳವನ್ನು ದೂರನಿಂತು ನೋಡಿದುವರ ವರದಿ. ಅಧ್ಯಯನಕ್ಕಾಗಿ ಹೋದವರ ಅಥವಾ ವಿಶೇಷ ಆಹ್ವಾನಿತರಾಗಿ ಪ್ರವಾಸವನ್ನು ಕೈಕೊಂಡವರ ಅನುಭವದ ನಿರೂಪಣೆಗಳೂ ಇವೆ. ಅಲ್ಲಿನ ಸಮಾಜದೊಡನೆ ಬೆರೆತು ಅಲ್ಲಿನ ಸಮಸ್ಯೆಗಳನ್ನು ಕೈಗೆತ್ತಿಕೊಂಡು ಕೆಲಸ ಮಾಡಿದವರ ಅನುಭವಗಳೂ ಇಲ್ಲದಿಲ್ಲ. ಆದರೆ ಇಲ್ಲಿ 'ಮೂಜಗಂ'ರವರ ವಿದೇಶಯಾತ್ರೆಯ ಉದ್ದೇಶ, ಇವೆಲ್ಲವುಗಳಿಂದ ಹೊರತಾದುದು, ಬೇರೆಯಾದುದು, ವಿಶಿಷ್ಟವಾದುದು."೨

ಶ್ರೀಯುತ ಎಸ್. ಕೆ. ಕುಲಕರ್ಣಿಯವರು ಈ ಕೃತಿಯ ಬಗ್ಗೆ ತಮ್ಮ ಮೆಚ್ಚುಗೆ ಮನತುಂಬಿ ವ್ಯಕ್ತಗೊಳಿಸಿದ್ದಾರೆ:

"'ನಮ್ಮ ವಿದೇಶಯಾತ್ರೆ' ಜಗದ್ಗುರುಗಳ ಶಾಂತಿ ಸಂದೇಶ, ವಿಶ್ವಬಂಧುತ್ವ ಘೋಷಣೆಗಾಗಿ ಮಾತ್ರವೆ ಅಲ್ಲದೆ ಪ್ರವಾಸಸಾಹಿತ್ಯದಲ್ಲಿರಬೇಕಾದ ಸಕಲ ಸರಸ ಗುಣಗಳು ಅದರಲ್ಲಿ ಸಮಾವೇಶವಾಗುವದರಿಂದ ಈ ಗ್ರಂಥದ ಮೌಲ್ಯ ಇನ್ನಷ್ಟು ಹೆಚ್ಚುತ್ತದೆ: ಅದರ ಆಯಾಮ ಇನ್ನಷ್ಟು ಅಧಿಕಗೊಳ್ಳುತ್ತದೆ."೩

ಪೂರ್ವ-ದೇಶದ ಪ್ರವಾಸಾನುಭವದಲ್ಲಿ ಅವರು ವಿವರಿಸಿದ ಹೇಯನ್ ಮಂದಿರ (Heian Shrine), ಚಿಯಾನ್-ಇನ್ ದೇವಾಲಯ (Chion in Shrine), ಕರುಣಾಳು ದೇವತೆ (Godess of Mercy), ತೋಡೈಜಿ (Todaiji) ದೇವಾಲಯ, ಶೋಸೋ-ಇನ್ (Shoso-in) ಅರಮನೆ, ಟೆನ್ರಿಕ್ಯೊ ಮಂದಿರ (Tenrikyo Shrine), ಸೌಂದರ್ಯದ ಅಧಿದೇವತೆ

೧ ನಮ್ಮ ವಿದೇಶ ಯಾತ್ರೆ: ಮುನ್ನುಡಿ: ಪುಟ-೪, ೫
೨ ಡಾ. ಎಚ್. ತಿಪ್ಪೇರುದ್ರಸ್ವಾಮಿ: "ನಮ್ಮ ವಿದೇಶ ಯಾತ್ರೆ": ಕೃತಿಪರಿಚಯ ಮಹಾಭಿನಂದನ ಸಂಪುಟ ಭಾಗ – ೨
೩ ಶ್ರೀ ಎಸ್.ಕೆ. ಕುಲಕರ್ಣಿ "ಶ್ರೀ ಜಗದ್ಗುರುಗಳ ಪ್ರವಾಸಸಾಹಿತ್ಯ" ಮಹಾಭಿನಂದನ ಸಂಪುಟ ಭಾಗ - ೨

5991

ಟೋಕಿಯೊ ಫ್ಯುಮನ್ ಪ್ರಾರ್ಥನಾಮಂದಿರ (Fuman Prayer Hall), ಜಪಾನಿನ ಮಹಿಳೆ, ಕಡಲದಂಡೆಯ ಬೆಡಗು ಹಾಂಗ್‌ಕಾಂಗ್, ಸಿಂಗಾಪುರದ ನಿಸರ್ಗ ರಮಣೀಯ ಶ್ರೀ ರಾಮಕೃಷ್ಣಾಶ್ರಮ, ಕೌಲಾಲಂಪುರದ ಬಟುಗವಿಗಳು (Batu Caves), ಥೈಲ್ಯಾಂಡಿನ ಬೌದ್ಧ ಸನ್ಯಾಸಿಗಳ ಮಠ, ಬೌದ್ಧ ಸನ್ಯಾಸಿಗಳ ವಿಶ್ವವಿದ್ಯಾಲಯ (Mahachulalong Kornraja Vidyalay), ಬುದ್ಧನ ಬಂಗಾರ ಮೂರ್ತಿ ಇರುವ ವಾತರಾಜ ಪ್ರದಿಸ್ಥ ದೇವಾಲಯ (Watraja Pradisth Temple) ಮುಂತಾದವುಗಳ ವರ್ಣನೆ ರೋಚಕವೂ ರೋಮಾಂಚಕವೂ ಆಗಿರುವದರೊಂದಿಗೆ ಪರಿಚಯಾತ್ಮಕವೂ ಆಗಿರುವದು ಪೂಜ್ಯರ ಅಧ್ಯಯನ ಶೀಲ ಪರಿವೀಕ್ಷಣೆಯ ಪ್ರತೀಕವಾಗಿದೆ.

ಪಶ್ಚಿಮ ರಾಷ್ಟ್ರಗಳ ಪ್ರವಾಸಾನುಭವದಲ್ಲಿ ಓದುಗರನ್ನು ಮುದಗೊಳಿಸುವದರೊಂದಿಗೆ ಮುಗ್ಧಗೊಳಿಸುವ ವಿವರಣೆಗಳಲ್ಲಿ ಸೌಂದರ್ಯರಾಣಿ ಲ್ಯೂವೆನ್ (Leuven), 'ನಾವು ಭಾರತೀಯರು! ಆದರೆ....?', ಹಿಟ್ಲರನ ಘೋರ ಹತ್ಯಾಕಾಂಡ ಬ್ರಿಂಡಾಕ್ (Breendonk), 'ಕಣ್ಣಿಗೆ ಹಬ್ಬ ಲಂಡನ್ ನಗರ', ಸೇಂಟ ಪಾಲ್ಸ್ ಕೆಥೆಡ್ರೆಲ್ (St. Paul's Cathedral), ಟ್ರ್ಯಾಫಲ್‌ಗರ್ ಸ್ಕ್ವೇರ್ (Trafalgar Square), ಹೈಡಪಾರ್ಕ್ (Hyde Park), ಮಹಾಕವಿ ಶೇಕ್ಸಪೀಯರನ ಜನ್ಮಭೂಮಿ ಸ್ಟ್ರ್ಯಾಟ್‌ಫರ್ಡ, 'ಭೋಗ-ಐಶ್ವರ್ಯಗಳ ಬೀಡು ಪ್ಯಾರಿಸ್', ನೋಟ್ರೆ-ಡೇಮ್ (Notre-dame) ದೇವಾಲಯ, ಲೋವ್ರೇ ಮ್ಯುಜಿಯಂ (Louvre Museum), ಐಫಿಲ್ ಗೋಪುರ (Eiffel Tower), ಬರ್ಲಿನ್ ನಗರದ ದುರ್ದೈವದ ಗೋಡೆ, ಸ್ವಿಝರ್‌ಲ್ಯಾಂಡಿನ ಕಾಶ್ಮೀರ ಕಣಿವೆ, ಮಹರ್ಷಿ ಮಹೇಶ ಯೋಗಿಗಳೊಂದಿಗೆ ಒಡನಾಟ, ರೋಮ ನಗರದ ಪ್ಲಾಝಾ ವೆನಿಝಿಆ (Plazza Venezia), ಕೆಪಿಟಾಲಿನ್ ಮ್ಯುಜಿಯಂ (Capitoline Museum), ರೋಮನ್ ವರ್ತುಲ ಸೌಧ (Colosseum), ಸೇಂಟ ಪೀಟರ್ ಚರ್ಚ್ (Church of San Pietro), ರೋಮನ್ ಕ್ಯಾಥೊಲಿಕ್ ಕೇಂದ್ರ ವ್ಯಾಟಿಕನ್ ಮುಂತಾದವುಗಳು ಬುದ್ಧಿಗೆ ಸಮೃದ್ಧ ಭೋಜನ ಒದಗಿಸುತ್ತವೆ. ಓದುವಾಗಿನ ಗತಿಶೀಲತೆ, ಆಕರ್ಷಣೀಯತೆ ಮನಮುಗ್ಧಗೊಳಿಸುವಂತಿವೆ. ಒಂದು ಮಠದ ಅಧಿಕಾರಿಗಳಾಗಿದ್ದು ಇವರು ಇಷ್ಟೊಂದು ಸೂಕ್ಷ್ಮಾಗ್ರಮತಿಗಳಾಗಿ ವಿಶ್ವವನ್ನು ನೋಡಿರುವದು ಕುತೂಹಲ. ಜಿಜ್ಞಾಸುಗಳಿಗೆ, ವಿದ್ಯಾರ್ಥಿಗಳಿಗೆ ಹಾಗೂ ವಿದೇಶ ಪ್ರವಾಸಕ್ಕೆ ಹೋಗುವವರಿಗೆ ಕೂಡ ಇದೊಂದು ಬೆಲೆಬಾಳುವ ಕೈದೀವಿಗೆ ಎಂದು ಹೇಳಲೇಬೇಕು.

ಕಳೆದು ಹೋದ ಪುಸ್ತಕಗಳು!
ಒಂದು ಊಹೆ : ಅವಲೋಕನ

ಪೂಜ್ಯ ಜಗದ್ಗುರುಗಳ ಕಳೆದುಹೋದ ಪುಸ್ತಕಗಳು ಸದ್ಯಕ್ಕೆ ತಿಳಿದ ಮಟ್ಟಿಗೆ ನಾಲ್ಕು: ಇವುಗಳ ಮೂಲಹಸ್ತಪ್ರತಿಗಳೇ ಕಳೆದು ಹೋದುದರಿಂದ ಈಗ ಏನುಮಾಡುವಂತಿಲ್ಲವಾದರೂ ಅವುಗಳ ಬಗ್ಗೆ ಜಗದ್ಗುರುಗಳಿಂದಲೇ ಕೇಳಿ ತಿಳಿದುಕೊಂಡು ನಾಲ್ಕು ಮಾತು ಬರೆಯಲು ಸಾಹಸ ಮಾಡಿದ್ದೇನೆ. ಕಳೆದು ಹೋದ ಕೃತಿಗಳು ಹೀಗಿವೆ:

೧) ಸಂಸ್ಕೃತ ಕವಿಚರ್ಯೆ (ಕನ್ನಡ) : ೪೦೦ ಪುಟಗಳು
೨) ಸಾಹಿತ್ಯ (ಕನ್ನಡ) : ೧೦೦ ಪುಟಗಳು
೩) ಅಭಿಜ್ಞಾನ ಶಾಕುಂತಲ ವಿಮರ್ಶೆ (ಕನ್ನಡ) : ೨೦೦ ಪುಟಗಳು
೪) ಪೂದೋಟ (ಕನ್ನಡ ಕಥಾಸಂಕಲನ) ; ೧೦೦ ಪುಟಗಳು

ಈ ಪುಸ್ತಕಗಳನ್ನು ಪೂಜ್ಯ ಜಗದ್ಗುರುಗಳು ಇನ್ನೂ ಕಾಶಿಯಲ್ಲಿ ವಿಜಯ ಮಹಾಂತ ದೇವರಾಗಿದ್ದಾಗ ತಮ್ಮ ವಯಸ್ಸಿನ ೨೩–೨೪–೨೫ ರ ಮಧ್ಯದಲ್ಲಿ ಬರೆದಿದ್ದರು. ಕಾವ್ಯತೀರ್ಥ, ವೇದಾಂತಾಚಾರ್ಯ ಮುಂತಾದ ಉನ್ನತ ಪದವಿಗಳು ಬಂದ ಹಿನ್ನೆಲೆಯಲ್ಲಿಯೇ ರಚಿತವಾದ ಮಹತ್ವದ ಗದ್ಯ ಕೃತಿಗಳಿವು. ಇವು ಒಟ್ಟಿಗೇ ಕಳೆಯಲು ಒಂದು ವಿಶಿಷ್ಟ ಕಾರಣವೂ ಉಂಟು. ಕಾಶಿಯಲ್ಲಿದ್ದಾಗ ಇವರಿಗೆ ಹುಬ್ಬಳ್ಳಿ ಮೂರುಸಾವಿರಮಠದ ಅಂದಿನ ಜಗದ್ಗುರು ಗುರುಸಿದ್ಧರಾಜ ಯೋಗೀಂದ್ರರಿಂದ ತಕ್ಷಣವೇ ಬರಲು ತಾರು ಬಂತು. ಆಗ ಈ ಪುಸ್ತಕಗಳ ಜವಾಬ್ದಾರಿಯನ್ನೆಲ್ಲಾ (ಅರ್ಥಾತ್ ಈ ಪುಸ್ತಕಗಳನ್ನಿರಿಸಿದ ಪೆಟ್ಟಿಗೆಯನ್ನು) ಶ್ರೀ ಚಂದ್ರಶೇಖರದೇವರು ಉದಾಸಮಠ (ಅಂದರೆ ಲಿಂಗೈಕ್ಯ ಗುರುಮಹಾಂತ ಸ್ವಾಮಿಗಳು: ಇಲಕಲ್ಲ) ಅವರ ಕೈಗೊಪ್ಪಿಸಿ ಹುಬ್ಬಳ್ಳಿ ಹಾದಿ ಹಿಡಿದರು. ಹುಬ್ಬಳ್ಳಿಯಲ್ಲಿ ಬಂದ ತಕ್ಷಣ ಜಗದ್ಗುರು ಪದವಿಗೆ ಆಮಂತ್ರಣ ಬಂದುದು, ಇಲಕಲ್ಲ ಹುನಗುಂದ ಜನತೆ ಮೊದಲು ವಿರೋಧಿಸಿದುದು, ಅನಂತರ ಒಪ್ಪಿದುದು, ಅಧಿಕಾರ ಪತ್ರ, ಗುರುಸಿದ್ಧ ರಾಜಯೋಗೀಂದ್ರರ ಲಿಂಗೈಕ್ಯ, ಇವರ ಸಿಂಹಾಸನಾರೋಹಣ, ಮಠದ ಎಲ್ಲಾ ಜವಾಬ್ದಾರಿಗಳು ಒಮ್ಮೆಲೇ ಕೊರಳಿಗೆ ಬಿದ್ದುದು; ಈ ಕಾರ್ಯಬಾಹುಳ್ಯದಲ್ಲಿ ಆ ಪುಸ್ತಕಗಳ ಬಗ್ಗೆ ಮರವೆಯೂ ಆಯಿತು. ಆ ಪೆಟ್ಟಿಗೆಯು ಯಾರ ರಕ್ಷಣೆ ಇಲ್ಲದೆ ಅನಾಥವಾಯಿತು. ಶ್ರೀ ಚಂದ್ರಶೇಖರ ದೇವರೂ ಇತ್ತ ಬಂದು ಬಿಟ್ಟರು. ಅವರೂ ಇಲಕಲ್ಲ ಮಠದ ಸ್ವಾಮಿಗಳಾದರು. ಈ ತೀವ್ರಕಾರ್ಯಾಚರಣೆಯಲ್ಲಿ ಅವರ ಅಪ್ರಕಟಿತ ಸಾಹಿತ್ಯ ಹಾಗೂ ಕೆಲವು ಪದ್ಯಗಳು ಕಳೆದು ಹೋದವು. ಮುಂದೆ ಪ್ರಯತ್ನಿಸಿದರೂ ಸಿಗಲಿಲ್ಲ.

'ಸಂಸ್ಕೃತ ಕವಿಚರ್ಚೆ' ಕಳೆದುದು ಒಂದು ದೊಡ್ಡಹಾನಿ. ಇದು ಕನ್ನಡದ ಗದ್ಯವಾಗಿತ್ತು. ಭವಭೂತಿ, ದಂಡಿ, ಕಾಳಿದಾಸ, ಮಾಘ, ಭಾಸ, ಬಾಣ ಮುಂತಾದ ೧೫–೨೦ ಸಂಸ್ಕೃತ ಕವಿಗಳ ಬಗ್ಗೆ ಪರಿಚಯ ಗ್ರಂಥ ಇದಾಗಿತ್ತು. ಶೈಲಿ ಬಹುಶಃ ಪ್ರೌಢವಾಗಿದ್ದರೂ ಲಾಲಿತ್ಯ ಸಂಪಾದಿಸಿರಬಹುದು. ಕಾರಣ "ಅಪ್ಪಯ್ಯ ಸ್ವಾಮಿಗಳ ಜೀವನ ಚರಿತ್ರ" ಬರೆದ ವಿಜಯ ಮಹಾಂತ ದೇವರು ಇದನ್ನು ಕಥಾನಕವಾಗಿಯೂ ಆಕರ್ಷಕವಾಗಿಯೂ ಪ್ರೌಢವಾದರೂ ಸರಳವಾಗಿ ಅರ್ಥವಾಗುವಂತೆ ಬರೆದಿರಲು ಸಾಕು. ಮುಖ್ಯವಾಗಿ ಅವರ ಆಳವಾದ ಅಧ್ಯಯನದ ಶ್ರಮ ಇಲ್ಲಿ ಸಾರ್ಥಕತೆ ಪಡೆದಿತ್ತೆಂದು ತೋರುತ್ತದೆ. "ಪೂದೋಟ" ಕಥಾ ಸಂಕಲನವಾಗಿತ್ತು. ಇದರಲ್ಲಿ ಹಲವು ಸಂಸ್ಕೃತ ಮೂಲದ ಕಥೆಗಳ ಪ್ರಭಾವವೂ ಇದ್ದಿರಬಹುದು. ಇಂದಿನ ಚಿಕ್ಕಕಥೆಗೂ ಈ 'ಪೂದೋಟ'ಕ್ಕೂ ಇರಬಹುದಾದ ಒಂದು ಸಮಾನಕೊಂಡಿ ಇದರಲ್ಲಿ ಇತ್ತೋ ಏನೋ ಗೊತ್ತಿಲ್ಲ! "ಸಾಹಿತ್ಯ" ಕೃತಿಯಲ್ಲಿ ಸಾಹಿತ್ಯವ್ಯಾಸಂಗದ ಒಳನೋಟವನ್ನು ಕುರಿತು ಭರತ, ಮಮ್ಮಟ, ದಂಡಿ, ಭಾಮಹ, ರಾಜಶೇಖರ, ವಿಶ್ವನಾಥ ಮುಂತಾದವರ ಅಗ್ರರಚನೆಗಳ ಹಿನ್ನೆಲೆಯಲ್ಲಿ ಸಾಹಿತ್ಯ ಮೀಮಾಂಸೆಯ ಸಾರದರ್ಶನ ನೀಡಲಾಗಿತ್ತು. ಇದರಲ್ಲಿ ಇವರು ವ್ಯಕ್ತಗೊಳಿಸಿರಬಹುದಾದ ಸ್ವತಂತ್ರವಾದ ಅಭಿಪ್ರಾಯಗಳಿಗೆ ಈಗ ಸುಳಿವು ಸಿಗಲಾರದು. "ಅಭಿಜ್ಞಾನ ಶಾಕುಂತಲ ವಿಮರ್ಶೆ" ದೊರೆಯಲಾರದ್ದಂತೂ ಇನ್ನೂ ವಿಷಾದನೀಯ. ಕಾರಣ ಇದರಲ್ಲಿ ಇವರ ಮುಕ್ತ ವಿಚಾರಗಳ ಅಭಿಪ್ರಾಯಕ್ಕೆ ಪೂರ್ಣಪ್ರಮಾಣದ ಅವಕಾಶವಿತ್ತು. ಕಾಳಿದಾಸನ ಕಾವ್ಯಗಳು ಇವರ ಮನವನ್ನು ಸೂರೆಗೊಳಿಸಿದ್ದವು. ಅಲ್ಲಿಯ ಪ್ರಾಕೃತಿಕ–ಜೀವನದ ಸಾಂಘಿಕ ಅಭಿವ್ಯಕ್ತಿಗಳಿಗೆ ಇವರು ಮಾರುಹೋಗಿದ್ದುಂಟು. ಕಳೆದು ಹೋದ ಕೃತಿಗಳ ಬಗ್ಗೆ ಜಗದ್ಗುರುಗಳು ಹೇಳುತ್ತಾರೆ: "ಅವು ಕಳೆದು ಹೋದಮೇಲೆ ನಮ್ಮ ಮನಸ್ಸಿಗೆ ಅಪಾರ ನೋವಾಯಿತು. ಆ ಕಾಲದ ನಮ್ಮ ಹೃದಯವೇ ಕಳೆದು ಹೋದಂತಾಯಿತು. ಆ ಪುಸ್ತಕಗಳನ್ನು ಅದೇ ಶಕ್ತಿಯಿಂದ ನಾವು ಮತ್ತೆ ಇಂದು ಬರೆಯುವದು ಸಾಧ್ಯವೇ ಇಲ್ಲ."

೫. ಮೂಜಗಂ ಸಾಹಿತ್ಯದ ಪಕ್ವರಸಾಫಲಗಳು "ಪೂರ್ಣಜ್ಞ ವಚನಗಳು": ಚಿಂತನ–ಚೇತನಗಳ ಕಾವ್ಯ ಕೂಡಲಸಂಗನು

ಸ್ಥೂಲವಾಗಿ "ಸರ್ವಜ್ಞ"ತ್ವವು ಸಮಗ್ರ ಜೀವನಾನುಭವದ ಸಂಕೇತವಾದರೆ; "ಪೂರ್ಣಜ್ಞ"ತ್ವವು ಸಮಗ್ರ ಆತ್ಮಾನುಭವದ ಕುರುಹಾಗಿದೆ. ಎಲ್ಲವನ್ನೂ

ತಿಳಿಯುವದು, ತಿಳಿದುದನ್ನು ತಿಳಿಯಾಗಿ ಹೇಳುವದು ಒಂದು ಗುಣವಾದರೆ; ಅರಿಯಲಾರದ ಘನವನರಿಯುವದು, ಅರಿತಂತೆ ಬರೆಯುವದು ಇನ್ನೊಂದು ಗುಣ. "ಸರ್ವಜ್ಞತ್ವ" ಮತ್ತು "ಪೂರ್ಣಜ್ಞತ್ವ" ಈ ನಿಟ್ಟಿನಲ್ಲಿ ಸತ್ಯದ ಎರಡು ಭಿನ್ನ ಮುಖಗಳೇ ಸೈ! ಆದರೆ ಎರಡಕ್ಕೂ ಅಭಿವ್ಯಕ್ತಿಯ ಮುಖ ಒಂದೇ; ಅದೇ ತ್ರಿಪದಿ!!

ಈ ನಿಟ್ಟಿನಲ್ಲಿ "ಸರ್ವಜ್ಞ"ನ ಅನುಕರಣೆಯಾಗಿ "ಪೂರ್ಣಜ್ಞ" ಬಾರದೇ; ಸ್ವತಂತ್ರವಾಗಿ ಅಭಿವ್ಯಕ್ತಿಗೊಳ್ಳಲು ಅಪೇಕ್ಷಿಸಿದ್ದಾನೆ. 'ಪೂರ್ಣಜ್ಞ'ನು ಪೂರ್ಣಜ್ಞನೇ ಅಲ್ಲವೇ? ಅನುಕರಣೆ ಎಂದಿಗೂ ಪೂರ್ಣಜ್ಞತ್ವದ ಲಕ್ಷಣವಲ್ಲ; ಲಕ್ಷಣವಾಗ ಬಾರದು. ಆದ್ದರಿಂದ 'ಪೂರ್ಣಜ್ಞ'ನ ಪೂರ್ಣಜ್ಞತ್ವದ ಅನ್ವೇಷಣೆಗೆ ಕೆಲಕಾಲ 'ಸರ್ವಜ್ಞ'ನನ್ನು ದೂರಿಟ್ಟೇ ಸಾಗುವದು ಯೋಗ್ಯ.

"ಪೂರ್ಣಜ್ಞತ್ವ" ಶ್ರೀ ಮೂಜಗಂ ಸಾಹಿತ್ಯದ ಗುರಿಮಾತ್ರ. ಅಂತರಾಳ ದಿಂದ ಅರಳುವ ಪರಿಮಳದ ಈ ಸುಜ್ಞಾನ ಪುಷ್ಪವನ್ನು ಅಳೆಯುವದು ಯಾವ ಶಬ್ದಮಾಪನದಿಂದಲೂ ಸಾಧ್ಯವಿಲ್ಲ. ಶಬ್ದಮುಗ್ಧವಾಗಿ ಸ್ನೇಹ ಶಿವನತ್ತ ಕೈಬೀಸಿ ಕರೆದಾಗ ಅಲ್ಲವೇ ಜ್ಞಾನದೇಗುಲದ ಮೊದಲ ಬಾಗಿಲು ತೆರೆಯುವದು! ಆ ಸ್ವಾನುಭವದ ನಿಜಾನಂದದ ನಿಲುವನ್ನು ಅಕ್ಷರಮಾಧ್ಯಮದಿಂದ ಗುರುತಿಸಬಹುದೇ ಹೊರತು ಅಳೆಯುವದು ಸಾಧ್ಯವಿಲ್ಲ.

ಮುಚ್ಚು ಹಿಡಿಯಿತು ಮತ್ತೆ ಸ್ವಚ್ಛ ಕೃತಿ ರಚಯಿಸಲು
ಬಿಚ್ಚು ಮನದಿಂದ ನೈಜಾನುಭವ ರಸದೊ
ಳಚ್ಚೊತ್ತಿದಂತೆ ಪೂರ್ಣಜ್ಞ||

ಈ 'ಮುಚ್ಚು' ಪೂರ್ಣಜ್ಞತ್ವದ ಕಡೆಗೆ ಸಾಗುತ್ತಿರುವ ಸಾಧಕನ ಗುಣ. ಅಂತೆಯೇ—

ಮೂರಳಿದು ಮೂರರಿದು ಸಾರಸತ್ವವ ತಿಳಿಸಿ
ಮಾರಮರ್ದನ ಗೈದ ಗುರುಸಿದ್ಧಯತಿಯೆ
ಪಾರುಮಾಡಯ್ಯ ಪೂರ್ಣಜ್ಞ||

ಎಂದು "ಪಾರುಮಾಡಯ್ಯ" ಎಂದು ಬೇಡುವ ವಿಮಲಮತಿಯ ಕೂಗು ಕರೆ ಇಲ್ಲಿದೆಯಲ್ಲವೇ! ಆದ್ದರಿಂದ ಈ ಪೂರ್ಣಜ್ಞನೂ ಸಾಧಕನಾದ ಅಭೀಪ್ಸೆ (aspiration) ಹೊಂದಿದ್ದಾನೆ. ಈತ ಮಗುವಾಗಲೂ ಬಲ್ಲ; ಮುನಿಯಾಗಲೂ ಬಲ್ಲ.

ಪೂರ್ಣಜ್ಞನು ಪೂರ್ಣದ ಕಡೆಗೆ ಸಾಗಿದ ಓರ್ವ ಆದರ್ಶ ಸಾಧಕ. ಆತನನ್ನು ಪೂರ್ಣ ತುಂಬಿದವನೆಂದು ತಿಳಿಯಬೇಕಿಲ್ಲ; ಆದರೆ ಪೂರ್ಣಕ್ಕೆ ಪಥ ಕಂಡುಕೊಂಡವನೆಂದು ಮರೆಯಬೇಕಿಲ್ಲ:

"ಪೂರ್ಣಜ್ಞ"ನೆಂದೊಡನೆ ಪೂರ್ಣದರಿವಿನ ನುಡಿಯು
ಪೂರ್ಣ ತುಂಬಿಹುದೆಂದು ಬಗೆಯ ಬೇಡಿರಿದು.
ಪೂರ್ಣಕ್ಕೆ ಪಥವು ಪೂರ್ಣಜ್ಞ||

ಈ ಲೋಕವೇ ಈ ಪೂರ್ಣಜ್ಞನಿಗೆ ಶಿಕ್ಷಣ ಶಾಲೆಯಾಗಿದೆ. ವಚನ ರಚಿಸುವ ಕಲೆಯೂ ಅಲ್ಲಿಂದಲೇ ಬಂದ ವರದಾನ:

ಲೋಕ ಶಿಕ್ಷಣಶಾಲೆ ಲೋಕಾನುಭವವನ್ನು
ಸಾಕನಿತು ಕಲಿಸಿಹುದು ವಚನರಚಿಸಲ್ಕೆ
ಲೋಕ ಜನಹಿತಕೆ ಪೂರ್ಣಜ್ಞ||

"ಕಷ್ಟಗಳ ಸಾಕಷ್ಟು ಕೊಟ್ಟಿಹರು ನಮ್ಮವರು" ಎಂದು ಪೂರ್ಣಜ್ಞ ಹೇಳುತ್ತಾನೆ. ಯಾಕೆಂದರೆ ಈತ ಶೂನ್ಯದಿಂದ ಸಿಡಿದ ಪೂರ್ಣಜ್ಞನಾಗದೇ; ಜೀವನದ ರಂಗಸ್ಥಳದಿಂದ ಮಿಡಿದ ಪೂರ್ಣಜ್ಞನಾಗಿದ್ದಾನೆ.

ಸಿಹಿಯೂಟ ಸಿಹಿಮಾತು ಸುಹೃದಯಕ್ಕೆ ಲೇಸಕ್ಕು
ಸಿಹಿಮಾತಿನೊಳಗೆ ಕೃತಕ ಬೆರೆತಿದ್ದರದು
ಕಹಿ–ಕಾಳಕೂಟ ಪೂರ್ಣಜ್ಞ||

ಅಕ್ಕಮಹಾದೇವಿ ಮತ್ತು ಬಸವಣ್ಣನವರ ವಚನಗಳಲ್ಲಿ ಸ್ಪಷ್ಟವಾಗಿ ನಿದರ್ಶನಕ್ಕೆ ಬಂದ ಈ ನೋವಿನ ನೋಟ ಪೂರ್ಣಜ್ಞನನ್ನೂ ಬಿಟ್ಟಿಲ್ಲ; ಮಾತ್ರವಲ್ಲ 'ಕಹಿ–ಕಾಳಕೂಟ'ವಾಗಿ ಕಾಡಿದೆ! ಒಂದರ್ಥದಲ್ಲಿ; ಕಾಡಿನ ಶಿಲೆ ಉಳಿಯ ಪೆಟ್ಟಿನಿಂದ ಶಿವಲಿಂಗವಾದಂತೆ, ಈ ಪೂರ್ಣಜ್ಞ ಜೀವನದ ಉದ್ದಕ್ಕೂ ಸಾಲುಗಟ್ಟಿ ಬಂದ ಇಂಥ ನೂರುಕಹಿಗಳ ಆಸ್ವಾದನೆಯಿಂದಲೇ ಚುರುಕಾಗಿದ್ದಾನೆ: ಪೂರ್ಣಜ್ಞತೆಯ ದಾರಿ ಕಂಡುಕೊಂಡಿದ್ದಾನೆ.

ಈ ಪೂರ್ಣಜ್ಞ ಆತ್ಮಾನುಭವದ ಮುಗಿಲಲ್ಲಿ ತೇಲಾಡುವ ಕನಸುಗಾರನಲ್ಲ. ಮುಗಿಲ ಹೊಳೆಯಲ್ಲಿ ನಕ್ಷತ್ರ ದೋಣಿಗಳನ್ನು ತೇಲಬಿಡುವವನಲ್ಲ. ಜೀವನದ ಜ್ವಲಂತ ಸಮಸ್ಯೆಗಳ ಉದ್ದಗಲಗಳನ್ನೂ ಕಣ್ಣಾರೆ ಕಂಡವ. ಸಾಕ್ಷಿಬೇಕೇ:

ಪ್ರೇಮವಿಲ್ಲದ ಪತ್ನಿ ಮಮತೆಯಿಲ್ಲದ ಮಾತೆ
ಧರ್ಮವಿಲ್ಲದಿಹ ಗುರುಗಳಿಹರು ಸಮಾಜ
ಕ್ಷೇಮ ಕಂಟಕರು ಪೂರ್ಣಜ್ಞ||

ಮೋಸ ಮಾಡುವ ಜನರು ಘಾಸಿ ಮಾಳ್ಪುದ ಕಂಡು
ರೋಸಿ ಹೋಗಿಹೆನು ಹರನೆ ನೀ ಕುಹಕಿಗಳ
ದೋಷ ಪರಿಹರಿಸು ಪೂರ್ಣಜ್ಞ||

ಜಾತಿ ಜಾಲವ ಬೀಸಿ ಕೋತಿಯಾಟವ ಹೂಡಿ
ಮಾತಿನಲಿ ಸ್ವರ್ಗ ತೋರಿಸುವ ಜನ ದೇಶ
ಘಾತಕರು ನೋಡು ಪೂರ್ಣಜ್ಞ॥

ತನುರೋಗ ಕಳೆಯಲ್ಕೆ ಎನಿತೆನಿತೊ ಮದ್ದುಂಟು
ಮನರೋಗಕುಂಟೆ ಮದ್ದು? ಮದ್ದದಕೆ ಶಿವ
ಮನವೆ ಮದ್ದಯ್ಯ ಪೂರ್ಣಜ್ಞ॥

ಎಲ್ಲ ವ್ಯವಹಾರದಲಿ ಸುಳ್ಳು ಮೋಸವ ತಂತ್ರ
ಸುಳ್ಳು ಸೊಗಡಿರದ ಸತ್ಯ ಪ್ರಾಮಾಣಿಕತೆ
ಯುಳ್ಳವರು ಕಡಿಮೆ ಪೂರ್ಣಜ್ಞ॥

ಈ ಪೂರ್ಣಜ್ಞನ ಪ್ರಥಮ ಸಾಧನೆಯ ಸೋಪಾನವೇ ಲೋಕಾನುಭವ. ಒಂದರ್ಥದಲ್ಲಿ ಲೋಕಾನುಭವವೇ ಅಂತರಾನುಭವದ ಒರೆಗಲ್ಲು! ಈ ಮಾತು ಶ್ರೀ ಮೂಜಗಂ ವಚನಗಳಲ್ಲಿ ಇಡಿಯಾಗಿ ಧ್ವನಿಸುತ್ತದೆ. ಇಗೋ ಪೂರ್ಣಜ್ಞ ಕಂಡ ಜೀವನದ ಆಳವಾದ ಅವಲೋಕನದ ಚಿತ್ರಗಳು:

ಅಧಿಕಾರ ದೊರಕಿಸಲು ಹಣವಿತ್ತು ಹಣ ಸುರಿಸಿ
ಅಧಿಕಾರ ದೊರೆತ ಮರುಚಣವೆ ಲಂಚಕ್ಕೆ
ಬೆದಕಾಡುತಿಹರು ಪೂರ್ಣಜ್ಞ॥

ಗುಮ್ಮಗುಸುಗರು ಒಳಗೆ ತಮ್ಮ ಲೆಕ್ಕದೊಳಿಹರು
ಸೊಮ್ಮು ಸಿಸ್ನದಕೆ ಕಣ್ಣಿಟ್ಟು ಕುಳಿತಿಹರು
ತಮ್ಮ ಬಲು ಜೋಕೆ ಪೂರ್ಣಜ್ಞ॥

ಗೃಹಿಣಿಯೇ ನೀ ಕೇಳು ಗಹಗಹಿಸಿ ನಗಬೇಡ
ಅಹಮಿಕೆಯು ಬೇಡ ಗೌರವಾದರದಿಂದ
ವಿಹರಿಸೌ ಗೃಹದಿ ಪೂರ್ಣಜ್ಞ॥

ನಮ್ಮ ಹಿತದ ಕೀರ್ತಿ ಹೊಮ್ಮಿರಲು ಕೆಲಜನರು
ತಮ್ಮ ಹೊಟ್ಟೆಯಲಿ ಕಿಚ್ಚು ಸುರಿದಂತಾಗಿ
ಉಮ್ಮಳಿಸುತಿಹರು ಪೂರ್ಣಜ್ಞ॥

ನುಡಿಯು ನಡಿಗೆಯು ದುಡಿಗೆ ಸುವಿಚಾರ ಹಿತ ಜಪವೆ
ಸವನೃತ್ಯಗಾನ ಸಾಧನೆಯ ಮಾಡಿದರೆ
ಜವದಿ ಸಿದ್ಧಿಪುದು ಪೂರ್ಣಜ್ಞ॥

ಈ ಪೂರ್ಣಜ್ಞ ಮಹಾ ಸಜ್ಜನ. ಹಾದಿಹೋಕರ ಲವಲವಿಕೆ ಆತ್ಮವನಿಗೆ ಆತ್ಮೀಯ ಗೆಳೆಯ. ಪೂರ್ಣಜ್ಞನಂತಹ ಪ್ರೀತಿಯ ಗೆಳೆಯ ಸಿಕ್ಕುವುದು ಕಠಿಣ.

ನಮ್ಮ ಹೆಜ್ಜೆ ಹೆಜ್ಜೆಯನ್ನೂ ಆತ ತಿದ್ದಬಲ್ಲ, ಕೈ ಹಿಡಿದು ನಡೆಸಬಲ್ಲ. ಅವನ ಮಮತೆಯು ಹಿತೋಪದೇಶಗಳಿಗೆ ಲೆಕ್ಕವೇ ಇಲ್ಲ. ಆತ ಗೆಳೆಯನಾಗಿ ಕೈಹಿಡಿಯುತ್ತಾನೆ, ಹಿರಿಯಣ್ಣನಾಗಿ ಹೇಳುತ್ತಾನೆ:

ಹಣಕಾಸು ವ್ಯವಹಾರ ಶನಿಕಾಟವಾದೀತು
ಘನ ಮೈತ್ರಿ ಭಂಗವಾದೀತು ಗೆಳೆತನದಿ
ಹಣದ ರುಣ ಬೇಡ ಪೂರ್ಣಜ್ಞ||

ಬಡ್ಡಿ ಬೆಳೆಯುತ ಸಾಲ ಗುಡ್ಡದಂತಾಗುವದು
ಅಡ್ಡ ತರುಬುತ್ತ, ಸಾಲ ತೀರಿಸೆ ನಿನ್ನ
ಮಡ್ಡನಿಳಿಸುವರು ಪೂರ್ಣಜ್ಞ||

ಒಂದು ಕಣ್ಣಿಗೆ ಬೆಣ್ಣೆ ಒಂದು ಕಣ್ಣಿಗೆ ಸುಣ್ಣ
ಇಂದು ಜಗದೊಳಗೆ ನಡೆದಿಹುದು ಅನ್ಯಾಯ
ಬಂದು ನೀನೋಡು ಪೂರ್ಣಜ್ಞ||

ಪಲವು ಹುನ್ನಾರದಲಿ ಕಲಬೆರಕೆ ಮಾಡುತ್ತ
ಮೆಲು ಮಾತನಾಡಿ ಮುಗ್ಧರನು ವಂಚಿಸುತ
ಸುಲಿಯುವರು ಹಣವ ಪೂರ್ಣಜ್ಞ||

ಅಕ್ಕಿಯಲಿ ಹರಳುಗಳು, ಚಕ್ಕೆಪುಡಿ ಸಜ್ಜಕದಿ
ಸಕ್ಕರೆಯೊಳೆಲಬು ಪುಡಿಮಾಡಿ ಬೆರೆಸುವರು
ಮುಕ್ಕಣ್ಣ ನೋಡು ಪೂರ್ಣಜ್ಞ||

ಹೀಗೆ ಪೂರ್ಣಜ್ಞ ನಮಗೆ ಒಮ್ಮೆ ಜಾಣ ಅಣ್ಣನಾಗಿ, ಪ್ರೀತಿಯ ಗೆಳೆಯನಾಗಿ ವರ್ತಿಸುತ್ತಾನೆ. ವಿಚಿತ್ರವೆಂದರೆ 'ಶ್ರೀ ಮೂಜಗಂ' ಒಂದು ಮಹಾಮಠದ ಜಗದ್ಗುರುಗಳಾಗಿದ್ದರೂ ಮೂಜಗಂ ಮಾನಸ ಸೃಷ್ಟಿಯ 'ಪೂರ್ಣಜ್ಞ' ಮಾತ್ರ ಕಾವ್ಯದುದ್ದಕ್ಕೆ ಎಲ್ಲಿಯೂ ಜಗದ್ಗುರುವಾಗಲು ಹೋಗಿಲ್ಲ. ಆತ "ಪ್ರೇಮವೇ ದೇವರು" **(Love is God)** ಎಂದು ನಂಬಿದವನು. ಎಂದಿಗೂ ಆತ ಆಜ್ಞೆ ಮಾಡನು. ತಾಯಿಯಾಗಿ ಹೇಳುತ್ತಾನೆ, ಅಣ್ಣನಾಗಿ ತಿದ್ದುತ್ತಾನೆ, ಗೆಳೆಯನಾಗಿ ಮಾತಾಡುತ್ತಾನೆ. ಎಲ್ಲಿಯೂ ಈ 'ಪೂರ್ಣಜ್ಞ' ಗುರುವಾಗಿ ಆಜ್ಞೆ ಹೊರಡಿಸುವದಿಲ್ಲ. ಜಗದ್ಗುರುವಾಗಿ ಅಪ್ಪಣೆ ಕೊಡುವದಿಲ್ಲ. ಸ್ನೇಹದ ಮಾತುಗಳೇ ಪೂರ್ಣಜ್ಞನ ಎದೆತುಂಬಿದ ಮಾತುಗಳು. ಆತ ಅತ್ತರೂ ನಮ್ಮನ್ನು ನಗಿಸಬಲ್ಲ. ಹೇಳಬೇಕಾದುದನ್ನೆಲ್ಲ ಹೇಳುತ್ತಾನೆ, ಮುಚ್ಚುಮರೆಯಿಲ್ಲದೇ ಹೇಳುತ್ತಾನೆ; ಆದರೆ ಹೇಳುವಿಕೆಯಲ್ಲಿ ಸ್ನೇಹ–ಪ್ರೀತಿ–ಸಲಿಗೆ–ಆತ್ಮೀಯತೆಯ ಸಿಹಿಯನ್ನು ಈ ವಚನಗಳಲ್ಲಿ ಸ್ಪಷ್ಟವಾಗಿ ಹಂಚುತ್ತಾನೆ:

ದಾಂಪತ್ಯ ಜೀವನವು ಕಂಪುಳ್ಳ ರಸಪಾಕ
ಇಂಪುಳ್ಳಗಾನದಂತಿರಲಿ ಸೊಂಪಿರಲಿ
ತಂಪು ಮನೆಯಂತೆ ಪೂರ್ಣಜ್ಞ॥

ಸತಿಯನ್ನು ಬರಿ ಭೋಗರತಿಯೆಂದು ತಿಳಿಯದಿರು
ಸತಿಯು ಸಖಿಯೆಂದು ಅರಿತವನೆ ಪರುಮಸುಖಿ
ಸತಿಸುಖದ ಶೃತಿಯು ಪೂರ್ಣಜ್ಞ॥

ಹಾವು ಹಿಡಿಯಲುಬಹುದು ಸಾವು ತಡೆಯಲುಬಹುದು
ನೋವು ತಾಳುತ್ತ ಇರಬಹುದು ಲಜ್ಜೆಯುಳಿ
ದಾವಳೂ ಇರಳು ಪೂರ್ಣಜ್ಞ॥

ಸೊಳ್ಳೆ ಚಿಕ್ಕಾಡಿರುವೆ ಕಳ್ಳ ಇಲಿ ಹೆಗ್ಗಣವು
ಮಳ್ಳು ಜೊಂಡಿಗವು ಇದ್ದಲ್ಲಿ ಇರಬೇಡ
ಒಳ್ಳೆ ಮನೆಯೊಳಿರು ಪೂರ್ಣಜ್ಞ॥

ಜಗದ್ಗುರುಗಳಾದ "ಶ್ರೀಮೂಜಗಂ" ಅವರು "ಪೂರ್ಣಜ್ಞ"ರಾದಾಗ ಶ್ರೀಸಾಮಾನ್ಯನ ನಡೆನುಡಿಗಳೊಂದಿಗೆ ಸಮೀಪದಿಂದ ಸ್ಪಂದಿಸುತ್ತಾರೆ. ಇಲ್ಲಿ 'ಪೂರ್ಣಜ್ಞ' ಪರಂಪರಾಗತವಾದ ಸುವರ್ಣಸಿಂಹಾಸನಾರೂಢ ಶ್ರೀಜಗದ್ಗುರುವಾಗದೇ ಎಲ್ಲರೊಂದಿಗೆ ಒಂದಾಗುವ ಮುನಿಯಾಗುತ್ತಾನೆ. 'ಶ್ರೀ ಮೂಜಗಂ' ಮಾನಸಗರ್ಭದ ಸತ್ಯಸಂಶೋಧಕ, ಅಪ್ಪಟ ವಾಸ್ತವವಾದಿ, ಜೀವನ ನಿರೀಕ್ಷಕ ಈ 'ಪೂರ್ಣಜ್ಞ'ನಾಗಿದ್ದಾನೆ. ಒಂದರ್ಥದಲ್ಲಿ ಜೀವನಾನುಭವದ ಪೂರ್ಣತ್ವವೇ ಪೂರ್ಣಜ್ಞನ ಪ್ರತೀಕವಾಗಿದೆ. ಯಾಕೆಂದರೆ ಎಲ್ಲೆಲ್ಲೂ ಶಿವತ್ವದ ಪ್ರಭೆ-ಪ್ರಭಾವಳಿಗಳನ್ನು ಕಂಡರಸಿದ ಈ ಉಜ್ವಲ ಸಾಧಕ ಶಿವತ್ವದ ನೆಲೆಯಲ್ಲಿ ಅಶಿವವು ಕಾಲೂರಿದಾಗ ಕೆಂಡ ಕಿಡಿಯಾಗುತ್ತಾನೆ. ಯೋಗಿಯು ಗರ್ಭಗುಡಿಯನ್ನು ಬಿಟ್ಟು ಬಂಡಾಯಗಾರ ದನಿಯನ್ನು ಕೂಗುತ್ತಾನೆ. ಭಿಡೆ ಮುರವತ್ತುಗಳನ್ನು ಇಂದಿನ ಸಮಾಜದ ಕೊಂಕು-ಡೊಂಕುಗಳನ್ನು, ತಗ್ಗು-ಕುಗ್ಗುಗಳನ್ನೂ ತೋರಿಸುತ್ತಾನೆ:

ಬದನೆ ತಿನಬೇಡೆಂದು ವದನದಿಂ ಬೋಧಿಸುತ
ಅದನೆ ತಿಂಬಂತೆ ಆಷಾಢಭೂತಿಗಳ
ಬದುಕು ನೋಡಯ್ಯ ಪೂರ್ಣಜ್ಞ॥

[illegible] ಮಾನವನು ಮಾರುವನು
ಊನವಿಲ್ಲದಿಹ ಮನೆತನದ ಗೌರವಕೆ
ಊನಮಾಡುವಳು ಪೂರ್ಣಜ್ಞ॥

ಬಸವೇಶ ತತ್ವವನು ಉಸುರುವದು ಬಲುಸುಲಭ
ಬಸವಣ್ಣನಂತೆ ನಡೆಯುವದು ಕಡುಕಷ್ಟ
ನಿಸದವೀ ನುಡಿಯು ಪೂರ್ಣಜ್ಞ||

ಸಿದ್ಧಾಂತ ತಿಳಿಯದಲೆ ಗುದ್ದಾಡುತಿಪರಯ್ಯ
ರಾದ್ಧಾಂತ ಮಾಳ್ಪ ಕ್ಷುದ್ರವಿಚ್ಛಿದ್ರಕರ
ಬುದ್ಧಿ ತಿದ್ದಯ್ಯ ಪೂರ್ಣಜ್ಞ||

ಅತಿವಿನಯ ತೋರುವವ ಅತಿಮೋಸಗಾರನವ
ಅತಿ ಮಾತುಗಾರನಲ್ಲಿರುವದತಿ ಸುಳ್ಳು
ಕ್ಷಿತಿಯಲ್ಲಿ ಜೋಕೆ ಪೂರ್ಣಜ್ಞ||

ಎಲ್ಲ ಪಕ್ಷಗಳಲ್ಲಿ ಕ್ಷುಲ್ಲಕರು ತುಂಬಿಹರು
ಹುಲ್ಲ ಮೆದೆಯಲ್ಲಿ ಹುಟ್ಟುವವು ಕಸಬರಿಗೆ
ಒಳ್ಳೆಯವರೆಷ್ಟು ಪೂರ್ಣಜ್ಞ||

ಲಲಿತ ಲೋಲಾಕ್ಷಿಯರ ಸಲೆಮೊಲೆಯುವಕ್ಷಿಯರ
ಸಲಿಗೆಗೊಳಗಾದ ಕಾವಿಧಾರಿಯ ಕೃಪ
ಕಳೆಯದಿರ್ದಪುದೆ ಪೂರ್ಣಜ್ಞ||

ದುರಿತ ಪಾರ್ಥೇನಿಯಂ ಶಿರದ ಮಾಳಿಗೆಯಲ್ಲಿ
ಭರದಿ ಬೆಳೆದಲ್ಲಿ ಕಾಯವೆಂಬುವ ಹೊಲವು
ಬರದ ಬೀಡಕ್ಕು ಪೂರ್ಣಜ್ಞ||

ಅವರು ಮತಸ್ಥಾಪಕರು ಇವರು ಮತಸ್ಥಾಪಕರು
ಅವರಿವರು ಎಂದು ಬವರಕ್ಕೆ ಇಳಿಯದಿರಿ
ಶಿವನೆ ಸ್ಥಾಪಕನು ಪೂರ್ಣಜ್ಞ||

ಹಿಂಡಬಂಡರು ಕೂಡಿ ಬಂಡಾಯ ಹೂಡುವರು
ಕಂಡ ಕಂಡಂತೆ ಗೀಚುತ್ತ ಸಂಸ್ಕೃತಿ ಸಭ್ಯತೆಯ
ಚಂಡು ಮುರಿಯುವರು ಪೂರ್ಣಜ್ಞ||

ಮಠದ ಅನ್ನವನುಂಡು ಮಠದಗಳ ಹಳಿಸುತಿಹ
ಶಠರನ್ನು ಕಂಡು ನೊಂದಿಹುದು ಮನವು ಈ
ಕುಟಿಲರನ್ನು ದಮಿಸು ಪೂರ್ಣಜ್ಞ||

ಚೇಳು ಕುಟುಕಿದ ನೋವ ತಾಳಿಕೊಂಡಿರಬಹುದು
ಕಾಳಾಹಿಯಂಥ ಖೂಳ ಖಳರುಪಟಳವ
ತಾಳಲಾಸಲ್ಲ ಪೂರ್ಣಜ್ಞ||

ಜಗದಗುರುವೆಂಬುವರು ಜಗದೊಳಗೆ ತುಂಬಿಹರು
ಜಗದ ಗುರುವೆನಿಸಿ ಜಗಕೆ ಬೆಳಕೀಯುವರು
ಜಗದೊಳೆಷ್ಟು ಜನ ಪೂರ್ಣಜ್ಞ||

ಬಣಜಿಗರು ಜಂಗಮರು ನೊಣಬ ಶಿವಶಿಂಪಿಗರು
ಗಾಣಿಗ ಸಾದರರು ಭಾವೈಕ್ಯ ನುಡಿಯಲ್ಲಿ
ಗೊಣಗುವರು ಬರಿದೆ ಪೂರ್ಣಜ್ಞ||

ನಮ್ಮ ಬೀಜೆಪಿಗೆ ನಮ್ಮ ಕಾಂಗ್ರೆಸ್ಸಾಯ್ಗೆ
ನಮ್ಮ ಜನತಾಕ್ಕೆ ಸ್ವಾಮಿಕೃಪೆಯೆನ್ನುವರು
ತಮ್ಮೊಳಗೆ ತಾವೆ ಪೂರ್ಣಜ್ಞ||

ಇಂಥ ನೂರಾರು ಪದ್ಯಗಳನ್ನು ಎತ್ತಿ ಹೇಳಬಹುದು. "ಶ್ರೀಮೂಜಗಂ" ಹೃದಯದಲ್ಲಿ "ಪೂರ್ಣಜ್ಞ" ಕುಳಿತಿದ್ದರೆ; "ಪೂರ್ಣಜ್ಞ"ನ ಹೃದಯದಲ್ಲಿ ಓರ್ವ "ಬಂಡಾಯಗಾರ" ಕುಳಿತಿದ್ದಾನೆ. "ಪೂರ್ಣಜ್ಞ" ಇಂದಿನ ಸಾಮಾಜಿಕ ವಾಸ್ತವ ಪರಿಸರದ ಅಸತ್ಯಗಳೊಂದಿಗೆ ಉಗ್ರವಾಗಿ ಪ್ರತಿಕ್ರಿಯಿಸಿದ್ದಾನೆ. ಈ ದೃಷ್ಟಿಯಿಂದ ಪೂರ್ಣಜ್ಞ ಪುರಾತನ ಕಾಲದವನಾಗದೇ: ಇಂದಿನ ಲೇಟೆಸ್ಟ್ ಆಗಿದ್ದಾನೆ. ಇಂದಿನ ಪ್ರಸ್ತುತ ಸಮಸ್ಯೆಗಳನ್ನು ಕೈಗೆತ್ತಿ ಕೂಗಿದ್ದಾನೆ. ಆತನ ವಾಸ್ತವಪ್ರಜ್ಞೆಯ 'ಇಂದುತನ'ದ ಕಿಡಿಮಾತುಗಳನ್ನು ಕೇಳಿರಿ:

ಲಂಚವಿಲ್ಲದೆ ಕಾರ್ಯ ಕೊಂಚವೂ ಸಿದ್ಧಿಸದು
ಲಂಚಾಧಿಕಾರಿ– ದೇವರ ಪ್ರಸನ್ನತೆಗೆ
ಲಂಚ ನೈವೇದ್ಯ ಪೂರ್ಣಜ್ಞ||

ನೆರಳೀವ ಗಿಡಗಳನು ಕರುಣೆಯಿಲ್ಲದೆ ಕಡಿವ
ಹರಿವ ನದಿಗಳನು ಮಲಿನಗೊಳಿಸುವ ಜನರ
ಪರಿಯ ನೋಡಯ್ಯ ಪೂರ್ಣಜ್ಞ||

ಕಾರಪುಡಿ ಕಾಷ್ಠಪುಡಿ ಸೇರಿಸುತ ಪೇಟೆಯಲಿ
ಮಾರಾಟ ಮಾಡಿ ಆರೋಗ್ಯ ಕೆಡಿಸುವರು
ಘೋರಾಪರಾಧ ಪೂರ್ಣಜ್ಞ||

ಅನ್ನದೊಳಗೆ ಸೋಡಾ ಮಣ್ಣನ್ನು ಹಿಟ್ಟಿನೊಳು
ಬೆಣ್ಣೆಯೊಳು ಮೈದಾ ಹಿಟ್ಟನ್ನು ಹಾಕುತ್ತ
ಹೊನ್ನುಗಳಿಸುವರು ಪೂರ್ಣಜ್ಞ||

ಈ ನಿಟ್ಟಿನಲ್ಲಿ "ಪೂರ್ಣಜ್ಞ" ತನ್ನ ವೈಶಿಷ್ಟ್ಯವನ್ನು, ತನ್ನತನವನ್ನು ಕಾಪಾಡಿಕೊಂಡು ಬಂದಿದ್ದಾನೆ. ಇದೇ ನಿಟ್ಟಿನಲ್ಲಿ ಹೆಣ್ಣಿನ ಇಂದಿನ ನೀತಿಯ ಬಗ್ಗೆ ಪೂರ್ಣಜ್ಞ ಏನು ಹೇಳುತ್ತಾನೆ ಎಂಬುದು ಮುಖ್ಯ:

ದೇವದಾಸಿಯರೆಂದು ದೇವಿ ನಿಲಯದೊಳಿರಿಸಿ
ದೇಹ ವಿಕ್ರಯಕೆ ದೂಡುವವರಸು ಯಾವ
ದೇವಿಯೊಲಿದಾಳು ಪೂರ್ಣಜ್ಞ||

ಮುಗ್ಧ ಬಾಲೆಯರನ್ನು ಹದ್ದೆರಗಿದಂತೆರಗಿ
ಕದ್ದೊಯ್ಯುವವರ ಬದ್ದೆಮೇಲೊದ್ದೊದ್ದು
ಬುದ್ಧಿಗಲಿಸವರ್ಗೆ ಪೂರ್ಣಜ್ಞ||

ಕಣ್ಣಿಟ್ಟು ಪ್ರೇಮದಲಿ ಹೆಣ್ಣೊಮ್ಮೆ ಕೂಡಿದರೆ
ಮಣ್ಣಗಿಳಿವ ತನಕ ಕೈಬಿಡಳು ಸುರಸುಖಕೆ-
ಹೆಣ್ಣು ಖಣಿಯಯ್ಯ ಪೂರ್ಣಜ್ಞ||

"ಪೂರ್ಣಜ್ಞ"ನ ಇನ್ನೊಂದು ವಿಶೇಷ ವೈಶಿಷ್ಟ್ಯವೆಂದರೆ ಆರೋಗ್ಯದ ಬಗ್ಗೆ ಆತ ಹೇಳಿರುವ ಕೆಲವು ಅಮೌಲ್ಯ ಸಲಹೆಗಳು:

ಕರಿದ ಭಜಿ ಸೇವು ಒಗ್ಗರಣೆ ಮಂಡರಳುಗಳ
ಬುರಿ ಬುರಿ ಜಿಲೇಬಿ ನಿರುತ ತಿನ್ನುವ ಚಟವು
ಹೊರಕಡೆಗೆ ಮೂಲ ಪೂರ್ಣಜ್ಞ||

ಕೆಲವರಿಗೆ ಹುಳಿದೇಗು ಕೆಲವರಿಗೆ ತಲೆನೋವು
ಕೆಲವರಿಗೆ ವಿವಿಧ ರೋಗಗಳು ಇವುಗಳಿಗೆ
ಒಳಿತುಷಃ ಪಾನ ಪೂರ್ಣಜ್ಞ||

ಜೆರಸಿ ಗುಗ್ಗಳ ಅಕ್ಕಿ ಅರೆದು ನೀರೊಳಗದನು
ಕುರಕೆ ಲೇಪಿಸಲು ಕುರ ಒಡೆದು ಮಾಯುವದು
ಕೊರಗು ತಪ್ಪುವದು ಪೂರ್ಣಜ್ಞ||

ಪ್ರಕೃತಿ ನಿಯಮವ ಬಿಟ್ಟು ವಿಕೃತಿಮನದಿಂ ತನ್ನ
ಪ್ರಕೃತಿಯನೆ ಕೆಡಿಸಿಕೊಂಡು ಹಾಳಾದವಗೆ
ಧಿಃಕಾರ ಜಗದಿ ಪೂರ್ಣಜ್ಞ||

ಕಡೆದ ಮಜ್ಜಿಗೆಯನ್ನು ಬಿಡದೆ ಕುಡಿ ಉಂಡೊಡನೆ
ಅಡಿಗಡಿಗೆ ಬರುವ ಮಂದಾಗ್ನಿ ಅಪಚನಗ-
ಳಡಗಿ ಹೋಗುವವು ಪೂರ್ಣಜ್ಞ||

ಜೇನು ಸೇವಿಸೆ ಶಕ್ತಿ ಜೇನು ಸೇವಿಸೆ ಸ್ಫೂರ್ತಿ
ಜೇನು ಔಷಧಿಯು ಶಿವನ ಅಭಿಷೇಕಕ್ಕೆ
ಜೇನು ಜೀವಾಳ ಪೂರ್ಣಜ್ಞ||

ಶ್ರೀಮೂಜಗಂ ಅವರ ವಿಶೇಷ ವೈಶಿಷ್ಟ್ಯವೆಂದರೆ ಸರ್ವಧರ್ಮ ಸಮ ಭಾವನೆ. ವೀರಶೈವತ್ವದಿಂದ ಹೊರನಿಂತು ವಿಶ್ವವನ್ನು ನೋಡುವ ಅವರ ಲೋಕೋತ್ತರ ಧಾರ್ಮಿಕ ಸ್ಥಿತಿಯನ್ನು ಮೆಚ್ಚಬೇಕು. ಸರ್ವಧರ್ಮ ಸಹನೆ ಸರ್ವ ದರ್ಶನ ಸಹನೆ ಇಲ್ಲಿ ಕಾಣುವ ಮುಖ್ಯ ಗುಣ. ಉದಾಹರಣೆಗೆ ಗಮನಿಸಿರಿ:

ಏಸುವಿನ ಉಪದೇಶ ಏಸು ಜನ ಕೇಳುವರು
ಅಸುರೀ ಶಕ್ತಿ ತೊರೆದು ನೆನೆಯಿರಿ ದಿವ್ಯ
ಏಸುವಿನ ವಚನ ಪೂರ್ಣಜ್ಞ||

ತಿಮ್ಮಪ್ಪನನು ಜನರು ನಮ್ಮಪ್ಪ ಎನ್ನುವರು
ಸುಮ್ಮಾನದಿಂದ ಬೆಟ್ಟವೇರುವ ನೋಟ
ಕಣ್ಮನಕ್ಕೆ ತೃಪ್ತಿ ಪೂರ್ಣಜ್ಞ||

ಬಡತನದಿ ಬೆಂದಿರುವ ಬಡಪಾಯಿಗಳಿಗೆಲ್ಲ
ಕಡುಶ್ರಮಿಸುತಿಹರು 'ವೀರೇಂದ್ರ ಹೆಗ್ಗಡೆ'
ಬಡವರುದ್ಧಾರ ಪೂರ್ಣಜ್ಞ||

ರಮಜಾನ ಹಬ್ಬವದು ಕರ್ಮಕಳೆಯುವ ಹಬ್ಬ
ವಿಮಲ ಮಾನಸದಿ ಪ್ರೇಮ ಸಂವರ್ಧಿಸುವ
ಸಮ್ಮುದದ ಹಬ್ಬ ಪೂರ್ಣಜ್ಞ||

ಒಂದು ತಿಂಗಳ ತನಕ ಬಂಧುರದ ಉಪವಾಸ
ಕುಂದದೆ ಕುರಾನ ಪಠಿಪರು ಮುಸಲ್ಮಾನ
ಬಂಧು ಬಾಂಧವರು ಪೂರ್ಣಜ್ಞ||

ಅದ್ಭುತವಾದ ಈ ಎಲ್ಲಾ ತ್ರಿಪದಿಗಳು ಪೂರ್ಣಪ್ರಜ್ಞನಿಗೆ 'ಸುಲಿದ ಬಾಳೆಯ ಹಣ್ಣಾ'ಗಿ 'ಕಳಿವ ದ್ರಾಕ್ಷಿಯ ಹಣ್ಣಾ'ಗಿ ರಸಪಾಕವಾಗಿ ಒಲಿದು ಓಗೊಟ್ಟು ಬಂದಿವೆ:

ಸುಲಿದ ಬಾಳೆಯ ಹಣ್ಣು ಚೆಲುವ ದ್ರಾಕ್ಷಿಯ ಹಣ್ಣು
ಲಲಿತ ಭಾಷೆಯಲಿ ಬರೆದಿಹೆನು ತ್ರಿಪದಿಗಳ
ಸುಲಭ ಶೈಲಿಯಲಿ ಪೂರ್ಣಜ್ಞ॥

ಕೊನೆಗೆ 'ಪೂರ್ಣಜ್ಞ' ತನಗೆ ತಾನೇ ಒಂದು ಉದಾತ್ತ ಅನುಭಾವದ ಸಂದೇಶ ಹೇಳಿಕೊಳ್ಳುತ್ತಾನೆ. ತನಗೆ ತಾನೇ ಆಶೀರ್ವದಿಸಿ ಕೊಳ್ಳುತ್ತಾನೆ:

ಅನುಭಾವ ರಸದೂಟ ಅನುಭವಿಸಿ ಸುಖಿಯಾಗು
ಅನುಭವಿಗಳೊಡನೆ ಸರಸವಾಡಿದರೆ ನೀ
ಘನ ಮುಕ್ತಿ ಪಡೆವೆ ಪೂರ್ಣಜ್ಞ॥

ಹೀಗೆ; 'ಪೂರ್ಣಜ್ಞ' ವಚನಗಳು 'ಶ್ರೀಮೂಜಗಂ' ಸಾಹಿತ್ಯ ನಿರ್ಮಿತಿಯ ಸರ್ವೋತ್ತುಂಗ ರಸಾಫಲಗಳಾಗಿ; ಸ್ವಾನುಭವದ ಸಾರಾಯ ಷಡ್ರಸಾನ್ನ ಭೋಜನ ವನ್ನು ಉಣಿಸಿ ಮೈಮನ ತಣಿಸುತ್ತವೆ. "ಪೂರ್ಣಜ್ಞ ಗಂಗಾಧರ"ನ ಓತಪ್ರೋತ ವಾಗಿ ಸುರಿದ ಇಂಥ ಸಹಸ್ರಾರು ತ್ರಿಪದಿಗಳ ಅನುಭಾವದ ರಸಪ್ರವಾಹದಲ್ಲಿ ಮಿಂದು ಮಡಿಯಾಗುವ ಅವಕಾಶವನ್ನು ಅಭಿಮಾನಿಗಳಾದ ಕನ್ನಡಗರಿಗೆ ನೀಡ ಲಾಗಿದೆ. ಈ ಕೃತಿ ಜಗದ್ಗುರು ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳಿಗೆ ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟ ಸ್ಥಾನವನ್ನು ನೀಡುವವರಲ್ಲಿ ಸಂಶಯವಿಲ್ಲ.

ಶ್ರೀಮೂಜಗಂ ವಿರಚಿತ ೩೦ ಗ್ರಂಥಗಳ ಪಕ್ಷಿನೋಟದ ವಿವರವನ್ನು: ರಚನಾ ಕಾಲ: ಮುದ್ರಣ ಕಾಲ: ರಚನಾಸ್ಥಳ: ಪುಟ ಸಂಖ್ಯೆ: ಪುನರ್ಮುದ್ರಣಗಳು ಇತ್ಯಾದಿಯಾಗಿ ವಿವರಗಳನ್ನೊದಗಿಸುವ ರೇಖಾ ವಿಂಗಡಣೆಯನ್ನು ಮುಂದಿನ ಪುಟ ದಲ್ಲಿ ಗಮನಿಸಬಹುದು:

ಶ್ರೀಮೂಜಗಂ ಸಾಹಿತ್ಯ ನಿರ್ಮಾಣ: ಪಕ್ಷಿನೋಟ

ಜನನ: ೧೯೨೮ [ಸಸಿವಾ ೪]

ಅ ಸಂ	ಪುಸ್ತಕದ ಹೆಸರು	ಪ್ರಕಾರ	ಪುಟಗಳು	ಮುದ್ರಣಗಳು	ರಚಿಸಿದ ವಯಸ್ಸು	ಸ್ಥಳ	ವಿಶೇಷ
೧	ಮೊಗ್ಗೆಯ ಮಾಲೆ	ಕವನ ಸಂಗ್ರಹ	೪೬	೧೯೪೬ ೧೯೭೨	೧೬	ಶಿವಯೋಗ ಮಂದಿರ	
೨	ಶ್ರೀ ಶಿವಬಸವೇಶ್ವರ ನಾಮಾವಳಿ	ನಾಮಾವಳಿ	೨೫	೩೦.೧೨.೪೮	೧೭	,, ,,	
೩	ಶ್ರೀ ವಿಜಯಮಹಾಂತೇಶ್ವರ ಲಾವಣಿ	ಲಾವಣಿ	೩೦	೧೬.೨.೪೯ ೧೫.೪.೮೨	೧೮	,, ,,	
೪	ಶ್ರೀ ಮರುಳಸಿದ್ಧೇಶ್ವರ ನಾಮಾವಳಿ	ನಾಮಾವಳಿ	೩೦	೧೯೪೯	೧೮	,, ,,	
೫	ಅಪ್ಪಯ್ಯ ಸ್ವಾಮಿಗಳ ಜೀವನ ಚರಿತ್ರೆ	ಗದ್ಯ	೭೫	೭ ೫.೧೯೫೦ ೧೯೭೫	೨೦	ಕಾಶಿಯಲ್ಲಿ	
೬	ಪಥಿಕ	ಕವನ ಸಂಕಲನ	೧೦೦	೨.೧೨.೫೩ ೧೯೭೨	೨೩	,, ,,	ಶ್ರೀ ಜ. ಚ ನಿ. ಮುನ್ನುಡಿ
೭	ಯೋಗಿರಾಜ ಆಫ್ ಕರ್ನಾಟಕ (ಇಂಗ್ಲೀಷ)	ಗದ್ಯ	೨೦	೧೯೫೩	೨೩	,, ,,	ಮುದ್ರಿತ ಪುಸ್ತಕ ಕಳೆದಿದೆ
೮	ಪೂಮಾಲೆ	ಕವನ ಸಂಕಲನ	೫೦	೧೯೫೩	೨೪	,, ,,	
೯	ಸಂಸ್ಕೃತ ಕವಿಚರ್ಯಾ	ಗದ್ಯ	೪೦೦	೧೯೫೪–೫೫	೨೫–೨೬	,, ,,	ಹಸ್ತಪ್ರತಿ ಕಳೆದಿದೆ: ಅಚ್ಚಾಗಿಲ್ಲ
೧೦	ಸಾಹಿತ್ಯ	ಗದ್ಯ	೧೫೦	,, ,,	,, ,,	,, ,,	,, ,, ,,

ಅ.ನಂ.	ಪುಸ್ತಕದ ಹೆಸರು	ಪ್ರಕಾರ	ಪುಟಗಳು	ಮುದ್ರಣಗಳು	ರಚಿಸಿದ ವಯಸ್ಸು	ಸ್ಥಳ	ವಿಶೇಷ
೧೧	ಅಭಿಜ್ಞಾನ ಶಾಕುಂತಲ ವಿಮರ್ಶೆ	ಗದ್ಯ	೨೦೦	,, ,,	,, ,,	,, ,,	,, ,, ,,
೧೨	ಪೂದೋಟ	ಕಥಾಸಂಕಲನ	೧೦೦	,, ,,	,, ,,	,, ,,	,, ,, ,,
೧೩	ಜೀವನ ವಿಕಾಸ	ಗದ್ಯ	೬೪	೧೯೬೯	೬೦	ಹುಬ್ಬಳ್ಳಿ	
೧೪	ಆಶೀರ್ವಾಣಿ: ಭಾಗ-೧	ಗದ್ಯ	೨೭೨	೨೮.೧೨.೭೦	೬೧	,, ,,	
೧೫	ಜಗದ್ಗುರು ಗುರುಸಿದ್ಧೇಶ್ವರ ಶತನಾಮಾವಳಿ	ನಾಮಾವಳಿ	೨೪	೧೪.೧.೭೩ ೧೯೮೦ ೧೯೮೬	೬೪	,, ,,	
೧೬	ಚಿತ್ಸುಮನ	ವಚನಗಳು	೨೫೦	೧೯೭೩ ೧೯೭೭ ೧೯೮೩	೬೪	,, ,,	ಡಾ. ಆರ್. ಸಿ. ಹಿರೇಮಠ ಮುನ್ನುಡಿ
೧೭	ವಚನ ವಾರಿಧಿ	,,				,, ,,	ಆಗಾಗ ಬರೆದ ವಚನಗಳು: ಅಚ್ಚಾಗಿಲ್ಲ
೧೮	ಅಮೃತಬಿಂದು	ಗದ್ಯ	೭೫	೧೯೭೭	೬೮	,, ,,	
೧೯	ಯುಗಪುರುಷ ಯೋಗಿಕುಮಾರ	,,	೧೧೬	೧೯೭೮ ೧೯೮೦ ೧೯೮೧	೬೯	,, ,,	

5-1

ಅ.ನಂ.	ಪುಸ್ತಕದ ಹೆಸರು	ಪ್ರಕಾರ	ಪುಟಗಳು	ಮುದ್ರಣಗಳು	ರಚಿಸಿದ ವಯಸ್ಸು	ಸ್ಥಳ	ವಿಶೇಷ
೨೦	ಮರುಳಶಂಕರ ದೇವರು	ಗದ್ಯ	೧೦೦	೧೯೭೮	೪೯	ಹುಬ್ಬಳ್ಳಿ	
೨೧	ಹಾರ್ಟ್ಸ್ ಬ್ಲಾಸಮ್ಸ್ (ಇಂಗ್ಲೀಷ)	,,	೧೦೪	೯.೮.೭೪	೪೫	,, ,,	ಇಂಗ್ಲೀಷಿಗೆ ಅನುವಾದಕರು: ಪ್ರೊ. ಅರ್ಮಂಡೊ ಮೆನೆಝಿಸ್ ಶ್ರೀ ಎಂ. ಎಸ್ ಅಂಗಡಿ ಪುಸ್ತಕ ಬಿಡುಗಡೆ: ಬೆಲ್ಜಿಯಂ ದೇಶದ ಲ್ಯೂವೆನ್ ನಗರದಲ್ಲಿ
೨೨	ನಮ್ಮ ವಿದೇಶ ಯಾತ್ರೆ	,,	೨೨೦	೨೫.೨.೭೯	೫೦	,, ,,	ಇಂಗ್ಲೀಷಿಗೆ ಭಾಷಾಂತರವಾಗಿದೆ
೨೩	ಜೇನಹನಿ	,,	೮೦	೨೨.೭.೮೧	೫೨	,, ,,	
೨೪	ಶಿವಯೋಗಮಂದಿರ	,,	೫೮	೧೯೭೮ ೧೯೮೦	೫೦	,, ,,	
೨೫	ಚಿತ್ಕಿರಣ	,,	೨೬೦	೮.೧೧.೮೧	[illegible]	,, ,,	'ಪರಂಜ್ಯೋತಿ'ಗೆ ಬರೆದ ಆಶೀರ್ವಾಣಿಗಳು
೨೬	ವಿವಿಧತಾ ಮೇ ಏಕತಾ (ಹಿಂದಿ)	,,	೬೦	೨೫.೧೨.೮೧	೫೧	,, ,,	ಹಿಂದಿ ಉಪನ್ಯಾಸಗಳು ಸಂಗ್ರಹ
೨೭	ಆಶೀರ್ವಾಣಿ: ಭಾಗ–೨	,,	೧೮೦	೧೯೮೨	೫೨	,, ,,	'ಪರಂಜ್ಯೋತಿ'ಗೆ ಬರೆದ ಆಶೀರ್ವಾಣಿಗಳು ಡಿ. ಎಸ್. ಕರ್ಕಿ ಅವರ ಮುನ್ನುಡಿ
೨೮	ಹೊಂಗಿರಣ	,,	೧೨೦	೧೯೭೨ ೧೯೮೪	೪೩	,, ,,	'ಪರಂಜ್ಯೋತಿ'ಗೆ ಬರೆದ ಆಶೀರ್ವಾಣಿಗಳು
೨೯	ಹೂಬಳ್ಳಿ	,,	೧೨೦	[illegible]	[illegible]	,, ,,	'ಪರಂಜ್ಯೋತಿ'ಗೆ ಬರೆದ ಆಶೀರ್ವಾಣಿಗಳು
೩೦	ಪೂರ್ಣಜ್ಞ ವಚನಗಳು	ತ್ರಿಪದಿ	ಅಚ್ಚಿನಲ್ಲಿ	[illegible]	೬೦	,, ,,	ಅಂದಾಜು ೨೫ [illegible]

ಶ್ರೀ ಮೂಜಗಂ ಸಾಹಿತ್ಯ ಸಮಾವೇಶ

ಸಮಗ್ರ ಗ್ರಂಥಗಳ
ಸಂಕಲಿತ
ಸಂಪಾದಿತ
ಪುನರ್ಮುದ್ರಣ

ಶ್ರೀ ಮನ್ಮಹಾರಾಜ ನಿರಂಜನ ಜಗದ್ಗುರು ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳವರು ವಿರಚಿಸಿದ ಒಟ್ಟು ೩೦ ಗ್ರಂಥಗಳಲ್ಲಿ ಇಲ್ಲಿ ಉಪಲಬ್ಧವಿರುವ ೨೪ ಗ್ರಂಥಗಳ ಮೂಲ ಮುದ್ರಣ ಕೊಡಲಾಗಿದೆ. "ಸಂಸ್ಕೃತ ಕವಿಚರ್ಚಾ", "ಸಾಹಿತ್ಯ", "ಅಭಿಜ್ಞಾನ ಶಾಕುಂತಲ ವಿಮರ್ಶೆ", "ಪ್ರಾದೋಟ" ಈ ಕೃತಿಗಳ ಹಸ್ತಪ್ರತಿಗಳು ಕಳೆದುಹೋಗಿವೆ. "ವಚನವಾರಿಧಿ"ಯ ವಚನಗಳು ಸಂಗ್ರಾಹ್ಯವಾಗಿ ದೊರೆಯುವದಿಲ್ಲ. "ಯೋಗಿರಾಜ್ ಆಫ್ ಕರ್ನಾಟಕಾ" ಇಂಗ್ಲೀಷ ಪುಸ್ತಿಕೆ ಅಚ್ಚಾಗಿ ಕಳೆದುಹೋಗಿದೆ. ಉಳಿದ ಹೊರತ ೨೪ ಕೃತಿಗಳ ಸಮಗ್ರ ಸಂಕಲಿತ ಸಂಪಾದಿತ ಪುನರ್ ಮುದ್ರಣವನ್ನು ಇಲ್ಲಿ ಕೊಡಲಾಗುತ್ತಿದೆ. ಆಯಾ ಪುಸ್ತಕಗಳಿಗೆ ಆಯಾಕಾಲಕ್ಕೆ ಬರೆಯಲ್ಪಟ್ಟ ಮುನ್ನುಡಿ ಇತ್ಯಾದಿಗಳನ್ನು ಇದ್ದುದಿದ್ದಂತೆಯೇ ಇಲ್ಲಿ ಮುದ್ರಿಸಲಾಗಿದೆ. ಶ್ರೀ ಮೂಜಗಂ ರಚನೆಗಳನ್ನು ಒಂದೆಡೆ ನೋಡಬಯಸಿದ ಬಹುಜನರ ಅಪೇಕ್ಷೆಗೆ ಈ ಪ್ರಯತ್ನ....

ಮೊಗ್ಗೆಯ ಮಾಲೆ

ಸಾಹಿತ್ಯ ಪ್ರಕಾರ	:	ಕವನ ಸಂಕಲನ
ಮೊದಲ ಮುದ್ರಣ	:	೧೯೪೬
ಎರಡನೆಯ ಮುದ್ರಣ	:	೧೯೭೨
ರಚನೆಯ ವಯಸ್ಸು	:	೧೬
ರಚನಾಸ್ಥಳ	:	ಶಿವಯೋಗಮಂದಿರ

॥ ಶ್ರೀ ಕುಮಾರೇಶ್ವರ ಪ್ರಸೀದ ॥

ಮೊಗ್ಗೆಯ ಮಾಲೆ

ಪೋಣಿಸಿದವರು :

ಮಹಾಂತದೇವರು ಚಿತ್ತರಗಿ

(ಸದ್ಯದ ಮೂರುಸಾವಿರಮಠದ ಶ್ರೀ ಜಗದ್ಗುರುಗಳು ತಮ್ಮ
೧೫ ನೆಯ ವಯಸ್ಸಿನಲ್ಲಿ ಬರೆದ ಕಿರುಹೊತ್ತಿಗೆ)

೧೯೭೨

ಶ್ರೀ ಜಗದ್ಗುರು ಮೂರುಸಾವಿರಮಠದ
ಗ್ರಂಥಮಾಲಾ ನಂ. ೫೩

ಎರಡನೆಯ ಆವೃತ್ತಿ : ೧೯೭೨

ಪ್ರಕಾಶಕರು :
ಶ್ರೀ ಜಗದ್ಗುರು ಗಂಗಾಧರ ಧರ್ಮಪ್ರಚಾರಕ ಮಂಡಳ
ಮೂರುಸಾವಿರಮಠ ಹುಬ್ಬಳ್ಳಿ.

ಮುದ್ರಕರು :
ಪರಂಜ್ಯೋತಿ ಪಾವರ ಪ್ರಿಂಟಿಂಗ್ ಪ್ರೆಸ್
ಶ್ರೀ ಜಗದ್ಗುರು ಮೂರುಸಾವಿರಮಠ, ಹುಬ್ಬಳ್ಳಿ.

ಪರಿವಿಡಿ

		ಪುಟ
೧.	ಅಲರಿನ ವಿರಹ	೮೩
೨.	ಹಾಲಲೆದ್ದು ನೀರಲೆದ್ದು	೮೫
೩.	ಎನ್ನ ಗಿಣಿ	೮೬
೪.	ಭಗವಾನ್ ಬಸವ	೮೮
೫.	ಇರಲಿ	೮೯
೬.	ಕುಮಾರನ ಕರೆ	೯೦
೭.	ಗುರುವಂದನಂ (ಸಂಸ್ಕೃತ)	೯೨
೮.	ವಚನ	೯೩
೯.	ದೇವನೆಂತಿರುವನಂತೆ?	೯೪
೧೦.	ಆಹ್ವಾನ	೯೫
೧೧.	ಶರಣರ ತೋಟ	೯೬
೧೨.	ಬನ್ನಿಯ ತರಲು ಬನ್ನಿ	೯೭
೧೩.	ಕಣ್ಮರೆಯಾದ 'ಯತಿಕುಲ ತಿಲಕ'	೯೮
೧೪.	ಕಣ್ಮರೆಯಾದ "ಕವಿರತ್ನ"	೧೦೦
೧೫.	ಹಿರಿಯತನ	೧೦೧
೧೬.	ಕರುನಾಡು ಗೀತೆ	೧೦೨
೧೭.	ಬಂದಿತಿಂದು	೧೦೩
೧೮.	ಹಾರುವೆಯೆಲ್ಲಿಗೆ?	೧೦೪
೧೯.	ಮಲಗು ಸುಮ್ಮನೆ	೧೦೫
೨೦.	ಸಲಹುಬಾರದೇ?	೧೦೬
೨೧.	ಹೀಗೆ ಸಾಗಲಿ	೧೦೮
೨೨.	ಆಶೀರ್ವದಿಸು	೧೦೯
೨೩.	ಪ್ರಾರ್ಥನೆ	೧೧೦
೨೪.	ಭಯ	೧೧೧
೨೫.	ಮೊಗ್ಗೆಯ ಬೇಡಿಕೆ	೧೧೨

ಮೊಗ್ಗೆಯ ಮಾಲೆ ಕುರಿತು

ನಡೆ-ನುಡಿಯೊಂದಾಗಿ ಬೆಳಗಿ ನಾಡವರಿಗೆ ಬೆಳಗನಿತ್ತ ಲಿಂಗೈಕ್ಯ ಮ. ನಿ. ಪ್ರ. ಕುಮಾರ ಶಿವಯೋಗಿಗಳು ಹಾನಗಲ್ಲ, ಅವರೊಂದು ಪುಷ್ಪವೃಕ್ಷ. ಆ ಪುಷ್ಪವೃಕ್ಷದ ಪುಷ್ಪ ಅನಂತ. ಆ ಪುಷ್ಪವೃಕ್ಷದಲ್ಲಿ ಅಷ್ಟಾಂಗಯೋಗವೆಂಬ ಶ್ರೇಷ್ಠ ಸಂಪಿಗೆ ಹೂವಿದೆ. ಇಷ್ಟಲಿಂಗಯೋಗವೆಂಬ ಪುಷ್ಪ ಸೇವಂತಿಗೆ ಹೂವಿದೆ. ಶೀಲಾಚರಣೆಯೆಂಬ ಜಾಜಿಮಲ್ಲಿಗೆಯಿದೆ. ಕ್ರಿಯಾಚರಣೆಯೆಂಬ ಸೂಜಿಮಲ್ಲಿಗೆಯಿದೆ. ಅಂತಃಕರಣಪೂರಿತ ಹೃದಯ ಕಮಲವಿದೆ. ಭಾವಭರಿತ ಬಕುಲವಿದೆ. ಮನೋಲಯವೆಂಬ ಕಣಗಿಲ ಹೂವಿದೆ. ಮನೀಷವೆಂಬ ಶಿರೀಷವಿದೆ. ಗುರು ಸಹಜ ಗುಣಗಳೆಂಬ ಗುಲಾಬಿ ಹೂಗಳಿವೆ. ಸೌಜನ್ಯವೆಂಬ ಸುರಗಿಯಿದೆ ಚಿರಸ್ಮರಣೆಯೆಂಬ ಸುರಹೊನ್ನೆ ಸುಮವಿದೆ. ಮೌನ ಮುದ್ರೆಯೆಂಬ [illegible] ಪಾದ್ರಿಯಿದೆ. ಪರಮಾನುಭೂತಿಯೆಂಬ ಪಾರಿಜಾತವಿದೆ. ಪ್ರೌಢ ಹೊಸ ಹೂಗಳಿವೆ. ಹೊನ್ನ ಹೂಗಳಿವೆ.

"ಬನ್ನದಿ ಬಳಲುವ| ಕನ್ನಡ ಕುವರರ
ಅನ್ನವನೀಯುತ ಪೊರೆದಿಯೊ ನೀ|
ಎನ್ನಯ ಬಕುತಿಯ 'ಮೊಗ್ಗೆಯ ಮಾಲೆ'ಯ
ನಿನ್ನಯ ಪಾದಕೆ ಅರ್ಪಿಸುವೆ"

ಎಂದು ಶಿವಯೋಗಮಂದಿರದ ಮಹಾಂತದೇವರು* ಆ ಹೂವುಗಳನ್ನು ಮೊಗ್ಗೆಯ ಮಾಲೆಯಲ್ಲಿ ಪೋಣಿಸಿಕೊಂಡು ಕಾರುಣ್ಯಯೋಗಿ ಶ್ರೀ ಸುಕುಮಾರರಿಗೆ ಅರ್ಪಿಸಲು ಭಕ್ತಿಯಿಂದ ಮುಂದಾಗಿದ್ದಾರೆ. 'ಮೊಗ್ಗೆಯ ಮಾಲೆ'ಯಲ್ಲಿಯ ಹೂಗಳು [illegible] ಬಾಡಿಲ್ಲ. ಶಿವಲಿಂಗದ ಸಿರಿಮುಡಿಗಾಗಿಯೆ [illegible]. [illegible] ನೋಡುಕೊಂಡಿವೆ. ಮಘಮಘಿಸಿ ಮೆರೆಯುತಿವೆ. ಆಹಾ! [illegible] ಅದೇನು ಆ ಹೂವುಗಳ ಗುಣ! ಅದೆಂಥ ದೃಶ್ಯ! [illegible] ಅವೇ ಧನ್ಯ.

[illegible] ಮೊಗ್ಗೆಯ ಮಾಲೆಯ [illegible] 'ಬಿಂಬ'? [illegible]

---

* [illegible] ಜಗದ್ಗುರುಗಳಾಗಿದ್ದಾರೆ.

ಯೆಲ್ಲಿಗೆ' ಎಂದು ತನ್ನನ್ನೇ ತಾನು ಪ್ರಶ್ನಿಸಿಕೊಂಡು ಪುಷ್ಪವೃಕ್ಷದ 'ಶರಣರ ತೋಟ'ಕ್ಕೆ ಹಾರಿಬಂದಿದೆ. ಕವಿಯ ಜೀವನವೊಂದು ಅಲ್ಲಿ ವಸಂತವಾಗಿದೆ ಯೆಂಬುದನ್ನು ಕಂಡಾಗ ಇಲ್ಲಿಯೆ 'ಮಲಗು-ಸುಮ್ಮನೆ' ಎಂದು ತನ್ನ ತಾನರಿದು ಎಚ್ಚರಿಸಿಕೊಂಡಿದೆ. 'ಅಲರಿನ ಪರಪ'ದ ಆ ಗಿಳಿ ಕಲ್ಪನಾಕುಸುಮಗಳನರಳಿಸಿಕೊಂಡು ಚಲುವ ಚಿಮ್ಮಿಸಿ, ನರುಗಂಪ ಹರಡಿಸಿ, ನವರಸಗಳೆಂಬ ನವಮಕರಂದದಿಂದ ತುಂಬಿಸಿ, ರಸಪೂರ್ಣವಾಗಿರಿಸಿ, ಸಕಲವಿಧ ವರ್ಣಗಳಿಂದ ತಾನೇ ರಂಜಿತವಾಗಿದೆ.

"ನೆಲದ ಮರೆಯು ಹೇಮದಂತೆ
ಫಲದ ಮರೆಯು ರುಚಿಯುಂತೆ
ತಿಲದ ಮರೆಯು ತೈಲದಂತೆ"
ಜಲದ ಮರೆಯು "ಅನಲದಂತೆ"

ಇರುವ ಕಾರುಣ್ಯಯೋಗಿಯನ್ನು 'ದೇವನೆಂತಿರುವನಂತೆ' ಎಂದು ಪ್ರಶ್ನಿಸಿದೆ.

"ಭವರೋಗ ವೈದ್ಯನೆ
ಭವಬಂಧನದಿ ಬಳಲಿ
ಬೆಂಡಾದ ಮಾನವರ
ನುದ್ಧರಿಸ ಬಾ ಬಾ"

ಎಂದು ತನ್ನ 'ಪ್ರಾರ್ಥನೆ' ಸಲ್ಲಿಸಿದೆ. ಸುಕುಮಾರ ಈ 'ಕುಮಾರನ ಕರೆ' ಕೇಳಿದನೋ ಇಲ್ಲವೋ ಎಂಬುದನ್ನು ತಿಳಿಯದೆ ಇದ್ದ ಮುಗ್ಧಮಾನಸ್ಸಿನ ಆ ಗಿಳಿ 'ಗುರುವಂದನೆ'ಯನ್ನು 'ಭಯ' ಭಕ್ತಿಯಿಂದ ಮುಂದುವರೆಸಿದೆ. 'ಕರುನಾಡ' ಗೀತೆಯನ್ನು ಪ್ರಾರಂಭಿಸಿದೆ.

"ಬೆಂದ ಜನಗಳಿಗೆಲ್ಲ ಮುಕ್ತಿನೀಡಿದ ನಾಡು
ಅಂದದಿಂದದಲಿ ಪೇಳ್ದ ಸತ್ಯಶರಣರ ಬೀಡು
ಚಂದ್ರಶೇಖರನನ್ನು ಬೇಗನೊಲಿಸುವ ನಾಡು
ಕಂದ "ಮಹಂತ"ನು ಬರೆದ ಭಕುತಿಯಿಂದೀಪಾಡು"

[illegible]

ಜೀವಂತ ಕವಿ ಕಾವ್ಯವನದಲ್ಲಿ ತಾನು ಸಂಚರಿಸುತ್ತಿರುವಾಗ ಎಲ್ಲಿನೋಡಿದಲ್ಲಿ ಬಸವನೆಂಬ ಬಳ್ಳಿ, ಲಿಂಗವೆಂಬ ಗೊಂಚಲು. ಒತ್ತಿ ಹಿಡಿದರೆ ಭಕ್ತಿ ಬರುವುದನ್ನು ಕಂಡು ಬಸವನನ್ನು ಕಾಣುವ ಹೆಬ್ಬಯಕೆಯಿಂದ 'ವಚನ' ರಚಿಸಿದೆ. ಹಾಡಿದೆ, ಕುಣಿದಿದೆ. 'ಭಗವಾನ್ ಬಸವ'ನ ಬರುವಿಗಾಗಿ. ಬಸವನ ಮಹತಿಯನ್ನು ಕುರಿತು–

"ಬಸವ ನಾಮವೆಮಗೆ ಜಪವು
ಬಸವ ನಾಮವೆಮಗೆ ತಪವು
ಬಸವ ಬಸವನೆಂಬುದದುವೆ
ಅಮೃತ ಧಾರೆಯು
ಬಸವನಾಮ ಮಹಿಮೆಯಿಂದ
ಮುಕ್ತಿದೊರೆವುದು"

ಬಗೆದುಂಬಿ ಹಾಡಿದೆ. ಬಸವನ ಬರವು 'ಬಂದಿತೆಂದು' ಎಂದು ತಿಳಿದು ಹಿಗ್ಗಿ 'ಹಿರಿಯತನ'ದಲ್ಲಿ ಆತನನ್ನು 'ಆಶೀರ್ವದಿಸು' ಎಂದು ಕೇಳಿಕೊಂಡಿದೆ. ನಿನ್ನ ಆಶೀರ್ವಾದ 'ಹೀಗೆಸಾಗಲಿ' ಎಂದು 'ಮೊಗ್ಗೆಯ ಬೇಡಿಕೆ' ಮುಂದಿಟ್ಟಿದೆ. ಆದರೂ ತೃಪ್ತಿಯಿಲ್ಲ.

"ಹಿಂದಿನ ಶರಣರು
ತನುವಂ ತೋಂಟವ
ಮನಮಂ ಗುದ್ದಲಿ ಮಾಡಿದರು
ಅಗಿದರು ಕಳೆದರು
ಭ್ರಾಂತಿಯ ಬೇರವ
ಒಡೆದರು ಸಂಸಾರದ ಹೆಂಟೆ"

ಎಂದು ಶರಣರನ್ನು ಲಿಂಗಮುಚ್ಚಿ ಅಹುದೆನ್ನುವಂತೆ ಕೊಂಡಾಡಿದೆ. ನನ್ನನ್ನು 'ಸಲಹುವಾರದೆ' ಎಂದು ಧೈರ್ಯದಿಂದ ಪ್ರಶ್ನಿಸಿದೆ. ಕಬ್ಬಿಗನ ಕಾವ್ಯಕನ್ನಿಕೆಯ ಚಲುವದೇನೊ?

ಮೊಗ್ಗೆಯ ಮಾತಿನಲ್ಲಿ ಹಳಗನ್ನಡ ಶೈಲಿಯಿದೆ, ನವೀನ ಧ್ವನಿಯಿದೆ. ಶಿಥಿಲವಲ್ಲದ ಬಂಧವಿದೆ, ಪರಿಣತ ಪದಪುಂಜವಿದೆ, ಚಿತ್ರವನ್ನು ಆಕರ್ಷಿಸುವ ನಿರೂಪಣೆಯಿದೆ, ಹೃದಯಕ್ಕೆ ನಿರ್ಮಲತೆಯನ್ನು ತರುವ ಪ್ರಾಸಾದಿಕತೆಯಿದೆ. ಆ ಚಿದಾನಂದವನ್ನು ಚಿತ್ರೀಕರಿಸುವ ಚತುರತೆ ಮಾತಿಗೆ ದೊರೆತುದಾಗಿದೆ. ಕವಿಯು ರಸಋಷಿಯಾಗಿ ಬಾಳುವನು, ಬರೆಯುವನು. ಕಾವ್ಯವೆಂದರೆ ತಪವನ್ನಾಚರಿಸುತ್ತ ಎಂಬುದನ್ನು ಕಾಣಬೇಕಾದರೆ, ಕವಿಯ ಕಾವ್ಯ ಕಲ್ಪನೆಯನ್ನು ಕಂಡುಂಡು ಅನುಭವಿಸಬೇಕಾದರೆ ಈ ಕೃತಿಯನ್ನು ಓದಿ ನೋಡಲೇಬೇಕು. ಕಾವ್ಯಮದ್ದುಕ್ಕು

ಅನುಭಾವ ರಸಗಂಗೆಯಾಗಿ ಹರಿದಿವೆ. ಭಾವಗೀತ ಮೈಗೂಡಿ ದೈವೀಭಾವಶ್ರುತಿ ಶ್ರಾವ್ಯನಾದ ಝೇಂಕಾರ ಮೊಳಗಿಸಿದೆ.

'ಮೊಗ್ಗೆಯ ಮಾಲೆ' ಯಲ್ಲಿ ಮಹಾಂತದೇವರ ಮೃದು ಮೃದು ಮಧುರ ಕಾವ್ಯಶೈಲಿ ಕಂಡುಬರುತ್ತದೆ. ಬೆಡಗಿನ ಭಾಷೆಯಲ್ಲಿ ಹೊಸ ಹೊಸ ಅನುಭವ ಗಳನ್ನು ಅರಳಿಸಿರುತ್ತಾರೆ. ಆ ಪರ ಮಾರ್ಘನಾದ ಮಧುರಮಯ ಕೊಳಲು ಗಾನದಂತೆ ಇಂಪಾಗಿರುತ್ತದೆ. ಚಿತ್ರಭೆ ಹುಣ್ಣಿಮೆ ಚಂದಿರನ ತಂಬೆಳಗಿನಂತೆ ಇರುತ್ತದೆ. ಶಬ್ದ ಸೌಂದರ್ಯ ಕಲಾಮಯ ಚಿತ್ರದಂತೆ ಚಲುವಾಗಿರುತ್ತದೆ ಮಹಾಂತದೇವರ ಕೃತಿಗಳ ಭಾವಸ್ಪರ್ಶದಿಂದ ಹೃದಯ ಪುಲಕಿತವಾಗುತ್ತದೆ. ಶ್ರವಣೇಂದ್ರಿಯ ಪುನೀತವಾಗುತ್ತದೆ. ಸದ್ವಾಸನೆ ಸುಗಂಧಮಯವಾಗಿ ಸಹೃದಯ ದಲ್ಲಿ ಸುಳಿಯುತ್ತದೆ. ತಮ್ಮ ೧೫ನೇ ಚಿಕ್ಕ ವಯಸ್ಸಿನಲ್ಲಿ ಇಂತಹ ಕೃತಿಯನ್ನು ಬರೆದು ಸಮಾಜಕ್ಕೆ ನೀಡಿದ್ದು ನಮ್ಮ ಭಾಗ್ಯ.

ವೀರಶೈವ ಸಂಸ್ಕೃತಿಯ ಪ್ರಚಾರಕರಾಗಿ, ಸ್ವಯಂ ಆಚಾರ–ವಿಚಾರ ಅನು ಸಾರಕರಾಗಿ, ಭಕ್ತ ಜನಕೋಟಿಯ ಹೃದಯವಾಸಿಗಳಾಗಿರುವ ಮಹಾಂತದೇವರು ಗುರುಮನೆಯನ್ನು ಸರಸ್ವತಿಯ ಅರಮನೆಯನ್ನಾಗಿ ಮಾಡುವರೆಂಬುದನ್ನು ಈ ಕೃತಿ ಎತ್ತಿತೋರಿಸುತ್ತದೆ. ಕನ್ನಡಿಗರಿಗೆ ಕರುಣಾಮೃತವ ಕರುಣಿಸುತ್ತಿವ ಶಿವಯೋಗ ಮಂದಿರದ ಮಹಾಂತದೇವರು ಕನ್ನಡದ ಉತ್ತಮ ಸಾಹಿತಿ, ಉನ್ನತ ಕವಿ ಎನ್ನು ವದಕ್ಕೆ ನಿದರ್ಶನ ಈ ಕೃತಿ.

—ಎ. ಎಸ್. ಹೂಗಾರ

ಪ್ರಕಾಶಕರ ನುಡಿ

"ಮೊಗ್ಗೆಯ ಮಾಲೆ"ಯ ಕವನ ಸಂಗ್ರಹದ ಕರ್ತರು "ಶ್ರೀ ಮೂಜಗಂ" ಇವರೇ ಮಹಾಂತದೇವರು ಚಿತ್ತರಗಿ: ಅಂದರೆ ಸದ್ಯದ ಮೂರುಸಾವಿರಮಠದ ಶ್ರೀ ಜಗದ್ಗುರು ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳವರು. ತಮ್ಮ ವಿದ್ಯಾರ್ಥಿ ಜೀವನದ ಸುಮಾರು ೧೫–೧೬ ನೆಯ ವಯಸ್ಸಿನಲ್ಲಿ ಬರೆದ ಕವನ ಸಂಕಲನದ ಪ್ರಥಮ ಮುದ್ರಣ ಪ್ರತಿಗಳು ತೀರಿದ್ದರಿಂದ ದ್ವಿತೀಯ ಪ್ರಕಾಶನ ಕೈಕೊಳ್ಳಲಾಗಿದೆ.

ಇಂದು ಶ್ರೀ ಜಗದ್ಗುರುಗಳವರ ಬಹುಮುಖ ಕರ್ತೃತ್ವದ ದರ್ಶನ ಜನತೆಯ ಕಣ್ಣೆದುರಿಗಿದೆ. ಅವರ ಮನದ ಸಾಮ್ರಾಜ್ಞಿಯ ಮಂದಾರ ಪುಷ್ಪಗಳ ಮೊಗ್ಗೆಗಳನ್ನು ಇದರಲ್ಲಿ ಕಾಣಬಹುದಾಗಿದೆ. ಅನುಭವ, ಅನುಭಾವಗಳ ಸೌಗಂಧ ಮೂಸಿ ಬಹುದಾಗಿದೆ. ಇಲ್ಲಿರುವವು ಒಂದು ಜಾತಿಯ, ಒಂದು ಬಣ್ಣದ, ಒಂದು ವಾಸನೆಯ ಮೊಗ್ಗುಗಳಲ್ಲ. ವಿವಿಧ ಮೊಗ್ಗುಗಳ ಮಾಲೆ ಇದು. ಇದೊಂದೂ ಬಾಡದ ಮಾಲೆ. ಈ ಮೊಗ್ಗುಗಳು ಬರಿ ಮೂಸಲಲ್ಲ, ಮುಡಿಯಲಲ್ಲ, ಸಲೆ ಪೂಜೆಗೆ ಸಜ್ಜಾದ ಮೊಗ್ಗುಗಳು. ಇವು ಬಾಳಿನುದ್ದಕ್ಕೂ ಅತಿ ಅವಶ್ಯ. ಇದಕ್ಕಾಗಿ ಪುನಃ ಪ್ರಕಾಶಗೊಳಿಸಿ ತಮ್ಮ ಕೈಯಲ್ಲಿ ಕೊಡಲಾಗಿದೆ. ವ್ಯಕ್ತಿ ಮಹಾಶಕ್ತಿಯಾದಾಗ ಅದರ ಹಿನ್ನೆಲೆಯಲ್ಲಿ ಎಂತಹ ಹೋರಾಟವಿದೆ ಎಂಬುದರ ಸಂಕೇತ ಈ ಕಿರುಹೊತ್ತಿಗೆ. ಶ್ರೀ ಜಗದ್ಗುರು ಗಂಗಾಧರ ಧರ್ಮ ಪ್ರಚಾರಕ ಮಂಡಳದ ಗ್ರಂಥ ಮಾಲೆಯಲ್ಲಿ ಇದೊಂದು ಸೇರಿದ್ದು ನಮಗೆ ಸಂತೋಷ. ಜಗದ್ಗುರುಗಳು ಅತಿ ಚಿಕ್ಕ ವಯಸ್ಸಿನಲ್ಲಿ ಬರೆದ ಕವನಗಳು ಮತ್ತೆ ಉಳಿಯಲಿ ಎಂಬ ಭಾವನೆಯಿಂದ ಪ್ರಕಟಿಸಲಾಗಿದೆ. ಬಾಲ್ಯಾವಸ್ಥೆಯ ಅವರ ಸಾಹಸಮಯ ಜೀವನವನ್ನು ನಾವಿಲ್ಲಿ ಕಂಡುಕೊಳ್ಳಬಹುದು. ಅಂದವಾಗಿ ಅಚ್ಚುಮಾಡಿಕೊಟ್ಟ ಪರಂಜ್ಯೋತಿ ಪಾವರ ಪ್ರಿಂಟಿಂಗ್ ಪ್ರೆಸ್ಸಿನವರಿಗೂ ಧನ್ಯವಾದಗಳು.

ಅರ್ಪಣೆ

ಮಾರವಿನಾಶನೆ| ವೀರನೆ ವಿರತನೆ
ಪುರಹರನೊಲಿಸಿದ ಯತಿ–ತಿಲಕ||
ಪರಿಪರಿಯಿಂದಲಿ ಕರೆಯುವೆ–ಬೇಡುವೆ
ಕರುಣಿಸು **ಶ್ರೀ ಸುಕುಮಾರನೇ ನೀ** ||೧||

ಯೋಗದಿ ನಿಪುಣನೆ| ತ್ಯಾಗದಿ ಧೀರನೆ
ಬಾಗುವೆ ಅನುನಯದಿಂದಲಿ ನಾ|
ಶ್ರೀಗುರುನಾಥನೆ| ರಾಗವಿರಹಿತನೆ|
ಬೇಗದಿಕರುಣಿಸು ಸುಮತಿಯ ನೀ || ೨ ||

ಬನದಿ ಬಳಲುವ| ಕನ್ನಡ ಕುವರರ
ಅನ್ನವನೀಯುತ ಪೊರೆದಿಯೊ ನೀ|
ಎನ್ನಯಭಕುತಿಯ "**ಮೊಗ್ಗೆಯ ಮಾಲೆ**"ಯ
ನಿನ್ನಯಪಾದಕೆ ಅರ್ಪಿಸುವೆ || ೩ ||

—ಮಹಂತದೇವರು

ಅಲರಿನ ವಿರಹ

(ಹಿಂದೀ ಕವಿತೆಯೊಂದರ ಅನುವಾದ)

ಒಂದುದಿನದಿ ಗಿಡದಬಳಿಯೆ
ಕಿರಿಯಹುಡುಗ ಬಂದುಕುಳಿತು
ಅರಳಿದಲರ ನೋಡಿತಾನು
ಹರಿದುಕೊಂಡನು!
ತರಿದು ಜೇಬಿನಲ್ಲಿ ತನ್ನ
ಶೋಭೆಗೈದನು

ಶಿರವು ಹೋಯಿತೆಂಬ ವಿರಹ-
ದಿಂದ ನೊಂದು ಬೆಂದು ತಾನು
ಹುಡುಗನನ್ನು ನೋಡುತಲರು
ಹೀಗೆ ಅಂದಿತು!
ದಯಾಹೀನ! ನಾನು ನಶಿಸಿ
ಹೋಗಲೆಂದಿಯಾ

ನಗುತಲಿದ್ದೆ ಪೂರ್ಣನಾನು
ಜಗದನೋಟ ನೋಡದಿದ್ದೆ
ದಲಗಳೆಲ್ಲ ಭೂಮಿಯಲ್ಲಿ
ಅಳಿದು ಹೋದವು!
ನಿರ್ದಯತ್ವ ನಿನ್ನ ಬಳಿಯು
ಲೆನಿತು ಇರುವದೈ

ದಯವು ಬೇಕು ಜೀವಿಗಳಲಿ
ದಯವು ಇಲ್ಲದಿರುವವನನ್ನು
ದೇವನೊಲ್ಲನೆಂಬ ಮಾತು
ಕೇಳದಿರುವಿಯಾ
ಬುದ್ಧಿವಂತರನ್ನು ಕೇಳು
ಇದರ ಭೇದವ

ಶೋಭೆಯಿಂದ ಮೆರೆಯುತಿದ್ದೆ
ಜನಕ್ಕೆ ಕಂಪು ಬೀರುತಿದ್ದೆ
ವನದಲಿರುವ ಎಲರಿನಲ್ಲಿ
ಹೆಚ್ಚು ಮೆಚ್ಚುಗೆ
ಪಡೆದು ನನ್ನ ಹಿರಿಮೆಯನ್ನು
ಹೇಳುತಿದ್ದೆನು

ಬಳಿಯಲಿರುವ ಗೆಳೆಯಬಳಗ
ದಲ್ಲಿನಾನು ಕುಣಿಯುತಿದ್ದೆ
ಹೀನತನವ ನೋಡಿ ಅವರು
ನಗುತಲಿರುವರು!
ಒಬ್ಬನಾಗಿ ವಿರಹದಿಂದ
ಬೇಯುತಿರುವೆನು!

ಹಾಲಲೆದ್ದು ನೀರಲೆದ್ದು

ದೇವನಿನ್ನ ಹಲವು ಜನರು
ಹಲವು ರೀತಿಯಿಂದ ಬಳಿಗೆ
ನಿನ್ನ ನಿಲಯದಲ್ಲಿ ಬಂದು ಕಾಲಕಳೆವರು
ವಸ್ತುವಡವೆಗಳನು ತಂದು ನಿನಗೆ ಈವರು

ನಾನು ಓರ್ವ ಬಡವ ಹುಡುಗ
ಧರಿಸಲಿಕ್ಕೆ ಒಡವೆಯಿಲ್ಲ
ಮತ್ತೆ ಸಾಸಪಟ್ಟು ಓಡಿ ನಿನ್ನ ಬಳಿಯಲಿ
ಪೂಜೆಗೈಯ್ಯಲಿಕ್ಕೆಬಂದು ನಿಂತು ನಮಿಸುವೆ

ಬೆಳಗಲಿಕ್ಕೆ ಧೂಪ ದೀಪ
ಕಂಠದಲ್ಲಿ ಧರಿಸಲಿಕ್ಕೆ
ಕುಸುಮಮಾಲೆ ಬಳಿಯಲಿನ್ನ ಇರುವದಿಲ್ಲವೈ
ಹಾಡಲಿಕ್ಕೆ ಮಧುರಧ್ವನಿಯು ಇರುವದಿಲ್ಲವೈ

ಪೂಜೆಮಾಡ ಬಯಕೆ ಇರಲು
ಪೂಜೆವಿಧಿಯು ಅರಿಯದಿರಲು
ನಾಥ ಬಳಿಯಲಿಂದು ಬಂದು ಮಿಡುಕುತಿರುವೆನು
ಈಯಲಿಕ್ಕೆ ಕರದೊಳಿನ್ನ ದ್ರವ್ಯವಿರುವದೇ?

ಸ್ತುತಿಸಲಿಕ್ಕೆ ಚತುರನಲ್ಲ
ನಿನ್ನ ಚರಣ ಕಮಲದಲ್ಲಿ
ಎನ್ನ ದೇಹವನ್ನು ಮುದದಿ ಅರ್ಪಿಸಿರುವೆನು
ಎನ್ನ ನೀನು "ಹಾಲಲೆದ್ದು ನೀರಲೆದ್ದಲೈ"||

ಎನ್ನಗಿಣಿ

ಎಳೆಯದಾದ ಎನ್ನ ಗಿಣಿಯು
ಕಣ್ಣ ಮುಂದೆ ಹಾರಿಹೋಯ್ತು
ನೋಡಿದವರು ಭರದೊಳೆನಗೆ ಪೇಳಬಾರದೆ?
ಸಾಸಮಾಡಿ ತಂದು ಕೊಟ್ಟು ತೋಷ ಗೈವಿರಾ?

ದೀನ, ಮೌನ, ಎನ್ನ ಪಕ್ಷಿ
ಶೂನ್ಯ ಸ್ಥಾನದಲ್ಲಿ ಬಿದ್ದು
ಯಾರ ಹಸ್ತದಲ್ಲಿ ಸಿಕ್ಕು ಬಳಲುತಿರುವದೈ
ಪಕ್ಷಿತೂಕ ಕನಕವೀವೆ ಉಸುರ ಬಾರದ?

ದೇಹವದರ ಹಸರುಬಣ್ಣ
ಕಂಠದಲ್ಲಿ ಅರುಣರೇಖೆ
ಎಳೆಯದಾದ ಎಲೆಯತರದಿ ಚಂಚುಪುಟವದು
ಅಂದ ಚಂದದಿಂದ ಇದ್ದ ಎನ್ನ ಗಿಣಿಯದು

ಗ್ರಾಮ ವನಗಳಲ್ಲಿ ಅಲೆದು
ಹುಡುಕಿ ಹುಡುಕಿ ನಡೆಯದಾದೆ
ಹೇಗೆ ಇರಲಿ! ಎಲ್ಲಿಹೋಗಲೆನಗೆ ಯುಕ್ತಿಯಂ
ಭರದಿ ಪೇಳಿ ಎನ್ನ ಗಿಣಿಯು ಎಲ್ಲಿ ಹಾರಿದೆ

"ವಿರಹವೆನಿತು ಸಹಿಸಲಾನು"
ಇಂದು ಒಂದು ಕಪ್ಪಿನಲ್ಲಿ
ಹಾಲುಬೆಲ್ಲ ಬೆರಸಿ ಸರಿಸಿ ಗಿಣಿಯು ಮನೆಯೊಳು
ಇಟ್ಟಕಪ್ಪು ಬಿಟ್ಟು ತಾನು ಹಾರಿಹೋಗಿದೆ

ಎನ್ನದೃಷ್ಟಿ ಶೂನ್ಯವಾಯ್ತು
ಸರ್ವದೃಷ್ಟಿ ನೋಡಿಯಾಯ್ತು
ಅಲ್ಲಿ–ಇಲ್ಲಿ ಬೆದಕಿ–ಬೆದಕಿ ವ್ಯರ್ಥವಾಯಿತೈ
ಕಣ್ಣು ತುಂಬ ನೀರು ಬಂದು ಹರಿದು ಹೋದವು

ಶಿವನೆ, ಹರನೆ, ಗುರುವೆ ಎಂದು
ಹಗಲು ಇರುಳು ನೆನೆಯುತ್ತಿತ್ತು
ಎನಗೆ ನಿನ್ನ ಧಾಮವನ್ನು ರವದಿ ತೋರಿಸೈ
ಮಾಯೆ ವಸ್ತ್ರ ಪರಿದು ಮರವೆ ಮನೆಯ ತೊಲಗಿಸೈ||

(ಹಿಂದೀ ಕವಿತೆಯೊಂದರ ಭಾವಾನುವಾದ)

ಭಗವಾನ್ ಬಸವ

ಧರಣಿ ತಲದಿ ಬೆಳೆದು ಬಂದ
ಜಾತಿ ಭೇದ ವಳಿಸಲೆಂದು
ಮಾದಲಾಂಬೆ ಕುವರನಂದು ಭರದಿಬಂದನು
ಕಾಯಕಷ್ಟ ಸಹಿಸಿಕೊಂಡು ಸತತದುಡಿದನು।

ಭಕ್ತಿ-ಭಾವ ತೋರಲೆಂದು
ಶಕ್ತಿ-ಯುಕ್ತಿ ಬೆಳೆಯಲೆಂದು
ಮುಕ್ತಿ-ಸುಖವ ಸುಣಿಸಲೆಂದು ಬಸವ ಬಂದನು
ಆಶೆಯಂತೆ ಗೈದುಜಗದಿ ಜಸವ ಪಡೆದನು।

ಭೃತ್ಯ ಭಾವದಿಂದಬಾಗಿ
ನೀತಿಯುಕ್ತ ವಚನವರುಹಿ
ಜಗವ ಜನದ ಮನದಮಲಿನವನ್ನು ಕಳೆದನು
ಪರಮ ವೀರಶೈವ ಮತಕೆ ಶಾಂತಿಯಿತ್ತನು।

ಧರ್ಮಸೇವೆಗಾಗಿ ತನ್ನ
ತನುವ ಮನವ ಧನವ ಸವೆಸಿ
ಭಕ್ತಿಯಲ್ಲಿ ಧೀರನೆನಿಸಿ ಪೊಳೆಯುತಿರ್ದನು
ಆಡಿದಂತೆ ಮಾಡಿ ತಾನು ಬೆಳಗುತಿರ್ದನು

ಬಸವ ನಾಮವೆಮಗೆ ಜಪವು
ಬಸವ ನಾಮವೆಮಗೆ ತಪವು
ಬಸವ ಬಸವ ನೆಂಬುದದುವೆ ಅಮೃತ ಧಾರೆಯು
ಬಸವ ನಾಮ ಮಹಿಮೆಯಿಂದ ಮುಕ್ತಿದೊರೆವುದು॥

ಇರಲಿ

ತನುವಿರಲಿ ದೇಶಕ್ಕೆ
ಮನವಿರಲಿ ಧ್ಯಾನಕ್ಕೆ
ಧನವಿರಲಿ ದಾನಕ್ಕೆ
ನುಡಿದಂತೆ ನಡೆಯಿರಲಿ

ದಯವಿರಲಿ ಜೀವಿಯಲಿ
ಸ್ವಯವಿರಲಿ ಗುಣಗಳಲಿ
ನಯವಿರಲಿ ನುಡಿಯಲ್ಲಿ
ಕೃತಿಯಲ್ಲಿ ಸೊಬಗಿರಲಿ

ಭಯವಿರಲಿ ಗುರುವಿನಲಿ
ಒಲವಿರಲಿ ದೇವನಲಿ
ಸೊಬಗಿರಲಿ ಶಾಂತತೆಯ
ಬಯಕಿರಲಿ ಶಿವನೊಲಿವ

ಕುಮಾರನಕರೆ

ಓ-ಯೋಗಿ ಓ-ತ್ಯಾಗಿ
ಭವಬೀಜಗಳಹುರಿದ
ರವಿಯಂತೆ ಬೆಳಗಿರ್ದ
"**ಸು-ಕುಮಾರ**" ಬಾ-ಬಾ||

ಭವರೋಗ ವೈದ್ಯನೆ
ಭವಬಂಧನದಿ ಬಳಲಿ
ಬೆಂಡಾದ ಮಾನವರ
ನುದ್ಧರಿಸ ಬಾ-ಬಾ||

ಶಿವಯೋಗಮಂದಿರವು
ವಿನಯದಿಂದಲಿ ನಿನ್ನ
ಕರೆಯುತಲಿ ತಾನಿಹುದು
ಭರದಿಂದ ನೀ-ಬಾ||

ಭಕ್ತ ಜನಗಳಿಗೆಲ್ಲ
ಭಕ್ತಿಸುಧೆಯುಣಿಸಲ್ಕೆ
ಭಕ್ತಿಯಿಂಬೇಡುವೆನು
ಭಕ್ತಿಸಿಧಿ ಬಾ-ಬಾ||

ಕರುನಾಡ ಜನತೆಯೊಳು
ಶಾಂತತೆಯ ಸೊಬಗನ್ನು
ಭರದಿಂದ ಬೀಱಲ್ಕೆ
ಶಾಂತಮೂರ್ತಿಯೇ ಬಾ||

ಚಿಕ್ಕ ಮಕ್ಕಳುಕೂಡಿ
ಅಕ್ಕರದಿ ನುತಿಸುವೆವು
ಅಕ್ಕರೆಯ ಮೂರ್ತಿ ನೀ
ಅಕ್ಕರದಿ ಸಲಹು ಬಾ||

ಒಡಲುಗೊಂಡವ ಹಸಿವ
ಒಡಲುಗೊಂಡವ ಹುಸಿವ
ಒಡಲುಗೊಂಡವನೆಂದು
ದೂಡದಿರು ಭವದೊಳ್||

ಹಿರಿಕಿರಿದು ಭೇದವ
ನಳಿಸಲ್ಕೆಭರದಿಂದ
ತವಚರಣಕರ್ಪಿಸುವೆ
ಭಕ್ತಿಯಲರನು ಬಾ||

ಗುರುವಂದನಂ

ಯೋಗಮುದ್ರಾ ಸಮೇತಂಚ
ರಾಗಭೋಗ ವಿವರ್ಜಿತಂ
ನಮಾಮಿ ಶಿರಸಾದೇವಂ
ಯೋಗಿವರ್ಯಂ ಜಿತೇಂದ್ರಿಯಂ

ಸಾಧಕಾಚಾರ ಧುರ್ಯಂಚ
ಭವರೋಗ ಭಿಷಗ್ವರಂ
ಭಕ್ತೋದ್ಧಾರಂ ಮಹೇಶಂ ಚ
ಭಕ್ತ ಸಂದೋಹ ಪೂಜಿತಂ

ಲಿಂಗಾಂಗ ಯೋಗಕುಶಲಂ
ಲಿಂಗಮೂರ್ತಿಂ ಮಹಾಮತಿಂ
"ಮಹಾಂತಯೋಗಿನಂ" ವೀರಂ
ವಂದೇಹಂ ಭಕ್ತಿಪೂರ್ವಕಂ

ಶ್ರೀಮದ್ವಿಜಯ ಮಹಾಂತ–
ಸ್ವಾಮಿನಾಂ ಜಯಂತ್ಯುತ್ಸವೇ
ತೇಷಾಂಸುತೇನ ರಚಿತಂ
ತದಿದಂ "**ಗುರುವಂದನಂ**"

ವಚನ

ಇಂದಿನ ಜನವತಿ ಆದರದಿಂದಲಿ
ಶೋಧಿಸಿ ವಚನವ ಪರಿಪರಿಯಿಂ
ದಾದರ ಗೊಂಡೀ ಸಾಧಕವರ್ಗಕೆ
ಮೋದದ ಮಾರ್ಗವ ತೋರಿಹುದು

ವಚನದಿಹೆಣೆದಿದೆ ನೀತಿಯಮಾಲೆಯು
ವೇದದ ಮರ್ಮವು ಧರ್ಮದಮೇಣ್
ಸತ್ಯದ ನುಡಿಯಿದೆ ಶಾಂತಿಯ ಸೊಬಗಿದೆ
ಭಕುತಿಯರಸ ತಾನುಕ್ಕುತಿದೆ

ಹೃದಯವು ಕರಗಿದೆ ಬೆಡಗಿದೆ ಕಾವ್ಯದ
ಆಚಾರದ ಖಣಿ ಕಾಣುತಲಿದೆ
ಕರುಣೆಯು ತುಂಬಿದೆ ಕಿಂಕರ ಭಾವವು
ತುಳುಕಿದೆ ಅನುಭವಸುಧೆಯಿಂದ

ದೇವ ನೆಂತಿರುವನಂತೇ?

ನೆಲದ ಮರೆಯು ಹೇಮದಂತೆ
ಫಲದಮರೆಯು ರುಚಿಯಂತೆ
ತಿಲದಮರೆಯು ತೈಲದಂತೆ
ಜಲದಮರೆಯು ಅನಲದಂತೆ

ಶಶಿಯೊಳಗಣ ತಂಪಿನಂತೆ
ನನೆಯೊಳಗಣ ಗಂಧದಂತೆ
ಕನ್ನೆಯೊಳಗಣ ನೇಹದಂತೆ
ನೀರೊಳಲೆವ ಛಾಯೆಯಂತೆ

ಗೋವಿನೊಳಗಣ ಕ್ಷೀರದಂತೆ
ದರ್ಪಣದಲಿರುವ ಬಿಂಬದಂತೆ
ಜೀವಕೋಟಿ ಮನಸಿನಲ್ಲಿ
ದೇವನಿಂತಿರುವನಂತೆ

ಆಹ್ವಾನ

(ಬಸವ ಜಯಂತಿಯು ದಿನ ರಚಿಸಿದ ಕವನವಿದು.)

ಬಸವಾ ಬಾ-ಬಾ ವಸುಧಿಗೆ ನಿನ್ನಯ
ಮಹಿಮೆಯು ತೋರಲು ಬೇಗನೆ ಬಾ।
ವೇದದ ಮರ್ಮವ ಜನರಿಗೆ ತಿಳಿಸಿದ
ನಿಗಮಾಗಮತೀತನೆ ಬಾ-ಬಾ॥

ಒಕ್ಕಟ್ಟಿಲ್ಲದ ನಮ್ಮ ಸಮಾಜವು
ಕಕ್ಕಸ ಬಡುತಿದೆ ಸಲಹಲು ಬಾ।
ಭಕ್ತಸಮೂಹಕೆ ಭಕ್ತಿಯನುಣಿಸಲು
ಭಕ್ತರ ಹೃತ್ಕಮಲಾರ್ಕನೆ ಬಾ॥

ತನು-ಮನ-ಧನವನು ಬೇಡಿದೊಡೀವೆನು
ಆದರದಿಂದಲಿ ಪೊರೆಯುಲು ಬಾ।
ತಂದೆಯು-ತಾಯಿಯು ಬಂಧುವೆ ನೀನ್ಕೈ
ನೀನೆಲ್ಲಿರುಸುವೆ-ಯೆಲ್ಲಿರುವೆ॥

ಮುರಿಯೈಮಾಯದ ಮದವನು ಎನ್ನಯ
ಕೆಡಿಸೈ ಕಾಯದ ಕತ್ತಲೆಯಂ।
ಬಿಡಿಸೈ ಜೀವದ ಜಂಜಡ, ಹಿಡಿಸೈ
ದೇವನು ಒಲಿಯುವ ಚಿಂತೆಯ ನೀ॥

ಭಕುತಿಯ ಮೂರ್ತಿಯೆ ಜ್ಞಾನದಿನೇಶನೆ
ವಿರತಿಯ ಕೋಶನೆ ಪಾಲಿಸ ಬಾ।
ಕೂಡಲಸಂಗನ ಕೂಡಿದ ಬಸವನೆ
ಭಕುತಿಯ ಕುಸುಮವ ಧರಿಸುವೆ ಬಾ॥

ಶರಣರ ತೋಟ

ಹಿಂದಿನ ಶರಣರು
ತನುವಂ ತೋಟವ
ಮನವಂ ಗುದ್ದಲಿಮಾಡಿದರು

ಅಗಿದರು ಕಳೆದರು
ಭ್ರಾಂತಿಯು ಬೇರವ
ಒಡೆದರು ಸಂಸಾರದಹೆಂಟೆ

ಬಗೆದರು ಬಿತ್ತಿದ
ರೀಪರಿ ತೋಟದಿ
ಬ್ರಹ್ಮವೆಂಬೀ ಬೀಜವನು

ಅಖಂಡ ಮಂಡಲ
ವೆಂಬೀ ಭಾವಿಗೆ
ಹೋದರು ತಂದರು ಜಲವನ್ನು

ಸಲುಹಿದ ರೀಪರಿ
ಹಾಕುತ ಶಶಿಗಳ
ಸಮತೆಯು ಬೇಲಿಯ ನಿಕ್ಕಿದರು

ಬನ್ನಿಯಂತರಲು ಬನ್ನಿ

(ದಸರೆಯ ದಿನ ರಚಿಸಿದ ಪದ್ಯ)

ಬನ್ನಿರಿ ಬನ್ನಿರಿ ಚನ್ನಿಗ ಗೆಳೆಯರೆ
ಬನ್ನಿಯ ವೃಕ್ಷಕೆ ಪೋಗೋಣ
ಬನ್ನವ ನಶಿಸಲು ಭಾಗ್ಯವಬೇಡಲು
ಮುದದಿಂದೆಲ್ಲರು ಹಾಡುತಲಿ

ಬನ್ನಿಯದಲಗಳ ಒಬ್ಬರಿಗೊಬ್ಬರು
ಪ್ರೇಮದಿ ಬೇಗನೆ ಕೊಡುವುದಕೆ
ನೇಹದ ಬೀಜವ ಬಿತ್ತಿದ ಗೆಳೆಯರೆ
ವೈರದ ವೃಕ್ಷವ ಕಡಿವುದಕೆ

ಹಿಂದಿನ ಹಗೆತನ ಕುಂದಲಿ ಎನ್ನುತ
ಬಂಧುರ ಪ್ರೇಮವ ಬೆಳಿಸೋಣ
ನೇಹದ ನಲ್ಮೆಯ ಎನ್ನಯ ಗೆಳೆಯರೆ
ಪ್ರೇಮಾಂಬುಧಿಯೊಳು ಈಸಲುಬನ್ನಿ

ಕಣ್ಮರೆಯಾದ ಯತಿಕುಲ ತಿಲಕ

ಹಾವೇರಿಯೊಳಗೆ

(ಮೌನಮೂರ್ತಿಯೆದುರಿನಲ್ಲಿ ನಿಂತು ರಚಿಸಿದ ಆರ್ತಗೀತೆ)

ಶ್ರೀ ಶಿವಬಸವನೆ ಮೋಸದ ಮಾಯೆಯ
ಘಾಸಿಯ ಮಾಡಿದ ಯತಿವರನೆ
ಆಶಾಪಾಶದ ಬಲೆಯೊಳು ಬೀಳದೆ
ಈಶನ ಪಾದವ ಪಿಡಿದಿಯಾ ನೀ

ನಿನ್ನಯ ಬೋಧಾಮೃತದಿಂದ ಮನುಜರು
ಸಂತಸದಿಂದಲಿ ನಲಿಯುತ್ತಿದ್ದರ್
ನಿನ್ನಯ ನೀತಿಯುವ ತೇಜವ ಕಾಣುತ
ಬನ್ನವ ನಳಿಸಲು ಅರಸುತ್ತಿದ್ದರ್

ನಿನ್ನಯ ಶಾಂತಿಯು ಸದ್ಗುಣಕಾಣುತ
ಬಾಗದೆ ಇರುವರ್ ನಿನಗಾರೈ
ಸದ್ಗುಣಮಣಿಯೆ ವಿರತಿಯ ಖಣಿಯೆ
ಯತಿಕುಲದಿನಮಣಿ ಅಗಲಿದೆಯಾ

ನರವರ ಗುರುವರ ಸುರವರ ನೀನೈ
ಮಾರನ ಮರ್ದನ ಮಾಡಿದೆಯೈ
ನಿನ್ನಯ ನಗಲಿದ ಶೋಕವತಾಳದೆ
ಸಾಧಕ ವೃಂದವು ಬಳಲುವದೈ

ಯೋಗದ ಪೀಠವು ಜ್ಞಾನದರತುನವು
ತ್ಯಾಗದ ನಿಧಿಯದು ಮರೆಮಾಯ್ತೈ
ಹಾ-ಹಾ ನಿನ್ನಯ ತೆರದಲಿ ಜಗವಂ
ನೀತಿಯ ಹಾದಿಯ ಹಿಡಿಸುವರಾರ್

ಚಿಕ್ಕವರಾಗಿಹ ಯೋಗಸುನಿಲಯದ
ಸಾಧಕವೃಂದವು ನೆನೆವೆವು ದೇವಾ
ಬಾರೈ ಬಾರೈ ಅನುದಿನ ಪಾದವ
ಯೋಗವಕಲಿಸಲು ಬೇಗನೆ ಮರಳಿ

ಪಾಡುವೆ ಬೇಡುವೆ ಕರೆಯುವೆ ಕೂಗುವೆ
ನಿನ್ನಯ ನಾಮವ ಭಕುತಿಯಲಿ
ಎನ್ನಯ ಹೃದಯದಿ ವಾಸಿಪಚೋರರ
ಸಂಗವ ಬಿಡಿಸೈ **"ಶಿವಬಸವಾ"**

ಕಣ್ಮರೆಯಾದ "ಕವಿರತ್ನ"

ಕನ್ನಡ ತಾಯಿಯ ಸನ್ನುತ ಪುತ್ರನೆ
ಕನ್ನಡದೇಳ್ಗೆಯ ಗೈದಿಯೋ ನಿ
ಚನ್ನನೆ, ರನ್ನನೆ, ಪೊನ್ನನೆ, ನೀಂ
ಕನ್ನಡ ಕವಿಕುಲ ರತ್ನನೆ ನೀಂ

ಯೋಗಿಕುಮಾರನ ಚರಿತವಪೇಳುತ
ಸಗ್ಗದ ಬಾಗಿಲ ಪೊಂದಿದೆಯಾ
ಧನ್ಯನು ನೀನ್ಯೆ ಮಾನ್ಯನು ನೀನ್ಯೆ
ಯೋಗಿಕುಮಾರನು ಕರೆದನೆ? ನಿನ್ನಂ

ಪುಣ್ಯದ ಮೂರ್ತಿಯೆ ನಿನ್ನಯ ಕೀರ್ತಿಯ
ವಲ್ಲಿಯು ಜಗದೊಳು ಬೆಳೆಯಲಿ ಜವದಿ
ಕನ್ನಡ ಜನನಿಯ ಒಡಲೊಳು ಉದಯಿಸಿ
ಕನ್ನಡನುಡಿಯಂ ಮೆರಸಿದಿಯಾ

ಹಾ–ಹಾ ನಿನ್ನಯ ತೆರದಲಿ ಕವಿತೆಯ
ರಚಿಸುವ ಕವಿಗಳು ಇನ್ನಾರೈ
ನಿನ್ನಯ ಕಾವ್ಯದಿ ಇಂಪಿದೆ ಸೊಂಪಿದೆ
ಶಾಂತಿಯರಸತಾ ತುಂಬಿದೆಯೈ

ನಿನ್ನಯ ಕಾಂತಿಯು ನಿನ್ನಯ ಶಾಂತಿಯು
ನಿನ್ನಯ ಕೀರ್ತಿಯು ಪಸರಿಸಲಿ
ನಿನ್ನಯ ಕಾವ್ಯದ ರಸವನು ಸರ್ವರು
ಕುಡಿಯಲಿ ಸವಿಯಲಿ ಬಯಸುವೆನ್ಯೆ

ದ್ಯಾಂಪುರವಾಸನೆ ಕವಿವರ ಚನ್ನನೆ
ಕನ್ನಡ ಮೂರ್ತಿಯು ನೀನಯ್ಯಾ
ಜಸವಂ ಪಡೆಯುತ ವ್ಯಸನವಕಳೆಯುತ
ಈಶನ ಸ್ಮರಿಸುತ ಅಗಲಿದೆಯಾ

ನಿನ್ನೆಯ ಪುಣ್ಯವು ಅಗಣಿತವಿಹುದೈ
ಯತಿಕುಲವೃಂದವು ಹರಸುವದೈ
ಯೋಗಿಕುಮಾರನು ನಿನ್ನಯ ಆತ್ಮಕೆ
ಶಾಂತಿಯನೀಯಲಿ ಬೇಡುವೆನ್ಯೆ

ಹಿರಿಯುತನ

ಓ–ದೇವ ಓ–ದೇವ
ಹಿರಿಯುತನದಲಿ ಒಗೆದು
ಕೊಲ್ಲದಿರು ಕೊಲ್ಲದಿರು
ಬೇಡುವೆನು ಕೈಮುಗಿದು

ಹಿರಿಯುತನದಲಿ ಬಂದೆ
ನಿನ್ನ ನಾಂ ನೆನೆಯುದಾದೆ
ತಪ್ಪು ಬಟ್ಟೆಗೆ ಬಿದ್ದೆ
ಭಕುತಿಯಿಲ್ಲದೆ ಮಿಂದೆ

ಹಿರಿಯುತನದಲಿ ದೂಕಿ
ಮರವೆ ಮನೆಯೊಳುಹಾಕಿ
ಪಿರಿದು ಮಾಡುವಿಶೋಕ
ಅರಿದರೂ ನೀ ಮೂಕ

ಬಲುಭಾರ ಹೆಚ್ಚಾಯ್ತು
ಜನ, ಕಂಗೆ, ಕಿಚ್ಚಾಯ್ತು
ಮನದೊಳಗೆ ಮೆಚ್ಚಾಯ್ತು
ಹಿಗ್ಗು ತಲಿ ಕುಗ್ಗಾಯ್ತು

ಚಿಕ್ಕವನು ಇವನೆಂದು
ಹಿರಿಯುತನ ಬೇಡೆಂದು
ತನ್ನ ತಾನರಿಯೆಂದು
ಬುದ್ಧಿಯಿತ್ತು ಸಲಹುಬಂದು

ಕರುನಾಡುಗೀತೆ

ವಿಜಯವಾಗಲಿ ನಮ್ಮ ತಾಯಿ ಕನ್ನಡನಾಡು
ಸುಜನ ಸಂಕುಳವನ್ನು ಪೆತ್ತು ಮೆರದಿಹನಾಡು
ಭಜಕರಿಂದಲಿ ತಾನು ಭಜಿಸಿಗೊಂಡಿಹನಾಡು
ಕುಜನರಿಂಗನುನಯದಿ ನೀತಿ ಪೇಳಿದನಾಡು

ವೀರ ವೀರತಿಯಮಣಿಯು ಅಲ್ಲಮಪ್ರಭುದೇವ
ವೀರಶಿವಕುಲವನ್ನು ಮೆರಸಿದಾಬಸವಣ್ಣ
ವೀರಯೋಗಿ ಕುಮಾರನ ಪಡೆದು ಶೋಭಿಪನಾಡು
ಭೂರಿಸದ್ಗುಣಿಗಳನು ಪಡೆದುದೀಕರುನಾಡು

ಬೆಂದ ಜನಗಳಿಗೆಲ್ಲ ಮುಕ್ತಿನಂತಹ ವಚನ
ಅಂದದಿಂದಲಿ ಪೇಳ್ದ ಸತ್ಯಶರಣರಬೀಡು
ಚಂಪ್ರಶೇಖರನನ್ನು ಬೇಗನೊಲಿಸುವನಾಡು
ಕಂಪ **"ಮಹಂತನು"** ಬರೆದ ಭಕುತಿಯಿಂದೀಪಾಡು

ಬಂದಿತಿಂದು

ಬಂದಿತಿಂದು ಬಂದಿತಿಂದು
ಉಬ್ಬಿಕೊಬ್ಬಿ ವೇಗದಿಂದ
ತಬ್ಬಿಕೊಂಡು ಹೋಗಲನುವು ಮಾಡಲೆಳಸಿತು
ಮದವು–ಮುದವು ತುಂಬಿ ಆನೆ ಓಡಿಬಂದಿತು

ಆನೆಯೆನಗೆ ಸೊಂಡೆಯಿಂದ
ಹೊಡೆದು–ಬಡಿದು ಮುರಿಯಲೆತ್ನ
ಮಾಡಲಿಂದು ಬಂದು ಹೊಂಚು ಹಾಕುತಿರುವುದೈ
ಅದರ ಬಲೆಗೆ ಸಿಲುಕದಿರಲು ಏನು ಮಾಡಲೈ

ಕರಿಯ ಮದವ ಮುರಿಯಲೀಗ
ಭರದಿ ಅಂಕುಶೆನಗೆವೀಯು
ಗುರುವೆ, ನಿನ್ನ ಚರಣದಲ್ಲಿ ಬೇಡುತಿರುವೆನೈ
ಚಿತ್ತದಾನೆ ಮದವ ಸಹಿಸಲಾಗವಲ್ಲದೈ

ಹಾರುವೆಯೆಲ್ಲಿಗೆ ?

ಹಾರುವೆಯೆಲ್ಲಿಗೆ ಎಲೆಪಕ್ಕಿ
ಬೇಟೆಯಜನಗಳ ಕೈಯೊಳುಸಿಕ್ಕಿ?
ಸಿಕ್ಕರೆ ನಿಶ್ಚಯ ವಿಹುದೈ ಧಕ್ಕೆ
ಎಲ್ಲಿಗೆಹೇಳೈ ಮುದ್ದಿನಪಕ್ಷಿ

ನಿಶೆಯೊಳುಬರುವದು ಬೇಗನೆಗೂಗಿ
ಎಚ್ಚರಿಸುತ್ತಲಿ ಹಿಡಿವುದುಬಾಗಿ
ಮರುಗುತಹೇಳುವೆ ಯುಕ್ತಿಯ ಕೂಗಿ
ತರುವಿನಪೊದರೊಳು ಅಡಗಲುಸಾಗು

ಎನ್ನಯಜೀವದಗಾಡಿಗೆ ಸಾರಥಿ
ಎನ್ನಯಜೀವದಗಾಡಿಗೆ ಕೀರ್ತಿ
ತರುವವನೀನೈ ಹೇಳುವೆಪೂರ್ತಿ
ಕೇಳೆಲೆಹಕ್ಕಿಯೆ ಎನ್ನಯಸ್ಫೂರ್ತಿ

ಮಲಗು ಸುಮ್ಮನೆ

ಗರಿಯಕೆದರಿ ನಲಿದುನೀನು
ಗುರಿಯಮರೆತು ಹಿರಿಮೆಯಿಂದ
ಹಾರಿಹೋಗಿ ಮರಗುಪೇಕೆ? ಮಲಗಬಾರದೆ?
ಮುದ್ದುಗಿಣಿಯೆ ಪಂಜರೆನ್ನ ಒಲ್ಲದಾಯಿತೆ?

ನಿನ್ನ ಕಾಯ್ವ ಬಯಕೆಯಿಂದ
ಚನ್ನಗಿರೀಶನನ್ನು ನೆನೆವೆ
ಹಣ್ಣು ಕಾಯಿಗಳನು ತರಿಸಿ ಕೊಡುತಲಿರುವೆನು
ಕಡಲೆಬೇಳೆ ನೆನೆಸಿನಿನಗೆ ಹಾಕುತಿರುವೆನು

ಎನ್ನ ಬಿಟ್ಟು ಹಾರಿಹೋಗಿ
ಬನ್ನದಲ್ಲಿ ತೊಳಲಿಬಳಲಿ
ಕೊರಳಲಿರುವ ರತ್ನ ಮಣಿಯು ನೀಡಬೇಡಲ್ಲೈ
ಬೆಲೆಯರತ್ನ ವದುವನೋಡು ಹೇಳುತಿರುವೆನ್ನೈ

ಸಲಹುಬಾರದೆ ?

ಎನ್ನಮನದ ಡೊಂಕುತಿದ್ದಿ
ನಿನ್ನಚರಣ ಕಮಲದಲ್ಲಿ
ಭ್ರಮರನಾಗುವಂತೆ ಮಾಡು ಹೀನಮನವನು
ಜ್ಞಾನಖಡ್ಗದಿಂದ ಎನ್ನ ಕಡಿಯಬೇಕಲ್ಲೆ
ಕಾಡುತಿಹುದು ಮುನಿಸಿನಿಂದ
ಬೇಡುತಿರುವೆ ಬಡವನಾನು
ಈವುದಯ್ಯ ಬುದ್ಧಿಬಲಗಳನ್ನು ಸತತವು
ಕರುಣವಿರುವದಿಲ್ಲವೇನು? ಕರುಣಸಾಗರ

ಸೊಣಗನಂತೆ ಅಲೆವಮನವ
ಕಾಟವನಿತು ಪೇಳಲಾನು
ನಿನ್ನ ಕೃಪೆಯನಿತ್ತುದೇವ ಸಲಹುಬೇಕಲ್ಲೆ
ಪುಂಡತನದಿ ಬಂಡುಮಾಡಿ ಕಾಟಗೊಳಿಪುದು
ತಂದೆನೀನು ತಾಯಿನೀನು
ಬಂಧುನೀನು ಬಳಗನೀನು
ನೀನುನಿನ್ನ ಬಳಿಯುಭರದಿ ಕರೆಯದಿರುವಿಯಾ
ಶುದ್ಧಬುದ್ಧಿಯಿತ್ತು ಎನ್ನ ಸಲಹದಿರುವಿಯಾ

ತಿಮಿರ ಮನೆಯಲಿರಲಿ ಎಂದು
ತೊಳಲಿ-ಬಳಲಿ ಭವದಿಮಿಂದು
ಸತ್ತುಹೋಗಿ ಮೃತ್ಯುವೊಗಕೆ ಪೋಗಲೆಂದಿಯಾ
ನಿನ್ನ ಚರಣದಲ್ಲಿ ನಾನು ಬೇಡವಾಯಿತೇ?
ಎನ್ನನೀನು ರವದಿಕರೆದು
ಜ್ಞಾನ-ಶಕ್ತಿ-ಭಕ್ತಿಯಿತ್ತು
ನಿನ್ನ ಚಿತ್ತವೊಪ್ಪುವಂತೆ ಇರಿಸುಗುರುವರ
ಎರಗಿಮರಗಿ ಕೊರಗಿ ಕರೆವೆ ನೋಡಲಾರೆಯಾ

ವಿತ್ತದೊಳಗೆ ಮನವನಿಟ್ಟೆ
ಉತ್ತಮಾತ್ಮ ಜನರಸಂಗ

ಮತ್ತನಾದ ಚಿಟ್ಟುಗುರುವೆ ಮತಿಯುಗೆಡಿಸುತ
ಚಿತ್ತದೊಳಗೆ ತಿಳಿದುದಯದಿ ಪಾಲಿಸೊಡೆಯನೆ
ತಾಯನಗಲಿ ಕರವುಬಳಲಿ
ತೊಳಲಿನೊಂದು ಬೆಂದುಮಡಿಯು
ವಾಗಪಸುವು ಓಡಿಬಂದು ಮೊಲೆಯನುಣಿಸುವ
ತೆರದಿಬಂದು ಮತಿಯನಿತ್ತು ಸಲಹುಬಾರದೆ?

ಹೀಗೆ ಸಾಗಲಿ

ಹೀಗೆ ಸಾಗು–ಸಾಗುರಥವೆ
ಕಲ್ಲು–ಮುಳ್ಳು ತುಳಿಯದಂತೆ
ರಥವ ನಡಿಸುವಂಥ ಸಾರ್ಥಿ
ಹೀಗೆ ನಡಿಸು–ನಡಿಸು ಹೀಗೆ

ತಗ್ಗಿನಲ್ಲಿ ಬೀಳದಂತೆ
ಅಶ್ವನಿಕರ ವೀಗಬೇಗ
ಓಡಿಯೋಡಿ ಹೀಗೆ ಓಡಿ
ಅತ್ತಲಿತ್ತ ನೋಡದಂತೆ
ಹೀಗೆ ಎನ್ನ ಜೀವರಥದ ಗತಿಯು ಸಾಗಲಿ

ಆಶೀರ್ವದಿಸು

ಮೌನದಲ್ಲಿಕುಳಿತ ಮೂರ್ತಿ
ಧ್ಯಾನದಲ್ಲಿ ಬೆರೆದಜ್ಯೋತಿ
ಹಾನಗಲ್ಲ ಪುರದಕೀರ್ತಿ ತಂದತಾತನೆ
ಮುಕ್ತಕಂಠದಿಂದ ಕರೆವೆ ಕರುಣೆಯಿಲ್ಲವೆ

ತಾತ ಮಗನರಕ್ಷಿಪಂತೆ
ತಾತನಾದ ನೀನು ಎನ್ನ
ಆತ್ಮಪಕ್ಷಿ ದಿಕ್ಕುಗೆಡತೆ ಹಾರಿಸೀಗಳೆ
ಇದೇ ಎನ್ನ ಕೊನೆಯಬಯಕೆ ಆಶೀರ್ವದಿಸಲ್ಲೈ

ಪ್ರಾರ್ಥನೆ

(೧೮ನೇ ಪುಣ್ಯತಿಥಿಯ ಸವಿನೆನಪಿಗಾಗಿ ರಚಿಸಿದ ಪದ್ಯವಿದು)

ಶ್ರೀಗುರು ಸಾರ್ವಭೌಮ ಶಿವಯೋಗಿವರೇಣ್ಯನೆ ಓವಿರಾಗಿಯೆ
ತ್ಯಾಗವ ತಾಸುಗೈದ ಮಠಮಾನ್ಯಗಳಂ ಪೋಣ್ ತ್ಯಾಗವೀರನೆ
ಭೋಗವಿಲಾಸಮಂ ತ್ಯಜಿಸಿ ಮಾನ್ಯತೆ ಪೆತ್ತಿ ಹರಾಗನಾಶನೆ
ಬಾಗುವೆ ಪಾದಪಂಕಜಕೆ ಭಕ್ತಿಯೊಳೀಗಳ್ **ಶ್ರೀಕುಮಾರನೆ**

ಶರಣರ ಮಾರ್ಗದಲ್ಲಿ ನಡೆದೀಶನ ತಾಣವಪೊಂದಿದಾತನೆ
ಗುರುವರನಾಗಿ ಬಾಳಿ ಶಿವಯೋಗದವೃಕ್ಷವ ಬೆಳಸಿದಾತನೆ
ಕೊರಗುವ ವೀರಶೈವಮತ ವೃದ್ಧಿಯಮಾಡಿದ ವೀರಯೋಗಿಯೇ
ಕರೆವೆವು ನಿನ್ನನಾವು ಜನಕೀಗಳ್ ಸದ್ಗುಣ ಬೀಜ ಬಿತ್ತಲು

ಶ್ರೀ ಶಿವಯೋಗಮಂದಿರದ ಸಾಧಕವೃಂದವು ನಿನ್ನನಾಮವಂ
ಬೇಸರವಿಲ್ಲದಾಡುತಲಿ ಪಾಡುತನೆನೆವರ್ ಕೇಳಬಾರದೆ?
ಈಶನತತ್ವಮಂ ತಿಳಿಸಿ ಪಾಲನೆಮಾಡುವವರಾರು? ದೇವನೆ
ಶ್ರೀಸುಕುಮಾರ; ಯೋಗಿವರ ಬೇಡುವೆವೀಗಳ್ ಬಾರದಿರುವಿರಾ?

ಭಯ

ದಾರಿತಪ್ಪಿ ಕಾಡುದಾರಿ
ಹಿಡಿದು ತಗ್ಗಿನಲ್ಲಿ ನಾನು
ಬೀಳ್ವ ಭಯವು ಎದೆಯ ಗೂಡಿನಲ್ಲಿ ಸೇರಿದೆ
ಅನಿತರೊಳಗೆ ಓಡಿಬಂದು ಕರವ ಪಿಡಿಯಲ್ಲೈ

ಜನುಮವಿತ್ತ **ಶ್ರೀಕುಮಾರ**
ನಿನ್ನನಾಮ ಭಜಿಸುತಿರುವೆ
ಎನ್ನಕಾವ ಭಾರನಿನ್ನ ಮೇಲೆ ಇರುವದೈ
ಎರಗಿ–ಮರಗಿ–ಕೊರಗಿ–ಕರೆವೆ ಭಯವ ತೊಲಗಿಸೈ

ಮೊಗ್ಗೆಯ ಬೇಡಿಕೆ

ಮೊಗ್ಗೆಯಮಾಲೆಯಲಿರುವೀಮಗ್ಗಿಗ-
ಳಾದರದಿಂದಲಿ ಮೂಸಿಸಿರಿ
ಬಾಡಿಪೆಯನ್ನುತ ನೋಡದೆ ಪಿಡಿಯದೆ
ವೋಗದೆ ಇರದಿರಿ ಬೇಡುವೆನೈ

ಅರಳಲು ಜಲವನು ಚಿಮ್ಮಿಸಿ ಬೇಗನೆ
ಕೊರಳೊಳು ಹಾಕಲು ಬಯಕಿದೆಯೈ
ಯೋಗಸುನಿಲಯದ ನಚ್ಚಿನಗೆಳೆಯರೆ
ಕಿರಿಯರೆ ಹಿರಿಯರೆ ನೀವುಗಳು

ಜಾಣರೆ ಎನ್ನಯ ಮಮತೆಯ ಹಿರಿಯರೆ
ಕಾಶಿನಿವಾಸಿಪ ನೇಹಿಗರೆ
ನಿಮಗೂ ಹಾಕಲು ಎದೆಯೊಳು ಹುದುಗಿದೆ
ತೆಗಳದೆ ಮೂಸಿಸಿ ನೋಡುವಿರಾ

—ಸಮಾಪ್ತಂ—

ಹಾವೇರಿ ಶ್ರೀ ಶಿವಬಸವೇಶ್ವರ ಅಷ್ಟೋತ್ತರ ಶತನಾಮಾವಳಿ

ಸಾಹಿತ್ಯ ಪ್ರಕಾರ	:	ನಾಮಾವಳಿ
ಮೊದಲ ಮುದ್ರಣ	;	೧೯೪೮
		೮ ಸಲ ಮುದ್ರಣ ಕಂಡಿದೆ
ರಚನೆಯ ವಯಸ್ಸು	:	೧೭
ರಚನಾ ಸ್ಥಳ	:	ಶಿವಯೋಗಮಂದಿರ

ಶ್ರೀ ಶಿವಬಸವೇಶ್ವರ
ಅಷ್ಟೋತ್ತರ-ಶತನಾಮಾವಳಿ

ರಚಿಸಿದವರು:

ಶ್ರೀ ಮಹಾಂತದೇವರು ಇಲಕಲ್ಲ

(ಸದ್ಯದ ಮೂರುಸಾವಿರಮಠದ ಶ್ರೀ ಜಗದ್ಗುರುಗಳು)

೧೯೭೬

[ಎಂಟನೆ ಆವೃತ್ತಿ]

ಎಂಟನೆಯ ಮುದ್ರಣ

ಪ್ರತಿಗಳು: ೫೦೦

ಪ್ರಕಾಶಕರು:
ಶ್ರೀ ಜಗದ್ಗುರು ಗಂಗಾಧರ ಧರ್ಮಪ್ರಚಾರಕ ಮಂಡಳ,
ಮೂರುಸಾವಿರಮಠ, ಹುಬ್ಬಳ್ಳಿ-580 020

ಮುದ್ರಕರು:
ಪರಂಜ್ಯೋತಿ ಪಾವರ ಪ್ರಿಂಟಿಂಗ್ ಪ್ರೆಸ್, ಹುಬ್ಬಳ್ಳಿ.

ಪ್ರಕಾಶಕರ ನುಡಿ

ಭಾರತವು ಮಹಾಪುರುಷರ ತಪಸ್ಸಿನ ಆಗರವಾಗಿರುವ ನಿಮಿತ್ತ ಕನ್ನಡ ನಾಡಿನಲ್ಲಿಯೂ ಅನೇಕ ಮಹಾತ್ಮರು ಆಗಿ ಹೋಗಿದ್ದಾರೆ. ಅಂತಹ ಮಹಾನುಭಾವರ ಪಂಕ್ತಿಯಲ್ಲಿ ಹಾವೇರಿ ಹುಕ್ಕೇರಿಮಠದ ಮಠಾಧಿಪತಿಗಳಾಗಿ ತಮ್ಮ ಜೀವನ ಪರ್ಯಂತ ಶ್ರೀಮದ್ ವೀರಶೈವ ಶಿವಯೋಗಮಂದಿರದ ಹಾನಗಲ್ ಕುಮಾರ ಸ್ವಾಮಿಗಳಿಗೆ ಅಚ್ಚು-ಮೆಚ್ಚಿನವರಾಗಿ ಎಲ್ಲ ಉದ್ದೇಶಗಳನ್ನು ನೆರವೇರಿಸುತ್ತ.ಶ್ರೀಶಕೆ ೧೮೬೮ ನೇ ಪುಷ್ಯ ಶುದ್ಧ ಏಕಾದಶೀ ತಿಥಿಯು ದಿವಸ ಲಿಂಗೈಕ್ಯರಾಗಿರುವ ಶ್ರೀಮನ್ನಿರಂಜನ ಪ್ರಣವ ಸ್ವರೂಪಿಗಳಾದ ಶಿವಬಸವ ಮಹಾಸ್ವಾಮಿಗಳೂ ಒಬ್ಬರು.

ಶ್ರೀಮ.ನಿ.ಪ್ರ. ಶಿವಬಸವ ಮಹಾಸ್ವಾಮಿಗಳ ಭಕ್ತ-ಕೋಟಿಯು ಅಭಿವೃದ್ಧಿ ಹೊಂದಿ ಇವರ "ಅಷ್ಟೋತ್ತರ ಶತನಾಮಾವಳಿ"ಯನ್ನು ಪಾರಾಯಣ ಮಾಡುವವರ ಸಂಖ್ಯೆಯು ದಿನೇ-ದಿನೇ ಬೆಳೆಯುತ್ತಿರುವುದರ ಪರಿಣಾಮವಾಗಿ ಇದೀಗ ಎಂಟನೆಯ ಆವೃತ್ತಿಯನ್ನು ಹೊರತರಲು ಸಂತೋಷಿಸುತ್ತೇವೆ.

ಶ್ರೀ ಜ. ಗಂ. ಧರ್ಮಪ್ರಚಾರಕ ಮಂಡಳ
ಮೂರುಸಾವಿರಮಠ, ಹುಬ್ಬಳ್ಳಿ-580020

ಪೀಠಿಕೆ

(ಎಂಟನೇ ಆವೃತ್ತಿ)

"ಶಿವನೆ ಬಸವ" ಎಂದು ನೂರೆಂಟು ಸಲ ನಾಮೋಚ್ಚಾರಣೆ ಮಾಡುವುದರ ಜೊತೆಗೆ, 'ಶ್ರೀಶಿವಯೋಗಿ-ಲಲಾಮ'ನಾದ ಲಿಂಗೈಕ್ಯ ಹಾವೇರಿ ಶಿವಬಸವ ಮಹಾಸ್ವಾಮಿಗಳ 'ಅಷ್ಟೋತ್ತರ-ಶತ-ನಾಮಂಗಳನು ಬೇಸರವಿಲ್ಲದೆ ಪಠಿಸುವವರಿಗೆ ಈಶ್ವರನು ಸುಖ-ಸಿರಿಯನಿತ್ತು ಸತತವೂ ಪೊರೆಯುವನು' ಎಂದು ಸಾರೀ ಪೂಜ್ಯ ಮಹಾಸ್ವಾಮಿಗಳ ಸಮಗ್ರ ಜೀವನ ಚರಿತೆಯನ್ನು 'ಉತ್ಸಾಹ ರಗಳೆ'ಯ ಛಂದದಲ್ಲಿ ರಚಿಸಿರುವ ಶ್ರೀ ಇಲಕಲ್ಲ ಮಹಾಂತದೇವರು, (೧೯೫೮ ನೇ ಇಸ್ವಿಯಲ್ಲಿ ಪಟ್ಟಾಭಿಷಿಕ್ತರಾಗಿರುವ, ಸದ್ಯದ ಹುಬ್ಬಳ್ಳೀ ಮೂರುಸಾವಿರಮಠದ, ಜಗದ್ಗುರುಗಳು) ತಮ್ಮ ಕವಿತ್ವದಿಂದಲೂ ನಾಡಿನ ಭಕ್ತ-ಪ್ರೇಮಾऽऽದರಗಳಿಗೆ ಪಾತ್ರರು.

ನಾಡಿನ ಭಕ್ತ-ಪ್ರೇಮ-ಆದರಗಳಿಗೆ ಪಾತ್ರರಾದ ಕವಿ-ಹೃದಯದ ಇಲಕಲ್ಲ ಮಹಾಂತದೇವರು ಸ್ತುತಿಸಿದ ಹಾವೇರಿ ಶಿವಬಸವೇಶ್ವರನು ಜ್ಞಾನ-ನೇತ್ರನು, ಪೂಜ್ಯ-ಗಾತ್ರನು, ವಿನುತ-ಪಾತ್ರನು; ಆ ಮಹಿಮನು ಧ್ಯಾನ-ಮೂರ್ತಿಯೂ, ಧವಲ-ಕೀರ್ತಿ ಉಜ್ವಲನೂ, ಪರಂಜ್ಯೋತಿ-ಸ್ವರೂಪನೂ ಆಗಿದ್ದಾನೆ.

ಪರಂಜ್ಯೋತಿ ಸ್ವರೂಪನಾಗಿದ್ದು, ಗುರುವರೇಣ್ಯನೂ ಚರವರೇಣ್ಯನೂ ಸುರವರೇಣ್ಯಪೂಜ್ಯನೂ ಆಗಿ ತನ್ನನ್ನು ನಂಬಿದ ಸದ್-ಭಕ್ತರ ಮರಣ-ಜನನ-ನಾಶಕನೂ ಈಶ್ವರನೂ (ಪುಟ: ೫) ಆದ ಶಿವಬಸವೇಶ್ವರನು ಸಪ್ತಶರಧಿಯೆಂಬ ಹಳ್ಳಿಯಲ್ಲಿ ಜನಿಸಿ, ಸಪ್ತ ವ್ಯಸನಗಳನು ಅಳಿದು, (೬) ಅತುಲ ಶೀಲ ತತ್ತ್ವವನ್ನು ಅರಿದುಕೊಂಡು (೭) ಶಿವನ ಯೋಗ ಮಾಡಿ (೧೨) ಶಿವನ ಯೋಗದಿಂದ ದಿವ್ಯ ತೇಜನಾಗಿ (೧೪) ಗುರು ಕುಮಾರನನ್ನು ಪೊಂದಿ, (೧೬) ಗುರು ಮಹತ್ತ್ವವರಿದು (೧೬) ಹಾವೇರಿಯ ಮಠಕ್ಕೆ ಸ್ವಾಮಿಯಾಗಿ (೧೮) ಭಕ್ತ ಜನರ ಮನದ ಮಲವ ಕಳೆದು (೧೯) ಬೇಡಿದವರಿಗೆ ಫಲವನಿತ್ತು (೨೦) ಶಿವಯೋಗ ನಿಲಯದಲ್ಲಿ ಕಾಲಕಳೆದು (೨೨) ಶಿವನ ಮಹಿಮೆ ಸಾಧಕರಿಗೆ ಅರುಹಿ (೨೩) ಪರಮ ಶಾಂತ ತಪವನೆಸಗಿ (೨೬) ಜ್ಞಾನದಾಹಿಗಳನ್ನು ನಿರುತ [illegible] (೩೦) ಭಾನು ತೇಜದಂತೆ ಬೆಳಗಿ, ಜ್ಯೋತಿಯಾಗಿ (೩೦) ಮಹಿಮೆ ತೋರಿ (೩೨) ಕೊನೆಗೆ ಶಿವ ಪೂಜೆಯಲ್ಲಿ ಕುಳಿತುಕೊಂಡು (೩೪) ತ್ರಿನಯನನಲ್ಲಿ ಬೆರೆದ (೩೫) ಶಿವಯೋಗಿಯೇ ಹಾವೇರಿ ಶಿವಬಸವೇಶ್ವರನು

ಶಿವಬಸವೇಶ್ವರನು ಜ್ಞಾನ-ಭಾನುವೂ, ಸ್ವಾಮಿಯೂ, ದೀನ-ಬಂಧುವೂ ಪ್ರೇಮ-ಸಿಂಧುವೂ (೪೪) ಹಾಗೂ ತಾಯಿ-ತಂದೆ-ಬಂಧು-ಬಳಗ ಏನೆಲ್ಲವೂ ಆಗಿರುವ ಆತನನ್ನು ಕುರಿತು ಆತನ ನಾಮಾವಳಿಯನ್ನು ಪಠಿಸುವಾತನ ಮುಖ್ಯ ಪ್ರಾರ್ಥನೆಯಂತೆ, ಆ ಶಿವಬಸವೇಶ್ವರನು ಸುತ್ತುತಿರುವ ಭವದ ಜಾಲ ಕತ್ತರಿಸುತ್ತಾನೆ; (೫೦) ಎಡರು ಕಂಟಕಗಳು ತೊಡರಿ ಕಾಡುವಾಗ, ಬಿಡದೆ ಬಂದು ಮತಿಗೆ ಬಲವನಿತ್ತು ಸಲಹುತ್ತಾನೆ. (೫೧)

ಆದ್ದರಿಂದ "ನಡೆವ, ನುಡಿವ, ಕೊಡುವ, ತೊಡುವ ಸಮಯದಲ್ಲಿ" (೫೩) ಅಂದರೆ ಯಾವಾಗಲೂ ಶಿಶು ಮಹಾಂತ-ವಿನುತನಾದಂಥ "ಶಿವನೆ ಬಸವ" ಎಂದು ಹಾವೇರಿ ಶಿವಬಸವೇಶ್ವರನ ನೂರೆಂಟು ನಾಮಗಳನ್ನು ಪಾರಾಯಣ ಮಾಡುತ್ತಿರಬೇಕು.

ಡಾ|| ಗುರುಸಿದ್ಧದೇವ ಶಿವಾಚಾರ್ಯರು
(ಎಂ. ಎ.. ಪಿ-ಎಚ್.ಡಿ.)
ರಾಜಗುರು ಹಿರೇಮಠ, ಕೆಳದಿ

ಮುನ್ನುಡಿ

(ಪ್ರಥಮ ಆವೃತ್ತಿ)

ಸರ್ವ ವಿದ್ಯೆಗಳಿಗೆ ಆಗರವಾದ ಭರತಖಂಡವು ಜಗತ್ತಿಗೆ ಆತ್ಮ-ವಿದ್ಯೆಯ ಕಾಣಿಕೆಯನ್ನು ಕೊಟ್ಟಿರುವದೆಂದು ನಿಸ್ಸಂದೇಹವಾಗಿ ಹೇಳಲು ಯಾವ ಅಭ್ಯಂತರವಿಲ್ಲ. ಭರತಖಂಡವು ಜೀವಜ್ಯೋತಿಗಳ ತವರ್ಮನೆಯಾಗಿದೆ. ಅದರಲ್ಲಿ ಕರ್ನಾಟಕವೊಳಗೆ ಬೆಳಗಿದಷ್ಟು ಜೀವಜ್ಯೋತಿಗಳು ಸಿಗುವದು ಅಪರೂಪ. ಇಲ್ಲಿ ಮಹಾನುಭಾವಿಗಳು ಯಾವಾಗಲೂ ಉದಯಿಸಿ, ಆತ್ಮವಿದ್ಯೆಯ ಪ್ರಭಾವದಿಂದ ಜನಜೀವನದ ಅಂತರಂಗದಲ್ಲಡಗಿದ ಕಾರ್ಗತ್ತಲೆಯನ್ನು ಕಳೆಯುತ್ತ ಬಂದಿರುವ ವಿಷಯವು ಪ್ರಭುದೇವರು, ಬಸವಣ್ಣ ಮೊದಲಾದ ಮಹಾ ವಿಭೂತಿಗಳಿಂದ ಸ್ಪಷ್ಟವಾಗಿ ತಿಳಿಯುವದು. ಹೀಗೆಯೇ ಅವ್ಯಾಹತವಾಗಿ ನಡೆಯುವದು ಜಗತ್ತಿನ ನೈಸರ್ಗಿಕ ಸ್ವಭಾವವಾಗಿದೆ. ಈ ಅವತಾರಿಗಳ ಪಾರಂಪರ್ಯವಿಲ್ಲದಿದ್ದರೆ ಜಗತ್ತು ಬಾಳಲು ಶಕ್ಯವೇ ಇಲ್ಲ. ಅಂತೆಯೇ ಲಿಂಗೈಕ್ಯರಾದ ಹಾವೇರಿ ಶ್ರೀ ಶಿವಬಸವ ಮಹಾಸ್ವಾಮಿಗಳು ವೈರಾಗ್ಯಶೀಲರೂ, ಮಹಾತಪಸ್ವಿಗಳೂ ಆಗಿದ್ದರಲ್ಲದೆ, ಅದರಂತೆ ಆಚಾರನಿಷ್ಠರೂ, ಶಾಂತಮೂರ್ತಿಗಳೂ, ಸರಳ ಸ್ವಭಾವದವರಿದ್ದರೆಂಬ ವಿಷಯವು ಅವರ ಜೀವನ ಚರಿತ್ರೆಯಿಂದ ತಿಳಿದುಬರುತ್ತದೆ. ಈ ತಪೋಧನರು, ಆಂತರಿಕ ಪ್ರಗತಿಯ ಮುಂದೆ ಬಾಹ್ಯಸಿದ್ಧಿಯು ಕಃಪದಾರ್ಥವೆಂದು ತಿಳಿದು "ಲಿಂಗದೊಳಿಟ್ಟ ದೃಷ್ಟಿ ನಿಜ ದೃಷ್ಟಿಯೊಳಿರ್ದ ಮನಂ ಮನಸ್ಸಿನೊಳ್| ಹಿಂಗದೆ ನಿಂದ ಭಾವಮದರೊಳ್ನೆಲೆಗೊಂಡ ಶಿವಾತ್ಮಲಿಂಗವಾ|| ಲಿಂಗದೊಳಿರ್ದ ನಿತ್ಯ ಸುಖಿಯಾಗಿ ವಿರಾಜಿಸುವಂಗೆ ಬಾಹ್ಯ ಕ-| ರ್ಮಂಗಳವೇತಕಯ್ಯ ಪರಮ ಪ್ರಭುವೇ ಮಹದೈಪುರೀಶ್ವರಾ"|| ಎಂಬಂತೆ ಯಾವಾಗಲೂ ಲಿಂಗಪೂಜೆಯಲ್ಲಿಯೇ ನಿರತರಾಗಿ, ಲಿಂಗಾಂಗ ಸಾಮರಸ್ಯ ಜ್ಞಾನದಿಂದ ಆತ್ಮಬಲ ಪಡೆದವರು. ಅರಣ್ಯ ಕುಸುಮವು ಅರಳಿ ಅಲ್ಲಿಯೇ ಬಿದ್ದು ಹೋಗುವಂತೆ, ಕೇವಲ ಸಂಕುಚಿತ ಭಾವದಿಂದ ತಮ್ಮ ಸುಖದ ಕಡೆಗೆ ಲಕ್ಷ್ಯಗೊಡದೆ ಜನಜೀವನದಲ್ಲಿ ಬೆರೆತು, ಕೃಪಾದೃಷ್ಟಿಯಿಂದ ಮಾನವರನ್ನು ಉದ್ಧಾರಮಾಡಿದ ಪತಿತ-ಪಾವನಮೂರ್ತಿಗಳು. ಇವರ ನಾಮದಲ್ಲಿ-ರುವ ವೈಶಿಷ್ಟ್ಯವೇನೆಂದರೆ: ಶಿವನಂತೆಯೇ ಶಾಪಾನುಗ್ರಹ ಸಾಮರ್ಥ್ಯವುಳ್ಳವರಾದ್ದರಿಂದಲೂ, ಶಿವಬಸವ ನಾಮವು ಅವರಿಗೆ ಅತ್ಯಂತ ಯಥಾರ್ಥವಾಗಿದೆ ಎಂದು ಹೇಳಬಹುದು.

ಈ ಪ್ರಾತಃಸ್ಮರಣೀಯರಾದ ಮಹಿಮರ ಪವಿತ್ರವಾದ ನಾಮದಿಂದ ಅಂತರಂಗವು ಶುದ್ಧಿಯಾಗಲೆಂದು ತಿಳಿದು, ಇಳಕಲ್ಲ ಶ್ರೀ ಮಹಾಂತ ದೇವರು,

(ಹುಬ್ಬಳ್ಳಿ ಮೂರುಸಾವಿರ ಮಠದ ಇಂದಿನ ಶ್ರೀ ಜಗದ್ಗುರುಗಳು) ಸರಳ ಭಾಷೆಯಲ್ಲಿ ಸುಂದರವಾಗುವಂತೆ ಈ ಕುಸುಮ ಮಾಲೆಯನ್ನು ಪೋಣಿಸಿರುವರು.

ಈ ನಾಮಾವಳಿಯನ್ನು ಭಕ್ತಿಭಾವದಿಂದ ಪಠಿಸಿ, ಸರ್ವರೂ ತಮ್ಮ ಅಂತರಾತ್ಮನನ್ನು ಪವಿತ್ರಮಾಡಿಕೊಂಡರೆ ಮಾತ್ರ ಈ ನಾಮಾವಳಿಯನ್ನು ಭಕ್ತಿಯಿಂದ ರಚಿಸಿದವರ ಈ ಕೃತಿಗೆ ಸಾಫಲ್ಯವುಂಟೆಂದು ನಾವು ಭಾವಿಸುತ್ತೇವೆ.

ತಾ. ೩೦-೧೨-೪೮ ಶ್ರೀ ಮ. ನಿ. ಪ್ರ.

ಮುಕ್ಕಾಂ: ಶಿವಯೋಗಮಂದಿರ **ಶ್ರೀ ಸದಾಶಿವಸ್ವಾಮಿಗಳು**

ವಿರಕ್ತಮಠ, ಹಾನಗಲ್ಲ

ಪ್ರಸ್ತಾವನೆ

ಶಿವಸಮುದ್ರದಲ್ಲಿ ಉತ್ತಮ ಮುತ್ತುಗಳ ಉಗಮವು ಪ್ರಸಿದ್ಧವಷ್ಟೇ. ಸಪ್ತಸಾಗರವೆಂಬ ಗ್ರಾಮದಲ್ಲಿ 'ಶಿವಬಸವ' ಎಂಬ ಮುತ್ತು ಜನಿಸಿತು; ಬೆಳೆದದ್ದು ಅಥಣಿ ಕೆಟ್ಟರ ಮಠದಲ್ಲಿ. ಶ್ರೀಮ ನಿ. ಪ್ರ. ಶ್ರೀ ಮರುಳಸಿದ್ಧ ಸ್ವಾಮಿಗಳ ಸನ್ನಿಧಿಯಲ್ಲಿ. ಶ್ರೀ ಬಿದರಿ ಕುಮಾರ ಸ್ವಾಮಿಗಳು ಆ ಮುತ್ತನ್ನು ಸಮಪತ್ತಿಗೆ ಕರೆದೊಯ್ದರು. ಆ ಮುತ್ತಿನ ಬೆಲೆಯನ್ನರಿತ ಯತಿವರೇಣ್ಯ: ಶ್ರೀ ಹಾನಗಲ್ಲ ಕುಮಾರ ಸ್ವಾಮಿಗಳು ಹಾವೇರಿ ಹುಕ್ಕೇರಿ ಮಠಕ್ಕೆ ಅಧಿಕಾರಿಗಳನ್ನಾಗಿ ಮಾಡಿದರು. ಮುತ್ತು ಹಳೆಯದಾದಷ್ಟು ಅದರಲ್ಲಿ ಕಾಂತಿ-ತೇಜಸ್ಸುಗಳು ಹೆಚ್ಚುವವೆಂಬಂತೆ, ದಿನೇ-ದಿನೇ ತಮ್ಮ ಜೀವನದಲ್ಲಿ ಹೆಚ್ಚಿನ ಸೌಂದರ್ಯವನ್ನು ತಂದುಕೊಂಡು ಮಹಾ ತಪಸ್ವಿಗಳಾದರು; ನಿಜವಾದ ವಿರಕ್ತರಾದರು. ಅವರ ತಪಸ್ಸಿನ ಬಲದಿಂದ ಕೊಪ್ಪದಲ್ಲಿ ಶಾಖಾ ಮಂದಿರವು ತಲೆಯೆತ್ತಿತ್ತು; ಅವರು ತಪಸ್ಸಿಗಾಗಿ ಕುಳಿತ ಕುಟೀರದ ಕೊರಡು ಕೊನರಿದ್ದು ಜನರು ಪ್ರತ್ಯಕ್ಷವಾಗಿ ನೋಡಿದ್ದಾರೆ. ಜಕ್ಕಲಿಯಲ್ಲಿ ಲಿಂಗಾಭಿಷೇಕಕ್ಕಾಗಿ ಬರಡನ್ನು ಹಯನಾಗಿರಿಸಿದ್ದು ಸರ್ವಶ್ರುತ-ದೃಷ್ಟವಷ್ಟೇ. "ಅಧ್ಯಾತ್ಮ ವಿದ್ಯಾವಿದ್ಯಾನಾಂ" ಎಂಬ ಗೀತೋಕ್ತಿಯಂತೆ ಅಧ್ಯಾತ್ಮದಲ್ಲಿ ನಿರತರು, ಸಾಮಾಜಿಕ ಕಾರ್ಯರಂಗಗಳೆಲ್ಲ ಆಧ್ಯಾತ್ಮಿಕ ಅಂಗಗಳೆಂದು ಅವರು ಭಾವಿಸುತ್ತಿದ್ದರು. ಎಂಥ ಮಹತ್ಕಾರ್ಯಗಳಿದ್ದರೂ ತಮ್ಮ ಶಿವಪೂಜೆಯಲ್ಲಿ ಕೊರತೆ ಮಾಡುವ ಹಂಬಲ ಅವರಲ್ಲಿರಲಿಲ್ಲ. ಅವರಿಗೆ ತಮ್ಮ ಶಿವಪೂಜೆ ಮುಗಿದ ಮೇಲೆ, ತಾನಾಗಿಯೇ ಸಿದ್ಧವಿದ್ದ ವಾಹನದಿಂದ ಪ್ರಯಾಣ ಬೆಳೆಸುವ ಹಂಬಲವಿತ್ತು. ಆದರೆ ಗಾಡಿ-ಸಮಯಕ್ಕಾಗಿ ತಮ್ಮ ಸಮಯದ ಶಿವಪೂಜೆಯನ್ನು ತಪ್ಪಿಸುತ್ತಿರಲಿಲ್ಲ. ಈ ಪೂಜಾ ನಿಷ್ಠೆಗಾಗಿ, ಸಮಾಜ ಕಾರ್ಯಧುರಂಧರರಾದ ಲಿಂಗೈಕ್ಯ ಶ್ರೀ ಹಾನಗಲ್ಲ ಮಹಾಸ್ವಾಮಿಗಳವರು ಅವರನ್ನು ಅಗಲಿ ಒಂದು ನಿಮಿಷ ಸಹ ಇರುತ್ತಿರಲಿಲ್ಲ. "ಪರಂತು, ತೇಥ ಭಗವಂತಾಚೀ ಅಧಿಷ್ಠಾನ ಪಾಹಿಜೇ" ಎಂಬುದಾಗಿ ತುಕಾರಾಮರು ಹೇಳುವಂತೆ, ಸ್ವಾರ್ಥತ್ಯಾಗಿ ಶ್ರೀ ಹಾನಗಲ್ಲ ಕುಮಾರ ಮಹಾಸ್ವಾಮಿಗಳು ತಮ್ಮ ಸಾಮಾಜಿಕ ರಂಗಕ್ಕಾಗಿ, ಅವರ ಶಿವಪೂಜೆಯ ಬೆಂಬಲವನ್ನು ಅನಿವಾರ್ಯವಾಗಿ ಅಪೇಕ್ಷಿಸುತ್ತಿದ್ದರು. ಅಂತೆಯೇ ಲಿಂ. ಹಾನಗಲ್ಲ ಮಹಾಸ್ವಾಮಿಗಳು ಶಿವಯೋಗಮಂದಿರದ ಭಾರವನ್ನೆಲ್ಲ ಅವರಿಗೆ ಒಪ್ಪಿಸಿದರು. ಈ ವಿಚಿತ್ರವಾದ, ತರ್ಕವಿತರ್ಕವಾದ ಕಾಲಚಕ್ರದಲ್ಲಿ ಸಿಲುಕಿದ ಶಿವಯೋಗ ಮಂದಿರವು, ಅವರ ತಪಃಪ್ರಭಾವದಿಂದಲೇ ಉಳಿದು ಬೆಳಗಿತು. ಇನ್ನರೇ ಶ್ರೀ ಹಾಲಕೆರೆ ಅನ್ನದಾನ ಮಹಾಸ್ವಾಮಿಗಳವರು, ಆ ಸಂಸ್ಥೆಗೆ ಒದಗಿದ ಆಪ-ತ್ತುಗಳನ್ನು ದೂರ ಮಾಡಿದರು. ದಯೆಯು ವೃದ್ಧಿಯಾದ ಶಿವಪೂಜೆಯ ಫಲವು; ಆ ಫಲವೇ ಧರ್ಮವು. ಅದಕ್ಕೇನೇ "ದಯೆಯೇ ಧರ್ಮದ ಮೂಲ"

ವೆಂದು ಹಾಡಿದರು. ಲಿಂ. ಶ್ರೀ ಹಾವೇರಿ ಮಹಾ ತಪಸ್ವಿಗಳವರು ದಯೆಗೆ ತವರು ಮನೆಯಾಗಿದ್ದರು. ತನಗೆ ಅನುಕೂಲವಾದುದನ್ನು ಪಾಲಿಸುವುದು, ಪ್ರೀತಿಸುವದು ಮತ್ತು ಇದಿರು ಬಂದವರನ್ನು ಅಲ್ಲಗಳೆಯುವದು ಪಶು-ಪಕ್ಷಿ-ಮನುಷ್ಯ ಪ್ರಾಣಿಗಳಲ್ಲಿ ಸಹಜವಾದದ್ದು. ಆದರೆ, ತಮಗೆ ವಿಷಪ್ರಯೋಗ ಮಾಡಿದವರನ್ನು ಅಪ್ಪಿಗೊಂಡ, ಲೋಕ ವಿಚಿತ್ರ ಚಾರಿತ್ರ್ಯವನ್ನು ನಮ್ಮ ಈ ಲಿಂ. ಶ್ರೀ ಹಾವೇರಿ ಶಿವಯೋಗಿಗಳಲ್ಲಿಯೇ ಕಾಣಬೇಕು. ಇವರ ಸಂಪತ್ತೆಲ್ಲಾ ದಿಕ್ಕಿಲ್ಲದ ದೀನ-ಅನಾಥರಿಗೆ ಸಲ್ಲುತ್ತಿತ್ತು; ಅವರೆಂದೂ ಧನದ ಆಯ-ವ್ಯಯವನ್ನು ತಿಳಿಯದ ವಿರಕ್ತರು. ವಿದ್ಯುತ್ ಶಕ್ತಿಯು ಬಲದಿಂದ ಅನೇಕ ಬಲ್ಬುಗಳು ತಮಗೆ ಮತ್ತು ಇತರರಿಗೆ ಬೆಳಕನ್ನು ಬೀರುವಂತೆ. ಈ ತಪಸ್ವಿಗಳ ತಪಃಪ್ರಭಾವದಿಂದ, ಅನೇಕ ರಾಷ್ಟ್ರ-ಸಮಾಜ, ಸಂಘ-ಸಂಸ್ಥೆಯ ಸೇವಕರು ಸೇವೆಯನ್ನು ಸಲ್ಲಿಸಲು ಸಮರ್ಥರಾದರು. ಆ ಮಹಾಶಿವಯೋಗಿ-ಸೂರ್ಯನು ತಾ. ೧೩-೧-೪೬ ರಲ್ಲಿ, ಪು. ಶು. ೧೧ ಪುಣ್ಯ ದಿನದಲ್ಲಿ, ಮೋಡದಲ್ಲಿ ಅಡಗಿದ್ದೂ ತನ್ನ ಪ್ರಭೆಯನ್ನು ನಮ್ಮ ಮೇಲೆ ಬೀರುತ್ತಿದ್ದಾನೆ. ಸ್ಥೂಲಕಾಯವನ್ನು ಕಳೆದುಕೊಂಡ ಅಜ್ಞಜೀವಿಗಳಾದ ನಾವು ಹಗಲಿರುಳು ಹಲುಬುತ್ತಿದ್ದೇವೆ. ಆ ಹಲುಬುತನ ಹಬ್ಬುವಿಕೆಯನ್ನು ಕಡಿಮೆ ಮಾಡುವದಕ್ಕಾಗಿ ಇಲಕಲ್ಲ ಶ್ರೀಮಹಾಂತದೇವರು(ಹುಬ್ಬಳ್ಳಿ ಮೂರುಸಾವಿರಮಠದ ಇಂದಿನ ಜಗದ್ಗುರುಗಳಾದ ಶ್ರೀಮನ್ ಮಹಾರಾಜ ನಿರಂಜನ ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳವರು) ಈ "ಶಿವಬಸವೇಶ್ವರ ಅಷ್ಟೋತ್ತರ ಶತನಾಮಾವಳಿ"ಯನ್ನು ರಚಿಸಿದ್ದಾರೆಂದು ನನ್ನ ಪೂರ್ಣ ನಂಬಿಗೆ. ಅವರು ತಮ್ಮ ಈ ಚಿಕ್ಕ ವಯಸ್ಸಿನಲ್ಲಿ ಹಲವಾರು ಕೃತಿಗಳನ್ನು ರಚಿಸಿದ್ದು ಸರ್ವ ಸುಲಭ ಸಾಧ್ಯವಲ್ಲ.

ಅವರು ಇನ್ನೂ ಕವಿತೆಯ ವಧುವಿನಲ್ಲಿ ಅನೇಕ ಪುತ್ರ ರತ್ನಂಗಳನ್ನು ಪಡೆದು, ನಮ್ಮ ರಾಷ್ಟ್ರದಲ್ಲಿ ಕೀರ್ತಿರತ್ನಗಳಾಗಲೆಂದು ಆ ಶಿವಬಸವನಲ್ಲಿ ಪ್ರಾರ್ಥಿಸುತ್ತೇನೆ. ಅವರು ತಮ್ಮ ಅಗಾಧ ಸೇವೆಯಲ್ಲಿ ನನಗೊಂದು ಬಿಂದುರೂಪವಾದ ಸೇವೆಯನ್ನು ಒದಗಿಸಿ ಕೊಟ್ಟದ್ದಕ್ಕಾಗಿ ನಾನು ಕೃತಜ್ಞನಿದ್ದೇನೆ. ನನ್ನ ಮೇಲೆ ಇರತಕ್ಕ ಈ ಮಮತೆಯು ಆ ಶ್ರೀ ಜಗದ್ಗುರುಗಳಲ್ಲಿ ಮಹದಿಯುಟ್ಟೊಳ್ಳಲೆಂದು ಹಾರೈಸುತ್ತೇನೆ.

ಹುಟ್ಟುವಾಗ್ಗೆ ಮುತ್ತಾಗಿ ಹುಟ್ಟಿ, ಪ್ರಾಯದಲ್ಲಿ ಶರಣ ಸಾಯುಜ್ಯವನ್ನು ಅನುಭವಿಸಿ, ಅಂತ್ಯದಲ್ಲಿ ಶಿವಯೋಗಿಯಾಗಿ ತನ್ನ ಶಿವಯೋಗಾನಂದದಲ್ಲಿ ಅಮೃತ್ಯೈಕ್ಯವನ್ನು ಹೊಂದಿದ ಆ ಹಾವೇರಿ ಮಹಾಶಿವಯೋಗಿಗಳ ಮೂರನೇ ಪುಣ್ಯತಿಥಿಯು ಸ್ಮರಣೆಗಾಗಿ ಹೊರಡುವ ಈ ಕೃತಿಯನ್ನು ನೋಡಿ ಆ ಶಿವಯೋಗಿಗಳವರ ಶಿಷ್ಯನಾದ ನನಗೆ ಅಪರಿಮಿತ ಆನಂದವಾಗುತ್ತದೆಂದು ನುಡಿದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ.

ದಿ. ೨೫-೧೨-೪೮ **ಶ್ರೀ ಮ.ನಿ.ಪ್ರ. ಮೃತ್ಯುಂಜಯ ಸ್ವಾಮಿಗಳು**

ಮು : ಹಾವೇರಿ "ವೇದಾಂತಾಚಾರ್ಯ" ಗವಿಮಠ, ಮುಧೋಳ

ಶ್ರೀ ಶಿವಬಸವೇಶ್ವರ ಅಷ್ಟೋತ್ತರ ಶತನಾಮಾವಳಿ

॥ ಕಂದ ॥ ಶ್ರೀ ಶಿವಯೋಗ ಲಲಾಮನ
ಶ್ರೀ ಶಿವಬಸವನ ಅಷ್ಟೋತ್ತರ ಶತನಾಮಂ।
ಬೇಸರವಿಲ್ಲದೆ ಪಠಿಪಂ
ಗೀಶಂ ಸುಖಸಿರಿಯು ನಿತ್ತು ಪೊರೆವಂ ಸತತಂ॥

ಪನ್ನಗಾಪ್ರರಾಧಿವಾಸ ಭವವಿನಾಶ ಶಿವನೆ ಬಸವ
ಸನ್ನುತಾರ್ಯ ಭಕ್ತ ಸೂರ್ಯ ಶಕ್ತಿ ಧುರ್ಯ ಶಿವನೆ ಬಸವ ॥ ೧ ॥

ಜ್ಞಾನನೇತ್ರ ಪುಣ್ಯಗಾತ್ರ ವಿನುತ ಪಾತ್ರ ಶಿವನೆ ಬಸವ
ಧ್ಯಾನಮೂರ್ತಿ ಧವಲಕೀರ್ತಿ ಪರಂಜ್ಯೋತಿ ಶಿವನೆ ಬಸವ ॥ ೨ ॥

ವಿಮಲಚರಣ ಕೃಪಾವರಣ ಶಾಂತಿ ಭರಣ ಶಿವನೆ ಬಸವ
ಯಮಿ ವಿರಾಜ ದಿವ್ಯ ತೇಜ ಭಕ್ತಿ ರಾಜ ಶಿವನೆ ಬಸವ ॥ ೩ ॥

ಅಲಸ ರಹಿತ ಯೋಗ ನಿರತ ಚಾರು ಚರಿತ ಶಿವನೆ ಬಸವ
ಲಲಿತ ವೇಷ ದೂರ ದೋಷ ಮೃದ ದಾಹ ಶಿವನೆ ಬಸವ ॥ ೪ ॥

ಗುರುವರೇಣ್ಯ ಚರವರೇಣ್ಯ ಸುರವರೇಣ್ಯ ಶಿವನೆ ಬಸವ
ಮರಣ ಜನನ ನಾಶ ಈಶ ಕುಮತ ಕುಲಿಶ ಶಿವನೆ ಬಸವ ॥ ೫ ॥

ಸಪ್ತ ಶರಧಿಯೆಂಬ ಹಳ್ಳಿಯಲ್ಲಿ ಜನಿಸಿ ಶಿವನೆ ಬಸವ
ಸಪ್ತ ವ್ಯಸನಗಳನು ಅಳಿದು ಬೆಳೆದೆ ನೀನು ಶಿವನೆ ಬಸವ ॥ ೬ ॥

ಅಥಣಿಯೋಗಿ ಮುರುಳ ಸಿದ್ಧನನ್ನು ಪೊಂದಿ ಶಿವನೆ ಬಸವ
ಅತುಲ ಶೀಲ ತತ್ತ್ವವನ್ನು ಅರಿದುಕೊಂಡೆ ಶಿವನೆ ಬಸವ ॥ ೭ ॥

ಗುರುಗಳನ್ನು ಭಕ್ತಿಯಿಂದ ಸೇವೆ ಗೈದೆ ಶಿವನೆ ಬಸವ
ಗುರುದಯಾ ಕಟಾಕ್ಷವನ್ನು ಪಡೆದೆ ನೀನು ಶಿವನೆ ಬಸವ ॥ ೮ ॥

ಬಿಜ್ಜಾರಿಯೊಳು ಕನ್ನಡೋದಿ ಕುಶಲನಾದೆ ಶಿವನೆ ಬಸವ
ಒಳ್ಳೆ ಜನರ ಸಂಗದಲ್ಲಿ ಕಾಲ ಕಳೆದೆ ಶಿವನೆ ಬಸವ ॥ ೯ ॥

ಉಚ್ಚ ಶಿಕ್ಷಣವನು ಪಡೆಯೆ ಕಾಶಿಯಲ್ಲಿ ಶಿವನೆ ಬಸವ
ಉಚ್ಚ ಧ್ಯೇಯ ಬಿಡದೆ ಓದಿ ತಜ್ಞನಾದೆ ಶಿವನೆ ಬಸವ ॥ ೧೦ ॥

ಯೋಗಿ ಜವರಿ ಕುಮಾರನಂ ಸೇವೆ ಮಾಡಿ ಶಿವನೆ ಬಸವ
ತ್ಯಾಗ ಯೋಗ ಮಹಿಮೆ ತಿಳಿಸಿಕೊಂಡೆ ನೀನು ಶಿವನೆ ಬಸವ ॥ ೧೧ ॥

ಭವದ ಬೇರೆ ನಗಿಯೆ ಯೋಗ ಬೇಕು ಎಂದೆ ಶಿವನೆ ಬಸವ
ಶಿವನ ಯೋಗ ಮಾಡಿ ನಿರುತ ಸುಖವ ಪಡೆದೆ ಶಿವನೆ ಬಸವ || ೧೨ ||

ಯೋಗದಿಂದ ದಿವ್ಯ ತೇಜನಾಗಿ ಮೆರೆದೆ ಶಿವನೆ ಬಸವ
ತ್ಯಾಗ ಮೂರ್ತಿ ನಿನ್ನ ಕೀರ್ತಿ ಹೇಳಲಳವೆ ಶಿವನೆ ಬಸವ || ೧೩ ||

ಆರು ಚೋರರನ್ನು ನೀನು ಯುಕ್ತಿಯಿಂದ ಶಿವನೆ ಬಸವ
ಸಾರ ಜ್ಞಾನಶಸ್ತ್ರದಿಂದ ರವದಿ ತರಿದೆ ಶಿವನೆ ಬಸವ || ೧೪ ||

ಬಿದರಿಯೋಗಿಯಿಂದ ಅನುಗ್ರಹವ ಪೊಂದಿ ಶಿವನೆ ಬಸವ
ಸದಮಲಾಂತಃಕರಣದಿಂದ ಪೂಜೆ ಗೈದೆ ಶಿವನೆ ಬಸವ || ೧೫ ||

ಗುರು ಕುಮಾರನನ್ನು ಪೊಂದಿ ಧನ್ಯನಾದೆ ಶಿವನೆ ಬಸವ
ಗುರು ಮಹತ್ತ್ವವಗಿದು ಮುದದಿ ಜಗದಿ ಪೇಳ್ದೆ ಶಿವನೆ ಬಸವ || ೧೬ ||

ಗುರುವಿನೊಲಿಮೆ ಇಲ್ಲದಿರುವ ನಿರವು ಹಾಳು ಶಿವನೆ ಬಸವ
ಗುರುವಿನಿಂದ ಜೀವಿಗೆ ಸುಖವು ಎಂದು ಪೇಳ್ದೆ ಶಿವನೆ ಬಸವ || ೧೭ ||

ಹಾವೇರಿಯ ಮಠಕ್ಕೆ ನೀನು ಸ್ವಾಮಿಯಾದೆ ಶಿವನೆ ಬಸವ
ಭಾವಕುಸುಮ ಸುಭಗ ಬೀರಿ ರಸವನುಂಡೆ ಶಿವನೆ ಬಸವ || ೧೮ ||

ಭಕ್ತ ಜನರ ಮನದ ಮಲಿನ ಕಳೆದು ನೀನು ಶಿವನೆ ಬಸವ
ರಕ್ತಿಯಿಂದೆ ಹರನತತ್ತ್ವ ತಿಳಿಸಿದೆಯ್ಯ ಶಿವನೆ ಬಸವ || ೧೯ ||

ದಾರಿತಪ್ಪಿ ನಡೆವರನ್ನು ಕಂಡು ನೊಂದೆ ಶಿವನೆ ಬಸವ
ದಾರಿತೋರಿ ಬೆಳಕನೀಡಿ ಕಳೆಯ ನಿತ್ತೆ ಶಿವನೆ ಬಸವ || ೨೦ ||

ಪರಸಗಡದಿ ಬಸವ ಪುರಾಣವನು ನೀನೆ ಶಿವನೆ ಬಸವ
ಹರುಷದಿಂದ ಪೂರ್ವದಲ್ಲಿ ಪೇಳ್ದೆಯಯ್ಯ ಶಿವನೆ ಬಸವ || ೨೧ ||

ಚಿತ್ತ ಶಾಂತಿಗಾಗಿ ನೀನು ಗಿರಿಯ ಸೇರ್ದೆ ಶಿವನೆ ಬಸವ
ಸ್ತುತ್ಯ ಮೂರ್ತಿ ನೆನೆಹ ನೆನೆದು ಮರವೆ ಕಳೆದೆ ಶಿವನೆ ಬಸವ || ೨೨ ||

ಮಾಯೆ ಮೋಹವನ್ನು ತೊರೆದು ಕಾಮಗೆಲಿದೆ ಶಿವನೆ ಬಸವ
ಕಾಯ ಜಾರಿ ದೇವನನ್ನು ನಿರುತ ನೆನೆದೆ ಶಿವನೆ ಬಸವ || ೨೩ ||

ಬೇಡಿದವರಿಗೆ ಫಲವನಿತ್ತು ಸಲಹಿದಯ್ಯ ಶಿವನೆ ಬಸವ
ಕಾಡಿದವರಿಗೆ ಮತಿಯನಿತ್ತು ಉಳಿಸಿದೆಯ್ಯ ಶಿವನೆ ಬಸವ || ೨೪ ||

ಜನರ ಹಂಗಿನಲ್ಲಿ ನೀನು ಬೀಳಲಿಲ್ಲ ಶಿವನೆ ಬಸವ
ಜನರಿಗೆಲ್ಲ ಭಕುತಿ ದಾರಿ ಅರುಹಿದಯ್ಯ ಶಿವನೆ ಬಸವ || ೨೫ ||

ಮಕ್ಕಳಿಲ್ಲದವರಿಗೆ ನೀನು ಮಕ್ಕಳಿತ್ತೆ ಶಿವನೆ ಬಸವ
ರೊಕ್ಕವಿಲ್ಲದವರಿಗೆ ಮುದದಿ ಧನವನಿತ್ತೆ ಶಿವನೆ ಬಸವ || ೨೬ ||

ರೋಗದಲ್ಲಿ ಬಳಲುತಿಪಗೆ ಮಮತೆಯಿಂದ ಶಿವನೆ ಬಸವ
ಅಂಘ್ರಿಯುದಕ ವಿತ್ತು ರೋಗವಳಿಸಿದಯ್ಯ ಶಿವನೆ ಬಸವ ॥ ೨೭ ॥

ಶಿವನಯೋಗ ನಿಲಯ ಸ್ಥಾಪನಾಗುವಾಗ ಶಿವನೆ ಬಸವ
ತವಕದಿಂದ ದುಡಿದು ವಿಪುಲ ಕಾರ್ಯಗೈದೆ ಶಿವನೆ ಬಸವ ॥ ೨೮ ॥

ಶಿವನ ಧ್ಯಾನಿಸುತ್ತ ಕಷ್ಟ ಸಹಿಸಿದಯ್ಯ ಶಿವನೆ ಬಸವ
ಶಿವನ ಕಾರ್ಯಕ್ಕಾಗಿ ಟೊಂಕಕಟ್ಟಿ ನಿಂತೆ ಶಿವನೆ ಬಸವ ॥ ೨೯ ॥

ಶಿವನ ಯೋಗ ನಿಲಯದಲ್ಲಿ ಕಾಲಕಳೆದೆ ಶಿವನೆ ಬಸವ
ಶಿವನ ಮಹಿಮೆ ಸಾಧಕರಿಗೆ ಅರುಹಿದಯ್ಯ ಶಿವನೆ ಬಸವ ॥ ೩೦ ॥

ಎಡೆಯೂರೆಂಬ ಪುರದಿ ನೀನು ತಪವಗೈದೆ ಶಿವನೆ ಬಸವ
ಎಡೆಯೂರೇಶನನ್ನು ಒಲಿಸಿ ಸುಖದಿ ನಲಿದೆ ಶಿವನೆ ಬಸವ ॥ ೩೧ ॥

ಶಿವನ ಪೂಜೆ ಮಾಡದಾಯ್ತು ಸಂತಸದುವೆ ಶಿವನೆ ಬಸವ
ಶಿವನ ಪೂಜೆ ಬೇನೆ ಬರಲು ಮರೆಯಲಿಲ್ಲ ಶಿವನೆ ಬಸವ ॥ ೩೨ ॥

ಕೊಪ್ಪದಲ್ಲಿ ತಪದ ಜಲದಿ ಆಶ್ರಮೊಂದು ಶಿವನೆ ಬಸವ
ಸ್ಥಾಪಿಸಿದೆಯೊ ನೀನು ಭಕ್ತರುದ್ಧರಿಸಿ ಶಿವನೆ ಬಸವ ॥ ೩೩ ॥

ಭಕುತಿ ಜಲವ ನೆರೆದು ಲಿಂಗ ಪೂಜೆಯೆಸಗಿ ಶಿವನೆ ಬಸವ
ಮುಕುತಿ ಮಟ್ಟವನ್ನು ನೀನು ಬೇಗ ನೇರ್ದೆ ಶಿವನೆ ಬಸವ ॥ ೩೪ ॥

ಮಿಸುಪ ಭಸಿತ ಪೂಜಿ ಸಿಂಗರಿಸಿದೆ ನೀನು ಶಿವನೆ ಬಸವ
ಕುಸುಮ ಶರನ ವೀರತನದಿ ದಹನಗೈದೆ ಶಿವನೆ ಬಸವ ॥ ೩೫ ॥

ಮಿರುಪ ವಿರತಿ ಗಂಧವನ್ನು ತೀಡಿ ತೊಡೆದು ಶಿವನೆ ಬಸವ
ಪರಮಶಾಂತಿ ತಪವನೆಸಗಿ ಎಸೆದೆ ನೀನು ಶಿವನೆ ಬಸವ ॥ ೩೬ ॥

ಎಳೆಯ ಬಿಲ್ವದಳಗಳನು ಮುದದಿ ಧರಿಸಿ ಶಿವನೆ ಬಸವ
ಕಳದೆ ಎದೆಯಹೊಲದಿ ಬೆಳೆವ ಕಸವ ನೀನು ಶಿವನೆ ಬಸವ ॥ ೩೭ ॥

ಸರಸ ಪುಷ್ಪಗಳನು ಸೂಡಿ ಶೋಭಿಗೈದೆ ಶಿವನೆ ಬಸವ
ಅರಿವ ಮನದಿ ನಲಿದೆ ಮೂರು ಮಲಗಳಳಿದ ಶಿವನೆ ಬಸವ ॥ ೩೮ ॥

ಪರುಷವೆಂಬ ಧೂಪವನ್ನು ಸಮರ್ಪಿಸಿದೆ ಶಿವನೆ ಬಸವ
ಅರಿದೆ ಮೂರುಲಿಂಗ ಮರೆದೆ ಜೀವಭಾವ ಶಿವನೆ ಬಸವ ॥ ೩೯ ॥

ಜ್ಞಾನ ವಾತಿಯನ್ನು ನಿರುತ ಮುಟ್ಟಿದಯ್ಯ ಶಿವನೆ ಬಸವ
ಭಾನು ತೇಜದಂತೆ ಬೆಳಗಿ ಜ್ಯೋತಿಯಾದ ಶಿವನೆ ಬಸವ ॥ ೪೦ ॥

ಪರಮ ತೋಷದಿಂದ ಲಿಂಗ ಗೆಡೆಯ ನಿತ್ತೆ ಶಿವನೆ ಬಸವ
ಪರತರ ಪ್ರಸಾದ ಸುಖವ ನುಂಡು ನಲಿದೆ ಶಿವನೆ ಬಸವ || ೪೧ ||

ಶಿವನ ಪೂಜೆಗಿಂತ ಅಧಿಕವಾವುದಿಲ್ಲ ಶಿವನೆ ಬಸವ
ತವಕದಿಂದ ಪೇಳ್ದೆ ಮಹಿಮೆ ತೋರ್ದು ಮೆರೆದೆ ಶಿವನೆ ಬಸವ || ೪೨ ||

ಕೊನೆಗೆ ಶಿವನ ಪೂಜೆಯಲ್ಲಿ ಕುಳಿತುಕೊಂಡು ಶಿವನೆ ಬಸವ
ತ್ರಿನಯನಲ್ಲಿ ಬೆರೆದೆ "ಶಿವನೆ ಶಿವನೆ" ಎಂದು ಶಿವನೆ ಬಸವ || ೪೩ ||

ಜ್ಞಾನಭಾನು ಸ್ವಾಮಿ ನೀನು ಎತ್ತ ಪೋದೆ ಶಿವನೆ ಬಸವ
ದೀನಬಂಧು ಪ್ರೇಮಸಿಂಧು ಮೊಗವ ತೋರೊ ಶಿವನೆ ಬಸವ || ೪೪ ||

ಸಲಹು ನಿನ್ನ ಧ್ಯಾನ ನೆನೆವ ಮನವ ನೀಡಿ ಶಿವನೆ ಬಸವ
ತಿಳುಹು ಬೇಗ ಮುಕುತಿದಾರಿ ಆವುದೆನಗೆ ಶಿವನೆ ಬಸವ || ೪೫ ||

ತಾಯಿ-ತಂದೆ ಬಂಧು-ಬಳಗ ನೀನೆ ಎನಗೆ ಶಿವನೆ ಬಸವ
ಕಾಯೊ ಮನದ ಚಂಚಲತೆಯನಳಿಸಿ ಮುನ್ನ ಶಿವನೆ ಬಸವ || ೪೬ ||

ಹೃದಯವೆಂಬ ಹ್ರದದ ಮಧ್ಯದಲ್ಲಿ ನೀನು ಶಿವನೆ ಬಸವ
ಮುದದಿ ನಳಿನವಾಗಿ ಸತತ ನಲಿಯೋ ಜವದಿ ಶಿವನೆ ಬಸವ || ೪೭ ||

ಕಾಡುತಿಹುದು ಮುನಿಸಿನಿಂದ ಮಾಯೆಯನ್ನು ಶಿವನೆ ಬಸವ
ಜೀಡುತಿರುವೆ ದೂಡಲುಕ್ತಿ ಬೇಗ ಹೇಳು ಶಿವನೆ ಬಸವ || ೪೮ ||

ಆವ ಪರಿಯೊಳೆನ್ನ ಮನದಿ ಬಂದು ನೀನು ಶಿವನೆ ಬಸವ
ಕಾವ ಭಾರ ನಿನ್ನದೆಂದು ಮರೆಯ ಹೊಕ್ಕೆ ಶಿವನೆ ಬಸವ || ೪೯ ||

ಸುತ್ತುತಿರುವ ಭವದ ಜಾಲ ಕತ್ತರಿಸೈ ಶಿವನೆ ಬಸವ
ಮತ್ತೆ ಬರುವ ಜನನ-ಮರಣ ತಪ್ಪಿಸೆನಗೆ ಶಿವನೆ ಬಸವ || ೫೦ ||

ಎದರು ಕಂಟಕಗಳು ತೊಡರಿ ಕಾಡುವಾಗ ಶಿವನೆ ಬಸವ
ಬಿಡದೆ ಬಂದು ಮತಿಗೆ ಬಲವ ನಿತ್ತು ಸಲಹು ಶಿವನೆ ಬಸವ || ೫೧ ||

ಲೋಲ ಮೂರ್ತಿ ಎನ್ನ ಮೇಲೆ ಕರುಣೆಯಿಟ್ಟು ಶಿವನೆ ಬಸವ
ಪಾಲಿಸಯ್ಯ ಪಾಪ ಸುಟ್ಟು ಮತಿಯ ಕೊಟ್ಟು ಶಿವನೆ ಬಸವ || ೫೨ ||

ನಡೆವ ನುಡಿವ ಕೊಡುವ ತೊಡುವ ಸಮಯದಲ್ಲಿ ಶಿವನೆ ಬಸವ
ಎಡವಿ ಮುಗ್ಗಿದಾಗ ನಿನ್ನ ಧ್ಯಾನ ನೀಡು ಶಿವನೆ ಬಸವ || ೫೩ ||

ಶರಣು ನಿನಗೆ ಶರಣು ಶಿವನೆ ಬಸವ ಬಸವ ಶಿವನೆ ಬಸವ
ಶರಣು ಯತಿವರೇಣ್ಯ ಶಿಸುಮಹಾಂತ ವಿನುತ ಶಿವನೆ ಬಸವ || ೫೪ ||

[ಫಲ-ಶ್ರುತಿ]

॥ ಮಾಲಿನೀ ವೃತ್ತ ॥

ಶಿವಬಸವ ಯತೀಂದ್ರಸ್ಯಾತ್ರ ಕೈವಲ್ಯ ಮೂರ್ತೇಃ
ಪರಮ ವಿರತಿ ವಿದ್ಯಾ ಪ್ರಾಪ್ತ ಲೋಕೈಕ ಕೀರ್ತೇಃ
ಪಠತಿ ವಿಮಲ ಭಾವೇನಾಸ್ಯ "ನಾಮಾವಲಿಂ"ಯೋ
ಪ್ರಜತಿ ಸುತ ಧನಾದೀನ್ ಭೋಗಜಾತಾನ್ನಿತಾಂತಂ॥
ಓಂ ಶಾಂತಿಃ ಶಾಂತಿಃ ಶಾಂತಿಃ!

ಮಂಗಲ

ಜಯ ಮಂಗಲಂ ನಿತ್ಯ ಶುಭ ಮಂಗಲಂ
ಜಯ ಜಯತು ಶಿವಬಸವ ಶಿವಯೋಗಿಗೆ ॥ ಪಲ್ಲವಿ ॥

ಆರು ಹಗೆಗಳನಳಿದು ದೇಹದಿಚ್ಛೆಯ ಹರಿದು
ವೀರತನವನು ಪೊಂದಿ ಮೆರೆದ ಮಹಿಮಗೆ
ಮೂರು ಮಲಗಳ ದೂಡಿ ಲಿಂಗದೊಳೋಲಾಡಿ
ಚಾರು ಚರಿತಗೆ ಶ್ರೀಲಿಂಗ ರೂಪನಿಗೆ ॥ ೧ ॥

ವಿರತನತಿ ಶಾಂತ ನಾಚಾರ ಶೀಲನಿಗೆ
ವರ ದಯಾ ಪರಗೆ ಲಿಂಗ ಪೂಜಾಸಕ್ತಗೆ
ಪರಮ ತೇಜೋಮೂರ್ತಿ ತಾನೆನಿಸಿದ
ವರ ಪನ್ನಗಾಪುರ ಮಠಾಧಿಪತಿಗೆ ॥ ೨ ॥

ಹರನಾಜ್ಞೆಯನು ಹೊತ್ತು ಭೂತಲದೊಳವತರಿಸಿ
ಪರಮ ಭಕ್ತಿ-ಜ್ಞಾನ ವಿರತಿಗಳನರುಹಿ
ಹರಮತವನುದ್ಧರಿಸಿ ಸಲಹಿದ ಶ್ರೀ
ಗುರುವರ್ಯ ಚಿತ್ಸ್ವರ್ಯ ಶಿವ ಮಹಾಂತ ಪ್ರೇಮಿಗೆ ॥ ೩ ॥

ಚಿತ್ತರಗಿ–ಇಲಕಲ್ಲ

ಶ್ರೀ ವಿಜಯ ಮಹಾಂತೇಶ್ವರ ಲಾವಣಿ

ಸಾಹಿತ್ಯ ಪ್ರಕಾರ : ಲಾವಣಿ
ಮೊದಲ ಮುದ್ರಣ : ೧೯೪೯
ಎರಡನೆಯ ಮುದ್ರಣ : ೧೯೮೨
ರಚನೆಯ ವಯಸ್ಸು : ೧೮
ರಚನಾ ಸ್ಥಳ : ಶಿವಯೋಗ ಮಂದಿರ

|| ಶ್ರೀ ||

ಶ್ರೀ ಜಗದ್ಗುರು ಮೂರುಸಾವಿರಮಠ ಗ್ರಂಥಮಾಲೆ ನಂ. ೧೬೦

ಶ್ರೀ ಮೂಜಗಂ ವಿರಚಿತ

ಶ್ರೀ ವಿಜಯ ಮಹಾಂತೇಶ ಲಾವಣಿ

೧೯೪೮ ರಲ್ಲಿ ಪ್ರಕಟವಾದ ಈ ಹೊತ್ತಿಗೆಯ ಪುನರ್ಮುದ್ರಣ

ಪ್ರಕಾಶಕರು:
ಶ್ರೀ ಜಗದ್ಗುರು ಗಂಗಾಧರ ಧರ್ಮಪ್ರಚಾರಕ ಮಂಡಳ
ಮೂರುಸಾವಿರಮಠ ಹುಬ್ಬಳ್ಳಿ.

೧೯೮೨

ಮೊದಲನೆಯ ಮುದ್ರಣ : ೧೯೪೮

ದ್ವಿತೀಯ ಮುದ್ರಣ : ೧೯೮೨

ಬೆಲೆ : ರೂ. ೧-೦೦

ಮುದ್ರಕರು :
ಪರಂಜ್ಯೋತಿ ಪಾವರ ಪ್ರಿಂಟಿಂಗ ಪ್ರೆಸ್,
ಶ್ರೀ ಜಗದ್ಗುರು ಮೂರುಸಾವಿರಮಠ, ಹುಬ್ಬಳ್ಳಿ.

ಮುನ್ನುಡಿ

ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಶ್ರೀ ಗಂಗಾಧರ ರಾಜ ಯೋಗೀಂದ್ರ ಮಹಾಸ್ವಾಮಿಗಳು ಮೂರುಸಾವಿರಮಠ ಹುಬ್ಬಳ್ಳಿ ಅವರು, ಚಿತ್ತರಗಿ ಇಲಕಲ್ಲ ಸಂಸ್ಥಾನಮಠದ ಉತ್ತರಾಧಿಕಾರಿಗಳಾಗಿದ್ದಾಗ, ತಮ್ಮ ೧೬ನೆಯ ವಯಸ್ಸಿನಲ್ಲಿ ಬರೆದ "ವಿಜಯ ಮಹಾಂತೇಶ ಲಾವಣಿ" ಇದು. ಬಹಳ ಚಿಕ್ಕ ವಯಸ್ಸಿನಲ್ಲಿಯೇ ಬರೆದ ಈ ಲಾವಣಿಯನ್ನು ನೋಡಿದರೆ ಅವರ ಕವಿತ್ವಶಕ್ತಿ ಹಾಗೂ ಪ್ರತಿಭೆಯು ಅರ್ಥವಾಗುತ್ತದೆ. ನಾವು ಶಿವಯೋಗ ಮಂದಿರದಲ್ಲಿ ವಟುವಾಗಿದ್ದಾಗ, ಈ ಲಾವಣಿಯನ್ನು ಸಭೆ ಸಮಾರಂಭದಲ್ಲಿ ಹಾಡಿ, ಮೆಚ್ಚುಗೆ ಪಡೆದದ್ದುಂಟು. ಅವರ ಕವಿತ್ವಶಕ್ತಿ ಹುಟ್ಟಿನಿಂದ ಬಂದುದು. ಸಹಜವಾಗಿ ಸರಳವಾಗಿ ನೀತಿಬೋಧಕವಾಗಿರುವಂತೆ ಬರೆದಿದ್ದಾರೆ. "ಗಿಡ ಹೂವನ್ನು ಬೀಡುತ್ತದೆ. ಕವಿಗಳು ಈ ಕವನವನ್ನು ರಚಿಸುತ್ತಾರೆ. ಉತ್ತಮರು ಅವನ್ನು ಲಾಲಿಸುತ್ತಾರೆ". ಆ ರೀತಿಯಾಗಿ ಶ್ರೀ ಜಗದ್ಗುರು ಸನ್ನಿಧಿಯವರು ಬರೆದಿದ್ದಾರೆ. ಚಿಕ್ಕವಯಸ್ಸಿನಲ್ಲಿಯೇ ತಾತ್ವಿಕ ಹಾಗೂ ಶಾಶ್ವತ ರೀತಿಯಲ್ಲಿ ಬರೆದ ಬರವಣಿಗೆ ಇಂದಿಗೂ ಅದನ್ನು ಓದಿದರೆ ಬಲುರುಚಿಯೆನಿಸುತ್ತದೆ. ಶ್ರೀ ಜಗದ್ಗುರು ಸನ್ನಿಧಿಯವರು, ಸಾಮಾಜಿಕ ಹಾಗೂ ಶೈಕ್ಷಣಿಕ ರಂಗದಲ್ಲಿ ಸಮಯವನ್ನು ಕಳೆಯದೆ, ಅಂದಿನಿಂದ ಕೇವಲ ಈವರೆಗೂ ಸಾಹಿತ್ಯ ಸರೋವರದಲ್ಲಿಯೇ ಈಜಿದ್ದರೆ, ರಾಷ್ಟ್ರ-ಕವಿಗಳ ಮಾಲಿಕೆಯಲ್ಲಿ ಬರುತ್ತಿದ್ದರು. ಆದರೂ ಈ ವರೆಗೆ ೨೫ ಗ್ರಂಥಗಳನ್ನು ಬರೆದು, ಸಾಹಿತ್ಯ ಸೇವೆ ಮಾಡಿದ್ದಾರೆ, ಸಾಹಿತ್ಯಶಕ್ತಿ ಬೆಳೆಸಿಕೊಂಡಿದ್ದಾರೆ. ಅವರು ಬರೆದ ಪ್ರತಿಯೊಂದು ಪುಸ್ತಕವೂ ಅರ್ಥ ಗಾಂಭೀರ್ಯದಿಂದ ಕೂಡಿ, ಜನ ಮನೋಮಂದಿರದಲ್ಲಿ ಕುಳಿತುಕೊಳ್ಳ ತಕ್ಕಂಥವುಗಳಾವುಗಳಾಗಿವೆ. ವ್ಯಕ್ತಿತ್ವವಿಕಾಸಕ್ಕೆ ದಾರಿದೀಪಗಳಾಗಿವೆ. ಶಿವಯೋಗಮಂದಿರದ ಪವಿತ್ರ ವಾತಾವರಣದಲ್ಲಿ ಬೆಳೆಯುತ್ತ ಶ್ರೀವಿಜಯಮಹಾಂತೇಶನ ಹಾಗೂ ಕುಮಾರೇಶನ ಆಚಾರ-ವಿಚಾರಗಳನ್ನು, ನಿಯಮ ನಿಷ್ಠೆಗಳನ್ನು ಬದಲಿಸುತ್ತಿರುವ ಸಂದರ್ಭದಲ್ಲಿ ಶ್ರೀವಿಜಯ ಮಹಾಂತೇಶ ಲಾವಣಿ ಬರೆದು ವಟುಗಳಿಗೆ ಮಾರ್ಗದರ್ಶಕರಾಗಿದ್ದರು. ಲಾವಣ್ಯಮಯವಾದ ಈ ಲಾವಣಿಯಲ್ಲಿ ವಿಜಯ ಮಹಾಂತೇಶ್ವರರ ಸಮಗ್ರ ವ್ಯಕ್ತಿತ್ವವನ್ನು ತೋರಿಸಿದ್ದಾರೆ. ಇಲಕಲ್ಲ, ಚಿತ್ತರಗಿ ವಿಜಯ ಮಹಾಂತ ಶಿವಯೋಗಿಗಳು, ಶಾಪಾನುಗ್ರಹ ಸಮರ್ಥರು, ಪವಾಡ ಪುರುಷರು, ಲಿಂಗಪೂಜಾ ನಿಷ್ಠರಾಗಿದ್ದಂತೆ, ಮಹಾತ್ಮಾ ಬಸವಣ್ಣನವರ ತತ್ವವನ್ನು ಏಕ ನಿಷ್ಠೆಯಿಂದ ಪರಿಪಾಲಿಸುತ್ತಿದ್ದರು. ಬಸವಣ್ಣನವರ ವಚನ ಗ್ರಂಥವನ್ನು ಎಂದಿಗೂ, ಕೆಳಗಿಡದ, ಬೆನ್ನಮೇಲೆ ಕಟ್ಟಿಕೊಂಡು,

ಸಂಚರಿಸುತ್ತಿದ್ದರು. ಅಪ್ಪನ ವಚನವೆಂದು ಆ ವಚನ ಗ್ರಂಥಕ್ಕೆ ಬಹಳ ಮನ್ನಣೆ ನೀಡುತ್ತಿದ್ದರು. ವಿಜಯ ಮಹಾಂತಶಿವಯೋಗಿಗಳು ಭಕ್ತಪ್ರೇಮಿಗಳಾಗಿದ್ದರಲ್ಲದೆ ವಿರಕ್ತಶಿಖಾಮಣಿಯಾಗಿ ರಾರಾಜಿಸುತ್ತಿದ್ದರು. ಇಪ್ಪತ್ತನೆಯ ಶತಮಾನದ ಮಹಾ ತಪಸ್ವಿಗಳಾಗಿ, ಧ್ಯಾನಯೋಗಿಗಳಾಗಿ, ಭಕ್ತೋದ್ಧಾರ ಮಾಡುತ್ತಿದ್ದರು. ಶ್ರೀ ಜಗದ್ಗುರು ಸನ್ನಿಧಿಯವರು ಶಿವಯೋಗ ಮಂದಿರದ ನಿಸರ್ಗ ಸೌಂದರ್ಯದ ಹಸಿರು ಗಿಡಬಳ್ಳಿಗಳ ಚೆಲುವಾದ ನೋಟವನ್ನು ನೋಡುತ್ತ, ಸುಂದರ ಸುಮನೋಹರವಾಗಿ ಹರಿಯುವ ಮಲಪ್ರಭೆಯ ತೀರದಲ್ಲಿ ಕುಳಿತು "ವಿಜಯಮಹಾಂತೇಶ ಲಾವಣಿ" ಬರೆದಂತೆ ಕಾಣುತ್ತದೆ.

ಈ ಲಾವಣಿಯ ಸರಳ ಸುಂದರ ಛಂದವನ್ನು ಅರಿಯಲು ಒಂದೆರಡು ಸಾಲುಗಳನ್ನು ಓದಿದರೆ ಸಾಕು. ಮೊದಲಿಗೆ ಹಾಗೂ ಕೊನೆಗೆ ಪ್ರಾಸಬದ್ಧವಾಗಿ ಹಾಗೂ ಭಾವಪೂರ್ಣವಾಗಿ ಬರೆದಿದ್ದಾರೆ.

"ತರತರ ತರುಗಳ ಲತೆಗಳ ಹಳ್ಳಗಳಂದದಿ
ಶೋಭಿಪ ಕರುನಾಡು।
ಉರುತರ ಜ್ಞಾನದ ಖಣಿಗಳ ಯತಿಕುಲ
ತಿಲಕರ ಪಡೆದಿಹ ಹಿರಿನಾಡು॥

ಕರುನಾಡಿನ ಹಿರಿಮೆಯನ್ನು ವರ್ಣಿಸಿದ್ದಾರೆ.

ಆಶೆಯ ಬಲೆಯೊಳು ಮನುಜನು ಸಿಕ್ಕರೆ
ಕಾಲಗೆ ಪಾಶವನೊಗೆದಂತೆ।
ಘಾಸಿಯ ಮಾಳ್ಪದು ಯತಿಗಳನಾಶೆಯು
ಹೇಸಿಕೆ ಕೆಸರೊಳು ಸಿಕ್ಕಂತೆ।

ಇಂತಹ ನೀತಿಬೋಧಕ ನುಡಿಮುತ್ತುಗಳು ಈ ಲಾವಣಿಯಲ್ಲಿ ತುಂಬಿರುವುದರಿಂದ ಇದರ ಘನತೆ ಹೆಚ್ಚಿದೆ. ಅಲ್ಲಲ್ಲಿ ಬಸವಣ್ಣನವರ ವಚನಗಳನ್ನೇ ಆಯ್ದುಕೊಂಡು, ಲಾವಣಿ ರೂಪದಲ್ಲಿ ಕೂಡಿಸಿ, ಬರೆದದ್ದು ಚಿತ್ತಾಕರ್ಷಕವಾಗಿದೆ.

"ಗೀತವನರಿದವ ಜಾಣನು ಅಲ್ಲ
ಮಾತನ್ನರಿದವ ಜಾಣಲ್ಲ
ಆತನು ಜಾಣನು ಜಾಣನು ಲಿಂಗವನಂಬಿಹಾತನು ಜಾಣಣ್ಣ।
ಜಂಗಮದಾಸರದಿಂದಲಿ ನಿತ್ಯವಿ ನೀಡುತಲಿರುವನು ಜಾಣಣ್ಣ
ಸಂಗನು ಇಂತಿಹ ಭಕ್ತರ ತನ್ನಯ ಚಿತ್ತದೊಳ್
ಕರೆಯುವನಣ್ಣ।

ಅಳವುತ್ತಳವುತ್ತ ಬಳಲುವರಲ್ಲದೆ ಕೊಳಗದು ತಾನು
ಬಳಲುವದೇ।
ನೆಲದೊಳ್ ನಡೆಯುತ ನಡೆಯುತ ಬಳಲುವರಲ್ಲದೆ,
ಬಟ್ಟೆಯಂ ಬಳಲುವದೆ।
ಶ್ರಮವಂ ಮಾಡುತ ಮಾಡುತ ಬಳಲುವರಲ್ಲದೆ,
ಕೋಲದು ಬಳಲುವದೇ।
ನಿಜವಂ ನರಿಯುರಿಯದೆ ಭಕುತನು ಬಳಲುವನಲ್ಲದೆ
ಲಿಂಗವು ಬಳಲುವದೆ॥

ಹಣದೊಳ್ ಹಿರಿಯ ಗುಣದೊಳ್ ಹಿರಿಯರು
ಇದನಾಲೋಚಿಸಿ ನೋಡಣ್ಣ।
ಹಣತಾನಿರ್ಪುದು ಕ್ಷಣದೊಳ್ ಪೋಪುದು
ಗುಣವೇ ಸ್ಥಿರವದು ನರಿಯಣ್ಣ॥

ಶ್ರೀ ವಿಜಯ ಮಹಾಂತೇಶ ಲಾವಣಿಯಲ್ಲಿ ಇಂತಹ ಮನೋಹರ ತಿಳಿನುಡಿಗಳು ತುಂಬಿ ತುಳುಕಿವೆ. ಪ್ರತಿಯೊಂದು ನುಡಿಯಲ್ಲಿಯೂ ಆ ಚಿಕ್ಕ ವಯಸ್ಸಿನಲ್ಲಿ ಅರ್ಥ ಗರ್ಭಿತ ವಿಚಾರಗಳನ್ನು ಹೆಣೆದದ್ದು ನೋಡಿದರೆ, ಅವರ ವ್ಯಕ್ತಿತ್ವ ಅರ್ಥವಾಗ ದಿರದು. ಇಂದು ಸಾಮಾಜಿಕ ಜೀವನದಲ್ಲಿ ಎಡಬಿಡವೆ ಕಾರ್ಯ ಮಾಡುತ್ತ ಮಾನವೀಯ ಸೇವೆ ಸಲ್ಲಿಸುತ್ತಿದ್ದರೂ, ಬಿಡುವು ಮಾಡಿಕೊಂಡು ರಚನೆ ಮಾಡು ತ್ತಿರುವುದು ನಾಡಿನ ಪುಣ್ಯ ವಿಶೇಷವೆಂದು ಹೇಳಬಹುದು. ಇವರ ಕಾರ್ಯಕ್ಷೇತ್ರ, ಸಾಮಾಜಿಕ ಜೀವನ ಸಾಹಿತ್ಯ ಸೇವೆ ಅವರ ಅಂತರಂಗವನ್ನು ಅರ್ಥಮಾಡಿಕೊಂಡ ವರಿಗಷ್ಟೇ ಅರ್ಥವಾಗುತ್ತಲ್ಲದೆ, ಇನ್ನುಳಿದವರಿಗೆ ಅರ್ಥವಾಗದು. ಶ್ರೀ ಜಗದ್ಗುರು ಗಳವರ ಚಿಕ್ಕವಯಸ್ಸಿನ ಕಾವ್ಯಪ್ರೇಮವು ಇಂದು ಬೃಹದಾಕಾರದಲ್ಲಿ ಹರಿಯುತ್ತ, ಇನ್ನುಳಿದ ನೂರಾರು ಸಾಹಿತಿಗಳ ಗ್ರಂಥಗಳನ್ನು ತಮ್ಮ ಶ್ರೀಮಠದಿಂದ ಪ್ರಕಟಿಸು ತ್ತಿರುವದು ನೋಡಿದರೆ ಎಂತಹ ವೈರಿಗೂ ಮೆಚ್ಚುವಂತಹ ಕಾರ್ಯ ಮಾಡುತ್ತಿ ದ್ದಾರೆ. ಸಮಾಜವು ಅವರ ಕಾರ್ಯವನ್ನು ಮಾಡಿಕೊಂಡಷ್ಟು ಒಳಿತಾಗುತ್ತದೆ. ಹಿತವಾಗುತ್ತದೆ.

ಶ್ರೀ ಜಗದ್ಗುರು ಸನ್ನಿಧಿಯವರಿಗೆ ವಿಜಯ ಮಹಾಂತೇಶನೆಂದರೆ ಪಂಚ- ಪ್ರಾಣ. ದಿನದಿನವೂ ಅವರನ್ನು ಸ್ಮರಿಸುತ್ತಿರುತ್ತಾರೆ. ಮೇಲಿಂದ ಮೇಲೆ ವಿಜಯ ಮಹಾಂತೇಶನ ಪೀಠದಿಂದ, ಹಾಗೂ ಶಿವಯೋಗ ಮಂದಿರದಿಂದ ವಿದ್ಯಾಬುದ್ಧಿ ಕಲಿತು ದೊಡ್ಡವರಾಗಿದ್ದೇವೆ. ಎಂದು ಅಪ್ಪಣೆ ಕೊಡಿಸುತ್ತಿರುತ್ತಾರೆ. ಇಂತಹವರು ಸಿಗುವದು ಬಹಳ ದುರ್ಲಭ.

ಈ "ವಿಜಯ ಮಹಾಂತೇಶ ಲಾವಣಿ"ಗಳ ಪ್ರತಿಗಳು ಮುಗಿದು ೩೦ ವರ್ಷಗಳು ಆದರೂ, ಅಚ್ಚಿಗೆ ಅಣಿಯಾಗಿದ್ದಿಲ್ಲ. ಈ ಲಾವಣಿಯ ಮುಗಿದ ಪ್ರತಿಗಳು ಈ ವರೆಗೂ ಯಾರಲ್ಲಿಯೂ ಸಿಗದ ಮೂಲಕ ಪುನರ್ಮುದ್ರಣ ಮಾಡಲು ಸಾಧ್ಯವಾಗಿದ್ದಿಲ್ಲ. ಮೇಲಿಂದ ಮೇಲೆ ಶ್ರೀ ಜಗದ್ಗುರು ಸನ್ನಿಧಿಯವರಿಗೆ ಪ್ರಕಟ ಮಾಡಲು ತಿಳಿಸಿದವು. ಆದರೆ ಪ್ರತಿಗಳು ದೊರೆಯದ ಮೂಲಕ ಬಿಡಲಾಗಿದೆ ಎಂದು ತಿಳಿಸಿದರು. ಕೆಲವು ದಿನಗಳ ಹಿಂದೆ ಹುಬ್ಬಳ್ಳಿಯಲ್ಲಿಯ ಮೂರುಸಾವಿರಪ್ಪ ಪಟ್ಟಣಶೆಟ್ಟರು "ವಿಜಯ ಮಹಾಂತೇಶ ಲಾವಣಿ"ಯನ್ನು ತಂದುಕೊಟ್ಟರು. ಶ್ರೀಸನ್ನಿಧಿಯವರಿಗೂ, ಹಾಗೂ ನಮಗೂ ಅತಿ ಆನಂದವಾಗಿ ಪುನರ್ಮುದ್ರಣ ಮಾಡಲು ಶ್ರೀ ಜಗದ್ಗುರು ಗಂಗಾಧರ ಧರ್ಮಪ್ರಚಾರಕ ಮಂಡಳಕ್ಕೆ ತಿಳಿಸಿದ ಪ್ರಕಾರ, ಮಂಡಳವು ಅಚ್ಚು ಮಾಡಿಸಿ, ಮಹಾಂತೇಶನ ಭಕ್ತರಿಗೆ ಮಹದುಪಕಾರ ಮಾಡಿದ್ದಾರೆ. ಮತ್ತು ವಿಜಯ ಮಹಾಂತೇಶ್ವರ ಪುರಾಣವನ್ನು ಸಹ ಪ್ರಕಟಿಸಲು ಮಂಡಳವು ಒಪ್ಪಿದ್ದು ನಮಗೆ ಅತೀವ ಆನಂದವಾಗಿದೆ.

ಜೆ. ಜಿ. ಮಂಡಳವು ಮಾಡುತ್ತಿರುವ ಸಾಹಿತ್ಯ ಸೇವೆಯು ಅಗಾಧವಾದುದು, ಶ್ರೀ ಜಗದ್ಗುರು ಸನ್ನಿಧಿಯವರು ಮಾಡುತ್ತಿರುವ ಈ ಧಾರ್ಮಿಕ ಸಾಹಿತ್ಯ ಸೇವೆಯು ನಿರಂತರ ನಡೆದು ರಾಷ್ಟ್ರಕ್ಕೆ ಹಿತಕಾರಿಯಾಗಲೆಂದು ಹೃದಯಾರೆ ಆಶಿಸುತ್ತೇವೆ, ವೇಳೆಗೆ ಸರಿಯಾಗಿ ಮುದ್ರಿಸಿಕೊಟ್ಟ ಪರಂಜ್ಯೋತಿ ಪಾವರ್ ಪ್ರಿಂಟಿಂಗ್ ಪ್ರೆಸ್ಸಿನವರಿಗೂ ಮಂಗಲಗಳು.

೧೫-೪-೮೦
ಹಳ್ಯಾಳ.

ಶ್ರೀ ನಿ. ಪ್ರ. ಮಹಾಂತ ಸ್ವಾಮಿಗಳು
ಚಿತ್ತರಗಿ ಸಂಸ್ಥಾನಮಠ
ಇಲಕಲ್ಲ.

ನಲ್ನುಡಿ

ಸದ್ಯದ ಶತಮಾನಕ್ಕೆ ನವಯುಗವೆಂದು ಕರೆಯಲು ಅನೇಕ ಸಬಲ ಕಾರಣಗಳುಂಟು. ರಾಜನೀತಿಯಲ್ಲಾದ ಬದಲಾವಣೆ ಜನಸಾಮಾನ್ಯರಲ್ಲಿ ಕಾಣುತಿಹ ಜಾಗ್ರತಿ, ಜಗದ ಜನರ ಜೀವನ ಮಟ್ಟವನ್ನು ಹೆಚ್ಚಿಸಲು ಹಂಬಲ ಹೊಸ ಶೋಧ ಇತ್ಯಾದಿಗಳೇ ಅವುಗಳಲ್ಲಿ ಎದ್ದು ಕಾಣುತಿಹ ಕಾರಣಗಳು. ಮುಂದೆ ಬಂದಿಹ ಮತ್ತು ಹಿಂದೆ ಉಳಿದ ರಾಷ್ಟ್ರಗಳಲ್ಲಿ ಜನತೆಯ ಜೀವನ ಮಟ್ಟವನ್ನು ಏರಿಸಲು ಹಂಬಲವು ಹೆಚ್ಚುತಿಹುದು. ನಮ್ಮ ಈ ಭರತಖಂಡದಲ್ಲಿಯೂ ಕೂಡಾ ಆ ವಿಚಾರವು ಹೆಚ್ಚಾಗಿ ಪ್ರಚಾರದಲ್ಲಿ ತೋರುತಿಹುದು.

ಈ ನಮ್ಮ ಭಾರತಕ್ಕೆ ಇದು ನವಯುಗವೆನ್ನಲು ಮತ್ತೊಂದು ಕಾರಣವೆಂದರೆ ಜೀವನಕ್ಕೆ ತಳಹದಿ ನೀತಿಯು, ಆ ನೀತಿಯ ಮಟ್ಟವನ್ನು ಮೊದಲು ಭದ್ರತಳಹದಿಯಲ್ಲಿ ಹಾಕಲು ಹೆಣಗಿದ ತ್ಯಾಗಮೂರ್ತಿ ಮಹಾತ್ಮಾ ಗಾಂಧಿಯವರಿಂದ ನಮಗೆ ಇದು ನವಯುಗವಾಗಿ ಎದ್ದು ಕಾಣತಿಹುದು.

ಇನ್ನು ಕರ್ನಾಟಕದ ಜನತೆಗೂ ಇದು ಒಂದು ಹೊಸ ಯುಗವೆನ್ನಿಸಿಕೊಳ್ಳಲು ಮೂಲೆ ಮೂಲೆಯಲ್ಲಿ ಎಲ್ಲೆಡೆಯಲ್ಲಿ ಕೇಳಿಬರುತಿಹ ಕನ್ನಡವನ್ನಾಡುವ ಜನರಿಂದ ಕೂಡಿದ ಕರ್ನಾಟಕ ಪ್ರಾಂತದ ಬೇಡಿಕೆಯ ಕೂಗೆಂಬ ಕಹಳೆಯ ಸದ್ದೂ ಸಹ ಈ ಹೊಸ ಯುಗದ್ದೇ ಆಗಿದೆ.

ಕನ್ನಡ ನಾಡಿನ ಪ್ರಮುಖ ಸಮಾಜವಾದ ವೀರಶೈವರಿಗೂ ಕೂಡಾ ಇದು ಹೊಸ ಯುಗವಾಗಿ ಪರಿಣಮಿಸಲು ಕಾರಣವೇನೆಂದರೆ ಮಹಾತ್ಮರ ನೀತಿಯ ತಿರುಳಾದ ಯಾವ ಸತ್ಯ ಅಹಿಂಸೆ ಹರಿಜನೋದ್ಧಾರವನ್ನು ಹನ್ನೆರಡನೆಯ ಶತಮಾನದಲ್ಲಿ ಹರಡಿ ಆಗಿನ ಜನತೆಯಲ್ಲಿ ಜಾಗ್ರತಿಯನ್ನುಂಟುಮಾಡಿ ಇಂದಿನ ಜನಕ್ಕೂ ಸಾಧ್ಯವಾಗದಂಥ ಹರಿಜನೋದ್ಧಾರದ ಕಾರ್ಯವನ್ನು ಮಾದರಸನೆಂಬ ಕುಲಜನ ಕುವರಿಯನ್ನು ಹರಳಯ್ಯನೆಂಬ ಹರಿಜನನ ಕುವರಂಗೆ ಕೊಟ್ಟು, ಲಗ್ನಮಾಡಿ, ನೀತಿವಂತನೇ ಕುಲಜ ಅನಾಚಾರಿಯೇ ಹೊಲೆಯನೆಂಬ ವೀರಶೈವ ಮತದ ತಿರುಳನ್ನು ಜಗಕರುಹಿ "ಕಳಬೇಡ ಕೊಲಬೇಡ ಹುಸಿಯ ನುಡಿಯಲು ಬೇಡ ಮುನಿಯ ಬೇಡ ಅನ್ಯರಿಗೆ ಅಸಹ್ಯ ಪಡಬೇಡ ತನ್ನ ಬಣ್ಣಿಸಬೇಡ ಇದಿರು ಹಳಿಯಲು ಬೇಡ" ಎಂಬ ವಚನವ ಹೇಳಿ ಪ್ರತಿಯೊಬ್ಬ ವೀರಶೈವನೆಂತಿರಬೇಕೆಂಬ ದಾರಿಯತೋರಿ, ಎನಗಿಂತ ಕಿರಿಯರಿಲ್ಲೆನೆದು ಸಂಬೋಧಿಸಿಗೊಂಡು, ಅಹಂಭಾವವನಳಿದು ಶಿವಭಕ್ತರಿಗಿಂತ ಹಿರಿಯರಿಲ್ಲೆಂದು ಸಾರಿ ಅಳಿಸಿ ಹೋಗುತ್ತಿರ್ದ ವೀರಶೈವ ಮತವ ಬೆಳೆಸಿ,

ದ್ವಿತೀಯ ಶಂಭುವೆಂದು ಕರೆಯಿಸಿಕೊಂಡ ಬಸವಣ್ಣನನ್ನೂ ಮತ್ತು ಆಗಿನ ಎಂಟುನೂರು ವರುಷದ ಹಿಂದಿನ ಶರಣರನ್ನೂ ಇಂದಿನ ವರೆಗೆ ಮರೆತು ಈ ಯುಗದಲ್ಲಿ ಅವರ ಅರಿವು ವೀರಶೈವರಿಗಷ್ಟೇ ಆಗದೆ ಇಡೀ ಕರ್ನಾಟಕದ ಜನತೆಗೆಲ್ಲ ಆಗಿರುವದರಿಂದ ಇದು ನಮಗೆ ಮಹತ್ವದ ನವಯುಗವಾಗಿರ್ದುದು, ಮಹಾತ್ಮರ ಯಾವ ತತ್ವಗಳನ್ನು ನಿಷ್ಠಾವಂತರಾದ ವೀರಶೈವ ಶಿವಶರಣರು ಹನ್ನೆರಡನೆಯ ಶತಮಾನದಲ್ಲಿ ಪ್ರಚಾರದಲ್ಲಿ ಮತ್ತು ಕಾರ್ಯರೂಪದಲ್ಲಿ ತಂದರೂ ಆ ತತ್ವಗಳ ಅರಿವು ವೀರಶೈವರಿಗಲ್ಲದವರಿಗೆ ಸಾಕಷ್ಟು ಆಗಲಿಲ್ಲ. ಅಲ್ಲದೆ ವೀರಶೈವರ ಮುಂದಿನ ಪೀಳಿಗೆಗೂ ಕೂಡ ಅವುಗಳ ಮಹತ್ವವು ತಿಳಿಯದಾಯಿತು. ಅಂಥ ಮಹತ್ವವನ್ನು ಈ ಇಪ್ಪತ್ತನೆಯ ಶತಮಾನದಲ್ಲಿ ಕಂಡುಕೊಂಡು ಆ ಶರಣರ ವಚನಗಳನ್ನು ವೀರಶೈವರೂ ಮತ್ತು ಇತರರೂ ತಮ್ಮ ತಮ್ಮ ಮನೆಗಳಲ್ಲಿ ಹಾಡಿಹಾಡಿ ಆನಂದ ಪಡುತಿಹರು. ಹಿರಿಯರು, ಕಿರಿಯರು ಸವಿಯನ್ನು ಸ್ವಾದಿಸುತ್ತಿಹರು.

ಈ ಹೊಸ ಯುಗದಲ್ಲಿ ನಮಗೆ ಮತ್ತೆ ಹೊಸ ಶೋಧನವೆಂದರೆ ಇಂಥ ಶರಣರ ಪುನರ್ದರ್ಶನವು. ಅಂಥ ಶರಣರೂ ಕೂಡ ಹೇಳಿಕೊಳ್ಳುವಷ್ಟು ಸಂಖ್ಯೆಯಲ್ಲಿ ಕಾಣಿಸಿಕೊಂಡಿಲ್ಲ. ಆ ವಿರಳ ಸಂಖ್ಯೆಯಲ್ಲಿ ವಿರಾಜಮಾನರಾಗಿ ಕಾಣುತಿರ್ದ ವಿಭೂತಿ ಪುರುಷರೆಂದರೆ ನಮ್ಮ ಶ್ರೀ ವಿಜಯ ಮಹಾಂತಶಿವಯೋಗಿವರ್ಯರು. ಯಾವಾಗಲೂ ಸನಿಹದ ಸೊಗಸಿನ ಸೌಂದರ್ಯವು ಸಹಜ ಮಾನವರ ಲಕ್ಷವನ್ನು ಹೆಚ್ಚಾಗಿ ಸೆಳೆಯದು ಎಂಬ ನಾಣ್ಣುಡಿಯಂತೆ ಮತ್ತು ಮದ್ದು ಹಿತ್ತಲದಲ್ಲಿದ್ದರೂ ಅದು ಮದ್ದೊ ಎಂಬ ಶಂಕೆ ಬರುವಂತೆ ಈ ನಾಡಿನ ಜನರಿಗೆ ಆಗಬೇಕಾಗಿದ್ದ ಆ ಮಹನೀಯರ ಅರಿವು ಸಾಕಷ್ಟಾಗಿಲ್ಲ. ಆದರೂ ಯಾವದೇ ನ್ಯಾಯಾಲಯದಲ್ಲಿ ಅವರ ಪುಣ್ಯನಾಮವನ್ನು ಸ್ಮರಿಸಿ ಹೇಳಿದರೆ ನ್ಯಾಯ ಸಿಕ್ಕೀತೆಂಬ ಭಾವನೆ ಸರ್ವರಿಗೂ ಆಗಿ ಈ ಭುವಿಯಲ್ಲಿ ಆಗಿಹೋಗಿಹರೊ ಅಂಥ ಜಗನ್ಮಾನ್ಯ ವ್ಯಕ್ತಿಗಳ ಚರಿತಾಮೃತವು ಜನರಿಗೆ ಅದರಲ್ಲಿಯೂ ಅಜ್ಞ ಜನರಿಗೆ ತಿಳಿಯುವದು ಅತ್ಯವಶ್ಯವು. ಅದರಲ್ಲಿಯೂ ಇಂಥ ಮಹಾತ್ಮರ ಚರಿತ್ರೆಯನ್ನು ಪ್ರಣವ ಸ್ವರೂಪಿಗಳೂ ಅವರ ಪಟ್ಟಕ್ಕೆ ಬಾಧ್ಯರೂ ಆದ ಶ್ರೀ ಮಹಾಂತಸ್ವಾಮಿಗಳ ಅಮೃತವಾಣಿಯಲ್ಲಿ ಕೇಳುವದೆಂದರೆ ಅದೂ ಒಂದು ಈ ನವಯುಗಕೆ ಸರಿಯಾದ ನವಹಾದಿಯೇ ಸರಿ. ಇಂಥ ಪುಣ್ಯಪುರುಷರ ಚರಿತ್ರವನ್ನು ಸವಿಸ್ತಾರ ಬಣ್ಣಿಸಹೋದರೆ ದೊಡ್ಡದೊಂದು ಗ್ರಂಥವೆ ಆಗುವದೆಂಬ ಭಾವನೆಯಿಂದ ಒಂದೆರಡು ವಿಷಯಗಳನ್ನಷ್ಟೇ ಇಲ್ಲಿ ಕಾಣಿಸುವದುಚಿತವು. ಹುನಗುಂದ ಭಾವಿಯಲ್ಲಿ ಕಾಣಲಸಾಧ್ಯವಾದ ನೀರು ಈ ಮಹಾತ್ಮರ ಪವಿತ್ರತೆಯಿಂದ ದೊಡ್ಡ ಸೆಲೆಯ ರೂಪದಲ್ಲಿ ಹೊರಟದ್ದು ಸರ್ವರಿಗೂ ಅರಿತ ಮಾತಾಗಿದೆ. ಮತ್ತೊಮ್ಮೆ ರಾಮಗಟ್ಟಿಯ ಮಠದಲ್ಲಿ ಸ್ವಾಮಿಗೆ ನುಷ್ಟ

ನೊಬ್ಬನು ಮೋಸದಿಂದ ವಿಷವನುಣಿಸಲು ಅಂತ ಭಕ್ತರು ಔಷಧಿಯ ಸೇವನೆಗೆ ಬಿನ್ನವಿಸಿಕೊಳ್ಳಲು ಸ್ಥಿರ ವೀರಶೈವನಿಗೆ ಪ್ರಸಾದವು ವಿಷವೆಂದೂ ಅಗಲಾರದೆಂದು ಅವರ ಬಾಧೆಯೂ ಆಗದೆಂದೂ ಜನರು ಅಚ್ಚರಿಗೊಳ್ಳುವ ರೀತಿಯಲ್ಲಿ ತಿಳಿಸಿ ಹೇಳಿದರು. ವಿಷವನಿಕ್ಕಿದ ದುರುಳನೇ ಮೃತನಾದ ಸತ್ಯ ಸಂಗತಿಯು ಈಗ್ಯೂ ಎಲ್ಲ ಜನರ ಬಾಯಿಂದ ಕೇಳಿಬರುತ್ತಿರುವದು ಶಿವಯೋಗ ಮಂದಿರಕೆ ಸ್ಥಳವ ನಾರಿಸಿ, ಇಂದಿನ ವೀರಶೈವರ ಮಂದಿರವನ್ನು ಮಾಡಲು ಹೆಣಗಿದ ಪರಮ ಪೂಜ್ಯ ಹಾನಗಲ್ಲ ಶ್ರೀ ಕುಮಾರಸ್ವಾಮಿಗಳವರಿಗೆ ಧೈರ್ಯವ ತೋರಿದ ದಿವ್ಯದೃಷ್ಟಿಯ ಅಮೋಘ ಪುರುಷರು ಇವರೇ. ಈ ನಮ್ಮ ವಿಜಯ ಮಹಾಂತ ಶಿವಯೋಗಿಗಳು ಇಂಥ ಮಹತ್ವದ ಅನೇಕ ವಿಷಯಗಳು ಜನರ ಬಾಯಲ್ಲಿ ಈಗಲೂ ಕೇಳಿಬರುತ್ತಿರುವವು, ಇಂಥ ಶ್ರೇಷ್ಠರ ಚರಿತಾಮೃತವನ್ನು, ಕತೆ ಪುರಾಣ ರೂಪಗಳಲ್ಲಿ ಪ್ರಕಟಿಸಿದರೆ ಅದರ ಪ್ರತಿಫಲವು ಬರಹ ಬಲ್ಲ ಜನರಿಗಷ್ಟೇ ಸಿಗುವದು. ಎಲ್ಲ ಬರಹಗಳನ್ನು ಎಲ್ಲರೂ ಓವರು. ಇಂಥದನ್ನು ಓದುವವರ ಪ್ರಮಾಣವು ೧೦೦ ಕ್ಕೆ ೧ ಕೂಡಾ ಆಗುವದೋ ಎಂಬ ವಿಚಾರದಿಂದ ಮತ್ತು ಶ್ರೀಮಂತ, ಬಡವ, ಹಿರಿಯರು, ಹಿರಿಯರು, ಸುಜ್ಞರು, ಅಜ್ಞರು ಸರ್ವಜನರಿಗೂ ಈ ಪುಣ್ಯವಂತರ ಪವಿತ್ರ ಚರಿತ್ರೆಯ ಸುಧಾರಸವು ದೊರಕಲೆಂಬ ಸದಿಚ್ಛೆಯಿಂದಲೂ ಮತ್ತು ಜನಜಂಗುಳಿಯ ಹೃದಯದಿಂದ ಅನೀತಿಯನ್ನು ಹೊರದೂಡಿ, ನೀತಿಯುತ ಸಮಾಜವನ್ನು ಕಟ್ಟಲು ಸಾಹಿತಿಗೆ ಸದ್ಯದಲ್ಲಿ ಸರಿಯಾದ ಕಲೆಯೆಂದರೆ ಲಾವಣಿಯೇ ಸುಲಭ ಸಾಧ್ಯವಾದ ಉಪಾಯವೆಂದರಿತು ಮತ್ತು ಚರಿತ್ರೆಯಲ್ಲಿ ಕೆಲಜನರ ಚಿಕ್ಕದೊಂದು ಗುಂಪಿನ ಪ್ರಮುಖನಾದ ಶಿವಾಜಿಯು ಮುಂದೆ ಮಹಾರಾಜನಾಗಲು ಮುಖ್ಯ ಸಾಧನವು ಇಂಥ ಲಾವಣಿಗಳು ಮತ್ತು ಲಾವಣಿಕಾರರು ಎಂಬ ವಿಷಯವನರಿತು ಅದೇ ಅಸ್ತ್ರವನ್ನು ಪಯೋಗಿಸಿ ಜನತೆಯನ್ನು ಜಾಗ್ರತೆಗೊಳಿಸಿ ನೀತಿವಂತರನ್ನಾಗಿ ಮಾಡಿ, ಲೋಕವುದ್ಧಾರ ಮಾಡಹೊರಟ ನಮ್ಮ ಈ ಲಾವಣಿಯ ಬರಹಗಾರರಾದ ಶ್ರೀ ಮಹಾಂತದೇವರು ಇಲಕಲ್ಲ ಇವರ ಸಾಹಸವು ಸಮಯೋಚಿತವಾಗಿರುವದು. ಇವರು ಈ ಚಿಕ್ಕ ವಯಸ್ಸಿನಲ್ಲಿ ಇಂಥ ಸಾಹಸ ಮಾಡಿದ್ದು ನೋಡಿದರೆ ಇವರು ಸನಿಹದಲ್ಲಿ ನಿಜವಾಗಿ ಗಣ್ಯಸಾಹಿತಿಗಳಾಗುವರೆಂಬುದು ನಿಸ್ಸಂದೇಹವು.

ಈ ಮುನ್ನುಡಿಯನ್ನು ಬರೆಯಲು ಎನಗಾವ ಅರ್ಹತೆಯಿರುವದೋ ನಾನರಿಯೆ. ಆದರೂ ಗುರುಗಳಾದ ಮಹಾಂತೇಶನು ಆಶೀರ್ವದಿಸಿದ ಪ್ರಕಾರ, ಅವರ ಆಜ್ಞೆಗನುಸಾರವಾಗಿ ಸಂಗಮೇಶನ ಕೃಪೆಯಿಂದ ಪ್ರೇರಣೆಯನ್ನು ಹೊಂದಿ ಭಕ್ತನಿಗುಚಿತರೀತಿಯಲ್ಲಿ ಈ ಮುನ್ನುಡಿಯನ್ನು ಬರೆದಿರುವವು.

ಶ್ರೀ ವಿಜಯ ಮಹಾಂತೇಶನಲ್ಲಿ ಶ್ರದ್ಧೆಯುಳ್ಳ ಸರ್ವಭಕ್ತರೂ ಈ ಲಾವಣಿಯನ್ನು ಪ್ರಚಾರ ಮಾಡಿದಲ್ಲಿ, ವೀರಶೈವರ ಉದ್ಧಾರವಷ್ಟೇ ಆಗದೆ ಸರ್ವರ ಕಲ್ಯಾಣವಾಗುವದು ನಿಶ್ಚಯವು. ಅದಕ್ಕಾಗಿ ಜನತಾ ಕಲ್ಯಾಣ ಮಾಡ ಬಯಸುವ ಸರ್ವರೂ ಈ ಚಿಕ್ಕ ಹೊತ್ತಿಗಿಗೆ ಪ್ರೋತ್ಸಾಹನಕೊಟ್ಟು ಈ ಲಾವಣಿಯ ಉಪಯೋಗ ಮಾಡಿಕೊಂಡು ಶ್ರೀ ಮಹಾಂತೇಶನ ಕೃಪೆ ಪಡೆಯುವರೆಂದು ನಂಬುತ್ತೇನೆ.

ಹುನಗುಂದ
೧೬-೨-೧೯೪೯

ಫಕೀರಪ್ಪ ಬಸಪ್ಪ ಕುಲಕರ್ಣಿ
ಸಬ್‌ರಜಿಸ್ಟ್ರಾರ ಹುನಗುಂದ

ಕಿರುನುಡಿ

ಯಾವ ಮಹಾತ್ಮನು ವಿರತಾಗ್ರಗಣ್ಯನಾಗಿ, ಭುವನಜಕ್ಕುಪಕಾರಿಯಾಗಿ, ಶ್ರೀ ಶಿವಯೋಗಮಂದಿರಕ್ಕೆ ಸ್ಥಾನ ತೋರಿಸಿದ ಮಹಾಮಹಿಮನಾಗಿ, ಸರ್ವ ಧಾರ್ಮಿಕ ಪ್ರವೃತ್ತಿ ಪ್ರವಾಹಗಳಿಗೆ ಸಾಗರನೆನಿಸಿ, ಭಕ್ತ ಸಂದೋಹವನ್ನು ಉದ್ಧರಿಸಿ, ಚಿತ್ತರಗಿ ಪೀಠವನ್ನು ಅಲಂಕರಿಸಿ, ಕೊನೆಗೆ ಶಿವಧ್ಯಾನತಲ್ಲೀನನಾಗಿ, ಬೆಳಗಿ ಹೋದ ಆ ಶಿವಯೋಗಿವರೇಣ್ಯ **"ಶ್ರೀ ವಿಜಯ ಮಹಾಂತೇಶ ಲಾವಣಿ"**ಯೊಂದನ್ನು ಸರ್ವಸಾಮಾನ್ಯರಿಗೂ ಸಹ ಅರಿಯುವಂತೆ ಸರಳ ಶೈಲಿ ಯಲ್ಲಿ ರಚಿಸಿದ್ದೇನೆ. ಮಹಾಂತೇಶನ ಪೂರ್ಣ ವೃತ್ತಾಂತವನ್ನು ತಿಳಿಯಬಯಸು ವವರು ಇದನ್ನು ಓದಿದರೆ ಗೊತ್ತಾಗುವದು ಮತ್ತು ಮಧ್ಯದಲ್ಲಿ ಆ ಯತಿಕುಲ ದೀಪನಿಗೆ ಪ್ರಿಯವಾದ ಜಗದಣ್ಣ ಬಸವಣ್ಣನವರ ಕೆಲವು ವಚನಗಳನ್ನು ಆಯ್ದು ಈ ಲಾವಣಿಯಲ್ಲಿ ಕೂಡಿಸಿರುವದರಿಂದ ಓದುಗರಿಗೆ ಸೊಗಸೆನಿಸಬಹುದೆಂದು ನನ್ನ ಮನೀಷೆ. ಇದು ಲಾವಣಿ ಹಾಡುವವರಿಗೂ ಬಲು ಉಪಯುಕ್ತವಾಗುವದೆಂದು ಬೇರೆ ಹೇಳಲಾರೆ. ನಾನಾದರೂ ಲಾವಣಿ ಕಟ್ಟುವವನಲ್ಲವಾದುದರಿಂದ ದೋಷ ಗಳಿಲ್ಲವೆಂದೂ ಬರೆಯಲಾರೆ.

ಕೊನೆಯದಾಗಿ **ಶ್ರೀ ವಿಜಯ ಮಹಾಂತ ಯತೀಂದ್ರನ** ಆ ಬಾಳ ತಿರುಳಿನ ತತ್ವವನ್ನು ಚಿತ್ತದ ಭಿತ್ತಿಯಲ್ಲಿ ಒತ್ತರಿಸಿ ಬಹುದಿನಗಳವರೆಗೆ ಉಳಿಸಿ, ಅದನ್ನೇ ಬೆಳಸಿ, ಗಳಿಸಿ ಶಿವಸುಖದ ಸವಿಯುಂಡು ನಲಿದು ಪುನೀತರಾಗಿ ಕೃತಾರ್ಥ ರಾದರೆ ಬರೆದವನು ಧನ್ಯನಲ್ಲವೆ?

ಶಿವಯೋಗಮಂದಿರ **ಮಹಾಂತದೇವರು**

ತಾ. ೨೫-೧೧-೪೮

.... ವಿಜಯ ಮಹಾಂತೇಶ ಲಾವಣಿ ....

ಧಾಟಿ: ಖಡೀಚಾಲ

ಕೇಳಿರಿ ಪೇಳುವೆ ಚಿತ್ತರಗೀಶನ ಚರಿತವ ನಾನು ನಿಮಗೆಲ್ಲಾ|
ಕಾಲನ ಜಯಿಸಿದ ಲೀಲೆಯಮಾಡಿದ ಶ್ರೀಗುರು ಮೂರ್ತಿಯ ಕತೆಯಲ್ಲಾ||
ತರತರ ತರುಗಳ ಲತೆಗಳ ಹಳ್ಳಗಳಿಂದಲಿ ಶೋಭಿಪ ಕರುನಾಡು||
ಉರುತರ ಜ್ಞಾನದ ಖಣಿಗಳ ಯತಿಕುಲ ತಿಲಕರ ಪಡೆದಿಪ ಸಿರಿನಾಡು||
ಈಪರಿ ರಂಜಿಪ ಕನ್ನಡ ನಾಡೊಳು ಮೈಸೂರೆಂಬುವ ಸುಪ್ರಾಂತ|
ಶ್ರೀಪತಿ ಪಂಡಿತವರ್ಯರ ಪೆತ್ತಿಪ ರಾಜರು ವಾಸಿಪ ಸಿರಿಪ್ರಾಂತ||
ಮೆರೆಯುತಲಿರುವೀ ಮೈಸೂರಪ್ರಾಂತದಿ ಎಸೆಯುವ ಸಿಸಿವಾಳೆಂಬೂರು|
ಇರುತಿರೆ ದೇವರ ಧ್ಯಾನವ ಮಾಡುವ ವೀರಯ್ಯನೆಂಬುವನಾಊರೊಳ್||
ಹಿರಿಮತದೊಡೆಯನು ಭಕುತಿ ಶಿರೋಮಣಿಯಾಗುತ ಗುರುಗಳಿಗನುನಯದಿ|
ಶಿರವನು ಬಾಗಿಸಿ ನಿರುತದಿ ಸೇವೆಯ ಮಾಡುವನೀತನು ಬಲುಮುದದಿ||
ಊರೊಳು ಮೆರೆಯುವ ಸರಸತಿಯಂತಹ ಗುಣಮಣಿ ಗೌರಮ್ಮ ಸತಿಯಿವಗೆ|
ವೀರಯ್ಯನೆಂಬುವನಾಕೆಗೆ ದಾನದ ಭಾಗ್ಯದ ಶರಧಿಯು ಅವಳಿಂಗೆ||
ಇಂತಿರೆ ಸದ್ಗುಣ ಭೂಷಿತ ಪುತ್ರನ ಚಿಂತೆಯು ಅವರೊಳು ಬಲವಾಗೆ|
ಚಿಂತೆಯ ಕೇಳುತ ಕರುಣದಿ ತನ್ನಯ ಚಿತ್ಕಳೆ ಕಳುಹಿದ ಶಿವನಾಗ||
ಸದಮಲ ಕೃಪೆಯಿಂ ಗರ್ಭವು ಧರಿಸಿತು ಸ್ತ್ರೀಮಣಿ ಗೌರೀದೇವಿಂಗೆ|
ಸುದಿನದಿ ಮಂಗಲ ತಿಥಿಯೊಳು ಪಡೆದೊಡೆನಾಕೆಗೆ ತಮವದು ತಾಪೋಗೆ||
ಗೌರಮ್ಮನಾಕ್ಷಣ ಪುತ್ರನ ನೋಡುತ ಪರಶಿವನಂಶವು ಎನ್ನುತ್ತ|
ಹರುಷದಿ ಮಗುವಿನ ಮೊಗವನು ಹಿಡಿಯುತ ಮುದ್ದನು ಕೊಡುವಳು ಹಿಗ್ಗುತ್ತ||
ಶರಣೆಯರೆಲ್ಲರು ಕೂಡುತ ಆಕೆಯ ಹಿರಿಮೆಯ ಪೊಗಳಿದರೊಲಿದೀಯ|
ತಿರೆಯೊಳ್ ಮಾನ್ಯಳು ಎನ್ನುತ ಹೆಂಗಳೆರನ್ನೆಯು ನೀತಾಯಿ||
ಮುತ್ತುಗಳಿಂದಲಿ ಶೋಭಿಪತೊಟ್ಟಿಲ ತಂದರು ಮುತ್ತೈದೆಯರಾಗ||
ಉತ್ತಮ ಪೂಗಳ ಹಾಸುತ ಅದರೊಳು ಕಂದನ ಮಲಗಿಸಿದರು ಬೇಗ||
ಸುಂದರ ಮೂರ್ತಿಯೆ ಶರಣರ ಕಂದನೆ ಅಂದದಿ ಜೋಗುಳ ಪಾಡಿದರು|
ಚಂದಿರ ರೂಪಶನೆ ಕಾಮವಿನಾನೆ ಎನ್ನುತ ಜೋ ಜೋ ತೂಗಿದರು||
ಮುದವನು ಬೀರುತ ಜೋಗುಳ ಪಾಡುತ ನಾಮವನ್ನಿಟ್ಟರು ಬಾಲಕನೆ|
ಮುದದಿಂದೆಲ್ಲರು ಕೂಡುತ ಕರೆದರು ಮಳೆಯಪ್ಪನೆಂದು ಅವಾಗ್ಗೆ||

ಬಿದಿಗಿಯ ಚಂದ್ರನ ತೆರದಲಿ ಬೆಳೆಯುವ ಮುದ್ದಿನ ಮಗುವಂ ನೋಡುತ್ತ||
ಪ್ರೊದಿಸುತ ಕುಂಚಿಗೆ ತರತರದೊಡವೆಯ ಹಾಕುತ ಮುದ್ದಿಸಿ ನಲಿವುತ್ತ||
ತಾಯಿಗೆ ತೋಷವ ನೀಡುತ ಮಳೆಯಪ್ಪಾರ್ಯನು ಬೆಳೆದನು ನಗೆಯಿಂದ|
ತಾಯಿಯ ಮಾತನು ಮೀರದೆ ಶೀಲದ ಮಾರ್ಗದಿ ನಡೆವನು ಬಗೆಯಿಂದ||
ಬಾಲಕ ಮಳಿಯಪ್ಪಾರ್ಯನ ಶೈಶವ ಲೀಲೆಯ ಹೇಳುವೆ ಕೇಳಿರಿ ತಾವ್||
ಬಾಲನು ನಾನೈ ಅರಿತಷ್ಟುಸುರುವೆ ತಪ್ಪುಗಳಿದ್ದರೆ ತಿದ್ದಿರಿ ನೀವ್||
ಮನುಜರ ತೆರದೋಳ್ ಗೆಳೆಯರ ಸಂಗಡ ಮದುವೆಯ ಗೊಂಬೆಯ ನಾಡಲಿಲ್ಲ||
ತನಗನುಚಿತ ಗೆಳೆಯರ ಗೆಳೆತನ ಆತನ ನಿರ್ಮಲ ಚಿತ್ತಕ್ಕದುಸಲ್ಲ||
ದುರ್ಜನ ಸಂಗವು ಕಜ್ಜಿಯ ಬಗೆಯೊಳ್ ಕಷ್ಟವು ಕೊಡುವದು ಅವನೆಂದು||
ದುರ್ಜನ ಸಂಗಕ್ಕಿಂತಲು ಹೆಚ್ಚಿಗೆ ಒಬ್ಬನೆ ಇರುವದೆ ಲೇಸೆಂದ||
ಲಿಂಗದ ಶಿಲೆಯನು ಸಾಹಸದಿಂದಲಿ ತಂದನು ಓಗರದೋಳಿಟ್ಟು||
ಮಂಗಳ ಹೂಗಳ ಪತ್ರಿಯ ಧರಿಸುವನಾತನು ಭಕುತಿಯ ಅಳವಟ್ಟು||
ಕುಣಿಯುತ ಮಣಿಯುತ ತಣಿಯುತ ನುತಿಸುತ ನಮಿಸುವ ಲಿಂಗಕೆ ಬಲುಮುದದಿ||
ಅಣುಗನತೋಷವ ಪೇಳಲಸಾಧ್ಯವು ಎನ್ನಯ ಮೂಢತೆ ಬುದ್ಧಿಗಿದು||
ಇಂತಿರೆ ಸದ್ಗುಣಿ ಮಳಿಯಪ್ಪಾರ್ಯನಿಗೆಂಟು ವರುಷಗಳುಂಟಾಗೆ||
ಚಿಂತೆಯ ವೀರಯ್ಯ ನೊಡಲೊಳ್ ಸೇರಿತು ಶಾಸ್ತ್ರವ ಕಲಿಸಲು ತನಯೆಂಗೆ||
ಕೂಡಲೆ ಬಿದರಿಯ ಹಿರಿಮಠದೊಡೆಯರ ಹತ್ತಿರ ಬಂದನು ಓಡುತ್ತ||
ಬೇಡಿದನೀಪರಿ ಗುರುವೇ! ಎನ್ನಯ ಪುತ್ರನ ಕೊಡುವೆನು ನಿನ್ನತ್ತ||
ದೀಕ್ಷಾಕಾರ್ಯವ ಮಾಡುತ ಅಣುಗಂಗಾಧರದಿಂದಲಿ ಗುರುವೆ ನೀ||
ಮೋಕ್ಷವ ಪಡೆಯುವ ಮಾರ್ಗವ ಪೇಳುತ ಪಾಲಿಸು ದೀನರ ಪಾಲಕನೆ||
ಕಳೆಯಿಂದೊಪ್ಪುವ ಮಗುವನು ನೋಡುತ ಸಂತಸಪಟ್ಟನು ಗುರುದೇವಾ||
ಮಳಿಯಪ್ಪಾರ್ಯನ ಭಾಗ್ಯವು ತೆರೆಯಿತು ಗುರುವಿನ ಕೃಪೆಯಿಂ ಪೆತ್ತಿಹದೇವಾ||
ಬಿದರಿಯ ಪ್ರಭುಗಳು ಮಳಿಯಪ್ಪಾರ್ಯನ ತಮ್ಮಯ ಮಠಕೆ ಕರತಂದು||
ಸದಮಲ ಮಹೇಶ್ವರ ದೀಕ್ಷೆಯ ಮಾಡಿದರೈ ಬಲು ವೈಭವದಿಂದ||
ಅತಿ ಸುವಿಚಾರದಿ ನಿಪುಣನು ಆದನು ಗುರುವಿನ ಸೇವೆಯ ಮಾಡುತ್ತ||
ಮತಿಯೊಳಗಿರುವಾ ಮಲಿನವ ಕಳೆದನು ಭವಕದು ಮೂಲವು ತಿಳಿಯುತ್ತ||
ಕೆಲದಿನ ಕಳೆಯಲು ಮನದೋಳ್ ಮೂಡಿತು ತಪವಂ ಮಾಡಂದ ಹಿರಿಬಯಕೆ||
ಅಲ್ಲಿಂದ ಹೋದರು ಕಲ್ಬಟ್ಟಾದ್ರಿಗೆ ನಮಿಸುತ ಗುರುವಿನ ಚರಣಕ್ಕೆ||
ಶಿವಾಳ್ ಗ್ರಾಮದ ಭಕುತರು ಬಂದರು ಮಳಿಯಪ್ಪಾರ್ಯನಿದ್ದೆಡೆಗೆ||
ಶಶಿಧರ ರೂಪನೆ ತ್ಯಾಗಿಯೆ ನೀನೈ ಮಳಿಯಪ್ಪಾರ್ಯನೆ ಬಾ ಈಗ||

ಒಳ್ಳಿಹ ತಾಣವು ನಿನಗಾಗಿರುವದು ನಮ್ಮಯ ಊರೊಳು ಬಾ ಬೇಗ।
ನಯದಿಂ ಬೇಡಿದರೀಪರಿ ಭಕುತರು ಅಂತ್ಯದಿ ಚರಣಕೆ ಶಿರಬಾಗಿ॥
ದಯಮಾಡೀಗಳೆ ಭಕುತರ ಸಂತಸ ಏಡಲು ಬಾರೈ ಶಿವಯೋಗಿ॥
ಕೇಳಲಿ ಭಕುತರೆ ಬೀಳುವೆ ನೀಗಳೆ ಎನ್ನಯ ವಚನವ ನಾದರದಿ॥
ಭಾಳಸುಲೋಚನ ನೆನೆವರು ಊರೊಳಗಿದ್ದರೆ ತಪವೆಂತಾಗ್ವದು ಮುದದಿ॥
ಹಿಂದಿನ ಹಿರಿಯರು ಯತಿಕುಲ ತಿಲಕರು ಊರೊಳು ಮಾಡಿದರೇಂಪೇಳಿ॥
ಗೊಂದಲದೊಳಿರುತಲಿ ಶಿವಯೋಗದ ಸಿದ್ಧರು ಅದರೆ ಏಂ ಪೇಳಿ॥
ಹುಲಿಗಳು ಕರಡಿಗಳು ಇರುತಿಹವೆಂದರೆ ತಪವೇ ಧನವಾಗಿರುವರ್ಗೆ॥
ಮಲ ಪಲ್ಲಯ ತೆರೆದೋಲಾಗುವವೈ ಶಾಂತಿ ಪ್ರಧಾನವಿರುವರ್ಗೆ॥
ಈ ಪರಿ ವಚನ ಕೇಳುತ ಬಂದರು ಭಕುತರು ಊರಿಗೆ ಬೆರಗಾಗಿ॥
ಪಾಪವಿನಾಶನ ನೆನೆಯುತ ಕುಳಿತನು ಒಂದೇ ಮನದೊಳು ಭವತ್ಯಾಗಿ॥
ತಪವಂ ಮಾಡಲು ವಿಸ್ಮಯವಾಲಸ ದುಃಖವು ಆತಗೆ ಬರಲಿಲ್ಲ।
ರಜತಮಕಿಂತಲು ಹೆಚ್ಚಿನ ಸತ್ವದ ಗುಣಮುಂ ತಾನು ಕೊಲಲಿಲ್ಲ॥
ಲಿಂಗದ ಪೂಜೆಯ ಮಾಡುತ ನಿಯಮದಿ ಅಂಗದ ಗುಣಗಳ ದಹಿಸುತ್ತ॥
ಸಂಗನೊಳೈಕ್ಯವ ಪೊಂದಲು ಹೆಚ್ಚಿನ ಜ್ಞಾನವು ಬೇಕೆಂದೆನ್ನುತ್ತ॥
ಇಂತಿರೆ ಹೆಚ್ಚಿನ ಶಿಕ್ಷಣ ಪಡೆಯುವ ಚಿಂತೆಯು ಅವನೊಳ್ ಬಲವಾಗೆ॥
ಎಂತೆಲ್ಕಲಿಯಲಿ ಮನದೊಳು ಬಗೆದನು ಚಿಂತೆಯು ತುಂಬಿದನೆದೆಯೊಳಗೆ॥
ಅಂತಿರೆ ಸಂಸ್ಕೃತ ಪಾಠದ ಶಾಲೆಯು ತೆರೆದಿರೆ ಬಳ್ಳಾರ್ನಗರದಲಿ।
ಚಿಂತೆಯು ಹೋಗಿತು ವಾರ್ತೆಯ ಕೇಳುತ ತುಂಬಿತು ಹರುಷವು ಚಿತ್ತದಲಿ॥
ಬಳ್ಳಾರಿಗೊಡನೆಯೆ ಬಂದನು ಮಳಿಯಪ್ಪಾರ್ಯನು ಜನರನು ಕೇಳಿದನು॥
ಒಳ್ಳೆಯ ತಾಣವು ವಿದ್ಯಾಧ್ಯಯನವ ಮಾಡಲು ಶಾಲೆಯು ಎಲ್ಲಿದೆಯೈ॥
ಅಲ್ಲಿಯೆ ಇರುತಿಹ ಜನಗಳು ಪೇಳಿದರೀಪರಿ ಆತಗೆ ಬಲುಭರದಿ।
ಇಲ್ಲಿಯೆ ಸಕ್ಕರಿ ಕರಡೀಶ್ವರನಾ ಶಾಲೆಯು ಅದೆಯ್ಯೈ ನೋಡುವದಿದು॥
ಪಾಠದ ಶಾಲೆಗೆ ಹೋದನು ಆತನು ಪಾಠದ ಗೆಳೆಯರ ಜೊತೆಯಾಗಿ।
ಪಾಠವ ಮಾಡುವನನುದಿನ ಗುರುಗಳಿಗೊಪ್ಪಿಸುವಾತನು ಸರಿಯಾಗಿ।
ಕೆಲದಿನ ಕಳೆಯಲು ಮಳಿಯಪ್ಪಾರ್ಯನ ಕೀರ್ತಿಯು ಬೆಳೆಯಿತು ಶಾಲೆಯೊಳು।
ಗೆಳೆಯರು ಜಾಣ್ಮೆಯ ತಾಳ್ಮೆಯ ನೋಡುತ ಸಂತಸಪಟ್ಟರು ಚಿತ್ತದೊಳು।
ಈತನ ರೀತಿಗೆ ನೀತಿಗೆ ಮೆಚ್ಚುತ ಕರಡೀಶನು ತಾ ಮನದಲ್ಲಿ।
ಸಂತಸ ಪಡುತಲಿ ಮನಮುಂ ಕರಗಿ ಕೇಳಿದರೀಪರಿ ಬಂದಲ್ಲಿ॥
ಮಳಿಯಪ್ಪಾರ್ಯನೆ ಭಿಕ್ಷೆಯ ಬೇಡುತ ಓದುತಲಿರುವದು ಸರಿಯಲ್ಲ।
ಬೆಳೆಸಲು ಜ್ಞಾನವ ಅಡ್ಡಿಯು ಬರುವದು ತಿಳಿದೇ ನೋಡೈ ಇದುಸಲ್ಲ॥

ಯಾಚನೆ ಬಿಡುತಲಿ ನಿಮ್ಮಯದಾದೀ ದಾಸೋಹಕಿಂದು ಬಾರಯ್ಯ।
ಅರ್ಜನೆ ಮಾಡುತ ಸೊಗಸದಿ ಕೆಚ್ಚಿನ ಶಿಕ್ಷಣ ಪಡೆ ನೀ ದಮ್ಮಯ್ಯ॥
ದಾಸೋಹಕೀಗಳೆ ಬರ್ಪೆನು ನಡೆಯೈ ದೀನರ ಬಂಧುವೆ ಮುದವೇರಿ॥
ಬಸವ ಸ್ವರೂಪನೆ ಜಗದೊಳು ನಿನ್ನಯ ಮಹಿಮೆಯ ಹಾಡಲಿ ಮಿತಿಮೀರಿ॥
ಮಳಿಯಪ್ಪಾರ್ಯನ ವಚನವ ಕೇಳದ ಕೂಡಲೆ ಆತಗೆ ಶರಣೆಂದು॥
ಕಳವಳಗೊಳ್ಳುತ ತನ್ನಾಲಯಕೆ ಕರಡೀಶ ತಾ ಕರೆದೊಯ್ದು।
ದಾಸೋಹದೊಳಗೆ ಪ್ರಸಾದ ಮಹಿಮೆಯ ಹೇಳುತ ಪ್ರಸಾದವ ಕೈಗೊಳಿಸೆ।
ಲೇಸೆಂದೆತಿಸುವ ಸಿದ್ಧಾಂತ ಗ್ರಂಥಗಳನ್ನು ತಾನು ಪೂರೈಸೆ।
ವಿರತಿಯು ಸಂಪದುಪಪತ್ತಿಯುರತರ ಶಾಸ್ತ್ರದ ಸದ್ವೃತ್ತಿಯಾಗುತ್ತ।
ಪರನೊಳು ಅರ್ಜನೆಯಾಶಕ್ತಿನಿಷ್ಠೆಯು ಬಲಿಸುತ ತಾಂ ಕಂಗೊಳಿಸುತ್ತ॥
ಇಂತಿರೆ ಸುತ್ತೆಲ್ಲ ಉತ್ತಮ ಮರಿಯಯಂಸರಸುತಲಿದ್ದರು ಚಿತ್ತರಗಿಗಾಗಿ।
ಅಂತ್ಯದಿ ರಾಮಪ್ಪ ದೇಸಾಯಿಯುವರು ಬಳ್ಳಾರಿಗೆ ಬಂದರು ಮರಿಗಾಗಿ।
ಕರಡೆಪ್ಪ ಶರಣನೆ ಭಕುತರ ಬಂಟನೆ ಇಲ್ಲಿರ್ಪಾ ಪಟುವಂ ನಮಗೆ।
ಕರುಣಿಸು ಜವದೋಳ್ ರಕ್ಷಿಸು ಎಮ್ಮಯ ಬೇಡುವೆ ಚರಣಕ್ಕೆ ನಾ ನಿಮಗೆ।
ನಿಲ್ಲದೆ ಕರಡೆಪ್ಪ ಶರಣರು ಮಳಿಯಪ್ಪಾರ್ಯನ ಕರೆಯಲು ಹೇಳಿದರು।
ಅಲ್ಲಿಗೆ ಮಳಿಯಪ್ಪಾರ್ಯನು ಬರಲು ಶರಣರು ಇಂತು ಕೇಳಿದರು।
ಎನ್ನಯ ಮಮತೆಯ ಮಳಿಯಪ್ಪಾರ್ಯನೆ ಚಿತ್ತರಿಗೊಂದು ಮತವೀಗ।
ನಿನ್ನಯ ಸಲುವಾಗಿರುವದು ನಡೆಯೈ ಮಹಾಂತೇಶಮಠಕೆ ನೀ ಬೇಗ।
ಪಟ್ಟವ ಗಟ್ಟುವ ವೇಳೆಯ ನಿಯಮಿಸಿ ಕರೆಯಲು ಬಂದಿಹರಯ್ಯ ನಿನ್ನ।
ಬಿಟ್ಟು ಕತ್ತುರಿ ಫಾಲಕೆ ಪಂಕವ ಇಡುವರೆ ಏಂ ಹೇಳ್ ನೀ ಮುನ್ನ।
ಕನಕದ ಕಡಗವು ಮುಂಗೈಯೊಳಿರೆ ಕಾರ್ಜೋಣನ್ನವೇತಕೆ ಹೇಳಯ್ಯ।
ನಿನ್ನಯ ತೆರೆದೊಳು ಪಟ್ಟಕೆ ಮಾನ್ಯರು ಅರಿಹರೈ ಮುಳಿದೇವಯ್ಯ।
ಭಕುತಿ ಸಮೂಹವು ನಿನ್ನನೆ ಸಮ್ಮತಿಸಿಂದೇ ಬಂದಿಹರೊಲವಿಂದ।
ಭಕುತಿಯಿಂದಲಿ ಕರೆಯುತಲಿರುವರ್ ಹೊರಡೈ ನೀ ಮುದದಿಂದ।
ವಿರತಿಯ ಭರದೊಳು ಮಳಿಯಪ್ಪಾರ್ಯನು ಶರಣರ ವಚನವ ಕೇಳುತ್ತ।
ಅರುಹಿದನೊಡನೆಯು ಕರಡೆಪ್ಪ ಶರಣಗೆ ಕೋಪದೊಳಾಸಕ್ತಿಯಾಗುತ್ತ।
ವಿರತಿಯ ರೀತಿಯ ಮಳಿಯಪ್ಪಾರ್ಯನ ಆಲಿಸಿ ತಾವು ಕಿವಿಗೊಟ್ಟು।
ವಿರತಿಯ ಕೆಚ್ಚಿನ ಎಂತಿಹದೆಂಬುದು ಕೇಳಿದರರಿವುದು ಮನವಿಟ್ಟು।
ಶರಣರಿರೋಮಣಿ ಜನನೀ ಜನಕರ ಮನಯೊಳಿರುತಿಹ ಜಂಜಾಟ।
ಮರೆಯಲಿ ಪರಮತವರಿಯಲು ನಿನ್ನಯ ಹತ್ತಿರ ಬಂದರೆ ಈ ಕಾಟ।
ಆಸೆಯ ಬಲೆಯೊಳು ಮನುಜನು ಸಿಕ್ಕರೆ ಕಾಲಿಗೆ ಪಾಶವ ನೊಗದಂತೆ।

ಘಾಸಿಯು ಮಾಳ್ಪದು ಯತಿಗಳನಾಳೆಯು ಹೇಸಿಕೆ ಕೆಸರೊಳು ಸಿಕ್ಕಂತೆ।
ಹಂಗಿಗೆ ಹಚ್ಚಿಸಿ ಸಂಗವ ಮರೆಯಿಸಿ ಮಂಗನತೆರದಲಿ ಕುಣಿಸುವದು।
ಹಂಗೇ ಮನುಜನ ಮನ್ನಣೆ ಭಂಗವ ಮಾಡಿಸಿತಾನು ಕಾಡುವದು।
ಅಧಿಕಾರವರಿಯೆ ತನಗದು ಅಪಕಾರವಾಗಿ ಅಪಾಯವಾಗುವದೈ।
ಅಧಿಕಾರವು ತಾ ದುರಹಂಕಾರಕೆ ಉಪಕಾರ ಕೊಡುವದು ನೋಡುವದೈ।
ನಾಮಕೆ ಅಧಿಕಾರದೈ ವಿರತೆಗೆ ಭಾರವ ಮಾಡಿ ದೂಡುವದೈ।
ಧಾಮವ ಪಡೆಯಲು ಮುಕ್ತಿಯು ಭಕ್ತಿಯು ಎದುರಿಗೆ ಕಂಟಕವಿಡುವದೈ।
ಬೇಡದು ಶರಣನೆ ಅಧಿಕಾರವೆನಗೆ ಶಶಿಧರ ಸೇವೆಯ ಮಾಡುವನೆ।
ಕಾಡಲುಬೇಡೈ ನಿಸ್ಸಂಗಿ ಇರುವಗೆ ಒಲಿಮೆಯ ಸಿರಿಯುಂನಿತ್ತನಗ।
ಅನ್ನವನಿತ್ತಿರುವೆಂಬನೆಗನ್ನುತ ಈ ಪರಿ ನುಡಿದಿಯಾ ನೀನಿಂತು।
ಅನ್ನವದಾದರೆ ಇದನೊಂದರಿಯೈ ವಿರತನು ಹಂಗಿನೊಳಿಲ್ಲಿಂತು।
ಕೇಳಿದ ಕೂಡಲೆ ಇವೆಲ್ಲ ನುಡಿಯನು ಕರಡೆಪ್ಪ ಶರಣರು ತಲೆದೂಗಿ।
ಪೇಳಿದನುರುತರ ಮೂರ್ತಿಗೆ ಚಿತ್ತದ ಉತ್ತಮ ಬಯಕೆಯ ಹಸಕೆರಗಿ।
ಜಯಸಿಗಳೆನ್ನುತ ವಟುರಾಯನೆನಾಂ ಮಮತೆಯ ಭರದೊಳು ನಿನಗೊರೆವ।
ಜಯಸಿದ ವಿಷಯವ ಮುನಿವರ ಮುನಿವರೆ! ಅಪಜಯವೇನಿದೆ ಇದರಿಂದ।
ವಿರತಗೆ ವಿರತನು ಪಟ್ಟವಗಟ್ಟುವದೊಳಿತ್ತೈ ಎಂದು ನಾ ಮಾಡಿ।
ಅಂತೂ ಮಾಡಿದ ಒಳ್ಳೆಯ ಕಾರ್ಯವು ಹಾಳಾಯ್ತೆಂದೇ ಹಳ್ಳಕೂಡಿ।
ಆಗಲಿ ಮಳೆಯಪ್ಪಾರ್ಯನೆ ನಿನ್ನಯ ಚಿತ್ತದ ಇಚ್ಛೆಯ ತೆರನಂತೆ।
ಪೋಗುವೆನೆನ್ನಯ ಮಂದಿರಕೀಗಳೆ ಮನದೊಳೆನಿಸುತ ನಿಜಚಿಂತೆ।
ಇವನರಿಯುತ್ತಲಿ ರಾಮಪ್ಪ ದೇಸಾಯಿಯವರು ಮನಮನೊಯಿಸುತ್ತ।
ಬಂದಿಹ ದಾರಿಗೆ ಸುಂಕವು ಸಿಗದಿರೆ ಊರಿನ ದಾರಿಯ ಹಿಡಿಯುತ್ತ।
ಕೆಲದಿನ ಕಳೆಯಲು ಕರಡೆಪ್ಪ ಶರಣನು ಲಿಂಗದಿತಾನು ಬಯಲಾಗಲ್।
ಅಲ್ಲಿಯ ಪಾತಕ ಪಂಡಿತ ವೃಂದವು ತಮ್ಮಯ ತಾಣಕೆ ಪೋಗುತಿರಲ್।
ಮೆರೆಯುವ ನೆರೆಗಲ್ಲೂರಿಗೆ ಮಳೆಯಪ್ಪಾರ್ಯನು ಬಂದನು ಚಿಂತಿಸುತ।
ಅರಿಯದೆ ಇರುತಿಹ ಸ್ಥಾನದಿ ಗುಡಿಸಲದೊಳಿದ್ದು ಭಿಕ್ಷೆಯ ಬೇಡುತ್ತ।
ಇಂತಿರೆ ಮಳೆಯಪ್ಪಾರ್ಯಗೆ ಒದಗಿತು ತನಗೆಂದಿಲ್ಲದ ರೋಗವಿಧಿ।
ಚಿಂತೆಯು ಬೆಳೆಯಿತು ದೃಢದೊತ್ತೀತಕೆ ಎಂದಿಗೂ ಅಗದ ದುಷ್ಟವಿಧಿ।
ತನುವಿನ ಬಲವದು ಪೋಗಲು ಕಳೆಯದು ಮೇಲೇಳದಂತೆ ಆಗುತಿರೆ।
ಮನದೊಳು ಬಗೆದನು ಕಾಡುವ ಫಲದೇ ಕರಡೆಪ್ಪನು ಕ್ರೂರಿಯಾರುತಿರೆ।
ನುಡಿಯಲು ಬಾರದು ಮುನಿಮನಗೆದುರಿಗೆ ಅದರಿಂದಪ್ಪಿಗೆ ಅಪ್ಪೆಯದು
ಒಡನೆಯೆ ನಿಶ್ಚಯಮಾಡಿದ ಮಠಕಾಗುವನಾಂ ಶರಣನ ನೆನೆದಿಂತು।

ಮಿತಿಮೀರಿರ್ಪತಿಸಾರವು ನಿಂತಿತು ಮಠಕಾಗುವದು ನಿಶ್ಚಯಮಾಡಲ್।
ಮತಿಯೊಳು ಬೆರಗಾಗುತ್ತಲಿ ಮಳಿಯಪ್ಪಾರ್ಯನು ತೋಪದೊಳಿರುತಿರಲ್।
ಆಕಡೆ ಕರಡೆಪ್ಪ ಶರಣರು ರಾಮಪ್ಪ ದೇಸಾಯಿಯವರ ಕನಸಿನೊಳು।
ಸಂಕಟ ಕಳೆಯಲು ಅವರಾಬಯಕೆಯು ಪೂರಿತಮಾಡಲು ಹೇಳಿದರು।
ಏಳ್ಳೆ ಏಳ್ಳೆ ರಾಮಪ್ಪದೊರೆಯೇ ಮಳಿಯಪ್ಪಾರ್ಯನ ಕರೆಯಲ್ಕೆ।
ಕಾಲವ ಕಳೆಯದೆ ನೆರೆಗಲ್ಲೂರಿಗೆ ಪೊರಡೈ "ಬರುವನು" ಕರೆಯಲ್ಕೆ॥
ಆಗಲೆ ಹೋದನು ರಾಮಪ್ಪೊಡೆಯನು ತನ್ನಯ ಕಾರ್ಯವ ಬದಿಗೊತ್ತಿ।
ಬಾಗಿದ ಮಳಿಯಪ್ಪಾರ್ಯನ ಚರಣಕೆ ಹೇಳಿದ ವಿಷಯವ ತಾನೊತ್ತಿ।
ನಡೆಯೈ ನಡೆಯೈ ರಾಮಪ್ಪದೊರೆಯೆ ಬರುವೆನು ನಾನು ನಲುವಿಂದ।
ತೊಡುವೆನು ಭಕುತರ ಸಂತಸವೀಯಲು ಮಠವೆಂಬ ಕವಚವ ಮುದದಿಂದ।
ಇಂತುಸುರುತ್ತಿರೆ ಮಿಗಿಲಾನಂದದಿ ಮಳಿಯಪ್ಪಾರ್ಯನೊಡಗೊಂಡು।
ಸಂತಸದಿಳಕಲ್ಲ ನಗರಕೆ ಬಂದರು ರಾಮಪ್ಪನವರನೆಡೆಗೊಂಡು॥
ಒಳ್ಳೆಸುಮೂರ್ತವನಾರಿಸಿ ಪಟ್ಟವಗಟ್ಟಿದರಾಗಳೆ ಅಂದದೊಳು॥
ಕುಳ್ಳಿರಿಸಿದರ್ಪೈ ಮಳಿದೇವ ಯತಿಯ ಬಂಧುರ ಸುಂದರ ಅಂದಣದೋಳ್॥
ಮಂಗಳವರದೋಳ್ ಜಂಗುಳಿಜನದೋಳ್ ಉನ್ನತ ಕೀರ್ತಿಯನುತಿಪಾಡಿ।
ಭಂಗವಿದೂರನ ಮೆರವಣಿಗೆಯಿಂದಲಿ ವಿರತಿಯ ಮಠಕೆ ಬರಮಾಡಿ।
ಪೆಸರಂನಿಟ್ಟರು ಮಳಿಯಪ್ಪಾರ್ಯಗೆ ವಿಜಯಮಹಾಂತೇಶ್ವರನೆಂದು।
ವ್ಯಸನವ ಕಳೆದರು ಹಸನ್ಮುಖದಿಂದ ಹರಸುತಲಿದ್ದರು ಜಯವೆಂದು॥
ಉತ್ಸವತೀರಿಸಿ ರಾಮಪ್ಪೊಡೆಯರು ಗ್ರಾಮದ ಪ್ರಮುಖರು ಪೋಗಲ್ಕೆ।
ಔತ್ಸುಕ್ಯದಿಂದಲಿ ವಿಜಯ ಮಹಾಂತೆಶ್ವರನಾ ನೇಮಪ್ರಸಾಗಲ್ಕೆ।
ಅಧಿಕಾರವು ತಾ ಬಂದಿಹೆಯೆನ್ನುತ ಮನದೊಳು ಅಭಿಮಾನವಿರಲಿಲ್ಲ।
ಮಧುರಾಜವ್ವನ ವಯದೋಳಿದ್ದರು ವಿಕೃತಿಯ ನೀತಗೆ ಬರಲಿಲ್ಲ।
ಬಿಡದಲೆ ಅನುದಿನ ಪಿಡಿದಾನಿಯಮವ ಲಿಂಗದೊಳಿರ್ಪಾ ನೆನೆವನ್ನು।
ಮೃಡನೋಳ್ ನೋಟವ ಲಿಂಗದೊಳಾಟವ ಮಾಡಿಸುತಿಹನ್ನೈಮನವನ್ನು।
ಲಿಂಗದ ಸುಖಮೇ ಲಿಂಗದ ರತಿಯೇ ಲಿಂಗದ ನುಡಿಯೇ ನುಡಿಯಾಯ್ತು।
ಲಿಂಗದ್ಯೈನಂಗವ ನೋಡುವಲಿಂಗದ ಚಿತ್ಕಳೆ ಹಿರಿದಾಯ್ತು।
ಲಿಂಗಕೆ ಧೂಪವ ದೀಪಾರಂತಿಯಂ ನೆತ್ತುವನಿಂತು ಮಹಂತೇಶ
ಲಿಂಗವ ಪಾಡುತ ಲಿಂಗವ ಬೇಡುತ ನಮಿಸುವನಿಂತು ಚಿತ್ಕೋಶ।
ಲಿಂಗದ ಪೂಜೆಯ ಸುಖವನು ಭೋಗಿಸಿ ಹೃತ್ಕಮಲದವನ್ನು ಅರಳಿಸಿ।
ಲಿಂಗದ ಲೀಲಾನಂದ ಸಮುದ್ರದಿ ತನ್ನಯ ಮನಮಂ ಮುಳುಗಿಸಿ।

ಲಿಂಗದ ಧ್ಯಾನದ ಬಲದಿಂ ಲಿಂಗದ ಅದ್ಭುತ ಶಕ್ತಿಯ ಪಡೆಯುತ್ತ|
ಲಿಂಗಾಂಗೈಕ್ಯದ ರೀತಿಯ ಸುಖಮಂ ಭಕ್ತರಿಗದಮಂ ಅರುಹುತ್ತ|
ಮುಕ್ತಿಯ ಮಂದಿರ ಮೆಟ್ಟಲು ಲಿಂಗದ ಸೂತ್ರವೆ ಹೆದ್ದಾರಿಯಿದಯ್ಯ|
ಭಕ್ತರ ಮುಕ್ತರು ಆಗಲು ಈ ಪರಿ ಪೇಳುತ ಸಲಹಿದಿ ಗುರುರಾಯ|
ಭಕ್ತರನುದ್ಧರಿಸುತ್ತಲಿ ಅದ್ಭುತ ಮಹಿಮೆಯ ತೋರಿಸಿ ಮೆರೆದೆಯೊ ನೀ|
ಭಕ್ತರು ಕೋರಿದ ಇಷ್ಟಾರ್ಥವಂ ನೀಡಿದ ಕಾಮಧೇನುವೆ ನೀ
ಮಹಾಂತೇಶನ ಮಹಿಮೆಯ ಪೇಳುವೆ ಕೇಳಿರಿ ಪ್ರಾಜ್ಞರೆ ತಾವೆಲ್ಲ|
ದೇಹಾಲಸ್ಯವ ಕಳೆಯುತ ಮುದದಿಂದಾದರದಿಂದಲಿ ನೀವೆಲ್ಲ|
ಚಿತ್ತರಿಗೂರಿಗೆ ಮಳೆತಾನಾಗದೆ ಬಿತ್ತಿದ ಸಸಿಗಳು ಒಣಗುತ್ತ|
ಉತ್ತಮ ಭೂಮಿಗಳೆಲ್ಲವು ಬೀಳಾಗಿರುತಿರೆ ಬಂದರು ಮರಗುತ್ತ|
ಮಠದೊಳಿರುತಿಹ ಜಂಗಮನೋರ್ವನಿಗಿಂತು ಭಕ್ತರು ಉಸುರಿದರು|
ಊಟವ ಮಾಡಿಸಬಾರದು ಜಂಗಮರಿಗೆಲ್ಲ ಹಾಳು ಮಾಡುವರು|
ಇಂತು ಸುರುತ್ತಿಹ ವಚನವ ಕೇಳಿದ ಕೂಡಲೆ ಬಂದನು ಯೋಗೀಶ|
ಭೂತಲದೊಳ್ ಜಂಗಮವನುಣಿಸಿದೊಡೆ ಮಳೆಯಾಗದಿಹುದೆ? ಎಂದೀಶ|
ಸಲೆಮೊದಲೊಳ್ ನೀ ಸಾಸಿರಗಣವ್ರಜಕುಣಿಸೈ ಬಳಿಕೀಮಾತನ್ನು|
ಕಲೆಯದು ಜಂಗಮರೊಳಿಲ್ಲುಸುರ್ಯೈ ಸುಮ್ಮನೆ ಅನ್ನದೆ ಇರುನೀನು|
ಯೋಗಿಯ ಮಹಿಮೆಯ ತಿಳಿಯದೆ ಮತ್ತಿಂತು ನುಡಿಯುತಲಿದ್ದನುಭಕ್ತಿಯನ್ನು
ಜಂಗಮರೊಳೀ ಸಾಮರ್ಥ್ಯವಿರ್ದೊಡೆ ಮೊದಲೆ ಬರಿಸಲಿ ಮಳೆಯನ್ನು|
ಅನಂತರನಾಂ ಗಣತೃಪ್ತಿಯೆಸೆಪೆ ನಂಬುವೆ ಇವರಾ ಮಹಿಮೆಯನು|
ಆನುಡಿಕೇಳ್ದನು ವಿಸ್ಮಿತನಾಗುತ ಆವನಂ ತನ್ನೆಡೆ ಕರೆಸಿದನು|
ಎಲವೋ ಹೆಡ್ಡನೆ ಭುವನದಿ ಮಳೆಯದು ಆರಕೈಯೊಳ್ ಇರುವದನು|
ತಿಳಿದಿರೆ ಪೇಳ್ಳೈ ನಿನ್ನಯ ಶಕ್ತಿಗೆ ಮೀರಿಂತಾಡದಿರು ವಚನವನು|
ಅಲ್ಲಿರುತಿಹ ಮಾಹೇಶನು ಇಂತೆಂದುಸುರಿದ ಮಾಹಾಂತೇಶಂಗೆ|
ಸಳ್ಳೆಂದೆನ್ನುವ ಜಂಗಮಶಕ್ತಿಯ ತೋರಿಸುಗುರುವೇ ಭಕ್ತರಿಗೆ|
ಒಡನೆಯ ಕುಳಿತನು ಶಿವನಾಧ್ಯಾನಕೆ ಒಂದೇ ಮನದೊಳ್ ಮಹಾಂತೇಶ|
ತಡೆಯದೇ ರಚಿಸಿದ ಮೇಘದ ಮಾಲೆಯು ಧ್ಯಾನಕ್ಕೊಲಿಯುತ ಪರಮೇಶ|
ಗುಡುಗುಡು ಸಿಡಿಲುಗಳಬ್ಬರವೇನೆಂ ಪೇಳಲಿ ಮಿಂಚಿನ ಕುಣಿದಾಟ|
ಮೃಡಸ್ವರೂಪರ ತೆಗಳುತ ಇರುವಾ ಭಕ್ತನದೆಲ್ಲಿದೆ? ಆರ್ಭಾಟ|
ವಾಪೀಪಳ್ಳಗಳೆಲ್ಲವು ತುಂಬಿದವಾಗಳೆ ಹೊರಗವು ಸೂಸಿದವು|
ಈ ಪರಿ ಕೃತಿಯಂ ನೋಡುತ ಮಹಾಂತೇಶನ ನುತಿಯಂ ಗೈಯುತ್ತಿದ್ದರ್|
ಚರಾಧಿಪತಿಯೀ ಮಹಿಮೆಯನಸುರಲಸಾಧ್ಯವು ಎಂದರು ಜಗವಾಗ|

ಹಿರಿಮೆಯ ಮಾತನ್ನಾಡಿದ ಮರುಳಾ ಭಕ್ತನ ಬಾಗಿತು ಶಿರವಾಗ।
ಮೊದಲೋಳ್ ಪೇಳ್ದಂತಾತನು ಸಾಸಿರ ಪ್ರಮಥ ಸಮೂಹಕೆ ಭಕುತಿಯೊಳು।
ಅಂದದಿ ಆರಾಧನೆಯಂ ಮಾಡಿಸಿ ಬೇಡಿದ ಜ್ಞಾನದ ಚಿತ್ತದೊಳು॥
ಮೇಘವೆ ಕೊಡೆಯಂ ಮಾಡಿಸಿ ಗಣರಂ ಸಲುಹಿದ ಕತೆಯಂ ಕೇಳುತ್ತ।
ತ್ಯಾಗಾದಿ ಗುಣಗಳೆಂತಿಹವೆಂಬುದ ನೋಡಿರಿ ಅಚ್ಚರಿಯಾಗುತ್ತ।
ಮಹಾಂತೇಶನಿಗೊಮ್ಮೆ ಶೀತ ಜ್ವರಗಳು ಬಂದವು ಕಾಡಿದವು।
ಮಹಾಂತೇಶನು ಬೇಡಿದನಾಗಳೆ ಸಂಗಮನಾಥಗೆ ಕೈಮುಗಿದಂ।
ಸಂಗಮನಾಥಾ "ಜ್ವರಗಳು ನಿಂಡೆ ಗಣರಿಂಗಾರಾಧನೆಯನ್ನು।
ಸಂಗಮ ಕ್ಷೇತ್ರದೊಳೆಸಗುವೆ ಮುಡುಪಿಡುವೀಗಳೆ ರೂಪಾಯೊಂದನ್ನು"
ಜ್ವರತಾ ನಿಲ್ಲಲು ಶ್ರೀ ಗುರು ಮೂರ್ತಿಯು ಕರೆಸಿದ ಭಕ್ತರ ಕೂಡಿಸಿದ।
ನೂರಾಒಂದು ಕೌಪ್ಯಕವಿತ್ತನು ಘೃತಮಂ ತರಿಸಲು ಮುದದಿಂದ।
ನೆರೆಯಿತು ಗಣವರ ನಿಕರವು ಹರಹರನೆನ್ನುತ ಹಾಡುತ ಅನಿತರೋಳು।
ಚರವರ ಯೋಗಿ ಮಹಾಂತನು ಬಂದನು ಗಣವರರೂಟಕೆ ಕೂಡ್ರಿಸಲು।
ಬೇಸಿಗೆ ಬಿಸಿಲಿದೆ ನೋಡಿರಿ ಮೇಲ್ಬಲ್ಲಿಗ್ಗಿಚ್ಚಿದೆ ಜಂಗಮರನ್ನುತ್ತ।
ಹಾಸಿದ ಶಿಲೆಯವು ಕಾಯ್ದಿರ್ಪುವಲ್ಲಿ ಒಟಗುಟತಿದ್ದರು ತಮ್ಮತ್ತ।
ಗಣರೇ ಗಣರೇ ಬನ್ನಿರಿ ಕುಳ್ಳಿರಿ ಸಂಗಮನಾಥನು ಕೊಡೆಯನ್ನು।
ಅನುನಯದಿಂದಲಿ ಎಲ್ಲರಗೀಗಳೇ ಏರಿಸಿ ನೆಳಲಂ ಮಾಡುವನು।
ಮಹಾಂತೇಶನು ಪೇಳಲೊಡನೆಯೇ ಮೋಡವು ಬಂದಿತು ಬಿಸಿಲೋಡಿ।
ಹಾ ಹಾ ಎನ್ನುವ ಕಾತರ ಹೋಯಿತು ತಂಪನ್ನಾಳ್ದುದು ಜಗನೋಡಿ।
ಸಕಲರು ವಿಸ್ಮಿತರಾದರು ಮಹಿಮನ ಮಹಿಮೆಯ ನೋಡುತ ಕೊಂಡಾಡಿ।
ಸಕಲರು ಭೋಜನಗೈದರು ನೆಳಲೊಳ್ ಪರಮಸಂತೋಷದಿ ಪಾಪಾಡಿ।
ಗಣವರರುಂಡಾ ಪತ್ರಾವಳಿಗಳಂ ತಗೆಯುವದನ್ನು ನೋಡಿದೊಡೆ।
ಗಣರೇ ಅವುಗಳ ಸಂಗನೆ ತಗೆಸುವ ನಿಮ್ಮ ಯುಗ್ರಾಮಕೆ ದಯಮಾಡಿ।
ಆಜ್ಞೆಯ ಮೇರೆಗೆ ಗಾಳಿಯುಬಂದಿತು ಎಲೆಗಳನೊಯ್ದು ನದಿಯೊಳಗೆ।
ಆಜ್ಞೆಯಪಾಲಿಸಿ, ಚೆಲ್ಲಿತು, ಹೋಯಿತು, ಅಚ್ಚರಿಯಾಗ್ವದು ಮನದೊಳಗೆ।
ಲಾವಣಿ ಕೇಳುವ ತಜ್ಞರೆ ಕೇಳಿರೆ ಶರಣನ ಮಹಿಮೆಯ ನೋಡಿರೋ।
ದೇವನೇ,! ಶರಣರ ಆಜ್ಞಾಧಾರಕ ನಾಗುವನೆಂಬುದು ನೋಡಿರೋ।
ಮಲರೋಗಿರುತಿಹ ಗುಳೇದಗುಡ್ಡದ ಒಪ್ಪತ್ತಿನಾ ಯತಿ ತಿಲಕನಿಗೆ।
ಮಲರೋಗಕಳೆದ ಔಷಧವಿಲ್ಲದ ಮನಸಿನ ರೀತಿಯ ಪೇಳ್ದವಗೆ।
ಯೋಗಿಕುಮಾರನು ನಿಜಗುಣಯೋಗಿಯ ಕೈವಲ್ಯ ಪದ್ಧತಿ ಬೋಧಿಸುತಿರೆ।
ರೋಗವು ಬಂದಿತು ಜಿಲ್ಲನ ತೆರದೊಳು ಮಣಿಯುತ್ತಲಿದ್ದನು ಒಪ್ಪತ್ತಾರ್ಯ।

ತ್ರೈಕಾಲಗಳನ್ನು ಕಳೆದವು ಜೋರೋಲ್ಗೆಯುತ್ತಿರೆ ಪಕ್ಕದ ತೋರಲ್ಕೆ।
ಈಕ್ಷಿಸಿ ಮನಮಂ ನೋಯಿಸಿ ಬಂದನೊಳಗಿಂದ ಕಿರ್ತನ ಕೇಳಲ್ಕೆ।
ಎಂತಿಹ ಮಗುವಿಗೆ ಎಂತಿಹರೋಗವು ಸತ್ತಿಹ ಏತಕೆ ಜಗದೀಶಾ।
ಇಂತುಸುರುತ್ತಿರೆ, ಒಪ್ಪತ್ತುಯೋಗಿಯು ಕಂಡಂತಂದನು ಓದೇವಾ।
ಪ್ರಭುವೇ ಮಹಾಂತೇಶನೆ ನನ್ನಿರೋಗದ ಬಟ್ಟೆಗ ತಡೆಕಾರೆ।
ವಿಭುವೇ ತ್ವತ್ಸ್ವರೂಪವಾಗದೆ ಇರಲಾರ ಲೋಕದಯಾತ್ರೆಯ ಮುಗಿಸುವೆನು।
ಬೇಡುತ್ತಿರುವೀ ಯೋಗಿಯನೋಡುತ ಮಹಾಂತೇಶನು ಆವಾಗ।
ಪೀಡಿತರೋಗವು ಪೋಪುದು ಮಗುವೇ, ಕರದಿಂ ಮುಟ್ಟಿದನೆಂದಾಗ।
ಅಂದಿನಿಂದಲಿ ಎಂದಿಗು ಬರದಿರೆ ಭಕ್ತಿಯೊಳೊಂದಿಸಿ ತಪ್ಪದಕೆ।
ಅಂದೇ ಅಂದನು ನಿನ್ನಯ ಪರಮೋಪಕಾರ ನೆನೆವಂ ಸತತವು ನಾ।
ಒಪ್ಪತ್ತುಯೋಗಿಯು ಮಾತನು ಕೇಳಿದನಾಗಳೆ ಚಿತ್ತಲಿಗೀಶನು ತಾ।
ಒಪ್ಪುತ ಮತ್ತೊಂದುಸುರಿದನು ಮುಂದಿನ ಹಿರಿಗುರಿ ಸಾಧಿಸಿ ಸುಖಪಡೆಯಲ್।
ಒಪ್ಪತ್ತಾರ್ಯನೆ ಮನವಿದು ಹೊರಗಣ ವಿಷಯವ ಗ್ರಹಿಸಲು ಸುಳಿದಾಡಿ।
ಜೆಪ್ಪಾಗುವವ್ಯೆ ಹಿರಿಗುರಿ ತಿಳಿಯದೆ ಮುಕ್ತಿಯ ಸೌಖ್ಯವ ಕಳೆದಾಡಿ।
ಯೋಗಿಯು ಆದೊಡೆ ಶಶಿಧರ ಯೋಗದಿ ಲೀನನು ಆಗಬೇಕಯ್ಯ।
ಜಾಗ್ರತ್ಸ್ವಪ್ನದಿ ಶಂಕರ ಧ್ಯಾನವ ಬಿಡದಲೆ ಮಾಡಲು ಬೇಕಯ್ಯ।
ಹೃದಯದ ಪಂಜರದಿರುತಿಹ ಮರ್ಕಟ ಸಾಹಸದಿಂದಲಿ ಸಾಕಯ್ಯ।
ಸದಮಲ ದೇವನ ಕೃಪೆಯದು ದೊರೆವುದು ಎಚ್ಚರದಿಂದಿರೆ ನೋಡಯ್ಯ।
ಎದುರಿಗೆ ಬರುತಿಹ ಕತ್ತಲೆಯೊತ್ತಲು ಜ್ಞಾನದ ದೀವಿಗೆ ಹಿಡಿಯಯ್ಯ।
ಅಂದರೆ ಮುಕ್ತಿಯ ಮಾಳಿಗೆಯನೇರಿ ಶಾಂತಿಯ ಪಡೆಯುವಿ ನೀನಯ್ಯ।
ಮಹಾಂತೇಶನ ಮಹಿಮೆಯನೆಲ್ಲ ಹೇಳುತ ನಿಂತರೆ ಬೆಳಗಾಗಿ।
ಹೋಹುದು ತಾಪಗಳೆಲ್ಲ ಪೋಗ್ವರಿ ಕೊನೆಗುಳಿವಾನೇ ಏಕಾಂಗಿ।
ಬಸವಾಕ್ಷರಮಂ ಮಂತ್ರಸಮಾನವೆಂದರಿಯುತ್ತಲಿ ಉಚ್ಚರಿಸಿ।
ಬಸವನ ವಚನವು ಅಪ್ಪನ ಮಾತಿದು ಅಪ್ಪಿಕೊಳ್ಳುವನೆತ್ತಲಿಸಿ।
ಊರಿಗೆ ಹೊರಡುವ ಸಮಯದಿ ವಚನವ ಬಸ್ನೊಳಗೊತ್ತಿ ಕಟ್ಟುತ್ತ।
ದಾರಿಯೊಳಿಹಮು ಜಾರಿಗೆ ಜಾರಿಗೆ ನೋಡುವರತಿಯೊಕ್ಕುಟ್ಟುತ್ತ।
ದಿನದೊಳು ಒಮ್ಮೆಯು ಓದಿದರೇನೆ ದಿನವದು ಸಂತಸವಾಗುವದು।
ಅನುದಿನ ನಿಯಮವ ಮೀರದೆ ಇರುತಿರೆ ಮನಶಿವಧ್ಯಾನವಾಗುವದು।
ಎಂದಿನ ತೆರದೋಳ್ ತನ್ನಯ ಹೃದಯಂ ಬಿರುತ ಗೋಪಂ ಹಿಡಿಯುತ್ತ।
ಬಂದರು ಹುನಗುಂದದೂರಿಗೆ ಶಿವಲಿಂಗಾರ್ಚನೆ ಗೈದರು ಶಿವಶಾಂತ।
ಶಂಭು ಸ್ವರೂಪನ ಬಸವನ ವಚನದ ಸಾಗ್ರಾಳ ದೊಡ್ಡಪ್ಪನವರಿಂಗೆ।

ಸಾಂಬವತಾರಿಯು ಶ್ರೀ ಮಹಾಂತೇಶನು ಬೋಧಿಸಿದಿಂತು ಆತಂಗೆ|
ಶ್ರೀ ಮಹಾಂತೇಶನ ಬೋಧಾಮೃತಮಂ ಕುಡಿಯಲು ಬಯಸಿ ಬಂದವರೆ?|
ಒಮ್ಮನದಿಂದಲಿ ಕೇಳಿರಿ ನೀವುಗಳಂತ್ಯದ ನುಡಿಯಿದು ಅರಿಯುವರೆ|
ಸದ್ಭಕ್ತ ಮದ್ಭಕ್ತ ದೊಡ್ಡಣ್ಣ ಕೇಳಣ್ಣ ಬಸವನ ವಚನದ ಸಾರವನು|
ಸದ್ಭಕ್ತಿ ರಸಮಂ ಕುಡಿಯಲು ನಿನಗಾಂ ವಚನಾಮೃತವ ತಂದಿಹೆನು|
ಬಳ್ಳಾರಿ ಸಕ್ಕರಿ ಕರಡೆಪ್ಪನೆಂಬುವ ಶಿವಮತವ ತಾನು ಉದ್ಧರಿಸಿ|
ಒಳ್ಳಿಹನಾಗಿಹ ಜಗದೊಳು ತನ್ನಯ ಕೀರ್ತಿಯ ಕೌಮುದಿ ಹರಡಿಸಿ|
ನೀನಾದರೀಗ ಮಾಡಲು ಬರ್ಪುದು ಸಂಸ್ಕೃತ ಶಾಲೆಯ ತಗೆಯಂಣ|
ಊನವು ಇಲ್ಲದ ಪಾತಕ ವೃಂದದ ರಚಿಸೈ ನೀನು ದೊಡ್ಡಂಣ|
ಅನ್ನವ ವಸ್ತ್ರಗಳಂನ್ನು ನೀಯುತ ಮಮತೆಯಿಂದಲಿ ಸಲಹಂಣ|
ಸನ್ನುತ ಭಕ್ತರ ನಿವಹಾಗ್ರಣಿಯು ಮಾಡಿದರಿಂತು ದೊಡ್ಡಂಣ|
ಜಗದೊಳ್ ಧನ್ಯನು ಮಾನ್ಯನು ಭಕ್ತನು ಆಗಲು ಭಕ್ತಿಯು ಬೇಕಂಣ|
ಮಿಗಿಲೈ ಎಲ್ಲಕ್ಕಂತಲು ಭಕ್ತಿಯ ಮುಕ್ತಿಯುಮಾಳಿಗೆಗಿರಲಂಣ|
ಗೀತವ ನರಿದವ ಜಾಣನು ಅಲ್ಲೆ ಮಾತಂನರಿದವ ಜಾಣಲ್ಲ|
ಆತನು ಜಾಣನು ಜಾಣನು ಲಿಂಗವನಂಬಿರ್ಪಾತನು ಜಾಣಂಣ|
ಜಂಗಮಕಾದರದಿಂದಲಿ ನಿತ್ಯದಿ ನೀಡುತಲಿರುವದು ಜಾಣಂಣ|
ಸಂಗನು ಇಂತಿಹ ಭಕ್ತರ ತನ್ನಯ ಹತ್ತಿರದೊಳ್ ಕರೆಯುವನಂಣ|
ಚಂದಿರಕಾಂತದ ಶಿಲೆಯೊಳ್ ಜಲತಾಂ ನಿಲ್ಲದೆ ಶೈತ್ಯವ ತೋರುವವೇ|
ಆದಿತ್ಯಕಾಂತದ ಶಿಲೆಯೊಳ್ ಅಗ್ನಿಯುಂ ಇಲ್ಲದ ಉಷ್ಣವ ತೋರುವವೇ|
ಭಕುತಗೆ ಭಕ್ತಿಯು ಕಾಯವು ಇಲ್ಲದೆ ಕೂಡಲ ಸಂಗನ ಅರಿವೆಂತೋ|
ಮುಕುತಿಯು ಸುಖಮುಂ ಪಡೆಯಲಿ ನೀನು ಭಕುತಿಯದಾರಿಯ ಹಿಡಿಯಿಂತೊ|
ಅಳವುತ್ತಳವುತ ಬಳಲುವರಲ್ಲವೆ ಕೊಳಗದು ತಾನು ಬಳಲುವದೇ|
ಬಟ್ಟೆಯು ನಡೆಯುತ ನಡೆಯುತ ಬಳಲುವರಲ್ಲದೆ ಬಟ್ಟೆಯು ಬಳಲುವದೇ|
ಶ್ರಮವಂ ಮಾಡುತ ಮಾಡುತ ಬಳಲುವರಲ್ಲದೆ ಕೋಲದು ಬಳಲುವದೇ|
ನಿಜವಂನರಿಯುವ ಭಕುತನು ಬಳಲುವನಲ್ಲದೆ ಲಿಂಗವು ಬಳಲುವದೇ|
ಶಂಕರಶೆಟ್ಟಿಯು ಧರಣಿಯುಮೇಲೊಂದು ಹಿರಿದಿಹ ಅಂಗಡಿ ಇಕ್ಕಿರುವ|
ಒಮ್ಮನವಾದೊಡೆ ನುಡಿಯುವ ಒಡನೆಯೆ ಇಮ್ಮನವಾದರೆ ನುಡಿಲಾರ|
ಬದಿರಲಿ ಮಲಿದರೆ ಮಲಿದಂತಲ್ಲದೆ ರಸವನು ಪಡೆಯಲು ಬಾರದು|
ಜಲಮುಂ ಕಡೆದರೆ ಕಡೆದಂತಲ್ಲದೆ ಬೆಣ್ಣೆಯು ಪಡೆಯಲು ಬಾರದು|
ಕೂಡಲ ಸಂಗಮ ದೇವನು ಅಲ್ಲದೆ ಅನ್ಯರ ದೈವಕ್ಕೆರಗಿದೊಡೆ|
ವಳ್ಳಂ ಕುಟ್ಟುತ ಕೈಯುಂ ಬೊಟ್ಟುಮಾಡಿಕೊಂಡಂತಾಗುವದೈ|

ಹಣದೋಳ್ ಹಿರಿಯರು ಗುಣದೋಳ್ ಹಿರಿಯರು ಇದನಾಲೋಚಿಸಿ ನೋಡಣ್ಣ।
ಹಣತಾನಿರ್ಪುದು ಕ್ಷಣದೋಳ್ ಪೋಪುದು ಗುಣವೇ ಸ್ಥಿರವದು ನರಿಯಣ್ಣ।
ಇಂತುಮುಸುರಿದ ನಂತರ ಕೆಲದಿನ ಶಿವಯೋಗಾನಂದದಿ ಕಳೆಯುತ್ತಿ।
ಚಿಂತೆಯು ಪುಟ್ಟಿತು ಯೋಗದ ಮಹಿಮೆಯು ಹರಡುವದೆಂತು ಜಗದೊಳಗೆ।
ಇಂತಿರೆ ಅಂದೇ ಹಾನಗಲ್ಲ ಯೋಗಿ ಕುಮಾರನ ಕಡೆಯಿಂದೊಬ್ಬರು ಅಲ್ಲಿ।
ಪತ್ರವ ತಂದರು ಶ್ರೀಗುರುಮಹಾಂತೇಶನ ಕೈಯೋಳ್ ಕೊಟ್ಟಲ್ಲಿ।
ಬೇಡಿದರೀಪರಿ ಗುರುವೇ ನಿಮ್ಮಯ ಅಪ್ಪಣೆಯೊಯ್ಯಲು ಬಂದಿಹೆನು।
ಕೂಡಲೆ ಅಪ್ಪಣೆ ಕೊಡುನೀ ಸ್ಥಾನವ ತೋರಲು ದಯಮಾಡುವೆನೆಂದು।
ಮನದೊಳು ಹಿರಿಹಿರಿ ಹಿಗ್ಗುತ ಅಪ್ಪಣೆಯಿತ್ತರು ದಯಮಾಡುವೆನೆಂದು।
ತ್ರಿಣಯನ ಲೀಲೆಯು ಪೇಳಲಸಾಧ್ಯವು ತಮ್ಮಾ ಬಯಕೆಯು ಸ್ಮರಿಸಂದು।
ಶ್ರೀಶಿವಯೋಗಿಸುಮಂದಿರ ಸ್ಥಾಪನಸ್ಥಾನವ ತೋರಿಸಿ ಮುದದಿಂದ।
ಆಶೀರ್ವಚನವನಿತ್ತರು ಶಿವನೀಕಾರ್ಯಕೆ ಶಂಕೆಯ ಮಾಡದಿರಿ।
ಕೊಟ್ಟರು ಬಸವಂ ಕೊಡದಿರೆ ಬಸವಂ ಭಯವದು ಆಗುವ ಕಾರಣವೇಂ।
ದುಷ್ಟರ ಹಾವಳಿಯಿದ್ದರೆ ಈತನೆ ನಷ್ಟವ ಮಾಡುವ ಭಯಬೇಡಿ।
ಎಂದು ಅಪ್ಪಣೆ ಕೊಡುತಲಿ ದಯಮಾಡಿದರೈ ಇಳಕಲ್ ಮಠಕಾಗ।
ಎಂದಿನ ತೆರದೊಳರ್ಚನೆ ಗೈಯುತ ಶಿವನೋಳ್ ಕೂಡಿದರೊಂದು ದಿನ।
ಧನ್ಯರು ಧನ್ಯರು ಅವರೇ ಧನ್ಯರು ಯೋಗಸುನಿಲಯದೊಳಿದ್ದವರು।
ಮಾನ್ಯರು ಮಾನ್ಯರು ಅವರೇ ಮಾನ್ಯರು ಪೂಜ್ಯಸ್ಥಾನದೊಳಿದ್ದವರು।
ಶಿವನಂ ಮರೆತಾ ಮನುಜನು ಬಂದರೆ ಅರಿವುದು ಪರಶಿವತತ್ವವದು।
ಭವದೋಳಿರುತಿಹ ಮನುಜನ ಭವರೋಗವು ತಾ ಜವದೋಳ್ ನಶಿಸುವದು।
ಯೋಗ ಸುಪೀಠದ ಕರ್ತೃವೆ ಶ್ರೀಗುರು ಚಿತ್ತರಗೀಶನೆ ನೀನೆನಗೆ।
ಯೋಗದ ದಾರಿಯ ಹಿಡಿಯಲು ಜ್ಞಾನವ ನೀಡಲುಬಾರದೆ? ನೀನೆನಗೆ।
ಕಿರುನುಡಿಯಿಂದಲಿ ಪೇಳಿದೆ ನಾನೀ ನಿನ್ನಯ ಚರಿತೆಯ ಚಿನ್ಮಾತ್ರ।
ಕರುಣೆಯ ನೀಡೈ ಮುದದೋಳ್ ನಿನ್ನಯ ಶ್ರೀಮಹಾಂತೇಶನುತಿಪಾತ್ರ।
ಪರಶಿವಯೋಗಿಯೆ ಯುಜಿಪೆನು ಭಜಿಪೆನು ಜಯಜಯವಾಗಲಿ ಸುಖಭೋಗಿ।
ನಿರುತದಿ ಬೇಡುವ ನಿನ್ನಯ ಧ್ಯಾನವ "**ಬಾಲಮಹಾಂತನು**" ಶಿರಬಾಗಿ

ಮಂಗಲ

ಮಂಗಲಂ ಭವಾರಣ್ಯ ದಾಹ || ಪಲ್ಲ ||
ನಿತ್ಯ ಮುಕ್ತನೆ ಮಹಾಮೂರ್ತಿ ದಿವ್ಯಾತ್ಮ||
ಸತ್ಯ ಪ್ರಬುದ್ಧ ಶುದ್ಧಸಿದ್ಧ ಮಹಾತ್ಮ || ೧ ||
ವೀರಶೈವಾಚಾರ ಸಾರ ವಿಜ್ಞಾತ||
ಮಾರ ಸಂಹಾರ ಧೀರ ಶೂರ ಪ್ರಖ್ಯಾತ || ೨ ||
ಜ್ಞಾನನೇತ್ರನೆ **ಮಹಾಂತೇಶ** ಮಹೇಶ||
ಧ್ಯಾನತಲ್ಲೀನ ಸ್ತೋತ್ರಪಾತ್ರ ಚಿತ್ಕೋಶ || ೩ ||

ಅಥಣಿ

ಶ್ರೀಮರುಳಸಿದ್ಧೇಶ್ವರ
ಅಷ್ಟೋತ್ತರ ಶತನಾಮಾವಳಿ

ಸಾಹಿತ್ಯ ಪ್ರಕಾರ : ನಾಮಾವಳಿ

ಮೊದಲ ಮುದ್ರಣ : ೧೯೪೯

ರಚನೆಯ ವಯಸ್ಸು : ೧೮

ರಚನಾ ಸ್ಥಳ : ಶಿವಯೋಗಮಂದಿರ

ಅಥಣಿ ಶ್ರೀ ಮುರುಘೇಂದ್ರಶಿವಯೋಗಿ

ಅಷ್ಟೋತ್ತರ ಶತನಾಮಾವಳಿ

ಶ್ರೀಮೂಜಗಂ.

ಶ್ರೀಜಗದ್ಗುರುಗಳು ವಿದ್ಯಾರ್ಥಿ ಜೀವನದಲ್ಲಿ ಬರೆದದ್ದು.

ಮೂರನೇ ಮುದ್ರಣ

೧೯೬೦

ಶ್ರೀ ಜಗದ್ಗುರು ಗಂಗಾಧರ ಧರ್ಮಪ್ರಚಾರಕ ಮಂಡಳ
ಮೂರುಸಾವಿರಮಠ, ಹುಬ್ಬಳ್ಳಿ.

ಬೆಲೆ: ರೂಪಾಯಿ ಎರಡು

ಮುದ್ರಕರು:
ಪರಂಜ್ಯೋತಿ ಪಾವರ ಪ್ರಿಂಟಿಂಗ ಪ್ರೆಸ್
ಮೂರುಸಾವಿರಮಠ ಹುಬ್ಬಳ್ಳಿ.

ಮುನ್ನುಡಿ

"ಮಹಾತ್ಮರಂ ನೆನೆವುದೇ ಘನಮುಕ್ತಿಪದಂ"

ನಮ್ಮೀ ಕರುನಾಡು ಮಹಾತ್ಮರ, ತಪಸ್ವಿಗಳ ತವರುಮನೆ. ೧೯ ನೆಯ ಶತಮಾನದಲ್ಲಿ ನುಡಿದಂತೆ ನಡೆದು ಸಮಾಜದಲ್ಲಿ ಜನತೆಯ ನಡೆ ನುಡಿಗಳನ್ನು ತಿದ್ದಿದ ಮಹಾನುಭಾವಿಗಳ ಮಹಾಶಿವಯೋಗಿಗಳ ಪರಂಪರೆಯಲ್ಲಿ ಶಕೆ ೧೮೧೪ ರಲ್ಲಿ ಲಿಂಗೈಕ್ಯರಾದ ಅಥಣಿಯ ಶೆಟ್ಟರಮಠ (ಕುಮಾರಮಠ)ದ ಶ್ರೀ ಮ.ನಿ.ಪ್ರ. ಮರುಳಸಿದ್ಧ ಮಹಾಶಿವಯೋಗಿಗಳವರು ಮೂಲಪುರುಷರು, ಅಗ್ರಗಣ್ಯರು.

ಅವರು ನಿಜವಿರಕ್ತರು. ಮಠದ ಆಸ್ತಿ-ಪಾಸ್ತಿಗಳನ್ನು ಗಳಿಸಿದವರಲ್ಲ ಅವರು. ನಶ್ವರ ಭೌತಿಕ ಸಂಪದಕ್ಕೆ ಮನವೆಳಿಸಿದವರಲ್ಲ ಅವರು. ಆಧ್ಯಾತ್ಮ ಭಾವ ಸಂಪತ್ತನ್ನು ಪಡೆದ ಮಹಾನುಭಾವಿಗಳವರು. ಈ ಲೋಕದಲ್ಲಿ ಅವರು ಇದ್ದೂ ಇಲ್ಲದ ಮಹಿಮರಾಗಿದ್ದರು. ಮೌನವೇ ಅವರ ಭಾಷೆ ಲಿಂಗಪೂಜೆಯೇ ಅವರ ವೈಭವ ಭಕ್ತರ ಭಕ್ತಿಯನ್ನು ಕೈಕೊಂಡು ಲಿಂಗೋಪಭೋಗಿಗಳಾದ ನಿತ್ಯ ನಿಜೈಕ್ಯರವರು. ಶಿವಯೋಗಿಯು ತ್ರಿಕರಣಗಳಿಂದ ಪರಿಪೂತಾತ್ಮನಾದಕಾರಣ ಅವನು ಮಾಡಿದುದೇ ಒಂದು ಅದ್ಭುತವಾಗಿ ತೋರುತ್ತದೆ. ಅವನು ನುಡಿದುದೇ ಒಂದು ವೇದವಾಣಿಯಾಗುತ್ತದೆ. ಅವನು "ನಿಂದುದೇ ನಿವಾಸ, ಮೆಟ್ಟಿದ ಧರೆ ಪಾವನ, ಅವನಿದ್ದ ಕ್ಷೇತ್ರ ಅವಿಮುಕ್ತಕ್ಷೇತ್ರ. ಅವನ ಸಾಮಾನ್ಯ ಜೀವನವೆಲ್ಲ ನಮಗೆ ಒಂದು ಅದ್ಭುತವಾಗಿ ಕಾಣುತ್ತದೆ. ಅದಕ್ಕೆ ನಾವು ಪವಾಡವೆಂದು (   ) ಕರೆಯುತ್ತೇವೆ. ಇಂತಹ ಮಹತ್ವಗಳು ಜಗತ್ತಿನ ಎಲ್ಲ ಮಹಾತ್ಮರ ಜೀವನಗಳಲ್ಲಿಯೂ ಕಾಣುತ್ತೇವೆ. ಅವು ಜನರಿಗೆ ದಾರಿತೋರುವ ಕೈದೀಪಗಳು.

ಇಂತಹ ಮಹಿಮಾನ್ವಿತ ಮಹಾತ್ಮರ ಚರಿತೆಯನ್ನು ಭಕ್ತಿಯಿಂದ ಶ್ರವಣ ಮತ್ತು ಪಠನ ಮಾಡುವದರಿಂದ ನಮ್ಮ ಮನೋಮಾಲಿನ್ಯವಳಿದು ನಮ್ಮಲ್ಲಿ ಸಾತ್ವಿಕ ಭಾವವು ಮೈದೋರುತ್ತದೆ. ಮಹಾತ್ಮರ ಚರಿತ್ರೆಗಳನ್ನು ಸೂತ್ರರೂಪದಿಂದ ಬರೆದು ಪೂಜೆಯ ಕಾಲದಲ್ಲಿ ಪಠನಕ್ಕೆ ಯೋಗ್ಯವಾಗುವಂತೆ ಮಾಡುವದು, ನಮ್ಮ ಸತ್ಕವಿಗಳ ಕಲಾವಿಧತೆಯ ವೈಶಿಷ್ಟ್ಯ. ಈ ದೃಷ್ಟಿಯಿಂದ ಶ್ರೀಮಹಾಂತ ದೇವರು ಇಲಕಲ್ ಅವರು ಶ್ರೀ ಮ.ನಿ.ಪ್ರ. ಮರಳಸಿದ್ಧ ಸ್ವಾಮಿಗಳವರ ದಿವ್ಯ ಚರಿತ್ರಾಂಶವನ್ನು ನಾಮಾವಳಿಯ ರೂಪದಲ್ಲಿ ಸುಲಭ ಸರಣಿಯಲ್ಲಿ ಪೋಣಿಸಿದ್ದಾರೆ. ಇಂತಹ ಸದ್ಬೋಧಕ ಸಾಹಿತ್ಯವನ್ನು ಪ್ರಕಾಶನಕ್ಕೆ ತರುತ್ತಿರುವ

ಶ್ರೀ ಮ.ನಿ.ಪ್ರ. ಕುಮಾರಸ್ವಾಮಿಗಳು ಬಿದರಿ ಸವದತ್ತಿ ಕಲ್ಮಠ ಅವರ ಪ್ರಯತ್ನ ಪ್ರ
ಬಹಳ ಶ್ಲಾಘನೀಯವಾಗಿದೆ. ಈ ನಾಮಾವಳಿಯು ಮುಮುಕ್ಷುಗಳ ಕಣ್ಮಣಿಯಾಗಲಿ.

ಶಿವಯೋಗಮಂದಿರ

ಶ್ರೀ ಉಮಾಪತಿ ಶಾಸ್ತ್ರಿಗಳು
ಪ್ರಾಧ್ಯಾಪಕ ಸಂಸ್ಕೃತ ಪಾಠಶಾಲೆ,
ಶಿವಯೋಗಮಂದಿರ.

೭-೮-೧೯೫೧

ಪ್ರಕಾಶಕರ ನುಡಿ

ಶ್ರೀ ಮರುಳಸಿದ್ಧೇಶ್ವರರು ಪರಮತಪಸ್ವಿಗಳಾಗಿದ್ದು ಲಿಂಗಪೂಜಾನಿಷ್ಠರಾಗಿ ಸಮಾಜದಲ್ಲಿರುವ ಅಜ್ಞಾನದ ಕತ್ತಲೆಯನ್ನು ಹೊಡೆದೋಡಿಸಿದ ಮಹಾಚೈತನ್ಯ ಮೂರ್ತಿಯಾಗಿದ್ದರು. ಶ್ರೀ ಮರುಳಸಿದ್ಧ ಶಿವಯೋಗಿಗಳು ಅಥಣಿಯ ಕುಮಾರ ಮಠಕ್ಕೆ ಪಟ್ಟಾಭಿಷಿಕ್ತರಾಗಿ ಲಿಂಗಾನಂದದಲ್ಲಿ ಇದ್ದುಕೊಂಡು ಭಕ್ತೋದ್ಧಾರ ಮಾಡುತ್ತಿದ್ದರು. ತಮ್ಮ ಲಿಂಗಪೂಜಾಬಲದಿಂದ ಅನೇಕ ಭಕ್ತರನ್ನು ಉದ್ಧರಿಸಿ ಮೇಲಕ್ಕೆತ್ತಿದವರಾಗಿದ್ದರು. ಶ್ರೀಗಳ ಶಿಷ್ಯರಾದ ಲಿಂ॥ ಶ್ರೀ ಶಿವಬಸವ ಮಹಾಸ್ವಾಮಿಗಳು ಹುಕ್ಕೇರಿಮಠ ಹಾವೇರಿ ಅವರು ಮಹಾತ್ಮರಾಗಿ, ಪರಮವಿರಕ್ತರಾಗಿ, ಮಹಾತಪಸ್ವಿಗಳಾಗಿ ನಾಡೆಲ್ಲವನ್ನು ಬೆಳಗಿದವರಾಗಿದ್ದರು. ಶ್ರೀ ಮರುಳಸಿದ್ಧ ಶಿವಯೋಗಿಗಳು ವಿರಾಗಿಗಳಾಗಿ, ನಿರಂಜನ ಮೂರ್ತಿಗಳಾಗಿ ನಾಡನ್ನುದ್ಧಾರ ಮಾಡಿದವರು. ಈ ಮಹಾಯೋಗಿಗಳ ನಾಮಾವಳಿಯನ್ನು ಶ್ರೀಮೂರುಸಾವಿರ ಮಠದ ಇಂದಿನ ಜಗದ್ಗುರುಗಳಾದ ಶ್ರೀ ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳವರು ಶ್ರೀ ಶಿವಯೋಗಮಂದಿರದಲ್ಲಿ ಸಾಧಕಾವಸ್ಥೆಯಲ್ಲಿದ್ದಾಗ ಇದನ್ನು ಬರೆದು ನಾಡಿಗೆ ನೀಡಿದ್ದಾರೆ. ಅತ್ಯಂತ ಸರಳಶೈಲಿಯಲ್ಲಿ ಜನಮನ ಒಪ್ಪುವಂತೆ ಬರೆದಿದ್ದಾರೆ. ಈ ನಾಮಾವಳಿಯು ಈಗ ಮೂರನೆಯ ಸಾರಿ ಮುದ್ರಣಗೊಳ್ಳುತ್ತಿರುವದು ನಮಗೆ ಸಂತಸವೆನಿಸುತ್ತದೆ. ಇದರ ಸದುಪಯೋಗವನ್ನು ಸದ್ಭಕ್ತರು ಮಾಡಿಕೊಳ್ಳಬೇಕೆಂದು ಆಶಿಸುತ್ತೇವೆ.

೧೦–೩–೬೦ ಮೂರುಸಾವಿರಮಠ ಕುಮಾರೇಶ್ವರ ಭವನ

ಹುಬ್ಬಳ್ಳಿ.

॥ ಶ್ರೀಗುರು ಸಿದ್ಧಲಿಂಗಾಯನಮಃ ॥

॥ ಶ್ರೀಗುರು ಬಸವಲಿಂಗಾಯನಮಃ ॥

ಶ್ರೀ ಮ.ನಿ.ಪ್ರ. ಶ್ರೀ ಮರುಳಸಿದ್ಧ ಶಿವಯೋಗಿಗಳು

ಕುಮಾರ (ಶೆಟ್ಟರ) ಮಠ ಅಥಣಿ ಇವರ

ಚರಿತ್ರೆ

ಬೆಳಗಾಂವ ಜಿಲ್ಲೆಯಲ್ಲಿ ಅಥಣಿ ಎಂಬುದು ಪ್ರಸಿದ್ಧವಾದ ಊರು. ಆ ಊರಿನ ನಡುಪೇಟೆಯಲ್ಲಿ ಶೆಟ್ಟರಮಠವೆಂಬ ಹೆಸರಿನ ಮಠವಿದೆ. ಆ ಮಠಕ್ಕೆ ಕುಮಾರ ಮಠವೆಂದೂ ಕರೆಯುವರು. ಆ ಮಠದಲ್ಲಿ ಆಗಿಹೋದ ಸ್ವಾಮಿಗಳವರಲ್ಲಿ ನಮ್ಮ ಚರಿತ್ರನಾಯಕರ ಗುರುಗಳಾದ ರುದ್ರಮುನಿಸ್ವಾಮಿಗಳೆಂಬವರು ಮಹಾತಪಸ್ವಿಗಳಾಗಿ ಹೋಗಿರುವರು. ಅವರ ತಪಃಪ್ರಭಾವದಿಂದ ಸುತ್ತಲಿನ ಭಾಗದ ಭಕ್ತಾದಿಗಳು ಪಾದದಲ್ಲಿ ಭಕ್ತಿಯುತರಾಗಿ ನಡೆದುಕೊಳ್ಳುತ್ತಿದ್ದರು. ಒಂದು ಸಾರೆ ಶ್ರೀಗಳು ದೇಶಸಂಚಾರಕ್ಕೆ ಹೊರಟು ಭಕ್ತಾದಿಗಳಿಗೆ ಬೋಧೆಗೈಯುತ್ತ ಯಾದವಾಡ ಎಂಬ ಹಳ್ಳಿಗೆ ದಯಮಾಡಿಸಿದರು. ಅಲ್ಲಿಯ ಹಿರೇಮಠದಲ್ಲಿಯೇ ಭಕ್ತಾದಿಗಳು ಅವರಿಗೆ ಪೂಜೆಯ ವ್ಯವಸ್ಥೆ ಮಾಡಿದ್ದರು. ಅಲ್ಲಿ ಯಥೋಕ್ತ ಪೂಜಾದಿಗಳನ್ನು ಪೂರೈಸಿದನಂತರ ಭಕ್ತಾದಿಗಳಿಗೆ ಬೋಧೆಗೈಯುತ್ತ ಕುಳಿತ ಸಮಯದಲ್ಲಿ ಅದೇ ಹಿರೇಮಠದ ದಂಪತಿಗಳ ಮನಸ್ಸಿನಲ್ಲಿ ಏನೋ ದೈವ ಪ್ರೇರಣೆಯಿಂದ ಮಗನಾದ ಮರುಳಯ್ಯನನ್ನು ಸದ್ಗುರುಗಳ ಪಾದಕ್ಕೆ ಅರ್ಪಿಸಬೇಕೆಂಬ ಸದುದ್ದೇಶ ಉಂಟಾಗಿ, ಭಕ್ತರ ಸಮ್ಮುಖದಲ್ಲಿಯೇ ಅವನನ್ನು ಶ್ರೀಗಳ ಪಾದಕ್ಕೆ ಅರ್ಪಿಸಿದರು. ರುದ್ರಮುನಿ ಸ್ವಾಮಿಗಳು ಇವನನ್ನು ಒಪ್ಪಿಸಿದ್ದು ಸಂತೋಷವಾಯಿತೆಂದು ಆಶೀರ್ವದಿಸಿ, ಅವನೊಡನೆ ಅಥಣಿಯ ತಮ್ಮ ಮಠಕ್ಕೆ ದಯಮಾಡಿಸಿದರು. ಮತ್ತು ಶಿವಪ್ರೇರಣೆಯಿಂದ ದೊರೆತ ೧೦-೧೨ ವರುಷದ ಆ ವಟುವನ್ನು ಪ್ರೀತಿಯಿಂದ ಲಾಲನೆ-ಪಾಲನೆ ಮಾಡುವದಲ್ಲದೆ, ಆತನಿಗೆ ವಿದ್ಯೆ ಆಚಾರ ವಿಚಾರಾದಿಗಳನ್ನು ಬೋಧಿಸತೊಡಗಿದರು. ಮರುಳಯ್ಯನಾದರೂ ಮುಗ್ಧ ಸಂಯ್ಯನಂತಿದ್ದರೂ ಆಚಾರಾದಿಗಳನ್ನು ಚಾಚೂ ತಪ್ಪದೆ ಕಲಿಯುವದಲ್ಲದೆ ಸದ್ಗುರುವಿನ ಸೇವೆಯನ್ನು ಮನಸಾರೆ ಮಾಡುತ್ತ, ಗುರುವಿನ ಕೃಪೆಗೆ ಪಾತ್ರನಾದನು. ಗುರುಗಳು ಶುಭ ಮುಹೂರ್ತದಲ್ಲಿ ಪಟ್ಟಾಧಿಕಾರಿಗಳಿಂದ ದೀಕ್ಷೆಗೈಯಿಸಿ ಮಠದ ಪದ್ಧತಿಗನುಸರಿಸಿ ಆತನಿಗೆ ಕಪನಿ ಕಿರೀಟೊಪ್ಪಿಗೆ ಧರಿಸಿದರು. ಮರುಳಾರ್ಯನು ಊರ ಪ್ರಾಥಮಿಕ ಶಾಲೆಯಲ್ಲಿ ೪-೬ ಇಯತ್ತೆಗಳವರೆಗೆ ಮಾತ್ರ ಶಾಲೆ ಕಲಿತ್ತಿದನು.

ಆದ್ದರಿಂದ ಸದ್ಗುರುಗಳು ಅವನಿಗೆ ಶರಣರವಚನ, ಸಪ್ಪಣ್ಣಾರ್ಯರ ಪದ, ಶಿವ ಗುಣಾರ್ಯರ ಪದ, ಷಟ್‌ಶಾಸ್ತ್ರ ವಿಚಾರ ಎಲ್ಲವನ್ನು ಪ್ರತಿದಿನ ಬೋಧಿಸತೊಡಗಿದರು. ಇವರ ಬೋಧೆಯಂತೆ, ನಮ್ಮ ಚರಿತ್ರನಾಯಕರು ಎಲ್ಲವನ್ನೂ ಕಲಿಯುವದಲ್ಲದೇ, ಶಿವಪೂಜೆ, ಗುರುಸೇವೆಯಲ್ಲಿಯೂ ತಲ್ಲೀನರಾಗಿರ ಹತ್ತಿದರು. ಇವುಗಳ ಹೊರತು ಅನ್ಯತ್ರ ಅವರ ಲಕ್ಷವೇ ಇರಲಿಲ್ಲ. ಯಾರೊಡನೆಯೂ ವಿಶೇಷ ಮಾತನಾಡುತ್ತಿರಲಿಲ್ಲ. ಮುಗ್ಧ ಸ್ವಭಾವದಿಂದ ಒತ್ತಟ್ಟಿಗೆ ಕುಳಿತು ಗುರುಪಾಠ ಓದುತ್ತಿದ್ದರು. ಇದೇ ರೀತಿ ಬಹಳ ದಿನಗಳು ಗತಿಸಲು ಗುರುಗಳು ವಯೋವೃದ್ಧರಾದ್ದರಿಂದ ಸರ್ವ ಭಕ್ತರನ್ನು ಕರೆಯಿಸಿ, ಶುಭಮುಹೂರ್ತದಲ್ಲಿ ಅನುಗ್ರಹ ಅಧಿಕಾರ ದಯಪಾಲಿಸಿದ್ದಲ್ಲದೆ, ಮರುಳಸಿದ್ಧಸ್ವಾಮಿಗಳೆಂಬ ಹೆಸರಿಟ್ಟು ಮಠದ ಸರ್ವಾಧಿಕಾರವನ್ನೆಲ್ಲ ಅವರಿಗೆ ಒಪ್ಪಿಸಿ ತಾವು ಲಿಂಗಾನಂದದಲ್ಲಿ ಕಾಲ ಕಳೆಯುತ್ತ ಒಂದಾನೊಂದು ದಿನ ಲಿಂಗದಲ್ಲಿ ಲೀನರಾದರು.

ಇತ್ತ ಗುರುಗಳಿಂದ ದತ್ತವಾದ ಅನುಗ್ರಹಬಲದಿಂದ ಮರುಳಸಿದ್ಧ ಸ್ವಾಮಿಗಳು ತ್ರಿಕಾಲ ಲಿಂಗಪೂಜೆ ಮಾಡುತ್ತ ಸದಾವಕಾಲ ಬಸವನಾಮೋಚ್ಚರಣೆಗೈಯುತ್ತ ಲಿಂಗಾನಂದದಲ್ಲಿರುತ್ತಿದ್ದರು. ಕೌಪೀನಗಳನ್ನು ತೊಳೆಯುವದು. ಪತ್ರಿ-ಪುಷ್ಪ ತರುವದು. ಪೂಜೋಪಕರಣಗಳನ್ನೆಲ್ಲ ಸಿದ್ಧಪಡಿಸುವದು. ಇವನ್ನೆಲ್ಲ ತಾವೇ ಮಾಡಿಕೊಳ್ಳುತ್ತಿದ್ದರು; ಯಾರಿಂದಲೂ ಸೇವೆ ಮಾಡಿಸಿಕೊಳ್ಳುತ್ತಿದ್ದಿಲ್ಲ. ಪ್ರತಿನಿತ್ಯ ಒಬ್ಬೊಬ್ಬ ಭಕ್ತರ ಮನೆಯ ಪ್ರಸಾದದಿಂದ ತೃಪ್ತರಾಗುತ್ತ ಬಸವಣ್ಣನವರ ವಚನಗಳನ್ನೂ ಯಾವಾಗಲೂ ಪಠಿಸುತ್ತಿದ್ದರು. ಇವರು ಸದಾವಕಾಲ ಲಿಂಗದ್ಯನೊಡನೆ ಮಾತಾಡುತ್ತಿದ್ದರು. ಶಿವಪೂಜೆ ವೇಳೆಯಲ್ಲಿಯೇ ತಮ್ಮ ಅಭೀಷ್ಟವನ್ನು ತಂದೆ-ಮಗನಂತೆ ಕೇಳುತ್ತಿದ್ದರು. ಇದನ್ನು ಹಾವೇರಿ ಶ್ರೀಗಳು ಪದೇ ಪದೇ ಅಪ್ಪಣೆ ಕೊಡಿಸುತ್ತಿದ್ದರು. ಅವರು ಸ್ವಾನುಭವದಿಂದ ಕಣ್ಣಾರೆ ಕಂಡ ತಮ್ಮ ಗುರುವಿನ ವಿಚಾರವನ್ನು ಮೇಲಿಂದ ಮೇಲೆ ಅಪ್ಪಣೆ ಕೊಡಿಸುತ್ತಿದ್ದುದು ಮನಗಂಡ ಮಾತಾಗಿದೆ. ಅದಕ್ಕಂತೆಯೇ ಮೊಗ್ಗೆಯ ಮಾಯಿದೇವರು ತಮ್ಮ ಶತಕತ್ರಯದಲ್ಲಿ "ಲಿಂಗದೊಳಿಟ್ಟ ದೃಷ್ಟಿ ನಿಜದೃಷ್ಟಿಯೊಳಿಟ್ಟ ಮನಂ ಮನಸ್ಸಿನೊಳಿಂಗವೆ ಸಿಂದ ಭಾವಮದರೊಳ್ನೆಲೆಗೊಂಡ ಶಿವಾತ್ಮ ಲಿಂಗವಾ" ಲಿಂಗಪೂಜಾರ್ದ ನಿತ್ಯಸುಖಿಯಾಗಿ, ವಿರಾಜಿಸುವಂಗೆ ಬಾಹ್ಯಕರ್ಮಂಗಳೇತಕಯ್ಯಾ ಪರಮ ಪ್ರಭುವೇ ಮಹದ್ವ ಪುರೀಶ್ವರಾ ॥೧॥ ಎಂಬಂತೆ ಯಾವಾಗಲೂ ಲಿಂಗಪೂಜೆಯಲ್ಲಿಯೇ ನಿರತರಾಗಿ ಲಿಂಗಾಂಗ ಸಾಮರಸ್ಯ ಜ್ಞಾನದಿಂದ ಆತ್ಮಬಲ ಪಡೆದರು. ಪ್ರತಿನಿತ್ಯ ಭಕ್ತರು ದರ್ಶನಾರ್ಥವಾಗಿ ಬಂದು, ತಮ್ಮ ತಮ್ಮ ಮನೆತನಗಳ ಸುಖ-ದುಃಖ ಪರಂಪರೆಯನ್ನು ಹೇಳುತ್ತಿದ್ದರು. ಅದಕ್ಕೆ ಮರುಳ

ಸಿದ್ಧರು, ತಮ್ಮ ಅಮೃತವಾಣಿಯಿಂದ ಪರಿಹಾರೋಪಾಯಗಳನ್ನು ಹೇಳುತ್ತಿದ್ದರು. ಇದರಂತೆ "ಲೋಕಾಪುರದವರು" ಎಂಬ ಮನೆತನದವರು ಬಹುದಿನಗಳಿಂದ ತಮಗೆ ಮಕ್ಕಳಾಗದಿರಲು, ಬಂದು ಸದ್ಗುರುಗಳಿಗೆ ತಮ್ಮ ವೇದನೆಯನ್ನು ಅರಿಕೆ ಮಾಡಿಕೊಂಡರು. ಆಗ ಮರುಳಸಿದ್ಧರು ಲಿಂಗಯ್ಯನಿಂದ ಅಪ್ಪಣೆ ಪಡೆದು, ಪ್ರಸಾದವಾಣಿಯಿಂದ ಆಶೀರ್ವಾದ ಮಾಡಿದರು. ಆ ಆಶೀರ್ವಾದದ ಫಲವಾಗಿ ಪುತ್ರನು ಜನಿಸಿದನು. ಅದರಿಂದ ಮನೆಯವರಿಗೆ ಮಹದಾನಂದವಾಗಿ, ಸದ್ಗುರುವಿನ ಹೆಸರನ್ನೇ ಇಟ್ಟು ಸುಖದಿಂದ ಬಾಳಿದರು.

ಇದರಂತೆ ಅಲ್ಲಿಯೇ (ಅಥಣಿಯಲ್ಲಿ) ಗಾಡಗೀಳ ವಿಷ್ಣುಪಂತನೆಂಬ ವೈಷ್ಣವ ಬ್ರಾಹ್ಮಣನಿದ್ದನು. ಅವನಿಗೆ ಬಹುದಿನಗಳಿಂದ ಮಕ್ಕಳಾಗದ್ದರಿಂದ ಮರುಳಸಿದ್ಧೇಶ್ವರರ ಸನ್ನಿಧಿಗೆ ಬಂದು ಬೇಡಿಕೊಳ್ಳಲು ನಾಳೆ ಬಾ ಹೇಳುವೆನೆಂದು ಹೇಳಿ, ಮರುದಿನ ಮಧ್ಯಾಹ್ನ ಪೂಜೆಯಲ್ಲಿ ಲಿಂಗಯ್ಯನೊಡನೆ ಅಪ್ಪಣೆ ಪಡೆದು, ಹೊರಗೆ ಬರುವಷ್ಟರಲ್ಲಿಯೇ ಮಾರ್ಗ ನಿರೀಕ್ಷಣೆಯಲ್ಲಿ ಕುಳಿತ ವಿಷ್ಣುಪಂತನಿಗೆ ಸತ್ಪುತ್ರನು ಜನಿಸುವನೆಂದು ಎರಡು ಉತ್ತತ್ತಿಗಳನ್ನು ಅವನ ಉಡಿಯಲ್ಲಿ ಹಾಕಿದರು. ಅದರಂತೆ ಸ್ವಲ್ಪ ದಿನಗಳಲ್ಲಿಯೇ ಶ್ರೀಗಳ ಪ್ರಸಾದದಿಂದ ಆತನಿಗೆ ಸತ್ಪುತ್ರನು ಜನಿಸಿದನು. ಮುಂದೆ ಆ ಶಿಶುವು ಶಂಕರರಾವನೆಂಬ ಹೆಸರಿನಿಂದ ಪ್ರಸಿದ್ಧನಾಗಿ ಬಾಳಿದನು. ಈಗಲಾದರೂ ಅಥಣಿಯಲ್ಲಿ ಅವನ ಮನೆತನವಿರುವದು.

ಮತ್ತೊಂದು ಸಾರೆ ಊರಲ್ಲಿಯ ಉಳಿದ ಬ್ರಾಹ್ಮಣರೆಲ್ಲರೂ ಸೇರಿ ವಿಷ್ಣುಪಂತನು ಬ್ರಾಹ್ಮಣನಿದ್ದು ಒಬ್ಬ ಅಯ್ಯನವರಿಗೆ ಭಕ್ತಿಯುತನಾಗಿ ನಡೆಯುವದು ನಾಚಿಕೆಗೇಡು. ಹೇಗಾದರೂ ಮಾಡಿ ಅವನ ಈ ವೃತ್ತಿಯನ್ನು ಬಿಡಿಸಬೇಕು ಎಂದು ನಿಶ್ಚಯಿಸಿ ವಿಷ್ಣುಪಂತನಿಗೆ ಗುರುವಿನಲ್ಲಿದ್ದ ಭಕ್ತಿಯನ್ನು ತೊಲಗಿಸಿ ಅದಕ್ಕೆ ವಿರುದ್ಧವಾಗಿ ತಿರಸ್ಕಾರವನ್ನು ಹುಟ್ಟಿಸಲು ಭೇದೋಪಾಯಗಳನ್ನು ಯೋಜಿಸಹತ್ತಿದರು. ಒಂದು ಸಾರೆ ಬಹಳ ದಿವಸಗಳಿಂದಲೂ ಮಳೆಯು ಆಗದೆ ಇರಲು ಎಲ್ಲರೂ ಕೂಡಿ ವಿಷ್ಣುಪಂತನಿಗೆ "ನಿಮ್ಮ ಸ್ವಾಮಿಯನ್ನು ಕೇಳಿ ಮಳೆ ಬರುವಂತೆ ಮಾಡಬಾರದೆ? ನೋಡೋಣ! ನಿಮ್ಮ ಸ್ವಾಮಿಯವರ ನಿಷ್ಠೆಯನ್ನು!! ಎಂದು ಚೇಷ್ಟೆ ಮಾಡಿದರು" ಅದನ್ನು ಕೇಳಿ ಮನನೊಂದ ಆ ವಿಷ್ಣುಪಂತನು ಮಠಕ್ಕೆ ಬಂದು ಮರುಳಸಿದ್ಧೇಶ್ವರರಿಗೆ ಬಿನ್ನವಿಸಲು, ಗುರುಗಳು ಮನದಲ್ಲಿ ಲಿಂಗಯ್ಯನನ್ನು ಧ್ಯಾನಿಸಿ "ಆಗಲಿ ಇಂದು ರಾತ್ರಿ ಬಸವನು ಕೃಪೆ ಮಾಡುವನು" ಎಂದು ಅಪ್ಪಣೆ ಕೊಟ್ಟರು. ಈ ವಾರ್ತೆ ಸರ್ವರಿಗೂ ತಿಳಿಸಲ್ಪಟ್ಟಿತು. ಎಲ್ಲರೂ ಉತ್ಸುಕರಾಗಿ ಮಳೆಯ ದಾರಿಯನ್ನು ಕಾಯುತ್ತಿದರು. ಹಾಸು ರಾತ್ರಿಯಾದರೂ ಮಳೆಯ ಚಿನ್ಹವೇನೂ ಕಂಡುಬರಲಿಲ್ಲ. ಅದರಿಂದ ಹಾಸ್ಯ ಮಾಡಲು ಪ್ರಾರಂಭಿಸಿದರು. ಅಷ್ಟರಲ್ಲಿಯೇ ಆಕಾಶದಲ್ಲಿ ಒಂದು ಮೂಲೆಯಲ್ಲಿ ಮಿಂಚಿನಂತಾಗಿ, ಇದ್ದ

ಸ್ವಲ್ಪ ಹೊತ್ತಿನಲ್ಲೇ ಆಕಾಶದಲ್ಲಿ ಮೋಡಗಳು ಕವಿದು ಸ್ವಲ್ಪ ಮೋಡದಿಂದಲೇ ಇರುಳೆಲ್ಲ ಒಂದೇ ಸವನೆ ಮಳೆ ಸುರಿಯಿತು. ವಿಷ್ಣು ಪಂತನಿಗೆ ಹಿಡಿಸಲಾರದಷ್ಟು ಆನಂದ; ಮಳೆಯಲ್ಲಿಯೇ ಅದರಲ್ಲಿಯೂ ರಾತ್ರಿ ಛತ್ರಿ ಹಿಡಿದುಕೊಂಡು ಎಲ್ಲ ಬ್ರಾಹ್ಮಣರ ಮನೆಗಳಿಗೆ ಹೋಗಿ, "ನೋಡಿರಿ ನಮ್ಮ ಗುರುವಿನ ಮಹಿಮೆಯನ್ನು" ಎಂದು ಹೇಳಲು, ಎಲ್ಲ ಬ್ರಾಹ್ಮಣರೂ ಸದ್ಗುರುವಿನ ಮಹಿಮೆಗೆ ತಲೆಬಾಗಿದರು.

ಮತ್ತೊಂದು ಸಲ ನಡೆದ ಘಟನೆಯು ಇನ್ನೂ ಅಚ್ಚರಿಯಾದುದು. ಮರುಳ ಸಿದ್ಧ ಶಿವಯೋಗಿಗಳು ಭಕ್ತರು ಬಿನ್ನಹಮಾಡಿದರೆ, ಅವರ ಮನೆಗೆ ದಯಮಾಡಿಸಿ ಪ್ರಸಾದ ಮುಗಿಸಿಕೊಂಡು ಬರುವ ಪರಿಪಾಠವಿತ್ತು. ಮತ್ತು ಎಡೆ ಮಾಡಿದ ಪ್ರಸಾದವನ್ನು ಅದು ಎಂಥದಿದ್ದರೂ ಲಿಂಗಾರ್ಪಣ ಎಂದು ಎಷ್ಟೂ ಬಿಡದೆ ಸ್ವೀಕರಿಸುವ ನಿಯಮವಿತ್ತು. ಅಜ್ಞಾನಿಯೋರ್ವ ಭಕ್ತನು ಕುಚೇಷ್ಟೆಗಾರರ ಸಂಚಿನಿಂದ ಉತ್ತೇಜಿತನಾಗಿ, ಸ್ವಾಮಿಗಳ ಈ ನಿಯಮವನ್ನು ಪರೀಕ್ಷಿಸಿ ಬಿಡಬೇಕೆಂಬ ದುಷ್ಟ ಬುದ್ಧಿಯಿಂದ ಅವರಿಗೆ ಬಿನ್ನಹ ಮಾಡಿ, ಪ್ರಸಾದಕ್ಕಾಗಿ ಮನೆಗೆ ಕರೆತಂದನು ಹಾಗೂ ಬುದ್ಧಿಪೂರ್ವಕವಾಗಿ ತಯಾರಿಸಿದ ಒಂದು ಹಿಡಿ ಹಸೀ ಖಾರದ ಉಂಡಿಯನ್ನೇ ಎಡೆಯ ಬಟ್ಟಲಿನಲ್ಲಿ ನೀಡಿಬಿಟ್ಟನು. ವ್ರತನಿಷ್ಠರಾದ ಸ್ವಾಮಿಗಳವರು ಬಸವನಿಚ್ಛೆಯಿಂದ ಬಂದಿರುವದಾಗಿ ಸಮಾಧಾನದಿಂದ ಸ್ವೀಕರಿಸುತ್ತ ಮುಗಿಯಿಸಿ ಮನೆಯವರೆಗೆ ಮರುಮಾತಾಡದೆ, ಮನದಲ್ಲಿಯೇ ಮರುಗಿದವರಾಗಿ, ಮಠಕ್ಕೆ ಬಂದರು. ಕೆಲವು ದಿವಸಗಳಲ್ಲಿಯೇ ಮನೆಯವರು ಶ್ರೀಮಂತರಿದ್ದು ಬಡತನ ಪ್ರಾಪ್ತಿಯಾಗಿ, ನಷ್ಟಕ್ಕೀಡಾದರು. ಶರಣರ ನೋವೇ ಲಿಂಗದ ನೋವಲ್ಲವೇ? ಇದೇ ವಿಚಾರವಲ್ಲಿ ಬಸವಣ್ಣನವರು "ಹುಲಿಯ ಮೀಸೆಯ ಕೊಂಡು ಉಯ್ಯಾಲೆಯ ನಾಡುವಂತೆ? ಉರಿಕೊಳ್ಳಿಯ ಕೊಂಡು ಮಂಡೆಯ ಸಿಕ್ಕು ಬಿಡಿಸುವಂತೆ? ಕೂಡಲ ಸಂಗನ ಶರಣರೊಡನೆ ಸರಸವಾಡಿದರೆ ಸುಣ್ಣದ ಹರಳು ಕಟ್ಟಿಕೊಂಡು ಮಡುವ ಬಿದ್ದಂತೆ" ಎಂದು ಬೋಧಿಸಿದ್ದಾರೆ.

ಇದನ್ನು ಕಂಡು ಭಕ್ತಾದಿಗಳು ಭಯಭಕ್ತಿಯುತರಾಗಿ, ನಡೆದಿರಲು ಇತ್ತ ಬಿದರಿ ಕುಮಾರ ಶಿವಯೋಗಿಗಳು ತಮ್ಮ ಪ್ರಾಯದವಯದಲ್ಲಿಯೇ ವೈರಾಗ್ಯತಾಳಿ ಸದ್ಗುರುವಿನ ಕೃಪೆ ಪಡೆಯಬೇಕೆಂದು ಆಲೋಚಿಸಿ ಮರುಳಸಿದ್ಧ ಶಿವಯೋಗಿಗಳ ತಪಃ ಸಾಮರ್ಥ್ಯವನ್ನು, ಬ್ರಹ್ಮತೇಜದ ಕಳೆಯನ್ನೂ, ಅನಂತಾನಂದ ಮಹಿಮೆಗಳನ್ನೂ, ಅರಿತವರಾಗಿ ಸದ್ಗುರುವನ್ನು ಹುಡುಕುತ್ತ ಬಿದರಿಯಿಂದ ಅಥಣಿಗೆ ಬಂದು ಬಹುದಿನಗಳವರೆಗೂ ಗುರುವಿನ ಸೇವೆಯನ್ನು ಮನ ಒಪ್ಪುವಂತೆ ಮಾಡಿದರು. ಗುರುಗಳು ಭಕ್ತನ ಅಂತರಂಗವನ್ನರಿತು ಯೋಗ್ಯ ಸುಮುಹೂರ್ತದಲ್ಲಿ ಅನುಗ್ರಹ ದಯಪಾಲಿಸಿ ಇಂದ್ರಿಯನಿಗ್ರಹ ವಿಷಯವಾಸನೆ ಕೀಳಲು ಅನಂತ ತೀರ್ಥ

ಯಾತ್ರೆಗಳಿಗೆ ಹನ್ನೆರಡು ವರುಷಗಳವರೆಗೆ ಸಂಚಾರ ಹೋಗಿಬರಲು ಅಪ್ಪಣೆಮಾಡಿ ಆಶೀರ್ವದಿಸಿ, ಕಳುಹಿಸಿಕೊಟ್ಟರು.

ಅಥಣಿಯಿಂದ ನಾಲ್ಕೈದು ಹರದಾರಿಯ ಮೇಲೆ ಸಪ್ತಸಾಗರವೆಂಬ ಊರು ಇರುವದು. ಇದಕ್ಕೆ ಸರ್ಪಸಾಗರವೆಂಬ ಹೆಸರೂ ರೂಢಿಯಲ್ಲಿದೆ. ಹಿಂದಕ್ಕೆ ಮಹಾಭಾರತ ಕಾಲಕ್ಕೆ ಜನಮೇಜಯರಾಜನು ಸರ್ಪಯಜ್ಞವನ್ನು ಇಲ್ಲಿಯೇ ಮಾಡಿರುವದರಿಂದ ಸರ್ಪಸಾಗರವೆಂಬ ಹೆಸರು ಬಂದಿರುವದಾಗಿಯೂ, ಆ ಯಜ್ಞಕ್ಕೆ ಸಪ್ತಸಾಗರ ನೀರು ಬೇಕಾದ್ದರಿಂದ ಸಾಗರದಂಥ ಏಳು ಕುಂಡಗಳನ್ನು ಮಾಡಿದ್ದರಿಂದ ಸಪ್ತಸಾಗರವೆಂಬ ಹೆಸರು ಬಂದಿರುವದೆಂದು ಈಗಲೂ ಜನರು ಹೇಳುತ್ತಿರುವರು. ಅದರ ಕುರುಹುಗಳು ಅಲ್ಲಿ ಈಗಲಾದರೂ ದೊರೆಯುವವು. ಇಂಥ ಊರಲ್ಲಿ ಗಿರಿಮಲ್ಲಯ್ಯ, ಶಿವಲಿಂಗಮ್ಮನವರೆಂಬ ಮಾಹೇಶ್ವರ ದಂಪತಿಗಳ ಉದರದಲ್ಲಿ ಶಿವಬಸವನೆಂಬ ಕುಮಾರನು ಜನಿಸಿ ೮-೧೦ ವರುಷದವನಾಗಿ, ಬಾಲಲೀಲೆಗಳನ್ನಾಡುತ್ತಲಿರ್ದನು. ಗಿರಿಮಲ್ಲಯ್ಯನವರು ಜ್ಯೋತಿಷ್ಯ ಶಾಸ್ತ್ರದಲ್ಲಿ ನಿಪುಣರಿದ್ದುದರಿಂದ ಮಗನ ಜನ್ಮ ಕುಂಡಲಿಯಲ್ಲಿ ಇವನು ಮಹಾಯೋಗಿ ಆಗುವನೆಂದು, ಮೊದಲೇ ಬರೆದಿಟ್ಟಿದ್ದರು. ಅಥಣಿಯಿಂದ ಆಕಸ್ಮಾತ್ ಒಂದು ಸಾರೆ ಮುರುಘೇಂದ್ರ ಶಿವಯೋಗಿಗಳು ಸಪ್ತಸಾಗರಕ್ಕೆ ದಯಮಾಡಿಸಿ ಆ ಹಿರಿಯಮಠದಲ್ಲಿಯೇ ಪೂಜೆಗಾಗಿ ಇಳಿದರು. ಅಲ್ಲಿರುವ ಶಿವಬಸವಕುಮಾರನ ಮುಖಲಕ್ಷಣಗಳನ್ನೂ, ಅವನ ಬಾಹು ಮುಖ ಸುಂದರತೆಯನ್ನೂ ಕಂಡು 'ಇವನನ್ನು ನಮಗೆ ಕೊಡಬೇಕು. ಇವನನ್ನು ನಮ್ಮ ಮಠಕ್ಕೆ ಮರಿಯನ್ನಾಗಿ ಮಾಡುವೆವು" ಎಂದು ತಾಯಿ-ತಂದೆಗಳನ್ನು ಆಗ್ರಹದಿಂದ ಕೇಳಿದರು. ಮೊದಲೇ ಗಿರಿಮಲ್ಲಯ್ಯನವರಿಗೆ ಮಗನು ಯೋಗಿಯಾಗುವನೆಂದು ಆತನ ಜನ್ಮಕುಂಡಲಿಯಿಂದ ತಿಳಿದಿದ್ದುದರಿಂದ ಅನುಮಾನಿಸದೆ ಒಳ್ಳೇ ಆನಂದಯುತರಾಗಿ ಸತಿಯೊಡಗೂಡಿ ನಮಸ್ಕರಿಸಿ, ಶಿವಬಸವನನ್ನು ಗುರುವಿನ ಪಾದಕ್ಕೆ ಅರ್ಪಿಸಿದರು. ಗುರುಗಳು ಅವನೊಡನೆ ಅಥಣಿಗೆ ದಯಮಾಡಿಸಿದರು. ಗುರುಗಳು ಅವನಿಗೆ ಅವಶ್ಯವಾದ ವಿದ್ಯಾಭ್ಯಾಸವನ್ನು ಮಾಡಿಸಿ, ಅದಪಟ್ಟಿಯ ಯೋಗ್ಯ ಪಟ್ಟಾಧಿಕಾರಿಯಿಂದ ದೀಕ್ಷೆ ಮಾಡಿಸಿದರು. [illegible] ವಿರಕ್ತರಿಗೆ ಒಪ್ಪುವ ಉಡಿಗೆ-ತೊಡಿಗೆ ಹಾಕಿಸಿದರು. ತಾವೇ ಸ್ವತಃ ಬಸವಣ್ಣನವರ ವಚನಗಳನ್ನು, ನಿಜಗುಣಾರ್ಯರ ಕೈವಲ್ಯವನ್ನು, ಶಿವಪೂಜೆಯ ವಿಧಿವಿಧಾನಗಳನ್ನು, ಮಂಗಲಾಷ್ಟಕಗಳನ್ನು ಕಲಿಸಿ, ಒಳ್ಳೆಯ ಬುದ್ಧಿವಂತನನ್ನಾಗಿ ಮಾಡಿದರು. ಶಿವಬಸವನಾದರೂ ಗುರುಗಳ ಸೇವೆಯನ್ನು ಮನಸಾರ ಮಾಡುತ್ತ, ಛತ್ರ ಮನೆಯ ಪ್ರಸಾದ ಸೇವಿಸುತ್ತ ಯುವಕನಾದರೂ ತನ್ನ ಬ್ರಹ್ಮಚರ್ಯವನ್ನು ಕಾಯ್ದುಕೊಂಡು ಇಪ್ಪತ್ತೈದು ವರುಷದವನಾಗುವವರೆಗೆ ಅಲ್ಲಿಯೇ ಸದ್ಗುರುವಿನ ಸನ್ನಿಧಿಯಲ್ಲಿದ್ದನು. ಇಂಥ ಮಹಾತ್ಮರ ಕೃಪಾಕಟಾಕ್ಷದಲ್ಲಿ ಬೆಳೆದವನಾದ್ದರಿಂದ ಇವನು

ಮುಂದೆ ಹಾವೇರಿಯ ಶಿವಬಸವಸ್ವಾಮಿಗಳೆಂಬ ನಾಮದಿಂದ ಪ್ರಸಿದ್ಧ ತಪೋನಿಷ್ಠ ರಾಗಿ ಬಾಳಿದರು.

ಇತ್ತ ಗುರುಗಳ ಆಜ್ಞೆಯಂತೆ ದೇಶಸಂಚಾರಾರ್ಥ ಹೋದ ಬಿದರಿ ಕುಮಾರೇಶ್ವರರು ಹನ್ನೆರಡು ವರ್ಷ ದೇಶಸಂಚಾರ ಮುಗಿಸಿಕೊಂಡು ಗುರುವಿನ ದರ್ಶನಕ್ಕಾಗಿ ಅಥಣಿಗೆ ಬಂದರು. ಗುರುಗಳು ಬಂದಿರುವ ಶಿಷ್ಯನನ್ನು ಮುಂದಕ್ಕೆ ಕರೆದು ದೇಶಸಂಚಾರದಲ್ಲಿ ಪಡೆದ ಅನುಭವ ಕ್ಷೇಮಾದಿಗಳನ್ನು ಕೇಳಿ ಆನಂದಯುತ ರಾಗಿ, "ಆಗಲಿ ನಾಳಿನ ಶುಭ ಮುಹೂರ್ತದಲ್ಲಿ ನಿನಗೆ ಸರ್ವರ ಸಮಕ್ಷಮ ನಿರಂಜನ ಚರಪಟ್ಟಾಧಿಕಾರವನ್ನು ಇತ್ತಪೆನು" ಎಂದು ಸದ್ಗುರುಗಳು ಶಿಷ್ಯನನ್ನು ಸಂತೈಸಿ ಸರ್ವ ಭಕ್ತಾದಿಗಳನ್ನು ಕರೆಯಿಸಿ ನಿರಂಜನ ಮೂರ್ತಿಗಳ ಸಮಕ್ಷಮದಲ್ಲಿ ಷಟ್ ಕಲಶಸ್ಥಾಪನೆ ಮಾಡಿ, ವಿಧಿಪೂರ್ವಕ ಆಗಿನ ಪದ್ಧತಿಯಂತೆ ನಿರಂಜನ ಪಟ್ಟಾಧಿಕಾರ, ಗದ್ದುಗೆಯ ಕಾರ್ಯ ಮುಗಿಯಿಸಿ ಲಿಂಗಾಂಗಸಾಮರಸ್ಯ ಬೋಧೆಗೈದು ಶಿಷ್ಯನ ಮಸ್ತಕದಲ್ಲಿ ಹಸ್ತವನ್ನಿಟ್ಟುಪರಿಸಿ "ವಿಷಯಗಳಾಸೆಯನ್ನು ದೂರೀಕರಿಸಿ" ಹೊನ್ನು, ಹೆಣ್ಣು, ಮಣ್ಣುಗಳೆಂಬ ತ್ರಿಮಲಗಳೆಂಬ ಕಣ್ಣೆತ್ತಿ ನೋಡದ ವೀರ ವಿರಕ್ತಿಯಿಂದ ಅನುಷ್ಠಾನ, ಜಪ, ತಪ, ಜಂಗಮದಾಸೋಹವನ್ನೆಸಗುತ್ತ ಭಕ್ತಾದಿಗಳ ಉದ್ಧಾರ ಗೈದು ಕುಮಾರ ಶಿವಯೋಗಿಯಾಗೆಂದು ಆಶೀರ್ವದಿಸಿದರು. ಸದ್ಗುರುಗಳ ಕೃಪೆ ಯನ್ನು ಪಡೆದು, ಅಲ್ಲಿಯೇ ಬಹುದಿನಗಳವರೆಗೆ ಸೇವೆ ಮಾಡುತ್ತ, ಗುರುಸನ್ನಿಧಿ ಯಲ್ಲಿರುತ್ತಿರಲು ಮರುಳಸಿದ್ಧಯೋಗಿಗಳಿಗೆ ವಯೋವಾರ್ಧಕ್ಯದಿಂದ ಪ್ರಕೃತಿಯಲ್ಲಿ ತುಸು ಜಡವಾದಂತಾಗಿ ಬರುಬರುತ್ತ ಅದು ಹೆಚ್ಚಾಗುತ್ತ ನಡೆದಿರಲು, ಲಿಂಗಯ್ಯ ನಲ್ಲಿಯೇ ತಮ್ಮ ಅಂತ್ಯ ಸಮಯವನ್ನು ನಿರೀಕ್ಷಿಸಿ ಬಿದರಿ ಕುಮಾರ ಶಿವಯೋಗಿ ಗಳನ್ನು ಕರೆದು "ಲಿಂಗಯ್ಯನೊಡನೆ ಬೆರೆಯುವ ವೇಳೆ ಸಮೀಪಿಸಿದೆ ಈ ಶಿವಬಸವ ದೇವರನ್ನು ಪೊರೆಯುವ ಭಾರವು ನಿಮ್ಮನ್ನು ಕೂಡಿದೆ" ಎಂದು ಹೇಳಿ ಶಿವಬಸವ ದೇವರನ್ನು ಅವರ ಪಾದಕ್ಕೆ ಹಾಕಿದರು ಮತ್ತು ಭಕ್ತರನ್ನು ಕರೆಯಿಸಿ ಸಮಾಧಿ ಯನ್ನು ಸಿದ್ಧಗೊಳಿಸಲು ಅಪ್ಪಣೆಮಾಡಿ ಕುಮಾರ ಶಿವಯೋಗಿಗಳ ತೊಡೆಯಮೇಲೆ ಮಸ್ತಕವನ್ನಿರಿಸಿ ಜಪಮಾಲೆಯಿಂದ ಜಪಮಾಡುತ್ತ ಲಿಂಗನಿರೀಕ್ಷಣೆಯಲ್ಲಿಯೇ ಭಾದ್ರಪದ ಶು॥ ೧೫,೧೮೧೪ ಶಕೆ ಸೋಮವಾರ ಶುಭ ದಿವಸದಲ್ಲಿ ಲಿಂಗೈಕ್ಯ ರಾದರು. ಇಲ್ಲಿಗೆ ಮರುಳಸಿದ್ಧೇಶ್ವರರ ಚರಿತೆಯು ಮುಗಿಯಿತು.

ಇಂಥ ಮಹಾ ಶಿವಯೋಗಿಗಳ ಕೃಪಾಶೀರ್ವಾದ ಬಲದಿಂದ ಬಿದರಿ ಹಾವೇರಿ ಶ್ರೀಗಳು ಪರಮ ಶಿಷ್ಯರಾಗಿ, ಅಂಥವರ ಅಮೃತಹಸ್ತದಿಂದ ಹೊರಟ ಪೂಜ್ಯ ಸ್ವಾಮಿಗಳೂ, ಲೋಕಮಾನ್ಯರೂ, ತಪಸ್ವಿಗಳೂ ಆದ ವಿಷಯವು ಎಲ್ಲರಿಗೂ ತಿಳಿದ ಸಂಗತಿ. ಇಂಥ ಮಹಾತ್ಮರ ನೆನಹು ಮಾನವನಿಗೆ ಮುಖ್ಯವಾಗಿರಬೇಕೆಂಬ ಸದುದ್ದೇಶದಿಂದ ಇಳಕಲ್ ಮಹಾಂತದೇವರು ಮರುಳಸಿದ್ಧೇಶ್ವರರ ನಾಮಾವಳಿ

ಯನ್ನು ರಚಿಸಿರುವರು. ಇದನ್ನು ಸರ್ವರೂ ಓದಿ ಪಠಿಸಿ ಕೃತಿ ಸಾರ್ಥಕತೆ ಮಾಡ ಬೇಕಾಗಿ ತಿಳಿಸಿ ಈ ಮರುಳಸಿದ್ಧೇಶ್ವರರ ಚರಿತ್ರೆಯನ್ನು ಮುಗಿಸುವೆನು. ಮಹಾ ತಪಸ್ವಿ ಮರುಳಸಿದ್ಧೇಶ್ವರನು ಸರ್ವರಿಗೂ ಮಂಗಲವನ್ನುಂಟು ಮಾಡಲಿ.

ಶುಭಮಸ್ತು

ಪ್ರಕಾಶಕರು:

ಮುಕ್ಕಾಂ: **ಶ್ರೀ ಮ. ನಿ. ಪ್ರ. ಕುಮಾರ ಸ್ವಾಮಿಗಳು**

ಸವದತ್ತಿ ಕಲ್ಮಠ ಬಿದರಿ ಸವದತ್ತಿ

ಅಥಣಿ ಶ್ರೀಮರುಳ ಸಿದ್ಧೇಶ್ವರ

ಅಷ್ಟೋತ್ತರ ಶತನಾಮಾವಳಿ

—ಕಂದ—

ಶ್ರೀಗುರು ಮರುಳ ಸಿದ್ಧಶಿವ
ಯೋಗಿಯ ನೂರೆಂಟು ನಾಮಮಂ ಸಂತಸದಿಂ
ರಾಗದಿ ಪಠಿಸಲ್ ನಿರುತಂ
ಯೋಗಿಶಂ ನೀಡುತಿಹನು ಸುಖಸಂಪದಮಂ॥

ಅಥಣಿ ಪುರನಿವಾಸ ಚಿನ್ಮಹಾಪ್ರಕಾಶ ಮರುಳಸಿದ್ಧ ೧
ಪ್ರಥಿತ ಕೀರ್ತಿ ಸತ್ಯಮೂರ್ತಿ ಜ್ಞಾನ ಜ್ಯೋತಿ ಮರುಳಸಿದ್ಧ ೨
ಬುಧಾಧಾರ ನಿರ್ವಿಕಾರ ವೀರ ಧೀರ ಮರುಳಸಿದ್ಧ ೩
ಚಿದಾಕಾರ ಶುಭಾಗಾರ ತ್ರಿಗುಣ ದೂರ ಮರುಳಸಿದ್ಧ ೪
ಗುಣೋತ್ತುಂಗ ಸುಂದರಾಂಗ ಭವವಿಭಂಗ ಮರುಳಸಿದ್ಧ ೫
ಪ್ರಣವರೂಪ ತ್ಯಕ್ತಕೋಪ ಮುಕ್ತಿದೀಪ ಮರುಳಸಿದ್ಧ ೬
ಸುಜನ ಲೋಲ ಭಕ್ತ ಪಾಲ ವಿಜಿತ ಕಾಲ ಮರುಳಸಿದ್ಧ ೭
ಸುಜನ ವಂದ್ಯ ಗುರುಕುಲೇಂದ್ರ ಭಕ್ತಿ ಸಾಂದ್ರ ಮರುಳಸಿದ್ಧ ೮
ದುರಿತ ದಹನ ಶಾಂತಿಸದನ ಜ್ಞಾನನಯನ ಮರುಳಸಿದ್ಧ ೯
ಗುರುವರೇಣ್ಯ ಪರಮ ಪುಣ್ಯ ಸರ್ವಮಾನ್ಯ ಮರುಳಸಿದ್ಧ ೧೦
ವಿಮಲ ಚರಿತ ಯೋಗಿ ನಮಿತ ಕಾಮವಿಜಿತ ಮರುಳಸಿದ್ಧ ೧೧
ತ್ರಿಮಲ ರಹಿತ ಶ್ರೇಯ ಭರಿತ ಶರಣ ವಿನುತ ಮರುಳಸಿದ್ಧ ೧೨
ಮರಣ ಹರಣ ಭಕ್ತಹೃದಯ ಕಮಲ ಚರಣ ಮರುಳಸಿದ್ಧ ೧೩
ಪರುಷ ಹಸ್ತ ಮನಪ್ರಶಾಂತ ನಿತ್ಯ ಮುಕ್ತ ಮರುಳಸಿದ್ಧ ೧೪
ಯಾದವಾಡ ಗ್ರಾಮದೊಳಗೆ ಜನುಮ ತಾಳ್ದ ಮರುಳಸಿದ್ಧ ೧೫
ಬಾಧೆ ಕೊಡುವ ಭವದಿ ಚಿತ್ತ ವಿರಸದಿದ್ದ ಮರುಳಸಿದ್ಧ ೧೬
ಬಾಲ ಲೀಲೆ ತೋರ್ದು ಜನಕೆ ಮೋದವಿತ್ತ ಮರುಳಸಿದ್ಧ ೧೭
ಫಾಲ ನಯನ ನೆನಹಿನಲ್ಲಿ ಕಾಲಕಳೆದ ಮರುಳಸಿದ್ಧ ೧೮
ಗುರುಗಳನ್ನು ಭಕ್ತಿಯಿಂದ ಸೇವೆಮಾಡಿ ಮರುಳಸಿದ್ಧ ೧೯
ಗುರು ಸುಪ್ರೇಮವನ್ನು ಗಳಿಸಿದಯ್ಯ ನೀನು ನೀನು ಮರುಳಸಿದ್ಧ ೨೦
ಗುರುವಿನಾಜ್ಞೆಯಂತೆ ನಡೆದು ಸುಖವ ಪಡೆದ ಮರುಳಸಿದ್ಧ ೨೧
ಗುರುವಿಗಿಂತ ಹಿರಿಯರಾರು? ಇಲ್ಲವೆಂದ ಮರುಳಸಿದ್ಧ ೨೨
ದೀಕ್ಷೆ ಶಿಕ್ಷೆಪಡೆದು ಮೋಕ್ಷಾಪೇಕ್ಷಿಯಾದ ಮರುಳಸಿದ್ಧ ೨೩

ದಕ್ಷನಾದೆ ಧರ್ಮ ತತ್ವದಲ್ಲಿ ನೀನು ಮರುಳಸಿದ್ಧ ೨೪
ಗುರುವಿನಿಂದ ಪರಸು ತತ್ವ ತಿಳಿದುಕೊಂಡೆ ಮರುಳಸಿದ್ಧ ೨೫
ಅರಿತು ಲಿಂಗಪ್ರಾಣೈಕ್ಯದಿ ಧನ್ಯನಾದೆ ಮರುಳಸಿದ್ಧ ೨೬
ಭವದ ಬೇರ ಸಿಗಿದು ಕಿತ್ತೆ ಯೋಗದಿಂದ ಮರುಳಸಿದ್ಧ ೨೭
ಶಿವನ ಯೋಗ ಪರಿಪೂರ್ಣದ ಬೋಧೆ ಗೈದೆ ಮರುಳಸಿದ್ಧ ೨೮
ರುದ್ರ ಯತಿಗಳಿಂದನುಗ್ರಹವ ಪಡೆದೆ ಮರುಳಸಿದ್ಧ ೨೯
ಸಿದ್ಧಿ ದಾರಿಯಲ್ಲಿ ಹೆಜ್ಜೆಯಿಟ್ಟೆಯಯ್ಯ ಮರುಳಸಿದ್ಧ ೩೦
ಭಕ್ತಿ ಜ್ಞಾನ ವಿರತಿಯಿಂದ ಮುಕ್ತನಾದೆ ಮರುಳಸಿದ್ಧ ೩೧
ಭಕ್ತಿಯಿರದೆ ಮುಕ್ತಿ ಸುಲಭ ದೊರೆಯದೆಂದೆ ಮರುಳಸಿದ್ಧ ೩೨
ಮಂತ್ರ ತಂತ್ರ ಸಿದ್ಧಿ ಕರ್ಮ ಭ್ರಾಂತಿತೊರೆದೆ ಮರುಳಸಿದ್ಧ ೩೩
ಮಂತ್ರದೊಳಗೆ ಷಡಕ್ಷರಿಯ ಮಿಗಿಲವೆಂದೆ ಮರುಳಸಿದ್ಧ ೩೪
ಮೂರು ತಾಪಗಳನು ಮೀರಿ ಶಾಂತಿ ತಾಳ್ದೆ ಮರುಳಸಿದ್ಧ ೩೫
ಆರು ವೈರಿಗಳನು ತುಳಿದು ಧೀರನಾದೆ ಮರುಳಸಿದ್ಧ ೩೬
ಅಷ್ಟಸಗುಣ ಸಿದ್ಧಿಗಳನು ತೃಣವೆಂದೆ ಮರುಳಸಿದ್ಧ ೩೭
ಲೋಷ್ಟದಂತೆ ತಿಳಿದುಕೊಂಡೆ ಕನಕವನ್ನು ಮರುಳಸಿದ್ಧ ೩೮
ಪಂಚ ಕ್ಲೇಶಗಳನು ಕಳೆದು ಶುದ್ಧನಾದೆ ಮರುಳಸಿದ್ಧ ೩೯
ಪಂಚಮುಖನ ನೆನೆದು ನೆನೆದು ಶಿವ ನಾದೆ ಮರುಳಸಿದ್ಧ ೪೦
ಮೌನವನ್ನು ತಾಳ್ದು ಸತ್ಯ ಬೋಧಗೈದೆ ಮರುಳಸಿದ್ಧ ೪೧
ಜ್ಞಾನಜ್ಯೋತಿ ಕಿರಣಗಳನು ಹರಡಿಸಿದೆಯೋ ಮರುಳಸಿದ್ಧ ೪೨
ಅಘಟ ಮಠದ ಸ್ವಾಮಿಯಾಗಿ ಮೆರೆದೆ ನೀನು ಮರುಳಸಿದ್ಧ ೪೩
ಅತುಲ ಶೀಲ ತತ್ವವೇತ್ತನಾಗಿ ಬಾಳ್ದೆ ಮರುಳಸಿದ್ಧ ೪೪
ಭಕ್ತ ವೃಂದ ಹೃದಯ ಮಧ್ಯ ಜ್ಯೋತಿಯಾದೆ ಮರುಳಸಿದ್ಧ ೪೫
ಭಕ್ತ ತತಿಗೆ ಶಕ್ತಿ ಭಕ್ತಿಯಿತ್ತು ಪೊರೆದೆ ಮರುಳಸಿದ್ಧ ೪೬
ಭವದಿ ಬಳಲಿ ಕೊರಗುವರಿಗೆ ಶಾಂತಿಯಿತ್ತೆ ಮರುಳಸಿದ್ಧ ೪೭
ಶಿವಸುಮಾರ್ಗ ತೋರಿ ನೀನು ಬೆಳಸಿತ್ತೆ ಮರುಳಸಿದ್ಧ ೪೮
ನಿಂದೆ ಮಾಡಿದವನ ಕರೆದು ಬುದ್ಧಿ ಹೇಳ್ದೆ ಮರುಳಸಿದ್ಧ ೪೯
ನಿಂದೆಯಿಂದ ತನಗೆ ಹಾನಿ ಬರುವದೆಂದೆ ಮರುಳಸಿದ್ಧ ೫೦
ಧನದ ಗರ್ವ ತುಂಬಿಕೊಂಡು ತಿರುಗುವವಗೆ ಮರುಳಸಿದ್ಧ ೫೧
ಗುಣದ ಬಿಂದು ತೋರಿ ಶುದ್ಧ ಬುದ್ಧಿ ಇತ್ತೆ ಮರುಳಸಿದ್ಧ ೫೨
ಶತ್ರುರಿಂದ ಮರುಗುವವಗೆ ಶತ್ರುಮಿತ್ರ ಮರುಳಸಿದ್ಧ ೫೩
ವಿತ್ತವಿರದ ಬಳಲುವವಗೆ ವಿತ್ತವಿತ್ತೆ ಮರುಳಸಿದ್ಧ ೫೪

ಮಳೆಯು ತಡೆದು ಬೆಳೆಯು ಒಣಗುವಾಗ ನೀನು ಮರುಳಸಿದ್ಧ ೫೫
ಮಳೆಯನಿತ್ತು ಜಗಕೆ ಕಳೆಯ ಬೆಳಗ ನಿತ್ತೆ ಮರುಳಸಿದ್ಧ ೫೬
ಉರಗ ಕಚ್ಚಿ ಸಾಯುವವನ ಉಳಿಸಿದಯ್ಯ ೫೭
ವರ ಪ್ರಸಾದ ವಿತ್ತು ಮಹಿಮೆ ತೋರಿ ಮೆರೆದೆ ಮರುಳಸಿದ್ಧ ೫೮
ಜಿವರಿ ಯೋಗಿಗಳನು ಕಂಡು ಹರುಷಗೊಂಡೆ ಮರುಳಸಿದ್ಧ ೫೯
ಮುದದಿ ಯೋಗ ಮಾರ್ಗ ದೋರಿ ಪಾಲಿಸಿದೆಯೋ ಮರುಳಸಿದ್ಧ ೬೦
ಬೇಡಿದವರಿಗೆ ಬೇಡಿದಿಷ್ಟ ಸಿದಿ ಯಿತ್ತೆ ಮರುಳಸಿದ್ಧ ೬೧
ಕಾವಿದರಿಗೆ ಸುಮತಿಯಿತ್ತು ಪೊರೆದೆ ನೀನು ಮರುಳಸಿದ್ಧ ೬೨
ವೀರಶೈವ ಧರ್ಮ ತತ್ವ ಬೆಳೆಸಿದಯ್ಯ ಮರುಳಸಿದ್ಧ ೬೩
ವೀರತನವ ಹೊಂದಿ ಜಗದಿ ಯಶವ ತಾಳ್ದೆ ಮರುಳಸಿದ್ಧ ೬೪
ಶಿವನ ಪೂಜೆಗಾಗಿ ತನುವ ದಂಡಿಸಿದೆಯೋ ಮರುಳಸಿದ್ಧ ೬೫
ಶಿವನ ಪೂಜೆ ಯದುವೆ ನಿನಗೆ ಸುಖವ ದಾಯ್ತು ಮರುಳಸಿದ್ಧ ೬೬
ಲಿಂಗ ಪೂಜೆಯಿಂದ ಸಿದ್ಧಿ ಪಡೆದುಕೊಂಡೆ ಮರುಳಸಿದ್ಧ ೬೭
ಲಿಂಗ ಸಂಗ ದಿರವ ನರಿತು ಸುಖವ ನುಂಡೆ ಮರಳುಸಿದ್ಧ ೬೮
ಲಿಂಗ ನನಹಿ ನಿಂದೆ ಚಿತ್ಸ್ವರೂಪನಾದೆ ಮರುಳಸಿದ್ಧ ೬೯
ಲಿಂಗ ಭೋಗಿಯಾಗಿ ಬ್ರಹ್ಮ ಜ್ಞಾನಿಯಾದೆ ಮರುಳಸಿದ್ಧ ೭೦
ಪರನೊಳೈಕ್ಯವಾಗುವಾಗ ಜನರಿಗೆಲ್ಲ ಮರುಳಸಿದ್ಧ ೭೧
ಕರೆದು ಪೇಳ್ದೆ "ಲಿಂಗದೊಡನೆ ಬೆರೆವನೆಂದು" ಮರುಳಸಿದ್ಧ ೭೨
ಶಿವನ ಪೂಜೆಯಲ್ಲಿ ನೀನು ಕುಳಿತುಕೊಂಡೆ ಮರುಳಸಿದ್ಧ ೭೩
ಶಿವನ ಧ್ಯಾನಿಸುತ್ತ ಲಿಂಗದೊಳಗೆ ಬೆರೆದೆ ಮರುಳಸಿದ್ಧ ೭೪
ಜ್ಞಾನಯೋಗ ಪೂರ್ಣ ನೀನದೆತ್ತ ಪೋದೆ? ಮರುಳಸಿದ್ಧ ೭೫
ಜ್ಞಾನಯೋಗ ತತ್ವವರುಹಿ ಪೊರೆವರಾರು? ಮರುಳಸಿದ್ಧ ೭೬
ತಂದೆ ತಾಯಿ ಬಂಧು ಬಳಗ ನೀನೇ ಎನಗೆ ಮರುಳಸಿದ್ಧ ೭೭
ಕುಂದು ಬಾರದಂತೆ ಪೊರೆಯೊ ಸಿದ್ಧಯೋಗಿ ಮರುಳಸಿದ್ಧ ೭೮
ಜ್ಞಾನ ಹೀನನಾಗಿ ದಾರಿ ತಪ್ಪಿದಾಗ ಮರುಳಸಿದ್ಧ ೭೯
ಜ್ಞಾನ ಬೆಳಕನೀಡಿ ಸಲಹು ಜ್ಞಾನ ಸೂರ್ಯ ಮರುಳಸಿದ್ಧ ೮೦
ಮೂರು ಮಲಗಳಿಂದ ಮೂರು ತಾಪದಿಂದ ಮರುಳಸಿದ್ಧ ೮೧
ದೂರ ಮಾಡಿ ಮೂರು ತತ್ವ ದಿರವ ತೋರು ಮರುಳಸಿದ್ಧ ೮೨
ಆಶೆ ಪಾಶದಿಂದ ಘಾಸಿ ಯಾಗುತಿರ್ಪೆ ಮರುಳಸಿದ್ಧ ೮೩
ಈಶ ಸುಖವ ನೀವುದೆನಗೆ ದೋಷ ರಹಿತ ಮರುಳಸಿದ್ಧ ೮೪
ವಿಷಯ ಜಲಧಿ ಯೊಳಗೆ ಮುಳುಗುವಾಗಲೆನ್ನ ಮರುಳಸಿದ್ಧ ೮೫

ವಿಷಮ ಸಂಸಾರ ಜ್ಞಾನವಿತ್ತು ಎತ್ತಿ ಸಲಹು ಮರುಳಸಿದ್ಧ ೮೬
ಹೀನ ವೃತ್ತಿಯಲ್ಲಿ ಬೆಂದು ನೋಯುವಾಗ ಮರುಳಸಿದ್ಧ ೮೭
ಸ್ವಾನುಭವದ ನಿಲವ ನರುಹಿ ಪೊರೆಯೊ ನೀನು ಮರುಳಸಿದ್ಧ ೮೮
ಚಿತ್ತ ಚಲನೆ ಯಾಗದಂತೆ ಕರುಣಿಸೆನಗೆ ಮರುಳಸಿದ್ಧ ೮೯
ಭೃತ್ಯ ಭಾವದಿಂದ ಬೇಡುತಿರುವೆನಯ್ಯಾ ಮರುಳಸಿದ್ಧ ೯೦
ದ್ವೇಷ ದೋಷ ಕ್ಲೇಶಗಳನು ತೊಲಗಿಸೆನಗೆ ಮರುಳಸಿದ್ಧ ೯೧
ರೋಷದಿಂದ ಕುದಿಯುವಾಗ ಶಾಂತಿಯೀಯೊ ಮರುಳಸಿದ್ಧ ೯೨
ಬಡವ ನಾನು ಒಡೆಯ ನೀನು ನೀಡು ಮತಿಯ ಮರುಳಸಿದ್ಧ ೯೩
ಅಡಿಗೆ ಯಡಿಗೆ ನಿನ್ನ ನೆನೆಯುವಂತೆ ಮಾಡು ಮರುಳಸಿದ್ಧ ೯೪
ಪಾಪ ಕೂಪದಲ್ಲಿ ಬೀಳದಂತೆ ಸಲಹು ಮರುಳಸಿದ್ಧ ೯೫
ಪಾಪ ತಾಪ ಹರನೆ! ಗುರುವೆ ಕರುಣಿಸೆನ್ನ ಮರುಳಸಿದ್ಧ ೯೬
ಹುಟ್ಟಿ ಹುಟ್ಟಿ ಸಾಯುವುದನ್ನು ತಪ್ಪಿಸೆನಗೆ ಮರುಳಸಿದ್ಧ ೯೭
ಶಿಷ್ಟ ಶೀಲ ದಾರಿಯನ್ನು ತೋರು ಬೇಗ ಮರುಳಸಿದ್ಧ ೯೮
ಮರವೆಯೆಂಬ ವಿಪಿನದೊಳಗೆ ನೂಕಬೇಡ ಮರುಳಸಿದ್ಧ ೯೯
ಪರಮ ಶಾಂತ ಮೂರ್ತಿ ಕಾಯೊ ಯೋಗಿ ರಾಜ ಮರುಳಸಿದ್ಧ ೧೦೦
ನಿನ್ನ ಕೃಪೆಯು ಇರದೆ ಬಾಳಲೆಂತು? ನಾನು ಮರುಳಸಿದ್ಧ ೧೦೧
ನಿನ್ನ ಧ್ಯಾನವಿತ್ತು ಸಲಹು ಮರೆಯಹೊಕ್ಕೆ ಮರುಳಸಿದ್ಧ ೧೦೨
ಹೃದಯ ಗೃಹಕೆ ದೀಪವಿರದೆ ಕೊರಗುತಿರುವೆ ಮರುಳಸಿದ್ಧ ೧೦೩
ಸದಮಲಾಂಗ ಜ್ಞಾನ ದೀಪವಿತ್ತು ಕಾಯೊ ಮರುಳಸಿದ್ಧ ೧೦೪
ಕಾಡಿ ಕಾಡಿ ದೂಡುತಿಹುದು ಮಾಯೆಯೆನ್ನ ಮರುಳಸಿದ್ಧ ೧೦೫
ಬೇಡುತಿಹೆನು ಮಾಯೆಯಿಂದ ತೊಲಗಿಸೆನ್ನ ಮರುಳಸಿದ್ಧ ೧೦೬
ಮರುಳಸಿದ್ಧ ಯೋಗಸಿದ್ಧ ನಿಚ್ಚಶುದ್ಧ ಮರುಳಸಿದ್ಧ ೧೦೭
ಶರಣು ಶರಣು ಶಿವ ಮಹಾಂತ ಸ್ತೋತ್ರ ಪಾತ್ರ ಮರುಳಸಿದ್ಧ ೧೦೮

ಫಲಶ್ರುತಿ

ಕಂದ

ಆವಂ ಶ್ರೀಗುರು ಮೂರ್ತಿಯ
ಭಾವವ ಮನದೊಳಗೆ ತಂದು ಪಠಿಸುತ್ತಿರ್ಪಂ
ಭೂವಿನುತ ಮರುಳಸಿದ್ಧನು
ಕಾಮ ಸುಖ ಸಿರಿಯನಿತ್ತು ಪೊರೆವನೆ ನಿರುತಂ।

ಓಂ ಶಾಂತಿಃ ಶಾಂತಿಃ ಶಾಂತಿಃ

ಸವದತ್ತಿ

ಶ್ರೀ ಅಪ್ಪಯ್ಯಸ್ವಾಮಿಗಳ ಜೀವನ ಚರಿತ್ರೆ

ಸಾಹಿತ್ಯ ಪ್ರಕಾರ	:	ಗದ್ಯ
ಮೊದಲ ಮುದ್ರಣ	:	೧೯೫೧
ಎರಡನೆಯ ಮುದ್ರಣ	:	೧೯೭೫
ರಚನೆಯ ವಯಸ್ಸು	:	೨೧
ರಚನಾಸ್ಥಳ	:	ಕಾಶಿ

ಶ್ರೀ ಜ. ಮೂರುಸಾವಿರಮಠ ಗ್ರಂಥಮಾಲೆಯ ೪೪ ನೆಯ ಕುಸುಮ

ಶ್ರೀ ಅಪ್ಪಯ್ಯಸ್ವಾಮಿಗಳ ಜೀವನ ಚರಿತ್ರೆ

ಪ್ರಕಾಶಕರು:

ಶ್ರೀಜಗದ್ಗುರು ಗಂಗಾಧರ ಧರ್ಮಪ್ರಚಾರಕ ಮಂಡಳ
ಮೂರುಸಾವಿರಮಠ, ಹುಬ್ಬಳ್ಳಿ.

೧೯೭೫

ಲೇಖಕರು:

ಶ್ರೀ ಮಹಾಂತದೇವರು ಇಲಕಲ್ಲ
(ಇಂದಿನ ಮೂರುಸಾವಿರಮಠದ ಶ್ರೀ ಜಗದ್ಗುರುಗಳವರು)

ಪ್ರಕಾಶಕರು:

ಶ್ರೀ ಜಗದ್ಗುರು ಗಂಗಾಧರ ಧರ್ಮಪ್ರಚಾರಕ ಮಂಡಳ
ಮೂರುಸಾವಿರಮಠ, ಹುಬ್ಬಳ್ಳಿ.

ಪ್ರಥಮ ಆವೃತ್ತಿ : ೧೯೫೦

ದ್ವಿತೀಯ ಆವೃತ್ತಿ : ೧೯೭೫

ಬೆಲೆ ರೂಪಾಯಿ : ೧-೫೦

ಮುದ್ರಕರು:

ಪರಂಜ್ಯೋತಿ ಪಾವರ ಪ್ರಿಂಟಿಂಗ್ ಪ್ರೆಸ್,
ಮೂರುಸಾವಿರಮಠ, ಹುಬ್ಬಳ್ಳಿ.

ಮುನ್ನುಡಿ

(ಪ್ರಥಮ ಮುದ್ರಣ)

"ಶರಣಂ ಶಾಂಭವಯೋಗಿಯಿರ್ದ ನೆಲನೇ ಕ್ಷೇತ್ರಂ ಪವಿತ್ರಂ ಪರಂ"

ಪೂಜ್ಯಳಾದ ಕರ್ನಾಟಕ-ಮಾತೆಯ ಹಿರಣ್ಯ ಗರ್ಭದಲ್ಲಿ ಅನೇಕ-ಜನ ಮಹಾ ಮಹಿಮರು ಉದಯಿಸಿದ್ದುಂಟು. ಅಲ್ಲಿ ಲೋಕಕಲ್ಯಾಣಕಾರಕರಾದ ಕರ್ಮ ಯೋಗಿಗಳು ಜನಿಸಿದ್ದಾರೆ. ವಿಶ್ವಶಾಂತಿಗೆ ತನುಮನಧನಗಳಿಂದ ಸೇವೆಸಲ್ಲಿಸಿದ ಶಾಂತಿದೂತರು ಉದಯಿಸಿದ್ದಾರೆ. ಭಕ್ತಿಭಾಂಡಾರಿಗಳೂ, ಸತ್ವಶಾಲಿಗಳೂ, ಶಿವ ಶರಣರೂ, ಸರ್ವೋದಯ ಸಿದ್ಧಿಗಾಗಿ ಸಾಹಸಗೈದ ಸುಧಾರಕರೂ ಉಗಮಿಸಿದ್ದಾರೆ. ಅಲ್ಲದೆ ಮಾನವಕಲ್ಯಾಣ ಸಾಧನೆಯ ಮಹಾ ಮಾರ್ಗದಲ್ಲಿ ಅನುಭವದ ಸಾಲು ಹೆಜ್ಜೆಗಳನ್ನು ಬಿತ್ತಿಹೋದ ಸತ್ಯ-ಪ್ರೇಮ-ಸೇವಾ ನಿರತರಾಗಿದ್ದ ಮಹಾನುಭಾವರು ಜನಿಸಿದ್ದಾರೆ. ಒಟ್ಟಾರೆ ಕನ್ನಡನಾಡು ಸಾಧುಸಂತರ, ಸತ್ಯಸಂಶೋಧಕರ, ಶಾಂತಿ ಸ್ಥಾಪಕರ, ಅನುಭವಾಮೃತವನ್ನು ಕೊರತೆಯಿಲ್ಲದಂತೆ ಹರಿಯಿಸುವ ಒರತೆಯಾಗಿದೆ. ಭಕ್ತಿಭಾಂಡಾರಿಯಾದ ಬಸವಣ್ಣನವರೂ, ವೈರಾಗ್ಯ ರಾಜನಾದ ಅಲ್ಲಮ ಪ್ರಭು ಗಳೂ, ಜ್ಞಾನ ಭಾಂಡಾರಿಯಾದ ಚನ್ನಬಸವಣ್ಣನವರೂ, ಪುಣ್ಯವೇ ದೇವತೆ ಯಾದ ಅಕ್ಕಮಹಾದೇವಿಯವರೂ ಮೊದಲಾದ ಶರಣರ ಪಾವನತರವಾದ ಜೀವನವೇ ಇದಕ್ಕೆ ಸಾಕ್ಷಿ ಹೇಳುತ್ತದೆ. ಭಕ್ತಿಯ ಹೊನಲನ್ನು ಮನೆಮನೆಗೂ ಹರಿಯಿಸಿದ ಪುರಂದರದಾಸ, ಕನಕದಾಸರೇ ಮೊದಲಾದ ದಾಸಕೂಟದವರ ದಿವ್ಯ ಜೀವನವೇ ಇದಕ್ಕೆ ಶಾಸನವಾಗಿದೆ.

ಇಂಥವರ ದಿವ್ಯಮಾಲಿಕೆಯಲ್ಲಿ ಸೇರಿ, ನಮ್ಮನಾಡಿನ ಅನುಭಾವಿಗಳಲ್ಲಿ ಒಬ್ಬ ರಾಗಿದ್ದ, ಶಿವಾನುಭವ ಸ್ವಾನುಭವಗಳ ಸಾಮರಸ್ಯದಿಂದ ತಮ್ಮ ಜೀವಕುಸುಮ ವನ್ನು ಸರ್ವಾಂಗಸುಂದರವಾಗುವಂತೆ ವಿಕಸಿಸಿ, ಅದರ ಅನುಭವದ ಪರಾಗವನ್ನು ನಮ್ಮಂಥ ಪಾಮರರಿಗೆ ಬಿಟ್ಟುಹೋದ ಶಿವಯೋಗಿಗಳಲ್ಲಿ ಒಬ್ಬರಾದ ಸವದತ್ತಿ ಕಲ್ಮಠದ ಅಧಿಕಾರಿಗಳಾದ ಲಿಂ. ಅಪ್ಪಯ್ಯಸ್ವಾಮಿಗಳವರ ದಿವ್ಯಚರಿತ್ರೆಯನ್ನು ಇಳಕಲ್ಲ ಶ್ರೀ ಮಹಾಂತ ದೇವರು ಅತ್ಯಂತ ಭಕ್ತಿಯಿಂದ ಬರೆದಿದ್ದಾರೆ. ಭಕ್ತಿಯ ಶಕ್ತಿಯಿಂದ ಸಾಧನೆಯ ಸಾಹಸದಿಂದ ಶಿವಾನುಭವದ ಸೀಮೆಯನ್ನು ಸೇರಿ, ಲಿಂಗಾಂಗ ಸಾಮರಸ್ಯದಾನಂದವನ್ನು ಹೊಂದಿ ಶಿವಸ್ವರೂಪಿಗಳಾದ ಅಪ್ಪಯ್ಯ ಸ್ವಾಮಿಗಳ ಈ ಜೀವನಚರಿತ್ರೆ ಅಧ್ಯಾತ್ಮದ ಅಕ್ಷಯ ಪಾತ್ರೆಯಾಗಿದೆ. ಇಂಥವರ ಜೀವನವನ್ನು ಚಿತ್ರಿಸುವ ಈ ಚಿಕ್ಕ ಹೊತ್ತಿಗೆಗೆ ಮೊದಲ ನುಡಿಯನ್ನಾಡುವ ಶಕ್ತಿ

ನನ್ನ ಲೇಖಣಿಯಲ್ಲಿಲ್ಲವೆಂಬ ಅರಿವು ನನಗಿದೆ. ಆದರೂ ಈಗಿನ ಸವದತ್ತಿ ಕಲ್ಮಠದ ಅಧಿಕಾರಿಗಳಾದ ಶ್ರೀ ಮ. ನಿ. ಪ್ರ. ಕುಮಾರಸ್ವಾಮಿಗಳು ನನ್ನೊಬ್ಬ ವಿದ್ಯಾರ್ಥಿಮಿತ್ರನ ಮುಖಾಂತರ ಅತ್ಯಂತ ಪ್ರೇಮದಿಂದ ಈ ಕಾರ್ಯವನ್ನು ನಾನು ಮಾಡಬೇಕೆಂದು ಅಪೇಕ್ಷೆಪಟ್ಟಿದ್ದಾರೆ. ಅವರ ಪ್ರೀತಿಯು ಈ ಬಯಕೆ ನನ್ನ ಭಕ್ತಿಯು ಈ ಸೇವೆಯಿಂದ ಹಣ್ಣುಸುವಂತಿದ್ದರೆ ಅದುವೆ ನನ್ನ ಭಾಗ್ಯವೆಂದು ನಂಬಿ ಶ್ರೀ ಅಪ್ಪಯ್ಯಸ್ವಾಮಿಗಳ ಅಮರ ಪದವನ್ನೇರಿದ ಆತ್ಮಜ್ಯೋತಿಗೆ ನನ್ನ ಮೊದಲ ಮಾತಿನ ತೊದಲೊಲವಿನಿಂದ ಮಂಗಳಾರುತಿಯನ್ನು ಎತ್ತುತ್ತಿದ್ದೇನೆ.

ಅಶಾಂತಿ ಅತೃಪ್ತಿಗಳಿಂದ ಬೆಂದು ಬೇಗುದಿಗೊಳ್ಳುತ್ತಿದ್ದ ಇಂದಿನ ಜನತೆ ಅನಂತಕಷ್ಟಕ್ಕೂ ಅಪಾರನಷ್ಟಕ್ಕೂ ಬಲಿಯಾಗುತ್ತಿದೆ. ಆಶೆ ಅತಿಯಾಶೆಗಳು ಬಾಳ ತಿರುಗಣೆಯಲ್ಲಿ ತಿರುಗಿ, ಬಹುಗುಣಿತವಾಗಿ ಮಾನವನ ಇಂದಿನ ಬಾಳು ಕಾಳಗದ ಕಣವಾಗಿದೆ. ವಿಜ್ಞಾನದ ಪ್ರಗತಿ ಮಾನವನ ಸುಗತಿಗೆ ಮಾರಕವಾದ ಧೋರಣೆಯಿಂದ ಸಾಗಿದ್ದುದರಿಂದ ಬದುಕುವದೇ ಬೇಸರವಾಗಹತ್ತಿದೆ. ಅಣುಶಕ್ತಿಯು ರಾಕ್ಷಸ ಪುತ್ರರಾದ ಹೊಸ ಹೊಸ ಶೋಧಗಳಾದ "ರೇಡಿಯೋ ರಶ್ಮಿಜನಕವಾದ ಕಾರ್ಪೋಣಡಗಳು" "ಪ್ರಾಣನಾಶಕ ಮಿಂಚಿನ ಉಸುಕು" ಮೊದಲಾದವು ಪಾಶ್ಚಾತ್ಯ ರಾಷ್ಟ್ರಗಳ ಅಣುಶಕ್ತಿ ಸಂಶೋಧನದ ಪ್ರಯೋಗ ಶಾಲೆಗಳಲ್ಲಿ ಜನಸಿ ಜಾಗ್ರತಿಕ ಕುರುಕ್ಷೇತ್ರಕ್ಕೆ ಸಾಗಲ್ಪಡುವುದೆಂಬ ವಾರ್ತೆ ಇದೀಗ ಕೇಳಬರುತ್ತದೆ. ಮಾನವನು ದಾನವನಾಗಿ, ಆಸ್ತಿಕತೆಯ ಸೀಮೆಯನ್ನು ದಾಟಿ, ನಾಸ್ತಿಕತೆಯ ನರಕದತ್ತ ಸಾಗುತ್ತಿರುವ ಇಂದಿನ ವಿಘಾತುಕವಾದ ವಿಚಿತ್ರ ಕಾಲದಲ್ಲಿ, ಮಾನವನ ಮನಸ್ಸಿನ ನೆಮ್ಮದಿ ಕಳಚಿ ಬೀಳುತ್ತದೆ, ಶಾಂತಿ ದೂರವಾಗುತ್ತದೆ, ಭ್ರಾಂತಿ ಆವರಿಸುತ್ತದೆ, ಬೆಳಕನ್ನು ನುಂಗಿದ ಈ ಮಬ್ಬಿನಲ್ಲಿ ಮುಂಗಾಣದಾಗಿದೆ. ಸಾಗಿದ ಮಾನವನನ್ನು ಎತ್ತಿ, ಶಾಂತಿಯೆಡೆಗೆ ನಡೆಸುವ "ಕರುಣಾಳು ಬೆಳಕು" ದಿಗಂತದಲ್ಲಿ ಮೂಡಿ ಬರಬೇಕಾಗಿದೆ. ಇಂಥ ಸಮಯದಲ್ಲಿ ಆಧ್ಯಾತ್ಮದತ್ತ ಮಾನವನ ಮನಸ್ಸನ್ನು ತಿರುಗಿಸಿ, ಆತ್ಮಶಾಂತಿಯ ಮಾರ್ಗದತ್ತ ಜನತೆಯನ್ನು ಎಚ್ಚರಿಸುವದು ಅಗತ್ಯವಾಗಿದೆ. ಆದುದರಿಂದ, ನಾವಿಂದು ನಮ್ಮ ನಾಡಿನ ಸಾಧು ಸಂತರ, ಶಾಂತಿದೂತರ ಮಾನವಕಲ್ಯಾಣಕ್ಕಾಗಿ ಸೇವೆ ಸಲ್ಲಿಸಿದ ಮಹಾನುಭಾವರ ಜೀವನ ಕಥೆಯನ್ನು ಸ್ಮರಿಸಿಕೊಂಡು, ಅವರ ಬೋಧನೆಯ ಬೆಳಕನ್ನು ನಮ್ಮ ಮನೆ-ಮನೆಗಳಲ್ಲಿ ತುಂಬಿಕೊಳ್ಳುವದು ಅನಿವಾರ್ಯವಾಗಿದೆ. ಇಂಥ ಸತ್ಪುರುಷರ ಜೀವನ ಚಿತ್ರಗಳನ್ನು ಲೇಖಿಸಿ, ಅವರ ತತ್ತ್ವಗಳನ್ನು ಜನತೆಯ ಎದುರು ರೂಪಿಸುವದು ಅತ್ಯಂತ ಅವಶ್ಯವಾದದ್ದು. ಈ ಬಗೆಯ ಆಧ್ಯಾತ್ಮವನ್ನು ಬೆಳಗುವ ಅಪ್ಪಯ್ಯಸ್ವಾಮಿಗಳವರ ಚರಿತ್ರೆಯನ್ನು ಸಂಕ್ಷೇಪವಾಗಿಯಾದರೂ, ಕನ್ನಡ ಜನಕ್ಕೆ ಒದಗಿಸಿಕೊಡುವ ಉದ್ದೇಶದಿಂದ

ಮುಂದೆ ಬಂದ, ಈ ಗ್ರಂಥ ಕರ್ತರನ್ನು ಈ ಸಂದರ್ಭದಲ್ಲಿ ಅಭಿನಂದಿಸುವದು ನಮ್ಮ ಕರ್ತವ್ಯವಾಗಿದೆ.

ಬಿದರಿ ಸವದತ್ತಿ ಕಲ್ಮಠದ ಉತ್ತರಾಧಿಕಾರಿಗಳಾಗಿಹೋದ, ಅಪ್ಪಯ್ಯ ಶಿವಯೋಗಿಗಳ ಜೀವಜ್ಯೋತಿಯು, ಕನ್ನಡನಾಡಿನ ಆಧ್ಯಾತ್ಮದಾಕಾಶದಲ್ಲಿ ನಿರಂತರ ವಾಗಿ ಬೆಳಗುತ್ತಿರುವ ನಕ್ಷತ್ರ ಪುಂಜದಲ್ಲಿ ಒಂದಾಗಿದೆಯೆಂದು ಹೇಳಬಹುದು. ಮಹಾತಪಸ್ವಿಗಳಾದ ಪರಮ ಪೂಜ್ಯ ಬಿದರಿ ಕುಮಾರ ಶಿವಯೋಗಿಗಳ ಶುಭ ಪ್ರಸಾದದಿಂದ, ಮುಘೋಳದಲ್ಲಿ ಬಸವಲಿಂಗಯ್ಯನವರು ಮತ್ತು ಶಾಂತಲಿಂಗಮ್ಮ ನವರೆಂಬ ದಂಪತಿಗಳ ಉದರದಲ್ಲಿ ಜನಿಸಿದ ಮಹಾಲಿಂಗನೆಂಬ ಬಾಲಕನೋರ್ವನು, ಶಿವಯೋಗಮಂದಿರದ ಹಾನಗಲ್ಲ ಕಾರಣಿಕ ಕುಮಾರ ಯೋಗೀಶ್ವರರ ಅನುಗ್ರಹ ಪೂರ್ಣವಾದ ದಿವ್ಯಬೋಧೆಯಿಂದ, ಶಿವಾನುಭವ ಸಂಪನ್ನನಾದ, ಶಿವಯೋಗಿ ಯಾದ, ಪವಿತ್ರವಾದ ಜೀವನ ಕಥೆಯನ್ನು ವಿವರಿಸುವ ಈ ಹೊತ್ತಿಗೆಯು, ಶ್ರೀ ಮಹಾಂತದೇವರ ನಿರ್ಮಲಾಂತಃಕರಣದ ಹೃದಯಕಾಸಾರದಲ್ಲಿ ಸಹಜವಾಗಿ ಅರಳಿ ನಿಂತ ಕುಸುಮವಾಗಿದೆ.

ಅಪ್ಪಯ್ಯ ಶಿವಯೋಗಿಗಳ ಸಮಗ್ರವಾದ ಜೀವನವು ಸಂಕ್ಷೇಪವಾಗಿ ಇಲ್ಲಿ ಚಿತ್ರಿತವಾಗಿದೆಯಾದರೂ, ಹಸಿರು ಹುಲ್ಲಿನ, ಎಸೆಯುವ ಮಂಜಿನ ಹನಿಯೊಂದರಲ್ಲಿ ಚಿತ್ರಿಸಲ್ಪಟ್ಟ, ವಿಶ್ವದ ಚಿತ್ರದಂತೆ ನಿಸರ್ಗ ಸಹಜವಾಗಿದೆ; ಪರಿಪೂರ್ಣವಾಗಿದೆ. ಹನಿಯು ಸಣ್ಣದಾಗಿದ್ದರೂ, ಅಲ್ಲಿ ತೋರುವ ಚಿತ್ರ ವಿಶ್ವದ ವಿರಾಟ ಚಿತ್ರ. ಹಾಗೆಯೇ, ಈ ಚಿಕ್ಕ ಹೊತ್ತಿಗೆಯಲ್ಲಿ ಶಿವಯೋಗಿಗಳ ಭವ್ಯ ಜೀವನದ ದಿವ್ಯವಾದ ಪ್ರತಿಬಿಂಬವಿದೆ.

ಅಪ್ಪಯ್ಯ ಸ್ವಾಮಿಗಳ ಒದುಕು ತುಂಬಿದ ಬದುಕು, ಆತ್ಮಜ್ಞಾನ ಸಾಧನೆಯ ತಪಸ್ಸಿನ ಕುಲುಮೆಯಲ್ಲಿ ಬಿದ್ದು, ಒರೆಗೆ ಬಂದ ಬಂಗಾರದಂತೆ ತೇಜೋಮೂರ್ತಿ ಯಾಗಿ, ಬೆಳಗಿ ಬಂದ ಅವರ ಜೀವನವು ಶಿವಯೋಗದಲ್ಲಿ ಒಂದು ದೀರ್ಘ ಪ್ರಯೋಗದಂತಿದೆ. ಹಾನಗಲ್ಲ ಕುಮಾರ ಶಿವಯೋಗಿಗಳಿಂದ ಪರಿಪೋಷಿಸಲ್ಪಟ್ಟ ಶಿವಯೋಗಮಂದಿರದ ವೃಕ್ಷಕ್ಕೆ ನೇತುಬಿದ್ದ, ಮಧುರವಾದ ಒಂದು ಜೀವ ಫಲ ವಿದು. "ಭಕ್ತಿಯೆಂಬ ಪೃಥ್ವಿಯ ಮೇಲೆ ಗುರುವೆಂಬ ಬೀಜವಂಕುರಿಸಿ, ಲಿಂಗ ವೆಂಬ ಎಲೆಯಾಯಿತ್ತು; ಲಿಂಗವೆಂಬ ಎಲೆಯ ಮೇಲೆ ವಿಚಾರವೆಂಬ ಹೂವಾಗಿತ್ತು; ಆಚಾರವೆಂಬ ಕಾಯಾಯಿತ್ತು ನಿಷ್ಪತ್ತಿ ಎಂಬ ಹಣ್ಣಾಯಿತ್ತು; ನಿಷ್ಪತ್ತಿ ಎಂಬ ಹಣ್ಣು ತೊಟ್ಟು ಬಿಟ್ಟು, ಕಳಚಿ ಬೀಳುವಲ್ಲಿ ಕೂಡಲಸಂಗಮದೇವ; ತನಗೆ ಬೇಕೆಂದೆತ್ತಿಕೊಂಡ" ಎಂದು ಭಕ್ತಿಭಾಂಡಾರಿ ಬಸವಣ್ಣನವರು ಹೇಳಿದಂತೆ– ಶ್ರೀ ಅಪ್ಪಯ್ಯ ಸ್ವಾಮಿಗಳ ಪರಿಪಕ್ವವಾದ ಜೀವ ಫಲವನ್ನು ಶಿವನು ತನಗೆ

ಬೇಕೆಂದು ಪಣತೊಟ್ಟುಕೊಂಡನೆಂದು ಹೇಳಬಹುದು. ಅಂಥ ಆದರ್ಶ ಜೀವನಕ್ಕೆ ಶ್ರೀಗಳ ಜೀವನ ನಿದರ್ಶನವಾಗಿ ನಿಲ್ಲಬಲ್ಲದೆಂದು ಅನಿಸುತ್ತದೆ. ಇಂಥವರ ಚರಿತ್ರೆಯನ್ನು ಅವರ ವ್ಯಕ್ತಿತ್ವಕ್ಕೆ ಕಳೆಯೇರುವಂತೆ ಉಚಿತ ಕಾಲದಲ್ಲಿ ಬರೆದು, ಪ್ರಕಟಿಸುತ್ತಿರುವದು ಅತ್ಯಂತ ಸಂತೋಷದಾಯಕವಾದುದು.

ಕಥೆಯಲ್ಲಿ ಶ್ರೀಗಳ ಜೀವನ, ಬಾಲ್ಯ, ವಿದ್ಯಾಭ್ಯಾಸ ಮೊದಲಾದ ಜೀವನಾಂಶಗಳ ವಿವರಣೆಯನ್ನು ಪ್ರಾರಂಭದಲ್ಲಿ ಸಂಕ್ಷೇಪವಾಗಿ ಸಾಂಪ್ರದಾಯಿಕವಾದ ರೀತಿಯಲ್ಲಿ ನಿವೇದಿಸಲಾಗಿದೆ. ಅಪ್ಪಯ್ಯದೇವರು ಅಪ್ಪಯ್ಯದೇಶಿಕರಾಗುವಾಗಿನ ಅವರ ಸಾಧನೆಯ ಸ್ಥಿತಿಯಲ್ಲಿಯ ಆತ್ಮ ಸಂಶೋಧನೆಯ ಒಳನೋಟವನ್ನು ಲೇಖಕರು ಅತ್ಯಂತ ಭಕ್ತಿಯಿಂದ, ಜಾಣ್ಮೆಯಿಂದ, ಆಸ್ಥೆಯಿಂದ ಚಿತ್ರಿಸಿದ್ದಾರೆ. ಅಲ್ಲಿ ಅವರ ಅನುಭವ ಜನ್ಯವಾದ ಪ್ರತಿಭೆ ಪ್ರಭಾವಶಾಲಿಯಾಗಿ ಬೆಳಗುತ್ತದೆ. ಸಾಧನೆಯ ಮಾರ್ಗವನ್ನು ಸುಲಲಿತವಾಗಿ ವಿವರಿಸಲಾಗಿದೆ. ಆಗ ಲೇಖಕರ ಲೇಖಣಿಯು ಸತ್ವಯುತವಾಗಿ ಮುಂದರಿಯುತ್ತದೆ. ಶೈಲಿ ಸರಳವಾಗಿದೆ. ವಿಚಾರ ವೈವಿಧ್ಯಪೂರ್ಣವಾಗಿ ಪ್ರವಹಿಸುತ್ತದೆ. ಆ ಶಿವಯೋಗ ಸಾಧನೆಯ ಅಂತರ್ಯದ ಚಿತ್ರ ಆಕರ್ಷಕವಾದ ರೀತಿಯಲ್ಲಿ ವರ್ಣಿಸಲಾಗಿದೆ. ಆತ್ಮಜ್ಞಾನದ ಅರಿವು ಅಳವುಗಳನ್ನು ಆಚಾರ ಅನುಷ್ಠಾನಗಳನ್ನು ತಮ್ಮ ಅನುಭವದ ಒರೆಗಲ್ಲಿಗೆ ತಿಕ್ಕಿ ಅಧಿಕೃತವಾಗಿ, ಆವೇಶಪೂರ್ವಕವಾಗಿ ಬರೆಯಲ್ಪಟ್ಟಂತೆ ಅನಿಸುತ್ತದೆ. ಅದು ಲೇಖಕರ ಆತ್ಮ ಸಂಶೋಧನೆಯ ಸ್ವಾನುಭವದ ಪ್ರತಿಬಿಂಬವಾಗಿದೆಯೆಂದು ಹೇಳಬಹುದು. ಅಲ್ಲಲ್ಲಿ ಶಿವಶರಣರ ವಚನಗಳನ್ನು ಒಳ್ಳೇ ಮಾರ್ಮಿಕವಾಗಿ ಉಲ್ಲೇಖಿಸಿದ್ದಾರೆ. ಶರಣಮಾರ್ಗದೊಡನೆ ತೂಗಿ ನೋಡಿದ್ದಾರೆ. ಅಲ್ಲದೆ ಭಗವದ್ಗೀತೆಯಿಂದಲೂ, ಆಗಮಗಳಿಂದಲೂ, ಉಪನಿಷತ್ತುಗಳಿಂದಲೂ, ಶಿವಯೋಗ ಪ್ರದೀಪಿಕೆಯಿಂದಲೂ, ಮೊಗ್ಗೆಯ ಮಾಯಿದೇವರ ಶತಕತ್ರಯದಿಂದಲೂ ಉದಾಹರಿಸಲ್ಪಟ್ಟ ಆ ತಾರಕ ವಾಕ್ಯಗಳೂ, ವಚನಗಳೂ, ಶ್ಲೋಕಗಳೂ ಶಿವಯೋಗ ಸಾಧನೆಯ ಮಾರ್ಗದಲ್ಲಿ ಸಾಲು ದೀಪಗಳಂತೆ ಕಂಗೊಳಿಸುತ್ತವೆ.

ಇಂಥ ದಿವ್ಯ ಚರಿತ್ರೆಯನ್ನು ಬರೆಯಿಸಿ ಪ್ರಕಟಿಸುತ್ತಿರುವ ಸವದತ್ತಿ ಕಲ್ಮಠದ ಶ್ರೀ ಕುಮಾರ ಸ್ವಾಮಿಗಳವರನ್ನು ಭಕ್ತಿಯಿಂದ ಅಭಿನಂದಿಸುತ್ತೇನೆ. ಇದು ಅವರ ಗುರುವಿನ ಭಕ್ತಿಯ ಕುರುಹೆಂದು ಭಾವಿಸುತ್ತೇನೆ. ಶ್ರೀ ಮಹಾಂತದೇವರ ಪವಿತ್ರವಾದ ಲೇಖಣಿಯಿಂದ, ಕನ್ನಡ ಸಾಹಿತ್ಯದ ಸೇವೆ ಇನ್ನು ಹೆಚ್ಚಾಗಿ ಸಲ್ಲಲಿದೆಯೆಂಬ ಭರವಸೆಯನ್ನು ಈ ಚಿಕ್ಕ ಹೊತ್ತಿಗೆಯು ತಂದುಕೊಡಬಲ್ಲದು. ಅಶಾಂತಿಯಲ್ಲಿ ಕೊರಗುತ್ತಿದ್ದ ಜನರ ಬಾಳುಟ್ಟೆಗೆ ಪರಮಾಗಮವಾಗಬಲ್ಲ, ಈ ಸಾಹಿತ್ಯ

ನಿರ್ಮಾಣ ಕಾರ್ಯದಲ್ಲಿ ಶ್ರೀಗಳಾದ ಇಲಕಲ್ಲ ಮಹಾಂತದೇವರು ಇದೇ ಬಗೆಯಾಗಿ ಮುನ್ನಡೆಯಲೆಂದು ಹಾರೈಸುತ್ತೇನೆ. ಅಲ್ಲದೆ, ಇಂಥ ರಸಋಷಿಗಳ ಕಲಾಕೃತಿಗಳಿಂದ ನಮ್ಮ ಜನತೆಯ ಬದುಕು ಬಂಗಾರವಾಗಲೆಂದು ಆ ಶಿವಯೋಗಿಗಳಲ್ಲಿ ಪ್ರಾರ್ಥಿಸಿ ಈ ತೊದಲ್ಮಾತನ್ನು ನಿಲ್ಲಿಸುತ್ತೇನೆ.

ತಮ್ಮ ಸಮಾಜ ಸೇವಕ
ಎಸ್. ಡಿ. ಇಂಚಲ, ಬಿ.ಎ.ಬಿ.ಟಿ,
ಕೆ. ಎಲ್. ಇ. ಸೊಸಾಯಿಟಿಯ
ಕನ್ನಡ ಟ್ರೇನಿಂಗ ಕಾಲೇಜ, ಬೆಳಗಾಂವ.
ತಾ. ೭–೫–೧೯೫೧

ಪ್ರಕಾಶಕರ ನುಡಿ

(ದ್ವಿತೀಯ ಮುದ್ರಣ)

ಪರಮವಿರಾಗಿ, ಮಹಾ ಶಿವಯೋಗಿ, ದಿವ್ಯ ತೇಜೋಮೂರ್ತಿ ಲಿಂ. ಅಪ್ಪಯ್ಯ ಸ್ವಾಮಿಗಳ ಜೀವನ ಚರಿತ್ರೆಯ ಕರ್ತೃ, ಇಂದಿನ "ಮೂಜಗಂ." ಅವರು ಇಲಕಲ್ಲ ಮಠದ ಮರಿದೇವರಿದ್ದಾಗ, ಸುಮಾರು ತಮ್ಮ ೧೮ನೇ ವಯಸ್ಸಿನಲ್ಲಿ ಸಾಹಿತ್ಯದ ಸೊಗಸಿನಿಂದ, ಚರಿತ್ರೆಗಳ ಅಂಶಗಳಿಂದ, ಪರಮ ತಪಸ್ವಿಗಳ ಈ ಜೀವನ ಚರಿತ್ರೆಯನ್ನು ಬರೆದಿದ್ದಾರೆ. ಅಪ್ಪಯ್ಯಸ್ವಾಮಿಗಳು ಲಿಂ. ಕಾರಣಿಕ ಕುಮಾರ ಶಿವಯೋಗಿಗಳ ಕರುಣೆಯ ಕಂದರಾಗಿ, ಲಿಂಗಾನುಷ್ಠಾನದಿಂದ ಮಹಾ ಮಹಿಮಾಶಾಲಿಗಳಾಗಿ ಮೆರೆದವರು, ಜನ-ಮನದಿಸುವ್ಯಾಪಕರಾಗಿ ನೆಲೆ ನಿಂತವರು. ಅವರ ವ್ಯಕ್ತಿತ್ವದ ಎತ್ತರ-ಬಿತ್ತರ, ಆಳ-ಅಗಲಗಳ ಸುಳುಹು ಇಲ್ಲಿ ಸೂಸಿದೆ.

ಈ ಗ್ರಂಥದ ಔಚಿತ್ಯವನ್ನರಿತು, ಮೊದಲು ಪ್ರಕಾಶನ ಪಡಿಸಿದವರು ಶ್ರೀ ಮ. ನಿ. ಪ್ರ. ಕುಮಾರ ಸ್ವಾಮಿಗಳು ಬಿದರಿ, ಸವದತ್ತಿ ಕಲ್ಮಠ. ಪ್ರಕಟಿತ ಗ್ರಂಥಗಳು ಮುಗಿದು, ಮಹಾತಪಸ್ವಿಗಳ ಸಂಕ್ಷಿಪ್ತ ಜೀವನ ಚರಿತ್ರೆಯ ಗ್ರಂಥದ ಅವಶ್ಯಕತೆ ತೋರಿಬಂದದ್ದರಿಂದ, ದ್ವಿತೀಯ ಮುದ್ರಣಕ್ಕೆ ಅಣಿಗೊಳಿಸಲಾಗಿದೆ. ಇದಕ್ಕೆ ಅನುಮತಿಯನ್ನಿತ್ತ, ಕುಮಾರ ಸ್ವಾಮಿಗಳವರನ್ನು ಕೃತಜ್ಞತೆಯಿಂದ ನೆನೆಯುತ್ತೇವೆ. ನಮ್ಮ ಶ್ರೀ ಜಗದ್ಗುರು ಗಂಗಾಧರ ಧರ್ಮ ಪ್ರಚಾರಕ ಮಂಡಳಿಯಿಂದ, ನಿರಂಜನ ಮೂರ್ತಿಗಳ ಈ ಜೀವನ ಚರಿತ್ರೆಯನ್ನು ಪ್ರಕಾಶಪಡಿಸಲು ಸಂತೋಷವೆನಿಸುತ್ತದೆ.

—ಪ್ರಕಾಶಕರು

ಸೂರ್ಯೋದಯ

ಅಂಧಃಕಾರ ಕವಿದಿತ್ತು. ಕರುನಾಡು ಸುಗಂಧದ ಗಾಳಿಯನ್ನು ಬೀಸಿಕೊಂಡು, ಸರ್ವಜನರ ಮನದ ವ್ಯಾಕುಲತೆಯನ್ನು ಕಳೆದು ಸುಗಂಧಮಯವಾಗಬೇಕೆಂದು ಹಂಬಲಿಸುತ್ತಿತ್ತು. ಮಾನವರು ಮನೋಭೂಮಿಕೆಯ ಮೇಲಿರುವ ಹೊಲಸನ್ನು ಕಳೆದುಕೊಂಡು ಪೂತಾತ್ಮರಾಗಿ ಬಾಳುವಂತೆ ಬೆಳಕನ್ನೀಡುವ ಯೋಗಿಯೊಬ್ಬನು ನಮ್ಮಗಳ ಉದ್ಧಾರಕ್ಕಾಗಿ ಉದಯಿಸಲೆಂದು ಹಗಲಿರುಳೂ ನೆನೆಯುತ್ತಿದ್ದರು. ಕನ್ನಡ-ದೇವಿಯು ತನ್ನ ಒಡಲಿನಿಂದ ಸುಪುತ್ರನೊಬ್ಬನನ್ನು ಪಡೆದುಕೊಂಡು, ಅವನಿಂದ ತನ್ನ ಹಿರಿಮೆಯನ್ನೂ, ಶಿವಾನಂದದ ಅಗಾಧ ಶಕ್ತಿಯನ್ನೂ ತೋರಿಸಿ, ವೀರಶೈವ ಧ್ವಜವನ್ನು ಮೇಲಕ್ಕೇರಿಸಲು ಹಾತೊರೆಯುತ್ತಿದ್ದಳು. ಪಕ್ಷಿಗಳೆಲ್ಲವೂ ಕಲಕಿಲ ಧ್ವನಿಯನ್ನು ತೊರೆದು, ಮೌನವನಾಂತು ಸೂರ್ಯೋದಯವನ್ನೇ ಚಿಂತಿಸುತ್ತಿದ್ದವು. ಕನ್ನಡಾಂಬೆ ಹಸುರು ಸೀರೆಯನುಟ್ಟುಕೊಂಡು ಶೋಭೆಯುಳ್ಳವಳಾಗಿ ಮೆರೆಯುವ ಆಶೆ ಹಿರಿದಾಗಿತ್ತು.

ನಾಡಿನ ಮೂಲೆ ಮೂಲೆಯಲ್ಲಿಯೂ ಹಾಹಾಕಾರ, ಹಸಿವೆಯನ್ನು ಕಳೆದು ಸುಖ ಸಾಮ್ರಾಜ್ಯದಲ್ಲಿ ಕುಳ್ಳಿರಿಸುವವರನ್ನು ಜನ ಸಂದೋಹವು ನಿರೀಕ್ಷಿಸುತ್ತಿತ್ತು. ತ್ಯಾಗಯೋಗಗಳ ಶಕ್ತಿಗಳು ಅಳಿಯುತ್ತಿದ್ದವು. ಇದೆಲ್ಲವನ್ನು ಪರಮಾತ್ಮನು ತನ್ನ ಅಂತರ್ದೃಷ್ಟಿಯಿಂದ ಅರಿತುಕೊಂಡು; ತನ್ನ ಶಕ್ತಿಗಳನ್ನು ಎರಡಲು ಪ್ರಮಥ ಸಮೂಹದಲ್ಲಿದ್ದ ಪೂಜ್ಯ ವ್ಯಕ್ತಿಗಳನ್ನು ಕರುನಾಡಿಗೆ ಹೋಗಲು ಆಜ್ಞೆ ಮಾಡಿದನು. ಆ ಆಜ್ಞೆಗನುಸಾರ ಕರುನಾಡಿಗೆ ಪ್ರಮಥ ವರ್ಯರು ಇಳಿದರು.

ಸೂರ್ಯೋದಯವಾಯ್ತು, ಹಾಹಾಕಾರದ ಹಬ್ಬುವಿಕೆಗಳು ನಾಶವಾಗ ಹತ್ತಿದವು. ರಾಜಸ-ತಾಮಸ ಗುಣಗಳು ದಿಕ್ಕೆಟ್ಟು ಓಡಹತ್ತಿದವು. ಜೀವ ಗುಣಗಳು ಹೋಗಿ ದೇವಗುಣಗಳು ಪ್ರತಿಯೊಬ್ಬರಲ್ಲಿಯೂ ಉದ್ಭೂತವಾಗಲು ಪ್ರಾರಂಭಿಸಿದವು. ಎಲ್ಲಿ ನೋಡಿದಡಲ್ಲಿ ಶಿವನಾಮದ ಧ್ವನಿಯೇ ಧ್ವನಿ. ಪಕ್ಷಿಗಳೂ ಸಂತಸದಿಂದ ಮಧುರಗಾನದಿಂಪನ್ನು ನೀಡುತ್ತಲಿದ್ದವು. ಪ್ರತಿಯೊಂದು ಜೀವಿಯ ಮುಖದ ಕಳೆಯು ಪ್ರಫುಲ್ಲಿತವಾಗಿ ನಗೆಯನ್ನೇ ತೋರುತ್ತಿತ್ತು. ಮಲಪ್ರಭೆಯೂ ತನ್ನ ಜಲವನ್ನು ಶಿವಯೋಗಿಯ ಸೇವೆಗೆ ಸಲ್ಲಿಸಿ ಎಂದು ಕೃತಕೃತ್ಯಳಾಗುವೆನೋ ಎಂಬ ಚಿಂತೆಯಿಂದ ಮುಕ್ತಳಾಗಿ ಜಲವನ್ನೀಡಲು ಸಿದ್ಧಳಾಗಿದ್ದಳು. ಕನ್ನಡಾಂಬೆಯೂ ಒಡೆಸಲಾರದ ಒಗ್ಗಿನ ಕಡಲೊಳಗೆ ಮುಳುಗಿದ್ದಳು.

ಭಾಸ್ಕರನ ಪ್ರಖರ ಕಿರಣಗಳ ಜ್ಯೋತಿಯು ಸುತ್ತೆಲ್ಲ ಪಸರಿಸಿ ಜನರನ್ನು ಸಚೇತನವ್ಯಕ್ತರನ್ನಾಗಿ ಮಾಡಿತು. ಪ್ರತಿಯೊಬ್ಬರ ಹೃದಯಾಂತರಾಳದಲ್ಲಿ ಹುರುಪು-ಹುಮ್ಮಸ್ಸುಗಳು ಚಿಮ್ಮುತ್ತಿದ್ದವು. ಪ್ರಶಾಂತ ವಾತಾವರಣವು ಹುಟ್ಟಿತು. ಸೂರ್ಯನ ಉದಯದಿಂದ ಕಮಲಗಳು ಅರಳಿದವು; ಸೌರಭವ ನೀಡಲು ಪ್ರಾರಂಭಿಸಿದವು. ಸುವಾಸನೆಯನ್ನು ಸೇವಿಸಲು ಜನರು ಎಚ್ಚರಾದರು.

ಲೋಕದ ಚೇಷ್ಟೆಗೆ ರವಿಯೆ ಬೀಜವಲ್ಲವೆ?
ಲೋಕೋದ್ಧಾರಕ್ಕೆ ಯತಿಯೆ ಕಾರಣನಲ್ತೆ?

ಓಂ ಶಾಂತಿಃ ಶಾಂತಿಃ ಶಾಂತಿಃ

ಜನನ-ಬಾಲ್ಯ

ಕನ್ನಡ ನಾಡು ಯತಿ-ಪುಂಗವರ ನೆಲೆವೀಡು. ಬಸವಣ್ಣ, ಅಲ್ಲಮಪ್ರಭು, ಅಜಗಣ್ಣ, ಮೋಳಿಗೆಮಾರಯ್ಯ, ಕುಮಾರಯೋಗಿ, ಮಹಾಂತ ಶಿವಯೋಗಿ ಮೊದಲಾದ ಮಹಾ ಮಹಿಮರನ್ನೂ ಮತ್ತು ದಾಸಕೂಟದವರನ್ನೂ ಪಡೆದು ಕೊಂಡು ಪರಿಶೋಭಿಸುವ ಹಿರಿನಾಡು, ಸರ್ವಕಲೆಗಳಿಗೂ ಆಗರವಾದ ನಾಡು, ಸುಗಂಧದಬೀಡು, ಈ ನಾಡಿನ ಮಧ್ಯದಲ್ಲಿ ರಾಜಿಸುವುದು ವಿಜಯಪುರ ಜಿಲ್ಲೆ. ಇದರೊಳಗೆ ಭಕ್ತಿಯ ತವರ್ಮನೆಯಾದ, ತಂಪೆಸೆವ, ಸೊಂಪೆಸೆವ, ಮುಧೋಳ ವೆಂಬ ಪುರವಿರ್ದುದು. ಇಲ್ಲಿಯ ಜನರೆಲ್ಲರೂ ಪವಿತ್ರ ಜೀವನದಲ್ಲಿ ಕಾಲಕಳೆಯು ತಕ್ಕವರು. ಮುಧೋಳದಲ್ಲಿ "ಸ್ವತಂತ್ರ" ಮಠವೆಂಬುದು ಗ್ರಾಮಕ್ಕೆ ಭೂಷಣ ಪ್ರದವಾದುದು. ಪ್ರತಿಯೊಬ್ಬರೂ ಅಲ್ಲಿಗೆ ಬಂದು, ನಡೆದಿರುವ ಸತ್‌ಶ್ರವಣ ವನ್ನು ಕೇಳಿ, ಬಾಳಿನ ಕೊಳೆಯನ್ನು ಕಳೆದು ನಿರ್ಮಲರಾಗುತ್ತಿದ್ದರು. ಆ ಮಠ ವೆಂದರೆ ಪ್ರತಿಯೊಬ್ಬರಿಗೂ ಭಕ್ತಿ, ಪುಣ್ಯಕ್ಷೇತ್ರದಂತೆ ಆಗಿದ್ದಿತು. ಆ ಮಠದಲ್ಲಿ ಬಸವಲಿಂಗಯ್ಯನವರು, ಶಾಂತಲಿಂಗಮ್ಮ ಈ ಮಾಹೇಶ್ವರ ದಂಪತಿಗಳು ಸುಖ ದಿಂದ ಕಾಲಕಳೆಯುತ್ತಿದ್ದರು. ಬಸವಲಿಂಗಯ್ಯನವರಿಗೆ ಲಿಂಗಪೂಜೆ, ಜಂಗಮ ಸೇವೆಯೆಂದರೆ ಬಲು ಹಿಗ್ಗು; ಯಾವನಾದರೂ ಜಂಗಮನು ಮನೆಯೆದುರಿನಲ್ಲಿ ಹಾಯ್ದು ಹೋದರೆ, ಅವರನ್ನು ಕರೆದು ಊಟೋಪಚಾರ ಮಾಡಿಸದೆ ಬಿಡು ತ್ತಿದ್ದಿಲ್ಲ. ನಿರಂತರದಲ್ಲಿಯೂ ಶಿವಧ್ಯಾನವೇ ಧ್ಯಾನ; ಬಡವರೆಂದರೆ ಬಲು ಕನಿಕರ. ಅವರನ್ನು ಕರೆದು, ಅನ್ನವನ್ನು ನೀಡಿ, ವಸ್ತ್ರ-ಒಡವೆಗಳನ್ನು ಕೊಟ್ಟು ಕಳುಹುತ್ತಿದ್ದರು. ದರಿದ್ರರಿಗೆ, ಅನಾಥರಿಗೆ, ಸಾಧು-ಸನ್ಯಾಸಿಗಳಿಗೆ ಅನಾಥ ಬಂಧುವಾಗಿದ್ದರು. ಸುತ್ತ-ಮುತ್ತಲಿನ ಜನರೆಲ್ಲರೂ ಇವರ ನಡೆ-ನುಡಿ, ಅತಿಥಿ-ಸತ್ಕಾರವನ್ನು ನೋಡಿ ಪ್ರೀತಿ-ಭಕ್ತಿ-ಗೌರವಗಳನ್ನು ಸಲ್ಲಿಸುತ್ತಿದ್ದರು. ಗುರು ಭಕ್ತಿ, ನಿಷ್ಠೆ, ಲಿಂಗಾರ್ಚನೆ ಇವೆಲ್ಲವೂ ಇವರ ಪ್ರಾಕೃತಿಕ ಗುಣಗಳಾಗಿದ್ದವು. ಅವರ ಧರ್ಮಪತ್ನಿ ಶ್ರೀಮತಿ ಶಾಂತಲಿಂಗಮ್ಮನವರೂ ಪತಿಯಂತೆಯೇ ಪವಿತ್ರ ಜೀವನ ದಲ್ಲಿಯೇ ಕಾಲಕಳೆಯುತ್ತಿದ್ದರು. ಇವರ ಮಠ ಸಣ್ಣದಿದ್ದರೂ ಮನವು ಮಾತ್ರ ಬಲು ದೊಡ್ಡದು. ಎಂತಹ ಸಂಕಟಗಳು ಬಂದೊದಗಿದರೂ ತಮ್ಮ ಸತ್ಯ ವ್ರತ ವನ್ನು ಎಂದಿಗೂ ಬಿಡುತ್ತಿದ್ದಿಲ್ಲ. ಆದರೆ, ಇವರಿಗೆ ಹೆಣ್ಣು ಸಂತಾನದ ಹೊರತು ಗಂಡು ಮಕ್ಕಳಿದ್ದಿಲ್ಲವಾದ್ದರಿಂದ ಚಿಂತೆಯಲ್ಲಿದ್ದರು.

ವಂಶವೃದ್ಧಿಯಾಗಿ, ಆ ವಂಶದ ಪೂರ್ವದ ಮಹತ್ತೆಯು ಪ್ರಕಾಶಿತವಾಗ ಬೇಕಾದರೆ ಗಂಡು ಮಗು ಜನಿಸುವದು ಅವಶ್ಯ. ಅದಲ್ಲದೆ ಆ ಮಠ ವೃದ್ಧಿ

ಯೋಗವು, ಶಾಂತಿಯೋಗವು, ಹಾಗು ಪರಿಪೂರ್ಣಯೋಗವು. "ಮಗನಿದ್ದರೆ ಮನೆತಂದ, ಮಗನಿದ್ದರೆ ಕುಲ ವೃದ್ಧಿ" ಅಂತೆಯೇ, ಬಸವಲಿಂಗಯ್ಯನವರಿಗೂ, ಶಾಂತಲಿಂಗಮ್ಮನವರಿಗೂ ಬಿಡಿಸಲಾರದ ಚಿಂತೆಯಾಗಿದ್ದಿತು. ಈ ಚಿಂತೆಯಿದ್ದರೂ ಲಿಂಗಾರ್ಚನೆ, ಜಂಗಮಾರ್ಚನೆ, ಅತಿಥಿ ಸತ್ಕಾರಗಳನ್ನು ಎಂದೂ ಅಲಕ್ಷಿಸುತ್ತಿರಲಿಲ್ಲ. ಅವರೂ ಧೈರ್ಯವಾಗಿ, ಮನದಲ್ಲಿಯೇ ದೇವರ ಸೇವೆಯನ್ನು ಮಾಡುವವರಿಗೆ, ದೇವರು ಮಗನನ್ನು ಕೊಡದೆ ಇರುವನೆ? ಎಂದು ಅಂದುಕೊಂಡು ಶಾಂತಿ ತಾಳುತ್ತಿದ್ದರು.

ಒಂದು ದಿನ, ಶಾಂತಲಿಂಗಮ್ಮನವರು ವೈರಾಗ್ಯ ಸಂಪನ್ನರಾದ, ಶ್ರೀ ಚಿದಂ ಕುಮಾರ ಯೋಗಿಗಳ ಸಂದರ್ಶನಕ್ಕಾಗಿ ಹೋಗುವ ಇಚ್ಛೆಯುಳ್ಳವರಾಗಿ, ಬಂಧುಗಳೊಡನೆ ಸವದತ್ತಿಗೆ ಹೋದರು. ಶ್ರೀ ಕುಮಾರ ಯೋಗಿಗಳು ಪ್ರಾತಃಕಾಲ ಪೂಜೆಯನ್ನು ತೀರಿಸಿಕೊಂಡು, ಜಗದ್ಗುರು ಬಸವಣ್ಣನವರ ವಚನವನ್ನು ಓದುತ್ತ ಕುಳಿತಿದ್ದರು. ಶಾಂತಲಿಂಗಮ್ಮನವರು ಬಂಧುಗಳೊಡಗೂಡಿ, ಕಲ್ಮಠಕ್ಕೆ ಹೋಗಿ, ಹಣ್ಣು-ಕಾಯಿಗಳನ್ನು ಎದುರಿಗಿಟ್ಟು ಪೂಜ್ಯ ಸನ್ನಿಧಿಗೆ ಅರ್ಪಿಸಿ ನಮಸ್ಕಾರ ಮಾಡಿದರು. ಶಿವಯೋಗಿಗಳು ಪ್ರೇಮ ದೃಷ್ಟಿಯಿಂದ ನೇತ್ರದ್ವಯಗಳನ್ನು ಇವರ ಕಡೆಗೆ ತಿರುಗಿಸಿ, "ಏತಕ್ಕೆ ಬರೋಣವಾಯ್ತು" ಎಂದು ಕೇಳಿದರು. ಆ ಕೂಡಲೆ ಶಾಂತಲಿಂಗಮ್ಮನವರ ಸಂಗಡ ಬಂದ, ಬಂಧುಗಳು ಸರ್ವಸಮಾಚಾರವನ್ನು ಹೇಳಿದರು. ಶಿವಯೋಗಿಗಳು ಆನಂದಿತರಾಗಿ, ಶಾಂತಲಿಂಗಮ್ಮನನ್ನು ನೋಡಿ– "ತಾಯೀ, ನಿನ್ನ ಮನೀಷೆ ಗೊತ್ತಾಗಿದೆ; ನೀನು ಚಿಂತಿಸುವ ಕಾರಣವಿಲ್ಲ. ನಿನ್ನ ಪವಿತ್ರ ಗರ್ಭದಲ್ಲಿ ಸತ್ಪುತ್ರನುತ್ಪತ್ತಿಯಾಗುವನು. ಆದರೆ, ನಾವು ಒಂದು ಮಾತನ್ನು ಕೇಳುವೆವು, ಅದಕ್ಕೆ ಒಪ್ಪುವಿರಾ? ಎಂದು ಕೇಳಿದರು. ಅದಕ್ಕೆ ಶಾಂತಲಿಂಗಮ್ಮನು, "ಮಹಾಗುರುವೇ! ನಾನೆಂದಾದರೂ ಸನ್ನಿಧಿಯ ಆಜ್ಞೆಯನ್ನು ಮೀರುವವಳೇ?" ಎಂದಳು.

ಕುಮಾರಯೋಗಿಗಳು– "ಹಾಗಾದರೆ, ಇದೀಗ ಹುಟ್ಟುವ ನಿನ್ನ ಮೊದಲನೆಯ ಮಗುವನ್ನು ನಮ್ಮ ಮಠಕ್ಕೆ ಅರ್ಪಿಸಬೇಕು; ನಾವು ಆತನನ್ನು ಮುಂದೆ ಈ ಮಠದ ಉತ್ತರಾಧಿಕಾರಿಯನ್ನಾಗಿ ಮಾಡಬೇಕಾಗಿದೆ. ಒಪ್ಪಿಗೆಯೋ? ಪೂರ್ಣ ಮನಸಿನಿಂದಲೋ? ಸಂದೇಹವಿದ್ದರೆ ಬೇಡ" ಎಂದು ಅಪ್ಪಣೆ ಕೊಡಿಸಿದನಂತರ, ಶಾಂತಲಿಂಗಮ್ಮನು ಕೂಡಲೇ ದೀರ್ಘದಿಂದ ನಮಸ್ಕಾರ ಮಾಡಿ, "ಪೂಜ್ಯ ಗುರುವೆ, ಮುಂದೆ ಹುಟ್ಟುವ ಮಗನು ನಿಮಗೇ ಸಮರ್ಪಿತ"ವೆಂದು ಅಭಿಮಾನ ಪಟ್ಟಳು. ಶ್ರೀ ಕುಮಾರ ಶಿವಯೋಗಿಗಳು ಹರ್ಷಿತರಾಗಿ ಆಶೀರ್ವದಿಸಿ ಕಳುಹಿ ಕೊಟ್ಟರು.

ಶಾಂತಲಿಂಗಮ್ಮನವರು ನೆಟ್ಟಗೆ ನೇಸರಗಿಗೆ ಬಂದು ಅಲ್ಲಿಂದ ಮುಘೋಳಕ್ಕೆ ಬಂದರು; ಮತ್ತು ತನ್ನ ಪತಿಗೆ ನಡೆದ ಸಂಗತಿಯೆಲ್ಲವನ್ನು ಹೇಳಿದರು. ಕುಮಾರ ಯೋಗಿಗಳು ಆಶೀರ್ವದಿಸಿದ ಹಣ್ಣುಗಳನ್ನು ಕೊಟ್ಟು, ಅವರನ್ನು ಆನಂದಸಾಗರ ದಲ್ಲಿ ತೇಲಿಸಿದಳು. ತನ್ಮೂಲಕ ಮತ್ತಿಷ್ಟು ಭಕ್ತಿಯು ಹಿರಿದಾಗಿ, ದಂಪತಿಗಳಿರ್ವರೂ ಒಮ್ಮನಸ್ಸಿನಿಂದ ಸೇವೆ-ಸತ್ಕಾರ್ಯಗಳನ್ನು ಮಾಡಲು ಆರಂಭಿಸಿದರು.

"ನುಡಿವೆಡೆಯಲ್ಲಿ, ನೋಡುವೆಡೆಯಲ್ಲಿ, ರಮಿಪ್ಪೆಡೆಯಲ್ಲಿ ವಸ್ತುವಂ। ಪಿಡಿವೆಡೆ ಯಲ್ಲಿ, ಭೋಗಿಪೆಡೆಯಲ್ಲಿ, ಸುಖಿಂಬಡೆವಲ್ಲಿ ದೇಹಮಂ। ಬಿಡುವೆಡೆಯಲ್ಲಿ, ಲಿಂಗಕಳೆ ಅಂಗಗುಣಂ ಘನಲಿಂಗ ಯೋಗಮಾ। ಪೊಡೆ ಬಳಿಕಾ ಮಹಾತ್ಮನನದೇನಬರ್ಪ್ಪ ದುದಂ ಶಿವಾಥವಾ॥" ಎಂಬಂತೆ ಮಾತನಾಡುವಾಗ, ನೋಡುವಾಗ, ಕ್ರೀಡಿಸುವಾಗ, ಪದಾರ್ಥವನ್ನು ಗ್ರಹಿಸುವಾಗ, ವಿಷಯವನ್ನು ಭೋಗಿಸುವಾಗ, ಸುಖವನ್ನು ಅನುಭವಿಸುವಾಗ ಎಲ್ಲ ಸಮಯಗಳಲ್ಲಿಯೂ ಶಿವಲಿಂಗ ಧ್ಯಾನದಲ್ಲಿಯೇ ತತ್ಪರ ರಾದರು.

ಒಂದು ದಿನ, ಶಾಂತಲಿಂಗಮ್ಮನವರ ಸ್ವಪ್ನದಲ್ಲಿ ದಂಡ, ಭಸ್ಮ, ಜಟಾ ಧಾರಿಯೂ, ದೀರ್ಘದೇಹಿಯೂ ಆದ, ಸೂರ್ಯ ಪ್ರಭೆಯಂತೆ ಜ್ಯೋತಿಯನ್ನೇ ಬಹಿರ್ಪಡಿಸುತ್ತಿದ್ದ ನಯನಕಾಂತಿಯುಳ್ಳ ಶಿವಯೋಗಿಯೊಬ್ಬನು ಬಂದು, "ತಾಯೇ-ಚಿಂತಿಸಬೇಡೆಂದು ಹೇಳಿ ಹಣ್ಣನ್ನು ಆಶೀರ್ವದಿಸಿದಂತಾಯ್ತು. ಅದನ್ನು ಕಂಡೊಡನೆಯೇ ಶಾಂತಲಿಂಗಮ್ಮನವರಿಗೆ ಹೇಳತೀರದ ಆನಂದವಾಯಿತು.

ಎಚ್ಚತ್ತೊಡನೆ, ಅವಳು ಸ್ವಪ್ನದಲ್ಲಿ ಕಂಡದ್ದನ್ನೆಲ್ಲವನ್ನೂ ತನ್ನ ಪತಿಗೆ ಹೇಳಿದಳು; ಅವರು ಹರ್ಷಪುಲಕಿತರಾದರು. ಅದನ್ನು ಕಂಡ ಕೆಲವು ದಿನಗಳಲ್ಲಿಯೇ, ಸದ್ಗುರುವಿನ ಪ್ರೇರಣೆಯಂತೆ ಶಾಂತಲಿಂಗಮ್ಮನವರಿಗೆ ಗರ್ಭಚಿಹ್ನಗಳು ತೋರ ಹತ್ತಿದವು. ಶಿವನ ಧ್ಯಾನದ ಹೆಚ್ಚಳದೊಡನೆ ಗರ್ಭಕ್ಕೆ ನವಮಾಸಗಳು ತುಂಬಿದವು. ಆದ್ದರಿಂದ, ಅವರು ಹೆರಿಗೆಗಾಗಿ ತವರುಮನೆಯಾದ ನೇಸರಗಿ ಕಳ್ಳೀಮಠಕ್ಕೆ ಬಂದರು.

ಮುಂದೆ, ಯಾರು ಅಪ್ಪಯ್ಯಸ್ವಾಮಿಗಳೆಂದು ನಾಮಧರಿಸಿ, ಕನ್ನಡನಾಡಿನ ದಿವ್ಯ ಜ್ಯೋತಿಯಾಗಿ, ಬಿದರಿ ನವಮಠ ಕಲ್ಮಠದ ಉತ್ತರಾಧಿಕಾರಿಯಾಗಿ, ಶಾಂತ ಮೂರ್ತಿಯಾಗಿ, ಭಕ್ತಜನನಿಕರವನ್ನು ಶಿವಯೋಗ ಸಾಮ್ರಾಜ್ಯದಲ್ಲಿ ನಲಿಸಿ, ತೃಪ್ತಿ ಪಡಿಸಿದರೋ, ಆ ಲೋಕಪೂಜ್ಯ ತಪಸ್ವಿಯು ಕಾರ್ತಿಕ ಶುದ್ಧ ॥೧॥ ಪ್ರತಿಪದ ಶಕೆ ೧೮೧೩ನೇ ರವಿವಾರ ದಿನದಲ್ಲಿ ಶಾಂತಲಿಂಗಮ್ಮನವರ ಗರ್ಭದಿಂದ ಜನ್ಮವೆತ್ತಿದರು. ಎತ್ತನೋಡಿದರೂ ಶಂಖಧ್ವನಿಯೇಧ್ವನಿ. ನೆರೆಹೊರೆಯ ಹೆಂಗಸರೆಲ್ಲರೂ ಬಂದು ಶಿಶುವಿನ ಶುಭ ಶರೀರಲಕ್ಷಣಗಳನ್ನು ನೋಡಿ ಕೊಂಡಾಡಿದರು. ಪಕ್ಷಿಗಳು ಕಿಲಕಿಲ ಧ್ವನಿಯಿಂದ ಜನತೆಯೆಲ್ಲವನ್ನೂ ಸಂತೃಪ್ತಿಸಾಗರದಲ್ಲಿ ಮುಳುಗಿಸಿದವು. ಪ್ರತಿ

ಯೊಬ್ಬರ ಮುಖಗಳು ನಗೆಯನ್ನೇ ಬೀರುತ್ತಿದ್ದವು. ಹುಟ್ಟಿದ ಹನ್ನೊಂದನೆಯ ಶುಭ ದಿನದ ಶುಭ ಸಮಯದಲ್ಲಿ ಆ ಶಿಶುವಿಗೆ "ಮಹಾಲಿಂಗ"ನೆಂದು ನಾಮಕರಣ ಮಾಡಿದರು.

ಮಹಾಲಿಂಗನು ನೆರೆಹೊರೆಯವರ ಮಮತೆಗೆ ಪಾತ್ರನಾಗಿ, ಮನೆಯವರಿಗೆ ಮುದ್ದಾಗಿ, ಬಿದಿಗೆಯ ಚಂದ್ರನಂತೆ ಬೆಳೆಯುತ್ತಿದ್ದನು. ತಾಯಿಯಾದ ಶಾಂತ ಲಿಂಗಮ್ಮನು ಬಹುದಿನದ ಬಯಕೆಯ ಗಂಡು ಮಗುವನ್ನು ಎತ್ತಿ ಅಪ್ಪಿಕೊಳ್ಳುತ್ತಿದ್ದಳು. ಆ ಮಗುವಿಲ್ಲದೆ ಕ್ಷಣವೂ ಇರುತ್ತಿರಲಿಲ್ಲ. ಅದರಲ್ಲಿಯೂ ಗುರು ಕೃಪೆಯಿಂದ ಜನಿಸಿದ ಮಗುವೆಂದ ಮೇಲೆ, ಮಿಗಿಲಾದ ಪ್ರೇಮವುಂಟಾಗುವದು ಸ್ವಾಭಾವಿಕವಲ್ಲವೆ?

ಇತ್ತ ಬಿದರಿ ಕುಮಾರ ಶಿವಯೋಗಿಗಳು ತಮ್ಮ ಲಿಂಗಾನಂದ ವೈಭವದೊಡನೆ ಸವದತ್ತಿ ಕಲ್ಮಠದಲ್ಲಿರುತ್ತಿರಲಾಗಿ, ಒಂದು ದಿನ ನೇಸರಗಿಯ ಭಕ್ತಾದಿಗಳು ಬಂದು, ತಮ್ಮ ಊರಲ್ಲಿ ನಡೆಯಿಸಲ್ಪಟ್ಟ ಬಸವ ಪುರಾಣದ ಸಮಾಪ್ತಿಯ ಮಂಗಲ ಕಾರ್ಯಕ್ಕೆ ದಯಮಾಡಿಸಲು ಶ್ರೀಗಳನ್ನು ಬಿನ್ನವಿಸಿಕೊಂಡರು. ಭಕ್ತ ಪ್ರೇಮಿಗಳಾದ ಶ್ರೀಕುಮಾರ ಯೋಗಿಗಳು ಅವರ ಬಿನ್ನಹಕ್ಕೆ ಒಪ್ಪಿ ನೇಸರಗಿಗೆ ದಯಮಾಡಿಸಿದರು. ಆ ಸಮಯದಲ್ಲಿಯೇ, ಶಾಂತಲಿಂಗಮ್ಮನವರ ಪುಣ್ಯ ಗರ್ಭದಿಂದ ಮಹಾಲಿಂಗನು ಜನ್ಮವೆತ್ತ ಸುದ್ದಿ ಶ್ರೀಕುಮಾರ ಯೋಗಿಗಳಿಗೆ ತಿಳಿಯಿತು. ಕೂಡಲೆ, ಶ್ರೀಗಳು ಆತನಿದ್ದ ನೇಸರಗಿ ಕಲ್ಮಠಕ್ಕೆ ದಯಮಾಡಿಸಿ, ಮುದ್ದು ಮಗುವನ್ನು ನೋಡಿ, ಸಂತೋಷಪೂರಿತರಾಗಿ, ವರದ ಹಸ್ತವನ್ನು ಮಸ್ತಕದ ಮೇಲಿಟ್ಟು, ಆಶೀರ್ವದಿಸಿ ದಯಮಾಡಿಸುವಾಗ ತಂದಿದ್ದ ಅಂಗಿ. ಜರದ ಟೊಪ್ಪಿಗೆ, ಸ್ವಹಸ್ತದಿಂದಲೇ ತೊಡಿಸಿ, ಮಗುವಿನ ತಾಯಿಯನ್ನು ಕುರಿತು–"ಈ ಮಗುವು ನಿನ್ನದಲ್ಲ, ನಮ್ಮದು. ಈತನು ಜಗದುದ್ಧಾರಕನಾಗುವನು. ಆದ್ದರಿಂದ ಮಹಾಲಿಂಗನನ್ನು ಕೊಡುವಿಯಾ?" ಎಂದು ಕೇಳಿದೊಡನೆಯೇ ಸ್ವಲ್ಪ ದೊಡ್ಡವನಾದ ಬಳಿಕ ಸನ್ನಿಧಿಯ ಚರಣಕ್ಕೆ ಅರ್ಪಿಸುವೆನೆಂದು ಶಾಂತಲಿಂಗಮ್ಮನು ಬೇಡಿಕೊಂಡಳು. ಬಿದರಿ ಕುಮಾರ ಶಿವಯೋಗಿಗಳು ಸವದತ್ತಿಯತ್ತ ದಯಮಾಡಿಸಿದರು.

ಮಹಾಲಿಂಗನು ಬಾಲ–ಲೀಲೆಯಿಂದ ಊರ ಜನರನ್ನು ಬೆರಗುಗೊಳಿಸುತ್ತಿದ್ದನು. ಮಹಾಲಿಂಗನೆಂದರೆ ಜೊತೆಗಾರರಾದ ಚಿಕ್ಕಮಕ್ಕಳಿಗೆ ಹಿಂದಾದ ಜಬ್ಬನ. ಸತತವೂ ಅವನನ್ನು ಹಿಂಬಾಲಿಸುವವರು: ಅವನೊಡನೆ ಕುಳಿತರೆ ಎಲ್ಲರೂ ಊಟವನ್ನೇ ಮರೆಯುತ್ತಿದ್ದರು. "ಬೆಳೆಯುವ ಸಿರಿ ಮೊಳಕೆಯಲ್ಲಿ" ಎಂಬುಕ್ತಿಯಂತೆ ಮಹಾಲಿಂಗನಿಗೆ ಚಿಕ್ಕವನಿರುವಾಗಲೇ ದಯ ಹಾಗೂ ಸತ್ಯಪರವಾದ ಕಥೆಗಳನ್ನು ಕೇಳುವದೆಂದರೆ ಬಲು ಹಿಗ್ಗು; ಒಮ್ಮೊಮ್ಮೆ ಭೋಜನವನ್ನು ಸಹ ತೊರೆದು, ತಾಯಿಯನ್ನು ಪೀಡಿಸಿ ಅವುಗಳನ್ನು ಕೇಳುವನು; ಕೇಳದೆ ಏನೇ ಊಟವನ್ನೇ ಮಾಡುತ್ತಿದ್ದಿಲ್ಲ.

ಗೆಳೆಯರೊಡನೆ ಕಲಹ ಮಾಡದೆ, ಅವರನ್ನು ಸಂತೈಸಿ ಪ್ರೇಮದಿಂದ ಆಡುತ್ತಿದ್ದನು. ನಿತ್ಯವೂ ಲಿಂಗಪೂಜೆ ಮಾಡಿದರೇನೆ ಸಮಾಧಾನ; ಅದು ಅವನ ಹುಟ್ಟು ಗುಣವಾಗಿತ್ತು.

ಇತ್ತ ಪರಮಪೂಜ್ಯ ಶ್ರೀ ಬಿದರಿ ಕುಮಾರ ಶಿವಯೋಗಿಗಳು ತಮ್ಮ ಬಿದರಿಯ ಮಠಕ್ಕೆ ದಯಮಾಡಿಸಿದ್ದರು. ಆಗ, ತಮ್ಮ ಆಶೀರ್ವಾದದಿಂದ ಜನಿಸಿದ, ಮಹಾಲಿಂಗ ಸುಪುತ್ರನನ್ನು ಸನ್ನಿಧಿಗೆ ಕರೆಯಿಸಿಕೊಳ್ಳುವ ಇಚ್ಛೆಯುಳ್ಳವರಾಗಿ, ಪರಮಪೂಜ್ಯ, ಸಮಾಜೋದ್ಧಾರಕ ಹಾನಗಲ್ಲ ಶ್ರೀಕುಮಾರ ಶಿವಯೋಗಿಗಳನ್ನು ಕರೆಯಿಸಿಕೊಂಡು "ಸುಪುತ್ರ ಮಹಾಲಿಂಗನು ತಾಯಿಯೊಡಗೊಂಡು, ತಂದೆಯ ಮನೆಯಾದ ಮುಧೋಳ ಸ್ವತಂತ್ರಿ ಮಠಕ್ಕೆ ಬಂದಿರುವನು. ೭-೮ ವರ್ಷದವನಾಗಿರುವನು, ಯೋಗ್ಯಕಾಲ ಸನ್ನಿಹಿತವಾಗಿರುವದು. ಕಾರಣ, ನೀವು ಮುಧೋಳಕ್ಕೆ ಹೋಗಿ, ಆತನ ತಾಯಿ-ತಂದೆಗಳಿಗೆ ಸಮಾಧಾನ ಹೇಳಿ, ಅವನನ್ನು ನಮ್ಮ ಮಠಕ್ಕೆ ಕರೆತರಬೇಕು; ನಾವು ಅವನನ್ನು ನಮ್ಮ ಪಶ್ಚಾತ್ ಮಠಕ್ಕೆ ಅಧಿಕಾರಿಯನ್ನಾಗಿ ಮಾಡುವದನ್ನು ಸಂಕಲ್ಪಿಸಿದ್ದೇವೆ. ಮುಂತಾಗಿ, ಅವರಿಗೆ ಮನಂಬುಗುವಂತೆ ಹೇಳಿ ಅವನನ್ನು ಸಂಗಡ ಕರೆದುಕೊಂಡು ಬರಬೇಕು" ಎಂದು ಅಪ್ಪಣೆಕೊಡಿಸಿದರು. ಶ್ರೀಗಳ ಅಪ್ಪಣೆಯಂತೆ, ಹಾನಗಲ್ಲ ಶ್ರೀಗಳು ಮುಧೋಳದ ಸ್ವತಂತ್ರಿಮಠಕ್ಕೆ ದಯಮಾಡಿಸಿ, ಶಾಂತಲಿಂಗಮ್ಮ ಬಸವಲಿಂಗಯ್ಯನವರಿಗೆ "ಇವನು ನಿಮ್ಮ ಮಗನಲ್ಲ, ಸದ್ಗುರು ಕುಮಾರ ಶಿವಯೋಗಿಗಳ ಕೃಪೆಯಿಂದ ಜನಿಸಿದನೆಂದ ಮೇಲೆ ಜಗತ್ಪೂಜ್ಯನಾಗುವನು, ಇವನಿಂದ ನಿಮ್ಮ ವಂಶವೆಲ್ಲಾ ಉನ್ನತಿಯನ್ನೈದುವದು. ನೀವು ಚಿಂತೆ ಮಾಡದೆ, ಗುರುವರ್ಯರ ಅಪ್ಪಣೆಯಂತೆ ಅವನನ್ನು ಗುರುವಿನ ಪಾದಕ್ಕೆ ಅರ್ಪಿಸಬೇಕೆಂದು" ಅನಂತ ರೀತಿಯಿಂದ ಬೋಧೆ ಮಾಡಿದರು. ಅವರ ಬೋಧೆಗೆ ಒಪ್ಪಿದ ದಂಪತಿಗಳು, ಮಹಾಲಿಂಗನನ್ನು ಕರೆತಂದು ಹಾನಗಲ್ಲ ಶ್ರೀಗಳ ಪಾದಕ್ಕೆ ಕೆಡಹಿದರು. ಆಗ ಹಾನಗಲ್ಲ ಶಿವಯೋಗಿಗಳು-ಸದ್ಗುರು ಕೃಪೆಯಿಂದ ಹುಟ್ಟಿದ ಮಗುವನ್ನು ಅಂತರ್ದೃಷ್ಟಿಯಿಂದ ನೋಡಿ, ಅಂತರಂಗದಲ್ಲಿಯೇ ಆನಂದಿತರಾಗಿ, ಮಹಾಲಿಂಗನ ಮೇಲೆ ಅಮೃತ ಹಸ್ತವನ್ನಿಟ್ಟು ಮಹಾಲಿಂಗ, ನಮ್ಮೊಡನೆ ಬರುವಿಯೇನೊ" ಅನ್ನುವಷ್ಟರಲ್ಲಿಯೇ ಬಾಲಕನು ಬರುವೆನೆಂದನು; ಮನೆಯವರಿಗೂ ಅತ್ಯಂತ ಸಂತಸವಾಯಿತು. ಮಗನ ತೀಕ್ಷ್ಣಬುದ್ಧಿಗೆ ಮೆಚ್ಚಿ, ಪೂಜ್ಯ ಹಾನಗಲ್ಲ ಮಹಾಸ್ವಾಮಿಗಳ ಅಪ್ಪಣೆಯಂತೆ, ದಂಪತಿಗಳಿಬ್ಬರೂ ನಮಸ್ಕರಮಾಡಿ ಅವರ ಚರಣ-ಕಮಲಗಳಿಗೆ ಮಹಾಲಿಂಗನನ್ನು ಅರ್ಪಿಸಿದರು. ಹಾನಗಲ್ಲ ಕುಮಾರ ಶಿವಯೋಗಿಗಳು, ಮಹಾಲಿಂಗನನ್ನು ಬಳಿಯಲ್ಲಿಯೇ ಕರೆದುಕೊಂಡು ಬಿದರಿಗೆ ದಯಮಾಡಿಸಿ, ಕುಮಾರ ಶಿವಯೋಗಿಗಳಿಗೆ ಪೊಡಮಡಿಸಿದರು. ಕುಮಾರ ಶಿವಯೋಗಿಗಳು ಮುದ್ದುಕುವರನನ್ನು ನೋಡಿ, ಆನಂದಿತರಾಗಿ, ಮಸ್ತಕದ ಮೇಲೆ ಅಮೃತ ಹಸ್ತವನ್ನಿಟ್ಟು,

ಆಶೀರ್ವದಿಸಿ, ಅಂದೇ "ಮಹಲಿಂಗ"ನೆಂಬ ಹೆಸರನ್ನು ತೆಗೆದು "ಅಪ್ಪಯ್ಯ"ನೆಂದು ಹೆಸರಿಟ್ಟು, ವಿದ್ಯೆ–ಬುದ್ಧಿಗಳನ್ನು ಕಲಿಸಿ, ಯೋಗ್ಯನನ್ನಾಗಿ ಮಾಡಲು ಹಾನಗಲ್ಲ ಮಹಾಸ್ವಾಮಿಗಳವರ ವಶಕ್ಕೆ ಕೊಟ್ಟರು.

ಇತ್ತ, ಬಿದರಿ ಶ್ರೀ ಶಿವಯೋಗಿಗಳು ಸವದತ್ತಿಯಲ್ಲಿ ೧೯೦೩ನೇ ಇಸ್ವಿಯೊಳಗೆ ಬಸವ ಪುರಾಣವನ್ನು ಪ್ರಾರಂಭಿಸಿದರು. ಅದರ ಸಮಾಪ್ತಿ ಮಂಗಲ ಮಹಾ ಕಾರ್ಯಕ್ಕೆ ಸುತ್ತಲಿನ ವಿರಕ್ತ ಮೂರ್ತಿಗಳೂ, ಪಟ್ಟ ಚರಮೂರ್ತಿಗಳೂ, ಭಕ್ತ ಮಾಹೇಶ್ವರ ವರ್ಗವೂ ನೆರೆದಿತ್ತಲ್ಲದೆ, ಹಾನಗಲ್ಲ ಮಹಾಸ್ವಾಮಿಗಳವರೂ, ಗುರುಗಳ ಅಪ್ಪಣೆಯಂತೆ ಅಪ್ಪಯ್ಯನೊಡಗೂಡಿ ಸವದತ್ತಿಗೆ ದಯಮಾಡಿಸಿದರು. ಅದೇ ಶುಭ ಸಮಯದಲ್ಲಿ, ಹಾವೇರಿ ಶಿವಬಸವ ಸ್ವಾಮಿಗಳ ಅನುಗ್ರಹ-ಅಧಿಕಾರವಿದ್ದ ಮೂಲಕ, ಆ ಸಮಯದಲ್ಲಿ ಅಪ್ಪಯ್ಯದೇವರಿಗೆ ಯೋಗ್ಯ ಪಟ್ಟಾಧಿಕಾರಿಗಳಿಂದ ವೀರಮಾಹೇಶ್ವರ ದೀಕ್ಷೆ ಮಾಡಿಸಿದರು. ಆ ಕಾರ್ಯವನ್ನು ಮುಗಿಸಿಕೊಂಡು, ಸದ್ಗುರುಗಳ ಅಪ್ಪಣೆ ಪಡೆದು ಹಾನಗಲ್ಲ ಮಹಾಸ್ವಾಮಿಗಳು, ಶಿವಬಸವ ಮಹಾಸ್ವಾಮಿಗಳು, ಅಪ್ಪಯ್ಯದೇವರೊಡಗೂಡಿ, ಹಾನಗಲ್ಲತ್ತ ಹೋಗಿ, ಶಿವಬಸವ ಸ್ವಾಮಿಗಳನ್ನು ಹಾವೇರಿ ಹುಕ್ಕೇರಿ ಮಠಕ್ಕೆ ಅಧಿಕಾರಿಗಳನ್ನಾಗಿ ಮಾಡಿ, ಅಪ್ಪಯ್ಯದೇವರನ್ನು ಹುಕ್ಕೇರಿ ಮಠದಲ್ಲಿಯ ಪಾಠಶಾಲೆಯಲ್ಲಿ ಅಧ್ಯಯನ ಮಾಡಲು ಇಟ್ಟರು. ಅಪ್ಪಯ್ಯದೇವರು ಉಪಾಧ್ಯಾಯರ ಮಮತೆಯನ್ನು ಸಂಪಾದಿಸಿಕೊಂಡು ಕಲಿಯಬೇಕಾದ ವೇದಾಂತ, ಸಿದ್ಧಾಂತ ಗ್ರಂಥಗಳನ್ನು ಚೆನ್ನಾಗಿ ಓದಿ ಅದರಲ್ಲಿ ತಜ್ಞರಾದರು. ಓದುತ್ತಿರುವಾಗಲೇ ಅವರ ಹಂಬಲವು ಕೇವಲ ಶಿವಯೋಗದಲ್ಲಿಯೇ ತುಂಬಿತ್ತು. ನಿರಂತರದಲ್ಲಿಯೂ ಓದಿದ್ದನ್ನು ಎಂತು ಹೃದಯದಲ್ಲಿ ಇಳಿಸಿಕೊಂಡು, ಶುದ್ಧಾತ್ಮನಾಗಿ ಸಿದ್ಧಿಯನ್ನು ಪಡೆಯಬೇಕು? ಲಿಂಗಾಂಗ ಸಾಮರಸ್ಯವೆಂದು? ಇದೇ ಚಿಂತನೆಯಲ್ಲಿ ಕಾಲಕಳೆಯುತ್ತಿದ್ದರು.

ಆತ್ಮಸಂಶೋಧನೆ:

ಅನನ್ಯಾಶ್ಚಿಂತಯಂತೋ ಮಾಂಯೇಜನಾಃ ಪರ್ಯುಪಾಸತೇ।
ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಂ॥

—ದೇವವಾಣಿ

ಬಾಗಲಕೋಟೆ ವೀರಶೈವ ಮಹಾಸಭೆಯಲ್ಲಿ ಶಿವಯೋಗ ಮಂದಿರವನ್ನು ಸ್ಥಾಪಿಸಲು ನಿರ್ಧಾರ ಮಾಡಿ, ನಿರ್ದಿಷ್ಟಸ್ಥಾನವನ್ನು ತೋರಿಸಲು, ಚಿತ್ತರಗಿ ವಿಜಯ ಮಹಾಂತಶಿವಯೋಗಿಗಳನ್ನು ನೇಮಿಸಲಾಯಿತು. ಆ ಯತಿಪುಂಗವರು ತೋರಿಸಿದ ಸ್ಥಳದಲ್ಲಿಯೇ ೧೯೦೯ನೇ ಇಸ್ವಿಯ ದಿನ, ಸಮಾಜೋದ್ಧಾರಕ ಹಾನಗಲ್ಲ ಮಹಾಸ್ವಾಮಿಗಳು ಶಿವಯೋಗಮಂದಿರವನ್ನು ಸ್ಥಾಪಿಸಿದರು. ಕನ್ನಡನಾಡಿನ ಸುತ್ತೆಲ್ಲ

ಶಿವಯೋಗಮಂದಿರದ ಕೀರ್ತಿ ಹಬ್ಬಲುಹತ್ತಿತು. ಈ ವಾರ್ತೆಯನ್ನು ಅಪ್ಪಯ್ಯದೇವರು ಕೇಳಿದೊಡನೆಯೇ ಹಿಡಿಸಲಾರದ ಆನಂದ, ಹೇಳಲಾರದ ಕೌತುಕವಾಯಿತು. ಹಾವೇರಿಯ ಶಿವಬಸವ ಮಹಾಸ್ವಾಮಿಗಳ ಹತ್ತಿರ ಹೋಗಿ, "ನನ್ನನ್ನು ಶಿವಯೋಗಮಂದಿರಕ್ಕೆ ಕರೆದುಕೊಂಡು ಹೋಗಲು ಅಪ್ಪಣೆಯಾಗಬೇಕು. ನನಗೆ ಶಿವಯೋಗದಲ್ಲಿಯೇ ನಿರತನಾಗಲು ಬಲು ಹಂಬಲವಾಗಿದೆ." ಕಳಿಸಲೇಬೇಕು ಎಂದು ಅನೇಕ ರೀತಿ ಹೇಳಿದ ನಂತರ, ಸ್ವಾಮಿಗಳು ಒಳ್ಳೆಯ ಉತ್ಸುಕರಾಗಿ ಅಪ್ಪಯ್ಯದೇವರನ್ನು ಕರೆದುಕೊಂಡು ಬಂದು ಶಿವಯೋಗಮಂದಿರದಲ್ಲಿ ಇಟ್ಟರು. ಅಂದಿನಿಂದ, ಅಪ್ಪಯ್ಯದೇವರು ಚಿಂತಿಸಿದ ಫಲವನ್ನು ಈಶ್ವರನು ಕೊಟ್ಟನೆಂದು ಬಗೆದು, ಆನಂದ ಜಲಧಿಯಲ್ಲಿ ತೇಲಿ, ಯೋಗಸಾಧನೆಯ ಅರಿವನ್ನು ಅರಿಯಲು ಪ್ರಾರಂಭಿಸಿದರು.

ಶಿವಯೋಗಮಂದಿರಕ್ಕೆ ಬಂದೊಡನೆಯೇ ಅಪ್ಪಯ್ಯದೇವರಿಗೆ, ಹಸಿದವರಿಗೆ ಅನ್ನ ಸಿಕ್ಕಂತಾಯಿತು. ಅಪ್ಪಯ್ಯದೇವರ ಮನವು ಸತತವೂ ಶಿವಯೋಗದಲ್ಲಿಯೇ ನಿರತ. ನಿಂತಲ್ಲಿ-ಕುಳಿತಲ್ಲಿ ದೇವನನ್ನು ಮೊರೆಹೋಗುವರು; "ಶಿವಯೋಗ"ವನ್ನು ನೀಡು ಎಂದು ಬೇಡುವರು, ಕಾಡುವರು, ಹಾಡುವರು. ಕರದೊಳಗೆ ಬಸವಣ್ಣನ ವಚನವನ್ನು ತೆಗೆದುಕೊಂಡು ಒಮ್ಮನದಿಂದ ಓದಿ ಉಸುರ್ಗರೆಯುವರು.

"ಆದ್ಯರ ವಚನ ಪರುಷವೆಂದೆಂಬೆನು ಆ ಪರುಷವೆನಗೆಂತು ದೊರಕೊಳ್ಳುವದು?" ಎಂದು ಕಾತುರಗೊಳ್ಳುವರು. ಒಮ್ಮೆ "ಅಶಾಂತಸ್ಯ ಕುತಃ ಸುಖಂ" ಎನ್ನುವರು, ಕಣ್ಣೀರಿಡುವರು, ಕೂಸಿನಂತೆ ಕಿರುಚುವರು. ಮತ್ತೊಮ್ಮೆ, "ನಾನೊಂದು ನೆನೆದೊಡೆ ತಾನೊಂದು ನೆನೆವುದು, ನಾನಿತ್ತಲೆಳೆಸಿದೆಡೆ ತಾನತ್ತಲೆಳೆಯುವದು, ತಾ ಬೇರೆ ಎನ್ನ ನಿಳಲಿಸಿ ಕಾಡಿತ್ತು, ತಾ ಬೇರೆ ಎನ್ನ ಬಳಲಿಸಿ ಕಾಡಿತ್ತು ಮಾಯೆ" ಎಂದು ಮಾಯೆಯನ್ನು ದೂಷಿಸುವರು, ಕೊರಗುವರು, ಮರಗುವರು. "ಓ ದೇವ, ಶಾಂತಿ ಎಂದು? ನಿನ್ನ ಸವಿ-ಸುಖವೆಂದು? ದಾರಿಯತ್ತಣದೆ ತೋರಿಸಬಾರದೆ? ತಂದೆ-ತಾಯಿ-ಬಂಧು-ಬಳಗ ನೀನೇ ಅಲ್ಲವೇ? ಓ ಜಗದೀಶ್ವರಾ, ಎನ್ನ ಕಾಯುವದು ನಿನ್ನ ಧರ್ಮವಲ್ಲವೆ? ಕೊಂಚ ಶಾಂತರಾಗಿ, ಹಾಲಲ್ಲಾದರೂ ಎದ್ದು ನೀರಲ್ಲಾದರೂ ಎದ್ದು ಎಂದು ಪ್ರಾರ್ಥಿಸುವರು." ಓ ತಂದೆ! ದಾರಿ ತಪ್ಪಿಸದಿರು, ಓ ದ್ವಿತೀಯ ಶಂಭು ಬಸವಣ್ಣ, ನಿನ್ನ ಸಾಮರ್ಥ್ಯವೆಂತು? ನಿನ್ನ ಸದ್ಗುಣ ಬೀಜಗಳನ್ನು ನನ್ನ ಹೃದಯಭೂಮಿಕೆಯಲ್ಲಿ ಬಿತ್ತಬಾರದೆ? ಕಳವಳಗೊಂಡು ಕರೆಯುವದನ್ನು ಕೇಳಲಾರೆಯಾ? ದೀನ-ಬಂಧುವಲ್ಲವೆ? ನೀನು ಕೊನೆಗೆ ಭಕ್ತಿಯ ಸನ್ಮಾರ್ಗದ ಹೆದ್ದಾರಿಯನ್ನು ತೋರಿಸದಿರುವಿಯಾ? ಮುಕ್ತಿಗೆ ಭಕ್ತಿಯೇ ಬೇಕಲ್ಲವೇ? ಪೂರ್ಣ ನಂಬಿಕೆಯನ್ನು ನೀಡಬಾರದೆ? ನಿನ್ನ ಧ್ಯಾನದ ಹೊರತು,

ಅನ್ಯತ್ರ ಮನವಿರಿಸದಂತೆ ಮಾಡಬಾರದೆ? ಭಕ್ತಿಜಲಧಿಯಲ್ಲಿ ಮುಳುಗಿಸದಿರುವೆಯಾ? "ನೆಚ್ಚಿದನೆಂದರೆ, ಮಚ್ಚಿದನೆಂದರೆ, ಸಲೆಮಾರುಹೋದನೆಂದರೆ ತನುವನಲ್ಲಾಡಿಸಿ ನೋಡುವೆ ನೀನು, ಮನವನಲ್ಲಾಡಿಸಿ ನೋಡುವೆ ನೀನು, ಧನವನಲ್ಲಾಡಿಸಿ ನೋಡುವೆ ನೀನು, ಇವೆಲ್ಲಕ್ಕಂಜದಿದ್ದರೆ ಭಕ್ತಿಕಂಪಿತ." "ಭಕ್ತನಾಗಿ, ತನ್ನ ಹಿಡಿದನೆಂದು ಹೋದರೆ ನುಗ್ಗು ಮಾಡುವ, ನುಸಿಯ ಮಾಡುವ, ಮಣ್ಣು ಮಾಡುವ, ಮಸಿಯ ಮಾಡುವ ಕೂಡಲ ಸಂಗಮದೇವರ ನೆರೆನಂಬಿದೆನಾದಡೆ, ಕಡೆಗೆ ತನ್ನಂತೆ ಮಾಡುವ"ನೆಂದು ಹಾಡುವರು. ಪರೀಕ್ಷಿಸಿ, ನಿರೀಕ್ಷಿಸಿ, ಒರೆಗಲ್ಲಿಗೆ ತಿಕ್ಕಿ, ಮುಕ್ಕಾಗದಂತೆ ಮಾಡಿ, ಮುಕ್ಕಣ್ಣನಕ್ಕರೆಗೆ ಯೋಗ್ಯನನ್ನು ಮಾಡಬಾರದೆ? ಮತ್ತೊಮ್ಮೆ "ವಿಷಯವೆಂಬ ಹಸುರನೆನ್ನ ಮುಂದೆ ತಂದು ಪಸರಿಸಿದರಯ್ಯಾ, ಪಶುವೇನ ಬಲ್ಲುದು ಹಸುರಂದೆಳಿಸುವದಲ್ಲದೆ? ವಿಷಯರಹಿತನ ಮಾಡಿ, ಭಕ್ತಿರಸವ ದಣಿಯ ಮೇಯಿಸಿ, ಸುಬುದ್ಧಿಯೆಂಬ ಉದಕವನೆರೆದು ನೋಡಿ ಸಲಹಯ್ಯ" ಮನಸ್ಸು ಸಂಸಾರಾದಿಗಳಲ್ಲಿ ಮೋಹಗೊಂಡು ಮಗ್ನವಾಗದಂತೆ, ಅನ್ಯ ವಿಚಾರಗಳಿಗೊಳಗಾಗದಂತೆ ಕರುಣಿಸಬಾರದೆ? ಎಂದುದಾಗಿ ಬೇಡಿಕೊಂಡು, ಮತ್ತೊಂದು ಸಲ ಭಗವದ್ಗೀತೆಯನ್ನು ಹಿಡಿದುಕೊಂಡು, ಸ್ಥಿರಚಿತ್ತದಿಂದ—"ವಿಷಯಾ ವಿನಿವರ್ತಂತೇ ನಿರಾಹಾರಸ್ಯ ದೇಹಿನಃ ॥ ರಸವರ್ಜಂ ರಸೋಪ್ಯಸ್ಯ ಪರಂದೃಷ್ಟ್ವಾ ನಿವರ್ತತೆ ॥ ಯತತೋಹ್ಯಪಿಕೌಂತೇಯ ಪುರುಷಸ್ಯವಿಪಶ್ಚಿತಃ । ಇಂದ್ರಿಯಾಣಿ ಪ್ರಮಾಥೀನಿಹರಂತಿ ಪ್ರಸಭಂಮನಃ ॥ ತಾನಿಸರ್ವಾಣಿ ಸಂಯಮ್ಯ ಯುಕ್ತ ಆಸೀತ್ ಮತ್ಪರಃ ॥ ವಶೇಹಿ ಯಸ್ಯೇಂದ್ರಿಯಾಣಿ ತಸ್ಯ ಪ್ರಜ್ಞಾ ಪ್ರತಿಷ್ಠಿತಾ ॥" ಎಂದು ಓದಿಕೊಂಡು, ಮನದಲ್ಲಿ ವಿಷಯಗಳನ್ನು ಇಂದ್ರಿಯಗಳಿಂದ ದೂರವಿಟ್ಟರೆ, ವಿಷಯಗಳು ಅಭಿಲಾಷೆಯನ್ನುಳಿಸಿ ದೇಹದಾರಿಯನ್ನು ಬಿಟ್ಟು ಹೋಗುವವು. ಆತ್ಮಸ್ವಭಾವವು ತಿಳಿದರೇನೆ ವಿಷಯದ ಅಭಿಲಾಷೆಯೂ ಇಲ್ಲದಾಗುವದು; ಇಂದ್ರಿಯ ನಿಗ್ರಹಕ್ಕಾಗಿ ಪ್ರಯತ್ನಿಸುವ ಜ್ಞಾನಿಯಾದ ಪುರುಷನ ಮನಸ್ಸನ್ನಾದರೂ, ಬಲಾಢ್ಯವಾದ ಇಂದ್ರಿಯಗಳು ಬಲಾತ್ಕಾರದಿಂದ ಸೆಳೆದೊಯ್ಯುವವು. ಆ ಎಲ್ಲ ಇಂದ್ರಿಯಗಳನ್ನು ನಿಗ್ರಹಿಸಿದರೇನೇ ಭಗವಂತನ ಕೃಪೆಯಾಗುವದು. ಚಿತ್ತ ಸ್ಥಿರವಾಗುವದೆಂತು, ಎಂತು ಸಾಧಿಸಲಿ ಸಿದ್ಧಿಯನು? ಎಂದು ಹಾತೊರೆಯುವರು. ಒಬ್ಬನಿಂದ ಆಗಲಾರದು, ಗುರುವನ್ನು ಸೇರಬೇಕು, ಗುರುವಿನಡಿಯ ಹಿಡಿಯಬೇಕು. ಗುರುವಿನ ಜ್ಞಾನವು ತನ್ನ ಮನದಲ್ಲಿ ಕುಳಿತರೆ ದೊರೆಯುವದು ಸಿದ್ಧಿ; ಸುಮ್ಮನೆ ಚಿಂತಿಸುತ್ತ ಕುಳಿತರೆ ಸಿದ್ಧಿಯಾಗದು. "ಅಭ್ಯಾಸೇನತು ಕೌಂತೇಯ ವೈರಾಗ್ಯೇಣ ಚ ಗೃಹ್ಯತಾಮ್" ಎನ್ನುವ ಭಗವಂತನು, ಅರ್ಜುನನನ್ನು ಕುರಿತು ಹೇಳುವ ಉಪದೇಶವನ್ನು ನೋಡಿ ಮನಕ್ಕೆ ಧೈರ್ಯ ಕೊಡುವರು. "ಮಡಿಕೆಯ ಮಾಡುವರೆ ಮಣ್ಣೇ ಮೊದಲು, ತೊಡಿಗೆಯ ಮಾಡು

ವರೆ ಪೊನ್ನೇ ಮೊದಲು, ಶಿವಪಥವನರಿವಡೆ ಗುರುಪಥವೇ ಮೊದಲು" ಗುರುವಿಗಾಗಿ ಬಸವಣ್ಣನವರು ಮಿಡುಕಿದರಲ್ಲವೆ? ತಾವೂ ಮಿಡುಕುವರು. "ನ ಗುರೋರಧಿಕಂ" ಶೃತಿಯ ಪ್ರಮಾಣವನ್ನು ನೆನಪಿಗೆ ತಕ್ಕೊಳ್ಳುವರು. "ತನುವ ಕೊಟ್ಟು, ಗುರುವನೊಲಿಸಬೇಕಂತೆ" ಸೇವೆ ಮಾಡಿದರೇನೇ ಗುರುವಿನ ಕೃಪೆಯೆಂದು ಹಾತೊರೆಯುವರು. ಓ. ಗುರುಕುಮಾರ! ನನ್ನನ್ನು ಸೇವೆಗೆ ತಕ್ಕೊಂಡು ಜ್ಞಾನೋಪದೇಶ ಮಾಡಬಾರದೇ? ಲಿಂಗವನ್ನು ಅನನ್ಯ ಭಕ್ತಿಯಿಂದ ಪೂಜಿಸುವರು, ಅಪ್ಪುವರು, ಮಣಿಯುವರು, ಬೇಡುವರು. ಎನ್ನನತಿ ಕರುಣದಿಂ ನೋಡು, ಎನ್ನ ಮನದೊಳು ಕೂಡು, ಎನ್ನ ಕಣ್ಣೊಳಗೆ ಪರಿದಾಡು, ಎನ್ನ ಮನದೊಳಗೆ ಕುಣಿದಾಡು, ಎಂದು ಸ್ತುತಿಗಚ್ಯುತಂ ಸ್ನೇಹರಸದೊಳ್ ಕೂಡಿ, ಇಂದುಧರನೊಳ್ ಸಲುಗೆಯಿಂ ಭಕ್ತಿಯಿಂ ಬೇಡುವರು ಹಿರಿಹಿರಿ ಹಿಗ್ಗಿ, ಮುಂಡಾಡಿ-ಮುಂಡಾಡಿ, ಕೊಂಡಾಡಿ-ಕೊಂಡಾಡಿ, ಅತಿಶಯಾನಂದಪ್ರವಂ ಕಣ್ಣೊಳು ತರುವರು. ಕೊನೆಗೆ ಶರಣರ ಸಹವಾಸವನ್ನಾದರೂ ಕರುಣಿಸಬಾರದೆ? ಮತ್ತೆ ಬಸವಣ್ಣನ ವಚನವನ್ನು ತೆಗೆದುಕೊಂಡು, "ಅತ್ತಿತ್ತ ಹೋಗದಂತ ಹೆಳವನ ಮಾಡಯ್ಯ ತಂದೆ, ಸುತ್ತಿ-ಸುಳಿದು ನೋಡದಂತೆ ಅಂಧಕನ ಮಾಡಯ್ಯ ತಂದೆ, ಮತ್ತೊಂದು ಕೇಳದಂತೆ ಕಿವುಡನ ಮಾಡಯ್ಯ ತಂದೆ, ನಿಮ್ಮ ಶರಣರ ಪಾದವಲ್ಲದೆ ಅನ್ಯ ವಿಷಯಕ್ಕೆಳಸದಂತೆ ಇಳಿಸಬಾರದೆ?"

ಈ ಆತ್ಮಜ್ಞಾನವು ಸುಲಭದಲ್ಲಿ ದೊರೆಯಲಾರದು. ಭಕ್ತಿಯಿಂದ ಒಲಿಸಿಕೊಳ್ಳುವದಕ್ಕೆ ಅಂತರಂಗ ಹೇಗೆ ಆವಶ್ಯಕವೋ ಹಾಗೆಯೇ ನಿರ್ಮಲ ಜ್ಞಾನಕ್ಕೂ, ನಿರ್ಮಲಾಂತಃಕರಣ ಮತ್ತು ಚಾರಿತ್ರ್ಯ ಆವಶ್ಯಕವೆಂದು ಕಠೋಪನಿಷತ್ತಿನಲ್ಲಿ ಹೇಳಿರುವ "ನಾವಿರತೋ ದುಶ್ಚರಿತಾನ್ನಾಶಾಂತೋ ನಾ ಸಮಾಹಿತಃ | ನಾ ಶಾಂತ ಮಾನಸೋವಾಪಿ ಪ್ರಜ್ಞಾನೇನೈನ ಮಾಪ್ನುಯಾತ್||" ವಾಕ್ಯವನ್ನು ನೆನಪಿಗೆ ತಂದುಕೊಳ್ಳುತ್ತಾರೆ. "ಕಂಗಳ ಮುಂದಣ ಕಾಮವ ಕೊಂದು, ಮನದ ಮುಂದಣ ಆಸೆಯ ತಿಂದು ಅತನನರಿ, ಆತುರವೈರಿ ಮಾರೇಶ್ವರಾ" ಆದುದರಿಂದ ಇಂದ್ರಿಯ ವಿಕಾರಗಳನ್ನು ತಡೆದರೆ, ಮನಸ್ಸು ಸ್ಥಿರವಾಗಿ ಆತ್ಮಜ್ಞಾನ ಪಡೆಯುವದಕ್ಕೆ ಸಹಾಯಕವಾಗುತ್ತದೆ; ಆಗ ಅಮೃತತ್ತ್ವ ಲಭಿಸುತ್ತದೆ. "ಯದಾಸರ್ವೇ ಪ್ರಮುಚ್ಯಂತೇ ಕಾಮಾಯೇಸ್ಯ ಹೃದಿಸ್ಥಿತಾಃ | ಅಥಮರ್ತ್ಯೋss ಮೃತೋ ಭವತ್ಯತ್ರ ಬ್ರಹ್ಮಸಮಶ್ನುತೇ || ಯದಾಸರ್ವೇ ಪ್ರಭಿದ್ಯಂತೇ ಹೃದಯಸ್ಯೇಹ ಗ್ರಂಥಯಃ | ಅಥಮರ್ತ್ಯೋss ಮೃತೋಭವ ತ್ಯೇತಾವದನು ಶಾಸನಂ | ಹೃದಾಮನೀಷೀ ಮನಸಾಭಿಕ್ಲೃಪ್ತೋಯ ಏತದ್ವಿದುರ ಮೃತಾಸ್ತೇ ಭವಂತಿ ||" ಅದೇ ಕಠೋಪನಿಷತ್ತಿನ ಶ್ಲೋಕಗಳನ್ನೇ ಮತ್ತೆ ಓದಿಕೊಂಡು, ವಚನ ಶಾಸ್ತ್ರಕ್ಕೂ,

ಉಪನಿಷತ್ತಿಗೂ ಒರೆಹಚ್ಚಿ ಉಪನಿಷತ್ತಿನ ಸಾರವೇ ವಚನದಲ್ಲಿ ಅದೆ ಎಂದು ಮೆಚ್ಚಿಕೊಳ್ಳುವರು; ವಚನದ ಹಿರಿಮೆಯನ್ನು ಹೊಗಳುವರು. "ಸೋಹಂ" ಎಂಬುದು ಕೂಡ, ಅಡಗಿದ ನಿಷ್ಕಲ ಶರಣನೇ ನಿಜೈಕ್ಯಲಿಂಗ; ಈ ನಿಜೈಕ್ಯಲಿಂಗ ಸಾಧನೆಯೇ ಶರಣ ಮಾರ್ಗ; ಆತ್ಮಸಂಶೋಧನೆ ಇದನ್ನು ತಿಳಿದುಕೊಳ್ಳುವದೇ ನಿಜವಾದ ವಿದ್ಯೆ; ಹೊರಗಿನ ವಿದ್ಯೆ ಗಳಿಸಿಕೊಂಡರೆ ಶಿವನೊಲಿಯನು. "ವೇದವ ನೋದಿದರೇನು? ಶಾಸ್ತ್ರವ ಕೇಳಿದರೇನು? ಜಪವ ಮಾಡಿದರೇನು? ತಪವ ಮಾಡಿದರೇನು? ಕೂಡಲಸಂಗಮ ದೇವರನರಿಯದನ್ನಕ್ಕರ" ವೇಷ-ಭಾಷೆಗಳಿಂದ ಪ್ರಯೋಜನವಿಲ್ಲ. ಅರಿವು ಆಚಾರವೆಂದರೆ– ಅಂತರಂಗದಲ್ಲಿ ಅರಿವು, ಬಹಿರಂಗ ದಲ್ಲಿ ಕ್ರಿಯೆ, ಇವು ಪರಸ್ಪರ ಸಮರಸವಾಗಿರಬೇಕು. ಇದೇ ಆತ್ಮಸಂಶೋಧನೆಯ ಲಕ್ಷಣ, ಅಂದೇ ಮುಮುಕ್ಷುವಾಗಲು ಯೋಗ್ಯ ಎಂದು ಸಮಾಧಾನ ತಾಳುವರು. ಆತ್ಮಜ್ಞಾನವಿಲ್ಲದವನ ಬಾಳು ಹಾಳು, ಜೀವನ ಪರಿಪೂರ್ಣವಾಗದು, ಪರಿಪಕ್ವ ವಾಗದು. ಪರಂಜ್ಯೋತಿಯ ಪ್ರತಿಭೆಯುತ್ತ ಮನವು ಉತ್ಸುಕತೆಯಿಂದ ಅಲೆದಾಡಿ ಸುತ್ತ, ಆತ್ಮಜ್ಞಾನಕ್ಕೆ ವೈರಾಗ್ಯವು ಪೂರ್ವಸೋಪಾನವೆನ್ನುವರು ಅಹಂಕಾರ ದಿಂದಲೇ ಆತ್ಮನಿಗೆ ಪ್ರಪಂಚದ ಬಂಧನಗಳು. ಅಹಂಕಾರವಿಲ್ಲದಿರುವುದೇ ವೈರಾಗ್ಯ. "ಒಲ್ಲೆನೆಂಬುದು ವೈರಾಗ್ಯ, ಒಲಿವೆನೆಂಬುದು ಕಾಯಗುಣ" ಅಹಂಕಾರ ಒಂದೇ ಬಾರಿಗೆ ಹೋಗಲಾರದು; ಅದಕ್ಕೆ ಸಾಧನೆ ಅತ್ಯವಶ್ಯಬೇಕು. ಎಂದು ಮನಕ್ಕುಪ ದೇಶ ಮಾಡುತ್ತ, ವೈರಾಗ್ಯ ಚಕ್ರವರ್ತಿಯಾದ ಅಲ್ಲಮಪ್ರಭುವಿನ ವಚನವನ್ನು ಓದುತ್ತ, ಸಂತೋಷ ಶರಧಿಯಲ್ಲಿ ಈಜುವರು, ತಣಿಯುವರು, ದಣಿಯುವರು. "ಸ್ವಸ್ಥಾನ–ಸುಸ್ಥಿರದ–ಸುಮನ ಮಂಟಪದೊಳಗೆ ನಿತ್ಯನಿರಂಜನ ಪ್ರಭೆಯ ಬೆಳಗು, ಶಿವಯೋಗಾನುಭವವು ಏಕಾರ್ಥವಾಗಿ, ಗುಹೇಶ್ವರಾ, ನಿಮ್ಮ ಶರಣ ಅನುಪಮ ಸುಖಿಯಾಗಿಪ್ಪನಾ ಎಲೆ ಮನವೆ, ನೀ ನಿನ್ನ ನಿಜವ ತಿಳಿವಡೆ ಆ ನಿನ್ನ ನಿಜವ ಹೇಳುವೆ ಕೇಳು. ಅದು ಕೇವಲ ಜ್ಯೋತಿ, ಅದು ವರ್ಣನಾತೀತ ಎಂದುಕೊಂಡು, "ಪೂಷನ್ನೇ ಕರ್ಷೇ ಯಮ ಸೂರ್ಯಪ್ರಜಾಪತ್ಯವ್ಯೂಹರಶ್ಮಿನ್ | ಸಮೂಹ ತೇಜೋಯತ್ತೇ ರೂಪಂ ಕಲ್ಯಾಣ ತಮಂ ತತ್ತೆ ಪಶ್ಯಯಂಯೋಸಾವಸೌ ಪುರುಷಃ ಸೋಹಮಸ್ಮಿ" ಎಂಬುವ ಈಶೋಪನಿಷತ್ತಿನ ವಾಕ್ಯವನ್ನು ಜ್ಞಾಪಕಕ್ಕೆ ತಂದು ಕೊಳ್ಳುವರು. ಪರಂಜ್ಯೋತಿ ಸ್ವರೂಪವಾದ ಇಷ್ಟಲಿಂಗವನ್ನು ಪೂಜಿಸುತ್ತ, ಆಶ್ಚರ್ಯಗೊಳ್ಳುತ್ತ– "ಕಾಣಬಾರದ ಲಿಂಗವು ಕರಸ್ಥಲಕ್ಕೆ ಬಂದರೆ ಹೇಳಲಮ್ಮ, ಕೇಳಲಮ್ಮ, ಎನಗಿದು ಸೋಜಿಗ ಗುಹೇಶ್ವರನೆಂಬ ಲಿಂಗ, ನಿರಾಕಾರ ಬಯಲು ಸಾಕಾರವಾಗಿ ಎನ್ನ ಕರಸ್ಥಲಕ್ಕೆ ಬಂದರೆ ಹೇಳಲಮ್ಮ, ಕೇಳಲಮ್ಮ" ಲಿಂಗದಲ್ಲಿ ತನ್ಮಯವುಳ್ಳವರಾಗುತ್ತಾರೆ. ನಿರ್ವಿಕಲ್ಪ ಸಮಾಧಿ ದೊರೆಯುತ್ತದೆಯೋ, ಇಲ್ಲವೋ ಎಂದು ಕಳವಳಗೊಳ್ಳುವರು. ಈ ಲೋಕದಲ್ಲಿ ಈ ಜನ್ಮವೆತ್ತುವರು.

ಮುಕ್ತಿಯನ್ನು ಗಳಿಸಬೇಕಲ್ಲದೆ ಸತ್ತು ಪರಲೋಕದಲ್ಲಿ ಮುಕ್ತಿ ಪಡೆಯುತ್ತೇವೆ ಎಂಬುದು ಯುಕ್ತಿಯಲ್ಲವೆಂದು, ಆಧ್ಯಾತ್ಮ ಸಿಂಹಾಸನಸ್ಥ ಅಲ್ಲಮಪ್ರಭು ಸ್ಪಷ್ಟವಾಗಿ ಸ್ಪಷ್ಟೀಕರಿಸಿದ್ದಾನಲ್ಲವೆ? "ಸತ್ತಬಳಿಕ ಮುಕ್ತಿಯ ಪಡೆದಿಹನೆಂದು ಪೂಜಿಸಹೋದರೆ, ಆ ದೇವರೇನು ಕೊಡುವರೋ? ಸಾಯದೆ, ನೋಯದೆ, ಸ್ವತಂತ್ರವಾಗಿ ಸಂದು ಭೇದವಿಲ್ಲದಿರ್ಪ ಗುಹೇಶ್ವರ ನಿಮ್ಮ ಶರಣ" ಮತ್ತೆ "ಇಹಚೇದವೇದೀದಥಸತ್ಯ ಮಸ್ತಿನಚೇದಿಹಾ ವೇದೀನ್ಮಹತೀವಿನಷ್ಟಿಃ" ಎಂಬುವ ಕೇನೋಪನಿಷತ್ತಿನ ವಾಕ್ಯವನ್ನು ಓದಿಕೊಳ್ಳುತ್ತಾರೆ. "ಪ್ರಣತೆಯು ಇದೆ, ಬತ್ತಿಯು ಇದೆ, ಜ್ಯೋತಿಯು ಬೆಳಗುವಡೆ ತೈಲವಿಲ್ಲದೆ ಪ್ರಭೆ ತಾನೆಲ್ಲಿಯದೋ, ಗುರುವಿದೆ, ಲಿಂಗವಿದೆ, ಶಿಷ್ಯನ ಸುಜ್ಞಾನೋದಯವಾಗದನ್ನಕ್ಕರ ಭಕ್ತಿಯೆಲ್ಲಿಯದೋ, ಸೋಹಂ ಎಂಬುದು ಕೇಳಿ ದಾಸೋಹಂ ಮಾಡದಿದ್ದರೆ, ಅತಿಗಳೆವ ಗುಹೇಶ್ವರಾ" ವಚನವನ್ನೋದಿ ಚಿಂತಾತುರರಾಗಿ, ಜ್ಞಾನಯುಕ್ತವಾದ ಭಕ್ತಿ, ಜ್ಞಾನಯುಕ್ತವಾದ ಕ್ರಿಯೆ ಇವು ಮುಖ್ಯವೆಂದೂ, ಈ ಜ್ಞಾನ–ಭಕ್ತಿ–ಕ್ರಿಯೆಗಳು ಶಿಷ್ಯನಲ್ಲಿ ಉದಯವಾಗಬೇಕಲ್ಲದೆ ಹೊರಗಿನಿಂದ ಯಾರೂ ಕೊಡಲಾರರು. ನನಗೆ ಮಾತ್ರ ಪೂಜ್ಯ ಗುರುಗಳಾದ ಕುಮಾರ ಯೋಗಿಗಳಾಗಿದ್ದಾರೆ. ನಿರ್ಜನ ಸ್ಥಾನವಾದ ಶಿವಯೋಗಮಂದಿರವನ್ನು ಕಲ್ಪಿಸಿಕೊಟ್ಟು ಮಹದುಪಕಾರ ಮಾಡಿದ್ದಲ್ಲದೆ ಜ್ಞಾನವನ್ನೂ ದಯಪಾಲಿಸಿದ್ದಾರೆ. ಅದನ್ನು ಬೆಳಸಿ–ಬೆಳಗಿಸುವದು ನನ್ನ ಕರ್ತವ್ಯವಲ್ಲವೆ! ಆಧ್ಯಾತ್ಮದ ದಾರಿ ಹಿಡಿದು ಸಿದ್ಧಿ ಪಡೆದರೇನೇ, ಗುರು ಕುಮಾರಯೋಗಿಗಳ ಮಗನಲ್ಲವೆ! ಗುರುವಿಗೆ ಇಂತಹ ಕಾರ್ಯ ಸಾಧಿಸಿದರೇನೇ ಮಮತೆಯಲ್ಲವೆ! ಓ ಗುರುವೆ! ಜ್ಞಾನ–ಭಕ್ತಿ–ವೈರಾಗ್ಯಗಳು ಎಂದಿಗೂ ಅಳಿಯದಂತೆ ಕರುಣಿಸು; ನಿಜವಾದ ಧ್ಯೇಯದ ಸಾರವನ್ನು ಚೆನ್ನಾಗಿ ಮನದಲ್ಲಿ ಕುಳ್ಳಿರಿಸು. ಕಾಮವ ಸುಟ್ಟು, ಹೋಮವನರುಹಿ, ತ್ರಿಪುರ ಸಂಹಾರದ ಕೀಲವನರಿಯಬಲ್ಲಡೆ ಯೋಗಿಯಾದಡೇನು? ಭೋಗಿಯಾದಡೇನು? ಶೈವನಾದಡೇನು? ಸನ್ಯಾಸಿಯಾದಡೇನು? ಆಶನವ ತೊರೆದಾತ, ವಸನವ ಮರೆದಾತ ಗುಹೇಶ್ವರ ಲಿಂಗದಲ್ಲಿ ಆತನು ಹಿರಿಯನಲ್ಲೇ! ಆಶೆಯನ್ನು ತೊರೆದು, ಜ್ಞಾನಿಯಾಗಿ ಸ್ಥೂಲ ಸೂಕ್ಷ್ಮ ಕಾರಣ ತನುವಿನ ಸಕೀಲವನ್ನು ಯಾರು ತಿಳಿಯುವರೋ, ಅಂದೇ ಅವರಿಗೆ ಹಿರಿಮೆ ದೇವಸಾನ್ನಿಧ್ಯವಲ್ಲವೆ, ಒಮ್ಮೊಮ್ಮೆ ಸಂಶಯದಲ್ಲಿ ಕುಳಿತುಕೊಂಡು ನಿಶ್ಚೇಷ್ಟಿತರಾಗುವರು. "ಸಂಶಯಾತ್ಮಾ ವಿನಶ್ಯತಿ" ಎಂದು ಮುಂದಿನ ಧ್ಯೇಯಸಾಧನೆಯ ಗುರಿಯನ್ನು ಸಾಧಿಸಲು ಹಾತೊರೆಯುವರು. ಕರ್ಮ, ಜ್ಞಾನವೆರಡೂ ಬೇಕೇ ಬೇಕು; ಅವೆರಡಿಲ್ಲದೆ ಆಧ್ಯಾತ್ಮ ಗಗನದಲ್ಲಿ ಹಾರಲು ಬರಲಾರದು. ಭಗವಂತನು ಕೂಡ "ಯಜ್ಞದಾನ ತಪಃ ಕರ್ಮ ನ ತ್ಯಾಜ್ಯಂ ಕಾರ್ಯಮೇವ ತತ್। ಯಜ್ಞೋದಾನ ತಪಶ್ಚೈವ ಪಾವನಾನಿ ಮನೀಷಿಣಾಂ"॥ ಕರ್ಮಯೋಗದ ಪ್ರಾಮುಖ್ಯವನ್ನು

ಹೇಳಿದ್ದಾನಲ್ಲವೇ! ಮತ್ತೊಂದರಲ್ಲಿ– "ಏತನ್ಯಾಪಿತು ಕರ್ಮಾಣಿ ಸಂಗತ್ಯಕ್ತ್ವಾ ಫಲಾನಿಚ। ಕರ್ತವ್ಯಾನೀತಿ ಮೇ ಪಾರ್ಥ ನಿಶ್ಚಿತಂ ಮತಮುತ್ತಮಂ"॥ ಎಂಬಂತೆ ಫಲಾಪೇಕ್ಷೆ ಇಲ್ಲದಿರುವದೇ ಮೇಲು. ಇದೇ ಕರ್ಮಯೋಗದ ತಿರುಳು; ಫಲಾಪೇಕ್ಷೆ ಇಲ್ಲದಂತೆ ಪರಿಪಾಕ ಹೊಂದಬೇಕು. "ಕ್ರಿಯಾಮಥನವಿಲ್ಲದೇ ಕಾಣಬಂದುದೇ ಕ್ಷೀರದೊಳಗಣ ತುಪ್ಪ! ಕ್ರಿಯಾಮಥನವಿಲ್ಲದೇ ಕಾಣಬಂದುದೇ ಇಕ್ಷುವಿನೊಳಗಣ ಮಧುರ! ಕ್ರಿಯಾಮಥನವಿಲ್ಲದೇ ಕಾಣಬಂದುದೇ ತಿಲದೊಳಗಣ ತೈಲ! ಕ್ರಿಯಾಮಥನವಿಲ್ಲದೇ ಕಾಣಬಂದುದೇ ಕಾಷ್ಠದೊಳಗಣ ಅಗ್ನಿ! ಇದು ಕಾರಣ, ನಮ್ಮ ಗುಹೇಶ್ವರಲಿಂಗವ ತನ್ನೊಳರಿದೆನೆಂಬ ಮಹಂತಂಗೆ ಸತ್ಕ್ರಿಯಾಚರಣೆಯೇ ಸಾಧನ ಕಾಣಿಭೋ" ಅನುಭವಯುಕ್ತವಾದ ತಿಳಿಗನ್ನಡದಲ್ಲಿ ವೇದಗಳ ಸಾರವನ್ನೇ ಇಳಿಸಿರುವ ಅಲ್ಲಮಪ್ರಭುವಿನ ಉಪದೇಶಪರ ವಾಕ್ಯವನ್ನು ನೋಡಿ ಆನಂದ ಕಡಲೊಳಗೆ ಮುಳುಗುವರು. ಅಹಾ ಎಂತಹ ಸ್ವಾರಸ್ಯದೂಟ, ಕರ್ಮಯೋಗ, ಜ್ಞಾನಯೋಗ ಅತ್ಯವಶ್ಯಕಲ್ಲವೇ! ಪಕ್ಷಿಗಳಿಗೆ ಎರಡು ರೆಕ್ಕೆ ಇದ್ದರೆ ಹಾರಲು ಬರುವದಿಲ್ಲವೇ? ಅನೇಕ ತರಹದ ಸಂದೇಹಗಳನ್ನು ತಂದುಕೊಂಡು, ಶಾಂತರಾಗಿ ಧ್ಯೇಯ ಸಾಧನೆಯ (ಸಿದ್ಧಿ) ಹಂಬಲವನ್ನು ತುಂಬಿಕೊಂಡು ಧ್ಯಾನದಲ್ಲಿ ತತ್ಪರರಾಗುವರು. ಕೊನೆಗೆ ಕರ್ಮ ಮಾಡಬೇಕು, ಜ್ಞಾನ ಪಡೆಯಬೇಕು, ವೈರಾಗ್ಯ ಗಳಿಸಬೇಕು, ಮುಕ್ತಿ ದೊರೆಯಬೇಕು. ಇದೇ ಬಗೆಯಿಂದ ಕರ್ಮ, ಜ್ಞಾನ, ವೈರಾಗ್ಯಗಳನ್ನು ಸಾಮರಸ್ಯದಿಂದ ಹೊಂದಿಸಿ ಲಿಂಗತನು, ಲಿಂಗಮನ, ಲಿಂಗಕರ್ಮಗಳಾಗಿ ಪರಿಣಾಮಗೊಳಿಸುವದೇ ಮುಖ್ಯವಾದ ಧ್ಯೇಯವೆಂದು ಬಗೆದು ನಿಸ್ಸಂದೇಹವಾಗುವರು.

ಸಾಧಕನು ಮಹೋನ್ನತ ಪರಂಜ್ಯೋತಿ ದರ್ಶನ ಪಡೆದು ಆ ಬೆಳಗಿನಲ್ಲಿ ನಿರಂತರದಲ್ಲಿಯೂ ಇದ್ದು, ಸುಖದಿಂದ ಬಾಳಬೇಕಾದರೆ ಸಾಧನೆ ಅತ್ಯಾವಶ್ಯಬೇಕು.

"ಸಾಧನೆಯೇ ಜೀವನದ ಚಿಹ್ನ. ಬುದ್ಧಿ ಸದಾ ನೂತನ ವಿಚಾರಗಳಲ್ಲಿ ತೊಡಗುತ್ತಿರುವದೇ ಆತ್ಮಪ್ರಗತಿಯ ಪ್ರಥಮ ಸೋಪಾನ: ವಿಚಾರವಿಲ್ಲದ ಬುದ್ಧಿಯು ಮೃತ ಬುದ್ಧಿಯೇ ಸರಿ. ಯಾವ ತರುಣನ ಬುದ್ಧಿಯು ತತ್ತ್ವವಿಚಾರಗಳಲ್ಲಿ ತೊಡಗಿ, ಗಹನವು ಜೀವನದ ಚರಮೋದ್ದೇಶದ ಕಡೆಗೆ ತಿರುಗುವದೋ, ಆತನ ಹೃದಯದ ಐಶ್ವರ್ಯವು ಬೆಳೆದು ನಳನಳಿಸುವದು. ಜೀವನ ಸಮಸ್ಯೆಗಳನ್ನು ಧೈರ್ಯವಾಗಿ ಸಂಧಿಸಬೇಕು: ಹೃದಯದ ಅಂತರಾಳದ ಗೂಢ ಪ್ರಶ್ನೆಗಳಿಗೆ ತಕ್ಕ ಉತ್ತರಗಳನ್ನು ಸಾಹಸದಿಂದ ಹುಡುಕಬೇಕು. ಸೋಲಿಗೆ ಅಂಜದೆ ವಿಚಾರ ಮಾರ್ಗದಲ್ಲಿ ಮುಂದುವರಿಯಬೇಕು; ಜ್ಞಾನವೃಕ್ಷವನ್ನು ಚೆನ್ನಾಗಿ ಬಿಗಿದು

ಅಲುಗಾಡಿಸಬೇಕು. ಅವರಲ್ಲಿ ನಿಷ್ಪ್ರಯೋಜಕವಾದ ಶುಷ್ಕ ಶಾಖೆಗಳಿದ್ದರೆ, ಹಣ್ಣೆಲೆಗಳಿದ್ದರೆ ಕೆಳಗುದುರಿ ಬೀಳಲಿ; ಬಲವಾದ ಕೊಂಬೆಗಳು, ಹಸುರೆಲೆಗಳು, ಹೊಸ ಹೂವುಗಳು ಚೆನ್ನಾಗಿ ಬದುಕಿ ಬಾಳಲಿ; ಸತ್ಯವು ಕೆಣಕಿದಂತೆಲ್ಲ ತಳಮಳಿಸುವದು. ಹೊಗೆಯಾಡುವ ಬೆಂಕಿಯಂತೆ, ಬೂದಿ ಮುಚ್ಚಿದ ಕೆಂಡದಂತೆ."

— ಸ್ವಾಮಿ ವಿವೇಕಾನಂದ

ಶ್ರೀ ಅಪ್ಪಯ್ಯದೇವರ ಬುದ್ಧಿಶಕ್ತಿಯು ಹೆಚ್ಚಿದಂತೆ ಅನೇಕ ಬಗೆಯ ಸಂದೇಹಗಳು ಚಿತ್ತವನ್ನು ಮುತ್ತಹತ್ತಿದವು. ದಿನ ಹೋದಂತೆ, ಸಾಧನೆ ಹೆಚ್ಚಾದಂತೆ ಕುರುಡು ನಂಬುಗೆಗಳು ಅಳಿಯಹತ್ತಿದವು.

ಜೀವಭಾವವು ತೊಲಗಿ, ದೇವಭಾವವು ಬರಬೇಕಾದರೆ ಯೋಗದ ಅವಶ್ಯಕತೆಯುಂಟು. ಯಾವ ಯೋಗವನ್ನು ಮಾಡಿದರೆ, ಚಿತ್ತವೃತ್ತಿ ನಿರೋಧವಾಗುತ್ತದೆಂದು ಶ್ರೀ ಅಪ್ಪಯ್ಯ ದೇವರು ಚಿಂತಿಸಿ, ಶಿವಯೋಗ ಪ್ರದೀಪಿಕೆಯನ್ನು ತೆಗೆದುಕೊಂಡು "ಮಂತ್ರೋಲಯೋ ಹಠೋರಾಜ ಯೋಗಶ್ಚೇತಿ ಚತುರ್ವಿಧಂ। ಏಕಾಕ್ಷರಂ ದ್ವಯಕ್ಷರಂ ವಾ ಷಡಕ್ಷರಮಥಾಪಿವಾ॥ ಅಷ್ಟಾಕ್ಷರಂ ವಾ ಮೋಕ್ಷಾಯ ಮಂತ್ರಯೋಗೀ ಜಪೇತ್ಸದಾ॥ ಯಸ್ಯಚಿತ್ತಂ ನಿಜಧ್ಯೇಯೇ ಮನಸಾಮರುತಸಹ। ಲಯಂ ಭವತಿನಾ ದೇವಾಲಯ ಯೋಗೀಸ ಏವಹಿ॥ ಭವೇದಷ್ಟಾಂಗ ಮಾರ್ಗೇಣ ಮುದ್ರಾಕರಣ ಬಂಧನೈಃ॥ ತಥಾ ಕೇವಲ ಕುಂಭೇವಾ ಹಠಯೋಗೀ ವಶಾನಿಲಃ॥ ತ್ರಿಷುಲಕ್ಷ್ಯೇಷು ಯೋಬ್ರಹ್ಮ ಸಾಕ್ಷಾತ್ಕಾರಂ ಗಮಿಷ್ಯತಿ। ಜ್ಞಾನೇವಾಥ ಮನೋವೃತ್ತಿ ರಹಿತೋರಾಜಯೋಗವಿತ್॥ (ಶಿ.ಪ್ರ. ೧-೮) ಉತ್ತರೋತ್ತರ ವೈಶಿಷ್ಟ್ಯಶಿದ್ಯೋಗಶ್ಚತ್ವಾರ ಏವಹಿ। ತೇಷ್ವೇವ ಏವ ಮುಖ್ಯೋಸೌ ರಾಜಯೋಗೋತ್ತಮೋತ್ತಮಃ॥ (ಶಿ.ಪ್ರ. ೧-೯) ಶ್ಲೋಕಗಳನ್ನು ಒಮ್ಮನದಿಂದ ಓದಿಕೊಂಡು, ಲಯ-ಹಟಯೋಗಕ್ಕಿಂತಲೂ ರಾಜಯೋಗವೇ ಮಿಗಿಲಾದುದೆಂದು ಶ್ಲೋಕದ ಅಭಿಪ್ರಾಯವಿದೆ. ಎಲ್ಲ ದರ್ಶನಗಳು ಅಂತಿಮ ಧ್ಯೇಯವಾದ ಸತ್ತ್ವವನ್ನು ಕಂಡು ಹಿಡಿಯಲು, ಸರಿಯಾದ ಮತ್ತು ಜೀವಿಯ ಅಂತರಂಗ ಪರಿಸ್ಥಿತಿಯನ್ನೂ ಮತ್ತು ಅಂತಃಕರಣಗಳನ್ನು ಪರಿಶೋಧಿಸುವ ಹಾದಿಯನ್ನೂ ರಾಜಯೋಗವು ತೋರಿಸುವದು. ಶರೀರವನ್ನು ವಿಶೇಷವಾಗಿ ಬಣ್ಣಿಸದೆ ಮನೋವೃತ್ತಿಗಳನ್ನು ಸ್ವಾಧೀನಪಡಿಸಿಕೊಳ್ಳುವದೇ ರಾಜಯೋಗವು. ಸೂಕ್ಷ್ಮವಾಗಿ ವಿಚಾರಿಸಿದರೆ ರಾಜಯೋಗಕ್ಕೂ, ಶಿವಯೋಗಕ್ಕೂ ಭೇದವಿಲ್ಲೆಂಬುದು ಕಾಣುತ್ತದೆ. ಚೆನ್ನಸದಾಶಿವಯೋಗಿಗಳು ತಮ್ಮ ಶಿವಯೋಗ ಪ್ರದೀಪಿಕೆಯಲ್ಲಿ ರಚಿಸಿದ ಶಿವಯೋಗ ಸ್ವರೂಪವನ್ನೇ ವಚನಕಾರರು ತಮ್ಮ ಸರಳ ಶೈಲಿಯಲ್ಲಿಯೇ ಗೂಢತತ್ತ್ವವನ್ನು ತಿಳಿಸಿದ್ದಾರೆ. "ವೀರ ಮಾಹೇಶ್ವರುಗಳ ಲಿಂಗಸಂಧಾನವೆಂತೆಂದೊಡೆ ಬ್ರಹ್ಮರಂಧ್ರದಲ್ಲಿಪ್ಪನಾದ ಚೈತನ್ಯವಪ್ಪ ಪರಮ ಚಿತ್ಕಳೆಯೇ ಭಾವಮನಕರದಲ್ಲಿ ಶ್ರೀಗುರು

ತಂದು ಸಾಹಿತ್ಯವ ಮಾಡಿದನಾಗಿ ಭಾವದಲ್ಲಿ ಸತ್ಸ್ವರೂಪವಪ್ಪ ಇಷ್ಟಲಿಂಗವೆಂದೆನಿಸಿ ಒಂದೇ ವಸ್ತು ತನು–ಮನ–ಭಾವಂಗಳಲ್ಲಿ ಇಷ್ಟಪ್ರಾಣಭಾವವಾದ ಭೇದವನರಿಯದೆ ಇಷ್ಟಲಿಂಗವ ದೃಷ್ಟಿಯಿಂದ ಗ್ರಹಿಸಿ, ಪ್ರಾಣಲಿಂಗವ ಮನಜ್ಞಾನದಿಂದ ಗ್ರಹಿಸಿ, ತೃಪ್ತಿಲಿಂಗವ ಭಾವಜ್ಞಾನದಿಂದ ಗ್ರಹಿಸಿ, ಈ ಲಿಂಗತ್ರಯ ಪಿಡಿದು ಆಚರಿಸಿ, ಲಿಂಗದೊಡನೆ ಕೂಡಿ, ಲಿಂಗವೇ ತಾನು–ತಾನಾಗಿ ವಿರಾಜಿಸುತ್ತಿರ್ಪನದೇ ಶಿವಯೋಗ ನೋಡಾ ಮಹಾಲಿಂಗ ಗುರುಸಿದ್ಧೇಶ್ವರ ಪ್ರಭುವೆ" ಈ ವಚನದಿಂದ ಶಿವಯೋಗದ ಮಹತ್ತ್ವತೆಯು ಕಂಡುಬರುತ್ತದೆ; ಎಂದ ಮೇಲೆ ಶಿವಯೋಗವನ್ನೇ ಪ್ರಾಧಾನ್ಯವಾಗಿಟ್ಟುಕೊಂಡು, ಅದರ ಸಾಧನೆಯನ್ನು ಬದಲಿಸುವದೇ ಪರಮ ಕರ್ತವ್ಯ. "ನಭೇದಶ್ಶಿವಯೋಗಸ್ಯ ರಾಜಯೋಗಸ್ಯ ತತ್ತ್ವತಃ। ಶಿವಾರ್ಥಿನಾಂ ತಥಾಪ್ಯೇವ ಮುಕ್ತ್ಯೋ ಬುದ್ಧೇಃ ಪ್ರವೃದ್ಧಯೇ॥ ಎಂಬುದನ್ನು ಓದಿ ಸಮಾಧಾನ ತಾಳುವರು. ಮತ್ತೊಮ್ಮೆ ಶಿವಯೋಗಮಂದಿರವನ್ನು ಸ್ಥಾಪಿಸಿದ್ದಾದರೂ ಶಿವಯೋಗವನ್ನೇ ಬೆಳೆಸಲಿಕ್ಕಲ್ಲವೆ? ಎಂದುಕೊಂಡು ಸರ್ವಸಿದ್ಧಾಂತ ಗ್ರಂಥಗಳನ್ನು ತಡಕಿ-ಹುಡುಕಿ ಮನಸ್ಸಿನ ಸಂದೇಹವನ್ನು ಕಳೆದುಕೊಳ್ಳುವರು.

ಇದೇ ರೀತಿಯಾಗಿ ಶಿವಯೋಗದಲ್ಲಿಯೇ ಆಸಕ್ತರಾಗಿ, ಶ್ರೀ ಅಪ್ಪಯ್ಯ ದೇವರು ಶಿವಸುಖ ಸಾಮ್ರಾಜ್ಯದಲ್ಲಿಯೇ ಆನಂದದಿಂದ ಕಾಲಕಳೆಯುತ್ತಿರಲು, ಒಂದು ದಿನ ಆಗಲಾರದ ದುಃಖಗಳು ಒದಗುತ್ತಿದವು. ಅಂದು, ಲಿಂಗಪೂಜೆಗೆ ಕುಳಿತಾಗ್ಗ ಧ್ಯಾನವೇ ನಿಲ್ಲಲೊಲ್ಲದಾಗಿದೆ, ಮನಸ್ಸಿನಲ್ಲಿ ಕಳವಳ, ಶಿವಪೂಜೆಗೆ ಕುಳಿತ ಸಮಯದಲ್ಲಿಯೇ ವಿಭೂತಿಯು ಒಡೆದದ್ದನ್ನು ನೋಡಿ ಮತ್ತಿಷ್ಟು ದುಃಖಕ್ಕೊಳಗಾದರು.

ಯಾವ ವಿಪತ್ತು ಸಂಭವಿಸುವದೋ ಎಂದು ಭೋಜನವನ್ನು ಮರೆತು, ಚಿಂತಿತರಾಗಿ ತಮ್ಮ ಶಿವಪೂಜೆಯ ಮಂದಿರದಲ್ಲಿ ಸುಮ್ಮನೆ ಕುಳಿತುಕೊಂಡರು. ಅವರ ಪರಮಸ್ನೇಹಿತರಾದ ಶ್ರೀ ಬಸವಲಿಂಗ ದೇಶಿಕರು (ನಿ. ಪ್ರ. ಬಸವಲಿಂಗ ಸ್ವಾಮಿಗಳು ಗವಿಮಠ, ನವಲಗುಂದ) ಕರೆದರೂ ಮೌನವೆ, ಏನಾದೀತೋ ಎಂದು ಎಲ್ಲರಿಗೂ ಸಂಕೋಚವೇ ಆಯಿತು. ಸ್ವಲ್ಪ ಹೊತ್ತಿನ ಮೇಲೆ, ಬದರಿ ಕುಮಾರ ಶಿವಯೋಗಿಗಳ ಅಂತ್ಯಾವಸ್ಥೆ ಒದಗಿದೆ ಎಂಬ ಸುದ್ದಿ ಶಿವಯೋಗ ಮಂದಿರಕ್ಕೆ ತಿಳಿಯಿತು. ಶ್ರೀ ಅಪ್ಪಯ್ಯ ದೇವರು ದುಃಖ ಹಿಡಿದಂತವರಾಗಿ, ನನ್ನ ಗುರುವಿಗೇನಾಯಿತು? ನಾನೆಂತು ಬದುಕಲಿ? ಜ್ಞಾನಧನವನಿತ್ತು ಸಲಹುವವರಾರು? ಎಂದು ಶೋಕಿಸುತ್ತ ಕುಳಿತ ಸಮಯದಲ್ಲಿ, ಪೂಜ್ಯ ಹಾನಗಲ್ಲ ಮಹಾಸ್ವಾಮಿಗಳು ಅವರಿಗೆ ಹಿತವಾದ ನುಡಿಯಿಂದ ತಿಳಿಹೇಳಿ ಅವರನ್ನು, ಸರ್ವ ವಟುಗಳನ್ನು ಮತ್ತು ಶಿವಯೋಗಿಗಳನ್ನು ಕರೆದುಕೊಂಡು ಬದರಿಗೆ ದಯಮಾಡಿಸಿದರು. ಅಷ್ಟರಲ್ಲಿ ಎಡವಳ್ಳಿ ದೇಸಾಯಿಯವರು, ಜಾಡಿ, ಸವಾತ್ತಿ ಗ್ರಾಮದ ಭಕ್ತರೆಲ್ಲರೂ

ಕೂಡಿದರು. ಬಿದರಿ ಕುಮಾರ ಶಿವಯೋಗಿಗಳು– ಹಾನಗಲ್ಲ, ಹಾವೇರಿ ಮಹಾ ಸ್ವಾಮಿಗಳನ್ನು ಕರೆಯುವದಲ್ಲದೆ, ತಮ್ಮ ಹತ್ತಿರದಲ್ಲಿಯೇ ಅಪ್ಪಯ್ಯದೇವರನ್ನು ಕುಳ್ಳಿರಿಸಿಕೊಂಡು ವರದ ಹಸ್ತವನಿಟ್ಟು, ಹಾನಗಲ್ಲ ಮಹಾಸ್ವಾಮಿಗಳ ಕಡೆಗೆ ತಮ್ಮ ಚಿನ್ಮುಖವನ್ನು ತಿರುಗಿಸಿ, ನಮ್ಮ ಮರಿದೇವರಿಗೆ ಯೋಗವಿದ್ಯೆಯನ್ನು ಕಲಿಸಿ ದೊಡ್ಡವರನ್ನಾಗಿ ಮಾಡಿದಿರಿ; ಮುಂದೆಯಾದರೂ ಇವನನ್ನು ನಮ್ಮ ಮಠಕ್ಕೆ ಅಧಿಕಾರ ಮಾಡುವ ಭಾರ ನಿಮ್ಮದು. ಇವರಿಗೆ ಅಥಣಿ ಶಿವಯೋಗಿಗಳ ದರ್ಶನ ಮಾಡಿಸಿ, ಆಶೀರ್ವಾದ ಕೊಡಿಸಿ, ಅಂತ್ಯದ ಕಾಣಿಕೆಯಾದ ೨೫ ರೂಪಾಯಿಗಳನ್ನು ಪೂಜ್ಯ ಅಥಣಿ ಶಿವಯೋಗಿಗಳ ಪಾದಕ್ಕೆ ಇವರಿಂದಲೇ ಸಲ್ಲಿಸಿರಿ. ನಾಳೆ ನನಗೆ ಶಿವನಪ್ಪಣೆಯಾಗಿದೆ ಎಂದು ಅಪ್ಪಣೆ ಕೊಡಿಸಿ, ಅಪ್ಪಯ್ಯದೇವರನ್ನು ಕುರಿತು– "ಪ್ರಿಯ ಶಿಷ್ಯನಾದ ಅಪ್ಪಯ್ಯ, ನಿನ್ನ ಸದ್ಗುಣಗಳನ್ನು ನೋಡಿ ಬಲು ಆನಂದ ವಾಗಿದೆ; ಇದೇ ಸತ್ಯದಾರಿಯಲ್ಲಿಯೇ ಹೋಗು. ಶಿವಯೋಗಿಯು ತನ್ನ ಶರೀರವನ್ನು ಯಾವ ಕಾಲದಲ್ಲಿ ಶಿವನಿಗೆ ಸಮರ್ಪಿಸುವನೋ, ಆಗ ಆ ಶಿವ ಯೋಗಿಯ ರೂಪವು ಶಿವಸ್ವರೂಪವೇ ಆಗುವದು; ಈ ವಿಷಯದಲ್ಲಿ ಯಾವ ಸಂಶಯವಿಲ್ಲ. ಶಿವಯೋಗಿಯು ಇಂದ್ರಿಯ ಪ್ರೀತಿ ನಿಮಿತ್ತಕವಾಗಿ ವಿಷಯ ಸಂಬಂಧದಿಂದುತ್ಪನ್ನವಾದ ಸುಖಗಳನ್ನು ಚಿದಾನಂದ ಸ್ವರೂಪನಾದ ಶಿವನಲ್ಲಿ ಸಮರ್ಪಿಸಬೇಕು. ವಿಷಯಗಳ ದಶೆಯಿಂದ ಅವುಗಳ ದರ್ಶನದಿಂದಲೂ, ಸ್ಪರ್ಶನ ದಿಂದಲೂ, ಚರ್ವಣದಿಂದಲೂ, ಶ್ರವಣದಿಂದಲೂ, ಆಘ್ರಾಣನದಿಂದಲೂ ಯಾವ ಸುಖವು ಉತ್ಪನ್ನವಾಗುವದೋ ಆ ಸುಖವನ್ನು ಶಿವನಲ್ಲಿ ಸಮರ್ಪಿಸಬೇಕು. ಸರ್ವೇಂದ್ರಿಯಂಗಳಿಂದುತ್ಪನ್ನವಾದ ಸುಖವಾಗಲಿ ಅಥವಾ ಪಾಪ-ಕರ್ಮ ಗಳಿಂದುತ್ಪನ್ನವಾದ ದುಃಖವಾಗಲಿ, ಇವೆರಡೂ ಶಿವನಿಗೇ ಇರುವವೆಂದು ಭಾವಿ ಸುವ ಶಿವಯೋಗಿಯು ಜೀವನ್ಮುಕ್ತನೆನಿಸುವನು" ಎಂದು ಮುಂತಾಗಿ ಅನುಭವ ಯುಕ್ತ ವಾಣಿಯಿಂದ ಸದುಪದೇಶ ಮಾಡಿ, ಮರುದಿನ ಯೋಗಿಕುಲ ಸಾರ್ವ ಭೌಮರಾದ ಶ್ರೀ ಬಿದರಿ ಕುಮಾರ ಶಿವಯೋಗಿಗಳು ಪುಷ್ಯ ಶು|| ೫. ೧೯೧೧ನೇ ಇಸ್ವಿ ಸೋಮವಾರ ಶುಭ ಮುಹೂರ್ತದಲ್ಲಿ ನಿರಕ್ಷೀರದಂತೆ ಶಿವಲಿಂಗದೊಳಗ ಬೆರೆದರು.

ತೀರ್ಥಯಾತ್ರೆ:

ಶ್ರೀ ಅಪ್ಪಯ್ಯದೇವರಿಗೆ ಗುರುಗಳು ಅಗಲಿದ ದುಃಖವಿದ್ದರೂ ಅದೆಲ್ಲ ವನ್ನು ಸಂತೈಸಿಕೊಂಡು, ಸದ್ಗುರುವಿನ ಧ್ಯಾನ ತೊರೆಯದಲೆ ಧ್ಯೇಯಸಿದ್ಧಿಯನ್ನು ಪಡೆಯಲು ಹಂಬಲಿಸುತ್ತಿದ್ದರು. ಪೂಜ್ಯ ಹಾನಗಲ್ಲ ಮಹಾಸ್ವಾಮಿಗಳಿಗೆ ತಮ್ಮ ಶಿಷ್ಯವೃಂದಕ್ಕೆ ಎಡೆಯೂರು ಕ್ಷೇತ್ರವನ್ನು ತೋರಿಸಿ ಅದರ ಮಹಿಮೆಯನ್ನು

ತಿಳಿಸಬೇಕೆಂಬುವ ಕುತೂಹಲ ತುಂಬಿತ್ತು. ಇಚ್ಛೆಯಂತೆ ಮಹಾಸ್ವಾಮಿಗಳು ಎಡೆಯೂರ ಕ್ಷೇತ್ರಕ್ಕೆ ಅಪ್ಪಯ್ಯದೇವರನ್ನು ಇನ್ನುಳಿದ ಶಿವಯೋಗ ವೃಂದವನ್ನು ಕರೆದುಕೊಂಡು ಎಡೆಯೂರ ಕ್ಷೇತ್ರಕ್ಕೆ ದಯಮಾಡಿಸಿದರು. ಅಲ್ಲಿಯ ರಮಣೀಯತೆ, ಜುಳು ಜುಳು ಹರಿಯುವ ನದಿ, ಪರಿಮಳವಸೂಸುತಿಹ ಮಲ್ಲಿಗೆ, ಅರಳಿದ ಸುರಗಿ–ಸುರಹೊನ್ನೆ, ಸಂಪಿಗೆಗಳಂ ನೋಡಿ ಸಂತಸಪಟ್ಟರು. ಅದರಲ್ಲಿಯೂ ನಮ್ಮ ಕರ್ನಾಟಕ ದೇಶಕ್ಕೆ ವಿರಾಜಮಾನಸ್ವರೂಪರಾದ, ಮಹಾ ತಪಸ್ವಿ, ಯತಿಕುಲ ದೀಪಕರಾದ ಶ್ರೀ ಸಿದ್ಧಲಿಂಗ ಶಿವಯೋಗಿಗಳ ಭವ್ಯ ಗದ್ದುಗೆಯನ್ನು ನೋಡಿ, ಸಿದ್ಧಲಿಂಗೇಶನ ದರ್ಶನ ತೆಗೆದುಕೊಂಡು ಶಿವಯೋಗಮಂದಿರಕ್ಕೆ ಬಂದ ನಂತರ, ಅಪ್ಪಯ್ಯದೇವರಿಗೆ ಶಿವಯೋಗಿವರೇಣ್ಯ ಸಿದ್ಧಲಿಂಗೇಶನ ಚಿಂತೆಯ ಚಿಂತೆ. ಆ ಪೂಜ್ಯ ಸ್ಥಾನದಲ್ಲಿ ಒಮ್ಮೆಯಾದರೂ ಅನುಷ್ಠಾನ ಮಾಡಲೇಬೇಕು, ಅತನೊಲಿಸಿ ಸುಖವನ್ನು ಪಡೆಯಬೇಕು, ಜೀವನ ಸಾರ್ಥಕತೆ ಮಾಡಿಕೊಳ್ಳಬೇಕು. ಇದೆಲ್ಲ ಸುಖವನ್ನು ಹೊಂದಬೇಕಾದರೆ, ಮೊದಲು ಅನುಗ್ರಹವಾದರೆ ಆ ಸಿದ್ಧಿ. ಅನುಗ್ರಹವಾಗದೆ ಶಾಸ್ತ್ರೋಕ್ತವಾಗಿ ಪೂಜಿಸಲು ಬರಲಾರದೆಂದು ಬಗೆದು, ಹಾನಗಲ್ಲ ಮಹಾಸ್ವಾಮಿಗಳ ಹತ್ತಿರ ಹೋಗಿ ತಮ್ಮ ವಿಚಾರ ತಿಳಿಸಿದರು. ಅವರ ಶಿವಲಿಂಗ ಪೂಜೆ ಮಾಡುವ ಹಿರಿ ಬಯಕೆ ನೋಡಿ, ಅತ್ಯಂತ ಉತ್ಸುಕರಾಗಿ, ಹಾವೇರಿ ಮಹಾಸ್ವಾಮಿಗಳಿಂದ ಮಾಘ ಮಾಸ, ೧೮೬೮ ಶಕೆ, ಪೌರ್ಣಿಮೆಯ ಶುಭಮುಹೂರ್ತದಲ್ಲಿ ಅನುಗ್ರಹ ಮಾಡಿಸಿದರು; ಅಪ್ಪಯ್ಯದೇವರು ಶ್ರೀ ಅಪ್ಪಯ್ಯ ದೇಶಿಕರಾದರು.

ಪೂಜ್ಯ ಹಾನಗಲ್ಲ ಮಹಾಸ್ವಾಮಿಗಳು ಅಪ್ಪಯ್ಯ ದೇಶಿಕರನ್ನು ಕರೆದು, ಅನುಗ್ರಹವಾದ ನಂತರ ತೀರ್ಥಯಾತ್ರೆಯನ್ನು ಮಾಡಬೇಕಾಗುವದು. ಕಾರಣ, ಪಕ್ಕಾ ಮಡಿಯಿಂದ ಪಾದಚಾರಿಯಾಗಿ, ಹೆಗಲಿನ ಮೇಲೆ ಶಿವಪೂಜೆಯ ಗಂಟನ್ನಿಟ್ಟುಕೊಂಡು, ಶ್ರೀ ಎಡೆಯೂರ ಸಿದ್ಧಲಿಂಗೇಶ್ವರ ದರ್ಶನಕ್ಕೆ ಹೋಗಿಬರಬೇಕೆಂದು ಅಪ್ಪಣೆ ಮಾಡಲು, ಅಪ್ಪಯ್ಯ ದೇಶಿಕರು ಈ ಸುದ್ದಿಯನ್ನು ಕೇಳಿ ಹಿಗ್ಗಿನ ಕಡಲೊಳಗೆ ಮುಳುಗಿದರು.

ಯಾರು, ಯಾವ ರೀತಿಯ ಚಿಂತೆಗಳಲ್ಲಿ ಇರುವರೋ ಅದೇ ತರಹದ ದೃಶ್ಯಗಳು ಅವರ ಎದುರಿಗೆ ಕಂಡುಬರುವವು. ಶ್ರೀ ಅಪ್ಪಯ್ಯ ದೇಶಿಕರಿಗೆ ನಿರಂತರದಲ್ಲಿಯೂ ಎಡೆಯೂರ ಕ್ಷೇತ್ರಕ್ಕೆ ಹೋಗಬೇಕು, ಆ ಭವ್ಯ ಭವನದೊಳಗೆ ಅನುಷ್ಠಾನ ಮಾಡಬೇಕು, ಶಾಂತಿಯನ್ನು ಪಡೆಯಬೇಕು, ಸಿದ್ಧಲಿಂಗನ ಸುದರ್ಶನ ಪಡೆದು ಆನಂದಸಾಗರದಲ್ಲಿ ತೇಲಬೇಕು, ಆತ್ಮಸಿದ್ಧಿಯನ್ನು ಹೊಂದಬೇಕು. ಇದೇ ಚಿಂತೆಯಲ್ಲಿ ಮಗ್ನರಿರುವಾಗ ಅಂತಹ ಸಮಯದಲ್ಲಿ, ನಿಮ್ಮ ಕಾರ್ಯಸಿದ್ಧಿಗಾಗಿ ಹೋಗಲು ಪೂಜ್ಯ ಹಾನಗಲ್ಲ ಮಹಾಸ್ವಾಮಿಗಳು ಹೇಳಿದ ಕೂಡಲೇ ಆನಂದವಾಗದೆ ಬಿಟ್ಟೀತೆ? ಅಪ್ಪಣೆಯ ಮೇರೆಗೆ, ಕರ್ತವ್ಯದಕ್ಷತೆಯುಳ್ಳವರಾದ ಅಪ್ಪಯ್ಯ

ದೇಶಿಕರು ಪಾದಚಾರಿಗಳಾಗಿ, ಸಂಗಡ ಬಸವಲಿಂಗ ದೇಶಿಕರೊಡಗೊಂಡು ಶ್ರೀ ಸಿದ್ಧಲಿಂಗನ ಧ್ಯಾನ ಮಾಡುತ್ತ ಎಡೆಯೂರ ಕ್ಷೇತ್ರದತ್ತ ದಯಮಾಡಿಸಿದರು.

ಯಾರು ತಮ್ಮ ಹೃದ್ಭೂಮಿಯನ್ನು ಸ್ವಚ್ಛಮಾಡಿ, ಅಲ್ಲಿ ಉತ್ತಮ ಬೀಜಗಳನ್ನು ಬಿತ್ತಿ, ಅದರ ಫಲದ ಸವಿಯನ್ನು ಸವಿದು ಶಿವಸುಖದಲ್ಲಿ ನಲಿಯಬೇಕಾದರೆ ಕರ್ತವ್ಯದಕ್ಷತೆಯುಳ್ಳವರಾಗಬೇಕು; ಕರ್ತವ್ಯವನ್ನು ಮಾಡುವದರಿಂದ ಪ್ರತಿಯೊಬ್ಬರಿಗೂ ಸಿದ್ಧಿಯಾಗುವದು. ಸುಖವನ್ನು ಹೊಂದುವವಗೆ ಕರ್ತವ್ಯ ಮಾಡುವದೇ ಅವನ ಧರ್ಮ; ಕರ್ತವ್ಯ ಮಾಡುವವರು ಲಾಭ ಹಾನಿಗಳ ಕಡೆಗೆ ಲಕ್ಷ್ಯವಿಟ್ಟು ಕೆಲಸ ಮಾಡದಿರುವದೇ ಒಳ್ಳೇದು. ಫಲದಾಶೆಗಾಗಿ ಎಂದಿಗೂ ಮಾಡಲೇಬಾರದು; ಆದರೆ ಕರ್ತವ್ಯವನ್ನು ಬಿಡಬಾರದು. ಭಗವಂತನು ಗೀತೆಯಲ್ಲಿ— "ಕರ್ಮಣ್ಯೇ ವಾಧಿಕಾರಸ್ತೇ ಮಾಫಲೇಷು ಕದಾಚನ। ಮಾಕರ್ಮಫಲಹೇತುರ್ಭೂರ್ಮಾತೇ ಸಂಗೋऽಸ್ತ್ವಕರ್ಮಣಿ॥ ಎಂದುದಾಗಿ ಹೇಳಿರುವನು. ಕರ್ತವ್ಯವು ನಮ್ಮನ್ನು ನಿರ್ಬಂಧಿಸಿ ಕಾರ್ಯ ಮಾಡಿಕೊಳ್ಳುವ ಅತಿ ಕ್ರೂರನಾದ ಯಜಮಾನನೆಂದು ನುಡಿಯಕೂಡದು; ಇಷ್ಟೇ ಅಲ್ಲ, ಮನಸ್ಸಿನಲ್ಲಿ ಕೂಡ ಎಣಿಸಕೂಡದು. ಅದು ನಮ್ಮನ್ನು ವಿಪತ್ತಿನಿಂದಲೂ, ಸಂಕಟಗಳಿಂದಲೂ ಪಾರು ಮಾಡಿ ಜೋಕೆ ಮಾಡುವ ಮಮತೆಯ ಮಾತೆಯೆಂದೇ ತಿಳಿಯತಕ್ಕದ್ದು. ಮಳೆಗಾಲದಲ್ಲಿ ರಾಡಿಯಾದ ನದಿಯ ನೀರು ಕಾಲಾವಧಿಯಿಂದ ತಿಳಿಯಾಗುವಂತೆಯೇ, ಕರ್ತವ್ಯ ಮಾಡುತ್ತ ಹೋದಂತೆ ಮನಸ್ಸಾದರೂ ಕಾಲಾವಧಿಯಿಂದ ಶಾಂತವೂ, ಸುಸ್ಥಿರವೂ ಆಗುವದು. ಕರ್ತವ್ಯವಿಲ್ಲದ ಮನುಷ್ಯನು ತನ್ನ ಜೀವನವನ್ನು ನಾಶ ಮಾಡಿಕೊಳ್ಳುವನಲ್ಲದೆ, ತನ್ನ ಮನೆತನವನ್ನೂ ನಾಶಮಾಡಿಕೊಳ್ಳುತ್ತಾನೆ. ಮುಮ್ಮಗಿಕೊಂಡಿದ್ದ ಅದ್ಭುತ ಅಂತಶ್ಶಕ್ತಿಯನ್ನು ಪ್ರಜ್ವಲಿಸಬೇಕಾದರೂ ಕರ್ತವ್ಯದ ಅವಶ್ಯಕತೆ ಬೇಕೇಬೇಕು. ಕರ್ತವ್ಯವೇ ಜೀವನ, ಕರ್ತವ್ಯವೇ ಸದ್ಗತಿಗೆ ಕಾರಣ. ದೇಶದ ಜನರೆಲ್ಲರನ್ನು ಅಜ್ಞಾನದಿಂದ ದೂರಮಾಡಿ, ಮಾನವತ್ವದ ಪ್ರಭುತ್ವದ ನೀತಿ ತಿಳಿಸಬೇಕಾದರೂ ಕರ್ತವ್ಯವೇ ಮೊದಲು. ಲಿಂಗಸುಖದ ಪ್ರಾಪ್ತಿಯಾಗುವದಕ್ಕೂ ಶಿವನ ಕಾರ್ಯದ ದುಡಿಕೆಯಿಂದಲೇ ಆತನ ಮಮತೆ; ಕಷ್ಟವಿಲ್ಲದೆ ಸುಖ ಎಂದಿಗೂ ದೊರೆಯಲಾರದು. ಕಷ್ಟ ಬಂದರೂ ಹಿಡಿದ ವ್ರತವನ್ನು ಬಿಡದಲೇ, ತನ್ನ ಕರ್ತವ್ಯವನ್ನು ಪಾಲಿಸುವದು ಹೆಚ್ಚಿನ ಸಾಮರ್ಥ್ಯ; ಅದೇ ತನ್ನ ಬಾಳ ದಾರಿಗೆ ದಾರಿದೀಪ.

ಶಿವನ ಕಾರ್ಯದಲ್ಲಿ ನಿರತರಾದ ದೇಶಿಕವರೇಣ್ಯ, ಶ್ರೀ ಅಪ್ಪಯ್ಯ ದೇಶಿಕರಿಗೆ ದಾರಿಯಲ್ಲಿ ಎಷ್ಟೋ ಕಷ್ಟಗಳು ಒದಗಿದರೂ ಅವೆಲ್ಲವುಗಳನ್ನು ಲೆಕ್ಕಿಸದೆ, ಕಡೆಗಾಣಿಸಿ, ಒಡಿದ ನಿಯಮದಂತೆ ಎಡೆಯೂರ ಕ್ಷೇತ್ರವನ್ನು ತಲುಪಿದರು. ಸತತವೂ ಅನುಷ್ಠಾನದ ಬಯಕೆಯಲ್ಲಿದ್ದ ಅಪ್ಪಯ್ಯ ದೇಶಿಕರಿಗೆ, ನಿರನ್ನಪೇಕ್ಷಿಸುವ

ಗಿದಕ್ಕೆ ನೀರೆರೆದಂತಾಯಿತು. ಪರಮ ಪೂಜ್ಯ ಹಾನಗಲ್ಲ ಸ್ವಾಮಿಗಳ ಅಪ್ಪಣೆ ಪಡೆದುಕೊಂಡು, ಎಡೆಯೂರ ಕ್ಷೇತ್ರದಲ್ಲಿ ಅನುಷ್ಠಾನ ಪ್ರಾರಂಭಿಸಿದರು. ಅಲ್ಲಿಯ ಜನರೆಲ್ಲರೂ ಶುದ್ಧ ಮನದಿಂದ ಮಾಡುವ ಅನುಷ್ಠಾನದ ಪ್ರಭಾವವನ್ನು ನೋಡಿ, ಚಕಿತರಾಗಿ, ದರ್ಶನಕ್ಕೆ ಬರಲು ಪ್ರಾರಂಭಿಸಿದರು.

ಶಿವಪೂಜೆಯೇ ಶರಣರ ಹೆದ್ದಾರಿ. ಶಿವಪೂಜೆಯುನ್ನತಿಗಳೆದು. ಕೇವಲ ಮುಕ್ತಿ ಹೊಂದುವನೆನ್ನುವ ಅಹಂಕಾರಿಗೆ ಎಂದಿಗೂ ಮುಕ್ತಿ ದೊರೆಯಲಾರದು. ಬನ್ನಿಯ ಕಟ್ಟಿಗೆಯಲ್ಲಿ ಘರ್ಷಣವಿಲ್ಲದೆ, ಅಗ್ನಿಯು ಹೇಗೆ ಪ್ರಕಾಶಿಸುವದಿಲ್ಲವೋ ಹಾಗೆಯೇ, ಲಿಂಗಮಧ್ಯಸ್ಥನಾದ ಶಿವನು ಪೂಜಾ ಕ್ರಿಯೆ ಇಲ್ಲದೆ ಪ್ರಕಾಶಿಸುವದಿಲ್ಲ. ವಿಧಿ ಲೋಪವಾಗದಂತೆಯೂ, ಶಿವನು ಪ್ರಸನ್ನವಾಗುವಂತೆಯೂ, ಆಗಮ ಪ್ರಮಾಣಾನುಸಾರವಾಗಿಯೂ ಪೂಜಾ ಕರ್ಮವನ್ನಾಚರಿಸಬೇಕು. ಜ್ಞಾನಿಯು ಶಾಸ್ತ್ರವಿಹಿತವಾದ ಕರ್ಮದಲ್ಲಿ, ಶಿವಾರಾಧನ ಬುದ್ಧಿಯಿಂದ ನಿರತನಾಗಬೇಕು. ಗುರೂಪದೇಶಾನುಸಾರವಾಗಿ ಶಿವಲಿಂಗವನ್ನು ಪೂಜಿಸಬೇಕು: ಶಿವಲಿಂಗವನ್ನು ಪೂಜಿಸಿದ್ದಾದರೆ ಸರ್ವ ದೇವತೆಗಳನ್ನು ಪೂಜಿಸಿದಂತಾಗುವದು. ಯಾವಾಗಲೂ ಶಿವಲಿಂಗ ಪೂಜಾ, ಸಾಧನ ಸಾಮಗ್ರಿಗಳ ಸಂಪಾದನೆಯಲ್ಲಿ ನಿರತನಾದ ಮನಸ್ಸುಳ್ಳವನೂ, ಶಿವಯೋಗಾಸಕ್ತನೂ ಆದ ಶಿವಯೋಗಿಯು, ಮಲಮಾಯಾದಿಪಾಶ ಮುಕ್ತನಾಗುವನೆಂದು ಸಿದ್ಧಾಂತ-ಶಿಖಾಮಣಿಯಲ್ಲಿ ಶ್ರೀ ರೇಣುಕರು ಅಗಸ್ತ್ಯನನ್ನು ಕುರಿತು ಉಪದೇಶಿಸಿದ್ದಾರೆ. ಪ್ರತಿಯೊಬ್ಬರ ಬಾಳ್ವಿಕೆಗೆ ಶಿವಪೂಜೆಯೇ ಹಿರಿಯ ಸಾಧನ; ಶಿವಪೂಜೆಯಿಂದಲೇ ಮಹೋನ್ನತ ದರ್ಶನ, ಸತ್ಯಸಂಪಾದನೆ.

ಸರ್ವ ವೀರಶೈವ ಸಿದ್ಧಾಂತ ಗ್ರಂಥಗಳನ್ನು ಓದಿ, ಅರಿದುಕೊಂಡ ಶ್ರೀಅಪ್ಪಯ್ಯ ದೇಶಿಕರ ಶಿವಪೂಜೆ ದಿನದಿನಕ್ಕೂ ವೃದ್ಧಿ ಹೊಂದಲು ಪ್ರಾರಂಭವಾಯಿತು. ಪರುಷದಿಂ ಮನವುಕ್ಕಿ, ಕರಗಳಿಂ ಮುಗಿ-ಮುಗಿದು ಲಿಂಗಯ್ಯನನ್ನು ಬೇಡುವರು, ದಿವ್ಯಾನ್ನವ ಮೃತಾನ್ನವಂ ಬಡಿಸುವರು, ಸೌಗಂಧ್ಯ ಬೀರುವ ಗುಗ್ಗಳದ ಧೂಪವನು ಹಾಕುವರು, ಬೀಸುವರು, ರಮಣೀಯವೆನಿಸಿದ ಪ್ರೋಳಾರತಿಗಳನೆತ್ತಿ ಬೆಳಗುವರು, ಮತ್ತೆ ಲಿಂಗದ ಮೇಲೆ ತನಿಗಂಪನೀವ ಮಲ್ಲಿಗೆ-ಜಾಜಿ ಹೂಗಳು ಧರಿಸುವರು, ಹೂಮಾಲೆ ಮಾಡಿ ಹಾಕಿ, ಕಮನೀಯತೆಯನ್ನು ನೋಡಿ ಆನಂದಿತರಾಗುವರು. ಮನ್ಮನೋಹರ! ಸಿದ್ಧಲಿಂಗ! ವೃತ್ತಮಾಲಾಮಂಡಿತ ಸಿದ್ಧಲಿಂಗ! ಎಂದು ನುತಿಸುವರು, ಮಣಿಟ್ಟು ನೋಡುವರು, ಅಪ್ಪುವರು, ನಿಜಸುಖವನೆನಗೆ ಕರುಣಿಸಲಾರೆಯಾ! ಎಂದು ಪ್ರಾರ್ಥಿಸುವರು. ಯೋಗಿಕುಲ ದಿನಮಣಿಯೆ! ವಿರಕ್ತ ಶಿಖಾಮಣಿಯೆ! ತಪೋನಿಧಿಯೆ! ಶ್ರೀ ಸಿದ್ಧಲಿಂಗನೆ! ಬಾರೆನ್ನ ಹೃದಯದೊಳು, ತೋರೆನಗೆ ನಿನ್ನ ದಿವ್ಯಪ್ರಭೆಯನು; ನೀಡೆನಗೆ ಶಾಂತಿಸುಖವನು ಎಂದು ಮುಂತಾಗಿ ಬೇಡುವರು, ಹಾಡುವರು.

ಶ್ರೀ ಸಿದ್ಧಲಿಂಗೇಶ್ವರನು ಕನಸಿನಲ್ಲಿ ಬಂದು, ದರ್ಶನವಿತ್ತ ದಿನ ಸಂತೋಷಕ್ಕೆ ಅಳತೆಯೇ ಇಲ್ಲ. ಶಾಂತಿ ದೊರೆಯುವವರೆಗೂ ಅನುಷ್ಠಾನಮಾಡಿ ಮುಗಿಸಿ, ಎಡೆಯೂರ ಕ್ಷೇತ್ರದಿಂದ ಹಾವೇರಿಗೆ ಬಂದು, ಸದ್ಗುರು ಹಾವೇರಿ ಪೂಜ್ಯರ ದರ್ಶನ ಪಡೆದು, ನಡೆದ ಸಂಗತಿಯನ್ನೆಲ್ಲ ಅರಿಕೆ ಮಾಡಿದ ನಂತರ, ಗುರುಗಳ ಹಸ್ತದಿಂದ ಕ್ರಿಯಾಘಟ್ಟಿಗಳನ್ನು ಶುದ್ಧ ಮಾಡಿಸಿಕೊಂಡು ಹೋಗಬೇಕೆಂದು ಗುರುಗಳಿಗೆ ಬಿನ್ನವಿಸಲು, ಅದರಂತೆ ಅಪ್ಪಯ್ಯದೇವರು ತಮ್ಮ ಭಸ್ಮದಘಟ್ಟಿಗೆ ಒಂದಿಷ್ಟು ಗುರ್ತುಮಾಡಿದ್ದರು. ಸಂಗಡ ಇದ್ದ ಬಸವಲಿಂಗ ದೇಶಿಕರು ಕೂಡಿ, ಎರಡೂ ಘಟ್ಟಿಗಳನ್ನು ಆಶೀರ್ವದಿಸುವಾಗ, ಅವರು ಗುರ್ತುಮಾಡಿದ್ದು ಬಸವಲಿಂಗ ದೇಶಿಕರಿಗೆ, ಶ್ರೀಗಳ ಹಸ್ತದಿಂದ ಕೊಡಲು ಅಪ್ಪಯ್ಯದೇವರು ಸಂಕಲ್ಪಿಸಿದ ಘಟ್ಟಿ ಬದಲಿ ಬಂದದ್ದು ತಿಳಿದು, ಮನನೊಂದವರಾಗಿ ಸುಮ್ಮನೆ ಒತ್ತಟ್ಟಿಗೆ ಕುಳಿತದ್ದನ್ನು ಹಾವೇರಿ ಗುರುಗಳು ತಿಳಿದು ಬಾ ಇಲ್ಲಿ, ಅವನಿಗಿಂತಲೂ ನಿನಗೆ ಹೆಚ್ಚಾದ ಆಶೀರ್ವಾದ ಕೊಡುವೆನೆಂದು ಮುಂದಕ್ಕೆ ಕರೆದು, ತಮ್ಮ ವರದ ಹಸ್ತವನ್ನು ಮಸ್ತಕದಮೇಲಿಟ್ಟು, ನಿನ್ನ ಇಷ್ಟಾರ್ಥಸಿದ್ಧಿಯಾಗಲೆಂದು ಆಶೀರ್ವದಿಸಿ, ಅವರಿಬ್ಬರನ್ನು ಪಕ್ಕಾ ಮಡಿಯಿಂದಲೇ ಶಿವಯೋಗಮಂದಿರಕ್ಕೆ ಕಳಿಸಿದರು. ಅಲ್ಲಿಗೆ ಹೋದ ನಂತರ, ಹಾನಗಲ್ಲ ಶ್ರೀಸ್ವಾಮಿಗಳು ಎಡೆಯೂರ ಕ್ಷೇತ್ರದಿಂದ ಬಂದ ವರ್ತಮಾನ ತಿಳಿದು, ಅಲ್ಲಿ ಆದ ಸರ್ವ ವರ್ತಮಾನ ತಿಳಿದುಕೊಂಡು, ಆನಂದವುಳ್ಳವರಾಗಿ ಇನ್ನು ನೀವೀರ್ವರೂ ಸೇರಿ ಪರಮ ತಪಸ್ವಿಗಳಾದ ಅಥಣಿ ಶಿವಯೋಗಿಗಳ ದರ್ಶನಕ್ಕೆ ಹೋಗಿಬರಬೇಕೆಂದು ಅಪ್ಪಣೆ ಮಾಡಲು, ಅದರಂತೆ ಅವರೀರ್ವರೂ ಸೇರಿ ವೈರಾಗ್ಯಮೂರ್ತಿಗಳಾದ, ಅಥಣಿ ಶಿವಯೋಗಿಗಳ ದರ್ಶನಕ್ಕೆಂದು ಅಥಣಿಗೆ ಬಂದರು. ಬಿದರಿ ಕುಮಾರ ಯೋಗಿಗಳ ಅಪ್ಪಣೆಯಂತೆ, ಪಾದುಗಾಣಿಕೆಯನ್ನು ಸಂಪೂಜ್ಯ ಸನ್ನಿಧಿಗೆ ಸಲ್ಲಿಸಿದರು. ವದನ ಕಳೆಯೇ ಮುಖದಲ್ಲಿ ಚಿಮ್ಮುತ್ತಿದ್ದ ಮಹಾಶಿವಯೋಗಿಗಳು ಇವರನ್ನು ನೋಡಿ ನಕ್ಕು, ಬಿದರಿ ಕುಮಾರಯೋಗಿಗಳ ಸವಿನೆನಪನ್ನು ತಂದುಕೊಂಡು, ಆತನು "ಜೀವಜ್ಯೋತಿ" ನಮ್ಮನ್ನು ಬಿಟ್ಟುಹೋದ ಎಂದುದಾಗಿ ಅಪ್ಪಣೆ ಕೊಡಿಸಿ, ಅಪ್ಪಯ್ಯ ದೇಶಿಕರು, ಬಸವಲಿಂಗ ದೇಶಿಕರು ಇರ್ವರೂ ಆಶೀರ್ವಾದ ತೆಗೆದು ಕೊಂಡು ಶಿವಯೋಗಮಂದಿರಕ್ಕೆ ಬಂದರು. ಮತ್ತೆ ಇಲಕಲ್ಲಿಗೆ ಸಮೀಪವಿರುವ ಕೊಡಗಲಿ ಗವಿಯಲ್ಲಿ ಅನುಷ್ಠಾನ ಮಾಡಲು ಅಪ್ಪಯ್ಯ ದೇಶಿಕರು ದಯಮಾಡಿಸಿದರು. ಅನುಷ್ಠಾನವು ಒಳ್ಳೆಯ ವೈಭವದಿಂದ ನಡೆಯುತ್ತಿರಲಿಕ್ಕೆ, ಒಂದು ದಿನ ಅತಿಸಾರ ಪ್ರಾರಂಭವಾಗಿ ಶಿವಪೂಜೆಗೆ ಬಾಧೆಗಳು ಬರಹತ್ತಿದವು.

"ಶ್ರೇಯಾಂಸಿ ಬಹು ವಿಘ್ನಾನಿ" ಯಾವದೇ ಒಂದು ಮಹತ್ಕಾರ್ಯವನ್ನು ಮಾಡುವವರಿಗೆ ವಿಘ್ನಗಳು ಬಂದು ಮುತ್ತುವುದು ಸ್ವಾಭಾವಿಕ. ಅಂಥ ಸಮಯದಲ್ಲಿ ಯಾರು ಧೀರೋದಾತ್ತ ಭಾವನೆಯಿಂದ ತಮ್ಮ ಕಾರ್ಯವನ್ನು ನೆರವೇರಿಸುವರೋ

ಅವರೇ ಮಹಾತ್ಮರು. ವಿಘ್ನಗಳನ್ನು ಆ ಭಕ್ತನ ಪರೀಕ್ಷೆಗಾಗಿ ದೇವನು ತಂದೊಡ್ಡುವನು. "ಭಕ್ತನಾಗಿ ತನ್ನ ಒಲಿದನೆಂದು ಹೋದರ ಕುಗ್ಗು ಮಾಡುವ, ಕುಸಿಯ ಮಾಡುವ, ಮಣ್ಣು ಮಾಡುವ, ಮಸಿಯ ಮಾಡುವ ಕೂಡಲ ಸಂಗಮದೇವರ ನೆರೆನಂಬಿದನಾದಡೆ ಕಡೆಗೆ ತನ್ನಂತೆ ಮಾಡುವ" "ಹರ ತನ್ನ ಭಕ್ತರ ತಿರಿವಂತೆ ಮಾಡುವ, ಒರೆದು ನೋಡುವ, ಸುವರ್ಣದ ಚಿನ್ನದಂತೆ ಅರೆದು ನೋಡುವ, ಚಂದನದಂತೆ ಅರಿದು ನೋಡುವ, ಕಬ್ಬಿನ ಕೋಲಿನಂತೆ ಬೆದರದೆ, ಬೆಚ್ಚದೆ ಇದ್ದಡೆ ಕರವಿಡಿದೆತ್ತಿಕೊಂಬ ನಮ್ಮ ರಾಮನಾಥ" ಆದುದರಿಂದ ದೇವರು ಬಹಳ ಒಕ್ಕೈಸುವನೆಂದಾಗಲಿ, ಸುಲಭದಲ್ಲಿ ಒಲಿದುಬಿಡುವನೆಂದಾಗಲಿ ಯಾರೂ ಮೋಸಹೋಗಬಾರದು. ನಾನು ನನ್ನ ಭಕ್ತರ ಸರ್ವಸ್ವವನ್ನೂ ಅಪಹಾರ ಮಾಡುವೆನೆಂದು ಭಗವಂತನು ಅರ್ಜುನನಿಗೆ ಹೇಳಿದ ಮಾತು ಸತ್ಯವಾದುದು. ಭಗವಂತನು ತನ್ನ ಭಕ್ತರನ್ನು ಅನೇಕ ರೀತಿಯಿಂದ ಪರೀಕ್ಷಿಸುವನು. ಯಾರು ಧನ-ಕನಕಾದಿಗಳಲ್ಲಿಯೂ, ಹೆಂಡರು-ಮಕ್ಕಳಲ್ಲಿಯೂ ಮೋಹವನ್ನು ಬಿಟ್ಟು, ಪರಮಾತ್ಮನಲ್ಲಿಯೇ ತಲ್ಲೀನರಾಗುವರೋ ಅವಂಗೆ ದೇವರು ಮುಕ್ತಿಯನ್ನು ನೀಡುವನು. ಭಕ್ತನಾದವನು ಕಠಿಣ ಪರೀಕ್ಷೆಗಳಲ್ಲಿ ಸಿಕ್ಕಿ-ಸಿಕ್ಕಿ ಮುಕ್ತನಾಗಬೇಕಾಗುವದರಿಂದ, ಅಡಿಗಡಿಗೂ ಮನಸ್ಸನ್ನು ಪರೀಕ್ಷಿಸಿಕೊಳ್ಳಬೇಕು; ಧ್ಯೇಯಸಾಧನೆಗೆ ಹಿಂಜರಿಯಬಾರದು.

ಶ್ರೀ ಅಪ್ಪಯ್ಯ ದೇಶಿಕರಿಗೆ ಅತಿಸಾರದ ಬಾಧೆ ದಿನ ದಿನಕ್ಕೂ ಅತಿ ಹೆಚ್ಚಾಗಲಿಯತ್ತಿತ್ತು. ಆಗ ಬಲು ನೊಂದುಕೊಂಡು ಕೂಡಲೇ ಅಲ್ಲಿರುವ ಮಹಾಲಿಂಗೇಶ್ವರ ಗದ್ದಿಗೆಗೆ ಏನಾದರೂ ಸಂಕಲ್ಪ ಮಾಡಿಕೊಳ್ಳಲು ಹಾವೇರಿ ಮಹಾಸ್ವಾಮಿಗಳು ಅಪ್ಪಣೆ ಕೊಡಿಸಿದಂತೆ, ಅವರ ಜೊತೆಯಲ್ಲಿರುವ ಬಸವಲಿಂಗ ದೇಶಿಕರು ಅವರ ಅತಿಸಾರದ ಬಾಧೆ ತಪ್ಪಿದರೆ, ೧೧ ಮಂಟಪದ ಪೂಜೆ ಮಾಡಿಸುವೆನೆಂದು ಮನದಲ್ಲಿ ಭಾವಿಸಿದೊಡನೆಯೇ, ಅತಿಯಾಗಿದ್ದ ಅತಿಸಾರವು ಆ ಕ್ಷಣದಲ್ಲಿಯೇ ನಿಂತುಹೋಯಿತು. ಯಥಾಕ್ರಮ ಪೂಜೆ ನಡೆದ ಕೆಲವು ದಿನಗಳ ತರುವಾಯ, ತೀರ್ಥಯಾತ್ರೆ ಮುಗಿಸಿಕೊಂಡು, ಪವಿತ್ರ ವಿಚಾರದ ಪಾತ್ರೆಯಲ್ಲಿ ಅನುಭವದ ಒಳ್ನುಡಿಗಳನ್ನು ತುಂಬಿಕೊಂಡು ಶ್ರೀ ಅಪ್ಪಯ್ಯ ದೇಶಿಕರು ಶಿವಯೋಗಮಂದಿರಕ್ಕೆ ದಯಮಾಡಿಸಿದರು.

ಅಧಿಕಾರ:

ಪರಮಪೂಜ್ಯ ಹಾನಗಲ್ಲ ಮಹಾಸ್ವಾಮಿಗಳು, ಅಪ್ಪಯ್ಯ ದೇಶಿಕರು ಅಧಿಕಾರದ ಸಲುವಾಗಿ ನಿರಂತರವಾಗಿ ಚಿಂತಿಸುತ್ತಿದ್ದರು. ಪ್ರೌಢ ಮನುಷ್ಯರಾದರೂ, ಕೇವಲ ಇಲ್ಲಿಯೇ ಇರುವದರಿಂದ ಸಮಾಜ ಸುಧಾರಣೆಯಾಗಲು ಅಸಾಧ್ಯ. ನಾಡಿನ ಜನತೆಯ ಅಜ್ಞಾನ ಕತ್ತಲೆಯನ್ನು ದೂರಮಾಡಬೇಕಾದರೆ ಯೋಗಿಗಳ ಅವಶ್ಯಕತೆ

ಯುಂಟು ಮತ್ತು ಬಿದರಿ, ಸವದತ್ತಿ ಗುರುಕುಮಾರ ಯೋಗಿಗಳು ಲಿಂಗೈಕ್ಯರಾಗಿ ಬಹುದಿನಗಳಾಗಿ ಹೋದವು. ಆ ಜನತೆಗೆ ಸುಜ್ಞಾನ ಬೀಜಗಳನ್ನು ಬಿತ್ತುವರಾರು? ಇದೀಗ ಅಪ್ಪಯ್ಯ ದೇಶಿಕರ ಭಾರವನ್ನು ಗುರುಗಳು ನನಗೆ ಒಪ್ಪಿಸಿಬಿಟ್ಟಿದ್ದಾರೆ. ಸವದತ್ತಿ, ಬಿದರಿ ಭಕ್ತ ಜನಸ್ತೋಮದ ಉದ್ಧಾರಾರ್ಥವಾಗಿ ಈ ಯೋಗಿಗಳನ್ನು ಕೊಡದೆ ಇದ್ದರೆ ಗುರು ಭಕ್ತಿ-ಭಾವನೆ, ಲಿಂಗಪೂಜೆ, ಇಷ್ಟಲಿಂಗದ ಮಹತ್ತತೆ, ಎಲ್ಲವೂ ನಶಿಸಿ ಹೋಗುವವು. ಜನತೆಯ ಜೀವನವನ್ನು ಪುನೀತ ಮಾಡಬೇಕಾದರೆ ಕರ್ತೃತ್ವಶಕ್ತಿಯುಳ್ಳ ಯತಿಯುಬೇಕು. ನಮ್ಮ ನಾಡಿನ ಮೂಲೆ ಮೂಲೆಗೂ ವೀರಶೈವರ ಕೀರ್ತಿ ಹರಡುವದಲ್ಲದೆ, ಅಲ್ಲಿಯ ಜನರು ವೀರಶೈವ ತತ್ತ್ವದ ದಾರಿಯಲ್ಲಿ ನಡೆಯಬೇಕು; ಪ್ರತಿಯೊಬ್ಬರ ಬಾಳು ಬೆಳಗಬೇಕು, ಪರಿಪೂರ್ಣವಾಗಬೇಕು. ನಮ್ಮ ಸಮಾಜದ ದಾರಿಯನ್ನು ಅನ್ಯ ಸಮಾಜದವರು ನೋಡಿ ಕಲಿತುಕೊಳ್ಳುವಂತಾಗಬೇಕು ಎಂದು ಮೊದಲಾಗಿ ಆಲೋಚಿಸಿ, ಅಪ್ಪಯ್ಯ ದೇಶಿಕರನ್ನು ಬಿದರಿಗೆ ಕಳಿಸಿದರೆ ಆ ಜನತೆಯು ಸುಧಾರಣೆಯಾಗಬಹುದೆಂದು ಚಿಂತಿಸಿ, ಬಿದರಿಗೆ ಅಪ್ಪಯ್ಯ ದೇಶಿಕರನ್ನು ಕಳಿಸಿದರು. ಇವರ ತ್ರಿಕಾಲ ಲಿಂಗಪೂಜೆ, ಆಚಾರ ನಿಷ್ಠತೆ, ಮೃದು ಸ್ವಭಾವ ನೋಡಿ ಭಕ್ತಾದಿಗಳೆಲ್ಲರೂ ಪರಮಹರ್ಷಿತರಾಗಿ, ಪ್ರತಿ ಕುಮಾರೇಶನೇ ಬಂದಿರುವನೆನ್ನುತ್ತಿದ್ದರಲ್ಲದೆ, ಅಧಿಕಾರದ ಸಲುವಾಗಿ ಚಿಂತಿಸುತ್ತಿದ್ದರು. ಅಪ್ಪಯ್ಯ ದೇಶಿಕರು ಗುರುಗದ್ದುಗೆಯ ಕಟ್ಟಡ ಮುಗಿಯದೆ ಇದ್ದದ್ದು ನೋಡಿ, ನಿರಂತರವೂ ಸಂತಾಪ ಪಡುತ್ತಿದ್ದರು. ಒಂದು ದಿನ, ಬಿದರಿಯಲ್ಲಿಯ ಸರ್ವ ಭಕ್ತರನ್ನು ಕರೆದು, ಗದ್ದುಗೆ ಕಟ್ಟುವದರ ಸಲುವಾಗಿ ಪಟ್ಟಿ ಮಾಡಿಸಿ ಕಟ್ಟಿಸುವದನ್ನು ನಿರ್ಧಾರ ಮಾಡಿದರು. ತರುವಾಯ, ಕೆಲವು ದಿನಗಳಲ್ಲಿಯೇ ಅಲ್ಲಿರುವ ಗುರು ಗದ್ದುಗೆಯ ಕಟ್ಟಡವನ್ನು ಮುಗಿಸಿ ಗದ್ದುಗೆಯ ಶೋಭೆಯನ್ನು ಹೆಚ್ಚಿಸಿದರು. ಸವದತ್ತಿ ಭಕ್ತರು ಇವರ ಪ್ರಯತ್ನ ವಿಶೇಷ ನೋಡಿ, ಆನಂದಿತರಾಗಿ, ಶಿವಯೋಗ ಮಂದಿರಕ್ಕೆ ಬಂದು, ಅಪ್ಪಯ್ಯ ದೇಶಿಕರ ನೀತಿ-ರೀತಿ-ಸಮಾಜ ಸೇವಾ ಭಾವನೆ, ಎಲ್ಲವನ್ನೂ ಸವಿಸ್ತಾರವಾಗಿ ಹಾನಗಲ್ಲ ಮಹಾಸ್ವಾಮಿಗಳಿಗೆ ತಿಳಿಸಿದರು. ಹಾನಗಲ್ಲ ಮಹಾಸ್ವಾಮಿಗಳು ಮನದಲ್ಲಿಯೇ, ಶಿವಯೋಗಮಂದಿರದ ಕೀರ್ತಿಯನ್ನು ಅಪ್ಪಯ್ಯ ದೇಶಿಕರು ತಂದರು ಎಂದುಕೊಂಡು- "ಮತ್ತೇನು ವಿಚಾರ ಹೇಳಿರಿ" ಎಂದು ಭಕ್ತರನ್ನುದ್ದೇಶಿಸಿ ಅಪ್ಪಣೆ ಕೊಡಿಸಿದರು. ಒಡನೆಯೇ ಸರ್ವ ಭಕ್ತರು—"ಕುಮಾರ ಶಿವಯೋಗಿಗಳು ಲಿಂಗೈಕ್ಯರಾಗಿ ಬಹಳ ದಿನಗಳಾದವು. ಸವದತ್ತಿಯ ಕಲ್ಮಠವೂ ಬರಿದಾಗಿದೆ, ನಮ್ಮೆಲ್ಲರ ಹೃದಯ ಘಟಗಳೂ ಸದ್ವರ್ತನೆಗಳಿಂದ ಬರಿದಾಗಿವೆ. ಭಾವೀ ಮರ್ಯಾದೆವಾದ ಶ್ರೀ ಅಪ್ಪಯ್ಯ ದೇಶಿಕರಿಗೆ ಶೀಘ್ರವಾಗಿ ಮಠದ ಅಧಿಕಾರ ಕೊಟ್ಟು, ನಮ್ಮನ್ನು ಉದ್ಧರಿಸಬೇಕು ಇದೇ ನಮ್ಮ ಪ್ರಾರ್ಥನೆ". ಕೂಡಲೇ, ಸಂಪೂಜ್ಯ ಹಾನಗಲ್ಲ ಹಾವೇರಿ ಮಹಾಸ್ವಾಮಿಗಳು ಭಕ್ತರ ಅಭೀಷ್ಟದಂತೆ ಅಧಿಕಾರ

ಮಾಡುವದನ್ನು ನಿಶ್ಚಯಿಸಿ, ಸವದತ್ತಿಗೆ ಉಭಯ ಮಹಾಸ್ವಾಮಿಗಳು ದಯ ಮಾಡಿಸಿದರು. ಅಲ್ಲಿಯ ಎಲ್ಲ ಭಕ್ತರನ್ನು ಕರೆಯಿಸಿ– "ಅಪ್ಪಯ್ಯ ದೇಶಿಕರ ಅಧಿಕಾರ ಇದೀಗ ಮಾಡಬೇಕಾಗಿದೆ, ತನು–ಮನ–ಧನದಿಂದ ಸೇವೆ ಸಲ್ಲಿಸುವಿರೋ? ಹೇಗೆ ಎಂದು ಅಪ್ಪಣೆ ಕೊಡಿಸಿದ ಕೂಡಲೇ, ಕೆಲಗೇರಿ ಸಿದ್ದಪ್ಪನವರು (ಫೌಜದಾರರು), ಕಂಕಣಮೇಲಿ ಮುರಿಗೆಪ್ಪ, ಗಾಣಿಗೇರ ಸೋಮಪ್ಪ, ಪಳಿಮನಿ ಅಜ್ಜ, ರುದ್ರಪ್ಪ, ಕಲಾದಗಿ ಗುಪ್ಪಣ್ಣ ಮೊದಲಾದ ಮುಖ್ಯಸ್ಥರೆಲ್ಲರೂ ಒಪ್ಪಿಕೊಂಡು ದೀರ್ಘದಂಡ ನಮಸ್ಕಾರ ಮಾಡಿದರು; ಅಪ್ಪಣೆಯಂತೆ ಅಧಿಕಾರಕ್ಕಾಗಿ ಧನವನ್ನು ಕೊಡಿಸಿದರು. ಫೌಜದಾರರು, ಮೊದಲಾದವರು ತಮ್ಮ ಸರಕಾರೀ ನೌಕರಿ ಇದ್ದರೂ ಅವೆಲ್ಲವುಗಳಿಗೆ ರಜೆ ತೆಗೆದುಕೊಂಡು, ತಮ್ಮ ಕೆಲಸವನ್ನು ಬದಿಗೊತ್ತಿ ಕಾರ್ಯ ಮಾಡಲು ಸನ್ನದ್ಧರಾದರು; ಬಿಡದಿಯ ಭಕ್ತರೆಲ್ಲರೂ ಕಾರ್ಯಕ್ಕೆ ಬಂದರು. ಹಾನಗಲ್ಲ ಮಹಾಸ್ವಾಮಿಗಳು ಅಧಿಕಾರಕ್ಕಿಂತ ಪೂರ್ವದಲ್ಲಿ, ೧೧ ದಿನಗಳ ವರೆಗೆ ಯೋಗ್ಯ ಶಿವಾನುಭವಿಕರನ್ನು ಕರೆಯಿಸಿ ಅವರಿಂದ ಶಿವಾನುಭವವನ್ನು, ಕೀರ್ತನಕಾರರಿಂದ ಕೀರ್ತನಗಳನ್ನು, ಪಂ. ಪಂಚಾಕ್ಷರಿ ಗವಾಯಿಗಳ ಮತ್ತು ಅವರ ಶಿಷ್ಯರ ಗಾಯನವನ್ನೂ, ವ್ಯಾಖ್ಯಾತೃಗಳ ವ್ಯಾಖ್ಯಾನವನ್ನೂ ಒಳ್ಳೇ ವೈಭವದೊಡನೆ ಸಾಗಿಸಿದರು. ಸುತ್ತುಕಡೆಯ ಪಟ್ಟ ಚರಮೂರ್ತಿಗಳನ್ನು, ಬೇರೆ ಬೇರೆ ಭಾಗಗಳಲ್ಲಿರುವ ವಿರಕ್ತ ಸ್ವಾಮಿಗಳನ್ನು ಕರೆಯಿಸಿ, ಅಧಿಕಾರಕ್ಕೆ ತಕ್ಕ ಶೋಭೆಯನ್ನುಂಟು ಮಾಡಿಸಿದರು. ಸವದತ್ತಿ ಕಲ್ಮಠವು ಎತ್ತ ನೋಡಿದರೂ ಮಹಾಸ್ವಾಮಿಗಳು, ಪಟ್ಟ ಚರಮೂರ್ತಿಗಳು, ವ್ಯಾಖ್ಯಾತೃಗಳು, ಮಹಾ ಮೇಧಾವಿಗಳು ಮೊದಲಾದವರಿಂದ ಆಕರ್ಷಣೀಯವಾಗಿತ್ತು. ಪೂಜ್ಯ ಹಾನಗಲ್ಲ ಮಹಾಸ್ವಾಮಿಗಳು ಅಪ್ಪಯ್ಯದೇಶಿಕರ ಅಧಿಕಾರವಾಗುವದಕ್ಕಿಂತ ಒಂದು ದಿನ ಮುಂಚಿತ ತಮ್ಮ ಹತ್ತಿರ ಕರೆದು– "ಅಪ್ಪಯ್ಯ ದೇಶಿಕರೇ! ಇಷ್ಟುದಿನಗಳ ವರೆಗೆ ಆಧ್ಯಾತ್ಮ ಸಾಧನೆಗೆ ಕುಂದುತಾರದ ಜೀವನವನ್ನು ಸಾಗಿಸಿದಿರಿ. ಹಿಂದೆ ಹೋದ ದಿನದಂತೆ ಮುಂದೆ ಎಂದು ತಿಳಿಯಬಾರದು. ಹಿಂದೆ ಧ್ಯೇಯಸಾಧನೆ ಸುಗಮವಾಗಿ ನಡೆಯಿತು. ಇನ್ನು ಮುಂದೆ ಸ್ವಾತಂತ್ರ್ಯದಲ್ಲಿ ಕಾಲಿಡುವಿರಿ. ಸ್ವಾತಂತ್ರ್ಯದ ಹೊಣೆ ಎಲ್ಲಕ್ಕಿಂತ ಹೆಚ್ಚಿನದು, ಇದಕ್ಕೆ ತುಂಬಾ ಕಣ್ಣುಗಳು ಬೇಕು, ವಿಚಾರ ಶಕ್ತಿ ಬೆಳೆಯಬೇಕು. ಇನ್ನು ಎತ್ತ ಕಾಲಿಟ್ಟರೂ ಮುಳ್ಳುಗಳು ಚುಚ್ಚುವವು: ಅವುಗಳ ಸಂಪರ್ಕ ಮಾಡಿಕೊಳ್ಳದಂತೆ ಧ್ಯೇಯಸಾಧನೆ ಮಾಡಿ ಸಿದ್ಧಿಗೇರಿದರೆ ಶಿವಯೋಗಮಂದಿರಕ್ಕೆ ಕೀರ್ತಿ ತಂದಂತೆ. ಈ ಸ್ವಾತಂತ್ರ್ಯದಲ್ಲಿಯೇ ಆತ್ಮ ಸ್ವಾತಂತ್ರ್ಯವನ್ನು ಚೆನ್ನಾಗಿ ಗಳಿಸಬೇಕು, ಬೆಳೆಗಿಸಬೇಕು. ಸುಜ್ಞಾನವೆಂಬುದು ಸಕಲ ಪದಾರ್ಥ ಸ್ವರೂಪವನ್ನು ಅರುಹಿಸತಕ್ಕದಾಗಿಯೂ, ಶಿವಾಗಮಗಳಲ್ಲಿ ಶ್ರೇಷ್ಠವಾದುದೆಂದು ಹೇಳಲ್ಪಟ್ಟುದಾಗಿಯೂ, ಇರುವದಲ್ಲದೆ ಅದೇ ಮುಕ್ತಿಪ್ರದವಾಗಿರುವದದು. ಅಂತಹ ಜ್ಞಾನವನ್ನು ಬಗೆ

ಪಡೆದುಕೊಂಡಿರುವ ಶರಣರೇ ಶರಣರು. ದೇಹವು ಚರ್ಮ ರಕ್ತ ಮಾಂಸ ಮೊದಲಾದವುಗಳ ಸ್ವರೂಪವಾಗಿರುವದು. ಅಂತಹ ದೇಹಕ್ಕೆ ಹಸಿವು, ನೀರಡಿಕೆ, ಮೊದಲಾದ ಗುಣಗಳು ಇದ್ದೇ ಇರುವದು ಸಹಜವೆಂದು ತಿಳಿದ ಮಹನೀಯರು ಆ ದೇಹ ಗುಣವನ್ನು ವಿಚಾರ ಮಾಡುವದಿಲ್ಲ. ಶರಣನ ಮಹತ್ವವನ್ನು ನಿರ್ಧರಿಸು ವದಕ್ಕೆ ದೇಹಧರ್ಮವು ಪ್ರಮಾಣವಲ್ಲ. ಮತ್ತೇನೆಂದರೆ ಅವನಲ್ಲಿ ಪ್ರಕಾಶಿಸುವ ಶಿವಜ್ಞಾನವೇ ಪ್ರಮಾಣವು. ಹೊರಗಣ ಸ್ಥೂಲಶರೀರದಲ್ಲಿ ಇಷ್ಟಲಿಂಗ ಸಂಬಂಧ ವನ್ನು ಮಾಡುವದೇ ಕ್ರಿಯಾ ದೀಕ್ಷೆಯು. ಸೂಕ್ಷ್ಮ ಶರೀರದಲ್ಲಿ ಪ್ರಾಣಲಿಂಗ ಸಂಬಂಧವನ್ನುಂಟು ಮಾಡುವದೇ ಮಂತ್ರ ದೀಕ್ಷೆಯು. ಆ ಇಷ್ಟಲಿಂಗಗಳೆರಡಕ್ಕೂ ಅಧಿಷ್ಠಾನವಾದ ಭಾವಲಿಂಗವನ್ನೂ ಕಾರಣಶರೀರದಲ್ಲಿ ಸಂಬಧಿಸುವದೇ ವೇಧಾ ದೀಕ್ಷೆಯು. ಹೀಗೆ ಶ್ರೀಗುರುವು ಮಾಡಿದ ತ್ರಿವಿಧ ದೀಕ್ಷೆಯ ರಹಸ್ಯವನ್ನು ವಿವೇಕದಿಂದ ತಿಳಿದುಕೊಂಡವನು ಮುಕ್ತನಾಗುವನು. ಶಿವಶರಣನು ಗುರುವಿನ ಅನುಗ್ರಹ ಆದಕೂಡಲೇ ಲಿಂಗಾಂಗ ಸಾಮರಸ್ಯವುಳ್ಳವನಾಗಿದ್ದರೂ ಯಾವಾಗಲೂ ಸದಾಚಾರ ನಿರತನಾಗಿ ಅದ್ವೈತ ಭಕ್ತಿಯಿಂದ ಲಿಂಗಾರ್ಚನೆಯನ್ನು ಮಾಡಿಕೊಂಡಿ ರುವ ಅವನ ಭಾವವು ಹೇಗಿರುವದೆಂದರೆ:- ಅಪರಿಮಿತವಾದ ವಾಯುವು ಆಕಾಶ ದಲ್ಲಿ ಬೆರೆದಿದ್ದರೂ ಶಬ್ದಗುಣವನ್ನು ಹುಟ್ಟಿಸುವ ಕತದಿಂದ ಆಕಾಶಕ್ಕೆ ಅದು ಹೇಗೆ ಭಿನ್ನವೆನ್ನಿಸಿಕೊಳ್ಳುವದೂ, ಹಾಗೆ ಅವನ ಭಿನ್ನಭಿನ್ನ ಭಾವವಿರುವದು ಮತ್ತು ನೀವುಗಳು ಸ್ವೋದ್ಧಾರದಲ್ಲಿ ಕುಳಿತುಕೊಳ್ಳಬಾರದು, ಸಮಾಜೋದ್ಧಾರವನ್ನು ಮಾಡಬೇಕು. ಇದೀಗ ವೀರಶೈವ ಮಾರ್ಗವನ್ನು ಹಿಡಿಯದ ಹುಚ್ಚರು ಕಣ್ಣು ಮುಂದೆ ಉಣಬಡಿಸಿದ್ದ ಭಕ್ಷ್ಯಭೋಜ್ಯಾದಿ ಪದಾರ್ಥಗಳನ್ನು ತಿರಸ್ಕರಿಸಿ ಭಿಕ್ಷಾನ್ನವ ನೆತ್ತುವದಕ್ಕೆ ಹೋಗುವವನಹಾಗೆ, ತಮ್ಮೊಡನೆಯೇ ಹತ್ತಿಬರುತ್ತಿರುವ ಮುಕ್ತಿ ಸೌಖ್ಯವನ್ನು ಪರಿತ್ಯಜಿಸಿ, ದೂರಸ್ಥಿತವಾದ ಕಷ್ಟಸಾಧ್ಯವಾದ ಮುಕ್ತಿಯನ್ನು ಹಡೆಯುತ್ತೇವೆಂದು ಪಾಟು ಪಡುತ್ತಿರುವರು ಮತ್ತು ಅವರ ರೀತಿಯು ಶೀತವೇರಿದ ಕಪಿಗಳ ಗುಂಪು ಜಿಂಕಿಯಲ್ಲಿ ಶಕೆಯನ್ನುಂಟುಮಾಡಿಕೊಳ್ಳಬೇಕೆಂಬ ಆತುರದಂತೆ. ಮಿಂಚುಹುಳವನ್ನು ಅಗ್ನಿಯನ್ನಾಗಿ ಕಲ್ಪಿಸಿಕೊಳ್ಳುವ ರೀತಿಯು ಹೇಗೋ ಹಾಗಿರು ವದು. ಇಂತಹರೆಲ್ಲರನ್ನು ಸನ್ಮಾರ್ಗಕ್ಕೆ ಅಂದರೆ, ವೀರಶೈವ ಮಾರ್ಗದ ಕಡೆಗೆ ತಿರುಗಿಸುವದೇ ನಿಮ್ಮ ಗುರಿಯೆಂದು ತಿಳಿಯಿರಿ. ಶತಕತ್ರಯ, ಸಿದ್ಧಾಂತ ಶಿಖಾಮಣಿ, ಶರಣರ ವಚನ ಮುಂತಾದ ವೀರಶೈವ ಸಿದ್ಧಾಂತ ಗ್ರಂಥಗಳನ್ನು ಓದಿ ಅದರಂತೆ ನಡೆದು ಭಕ್ತರಿಗೆ ಅವುಗಳ ಸಾರವನ್ನು ತಿಳಿಸಿ ಸನ್ಮಾರ್ಗದಲ್ಲಿ ನಡಿಸಿದರೆ ಅವರ ಉದ್ಧಾರ ಮಾಡಿದಂತಾಗುವದು. ಈ ವಿಚಾರಗಳನ್ನು ತುಂಬಾ ತಿಳಿದುಕೊಂಡು ಎಂದಿಗೂ ಮರೆಯಬಾರದು. ಅಧಿಕಾರವಾಗಿನ, ಸ್ವಾಮಿಯಾಗಿರುವೆ ಎಂದು ಅಡ್ಡಹಾದಿ ಹಿಡಿದರೆ, ಸ್ವಾಮಿತ್ವಕ್ಕೆ ದೋಷ ತಂದಂತೆ; ಶಿವನವೇಷ ಧರಿಸಿದ

ಮೇಲೆ ಶಿವನ ಗುಣಗಳು ಅಳವಡಬೇಕು. ಇವೆಲ್ಲ ಗುಣಗಳು ಪ್ರಫುಲ್ಲಿತವಾಗಲು "ಅನುಷ್ಠಾನವೇ ಮುಖ್ಯ ಸಾಧನ" ಎಂದು ಮುಂತಾಗಿ ಅನೇಕ ರೀತಿಯಿಂದ ಬೋಧೆ ಮಾಡಿದರು. ತರುವಾಯ ಮರುದಿನವೇ ಮೊದಲು ನಿಶ್ಚಯಿಸಿದ ಪ್ರಕಾರ ೧೯೩೨ ನೇ ಇಸವಿ ಮಾಘ ಶುಕ್ಲ ಪಂಚಮಿ ಗುರುವಾರ ಶುಭಮುಹೂರ್ತದಲ್ಲಿ ಹಾವೇರಿ ಶಿವಬಸವ ಮಹಾಸ್ವಾಮಿಗಳಿಂದ ಷಟ್‌ಸ್ಥಲ ಬ್ರಹ್ಮೋಪದೇಶ, ನಿರಾಭಾರಿ ಚರಪಟ್ಟಾಧಿಕಾರವನ್ನು ಕೊಡಿಸಿ, ಗದ್ದುಗೆಯನ್ನು ಕೊಟ್ಟು, ಅಂಗಲಿಂಗ ಸಾಮರಸ್ಯವನ್ನು ಲಿಂಗಾಂಗ ಸಕೀಲಗಳನ್ನು ಬೋಧಿಸಿದ ನಂತರ ಗುರುಗಳಿಗೆ ನಮಸ್ಕರಿಸಿ ಶಾಸ್ತ್ರೋಕ್ತ ವಿಧಾನಗಳನ್ನು ಮುಗಿಸಿದರು. ಅಪ್ಪಯ್ಯ ದೇಶಿಕರು ಅಪ್ಪಯ್ಯ ಸ್ವಾಮಿಗಳಾದರು. (ಮಠದ ಪದ್ಧತಿಗನುಸರಿಸಿ, ಶ್ರೀ ಶಿವಲಿಂಗ ಸ್ವಾಮಿಗಳೆಂದು ನಾಮಕರಣವಾಯಿತು.)

ಅಪ್ಪಯ್ಯ ಸ್ವಾಮಿಗಳಿಗೆ ಅಧಿಕಾರವಾದ ಕೂಡಲೇ ಹಿಂದೆ ಕೊಡಗಲಿ ಗವಿಯಲ್ಲಿ ಶ್ರೀ ಬಸವಲಿಂಗ ದೇಶಿಕರು (ಲಿಂ. ನವಿಲಗುಂದ ಸ್ವಾಮಿಗಳು) ಅವರ ರೋಗ ನಿವಾರಣೆಗಾಗಿ ಸಂಕಲ್ಪಿಸಿಕೊಂಡದ್ದನ್ನು ಹಾನಗಲ್ಲ ಮಹಾಸ್ವಾಮಿಗಳಿಗೆ ತಿಳಿಸಿದರು. ಅದರಂತೆ ೧೧ ಮಂಟಪದ ಪೂಜೆಯನ್ನು ಒಳ್ಳೇ ವೈಭವದೊಡನೆ ಮಾಡಿಸಿದ ನಂತರ ಮಹಾಗಣಾರಾಧನೆ; ಸಿಂಹಾಸನಾರೋಹಣ ಮುಂತಾದ ಕಾರ್ಯಗಳು ಜರುಗಿದವು. ಸಾಯಂಕಾಲ ಅಂದೋಲಿಕೋತ್ಸವವು ಸಕಲ ಬಿರುದಾವಳಿಯೊಡನೆ ಸಮಸ್ತ ಜನಸಮೇತರಾಗಿ ಅನೇಕ ವಾದ್ಯ ವೈಭವಗಳಿಂದ ನಗರವನ್ನೆಲ್ಲ ತಿರುಗಿ ಜಯ ಜಯಕಾರಗಳಿಂದ ಉತ್ಸವವು ಕಲ್ಮಠವನ್ನು ಸೇರಿತು. ಮರುದಿನ ಬೇರೆ ಬೇರೆ ಭಾಗದಿಂದ ಬಂದ ಭಕ್ತ ವೃಂದವು ಗುರುವಿಗೆ ಭಕ್ತಿಕಾಣಿಕೆಯನ್ನು ಸಲ್ಲಿಸಿ ಸ್ವಗ್ರಾಮಕ್ಕೆ ತೆರಳಿತು. ಹಾನಗಲ್ಲ ಹಾವೇರಿ ಶ್ರೀಗಳು ಕಲ್ಮಠದಲ್ಲಿ ಕೆಲದಿನವಿದ್ದು ಶಿವಾನುಭವದ ತತ್ವವನ್ನು ಅಪ್ಪಯ್ಯ ಸ್ವಾಮಿಗಳಿಗೆ ಚೆನ್ನಾಗಿ ತಿಳಿಸಿ, ತಮ್ಮ ಶಿಷ್ಯರೊಡನೆ ಶಿವಯೋಗಮಂದಿರಕ್ಕೆ ದಯಮಾಡಿಸಿದರು.

ಸತ್ಯಶಿವಯೋಗಿ

ಅರ್ಧವಿಕಸಿತವಾದ ಹೂವು ಪೂರ್ಣ ಅರಳಿ ತನ್ನ ಸೌರಭವನ್ನು ತನ್ನ ತೋಟದಲ್ಲಿರುವವರಿಗೆ ನೀಡದೆ ಇರುವದೇ?

ಇದೀಗ ನಾವುಗಳು ಮಹಾತ್ಮರಾಗುವವರ ಜೀವನವನ್ನು ಪರೀಕ್ಷಿಸಿ, ಸಮೀಕ್ಷಿಸಿ, ನಿರೀಕ್ಷಿಸಬೇಕಾದರೆ ಅವರ ಬಾಲ್ಯ ಯೌವ್ವನದ ಕಡೆಗೆ ದೃಷ್ಟಿಯನ್ನು ಹಾಕಬೇಕು. ಹಣ್ಣು ಆಗುವದಕ್ಕಿಂತ ಮುಂಚಿತ ಮಿಡಿಗಾಯಿ ಪುಷ್ಟವಾಗಿದ್ದರೆ ಆ ಕಾಯಿ ದೊಡ್ಡದಾಗಿ ಹಣ್ಣಾಗಿ ರಸಾಸ್ವಾದನೆಯನ್ನು ಇನ್ನಿತರರಿಗೆ ನೀಡುತ್ತದೆ. ಅಂತೆಯೇ ಮಹಾತ್ಮರಾಗುವವರು ತಮ್ಮ ಬಾಲ್ಯದಲ್ಲಿಯೇ ಮುಂದಿನ ಸ್ಥಿತಿಗತಿ

ಗಳನ್ನು ತೋರಿಸಿ ಬೆರಗುಗೊಳಿಸುತ್ತಾರೆ. ಸೂರ್ಯನು ಉದಯವಾಗುವದಕ್ಕಿಂತ ಮೊದಲು ಸ್ವಲ್ಪ ಬೆಳಕನ್ನು ಹರಡಿದನಂತರವೇ ಪೂರ್ಣ ಉದಯನಾಗುತ್ತಾನೆ. ಜನ ಜೀವನಕ್ಕೆ ಚೇತನವನ್ನು ನೀಡುತ್ತಾನೆ.

ಅಪ್ಪಯ್ಯ ಸ್ವಾಮಿಗಳು ಜನಿಸಿದರು. ಬೆಳೆದರು, ವಿದ್ಯೆಯನ್ನು ಗಳಿಸಿದರು. ಯೋಗದಲ್ಲಿ ಮುಂದರಿದರು. ಸಾಧಕರಾದರು. ಸಾಧನೆಯ ಸಿದ್ಧಿಯನ್ನು ಪಡೆದರು. ಶಿವಯೋಗಿಗಳಾದರು. ಸವದತ್ತಿ ಮಠಕ್ಕೆ ಅಧಿಕಾರಿಗಳಾದರು, ಪೂಜ್ಯ ಸ್ವಾಮಿಗಳಾದರು, ಇವೆಲ್ಲವುಗಳನ್ನು ಅರಿತುಕೊಳ್ಳಬೇಕಾದರೆ ಹಿಂದಿನ ಅವರ ಜೀವನ ಚಿತ್ರವನ್ನು ಚಿತ್ತದ ಭಿತ್ತಿಯಲ್ಲಿ ಚಿತ್ರಿಸಿಕೊಳ್ಳಬೇಕು.

ಅವರ ಜೀವನವೇ ಅಂತಹದು. ಸತತವೂ ಸಾತ್ವಿಕ ಭಾವನೆಯಲ್ಲಿ ತುಂಬಿದ ಸತ್ಯಮೂರ್ತಿ, ಆತ್ಮ ಸಾಧನೆಯ ಬಲದಿಂದ ಬ್ರಹ್ಮವನ ವಿಹಾರಿಗಳಾಗಿ ರಾರಾಜಿಸುವ ತೇಜೋಮೂರ್ತಿ. ಭಕ್ತರ ಹೃತ್ಕಮಲದಲ್ಲಿ ವಾಸಿಸುವ ಹೃನ್ಮೂರ್ತಿ. ಅಂತಶ್ಶಕ್ತಿಯ ಪ್ರಭೆಯನ್ನೂ ಬೀರುವ ಚಿನ್ಮೂರ್ತಿ.

ಶ್ರೀಗುರುವು ಉಪದೇಶ ಮಾಡಿದಂತೆ ಅಪ್ಪಯ್ಯ ಸ್ವಾಮಿಗಳು ಜನತೆಯಲ್ಲಿರುವ ಅಜ್ಞಾನವನ್ನು ಕಳೆಯಲಾರಂಭಿಸಿದರು. ಎನಿತೋ ಜನರು, ಲಿಂಗವನ್ನೇಕೆ ಧರಿಸಬೇಕು? ಲಿಂಗವನ್ನೇಕೆ ಪೂಜಿಸಬೇಕು? ಲಿಂಗದ ಕಳೆ ತಿಳಿಯುವದೆಂದು? ಜಂಗಮಾರಾಧನೆ ಏಕೆ ಮಾಡಬೇಕು? ಭಸ್ಮವನ್ನೇಕೆ ಧರಿಸಬೇಕು? ಇತ್ಯಾದಿ ಅಲ್ಲದ ಸಲ್ಲದ ವಿಚಾರಗಳನ್ನು ಅಪ್ಪಯ್ಯಸ್ವಾಮಿಗಳನ್ನು ಕೇಳಲುಹತ್ತಿದರು. ಅದಕ್ಕೆ ಅಪ್ಪಯ್ಯಸ್ವಾಮಿಗಳು ಸಮ್ಮನಿರದೆ, ಪ್ರಶ್ನೆ ಕೇಳಿದವರನ್ನು ಕುರಿತು ಅನುಭವಯುಕ್ತ ವಾಣಿಯಿಂದ ಇಂತು ಅಪ್ಪಣೆ ಕೊಡಿಸುತ್ತಿದ್ದರು. ವೀರಶೈವರಾದ ಪ್ರತಿಯೊಬ್ಬರಿಗೂ ಲಿಂಗಧಾರಣದ ಅವಶ್ಯಕತೆಯುಂಟು. ಶರೀರದಲ್ಲಿ ಸದಾ ಇಷ್ಟಲಿಂಗ ಧರಿಸಿಕೊಳ್ಳುವದು ಪುಣ್ಯಕರವೂ ಸರ್ವಪಾಪ ನಾಶಕವೂ ಆಗಿರುವದು. ಆದುದರಿಂದಲೇ ನಿಗಮಾರ್ಥಜ್ಞರಾದ ಸಮಸ್ತ ಮುನಿಗಳು ಈ ಶಿವಲಿಂಗವನ್ನು ಧರಿಸಿಕೊಂಡಿರುವರು. ಮೋಕ್ಷಾಪೇಕ್ಷಿಗಳಾದ ಮಹರ್ಷಿಗಳು ಸರ್ವಾರ್ಥಸಾಧಕವಾದ ಲಿಂಗಧಾರಣವು ಬಾಹ್ಯ ಮತ್ತು ಅಂತರ ಭೇದದಿಂದ ಎರಡು ಪ್ರಕಾರವಾಗಿದೆ ಎಂದು ಹೇಳುತ್ತಿರುವರು. ಈ ಶಿವಲಿಂಗವು ಸಚ್ಚಿದಾನಂದ ರೂಪವೂ, ಸಮಸ್ತ ಪ್ರಪಂಚ ಕಾರಣೀಭೂತವೂ ಆಗಿರುವದು. ಹೃತ್ಕಮಲದಲ್ಲಿ ಆ ಮಹಾಲಿಂಗವನ್ನೂ ಧ್ಯಾನರೂಪವಾಗಿ ಧರಿಸುವದೇ ಅಂತರಲಿಂಗಧಾರಣವೆನಿಸುವದು. ಇದು ಎಲ್ಲಕ್ಕಿಂತಲೂ ಹೆಚ್ಚಿನದು. ಲಿಂಗದ ಲಕ್ಷಣಗಳನ್ನು ಪಾರಮೇಶ್ವರಾಗಮದಲ್ಲಿ "ಚರಂ ಸ್ಥಿರಂ ಸ್ಥಿರಂ ಚರಂ ಚರಸ್ಥಿರ ಮಥಾಂಬಿಕೆ। ಸ್ಥಿರಂ ಸ್ಥಿರಂ ಚರಂ ಚರಂ ಷಡ್ವಿಧಂ ಲಿಂಗ ಲಕ್ಷಣಂ। ಕ್ರಮೇಣ ಲಕ್ಷಣಂ॥ ತೇಷಾಂ ವಕ್ಷ್ಯಾಮಿ ಶೃಣುಪಾರ್ವತಿ। ಯದ್‌ಜ್ಞಾತ್ವಾಮುಚ್ಯತೇಸದ್ಯಃ

ಶಿವಯೋಗಿಶಿವ್ರೋ|| ದೇವಾಲಯೇ ಪಾಣಿಪೀಠೆಸನ್ನಿಧಾಯಾಷ್ಟ ಬಂಧನಂ| ಪ್ರತಿಷ್ಠಿತಂ ಶಿಲಾಲಿಂಗಂ ಸ್ಥಿರಲಿಂಗಂ ತದುಚ್ಯತೇ|| ಪೂಜಾ ದರ್ಶನ ಸಂಸೇವಾ ಧ್ಯಾನಾರ್ಚನಾದಿಕ ಸಾಧನಂ| ಸ್ಥಿರಂ ತತ್ಸರ್ವಭೂತಾನಾಮುತ್ತಮಂ ಲಿಂಗಮಿಷ್ಟರೀ| ಎಂಬುದಾಗಿ ಪರಮೇಶ್ವರನೇ ಪಾರ್ವತಿಗೆ ಹೇಳಿದ್ದಾನೆಂದಮೇಲೆ ಇದರ ಮಹತ್ವವನ್ನು ತಿಳಿದು ಲಿಂಗವನ್ನು ಪೂಜಿಸಬೇಕು. ಲಿಂಗ ಎಂದರೆ ಪರಮಾತ್ಮ ಸಚ್ಚಿದಾನಂದ ಸ್ವರೂಪ, "ಶಿವ್ರೋಸ್ತಿ ಸಚ್ಚಿದಾನಂದಃ ಪರಿಪೂರ್ಣೋ ನಿರಂಜನಃ| ಅಕರಣ ಮಕಾರ್ಯಂಚ ಮನೋವಾಚಾ ಮಗೋಚರಂ|| ಪರಂ ಗೂಢಂ ಶರೀರಸ್ಥಂ ಲಿಂಗ ಕ್ಷೇತ್ರ ಮನಾದಿವತ್| ಯಥಾದಿ ಪ್ಯೆಶ್ವರಂ ತೇಜಸ್ತ್ಥಲಿಂಗಂ ಪಂಚ ಸಂಜ್ಞಿತಂ| ಎಂಬುದಾಗಿ ವಾತುಲಾಗಮದಲ್ಲಿಯೂ ಹೇಳಿದ್ದಾರೆ. ಇಷ್ಟಲಿಂಗವನ್ನೂ ಪೂಜಾ ಕಾಲದಲ್ಲಿ ಎಡಗೈಯ್ಯಲ್ಲಿಟ್ಟುಕೊಂಡು ಪೂಜೆ ಮಾಡಬೇಕು. ಇಷ್ಟಲಿಂಗದ ಮೂಲಕ ಪ್ರಾಣಲಿಂಗ ಭಾವಲಿಂಗಗಳ ಜ್ಞಾನವನ್ನುಂಟುಮಾಡಿಕೊಳ್ಳಬೇಕು, "ಮನವಕೊಟ್ಟು ಲಿಂಗವನೊಲಿಸಬೇಕು" ಎಂದಿರುವದರಿಂದ ಲಿಂಗಪೂಜೆಯೆಂಬುದು ಮನಸ್ಸನ್ನು ಸ್ಥಿರಗೊಳಿಸುವದಕ್ಕೂ ಸಹಾಯ ಮಾಡುತ್ತದೆ. ಈ ಲಿಂಗದಿಂದ ಒಳಗೆ ಶೋಧಿಸಬೇಕು, ಭಾವದಿಂದ ಗುಡಿಗೆ ತೋರಣ ಕಟ್ಟಬೇಕು. ಅಂದರೆ ಮಾತ್ರ ಲಿಂಗದ ಚಿತ್ಕಳೆ ದೊರೆಯುವದು. ಈ ವಿಚಾರವಾಗಿ ಬಸವಣ್ಣನವರು ತಿಳಿಗನ್ನಡದಲ್ಲಿ ಸರ್ವರಿಗೂ ತಿಳಿಯುವಂತೆ, ಅಪ್ಪಣೆ ಕೊಡಿಸಿದ್ದಾರೆ. "ಗಂಡನ ಮೇಲೆ ಸ್ನೇಹವಿಲ್ಲದ ಹೆಂಡತಿ ಲಿಂಗದಮೇಲೆ ನಿಷ್ಠೆ ಇಲ್ಲದ ಭಕ್ತ ಇದ್ದರೇನೋ ಶಿವ ಶಿವಾ, ಹೋದರೇನೋ? ಶಿವ ಶಿವಾ. ಕೂಡಲಸಂಗಮದೇವ ಊಡದ ಆವಿಂಗೆ ಉಣ್ಣದ ಕರುವು ಬಿಟ್ಟಂತೆ" "ಅಳವುತ್ತಳವುತ್ತ ಬಳಲುವರಲ್ಲದೆ ಕೊಳಗ ಬಳಲುವದೇ? ನಡೆವುತ್ತ ನಡೆವುತ್ತ ಬಳಲುವರಲ್ಲದೆ ಬಟ್ಟೆ ಬಳಲುವದೇ? ಶ್ರಮವ ಮಾಡುತ್ತ ಮಾಡುತ್ತ ಬಳಲುವರಲ್ಲದೆ? ಕೋಲು ಬಳಲುವದೇ? ನಿಜವನರಿಯದ ಭಕ್ತ ಬಳಲುವನಲ್ಲದೆ ಲಿಂಗಬಳಲುವದೆ? ಕೂಡಲಸಂಗಮದೇವ ಅರಸನರಿಯದ ಬಿಟ್ಟಿಯೋ," ಮೊಗ್ಗೆಯ ಮಾಯಿದೇವರು ಶತಕತ್ರಯದಲ್ಲಿ ಲಿಂಗದ ನೆನವಿನ ವಿಷಯದಲ್ಲಿ" ನೆನವುದರಿಂ ನಿರೀಕ್ಷಿಸುವದತ್ಯಧಿಕಂ ನೆನೆಯಿಂ ನಿರೀಕ್ಷೆಯಿಂ| ದಿನ ದಿವಸಂ ಸಮರ್ಚಿಸುವದತ್ಯಧಿಕಂ ನೆನೆಯಿಂ ನಿರೀಕ್ಷೆಯಿಂ| ದಿನದಿವಸಂ ಸಮರ್ಚ ಪುದರಿಂ ಶಿವಲಿಂಗ ಮಹಾಂಗದಲ್ಲಿ ಸು| ಮ್ಮನೆ ಧರಿಸಿರ್ಪುದತ್ಯಧಿಕಮತ್ಯಧಿಕಂ ನಿರುತಂ ಶಿವಾಧವಾ|| ಪರವಸ್ತುವಾದ ಶಿವಲಿಂಗದ ಸ್ಮರಣೆಗಿಂತಲೂ ದರ್ಶನವು ಅತ್ಯಧಿಕ ವಾದುದು. ಆ ಸ್ಮರಣ ದರ್ಶನಗಳೆರಡಕ್ಕಿಂತಲೂ ಸದಾ ಪೂಜಿಸುವದು ಶ್ರೇಷ್ಠವು. ಆ ಸ್ಮರಣ ದರ್ಶನ ಪೂಜಾದಿಗಳಿಗಿಂತಲೂ ಆ ಮಂಗಳಮಯವಾದ ಶಿವಲಿಂಗವನ್ನು ದೇಹದಲ್ಲಿ ನಿಸ್ಸಂದೇಹವಾಗಿ ಧರಿಸುವದು ಅತಿಶ್ರೇಷ್ಠವು. ಅದು ಹೇಗೆಂದರೆ: ಸ್ಮರಿಸುವಿಕೆಯಲ್ಲಿರುವ ಬಯಕೆಯು ದರ್ಶನ ಮಾತ್ರದಿಂದಡಗಿ ಹೋಗುವದು.

ದರ್ಶನದಲ್ಲಿರುವ ಬಯಕೆ ಮುಟ್ಟುವದರಲ್ಲೂ ಪೂಜಿಸುವದರಲ್ಲೂ ಅಡಗಿಹೋಗು ವದು, ಆ ಸ್ಪರ್ಶನ ಪೂಜನ ಕ್ರಿಯೆಗಳು ಇಷ್ಟಲಿಂಗ ಧಾರಣದಲ್ಲಿ ಅಡಗಿರುವವು. ಅದುಕಾರಣ ಈ ಲಿಂಗಾಂಗ ಸಂಗವು ಆ ಸಕಲ ಪರಿಣಾಮವಾಗಿರುವದರಿಂದ ಇದೇ ಉತ್ಕೃಷ್ಟವಾದ ಐಕ್ಯಮಾರ್ಗವೆಂದು ಅಪ್ಪಣೆ ಕೊಡಿಸಿದ್ದಾರೆ.

ಮತ್ತು ಜಂಗಮನನ್ನು ಎಂದಿಗೂ ತಿರಸ್ಕರಿಸಬಾರದು. ಜಂಗಮನೆಂದರೆ ಜ್ಞಾನಮೂರ್ತಿ ಸ್ವರೂಪನು ಅನುಭವ ಜ್ಞಾನವನ್ನು ತಿಳಿದು ಬ್ರಹ್ಮ ಸಾಕ್ಷಾತ್ಕಾರ ವನ್ನು ಪಡೆದವನು. ವಿರಾಗಮದಲ್ಲಿಯೂ ಜಂಗಮದ ರೀತಿಯು ವಿಷಯವಾಗಿ "ಸತ್ವರೂಪಂ ಜಕಾರಂ ಚ ಚಿತ್ಸ್ವರೂಪಕಂ ಗಕಾರಕಂ। ಆನಂದತ್ವಂ ಮಕಾರಂಚ ನಿತ್ಯಮಾನೇನ ಜಂಗಮಂ॥ ಜಕಾರಂ ಜನನಂ ನಾಸ್ತಿ ಗಕಾರಂ ಗಮನಂ ನಹಿ। ಮಕಾರಂ ಮರಣಂ ನಾಸ್ತಿತಸ್ಯ ಜಂಗಮ ಲಕ್ಷಣಂ"॥ ಎಂಬುದಾಗಿ ಜಂಗಮದ ವಿವರಣವು ವಿಶದೀಕರಿಸಿದೆ. ಈ ಜಂಗಮರು ಕಾಮ ಕ್ರೋಧಗಳನ್ನು ಗೆದ್ದವರೂ, ಮೋಹ ಗ್ರಂಥಿಯನ್ನು ಕತ್ತರಿಸಿದವರೂ, ಮಣ್ಣಿನ ಹೆಂಟೆ ಕಲ್ಲು ಬಂಗಾರಗಳಲ್ಲಿ ಸಮಾನ ಬುದ್ಧಿಯುಳ್ಳವರೂ, ಸಾಧು ಸ್ವಭಾವದವರೂ ಇರುತ್ತಾರೆ ಮತ್ತು ಇವರು ಪರಸ್ತ್ರೀ ಸಂಗದೂರರರೂ, ಪರದ್ರವ್ಯ ಪರಾಙ್ಮುಖರೂ, ಶಿವಪ್ರಯೋಜನ ಕಾರಕ ಕಾರ್ಯಗಳಿಂದ ಕೂಡಿದವರೂ, ಶಿವಾಗಮ ಪರಾಯಣರೂ. ಶಿವಸ್ತೋತ್ರ ಗಳಿಂದ ಉಂಟಾದ ಆನಂದ ಸ್ವೀಕಾರದಿಂದ ಸಂತುಷ್ಟವಾದ ಮನಸ್ಸುಳ್ಳವರೂ. ನಿರ್ಮಲರೂ ಶಿವಸರ್ವೋತ್ತಮ ತತ್ವವನ್ನು ಪ್ರತಿಪಾದಿಸುವ ಪ್ರಮಾಣಗಳನ್ನು ಸಂಗ್ರಹಿಸುವದರಲ್ಲಿ ಆಸಕ್ತರೂ, ಅಹಂಕಾರ ಮಮಕಾರಗಳಿಂದ ದೂರಾದವರೂ. ಲಿಂಗೈಕ್ಯ ನಿಷ್ಠರೂ, ಇರುತ್ತಾರೆಂದು ರೇಣುಕರು ಅಗಸ್ತ್ಯರನ್ನು ಕುರಿತು ಜಂಗಮರ ಮಹತ್ವ ತಿಳಿಸಿದ್ದಾರೆ. ಮಹಾತ್ಮಾ ಬಸವಣ್ಣನವರೂ ಕೂಡ "ಜಂಗಮ ನಿಂದೆಯ ಮಾಡಿ ಲಿಂಗವ ಪೂಜಿಸುವ ಭಕ್ತನ ಅಂಗವಣೆಯುಂತೋ, ಶಿವ ಶಿವಾ. ನಿಂದಿಸಿ ಪೂಜಿಸುವ ಭಕ್ತನ ಪಾತಕವ ಕೇಳಲಾಗದು ಗುರುವಿನ ಗುರು ಜಂಗಮನೆಂದು ಕೂಡಲ ಸಂಗನ ವಚನವೆಂದು" ನಿಂದಿಸುವವರಿಗೆ ಎಂದಾದರೂ ಪಾಪ ತಟ್ಟದೇ ಬಿಡುವದೇ? ಅಂಥವರ ಮುಖವ ನೋಡಲಾಗದೆಂದು ಅತ್ಯಂತ ಕಠೋರವಾಣಿ ಯಿಂದ ಅಪ್ಪಣೆಕೊಡಿಸಿದ್ದಾರೆ ಆದ್ದರಿಂದ ಭಕ್ತರಾದವರು ಭಕ್ತಿಯಿಂದ ಅವರೊಡನೆ ವರ್ತಿಸಬೇಕು.

ವೀರಶೈವರಾದವರು ಭಸ್ಮವನ್ನು ಹಣೆಗೆ ಧರಿಸಲೇಬೇಕು. ಭಸ್ಮವೆಂಬುದು ಸಂಪತ್ತು ಇದ್ದಂತೆ; ಪರಮಾರ್ಥದ ಸಂಪತ್ತನ್ನು ಕೊಟ್ಟು ಐಹಿಕ ತ್ಯಾಗವನ್ನು ಮಾಡಿಸುವದರಿಂದ ಭಕ್ತರಾದವರಿಗೆ ಅತ್ಯಾವಶ್ಯಕ; ಈ ಭಸ್ಮ ಧಾರಣದಿಂದ ಕೂಡಿದ ವೀರಶೈವನು ಪವಿತ್ರನೂ, ನಿಷ್ಕಲ ಚಿತ್ತನೂ ಆಗುವನು. ಇದು ಪರಮೇಶ್ವರನು ಧರಿಸಿದ ಭಸ್ಮವಾದುದರಿಂದ ಅತ್ಯಂತ ಪಾವನವಾದದ್ದು,

ನಿರಂತರವೂ ಸದ್ಭಾವನೆಯಿಂದ ಭಸ್ಮವನ್ನು ಧರಿಸಿದವರಿಗೆ ಪಾಪಗಳು ಮುಟ್ಟಲಾರವು, "ಅನಾದಿ ಶಾಶ್ವತಂ ಶಾಂತಂ ಚೈತನ್ಯಂ ಚಿತ್ಸ್ವರೂಪಕಂ। ಚಿದಂಗ ವೃಷಭಾಕಾರಂ ಚಿಹ್ನಸ್ಯ ಲಿಂಗಧಾರಣಂ। ಆಪಾದ ಮಸ್ತಕಾಂತಂಚ ರೋಮರೋಮ ಭಿಧೇಚ್ಛಿವಂ। ಸ್ವಕಾಯ ಮುಚ್ಯತೇ ಲಿಂಗಂ ವಿಭೂತ್ಯುದ್ಧೂಳನಾದ್ಭವೇತ್॥ ಎಂದು ಇದರ ಬಣ್ಣನೆಯನ್ನು ಬಣ್ಣಿಸಿದ್ದಾರೆ. ನಾಸ್ತಿಕನಾಗಲಿ, ಜಾತಿಭ್ರಷ್ಟನಾಗಲಿ, ದುರಾಚಾರಿಯಾಗಲಿ, ಭಸ್ಮತ್ರಿಪುಂಡ್ರವನ್ನು ಧರಿಸಿದ್ದೇ ಆದರೆ ಅವರೆಲ್ಲರೂ ಸಮಸ್ತ ಪಾಪಗಳಿಂದ ಬಿಡುಗಡೆಯನ್ನು ಹೊಂದುತ್ತಾರೆ. "ಶ್ರೀ ವಿಭೂತಿಯನೊಲಿದು ಧರಿಸಿದರೆ ಭವವು ಪರಿವುದು. ದುರಿತ ಸಂಕುಳವನೊರಸುವದೆಂದು" ಶರಣರು ಹಾಡಿದ್ದಾರೆ. ಮಹಾತ್ಮಾ ಬಸವಣ್ಣನವರೂ "ಮುನ್ನ ಮಾಡಿದ ಪಾಪವೆಂತು ಹೋಹುದೆಂದು ಚಿಂತಿಸಬೇಡ. ಕಪಿ ಸೋರೆಯ ಕಾಯಿತಂದು ವಿಭೂತಿಯು ತಿಂದರೆ ಸಿಹಿಯಾಗದೆ ಮೂರು ದಿವಸಕ್ಕಯ್ಯಾ? ಹಲವುಕಾಲ ಕೊಂದ ಸೊನೆಗಾರನ ಕತ್ತಿಯಾದರೇನು? ಪರುಷ ಮುಟ್ಟಲಿಕ್ಕೆ ಹೊನ್ನಾಗದೇ ಅಯ್ಯ, ಲಲಾಟದಲ್ಲಿ ವಿಭೂತಿಯ ಬರೆಯಲಿಕ್ಕೆ ಪಾಪಪಲ್ಲಟವಾಗದೆ? ಕೂಡಲಸಂಗಮದೇವಾ" ಎಂದು ಮುಂತಾದ ಅನೇಕ ಸೂಕ್ತಿಗಳನ್ನು ಹೇಳಿ ಭಕ್ತರ ಎದೆಯೊಳು ಕುಳಿತಿರುವ ಅಜ್ಞಾನ ಕತ್ತಲೆಯನ್ನು ಹೊಡೆದೋಡಿಸಿ, ಸುಜ್ಞಾನ ದೀವಿಗೆಯನ್ನು ಕೊಟ್ಟು ರಕ್ಷಿಸುತ್ತಿದ್ದರು, ಇದೇ ರೀತಿಯಾಗಿ ಪ್ರತಿದಿನವೂ ಪ್ರಶ್ನೆ ಕೇಳಿದವರಿಗೆಲ್ಲ, ಅಷ್ಟಾವರಣ, ಷಟ್‌ಸ್ಥಲ, ಪಂಚಾಚಾರ. ಮೊದಲಾದವುಗಳ ರಹಸ್ಯವನ್ನು ಪ್ರತಿಯೊಬ್ಬರಿಗೆ ತಿಳಿಯುವಂತೆ, ಅಪ್ಪಣೆಕೊಡಿಸಿ ಜನರನ್ನು ಒಳ್ಳೆಯದಾರಿಗೆ ತರುತ್ತಿದ್ದರು, ಇವರು ಅಧಿಕಾರವಾದಂದಿನಿಂದ ಜನತೆಯಲ್ಲಿ ಚೇತನವಾದಂತೆ ಆಗಿತ್ತು. ನಿಂತಲ್ಲಿ, ಕುಳಿತಲ್ಲಿ, ಪ್ರತಿಯೊಬ್ಬರ ಮುಖದೊಳಗೆ ಶ್ರೀ ಅಪ್ಪಯ್ಯ ಸ್ವಾಮಿಗಳ ಸದ್ಗುಣ ವರ್ಣನೆಯೇ ವರ್ಣನೆ. ಅಪ್ಪಯ್ಯ ಸ್ವಾಮಿಗಳು ಆ ಪ್ರಾಂತದ ಭಕ್ತರಿಗೆಲ್ಲ ಜೀವಜ್ಯೋತಿ ಸ್ವರೂಪರಾಗಿದ್ದರು ಮತ್ತೆ ಪೂಜ್ಯ ಅಪ್ಪಯ್ಯ ಶಿವಯೋಗಿಗಳಿಗೆ ಸತ್ಯಸಂಶೋಧನೆ ಮಾಡಿ ಅದರಲ್ಲಿಯೇ ನಿರತರಾಗಬೇಕೆಂಬುವ ಮಹದಾಕಾಂಕ್ಷೆಯು ಅಂಕುರಿಸಿತು. ಮಠದಲ್ಲಿ ಇದ್ದರೆ ಹೊರಗಿನ ವ್ಯಾಪಾರದಲ್ಲಿ ಮನಸ್ಸು ಹರಿದಾಡುತ್ತದೆ ಅದಕ್ಕೆ ನಿರ್ಬಂಧ ಮಾಡಿದರೇನೆ ಶಾಂತಿ ದೊರೆಯುತ್ತದೆ. ಜೀವವೂ ಶಿವಮಯವಾಗಿರಬೇಕಾದರೆ ನಿರ್ಜನ ಸ್ಥಾನವೇ ಅವಶ್ಯಕವೆಂದು ಅನೇಕ ಬಗೆಯಾಗಿ ಆಲೋಚಿಸಿ ಲಿಂಗೈಕ್ಯ ಬದರಿ ಕುಮಾರ ಯೋಗಿಗಳು ಹಿಂದಕ್ಕೆ ಅನುಷ್ಠಾನಮಾಡಿದ ಮಲಪ್ರಭೆ ಒತಕುಮೊಳೆಯ ತೀರದಲ್ಲಿ ಶಿವಲಿಂಗಾರ್ಚನೆ ಮಾಡಬೇಕೆಂದು ಮನದಲ್ಲಿ ನಿಶ್ಚಯಿಸಿದರು. ಮರುದಿನ ಭಕ್ತರನ್ನು ಕರೆಯಿಸಿ ಸರ್ವ ವಿಚಾರವನ್ನು ತಿಳಿಸಿದರು. ಕೂಡಲೇ ಭಕ್ತರು ದುಃಖಿತರಾಗಿ ನಮಗೆ ಇನ್ನು ಮುಂದೆ ಸದ್ಬೋಧೆ ಮಾಡಿ ಸನ್ಮಾರ್ಗಕ್ಕೆ ಹಚ್ಚುವರಾರು? ತಾವು ದಯಮಾಡಿಸಿದರೆ ಮಠವು

ಬರಿದಾಗುತ್ತದೆ. ದಯಮಾಡಿಸಬಾರದು ಎಂದು ಅನೇಕ ರೀತಿಯಿಂದ ಭಕ್ತರು ಬೇಡಿಕೊಂಡರೂ ಅಪ್ಪಯ್ಯ ಸ್ವಾಮಿಗಳು ನಮಗೆ ಪೂಜ್ಯ ಹಾನಗಲ್ಲ ಮಹಾಸ್ವಾಮಿಗಳಿಂದ ಅಲ್ಲಿ ಪೂಜೆಮಾಡಲು ಅಪ್ಪಣೆಯಾಗಿದೆ. ಅಪ್ಪಣೆ ಮೀರಲು ಬರುವಂತಿಲ್ಲ. ನಾಳೆಯ ದಿನವೇ ಹೊರಡುವೆನು ಎಂದು ಅಪ್ಪಣೆ ಕೊಡಿಸಿದರು. ಸರ್ವಭಕ್ತರು ಸನ್ನಿಧಿಯ ಚಿತ್ತಕ್ಕೆ ಬಂದಂತೆ ಮಾಡುವದಾಗಬೇಕೆಂದು ಹೇಳಿದರು ಧ್ಯಾನಾಸಕ್ತರಾದ ಅಪ್ಪಯ್ಯಸ್ವಾಮಿಗಳು ಕೂಡಲೇ ಒಡಕುಹೊಳೆಗೆ ಅನುಷ್ಠಾನಕ್ಕೆಂದು ದಯಮಾಡಿಸಿದರು. ಒಡಕುಹೊಳೆಯ ತೀರದಲ್ಲಿ ಎತ್ತನೋಡಿದರೂ ಡಬಗಳ್ಳಿ, ಮುಳ್ಳುಕಂಟಿ, ವಿಷಜಂತುಗಳು ವಾಸವಾಗಿದ್ದವು. ಗೊರವನಕೊಳ್ಳ, ವಟ್ನಾಳ, ಸವದತ್ತಿ ಮೊದಲಾದ ಪ್ರೀತಿಯ ಭಕ್ತರು ಅದೆಲ್ಲವನ್ನು ಸ್ವಚ್ಛಮಾಡಿಸಿ ಪೂಜೆಗೆ ಯೋಗ್ಯಸ್ಥಾನ ಮಾಡಿಕೊಟ್ಟರು.

ಒಡಕುಹೊಳೆಯು ಸವದತ್ತಿಯಿಂದ ೪ ಮೈಲಿನ ಮೇಲೆ ಅದೆ. ಆ ಹೊಳೆಯ ಸ್ಥಾನದಲ್ಲಿ ಹರಪ್ರರ ಪಟ್ಟಣವೆಂಬುದು ಪೂರ್ವಕಾಲದಲ್ಲಿದ್ದುದು ಪ್ರತೀತಿ ಅದೆ. ಅಲ್ಲಲ್ಲಿ ಕುರುಹುಗಳೂ ಅವೆ. ಪೂರ್ವಕ್ಕೆ ಹನುಮಂತ ದೇವರ ಮೂರ್ತಿಯು. ಉತ್ತರಕ್ಕೆ ರಾಮೇಶ್ವರ ಪುರಾತನ ಗುಡಿಯೂ, ಪಶ್ಚಿಮಕ್ಕೆ ಯಕ್ಷಿಣೀ ದೇವತೆಯೂ, ದಕ್ಷಿಣಕ್ಕೆ ಬಾಣತೆವ್ವ ದೇವತೆಯೂ, ಈ ಪ್ರಕಾರ ಅಧಿಷ್ಠಾತೃ ದೇವತೆಗಳಿದ್ದು ಈಗಲಾದರೂ ಆ ಸ್ಥಾನದಲ್ಲಿ ಅಪವಿತ್ರ ಕಾರ್ಯಗಳು ಆಗುವದಿಲ್ಲ. ಈ ಸ್ಥಾನದೊಳಗೆ ಅಪ್ಪಯ್ಯ ಮಹಾಸ್ವಾಮಿಗಳು ಆನಂದ ವೈಭವದೊಡನೆ ನದೀ ತೀರದಲ್ಲಿ ಕುಟೀರವೊಂದನ್ನು ಕಟ್ಟಿಕೊಂಡು ಶಿವನರ್ಚನೆ ಮಾಡಲಾರಂಭಿಸಿದರು. ಕೆಲವು ದಿನಗಳು ಕಳೆದ ನಂತರ ಗೊರವನಕೊಳ್ಳದ ಅಪ್ಪಾಸಾಹೇಬರು ಸ್ವಾಮಿಗಳಿದ್ದಲ್ಲಿಗೆ ಬಂದು ದರ್ಶನ ತೆಗೆದುಕೊಂಡ ನಂತರ ಸ್ವಾಮಿಗಳನ್ನು ಕುರಿತು: ಪೂಜ್ಯ ಗುರುವೆ! "ತಮಗೆ ಇಲ್ಲಿದ್ದರೆ ಮಳೆಗಾಲದಲ್ಲಿ ಹೊಳೆ ಹರಿ ಶಿವಪೂಜೆಗೆ ತೊಂದರೆಯಾಗಬಹುದು, ಕಾರಣ ತಮಗೊಂದು ಮಠವನ್ನು ಕಟ್ಟಿಸಬೇಕೆಂದು ಆಲೋಚನೆ ಮಾಡಿರುವೆ, ಅಪ್ಪಣೆಯಾದರೆ ಅದರಂತೆ ಮಾಡಲು ಸದಾಸಿದ್ಧನು" ಎಂದು ವಿನಂತಿ ಮಾಡಿಕೊಂಡನಂತರ ಅಪ್ಪಯ್ಯ ಸ್ವಾಮಿಗಳು ಸಾಧ್ಯವಾದರೆ ಕಟ್ಟಿಸುವದಾಗಬೇಕೆಂದು ಅಪ್ಪಣೆಕೊಟ್ಟರು. ಅಪ್ಪಣೆ ಪ್ರಕಾರ ಅಪ್ಪಾಸಾಹೇಬರು ಮಠವನ್ನು ಕಟ್ಟಿಸಿ ಪೂಜೆಗೆ ಅನುಕೂಲ ಮಾಡಿಕೊಟ್ಟರು. ಅಪ್ಪಯ್ಯ ಮಹಾಸ್ವಾಮಿಗಳ ಪೂಜಾ ಪ್ರಭಾವವು ದಿನೇ ದಿನೇ ಬೆಳೆಯುತ್ತ ಬೆಳಗುತ್ತ ಪ್ರಸಾರವಾಗಲು ಹತ್ತಿತು. ಇವರ ಅನುಷ್ಠಾನ ಮಹಿಮೆಗೆ ಕ್ರೂರ ಪ್ರಾಣಿಗಳೂ ತಮ್ಮ ವೈರಭಾವವನ್ನು ಬಿಟ್ಟು ಇರುತ್ತಿದ್ದವು, ಪ್ರತಿನಿತ್ಯವೂ ಶಿವ ಪೂಜೆಗೆ ಕುಳಿತೊಡನೆಯೇ ಹುಲಿಯು ಬಂದು ಅವರೆದುರಿನಲ್ಲಿ ಬಂದು ಮಲಗುತ್ತಿತ್ತು. ಪೂಜ್ಯ ಸ್ವಾಮಿಗಳು ಹೋಗು ಎಂದಾಕ್ಷಣವೇ ಹೋಗುತ್ತಿತ್ತು. ಇವಲ್ಲ

ವನ್ನು ಜನರು ನೋಡಿ ಆಶ್ಚರ್ಯಯಾಗುತ್ತಿದ್ದರು, ಪೂಜ್ಯ ಗುರುಗಳಾದ ಶಿವಕುಮಾರ ಶಿವಯೋಗಿಗಳಾದರೂ ದೈವಸಂಕಲ್ಪದಿಂದ ಅನುಷ್ಠಾನ ಯೋಗ್ಯ ಸ್ಥಾನವೆಂದು ಅಲ್ಲಿಯೇ ಒಡಕು (ಹೊಳೆಯಲ್ಲಿಯೇ) ಅನುಷ್ಠಾನ ಮಾಡಿದರು. ನಂತರ ಅಪ್ಪಯ್ಯ ಸ್ವಾಮಿಗಳು ಅಲ್ಲಿಯೇ ಅನುಷ್ಠಾನ ಗೈಯುತ್ತಿರಲು ಶಿವೇಚ್ಛೆಯಿಂದ ಏನೂ ಅಪೇಕ್ಷೆ ಇಲ್ಲದೆ ಜಂಗಲ ಸಾಹೇಬರು ಅಪ್ಪಯ್ಯ ಶ್ರೀಗಳ ತಪೋಬಲ ಮಹಿಮಾತಿಶಯಗಳನ್ನು ಕೇಳಿ ದರ್ಶನ ಪಡೆಯಬೇಕೆಂದು ದರ್ಶನಕ್ಕೆ ಬಂದು ಕ್ಷೇಮ ಸಮಾಚಾರ ಮಾತುಕತೆ ನಡೆದ ನಂತರ ಗುರುಗಳ ಬ್ರಹ್ಮತೇಜ ವರ್ಚಸ್ಸನ್ನು ಕಂಡು, ಮನಃ ಪ್ರವರ್ತನೆಯಾಗಿ ತಮಗಾಗಿ ಇಲ್ಲಿಯ ೩೨ ಎಕರೆ ಭೂಮಿ ಗುಡ್ಡವನ್ನು ಇನಾಮಾಗಿ ಕೊಟ್ಟಿರುವೆನೆಂದು ಅಭಯ ವಚನ ಕೊಟ್ಟರು. ಅದರಂತೆ ಲೀಜೀ ಮಾಡಿದರು ಆ ಭೂಮಿ ಇಂದಿಗೂ ಮಠದ ತಾಬಾಕ್ಕೇನೇ ಅದೆ, "ಬಯಸಿ ಬಂದುದು ಅಂಗಭೋಗ. ಬಯಸದೇ ಬಂದುದು ಲಿಂಗಭೋಗ" ಎಂದಿದೆ, ಈ ವರೆಗಾದರೂ ಅಲ್ಲಿ ಮಠವಿದ್ದು ಆ ಜಾಗೆಯು ಕಬ್ಜಾದಲ್ಲಿಯೇ ಇದ್ದು ಅವರ ತಪಃ ಪ್ರಭಾವ ಮಹಿಮಾತಿಶಯದಿಂದ ಪ್ರತಿವರ್ಷ ಸಂಕ್ರಮಣಕ್ಕೆ ಜಾತ್ರೆ ನಡೆಯುತ್ತದೆ.

ಯಾರಲ್ಲಿ ಸಾತ್ವಿಕ ಭಾವನೆ ಇರುತ್ತದೆಯೋ, ಅವರಿಗೆ ಎಂತಹ ಕ್ರೂರ ಪ್ರಾಣಿಗಳಿದ್ದರೂ ಅವುಗಳು ಅವರ ಸಾತ್ವಿಕ ಭಾವದ ಪ್ರಭಾವದಿಂದ ಸತ್ವ ಗುಣವುಳ್ಳವುಗಳಾಗುತ್ತವೆಂಬುದು ಪುರಾಣ ಪ್ರಸಿದ್ಧವಾದದ್ದು. ಅಂತಹ ಸದ್ಭಾವನೆ ನಮ್ಮಲ್ಲಿ ನೆಲೆಗೊಳ್ಳದೆ ಇರುವುದರಿಂದ, ಆಶ್ಚರ್ಯಪಡಬೇಕಾಗುತ್ತದೆ. ಈ ನುಡಿಯು ಮಿಥ್ಯವೆಂದುಸುರಬೇಕಾಗುತ್ತದೆ, ನಮ್ಮಲ್ಲಿ ಶಾಂತಿ, ಆತ್ಮಶಕ್ತಿ ಮೊದಲಾದ ಸದ್ಗುಣಗಳು ಅಂಕುರವಾಗಲು ಪ್ರಾರಂಭವಾದಾಗ ಕಿಂಚಿತ್ ಸತ್ಯವದೆ ಎಂಬುದು ಅರಿಯುತ್ತದೆ.

ಈದೀಗ ಇರವೆಗಳನ್ನು ನಾವು ತುಳಿದ ನಂತರ ಅವು ಜೀವದಿಂದ ಇದ್ದರೆ ನಮಗೆ ಕಡಿಯುತ್ತವೆ, ಅವಕ್ಕೆ ತ್ರಾಸು ಮಾಡದೆ ಇದ್ದರೆ ಅವು ಎಂದಿಗೂ ಕಡಿಯಲಾರವು. ಸ್ಮೃತಿಯೂ ಕೂಡ "ಮಾಹಿಂಸ್ಯಾತ್ ಸರ್ವ ಭೂತಾನಿ" ಎಂದು ಹೇಳಬೇಕಾದರೆ ಸಾತ್ವಿಕ ಭಾವನೆಯಿಂದ ಎಂತಹ ಕಠೋರ ಮನುಷ್ಯನಿದ್ದರೂ ಮೃದು ಸ್ವಭಾವವುಳ್ಳವನಾಗುತ್ತಾನೆ. ಜನತೆಯ ಜೀವನವು ನಿರಂತರವೂ ಶಾಂತಮಯವಿರುತ್ತದೆ. ಸಾತ್ವಿಕ ವರ್ತನೆಯೇ ಜೀವನಕ್ಕೆ ಶಾಂತಿ! ಶಾಂತಿ!!

ಸೂರ್ಯಾಸ್ತ

ಉದಯವಾದ ಸೂರ್ಯನು ಅಸ್ತಂಗತನಾಗದೇ ಇರುವನೇ? ಸೂರ್ಯನು ಹುಟ್ಟಿ ಜನಜೀವನವನ್ನು ಎಚ್ಚರಗೊಳಿಸಿ, ಚೇತನಗೊಳಿಸಿ, ಸಮೃದ್ಧಿಯನ್ನು

ಕೊಟ್ಟು ಪ್ರತಿಯೊಬ್ಬರಿಗೆ ಸ್ವಪ್ರಭೆಯ ಮಹಿಮೆಯನ್ನು ತೋರಿಸಿ ಆಮೇಲೆ
ಮುಳುಗುವನು.

ಚರಿತ್ರನಾಯಕರಾದ ಅಪ್ಪಯ್ಯ ಮಹಾಸ್ವಾಮಿಗಳು ಜನ್ಮ ತಾಳ್ದು ನಾಡಿನ
ಜನರ ಅಜ್ಞಾನವನ್ನು ಕಳೆದು ಶಾಂತಮಯ ವಾತಾವರಣವನ್ನು ಹಬ್ಬಿಸಿ
ಲಿಂಗಾನಂದ ವೈಭವವನ್ನು ಉಪಭೋಗಿಸಿದರು.

ಶ್ರೀ ಅಪ್ಪಯ್ಯ ಸ್ವಾಮಿಗಳು ಒಡಕು ಹೊಳೆಯಲ್ಲಿದ್ದಾಗ್ಗೆ ಪೂಜ್ಯ ಹಾವೇರಿ
ಮಹಾಸ್ವಾಮಿಗಳು ವಾತದ ಬಾಧೆಯಿಂದ ಸವದತ್ತಿಗೆ ದಯಮಾಡಿಸಿದ ವಾರ್ತೆ
ಅಪ್ಪಯ್ಯಸ್ವಾಮಿಗಳಿಗೆ ತಿಳಿದೊಡನೆಯೇ ಹಾವೇರಿ ಮಹಾಸ್ವಾಮಿಗಳ ಸಂದರ್ಶನಕ್ಕೆ
ಪಾದಚಾರಿಗಳಾಗಿ ಸವದತ್ತಿಗೆ ದಯಮಾಡಿಸಿದರು. ಹಾವೇರಿ ಮಹಾಸ್ವಾಮಿಗಳು
ಸಂದರ್ಶನಕ್ಕೆ ಪಾದಚಾರಿಗಳಾಗಿ ಸವದತ್ತಿಗೆ ದಯಮಾಡಿಸಿದರು. ಹಾವೇರಿ
ಮಹಾಸ್ವಾಮಿಗಳು ಪಾದ ನೋವಿನಿಂದ ಒಂದು ಖೋಲಿಯಲ್ಲಿ ಪವಡಿಸಿದ್ದರು.
ಅಪ್ಪಯ್ಯಸ್ವಾಮಿಗಳು ಬಂದು, ಸಾಷ್ಟಾಂಗನಮಸ್ಕಾರ ಮಾಡಿ ಒತ್ತಟ್ಟಿಗೆ ನಿಂತಿರಲು
ಹಾವೇರಿ ಮಹಾಸ್ವಾಮಿಗಳು ತಿಳಿದು, ಅಪ್ಪಯ್ಯಸ್ವಾಮಿಗಳನ್ನು ಕುರಿತು:—
"ಅನುಷ್ಠಾನ ಮಾಡುವದನ್ನು ಬಿಟ್ಟು ನಿಮಗೆ ಇಲ್ಲಿ ಯಾರು ಬಾ ಅಂದರು–
ಹೋಗು ಅಲ್ಲಿಗೆ" ಎಂಬುವ ನುಡಿ ಕೇಳಿದೊಡನೆಯೇ, ಕೋಮಲ ಸ್ವಭಾವದವ
ರಾದ ಅಪ್ಪಯ್ಯಸ್ವಾಮಿಗಳು ಮನದಲ್ಲಿ ನೊಂದುಕೊಂಡು, ಆ ಕ್ಷಣವೇ ನಡು
ರಾತ್ರಿಯ ಕತ್ತಲಿನಲ್ಲಿಯೇ ಶಿವಧ್ಯಾನ ಮಾಡುತ್ತ ಒಡಕುಹೊಳೆಗೆ ದಯಮಾಡಿಸಿ
ದರು. ಸ್ವಲ್ಪ ವೇಳೆಯ ನಂತರ, ಹಾವೇರಿ ಮಹಾಸ್ವಾಮಿಗಳು ಅಲ್ಲಿದ್ದ ಜನ
ಗಳನ್ನು ಕುರಿತು– "ನೋಡ್ರೆಪ್ಪಾ, ನಿಮ್ಮ ಸ್ವಾಮಿಗಳು ಎಲ್ಲಿಗೆ ಹೋದರು?"
ಸುತ್ತಲೂ ಹುಡುಕಿದ ತರುವಾಯ ದೊರೆಯದೆ, ಮರುದಿನ ಒಡಕುಹೊಳೆಯಲ್ಲಿ
ರುವ ವಾರ್ತೆ ಮಹಾಸ್ವಾಮಿಗಳು ಕೇಳಿ ಮರುಗಿದರು.

ಶ್ರೀ ಅಪ್ಪಯ್ಯಸ್ವಾಮಿಗಳೆಂದರೆ, ಶ್ರೀ ಹಾನಗಲ್ಲ, ಹಾವೇರಿ ಮಹಾಸ್ವಾಮಿ
ಗಳಿಗೆ ಬಲು ಪ್ರೀತಿ. ಅವರ ಮೇಲಿರುವ ಪ್ರೀತಿಯ ನೆನಪಿಗಾಗಿಯೇ ಹಾವೇರಿ
ಯಲ್ಲಿ, "ಶಿವಲಿಂಗ ವಿಜಯ ಮುದ್ರಣಾಲಯ"ವನ್ನು ಸ್ಥಾಪಿಸಿದ್ದರು.

ಶ್ರೀ ಅಪ್ಪಯ್ಯಸ್ವಾಮಿಗಳ ಪೂಜೆಯು, ಯಥಾವತ್ ಅತ್ಯಂತ ವೈಭವದಿಂದ
ನಡೆಯುತ್ತಿರುತ್ತಿರಲಿಕ್ಕೆ ಕೆಲವು ದಿನಗಳ ನಂತರ, ಅಪ್ಪಯ್ಯಸ್ವಾಮಿಗಳಿಗೆ ಪ್ರಕೃತಿ
ಯಲ್ಲಿ ಅಸ್ವಸ್ಥೆಯಿಂದ ದೇಹಾಲಸ್ಯವು ಒದಗಿತು. ದಿನೇ ದಿನೇ ಪ್ರಕೃತಿಯು ಕ್ಷೀಣ
ವಾಗುತ್ತ ನಡೆಯಿತು. ಪೂಜೆಗೆ ಕುಳಿತ ಸಮಯದಲ್ಲಿ ತಾವು ಧರಿಸಿಕೊಳ್ಳುವ
ಕ್ರಿಯಾಘಟ್ಟಿಯು ಒಡೆದದ್ದನ್ನು ನೋಡಿ ನನಗೆ ಶಿವನ ಕರೆಬಂದಿದೆ ಎನ್ನುತ್ತಿದ್ದರು
ಪ್ರೀತಿಯ ಭಕ್ತವೃಂದವೆಲ್ಲರೂ ಬಂದು ಅನೇಕ ರೀತಿಯಿಂದ ಉಪಚರಿಸಹತ್ತಿದರು.

ಗುಣವಾಗದೆ ಮತ್ತಿಷ್ಟು ಹೆಚ್ಚುತ್ತ ನಡೆಯಿತು. ಮರುದಿನ ಅಂದರೆ ಮಾರ್ಗಶಿರ ಶು|| ೭ ಶಕೆ ೧೮೪೬ನೇ ದಿನ ಭಕ್ತರೆಲ್ಲರನ್ನೂ ಕರೆಯಿಸಿ, ಇನ್ನು ನಮಗೆ ಶಿವನಪ್ಪಣೆ ಯಾಗಿದೆ. ಕಾರಣ ಚಿಂತೆ ಮಾಡಬೇಡಿರಿ; ಶ್ರೀ ಹಾವೇರಿ ಹಾನಗಲ್ಲ ಪೂಜ್ಯರಿಗೆ ತಿಳಿಸಿರಿ. ಸೇವಕರನ್ನು ಕುರಿತು– ಪೂಜೆಗಾಗಿ ಸೇವೆ ತಯ್ಯಾರಾಗಲೆಂದು ಹೇಳಿ, ಅದರಂತೆ ಸ್ನಾನ–ಪೂಜೆ ತೀರಿಸಿಕೊಂಡು ತಾವು ಕುಳಿತ ಗದ್ದುಗೆಯ ಮೇಲೆ ಶಿವಧ್ಯಾನ ಮಾಡುತ್ತ ಶಿವನೊಳ್ ಬೆರೆದರು; ಸೂರ್ಯಾಸ್ತವಾಯಿತು.

ಸರ್ವಜನ ಸಮೂಹಕ್ಕೆ ಕಣ್ಣು ಕಟ್ಟಿದಂತಾಗಿದೆ. ಹಾ ನನ್ನ ಗುರು ಎತ್ತ ಹೋದ? ಹಾ ನನ್ನ ತಂದೆ ಎತ್ತಹೋದ? ನಮ್ಮನ್ನು ಇನ್ನು ಪಾಲಿಸುವರಾರು? ಅನೇಕ ರೀತಿಯಿಂದ ಭಕ್ತರು ದುಃಖಿಸುತ್ತಿರಲು, ಅಷ್ಟರೊಳಗಾಗಿ ಪೂಜ್ಯ ಹಾನಗಲ್ಲ, ಹಾವೇರಿ ಮಹಾಸ್ವಾಮಿಗಳು ದಯಮಾಡಿಸಿ. ನೋಡಿ ದುಃಖ ಮಾಡಿಕೊಂಡರು. ಅಂತರಂಗದೊಳಗೆ ದುಃಖವಿದ್ದರೂ ಭಕ್ತರನ್ನು ಕುರಿತು ಅನೇಕ ರೀತಿ ನೀತಿ ವಾಕ್ಯಗಳನ್ನು ಹೇಳಿ–ಹೇಳಿ ಸಂತೈಸಿದರು. ಪೂಜ್ಯ ಹಾನಗಲ್ಲ ಮಹಾಸ್ವಾಮಿಗಳು ಭಕ್ತರನ್ನುದ್ದೇಶಿಸಿ, ಇಂಥ ಪೂಜ್ಯವಸ್ತುವನ್ನು ನಾವು ಇರುವದ ರೊಳಗಾಗಿ ಕಾಣುತ್ತೇವೆಂಬುದು ತಿಳಿಯದಾಗಿದೆ. ಅಪ್ಪಯ್ಯಸ್ವಾಮಿಗಳು ಚಿಕ್ಕವ ರಿರುವಾಗಲೇ, ದೇವರು ತನ್ನತ್ತ ಎಳೆದುಕೊಂಡ. ನೀವುಗಳು ಚಿಂತೆಮಾಡುವ ಕಾರಣವಿಲ್ಲ; ಅವರು ಜಡತನುವನ್ನು ಬಿಟ್ಟು, ನಿಮ್ಮಗಳಿಗೆ ತಮ್ಮ ಆತ್ಮ ಪರಿಶುದ್ಧತೆ ಯನ್ನು ಇಟ್ಟು ಹೋಗಿದ್ದಾರೆ. ಅವರು ಎಂದಿಗೂ ನಾಶವಾಗುವದಿಲ್ಲ; ಅಮರ ರಾಗಿದ್ದಾರೆ. ನೀವು ಸದಾ ಹೃದಯದೊಳಗೆ ಅವರ ನೆನಪು ಇಟ್ಟುಕೊಂಡು ಇದ್ದರೆ ಅವರೂ ಇದ್ದಂತೆ ಮತ್ತು ಅವರು ನಿಮಗೆ ಪದೇ–ಪದೇ ಹೇಳುತ್ತಿರುವ ಉಪದೇಶ ವಾಕ್ಯಗಳನ್ನು ಮರೆಯದೆ, ನಿರಂತರವೂ ಅದರಂತೆ ಆಚರಿಸಿರಿ. ಅಂದರೆ, ನಿಮ್ಮ ಜೀವನ ಸಾರ್ಥಕ್ಯ; ಶಿವನ ವಸ್ತು ಶಿವನಿಗೆ ಮುಟ್ಟಿದೆ. ಒಡಕಃಹೊಳೆ ಯಿಂದ ನವದತ್ತಿ ಕಲ್ಮಠಕ್ಕೆ ಪಾಲಕಿಯಿಂದ ಮೆರೆಸುತ್ತ ಜಡ ತನುವನ್ನು ತಂದು, ಯೋಗ್ಯ ಆಸನವನ್ನು ನಿರ್ಮಿಸಿ, ಒಂದೆಡೆ ಜಡ ದೇಹವನ್ನು ಕುಳ್ಳಿರಿಸಿದ್ದರು. ಸರ್ವ ಭಕ್ತರ ಸಂದರ್ಶನವಾದ ನಂತರ, ಹಾನಗಲ್ಲ ಮಹಾಸ್ವಾಮಿಗಳು ತೋರಿಸಿದ ನಿರ್ದಿಷ್ಟ ಸ್ಥಾನದಲ್ಲಿ ಸಮಾಧಿ ತೆಗೆದು, ಸರ್ವ ತಯಾರ ಮಾಡಿದರು. ಸಮಾಧಿಯ ಆ ಸ್ಥಾನದಲ್ಲಿ ಶಾಸ್ತ್ರೋಕ್ತ ಪದ್ಧತಿಗನುಸಾರ ಪ್ರಣವ ಸಂಬಂಧಮಾಡಿಸಿ, ಸರ್ವ ಭಕ್ತರ ಸಮಕ್ಷಮ ಆ ಲಿಂಗತನುವನ್ನು ಸಮಾಧಿಯಲ್ಲಿಳುಹಿ, ಮಂಗಲ–ಪುಷ್ಪಾಂಜಲಿ ಯೊಡನೆ ಸಮಾಧಿಯನ್ನು ಮುಚ್ಚಿ, ಮಂಗಲ ಮಾಡಿ, ಅಂದಿನಿಂದ ಸಮಾಧಿಯ ಮೇಲೆ ಏಕಾದಶ ರುದ್ರಾಭಿಷೇಕ ವೈಭವದೊಡನೆ ಸಾಗಿಸಿದರು.

ಕೆಲವು ದಿನಗಳ ವರೆಗೆ, ಪೂಜ್ಯ ಹಾನಗಲ್ಲ ಮಹಾಸ್ವಾಮಿಗಳು ಅಲ್ಲೇ ಇದ್ದು,

ಭಕ್ತ ವೃಂದವನ್ನು ಸಮಾಧಾನ ಮಾಡಿ, ಸಾಧಕ ವೃಂದವನ್ನು ಕರೆದುಕೊಂಡು ಶಿವಯೋಗಮಂದಿರಕ್ಕೆ ದಯಮಾಡಿಸಿದರು.

ಅಪ್ಪಯ್ಯಸ್ವಾಮಿಗಳು ಲಿಂಗೈಕ್ಯರಾಗುವದಕ್ಕಿಂತ ಮುಂಚಿತ ತಮ್ಮ ಸೇವಾದಲ್ಲಿದ್ದ ಶರಣ ಟಾಕಪ್ಪನನ್ನು ಕುರಿತು– ಒಡಕು ಹೊಳಿಯ ಜಾಗೆಯಲ್ಲಿ "ತೆಪ್ಪದ ತೇರು ಮಾಡಿಸು" ಎಂದುದಾಗಿ ಅಪ್ಪಣೆ ಕೊಡಿಸಿದ ಪ್ರಕಾರ, ಅದನ್ನು ಅವನು ಮನದಲ್ಲಿ ಇಟ್ಟುಕೊಂಡು: ಸವದತ್ತಿ, ವಟ್ನಾಳ, ಗೊರವನಕೊಳ್ಳ, ಚಚಡಿ ಮುಂತಾದ ಭಕ್ತರಿಗೆ ಈ ಸುದ್ದಿ ತಿಳಿಸಿ, ಆಲೋಚಿಸಿ ಮಕರ ಸಂಕ್ರಮಣ ಪವಿತ್ರ ದಿನವಲ್ಲಿಯೇ, ಸಣ್ಣ ಪ್ರಮಾಣದಿಂದ ಪ್ರಾರಂಭಿಸಿದನು. ಅದು ಪ್ರತಿವರ್ಷ ಬೆಳೆಯುತ್ತ–ಬೆಳೆಯುತ್ತ ದೊಡ್ಡ ಪ್ರಮಾಣದಿಂದ ಸುತ್ತಲಿನ ಭಾಗದಲ್ಲೆಲ್ಲ ವರ್ಣಣೆ ಮಾಡಲು ಪ್ರಾರಂಭಿಸಿದನು. ಆ ಸ್ಥಾನದ ಮೇಲೆ, ಶರಣ ಟಾಕಪ್ಪನ ಅತಿಶ್ರದ್ಧೆ ಇದ್ದ ಮೂಲಕ, ಅಲ್ಲಿಯೇ ಯಾವಾಗಲೂ ಇದ್ದು ದಾಸೋಹ ಮಾಡುತ್ತ ನಡೆದನು. ಈ ಸ್ಥಾನ ಅತಿ ನಿರ್ಜನ ಸ್ಥಾನವಿದ್ದರೂ, ಅಲ್ಲಿಗೆ ಬಂದವರಿಗೆ ಅನ್ನ ಕೊಡದೆ ಕಳಿಸುತ್ತಿದ್ದಿಲ್ಲ. ಪ್ರತಿಯೊಬ್ಬರಿಗೆ ಈ ಸ್ಥಾನ ಅಂದರೆ ಬಲು ಶ್ರದ್ಧೆ. ಇಷ್ಟು ಶ್ರದ್ಧೆ ಹುಟ್ಟಿ, ಪವಿತ್ರ ಸ್ಥಾನವೆಂದೆನಿಸಿಕೊಳ್ಳಲು ಮಹಾತ್ಮರ ವಾಸ, ಪೂಜಾ ಮಹಿಮೆಯೇ ಕಾರಣ. ಆ ಪೂಜ್ಯ ಸ್ಥಾನದ ಮಹತ್ತ್ವವನ್ನು ಪ್ರತಿಯೊಬ್ಬರೂ ಅರಿತುಕೊಂಡು, ನಡೆದುಕೊಂಡು ಧನ್ಯರಾಗಲು ಸಂದೇಹವಿಲ್ಲ.

ಶರಣಂ ಶಾಂಭವಯೋಗಿಯಿರ್ದ ನೆಲನೇ ಕ್ಷೇತ್ರಂ ಪವಿತ್ರಂ ಪರಂ।
ಭರದಿಂದೇರಿದ ಬೆಟ್ಟಮೇಘನತರಂ ಶ್ರೀ ಪರ್ವತಂ ಸ್ವೇಚ್ಛೆಯಿಂ॥
ದಿರದಾಂ ಕ್ರೀಡಿಸಲೆಂದು ಪೊಕ್ಕಜಲಮೇತೀರ್ಥಂ ಮಹಾಪಾವನಂ।
ನಿರುತಂ ಲೀಲೆಯೊಳೊಲ್ದು ಮಾಡಿದುದೆ ತಾಂ ದೈವಂ ಶಿವಾವಲ್ಲಭಾ ॥೧॥

॥ ಓಂ ಶಾಂತಿಃ ಶಾಂತಿಃ ಶಾಂತಿಃ ॥

ಕಡೆ ನುಡಿ

ಶ್ರೀ ಪೂಜ್ಯ ಅಪ್ಪಯ್ಯಸ್ವಾಮಿಗಳವರು ವಿರತಾಗ್ರಗಣ್ಯರು. ಸಾತ್ವಿಕ ಸ್ವಭಾವದ ಸನ್ಮೂರ್ತಿಗಳು, ಆತ್ಮಶಕ್ತಿಯ ಪ್ರಭೆಯಿಂದ ದಿವ್ಯ ಶಕ್ತಿಯನ್ನು ಪಡೆದವರು, ಶಿವಯೋಗಾನಂದ ತಲ್ಲೀನರು. ತೇಜೋಮೂರ್ತಿಗಳು, ಕಾಮ-ಕ್ರೋಧಾದಿಗಳನ್ನು ಜಯಿಸಿದವರು, ಬಾಲ್ಯದಿಂದ ಹಿಡಿದು ಜೀವನಾಂತ್ಯದವರೆಗೂ ಶಿವಪೂಜೆಗಾಗಿ ಅಹೋರಾತ್ರಿ ಕಷ್ಟಪಟ್ಟವರು, ಭಕ್ತರ ಹೃನ್ಮೂರ್ತಿಗಳು, ವೀರಶೈವ ತತ್ತ್ವ ಶಿಖಾಮಣಿಗಳು. ಪರಮ ಪದವಿಯ ಆಸೆಗಾಗಿ ಸಂಸಾರವನ್ನು ತೊರೆದು, ಸನ್ಯಾಸವನ್ನು ಪಡೆದು, ತಮ್ಮೊಬ್ಬರ ಮುಕ್ತಿಗಾಗಿ ಶ್ರಮಿಸಿದವರಲ್ಲ. ಮಹದಾದರ್ಶನವನ್ನು ಮುಂದಿಟ್ಟುಕೊಂಡು, ಅದಕ್ಕಾಗಿ ದುಡಿದ ಮಹಾ ಶಿವಯೋಗ ಸಂಪನ್ನರು. ಜನತೆಯಲ್ಲಿ ಹರಡಿರುವ ಮೂಢಭಾವನೆಗಳನ್ನು ಪರಿದೂಗೆದು, ಅವರ ಮನೋಭೂಮಿಕೆಯ ಮೇಲೆ ಗೂಢ ತತ್ತ್ವಗಳನ್ನು ಬಿತ್ತಿ, ಜನರನ್ನು ಸುಧಾರಣೆ ಮಾಡಿದವರು; ದೂರದರ್ಶಿಗಳು.

ಆದರೆ, ಈ ಯತಿಪುಂಗವರು ಪ್ರೌಢಾವಸ್ಥೆಯಲ್ಲಿಯೇ ಲಿಂಗೈಕ್ಯರಾಗಿದ್ದು ನೋಡಿ ಕಣ್ಣೀರಿಡಬೇಕಾಗಿದೆ. "ಹಣ್ಣಿನ ಗುಣ ಹೀಚಿನಲ್ಲಿ" ಎಂಬಂತೆ, ಬಾಲ್ಯದಿಂದ ಅಂತ್ಯದವರೆಗೆ ಚಿನ್ನದಂತೆ, ಯಾವ ದೋಷವನ್ನು ಅಂಟಿಸಿಕೊಳ್ಳದೆ ನಿರ್ಲಿಪ್ತರಾಗಿದ್ದುದು ಸರ್ವರಿಗೂ ವೇದ್ಯವಾದುದು. ಈ ಪೂಜ್ಯರು, ಇನ್ನು ಕೆಲವು ದಿನ ನಾಡಿನಲ್ಲಿ ದೇಹ ಧರಿಸಿಕೊಂಡು ಒಂದು ಪಕ್ಷ ಇದ್ದಿದ್ದರೆ, ನಮ್ಮ ವೀರಶೈವ ಸಮಾಜದ ಕಳೆ ಬೆಳಗುತ್ತಿತ್ತು.

ಯಾರಲ್ಲಿ ಆಧ್ಯಾತ್ಮಿಕ ತಪಃಶಕ್ತಿ ಇದೆಯೋ, ಅವರಿಂದಲೇ ಸಮಾಜ ಸುಧಾರಣೆ. ಆತ್ಮಶಕ್ತಿ ಇಲ್ಲದೆ, ಕೇವಲ ಪ್ರಖ್ಯಾತಿಗಾಗಿ ಸಮಾಜ ಸುಧಾರಣೆ ಮಾಡುವವರ ಕೀರ್ತಿ ಎರಡು ದಿನದ್ದಾಗುವದಲ್ಲದೆ, ಅದರಿಂದ ಸಮಾಜವು ಭದ್ರವಾಗಲಾರದು.

ಗೋಡೆಯ ತಳಹದಿ ಚೆನ್ನಾಗಿದ್ದರೆ, ಭವ್ಯ ಮಂದಿರವಾಗಿ ಬಹುದಿನಗಳ ವರೆಗೆ ಉಳಿದು ಬಾಳುತ್ತದೆ. ಇಲ್ಲವಾದರೆ, ಮಧ್ಯದಲ್ಲಿಯೇ ಬೀಳುವದು ಸ್ವಾಭಾವಿಕವಾದುದು.

ಸಮಾಜದ ಸುಧಾರಣೆಗೆ ಆತ್ಮಶಕ್ತಿಯೇ ಪ್ರಥಮ ಸೋಪಾನ. ಈ ಶಕ್ತಿಯ ಮುಂದ ಇನ್ನಿತರ ಹೊರಗಿನ ಎಲ್ಲ ಯುಕ್ತಿಗಳು ನೀರಮೇಲಿನ ಗುರುಳೆಯಂತೆ. ಅಪ್ಪಯ್ಯಸ್ವಾಮಿಗಳು, ಯೋಗಿವರೇಣ್ಯ ಪರಮ ಪೂಜ್ಯ ಲಿಂ. ಹಾನಗಲ್ಲ ಮಹಾಸ್ವಾಮಿಗಳ ಪ್ರೀತಿಗೆ ಪಾತ್ರರಾಗಬೇಕಾದರೂ, ಅಪ್ಪಯ್ಯಸ್ವಾಮಿಗಳಲ್ಲಿದ್ದ

ಆಧ್ಯಾತ್ಮಿಕ ಶಕ್ತಿಯೇ ಕಾರಣ. ಅಂತಹ ಶಕ್ತಿಯನ್ನು ಗಳಿಸಿದರೆ ಅಜರಾಮರ ಕೀರ್ತಿ, ಕೀರ್ತಿಯಾಶೆಗೆ ಗಳಿಸುವ ಇಚ್ಛೆ ಇದ್ದರೂ ಕ್ಷಣಿಕ. ಕೀರ್ತಿಯಾಶೆಯಾದರೂ ಮೋಹವೆಂದು ಅನುಭವಿಗಳು ಹೇಳುತ್ತಾರೆ.

ಆ ಶಕ್ತಿಯ ನಿಧಿಯು ಕನ್ನಡನಾಡಿನ ಪ್ರತಿಯೊಂದು ವ್ಯಕ್ತಿಯ ಹೃದಯ ಪೀಠದಲ್ಲಿ ಕುಳಿತು, ಅದರ ಮಹತ್ತ್ವವು ಸಮಸ್ತ ಕಡೆಗೂ ಹರಡಿದರೆ, ನಾಡು ಭವ್ಯವಾಗಿ ಸುಂದರವಾಗುತ್ತದೆ. ನಾಡಿನ ಕೀರ್ತಿ ಬೆಳೆದು, ಬೆಳಗಬೇಕಾದರೆ ಆ ನಾಡಿನಲ್ಲಿರುವ ವ್ಯಕ್ತಿಗಳೇ ಕಾರಣ. ಕೊನೆಯದಾಗಿ, ಪೂಜ್ಯ ಗುರುದೇವನು ನಮ್ಮೆಲ್ಲರಿಗೆ ಆಧ್ಯಾತ್ಮ ಶಕ್ತಿಯನ್ನು ಕೊಟ್ಟು ರಕ್ಷಿಸಲೆಂದು ಅನನ್ಯ ಭಕ್ತಿಯಿಂದ ಬೇಡುವೆ.

ಶ್ರೀ ಅಪ್ಪಯ್ಯ ಮಹಾಸ್ವಾಮಿಗಳು ಲಿಂಗೈಕ್ಯರಾದ ನಂತರ, ಹಾನಗಲ್ಲ, ಹಾವೇರಿ ಮಹಾಸ್ವಾಮಿಗಳಿಗೆ ಬಹಳ ಚಿಂತೆಯಾಗಿ, ಸವದತ್ತಿ ಕಲ್ಮಠಕ್ಕೆ ಯಾರನ್ನು ಉತ್ತರಾಧಿಕಾರಿಗಳನ್ನಾಗಿ ಮಾಡಬೇಕು? ಆ ಪೂಜ್ಯ ಸ್ಥಾನಕ್ಕೆ ಒಪ್ಪತಕ್ಕ ಮರಿದೇವರನ್ನು ಎಲ್ಲಿ ಹುಡುಕಬೇಕೆಂದು ಆಲೋಚಿಸಿ, ಸದ್ವಂಶ ಸಂಭೂತ ಅಪ್ಪಯ್ಯಸ್ವಾಮಿಗಳ ಸಂಬಂಧಿಕರನ್ನೇ ಈ ಮಠಕ್ಕೆ ಉತ್ತರಾಧಿಕಾರಿಗಳನ್ನಾಗಿ ಮಾಡಿದರೆ, ಮಠದ ಕೀರ್ತಿ, ಭಕ್ತರ ಸುಧಾರಣೆಯಾಗುತ್ತದೆ ಎಂದು ತಿಳಿದು, ಅಪ್ಪಯ್ಯಸ್ವಾಮಿಗಳ ತಮ್ಮಂದಿರಾದ, ಮರೇಗುದ್ದಿ ಷಡಕ್ಷರಿಮಠದ ಶಿವಲಿಂಗಯ್ಯನವರ ಸುಪುತ್ರರಾದ ಮಹಾಲಿಂಗದೇವರನ್ನು ಮಠದ ದೇವರನ್ನಾಗಿ ನಿಯಮಿಸಿ, ಶಿವಯೋಗಮಂದಿರದಲ್ಲಿ ಯೋಗಾಭ್ಯಾಸವನ್ನು ಕಲಿಸಿ, ನಂತರ ಲಿಂ. ಹಾವೇರಿ ಮಹಾಸ್ವಾಮಿಗಳು ತಮ್ಮ ಸೇವೆಯಲ್ಲಿ ೫-೬ ವರ್ಷಗಳವರೆಗೆ ಇಟ್ಟುಕೊಂಡು, ಶಿವಾನುಭವ ಸದ್ಬೋಧೆ ಮಾಡುತ್ತ, ಆಧ್ಯಾತ್ಮಿಕ ಜ್ಞಾನದಲ್ಲಿ ನಿಪುಣರನ್ನಾಗಿ ಮಾಡಿ, ಸನ್ ೧೯೪೫ ನೇ ಮಾಘ ಬ॥ ೪ ರಂದು ಶುಭ ಮುಹೂರ್ತದಲ್ಲಿ ಕುಮಾರ ಸ್ವಾಮಿಗಳು ಎಂದು ನಾಮಕರಣ ಮಾಡಿ, ಬಿದರಿ ಸವದತ್ತಿ ಕಲ್ಮಠದ ಉತ್ತರಾಧಿಕಾರಿಗಳನ್ನಾಗಿ ಮಾಡಿದರು. ಇದೀಗ ಆ ಮಠದ ಸ್ವಾಮಿಗಳಾದ, ಶ್ರೀ ಮ. ನಿ. ಪ್ರ. ಬಿದರಿ ಕುಮಾರ ಸ್ವಾಮಿಗಳು ಜನತೆಯನ್ನು ಎಚ್ಚರಗೊಳಿಸಿ, ಜನತೆಯ ಅಜ್ಞತೆಯನ್ನು ಕಳೆಯುತ್ತ, ಭಕ್ತರ ಹೃದಯ ಭೂಮಿಕೆಯಲ್ಲಿ ಸದ್ಗುಣ ಬೀಜಗಳನ್ನು ಬಿತ್ತುತ್ತಿರುವುದನ್ನು ನೋಡಿ, ಯಾರಿಗೆ ತಾನೆ ಆನಂದವಾಗಲಿಕ್ಕಿಲ್ಲ! ಸಾಹಿತ್ಯ ಪ್ರಚಾರ, ಜನತೆಯ ಸುಧಾರಣೆ ಇವುಗಳನ್ನು ಮುಖ್ಯ ಗುರಿಯನ್ನಾಗಿಟ್ಟುಕೊಂಡ, ಪೂಜ್ಯ ಬಿದರಿ ಸವದತ್ತಿ ಕಲ್ಮಠದ ಶ್ರೀ ಮ. ನಿ. ಪ್ರ. ಕುಮಾರ ಸ್ವಾಮಿಗಳ ಆಯುರಾರೋಗ್ಯ ಅಭಿವೃದ್ಧಿ ಹೊಂದಿ, ಕರುನಾಡು ಚಿನ್ನದಾಗ ಲೆಂಬುದನ್ನೇ ದೇವನಲ್ಲಿ ಪ್ರಾರ್ಥಿಸಿ, ಈ ಚಿಕ್ಕ ಲೇಖಕನಿಗೆ ವಿಶ್ರಾಂತಿ ಕೊಡುವೆ.

॥ ಓಂ ಶಾಂತಿಃ ಶಾಂತಿಃ ಶಾಂತಿಃ ॥

ಪಥಿಕ

ಸಾಹಿತ್ಯ ಪ್ರಕಾರ	:	ಕವನ ಸಂಕಲನ
ಮೊದಲ ಮುದ್ರಣ	;	೧೯೫೩
ಎರಡನೆಯ ಮುದ್ರಣ	:	೧೯೭೨
ರಚನೆಯ ವಯಸ್ಸು	:	೨೩
ರಚನಾಸ್ಥಳ	:	ಕಾಶಿ

ಶ್ರೀ ಜಗದ್ಗುರು ಮೂರುಸಾವಿರಮಠದ ಗ್ರಂಥ ಮಾಲಾ ನಂ. ೫೨

ಪಥಿಕ

(ಕವನ ಸಂಗ್ರಹ)

ಕರ್ತರು:

ಮಹಾಂತದೇವರು ಚಿತ್ತರಗಿ

ಕಾವ್ಯತೀರ್ಥ, ಸಾಹಿತ್ಯರತ್ನ ವೇದಾಂತಶಾಸ್ತ್ರಿ

(ಸದ್ಯದ ಮೂರುಸಾವಿರಮಠದ ಶ್ರೀ ಜಗದ್ಗುರುಗಳು.)

ಪ್ರಕಾಶಕರು:

ಶ್ರೀ ಜಗದ್ಗುರು ಗಂಗಾಧರ ಧರ್ಮಪ್ರಚಾರಕ ಮಂಡಳ,

ಮೂರುಸಾವಿರಮಠ, ಹುಬ್ಬಳ್ಳಿ.

೧೯೭೨

ಬೆಲೆ : ೨-೦೦

ಎರಡನೆಯ ಆವೃತ್ತಿ: ೧೯೭೨

ಮುದ್ರಣ:
ಪರಂಜ್ಯೋತಿ ಪಾವರ ಪ್ರಿಂಟಿಂಗ್ ಪ್ರೆಸ್,
ಶ್ರೀ ಜಗದ್ಗುರು ಮೂರುಸಾವಿರಮಠ, ಹುಬ್ಬಳ್ಳಿ.

ಮುನ್ನುಡಿ

"ಕವಿಃ ಕರೋತಿ ಕಾವ್ಯಾನಿ ಲಾಲಯತ್ಯುತ್ತಮೋಜನಃ
ತರುಃ ಪ್ರಸೂತೇ ಪುಷ್ಪಾಣಿ ಮರುದ್ವಹತಿ ಸೌರಭಮ್"

೧

ಬಿಡುವಿಲ್ಲದಂತೆ ಬರವಣಿಗೆಯಲ್ಲಿ ತೊಡಗಿರುವಾಗ ಈ 'ಪಥಿಕ' ಬಂದು ಭೇಟಿಯಿತ್ತ. ಬಯಕೆಯನ್ನು ತೋರಿದ. ಮುಂದಿನ ದಾರಿಗೆ 'ಬುತ್ತಿ'ಬೇಕೆಂದ. ಬುತ್ತಿಯು ಕಟ್ಟಿಕೊಡಲು ನಾವಾರು. ನೀನಾರು ಎಂದು ಕೇಳಬೇಕೆಂದಿದ್ದೆವು. ಅನಿತರಲ್ಲಿ ಶಿವಯೋಗ ಮಂದಿರದ ಹತ್ತಿರದ ಸಂಬಂಧ ನೆನವಿಗೆ ಬಂದು ನಿಂತಿತು. ಜೊತೆಗೆ 'ಪಥಿಕ' ತಾಯಿ-ತಂದೆಗಳಿಲ್ಲದ, ಮಡದಿ ಮಕ್ಕಳಿಲ್ಲದ ತಬ್ಬಲಿ. ಬಹು ದೂರದಿಂದ ಬಳಲಿ ಬಂದ ಬಂಧು. ಇಲ್ಲೆನಲು-ಆಗದೆನಲು ಸಾಧ್ಯವಿಲ್ಲದಾಯಿತು. ಬುತ್ತಿ(ಮುನ್ನುಡಿ)ಯು ಕಟ್ಟಬೇಕಾಯಿತು. ಬುತ್ತಿಗೆ ಬೇಕಾದ ಪದಾರ್ಥವೆಲ್ಲ ಪಥಿಕನದೆ! ಕಲೆಹಾಕಿ ಕಟ್ಟಿಕೊಟ್ಟ ಕೆಲಸ ನಮ್ಮದು. ಎಂತಹದನ್ನಾದರೂ ಎಷ್ಟನ್ನಾದರೂ ಕಟ್ಟಿಕೊಡೋಣವೆಂದರೆ 'ಪಥಿಕ' ಒಪ್ಪದೇ ಹೋದ. ಪಥಿಕ ಒಳ್ಳೇ ರಸಿಕ, ಒತ್ತಾಸೆಯುಳ್ಳವ. ಬುತ್ತಿ ಒಪ್ಪಾಗಿ ಒಳಿತಾಗಿ ಮಿಗಿಲಾಗಿ ಇರಬೇಕೆಂಬ ಇಚ್ಛೆ ತೋರಿದ. ರೂಪ ರುಚಿಗಳ ಮಾತು ಹೇಗಾದರೂ ಇರಲಿ ಹೆಚ್ಚಾಗಿ ಕಟ್ಟಿ ಕೊಡಬೇಕಾಯಿತು.

ಶಿವಯೋಗಮಂದಿರದ ಸಾಧಕರಲ್ಲಿ ಕವಿಮಾರ್ಗದಲ್ಲಿ ಹೆಜ್ಜೆ ಹಾಕಿದವರು ಅದೆಷ್ಟು ಜನ? ತೀರ ಕಮ್ಮಿಯೆಂದರೆ ಅಲ್ಲಗಳೆಯುವಂತಿಲ್ಲ. ಮೂರು ನಾಲ್ಕು ಸಂಖ್ಯೆಗೆ ಮೀರಿಲ್ಲವೆಂದರೆ ಅತಿಶಯೋಕ್ತಿಯಲ್ಲ. ಕಾವ್ಯರಸ ಮಾಧುರ್ಯಕ್ಕೆ ಮನವೊಲಿದು ಕವಿಗಳಾದವರಲ್ಲಿ ಶ್ರೀ ಮಹಾಂತದೇವರು ಒಬ್ಬರು. ಅವರೊಬ್ಬ ತರುಣ ಕವಿ. ಅವರ ಈ 'ಪಥಿಕ'ವು ಅಂಕುರಾರ್ಪಣ. ಆದರೂ ಈ ಎಳೆ ಹಸಿರು ಆಕರ್ಷಕವಾಗಿದೆ. ಅದರದೇ ಒಂದು ಮಾಟ. ಅದೇ ಒಂದು ನಲುಮೆಯ ನೋಟ.

'ಗಿಡ ಹೂವನ್ನು ಬಿಡುತ್ತದೆ. ಗಾಳಿ ಆ ಹೂಗಂಪನ್ನು ಹೊತ್ತು ತಂದು ಬೀರುತ್ತದೆ. ಕವಿ ಕವನಗಳನ್ನು ರಚಿಸುತ್ತಾನೆ. ಉತ್ತಮರು ಅವನ್ನು ಲಾಲಿಸುತ್ತಾರೆ.'

ವಸಂತ ಋತುವಿನಲ್ಲಿ ಗಿಡ ಹೂ ಬಿಡುವಂತೆ ಕಾವ್ಯಗಳನ್ನು ಕಟ್ಟುವುದು, ಋಷಿ, ಕವಿಯಾದವರಿಗೆ ನಿಸರ್ಗಧರ್ಮ. ಆ ಕಾವ್ಯ ಗಂಧವನ್ನು ಹಚ್ಚಿ ಬೀರುವುದು ಒಲು ಬಿಗಿಯಾದ ಬದುಕು. ಕೇಳಿ ಮೆಚ್ಚಿಸುವುದು, ಕೇಳಿ ಪೋಣಿಸುವುದು, ಅವನ್ನು ಅಳೆವುದು ವಿಮರ್ಶಕನಾಗದೆ ಸಾಧ್ಯವಿಲ್ಲ. ಆ ಮಾರ್ಗದಲ್ಲಿ ಪಳಗಿದ್ದರೆ, ಆ ಕಲೆಯನ್ನು ಸಂಗಳಿಸಿದ್ದರೆ ಅದರಲ್ಲಿಯೂ ಅನಾದೃಶವಾದ ಆನಂದವಿದೆ. ಆದರೆ ಆ ಶಕ್ತಿ ಬೇಡವೆ? ಅಂತು ಈ ಕಷ್ಟ ಮತ್ತು ಸುಖಗಳಿಂದ ಕೂಡಿದ ಲಾಲನೆಯ (ಮುದ್ದುನುಡಿಯ) ಕೆಲಸಕ್ಕೆ ನಮ್ಮನ್ನು ತೊಡಗಿಸಿದ್ದಾರೆ ಶ್ರೀ ಮಹಾಂತದೇವರು. ಇದಕ್ಕೆ ಅವರ ಆತ್ಮೀಯ ವಿಶ್ವಾಸವೇ ವಿಶೇಷ ಕಾರಣ.

ಎರಡನೆಯದಾಗಿ ಸತ್ಯ ಶುದ್ಧ ಭಾವದಿಂದ ಶಾಶ್ವತ ದೃಷ್ಟಿಯಿಂದ ಕನ್ನಡ ಸಾಹಿತ್ಯ ಕೃತಿ ಪ್ರಕಟನೆ, ಶಿವಶರಣರ ಸಮ್ಮೇಲನ ಇವುಗಳಿಗೆ ತಮ್ಮ ತ್ರಿಕರಣ ಪೂರ್ವಕ ಸೇವೆ ಸಲ್ಲಿಸುತ್ತಿರುವ 'ತ್ಯಾಗವೀರ' ಶ್ರೀ ಶಿವಶಂಕರಪ್ಪನವರು ಶಿವಲಿಂಗಪ್ಪನವರು ಚಿತ್ತರಗಿ ಇವರು ಈ 'ಪಥಿಕ' ಪ್ರಕಾಶನಕ್ಕೆ ಕಾರಣೀಕರ್ತರಾಗಿ ನಿಂತಿದ್ದಾರೆ. ಇವರು ಬ್ಯಾಂಕ್ ಕ್ಲರ್ಕರಾಗಿರುವರಂತೆ. ಭಾಷಾ ಕ್ಲರ್ಕರೂ ಆಗುತ್ತಿರುವುದು ಆದರ್ಶವಾಗಿದೆ. ಇವರ ಭಾಷಾಸೇವೆ ಮೆಚ್ಚತಕ್ಕದಾಗಿದೆ. ಇವರೂ ಸಹ ಉತ್ತಮವಾದ ಮುನ್ನುಡಿಯನ್ನು ಬಯಸಿ ಬಿನ್ನವಿಸಿಕೊಂಡಿದ್ದಾರೆ. ಹೀಗೆ ಇಬ್ಬರ ಹೃದಯ ಬೇಡಿಕೆಯನ್ನು ಪೂರೈಸದಿರುವುದು ಹೇಗೆ ತಾನೆ ಸಾಧ್ಯ?

ಶ್ರೀ ಮಹಾಂತದೇವರನ್ನು ನಾವು ಮೊದಲಿನಿಂದಲೂ ಬಲ್ಲೆವು. ಸುಮಾರು ಇಪ್ಪತ್ತು ವರುಷಗಳ ಮಾತು. ಶಿವಯೋಗಮಂದಿರದಲ್ಲಿ ನಾವು ಪ್ರೌಢ ಶಿಕ್ಷಣವನ್ನು ಪಡೆಯುತ್ತಿರುವಾಗ ಇವರು ಪ್ರಾಥಮಿಕ ಶಿಕ್ಷಣ ಪಡೆಯುತ್ತಿದ್ದರು. ಅಂದು ಇವರು ತೀರ ಎಳೆಯವರು. ಸಹಜ ಮೃದು ಹೃದಯರು. ನಿರ್ಮಲ ಮನಸ್ಕರು. ಆ ಚಿಕ್ಕ ವಯಸ್ಸಿನಲ್ಲಿಯೇ ತಂದೆ-ತಾಯಿಗಳನ್ನು ಮನೆ-ಮಠಗಳನ್ನು ಬಂಧು-ಬಳಗವನ್ನು ಸುಖ-ಸಂಪದಗಳನ್ನು ತ್ಯಜಿಸಿ ವ್ಯಾಸಂಗಕ್ಕಾಗಿ ಬಂದು ನಿಂತರು ಆಶ್ರಮದ ನಿಬಂಧನೆಗಳಿಗೆ ನಡಕಟ್ಟಿದರು. ಸನ್ಯಾಸಿಯಾಗಲು ಸನ್ನದ್ಧರಾದರು. ಆದರೆ ಬರೀ ಸನ್ಯಾಸಿ ಆಗಲಿಲ್ಲ. ಜೊತೆಗೆ ಸಾಹಿತಿಯೂ ಆದರು, ಇದು ಅವರ ಜೀವನದ ವ್ಯಾಸಂಗದ ವೈಶಿಷ್ಟ್ಯ. ಕಾವ್ಯರಸಾಸ್ವಾದ, ಸಜ್ಜನಸಂಗ ಯೌಗಿಕ ಸಂಪತ್ತು ಇವು ಮೂರು ಶಿವಯೋಗಮಂದಿರದಲ್ಲಿ ಸಿಕ್ಕುವ ಸಂಪಾದನೆಗಳು. ಶ್ರೀ ಮಹಾಂತದೇವರು ಮೊದಲನವೆರಡನ್ನು ಸಂಪೂರ್ಣ ಸಂಗಳಿಸಿದ್ದಾರೆ. ಅದರಲ್ಲಿಯೂ ಕಾವ್ಯ ಸಾಹಿತ್ಯದಲ್ಲಿ ಅವರಿಗೆ ಅತಿಶಯಾಕಾಂಕ್ಷೆ. ಅದರಿಂದ ಅವರಿಂದು "ಕಾವ್ಯತೀರ್ಥರು", "ಸಾಹಿತ್ಯರತ್ನ"ರು. ಇಷ್ಟಕ್ಕೆ ಅವರ ವ್ಯಾಸಂಗ ನಿಂತಿಲ್ಲ. ಇನ್ನು ಮುಂದುವರಿದಿದೆ. ವಿದ್ಯಾಕೇಂದ್ರವಾದ ಕಾಶಿ(ಬನಾರಸ)ದಲ್ಲಿ ಅದಕ್ಕಾಗಿ ನೆಲೆನಿಂತಿದ್ದಾರೆ. ಚಿತ್ತರಗಿ ವಿರಕ್ತಮಠದ ಉತ್ತರಾಧಿಕಾರಿಗಳಾಗಿದ್ದಾರೆ.

"ಪಥಿಕ" ಇವರ ಪ್ರಪ್ರಥಮ ಕವನ ಸಂಕಲನ. ತಮ್ಮ ಕವನ ಕುಸುಮ ಗಳಿಂದ ಈ ಕಾವ್ಯಮಾಲೆಯನ್ನು ಕಟ್ಟಿದ್ದಾರೆ. ಭಾವ ಸೂತ್ರದಿಂದ ಬಿಡಿಬಿಡಿಯಾದ ಹೂವುಗಳನ್ನು ಏಕಸೂತ್ರಕ್ಕೆ ತಂದಿದ್ದಾರೆ. ಇದು ಇವರ ಕುಶಲತೆ. ಇದು ಇವರ ಈ ಕಾವ್ಯ ವೈಶಿಷ್ಟ್ಯ. ಅನೇಕರು ಬಿಡಿ ಹೂವುಗಳನ್ನೇ ತಂದು ಮುಂದೆ ಸುರಿಯಬಲ್ಲರು. ಇದಕ್ಕಿಂತ ಏಕಸೂತ್ರತೆಗೆ ತಂದು ಮಾಲೆಯಾಗಿಸಿ ಮುಂದಿಡುವುವೆ ಮನೋಜ್ಞಕಾರ್ಯ. ಇಂದಿನ ಕವನ ಸಂಗ್ರಹಗಳಿಗೆ ಇದೇ ಒಂದು ಕಳೆ ಕಲೆ! ಇದನ್ನು ಈ ಕಾವ್ಯದಲ್ಲಿ ನಸುನೋಡುವುದೇ ಈ ಮುನ್ನುಡಿಯ ಮುಂಗುರಿ!

೨

ಶ್ರೀ ಮಹಾಂತದೇವರೇ "ಪಥಿಕರು." ಅವರ ಪಥ ಕಾವ್ಯಕಲೆ. ಅವರು ಜೋಡಿ ಬಯಸಿದುದು ತಿಳಿವಿನ ಬೆಳಗು. ಸೇರಬಯಸಿದುದು ಕವಿತನದ ಮಾಮನೆ.

ಅವರು ಬಯಸಿದ ಹಾದಿ ಹಸನಾಗಿಲ್ಲ, ಸಮವಾಗಿಲ್ಲ: ಸುಗಮವಾಗಿಲ್ಲ. ಅಲ್ಲಿ ಹಳ್ಳ ತಿಟ್ಟುಗಳವೆ ಮುನ್ನಡೆದರೆ ದೊಡ್ಡ ಬೆಟ್ಟಗಳಿವೆ. ಮುನ್ನೋಡಿದರೆ ಹೊಳೆ ಹಳ್ಳಗಳಿವೆ; ಜಲಚರ ಪ್ರಾಣಿಗಳಿವೆ. ಸಾಲದ್ದಕ್ಕೆ ಬಿರುಗಾಳಿ ಬೇರೆ ಭರದಿಂದ ಬೀಸುತಿದೆ. ಧೂಳಿದೂಸರನ್ನು ಮೈಮ್ಯೇಲೆ ತಂದೆರಚುತಿದೆ. ಇದರ ಮೇಲೆ ಕಾರ್ಮೋಡಗಳ ಆವರಣ ಬೇರೆ, ಆರ್ಭಟ ಬೇರೆ; ಕಾಳರಾತ್ರಿಯ ಕಾಟ ಬೇರೆ, ಇಷ್ಟು ಕಷ್ಟವಿದ್ದರೂ ಹೇಗಾದರೂ ಮಾಡಿ ಸಾಹಸದಿಂದ ಸಾಗಬಹುದೆಂದರೆ ಪಥಿಕ ಕುರುಡು ಅಷ್ಟೇ ಅಲ್ಲ ಕವಿ ತನ್ನ ಆತ್ಮನೊಡನೆ ನಮ್ಮನ್ನೂ ಮುನ್ನಡಿಸು ತ್ತಾನೆ. ಪಥಕನೊಡನೆ ಹೋದರೆ ನಾವು ಕಾಣುವದೇನನ್ನು?

"ಸೋಲಿನಲಿ ಇರುತಿರಲು ಮುಂದಿನ ಹಿರಿಗುರಿಯ
ದಾರಿಯನು ಮರೆಯದಿರೈ
ದಾರಿಯಾ ನಡೆವವನು ಎಡಹದಲೆ ಇರುವನೇಂ
ಎಡಹಿದರೂ ಹೆದರದಿರೈ"

ಕವಿಗೆ ಕಣ್ಣಿಲ್ಲದಿದ್ದರೂ ಯಾವುದೋ ಕೋಲುಮಿಂಚಿನ ಕಳೆಯಿದೆ. ಕಾಲಿಲ್ಲ ದಿದ್ದರೂ ಕುಟೀರ ಸೇರುವ ಬಲುಮೆಯಿದೆ. ಇಂತಹ ಕವಿಯ ಜೊತೆಗೆ ಹೋಗುವ ನಮಗೆ ಕಾಲಿದ್ದರೂ ಸೋತು ನಿಂತಿದ್ದೇವೆ. ಕಣ್ಣಿದ್ದರೂ ಮುಂದಿನ ಗುರಿಯನ್ನು ಮರೆತಿದ್ದೇವೆ. ಎಡಹಿ ಎದೆಗೆಟ್ಟಿದ್ದೇವೆ. ಹೀಗಿದ್ದರೂ ಕವಿ ನಮ್ಮನ್ನು ಪ್ರಚೋದಿಸುತ್ತಾನೆ. ಬಾಳಿನಲ್ಲಿ ಸೋಲು ಬರುವದು ಸಹಜ ಅದೇ ಅವಮಾನ ವೆಂದು ಭಾವಿಸಿ ಆ ಸೋಲಿನ ಸೆಳವಿಗೆ ಸಿಕ್ಕು 'ಮುಂದಿನ' ಹಿರಿ ಗುರಿಯ ಮರೆಯ ದಿರೈ ಎಂದು ನಮ್ಮ ಮೆದುಳಿಗೆ ತಿಳಿಹೇಳುತ್ತಾನೆ. ನಡೆವವನು ಎಡಹುವುದು

ನಿಸರ್ಗ. 'ಎಡಹಿದರೂ ಹೆದರದಿರೈ' ಎಂದು ಹೃದಯಕ್ಕೆ ಧೈರ್ಯ ತುಂಬುತ್ತಾನೆ. ಹೀಗೆ ಮೆದುಳನ್ನೂ ಎದೆಯನ್ನೂ ಕಾಪಾಡುವುದಕ್ಕಿಂತ ಬೇರೆ ಕವಿಕ್ರಿಯೆಯೇನು?

"ನೋಡದಿರು ಬೇಡದಿರು ಹಿಂದಿನಾ ದಾರಿಯನು
ನಡೆಮುಂದೆ ದೃಢ ಮನದಿ
ಶಿಲ್ಪಿಗನ ಶಿಲೆಯೊಡೆದು ಪೋದರವ ಚಿತ್ರವನು
ಕಡೆಯುವುದ ಬಿಡುವನೇನು?"

'ನಡೆಮುಂದೆ' ಏನು ಭಾವಪೂರ್ಣವಾದ ಮಾತಿದು. ಸತ್ ಪ್ರೇರಣೆಯ ಪೂರ್ಣ ಪ್ರವಾಹವನ್ನೇ ಇಲ್ಲಿ ಸಂದಿಸುತ್ತೇವೆ. ಕಾಲು ಸೋತ ನಾವು ಆ ವೇಗ ದೊಡನೆ ಮುನ್ನಡೆಯುತ್ತೇವೆ. ಕವಿಗೆ ಮುಂಗುರಿಯಲ್ಲಿ ಅದೆಂತಹ ನಿಶ್ಚಿತ ಭಾವವಿದೆ. ಅದೆಂತಹ ನಿಶ್ಚಲವಿದೆ ನಿಜವಾಗಿಯೂ ಕವಿ ಅನುಭಾವಿ ಪಥಿಕ. ಭಗೀರಥ ಸಾಹಸಿಕ. ಅವನಿತ್ತ ಶಿಲ್ಪಿಗನ ಉಪಮೆ; ಓದುಗರ ಮನಸ್ಸನ್ನು ಕೆಸರಲ್ಲಿ ಕಲ್ಲಿಟ್ಟಂತೆ ನೇರವಾಗಿ ನಾಟುತ್ತದೆ. ನಾಟಿ ಮುಂದೆ ನಡೆಸುತ್ತದೆ.

ಕವಿ ತಾನೂ ನಡೆದು ನಮ್ಮನ್ನೂ ನಡೆಯಿಸಿಕೊಂಡು ಒಂದು ನಿಲುಕಡೆ (ಊರಿ)ಗೆ ಬಂದು ನಿಲುಕುತ್ತಾನೆ. ನಿಲುಕಿದರೇನಾಯ್ತು? ನಡೆದು ಬಂದ ಪರಿಶ್ರಮದ ಫಲವಾಗಿ ಹಸಿವು ಹೆಚ್ಚಿದೆ. ಧನಿಕನೊಬ್ಬನ ದರ್ಶನವಾಗಿದೆ. ಅತನನ್ನು ಬೇಡದೆ ವಿಧಿಯಿಲ್ಲ. ಬೆಂದ ಒಡಲ ಹೊರೆಯುವ ಗತಿಯಿಲ್ಲ. ಕವಿ 'ಭಿಕ್ಷುಕ'ನಾದ ಕೈಯೊಡ್ಡಿ ಬೇಡಿದ. ಹೀಗೆಂದು ಹೇಳಿದ.

"ಕಲಿಕಾಲವಿಹುದೀಗ ನೀಡುವರು ಬಹಳಿಲ್ಲ
ಎಲ್ಲರನು ಕೇಳಿ ಬಂದೆ
ಉತ್ತರವನಿತ್ತರೈ 'ನಡೆಮುಂದೆ' ನೀನಿಲ್ಲಿ
ನಿಲ್ಲದಿರು ಹೋಗು ಮುಂದೆ"

ಕವಿ, ಕಲಿಕಾಲಿನವರ ಸ್ವಭಾವವನ್ನು ಸಹಜವಾಗಿ ಸಮರ್ಪಕವಾಗಿ ಚಿತ್ರಿಸಿದ್ದಾನೆ. ಕಾಲಮಹಿಮೆಯಿಂದ ತ್ಯಾಗಗುಣದ ಮೇಲೆ, ಸವಿನುಡಿಯ ಮೇಲೆ ಕಪ್ಪುಕಲೆ ಮೂಡಿದೆ. ನೀಡುವವರಲ್ಲಿ ಹೋಗಲಿ ನುಡಿಯುವವರಲ್ಲಿಯೂ ಔದಾರ್ಯವಿಲ್ಲ, ಔಚಿತ್ಯವಿಲ್ಲ. ಬಹುಜನ ಜಿಪುಣರು ನೀಡದ 'ನಡೆಮುಂದೆ'೧ ಎಂದು ಗದರಿಸಿದರು. 'ಹೋಗುಮುಂದೆ' ಎಂದು ಮರಳಿ ಗುಡುಗಿದರು. ಅಯ್ಯೋ, ಅವರಿಗೆ ಕರುಳಿಲ್ಲ, ಕಣ್ಣಿಲ್ಲ.

೧ ಕವಿ ವಾಣಿಯಿಂದ ಬಂದ "ನಡೆಮುಂದೆ" ಎಂಬುಕ್ತಿಯೂ ಕಲಿ ಜನರ ಬಾಯಿಂದ ಬಂದ ಅದೇ "ನಡೆಮುಂದೆ" ಎಂಬುಕ್ತಿಯೂ ಇರುವ ಧ್ವನಿ ಭಾವಗಳ ವ್ಯತ್ಯಾಸವನ್ನು ಕಾಣಬೇಕು.

"ಧನಕನಕ ಕೇಳದಲೆ ಇಂತಿವರು ಮಾಡುವರು
ಬಡಕೊಂಡೆ ಎನ್ನ ಕುಕ್ಷಿ
ಕೃಪೆಮಾಡು ಜವದಿಂದ ಅಂತರ್ಯಾಮಿ ಓ ಗುರುವೆ
ಬೇಡುವೆನು ಜ್ಞಾನಭಿಕ್ಷೆ!

ಕವಿ 'ಪಥಿಕ' ನಾಗಿ ಮುಂದೆ ನಡೆದು ಬಂದು ಪಸಿದು "ಭಿಕ್ಷುಕ"ನಾದುದು ಹೊಟ್ಟೆಗಾಗಿಯಲ್ಲ, ಹಿಡಿ ಹಿಟ್ಟಿಗಾಗಿಯಲ್ಲ; ಹೊನ್ನು ರತ್ನಗಳಿಗಾಗಿಯಲ್ಲ; ಅವನು ತನ್ನ ಹೊಟ್ಟೆಯನ್ನು ಬಡಕೊಂಡದ್ದು ಬರೀ ತನಗಾಗಿಯಲ್ಲ; ಜನರ ಹೀನ ಮನೋಭಾವಕ್ಕಾಗಿ, ಸ್ವಾರ್ಥ ಸಂಕುಚಿತತೆಗಾಗಿ ಅವನು ತನಗಾಗಿ ಬೇಡಿದ್ದು ಜ್ಞಾನಭಿಕ್ಷೆ! ಅದನ್ನು ಕರುಣಿಸುವ ಗುರುಗಳು ಕಲಿಕಾಲದಲ್ಲಿ ಬಹಳಿಲ್ಲ. ಅದನರಿತ ಗುರು ಸಾಸಿರಕ್ಕೊಬ್ಬ ಅಂತರಂಗವನ್ನು ಅರಿತವನೆ ಅರಿವವನೆ ಅಂತರ್ಯಾಮಿ. ಅವನೇ ಕರುಣಾಮಯಿ. ಅವನೇ ಶ್ರೀ ಗುರು. ಅಂಥವನಲ್ಲಿ ಈ ಕವಿ ಭಿಕ್ಷಕನು ಬೇಡಿದ್ದಾನೆ ಜ್ಞಾನ ಭಿಕ್ಷವನು.

ಒಂದು ಬೇಡಿ ನೂರೊಂದು ಪಡೆದಿದ್ದಾನೆ ಪಥಿಕ. ಅದರಿಂದ ಅವನ ಆ ಕಾಳರಾತ್ರಿಯ ಕುರುಡ ಜೀವನದಲ್ಲಿ "ದೀಪಾವಳಿ"ಯ ಹಬ್ಬ ಓಡಿ ಬಂದಿದೆ. ದೀಪಗಳ ಸಾಲು ಕೂಡಿ ನಿಂತಿವೆ. ಕವಿಯ ಕನಸು ಹೊಂಗನಸಾಗಿದೆ. ಅವನ ದೇಹ ದೇವಾಲಯವು ದೀಪಗಳ ಸಾಲಿನಿಂದ ರಾರಾಜಿಸಿದೆ. ಮುತ್ತಿದ್ದ ಕತ್ತಲೆ ಹರಿದು ಹೋಗಿ ಬೆಳಕಿನ ಒಬ್ಬುಳಿ ಮೂಡಿದೆ. ಶಾಂತಿ ನೆಲಸಿದೆ. ಸತ್ಯತೆಯು ಸಾರಿದೆ.

"ಹೃದಯದೀ ಪ್ರಣತೆಯೊಳು ಸದ್ಭಕ್ತಿ ತೈಲವನು
ಸುವಿಚಾರ ಬತ್ತಿಯನು ಹೊಸೆದಿಟ್ಟು ಹಚ್ಚಿದೊಡೆ
ಗುಡಿಯೊಳಗೆ ಮೆರೆಯುತ್ತ ಕುಳಿತಿರುವ ಈಶ್ವರನು
ಕೊಡುತಿಹನು ದರ್ಶನವ ಪರಂಜ್ಯೋತಿ ಬೆಳಗಿನೊಳು"

ಕವಿಯು ನಿಜವಾದ ಜೀವನ ದರ್ಶನವನ್ನು ಕಂಡುಕೊಂಡಿದ್ದಾನೆ ಕಳೆದು ಉಳಿವುದಾವುದೆಂಬುದನ್ನು ಅರಿತಿದ್ದಾನೆ. ಕಳೆಯೇರುವುದು ಯಾವುದರಿಂದ ಎಂಬು ದನ್ನು ಅನುಭವಕ್ಕೆ ತಂದುಕೊಂಡಿದ್ದಾನೆ. ಅದರಿಂದ ಆ ಸಾಧನೆಯನ್ನು ಮಾಡಿ ಶ್ರೇಷ್ಠ ಸಿದ್ಧಿಯನ್ನು ಸಾಧಿಸಿದ್ದಾನೆ ಕವಿಯ ಕಾಯ ಚಿಕ್ಕದಾಗಿರಬಹುದು? ಕಣ್ಣು ಚಿಕ್ಕದಲ್ಲ. ನುಡಿಯು ಪರಿ ಕೊರತೆಯುದಿರಬಹುದು. ನಡೆಯು ಗುರಿ ಕೊರತೆಯ ದಲ್ಲ. ಅದರಿಂದ ಕವಿವಾಣಿ ನಮ್ಮ ಮನಸ್ಸನ್ನು ಮುಟ್ಟುತ್ತದೆ. ಬುದ್ಧಿಯನ್ನು ತಟ್ಟುತ್ತದೆ. ಸತ್ಯಪೂರ್ಣ ಸಂದೇಶವನ್ನು ಸಾರುತ್ತದೆ.

ಅದೋ ಮೇಲಕ್ಕೆ ನೋಡು ಮುಗಿಲಲ್ಲಿ ಹಾರಾಡುತಿದೆ ಕವಿಯ ಕಾಂತಿ ಯುತ ಕಾಯವೆಂಬ "ಶಿವನಪಟ್ಟಿ" ನಿನ್ನ ಪಟ್ಟಿಯ ಹಾಗೆ ಮೇಲಕ್ಕೆ ಹಾರದೆಯೇ

ಇನ್ನೇನ್ನು ಬೇಕಾ? ಹಾಗಾದರೆ ಕೇಳು ಖಗೋಳ ಪಥಿಕನಾದ ಕವಿಯ ಬಾನುಲಿಯನ್ನು:

"ಹೃದಯಾಕಾಶದಿ ಏರಿಸು ಪುಟ್ಟಿ
ಅದರೊಳ್ ಜ್ಞಾನಸುದೀಪವನಿಟ್ಟು
ಮುತ್ತಿದ ಕತ್ತಲೆ ಮೊತ್ತವನಟ್ಟಿ
ಸುತ್ತುತ ಬರುತಿಹ ಗಾಳಿಯ ಕಟ್ಟಿ
ಬಂಧುರ ಸತ್ಯದ ಸ್ತಂಭವನೂರಿ
ಸುಂದರ ಭಕುತಿಯ ದಾರವ ತೂರಿ
ಅಷ್ಟಮದಂಗಳ ದಾರಿಯ ಮೀರಿ
ಆತ್ಮಾನಂದದ ಸೊಗವನು ತೋರಿ
ನಭದಲಿ ಬೆಳಗಲಿ ಚಿನ್ಮಯ ಕಿರಣ
ತುಂಬಲಿ ಪುಟ್ಟಿಯು ದೇವರ ಸ್ಮರಣ
ಆಗಲಿ ಜನನ ಮರಣದ ಹರಣ
ಇಂತೇರಿಸು ಶಿವಪುಟ್ಟಿಯ ಜಾಣ"

ಸತ್ಯಭಿಕ್ಷುಕನಾಗಿ ಅಂದರೆ ಸಚ್ಛಿಷ್ಯನಾಗಿ ಶ್ರೀ ಗುರುವಿನಿಂದ ಪಡೆದ ಕಾರುಣ್ಯಮಯ ಜ್ಞಾನಬೋಧೆಯನ್ನು ಬರೀ ಕಿವಿಯಲ್ಲಿ ಕೇಳಿ ಬಿಡಬಾರದು. ಹೃದಯಕ್ಕೆ ಮುಟ್ಟಿಸಬೇಕು. ಆಲಿಸಿದುದನ್ನು ಪಾಲಿಸಬೇಕು. ಭಕ್ತನಾಗಬೇಕು. ಜ್ಞಾನಿಯಾಗಬೇಕು. ಸತ್ಯವಂತನಾಗಬೇಕು. ಅಷ್ಟಮದದ ಪಂಚಪ್ರಾಣದ ಹಂಗಿಗ ನಾಗಬಾರದು. ಆತ್ಮಾನಂದದಲ್ಲಿ ನಲಿಯಬೇಕು. ಎತ್ತರದ ಬಾಳು ಬಾಳಬೇಕು ಬೆಳಗಬೇಕು. ಅದು ಆದರ್ಶ ಜೀವನ, ಉಜ್ವಲ ಜೀವನ, ಅಚ್ಚಳಿಯದ ಜೀವನ ಅಂತಾದಾಗ ಗುರುಕರುಣೆ ಪಡೆದುದಕ್ಕೆ ಸಾರ್ಥಕ ಎಂದು ಕವಿ ಹೇಳುತ್ತಾನೆ.

ಹೀಗೆ ಅಂಗವನ್ನು ಜ್ಯೋತಿರ್ಲಿಂಗಮಯವಾಗಿಸಿ ಹೃದಯಾಕಾಶದಲ್ಲಿ ಹಾರುವಾಗ ಹಾಡುವಾಗ ಅಲ್ಲಿರುವ "ಯ ಏಷೋಂತರಾದಿತ್ಯೆ ಹಿರಣ್ಮಯ ಪುರುಷೋದೃಶ್ಯತೇ" ಹೊನ್ನ ಹಕ್ಕಿಯೊಂದು ಕಾಣಿಸಿಕೊಳ್ಳುತ್ತದೆ. ಅದಕ್ಕೆ ಹಣ್ಣುಗಳ ಆಸೆಯಿಲ್ಲ. ಹೆಸರಿಲ್ಲ ರೆಕ್ಕೆ ಇದ್ದದ್ದೂ ಇಲ್ಲ. ಆದರೂ ಹಾರುತಿದೆ. ಎಲ್ಲರಲ್ಲಿಯೂ ಇದೆ. ಆದರೆ ಅನೇಕರಿಗೆ ಅದಾವುದೆಂದು ತಿಳಿಯದು. ತಿಳಿದವರು ತೀರ ವಿರಳ. ತಿಳಿದು ನಡೆದರೆ "ಅಮೃತವೆಂದು" ಲಭ್ಯವಾಗುವುದು. ಅಮರತೆ ಪ್ರಾಪ್ತಿಯಾಗುವುದು. ಸರ್ವಜ್ಞತೆ ಕೈ ಸಾರುವುದು ಆತ್ಮದ್ರಷ್ಟಾರ ನೆನಿಸುವನು. ಅವನೇ ಕಣ್ಣುಳ್ಳ ಕವಿ. ಅದೇ ಅವನು ಸೇರುವ ಮಾಮನೆ. ಅಲ್ಲಿ ನಿಂತು ಕವಿ ಅಮರಗಾನ ಮಾಡುವನು.

"ಎಲ್ಲಿ ಹೋದೆ ತಂದೆ" "ಮಟ್ಟೆ ಹೊಡೆದವಗೆ" "ಮೌನಂ ಸರ್ವಾರ್ಥ ಸಾಧನಂ" "ಸಮರ್ಪಣ" "ಮಂಗಲಗೀತೆ" "ರಾಷ್ಟ್ರಪಿತನಿಗೆ" "ಪ್ರೋತ್ಸಾಹ" "ಮಳೆಗಾಲ" "ಬಿಡುವನೇ" "ಶಿವಯೋಗಮಂದಿರ" "ನಾವಿಕನನ್ನು ಕುರಿತು" "ಸುಕುಮಾರನಿಗೆ" "ಶಮೀಸಮರ್ಪಣ" "ಪ್ರೇರಣೆಗೆ" "ಬಡವ" "ವಿಜಯೋತ್ಸವ" "ಉತ್ತಿಷ್ಠತ"

ಕವಿ ಈ ಕವನಗಳನ್ನು ಕಟ್ಟಿ ಹಾಡಿದ್ದಾನೆ. ತನ್ನ ಕವಿತನದ ಲಕ್ಷಣಗಳನ್ನು ಸಾಧ್ಯವಾದಮಟ್ಟಿಗೂ ಇವುಗಳಲ್ಲಿ ಎತ್ತಿ ತೋರಿದ್ದಾನೆ ಅಲ್ಲದೆ ಕೆಳಗೆ ಕಾಣಿಸಿದ ಈ ಮಾತುಗಳು ಮನೋಹರವಾಗಿವೆ ಮಾರ್ಮಿಕವಾಗಿವೆ.

"ಉಷೆಯೊಳು ಇರುವುದು ಒಂದೇ ಕಣ್ಣು"
ನಿಶೆ ತಾ ಮುತ್ತಲು ಸಾವಿರ ಕಣ್ಣು
"ನಿಶೆಯು ಕಳೆದು ಉಷೆಯು ಬರಲಿ
ಹೃದಯ ಭಾವಿ ತೊಳೆದು ಮುಕ್ತನಾಗು ನೀ"
"ಇನ್ನು ಅಳಿಯಲಿ ಜಾತಿ ಭೇದವು
ಮುನ್ನ ಬೆಳೆಯಲಿ ಒಂದೇ ಭಾವವು"
"ಸುಕುಮಾರನಿಲ್ಲದಿರೆ ಜನಕೆಲ್ಲ ಕಡು ದುಃಖ
ಸುಕುಮಾರ ಮನೆಗೆಲ್ಲ ಸುಖಸಾರ ಸಂಭಾರ"

—ಇತ್ಯಾದಿ

ಕನ್ನಡಿಗನಾದರೂ ಕವಿ ಹೃದಯ ಭಾರತದ ವಿಜಯಕ್ಕೆ ಮಿಡಿದಿದೆ. ಭಾವ ವಿಶಾಲತೆಯು ಬೀರಿದೆ. ಭಾಷಾಮಯಿಯಾಗಿ ಹೊಮ್ಮಿದೆ.

"ವಿಜಯವಾಗಲಿ ನಮ್ಮ ಭಾರತನಾಡು
ಸುಜನ ಸಂಕುಲವನ್ನು ಪೆತ್ತು ಮೆರೆದಿಹನಾಡು

ಎನ್ನುತ್ತಾನೆ ಕವಿ. ಭಾರತ ಪ್ರೇಮವನ್ನು ಉಗ್ಗಡಿಸಿದ್ದಾನೆ. ಭಾರತಕ್ಕಾದ ವಿಜಯವನ್ನು ಕಂಡು ಕವಿ ಉಲ್ಲಾಸ—ಉತ್ಸಾಹಗಳಿಂದ ಉಬ್ಬಿದ್ದಾನೆ.

"ವೀರರಾತ್ಮಗಳಿಂದು ತೃಪ್ತಿ ಹೊಂದುವ ದಿನವು
ಭಾರತೀಯರ ಕೈಗೆ ರಾಜ್ಯ ದೊರೆಯುವ ದಿನವು
ವೀರತನವನು ಪೊಂದಿ ದೇಶವಾಳುವ ದಿನವು
ಭಾರತೀಯರೇ ಎನ್ನಿ ಹರುಷದಲಿ ಮುಂದಿನ್ನು"
"ವೀರರಹ ಧೀರರಹ ನಿನ್ನ ಮಕ್ಕಳಿಗಿನ್ನು
ಭೂರಿ ಸಂತಸದಿಂದ ಕರುಣಿಸೌ ಓ ತಾಯೆ"

ಕವಿ ಹರುಷದಲಿ ತೇಲಿ ವಿಜಯ ತಂದ ದಿನವನ್ನು ವಿವಿಧವಾಗಿ ವರ್ಣಿಸಿ ತುಂಬಿದ ಎದೆಯಿಂದ ಅತ್ತ ಭಾರತೀಯರನ್ನು ಆಹ್ವಾನಿಸಿದ್ದಾನೆ. ಇತ್ತ ಭಾರತಾಂಬೆಯನ್ನು ಕರುಣಿಸೆಂದು ಕರುಳಿನಿಂದ ಕೋರುತ್ತಾನೆ.

ಗೋಡ್ಸೆ ಗುಂಡಿಗೆ ಆಹುತಿಯಾಗಿ ಕಣ್ಮರೆಯಾದ ಗಾಂಧೀಜಿಯನ್ನು ಕಂಡು ಕವಿ ಹೃದಯ ತಲ್ಲಣಿಸಿದೆ

"ಮುಳುಗಿದನು ಮುಳುಗಿದನು ಭಾರತದ ಚಿತ್ಸೂರ್ಯ
ಮುಳುಗಿದನು ಮುಳುಗಿದನು ಸತ್ಯಕಿರಣದ ಸೂರ್ಯ"

ಕವಿಯ ಈ ಬಾಷ್ಪಾಂಜಲಿಯಲ್ಲಿಯೂ ಇಡಿದಾದ ಭಾರತದ ಮುಂದಿನ ಚಿಂತೆ: ಮುಸುಗಿ ಮುತ್ತಿ ಬರುವ ಕಾಳ್ಗತ್ತಲೆಯ ಕಳೆವ ಚಿಂತೆ, ಅದರಲ್ಲಿ ದಾರಿ ತೋರುವರಾರೆಂಬ ಚಿಂತೆ ತುಂಬಿ ಬಂದಿದೆ. ಜ್ಞಾನ ಮತ್ತು ಸತ್ಯಗಳ ಹಂಬಲ ಹೊಮ್ಮಿದೆ. ಭಾರತವ ರೂಪದಲ್ಲಿ ಮಹಾತ್ಮರ ಸೇವೆ ಸಲ್ಲಿಸುತ್ತಿರುವವರು ಬಹುಮಂದಿ ಸ್ವಾರ್ಥಕ್ಕೆ ಸಿಕ್ಕಿ ಸತ್ಯದ ನಿಗ್ರಹ ಮಾಡುತ್ತಿದ್ದಾರೆ. ಅಹಂಕಾರಕ್ಕೆ ಸಿಕ್ಕಿ ಅರಿವಿನ ದುರುಪಯೋಗ ನಡೆಸಿದ್ದಾರೆ. ಹೀಗಾಗುವುದನ್ನು ಅಂದೆ ಕಂಡು ಕವಿ ಮಮ್ಮಲನೆ ಮರುಗಿದ್ದಾನೆ. ಆ ಚಿತ್ಸೂರ್ಯ ಮುಳುಗಿದ ಮೇಲೆ ನಡೆಯುತ್ತಿರುವ ಇಂದಿನ ಭಾರತದ ಭೀಕರ ಚಿತ್ರವಿದು.

"ಸ್ವಾತಂತ್ರ್ಯ ದೊರೆತರೂ ನಡೆದಿಹುದು ಸುತ್ತೆಲ್ಲ
ಕಳ್ಳ ಸುಲಿಗೆಗಳಾ ಬಡಿದಾಟ ಕೊಲೆಯಾಟ
ಅನ್ನ ನೀರಿಲ್ಲದಲೆ ಮರಗುತ್ತ ಕೊರಗುತ್ತ
ಸಾಯುದಾ ಜನಸಂಖ್ಯೆ ಹೆಚ್ಚುತ್ತಲಿರುವದಯ್ಯ"

ಸ್ವಾರ್ಥ, ಅಸತ್ಯ, ಅಜ್ಞಾನ, ಆಹಾರದ ಅಭಾವ ಈ ವಿಪತ್ತಿಗೆ ಮೂಲ ಬೀಜವೆಂದು ಕವಿಯು ಹೇಳುತ್ತಾನೆ. ತೃಪ್ತಿಯಿಲ್ಲದ ತ್ಯಾಗವಿಲ್ಲದ ಸ್ವಾತಂತ್ರ್ಯ ಸತ್ಯಕ್ಕೆ ಕೊರತೆಯದೆಂದು ನುಡಿಯುತ್ತಾನೆ. ಕೊನೆಗೆ ಸ್ವಾತಂತ್ರ್ಯ ಆತ್ಮಶಕ್ತಿಗೆ ಸಾಧನವಾಗಲೆಂದು ಹೃದಯಾರೆ ಹರಸುತ್ತಾನೆ.

ಆತ್ಮಸಾಧನೆಯ ಮಾಡಿ ಆತ್ಮವೀರರಾಗಿ ಬಾಳಬೇಕೆಂಬುದು ಕವಿಯ ಗಾಢ ಮನಿಷೆ! ಅದಕ್ಕಾಗಿ ಕವಿಯ ಕಲ್ಮಷರಹಿತ ಹೃದಯವಾಣಿ ಉಕ್ಕಿ ಬಂದಿದೆ. 'ಉತ್ತಿಷ್ಠತ' ಎಂಬ ಕವನರೂಪದಲ್ಲಿ ಉಗ್ಗಡಿಸುತ್ತಾನೆ. ಅದರಲ್ಲಿ ಎಲ್ಲರನ್ನು ಪ್ರಚೋದಿಸುವ ಪ್ರಚೋದಲಹರಿ ಇದೆ, ವೀರರಸವಿದೆ. "ಉತ್ತಿಷ್ಠ ಜಾಗ್ರತ" ಎಂಬ ನಾಣ್ನುಡಿಯ ಆತುರತೆಯಿದೆ. ಹೂವುಗಳಂತೆ ಹೃದಯಗಳು ಅರಳಬೇಕೆನ್ನುತ್ತಾನೆ. ಹಕ್ಕಿಗಳಂತೆ ಹಾರಬೇಕೆನ್ನುತ್ತಾನೆ. ಭಾಸ್ಕರನ ಬೆಳಕಿನಂತೆ ಬುದ್ಧಿಯ ಬೆಳಕು ಹಬ್ಬಬೇಕೆನ್ನುತ್ತಾನೆ. ಮದವನ್ನು ಮುರಿದು; ತೋಳ್ಬಲವನ್ನು ತಂದು

ಗುರಿಯನ್ನು ಗುರುತಿಸಬೇಕೆನ್ನುತ್ತಾನೆ. ಆ ಗುರಿಯ ಸಾಧನೆಗೆ ಹೊರತಾದುದನ್ನ ಕವಿ ಸಹಿಸ:

"ಜರಿಯೋಣ ಜವದಿಂದ ಸಂಸಾರ ಜಂಜಾಟ
ಮನಸಿನ ಶಾಂತಿಯನು ಕಳದೇಕೆ ಹೊರನೋಟ
ರತ್ನವನು ಹುಡುಕುವುದು ಬಿಟ್ಟೇಕೆ ಅಲೆದಾಟ
ಆಡೋಣ ಶಕ್ತಿಯನುಗಳಿಸಲ್ಕೆ ಶಿವನಾಟ!
ಪ್ರಕೃತಿ ರಂಗದಿ ಬಾಳಿ ಸಂಪತ್ತು ಗಳಿಸೋಣ
ಪ್ರಾಕೃತಿಕ ಭಾವದೊಳು ಸತ್ಯತೆಯ ಕಾಣೋಣ
ಶಕ್ತಿ ತಾನಿಲ್ಲೆಂದು ಕೂಡ್ರುವುದು ಹಿತವಲ್ಲ
ಸೋಲು ತಾ ಬರುತಿರೆ ಹೆದರುವುದು ವಿಹಿತವಲ್ಲ.
ದುಡಿಮೆಯು ಮಾನವನ ಬಾಳಿಗಿದು ಹಿರಿಬೆಳಕು
ದುಡಿದಂತೆ ದೂರಪುದು ಪೆತ್ತಿರುವ ಮನಕೊಳಕು
ದುಡಿಯಲಾರದ ವ್ಯಕ್ತಿ ಬಿದ್ದಿರುವ ಹೆಣದಂತೆ
ದುಡಿವವನ ದಿಟಬಾಳು ಕನಕದರ್ಪಣದಂತೆ
ಎದ್ದೇಳಿ ನಡೆಯೋಣ ಭಕ್ತಿ ಭಿಕ್ಷವ ಬೇಡಿ
ಸಿದ್ಧರಿರಿ ನೀವೆಲ್ಲ ವಿರತಿ ಗಂಧವ ತೀಡಿ"

ಕವಿ ಆ ಆತ್ಮಸಾಧನೆಗೆ ಆಹ್ವಾನ ಕೊಡುತ್ತಿದ್ದರೂ ಎಚ್ಚರಿಕೆ ಹೇಳುತ್ತಿದ್ದರೂ ಭೌತಿಕದ ಬಾಳನ್ನು ಗಾಳಿಗೆ ತೂರಿಲ್ಲ. ಇಹದ ಅಭ್ಯುದಯದ ಮೇಲೂ ಕಣ್ಣಿದೆ. ಈ ಲೋಕದ ಸುಖಸಂಪತ್ತುಗಳು ಪುಣ್ಯದ ಫಲವೆಂದು ವಿಧಿಬಲವೆಂದು ಹುರುಳಿಲ್ಲದ ಹೇಡಿ ನುಡಿಗಳ ನಾಡಿಲ್ಲ ದುಡಿಮೆ ಬೇಕೆಂದು ಎಲ್ಲರೂ ದುಡಿಯಬೇಕೆಂದು ಕವಿ ವಾಣಿಯಲ್ಲಿ ಕರುಳರಿವಂತೆ ಹೇಳುತ್ತಾನೆ. ಸೋಲಿನಲ್ಲಿಯೂ ಸಹ ಜೋಲು ಬೀಳಬಾರದೆಂದು ಕವಿ ಮೇಲಿಂದ ಮೇಲೆ ಹೇಳುತ್ತಾನೆ. ಕವಿಯ ಸ್ಥೈರ್ಯ ಗುಣಕ್ಕೆ ಸಾಹಸ ಪ್ರಿಯತೆಗೆ ಇದು ಕುರುಹು. ಭಕ್ತಿರಸದೂಟಕ್ಕೆ ಎದ್ದೇಳಿ ಎನ್ನುತ್ತಾನೆ ಕವಿ. ತ್ಯಾಗಗಂಧವ ತೀಡಲು ಮರೆಯದಿರೆಂದು ಎಚ್ಚರವೀಯುತ್ತಾನೆ. ಪಥಿಕನ ಗುರಿ ಭಕ್ತಿಯಲ್ಲಿ ಜ್ಞಾನದಲ್ಲಿ ತ್ಯಾಗದಲ್ಲಿ! ತನ್ನಂತೆ ಎಲ್ಲರೂ ಆ ದಾರಿಕಾರರಾಗಬೇಕೆಂಬ ವಿಶಾಲ ದೃಷ್ಟಿ ಕವಿಗಿದೆ. ಸತ್ಯದೃಷ್ಟಿಕರ್ತನಾಗುವ ತೀವ್ರಾಸಕ್ತಿಯಿದೆ.

ಈ ಪಥಿಕನಿಗೆ "ಪಥಿಕ" ಕವನದಲ್ಲಿ ಹೇಳಿದಂತೆ ಯಾವ ಸಾಧನ ಸಂಪತ್ತಿ ಇಲ್ಲದಿದ್ದರೂ ಅಂಗಸೌಷ್ಠವದ ಅಭಾವವಿದ್ದರೂ ತನ್ನ ಅಂತಃಪ್ರೇರಣೆಯಮೇಲೆ ಅಪಾರ ವಿಶ್ವಾಸವಿದೆ.

"ನಡೆಮುಂದೆ ಎನ್ನುತ್ತ ದೂಡೆನ್ನ ಪ್ರೇರಣೆಯು
ಆತ್ಮರಾಜ್ಯದೊಳಾನರಸಾಗಿ ಬಾಳ್ವಂತೆ!"

ಆತನ ಆ ಅಂತಃಪ್ರೇರಣೆಯು, ಆತನನ್ನು ಬರೀ "ನಡೆಮುಂದೆ" ಎಂದು ನುಡಿದರೆ ಸಾಲದು, ಕೈಯಿಂದ ದೂಡಬೇಕಂತೆ! ಅದೇನು ಆತುರತೆ, ಅದೆಂತಹ ಉತ್ಕಟತೆ? ಆತ್ಮರಾಜ್ಯದ ಅರಸಾಗಿ ಬಾಳುವ ಹೊಂಗನಸು ಪಥಿಕನದು. ತನಗೆ ಆ ರಾಜಬೀದಿಯನ್ನು ತೋರುವುದು ತನ್ನ ಪ್ರೇರಣೆ! ತನ್ನ ಆ ಪ್ರೇರಣೆಯಲ್ಲಿ ಅಂತಹ ಶಕ್ತಿಯಿಲ್ಲದಿಲ್ಲ 'ಪ್ರೇರಣೆಯೇ ಧಾರುಣಿಗೆ ಚೇತನ ಕೊಡುತಿಹುದು.' ಒಬ್ಬ ವ್ಯಕ್ತಿಗೆ ಕೊಡದಿದ್ದೀತೆ? ಕವಿಯ ಕಣ್ಣು ಪ್ರೇರಣೆಯ ಬೆನ್ನು ಬಿದ್ದಿದೆ. ತಬ್ಬಲು ತವಕಗೊಂಡಿದೆ.

ಪ್ರೇರಣೆ ಪ್ರತಿಯೊಬ್ಬರಿಗೂ ಬೇಕು. ಅದಿಲ್ಲದ ಜೀವನ ಜೀವನವಲ್ಲ. ಅಲ್ಲಿ ವಿಕಾಸವಿಲ್ಲ, ಪ್ರಕಾಶವಿಲ್ಲ, ಪೆಂಪಿಲ್ಲ, ಕಂಪಿಲ್ಲ.

"ಪ್ರೇರಣೆಯು ಬಲವಿರದ ಆ ಜೀವ ಆ ಭಾವ
ದಿನಕರನು ತಾನಿರದ ನೀರಜದ ತೆರದಂತೆ
ಪ್ರೇರಣೆಯು ತುಂಬಿರುವ ಹೃದಯವದು ಕಾಣ್ಪುದು
ಸ್ವರ್ಣಘಟದಂತೆ ಮೇಣ್ ಸೌಗಂಧ್ಯದಲರದಂತೆ!"

ಕವಿಯದು ಈ ಭಾವ. ಸತ್ಪ್ರೇರಣೆಯಿಲ್ಲದವನು ಬೆಳಕಿಗೆ ಬಾರನೆಂಬುದು ಸಾವಿರ ಪಾಲಿಗೂ ಸತ್ಯ. ಕವಿಗೆ ಪ್ರೇರಣೆಯ ಬಲವೇ ಬಲ. ಆ ಚಲುವೇ ಚಲುವು. ಅದರಿಂದ ಆತನ ಶೈಲಿಯಲ್ಲಿ ಪ್ರಾಸಿನ ಮಾಟವನ್ನು ಬೆದಕಬೇಕಾಗಿಲ್ಲ. ಆತನ ಭಾವಪ್ರೇರಣೆಯ ಓಟವನ್ನು ನೋಡಿ ನಲಿಯಬೇಕು. ಹೃದಯರಸದೂಟವನ್ನು ಉಂಡು ಒಲಿಯಬೇಕು.

"ಬಡತನದ ಬೇಗೆಯಲಿ
ಬೆಂದಿಹುದು ಬಾಳೆಂದು
ಅಳಲದಿರು ಬಳಲದಿರು
ಬಳಲಿ ನೀ ಚಿಂತಿಸದಿರು"

ಎಂದು ಮನಸ್ಸಿಗೆ ಬೋಧಿಸುತ್ತಾನೆ. ಕಾಳಿದಾಸ, ಮಾಘ, ಷಾ, ಷೆಲ್ಲಿ ಕವಿಗಳು ಬಡವರಾದರೂ ಕಾವ್ಯರಾಜ್ಯ ಕಟ್ಟಲಿಲ್ಲವೆ? ಆಳಿ ಬೆಳಸಲಿಲ್ಲವೇ? ಚಿರಕೀರ್ತಿ, ಚಿರಶಾಂತಿ ಗಳಿಸಲಿಲ್ಲವೆ? ಎಂದೆನ್ನುತ್ತಾನೆ. 'ಬಡವಾದರೇನಂತೆ ಸಾಹಿತ್ಯ ಬೆಳಸಲ್ಕೆ ಎಂಬುದು ಕವಿಯ ಭಾವ; ಕಲಾಭಿಮಾನ. ಈ ಸಂಪತ್ತು ನಶ್ವರ: ಸಾಹಿತ್ಯ ಸಂಪತ್ತು ಶಾಶ್ವತ. ಕಾಣುವ ರಾಜ್ಯ ಅಸ್ಥಿರ; ಕಾವ್ಯರಾಜ್ಯ ಸುಸ್ಥಿರ. ಅದ್ದರಿಂದ ಕವಿ ಬಡವನಲ್ಲ. ಕಾವ್ಯರಾಜ್ಯದಿಪ. ಸಾಹಿತ್ಯ ಸಂಪತ್ತಿದೆ—ಸಾಲದೆ? ಎಂದು,

ಮನಸ್ಸಿಗೆ ಸಮಾಧಾನ ಹೇಳುತ್ತಾನೆ. ಕಾವ್ಯತೀರ್ಥ–ಸಾಹಿತ್ಯ ರತ್ನನಾದ ಕವಿಗೂ ಅದರಲ್ಲಿ "ಪುರಸ್ಕಾರ"ವಿದೆ. ಅದರಿಂದ ಭಾರತದ ಕವಯಿತ್ರಿ ಶ್ರೀಮತಿ ಸರೋಜಿನಿ ನಾಯಿಡು ಅವರ "ಪುರಸ್ಕಾರ" ಕವನಕ್ಕೆ ಕವಿಯು ಭಾವ ಬಳುಕಿದೆ. ಭಾವಾನು ವಾದವನ್ನು ನೆರವೇರಿಸಿದ. ಪುರಸ್ಕಾರವಿತ್ತಿದ. ಕವಿವಾಣಿ ಹೀಗೆ ಹಂಬಲಿಸಿದೆ.

"ಸ್ರೋತವಗೆ ಮಾನಸಿಕ
ಶಾಂತಿಯನು ಕರುಣಿಸೈ
ಓ ನನ್ನ ಗುರುದೇವ
ಕೃಪೆಮಾಡು ನೀನೆನಗೆ
ಕವಿತೆಯಾ ಶಕ್ತಿಯದು
ಬೆಳೆವಂತೆ ಲತೆಯಂತೆ?"

ಎಂದು ಕವಿ ಪ್ರಾರ್ಥಿಸುತ್ತಾನೆ. ಕಾವ್ಯಶಕ್ತಿಯನ್ನು ಅರ್ಥಿಸುತ್ತಾನೆ. ತನಗೆ ಕಾವ್ಯಶಕ್ತಿ ಸುಳಿಯಿಡುವ ಗಾಳಿಗೆ ಬಳುಕುವ ಲತೆಯಂತೆ ಬೆಳೆದು ಬರಬೇಕಂತೆ! ಸ್ರೋತವನ ಎದೆಗೆ ಶಾಂತಿಯನು ಕೊಡುವಂತೆ ಕರುಣಿಸಬೇಕಂತೆ!!

ಲತೆಯ ಉಪಮೆಯಿಂದ ಕವಿಗೆ ಕಾವ್ಯಶಕ್ತಿ ಬಂದರೂ ಕಾಠಿಣ್ಯ. ಹಠಭಾವ ಬೇಡವೆಂಬುದನ್ನು ಬಳ್ಳಿಯಂತೆ ಬಾಗುವ ವಿನಯ ಗುಣ ಬೇಕೆಂಬುದನ್ನು ಅರಿಯ ಬಹುದಲ್ಲವೆ?

ಸಂಭವಿಸಿದ ಆ ಕಾವ್ಯಶಕ್ತಿಯಿಂದ ಪಥಿಕನಾದ ತಾನು ನೀರಲ್ಲಿ ನೆಲದಲ್ಲಿ ಗಾಳಿಯಲ್ಲಿ ಬೆಂಕಿಯಲ್ಲಿ ಶೈಲ ಶಿಖರದಲ್ಲಿ ಲೀಲಾಜಾಲವಾಗಿ ಹೋಗಬಲ್ಲನಂತೆ! ಚಂದ್ರನಂತೆ ತಂಪಾಗಿ ಸೂರ್ಯನಂತೆ ತೇಜಸ್ವಿಯಾಗಿ ಸಲಿಲದಂತೆ ಸರಸನಾಗಿ ಮೆರೆಯಲಾಸೆಯಂತೆ! ಕವಿಗೆ ಬಾನ್ ಬಲುಕಿರಿದಂತೆ! ಬನಮಿಗಿಲಂತೆ; ಚಲುವಂತೆ! ಮೂಲೋಕದ ತುಂಬ ಮನೆಗಳಂತೆ! ಅಲ್ಲದೆ,

"ಅಳಿವುದೊಮ್ಮ ಬ್ರಹ್ಮಸೃಷ್ಟಿ
ಉಳಿವುದಂತ್ಯ ಕವಿಯಸೃಷ್ಟಿ"

ಆದರಿಂದ ಈ ಪಥಿಕನಿಗೆ ಕವಿಯಾಗುವ ಕೆಚ್ಚು–ಮೆಚ್ಚು; ಸಾಹಸ ಹೆಚ್ಚು.

ಈ ಕವಿಯು ಸಾಹಸ ಕೈಗೂಡಿ ಬರುವ ಆಶೆಯಿದೆ. ಕವಿ ತನ್ನ ಸಾಧನೆಯನ್ನು ಮನಮುಟ್ಟಿ ಮಾಡಿದ್ದಾನೆ. ಶಿವಯೋಗಮಂದಿರದಲ್ಲಿ ಓದುವಾಗ ಕಾಲವನ್ನು ವೃಥಾ ಕಳೆದಿಲ್ಲ. ಅಲ್ಲಿಗೆ ತಾನುಬಂದ ಧ್ಯೇಯವೇನೆಂಬುದನ್ನು ಚನ್ನಾಗಿ ಅರಿತು ತನ್ನ ಸಾಧನೆಯಲ್ಲಿ ನಿರತಿದ್ದಾನೆ. ತನ್ನ ಬುದ್ಧಿಯನ್ನು ಬಿತ್ತರಿಸಿದ್ದಾನೆ. ತನ್ನ ಬಾಳನ್ನು ಎತ್ತರಿಸಿದ್ದಾನೆ. ಆದರೆ ಆಳಮಾತ್ರ ಇನ್ನೂ ಹೆಚ್ಚಿಸಬೇಕು. ಶಬ್ದ ಸಂಪತ್ತು ಅಭಿವೃದ್ಧಿಯಾಗಬೇಕು. ಶೈಲಿಯಲ್ಲಿ ಬಿಗುವು ಬರಬೇಕು.

ಶಿವಯೋಗಮಂದಿರದ ಸಾಧಕ ವೃಂದಕ್ಕೆಲ್ಲ ಶ್ರೀ ಮಹಾಂತದೇವರು ಒಬ್ಬ ಮಹಾ ಆದರ್ಶಸಾಧಕ ಕೃತಕ ಬಾಳಿಗೆ ಸ್ಥಳವನ್ನು ಕೊಡದೆ ಕೃತಾರ್ಥ ಜೀವನ ಪಥದಲ್ಲಿ "ಪಥಿಕ"ರಾಗಿ ಮುನ್ನಡೆದಿದ್ದಾರೆ. ಸರ್ವರಿಗೂ ಸಾಧ್ಯವಾಗದ ಸಾಹಿತ್ಯಾಭಿರುಚಿಯನ್ನು ಸುಲಭವಾಗಿ ಬೆಳೆಸಿಕೊಂಡಿದ್ದಾರೆ. ನೂತನ ಮಾನವೀಯತೆಯ ಉನ್ನತಮಟ್ಟವನ್ನು ಮನವರಿಕೆ ಮಾಡಿಕೊಂಡಿದ್ದಾರೆ. ವಿರತಿ ಜೀವನವನ್ನು ಸಾಹಿತ್ಯ ಸಾಂಸ್ಕೃತಿಕ ಸೇವೆಯಿಂದ ಸಾರ್ಥಕಪಡಿಸುವ ವಿಶೇಷ ರೀತಿಯನ್ನು ತಾಳಿದ್ದಾರೆ. ವಿರತಿಗೆ ಈ ರೀತಿ ಶೋಭಾಯಮಾನವಲ್ಲವೇ? ಈ ಪ್ರೇರಣೆ ಈ ಪ್ರಯೋಗ ಧೋರಣೆ ಪ್ರತಿಯೊಬ್ಬ ಸಾಧಕನಿಗೂ ಮನಸಿನಮೇಲೆ ಮೂಡಿಬರಬೇಕು. ಇವನ್ನು ಒಬ್ಬರಲ್ಲಿಯೂ ಕಾಣುವದು ಕಷ್ಟಸಾಧ್ಯವಾಗಿದೆ.

ಬೌದ್ಧಿಕ ಮತ್ತು ಆಧ್ಯಾತ್ಮಿಕ ವಿಕಾಸವು ಇಂದಿನ ವಿಜ್ಞಾನ ಯುಗದಲ್ಲಿ ಅತ್ಯಾವಶ್ಯಕ! ಅದಕ್ಕಾಗಿಯೇ ಮೀಸಲಾಗಿ ಸಂಸಾರವನ್ನು ತ್ಯಜಿಸಿ ಬಂದವರಿಗಂತೂ ಮತ್ತೂ ಅವಶ್ಯಕ. ಇಂದು ವಿಜ್ಞಾನದ ವಿಸ್ತಾರ ದಿನ ದಿನಕ್ಕೂ ಗಳಿಗೆ ಗಳಿಗೆಗೂ ವಿಶೇಷವಾಗಿ ಸಾಗುತ್ತಿರುವಾಗ ನಮ್ಮ ಬುದ್ಧಿ ವಿಕಾಸವಾಗಬೇಡವೆ? ಅಶಾಂತಿ ಅನೈಕ್ಯತೆ ತಾಂಡವವಾಡುತ್ತಿರುವಾಗ ಆತ್ಮಶಕ್ತಿ ಆತ್ಮೀಯ ಶಕ್ತಿಗಳನ್ನು ಮೈಗೂಡಿಸಿಕೊಳ್ಳಬೇಡವೆ? ಮಹಾತ್ಮನಾಗುವ ಮಾನವಶಕ್ತಿಯು ಅಪವ್ಯಯವಾಗಬಾರದು. ಕಾವ್ಯಸಿದ್ಧಿಗಿರುವ ಬುದ್ಧಿಶಕ್ತಿಯು ವಂಚನೆಯಾಗಬಾರದು. ಕಲಿತ ವಿದ್ಯೆಯು ಉಪಯೋಗವಾಗಬೇಕು. ಬಲಿತ ತಪಸ್ಸಿನ ಪ್ರಯೋಗವಾಗಬೇಕು ಎಂಬುದನ್ನು ಮಹಾಂತದೇವರು ಮನಸಾರೆ ಒಪ್ಪಿ ಆ ಮಾರ್ಗವನ್ನು ಅಪ್ಪಿಕೊಂಡಿದ್ದಾರೆ. "ಪಥಿಕ" ರೂಪದಲ್ಲಿ ಪ್ರಯೋಗ ನಡೆಸಿದ್ದಾರೆ. ಫಲಿತಾಂಶಕ್ಕಾಗಿ ಚಾತಕ ಪಕ್ಷಿಯಂತೆ ಪ್ರಾರ್ಥನೆಯು ಮಾಡಿದ್ದಾರೆ.

ಈ "ಪಥಿಕ" ಕಾವ್ಯವು 'ಪ್ರಾರ್ಥನೆ'ಯಲ್ಲಿ ಪರ್ಯವಸಾನವಾಗುತ್ತದೆ. ಪಥಿಕನ ಪಾತ್ರ ಪ್ರಾರ್ಥನೆಯಲ್ಲಿಯೂ ಮೂಡಿಬಂದು ತನ್ನ ಗುರಿಯನ್ನು ನಾವು ಮೊದಲು ಹೇಳಿರುವಂತೆ ತನ್ನ ಏಕಸೂತ್ರತೆಯನ್ನು ಚೆನ್ನಾಗಿ ಕಾಪಾಡಿಕೊಂಡಿದೆ.

ಪಥಿಕನು ಪ್ರಯತ್ನಪಟ್ಟು ತಾನು ಸೇರಲಿರುವ ಮಂದಿರದ ಬಾಗಿಲ ಬಳಿ ಬಂದಿದ್ದಾನೆ. ಇನ್ನು ಒಳ ಹೋಗಲಾರನೆ? ಇಲ್ಲಿಗೆ ಬಂದ ಈ ಪಥಿಕನಿಗೆ ಕಾಲಿಲ್ಲದಿದ್ದರೂ ಬಲವೇ ಕಾಲಾಯಿತು. ಕಣ್ಣಿಲ್ಲದಿದ್ದರೂ ಅರಿವೇ ಕಣ್ಣಾಯಿತು. ಜ್ಞಾನಭಿಕ್ಷುವಾದ ಈ ಪಥಿಕನಿಗೆ ಜ್ಞಾನವೇ ಬೆಳಕು, ಭಾಗ್ಯ, ನೌಕೆ, ವಪ್ರಗಳಾಗಿ ಸರ್ವಸ್ವವಾಗಿ ಪರಿಣಮಿಸಿತು. ಆ ಜ್ಞಾನ ತೇಜಸ್ಸಿನ ಮುಂದೆ ಈ ಕಾಳರಾತ್ರಿ ನಿಲ್ಲಲಿಲ್ಲ. ಆ ಜ್ಞಾನ ಸಂಪದದ ಮುಂದೆ ಈ ಹೀನ ಧನದ ಬಡತನ ಕಾಣಲಿಲ್ಲ. ಆ ಜ್ಞಾನ ನೌಕೆಗೆ ಈ ಮೋಹದ ತೆರೆ–ಕರೆಗಳು ಅಡ್ಡಾಗಲಿಲ್ಲ. ಆ ಜ್ಞಾನ

ವಜ್ರಕ್ಕೆ ಈ ಅಜ್ಞಾನ ಗಿರಿ ಶಿಖರಗಳು ಪುಡಿಯಾಗದೆ ಉಳಿಯಲಿಲ್ಲ. ಪಥಿಕ ಅವರ ಬಲದಿಂದ ಹಾಯಾಗಿ ಹಾದಿ ನಡೆದು ಬಂದಿದ್ದಾನೆ. ತಾಪಗಳನ್ನು ತುಳಿದು ಬಂದಿದ್ದಾನೆ. ತಮಸ್ಸನ್ನು ತೊಡೆದು ಬಂದಿದ್ದಾನೆ. ಆದರೂ "ಬಲವಾನ್ ಇಂದ್ರಿಯ ಗ್ರಾಮೋ ವಿದ್ವಾಂಸಮಪಿ ಕರ್ಷತಿ" ಎಂಬುದು ಸತ್ಯ ಮತ್ತು ಜ್ಞಾನ ಪಿಪಾಸು ತನ್ನ ಸಾಧನೆಯ ಜೀವನದಲ್ಲಿ ಅನೇಕ ಕಷ್ಟ-ಕೊರತೆಗಳನ್ನು ಎದುರಿಸಿ ಮುನ್ನಡೆಯಬೇಕಾಗುತ್ತದೆ. ಅಲ್ಲದೆ "ಶ್ರೇಯಾಂಸಿ ಬಹು ವಿಘ್ನಾನಿ" ಎಂಬುದನ್ನು ಎತ್ತಿಹೇಳಲು ಕವಿ ಪ್ರಾರ್ಥನೆಗೆ ಪ್ರಾರಂಭಿಸಿ ತನಗುಂಟಾದ ನೋವು ಸಾವುಗಳನ್ನು ಕಷ್ಟ ಕಾರ್ಪಣ್ಯಗಳನ್ನು ಪರಿಪರಿಯಾಗಿ ತೋಡಿಕೊಂಡು ಕಡೆಗೆ-

"ಬಲ್ಗಿಚ್ಚ ತೆರನಂತೆ ಕಾಯ್ದಿರುವ ನೆಲವನ್ನು
ತುಳಿಯುತ್ತ ತೊಳಲುತ್ತ ನಿನ್ನಬಳಿ ಬಂದಿಹೆನು
ಮನೆಯೊಳಗೆ ಕುಳಿತಿರುವ ಅಂತರತಮ ಗುರುದೇವ
ಕಣ್ದೆರೆದು ನೋಡಯ್ಯ ಕರುಣೆಯನು ನೀಡಯ್ಯ
ಬಾಯ್ದೆರೆದು ಬಟ್ಟಲವ ಹಿಡಿದು ನಾ ನಿಂತಿರುವೆ
ಸವಿನೀರನಿತ್ತೆನಗೆ ಮನೆಯೊಳಗೆ ಕರೆದುಕೋ"

ಸಾಧನೆಯ ಮಾರ್ಗ ಉರಿಗಿಚ್ಚು. ಅದನ್ನು ದಾಟಲುಬೇಕು ಹಿರಿದಾದ ಕೆಚ್ಚು, ಮಹಾಂತಕವಿ ದಾಟಿ ಬಂದಿದ್ದಾನೆ. ಆರ್ತ ಹೃದಯನಾಗಿ ಅಂಗಲಾಚಿದ್ದಾನೆ. ನಡೆದುಬಂದವರ ಕಷ್ಟವನ್ನು ಕಡೆಯುದವರೆತ್ತ ಬಲ್ಲರು? ಕಠಿಣಾತ್ಮರಿಗಂತೂ ಕಾಣುವುದೇ ಇಲ್ಲ. ಕರುಣಾಳುವಾದ ಗುರುದೇವ ಮಾತ್ರ ಕಾಣುವನು. ಅದರಿಂದ ಗುರುದೇವನಲ್ಲಿ ಮನಕರಗುವಂತೆ ಮೊರೆಯಿಟ್ಟಿದ್ದಾನೆ. ಕವಿ ತನ್ನ ಬುದ್ಧಿಯೆಂಬ ಬಾಯ್ದೆರೆದ ಶಬ್ದವೆಂಬ ಬಟ್ಟಲ ಹಿಡಿದು ರಸಾಮೃತವನೀಡೆಂದು ಬೇಡುತ್ತಾನೆ. ಆ ಕಾವ್ಯರಸವನುಂಡು ಕವಿಯಾಗಲು ಆಕಾಂಕ್ಷಿಸುತ್ತಾನೆ. ಆಗುವ ಮುನ್‌ಸೂಚನೆಯನ್ನು ಈ ಕವನ ಸಂಗ್ರಹ ಸಾರಿದೆ. ಶ್ರೀ ಮಹಾಂತದೇವರು ಮಹಾಕವಿಯಾಗುವ ಮಹಾಂತಕೀರ್ತಿ ಕಾಯ್ದಿದೆ. ಅವರ ಪ್ರಾಣವಾಯು ಅದೇ ಸಂದೇಶವನ್ನು ಹೊತ್ತು ತಂದು ಉಸುರುತಿದೆ. ಈ ಬಾಲಕವಿಗೆ ನಿಜವಾಗಿಯೂ ಆ ಧೃತಿಯಿದೆ, ಧ್ಯುತಿಯಿದೆ. ಶಬ್ದ ಸಂಪತ್ತಿಯ ಸಹಾಯವೊದಗಿದರೆ ಸಾಕು.

ಕವಿಯ ಹೃದಯ ಪರಕೆ ಕೈಗೂಡಲಿ. ಕಾವ್ಯರಸದೂಟವನ್ನು ಕನ್ನಡಿಗರಿಗೆ ಇನ್ನೂ ರುಚಿಕಟ್ಟಾಗಿ ಶುಚಿಯಾಗಿ ಉಣಬಡಿಸಲಿ ಎಂದು ಹೃದಯಾರೆ ಹಾರಯಿಸಿ ಪಥಿಕನ ಪರಿಚಯವನ್ನು ಪೂರೈಸುತ್ತೇವೆ. ಈ ಶಾಂತಿ ಮಂತ್ರದೊಡನೆ ಶ್ರೇಯೋ ಮಂತ್ರವೊಂದನ್ನು ನುಡಿಯುತ್ತೇವೆ.

"ಕೇವಲ ಗೈರಿಕ ಗೌರವವನ್ನು ಬಯಸುವವರು ಬಯಸಲಿ
ನೀನುಮಾತ್ರ ಕಾವ್ಯಜೀವಿಯಾಗು. ಸಾಹಿತ್ಯ ಸಂಜೀವಿಯಾಗು

ಇದು ಪವಿತ್ರವಾದ ಪರಮೋನ್ನತವಾದ ಪರಮಾನಂದಕರವಾದ ಕಾರ್ಯ
ಇದು ಪ್ರಾಪಂಚಿಕ ಸತ್ಯ, ಪಾರಮಾರ್ಥಿಕ ಪಥ್ಯ
ಸಣ್ಣಪುಟ್ಟ ಸ್ವಭಾವಬೇಡ, ಸಾಹಿತ್ಯಪಂಥ ಜಡಬೇಡ
ಮುಂದುನಡೆ ಮುಂದುನಡೆ:
ನಿನ್ನ ಜೀವನವೆ ಒಂದು ಮಧುರ ಕಾವ್ಯವಾಗಲಿ"

ಸಿರಿಗನ್ನಡಂಗೆಲ್ಗೆ

ವಿಜಯ ಸಂವತ್ಸರ
೨-೧೨-೫೩

ಸೂರ್ಯ ಸಿಂಹಾಸನಾಧೀಶ್ವರ,
ಶ್ರೀ ಜ. ಚ. ನಿ. ಸಂಸ್ಥಾನ
ಗೂಳೂರು.

"ಪಥಿಕ"ದ ನೆನಹು

ಹೊಸಕನ್ನಡ ಸಾಹಿತ್ಯದ ನವೋದಯ ಕಾಲದಲ್ಲಿ ಕನ್ನಡ ಕವಿಕೋಕಿಲಗಳ ಕುಕಿಲು ಇನಿದಾಗಿ ಕೇಳಿಬಂದಿತು. ಭಾವಗೀತವಾಹಿನಿಗೆ ಆಗ ಮಹಾಪೂರ ಬಂದಂತಾಯಿತು.

ವ್ಯಕ್ತಿನಿಷ್ಠತೆ, ಸೌಂದರ್ಯಾನುಭವ, ಭಾವಪರತೆ, ನೇಮತೆಗಳು ಭಾವಗೀತೆಯ ಪ್ರಮುಖ ಲಕ್ಷಣಗಳಾಗಿವೆ. ಮನವರಿಕೆಯನ್ನುಂಟುಮಾಡುವ ಕಳಕಳಿಯ ಭಾವ, ಚಿತ್ರಮಯತೆಗಳಿಂದ ಭಾವಗೀತೆಯು ಪರಿಣಾಮಕಾರಿಯಾಗುತ್ತದೆ. ವ್ಯಕ್ತಿತ್ವ ನಿರೂಪಣೆಯಲ್ಲಿ ತೊಡಗಿದ ಕವಿಯು ಸಮಷ್ಟಿಯ ಭಾವನೆಗಳನ್ನು ಅಭಿವ್ಯಕ್ತಗೊಳಿಸುತ್ತಾನೆ. ನಿಸರ್ಗದ ಸೊಬಗು, ಮಾನವನ ನಲಿವು–ನೋವುಗಳು ಪ್ರೇಮ ದೇವರು ದೇಶಪ್ರೇಮ ಇತ್ಯಾದಿ ಭಾವಗಳನ್ನು ಭಾವಗೀತೆಯ ಕವಿಗಳು ಅಂದು ಬಳಸಿಕೊಂಡರು. ಪದ ಸೌಂದರ್ಯ, ಲಯ, ಪ್ರಾಸಗಳ ಬಳಕೆಯಿಂದ ಭಾವಗೀತೆಗೆ ಗೇಯತೆಯುಂಟಾಯಿತು. ಕನ್ನಡ ಭಾಷೆಗೆ ಹೊಸ ತಿರುವನ್ನು ಒದಗಿಸಿದ ಕಾಲವದು. ಬಿ. ಎಮ್. ಶ್ರೀ ರವರ "ಇಂಗ್ಲೀಷ ಗೀತೆಗಳು" ಎಂಬ ಕೃತಿಯು ಅಂದಿನ ಭಾವಗೀತೆಗಳಿಗೆ ಒಂದು ಮಾದರಿಯನ್ನು ಒದಗಿಸಿತು. ಭಾವನಾ ಪರವಶತೆಯೊಂದಿಗೆ ಆದರ್ಶ ಪ್ರಿಯತೆಯೂ ಮೂಡಿಬಂದಿತು. ಆಗ ಭಾವಗೀತೆಯು ತತ್ತ್ವಪರತೆಯತ್ತಲೂ ಸಾಗಿತು. ಈ ಬಗೆಯಲ್ಲಿ ಕನ್ನಡ ಭಾವಗೀತೆಯು ೧೯೫೦ರ ವರೆಗೂ ಸಾಗಿಬಂದಿತು. ಈ ಮಧ್ಯ ಕುವೆಂಪು ಅವರ ಕಲ್ಕಿ 'ಅಂಬಿಕಾತನಯ ದತ್ತರ' ತುತ್ತೂರಿಯ ಬಲದಂತಹ ಉಗ್ರ, ಕ್ರಾಂತಿಕಾರಕ ಕವನಗಳು ಸೃಷ್ಟಿಯಾದವು. ಕೋಗಿಲೆಯು ಇಂಚರವು ಕ್ರಾಂತಿಯ ಕಹಳೆಯಾಗಿ ಮಾರ್ಪಟ್ಟ ಸನ್ನಿವೇಶವದು. ಅಂದಿನ ಪ್ರಗತಿಶೀಲ ಸಾಹಿತಿಗಳ ಆಂದೋಲನವು ಕನ್ನಡ ಕವನ ರಂಗದಲ್ಲಿ ಪ್ರತಿಬಿಂಬಿತವಾದಂತಿಲ್ಲ. ೧೯೫೦ರ ನಂತರ ನವೋದಯ ಕಾಲದ ಭಾವಗೀತೆಗಳ ಹಾದಿಗಿಂತ ಭಿನ್ನವಾದ ದಿಸೆಯಲ್ಲಿ ಸಾಗುವ ಪ್ರವೃತ್ತಿ ತಲೆದೋರಿದೆ.

'ಪಥಿಕ' ಕವನ ಸಂಕಲನವು ೧೯೫೪ ರಲ್ಲಿ ಪ್ರಕಟವಾಗಿದ್ದರೂ ಅದರಲ್ಲಿಯ ಕವನಗಳ ರಚನೆಯು ಕಾಲ ೧೯೫೦ಕ್ಕೆ ಪೂರ್ವದ್ದೆಂದು ತೋರುತ್ತದೆ. ಅಂತೆಯೇ ಆ ಕವನಗಳಲ್ಲಿ ನವೋದಯಕಾಲದ ದೃಷ್ಟಿ ಸ್ಪಷ್ಟವಾಗಿದೆ. ಈ ಸಂಕಲನದಲ್ಲಿ ೪೦ ಕವನಗಳಿವೆ, ಅವು ಚಿಂತನಪರವಾಗಿವೆ.

ಬಾಳಿನಲ್ಲಿ ನಲಿವಿನಂತೆ ನೋವು ಇದೆ. ಚಿಂತನಶೀಲನಾದ ಕವಿಗೆ ಬಾಳು ಹಲವಾರು ತೊಡಕುಗಳನ್ನು, ಸಮಸ್ಯೆಗಳನ್ನು ಒಡ್ಡುತ್ತಿದೆ. ಬಾಳಿನ ಸಮಸ್ಯೆಗಳು

ಆಗಾಗ ಆತನ ಮನಸ್ಸನ್ನು ಗಾಸಿಗೊಳಿಸುತ್ತಿದೆ. ಆದರೆ ಶ್ರದ್ಧೆಯಿಂದ ಕೂಡಿದ ಕವಿಯು ದೈವೀಕೃಪೆ ಗುರುಕರುಣೆಗಳನ್ನು ಹಾರೈಸುತ್ತ ಬಾಳನ್ನು ಒಂದು ಪಯಣವಾಗಿ ಭಾವಿಸಿ ಧೀರಪಥಿಕನಂತೆ ಮುಂದೆ ಸಾಗಲು ನಿರ್ಧರಿಸುತ್ತಾನೆ. ಇಂತಹ ಮೂಡಿ ಕವನಗಳು ಈ ಸಂಕಲನದಲ್ಲಿವೆ.

ಮಾನವನು ಪರಮಸತ್ಯದ ಯಾತ್ರಿಕನೇ ಅಹುದು. (A Pilgrim of ever lasting truth–Sir Aurobindo) ಆದರೆ ಈ ದೃಷ್ಟಿಯು ಬಹು ಜನರಿಗೆ ಇಲ್ಲದೆ ಬೇಗನೆ ಮೂಡಿಬರುವದಿಲ್ಲ. ಅಂತೆಯೇ ಅವರಿಗೆ ಬಾಳ ಗೋಳಿನ ಸಂತೆಯಾಗುವುದು. 'ಪಥಿಕ' ಸಂಕಲನದ ಕವಿಗೆ ಮಾತ್ರ ಚಿಕ್ಕವಯಸ್ಸಿನಲ್ಲಿಯೇ ಈ ದೃಷ್ಟಿ ಮೂಡಿಬಂದಿದೆ. ಅಂದು ಅದು ಬೆಳೆಯುವ ಚೇತನದ ಗುರುತಾಗಿ ಕಂಡುಬಂದಿತು. ಆಗ ಕಂಡುಬಂದ ಗುರುತು ಈಗ ಫಲಪ್ರದವಾಗಿ ಕಾಣುತ್ತಿದೆ. ಅಂದಿನ 'ಪಥಿಕ' ಸಂಕಲನದ ಕವಿ ಚಿತ್ತರಗಿ ಮಹಾಂತದೇವರು ಬನಾರಸದಲ್ಲಿ ವಿದ್ಯಾರ್ಥಿ ಕವನಸಂಕಲನದ ನನ್ನ ನುಡಿಯಲ್ಲಿಯ ಮಾತುಗಳನ್ನು ಗಮನಿಸಬೇಕು.

"ಈ ಪಥಿಕನು ಇನ್ನೂ ಅನನುಭವಿ, ವಿದ್ಯಾರ್ಥಿ ಪ್ರತಿಯೊಬ್ಬ ವ್ಯಕ್ತಿಗೆ ಮುಂದೆ ಸಾಗಲು ಹಿರಿಬಯಕೆಯಿದ್ದಂತೆ ಈತನಿಗೂ ಅದೆ. ಪಥಿಕನು ಕಲ್ಲು ಮುಳ್ಳುಗಳನ್ನು ತುಳಿದರೂ ತಾಳಿ ಮುಂದೆಹೋಗಲು ಯತ್ನಿಸಬೇಕೆಂಬುವವನು...."

ಅಂದಿನ 'ಪಥಿಕ' ಸಂಕಲನದ ಕವಿಯೇ ಇಂದಿನ ಶ್ರೀ ಮನ್ಮಹಾರಾಜ ನಿರಂಜನ ಜಗದ್ಗುರು ಶ್ರೀ ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳು ಮೂರುಸಾವಿರಮಠ, ಹುಬ್ಬಳ್ಳಿ. 'ಪಥಿಕ' ಸಂಕಲನದ ಕವಿತೆಗಳ ರಚನೆಯ ಕಾಲದಿಂದ ಅವರು ಈಗ ಬಹು ಮುಂದೆಸಾಗಿದ್ದಾರೆ. ನಮ್ಮ ನಾಡಿನ 'ಮಹಾಪಥಿಕ' ಆಗಿದ್ದಾರೆ. ಇಡಿಯ ದೇಶದಲ್ಲಿ, ಪರದೇಶಗಳಲ್ಲಿ ಕೂಡ ಕೀರ್ತಿಶಾಲಿಯಾಗಿದ್ದಾರೆ.

'ಪಥಿಕ' ಸಂಕಲನದಲ್ಲಿ ವ್ಯಕ್ತಿನಿಷ್ಠ ಕವನಗಳಿವೆ;

ದಾರಿಗಾಣದೆ ಗುರುವೆ ಕುಳಿತಿರುವೆ
ಚಿಂತಿಸುತ್ತಲಿ ನಿನ್ನಯ
ದಾರಿದೋರುತ ಬೆಳಗುನೀಡುತ
ಮನೆಯ ಸೇರಿಸು ಎನ್ನನು

ಎಂಬುದಾಗಿ ಈ ಸಂಕಲನದ ಪ್ರಥಮ ಕವನ ಆರಂಭವಾಗುತ್ತಿದೆ. ಗುರುವು ದಾರಿದೋರಿ ಬೆಳಕು ನೀಡಿದುದೂ ಆಗಿದೆ. ಅಂತಹ ಗುರುವನ್ನು ಕುರಿತೇ ನಾಲ್ಕಾರು ಕವನಗಳು ಇಲ್ಲಿ ಮೂಡಿಬಂದಿವೆ. ಅವು ಕವಿಯ ಗುರುಭಕ್ತಿ ನಿರ್ಭರತೆಯನ್ನು ಸ್ಪಷ್ಟಗೊಳಿಸುವಂತಿವೆ. ಬಾಲ್ಯದ ಪಾಠಶಾಲೆ ಕೂಡ 'ಶಿವಯೋಗ

ಮಂದಿರ'ವನ್ನು ಅಲ್ಲಿಯ ಪತ್ರಿಕೆ 'ಸುಕುಮಾರ'ವನ್ನು ಅಲ್ಲದೆ ಬೇರೊಂದು ಪತ್ರಿಕೆಯನ್ನು ಕುರಿತು ಒಂದೊಂದು ಕವನಗಳಿವೆ. "ಕವಿಯನ್ನು ಕುರಿತು ಕವನದಲ್ಲಿಯ ಭಾವಪುಷ್ಪವರಳಿದಾಗ....ಹಾಡಿಬಿಡುವನು" ಎಂಬ ಉಕ್ತಿಯಂತೆ ಮೂಡಿಬಂದ ಕವನಗಳು ಈ ಸಂಕಲನದಲ್ಲಿವೆ. ೧೫-೮-೪೭ಕ್ಕೆ ದೊರೆತ ಭಾರತ ಸ್ವಾತಂತ್ರ್ಯವನ್ನು ಕುರಿತು ಒಂದೆರಡು, ೩೦-೧-೪೮ಕ್ಕೆ ನಡೆದ ಮಹಾತ್ಮಾ ಗಾಂಧಿಯವರ ಕೊಲೆಯನ್ನು ಕುರಿತು ಒಂದು, "ದೀಪಾವಳಿ" "ಶಮೀ ಸಮರ್ಪಣ"ಗಳನ್ನು ಕುರಿತು ಒಂದೊಂದು "ಬಡವ"ನನ್ನು ಕುರಿತು ಒಂದು ಕವನಗಳಿವೆ. ಕೆಲವು ನೈತಿಕ ಕವನಗಳೂ ಇವೆ. ಉಳಿದ ಕವನಗಳು ವ್ಯಕ್ತಿನಿಷ್ಠವಾಗಿದ್ದು 'ಪಥಿಕ'ನು ಕೈಕೊಂಡ ಪದಕ್ರಮಣವನ್ನು ಕುರಿತಿವೆ.

ಇಲ್ಲಿಯ ಪ್ರಥಮ ಕವನದ ಹೆಸರೇ **ಪಥಿಕ.** ಜೀವನಪಥದಲ್ಲಿ

ಕಾಳರಾತ್ರಿಯ ಮುಸುಗು ಮುತ್ತಿದೆ
....
ಮೇಲೆ ಮೇಘವು ಗುಡುಗುಹಾಕುತ
ಭಯದ ಬೆದರಿಕೆ ಕೊಡುತಿದೆ
....
....
ಮುಂದೆ ಹೋದಡೆ ತಗ್ಗು ದಿನ್ನೆಯು

ಹೀಗಿದ್ದೂ ಪಥಿಕ ಧೀರತನದಿಂದ ಮುಂದೆ ಸಾಗಬೇಕು.

ನಡೆ ಮುಂದೆ

ಸೋಲಿನಲಿ ಇರುತಿರಲು ಮುಂದಿನಾ ಹಿರಿಗುರಿಯ
ದಾರಿಯನು ಮರೆಯದಿರೈ
....
ನಡೆ ಮುಂದೆ ದೃಢಮನದಿ

ಪಥಿಕರಿಗೆ ಒರಿಯ ಗುರಿಯೊಂದಿರಬೇಕಲ್ಲ! ಆನಂದ ಭಿಕ್ಷೆಯ ಪಡೆಯಲೆಂದು ಬುದ್ಧ ಪಥಿಕನಾದ. ಜ್ಞಾನಭಿಕ್ಷುವಾಗಿ ಸರ್ವಜ್ಞ ಕವಿ ಪಥಿಕನಾದ. ಈ ಕವಿಯಾದರೂ **'ಶಿವಶಾಂತಿ ಹೊಂಬೆಳಕು'** ಅರಸಲೆಂದು ಪಥಿಕನಾದ. ದೀಪಾವಳಿಯ ಸೊಡರಿನ ಸಾಲುಗಳು ಒಳಬೆಳಕಿಗೆ ಪ್ರಚೋದನೆಯನ್ನಿತ್ತಿವೆ:

ಹೃದಯದೀ ಪ್ರಣತೆಯೊಳು ಸದ್ಭಕ್ತಿ ತೈಲವನು
ಸುವಿಚಾರ ಬತ್ತಿಯನು ಹೊಸೆದಿಟ್ಟು ಹಚ್ಚಿದೊಡನೆ

ಗುಡಿಯೊಳಗೆ ಮೆರೆಯುತ್ತ ಕುಳಿತಿರುವ ಈಶ್ವರನು
ಕೊಡುತಿಹನು ದರ್ಶನವ ಪರಂಜ್ಯೋತಿ ಬೆಳಗಿನೊಳು

“ಶಮೀ ಸಮರ್ಪಣ” ಪದ್ಯವು ಕವಿಗೆ ಆತ್ಮಸಿದ್ಧಿಯ ಸಂಕೇತವಾಗುತ್ತದೆ. ಅಲ್ಲಿ,

ವಿಜಯ ಪಡೆಯದ ಮನುಜ
ಒಣಗಿರ್ಪ ಎಲೆಯಂತೆ
ಬತ್ತಿರುವ ಕೆರೆಯಂತೆ
ಒಡೆದ ಕನ್ನಡಿಯಂತೆ

ಎಂಬ ಸುಂದರ ಹೋಲಿಕೆಗಳಿವೆ. “ಶಿವಪುಟ್ಟಿ”ಯಲ್ಲಿ ಅರ್ಥವತ್ತಾದ ರೂಪಕ ಚಿತ್ರವಾಗಿದೆ;

ಹೃದಯಾಕಾಶದಿ ಏರಿಸು ಪುಟ್ಟಿ
ಅದರೊಳ್ ಸುಜ್ಞಾನ ದೀಪವನಿಟ್ಟು
ಮುತ್ತಿದ ಕತ್ತಲೆ ಮೊತ್ತವನಟ್ಟಿ
ಸುತ್ತುತ ಬರುತಿಹ ಗಾಳಿಯ ಕಟ್ಟಿ
ನಭದಲಿ ಬೆಳಗಲಿ ಚಿನ್ಮಯಕಿರಣ
ತುಂಬಲಿ ಪುಟ್ಟಿಯು ದೇವರ ಸ್ಮರಣ
ಆಗಲಿ ಜನನದ ಮರಣದ ಹರಣ
ಇಂತೇರಿಸು ಶಿವಪುಟ್ಟಿಯ ಜಾಣ

ಇಲ್ಲಿಯ ಸಲೀಸಾದ ಪದಗಳ ಹೊಂದಾವಣೆಯನ್ನು ಅರ್ಥಗೌರವವನ್ನು ಗಮನಿಸಬೇಕು.

ಮಟ್ಟೆ ಹೊಡೆಯುವವಗೆ ಎಂಬ ಕವನದಲ್ಲಿಯೂ ಸ್ವಾರಸ್ಯಕರವಾದ ರೂಪಕ ಸೃಷ್ಟಿಯಿದೆ.

ಮಟ್ಟೆ ಹೊಡೆಯೋ ನೀನು ಇಂತು
ಜ್ಞಾನಕರ್ಮ ಎತ್ತುಗಳಿಗೆ
ಧ್ಯಾನವೆಂಬ ನೊಗವಹಾಕಿ
ಮಟ್ಟೆ ಹೊಡೆಯೋ
........ಹೃದಯಭಾವಿ ತೊಳೆದು
ಮುಕ್ತನಾಗುನೀ.

ಜೀವನದ ವೃತ್ತಿಗಳನ್ನು ಅಧ್ಯಾತ್ಮಕ್ಕೆ ತಿರುಗಿಸುವ ಹರಿದಾಸರ ರಚನೆಗಳಲ್ಲಿಯೂ ರೂಪಸೃಷ್ಟಿಯು ಸುಪ್ರಸಿದ್ಧವಾಗಿದೆ. ಈ ಸಂಕಲನದ 'ನಾವಿಕನನ್ನು ಕುರಿತು' ಎಂಬ ಕವನದಲ್ಲಿಯೂ ರೂಪಕವಿದೆ.

'ಇದಾವುದು' ಎಂಬ ಕವನವಲ್ಲಿ ಸರ್ವಜನರ ಹೃದಯದೊಳಿರುವ ಹಂಬಲ ವನ್ನು ಹಕ್ಕಿಯಾಗಿ ಭಾವಿಸಲಾಗಿದೆ. "ರೆಕ್ಕೆ ಬಲಿತು ಹಾರಿಹೋದ ಬಯಕೆ ಹೊಕ್ಕ" ನಂತರವೂ "ತಿಂದು ತಿಂದು ಹಣ್ಣು ಹಾರದಿರಲು" ವ್ಯಥೆಯೆನಿಸುವುದು ಸಹಜವೇ. ಪಥಿಕ ನಿಂತಲ್ಲಿಗೆ ನಿಲ್ಲದಾಗದಲ್ಲ! ಆತನು ಗತಶೀಲನಾಗಲೇಬೇಕು. ಮುಂದೆ ಸಾಗುವುದೇ ಜೀವಂತತನದ ಲಕ್ಷಣ.

'ಮುಕುತಿಯಟ್ಟವನೇರು
ದೇವನಡಿಯೊಳು ಸೇರು'

ಎಂಬುದಾಗಿ ಕವಿ ಹೃದಯದ ಹಕ್ಕಿಯನ್ನು ಎಚ್ಚರಿಸುತ್ತಾನೆ. ಈ ದಿಶೆಯಲ್ಲಿ "ಶಾಂತಿತಪ" "ವಿರತಿಗಂಧ" "ಭಕುತಿ"ಗಳು ನೆರವಾಗುತ್ತಿವೆ.

ಬಾಳಿನ ಪಯಣದಲ್ಲಿ ನಿಶೆಯ ಅನುಭವವೂ ಅನಿವಾರ್ಯ, ಅಂತೆಯೇ "ಧ್ಯಾನದ ದೀಪವ ಹಚ್ಚುತ" ಎಚ್ಚರಗೊಂಡು "ಸತ್ಯದ ಬೆಳಕಿನ ಹಾದಿಯ" ಕಂಡುಕೊಳ್ಳುವುದು ಅವಶ್ಯಕವಾಗಿದೆಯೆಂದು **"ನಿಶೆಗೆ"** ಎಂಬ ಕವನದಲ್ಲಿ ನಿರೂಪಿಸಲಾಗಿದೆ.

ಗುರುವಿನ ಆಗಮನವನ್ನು ಕುರಿತ ಉತ್ಕಟಭಾವವು "ಆಹ್ವಾನ" ಕವನದಲ್ಲಿ ವ್ಯಕ್ತವಾಗಿದೆ:

ಬಾಗಿಲವ ತೆರದಿರುವೆ ಬಾ ಬೇಗ ಗುರುವೆ
ದಾರಿಯನು ನೋಡುತ್ತ ಕುಳಿತಿರುವೆ ಬಾ

ಹೃದಯಮಂಟಪವನ್ನ ಚಿಚ್ಚರಣ ಕಿರಣಗಳ
ಹರಡುತ್ತ ಕತ್ತಲೆಯ ನಶಿಸುತ್ತ ಬಾ ಬಾ

ಸಮರ್ಪಣಭಾವದಿಂದ ಮನದಶಾಂತಿಯನ್ನು ಪಡೆಯುವ ಭಾವ "ಸಮರ್ಪಣ" ಕವನದಲ್ಲಿ ಮೂಡಿಬಂದಿದೆ.

ಬಾಳಿನ ಪಯಣದಲ್ಲಿ ಪ್ರೋತ್ಸಾಹದ ಅವಶ್ಯಕತೆಯಿದೆ. ಅಂತೆಯೇ "ಪ್ರೋತ್ಸಾಹ" ಎಂಬ ಕವನದಲ್ಲಿ—

'ಪ್ರೋತ್ಸಾಹವಿಲ್ಲದಲೆ
ವಾಸಿಸುವ ಆ ಬಾಳು
ರಸಕವಿದ ಪಟ್ಟಣಲ್ಲವೇ?'

ಎಂದು ಹೇಳಲಾಗಿದೆ. ಆದರೆ ಗುರಿ ತಲುಪಬೇಕೆಂಬ ನಿರ್ಧಾರ ದೃಢವಾಗಿರುವಾಗ ಪ್ರೋತ್ಸಾಹ ದೊರೆಯದಿದ್ದರೂ ಮುಂದುವರಿಯಬೇಕೆಂಬ ಹುಮ್ಮಸ್ಸು ಕವಿಗಿದೆ. ಅಂತೆಯೇ "ಬಿಡುವನೇಂ" ಎಂಬ ಕವನದಲ್ಲಿ—

ಕಾರ್ಯವನು ಮಾಡುವಗೆ
ಪ್ರೋತ್ಸಾಹ ನೀಡಿದರೆ
ಕಾರ್ಯವನು ಬಿಡುವನೇಂ

ಎಂಬ ಛಲ ವ್ಯಕ್ತವಾಗಿದೆ. ಪಥಿಕನು ಮುನ್ನಡೆಯಲು ಮುಖ್ಯವಾಗಿ ಬೇಕಾದುದು ಪ್ರೇರಣೆ:

ಪ್ರೇರಣೆಯೇ! ಧಾರುಣಿಗೆ ಚೇತನವ ಕೊಡುತಿಹುದು
ಪಥಿಕಂಗೆ ದಾರಿಯನು ತೋರಿ ಸುಖನೀಡುವುದು
(—ಪ್ರೇರಣೆಗೆ)

ಪಥಿಕನು ಬಾಳಿನ ಬಡತನವನ್ನು ಗಮನಿಸುವುದಿಲ್ಲ:

ಹೃದಯಧನವಿರುತಿರಲು
ಆನಂದ ಪಡೆಯಲ್ಕೆ
ಮತ್ತೇಕೆ ಆಶಯದು
ಅಳಿಯುತಿಹ ಹೊರಧನಕೆ
ಭಾವದಾ ಕಿರಣಗಳು
ಬೆಳಗುತ್ತ ಹೋದಂತೆ
ಬಡವನೇ ಚಿರಧನಿಕ
ನಾಗಿ ತಾ ಮೆರೆವವಂ

(—ಬಡವ)

ಹೃದಯ ಸಂಪತ್ತಿರುವಾಗ ಹೊರಗಿನ ಧನದ ಅವಶ್ಯಕತೆಯಿರಬೇಕಾಗಿಲ್ಲ. ಭಾವದಾ ಕಿರಣಗಳು ಬೆಳಗುತ್ತಿದ್ದರೆ ಅಂತಹನೇ ಧನಿಕ ಇಂತಹ ನಿಲುವು ಈ ಕವಿಯದಾಗಿದೆ. ಆತ್ಮ ಜಾಗೃತಿಯೇ ಪಥಿಕನಿಗೆ ಮಹತ್ವದ ಆಸರೆ. ಅಂತೆಯೇ ಕವಿ ಹೇಳುತ್ತಾನೆ—

ಸಾಕಿನ್ನು ಎದ್ದೇಳಿ ಮೋಹನಿದ್ರೆಯ ಬಿಟ್ಟು
ಹೊರಬನ್ನಿ ಭರದಿಂದ ಜ್ಞಾನವಸ್ತ್ರವನುಟ್ಟು
ಮನದೊಳಗೆ ತುಂಬಿರುವ ಕಾಮದಾಸೆಯ ಸುಟ್ಟು
ತನುವಿನೊಳಗೆ ಹೊಕ್ಕಿರುವ ಭ್ರಾಂತಿಯನು ಬಿಟ್ಟು
....
....
ತೆರೆಯಿರೈ ಒಳಗಣ್ಣು ಹರಿಯಿರೈ ಹಗ್ಗವನು

ಮುರಿಯಿರೈ ಮದವನ್ನು ತೊರೆಯಿರೈ ಶೋಕವನು
ಅರಿಯಿರೈ ಮುಂದಿನ ಹಿರಿಗುರಿಯ ದಾರಿಯನು

(—ಉತ್ತಿಷ್ಠತ)

ಅಂತೂ ಪಥಿಕ 'ಹಿರಿಗುರಿಯ ದಾರಿಯನು' ಅರಿತುಕೊಂಡಿದ್ದಾನೆ. ಶ್ರದ್ಧೆಯಿಂದ ಕೂಡಿದ್ದಾನೆ. ಹರ–ಗುರು ಕೃಪೆಗಳ ಆಸರೆಯನ್ನು ಅಪೇಕ್ಷಿಸುತ್ತ ಧೀರತನದಿಂದ ಮುಂದೆಸಾಗಲು ನಿರ್ಧರಿಸಿದ್ದಾನೆ. ಕಿರಿಯ ವಯಸ್ಸಿನಲ್ಲಿ ಈ ಬಗೆಯ ನಿಲುವು ಶ್ಲಾಘನೀಯವಾದುದಾಗಿದೆ. ಈ ಬಗೆಯ ನಿಲುವೆಯನ್ನು ಕವನ ರೂಪದಲ್ಲಿ ಇಲ್ಲಿ ಅಭಿವ್ಯಕ್ತಗೊಳಿಸಲಾಗಿದೆ.

ಈ ಸಂಕಲನದ ಕವನಗಳಲ್ಲಿ ಮುಕ್ತಛಂದಸ್ಸು, ಹಾಡಿನಮಟ್ಟು, ಷಟ್ಪದಿ, ಅನಷ್ಟುಪ್‌ಗಳನ್ನು ಬಳಸಿಕೊಳ್ಳಲಾಗಿದೆ. ಭಾಷೆ ಸರಳವೂ, ಸ್ಪಷ್ಟವೂ ಆಗಿದೆ. ಆದರೆ ಬಂಧುರತೆಯಿಂದ ಕೂಡಿ ಅದಿನ್ನು ಹದಗೊಳ್ಳಬೇಕಾಗಿದೆ. ಈ ಕವನ ಸಂಕಲನ ಕವಿಯ ಪ್ರಥಮ ಪ್ರಯತ್ನ. ಇಲ್ಲಿಯ ಕವನಗಳನ್ನು ಮೊಗ್ಗುಗಳೆಂದು ಹೇಳಬಹುದು. ಆದರೆ ಈ ಮೊಗ್ಗುಗಳಲ್ಲಿಯೂ ಸೌರಭವನ್ನು ಗುರುತಿಸಲು ಸಾಧ್ಯವಿದೆ. ಬಾಳಿನ ಪಯಣವನ್ನು ಕುರಿತ ಈ ಕವಿಯ ದೃಷ್ಟಿಯು ಉನ್ನತವಾದುದೆಂಬ ಮಾತು ಈ ಸಂಕಲನದಿಂದ ತಿಳಿದುಬರುವಂತಿದೆ. ಕವಿಯಾಗಿ ಹಾಡಿ ಬಾಳಿನ ಸೊಗಸನ್ನು ಹೆಚ್ಚಿಸಿಕೊಳ್ಳುವ ದೃಷ್ಟಿ ಈ ಪಥಿಕನಿಗಿದೆ. ಆ ಸೊಗಸು ಕವಿಗೆ ಮಾತ್ರವಲ್ಲ, ಓದುಗರಿಗೂ ದೊರೆಯುವಂತಿದೆ.

ಬಾಳನ್ನು ಗಂಭೀರವಾಗಿ ಎದುರಿಸುವ ದೃಷ್ಟಿ, ಉದಾತ್ತ ಭಾವಲಹರಿಗಳು ಇಲ್ಲಿ ಕಂಡುಬರುತ್ತವೆ.

ಸ. ಸ. ಮಾಳವಾಡ

ನನ್ನನುಡಿ

(ಪ್ರಥಮ ಮುದ್ರಣ)

One of the pleasantest things in the world is going a journey....Tne soul of a journey is liberty, perfect liberty, to think, feel do just as one pleases.

—WILLIAM HAZLITT.

ಈ ಪಥಿಕನು ಇನ್ನೂ ಅನನುಭವಿ, ವಿದ್ಯಾರ್ಥಿ, ಪ್ರತಿಯೊಬ್ಬ ವ್ಯಕ್ತಿಗೆ ಮುಂದೆ ಸಾಗಲು ಹಿರಿಬಯಕೆಯಿದ್ದಂತೆ ಈತನಿಗೂ ಇದೆ. ಪಥಿಕನು ಕಲ್ಲು ಮುಳ್ಳುಗಳನ್ನು ತುಳಿದರೂ ತಾಳಿ, ಮುಂದೆ ಹೋಗಲು ಯತ್ನಿಸಬೇಕೆಂಬುವವನು. ಪಥಿಕನು ಹಾಡಿರುವ ಕವನಗಳನ್ನು ಕೇವಲ ಹೊರನೋಟದಿಂದ ನೋಡದೇ ಸ್ವಲ್ಪ ದೂರ ದೃಷ್ಟಿಯ ವಿಚಾರವಿಟ್ಟು ಓದಿದಾಗ ವೇದ್ಯವಾಗುವದು. ಪಥಿಕನು ೪-೫ ವರ್ಷಗಳಿಂದ ಆಗಾಗ ದಾರಿಯಲ್ಲಿ ಹಾಡಿದ ಕವನಗಳನ್ನು ಇಲ್ಲಿ ಸಂಗ್ರಹಿಸಿ ವಾಚಕರ ಕೈಗೆ ಕೊಟ್ಟಿದ್ದಾನೆ. ಇದರಲ್ಲಿರುವ ಹಲಕೆಲವು ಕವನಗಳು, ಜೀವನ ಜಯಕರ್ನಾಟಕ, ಶರಣಸಾಹಿತ್ಯ, ಸುಕುಮಾರ, ಅಮರವಾಣಿ, ಸಾವಧಾನ, ನವಯುಗ ಮುಂತಾದ ಪತ್ರಿಕೆಗಳಲ್ಲಿ ಈಗಾಗಲೆ ಬೆಳಕು ಕಂಡಿವೆ. ಆ ಮಾನ್ಯ ಸಂಪಾದಕರರೆಲ್ಲರನ್ನು ಇಲ್ಲಿ ಸ್ಮರಿಸದಿರಲಾರೆ.

ಪಥಿಕನು ಬಲಶಾಲಿಯಾಗಿ ಮುಂದೆ ನಡೆಯಲ್ಕೆ ಕೋಲನಿತ್ತು; ಮಮತೆಯಿಂದ ಸೂರ್ಯಸಿಂಹಾಸನಾಧೀಶ್ವರ ಶ್ರೀ ಜ. ಪ. ನಿಡುಮಾಮಿಡಿ ಶ್ರೀ ಚನ್ನಬಸವರಾಜ ದೇಶಿಕೇಂದ್ರ ಮಹಾಸ್ವಾಮಿಗಳವರು ಬರೆದ ಮುನ್ನುಡಿಯೇ ಪಥಿಕನಿಗೆ ಹೊಂಗುಡಿ.

ಈ ಪಥಿಕನ ಪರಿಚಯ ಪ್ರತಿಯೊಬ್ಬರಿಗೂ ಗೊತ್ತಾಗಬೇಕೆಂಬುದು "ತ್ಯಾಗವೀರ ಶ್ರೀ ಶಿವಶಂಕರಪ್ಪನವರು ಚಿತ್ತರಗಿ ಅವರ ಮಹದಾಶೆ. ಅಂತೆಯೇ ಮುಂದೆ ಬಂದು "ಪಥಿಕ" ಪುಸ್ತಕವನ್ನು ಸುಂದರವಾಗಿ ಅಚ್ಚು ಮಾಡಿಸಲು ಸಿದ್ಧರಾಗಿದ್ದಾರೆ. ತ್ಯಾಗವೀರ ಶಂಕರಪ್ಪನವರ ಜನ್ಮಸ್ಥಳ ಚಿತ್ತರಗಿ. ಇವರು ಚಿತ್ತರಗಿ ಮಹಾಂತೇಶ ಮಠದ ಪೀಠಾಭಿಮಾನಿಗಳು. ಚಿತ್ತರಗಿ ಪೀಠದ ಕೀರ್ತಿ ಕೇವಲ ಕರ್ನಾಟಕವಲ್ಲದೆ ಭಾರತದ ತುಂಬ ಹರಡಬೇಕೆಂಬುದನ್ನು ಹೊಂಗನಸು ಕಟ್ಟಿದವರು; ಇವರು ಈಗಾಗಲೇ ತಮ್ಮ ಔದಾರ್ಯಗುಣದಿಂದ ಕರ್ನಾಟಕದಲ್ಲಿ ತುಂಬಾ ಹೆಸರುಗಳಿಸಿದ್ದಾರೆ. ಇವರು ಸರಳ ಜೀವಿಗಳಿದ್ದಂತೆ ಸಾಹಿತ್ಯಾಭಿರುಚಿಯುಕ್ತರಾಗಿದ್ದಾರೆ.

ಅಂತೆಯೇ ೬-೭ ಬುಕ್ಕುಗಳನ್ನು ಈಗಾಗಲೇ ಅಚ್ಚುಮಾಡಿಸಿ ಚಿರಕೀರ್ತಿ ಗಳಿಸಿದ್ದಾರೆ. ಬಸವೇಶ್ವರ ಕಾಲೇಜಕ್ಕೆ ೨೦ ಸಾವಿರ ರೂಪಾಯಿಗಳನ್ನು ಕೊಟ್ಟು ತಮ್ಮ ತ್ಯಾಗಗುಣ ತೋರಿಸಿದ್ದಾರೆ. ಬ್ಯಾಂಕಿನ ಕ್ಲಾರ್ಕರಾಗಿ, ಹೀಗೆ ಸಮಾಜಸೇವೆ ಮಾಡುವವರು ದೊರೆಯುವದು ತೀರ ವಿರಳ. ಎಷ್ಟೋ ಬಡ ಹುಡುಗರಿಗೆ ಧನ ಕೊಟ್ಟು ಓದಿಸಿದ್ದಾರೆ. ಅಲ್ಲದೆ ಪರೀಕ್ಷೆಯೊಳಗೆ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಚಿನ್ನದ ಪದಕಗಳನ್ನು ಕೊಟ್ಟು ಪ್ರೋತ್ಸಾಹಿಸಿದ್ದಾರೆ. ಇವರು ಪ್ರೋತ್ಸಾಹಿಗಳು, ತ್ಯಾಗವೀರರು ವಿಜಯ ಮಹಾಂತೇಶನಲ್ಲಿ ಭಕ್ತಿ ವಿಶ್ವಾಸವನ್ನಿಟ್ಟುಕೊಂಡವರು. ಕೀರ್ತಿಶಾಲಿಗಳು. ಅವರಿಗೆ ವಿಜಯ ಮಹಾಂತೇಶನು ಆಯುರಾರೋಗ್ಯವನ್ನು ದಯಪಾಲಿಸಲೆಂದು ಹಾರೈಸುವೆ.

ಮುಕ್ಕಾಂ – ಬನಾರಸ
೨೬-೧೨-೧೯೫೩. **ಮಹಾಂತದೇವರು ಚಿತ್ತರಗಿ.**

ಪ್ರಕಾಶಕರ ನುಡಿ

ಪಥಿಕ ಕವನ ಸಂಕಲನದ ಕರ್ತರು ಶ್ರೀ ಮೂಜಗಂ. ಅವರೇ ಸದ್ಯದ ಹುಬ್ಬಳ್ಳಿ ಮೂರುಸಾವಿರ ಮಠದ ಶ್ರೀ ಜಗದ್ಗುರು ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳವರು. ಅವರ ವಿದ್ಯಾರ್ಥಿ ಜೀವನದಲ್ಲಿ ರಚಿಸಿದ ಕವನಗಳ ಸಂಗ್ರಹದ ಮೊದಲ ಪ್ರತಿಗಳು ತೀರಿದ್ದರಿಂದ ದ್ವಿತೀಯ ಮುದ್ರಣ ಕೈಗೆತ್ತಿಕೊಳ್ಳಲಾಗಿದೆ.

ಶ್ರೀ ಜಗದ್ಗುರುಗಳವರ ಹೃದಯತಂತಿ ಭಕ್ತಿ, ವೈರಾಗ್ಯ, ಅನುಕಂಪ, ಕರುಣೆ, ಕಿಂಕರತ್ವದ ಝೇಂಕಾರ ಹೊರಹೊಮ್ಮಿಸಿ ಅವರ ಹಿರಿಹಂಬಲದ ಸಂದೇಶವಾಗಿ ಅವರ ಕವನಗಳು ಒಡಮೂಡಿಬಂದಿವೆ; ಸಾಹಿತ್ಯದ ಬಗ್ಗೆ ಅವರ ಒಲುಮೆಗೆ ಸಾಕ್ಷಿಯಾಗಿ ನಿಂತಿವೆ. ವಿಶ್ವತೋಮುಖದತ್ತ ಸಾಗಿದ ಅವರ ವಿಚಾರವ್ಯಾಪ್ತಿಯ ಹಿನ್ನೆಲೆಯಲ್ಲಿ ಎಂತಹ ಚಿಂತನದ ಅಧ್ಯಾಯಗಳಿವೆ ಎಂಬುದಕ್ಕೆ ಈ ಕವನಸಂಕಲನ ಕೈಗನ್ನಡಿಯಾಗಿದೆ. ವಿದ್ಯಾರ್ಥಿ ಜೀವನದಲ್ಲಿ ಅವರು ತಮ್ಮ ಒಲವು-ನಿಲವುಗಳನ್ನು ನಿರ್ದಿಷ್ಟ ದಿಶೆಯಲ್ಲಿ ಸಂಗಳಿಸಿಕೊಂಡು ಮುನ್ನಡೆದಿದ್ದಾರೆ, ಎಂತಲೇ ಇಂದು ಹಿರಿಮೆಯ ಮೆಟ್ಟಲು ಹತ್ತಿದ್ದಾರೆ. ಸಾಹಿತ್ಯದ ಬಗ್ಗೆ ಇರುವ ಅವರ ಅಪಾರ ಒಲುಮೆ ಇಂದು–ನಿನ್ನೆಯದಲ್ಲ, ಬಾಲ್ಯದಿಂದಲೇ ಮೈಗೂಡಿ ಬಂದಿದ್ದು, ಎಂತಲೇ ಅದು ಇಂದು ಮೇಳೈಸುತ್ತ ಮೈಚಾಚಿದೆ. ಬಾಳಸಾರ್ಥಕದ ಸೀಮೆಯತ್ತ ಪ್ರೇರೇಪಿಸಿದೆ.

ಶ್ರೀ ಜಗದ್ಗುರು ಗಂಗಾಧರ ಧರ್ಮಪ್ರಚಾರಕ ಮಂಡಳದ ಪ್ರಕಾಶನದಿಂದ ಈ "ಪಥಿಕ" ಕವನ ಸಂಕಲನ ಪ್ರಕಟವಾಗುತ್ತಿರುವದು ಹೆಮ್ಮೆಯ ವಿಷಯವಾಗಿದೆ.

ಕವನಗಳ ಕ್ರಮ

		ಪುಟ
೧.	ಪಥಿಕ	೨೫೩
೨.	ನಡೆ-ಮುಂದೆ	೨೫೫
೩.	ಭಿಕ್ಷುಕ	೨೫೬
೪.	ದೀಪಾವಳಿ	೨೫೭
೫.	ಶಿವನಪುಟ್ಟಿ	೨೫೮
೬.	ಇದಾವುದು?	೨೫೯
೭.	ಅಮೃತಬಿಂದು	೨೬೦
೮.	ಎಲ್ಲಿಹೋದೆ ತಂದೆ?	೨೬೧
೯.	ಅಮರವಾಣಿಗೆ	೨೬೨
೧೦.	ಸಾವಧಾನ	೨೬೩
೧೧.	ನಿಶೆಗೆ	೨೬೪
೧೨.	ಮಟ್ಟೆ ಹೊಡೆಯುವವಗೆ	೨೬೫
೧೩.	"ಮೌನಂ ಸರ್ವಾರ್ಥ ಸಾಧನಂ"	೨೬೭
೧೪.	ಆಹ್ವಾನ	೨೬೯
೧೫.	ಸಮರ್ಪಣ	೨೭೦
೧೬.	ವಿಜಯಗೀತೆ	೨೭೧
೧೭.	ಮರೆಯಾದ ಮಹಾತ್ಮ	೨೭೨
೧೮.	ಗುರುಕುಮಾರ	೨೭೩
೧೯.	ಮಹಂತೇಶಗೀತೆ	೨೭೪
೨೦.	ಸ್ತೋತ್ರ	೨೭೫
೨೧.	ಮಂಗಲಗೀತೆ	೨೭೬
೨೨.	ಕವಿ	೨೭೭
೨೩.	ರಾಷ್ಟ್ರಪಿತನಿಗೆ	೨೭೮
೨೪.	ಪ್ರೋತ್ಸಾಪ	೨೭೯
೨೫.	ಮಳೆಗಾಲ	೨೮೦
೨೬.	ಬಿಡುವನೇಂ?	೨೮೧

೨೭. ಸ್ತುತಿಪಂಚಕಂ ೨೮೩
೨೮. ಸ್ವಾತಂತ್ರ್ಯ ೨೮೫
೨೯. ಶಿವಯೋಗಮಂದಿರಂ ೨೮೬
೩೦. ನಾವಿಕನನ್ನು ಕುರಿತು ೨೮೭
೩೧. ಸುಕುಮಾರನಿಗೆ ೨೮೮
೩೨. ಶಮೀ ಸಮರ್ಪಣ ೨೮೯
೩೩. ಪ್ರೇರಣೆಗೆ ೨೯೧
೩೪. ಬಡವ ೨೯೨
೩೫. ವಿಜಯೋತ್ಸವ ೨೯೪
೩೬. ಪುರಸ್ಕಾರ ೨೯೫
೩೭. ಮಾತೃಭೂಮಿ ೨೯೭
೩೮. ಉತ್ತಿಷ್ಠತ ೨೯೮
೩೯. ವಿಜಯ ಮಹಾಂತ ಯೋಗಿಯೆ! ೩೦೦
೪೦. ಪ್ರಾರ್ಥನೆ ೩೦೨

ARISE! AWAKE!
AND STOP NOT
TILL THE GOAL
IS REACHED!

ಪಥಿಕ

"ಶ್ರೀಮನ್ನೂಜಗಂ"

PATHIK

ಪಥಿಕ

(ದಾಟಿ: ದೋಣಿಸಾಗಲಿ ಮುಂದೆ ಹೋಗಲಿ ಎಂಬಂತೆ)

ದಾರಿಗಾಣದೆ ಗುರುವೆ ಕುಳಿತಿಹೆ
ಚಿಂತಿಸುತ್ತಲಿ ನಿನ್ನಯ
ದಾರಿದೋರುತ ಬೆಳಗು ನೀಡುತ
ಮನೆಯ ಸೇರಿಸು ಎನ್ನಯ

೧

ಕಾಳರಾತ್ರಿಯ ಮುಸುಗು ಮುತ್ತಿದೆ
ದಿಕ್ಕು ತಪ್ಪುತಲಿರುವೆನು
ಧೂಳು ಸೂಸುವ ಭರದಿ ಬೀಸುವ
ಗಾಳಿ ಹೊಡೆತವ ಸಹಿಸೆನು
ಮೇಲೆ ಮೇಘವು ಗುಡುಗು ಹಾಕುತ
ಭಯದ ಬೆದರಿಕೆ ಕೊಡುತಿದೆ
ಕೋಲು ಮಿಂಚದು ಒಮ್ಮೆ ಒಮ್ಮೆಯೆ
ಮಿಂಚಿ ಬೆಳಕನು ತರುತಿದೆ

೨

ಬನದ ಸುತ್ತಲು ಕಳ್ಳಕಾಕರು
ವಾಸ ಮಾಡುತ ಹೊಂಚುತ
ಅಣಗಿಕೊಂಡಿಹರಂತೆ ಧನವನು
ಹಾದಿಗಾರರ ಸುಲಿಯುತ
ಮುಂದೆ ಹೋದಡೆ ತಗ್ಗುದಿನ್ನೆಯು
ಮತ್ತೆ ಪಯಣವ ತಡೆವುದು
ಮುಂದುವರಿಯಲು ದೊಡ್ಡಬೆಟ್ಟವು
ಎದುರು ಕಾಣುತಲಿರುವುದು

೩

ಹೊಳೆಯು, ಹಳ್ಳವು ಕೆರೆ ಸರೋವರ
ತುಂಬಿ ಹರಿಯುತಲಿರುವವು
ಈಜಿ ಹೋಗಲು ಬರುವದೆಂದರೆ
ನಡುವೆ ಮೊಸಳೆಗಳೆಳೆವವು
ಕುರುಡನಂದದಿ ಹೆಳವನಂದದಿ
ಸುತ್ತು ತಿರುಗುವದೊದಗಿದೆ
ಬೆಳಕು ಇಣುಕದ ಗಹ್ವರಂದದಿ
ನನ್ನ ಜೀವನವಾಗಿದೆ.

ನಡೆ–ಮುಂದೆ

೧

ಸೋಲಿನಲಿ ಸೋತಿರಲು ಮುಂದಿನಾ ಹಿರಿಗುರಿಯು
ದಾರಿಯನು ಮರೆಯದಿರ್ರೈ
ದಾರಿಯಾ ನಡೆವವನು ಎಡಹದಲೆ ಇರುವನೇಂ?
ಎಡಹಿದರೂ ಹೆದರದಿರ್ರೈ

೨

ನೋಡದಿರು ಬೇಡದಿರು ಹಿಂದುಳಿದ ಹಾದಿಯನು
ನಡೆ–ಮುಂದೆ ದೃಢಮನದಿ
ಶಿಲ್ಪಿಗನ ಶಿಲೆಯೊಡೆದು ಹೋದರವ ಚಿತ್ರವನು
ಕೊರೆಯುವದ ಬಿಡುವನೇನು?
ನೀಂ ಮುಂದೆ ನಡೆಯದೊಡೆ ಮಾಯರಕ್ಕಸರೆದ್ದು
ಮುತ್ತುವರು ಜವದಿ ನಿನ್ನಂ
ಗಜನಿಕರ ಓಡುತ್ತ ಕಾಡನ್ನು ತುಳಿಯುತ್ತ
ಹೂಹಣ್ಣು ಮುರಿಯುವಂತೆ

ಭಿಕ್ಷುಕ

೧

ಹಸಿದಿರುವೆ ಓ ತಂದೆ ಬಂದಿರುವೆ ನಿನ್ನ ಬಳಿ
ಬೇಡುವೆನು ಭಿಕ್ಷೆಯುನ್ನು
ನೀಡದಿರೆ ನಾನಿನ್ನು ಸಾಯುವೆನು ಬಲು ಬಳಲಿ
ನಿಂತಿಹೆನು ನೋಡುಮುನ್ನ

೨

ಕಲಿಕಾಲವಿಹುದೀಗ ನೀಡುವರು ಬಹಳಿಲ್ಲ
ಎಲ್ಲರನು ಕೇಳಿ ಬಂದೆ
ಉತ್ತರವ ನಿತ್ತರೈ ನಡೆಮುಂದೆ ನೀನಿಲ್ಲಿ
ನಿಲ್ಲದಿರು ಹೋಗು ಮುಂದೆ

೩

ಧನಕನಕ ಕೇಳದಲೆ ಇಂತಿವರು ಮಾಡುವರು
ಬಡಕೊಂಡೆ ಎನ್ನ ಕುಕ್ಷಿ
ಕೃಪೆಮಾಡು ಜವದಿಂದೆ ಅಂತರ್ಯಾಮಿ ಓ ಗುರುವೆ
ಬೇಡುವೆನು ಜ್ಞಾನಭಿಕ್ಷೆ

ದೀಪಾವಳಿ

೧

ದೀಪಗಳ ಸಾಲಿನೊಳು ಗರ್ಭಗುಡಿ ರಾಜಿಪ್ಪುದು
ಮುತ್ತಿರುವ ಕತ್ತಲೆಯು ಪೊತ್ತವನು ಒತ್ತಿಹುದು
ಬೆಳಕನ್ನು ತಂದಿಹುದು ಶಾಂತಿಯನ್ನು ಕೊಡುತಿಹುದು
ಸತ್ಯತೆಯ ಕಿಡಿ ನಿಕರ ಚಿತ್ತದೊಳು ಚಿಮುಕುವದು

೨

ಹೃದಯದೀ ಪ್ರಣತೆಯೊಳು ಸದ್ಭಕ್ತಿ ತೈಲವನು
ಸುವಿಚಾರ ಬತ್ತಿಯನು ಹೊಸೆದಿಟ್ಟು ಹಚ್ಚಿದೊಡೆ
ಗುಡಿಯೊಳಗೆ ಮರೆಯುತ್ತ ಕುಳಿತಿರುವ ಈಶ್ವರನು
ಕೊಡುತಿಹನು ದರ್ಶನವ ಪರಂಜ್ಯೋತಿ ಬೆಳಗಿನೊಳು

೩

ದೀಪಗಳು ಒಳಬೆಳಕು ತೋರುತ್ತ ಬೆಳಗಿಸಲಿ
ದೀಪೋತ್ಸವವೆಮಗೆಲ್ಲ ಚಿರಕಾಂತಿ ಹರಡಲಿ
ಜಗದೊಳಗೆ ಹುದುಗಿರ್ಪ ಅಜ್ಞತೆಯ ನಳಿಸುತ್ತ
ಝಗಝಗಿಸಲೆದೆಯೊಳಗೆ ಶಿವಶಾಂತಿ ಹೊಂಬೆಳಗು

ಶಿವನಪುಟ್ಟಿ

೧

ಹೃದಯಾಕಾಶದಿ ಏರಿಸುಪುಟ್ಟಿ
ಅದರೊಳ್ ಜ್ಞಾನಸುದೀಪವನಿಟ್ಟು
ಮುತ್ತಿದ ಕತ್ತಲೆ ಮೊತ್ತವನಟ್ಟಿ
ಸುತ್ತುತ ಬರುತಿಹ ಗಾಳಿಯಕಟ್ಟಿ

೨

ಬಂಧುರ ಸತ್ಯದ ಸ್ತಂಭವನೂರಿ
ಸುಂದರ ಬಕುತಿಯ ದಾರವ ತೂರಿ
ಅಷ್ಟಮದಂಗಳ ದಾರಿಯ ಮೀರಿ
ಆತ್ಮಾನಂದದ ಸೊಗವನು ತೋರಿ

೩

ನಭದಲಿ ಬೆಳಗಲಿ ಚಿನ್ಮಯ ಕಿರಣ
ತುಂಬಲಿ ಪುಟ್ಟಿಯು ದೇವರ ಸ್ಮರಣ
ಆಗಲಿ ಜನನದ ಮರಣದ ಹರಣ
ಇಂತೇರಿಸು ಶಿವಪುಟ್ಟಿಯ ಜಾಣ

ಇದಾವುದು?

೧

ಎದೆಯ ಹೊದರಿನಲ್ಲಿ ಬೆರೆದ
ಪದುಳದಿಂದ ಸಲಹಿ ಪೊರೆದ
ಹಾಲುಹಕ್ಕಿಯೊಂದು ಇಂದು
ಕೂಗುತಿರುವದು
ಬಾಳೆ, ಸೇಬು ತಿಂದು ಮತ್ತೆ
ಕೂಗುತಿರುವದು

೨

ದಿನಕೆ ದಿನಕೆ ರೆಕ್ಕೆ ಬಲಿತು
ಹಾರಿಹೋಹ ಬಯಕೆ ಪೊಳೆತು
ತಿಂದು ತಿಂದು ತೇಗಿ ತಾನು
ಸೊಕ್ಕುತಿರುವದು
ಮದವ ಮುರಿದು ಹಾರದಿರಲು
ಏನುಮಾಡಲ್ಕೆ

೩

ಹಕ್ಕಿ ಹೆಸರು ಹಂಸ ಪಿಕವು
ಗುಬ್ಬೆ ಗೂಬೆ ನವಿಲು ಶುಕವು
ಇದುವೆ ಅಲ್ಲ ರೆಕ್ಕೆಯಿಲ್ಲ
ಹಾರುತಿರುವದು
ಸರ್ವಜನರ ಎದೆಯೊಳಿರುವ
ದೇನುಪೇಳ್ವೆಯಾ?

ಅಮೃತಬಿಂದು

೧

ಕ್ರಾಂತಿ ಕಹಳೆಯನೂದು
ಶಾಂತಿ ತಪವನು ಮಾಡು
ಭ್ರಾಂತಿ ಮೋಹವದೂಡು
ವಿರತಿ ಗಂಧವ ತೀಡು

೨

ಶರಣರನು ಕೊಂಡಾಡು
ಭಕುತಿಯೊಳು ನಲಿದಾಡು
ಆನಂದ ಜಲಧಿಯೊಳು
ಮುಳುಗಿ ನೀನಮರನಾಗು

೩

ಸತ್ಯ ಕಂಬವನೂರು
ನಿತ್ಯ ಸುಖವನು ಕೋರು
ಮುಕುತಿಯಟ್ಟವನೇರು
ದೇವನಡಿಯೊಳು ಸೇರು

ಎಲ್ಲಿ ಹೋದೆ ತಂದೆ?

೧

ಎಲ್ಲಿ ಹೋದೆ ತಂದೆ ನೀನು
ಹುಟ್ಟಿಸೆನ್ನ ಎಲ್ಲಿ ಹೋದೆ
ದಾರಿತೋರಿ ಬುದ್ಧಿ ಹೇಳಿ
ಮಮತೆಯಿಂದ ಮುದವ ಮಾಡಿ
ಅಪ್ಪಿಕೊಂಡು ಸಲಹದನ್ನ
ಬಿಟ್ಟುಪೋದೆಯಾ?

೨

ಕಣ್ಣು ಕಾಣದಿರುವ ಕುರುಡ
ನಿಕರಕೆಲ್ಲ ಜ್ಞಾನನೇತ್ರ
ವಿತ್ತು ಧನ್ಯಮಾಡಿ ಹೋದ
ಜ್ಞಾನ ಸೂರ್ಯನೆ
ತಂದೆ ಅಲ್ಲವೇನು ನೀನು
ಎಲ್ಲಿ ಪೋದೆಯೊ?

೩

ಹುಟ್ಟಿದೊಂದು ವರುಷಕೆನ್ನ
ಬಿಟ್ಟು ದೇವಸಲ್ಲಿ ಜರೆದ
ಪೂರ್ಣಕಣ್ಣು ಬರುವತನಕ
ಇರದೆ ಹೋದೆಯಾ?
ಮರಳಿ ಜನುಮ ತಾಳ್ದು ಬರುವೆ
ನೆಂದು ಪೇಳ್ದೆಯಾ?

೪

ಆವಪರಿಯಲೆಂತು ಬರುವಿ
ಯೆಂಬುದನ್ನು ನೋಡುತಿರುವೆ
ಬೇಗಬಾರೋ ಎನ್ನ ಪಿತನೆ
ಮನೋನಿಲಯಕೆ
ಜೀವಜ್ಯೋತಿ "ಗುರುಕುಮಾರ"
ಕಾಣಬಾರದೇ?

ಅಮರವಾಣಿ

ಭಾಮಿನಿ ಷಟ್ಪದಿ

೧

ಅಮರವಾಣಿಯು ಬೆಳೆದುಬಾಳಲಿ
ಸುಮನಲೋಕದ ಗಾನ ಸುರುಹಲಿ
ವಿಮಲ ಹೃದಯದ ವೀಣೆಯೊಳು ತಾ ಕೂಡಿ ಒಂದಾಗಿ
ತ್ರಿಮಲ ಕಳೆಯುತ ಸುಖವ ನೀಡುತ
ಅಮಲಜ್ಞಾನದ ಪ್ರಭೆಯ ತೋರುತ
ಅಮರಗಾನವ ಸತತಹಾಡಲಿ ಮಧ್ಯನಿಲ್ಲದಲೆ

೨

ಅಮರವಾಣಿಯು ಶಾಂತಿ ಕಾಂತಿಯು
ಅಮರ ನೀತಿಯ ಸತ್ಯಭಕ್ತಿಯ
ಅಮರ ಕಾವ್ಯವ ನೀಡಿ ಜೀವನ್ಮುಕ್ತ ಮಾಡುವದು
ಅಮರವಾಣಿಯ ಮಧುರ ಧ್ವನಿಯು
ಅಮರವಾಗಲಿ ಪ್ರತಿಭೆ ಬೆಳಗಲಿ
ಅಮರನಾಥನ ಭಕ್ತಿಯಿಂದಲಿ ಮುನ್ನ ಬೇಡುವೆನು

ಸಾವಧಾನ

ಭಾಮಿನಿ ಷಟ್ಪದಿ

೧

ಸಾವಧಾನದಿ ಕಾರ್ಯ ಮಾಳ್ಪಡೆ
ಆವರಿಸುವವು ಶಿಷ್ಟ ಗುಣಗಳು
ಭಾವನಾಶಕ್ತಿಯದು ತಾ ಬಲಿಯುವದು ಬಲು ಬೇಗ
ಸಾವಧಾನದಿ ಕಾರ್ಯ ಮಾಡುತ
ಭೂವಿನುತ ನಾದಜ್ಞ ಗಾಂಧಿಯು
ಸಾವಧಾನದಿ ಮಾಡಿ ಬೆಳೆಸಿರಿ ಕೀರ್ತಿಲತೆಯನ್ನು

೨

ಸಾವಧಾನದಿ ಶಕ್ತಿ ಬರುವದು
ಸಾವಧಾನದಿ ಬುದ್ಧಿ ವೃದ್ಧಿಯು
ಸಾವಧಾನದಿ ಧೈರ್ಯ ತೇಜಗಳೆಲ್ಲ ದೊರೆಯುವವೈ
ಸಾವಧಾನದಿ ಕಾರ್ಯ ಮಾಡುವ
ಸಾವಧಾನದಿ ಒಡೆಯರಿಗೆ ನಾ
ಸಾವಧಾನದಿ ಮಾಡುವೆನು ಸುಸ್ವಾಗತವನು ಮುದದಿ

ನಿಶೆಗೆ

೧

ನಿಶೆಯೇ ನಿಶೆಯೇ ಬರುತಿಹೆ ಏತಕೆ?
ಯತಿಗಳನಾಸೆಯು ಬಲೆಯೋಳು ಸಿಲುಕಿಸಿ
ಜಪಮಾಲಿಕೆಯನು ಬೇಗನೆ ಹರಿಯಿಸಿ
ಘಾಸಿಯಮಾಡಲು ಬರುತಿಹೆ ಹೇಸಿ

೨

ನಿನ್ನಾವರಣವ ನೋಡಿದ ಚಣದೊಳು
ಬರುವವು ಹುಲಿಗಳು ಕರಡಿ ಸಮೂಹವು
ಕೂಗುತ ಚೀರುತ ಭೀಕರ ಧ್ವನಿಯಿಂ
ತಿನ್ನಲು ಹವಣಿಕೆ ಹಾಕುತಲಿರುವವು

೩

ನಿಶೆಯೇ ನೀಬರೆ ದೇಹವು ನಡಗುತ
ಲಿರುವದು ಚೋರರು ಬಂದರೆ ಗಳಿಸಿದ
ಧನವನ್ನಪಹರಿಸೊಯ್ಯುವರೆನ್ನುವ
ಭಯವದು ತುಂಬಿದೆ ಶಸ್ತ್ರವನೀಡ್ಯೆ

೪

ಉಷೆಯೊಳು ಇರುವದು ಒಂದೇ ಕಣ್ಣು
ನಿಶೆ ತಾ ಮುಚ್ಚಲು ಸಾವಿರ ಕಣ್ಣು
ಓರಿಯರು ಪೇಳ್ವರು ನಿನ್ನಯ ಬಣ್ಣ
ಸಾಧಕವೃಂದವು ತೆಗಳ್ವುದು ನಿನ್ನ

೫

ಅಂತೆಯೆ ಶರಣರು ನಿನ್ನಯಕತ್ತಲೆ
ಮೊತ್ತವನೊತ್ತಲು ಧ್ಯಾನದ ದೀಪವ
ಹಚ್ಚುತ ಎಚ್ಚರಗೊಳ್ಳುತ ಸತ್ಯದ
ಬೆಳಕನ ಹಾದಿಯ ಹಿಡಿಯುತಪೋದರು

ಮಟ್ಟಿ ಹೊಡೆಯುವವಗೆ

೧

ಮಟ್ಟೆ ಹೊಡೆಯೋನೀನು ಇಂತು
ಜ್ಞಾನಕರ್ಮ ಎತ್ತುಗಳಿಗೆ
ಧ್ಯಾನವೆಂಬ ನೊಗವಹಾಕಿ
ಮಟ್ಟೆ ಹೊಡೆಯೋ
ಅದಕ್ಕೆ ಗಟ್ಟಿ ಮನದ ಮಿಣೆಯು
ನಿಟ್ಟುಕೊಳ್ಳುನೀ

೨

ಹೊಡೆಯೊ ಹೊಡೆಯೋ ಸತ್ಯವೆಂಬ
ಬಾರುಕೋಲಿನಿಂದ ಸದೆಯೊ
ಭಕ್ತಿ ಹಗ್ಗ ಕಟ್ಟಿ
ಯುಕ್ತಿಯಿಂದ ತಟ್ಟಿ
ಬರುವ ಹಲವು ಕ್ಲೇಶಗಳನು
ಭರದಿ ಕುಟ್ಟಿ ಹೊಡಿಯೋ

೩

ಶಕ್ತಿಯನ್ನು ಹೊರಗೆ ಚಿಮ್ಮು
ನಶಿಸುವವರ ಬೇಗ ಗುಮ್ಮು
ಕೇಕೆಹಾಕು ಹುರುಪಿನಿಂದ
ಹೊಡೆಯೋಮಟ್ಟೆಯು
ಹಾಡಹಾಡು ಶುದ್ಧಸಿದ್ಧ
ಪ್ರಬುದ್ಧರಾತ್ಮರ

೪

ಮಬ್ಬುತಾನು ಮುತ್ತುತಿರಲಿ
ರಜನಿರಾಜ್ಯ ಬರುತಲಿರಲಿ
ಪಕ್ಷಿಪಶುಸಮೂಹವೀಗ

ಮನೆಯು ಸೇರಲಿ
ಭಾವಿ ಕೊಳೆಯು ಕಳೆಯು ತನಕ
ಹೊಡಿಯೋ ಮಟ್ಟಿಯು

೫

ಸಾಕುಮಾಡು ಹೇಳುತಿರಲಿ
ಬಂದು ಅವರು ಕರೆಯುತಿರಲಿ
ನೊಂದುಕೊಂಡು ಹೋಗುತಿರಲಿ
ಚಿಂತೆ ಬೇಡಲೈ
ಬಾಳಮೋಹ ದೂಡು ಭವದ
ತೃಷ್ಣೆ ಬತ್ತಲಿ

೬

ನಿಶೆಯು ಕಳೆದು ಉಷೆಯು ಬರಲಿ
ರವಿಯು ಪ್ರಖರ ಕಿರಣ ನಿಕರ
ಬಂದು ಜೀವ ಕುಸುಮವನ್ನು
ಮ್ಲಾನಿಸುತ್ತಿರೆ
ಧೈರ್ಯಬಿಡದೆ ಶಾಂತಿ ಜಲವ
ಸಿಂಚಿಸುತ್ತಿರು

೭

ಹೊಡೆಯೋ ಮಟ್ಟಿ ಇಂತು ಸುಮತಿ
ಸಲಿಲ ಸೆಲೆಯು ಒಡೆವವರೆಗೆ
ಸಿಹಿಯು ನೀರು ಬರದೆ ಇರಲು
ನಾನು ಎಂಬುದಂ
ನ್ನಳಿದ ಬೋರಿಯಂತ್ರವನ್ನು
ಹಚ್ಚಿ ಮತ್ತೆ ಹೊಡೆದು ಸ್ವಚ್ಛ
ಮಾಡಿ ಹೃದಯ ಭಾವಿ ತೊಳೆದು
ಮುಕ್ತನಾಗುನೀ

ಮೌನಂ ಸರ್ವಾರ್ಥ ಸಾಧನಂ

೧

ಮೌನವಿರೆ ಸುಖವುಂಟು
ಬಲುನುಡಿದು ಕಾಲ್ಗಳೆವ
ಬಾಳದುವೆ ಏತರದು?
ನುಡಿಯಲ್ಲಿ ಮಿತಿಯುಂಟು
ಅತಿಯುಂಡ ಜೀವಿಗಳು
ಬದುಕರದು ಸಟೆಯಲ್ಲ
ಬದುಕಿದರೆ ಆ ಬದುಕು
ಎಂತಹದು ಬಲುಮಿಡುಕು
ಕೊನೆಗದುವೆ ಅತಿಕೆಡುಕು
ಬಹುದಿನದಿ ಗಳಿಸಿರ್ಪ
ರತ್ನ ವೈಢೂರ್ಯಗಳ
ನೋಡಿದರೇಂ ಬರ್ಪುದೈ?

೨

ಮೌನಿಯಿರೆ ಹುಚ್ಚೆಂದು
ಎಸೆಯುವರು ಕಲ್ಲನ್ನು
ಎಸೆದರೂ ಸುಮ್ಮನಿರು
ಒಗೆವವಗೆ ಬೇರೊಬ್ಬ
ಒಗೆವವನು ಇರನೆ?
ಒಗೆವವಗೆ ನೀ ಒಗೆದು
ಮತ್ತಿಷ್ಟು ತಡವಿದರೆ
ಮದ್ಯವನು ಕುಡಿಸಿರ್ಪ
ಮಂಗನಂತಾಗುವನು
ಅನಲಕ್ಕೆ ಅರ್ಘ್ಯವನು
ಹಾಕಿದರೆ ಹೆಚ್ಚದಲೆ
ಬಿಡುವದೇನು?

೩

ಮೌನವಿರೆ ಮುಚ್ಚದಿರು
ಒಳಗಣ್ಣು, ಮುಚ್ಚಿದರೆ
ಕಾದಿರ್ಪ ಭರ್ಚಿಯಿಂ
ಚುರ್ಚಿರ್ಪ ತೆರನಂತೆ
ಆಗುವದು ನಿಜವಂತೆ
ಕವಿ ಕಾಳಿದಾಸತಾ
ಹಾಡಿದನು ಸತ್ಯಕ್ಕೆ
ಮಿತಿಮಾತು ಬೇಕೆಂದು

ಆಹ್ವಾನ

೧

ಬಾಗಿಲವ ತೆರೆದಿರುವೆ ಬಾಬೇಗ ಓ ಗುರುವೆ
ದಾರಿಯನು ನೋಡುತ್ತ ಕುಳಿತಿರುವೆ ಬಾ
ನಿನಗಾಗಿ ಕಟ್ಟಿರುವೆ ಸುಂದರದ ಮಂಟಪವ
ಚಿತ್ರದಿಂ ಶೋಭೆಯನು ಮಾಡಿರುವೆ ಬಾ

೨

ಆಸನವ ಹಾಸಿರುವೆ ಗಂಧವನು ತೇದಿರುವೆ
ಪತ್ರಿ ಪುಷ್ಪಗಳನೆತ್ತಿರುವೆ ಬಾ ಬಾ
ನಿರ್ಮಲದ ಹೃದಯದಿಂ ಸೇವೆಯನು ಮಾಡಿರುವೆ
ಭಕ್ತಿಯಿಂ ಕೈಮುಗಿದು ಬೇಡುವೆನು ಬಾ

೩

ಸಿಂಹಾಸನಾಸೀನನಾಗುತ್ತ ಪಾವನವ
ಗೈಯುತ್ತ ಜಲವನ್ನು ಸಿಂಚಿಸುತ ಬಾ
ಹೃದಯ ಮಂಟಪವನ್ನ ಚಿಚ್ಛರಣ ಕಿರಣಗಳ
ಹರಡುತ್ತ ಕತ್ತಲೆಯ ನಶಿಸುತ್ತ ಬಾ ಬಾ

ಸಮರ್ಪಣ

೧

ಒಪ್ಪಿರಲಿ ತಪ್ಪಿರಲಿ
ಸುಖವಿರಲಿ ಶೋಕವಿರೆ
ನಿಂದಿಸಲಿ ಬಂಧಿಸಲಿ
ಪ್ರೀತಿಸಲಿ ದ್ವೇಷಿಸಲಿ
ಮಿತ್ರನಿರೆ ಶತ್ರುವಿರೆ
ಹಿರಿಯರಾದವರು ತಾವ್
ಹಿಂದಕ್ಕೆ ಜಗ್ಗುತಿರೆ
ಎಲ್ಲವೂ ನಿನ್ನದೈ

೨

ಮಾನಾಪಮಾನವಿರೆ
ದೇವನಲಿ ಧ್ಯಾನವಿರೆ
ಶಕ್ತಿಯಿರೆ ಯುಕ್ತಿಯಿರೆ
ಸಟೆಯಿರಲಿ ದಿಟವಿರಲಿ
ಪಾಪವಿರೆ ಪುಣ್ಯವಿರೆ
ಕೋಪವಿರೆ ತಾಪವಿರೆ
ಹೃದ್ಭೂಮಿಯೊಳೆಲ್ಲವೂ
ವಾಸಿಸಲಿ ನಿನಗರ್ಪಿತೈ

ವಿಜಯಗೀತೆ

೧

ವಿಜಯವಾಗಲಿ ನಮ್ಮ ವೀರ ಭಾರತನಾಡು
ಸುಜನ ಸಂಕುಲವನ್ನು ಪೆತ್ತು ಮೆರೆದಿಹನಾಡು
ಕುಜನಕೂಟಕು ನಯದಿ ನೀತಿ ಪೇಳಿದ ನಾಡು
ಭಜಕರಿಂದಲಿ ತಾನು ಭಜಿಸಿಕೊಂಡಿಹನಾಡು

೨

ಪರದಾಸ್ಯದಲಿತಾನು ಘೋರಕಷ್ಟದಿ ಬಳಲಿ
ಶೂರತನದಲಿ ಕಾದಿ ವಿಜಯ ಪಡೆಯಿತು ಇಂದು
ವೀರಮಾತೆಯ ಕುವರರೆಲ್ಲರೊಂದಾಗಿನ್ನು
ಭಾರತಾಂಬೆಯ ಸೇವೆ ಭರದಿ ಮಾಡಲು ಬನ್ನಿ

೩

ಸ್ವಾತಂತ್ರ್ಯ ಪಡೆಯಲ್ಕೆ ಗಾಂಧಿ ಮಹಾತ್ಮನೆ ನೀನು
ಸ್ವಾತಂತ್ರ್ಯ ಪಡೆಯಲ್ಕೆ ನೆಹರು ವೀರನೆ ನೀನು
ಸ್ವಾತಂತ್ರ್ಯಕ್ಕಾಗಿಯೇ ಇತ್ತು ತನುಮನಧನಂಗಳನು
ಶಾಂತದಾತರೆ ನಿಮಗೆ ನಮಿಸುವೆವು ನಾವೀಗ

೪

ವೀರರಾತ್ಮಗಳಿಂದು ತೃಪ್ತಿಪೊಂದುವ ದಿನವು
ಭಾರತೀಯರ ಕೈಗೆ ರಾಜ್ಯ ದೊರೆಯುವ ದಿನವು
ವೀರತನವನು ಪೊಂದಿ ದೇಶವಾಳುವ ದಿನವು
ಭಾರತೀಯರೆ ಬನ್ನಿ ಹರುಷದಲಿ ಮುಂದಿನ್ನು

೫

ವೀರಕೇಸರಿ ಭೋಸನನ್ನು ಪಡೆದಿಹತಾಯೆ
ಭೂರಿ ಸದ್ಗುಣಗಳನು ಪಡೆದು ಶೋಭಿಪತಾಯೆ
ವೀರರಹ ಧೀರರಹ ನಿನ್ನ ಮಕ್ಕಳಿಗಿನ್ನು
ಭೂರಿ ಸಂತಸದಿಂದ ಕರುಣಿಸೌ ಓ ತಾಯೆ!

ಮರೆಯಾದ ಮಹಾತ್ಮ

೧

ಮುಳುಗಿದನು ಮುಳುಗಿದನು ಭಾರತದ ಚಿತ್ಸೂರ್ಯ
ಮುಳುಗಿದನು ಮುಳುಗಿದನು ಸತ್ಯಕಿರಣದ ತೂರ್ಯ
ಬೆಳಗಿಪೋದನು ಬಾಪು ವ್ರತವ ಬಿಡದಲೆ ತಾನು
ಬೆಳಗುವೆವು ಬೆಳಗುವೆವು ಭಕುತಿಯಿಂದಾರುತಿಯ

೨

ಶಾಂತಮೂರ್ತಿಯ ನಾವು ಕಳೆದುಕೊಂಡೆವು ಇಂದು
ಶಾಂತಿಯಿಲ್ಲದೆ ನಾವು ಅಂಧರಾದೆವು ಮುಂದು
ಶಾಂತಿ ಪಥವನು ತೋರಿ ನಡಿಸುವರು ಆರಿನ್ನು
ಶಾಂತಮೂರ್ತಿಯೆ ನಿನಗೆ ಶಾಂತಿ ನೀಡಲಿದೇವ

೩

ಮರೆಯಾದೆ ಹರಿಯಾಗಿ ಗಾಂಧಿ ಮಹಾತ್ಮನೆ ನೀನು
ಮರವೆಯಾ ಮನೆಯೊಳಗೆ ಬೀಳುವದು ಜಗವಿನ್ನು
ಮರವೆ ಜಿಡಿಸುತಲಿನ್ನು ಶಾಂತಿ ಸಮತೆಯ ಪಾಠ
ಅರುಹುವರು ಜಗದೊಳಗೆ ಆರಿಹರು ಜಗದಜ್ಜ !

ಗುರುಕುಮಾರ

ಶಿವಯೋಗಿಯೋ ನೀಯೋಗಿ ಮಹಾಮೂರ್ತಿ ಕುಮಾರಾ
ಶಿವಯೋಗಮಣಿ ತ್ಯಾಗಖಣಿ ವೀರಸುಧೀರಾ

೧

ಸದಾಶಿವಾತ್ಮ ನಾಮಾ ವರಭಾಸುರಧಾಮಾ
ಆಧ್ಯಾತ್ಮ ಸಾರ್ವಭೌಮಾ ಶಿವಯೋಗಿ ಲಲಾಮಾ
ಅಗಲಿದೆ ನೀನೆಮ್ಮನು ನೀ ಶಕ್ತಿಯ ಸೀಮಾ

೨

ಧೈರ್ಯಸುಮೇರು ಕ್ರೂರ ಮಾರಸಂಹರ ವೀರ
ಶಾಂಭವ ಜ್ಞಾನ ಮಹಾಬೋಧವರ ವಿಖ್ಯಾತ
ಭವತ್ಯಾಗಿ ಲಿಂಗಭೋಗಿ ಜಂಗಮ ಪ್ರೇಮಿನೀ

೩

ಶ್ರೀ ಶಾಂತಮೂರ್ತಿ ಯೋಗಕೀರ್ತಿ ಜ್ಯೋತಿ ಇದಯ್ಯ
ಶ್ರೀ ವೀರಶೈವ ಮಹಾಮತ ಪಾಲಕನೇತಾ
ಸುವಿರಾಗಿ ಲಿಂಗಾಂಗಿ ನೀ ಶ್ರೀ ಸುಕುಮಾರಾ

ಮಹಂತೇಶಗೀತೆ

ಸ್ಮರಿಸುವೆ ವೀರ ಶ್ರೀ ಮಹಂತೇಶ
ಮರೆಯುವೆ ಏಮ್ಮಯ ಪಾಲಿಸು ಗುರುವೆ ||ಪ||

೧

ಅರಿಷಡ್ವರ್ಗವ ಜಯಿಸಿದ ತ್ಯಾಗಿ
ನಿರುತದಿ ಲಿಂಗವ ಪೂಜಿಪಯೋಗಿ

೨

ಭಕುತರಿಗೆಲ್ಲ ಭಕುತಿಯ ರೀತಿ
ಯುಕುತಿಯಿಂದರುಹಿದ ಭಕ್ತರಮೂರ್ತಿ

೩

ಯೋಗದ ಪೀಠವು ಉಳಿಯಲಿ ಎಂದು
ಯೋಗಸುಮಂದಿರ ರಚಿಸಿದಿ ಬಂದು

೪

ಯೋಗದಿ ನಿಪುಣನೆ ಚಿತ್ತರಗೀಶ
ಬಾಗುವೆ ಪಾದಕೆ ಭಕ್ತಿಯ ಕೋಶ

೫

ನಿನ್ನಯ ನಾಮವ ನೆನೆಯುತ ಮುದದಿ
ಬನ್ನವ ಕಳೆಯಲು ಬೇಡುವೆ ಜವದಿ

ಸ್ತೋತ್ರ

ಶ್ರೀ ಗುರುನಾಥಾ ಯೋಗವಿಖ್ಯಾತಾ
ಬಾಗುವೆ ಚರಣಕೆ ಭೋ ಭೋ ||ಪ||

೧

ಮಾಯದ ಮದವನು ಮುರಿದು
ಧ್ಯೇಯವ ಸಾಧಿಸಿ ಮುದದಿ
ಮಾಯಾ ವಿರಹಿತನಾಗಿ
ಮೆರೆದಿಹ ಯತಿವರ ನೀನು

೨

ಜೀವದ ಗುಣಗಳ ನಳಿಸಿ
ದೇವರ ಧ್ಯಾನವ ಸ್ಮರಿಸಿ
ದೇವನೊಳೈಕ್ಯವಪೊಂದಿ
ದಾನಂದ ಮೂರ್ತಿಯೋ ನೀ

೩

ಯೋಗಸುಮಂದಿರ ರಚಿಸಿ
ಯೋಗದ ತತ್ವವ ತಿಳಿಸಿ
ಯೋಗಾನಂದವ ಪಡೆದಿಹ
ಯತಿವರ ಶ್ರೀ ಸುಕುಮಾರ

ಮಂಗಲಗೀತೆ

ಮಂಗಲಂ ಭವಾರಣ್ಯದಾವ ||ಪ||

೧

ನಿತ್ಯಮುಕ್ತನೆ ಮಹಾಮೂರ್ತಿ ದಿವ್ಯಾತ್ಮ
ಸತ್ಯಪ್ರಭುದ್ಧಶುದ್ಧಸಿದ್ಧ ಮಹಾತ್ಮ

೨

ವೀರಶೈವಾಚಾರ ಸಾರ ವಿಜ್ಞಾತ
ಮಾರಸಂಹರ ಧೀರಶೂರ ಪ್ರಖ್ಯಾತ

೩

ಜ್ಞಾನನೇತ್ರನೆ ಮಹಾಂತೇಶ ಮಹೇಶ
ಧ್ಯಾನತಲ್ಲೀನ ಸ್ತೋತ್ರ ಪಾತ್ರ ಚಿತ್ಕೋಶ

ಕವಿ

೧

ಕಲ್ಲಿನೆದೆಯ ಕರಗಿಸುವನು
ದೇವನಡಿಯ ತೋರಿಸುವನು
"ತತ್ವಮಸಿ"ಯ ತತ್ವವನ್ನು
ತಿಳುಹಿಕೊಡುವನು
ಭಾವಪುಷ್ಪವರಳಿದಾಗ
ಭಯವು ಬಂದು ಮುತ್ತಿದಾಗ
ಸುಖದ ದುಃಖ ಸಮಯದಲ್ಲಿ
ಹಾಡಿಬಿಡುವನು

೨

ನೀರಿನಲ್ಲಿ ಭೂಮಿಯಲ್ಲಿ
ಅನಿಲದಲ್ಲಿ ಅನಲದಲ್ಲಿ
ಶೈಲ ಶಿಖರದಲ್ಲಿ ತಾನು
ಹೋಗತಕ್ಕವ
ಚಂದ್ರನಂತೆ ತಂಪುತಾಳ್ದು
ಸೂರ್ಯನಂತೆ ದೀಪ್ತಿ ಪಡೆದು
ಸಲಿಲದಂತೆ ಸರಸನಾಗಿ
ಮೆರೆಯತಕ್ಕವ

೩

ಗಗನವವಗೆ ಬಹಳ ಕಿರಿದು
ಸಘನವನವು ಮಿಗಿಲುಚಂದ
ಮೂರು ಲೋಕ ತುಂಬ ಇವನ
ಮನೆಗಳಿರುವವು
ಅಳಿವುದೊಮ್ಮೆ ಬ್ರಹ್ಮಸೃಷ್ಟಿ
ಉಳಿವುದಂತ್ಯ ಕವಿಯ ಸೃಷ್ಟಿ
ಕವಿಯು ದಯಾದೃಷ್ಟಿ ಪಡೆಯುವವರೆ
ಅಮರರು

ರಾಷ್ಟ್ರಪಿತನಿಗೆ

ಭಾಮಿನಿ ಷಟ್ಪದಿ

೧

ಶಾಂತಮೂರ್ತಿಯೆ ಸತ್ಯವಂತನೆ
ಶಾಂತಿಯುಕ್ತವಿರಾಗ ಜಲಧಿಯೆ
ಅಂತರಂಗದಿ ಪರಿಯನೆಸಪನುಬಿಡದೆ ಬಯಲಾದೆ
ಚಿಂತೆಯಲಿ ಮುಳುಗಿರ್ಪನಿನ್ನಯ
ಭ್ರಾಂತಿ ಎಂಬಾ ಹಿರಿಬಲೆಗೆ ಸಿಲು-
ಕಿಂತು ನಾನಾ ಯೋಚನೆ ಗೆಯ್ವುತಿಹುದು ಜಗವೆಲ್ಲ

೨

ಹೊಳೆವ ಚಂದ್ರಗೆ ರಾಹುವೆಂಬಾದು
ರುಳ ನೆನಿಸಿದಾ ಹಿರಿಯರಕ್ಕಸ
ಕಳೆಯ ಕಳೆಯುತ ಕಷ್ಟಕೊಡುತಲಿ ನುಂಗಿಬಿಡುವಂತೆ
ಕೊಲೆಯಪಾತಕಿ ಘೋಡ್ಸೆಯೆಂಬುವ
ಕೊಲೆಯ ಮಾಡಿದನಲ್ತೆ ಗಾಂಧಿಯ
ಬಲುಮಹಿಮನಾ ಶಾಂತಕೊಲೆಯಿಂ ಜಗವ ಪೀಡಿಸಿದ

೩

ನಿನ್ನ ಆತ್ಮಕ್ಕೆ ಶಾಂತಿ ನೀಡಲಿ
ನಿನ್ನ ಕೀರ್ತಿಯು ಜಗದಿ ಹರಡಲಿ
ನಿನ್ನ ಹಾದಿಯ ಹಿಡಿಯಲೆಂದು ಬೇಡುವೆನು ಪರನನ್ನು
ಇನ್ನು ಅಳಿಯಲಿ ಜಾತಿ ಭೇದವು
ಮುನ್ನ ಬೆಳೆಯಲಿ ಒಂದೇ ಭಾವವು
ನಿನ್ನ ಧರ್ಮವು ಬಾಳಿ ಬದುಕಲಿ ರಾಷ್ಟ್ರನಾಯಕನೇ

ಪ್ರೋತ್ಸಾಹ

ಬಳ್ಳಿಗಳು ಚಿಗುರೊಡೆದು
ಹೂಕಾಯಿ ಬಿಡಲಿಕ್ಕೆ
ನೀರೆರೆಯು ಬೇಕಲ್ಲವೆ?

ಎಳೆಮಗುವು ಹಿರಿದಾಗಿ
ಬಲಶಾಲಿಯಾಗಲ್ಕೆ
ಹಾಲ್ಗುಡಿಸಬೇಕಲ್ಲವೆ?

ಹುಲುಸಾದ ಕಾಳುಗಳ
ಬೆಳೆಯುತಿಹ ಹೊಲಗಳಿಗೆ
ಬಲವೀಯಬೇಕಲ್ಲವೆ?

ಎಲ್ಲರನು ಒಯ್ಯುತಿಹ
ರೈಲುರಥ ಚಲಿಸಲ್ಕೆ
ಕಲ್ಲಿದ್ದಲ ಬೇಕಲ್ಲವೆ?

ಹಸಿವೆಯನು ಹಿಂಗಿಸುವ
ರಸೋಗರ ಮಾಡಲ್ಕೆ
ಕಾಷ್ಟವದು ಬೇಕಲ್ಲವೆ?

ಸಲೆ ನೆರಳು ಕೊಡುತಿರುವ
ಚಲು ಮನೆಯ ಕಟ್ಟಲ್ಕೆ
ಕಲ್ಲುಗಳು ಬೇಕಲ್ಲವೆ?

ಜನರೊಳಗೆ ಜಾಣನೆಂ-
ದೆನಿಸಲ್ಕೆ ಗುರುವಿನಾ
ಉಪದೇಶ ಬೇಕಲ್ಲವೆ?

ಪ್ರೋತ್ಸಾಹವಿಲ್ಲದಲೆ
ಸಾಗಿಸುವ ಆ ಬಾಳು
ರಸವಿರದ ಹಣ್ಣಲ್ಲವೆ?

ಮೇಲ್ಮಠವ ಮುಟ್ಟಿಸೈ

೧

ಕತ್ತಲೆಯು ಮುತ್ತುತಿದೆ
ಮಳೆ ಹನಿಯು ಸಿಡಿಯುತಿದೆ
ದಾರಿಯನು ಹಿಡಿದಿರುವೆ
ಮೇಲ್ಮಠವ ಮುಟ್ಟಲಿಕೆ
ಮೇಘಗಳ ಗರ್ಜನೆಯು
ಭೋರ್ಗರೆದು ಕೇಳುತಿದೆ
ಕಣ್ಣನ್ನು ಕೋಲ್ಮಿಂಚು
ಕೋರೈಸಿ ಮುಚ್ಚುತಿದೆ

೨

ಕಾಡುನರಿ ನಿಕರಗಳ
ಗುದ್ದಾಟ ದುರುಳಾಟ
ನಾಗಗಳ ಓಡಾಟ
ಗೂಬೆಗಳ ಕೂಗಾಟ
ಕೋಣಗಳ ಕಾದಾಟ
ಭೂತಗಳ ತಿರುಗಾಟ
ನಡೆದಿಹವು ಸುತ್ತೆಲ್ಲ
ಕಿರುಚಾಟದಬ್ಬರಾಟ

೩

ಎಂತು ನಾ ಸಾಗಿಸಲಿ
ದಾರಿಯನು ಓ ತಂದೆ
ಇಂತಿರುವ ಕಷ್ಟಗಳ
ಪರಿಹರಿಸಲಾನೆಂದು?
ಓ ಗುರುವೆ ನಾನೀಗ
ಬೇಡುವೆನು ನಿನ್ನಲ್ಲಿ
ಜ್ಞಾನದೀಪವ ನೀಡಿ
ಮೇಲ್ಮಠವ ಮುಟ್ಟಿಸೈ

ಬಿಡುವನೇಂ?

೧

ಪಕ್ಷಿಯನು ಹಿಡಿತಂದು
ಪಂಜರದೊಳಿಟ್ಟರೇಂ
ಹಾರುವದು ಹೋದೀತೆ?

೨

ಹಸಿವೆಯಿಂ ಬಳಲುತಿಹ
ಭಿಕ್ಷುಕಗೆ ನೀಡದಿರೆ
ಭಕ್ಷಿಪುದು ಬಿಡುವನೇಂ?

೩

ಕಟ್ಟಡವ ಕಟ್ಟುವಗೆ
ಇಟ್ಟಿಗೆಯು ಸಿಗದಿರಲು
ಕಟ್ಟುವದು ಬಿಡುವನೇಂ?

೪

ಕೃಷಿಕನಿಗೆ ಬಿತ್ತಲ್ಕೆ
ಹೊಸಬಿತ್ತು ದೊರೆಯದಿರೆ
ಪಸಹೊಲವ ಬಿಡುವನೇಂ?

೫

ಸೌರಭವ ಸೂಸುತಿಹ
ಕುಸುಮಗಳ ನೆಸೆದೊಡೇಂ?
ಸೌರಭವ ಬಿಡುವನೇಂ?

೬

ಕದಳಿಯಾ ಹಣ್ಣುಗಳು
ಸಿಹಿಕೊಡುವವಲ್ಲದೆ
ಕಹಿಯನ್ನು ಕೊಡುವವೇಂ?

೭

ನಿಡುತೊರೆಯು ಕಡಲವನು
ಕೂಡಲ್ಕೆ ಕಠಿಣವಿರೆ
ಕೂಡುವದು ಬಿಟ್ಟೀತೇ?

೮

ಕಾರ್ಯವನು ಮಾಡುವವಗೆ
ಪ್ರೋತ್ಸಾಹ ನೀಡದಿರೆ
ಕಾರ್ಯವನು ಬಿಡುವನೇಂ?

ಸ್ತುತಿ ಪಂಚಕಂ

(ನಗಸ್ವರೂಪಿಣೀ ವೃತ್ತ)

೧

ಯತೀಂದ್ರ ವೃಂದ ಪೂಜಿತಂ
ವಿರಾಗಭೋಗ ವರ್ಜಿತಂ
ಕೃತೇಶಭವ್ಯ ಮಂದಿರಂ
ಗಿರೀಶಯೋಗರಾಜಿತಂ
ಸುವೀರಶೈವರಕ್ಷಕಂ
ಸಧರ್ಮಬೋಧ ಶಿಕ್ಷಕಂ
ವಿರಾಟ್ಪುರಾಧಿನಾಯಕಂ
ಭಜಾಮಿ ಮುಕ್ತಿದಾಯಕಂ

೨

ವಿಚಾರಸಾರಪೂರಕಂ
ಸ್ವಭಕ್ತಶೋಕ ನಾಶಕಂ
ಭವಾದಿ ಮೂಲದಾಹಕಂ
ಯಮೀಶ ಸಂಘದೀಪಕಂ
ಅನಾಥವೃಂದ ಪೋಷಕಂ
ಮಹಾಪದಾಂ ನಿವಾರಕಂ
ವಿರಾಟ್ಪುರಾಧಿ ನಾಯಕಂ
ಭಜಾಮಿ ಮುಕ್ತಿದಾಯಕಂ

೩

ಚಿದಂಗಯೋಗಿ ಸಿದ್ಧಿದಂ
ಚಭಕ್ತಿಶಕ್ತಿ ಮುಕ್ತಿದಂ
ಶಿವಾನುರಾಗಿ ಯೋಗಿಶಂ
ಕರಾನುಭಾವ ಶಾಂತಿದಂ
ಕೃಪಾಕರಂ ಗುಣಾಕರಂ
ಪರೋಪಕಾರ ಸಾಗರಂ
ವಿರಾಟ್ಪುರಾಧಿ ನಾಯಕಂ
ನಮಾಮಿ ಭಕ್ತಿಪೂರ್ವಕಂ

೪

ನಿರಂಜನಂಚ ನಿರ್ಗುಣಂ
ಕುಪಾಪ ಪಂಕ ಶೋಷಣಂ
ವಿರಾಗ ಸತ್ಯ ಭೂಷಣಂ
ಚ ಷಟ್ಸ್ಥಲ ಸ್ವರೂಪಿಣಂ
ವಿರಕ್ತವೃಂದ ಶೇಖರಂ
ಹ್ಯನೀತಿ ವರ್ತ್ಮಭೀಕರಂ
ವಿರಾಟ್ಪುರಾಧಿ ನಾಯಕಂ
ನಮಾಮಿ ಮುಕ್ತಿದಾಯಕಂ

೫

ಸುಭಾವ ಭಕ್ತ ಭಾಸ್ಕರಂ
ಸುಶಾಂತಿ ಮುಕ್ತಿಮಂದಿರಂ
ಚರೇಶ್ವರಂ ಪರೇಶ್ವರಂ
ಸುಜಂಗಮೇಶ್ವರಂ ಗುರುಂ
ಫಲಪ್ರದಂ ಪ್ರಮೋದದಂ
ಚಿದಾತ್ಮಲಿಂಗಭೋಗಿನಂ
ಸದಾಶಿವಂಚ ಮತ್ಪ್ರಭುಂ
ಭಜೇ ಕುಮಾರ ಯೋಗಿನಂ

ಅನುಷ್ಟುಪ್ —

೨

ಭಾವಾತ್ಮಕಂ ಸುಪೃದ್ಯಂಚ
ಕುಮಾರಸ್ವಾಮಿ ಪ್ರೀತಯೇ!
ಸೇವಕೇನ ಮಹಾಂತೇನ
ರಚಿತಂ "ಸ್ತುತಿ ಪಂಚಕಂ"

೩

ಸ್ತುತಿ ಪಂಚಕ ಮೇತಚ್ಚ
ಸದ್ಭಕ್ತ್ಯಾ ಪ್ರಣಿಧಾನದಂ
ಯಃ ಪಠೇಲ್ಲಭತೇ ನಿತ್ಯಂ
ಸಸ್ವ ಸಿದ್ಧಿಸು ಸಂಪದಂ

ಸ್ವಾತಂತ್ರ್ಯ

೧

ಬಹು ದಿನದ ಯತ್ನದಿಂ ದೊರೆತಿಹುದು ಸ್ವಾತಂತ್ರ್ಯ
ಸ್ವಾತಂತ್ರ್ಯ ಪ್ರಾಪ್ತಿಯೊಳಿರುತಿಹುದು ನಿಜಶಾಂತಿ
ಸ್ವಾತಂತ್ರ್ಯ ಗಳಿಸಿದೊಡೆ ಬೆಳಗುವದು ಶಿವಕಾಂತಿ
ಸ್ವಾತಂತ್ರ್ಯವೆಮಗೆಲ್ಲ ಕೊಡುತಿಹುದು ಧೈರ್ಯವನು

೨

ಸ್ವಾತಂತ್ರ್ಯ ದೊರೆತರೂ ನಡೆದಿಹುದು ಸುತ್ತೆಲ್ಲ
ಕಳ್ಳ ಸುಲಿಗೆಗಳಾ ಬಡಿದಾಟ ಕೊಲೆಯಾಟ
ಅನ್ನ ನೀರಿಲ್ಲದಲೆ ಮರಗುತ್ತ ಕೊರಗುತ್ತ
ಸಾಯುತಿದೆ ಜನಸಂಖ್ಯೆ ಗುಣಿತ ಗಣಿತವ ಮೀರಿ

೩

ಬಳಲುತಿಹ ಬಡಜನರಿಗಾಹಾರದಾನಂದ
ದೊರೆತಾಗ ನಿಜವಾದ ಸಂಪೂರ್ಣ ಸ್ವಾತಂತ್ರ್ಯ
ಓ! ತಂದೆ ಜಗದೀಶ ಎಚ್ಚರಿಸು ಜನಗಳನು
ಆತ್ಮಶಕ್ತಿಯನಿತ್ತು ಪಾಲಿಸೈ ಮುದದಿಂದ

ಶಿವಯೋಗಮಂದಿರಂ

೧

ಹೃದಯವೇ ನಿಜನಿಲಯ ಶಿವಯೋಗಮಂದಿರಕೆ
ಜ್ಞಾನದಾ ನೇತ್ರವನು ತೆರೆದವರದು ಕಾಣುವದು
ಎಲ್ಲಿದ್ದರೇನಂತೆ ಆ ಭವ್ಯ ಭವನವನು
ತೊರೆಯದಲೆ ಮರೆಯದಲೆ ಪೂಜಿಪಡೆ ಸೊಗಸಿಹುದು

೨

ಮಂದಿರದ ಸುತ್ತಲೂ ಸತ್ಯದಾಗೋಡೆಯನು
ಕಟ್ಟಿದೊಡೆ ಒಳಗಿರುವ ಶಿವಯೋಗ ದೊರಕುವದು
ಭಕುತಿಯಿಂ ಕೈಮುಗಿದು ಹಾಡಿದೊಡೆ ಬೇಡಿದೊಡೆ
ಹೃದಯದಾ ಮಂದಿರವು ಥಳಥಳನೆ ಹೊಳೆಯುವದು

೩

ಮುಸುಕಿರುವ ಅಜ್ಞಾನ ಭ್ರಮೆಯನ್ನು ದೂಡಿದೊಡೆ
ಶಿವಯೋಗದೊಳಗಿರುವ ಶಿವತೇಜ ಕಾಣುವದು
ಹೃದಯದೊಳು ಶಿವಜ್ಞಾನ ಶಿವಭಾವ ಒಲಿಸಿದೊಡೆ
ಶಿವಯೋಗ ಮಂದಿರವೆ ಹೃದಯ ತಾನಾಗುವದು

ನಾವಿಕನನ್ನು ಕುರಿತು

೧

ಈ ಪುಟ್ಟನಾವೆಯಲಿ ತೇಲುತ್ತ ಹೊರಟಿಹೆನು?
ಹತ್ತಿರದ ತೀರಕ್ಕೆ ತಲ್ಪಿಸೈ ತಂದೆ
ಜೀವನದ ಸಾಗರದಿ ಈಜಿ ನಾ ಸೋತಿರುವೆ
ದೇಹವದು ಹಣ್ಣಾಗಿ ಸಣ್ಣಾಗಿ ಹೋಗಿಹುದು

೨

ಹಗಲಿನಲಿ ಭಯವೀವ ಬಿರುಗಾಳಿ ಬೀಸುವದು
ರಾತ್ರಿಯೊಳು ಕತ್ತಲೆಯ ಪೊತ್ತವದು ಮುತ್ತುವದು
ನನ್ನಯೀ ದಾರಿಯೊಳು ಸಂಗಡಿಗರಾರಿರದೆ
ಬಳಲಿ ನಾನಿನ್ನನ್ನು ಬೇಡುತಿಹೆ ನಾವಿಕನೆ!

೩

ಈಸೆನಗೆ ಬಂದರೂ ಭಯತುಂಬಿ ಬೀಸಿಹುದು
ಆರ್ಭಟದಿ ಬರುತಿರುವ ತೆರೆಗಳಾ ಹೊಡೆತವನು
ನೋಡಿದೊಡೆ ದೇಹವದು ನಡುಗುತ್ತಲಿರುವದೈ
ಭಯದಿಂದ ದೂರಿರಿಸಿ ಧೈರ್ಯವನು ನೀಡಯ್ಯ

೪

ನೀನಿರದ ಜಗವೆಲ್ಲ ಬಾಳುವದು ದುರ್ಲಭವು
ನಿನ್ನೀ ಕರುಣೆಯನು ಬೇಡುವದು ಜನವೆಲ್ಲ
ದೀಪ್ತಿಯನು ಶಾಂತಿಯನು ನೀಡುತ್ತ ಮುದದಿಂದ
ಆ ತೀರ ಮುಟ್ಟಿಸೈ ಜೋಕೆಯಿಂ ನಾವೆಯನು

ಸುಕುಮಾರನಿಗೆ

೧

ಹುಟ್ಟಿರುವ ಸುಕುಮಾರ
ಸುಖವಾಗಿ ಬಾಳುತ್ತ
ಬೆಳೆಯುತ್ತ ಬೆಳಗುತ್ತ
ಚಿರಕಾಂತಿ ನೀಡುತ್ತ
ಜನಮನದ ಪ್ರೇಮದಾ
ಸಾಗರದಿ ಮುಳುಗುತ್ತ
ಜವ್ವನದ ಸೌಂದರ್ಯ
ತೋರಿಸಲಿ ಮಾಧುರ್ಯ

೨

ಸುಕುಮಾರನಿಲ್ಲದಿರೆ
ಜನಕೆಲ್ಲ ಕಡುದುಃಖ
ಸುಕುಮಾರ ಮನೆಗೆಲ್ಲ
ಸುಖಸಾರ ಸಂಭಾರ
ಸುಕುಮಾರ ನಮಗೆಲ್ಲ
ಸನ್ಮಾರ್ಗಕಾಧಾರ
ಹೃನ್ಮೂರ್ತಿ ಸುಕುಮಾರ
ನಾ ಪ್ರಭೆಯು ರಂಜಿಸಲಿ

೩

ಅಡಿಯಿಡುತ ಸುಕುಮಾರ
ಪ್ರೌಢಿಮೆಯ ದಾರಿಯೊಳು
ಹೊಂಗಿರಣ ಹೊಂಬೆಳಕು
ಪಸರಿಸಲಿ ಸುತ್ತೆಲ್ಲ
ಎಚ್ಚರಿಸಿ ಕನ್ನಡದ
ಜನತೆಯನು ಧೈರ್ಯದಿಂ
ಸುಖಶಾಂತಿ ಬೀರುತ್ತ
ಹೃದ್ದೀಪ ಬೆಳಗಿಸಲಿ

5991

ಶಮೀ ಸಮರ್ಪಣ

೧

ಆಶೀರ್ವದಿಸು ಗುರುವೆ
ಬಾಗಿರುವೆ ಭಕ್ತಿಯಿಂ
ತೊಳೆದಿರುವೆ ಹೃದಯವನು
ಗಂಗೆಯಾ ಸಲಿಲದಿಂ
ಅರ್ಪಿಸುವೆ ಬನ್ನಿಯನು
ಸಂಪೂಜ್ಯ ಚರಣದೊಳು
ಸ್ವೀಕರಿಸು ಓ ತಂದೆ
ಮಮತೆಯಿಂ ನೋಡುತ್ತ

೨

ಎಡೆಬಿಡದೆ ಮುನ್ನುಗ್ಗಿ
ರಣಭೂಮಿಯೊಳುಕಾದಿ
ಕಡಿಯುತ್ತ ವೈರಿಗಳ
ದೂಡುತ್ತ ಕ್ಲೇಶಗಳ
ತುಳಿಯುತ್ತ ಧೂಳಿಯನು
ತಾಳುತ್ತ ಧೈರ್ಯವನು
ವಿಜಯವನು ಪಡೆಯಲ್ಕೆ
ಬೇಡುತಿಹೆ "ಶಸ್ತ್ರವನು"

೩

ವಿಜಯಕಾಗಿಯೆ ನಡೆದಿಹುದು
ಸುತ್ತೆಲ್ಲ ಯುದ್ಧ
ವಿಜಯದಿಂದಾತ್ಮಸಿದ್ಧಿ
ದೊರಕುವದು ಸಂಸಿದ್ಧಿ
ವಿಜಯವೇ ಜೀವನಕೆ
ನವಕಾಂತಿ ಸಮಶಾಂತಿ

ಯಾತ್ರಿಕಗೆ ಪಟ್ಟಣವು
ದೊರೆತರದು ಚಿಂತೆಯೇಂ?

೪

ವಿಜಯ ಪಡೆಯದ ಮನುಜ
ಒಣಗಿರ್ಪ ಎಲೆಯಂತೆ
ಬತ್ತಿರುವ ಕೆರೆಯಂತೆ
ಒಡೆದ ಕನ್ನಡಿಯಂತೆ
ಅಪಜಯವೇ ದುಃಖಕ್ಕೆ
ಮೂಲಬೇರಲ್ಲವೆ?
ವಿಜಯ ಪಡೆಯುವ ಮನುಜ
ರಸಭರಿತ ಪಣ್ಣಲ್ಲವೆ?

೫

ಬಂಗಾರನೀಡಯ್ಯ
ಕಡುಬಡವನಾಗಿರುವೆ
ಬಂಗಾರ ದೊರೆಯದಿರೆ
ಶೃಂಗಾರವೆಂತಯ್ಯ
ಅಂತರ್ಯಾಮಿ ಓ ಗುರುವೆ
"ಸುಕುಮಾರ" ಚಿನ್ಮೂರ್ತಿ
ಸುಜ್ಞಾನ ಸುವರ್ಣವನು
ಬೇಡುತಿಹೆ ಹೃನ್ಮೂರ್ತಿ

ಪ್ರೇರಣೆಗೆ

೧

ಪ್ರೇರಣೆಯೆ! ಧಾರುಣಿಗೆ ಚೇತನವ ಕೊಡುತಿಹುದು
ಪಥಿಕಂಗೆ ದಾರಿಯನು ತೋರಿ ಸುಖ ನೀಡುವದು
ಪ್ರೇರಣೆಯ ಬಲದಿಂ ಸಾಗುವವು ಅಶ್ವಗಳು
ಪ್ರೇರಣೆಯೆ ದೀಪಕ್ಕೆ ನಿಜತೈಲವತ್ತಿ?

೨

ಪ್ರೇರಣೆಯ ಬಲವಿರದ ಈ ಜೀವ ನಿರ್ಜೀವ
ದಿನಕರನು ತಾನಿರದ ನೀರಜದ ತೆರನಂತೆ
ಪ್ರೇರಣೆಯು ತುಂಬಿರುವ ಹೃದಯವದು ಹೊಮ್ಮುವದು
ಸ್ವರ್ಣ ಘಟದಂತೆ ಮೇಣ್ ಸೌಗಂಧ್ಯದಲರಂತೆ

೩

ಬಿಗಿದಿರುವ ಹಗ್ಗವನು ಕಲಿತನದಿ ಹರಿಯುತ್ತ
ಬಂಧನವ ಬಿಡಿಸುತ್ತ ಸ್ವಾತಂತ್ರ್ಯ ನೀಡೆನಗೆ
ನಡೆಮುಂದೆ ಎನ್ನುತ್ತ ದೂಡೆನ್ನ ಪ್ರೇರಣೆಯೇ!
ಆತ್ಮರಾಜ್ಯದ ಅರಸ ಆನಾಗಿ ಬಾಳ್ವಂತೆ

೪

ಸತ್ಯ ಸೌಂದರ್ಯತೆಗೆ ತವಶಕ್ತಿಯೆ ಕಾರಣವು
ಗುಡಿಗದುವೆ ತೋರಣವು ಭಾವಕ್ಕೆ ಪೋಷಣವು
ಒಣಗುತಿಹ ವೃಕ್ಷಕ್ಕೆ ಚಿಗರೊಡಿಸಿ ಹೂ ಬಿಡಿಸಿ
ಫಲಗಳಂ ನೀಡುವಾ ನಿಜಶಕ್ತಿ ನಿನ್ನೊಳಗೆ

೫

ಎತ್ತನೋಡಿದಡತ್ತ ತುಂಬಿಹುದು ಕತ್ತಲೆಯು
ರವಿಕರಣ ಪ್ರತಿಬಿಂಬ ಬೀಳಿಸ್ಯೆ ದಯದೀ
ತಿಳಿನೀರ ಸಿಂಚಿಸುತ ವನವೆಲ್ಲ ಬೆಳಗಿಸ್ಯೆ
ಮೊಗ್ಗೆಗಳನರಳಿಸಿ ಸೌರಭವಬೀರಿ ಮುದದಿ

ಬಡವ

೧

ಬಡತನದ ಜೀವತಾ
ದುಃಖದಾಗರವೆಂದು
ಬಡತನವೆ! ಉಪಹಾಸ
ಕಪಮಾನಕೆಡೆಯೆಂದು
ಬಡತನದ ಬೇಗೆಯಲಿ
ಬೆಂದಿಹುದು ಬಾಳೆಂದು
ಅಳಲದಿರು ಬಳಲದಿರು
ಬಳಲಿ ನೀ ಚಿಂತಿಸದಿರು

೨

ಬಡತನದಿ ಕವಿ "ಮಾಘ"
ಕಾಲಿದಾಸರು ಮೇಣ್
"ಷಾ" "ಷೆಲ್ಲಿ" ಹುಟ್ಟಿದರು
ಕಟ್ಟಿದರು ಕಾವ್ಯದಾ
ರಾಜ್ಯವನು ಸ್ಥಿರವಾ
ಗುಳಿಸಿದರು ಬೆಳಸಿದರು
ಚಿರಶಾಂತಿ ಪಡೆದಿಹರು

೩

ಹೃದಯ ಧನವಿರುತಿರಲು
ಆನಂದವಡೆಯಲ್ಕೆ
ಮತ್ತೇಕೆ ಆಶೆಯದು?
ಅಳಿಯುತಿಹ ಹೊರಧನಕೆ
ಅರಳಿರುವ ಕಮಲ ತಾ
ಕರೆಯುವದೆ ಮನುಜರಂ?
ಬಂಗಾರ ಘಟ್ಟಿಯದು
ಉರುಳುತ್ತ ಬರುವದೇಂ?

೪

ಹೃದ್ಭೂಮಿ ಸ್ವಚ್ಛವಿರೆ
ಕಾಳುಗಳು ದೊರೆಯುವೇಂ?
ಬಡವಾದರೇನಂತೆ
ಸಾಹಿತ್ಯ ಬೆಳೆಸಲ್ಕೆ
ಭಾವದಾ ಕಿರಣಗಳು
ಬೆಳಗುತ್ತ ಹೋದಂತೆ
ಬಡವನೇ ಚಿರಧನಿಕ
ನಾಗಿತಾ ಮೆರೆವವಂ

ವಿಜಯೋತ್ಸವ

೧

ಕತ್ತಲಲಿ ಹೊರಟಿರುವೆ ವಿಜಯೋತ್ಸವಕೆ ನಾ
ಎತ್ತ ನೋಡಿದಡತ್ತ ಬಿದ್ದಿಹವು ಕಲ್ಬಂಡೆಗಳ್
ಕುತ್ತಿಗೆಯನೆತ್ತಿದೊಡೆ ಮುತ್ತಿಹುದು ಮೋಡವದು
ಎತ್ತರದ ದಿಬ್ಬದೊಳು ಅತಿಮಬ್ಬು ತಬ್ಬಿಹುದು

೨

ವಿಜಯದಾಶೆಯದು ತಾತುಂಬಿಹುದು ಮನದೊಳಗೆ
ವಿಜಯವನು ಪಡೆಯಲ್ಕೆ ಬಲವಿಲ್ಲದಾಗಿಹುದು
ಬೆಳಕಿರದೆ ವಿಜಯವನು ಪಡೆಯುವನ ಹಂಬಲವು
ಪರ್ವತಕೆ ಕಲ್ಲುಗಳ ನೆತ್ತಿತಾ ಹೊತ್ತಂತೆ

೩

ವನವೆಲ್ಲ ಹಸನಾಗಿ ಬಳ್ಳಿಗಳು ಹಸುರಾಗಿ
ಗಿಡವೆಲ್ಲ ಹೂಗಾಯಿ ಪಣ್ಗಳಿಂ ತುಂಬಿದೊಡೆ
ಸೌಗಂಧ್ಯ ಧೂಪವದು ವನವನಾವರಿಸಿದೊಡೆ
ವಿಜಯತಾ ಮೆರೆಯುವದು ಬೆಳಗುವದು ಚಿರಕಾಂತಿ

೪

ವಿಜಯದಿಂ ಸಾಮ್ರಾಜ್ಯ ವಿಜಯದಿಂ ಸರ್ವಸುಖ
ವಿಜಯವೇ ಜೀವನಕೆ ಚೇತನವು ಕೀರುತಿಯು
ಸಂತೋಷ ಶರಧಿಯೊಳು ಈಜಿತಾ ಮುನ್ನಡೆಯೆ
ವಿಜಯವೇ ಕಾರಣವು ಶಕ್ತಿಗಾಸರ ಕಂಭವು

೫

ವನದೊಳಗೆ ಕುಳಿತಿರುವ ಅಂತರತಮ ಗುರುದೇವ
ವಿಜಯೋತ್ಸವವನು ಗೈವ ಶಕ್ತಿಯನು ನೀಡೈ
ಬಾಗುವೆನು ಭಕುತಿಯಿಂ ಬೇಡುವೆನು ನಿನ್ನನಿದೋ
ವಿಜಯರಾಜ್ಯದಿ ನಿತ್ಯ ಕುಳ್ಳಿರಿಸು ಓ ತಂದೆ

ಪುರಸ್ಕಾರ

ಕವಯಿತ್ರಿ ಶ್ರೀಮತಿ ಸರೋಜಿನಿ ನಾಯ್ಡು ಅವರ Guerdon ಎಂಬ
ಕವನದ ಭಾವಾನುವಾದ

೧

ವನಗಳಿಗೆ ಹೊಲಗಳಿಗೆ
ವಸಂತ ಋತುವಿನ ತೆರದಿ
ತರತರದ ಪೂಗಳಿಂ
ಸಿಂಗರಿಸು ಮುದದಿಂದ
ಇಂಪಾಗಿ ಹಾಡುತಿಹ
ಹಕ್ಕಿಯಾ ರೆಕ್ಕೆಗಳಿಗೆ
ಅಭಿಮಾನ ಶಕ್ತಿಯನು
ಭರದಿಂದ ನೀಡಯ್ಯ
ಮೃಗಗಳಿಗೆ ಕೊಡು ನೀನು
ಸೌಂದರ್ಯ ಗತಿಯನ್ನು
ನನಗೆ ನೀ ಕೃಪೆಮಾಡು
ಅತ್ಯಧಿಕ ಪ್ರೇಮವನು

೨

ಸಾಗರದಿ ಈಸುವಗೆ
ರತ್ನವನು ದೊರಕಿಸೈ
ಗುಣವರಗೆ ಕೊಡುಬೇಗ
ಗುಣವುಳ್ಳ ಕನ್ಯೆಯನು
ಸ್ವಪ್ನ ದೃಷ್ಟಾರಂಗೆ
ಸ್ವಪ್ನ ಸಿದ್ಧಿಯ ನೀಡು
ನನಗೆ ನೀ ಕೃಪೆಮಾಡು
ಸತ್ಯ ಸಂಸಿದ್ಧಿಯನು

೩

ಧರ್ಮದಾ ಗುರುಗಳಿಗೆ
ಧರ್ಮದಾನಂದಕೊಡು
ಆಳುತಿಹ ರಾಜರಿಗೆ
ವಿಜಯ ಪ್ರಾಪ್ತಿಯ ನೀಡು
ಸೋತವಗೆ ಮಾನಸಿಕ
ಶಾಂತಿಯನು ಕರುಣಿಸೈ
ಓ ನನ್ನ ಗುರುದೇವ
ಕೃಪೆಮಾಡು ನೀನೆನಗೆ
ಕವಿತೆಯಾ ಶಕ್ತಿಯದು
ಕುಡಿವರೆದು ಬೆಳೆವಂತೆ

ಮಾತೃಭೂಮಿ

(HOME LAND ಎಂಬ ಕವನದ ಭಾವಾನುವಾದ)

೧

ತಿರುಗುತಿರುವೆ ಕ್ಲಾಂತನಾಗಿ ಒಬ್ಬನಾಗಿ ಕಾರ್ಯವಿರದೆ
ಮರುಗುತಿರುವೆ ಮನೆಯಬಿಟ್ಟು ಮನವಸುಟ್ಟು ಗೆಳೆಯರಿರದೆ
ಕೊರಗಿ ಕರಗಿ ಸೊರಗುತಿರುವೆ ಪ್ರಬಲ ಇಚ್ಛೆಯಲ್ಲಿ ನೊಂದು
ನರಳುತಿರುವೆ ಮಾತೃಭೂಮಿ ಕಾಣ್ವ ಬಯಕೆ ಬೆಂದು

೨

ಬಿಟ್ಟು ಬಿಡಲಿ ಗೆಳೆಯರೆನ್ನ "ಓ ಮಧುರ ಮಾತೃಭೂಮಿ"
ಕಷ್ಟಕೊಟ್ಟು ತೆಗಳಲನ್ಯ ದೇಶದವರು ಶತ್ರುತನದಿ
ದೃಷ್ಟಿಯಲ್ಲಿ ನೀಚಭಾವವಿಟ್ಟುನೋಡುತಿರಲಿ ಸದಾ
ಕಷ್ಟಕಳೆವ ಮಾತೃಭೂಮಿ ಪ್ರೇಮವನ್ನು ಮರೆಯಲೆಂತು?

೩

ಮಾತೃಭೂಮಿ ಮಕ್ಕಳೆಲ್ಲರೊಡನೆ ತಾವು ಕೂಡಲೆಂದು
ಪ್ರಾರ್ಥಿಸುವೆನು ಭಕ್ತಿಯಿಂದ ಶಿವನು ಶಾಂತಿ ನೀಡಲೆಂದು
ಕೂಡಿಕೊಂಡು ಮಾಡುತಿರುವ ಕಾರ್ಯದಲ್ಲಿ ಶಕ್ತಿಯುಂಟು
ನಾಡದೇವಿ ಕೃಪೆಯದುಂಟು ಪ್ರಾಂತವುಂಟು ಕಾಂತಿಯುಂಟು

೪

ಬಯಸುತಿರುವೆ ನನ್ನ ಮಾತೃಭೂಮಿಯಲ್ಲಿ ಇರಿಸಲೆಂದು
ಆಶೆಯನ್ನ ತುಂಬುತಿಹುದು ಶ್ವಾಸವಲ್ಲಿ ಹೋಗಲೆಂದು
ನನ್ನ ಮರಣ ಹರಣವಾಗಲಂತ್ಯಕ್ರಿಯೆಯದಾಗಲೆಂದು
ಕೋರುತಿರುವೆ ಮಾತೃಭೂಮಿ ಮಧುರಶಾಂತಿ ದೊರೆಯಲೆಂದು

೫

ಬಯಸಲಾರೆ ವಿಪುಲಧನವ ಅಳಿಯುತಿರುವ ಕೀರ್ತಿಯನ್ನು
ಜನ್ಮಭೂಮಿಯಲ್ಲಿ ನಾನು ಬಡವನಾಗಿ ಬಾಳಬಲ್ಲೆ
ಅನ್ಯದೇಶದಿರುವದೊಲ್ಲೆ ಬೇಡುತಿರುವೆನಿದನೆ ಶಿವನೆ
ಜವದಿ ಮಾತೃಭೂಮಿ ಸೇವೆ ಮಾಡಲಿಕ್ಕೆ ಕಳುಹಿಸೆನ್ನ

ಉತ್ತಿಷ್ಠತ!

೧

ಸಾಕಿನ್ನು ಎದ್ದೇಳಿ ಮೋಹನಿದ್ರೆಯಬಿಟ್ಟು
ಹೊರಬನ್ನಿ ಭರದಿಂದ ಜ್ಞಾನವಸ್ತ್ರವನುಟ್ಟು
ಮನದೊಳಗೆ ತುಂಬಿರುವ ಕಾಮದಾಸೆಯ ಸುಟ್ಟು
ತನುವಿನೊಳು ಹೊಕ್ಕಿರುವ ಭ್ರಾಂತಿಯನು ಬಿಟ್ಟು

೨

ಭಾಸ್ಕರನು ಬಂದಿಹನು ಬೆಳಕನ್ನು ತಂದಿಹನು
ಮೊಗ್ಗಗಳು ಕರೆಯುವವು ತಮ್ಮೊಡನೆ ಅರಳಲ್ಕೆ
ಎಲರು ತಾ ಬೀಸುತ್ತ ಕೊಡುತಿಹುದು
ಪಕ್ಷಿಗಳು ಹಾಡುವವು ಕಣ್ದೆರೆದು ಸಂತಸದಿ

೩

ಕಿರಣಗಳು ಹಬ್ಬುವವು ಮಬ್ಬನ್ನು ದೂಡುತ್ತ
ನಾವಿನ್ನು ಮಬ್ಬಿನೊಳು ಮಲಗುವದು ತರವಲ್ಲ
ಗುರುದೇವ ಕೊಟ್ಟಿಹನು ನಮಗೆಲ್ಲ ಬುದ್ಧಿಯನು
ಹಚ್ಚಿಹನು ಸನ್ಮಾರ್ಗ ಮರೆಯಲು ಒಳಿತಲ್ಲ

೪

ತೆರೆಯಿರೈ ಒಳಗಣ್ಣ ಹರಿಯಿರೈ ಹಗ್ಗವನು
ಮುರಿಯಿರೈ ಮದವನ್ನು ತೊರೆಯಿರೈ ಶೋಕವನ್ನು
ಅರಿಯಿರೈ ಮುಂದಿನಾ ಹಿರಿಗುರಿಯ ದಾರಿಯನು
ಸ್ಮರಿಸಿರೈ ದೇವನಂ ನಿಷ್ಕಾಮಭಾವದಲಿ

೫

ಜರಿಯೋಣ ಜವದಿಂದ ಸಂಸಾರ ಜಂಜಾಟ
ಮನಸಿನ ಶಾಂತಿಯನು ಕಳೆದೇಕೆ ಹೋರಾಟ?
ರತ್ನವನು ಹುಡುಕುತ್ತ ಮತ್ತೇಕೆ ಅಲೆದಾಟ?
ಆಡೋಣ ಮಾಡೋಣ ಶಿವಶಕ್ತಿಯೊಡನಾಟ

೬

ನಮಗಾಗಿ ಕೊಟ್ಟಿಹನು ಈಶ್ವರನು ಎಲ್ಲವನು
ಅರಿದರಿದು ಭಾವಿಯೊಳು ದುಡಿಕದರೆ ಸುಖವುಂಟೆ?
ವಿಷದ ಬಟ್ಟಲ ಬಿಸುಟು ಸುಧೆಯನೀಂಟುವುದೊಳಿತು
ವಿಷದ ಸೇವನೆಯಿಂದ ನಶಿಸುವುದು ಈ ಬಾಳು?

೭

ಪ್ರಕೃತಿ ರಂಗದಿ ಬಾಳಿ ಸಂಪತ್ತುಗಳಿಸೋಣ
ಪ್ರಾಕೃತಿಕ ಭಾವದೊಳು ಸತ್ಯತೆಯ ಕಾಣೋಣ
ಪ್ರಕೃತಿದೇವಿಯನು ಭಕ್ತಿಯಿಂದ ಪೂಜಿಸುತ
ಚಿದಾನಂದವ ಪಡೆದು ಹರುಷದಿಂ ನಲಿಯೋಣ

೮

ಸಾಗೋಣ ಒಮ್ಮನದಿ ಒಗ್ಗೂಡಿ ಮುಂದಕೆ
ನೀಗೋಣ ಹಿರಿಕಿರಿದು ಭೇದವನು ಹಿಂದಕೆ
ದೂಡೋಣ ಶಿವಜೀವ ರಥವನ್ನು ಸಗ್ಗಕೆ
ಆದರ್ಶರಾಗೋಣ ಅನ್ಯಸಮಾಜಕೆ

೯

ಶಕ್ತಿತಾನಿಲ್ಲೆಂದು ಕೂಡುವದು ಹಿತವಲ್ಲ
ಸೋಲುತಾ ಬರುತಿರೆ ಹೆದರುವದು ಹಿತವಲ್ಲ
ಕ್ಷಣದೊಳಗೆ ಶಿಲೆಕೆತ್ತಿ ಗುಡಿಕಟ್ಟ ಬಲ್ಲೆಯೇಂ?
ಚಿತ್ತದಲಿ ಕಾಲುಗಳು ಸಿಗಲೆಂದರೇಂ ಸಾಧ್ಯ?

೧೦

ದುಡಿಮೆಯೆ ಮಾನವನ ಬಾಳಿಗಿದು ಹಿರಿಬೆಳಕು
ದುಡಿದಂತೆ ದೂರಹುದು ಮೆತ್ತಿರುವ ಮನಕೊಳಕು
ದುಡಿಯಲಾರದವ ವ್ಯಕ್ತಿ ಬಿದ್ದಿರುವ ಹೆಣದಂತೆ
ದುಡಿವವನ ದಿಟಬಾಳು ರನ್ನ ಗನ್ನಡಿಯಂತೆ

೧೧

ಎದ್ದೇಳಿ ನಡೆಯೋಣ ಭಕ್ತ ಭಿಕ್ಷೆಯ ಬೇಡಿ
ಸಿದ್ಧರಿರಿ, ನೀವೆಲ್ಲ ಹಿರತಿ ಗಂಧವತೀಡಿ
ಸಿದ್ಧ ಗುರುಕುಮಾರನ ಭಜನೆಯನು ಮಾಡಿ
ಶುದ್ಧಾತ್ಮರಾಗೋಣ ನಿಷ್ಕಪಟದಿಂಕೂಡಿ

ವಿಜಯಮಹಾಂತಯೋಗಿಯೆ !

೧

ಅರಿಗಳಾರನು ಸುಳಿದು ತರಿದಿಹ
ವೀರವಿರತನೆ ವಿಜಯಶಾಲಿಯೆ
ಅರಿಯುತಾರನು ಅರುಹಿ ಮೆರೆದಿಹ
ಚಾರು ಚರಿತನೆ ಸುಜನಲೋಲನೆ
ಭಕ್ತಜನರಿಗೆ ಮುಕ್ತಿಮಾರ್ಗವ
ಯುಕ್ತಿಯಿಂದಲಿ ತಿಳುಪಿದಾತನೆ
ಎತ್ತಪೋದೆಯೊ ಹೃದಯಮೂರ್ತಿಯೆ
ಸದಮಲಾಂತಃಕರದ ಜ್ಯೋತಿಯೆ

೨

ಯೋಗವಿದ್ಯೆಯು ದಿವ್ಯದೀಪ್ತಿಯು
ದಿಗ್ ದಿಗಂತದಿ ಬೆಳಗಲೆನ್ನುತ
ಯೋಗಮಂದಿರ ತಾಣತೋರಿಸಿ
ಯೋಗಕೀರ್ತಿಯ ನುಳಿಸಿ ಬೆಳಗಿದೆ
ಯೋಗ್ಯದಿಂದಲಿ ಶಕ್ತಿವೃದ್ಧಿಯು
ತ್ಯಾಗಬುದ್ಧಿಯು ಬುದ್ಧಿವೃದ್ಧಿಯು
ಯೋಗದಿಂದಲಿ ಭಾವಶುದ್ಧಿಯು
ಬಹುದು ತಪ್ಪದು ಎಂದು ತಿಳುಹಿದೆ

೩

ಧ್ಯಾನಶಕ್ತಿಯು ದಿವ್ಯಬಲದಿಂ
ಭವ್ಯಮೂರ್ತಿಯು ಬೆಳೆದು ಬಾಳಿದೆ
ಶಿವನಧ್ಯಾನದಿ ಲೀನನಾಗುತ
ಶಿವನರೂಪವ ತಾಳಿಹೋಳೆದೆಯೊ
ಜ್ಞಾನದೃಷ್ಟಿಯ ನವ್ಯ ತೇಜದಿ
ಅಜ್ಞ ಜನಗಳ ಜಾಢ್ಯಕೊಚ್ಚಿದೆ
ಜ್ಞಾನಭಾನುವೆ ಗುರುವರೇಣ್ಯನೆ
ಚರವರೇಣ್ಯನೇ ಪರಮಪೂಜ್ಯನೆ!

೪

ನಿನ್ನ ನೆನೆವುದು ಭಕ್ತವೃಂದವು
ಶ್ರೀ ವಿಜಯಮಹಾಂತೇಶಯೋಗಿಯೆ!
ಬನ್ನ ಪಡುತಿಹ ಮನುಜರನು ನೀ
ನುದ್ಧರಿಸಿ ಕಾಯೋ ಗುರುವರಾ

ಮಾಯೆ ಬೀಸಿಹ ಬಲೆಗೆ ಬೀಳುತ
ಘಾಸಿಯಾಗುತ್ತಿಹೆವು ದೇವಾ
ಕಾಯಜಾರಿಯೆ ಸಲಹು ಜವದೊಳಾ
ನಿನ್ನ ಧ್ಯಾನದ ಶಕ್ತಿ ನೀಡೈ

೫

ನಿನ್ನ ಜೀವನವೆಮಗೆ ಪಾವನ
ಮನ್ನಿಸುತ್ತಲಿ ದಿವ್ಯದೃಷ್ಟಿಯಿಂ
ಚನ್ನಮಾರ್ಗದಿ ಕರೆದುಕೊಳ್ಳುತ
ಶಾಂತಿಯೊಳಿರಿಸು ಓ ತಪಸ್ವಿಯೆ!

ನಾವು ಬಾಲರು ನೀನು ಒಡೆಯನು
ಕಾವಭಾರವು ನಿನ್ನದಯ್ಯಾ
ಜೀವಜ್ಯೋತಿಯೆ ಗುರುಮಹಾಂತನೆ
ಎನ್ನ ಹೃನ್ಮನ ತುಂಬಿ ಕಾಯೈ

ಪ್ರಾರ್ಥನೆ

೧

ಉರಿಬಿಸಿಲ ತಾಪದಿಂ ಬಲುಬಳಲಿ ಬೆಂದಿಹೆನು
ಕುಡಿಯಲ್ಕೆ ನೀರಿರದೆ ಕೊರಗಿ ಕಂದಿಹೆನು
ಮರುಭೂಮಿಯೊಳು ಸುತ್ತಿ ಕಾಲ್ಸುಟ್ಟುಕೊಂಡುನಾ
ಹೃದಯಾಗ್ನಿಯಾರಿಸಲು ದ್ವಾರಬಳಿ ಬಂದಿಹೆನು

೨

ನಾ ಬರುವ ದಾರಿಯೊಳು ವೃಕ್ಷಗಳು ಕಾಣಿಸದೆ
ಹುಡುಕಿಹುಡುಕಿ ಬೇಸತ್ತು ಕಲ್ಬಂಡೆ ತುಳಿಯುತ್ತ
ಸುತ್ತೆಲ್ಲ ತಿರುಗಿದರೂ ನೀರೆನಗೆ ದೊರೆಯದತಿ
ಮರಮರುಗಿ ತಿರುತಿರುಗಿ ಮುಳ್ಕಂಟಿತುಳಿದಿರುವೆ

೩

ಹೃದಯತಾ ಒಣಗಿಹುದು ಬಲವಿಲ್ಲದಾಗಿಹುದು
ಸಿಹಿಕಹಿಗಳನುಂಡು ಬೇಸತ್ತು ನೊಂದಿಹುದು
ಬಲ್ಗಿಚ್ಚಿನಂತಿರುವ ನೆಲವನ್ನು ತುಳಿಯುವದು
ಜೀವಕಿದು ಸಾಕೆಂದು ಬೇಡುತಿಹೆ ನಿನ್ನನ್ನೇ

೪

ನಿನ್ನಡಿಯ ಹಿಡಿಯುವದು ಬಲುಕಷ್ಟಕರವೆಂದು
ಯೋಗಿಗಳು ತ್ಯಾಗಿಗಳು ಜ್ಞಾನಿಗಳು ಮೇಣ್ ಶರಣರು
ನಿನಗಾಗಿ ತಪಿಸಿದರು ಕಷ್ಟವನು ಸಹಿಸಿದರು
ಧ್ಯಾನವಲಿ ಕೂಡಿದರು ಶಾಂತಿಯನು ಪಡೆದಿಹರು

೫

ಮನೆಯೊಳಗೆ ಕುಳಿತಿರುವ ಅಂತರತಮ ಗುರುದೇವ
ಕಣ್ದೆರೆದು ನೋಡಯ್ಯ ಕರುಣೆಯನು ನೀಡಯ್ಯಾ
ಬಾಯ್ದೆರೆದು ಬಟ್ಟಲವ ಹಿಡಿದು ನಾನಿಂತಿರುವೆ
ಸವಿನೀರನಿತ್ತೆನಗೆ ಮನೆಯೊಳಗೆ ಕರೆದುಕೋ

ಪೂಮಾಲೆ

ಸಾಹಿತ್ಯ ಪ್ರಕಾರ	:	ಕವನ ಸಂಕಲನ
ಮೊದಲ ಮುದ್ರಣ	:	೧೯೫೩
ರಚನೆಯ ವಯಸ್ಸು	:	೨೪
ರಚನಾಸ್ಥಳ	:	ಕಾಶಿ

ಪ್ರೂಮಾಲೆ

ಕೃತಿಕರ್ತರು:

ಮಹಂತದೇವರು ಚಿತ್ತರಗಿ
(ಸದ್ಯದ ಮೂರುಸಾವಿರಮಠದ ಶ್ರೀ ಜಗದ್ಗುರುಗಳು)

೧೯೭೩

ಪ್ರಕಾಶಕರು :
ಶ್ರೀ ಜಗದ್ಗುರು ಗಂಗಾಧರ ಧರ್ಮಪ್ರಚಾರಕ ಮಂಡಳ
ಮೂರುಸಾವಿರಮಠ, ಹುಬ್ಬಳ್ಳಿ

ದ್ವಿತೀಯ ಮುದ್ರಣ : ೧೦೦೦ ಪ್ರತಿ

ಬೆಲೆ : ೫೦ ಪೈಸೆ

ಮುದ್ರಕರು :
ಪರಂಜ್ಯೋತಿ ಪಾವರ ಪ್ರಿಂಟಿಂಗ ಪ್ರೆಸ್,
ಮೂರುಸಾವಿರಮಠ ಹುಬ್ಬಳ್ಳಿ.

ಮುನ್ನುಡಿ

"ರಸಮಂ ನಾಲಗೆ, ಕವಿತಾ-
ರಸಮಂ ಕವಿ, ಕುಸುಮರಸಮನಳಿಮಾಲೆ ಸುಧಾ-
ರಸಮಂ ಸುರರಕ್ಷಯ ಸುಖ.
ರಸಮಂ ಪರಮಾತ್ಮನರಿವನುಳಿದವರರಿಯರ್"

-ನಾಗಚಂದ್ರ

೯೪ ಕಂದ ಪದ್ಯಗಳಿಂದ ಅಂದವಾಗಿ ಪವಣಿಸಿದ 'ಪೂಮಾಲೆ'ಯಿದು. ಇದನ್ನು ಕಟ್ಟಿದ ಕವಿ ಒಳ್ಳೆಯ ಮಾಲೆಗಾರ. ಬರೀ ಮಾಲೆಗಾರ ಮಾತ್ರವಲ್ಲ ತನ್ನ ಮಾಲೆಯನ್ನು ತನ್ನ ಅಭಿಮಾನ ಮೂರ್ತಿಯಾದ ಸುಕುಮಾರ ಯೋಗಿಗೆ ಆದರದಿಂದ ಅರ್ಪಿಸ ನಿಂತ ನಿಷ್ಠಾವಂತ.

"ನಿನ್ನಡಿಯ ಧ್ಯಾನಿಸುತ್ತಂ
ನಿನ್ನ ಸುನಾಮವನೆ ಪಾಡಿ ಪಠಿಯಿಸುತ್ತಂ
ನಿನ್ನ ಕೃಪೆಯಿಂದ ಪೇಳ್ದೀ
ಸನ್ನುತ ಪದ್ಯಗಳ ನಿನ್ನ ಪದಕರ್ಪಿಸುವೆಂ"

ಕವಿಯ ಮನಸ್ಸನ್ನು ಮಣಿಹವನ್ನು ಇಲ್ಲಿ ಮನಗಾಣಬಹುದು. ಮಾಲೆಯನ್ನು ಮಾರಿ ಹಣ ಗಳಿಸುವ ಮಾಲೆಗಾರನಲ್ಲ. ತನ್ನ ಗುರುವಿನಲ್ಲಿ ತನಗಿರುವ ಭಕ್ತಿಯನ್ನು ಭಾವವನ್ನು ಈ ಪದ್ಯದ ಮೂಲಕ ಸಾರಿದ್ದಾನೆ.

ಈ ಪೂಮಾಲೆಯನ್ನು ಕವಿ ಗುಣಪುಷ್ಪಗಳಿಂದ ಹೆಣೆದಿದ್ದಾನೆ. ನೀತಿಯೇ ಮಾನವೀಯ ರೀತಿ ಅದಿಲ್ಲದವ ಕೋತಿಯೆನ್ನುತ್ತಾನೆ ಕವಿ.

"ನೀತಿಯೆ ಜಗದೊಳ್ಮಾನ್ಯಂ
ನೀತಿಯ ನಡೆಯಿಲ್ಲದವನೆ ಕೋತಿಯೆನಿಕ್ಕುಂ
ನೀತಿಯ ಪೂಗಳ ಜೋಡಿಸಿ
ಮಾತಿನ ಪೊನ್ನೆಳೆಯೊಳ್ ಹೆಣೆದೆ ಪೂಮಾಲಿಕೆಯಂ"

ಈ ಬಗೆಯ ಪೂಮಾಲೆಯನ್ನು ಗುರುವಿಗೆ ಅರ್ಪಿಸಿ ತನ್ನನ್ನು ಮಾಯೆ ಮೋಹಗಳಿಂದ ಭಾವಭ್ರಮೆಗಳಿಂದ ತೊಲಗಿಸಿ ಕರುಣಿಸಿ ಕಾಯುವಂತೆ ಒಂಬತ್ತು ನುಡಿಗಳಿಂದ ಒಪ್ಪನಯದ ಒಳ್ನುಡಿಯಿಂದ ಬೇಡಿಕೊಂಡಿದ್ದಾನೆ. ಅನಂತರ ಗುರು-ಲಿಂಗ-ಜಂಗಮದ ಲಕ್ಷಣ ಕ್ರಿಯೆ ಮೋಕ್ಷ, ಸಾಮರಸ್ಯಗಳನ್ನು ಚನ್ನಾಗಿ ಚಿತ್ರಿಸಿದ್ದಾನೆ.

ಚಿತ್ತನಿಲ್ಲದೆ ಅದೆಷ್ಟು ಹೊತ್ತು ಕುಳಿತು ಪೂಜಿಸಿದರೂ ಫಲವಿಲ್ಲ. ಮನದಲ್ಲಿ ನೆನೆವವಗೆ ಮನೆಯೇನು, ಮಠವೇನು. ಕನಕಾಚಲವೇನು? ಬಾಯಿಂದ ಆಡಿದುದನ್ನು ಕೈಯಿಂದ ಮಾಡದವನಿಗೆ ಮಾಯಾಬಂಧನ ತಪ್ಪದು. "ಬಿಡಿಸದು ಪರನಾರಿಸಂಗನಾರಕ ಪಥಮಂ" "ಕಣ್ಣಿನ ಕೊನೆಯೊಳಗಿರುತಿಹ ಬಣ್ಣದ ಪಕ್ಷಿಯನು ಓಡಿದು ಕಟ್ಟುವರಾರ್ಕೈ?" ಎನ್ನುತ್ತಾನೆ; ಎಂದು ಕೇಳುತ್ತಾನೆ.

ನಾ ಯತಿ, ನಾ ವ್ರತಿ, ನಾ ಕುಲವಂತ, ನಾ ಛಲವಂತ ಎಂದು ಹೆಮ್ಮೆಪಡುವವರ 'ಮತಿಹೀನರ ಮಾಡಿ ಘಾಸಿಗೊಳಿಸ್ಪದು ಮಾಯೆ' 'ಒಳಗಿನ ಆತ್ಮಶ್ರೀಯಂ ಗಳಿಸದೆ ಕೆಡುತಿರ್ಪ ಬಾಹ್ಯ ಸಿರಿಯಂ ಗಳಿಸೇಂ?'

ಸತ್ಯವನಾಡು, ಮಿಥ್ಯೆಯ ದೂಡು, ಮರವೆಯ ಹರಿ, ಆತ್ಮವನರಿ, ಸಮತೆಯೆಂಬುದು ಸುಧೆ. ಅದನ್ನು ಕುಡಿದು ಹಸಿವುತೃಷೆಗಳ ಹಿಂಗು; ರಾಗದ್ವೇಷಗಳ ನೀಗು. ವಿಷಯ ವ್ಯಸನದ ಬೆಂಬತ್ತಿ ಬಾಯಾರದಿರು. ನೀರೊಳಗಿನ ತಾವರೆಯಂತೆಯುಂತಿರು. ಧರ್ಮದಿಂದ ನಡೆದರೆ ಪರಶಿವನ ಕರುಣೆಯು ವಸಂತಋತು ಬಂದಂತೆ ಬರುತ್ತದೆ. ದೀಪವ್ವರಿಯಲು ಎಣ್ಣೆ ಬೇಕು. ಸಂಪದ ದೊರೆಯಲು ಪುಣ್ಯಬೇಕು. ದುರಿತ ದುರ್ಮಾರ್ಗದಲ್ಲಿ ನಡೆದರೆ ದಳ್ಳುರಿಯಲ್ಲಿ ಧುಮುಕಿದಂತೆ ಜ್ಞಾನಿಗಳ ವಚನವಿದ್ದು ಹೀನಗುಣಗಳನು ಬಿಡದಿದ್ದರೆ, ಕಾಗೆ ಕೋಗಿಲೆಯ ಬಳಿ ಇದ್ದಂತೆ ವ್ಯರ್ಥ! ಮರ್ಮವನರಿಯದೆ ಮೈಯಲ್ಲಿ ಲಿಂಗವ ಧರಿಸಿರುವುದು ಕುರುಡ ಕನ್ನಡಿಯನ್ನು ಕೈಯಲ್ಲಿ ಹಿಡಿದಂತೆ! ಅರಿವಿಲ್ಲದರ್ಚನೆ ಅರಸರಿಯದ ಬಿಟ್ಟಿ.

"ಸತ್ಯರ ನುಡಿಗಳನಾಲಿಸಿ
ಸತ್ಯರ ನಡತೆಯನೆ ನೋಡಿ ನಡೆವುದೆ ಚಂದಂ
ಸ್ತುತ್ಯರ ಸ್ತೋತ್ರವ ಮಾಡುತೆ
ಮಿಥ್ಯಾಲಾಪಗಳನುಳಿದು ನುಡಿವುದೆ ಚಂದಂ"

ಮುಖ್ಯವಾಗಿ ಮಾನವನಿಗೆ ಬೇಕಾದವು ನಡೆ ನುಡಿ! ಅವು ಶುದ್ಧವಾಗಿರಬೇಕು. ಸತ್ಯವಾಗಿರಬೇಕು. ಸತ್ಯರ ಸ್ತುತ್ಯರ ನಡೆ ನುಡಿಗಳನ್ನು ಅನುಸರಿಸಿರಬೇಕು. ಅಂಥವನ ನಡೆ ಚಂದ, ನುಡಿ ಚಂದ ಎಂದು ಕವಿ ಹೇಳುತ್ತಾನೆ. ನೀತಿಯ ಮಾತುಗಳ ಮಾಲೆಯನ್ನು ರಚಿಸಿದ್ದಾನೆ.

"ಕವಿಯು ಮರ್ಮವನರಿಯದೆ
ಬರಿದೇ ಬಡಬಡಿಪ ಕವಿಗೆ ಕೀರ್ತಿಯದೆಂತೈ
ಕವಿತಾ ಚತುರಂ ಹರಿಹರ
ಭುವಿಯೊಳ್ ತಾಂ ಮೆರೆದು ಕೀರ್ತಿವೆತ್ತಿರ್ಪನ್"

ಮೊದಲಲ್ಲಿ ನಾವು ಉದಹರಿಸಿದ ನಾಗಚಂದ್ರನ ಮಾತನ್ನೆ ಪರ್ಯಾಯವಾಗಿ

ಶ್ರೀ ಮಹಾಂತದೇವ ಕವಿ ಈ ಪದ್ಯದಲ್ಲಿ ಎತ್ತಿ ಸಾರಿದ್ದಾನೆ. ಕವಿತೆಯ ಮರ್ಮವನ್ನು (ರಸವನ್ನು) ಅರಿಯಬೇಕಾದರೆ ಕವಿಯೇ ಆಗಬೇಕು. ಅದು ಉಳಿದವರ ಸೊತ್ತಲ್ಲ. ಪದಾರ್ಥದ ರುಚಿಯನ್ನು ಅರಿಯಬೇಕಾದರೆ ನಾಲಗೆಯೇ ಬೇಕಲ್ಲವೆ?

ಅದರಂತೆ ನಾನು ಕವಿತೆಯ ರಸವನ್ನರಿದ ಕವಿಯಾಗದಿದ್ದರೂ ಕಂದನಾಗಿ ಕಂದಗಳನು ಕಟ್ಟಿ ಹಾಡಿದ್ದೇನೆ. ತಂದೆಗಳಾದ ಸಜ್ಜನರು ಈ ನುಡಿಗಳನು ಒಲಿದು ಕೇಳಲಿ ಎಂದು ಹಾರೈಸಿದ್ದಾನೆ ಕವಿ. ಅದರಿಂದ ಇಲ್ಲಿ ವಿಮರ್ಶೆಗೆ ಅವಕಾಶವಿಲ್ಲ.

ರೀತಿ ನೀತಿಗಳನ್ನು ಬೋಧಿಸುವ ಈ ಮಾಲೆಯನ್ನು ಪ್ರತಿಯೊಬ್ಬ ಕನ್ನಡಿಗನು ಧರಿಸಿ ನಲಿಯಬೇಕು. ಮೂಸಿ ಮೋದಗೊಳ್ಳಬೇಕು.

ಶ್ರೀ ಮಹಾಂತ ದೇವರ ಮನದಾಸೆ ಮಹೋನ್ನತವಾದುದು. ಅದು ಅವರ ವಾಣಿಯ ಮುಖಾಂತರ ಹೊರಹೊಮ್ಮಿದೆ. ಇನ್ನೂ ಮಧುರವಾದ ಕಾವ್ಯವಾಣಿಯಾಗಿ ಹೊಮ್ಮಿಬರಲಿ. ಇಂದು ಹೂವಾಗಿ ಬಂದ ಅವರ ವಾಣಿ, ಮುಂದೆ ಹಣ್ಣಾಗಿ ಬರಲಿ. ಅವರ ಕಾವ್ಯಲತೆ ಫಲಿಸಲಿ.

ವಿಜಯ ಸಂವತ್ಸರ
೧೨-೧೨-೫೩
ಕೋಲಾರ ಮುಕ್ಕಾಂ

ಸೂರ್ಯಸಿಂಹಾಸನಾಧೀಶ್ವರ
ಶ್ರೀ ಜ.ಚ.ನಿ. ಸಂಸ್ಥಾನ
ಗೂಳೂರು.

ಪೂಮಾಲೆ

ಒಂದು ಸಮೀಕ್ಷೆ

ಪ್ರೊ. ಎಸ್. ಎಂ. ವೃಷಭೇಂದ್ರಸ್ವಾಮಿ, ಎಂ.ಎ.

ಮಠದ ಗುರು ಪರಂಪರೆಯಲ್ಲಿಯೇ ತೋರುವಂತೆ, ಶ್ರೀ ಗಂಗಾಧರ ರಾಜಯೋಗೀಂದ್ರ ಜಗದ್ಗುರುಗಳು, 'ಮುಮುಕ್ಷು'ಗಳಾಗಿರುವಾಗಲೇ, ಶಾಸ್ತ್ರ ಸಮನ್ವಯ ಪ್ರವೃತ್ತಿ, ಕಾವ್ಯರಚನಾ ಪ್ರತಿಭೆ, ಪ್ರವಚನ ಪ್ರೌಢತೆಯ ಕುರುಹುಗಳನ್ನು ತೋರಿರುವರು. ಕಾವ್ಯತೀರ್ಥ, ಸಾಹಿತ್ಯ ರತ್ನ, ವೇದಾಂತಾಚಾರ್ಯ ಪದವಿಗಳನ್ನು ಪಡೆದು ತಮ್ಮಂತರಂಗದ ನಿಗೂಢ ಚೈತನ್ಯವೊಂದರ ಆವಿಷ್ಕಾರಕ್ಕೆ ಸಾಹಸಮಯ ಪ್ರಯತ್ನದಲ್ಲಿ ತೊಡಗಿರುವುದು ತೋರುತ್ತಿದೆ. ಸಂಸ್ಕೃತ, ಕನ್ನಡ, ಇಂಗ್ಲೀಷ ಭಾಷಾ ಸಾಹಿತ್ಯಗಳ ಅಭ್ಯಾಸದಿಂದ, ಮಹಾತ್ಮರುಗಳ ವಿಚಾರ, ಭಾವನೆಗಳ ಅಳವಡಿಸುವಿಕೆಯಿಂದ, ಸ್ವಾಧ್ಯಾಯ ಸ್ವಚಿಂತನ, ಸ್ವಯಂಸ್ಫೂರ್ತಿಯ ಪ್ರವೃತ್ತಿಯಿಂದ, ಶ್ರೀ ಶ್ರೀಗಳ 'ವ್ಯಕ್ತಿತ್ವ' ರೂಪಿತವಾಗಿರುವುದನ್ನು ಗಮನಿಸಬಹುದು. ಅಂತೆಯೇ ಶಿವಯೋಗಮಂದಿರದ ಯೋಗಿಪುಂಗವರ ಸೇವೆ, ಸಾನಿಧ್ಯ, ಆಶೀರ್ವಾದಗಳು ಈ "ವ್ಯಕ್ತಿತ್ವ" ವೃಕ್ಷದ ಬೆಳವಣಿಗೆಗೆ ನೀರು ಸಾರಗಳಾಗಿರುವುದನ್ನು ಪರಿಶೀಲಿಸಿದರೆ ಈ "ವಟು" ಮುಂದೆ ಧರ್ಮಕ್ಷೇತ್ರದ "ವಟವೃಕ್ಷ"ವಾಗಿ ಬೆಳಗಿದುದರ ಮೂಲ ಅಂಶಗಳನ್ನು ಕಂಡುಕೊಂಡಂತಾಗುವುದು. ಪೂಜ್ಯ ಜಗದ್ಗುರುಗಳವರ ಅಭಿರುಚಿ, ಸಾಧನೆ, ಬೋಧನೆ ಹಾಗೂ ಆತ್ಯಂತಿಕ ಗುರಿಯನ್ನು ಸೂಚಿಸುವ ಕೃತಿ, "ಪೂಮಾಲೆ" ಎಂಬ ಸೂಕ್ತಿ ಕಂದಗಳ ಕೃತಿ.

ಇಂದಿನ ಶ್ರೀ ಶ್ರೀ ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳನ್ನು ಚಿತ್ತರಗಿಯ ಮಹಾಂತದೇವರಾಗಿದ್ದ ಕಾಲದಲ್ಲಿ ಅಂದರೆ, ೧೯೫೦ರ ಸುಮಾರಿನಲ್ಲಿ ರಚಿಸಿದ ಕೃತಿ. "ಪೂಮಾಲೆ" ಲೇಖಕರೇ ಹೇಳಿಕೊಂಡಿರುವಂತೆ ಭಗವದ್ಗೀತೆ ಮತ್ತು ಶರಣರ ವಚನಗಳ ಭಾವವನ್ನು ಕೆಲವು ಅಂಶಗಳಲ್ಲಿ ಮಾತ್ರ ತೆಗೆದುಕೊಂಡು ಈ "ಪೂಮಾಲೆ"ಯನ್ನು ಪೋಣಿಸಿದ್ದಾರೆ. ಈ ನೀತಿ-ಸೂಕ್ತಿಗಳನ್ನು ಕಂದದ ಛಂದದಲ್ಲಿ ಪವಣಿಸಿರುವ ಚಾತುರ್ಯ ಮೆಚ್ಚುವಂತಹದು. ಈ ಪೂಮಾಲೆಯಲ್ಲಿ ಛಂದಸ್ಸು ಬಂಧನವಾಗದೆ, ಭಾವಮಧುರಗಳನ್ನು ಸ್ಮರಣ ಯೋಗ್ಯವಾಗುವಂತೆ ಅಳವಡಿಸುವ ಮಾಧ್ಯಮವಾಗಿ ಹರಿದಿದೆ. ಸರಳ ಕನ್ನಡದ ಸೊಗಸು, ಅಲ್ಲಲ್ಲಿ ಮಿನುಗಿರುವ "ದೇಸಿ"ಯ ರಮ್ಯತೆ, ಹಾಗೆಯೇ ಸಂಸ್ಕೃತ ಸಮಾಸ ಪದ, ಈ

"ಪೂಮಾಲೆ"ಯ ಶೈಲಿಗೆ ಒಂದು "ಪದಪಾದ ಪಾಕ"ವನ್ನೊದಗಿಸಿವೆ. ಧರ್ಮದ ಮರ್ಮ, ನೀತಿಯ ರೀತಿ, ನಡೆವಳಿಕೆಯ ಮಾರ್ಗದರ್ಶನ ಹಾಗೂ ಮಾನವ ಜನ್ಮದ ಪರಮಗುರಿಯನ್ನು ಈ ಪೂಮಾಲೆಯ "ಸರುಗಂಪಿ"ನ ಪರವಿನಲ್ಲಿ ಕಾಣಬಹು ದಾಗಿದೆ. ಮುನ್ನುಡಿಕಾರರಾದ ಶ್ರೀ ಜ.ಚ.ನಿ. ಯವರೆಂದಂತೆ, "ಇದನ್ನು ಕಟ್ಟಿದ ಕವಿ ಒಳ್ಳೆಯ ಮಾಲೆಗಾರ....ಮಾಲೆಯನ್ನು ಮಾರಿ ಹಣ ಗಳಿಸುವ ಮಾಲೆಗಾರ ನಲ್ಲ, ತನ್ನ ಗುರುವಿನಲ್ಲಿ ತನಗಿರುವ ಭಕ್ತಿಯನ್ನು, ಭಾವವನ್ನು ಈ ಪದ್ಯದ ಮೂಲಕ ಸಾರಿದ್ದಾನೆ" ಈ ಶೈಶವದ ಶಿವಕವಿ ಅಷ್ಟೇ ಅಲ್ಲದೆ, ಜನತೆಗೆ ಮಾರ್ಗ ದರ್ಶನ ನೀಡಿ, ಸಮಾಜದ ಸಾಮರಸ್ಯಕ್ಕೆ ದಾರಿತೋರುವ "ಒಳಬಯಕೆ"ಯೂ ಇಲ್ಲಿ ಧ್ವನಿತವಾಗುತ್ತಿರುವುದನ್ನು ಸೂಕ್ಷ್ಮ ಓದುಗರು ಗಮನಿಸಬಲ್ಲರು.

"ಪೂಮಾಲೆ"ಯನ್ನು ಕಾರುಣ್ಯಮೂರ್ತಿಯಾದ ಸುಕುಮಾರ ಯೋಗಿಗೆ ಅರ್ಪಿಸಿ, "ಮತಿಯ ಪಾಲಿಸು" "ಪರಯೋಗ ಮಾರ್ಗದಿರವಂ ಕರುಣಿಸಿ ಶಿವ ಸುಖವನಿತ್ತು....ಪೊರೆ" ಸುವಿಚಾರದಿರವನಿತು!....ಮೊರೆ...."ಕಾಯದ ಕತ್ತಲೆಯ ಕಳೆದು....ಮಾಯದ ತೊಡಕನು ಬಿಡಿಸೈ. ..ನಿಮ್ಮ ಧರ್ಮ" ಎಂದು ಅತಿ ವಿನಯ ದಿಂದ ಬೇಡಿಕೊಂಡಿರುವ ಪದ್ಯಗಳಲ್ಲಿ ಪ್ರಾಂಜಲ ಮನೋಭಾವ ವ್ಯಕ್ತವಾಗಿದೆ. ಹಾಗೆಯೇ—

ಸತ್ಯ ಸುಮಾರ್ಗದೆ ನಡೆಯೆಂ।
ಭಕ್ತಿಯ ಮರ್ಮವನೆ ತಿಳಿವ ನಂಬುಗೆಯಿಲ್ಲಂ॥
ಮುಕ್ತಿಯ ಪಥವನ್ನರಿಯದೆ।
ವ್ಯರ್ಥವು ಕೆಡುತಿರ್ಪೆನಯ್ಯ ಪೊರೆಬಿಡದೆನ್ನಂ॥

ಎಂಬ ಕಕ್ಕುಲತೆಯ ನುಡಿಯಾಡಿ, "ಪೊರೆನೀಂ ಮೊರೆ ಹೊಕ್ಕಿರುವೆಂ" ಎಂದು ಹಂಬಲಿಸಿದ್ದಾರೆ; ಭಕ್ತಿಯ ಗರಿಗೆದರುತ್ತಿರುವ ಕಿರು ಹರೆಯದ ಕವಿ.

ಗುರುಮಹಿಮೆಯನ್ನು, ಗುರುಕಾರುಣ್ಯದ ಆಧ್ಯತೆಯನ್ನು ಪೂಮಾಲೆಯ ಮುಂದಿನ ಕೆಲವು ಕಂದಗಳಲ್ಲಿ ಪರಂಪರೆಯಾಗಿ ವರ್ಣಿಸಿದ್ದಾರೆ.

ಗುರುಬೋಧೆಯಿಂದ ಜನನದ।
ಮರಣದ ಬೇರುಗಳು ಕಿತ್ತು ಕಡೆಗಾಗುವವೈ॥
ಗುರುಬೋಧೆಯಿಂದ ದುಃಖಂ।
ಪರಿವುದು ತಚ್ಛಾಂತಿ ಸುಖವು ದೊರೆವುದು ಸಹಜಂ॥

ಅಲ್ಲದೆ, ಸಾಧನೆಯ ಕೀಲಾದ ಲಿಂಗಕ್ಕೆ ಗುರುವಿನಿಂದಲೇ "ಸತ್ಕಳೆ" ಸಮನಿಸುವು ದೆಂದೂ, ಗುರುಸೇವೆಯಿಂದ ಅಂಗ ಪರಿಶುದ್ಧಿಯಾಗುವುದೆಂದೂ, ಮುಮುಕ್ಷು ಕವಿ ಕಂಡು, ಈ ಕಂದಗಳಲ್ಲಿ ಕಂಡರಿಸಿದ್ದಾರೆ. ಕಾರುಣ್ಯಮೂರ್ತಿಯಾದ ಸದ್ಗುರು ಮುಕ್ತಿ ಪಥದರ್ಶಿ ಎಂದೂ, "ನಗುರೋರಧಿಕಂ" ಎಂಬಂತೆ "ಗುರುವಿಂ ಮಿಗಿಲ ಪರಿಲ್ಲಿಲ್ಲ ಮೂರು ಲೋಕದೊಳೆಂದುಂ" ಎಂದು ಕವಿ ಹಾಡಿದ್ದಾರೆ. ಗುರುಕರುಣ

ದಿಂದಲೇ ಆತ್ಯಂತಿಕ ಸುಖಪ್ರಾಪ್ತಿ ಎನ್ನುವುದನ್ನು ಅತ್ಯಂತ ಮನೋಜ್ಞವಾಗಿ ಈ ಕೆಳಗಿನ ಪದ್ಯದಲ್ಲಿ ಬಿಂಬಿಸಲಾಗಿದೆ.

ಗುರುಸೇವೆಯೆ ಸಗುತರ್ತಿಂ।
ಪರತರ ಮೋದವನು ಪಡೆವ ಸಾಧುವನೋಕ್ಷೈ।
ಗುರುಕೃಪೆಯಾಗಲ್ ನಿರುತಂ।
ದೊರೆವುದು ಶಿವಯೋಗ ಸೌಖ್ಯ ಸಂತಸಮಪ್ಪಂ॥

ಮುಂದಿನ ಪದ್ಯಗಳಲ್ಲಿ ಜಂಗಮದ ಹಿರಿಮೆ-ಗರಿಮೆಗಳನ್ನು ಕವಿ ಬಣ್ಣಿಸಿದ್ದಾರೆ. "ಮರವೆಯ ಮನುಜರ ಬೋಧಿಸಿ। ಪರಿಶುದ್ಧರಗೊಳ್ಳುವವನೆ ಜಂಗಮನಪ್ಪಂ" ಎಂದು ನಂಬಿ,ಭಕ್ತ ಸಂತತಿಯನ್ನು ದಯಾಪ್ರೇಮದಿಂದ, ತಾರತಮ್ಯ ಭೇದವಿಲ್ಲದೆ, ನಿರಪೇಕ್ಷನಾಗಿ ಬೋಧಿಸುವ ಮಹಾತ್ಮನೇ ನಿಜ ಜಂಗಮನೆಂದು ಬೋಧಿಸಿದ್ದಾರೆ.

ಗುರುಜಂಗಮರಿವರೀರ್ವರ್।
ಜರೆಯುತ ತಮ್ಮೊಳಗೆ ಕಲಹವಿಲ್ಲದಮಾಗಳ್।
ವರವೀರಶೈವ ಧರ್ಮವ।
ದಿರದುದ್ಧರಿಸುವದೆಯವರ ಸತ್ಕರ್ತವ್ಯಂ॥

ಈ ಪದ್ಯದಲ್ಲಿ ಕವಿ, ಸಾಮಾಜಿಕ ಏಕಮತಿಯನ್ನು ಪ್ರತಿಪಾದಿಸಿ, ವೀರಶೈವ ಧರ್ಮ ಗುರುಗಳ ಕರ್ತವ್ಯವನ್ನು ವಿಶ್ಲೇಷಿಸಿದ್ದಾರೆ. ಹಾಗೆಯೇ—

ವೀರತಾಗ್ರಗಣಗಳನಿಸುವ।
ಚರಮೂರ್ತಿಗಳೈದೆ ಸಮಯ ಭೇದಗಳಿಂದಂ॥
ಚರಿಸುತೆ ತಮ್ಮೊಳ್ಕಲಹವ।
ನಿರಚಿಸುತಿರ್ಪುದಿದುವೆ ಶಾಸ್ತ್ರ ವಿರೋಧಂ॥

ಎಂಬ ದಿಟ್ಟ ನುಡಿಯಾಡಿದ್ದಾರೆ. ಕವಿಯ "ವ್ಯಕ್ತಿತ್ವ"ದ ವಿಶಿಷ್ಟತೆ, ಇಲ್ಲಿ ಎಡೆಯಾಡಿರುವುದನ್ನು ಗಮನಿಸಬಹುದಾಗಿದೆ.

ಪ್ರವಾಹಿಯ ಮಿಕ್ಕಿನ ಭಾಗ, ಲೋಕನೀತಿಯನ್ನು ಹೇಳಲು ಮೀಸಲಾಗಿದೆ ನೈತಿಕ ಜೀವನವೇ ಪರಮ ಶ್ರೇಷ್ಠ. ಶಿವಪೂಜೆ, ಶಿವಧ್ಯಾನ ಹಾಗೂ ಶಿವಯೋಗ ಸಾಧನೆಯ ಮಹತಿಯನ್ನು ಹಲವು ಕಂದಗಳಲ್ಲಿ ವರ್ಣಿಸಿದ್ದಾರೆ. 'ಬಾಯಲಿ ಬೊಮ್ಮವ' ಹೇಳುವವರನ್ನು ನಿಂದಿಸಿ, ಹಾಳ್ಕೆಲಸಗಳಲ್ಲಿ ಸಿಲುಕುವವರನ್ನು ಛಂಗಿಸಿ, ಚಿತ್ತ, ವಿತ್ತಗಳ ವಿಭ್ರಮವನ್ನು ವಿವರಿಸಿ, ಭಕ್ತಿಸಾಧನೆಯಲ್ಲಿ ತೊಡಗುವವರು ಈ ದುರ್ಗುಣಗಳಿಂದ ದೂರವಿರಬೇಕೆಂದು ನುಡಿದಿದ್ದಾರೆ. ಪ್ರಭುದೇವನ ನುಡಿಯನ್ನೆತ್ತಿಕೊಂಡು—

ಕಣ್ಣಿನ ಕೊನೆಯೊಳಗಿರುತಿಹ।
ಬಣ್ಣದ ಪಸ್ತುವನು ಬಿಡದು ಕಟ್ಟುವರಾರ್।

ಅಣ್ಣಗಳೇ ಪೇಳಿರಿ ಬರಿ।
ಬಣ್ಣದ ಮಾತಿನೊಳು ಸಾಧ್ಯವಾಗುವವಲ್ಲೈ॥

ಎಂದು ಬಿಡುನುಡಿಯಲ್ಲಿ ವಿವರಿಸಿ, "ಕಾಯ ಹಾಗೂ ಜೀವ ಸ್ಥಿರವಲ್ಲ, ಈಗಲೇ ಶಿವಪೂಜೆಯಲ್ಲಿ ತೊಡಗಿ, ಭಕ್ತಿಯ ಮಾರ್ಗದಲ್ಲಿ ನಡೆದು, ನಿಷ್ಠೆ ಬಲಿದು, 'ಭಾವ ತುಂಬಿ' ಬಾಳಬೇಕೆಂದು" ಮಾರ್ಗದರ್ಶನ ನೀಡಿದ್ದಾರೆ. ನಾನು ಜ್ಞಾನಿ, ನಾನು ಹಿರಿಯ, ಎಂಬ ಅಹಂಕಾರದ ಎಳೆಗಳನ್ನು ಬಿಡಿಸಿ, "ಸತ್ಯರ ನುಡಿಗಳನ್ನಾಲಿಸಿ, ಸತ್ಯರ ನಡತೆಯನ್ನು ನೋಡಿ ನಡೆವುದೇ ಚಂದ" ಎಂದು ನಂಬಿಸಿ, ಅಂತರಂಗದ ಆತ್ಮಶ್ರೀಯನ್ನು ಗಳಿಸಿ, ಮುಕ್ತಿ ಪಥ ಹಿಡಿಯದಿದ್ದರೆ ಮಾನವಜನ್ಮದ ಫಲವೇನು ಎಂದು ಪ್ರಶ್ನಿಸಿದ್ದಾರೆ. ಇಲ್ಲಿ "ಪೊಳೆಯೊಳ್ ಹುಣಸೆಯ ಹಣ್ಣು ತೊಳೆದಂತೆ , "ಊರೊಳ್ಪಂದಿಗಳಿರಲಾ ಕೇರಿಯೆ ಪರಿಶುದ್ಧವಾಗುವ ತೆರದಿ" ಎಂಬ ದೇಶಿಯ ನುಡಿಗಳನ್ನು ಕಂದದ ಛಂದದಲ್ಲಿ ಅಳವಡಿಸಿರುವ ಕವಿ, "ಸತ್ಯವ ನಾಡಿದ ಗಾಂಧಿ"ಯ ಹಿರಿಮೆಯನ್ನು ಉದಾಹರಿಸಿದ್ದಾರೆ. ಹಾಗೆಯೇ, ಜೀವನ ಸಾರ್ಥಕತೆಗೆ ಮಾರ್ಗದರ್ಶಕವಾಗುವ ಹಲವಾರು ರೀತಿ–ನೀತಿ–ಇತಿ ನುಡಿಗಳನ್ನು ಈ "ಪೂಮಾಲೆ"ಯಲ್ಲಿ ಪವಣಿಸಿದ್ದಾರೆ.

ನೀತಿಯ ಜಗದೋಳ್ಮಾನ್ಯಂ।
ನೀತಿಯ ನಡೆಯಿಲ್ಲದವನೆ ಕೋತಿಯೆನಿಕ್ಕುಂ॥
ನೀತಿಯ ಪೂಗಳ ಜೋಡಿಸಿ।
ಮಾತಿನ ಪೋಣ್ಕೆಯೊಳೆಹೆಣೆದ ಪೂಮಾಲಿಕೆಯಂ॥

ಅಲ್ಲದೆ, ಪೂರ್ವಜನ್ಮದ ಪುಣ್ಯ, ಈ ಜೀವದೀಪದ ಎಣ್ಣೆ (ಪದ್ಯ ೬೩)ಯೆಂದೂ ಧರ್ಮವೇ ದಿವ್ಯಪಥವೆಂದೂ, "ಭಕ್ತಿಯೇ ಮುಕ್ತಿಯ ನೀವ್" ತಾರಕ ಮಂತ್ರ ವೆಂದೂ ವರ್ಣಿಸಲಾಗಿದೆ. ಅಲ್ಲದೆ–

ಕತ್ತಲೆಯೊಳಿರ್ದು ದೀಪದ।
ಚಿತ್ತರವಂ ಬಣ್ಣಿಸಲ್ಕೆ ಬೆಳಕಹುದೆಂತೈ॥
ಸತ್ಯ ಬ್ರಹ್ಮದ ಬಲುಹೊಗ।
ಳುತ್ತಿರೆ ಸತ್ಕ್ರಿಯೆಗಳಿಲ್ಲದಿರಲದು ವ್ಯರ್ಥಂ॥

ಎಂಬ ಮಾರ್ಗದರ್ಶಕ ನುಡಿಗಳನ್ನು ಆಡಿ ಈ ಎಲ್ಲ "ಸದಾಚಾರ ನುಡಿಗಡಣ", ತಂದೆ ಮಗನಿಗೆ ಹೇಳಿದ ಮಾತುಗಳೆಂದು ಸೂಚಿಸಿದ್ದಾರೆ. ಇಂದು ಒಂದು ರೀತಿ ಯಲ್ಲಿ ಇದು ಚಿತ್ರ ಸುಮಿತ. ಕವಿಯೇ ತಂದೆ, ಭಕ್ತರೆ ಮಕ್ಕಳು.

ಶಿವಯೋಗಿವರ್ಯರ ಸ್ಮರಣೆಯಿಂದ ಈ 'ಪೂಮಾಲೆ' ಕೊನೆಗೊಂಡಿದೆ. ಪರಿಸಮಾಪ್ತಿಯ ವಾಕ್ಯಗಳಲ್ಲಿ ಮತ್ತೆ ಕವಿಯ ನೈಜಭಕ್ತಿಯ ಅಭಿವ್ಯಕ್ತಿಯನ್ನೂ ಕಾಣುತ್ತೇವೆ. ನೀತಿ–ನಡೆಯ ಮಾತುಗಳು ಅಲ್ಲಲ್ಲಿ ಅಂಟಿಸಿದಂತೆ ಕಾಣಿಸಿದರೂ

ಗುರುಭಕ್ತಿ, ಲಿಂಗಜಂಗಮ ಮಹಿಮೆ ಹಾಗೂ ಮುಮುಕ್ಷುಭಾವದ ನುಡಿಗಳಲ್ಲಿ ಕವಿಯ ಸ್ವಂತಿಕೆ ಎದ್ದುಕಾಣುತ್ತಿದೆ. ಬದುಕಿನ ಮಹತಿಯನ್ನು ತೋರುವ ಶ್ರೀ ಮಹಾಂತ ಮರಿದೇವರು ಸಂಘಟಿಸಿದ ಈ ಪೂಮಾಲೆ ಓದುಗರಲ್ಲಿರುವ 'ಸಹೃದಯ ಸದಾಶಿವನ' ಭಾವಕ್ಕೆ ಅರ್ಪಿತವಾಗಿದೆ. ತನ್ನ ಲೋಕೋಕ್ತಿ ಸಂಗ್ರಹದಿಂದ, ಸ್ವಾಭಿವ್ಯಕ್ತಿಯ ಹೊಸತನದಿಂದ, ದೇಸಿಯ ಬೆಡಗಿನಿಂದ ಕಂಗೊಳಿಸುತ್ತಿದೆ. 'ಪಟು'ವಿನ ಹೃದಯದ ಮೊಗ್ಗೆ ಅರಳಿ, ಈ 'ಪೂಮಾಲೆ' ಛಂದಗುಂಫದ ಕಂದಗಳ "ಕುಂದಮಾಲೆ"ಯಾಗಿದೆ.

ಪ್ರಕಾಶಕರ ನುಡಿ

ಪೂಮಾಲೆ ಕಂದ ಪದ್ಯಗಳ ಪವಣಿಕೆ. ಅದರ ಕರ್ತರು ಶ್ರೀ ಮೂಜಗಂ ಅಂದರೆ ಸದ್ಯದ ಮೂರುಸಾವಿರಮಠದ ಜಗದ್ಗುರು ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳವರು. ಅವರು ಚಿತ್ತರಗಿ ಮಹಾಂತ ದೇವರಾಗಿದ್ದಾಗಲೇ ಈ ಕೃತಿ ರಚನೆಗೈದುದು: ವಿದ್ಯಾರ್ಥಿ ಜೀವನದಲ್ಲಿರುವಾಗಲೆ ಕಂದ ಪದ್ಯಗಳ ಸೊಬಗು, ಸೊಗಸು ಹಾಗೂ ಅದರ ಮೇಲಿರುವ ತಮ್ಮ ಪ್ರಭುತ್ವ ಅಭಿವ್ಯಕ್ತಗೊಳಿಸಿದ್ದಾರೆ. ಅದರ ಉದ್ದಕ್ಕೂ ಬರುವ ಜೀವನಾನುಭವಗಳು, ದೈವದತ್ತ ಭಾವಗಳು, ಹಲವಾರು ರೀತಿ, ನೀತಿ, ಉದಾತ್ತತೆಗಳು ಸ್ವಂತಿಕೆಯ ಚೌಕಟ್ಟಿನಲ್ಲಿ ಬಿಂಬಿತವಾದುದರಿಂದ ಹಾಗೂ ಮೊದಲ ಪ್ರತಿಗಳು ತೀರಿದ್ದರಿಂದ ಪುನರ್ಮುದ್ರಣದ ಅವಶ್ಯಕತೆ ತೋರಿತು. ಶ್ರೀ ಜಗದ್ಗುರು ಗಂಗಾಧರ ಧರ್ಮಪ್ರಚಾರಕ ಮಂಡಳದ ಮಾಲಿಕೆಯಲ್ಲಿ ಪೂಮಾಲೆ ಸೇರಿತು. ಸಂತಸವನ್ನುಂಟುಮಾಡಿತು. ಸುಂದರವಾಗಿ ಮುದ್ರಿಸಿಕೊಟ್ಟ ಪರಂಜ್ಯೋತಿ ಪಾವರ ಪ್ರಿಂಟಿಂಗ ಪ್ರೆಸ್ಸಿನವರಿಗೆ ಧನ್ಯವಾದಗಳು.

ಪೂವಾಲೆ

ದ್ರಾಕ್ಷಾಮ್ಲಾನ ಮುಖೀಜಾತಾ
ಶರ್ಕರಾಪ್ಯಶ್ಮತಾಂ ಗತಾ।
ಸುಭಾಷಿತ ರಹಸ್ಯಾಗ್ರೇ
ಸುಧಾ ಭೀತಾ ದಿವಂಗತಾ॥

ನನ್ನ ನುಡಿ

What a desolate place would be a world without flowers? It would be a face without a smile; a feast without a welcome.

Mrs. Clara Lucas Balfour.

ಈ ಪೂಮಾಲೆಯನ್ನು ಕಟ್ಟಿ ನಾಲ್ಕುವರ್ಷಗಳಾಗಿರಬಹುದು. ನನ್ನ ಪೂಜ್ಯ ಗುರುಗಳಾದ ಶ್ರೀ ಮ.ನಿ.ಪ್ರ. ಮಹಾಂತಸ್ವಾಮಿಗಳು ಚಿತ್ತರಗಿ ಅವರು ದೊಡ್ಡ ವಾಗ್ಮಿಗಳಿದ್ದಂತೆಯೇ, ಸಾಹಿತ್ಯಾಭಿರುಚಿಯುಳ್ಳವರು. ಪ್ರಾಚೀನ ಕವಿಗಳ ಛಂದೋಬದ್ಧ ಕವಿತೆಗಳ ಮೇಲೆ ಅತ್ಯಂತ ಆಸಕ್ತಿಯುಳ್ಳವರು. ಪೂಜ್ಯ ಗುರುಗಳು ಕಂದಮಕ್ಕಳ ಮೇಲೆ ಮಮತೆಯಿರುವಂತೆ ಕಂದ ಪದ್ಯಗಳನ್ನು ಓದುವದರಲ್ಲಿಯೂ ಉತ್ಕಟೇಚ್ಛೆಯುಳ್ಳವರು. ನನಗೆ "ಪೂಜ್ಯ ಗುರುಗಳು ಪ್ರಾಚೀನ ಕವಿಗಳನ್ನು ಅನುಸರಿಸಿ ಬರೆ" ಎಂದು ಬಾರಿ ಬಾರಿ ಅಪ್ಪಣೆ ಕೊಡಿಸುತ್ತಿದ್ದರು. ಅಪ್ಪಣೆ ಪ್ರಕಾರ ಛಂದೋಬದ್ಧ ಕವಿತೆಗಳುಳ್ಳ ಅಲರುಗಳನ್ನು ಪೋಣಿಸಿ ಪೂಜ್ಯ ಗುರುಗಳ ಚರಣಗಳಿಗೆ ಅರ್ಪಿಸಿರುವೆ. ಭಗವದ್ಗೀತೆ ಮತ್ತು ಶರಣರ ವಚನಗಳ ಭಾವವನ್ನು ಕೆಲವು ಅಲರುಗಳಲ್ಲಿ ಮಾತ್ರ ತೆಗೆದುಕೊಂಡು ಈ ಪೂಮಾಲೆಯನ್ನು ಪೋಣಿಸಿದ್ದೇನೆ. ಈ ಪೂಮಾಲೆಯಲ್ಲಿರುವ ಕಂದ ಪದ್ಯಗಳನ್ನು ತಿದ್ದಿ ಪ್ರೋತ್ಸಾಹಿಸಿದ ವೇ. ಪಂ. ಮಹಾಲಿಂಗಶಾಸ್ತ್ರಿಗಳು, ದ್ಯಾಂಪುರ ಅವರನ್ನಿಲ್ಲಿ ಸ್ಮರಿಸದಿರಲಾರೆ. ಪೂಮಾಲೆಯಲ್ಲಿರುವ ಹಲಕೆಲವು ಅಲರುಗಳು ಸದ್ಧರ್ಮ ದೀಪಿಕೆ ಮತ್ತು ಶರಣಸಾಹಿತ್ಯ ಈ ಪತ್ರಿಕೆಗಳಲ್ಲಿ ಅರಳಿವೆ.

ಕೃಪೆಯಿಟ್ಟು ಸೂರ್ಯ ಸಿಂಹಾಸನಾಧೀಶ್ವರ ಜ. ಪಂ. ನಿಡುಮಾಮಿಡಿ ಶ್ರೀ ಚನ್ನಬಸವರಾಜ ದೇಶಿಕೇಂದ್ರ ಮಹಾಸ್ವಾಮಿಗಳು ಸುಂದರ ಮತ್ತು ಮಧುರವಾದ ಮುನ್ನುಡಿ ಬರೆದು ಪೂಮಾಲೆಗೆ ಸೌಗಂಧವನ್ನು ತಂದುಕೊಟ್ಟಿದ್ದಾರೆ. ಪೂಜ್ಯ ಮಹಾಸನ್ನಿಧಿಗೆ ಕೃತಜ್ಞತಾಪೂರ್ವಕ ಅಭಿನಂದನೆಗಳನ್ನು ಅರ್ಪಿಸಲು ಮರೆಯದಿರಲಾರೆ.

೨[illegible]–೧೨–೫೩ **ಮಹಾಂತದೇವರು ಚಿತ್ತರಗಿ**

ಮುಕ್ಕಾಂ–ಬನಾರಸ.

"PROVE ALL THINGS,
HOLD FAST THAT WHICH IS GOOD"

—Bible.

ಪೂಮಾಲೆ

ಕಂದ

ನರವರ ಸುರವರ ಗುರುವರ।
ಚರವರ ಸುಕುಮಾರ ಯೋಗಿವರ್ಯನೆ ನಿನ್ನಂ॥
ಪರಿಪರಿಯಿಂದಂ ಭಜಿಸುತೆ।
ಕಿರಿತನದಿಂ ಬೇಳ್ಪೆ ಮತಿಯ ಪಾಲಿಸು ದಯದಿಂ॥

೨

ಉರುತರ ಯೋಗದ ಮಹಿಮೆಯ।
ನರಿಯದೆ ಭವಭವದೆ ಬಳಲಿ ಬೆಂಡಾಗಿರ್ಪೆಂ॥
ವರಯೋಗ ಮಾರ್ಗದಿರವಂ।
ಕರುಣಿಸಿ ಶಿವಸುಖವನಿತ್ತು ಪೊರೆ ಬಿಡದೆನ್ನಂ॥

೩

ನಿನ್ನ ಸು ಕೃಪೆಯಿಂ ಪುಟ್ಟಿದೆ।
ನಿನ್ನಯ ಸೇವೆಯೊಳೆ ಬಾಳಿ ಬದುಕಿದೆನಲ್ತೆ॥
ನಿನ್ನ ಸುವಿಚಾರ ದಿರವಂ।
ಮನ್ನಿಸುತೆನಗಿತ್ತು ಪೊರೆ ಕುಮಾರ ಯತೀಶಾ॥

೪

ಮಾಯೆಯ ಮದಮಂ ಮುರಿಯುತೆ।
ಕಾಯದ ಕತ್ತಲೆಯ ಕಳೆದು ರಕ್ಷಿಪ್ಪುದೆನ್ನಂ॥
ಮಾಯದ ತೊಡಕನು ಬಿಡಿಸೈ।
ಮಾಯಾ ಮಯದೂರನಿಪ ನಿನ್ನಯ ಧರ್ಮಂ॥

೫

ಎನ್ನಯ ತನು ಕರಣಂಗಳ್।
ನಿನ್ನ ಸುಸೇವೆಯನೆ ಮಾಳ್ಪ ತೆರದಿಂ ಶಿವನೇ॥
ಎನ್ನಂ ಕರುಣಾ ಕಟಾಕ್ಷದಿ।
ಮನ್ನಿಸಿ ನೋಡೆಂದು ಬೇಳ್ಪೆ ಕರುಣಿಸು ದೇವಾ॥

೬

ಸತ್ಯ ಸುಮಾರ್ಗದೆ ನಡೆಯೆಂ।
ಭಕ್ತಿಯ ಮರ್ಮವನೆ ತಿಳಿವ ನಂಬುಗೆಯಿಲ್ಲಂ॥
ಮುಕ್ತಿಯ ಪಥವನ್ನರಿಯದೆ।
ವ್ಯರ್ಥವು ಕೆಡುತಿರ್ಪೆನಯ್ಯ ಪೊರೆಬಿಡದೆನ್ನಂ॥

೭

ಎನ್ನಪಮಾನ ಸುಮಾನಗ।
ಳೆನ್ನಯ ಸುಖದುಃಖ ಹಾನಿವೃದ್ಧಿಗಳೆಲ್ಲಂ॥
ಎನ್ನಾ ನುತಿನಿಂದ್ಯಗಳುಂ।
ನಿನ್ನವು ದೇವೇಶ ಪೊರೆಯೋ ಮೊರೆಪೊಕ್ಕಿರುವೆಂ॥

೮

ಬಿಡಲಾರದೆ ಮನವದು ತಾ।
ನೆಡೆಯಾಡುತ್ತಿಹುದು ವಿಷಯತತಿಯೊಳಗಾಗಳ್॥
ತಡೆಯುವೆ ನಿನ್ನಯ ನೆನಹನು।
ಕೊಡುತೆನ್ನಂ ಪೊರೆವುದಯ್ಯ ದೇವರದೇವಾ॥

೯

ಎನ್ನಯ ಕಾಯದ ಮೋಹವ।
ನೆನ್ನಯ ಪ್ರಾಣ ಪ್ರಪಂಚ ಭಾವದ ಭ್ರಮೆಯುಂ॥
ಎನ್ನಾ ಮನದ ವ್ಯಾಕುಲ।
ವಂ ನೆರೆ ತೊಲಗಿಸುತೆ ಕಾಯೊ ಕರುಣೆಗರಸಾ॥

೧೦

ವೇದಾಂತ ನಿಷ್ಠನಾಗಿಯೆ।
ಸಾದರದಿಂ ಬಂದ ಸಾಧಕ ವ್ರಜಕಾಗಳ್॥
ಬೋಧಿಸಿ ಶಿವಸದ್ಧರ್ಮದ।
ಹಾದಿಯೊಳಿರಿಸುವನೆ ಗುರುವೆನಿಪ್ಪಂ ಧರೆಯೊಳ್॥

೧೧

ಗುರುಬೋಧೆಯಿಂದ ಜನನದ ।
ಮರಣದ ಬೇರುಗಳು ಕಿತ್ತು ಕಡೆಗಾಗುವವೈ॥

ಗುರುಬೋಧೆಯಿಂದ ದುಃಖಂ।
ಪರಿವುದು ತಚ್ಛಾಂತಿ ಸುಖವು ದೊರೆವುದು ಸಹಜಂ॥

೧೨

ಗುರುವಚನದೊಳಲ್ಲದೆ ಭವ।
ಪರಿಯದು ಕುಲಜಾತಿ ತೊಡಕು ಮಾಣದು ನಿರುತಂ॥
ಗುರುವಿಂದಲ್ಲದೆ ಲಿಂಗಕೆ।
ಸುರುಚಿರ ಸತ್ಕಳೆಯು ಬಾರದೆಂಬುದೆ ವಿಹಿತಂ॥

೧೩

ಗುರುವಾಕ್ಯದಿರವನರಿಯದೆ।
ಪರತರ ಸುವಿಚಾರ ಭಕ್ತಿ ದೊರೆಯುವದೆಂತೈ॥
ಗುರುಸೇವೆಯಿಲ್ಲದಂಗಂ।
ಪರಿಶುದ್ಧತೆಯಾಗಲರಿಯದೆಂಬುವೆ ಸತ್ಯಂ॥

೧೪

ಮೂರು ಶರೀರವೆ ಮುಸುಕಿದ।
ಮೂರು ಮಲಂಗಳನೆ ತೊಳೆದು ಭವವಂ ಕಳೆವಂ॥
ಮೂರಾದ ಲಿಂಗದಿರವಂ।
ತೋರಿಸಿ ಗುರುಮುಕ್ತಿ ಪಥವೆ ನಡೆಸುವನಲ್ತೇ॥

೧೫

ನಗುರೋರಧಿಕಂ ವಿದಿತಂ।
ನಗುರೋರಾಧಿಕ್ಯವೆಂದು ಶ್ರುತಿಸೂಕ್ತಿಯು ತಾಂ॥
ಹೊಗಳುವದಾಗಿಯೆ ಗುರುವಿಂ।
ಮಿಗಿಲವರಿಲ್ಲಿಲ್ಲ ಮೂರು ಲೋಕದೊಳೆಂದುಂ॥

೧೬

ಗುರುಸೇವೆಯೆಸಗುತರ್ತಿಂ।
ಪರತರ ಮೋದವನು ಪಡೆದು ಬಾಳುವದೊಳಿತೈ॥
ಗುರುಕೃಪೆಯಾಗಲ್ ನಿರುತಂ।
ದೊರೆವುದು ಶಿವಭೋಗ ಸೌಖ್ಯ ಸಂಶಯಮಿಲ್ಲಂ॥

೧೭

ಲಿಂಗಾಂಗಿಯೆ ಸತ್ಪುರುಷಂ।
ಲಿಂಗಾಂಗಿಯೆ ನಿಖಿಲ ಜಗದ ಪಾವನನಪ್ಪಂ॥
ಲಿಂಗದೊಳಗಂಗಭರಿತಂ।
ಲಿಂಗವೆ ತಾನಾಗಿ ಬೆಳಗುವಂ ಭೂತಳದೊಳ್॥

೧೮

ಅರಿವೆಯಂಗಂಭಕ್ತಿಯೆ।
ಪರಮಾಪ್ಯಾಯನವದಾಗಿ ಚರಿಸುತ್ತಾಗಳ್॥
ಮರವೆಯ ಮನುಜರ ಬೋಧಿಸಿ।
ಪರಿಶುದ್ಧತೆಗೆಯ್ವೊಡವನೆ ಜಂಗಮವರ್ಯಂ॥

೧೯

ಗುರುಜಂಗಮವರೀರ್ವರ್।
ಬೆರೆಯುತೆ ತಮ್ಮೊಳಗೆ ಕಲಹವಿಲ್ಲದೆಯಾಗಳ್॥
ವರವೀರಶೈವಧರ್ಮವ।
ನಿರಮುದ್ಧರಿಸುವದೆಯವರ ಸತ್ಕರ್ತವ್ಯಂ॥

೨೦

ಗುರುವಂಶಗತನು ತಾನಾ।
ಗಿರುತಂ ಮರವೆಯನೆ ಕಳೆಯುತರವಿನ ಪ್ರಭೆಯಿಂ॥
ಮಿರುಗುತೆ ಶಿಷ್ಯವ್ರಜಮಂ।
ನಿರಪೇಕ್ಷಕನಾಗಿ ಬೋಧಿಸುವನೆ ಮಹಾತ್ಮಂ॥

೨೧

ಶಿವಪೂಜೆ ಶಿವನ ಧ್ಯಾನಂ।
ಶಿವಭಾವನೆಯೊಡನೆ ಪ್ರೇಮಸುಮಾತುಗಳೊಳ್॥
ಅವಿರತ ಶಿವಸದ್ಧರ್ಮವ।
ನವಧರಿಸಿದ ಮಹಿಮನವನೆ ಪೂಜ್ಯನೆನಿಪ್ಪಂ॥

೨೨

ಚಿತ್ತವು ನಿಲ್ಲದೆ ದೇವರ।
ಚಿತ್ರರ ಕುಳ್ಳಿರ್ದು ಪೆಸ್ಟು ಪೂಜೆಯನೆಸಗಲ್॥

ಕೃತ್ರಿಮ ಪೂಜೆಯದಕ್ಕಂ।
ಮತ್ತದಕೆಂತಪುದು ಮುಕ್ತಿ ಸುಖಸಂಪತ್ತಿ॥

೨೩

ಮನದೊಳ್ ನೆನೆಯುವ ಮನುಜಗೆ।
ಮನೆಯೇಂ ಮಠವೇನರಣ್ಯದೊಳಗಾದರುಮೇಂ॥
ಮನದಲಿ ನೆನೆಯದ ಮನುಜಂ।
ಕನಕಾದ್ರಿಯೊಳ್ ತಪತಪಿಸಲೇಂ ಫಲಮಹುವೇ॥

೨೪

ಬಾಯಲಿ ಬೊಮ್ಮವ ಪೇಳುತೆ।
ಕಾಯದ ಮೊಳದೊಳು ಸಿಲುಕಿಜೀವಿಪ ಮನುಜಂ॥
ಮಾಯೆಯ ಬಲೆಯೊಳ್ಸಿಳುತೆ।
ಸಾಯುತೆ ಹುಟ್ಟುತ್ತೆ ಪರಿಭವಂ ಪಡುತಿರ್ಪಂ॥

೨೫

ಬಾಯಲಿ ಪೇಳಿದ ನುಡಿಯದು।
ಕಾಯದ ಕ್ರಿಯೆಯಾಗೆ ಸುಫಲದೊರಕೊಂಬುವವೈ॥
ಬಾಯೊಳಗಿರ್ಪುದು ಕೃತಿಯೊಳ್।
ಆಯತಮಾಗಿರದಿರಲ್ ಶಿವಂದಯೆಗೈಯಂ॥

೨೬

ಕ್ಲೇಶಗಳೈದಂ ಕೆಡಿಸದೆ।
ಪಾಶುಗಳೈದುವಸು ಪರಿದುಪಾಕವೆ ಜವದಿಂ॥
ಆ ಶಿವನೊಲಿಯಲಿ ಎಂದೊಡೆ।
ಈಶಂ ತಾಸರಿದು ನೂಕುವಂ ದುರ್ಭವದೊಳ್॥

೨೭

ವಿನಯಾದಿ ಗುಣಗಳಿಲ್ಲದ।
ಮನುಜಂ ಮನ್ನಣೆಯನೊಂದಿ ಬಾಳಂಜಗದೊಳ್॥
ವಿನಯಾದಿ ಗುಣಗಳಿರೆ ತಾ।
ನನಿಶಂ ಸುಖಿಯಾಗಿ ಬಾಳ್ವನೆಂಬುದೆ ಸಿದ್ಧಂ॥

೨೮

ಕೆಡಿಪ್ಪುದು ವಿತ್ತಂ ದೇಹವ|
ಜಡಿಪ್ಪುದು ನಿಜಧರ್ಮದೇಳ್ಗೆ ಪರರಾಪಕೃತಿಯುಂ||
ಕಡಿಪ್ಪುದು ಕೀರ್ತಿಯಲತೆಯಂ|
ಒಡಿಪ್ಪುದು ಪರನಾರಿ ಸಂಗ ನಾರಕ ಪಥಮಂ||

೨೯

ಧನ ಚರ ದಾನಕೆ ವಿಹಿತಂ|
ಮನತಾಂ ಲಿಂಗದೊಳು ಬೆರೆಯುಲತಿಶಯ ವಿಹಿತಂ||
ತನುವಿಂ ಸದ್ಗುರು ಸೇವೆಯು|
ನನುನಯದಿಂ ಮಾಡಿ ಮುಕುತಿ ಪಡೆವುದೆ ವಿಹಿತಂ||

೩೦

ಲಿಂಗದ ಮುಖವೇ ಜಂಗಮ|
ಲಿಂಗವದೆಂದನ್ನ ವಸ್ತ್ರ ಧನಧಾನ್ಯಗಳಂ||
ಮಂಗಲ ಮನದಿಂದೀಯಲ್|
ಕಂಗೊಳಿಸುವ ಗಣಿಸುಪದವಿಯಂ ಪಡೆವಸೆವಂ||

೩೧

ನುಡಿಯೊಳು ಕರ್ಕಶಮಲ್ಲದೆ|
ನಡೆಯೊಳು ದೋಷಂಗಳುಗದೆ ಮಾನಸದೆಡೆಯೋಳ್||
ಪಿಡಿದಿಹ ನಿಯಮವ ಬಿಡದಿರೆ|
ಕೊಡುವಂ ದೇವೇಶನವಗೆ ಬೇಡಿದ ಫಲಮಂ||

೩೨

ಕಣ್ಣಿನ ಕೊನೆಯೊಳಗಿರುತಿಹ|
ಬಣ್ಣದ ಪಕ್ಷಿಯನು ಓಡಿದು ಕಟ್ಟುವರಾರ್ಕೈ||
ಅಣ್ಣಗಳೇ ಪೇಳಿರಿ ಬರಿ|
ಬಣ್ಣದ ಮಾತಿನೊಳು ಸಾಧ್ಯವಾಗುವದಲ್ಲೈ||

೩೩

ಗಾಳಿಯು ಬೀಸುವ ಕಾಲದೆ|
ಪೇಳಿಂಪು ಬೆಳೆಯುರಿದು ಜವದಿ ತೂರುವ ತೆರದಿಂ||

ಕಾಲುಕೈಕಣ್ಣು ಮನಗಳು।
ಕೇಳಾಗದ ಮುನ್ನ ಶಿವನ ಭಜಿಸುವದೊಳಿತ್ತೈ॥

೩೪

ತ್ವರಿತದಿ ಜೀವವು ಪೋಪ್ಪದು।
ತ್ವರಿತದಿ ಜವ್ವನವು ಕ್ಷೀಣವಾಗುವವಲ್ತೇ॥
ತ್ವರಿತದಿ ಚಲಿಪ್ಪದು ಮನವುಂ।
ತ್ವರಿತದಿ ಶಿವಪೂಜೆಗೈದು ಸುಖಿಪನೆ ಧನ್ಯಂ॥

೩೫

ಭಕ್ತಿಯ ಮರ್ಮವದಿಲ್ಲಂ।
ಮುಕ್ತಿಯ ಮಾರ್ಗವಲಿ ಚರಿಪನಂಬಿಗೆಯಿಲ್ಲಂ॥
ಮುಕ್ತರೊಡನಾಟವಿಲ್ಲಂ।
ಮುಕ್ತನು ತಾನೆಂದು ನುಡಿವವಂ ತಾಂ ಮರುಳಂ॥

೩೬

ನೈಷ್ಠಿಕ ಭಾವಮದಿಲ್ಲದ।
ಶಿಷ್ಟನು ಕೇಳಿದೊಡೆ ಜಪವ ಮಾಡಿದೊಡೇನೈ॥
ನಷ್ಟವದಲ್ಲದೆ ಮತ್ತೇಂ।
ನಿಷ್ಠೆಯ ತಾಂ ಬಲಿಸಿ ಭಾವತುಂಬಲು ಬೇಕೈ॥

೩೭

ವಿ ಯೆನಲು ವಿಷಯ ದೂರಂ।
ರ ಯೆನೇದುರ್ವಿಷಯ ರಹಿತ ಭೋಗವಿದೂರಂ॥
ತ ಎನೇ ತ್ರೈಗುಣನಾಶಂ।
ಮಾಯಾ ಮೋಹವನು ತೊರೆದು ಮೆರೆದವವಿರತಂ॥

೩೮

ವಿರತಾಗ್ರಗಣೆಗಳೆನಿಸುವ।
ಚರಮೂರ್ತಿಗಳೈವ ಸಮಯ ಭೇದಗಳಿಂದಂ॥
ಚರಿಸುತೆ ತಮ್ಮೊಳ್ಕಲಹವ।
ನಿರವಬ್ಬಿಸುತಿರ್ಪುದಿದುವೆ ಶಾಸ್ತ್ರವಿರೋಧಂ॥

೩೯

ಅರಿವಿನ ಮರ್ಮವನರಿಯದ।
ಗುರುಗಳ್ತಾವೆಂದು ಬರಿದೆ ಬೋಧಿಸುತಿರುವರ್॥
ಕುರುಡಂ ಕುರುಡನಕರವಿಡಿ।
ದರಿಯುವ ಮಾರ್ಗವನು ಕಾಡುಸೇರುವ ತೆರದಿಂ॥

೪೦

ನಾನಧಿಕ ನಾನೇ ಪಂಡಿತ।
ನಾನೇ ಸುಜ್ಞಾನಿಯೆಂದು ನುಡಿಯುತೆ ತನ್ನಂ॥
ತಾನೇ ಹೊಗಳುತಲನ್ಯರ।
ತಾನ್ನೆವ ನಿಂದಿಸುವನೆ ಮೂರ್ಖನೆನಿಕ್ಕುಂ॥

೪೧

ಪರಹಿಂಸೆ ಪರವಿದೂಷಣೆ।
ಪರರಂ ಪೀಡಿಸುವ ವೃತ್ತಿ ತನಗಿರ್ದಾಗಳ್॥
ದುರಿತವೆ ಮನೆಯಾಗಿರ್ದು।
ಶರೀರವ ಪೊರೆವವನೆ ಪಾಪಿಯೆನಿಪಂ ಧರೆಯೊಳ್॥

೪೨

ನಾನೇ ಜ್ಞಾನಿಯು ಪಂಡಿತ।
ನಾನೇ ಕುಲವಂತ ನಾನೇ ಛಲವಂತನುಯೆಂ॥
ಬಾನುಡಿ ಭವಕದು ಬೀಜಂ।
ನಾನೆಂಬುದನಳಿಯೇ ಭವವನೀಗುವನತ್ತೇ॥

೪೩

ವ್ರತಮಂ ಮಾಡುವೆನೆನ್ನುವ।
ವ್ರತಿಗಳ ನಿಯಮವನೇ ಕೆಡಿಸಿ ಕಳವಳವಿತ್ತು।
ಯತಿ ನಾವೆನ್ನುವ ಮುನಿಗಳ।
ಮತಿಹೀನರ ಮಾಡಿ ಘಾಸಿಗೊಳಿಪ್ಪುದು ಮಾಯು॥

೪೪

ಸತ್ಯರ ನುಡಿಗಳನಾಲಿಸಿ।
ಸತ್ಯರ ನಡತೆಯನೆ ನೋಡಿ ನಡೆವುದ ಚಂದಂ॥

ಸ್ತುತ್ಯರ ಸ್ತೋತ್ರವ ಮಾಡುತೆ।
ಮಿಥ್ಯಾಲಾಪಗಳನುಳಿದು ನುಡಿವುದೆ ಚಂದಂ॥

೪೫

ಒಳಗಿನ ಆತ್ಮಶ್ರೀಯುಂ।
ಗಳಿಸದೆ ಕೆಡುತಿರ್ಪ ಬಾಹ್ಯಸಿರಿಯಂಗಳಿಸೇಂ॥
ಹೊಳೆಯೊಳ್ ಹುಣಸಿಯಹಣ್ಣಂ।
ತೊಳೆದಂತದು ನಿನಗೆ ಸುಖವನೀಯದು ಸತತಂ॥

೪೬

ಭೋಗವಿತಾನವ ಮನದನು।
ರಾಗದೆ ಪೆರ್ಚಿಸುತೆ ಶರಣಸಂತತಿಗಿತ್ತು॥
ಭೋಗಿಸದೆ ಲೋಭದವಗುಣಿ।
ಯಾಗಿಪ ಮಾನವನು ಬೀಳ್ವನರಕಾರ್ಣವದೊಳ್॥

೪೭

ಊರೊಳ್ಪಂದಿಗಳಿರಲಾ।
ಕೇರಿಯೆ ಪರಿಶುದ್ಧವಾಗಿ ರಾಜಿಪತೆರದಿಂ॥
ಕ್ರೂರರ್ ನಿಂದೆಯ ನೆಸಗಲ್।
ಪಾರುವವೈ ಪಾಪರಾಶಿ ಪರಿಪರಿಯಿಂದಂ॥

೪೮

ಚಿತ್ತದ ಕೊನೆಯೊಳ್ ಮುಸುಕಿದ।
ಕತ್ತಲೆಯಂ ಕಳೆದು ಬಿಡದೆ ಸದ್ಗುಣ ಗಣಮಂ॥
ವೃತ್ತಿಯೊಳಳವಡಿಸುತೆ ಶಿವ।
ಭಕ್ತಂ ತಾನಾಗೆ ಮುಕ್ತಿ ದೊರೆವುದು ಸತ್ಯಂ॥

೪೯

ಸತ್ಯವನಾಡುವ ಮನುಜಂ।
ಮರ್ತ್ಯದೆ ಮನ್ನಣೆಯನೊಂದಿ ಸುಖಿಯಾಗಿರ್ಪಂ॥
ಸತ್ಯವನಾಡಿಯೆ ಗಾಂಧಿಯು।
ನಿತ್ಯ ಸುಕೀರ್ತಿಯನೆ ಗಳಿಸಿ ಸುಖಿಸಿದನಲ್ತೇ॥

೫೦

ಮನದೋಳ್ ಪರಿಪರಿ ವಿಷಯದ।
ನೆನೆಪದು ತಾಂ ಬರಲಪೇಕ್ಷೆ ಪುಟ್ಟುವದದರಿಂ॥
ಕ್ಷಣದೋಳ್ಕಾಮವಿಕಾರಂ।
ಜನಿಸುವದದರಿಂದ ನರನು ಕೆಡುತಿಹನ್ನೈಸೇ॥

೫೧

ಮರವೆಯು ಮುಸುಕಿದ ಮನುಜಂ।
ಕುರುಡನ ತೆರದಿಂದ ಕಾಣನರುಹಿನ ಪಥಮಂ॥
ಪರಬೊಮ್ಮದಿರವನರಿಯದೆ।
ತಿರುಗುತ್ತಿಹನ್ನೈಸೆ ಭವದ ಬಾಧೆಯೊಳನಿಶಂ॥

೫೨

ಬುದ್ಧಿಭ್ರಂಶಮದಾಗಲ್।
ನಿರ್ಧರತಪ್ಪುದವಗೆ ಶರಣಸುಮಾರ್ಗಂ॥
ಶುದ್ಧಸ್ವಾತ್ಮಜ್ಞಾನಂ।
ಸಿದ್ಧಿಸದಜ್ಞಾನಿಯಾಗಿ ಬಳಲುವನಲ್ತೇ॥

೫೩

ದುಷ್ಟ ದುರ್ವಿಷಯದೋಳ್ಮನ।
ನಟ್ಟಿಹ ಮನುಜಂಗೆ ಲೋಕ ಮನ್ನಣೆಯಿಲ್ಲಂ॥
ಕಷ್ಟಕರ ಜನ್ಮ ಜನ್ಮದೆ।
ಪುಟ್ಟುತೆ ಕಡೆಗವನು ಬೀಳ್ವನರಕಾರ್ಣವದೊಳ್॥

೫೪

ವಿಷಯ ವಿಷಯಿಗಳನುಭಯವ।
ನೊಸೆದೀಕ್ಷಿಸೆ ವಿಷಯು ತಾನು ಕೆಡಿಸದು ಮನುಜಂ॥
ವಿಷಯಿಗಳೊಡನಾಡಲ್ ಮಿಗೆ।
ಕಸಿವಿಸಿಪಡುತವನು ಕೆಟ್ಟುಪೋಗುವನ್ನೈಸೆ॥

೨೫

ಮನದೊಳ್ ಸಮತೆಯುದಳವಡೆ।
ಮನೆಮಾಡಿಹುದಯ್ಯ ಶಾಂತಿಸುಖಸಂಪದವುಂ॥

ಘನವಾದ ಸುಧೆಯು ಸೇವನೆ|
ಯನುಕೂಲಿಸಿದಂಗೆ ಹಸಿವು ಬಾಧಿಪುದೆಂತೈ||

೫೬

ಹಸಗೆಟ್ಟು ಹಲವು ವಿಷಯದ|
ಬೆಸುಗೆಯ ಬೆಂಬತ್ತಿ ಬಳಲಿ ಬಾಯಾರಿರುವಾ||
ವ್ಯಸನಿಗೆ ನಿಜಸುಖವಾಗದೆ|
ನಶಿಪ್ಪುದು ಕೀಳ್ಗಾಳಿಗಿಟ್ಟ ದೀಪದ ತೆರದಿಂ||

೫೭

ಪರಿಪರಿ ವಿಷಯಗಳಿಚ್ಛೆಗೆ|
ಪರಿದಾಡುವ ಮನದ ಮನುಜಗಾಗುವದೆಂತಾ||
ಪರತರ ಶಿವಸುಖದಿರವಂ|
ದರಿಯುತೆ ನಿರ್ವಿಷಯಿಯಾಗಿ ಚರಿಪನೆ ಸುಖಿಯೈ||

೫೮

ಬೇಸಿಗೆ ಬಿಸಿಲೊಳ್ನದಿಗಳು|
ಶೋಷಿಸಿದಂತಂಬುನಿಧಿಯು ತಾಂ ಶೋಷಿಪ್ಪುದೇ||
ಭಾಸುರ ಮಹಾತ್ಮನಂತೆಯೆ|
ಘಾಸಿಯು ತಾನಾಗನೈಸೆ ಸುಖದುಃಖಗಳೊಳ್||

೫೯

ಜ್ಞಾನಾಜ್ಞಾನಕೆ ಮೇಳಂ|
ತಾನೆಂತಹುದಯ್ಯ ಭಾನು–ತಿಮಿರದ ತೆರದಿಂ||
ಸ್ವಾನುಭವಮುಳ್ಳ ಯತಿಗಾ|
ಹೀನರ ಸಂಸರ್ಗವಂಟಿ ಕೆಡಿಸುವದೆಂತೈ||

೬೦

ನೆರೆ ಸ್ಪರ್ಶೇಂದ್ರಿಯ ಮುಖದಿಂ|
ಬರುತಿಹ ಸುಖಗಳನು ಲಿಂಗಕರ್ಪಿಸುತಿರುವಾ||
ಪುರುಷಂ ಸ್ವಾತ್ಮಾನಂದದಿ|
ಹರುಷಿತನಾಗಿರ್ದು ಜಗದೆ ಸುಖಿಯಾಗಿರ್ಪಂ||

೬೧

ನೀರೊಳಿಹ ಕಮಲಪತ್ರಂ।
ನೀರಂ ಸೋಂಕಿರ್ದುಂ ಲೇಪವಿಲ್ಲದ ತೆರದಿಂ।
ವೀರ ವಿರಕ್ತಂ ವಿಷಯಾ।
ಕಾರಂ ತಾನಾಗದದರೊಳಿರುತಿಹನಲ್ತೆ॥

೬೨

ಬರುತಿರೆ ವಸಂತ ಋತುವದು।
ಬರುವದು ವನಶೋಭೆಯ್ಸೆಯುವರೋಲ್ಧರ್ಮಾ॥
ಚರಣೆಯು ಗೈದೊಡೆ ಲೋಕದೆ।
ಬರುವನು ಪರಶಿವನು ಸಗುಣ ರೂಪದೆ ಜವದಿಂ॥

೬೩

ಎಣ್ಣೆಯಿರುವನಕ ದೀಪವು।
ಜನ್ಮಾಗಿರುವಂತೆ ಪೂರ್ವಜನ್ಮದ ಗೈದಾ॥
ಪುಣ್ಯವಿರುವತನಕ ಸಿರಿಯುಂ।
ಜನ್ಮಾಗಿರುತಿರ್ಪುದೆಂದು ಪುಣ್ಯವನೆಸಗೈ॥

೬೪

ಧರೆಯೊಳಗಧರ್ಮದಿಂದಿಹ।
ನರತಾಂ ನರಕಾಬ್ಧಿಯಲ್ಲಿ ಬೀಳ್ವುದೆ ಸಹಜಂ॥
ಅರಿದೀ ಮರ್ಮವ ಮನುಜಂ।
ಮರೆಯದೆ ಸದ್ಧರ್ಮಿಯಾಗೆ ಸುಖಿಪ್ಪುದೆ ಸಹಜಂ॥

೬೫

ಮರುಳರ್ಮೋಹದ ಮಧ್ಯವ।
ನಿರದೀಂಟುತೆ ಮರೆದು ಮೋಕ್ಷಮಾರ್ಗವನಿನಿಸಂ॥
ನರಕಾರ್ಣವದೊಳ್ಬೀಳುತೆ।
ಪಂಪರಿ ದುಃಖದೊಳು ಬಾಳ ಬಾಯಾರುವರ್ಕೈ॥

೬೬

ಅಡಿಯಿಂ ತುಳಿದೊಡೆಯುನಲಂ।
ಸುಡುತಿಹುದದರಂತೆ ದುರಿತ ದುರ್ಮಾರ್ಗಗಳೋಳ್॥

ನಡೆಯುವ ಮನುಜನ ಯಮತಾ|
ನೊಡನಗ್ನಿಯಕುಂಡದಲ್ಲಿ ಕೆಡಹುತ್ತಿರ್ಪಂ||

೬೭

ಅನಿಮಿತ್ತವರಿಗಳೆನಿಸುತೆ|
ಮನದೊಳ್ ಮನೆಮಾಡಿಕೊಂಡ ಮನುಜರನಾಗಳ್||
ಘನವಾದ ದುರಿತದೇಳ್ಗೆಯೊ|
ಳನುಗೊಳಿಪರ್ ಕಾಮ ಮುಖ್ಯರಿಪುಗಳ್ ಸತತಂ||

೬೮

ಅದರಿಂದೀ ರಿಪುವರ್ಗವ|
ಸದೆಯಲ್ ಶಿವಸಂಘ್ರಿಗೆರಗಿ ಮೊರೆಯಿಡುತಾಗಳ್||
ಮುದದಿಂದ ಭಜಿಸುತಿರಲಾ|
ಮದನಾಂತಕನೈಪ ನೋಡಿ ಕರುಣಿಪನಲ್ತೇ||

೬೯

ಅಧರಕ್ಕೆ ಕಹಿಯದಾಗುತೆ|
ಉದರಕೆ ಸವಿಯಾಗಿ ತೋರ್ಪ ಬೇವಿನ ತೆರದಿಂ||
ಮೊದಲೊಳ್ಕಠಿಣವದೆನಿಸುತೆ|
ತುದಿಯೊಳ್ಸುಖವೀವುದಲ್ತೆ ಶರಣಸುಮಾರ್ಗಂ||

೭೦

ನಾಶಿಕದಿಚ್ಛೆಗೆ ಭ್ರಮರಂ|
ಭಾಸುರ ಸಂಪಗೆಯನೈದಿ ಸಾಯುವ ತೆರದಿಂ||
ಹೇಸದೆ ಪರಸತಿ ರೂಪವ|
ನಾಶಿಪ ಮನುಜಂಗೆ ಮೃತ್ಯು ಮುಂಪಡಿಯಿಡುವಳ್||

೭೧

ಕಾಯಾರಣ್ಯದೆ ಚರಿಸುತೆ|
ಮಾಯಾ ಮಂಕವನೆ ಬೀರಿ ಕಾಮಾದಿಗಳುಂ||
ನೋಯಿಸದೆ ಜ್ಞಾನಮಣಿಯನು|
ಪಾಲಿಸದಿ ಕಷ್ಟದಿಪ್ಪರೆಂಬುದನರಿಯರ್ ಮೂಢರ್||

೭೨

ತನು ಧನ ವನಿತಾದಿಗಳೋಳ್।
ತನಗೆಂತತಿ ಮಮತೆಯಿರ್ಪುದಂತಾ ಶಿವನೊಳ್॥
ಮನದನುರಾಗಂ ನೆಲೆಸಲು।
ಘನ ಮುಕ್ತಿಯನೀವ ಭಕ್ತಿಯೆನಿಪ್ಪುದು ಸಹಜಂ॥

೭೩

ಅರಸರ ಮನ್ನಣೆಯಂ ಸ।
ತ್ಪುರುಷರ ಭಯಭಕ್ತಿಗಳನು ಲೋಕದ ಜನರಾ॥
ವರ ವಂದನೆಯನು ಕೆಡಿಸುವ।
ದುರುಳಂ ದುರ್ಮಾರ್ಗಿ ಕಾಮನಂ ಕಳೆ ಯೋಗೀ॥

೭೪

ಜ್ಞಾನಿಗಳ ಬಳಿಯೊಳಿರ್ದರು।
ಹೀನಂ ತನ್ನಿರವನುಳಿದು ಸದ್ಗುಣಿಯಾಗಂ॥
ಮಾನಿತ ಕೋಗಿಲೆಯೊಡನಿರ।
ಲೇನು ಫಲಂ ಕಾಗೆ ಕಠಿಣರವಮಂ ಬಿಡದು॥

೭೫

ಲಿಂಗದ ಮರ್ಮವನರಿಯದೆ।
ಯಂಗದೆ ಬಹುಕಾಲ ಧರಿಸಿ ಪೂಜಿಸಿ ಫಲವೇಂ॥
ಮಂಗಲಮಯ ಕನ್ನಡಿಯಂ।
ಪಿಂಗಿದ ಕಂಗಳನು ಪಿಡಿದ ತೆರನಂತಕ್ಕು॥

೭೬

ಆಗಮಿಪ ಸೂರ್ಯಕಿರಣವ।
ಗೂಗೆಯು ತಾನರಿಯದಂತೆ ಶಿವಸುಖಮೆನಿಪಾ॥
ಯೋಗಿಯ ಪರಿಯಂ ದುರ್ಭವ।
ಭೋಗಿಯು ತಾನೆಂತರಿಯನೆಂಬುದು ಸಹಜಂ॥

೭೭

ಬೆಂದೊಡಲಿಗಾಗಿ ಚಿಂತಿಸು-।
ತಿಂದಿಗೆ ನಾಳಿಂಗದೆಂತು ಬಾಳ್ವೆನೊ ಯೆನುತಂ॥

ಮಂದಮತಿ ದುರಿತದೇಳ್ಗೆಯೊ।
ಳೊಂದಿರೆ ಭವಭವದೆ ದುಃಖಿಯಾಗಿರುತಿರ್ಪಂ॥

೭೮

ಕಲುಷಿತ ಗುಣೆಯೆನುತೆನ್ನುವ।
ನುಳಿಯಲ್ಬಪುದೇನೊ ದೇವದೇವನೆ ನಿನ್ನಾ॥
ಚಲುವಿನ ನಾಮಾಮೃತವದು।
ತೊಲಗಿಸದಘರೋಗಮುಂಟೆಯುದರಿಂ ಸಲಹೈ॥

೭೯

ಅರಿವಿಲ್ಲದರ್ಚನೆಯನುರು।
ತರವೆನೆ ಮಾಡಿದೊಡೆ ಜನದ ಮೆಚ್ಚುಕೆಯೈಸೆ॥
ಶರಣರ ಮೆಚ್ಚಿಕೆಯುಲ್ಲರ।
ಸರಿಯುದ ಬಿಟ್ಟಿಯನೆ ಮಾಳ್ಪ ತೆರನಂತಕ್ಕುಂ॥

೮೦

ಕತ್ತಲೆಯೊಳಿರ್ದು ದೀಪದ।
ಬಿತ್ತರವಂ ಬಣ್ಣಿಸಲ್ಕೆ ಬೆಳಕಹುದೆಂತೈ॥
ಸತ್ಯ ಬ್ರಹ್ಮವ ಬಲುಹೊಗ।
ಳುತ್ತಿರೆ ಸತ್ಕ್ರಿಯೆಗಳಿಲ್ಲದಿರಲದು ವ್ಯರ್ಥಂ॥

೮೧

ಒಡಲೊಡವೆ ಮಡದಿ ಮಕ್ಕಳ।
ಕಡು ಮಮತೆಯು ಮಾಳ್ಪ ತೆರದೆ ಭಕ್ತಿಯೊಳನಿಶಂ॥
ಮೃಡಕಾರ್ಯವನೆಡೆವಿಡದತಿ।
ಸಡಗರದಿಂ ಮಾಡೆ ಮುಕ್ತಿ ಸಂಪದಮಕ್ಕುಂ॥

೮೨

ಮಾಡಿದ ಕರ್ಮದ ಫಲಮಂ।
ಬೇಡದೆ ಶಿವಗರ್ಪಿಸುತ್ತೆ ಸತ್ಕರ್ಮವನೇ॥
ಮಾಡುತ್ತಿರೆ ಶಿವನರಿದೊಡ।
ಗೂಡಿಸುವಂ ನಿನಗೆ ಬೇಕು ಬೇಕಾದುದನೇ॥

೮೩

ಸಮತಾಭಾವಮದಳವಡೆ।
ಸಮಸ್ತುತಿ ನಿಂದೆಗಳು, ಸುಖವು ದುಃಖಗಳೆಲ್ಲಂ॥
ಸಮತೆಯೊಳನುವರ್ತಿಸುತಿ।
ರ್ಪ ಮಹಾತ್ಮಂ ಶಾಂತಿ ಸುಖವನನುಭವಿಸಿರ್ಪಂ॥

೮೪

ಅಳಿಮೀನ–ಗಜಪತಂಗಂ।
ಗಳು ತಾವೊಂದೊಂದೆ ವಿಷಯದೊಳ್ಕೆಡುತಿರ್ಕುಂ॥
ಸುಳಿಯಲ್ ಪಂಚಕ ವಿಷಯದೊ।
ಳುಳಿವೇಂ ತಾನೆಂಬ ನುಡಿ ವಿಚಿತ್ರಮದಲ್ತೇ॥

೮೫

ಮಾಯಾಮೋಹದೆ ಮುಸುಗುತೆ।
ಸಾಯಸಗೊಳುತಿರ್ಪೆನೈಸೆ ದೇವರ ದೇವಾ॥
ಕಾಯ್ಯೆ ಕಾರುಣ್ಯದೊಳೀ।
ಮಾಯಾ ಮೋಹವನೆ ಕಳೆದು ಭಕ್ತಸುಬಂಧು॥

೮೬

ಹಣವುಳ್ಳ ಮನುಜನಾದಡೆ।
ಗುಣಿಯೇ ತಾನೆನಿಸಿ ಮೆರೆವ ಕಲಿಯೊಳ್ವಿಷಮಂ॥
ಹಣವಿಲ್ಲದಿರ್ಪ ಮನುಜಂ।
ಗುಣಿಯಾಗಿರುತಿರ್ದೊಡವನ ಗಣನೆಗೆ ತಾರರ್॥

೮೭

ನುಡಿವುದು ದಿಟವಾದುದನೇ।
ಕೊಡುವುದು ಸತ್ಪಾತ್ರಕನ್ನ ವಸ್ತ್ರಾದಿಗಳಂ॥
ಬಿಡುವುದು ದುರಿತಂಗಳ ನೀ।
ನಡೆಯಿರೆ ಭವಭವದ [illegible]॥

೮೮

ಕವಿತೆಯ ಮರ್ಮವನರಿಯದೆ।
ಕವಿಯೆಂದು ಬಡಬಡಿಪಂಗೆ ಕೀರ್ತಿಯುಮೆಂತೈ॥

ಕವಿತಾ ಚತುರಂ ಹರಿಹರ।
ಭುವಿಯೊಳ್ತಾಂ ಮೆರೆದು ಕೀರ್ತಿವೆತ್ತಿಹನಲ್ತೇ॥

೮೯

ನೀತಿಯೆ ಜಗದೊಳ್ಮಾನ್ಯಂ।
ನೀತಿಯು ನಡೆಯಿಲ್ಲದವನೆ ಕೋತಿಯೆನಿಕ್ಕುಂ॥
ನೀತಿಯು ಪೂಗಳ ಜೋಡಿಸಿ।
ಮಾತಿನ ಪೋಣ್ಕೆಯೊಳುಹೆಣೆದೆ ಪೂಮಾಲಿಕೆಯಂ॥

೯೦

ತಂದೆಗೆ ಮಗುವಿನ ಬಲುತೊದ।
ಲೊಂದಿಪ ಮಾತುಗಳ ಮೊದಮೀಯುವ ಪರಿಯಿಂ॥
ದಿಂದಾಂ ಪೇಳ್ದೀ ಕಂದಗ।
ಳಿಂದತಿ ಮೋದವನೆ ಮಾಳ್ಕೆ ಸಜ್ಜನರೊಲವಿಂ॥

೯೧

(ಚಂಪಕ ಮೂಲಾವೃತ್ತ)

ಗುರುವರ ದೇವದೇವ ಭವಬಾಧೆಯು ನೀಗಿಪ ಯೋಗಿರಾಜನೇ।
ಧರೆಯೊಳೆ ಲಿಂಗತತ್ವವನು ಬೋಧಿಸಿ ಮೆರೆದ
ವಿರಾಗ ಮೂರ್ತಿಯೇ॥
ಉರುತರ ವೀರಶೈವ ಮತವೇಳ್ಗೆಯನೆಸಗಿದ ಜ್ಞಾನಭಾನುವೇ।
ಶಿರವನು ಬಾಗಿ ಬೇಡುವೆನು ಭಕ್ತಿಯ ಭಿಕ್ಷೆಯ ಶ್ರೀ ಕುಮಾರನೇ॥

೯೨

ಶಿವಯೋಗ ಮರ್ಮವರಿಯಲ್।
ಶಿವಯೋಗ ಸುಮಂದಿರಾಖ್ಯ ಸಂಸ್ಥೆಯನೆಗಳ್ದಾ॥
ಶಿವಯೋಗವ ಬೋಧಿಸುತಂ।
ಶಿವನೊಳ್ ಬೆರೆದಿರ್ಪೆಯಯ್ಯ ಯೋಗಿವರೇಣ್ಯಾ॥

೯೩

ನಿನ್ನಡಿಯ ಧ್ಯಾನಿಸುತ್ತಂ।
ನಿನ್ನ ಸುನಾಮವನೆ ಪಾಡಿ ಪಣಿಮಿಸುತ್ತಂ॥

ನಿನ್ನ ಕೃಪೆಯಿಂದ ಪೇಳ್ದೀ।
ಸನ್ನುತ ಪದ್ಯಗಳ ನಿನ್ನ ಪದಕರ್ಪಿಸುವೆಂ॥

೯೪

ಕರಣೇಂದ್ರಿಯ ನಿಗ್ರಹದಿಂ।
ದಿರುವುದು ಸುಖವೆಂದು ಬಗೆದು ಶರಣ ಸಮೂಹಂ॥
ಗುರುಲಿಂಗ ಜಂಗಮದ ಪರಿ।
ಕರದೊಳ್ನೆಲಿಸಿರ್ಪರಾಗಿಯುವರಂ ನುತಿಪೆಂ॥

ಪದ್ಯಗಳ ಅಕಾರಾದಿ

ಅಡಿಯಿಂ ತುಳಿದೊಡೆ ೬೬
ಅದರಿಂದೀ ರಿಪು-ವರ್ಗವ ೬೮
ಅಧರಕ್ಕೆ ಕಹಿಯದಾಗುತೆ ೬೯
ಅನಿಮಿತ್ತವರಿಗಳನಿಸುತೆನಿಸುತೆ ೬೭
ಅರಸರ ಮನ್ನಣೆಯುಂ ೭೩
ಅರಿವಿನ ಮರ್ಮವನರಿಯದೆ ೩೯
ಅರಿವಿಲ್ಲದರ್ಚನೆಯನು ೭೯
ಅರಿವೆಯುಂಗಂ; ೧೮
ಅಳಿ-ಮೀನ-ಗಜ-ಪತಂಗಂ ೮೪
ಆಗಮಿಪ ಸೂರ್ಯ-ಕಿರಣವ ೭೬
ಉರುತರ ಯೋಗದ ಮಹಿಮೆಯನು ೨
ಊರೊಳ್ ಪಂದಿಗಳಿರಲು ೪೭
ಎಣ್ಣೆಯಿರುವನಕ ದೀಪವು ೬೩
ಎನ್ನಪಮಾನ ಸುಮಾನಗಳ್ ೭
ಎನ್ನಯ ಕಾಯದ ಮೋಹವನು ೯
ಎನ್ನಯ ತನು-ಕರಣಂಗಳ್ ೫
ಒಡಲೊಡವೆ ಮಡದಿ ಮಕ್ಕಳ ೮೧
ಒಳಗಿನ ಆತ್ಮ-ಶ್ರೀಯುಂ ಗಳಿಸದ ೪೫
ಕಣ್ಣಿನ ಕೊನೆಯೊಳಗಿರುತಿಹ ೩೨
ಕತ್ತಲೆಯೊಳಿರ್ದು ೮೦
ಕರಣೇಂದ್ರಿಯ ನಿಗ್ರಹದಿಂದ ೯೪
ಕಲುಷಿತ ಗುಣಿಯೆನುತ ೭೮
ಕವಿತೆಯ ಮರ್ಮವನರಿಯದೆ ೮೮
ಕಾಯಾಽರಣ್ಯದೆ ಚರಿಸುತೆ ೭೧
ಕೆಡಿಪ್ಪುದು ವಿತ್ತಂ ೨೮
ಕ್ಲೇಶಗಳೈದಂ ಕೆಡಿಸದೆ, ... ೨೬
ಗಾಳಿಯು ಬೀಸುವ ಕಾಲದೆ ೩೩

ಗುರು ಜಂಗಮರಿರ್ವರಿರ್ವರ್ ೧೯
ಗುರು ಬೋಧೆಯಿಂದ ೧೧
ಗುರುವಚನದೊಳಲ್ಲದೆ ೧೨
ಗುರುವರ! ದೇವ ದೇವ! ೯೧
ಗುರು ವಂಶ–ಗತಸು ತಾಸು ೨೦
ಗುರುವಾಕ್ಯದಿರವನರಿಯದೆ ೧೩
ಗುರುಸೇವೆಯೆಸಗುತ ೧೭
ಚಿತ್ತವು ಕೊನೆಯೊಳ್ ೪೮
ಚಿತ್ತವು ನಿಲ್ಲದೆ ೨೨
ಜ್ಞಾನಾಽಜ್ಞಾನಕೆ ಮೇಳಂ ೫೯
ಜ್ಞಾನಿಗಳ ಬಳಿಯಿರ್ದರು ೮೪
ತನು-ಧನ–ವನಿತಾದಿಗಳೊಳ್ ೮೨
ತಂದೆಗೆ ಮಗುವಿನ ಬಲು ೯೦
ತ್ವರಿತದಿ ಜೀವವು ಪೋಪುದು ೩೪
ದುಷ್ಟ ದುರ್ವಿಷಯದೊಳ್ ೩
ಧನ ಚರ–ದಾನಕೆ ವಿಹಿತಂ ೨೯
ಧರೆಯೊಳಗಧರ್ಮದಿಂದಿಹ ೬೪
ನ ಗುರೋರಧಿಕಂ ವಿದಿತಂ ೧೫
ನರವರ! ಸುರವರ! ಗುರುವರ! ೧
ನಾನಧಿಕ; ನಾನೇ ಪಂಡಿತ; ೪೦
ನಾನೇ ಜ್ಞಾನಿಯು, ಪಂಡಿತ; ೪೨
ನಾಸಿಕದಿಚ್ಛೆಗೆ ಭ್ರಮರಂ ೮೦
ನಿನ್ನಡಿಯ ಧ್ಯಾನಿಸುತ್ತಂ ೯೩
ನಿನ್ನ ಸುಕೃಪೆಯಿಂ ಪುಟ್ಟಿದೆ ೩
ನೀತಿಯೆ ಜಗದೊಳ್ ಮಾನ್ಯಂ ೨೯
ನೀರೊಳಿಹ ಕಮಲ–ಪತ್ರಂ ೬೧
ನುಡಿಯೊಳು ಕರ್ಕಶಮಲ್ಲದೆ ೩೧
ನುಡಿವುದು ದಿಟವಾದುದನೇ; ೮೭
ನೆರೆ ಸರ್ವೇಂದ್ರಿಯ ಮುಖದಿಂ ೬೦
ನೈಷ್ಠಿಕ ಭಾವಮದಿಲ್ಲದೆ ೩೭
ಪರ ಹಿಂಸೆ, ಪರ ದೂಷಣೆ ೪೧

ಪರಿ–ಪರಿ ವಿಷಯಗಳಿಚ್ಛೆಗೆ ೫೭
ಬರುತಿರೆ ವಸಂತ ಋತುವದು ೬೨
ಬಾಯಲಿ ಪೇಳಿದ ನುಡಿಯು ೨೫
ಬಾಯಲಿ ಬೊಮ್ಮವ ಪೇಳುತ ೨೪
ಬಿಡಲಾರದೆ ಮನವದು ತಾನು ೮
ಬುದ್ಧಿ ಭ್ರಂಶಮದಾಗಲ್ ೫೨
ಚಿಂದೊಡಲಿಗಾಗಿ ಚಿಂತಿಸುತ ೭೭
ಬೇಸಿಗೆ ಬಿಸಿಲೋಳ್ ೫೮
ಭಕ್ತಿಯು ಮರ್ಮವದಿಲ್ಲಂ ೩೫
ಭೋಗ–ವಿತಾನವ ೪೬
ಮನದೋಳ್ ನೆನೆಯುವ ಮನುಜಗೆ ೨೩
ಮನದೊಳ್ ಪರಿ-ಪರಿ ವಿಷಯದ ೫೦
ಮನದೊಳ್ ಸಮತೆಯದು ೫೫
ಮರವೆಯು ಮುಸುಕಿದ ಮನುಜಂ ೫೧
ಮರುಳರ್ ಮೋಹದ ಮದ್ಯವನು ೬೫
ಮಾಡಿದ ಕರ್ಮದ ಫಲಮಂ ೮೨
ಮಾಯಾ-ಮೋಹದೆ ಮುಸುಗುತೆ ೮೫
ಮಾಯೆಯು ಮದಮಂ ಮುರಿಯುತೆ ೪
ಮೂರು ಶರೀರದೆ ಮುಸುಕಿದ ೧೪
ಲಿಂಗದ ಮರ್ಮವನರಿಯದೆ ೭೫
ಲಿಂಗದ ಮುಖವೇ ಜಂಗಮ ೩೦
ಲಿಂಗಾಂಗಿಯೆ ಸತ್ ಪುರುಷಂ ೧೭
'ವಿ' ಎನಲು ವಿಷಯ–ದೂರಂ ೩೬
ವಿನಯಾದಿ ಗುಣಗಳಿಲ್ಲದ ೨೭
ವಿರತಾಗ್ರಗಣೆಗಳೆನಿಸುವ ೩೮
ವಿಷಯ–ವಿಷಯಿಗಳನುಭಯವನು ೫೪
ವೇದಾಂತ-ನಿಷ್ಠನಾಗಿಯೆ ೧೦
ವ್ರತಮಂ ಮಾಡುವೆನೆನ್ನುವ ೪೩
ಶಿವಪೂಜೆ ಶಿವನ ಧ್ಯಾನಂ ೨೧
ಶಿವಯೋಗ ಮರ್ಮವನರಿಯಲ್ ೯೨
ಸತ್ಯದ ನುಡಿಗಳನಾಲಿಸಿ ೪೪

ಸತ್ಯವನಾಡುವ ಮನುಜಂ ೪೯
ಸತ್ಯ ಸು–ಮಾರ್ಗದೆ ನಡೆಯೆಂ! ೬
ಸಮತಾ–ಭಾವಮದು ೮೩
ಹಣವುಳ್ಳ ಮನುಜನಾದಡೆ ೮೬
ಹಸಗೆಟ್ಟು ಹಲವು ವಿಷಯದ ೫೬

ಜೀವನ ವಿಕಾಸ

ಸಾಹಿತ್ಯ ಪ್ರಕಾರ : ಗದ್ಯ ಲೇಖನಗಳು
ಮೊದಲ ಮುದ್ರಣ : ೧೯೬೯
ರಚನೆಯ ವಯಸ್ಸು : ೪೦
ರಚನಾಸ್ಥಳ : ಹುಬ್ಬಳ್ಳಿ

ಶ್ರೀ ಜಗದ್ಗುರು ಮೂರುಸಾವಿರಮಠ ಗ್ರಂಥಮಾಲೆ ಸಂ. ೩೨

ಜೀವನ ವಿಕಾಸ

(ಹುಬ್ಬಳ್ಳಿ ಮೂರುಸಾವಿರಮಠದ ಶ್ರೀ ಜಗದ್ಗುರುಗಳವರ ಐದು ಆಶೀರ್ವಚನಗಳು)

೧೯೬೯

ಪ್ರಕಾಶಕರು:

ಶ್ರೀ ಜಗದ್ಗುರು ಗಂಗಾಧರ ಧರ್ಮ ಪ್ರಚಾರಕ ಮಂಡಲ
ಮೂರುಸಾವಿರಮಠ, ಹುಬ್ಬಳ್ಳಿ.

ಮೊದಲನೆಯ ಮುದ್ರಣ: ೧೯೬೪

ಬೆಲೆ: ೭೫ ಪೈಸೆ

ಮುದ್ರಣ:
ಪರಂಜ್ಯೋತಿ ಪಾವರ ಪ್ರಿಂಟಿಂಗ್ ಪ್ರೆಸ್,
ಹುಬ್ಬಳ್ಳಿ

ಪರಿವಿಡಿ

೧.	ಮುಮ್ಮಾತು	....	...	೩೪೬
೨.	ಸೋಽಯಂ ಗಂಗಾಧರಃ	....	....	೩೪೯
೩.	ವ್ಯಕ್ತಿತ್ವದ ವಿಕಾಸ	....	....	೩೫೨
	ಚಾರಿತ್ರ್ಯದ ಬಲ			೩೫೩
	ಸ್ವಭಾವದ ಶಕ್ತಿಗಳು			೩೫೫
	ಆಕರ್ಷಣ ಶಕ್ತಿ			೩೫೬
೪.	ಸಾಹಿತ್ಯ ಮತ್ತು ಮನೋವಿಜ್ಞಾನ	....	....	೩೫೮
	ಸಾಹಿತ್ಯ			೩೫೮
	ಮನೋವಿಜ್ಞಾನ			೩೫೯
	ಸಮನ್ವಯ			೩೬೦
	ಧೃತಿ, ದೀಪ್ತಿ ಮತ್ತು ವಿಕಾಸ			೩೬೦
೫.	ಶ್ರೀ ನಿಜಗುಣ ಶಿವಯೋಗಿ	....	....	೩೬೨
೬.	ಶಿವಾದ್ವೈತ ಶಕ್ತಿ	....	....	೩೬೯
	ಯಜ್ಞ, ಯಾಗ, ಕ್ರತು			೩೭೭
೭.	ಜಾಗತಿಕ ಶಾಂತಿಗೆ ವೀರಶೈವ ದರ್ಶನದ ಕೊಡುಗೆ		....	೩೮೦
	ಶೈವ ಪ್ರಭೇದಗಳು			೩೮೦
	ವೀರಶೈವ ಧರ್ಮದ ವೈಶಿಷ್ಟ್ಯಗಳು			೩೮೧
	ವೀರಶೈವ ಸಮತಾವಾದ			೩೮೨
	ಮಹಾತ್ಮಾ ಬಸವಣ್ಣ ಮತ್ತು ಗಾಂಧೀಜಿ			೩೮೨
	ಅನುಭವ ಮಂಟಪ			೩೮೩
	ವೀರಶೈವದ ಗುರಿ			೩೮೩
	ನಮ್ಮ ಪ್ರತಿಜ್ಞೆ			೩೮೪

ಮುನ್ಮಾತು

ವ್ಯಕ್ತಿಯು "ಜೀವನದ ವಿಕಾಸ"ವಾಗಲೆಂದು ಪ್ರಾಯಶಃ ಎಲ್ಲರೂ ಬಯಸುತ್ತಾರೆ. ಅದನ್ನು ಕಂಡರಿದ ಪರಮಪೂಜ್ಯ ಮಂತ್ರದ್ರಷ್ಟಾರರು ಅದು ಎಲ್ಲರಿಗೂ ಸುಗಮವಾಗಲೆಂದು ಪ್ರಯತ್ನಿಸಿದ್ದಾರೆ. ಅಂತೆಯೇ ಎಲ್ಲರ ಗುರಿಯು ಸಾಧನೆಯು ಜೀವನ-ವಿಕಾಸವೆಂಬುದು ಸರ್ವಸಮ್ಮತ-ಒಮ್ಮತ.

ಸತ್ಯ-ಶಿವ-ಸುಂದರತೆಯು ಈ ಜೀವನ ವಿಕಾಸಕ್ಕೆ ಪಾವಿತ್ರ್ಯ-ಮಾಧುರ್ಯ-ಲಾವಣ್ಯಗಳಿಂದೊಡವೆರೆದ ಕ್ಷೀರ ಅವಶ್ಯಕ; ನೀತಿ-ಸದ್ಗುಣ-ಸಚ್ಚಾರಿತ್ರ್ಯಗಳ ಭಕ್ತಿ-ಜ್ಞಾನ-ವೈರಾಗ್ಯಪ್ರದ ಆಶೀರ್ವಚನಾಮೃತದಿಂದ ಇನ್ನೂ ಹೆಚ್ಚಿಗೆ ಜೀವನ-ವಿಕಾಸವಾಗಲು ಸುಲಭವಾಗುತ್ತದೆ. 'ವಿಕಾಸವು ಚಿತ್ತದ ಒಂದು ಸಹಜ ಭಾವವಾಗಿದ್ದರೂ ಹಾಸ್ಯ ಮತ್ತು ವಿಸ್ಮಯಗಳ ಕಾಲದಲ್ಲಿಯೂ ಪರಿಪಕ್ವಾವಸ್ಥೆಯನ್ನು ಹೊಂದುತ್ತದೆ.' ವಿಕಾಸದಿಂದಲೇ ಶಿವ-ಪ್ರಕಾಶದ ಪರಿಕಲ್ಪನೆ ಸ್ವಾಭಾವಿಕ.

ಜೀವ-ಬೀಜವು ತನ್ನ ಹೊದಿಕೆಯನ್ನು ಪರಿಹರಿಸಿ, ತನ್ನ ನಿಜ ಸ್ವರೂಪವಾದ ಅಂಕುರವನ್ನು ವಿಕಸಿತಗೊಳಿಸಿದಾಗ ಮಾತ್ರ ಅದರ ವಿಕಾಸ. ತನ್ನ ಆ ಕಾರ್ಯದಲ್ಲಿ ಅದಕ್ಕೆ ಪ್ರಾಯಶಃ ಪಂಚಭೂತಗಳ ಸಹಕಾರಬೇಕು. ಸಾಕ್ಷಾತ್ತಾಗಿ ಪೃಥ್ವಿಯ ಸಂಪರ್ಕವಿರದ 'ಕುಸೂಲಸ್ಥ' ಬೀಜವು ಅಂಕುರಿಸಿದರೂ ಕೂಡ ಅದರ ಪರಿಪೂರ್ಣ ಜೀವನ-ವಿಕಾಸಕ್ಕೆ ವ್ಯಕ್ತಿತ್ವದ ವಿಕಾಸಾದಿ ಸಹಕಾರಿ ಕಾರಣಗಳ ಅಗತ್ಯ ಇದೆ.

ಜೀವ ಶಾಸ್ತ್ರಜ್ಞರಾದ ಸರ್ ವಿಲಿಯಂ ಹಾರ್ವೀ, ಜೇ. ಎಸ್. ಹಾಲ್ಡೇನ್ ಮೊದಲಾದವರು ಜೀವದಿಂದಲೇ ಜೀವವು ಜನ್ಮವೆಂದು ಹೇಳಿದರೆ, ಪೌರಸ್ತ್ಯ ದಾರ್ಶನಿಕರು 'ವಿಷಮಪ್ಯಮೃತಂ ಭವೇದ್, ಅಮೃತಂ ವಾ ವಿಷಮೀಶ್ವರೇಚ್ಛಯಾ' ಎಂದು ನೆರೆ ನಂಬಿ, ಅಜೀವವಾದ ಗೋಮಯದಿಂದಲೂ ವೃಶ್ಚಿಕದ ಉತ್ಪತ್ತಿಯ ದೃಷ್ಟಾಂತವನ್ನು ಮುಂದು ಮಾಡುತ್ತಾರೆ. ಪ್ರಾಣಿಗಳಲ್ಲಿ ಇದ್ದಂತೆ ಭೌತಿಕದ ಅಣು-ರೇಣು-ತೃಣ-ಕಾಷ್ಠಾದಿಗಳಲ್ಲಿ ಅಥವಾ ಎತ್ತ ನೋಡಿದತ್ತ ಜೀವದ ಇರುವಿಕೆಯನ್ನು ತೀರ್ಮಾನಿಸಲಾಗದು. ಒಂದು ಪಕ್ಷ, ಜೀವವಿಲ್ಲದಿದ್ದರೆ ಭೌತಿಕ ವಸ್ತುಗಳಲ್ಲಿ ಯಾವಾಗಲೂ ಒಂದೇ ತರನಾಗಿರಬಹುದಾಗಿತ್ತು; ಪರಿಣಾಮಕ್ಕೊಳಗಾಗಬಾರದಿತ್ತು. ಆದರೆ, ಪ್ರತಿಯೊಂದಕ್ಕೂ ವೃದ್ಧಿ-ಕ್ಷಯಾದಿಗಳು ಹೊಸ-ಹೊಕ್ಕಿದುದು ಕಂಡುಬರುತ್ತದೆ. ಆದುದರಿಂದ ಸಾಮಾನ್ಯವಾಗಿ ನಾವು ಅಜಡವೆಂದು ತಿಳಿದಿರುವ ಜೀವವೂ ಕೂಡ ವಾಸ್ತವಿಕವಾಗಿ ಸಚೇತನವಲ್ಲ. ನಿಜವಾದ ಚೇತನವು ಜೀವದ ಜೀವನದ ವಿಕಾಸವಾದಾಗ ಮಾತ್ರ ಗೋಚರಿಸುತ್ತದೆ. ಹಾಗೆ ಗೋಚರಿಸುವ 'ಜೀವನು ಸ್ಥೂಲ ಚಿದಚಿದಾತ್ಮ ಶಕ್ತಿಯುಕ್ತನಾಗಿರುವನು. ಶಿವನು ಸೂಕ್ಷ್ಮ ಚಿದಚಿದಾತ್ಮ ಶಕ್ತಿಯುತನಾಗಿರುವನು. ಜೀವನ ಸ್ಥೂಲ ಚಿಚ್ಛಕ್ತಿಯು ಕಿಂಚಿಜ್ಞತಾ ರೂಪವಾಗಿರುವುದು; ಸ್ಥೂಲಾಚಿಚ್ಛಕ್ತಿಯು ಕಿಂಚಿತ್ಕರ್ತೃತಾರೂಪ

ವಾಗಿರುವುದು. ಶಿವನ ಸೂಕ್ಷ್ಮ ಚಿಚ್ಛಕ್ತಿಯು ಸರ್ವಜ್ಞತಾರೂಪವಾಗಿರುವುದು. ಈ ದ್ವಿವಿಧ ಶಕ್ತಿಗಳಿಂದ ಯುಕ್ತರಾದ ಜೀವ ಮತ್ತು ಶಿವ—ಇವರ ಅದ್ವೈತವೇ' ಜೀವನ ವಿಕಾಸದ ಪರಮಗುರಿ.

ಈ ಜೀವನ ವಿಕಾಸದ ಬಗೆಗೆ ನೀತಿ-ಸಂವಿಧಾನ ಹಾಗೂ ಅದರಿಂದಾಗುವ ಶಾಶ್ವತ ಲಾಭವನ್ನು ವಿಸ್ತರಿಸುವ ಶಾಸ್ತ್ರ ಪರಂಪರೆಯಲ್ಲಿ ಆಶೀರ್ವಚನಕ್ಕೂ ಒಂದು ವಿಶಿಷ್ಟ ಸ್ಥಾನವಿದೆ. ಅದರಿಂದ ಜೀವದ ಜೀವನ ವಿಕಾಸ ಆದಾಗಲೇ "ಜೀವೋ ಬ್ರಹ್ಮೈವ, ನಾಽಪರಃ" ಆದಾಗದ ಹೊರತು, ಅವನಿಗೆ ಹಾಗೂ ಶಿವನಿಗೆ ನಡುವೆ, ಸಾಮರಸ್ಯಕ್ಕೆ ಪ್ರತಿಬಂಧಕವಾದ ಮರವೆಯಿಂದಾದ ಭವ ಬಂಧನ-ಭವ ಪಾಶಗಳಿಂದ ಬಿಡುಗಡೆಯಾಗದು. ಅಂಥ ಬಿಡುಗಡೆ ಮಾಡಿಸುವ ಸದುಪದೇಶದಿಂದ ಶಬ್ದ ಸೋಪಾನವ ಕಟ್ಟಿ ನಡೆಸಿದ ಮೃಡಶರಣರ ನುಡಿಗಡಣವು ಆಗಾಗ್ಗೆ ಜಾಗ್ರತಗೊಳಿಸಿ ಜೀವನನ್ನು ಮುನ್ನಡೆಸುತ್ತದೆ.

ಇಂಥ ಮುನ್ನಡೆಯನ್ನು ಬಯಸುವ ಜೀವನಿಗೆ "ಮೋಕ್ಷೇ ಧೀರ್ಜ್ಞಾನ ಮನ್ಯತ್ರ ವಿಜ್ಞಾನಂ ಶಿಲ್ಪ-ಶಾಸ್ತ್ರಯೋಃ" ಎಂಬಂತೆ ತಾಪತ್ರಯಗಳ ನಿವಾರಣೆ ಮಾಡಿಸುವ ಪರಮ ಪುರುಷಾರ್ಥಕ್ಕೆ ಕಾರಣವಾದ ಸಕ್ರಿಯ ಜ್ಞಾನವೇ ಮುಖ್ಯ ವಾದದ್ದೆಂದೂ, ವಿಶೇಷ ರೀತಿಯ ಜ್ಞಾನವಾದ ಭೌತಿಕ ವಿಜ್ಞಾನಕ್ಕಿಂತಲೂ ಅದು ಮೌಲಿಕವಾದದ್ದೆಂದೂ ಎಲ್ಲ ದಾರ್ಶನಿಕರು ಪ್ರತಿಪಾದಿಸುತ್ತಾರೆ.

ಈ ಪ್ರತಿಪಾದ್ಯ ವಿಷಯದ ಬಗೆಗೆ ಪರಮಪೂಜ್ಯರ ಆಪ್ತ ವಾಕ್ಯವು ನಿಗಮಾಗಮ-ವಚನಾಮೃತದ ಸಾರರೂಪದಲ್ಲಿ 'ನಿತ್ಯಪ್ರವಾಹ'ವಾಗಿದೆ. ಅಲ್ಲಿ ಜ್ಞಾನ-ವಿಜ್ಞಾನಗಳೆರಡೂ ಸೇರಿ 'ಜೀವನ ವಿಕಾಸ'ದಲ್ಲಿ ಒಂದುಗೂಡಿವೆ.

ಶಿವನಾಗುವ ಪರಮ ಗುರಿಯ ಸಾಧನೆಯಲ್ಲಿ ವ್ಯಕ್ತಿತ್ವದ ವಿಕಾಸಕ್ಕಾಗಿ ಚಾರಿತ್ರ್ಯಬಲದ ಹಾಗೂ ಸ್ವಭಾವದ ಆಕರ್ಷಣಶಕ್ತಿಗಳಿಸಿ 'ವಿಶಾಲ ಮನೋಭಾವ ದವರಾಗಬೇಕು. ಹೊರಗಿನ ವಿಚಾರಗಳನ್ನು ಅರಿತುಕೊಳ್ಳಬೇಕು. ಹಳೇ ಪದ್ಧತಿಗೆ ಹೊಸ ವಿಚಾರಗಳನ್ನು ಅನ್ವಯಿಸಬೇಕು. ಆಂತರಿಕ ವಿಚಾರಕ್ಕೆ ಬಾಧೆ ಬರದಂತೆ ನಡೆಯಬೇಕು. ಇದರಿಂದ ಮನುಷ್ಯ ಜೀವನದಲ್ಲಿ ಸ್ಫೂರ್ತಿ ಬರುತ್ತದೆ.'

ಸ್ಫೂರ್ತಿ ಪಡೆದು "ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ!!!" ಎಂದು ಹುರಿದುಂಬಿಸಿ ನುಡಿಯಲು ಸಮರ್ಥನಾದ ಸಾಹಿತ್ಯ ಮತ್ತು ಮನೋ ವಿಜ್ಞಾನದ 'ಸಾಹಿತ್ಯಕಾರನು ಅಮರ; ಜೀವನ ದರ್ಶನದ ಸೃಷ್ಟಿಕರ್ತ; ಹೊಸ ವಿಶ್ವದ ಅದ್ವಿತೀಯ ವಿಧಾತೃ. ಅಂತೆಯೇ ಅವನು ಸೂಕ್ಷ್ಮದರ್ಶಿ, ತತ್ತ್ವದರ್ಶಿ ಮತ್ತು ಸ್ವಯಂಪ್ರಜ್ಞ.'

ಈ ಗುಣಗಳೊಂದಿಗೆ ಧೃತಿ, ದೀಪ್ತಿ ಮತ್ತು ವಿಕಾಸಗಳನ್ನು ಹೊಂದಿ 'ಕಾವ್ಯ ದಲ್ಲಿ ಜನಜೀವನದ ಸತ್ಯ ಸೌಂದರ್ಯಗಳನ್ನು ಪ್ರತಿಬಿಂಬಿಸಿ, ಅಂತಶ್ಚೈತನ್ಯ ವನ್ನಿತ್ತು, ಅಮೃತತ್ವವನ್ನೇ ಸೂರೆಗೈಯುವುದು ಕಲೆಯ ಏಕಮಾತ್ರ ಧ್ಯೇಯವಾಗಿರ

ಬೇಕು' ಎಂದು ತಿಳಿದ ಶ್ರೀ ನಿಜಗುಣ ಶಿವಯೋಗಿಗಳು ಜೀವನ–ವಿಕಾಸ ಮಾಡಿಕೊಂಡು 'ಆಧ್ಯಾತ್ಮಿಕ ದಿವ್ಯ ಶಕ್ತಿ'ಯನ್ನು ಗಳಿಸಿ ಬೆಳಗಿದರು. ಅವರು ಶಿವಧರ್ಮವೆಂಬ ಕಂಬದ ಮೇಲೆ ಸುವಿವೇಕದಿಂದೊಡಗೂಡಿದ ಪ್ರೀತಿಯನ್ನಿಟ್ಟು, ಸಮಯದ ಸದ್ಭಕ್ತಿ ತೈಲವನೆರೆದು ಪ್ರವಿಮಲ ಕಳೆಯೆಂಬ ಬತ್ತಿ ಹಾಕಿ ಹಚ್ಚಿ, ಅಂತರಾತ್ಮನಿಗೆ ಬೆಳಗಿ, ಮೋಕ್ಷ ಚಿಂತಾಮಣಿಯೆನಿಸುವ ಶುಭಲಿಂಗವೆ ತಾನಾದ ದಿವ್ಯಜ್ಯೋತಿ'ಯಾದರು.

ಆ ದಿವ್ಯಜ್ಯೋತಿಯಾದ ಪರಂಜ್ಯೋತಿಯನ್ನು ನಾವೂ ಸಹ ಕಾಣಬೇಕು. ಅದಕ್ಕಾಗಿ ಸ್ಥೂಲವೂ, ಸೂಕ್ಷ್ಮವೂ ಆಗಿರುವ ಚಿದಚಿದಾತ್ಮ ಶಕ್ತಿಯುತವಾದ ಶಿವ ಜೀವರ–ಶಿವಾದ್ವೈತ–ಶಕ್ತಿಯ ರಹಸ್ಯವನ್ನು ತಿಳಿಯಬೇಕು. ಅದರಿಂದ 'ಪ್ರತಿಯೊಂದು ಪದಾರ್ಥದಲ್ಲಿಯೂ ಒಂದೊಂದು ವಿಧವಾದ ಶಕ್ತಿಯಿರುವುದಾಗಿ ಕಂಡು ಬರುವುದು.' ಆಗ ಶಿವಾದಿ ಪೃಥ್ವ್ಯಂತವಾದ ಮೂವತ್ತಾರು ತತ್ತ್ವಗಳು ಅದೇ ಪರಶಿವ ಬ್ರಹ್ಮದ ವಿಮರ್ಶ ಶಕ್ತಿಯ ಸ್ಫುರಣಗಳ ಸ್ವರೂಪವೆಂದು ಸ್ಪಷ್ಟವಾಗುವುವು. ಈ ಷಟ್‌ತ್ರಿಂಶತ್ ತತ್ತ್ವಗಳ ಜ್ಞಾನವೇ ತತ್ತ್ವಜ್ಞಾನ.

ಈ ತತ್ತ್ವಜ್ಞಾನದ ಮೂಲಕ ಜಾಗತಿಕ ಶಾಂತಿಗೆ ವೀರಶೈವ ದರ್ಶನದ ಕೊಡುಗೆ ಏನೆಂಬುದನ್ನು ವಿಸ್ತರಿಸುತ್ತ, ವೀರಶೈವ ಧರ್ಮದ ವೈಶಿಷ್ಟ್ಯ, ಅದರ ಸಮತಾವಾದ ಹಾಗೂ ಅದರ ಗುರಿಯನ್ನು ನಾವು ಕಂಡುಕೊಳ್ಳುತ್ತೇವೆ; ಮತ್ತು ಅನುಭವಮಂಟಪದ ಸಂದೇಶದೊಂದಿಗೆ "ಶಿವಾರ್ಥೇ ದೇಹ–ಸಂಶೋಷ"ವನ್ನು ಮಾಡುತ್ತ, ಜೀವನ ವಿಕಾಸದ ಪ್ರತಿಜ್ಞೆಯನ್ನು ಪೂರೈಸುತ್ತೇವೆ.

ಪ್ರತಿಜ್ಞೆಯನ್ನು ಪೂರೈಸಿಕೊಡಲು ಸಮರ್ಥವಾದ ಜೀವನ ವಿಕಾಸದ ತತ್ತ್ವಜ್ಞಾನವು ಒಂದು ಕೀಲಿಕೈ ಹಾಗೆಯೇ ಉಳಿದಿತ್ತು. ಅದನ್ನು ಅಲ್ಲಲ್ಲಿ ಸಭಿಕರಿಗೆ ದಯಮಾಡಿ ಉಪದೇಶಿಸಿದರು—ಪರಮಪೂಜ್ಯ ಹುಬ್ಬಳ್ಳಿ ಮೂರುಸಾವಿರಮಠದ ಶ್ರೀ ಮನ್ಮಹಾರಾಜ ನಿರಂಜನ ಜಗದ್ಗುರು ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳು. ಅದನ್ನೇ ನಾವಿಲ್ಲಿ, ಜನಸಾಮಾನ್ಯಕ್ಕೂ ಲಭ್ಯವಾಗುವಂತೆ, ಪುಸ್ತಕ ರೂಪದಲ್ಲಿ ಹೊರಗೆ ತರಲು, ಅವರ ಕೃಪೆ ಪಡೆದು ಪ್ರಯತ್ನಿಸಿದ್ದೇವೆ. ಅವರ ಹಲವಾರು ಆಶೀರ್ವಚನಗಳಲ್ಲಿ ಈ 'ಜೀವನ ವಿಕಾಸ'ಕ್ಕಾಗಿ ಕೇವಲ ಇದನ್ನೇ ಆರಿಸಿಕೊಳ್ಳಲಾಗಿದೆ. ಇದೇ ಕ್ರಮವನ್ನು ಮುಂದುವರಿಸಲಾಗುವುದು.

ನಮ್ಮ ಈ 'ಜೀವನ ವಿಕಾಸ'ದ ಸಂಪಾದನೆಗೆ ನೆರವಾದ ಶ್ರೀ ಜಗದ್ಗುರು ಗಂಗಾಧರ ಧರ್ಮಪ್ರಚಾರಕ ಮಂಡಳಿಯವರಿಗೂ, "ಸೋಽಹಂ ಗಂಗಾಧರಃ"ವನ್ನು ಮುದ್ರಿಸಲು ಒಪ್ಪಿಗೆ ದಯಪಾಲಿಸಿದ ಕಾಶಿಯ ಪಂಡಿತ ಸಭೆಯವರಿಗೂ ಹಾಗೂ ಸಕಾಲಕ್ಕೆ ಮುದ್ರಿಸಿಕೊಟ್ಟ ಮನೋಹರ ಪ್ರಿಂಟಿಂಗ್ ಪ್ರೆಸ್ಸಿನವರಿಗೂ ಕೃತಜ್ಞತೆ ಸಲ್ಲಬೇಕು.

—ಇಲಕಲ್ ಗುರುಸಿದ್ಧದೇವರು

ಸೋಽಯಂ ಗಂಗಾಧರಃ

ಇಲಕಲ್ ಗುರುಸಿದ್ಧದೇವರು (ರಿಸರ್ಚ್-ಸ್ಕಾಲರ್)

[ಪರಮಪೂಜ್ಯ ಶ್ರೀ ಮನ್ಮಹಾರಾಜ ನಿರಂಜನ ಜಗದ್ಗುರು ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳವರು ದಿಲ್ಲಿಯಲ್ಲಿ ಜರುಗಿದ 'ಅಂತರ್ ರಾಷ್ಟ್ರೀಯ ಸರ್ವಧರ್ಮ ಸಮ್ಮೇಲನ'ದಲ್ಲಿ ತಮ್ಮ ಭಾಷಣ ಕಾರ್ಯಕ್ರಮ ಪೂರೈಸಿಕೊಂಡು ಕಾಶೀ ಕ್ಷೇತ್ರಕ್ಕೆ ದಯಮಾಡಿಸಿದಾಗ, ಕಾಶೀ ಪಂಡಿತ ಸಭೆಯು ಮೂರನೇ ದಿವಸದಸಭೆಯಲ್ಲಿ ರಚಿಸಿ, ಓದಿ, ಶ್ರೀ ಸನ್ನಿಧಿಗೆ ಸಮರ್ಪಿಸಿದ ಸ್ವಾಗತ ಶುಭಾಭಿನಂದನ ಪತ್ರ.]

॥ ಶಾರ್ದೂಲ ವಿಕ್ರೀಡಿತವೃತ್ತ ॥

೧

ಸಿದ್ಧ್ಯಾಮ್ನಾಯವಸುಸ್ಥಿರಾ-ಪರಿಮಿತೇ ವರ್ಷೇಽಕ್ಷಯೇ ಶೋಭನೇ
ಶ್ರೀ ಶ್ರೀಮನ್ನೃಪಶಾಲಿವಾಹನಶಕೇ ಮಾಘೇ ವಿಶುದ್ಧೇ ದಲೇ।
ನಕ್ಷತ್ರೇ ಮೃಗಶೀರ್ಷಕೇ ಕವಿದಿನೇ ರಾತ್ರೌ ದಶಮ್ಯಾಂ ತಿಥೌ
ಜನ್ಮಾಪ್ತ್ವಾ-ಮರುಳಾರ್ಯ-ಭಾಗ್ಯನಿಚಯಾಜ್ಜಾತೋಽತ್ರ ಗಂಗಾಧರಃ॥

೨

ವೇದಪ್ರಾಣವಸುಸ್ಥಿರಾಮಿತಶಕೇ ಚೈತ್ರೀಯ-ಶುಕ್ಲಾಽನ್ತಿಮೇ
ಪೂರ್ವಾಹ್ಣೇ ಶಿವಯೋಗಮಂದಿರವಟುರ್ಭೂತ್ವಾ ಕ್ರಮೇಣ ಸ್ವಯಂ।
ಆಚಾರ್ಯಪ್ರಮುಖಾತ್ ಪ್ರಬುದ್ಧಮತಿವಾಕ್ಛಾಸ್ತ್ರೇಷ್ಟ ವಿದ್ಯಾಃ ಪಠನ್
ಧೀ-ರತ್ನೈಃ ಪರಿಶೋಭತೇಽತ್ರ ಪರಮಃ ಪೂಜಾರ್ಹ-ಗಂಗಾಧರಃ॥

೩

ಪೂರ್ವಂ ಶ್ರೀ ಶಿವಯೋಗಮಂದಿರಮಠೇ ಪಶ್ಚಾತ್ತು ಕಾಶ್ಯಾಂ ಪಠನ್
ವೇದಾಂತೇ ಪರಮೋಚ್ಚ-ಮಾನ್ಯ-ಪದವೀಮ್ 'ಆಚಾರ್ಯ' ಶಬ್ದಾಽಽವೃತಮ್।
ಸಾಹಿತ್ಯೇ ಕವಿ-'ಕಾವ್ಯತೀರ್ಥ'ಮಥ ತಮ್ 'ರತ್ನಂ'ಚ ಸಂಪಾದಿತಂ
ಭಾಷಾ ಚಿತ್ರಕಲಾಽಽಂಗ್ಲ 'ಕನ್ನಡ'ಗಿರಾಂ ಪಾಂಡಿತ್ಯಮತ್ರ ಸ್ಫುಟಮ್।

೪

ಭಕ್ತ್ಯರ್ಥೇ ಶಿವನಾಮಕೀರ್ತನಮಥೋ ಶಾಸ್ತ್ರಾರ್ಥಸಂಭಾಷಣಂ
ತಚ್ಛಾತ್ರಾನ್ ಪ್ರತಿಪಾಠನಂ ನಿಯಮತೋ ಯೋಗಾಸನಂ ಪೂಜನಂ।
ರುದ್ರಾಧ್ಯಾಯ-ಸಹಸ್ರಬಿಲ್ವನುತಿಗೀಃ ಪಾರಾಯಣಂ ಗೀತಿನಾಂ
ಶಾಸ್ತ್ರೋಕ್ತ್ಯಾ ಶತರುದ್ರಸೂಕ್ತಪಠನಂ ನಿತ್ಯತಾಪಿ ತತ್ಸಾಧನೇ

೫

ಯೋಗಾಭ್ಯಾಸಮುಖಾನ್ ಸ್ವಕಾರ್ಯನಿವಹಾನ್ ಶ್ರದ್ಧಾಽನ್ವಿತೋಽಭ್ಯಾಚರನ್
ಪ್ರಾತಃಕಾಲನುತಿಂ ಕ್ರಿಯಾಂ ಪ್ರಥಮತಃ ಕೃತ್ವಾಽಥ ಶಾಸ್ತ್ರಂ ಪಠನ್।
ಪೂಜಾಪಾಠ ಪುರಾಣಭಾಷಣಕಲಾಶಿಕ್ಷಾಸು ಯೋಗ್ಯೋ ಭವನ್
ಲೋಕೇಽಸ್ಮಿನ್ ಸಕಲಪ್ರಶಸ್ತಯಮಿನಾಂ ಗಣ್ಯೋಽತ್ರ ಗಂಗಾಧರಃ॥

೬

ಹಾವೇರೀ-ಬಿದರೀ-ವಿರಾಟ್‌ಪುರಮುಖ-ಸ್ತೋತ್ರಾಣಿ ಗೀತಾನ್ಯಥೋ
ಇಲ್‌ಕಲ್ಲೀಶ್ವರ- 'ಲಾವಣೀ'ನಿದಿತಾ, 'ಪೂಮಾಲಿಕಾ' ಗುಮ್ಫಿತಾ।
ಅಪ್ಪಯ್ಯಾದಿ-ಜರೇಶಜೀವನಕಥಾ ನಾನಾವಿಧಾ ಗೀತಿಕಾಃ
ಶ್ರೀಗಂಗಾಧರಯೋಗಿನಾ ವಿರಚಿತಾಃ ಸರ್ವಾಃ ಪ್ರಸಿದ್ಧಿಂ ಗತಾಃ॥

೭

ಯೋಮಾಽಷ್ಟಾಽಷ್ಟಧರಾ-ಸುಸಮ್ಮಿತಶಕೇ ವರ್ಷೇ ವಿಲಮ್ಬ್ಯಾಭಿಧೇ
ನಿರ್ದಿಷ್ಟೇ ಸಮಯೇ ತ್ರಯೋದಶದಿನೇ ವೈಶಾಖಶುದ್ಧೇ ದಲೇ।
ಲಗ್ನೇಽಯಂ ಗುರುವಾಸರೀಯ-ಮಿಥುನೇ ಪ್ರದ್ಯೋತಮಾನಾದ್ ಧ್ರುವಂ
ಪ್ರಾತಃ ಷಟ್‌ಸ್ಥಲಮಂತ್ರ ಸಂಸ್ಕೃತವಪುಃ ಸಿದ್ಧೋಽತ್ರ ಗಂಗಾಧರಃ॥

೮

ತಸ್ಮಿನ್ನೇವ ದಿನೇ ನಿಶೀಥಸಮಯೇ ಸಿಂಹಾಸನಾಽಽರೋಹಣಂ
ಭಕ್ತ್ಯಾಽರ್ಜಿತ-ಸೂಪದಾ-ನವನಿಧಿ-ಸ್ವೀಕಾರಕಾರ್ಯಂ ತಥಾ।
ಸಂಕ್ಷಿಪ್ತಂ ಪರಮಾರ್ಥಸಾರಸಹಿತಂ ಸ್ವಾಽಽಶೀರ್ವಚಃ ಶ್ರಾವಣಂ
ಕೃತ್ವಾ ಪೂಜ್ಯ ಜಗದ್ಗುರುರ್ಜಯತೇ ಹುಬ್ಬಳ್ಳಿ-ಪೀಠಾಧಿಪಃ॥

೯

ಹುಬ್ಬಳ್ಳೀ-ಸ್ಥಿತ-ಮೂರುಸಾವಿರಮಠಾನ್ನಿರ್ಗತ್ಯ ಭಕ್ತೈಃ ಸಹ
ದಿಲ್ಲೀಮುಖ್ಯಪ್ರದೇಷು ಚಾತ್ರ ಜನತಾಂ ಸಂಬೋಧಯನ್ ಸಾಽಽಶಿಷಂ।
ಭಕ್ತಾನಾಂ ಶ್ರವಣಾರ್ಥಿನಾಂ ಹಿ ಹೃದಯೇ ಸದ್ಬೋಧಮುದ್ಬೋಧಯನ್-
ಅತ್ರೈವಾಽಽಗತಯೋಗಿನಃ ಪರಿಚಿತಾಃ ಕುರ್ಮೋ ವಯಂ ಸ್ವಾಗತಮ್॥

೧೦

ಹುಬ್ಬಳ್ಳೀ-ನಗರಾತ್ ಪ್ರಯಾಣಸಮಯೇ ಕಾಶೀಮುಪೇತ್ಯಾಽಽದರಾತ್
ವಿದ್ವದ್ವೃಂದಸಮಾಜಮುಖ್ಯಪುರುಷೈಃ ಸಂಪ್ರಾರ್ಥಿತೇಽಸ್ಮಿನ್ ದಿನೇ[೧]।
ಅತ್ರತ್ಯಾನ್ ವಿದುಷಃ[೨] ಪ್ರಭೂತಕರುಣಾದೃಷ್ಟ್ಯಾ ಸದಾ ಪಾತ್ವಿತಿ
ಸಶ್ರದ್ಧಾ ಗುರು-ಸಿದ್ಧ-ಮುಖ್ಯ-ಕವಯೋ ಭಕ್ತ್ಯಾ ಪ್ರಣಾಮಂವ್ಯಧುಃ॥

---

೧ ೧೬-೧-೧೯೬೮ ನೇ ದಿನ.

೨ ಕಾಶೀ ಪಂಡಿತರನ್ನು.

ಓಂ

ವ್ಯಕ್ತಿತ್ವದ ವಿಕಾಸ

ಮಹಾನ್ ವ್ಯಕ್ತಿತ್ವವು ಮನುಷ್ಯ ಜೀವನದಲ್ಲಿ ಎಲ್ಲಕ್ಕಿಂತ ಹೆಚ್ಚಿನ ಆಕರ್ಷಣೆಯಾಗಿರುತ್ತದೆ. ಸೂರ್ಯನಲ್ಲಿ ಕಿರಣ, ಹೂವಿನಲ್ಲಿ ಸೌಂದರ್ಯ, ವನದಲ್ಲಿ ಹಸಿರು, ಪಕ್ಷಿಗಳಲ್ಲಿ ಬಣ್ಣದಾಕರ್ಷಕವಿರುವಂತೆ ಮನುಷ್ಯನಲ್ಲಿಯೂ ವ್ಯಕ್ತಿತ್ವದ ಆಕರ್ಷಣವಿರುವದು ಸಹಜ. ವ್ಯಕ್ತಿತ್ವವುಳ್ಳ ಮನುಷ್ಯನ ಆಕರ್ಷಣದ ತೇಜವು ಇನ್ನುಳಿದವರಿಗೆ ಪ್ರಿಯಕರ ಮತ್ತು ಲಾಭಕರ.

ಶಕ್ತಿಶಾಲಿ ವ್ಯಕ್ತಿತ್ವವನ್ನಿಟ್ಟುಕೊಂಡವರು ಕೇವಲ ಸ್ರಷ್ಟಾರರಾಗದೆ ದ್ರಷ್ಟಾರರಾಗುತ್ತಾರೆ. ಅವರು ನೋಡುತ್ತಾರೆ, ಕೇಳುತ್ತಾರೆ, ಸೃಷ್ಟಿಯನ್ನು ಮಾಡುತ್ತಾರೆ. ಇಂಥವರೆದುರಿನಲ್ಲಿ ಸಾಧಾರಣ ಮನುಷ್ಯರನ್ನು ತುಲನೆಮಾಡಿದರೆ ಭೂಮ್ಯಾಕಾಶದಷ್ಟು ಅಂತರವಾಗುತ್ತದೆ. ಸಾಧಾರಣ ಜನರ ದೃಷ್ಟಿಯಲ್ಲಿ ಇಲ್ಲದಿರುವ ಶಕ್ತಿಯು ಇವರಲ್ಲಿ ಅಡಗಿಕೊಂಡಿರುತ್ತದೆ.

ಮಹಾನ್ ವ್ಯಕ್ತಿತ್ವವು ಮನುಷ್ಯನಿಗೆ ಅಮರನಾಗಲು ಅಮೃತವನ್ನು ಕುಡಿಸುತ್ತದೆ. ಮಹಾನ್ ವ್ಯಕ್ತಿತ್ವವುಳ್ಳವರು ಮುರುಕು ಗುಡಿಸಲಿನಲ್ಲಿದ್ದರೂ ಅವರ ಆತ್ಮಿಕ ಪ್ರಕಾಶದಿಂದ ಆ ಮುರುಕು ಗುಡಿಸಲು ಸುವರ್ಣಮಂದಿರಕ್ಕಿಂತಲೂ ಹೆಚ್ಚಾಗಿ ಸುಂದರವಾಗಿ ಕಾಣಿಸುತ್ತದೆ. ವ್ಯಕ್ತಿತ್ವಶಾಲೀ ಮನುಷ್ಯರು ನಿರಂತರ ನಿರ್ಭೀತರಿರುತ್ತಾರೆ. ತಮ್ಮನ್ನು ದ್ವೇಷಿಸುವವರಿದ್ದರೂ ಅವರಿಗೆ ತುಂಬಾ ಆದರವಿತ್ತು ಗೌರವಿಸುತ್ತಾರೆ.

ಜಗತ್ತಿನಲ್ಲಿ ಪ್ರಕಾಶ ತೆಗೆದುಕೊಂಡು ಬಂದು ಮತ್ತೆ ಅಂಧಕಾರದಲ್ಲಿ ತಿರಗುವವರಿಗೆ ತುಂಬಾ ದರಿದ್ರರೆನ್ನಬಹುದು. ಜೀವನದಲ್ಲಿ ಸುಖ-ಶಾಂತಿಗಳನ್ನು ಪಡೆಯದೆ ಕೇವಲ ಬಾಹ್ಯಾಡಂಬರದಲ್ಲಿಯೇ ಕಾಲ ಕಳೆಯುವವರಿಗೆ ವ್ಯಕ್ತಿತ್ವವೆಲ್ಲಿಯದು?

ಅರಣ್ಯದಲ್ಲಿ ಸಿಂಹವು ತನ್ನ ವ್ಯಕ್ತಿತ್ವದ ಆಕರ್ಷಣದಿಂದ ರಾಜ್ಯವನ್ನಾಳುತ್ತದೆ. ಅಧೈರ್ಯ ಬರುವದು ಮತ್ತೊಬ್ಬರನ್ನು ನಾಯಕನಾಗಿ ಅವಲಂಬಿಸುವದಾದರೂ ನಮ್ಮಲ್ಲಿ ವ್ಯಕ್ತಿತ್ವವಿಲ್ಲದಿರುವದೇ ಮೂಲ ಕಾರಣ. ಇದಕ್ಕಾಗಿಯೇ ನಮ್ಮಲ್ಲಿಯ ಶಕ್ತಿಯನ್ನು ದಿನದಿನಕ್ಕೆ ಕಳೆದುಕೊಂಡು ಶಕ್ತಿಹೀನರಾಗುತ್ತಿದ್ದೇವೆ. ಮೋಹಸಾಗರದಲ್ಲಿ ಮುಳುಗುತ್ತಿದ್ದೇವೆ. ನಾವಿಲ್ಲಿ ಸ್ವಾಮಿ ವಿವೇಕಾನಂದರ ವಾಣಿಯನ್ನು ಲಕ್ಷಿಸಬೇಕು.

"Weakness is the one cause of suffering, we become miserable, we are weak. We lie, steal, kill and commit other crimes, because we are weak. We die because we are weak. Where there is nothing to weaken us there is no death nor sorrow.

Stand up, be bold, be strong. Take the whole responsibility on your own shoulders and know that you are the creator of your own destiny. All the strength and succour you want is within your senses. There fore make your own future."

(ನಮ್ಮ ನರಳುವಿಕೆಗೆ ಕಾರಣ ದುರ್ಬಲತೆಯೂ ಒಂದು. ನಾವು ದುರ್ಬಲರಿರುವವರಿಂದಲೇ ದುಃಖಾರ್ತರಾಗುವೆವು. ನಾವು ಹುಸಿ ನುಡಿಯುವದು, ಕಳವು ಮಾಡುವದು ಮತ್ತು ಇತರ ಅಪರಾಧಗಳನ್ನೆಸಗುವದು ನಮ್ಮಲ್ಲಿಯ ದುರ್ಬಲತೆಯಿಂದಾಗಿಯೇ. ಸಾವು ಕೂಡ ನಮ್ಮ ದುರ್ಬಲತೆಯಿಂದಾಗಿಯೇ ಬರುವದು. ನಮ್ಮಲ್ಲಿ ದುರ್ಬಲಗೊಳಿಸುವಂತಹದೇನೂ ಇಲ್ಲದಿದ್ದಲ್ಲಿ ಸಾವೂ ಇರುತ್ತಿರಲಿಲ್ಲ; ದುಃಖವೂ ಇರುತ್ತಿರಲಿಲ್ಲ.

ಎದ್ದೇಳಿರಿ! ದಿಟ್ಟರಾಗಿರಿ, ಸಂಪೂರ್ಣ ಹೊಣೆಯನ್ನು ನೀವೇ ಕೈಕೊಳ್ಳುವ ಬಲ ಪಡೆಯಿರಿ. ನಿಮ್ಮ ಭವಿತವ್ಯದ ನಿರ್ಮಾತೃ ನೀವೇ ಎಂಬುದನ್ನು ಅರಿಯಿರಿ. ನಿಮಗೆ ಬೇಕಾದ ಬಲ, ಯಶಸ್ಸು ನಿಮ್ಮಲ್ಲಿಯೇ ಹುದುಗಿದೆ. ಅದಕ್ಕಾಗಿ ನಿಮ್ಮ ಭವಿತವ್ಯವನ್ನು ನೀವೇ ರೂಪಿಸಿಕೊಳ್ಳಿರಿ.)

ಈ ಸಿಂಹವಾಣಿಯನ್ನಾಲಿಸಿದಾಗ ಅವರ ಆತ್ಮಶಕ್ತಿಯ ಪ್ರತಿಭೆಯಿಂದೊಡಗೂಡಿದ ಮಹೋಪದೇಶ ಕಣ್ಣೆದುರಿನಲ್ಲಿ ನಿಲ್ಲುತ್ತದೆ. ರೋಮಾಂಚನಗಳು ಏಳುತ್ತವೆ. ದಿಕ್ಕುಗಾಣವೆ ತಿರುಗುವವರಿಗೆ ಹುರುಪು ಹುಮ್ಮಸಗಳು ತುಂಬುತ್ತವೆ. ಮಲಗಿವವರನ್ನು ಎಚ್ಚರಿಸುತ್ತದೆ. ಅವರ ಅಂತಃಸ್ಫೂರ್ತಿಯ ಶಕ್ತಿಯೇ ಅಂತಹದು.

ಚಾರಿತ್ರ್ಯದ ಬಲ:

ಮನುಷ್ಯನಿಗೆ ವ್ಯಕ್ತಿತ್ವವೆಲ್ಲಿಂದ ದೊರೆಯುತ್ತದೆಂಬುದನ್ನು ಕೇಳಿದರೆ ಚಾರಿತ್ರ್ಯ ಬಲದಿಂದ ಎಂದು ಹೇಳಬಹುದು. ಮನುಷ್ಯನು ಚಾರಿತ್ರ್ಯ ಬಲದಿಂದ ತನ್ನಲ್ಲಿ ತಾನು ಮನೋಹರ ಪ್ರಕಾಶವನ್ನು ಕಾಣುತ್ತಾನೆ. ಆಗ ಆತನಿಗೆ ಜಗತ್ತಿನ ಸಮಸ್ತ ವಸ್ತುಗಳು ತುಚ್ಛವಾಗುತ್ತವೆ. ರತ್ನವನ್ನು

ಹುಡುಕುವವನು ಕಲ್ಲು ಚೂರುಗಳನ್ನೆಂದಿಗೂ ಅಪೇಕ್ಷಿಸನು. ಸಚ್ಚರಿತ್ರ ಮನುಷ್ಯನು ರಾಷ್ಟ್ರದ ರಚನೆ ಮಾಡಲು ಸಮರ್ಥನಿರುತ್ತಾನೆ. ಮೃತರಲ್ಲಿ ಜೀವನವನ್ನೂ, ಅಶಕ್ತರಲ್ಲಿ ಶಕ್ತಿಯನ್ನೂ ತುಂಬಿಕೊಡುತ್ತಾನೆ. ಆತನಿಗೆ ಅಗ್ನಿಯು ಶೀತಲ ಜಲವಾಗುವುದು. ಸರ್ಪವು ಪುಷ್ಪಮಾಲೆಯಾಗುವುದು. ಇಂಥ ಮನುಷ್ಯರ ಚರಣಗಳಲ್ಲಿ ಸಂಸಾರವು ಬಾಗುತ್ತದೆ. ಸಚ್ಚರಿತ್ರ ಮನುಷ್ಯನು ಈ ಶಕ್ತಿಕಣಗಳನ್ನು ಜಗತ್ತನ್ನೇ ಚುಂಬಕದಂತೆ ತನ್ನತ್ತ ಸೆಳೆದುಕೊಳ್ಳುತ್ತಾನೆ.

ಮನುಷ್ಯನ ಬೆಲೆ ಅವನ ಚರಿತ್ರದಲ್ಲಿದೆ. ಚರಿತ್ರದಲ್ಲಿಯೇ ಅವನಿಗೆ ಆತ್ಮಬಲದ ಪ್ರಕಾಶ ದೊರಕುತ್ತದೆ. ಧನ, ಮಿತ್ರ, ಮಾನ ಮತ್ತು ಆನಂದ ಚರಿತ್ರವುಳ್ಳ ವ್ಯಕ್ತಿಗೆ ತನ್ನಿಂದ ತಾನೇ ಹೊಂದುತ್ತವೆ. ಮೃತ್ಯುವಾದ ಮೇಲೆಯೂ ಆತನ ಕೀರ್ತಿಲತೆ ಬೆಳೆಯುತ್ತದೆ. ಸಚ್ಚರಿತ್ರ ವ್ಯಕ್ತಿಯು ಪರಜನೆಯವರ ಅಪ್ರಿಯವನ್ನೆಂದಿಗೂ ಆಶಿಸಲಾರ. ಆತನ ಚರಿತ್ರೆಯ ಪ್ರಭಾವದಿಂದ ಅನ್ಯರು ಆತನನ್ನು ಆಶ್ರಯಿಸಿ ಉದ್ಧಾರರಾಗುತ್ತಾರೆ. ಚರಿತ್ರೆ ಬಲವುಳ್ಳ ಮನುಷ್ಯನ ಶರೀರದಲ್ಲಿ ಒಂದು ಪ್ರಕಾರದ ಜೀವಿತ ಜ್ಯೋತಿಯಿದ್ದುದಕ್ಕೇನೇ ನಾವು "ಮಾನವ ಜ್ಯೋತಿ" ಎಂದು ಹೇಳುತ್ತೇವೆ. ಇದೇ ಜ್ಯೋತಿಯನ್ನು ಬೇರೆ ಬೇರೆ ರೂಪದಲ್ಲಿ ಚಿತ್ರಿಸುತ್ತಾರೆ. ಸಂಸ್ಕೃತದಲ್ಲಿ ಇದಕ್ಕೆ "ಓಜಸ್" ಎಂದು ಹೇಳುತ್ತಾರೆ. ಮುಸಲ್ಮಾನರು "ನೂರ್" ಎಂದು ಪಾಶ್ಚಾತ್ಯ ವಿದ್ವಾಂಸರು Magnetism ಮತ್ತು Human Electricity ಇತ್ಯಾದಿಯಾಗಿ ಕರೆಯುತ್ತಾರೆ.

ವಿಚಾರದ ತೆರೆಗಳು ವಿದ್ಯುತ್ತಿನ ತೆರೆಗಳಿಗಿಂತ ಅತ್ಯಂತ ಶಕ್ತಿಶಾಲಿಗಳಾಗಿವೆ. ಇದಕ್ಕಾಗಿ ಯಾವ ಮನುಷ್ಯನು ಉನ್ನತಿ, ಶಕ್ತಿ, ಉತ್ಸಾಹ ಮುಂತಾದವುಗಳನ್ನು ಮನಸ್ಸಿನಲ್ಲಿ ತುಂಬಿರುತ್ತಾನೆಯೋ ಅವನ ಜೀವನಜ್ಯೋತಿ ಅತ್ಯಂತ ಬಲವುಳ್ಳದ್ದಾಗುವದಲ್ಲದೆ ಪರಜನೆಯವರ ಕೆಟ್ಟ ವಿಚಾರಗಳು ಅವನ ಮೇಲೆ ಬೀಳಲಾರವು. ಇನ್ನಿತರರು ಅವನಿಗೆ ಕೇಡು ಬಯಸಿದರೂ ಕೇಡು ಬಯಸುವವರೇ ಬಾಧೆಗೊಳಗಾಗುತ್ತಾರೆ.

ಈಶ್ವರ ಮತ್ತು ಜಗತ್ತಿನ ಆಕರ್ಷಣವು ಜ್ಞಾನೇಂದ್ರಿಯಗಳ ಜಾಗರಣೆಯಿಂದ ಪ್ರಾಪ್ತವಾಗುತ್ತದೆ. ಈ ಆಕರ್ಷಣವು ಪ್ರತಿಭಾಶಾಲಿ ವ್ಯಕ್ತಿಗಳಲ್ಲಿ ಕವಿಯ ಕಲ್ಪನೆಯಂತೆ ವಿಲಕ್ಷಣ ಆವಿಷ್ಕಾರವುಳ್ಳದ್ದಾಗಿರುತ್ತದೆ. ಇಂದ್ರಿಯಗಳ ಜಾಗರಣವು ಮನುಷ್ಯ ಜೀವನವನ್ನು ಒಳ್ಳೇ ದಾರಿಗೆ ಒಯ್ಯುತ್ತದೆ. ಅವರ ಕಾರ್ಯಗಳು ಗುಪ್ತವಿರಲಿ ಅಥವಾ ಪ್ರಕಟವಿರಲಿ ಅವರ ಪ್ರತ್ಯೇಕ ಕಾರ್ಯಗಳು ಮನುಷ್ಯನಲ್ಲಿ ಜಾಗೃತ ಸ್ವಭಾವಗಳನ್ನು ಉತ್ಪನ್ನ ಮಾಡುತ್ತವೆ.

ಸ್ವಭಾವದ ಶಕ್ತಿಗಳು:

ಸ್ವಭಾವದ ಶಕ್ತಿಗಳು ವಿಚಿತ್ರವಾಗಿರುತ್ತವೆ. ಸ್ವಭಾವವನ್ನನುಸರಿಸಿಯೇ ವಿಚಾರಗಳು ಕೂಡಿಕೊಂಡಿರುತ್ತವೆ. ಇಂದ್ರಿಯಗಳನ್ನು ಎಚ್ಚರಿಸುವದರಲ್ಲಿ ಸ್ವಭಾವಗಳೇ ಪ್ರಧಾನ ಕಾರಣ. ನೋಡುವದು, ಕೇಳುವದು, ಓದುವದು ಇವೆಲ್ಲ ಸ್ವಭಾವಗಳಾಗಿ ಇದ್ದರೂ ಇವುಗಳೇ ಸತ್ಕಾರ್ಯದಲ್ಲಿ ಪರಿಣಿತಗೊಂಡರೆ ಇವುಗಳ ಲಾಭ ಆಗ ಗೊತ್ತಾಗುವದು. ಇವುಗಳಿಂದಲೇ ಸುಪ್ತಶಕ್ತಿಗಳು ಜಾಗೃತವಾಗುತ್ತವೆ. ಒಳ್ಳೆ ಸ್ವಭಾವವನ್ನು ಅಂಟಿಕೊಳ್ಳುವದರಿಂದ ಹಾನಿಯಾಗದೆ ಅದರಿಂದ ಸಾಕಷ್ಟು ಲಾಭವಾಗಲು ಸಂದೇಹವಿಲ್ಲ.

ಮನುಷ್ಯನಿಗೆ ಬುದ್ಧಿ, ಕಣ್ಣು, ಕಿವಿ, ಮೂಗು, ಕೈ ಮತ್ತು ನಾಲಿಗೆ ಈ ಆರು ಎಲ್ಲಕ್ಕಿಂತ ಹೆಚ್ಚಿನ ಶಕ್ತಿಯುಳ್ಳವುಗಳು. ಇವುಗಳಲ್ಲಿ ಜಾಗರಣ ಉಂಟಾಗುತ್ತಲೇ ಈ ಸಂಸಾರದ ರಹಸ್ಯ ಭೇದಗಳಿಂದ ಉನ್ನತಿಯನ್ನು ಪಡೆಯಬಹುದು. ನಮಗೆ ಭಾಗ್ಯವಿಲ್ಲವೆಂದು ಕೆಲವರು ಹೇಳುತ್ತಾರೆ. ಈ ಸಿದ್ಧಾಂತ ಪ್ರಮಾದವುಳ್ಳದ್ದು. ಮನುಷ್ಯನೇ ಕುರುಡು ದಾರಿಯಲ್ಲಿ ನಡೆಯುತ್ತಿರುವಾಗ ಭಾಗ್ಯವೇನು ಮಾಡೀತು? ಭಾಗ್ಯದ ಉದ್ಧಾರ ಆತ್ಮದ ಆನಂದದಲ್ಲಿರುತ್ತದೆ.

ಹಚ್ಚಿದ ಒಂದು ದೀಪದಿಂದ ಸಾವಿರಾರು ದೀಪಗಳನ್ನು ಹಚ್ಚಬಹುದು. ಒಳ್ಳೆಯ ಕರ್ಮಗಳನ್ನು ಆರಿಸಿಕೊಂಡವರಿಗೆ ಭಾಗ್ಯದ ಬಾಗಿಲು ತೆರೆಯುವದು. ಕೆಟ್ಟ ಕರ್ಮಗಳನ್ನನುಸರಿಸುವವರಿಗೆ ನಿರಂತರ ಕಷ್ಟ ಜೀವನದಲ್ಲಿರುವ ಪ್ರಸಂಗ ಬರಬಹುದು. ಮನುಷ್ಯ ಜೀವನದ ದೈನಿಕ ಘಟನೆಗಳನ್ನು ನಿತ್ಯ ನೋಡುತ್ತೇವೆ, ಕೇಳುತ್ತೇವೆ. ಇವುಗಳಿಂದಲೇ ಮನುಷ್ಯನಿಗೆ ಮೂಲಜ್ಞಾನ ಉತ್ಪನ್ನವಾಗುತ್ತದೆ ಮತ್ತು ಜೀವನದಲ್ಲಿ ಅನೇಕ ಮಹತ್ವಪೂರ್ಣ ಕಾರ್ಯಗಳನ್ನು ಮಾಡಲು ಸಮರ್ಥರಿರುತ್ತೇವೆ. ನಾವು ನಿತ್ಯ ದಾರಿಯಲ್ಲಿ ಹೆಣಗಳನ್ನು ನೋಡುತ್ತೇವೆ. ಆದರೆ ಮಹಾತ್ಮ ಬುದ್ಧನ ದೃಷ್ಟಿಯಲ್ಲಿ ಶುದ್ಧಿಯಿದ್ದುದಕ್ಕಾಗಿಯೇ ಆಕರ್ಷಣ ಶಕ್ತಿಯ ತೇಜ ಅವನಲ್ಲಿ ಪೂರ್ತಿಗೊಂಡಿತು. ಅವನ ದೃಷ್ಟಿ ಸೃಷ್ಟಿಯನ್ನು ಬದಲಿಸಿತು; ಜನವನ್ನು ಎಚ್ಚರಗೊಳಿಸಿತು. ದೃಷ್ಟಿ ಶುದ್ಧಿಯ ಬಲದಿಂದಲೇ ಅಂದಿನ ಶಿವ ಶರಣರು ಇಂದಿಗೂ ನಮ್ಮ ಚಿತ್ತ ಪಟಲದಲ್ಲಿ ಚಿತ್ರಿತರಾಗಿದ್ದಾರೆ. ಅವರು ಕಣ್ದೆರೆದು ಕೆಲಸ ಮಾಡಿದ್ದಕ್ಕಾಗಿಯೇ ಅವರ ವ್ಯಕ್ತಿತ್ವ ಆಕರ್ಷಕವಾಗಿದೆ. ಸೋತ್ಕರ್ಷವಾಗಿದೆ.

ರಷ್ಯಾದ ಪ್ರವರ್ತಕನಾದ ಮ್ಯಾಕ್ಸಿಮ್ ಗೋರ್ಕಿಯು "ಅಪರಿವರ್ತಿತ ಅವಸ್ಥೆಯಲ್ಲಿರುವದು ತುಂಬಾ ದುಃಖಮಯವಾದದ್ದು. ಈ ಅವಸ್ಥೆ ಇದ್ದು, ಒಂದುಪಕ್ಷ ನಮ್ಮ ಹೃದಯ ಸಾಯದಿದ್ದರೆ ಆ ಪರಿಸ್ಥಿತಿಯು ಮತ್ತಷ್ಟು

ದುಃಖದಾಯಕ" ಎಂದು ಹೇಳಿದ್ದಾನೆ. ಇದು ತುಂಬಾ ಸತ್ಯ. ಮನುಷ್ಯನು ತನ್ನ ಅನಂತಶಕ್ತಿಯ ಮೇಲೆ ಅಧಿಕಾರ ಮಾಡುತ್ತಾನೆ.

ಆಕರ್ಷಣ ಶಕ್ತಿ:

ಜಗತ್ತಿನ ನಾಲ್ಕೂ ದಿಕ್ಕಿನಲ್ಲಿ ಆಕರ್ಷಣ ಶಕ್ತಿಯು ಪ್ರಕಾಶವಿರುತ್ತದೆ. ಎಲ್ಲಿಯವರೆಗೆ ಅದನ್ನು ನಾವು ಗುರುತಿಸುವದಿಲ್ಲವೋ ಅಲ್ಲಿಯವರೆಗೆ ನಮ್ಮ ಶಕ್ತಿಗಳು ಬಿದ್ದ ಹೆಣದಂತೆಯೇ. ಹೂವನ್ನು ನಮ್ಮ ಜೇಬಿನಲ್ಲಿ ಇಟ್ಟುಕೊಂಡು ಅದರ ಸುಗಂಧ ಸೇವಿಸದಿದ್ದರೆ ನಾವು ದುರ್ಭಾಗ್ಯರು. ನಮ್ಮ ಎಡೆ ಬಟ್ಟಲದಲ್ಲಿ ಸ್ವಾದಿಷ್ಟ ಭೋಜನವಿದ್ದು, ಅದನ್ನು ಸೇವಿಸಿ ಸುಖಪಡೆಯದಿದ್ದರೆ ನಮ್ಮ ದೋಷ ವಲ್ಲದೆ ಮತ್ತಾರದು?

ನ್ಯೂಟನ್ನನು "ನಾನು ನನ್ನ ವಿಷಯವನ್ನು ನಿರಂತರ ನನ್ನೆದುರು ಇಟ್ಟುಕೊಳ್ಳುತ್ತೇನೆ. ಸಾವಧಾನದಿಂದ ಅದರ ಅಂಧಕಾರವನ್ನು ನಾಶಮಾಡಿ ನನ್ನ ಮಾರ್ಗದಲ್ಲಿ ಬೆಳಕನ್ನು ತಂದುಕೊಳ್ಳುತ್ತಿದ್ದೇನೆ" ಎಂದು ಹೇಳುತ್ತಿದ್ದನಂತೆ. ಯಾವದೇ ಕೆಲಸವನ್ನು ಶಕ್ತಿಯೊಡಗೂಡಿ ಮಾಡುವದರಲ್ಲಿಯೇ ಸಫಲತೆಯೇ ಹೊರತು ಕೇವಲ ಹಾಹಾಕಾರ ಎಬ್ಬಿಸುವದರಲ್ಲಿ ಅಲ್ಲ.

ಮನುಷ್ಯನ ಚಿತ್ತದಲ್ಲಿ ಒಂದು ವಿಲಕ್ಷಣ ಮತ್ತು ವಿಚಿತ್ರ ಜಗತ್ತು ಸ್ಥಾಪಿತವಾಗುತ್ತಿದೆ. ಅದರಲ್ಲಿ ಮೃದುವಾದ ಗುಲಾಬಿ ಹೂಗಳಿಂದ ಹರಡಿರುವ ಆಕರ್ಷಕ ಉದ್ಯಾನಗಳಿದ್ದಾವೆ. ಆ ಉದ್ಯಾನದಲ್ಲಿ ಮೃತ್ಯುವಿನಂತೆ ಅಂಧಕಾರವುಳ್ಳ ಭಯಾನಕ ನಿರಾಶೆಯ ಭಾವಿಗಳಿದ್ದಾವೆ. ಅದರ ಆಳವನ್ನು ನೋಡುತ್ತಲೇ ಹೃದಯ ಕಂಪಿಸುತ್ತದೆ ಮತ್ತು ಆ ಉದ್ಯಾನದಲ್ಲಿ ತ್ಯಾಗ ಮತ್ತು ಸಹಾನುಭೂತಿ ಮುಂತಾದವುಗಳಿಂದ ತುಂಬಿ ಹರಿಯುತ್ತಿರುವ ಪ್ರೇಮದ ಹಳ್ಳಗಳಿದ್ದಾವೆ. ಅದರಲ್ಲಿ ದ್ವೇಷ, ಅಸತ್ಯ, ಅಭಿಮಾನ, ಇಂದ್ರಿಯ ಲೋಲುಪತೆ ಇತ್ಯಾದಿಗಳಿಂದ ತುಂಬಿರುವ ನರಕವೂ ಅದೆ. ಅದರಲ್ಲಿ ಸತ್ಯ, ಸಂತೋಷ, ಭಕ್ತಿ ಮತ್ತು ನಮ್ರತೆಯ ಸ್ವರ್ಗವು ಕೂಡ ಪ್ರಕಾಶಿಸುತ್ತಿರುತ್ತವೆ.

ಈ ಮನುಷ್ಯನ ಚಿತ್ತದಲ್ಲಿ ಎಲ್ಲವೂ ಇದ್ದು ಕೆಟ್ಟದ್ದನ್ನು ಬಿಟ್ಟು ಒಳ್ಳೆಯದನ್ನು ಹಿಡಿಯುವದರಲ್ಲಿ ಜಾಣ್ಮೆಯಿದೆ, ತಾಳ್ಮೆಯಿದೆ, ಶಕ್ತಿಯಿದೆ. ಅಂತೆಯೇ ಹಿರಿಯರು "ಒಂದು ಬಿಟ್ಟು ಒಂದು ಹಿಡಿ" ಎಂದು ಅನುಭವವಾಣಿಯಿಂದುಸುರಿದ್ದಾರೆ. ನಮ್ಮ ಜೀವನದಲ್ಲಿ ಜ್ಯೋತಿ ತುಂಬಬೇಕಾಗಿದೆ, ಶಕ್ತಿಗಳಿಸಬೇಕಾಗಿದೆ. ವ್ಯಕ್ತಿತ್ವವನ್ನು ವ್ಯಕ್ತಮಾಡಬೇಕಾಗಿದೆ, ಶಕ್ತಿಗಳಿಸಬೇಕಾಗಿದೆ. ಅದಕ್ಕಾಗಿ ಕಲುಷಿತ ಭಾವನೆಗಳನ್ನು ಹೊರಗೊಗೆದರೆ ತನ್ನಿಂದ ತಾನೆ ಆಕರ್ಷಕವಾಗುತ್ತದೆ. ಅಲ್ಲದೆ ನಾವು ವಿಶಾಲ ಮನೋಭಾವದವರಾಗಬೇಕು. ಹೊರಗಿನ ವಿಶಾಲ ವಿಚಾರಗಳನ್ನು

ಅರಿತುಕೊಳ್ಳಬೇಕು. ಬದಲಾದ ಜಗತ್ತಿನ ಕೂಡ ಸಾಗಬೇಕು. ಹಳೇ ಪದ್ಧತಿಗೆ ಹೊಸ ವಿಚಾರಗಳನ್ನು ಅನ್ವಯಿಸಬೇಕು. ಆದರೆ ಇದಾವುದು ಆಂತರಿಕ ವಿಚಾರಕ್ಕೆ ಬಾಧೆ ಬರದಂತೆ ನಡೆಯಬೇಕು. ಇದರಿಂದ ಮನುಷ್ಯ ಜೀವನದಲ್ಲಿ....ಸ್ಫೂರ್ತಿ ಬರುತ್ತದೆ. ಈ ಶಕ್ತಿಗಾಗಿ ನಿರಂತರ ಪರಿಶ್ರಮ ಪಟ್ಟಲ್ಲಿ ಅದರ ಸಫಲತೆ. ಶಕ್ತಿ ಸಿದ್ಧಿಗಾಗಿ ಈ ಕಿವಿನುಡಿಗಳು ನಮಗೆ ಆಕರ್ಷಕವಾಗಲಿ! ದಾರಿದೀಪಗಳಾಗಲಿ!

ಉತ್ತಿಷ್ಠತ, ಜಾಗ್ರತ ಪ್ರಾಪ್ಯವರಾನ್ನಿಬೋಧತ!

"Arise! Awake! and stop not
till the goal is reached!"

೧೯೫೭ ರಂದು ಶ್ರೀ ಶಿವಯೋಗಮಂದಿರದಲ್ಲಿ ಸಾಧಕರನ್ನುದ್ದೇಶಿಸಿ ಅಪ್ಪಣೆ ಕೊಡಿಸಿದ ಆಶೀರ್ವಚನ.

ಸಾಹಿತ್ಯ ಮತ್ತು ಮನೋವಿಜ್ಞಾನ

ಚೇತನ ವರ್ಗದ ಪ್ರತಿಯೊಂದು ಗತಿವಿಧಿಯಲ್ಲಿಯೂ "ಮನೋಯೋಗ"ದ ಸುಲಭ ಯೋಗವು ಅತ್ಯಂತ ಅಪೇಕ್ಷಿತವಾದುದು. ಜ್ಞಾನ, ಸಂವೇದನೆ ಮತ್ತು ಇಚ್ಛೆ ಈ ಮೂರು ಮನದ ಶಕ್ತಿಗಳು; ಜಾಗ್ರತ ಕಾಲದಲ್ಲಿ ಯಾವಾಗಲೂ ಸಕ್ರಿಯವಾಗಿರುತ್ತವೆ. ವಿಷಯವು ಸಂವೇದ್ಯವಾಗುತ್ತದೆ. ನಂತರ ಇಚ್ಛಾಶಕ್ತಿಯಿಂದ ವಿಷಯ ಸಂಪಾದನೆಯ ಕಾರ್ಯದಲ್ಲಿ ಪ್ರವೃತ್ತನಾಗುತ್ತಾನೆ. ಇಚ್ಛಾಶಕ್ತಿಯ ಸಮ್ಯಕ್ ಸ್ಫುರಣೆಯಿಂದ ಕರ್ಮೇಂದ್ರಿಯ ಮತ್ತು ಜ್ಞಾನೇಂದ್ರಿಯಗಳಲ್ಲಿ ಸ್ಪಂದನವುಂಟಾಗಿ ಇಂದ್ರಿಯಗಳೆಲ್ಲವೂ ವಿಷಯೋನ್ಮುಖವಾಗುತ್ತವೆ. ಈ ಕಾರಣ ಶರೀರ ವಿಭಿನ್ನ ಅವಯವಗಳಲ್ಲಿ ಕಾರ್ಯಕ್ಷಮತೆಯು ಜಾಗರೂಕವಾಗಿರುತ್ತವೆ. ಮನೋಯೋಗವು ವಿಷಯ ವಿರತವಾದಾಗ ನಾವು ಸರ್ವಥಾ ನಿರ್ವ್ಯಾಪಾರ, ನಿಶ್ಚೇಷ್ಟ ಮತ್ತು ಜ್ಞಾನ ಶೂನ್ಯವಾದ ಸ್ಥಿತಿಯನ್ನು ಅನುಭವಿಸುತ್ತೇವೆ. ಇದಕ್ಕೆ ಭಾರತೀಯ ತತ್ವಜ್ಞರು ಸುಷುಪ್ತಿಯೆಂದು ಹೇಳುತ್ತಾರೆ. ಮನ, ಇಂದ್ರಿಯಗಳು ಮತ್ತು ಸುಖ ದುಃಖ, ಹರ್ಷ ವಿಸ್ಮಯ, ಶ್ರದ್ಧಾ ಪ್ರೇಮ ಮುಂತಾದ ಆಂತರಿಕ ಭಾವಗಳು, ಇವುಗಳ ಪರಸ್ಪರ ಸಂಬಂಧದ ಸೂಕ್ಷ್ಮ ವಿವೇಚನೆಗೆ 'ಮನೋವಿಜ್ಞಾನ' ಎಂದು ಹೆಸರು.

ವಿಷಯಗಳ ಸಾಮಾನ್ಯ ಜ್ಞಾನವಾದ ನಂತರ ಅವುಗಳ ವಿವೇಚನೆ ಮತ್ತು ವಿಶ್ಲೇಷಣದಿಂದ ಒಂದು ವಿಶಿಷ್ಟ ಮತ್ತು ವ್ಯಾಪಕ ವ್ಯಾಪ್ತಿಯನ್ನು ಹೊಂದಿ, ಅದರ ಮೂಲಕ ಒಂದು ಸುಸ್ಥಿತ ಅನುಮಾನಾತ್ಮಕ ಜ್ಞಾನವನ್ನು ಹೊಂದುವುದು, ತರ್ಕ ವಿಜ್ಞಾನ ಕೋಟಿಯಲ್ಲಿ ಬರುತ್ತದೆ. ಮಾನವ ಶರೀರವು ಪೃಥಿವ್ಯಾದಿ ಪಂಚ ಭೌತಿಕ ಉಪಾದಾನಗಳ ಸಂಗ್ರಹವಾಗಿದೆ. ಆದ್ದರಿಂದ ಈ ಪ್ರಪಂಚ ತತ್ವಗಳ ಸ್ಥಿತಿ, ಉತ್ಪತ್ತಿ ಮತ್ತು ವಿಲಯ ಮೊದಲಾದವುಗಳು ಭೌತಿಕ ವಿಜ್ಞಾನದ ವಿಷಯಗಳಾಗಿವೆ.

ಸಾಹಿತ್ಯ:

ಸಮಾಜದ ಉತ್ಥಾನ, ಪತನ, ಸುಖ ದುಃಖ, ಸ್ಮಯ ವಿಸ್ಮಯ, ಶ್ರದ್ಧಾ, ಕೋಪ ಇವೆಲ್ಲವೂ ಜೀವನದ ಸಮಸ್ತ ಅನುಭೂತಿಗಳು. ಕವಿಯು ತನ್ನ ಅಪ್ರತಿಮ ಪ್ರತಿಭೆಯ ಕೌಶಲ್ಯದಿಂದ ಜೀವನದ ಪ್ರಖರತರ ಘಟನೆಗಳನ್ನು ತನ್ನ ರಾಗಾತೀತ ವೃತ್ತಿಯ ಸಹಾಯದಿಂದ ಕಲ್ಪನೆಯ ಮೋಹಕ ವಸ್ತ್ರವನ್ನು ಹೊದಿಸಿ, ಬುದ್ಧಿ ವೈಭವದೊಡನೆ ಸಮಾಜದ ಜನರೆದುರು, ಸಜೀವ ಚಿತ್ರಗಳನ್ನಾಗಿ ತೆರೆದಿಡಲು, ಪ್ರತಿಯೊಬ್ಬ ರಸಿಕನ ಹೃದಯಕಮಲವು ವಿಕಸಿತ

ವಾಗುತ್ತವೆ. ಆಸ್ವಾದಕನ ಮನೋಭಾವಗಳು ಹೊರ ಹೊಮ್ಮುತ್ತವೆ. ಕಣ್ಣೀರು ಹರಿಯುತ್ತವೆ. ರಸಿಕರು ಆ ಮಹಾನಂದನವನ್ನು ಮನದಣಿ ತಣಿದು ನಿತ್ಯ ತೃಪ್ತರಾಗುತ್ತಾರೆ. ಕವಿಯ ಈ ಶಾಶ್ವತ ಮನನೀಯ ಪ್ರಯಾಸವನ್ನು ನೋಡಿ ಸಮಾಜವು ತನ್ನ ಹಾರ್ದಿಕ ಕೃತಜ್ಞತೆಯನ್ನು ಈ ವಚನದಲ್ಲಿ ವ್ಯಕ್ತ ಮಾಡಿದೆ. "ಕವಿರ್ಮನೀಷೀ ಪರಿಭೂಃ। ಸ್ವಯಂಭೂಃ।"

ಸಾಹಿತ್ಯಕಾರ ಅಮರ ಜೀವನ ದರ್ಶನದ ಸೃಷ್ಟಿಕರ್ತ. ಹೊಸ ವಿಶ್ವದ ಅದ್ವಿತೀಯ ವಿಧಾತ, ರವಿ ಕಾಣದ್ದನ್ನು ಕವಿಯು ಕಾಣಬಲ್ಲ ಅಂತೆಯೇ ಅವನು ಸೂಕ್ಷ್ಮದರ್ಶಿ, ತತ್ವದರ್ಶಿ, ಮತ್ತು ಸ್ವಯಂ ಪ್ರಜ್ಞ.

ಜೀವನದರ್ಶನದ ಪ್ರಶ್ನೆಯೇ ಮೂಲತಃ ಮನೋವೈಜ್ಞಾನಿಕವಾದುದು. ಆದರೆ ಮಾನವ ಸಹಜ ಭಾವಗಳನ್ನು ಜಾಗೃತ ಮತ್ತು ನವ ನಿರ್ಮಿತಗಳನ್ನಾಗಿ ಮಾಡುವ ಕಾರ್ಯದಲ್ಲಿ ಸಾಹಿತ್ಯವು ಮನೋವಿಜ್ಞಾನಕ್ಕಿಂತಲೂ ನೂರ್ಮಡಿ ಮುಂದು ವರೆದು ಮನನೀಯವಾಗಿದೆ. ಮನೋವಿಜ್ಞಾನವು ಎಲ್ಲ ಮಾನಸಿಕ ವ್ಯಾಪಾರಗಳು ಸೂಕ್ಷ್ಮಾತಿ ಸೂಕ್ಷ್ಮ ವಿಶ್ಲೇಷಣಾತ್ಮಕ ವಿವೇಚನೆಯಲ್ಲಿಯೇ, ಪರಿ ಸಮಾಪ್ತಿಯನ್ನು ಹೊಂದಿದರೆ, ಸಾಹಿತ್ಯವು ಮಾನವನ ಎಲ್ಲ ಚಿತ್ತ ವೃತ್ತಿಗಳಿಗೆ ನವ ಚೈತನ್ಯವನ್ನು ಕೊಡಬಲ್ಲುವ ಪರಮಧ್ಯೇಯವನ್ನು ಸಾಧಿಸಿ ಅಮರವಾಗುತ್ತದೆ. ವಿವೇಚನೆ ಮಾನಸ ಶಾಸ್ತ್ರದ ಸರ್ವಸ್ವ. ಆದರೆ ಅನುಭೂತಿಯೇ ಸಾಹಿತ್ಯದ ಜೀವಾಳ. ಸಾಹಿತ್ಯದ ಭವ್ಯ ಪ್ರಾಸಾದವು ಭಾವ ಭೂಮಿಯ ಮೇಲೆ ಆಧಾರಿತವಾಗಿರುವದ ರಿಂದಲೇ ಮನೋವಿಜ್ಞಾನವು ಸಾಹಿತ್ಯದ ಒಂದು ಅವಶ್ಯಕ ಅಂಗವಾಗಿದೆ.

ಮನೋವಿಜ್ಞಾನ :

ಭಾರತೀಯ ದಾರ್ಶನಿಕರೆಲ್ಲರೂ ಮನೋವೈಜ್ಞಾನಿಕರೇ. ವೈದಿಕ ಷಡ್ ದರ್ಶನಾಚಾರ್ಯರನ್ನು ಮೊದಲುಗೊಂಡು ಚಾರ್ವಾಕ, ಜೈನ, ಬೌದ್ಧ ಮೊದಲಾದ ಅವೈದಿಕ ದಾರ್ಶನಿಕರೂ ತಮ್ಮ ತತ್ವ ವಿವೇಚನೆಯಲ್ಲಿ ಅಂತಃಕರಣ, ಮನಸ್ಸು, ಬುದ್ಧಿ ಮತ್ತು ಅಹಂಕಾರ ಈ ಎಲ್ಲ ಚಿತ್ತ ವೃತ್ತಿಗಳ ನಿರ್ದೇಶನವನ್ನು ಮಾಡಿ ದ್ದಾರೆ. ಸದಸದ್ವಿವೇಕದಿಂದ ಬುದ್ಧಿಯು ಮಾನಸಿಕ ಸಂಕಲ್ಪ ವಿಕಲ್ಪಾತ್ಮಕ ಭಾವ ಗಳಿಗೆ ನಿಶ್ಚಯಾತ್ಮಕ ರೂಪವನ್ನು ಕೊಡುತ್ತದೆ. ಬುದ್ಧಿ ಪೂರ್ವಕ ನಿಗ್ರಹವಿಲ್ಲದ ಚಿತ್ತ ವೃತ್ತಿಯು ರಾಗಾತ್ಮಕವಾಗಿ ಸುಖ–ದುಃಖಗಳ ದ್ವಂದ್ವಗಳಲ್ಲಿ ಬಿದ್ದು ಬಳಲು ತ್ತದೆ. ಮಾನವನು ಬಿಟ್ಟುದೀರದ ಮರುಳಾಗುತ್ತಾನೆ. ಮಾನವನಿಗೆ ನಿತ್ಯ ಶಾಂತಿಯನ್ನೀಯುವದೇ ಎಲ್ಲ ದರ್ಶನಗಳ ಪರಮಲಕ್ಷ್ಯ. ಮುಕ್ತಿ, ನಿಶ್ರೇಯ, ನಿರ್ವಾಣವೇ ಎಲ್ಲ ಶಾಸ್ತ್ರಗಳ ಚರಮಗುರಿ ಆದರೆ ಈ ದರ್ಶನಗಳ ಆತ್ಮ, ಅನಾತ್ಮ, ನಿವೃತ್ತಿ ಮತ್ತು ಪ್ರವೃತ್ತಿ ವಾದಗಳು ಎಷ್ಟು ಗಹನ ಮತ್ತು ಗಾಂಭೀರ್ಯ

ವಾದವು. ಆದರೂ ಆತ್ಮ ಅನಾತ್ಮ ಸಂಬಂಧವು ಕ್ಷೇತ್ರ ಕ್ಷೇತ್ರಜ್ಞರ ರೂಪದಲ್ಲಿ ಅನ್ಯೋನ್ಯವಾಗಿ ಅನುಸ್ಯೂತವಾಗಿದೆ. ಅಧ್ಯಾತ್ಮ ಭೌತಗಳು ಪರಸ್ಪರ ಸಾಧ್ಯ ಸಾಧನೆಗಳಾಗಿ ಹೊಂದಿಕೊಂಡಿವೆ. ಇಂದಿನ ಪಾಶ್ಚಾತ್ಯ ತತ್ವಜ್ಞಾನಿಗಳೂ ಮಾನವನು ಶರೀರ ಮತ್ತು ಆತ್ಮಗಳ ಸಂಯೋಗರೂಪವೆಂದು ಸಾರಿ ಹೇಳಿದ್ದಾರೆ.

ಸಮನ್ವಯ :

ಶರೀರ ವಿಶ್ಲೇಷಣವು ಭೌತಿಕ ವಿಜ್ಞಾನದ ವಿಷಯ. ಮನೋವಿಶ್ಲೇಷಣೆಯು ಮನೋವಿಜ್ಞಾನದ ವಸ್ತು. ಆತ್ಮ ಸಾಕ್ಷಾತ್ಕಾರವೇ ಅಧ್ಯಾತ್ಮ ವಿದ್ಯೆಯ ಧ್ಯೇಯ. ಇವೆಲ್ಲವುಗಳ ಸಮನ್ವಯವನ್ನು ಸಾಹಿತ್ಯದಲ್ಲಿ ಕಾಣುತ್ತೇವೆ.

“ವಾಕ್ಯಂ ರಸಾತ್ಮಕಂ ಕಾವ್ಯಂ” ಕಾವ್ಯವು ರಸಾತ್ಮಕವಾದುದು. “ರಸೋ ವೈ ಸಃ” ರಸವೇ ಆನಂದ. ಪರಮಾನಂದವೇ ಸಾಹಿತ್ಯದ ಪರಿಪಾಕ. ಈ ಆನಂದವು ಆತ್ಮ ಸಂವೇದ್ಯವಾದುದು. ರಸವು ಕಾವ್ಯದ ಆತ್ಮ ಅಂತೆಯೇ ವಸ್ತುವು ಕಾವ್ಯದ ಶರೀರ. ಭೌತಿಕತೆಯಲ್ಲಿಯು ಸತ್ಯ ಸೌಂದರ್ಯಗಳ ದಿವ್ಯದರ್ಶನವನ್ನು ಹೊಂದುವದು ಸಾಹಿತ್ಯದ ಸತ್ಯಸಂಕಲ್ಪ. ಅಮರ ಕಲಾಕಾರನ ಕಲಾಕೃತಿಯಲ್ಲಿ ಐಹಿಕ ಸೌಂದರ್ಯಗಳೂ ಭಗವದ್ವಿಲಾಸಗಳಾಗಿಯೇ ತೋರುತ್ತವೆ. ಪ್ರತಿಭಾಶಾಲಿ ಕವಿಯ ದಿವ್ಯದೃಷ್ಟಿಯಲ್ಲಿ “ಐಹಿಕ ಸೌಂದರ್ಯ ಭಾವ ಸೌಂದರ್ಯಗಳೇ ವಿಶ್ವ ಸತ್ಯದ ಗುಡಿಯ ಗೋಪುರದಿಂದ ದೂರಕ್ಕೆ ಕಾಣಬರುವ ಬೆಳಕಿನ ಕಿರಣಗಳು.” ಈ ಮಿತ ಸೌಂದರ್ಯದ ಸುಳುಹಿಡಿದು ಮಾನವನು ಜೀವನದಲ್ಲಿಯೂ “ಅಮಿತ ಸೌಂದರ್ಯದ” ಎಲ್ಲೆಯನ್ನು ಮುಟ್ಟಬೇಕು! ಅಳುಕಿನ ಬಾಳನ್ನು ಸೊಗಯಿಸಿ ಬೆಳಗಿಸಲು ಬುದ್ಧಿಯಿಂದಲೂ ಬಾಹುಬಲದಿಂದಲೂ ಹೋರಾಡಬೇಕು. ಉತ್ಸಾಹ ಧೈರ್ಯ ಶ್ರದ್ಧೆಗಳಿಲ್ಲದ ಮಾನವನು ಈ ಜೀವನದ ಸಂಘರ್ಷಣದಲ್ಲಿ ವಿಜಯಿಯಾಗಲಾರನು.

ಧೃತಿ, ದೀಪ್ತಿ ಮತ್ತು ವಿಕಾಸ :

ಜೀವನದ ಪ್ರೇಮಮಯ ಲಾಲಸೆಯಿಂದ ಉತ್ಪನ್ನವಾದ ಧೃತಿಯು ಜೀವನದ ಕರುಣಾ ಕಲಿತ ವ್ಯಾಪಾರಗಳ ನಿರೀಕ್ಷಣೆ ಮಾಡುತ್ತ ವಿರಕ್ತತೆಯ ಚರಮ ಸೀಮೆಯನ್ನೂ ತಲುಪುತ್ತದೆ. ಪರಬ್ರಹ್ಮಪ್ರಾಪ್ತಿಗಾಗಿ ಸರ್ವಸಾಧನೆಗಳಲ್ಲಿ ಸಾಂಸಾರಿಕ ವಿಷಯಗಳ ಅವಹೇಳನವೇ ಅವಶ್ಯಕವಾಗಿದ್ದರೂ ಧೃತಿಯಲ್ಲಿ ಮಾತ್ರ ಮಾಧುರ್ಯ ಭಾವದ ಅಪೂರ್ವ ಅಭಿವ್ಯಕ್ತತೆಯು ಸಹಜವಾಗಿದೆ. ಜೀವನದಲ್ಲಿ ಸಾಧನೆಯು ಪ್ರಥಮಾವಸ್ಥೆಯಿಂದ ಮೊದಲುಗೊಂಡು ಸಿದ್ಧಿಯ ಪರಿಪೂರ್ಣತೆಯವರೆಗೂ ಸಾಧಕನು ವಿಘ್ನದ ಬಾಧೆಯನ್ನು ಎದುರಿಸಬೇಕಾಗುತ್ತದೆ. ವಿಕಾರಗಳ ಕರ್ಮ

ಕ್ಕಾಗಿಯೇ ಸಾಧಕನ ಮನೋವೃತ್ತಿಯು ಉತ್ತೇಜನದ ಚರಮ ಸೀಮೆಯನ್ನು ತಟ್ಟಿ ಹಿಂತಿರುಗಬೇಕಾಗುತ್ತದೆ. ಒಟ್ಟಿನಲ್ಲಿ ಅಕಲ್ಯಾಣದಿಂದ ಕಲ್ಯಾಣದ ಭೂಮಿಯ ವರೆಗೂ ಮುಟ್ಟಿಸಿ ಚಿರಶಾಂತಿಯನೀಯುವ ವೃತ್ತಿಯನ್ನೇ ನಾವು "ದೀಪ್ತಿ" ಎಂದು ಕರೆಯುವದು. "ವಿಕಾಸವು" ಚಿತ್ತದ ಒಂದು ಸಹಜ ಭಾವವಾಗಿದ್ದರೂ ಹಾಸ್ಯ ಮತ್ತು ವಿಸ್ಮಯಗಳ ಕಾಲದಲ್ಲಿಯೂ ಪರಿಪಕ್ವಾವಸ್ಥೆಯನ್ನು ಹೊಂದುತ್ತದೆ.

ಕಾವ್ಯದಲ್ಲಿ ಬರಿಯ ಅಲಂಕಾರ ಚಾತುರ್ಯ, ಮಾಧುರ್ಯ, ಓಜ ಮತ್ತು ಪ್ರಸಾದ ಗುಣಗಳ ಮೂಲಕ ಕಾವ್ಯದ "ಬಹಿರಂಗ ಶೃಂಗಾರ" ಮಾಡಿ ಜನರ ಮನ ಮೋಹಿಸಿ ಕೇವಲ ಖ್ಯಾತಿಯನ್ನು ಪಡೆಯುವದರಲ್ಲಿಯೇ ಕವಿಯು ಕಲೆಯು ಕೃತ ಕೃತ್ಯವಾಗಿರದೆ, ಕಾವ್ಯದಲ್ಲಿ ಜನ ಜೀವನದ ಸತ್ಯ ಸೌಂದರ್ಯಗಳನ್ನು ಪ್ರತಿಬಿಂಬಿಸಿ, ಅಂತಶ್ಚೈತನ್ಯವನ್ನಿತ್ತು; ಅಮೃತತ್ವವನ್ನೇ ಸೂರೆಗೈಯ್ಯುವದು ಕಲೆಯ ಏಕ ಮಾತ್ರ ಧ್ಯೇಯವಾಗಿರಬೇಕು. ಇಂತಹ ಕಲೆಯನ್ನು ಸಾಧಿಸದ ಕವಿಯು ಪ್ರತ್ಯಕ್ಷ ಜನಜೀವನದ ಸತ್ಯ ರಹಸ್ಯವನ್ನು ನೋಡಿ ಅರಿಯುವದೆಂತು? ಕವಿಯು ಕಾವ್ಯದಲ್ಲಿ ಜನಜೀವನವನ್ನು ಸಜೀವವಾಗಿರಿಸಬೇಕಾದರೆ ಮಾನವನ ಮನೋಭಾವನೆಗಳು, ಅಪೂರ್ವ ಪರಿಜ್ಞಾನವು ಅವನಿಗೆ ಪರಮಾವಶ್ಯಕ. ಕವಿಯ ಕಾವ್ಯಕ್ಕೆ ಕಳೆಬರು ವದು, ಅವನ ಆಳವಾದ ಲೋಕಾನುಭವದಿಂದ. ಮಾನವನ ಜೀವನದ ಸೂಕ್ಷ್ಮಾತಿ ಸೂಕ್ಷ್ಮ ಮತ್ತು ಮರ್ಮಸ್ಪರ್ಶ ಘಟನೆಗಳನ್ನು ಕಲಾತ್ಮಕವಾಗಿ ಚಿತ್ರಿಸುವ ಕವಿಯೇ ಮಹಾಕವಿ. ಇಂತಹ ಕವಿಯೇ ಸಮಾಜದ ಸಂಸ್ಕೃತಿಯ ಸತ್ಯ ಪ್ರಸಾರಕನಾಗಿ ಸಮಾಜದ ದೇಶದ ಲೋಕಪ್ರಿಯ ಪ್ರತಿನಿಧಿಯಾಗಿ ಬಾಳುತ್ತಾನೆ. ವಾಲ್ಮೀಕಿ, ರನ್ನ, ಪಂಪ, ಹರಿಹರ, ಹೋಮರ, ಶೇಕ್ಸಪೀಯರ್, ಕಾಳಿದಾಸ ಮೊದಲಾದ ಕವಿ ಗಳು ಈ ಕೋಟಿಯಲ್ಲಿ ಅಗ್ರಗಣ್ಯರು. ನವನವೋನ್ಮೇಷ ಶಾಲಿನಿ ಪ್ರಜ್ಞೆಯೇ ಪ್ರತಿಭೆ. ಪ್ರತಿಭೆ ಕವಿಯ ಕಲಾತತ್ವ. ಅಲೌಕಿಕ ಶಕ್ತಿ. ಅದುವೇ ಜನರ ಮನೋಭಾವಗಳನ್ನು ಗ್ರಹಿಸಿ, ಪರಿಷ್ಕರಿಸುವ ಪರುಷಮಣಿ. ಇಂತು ಸಾಹಿತ್ಯದಲ್ಲಿ ಮನೋವಿಜ್ಞಾನವು ಕ್ಷೀರದಲ್ಲಿ ನವನೀತದಂತೆ ಕೂಡಿಕೊಂಡಿದೆ. ಮನೋ ವಿಜ್ಞಾನದ ಅಭ್ಯುನ್ನತಿಯಲ್ಲಿ ಸಾಹಿತ್ಯ ನಿತ್ಯ ಸಹಕಾರ ಸಾಹಿತ್ಯರಸಾಸ್ವಾದನೆಯೇ ಮಾನವನ ಮಹೋನ್ನತ ದರ್ಶನ ಜೀವನದುನ್ನತಿಯ ಸೋಪಾನ. ಇದೇ ನಮ್ಮ ಬಾಳಿಗೆ ದಾರಿದೀಪ. ಇದರಿಂದಲೇ ಶಕ್ತಿ ಮತ್ತು ಮುಕ್ತಿ.

[illegible] ರಂದು ಶ್ರೀ ಶಿವಯೋಗಮಂದಿರದಲ್ಲಿ ಜರುಗಿದ ಸಾಹಿತ್ಯಗೋಷ್ಠಿಯಲ್ಲಿ ಅಧ್ಯಕ್ಷಸ್ಥಾನದಿಂದ ಅರ್ಪಣೆಕೊಡಿಸಿದ ಆಶೀರ್ವಚನ.

ಶ್ರೀ ನಿಜಗುಣ ಶಿವಯೋಗಿ

ಕನ್ನಡ ನಾಡಿನ ಹಿರಿಮೆ ಬೆಳೆದು ಬೆಳಗಬೇಕಾದರೆ ನಾಡಿನಲ್ಲಿರುವ ಶಿವಯೋಗಿಗಳೇ ಕಾರಣರು. ಅವರ ಅಂತಃಶಕ್ತಿಯ ಕಿರಣಗಳು ನಾಡಿನ ಮೂಲೆ ಮೂಲೆಯಲ್ಲಿಯೂ ಪ್ರಸರಿಸಿ ಜನಜೀವನವನ್ನು ಚೇತರಿಸುತ್ತವೆ. ಅವರು ತಮ್ಮ ಅನುಭವ ಸಂಪತ್ತನ್ನು ಜನತೆಯ ಉದ್ಧಾರಕ್ಕಾಗಿ ಬಿಟ್ಟು ಹೋಗಿದ್ದಾರೆ. ಯೋಗಿಗಳು ಮಾನವನ ಸರ್ವೋನ್ನತಿಗಾಗಿ ಅಹೋರಾತ್ರಿ ಕಷ್ಟಪಟ್ಟು ತಮ್ಮ ಜೀವನವನ್ನು ಪಾವನ ಮಾಡಿಕೊಂಡು ಆದರ್ಶರಾಗಿದ್ದಾರೆ. ಸಾಧಕರಿಗೆ ದಾರಿದೀಪಗಳಾಗಿದ್ದಾರೆ. ಕುರುಡರಿಗೆ ಕೈಗೋಲಾಗಿದ್ದಾರೆ. ಅವರಲ್ಲಿ ಭಾವಶುದ್ಧಿ ಇದ್ದುದಕ್ಕಾಗಿಯೇ ಜಗತ್ತು ಅವರಿಗೆ ಬಾಗುತ್ತದೆ. ಅವರು ಅಂದು ಕೊಟ್ಟ ಅನುಭವಾಮೃತವನ್ನು ಇಂದಿಗೂ ಜನತೆ ಸೇವಿಸಲು ಹಾತೊರೆಯುತ್ತದೆ. ಅವರ ನುಡಿಯು ಗಾಢತರವಾದ ಕಾಳರಾತ್ರಿಯಲ್ಲಿ ಮುಗ್ಗರಿಸುತ್ತಿರುವ ಮನುಷ್ಯನನ್ನು ಕೈಹಿಡಿದು ದಾರಿತೋರಿಸುತ್ತದೆ. ಬಾಳ ಬಂಡಿಗೆ ಕಡೆಗೋಲಾಗುತ್ತದೆ. "ಎಡರುಬಂದ ವೇಳೆಯೊಳು ಧೈರ್ಯವನು, ಸಿರಿವಡೆದು ಜೀವಿಸುವೆಡೆಯೊಳು ವಿನಯವನು, ಕಡುಜವ್ವನದೊಳು ವಿಕೃತ–ವೇರದಿಹುದನು, ಹಿಡಿದ ನೇಮವನೆಡೆಪಡದತಿ ಛಲವನು, ಮಸುಳಿಸದಿಹ ಪ್ರಾಜ್ಯಮಯ ಕೀರ್ತಿಯನು, ಶಾಂತರೊಸೆದಾಡುವೆಂದು ಬಣ್ಣಿಸುವ ವರ್ತನವನು, ಕಾಪಟ್ಯವಿಲ್ಲದಾಶ್ರಮ ಧರ್ಮರತಿಯನು, ಪರತರ ಮುಕುತಿಯೀರುವ ಶಾಸ್ತ್ರವನು" ತೋರಿಸುವ ಶಕ್ತಿ ಅವರ ನುಡಿಯಲ್ಲಿದೆ. ಅಂದು ನುಡಿದ ಅವರ ಮಹೋಪದೇಶ ನಮಗಿಂದು ಕಣ್ಣೆದುರಿನಲ್ಲಿ ನಿಲ್ಲುತ್ತದೆ. ಆ ಸಿಂಹವಾಣಿಯನ್ನಾಲಿಸಿದಾಗ ರೋಮಾಂಚನಗಳು ಏಳುತ್ತವೆ. ಕಿವಿ ನಿಮಿರುತ್ತವೆ. ಮಾನವನು ಒಂದು ಸ್ಥಾನವನ್ನು ಬಿಟ್ಟು ಮತ್ತೊಂದು ಉತ್ತಮೀಯ ಸ್ಥಾನವನ್ನು ಪಡೆದಂತೆ ಭಾಸವಾಗುತ್ತದೆ. ಪರಮಾತ್ಮನ ಪರಿಜ್ಞಾನಕ್ಕಿಂತಲೂ ಹೆಚ್ಚಿನ ಜ್ಞಾನ ಮತ್ತೊಂದಿಲ್ಲವೆಂದು ಮನಕ್ಕೆ ವೇದ್ಯವಾಗುತ್ತದೆ. ಕಡಲ ತೆರೆಯ ಹೊಡೆತಕ್ಕೆ ಕಸಕಡ್ಡಿ ಹರಿದು ಹೋಗಿ ಭೂಮಿ ಸ್ವಚ್ಛವಾದಂತೆ ಹೃದಯವು ಸ್ವಚ್ಛವಾಗುತ್ತದೆ. ಅವರ ನುಡಿಯಲ್ಲಿ ಅವರ ಭವ್ಯ ವ್ಯಕ್ತಿತ್ವದ ವಿರಾಟ್ ಸ್ವರೂಪ ದರ್ಶನವಾಗುತ್ತದೆ. ಅಜ್ಞಾನಾಂಧಕೂಪದಲ್ಲಿ ಮುಳುಗಿದ ಮಾನವನ ಮನಸ್ಸಿಗೆ ಒಂದು ದಿವ್ಯ ಶಕ್ತಿಯು ಲಭ್ಯವಾಗುತ್ತದೆ. "ಅಸತೋ ಮಾ ಸದ್ಗಮಯ"ದ ಸಾರವನ್ನೇ ಬಿಂಬಿಸುತ್ತದೆ. ಧರೆಗೆ ಹೆಸರಾದ ಗುರುಶಂಭುಲಿಂಗನ ಚರಣ ಪಲ್ಲವ ಹಿಡಿಯಲು

ಭಕ್ತನನ್ನು ಕೈಹಿಡಿದು ಕರೆದುಕೊಂಡು ಹೋಗುತ್ತದೆ. ಇಂತಹ ನವ್ಯ ಶಕ್ತಿಯು ಅವರ ನುಡಿಯುಲ್ಲಿರುವಾಗ ಆ ವ್ಯಕ್ತಿಗಳಲ್ಲಿ ಎಂತಹ ಮಹದ್‌ಶಕ್ತಿಯು ಹುದುಗಿದೆ ಎಂಬುದು ಬೇರೆ ಹೇಳಬೇಕಾಗಿಲ್ಲ. ಯೋಗಿಗಳ ಕಾಯ ಚಿಕ್ಕದಾಗಿದ್ದರೂ ಮಾನವರಂತೆ ಕಾಣುತ್ತಿದ್ದರೂ ಅವರು ಅಘಟನಾಘಟನ ಸಾಮರ್ಥ್ಯವುಳ್ಳವರು. ಅವರು ಮುರುಕು ಗುಡಿಸಲದಲ್ಲಿದ್ದರೂ ಅವರ ಆತ್ಮಿಕ ಪ್ರಕಾಶದಿಂದ ಆ ಮುರುಕು ಗುಡಿಸಲು ಸುವರ್ಣ ಮಂದಿರಕ್ಕಿಂತಲೂ ಹೆಚ್ಚಾಗಿ ಸುಂದರ ಕಾಣುತ್ತದೆ. ಅವರ ಜೀವನ ಆಧ್ಯಾತ್ಮದ ಅಮೃತ ಕಲಶವಿದ್ದಂತೆ. ಈ ರೀತಿಯ ಸುಂದರ ಜೀವನವುಳ್ಳ ಕಾಲಕಳದ ಮಹಾಯೋಗಿಗಳ ಮಾಲಿಕೆಯಲ್ಲಿ ಶ್ರೀಮನ್ನಿಜಗುಣ ಶಿವಯೋಗಿಗಳೂ ಒಬ್ಬರು. ಇವರು ಮಹಾಕವಿಗಳಾಗಿರುವರಲ್ಲವೆ ಪ್ರಸಿದ್ಧ ದಾರ್ಶನಿಕರೂ, ಕನ್ನಡ ಭಾಷೆಯಲ್ಲಿ ಪ್ರಭುತ್ವ ಸಂಪಾದಿಸಿದವರಾಗಿದ್ದರು. ಮೊದಲು ನಿಜಗುಣ ಶಿವಯೋಗಿಗಳು ಕೆಲಕಾಲ ಅರಸರಾಗಿದ್ದು, ನಂತರ ಸಂಸಾರದಲ್ಲಿ ಜುಗುಪ್ಸೆಯುಂಟಾಗಿ ವೈರಾಗ್ಯವನ್ನು ತಾಳಿ ಸನ್ಯಾಸಿಯಾದರೆಂದು ಪ್ರಚಾರದಲ್ಲಿದೆ.

ನಿಜಗುಣ ಶಿವಯೋಗಿಗಳ ಕಾಲ ವಿಚಾರದಲ್ಲಿ ಇನ್ನೂ ಸಾಕಷ್ಟು ಭಿನ್ನಾಭಿಪ್ರಾಯಗಳಿವೆ. ಆ ವಿಷಯವನ್ನು ಚರ್ಚಿಸುವದು ಇದೀಗ ಅಪ್ರಸ್ತುತ. ಇದೀಗ ಅವರ ಮಹಾನ್ ವ್ಯಕ್ತಿತ್ವದ ಘನತೆಯನ್ನು ಕಂಡರಿಯುವದೇ ಈ ಭಾಷಣದ ಮಹೋದ್ದೇಶ.

ಮಹಾಸಾಮ್ರಾಜ್ಯದ ವೈಭವದ ಅರಸೊತ್ತಿಗೆಯನ್ನು ಕಿತ್ತೊಗೆದು ವೈರಾಗ್ಯದ ಚಾವುಟವನ್ನು ಎತ್ತಿ ಹಾರಿಸಿ ನಿಜ ಸಾಹಿತ್ಯದ ಸುಧೆಯನ್ನು ಪಾನ ಮಾಡಿಸಿ ಜನಜೀವನವನ್ನು ಬೆಳಕಿನೆಡೆ ಕರೆದೊಯ್ದ ವೈರಾಗ್ಯ ಶಿಖಾಮಣಿ ನಿಜಗುಣರ ಮಹಾಶಕ್ತಿ ವರ್ಣನಾತೀತವಲ್ಲದೆ ಮತ್ತೇನು? ಅವರ ಹಾಡಿನಲ್ಲಿ ಅನುಭವ ಸಂಪತ್ತಿದೆ. ಭಾವಗಾಂಭೀರ್ಯ ನೈತಿಕ ಶಕ್ತಿಯ ಕಿಡಿಗಳು ಪ್ರತಿ ಶಬ್ದದಲ್ಲಿಯೂ ಚಿಮ್ಮುತ್ತಲಿವೆ. ಅವರ ಕಾವ್ಯ ಗಂಗಾ-ಪ್ರವಾಹದಂತೆ ಪವಿತ್ರವಾಗಿದೆ. ಶಾಂತಮಯವಾಗಿದೆ ಎಲ್ಲೆಲ್ಲೂ ರಸೋದ್ರೇಕವಿಲ್ಲ. ಆವೇಶವಿಲ್ಲ. ಅನುಭವ ಮತ್ತು ತತ್ವದಿಂದೊಡಗೂಡಿದ ಕೂಡಲಸಂಗಮವಾಗಿದೆ. ಗೇರುಸೊಪ್ಪೆಯ ಜಲಪಾತದ ಶಕ್ತಿಗಿಂತ ಮಿಗಿಲಾಗಿದೆ ಅವರ ಕಾವ್ಯ ಶಕ್ತಿ. ಆ ಶಕ್ತಿಯನ್ನು ಅಳವಡಿಸಿಕೊಂಡರೆ ಮಾನವನು ದೇವನಾಗುತ್ತಾನೆ. ವೇದಾಂತ ತತ್ವದ ತಿರುಳು ತಿಳಿಸುತ್ತ ವೀರಶೈವ ಸಿದ್ಧಾಂತದ ಮಹತ್ವವನ್ನು ವಿಶದವಾಗಿ ವಿವೇಚಿಸಿದ್ದಾರೆ. ಸಂಸ್ಕೃತದಲ್ಲಿ ಭಾಸ, ಕಾಳಿದಾಸ, ಬಾಣ, ಭಾರವಿ, ಭವಭೂತಿ, ಇಂಗ್ಲೀಷಿನಲ್ಲಿ ಶೆಲ್ಲಿ, ಕೀಟ್ಸ, ವರ್ಡ್ಸ್‌ವರ್ಥ ಮೊದಲಾದ ಮಹಾಕವಿಗಳು ಕವಿತಾ ಕಾಮಿನಿಯನ್ನೊಲಿಸಿಕೊಂಡು ಕೀರ್ತಿಶಾಲಿಗಳಾದಂತೆ ಇವರಿಗೂ ಕನ್ನಡ ಭಾಷೆ

ಯಲ್ಲಿ ಮಿಗಿಲಾದ ಕವಿತ್ವಶಕ್ತಿ ತುಂಬಿದೆ. ಹಾಗೆ ರಚನೆಯಲ್ಲಿಯೂ ಯಾವ ವ್ಯತ್ಯಾಸ ಬಾರದಂತೆ ನೋಡಿಕೊಂಡು ಸಹಜವಾಗಿ ಸಮರ್ಪಕವಾಗಿ ಹಾಡಿದ್ದಾರೆ. "ಕರಿದರೊಳೆ ಪಿರಿದುಮರ್ಥಮನಡಕಲ್ ಬಲ್ಲರ್" ಎಂಬ ಯೋಗ್ಯತೆಗೆ ತಕ್ಕಂತೆ ನಿಜಗುಣರ ಗದ್ಯ ಪದ್ಯ ಗ್ರಂಥಗಳು ನಿದರ್ಶನವಾಗಿವೆ. ಕಾವ್ಯ ಸರಸ್ವತಿಯೇ ನರ್ತಿಸಿದಂತೆ ಭಾಸವಾಗುತ್ತದೆ. "ಆಬಾಲ ವೃದ್ಧರಿಗಾಯಾಸವಿನಿತಿಲ್ಲದಂತೆ ಸಮ್ಯಜ್ಞಾನಿಗಳೊಡನೊಡಂಬಡುವಂತೆ" ಬರೆದ ನಿಜಗುಣರು ತತ್ವದರ್ಶಿಗಳು, ಮಹಾ ಮೇಧಾವಿಗಳು, ರಸಿಕ ಚಕ್ರವರ್ತಿಗಳು.

"ರಸೋವೈಸಃ" "ರಸಾತ್ಮಕಂ ವಾಕ್ಯಂ ಕಾವ್ಯಂ" ಸೃಷ್ಟಿಯಲ್ಲಿಯ ಯಾವದೇ ಘಟನೆ ಚಿತ್ತ ಭಿತ್ತಿಯ ಮೇಲೆ ಮೂಡಿ ಕಲ್ಪನೆ ಭಾವನಾತರಂಗಗಳಿಂದೊಡಗೂಡಿ ರಸಾತ್ಮಕವಾಗಿ ರಸಜ್ಞೆಯಿಂದ ಉಕ್ಕಿ ಉಮ್ಮಳಿಸಿದುದೇ ಕವಿತೆ. ಹೃದಯದಲ್ಲಿ ಭಾವನಾತರಂಗಗಳನ್ನು ರಸಾತ್ಮಕವಾಗಿ ಶಬ್ದಗಳಲ್ಲಿ ಸೃಷ್ಟಿಸುವವನು ಕವಿ "Poets are unacknowledged legislators of the world" ಎಂದುದಾಗಿ ಇಂಗ್ಲೀಷ ಕವಿ ಶೆಲ್ಲಿ ಹೇಳಿದ ಮಾತು ನೆನಪಿಗೆ ಬರುತ್ತದೆ. ಫ್ರಾನ್ಸಿನಲ್ಲಿ ಕ್ರಾಂತಿಯುಂಟಾಗಲು ಕವಿಗಳೇ ಕಾರಣರಾದರಂತೆ! "ನಾನೃಷಿಃ ಕುರುತೇ ಕಾವ್ಯಂ" ಋಷಿಯಾಗದವ ಕವಿಯಾಗಲಾರ ಋಷಿ ಜೀವನದಿಂದೊಡಗೂಡಿ ಬರೆದ ಕಾವ್ಯವೇ ಬಹುಕಾಲ ಬಾಳುವದು, ಬೆಳಗುವದು. ಅಂತಹ ಕವಿತ್ವ ಶಕ್ತಿ ನಿಜಗುಣರ ಕಾವ್ಯದಲ್ಲಿ ಮನೆ ಮಾಡಿಕೊಂಡಿದೆ. ಅನುಭವ ಟಂಕಸಾಲೆಯಲ್ಲಿ ತಯಾರಾದ ನಾಣ್ಯಗಳಂತೆ ಅವರ ಹಾಡುಗಳು ಓದಿದಾಕ್ಷಣವೇ ಮಾನವನ ಕೆಟ್ಟ ವಿಚಾರಗಳು ಸುಟ್ಟು ಬೂದಿಯಾಗುತ್ತವೆ. ಮಾನವನು ಸದ್ವಿಚಾರ ತರಂಗಗಳಲ್ಲಿ ತೇಲುತ್ತಾನೆ.

ಶ್ರೀ ಮಧ್ವಾಚಾರ್ಯರು ದ್ವೈತವನ್ನು, ಶ್ರೀ ಶಂಕರಾಚಾರ್ಯರು ಅದ್ವೈತವನ್ನು, ಶ್ರೀ ರಾಮಾನುಜಾಚಾರ್ಯರು ವಿಶಿಷ್ಟಾದ್ವೈತವನ್ನು, ಶ್ರೀ ರೇಣುಕಾದ್ಯಾಚಾರ್ಯರು ಶಕ್ತಿ ವಿಶಿಷ್ಟಾದ್ವೈತವನ್ನು ಪ್ರತಿಪಾದನೆ ಮಾಡಿ ತಮ್ಮ ತಮ್ಮ ಮತತತ್ವವನ್ನು ವಿಶದವಾಗಿ ವಿವರಿಸಿದ್ದಾರೆ. ಆದರೆ ಶ್ರೀ ನಿಜಗುಣ ಶಿವಯೋಗಿಗಳು ತಮ್ಮ ಗ್ರಂಥದಲ್ಲಿ ನಾಲ್ಕು ಮತಗಳ ಲಕ್ಷಣಗಳ ವಿವರಣೆಯನ್ನು ಮಾಡಿದ ಪ್ರತಿಭೆ ಎದ್ದು ಕಾಣುತ್ತದೆ. ಕೊನೆಗೆ ಶಕ್ತಿ ವಿಶಿಷ್ಟಾದ್ವೈತಕ್ಕೆ ಹೆಚ್ಚಿನ ಪ್ರಾಶಸ್ತ್ಯ ಕೊಟ್ಟಿದ್ದಾರೆ. ಶ್ರೀ ಮನ್ನಿಜಗುಣ ಶಿವಯೋಗಿಗಳು ಬರೆದ ಕೈವಲ್ಯ ಪದ್ಧತಿ, ವಿವೇಕ ಚಿಂತಾಮಣಿ, ಪರಮಾರ್ಥ ಪ್ರಕಾಶಿಕೆ, ಅನುಭವಸಾರ ಪರಮಾನುಭವ ಬೋಧೆ, ಪರಮಾರ್ಥ ಗೀತೆ ಈ ಆರೂ ಗ್ರಂಥಗಳು ಭಾರತಕ್ಕೆ ಕಾಣಿಕೆಯಾಗಿರುವ ದಿವ್ಯ ರತ್ನಗಳು, ಅನುಭವಾಮೃತದಿಂದ ತುಂಬಿದ

ಕಲಶಗಳು. ಸಾಹಿತ್ಯಕ್ಕೆ ಶಿರೋಮಣಿಯಂತೆ ಉಜ್ವಲ ಪ್ರಕಾಶವನ್ನೀಯತಕ್ಕವುಗಳು. ಮಾನವ ಕೋಟಿಯನ್ನೇ ಉದ್ಧರಿಸತಕ್ಕ ಶಕ್ತಿಯನ್ನು ಪಡೆದವುಗಳು.

ಅವರು ಬರೆದ ಆರು ಗ್ರಂಥಗಳಲ್ಲಿ ವಿವೇಕ ಚಿಂತಾಮಣಿ, ಕೈವಲ್ಯ ಪದ್ಧತಿ, ಅನುಭವಸಾರ ಈ ಮೂರು ಗ್ರಂಥಗಳು. ಸ್ವತಂತ್ರ ಗ್ರಂಥಗಳೆಂದು ಹೇಳಬಹುದು. ಇನ್ನುಳಿದವು ಸಂಸ್ಕೃತ ಗ್ರಂಥಗಳ ಅನುವಾದಗಳು ಇರಬೇಕೆಂದು ಕಾಣುತ್ತದೆ. ಆದರೆ ಸ್ವತಂತ್ರವಾಗಿ ಬರೆದ ಮೂರು ಗ್ರಂಥಗಳಲ್ಲಿ ವೇದಾಂತ (ಉಪನಿಷತ್ತು)ಗಳ ವಾಕ್ಯಗಳನ್ನೇ ತಮ್ಮ ಅನುಭವದ ಒರೆಗಲ್ಲಿಗೆ ಹಚ್ಚಿ ಸಾರ ಸಂಗ್ರಹ ಮಾಡಿದ ಪುಸ್ತಕ "ಅನುಭವಸಾರ"ವು ಇದರಲ್ಲಿ ಅನೇಕ ಕಡೆಗೆ ಶಕ್ತಿ ವಿಶಿಷ್ಟಾದ್ವೈತವನ್ನು ಅಲ್ಲಲ್ಲಿ ಪ್ರತಿಪಾದನೆ ಮಾಡಿದಂತೆ ತೋರುತ್ತದೆ. ಅನುಭವಸಾರದಲ್ಲಿ ನಿಜಗುಣರು:-

"ಸಕಲ ವೇದಾಂತ ಸಾರವನ್ನು ತಿಳಿವಂತೆ ಸಾಧಕರಿಗೆ ಒರೆವೆನು" ಎಂದು ಹೇಳಿ—

"ಇದು ವೇದ ಶಿರವರ್ಥ! ವಿದು ಸಕಲ ಶಾಸ್ತ್ರೋಕ್ತ! ವಿದು ಪುರಾತನರ ಮತ! ವಿದು ಗುರೂಕ್ತಿಮು! ತ್ತಿದು ತತ್ವವಿದರ ನಿಜಮಾರ್ಗ" ಎಂದು ಅದರ ಉತ್ಕರ್ಷೆಯನ್ನು ಅರುಹಿದ್ದಾರೆ.

ಮತ್ತೊಂದೆಡೆಯಲ್ಲಿ—

"ತನ್ನೊಳವಿನಾಭೂತದಿಂ ನಿತ್ಯಮಿಹ ಶಕ್ತಿಯಿಂ ನಿಖಿಲ ಸೃಷ್ಟಿಯನೆ ಮಾಡಿ"

"ಆಧಾರ ಬ್ರಹ್ಮವಾಧೇಯವೀ ಮಾಯೆಯಾಧಾರದಲ್ಲಿ ಬೆರೆಸಿ ಬೇರಿಲ್ಲದಂತಾಧೇಯ ವಿರ್ಪುದೆಲೆ ಪುತ್ರ"

ಇತ್ಯಾದಿ ವಾಕ್ಯಗಳಿಂದ ಶ್ರೀ ನಿಜಗುಣರು ಪರಮಾತ್ಮನಲ್ಲಿ ಶಕ್ತಿಯು ಪೃಥಗ್ಭಾವವಿಲ್ಲದೆ ನಿತ್ಯವಾಗಿ ನೆಲೆಸಿರುವದೆಂಬುದನ್ನು ಸಮರ್ಥಿಸಿರುವರೆಂದು ಕಂಡುಬರುತ್ತಿದೆ.

"ಕೈವಲ್ಯ ಪದ್ಧತಿಯು" ಕನ್ನಡದಲ್ಲಿ ಮೊದಲನೆಯ ಹಾಡುಗಬ್ಬವಾದರೆ "ವಿವೇಕ ಚಿಂತಾಮಣಿಯು" ಕನ್ನಡದಲ್ಲಿ ಮೊದಲನೆಯ ವಸ್ತುಕೋಶವಾಗಿದೆ. "ಪರಮಾರ್ಥ ಪ್ರಕಾಶಿಕೆಯು" ಕನ್ನಡದಲ್ಲಿ ಮೊದಲನೆಯ ಯೋಗಶಾಸ್ತ್ರವೆನಿಸಿದರೆ "ಅನುಭವಸಾರ"ವು ದಶೋಪನಿಷತ್ತುಗಳ ಸಾರ ಸಂಗ್ರಹವಾಗಿದೆ. "ಪರಮಾನುಭವ ಬೋಧೆಯು" ಉಪನಿಷತ್ತು ಮೊದಲಾದ ವೇದಾಂತ ಗ್ರಂಥಗಳ ತಿರುಳಾದರೆ "ಪಾರಮಾರ್ಥ ಗೀತೆಯು" ಭಾರತೀಯ "ಸೃಷ್ಟಿ ಶಾಸ್ತ್ರವಾಗಿದೆ" ಎಂದು ಆಧುನಿಕ ಪಂಡಿತರು ಅಭಿಪ್ರಾಯ ಪಟ್ಟಿದ್ದಾರೆ.

ಇದೇನೆ ಇರಲಿ, ನಾವೀಗ ಶ್ರೀ ಮನ್ನಿಜಗುಣ ಶಿವಯೋಗಿಗಳ ಅನುಭವ ಸಾಗರದೊಳಗಿರುವ ಕೆಲವು ಮುತ್ತುಗಳನ್ನಾದರೂ ಆಯ್ದುಕೊಳ್ಳಲು ಪ್ರಯತ್ನಿಸೋಣ!

ಜೀವಭಾವವು ತೊಲಗಿ ದೇವಭಾವವು ಬರಲು ಶ್ರೀಗುರು ಮಹೋಪದೇಶವಿಲ್ಲದೆ ನರರಿಗೆ ಮುಕ್ತಿಯಿಲ್ಲವೆಂದು ಕೈವಲ್ಯ ಪದ್ಧತಿಯ ಮೊದಲನೆಯ ನುಡಿಯಲ್ಲಿ ಚಿತ್ರಿಸಿದ್ದಾರೆ. ಮಾನವನಿಗೆ ಶಾಂತಿ-ಕಾಂತಿಗಳು ಪ್ರಾಪ್ತವಾಗಬೇಕಾದರೆ ಗುರುವಿಲ್ಲದೆ ಆಗದು. ಮತಿಬರದು. ಗತಿಸಿಗದು, ದಿಕ್ಕುದಪ್ಪಿ ದಾರಿಗಾಣದೆ ತಿರುಗುವ ಅಂಧನಿಗೆ ಗುರುವೇ ಮಾರ್ಗದರ್ಶಕ, ಆಸರಕಂಬ.

"ಶ್ರೀಗುರು ವಚನದಿಂದಧಿಕಸುಖವುಂಟೆ?" ಎಂದೆನ್ನುತ್ತಾರೆ ಮಹಾತ್ಯಾಗಿ ನಿಜಗುಣರು.

ಮತ್ತೊಂದೆಡೆ ಮನವೆಂಬ ಪೋಷಕ ಕೋಗಿಲೆಯನ್ನು ಕುರಿತು "ಕೋಗಿಲೆ ಚಲ್ವ ಕೋಗಿಲೆ ಮುದ್ದು ಕೋಗಿಲೆ ಜಾಣ ಕೋಗಿಲೆ ॥ ಪ ॥

ಹಿಂದೆ ತಪವೊಳಿಸನೊಂದಿರುತಿರಲಿಚ್ಚು ಚೆಂದ ಕಾಮನ ಬಿಟ್ಟು ಕೋಗಿಲೆ! ಬಂದು ಬೇಗದಿ ಬಾಲೇಂದುಧರನ ಕೂಡಿ ಕುಂದದೆ ನೀವಾಳು ಕೋಗಿಲೆ ॥ ೧ ॥

ನಲ್ಲರನಗಲಿದ ಮೆಲ್ಲೆದೆಯರ ಕೊಲ್ವ! ಪುಲ್ಲ ಶರನ ಪಿಂಗಿ ಕೋಗಿಲೆ! ಎಲ್ಲ ಜೀವರಿಗೆರವಿಲ್ಲದೊಲವೀವ ಬಲ್ಲ ಭವನೊಳಿರು ಕೋಗಿಲೆ ॥ ೨ ॥

ದುರುಳ ಕಂತುವಿನೊಡನಿರೆ ಲೋಕದೊಳು ನಿನ್ನ! ಪರಪುಟ್ಟನೆಂಬರು ಕೋಗಿಲೆ॥ ಧರೆಗೆ ಜನಕನಾದ ಗುರುಶಂಭುಲಿಂಗನ ಚರಣ ಪಲ್ಲವಪಿಡಿ ಕೋಗಿಲೆ" ॥ ೩ ॥

ಹಾಡಿದ ಈ ನುಡಿಗಳಲ್ಲಿ ಭಾವ ಸೌಷ್ಠವ ರಾಗರಚನೆ, ಸಹಜ ಶೈಲಿಯ ಸೊಗಸು, ಧಾರಾಪ್ರವಾಹವಾಗಿ ಅಡೆತಡೆಯಿಲ್ಲದೆ ಹರಿದಿದೆ. ಎಲ್ಲ ಶರಣರು, ಯೋಗಿಗಳು, ಮನಸ್ಸನ್ನು ಮಂಗನಿಗೆ ಹೋಲಿಸಿದರೆ ಇವರು ಮುದ್ದು ಕೋಗಿಲೆಗೆ ಹೋಲಿಸಿದ್ದಾರೆ. ಕೋಗಿಲೆಯನ್ನೆ ಚರಣ **ಕಮಲದೊಳು ಭ್ರಮರವಾಗಿ** ಸಚ್ಚಿದಾನಂದದ ರಸಾಸ್ವಾದನೆ ಮಾಡೆಂದು ಮುದ್ದಾಗಿ ಕೋಗಿಲೆಯನ್ನೇ ಕೇಳಿ ಕೊಂಡಿದ್ದಾರೆ. ಎಂತಹ ಸುಂದರ ಕವಿತೆಯಿದು? ಬಿಸಿಲುದಿನದಲ್ಲಿ ಕಾಂತಾರಣ್ಯದೊಳಗೆ ಸಂಚರಿಸಿ ಬೇಸತ್ತು ಬಂದ ಪಥಿಕನಿಗೆ ಸಿಹಿನೀರಸಿತ್ತಂತೆಯಾಗಿದೆ. ಶಬ್ದ ಶಬ್ದದಲ್ಲಿಯೂ ಅಂತರಾಳದ ದಿವ್ಯಶಕ್ತಿ ತೋರುತ್ತದೆ. ಮಾನವನನ್ನು ಅಡ್ಡದಾರಿಗೆ ಎಳೆದೊಯ್ಯುವದೇ ಮನಸ್ಸು.

"ಮನ ಏವ ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋಃ॥ ಬಂಧಾಯ ವಿಷಯಾಸಕ್ತಂ ಮುಕ್ತ್ಯೈ ನಿರ್ವಿಷಯಂ ಸ್ಮೃತಂ" ಎಂದು ಉಪನಿಷತ್ತಿನ

ಹೇಳಿದೆ. ಮನಸ್ಸು ಮೋಹವೆಂಬ ದಾರದಿಂದ ವಿಷಯಗಳೆಂಬ ಹೂಗಳಿಂದ ಕಟ್ಟಿದ ಮಾಲೆಯೋಪಾದಿಯಲ್ಲಿದೆ. ಆಧ್ಯಾತ್ಮ ತತ್ವಗಳನ್ನು ತಿಳಿಭಾಷೆಯಲ್ಲಿ ಸರ್ವರಿಗೂ ಮನಂಬುಗುವಂತೆ ಬೋಧಿಸಿದ್ದಾರೆ.

"ಆರುನಾನೆಂದು ವಿಚಾರಿಸು ಮಾರಮರ್ದನ ಶಂಭುಲಿಂಗವನೊಲಿಸಿ ಗಂಭೀರ ಸುಖದೊಳಿರು" ಎಂದು ಮಾನವ ಕೋಟಿಯನ್ನೇ ಎಚ್ಚರಿಸಿದ್ದಾರೆ. ನಾನಾರೆಂಬುದು ವಿಚಾರಿಸಲು ಚೈತನ್ಯವಿತ್ತಿದ್ದಾರೆ. ಜೀವಕಳೆ ತುಂಬಿದ್ದಾರೆ. ಸುಮ್ಮನೆ ಕುಳಿತರೆ ಮಾನಸಿಕ ಶಾಂತಿ ಸಿಗದು. ಭ್ರಾಂತಿ ದೂರಾಗದು. ಹುಟ್ಟಿದ ಮನುಷ್ಯನು ಭವದಿಂದ ದೂರಾಗಬೇಕಾದರೆ ಜಗದೊಡೆಯ ಗುರು ಶಂಭುಲಿಂಗನ ಚರಣ ಪಲ್ಲವ ಹಿಡಿಯಲೇ ಬೇಕು. ಆಗ ಅವನು ಬಾಳಿನಲ್ಲಿ ಬೆಳಕು ಕಾಣುತ್ತಾನೆ.

ಸಂಸಾರ ಸಾಗರದಲ್ಲಿ ಬಿದ್ದು ಬಳಲುವ ಮಾನವನನ್ನು ಕುರಿತು ತಂದೆಯು ಮುದ್ದು ಮಗನಿಗೆ ಹೇಳಿದಂತೆ ಕನಿಕರದಿಂದ—

"ಸುಮ್ಮನೆ ಕಾಲ ಕಳೆದು ಸಾವುದುಚಿತವೆ! ನೆಮ್ಮಿ ನಿಜವನೆ ಮುಕ್ತಿವಡೆಯದೆ ಮನುಜ ನೀ"‖ ಎಂದು ಮುಂತಾಗಿ ಸಂಬೋಧಿಸಿ ಎನಿತೋ ಪೂರ್ವ ಪುಣ್ಯದಿಂದ ಪಡೆದುಕೊಂಡ ಈ ಮನುಷ್ಯತ್ವವನ್ನು ಸಾರ್ಥಕ ಮಾಡಿಕೊಂಡು ಮುಕ್ತಿ ಪಡೆಯಲು ಉಪದೇಶಿಸಿದ್ದಾರೆ.

"ಮಾಡಲಿಲ್ಲವೇ ತಪವ ಮಾಡಲಿಲ್ಲವೆ! ಕೂಡೆ ಸುಗುಣದೊಡನೆ ತಿಳಿದು ನೋಡಿ ತ್ರಿವಿಧ ಕರಣದಲ್ಲಿ ‖ ಪ ‖ ಶಮೆವಿವೇಕವಾತ್ಮವಿದ್ಯೆ ದಮೆದಯಾ ವಿರಕ್ತಿ ಯೋಗ! ವಮಳರೂಪ ಶಂಭುಲಿಂಗ–ವಮರ್ದುತೋರೆ ಸುಮನದಲ್ಲಿ‖ "ಶಮೆದಮೆ ವಿರಕ್ತಿಗಳಿಂದೊಡಗೂಡಿದ ತಪಸ್ಸು ನೀಡೆಂದು ಶಂಭುಲಿಂಗವನ್ನು ಬಿಚ್ಚುಮನದಿಂದ ಪ್ರಾರ್ಥಿಸಿ ತಪಸ್ಸಿದ್ಧಿ ಮಾಡಿಕೊಂಡಿದ್ದಾರೆ. ಆತ್ಮಶ್ರೀಗಳಿಸಿದ್ದಾರೆ. ಸುಗುಣ ಸಂತತಿ ನೀಡೆಂದು" ಮರೆಹೊಕ್ಕಿದ್ದಾರೆ.

ಅಷ್ಟಕ್ಕೆ ಸಾಲದೆ—

"ನೋಡಲಾಗದೇ ದೇವ ನೋಡಲಾಗದೆ! ಕೂಡೆ ನಿನ್ನ ದಿಟ್ಟ ಮೂರು ನಾಡೆ ಲೇಸು ಮಾಡಲೆನ್ನ" ‖ ಪ ‖

ಎಂದು ದೇವನನ್ನು ಅಂಗಲಾಚಿ ಬೇಡಿಕೊಂಡಿದ್ದಾರೆ. ಹಸುಗೂಸು ಅಗಲಿದ ತಾಯಿಯನ್ನು ಅತ್ತತ್ತು ಕರೆಯುವಂತೆ ಶ್ರೀ ನಿಜಗುಣರು ಆರ್ತವಾಣಿಯಿಂದ ದೇವರನ್ನು ಕರೆಯುತ್ತಿದ್ದಾರೆ. ದೇವನೊಡನೆ ಕೂಡಲು ಹಾತೊರೆಯುತ್ತಿದ್ದಾರೆ. ನಿಜಸುಖಪಡೆಯಲು ಹಂಬಲಿಸುತ್ತಿದ್ದಾರೆ. ಭಾವನಾ ತರಂಗಗಳು ಆನಂದೋದ್ರೇಕ ದಿಂದ ಪುಟಿಯುತ್ತಲಿವೆ. ನೀರು ನೀರೊಳು ಬೆರೆತಂತೆ ಅವರ ಭಾವನೆಗಳು ದೇವ ರೊಡನೆ ಬೆರೆತುಬಿಟ್ಟಿವೆ. "ನಾನಾರು" ಎಂಬುವ ಭಾವನೆ ನಷ್ಟವಾಗಿ ದೇವನೊಡನೆ

ಕೂಡಿಯೇ ಪರಿತಪಿಸುತ್ತಿದ್ದಂತೆ ಭಾಸವಾಗುತ್ತದೆ. ಇಂತಹ ಮಹಾನ್ ಶಕ್ತಿಯು ಸಾಮಾನ್ಯರಿಗೆ ಸಾಧ್ಯವೆ?

ಒಂದೆಡೆ ಮಹಾತ್ಮಾಗಾಂಧೀಯವರು ಹೇಳಿದಂತೆ—

"Life is graeater than all art. I would go even further and declare that the man whose life comes nearest to perfection is the greatest artist."

ಸಾಧನೆ ಬಲಿತು ಸಿದ್ಧಿಯತ್ತಸಾಗಿ ಪೂರ್ಣತೆಯನ್ನು ಪಡೆಯುವುದೇ ಯೋಗಿ ಜೀವನದ ಪರಮಗುರಿ.

ನಿಜಗುಣರು ಈ ರೀತಿ ಆಧ್ಯಾತ್ಮಿಕ ದಿವ್ಯಶಕ್ತಿಯನ್ನುಗಳಿಸಿ ಬೆಳಗಿದರು. ಅರಮನೆಯಿಂದ ಪೂರ್ಣ ಮನೆಗೆ ತೆರಳಿದ ಪವಿತ್ರಮೂರ್ತಿ. ಅದ್ವೈತವನ್ನು ತಿಳಿದು ಶಿವಯೋಗವನ್ನು ಹೃದಯಾನುಭವ ಮಾಡಿಕೊಂಡ ಶಿವಯೋಗಿ. ಅರಿಷಡ್ವೈರಿಗಳನ್ನು ಜಯಿಸಿದ ಮಹಾವಿರಾಗಿ, ಶಿವಧರ್ಮವೆಂಬ ಕಂಭದ ಮೇಲೆ ಸುವಿವೇಕದಿಂದೊಡಗೂಡಿದ ಪ್ರಣತೆಯನ್ನಿಟ್ಟು ಸವೆಯದ ಸದ್ಭಕ್ತಿ ತೈಲವನೆರೆದು, ಪ್ರವಿಮಳ ಕಳೆಯೆಂಬ ಬತ್ತಿಹಾಕಿ ಹಚ್ಚಿ, ಅಂತರಾತ್ಮನಿಗೆ ಬೆಳಗಿ ಮೋಕ್ಷ ಚಿಂತಾಮಣಿಯೆನಿಸುವ ಶಂಭುಲಿಂಗವೆ ತಾನಾದ ದಿವ್ಯಜ್ಯೋತಿ.

ಸನ್ ೧೯೫೭ ರಂದು ಹುಬ್ಬಳ್ಳಿ ರುದ್ರಾಕ್ಷಿಮಠದಲ್ಲಿ ನಿಜಗುಣ ಶಿವಯೋಗಿಗಳ ಸ್ಮಾರಕೋತ್ಸವದಲ್ಲಿ ಅಪ್ಪಣೆಕೊಡಿಸಿದ ಆಶೀರ್ವಚನ.

ಶಿವಾದ್ವೈತ ಶಕ್ತಿ

ಶಕ್ತಿವಿಶಿಷ್ಟಾದ್ವೈತವೆಂದರೆ; ಶಕ್ತಿವಿಶಿಷ್ಟ ಜೀವನಿಗೂ, ಶಕ್ತಿವಿಶಿಷ್ಟ ಶಿವನಿಗೂ ಸಾಮರಸ್ಯವೆಂದರ್ಥವಾಗುತ್ತದೆ. "ಶಕ್ತಿಶ್ಚ ಶಕ್ತಿಶ್ಚ ಶಕ್ತೀ ತಾಭ್ಯಾಂ ವಿಶಿಷ್ಟೌಜೀವೆ ಶೌತಯೋಃ ಅದ್ವೈತಂ ಶಕ್ತಿ ವಿಶಿಷ್ಟಾದ್ವೈತಂ" ಎಂದು ಪೂರ್ವಾಚಾರ್ಯರು ಶಕ್ತಿ ವಿಶಿಷ್ಟಾದ್ವೈತ ಪದದ ಉತ್ಪತ್ತಿಯನ್ನು ತೋರಿಸಿರುವರು. ಶಕ್ತಿಯು ಸ್ಥೂಲ ಚಿದಚಿದಾತ್ಮಶಕ್ತಿ, ಸೂಕ್ಷ್ಮ ಚಿದಚಿದಾತ್ಮ ಶಕ್ತಿಯೆಂದು ಎರಡು ಪ್ರಕಾರವಾಗಿರುವದು. ಜೀವನು ಸ್ಥೂಲ ಚಿದಚಿದಾತ್ಮ ಶಕ್ತಿಯುಕ್ತನಾಗಿರುವನು. ಶಿವನು ಸೂಕ್ಷ್ಮ ಚಿದಚಿದಾತ್ಮ ಶಕ್ತಿಯುಕ್ತನಾಗಿರುವನು. ಜೀವನ ಸ್ಥೂಲ ಚಿಚ್ಛಕ್ತಿಯು ಕಿಂಚಿಜ್ಞಾತಾ ರೂಪವಾಗಿರುವದು. ಸ್ಥೂಲಾಚಿಚ್ಛಕ್ತಿಯು ಕಿಂಚಿತ್ಕರ್ತೃತಾ ರೂಪವಾಗಿರುವದು. ಶಿವನ ಸೂಕ್ಷ್ಮ ಚಿಚ್ಛಕ್ತಿಯು ಸರ್ವಜ್ಞತಾರೂಪವಾಗಿರುವದು. ಈ ದ್ವಿವಿಧ ಶಕ್ತಿಗಳಿಂದ ಯುಕ್ತರಾದ ಜೀವ ಮತ್ತು ಶಿವ ಇವರ ಅದ್ವೈತವೇ (ಸಾಮರಸ್ಯವೇ) ಶಕ್ತಿ ವಿಶಿಷ್ಟಾದ್ವೈತವೆನಿಸುವದು. ಶಕ್ತಿಯು ಪರಶಿವನಲ್ಲಿ ಅವಿನಾಭಾವ ಸಂಬಂಧ ದಿಂದಿದ್ದು ನಿತ್ಯವೆನಿಸುವದು. ಇದೇ ವಿಷಯವನ್ನು ಶ್ವೇತಾಶ್ವತರ ಶೃತಿಯು

ಪರಾಸ್ಯ ಶಕ್ತಿರ್ವಿವಿಧೈವಶ್ರೂಯತೇ।
ಸ್ವಾಭಾವಿಕೀ ಜ್ಞಾನಬಲಕ್ರಿಯಾ ಚ॥

ಎಂಬ ವಾಕ್ಯದಿಂದ ಸಾರುತ್ತಿರುವದು. ಈ ಮಂತ್ರಾರ್ಥವನ್ನು ಪರ್ಯಾಲೋಚಿಸಿದರೆ, ಪರಬ್ರಹ್ಮದಲ್ಲಿ ಶಕ್ತಿಯು ಸ್ವಭಾವಸಿದ್ಧವಾಗಿರುವದೆಂದೂ, ಈ ಶಕ್ತಿಯು ಜ್ಞಾನಶಕ್ತಿ, ಕ್ರಿಯಾಶಕ್ತ್ಯಾದಿ ರೂಪದಿಂದ ನಾನಾಪ್ರಕಾರವಾಗಿರುವದೆಂದೂ ಸಿದ್ಧ ವಾಗಿರುತ್ತದೆ. "ಸ್ವಾಭಾವಿಕೀ" ಎಂಬ ಪದವು ಶಕ್ತಿಯ ನಿತ್ಯತ್ವವನ್ನು ಘಂಟಾ ಘೋಷವಾಗಿ ಹೇಳುತ್ತಿರುವದು. ಇದೇ ಶೃತಿಯು ಮತ್ತೊಂದಡೆಯಲ್ಲಿ

ಯದಾ ತಮಸ್ತನ್ನ ದಿವಾನ ರಾತ್ರಿರ್ನಸನ್ನಚಾಸಚ್ಛಿವ
ಏವ ಕೇವಲಃ। ತದಕ್ಷರಂ ತತ್ಸವಿತುರ್ವರೇಣ್ಯಂ
ಪ್ರಜ್ಞಾ ಚ ತಸ್ಯಾಃ ಪ್ರಸೃತಾ ಪುರಾಣೀ॥

ಎಂಬ ವಾಕ್ಯದಿಂದ ಪ್ರತಿಪಾದಿಸುತ್ತಿರುವದು ಪುರಾಣೀ ಅನಾದಿ ಸಂಸಿದ್ಧವಾದ, ಪ್ರಜ್ಞಾಚಿಚ್ಛಕ್ತಿಯು ಆ ಪರಶಿವಬ್ರಹ್ಮದಿಂದ ಪ್ರಸೃತಾ ಕ್ರಿಯಾಶಕ್ತಿ ಅನಾದ್ಯನಂತ ರೂಪದಿಂದ ಪ್ರಸೃತವಾಯಿತು ಎಂದು ಬೋಧಿಸುತ್ತಿರುವದು. ಈ ಶೃತಿವಾಕ್ಯ ದಲ್ಲಿ ಶಕ್ತಿ ವಿಕಸನವು ಸ್ಫುಟವಾಗಿ ತೋರಿಸಲ್ಪಟ್ಟಿರುವದು.

ಮಾಯಾಂ ತು ಪ್ರಕೃತಿಂ ವಿದ್ಯಾನ್ಮಾಯಿನಂ ತು ಮಹೇಶ್ವರಂ

ಎಂಬ ಮಂತ್ರವೂ ಸಹ ಪರಮಾತ್ಮನು ಶಕ್ತಿವಿಶಿಷ್ಟನಾಗಿರುವನೆಂದು ಬೋಧಿಸುತ್ತಿರುವದು. ಪೂರ್ವಾಚಾರ್ಯರು ಮಾಯಾ ಶಬ್ದಕ್ಕೆ ಮಂ ಶಿವಂ ಅಯತೇ ಸ್ವಭಾವತಃ ಪ್ರಾಪ್ನೋತೀತಿ ಮಾಯಾ ಎಂದು ವಿಗ್ರಹ ಮಾಡಿರುವದರಿಂದ ಈ ಮಾಯೆಯು ಅದ್ವೈತಿಗಳು ಹೇಳಿರುವಂತೆ ಮೂಲಾವಿದ್ಯಾ ರೂಪವಾದುದಾಗಿರದೆ ವಿಮರ್ಶ ಶಕ್ತಿ ರೂಪವಾದುದಾಗಿರುವದೆಂದು ತಿಳಿಯಬೇಕು. ಈ ಮಂತ್ರಾಭಿಪ್ರಾಯವನ್ನು ಸಿದ್ಧಾಗಮವು:—

ಮಂ ಶಿವಂ ಪರಮಂ ಬ್ರಹ್ಮ ಪ್ರಾಪ್ನೋತೀತಿ ಸ್ವಭಾವತಃ।
ಮಾಯೇತಿ ಪ್ರೋಚ್ಯತೇ ಲೋಕೇ ಬ್ರಹ್ಮನಿಷ್ಠಾ ಸನಾತನೀ॥

ಎಂಬ ಶ್ಲೋಕದಿಂದ ಬೋಧಿಸುತ್ತಿರುವದು.

ಮತ್ತೊಂದೆಡೆಯಲ್ಲಿ—

In the Shiva Siddhant, "Shakti is not maya, but an important factor eternally associated with Shiva, without the co-operation of which Shiva is powerless and cannot bring into existence the Universe hidden within Him" ಎಂದು ಮುಂತಾಗಿ ಶಿವಜ್ಞಾನ ಬೋಧದ ಸಾರವನ್ನೇ ಇಲ್ಲಿ ಹೇಳಲಾಗಿದೆ.

ಯಜುರ್ವೇದ ತೈತ್ತರೀಯ ಸಂಹಿತೆಯು—

ಆಖುಸ್ತೇ ರುದ್ರ ಪಶುಸ್ತಂ ಜುಷಸ್ವೈಷತೇರುದ್ರಭಾಗಃ॥
ಸಹ ಸ್ವಸ್ರಾಽಂಬಿಕಯಾ ತಂ ಜುಷಸ್ವ॥

ಎಂಬೀ ಮಂತ್ರದಿಂದ ಶಕ್ತಿನಿತ್ಯತ್ವವನ್ನು ಪ್ರತಿಪಾದಿಸುತ್ತಿರುವದು. ಈ ಮಂತ್ರದಲ್ಲಿರುವ "ಸ್ವಸ್ರಾ ಅಂಬಿಕಯಾ" ಎಂಬ ಪದಗಳನ್ನು ಪರ್ಯಾಲೋಚಿಸಿದರೆ ಪರಮಾತ್ಮನಲ್ಲಿ ಶಕ್ತಿಯು ಸ್ವಾಭಾವಿಕವಾಗಿರುವದೆಂದು ಸಿದ್ಧವಾಗುವದು.

"Shakti is not different from Shiva but has its source in Shiva and in fact in the power of Shiva and becomes the source of Maya or cosmic matter" ಎಂಬುದಾಗಿ ಕಾಶ್ಮೀರ ಶೈವ ಸಿದ್ಧಾಂತದ ಭಾವವನ್ನೇ ಇಲ್ಲಿ ಚಿತ್ರಿಸಲಾಗಿದೆ.

"ನಮಃ ಸೋಮಾಯ ಚ ರುದ್ರಾಯ ಚ" ಎಂಬ ಶ್ರೀ ರುದ್ರ ಮಂತ್ರವೂ ಸಹ ಪರಮೇಶ್ವರನು ಉಮಾರೂಪ ಶಕ್ತಿಯುಕ್ತನಾಗಿರುವನೆಂದು ಬೋಧಿಸುತ್ತದೆ. ಇದೇ ಅಭಿಪ್ರಾಯವನ್ನು ಕೈವಲ್ಯ ಶ್ರುತಿಯು—

"ಉಮಾಸಹಾಯಂ ಪರಮೇಶ್ವರಂ ಪ್ರಭುಂ"

ಎಂಬ ಮಂತ್ರವಿಂದ ಸಮರ್ಥಿಸುತ್ತಿರುವವು. ಇದೇ ರೀತಿಯಾಗಿ ಅನೇಕ ಶ್ರುತಿವಾಕ್ಯಗಳು ಶಕ್ತಿನಿತ್ಯತ್ವವನ್ನು ಪ್ರತಿಪಾದಿಸುತ್ತಿರುವವು.

ಯಥಾಚಂದ್ರೇ ಸ್ಥಿರಾ ಜ್ಯೋತ್ಸ್ನಾ ವಿಶ್ವವಸ್ತುಪ್ರಕಾಶಿನೀ।
ತಥಾಶಕ್ತಿರ್ವಿಮರ್ಶಾಖ್ಯಾ ಪ್ರಕಾಶೇ ಬ್ರಹ್ಮಣಿ ಸ್ಥಿರಾ॥
ಅಂತಃಕರಣರೂಪೇಣಜಗದಂಕಿತರೂಪತಃ। ಯಸ್ಮಿನ್
ವಿಭಾತಿಚಿಚ್ಛಕ್ತಿರ್ಬ್ರಹ್ಮಭೂತಃ ಸ ಉಚ್ಯತೇ॥

ಸಮಸ್ತ ವಸ್ತುಗಳನ್ನು ಪ್ರಕಾಶಪಡಿಸುವ ಚಂದ್ರಿಕೆಯು ಚಂದ್ರನಲ್ಲಿ ಹೇಗೆ ಸ್ಥಿರವಾಗಿರುವದೋ, ಹಾಗೆಯೇ ಚರಾಚರಾತ್ಮಕ ಸಕಲ ಪದಾರ್ಥಗಳನ್ನೂ ಪ್ರಕಾಶಪಡಿಸುವ ವಿಮರ್ಶ ಶಕ್ತಿಯೂ ಪ್ರಕಾಶ ಸ್ವರೂಪವಾದ ಪರಬ್ರಹ್ಮದಲ್ಲಿ ಸ್ಥಿರವಾಗಿರುವದೆಂದೂ ವಿಮರ್ಶ ಶಕ್ತಿಯು ಮೂಲಾಹಂಕಾರ ರೂಪದಿಂದಲೂ ಸೂಕ್ಷ್ಮ ಜಗದ್ರೂಪದಿಂದಲೂ ಯಾವನಲ್ಲಿ ಪ್ರಕಾಶಿಸುತ್ತಿರುವದೋ ಅವನೇ ಪರಬ್ರಹ್ಮ ಸ್ವರೂಪನೆಂದೂ ಸಿದ್ಧಾಂತ ಶಿಖಾಮಣಿಯಲ್ಲಿ ಸ್ಫುಟವಾಗಿ ಪ್ರತಿಪಾದಿಸಲ್ಪಟ್ಟಿರುವದು.

ಲೋಕವಿಖ್ಯಾತನಾದ ಕಾಳಿದಾಸ ಮಹಾಕವಿಯು ತನ್ನಿಂದ ರಚಿಸಲ್ಪಟ್ಟ ರಘುವಂಶ ಕಾವ್ಯದ ಆರಂಭದಲ್ಲಿ—

"ವಾಗರ್ಥಾವಿವ ಸಂಪೃಕ್ತೌ ವಾಗರ್ಥಪ್ರತಿಪತ್ತಯೇ।
ಜಗತಃ ಪಿತರೌ ವಂದೇ ಪಾರ್ವತೀಪರಮೇಶ್ವರೌ"॥

ಎಂದು ಮಂಗಲವನ್ನಾಚರಿಸಿ, ಈ ಮಂಗಲ ಶ್ಲೋಕದಲ್ಲಿ ಪಾರ್ವತೀ ಪರಮೇಶ್ವರರು ಶಬ್ದಾರ್ಥದಂತೆ ನಿತ್ಯ ಸಂಬಂಧದಿಂದಿರುವರೆಂದು ಉಲ್ಲೇಖಿಸಿರುತ್ತಾನೆ. ಪಾರ್ವತೀ ಪರಮೇಶ್ವರರೆಂದರೆ ಶಕ್ತಿ-ಶಿವರೆಂದರ್ಥ. ಶಬ್ದವನ್ನು ಬಿಟ್ಟು ಅರ್ಥವೂ, ಅರ್ಥವನ್ನು ಬಿಟ್ಟು ಶಬ್ದವೂ ಹೇಗೆ ಇರುವದಿಲ್ಲವೋ, ಹಾಗೆಯೇ ಶಿವನನ್ನು ಬಿಟ್ಟು ಶಕ್ತಿಯೂ, ಶಕ್ತಿಯನ್ನು ಬಿಟ್ಟು ಶಿವನೂ ಇರುವದಿಲ್ಲವೆಂದು ಈ ಮಹಾಕವಿಯ ಅಭಿಪ್ರಾಯವಾಗಿದೆ.

ವೀರಶೈವಾನಂದ ಚಂದ್ರಿಕೆಯಲ್ಲಿಯೂ ಸಹ—

ನ ಶಿವೇನ ವಿನಾ ಶಕ್ತಿರ್ನಶಕ್ತಿರಹಿತಃ ಶಿವಃ।
ಪುಷ್ಪಗಂಧವದನ್ಯೋನ್ಯಂ ಮಾರುತಾಂಬರಯೋರಿವ॥

ಇದೇ ಭಾವವು ವ್ಯಕ್ತವಾಗಿದೆ.

ವೀರಶೈವ ಸಿದ್ಧಾಂತದಲ್ಲಿ ಬ್ರಹ್ಮವೂ ನಿರ್ವಿಶೇಷವಾಗಿರದೆ ಸವಿಶೇಷವಾಗಿರುವದು. ಪರಬ್ರಹ್ಮವು ಶಕ್ತಿವಿಶಿಷ್ಟವಾದುದರಿಂದ ಸವಿಶೇಷವೆನಿಸಿಕೊಳ್ಳುವದು. ಬ್ರಹ್ಮವು ಸವಿಶೇಷವಾದುದರಿಂದಲೇ ಚರಾಚರಾತ್ಮಕ ಜಗದುತ್ಪತ್ತಿಗೆ

ಕಾರಣೀಭೂತವಾಗಿರುವದು. ಶಕ್ತಿ ವಿಶಿಷ್ಟ ಬ್ರಹ್ಮದಿಂದುತ್ಪನ್ನವಾದ ಜಗತ್ತೂ ಕೂಡ ಶಕ್ತಿ ವಿಶಿಷ್ಟವಾಗುವದು. ಈ ಜಗತ್ತಿನಲ್ಲಿರತಕ್ಕ ಪ್ರತಿಯೊಂದು ಪದಾರ್ಥ ವನ್ನು ಪರ್ಯಾಲೋಚಿಸಿದ್ದಾದರೆ ಪ್ರತಿಯೊಂದು ಪದಾರ್ಥದಲ್ಲಿಯೂ ಒಂದೊಂದು ವಿಧವಾದ ಶಕ್ತಿಯಿರುವದಾಗಿ ಕಂಡುಬರುವದು. ಪೃಥ್ವಿಯಲ್ಲಿ ಧಾರಣಶಕ್ತಿ,ಜಲದಲ್ಲಿ ಆಪ್ಯಾಯನಶಕ್ತಿ,ತೇಜಸ್ಸಿನಲ್ಲಿ ಉಜ್ವಲನಶಕ್ತಿ, ವಾಯುವಿನಲ್ಲಿ ಸ್ಪಂದನಶಕ್ತಿ, ಆಕಾಶದಲ್ಲಿ ವ್ಯಾಪನಶಕ್ತಿ, ಆತ್ಮನಲ್ಲಿ ಬುದ್ಧಿಶಕ್ತಿ ಇರುವದಲ್ಲದೆ ವೃಕ್ಷಾದಿಗಳಲ್ಲಿ ಜಲಾಕರ್ಷಣಾದಿ ಶಕ್ತಿಗಳು, ಅಗ್ನ್ಯಾದಿಗಳಲ್ಲಿ ದಾಹಾದಿ ಶಕ್ತಿಗಳು, ವನಸ್ಪತಿಗಳಲ್ಲಿ ಮಹಾರೋಗಗಳನ್ನು ಗುಣಪಡಿಸುವ ಶಕ್ತಿಯು, ಪಾದರಸದಲ್ಲಿ ತಾಮ್ರವನ್ನು ಸುವರ್ಣವನ್ನಾಗಿ ಮಾಡುವ ಶಕ್ತಿಯು, ವಜ್ರದಲ್ಲಿ ಶಿಲೆಯನ್ನು ಭೇದಿಸುವ ಶಕ್ತಿಯು, ಮಣಿ ಮಂತ್ರಾದಿಗಳಲ್ಲಿ ವಿಷಬಾಧೆಯನ್ನು, ಭೂತ–ಪ್ರೇತ–ಪಿಶಾಚಾದಿಗಳಿಂದುಂಟಾಗುವ ಬಾಧೆಯನ್ನು ಪರಿಹರಿಸುವ ಶಕ್ತಿಯು, ಧ್ವನ್ಯಾಕರ್ಷಕ ಯಂತ್ರ (ರೇಡಿಯೋ)ದಲ್ಲಿ ಧ್ವನಿಯನ್ನು ಆಕರ್ಷಿಸಿ ಅದನ್ನು ವಿಸ್ತಾರಗೊಳಿಸುವ ಶಕ್ತಿಯು, ವಿದ್ಯುತ್ತಿನಲ್ಲಿ ನಾನಾವಿಧ ಯಂತ್ರಚಾಲನಶಕ್ತಿಯು ಸೂಜಿಗಲ್ಲಿನಲ್ಲಿ ಸೂಜಿಯನ್ನು ಆಕರ್ಷಿಸುವ ಶಕ್ತಿಯು ಇದೇ ರೀತಿಯಾಗಿ ಬ್ರಹ್ಮಸೃಷ್ಟ್ಯಂತರ್ಗತ ಸಕಲ ಪದಾರ್ಥಗಳಲ್ಲಿಯೂ ಒಂದೊಂದು ವಿಧವಾದಶಕ್ತಿಯು ಇರುವದು ಲೋಕದಲ್ಲಿ ಪ್ರತಿಯೊಬ್ಬರಿಗೂ ಪ್ರತ್ಯಕ್ಷವಾಗಿ ಕಂಡುಬರುವದಷ್ಟೇ? ಇದರಿಂದ ಸಕಲ ಚರಾಚರಾತ್ಮಕವಾದ ಜಗತ್ತು ಶಕ್ತಿವಿಶಿಷ್ಟವಾಗಿರುವ ದೆಂದೂ ಇಂಥ ಶಕ್ತಿ ವಿಶಿಷ್ಟ ಜಗತ್ತನ್ನು ನಿರ್ಮಿಸಿದ ಬ್ರಹ್ಮವು ಅರ್ಥಾತ್ ಶಕ್ತಿವಿಶಿಷ್ಟವಾದುದೆಂದೂ ಸರ್ವರಿಗೂ ಅನುಭವದಿಂದ ವೇದ್ಯವಾಗುವದು. ಸತ್, ಚಿತ್, ಆನಂದ ಸ್ವರೂಪವಾದ "ಪರಬ್ರಹ್ಮವೂ" ಅಸ್ಮಿ ಪ್ರಕಾಶೇ ನಂದಾಮಿ ಅಂದರೆ ನಾನು ಇದ್ದೇನೆ ಪ್ರಕಾಶಿಸುತ್ತೇನೆ; ಆನಂದಿಸುತ್ತೇನೆ ಎಂಬ ಅನುಭವದಿಂದ ಕೂಡಿರುವದಷ್ಟೇ? ಈ ಅನುಭವವೇ ಪರಬ್ರಹ್ಮದ ವಿಮರ್ಶ ಶಕ್ತಿ.

ಈ ಅನುಭವವು ಆ ಪರಬ್ರಹ್ಮದಲ್ಲಿ ಇರದಿದ್ದರೆ ಆಬ್ರಹ್ಮಕ್ಕೆ ಪ್ರಕಾಶ ರೂಪವಾದ ಸ್ಫಟಿಕ ಶಿಲೆಯಂತೆ ಜಡವೆಂದು ಹೇಳಬೇಕಾಗುವ ಪ್ರಸಂಗ ಬರಬಹುದು. ಸೌಂದರ್ಯ ವಿಶಿಷ್ಟನಾದ ಅಂಧನಿಗೆ ತನ್ನ ಸೌಂದರ್ಯವನ್ನು ತಿಳಿಯುವ ಶಕ್ತಿ ಇಲ್ಲದಿರುವದರಿಂದ ಅವನಿಗೆ ಅವನಸೌಂದರ್ಯವು ವ್ಯರ್ಥವಾಗುವಂತೆ, ಬ್ರಹ್ಮಕ್ಕೆ ತನ್ನ ಸಚ್ಚಿದಾನಂದ ಸ್ವರೂಪವನ್ನು ತಿಳಿಯುವ ಶಕ್ತಿಯಿಲ್ಲದಿದ್ದರೆ, ತನ್ನಲ್ಲಿರುವ ಸಚ್ಚಿದಾನಂದ ಸ್ವರೂಪವೂ ವ್ಯರ್ಥವಾಗುವದಷ್ಟೇ? ಆದುದರಿಂದ ಬ್ರಹ್ಮನಲ್ಲಿ ಸಚ್ಚಿದಾನಂದರೂಪಾನುಭವ ಶಕ್ತಿಯನ್ನು ಒಪ್ಪಲೇಬೇಕಾಗುವದು. ಇದರಿಂದ ಬ್ರಹ್ಮವು ಶಕ್ತಿವಿಶಿಷ್ಟವೆಂದು ಸಿದ್ಧವಾಗುವದು. ಇಂಥಹ ಶಕ್ತಿವಿಶಿಷ್ಟ ಪರಬ್ರಹ್ಮವು "ಅಥಾತೋ ಬ್ರಹ್ಮ ಜಿಜ್ಞಾಸಾ" "ಚೈತನ್ಯಮಾತ್ಮಾ" ಇತ್ಯಾದಿ ಬ್ರಹ್ಮಸೂತ್ರ, ಶಿವಸೂತ್ರಮೊದಲಾದ ವೇದಾಂತಶಾಸ್ತ್ರ ಪ್ರತಿಪಾದ್ಯವಾಗಿರುವದು.

ಸತ್-ಚಿತ್, ಆನಂದ, ನಿತ್ಯ ಪರಿಪೂರ್ಣ ಎಂಬ ಪಂಚ ಲಕ್ಷಣ ಲಕ್ಷಿತವಾದ ಪರಶಿವ ಬ್ರಹ್ಮದಲ್ಲಿ ಆವಿರ್ಭಾವ ಸಂಬಂಧದಿಂದಿರುವ ವಿಮರ್ಶ ಶಕ್ತಿಯ ಸ್ಫುರಣವೇ ಮೂವತ್ತಾರು ತತ್ವಗಳ ರೂಪವಾಗಿ ಪರಿಣಮಿಸುತ್ತಿದೆ. ಆ ಮೂವತ್ತಾರು ತತ್ವಗಳು – ೧ ಶಿವ, ೨ ಶಕ್ತಿ, ೩ ಸದಾಶಿವ, ೪ ಈಶ್ವರ, ೫ ಶುದ್ಧವಿದ್ಯಾ, ೬ ಮಾಯಾ, ೭ ಕಲಾ, ೮ ವಿದ್ಯಾ, ೯ ರಾಗ, ೧೦ ಕಾಲ, ೧೧ ನಿಯತಿ, ೧೨ ಪುರುಷ, ೧೩ ಪ್ರಕೃತಿ, ೧೪ ಬುದ್ಧಿ, ೧೫ ಅಹಂಕಾರ, ೧೬ ಮನಃ, ೧೭ ಶ್ರೋತ್ರ, ೧೮ ತ್ವಕ್, ೧೯ ನೇತ್ರ, ೨೦ ಜಿಹ್ವಾ, ೨೧ ಘ್ರಾಣ, ೨೨ ವಾಕ್, ೨೩ ಪಾಣಿ, ೨೪ ಪಾದ, ೨೫ ಪಾಯು, ೨೬ ಉಪಸ್ಥ, ೨೭ ಶಬ್ದ, ೨೮ ಸ್ಪರ್ಶ ೨೯ ರೂಪ, ೩೦ ರಸ, ೩೧ ಗಂಧ, ೩೨ ಆಕಾಶ, ೩೩ ವಾಯು, ೩೪ ಅಗ್ನಿ, ೩೫ ಜಲ, ೩೬ ಪೃಥ್ವಿ ಇವುಗಳು.

ಪ್ರಥಮದಲ್ಲಿ ಶಕ್ತಿ ವಿಶಿಷ್ಟ ಪರಶಿವ ಬ್ರಹ್ಮವು ಛಾಂದೋಗ್ಯೋಪನಿಷತ್ತಿನಲ್ಲಿ ಹೇಳಿದ "ಬಹು ಸ್ಯಾಂ ಪ್ರಜಾಯೇಯ" ೬-೨-೩ ಎಂಬ ಶ್ರುತ್ಯನುಸಾರವಾಗಿ ಸೃಷ್ಟಿಗುನ್ಮುಖವಾಗಲು ತನ್ನಿಷ್ಟವಾದ ವಿಮರ್ಶ ಶಕ್ತಿಯೇ ಇಚ್ಛಾಶಕ್ತಿ ರೂಪವಾಗಿ ಪರಿಣಮಿಸುವದು.

"ಅನಾದಿ ನಿಧನಾತ್ ಶಾಂತಾತ್ ಶಿವಾತ್ ಪರಮ ಕಾರಣಾತ್
ಇಚ್ಛಾ ಶಕ್ತಿರ್ವಿನಿಷ್ಕ್ರಾಂತಾ ತತೋಜ್ಞಾನಂ ತತಃ ಕ್ರಿಯಾ||
ತತ್ರೋತ್ಪನ್ನಾನಿ ಭೂತಾನಿ ಭುವನಾನಿ ಚತುರ್ದಶ"

ಎಂಬ ಶಿವಾಗಮ ವಚನಾನುಸಾರವಾಗಿ ಉತ್ಪತ್ತಿನಾಶರಹಿತವೂ, ಶಾಂತವೂ, ಪರಮ ಕಾರಣವೂ ಆದ ಪರಶಿವ ಬ್ರಹ್ಮದಿಂದ ಮೊದಲು ಇಚ್ಛಾಶಕ್ತಿಯೂ, ಆ ಇಚ್ಛಾಶಕ್ತಿಯಿಂದ ಜ್ಞಾನಶಕ್ತಿಯೂ, ಕ್ರಿಯಾಶಕ್ತಿಯೂ ಆವಿರ್ಭವಿಸುವವು. ಆ ಇಚ್ಛಾಶಕ್ತಿಗೆ ಜ್ಞಾನಶಕ್ತಿಯು ಅಂತರಂಗವಾಗಿಯೂ, ಕ್ರಿಯಾಶಕ್ತಿಯೂ ಬಹಿರಂಗವಾಗಿಯೂ ಇರುವವು. ಪರಶಿವ ಬ್ರಹ್ಮವು ಜ್ಞಾನಶಕ್ತಿಯಲ್ಲಿ ಬೆರೆತು 'ನಾನು ಸರ್ವಜ್ಞನು' ಎಂಬ ಅಭಿಮಾನವನ್ನು ಪಡೆಯಲು 'ಶಿವತತ್ವ'ವೆನಿಸಿಕೊಳ್ಳುವದು. ಜೇಡರ ಹುಳವು ಜಾಲಕ್ಕೆ ನಿಮಿತ್ತ ಕಾರಣವಾಗುವಂತೆ, ಈ ಶಿವತತ್ವಾತ್ಮಕವಾದ ಪರಶಿವ ಬ್ರಹ್ಮವೇ ಜ್ಞಾನ ವಿಶಿಷ್ಟತ್ವಾಕಾರದಿಂದ ಭಾವೀ ಪ್ರಪಂಚಕ್ಕೆ ನಿಮಿತ್ತ ಕಾರಣವಾಗುವದು.

ಪರಶಿವಬ್ರಹ್ಮವು ಕ್ರಿಯಾಶಕ್ತಿಯಲ್ಲಿ ಬೆರೆತು 'ನಾನು ಸರ್ವ ಕರ್ತೃವು' ಎಂಬ ಅಭಿಮಾನವನ್ನು ಪಡೆಯಲು, 'ಶಕ್ತಿತತ್ವ'ವೆನಿಸಿಕೊಳ್ಳುವದು. ಜೇಡರ ಹುಳವು ಜಾಲೋತ್ಪತ್ತಿ ಯೋಗ್ಯ ಶರೀರ ವಿಶೇಷ ವಿಶಿಷ್ಟತ್ವಾಕಾರದಿಂದ ಜಾಲಕ್ಕೆ ಉಪಾದಾನ ಕಾರಣವಾಗುವಂತೆ, ಈ ಶಕ್ತಿ ತತ್ವಾತ್ಮಕವಾದ ಪರಶಿವಬ್ರಹ್ಮವೇ ಕ್ರಿಯಾ ವಿಶಿಷ್ಟತ್ವಾಕಾರದಿಂದ ಭಾವೀ ಪ್ರಪಂಚಕ್ಕೆ ಉಪಾದಾನಕಾರಣವೂ ಆಗುವದು.

ಪರಶಿವಬ್ರಹ್ಮವೊಂದೇ ಪ್ರಪಂಚಕ್ಕೆ ಅಭಿನ್ನ ನಿಮಿತ್ತೋಪಾದಾನ ಕಾರಣವಾಗುವದೆಂಬುದನ್ನು ಮುಂಡಕ ಶ್ರುತಿಯು—

ಯಥೋರ್ಣನಾಭಿಃ ಸೃಜತೇ ಗೃಹ್ಣತೇ ಚ (೧-೧-೭)

ಎಂಬೀ ವಾಕ್ಯದಿಂದ ಪ್ರತಿಪಾದಿಸುತ್ತಿರುವುದು.

ಈ ಶಕ್ತಿತತ್ತ್ವವು ಇಚ್ಛಾಶಕ್ತಿಗೆ ಅಂತರಂಗವಾದ ಜ್ಞಾನಶಕ್ತಿಯಲ್ಲಿ ಪ್ರವೇಶಿಸಿ, ಜಲಾಧಿವಾಸದಿಂದ ಅಂಕುರೋನ್ಮುಖವಾದ ಕಡಲೆಯಂತೆ ಉಬ್ಬಿ, ಅಂಕುರಾಯಮಾಣವಾದ ಭಾವೀ ಪ್ರಪಂಚವನ್ನು ಕುರಿತು– 'ಅಹಮಿದಂ'–'ನಾನು ಈ ಪ್ರಪಂಚವು' ಎಂದು ಅಭಿಮಾನವನ್ನು ಪಡೆಯಲು 'ಸದಾಶಿವತತ್ತ್ವ'ವೆನಿಸಿಕೊಳ್ಳುವದು. ಈ ಶಕ್ತಿ ತತ್ತ್ವವು ಇಚ್ಛಾಶಕ್ತಿಗೆ ಬಹಿರಂಗವಾದ ಕ್ರಿಯಾಶಕ್ತಿಯಲ್ಲಿ ಪ್ರವೇಶಿಸಿ, ಸುಕ್ಷೇತ್ರದಲ್ಲಿ ಬಿತ್ತಿದ ಸುಬೀಜದಂತೆ ಅಂಕುರಿಸಿ, ಅಂಕುರಿತವಾದ ಪ್ರಪಂಚವನ್ನು ಕುರಿತು— 'ಅಹಮಿದಂ'—'ನಾನು ಈ ಪ್ರಪಂಚವು' ಎಂದು ಅಭಿಮಾನವನ್ನು ಪಡೆಯಲು 'ಈಶ್ವರತತ್ತ್ವ'ವೆನಿಸಿಕೊಳ್ಳುವುದು.

ಈ ಶಕ್ತಿತತ್ತ್ವವು, ಸಾಗರತರಂಗ ನ್ಯಾಯದಂತೆ (ಸಮುದ್ರಕ್ಕೂ ಸಮುದ್ರದಲ್ಲಿರುವ ತೆರೆಗಳಿಗೂ ಅಭೇದವಿರುವಂತೆ) 'ಅಹಮಿದಂ-ನಾನು' ಎಂಬ ಅಹಂಕಾರಕ್ಕೂ 'ಇದು' ಎಂಬ ಪ್ರಪಂಚಕ್ಕೂ ಅಭೇದ ಜ್ಞಾನವನ್ನು ಪಡೆಯಲು, "ಶುದ್ಧ ವಿದ್ಯಾತತ್ತ್ವ"ವೆನಿಸಿಕೊಳ್ಳುವುದು.

ಶುದ್ಧ ವಿದ್ಯಾತತ್ತ್ವ ರೂಪವಾಗಿ ಪರಿಣಮಿಸಿರುವ ಈ ಶಕ್ತಿತತ್ತ್ವವು ಮಯೂರಾಂಡರಸ ನ್ಯಾಯದಂತೆ (ನವಿಲಿನ ತತ್ತಿಯ ರಸದಲ್ಲಿ ಪಾದ-ಪಕ್ಷವರ್ಣವೈಚಿತ್ರ್ಯಾದಿಗಳು ವಿಭಾಗ ರೂಪವಾಗಿ ಸೂಕ್ಷ್ಮರೂಪದಿಂದಿರುವಂತೆ) ತನ್ನಲ್ಲಿಡಕವಾಗಿರುವ ಪ್ರಪಂಚ ನಿರ್ಮಾಣಕಾರಣೀಭೂತ ಸೂಕ್ಷ್ಮ ಪದಾರ್ಥಗಳಲ್ಲಿ ಅನ್ಯೋನ್ಯಾಭಾವ ರೂಪಭೇದಬುದ್ಧಿ ಪ್ರಾಧಾನ್ಯದಿಂದ 'ಮಾಯಾ ತತ್ತ್ವ'ವೆನಿಸಿಕೊಳ್ಳುವದು.

ಕಲಾ-ವಿದ್ಯಾ-ರಾಗ-ಕಾಲ ನಿಯತಿಗಳೆಂಬ ಪಂಚತತ್ತ್ವಗಳು ಪುರುಷನಿಗೆ ಕಂಚುಕರೂಪವಾಗಿರುವುದರಿಂದ ಮೊದಲು ಕಂಚುಕಿಯಾದ ಪುರುಷ ತತ್ತ್ವವನ್ನು ನಿರೂಪಿಸಿ, ಬಳಿಕ ಕಲಾದಿ ಪಂಚತತ್ತ್ವಗಳನ್ನು ನಿರೂಪಿಸುವುದಾಗುವುದು.

ಕಾಷ್ಠಯೋಗದಿಂದ ಅಗ್ನಿ ಕಣಗಳು ಆವಿರ್ಭವಿಸುವಂತೆ, ಪರಶಿವನ ಇಚ್ಛಾಶಕ್ತಿಯ ಯೋಗದಿಂದ ಆವಿರ್ಭವಿಸುವ ಶಿವಾಂಶವೇ ಮಾಯಾಶಕ್ತಿಯಲ್ಲಿ ಪ್ರವೇಶಿಸಿ, 'ಪುರುಷತತ್ತ್ವ'ವೆನಿಸಿಕೊಳ್ಳುವದು. ಈ ಪುರುಷತತ್ತ್ವಕ್ಕೆ ಮಾಯಾಮಲ ಸಂಬಂಧವುಂಟಾಗುವದರಿಂದ ಆತ್ಮನಲ್ಲಿ ಅನಾತ್ಮತ್ವಜ್ಞಾನವೂ, ಅನಾತ್ಮ

ವಸ್ತುಗಳಲ್ಲಿ ಆತ್ಮಜ್ಞಾನವೂ 'ನಾನು ಸುಖಿಯು-ನಾನು ದುಃಖಿಯು' ಎಂಬ ಬುದ್ಧಿಯೂ ಉತ್ಪನ್ನವಾಗುವವು. ಪುರುಷನು ಈ ರೀತಿಯಾಗಿ ಆಣವಾದಿ ಮಲಗಳಿಂದ ಯುಕ್ತನಾಗುವುದರಿಂದ ಸಂಸಾರಿಯೆನಿಸುವನು.

ಪುರುಷನು ಮಾಯಾಮಲಾವೃತನಾಗಿ ತನ್ನ ಸರ್ವಕರ್ತೃತ್ವ ಸರ್ವಜ್ಞತ್ವ ಪೂರ್ಣತ್ವ-ನಿತ್ಯತ್ವ-ವ್ಯಾಪಕತ್ವ ರೂಪ ಶಕ್ತಿಗಳನ್ನು ಕಳೆದುಕೊಂಡು, ಕಿಂಚಿತ್ಕರ್ತೃತ್ವಾದಿ ಶಕ್ತಿಗಳಿಂದ ಯುಕ್ತನಾಗುವನು. ಪುರುಷನ ಈ ಕಿಂಚಿತ್ಕರ್ತೃತ್ವ ರೂಪ ಶಕ್ತಿಯೇ 'ಕಲಾತತ್ವ'ವೆನಿಸಿಕೊಳ್ಳುವದು. ಕಿಂಚಿಜ್ಞತ್ವ ರೂಪ ಶಕ್ತಿಯೇ 'ವಿದ್ಯಾತತ್ತ್ವ'ವೆನಿಸಿಕೊಳ್ಳುವದು. ಅಪೂರ್ಣತ್ವ ರೂಪ ಶಕ್ತಿಯೇ ಸ್ರಕ್ಚಂದನವನಿತಾದಿ ವಿಷಯಕ ಪ್ರೀತಿ ರೂಪವಾದ 'ರಾಗತತ್ತ್ವ'ವೆನಿಸಿಕೊಳ್ಳುವುದು. ಅನಿತ್ಯತ್ತ್ವ ರೂಪ ಶಕ್ತಿಯೇ ಭೂತ ಭವಿಷ್ಯದ್ವರ್ತಮಾನ ಕಾಲಗಳ ವ್ಯವಹಾರಕ್ಕೆ ಅಸಾಧಾರಣ ಕಾರಣವಾದ 'ಕಾಲತತ್ತ್ವ'ವೆನಿಸಿಕೊಳ್ಳುವುದು. ಅವ್ಯಾಪಕತ್ತ್ವ ರೂಪ ಶಕ್ತಿಯೇ ಈ ಕಾರಣದಿಂದ ಕಾರ್ಯವೇ ಹುಟ್ಟುವದು. ಮತ್ತೊಂದು ಹುಟ್ಟುವದಿಲ್ಲವೆಂಬ ನಿಯಮಕ್ಕೆ ಅಸಾಧಾರಣ ಕಾರಣವಾದ 'ನಿಯಮತತ್ತ್ವ'ವೆನಿಸಿಕೊಳ್ಳುವುದು.

ಕಾರ್ಯೋನ್ಮುಖ್ಯ ಗರ್ಭಿತವಾದ ಇಚ್ಛಾಶಕ್ತಿಯು ಸ್ವಗತವಾದ ಜ್ಞಾನಶಕ್ತಿ ಕ್ರಿಯಾಶಕ್ತಿಗಳಲ್ಲಿರುವ "ಜ್ಞಾನಂ ಕ್ರಿಯಾ ನ ಭವತಿ ಕ್ರಿಯಾ ಜ್ಞಾನಂ ನ ಭವತಿ" ಎಂಬ ಅನ್ಯೋನ್ಯಾಭಾವ ರೂಪ ಭೇದ ಬುದ್ಧಿ ಪ್ರಧಾನವಾದ ಮಾಯಾತತ್ತ್ವದಲ್ಲಿ ಪ್ರತಿಸ್ಫುರಿಸಲು, 'ಪ್ರಕೃತಿ ತತ್ತ್ವ'ವೆನಿಸಿಕೊಳ್ಳುವುದು. ಈ ಪ್ರಕೃತಿ ತತ್ತ್ವವು ಸುಖ ದುಃಖ ಮೋಹಗಳಿಗೆ ಕಾರಣಗಳಾದ ಸತ್ವರಜಸ್ತಮೋಗುಣಗಳ ಸಾಮ್ಯಾವಸ್ಥಾರೂಪವಾಗಿದ್ದು ಮಹತತ್ತ್ವವೇ ಮೊದಲ್ಗೊಂಡು ಪೃಥಿವ್ಯಂತವಾಗಿರುವ ೨೩ ತತ್ತ್ವಗಳಿಗೆ ಮೂಲ ಕಾರಣವಾಗಿರುವುದು.

ಪ್ರಕೃತಿತತ್ತ್ವ ರೂಪವಾದೀ ಶಕ್ತಿ ತತ್ತ್ವವೇ "ಇದಮಿತ್ಥಂ" ಇದ್ದು ಹೀಗೆಯೇ ಸರಿ ಎಂಬ ವಿಷಯಕ್ಕೆ ಕಾರಣವಾದುದಾಗಿ "ಬುದ್ಧಿತತ್ವ"ವೆನಿಸಿಕೊಳ್ಳುವುದು.

ಇದಕ್ಕೆ ಮಹತ್ತತ್ತ್ವವೆಂಬ ನಾಮಾಂತರವೂ ಉಂಟು. ಬುದ್ಧಿತತ್ತ್ವ ರೂಪಾದೀ ಶಕ್ತಿ ತತ್ತ್ವವೇ "ನಾನು-ನನ್ನದು" ಎಂಬ ಅಹಂಕಾರ-ಮಮಕಾರಗಳಿಗೆ ಕಾರಣವಾದುದಾಗಿ, "ಅಹಂಕಾರತತ್ತ್ವ"ವೆನಿಸುವದು. ಅಹಂಕಾರ ತತ್ತ್ವ ರೂಪವಾದೀಶಕ್ತಿತತ್ತ್ವವೇ "ಸ್ಥಾಣುರ್ವಾ ಪುರುಷೋವಾ" ಎಂಬ ಸಂಕಲ್ಪ ವಿಕಲ್ಪಗಳಿಗೆ ಕಾರಣವಾದುದಾಗಿ "ಮನಸ್ತತ್ತ್ವ"ವೆನಿಸಿಕೊಳ್ಳುವುದು. ಬುದ್ಧ್ಯಹಂಕಾರ ಮನಸ್ತತ್ತ್ವಗಳು ಶರೀರದೊಳಗಿರುವುದರಿಂದ ಈ ಮೂರೂ "ಅಂತಃಕರಣ"ವೆನಿಸುವುದು. ಈ ಅಂತಃಕರಣವು ಇಚ್ಛಾಶಕ್ತಿ ಪ್ರಧಾನವಾಗಿರುವುದು.

ಅಂತಃಕರಣ ರೂಪವಾಗಿ ಪರಿಣಮಿಸಿದ ಈ ಶಕ್ತಿತತ್ತ್ವವೇ, ಬಾಹ್ಯ ಶರೀರ ವನ್ನವಲಂಬಿಸಿ ಶಬ್ದ ಜ್ಞಾನಕ್ಕೆ ಸಾಧನವಾಗಿ, "ಶ್ರೋತ್ರತತ್ತ್ವ"ವೆಂದೂ ಸ್ಪರ್ಶ ಜ್ಞಾನಕ್ಕೆ ಸಾಧನವಾಗಿ, "ತ್ವಕ್‌ತತ್ತ್ವ"ವೆಂದೂ ರೂಪಜ್ಞಾನಕ್ಕೆ ಸಾಧನವಾಗಿ, "ನೇತ್ರತತ್ತ್ವ"ವೆಂದೂ ರಸಜ್ಞಾನಕ್ಕೆ ಸಾಧನವಾಗಿ, "ಜಿಹ್ವಾತತ್ತ್ವ"ವೆಂದೂ ಗಂಧ ಜ್ಞಾನಕ್ಕೆ ಸಾಧನವಾಗಿ, ಘ್ರಾಣತತ್ತ್ವ"ವೆಂದೂ ಹೇಳಿಸಿಕೊಳ್ಳುವದು. ಈ ಐದು ಇಂದ್ರಿಯಗಳು ಜ್ಞಾನಶಕ್ತಿ ಪ್ರಧಾನವಾದುದರಿಂದ ಜ್ಞಾನೇಂದ್ರಿಯಗಳೆಂದು ಹೇಳಿಸಿಕೊಳ್ಳುವವು.

ಜ್ಞಾನೇಂದ್ರಿಯ ರೂಪವಾಗಿ ಪರಿಣಮಿಸಿದ ಈ ಶಕ್ತಿತತ್ತ್ವವೇ ಉಚ್ಚಾ ರಣ ಕ್ರಿಯೆಗೆ ಸಾಧನವಾಗಿ, "ವಾಕ್ತತ್ತ್ವ"ವೆಂದೂ, ಗಮನಾಗಮನಾದಿ ಕ್ರಿಯೆ ಗಳಿಗೆ ಸಾಧನವಾಗಿ, 'ಪಾದತತ್ತ್ವ'ವೆಂದೂ, ಮಲಪರಿತ್ಯಾಗಕ್ಕೆ ಸಾಧನವಾಗಿ, "ಪಾಯುತತ್ತ್ವ"ವೆಂದೂ, ರೇತೋಮೂತ್ರಪರಿತ್ಯಾಗಕ್ಕೆ ಸಾಧನವಾಗಿ "ಉಪಸ್ಥ ತತ್ತ್ವ"ವೆಂದೂ ಹೇಳಿಸಿಕೊಳ್ಳುವುದು. ಈ ಐದು ಇಂದ್ರಿಯಗಳು ಕ್ರಿಯಾಶಕ್ತಿ ಪ್ರಧಾನವಾದುದರಿಂದ ಕರ್ಮೇಂದ್ರಿಯಗಳೆಂದು ಹೇಳಿಸಿಕೊಳ್ಳುವವು. ಈ ಮೇಲೆ ಹೇಳಿದ ಬುದ್ಧಿತತ್ತ್ವಾದಿ ತ್ರಯೋದಶ ತತ್ತ್ವಗಳು ಇಚ್ಛಾಶಕ್ತಿ, ಜ್ಞಾನಶಕ್ತಿ, ಕ್ರಿಯಾಶಕ್ತಿ ಪ್ರಧಾನವಾಗಿರುವವು.

ಈ ಶಕ್ತಿತತ್ವವೇ ಕೇವಲ ಶ್ರೋತ್ರೇಂದ್ರಿಯ ಗ್ರಾಹ್ಯವಾದ "ಶಬ್ದತತ್ವ" ರೂಪವಾಗಿ ಕೇವಲತ್ವಗಿಂದ್ರಿಯ ಗ್ರಾಹ್ಯವಾದ "ಸ್ಪರ್ಶತತ್ವ" ರೂಪವಾಗಿ ಕೇವಲ ನೇತ್ರೇಂದ್ರಿಯ ಗ್ರಾಹ್ಯವಾದ "ರೂಪತತ್ವ" ರೂಪವಾಗಿ ಕೇವಲ ಜಿಹ್ವೇಂದ್ರಿಯ ಗ್ರಾಹ್ಯವಾದ "ರಸತತ್ವ" ರೂಪವಾಗಿ ಕೇವಲ ಘ್ರಾಣೇಂದ್ರಿಯ ಗ್ರಾಹ್ಯವಾದ "ಗಂಧತತ್ವ" ರೂಪವಾಗಿ ಪರಿಣಮಿಸುವುದು. ಶಬ್ದದಲ್ಲಿ ಧ್ವನ್ಯಾತ್ಮಕ, ವರ್ಣಾ ತ್ಮಕವೆಂದೂ, ಸ್ಪರ್ಶದಲ್ಲಿ ಶೀತೋಷ್ಣಸ್ಪರ್ಶವೆಂದೂ, ರೂಪದಲ್ಲಿ ನೀಲಪೀತಾದಿ ರೂಪವೆಂದೂ, ರಸದಲ್ಲಿ ಮಧುರಾಮ್ಲಾದಿ ರಸವೆಂದೂ, ಗಂಧದಲ್ಲಿ ಸುಗಂಧ ದುರ್ಗಂಧವೆಂದೂ ವಿಭಾಗವು ವ್ಯಕ್ತವಾಗದೆ ಸಾಮಾನ್ಯ ರೂಪವಾಗಿರುವದರಿಂದ ಶಬ್ದಾದಿಗಳು ತನ್ಮಾತ್ರಗಳೆಂದೂ ಹೇಳಿಸಿಕೊಳ್ಳುವವು.

ಪೂರ್ವೋಕ್ತವಾದೀ ಶಕ್ತಿತತ್ವದ ಶಬ್ದೈಕಗುಣವುಳ್ಳ "ಆಕಾಶತತ್ವ" ರೂಪ ವಾಗಿಯೂ, ಸ್ಪರ್ಶವೆಂಬ ಪ್ರಧಾನಗುಣವುಳ್ಳ "ವಾಯುತತ್ವ" ರೂಪವಾಗಿಯೂ, ರೂಪವೆಂಬ ಪ್ರಧಾನಗುಣವುಳ್ಳ "ತೇಜಸ್ತತ್ವ" ರೂಪವಾಗಿಯೂ, ರಸವೆಂಬ ಪ್ರಧಾನಗುಣವುಳ್ಳ "ಜಲತತ್ವ" ರೂಪವಾಗಿಯೂ ಗಂಧವೆಂಬ ಪ್ರಧಾನಗುಣವುಳ್ಳ "ಪೃಥ್ವೀತತ್ವ" ರೂಪವಾಗಿಯೂ ಪರಿಣಮಿಸುವದು. ಈ ಪಂಚಭೂತಗಳಲ್ಲಿ ಉತ್ತರೋತ್ತರ ಭೂತಗಳೊಳಗೆ ಪೂರ್ವಾಪೂರ್ವಭೂತಗಳ ಗುಣಗಳು ಅನುವರ್ತಿ ಸುವವು.

ನಿಗಮಾಗಮ ಪ್ರಸಿದ್ಧವಾದೀ ಮುವತ್ತಾರು ತತ್ವಗಳು ಸಚ್ಚಿದಾನಂದ ರೂಪವಾದ, ಶಕ್ತಿವಿಶಿಷ್ಟಪರ ಶಿವಬ್ರಹ್ಮದ ಪರಿಣಾಮರೂಪವಾಗಿರುವದರಿಂದ ವೀರಶೈವ ಮತವು ಅವಿಕೃತ ಪರಿಣಾಮವನ್ನೂ ಜಗತ್ಸತ್ಯತ್ವವಾದವನ್ನೂ ಬೋಧಿಸುತ್ತಿರುವುದು.

ಯಜ್ಞ, ಯಾಗ, ಕ್ರತು

ಪ್ರತಿಯೊಬ್ಬ ದರ್ಶನಕಾರರು ತಮ್ಮ ವಿಚಾರಗಳನ್ನು ಜನರ ಮುಂದೆ ಇರಿಸುವದಕ್ಕಾಗಿ ಯಾವ ಶಾಸ್ತ್ರಗಳನ್ನು ಬರೆಯುತ್ತಿರುವನೋ ಅವುಗಳಲ್ಲಿ ಭಾಷೆಯು ಮತ್ತು ವ್ಯಾಖ್ಯೆಯು ಉದ್ದುದ್ದವಾದ ವಾಕ್ಯಗಳನ್ನು ಸೇರಿಸಬಾರದೆಂದು ಕೆಲವು ಪಾರಿಭಾಷಿಕ ಶಬ್ದಗಳನ್ನು ಕಲ್ಪಿಸುವರು ಹಾಗೂ ಉತ್ಪತ್ತಿ ರೂಢಿ ಮೊದಲಾದವುಗಳಿಂದಲೇ ಅವುಗಳ ಅರ್ಥವನ್ನು ನಿರ್ಣಯ ಮಾಡದೇ ತಮಗೆ ಅಭಿಪ್ರೇತವಾದುದನ್ನೇ ಆಯಾ ಪಾರಿಭಾಷಿಕ ಶಬ್ದಗಳಿಗೆ ಅರ್ಥ ಕಲ್ಪನೆ ಮಾಡುವರು. ಪ್ರಸಂಗಾನುಸಾರವಾಗಿ ಆಯಾ ಶಬ್ದಗಳ ರೂಢಾರ್ಥಗಳನ್ನು ಒತ್ತಟ್ಟಿಗಿಟ್ಟು ತಾವು ಯೋಚಿಸಿದ ಅರ್ಥಗಳಿಂದಲೇ ತಮ್ಮ ದರ್ಶನಗಳಲ್ಲಿ ಆ ಶಬ್ದಗಳನ್ನು ಉಪಯೋಗಿಸುವರು. ಒಬ್ಬ ದರ್ಶನಕಾರನು ಒಂದು ಶಬ್ದವನ್ನು ಒಂದು ಅರ್ಥದಿಂದ ಉಪಯೋಗಿಸಿದರೆ, ಅನ್ಯ ದರ್ಶನಕಾರನು ಆ ಶಬ್ದವನ್ನು ಅದೇ ಅರ್ಥದಲ್ಲಿ ಉಪಯೋಗ ಮಾಡೇ ತೀರಬೇಕೆಂಬ ನಿಯಮವಿಲ್ಲ. ಇಷ್ಟೇ ಅಲ್ಲ, ಇತರರಿಗಿಂತ ಬೇರೆಯಾದ ಅರ್ಥದಲ್ಲಿ, ಕೆಲವು ಪ್ರಸಂಗದಲ್ಲಿ ವಿಪರೀತಾರ್ಥಗಳಲ್ಲಿಯೂ ಉಪಯೋಗಿಸಿರುವ ಉದಾಹರಣೆಗಳು ಅನೇಕವುಂಟು. ವಿಸ್ತಾರಭಯದಿಂದ ಪ್ರಕೃತ್ತದಲ್ಲಿ ಒಂದನ್ನೇ ತೋರಿಸುತ್ತವೆ. ೧) ಪ್ರತ್ಯಕ್ಷ, ೨) ಅನುಮಾನ ಎಂಬ ಎರಡೂ ಪಾರಿಭಾಷಿಕ ಶಬ್ದಗಳನ್ನು ದರ್ಶನಕಾರರು ಯಾವ-ಯಾವ ಬಗೆಯಿಂದ ಉಪಯೋಗಿಸಿರುವರೆಂಬುದನ್ನು ನೋಡೋಣ. ನ್ಯಾಯ ದರ್ಶನಕಾರರು- ಇಂದ್ರಿಯಗಳು ಪದಾರ್ಥಗಳೊಡನೆ ಸಂಬದ್ಧವಾಗುವುದರಿಂದ ಉಂಟಾಗುವ ಜ್ಞಾನಕ್ಕೆ 'ಪ್ರತ್ಯಕ್ಷ' ಎಂದೂ, ಹೊಗೆಯುಳ್ಳ ಬೆಟ್ಟವನ್ನು ನೋಡಿ, ಬೆಂಕಿ-ಹೊಗೆಗಳ ಸಾಹಚರ್ಯ ನಿಯಮದಿಂದ, ಹೊಗೆಯನ್ನು ಕಂಡು ಅಲ್ಲಿ ಬೆಂಕಿಯನ್ನು ಊಹಿಸಿ ತಿಳಿಯುವುದೇ ಅನುಮಾನ ಅದಕ್ಕೆ ಸಾಧನವಾದುದೇ 'ಅನುಮಾನ'ವೆಂದು ಹೇಳುವರು. ಆದರೆ, ಇದನ್ನೇ ವೇದಾಂತ ದರ್ಶನಕಾರರು- "ಅಪಿ ಸಂರಾಧನೇ ಪ್ರತ್ಯಕ್ಷಾನುಮಾನಾಭ್ಯಾಂ" (ಬ್ರ. ಸೂ. ೩-೨-೧೪) ಎಂಬಲ್ಲಿ ಪ್ರತ್ಯಕ್ಷವೆಂದರೆ 'ಶ್ರುತಿ' ಎಂದೂ, ಅನುಮಾನವೆಂದರೆ 'ಸ್ಮೃತಿ' ಎಂದೂ ಅರ್ಥ ಮಾಡುವರು. ಅದರಂತೆ, ಪೂರ್ವ ಮೀಮಾಂಸಕರು ಯಜ್ಞ, ಯಾಗ, ಕ್ರತು ಮುಂತಾದ ಶಬ್ದಗಳ ಅರ್ಥವನ್ನು ಕರ್ಮಕಾಂಡದಲ್ಲಿ ಒಂದು ವಿಧವಾಗಿ ಮಾಡಿದರೆ, ಉತ್ತರ ಮೀಮಾಂಸಕರು ಬ್ರಾಹ್ಮಣ, ಆರಣ್ಯಕ ಹಾಗೂ ಉಪನಿಷತ್ತುಗಳಲ್ಲಿ ಇವೇ

ಶಬ್ದಗಳಿಗೆ ಬೇರೆ ವಿಧವಾಗಿ ಅರ್ಥ ಮಾಡುವರು. ಉದಾಹರಣೆಗಾಗಿ— ಛಾಂದೋಗ್ಯೋಪನಿಷತ್ತಿನ ಮೂರನೇ ಅಧ್ಯಾಯದ ಹದಿನಾಲ್ಕನೆಯ ಖಂಡದ ಮಂತ್ರದಲ್ಲಿ—

"ಸರ್ವಂ ಖಲ್ವಿದಂ ಬ್ರಹ್ಮ, ತಜ್ಜಲಾನಿತಿ ಶಾಂತ ಉಪಾಸೀತಾಥ
ಖಲು **ಕ್ರತು**ಮಯಃ ಪುರುಷೋ ಯಥಾ **ಕ್ರತು**ರಸ್ಮಿನ್-ಲ್ಲೋಕೇ
ಪುರುಷೋ ಭವತಿ ತಥೇತಃ ಪ್ರೇತ್ಯ ಭವತಿ ಸ ಕ್ರತುಂ ಕುರ್ವೀತ ॥೧॥
ಮನೋಮಯಃ ಪ್ರಾಣಶರೀರೋ ಭಾ-ರೂಪಃ ಸತ್ಯಸಂಕಲ್ಪ
ಆಕಾಶಾತ್ಮಾ ಸರ್ವಕರ್ಮಾ ಸರ್ವಕಾಮಃ......."

ಎಂಬಲ್ಲಿ ಸತ್ಯಸಂಕಲ್ಪನೂ ಆಕಾಶಸ್ವರೂಪನೂ ಸರ್ವಕಾಮಾದಿ ಗುಣಯುಕ್ತನೂ ಆದ **ಪರಶಿವನೇ ಕ್ರತು** ಶಬ್ದವಾಚ್ಯನಾಗಿರುವನು. ಇಂತಹ ಕ್ರತು ಶಬ್ದಕ್ಕೆ ವಾಚ್ಯನಾದ ಶಿವನನ್ನು ಉಪಾಸನೆಮಾಡಿರಿ ಎಂಬುದೇ ಇದರ ಸಾರ.

ಭಗವದ್ಗೀತೆಯಲ್ಲಿಯೂ ಯಜ್ಞ ಶಬ್ದದ ಅರ್ಥವು ಬೇರೆ ರೀತಿಯಾಗಿ ಮಾಡಲ್ಪಟ್ಟಿದೆ:

"ದ್ರವ್ಯಯಜ್ಞಾಸ್ತಪೋಯಜ್ಞಾ ಯೋಗಯಜ್ಞಾಸ್ತಥಾಪರೇ।
ಸ್ವಾಧ್ಯಾಯ-ಜ್ಞಾನಯಜ್ಞಾಶ್ಚ ಯತಯಃ ಸಂಶಿತವ್ರತಾಃ॥"

(ಭಗವದ್ಗೀತೆ ೪-೨೮)

ಎಂಬುದಾಗಿ ತಪಸ್ಸು, ಯೋಗ, ವೇದಾಧ್ಯಯನ, ಜ್ಞಾನ ಹಾಗೂ ದಾನಗಳಿಗೇನೇ ಯಜ್ಞ ಎಂದು ಹೇಳಿದೆ.

ವೀರಶೈವ ದರ್ಶನಕಾರರೂ ಸಹ, ಯಜ್ಞ-ಯಾಗಾದಿಗಳ ಅರ್ಥವನ್ನು ಬೇರೆ-ಬೇರೆಯಾಗಿ ಮಾಡಿರುವರು: ಶ್ರೀ ರೇಣುಕಾಚಾರ್ಯರು-

"ಶಿವಾರ್ಥೇ ದೇಹ ಸಂಶೋಷಸ್ತಪಃ; ಕೃಚ್ಛ್ರಾದಿ ನೋ ಮತಮ್।
ಶಿವಾರ್ಚಾ ಕರ್ಮ ವಿಜ್ಞೇಯಂ; ಬಾಹ್ಯಂ ಯಾಗಾದಿ ನೋಚ್ಯತೇ॥"

(ಸಿದ್ಧಾಂತ ಶಿಖಾಮಣಿ, ೯-೨೨)

ಎಂದು ಮುಂತಾಗಿ ವಿಶದೀಕರಿಸುತ್ತ,

"ತಪಃ ಕರ್ಮ ಜಪೋ ಧ್ಯಾನಂ ಜ್ಞಾನಂ ಚೇತ್ಯನುಪೂರ್ವ ಕಮ್॥"

(ಸಿ. ಶಿ. ೯-೨೧)

ಎಂಬುದಾಗಿ ೧) ಯೋಗಾಽನುಷ್ಠಾನ, ೨) ಕಾಯಕ, ೩) ಜಪ, ೪) ಧ್ಯಾನ ಮತ್ತು ೫) ಶಿವಾನುಭವ- ಈ ಐದು ವೀರಶೈವರ 'ಪಂಚಯಜ್ಞ'ಗಳೆಂದು ನಿರೂಪಿಸಿರುವರು. ಅರ್ಥಾತ್ ಬ್ರಾಹ್ಮಣಾದಿ-ತ್ರಿವರ್ಣಗಳಲ್ಲಿ, ದ್ವೈತಾದಿ ಮತಗಳಲ್ಲಿ ಯಾವುದನ್ನಾದರೂ ಆಶ್ರಯಿಸಿದ ಗುರುವಿನಿಂದಾದ

ಉಪನಯನದಿಂದ 'ದ್ವಿಜ'ನಾಗಿ ಬ್ರಹ್ಮಚರ್ಯಾದ್ಯಾಶ್ರಮಗಳಲ್ಲಿ ಕ್ರಮವಾಗಿ ನಡೆದು, ಕೊನೆಗೆ ಜುಟ್ಟು-ಜನಿವಾರಗಳನ್ನು ತ್ಯಜಿಸಿ, ಸನ್ಯಾಸಿಯಾಗಿ ನಿಂತ ಕಾಲದಲ್ಲಿ ಅವನು ಯಾವ ಕೊನೆಯ ಮೆಟ್ಟಲಲ್ಲಿರುವನೋ ಅದೇ ಮೆಟ್ಟಲಲ್ಲಿ ವೀರಶೈವರಾದವರು ದೀಕ್ಷಾ ಸಂಸ್ಕಾರವಾದ ಸಮಯದಲ್ಲಿಯೇ-ಮೊಟ್ಟ ಮೊದಲಿಗೇ-ಆ ಮೆಟ್ಟಲಲ್ಲಿರುವರು.

"ಯಥಾ ಮತೇಷು ಸರ್ವೇಷು ತುರೀಯತ್ವೇನ ಕಥ್ಯತೇ।
ಸನ್ಯಾಸ ಇತ್ಯಯಂ ದೇವಿ! ವೀರಶೈವಸ್ತಥಾಽಽಶ್ರಮಃ॥"

ಅಂದರೆ, ಬೇರೆ ಮತದವರ ಅಂತಿಮ ಮೆಟ್ಟಲು, ವೀರಶೈವರ ಪ್ರಥಮ ಮೆಟ್ಟಲು ಎಂದು ಆಗಮವು ಉದ್ಘೋಷಿಸಿದೆ.

ವಿವೇಚನಾತ್ಮಕವಾದ ಈ ತತ್ತ್ವಜ್ಞಾನದ ಬಗೆಗೆ ಸಾಕಷ್ಟು ವಿಸ್ತರಿಸಬಹುದು. ಈ ಶಕ್ತಿ ವಿಶಿಷ್ಟಾದ್ವೈತ ಶಿವಾಽದ್ವೈತ ಶಕ್ತಿಯ ಮರ್ಮವನ್ನು ಪ್ರತಿಯೊಬ್ಬರು ತಿಳಿದುಕೊಂಡು, ಅದರಂತೆ ಆಚರಿಸಿದ್ದಾದರೆ ಸರ್ವರೂ ಶಕ್ತಿಯುತರಾಗಲು ಸಾಧ್ಯ.

ಇದು ವಿಜ್ಞಾನ ಯುಗವಾದುದರಿಂದ ಜನತೆಯಲ್ಲಿ ದಿನ ದಿನಕ್ಕೂ ವಿಚಾರ ಕ್ರಾಂತಿ ನಡೆದಿದೆ. ಆದುದರಿಂದ "ಸ್ವಧರ್ಮೇ ನಿಧನಂ ಶ್ರೇಯಃ; ಪರಧರ್ಮೋ ಭಯಾವಹಃ" (ಗೀತಾ ೩-೩೫) ಎಂಬುದನ್ನು ಸ್ಮರಿಸಿಕೊಂಡು, ನಮ್ಮ ಧರ್ಮವನ್ನು ಬಿಡದೆ, ಅನ್ಯ ಧರ್ಮವನ್ನು ತೆಗಳದೆ ಸಹಕರಿಸಿ, ಬಾಳಬಂಡಿ ಸಾಗಿಸಬೇಕು.

ದಿನಾಂಕ ೨೧-೨-೧೯೫೫ ರಂದು ಗಂಗಾಪುರದ 'ಶಿವಾನುಭವ ಸಮ್ಮೇಲನ'ದಲ್ಲಿ ಅಪ್ಪಣೆ ಕೊಡಿಸಿದ ಆಶೀರ್ವಚನ.

ಜಾಗತಿಕ ಶಾಂತಿಗೆ ವೀರಶೈವ ದರ್ಶನದ ಕೊಡುಗೆ[೧]

ಭಾರತವು ಸಾಧುಸಂತರ ನೆಲೆವೀಡೆಂದು ಹೆಸರಾಗಿದೆ. ಅದಕ್ಕೆ ಕಾರಣಗಳೂ ಇಲ್ಲದಿಲ್ಲ. ಕ್ರಿ. ಶ. ಪೂರ್ವದಲ್ಲಿ ಜಗತ್ತಿನಲ್ಲಿ ಇನ್ನಾವ ಧರ್ಮವೂ, ಉಗಮ ವಾಗದ ಪೂರ್ವದಲ್ಲಿಯೇ ನಮ್ಮವರು ಇಹಪರಗಳಲ್ಲಿ ಸಾಧಿಸುವ ಮಾನವ ಕಲ್ಯಾಣದ ನಾಗರಿಕತೆಯ ಮಾರ್ಗವನ್ನು ಧರ್ಮದಿಂದ ಸಾಧಿಸಿಕೊಂಡಿದ್ದರು. ಆದ್ದರಿಂದಲೇ ಭಾರತವು ಉಳಿದೆಲ್ಲ ಜಗತ್ತಿನ ಧರ್ಮಗಳಿಗೆ ತವರುಮನೆಯಾಗಿದೆ ಯೆಂದು ಹೇಳಿದರೆ ತಪ್ಪಾಗದು.

ಪ್ರಪಂಚದ ವಿಖ್ಯಾತವಾದ ಧರ್ಮಗಳು ಹಲವಾರು ಭರತಖಂಡದಲ್ಲಿಯೇ ಜನಿಸಿ ಹೊರಗಡೆ ಹಬ್ಬಿದವು. ಭಾರತದ ಹೊರಗೆ ಹುಟ್ಟಿದ ಇಸ್ಲಾಂ, ಕ್ರೈಸ್ತ ಇಂಥಹ ಧರ್ಮಗಳೂ ಭರತಭೂಮಿಯಲ್ಲಿ ಹುಲುಸಾಗಿ ಬೆಳೆದವು, ಅಂತೆಯೇ ಭರತಖಂಡವು ದರ್ಶನಗಳ ನೆಲೆವೀಡೆಂದು ನೆಗಳ್ತೆವೆತ್ತಿದೆ. ಭಾರತೀಯರಿಗೆ ಭೌತಿಕ ಆಸಕ್ತಿಗಿಂತಲೂ ಪಾರಮಾರ್ಥಿಕ ಜಿಜ್ಞಾಸೆ ಹೆಚ್ಚು. ಮಹೆಂಜೊದಾರೊ ಹರಪ್ಪಾ ಸಂಸ್ಕೃತಿಯ ಕಾಲದಿಂದ ಅಂದರೆ ಕ್ರಿ. ಶ. ಪೂ. ೩೦೦೦ ವರ್ಷಗಳಿಂದಲೂ ಭರತಭೂಮಿಯಲ್ಲಿ ದರ್ಶನಗಳು ಮೈವೆತ್ತು ಬಂದಿವೆ. ಚಾರ್ವಾಕ, ಜೈನ, ಬೌದ್ಧ, ಸಾಂಖ್ಯ, ಯೋಗ, ಪೂರ್ವ-ಮೀಮಾಂಸೆ, ಉತ್ತರ-ಮೀಮಾಂಸೆ, ಇಂತಹ ಅನೇಕ ದರ್ಶನಗಳು ಭರತಖಂಡದಲ್ಲಿಯೇ ಹುಟ್ಟಿ ಬೆಳೆದವು. ಭಾರತೀಯ ಷಡ್ದರ್ಶನ ಗಳು ಜಗತ್ಪ್ರಸಿದ್ಧವಾಗಿವೆ. ಈ ಷಡ್ದರ್ಶನಗಳಿಗಿಂತಲೂ ಮೃಡದರ್ಶನವೊಂದು ಅತ್ಯಂತ ಪ್ರಾಚೀನ ಕಾಲದಿಂದಲೂ ಬೆಳೆದು ಬಂದಿದೆ. ಅದೇ ಶೈವಧರ್ಮ.

ಶೈವ ಪ್ರಭೇದಗಳು:

ಶೈವಧರ್ಮಕ್ಕೆ ಪ್ರಮಾಣ ಗ್ರಂಥಗಳು ಕಾಮಿಕಾದಿ ವಾತುಲ ಪರ್ಯಂತರ ವಾದ ೨೮ ಶೈವಾಗಮಗಳು.

ಶೈವ ಪ್ರಭೇದಗಳಲ್ಲಿಯೂ ಮುಖ್ಯವಾದವುಗಳು ಮೂರು: ಕಾಶ್ಮೀರಶೈವ, ತಮಿಳುಶೈವ, ವೀರಶೈವ ಕಾಶ್ಮೀರಶೈವರನ್ನು ತ್ರಿಕ ಇಲ್ಲವೆ ಪಾಶುಪತ ಮತವೆಂದೂ, ತಮಿಳು ಶೈವವನ್ನು ಶೈವ ಸಿದ್ಧಾಂತವೆಂದೂ, ವೀರಶೈವವನ್ನು ಷಟ್‌ಸ್ಥಲ ಸಿದ್ಧಾಂತವೆಂದೂ ಕರೆಯುವುದುಂಟು. ತ್ರಿಕ ಮತ್ತು ಶೈವ

೧ ಹೊಸದಿಲ್ಲಿಯಲ್ಲಿ ದಿ. ೧೧-೧-೧೯೬೮ ರಂದು ನಡೆದ ಅಂತರ್ರಾಷ್ಟ್ರೀಯ ಅಂತರ್ಧಾರ್ಮಿಕ ವಿಚಾರಗೋಷ್ಠಿಯಲ್ಲಿ ಮಾಡಿದ ವಿಚಾರಪೂರ್ಣ ಭಾಷಣದ ಮುಖ್ಯಾಂಶಗಳು.

ಸಿದ್ಧಾಂತಗಳು ಶಿವ ಸಮಾನತಾವಾದವನ್ನು ಎತ್ತಿಹಿಡಿದರೆ, ವೀರಶೈವವು ಶಿವ ಸಾಮರಸ್ಯವನ್ನು ಸಮರ್ಥಿಸುತ್ತವೆ. ಮಲತ್ರಯದ ಮೂಲಕ ಪಾಶಬದ್ಧನಾದ ಜೀವಾತ್ಮನಿಗೆ ಮಲಪರಿಹಾರದಿಂದ ಶುದ್ಧ ಸ್ಥಿತಿಯು ಪ್ರಾಪ್ತವಾಗಿ ಅವನು ಲಿಂಗಾಂಗ ಸಾಮರಸ್ಯವನ್ನು ಪಡೆಯುತ್ತಾನೆ. ಅದೇ ಕೈವಲ್ಯ.

ವೀರಶೈವ ಧರ್ಮದ ವೈಶಿಷ್ಟ್ಯಗಳು:

ಸ್ಥಾವರಲಿಂಗವನ್ನು ಗುಡಿಗುಂಡಾರಗಳಲ್ಲಿರಿಸಿ ಪೂಜಿಸುವುದು ಶೈವಧರ್ಮದ ಹೆಗ್ಗುರುತು. ಆದರೆ ವೀರಶೈವ ಧರ್ಮದ ವಿಶಿಷ್ಟವಾದ ಗುರುತು ಇಷ್ಟಲಿಂಗ ಪೂಜೆಯಲ್ಲಿ ವ್ಯಕ್ತವಾಗುತ್ತದೆ.

ವೀರಶೈವಕ್ಕೆ ಷಟ್‌ಸ್ಥಲವೇ ಆತ್ಮ ಪಂಚಾಚಾರವೇ ಪ್ರಾಣ. ಅಷ್ಟಾವರಣವೇ ದೇಹ, ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಈ ಪರಿವಿಡಿಯಲ್ಲಿ ಸಾಧಕನ ಭಕ್ತಿ, ಶ್ರದ್ಧೆ, ನಿಷ್ಠೆ, ಅವಧಾನ, ಅನುಭಾವ, ಆನಂದ, ಸಮರಸ ಈ ರೂಪ ತಳೆದು ಶಕ್ತಿಯಲ್ಲಿ ಸಮರಸವಾಗುತ್ತ ಹೋಗುತ್ತದೆ.

ವೀರಶೈವರ ಈ ಆಚರಣೆಯಿಂದ ವಿಶ್ವಶಾಂತಿ ಎಂತು ಸಾಧ್ಯವಾಗಬಲ್ಲುದು ಎಂಬುದನ್ನು ಈಗ ಅವಲೋಕಿಸಬಹುದು. ವ್ಯಕ್ತಿಯಲ್ಲಿ ಹೇಗೋ ಹಾಗೆ ವಿಶ್ವದಲ್ಲಿ ಅಶಾಂತಿ ತಲೆದೋರುವುದಕ್ಕೆ ಆಶೆಯೇ ಮೂಲ ಕಾರಣ. ಆಶೆಯನ್ನಳಿದ ವ್ಯಕ್ತಿ ಎಲ್ಲೆಲ್ಲಿಯೂ ಆನಂದವನ್ನು ಪಡೆಯುವನು. ಆಶೆಯೇ ದುಃಖದ ಮೂಲ. ಆಶಾ ಮೂಲಕ ಸ್ವೈರವೃತ್ತಿಯಿಂದ ಜಗತ್ತಿನ ಇತಿಹಾಸದಲ್ಲಿ ಯುದ್ಧದ ಜ್ವಾಲೆಗಳು ಭುಗಿಲ್ಲೆಂದು ಜಗತ್ತಿನ ಸಂಸ್ಕೃತಿಯನ್ನು ಸಂಹಾರ ಮಾಡುತ್ತ ಬಂದಿವೆ. ಜಗತ್ತು ಮುಂದುವರೆಯಲು ಎಲ್ಲದರಿಂದಲೂ ಅಭಿವೃದ್ಧಿಯನ್ನು ಪಡೆಯಲು ಅದು ಕ್ರಿಯಾ ಸಂಮುಖವಾಗುವುದು ಅತ್ಯವಶ್ಯ. ಒಂದೆಡೆ ಸ್ವಾರ್ಥ ತೊಲಗಬೇಕು. ಇನ್ನೊಂದೆಡೆ ನಿಷ್ಕ್ರಿಯೆ ನಿಲ್ಲಬೇಕು. ಅಂದರೆ ವ್ಯಕ್ತಿ-ವ್ಯಕ್ತಿಯ ವ್ಯಾಪಾರ, ದೇಶ-ವಿದೇಶಗಳ ವ್ಯವಹಾರ, ತಮ್ಮ-ತಮ್ಮ ಸ್ವಾರ್ಥ ಸಾಧನೆಯತ್ತ ನಡೆಯದೆ ಇನ್ನೊಂದು ಮಹಾಶಕ್ತಿಯ ಆರಾಧನೆಯೆಂದೂ ಸಾಧನೆಯೆಂದೂ ನಡೆಯಬೇಕು.

ಬೇಡಿ ಉಣ್ಣುವುದು ಪಾಪ, ಮಾಡಿ ಉಣ್ಣುವುದು ಪುಣ್ಯ. ಕಾಯಕದಿಂದಲೇ ಪ್ರತಿಯೊಬ್ಬ ವ್ಯಕ್ತಿ ತನ್ನ ಉದರಪೋಷಣೆಯನ್ನು ಮಾಡಿಕೊಳ್ಳಬೇಕಾದುದರಿಂದ ಪ್ರತಿಯೊಬ್ಬ ವ್ಯಕ್ತಿಗೆ ಬೇಕಾಗುವಷ್ಟು ಕಾಯಕವನ್ನು ಕಲ್ಪಿಸಿ ಕೊಡುವುದು ಸಮಾಜದ ಹೊಣೆ. ಈ ಭಾವನೆಯಿಂದ ಸಮಾಜ ನಿರುದ್ಯೋಗ ನಿರುತ್ಸಾಹಗಳಿಗೆ ಬಲಿಯಾಗದೆ ಮುನ್ನಡೆಯಬಲ್ಲುದು. ಹೀಗೆ ಕಾಯಕ ಮಾಡಿ ಬಂದ ಪ್ರತಿಫಲದಲ್ಲಿ ಒಂದಿನಿತನ್ನಾದರೂ ನಾಳಿಗೆಂದು ಸಂಗ್ರಹಿಸಕೂಡದು. ಇಂದಿನದು ನಾಳಿಗೆ ಎಂಜಲು, ಕಹಿ, ವಿಷ.

ವೀರಶೈವ ಸದ್ಭಕ್ತನು ತ್ರಿವಿಧ ದಾಸೋಹಿಯಾಗಬೇಕೆಂದು ಹೇಳಲಾಗಿದೆ. ಆತನು 'ಸೋಹಂ' ಎನ್ನುವದಿಲ್ಲ. 'ದಾಸೋಹಂ' ಭಾವವನ್ನು ತಳೆಯುವನು. ಅಂದರೆ ವಿನಯವೇ ಆತನ ವ್ಯಕ್ತಿತ್ವದ ಮೂಲವಾಗುವದು. ವೀರಶೈವ ಧರ್ಮದನ್ವಯ ಸದುವಿನಯವೇ ಸದಾಚಾರದ ತಳಹದಿಯಾಗಿದೆ.

ವೀರಶೈವ ಸಮತಾವಾದ:

ಸಮತೆ ವೀರಶೈವರ ಮುಖ್ಯ ಸೂತ್ರ. ಭಾರತೀಯ ಸಂಸ್ಕೃತಿಯ ಬೇರನ್ನು ಸಡಲಿಸಿದ ಜಾತೀಯತೆಯ ವಿರುದ್ಧ ವೀರಶೈವ ಕೋಲಾಹಲವನ್ನೇ ಎಬ್ಬಿಸಿತು. ಅದರ ಮೂಲೋತ್ಪಾಟನಮಾಡಲು ಸಿದ್ಧವಾಯಿತು. ಅಂತೆಯೇ ಉತ್ತಮ ವರ್ಣೀಯರಿಂದ ಅಂತ್ಯಜರವರೆಗೆ ವೀರಶೈವ ಎಲ್ಲರನ್ನೂ ಒಂದೇ ಎಂದು ಕಂಡಿತು.

ಸಹಸ್ರಾರು ವರುಷಗಳಿಂದ ಜಗತ್ತಿನ ಜನತೆಯಲ್ಲಿ ಬೇರೂರಿದ್ದ ಹೆಚ್ಚು ಕೀಳೆಂಬ ಭಾವನೆಯನ್ನು ವೀರಶೈವ ತೊಡೆದು ಹಾಕಿತು.

ಸ್ವಾತಂತ್ರ್ಯ ಪ್ರತಿಯೊಬ್ಬ ವ್ಯಕ್ತಿಯ ಜನ್ಮಸಿದ್ಧ ಹಕ್ಕು. ವೀರಶೈವ ಧರ್ಮ ಅದನ್ನು ಸಂಪೂರ್ಣವಾಗಿ ಗಮನಿಸಿತು. ಪ್ರತಿಯೊಬ್ಬ ವ್ಯಕ್ತಿ ತನ್ನ ಆತ್ಮೋದ್ಧಾರವನ್ನು ಮಾಡಿಕೊಳ್ಳಲು ಸ್ವತಂತ್ರನು. ಇದರಂತೆ ಅಂಗದ ಮೇಲೆ ಲಿಂಗವಿದ್ದವರೆಲ್ಲರೂ ಸಂಗಮನಾಥನಿಗೆ ಸರಿಸಮಾನರು. ಎಲ್ಲರೂ ಬಂಧುಗಳು ಎಂಬ ತತ್ವವನ್ನು ವೀರಶೈವ ಸಾಧಿಸುತ್ತದೆ.

ಶಿವಶರಣರು ತಮ್ಮ ಪ್ರತಿಯೊಂದು ಕಾರ್ಯದಲ್ಲಿಯೂ ಸಾಮ್ಯವಾದದ ಅಚ್ಚು ಮೂಡಿಸಿದುದು ಸಾಮಾನ್ಯವಾದ ಮಾತಲ್ಲ. ಜಾತಿಯಲ್ಲಿಯೂ ಸಾಮ್ಯವಾದ; ರೀತಿಯಲ್ಲಿಯೂ ಸಾಮ್ಯವಾದ. ಹೀಗೆ ನಡೆ-ನುಡಿಗಳಲ್ಲಿಯೂ ಸಾಮ್ಯವಾದವನ್ನು ಉಪಯೋಗಿಸಿ, ಅಸಾಧಾರಣ ಕ್ರಾಂತಿ ಮಾಡಿದರು.

ಮಹಾತ್ಮಾ ಬಸವಣ್ಣ ಮತ್ತು ಗಾಂಧೀಜಿ:

ಪ್ರೇಮವಿಶ್ವಶಾಂತಿಗೆ ಮೂಲವಾದಂತೆ ದಯೆಯೂ ಅದಕ್ಕೆ ಪರಮಸಾಧನ.

ದಯವಿಲ್ಲದ ಧರ್ಮವದಾವುದಯ್ಯಾ?
ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿಯೂ;
ದಯವೇ ಧರ್ಮದ ಮೂಲವಯ್ಯಾ;
ಕೂಡಲಸಂಗಯ್ಯನಂತಲ್ಲದೊಲ್ಲನಯ್ಯಾ.[೧]

ಎಂದು ಭಕ್ತಿಭಾಂಡಾರಿ ಬಸವಣ್ಣನವರು ಸಾರಿದರು. ವೀರಶೈವ ಧರ್ಮಕ್ಕೆ

---

೧ ಬಸವಣ್ಣನವರ ಷಟ್‌ಸ್ಥಲದ ವಚನಗಳು:
ಭಕ್ತಜ್ಞಾನಿಸ್ಥಳ, ವ. ೨೪೭; ಸಂ: ಪ್ರೊ. ಶಿ. ಶಿ. ಬಸವನಾಳ; ದ್ವಿ. ಮು. ೧೯೫೪

ದಯವೇ ಮೂಲ. ದಯೆ ಇಲ್ಲದೆ ಧರ್ಮವಾಗಲಾರದೆಂದು ಶರಣರು ಸ್ಪಷ್ಟಪಡಿಸಿರುವರು. ಹಿಂಸೆ ಎಲ್ಲ ದೃಷ್ಟಿಯಿಂದಲೂ ತ್ಯಾಜ್ಯ. ಕಾಯಾ, ವಾಚಾ, ಮನಸಾ ಹಿಂಸೆ ನಡೆಯಕೂಡದು. ಹಿಂಸೆಯಿಂದ ಯಾವ ಕಲ್ಯಾಣವೂ ಉಂಟಾಗಲಾರದು.

ನಡೆ-ನುಡಿಗಳಲ್ಲಿ ಸಾಮರಸ್ಯವಿರಬೇಕು. ರಾಜಕೀಯ ಗಲಭೆಯಲ್ಲಿ ಕಾಣುವ ಕ್ಷೋಭೆ ನಡೆ-ನುಡಿಗಳಲ್ಲಿ ಹೊಂದಿಕೆ ಇಲ್ಲದಿರುವುದರಿಂದಲೇ ಉಂಟಾಗಿದೆ. ಧಾರ್ಮಿಕ ಹಿನ್ನೆಲೆ ಇಲ್ಲದ ರಾಜಕೀಯ ಇಂತಹ ಸ್ಥಿತಿಗೆ ಗುರಿಯಾಗುತ್ತದೆ. ಧರ್ಮ ಮತ್ತು ರಾಜಕಾರಣಗಳು ಒಂದುಗೂಡಿರಬೇಕು, ಹೊಂದಿಕೊಂಡಿರಬೇಕು ಎಂದು ಹೇಳಿದ ಮಹಾತ್ಮಾ ಬಸವಣ್ಣ ಹಾಗೂ ಮಹಾತ್ಮಾ ಗಾಂಧೀಜಿಯವರ ರಾಜನೀತಿಯಲ್ಲಿ ನುಡಿ-ನಡೆಗಳ ಸಾಮರಸ್ಯವನ್ನು ಕಾಣುತ್ತೇವೆ.

ಅನುಭವ ಮಂಟಪ:

ಈ ವೀರಶೈವ ಧರ್ಮತತ್ವಗಳಿಗೆ ಸಾರ್ವತ್ರಿಕ ಸ್ವರೂಪ ಕೊಡುವುದಕ್ಕೆ ವೀರಶೈವ ಮತೋದ್ಧಾರಕ ಯುಗ ಪ್ರವರ್ತಕ ಬಸವಣ್ಣನವರು ಹನ್ನೆರಡನೆಯ ಶತಮಾನದಲ್ಲಿ ಅನುಭವ ಮಂಟಪವನ್ನು ಸ್ಥಾಪಿಸಿ ಅಧ್ಯಾತ್ಮಿಕ ಪರಮಹಂಸಗಳ ತಿಳಿಗೊಳವನ್ನಾಗಿ ಮಾಡಿ ಮಾನವ ಕುಲವನ್ನೇ ಎಚ್ಚರಿಸಿದರು.

ವೀರಶೈವ ಧರ್ಮದ ನೆಲೆಕಲೆಗಳನ್ನು ಎಲ್ಲರೂ ತಿಳಿಯುವಂತೆ ಅನುಭವ ಮಂಟಪದಲ್ಲಿ ಶರಣ-ಶರಣೆಯರಿಗೆ ಸ್ಥಾನಗಳನ್ನು ಕಲ್ಪಿಸಿ ಅವರಿಗೆ ಆತ್ಮೋದ್ಧಾರ ಮಾಡಿಕೊಳ್ಳಲು ದಾರಿಮಾಡಿಕೊಟ್ಟರು. ಆಗಿನ ಅನುಭವ ಮಂಟಪವು ಶಿವಜ್ಞಾನದ ವಿಶ್ವವಿದ್ಯಾನಿಲಯವಾಗಿತ್ತೆಂದರೂ ಅಡ್ಡಿ ಇಲ್ಲ.

ಇಂತಹ ಸಂಘ ಸಂಸ್ಥೆಗಳು ಭರತಖಂಡದಲ್ಲಿಯೇ ಏಕೆ, ಜಗತ್ತಿನ ಇನ್ನಿತರ ಭಾಗಗಳಲ್ಲಿಯೂ ಕಡಿಮೆ ಎಂದು ಹೇಳಬಹುದು. ಕೆಲವರು ಶಿವಾನುಭವ ಮಂಟಪದ ಧಾರ್ಮಿಕ ಕಾರ್ಯಕಲಾಪಗಳನ್ನು ಪ್ಲೇಟೋನು ಸಂಗ್ರಹಿಸಿದ ಸಾಕ್ರೇಟೀಸನ ಸಂಭಾಷಣೆಗಳಿಗೂ, ತಮಿಳುನಾಡಿನ ಸಂಘ ಸಾಹಿತ್ಯಕ್ಕೂ, ಮತ್ತೆ ಕೆಲವರು ಉಪನಿಷತ್‌ಕಾಲದ ಜನಕರಾಜನ ಸಭೆಗೂ ಮತ್ತು ಅಶೋಕನ ಸಭೆಗೂ ಹೋಲಿಸುತ್ತಾರೆ. ಹೀಗೆ ಅನುಭವ ಮಂಟಪದಲ್ಲಿ ಚರ್ಚೆ ನಡೆದು ವೀರಶೈವ ಧರ್ಮದ ಜಾಗೃತಿಗಾಗಿ ಅನುಭವ ಮಂಟಪದಿಂದ ಹೊರಬಂದ ನುಡಿಮುತ್ತುಗಳೇ ಅಂದರೆ ಶರಣರ ವಚನಗಳೇ ಇಂದಿನ ಅಶಾಂತಮಯ ಜಗತ್ತಿಗೆ ತಾರಕ ಮತ್ತು ವಿಶ್ವಶಾಂತಿಗೆ ದಾರಿದೀಪಗಳೆಂದು ಹೇಳಬಹುದು.

ವೀರಶೈವದ ಗುರಿ:

ವೀರಶೈವವು ಸಂಕುಚಿತ ಮನೋಭೂಮಿಕೆಯುಳ್ಳದ್ದಲ್ಲ. ಅದರ ದೃಷ್ಟಿಯಲ್ಲಿ ವಿಶ್ವವೇ ನೆಲೆಸಿರುವದು. ವಿಶ್ವದ ಉದ್ಧಾರವೇ ಅದರ ಗುರಿ.

"ಎಲ್ಲರೂ ಪರಮಾತ್ಮನ ಸಾಕ್ಷಾತ್ಕಾರಕ್ಕೆ ಸಿದ್ಧರಾಗಿರಿ, ಎಲ್ಲರೂ ಅಚ್ಚಳಿಯುವ ಆನಂದ ಹೊಂದಿರಿ. ನೀವು ಜೀವತ್ವದ ಬೇಡಿಕೆಯನ್ನು ಕಡಿದೊಗೆದು ದೇವರ ಕಡೆಗೆ ಹೊರಡಿರಿ. ಅಲ್ಲಿ ಅನಂತತೆಯ ಅನುಭವ ಪಡೆಯಿರಿ. ಪುರುಷರು, ಸ್ತ್ರೀಯರು ಉಚ್ಚರು, ನೀಚರು ಎಲ್ಲರಿಗೂ ಶಿವಸುಖದ ಬಾಗಿಲು ತೆರೆದಿದೆ" ಎಂಬುದೆ ವೀರಶೈವರ ವೀರ ಸಂದೇಶ.

ನಮ್ಮ ಪ್ರತಿಜ್ಞೆ :

ಇಂದು ಪ್ರಪಂಚದಲ್ಲಿ ಸುತ್ತೆಲ್ಲ ಯುದ್ಧ ಭೀತಿಯ ಭಯವೇ ಹೆಚ್ಚಾಗಿ ಕಾಣುತ್ತದೆ. ಒಂದು ರಾಷ್ಟ್ರವು ಮತ್ತೊಂದು ರಾಷ್ಟ್ರವನ್ನು ಹತ್ತಿಕ್ಕಬೇಕು. ಅದರ ಶಕ್ತಿಯನ್ನು ಹೀರಬೇಕು ಎಂಬ ಇದೇ ಹೊಂಚಿನ ತಾಮಸಿಯ ಪ್ರವೃತ್ತಿಯು ಬೆಳೆ ಯುತ್ತಿರುವಾಗ ಪ್ರಪಂಚದ ಎಲ್ಲ ರಾಷ್ಟ್ರಗಳ ಧರ್ಮ ಗುರುಗಳು. ತತ್ವಜಿಜ್ಞಾಸು ಗಳು ಆಲೋಚನೆ ಮಾಡಿ, ವಿಶ್ವಶಾಂತಿಗೆ ಈ ಪ್ರಸಂಗದಲ್ಲಿ ಹೋರಾಡುವದು ಅತ್ಯಾವಶ್ಯಕ. ಇದೇ ಧೋರಣೆಯನ್ನು ಇಟ್ಟುಕೊಂಡು "International Intre-religious Symposium" ಎಂಬ ಈ ವಿಚಾರಗೋಷ್ಠಿಯನ್ನು ಹಮ್ಮಿ ಕೊಂಡಿರುವುದು ಪ್ರಪಂಚದ ದೃಷ್ಟಿಯಿಂದ ಅತ್ಯಂತ ಯೋಗ್ಯವಾದುದಾಗಿದೆ.

ಪ್ರತಿಯೊಂದು ಧರ್ಮ ಮತಗಳಲ್ಲಿರುವ ಒಂದು ಬೆಳಕನ್ನು ನಮ್ಮ ಅಂತ ರಂಗದ ಕಡೆಗೆ ಎಳೆದುಕೊಂಡು ವಿಶ್ವಶಾಂತಿಗೆ ಅಹೋರಾತ್ರಿ ಪರಿಶ್ರಮಿಸಿ ಇಂದೇ ನಾವೆಲ್ಲರೂ ಪ್ರತಿಜ್ಞೆಗೈದು ಕಾರ್ಯಪ್ರವೃತ್ತರಾಗೋಣ.

ಹುಬ್ಬಳ್ಳಿ ಮೂರುಸಾವಿರಮಠದ ಜಗದ್ಗುರುಗಳು, ವಿದ್ಯಾರ್ಥಿ ಜೀವನದಲ್ಲಿ ರಚಿಸಿದ

— ಕೃತಿಗಳು —

* ಮೊಗ್ಗೆಯ ಮಾಲೆ .... (ಕವನ ಸಂಗ್ರಹ)

* ಪೂಮಾಲೆ .... (ಕಂದ ಪದ್ಯಗಳು)

* ಶ್ರೀ ಮರುಳಸಿದ್ಧೇಶ್ವರ ಅಷ್ಟೋತ್ತರ ಶತನಾಮಾವಳಿ.

ಶ್ರೀ ಶಿವಬಸವೇಶ್ವರ ಅಷ್ಟೋತ್ತರ ಶತನಾಮಾವಳಿ.

ಅಪ್ಪಯ್ಯ ಸ್ವಾಮಿಗಳ ಜೀವನ ಚರಿತ್ರೆ .... (ಗದ್ಯ)

* ಪಥಿಕ .... (ಕವನ ಸಂಗ್ರಹ)

* ವಿಜಯ ಮಹಾಂತೇಶ ಲಾವಣಿ

* ಪ್ರತಿಗಳು ತೀರಿವೆ.

ಮುಂಬರುವ ಕೃತಿಗಳು

ರತ್ನ ಪಕ್ಷಿ .... (ಕವನ ಸಂಕಲನ)

ಸಾಹಿತ್ಯ .... (ವಿವೇಚನಾತ್ಮಕ ಪ್ರಬಂಧ)

ಆಶೀರ್ವಾಣಿ .... (ಭಾಷಣಗಳ ಸಂಗ್ರಹ) ಅಚ್ಚಿನಲ್ಲಿದೆ.

ಆಶೀರ್ವಾಣಿ : ಭಾಗ : ಒಂದು

ಸಾಹಿತ್ಯ ಪ್ರಕಾರ	:	ಗದ್ಯ ಲೇಖನಗಳು
ಮೊದಲ ಮುದ್ರಣ	:	೧೯೬೦
ರಚನೆಯ ವಯಸ್ಸು	:	೪೧
ರಚನಾಸ್ಥಳ	:	ಹುಬ್ಬಳ್ಳಿ

[ಶ್ರೀ ಜಗದ್ಗುರು ಮೂರುಸಾವಿರಮಠ ಗ್ರಂಥಮಾಲೆ—ನಂ. ೩೬]

ಆಶೀರ್ವಾಣಿ

(ಭಾಗ ೧)

(ಹುಬ್ಬಳ್ಳಿ ಮೂರುಸಾವಿರ ಮಠದ ಶ್ರೀ ಜಗದ್ಗುರುಗಳವರ ಭಾಷಣ ಸಂಗ್ರಹ)

ಸಂಪಾದಕರು:

ಶ್ರೀ. ನಿ. ಪ್ರ. ಮಹಾಂತಸ್ವಾಮಿಗಳು

ಚಿತ್ತರಗಿ ಸಂಸ್ಥಾನಮಠ, ಇಳಕಲ್ಲ

೧೯೭೧

ಪ್ರಕಾಶಕರು:
ಶ್ರೀ ಜಗದ್ಗುರು ಗಂಗಾಧರ
ಧರ್ಮ ಪ್ರಚಾರಕ ಮಂಡಳ
ಮೂರುಸಾವಿರಮಠ, ಹುಬ್ಬಳ್ಳಿ

ಬೆಲೆ: ಐದು ರೂಪಾಯಿ

ಮುದ್ರಕರು:
ಶ್ರೀ ಬಿ. ಜಿ. ಗುತ್ತಲ
ಸಂಯುಕ್ತ ಕರ್ನಾಟಕ ಮುದ್ರಣಾಲಯ
ಕೊಪ್ಪೀಕರ ರೋಡ, ಹುಬ್ಬಳ್ಳಿ—೨೦.

ಮುನ್ನುಡಿ

ಹುಬ್ಬಳ್ಳಿಯ ಮೂರುಸಾವಿರಮಠದ ಜಗದ್ಗುರು ಶ್ರೀ ಶ್ರೀ ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳವರ ಈ ಕೃತಿಗೆ ಮೊದಲು ಈ ನಾಲ್ಕು ಮಾತುಗಳನ್ನು ನಾನು ಬರೆಯುತ್ತಿರುವುದು ನನಗೇ ಅಚ್ಚರಿಯನ್ನುಂಟು ಮಾಡಿದೆ. ಇದು ಶ್ರೀ ಜಗದ್ಗುರುಗಳವರ ವಾತ್ಸಲ್ಯ ಔದಾರ್ಯಗಳ ಫಲವೇ ಹೊರತು ಈ ಗ್ರಂಥಕ್ಕೆ ಇಂತಹ ಪರಿಚಯದ ಮಾತುಗಳ ಆವಶ್ಯಕತೆ ಇದೆಯೆಂದಾಗಲೀ ಅದನ್ನು ನಾನು ನಿರ್ವಹಿಸಬಲ್ಲವನೆಂಬುದಾಗಲೀ ಕಾರಣವಲ್ಲ. ಅವರ ಆಶೀರ್ವಾದಪೂರ್ವಕವಾದ ಅಪ್ಪಣೆಯನ್ನು ಮೀರಲಾಗದೆ ವಿನೀತನಾಗಿ ಇದನ್ನು ಒಪ್ಪಿಕೊಳ್ಳಬೇಕಾಯಿತು.

ಈ ಕೆಲಸವನ್ನು ಬಹಳ ಸಂತೋಷದಿಂದ ಮಾಡುತ್ತಿದ್ದೇನೆ. ಅದಕ್ಕೆ ಕಾರಣ ಈ ಕೃತಿಯೇ. ಇದನ್ನು ಓದುತ್ತಾ ಹೋದಂತೆಲ್ಲಾ ಇಲ್ಲಿ ಕಂಡು ಬಂದ ವಿಷಯ ವಿಶ್ಲೇಷಣೆ, ನಿರೂಪಣೆ ಮತ್ತು ಅದರ ಹಿನ್ನೆಲೆಯಲ್ಲಿರುವ ವ್ಯಾಪಕವಾದ ಧರ್ಮ ದೃಷ್ಟಿಗಳು ಮನಸೆಳೆದವು. ನಮ್ಮ ಸನಾತನ ಧರ್ಮದ ಶಕ್ತಿಯುತವಾದ ಶ್ರೀಮಂತ ಪರಂಪರೆಯನ್ನು ಸಕ್ರಿಯಾತ್ಮಕವಾಗಿ ಅರಗಿಸಿಕೊಂಡ ಶ್ರೀ ಜಗದ್ಗುರುಗಳವರ ಆಧುನಿಕ ದೃಷ್ಟಿ ಇಂದಿನ ವಿಚಾರವಂತರನ್ನೂ ಮುಟ್ಟಬಲ್ಲುದು. ಆದುದರಿಂದಲೇ ಅವರ ಈ "ಆಶೀರ್ವಾಣಿ", ವಿಚಾರವಾಣಿಯೂ ಆಗಿ ಪರಿಣಮಿಸಿದೆ.

ಇದು ಜಗದ್ಗುರುಗಳು ಬೇರೆ ಬೇರೆ ಸಂದರ್ಭಗಳಲ್ಲಿ ಮಾಡಿದ ಭಾಷಣಗಳು ನೀಡಿದ ಸಂದೇಶಗಳು ಮೂಡಿಬಂದ ಅನುಗ್ರಹನುಡಿಗಳ ಸಂಗ್ರಹ ಗ್ರಂಥ. ಇಲ್ಲಿ ಕಂಡುಬರುವ ವಿಷಯ, ವೈವಿಧ್ಯ ಮತ್ತು ವ್ಯಾಪ್ತಿಗಳೂ ಆಶ್ಚರ್ಯಕರವಾದುವು. 'ಸಾಹಿತ್ಯ ಮತ್ತು ಮನೋವಿಜ್ಞಾನ,' 'ಸೌಂದರ್ಯ ಮತ್ತು ಕಲೆ'–ಎಂಬಂತಹ ವಿಷಯುಗಳಿಂದ ಹಿಡಿದು 'ಸರ್ವಧರ್ಮ ಸಮನ್ವಯ ದೃಷ್ಟಿ'ಯವರೆಗೆ ಅದರ ಹರವು ಹಬ್ಬಿದೆ. ಸಾಹಿತ್ಯ ಸಂಸ್ಕೃತಿ ಧರ್ಮ, ಸತ್ಯ ಸೌಂದರ್ಯ ಶೀಲ, ನೀತಿ ಸಮಾಜ ವ್ಯಕ್ತಿ–ಈ ಮೊದಲಾದುವುಗಳ ಪ್ರೌಢವಾದ ವಿವೇಚನೆ ಇಲ್ಲಿರುವಂತೆಯೇ, ಹಿಂದಿನ ಮತ್ತು ಇಂದಿನ ಮಹಾವ್ಯಕ್ತಿಗಳ ಆಂತರಿಕ ನಿಲವನ್ನು ಕಂಡುಕೊಳ್ಳುವ ಪರಿಣತಿಯೂ ಗೋಚರವಾಗುತ್ತಿದೆ. ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ ಅಂತೆಯೇ ಭಗವಾನ್ ಬುದ್ಧ. ಈ ಮೊದಲಾದ ವ್ಯಕ್ತಿಗಳ ಸಾಧನೆ ಸಿದ್ಧಿಗಳನ್ನು ಕುರಿತು ಜಗದ್ಗುರುಗಳು ನುಡಿದಿರುವ ಮಾತುಗಳು ಮನನ ಮಾಡಬೇಕಾದುವು.

ಬಸವಣ್ಣನವರನ್ನೂ ಇತರ ಶರಣರನ್ನೂ ಶರಣಧರ್ಮವನ್ನೂ ಪರಿಚಯಿಸುವ ಅನೇಕ ಭಾಷಣಗಳು ಇಲ್ಲಿ ಸಮಾವೇಶಗೊಂಡಿರುವುದು ಸಹಜವಾಗಿಯೇ ಇದೆ. ೧೨ ನೇ ಶತಮಾನದಲ್ಲಿ ಕರ್ನಾಟಕ ಕಂಡ ಆ ಮಹಾಯುಗದ ಸಾಧನೆಯನ್ನು ಜಗದ್ಗುರುಗಳವರು ಸಮರ್ಥವೂ ಸಮಂಜಸವೂ ಆದ ರೀತಿಯಲ್ಲಿ ಪ್ರತಿಪಾದಿಸಿರುವುದು ಮೆಚ್ಚತಕ್ಕ ಅಂಶ. ಬಸವಣ್ಣನವರ ವ್ಯಕ್ತಿತ್ವ ಯಾವುದೇ ಒಂದು ಜಾತಿಯ ಪರಿಮಿತ ವಲಯಕ್ಕೆ ಸೀಮಿತವಾಗುವಂತಹುದಲ್ಲ. ಹಾಗೆ ಭಾವಿಸಿದರೆ ಆತನನ್ನು ನಾವು ಕಿರಿದುಗೊಳಿಸಿದಂತಾಗುತ್ತದೆ. ಧರ್ಮದ ಹೆಸರಿನಲ್ಲಿ ನಿರ್ಮಿಸಿಕೊಂಡಿದ್ದ ತಾರತಮ್ಯದ ಅಡ್ಡಗೋಡೆಗಳನ್ನು ಒಡೆದುಹಾಕಿ, ಇಡೀ ಮಾನವತೆಯ ಉದ್ಧಾರದ ಕನಸನ್ನು ಕಂಡ ಮಹಾವ್ಯಕ್ತಿ ಆತ. ತನ್ನ ಪ್ರಭಾವಲಯದಿಂದ ಮಾನವ ಧರ್ಮವನ್ನು ಬೆಳಗಿದ ಜ್ಯೋತಿಶಕ್ತಿ ಅದು. ಆ ನಿಲುವಿನಲ್ಲಿ ನಿಂತು ನೋಡಿದಾಗ ಬಸವ ಸಂದೇಶ ಇಂದಿನ ಯುಗಮನೋಧರ್ಮಕ್ಕೆ ಅಂದಿಗಿಂತ ಹೆಚ್ಚು ಅರ್ಥವತ್ತಾಗಿ ಉಜ್ವಲವಾಗಿ ಗೋಚರವಾಗುತ್ತದೆ. ಜಗದ್ಗುರುಗಳ ಪರಿಪಕ್ವ ದೃಷ್ಟಿ, ಅದನ್ನು ಕಾಣುವುದರಲ್ಲಿ ಮತ್ತು ಕಾಣಿಸುವುದರಲ್ಲಿ ಯಶಸ್ವಿಯಾಗಿದೆ. ಇಲ್ಲಿರುವ ಅನೇಕ ಭಾಷಣಗಳಲ್ಲಿ, ಉದಾಹರಣೆಗೆ ಬಸವಸಂದೇಶ, ಶರಣರ ಅಮರ ಜೀವನ, ಶಿವಾನುಭವದ ಮಹತಿ, ಷಟ್‌ಸ್ಥಲವಿವೇಚನೆ, ಜಾಗತಿಕ ಶಾಂತಿಗೆ ವೀರಶೈವ ದರ್ಶನದ ಕೊಡುಗೆ,–ಮೊದಲಾದ ಅನೇಕ ಕಡೆಗಳಲ್ಲಿ ಶರಣರು ಪ್ರತಿಪಾದಿಸಿದ ಮಾನವ ಧರ್ಮದ ಪರಿಪೂರ್ಣದೃಷ್ಟಿ ಸಮರ್ಥವಾಗಿ ಸೂಚಿತವಾಗಿದೆ. ಗ್ರಂಥವೇ ಮುಂದಿರುವುದರಿಂದ ವಿವರಗಳನ್ನು ಕೊಡುವ ಅಗತ್ಯವಿಲ್ಲ.

ಒಂದು ಮಾತಿನಲ್ಲಿ ಹೇಳಬಹುದಾದರೆ ಇಲ್ಲಿನ ಭಾಷಣಗಳಲ್ಲಿ ಅಧ್ಯಯನ, ಚಿಂತನ, ನಿರೂಪಣಾ ಸಾಮರ್ಥ್ಯಗಳು ಮುಪ್ಪುರಿಗೊಂಡಿವೆ. ಭಾಷೆ ಸರಳವಾಗಿದೆ, ಅರ್ಥಗರ್ಭಿತವಾಗಿದೆ; ನೇರವಾಗಿ ಮನಮುಟ್ಟುವಂತಿದೆ. ಸೂತ್ರರೂಪವಾದ ಅನೇಕ ಮಾತುಗಳು ಮತ್ತೆ ಮತ್ತೆ ಮನನ ಮಾಡುವಂತಿವೆ. ಉದಾಹರಣೆಗಾಗಿ: "ಮನುಷ್ಯನಿಗೆ ವ್ಯಕ್ತಿತ್ವವೆಲ್ಲಿಂದ ದೊರೆಯುತ್ತದೆಂಬುದನ್ನು ಕೇಳಿದರೆ ಚಾರಿತ್ರ್ಯಬಲದಿಂದ ಎಂದು ಹೇಳಬಹುದು." "ವಿಚಾರದ ತೆರೆಗಳು ವಿದ್ಯುತ್ತಿನ ತೆರೆಗಳಂತೆ ಅತ್ಯಂತ ಶಕ್ತಿಶಾಲಿಗಳಾಗಿವೆ." "ಅಕಲ್ಯಾಣದಿಂದ ಕಲ್ಯಾಣದ ಭೂಮಿಯವರೆಗೂ ಮುಟ್ಟಿಸಿ ಚಿರಶಾಂತಿಯನ್ನೀಯುವ ವೃತ್ತಿಯನ್ನೇ ನಾವು 'ದೀಪ್ತಿ' ಎಂದು ಕರೆಯುವುದು." "ಸಾಹಿತ್ಯದಲ್ಲಿ ಮನೋವಿಜ್ಞಾನವು ಕ್ಷೀರದಲ್ಲಿ ನವನೀತದಂತೆ ಕೂಡಿಕೊಂಡಿದೆ." "ಅಕ್ಷರಜ್ಞಾನ ಬೆಳೆದಂತೆ ಅಂತರ್‌ಜ್ಞಾನ ಬೆಳೆದು ಸ್ವಾವಲಂಬನ ಜೀವನವನ್ನು ಸಾಗಿಸುವ ಹೊಣೆ ಹೊತ್ತುಕೊಳ್ಳುವ ಶಕ್ತಿ ಸಂಪನ್ನರಾಗಬೇಕು." "ಬರೀ ವಿಚಾರವೆ ಜ್ಞಾನವಲ್ಲ ನಾಲಿದು, ಆಚಾರವೂ ಕೃತಿಯಲ್ಲಿ ಇದ್ದಾಗ ಮಾತ್ರ ಪರಿಪೂರ್ಣ ಜೀವನ" "ಯಾರ ಭಾವನೆ ಪರಿಪಕ್ವವಾಗಿ ಆತ್ಮಸಿದ್ಧಿ ಮತ್ತು ಸಮಾಜ ಸೇವೆಯತ್ತ

ಹುದಾಹುತ್ತದೆಯೋ ಅಂಥವರು ಶರಣರು"—ಇಂತಹ ಅನೇಕ ಮಾತುಗಳನ್ನು ಎತ್ತಿ ತೋರಿಸಬಹುದು.

ಇಲ್ಲಿರುವ ಅನೇಕ ಭಾಷಣಗಳು ಧರ್ಮದ ನಿಜವಾದ ಸ್ವರೂಪದ ಮೇಲೆ ಬೆಳಕನ್ನು ಬೀರುತ್ತವೆ; ಅಂತೆಯೇ ಸ್ವತಂತ್ರ ವಿಚಾರ ಶೀಲತೆಯನ್ನೂ ಪ್ರಚೋದಿಸುತ್ತವೆ. ಶಿವಾನುಭವದ ಮಹತಿಯನ್ನು ಹೇಳುವಾಗ ಕೊನೆಯಲ್ಲಿ ಬರುವ ಈ ಮಾತನ್ನು ಉದಾಹರಿಸಬಹುದು: "ವೀರಶೈವ ತತ್ವಜ್ಞಾನವು ಅದೆಷ್ಟು ವಿಶ್ವಸಂಪೂಜಿತವಾದರೂ ಸರ್ವಾದರಣೀಯವಾದರೂ ಇಂಥ ಸಾಮಾಜಿಕ ಮುಗ್ಗಟ್ಟಿನ ಗೊಂದಲಮಯ ವಾತಾವರಣದಲ್ಲಿ ತಳಕೆಟ್ಟ ಚಿನ್ನದ ಪಾತ್ರೆಯಂತೆ ಆಗಿದೆ" ಎನ್ನುತ್ತಾರೆ. ಆತ್ಮತೃಪ್ತಿ ಅನೇಕ ವೇಳೆ ಆತ್ಮವಿಸ್ಮೃತಿಗೆ ಕಾರಣವಾಗಬಹುದು. ಆದರೆ ಆತ್ಮವೀಕ್ಷಣೆಯಿಂದ ನಿಜಸ್ವರೂಪವನ್ನು ಕಂಡುಕೊಳ್ಳಬೇಕಾಗುತ್ತದೆ. ಹೀಗೆ ಶರಣಧರ್ಮದ ನಿಜಸ್ವರೂಪದ ಕಡೆಗೆ ಗಮನವನ್ನು ಸೆಳೆದು ಆತ್ಮಜಾಗೃತಿಗೆ ಕಾರಣವಾಗುವ ಅನೇಕ ಮಾತುಗಳು ಇಲ್ಲಿ ಬರುತ್ತವೆ; ಹೊಸ ಅಭಿಪ್ರಾಯಗಳಿಗೆ ಸ್ವಾಗತ ನೀಡುವ ವಿಚಾರವಂತಿಕೆಯನ್ನು ವ್ಯಕ್ತಪಡಿಸುತ್ತವೆ. ಅಲ್ಲದೆ ಇನ್ನೊಂದು ಗಮನಾರ್ಹವಾದ ಅಂಶವೆಂದರೆ, ಇವು ಸುಮಾರು ೧೦–೧೨ ವರ್ಷಗಳ ಅವಧಿಯಲ್ಲಿ ಬೇರೆ ಬೇರೆ ಸನ್ನಿವೇಶಗಳಲ್ಲಿ ಕಾಲಕಾಲಕ್ಕೆ ಕೊಟ್ಟ ಭಾಷಣಗಳಾದರೂ ನಿರಂತರ ಸಾಧನೆಯಿಂದ ಸಮನ್ವಿತವಾದ ಸುಸಂಗತಿಯ ಸೂತ್ರವನ್ನು ಒಳಗೊಂಡಿವೆ; ಎಲ್ಲ ಕಾಲಕ್ಕೂ ಆಸ್ವಾದ್ಯವಾಗಿ ಉಳಿಯುವಂತಾಗಿದೆ.

ಈ ಭಾಷಣಗಳನ್ನು ಶ್ರೀ. ನಿ. ಪ್ರ. ಮಹಾಂತಸ್ವಾಮಿಗಳು ಚಿತ್ತರಗಿ, ಇಲ್ಲಕಲ್ಲ—ಇವರು ಸಂಪಾದಿಸಿ ಪ್ರಕಟಿಸುತ್ತಿರುವುದು ಸ್ತುತ್ಯವಾದದ್ದು. ಅದಕ್ಕಾಗಿ ಅವರು ಅಭಿನಂದನಾರ್ಹರಾಗಿದ್ದಾರೆ. ಜಗದ್ಗುರುಗಳವರ ಭಾಷಣರೂಪವಾದ ಈ 'ಆಶೀರ್ವಾಣಿ' ಎಲ್ಲರ ಮನಗಳನ್ನು ಮುಟ್ಟಿ ವಿಚಾರದತ್ತ ಕೆರಳಿಸಲಿ; ಆಚಾರದತ್ತ ಮರಳಿಸಲಿ; ಅನುಭವದತ್ತ ಅರಳಿಸಲಿ: ಎಂದು ಹಾರೈಸುತ್ತೇನೆ. ಅಂತೆಯೇ ಈ ಅವಕಾಶವನ್ನಿತ್ತ ಜಗದ್ಗುರುಗಳವರ ಸನ್ನಿಧಿಯಲ್ಲಿ ತಲೆವಾಗಿ ಇದನ್ನು ಅರ್ಪಿಸುತ್ತೇನೆ.

ಮಾನಸಗಂಗೋತ್ರಿ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು ತಾ. ೨೮–೧೨–೭೦

—ಎಚ್. ತಿಪ್ಪೇರುದ್ರಸ್ವಾಮಿ

ಸಂಪಾದಕರ ನುಡಿ

ಹುಬ್ಬಳ್ಳಿ ನಗರದ ಇಂದಿನ ಬೆಳೆಯುತ್ತಿರುವ ಚಟುವಟಿಕೆಗಳಲ್ಲಿ ಕೆಲವು ಪುರಾತನ ಸಂಸ್ಥೆಗಳು ವಿಶೇಷ ಆಸ್ಥೆಯೊಂದಿಗೆ ಪರಿಶ್ರಮಿಸುತ್ತಿವೆ. ಇಂಥ ಪ್ರಗತಿಶೀಲ ವಿಚಾರ ದೃಷ್ಟಿಕೋನವನ್ನಿರಿಸಿಕೊಂಡ ಪುರಾತನ ಸಂಸ್ಥೆಗಳಲ್ಲಿ ಶ್ರೀ ಜಗದ್ಗುರು ಮೂರುಸಾವಿರ ಮಠವು ಪ್ರಮುಖ. ಅನೇಕ ಶತಮಾನಗಳ ಪರಂಪರೆಯುಳ್ಳ ಈ ಮಠವು ಹುಬ್ಬಳ್ಳಿಯ ನವಜೀವನದ ಕಾರ್ಯದಲ್ಲಿ ಅತ್ಯಂತ ಹಿರಿಯಪಾತ್ರ ವಹಿಸುತ್ತಲಿದೆ.

ವೀರಶೈವ ಸಮಾಜದ ಜನತೆಯ ಆಧ್ಯಾತ್ಮಿಕ ಹಾಗು ಧಾರ್ಮಿಕ ಉದ್ಧಾರ ಕಾರ್ಯದಲ್ಲಿ ಮಾರ್ಗದರ್ಶನ ಮಾಡುವ ತನ್ನ ಪರಂಪರಾಗತವಾಗಿ ನಡೆದು ಬಂದ ಕಾರ್ಯದೊಡನೆ ಮುಂದುವರೆದಿದೆ. ಮಹಾ ಮಠವು "ಸಕಲ ಜೀವಾತ್ಮರಿಗೆ ಲೇಸನೇ ಬಯಸಿ" ಸರ್ವಜನತೆಗೂ ಕಲ್ಯಾಣಕಾರಿಯೆನಿಸಿದ ಅನೇಕ ಶೈಕ್ಷಣಿಕ ಸಾಮಾಜಿಕ ಸಾಂಸ್ಕೃತಿಕ ಕಾರ್ಯಗಳನ್ನು ನೆರವೇರಿಸಿದೆ. ಹುಬ್ಬಳ್ಳಿಯು ಶೈಕ್ಷಣಿಕ ಕೇಂದ್ರವಾದುದು ಈ ಮಠದ ಉದಾರ ಕೊಡುಗೆಯ ಕೃಪಾಶೀರ್ವಾದದ ಫಲವೆಂದೇ ಹೇಳಬಹುದು.

ಪೂಜ್ಯಪಾದರಾದ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳವರು ಸಾಮಾಜಿಕ, ಸಾಹಿತ್ಯಿಕ, ಶೈಕ್ಷಣಿಕ ಧಾರ್ಮಿಕ ರಂಗದಲ್ಲಿ ಶಾಂತಿಯುತ ಕ್ರಾಂತಿಯನ್ನೇ ಮಾಡಿ ಇಪ್ಪತ್ತನೆಯ ಶತಮಾನದ ಮಹಾ ಪ್ರಭಾವಿ ಪುರುಷರಾಗಿದ್ದಾರೆ. ಲೋಕಸಂಗ್ರಹವೇ ತಮ್ಮ ಜೀವಿತದ ಇತಿ ಕರ್ತವ್ಯವೆಂದು ಭಾವಿಸಿದ್ದಾರೆ. ಜೊತೆಗೆ ಅಪೂರ್ವವಾದ ಆಧ್ಯಾತ್ಮಿಕ ಅನುಭವವನ್ನು ಸಂಪಾದಿಸಿದ್ದಾರೆ.

ಪರಮಪೂಜ್ಯ ಲಿಂ. ಹಾನಗಲ್ಲ ಕುಮಾರ ಮಹಾಸ್ವಾಮಿಗಳವರ ಶಿವಯೋಗ ಮಂದಿರ ಗರಡಿಯಲ್ಲಿ ರೂಪುಗೊಂಡ ಇವರ ಜೀವನ ನಿರಾಡಂಬರವಾಗಿದೆ, ನೈಜವಾಗಿದೆ. ಜೀವನದಲ್ಲಿ ಸಮದೃಷ್ಟಿ ಬೆಳೆದು ಬಂದು, ಸರ್ವಧರ್ಮಸಮನ್ವಯಾಚಾರ್ಯರಾಗಿದ್ದಾರೆ. ಅವರಿವರೆನ್ನದೆ ಭೇದಭಾವವನ್ನೆಣಿಸದೆ, ಸಂದರ್ಶನಕ್ಕೆ ಬಂದ ಸದ್ಭಕ್ತರನ್ನು ಕೃಪಾದೃಷ್ಟಿಯಿಂದ ನೋಡಿ, ಅವರ ಯೋಗಕ್ಷೇಮವನ್ನು ತಿಳಿದು ಕೊಳ್ಳುವದಲ್ಲದೆ ಅವರ ಆಗು ಹೋಗುಗಳಲ್ಲಿಯೂ ಸಮಭಾಗಿಯಾಗಿರುವದು ಪೂಜ್ಯಪಾದರ ವಿಶಾಲ ಮನೋಭಾವದ ದ್ಯೋತಕವಾಗಿದೆ.

ಇಂದಿನ ನವೀನ ಸ್ಥಿತಿಗತಿಗಳನ್ನು ಗುರುತಿಸಿ ಅದಕ್ಕನುಗುಣವಾದ ವಿಧಾನದಲ್ಲಿ ನೀತಿ-ಧರ್ಮಗಳನ್ನು ವ್ಯಕ್ತಿ ಸಮಾಜಗಳ ಜೀವನದಲ್ಲಿ ರೂಢಿಸಲು ಹವಣಿಸುವದೇ

ಪೂಜ್ಯ ಜಗದ್ಗುರುಗಳವರ ಮುಖ್ಯ ಕಾರ್ಯವಾಗಿದೆ. ತುಂಬ ಪ್ರಗತಿಪರ ವಿಚಾರಸರಣಿಯುವರಾದ ಜಗದ್ಗುರುಗಳವರು ತಮ್ಮಂತರಂಗ ಬೆಳಕು ತೋರಿದ ದಾರಿಯಲ್ಲಿ ಸಾಗುವವೇ ಅವರಿಗೆ ಹೆಚ್ಚು ಪ್ರಿಯಕರವಾಗಿದೆ.

ಮಹಾ ಸನ್ನಿಧಿಯವರು ವಯೋಮಾನ ದೃಷ್ಟಿಯಿಂದ ಚಿಕ್ಕವರಾಗಿದ್ದರೂ ತುಂಬ ಪ್ರತಿಭಾಪೂರ್ಣ ವ್ಯಕ್ತಿತ್ವವನ್ನು ಪಡೆದುಕೊಂಡಿದ್ದಾರೆ. ೫೦-೬೦ ವರ್ಷ ಗಳಲ್ಲಿ ಅತ್ಯಂತ ಶ್ರಮವಹಿಸಿ ದುಡಿದರೂ ಪೂರ್ತಿಗೊಳ್ಳದ ಪೀಠದ ಸರ್ವಾಂಗೀಣ ಉನ್ನತಿಯ ಮಹತ್ತರ ಕಾರ್ಯವನ್ನು ಜಗದ್ಗುರುಗಳವರು ಪೀಠಾರೋಹಣದ ೮-೧೦ ವರುಷಗಳಲ್ಲಿ ಹತ್ತು ಹದಿನೈದು ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡಿ ಅನೇಕ ಶೈಕ್ಷಣಿಕ ಧಾರ್ಮಿಕ ಸಂಬಂಧವಾದ ಭವ್ಯ ಭವನಗಳನ್ನು ಕಟ್ಟಿಸಿದ್ದನ್ನು ನೋಡಿದರೆ,ಅದು ಅವರ ಒಂದು ಲೀಲೆಯೆಂದೇ ಭಾವಿಸಲಾಗಿದೆ; ಲೋಕಕಲ್ಯಾಣ, ವಿದ್ಯಾಪ್ರಚಾರ ಧಾರ್ಮಿಕ ಮುಂತಾದ ಚಟುವಟಿಕೆಗಳಲ್ಲಿ ಉತ್ಸಾಹದಿಂದ ಮುಂದು ವರೆದು ಪೀಠದ ಸತ್ಪರಂಪರೆಯನ್ನು ಕಾಯ್ದುಕೊಂಡು ಬಂದಿದ್ದಾರೆ. ಮಠದ ಕೀರ್ತಿಯನ್ನು ದ್ವಿಗುಣಿತಗೊಳಿಸಿದ್ದಾರೆ. ಇದೆಲ್ಲಕ್ಕೂ ಅವರ ಅಗಾಧವಾದ ಕರ್ತೃತ್ವ ಶಕ್ತಿಯೇ ಕಾರಣವಾಗಿದೆ.

ಜಗದ್ಗುರುಗಳವರು ಸ್ವತಃ ಸಾಹಿತಿಗಳಾಗಿದ್ದಾರೆ: ಚತುರ್‌ಭಾಷಾ ಪರಿಣಿತ ರಾಗಿದ್ದಾರೆ. ಆಳವಾದ ಪಾಂಡಿತ್ಯವನ್ನು ಸಂಪಾದಿಸಿದ್ದಾರೆ. ಪೀಠಕ್ಕೆ ಬರುವ ಪೂರ್ವದಲ್ಲಿ ಅನೇಕ ಕಾವ್ಯಕಥನಗಳನ್ನು ಬರೆದು, ಗ್ರಂಥರೂಪದಲ್ಲಿ ಪ್ರಕಟಿಸಿದ್ದಾರೆ.

ಮಾತು-ಕೃತಿಗಳ ಸಮನ್ವಯವೇ ಅವರ ಜೀವನದ ಪರಮೋಚ್ಚ ಸಾಧನ ವಾಗಿದೆ. 'ನುಡಿದಂತೆ ನಡೆ, ಇದೇ ಜನ್ಮ ಕಡೆ' ಎಂದು ಬಸವಾದಿ ಪ್ರಮಥರು, ಸಾರಿ ಅನುಭವಿಸಿ ನುಡಿದಿದ್ದಾರೆ. ಶರಣರ ಅನುಭವದ ನುಡಿಯಲ್ಲಿ ಲಿಂಗದರ್ಶನ ವಾಗುತ್ತದೆ, ಮಾತು ಜ್ಯೋತಿಯಾಗುತ್ತದೆ, ಅವರ ಅನುಭಾವ ಪೂರ್ಣ ನುಡಿಯಲ್ಲಿ ಅನುಗ್ರಹ ಆಶೀರ್ವಾದದ ಶಕ್ತಿಯನ್ನು ಕಾಣಬಹುದು. ಅಂತೆಯೇ ಶ್ರೀಜಗದ್ಗುರು ಮಹಾ ಸನ್ನಿಧಿಯವರ ಅನುಭವಯುಕ್ತ ಈ ವಚನ ಸಂಚಯಕ್ಕೆ "ಆಶೀರ್ವಾಣಿ" ಎಂದು ನಾವು ಕರೆದಿದ್ದೇವೆ. ಜಗದ್ಗುರುಗಳವರು ನಾಡಿನ ಭಕ್ತರ ಬಿನ್ನಹವನ್ನು ವನ್ನು ಅಂಗೀಕರಿಸಿ, ಜಗಜ್ಜಾಗೃತ ಮಾಡಲೆಳಿಸಿ, ಅನೇಕ ಸಂಘ-ಸಂಸ್ಥೆಗಳಲ್ಲಿ ಸಭೆ-ಸಮಾರಂಭಗಳಲ್ಲಿ ಸಮಯೋಚಿತವಾಗಿ ಆಶೀರ್ವಚನ ದಯಪಾಲಿಸಿದ್ದಾರೆ. ಅವರ ಪ್ರತಿಯೊಂದು ಮಾತುಗಳು ಹೊಸಯುಗಕ್ಕೆ ಹೊಂದಿಕೊಳ್ಳುವಂತಹವೇ ಆಗಿವೆ. "ನಾವು ವಿಶಾಲ ಮನೋಭಾವದವರಾಗಬೇಕು, ಹೊರಗಿನ ವಿಶಾಲ-ವಿಚಾರಗಳನ್ನು ಅರಿತುಕೊಳ್ಳಬೇಕು. ಬದಲಾದ ಜಗತ್ತಿನ ಕೂಡ ಸಾಗಬೇಕು; ಹಳೇ ಪದ್ಧತಿಗೆ ಹೊಸವಿಚಾರಗಳನ್ನು ಅನ್ವಯಿಸಬೇಕು, ಆದರೆ ಇದಾವದೂ

ಆಂತರಿಕ ವಿಚಾರಕ್ಕೆ ಬಾಧೆ ಬರದಂತೆ ನಡೆಯಬೇಕು" ಎಂದು ಜಗದ್ಗುರುಗಳವರು ವಿಶಾಲವಾದ ಮನೋಭಾವದ ಮಾರ್ಗದರ್ಶನಕ್ಕೆ ಹೊಸಬೆಳಕನ್ನು ತಂದುಕೊಟ್ಟಿದ್ದಾರೆ. ಅವರ ನುಡಿಗಡಣದಲ್ಲಿ ಒಂದು ನಾವೀನ್ಯತೆಯನ್ನು ಕಾಣಬಹುದು. ಹೊಸತನವನ್ನು ಅರಿಯಬಹುದು. ಅವರ ಅನುಭಾವ ಸಾಹಿತ್ಯವಾಹಿನಿಯಲ್ಲಿ ಕಳಪೆ ಎಂಬುವದಿಲ್ಲ. ಎಲ್ಲವೂ ಉಪಯುಕ್ತವೇ. ಕೇವಲ ಬುದ್ಧಿಗೆ ನಿಲುಕುವಂತಹ ಸಾಹಿತ್ಯವನ್ನು ಬಳಸದೇ, ಹೃದಯ ಗಮ್ಯವಾದುದನ್ನು ಹಿತ–ಮಿತವಾಗಿ ಬಳಸಿಕೊಂಡು ಬಂದಿದ್ದಾರೆ. ಓದುಗರ ಹೃದಯ ಪರಿವರ್ತನೆಯಾಗುವ ಸಾಹಿತ್ಯವೇ ನಿಜವಾದ ಸಾಹಿತ್ಯವೆನಿಸಿಕೊಳ್ಳುವದು. ಕಾಲ–ದೇಶ–ವರ್ತಮಾನಗಳನ್ನು ಮೀರಿ ನಿಲ್ಲಬಲ್ಲ ಜೀವನದ ನೈಜ ಅಭಿವ್ಯಕ್ತಿಯೇ ಸಾಹಿತ್ಯ. ರಸಜ್ಞತೆಯು ಕಾವ್ಯ ಸಾಹಿತ್ಯದ ಪ್ರಮುಖ ಲಕ್ಷಣವಾದರೆ, ದಾರ್ಶನಿಕತೆಯು ಅಧ್ಯಾತ್ಮಿಕ ಸಾಹಿತ್ಯದ ಸ್ಥಾಯಿಗುಣವಾಗಿದೆ. ಆದರೆ ಇವೆರಡು ಮಹಾಸತ್ವಗಳನ್ನು ಸಂಯೋಜಿಸುವಲ್ಲಿ ಅದರ ಪರಿಣಾಮ ರಮಣೀಯತೆ ಎದ್ದು ಕಾಣುತ್ತದೆ. ಉದಾಹರಣೆಗೆ—ನಿಜಗುಣ ಶಿವಯೋಗಿಗಳವರ ಸಾಹಿತ್ಯ ದಾರ್ಶನಿಕ ಸಿದ್ಧಿಯನ್ನು ದರ್ಶಿಸಿದರೂ ಭಾವ–ರಸಗಳ ಪುಷ್ಟಿಯನ್ನು ನೀಡಿ ಶ್ರೋತೃಗಳ ಹೃದಯವನ್ನು ಗೆಲ್ಲುತ್ತದೆ. ಈ ಬಗೆಯ ತಾತ್ವಿಕ ದರ್ಶನ ಹಾಗೂ ಸಾಹಿತ್ಯಕ ಮೌಲ್ಯಗಳ ಸುಂದರವಾದ–ಬೆಸುಗೆಯನ್ನು ಪೂಜ್ಯಪಾದರಾದ ಜಗದ್ಗುರುಗಳವರ ಸಾಹಿತ್ಯದಲ್ಲಿ ಕಾಣಬಹುದು. ಅವರ ಸರ್ವ–ಸಾಹಿತ್ಯದ ಪ್ರಧಾನ ಲಕ್ಷಣವು ಇದೇ ಎಂದರೂ ಸಲ್ಲುವದು. ಈ ಅವರ ಹೃದಯ ಸಂಸ್ಕಾರವನ್ನು ಅವರ ಎಲ್ಲ ಪ್ರವಚನಗಳಲ್ಲಿ ನಾವು ಕಾಣಬಹುದಾಗಿದೆ, ಈ ಮಾತಿಗೆ ಅವರ 'ಆಶೀರ್ವಾಣಿ' ಒಂದು ನೇರ ನಿದರ್ಶನವೆಂದು ನಮ್ಮ ಗ್ರಹಿಕೆಯಾಗಿದೆ. ಕಾರಣ ಪೂಜ್ಯ ಜಗದ್ಗುರು ಮಹಾ ಸನ್ನಿಧಿಯವರು ಕೇವಲ ದಾರ್ಶನಿಕ–ತಾತ್ವಿಕ ವಿಚಾರಗಳನ್ನು ಶುಷ್ಕವಾದ ತತ್ವದಿಂದ ತೂಗಿದವರಲ್ಲ. ಆದರೆ ಆಳವಾದ ಜೀವನದ ಅನುಭವ ಮಾನವೀಯ–ಮೌಲ್ಯಗಳ ಪ್ರಜ್ಞೆಯಿಂದ ಪರಿಷ್ಕಾರ ನೀಡಿದವರಾಗಿದ್ದಾರೆ. ಆದ್ದರಿಂದ ಅವರು ಆಡಿದ ಮಾತು ಅವರ ಅಂತಃಶಕ್ತಿಯ ಪರಿಸ್ಫೂರ್ತಿಯೇ ಆಗಿದ್ದು, ಅವರ ವ್ಯಕ್ತಿತ್ವದ ಅಮೃತ ಸಿದ್ಧಿಯನ್ನು ದಯಪಾಲಿಸುತ್ತಿದೆ, ಆ ಪ್ರಸಾದ ಫಲವನ್ನೇ ನಾವು ಆಶೀರ್ವಾಣಿಯಾಗಿ, ನಿಮ್ಮ ಕೈಯಲ್ಲಿ ನೀಡುತ್ತಿದ್ದೇವೆ. ಒಟ್ಟಾರೆ ಅವರ ಅನುಭಾವ ಸಾಹಿತ್ಯವಾಹಿನಿಯಲ್ಲಿ ನಾಡವರೆಲ್ಲ ಮಿಂದು ಪಾವನರಾಗಬೇಕು, ಪರಿಶುದ್ಧರಾಗಬೇಕು.

ಹೊಸ ಮಾನವತೆಯ ಪುರಸ್ಕೃತರಾದ ಪೂಜ್ಯ ಜಗದ್ಗುರುಗಳವರು ಕಳೆದ ಎರಡು ವರುಷಗಳಾಚೆಗೆ (೧೯೬೯) ಭಾರತದ ಮಹಾತ್ಮಾಗಾಂಧಿ ಜನ್ಮಶತಾಬ್ದಿ ಸಮಿತಿ ಹಾಗು ಅಮೇರಿಕೆಯ ಅಂತರ ಧರ್ಮೀಯ ಶಾಂತಿ ಸಮಿತಿಗಳು ಕೂಡಿ ಸಂಘಟಿಸಿದ ದಿಲ್ಲಿ ವಿಚಾರಗೋಷ್ಠಿಯಲ್ಲಿ "ವಿಶ್ವಶಾಂತಿಗೆ ವೀರಶೈವ ದರ್ಶನದ

ಕೊಡುಗೆ" ಎಂಬ ವಿಷಯವಾಗಿ ಮಾಡಿದ ಭಾಷಣ ಮನನೀಯವಾಗಿತ್ತು ಮತ್ತು ಪ್ರಭಾವ ಪೂರ್ಣವಾಗಿತ್ತು. ಸುಮಾರು ೬೦-೭೦ ವರುಷದ ಮೇಲಿನ ಪಕ್ವ ವಿಚಾರದ ಹಿರಿಯರೇ ನೆರದಿದ್ದ ಆ ಗೋಷ್ಠಿಯಲ್ಲಿ ೪೦ ವರುಷ ವಯಸ್ಸಿನೊಳಗಿನ ಜಗದ್ಗುರುಗಳವರೇ ಅತ್ಯಂತ ಕಿರಿಯರಾಗಿದ್ದರು. ಮಾನವತಾವಾದವನ್ನು ಪ್ರತಿಪಾದಿಸುವ ವೀರಶೈವ ದರ್ಶನದ ಶ್ರವಣವು ಅಂತರ್‌ರಾಷ್ಟ್ರೀಯ ಧರ್ಮ ಮೇಳದಲ್ಲಿ ಸಮಾವೇಶಗೊಂಡು ಜಗತ್ತಿನ ಎಲ್ಲ ಧರ್ಮ ಗುರುಗಳಿಗೆ ಅಚ್ಚರಿಯನ್ನುಂಟು ಮಾಡಿತು. ಆ ಸಮ್ಮೇಳನದಲ್ಲಿ ವೀರಶೈವ ಜಗದ್ಗುರುಗಳೊಬ್ಬರು ಭಾಗವಹಿಸಿದ್ದುದು ಇದೇ ಪ್ರಥಮಸಲವಾಗಿದೆ. ಈ ಆಶೀರ್ವಾಣಿಯಲ್ಲಿ ರೂಪುಗೊಂಡ ವೀರಶೈವ ದರ್ಶನದ ವಿಚಾರ ಓದುಗರೇ ಓದಿ ಅನುಭವಿಸಬೇಕು. ಇದರ ಪರಿಣಾಮವಾಗಿ ಜಪಾನ ಸರಕಾರದವರು ಇತ್ತೀಚಿಗೆ (೧೯೭೦) ಕಿಯೋಟೋದಲ್ಲಿ ಜರುಗಿದ ಜಾಗತಿಕ ಧರ್ಮಶಾಂತಿ ಸಮ್ಮೇಲನದಲ್ಲಿ ಜಗದ್ಗುರುಗಳವರಿಗೆ ಖಚಿತವಾದ ಔತಣವನ್ನಿತ್ತು ಗೌರವಿಸಿದೆ. ಈ ಸಮ್ಮೇಲನದಲ್ಲಿ ಬಹಿರಂಗಾದಿ ವೇಶನದಲ್ಲಿ ಮಾಡಿದ ಜಗದ್ಗುರುಗಳವರ ಭಾಷಣ ಅತ್ಯಂತ ಪ್ರಭಾವಪೂರ್ಣವಾಗಿದೆ. ಆ ಭಾಷಣವನ್ನು ಎರಡನೆಯ ಭಾಗದಲ್ಲಿ ಸೇರಿಸಲಾಗುವದು.

ಪೂಜ್ಯ ಜಗದ್ಗುರುಗಳವರ ಆಶೀರ್ವಚನಗಳನ್ನು ಒಂದೆಡೆಗೆ ಸಂಗ್ರಹಿಸಿ ಅಚ್ಚು ಹಾಕಿಸುವದೊಂದು ನಾಡಿನ ಅಹೋಭಾಗ್ಯವೆಂದು ಭಾವಿಸಿದ್ದೇವೆ. ಇದರಿಂದ ಜನತೆಗೆ ಸುಲಭವಾಗಿ ಜಗದ್ಗುರು ಸನ್ನಿಧಿಯವರ ಉಪದೇಶ ಲಾಭವಾಗುವದೆಂದು ಬಯಸಿ ಇದೀಗ "ಆಶೀರ್ವಾಣಿ"ಯ ಮೊದಲನೆಯ ಭಾಗವನ್ನು ಪ್ರಕಟಿಸಲಾಗಿದೆ. ಇವುಗಳಲ್ಲಿ ಅಧಿಕಾಂಶ ಧಾರವಾಡ ಅಖಿಲ ಭಾರತ ಆಕಾಶವಾಣಿ ಕೇಂದ್ರದಿಂದ ಪ್ರಸಾರಿತವಾಗಿದ್ದು, ಕೆಲವೊಂದು ದೈನಿಕ ಪತ್ರಿಕೆ, ಮಾಸ ಪತ್ರಿಕೆಗಳಲ್ಲಿಯೂ ಪ್ರಕಟಿತವಾಗಿವೆ ಮತ್ತು ಈ "ಆಶೀರ್ವಾಣಿ"ಗೆ ಸುಪ್ರಸಿದ್ಧ ಸಾಹಿತಿಗಳಾದ ಡಾ. ಎಚ್. ತಿಪ್ಪೇರುದ್ರಸ್ವಾಮಿಗಳು ಮೈಸೂರು ಅವರು ವಿಚಾರಾತ್ಮಕ ವಿವೇಚನಾ ಪೂರ್ಣ ಸುಂದರವಾದ ಮುನ್ನುಡಿಯನ್ನು ಬರೆದು ಕೊಟ್ಟದ್ದಕ್ಕೆ ನಮಗೆ ಅತೀವ ಸಂತಸವೆನಿಸಿದೆ. ಅವರೆಲ್ಲರಿಗೂ ನಮ್ಮ ಹಾರ್ದಿಕ ಹಾರೈಕೆಗಳನ್ನು ಕೋರುತ್ತೇವೆ.

ಈ ಆಶೀರ್ವಾಣಿಯನ್ನು ಸರ್ವಾಂಗ ಸುಂದರವಾಗಿ ಪ್ರಕಾಶ ಪಡಿಸಿದ ಶ್ರೀ ಜಗದ್ಗುರು ಗಂಗಾಧರ ಧರ್ಮಪ್ರಚಾರಕ ಮಂಡಲ ಮೂರುಸಾವಿರಮಠ ಹುಬ್ಬಳ್ಳಿ ಅವರಿಗೂ ಅಂದವಾಗಿ ಸಕಾಲಕ್ಕೆ ಮುದ್ರಿಸಿಕೊಟ್ಟ ಸಂಯುಕ್ತ ಕರ್ನಾಟಕ ಅಚ್ಚುಕೂಟದ ಒಡೆಯರಿಗೂ ಧನ್ಯವಾದಗಳನ್ನೀಯದಿರಲಾರೆವು.

ಸಂಪಾದಕರು

ಶ್ರೀ ನಿ. ಪ್ರ. ಸವದಿ ಮಹಾಂತಸ್ವಾಮಿಗಳು

ಚಿತ್ತರಗಿ ಸಂಸ್ಥಾನಮಠ ಇಲಕಲ್ಲ

ಪರಿವಿಡಿ

ವಿಷಯ	ಪುಟ
ಸೌಂದರ್ಯ ಮತ್ತು ಕಲೆ	೩೯೯
ಶಿವಯೋಗಮಂದಿರ	೪೦೨
ಷಟ್‌ಸ್ಥಲ ವಿವೇಚನೆ	೪೦೭
ಅಣ್ಣನ ಅನುಭಾವಕ್ರಾಂತಿ	೪೧೪
ಶಿವಾನುಭವದ ಮಹತಿ	೪೧೮
ಅಕ್ಕನ ಆಧ್ಯಾತ್ಮಿಕ ಶಕ್ತಿ	೪೨೩
ಕಾಯಕವೇ ಕೈಲಾಸ	೪೩೦
ಸ್ವಾತಂತ್ರ್ಯ ರಕ್ಷಣೆ	೪೩೪
ಮಾನವಕುಲದೀಪಕ ಯೋಗಿಕುಮಾರ	೪೩೮
ನೀತಿ ಮತ್ತು ಸಮಾಜ	೪೪೪
ಕನ್ನಡನಾಡಿನ ಕಾರಣಪುರುಷ ಬಸವಣ್ಣನವರು	೪೪೯
ಬಸವ ಸಂದೇಶ	೪೫೪
ಅವಿಭಕ್ತಂ ವಿಭಕ್ತೇಷು	೪೬೦
ಗೀತೆಯ ಒಳಗುಟ್ಟು	೪೬೪
ಶೀಲವೇ ಧರ್ಮ	೪೭೦
ಶರಣರ ಅಮರ ಜೀವನ	೪೭೬
ಬಸವಣ್ಣನವರ ವಚನಗಳಲ್ಲಿ ಧರ್ಮ ಮತ್ತು ಭಕ್ತಿ	೪೮೬
ರಾಮಕೃಷ್ಣ ಪರಮಹಂಸರು	೪೯೨
ಶ್ರೀ ಚನ್ನಬಸವಣ್ಣನವರು	೪೯೫
ಅಕ್ಕನಾಗಮ್ಮ	೪೯೮
ಸ್ವಾಮಿ ವಿವೇಕಾನಂದರ ರಾಜಯೋಗ	೫೦೧
ಗಂಗಾಂಬಿಕೆ	೫೦೪
ಸ್ವಾಮಿ ವಿವೇಕಾನಂದ	೫೦೬
ಮಹಾತ್ಮಾಗಾಂಧೀಜಿ	೫೧೪
ಜಾತೀಯತೆಯ ಐಕ್ಯ	೫೧೯
ಗಾಂಧೀಜಿ ದೃಷ್ಟಿಯಲ್ಲಿ— ಮಾನವ ಮತ್ತು ಆತನ ಸಂಪತ್ತು ಇವುಗಳ ಸಂಬಂಧ	೫೨೧
ಸರ್ವಧರ್ಮ ಸಮನ್ವಯ ದೃಷ್ಟಿ	೫೨೬
ಸ್ತ್ರೀ ಶಿಕ್ಷಣ	೫೪೦
ಒಳಪಂಗಡಗಳು ಒಂದಾಗಬೇಕು	೫೪೩
ಧ್ಯಾನಯೋಗ	೫೪೬
ಭಗವಾನ್ ಬುದ್ಧ	೫೫೧
ಸತ್ಯವೇ ದೇವರು	೫೫೮
ಶಿಸ್ತು ಸಂಯಮ	೫೬೧
ಭಾಷಾ ಬಾಂಧವ್ಯ	೫೬೬

ಸೌಂದರ್ಯ ಮತ್ತು ಕಲೆ

ಈ ದೃಶ್ಯಲೋಕದಲ್ಲಿ ನಮ್ಮ ಮನಸ್ಸನ್ನು ಆಕರ್ಷಿಸುವ ವಸ್ತುವಿಗೆ ಸೌಂದರ್ಯವೆಂದು ಹೆಸರು. ಈ ಜಗತ್ತಿನಲ್ಲಿ ಸೌಂದರ್ಯಕ್ಕೆ ಮರುಳಾಗದ ಪ್ರಾಣಿಯೇ ಇಲ್ಲ. ಸಮಸ್ತ ವಿಶ್ವವೇ ಸೌಂದರ್ಯಮಯವಾಗಿದೆ. ಸಂಸಾರದಲ್ಲಿ ನಮ್ಮ ದೃಷ್ಟಿಗೆ ಗೋಚರಿಸುವ ಪ್ರತಿವಸ್ತುವಿನಲ್ಲಿಯೂ ಸತ್-ಚಿತ್ ಮತ್ತು ಆನಂದ ಸ್ವರೂಪವು ಸೌಂದರ್ಯದ ಸತ್ ಸ್ವರೂಪದೊಡನೆ ಯಾವಾಗಲೂ ಇದ್ದೇ ಇರುತ್ತದೆ. ಆದರೆ ಆ ದಿವ್ಯ ಸೌಂದರ್ಯದ ಪಾವನ ದರ್ಶನವನ್ನು ಪಡೆಯಲು ಹೆಚ್ಚಿನ ಸಾಮರ್ಥ್ಯಬೇಕು.

ಸೃಷ್ಟಿಯು ಸಚ್ಚಿದಾನಂದ ಸ್ವರೂಪವಾದ ಪರವಸ್ತುವಿನಿಂದ ಹುಟ್ಟಿದೆಯೆಂದ ಮೇಲೆ ಅದರಲ್ಲಿಯೂ ಆ ಕಾರಣರೂಪವಸ್ತುವಿನ ಗುಣಗಳು ಸಂಕ್ರಮಿಸುವದು ಸ್ವಾಭಾವಿಕ. ಅಂತೆಯೇ ಸೃಷ್ಟಿಯಲ್ಲಿ ನಾವು ಬಗೆಬಗೆಯ ಸುಖವನ್ನು ಕಾಣುತ್ತೇವೆ. ಕಣ್ಮನಗಳನ್ನು ತಣಿಸುತ್ತೇವೆ. ಈಶ್ವರನು ಸುಂದರನು, ಶಿವಸ್ವರೂಪನು. ಆದ್ದರಿಂದ ಅವನು ತನ್ನ ಸುಂದರತೆಯ ಮಧುರ ಪ್ರಕಾಶವನ್ನು ವಿಶ್ವದ ಕಣಕಣದಲ್ಲಿಯೂ ನಿತ್ಯವೂ ಬೀರುತ್ತಿರುತ್ತಾನೆ.

ಸೌಂದರ್ಯವು ರೂಪಮೂಲಕವಾದುದು, ಆದುದರಿಂದ ಅದು ನೇತ್ರ ವಿಷಯವು. ನೇತ್ರವು ಜೀವಾತ್ಮ (ಅಂತರ) ಮತ್ತು ಜಗತ್ತು (ಬಾಹ್ಯ)ಗಳ ಸಂಬಂಧವನ್ನು ಬೆಳೆಸುತ್ತದೆ. ವಿಶ್ವದಲ್ಲಿ ರೂಪವುಳ್ಳ ವಸ್ತುವೆಲ್ಲವನ್ನು ಚೈತನ್ಯ ರೂಪನಾದ ಆತ್ಮನು ನೇತ್ರ ಮತ್ತು ಮಸ್ತಿಷ್ಕ (mind) ಮುಖ್ಯವಾಗಿ ಗ್ರಹಿಸುತ್ತಿದ್ದಾನೆ. ಸೌಂದರ್ಯವು ಸತ್ಯವಾಗಿರುವಂತೆ ಶಿವಮಯವಾಗಿದೆ. ಅಂತೆಯೇ ಅದು ಆನಂದದಾಯಕವೂ ಆಗಿದೆ. ಈ ತೆರನಾಗಿ ಆತ್ಮನು 'ಸತ್ಯಂ ಶಿವಂ ಸುಂದರಂ' ಭಾವನೆಯನ್ನು ಅನುಭವಿಸಿ ನಿತ್ಯಾನಂದದಲ್ಲಿ ಮಗ್ನನಾಗುತ್ತಾನೆ, ಸತ್ಯಶಿವ ಸುಂದರ ಮಯವಾದುದೇ ಕಲೆಯು.

ಕಲಾಪ್ರಿಯ ಕವಿಯು ರಸಪೂರ್ಣ ರಚನೆಯನ್ನು ಮಾಡಿ, ಚತುರ ಚಿತ್ರಕಾರನು ಲಲಿತ ಚಿತ್ರಗಳನ್ನು ಭಾವಭಂಗಿಗಳೊಡನೆ ಚಿತ್ರಿಸಿ ಶಿಲ್ಪಿಯು ಮನೋಹರ ಸಜೀವ ಮೂರ್ತಿಗಳನ್ನು ಕಲ್ಲಿನಲ್ಲಿ ನಿರ್ಮಿಸಿ, ಗಾಯಕನು ಇಂಪಾದ ಗೀತಗಳನ್ನು ಹಾಡಿ ಆ ಲೀಲಾಲೋಲ ಪರಮಾತ್ಮನನ್ನು ಒಂದಂಶದಲ್ಲಿಯಾದರೂ ಕಾಣಲು ಸಮರ್ಥರಾಗಬಹುದು.

ದಿವ್ಯ ಸೌಂದರ್ಯದ ದರ್ಶನ ಹೊಂದಲು ಈ ಚರ್ಮಚಕ್ಷುವಿನಿಂದ

ಸಾಧ್ಯವಿಲ್ಲ. ಅದನ್ನು ನಾವು ಅನುಭವದ ಕಣ್ಣು ತೆರೆದಾಗಲೇ ಕಾಣುವೆವು. ನಮ್ಮ ಹೃದಯವು ಪರಿಪಕ್ವವಾಗಬೇಕು. ಅಂದು ನಾವು ಆ ಪರಮನನ್ನು ಕಾಣಲು ಸಮರ್ಥರಾಗುತ್ತೇವೆ. ಭಕ್ತಿಯ ಭಾವಾವೇಶವು ಉಕ್ಕಿ ಬಂದಾಗಲೇ ಭಕ್ತನು ದೇವನನ್ನು ಕರೆಯುತ್ತಾನೆ. ಅವನ ವಾಣಿಯೇ ಕಾವ್ಯದ ಹೊನಲಾಗಿ ಹರಿಯುತ್ತದೆ. ಲೋಕದ ಜನರನ್ನು ಪುನೀತರನ್ನಾಗಿ ಮಾಡುತ್ತದೆ. ಅಂತೆಯೇ ನಾವು ಶರಣರ, ಭಕ್ತರ, ಸಂತರ ವಚನಗಳಲ್ಲಿ ಸಾಹಿತ್ಯದ ಸತ್ಯಸ್ವರೂಪವನ್ನು ಕಾಣುವದು.

ಈಶ್ವರನು ದಿವ್ಯ ಸುಂದರತೆಯಲ್ಲಡಗಿರುವಂತೆ ಸತ್ಯಸ್ವರೂಪದಲ್ಲಿಯೂ ಅವ್ಯಕ್ತನಾಗಿದ್ದಾನೆ. ಸದಾ ಸನ್ನಿಹಿತನಾಗಿದ್ದಾನೆ. ಸತ್ಯ-ಸೌಂದರ್ಯದ ನಿಜ ಸ್ವರೂಪವನ್ನು ಕಾಣುವದೇ ಈಶ್ವರನ ಸಾಕ್ಷಾತ್ಕಾರವನ್ನು ಹೊಂದಿದಂತೆ. ನಮ್ಮ ಭಾವನೆಯು ಬಲಿತಂತೆ ನಮಗೆ ನಿತ್ಯ ಸುಖವೂ ನಿತ್ಯಾನಂದವೂ ದೊರೆಯುತ್ತದೆ. ಭಾವನಾಪರವಶನಾಗಿ ನಿಷ್ಕ್ರಿಯನಾಗುವದು ಸಾಧಕ ಕಲೆಗಾರನ ಸ್ವಭಾವವಲ್ಲ. ಕಾರ್ಯದಲ್ಲಿಯೂ ನಿತ್ಯದ ಕಾಯಕದಲ್ಲಿಯೂ ಕಲೆಯ ದಿವ್ಯ ದರ್ಶನವನ್ನು ಹೊಂದುವದೇ ಅವನ ಧ್ಯೇಯವಾಗಿರುವದು.

ಯಾವುದೆ ರೂಪ ಅಥವಾ ಆಕಾರಕ್ಕೆ ಸೌಂದರ್ಯವೆನ್ನುವದಿಲ್ಲ. ಬಣ್ಣ ಇಲ್ಲವೆ ರೂಪ ಮತ್ತು ಆಕಾರದಲ್ಲಿ ಅವ್ಯಕ್ತವಾಗಿದ್ದು ಪ್ರಕಟವಾಗುವ ಶಕ್ತಿ ವಿಶೇಷವೇ ಸೌಂದರ್ಯವೆಂದು ಹೇಳಬಹುದು. ಅದೇ ಈಶ್ವರನ ಸ್ವರೂಪವೂ ಹೌದು.

ನಾವು ನಮ್ಮ ನಿತ್ಯದ ಜೀವನದಲ್ಲಿ 'ಸತ್ಯಂ ಶಿವಂ ಸುಂದರಂ' ಸ್ವರೂಪವನ್ನು ಅನೇಕ ರೂಪದಲ್ಲಿ ಕಾಣಬಹುದು. ಒಂದು ವಿಶಿಷ್ಟ ಸಾಧನದ ಆಶ್ರಯದಿಂದ ನಾವು ಅವುಗಳ ದಿವ್ಯ ದರ್ಶನವನ್ನು ಪಡೆಯಬಹುದು. ಸೌಂದರ್ಯ ದರ್ಶನವೇ ಈಶ್ವರನ ಸಾಕ್ಷಾತ್ಕಾರವು. ಅದನ್ನು ಪಡೆಯಲು ಕಲೆಯೊಂದು ಸಾಧನವು. ಕಲೆಯ ಮರ್ಮವನ್ನರಿತವನೇ ಕವಿಯು, ರಸಋಷಿಯು, ವಿಶ್ವಕರ್ಮನು. ಅವನ ಪ್ರತಿಭಾಮಯ ಕಲೆಗೆ ನಿಲುಕದ ವಸ್ತು ಯಾವುದೂ ಇಲ್ಲ.

'ಸುಂದರ' ಇದನ್ನು ಅನುಭವಿಸಿ ಅದನ್ನು ಲಲಿತವಾದ ಶೈಲಿ ರೀತಿ ಮತ್ತು ವಿಧಿವಿಧಾನಗಳಿಂದ ವ್ಯಕ್ತಮಾಡುವದೇ ಕಲೆಯು ಅನುಭೂತಿ ಇಲ್ಲವೆ ಅನುಭವವು ಆಂತರಿಕ ಸೌಂದರ್ಯವನ್ನು ಗ್ರಹಿಸುತ್ತದೆ. ಅಭಿವ್ಯಕ್ತಿಯು ಅದನ್ನೇ ಬಾಹ್ಯದಲ್ಲಿ ಅಭಿರಾಮವಾಗಿ ಪ್ರಕಟಿಸಲು ಸಮರ್ಥವಾಗುತ್ತದೆ. ಕಲೆಗಾರನು ಆನಂದ ರೂಪದಲ್ಲಿ ಅನುಭವಿಸಿದ ಸೌಂದರ್ಯವನ್ನೇ ಅವನ ಕಲೆಯು ಅದನ್ನು ನಾನಾ ರೀತಿಯಲ್ಲಿ ಪ್ರಕಟಿಸಿ ಜನರ ಮನವನ್ನು ರಂಜಿಸುತ್ತದೆ. ಕಲೆಯು ಸೌಂದರ್ಯದಿಂದ ಪ್ರೇರಣೆಯನ್ನು ಹೊಂದಿದರೆ ಸೌಂದರ್ಯವು ಕಲೆಯಿಂದಲೇ ಮೂರ್ತಿಮತ್ತಾಗಿ ನಿಲ್ಲುತ್ತದೆ.

ಕಲೆಗಳಲ್ಲಿಯೂ ನಾನಾ ಪ್ರಕಾರಗಳುಂಟು. ಅವುಗಳಲ್ಲಿ ಲಲಿತ ಕಲೆಗಳೇ (ಸಾಹಿತ್ಯ, ಸಂಗೀತ, ಚಿತ್ರಕಲೆ, ಸ್ಥಾಪತ್ಯ ಮೊದಲಾದವು) ಪ್ರಾಧಾನ್ಯವನ್ನು ಪಡೆದಿವೆ. ಕಲೆಯ ಆಧಾರವು ಸೂಕ್ಷ್ಮವಿದ್ದಷ್ಟು ಸುಂದರವಾಗಿರುತ್ತದೆ. ಅದೇ ಉಚ್ಚಕೋಟಿಯಲ್ಲಿ ಎಣಿಸಲ್ಪಡುತ್ತದೆ. ಆನಂದಸ್ವರೂಪವು ಈಶ್ವರನ ಒಂದು ಅಂಶವಾಗಿದೆ. ಅದೇ ಕವಿಯ ಹೃದಯರೂಪದಲ್ಲಿಯೂ ಸಮಸ್ತ ಪ್ರಾಣಿಗಳ ಹೃದಯದಲ್ಲಿಯೂ ವ್ಯಾಪ್ತವಾಗಿದೆ. ಯಾವಾಗ ನಮ್ಮ ಅಂತರ್ಯದಲ್ಲಿ ಆನಂದದ ಅನುಭೂತಿಯ ಪ್ರಬಲ ಆವೇಗ ಉತ್ಪನ್ನವಾಗುತ್ತದೆಯೋ ಆಗ ಬಾಹ್ಯ ಜಗತ್ತಿನಲ್ಲಿ ಉದ್ದಾಮಗತಿಯಿಂದ ಲಲಿತ ಕಲೆಗಳ ಸುಂದರ ಸೃಷ್ಟಿಯಾಗುತ್ತದೆ. ಕಲೆಗಳಿಂದಲೆ ಮನುಷ್ಯನಿಗೆ ಶಾಶ್ವತಭಾವನೆಗಳುಂಟಾಗುತ್ತವೆ. ಕಲೆಯು ನೆಲೆಯನ್ನರಿತವನು ಆನಂದಸಾಗರದಲ್ಲಿ ತೇಲುವನು. ಕಲೆಯೇ ಮುಕ್ತಿಗೆ ಮೂಲ ಕಾರಣ.

ಸಂಸ್ಕೃತ ಭಾಷೆಯಲ್ಲಿ 'ಕಲೆ'ಗೆ ಒಂದು ಅಂಶವೆಂದು ಹೇಳುತ್ತಾರೆ. 'ಸುಂದರಂ ಒಂದು ಪಕ್ಷ ಈಶ್ವರ ಸ್ವರೂಪವಿದ್ದರೆ ಕಲೆಗಳೂ ಸ್ವಭಾವತಃ ಅದರ ಒಂದು ಅಂಶವಾದಂತೆ. ಕಲೆಗಳು ಸೌಂದರ್ಯದ ಪ್ರತಿಕೃತಿ ಅರ್ಥಾತ್ ಸೌಂದರ್ಯದ ಅವತಾರವೆಂತಲೂ ಹೇಳಬಹುದು. ಕಲೆಗಳು ಮಾನವ ಜಗತ್ತಿಗೆ ಸರ್ವಾಧಿಕ ರುಚಿಕರ ಪ್ರವೃತ್ತಿಯುಳ್ಳವುಗಳಾಗಿದ್ದಾವೆ. ಆದ್ದರಿಂದಲೇ ಮಾನವನು ಸನಾತನ ಕಾಲದಿಂದ ಕಲೆಗಳ ರೂಪದಲ್ಲಿ ಸೌಂದರ್ಯಾರಾಧನೆ ಮಾಡುವ ರೂಢಿಯು ಬಂದಿದೆ. ಮನುಷ್ಯನು ತನ್ನ ಸತತ ಪ್ರಯತ್ನಗಳಿಂದ ಕಲೆಗಳ ದ್ವಾರಾ ಈ ಸಂಸಾರವನ್ನೇ ಸುಂದರ ಸ್ವರ್ಗದಂತೆ ಮಾಡಲು ಸಮರ್ಥನಿರುವನು. ಆದರೆ ಅಂತಃಶಕ್ತಿಯಲ್ಲಿ ಆತನ ಪ್ರಭುತ್ವ ಮಿಗಿಲಾಗಿರಬೇಕಾಗುತ್ತದೆ. 'ಸತ್ಯಂ ಶಿವಂ ಮತ್ತು ಸುಂದರಂ' ಈ ಲಲಿತ ಅನುಭೂತಿಗಳ ಅಭಿವ್ಯಂಜನೆ ಮಾಡುವವರಲ್ಲಿ ಕಲೆಗಳು ಬಹುಸುಂದರ ಮಾಧ್ಯಮದ ರೂಪಗಳಲ್ಲಿ ಸಿದ್ಧವಾಗಿರುತ್ತವೆ. ಕಲೆಗಳು ಸಭ್ಯತೆಗೆ ಮತ್ತು ಸಂಸ್ಕೃತಿಗೆ ಒರೆಗಲ್ಲಾಗಿವೆ. ಸೌಂದರ್ಯ ಮತ್ತು ಕಲೆಗಳು ಅನ್ಯೋನ್ಯಾಶ್ರಿತವಾಗಿವೆ.

ಸೌಂದರ್ಯ ಮತ್ತು ಕಲೆಯ ಈ ಅನ್ಯೋನ್ಯಾಶ್ರಿತ ಚೇತನೆಯು ಉನ್ಮೇಷದ ಆದಿಕಾಲದಿಂದ ಇರುತ್ತದೆ. ಮತ್ತು ಸೃಷ್ಟಿಯು ಅನಂತ ಕಾಲದ ವರೆಗೆ ಇದೇ ಶಾಶ್ವತ ಸುಂದರರೂಪದಲ್ಲಿ ವಿದ್ಯಮಾನವಾಗಿರುವದು.

೧೯೫೯ ರಂದು ಶ್ರೀ ಶಿವಯೋಗಮಂದಿರದಲ್ಲಿ ನಾಡಹಬ್ಬದ ಸುಸಂದರ್ಭದಲ್ಲಿ ಅಪ್ಪಣೆ ಕೊಡಿಸಿದ ಆಶೀರ್ವಚನ.

ಶಿವಯೋಗಮಂದಿರ

ಐವತ್ತು ವರುಷಗಳ ಶಿವಯೋಗಮಂದಿರವು ಈ ಹೊತ್ತು ತನ್ನ ಚಿನ್ನ ದೊಸಗೆಯನ್ನು ನೆರವೇರಿಸಿಕೊಳ್ಳುತ್ತಿರುವುದು ನಮಗೆಲ್ಲ ಒಂದಾದ ಹೆಮ್ಮೆ: ವರುಷ ಕಳೆದುಹೋದ ಕಾಲವೆ ಇದರ ಪರಿಣತಿಯ ಕುರುಹಾಗಿದೆ. ಪರಮಪೂಜ್ಯ ಲಿಂಗೈಕ್ಯ **ಶ್ರೀ ಹಾನಗಲ್ಲ ಶ್ರೀಗಳವರ ಜೀವನ ಧ್ಯೇಯ ಪಾವನಶಕ್ತಿ ಈ ಸಂಸ್ಥೆಯಲ್ಲಿ ಕೇಂದ್ರಿತವಾಗಿವೆ.** ಅವರ ಕ್ರಿಯಾ-ಸಂಪತ್ತಿ ಜ್ಞಾನ-ದೀಪ್ತಿ ಇಲ್ಲಿ ನೆಲೆ ನಿಂತಿವೆ. ಈ ಸಂಸ್ಥೆ ಸಮಾಜದ ಧಾರ್ಮಿಕ ಕೋಶವಾಗಿದೆ. ರಾಷ್ಟ್ರದ ನೈತಿಕ, ಸಾಂಸ್ಕೃತಿಕ ಹಾಗೂ ಸಾಹಿತ್ಯಿಕ ಸೇವೆಯನ್ನು ಸಲ್ಲಿಸುವ ವಿಶಾಲ ಮಹೋನ್ನತ ಸಂಸ್ಥೆಗಳಲ್ಲಿ ಇದೂ ಒಂದಾಗಿದೆ.

ಈ ಶಿವಯೋಗಮಂದಿರದ ಮಗ್ಗುಲಲ್ಲಿ ಮಲಾಪಹಾರಿಣಿ ತರಂಗಿಣಿಯು ಹಾವಿನಂತೆ ಹರಿಯುತ್ತಿದೆ: ತೀರದಲ್ಲಿ ತರು-ಲತೆಗಳು ಸೊಂಪಾಗಿ ಬೆಳೆದಿವೆ. ಪರ್ವತ ಶ್ರೇಣಿಗಳು ಪರಿಸರದಲ್ಲಿ ಪವಡಿಸಿವೆ, ಪ್ರಶಾಂತಾಶ್ರಮಗಳು, ಪ್ರಸಿದ್ಧ ಐತಿಹಾಸಿಕ ಸ್ಥಳಗಳು ಶಿವಯೋಗ ಮಂದಿರದ ಸುತ್ತುವರಿದಿವೆ.

ಅರ್ಧ ಶತಮಾನದ ಹಿಂದೆ ಸಮಾಜವು ತನ್ನ ಅರ್ಥಕ್ಯಂತ ಪುಷ್ಟಿ ಶಕ್ತಿಯನ್ನು ದೀಪ್ತಿಯನ್ನು ಕಳೆದುಕೊಂಡಿತ್ತು. ಮುನ್ನಡೆವ ಬಲ, ಮುನ್ನೋಡುವ ನೋಟ ಸಮಾಜಕ್ಕಿರಲಿಲ್ಲ. ಕೈಕಾಲು ಕಣ್ಣುಗಳಿಲ್ಲದ ಕಬಂಧನಂತಾಗಿತ್ತು ವೀರಶೈವ ಸಮಾಜ! ಅಂತಹ ಸಮಾಜಕ್ಕೆ ಕೈಕಾಲು ಕಣ್ಣುಗಳನ್ನು ಕೊಡುವ ಒಂದು ಸಂಸ್ಥೆಯ ಉದಯ ಅಂದು ಆಗಬೇಕಾಗಿತ್ತು; ಅಗತ್ಯವೂ ಇತ್ತು.

ಈ ಅಗತ್ಯವನ್ನು ಪೂರೈಸಲು ಹಾನಗಲ್ಲ ಶ್ರೀಕುಮಾರ ಶಿವಯೋಗಿಗಳು ಅವತರಿಸಿದರು. ಅವರು ಎಳತನದ ಬಾಳಿನಿಂದ ಬೆಳಗಿ ಮುಂದೆ ಬಂದರು. [illegible] [illegible] ವಿದ್ಯೆ, ಯೋಗ, ನಿಜಗುಣರಶಾಸ್ತ್ರಗಳನ್ನು ಕಲಿತರು: ಮನನ ಮಾಡಿದರು. ನಿಜಗುಣರ ಪವಿತ್ರ ತಪೋಭೂಮಿಯಲ್ಲಿ ತಪವನ್ನಾಚರಿಸಿದರು. ಹಲವು ಯೋಗಗಳಲ್ಲಿಯೂ ಪರಿಣತರಾದರು: ಸಿದ್ಧಪುರುಷರಾದರು. ಇದರ ಫಲವಾಗಿ **ಲಿಂ. ಎಳಂದೂರ ಶ್ರೀ ಬಸವಲಿಂಗ ಮಹಾಸ್ವಾಮಿಗಳವರಿಂದ** ಯೋಗ ದಂಡವನ್ನು ಪಡೆವ ಸುಯೋಗವು ಅವರದಾಯಿತು. **ಲಿಂ. ಬಿದರೀ ಶ್ರೀ ಕುಮಾರ ಶ್ರೀಗಳವರ** ಭಾವಪೂರ್ಣ ಅನುಗ್ರಹಕ್ಕೆ ಪಾತ್ರರಾದರು. **ವೈರಾಗ್ಯದ ಮಲ್ಲಣಾರ್ಯರ** ವಿಚಾರ ಸಹಕಾರಗಳು ಅವರಿಗೆ ಅನುಗೂಡಿದವು. **ಲಿಂ. ಹಾವೇರಿ ಶ್ರೀಗಳವರು** ಜತೆಗೂಡಿದರು. ಕ್ರಿಸ್ತಶಕ ೧೯೦೮ ರಲ್ಲಿ ಬಾಗಲಕೋಟೆಯಲ್ಲಿ

ನಡೆದ ಅಖಿಲ ಭಾರತೀಯ ವೀರಶೈವ ಮಹಾಸಭೆಯಲ್ಲಿ ಯೋಗ ಸಂಸ್ಥೆಯೊಂದರ ಸಂಸ್ಥಾಪನೆಯು ನಿರ್ಣಯವಾಯಿತು. ಸಂಸ್ಥೆಯ ಸ್ಥಾಪನೆಯಲ್ಲಿ ಕುಮಾರ ಶಿವಯೋಗಿಗಳು ದೃಢಚಿತ್ತರಾದರು. ಧೈರ್ಯೋತ್ಸಾಹಗಳಿಂದ ಮುಂದುವರೆದರು. ಈ ಸಂಸ್ಥೆಗೆ ಬೇಕಾಗಿದ್ದ ಸರಿಯಾದ ಸ್ಥಳವನ್ನು ಪರಮ ತಪಸ್ವಿಗಳಾದ ಶ್ರೀ ಚಿತ್ತರಗಿ ವಿಜಯ ಮಹಾಂತ ಸ್ವಾಮಿಗಳವರು ತೋರಿಸಿದರು.

ಇಂದು ನಾಡಲ್ಲಿ ಧಾರ್ಮಿಕ ಭಾವನೆಯಿಂದ ನೆರೆದಿರುವ ಈ ಪುಣ್ಯ ಭೂಮಿಯಲ್ಲಿ **ಕ್ರಿ ಶಕ** ೧೯೦೯ ರಲ್ಲಿ, ಕೀಲಕನಾಮ ಸಂವತ್ಸರದ ಮಾಘ ಶುದ್ಧ ಸಪ್ತಮಿಯಲ್ಲಿ ಈ ಶ್ರೀಮದ್‌ವೀರಶೈವ **ಶಿವಯೋಗ ಮಂದಿರವು** ತನ್ನ ಈ ಪುಣ್ಯನಾಮದಿಂದ ಶ್ರೀ ಪರಮಪೂಜ್ಯ ಹಾನಗಲ್ಲ ಶಿವಯೋಗಿಗಳವರ ಅಮೃತಹಸ್ತದಿಂದ **ಉದಯವಾಯಿತು.** ಅಂದಿನಿಂದ ಸಮಾಜವನ್ನು, ಸಾಹಿತ್ಯವನ್ನು, ಸಂಸ್ಕೃತಿಯನ್ನು ಉದ್ಧರಿಸುವ, ಉದಾತ್ತ ಚರಿತ್ರರನ್ನು ತಯಾರಿಸುವ ಪ್ರಾಯೋಗಿಕ ಪಾಠಶಾಲೆ ಪ್ರಾರಂಭವಾಯಿತು. ಅಭ್ಯಾಸದಲ್ಲಿ, ಆಹಾರದಲ್ಲಿ, ವಿಹಾರದಲ್ಲಿ, ಉಡುಗೆ–ತೊಡುಗೆಯಲ್ಲಿ ಇದರದೇ ಒಂದು ಹೊಸ ಹಾದಿಯ ರಚನೆಯಾಯಿತು. ಆ ಹೆದ್ದಾರಿಯಲ್ಲಿ ಸಾಗಿಬಂದ ಸಾಧಕರನೇಕರು ಸಿದ್ಧಿಗೇರಿ ಸಾಮಾಜಿಕ ರಂಗಕ್ಕಿಳಿದು ಸಮಾಜಕ್ಕೆ ಸರ್ವಾಂಗೀಣ ಸೇವೆ ಸಲ್ಲಿಸುವಂತಾಯಿತು: ನಾಡಿನ ಸೇವೆ ಸಲ್ಲಿಸುವಂತಾಯಿತು.

ಒಗ್ಗಟ್ಟಿನಲ್ಲಿ ಒಲವು:

ಸಮಾಜದ ಉನ್ನತಿಯ ಜತೆಗೆ, ಸಮಾಜದ ಐಕ್ಯತೆಗೂ ಈ ಸಂಸ್ಥೆ ಮಿತಿಮೀರಿದ ಪ್ರಯತ್ನ ಮಾಡಿದೆ. ಭಕ್ತ–ಭಕ್ತರಲ್ಲಿ, ಗುರು–ವಿರಕ್ತರಲ್ಲಿ ಭಾಸವಾಗುವ ಭೇದಗಳು ತೊಲಗಬೇಕೆಂಬುದೇ ಇದರ ಮೂಲ ಉದ್ದೇಶ. ಅದನ್ನು ತನ್ನ ಆಚರಣೆಯಲ್ಲಿ ತಂದಿದೆ ಈ ಸಂಸ್ಥೆ! ಇಲ್ಲಿ ಗುರು ವಿರಕ್ತರಿಬ್ಬರೂ ತಯಾರಾಗುವ ವಟುಗಳಿದ್ದಾರೆ; ತಯಾರಾಗಿದ್ದಾರೆ. ಸಾಮಾಜಿಕ ಒಗ್ಗಟ್ಟಿಗಾಗಿ ಸಾಧ್ಯವಿದ್ದುದನ್ನೆಲ್ಲ ಸಾಧಿಸುತ್ತ ಬಂದಿದೆ ಈ ಸಂಸ್ಥೆ!!

ಸಾಹಿತ್ಯ ಶಕ್ತಿ:

ಶಿವಯೋಗಮಂದಿರದ ಸಾಹಿತ್ಯಶಕ್ತಿಯು ಯಾವ ವಿಧದಲ್ಲಿಯೂ ಕಡಿಮೆ ಆಗಿಲ್ಲ. ಪುರಾತನ ಸಾಹಿತ್ಯ ಸಂಗ್ರಹ ಕಾರ್ಯದಲ್ಲಿ ಬೇರಾವ ಸಂಸ್ಥೆಗಿಂತಲೂ ಹಿಂದುಳಿದಿಲ್ಲ ಅಷ್ಟೇ ಅಲ್ಲ, ಅಗ್ರಸ್ಥಾನದಲ್ಲಿದೆ. ಆಧುನಿಕ ಸಾಹಿತ್ಯ ಸೇವೆಯೂ ಸಹ ಇಲ್ಲಿ ಸಾಗಿ ಬರುತ್ತಿದೆ. ಈ ಸಂಸ್ಥೆ ಎನಿತೋ ಸಾಹಿತಿಗಳನ್ನು, ವಾಗ್ಮಿಗಳನ್ನು, ಕವಿಗಳನ್ನು ಮತ್ತು ನಾನಾ ಬಗೆಯ ಕಲಾವಿದರನ್ನು ತಯಾರ ಮಾಡಿದೆ. ಅವರಲ್ಲಿ

ಶ್ರೀ ನಿಡುಮಾಮಿಡಿ ಶ್ರೀಗಳವರು ಸಾಹಿತ್ಯರಂಗದಲ್ಲಿ ಅಗ್ರಸ್ಥಾನ ಪಡೆದು ಕನ್ನಡಿಗರ ಮೆಚ್ಚುಗೆಗೆ ಪಾತ್ರರಾಗಿದ್ದಾರೆಂದು ಹೇಳಲು ನಮಗೆ ಅತಿಶಯ ಆನಂದವಾಗುತ್ತಿದೆ. ವಚನ ವಾಙ್ಮಯವನ್ನು ಮೊದಲು ಸಂಗ್ರಹಿಸಿದ ಕೀರ್ತಿಯೂ ಈ ಸಂಸ್ಥೆಯದೇ ಆಗಿದೆ.

ಆಧ್ಯಾತ್ಮಿಕ ಸಂಪತ್ತಿ:

ಆಧ್ಯಾತ್ಮಿಕ ಸಂಪತ್ತಿಯೇ ಶಿವಯೋಗಮಂದಿರದ ಸರ್ವಸ್ವ. ಸಂಸ್ಥಾಪಕರ ಹೃದಯದ ಒಲವೂ ಒಗುಮಿಗೆಯಾಗಿತ್ತು. ಅದರಿಂದ ಅವರು ಆತ್ಮಸಾಧನೆಗೆ ಅನುಕೂಲವಾಗುವ ವಾತಾವರಣ, ಅಧ್ಯಯನ ವರ್ತನಾದಿಗಳನ್ನು ಏರ್ಪಡಿಸಿದರು. ಭೌತಿಕದ ಎಲ್ಲ ಅಭ್ಯುದಯಗಳಿಗೂ ಆಧ್ಯಾತ್ಮಿಕವೇ ಆದಿ, ಆಧಾರವೆಂದು ಕಂಡು, ಕಾರ್ಯಕ್ರಮದಲ್ಲಿ ತಂದ ಸಂಸ್ಥೆ ಇದಾಗಿದೆ. ಇದರ ಆಧ್ಯಾತ್ಮಿಕ ಶಕ್ತಿಯೇ ಇಷ್ಟು ದೀರ್ಘ ಕಾಲದ ತನ್ನ ಜೀವನಾಧಾರವಾಗಿ ನಿಂತಿದೆ; ಆದರ್ಶವಾಗಿ ನಿಂತಿದೆ.

ದೂರ ದೃಷ್ಟಿ:

ಪೂಜ್ಯ ಹಾನಗಲ್ಲ ಶಿವಯೋಗಿಗಳವರ ದೃಷ್ಟಿ ಬಲು ಎತ್ತರದ್ದು. ಅವರ ಆ ದೃಷ್ಟಿ ಹರಿಯದ ವಿಷಯವೇ ಇಲ್ಲ. ಔದ್ಯೋಗಿಕ, ಆರ್ಥಿಕ, ಧಾರ್ಮಿಕ, ಸಾಂಸ್ಕೃತಿಕ, ನೈತಿಕ, ಯೌಗಿಕ, ಆಧ್ಯಾತ್ಮಿಕ, ಕಲಾತ್ಮಕ, ವೈದಿಕ, ವೈದ್ಯಕ ಮುಂತಾದ ಎಲ್ಲ ಕ್ಷೇತ್ರಗಳಲ್ಲಿಯೂ ಅವರ ದೃಷ್ಟಿ ಹರಿದಿದೆ, ಕೃಷಿ ಸಾಗಿದೆ. ಜೊತೆಗೆ **ಧರ್ಮಸಮನ್ವಯ ದೃಷ್ಟಿಯೂ ಅವರಲ್ಲಿತ್ತು**. ಅವರು ದಯಾಪರರಾಗಿದ್ದರು, ಅಂತೆಯೇ ಕಾರಣಿಕರಾಗಿದ್ದರು. ಧರ್ಮಕ್ಕೆ ಎಲ್ಲಿಯೇ ಚ್ಯುತಿ ಬರಲಿ ಅಲ್ಲಿಗೆ ಕಳಕಳಿಯಿಂದ ವಾಯುವೇಗದಲ್ಲಿ ಸಾಗಿಹೋಗುತ್ತಿದ್ದರು; ವಾಯುಸುತನ ಬಲದಲ್ಲಿ ಕೆಲಸ ಮಾಡುತ್ತಿದ್ದರು; ಬೃಹಸ್ಪತ್ಯಾಚಾರ್ಯರಂತೆ ಬೃಹದ್ರೂಪದಲ್ಲಿ ವಿಚಾರಿಸುತ್ತಿದ್ದರು. ಈ ದಿಶೆಯಲ್ಲಿ **ಪರಳಿ ಪ್ರಕರಣ** ಮುಂತಾದವುಗಳಲ್ಲಿ ಅವರು ಗಳಿಸಿದ ಯಶಸ್ಸನ್ನು ಗಮನಿಸಬೇಕು. ವಿಶಾಲ ಹೃದಯದ ವೀರಶೈವ ತತ್ವವು ವಿಶ್ವವ್ಯಾಪಿಯಾಗಿ ಹಬ್ಬುವಂತೆ ಪ್ರಚಾರವಾಗಬೇಕೆಂಬ ದೂರದೃಷ್ಟಿ ಕುಮಾರ ಶ್ರೀಗಳವರದು.

ಶಿಕ್ಷಣ ಪ್ರಚಾರ:

ನಾಡಿನ ಹಲವೆಡೆಗಳಲ್ಲಿ ಶಿಕ್ಷಣ–ಮಂದಿರಗಳನ್ನು ಸ್ಥಾಪಿಸಿ ಗಮನಾರ್ಹವಾದ ಪ್ರಗತಿಯನ್ನು ಅಂದಿನ ಆ ವಿದ್ಯೆಯ ಅಭಾವ ಕಾಲದಲ್ಲಿ ಸಾಧಿಸಿದ ಕೀರ್ತಿ ಶ್ರೀ ಹಾನಗಲ್ಲ ಕುಮಾರ ಶಿವಯೋಗಿಗಳವರದೇ. ಒಂದಲ್ಲ, ಎರಡಲ್ಲ, ಹತ್ತಿಪ್ಪತ್ತು ಪಾಠಶಾಲೆಗಳನ್ನು ಮಠ–ಮಾನ್ಯಗಳಲ್ಲಿ ಆರಂಭಿಸಿದರು. ಅಲ್ಲದೆ ಇಂಗ್ಲೀಷ

ಓದುವವರಿಗೂ ಕಾಶಿಯಲ್ಲಿ ಸಂಸ್ಕೃತದ ಪ್ರೌಢ ಶಿಕ್ಷಣ ಪಡೆಯುವವರಿಗೂ ಮುಕ್ತಹಸ್ತದಿಂದ ಸಹಾಯ ಮಾಡಿದರು. ಸಾಮಾಜಿಕರೆಲ್ಲ ಪ್ರೌಢ ಮತ್ತು ಪರಿಪೂರ್ಣ ವಿದ್ಯಾಸಂಪನ್ನರಾಗಬೇಕೆಂಬ ಅಪೇಕ್ಷೆ ಅತ್ಯಂತವಾಗಿತ್ತು ಶ್ರೀಗಳವರಲ್ಲಿ! ಇದಕ್ಕಾಗಿ ಸಹಾಯ-ಸಂಪತ್ತಿಯನ್ನು ದಯಪಾಲಿಸಲು ಯಾವಾಗಲೂ ಸಿದ್ಧರಾಗಿದ್ದರು ಶ್ರೀಗಳವರು!! ವಿದ್ಯಾಭ್ಯಾಸಿಗಳ ಬೇಡಿಕೆ ಅದೆಲ್ಲಿಂದಲಾದರೂ ಬರಲಿ ಅದು ಬರಿದಾಗುತ್ತಿರಲಿಲ್ಲ.

ಸಂಗೀತ ಪ್ರಸಾರ:

ಪರಮಪೂಜ್ಯ ಶ್ರೀಗಳವರಿಂದ ಸಂಗೀತಕ್ಕೆ ಸಿಕ್ಕ ಪ್ರೋತ್ಸಾಹ ಅಷ್ಟಿಷ್ಟಲ್ಲ. ಉಭಯಗಾಯನಾಚಾರ್ಯ ಲಿಂ. ಶ್ರೀ ಪಂಚಾಕ್ಷರ ಗವಾಯಿಗಳು, ಅವರ ಪಟ್ಟಶಿಷ್ಯರಾದ ಸಾಹಿತ್ಯ ಸಂಗೀತ ಕಲಾವಿಶಾರದ ಪುಟ್ಟರಾಜ ಗವಾಯಿಗಳು ಇವರ ಶಿಷ್ಯರು. ಗಾಯನ ಸುಧಾಕರ ಶ್ರೀ ಬಸವರಾಜ ರಾಜಗುರು ಮೊದಲಾದ ನೂರಾರು ಜನ ಶಿಷ್ಯರು ನಾಡಿನ ಪ್ರಸಿದ್ಧ ಸಂಗೀತ ಕಲಾನ್ವಿತರಾಗಿರುವುದು ಕುಮಾರ ಶಿವಯೋಗಿಗಳವರ ಕೃಪಾಪೋಷಣೆಯಿಂದ ಎಂಬುದನ್ನು ಇಡೀ ರಾಷ್ಟ್ರವೇ ಅರಿತಿದೆ.

ವೈದ್ಯಕೀಯದಲ್ಲಿಯೂ ಶ್ರೀಗಳವರಿಗೆ ವಿಶೇಷವಾದ ಪಾಂಡಿತ್ಯವಿತ್ತು. "ಧೃತಿ" ಮೊದಲಾದ ಸಿದ್ಧೌಷಧಗಳನ್ನು ತಯಾರಿಸಿ, ಪ್ರಸಿದ್ಧ ಡಾಕ್ಟರುಗಳಿಂದಲೂ ಗುಣಪಡಿಸಲು ಸಾಧ್ಯವಾಗದ ಚರ್ಮವ್ಯಾಧಿಯನ್ನು ನಿರ್ಮೂಲನ ಮಾಡಿದ ಸಿದ್ಧಹಸ್ತ ಶ್ರೀಗಳವರು. ಮಹಾರೋಗಿಗಳಿಗೂ ಕೂಡ ಸ್ವಯಂ ಚಿಕಿತ್ಸೆ ಮಾಡುತ್ತಿದ್ದರು. ಶ್ರೀಗಳವರು ಭಕ್ತವತ್ಸಲರಾಗಿದ್ದಂತೆ ದೀನದಲಿತೋದ್ಧಾರಕರೂ ಆಗಿದ್ದರು.

ಮಾತೃ ಹೃದಯ:

ಮಕ್ಕಳ ಮತ್ತು ಮಾತೆಯರ ಉದ್ಧಾರ ಕಾರ್ಯದಲ್ಲಿ ಕೃತಕೃತ್ಯರು ಶ್ರೀಕುಮಾರ ಗುರುವರೇಣ್ಯರು. ಅವರು ಮಹಿಳೆಯರ ಮುಖ ನೋಡದಿದ್ದರೂ ಮಹಿಳಾ-ಜೀವನ-ಮೌಲ್ಯವನ್ನು ಕಂಡಿದ್ದರು; ಕಳೆಹೀನವಾಗಿದೆಯೆಂದು ಅರಿತಿದ್ದರು. ಮಹಿಳೆಯರ ಮುನ್ನಡೆಗೆ, ಮಂಗಳ ಜೀವನಕ್ಕೆ ಬೇಕಾದ ಕಾರ್ಯ-ಚಟುವಟಿಕೆಗಳನ್ನು ಕಲ್ಪಿಸಿ ಕೊಡುತ್ತಿದ್ದರು. ಉದಾಹರಣೆಗೆ ಸೊನ್ನಲಿಗೆಯಲ್ಲಿರುವ ಆಧುನಿಕ ಶಿವಶರಣೆಯರೂ ಮಾತೃ ಸಮಾನರೂ ಆದ ಶ್ರೀ ರುದ್ರಮ್ಮನವರ ಸ್ತ್ರೀತ್ವ ಮತ್ತು ತರುಣಸ್ಥಿತಿ ರಕ್ಷಣೆಯ ಹೊಣೆ ಶ್ರೀಗಳವರದಾಗಿತ್ತೆಂದರೆ ಅವರಲ್ಲಿರುವ ಮಹಿಳಾ ಮಂಡಲದ ಉದ್ಧಾರದ ಉದ್ದೇಶದ ಘನತೆ ಗೊತ್ತಾಗುತ್ತದೆ.

ಧಾರ್ಮಿಕ ಪ್ರಗತಿ:

ಶ್ರೀಗಳವರಿಂದ ಸ್ಥಾಪಿತವಾದ ಈ ಶಿವಯೋಗಮಂದಿರದಿಂದ ಸಮಾಜಕ್ಕೆ ಆದ ಅನುಕೂಲತೆಗಳು ಒಂದಲ್ಲ, ಎರಡಲ್ಲ, ಅನಂತ. ಧಾರ್ಮಿಕವಾಗಿ ಅನೇಕ ಪ್ರಗತಿ ನಡೆದಿದೆ. ಲಿಂಗ-ಭಸ್ಮಗಳಲ್ಲಿ ಶಾಸ್ತ್ರೋಕ್ತತೆ, ಶುದ್ಧತೆಗಳನ್ನು ತಂದಿದೆ. ಪಾದೋದಕ ಪ್ರಸಾದಗಳ ಸಂವಿಧಾನದಲ್ಲಿ ಸಕ್ರಮತೆಯನ್ನು ತಂದಿದೆ. ಧರ್ಮಾಧಿಕಾರಿಗಳ ಆಚರಣೆಯನ್ನು ನಿರೂಪಿಸಿದೆ. ಮಂತ್ರ ಮಹಿಮೆಯನ್ನು ಗುರುತಿಸಿದೆ. ಕಾಯಕಕ್ಕೆ ಮಹತ್ವಕೊಟ್ಟಿದೆ. 'ಕಾಯಕವೇ ಕೈಲಾಸ'ವೆಂದು ಸಾರುತ್ತದೆ. ಲೌಕಿಕ ಉದ್ಧಾರಕ್ಕೆ ಹೆಣಗುತ್ತಿದೆ. ರಾಷ್ಟ್ರೀಯ ಭಾವನೆಯನ್ನು ತುಂಬುತ್ತಿದೆ. ಎಲ್ಲಕ್ಕೂ ಮಿಗಿಲಾಗಿ, ಅನೇಕ ಮಂದಿ ವಟುಗಳನ್ನು ಮಾತೆಯ ವಾತ್ಸಲ್ಯ-ಮಮತೆಯಿಂದ ಸಾಕಿಸಲುಹಿ, ವಿದ್ಯಾಭ್ಯಾಸಮಾಡಿಸಿ ಯೋಗ ಶಿವಯೋಗದಲ್ಲಿ ಪರಿಣತರನ್ನಾಗಿಸಿ, ಸಮುನ್ನತ ಸಮಾಜ ಸೇವೆಗೆ ಸನ್ನದ್ಧರನ್ನಾಗಿಸಿದೆ. ಇದರ ಫಲವಾಗಿ ಇಲ್ಲಿಂದ ತಯಾರಾದವರು ನಾಡಿನಲ್ಲೆಲ್ಲ ಮಠ-ಮಾನ್ಯಗಳಿಗೆ ಅಧಿಕಾರಿಗಳಾಗಿ ಸಮಾಜದಲ್ಲಿ ನಾನಾ ರೀತಿಯಲ್ಲಿ ಸೇವೆಸಲ್ಲಿಸುತ್ತಿದ್ದಾರೆ: ಸಾಹಿತ್ಯ, ಸಂಗೀತ, ವೈದ್ಯ, ಸಂಕೀರ್ತನ ಮುಂತಾದ ಕಲೆಗಳಲ್ಲಿ ಪರಿಣತೆಯನ್ನು ಪಡೆದು ಪ್ರಗತಿಯನ್ನು ಸಾಧಿಸಿದ್ದಾರೆ. ಅಲ್ಲಲ್ಲಿ ಉಚಿತ ಪ್ರಸಾದನಿಲಯಗಳು ಏರ್ಪಟ್ಟಿವೆ. ಜ್ಞಾನಾನುಭವಗಳ ಬೋಧೆಯಿಂದ ಜನತೆಯಲ್ಲಿ ನೂತನವಾದ ಚೇತನವನ್ನು ತಂದಿದ್ದಾರೆ. ಹೊಸತಾದ ಹೊಂಬೆಳಗನ್ನು ಹರಡಿದ್ದಾರೆ.

ಪೂಜ್ಯ ಹಾನಗಲ್ಲ ಕುಮಾರ ಮಹಾಸ್ವಾಮಿಗಳವರ ಜೀವನ ಪಥದಲ್ಲಿ **ಅಖಿಲ ಭಾರತೀಯ ವೀರಶೈವ ಮಹಾಸಭೆ** ಮತ್ತು **ಶ್ರೀ ಶಿವಯೋಗ ಮಂದಿರ ಸಂಸ್ಥೆ** ಇವೆರಡು ಮೈಲುಗಲ್ಲುಗಳು; ಅವರ ಜೀವನಾಕಾಶದ ಸೂರ್ಯ-ಚಂದ್ರ ಸ್ವರೂಪಗಳು. ಆ ಪ್ರಕಾಶದಿಂದ ಪ್ರೇರಿತರಾದವರು ಅಂದರೆ ಎಚ್ಚೆತ್ತವರು ಅದೆಷ್ಟೋ ಜನ ಮಿರಿಮಿರಿ ಮಿಂಚಿದವರು, ಮಿಂಚುವವರು ಅದೆನಿತೋ ಜನ.

ಅಂತಹ ಅವೆರಡು ಸಮುನ್ನತ ಸಂಸ್ಥೆಗಳಲ್ಲಿ ಒಂದಾದ ಶ್ರೀ ಶಿವಯೋಗ ಮಂದಿರದ ಅರ್ಧ ಶತಮಾನದ **ಸುವರ್ಣೋತ್ಸವ**ವನ್ನು ಇದೀಗ ನಾವೆಲ್ಲರೂ ಆಚರಿಸುತ್ತಿರುವುದು ನಮ್ಮ ಭಾಗ್ಯ; ನಮ್ಮ ಪುಣ್ಯ.।

ದಿ. [illegible] ರಂದು ಶ್ರೀ ಮದ್ವೀರಶೈವ ಶಿವಯೋಗಮಂದಿರದ ಸುವರ್ಣ ಮಹೋತ್ಸವದ ಶುಭ ಸಂದರ್ಭದಲ್ಲಿ ಅಚ್ಚಾಗಿ ಕೊಡಿಸಿದ ಅಭಿಪ್ರಾಯ.

ಷಟ್‌ಸ್ಥಲ ವಿವೇಚನೆ

ಕನ್ನಡಭಾಷೆ, ಸಾಹಿತ್ಯ, ಧಾರ್ಮಿಕ ಜೀವನಗಳಿಗೆ ಚೇತನ ಶಕ್ತಿಯನ್ನು ರೂಪಿಸಿಕೊಟ್ಟು, ಮಹಾಕ್ರಾಂತಿಯನ್ನೆಸಗಿ ಮಲಗಿದ ಮಾನವ ಜನಾಂಗವನ್ನು ಎಚ್ಚರಿಸಿ ದಿವ್ಯಜ್ಯೋತಿಯೆನಿಸಿದ ಮಹಾತ್ಮಾ ಬಸವಣ್ಣನವರ ಮಹೋಪಕಾರ, ಸಮಾಜಕ್ಕೆ ಹೇಳತೀರದಷ್ಟು ಆಗಿದೆ. ಸರಳ ಕನ್ನಡದಲ್ಲಿ ಆಧ್ಯಾತ್ಮಿಕ ದಿವ್ಯಜೀವನದ ಅನುಭವಭಾವವನ್ನು ವಚನಾಙ್ಮಯದಲ್ಲಿ ಭಟ್ಟಿ ಇಳಿಸಿದರು. ವೇದಾಗಮ ಉಪನಿಷತ್ತುಗಳನ್ನು ತಿಳಿದು ಆಚರಿಸಿ ಮತ್ತು ಷಟ್‌ಸ್ಥಲ ಸಿದ್ಧಾಂತ ಅನುಭವಸಾರವನ್ನು ಸುಲಲಿತವಾದ ಕನ್ನಡನುಡಿಯಲ್ಲಿ ಪ್ರಸಾದ ರೂಪವಾಗಿ ಹರಿಸಿದ ಕೀರ್ತಿ ಬಸವಣ್ಣನವರದು. **ಸಮಾಜ, ಧರ್ಮ, ಸಾಹಿತ್ಯ** ಈ ಮೂರು ಕುದುರೆಗಳನ್ನು ಹೂಡಿದ ರಥದ ಮಹಾ ಸಾರಥಿಯಾಗಿ ಕೆಲವೇ ದಿನಗಳಲ್ಲಿ ಅಘಟಿತ ಘಟನಾ ಸಾಮರ್ಥ್ಯವನ್ನು ತೋರಿಸಿ, ಸಮಾಜದ ಕೊಳೆಯನ್ನು ತೊಳೆದು, ಜನಜಾಗ್ರತಿ ಮಾಡಿದ ದಿವ್ಯ ಶಕ್ತಿಯಾಗಿದ್ದರು; ಭವ್ಯಮೂರ್ತಿಯಾಗಿದ್ದರು. ಇಂದಿನ ಈ ಇಪ್ಪತ್ತನೆಯ ಶತಮಾನದಲ್ಲಿ ಮಹಾತ್ಮಾಗಾಂಧೀಜಿಯವರು ಮಾಡಿದ ಕ್ರಾಂತಿಯನ್ನು ೧೨ನೆಯ ಶತಮಾನದಲ್ಲಿಯೇ ಮಹಾತ್ಮಾ ಬಸವಣ್ಣನವರು ಮಾಡಿ ಕೀರ್ತಿ ಕಲಶಪ್ರಾಯರಾಗಿದ್ದಾರೆ.

"ಸಾಧಕನು ಹಲವು ನಾಮರೂಪಗಳ ನೆಸಕಿನಲ್ಲಿ ತನ್ನ ಕ್ರಿಯಾಜ್ಞಾನ ಶಕ್ತಿಯನ್ನು ದುರ್ವಿನಿಯೋಗ ಮಾಡುತ್ತಾನೆ.

ಪರಮಾತ್ಮನನ್ನು ಲಿಂಗಸ್ವರೂಪಿಯಾಗಿ ಕಂಡು, ಸುಯೋಗ್ಯ ಅನು ಸಂಧಾನದಿಂದ ಲಿಂಗಾಂಗ ಸಾಮರಸ್ಯವನ್ನು ಪಡೆಯಬೇಕು. ಇದಕ್ಕೆ ಭಕ್ತಿಯ ಬೆಳಕು, ಕರ್ಮದ ಸುಳಿವು, ಜ್ಞಾನದ ಜ್ಯೋತಿಗಳೂ ಬೇಕು. ಈ ಸಮನ್ವಯ ಸಿದ್ಧಾಂತದ ಮಹಾಪುರುಷನಾಗಿ, ದೇವದೇವನ ಕಾರುಣಿಕ ಶಿಶುವಾದ ಬಸವಣ್ಣನವರು "ದೇವನೊಬ್ಬ ನಾಮ ಹಲವು" ಎಂದು ನುಡಿದರು. ಸಕಲ ಧರ್ಮಗಳ ಸಾರವೇ ವೀರಶೈವ ಧರ್ಮದಲ್ಲಿ ಅಡಕವಾಗಿದೆ. ಅಷ್ಟೇ ಏಕೆ, ಆ ಎಲ್ಲ ಧರ್ಮಗಳ ತತ್ವಕ್ಕಿಂತಲೂ ಮಿಗಿಲಾದ ವಿಶಿಷ್ಟ ತತ್ವಗಳು ವೀರಶೈವ ಧರ್ಮದಲ್ಲಿವೆ ಎಂಬುದನ್ನು ತಮ್ಮ ಅನುಭವದ ಅಳತೆಗೋಲಿನಿಂದ, ಸಮಾಜ ಜೀವನದ ಅನುಸಂಧಾನದ ಮೂಲಕ ತೋರಿಸಿಕೊಟ್ಟರು. ಅಂತೆಯೇ ಅವರ ಮಾತು ಜನಜೀವನಕ್ಕೆ "ಜ್ಯೋತಿರ್ಲಿಂಗ"ವಾಗಿ ತೋರಿತು.

ಬಸವಣ್ಣನವರು ಬಿಜ್ಜಳನ ಮಹಾಮಂತ್ರಿಯಾಗಿ ರಾಜಕೀಯ ಷಡ್ಯಂತ್ರದಲ್ಲಿ

ದ್ದರೂ, ಧಾರ್ಮಿಕ ಕ್ರಾಂತಿಯನ್ನು ಸಾಧಿಸಿದ ಪುಣ್ಯ-ಪುರುಷವರೇಣ್ಯರು, ನೈತಿಕ ನೇಮನಿಷ್ಠೆಯನ್ನು ಧೈರ್ಯೋತ್ಸಾಹದಿಂದ ಮಾಡಿದರೂ ಸುಖಶಾಂತಿ ಸಿಗದೆ, ಮಾನವನು ದೇವನಾಗುವುದಕ್ಕೆ, ಬೇಕಾಗುವ ಸಿದ್ಧಾಂತವನ್ನು ತಿಳಿಸಲು ನಿರ್ಜೀವವಾಗಿರುವ ಸಮಾಜಕ್ಕೆ ಸಂಜೀವಿನಿ ಶಕ್ತಿಯನ್ನು ನೀಡಲು ಅನುಭವ ಮಂಟಪವನ್ನು ಸ್ಥಾಪಿಸಿ, ತನ್ಮೂಲಕ ಪ್ರಚಾರವನ್ನು ಮಾಡಿದರು. ಅನುಭವ ಮಂಟಪದಲ್ಲಿ ಸ್ತ್ರೀ-ಪುರುಷರೆಂಬ ಭೇದವಿಲ್ಲ. ದೇವ ದೇವನ ಹಸಿವಿದ್ದ ಪ್ರತಿಯೋರ್ವ ಜೀವಾತ್ಮನಿಗೂ ಅಲ್ಲಿ ಪ್ರವೇಶವಿದೆ ಎಂದು ಸಾರಿ, ವೈರಾಗ್ಯ ಚಕ್ರವರ್ತಿ ಅಲ್ಲಮಪ್ರಭುದೇವರನ್ನು ಆ ಅನುಭವ ಮಂಟಪದ ಅಧ್ಯಾತ್ಮ ಸಿಂಹಾಸನದ ಮೇಲೆ ಕೂಡ್ರಿಸಿ ಅವರ ದಿವ್ಯ ಶಕ್ತಿಯ ಪ್ರಭಾವದಿಂದ ಸಾಧಕರ ಹೃದಯ ಕಮಲಗಳನ್ನು ಅರಳಿಸಿ ಮಾರ್ಗ ದರ್ಶಕರಾದ ಮಹಾ ಕಾರುಣಿಕ ಪುರುಷ. ಭಾರತದ ಮೂಲೆ ಮೂಲೆಗಳಿಂದ, ಯೋಗಿಗಳು, ತ್ಯಾಗಿಗಳು, ಶರಣರು, ಶರಣೆಯರು, ರಾಜರು ಮುಂತಾದವರು ಅನುಭವ ಮಂಟಪಕ್ಕೆ ಬಂದು ತಮ್ಮ ಅಧ್ಯಾತ್ಮಿಕ ಹಸಿವನ್ನು ಹಿಂಗಿಸಿಕೊಳ್ಳುತ್ತಿದ್ದರು. ಆತ್ಮ ಸಿದ್ಧಿಯನ್ನು ಸಾಧಿಸಿಕೊಳ್ಳುತ್ತಿದ್ದರು.

"ಸೂರ್ಯನುದಯ ತಾವರೆಗೆ ಜೀವಾಳ, ಚಂದ್ರನುದಯ ನೈದಿಲೆಗೆ ಜೀವಾಳ. ಕೂಪರ ಠಾವಿನಲ್ಲಿ ಕೂಟ ಜೀವಾಳವಯ್ಯ. ಒಲಿದ ಠಾವಿನಲ್ಲಿ ನೋಟ ಜೀವಾಳವಾದಂತೆ ಕೂಡಲ ಸಂಗನ ಶರಣರ ಬರವ ಬಸವಣ್ಣನವಂಗೆ ಪ್ರಾಣ ಜೀವಾಳವಾಗಿತ್ತು."

ಪಾರಮಾರ್ಥಿಕ ಭಿಕ್ಷೆಯನ್ನು ಬೇಡುವವಂಗೆ ಅಧ್ಯಾತ್ಮಿಕ ಅನ್ನವು ಆ ಅನುಭವ ಮಂಟಪದಲ್ಲಿ ದೊರೆಯುತ್ತಿತ್ತು.

"ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯ, ಜ್ಯೋತಿಯ ಬಲದಿಂದ ತಮಂಧದ ಕೇಡು ನೋಡಯ್ಯ, ಸತ್ಯದ ಬಲದಿಂದ ಅಸತ್ಯದ ಕೇಡು ನೋಡಯ್ಯ, ಪರುಷದ ಬಲದಿಂದ ಅವಲೋಹದ ಕೇಡು ನೋಡಯ್ಯಾ ಕೂಡಲ ಸಂಗನ ಶರಣರ ಅನುಭಾವದಿಂದ ಎನ್ನ ಭವದ ಕೇಡು ನೋಡಯ್ಯ."

ಎಂದು ಅನುಭಾವದ ಬಿಂಬು ಹೇಳಿ ಬಸವಣ್ಣನವರು ಆತ್ಮಾನಂದಾಂಬುಧಿಯಲ್ಲಿ ತೇಲುತ್ತಿದ್ದರು.

"Means can be justtfied by the ends" ವಾದವನ್ನು ಗುರಿಯು ಹಿರಿದಾದುದು ಸಿದ್ಧಿಸುವುದು ಎಂಬ ದುರ್ವಾದಿಯ ಸಿದ್ಧಾಂತವನ್ನೇ ಬಸವಣ್ಣನವರ ದಾರಿಯು ಅದೇ ಗುರಿಯನ್ನು ಎತ್ತಿ ಹೇಳುತ್ತದೆ. ದಾರಿಯೂ ಗುರಿಯೂ ಸತ್ಯ ಶುದ್ಧವಾದ ಮೇಲೆ ಯಾವ ಕಳಂಕವೂ ಇಲ್ಲ.

"यादृशा भावना यस्य, सिद्धिर्भवति तादृशी" ಎಂಬಂತೆ ಭಾವನೆ ಯಿದ್ದಂತೆ ಸಿದ್ಧಿವಾಗುವದು.

"ಕಾಯಕವೇ ಕೈಲಾಸ"ವೆಂದು ಸಾರಿ ಉದ್ಯೋಗ ಶೀಲತೆಯ ಹಿರಿಮೆ ಯನ್ನು ಎತ್ತಿ ತೋರಿಸಿದರು. "ಅರಿದೊಡೆ ಶರಣ ಮರೆದೊಡೆ ಮಾನವ" ಎಂದು ಶರಣ ಜೀವನದ ರಹಸ್ಯವನ್ನು ಸ್ಫುಟಗೊಳಿಸಿದರು. "ಸಂಸಾರವೆಂಬ ದೊಂದು ಗಾಳಿಯಸೊಡರು, ಸಿರಿಯೆಂಬುದೊಂದು ಸಂತೆಯ ಮಂದಿ" "ಭಿತ್ತಿ ಯಿಲ್ಲದೆ ಬರೆಯಬಹುದೇ ಚಿತ್ತಾರವ" "ಕಾಗೆ ಒಂದಗುಳ ಕಂಡರೆ ಕರೆಯದೆ ತನ್ನ ಬಳಗವನು, ಕೋಳಿ ಒಂದು ಕುಟುಕ ಕಂಡರೆ ಕರೆಯದೆ ತನ್ನ ಕುಲವೆಲ್ಲವ" "ಭಕ್ತಿ ಯೆಂಬುದು ಕರಗಸದಂತೆ ಹೋಗುತ್ತ ಕೊಯ್ವುದು, ಬರುತ್ತ ಕೊಯ್ವುದು" "ಛಲಬೇಕು ಶರಣಂಗೆ ಪರಧನವನೊಲ್ಲೆನೆಂಬ ಪರಸತಿಯನೊಲ್ಲೆನೆಂಬ" "ಒಲೆಹತ್ತಿ ಉರಿದೊಡೆ ನಿಲ್ಲಬಹುದಲ್ಲದೆ, ಧರೆಹತ್ತಿ ಉರಿದೊಡೆ ನಿಲ್ಲಬಹುದೆ?"

"ಅಂಧಕನ ಕೈಯಲ್ಲಿ ದರ್ಪಣವಿದ್ದು ಫಲವೇನು" "ಜಂಗಮನಿಂದೆಯ ಮಾಡಿ, ಲಿಂಗವ ಪೂಜಿಸುವ ಭಕ್ತನ ಅಂಗವಣೆಯೆಂತೋ" "ದಯವಿಲ್ಲದ ಧರ್ಮವಾವುದಯ್ಯ" ಎಂಬ ಮುತ್ತಿನಂತಹ ಮಾತುಗಳು ಬಸವಣ್ಣನವರ ಅನುಭವ ಟಂಕಸಾಲೆಯಿಂದ ಹೊರಬಂದವು. ಜನತೆಯನ್ನು ಚೇತರಿಸಿದವು. ಬಸವಣ್ಣನವರು ಕರ್ಮಭ್ರಷ್ಟರನ್ನು ಕಾಯಕ ನಿಷ್ಠರನ್ನಾಗಿ ಮಾಡಿದರು. ಅಜ್ಞಾನದ ಮರುಭೂಮಿಯಲ್ಲಿ ತಿರುತಿರುಗಿ ಬಳಲಿ ಬೆಂದವರಿಗೆ ದಾರಿ ದೀಪ ವಾದರು, ಅಂತಃಶಕ್ತಿಯ ಘನತೆಯನ್ನು ತೋರಿಸಿಕೊಟ್ಟರು. ಜಂಗಮ ಪ್ರೇಮಿ ಯಾಗಿದ್ದರು; ಜಂಗಮ ಪ್ರಾಣಿಯಾಗಿದ್ದರು. ಸ್ತ್ರೀ ಜನಾಂಗವನ್ನು ಉದ್ಧರಿಸಿ ಮೇಲಕ್ಕೆತ್ತಿದರು. ಆಧ್ಯಾತ್ಮಿಕ ಚಿಂತನೆಯಲ್ಲಿ ಸ್ತ್ರೀಯು ಪುರುಷರಿಗಿಂತ ಕಡಿಮೆ ಯಿಲ್ಲವೆಂದು ಅನುಭವ ಮಂಟಪದ ಮೂಲಕ ತೋರಿಸಿಕೊಟ್ಟರು. ಅನೇಕ ಸ್ತ್ರೀಯರು ಶಿವಾನುಭವದಲ್ಲಿ ಪುರುಷರನ್ನು ಹಿಮ್ಮೆಟ್ಟಿಸಿದರು. ಸ್ತ್ರೀಯರು ಮೋಕ್ಷ ಪಡೆಯಲು ಅರ್ಹರಲ್ಲ ಎಂದು ಅನ್ಯ ಧರ್ಮದವರು ಅಲ್ಲಗಳೆದಿದ್ದರು. ಅದಲ್ಲವೂ ಅನುಭವ ಮಂಟಪದ ಶಿವಾನುಭವಾಮೃತದಿಂದ ದೂರಾಗಿ ವೈರಾಗ್ಯ, ಶಿರೋಮಣಿ ಅಕ್ಕಮಹಾದೇವಿ, ಸತ್ಯಕ್ಕ, ಕದಿರೆಯ ರೆಮ್ಮವ್ವ ಮುಂತಾದ ಮಹಾ ಶಿವಶರಣೆಯರ ದಿವ್ಯ ಶಕ್ತಿಯ ಪ್ರಭಾವದಿಂದ ನಾಡಿನ ಮೂಲೆಮೂಲೆಯಲ್ಲಿಯೂ ಷಟ್‌ಸ್ಥಲ ಸಿದ್ಧಾಂತದ ಮರ್ಮವು ಪ್ರಚುರಗೊಂಡಿತಲ್ಲದೆ, ಸಮಾಜದ ಕರ್ಮ ಜಾಲದ ಜಡತ್ವವನ್ನು ಹೋಗಲಾಡಿಸಿ ಕಾಯಕನಿಷ್ಠೆ ಉದ್ಯೋಗಶೀಲತೆಯನ್ನು ತಂದುಕೊಟ್ಟರು. ಈ ಅನುಭವ ಮಂಟಪದ ವಿದ್ಯುಲ್ಲಹರಿಯ ಮೂಲಕ ಸಮಾಜದಲ್ಲಿ ನವಚೈತನ್ಯವನ್ನು ತಂದುಕೊಟ್ಟರು. ನವಮನ್ವಂತರದ ಸುಳಿ ಗಾಳಿಯಿಂದ ಉತ್ತೇಜಿತವಾದ ಜನಜೀವನ ಹೊಸ ಕಳೆ, ಹೊಸ ಭಾವ, ಹೊಸ

ಬೆಳಕಿನಿಂದ ಪ್ರಭಾವಿತವಾಯಿತು. ಪ್ರತಿಯೊಬ್ಬ ವ್ಯಕ್ತಿಗೆ ವಿಚಾರ ಸ್ವಾತಂತ್ರ್ಯ, ಆಚಾರ ಸ್ವಾತಂತ್ರ್ಯ ಈ ಅನುಭವ ಮಂಟಪದ ಮೂಲಕ ದೊರೆಯಿತು. ಪ್ರತಿಯೊಬ್ಬನೂ 'ಕಾಯಕದಲ್ಲಿ ನಿರತನಾಗಬೇಕು' ಎಂಬ ಕಟ್ಟುನಿಟ್ಟಿನಿಂದ ಉದ್ಯೋಗದ ಘನತೆ ಗೌರವಗಳು ಬೆಳೆದವು. ಈ ಸೇವೆಯ ಪವಿತ್ರ ಭಾವನೆಯನ್ನು ತಮ್ಮ ತಮ್ಮ ಉದ್ಯೋಗಗಳಲ್ಲಿಯೇ ಕಂಡುಕೊಳ್ಳುವಂತಾಯಿತು. ಈ ಅನುಭವ ಮಂಟಪದಿಂದ ಲಿಂಗತತ್ತ್ವವು ಜ್ಯೋತಿರ್ಮಯವಾಗಿ ಸ್ಫುರಣಗೊಂಡು, ಶರಣ ಜೀವನಕ್ಕೆ ಅಗತ್ಯವಾದ ಷಟ್‌ಸ್ಥಲಗಳು ಪ್ರತಿಷ್ಠಿತವಾದವು. ಪಂಚಾಚಾರಗಳು ಸ್ಥಿರವಾಗಿ ಸಮಾಜದಲ್ಲಿ ನೆಲೆಗೊಂಡವು. ಆಚಾರ ನಿಷ್ಠೆಯು ತೊಳಗಿ ಬೆಳಗಿತು. ಎತ್ತ ನೋಡಿದರತ್ತ ಶಿವಧರ್ಮದ ಪ್ರಭಾವವು ಪಸರಿಸಿತು. ಜಾತಿಭೇದದ ನಾಶವಾಗಿ ಅಂಗದ ಮೇಲೆ ಲಿಂಗವಿದ್ದವರೆಲ್ಲರೂ ಸಂಗಮನಾಥರು, ಆತ್ಮಾನುಭಾವಿಗಳೆಂಬ ಭಾವನೆಯು ಬೇರೂರಿತು. ಅಂದಿನ ಅನುಭವ ಮಂಟಪವು ಶಿವಜ್ಞಾನದ ವಿಶ್ವವಿದ್ಯಾನಿಲಯವಾಗಿತ್ತು. ಅಂತಹ ದಿವ್ಯ ಜ್ಞಾನಶಕ್ತಿ, ಅಂತಃಸ್ಫೂರ್ತಿ ಪ್ರತಿಯೊಬ್ಬರಲ್ಲಿ ಮನೆಮಾಡಿಕೊಂಡಿತ್ತು.

"ಅನುಭಾವವಿಲ್ಲದ ಭಕ್ತಿ ಅರಿವಿಂಗೆ ಬಾರದು. ಅನುಭಾವವಿಲ್ಲದ ಸಂಗಮ ಸಮರಸಕ್ಕೆ ನಿಲುಕದು. ಅನುಭಾವವಿಲ್ಲದ ಪ್ರಸಾದ ಪರಿಣಾಮವ ಕೊಡದು. ಅನುಭಾವವಿಲ್ಲದೆ ಏನೇನೂ ಅರಿಯಬಾರದು. ತನ್ನಲ್ಲಿ ಸನ್ನಿಹಿತ ಉಳ್ಳೊಡೆ ಶಿವಶರಣರ ಸಂಗವೇತಕ್ಕೆನಲುಂಟೆ? ಕೂಡಲ ಸಂಗಮದೇವಯ್ಯ ನಿಮ್ಮ ಅನುಭಾವ ಮಾಡುವ ಮಹಾಘನವೆಂದು ನುಡಿಯುವುದೇ?" ಎಂದು ಬಸವಣ್ಣನವರು ನುಡಿದು ಅನುಭಾವದ ಹಿರಿಮೆಯನ್ನು ಜಗತ್ತಿಗೆ ಸಾರಿದರು. ಶಿವಾನುಭವದ ವಗ್ಗರಣೆಯನ್ನು ಅನುಭವಮಂಟಪದ ಮೂಲಕ ಎತ್ತಿ ತೋರಿಸಿ, ಭಾರತದ ತುಂಬೆಲ್ಲ ಅದು ಘಮಘಮಿಸುವಂತೆ ಮಾಡಿದರು.

ಅನುಭಾವಿಗಳು ತಮ್ಮ ಜೀವನದ ಜೇಂಗೊಡಗಳನ್ನು ಅನುಭವಮಂಟಪದಲ್ಲಿರಿಸಿ, ನಾನಾ ದೇಶದಿಂದ ಬಂದ ಶಿವಶರಣ ಶರಣೆಯರಿಗೆ ಅದನ್ನು ಸವಿಯಲು ಅನುವು ಮಾಡಿಕೊಟ್ಟದ್ದರಿಂದಲೇ ವೀರಶೈವ ಧರ್ಮವು ವಿಶ್ವಧರ್ಮವೆನಿಸಿಕೊಳ್ಳಲು ಸಂಪೂರ್ಣ ಅರ್ಹತೆಯನ್ನು ಪಡೆಯಿತೆಂದು ಘಂಟಾಘೋಷವಾಗಿ ಹೇಳಬಹುದು.

ವೀರಶೈವರ ಅನುಭಾವದ ಅಡಿಗಲ್ಲ ಮೇಲೆ ನಿಂತ **ಶಕ್ತಿ ವಿಶಿಷ್ಟಾದ್ವೈತ ತತ್ತ್ವವು ವಿಶ್ವಧರ್ಮವಾಗಿದ್ದು,** ಜಾಗತಿಕ ತತ್ತ್ವದ ಮೂಲ ಬೇರುಗಳು ಅದರಲ್ಲಿರುವುದರಿಂದ ಸಮನ್ವಯ ದೃಷ್ಟಿಯಿಂದ ಅಂತರ್‌ರಾಷ್ಟ್ರೀಯ ಮನ್ನಣೆ ಪಡೆಯಬೇಕಾಗಿದೆ. ಈ ಧಾರ್ಮಿಕ ತತ್ತ್ವಗಳನ್ನು ವಿಚಾರ ಪೂರಿತವಾಗಿ ತಿಳಿಸಲು ಷಟ್‌ಸ್ಥಲಗಳು ಪ್ರಮುಖವಾಗಿವೆ. ವೀರಶೈವ ಸಿದ್ಧಾಂತ

ದಲ್ಲಿ ಮಾನವನು ದೇವನಾಗಲು ಈ ಆರು ಮೆಟ್ಟಲುಗಳನ್ನು ತನ್ನ ಅನುಭವಾಮೃತದ ಅಡಿಗಲ್ಲ ಮೇಲಿಂದ ಹತ್ತಬೇಕಾಗುತ್ತದೆ. ಆದ್ದರಿಂದ ಈ ಷಟ್‌ಸ್ಥಲಗಳ ವಿವೇಚನೆಯೆಂದರೆ ವೀರಶೈವ ಸಿದ್ಧಾಂತದ ವಿವೇಚನೆಯಾಗಿದೆ. ಈ ಷಟ್‌ಸ್ಥಲಗಳ ತತ್ತ್ವದಲ್ಲಿ ವಿಶ್ವಮಾನವಧರ್ಮದ ಸಾರವೇ ಅಡಗಿದೆ ಎಂದರೆ ತಪ್ಪಾಗಲಾರದು.

ಷಟ್‌ಸ್ಥಲಗಳೆಂದರೆ ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯಸ್ಥಲಗಳು. ಇವೇ ವೀರಶೈವ ಮತದ ಮುಖ್ಯ ತತ್ತ್ವಗಳು; ಷಟ್‌ಸ್ಥಲಗಳೆಂದರೆ ಲಿಂಗಾಂಗ ಸಾಮರಸ್ಯವು; ಜೀವಶಿವರೈಕ್ಯವು. ಲಿಂಗಾಂಗ ಸಾಮರಸ್ಯವೆಂದರೆ ಷಟ್‌ಸ್ಥಲಗಳ ಜ್ಞಾನಸಂಪಾದನೆ. ವೀರಶೈವರು ಕಂಡುಕೊಂಡ ಪರಬ್ರಹ್ಮದ ನಿರೂಪಣೆಯನ್ನು ಈ ಸ್ಥಲಗಳು ಮನಂಬುಗುವಂತೆ ಬೋಧಿಸುವದರಿಂದ ವೀರಶೈವ ಧರ್ಮದ ಜೀವಜೀವಾಳವಾಗಿವೆಯೆಂಬುದು ಸ್ವತಃ ಸಿದ್ಧವಾದ ಮಾತು. ಈ ಸ್ಥಲಗಳ ನಿಜವಾದ ಜ್ಞಾನ ಮಾಡಿಕೊಳ್ಳುವದು ಕರ್ತವ್ಯನಿಷ್ಠ ಸಾಧಕನಿಗೇ ಮಾತ್ರ ಸಾಧ್ಯ. ಮಾನವನು ಷಟ್‌ಸ್ಥಲಗಳನ್ನು ತನ್ನ ನಿತ್ಯಜೀವನದಲ್ಲಿ ಆಚರಣೆಯಲ್ಲಿ ತರುವದೆಂದರೆ ಮುಳ್ಳಿನ ಹಾಸಿಗೆಯ ಮೇಲೆ ನಡೆದಂತೆಯೇ ಎಂದು ಬೇರೆ ಹೇಳಬೇಕಾಗಿಲ್ಲ. ಹೃದಯ ಪರಿಪಕ್ವವಾಗಬೇಕಾಗುತ್ತದೆ. ಮೊದಲು ಭಕ್ತಿ ಮಾರ್ಗ ಹಿಡಿಯಬೇಕಾದರೇನೇ ಮಾನವನು ಬಹಳ ಕಷ್ಟ ಸಹಿಸಬೇಕಾಗುತ್ತದೆ. ಸದಾಚಾರ ಸಂಪನ್ನತೆಯಿಂದ ತನ್ನ ಮನವನ್ನು ಪರಿಶುದ್ಧವಾಗಿಟ್ಟುಕೊಳ್ಳಬೇಕು. ಈ ಭಕ್ತಸ್ಥಲದ ಕಾತರ, ಸಂಶಯ ತೊಲಗಿ ವ್ರತ, ನಿಯಮ, ಶೀಲಗಳಿಂದ ಮಲವಿರಹಿತನಾದಾಗ, ಮಹೇಶಸ್ಥಲಕ್ಕೇರುವನು. ತನ್ನ ಸರ್ವಸ್ವವನ್ನೂ ಲಿಂಗಜಂಗಮಾರ್ಪಿತ ಮಾಡಿ ಉಳಿದುದನ್ನು ದೇವದೇವನ ಪ್ರಸಾದವೆಂದು ಸ್ವೀಕರಿಸಿದಾಗ ಪ್ರಸಾದಿ ಸ್ಥಲಕ್ಕೇರುತ್ತಾನೆ, ಭಕ್ತ, ಮಹೇಶ, ಪ್ರಸಾದಿ ಎಂಬ ತ್ರಿವಿಧ ಸಾಧನ ಮುಗಿದ ಮೇಲೆ ಪ್ರಾಣವೇ ಲಿಂಗ, ಲಿಂಗವೇ ಪ್ರಾಣವೆಂದುಕೊಂಡು ತಾನು ಅರಸುತ್ತಿದ್ದ ಈಶ್ವರನು ತನ್ನೊಳಗೇ ಹುದುಗಿಕೊಂಡಿದ್ದಾನೆಂದು ಖಚಿತವಾಗಿ ಅನುಭವಿಸಿದಾಗ ಪ್ರಾಣಲಿಂಗಿ ಸ್ಥಲಕ್ಕೇರುತ್ತಾನೆ.

"ಭವಕ್ಕೆ ಹುಟ್ಟುವವನಲ್ಲ, ಸಂದೇಹ ಸೂತಕಿಯಲ್ಲ, ಆಕಾರ ನಿರಾಕಾರನಲ್ಲ ನೋಡಯ್ಯ, ಕಾಯವಂಚಕನಲ್ಲ, ಜೀವವಂಚಕನಲ್ಲ ಶಂಕೆಯಿಲ್ಲದ ಮಹಾಮಹಿಮನು ನೋಡಯ್ಯ, ಕೂಡಲ ಸಂಗನ ಶರಣನುಪಮಾತೀತನು" ಹೀಗೆ ಸ್ಥಿತಪ್ರಜ್ಞನಾಗಿ ಶರಣಸ್ಥಲಕ್ಕೇರುತ್ತಾನೆ. ಇನ್ನು ಐಕ್ಯಸ್ಥಲದಲ್ಲಿ ಜೀವ-ಶಿವರು ಒಂದಾಗಿ ಬಿಡುತ್ತಾರೆ. ಲಿಂಗಾಂಗ ಸಾಮರಸ್ಯದ ಅನುಭಾವವೇ ಅಲ್ಲಿ ತುಂಬಿತುಳುಕುತ್ತದೆ. ಕಾಳರಾತ್ರಿಯ ಕತ್ತಲೆಯು ಕಳೆದು ಮುಂಬೆಳಗು ಕಾಣಿಸಿ

ಕೊಳ್ಳುವನು, ಬೆಳಗಿಂಬೆಳಗು ಸಿಂಹಾಸನವಾಗಿ ಬೆಳಗು ಮಹಾಬೆಳಗು ಕೂಡಿದ ಕೂಟದ ಸುಖವ ಕೂಡಲ ಸಂಗನಲ್ಲಿ ಕಂಡು ತಾನೇ ತಾನಾಗುತ್ತಾನೆ. ಹೊರ ಜಗತ್ತಿನ ಅವರಣವು ಎಳ್ಳನಿತೂ ಆವರಿಸಿರುವದಿಲ್ಲ. ನಿರಂತರವಾಗಿ ಪರಮಾತ್ಮ ನಲ್ಲಿ ಲೀನವಾಗಿ ಸಚ್ಚಿದಾನಂದ ಸ್ವರೂಪವು ಲಭಿಸುತ್ತದೆ. ಇಲ್ಲಿ ಜ್ಞಾನವು ಶೂನ್ಯವಾಗುತ್ತದೆ. ಈ ಸ್ಥಿತಿಯು ಬರಬೇಕಾದರೆ ಅನೇಕ ವರ್ಷಗಳ ಸಾಧನೆ ಯಿಂದ ಸಿದ್ಧಿಯನ್ನು ಬಲಪಡಿಸಿಕೊಂಡು ಮಲತ್ರಯಗಳನ್ನು ದೂರ ಮಾಡಿದ ಬಳಿಕ ಇಂಥ ಐಕ್ಯ ಸ್ಥಿತಿಯು ಲಭಿಸುವದು.

ಷಟ್‌ಸ್ಥಲದ ಮೀಮಾಂಸೆಯನ್ನು ವಚನಕಾರರೊಬ್ಬರು ಹೀಗೆ ವರ್ಣಿ ಸಿದ್ದಾರೆ.

"ಭಕ್ತನಾದೊಡೆ ತನುಮನಧನದಾಶೆಯಳಿದಿರಬೇಕು. ಮಾಹೇಶ್ವರನಾದೊಡೆ ಪರಧನ, ಪರಾಂಗನೆಯರ ಎಡೆಯುಳಿದುಳಿದಿರಬೇಕು. ಪ್ರಸಾದಿಯಾದಡೆ ಸುಖ ರುಚಿಯವಗ್ರಹವಂ ಮರೆದು ಪ್ರಸಾದ ಘಟವಳಿಯದುಳಿದಿರಬೇಕು ಪ್ರಾಣ ಲಿಂಗಿಯಾದಡೆ ಘಟದಾಶೆಯು ತೊರೆದು ಪ್ರಾಣಲಿಂಗದೊಳಗೆ ಬೆರಸಿ ಬೇರಿಲ್ಲದಿರ ಬೇಕು. ಶರಣನಾದರೆ ಸತಿರತಿಯು ಸಂಗವಳಿದು ಲಿಂಗಕ್ಕೆ ತಾ ಸತಿಯಾಗಿರಬೇಕು. ಲಿಂಗೈಕ್ಯನಾದಡೆ ಅಪ್ಯಾಯಪಡೆಯಡಗಿ ಸುಖದುಃಖಮಂ ತಾಳದೆ ನಿರ್ಭ್ರಾಂತ ನಾಗಿರಬೇಕು."

ಮಗುದೊಬ್ಬ ಮಹಾಶಿವಶರಣರು–

"ಭಕ್ತಂಗೆ ವಿಶ್ವಾಸ, ಮಹೇಶ್ವರಂಗೆ ನೈಷ್ಠೆ, ಪ್ರಸಾದಿಗೆ ಅವಧಾನ, ಪ್ರಾಣ ಲಿಂಗಿಗೆ ಯೋಗ, ಶರಣಂಗೆ ಮುನ್ನವೇ ಬಿಡುಗಡೆ; ಐಕ್ಯಂಗೆ ಕುರುಹುಗೊಂಬುವ ದಕ್ಕೆ ಮುನ್ನವೇ ನಿರಾಳ ಇಂತೀ ಷಟ್‌ಸ್ಥಲಭೇದ ಎನ್ನಯ್ಯ ಪ್ರಿಯ ನಿಷ್ಕಳಂಕ ಮಲ್ಲಿಕಾರ್ಜುನಾ."

ಈ ರೀತಿಯಾಗಿ ಷಟ್‌ಸ್ಥಲದ ಮಹತ್ವವನ್ನು ಮನಂಬುಗುವಂತೆ ವಿವರಿಸಿ, ಬೋಧಿಸಿ ಷಟ್‌ಸ್ಥಲ ಧ್ವಜವನ್ನು ಭಾರತದ ತುಂಬೆಲ್ಲ ಹಾರಿಸಿದ್ದಾರೆ. ಎಲ್ಲ ವಚನ ಕಾರರು ತಮ್ಮ ವಚನಗಳಲ್ಲಿ ಷಟ್‌ಸ್ಥಲಗಳ ವಿಚಾರವನ್ನೇ ಹೆಚ್ಚಾಗಿ ಹೇಳಿದ್ದಾರೆ. ವಚನಕಾರರು ತಾವು ನುಡಿದಂತ ನಡೆದು ತಾವು ಕಂಡುಕೊಂಡ ಅನುಭಾವವನ್ನು ವಚನಿಸಿ ಕನ್ನಡ ಸಾಹಿತ್ಯಕ್ಕೆ ಅನರ್ಘ್ಯ ಕಾಣಿಕೆ ಇತ್ತಿದ್ದಾರೆ. ವಚನ ಸಾಹಿತ್ಯಕ್ಕೆ ಪ್ರತಿಯೊಬ್ಬರೂ ಮಾರುಹೋಗುವಂತಾಗಿದೆ. ಇಂತು ಅನುಭವಮಂಟಪದ ಮುಖಾಂತರ ಮಹಾತ್ಮಾ ಬಸವಣ್ಣನವರು ಎಲ್ಲ ಭಾಗದಿಂದ ಬಂದ ಶಿವಶರಣ ಶರಣೆಯರನ್ನು ಕೂಡಿಸಿ ತಮ್ಮ ಅನುಭವಾಮೃತದಿಂದ ಹೊರಹೊಮ್ಮಿದ ಸಾಹಿತ್ಯ ಸುಧೆಯನ್ನು ಸವಿಯಲು ಆಸ್ಪದ ಮಾಡಿಕೊಟ್ಟದ್ದಕ್ಕಾಗಿ ಮಾನವ ಜನಾಂಗವೇ

ಚಿರಋಣಿಯಾಗಿದೆ ಎಂದರೆ ತಪ್ಪಾಗಲಾರದು. ಅದಕ್ಕಾಗಿ ಜನ್ಮಜನ್ಮಾಂತರದಲ್ಲಿ ಕೃತಜ್ಞತೆ ಸಲ್ಲಿಸಿದರೂ ಕಡಿಮೆಯೇ. ನಾಡಿಗೆ ಶಿವಶರಣ ಶರಣೆಯರು ಅಸದೃಶವಾದ ಕಾಣಿಕೆ ನೀಡಿ ಚಿರಂಜೀವಿಗಳಾಗಿದ್ದಾರೆ.

ದಿ. ೨-೫-೧೯೬೭ ರಂದು ಬೆಂಗಳೂರ ಬಸವ ಸಮಿತಿಯವರು ಏರ್ಪಡಿಸಿದ ಶಾಘ ಸಮಾರಂಭದಲ್ಲಿ ಅಪ್ಪಣೆ ಕೊಡಿಸಿದ ಆಶೀರ್ವಚನ.

ಅಣ್ಣನ ಅನುಭಾವ ಕ್ರಾಂತಿ

ಇಂದು ನಾವು ೮೦೦ ವರ್ಷಗಳ ತರುವಾಯ ಉಂಟಾಗಲಿರುವ ಮರು ಕ್ರಾಂತಿಯೊಂದರ ಪ್ರಾರಂಭದ ದಿಶೆಯಲ್ಲಿ ಇದ್ದೇವೆ. ಇದರ ಮುನ್ಸೂಚನೆಗಳನ್ನು ನಾವು ಹಲವು ವಿಧವಾದ ಕಾರ್ಯ ಸಂವಿಧಾನಗಳಿಂದ ಕಾಣುತ್ತಿರುವುದು ನಿಮಗೆಲ್ಲರಿಗೂ ಗೋಚರವಾಗಿಯೇ ಇದೆ. ಇಂದಿನ ಈ ವಿಚಾರ ಯುಗದಲ್ಲಿ ಶಿವಶರಣರ ಹಾಗೂ ಬಸವಣ್ಣನವರ ಕ್ರಾಂತಿ ವಿಚಾರಗಳು ಹೆಚ್ಚು ಗ್ರಾಹ್ಯ ವಾಗುತ್ತಿರುವುದು ಶುಭ ಲಕ್ಷಣವೇ ಆಗಿದೆ. ಕಾರಣ ಮಾನವ ಧರ್ಮ ತತ್ವ ಗಳನ್ನು ತನ್ನಲ್ಲಿ ಅಳವಡಿಸಿಕೊಂಡು ಶುದ್ಧವಾದ ವೀರಶೈವ ಸಿದ್ಧಾಂತವು ಒಂದು ನಿರ್ದಿಷ್ಟ ದಾರಿಯ ಮೇಲೆ ಅಡಿಯಿರಿಸುತ್ತ ಬಂದಿರುತ್ತದೆ. ಅದರ ಐತಿಹಾಸಿಕ ಹಿನ್ನೆಲೆಯನ್ನು ಸಿಂಹಾವಲೋಕನ ಮಾಡಿ ನೋಡಿದರೆ ಮೊಹೆಂಜೋ ದಾರೊ, ಹರಪ್ಪಾ ಉತ್ಖನನಗಳ ಸುಮಾರು ೫೦೦೦ ವರ್ಷಗಳ ಮೂಲದಿಂದ ರೂಪುಗೊಂಡ ಶೈವ ಪರಂಪರೆಯ ಸುವ್ಯವಸ್ಥಿತ ಕ್ರಮವೇ ವೀರಶೈವ ಧರ್ಮ ವಾಗಿದೆ. ಲಾಕುಲೀಶ, ಪಾಶುಪತ, ಕಾಶ್ಮೀರ ಶೈವ ಮೊದಲಾದ ನೂರಾರು ಶೈವ ಪ್ರಭೇದಗಳು ಹನ್ನೆರಡನೆಯ ಶತಮಾನದ ಕ್ರಾಂತಿಯುಗದಲ್ಲಿ, ಸೂರ್ಯ ತೇಜದಲ್ಲಿ ಲೀನಗೊಂಡ ನಕ್ಷತ್ರ ಪ್ರಕಾಶಿಕೆಯಂತೆ ಐಕ್ಯಗೊಂಡವು. ಆಗಮೋಕ್ತ ತತ್ವಾರ್ಥಗಳು ಉಪನಿಷತ್ ಸಿದ್ಧಾಂತಗಳೊಂದಿಗೆ ಸಂಪರ್ಕಗೊಂಡು ಶಿವಶರಣರ ಅನುಭಾವ ವಾಣಿಯಲ್ಲಿ ಅನುಗಮವಾಗಿ ಸ್ಥಿರಗೊಂಡವು. ಆದುದರಿಂದ ೧೨ನೇ ಶತಮಾನದ ಸಾಮಾಜಿಕ, ನೈತಿಕ, ಆರ್ಥಿಕ, ರಾಜಕೀಯ ಹಾಗೂ ಸಾಹಿತ್ಯಿಕ ಕ್ರಾಂತಿಗಳಿಗೆ ಈ ಅನುಭಾವ ಕ್ರಾಂತಿಯೇ ಮೂಲವಾಯ್ತು. ಅನುಭಾವವು ಭಕ್ತಿಯ ಆಧಾರದ ಮೇಲೆ ಕೈಗೂಡಿ ನಿಂತಾಗ ಈ ಸರ್ವಾಧಾರಗಳಿಗೆ ಭಕ್ತಿ ಭಂಡಾರಿ ಬಸವಣ್ಣನವರು ಮೂಲಾಧಾರರಾದರು. ಅಂದಿನ ಅಖಂಡ ಹಾಗೂ ಸಂಪೂರ್ಣ ಕ್ರಾಂತಿಗೆ ಅಂತಃಸ್ಫೂರ್ತಿಯಾದರು. ಒಟ್ಟಿನಲ್ಲಿ ಅಸಂಖ್ಯ ಶಿವಶರಣ ಶಿವಶರಣೆಯರು ಅಧ್ಯಾತ್ಮ ಸಾಮ್ರಾಜ್ಯದ ಶಿಖರವನ್ನು ಮುಟ್ಟಿಕೊಂಡರು. ಅವರಲ್ಲಿ ಹೊರಗೆ ಬೇರಾಗುವ ಅಂತರಂಗ ಕಲ್ಮಶವಿಲ್ಲದಿದ್ದರೂ ಅಂದಿನ ಬಹುಜನರ ಹಾಗೂ ರಾಜಕೀಯ ತೊಡಕುಗಳಿಗೆ ಮುಖ್ಯಸ್ಥರಾಗಿ ನಿಲ್ಲು ತ್ತಿದ್ದರು. ಈ ಫಲವಾದಿತ್ವವೇ ಅವರನ್ನು ಸರಳ ಜೀವನದಿಂದ ಮುಕ್ತಿ ಬೀಡಕ್ಕೆ ಕೊಂಡೊಯ್ಯಿತು. ಕೊನೆಗೆ ಈ ಫಲವಾದಿತ್ವವೇ ಅವರ ಸಮಗ್ರ ಕ್ರಾಂತಿಯನ್ನೇ ಬುಡಮೇಲು ಮಾಡುವ ಬಿಸುಗಾರ ಪ್ರತ್ಯಾಘಾತವನ್ನು ಸಹಿಸಬೇಕಾಯಿತು. ಮಹಾತ್ಮಾ ಬಸವಣ್ಣನವರು ಕ್ರಾಂತಿ ಜೀವಿ. ಆದರೆ ಅವರು ಕ್ರಾಂತಿಗಾಗಿಯೇ

ಪಣತೊಟ್ಟು ನಿಂತವರಲ್ಲ. ಆದರೆ ಬಹು ಕಾಲದಿಂದ ಚಾತುರ್ವರ್ಣ್ಯದಲ್ಲಿ ಉಂಟಾದ ಅಧಾರ್ಮಿಕತೆ, ಸಾಮಾಜಿಕ ಹಿಂಸೆ, ನೈತಿಕ ಅಧಃಪತನ ಹಾಗೂ ರಾಜಕೀಯ ದುರಾಚಾರಗಳು ಅವರ ಸಹಜ ಪರಿಶುದ್ಧವಾದ ಆತ್ಮಕ್ಕೆ ತಡೆಯಲು ಅಸಾಧ್ಯವಾದವು. ಆದುದರಿಂದಲೇ ಅವರು ಸ್ವಾಭಾವಿಕವಾಗಿ ಈ ಧಾರ್ಮಿಕ ಹೋರಾಟಕ್ಕೆ ಅಣಿಯಾಗಬೇಕಾಯಿತು.

ನಾವು ಆಚರಿಸಲಿರುವ ಮಹಾನುಭಾವಿ ಬಸವಣ್ಣನವರ ೮೦೦ನೆಯ ಶತಾಬ್ದಿಗೆ ಮುನ್ನ ಅವರು ತಮ್ಮ ಜೀವನದಲ್ಲಿ ಎದುರಿಸಿದ ಈ ಐತಿಹಾಸಿಕ ವಿಷಮತೆಯನ್ನು ತಿಳಿದುಕೊಳ್ಳುವದು ಉತ್ತಮ. ಕಾರಣ ನಾವು ಯಾವುದೇ ಆಚರಣೆ, ಜಯಂತಿ ಇಲ್ಲವೇ ಉತ್ಸವಗಳನ್ನು ಮಾಡುವಾಗ ಪೂರ್ವ ಭಾವಿಯಾಗಿ ಅದರ ಔಚಿತ್ಯ ಹಾಗೂ ವಿಚಾರಗಳ ಬಗ್ಗೆ ತಿಳಿದಿರಬೇಕು. ಇಂತಹ ಸಮಗ್ರ ದೃಷ್ಟಿಯನ್ನು ಜನಸಾಮಾನ್ಯರಲ್ಲಿ ಉಂಟುಮಾಡುವದೇ ನಮ್ಮ ಇಂದಿನ ಬಸವ ಸಮಿತಿಯ ಕಾರ್ಯಕಲಾಪಗಳ ಮಹೋದ್ದೇಶವಾಗಿದೆ. ಇಂದಿನ ಈ ಪಾದಯಾತ್ರೆಯೂ ಕೂಡ ಅದೇ ದಿಶೆಯಲ್ಲಿ ಕೈಕೊಂಡುದಾಗಿದೆ. ಕಾರಣ ನಮ್ಮ ಜ್ಞಾನಸಾಮಗ್ರಿಯು ಅನುಭಾವಗಮ್ಯವಾಗಬೇಕಾದರೆ ಕ್ರಿಯಾಶಕ್ತಿಯನ್ನು ಪಡೆಯಬೇಕಾಗುತ್ತದೆ. ಈ ಕ್ರಿಯೆ ಇಲ್ಲವೆ ಕಾರ್ಯಶಕ್ತಿಗೆ ಶಿವಶರಣ ಶರಣೆಯರು ಪ್ರಥಮಸ್ಥಾನ ನೀಡಿದ್ದಾರೆ. ಇದನ್ನೇ ಆಧುನಿಕ ಅರ್ಥಶಾಸ್ತ್ರ ಹಾಗೂ ಸಾಮಾಜಿಕ ಶಾಸ್ತ್ರಗಳಲ್ಲಿ Dignity of Labour (ಕಾರ್ಯ ಗೌರವ) ಎಂಬುದಾಗಿ ಅನೇಕ ಜಗತ್ಪ್ರಸಿದ್ಧ ಅರ್ಥಶಾಸ್ತ್ರ ಪಂಡಿತರು ಹೇಳುತ್ತಾರೆ. ಮಾರ್ಕ್ಸ ಅವರು ತಮ್ಮ ಉದ್ಗ್ರಂಥದ ಪ್ರಧಾನ ವಿಷಯವಾಗಿ ಇದನ್ನು ನಿರೂಪಿಸಿದ್ದಾರೆ. ಅನೇಕ ಐತಿಹಾಸಿಕ ಯುಗಗಳಿಂದ ನಾವು ಆಳುವವ, ಆಳಿಸಿಕೊಳ್ಳುವವ. ಉಚ್ಚ ಕಾಯಕದವ, ನೀಚಕಾಯಕದವನೆಂದು ವಿಭೇದ ಕಲ್ಪಿಸುತ್ತ ಬಂದಿದ್ದೇವೆ. ಆದರಿಂದ ನಮ್ಮ ಸಮಾಜವು ಉತ್ತಮ-ಮಧ್ಯಮ-ಕನಿಷ್ಠಗಳೆಂಬ ಮೂರು ಗುಂಪುಗಳಲ್ಲಿ ಒಡೆದುಹೋಯಿತು. ಈ ಆರ್ಥಿಕ ಹಾಗೂ ಸಾಮಾಜಿಕ ಕ್ಷೇತ್ರದ ಘೋರ ಮುಗ್ಗಟ್ಟನ್ನು ತಡೆಹಿಡಿಯಬೇಕೆಂದು ಆಧುನಿಕ ಸಮಾಜ ವಿಜ್ಞಾನಿಗಳು ಅಹೋರಾತ್ರಿ ಹೋರಾಡುತ್ತಿದ್ದಾರೆ. ಆದರೆ ಇಂದಿಗೆ ೮೦೦ ವರ್ಷಗಳ ಹಿಂದೆಯೇ ಬಸವಣ್ಣನವರು ಈ ಕಾರ್ಯ ಗೌರವವನ್ನು ಕಾಪಾಡಿಕೊಳ್ಳಲು ಹಾಗೂ ಈ ಸಾಮಾಜಿಕ ವಿಷಮತೆಯನ್ನು ನಿವಾರಿಸಲು ಹೋರಾಡಿದರೆಂಬ ಮಾತನ್ನು ನಾವು ತಿಳಿದುಕೊಂಡರೆ ಅವರ ಜೀವನ ಸಂದೇಶದ ಬಗ್ಗೆ ಕಲ್ಪನೆ ಬರುತ್ತದೆ. ಆಂಗ್ಲ ಭಾಷೆಯ Labour ಈ ಪದವನ್ನು ಉದ್ಯೋಗ ಇಲ್ಲವೇ ಕೆಲಸವೆಂದು ನಾವು ಭಾಷಾಂತರಿಸುತ್ತೇವೆ. ಆದರೆ ಈ ಉದ್ಯೋಗ ಇಲ್ಲವೇ

ಕೆಲಸ ಪದಗಳೂ ದೂಷಿತವಾಗಿವೆ. ಕಾರಣ ಉದ್ಯೋಗವು ಸ್ವಾರ್ಥಕ್ಕಾಗಿ ಹಾಗೂ ಫಲಾಪೇಕ್ಷೆಗಾಗಿ ಇರುತ್ತದೆ. ಆದುದರಿಂದ ಶಿವಶರಣರು ಈ ಉದ್ಯೋಗ ಪದದ ಶುದ್ಧೀಕರಣ ಮಾಡಿ ಅದಕ್ಕೆ "ಕಾಯಕ" ಎಂಬ ಸರ್ವಶ್ರೇಷ್ಠವಾದ ಅಭಿಧಾನವನ್ನು ಕೊಟ್ಟರು. ಕಾಯಕವೆಂದರೆ ಕೇವಲ ಕೆಲಸವಲ್ಲ. ಆದರೆ ಪರಿಶುದ್ಧವಾದ ಕೆಲಸ. ದುಡಿಯುವಲ್ಲಿ ಹಾಗೂ ಫಲದಲ್ಲಿ ಭೌತಿಕ ದೃಷ್ಟಿಯಿದ್ದರೆ ಅದು ಕೆಲಸ. ಇವೆರಡರಲ್ಲಿ ಲಿಂಗದೃಷ್ಟಿಯಿದ್ದರೆ ಅದು ಕಾಯಕ.

ಶುದ್ಧ ಕಾಯಕವು ಚಿತ್ತಶುದ್ಧಿಯನ್ನು ತರುವದಲ್ಲದೆ ಜೀವನಕ್ಕೆ ಪೂರ್ಣತೆಯನ್ನು ಕೊಡುತ್ತದೆ. "ಕಾಯಕ ಅದೊಂದು ಸರ್ವಾಂಗ ಸಂಪೂರ್ಣ ದರ್ಶನ. ಶಾರೀರಿಕ, ಐಂದ್ರಿಕ, ಮಾನಸಿಕ, ಬೌದ್ಧಿಕ, ಭಾವನಾತ್ಮಕ, ಆತ್ಮಿಕ, ಆರ್ಥಿಕ, ಆಹಾರಾತ್ಮಕ, ಸಾಮಾಜಿಕ, ನೈತಿಕ, ಕಲಾತ್ಮಕ" ಮುಂತಾದ ಎಲ್ಲ ವಿಷಯಗಳನ್ನೊಳಗೊಂಡ ಕೇಂದ್ರವಾಗಿದೆ. "ಕಾಯಕ ಧರ್ಮ" ಇದು ನಿಜಕ್ಕೂ ಸತ್ಯ. ಮಾನವನು ದೇವನಾಗುವ ಸತ್ಯ ಸಾಧನವೆಂದರೆ ಕ್ರಿಯೆಯೊಡನೆ ಮಾಡುವ ಕಾಯಕವೇ ಆಗಿದೆ.

"ಕ್ರಿಯಾಮಥನವಿಲ್ಲದೆ ಕಾಣಬಂದುದೇ ಇಕ್ಷುವಿನೊಳಗಣ ಮಧುರ? ಕ್ರಿಯಾಮಥನವಿಲ್ಲದೆ ಕಾಣಬಂದುದೇ ತಿಲದೊಳಗಣ ತೈಲ? ಕ್ರಿಯಾಮಥನವಿಲ್ಲದೆ ಕಾಣಬಂದುದೇ ಕಾಷ್ಠದೊಳಗಣ ಅಗ್ನಿ? ಇದು ಕಾರಣ ನಮ್ಮ ಗುಹೇಶ್ವರಲಿಂಗವ ತನ್ನೊಳರಿದೆನೆಂಬ ಮಹಂತಂಗೆ ಸತ್ಕ್ರಿಯಾಚರಣೆಯೇ ಸಾಧನ ಕಾಣಿಭೋ" ಎಂಬುದಾಗಿ ವೈರಾಗ್ಯನಿಧಿ ಅಲ್ಲಮಪ್ರಭುದೇವರು ನುಡಿದಿದ್ದಾರೆ. ಕ್ರಿಯೆಯಿಲ್ಲದ ಜ್ಞಾನ ರಸರುಚಿಯಿರದ ಹಣ್ಣು ಇದ್ದಂತೆ. ಆದರಿಂದ ಜೀವಕ್ಕೆ ಶಾಂತಿ ಸಮಾಧಾನ ಸಿಗಲಾರದು. ಜೀವನಕ್ಕೆ ಭಕ್ತಿಯು ಬೆಳಕು, ಕರ್ಮದ ಸುಳಿವು, ಜ್ಞಾನದ ಜ್ಯೋತಿಗಳೂ ಬೇಕು. ಈ ಸಮನ್ವಯ ಸಿದ್ಧಾಂತದ ಮಹಾಪುರುಷನಾಗಿ ಮಹಾದೇವನ ಕಾರುಣಿಕ ಶಿಶುವಾದ ಬಸವಣ್ಣನವರು ತಮ್ಮ ಜೀವಮಾನದಲ್ಲಿಯೇ ಇಂಥ ಆದರ್ಶ ಜೀವನ ಸಾಗಿಸಿ ನಮಗೆಲ್ಲ ಮೇಲ್ಪಂಕ್ತಿಯನ್ನು ಹಾಕಿಕೊಟ್ಟಿದ್ದಾರೆ. ಒಂದೆಡೆ ಕಾಯಕವನ್ನು ಕುರಿತು ನುಲಿಯ ಚಂದಯ್ಯನು ನಿರ್ಭೀತಿಯಿಂದ ಹೀಗೆ ಪ್ರತಿಪಾದಿಸಿದ್ದಾನೆ.

"ಗುರುವಾದರೂ ಕಾಯಕದಿಂದಲೇ ಜೀವನ್ಮುಕ್ತಿ. ಲಿಂಗವಾದಡೂ ಕಾಯಕದಿಂದಲೇ ಶಿಲೆಯ ಕುಲಹರಿವುದು, ಜಂಗಮವಾದಡೂ ಕಾಯಕದಿಂದಲೇ ವೇಷದ ಪಾಶ ಹರಿಯುವದು ಇದು ಚೆನ್ನಬಸವಣ್ಣ ಪ್ರಿಯ ಚಂದೇಶ್ವರಲಿಂಗದ ಅರಿವು. ಅಂತೆಯೇ ಅವರು ಮಂತ್ರಿಕಾಯಕದಿಂದ ಮೋಟ್ಟೆಯ ಕಾಯಕದವರೆಗೂ ಎಲ್ಲರನ್ನು ಸನ್ನವರೆಂದು ಸಾರಿದರು. ಆದುದರಿಂದ ಅವರವರ ಹೆಸರಿನ ಹಿಂದೆಯೇ ಅವರ ಕಾಯಕವನ್ನು ಸೇರಿಸಿ ಹೇಳಿರುವದರಿಂದ ಅವರು ಕಾಯಕಕ್ಕೆ ಕೊಟ್ಟ

ಗೌರವದ ಬಗ್ಗೆ ಅರಿವಾಗುತ್ತದೆ. ಉದಾಹರಣೆಗೆ ಮಹಾಮಂತ್ರಿ ಬಸವಣ್ಣನವರು, ಕಂಬಳಿಯ ನಾಗಿದೇವ, ಅಂಬಿಗರ ಚೌಡಯ್ಯ, ಹುಲ್ಲು ಕಾಯಕದ ರೆಮ್ಮವ್ವೆ, ಆಯ್ದಕ್ಕಿ ಮಾರಯ್ಯ, ನುಲಿಯ ಚಂದಯ್ಯ, ಹಡಪದ ಅಪ್ಪಣ್ಣ, ಮಡಿವಾಳ ಮಾಚಯ್ಯ, ಡೋಹರ ಕಕ್ಕಯ್ಯ ಹಾಗೂ ಕಿನ್ನರಿ ಬೊಮ್ಮಯ್ಯ ಮುಂತಾದವರು ಪ್ರಮುಖರಾಗಿ ಬರುತ್ತಾರೆ.

ದಿ. ೨[illegible]–೪–೧೯೬೬ ರಂದು ಬಸವ ಕಲ್ಯಾಣದಲ್ಲಿ ಅಪ್ಪಣೆ ಕೊಡಿಸಿದ ಆಶೀರ್ವಚನ.

ಶಿವಾನುಭವದ ಮಹತಿ

ದರ್ಶನ ವಿಚಾರದಲ್ಲಿ ಪಾಶ್ಚಿಮಾತ್ಯ ತತ್ವಜ್ಞಾನಿಗಳು ಭಾರತೀಯರಷ್ಟು ಮುಂದೆ ಹೋಗಿರದಿದ್ದರೂ ಅವರಿಬ್ಬರೂ ಕಂಡುಕೊಂಡ ಸ್ಥೂಲ ಸಿದ್ಧಾಂತಗಳು ಒಂದೇ ಆಗಿವೆ. ಅವರ ವಿಂಗಡಣೆಯಲ್ಲಿ ನಮ್ಮಂತೆ ತ್ರಿವಿಧ ದರ್ಶನಗಳನ್ನು ಕಾಣಬಹುದು. ಈ ದರ್ಶನಾತ್ಮಕ ಉತ್ಕ್ರಾಂತಿಯೇ ಯೋಗವೆಂಬುದು ಭಾರತೀಯರ ಮತ. ಆದರೆ ಇವುಗಳ ಸಮನ್ವಯ ಇಲ್ಲವೇ ಅನ್ವಯದಲ್ಲಿ ಭಾರತೀಯರ ಸಿದ್ಧಾಂತಗಳು ಹಲವು ಕಾಂಡಗಳಲ್ಲಿ ಕವಲುಗೊಂಡಿವೆ. ಪಾಶ್ಚಿಮಾತ್ಯರು ಚಾಕ್ಷುಷ ದರ್ಶನ, ಬೌದ್ಧಿಕ ದರ್ಶನ ಹಾಗೂ ಅಂತರ್ದರ್ಶನ ಎಂದು ಸ್ಥೂಲವಾಗಿ ವಿಂಗಡಿಸಿದರು. ಇದನ್ನೆ ಶ್ರೀ ಅರವಿಂದರು Earth Consciousness, Mind Consciousness ಹಾಗೂ Supramental Consiousness, ಇಲ್ಲವೇ Higher Consciousness ಎಂಬುದಾಗಿ ಮಾಡಿದ್ದಾರೆ. ಈ ಎಲ್ಲ ವಿಂಗಡಣೆಗಳೂ ೮೦೦ ವರ್ಷಗಳ ಹಿಂದೆಯೇ ವೀರಶೈವರ ಶಿವಯೋಗ ಸಿದ್ಧಾಂತದಲ್ಲಿ ಅತ್ಯಂತ ಸೂಕ್ಷ್ಮಾತಿಶಯವಾಗಿ ತಳ್ಳಂಕಗೊಂಡು ಅಗಾಧ ಸಾಮರ್ಥ್ಯವನ್ನು ಹೊಂದಿದುದನ್ನು ತಿಳಿದುಕೊಂಡರೆ ಯಾರಿಗೆ ತಾನೆ ಅಚ್ಚರಿಯಾಗಲಿಕ್ಕಿಲ್ಲ! ಚಾಕ್ಷುಷ ದರ್ಶನದ ವಿವೇಚನೆಯಲ್ಲಿ ವೀರಶೈವರು ಅಷ್ಟಾವರಣಗಳನ್ನು ಅನುಗೊಳಿಸಿದರು. ಕಾರಣ ಚಾಕ್ಷುಷ ದರ್ಶನದಿಂದ ಲೋಕದ ಸ್ಥಿತ್ಯಂತರಗಳನ್ನೂ ಚಂಚಲ ಸ್ಪಂದನಗಳನ್ನೂ ಅರಿಯಬಹುದು. ಇವುಗಳಿಂದ ಧರ್ಮದ ಆಂತರಿಕ ಸಿದ್ಧಾಂತವು ಬಹಿರಂಗ ಭೂಮಿಕೆಯಲ್ಲಿ ವಿಫಲವಾಗುವ ಭಯವೇ ಹೆಚ್ಚು. ಆದುದರಿಂದ ನಮ್ಮ ಬಾಹ್ಯಜೀವನವನ್ನು ಸಮಾಜದ ಕಟ್ಟಿನಲ್ಲಿ ಸೂತ್ರಗೊಳಿಸಲು ವೀರಶೈವರು ಅಷ್ಟಾವರಣಗಳನ್ನು ತೊಡಿಸಿದರು. ಇದರಿಂದ ಗುರು-ಲಿಂಗ-ಜಂಗಮಾದಿ ಆಧಾರ ಶಕ್ತಿಗಳು ನಮಗೆ ನಮ್ಮ ಭಕ್ತ ಸ್ಥಲದಲ್ಲಿ ಆದಿ ದೀಪವಾಗಿ ನಿಂತು ಉತ್ಕ್ರಾಂತಿ ಪಥವನ್ನು ತೋರಿಸಿದವು.

ಇದೇ ಬಗೆಯ ದರ್ಶನ ವಿವೇಚನೆಯನ್ನು ಬೌದ್ಧಿಕವಾಗಿಯೂ ವೀರಶೈವರು ಸಲುವಾಗಿ ಮಾಡಿದುದನ್ನು ನೀವು ಅರಿಯಬಹುದು. ಬೌದ್ಧಿಕ ವಿವೇಚನೆಯು ಮುಖ್ಯವಾಗಿ ಮಾನಸಿಕ ರಂಗದಲ್ಲಿಯೇ ನಡೆಯಬೇಕಲ್ಲವೇ? ಹಾಗಿರಲು ಶಿವ ಶರಣರು ಮನಸ್ಸಿನ ಪರಿಶುದ್ಧಿಗಾಗಿ ಪಂಚಾಚಾರಗಳನ್ನು ಅಣಿಗೊಳಿಸಿದರು. ಇವುಗಳಿಂದ ಧರ್ಮಚೈತನ್ಯ ನಮ್ಮ ಆಚಾರ ಸಂಪತ್ತಿಯಲ್ಲಿಯೂ ನಿಗೂಢವಾಗಿ ನೆಲೆಸುವಂತಾಯಿತು. ಇದು ಶರಣರ ಜಾಗ್ರತೆಯಲ್ಲದೇ ಇನ್ನೇನು?

ಇನ್ನು ಬರುವದು ಅಂತರ್‌ದರ್ಶನ ಇಲ್ಲವೇ ಆತ್ಮದರ್ಶನ. ಈ ದರ್ಶನವು ಮಾನಸ ದರ್ಶನಕ್ಕಿಂತ ಹೇಗೆ ಭಿನ್ನವೆಂಬುದನ್ನು ಅರವಿಂದರ ಮಾತಿನಲ್ಲಿ ನೋಡ ಬಹುದು. ಅವರು ಈ ಅವಸ್ಥೆಗೆ Supramental consciousness ಇಲ್ಲವೇ Higher consciousness ಎಂದು ಹೇಳಿದ್ದಾರೆ. ಭೌತಿಕ ಹಾಗೂ ಮಾನಸಿಕ ಘಟ್ಟಗಳಿಗೆ Lower consciousness ಎಂದು ಕರೆದಿದ್ದಾರೆ.

ಉದಾಹರಣೆಗೆ :

''The consciousness which you call supramental is no doubt above the human mind, but it should be called, not the supramental, but simply the higher consciousness. In this higher consciousness there are many degrees, of which the supramental is the summit or the source. It is not possible to reach the summit or source all at once; first of all the lower consciousness has to be purified and made ready.

(More Lights on Yoga. page-6)

—ಎಂದು ಹೇಳಿದ್ದಾರೆ. ಇಲ್ಲಿ ಅರಿವಿನ ಅವಿರಳ ಶಕ್ತಿ ಮಹಾ ಪ್ರಕಾಶ ದಲ್ಲಿ ನೆಲೆಸಿ ನೆಲಸದಂತಿರುತ್ತದೆ ಎಂದು ಶಿವಶರಣರು ಹೇಳುತ್ತಾರೆ. ಸಾಧಕನು Lower consciousness ನಿಂದ Supramental Consciousness ನಲ್ಲಿ ಬದಲಾವಣೆ ಹೊಂದುವದಕ್ಕೆ ಅರವಿಂದರು transformation ಎಂದು ಕರೆ ದಿದ್ದಾರೆ. ಇದನ್ನೇ ವೀರಶೈವ ಪರಿವಿಡಿಯಲ್ಲಿ ಅಂಗಕ್ರಿಯೆಗಳೆಲ್ಲವೂ ಲಿಂಗಕ್ರಿಯೆ ಗಳಾಗುತ್ತವೆಂದು ಅಲ್ಲಮಪ್ರಭುದೇವರು ಹೀಗೆ ಹೇಳಿದ್ದಾರೆ—

—"ಅಂಗ ಅನಂಗವೆಂಬೆರೆಡು ಅಳಿದು ನಿಜದಲ್ಲಿ ನಿಂದ ಲಿಂಗೈಕ್ಯನ
ಅಂಗದಲುಳ್ಳ ಕ್ರಿಯೆಗಳೆಲ್ಲವೂ ಲಿಂಗಕ್ರಿಯೆಗಳು ನೋಡಾ!
ಮನೋಲಯವಾಗಿಪ್ಪ ನಿಜಲಿಂಗೈಕ್ಯನ
ಅನುಭಾವವೆಲ್ಲವೂ ನಿಶ್ಶಬ್ದ ನೋಡಾ!
ತನ್ನಲ್ಲಿ ತಾನು ತದ್ಗತನಾಗಿಪ್ಪ ಶಿವಯೋಗಿಗೆ
ಭಿನ್ನವಿಲ್ಲ ನೋಡಾ! ಗುಹೇಶ್ವರ ಸಾಕ್ಷಿಯಾಗಿ"

ಆದರೆ ಈ ಆತ್ಮದರ್ಶನ ವಿಚಾರವು ಹೊಂದಿದಷ್ಟು ಅಸಂಬದ್ಧತೆ ಹಾಗೂ ತರ್ಕದ ಜಟಿಲತೆಗಳು ಇನ್ನಾವ ರಂಗದಲ್ಲಿಯೂ ಉದ್ಭವಿಸಿಲ್ಲ. ಈ ದರ್ಶನ ಇದರ ವಿವೇಚನೆಯಲ್ಲಿಯೇ ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಹಾಗೂ ಶಕ್ತಿ ವಿಶಿಷ್ಟಾ ದ್ವೈತಗಳು ರೂಢಮೂಲವಾದವು. ಪಾಶ್ಚಿಮಾತ್ಯರೂ ಇದೇ ವಿಚಾರ ಸರಣಿಯಲ್ಲಿ ತಮ್ಮವೇ ಆದ ಪಂಥಗಳನ್ನು ಅನುಸರಿಸಿರುವರಾದರೂ ವಾದಭೂಮಿಕೆಯಲ್ಲಿಯೇ

ಉಳಿದಿದ್ದಾರೆ. ಆದರೆ ವೀರಶೈವರ ಶಕ್ತಿ ವಿಶಿಷ್ಟಾದ್ವೈತ ತತ್ವದ ಮೇಲೆ ಆಧಾರಿತವಾದ ಶಿವಯೋಗ ಸಿದ್ಧಾಂತವು ಸಮನ್ವಯ ಯುಕ್ತವಾಗಿದೆ. ದ್ವೈತ ಅದ್ವೈತಗಳ ಅತಿರೇಕಗಳನ್ನು ಅಲ್ಲಗಳೆದು ಇದು ದ್ವೈತಾದ್ವೈತಗಳ ಸಮನ್ವಯವನ್ನು ಅಂಗೀಕರಿಸಿದೆ. ಆದ್ದರಿಂದಲೇ ಇಲ್ಲಿ ಕರ್ಮನಿಷ್ಠತೆ ಇಲ್ಲವೇ ಕರ್ಮಶೂನ್ಯತೆಗಳು ಸ್ಥಾನವನ್ನು ಹೊಂದಿಲ್ಲ. ಕ್ರಿಯಾ-ಜ್ಞಾನ-ಭಕ್ತಿಗಳು ವೈರಾಗ್ಯದಲ್ಲಿ ಅಳವಟ್ಟಿವೆ. ಆದ್ದರಿಂದ ವೀರಶೈವರು ಈ ಅಂತರ್ದರ್ಶನ ಇಲ್ಲವೇ ಆತ್ಮದರ್ಶನವನ್ನು ತಮ್ಮ ಯೋಗಕ್ರಮಕ್ಕೆ ಅಳವಡಿಸಿಕೊಂಡು ಮಾನಸಶಾಸ್ತ್ರದ ಸೂಕ್ಷ್ಮ ಪರಿಧಿಯಲ್ಲಿ ಷಟ್‌ಸ್ಥಲಗಳನ್ನು ಸಲುವಳಿಗೊಳಿಸಿದರು. ಷಟ್‌ಸ್ಥಲಗಳು ಭಕ್ತಸ್ಥಲದಿಂದ ಐಕ್ಯಸ್ಥಲದ ವರೆಗೆ ಉತ್ಕ್ರಾಂತಿ ಪಥದಲ್ಲಿ ಇದ್ದರೂ ಅನುಲೋಮ-ವಿಲೋಮ ಕ್ರಮದಿಂದ ಸಮ್ಯಕ್ ಸ್ವರೂಪವನ್ನು ಪಡೆದಿವೆ.

ಈ ರೀತಿ ವೀರಶೈವರು ತ್ರಿವಿಧ ದರ್ಶನವನ್ನು ತ್ರಿವಿಧ ಕ್ರಮಗಳಲ್ಲಿ ಜೋಡಣೆಗೊಳಿಸಿದರು. ಆದ್ದರಿಂದ ಶಿವಯೋಗ ರಹಸ್ಯವನ್ನೂ ಶಿವಯೋಗ ಸಿದ್ಧಾಂತವನ್ನೂ ತಿಳಿಯಲಿಚ್ಛಿಸುವ ಸಹೃದಯಿಗಳು ಮೊದಲು ಅಷ್ಟಾವರಣ, ಪಂಚಾಚಾರ ಹಾಗೂ ಷಟ್‌ಸ್ಥಲಗಳ ಹೊಂದಾಣಿಕೆಯನ್ನು ಕಂಡುಕೊಳ್ಳಬೇಕು. ಶರಣ ಜೀವಿಗೆ ಅಷ್ಟಾವರಣವು ಅಂಗವಾದರೆ ಪಂಚಾಚಾರ ಹಾಗೂ ಷಟ್‌ಸ್ಥಲಗಳು ಪ್ರಾಣ ಮತ್ತು ಆತ್ಮಗಳಾಗಿವೆ. ಅವೆಲ್ಲವುಗಳ ಸಮನ್ವಯಪರ ಸಿದ್ಧಾಂತಕ್ಕೆ ವೀರಶೈವ ಪರಿಧಿಯಲ್ಲಿ 'ಅನುಭಾವ' ಎಂದು ಹೆಸರು. ಈ ರೀತಿ ಸಜೀವಸಿದ್ಧಾಂತ ಪ್ರತಿಪಾದನೆಯು ಮತ್ತೆಲ್ಲಿಯೂ ಕಾಣುವದಿಲ್ಲ. ಆ ಅನುಭಾವದ ಅಗತ್ಯತೆ ಎಷ್ಟೆಂಬುದನ್ನು ಬಸವಣ್ಣನವರು ಹೀಗೆ ಹೇಳಿದ್ದಾರೆ—

"ಅನುಭಾವವಿಲ್ಲದ ಭಕ್ತಿ ಅರಿವಿಂಗೆ ಬಾರದು.
ಅನುಭಾವವಿಲ್ಲದ ಸಂಗ ಸಮರಸ ಸುಖಕ್ಕೆ ನಿಲುಕದು.
ಅನುಭಾವವಿಲ್ಲದ ಪ್ರಸಾದ ಪರಿಣಾಮ ಕೊಡದು.
ಅನುಭಾವವಿಲ್ಲದ ಏನೇನೂ ಅರಿಯಬಾರದು..........
ಕೂಡಲಸಂಗಮದೇವಯ್ಯ! ನಿಮ್ಮ ಅನುಭಾವ
ಮಾತಿನ ಮಥನವೆಂದು ನುಡಿಯಬಹುದೇ?"

ವಿಶ್ವತತ್ವಗಳನ್ನೆಲ್ಲ ತನ್ನಲ್ಲಿ ಅಂಗವಿಸಿಕೊಂಡು ವೀರಶೈವ ಸಿದ್ಧಾಂತವು ವಿಶ್ವಧರ್ಮವೇ ಆಗಿದೆಯೆಂಬ ಕೂಗನ್ನು ನೀವು ನಾವೆಲ್ಲರೂ ಕೇಳಿದ್ದೇವೆ. ಆದರೆ ಈ ಸ್ವಯಂ ಸಂಪೂರ್ಣವಾದ ಸಿದ್ಧಾಂತಕ್ಕೆ ಒಂದೇ ಒಂದು ದೊಡ್ಡ ಕೊರತೆ ಇದೆ. ಅದೆಂದರೆ ಈ ಸಿದ್ಧಾಂತವನ್ನು ಜಗತ್ತಿನ ಎಲ್ಲ ಮೂಲೆಗಳಿಗೂ ಹೊತ್ತೊಯ್ಯುವ ಪ್ರಚಾರದ ಕೊರತೆ. ಅಣುಬಾಂಬನ್ನು ಸಿದ್ಧಪಡಿಸಿದರೂ ಅದನ್ನು ದೂರಗಾಮಿಯಾಗಿ ಕೊಂಡೊಯ್ಯಬಲ್ಲ ಕ್ಷಿಪಣಿಗಳನ್ನೂ ಅಣ್ವಸ್ತ್ರ ರಾಷ್ಟ್ರಗಳು ಸಿದ್ಧಪಡಿಸ

ಬೇಕಾಗುತ್ತದೆ. ಅದರಂತೆ ಅಸಾಧ್ಯ ಸಾಮರ್ಥ್ಯವನ್ನು ಒಳಗೊಂಡ ಈ ಸಿದ್ಧಾಂತಕ್ಕೆ ಪ್ರಚಾರ ಕ್ಷಿಪಣಿ ಅತ್ಯಗತ್ಯ. ಇಂದು ವಾಣಿಜ್ಯ-ಉದ್ಯಮ ರಂಗದಲ್ಲಿ ಪ್ರಚಾರಕ್ಕೆ ಎಷ್ಟೊಂದು ಬೆಲೆ ಇದೆ ಎಂಬುದನ್ನು ನೀವೆಲ್ಲರೂ ಅರಿತಿದ್ದೀರಿ. ಅಲ್ಲದೇ ಕ್ರಿಶ್ಚನ್ ಧರ್ಮವು ಭಾರತದಲ್ಲಿ ತಳ ಊರಿದುದು ಕೇವಲ ಪ್ರಚಾರ ಸಾಮರ್ಥ್ಯದ ಮೇಲೆಯೇ ಎಂಬುದನ್ನು ಹೇಳಬಹುದು. ಅದರಂತೆ ಕರ್ನಾಟಕದಲ್ಲಿ ಆಗಾಗ ನಡೆಯುತ್ತಿರುವ ಈ ಶಿವಾನುಭವ ಸಮ್ಮೇಲನಗಳು ಕೂಡ ಒಂದು ಸಂಸ್ಥೆಯ ರೂಪ ತಾಳಿ ಶಿವಯೋಗ ತತ್ವಪ್ರಸಾರವನ್ನು ಜಗತ್ತಿನ ಎಲ್ಲ ಭಾಷೆಗಳಲ್ಲಿಯೂ ಕೈಕೊಳ್ಳಬೇಕು. ಅಲ್ಲದೇ ಮಠಾಧೀಶರೆಲ್ಲರೂ ಒಟ್ಟುಗೂಡಿ ಕೆಲವು ಪರಿಣತ ತಜ್ಞರನ್ನು ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ಕಳುಹಿಸಿ ಅಲ್ಲಿಯೂ ಈ ಪ್ರಸಾರಾಂಗ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕು. ಇಂದಿನ ರಾಜಕೀಯ, ಸಾಮಾಜಿಕ ಹಾಗೂ ವೈಜ್ಞಾನಿಕ ವಾತಾವರಣದಲ್ಲಿ ಉಂಟಾದ ಗಾಢಾಂಧಕಾರವನ್ನು ತೊಲಗಿಸಲು ಇದೊಂದು ಯೋಗ್ಯ ಉಪಕ್ರಮವಾಗಲೆಂದು ನಾವು ಬಯಸುತ್ತೇವೆ.

ಇಂದಿನ ಉದ್ರಿಕ್ತ ವಾತಾವರಣವು ಮಾನವನ ವಿಚಾರ ಓಘವನ್ನು ಕ್ಲುಪ್ತಗೊಳಿಸಿ ಭೌತಿಕ ಈಪ್ಸಿತಗಳಲ್ಲಿಯೇ ನೂಕಿಬಿಟ್ಟಿದೆ. ಸ್ವಾರ್ಥ ಚಿಂತನೆಯು ಸ್ಥಿರ ಪರಂಪರೆಯನ್ನು ಸ್ಥಾಪಿಸಿದೆ.

ಇಂಥ ಧರ್ಮಗ್ಲಾನಿಯು ನಮ್ಮ ಎದುರಿಗೇ ಮಂದಹಾಸ ಬೀರುತ್ತಾ ನಾಟ್ಯವಾಡುವಾಗ ನಾವೆಲ್ಲರೂ ಸುಮ್ಮನೇ ಕುಳಿತರೆ ನಡೆಯುತ್ತದೆಯೇ? ಮೊದಲು ಇಂದಿನ ಈ ಅಧಿಕಾರ ಹಾಗೂ ಕೀರ್ತಿದಾಹಗಳಿಂದುಂಟಾದ ಪರಸ್ಪರ ಸ್ಪರ್ಧೆಯು ಮಠಾಧೀಶರಲ್ಲಿ ಹಾಗೂ ಅವರ ಅನುಯಾಯಿಗಳಲ್ಲಿ ನುಸುಳದಿರಲೆಂದು ನಾವು ಹೇಳಬಯಸುತ್ತೇವೆ. ನಮ್ಮಲ್ಲಿ ಇದ್ದುದೆಲ್ಲವೂ ಒಳ್ಳೆಯದೇ ಎಂಬ ಈ ಮೇಲು ಮುಸುಕನ್ನು ಹಾಕಿಕೊಂಡು ಕೂಡ್ರುವ ಕಾಲ ಈಗ ಬಹುದೂರ ಹೋಗಿದೆ. ನಾವು ನಮ್ಮನ್ನು ನಿರ್ದಾಕ್ಷಿಣ್ಯವಾಗಿ ಕಂಡುಕೊಂಡು ಲೋಪ-ದೋಷಗಳನ್ನು ತಿದ್ದಿಕೊಳ್ಳದಿದ್ದರೆ ಮುಂದೇನು? ಈ ಪ್ರಯತ್ನಕ್ಕೆ ಅತಿ ಮುಖ್ಯ ಸಾಧನ ವೆಂದರೆ ಸಕಲ ಪರಂಪರೆಗಳ ಮಠಾಧೀಶರೂ ತಮ್ಮ ಅಂತಸ್ತು ಹಾಗೂ ಗೌರವಗಳನ್ನೇ ನೆಚ್ಚಿ ಕೂಡ್ರದೇ ಒಂದೆಡೆಗೆ ಬಂದು ಕಲೆಯಬೇಕು. ಪರಸ್ಪರರು ಬಿಚ್ಚು ಮನದಿಂದ ವಿಚಾರ ಮಂಥನವನ್ನು ಮಾಡಿ ಇಂದಿನ ವಿಷಮ ಪರಿಸ್ಥಿತಿಗೆ ಪರಿಹಾರವನ್ನು ಕಂಡುಕೊಳ್ಳಬೇಕು. ಕಾರಣಾಂತರಗಳಿಂದ ವೀರಶೈವ ಧರ್ಮವು ನೂರಾರು ಉಪಪಂಗಡಗಳ ಸುಳಿಗೆ ಸಿಲುಕಿ ಬಿದ್ದು ಶಕ್ತಿಹೀನವಾಗಿದೆ. ಕಾಲಾನಂತರ ಇವೇ ಕ್ಷುದ್ರ ಪಂಗಡಗಳು ತಮ್ಮ ವೀರಶೈವತ್ವವನ್ನೇ ಅಲ್ಲಗಳೆದು ತಮ್ಮದೇ ಆದ ಬೇರೆ ಸಂಸ್ಕೃತಿಯನ್ನು ಬೆನ್ನುಹತ್ತಿ ಸರ್ವಾಧಿಕಾರವನ್ನು ಸ್ಥಾಪಿಸಿಕೊಳ್ಳಬಹುದು. ಇಂಥ ಅನೇಕ ಒಳಪಂಗಡಗಳು ಹಲವು ಧರ್ಮ ಸೂಕ್ಷ್ಮವನ್ನು ತಿಳಿಯದ

ಉಪದೇಶದಿಂದ ಮರುಳುಗೊಂಡು ತಮ್ಮತಮ್ಮಲ್ಲಿಯೇ ಅಂತಃಕಲಹಕ್ಕೆ ನಿಂತು ದನ್ನು ನೀವೆಲ್ಲರೂ ಕಾಣುತ್ತಿರುವಿರಿ. ಈ ರೀತಿಯ ಘರ್ಷಣೆಗಳು ಯಾವುದೇ ಯೋಚಿತ ಧರ್ಮಶಕ್ತಿಗೆ ಪೂರಕವಾಗದೇ ಕೇವಲ ಮಾರಕವಾಗಿದೆಯೆಂಬುದನ್ನು ನೆನಪಿಡಬೇಕು. ನಾವು ಹೋರಾಟದಲ್ಲಿ ಎಂದಿಗೂ ಧರ್ಮವನ್ನು ಕಾಣಲಾರೆವು. ವೀರಶೈವ ತತ್ವಜ್ಞಾನವು ಅದೆಷ್ಟು ವಿಶ್ವ ಸಂಪೂಜಿತವಾದರೂ ಸರ್ವಾದರಣೀಯ ವಾದರೂ ಇಂಥ ಸಾಮಾಜಿಕ ಮುಗ್ಗಟ್ಟಿನ ಗೊಂದಲಮಯ ವಾತಾವರಣದಲ್ಲಿ ತಳಕೆಟ್ಟ ಚಿನ್ನದ ಪಾತ್ರೆಯಂತೆ ಆಗಿದೆ. ನಾವು ಈ ಮೊದಲೇ ಸೂಚಿಸಿದಂತೆ ಇಂಥದೊಂದು ಒಕ್ಕಟ್ಟನ್ನು ಹಾಗೂ ಒಮ್ಮತವನ್ನು ಸಾಧಿಸಲು ಸಕಲ ಪೀಠಾಧಿಪತಿಗಳು ಏಕಸ್ಥಾನದಲ್ಲಿ ಸಮ್ಮಿಲಿತರಾಗಿ ಕಳಕಳಿಯಿಂದ ವಿಚಾರಿಸಬೇಕು.

೩. ೨೫-೫-೧೯೭೭ ರಂದು ಬಾಗಲಕೋಟೆ ಶಿವಾನುಭವ ಸಮ್ಮೇಳನದಲ್ಲಿ ಅಪ್ಪಣೆ ಕೊಡಿಸಿದ ಆಶೀರ್ವಚನ.

ಅಕ್ಕನ ಆಧ್ಯಾತ್ಮಿಕ ಶಕ್ತಿ

ಮಾನವ ಕುಲವಿಂದು ಸಾಧು-ಸತ್ಪುರುಷರ ಹೆಸರನ್ನು ಹೇಳುತ್ತ, ವಿಶ್ವ ಕಲ್ಯಾಣವನ್ನು, ಸಾರ್ವತ್ರಿಕ ಶಾಂತಿಯನ್ನು ಸಾಧಿಸುವ ನೆವಮುಂದೆಮಾಡಿ, ವೈಯಕ್ತಿಕ ಹಿತಾಸಕ್ತಿಗಳನ್ನು ಸಾಧಿಸಿಕೊಳ್ಳುವಲ್ಲಿ ನಡೆದಿರುವದರಿಂದ ನೈತಿಕ ಅಧಃಪತನವು ಒಡಮೂಡಿದೆ. ಈ ಸಂದರ್ಭದಲ್ಲಿ ೧೨ನೆಯ ಶತಮಾನದಲ್ಲಿ ಕಲ್ಯಾಣದಲ್ಲಿ ಧರ್ಮಜಾಗ್ರತಿಯ ದೃಷ್ಟಿಯಿಂದ 'ಅನುಭವ ಮಂಟಪ'ದಲ್ಲಿ ಕಾಣಿಸಿಕೊಂಡ ಅಪ್ರತಿಮ ಶಿವಶರಣೆ ಮಹಾದೇವಿಯಕ್ಕಗಳ ಜೀವನ ಚರಿತ್ರೆ ಕನ್ನಡ ನಾಡಿನ ಮಹಿಳಾ ಲೋಕಕ್ಕೆ ಅಂದಿಗೂ-ಇಂದಿಗೂ ಆದರ್ಶಪ್ರಾಯವಾಗಿ ಉಳಿದಿದೆ ಎಂದರೆ ಅತಿಶಯೋಕ್ತಿಯಲ್ಲ. ಅಕ್ಕಮಹಾದೇವಿಯು ರಚಿಸಿದ ವಚನಗಳು ಮಹತ್ವಪೂರ್ಣವೂ, ಸನ್ಮಾರ್ಗದರ್ಶಿಯೂ ಆಗಿವೆಯೆಂದು ಮಹಾನುಭಾವಿಗಳಾದ ಬಸವಣ್ಣನವರು, ಚನ್ನಬಸವಣ್ಣನವರು, ಅಲ್ಲಮಪ್ರಭುದೇವರು ಒಪ್ಪಿಕೊಂಡಿರುವದನ್ನು ನಾವು ಕಾಣುತ್ತೇವೆ.

"ಆದ್ಯರ ಅರವತ್ತು ವಚನಕ್ಕೆ ದಣ್ಣಾಯಕರ ಇಪ್ಪತ್ತು ವಚನ;
ದಣ್ಣಾಯಕರ ಇಪ್ಪತ್ತು ವಚನಕ್ಕೆ ಪ್ರಭುದೇವರ ಹತ್ತುವಚನ;
ಪ್ರಭುದೇವರ ಪತ್ತು ವಚನಕ್ಕೆ ಅಜಗಣ್ಣನ ಐದು ವಚನ;
ಅಜಗಣ್ಣನ ಐದು ವಚನಕ್ಕೆ ಕೂಡಲ ಚನ್ನಸಂಗಯ್ಯನಲ್ಲಿ;
ಮಹಾದೇವಿಯಕ್ಕಗಳ ಒಂದು ವಚನ, ನಿರ್ವಚನ ಕಾಣಾ ಸಿದ್ಧರಾಮಯ್ಯ"

ಎಂದು ಮಹಾಜ್ಞಾನಿ ಎನಿಸಿದ ಚನ್ನಬಸವಣ್ಣನವರೇ ಹೇಳಿರುವರೆಂದ ಬಳಿಕ ಅಕ್ಕನ ಯೋಗ್ಯತೆಗೆ ಸರಿಸಮಾನರುಂಟೇ ಎಂದು ಕೇಳಬೇಕಾಗಿ ಬರುತ್ತದೆ. ಇರಲಿ, ಶಿವಭಕ್ತಿಗೆ ತವರುಮನೆ ಎನಿಸಿದ ಉಡುತಡಿ (ಶಿವಮೊಗ್ಗ ಜಿಲ್ಲೆ) ಎಂಬ ಗ್ರಾಮದಲ್ಲಿ ಶಿವಭಕ್ತೆ ಸುಮತಿ-ಶಿವಭಕ್ತ ನಿರ್ಮಲರೆಂಬವರ ಹೊಟ್ಟೆಯಲ್ಲಿ ಜನಿಸಿ, ಮುದ್ದುಗುವರಿಯಾಗಿ ಶಿವಭಕ್ತಿ ಕುಸುಮ ಅರಳುವಂತೆ ಬೆಳೆದು ವಿಕಸಿತಳಾಗಿ ಹದಿನಾರರ ಹರೆಯದಲ್ಲಿ ಕಾಲಿಡುತ್ತಲೇ ಅಕ್ಕನ ಜೀವನದ ಮುಂದೆ ಒಂದು ಮಹಾ ಸಮಸ್ಯೆ ಒಂದು ನಿಲ್ಲುತ್ತದೆ. ಮಧ್ಯಮ ವರ್ಗದ ಕುಟುಂಬದಲ್ಲಿ ಹುಟ್ಟಿ ಬೆಳೆದ ಅಕ್ಕನು ತನ್ನ ಗುರುಗಳಾದ ಗುರುಲಿಂಗದೇವರಿಂದ ಇಷ್ಟಲಿಂಗವ ಪಡೆದು, ಲಿಂಗದಲ್ಲಿ ಅತಿ ಭಕ್ತೆಯಾಗಿ ವಚನ ಸಾಹಿತ್ಯದ ರಸಿಕ ಚಕ್ರವರ್ತಿ ಬಸವಣ್ಣನವರ ಭಕ್ತಿರಸದ ಸವಿಗೆ ಮಾರುಹೋಗಿ ಶ್ರೀಶೈಲ ಮಲ್ಲಿಕಾರ್ಜುನನ ಮಹಿಮೆಯನ್ನು ತಿಳಿದುಕೊಳ್ಳುತ್ತ ಅವನೊಡನೆ ಬೆರೆತು ಸಮರಸವಾಗಲು ಪ್ರಯತ್ನಿಸುತ್ತಾಳೆ.

ದೊರೆಯಾದ ಕೌಶಿಕನು ಸಕಲಸನ್ನಾಹದಿಂದ ಮೆರವಣಿಗೆ ಹೊರಟ ಸಂದರ್ಭದಲ್ಲಿ ಊರ ಮಹಿಳಾಮಣಿಗಳೆಲ್ಲಾ ತಮ್ಮ ತಮ್ಮ ಮನೆ ಬಾಗಿಲಲ್ಲಿ ನಿಂತು ನೋಡುವಂತೆ ಮಹಾದೇವಿಯಕ್ಕನೂ ತನ್ನ ಮನೆಯ ಬಾಗಿಲು ಬಳಿ ನಿಂತು ನೋಡುವದೊಂದೇ ತಡ ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರ ಬಂದೆರಗಿದಂತೆ, ಕೌಶಿಕನ ದೃಷ್ಟಿಕೋನ ಅಕ್ಕನ ತಾರುಣ್ಯದ ಸೌಂದರ್ಯ ರಾಶಿಯ ಮೇಲೆ ಬಿದ್ದಿತು. ನಾಗಾಲೋಟದಿಂದ ಕೌಶಿಕನ ಮನಸ್ಸು ಮಾಯಾ ಮೋಹ ಪಾಶದಲ್ಲಿ ಸಿಲುಕಿ, ಮದುವೆ ಮಾಡಿಕೊಳ್ಳಬೇಕೆಂಬ ಹಂಬಲು ಹುಟ್ಟುವಂತಾಯಿತು. ಅಷ್ಟು ಹೊತ್ತಿಗೆ ಅಕ್ಕ ತನ್ನ ಮನೋದೇವತೆಯಾದ ಚನ್ನಮಲ್ಲಿಕಾರ್ಜುನನೇ ಗಂಡ 'ಈ ಸಾವ ಕೆಡುವ ಗಂಡರ ನೊಯ್ದು ಒಲೆಯೊಳಗಿಕ್ಕು' ಎಂಬ ಭಾವಾವೇಶದಿಂದ ಪುಳಕಿತಳಾಗಿರುತ್ತಾಳೆ. ಕೌಶಿಕ ತನ್ನ ವಂದಿಮಾಗಧರ ಮೂಲಕ, ಮಂತ್ರಿಗಳ ತಂತ್ರದಿಂದ ಸುಮತಿ–ನಿರ್ಮಲರನ್ನು ಹೆದರಿಸಿ–ಬೆದರಿಸಿ ತನ್ನನ್ನು ಮದುವೆಯಾಗು ವಂತೆ ಬಲವಂತ ಮಾಡುತ್ತಾನೆ. ಅಕ್ಕ ಬಯಸಿದ್ದು 'ಸಾವಿಲ್ಲದ ರೂಹಿಲ್ಲದ, ಕೇಡಿಲ್ಲದ ಜನನ ಮರಣ ವಿಲ್ಲದವನ' ಕೂಡ ಲಗ್ನ. ವ್ಯವಹಾರ ಪ್ರಪಂಚದಲ್ಲಿ ಪಾಲಿಗೆ ಬಂದದ್ದು ಕಾಮಾಂಧನಾದ ಕೌಶಿಕನ ಜೊತೆಗೆ ಮದುವೆ ಇಲ್ಲವಾದರೆ ತಂದೆ–ತಾಯಿಗಳ ಜೀವಕ್ಕೆ ಸಂಚಕಾರ! ಕೌಶಿಕನೊಡನೆ ಅಕ್ಕಮಹಾದೇವಿಯ ಲಗ್ನ ವಾಗಿತ್ತೋ ಇಲ್ಲವೋ ಎಂಬ ಮಹತ್ವದ ಪ್ರಶ್ನೆ ಬಂದಾಗ ಮದುವೆಯಾಗಿದ್ದಿಲ್ಲವೆಂಬುದು ನಮ್ಮ ಭಾವನೆ. ಕೌಶಿಕನ ಅರಮನೆಯಲ್ಲಿ ಗುರುಲಿಂಗಜಂಗಮ ಸೇವೆ ಮಾಡುತ್ತ ಕೆಲಕಾಲ ಕಳೆದಳೆಂಬುದು ನಿಜ. ರಾಜನು ಪ್ರೀತಿಸುತ್ತಿದ್ದುದು ಅಕ್ಕನನ್ನಲ್ಲ; ಅಕ್ಕನ ರೂಪಲಾವಣ್ಯವನ್ನು. ಅಕ್ಕನಿಗೆ ಬೇಕಾದುದು ಲೋಕದ ಕಲ್ಯಾಣ ವೆನಿಸಿದ್ದ ಬಸವಣ್ಣನ ಕಾರ್ಯಕ್ಷೇತ್ರವಾದ "ಅನುಭವ ಮಂಟಪ". ಅಲ್ಲಿಯ ಶರಣ–ಶರಣೆಯರ ತಿಂಥಿಣಿಯನ್ನು ಕಂಡು ಅವರ ಹರಕೆಗಳನ್ನು ತಲೆಯಲಾಂತು ಕೊಳ್ಳಬೇಕೆಂಬ ಹಂಬಲು. ಆದ್ದರಿಂದ ಅಕ್ಕ ತಾನು ಹೇಳಿದಂತೆ ನಡೆಯದ ಕೌಶಿಕನ ಅರಮನೆಯನ್ನು ತೊರೆದಳು, ಮನೆ–ಮಾರು ತ್ಯಜಿಸಿ ಚನ್ನಮಲ್ಲಿಕಾರ್ಜುನನನ್ನು ಅರಸುತ್ತ ಗುಡ್ಡ ಗಹ್ವರಗಳನ್ನು ಸುತ್ತಿದಳು.

"ಅಳಿಸಂಕುಳವೆ, ಮಾಮರವೇ, ಬೆಳುದಿಂಗಳೇ, ಕೋಗಿಲೆಯೇ ನಿಮ್ಮ ನಿಮ್ಮನೆಲ್ಲರನು ಒಂದು ಬೇಡುವೆನು! ಎನ್ನೊಡೆಯ ಚನ್ನಮಲ್ಲಿಕಾರ್ಜುನ ದೇವರ ಕಂಡರೆ ಕರೆದು ತೋರಿರೆ"

ಎಂದು ಗೋಗರೆಯುವದು ಅರ್ಥಪೂರ್ಣವಾಗಿದೆ. ಈ ಜಗತ್ತಿನಲ್ಲಿ ದೇವದೇವನೆ ಸೃಷ್ಟಿಸಿದ ವಸ್ತುಗಳೇ ಆ ಗುರುದೇವನ ತಾಣವನ್ನು ಬಿಕೆ ತೋರಿಸ ಬಾರದು ಎಂದವಳ ಎಣಿಕೆ. ಜನಾಪವಾದಕ್ಕೆ ಲಗ್ನವಾಗುವೆನೆಂದು ಒಪ್ಪಿಕೊಂಡ

ಅಕ್ಕ ಮದುವೆಯಾಗದೇ ಅಖಂಡ ಬ್ರಹ್ಮಚರ್ಯ ವ್ರತವನ್ನು ಪಾಲಿಸಿ ಮಹಿಳಾ ಲೋಕಕ್ಕೆ ಆದರ್ಶಪ್ರಾಯಳಾಗಿರುವಳು.

ಅಕ್ಕಮಹಾದೇವಿಯ ವಚೋಲಹರಿ, ಭಾವನಾಶಕ್ತಿ, ನಿರೂಪಣಾ ಶಕ್ತಿ ಅದ್ವಿತೀಯವಾಗಿದೆ. ಕನ್ನಡ ಸಾಹಿತ್ಯದಲ್ಲಿ ವಚನ ರಚನಾಶೈಲಿಯು ಅನುಪಮ ವಾಗಿದೆ. ಅವರ್ಣನೀಯ ಸೌಂದರ್ಯದಿಂದ ಕೂಡಿದೆ. ಬಸವಣ್ಣನವರ ವಚನ ಗಳಿಗೆ ಸುಂದರವಾದ ಸುದೀರ್ಘವಾದ ಪ್ರಸ್ತಾವನೆ ಬರೆಯುತ್ತ ದಿ. ಬಸವನಾಳ ಶಿವಲಿಂಗಪ್ಪನವರು ಹೇಳಿದ ಮಾತುಗಳು ಬಹು ಮಾರ್ಮಿಕವಾಗಿವೆ.

"ವಚನಗಳಲ್ಲಿ ಮಿಡಿಯುವ ವಾಣಿ ಅಧರಕ್ಕೂ ಸಿಹಿ, ಉದರಕ್ಕೂ ಸಿಹಿ ರಸ ಪರಿಪಾಕವೆಂದು ಅಮೃತ; ಶಾಶ್ವತ ಸಾಹಿತ್ಯವೆಂದೂ ಅಮೃತ! ದೇವ ವಾಣಿಗೆ ಜನವಾಣಿಯಾಗುವದು ಅಸಾಧ್ಯವಾದಾಗ ಜನವಾಣಿಯನ್ನೇ ದೇವವಾಣಿಯು ಮಟ್ಟಕ್ಕೇರಿಸಿದ ಪವಾಡ ವಚನಕಾರರದು.........ವಚನ ಸಾಹಿತ್ಯವು ಕನ್ನಡ ನುಡಿ ವಿಶ್ವಸಾಹಿತ್ಯಕ್ಕೆ ಕೊಟ್ಟ ಅಪೂರ್ವ ಕಾಣಿಕೆ ಎಂದು ಕನ್ನಡಿಗರು ಹೆಮ್ಮೆ ಪಡಬಹು ದಾಗಿದೆ. ವಚನಗಳು ಕಿರಿದರಲಿ ಪಿರಿದರ್ಥ ಬರುವಂತೆ ರಚಿಸಿದ "ಹಾಡುಗಬ್ಬ" ಗಳಾಗಿವೆ. ಎಂತಲೇ ಅವು ರಚಿಸಿ ಸುಮಾರು ೮೦೦ ವರ್ಷಗಳಾದರೂ ನವ ನವೋನ್ಮೇಷಶಾಲಿಯಾಗಿ ಜನಸಾಮಾನ್ಯರ ನಾಲಿಗೆಯ ಮೇಲೆ ಕುಣಿಯುತ್ತಲಿವೆ.

ಅವರಲ್ಲಿ ಅಕ್ಕಮಹಾದೇವಿಯ ವಚನಗಳು ವೈಶಿಷ್ಟ್ಯಪೂರ್ಣವಾಗಿವೆ. ಓದುಗರನ್ನು ಆನಂದಪರವಶತೆಯಲ್ಲಿ ಮುಳುಗಿಸುವ ಗಾರುಡಿಯಿದೆ. ಅವಳ ವಚನ ರಚನಾಶಕ್ತಿಯು ಕಮನೀಯತೆ, ಭಾವಸಂಸ್ಕಾರದ ರಮಣೀಯತೆ, ಗಾಯನ ಸಂಸ್ಕಾರದ ಮಾಧುರ್ಯತೆ ತುಂಬಿ ತುಳುಕುತ್ತವೆ. ಜೀವ-ಶಿವರ ಅಂತರಾತ್ಮದ ಮಿಲನಕ್ಕೆ ಹಾತೊರೆದು ಹೋಗುವ ಉತ್ಕಟೇಚ್ಛೆ ಅಕ್ಕನ ವಚೋಲಹರಿಯಲ್ಲಿದೆ.

'ಕದಳಿಯೆಂಬುದು ತನು, ಕದಳಿಯೆಂಬುದು ಮನ,
ಕದಳಿಯೆಂಬುದು ವಿಷಯಂಗಳು
ಕದಳಿಯೆಂಬುದು ಭವಘೋರಾರಣ್ಯ!
ಕದಳಿಯೆಂಬುದು ಗೆದ್ದು ಬದುಕಿ ಬಂದು
ಕದಳಿಯ ಬನದಲ್ಲಿ ಭವಹರನ ಕಂಡೆನು
'ಭವಗೆಟ್ಟು ಬಂದೆಯಾ ಮಗಳೇ' ಎಂದು
ಕರುಣದಿಂದ ತೆಗೆದು ಬಿಗಿಯಪ್ಪಿದಡೆ
ಚನ್ನಮಲ್ಲಿಕಾರ್ಜುನನ ಹೃದಯ ಕಮಲದಲ್ಲಿ ಅಡಗಿದೆನು'

ಇಲ್ಲಿ ಅಕ್ಕನು ಬಳಸಿದ ಕದಳಿ ಎಂಬುದು ಬಾಳುವೆ ಅಥವಾ ನಿತ್ಯ ಜೀವನ ಎಂದು ಅರ್ಥೈಸಿಕೊಂಡು ಈ ವಚನವನ್ನು ನಾವು ಮೆಲುಕು ಹಾಕಿದವಾದರೆ ಅದರ

ಸೊಬಗು ಸೌಂದರ್ಯ ನಮಗೆ ದೃಗ್ಗೋಚರವಾಗುವದು. ಭಕ್ತಿ, ಜ್ಞಾನ, ವೈರಾಗ್ಯವೆಂಬ ತ್ರಿವೇಣಿ ಸಂಗಮ ಅವಳ ವಚನಾಮೃತದಲ್ಲಿ ಮಹೋನ್ನತವಾಗಿ ಕಂಡು ಬರುವದು. ಅಕ್ಕನ ವಚನಗಳ ಶೈಲಿ ರಮ್ಯವಾಗಿ, ಬೇಗನಿಂದ ಬಂದು ಹೃದಯ ದಾಳದಲ್ಲಿ ಹೋಗುವದು. ಅಂತೆಯೇ ಅವಳ ವಚನ ರಚನಾ ಚಮತ್ಕೃತಿ ಕನ್ನಡ ಕವಿಗಳಿಗಷ್ಟೇ ಅಲ್ಲವಾಗದೆ, ತಮಿಳು, ತೆಲಗು, ಮರಾಠಿಯ ಸಾಹಿತಿಗಳನ್ನು ಕೈಮಾಡಿ ಕರೆದಿರುವದು ಆಯಾ ಭಾಷೆಯಲ್ಲಿ ತರ್ಜುಮೆಯಾದ ಪುಸ್ತಕಗಳೇ ಸಾಕ್ಷಿ ನುಡಿಯುತ್ತಿವೆ.

ಅಕ್ಕಮಹಾದೇವಿಯು ಕಾರುಣಿಕ ಶಿಶುವಾಗಿ ಎಲ್ಲ ಶಿವಶರಣ-ಶರಣೆಯರನ್ನು ಮೀರಿಸಿ ನಿಲ್ಲುವಂಥ ವಚನ ರಚನಾಶೈಲಿಯನ್ನು ಅಳವಡಿಸಿಕೊಂಡಳೋ ಹೇಗೆ ಎಂಬುದು ಒಡೆಯಲಾರದ ಒಗಟಿನಂತಿದೆ. ತಾನು ಕಂಡ ಸತ್ಯವನ್ನು ಅಚ್ಚಳಿಯದೆ ಜನಮನಕ್ಕೆ ಅಪ್ಯಾಯಮಾನವಾಗುವಂತೆ ಇಡುವದು ಒಂದು ಕಲೆಯೇ. ಬಸವಣ್ಣನವರ "ಅನುಭವಮಂಟಪ"ದ ಖ್ಯಾತಿ ದಿಗ್ದಂತದಲ್ಲಿ ತೊಳಗಿ ಬೆಳಗುವಾಗ ಅಕ್ಕನು ಅತ್ತ ಆಕರ್ಷಣೆಗೊಳ್ಳುವದೇನು ಚೋದ್ಯ? ಆದರೂ ಭವಿಯಾದ ಕೌಶಿಕನ ಅರಮನೆಯಲ್ಲಿ ಕೆಲಕಾಲ ಕಳೆದ ತಾನು, ತ್ರಿಕರಣಪೂರ್ವಕವಾಗಿ ಪರಿಶುದ್ಧಳಾದರೂ, ಶಿವಶರಣರಿಗೆ ಅದನ್ನು ಮನಗಾಣಿಸಿಕೊಡುವ ಬಗೆ ಹೇಗೆ ಎಂದು ಚಿಂತಿಸುವದು ಸ್ವಾಭಾವಿಕ. ಅಕ್ಕನದೇ ಆದ ಒಂದು ವಚನದಲ್ಲಿ ಅದರ ಝಳುಕು ಕಂಡು ಬರುತ್ತದೆ.

"ಕಲ್ಯಾಣವೆಂಬುದಿನ್ನಾರಿಗೂ ಹೊಗಬಾರದು ಅಸಾಧ್ಯವಯ್ಯ
ಆಸೆ ಆಮಿಷವನ್ನಳಿದವಂಗಲ್ಲದೆ
ಕಲ್ಯಾಣದತ್ತಲಡಿಯಿಡಬಾರದು.
ಒಳಗು ಹೊರಗು ಶುದ್ಧವಾದವಂಗಲ್ಲದೆ
ಕಲ್ಯಾಣ ಹೊಗಬಾರದು
ನೀನೆಂಬುದನರಿದು ನಾನೆಂಬುದು ಮರೆದು
ತಾನು ತಾನಾದವಂಗಲ್ಲದೆ, ಕಲ್ಯಾಣವ ಹೊಕ್ಕು ಬೆರಸಬಾರದು
ಲಜ್ಜೆಗೆಟ್ಟೆನಲಾ! ಸತಿಬೇಟಕ್ಕೊಲಿದು
ನಾನಪ್ಪನರಿಯನಾಗಿ ಚೆನ್ನಮಲ್ಲಿಕಾರ್ಜುನನ ಧರ್ಮದಿಂದ
ನಾನು ಕಲ್ಯಾಣ ಕಂಡೆನು"

ಎಂಬ ವಚನದಲ್ಲಿ ಅನುಭವಮಂಟಪದ ರೂಪರೇಷೆಯೂ ಕಾಣಸಿಗುವದು. ಮಾನವ ಕಲ್ಯಾಣ ಮಾಡ ಹೊರಟಿರುವನೆಂದು ಹಾಗೂ ಡಬ್ಬುಗಾರದ ಮಾತ ನಾಡುವ ಮಾನವರಿಗೆಲ್ಲ ಒಂದು ಎಚ್ಚರಿಕೆಯ ನುಡಿಯನ್ನು ಇಲ್ಲಿ ಕಾಣಬಹುದು.

ಇಂಥ ವಚನಗಳನ್ನು ಗಾನಲೋಲರಾದ ಸಂಗೀತಜ್ಞರಿಂದ ಹಾಡಿಸಿ ಕೇಳಿದಾಗ ಆಗುವ ಆನಂದವು ಅನುಪಮವಾಗಿದೆ ಅನರ್ಘ್ಯವಾಗಿದೆ.

ಅಕ್ಕನ ಆಧ್ಯಾತ್ಮಿಕ ಶಕ್ತಿ ಅಗಾಧವಾಗಿದೆ; ಅಪಾರವಾಗಿದೆ. ಜನಸಾಮಾನ್ಯರ ಕೈಗೆ ನಿಲುಕದಷ್ಟು ಎತ್ತರಕ್ಕೆ ಏರಿದರೂ, ಪ್ರಯತ್ನ ಮಾಡಿದರೆ ನಮಗೂ ಲಭ್ಯವಾಗಬಲ್ಲುದು ಎಂದು ಅಭಯದಾನ ಮಾಡುವಂತೆ ಇದೆ. ಅಕ್ಕನು ತನ್ನ ಆರಾಧ್ಯ ಮೂರ್ತಿಯಾದ ಚನ್ನಮಲ್ಲಿಕಾರ್ಜುನನನ್ನು ತ್ರಿಕರಣ ಪೂರ್ವಕ ಪೂಜಿಸಿ ಭಾವರತಿಯಲ್ಲಿ ಮಿಂದು, ವೀರಶೈವ ಧರ್ಮದ ತಿರುಳಾದ ಷಟ್‌ಸ್ಥಲ ಮಾರ್ಗದಲ್ಲಿ ಮದ್ದಾನೆಯಂತೆ ನಡೆದವಳು. ಯಾವ ಹಂಗು ಹರಿಬುಗಳನ್ನು ಲಕ್ಷಿಸದೆ, ಚಿತ್ತಕ್ಕೆ ತಾರದೇ ಧ್ರುವತಾರೆಯಂತೆ ತನ್ನ ಕಣ್ಣ ಮುಂದಿರಿಸಿಕೊಂಡ ವಿಶ್ವೇಶ್ವರನಾದ ಚನ್ನಮಲ್ಲಿಕಾರ್ಜುನನೇ ಪತಿಯೆಂದು ಪತಿವ್ರತಾ ಶಿರೋಮಣಿಯಾಗಿ ನಡೆದವಳು.

'ಬೆಟ್ಟದ ಮೇಲೊಂದು ಮನೆಯ ಮಾಡಿ
ಮೃಗಗಳಿಗಂಜಿದಡೆಂತಯ್ಯ?
ಸಮುದ್ರದ ತಡಿಯಲ್ಲಿ ಮನೆಯ ಮಾಡಿ,
ನೊರೆ ತೆರೆಗಳಿಗಂಜಿದೊಡೆಂತಯ್ಯ?
ಸಂತೆಯೊಳಗೊಂದು ಮನೆಯ ಮಾಡಿ
ಶಬ್ದಕ್ಕೆ ನಾಚಿದೊಡೆಂತಯ್ಯ?
ಚನ್ನಮಲ್ಲಿಕಾರ್ಜುನ ದೇವ ಕೇಳಯ್ಯ
ಲೋಕದೊಳಗೆ ಹುಟ್ಟಿದ ಬಳಿಕ ಸ್ತುತಿನಿಂದೆಗಳು ಬಂದಡೆ
ಮನದಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು'

ಎಂಬ ವಚನವು ಅವಳ ಮನೋಗತವನ್ನು ಚನ್ನಾಗಿ ಬಿಂಬಿಸುತ್ತದೆ. ಜೀವನದಲ್ಲಿ ಉತ್ತಮವಾಗಿ ಬಾಳಬೇಕೆಂಬವರಿಗೆ ಅನೇಕ ವಿಘ್ನಗಳು ಕಾಣಿಸಿಕೊಳ್ಳುವವು. ಭಾರತಕ್ಕೆ ಸ್ವಾತಂತ್ರ್ಯವನ್ನು ತಂದುಕೊಟ್ಟ ಗಾಂಧೀಜಿಯವರು ಜಾತೀಯ ಮಬ್ಬಿನಲ್ಲಿ ಹುಚ್ಚಿದ್ದ ಕುರುಡು ಕೊಲೆಪಾತಕಿಗೆ ಆಹುತಿಯಾದಾಗ ಇಂಗ್ಲಂಡದ ಪ್ರಸಿದ್ಧ ನಾಟಕಕಾರ ಜಾರ್ಜ ಬರ್ನಾರ್ಡಶಾ 'ಸತ್ಯ ಶೀಲ ಸರಳ ಹೃದಯಿಯಾಗುವುದು ಅದೆಷ್ಟು ಗಂಡಾಂತರಕಾರಿಯಾಗಿದೆ' ಎಂದು ಆ ಘಟನೆಯನ್ನು ಕುರಿತು ಉದ್ಗರಿಸಿದರು. ಇರಲಿ, ಮಾನವನಲ್ಲಿ ಹುದುಗಿಕೊಂಡಿರುವ ಇಂಥ ಪಶುಗುಣ ಅಳಿದು ಪರಮಾತ್ಮನ ಗುಣವನ್ನು ಪಡೆಯುವದಕ್ಕಾಗಿ ಸಾಧಿಸುವ ಮಾನಸಿಕ ಪರಿವರ್ತನೆ, ಕ್ರಿಯೆಗಳ ಪರಿವರ್ತನೆಯೇ ಶಿವಯೋಗ. ಇಂಥ ಶಿವಜೀವ ರಹಸ್ಯವನ್ನು ಅರಿತು ಆಚರಿಸಿ ತೋರಿದ ಅಕ್ಕಮಹಾದೇವಿ ಸರ್ವಮಂಗಳೆಯಾಗಿ ಶರಣ-ಶರಣೆಯರೆಲ್ಲರಿಗೆ ಆದರ್ಶಪ್ರಾಯಳಾದಳು. ಸರ್ವಜ್ಞನಂತೆ ಎಲ್ಲರೊಳೊಂದೊಂದು ನುಡಿಗಲಿತು ವಿದ್ಯೆಯ ಪರ್ವತವೇ ಆದಳು.

"ಬಸವಣ್ಣನ ಮನೆಯ ಮಗಳಾಗಿ ಬದುಕಿದೆನಾಗಿ
ತನ್ನ ಕರುಣ ಭಕ್ತಿಪ್ರಸಾದವ ಕೊಟ್ಟನು
ಚನ್ನಬಸವಣ್ಣನ ತೊತ್ತಿನ ಮಗಳಾದ ಕಾರಣ
ಒಕ್ಕ ಪ್ರಸಾದವ ಕೊಟ್ಟನು
ಪ್ರಭುದೇವರ ತೊತ್ತಿನ ಮಗಳಾದ ಕಾರಣ
ಜ್ಞಾನ ಪ್ರಸಾದವ ಕೊಟ್ಟನು
ಸಿದ್ಧರಾಮಯ್ಯನ ಶಿಶುಮಗಳಾದ ಕಾರಣ
ಪ್ರಾಣಪ್ರಸಾದವ ಸಾಧಿಸಿಕೊಟ್ಟನು;
ಮಡಿವಾಳ ಮಾಚಿ ತಂದೆಯ ಮನೆಯ ಮಗಳಾದ ಕಾರಣ
ನಿರ್ಮಳ ಪ್ರಸಾದವ ನಿಶ್ಚಯಿಸಿ ಕೊಟ್ಟನು
ಇಂತೀ ಅಸಂಖ್ಯಾತರೆಲ್ಲರು ತಮ್ಮ ಕರುಣದ ಕಂದಳೆಂದು
ತಲೆದಡಹಿ ರಕ್ಷಿಸಿದ ಕಾರಣ
ಚನ್ನಮಲ್ಲಿಕಾರ್ಜುನನ ಪಾದಕ್ಕೆ ಯೋಗ್ಯಳಾದೆನು."

ಎಂಬ ವಚನ ಅಕ್ಕನ ಬಾಳಿನ ಬಟ್ಟೆಯನ್ನು ನಮ್ಮ ಚಿತ್ತ ಫಲಕದ ಮೇಲೆ ಹೃದಯಂಗಮವಾಗಿ ಮೂಡಿಸಿ ಪೂಜ್ಯ ಭಾವವನ್ನು ತಳೆಯುವಂತೆ ಮಾಡುತ್ತದೆ.

ಹೀಗೆ ಅಕ್ಕಮಹಾದೇವಿಯು ತನ್ನ ಶ್ರದ್ಧಾಭಕ್ತಿ, ಸಮರಸಭಕ್ತಿಯಿಂದ ಗುರುಲಿಂಗಜಂಗಮ ಸೇವೆ ಮಾಡಿ, ವೈರಾಗ್ಯದಿಂದ ಇಂದ್ರಿಯ ಕಾರ್ಯಗಳನ್ನು ಲಿಂಗಮುಖವಾಗಿ ಮಾಡುತ್ತ ಪ್ರಾಣ ಲಿಂಗಾನುಸಂಧಾನದಲ್ಲಿ ಶಿವಭಾವನೆಯನ್ನು ಬೆಳೆಸಿಕೊಂಡಳು.

"ಹುಟ್ಟಿದೆ ಶ್ರೀ ಗುರುವಿನ ಹಸ್ತದಲ್ಲಿ, ಬೆಳೆದೆನು ಅಸಂಖ್ಯಾತರ ಕರುಣದೊಳಗೆ. ಭಾವವೆಂಬ ಹಾಲು, ಸುಜ್ಞಾನವೆಂಬ ತುಪ್ಪ, ಪರಮಾರ್ಥವೆಂಬ ಸಕ್ಕರೆಯನಿಕ್ಕಿದಿರಿ ನೋಡಾ! ಇಂತಪ್ಪ ತ್ರಿವಿಧಾಮೃತವ ದಣಿಯೆ ದೆರೆದು ಸಲುಹಿದಿರಿ. ಎನ್ನ ವಿವಾಹ ಮಾಡಿದಿರಿ. ನಯವಪ್ಪ ಗಂಡನಿಗೆ ಕೊಟ್ಟಿರಿ. ಕೊಟ್ಟ ಮನೆಗೆ ಕಳುಹಲೆಂದು ಅಸಂಖ್ಯಾತರೆಲ್ಲರು ನೆರೆದು ಬಂದಿರಿ. ಬಸವಣ್ಣ ಮುಚ್ಚಿಲು ಒಗೆತನವ ಮಾಡುವೆ. ಚನ್ನಮಲ್ಲಿಕಾರ್ಜುನನ ಕೈವಿಡಿದು ನಿಮ್ಮ ಮುಂದೆಗೆ ಹುವ್ವತಾಹೆನಲ್ಲದೆ ಹುಲ್ಲತಾರೆನು. ಅವಧರಿಸಿ ನಿಮ್ಮಡಿಗಳೆಲ್ಲರು ಮರಳಿ ಬಿಜಯಂಗೈಯುವುದು ಶರಣಾರ್ಥಿ" ಎಂಬ ಶ್ರೀಶೈಲಕ್ಕೆ ಹೋಗುವ ಮುನ್ನ ಅಕ್ಕನು ಉಸುರಿದ ವಚನ ಅವಳ ಬಾಳ ಬಟ್ಟೆಯನ್ನು ಚನ್ನಾಗಿ ಸೂಚಿಸುವದು.

ಎಂತಲೇ ಬಸವಣ್ಣನು ಮಹಾದೇವಿಯಕ್ಕನನ್ನು "ವೀರಾಂಗನೆ, ಜ್ಞಾನ ಸದನ, ಸ್ವಾನುಭಾವದ ಸಾಗರ, ಶಿವಾನುಭವ ಸಂಪನ್ನೆ ಎನ್ನ ಹೆತ್ತ ತಾಯಿ

ಮಹಾದೇವಿಯಕ್ಕ"ನೆಂದೂ ಅಲ್ಲಮಪ್ರಭುದೇವರು "ಕಾಲದ ಕಿರಿಯತನದಲ್ಲಿ ಕಾಮನ ಸುಟ್ಟ ಮಹಾದೇವಿಯಕ್ಕನ ಹಿರಿಯತನವ ನೋಡಾ" ಎಂದು ಶ್ಲಾಘಿಸ ಬೇಕಾದರೆ ಅವಳ ಅನುಭವ ಸಂಪತ್ತು, ಆಧ್ಯಾತ್ಮಿಕ ಸಂಪತ್ತೂ ಅದೆಷ್ಟು ಘನತೆ ವೆತ್ತಿದ್ದವೆಂಬುದು ತಿಳಿದುಬರುವದು.

ಇಂದಿನ ಕಾಲಮಾನ ಪರಿಸ್ಥಿತಿಗನುಗುಣವಾಗಿ ನೀವೆಲ್ಲರೂ ಸಂಸಾರದಲ್ಲಿದ್ದು ಕೊಂಡೇ ಪರಮಾತ್ಮನೊಡನೆ ಅನುಸಂಧಾನ ಮಾಡಿಕೊಳ್ಳುವ ಹಮ್ಮು-ಬಿಮ್ಮು ತೋರಬೇಕಾಗಿದೆ. ಸಂಸಾರದಲ್ಲಿ ಬರುವ ಕೋಪ-ತಾಪಗಳನ್ನು ಸಮಾಧಾನ ಚಿತ್ತ ದಿಂದ ಸಹಿಸಿ ಆದರ್ಶ ಜೀವನವನ್ನು ಸಾಗಿಸುವ ಉತ್ಕಟೇಚ್ಛೆಯನ್ನು ತೋರುವಿ ರೆಂದು ಬಗೆದಿದ್ದೇವೆ. ವೈಜ್ಞಾನಿಕ ಪ್ರಗತಿ ಹೆಚ್ಚಾದಂತೆ ದೇವರು-ಧರ್ಮ, ಸತ್ಯ, ಶಾಂತಿ, ಮಾನವ ಕಲ್ಯಾಣವು ಬೇಸಿಗೆಯ ಬಿಸಿಲ ಮರೀಚಿಕೆಯಂತೆ ಕಾಣು ತ್ತದೆ. ಮಾನವ ಜೀವನಕ್ಕೆ ಋಜುಮಾರ್ಗವನ್ನು ತೋರಬಲ್ಲ ಶಾಂತಿ ಸಾಧನೆಗೆ ಸನ್ಮಾರ್ಗವೀಯಬಲ್ಲ ಧಾರ್ಮಿಕ ಶ್ರದ್ಧಾ ಭಕ್ತಿಯನ್ನು ಅಕ್ಕನು ನಿಮಗೆಲ್ಲ ಕರುಣಿಸಲಿ ಎಂದು ಹಾರೈಸುತ್ತೇವೆ.

ದಿನಾಂಕ ೯-೧೨-೬೬ ರಂದು ಹುಬ್ಬಳ್ಳಿ ಅಕ್ಕನ ಬಳಗದ ನೂತನ ಕಟ್ಟಡದ ಉದ್ಘಾಟನಾ ಶುಭ ಸನ್ನಿವೇಶದಲ್ಲಿ ಅಪ್ಪಣೆ ಕೊಡಿಸಿದ ಆಶೀರ್ವಚನ.

ಕಾಯಕವೇ ಕೈಲಾಸ

ಭಾರತವು ಸ್ವತಂತ್ರವಾಗಿ ಜಾಗತಿಕ ಕ್ಷಿತಿಜದಲ್ಲಿ, ಪ್ರತಿಭಾ ಸಂಪನ್ನತೆಯಿಂದ ಮುಂಪಡಿಯಿಡುವಾಗ, ಅನೇಕ ಅಡ್ಡಿ ಅಡಚಣೆಗಳು ಲೋಕಕಂಟಕ ಕುಹಕ ಕೌಟಿಲ್ಯಗಳು ಪಿಡಿಸಿ ಕಾಡಿದರೂ ಎದೆಗುಂದದೆ ಯಾರ ಪ್ರಭಾವಲಯಕ್ಕೂ ಒಳಗಾಗದ "ನಿರಂಕುಶ ಮಾಲೆ"ಯಾಗಿ ನಡೆದಿದೆಯಷ್ಟೆ. ಭಾರತಾಂತರ್ಗತವಾದ ಕರ್ನಾಟಕವು ಅದೇ ದಿಶೆಯಲ್ಲಿ ಸ್ವಯಂ ಸಮೃದ್ಧವಾಗಿ ಪ್ರಗತಿ ಪರವಾಗಿ ನಡೆಯುತ್ತಿರುವದು ಆನಂದವನ್ನೂ ಅಭಿಮಾನವನ್ನೂ ಉಂಟು ಮಾಡುತ್ತದೆ. ರಾಷ್ಟ್ರದ ಸಂಪನ್ಮೂಲವೆಂದರೆ ಜನತೆಯ ಕುಶಲತೆ. ಇಂದಿನ ಅವಶ್ಯಕತೆ ಎಂದರೆ ಶಿಸ್ತು-ಜ್ಞಾನ ಸಂಪಾದನೆಯಲ್ಲಿ ಪ್ರಾಮಾಣಿಕತೆ ಹಾಗೂ ಬೆವರು ಸುರಿಸಿ ದುಡಿಯುವ ಅದಮ್ಯ ಉತ್ಸಾಹಬೇಕು. ಅರ್ಥಾತ್ ಇಂದಿನ ತರುಣರು ವಿಸ್ತಾರವಾದ ನಿಜ ಜೀವನದ ಮೌಲ್ಯಗಳ ಅರಿವು ಮತ್ತು ಜೀವನದ ಹೋರಾಟವನ್ನು ಎದುರಿಸಲು ಅಗತ್ಯವಾದ ಆಧ್ಯಾತ್ಮಿಕ ಶಕ್ತಿಯ ಅಭಿವೃದ್ಧಿ ಇವು ಕೇವಲ ಖುಜುರೇಟಿಯಲ್ಲಿ ವ್ಯವಸ್ಥಿತಗೊಂಡ ಶಿಕ್ಷಣದಿಂದ ಮಾತ್ರವೇ ಸಾಧ್ಯ. ಅವನ್ನು ನಿತ್ಯ ಜೀವನದಲ್ಲಿ ದೊರಕಿಸುವ ಬಗೆ ಹೇಗೆ?

ಸದಾ ಜಾಗ್ರತರಿರಬೇಕು

ಪ್ರತಿಯೊಬ್ಬ ಮಾನವನಿಗೂ ಒಂದು ಆತ್ಮವಿರುವಂತೆ ರಾಷ್ಟ್ರ ಪುರುಷನಿಗೂ ಒಂದು ಆತ್ಮ ಎಂಬುದೊಂದು ಇದೆ. ಈ ಆತ್ಮವು ಸದಾ ಜಾಗ್ರತವಾಗುವಂತೆ ನಾವು ನೀವೆಲ್ಲರು ಸದಾ ಎಚ್ಚರದಿಂದ ನೋಡಿಕೊಳ್ಳಬೇಕಾಗುವದು. ರಾಷ್ಟ್ರ ಪುರುಷನ ಅವಯವಗಳಂತಿರುವ ಬಂಗಾಲ, ಮಹಾರಾಷ್ಟ್ರ, ಆಂಧ್ರ, ತಮಿಳನಾಡು, ಕರ್ನಾಟಕ ಮುಂತಾದ ರಾಜ್ಯಗಳು ಚೇತೋಹಾರಿಯಾಗಿ ಮುಂದುವರಿಯಬೇಕು. ಅಂದ ಬಳಿಕ ಕನ್ನಡ ನಾಡಿನ ಯುವ ಜನಾಂಗವು ಈ ಹೊಣೆಗಾರಿಕೆಯನ್ನು ಹೊರಲು ಕರ್ನಾಟಕ ರಾಜ್ಯದ ಸರ್ವಾಂಗೀಣ ಉನ್ನತಿಗಾಗಿ ಇಂದಿನ ತರುಣ ಪೀಳಿಗೆಯು ಮನಮುಟ್ಟಿ ದುಡಿಯಲು, ಕಂಕಣಬದ್ಧವಾಗಬೇಕು. ತಮ್ಮ ಮೇಲಿರುವ ಗುರುತರವಾದ ಹೊಣೆಯನ್ನು ಯಶಸ್ವಿಯಾಗಿ ನಿರ್ವಹಿಸಲು ಪೂರ್ವಸಿದ್ಧತೆಯನ್ನು ಮಾಡಿಕೊಳ್ಳಬೇಕು.

ಅಭಿವೃದ್ಧಿ ಕಾರ್ಯಗಳು

ನಾಲ್ಕನೆಯ ಪಂಚ ವಾರ್ಷಿಕ ಯೋಜನೆಯಲ್ಲಿ ಒಕ್ಕಲುತನಕ್ಕೆ ಪ್ರಾಧಾನ್ಯತೆಯನ್ನೀಯಲಾಗಿದೆ. ಸುದೈವದಿಂದ ಕರ್ನಾಟಕವು ಒಕ್ಕಲತನ ಪ್ರಧಾನವಾದ

ರಾಜ್ಯವಾಗಿರುವದರಿಂದ ನಮ್ಮ ರಾಜ್ಯದ ಯುವ ಜನಾಂಗವು ಮುಖ್ಯವಾಗಿ ರೈತಾಪಿ ವರ್ಗದವರು ಕೇಂದ್ರ ಸರಕಾರದ ಮನೋಧರ್ಮವನ್ನು ತಿಳಿದು, ನಮ್ಮ ರಾಜ್ಯದ ಒಕ್ಕಲುತನ ಅಭಿವೃದ್ಧಿಯನ್ನು ಸರ್ವಾಂಗ ಸುಂದರವಾಗಿ, ಸಮಂಜಸ ಸಂಘಟನೆಯ ಮೂಲಕ ಸ್ವಯಂ ಸಮೃದ್ಧಿಯನ್ನು ಪಡೆಯಲು ಸರ್ವತೋಮುಖ ಪ್ರಯತ್ನ ಮಾಡಬೇಕು.

ಹೀಗೆಂದ ಮಾತ್ರಕ್ಕೆ ಔದ್ಯೋಗಿಕ ರಂಗವನ್ನು ಕಡೆಗಣಿಸಬೇಕೆಂದು ನಮ್ಮ ಅಭಿಪ್ರಾಯವಲ್ಲ. ಕಾಯಕವು (ಉದ್ಯಮ) ಆಧುನಿಕ ಮನ್ವಂತರದಲ್ಲಿ ರಾಷ್ಟ್ರದ ಜೀವನಾಡಿಯಾಗಿರುವದು. ಅದಕ್ಕೆ ಪೂರಕವಾಗಿ ಶಿಕ್ಷಣ ಔಷಧೋಪಚಾರಗಳ ಸೌಲಭ್ಯ, ನೀರಾವರಿಯ ಸೌಕರ್ಯ, ವಿದ್ಯುಚ್ಛಕ್ತಿಯ ಬಳಕೆ, ಸಾರಿಗೆ–ಸಂಪರ್ಕ ಇವೆಲ್ಲ ಸೌಲಭ್ಯಗಳನ್ನು ಒದಗಿಸಿಕೊಂಡಾಗಲೇ ನಾವು ಒಕ್ಕಲತನದ ಅಭಿವೃದ್ಧಿ ಹಾಗು ಔದ್ಯೋಗಿಕ ಪ್ರಗತಿಯನ್ನು ಸಾಧಿಸಿಕೊಳ್ಳಬಲ್ಲೆವು ಎಂಬುದನ್ನು ಗಮನಿಸ ಬೇಕು.

ಪ್ರಗತಿಪರ ದೃಷ್ಟಿಕೋನ

ಇಂದಿನ ತರುಣರು ಅನೇಕ ದೃಷ್ಟಿಯಿಂದ ಪ್ರಗತಿ ಪರವಾದ ಹೆಜ್ಜೆಯನ್ನು ಹಾಕುತ್ತಿರುವದು ಸಮಾಧಾನವನ್ನುಂಟುಮಾಡಿದೆ. ವಿಶಾಲವಾದ ವಿಶ್ವದ ಆಗು ಹೋಗುಗಳನ್ನು ನಿರೀಕ್ಷಿಸಿ, ಪರೀಕ್ಷಿಸಿ, ತನ್ನ ಸದಸದ್ವಿವೇಕದ ಆಳಕ್ಕೆ ಇಳಿದು ಸರಿ ಯಾವುದು? ಕೆಟ್ಟದ್ದು ಯಾವುದು? ಎಂಬ ವಿಮರ್ಶಾತ್ಮಕ ಬುದ್ಧಿಯಿಂದ ನೋಡುವ ಪರಂಪರೆಯನ್ನು ಬೆಳೆಸಿಕೊಂಡಿದ್ದಾರೆ!

ಆ ಮೇಲ್ಮಟ್ಟದ ಕುಶಾಗ್ರ ಬುದ್ಧಿಯನ್ನು ಅಳವಡಿಸಿಕೊಳ್ಳಲು ಇನ್ನೂ ಹೆಚ್ಚಿನ ತಪಸ್ಸಾಧನೆ ಅವಶ್ಯಕವೆಂದು ನಮಗೆ ತೋರುತ್ತದೆ. ಇಂದಿನ ತರುಣರಲ್ಲಿ ಕೆಲವರಿಗೆ ಉದ್ವೇಗ ಮೂಲಕವಾದ ಸಂಕುಚಿತ ಭಾವನೆ ಬೆಳೆಯುತ್ತಿದೆ ಎಂಬ ದೋಷಾರೋಪಣೆಗಳಿಗೆ ಮಾರುಹೋಗಿ, ಆಧ್ಯಾತ್ಮಿಕ ಹಿತಚಿಂತನೆಯನ್ನು ಮರೆತು ಬಿಟ್ಟಿದ್ದಾರೆಂಬ ಆರೋಪವನ್ನುಂಟುಮಾಡಲಾಗುತ್ತಿದೆ. ಅದು ಮಾತ್ರ ಸಲ್ಲಕ್ಷಣ ವಲ್ಲವೆಂದು ಹೇಳದೇ ವಿಧಿಯಿಲ್ಲ. ಶ್ರೀಸಾಮಾನ್ಯನು ಇಂದು ಯುವ ಜನಾಂಗ ದಿಂದ ನಿರೀಕ್ಷಿಸುವದೇನು? ಜನತೆ ಬಯಸುವದು ಸತ್ಕಾರ್ಯ ಸಾಮರ್ಥ್ಯ, ಕ್ರಿಯಾತ್ಮಕ ನಿಷ್ಪಕ್ಷಪಾತ ಹಾಗು ಸಹಾನುಭೂತಿಯುಕ್ತವಾದ ನಡಾವಳಿ ಬೆಳೆದು ಬರಬೇಕು.

ನಮ್ಮ ರಾಷ್ಟ್ರವು ಈಗ ಪರೀಕ್ಷಾ ಕಾಲದಲ್ಲಿದೆ. ಅನ್ನದ ಸಮಸ್ಯೆಯು ನಮ್ಮನ್ನು ನಿರಂತರವಾಗಿಯೂ ಎಂಬಂತೆ ಕಾಡುತ್ತಿದೆ. ಬೆಳೆಯುತ್ತಿರುವ ಜನ ಸಂಖ್ಯೆಯು ನಮ್ಮ ತಲೆತಿನ್ನುವ ಸಮಸ್ಯೆಯಾಗಿದೆ. ಔದ್ಯೋಗೀಕರಣವನ್ನು

ಯಶಸ್ವಿಯಾಗಿ ಮುಂದುವರಿಸಿಕೊಂಡು ಹೋಗದಿದ್ದರೆ, ನಾವು ಸುಖ ಜೀವನವನ್ನು ಸಾಗಿಸುವದು ಒತ್ತಟ್ಟಿಗಿರಲಿ, ಬದುಕಿ ಉಳಿಯುವೆವೆ ಇಲ್ಲವೆ ಎಂಬ ಸಮಸ್ಯೆ ಬರುತ್ತದೆ. ಈ ಸಮಸ್ಯೆಯು ಕೇವಲ ರಾಜಕೀಯ ಧುರಂಧರವಲ್ಲ. ಸಾಮಾಜಿಕ ಕಾರ್ಯಕರ್ತರಿಗೆ ಮೀಸಲಾಗಿರುವದಿಲ್ಲ. ಆರ್ಥಿಕ ಪಂಡಿತರಿಗಷ್ಟೆ ಗುತ್ತಿಗೆ ಕೊಟ್ಟಿಲ್ಲ. ಇವರೆಲ್ಲರನ್ನೊಳಗೊಂಡ ಜನತಾಜನಾರ್ಧನನೇ ಬಿಡಿಸಬೇಕೆಂದ ಬೇಕ ಯುವಕರ ಹೊಣೆಗಾರಿಕೆಯೂ ಇದರಲ್ಲಿದೆ ಎಂಬ ಅರಿವುಂಟಾಗುವದು.

ಜೀವನ ಒಂದು ಯೋಗ

ಈ ಕಾರ್ಯ ಸಾಧನೆಗಾಗಿ ಜೀವನವೇ ಒಂದು ಯೋಗ ಎಂಬ ಮಹೋನ್ನತ ಉದ್ದೇಶದಿಂದ ನಡೆಯಲು ತರುಣರು ತಕ್ಕ ಸಿದ್ಧತೆಯನ್ನು ಮಾಡಿಕೊಳ್ಳಲು ಮುಂದಾಗಬೇಕು. ಸುಸಂಬದ್ಧವಾದ ಅಭಿಪ್ರಾಯಗಳ ಮೇಲೆ ತೀವ್ರ ನಿರ್ಣಯ ಕೈಕೊಳ್ಳುವ ಮತ್ತು ಕ್ರಮವಾದ ಅಭಿಪ್ರಾಯಗಳ ಮೇಲೆ ತೀವ್ರ ನಿರ್ಣಯ ಕೈಕೊಳ್ಳಲು ಮತ್ತು ಕ್ರಮವಾದ ರೀತಿಯಲ್ಲಿ ಕಾರ್ಯಗತ ಮಾಡುವ ವ್ಯವಹಾರ ಕುಶಲತೆಯನ್ನು ಅಳವಡಿಸಿಕೊಳ್ಳಬೇಕು. ಸಂದರ್ಭೋಚಿತ ವಿವೇಚನಾ ಶಕ್ತಿಯನ್ನು ಪಡೆದುಕೊಳ್ಳಬೇಕು. ನಮ್ಮ ರಾಷ್ಟ್ರವನ್ನು ಸಂಪದ್ ಸಮೃದ್ಧವನ್ನಾಗಿ ಮಾಡುವ ಕರ್ಮ ಕುಶಲತೆ ಪ್ರತಿಯೊಬ್ಬ ತರುಣ ತರುಣಿಯರಲ್ಲಿ ಬುಗ್ಗೆ ಬುಗ್ಗೆಯಾಗಿ ಹೊರಚಿಮ್ಮಬೇಕು.

"ನಾಯಮಾತ್ಮಾ ಬಲಹೀನೇನ ಲಭ್ಯಃ" ಎಂದು ಉಪನಿಷತ್ತು ಸಾರಿ ಹೇಳಿದೆ. ನಾವು ಇಂದು ಸಂಕ್ರಮಣಾವಸ್ಥೆಯಲ್ಲಿದ್ದೇವೆ. ಮಹಾನುಭಾವಿಗಳಾದ ಬಸವಣ್ಣನವರು "ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರು" ಎಂದು ಲೋಕ ಮಾನ್ಯವಾದ ಸಂದೇಶವನ್ನೂ ಕೊಟ್ಟು "ಕಾಯಕವೇ ಕೈಲಾಸ" ಎಂದು ನುಡಿದರಲ್ಲದೆ, ಅದರಂತೆ ನಡೆದು ತೋರಿಸಿದರು. ಈ ದಿವ್ಯ ಆದರ್ಶವನ್ನು ಪ್ರತಿಯೊಬ್ಬರೂ ಇಂದು ಮೈಗೂಡಿಸಿಕೊಳ್ಳಬೇಕು. ಪ್ರತಿಯೊಬ್ಬರಲ್ಲಿಯೂ ಆತ್ಮ ವಿಶ್ವಾಸ ಒಡಮೂಡಿ, ಸ್ವತಂತ್ರ ಉದ್ಯೋಗ ವ್ಯವಸಾಯಗಳನ್ನು ಕಲ್ಪಿಸಿಕೊಂಡು, ಬಾಳಬಟ್ಟೆಯಲ್ಲಿ ನಡೆದರೆ ಅದೇ ಸ್ವರ್ಗ, ಕೈಲಾಸ, ಏನು ಬೇಕಾದರೂ ಹೇಳಿರಿ.

ಸ್ವಾತಂತ್ರ್ಯ ರಕ್ಷಣೆ ಮುಖ್ಯ

ನಮ್ಮ ಪ್ರೀತಿ ಪಾತ್ರರಾದ ದಿ. ಜವಾಹರಲಾಲ ನೆಹರು ಸ್ವಾತಂತ್ರ್ಯವನ್ನು ದೊರಕಿಸಿದ ಮಾತ್ರಕ್ಕೆ ಸಾಲದು. ಗಳಿಸಿದ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವದು ವೈರಿದಾಳಿಯನ್ನು ಪ್ರತಿಭಟಿಸುವದು ಅನಿವಾರ್ಯ ಎಂದು ಹೇಳಿರುವದು ಗಮನಾರ್ಹವಾಗಿದೆ. ಈ ಗುರಿಯನ್ನು ಸಾಧಿಸಲು ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿ

ಸರಿಯಾಗಿ ಮಾರ್ಗದರ್ಶನ ಮಾಡಿದ್ದಾರೆ. ಅಹಿಂಸೆಗಿಂತಲೂ ಶ್ರೇಷ್ಠವೆನಿಸಿರುವ ಧೈರ್ಯೋತ್ಸಾಹವು ನಿಮ್ಮ ಬೆಂಗಾವಲಾಗಿರಲಿ. ನಿಮ್ಮ ನಿತ್ಯ ಜೀವನದಲ್ಲಿ ಯಶೋದುಂದುಭಿ ಮೊಳಗಲಿ ಎಂದು ಅಂತಃಕರಣಪೂರ್ವಕವಾಗಿ ಆಶೀರ್ವದಿಸುವೆವು.

ದಿ. ೬–೪–೧೯೬೬ ರಂದು ಅ. ಭಾ. ಆಕಾಶವಾಣಿ ಕೇಂದ್ರ (ಧಾರವಾಡ)ದಲ್ಲಿ ಕರ್ನಾಟಕದ ಯುವಜನಾಂಗವನ್ನುದ್ದೇಶಿಸಿ ಅಪ್ಪಣೆಕೊಡಿಸಿದ ಆಶೀರ್ವಚನ.

ಸ್ವಾತಂತ್ರ್ಯ ರಕ್ಷಣೆ

ಪ್ರತಿಯೊಬ್ಬ ಭಾರತೀಯನೂ ಇಂದು ಗಳಿಸಿದ ಸ್ವಾತಂತ್ರ್ಯವನ್ನು ಉಳಿಸಿಕೊಂಡು ಹೋಗುವ, ಹಾಗೂ ಪ್ರತಿಜ್ಞೆಗೈಯುವ ಪವಿತ್ರದಿನವಿದು. ಅಡೆತಡೆಗಳೂ ಬಂದರೂ ನಾವು ನಮ್ಮ ರಾಷ್ಟ್ರದ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವೆವು. ಪ್ರಸಂಗ ಬಂದರೆ, ಆತ್ಮಾರ್ಪಣೆ ಮಾಡುವೆವು ಎಂದು ಆಣೆ ಮಾಡುವ ಕಾಲವಿದು. ಪ್ರತಿಯೊಬ್ಬ ಮನುಷ್ಯನಿಗೂ ಆತ್ಮವಿರುವಂತೆ, ರಾಷ್ಟ್ರ ಪುರುಷನಿಗೆ ಆತ್ಮವೆಂಬುದಿದೆ. ಅದನ್ನು ಬಲಶಾಲಿಯಾಗಿಸಲು ನಾಲ್ಕು ದಿಶೆಯಲ್ಲಿ ನಮ್ಮ ಪ್ರಯತ್ನಗಳು ಕ್ರೋಢೀಕರಣಗೊಳ್ಳಬೇಕು.

೧. ರಾಜಕೀಯ ಪ್ರಜ್ಞೆ.
೨. ಆರ್ಥಿಕ ಪ್ರಜ್ಞೆ.
೩. ಸಾಮಾಜಿಕ ಪ್ರಜ್ಞೆ.
೪. ಧಾರ್ಮಿಕ ಪ್ರಜ್ಞೆ.

ಇವೆಲ್ಲವುಗಳನ್ನು ನಮ್ಮ ರಾಷ್ಟ್ರದ ಭಾವೈಕ್ಯದ ದೃಷ್ಟಿಕೋನದಿಂದ ಬೆಳೆಸಿಕೊಳ್ಳಬೇಕು.

"ರಾಜಕೀಯ ಪ್ರಜ್ಞೆಯೆಂದರೆ ನಮ್ಮ ನಾಡು ನುಡಿಯ ಹಿತವಾಡಿಕೊಳ್ಳುವಂಥ ಮತ್ತು ರಾಷ್ಟ್ರದ ಅಭ್ಯುದಯವನ್ನು ಆಸ್ಥೆ, ಆಸಕ್ತಿಯಿಂದ ರಾಜಕೀಯ ಸುಧಾರಣೆಗಳನ್ನು ಅಳವಡಿಸಿಕೊಳ್ಳುವದು" ನಮ್ಮ ರಾಷ್ಟ್ರಪಿತಾಮಹರೆನಿಸಿದ ಮಹರ್ಷಿ ದಾದಾಭಾಯಿ ನವರೋಜಿಯವರು ಹೇಳಿದ ಮಾತು ಗಮನಾರ್ಹವಾಗಿದೆ. "ನಾನು ಹಿಂದೂ, ಮುಸಲ್ಮಾನ, ಪಾರ್ಸಿ, ಕ್ರೈಸ್ತ ಅಥವಾ ಇನ್ನಾವದೊಂದು ಬೇರೆ ಧರ್ಮದವನಾಗಿದ್ದರೂ ಒಟ್ಟಿನಲ್ಲಿ ನಾನು ಭಾರತೀಯನಾಗಿದ್ದೇನೆ. ನನ್ನ ದೇಶವೇ ಭರತಖಂಡ. ಭಾರತೀಯವೇ ನನ್ನ ರಾಷ್ಟ್ರೀಯತ್ವ" ಈ ತೆರನಾದ ರಾಷ್ಟ್ರಭಕ್ತಿ ನಮ್ಮ ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿ ದುಡಿಯುವ ಪ್ರತಿಯೊಬ್ಬ ಭಾರತೀಯನಿಗೆ ಬಂದಿದೆಯೋ? ಬಂದಿದ್ದರೆ ಎಷ್ಟರ ಮಟ್ಟಿಗೆ ಬಂದಿದೆ? ಬಂದಿರದಿದ್ದರೆ ಅದನ್ನು ತಂದುಕೊಳ್ಳುವ ಉಪಾಯ ಯೋಜನೆ ಮಾಡಿಕೊಳ್ಳಬೇಕು. ಯಾಕೆಂದರೆ ಇಂದು ಚೀನದಂತಹ ದೇಶಗಳು ನಮ್ಮ ಮೇಲೆ ಆಕ್ರಮಣಶೀಲ ದೃಷ್ಟಿಯಿಂದ ಚಟುವಟಿಕೆಗಳನ್ನು ನಡೆಸುತ್ತಿರುವದರಿಂದ ನಾವು ಈ ಬಗ್ಗೆ ಗಂಭೀರವಾಗಿ ಆಲೋಚಿಸಿ, ತಕ್ಕ ಕ್ರಮಗಳನ್ನು ಕೈಕೊಳ್ಳಬೇಕು ಮತ್ತು ಜಾಗತಿಕ ರಾಜಕೀಯ ರಂಗದ ಪರಾಮರ್ಶೆಯನ್ನು

ಕಾಲಕಾಲಕ್ಕೆ ಅಭ್ಯಸಿಸಿ, ನಮ್ಮ ರಾಷ್ಟ್ರದ ಆಚಾರ-ವಿಚಾರಗಳಲ್ಲಿ ಒಂದು ಹೊಂದಿಕೆಯನ್ನು ಮಾಡಿಕೊಳ್ಳಬೇಕು.

ನಮ್ಮ ರಾಷ್ಟ್ರದಲ್ಲಿ ಆರ್ಥಿಕ ಪ್ರಜ್ಞೆಯನ್ನು ಬೆಳಸಿಕೊಳ್ಳುವದೆಂದರೆ, ವ್ಯಾಪಾರ ಉದ್ಯಮಗಳನ್ನು ಬೆಳೆಯಿಸಿಕೊಳ್ಳುವದು. ನಮ್ಮ ರಾಷ್ಟ್ರದ ಸಂಪನ್ಮೂಲಗಳನ್ನು ಕಂಡುಹಿಡಿದು, ಅವುಗಳನ್ನು ಜಾಣ್ಮೆಯಿಂದ ಉಪಯೋಗಿಸಿಕೊಳ್ಳುವ ಶಕ್ತಿ ಸಂಪಾದನೆ ಮಾಡಿಕೊಳ್ಳುವದಾಗಿದೆ. ವರ್ತಕರಲ್ಲಿ, ಉದ್ಯೋಗ ದಂಧೆ ಮಾಡುವವರಲ್ಲಿ ಸಹಜವಾಗಿಯೇ ಸಾಹಸ, ಬುದ್ಧಿವಂತಿಕೆ ಮತ್ತು ಸಂಪತ್ತು ಯಾವಾಗಲೂ ಇದ್ದೇ ಇರುತ್ತವೆ. ಆದರ ಜೊತೆಗೆ ಅವರಿಗೆ ರಾಷ್ಟ್ರಾಭಿಮಾನವೂ ಬೆಳೆದು ಬರಬೇಕು. ಇತ್ತೀಚೆಗೆ ಪಂಜಾಬದಲ್ಲಿ ನಡೆದ ವಿದ್ಯಮಾನಗಳನ್ನು ನೋಡಿದರೆ, ರಾಜ ಕಂಟಕರಿಗೆ ಹಿಂದುಸ್ತಾನದಲ್ಲಿ ಖಂಡಿತವಾಗಿ ಅವಕಾಶವಿರಬಾರದು ಎಂದು ಹೇಳಬೇಕಾಗಿ ಬರುತ್ತದೆ. ದುಡಿಯುವವ—ದುಡಿಸಿಕೊಳ್ಳುವವ ಎಂಬ ಭೇದ ಭಾವಕ್ಕೆಡೆಗೊಡದಂತೆ ಒಂದು ಸುಮಧುರ ಬಾಂಧವ್ಯ ಬೆಳೆದು ಬರುವ ಹಾಗೆ ನಮ್ಮ ಆರ್ಥಿಕ ನೀತಿ ಸಮಾಜವಾದದ ಕಡೆಗೆ ಸಾಗಬೇಕು. ಬಸವಣ್ಣನವರೆಂದಂತೆ "ಕಾಯಕವೇ ಕೈಲಾಸ"ವಾಗಬೇಕು.

ಆಹಾರ ಸ್ವಾವಲಂಬನೆಯ ದೃಷ್ಟಿಯಿಂದ ನಾವು ಒಳ್ಳೆಯ ಜಿಗುಟುತನದಿಂದ ಕಾರ್ಯ ಮಾಡಬೇಕಾಗಿದೆ. ಒಕ್ಕಲುತನದ ಅಭಿವೃದ್ಧಿಗೆ ನಾವು ಸರ್ವತೋಮುಖ ಪ್ರಯತ್ನ ನಡೆಯಿಸಬೇಕು ಮತ್ತು ಗ್ರಾಮಾಂತರಗಳಲ್ಲಿ ಕುಶಲ ಕೈಗಾರಿಕೆ, ಗೃಹ ಕೈಗಾರಿಕೆ, ಗ್ರಾಮೋದ್ಯೋಗ ಮತ್ತು ಚಿಕ್ಕ ಪುಟ್ಟ ಉದ್ಯಮಗಳನ್ನು ಬೆಳೆಯಿಸಿಕೊಳ್ಳಲು ಸದವಕಾಶವಿದೆ. ಕೇಂದ್ರ ಸರಕಾರದ ನೆರವಿನಿಂದ ರಾಜ್ಯ ಸರಕಾರವು ಈ ಬಗ್ಗೆ ದಿಟ್ಟ ಹೆಜ್ಜೆ ಇಟ್ಟು, ಮಾರ್ಗದರ್ಶನ ಮಾಡಬೇಕು.

ಯಾಂತ್ರೀಕರಣ ಕಾಲವಾಗಿರುವದರಿಂದ ರಾಷ್ಟ್ರದಲ್ಲಿ ಭಾರೀ ದೊಡ್ಡ ಉದ್ಯಮಗಳನ್ನು ಸ್ಥಾಪಿಸಲಾಗುತ್ತಿದೆ. ವಿಜ್ಞಾನದ ಬೆಳವಣಿಗೆಯಾದಂತೆ, ಹೊಸ ಹೊಸ ಶೋಧಗಳು ಬರುತ್ತಲಿವೆ. ಅವುಗಳ ಆಳವಾದ ಅಭ್ಯಾಸ ಮಾಡುವದು, ಮಾನವನ ಪ್ರಗತಿಗೆ ಅಳವಡಿಸಿಕೊಳ್ಳುವದೂ ನಿರಂತರವಾಗಿ ನಡೆಯಬೇಕು. ಸಾರ್ವಜನಿಕ ರಂಗ ಮತ್ತು ಖಾಸಗಿ ರಂಗದಲ್ಲಿ ಉದ್ಯಮಗಳನ್ನು ಸ್ಥಾಪಿಸಿರುವ ಹವ್ಯಾಸ ಎಲ್ಲ ಕಡೆಗೂ ನಡೆದಿದೆ. ಆದರೆ ನಮ್ಮ ಭಾಗದಲ್ಲಿ ಈ ದೃಷ್ಟಿಯಿಂದ ಹೆಚ್ಚು ಕೆಲಸವಾಗಲಿಲ್ಲವೆಂದು ವ್ಯಸನದಿಂದ ಹೇಳಬೇಕಾಗಿದೆ. ನಮ್ಮ ವ್ಯಾಪಾರೋದ್ಯಮಿಗಳು ಇಂದಿನ ವಿದ್ಯಾವಿನಿಮಯ ಸಂಪನ್ನ ತರುಣರ ಶಕ್ತಿ ಸಾಹಸಗಳನ್ನು ಬಳಸಿಕೊಂಡು ಈ ದಿಶೆಯಲ್ಲಿ ಪ್ರಯತ್ನಿಸಬೇಕು.

ಎಲ್ಲಕ್ಕೂ ಮಿಗಿಲಾಗಿ ನಮ್ಮಲ್ಲಿ ಸಾಮಾಜಿಕ ಪ್ರಜ್ಞೆ ಬೆಳೆದು ಬರಬೇಕು. ಈ ಬಗ್ಗೆ ವೀರ ಸನ್ಯಾಸಿ ಸ್ವಾಮಿ ವಿವೇಕಾನಂದರ ಧೀರವಾಣಿಯನ್ನು ಆಲಿಸಿರಿ—

"ಹಿಂದುಸ್ತಾನದ ಕೋಟ್ಯಂತರ ಜನಗಳು ಅಜ್ಞಾನದಿಂದಲೂ, ದಾರಿದ್ರ್ಯದಿಂದಲೂ ಕಾಲಕ್ಷೇಪ ಮಾಡುತ್ತಿರುವಾಗ, ಅವರ ದ್ರವ್ಯದಿಂದಲೇ ಶಿಕ್ಷಣವನ್ನು ಹೊಂದಿದವರು ಈ ದೀನ ಜನಗಳ ಉನ್ನತಿಗಾಗಿ ಪ್ರಯತ್ನಿಸದಿದ್ದರೆ, ಆ ಸುಶಿಕ್ಷಿತರಿಗೆ ನಾನು ದೇಶದ್ರೋಹಿಗಳೆಂದು ಹೇಳದಿರಲಾರೆನು" ಮಾನವನು ಸಮಾಜ ಜೀವಿ ಎಂಬುದು ಯಾರಿಗೆ ತಿಳಿದಿಲ್ಲ ? ಆದರೆ ನಮ್ಮ ನಾಡಿನಲ್ಲಿ ಸಾಮಾಜಿಕ ಜಾಗ್ರತಿಯನ್ನುಂಟುಮಾಡುವ ಪ್ರಯತ್ನಗಳು ಎಷ್ಟರ ಮಟ್ಟಿಗೆ ನಡೆದಿವೆ ಎಂಬುದನ್ನು ನೋಡಿದರೆ ದುಃಖ ಉಂಟಾಗುತ್ತದೆ. ಸಮಾಜಕ್ಕೆ ರಾಷ್ಟ್ರಕ್ಕೆ ವ್ಯಕ್ತಿಯೇ ಘಟಕ. ಪ್ರತಿಯೊಬ್ಬ ವ್ಯಕ್ತಿಯಲ್ಲಿ ಶೀಲ, ಚಾರಿತ್ರ್ಯಗಳು ದೂರಾದಲ್ಲಿ ರಾಷ್ಟ್ರದ ಪ್ರಗತಿ, ಸಮಾಜ ಸ್ವಾಸ್ಥ್ಯಗಳು ದೂರವಾಗಿ ಹಾಳು ಕೊಂಪೆಯಂತೆ ಜೀವನವಾಗುತ್ತದೆ. ಇದರಿಂದ ರಾಷ್ಟ್ರದ ಆತ್ಮಬಲವೇ ನಾಶವಾಗುತ್ತದೆ. ಮಹಾತ್ಮಾಜೀಯವರೆಂದಂತೆ– "ಸ್ವಾತಂತ್ರ್ಯವೆಂದರೆ ಸ್ವೈರಾಚಾರವಲ್ಲ, ಸ್ವೈರಪ್ರವೃತ್ತಿಯಲ್ಲ" ಎಂಬುದನ್ನು ಮರೆಯಬಾರದು. ಆದ್ದರಿಂದ ಸಮಾಜ ಜೀವನವನ್ನು ಒಂದು ಸುವ್ಯವಸ್ಥಿತ ರೀತಿಯಲ್ಲಿ ಮುನ್ನಡೆಯಿಸಲು ಚಾರಿತ್ರ್ಯ ಶುದ್ಧಿಯುಳ್ಳ ಸದ್ಗುಣವಂತ ಕಾರ್ಯಕರ್ತರು ಬೇಕು.

ಧಾರ್ಮಿಕ ಪ್ರಜ್ಞೆಯನ್ನು ಬೆಳೆಯಿಸಿಕೊಳ್ಳುವದು ಇಂದಿನ ದಿನ ಮಾನಗಳಲ್ಲಿ ಅತ್ಯಾವಶ್ಯಕವೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ಅರಮನೆ–ಗುರುಮನೆಗಳು ನಾಡಿನ ಜನಮನಕ್ಕೆ ಮಾರ್ಗದರ್ಶನ ಮಾಡುವಲ್ಲಿ ಅವಿಶ್ರಾಂತವಾಗಿ ಶ್ರಮಿಸುತ್ತಿದ್ದವೆಂಬುದನ್ನು ವೇದಕಾಲದಿಂದಲೂ ಐತಿಹಾಸಿಕ ಆಧಾರದಿಂದಲೂ ಸಿದ್ಧವಾಗುತ್ತಿದೆ. ಇಂದಿನ ಈ ಪ್ರಜಾಪ್ರಭುತ್ವಯುಗದಲ್ಲಿ ಜನಜೀವನದ ಸುಳುವು–ಪೊಳವುಗಳ ಜಟಿಲವಾದ ಸಮಸ್ಯೆಗಳನ್ನು ನೈತಿಕ, ನಿಯಮ–ನಿಷ್ಠೆಯ ಒರೆಗಲ್ಲಿಗೆ ತಿಕ್ಕಿ ನಾಗರಿಕ ಜೀವನಕ್ಕೆ ಸರಿಹೊಂದುವಂತೆ ಸುಸಂಸ್ಕೃತವಾದ ರೀತಿಯಲ್ಲಿ ಬಾಳು ಸಾಗಿಸುವಂತೆ ಮಾರ್ಗದರ್ಶನ ಮಾಡಬೇಕು. ಅದು ಆಧ್ಯಾತ್ಮಿಕ ಶಕ್ತಿಯಿಂದ ಸಾಧ್ಯ.

Love knows no far, love knows no bargain and love is its own ideal.

ಇಂತಹ ಆತ್ಮಬಲ, ನಿಷ್ಕಾಮ ಕರ್ಮ, ದೂರದೃಷ್ಟಿಯಿಂದ ಸ್ವಾತಂತ್ರ್ಯ ರಕ್ಷಣೆ ಗೈಯುವದೇ ಧಾರ್ಮಿಕ ಪ್ರಜ್ಞೆಯ ಮೂಲಾಧಾರ.

ಹಿಂದುಗಳೇ ಹಿಂದುಸ್ತಾನವನ್ನು ಗೆದ್ದು ಇಂಗ್ಲೀಷರ ಸ್ವಾಧೀನಪಡಿಸಿದರು ಎಂದು ಪ್ರೊಫೆಸರ ಸೀಲಿ ಹೇಳುತ್ತಾರೆ. ಯಾಕೆಂದರೆ ಹಿಂದು–ಮುಸಲ್ಮಾನರ ರಾಜ ಮಹಾರಾಜರು ಪರಸ್ಪರರಲ್ಲಿ ಬಡಿದಾಡಿ, ಇಂಗ್ಲೀಷರ ಮತ್ತು ಫ್ರೆಂಚರ ಸಹಾಯ ಬೇಡುತ್ತಿದ್ದರು. ಇಂಗ್ಲೀಷರಾಗಲಿ, ಫ್ರೆಂಚರಾಗಲಿ ತಮ್ಮ ಸೈನ್ಯದಲ್ಲಿ

ಹಿಂದು-ಮುಸಲ್ಮಾನ ಸೈನಿಕರನ್ನೇ ಇಟ್ಟುಕೊಂಡಿದ್ದರು. ಅವರ ಜಯಾಪಜಯುಗಳು ಅವರವರ ಸಂಘಟನೆಯು ಜಾಣ್ಮೆಯನ್ನವಲಂಬಿಸಿದರೂ, ನಾವು ತಿಳಿದುಕೊಳ್ಳಬೇಕಾದ ಅಂಶ, ಅವರ ದೇಶಾಭಿಮಾನ ಮತ್ತು ರಾಷ್ಟ್ರ ಭಕ್ತಿ.

ಪೇಶ್ವೆ ಬಾಜೀರಾಯನ ಬಳಿಯಲ್ಲಿದ್ದ ಕ್ಯಾಪ್ಟನ್ ಫೋರ್ಡ ಎಂಬವ ೧೮೧೭ರಲ್ಲಿ ಇಂಗ್ಲೀಷರ ಸಂಗಡ ಯುದ್ಧ ಮಾಡುವ ಸಮಯ ಬಂದಾಗ ಆತ ಒಪ್ಪಲಿಲ್ಲ. ಹೋಳಕರನ ಅಧಿಕಾರಿಯಾಗಿದ್ದ ಒಬ್ಬ ಇಂಗ್ಲೀಷ ಮನುಷ್ಯನು ಇಂಗ್ಲೀಷರ ಸಂಗಡ ಯುದ್ಧ ಮಾಡದಿರುವದನ್ನು ನೋಡಿ ಆತನನ್ನು ತೋಫಿನ ಬಾಯಿಗೆ ಕೊಟ್ಟರೆಂದು ಹೇಳುತ್ತಾರೆ. ಇಂತಹ ಅನೇಕ ಉದಾಹರಣೆಗಳನ್ನು ಕೊಡಬಹುದು; ಇರಲಿ. ಭಾರತೀಯರಾದ ನಾವು ಸ್ವಾತಂತ್ರ್ಯೋತ್ಸವದ ಶುಭದಿನದಲ್ಲಿ ರಾಷ್ಟ್ರದ ಶಕ್ತಿ-ಸಾಹಸಗಳನ್ನು ಇಮ್ಮಡಿಯಾಗಿ ಬೆಳೆಯಿಸುವ ದೃಢ ಸಂಕಲ್ಪ ಮಾಡುವಾ. ಕವಿ ರವೀಂದ್ರರು- "ಎಲ್ಲಿ ಮನಸ್ಸು ನಿರ್ಭಯದಿಂದಿದ್ದು, ಬುದ್ಧಿಯು ವಿಕಸಿತವಾಗಿರುವದೋ, ಎಲ್ಲಿ ಜ್ಞಾನ ಪ್ರಸಾರಣೆಗೆ ಪ್ರತಿಬಂಧವಿಲ್ಲವೋ, ಎಲ್ಲಿ ಪ್ರಪಂಚವು ಸಂಕುಚಿತವಾದ ಸ್ಥಳೀಯ ವಿಷಯಗಳೆಂಬ ಗೋಡೆಗಳಿಂದ ಭಿನ್ನ ಭಿನ್ನವಾಗಿ ಭೇದಿಸಲ್ಪಟ್ಟಿಲ್ಲವೋ, ಎಲ್ಲಿ ಶಬ್ದಗಳು ಸತ್ಯ ರೂಪದಲ್ಲಿಯೇ ಹೊರಬೀಳುವವೋ, ಎಲ್ಲ ಶ್ರಮವನ್ನು ಲಕ್ಷಿಸದ ಉದ್ಯಮವು ಸಂಪೂರ್ಣಾವಸ್ಥೆಯ ಕಡೆಗೆ ತನ್ನ ಬಾಹುಗಳನ್ನು ನೀಡುತ್ತದೆಯೋ, ಎಲ್ಲಿ ವಿಚಾರವೆಂಬ ನಿರ್ಮಲವಾದ ಪ್ರವಾಹವು ದಾರಿತಪ್ಪಿ ಮೃತಪ್ರಾಯವೆಂಬ ರೂಢಿಯೆಂಬ ಭಯಂಕರ ಮರುಭೂಮಿಯಲ್ಲಿ ಪ್ರವೇಶಿಸಲಿಲ್ಲವೊ, ಎಲ್ಲಿ ಮನಸ್ಸು ಸರ್ವದಾ ಉದಾತ್ತವಾದ ಯೋಜನೆಗೂ, ಕಾರ್ಯಕ್ಕೂ ನಿನ್ನಿಂದ ಮುಂದುವರಿಸಲ್ಪಡುವದೊ, ಆ ಸ್ವಾತಂತ್ರ್ಯ ಸ್ವರ್ಗದಲ್ಲಿ; ಹೇ! ನನ್ನ ತಂದೆಯೇ, ನನ್ನ ಜನ್ಮಭೂಮಿ ಜಾಗೃತಿಗೊಳ್ಳಲಿ" ಎಂದು ಗೀತಾಂಜಲಿಯಲ್ಲಿ ಸೂಚಿಸಿದಂತೆ ಜಾಗೃತರಾಗಿ ಕಾರ್ಯ ಮಾಡೋಣ, ನಾವೆಲ್ಲರೂ ಈ ಶುಭ ಸನ್ನಿವೇಶದಲ್ಲಿ ಹಲವಾರು ವರುಷಗಳಿಂದ ಬುದ್ಧಿ ಭಾವಗಳ ಮೇಲೆ ಕುಳಿತ, ಕೆನೆಗಟ್ಟಿರುವ ಧೂಳು ತೊಳೆದು ಹೋಗಿ, ಜೀವನಕ್ಕೆ ಬೇಕಾದ ಸೌಹಾರ್ದ್ರ, ಸಹಕಾರ, ತ್ಯಾಗ, ಪ್ರೇಮಗಳು ಮಾನವರಲ್ಲಿ ಮೈದೋರಲೆಂದು ಜಗದೀಶನಲ್ಲಿ ಪ್ರಾರ್ಥಿಸೋಣ.

ದಿ. ೧೫-೮-೧೯೬೬ ರಂದು ಭಾರತ ಸ್ವಾತಂತ್ರ್ಯ ವರ್ಧಂತಿಯ ೧೯ ನೆಯ ವರ್ಷದ ಶುಭ ಪ್ರಸಂಗದಲ್ಲಿ, ಅ. ಭಾ. ಆಕಾಶವಾಣಿ ಕೇಂದ್ರ (ಧಾರವಾಡ-ಬೆಂಗಳೂರು)ದ ಮೂಲಕ ಬಿತ್ತರಿಸಿದ ಶುಭ ಸಂದೇಶ.

ಮಾನವಕುಲದೀಪಕ ಯೋಗಿಕುಮಾರ

ಒಂದು ಶತಮಾನದ ಹಿಂದೆ ಸಮಾಜವು ತನ್ನ ಅರ್ಧಕ್ಕಿಂತ ಹೆಚ್ಚು ಶಕ್ತಿಯನ್ನು, ದೀಪ್ತಿಯನ್ನು ಕಳೆದುಕೊಂಡಿತ್ತು. ಮುನ್ನಡೆವ ಬಲ, ಮುನ್ನೋಡುವ ನೋಟ ಸಮಾಜಕ್ಕಿರಲಿಲ್ಲ. ಕೈ–ಕಾಲು, ಕಣ್ಣುಗಳಿಲ್ಲದ ಕಬಂಧನಾಗಿತ್ತು ಕರುನಾಡು.

ಅನೇಕ ಶತಮಾನಗಳಿಂದಲೂ ಜಗತ್ತಿನ ಮೂಲೆ–ಮೂಲೆಯಲ್ಲಿ, ಅನೇಕ ಮಹಾಪುರುಷರು ಹುಟ್ಟಿ ಸಾಮಾನ್ಯವ್ಯಕ್ತಿಗಳನ್ನು ಕರಾಳ ಕತ್ತಲೆಯಿಂದ ಕೈಹಿಡಿದು ಬೆಳಕಿನತ್ತ ಕರೆದೊಯ್ದು ಲೋಕಕಲ್ಯಾಣವನ್ನು ಮಾಡಿದ ಉದಾಹರಣೆಗಳು ಸಾಕಷ್ಟು ದೊರೆಯುತ್ತವೆ.

ನೂರಾರು ವರ್ಷಗಳ ಹಿಂದೆ ಬಾಳು ಬದುಕಿನ ಗುರಿಯನ್ನರಿಯದೆ ಅಜ್ಞಾನ ಜೀವನದಲ್ಲಿ ಭ್ರಮಿಸಿ, ಜೀವನ್ಮೃತರಾಗಿ ಬಳಲುವ ಮಾನವ ಜನಾಂಗವನ್ನು ಎಚ್ಚರಿಸಿ ಉದ್ಧರಿಸಿದ ಮಹಾಯೋಗಿ ಪುಂಗವರಲ್ಲಿ ಕುಮಾರ ಶಿವಯೋಗಿವರೇಣ್ಯರು ಅಗ್ರಗಣ್ಯರು.

ತಮ್ಮ ಜೀವನದ ಕಷ್ಟ–ಕಾರ್ಪಣ್ಯಗಳನ್ನು ತಮ್ಮ ಆತ್ಮಶಕ್ತಿಯ ಪ್ರಭಾವದಿಂದ ವಿಚ್ಛೇದಿಸಿ, ನಾಡಿನಲ್ಲಿ ಹಬ್ಬಿದಂಥ, ಅಜ್ಞಾನದ ಕಾರ್ಮೋಡಗಳನ್ನು ಚದುರಿಸಿ, ಸಮಾಜದಲ್ಲಿ ವಿದ್ಯುದ್ವೇಗದಂತೆ ಆತ್ಮ ಪ್ರಭೆಯನ್ನು ಪ್ರಕಾಶಿಸಿದರು. ಮಾನವಜನಾಂಗಕ್ಕೆ ಚೇತನವಿತ್ತರು. ಸಮಾಜವೃಕ್ಷಕ್ಕೆ ಹತ್ತಿದ್ದ ಕೀಟರೋಗವನ್ನು ಕಂಡು ಅದನ್ನು ಕಳೆದು ಆ ವೃಕ್ಷದ ಬೇರಿಗೆ ಪರಿಶುದ್ಧ ಜಲವನ್ನು ನೀಡಿ, ಸತ್ವಯುತವನ್ನಾಗಿ ಮಾಡಿದ್ದರು. ನಾಡಿನ ತುಂಬೆಲ್ಲಾ ಸುವಿಚಾರದ ಸುಗಂಧವನ್ನು ಬೀರಿದರು. ಧರ್ಮಗುರುಗಳಿಗೆ ಬೆಳಕನ್ನು ತೋರಿಸಿದರು. ಮಾನವಕುಲದೀಪಕರಾದರು.

ಈ ಆದರ್ಶ ಮಾರ್ಗದರ್ಶಕ ಮಹಾತ್ಯಾಗಿ ಹಾನಗಲ್ಲ ಕುಮಾರಯೋಗಿಗಳು ೧೮೬೭ನೆಯ ಇಸ್ವಿಯಲ್ಲಿ ರಾಣೇಬೆನ್ನೂರ ತಾಲೂಕಿನ ಜೋಯಿಸರ ಹಳ್ಳಿಯಲ್ಲಿ ಉದಯವಾದರು.

ಅವರು ಬಹು ಪರಿಶ್ರಮದಿಂದ ಯೋಗವಿದ್ಯೆ, ನಿಜಗುಣರ ಷಟ್‌ಶಾಸ್ತ್ರಗಳನ್ನು ಅಧ್ಯಯನ ಮಾಡಿದರು. ನಿಜಗುಣರ ಪವಿತ್ರ: ತಪೋಭೂಮಿಯಲ್ಲಿ ತಪಸ್ಸನ್ನಾಚರಿಸಿ, ಆಧ್ಯಾತ್ಮಶಕ್ತಿಯನ್ನು ಗಳಿಸಿದರು. ಹಠಯೋಗಗಳಲ್ಲಿಯೂ ಪರಿಣತರಾದರು—ಸಿದ್ಧಿ ಮಟ್ಟಕ್ಕೇರಿದರು. ಕ್ರಿಯಾಶಕ್ತ, ಧರ್ಮಶಕ್ತ,

ಮಾನವೋದ್ಧಾರಕ ಶಕ್ತಿಯನ್ನು ಪಡೆದರು. ಇದರ ಫಲವಾಗಿ, ಲಿಂಗೈಕ್ಯ-ಎಳಂದೂರ ಶ್ರೀ ಬಸವಲಿಂಗ ಶಿವಯೋಗಿಗಳಿಂದ ಯೋಗದಂಡವನ್ನು ಪಡೆದು, ಲಿಂಗೈಕ್ಯ ಬಿದರಿ ಶ್ರೀ ಕುಮಾರ ಶ್ರೀಗಳವರ ಭಾವಪೂರ್ಣ ಅನುಗ್ರಹಕ್ಕೆ ಪಾತ್ರರಾದರು. ವೈರಾಗ್ಯನಿಧಿ ಮಲ್ಲಣಾರ್ಯರ ವಿಚಾರಧಾರೆಗಳು ಸಮಾಜೋದ್ಧಾರಕ್ಕೆ ಅನುಕೂಲವಾದವು. ಲಿಂಗೈಕ್ಯ ಹಾವೇರಿಯ ಶಿವಬಸವಯೋಗಿವರೇಣ್ಯರು ಇವರ ಕಾರ್ಯಕ್ಷೇತ್ರಕ್ಕೆ ತಮ್ಮ ತಪಃಶಕ್ತಿಯನ್ನು ಧಾರೆಯೆರೆಯಲು ಸಹಾಯಕರಾದರು.

ಕುಮಾರ ಯೋಗಿಗಳು ತಮ್ಮ ವೈರಾಗ್ಯದ ರನ್ನದೀವಿಗೆಗೆ ಬಿರುಗಾಳಿ ಸೋಂಕದಂತೆ ಅಚಲವಾಗಿದ್ದ ಮಹಾ ತೇಜಃಪುಂಜ ಜ್ಯೋತಿಯಾಗಿದ್ದರು. ತಮ್ಮ ತ್ಯಾಗಮಯ ಜೀವನದಿಂದ, ವಿಶಾಲವಾದ ಮಾನನೀಯ ವಿಚಾರ ಸ್ವಾತಂತ್ರ್ಯದಿಂದ ಹಾನಗಲ್ಲ ಮಠದ ಕೀರ್ತಿಕಲಶವನ್ನು ಸ್ಥಿರವಾಗುಳಿಸಿದ ದಿವ್ಯ ವಿಭೂತಿ.

ಕುಮಾರ ಯೋಗಿಗಳ ಪ್ರತಿ ನುಡಿಯಲ್ಲಿ ಓಂಕಾರದ ಮಹತ್ತಿತ್ತು— ಶ್ರೀಕಾರದ ಸಂಪತ್ತಿನ ವೈಭವವಿತ್ತು.

ಬಹು ದಿನಗಳ ಹಿಂದೆ ದಕ್ಷಿಣ ಭಾರತದಲ್ಲಿ ಅದರಲ್ಲಿಯೂ ವೀರಶೈವ ಸಮಾಜ ಅತ್ಯಂತ ವೈಭವದಿಂದ ಮೆರೆಯುತ್ತಿತ್ತು. ಸಾಮಾಜಿಕ ಕಾರ್ಯಕರ್ತರಿಂದ, ಸಾಹಿತಿಗಳಿಂದ, ವಾಗ್ಮಿಗಳಿಂದ, ಕವಿಗಳಿಂದ, ಆತ್ಮ ಸಂಶೋಧಕರಾದ ಯೋಗಿಗಳಿಂದ ಯಾವ ದೃಷ್ಟಿಯಿಂದಲೂ ಕೊರತೆಯಿದ್ದಿಲ್ಲ. ಇಂತು ಪ್ರಗಲ್ಭ ಬೆಳವಣಿಗೆಯುಳ್ಳದ್ದ ದಕ್ಷಿಣ ಭಾರತದಲ್ಲಿ ಸುಮಾರು ೭೦ ಲಕ್ಷ ಜನಸಂಖ್ಯೆಯುಳ್ಳ ವೀರಶೈವ ಸಮಾಜವು ಸ್ವತಂತ್ರ ಅಸ್ತಿತ್ವವನ್ನು ಕಳೆದುಕೊಂಡು ಕಂದಸಂತಾಗಿತ್ತು. ಉಜ್ವಲಶಾಂತಿ ಮಹೋನ್ನತ ಕ್ರಾಂತಿಯ ಸಂಸ್ಕೃತಿಯು ತನಗಿದ್ದರೂ ಕಳಾಹೀನವಾಗಿತ್ತು. ಅನೈಕ್ಯತೆಯೇ ಸುತ್ತೆಲ್ಲ ಕಾಣುತ್ತಿತ್ತು. ಮಹಾತ್ಮಾ ಬಸವಣ್ಣನವರ ಸಂಸ್ಕೃತಿಯ ವಿಚಾರಕರಣಗಳು ನಂದಿಸಿದ್ದವು. ಸಂಘ-ಶಕ್ತಿ ಅತ್ಯವಶ್ಯಬೇಕಾಗಿತ್ತು. ಕಾಡುಸ್ಥಿತಿಯಲ್ಲಿದ್ದ ವೀರಶೈವ ಸಮಾಜಕ್ಕೆ ಸಂಘದ ಶಕ್ತಿಯುನ್ನಿತ್ತು, ಶಕ್ತಿಯುತವಾಗಲೆಂದು ಕುಮಾರ ಶಿವಯೋಗಿಗಳು ಹಗಲಿರುಳು ಯೋಚಿಸಿ, ಸಮಾಜದ ಅನೇಕ ಭಕ್ತರೊಡನೆ ಸಹಕರಿಸಿ ಶೈಕ್ಷಣಿಕ, ಧಾರ್ಮಿಕ, ನೈತಿಕ, ಔದ್ಯೋಗಿಕ, ಸಾಂಸ್ಕೃತಿಕ ಚಟುವಟಿಕೆಗಳನ್ನು ಕಾರ್ಯರೂಪದಲ್ಲಿ ತರಬೇಕಾದರೆ—

"ಅಖಿಲ ಭಾರತ ವೀರಶೈವ ಮಹಾಸಭೆ"ಯನ್ನು ಸಂಸ್ಥಾಪಿಸಬೇಕೆಂದು ನಿರ್ಣಯಮಾಡಿ, ಕ್ರಿ. ಶ. ೧೯೦೪ ಮೇ ತಿಂಗಳಲ್ಲಿ, ಕೈಲಾಸವಾಸಿ ಶ್ರೀಮಂತ ಲಿಂಗಪ್ಪ ಜಾಮಪ್ಪ ಸರದೇಸಾಯಿಯವರು, ಶಿರಸಂಗಿ ಇವರ ಅಧ್ಯಕ್ಷತೆಯ ಕೆಳಗೆ

ಮಹಾಸಭೆಯನ್ನು ಸ್ಥಾಪಿಸಿ, ಅದರ ಮುಖಾಂತರ ಸಮಾಜದಲ್ಲಿ ಮಹಾಕ್ರಾಂತಿ ಯನ್ನು ಮಾಡಿದರು.

ಸಾಮಾಜಿಕ ಶೈಕ್ಷಣಿಕ ಕಾರ್ಯವನ್ನು ವ್ಯಾಪಕದೃಷ್ಟಿಯಿಂದ ನಿರ್ವಹಣ ಮಾಡಿದರು. ಕುಮಾರ ಶಿವಯೋಗಿಗಳ ಪ್ರೇರಣೆಯಿಂದಲೇ ಸುದೀರ್ಘಪರಿಶ್ರಮದ ಫಲವಾಗಿ "ಲಿಂಗಾಯತ ಎಜ್ಯುಕೇಶನ್ ಫಂಡಿಗೆ" ಬಡವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಲಕ್ಷಾವಧಿ ಹಣವನ್ನು ಶೇಖರಿಸಿ ಕೊಟ್ಟು ಸಮಾಜೋನ್ನತಿಯನ್ನು ಮಾಡಿದರು. ದಾನವೀರ ಲಿಂಗರಾಜರು ತಮ್ಮ ಸರ್ವಸಂಪತ್ತನ್ನು ಸಾರ್ವಜನಿಕರ ಕಲ್ಯಾಣಕ್ಕಾಗಿ ಧಾರೆಯೆರೆಯಲು ಪ್ರೇರೇಪಿಸಿದವರು ಕುಮಾರ ಯೋಗಿಗಳೇ !

ಅಖಿಲ ಭಾರತ ವೀರಶೈವ ಮಹಾಸಭೆಯನ್ನು ದೊಡ್ಡದೊಡ್ಡ ನಗರಗಳಲ್ಲಿ ಮಹಾಸಭೆಯ ಅಧಿವೇಶನಗಳನ್ನು ಮಾಡಿ, ಜನಜಾಗೃತಿ, ಒಕ್ಕಟ್ಟು ಧೈರ್ಯೋತ್ಸಾಹಗಳು ಮೂಡಿ ಬರುವಂತೆ ಪ್ರಯತ್ನಮಾಡಿ, ಮಲಗಿದ ಜನರನ್ನು ಎಚ್ಚರಿಸಿ, ದೀಪಸ್ತಂಭವಾದರು. ಸಮಾಜದಲ್ಲಿಯ ಕಸವನ್ನು ರಸವನ್ನಾಗಿ ಮಾಡುವಂತೆ ಬಹು ಪರಿಶ್ರಮಿಸಿದರು. ಸಮಾಜದ ಯಾವ ಮೂಲೆಯಲ್ಲಿಯೇ ಏನಾದರೂ ಕೊರತೆ ಸಂಭವಿಸಿದ್ದರೆ ಅಲ್ಲಿಗೆ ಹೋಗಿ ಅವರಲ್ಲಿರುವ ಕುಂದುಕೊರತೆಗಳನ್ನು ಕೇಳಿ, ಅವರ ಇಚ್ಛೆಯನ್ನು ಪೂರ್ತಿಮಾಡಿ, ಸಮಾಜದ ಏಳಿಗೆಗೆ ಕಾರಣರಾಗುತ್ತಿದ್ದರು. ಮತ್ತಿಷ್ಟು ಸುಂದರ ವ್ಯವಸ್ಥಿತ ರೀತಿಯಲ್ಲಿ ಸಮಾಜ ರಥ ಸಾಗಬೇಕಾದರೆ, ಅಖಿಲ ಭಾರತ ವೀರಶೈವ ಮಹಾಸಭೆಯ ಅಂಗವಾಗಿ, ಅಖಿಲ ಭಾರತ ವೀರಶೈವ ಮಹಿಳಾ ಪರಿಷತ್ತು, ವೀರಶೈವ ತರುಣರ ಪರಿಷತ್ತು, ಶಿಕ್ಷಣ ಸಮ್ಮೇಲನ, ವೈದ್ಯ ಸಮ್ಮೇಲನ ಮತ್ತು ಧರ್ಮೋತ್ತೇಜಕ ಸಭಾ ಮುಂತಾದ ಮಹತ್ವಪೂರ್ಣ ಸಮ್ಮೇಲನಗಳನ್ನು ಸ್ಥಾಪಿಸಿ, ಅವರವರ ಮುಖಾಂತರ ನಾಡಿನ ಜಾಗೃತಿ ಮಾಡಿ, ಸಮಾಜದಲ್ಲಿ ವಿದ್ಯಾಭಾಸ್ಕರನು ಪ್ರಕಾಶಿಸುವಂತೆ ತಮ್ಮ ಕರ್ತೃತ್ವ ಶಕ್ತಿಯಿಂದ ಕಾರ್ಯಗೈದವರಲ್ಲಿ ಕುಮಾರ ಶಿವಯೋಗಿಗಳೇ ಮೂಲ ಕಾರಣರು. ಸಂಸ್ಕೃತ ಪಾಠಶಾಲೆಗಳನ್ನು, ವಾಚನಾಲಯಗಳನ್ನು ಸ್ಥಾಪಿಸಿ, ಸಂಸ್ಕೃತ ವಿದ್ಯಾರ್ಜನೆಗೆ ಪ್ರೋತ್ಸಾಹನೆ ನೀಡಿದರು. ಅನೇಕ ಸಂಸ್ಕೃತ ಪಂಡಿತರನ್ನು ಮದ್ರಾಸ, ತ್ರಾವಣಕೋರ ನಗರಗಳಿಗೆ ಕಳುಹಿಸಿ, ಪ್ರಾಚೀನ ಗ್ರಂಥ ಸಂಶೋಧನೆಗೆ ಸಹಾಯಮಾಡಿದರು. ಕುಮಾರ ಯೋಗಿಗಳ ಪರಿಶೋಧ ಪರಿಶ್ರಮದಿಂದ, ಹುಳದ ಬಾಯಿಗೆ ಬಿದ್ದು ಹಾಳಾಗಿ ಹೋಗುತ್ತಿದ್ದ ಏಷ್ಟೋ ವಾಙ್ಮಯವು ಬದುಕಿತು, ಬೆಳಕಿಗೆ ಬಂದಿತು. ನಾಡಿನ ಅನೇಕ ಪೀಠಾಧಿಪತಿಗಳನ್ನು ಪುಣ್ಯಮೂರ್ತಿಗಳನ್ನಾಗಿ ಮಾಡಿ, ಮಾರ್ಗದರ್ಶನ ಮಾಡಿಸಿದ, ಸತ್ಯಸ್ವರೂಪಿಯಾಗಿ ಬಾಳಿದ ದಿವ್ಯಜ್ಯೋತಿ ಕುಮಾರಯೋಗಿ, ಆಯುಷ್ಯವನ್ನೂ ಆರೋಗ್ಯವನ್ನೂ ಸಮಾಜೋದ್ಧಾರಕ್ಕಾಗಿಯೇ ಧಾರೆಯೆರೆದ ಪುಣ್ಯಾತ್ಮ.

ತತ್ತ್ವ ಸಾಧನೆಯ ಸತ್ವಯುತವಾದ ರಕ್ತರಹಿತ ಕ್ರಾಂತಿಯನ್ನೆಸಗಿದ ಕ್ರಿಯಾ ಶಿಲ್ಪಿಗಳಾದ ಕುಮಾರಯೋಗಿಗಳು ಇನ್ನೊಂದು ಮಹತ್‌ಕಾರ್ಯವನ್ನೆಸಗಿದ್ದಾರೆ. ಧರ್ಮೋನ್ನತಿಗೆ ಕ್ಷಾತ್ರಬಲಕ್ಕಿಂತಲೂ ಮಿಗಿಲಾಗಿ ಆತ್ಮಬಲ ಅತ್ಯಾವಶ್ಯಕವೆಂದು ಕಂಡುಹಿಡಿದಿದ್ದರು. ಬೃಹಸ್ಪತ್ಯಾಚಾರ್ಯರಂತೆ ಬೃಹದ್‌ರೂಪದಲ್ಲಿ ವಿಚಾರಿಸುತ್ತಿದ್ದರು. ಆ ಸಮಯದಲ್ಲಿ ಸಮಾಜದೊಳಗೆ ಗುರು–ವಿರಕ್ತರ ಅಸಹಕಾರ ನೋಡಿ, ಮನವನ್ನು ಕೊರಗಿಸಿ, ಅವರೀರ್ವರ ಉದ್ಧಾರ–ಪ್ರಗತಿ ಮತ್ತು ಐಕ್ಯತೆಯುಂಟಾಗಿ ಭಕ್ತರಿಗೆ ಸರಿಯಾದ ಮಾರ್ಗದರ್ಶನ ನೀಡಬೇಕೆಂಬುವ ಹಂಬಲವುಳ್ಳ ಭಕ್ತರ ಮನೀಷೆಯನ್ನು ತಿಳಿದುಕೊಂಡು ಆತ್ಮಾನುಸಂಧಾನ ಮಾಡಲು, ಜಲಶ್ರೀ, ವನಶ್ರೀ ಸನ್ನಿಹಿತವಾದ ನಿಸರ್ಗ ಸೌಂದರ್ಯವುಳ್ಳ ತಾಣವನ್ನು, ಪರಮ ತಪಸ್ವಿ ಶ್ರೀ ಚಿತ್ತರಗಿ-ಇಳಕಲ್ಲ ವಿಜಯ ಮಹಾಂತ ಶಿವಯೋಗಿಗಳು ತೋರಿಸಿದಲ್ಲಿ ೧೯೦೯ನೆಯ ಮಾಘ ಶುದ್ಧ ಸಪ್ತಮಿಯ ದಿನ "ಶಿವಯೋಗ ಮಂದಿರ"ವೆಂಬ ನಾಮದ ಆತ್ಮಾನುಭೂತಿಯ ಅಧ್ಯಾತ್ಮಕೇಂದ್ರವನ್ನು ಸ್ಥಾಪಿಸಿದರು. ಈ ಸಂಸ್ಥೆಯು ಸ್ಥಾಪಿತವಾದಂದಿನಿಂದ ಸಾವಿರಾರು ಜನ ಸಾಧಕರು ಅಧ್ಯಯನ ಮಾಡಿದ್ದಾರೆ. ಷಟ್‌ಕರ್ಮಗಳ ಸಿದ್ಧಿಯನ್ನು, ಷಟ್‌ಸ್ಥಲಗಳ ಶುದ್ಧಿಯನ್ನು ಬುದ್ಧಿ ವೈಭವದೊಡನೆ ಭಾವ–ಜೀವಿಗಳಾಗಿ, ಆತ್ಮಾನುಸಂಧಾನ ಮಾಡಿಕೊಂಡು, ಅಷ್ಟಾಂಗಯೋಗಗಳಲ್ಲಿ ಪರಿಣತರಾಗಿ ಇಷ್ಟಲಿಂಗಪೂಜಾನಿಷ್ಠರಾಗಿ ಅಂತಃಶಕ್ತಿಪ್ರಭೆಯಿಂದ ನಾಡನ್ನು ಜಾಗೃತಗೊಳಿಸಿದ್ದಾರೆ. ಮಹಾರಾಷ್ಟ್ರ, ಆಂಧ್ರಗಳಲ್ಲಿಯೂ ಶಿವಯೋಗದ ಬೆಳಕನ್ನು ನೀಡಿದ ಎನಿತೋ ಜನಸ್ವಾಮಿಗಳು ಶಿವಯೋಗ ಮಂದಿರದ ಸಾಧಕರಾಗಿ ಸಾಧನೆ ಮಾಡಿದವರಾಗಿದ್ದಾರೆ. ಶಿವಯೋಗ ಮಂದಿರದಲ್ಲಿಯೇ ಸಾಧಕರಾಗಿ ಜಗದ್ಗುರು ಪೀಠವನ್ನು ಅಲಂಕರಿಸಿದ ಕೆಲವರು ನಾಡಿನ, ರಾಷ್ಟ್ರದ ಶೈಕ್ಷಣಿಕ, ಸಾಹಿತ್ಯಿಕ, ಸಾಮಾಜಿಕ ಕ್ರಾಂತಿಯನ್ನು ಮಾಡಿದ್ದಾರೆ. ಜನರಲ್ಲಿ ಧರ್ಮಜಾಗೃತಿಗೈದಿದ್ದಾರೆ. ಶಿವಯೋಗ ಮಂದಿರದಿಂದ ಸಮಾಜಕ್ಕೆ ಆದ ಅನುಕೂಲಗಳು ಒಂದಲ್ಲ ಎರಡಲ್ಲ ಅನಂತವಾಗಿವೆ. ಧಾರ್ಮಿಕವಾಗಿ ಅದೆಷ್ಟೋ ಪ್ರಗತಿಯಾಗಿದೆ. ಲಿಂಗ ಭಸ್ಮಗಳಲ್ಲಿ ಶಾಸ್ತ್ರೋಕ್ತತೆ–ಶುದ್ಧತೆಗಳನ್ನು ತಂದಿದೆ. ಪಾದೋದಕ ಪ್ರಸಾದಗಳ ಸಂವಿಧಾನದಲ್ಲಿ ಸಕ್ರಮತೆಯನ್ನು ತಂದಿದೆ. ಧರ್ಮಾಧಿಕಾರಿಗಳ ಆಚರಣೆಯನ್ನು ನಿರೂಪಿಸಿದೆ. ಮಂತ್ರಮಹಿಮೆಯನ್ನುಗ್ಗಡಿಸಿದೆ. ಕಾಯಕಕ್ಕೆ ಮಹತ್ವ ಕೊಟ್ಟಿದೆ. "ಕಾಯಕವೇ ಕೈಲಾಸ"ವೆಂದು ಸಾರಿದೆ. ಲೌಕಿಕ ಉದ್ಧಾರಕ್ಕೆ ರಾಷ್ಟ್ರೀಯ ಭಾವನೆಯನ್ನು ತುಂಬಿದೆ. ಸರ್ವಧರ್ಮದವರನ್ನು ಪುರಸ್ಕರಿಸಿದೆ.

ಇಲ್ಲಿಂದ ತಯಾರಾದವರು ದಕ್ಷಿಣ ಭಾರತದಲ್ಲಿಯ ಮಠಮಾನ್ಯಗಳಿಗೆಲ್ಲ ಅಧಿಕಾರಿಗಳಾಗಿ ಸಮಾಜದಲ್ಲಿ ನಾನಾರೀತಿ ಸೇವೆ ಸಲ್ಲಿಸಿದ್ದಾರೆ. ಪ್ರಗತಿ ಸಾಧಿಸಿದ್ದಾರೆ. ಈ ಸಂಸ್ಥೆಯಿಂದ ಭಾಷಣಕಾರರು, ವೈದ್ಯರು, ಕೀರ್ತನಕಾರರು,

ಪುರಾಣಿಕರು, ಲೇಖಕರು, ಸಂಶೋಧಕರು, ವೈದಿಕರು, ಸಂಗೀತಜ್ಞರು ಹೀಗೆ ಅನೇಕರು ಅನೇಕ ಕಲೆಗಳಲ್ಲಿ ಯಶವನ್ನು ಸಂಪಾದಿಸಿದ್ದಾರೆ. ನಾಡಿನಲ್ಲಿ ಹೆಚ್ಚಾಗಿ ಈ ಯೋಗಿಯ ಶಿಷ್ಯರೇ ಇದ್ದಾರೆಂದು ಹೇಳಿದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ. ಕುಮಾರ ಯೋಗಿಗಳು ಬೇರೆ ಬೇರೆ ಊರುಗಳಲ್ಲಿ ಶಾಖಾಮಂದಿರಗಳನ್ನು ಸ್ಥಾಪಿಸಿದ್ದಾರೆ.

೧೨ನೆಯ ಶತಮಾನದಲ್ಲಿ ಮಹಾತ್ಮಾ ಬಸವಣ್ಣನವರು **ಅನುಭವ ಮಂಟಪ** ರಚಿಸಿದಂತೆ, ವಿಶ್ವಕವಿ ರವೀಂದ್ರನಾಥ ಠಾಕೂರರು ಶಾಂತಿ ಸಾಧಕರಿಗೆ **ಶಾಂತಿನಿಕೇತನ** ನಿರ್ಮಿಸಿದಂತೆ, ವಿವೇಕಾನಂದರು, ಧರ್ಮ ಪ್ರಚಾರ ಮಾಡಲು ರಾಮಕೃಷ್ಣಾಶ್ರಮವನ್ನು ಸ್ಥಾಪಿಸಿದಂತೆ ಕುಮಾರಯೋಗಿಗಳು ಸಮಾಜ ಪುರುಷನಿಗಾಗಿ ಆಧ್ಯಾತ್ಮಿಕ ಅಮೃತಫಲವನ್ನೀಯಲು ಜೀವಂತ ಶಕ್ತಿಗಳು ನಾಡಿನ ತುಂಬೆಲ್ಲ ಕ್ರಿಯಾತ್ಮಕ ರೀತಿಯಲ್ಲಿ ಸಾಂಸ್ಕೃತಿಕ, ಸಾಹಿತ್ಯಿಕ, ಧಾರ್ಮಿಕ ಕಾರ್ಯಗಳನ್ನು ನೆರವೇರಿಸಲು, ಅಜ್ಞಾನದ ನೆರಳನ್ನು ನಾಶಮಾಡಿ ವಿದ್ಯೆಯ ಕಿರಣಗಳನ್ನು ಬೆಳಗಿಸಲು, ಮಾನವರನ್ನು ಮಹಾದೇವರನ್ನಾಗಿ ಮಾಡಲು ಸ್ಥಾಪಿಸಿದ ಶಿವಯೋಗ ಮಂದಿರ ಜನಾಂಗದಲ್ಲಿ ನವೀನ ಸೃಷ್ಟಿಯನ್ನು ರೂಪಿಸಿದ 'ನಂದಾದೀಪ, ಬಸವಣ್ಣನ ತರುವಾಯ ಶಿವಾನುಭವ ರಸದೂಟವನ್ನು ಸರ್ವರಿಗೂ ನೀಡಿ, ತತ್ವಪ್ರಚಾರಕರಿಗೆ ದಾರಿಯನ್ನು ತೋರಿಸಿ, ಶಿವಾನಂದ ಸಾಗರದಲ್ಲಿ ತೇಲಿಸಿದ ಮಹಾವಿಭೂತಿ. ಈಗ ಎಲ್ಲಿಯೇ ಶಿವಾನುಭವ ಪ್ರಚಾರ ನಡೆದಿರಲಿ. ಅವೆಲ್ಲವೂ ಕುಮಾರೇಶನ ಕೃಪಾ ವಿಶೇಷವೇ!

"ಅಖಿಲ ಭಾರತ ವೀರಶೈವ ಮಹಾಸಭೆ" ಶಿವಯೋಗ ಮಂದಿರ ಇವು ಅವರ ಜೀವನಾಕಾಶದ ಸೂರ್ಯ-ಚಂದ್ರಸ್ವರೂಪಗಳಿದ್ದಂತೆ, ಆ ಪ್ರಕಾಶದಿಂದ ಪ್ರೇರಿತರಾದವರು ಅಂದರೆ ಪವಿತ್ರಾತ್ಮರು ಅದೆಷ್ಟೋ ಜನ, ಮಿರಿ ಮಿರಿ ಮಿಂಚು ವವರು, ಇನ್ನೂ ಮಿಂಚುವವರು ಅದೆನಿತೋ?

ಸ್ವಾಮಿ ವಿವೇಕಾನಂದರ ಮತ್ತು ಕುಮಾರ ಯೋಗಿಗಳ ಚರಿತೆಯನ್ನು ನಿರೀಕ್ಷಿಸಿದರೆ ಎರಡೂ ಹೃದಯಗಳು ಒಂದೇ ತೆರನಾಗಿವೆ. ವ್ಯಕ್ತಿಗಳು ಬೇರೆಯಾದರೂ ಆತ್ಮ ಒಂದೇ. ಇಬ್ಬರೂ ಧರ್ಮ ಸಂಸ್ಕೃತಿಗಳ ಉದ್ಧಾರದ ಅವತಾರಿಗಳೇ. ದೀನ ದರಿದ್ರರ ದುಃಖಗಳನ್ನು ನಿವಾರಿಸುವ ಪ್ರತಿನಿಧಿಗಳೇ! ಇಬ್ಬರೂ ಮಾನವ್ಯೋನ್ನತಿಗಾಗಿ ತಮ್ಮ ಜೀವನವನ್ನು ಸಮರ್ಪಿಸಿ ಲೋಕೋದ್ಧಾರಗೈದವರು.

ನಾಡಿನಲ್ಲಿ ಅನೇಕ ಮಹಾತ್ಮರು ಸಾಧು-ಸಂತರು ನಾನಾಬಗೆಯ ಪವಾಡಗಳನ್ನು ತಮ್ಮ ನೈತಿಕಶಕ್ತಿ ಪ್ರಭಾವದಿಂದ ಮಾಡಿರುವುದು. ಜಲವನ್ನೇ ತುಪ್ಪವನ್ನಾಗಿ ಮಾಡಿರುವುದು. ವೈದ್ಯರಿಂದ ನಿಲಿಸಲಾರದ ರೋಗಗಳನ್ನು ಮಂತ್ರ ಶಕ್ತಿಯಿಂದ ಕಳೆದಿರುವುದು. ಹುಲಿಯನ್ನು ಬೆಕ್ಕಿನಂತೆ ಸ್ವಾಧೀನಮಾಡಿಕೊಂಡಿರುವುದು. ಇವೆಲ್ಲವುಗಳು ಪವಾಡಗಳಾಗಿದ್ದರೂ, ಸತ್ವಹೀನವಾದ, ದುರ್ಬಲವಾದ

ಸಾವಿನ ದವಡೆಯಲ್ಲಿ ಸಿಕ್ಕು ಜರ್ಜರಿತವಾಗಿ ಘನಘೋರ ಕಷ್ಟದಲ್ಲಿ ತಾಮಸೀಯ ವೃತ್ತಿಯಿಂದ ಬೆಂದು ಬಳಲುತ್ತಿದ್ದ ಸಮಾಜವನ್ನು ಚೇತರಿಸುವಂತೆ ಸತ್ವಯುತ ಹಾಗೂ ಕಾಂತಿಯುತವಾಗುವ ವರೆಗೂ ಹಗಲಿರುಳೆನ್ನದೆ ತಮ್ಮ ದೇಹವನ್ನೇ ಗಂಧ ದಂತೆ ಸವೆಯಿಸಿ ಜೀವಂತ ವ್ಯಕ್ತಿಗಳನ್ನು ಮಾಡಿದ ಮಹಾಯೋಗಿ ಕುಮಾರನ ಶಕ್ತಿ ಮಹಾಪವಾಡವಲ್ಲದೆ ಮತ್ತೇನು?

ಒಟ್ಟಿನಲ್ಲಿ ಕುಮಾರಯೋಗಿಗಳ ಜೀವನ ಗೌರೀಶಂಕರ ಶಿಖರದಂತೆ ಎತ್ತರ ವಾದುದು. ಅವರ ಹೃದಯ **"ವಜ್ರಾದಪಿ ಕಠೋರಾಣಿ, ಮೃದೂನಿ ಕುಸುಮಾದಪಿ"** ಇದ್ದು ಚಿನ್ನದಂತೆ ನಿಷ್ಕಳಂಕವಾದ ಅವರ ಆದರ್ಶ ವ್ಯಕ್ತಿತ್ವ ವನ್ನು ಭಾಷೆಯಿಂದ ಬಣ್ಣಿಸಲು ಅಸಾಧ್ಯ. ಕುಮಾರ ಜ್ಯೋತಿಯಿಂದ ನಾಡು ಬೆಳಗಿತು—ಪುನೀತವಾಯ್ತು, ಸಾಹಿತ್ಯ ಸೃಷ್ಟಿಯಾಯ್ತು, ಸ್ವಾಮಿಗಳು, ಧರ್ಮ ಗುರುಗಳು ಎಚ್ಚತ್ತರು. ಮಾನವ ಲೋಕವೇ ಜಾಗೃತವಾಯ್ತು.

ಕುಮಾರಯೋಗಿಗಳು ಇದೇ ರಾಷ್ಟ್ರಕ್ಕೆ ಕೊಟ್ಟ ದೊಡ್ಡ ಕಾಣಿಕೆ!

ದಿ. ೧೨-೩-೧೯೬೭ ರಂದು ೨೦. ಹಾನಗಲ್ಲ ಕುಮಾರ ಶಿವಯೋಗಿಗಳವರ ಪುಣ್ಯತಿಥಿಯ ಸುಸಂದರ್ಭದಲ್ಲಿ ಅ. ಭಾ. ಆಕಾಶವಾಣಿ ಕೇಂದ್ರ(ಧಾರವಾಡ)ದ ಮೂಲಕ ಅರ್ಪಣೆ ಕೊಡಿಸಿದ ಆಶೀರ್ವಚನ.

ನೀತಿ ಮತ್ತು ಸಮಾಜ

ಆಧುನಿಕ ತತ್ವಶಾಸ್ತ್ರದ ಪ್ರಕಾರ ಯಾವದೊಂದು ವಿಚಾರವನ್ನು ನಾವು ನಿರ್ಣಯಾತ್ಮಕವಾಗಿ ವಿಮರ್ಶಿಸುವ ಮುನ್ನ ಅಲ್ಲಿ ಬಳಸುವ ಪದಗಳ ವ್ಯಾಪ್ತಿ (Scope) ಹಾಗೂ ಲಕ್ಷಣಗಳನ್ನು ಮೊದಲು ಕಂಡುಕೊಳ್ಳಬೇಕು. ಉದಾಹರಣೆಗೆ ಜೀವ, ಜಗತ್ತು ಹಾಗೂ ಈಶ್ವರ ಎಂಬ ಪದಗಳು ತತ್ವಜ್ಞಾನದ ಉಗಮದೊಂದಿಗೆ ವಿವಾದಾಸ್ಪದವಾಗಿ ಬಂದು, ಇಂದಿನ ವರೆಗೂ ಅನಿರ್ಣೀತವಾಗಿವೆ. ಇವುಗಳ ಸೂಕ್ಷ್ಮ ವಿಚಾರಗಳ ಘರ್ಷಣೆಯಿಂದ ವಿಕೃತ ಪರಿಣಾಮಗಳಾಗಿ ಹಲವು ಭಿನ್ನ ಪಂಗಡಗಳೂ ಉದ್ಭೂತವಾದವು. ಅದರಂತೆ ನಾವು ಈಗ ಚರ್ಚಿಸಲಿರುವ ನೀತಿ ಮತ್ತು ಸಮಾಜ ಪದಗಳೂ ಅಷ್ಟೇ ವಿವಾದಾಸ್ಪದವಾಗಿವೆ. ಇವುಗಳಲ್ಲಿ ಯಾವುದು ಸ್ಥಾಯಿ ಸ್ವರೂಪವನ್ನು ಪಡೆದಿವೆ ಹಾಗೂ ಯಾವುದು ಸಂಚಾರಿ ಗುಣಧರ್ಮವನ್ನು ಒಳಗೊಂಡಿದೆ ಎಂಬುದನ್ನು ಮೊದಲು ಅವಗಾಹನೆ ಮಾಡಬೇಕು. ನಿಸ್ಸಂಕೋಚವಾಗಿ ವಿಶ್ವದ ಎಲ್ಲ ಸಮಾಜದ ವಿಜ್ಞಾನಿಗಳು ಹಾಗೂ ಧರ್ಮಶಾಸ್ತ್ರಜ್ಞರು ಸಮಾಜವೇ ಈ ಎಲ್ಲ ಮಾನವ ಶಾಸ್ತ್ರಗಳಿಗೆ ಮೂಲವೆಂದು ಪರಿಗಣಿಸಿದ್ದಾರೆ. ಕಾರಣ ನೀತಿ ಶಾಸ್ತ್ರ, ಧರ್ಮ ಶಾಸ್ತ್ರ, ಸಮಾಜ ಶಾಸ್ತ್ರ, ಕಲೆ, ಸಾಹಿತ್ಯ, ವಿಜ್ಞಾನ ಮೊದಲಾದ ಮಾನವ ಜೀವಿಯು ಅಭ್ಯಸಿಸುವ ಎಲ್ಲ ಅಂಗ ಪ್ರತ್ಯಂಗಗಳೂ ತಮ್ಮ ತಮ್ಮ ಸಮಾಜ ರಚನೆಯ ಲೋಪದೋಷಗಳೊಂದಿಗೆ ಹಮ್ಮಿಕೊಂಡಿರುತ್ತವೆ. ಆದುದರಿಂದ ಸಮಾಜವನ್ನು ಅವಗಾಹನೆ ಮಾಡುವಾಗ ನೀತಿ ಇಲ್ಲವೆ ಸಮಾಜ ಶಾಸ್ತ್ರವು ಅದರ ಒಂದು ಅಂಗವೆಂಬುದನ್ನು ಮೊದಲು ಅರಿತುಕೊಳ್ಳಬೇಕು. ಆನಿಮಿತ್ತ ಇಲ್ಲಿ ಹೆಚ್ಚು ವ್ಯಾಪ್ತಿಯನ್ನು ಹಾಗೂ ಸ್ಥಾಯಿ ಧರ್ಮವನ್ನು ಹೊಂದಿರುವದು ಸಮಾಜವೇ ಆಗಿದೆ. ಆದರೆ ಇದೇ ಸಮಾಜ ಎಂಬ ಶಬ್ದವನ್ನು ಅತ್ಯಂತ ಸಂಕುಚಿತವಾದ ಜಾತಿ, ಕುಲ, ವರ್ಣ ಇಲ್ಲವೆ ಎಂಬರ್ಥದಲ್ಲಿ ಹಲವು ಸಲ ಉಪಯೋಗಿಸುತ್ತಾರೆ. ಆದರೆ ಇಂಥ ಪ್ರಸಂಗದಲ್ಲಿ 'ಸಮಾಜ' ಶಬ್ದಕ್ಕೆ ಕೇವಲ ಒಂದು ಇಲ್ಲವೆ ಪಂಗಡ ಎಂಬ ಅರ್ಥ ಮಾತ್ರ ಇರುತ್ತದೆ. ಆದರೆ ಆಧುನಿಕ ಸಮಾಜ ವಿಜ್ಞಾನಿಗಳು ಇದನ್ನು ಮಾನವ ಸಮಾಜದ ಅಧ್ಯಯನ ಎಂಬರ್ಥದಲ್ಲಿ Sociology ಇಲ್ಲವೆ Social-Anthropology ಎಂಬುದಾಗಿ ಹಲವು ವಿಧದಲ್ಲಿ ಬಳಸುತ್ತಾರೆ. ಇಲ್ಲಿ Sociology ಎಂಬ ಪದವನ್ನು ಬಳಸುವಾಗ ಸಮಾಜ ಇಲ್ಲವೇ ಮಾನವ ಸಮಾಜ ಎಂಬರ್ಥವಲ್ಲದೆಯೇ ಹೊರತು ಮಾನವ ಧರ್ಮವೆಂಬ ಅರ್ಥವಿಲ್ಲ. ಧರ್ಮವು ಕೂಡ ಎಷ್ಟೇ ವ್ಯಾಪ್ತಿಯನ್ನು ಹೊಂದಿರಲಿ, ಸಮಾಜವನ್ನು ಆಧರಿಸಿಯೇ ಸಲುವಳಿ ಹೊಂದುತ್ತದೆ. ಅಂದ

ಮೇಲೆ ಧರ್ಮದ ಒಂದು ಅಂಗವೆಂಬಂತೆ ಪರಿಗಣಿತವಾದ ನೀತಿ ಇಲ್ಲವೇ ನೀತಿ ಶಾಸ್ತ್ರವೂ ಕೂಡಾ ಸಮಾಜದ ಪ್ರತ್ಯಂಗವಾಗಿ ಪ್ರಸ್ಫುರಿಸಿದೆ.

ಮಾನವನ ಅಸ್ತಿತ್ವ ಒಂದರಿಂದಲೇ 'ಸಮಾಜ'ವು ಸಿದ್ಧಿಸಬೇಕೆಂಬ ನಿಯಮವು ವೇನಿಲ್ಲ, ಅವರೂ ಸಮಾಜವಿಲ್ಲದೆ, ಆತನ ಅಸ್ತಿತ್ವವಿಲ್ಲ. ಕಾರಣ ವಿಶ್ವದ ನಿಯಮದ ಪ್ರಕಾರ ಮಾನವನ ಜನನವೇ ಈ ಒಂದು ಬಗೆಯ ಸಮಾಜ, ಇಲ್ಲವೆ ಸಂಪರ್ಕದಿಂದ ಉಂಟಾಗಿರುತ್ತವೆ. ಇಂತಹ ಸಂಪರ್ಕಗಳು ನೂರಾರು ವಿಧವಾಗಿರುತ್ತವೆ. ಪರಸ್ಪರ ಸಂಪರ್ಕವಿಲ್ಲದ ಮಾನವನಾಗಲಿ, ಪಶು ಪಕ್ಷಿಗಳಾಗಲಿ ತಮ್ಮನ್ನು ತಾವು ರಕ್ಷಿಸಿಕೊಳ್ಳಲಾರವೆಂಬುದು ವ್ಯವಹಾರಸಿದ್ಧ. ಆದುದರಿಂದಲೇ ಸಮಾಜವು ಕೃತ್ರಿಮ ರಚನೆಯಾಗದೆ ನೈಸರ್ಗಿಕವಾದುದು. ಆದರೆ ಈ ಸಹಜವಾದ ಸಮಾಜವು ಮಾನವನ ವಿಚಾರ ಪ್ರಥಕ್ಕರಣದಿಂದ ಅವನವೇ ಆದ ಕೃತ್ರಿಮ ನಿಯಮಾವಳಿಗೆ ಒಳಪಟ್ಟು ಸಂಘಟನೆ, ಕುಲ, ಜಾತಿ, ಪಂಥ, ಉಚ್ಚ, ನೀಚ, ಹಿರಿಯ, ಕಿರಿಯ, ಸ್ವಕೀಯ, ಪರಕೀಯವೆಂಬ ಬಹುವಿಧ ತಾರತಮ್ಯಗಳು ಜನಿಸಿದವು. ಅಷ್ಟೇ ಅಲ್ಲ, ಅವು ರಕ್ತಗತವಾಗಿ ಬಂದು ಈ ಕೃತ್ರಿಮ ಸಮಾಜದ ನಿರ್ಮಿತಿಯಿಂದ ಇತಿಹಾಸದ ಬಹು ಸಂಖ್ಯೆ ಪರ್ಯಟನದಲ್ಲಿ ಬಣ-ಬಣಗಳ ತಿಕ್ಕಾಟ, ಜಾತಿ ಜಾತಿಗಳ ಘರ್ಷಣೆ, ಧರ್ಮ ಧರ್ಮಗಳ ಕೋಲಾಹಲಗಳು ಕೇಳಿ ಬಂದವು. ತರುವಾಯ ಸಮಾಜ ರಚನೆಯ ಮೂಲ ಸಿದ್ಧಾಂತವಾದ ಆತ್ಮರಕ್ಷಣೆಯೊಂದಲ್ಲದೆ ಸ್ವಾರ್ಥಸಾಧನೆ, ಆತ್ಮಾಭಿಮಾನಗಳು ಈ ಕೃತ್ರಿಮ ಸಮಾಜ ರಚನೆಯಿಂದ ಉಂಟಾದವು. ಸ್ವಾರ್ಥವು ಯಾವಾಗಲೂ ಭೂಮಿ, ಭಾಮಿನಿ ಹಾಗೂ ಕಾಂಚನಗಳು ನನ್ನ ಸುಖಕ್ಕಾಗಿ ಮಾತ್ರ ಎಂದು ಸಾಧಿಸುತ್ತದೆ. ಇದರಿಂದ ಈರ್ಷೆ, ಹೋರಾಟ, ಅನ್ಯಾಯ, ಮೋಸ, ಪ್ರತೀಕಾರ, ಪ್ರಹಾರ, ಅತಿಕ್ರಮಣ ಮೊದಲಾದ ವಿಷಬೀಜಗಳು ನೆಲೆಯೂರಿದವು. ಇವುಗಳ ಬೀಭತ್ಸ ಸ್ವರೂಪದಿಂದ ವಿಶ್ವದ ನಾನಾ ದೇಶಗಳು ಪಲವು ಕಾಲ ತಳಮಳಗೊಂಡವು. ತರುವಾಯ ಮಾನವನ ಈ ಪ್ರಚ್ಛನ್ನತೆಯ ವಿರುದ್ಧ ಹಲವಾರು ನೀತಿ-ಶಾಸ್ತ್ರ ಕೋವಿದರು ಧರ್ಮದ ದುಂದುಭಿಯನ್ನು ಊದಿ ನೀತಿ ಶಾಸ್ತ್ರದ ಖಡ್ಗವನ್ನು ಹಿರಿದರು. ಆದುದರಿಂದ ಧರ್ಮ ಶಾಸ್ತ್ರದ ಪ್ರಧಾನವಿಷಯವಾಗಿ ನೀತಿಶಾಸ್ತ್ರವು ಜನನವಾಯಿತು. ಇದಕ್ಕೆ ಕಾರಣವೆಂದರೆ ಜಗತ್ತಿನ ಎಲ್ಲ ಪ್ರಸ್ಥಾನಕಾರರು ನೀತಿಯ ಅಸ್ತಿತ್ವದ ಮೇಲೆಯೇ ತಮ್ಮ ತತ್ತ್ವವಿಚಾರಗಳನ್ನು ಸಾರಿದ್ದಾರೆ. ಬುದ್ಧನು ಮಾನವನ ಈ ಶೋಕ ಗೀತೆಗೆ ಮೂಲ ಸೂತ್ರವಾವುದೆಂದು, ಆಲದ ಮರದ ಅಡಿಯಲ್ಲಿ ನಿರಾಹಾರಿಯಾಗಿ ಕುಳಿತು ವಿಚಾರಿಸಿದನು. ಆಗ ಅವನಿಗೆ ದೊರೆತುದು Desire ಇಲ್ಲವೆ ಇಚ್ಛೆ ಎಂಬ ಪದ. ಇಚ್ಛೆಯೇ ಸರ್ವ ದುಃಖಗಳಿಗೂ ಮೂಲವೆಂದು ಆತನು ಸಾರಿದನು. ಭಾರತದಲ್ಲಿ ಶಂಕರಾಚಾರ್ಯರೂ ಇನ್ನುಳಿದ

ಮತಾಚಾರ್ಯರೂ ರಾಗದ್ವೇಷಗಳೇ ಮಾನವನ ಅಧಃಪತನಕ್ಕೆ ಮೂಲ ಕಾರಣ ವೆಂದು ಹೇಳಿದರು. ಭಗವಾನ್ ಕ್ರಿಸ್ತನಾದರೂ ಸಹ ಇದೇ ಭಾವವನ್ನೇ ತಿಳಿಸಿದ್ದಾನೆ. ವಿಶ್ವಜ್ಯೋತಿ ಬಸವಣ್ಣನವರು "ದಯವಿಲ್ಲದ ಧರ್ಮ ಅದ್ಯಾವುದಯ್ಯ" ಎಂದು ಧರ್ಮದ ಅಸ್ತಿತ್ವವನ್ನೇ ಅಲ್ಲಾಡಿಸಿ ಕೇಳಿದರು. ಈ ರೀತಿ ನೀತಿ ಶಾಸ್ತ್ರವು ಮಾರ್ಮಿಕವಾಗಿ ಎಲ್ಲ ಧರ್ಮಶಾಸ್ತ್ರಗಳ ಹಾಗೂ ಶಾಸ್ತ್ರಜ್ಞರ ಪ್ರಮುಖವಿಷಯ ವಾಯಿತು. ಬಸವಣ್ಣನವರು ಈ ವಿಷಯವನ್ನೇ ಕ್ರೋಢೀಕರಿಸಿ ಒಂದೇ ಒಂದು ವಚನದಲ್ಲಿ ಅತ್ಯಂತ ಸ್ಪಷ್ಟವಾಗಿ ಹೇಳಿದ್ದಾರೆ.

"ಕಳಬೇಡ ಕೊಲಬೇಡ
ಹುಸಿಯ ನುಡಿಯಲುಬೇಡ
ಅನ್ಯರಿಗೆ ಅಸಹ್ಯ ಪಡಬೇಡ,
ತನ್ನ ಬಣ್ಣಿಸಬೇಡ, ಇದಿರು ಹಳಿಯಲುಬೇಡ,
ಇದೇ ಅಂತರಂಗದ ಶುದ್ಧಿ.
ಇದೇ ಬಹಿರಂಗದ ಶುದ್ಧಿ.
ಇದೇ ನಮ್ಮ ಕೂಡಲ ಸಂಗಮದೇವರನೊಲಿಸುವ ಪರಿ."

ಇಲ್ಲಿ ಬರುವ ಅಹಿಂಸೆ, ಸತ್ಯ, ದಯೆ, ನಿರಹಂಕಾರ, ವಿಚಾರಗಳನ್ನು ವಿಶ್ವದ ಎಲ್ಲ ಧರ್ಮಗಳು ತಮ್ಮ ತಮ್ಮ ಪಡಿಯಚ್ಚಿನಲ್ಲಿ ನಾನಾವಿಧವಾಗಿ ಹೇಳಿರುತ್ತವೆ. ಸ್ವಾಭಾವಿಕವಾಗಿ ಕಾರಣಪುರುಷರು ಉದಯಿಸುವದು ಧರ್ಮಗ್ಲಾನಿಯಾದಾಗಲೇ. ಬುದ್ಧ ಹಾಗೂ ಕ್ರಿಸ್ತರೂ ಸಮಾಜದಲ್ಲಿ ನೆಲೆಯೂರಿದ ಅನೀತಿ, ದುರಾಚಾರಗಳ ವಿರುದ್ಧ ಪ್ರತಿಭಟಿಸಿ ನಿಂತರು. ಅರಬಸ್ತಾನದ ಉಸುಬಿನ ಮರುಭೂಮಿಯಲ್ಲಿ ಸಾವಿರಾರು ಕಬೀಲಿಗಳಲ್ಲಿ ಸಮಾಜವು ವಿಚ್ಛಿನ್ನವಾಗಿ ಹೋಗಿತ್ತು, ಈ ಕಬೀಲಿಗಳು ಒಂದಕ್ಕೊಂದು ಘರ್ಷಿಸಿದಾಗ, ಯಾವಾವ ಕೈದಿಗಳಾಗಿ ದೊರೆತ ಸ್ತ್ರೀಯರನ್ನು, ಪುರುಷರನ್ನು ಪೇಟೆಯಲ್ಲಿ ಮಾರುತ್ತಿದ್ದರು, ಸಂಕುಚಿತ ವಿಚಾರಗಳ ಈ ಘೋರ ವ್ಯಾಮೋಹದಲ್ಲಿ ಅವರು ಒಮ್ಮೊಮ್ಮೆ ಹುಟ್ಟಿದ ಹೆಣ್ಣು ಕೂಸನ್ನು ಜೀವಂತವಾಗಿ ಹುಗಿಯುತ್ತಿದ್ದರು. ಇಂಥ ಅವರ ನೈತಿಕ ಅಧಃಪತನದಲ್ಲಿ ರೋಮ, ಇರಾಣ ಹಾಗೂ ಎಥಿಯೋಪಿಯಾ ರಾಜರು ದಂಡೆತ್ತಿ ಬಂದು ಆಕ್ರಮಣ ಮಾಡುತ್ತಿದ್ದರು. ಆದುದರಿಂದ ಅರಬರ ಇಂಥದೊಂದು ನೈತಿಕ ಗ್ಲಾನಿಯಲ್ಲಿ ಹಜರತ್ ಮಹಮ್ಮದ ಪೈಗಂಬರರು ಉದಿಸಿ ಬಂದು, ಅಧರ್ಮದ ತಾಡನವನ್ನು ಮಾಡಬೇಕಾಯಿತು. ಇದರಿಂದ ಅವರು ಮೂರ್ತಿ ಪೂಜಕರಾದ 'ಕುರೇಶ' ವ್ಯಾಪಾರಿಗಳ ಕೋಪಕ್ಕೆ ಪಾತ್ರರಾಗಬೇಕಾಯಿತು. ಕಾರಣ ನೈತಿಕ ಹೋರಾಟವೆಂದರೆ ಹೀಗೆಯೇ; ಈ ಪ್ರಕಾರದ ಬುದ್ಧ, ಕ್ರಿಸ್ತ, ಪೈಗಂಬರರ ಮಾಲಿಕೆಯಲ್ಲಿಯೇ ಶಂಕರಾಚಾರ್ಯರೂ, ಬಸವಣ್ಣನವರೂ ಬರುತ್ತಾರೆ.

ಚಾತುರ್ವರ್ಣ್ಯದ ವ್ಯಾಪಕ ವಿಚಾರವು ನುಸುಳಿ ಹೋಗಿ ಸ್ವಾರ್ಥ, ಅಂಧಕಾರ, ಡಂಭಾಚಾರ, ಮೇಲು-ಕೀಳು ಭಾವಗಳು ಸಮಾಜದಲ್ಲಿ ಭೀಕರವಾಗಿ ದಾಳಿ ಮಾಡಿದಾಗ, ಜಗಜ್ಯೋತಿ ಬಸವಣ್ಣನವರು ತಮ್ಮ ಆತ್ಮತೇಜದಿಂದ ಅದನ್ನು ಪ್ರತಿಭಟಿಸಬೇಕಾಯಿತು. ಅತ್ಯಾಧುನಿಕ ಸಮಾಜವಾದದ ಮೂಲ ಮಂತ್ರವಾದ ದುಡಿಮೆಯ ಸಮಾನ ಗೌರವವನ್ನು ಅವರು ಹೇಳಿಕೊಟ್ಟರು. ಸರ್ವವಿಧದ ಕಾಯಕ ಜೀವಿಗಳನ್ನು, ಒಂದೆಡೆ ಕರೆದುದರಿಂದ ಸಮಾಜದ ವಿಷಮತೆ ಸಮತೋಲನಗೊಳ್ಳಲು ಸಾಧ್ಯವಾಯಿತು. ಅವರು ಒಂದು ವಚನದಲ್ಲಿ ಹೀಗೆ ಹೇಳಿದ್ದಾರೆ.

"ಸೆಟ್ಟಿಯೆಂಬೆನೆ ಸಿರಿಯಾಳನ? ಮಡಿವಾಳನೆಂಬೆನೆ ಮಾಚಯ್ಯನ? ಡೋಹರನೆಂಬೆನೆ ಕಕ್ಕಯ್ಯನ? ಮಾದಾರನೆಂಬೆನೆ ಚನ್ನಯ್ಯನ? ಆನು ಹಾರವನೆಂದರೆ ಕೂಡಲ ಸಂಗಯ್ಯ ನಗುವನಯ್ಯ"

ಈ ರೀತಿ ಅಭೇದ ಕಲ್ಪನೆಯೇ ಧರ್ಮದ ಜೀವಾಳ. ಎಲ್ಲರೂ ಸಮಾನ ನೆಲೆಗಟ್ಟಿನ ಮೇಲೆ ನಿಂತು, ತಮ್ಮ ಹಾಗೂ ಪರರ ನೋವು, ನಲಿವುಗಳೊಂದಿಗೆ ನಿಃಸ್ವಾರ್ಥ ಭಾವದಿಂದ ಒಡಗೂಡಬೇಕೆಂಬುದೇ ನೀತಿಶಾಸ್ತ್ರದ ಪರಮ ಉದ್ದೇಶ. ಸಂಸ್ಕೃತ ಸಾಹಿತ್ಯದಲ್ಲಿ ರಾಮಾಯಣ, ಮಹಾಭಾರತ ಹಾಗೂ ಪುರಾಣಗಳು ಸಮಾಜದ ನಿರ್ಮಲತೆಗಾಗಿ ಸಾಕಷ್ಟು ವಿಧವಾಗಿ ಪರಿಶ್ರಮಿಸಿದವು. ಇದಲ್ಲದೆ ಪಂಚತಂತ್ರ ಹಾಗೂ ಹಿತೋಪದೇಶ ಮೊದಲಾದವುಗಳಲ್ಲಿ ವಿಶದವಾಗಿ ಬಂದಿದೆ. ಇಷ್ಟೇ ಅಲ್ಲ, ನೀತಿ ಶಾಸ್ತ್ರವು ವಿಶ್ವ ಸಾಹಿತ್ಯದಲ್ಲಿಯೇ ಅಗ್ರಸ್ಥಾನವನ್ನು ಪಡೆದಿದೆ. ಮನರಂಜಕವಾದ ಕಿರಿಯ ಕಥೆಗಳನ್ನೇ ಆಧಾರವಾಗಿಟ್ಟುಕೊಂಡು ಈ ಗ್ರಂಥಗಳು ಒಂದೊಂದೆ ನೀತಿ, ವಿಚಾರದ ಬಾಣಗಳನ್ನು ಬಿಡುತ್ತ ಮುಂದೆ ಸಾಗುತ್ತವೆ. ಪಾಶ್ಚಿಮಾತ್ಯರಲ್ಲಿ ಗ್ರೀಕ ನಾಟಕ ಸಾಹಿತ್ಯದ ಮೂಲ ಟೀಕಾಕಾರರಾದ ಪ್ಲೇಟೋ, ಅರಿಸ್ಟಾಟಲ್‌ರಲ್ಲಿಯೂ ಇದೇ ಚರ್ಚೆ ಪ್ರಾರಂಭವಾಗಿತ್ತು. ಪ್ಲೇಟೋ ತನ್ನ ರಿಪಬ್ಲಿಕ್ ಗ್ರಂಥದ ೧೦ ನೆಯ ಸಂಧಿಯಲ್ಲಿ ಕವಿಗಳನ್ನು ದೂಷಿಸುವದು, ಇದೇ ವಿಚಾರದಲ್ಲಿ ಅದಕ್ಕೆ ಅರಿಸ್ಟಾಟಲ್‌ನು ಜಾಣ್ಮೆಯಿಂದ ಉತ್ತರಿಸಿ ಸಮಸ್ಯೆಯನ್ನು ನಿವಾರಿಸಿದನು.

ಇನ್ನು ಅನೀತಿ ಇಲ್ಲವೆ ಸ್ವಾರ್ಥ ಇವು, ಮನೋನಿಷ್ಠವೋ ಪ್ರಕೃತಿನಿಷ್ಠವೋ ಎಂಬುದಕ್ಕೆ ಅಲ್ಲಮ ಪ್ರಭುಗಳು ತೀರ ಸಹಜವಾಗಿ ಅವರ ಪರಿಭಾಷೆಯಲ್ಲಿ, ನೀತಿ ಅನೀತಿ ವಿಚಾರಗಳು, ಬಾಹ್ಯ ಪ್ರಕೃತಿಯಲ್ಲಿ ಇಲ್ಲ, ಆದರೆ ಅಂತರಂಗ ಭೂಮಿಕೆಯಲ್ಲಿ ಇವೆ. ಅವಕ್ಕೆ ಅವರು ಹೀಗೆ ಹೇಳುತ್ತಾರೆ.

"ಹೊನ್ನು ಮಾಯೆಯೆಂಬರು, ಹೆಣ್ಣು ಮಾಯೆಯೆಂಬರು, ಮಣ್ಣು ಮಾಯೆಯೆಂಬರು, ಹೊನ್ನು ಮಾಯೆಯಲ್ಲ, ಹೆಣ್ಣು ಮಾಯೆಯಲ್ಲ, ಮಣ್ಣು ಮಾಯೆಯಲ್ಲ, ಮನದ ಮುಂದಣ ಆಸೆಯೇ ಮಾಯೆ ಕಾಣಾ ಗುಹೇಶ್ವರಾ." ಆದುದರಿಂದ

ಈ ದೃಷ್ಟಿ ಸೂಕ್ಷ್ಮವನ್ನು ಅರಿತಾಗ, ನೀತಿಶಾಸ್ತ್ರದ ಸಮಸ್ಯೆ ದೂರಾಗುತ್ತದೆ. ನಾವು ಏನೇ ಇರಲಿ, ಏನನ್ನೇ ಮಾಡಲಿ, ಆದರೆ ಅದರ ನಿಷ್ಕರ್ಷೆಯಾಗುವುದು, ನಮ್ಮ ಈ ಮನದ ಮುಂದಣ ಆಸೆಯಿಂದಲೇ. ಇದನ್ನು ತಾನು ಕಾಣಬೇಕಲ್ಲದೆ ಬೇರೆಯವರು ಕಾಣಲು ಸಾಧ್ಯವಿಲ್ಲ. ಆದುದರಿಂದ ಮನುಷ್ಯನು ತನ್ನ ಅರಿವಿಗೆ ತಾನೇ ಗುರುವಾಗಿ ಕಾರ್ಯಮಾಡಬೇಕು.

ಒಟ್ಟಿನಲ್ಲಿ ಸಮಾಜವು ಬಿತ್ತಲಾರದ ಹೊಲವಿದ್ದಂತೆ. ಅದನ್ನು ನೀತಿಶಾಸ್ತ್ರದಿಂದ ಬಿತ್ತಬೇಕಾಗುತ್ತದೆ. ಅಂದರೇನೇ ಅದು ಉತ್ತಮ ಸಮಾಜ, ಆದರ್ಶ ಸಮಾಜ, ಇಲ್ಲವಾದರೆ ಅದು ಕಲ್ಲಿನಿಂದ ಕಲ್ಲಿಗೆ ಧುಮ್ಮಿಕ್ಕುವ ಹೊಳೆಯಂತೆ ಹರಿದು ನಿಷ್ಫಲವಾಗುತ್ತದೆ. ಆದುದರಿಂದ ಆಧುನಿಕ ಧರ್ಮಶಾಸ್ತ್ರ ಪ್ರವೀಣರು, ಈ ಮೂಲ ವಿಚಾರವನ್ನು ಸಮಗ್ರ ಮಾನವಸಮಾಜದ ತಳಹದಿಯ ಮೇಲೆ ನಿಲ್ಲಿಸಬೇಕು. ಸಂಕುಚಿತವಾದ ಮತೀಯ ಧರ್ಮಪ್ರಚಾರ ಹಾಗೂ ಪರಮತಖಂಡನೆ ಇವು ತೊಲಗಿ ನೀತಿವಂತ ಸಮಾಜವನ್ನು ಕಟ್ಟಲು ಎಲ್ಲರೂ ಹೋರಾಡಬೇಕೆಂಬುದೇ ನಮ್ಮ ಇಚ್ಛೆಯಾಗಿದೆ.

ದಿ. ೧೦–೬–೧೯೬೬ ರಂದು ಅ. ಭಾ. ಆಕಾಶವಾಣಿ ಕೇಂದ್ರ(ಧಾರವಾಡ)ದ ಮೂಲಕ ಅಪ್ಪಣೆ ಕೊಡಿಸಿದ ಆಶೀರ್ವಚನ.

ಕನ್ನಡನಾಡಿನ ಕಾರಣಪುರುಷ ಬಸವಣ್ಣನವರು

ಓ ಬಸವ ಬಾರಯ್ಯ ಅವತರಿಸಿ ತೋರಯ್ಯ
ನಿನಗಾಗಿ ಈ ಲೋಕ ಕಾದಿರುವದು
ಈ ಮೋಹ ಮಾಯೆಯಲಿ ಈ ಈರ್ಷೆ ಜಾಲದಲಿ
ಸಿಕ್ಕಿರುವ ಈ ಜಗವು ಬಾಡಿರುವದು
ರಾಷ್ಟ್ರ ರಾಷ್ಟ್ರದ ಯುದ್ಧ ಬದ್ಧ ವೈರದ ಕ್ಷುಬ್ಧ
ಕ್ಷಾಮಬಾಧೆಯ ಸರಿಸಿ ನೀ ಮೂಡಿಬಾ
ಶರಣವಾಣಿಯ ನೀಡಿ ಅಭಯವಾಣಿಯ ಹೇಳಿ
ಉರಿವ ಲೋಕಕ್ಕೆ ತಂಪು ನೀ ನೀಡ ಬಾ

ಈಗ ನಾವು ಎಂಟನೆಯ ಶತಾಬ್ದಿಯನ್ನು ಇಷ್ಟರಲ್ಲೇ ನಿಲುಕಿರುವ ಯುಗಪುರುಷ ಬಸವೇಶ್ವರರ ೮೦೦ ನೆಯ ವರ್ಷದ ಹಿಂಗಡೆಯ ಜಯಂತಿಯನ್ನು ಆಚರಿಸುತ್ತಿದ್ದೇವೆ. ಈ ವರ್ಷವು ಮುಂಬರುವ ವರ್ಷದ ಸಹಸ್ರಾರು ಕಾರ್ಯಕ್ರಮಗಳಿಗೆ ಕನ್ನಡಿಯಾಗಿದೆ. ಇಂದಿನಿಂದಲೇ ನಾವು ಬರುವ ವರ್ಷದ ಪೂರ್ವಸಿದ್ಧತೆಯಲ್ಲಿ ತೊಡಗಬೇಕಾಗಿದೆ. ಆ ಮೂಲಕ ಬಸವಣ್ಣನವರು ಸಾಧಿಸಿದ ಜೀವನ ತತ್ತ್ವ ಸಾರಿದ ಜೀವನ ಸಿದ್ಧಾಂತಗಳ ವಿಶ್ಲೇಷಣೆಗೆ ಇಂದು ತೊಡಗೋಣ.

ಶೈವ ಪ್ರಭೇದಗಳೊಡನೆ ಬೆರೆತು ಬಂದ ವೀರಶೈವವು ಶೈವಾಧಾರಿತವಾದರೂ ತನ್ನದೇ ಆದ ನವೀನ ದರ್ಶನಗಳ ಗಾಳಿ–ಬೆಳಕುಗಳನ್ನು ಉಂಡು ಸಂಪೂರ್ಣ ಸುಸಂಬದ್ಧವೂ ಆಯಿತು. ಇಂಥದೊಂದು ಶೈವಾಂತರಿತ ವೈಚಾರಿಕ ಕ್ರಾಂತಿಯಲ್ಲಿ ಧಾರ್ಮಿಕ, ಸಾಮಾಜಿಕ, ಆರ್ಥಿಕ, ರಾಜಕೀಯ ಹಾಗೂ ಸಾಹಿತ್ಯಿಕ ಕ್ರಾಂತಿಗಳೂ ಒಳಗೊಂಡು ಮಹಾಕ್ರಾಂತಿಯ ಸ್ವರೂಪವನ್ನು ಹೊಂದಿ, ಆ ಮಹಾಕ್ರಾಂತಿಗೆ ಯುಗಪುರುಷನೂ ಮಹಾ ಸಾಮರ್ಥ್ಯಶಾಲಿಯೂ ಆದಂಥ ಬಸವಣ್ಣನವರನ್ನು ಅಗ್ರಗಣ್ಯರನ್ನಾಗಿ ಪಡೆದು ವೀರಶೈವ ಸಿದ್ಧಾಂತವು ವಿವೇಕಬದ್ಧವಾಗಿ ನಿರ್ಮಾಣಗೊಂಡಿತು. ಈ ಸಮಗ್ರ ಕ್ರಾಂತಿಯು ನಾಡಿನಾಡಿನಲ್ಲಿಯೂ ಪ್ರವಹಿಸಿ ಬಂದ ಚೈತನ್ಯ ಶಕ್ತಿಯೊಂದರೇ ಬಸವಣ್ಣನವರು. ಅವರೊಬ್ಬರು ವ್ಯಕ್ತಿಗಳಲ್ಲ; ಅವರೆ ಅನೇಕ ಶಕ್ತಿಗಳ ಕೇಂದ್ರಮೂರ್ತಿ. ಕಾರಣ ಅವರಲ್ಲಿ ದಯೆಯೊಂದಿಗೆ ಕಾಠಿಣ್ಯ, ಭಾವುಕತೆಯೊಂದಿಗೆ ದಾರ್ಶನಿಕತೆ, ಭಕ್ತಿಯೊಂದಿಗೆ ವಿಮರ್ಶೆ, ಶಾಂತಿಯೊಂದಿಗೆ ಕ್ರಾಂತಿ, ಮುಗ್ಧತೆಯೊಂದಿಗೆ ಪ್ರಬುದ್ಧತೆ ರಾಜತ್ವದೊಂದಿಗೆ ಕಿಂಕರತ್ವ ಹೀಗೆ ಎಲ್ಲ

ಶಕ್ತಿಗಳೂ ಸಮಯೋಚಿತವಾಗಿ ಕಂಡು ಬರುತ್ತಿದ್ದವು. ಬಸವಣ್ಣನವರು ತಮ್ಮ ವಚನ ಧರ್ಮವನ್ನು ಯಾವುದೊಂದು ಸಂಕುಚಿತವಾದ ಮನೋವೃತ್ತಿಯಲ್ಲಿ ಕಂಡವರಲ್ಲ.

ಅಲ್ಲಮಪ್ರಭುಗಳು ಯೋಗನಿಷ್ಠರಾಗಿಯೂ ಚನ್ನಬಸವಣ್ಣನವರು ಜ್ಞಾನನಿಷ್ಠರಾಗಿಯೂ ಬೆಳಗಿದಂತೆ ಬಸವಣ್ಣನವರು ಕ್ರಿಯಾನಿಷ್ಠರಾದ ಭಕ್ತಶ್ರೇಷ್ಠರಾಗಿ ವಿರಾಜಿಸಿದರು. ಅವರಲ್ಲಿ ಭಕ್ತಿಯ ಹೆಗ್ಗಳಿಕೆಯೊಂದಿಗೆ ಜ್ಞಾನದ ಅರಿವು, ಅನುಭವದ ಆಳ, ವೈರಾಗ್ಯದ ತಿರುಳುಗಳು ಮುಪ್ಪುರಿಗೊಂಡು ಜಾಜ್ವಲ್ಯಮಾನವಾಗಿವೆ. ಅವರು ತಾವು ದಾಸರೆಂದು ಕೊಂಡರೂ ದಾಸಶ್ರೇಷ್ಠರು. ತಮ್ಮಲ್ಲಿ ಭಕ್ತಿಯೆಂಬುದು ಸಾಸಿವೆಯ ಷಡ್ಭಾಗದಿನಿತಿಲ್ಲವೆಂದು ಕೊಂಡರೂ ಸಾಗರದಷ್ಟು ಭಕ್ತಿಯುಳ್ಳ ಭಕ್ತಿಭಂಡಾರಿಗಳು, ಸಂಸಾರವೆಂಬ ಮಾಯೆಗೆ ಅಂಜಿದರೂ ಅದನ್ನು ಗೆದ್ದು ಸಿದ್ಧಹಸ್ತರಾದವರು. ಹೀಗೆ ಅವರು ಯಾವಾಗಲೂ ತಮ್ಮನ್ನು ಸಣ್ಣತನದಲ್ಲಿಯೂ ಪರರನ್ನು ದೊಡ್ಡತನದಲ್ಲಿಯೂ ಕಂಡಿದ್ದಾರೆ. ತನಗಿಂತ ಕಿರಿಯರಿಲ್ಲವೆಂದು ಸಾರಿದ್ದಾರೆ. ಈ ಅವರ ಮಾತೇ ಅವರನ್ನು ಎಲ್ಲರಿಗಿಂತಲೂ ಹಿರಿಯರನ್ನಾಗಿ ಮಾಡಿವೆ. ಅವರು ತಮ್ಮ ನವೀನ ಸಿದ್ಧಾಂತವನ್ನು ಬಿತ್ತರಿಸಿದಾಗ ಸಂಪ್ರದಾಯ ಶರಣರು ಕೆರಳಿದ ಸರ್ಪದಂತೆ ಭೋರ್ಗರೆಯುತ್ತ ಎದುರು ಬಂದರು. ಸಹನೆಗೊಳ್ಳದವರು ಅವರ ಈ ಕ್ರಾಂತಿಯನ್ನು ಕುಡಿಯಿದ್ದಾಗಲೇ ಚಿವುಟಿ ಒಗೆಯಬೇಕೆಂದು ಯತ್ನಿಸಿದರು. ಆದರೆ ಅವರ ಸಂಘಟನಾಶಕ್ತಿ ಕುಡಿ ಇದ್ದಂತೆಯೇ ಹೆಮ್ಮರವಾಗಿ ಬಲಿತು ನಿಂತಿತ್ತು. ಕ್ರಾಂತಿಪೂರ್ವದ ಕಾಲದಲ್ಲಿ ಧರ್ಮದ ಹೆಸರಿನಿಂದ ಡಂಭಾಚಾರ, ಅಂಧಶ್ರದ್ಧೆ, ವೈಚಾರಿಕ ದೋಷಗಳು ಅನೇಕ ಬಣಗಳಲ್ಲಿ ಸುಚ್ಚು ಸೂರುಗೊಂಡು ಗುಂಪುಗಾರಿಕೆ ಉಪಜಾತಿಗಳ ಪರಾಟಿಕೆಗಳಿಗೆ ಹೆಚ್ಚು ಆಸ್ಪದ ದೊರೆಯಿತು. ವರ್ಣಾಶ್ರಮವು ತನ್ನ ಮೂಲಸ್ಥಿತಿಯಿಂದ ತಪ್ಪಿ ಹೋಗಿ ಉಚ್ಚನೀಚತ್ವದಲ್ಲಿ ಪರ್ಯವಸಾನಗೊಂಡಿತ್ತು. ಹೀಗಾಗಿ ಸಮಾಜ ಧರ್ಮಗಳ ಈ ಭೀಕರ ಸಾಂಕ್ರಾಮಿಕಗಳ ವಿರುದ್ಧ ಬಸವಣ್ಣನವರು ಕ್ರಾಂತಿಯ ಅಸ್ತ್ರವನ್ನು ಹೂಡಬೇಕಾಯಿತು. ಅವರು ಆ ಅಸ್ತ್ರವನ್ನು ಹೂಡಿದರು. ಅವರ ಕರೆಗೆ ಅಸಂಖ್ಯಾತ ಶರಣರು ಓಗೊಟ್ಟರು. ಕೂಡಲಸಂಗಯ್ಯ ಅನುಗ್ರಹಿಸಿದ ಹೀಗಾಗಿ ಅವರ ಶರಣಸ್ತೋಮ ಸಮಾಜದ ಈರ್ಷೆಯಿಂದ ತಾತ್ಕಾಲಿಕವಾದ ಏಟಿನಿಂದ ಛಿನ್ನವಿಚ್ಛಿನ್ನವಾದರೂ ಅವರ ಧ್ಯೇಯ ಮಾತ್ರ ಸಚ್ಚಿದಾನಂದರೂಪವಾಗಿ ಬೆಳಗಿತು. ಸರ್ವರ ಮನ ಮನದ ಹೃದಯದಾಳದಲ್ಲಿ ಭದ್ರವಾಗಿ ನೆಲಸಿತು.

ಬಸವಣ್ಣನವರ ವಚನಗಳಲ್ಲಿ ಸಂಸಾರ ಹೇಯಸ್ಥಲ, ಭಕ್ತ-ಸ್ಥಲ, ಸತಿ-ಪತಿ ಭಾವ, ಆತ್ಮಪರಿಶೋಧನೆ ಹಾಗೂ ಸಮಾಜದ ದೋಷ ವಿಡಂಬನೆಗಳು ಸ್ಫುಟವಾಗಿ

ಕಾಣುತ್ತವೆ. ಇವರ ಪ್ರಕೃತಿಯಲ್ಲಿ ಭಕ್ತಸ್ಥಲದ ಆವಿರ್ಭಾವವು ಸ್ಥಾಯಿ ಸ್ವರೂಪವನ್ನಿ ನೆಲೆಸಿವೆ. ಇವರು ಭಕ್ತಸ್ಥಲದಲ್ಲಿ ನಿಂತುಕೊಂಡೇ ಷಟ್‌ಸ್ಥಲಾನು ಭವಿಗಳಾಗಿ ಅರಿವು-ಆಚಾರ-ಅನುಭವ-ಆನಂದ ಸಮರಸಗಳನ್ನು ಸವಿದರು. ಇವರ ಈ ವ್ಯಕ್ತಿ ವಿಶಿಷ್ಟತೆಯು ಇವರ ಎಲ್ಲ ವಚನಗಳ ಅಕ್ಷರ ಅಕ್ಷರಗಳಲ್ಲಿ ಅತ್ಯಂತ ಪ್ರಾಮಾಣಿಕವಾಗಿ ಮೂಡಿಬಂದಿವೆ. ತನ್ನದಿರಲಿ, ಅನ್ಯರದಿರಲಿ ಇದ್ದುದನ್ನು ಇದ್ದಂತೆ ಹೇಳಿ. ಸ್ವಾರ್ಥದ ಹಂಗನ್ನು ಹರಿದುನಿಂತ ಕೆಲವೇ ಕನ್ನಡ ಅನುಭಾವಿ ಗಳಲ್ಲಿ ಇವರೊಬ್ಬರು. ಸಾತ್ವಿಕ ಪ್ರಕೃತಿಯು ಜಾಗೃತ ಜ್ವಾಲಾಮುಖಿಯಂತೆ ಇವರ ಹೃದಯ ಸದಾ ಸಂತಪ್ತವಾಗಿ ತನ್ನ ಲಾವಾರಸದಿಂದ ಸಮಾಜದ ಡಾಂಭಿಕತೆ, ಜಾತೀಯತೆ, ಉಚ್ಚನೀಚತ್ವ, ಅಗತ್ಯತೆಗಳನ್ನು ಧ್ವಂಸ ಮಾಡಲು ಹೆಣಗುತ್ತಿತ್ತು. ಈ ರೀತಿ ಇವರು ಸಿಡಿಮಿಡಿಯುತ್ತಿರುವ ಜ್ವಾಲಾಮುಖಿಯಾದರೂ ಮರುಕ್ಷಣದಲ್ಲೇ ಜಂಗಮ ಸಾನಿಧ್ಯ, ಸಂಗಮನ ಸೇವೆ, ಶರಣರ ಆರಾಧನೆಗಳಲ್ಲಿ ತೊಡಗಿದಾಗ ಪೂರ್ಣ ಚಂದ್ರನ ಶೀತಲ ಕಿರಣಗಳನ್ನು ಚೆಲ್ಲುತ್ತ ಶಾಂತಸಾಗರದ ಮೇಲೆ ಬೀಸುವ ಮಂದ ಮಾರುತನಾಗಿ ತೋರುತ್ತಿದ್ದರು. ಈ ರೀತಿ ಅವರ ವ್ಯಕ್ತಿತ್ವದಲ್ಲಿ ಆಕುಂಚನ ಪ್ರಸರಣಗಳು ಎಡೆಬಿಡದೇ ಗೋಚರಿಸಿದರೂ ಭಕ್ತಿಯ ಸ್ಥಿತಿ ಸ್ಥಾಪಕತನದಲ್ಲಿ ಮತ್ತೆ ಮತ್ತೆ ನಿಲ್ಲುತ್ತಿದ್ದರು. ಒಂದು ಸಲ 'ಅಂಗೈಯೊಳ ಗಣ ಲಿಂಗವ ನೋಡುತ್ತ' ನೋಟವೇ ಪ್ರಾಣವಾಗಿ ಹಾಗೂ ಕೂಟವೇ ಪ್ರಾಣ ವಾಗಿ ಎಂದಿಪ್ಪೆನೋ ಎಂದು ನೆನಸಿದರೆ ಮತ್ತೊಂದು ಸಲ—'ಭಕ್ತಿಯೆಂಬುದ ಮಾಡಬಾರದು, ಕರಗಸದಂತೆ ಹೋಗುತ್ತ ಕೊಯ್ವುದು, ಬರುತ್ತ ಕೊಯ್ವುದು ಘಟಸರ್ಪದಲ್ಲಿ ಕೈದುಡುಕಿದರೆ ಹಿಡಿವುದು ಮಾಬುದೇ?' ಎಂದು ಹೇಳುತ್ತಾರೆ. ಇಲ್ಲಿ ಭಕ್ತಿಯೆಂದರೆ ಆತ್ಮಸಾಕ್ಷಾತ್ಕಾರದ ನಿಜವಾದ ಒರೆಗಲ್ಲು. ಇದು ಎಷ್ಟು ಸರಳವೋ ಅಷ್ಟೇ ಕಠಿಣ. ಆದುದರಿಂದ ಇಲ್ಲಿ ಆತ್ಮವಂಚನೆ ಸಲ್ಲದು ಎಂದು ಹೇಳಿದ್ದಾರೆ. ಯಾಕಂದರೆ 'ಹುತ್ತವ ಬಡಿದಡೆ ಹಾವು ಸಾಯಲಾರದು! ಅದರಂತೆ ಅಘೋರ ತಪವನ್ನು ಮಾಡಿಯೂ ಆತ್ಮವು ದೋಷಪೂರಿತವಾಗಿದ್ದರೆ ಅನುಭಾವ ದೂರಾಗುತ್ತದೆ. ಆದ್ದರಿಂದ ಬಸವಣ್ಣನವರು ಭಕ್ತಿಯ ಸಾಕ್ಷಾತ್ಕಾರಕ್ಕಾಗಿ ಪಣ ತೊಟ್ಟು ನಿಂತರು. ಅವರು— 'ತನುವ ಬೇಡಿದಡೀವೆ, ಮನವ ಬೇಡಿದಡೀವೆ, ಧನವ ಬೇಡಿದಡೀವೆ, ತಲೆಯ ಬೇಡದಡೀವೆ, ಕೂಡಲ ಸಂಗಮದೇವಾ ನಿಮಗಿತ್ತು ಶುದ್ಧನಾಗಿಪ್ಪ' ಎಂದು ಸಾರಿದರು. ಆದರೂ ಮುಂದೆ ಹೀಗೆ ಹೇಳಿದ ಬಸವಣ್ಣ ನವರೇ, 'ಆನು ಭಕ್ತನಲ್ಲಯ್ಯಾ, ಆನು ವೇಷಧಾರಿಯುಯ್ಯಾ' ಎಂಬುದಾಗಿಯೂ ಮತ್ತು— 'ಎನ್ನಲ್ಲಿ ಭಕ್ತಿಯೆಂಬುದು ಸಾಸಿವೆಯ ಷಡ್ಭಾಗದನಿತಿಲ್ಲ'ವೆಂದೂ ಹೇಳಿದರು, ಇಂಥ ಮಾತುಗಳು ಅವರ ಭಕ್ತಿಯ ವೈಶಾಲ್ಯಕ್ಕೆ ಸಾಕ್ಷಿ ಯಾಗಿರುತ್ತವೆ.

ಇನ್ನು ಸಾಮಾಜಿಕ ಸಂಬಂಧವು ಬಂಧುರವಾಗಬೇಕಾದರೆ ಪರಸ್ಪರ ಸೌಹಾರ್ದ, ಸಹನ, ಗೌರವಗಳು ಅತ್ಯವಶ್ಯ. ಅದ್ದರಿಂದಲೇ– 'ಅಯ್ಯಾ ಎಂದರೆ ಸ್ವರ್ಗ, ಎಲವೋ ಎಂದರೆ ನರಕ' ಎಂದು ಹೇಳಿದ್ದಾರೆ. ಕಾರಣ ವಚನವು ಅಮೃತವಿದ್ದಂತೆ. ನಾವು ಏನೇ ಮಾತನಾಡಿದರೂ– 'ನುಡಿದರೆ ಲಿಂಗ ಮೆಚ್ಚಿ ಅಹುದಹುದೆನಬೇಕು'. ಇದುವೇ ಲೋಕಹಿತದ ಮೊದಲನೆಯ ನಿಯಮ. ಮಾತು ಮುನಿದರೆ ಅದೇ ನರಕ, ಮಾತು ಮರೆತರೆ ಅದೇ ಸ್ವರ್ಗ. ಅದ್ದರಿಂದ ಮನೆಗೆ ಬಂದವರಿಗೆ– 'ಏನು ಬಂದಿರಿ? ಹದುಳವಿದ್ದಿರೆ? ಎಂದರೆ ನಿಮ್ಮ ಸಿರಿ ಹಾರಿಹೋಹುದೇ? ಕುಳ್ಳಿರೆಂದರೆ ನೆಲ ಕುಳಿಹೋಹುವುದೇ? ಒಡನೆ ನುಡಿದರೆ ಸಿರಹೊಟ್ಟೆಯೊಡೆವುದೇ?' ಎಂದು ಕೇಳುತ್ತಾರೆ. 'ಲೋಕದ ಡೊಂಕು' ತಿದ್ದುವ ಮುಂದಾಳುಗಳಿಗೆ 'ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ' ಎಂದು ಹೇಳಿದ್ದಾರೆ. ಈ ಮಾತು ತ್ರಿಕಾಲ ಸತ್ಯ ನಮ್ಮಲ್ಲಿ ನಮ್ಮ ತಪ್ಪನ್ನಲ್ಲದೇ ಅನ್ಯರ ತಪ್ಪನ್ನು ಕೆದಕಿ ತೋಡುವ ಹವ್ಯಾಸ ಬಹಳ. ಸಮಾಜದ ಈ ಸೂಕ್ಷ್ಮನಾಡಿಯ ಮಿಡಿತವನ್ನು ಬಸವಣ್ಣನವರು ಚೆನ್ನಾಗಿ ಅರಿತವರಾಗಿದ್ದರು. ಇನ್ನು ಶರಣ ಮಾರ್ಗದಲ್ಲಾಗಲಿ ಲೋಕ ಮಾರ್ಗದಲ್ಲಾಗಲೀ ಒಳಗೊಂದು ಹೊರಗೊಂದು ಸಲ್ಲದು. ಒಳಗೆ ವಿಷ, ಮೇಲೆ ಬೆಲ್ಲದ ಸವಿ ಇದು ಸನ್ಮಾರ್ಗಕ್ಕೆ ವಿರೋಧ. ಈ ರೀತಿ ಇರುವುದು 'ಹಸಿದು ಬಂದ ಗಂಡನಿಗೆ ಉಣ್ಣಲಿಕ್ಕದೇ ಬಡವಾದನೆಂದು ಮರುಗುವ ಸತಿಯ ಸ್ನೇಹದಂತೆ' ಆಗುತ್ತದೆಯೆಂದು ಬಹು ಮಾರ್ಮಿಕವಾಗಿ ಹೇಳಿದ್ದಾರೆ. ಅವರಿಗೆ ಆತ್ಮಸ್ತುತಿ ಬೇಡ, ಪರನಿಂದೆಯೂ ಬೇಡ. ಅಂತೆಯೇ 'ಆತ್ಮಸ್ತುತಿ ಪರನಿಂದೆಯ ಕೇಳಿಸದಿರಯ್ಯ' ಎಂದಿದ್ದಾರೆ.

ಬಸವಣ್ಣನವರು ಏಕೇಶ್ವರವಾದಿಗಳು. 'ದೇವನೊಬ್ಬ ನಾಮ ಹಲವು. ಪರಮ ಪತಿವ್ರತೆಗೆ ಗಂಡನೊಬ್ಬ ಕಾಣಿರೋ. ಮತ್ತೊಂದಕ್ಕೆರಗಿದರೆ ಕಿವಿ, ಮೂಗ ಕೊಯ್ಯುವನು. ಹಲವು ದೈವದ ಎಂಜಲ ತಿಂಬುವರನೇನೆಂಬೆನಯ್ಯ' ಎಂದು ಕಠೋರವಾಗಿ ಸಾರಿದ್ದಾರೆ. ಉಳಿಮುಟ್ಟಿದ ಲಿಂಗವನ್ನು ಹಾಗೂ ಕಲ್ಲ ಮೇಲೆ ಸ್ಥಾಪಿತವಾದ ಕಲ್ಲು ಲಿಂಗವನ್ನು ಅಲ್ಲಮಪ್ರಭುಗಳು ಹಳಿಯುವಂತೆ— 'ಅರಗು ತಿಂದು ಕರಗುವ. ಉರಿಯ ಕಂಡರೆ ಮರಗುವ. ಅವಸರ ಬಂದರೆ ಮಾರುವ, ಅಂಜಿಕೆಯಾದರೆ ಹೂಳುವ ಸ್ಥಾವರ ಲಿಂಗಪೂಜೆ ಅವರಿಗೆ ಬೇಡ.' ಅದ್ದರಿಂದ– 'ಇಬ್ಬರು ಮೂವರು ದೇವರೆಂದು ಉಬ್ಬಿ ನುಡಿಯಬೇಡ' ಎಂದು ಹೇಳಿದ್ದಾರೆ. ಇನ್ನು– 'ಸತ್ಯವ ನುಡಿವುದೇ ದೇವಲೋಕ' ಹಾಗೂ 'ಸತ್ಯವೆಂಬ ಕೂರಲಗನೆ ಕಳೆದುಕೊಂಡು ಸದ್ಭಕ್ತರು ಗೆದ್ದರು' ಎಂಬಲ್ಲಿ ಸತ್ಯದ ಮಹತ್ವವನ್ನು; ತನಗೆ ಮುನಿವವರಿಗೆ ತಾ ಮುನಿಯಬೇಕಯ್ಯ?' 'ಮನದ ಕೋಪ ತನ್ನ ಅರುಹಿಂಗೆ ಹಾನಿ, ಮನೆಯ ಸುಹಮು' ಎಂಬಲ್ಲಿ ಸಹನೆಯ ಮಹತ್ವವನ್ನು;

'ದಯವಿಲ್ಲದ ಧರ್ಮವಾವುದಯ್ಯಾ' 'ದಯವೇ ಧರ್ಮದ ಮೂಲವಯ್ಯಾ' ಎಂಬಲ್ಲಿ ಕರುಣೆಯ ಮಹತ್ವವನ್ನೂ; 'ಉಂಬ ಜಂಗಮ ಬಂದರೆ ನಡೆಯೆಂಬರು, ಉಣ್ಣದ ಲಿಂಗಕ್ಕೆ ಬೋನವ ಹಿಡಿಯೆಂಬರಯ್ಯಾ' ಹಾಗೂ 'ಪಾಪಿಯ ಧನ ಪ್ರಾಯಶ್ಚಿತ್ತಕ್ಕಲ್ಲದೇ ಸತ್ಪಾತ್ರಕ್ಕೆ ಸಲ್ಲದಯ್ಯಾ' ಎಂಬಲ್ಲಿ ದಾನದ ಪರಿಶುದ್ಧತೆಯನ್ನೂ; 'ಕಳಬೇಡ ಕೊಲಬೇಡ' 'ವೇದವನೋದಿದವರ ಮುಂದೆ ಅಳು ಕಂಡೆಯಾ ಹೋತೆ' ಹಾಗೂ 'ಕೊಲ್ಲುವವನೇ ಮಾದಿಗ, ಹೊಲಸು ತಿಂಬುವವನೇ ಹೊಲೆಯ' ಎಂಬಲ್ಲಿ ಅಹಿಂಸೆಯ ತತ್ವವನ್ನೂ ಸಾರಿದ್ದಾರೆ.

ಹೀಗೆ ಬಸವಣ್ಣನವರು ಅನೇಕ ಶಕ್ತಿಗಳ ಕೇಂದ್ರಸ್ಥಾನವಾದ ವ್ಯಕ್ತಿ ಶಕ್ತಿಯಾಗಿದ್ದಾರೆ. ಭಾರತದ ಇತಿಹಾಸದಲ್ಲಿ ನಾವು ಅನೇಕ ಸಂತ ಶರಣರ–ದಾಸ–ಸನ್ಯಾಸಿ ಸ್ವಾಮಿಗಳ ದಿವ್ಯ ಜೀವನವನ್ನು ಕಂಡಿದ್ದೇವೆ. ಅವರಲ್ಲಿ ಕೆಲವರು ಭಕ್ತ ಜೀವಿಗಳು, ಕೆಲವರು ಜ್ಞಾನಿಗಳು, ಕೆಲವರು ಯೋಗಿಗಳು, ಕೆಲವರು ಸಮಾಜ ಸುಧಾರಕರು ಇನ್ನು ಕೆಲವರು ರಾಜ ಗುರುಗಳು ಮತ್ತೆ ಕೆಲವರು ಸಾಹಿತಿಗಳು. ಆದರೆ ಬಸವಣ್ಣನವರೊಬ್ಬರಲ್ಲಿಯೇ ಅಂಥ ಅನೇಕ ವ್ಯಕ್ತಿಗಳ ಅನೇಕ ಶಕ್ತಿಗಳು ತಮ್ಮ ಪೂರ್ಣ ಸ್ಥಿತಿಯಲ್ಲಿ ಕೇಂದ್ರೀಭೂತವಾಗಿದ್ದವು. ಕಾರಣ ಅವರು ಚಾಣಾಕ್ಷರಾದ ರಾಜಕಾರಣಿಗಳು. ದಕ್ಷ ಆಡಳಿತಗಾರರು, ಕಠೋರ ಸತ್ಯನಿಷ್ಠರು, ಕೋಮಲ ಭಕ್ತರು, ಸಮಾಜದ ಸುಧಾರಕರು, ತತ್ವಜ್ಞಾನಿಗಳು, ಧರ್ಮಬೋಧಕರು, ನೀತಿವಿಶಾರದರು, ಅನುಭಾವಿಗಳು, ಯೋಗಿಗಳು, ಸಾಹಿತಿಗಳು ಅಷ್ಟೇ ಅಲ್ಲದೆ ಸರ್ವಧರ್ಮ ಸಮಭಾವದಿಂದೊಡಗೂಡಿದ ಸಮನ್ವಯಾಚಾರ್ಯರು.

[illegible] ರಂದು ಬಸವಜಯಂತಿಯ ಶುಭ ಸನ್ನಿವೇಶದಲ್ಲಿ, ಆ. ಭಾ. ಆಕಾಶವಾಣಿ ಕೇಂದ್ರ (ಧಾರವಾಡ) ದ ಮೂಲಕ ಅಪ್ಪಣೆ ಕೊಡಿಸಿದ ಆಶೀರ್ವಚನ.

ಬಸವ ಸಂದೇಶ

ಮಹಾತ್ಮಾ ಬಸವಣ್ಣನವರು ಮಾಡಿದ ಅನೇಕ ಕಾರ್ಯಗಳಲ್ಲಿ, ಕನ್ನಡ ಸಾಹಿತ್ಯಕ್ಕೆ ನೀಡಿರುವ ಉಪಕಾರ ಅಪಾರವಾಗಿದೆ ಮತ್ತು ಸಂಸ್ಮರಣೀಯವಾಗಿದೆ. ಸಾಹಿತ್ಯ ಬೆಳೆಯದೆ ಮಾನವನ ವಿಕಾಸವಾಗಲಾರದು. ಸತ್ವಯುತ ಸಾಹಿತ್ಯ ಸಂಸ್ಕೃತಿಯಿಂದ ಮನುಷ್ಯನಿಗೆ ಆತ್ಮಶಕ್ತಿ ಪಡೆಯಲು ಸಾಧನವಾಗುತ್ತದೆ. ಸಾಹಿತ್ಯ ದೇವಿಯಾರಾಧನೆ ಮಾಡಿದಂತೆ, ಭಾವಕುಸುಮ ಅರಳಿ ಅದರ ಸೌಗಂಧವನ್ನು ಸೇವಿಸಿ ತನ್ಮಯನಾಗಬಹುದು. ಹೃದಯದಿಂದ ಬಂದ ಸಾಹಿತ್ಯವು ಬೇರೊಬ್ಬರ ಹೃದಯವನ್ನು ಮುಟ್ಟಿ ಅವರ ಆತ್ಮೋದ್ಧಾರಕ್ಕೆ ಮಾರ್ಗದರ್ಶನವಾಗುವುದು. ಅಂತರ್ಮುಖಿದಿಂದೊಡಗೂಡಿದ ಅಂತರಂಗ ಸೌಂದರ್ಯವನ್ನು ಹೆಚ್ಚಿಸುವ ಸಾಹಿತ್ಯಕ್ಕೆ ಹಿರಿದಾದ ಬೆಲೆ ಮತ್ತು ಬಲ ಬರುತ್ತದೆ.

"ಸತ್ಯಂ ಶಿವಂ ಸುಂದರಂ" ಸತ್ಯವಿದ್ದಲ್ಲಿ ಸೌಂದರ್ಯವು ಪ್ರಕಟವಾಗಿ, ಶಿವನೂ ಅಲ್ಲಿ ಕಾಣುತ್ತಾನೆ, ಸೌಂದರ್ಯವನ್ನು ಹೊರನೋಟದ ಅನುಭವದಿಂದ ಪಡೆದರೆ ನಿರರ್ಥಕ, ಅದನ್ನೇ ಆತ್ಮಾನುಭೂತಿಯೊಡನೆ, ಭಾವಾಂಶ, ಚಿಂತನಾಂಶದೊಡನೆ ಸೌಂದರ್ಯಾನುಭವ ಪಡೆದರೆ ಮಾನವನ ಬಹುಮುಖಿ ಜೀವನದ ಪ್ರತಿಭೆ ಎದ್ದುಕಾಣುವದಲ್ಲದೆ ಆತ್ಮ ಸಂತುಷ್ಟಿಯಾಗಿ ರಸಾನುಭವವನ್ನು ಪಡೆಯುತ್ತಾನೆ. ಆದರೆ ಅದು ಸತ್ಯವೂ, ಶಿವವೂ ಸೌಂದರ್ಯದ ಮೂಲಕವೇ ಅನುಭವಕ್ಕೆ ಬರಬೇಕು. ಪ್ರಪಂಚದ ವಿವಿಧ ಮತಗಳೂ ವಿವಿಧಯೋಗ ಮಾರ್ಗಗಳೂ ತಮ್ಮ ತಮ್ಮ ಸಾಧಕರನ್ನು ಸತ್ಯದ ನೆಲೆಗೂ ಶಿವದ ನೆಲೆಗೂ ಕೊಂಡೊಯ್ದವು. ಲೋಕಾನುಭವವೇ ರಸಾನುಭವಕ್ಕೇರಿ, ಅಂತರಂಗ ಸೌಂದರ್ಯೋಪಾಸನೆಗೆ ಸಾಧನವಾದರೆ ಮಾತ್ರ ರಸಸಿದ್ಧಿ "ರಸ"ದ ಅರ್ಥ ಹಣ್ಣಿನ ರಸದಿಂದ ಹಿಡಿದುಕೊಂಡು ಕಾವ್ಯಾನಂದ, ಬ್ರಹ್ಮಾನಂದ, ಕೊನೆಗೆ ಲಿಂಗಾನಂದದ ವರೆಗೆ ತಾದಾತ್ಮ್ಯ ಸ್ಥಿತಿಯಲ್ಲಿ ಮುಟ್ಟುತ್ತದೆ. ಉಪನಿಷತ್ಕಾಲದ ಋಷಿಗಳೊಬ್ಬರು—

ಸ ಏಷ ರಸಾನಾಂ ರಸತಮಃ

ಎಂದು ಹೇಳಿದ್ದಾರೆ.

ಉತ್ತಮ ಸಾಹಿತ್ಯಕ್ಕೆ ಜೀವನ ದರ್ಶನವಿರುವಂತೆ ಭಾವ, ಕಲ್ಪನೆ ಮತ್ತು ಆಲೋಚನೆಗಳ ಸಂಗಮದಿಂದ ಸಂಭವಿಸುವ ಪ್ರತಿಭೆ ಬೇಕು ಮತ್ತು ಸ್ಫೂರ್ತಿ ಯನ್ನೀಡುತ್ತದೆ. ಈ ಬೆಳಕು ದೊರೆಯುವದು ಲಘು ಜೀವನದಿಂದ ಅಸಾಧ್ಯ. ಅದಕ್ಕೆ ತಪಸ್ಸು, ಅತ್ಯಗತ್ಯ ಸಾಹಿತ್ಯ ಭಾವಗರ್ಭಿತವಿರಬೇಕು. ಸಾಹಿತ್ಯಕ್ಕೆ ಬುದ್ಧಿ

ಪ್ರಧಾನತೆಗಿಂತಲೂ ಹೃದಯದ ಅಂತರಿಕ ಸದ್ವಿಚಾರದ ಅನುಭವಕ್ಕೆ ಹೆಚ್ಚು ಘನತೆ ಬರುತ್ತದೆ. ಸುವರ್ಣ ಘಟದಂತೆ ಶೋಭಿಸುತ್ತದೆ. ಜೀವನವೃಕ್ಷದ ಶಾಖೋಪ ಶಾಖೆಗಳು ಪ್ರಾಣರಸ ತುಂಬಿ ಚೇತನಗೊಳ್ಳುತ್ತವೆ. ಶುಷ್ಕ ಜೀವನದಗ್ಧವಾಗಿ ಸ್ನಿಗ್ಧತೆಯುಂಟಾಗಿ ಭಾವಬಂಧುರವಾಗುತ್ತದೆ.

Beauty is Truth, Truth is Beauty ಎಂಬ ಅನುಭವ ಬಂದು ಜೀವನವೇ ಶಿವಮಯವಾಗುತ್ತದೆ. ಇಂತಹ ಸತ್ಯಸೌಂದರ್ಯ ಸಾಹಿತ್ಯ ಸ್ವಾನು ಭವದ ವಚನಾಮೃತವನ್ನು ದ್ವಿತೀಯ ಶಂಭು ಬಸವಣ್ಣನವರು ನೀಡಿದುದರ ಫಲವೇ ನಾವಿಂದು ಎಚ್ಚರಗೊಳ್ಳಲು ಸಾಧನವಾಗಿದೆ. ವಚನ ವಾಙ್ಮಯಕ್ಕೆ ಬಸವಣ್ಣ ನವರೇ ಪುರಸ್ಕರ್ತರು ಅಥವಾ ವಚನ ವಾಙ್ಮಯಾಚಾರ್ಯರೆಂದರೂ ತಪ್ಪಾಗ ಲಿಕ್ಕಿಲ್ಲ, ಬಸವಣ್ಣನವರಿಗಿಂತ ಮೊದಲು ಕೆಲವರು ವಚನಗಳನ್ನು ರಚಿಸಿದರೂ ಬೆಳೆಸಿ ಬೆಳಗಿಸಿದವರಲ್ಲಿ ಇವರೇ ಮೂಲ ಪುರುಷರು.

ಭಗವಾನ್ ಬುದ್ಧನು ಧರ್ಮಪ್ರಚಾರ ಮಾಡಲಿಕ್ಕೆ ತನ್ನ ಮಾತೃ ಭಾಷೆ ಯಾದ ಪಾಲಿಯ ಭಾಷೆಯಲ್ಲಿಯೇ ಧರ್ಮಗ್ರಂಥಗಳನ್ನು ಬರೆದಂತೆ ಬಸವಣ್ಣ ನವರೂ ಸಹ ತಮ್ಮ ಮಾತೃಭಾಷೆಯಾದ ಕನ್ನಡದಲ್ಲಿಯೇ ವಚನಗಳನ್ನು ಬರೆದು ಸಮಾಜಕ್ಕೆ ಮೇಲ್ಪಂಕ್ತಿಯನ್ನು ಹಾಕಿಕೊಟ್ಟಿದ್ದಾರೆ. ಹೀಗಾಗಿ ಬಸವಣ್ಣನವರಿಗೂ ಕನ್ನಡ ಸಾಹಿತ್ಯಕ್ಕೂ ನಿಕಟ ಸಂಬಂಧ ಬೆಳೆದು ನಾಡು ಅವರ ವಚನ ಸಾಹಿತ್ಯ ಗಂಗೆಯಿಂದ ಪುನೀತವಾಗಿದೆ. ಗೌರವವನ್ನು ಪಡೆಯುವ ಯೋಗ್ಯತೆಯುಂಟಾಗಿದೆ. ಅವರ ವಚನಗಳೆಲ್ಲವೂ ಹೃದಯದಿಂದ ಹೊರಹೊಮ್ಮಿದುದರಿಂದ ಭಾವಸಂಚಾರಕ ಶಕ್ತಿ ಸಹಜವಾಗಿ ಬಂದು ರಸರಮಣೀಯತೆಯನ್ನು ತಂದಿದೆ.

ಒಂದೆಡೆ ಬಸವಣ್ಣನವರು—

"ಅಯ್ಯರ ವಚನ ಪರುಷ ಕಂಡಯ್ಯ ನಂಬಲೊಡನೆ ನೀ ವಿಜಯ ಕಂಡಯ್ಯಾ ಸದಾಶಿವನೆಂಬ ಲಿಂಗವನರಿನೆನಂಬುವದು, ಅಧರಕ್ಕೆ ಕಹಿ, ಉದರಕ್ಕೆ ಸಿಹಿ ಕೂಡಲ ಸಂಗನ ಶರಣರ ವಚನ ಬೇವ ಸವಿದಂತೆ."

"ಹಾಲತೊರೆಗೆ ಬೆಲ್ಲದ ಕೆಸರು, ಸಕ್ಕರೆಯ ಮರಳು, ತವರಾಜದ ನೊರೆತೆರೆ ಯಂತೆ ಆದ್ಯರ ವಚನವಿರಲು ಬೇರೆ ಭಾವಿಯತೋಡಿ ಉಪ್ಪನೀರನುಂಬುವನ ವಿಧಿ ಯಂತೆ ಆಯಿತ್ತೆನ್ನ ಮತಿ ಕೂಡಲ ಸಂಗಮದೇವಾ."

ಎಂಬ ಈ ವಚನರಚನೆಯಲ್ಲಿ ಅದ್ಭುತಶಕ್ತಿ ಪ್ರವಾಹ ಹರಿದಿದೆ. ತವರಾಜದ ನೊರೆಯಂತೆ ನಿರ್ಮಲವಾಗಿದೆ. ಮನುಷ್ಯನ ಹೃದಯದಲ್ಲಿ ಈಶ್ವರಾಸಕ್ತಿಯ ಒಳ್ಳೇ ವಿಚಾರಗಳನ್ನು ತುಂಬಿ ದೇವರತ್ತ ಕರೆದೊಯ್ಯುವ ಭವ್ಯೋದ್ದೇಶ ತುಂಬಿದೆ.

"ಎನ್ನ ಕಾಯವ ದಂಡಿಗೆಯ ಮಾಡಯ್ಯ, ಎನ್ನ ಶಿರವ ಸೋರೆಯ ಮಾಡಯ್ಯ, ಎನ್ನ ನರವ ತಂತಿಯ ಮಾಡಯ್ಯ, ಎನ್ನ ಬೆರಳ ಕಡ್ಡಿಯ ಮಾಡಯ್ಯ

ಮೂವತ್ತೆರಡು ರಾಗವ ಹಾಡಯ್ಯ, ಉದರದಲೊತ್ತಿ ಬಾರಿಸು ಕೂಡಲಸಂಗಮದೇವಾ" ಎನ್ನುವ ಸುವರ್ಣಪರ್ಣ ಭಾವದ ನುಡಿ ಅಂಧಕಾರದಲ್ಲಿ ಮುಳುಗಿದವರನ್ನು ಎಚ್ಚರಿಸುತ್ತದೆ. ಒಂದೊಂದು ನುಡಿಯಲ್ಲಿ ಭಾವಸೌಷ್ಠವ, ಅರ್ಥಶಕ್ತಿಯ ಗಾಂಭೀರ್ಯ, ಕೂಡಲ ಸಂಗನಲ್ಲಿರುವ ಅಚಲ ನಿಷ್ಠೆ ಎದ್ದು ಕಾಣುತ್ತದೆ. ಕಂಗಳ ಕತ್ತಲೆ ಕಳೆದುಕೊಳ್ಳಲು ಕಾಯದ ಮೋಹವನ್ನು ದೂಡಲು ಸರ್ವಸ್ವವನ್ನೇ ಸೂರೆಗೊಂಡಂತಿದೆ. ಈ ವಚನದಲ್ಲಿ ಪ್ರತಿಶಬ್ದದಲ್ಲಿ ಗೂಢವಾದ ಅರ್ಥವು ವ್ಯಕ್ತವಾಗುವಂತೆ ಶಕ್ತಿ ತುಂಬಿದೆ. ಮಹಾತ್ಮ ಬಸವಣ್ಣನವರ ವಚನಗಳಲ್ಲಿ ಅನೇಕ ರೀತಿಯ ಆಗಿನ ಸಾಮಾಜಿಕ ಸ್ಥಿತಿಗತಿಗಳನ್ನು ಜೀವನದ ಅನುಭವಗಳನ್ನು ನಿರೂಪಿಸಿವೆ. ವಚನಗಳು ಜೀವನದ ನಾನಾ ಸಮಸ್ಯೆಗಳನ್ನು ಚರ್ಚಿಸಿ ನಿರ್ಣಯಕ್ಕೆ ತಂದಿವೆ. ತಿಳಿಭಾಷೆಯಲ್ಲಿಯೇ ಜನ ಸಾಮಾನ್ಯರನ್ನು ಉದ್ಧರಿಸಲು ಮಾರ್ಗದರ್ಶಕವಾಗಿವೆ. ಸುಖ ದುಃಖಗಳನ್ನೆಲ್ಲ ದೇವನಿಗರ್ಪಿಸಿ ಶಿವಸಾಕ್ಷಾತ್ಕಾರವನ್ನು ಪಡೆದ ಮಹಾ ಕಾರಣಿಕ ಪುರುಷ.

"ಎನ್ನ ಯೋಗಕ್ಷೇಮ ನಿಮ್ಮದಯ್ಯ, ಎನ್ನ ಹಾನಿವೃದ್ಧಿ ನಿಮ್ಮದಯ್ಯ, ಬಳ್ಳಿಗೆ ಕಾಯಿ ದಿಮ್ಮಿತ್ತೆ! ಕೂಡಲ ಸಂಗಮದೇವಾ" ಎಲ್ಲ ಭಾರವನ್ನು ಪರಮಾತ್ಮನಿಗೆ ಕೊಟ್ಟು ಹಿರಿಯ ವ್ಯಕ್ತಿತ್ವ ಪಡೆದ ಮಹಾಮಹಿಮ, ಮಹಾ ವಿಭೂತಿ.

ಸಾಹಿತ್ಯವು ಆನಂದಕ್ಕೂ ತತ್ವದ ಸಲುವಾಗಿಯೂ ಇದ್ದೇ ಇರುವುದೆಂಬ ವಾದವು ತಿಳಿದುಬರುತ್ತಿದೆ. ತತ್ವದ ಹಾಗೂ ಆನಂದದ ದೃಷ್ಟಿಯಿಂದ ಬಸವಣ್ಣನವರ ಸಾಹಿತ್ಯವು ಅತ್ಯಂತ ಶ್ರೇಷ್ಠವಾಗಿದೆ. ತಮ್ಮದೊಂದು ವಚನದಲ್ಲಿ—

ಮನಕ್ಕೆ ಮನ ಒಂದಾಗಿ ಧನಕ್ಕೆ ಧನವೊಂದಾಗಿ ನೆಚ್ಚಿದ ಮೆಚ್ಚು ಅಚ್ಚೊತ್ತಿದಂತಿರಬೇಕು. ಪ್ರಾಣಕ್ಕೆ ಪ್ರಾಣವೊಂದಾಗಿ ಶುಭಸೂಚನೆಯೊಂದಾಗಿರದ ನೆಚ್ಚು ಮೆಚ್ಚು ಪಾಲಪ್ಪುದುವವೇ? ಇಂತಪ್ಪ ಸಮಸ್ತ ವಸ್ತುವೆಲ್ಲವೂ ಪೋದರೇನು? ಚಿತ್ತ, ಮನ, ಬುದ್ಧಿಯೊಂದಾದ ಮೆಚ್ಚು ಬಿಚ್ಚಬೇಕಾಗಿದ್ದರೆ, ಮೆಚ್ಚುವ ನಮ್ಮ ಕೂಡಲ ಸಂಗಮದೇವಾ."

ನೂರನೋದಿ ನೂರ ಕೇಳಿದರೇನು, ಆಸೆ ಹರಿಯದು ರೋಷ ಬಿಡದು ಮಜ್ಜನಕ್ಕೆರೆದು ಫಲವೇನು? ಹೀಗೆ ಹಲವು ಬಗೆಯ ತತ್ವ ದೃಷ್ಟಿಯ ವಚನಗಳನ್ನು ಬಸವಣ್ಣನವರ ವಚನಸಾಗರದಲ್ಲಿ ಕಾಣಬಹುದು. ಪವಿತ್ರ ವಾಣಿಯಿಂದ, ಆತ್ಮಸ್ಫುರಣದಿಂದ ಲೋಕಕಲ್ಯಾಣಕ್ಕಾಗಿ ನುಡಿದ ವಚನಗಳು ಜೀವನದ ಎಲ್ಲ ಸಮಸ್ಯೆಗಳನ್ನು ಬಗೆಹರಿಸತಕ್ಕವುಗಳೆಂದು ಹೇಳಬಹುದು. ವೇದಾಗಮ ಉಪನಿಷತ್ತಿನ ಸಾರವನ್ನೇ ಸುಲಭವಾದ ಕನ್ನಡ ಭಾಷೆಯಲ್ಲಿ ಹೇಳಿ, ಮಾನವನ ಹೃದಯವು ಕರಗುವಂತೆ, ಕಲ್ಯಾಣದತ್ತ ಎಲ್ಲರೂ ಬರುವಂತೆ ಮಾಡಿ ಕಲ್ಯಾಣ ಮಾರ್ಗವನ್ನು ತೋರಿಸುವ ಆಧ್ಯಾತ್ಮಿಕ ಜ್ಯೋತಿಯಾಗಿದ್ದರು. ಬಸವಣ್ಣನವರು ಕೇವಲ ವಚನ

ರಚನೆಯಲ್ಲಿ ತೊಡಗವೆ ಅಂದು ಎಂದೆಂದೂ ಹಸಿದ ಜಗತ್ತಿಗೆ ಆವಶ್ಯಕವಾದ, ಸಮಾಜ ಸುಧಾರಣೆ, ಸ್ತ್ರೀ ಸುಧಾರಣೆ, ಅಸ್ಪೃಶ್ಯೋದ್ಧಾರ, ಧಾರ್ಮಿಕ ಸುಧಾರಣೆ ಮುಂತಾದವುಗಳಿಗಾಗಿ ಹಗಲಿರುಳೂ ಚಿಂತಿಸಿ ಕಾರ್ಯರೂಪಕ್ಕೆ ತಂದು ವೈಚಾರಿಕ ಕ್ರಾಂತಿಯನ್ನು ಮಾಡಿದರು.

ವೀರಶೈವ ಧರ್ಮವು ಕೇವಲ ವ್ಯಕ್ತಿ ವೈಶಿಷ್ಟ್ಯವನ್ನು ಸಾರುವದಕ್ಕಾಗಲಿ, ವ್ಯಕ್ತಿಯ ವಿಮುಕ್ತಿಯನ್ನು ಸಾಧಿಸುವದಕ್ಕಾಗಲಿ ಜನ್ಮ ತಾಳಲಿಲ್ಲ, ಪಾಂಡಿತ್ಯದ ಕೆಚ್ಚಿನಿಂದ ಒಂದು ಗಹನ ತತ್ವವನ್ನು ಪ್ರತಿಪಾದಿಸಿ ಜನತೆಯನ್ನು ದಂಗುಗೊಳಿಸು ವದಕ್ಕೂ ಪ್ರಯತ್ನಿಸಲಿಲ್ಲ, ಬಸವಣ್ಣನವರೇ ಆದಿಯಾಗಿ ವೀರಶೈವ ಧರ್ಮ ಪ್ರತಿಪಾದಿತರು ಜನತೆಯಿಂದ ಬಹಳ ಎತ್ತರದಲ್ಲಿ ನಿಂತು ಜನಸಾಮಾನ್ಯರನ್ನು ಕಡೆಗಣ್ಣಿನಿಂದ ಕಾಣುವ ಮಹಾನುಭಾವತ್ವವನ್ನು ಮೆರೆಸಲಿಲ್ಲ, ತಮ್ಮ ಆಧ್ಯಾತ್ಮಿಕ ಸಾಧನೆಯಿಂದ ಯಾವ ಆನಂದ ನೈರ್ಮಲ್ಯ ಶಾಂತಿಗಳನ್ನು ದೊರಕಿಸಿಕೊಂಡಿ ದ್ದರೋ ಅದರ ಲಾಭ ಎಲ್ಲರಿಗೂ ದೊರೆಯಬೇಕೆಂದು ಬಯಸಿದರು. ತಮ್ಮ ಜೀವನ ಹಸನಾದಂತೆ ನಾಡಿನವರೆಲ್ಲರ ಜೀವನವೂ ಹಸನಾಗಬೇಕು. ಲೋಕವೆಲ್ಲ ಒಂದು ಧರ್ಮದ ಶ್ವೇತಛತ್ರದ ಕೆಳಗೆ ಗೆಳೆಯರಂತೆ, ಸಹೋದರರಂತೆ ಬಾಳಿ ಬದುಕಬೇಕೆಂಬುದೇ ಅವರ ಹಿರಿಯಾಶೆಯಾಗಿತ್ತು. ಬಾಳುವೆಯನ್ನು ಮರೆತು ಸದಾ ಪರಲೋಕ ಚಿಂತೆಯಲ್ಲಿರುವದು ನಿರರ್ಥಕವಾದುದೆಂದು ಬಗೆದಿದ್ದರು. ಇಹ ಪರಲೋಕಗಳನ್ನು ಎರಡು ಜಗತ್ತುಗಳನ್ನಾಗಿ ವಿಭಾಗಿಸಿವೆ "ಮರ್ತ್ಯಲೋಕ ವೆಂಬುದು ಕರ್ತಾರನ ಕಮ್ಮಟವಯ್ಯ ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರು, ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯಾ," ಎಂದುಸುರಿ ಒಂದು ಮತ್ತೊಂದರ ಪೂರಕವೆಂದು ಭಾವಿಸಿದ್ದರು. ಮುಂದಿನ ಲೋಕಕ್ಕೆ ಹೋಗಿ ಬಾಳುವೆ ಮಾಡುವ ದೆಂದರೆ ಈ ಲೋಕದ ಜೀವನವನ್ನು ಮುಂದುವರಿಸಿದಂತಲ್ಲದೆ ಬೇರೆಯಲ್ಲವೆಂಬು ದನ್ನು ಸಾರಿದರು. ಇಹಲೋಕದ ಕುಂದು ಕೊರತೆಗಳನ್ನು ಅಪೂರ್ಣವಾದ ಆಶೆಗಳನ್ನು ಪೂರೈಸುವದಕ್ಕೆ ಮುಂದಿನ ಲೋಕ ಒಂದಿದೆ ಎಂದು ಭಾವಿಸುವ ಮಾಯಾಸಿರಸವನ್ನು ಮಾಡಲೆತ್ನಿಸಲು ವೀರಶೈವ ಮತೋದ್ಧಾರಕರಾದ ಮಹಾತ್ಮ ಬಸವಣ್ಣನವರು ವೀರಶೈವ ಸಿದ್ಧಾಂತದಲ್ಲಿ ಅಡಗಿದ್ದ ಭಕ್ತಿ ಜ್ಞಾನ ವೈರಾಗ್ಯಗಳ ತ್ರಿವೇಣಿಸಂಗಮಕ್ಕೆ ಒಂದು ಶಾಶ್ವತ ನಿಲವನ್ನು ಕೊಡಲು ಶಿವಾನುಭವ ಮಂಟಪವನ್ನು ಸಂಸ್ಥಾಪಿಸಿದರು.

ಅಂದು ಶಿವಾನುಭವ ಮಂಟಪ ಸಂಸ್ಥಾಪಿಸಿದ್ದುದರಿಂದಲೇ ಇಂದಿಗೂ ಮಾನವಕುಲಕ್ಕೆ ಚೇತನ ಶಕ್ತಿ ನೀಡಿರುವದಲ್ಲದೆ ವೀರಶೈವ ಸಮಾಜದ ಹೆಗ್ಗುರುತು ಇನ್ನೂ ಉಳಿದಿದೆ.

ಷಟ್‌ಸ್ಥಲ ಸಿದ್ಧಾಂತದ ಮೂಲಕ ಈ ಶಿವಾನುಭವದ ಮಂಟಪವು ಕರ್ಮ

ಹಾದ ಬೇರುಗಳನ್ನೆಲ್ಲ ಸಡಿಲಿಸಿಬಿಟ್ಟಿತು. ಲಿಂಗದೀಕ್ಷೆಯ ಮೂಲಕವಾಗಿ ತನ್ನ ಧರ್ಮದ್ವಾರವನ್ನು ಎಲ್ಲ ಜಾತಿ ಸ್ತ್ರೀ ಪುರುಷರಿಗೆ ತೆರೆದಿಟ್ಟಿತು. ಅದರಿಂದ ಹಿಂದೂ ಸಮಾಜದ ಜೀವನದಲ್ಲಿ ಅತಿ ದೊಡ್ಡ ಕ್ರಾಂತಿಯನ್ನುಂಟು ಮಾಡಿತೆಂದು ಹೇಳ ಬಹುದು. ಇದರಿಂದ ಬಂಧು ಭಾವನೆಯೂ, ಭಗಿನಿ ಭಾವನೆಯೂ ಬೆಳೆಯುವ ದಲ್ಲಿದೆ. ಸ್ತ್ರೀಯರಿಗೆ ಪುರುಷರಂತೆ ಸಮಾನ ಹಕ್ಕುಗಳು ದೊರೆತವು. "ಗಡ್ಡ ಮೀಸೆ ಬಂದರೆ ಗಂಡೆಂಬರು ಮೊಲೆ ಮುಡಿ ಬಂದರೆ ಹೆಣ್ಣೆಂಬರು ನಡುವೆ ಸುಳಿವಾತ್ಮ ಹೆಣ್ಣೂ ಅಲ್ಲ ಗಂಡೂ ಅಲ್ಲ" ಎನ್ನುವ ಸ್ವಾರಸ್ಯಮಯ ವಿಚಾರವನ್ನು ನಿವೇದಿ ಸಿತು ಮತ್ತು ಧಾರ್ಮಿಕ ಸಾಮಾಜಿಕ ವಿಷಯಗಳಲ್ಲಿ ಪ್ರತಿಯೊಂದು ವ್ಯಕ್ತಿಗೆ ಸಂಪೂರ್ಣ ಸ್ವಾತಂತ್ರ್ಯ ಸಿಕ್ಕಿತು, ಶಿವಾನುಭವ ಮಂಟಪವು ಒಂದೇ ಜನ್ಮದಲ್ಲಿ ಮುಕ್ತಿಯನ್ನು ಹೊಂದಲು ಶಕ್ಯವಿದೆಯೆಂದು ತೋರಿಸಿಕೊಟ್ಟಿತು.

ಪ್ರಾರಬ್ಧ ಕರ್ಮವನ್ನು ಸಹ ಪ್ರಸಾದ ರೂಪವಾಗಿ ಹೇಗೆ ಭೋಗಿಸ ಬೇಕೆಂಬುದಕ್ಕೆ ಬಸವಣ್ಣನವರ ನುಡಿಯಲ್ಲಿಯೇ ಕೇಳೋಣ.

"ಪಂಡಿತನಾಗಲಿ, ಮೂರ್ಖನಾಗಲಿ ಸಂಚಿತ ಕರ್ಮ ಉಂಡಲ್ಲದೆ ಬಿಡದು, ಪ್ರಾರಬ್ಧ ಭೋಗಿಸಿದಲ್ಲದೆ ಹೋಗದೆಂದು ಶೃತಿಸಾರುತ್ತಿದಾವೆ ನೋಡಾ." ತಾನಾವ ಲೋಕದೊಳಗಿದ್ದೊಡೆಯೂ ಬಿಡದು ಕರ್ಮ, ಕರ್ಮಫಲಗೂಡಿ ಕೂಡಲ ಸಂಗವು ದೇವರಿಗ ಆತ್ಮ ನೈವೇದ್ಯ ಮಾಡಿದಾತನೇ ಧನ್ಯನು, ಆತ್ಮಾನುಭವದ ಅಮರ ಸಂದೇಶವನ್ನು ನೀಡಿದರು.

ಶಿವಾನುಭವ ಮಂಟಪವು ಆಧ್ಯಾತ್ಮಿಕ ವಿಷಯದಲ್ಲಿ ಸ್ತ್ರೀಯರು ಯಾವ ರೀತಿಯಿಂದಲೂ ಕಡಿಮೆಯುವರಲ್ಲವೆಂದು ತೋರಿಸಿಕೊಟ್ಟಿದ್ದಕ್ಕಾಗಿ ಸ್ತ್ರೀಯರ ಉನ್ನತಿ ವಿಲಕ್ಷಣವಾಗಿ ಆಯಿತೆಂದು ಹೇಳಬಹುದು. ಈ ಅನುಭವಮಂಟಪದ ವಿದ್ಯುತ್ ಶಕ್ತಿಯ ಆಗರದಲ್ಲಿ ಹುಟ್ಟಿದ ಶಕ್ತಿಯ ಮೂಲಕ ಇಡೀ ಸಮಾಜದಲ್ಲಿ ಒಂದು ತರಹದ ಹೊಸಜೀವ, ಹೊಸಬೆಳಕು, ಹೊಸತೇಜಸ್ಸು ಮಿಂಚತೊಡಗಿತು. ಇದು ಕನ್ನಡ ವಾಙ್ಮಯದಲ್ಲಿ ಒನೂತನ ಜೀವಕಳೆಯನ್ನು ತಂದುಕೊಟ್ಟಿತು.

ಪ್ರತಿಯೊಬ್ಬರೂ ಯಾವದಾದರೊಂದು ಕಾಯಕವನ್ನು ಮಾಡಲೇಬೇಕೆಂದು ಕಟ್ಟು ನಿಟ್ಟಾಗಿ ಮಾಡಿ "ಕಾಯಕವೇ ಕೈಲಾಸ" ಎಂದು ಉದ್ಯೋಗದ ಗೌರವವನ್ನು ಬೆಳೆಯಿಸಿತು. ತೋರಲಿಕ್ಕೆ ಎಷ್ಟು ಕೀಳು ಕೆಲಸವಾದರೂ, ಅದು ಈಶ ಸೇವೆ, ಮಾನವ ಸೇವೆಯ ದೃಷ್ಟಿಯಿಂದ ಮಾಡಲ್ಪಡಲಿರುವ ಉದ್ಯೋಗವೆಲ್ಲವೂ ಪವಿತ್ರ ವೆಂಬ ಭಾವನೆಯನ್ನು ಹುಟ್ಟಿಸಿತು. ಜ್ಞಾನ ಭಕ್ತಿ ಮತ್ತು ಕರ್ಮ ಈ ಮೂರರೊಳಗೆ ಯಾವದು ಹೆಚ್ಚಿನದೆಂಬುವ ವಾದವನ್ನು ನಿಲ್ಲಿಸಿಬಿಟ್ಟಿತು ಮತ್ತು ಅವು ಮೂರು ಸಮವಾಗಿಯೇ ಮಹತ್ವದವುಗಳೆಂಬುದನ್ನು ತಿಳಿಸಿಹೇಳಿತು. ಗುರುಲಿಂಗ ಜಂಗಮ

ಗಳೆಂಬುವೇ ಇದರ ಬಾಹ್ಯ ಕುರುಹುಗಳು ಎಂದು ತತ್ವಯುತ ಅನುಭವ ಪೂರ್ಣ ವಿಚಾರದೊಡನೆ ನಿರ್ಧರಿಸಿತು.

ಈ ರೀತಿಯಾಗಿ "ವಿವಿಧ ಅನುಭವಪುಷ್ಪಗಳಿಂದ ಶೋಭಿಸುವ ಪ್ರದರ್ಶನ ಮಂದಿರವಂತಿತ್ತು ಈ ಶಿವಾನುಭವಮಂಟಪ, ಈ ಹೂದೋಟದಲ್ಲಿ ದೇಶದಲ್ಲಿ ತುಂಬಿರುವ ಸಕಲ ತರಹದ ಅನುಭವದ ಹೂವಿನಗಿಡಗಳು ಸಂಗ್ರಹಿಸಲ್ಪಟ್ಟಿದ್ದವು. ಒಂದೊಂದು ಹೂವಿಗೆ ಒಂದೊಂದು ಸೌಂದರ್ಯ ಒಂದೊಂದು ತರಹದ ವಾಸನೆ. ಈ ಅನುಭವ ಮಂಟಪದಲ್ಲಿ ಶಿವಾನುಭವ ಪುಷ್ಪಗಳು ಬಹು ಕಮನೀಯವಾಗಿ ಶೋಭಿಸುತ್ತಿದ್ದವೆಂದು" ಹೇಳಬಹುದು.

ಇಂತು ೮೦೦ ವರ್ಷಗಳ ಪೂರ್ವದಲ್ಲಿಯೇ ಮಹಾತ್ಮಾ ಬಸವಣ್ಣನವರು ಅಸಾಧಾರಣವಾದದ್ದನ್ನು ಸಾಧಿಸಿ ಅನುಭವ ಮಂಟಪದ ಮೂಲಕ ಮಹಾಕ್ರಾಂತಿ ಯನ್ನು ಸ್ವಲ್ಪೇ ದಿನಗಳಲ್ಲಿಯೇ ಮಾಡಿದ್ದು ನೋಡಿದರೆ ಅಚ್ಚರಿಯಾಗದೇ ಇರದು.

೧೯೬೭ ರಂದು ಬಸವಕಲ್ಯಾಣದಲ್ಲಿ ಜರುಗಿದ ಶ್ರೀ ಬಸವೇಶ್ವರರ ಎಂಟನೆಯ ಶತಮಾನೋತ್ಸವ ಶುಭ ಸಮಯದಲ್ಲಿ ಅಪ್ಪಣೆಕೊಡಿಸಿದ ಆಶೀರ್ವಚನ.

ಅವಿಭಕ್ತಂ ವಿಭಕ್ತೇಷು

ಭಾರತವು ವೈವಿಧ್ಯಮಯವಾಗಿರುವಂತೆ ಭಾವೈಕ್ಯತೆಯನ್ನು ಹೊಂದಿರುವ ಸುಂದರ ದೇಶ. ಜಗತ್ತಿನಲ್ಲಿ ಭಿನ್ನ ಭಿನ್ನ ರುಚಿ, ಭಾಷೆ ಗುಣ ವಿಶೇಷಗಳ ತಾಕಲಾಟ ಕಂಡುಬಂದರೂ ವಿಶ್ವಜೀವನವೂ ಪರಮಾತ್ಮನ ಲೀಲೆಯಾಗಿ, ಪರಂಪರಾನುಗತವಾಗಿ ಒಂದು ಕುಟುಂಬದಂತೆ ನಡೆದುಕೊಂಡು ಬಂದಿರುವುದನ್ನು ನಾವು ಕಾಣುತ್ತೇವೆ. ಅಂತೆಯೇ ಭಾರತದಲ್ಲಿಯೂ ಅದರ ಅಂಶಗಳನ್ನು ಕಾಣಬಹುದು. ಭಗವದ್ಗೀತೆಯಲ್ಲಿ ಒಂದು ಮಾತು ಬರುತ್ತದೆ.

ಅವಿಭಕ್ತಂಚ ಭೂತೇಷು ವಿಭಕ್ತಮಿವ ಚಸ್ಥಿತಂ।
ಭೂತ ಭರ್ತೃಂಚ ತಜ್ಞೇಯಾ ಗ್ರಸಿಷ್ಣು ಪ್ರಭವಿಷ್ಣು ಚ॥

ಪರಬ್ರಹ್ಮ ಸ್ವರೂಪವೂ ಸುತ್ತೆಲ್ಲವೂ ತುಂಬಿದೆ. ಅದು ಎಲ್ಲೆಡೆಯಲ್ಲಿಯೂ ತನ್ನ ಕೈ ಕಾಲು, ತಲೆ, ಕಣ್ಣು, ಮುಖಗಳನ್ನು ಹರಡಿದೆ. ಜ್ಞೇಯವಾದ ಪರಬ್ರಹ್ಮವು ಎಲ್ಲ ಇಂದ್ರಿಯ ವ್ಯಾಪಾರಗಳಿಂದ, ವ್ಯಾಪಾರವುಳ್ಳ ವಸ್ತುವಿನಂತೆ ಕಂಡರೂ ಅದು ಇಂದ್ರಿಯ ವ್ಯಾಪಾರಕ್ಕೆ ಅಂಟಿಕೊಂಡಿಲ್ಲ. ಸುಖದುಃಖಾದಿಗಳನ್ನು ಅನುಭವಿಸುತ್ತಿದ್ದರೂ ಅದು ನಿಗರ್ವಿಕ. ಎಲ್ಲ ಪ್ರಾಣಿಗಳೊಳಗೂ ಅದು ಜ್ಯೋತಿಗಳಿಗೆ ಜ್ಯೋತಿ. ಕತ್ತಲೆನ ಆಚೆಗಿದೆ. ಅದೇ ಜ್ಞಾನ ಜ್ಞಾನಗಮ್ಯ ಜ್ಞೇಯವೆನಿಸಿ ಸಮಸ್ತರ ಹೃದಯದಲ್ಲಿ ಸುಸ್ಥಿರವಾಗಿರುವ ಪರಮಾತ್ಮನ ದರ್ಶನ ಪಡೆಯಲು, ಅಹೋರಾತ್ರಿ ಕಷ್ಟಪಡಬೇಕಾಗುವಂತೆ; ಭಾರತವನ್ನು ವಿವಿಧ ಶಕ್ತಿಗಳಿಂದ ನಿಯಮಗೊಳಿಸಬೇಕಾಗುತ್ತದೆ. Unity in diversity ಎಂದರೆ ವಿವಿಧತೆಯಲ್ಲಿ ಏಕತ್ವತಂದು, ಭಾವೈಕ್ಯದಲ್ಲಿ ಮುಂದು ರಾಷ್ಟ್ರಶಕ್ತಿಯನ್ನು ಹೆಚ್ಚಿಸಬೇಕಾಗುತ್ತದೆ.

ಭಾರತದ ಇಂದಿನ ಪರಿಸ್ಥಿತಿಯನ್ನು ಕಂಡು ರಾಜಕೀಯ ಸಾಮಾಜಿಕ; ಹಾಗೂ ಆರ್ಥಿಕ ರಂಗದಲ್ಲಿ ಮುಂಚೂಣಿಯಲ್ಲಿ ನಿಂತು ನಡೆಯುವವರಿಗೆ ಒಂದು ಬಗೆಯ ಅಧೀರತೆ ಕಂಡುಬರುತ್ತದೆ. ಎಲ್ಲಿ ನೋಡಿದಲ್ಲಿ ಅಜ್ಞಾನ, ರೋಗ ರುಜಿನ, ಉಪವಾಸ ವನವಾಸದಿಂದಾಗಿ ದಂಗೆಗಳು, ಮಾತ್ರ ಜಾತೀಯ ಗಲಭೆಗಳನ್ನು ಕಂಡು ರಾಷ್ಟ್ರದ ಗೃಹಮಂತ್ರಿ ಶ್ರೀ ಚವ್ಹಾಣರು "ಭೇದ ನೀತಿ ಹಾಗೂ ಜಾತೀಯತೆಗಳೇ ನಮ್ಮ ಜನಜೀವನವನ್ನು ಹಿಡಿದು ಹಿಂಡುವುದಾದರೆ ನಮ್ಮ ರಾಷ್ಟ್ರದ ಸ್ವಾತಂತ್ರ್ಯ ಮತ್ತು ಪ್ರಜಾ ಪ್ರಭುತ್ವಗಳು ತೀವ್ರ ಮುಕ್ಕಾಗಿ ಹೋಗುವವು. ಆಂತರಿಕ ಭಿನ್ನ ಭೇದಗಳು ರಾಷ್ಟ್ರವನ್ನು ದುರ್ಬಲಗೊಳಿಸುತ್ತವೆ" ಎಂದು ಹೇಳಿರುವ ಮಾತು ಗಮನಾರ್ಹವಾಗಿದೆ.

ಮಹಾಭಾರತದಲ್ಲಿಯು ಒಂದು ಮಾತು ನಮ್ಮ ನೆನಪಿಗೆ ಬರುತ್ತದೆ. ಕೌರವರು ಪಾಂಡವರು ದಾಯಾದಿ ಯುದ್ಧದಲ್ಲಿ ತೊಡಗಿದವರು ಅವರ ಮನೋಭಾವನೆಗಳು ಹೇಗಿದ್ದವು? ಧರ್ಮರಾಜನು ಹೇಳುತ್ತಾನೆ— ಪರರಾಜರ ದಾಳಿ ನಮ್ಮ ಮೇಲಾದಾಗ ನಾವು ನೂರಾ ಆರು ಜನ ಅಂದರೆ ಕೌರವರು ಮತ್ತು ಐವರು ಪಾಂಡವರು ನಾವೆಲ್ಲ ಒಂದಾಗಿ ಹೋರಾಡುವೆವು ಎಂದು. ಅದೇ ಘಟನೆ ಭಾರತದ ತುರ್ತು ಪರಿಸ್ಥಿತಿಯಲ್ಲಿ ದೃಗ್ಗೋಚರವಾಯಿತು ಭಾರತೀಯರು ಅನೇಕ ಭಾಷೆ ಪ್ರಾಂತಗಳಿಂದ ವಿಂಗಡಿಸಲ್ಪಟ್ಟಿದ್ದರೂ ಅವರು ಒಂದು ಎಂಬ ದಿವ್ಯ ತತ್ವವನ್ನು ಜಗತ್ತಿಗೆ ಬಹು ಮಾರ್ಮಿಕ ರೀತಿಯಲ್ಲಿ ಆ ಪರಿಸ್ಥಿತಿಯಲ್ಲಿ ತೋರಿಸಿ ಕೊಟ್ಟರು. ಈ ಭಾವೈಕ್ಯತೆ ಭಾರತೀಯ ಸರ್ವೋದಯಕ್ಕೆ ದಾರಿದೀಪ. ಹಿಂದುಸ್ತಾನದಲ್ಲಿ ಸಕಲ ಜಾತಿ ಮತ ಪಂಥಗಳು ಒಂದೆಂಬ ಭಾವನೆ ಬೆಳೆದು ರಾಷ್ಟ್ರೀಯ ಭಾವೈಕ್ಯತೆಗೆ ಹಾದಿ ಮಾಡಿ ಕೊಟ್ಟಿವೆಯೆಂದು ಧಾರಾಳವಾಗಿ ಹೇಳಬಹುದು.

ಜಗತ್ತಿನ ಜನಜೀವನವೇ ಇಂದು ಹಲವಾರು ಜಟಿಲ ಸಮಸ್ಯೆಗಳನ್ನು ಎದುರಿಸುತ್ತಿದೆ. ಅಮೇರಿಕನ್ನರಿಗೆ ವಿಯಟ್ನಾಮದ ಸಮಸ್ಯೆ, ಇಜಿಪ್ತದವರಿಗೆ ಇಸ್ರೇಲಿಯಗಳ ಸಮಸ್ಯೆ, ರಶಿಯಕ್ಕೆ ಚೀನದ ಆಗುಹೋಗುಗಳ ಸಮಸ್ಯೆ, ಮುಂದುವರಿದ ರಾಷ್ಟ್ರಗಳಿಗೆ ಹಿಂದುಳಿದ ರಾಷ್ಟ್ರಗಳ ಸಮಸ್ಯೆ, ಹೀಗೆ ಹಲವಾರು ಸಮಸ್ಯೆಗಳು ಜಾಗತಿಕ ರಾಜಕೀಯ, ಸಾಮಾಜಿಕ ಹಾಗೂ ಆರ್ಥಿಕ ರಂಗಗಳಲ್ಲಿ ತಲೆ ಎತ್ತಿ ನಿಂತಿರುವಾಗ ಭಾರತವು ಈ ಲೋಕ ವ್ಯವಹಾರದಲ್ಲಿ ತನ್ನ ಹಾದಿಯನ್ನು ಸುಗಮಮಾಡಿಕೊಂಡು ನಡೆಯಬೇಕಾದರೆ ತನ್ನ ಮೈ ಮನಗಳನ್ನು ಪರಿಶುದ್ಧವಾಗಿಟ್ಟುಕೊಳ್ಳಬೇಕೆಂಬುದನ್ನು ನಾವೆಲ್ಲರೂ ಗಮನಿಸಬೇಕು. ಶಾಲಾ ಶಿಕ್ಷಕನಂತೆ ಇದನ್ನು ಮಾಡಬೇಕು. ಅದನ್ನು ಬಿಡಬೇಕು ಎಂದು ಹೇಳಲಾಗುವದಿಲ್ಲ. ಮಾನವ ಘಟನೆಗಳು ನಡೆಯುವಾಗ ರಾಜಕೀಯ ಓರೆ ಕೋರೆಗಳನ್ನು ಬಿಡಬೇಕು. ಈ ಜಗತ್ತಿನ ಸ್ವಾಭಾವಿಕ ಶಕ್ತಿಗಳಿಗೆ ತಲೆ ಬಾಗಿ ದೈವ ಪರಮಾತ್ಮ ಭಾವನೆಗೆ ಅಸ್ತು ಎಂದು ನಡೆಯಬೇಕೆಂದು ರಾಜಕೀಯ ಪರಿಣಿತರೇ ಹೇಳುತ್ತಾರೆ. ಕನ್ನಡದ ಆಧ್ಯಾತ್ಮ ಕವಿಗಳೊಬ್ಬರು ತಮ್ಮದೊಂದು ಪದ್ಯದಲ್ಲಿ ಹೀಗೆ ಉಸುರಿದ್ದಾರೆ.

> ಯಾವುದೇನೇ ಇರಲಿ ಪ್ರೀತಿಯಂತಹ ವಸ್ತು
> ಜಗದಲ್ಲಿ ಕಾಣೆ, ಮನಗಂಡ ಮಾತು.

ಈ ಜಾಡು ಹಿಡಿದ ಜಗತ್ತನ್ನು ಪ್ರೀತಿಸಲು ಹೊರಟವರು ಭಾರತೀಯರು. ನಮ್ಮ ಪ್ರಥಮ ಪ್ರಧಾನಿ ದಿವಂಗತ ಜವಾಹರಲಾಲ ನೆಹರು ಅವರು. ನಾವು ಜಗತ್ತಿನ ಯಾವ ಬಣಕ್ಕೂ ಸೇರದವರು, ತಟಸ್ಥ ರಾಷ್ಟ್ರಗಳು ಎಲ್ಲಿಯೇ ಇರಲಿ,

ಯಾರೇ ಇರಲಿ, ಅವರೊಡನೆ ಇರಬಯಸುವವರು. ಅವರ ಕಷ್ಟ ಸುಖಗಳಲ್ಲಿ ಪಾಲುಗೊಳ್ಳುವೆವು ಎಂದು ಘೋಷಿಸಿದ ನುಡಿ ಅಚ್ಚೊತ್ತಿದಂತೆ ಇದೆ. ಭಾರತದ ಸ್ವಾತಂತ್ರ್ಯ ಸೂರ್ಯನು ಜಗತ್ತಿನಲ್ಲಿ ದೇದೀಪ್ಯಮಾನನಾಗಿ ಬೆಳಗುತ್ತಿದ್ದರೆ ಈ ಧ್ಯೇಯ ಧೋರಣೆಯಿಂದ ನಮ್ಮ ಪ್ರಜಾಪ್ರಭುತ್ವದ ಪ್ರವೃತ್ತಿ ಇದು. ಅದು ನಮ್ಮ ಶಕ್ತಿ ಸಾಹಸಕ್ಕೆ ಮಹತ್ತರ ದಾರಿ ದೀಪವೆನಿಸಿದೆ.

ಭಾರತದಲ್ಲಿ ಅನೇಕ ಭಾಷೆಗಳಿವೆ. ರಾಷ್ಟ್ರಭಾಷೆ ಯಾವುದಾಗಿರಬೇಕು? ಎಂಬ ಬಗ್ಗೆ ಇತ್ತೀಚೆಗೆ ಪ್ರಬಲವಾದ ಚರ್ವಿತ ಚರ್ವಣ ನಡೆದಿದೆ. ಬೋಧ ಭಾಷೆ ಯಾವುದಾಗಿರಬೇಕು ಎಂಬ ಪ್ರಶ್ನೆಯೂ ತಲೆಯೆತ್ತಿದೆ. ಇಂಥ ಸಮಯ ದಲ್ಲಿ ರಾಷ್ಟ್ರವಿರೋಧೀ ಪ್ರವೃತ್ತಿಗಳನ್ನು ಸಾರ್ವಜನಿಕ ಹಿತದ ದೃಷ್ಟಿಯಿಂದ ಹತ್ತಿಕ್ಕ ಬೇಕಾಗುತ್ತದೆ.

ಭಾರತದ ಭಾಷೈಕ್ಯತೆಯನ್ನು ಸಾಧಿಸುವಲ್ಲಿ ಸರ್ವಧರ್ಮ ಸಮನ್ವಯ ತತ್ವಗಳನ್ನು ಅನುಸರಿಸಬೇಕು. ವಿಜ್ಞಾನದ ಸಂಶೋಧನೆಗಳು ಜಾಣ್ಮೆಯಿಂದ ಜಿಜ್ಞಾಸುಗಳ ಅನುಭವಾಮೃತಕ್ಕೆ ಮಾರು ಹೋಗಬೇಕೆ ವಿನಃ ಸ್ವೈರ ಪ್ರವೃತ್ತಿ ಗಿಳಿಯಬಾರದು. ನಮ್ಮ ರಾಷ್ಟ್ರದಲ್ಲಿ ತಾಂತ್ರಿಕ ಕ್ರಾಂತಿಯಾಗಬೇಕು. ನಮ್ಮ ವ್ಯಾಪಾರೋದ್ಯಮಗಳು ಬೆಳೆಯಬೇಕು. ಒಕ್ಕಲತನ ಉತ್ಪಾದನೆ ಹೆಚ್ಚಬೇಕು. ಇವೆಲ್ಲ ಆಗಬೇಕಾದ ಕೆಲಸಗಳೇ ಎಂಬ ಮಾತಿನಲ್ಲಿ ಭಿನ್ನಾಭಿಪ್ರಾಯವೇ ಇಲ್ಲ. ಇವೆಲ್ಲ ನೀತಿಯ ನೆಲಗಟ್ಟಿನ ಮೇಲೆ ನಡೆಯಬೇಕು.

ಶಿವಶರಣೆ ವಿರತಿ ಶಿಖಾಮಣಿ ಅಕ್ಕಮಹಾದೇವಿ ಪರಮಾತ್ಮನ ಇರವನ್ನು ಕುರಿತು— "ನೆಲದಮರೆಯ ನಿಧಾನದಂತೆ, ಶಿಲೆಯ ಮರೆಯ ಹೇಮದಂತೆ, ತಿಲದ ಮರೆಯ ತೈಲದಂತೆ" ಎಂದು ಚನ್ನಮಲ್ಲಿಕಾರ್ಜುನನ ಇರವನ್ನು ಹೇಳಿರು ವಳು. ಜಗತ್ತಿನ ಲೀಲಾ ಜಾಲದಲ್ಲಿ ಪರಮಾತ್ಮನು ಇದ್ದೂ ಇಲ್ಲದಂತೆ, ತೋರಿಸಿ ಕೊಳ್ಳುವಂತೆಯೇ ನಾವು ಈ ಜಗತ್ತಿನ ವ್ಯಾಪಾರವನ್ನು ವೀಕ್ಷಿಸಬೇಕು. ಪರಾ ಮರ್ಶಿಸಿಕೊಂಡು ಒಳ್ಳೆಯ ಮಾರ್ಗದಲ್ಲಿ ನಡೆಯಬೇಕು.

ಇಂದು ಭಾರತೀಯರಲ್ಲಿ ಈ ಆತ್ಮಶಕ್ತಿ ಪ್ರಭೆಯು ಪ್ರಕಾಶಿಸಬೇಕಾಗಿದೆ. ಅಂದರೆ ಭಾರತ ಪುರುಷನು ಜಾಗ್ರತನಾಗುತ್ತಾನೆ. ಭಾರತದಲ್ಲಿ ವಿವಿಧ ಭಾಷೆ ವಿವಿಧ ವಿಚಾರ, ಮತ, ಭಾವ ಭೂಮಿಕೆಗಳ ಜಟಿಲತೆ ತುಂಬಿದ್ದರೂ "ವಂದೇ ಮಾತರಂ" ನಾವೆಲ್ಲ ಭಾರತಮಾತೆಯ ಮಕ್ಕಳು ಎಂಬ ಭಾವನೆ ಬೇರೂರಿದ್ದ ರಿಂದಲೇ ಭಾರತವು ನವಚೈತನ್ಯದಿಂದ ತುಂಬಿ ತುಳುಕುತ್ತಿದೆ. ಪ್ರಧಾನ ಮಂತ್ರಿ ಶ್ರೀಮತಿ ಇಂದಿರಾ ಗಾಂಧಿಯವರು ಮುಂಬೈಯಲ್ಲಿ ಈಚೆಗೆ ಮುತ್ತಿನಂತಹ ಮಾತೊಂದನ್ನು ಹೇಳಿದ್ದಾರೆ.

"ನಾವು ಪ್ರಗತಿ ಮತ್ತು ಸಂಪದಭಿವೃದ್ಧಿಯ ಗುರಿ ಇಟ್ಟುಕೊಂಡು ಹಗಲಿಗೆ ಹಗಲು ಪಟ್ಟುಹಿಡಿದು ನಡೆಯಬೇಕು. ನಾವು ಆಗ ಬಲಶಾಲಿ ಸಂಪದಭಿವೃದ್ಧಿಯುಳ್ಳ ಭಾರತವನ್ನು ಕಂಡು ಎಲ್ಲ ಸಮಸ್ಯೆ ದುಃಖ-ದುಮ್ಮಾನಗಳನ್ನು ಜಯಿಸಬಲ್ಲೆವು."

ಮಹಾತ್ಮಾಗಾಂಧೀಜಿಯವರು ಮತ್ತೊಂದೆಡೆಯಲ್ಲಿ ಭಾರತದ ವೈವಿಧ್ಯಮಯದ ಏಕತ್ವವನ್ನು ಕಂಡು— "ರಾಷ್ಟ್ರದ ತನ್ಮೂಲಕ ಮಾನವತೆಯ ಸೇವೆಗಾಗಿ ಎಡೆಬಿಡದೆ ದುಡಿಯುವವೇ ನನ್ನ ಮೋಕ್ಷ ಪಥ. ಜೀವ ಸಮಸ್ತದೊಂದಿಗೆ ಅನನ್ಯತೆಯನ್ನು ಸಾಧಿಸುವವೇ ನನ್ನ ಹೆಬ್ಬಯಕೆ" ಎಂದು ಮುಂತಾಗಿ ನುಡಿದು, ನುಡಿದಂತೆ ನಡೆದು ಅವರು ಮಹಾತ್ಮರಾದರು. ಅವರು ಬೋಧಿಸಿದ ಮಾರ್ಗದಲ್ಲಿ ಹೆಜ್ಜೆ ಹಾಕುವದು ನಮ್ಮೆಲ್ಲರ ಕರ್ತವ್ಯಕರ್ಮವೆನಿಸಿದೆ.

ಭಾರತದ ಪ್ರತಿಯೊಂದು ವ್ಯಕ್ತಿಯ ಭಾವ ಭೂಮಿಯು ಹಸನಾದರೆ ಮಾತ್ರ ವೈಭವದಿಂದ ಫಲವನ್ನು ಪಡೆಯಬಹುದು. ಅದಕ್ಕಾಗಿ ನಾನು ಭಾರತದ ವೈಭವವನ್ನು ರಕ್ಷಿಸಲು ಐಕ್ಯತೆಯೆಂಬ ಬೇಲಿಯನ್ನಿಟ್ಟು ಅನೇಕ ಪಕ್ಷ ಪಂಗಡಗಳೆಂಬ ಕಸವನ್ನು ಕಿತ್ತರೆ, ಆ ವೃಕ್ಷದ ಫಲದ ಸವಿಯನ್ನು ಅನುಭವಿಸುತ್ತೇವೆ. ಅನೇಕತ್ವದಲ್ಲಿ ಏಕತ್ವವನ್ನು ಕಾಣುತ್ತೇವೆ. ಆಗ ಭಾರತಮಾತೆಯು ಎಲ್ಲರನ್ನೂ ಪ್ರೀತಿಯಿಂದ ಎತ್ತಿಕೊಳ್ಳುತ್ತಾಳೆ.

ಪ್ರತಿಯೊಂದು ರಾಷ್ಟ್ರವೂ ಆತ್ಮಶಕ್ತಿಯ ಅಡಿಗಲ್ಲಿನ ಮೇಲೆ ನಿಂತರೆ ಮಾತ್ರ ಬಹುದಿನ ಬದುಕುವದು ಬಾಳಿ ಬೆಳಗುವದು. ನಾವು ಕಷ್ಟಪಟ್ಟು ಪ್ರಗತಿ ಸಾಧಿಸಿ ವೈಜ್ಞಾನಿಕ ಅದ್ಭುತ ಸಂಶೋಧನೆಗಳನ್ನು ಬಳಸಿಕೊಂಡು ಮುನ್ನಡೆದರೂ, ಆತ್ಮ ಸಂಶೋಧನೆ ಮಾಡಿಕೊಳ್ಳದಿದ್ದರೆ, ಆತ್ಮಶ್ರೀಯ ಸಮನ್ವಿತತೆಯನ್ನು ಸಾಧಿಸಿಕೊಳ್ಳದಿದ್ದರೆ, ರಸವಿಲ್ಲದ ಹಣ್ಣಿನಂತೆ ಸುಗಂಧವಿಲ್ಲದ ಹೂವಿನಂತೆ ನಮ್ಮ ಬಾಳು ನಿಸ್ಸತ್ವಮಯವಾಗುವದೆಂಬುದನ್ನು ಸ್ಮರಣೆಯಲ್ಲಿ ತರಬೇಕಾಗಿದೆ.

ಇಂದು ರಾಜಕೀಯ ಕ್ಷೇತ್ರದಲ್ಲಾಗಲಿ ಅಥವಾ ಧಾರ್ಮಿಕ, ಸಾಹಿತ್ಯಕ, ಸಾಮಾಜಿಕ ಕ್ಷೇತ್ರದಲ್ಲಾಗಲಿ ವಿವಿಧತೆಯಲ್ಲಿ ಏಕತ್ವ ಪಡೆದು ಭಾವೈಕ್ಯವನ್ನು ಕೃತಿಯಲ್ಲಿ ತಂದರೆ ಮಾತ್ರ ಭಾರತಕ್ಕೆ ಬಲ ಬಂದೀತು.

ಭಾರತೀಯರೆಲ್ಲರೂ ಭಾರತವೇ ನಮ್ಮ ಅಂತರಾತ್ಮ ಎಂದು ಬಗೆದು, ಭಾರತದ ಪ್ರಗತಿಯೇ ನಮ್ಮ ಪ್ರಗತಿ, ಭಾವೈಕ್ಯತೆಯೇ ನಮ್ಮ ಶಕ್ತಿಸಾಹಸದ ದ್ಯೋತಕ ಎಂದು ನಾಡಿ ನಾಡಿಯಲ್ಲಿ ಆಶಕ್ತಿ ಚಿಮ್ಮುವಂತೆ ನಡೆದುಕೊಳ್ಳುವ ಹೊಣೆಹೊತ್ತುಕೊಳ್ಳಬೇಕು.

---

೧. ೨೦-೧೦-೧೯೬೭ ರ ರಾಷ್ಟ್ರೀಯ ಭಾವೈಕ್ಯತೆಯ ದಿನದಂದು, ಅ. ಭಾ. ಆಕಾಶವಾಣಿ ಕೇಂದ್ರ (ಧಾರವಾಡ) ದ ಮೂಲಕ ಅಪ್ಪಣೆಕೊಡಿಸಿದ ಆಶೀರ್ವಚನ.

ಗೀತೆಯ ಒಳಗುಟ್ಟು

ಅವಿಭಕ್ತಂ ವಿಭಕ್ತೇಷು ವಿಭಕ್ತಮಿವ ಚ ಸ್ಥಿತಂ।
ಭೂತ ಭರ್ತೃ ಚ ತಜ್ಜ್ಞೇಯಂ ಗ್ರಸಿಷ್ಣು ಪ್ರಭವಿಷ್ಣು ಚ॥

ಪರಬ್ರಹ್ಮ ಸ್ವರೂಪವು ಸುತ್ತೆಲ್ಲವೂ ತುಂಬಿದೆ. ಅದು ಎಲ್ಲೆಡೆಯೂ ತನ್ನ ಕೈ, ಕಾಲು, ತಲೆ, ಕಣ್ಣು, ಮುಖಗಳನ್ನು ಹರಡಿದೆ. ಧ್ಯೇಯವಾದ ಪರಬ್ರಹ್ಮವು ಎಲ್ಲ ಇಂದ್ರಿಯ ವ್ಯಾಪಾರಗಳಿಂದ ವ್ಯಾಪಾರವುಳ್ಳ ವಸ್ತುವಿನಂತೆ ಕಂಡರೂ ಅದು ಇಂದ್ರಿಯ ವ್ಯಾಪಾರಕ್ಕೆ ಅಂಟಿಕೊಂಡಿಲ್ಲ. ಸುಖದುಃಖಾದಿಗಳನ್ನು ಅನುಭವಿಸುತ್ತಿದ್ದರೂ ಅದು ನಿರ್ಗುಣ. ಎಲ್ಲ ಪ್ರಾಣಿಗಳ ಒಳಗೂ, ಹೊರಗೂ ತುಂಬಿರುವದು. ಅಜ್ಞಾನಿಗಳು ಅದನ್ನು ಅರಿಯರು. ಅದು ಜ್ಯೋತಿಗಳಿಗೆ ಜ್ಯೋತಿ ಕತ್ತಲಿನ ಆಚೆಗೆ ಇದೆ. ಅದೇ ಜ್ಞಾನ, ಜ್ಞಾನಗಮ್ಯ, ಜ್ಞೇಯವೆನಿಸಿ ಸಮಸ್ತರ ಹೃದಯದಲ್ಲಿ ಸುಸ್ಥಿರವಾಗಿರುವದು.

ಇದು ಭಗವದ್ಗೀತೆಯ ದಿವ್ಯಸಂದೇಶ. ಭಾರತೀಯ ಜನಾಂಗಕ್ಕೆ ಸುಸಂಸ್ಕೃತ ಅಂತರ್ಮುಖಿ ವ್ಯಕ್ತಿಗಳಿಗೆ ಮಾರ್ಗದರ್ಶನ ಮಾಡಿ ಅವರ ಅಂತಃಶಕ್ತಿಯ ಬೆಳವಣಿಗೆಗೆ ಮತ್ತು ಅಧ್ಯಾತ್ಮ ಚಿಂತನೆಗೆ ದಾರಿದೀಪವಾಗಿದೆ,-ಭಗವದ್ಗೀತೆ. ಇದು ವಿಶ್ವಮಾನವ ಜೀವನಕ್ಕೆ ಆದರ್ಶವಾಗಿದೆ. ಭಾರತ ತತ್ವಶಾಸ್ತ್ರದ ಗಣಿಯಂತಿರುವ ಉಪನಿಷತ್ತುಗಳ ಸಾರಸಂಗ್ರಹವಿದೆ ಈ ಗೀತೆಯಲ್ಲಿ.

ಸರ್ವೋಪನಿಷದೋ ಗಾವೋ ದೋಗ್ಧಾ ಗೋಪಾಲನಂದನಃ।
ಪಾರ್ಥೋ ವತ್ಸಸ್ಸುಧೀರ್ಭೋಕ್ತಾ ದುಗ್ಧಂ ಗೀತಾಮೃತಂ ಮಹತ್॥

ಗೀತೆ ಉಪನಿಷದ್ಧೇನುಗಳ ದುಗ್ಧಾಮೃತವಾದರೆ, ಶ್ರೀಕೃಷ್ಣನೇ ದೋಗ್ಧಾ, ಅರ್ಜುನನೇ ವತ್ಸ, ಗೀತಾರ್ಥವೇ ಕ್ಷೀರ.

ವಿಶ್ವಸಾಹಿತ್ಯದಲ್ಲಿ ಗೀತೆಯು ಇಷ್ಟು ಅಗ್ರಸ್ಥಾನದಲ್ಲಿರಬೇಕಾದರೆ ಅದರಲ್ಲಿ ತುಂಬಿರುವ ಜ್ಞಾನಾಮೃತವೇ ಮೂಲ ಕಾರಣ. ಆತ್ಮನಿಗೆ ಬೋಧಿಸುವ ವಾಣಿಯೇ ಭಗವದ್ಗೀತೆ. ಈಶ್ವರನೇ ಆತ್ಮನೊಳಗಿರುವ ಪರಮಾತ್ಮ. ಪರಮಾತ್ಮನನ್ನು ಹತ್ತಿರಕ್ಕೆ ಕರೆದುಕೊಂಡು ಆಧ್ಯಾತ್ಮಿಕ ಶಕ್ತಿಗಳ ವಿಕಾಸದೊಡನೆ ಅವನನ್ನು ಪಡೆಯುವದೇ ಇದರಲ್ಲಿ ತುಂಬಿದೆ. ಇದು ಕೃಷ್ಣಾರ್ಜುನರಿಗೆ ನಡೆದ ಸಂಭಾಷಣೆಯಲ್ಲಿ ಅಡಕವಾಗಿದ್ದರೂ ಇದಕ್ಕೆ ಕೃಷ್ಣಗೀತೆಯಾಗಲಿ, ಕೃಷ್ಣಾರ್ಜುನ ಸಂವಾದವೆಂದಾಗಲಿ ಹೆಸರಿಲ್ಲ. ಕೃಷ್ಣ ಅರ್ಜುನ ಎಂಬ ವ್ಯಕ್ತಿಗಳು ಇಲ್ಲಿ ಪ್ರಧಾನ ಅಲ್ಲ. ಕೃಷ್ಣನು ಪರಮಾತ್ಮನನ್ನು ಅರ್ಜುನನು ಜೀವಾತ್ಮನನ್ನಾಗಿ ಪ್ರತಿನಿಧಿಸಿದ್ದರಿಂದಲೇ ಭಗವದ್ಗೀತೆ ಹೆಸರು ಬಂದಿದೆ ಎಂದು ಹೇಳಬಹುದು. ನಿರಾಕಾರ ಪರಮಾತ್ಮನು

ಭಕ್ತರುದ್ಧಾರಕ್ಕಾಗಿ ಸಾಕಾರನೆನಿಸಿ, ದಿವ್ಯವಾದ ಆಕಾರಗಳನ್ನು ಧರಿಸಿ ಎಲ್ಲ ಪ್ರಾಣಿಗಳ ಉತ್ಪತ್ತಿ ವಿನಾಶಗಳನ್ನು ಮತ್ತು ಬಂಧ ಮೋಕ್ಷಗಳನ್ನು ತಿಳಿದು ಅವರ ಬಂಧನವನ್ನು ಬಿಡಿಸಿ ತನ್ನೊಳಗೆ ಸೇರಿಸಿಕೊಳ್ಳುವ ದಿವ್ಯಶಕ್ತಿಯುಳ್ಳವನೇ ಭಗವಂತ. ಈ ರೀತಿ ಭಗವಂತನುದಯಿಸಿ ತನ್ನ ಶಕ್ತಿ ವೈಭವದೊಡನೆ ಜಗತ್ತನ್ನು ಉದ್ಧರಿಸುತ್ತಿರುವದರಿಂದಲೇ ಜಗತ್ತಿನಲ್ಲಿ ಇಂದಿಗೂ ಸ್ವಲ್ಪಾದರೂ ಧರ್ಮ, ನ್ಯಾಯ, ಸಂಸ್ಕೃತಿ, ಸತ್ಯಗಳನ್ನು ಕಾಣುತ್ತಿದ್ದೇವೆ. ಭಗವದ್ಗೀತೆಯು ಇಡೀ ರಾಷ್ಟ್ರಕ್ಕೆ ಏಕೆ, ವಿಶ್ವಕ್ಕೇನೆ ದಿವ್ಯ ಮಾರ್ಗವನ್ನು ತೋರಿಸಿದೆ. ಭಗವಂತನು ಮಾನವಸಮಾಜಕ್ಕೆ ನೀಡಿರುವ ದಿವ್ಯವಾಣಿಯೇ ಭಗವದ್ಗೀತೆ.

ಭಗವದ್ಗೀತೆಯಲ್ಲಿ ಮೂರು ತೆರನಾಗಿ ವಿಂಗಡಿಸಬಹುದು. ಮೊದಲನೆಯದು ವ್ಯಕ್ತಿಯು ತನ್ನ ಧರ್ಮದಂತೆ ನಡೆದು ಕೀರ್ತಿ ಪಾತ್ರನಾಗುವದು. ಎರಡನೆಯದಾಗಿ ಸಮಾಜದಲ್ಲಿ ನಡೆ ನುಡಿ ಶುದ್ಧವಾಗಿಟ್ಟುಕೊಂಡು ಬಾಳಿ ಸಮಾಜೋದ್ಧಾರಕ್ಕೆ ಪ್ರಯತ್ನಮಾಡುವದು. ಮೂರನೆಯದಾಗಿ ಜಗತ್ತನ್ನೇ ಸೃಷ್ಟಿಸಿ ಅದರ ಪಾಲನೆಯನ್ನು ಮಾಡಲು ಕಾರಣಕರ್ತನಾಗಿರುವ, ವಿಭಕ್ತೇಷು ಅವಿಭಕ್ತನಾಗಿರುವ ಪರಮಾತ್ಮನ ಬಗೆಗೆ ತಾವಿರಬೇಕಾಗಿರುವ ರೀತಿಯನ್ನು ತೋರಿಸುವದು. ಕೊನೆಯ ಗುರಿ ಪರಮಾತ್ಮನಲ್ಲಿ ಲೀನವಾಗುವದು. ಇದಕ್ಕೆ ಮುಕ್ತಿ, ಆತ್ಮಸಾಕ್ಷಾತ್ಕಾರ, ಆನಂದದ ಚರಮಸೀಮೆ ಎಂದು ಮುಂತಾಗಿ ಕರೆಯುತ್ತಿರುವದನ್ನು ನಾವು ನೋಡುತ್ತಿದ್ದೇವೆ. ಮನುಷ್ಯನು ಅಂತಿಮಾವಸ್ಥೆಯನ್ನು ತಲುಪಬೇಕಾದರೆ ವಿವಿಧ ಶಕ್ತಿಗಳಿಂದ ಸ್ವಧರ್ಮವನ್ನು ನಿಯಮನಗೊಳಿಸಬೇಕಾಗುತ್ತದೆ. **Unity in diversity** ಅಂದರೆ ವಿವಿಧತೆಯಲ್ಲಿ ಏಕತ್ವ ತಂದು ಭಾವೈಕ್ಯದಲ್ಲಿ ಮಿಂದು ಆತ್ಮದರ್ಶನ ಪಡೆಯಲು ಅಹೋರಾತ್ರಿ ಕಷ್ಟಪಡಬೇಕಾಗುತ್ತದೆ.

ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ।
ಶ್ರೇಯಾಂ ಸ್ವಧರ್ಮೋ ವಿಗುಣಃ ಪರಧರ್ಮಾತ್ ಸ್ವನುಷ್ಠಿತಾತ್॥

ಸ್ವಧರ್ಮದ ಅನುಷ್ಠಾನದಿಂದ ತತ್ವಜ್ಞಾನದ ಲಾಭವೂ, ತನ್ಮೂಲಕ ಪರಮಾನಂದಾನುಭವವೂ ದೊರೆಯುತ್ತಿದೆಯೆಂದು ಗೀತೆಯಲ್ಲಿ ಹೇಳಿದೆ.

ಮಾನವ ಜನಾಂಗದ ಮಾನಸಿಕ ಬೆಳವಣಿಗೆಯಾಗಬೇಕಾದರೆ ಧರ್ಮ ಸಂಸ್ಕೃತಿಯಿಲ್ಲದೇ ಆಗದು.

ಭಾರತೀಯರಿಗೆ ಧರ್ಮವೇ ಮೂಲ. ಇಲ್ಲಿ ಧರ್ಮ ರೂಢಿಯಲ್ಲದ, ಧರ್ಮಜಾಗೃತಿ ವಿಚಾರವಲ್ಲದ ನುಡಿಗೆ ಬೆಲೆಯಿಲ್ಲ, ಮಾನ್ಯತೆಯಿಲ್ಲ. ಅಂತೆಯೇ ಭಾರತಭೂಮಿ ಧರ್ಮ ಸಂಸ್ಕೃತಿಗಳ ನೆಲೆಬೀಡು ಎಂದು ಪ್ರಾಚೀನರು ಕರೆದಿದ್ದಾರೆ.

ಧರ್ಮಸಂಸ್ಕಾರಗಳು ಸಂಸ್ಫುರಣಗೊಂಡವರಲ್ಲಿ ದೇವನಿರವು. ಆ ಇರುವಿಕೆ ಸ್ಥಿರವಾಗಿ ಪರಮಾತ್ಮನಲ್ಲಿ ಐಕ್ಯತೆ ಹೊಂದಬೇಕಾದರೆ ಜೀವಭಾವವನ್ನು ತೊಲಗಿಸಿದರೆ ಮಾತ್ರ ಜ್ಞಾನಪ್ರಕಾಶ ದೊರೆಯುವದು. ಜ್ಯೋತಿಷಾಮಪಿತಜ್ಜ್ಯೋತಿಯಲ್ಲಿ ಬೆಳೆಯಲು ಜ್ಞಾನಕರ್ಮಗಳನ್ನು ಆಚರಣೆಯಲ್ಲಿ ತರಬೇಕಾಗುತ್ತದೆ.

ಈಶ್ವರಶಕ್ತಿಯು ಪ್ರತಿಯೊಂದು ವೇಳೆಯಲ್ಲಿಯೂ ಯಂತ್ರದ ಹಾಗೆ ಕೆಲಸ ಮಾಡುತ್ತಿರುವದು. ಅದೇ ಪ್ರಕಾರ ಮಾನವನೂ ಸಹ ಬುದ್ಧಿಪೂರ್ವಕವಾಗಿ ಯಂತ್ರದಂತೆ ನಿಯಮಿತ ಕ್ರಮದಲ್ಲಿ ಕಾರ್ಯಮಾಡಬೇಕಾಗುತ್ತದೆ. ಕರ್ತವ್ಯವನ್ನು ವಿವೇಕದಿಂದ ಅರಿತು ಜ್ಞಾನಭಕ್ತಿಯೊಡನೆ ಆಚರಿಸುವವರಲ್ಲಿ ಹಿರಿದಾದ ಶಕ್ತಿಯಿದೆ. ದೈಹಿಕಶಕ್ತಿಗಿಂತಲೂ ಆತ್ಮಿಕಶಕ್ತಿಯ ಪ್ರಭಾವ ಬೆಲೆಯುಳ್ಳದ್ದು ಈಶ್ವರನಿಗೆ ಅದು ಪ್ರಿಯಕರ.

ಭಗವಂತನು ಒಂದೆಡೆಯಲ್ಲಿ—

ಯದ್ಯದಾಚರತಿ ಶ್ರೇಷ್ಠಃ ತತ್ತದೇವೇತರೋಜನಃ।
ಸ ಯತ್ಪ್ರಮಾಣಂ ಕುರುತೇ ಲೋಕಸ್ತದನುವರ್ತತೇ॥

ದೊಡ್ಡವರು ಆಚರಿಸಿ ಹೋದ ದಾರಿಯೇ ಇನ್ನುಳಿದವರಿಗೆ ದಾರಿದೀಪವೆಂದು ಹೇಳಿದ್ದಾನೆ.

ಆತ್ಮವಿಕಾಸಕ್ಕೆ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಾದಿಗಳು ಎದುರು ಬಂದು ಸಾಗರದ ನೀರು ವೇಗದಿಂದ ಬಂದು ದಂಡೆಯನ್ನು ಕೊಚ್ಚುವಂತೆ, ಹೊಗೆಯಿಂದ ಬೆಂಕಿಯು ಮುಚ್ಚುವಂತೆ, ಆತ್ಮವನ್ನು ತಮೋಗುಣಗಳಿಂದ ಮುಚ್ಚಿ ಬುದ್ಧಿಭ್ರಂಶ ಮಾಡಲು ಪ್ರಯತ್ನಿಸುತ್ತವೆ. ಆಗ ತಮೋಗುಣದ ಕಾಡಿಗೆಯನ್ನು ತೆಗೆದು ರಜೋಗುಣದ ಧೂಳನ್ನು ತೊಳೆದರೆ ಶುದ್ಧ ಸತ್ವಗುಣದ ಬೆಳಗು ಮಿಂಚುತ್ತದೆ. ಆ ಚಿತ್ಸೂರ್ಯನ ಕಿರಣಗಳು ಹೃದ್ವ್ಯೋಮದಲ್ಲಿ ಪ್ರಕಾಶಿಸಬೇಕಾದರೆ ಅಜ್ಞಾನ ಕತ್ತಲೆಯನ್ನು ಕಳೆಯಬೇಕಾಗುತ್ತದೆ. ಅಂದರೆ ತನ್ನ ದೇಹದಲ್ಲಿರುವ ಆತ್ಮನನ್ನು ಅರಿತು ಈಶ್ವರನೊಡನೆ ಬೆರೆತರೆ ಸರ್ವೇಂದ್ರಿಯಗಳೆ ಈಶ್ವರಮಯವಾಗುವವು. ಚಿತ್ತಶುದ್ಧಿ ದೊರೆತಿದ್ದುದರ ಫಲವೇ ಬಾಹ್ಯ ಕರ್ಮಗಳಿಂದ ಅರಿಯಬಹುದು. ಹೃದಯದೊಳಗೆ ಮಂತ್ರಶಕ್ತಿಯಿಲ್ಲದ ಕರ್ಮ ಹೊಳೆಯಲ್ಲಿ ಹುಣಸೆಹಣ್ಣು ತೊಳೆದಂತೆ, ಎಷ್ಟು ಕರ್ಮ ಮಾಡಿದರೂ ವ್ಯರ್ಥ ಭಾವಶುದ್ಧಿಯಾಗದು. ಹತ್ತಿಯು ಹಂಜಿಯಂತೆ ಅವ್ಯಕ್ತ ಪರಮಾತ್ಮನು ಸೂತ್ರ ರೂಪದಲ್ಲಿ ಪ್ರಕಟಗೊಳ್ಳುತ್ತಾನೆ. ಮಂತ್ರವನ್ನು ಕ್ರಿಯೆಯೊಳಗೆ ತುಂಬಿದರೆ ಸುವರ್ಣ ಘಟದಂತೆ ಆತ್ಮಪ್ರಭೆಯಿಂದ ಹೃದಯವು ಥಳಥಳನೆ ಹೊಳೆಯುವದು. ಆತ್ಮ ಸೌಂದರ್ಯ ಹೆಚ್ಚಾಗಿ ಇವರ ಪ್ರಭಾವ ಸಮಾಜೋದ್ಧಾರಕ್ಕೆ ಮೂಲ ಕಾರಣ

ವಾಗುತ್ತದೆ. ಕೃಷಿ ಕರ್ಮವು ಹದವಾಗಿ ಮತ್ತು ಸ್ವಚ್ಛವಿದ್ದರೆ ಬೆಳೆ ಬರುತ್ತದೆ. ಅಂತೆಯೇ ಕರ್ಮದಲ್ಲಿ ನಿಷ್ಕಾಮವಿದ್ದಂತೆ, ಶಕ್ತಿ ದೊರೆಯುತ್ತದೆ.

'ಕರ್ಮಣ್ಯೇವಾಧಿಕಾರಸ್ತೇ ಮಾಫಲೇಷು ಕದಾಚನ'

ಇದೇ ನಿತ್ಯಜೀವನದ ಕರ್ತ್ಮಗುರಿಯಾಗಬೇಕು. ಇದೇ ಗೀತೆಯ ಒಳಗುಟ್ಟು.

ಧರ್ಮಾಚರಣೆಯು ಕರ್ಮಕಟ್ಟಡದ ಬುನಾದಿ ಭದ್ರವಾದಂತೆ ಬಹುದಿನ ಬಾಳುತ್ತದೆ. ಬೆಳಗುತ್ತದೆ. ಟೆಂಗಿನಕಾಯಿಯನ್ನು ಒಡೆದು ಒಳಗಿನ ಸಿಹಿ ನೀರನ್ನು ಸೇವಿಸಿದಾಗ ಅದರ ರುಚಿ ತಿಳಿಯುತ್ತದೆ. ಹಲಸಿನ ಹಣ್ಣಿನ ಮೈಯ್ಯಲ್ಲಿ ಮುಳ್ಳಿದ್ದರೂ ಒಳಗಿನ ತೊಳೆಯು ತಿಳಿಲು ಬಲು ಮಧುರ. ಅದರಂತೆಯೇ ನಿಷ್ಕಾಮ ಕರ್ಮದಲ್ಲಿ ಮನಸ್ಸಿಗೆ ತುಂಬಾ ಸಮಾಧಾನ ಸಿಗುತ್ತದೆ. ಹೊರಗಿನದು ಕರ್ಮಲೇಪ, ಕರ್ಮದಿಂದುಂಟಾದ ಚಿತ್ತಶುದ್ಧಿ ಆತ್ಮ, ಈ ಆತ್ಮಸಾಕ್ಷಾತ್ಕಾರ ಮಾಡಿಕೊಳ್ಳಲು ಸತ್ಯಶುದ್ಧ ಜ್ಞಾನಬೇಕು. ಅಂದರೆ ಕಣ್ಣು ಮನಸ್ಸಿಗೆ ಶಿಕ್ಷಣ ಅಭ್ಯಾಸ ಬೇಕು. ಪ್ರತಿಯೊಂದು ಕರ್ಮ ಮಾಡಬೇಕಾದರೆ ಹೊರಗಿನ ದೇಹದ ಆವರಣ ಗುಣಗಳನ್ನು ದೂರಮಾಡಿ ಆತ್ಮನನ್ನು ಅರ್ಚನೆ ಮಾಡಬೇಕಾಗುತ್ತದೆ. ಸತ್ಯಾಸತ್ಯತೆಗಳನ್ನು ಪೂರ್ಣ ವಿಚಾರಿಸಿ, ಅದರ ಸಾರವನ್ನು ಕಂಡುಹಿಡಿದು ತೆಗೆದುಕೊಂಡರೆ ಸತ್ಯಸಂಕಲ್ಪಸಿದ್ಧಿ. ಸಾಗರದೊಳಗಿರುವ ಚಿಪ್ಪನ್ನು ತೆಗೆದುಕೊಂಡು ಅದರೊಳಗಿರುವ ಮುತ್ತನ್ನು ಸ್ವೀಕರಿಸಿ ಚಿಪ್ಪನ್ನು ಹೊರಗೆ ಚಲ್ಲಿದರೆ ಮಾತ್ರ ಬಾಳ್ಬೆಳಕಿಗೆ ಮೆರಗು ದೊರೆಯುತ್ತದೆ. ಜ್ಞಾನಜ್ಯೋತಿಯು ಹೃನ್ಮಂದಿರದೊಳು ಪ್ರವೇಶಿಸಿದಾಗ ಅಲ್ಲಿರುವ ಪರಮಾತ್ಮನ ದರ್ಶನ ಸನ್ನಿಹಿತವಾಗುವದು. ಪರುಷದ ಬಲದಿಂದ ಅವಲೋಹದ ಶಕ್ತಿಯು ನಷ್ಟವಾದಂತೆ, ವಿದ್ಯುತ್‌ಶಕ್ತಿಯ ಸಹಾಯದಿಂದ ಕತ್ತಲೆಯು ನಶಿಸುವಂತೆ, ಜ್ಞಾನಪ್ರಭೆಯಿಂದ ಅಜ್ಞಾನದ ಕಾರ್ಮೋಡಗಳು ದೂರಾಗುತ್ತವೆ. ಆಗ ತತ್ವಮಸಿ, ಸೋಹಂ ಅವನೇ ನೀನು, ನಾನೇ ಅವನು ಎಂಬ ಭಾವ ಸ್ಫುರಣಗೊಂಡು ಎಲ್ಲ ಸಣ್ಣ ಕಣಗಳಲ್ಲಿಯೂ ಇರುವವನು ನೀನಲ್ಲದೆ ಎಲ್ಲರ ಜೀವನದ ಮೂಲಾಧಾರ ಅವನೆಂದು ಭಾಸವಾಗುತ್ತದೆ.

"ಆ ಪರಮಾತ್ಮ ನಾನು ಎಂಬ ವಿಚಾರ ಬಂದಾಗ ಒಂದು ಬಗೆಯ ಅನನುಭೂತ ಆನಂದ ಮನಸ್ಸಿನಲ್ಲಿ ತುಂಬುತ್ತದೆ. ಆ ನನ್ನ ರೂಪವನ್ನು ನಾಶ ಮಾಡುವದು ಸೃಷ್ಟಿಯಲ್ಲಿನ ಯಾವ ವಸ್ತುವಿಗೂ ಸಾಧ್ಯವಿಲ್ಲ, ಯಾರಿಗೂ ಆ ಸಾಮರ್ಥ್ಯವಿಲ್ಲ. ದೇಹದಾಚೆಗಿರುವ ಅವಿನಾಶಿ ನಿಷ್ಕಲಂಕ ಆತ್ಮ ತತ್ವ ನಾನು" ಎಂದು ಮುಂತಾಗಿ ಗೀತೆಯಲ್ಲಿ ಹೇಳಿರುವವಲ್ಲದೆ ಮತ್ತೊಂದೆಡೆಯಲ್ಲಿ—

'ಸಮಂ ಪಶ್ಯಂತಿ ಸರ್ವತ್ರ ಸಮವಸ್ಥಿತಮೀಶ್ವರಂ।
ನಹಿ ನಸ್ತ್ಯಾತನಾತ್ಮಾನಂ ತತೋಯಾತಿ ಪರಾಂಗತಿಂ॥

"ಈಶ್ವರನು ಎಲ್ಲರಲ್ಲೂ ಸಮಭಾವದಿಂದ ಇರುವನೆಂದು, ಅರಿತವನು, ತಾನಾಗಿಯೇ ಅವನಲ್ಲಿ ಕೂಡಿಕೊಳ್ಳುತ್ತಾನೆ. ಅವನು ಬೇರೆ ಯಾವುದನ್ನೂ ಕಾಣಲಾರ ಮತ್ತು ಎಂದಿಗೂ ನಾಶ ವಿಕಾರಗಳನ್ನು ಹೊಂದನು ಎಂದು ಹೇಳಿದೆ.

ಭಾವಜೀವಿಯು ಆತ್ಮಸಾಕ್ಷಾತ್ಕಾರ ಮಾಡಿಕೊಂಡು ತನ್ಮಯನಾಗಿ ಆ ವಿಶ್ವ ವ್ಯಾಪಕನೊಂದಿಗೆ ಐಕ್ಯವನ್ನು ಪಡೆಯಲು ಇಚ್ಛಿಸುತ್ತಾನೆ. ಅವನಿಗೆ ದೇವರು ತನ್ನ ಪ್ರಾಣದ ಪ್ರಾಣ, ಆತ್ಮದ ಆತ್ಮ. ಇವನಾತ್ಮವೆ ದೇವರು. ದೇವರಿಲ್ಲದ ವಸ್ತುವು ಮತ್ತಾವುದೂ ಇಲ್ಲ. ಸತ್ಯದ ಸಮ್ಯಕ್ ದರ್ಶನವೇ ಆತ್ಮ ಸಾಕ್ಷಾತ್ಕಾರ. ಅದೇ ಜೀವನದ ಅಂತಿಮ ಗುರಿಯೆಂದು ಬಗೆದು ಈಶ್ವರ ಸಾಕ್ಷಾತ್ಕಾರ; ಪರಮೋದ್ದೇಶದಿಂದಲೇ ನಿಯಂತ್ರಿತನಾಗುತ್ತಾನೆ. ಒಂದು ಕಡೆ ಮಹಾತ್ಮಾ ಗಾಂಧೀಜಿ "ಈ ಭಾವಜೀವಿಗೆ ಶ್ರದ್ಧೆ ಹೆಚ್ಚಿದಂತೆ ಬುದ್ಧಿಯೂ ಹೆಚ್ಚುತ್ತದೆ. ಬುದ್ಧಿಯೋಗ ಈಶ್ವರನ ಅನುಗ್ರಹ; ಶ್ರದ್ಧೆ ಬೆಳೆಸುವದು ನಮ್ಮ ಕೆಲಸ. ಇಲ್ಲಿ ಶ್ರದ್ಧೆ ಬುದ್ಧಿಗಳ ಅರ್ಥವನ್ನು ಅರಿಯಬೇಕು. ಈ ಅರಿವು ವ್ಯಾಖ್ಯೆ ಮಾಡಿದರೆ ಬಾರದು. ನಿಜವಾದ ನಮ್ರತೆಯನ್ನು ವಿಕಾಸಗೊಳಿಸಿದರೆ ಬರುತ್ತದೆ. ತನಗೆ ಎಲ್ಲವೂ ತಿಳಿದಿದೆ ಎಂದು ತಿಳಿದವನಿಗೆ ಏನೂ ತಿಳಿಯದು. ನನಗೆ ಏನೂ ತಿಳಿಯದು ಎನ್ನುವವನಿಗೆ ಯಥಾ ಸಮಯದಲ್ಲಿ ಜ್ಞಾನ ಸಿಗುತ್ತದೆ. ತುಂಬಿದ ಕೊಡದಲ್ಲಿ ಗಂಗಾಜಲವನ್ನು ದೇವರೂ ಕೂಡ ತುಂಬಲಾರ. ಆದುದರಿಂದ ದಿನವೂ ಈಶ್ವರನ ಮುಂದೆ ಬರಿಗೈಯ್ಯಲ್ಲಿ ನಿಲ್ಲಬೇಕೆಂದುಸುರುವ ಅನುಭವ ನುಡಿಯು ನಮ್ಮ ನೆನಪಿಗೆ ಬರುತ್ತದೆ. ಅದಕ್ಕಾಗಿ ಶರೀರವೆಂಬ ಹೊಲವನ್ನು ಹಸನುಮಾಡಿ ಮೋಕ್ಷ ಫಲದ ಬೆಳೆಯನ್ನು ಬೆಳೆದುಣ್ಣಲು ನಿರಂತರ ಪರಿಶ್ರಮಿಸ ಬೇಕಾಗುತ್ತದೆ.

ಇದಂ ಶರೀರಂ ಕೌಂತೇಯ ಕ್ಷೇತ್ರಮಿತ್ಯಭಿಧೀಯತೇ
ಏತದ್ಯೋವೇತ್ತಿ ತಂ ಪ್ರಾಹುಃ ಕ್ಷೇತ್ರಜ್ಞ ಇತಿ ತದ್ವಿದಃ
ಕ್ಷೇತ್ರ ಕ್ಷೇತ್ರಜ್ಞಯೋರೇವಮಂತರಂ ಜ್ಞಾನ ಚಕ್ಷುಷಾ
ಭೂತ ಪ್ರಕೃತಿ ಮೋಕ್ಷಂಚ ಯೇವಿದುರ್ಯಾಂತಿ ತೇ ಪರಂ

ಈ ಶರೀರವೇ ಕ್ಷೇತ್ರ, ಇದನ್ನರಿತವನು ಕ್ಷೇತ್ರಜ್ಞ. ಈ ಎರಡನ್ನು ತಿಳಿಯುವದೇ ಜ್ಞಾನ. ಕ್ಷೇತ್ರಿಯಾದ ಆತ್ಮನು ದೇವನಲ್ಲಿದ್ದುಕೊಂಡು ಸೂರ್ಯನು ವಿಶ್ವವನ್ನು ಬೆಳಗುವಂತೆ ಶರೀರಾದ್ಯಾಂತವನ್ನು ಬೆಳಗುವನು. ಹೀಗೆ ಜ್ಞಾನ ನೇತ್ರದಿಂದ ಕ್ಷೇತ್ರ ಕ್ಷೇತ್ರಜ್ಞರನ್ನು ಪ್ರಕೃತಿ ಮುಕ್ತಿಗಳ ಉಪಾಯವನ್ನು ತಿಳಿದವನು ಮೋಕ್ಷ ಪಡೆಯುವನೆಂಬುದೇ ಭಗವದ್ಗೀತೆಯ ಅಮರವಾಣಿ. ಇದೇ ಭಾವವನ್ನೇ ಅಲ್ಲಮಪ್ರಭುಗಳು 'ತನುವ ತೋಟವ ಮಾಡಿ ಮನವ ಗುದ್ದಲಿಯ ಮಾಡಿ ಅಗಿದು ಕಳೆವೆನಯ್ಯ ಭ್ರಾಂತಿ ಬೇರ, ಒಡದು ಸಂಸಾರದ ಹೆಂಟೆಯ, ಬಗಿದು ಬಿತ್ತಿ

ದೇನಯ್ಯ ಬ್ರಹ್ಮ ಬೀಜವ, ಅಖಂಡ ಮಂಡಲವೆಂಬ ಭಾವಿ, ಪವನವೇ ರಾಟಾಳ, ಸುಷುಮ್ನಾಳದಿಂದ ಉದಕವ ತಿದ್ದಿ ಬಸವಗಳೈವರು ಹಸಗೆಡಿಸಿಹವೆಂದು ತೋಟದಲ್ಲಿ ಜಾಗರವಿದ್ದು ಸಸಿಯ ಸಲುಹಿದೆನು ಕಾಣಾ ಗುಹೇಶ್ವರಾ' ಎಂದು ಹೇಳಿದ ಈ ವಚನ ರಚನೆಯಲ್ಲಿ ಭಾವ ಸೌಷ್ಠವ, ಅಂತರ್ಮೂರ್ತತೆಯ ಅಖಂಡತ್ವ ಪ್ರತಿ ನುಡಿಯಲ್ಲಿಯೂ ಆಧ್ಯಾತ್ಮಿಕ ಜೀವನದ ಜ್ಞಾನ ಭಾಂಡಾರವು ತುಂಬಿದಂತೆ ಎದ್ದು ಕಾಣುತ್ತದೆ.

[illegible] ರಂದು ಧಾರವಾಡ ಆಕಾಶವಾಣಿಯಲ್ಲಿ ಗೀತಾ ಜಯಂತಿಯ ಶುಭ ಸಂದರ್ಭದಲ್ಲಿ ಅಪ್ಪಣೆ ಕೊಡಿಸಿದ ಆಶೀರ್ವಚನ.

ಶೀಲವೇ ಧರ್ಮ

ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯಾ
ಜ್ಯೋತಿಯ ಬಲದಿಂದ ತಮಂಧದ ಕೇಡು ನೋಡಯ್ಯಾ
ಪರುಷದ ಬಲದಿಂದ ಅವಲೋಹದ ಕೇಡು ನೋಡಯ್ಯಾ
ನಿಮ್ಮ ಶರಣರ ಅನುಭಾವದಿಂದ ಎನ್ನ ಭವದ ಕೇಡು ನೋಡಯ್ಯಾ
ಕೂಡಲ ಸಂಗಮದೇವಾ||

ಭಾರತದೇಶ ಶೀಲ ಸಂಸ್ಕೃತಿಗಳ ನೆಲೆಬೀಡು, ಧರ್ಮ, ಸಾಹಿತ್ಯ ನಡೆನುಡಿ ಭಾವ ಶುದ್ಧಿಗಳಿಂದ, ಕೂಡಿಕೊಂಡಿರುವ ಪವಿತ್ರನಾಡು. ಪ್ರಾಚೀನ ಕಾಲದಿಂದಲೂ, ಜ್ಞಾನ ವಿದ್ಯೆಗಳ ಕೇಂದ್ರವಾಗಿದೆ. ಮೌರ್ಯ ಕಾಲದಲ್ಲಿ ಅದೇಕೆ. ಉಪನಿಷತ್ಕಾಲದಲ್ಲಿಯೂ ಕೂಡ ಸುಪ್ರಸಿದ್ಧ ವಿಶ್ವವಿದ್ಯಾನಿಲಯಗಳ ಸ್ಥಾಪನೆಯ ಮೂಲಕ ಭಾರತವು ಜನಜಾಗೃತಿ ಮಾಡಿ, ದೇಶ ವಿದೇಶದವರನ್ನು ಆಕರ್ಷಿಸಿ, ಭಾರತದ ಉಚ್ಚ ಸಂಸ್ಕೃತಿಯನ್ನು ತಿಳಿಯಪಡಿಸಿ, ಧಾರ್ಮಿಕ ಮನೋವೃತ್ತಿಯ ಬಲವಾದ ಆತ್ಮಶಕ್ತಿ ಪ್ರಭಾವವನ್ನು ಬೀರಿ ಎಚ್ಚರಿಸಿ ಪುನೀತರನ್ನಾಗಿ ಮಾಡಿದೆ. ಇದೇ ಭಾರತದ ಭವ್ಯಪರಂಪರೆಯಂತೆ, ಕನ್ನಡನಾಡೂ ನವ ನೂತನ ಚೇತನೋತ್ಪತ್ತಿಯನ್ನು ತೋರಿಸುತ್ತ, ಸಾಹಿತ್ಯದಲ್ಲಿ ನವಚೈತನ್ಯದ ಚಿಲುಮೆಯನ್ನು ಚಿಮ್ಮುತ್ತ ಸನಾತನ ಧರ್ಮದ ಪುಣ್ಯಾಕಾಶದಲ್ಲಿ ತುಂಬಿದ್ದ ಕಾರ್ಮೋಡಗಳ ಕತ್ತಲೆಯನ್ನು ನಲಿಸಿ, ಜ್ಞಾನದೀಪ್ತಿಯನ್ನು ನೀಡುತ್ತ ಬಂದಿದೆ. ಮಹಾವ್ಯಕ್ತಿಗಳು, ಮಹಾ ಶಕ್ತಿವಾಹಿನಿಯನ್ನು ನಾಡಿನಲ್ಲಿ ಹರಿಯಬಿಟ್ಟು, ಶೀಲ ಸಂಸ್ಕೃತಿಗಳ ಉಳಿವಿಗೆ ಕಾರಣರಾಗಿದ್ದುದರ ಫಲವೇ ನಾವಿಂದು ಜ್ಞಾನಾಮೃತ ಪಾನ ಮಾಡುತ್ತ ಸಂಸ್ಕೃತಿಯ ಏಳಿಗೆಯ ಕಡೆ ಧಾವಿಸುವಂತಾಗಿದೆ. ಸಾಹಿತ್ಯ ದೇವಿಯ ಪವಿತ್ರ ಮಂದಿರದಲ್ಲಿ ನಡೆಯುವ ಪೂಜೆಯನ್ನು ನೋಡಿ- ತೃಪ್ತಿಮಾಡಿಕೊಳ್ಳಬೇಕಾಗಿದೆ. ಸಾಹಿತ್ಯ ಶೀಲ ಸಂಸ್ಕೃತಿಯನ್ನು ಸಂಗೋಳಿಸಿ, ಧರ್ಮನಿಷ್ಠ ಪೂತಾತ್ಮರಾಗಿ ಆತ್ಮಜ್ಯೋತಿಯನ್ನು ಬೆಳಗಿಸಬೇಕಾಗಿದೆ.

ವಿಶ್ವವಿದ್ಯಾನಿಲಯಗಳು ವಿದ್ಯಾರ್ಥಿಗಳನ್ನು ಸತ್ಯಾರ್ಥಿಗಳನ್ನಾಗಿ ಮಾಡುವವಲ್ಲದೆ, ಶೀಲಸಂಸ್ಕೃತಿಯನ್ನು ಹೃದ್ಭೂಮಿಯಲ್ಲಿ ಬಿತ್ತಿ, ಅವರ ಬುದ್ಧಿಶಕ್ತಿ, ಹೃದಯಶಕ್ತಿ ಮತ್ತು ಭಾವಶಕ್ತಿಯನ್ನು ವಿಕಸನಗೊಳಿಸುವ ದೇವ ಮಂದಿರಗಳಂತೆ, ವಿದ್ಯಾರ್ಥಿಗಳಲ್ಲಿ ಹೆಚ್ಚಾಗಿ ಲೌಕಿಕೋದ್ದೇಶದ ಸಾಧನೆಗೆ, ಹಣವೇ [illegible], ಜೀವನವನ್ನು ಸುಖಮಯ ಮಾಡಿಕೊಳ್ಳುವ ಹಂಬಲ ತುಂಬಿರುವುದು. ಇತ್ತ

ರಿಂದಲೇ ವಿದ್ಯೆಯು ಸಾರ್ಥಕತೆಯಾಗದು, ಅನ್ನವಸ್ತ್ರಾದಿಗಳಿಂದ ಮನುಷ್ಯ ಬದುಕ ಬಹುದು. ಆ ಬದುಕು ಪಶುವಿನಂತೆ ಬದುಕಾದೀತೆ ಹೊರತು, ಮನುಷ್ಯತ್ವದ ಬದುಕಾಗಲಾರದು, ವ್ಯಕ್ತಿತ್ವ ದೊರೆಯಲಾರದು, ಭಾವ ಶುದ್ಧಿಯಾಗದು.

ನಾಗರಿಕತೆ ಬೆಳೆದಂತೆ ಆಧ್ಯಾತ್ಮಿಕ ಬೆಳೆದು ಬೆಳಗಿದರೆ ಮಾತ್ರ ಆತ್ಮ ಸಂತೃಪ್ತಿಯಾಗುತ್ತದೆ. ಲೌಕಿಕ ವಿದ್ಯೆಗೆ, ಆಧ್ಯಾತ್ಮಿಕ ವಿದ್ಯೆಯಿಂದ - ಪುಷ್ಟಿ ದೊರೆತು ಮಿಗಿಲಾದ ಶಕ್ತಿ ಬರುತ್ತದೆ. ರೋಗಿಗೆ ಔಷಧವಿತ್ತು ಚೇತರಿಸಿದಂತೆ ಸುಖ ಜೀವನವಾಗುತ್ತದೆ.

ಪ್ರಾಚೀನ ಕಾಲದ ಋಷಿಪುಂಗವರು:

"ಅಂಧಂ ತಮಃ ಪ್ರವಿಶಂತಿ ಯೇ ಅವಿದ್ಯಾಂ ಉಪಾಸತೇ

ತತೋ ಭೂಯ ಇವತೇ ತಮೋಯ ಉ ವಿದ್ಯಾಯಾಂ ರತಾಃ"

ಎಂದುಸುರಿ ವಿದ್ಯೆಯ ಮಹತ್ವವನ್ನು ತೋರಿಸಿದ್ದಾರೆ. ಕೇವಲ ಅವಿದ್ಯೆಯನ್ನು ಉಪಾಸಿಸುವವನು ಅಂಧಕಾರಕ್ಕೆ ಇಳಿಯುತ್ತಾನೆ. ಯಾವನು ಕೇವಲ ವಿದ್ಯೆಯನ್ನು ಬೆಳೆಸಿಕೊಂಡು ಹೋಗುತ್ತಾನೆಯೋ ಅವನೂ ಸಹ ಕತ್ತಲೆಗೆ ಇಳಿಯುತ್ತಾನೆ. ವಿದ್ಯೆಯು ನಮ್ಮನ್ನು ದೇವರ ಹತ್ತಿರ ಕರೆದೊಯ್ಯುವ ಮಹತ್ಸಾಧನೆ. ಅವಿದ್ಯೆ ಲೌಕಿಕ ಸುಖವನ್ನು ನೀಡುವದು.

"ಸಾ ವಿದ್ಯಾ ಯಾ ವಿಮುಕ್ತಯೇ"

ಯಾವದು ನಮ್ಮನ್ನು ಮುಕ್ತರನ್ನಾಗಿ ಮಾಡುವದೋ ಅದೇ ವಿದ್ಯೆ ಎಂದು ಪ್ರಾಚೀನರು ತಿಳಿಸಿದ್ದಾರೆ, ಅಲ್ಲದೆ

"ವಿದ್ಯಾ ದದಾತಿ ವಿನಯಂ ವಿನಯಾದ್ಯಾತಿ ಪಾತ್ರತಾಂ|

ಪಾತ್ರತ್ವಾತ್ ಧನಮಾಪ್ನೋತಿ ಧನಾದ್ಧರ್ಮಂ ತತಃ ಸುಖಂ||"

ಎಂಬ ಈ ಹಿತೋಕ್ತಿ ನಮ್ಮನ್ನೆಚ್ಚರಿಸುತ್ತದೆ. ಬಾಳ್ ಬೆಳಕಿಗೆ ದಾರಿ ತೋರುತ್ತದೆ. ವಿನಯವಿಲ್ಲದ ವಿದ್ಯೆಯು ಸುಗಂಧವಿಲ್ಲದ ಪುಷ್ಪದಂತೆ ಶೋಭಿಸದು. ಮಾನವನು ಪ್ರಗತಿ ಪಥದತ್ತ ಸಾಗಲಾರ. ವಿದ್ಯೆಯ ಮುಖ್ಯ ಗುರಿಯು ಮಾನವನ ಅಂತರ್-ಬಾಹ್ಯ ಸುಧಾರಣೆಯ ಸಂಸ್ಕಾರಗಳನ್ನು ಅನುಲಕ್ಷಿಸಿ, ರೂಪಗೊಳಿಸುವದಾಗಿರುವದು. ಅದಕ್ಕಾಗಿ ವಿಜ್ಞಾನದ ಜೊತೆಗೆ ಆತ್ಮಜ್ಞಾನವೂ, ಸಮನ್ವಯಗೊಂಡು ವಿಕಾಸಮಾಡಿಕೊಳ್ಳುವಂತೆ ಸಂಸ್ಕರಿಸುವದೇ ವಿಶ್ವವಿದ್ಯಾಲಯಗಳ ಉದ್ದೇಶವಾಗಿದೆ. ಕಾರಣ ಇಂದಿನ ವಿಶಾಲದೃಷ್ಟಿಯ ನೂತನ ವಿದ್ಯಾಸಾಧನೆಯಾಗಿ— ವಿದ್ಯಾರ್ಥಿಗಳ ಅಂತಃಸತ್ವ ಚೇತನಗೊಂಡು ಅರುವಿನ ಕಣ್ಣು ತೆರೆದರೆ ಮಾತ್ರ ಗುರಿ ಸಾಧಿಸಿದಂತಾಗುವದು. ಅರುವಿನ ನಿಯಂತ್ರಣವಿಲ್ಲದ ಈಗಿನ ವಿಜ್ಞಾನವೂ ಕೂಡ, ಕಡಿವಾಣವಿಲ್ಲದ ಕುದುರೆಯಂತೆ ಸ್ವೈರವೃತ್ತಿಯಿಂದ ಕೊನೆಗೆ ವಿನಾಶಕ್ಕೆ ದಾರಿಯಾಗುವ ಮುನ್ಸೂಚನೆ ತೋರಿಸುತ್ತದೆಯೋ ಏನೋ ಅನ್ನಿಸುತ್ತದೆ. ಇದಕ್ಕೆ

ಪಾಶ್ಚಿಮಾತ್ಯರ ವಿಜ್ಞಾನವೇ ನಿದರ್ಶನ. ಅಕ್ಷರಜ್ಞಾನ ಬೆಳೆದಂತೆ ಅಂತರ್‌ಜ್ಞಾನ ಬೆಳೆದು ಸ್ವಾವಲಂಬನ ಜೀವನವನ್ನು ಸಾಗಿಸುವ ಹೊಣೆ ಹೊತ್ತುಕೊಳ್ಳುವ ಶಕ್ತಿ ಸಂಪನ್ನರಾಗಬೇಕು–ಆತ್ಮಶ್ರೀ ಸಮನ್ವಿತರಾಗಬೇಕು.

ಈ ಜಗತ್ತು ನಮ್ಮ ಆತ್ಮದ ಸಾಧನರಂಗ. ಇಲ್ಲಿ ನಾವು ಲೌಕಿಕ ವಿದ್ಯೆ, ಅಧ್ಯಾತ್ಮ ವಿದ್ಯೆ ಎರಡನ್ನೂ ಸಾಧಿಸಬೇಕಾಗುತ್ತದೆ. ಇವು ಪರಸ್ಪರ ವಿರುದ್ಧವಾಗದಂತೆ, ಸಮನ್ವಯ ದೃಷ್ಟಿಯಿಂದ ಎರಡನ್ನೂ ಸಾಗಿಸಿಕೊಂಡು, ಅದರಲ್ಲಿ ದಿವ್ಯದೃಷ್ಟಿಯನ್ನು ಕಾಣತಕ್ಕವರೇ ಸುಖವನ್ನು ಪಡೆಯುತ್ತಾರೆ. ಒಂದೆಡೆ ನಿಜಗುಣ ಶಿವಯೋಗಿಗಳು "ಜಾಣನು ಲೌಕಿಕ–ಪಾರಮಾರ್ಥವೆರಡನ್ನು ಮಾಣದೆ ಕೂಡಿ ನಡೆಸುತಿಹನು" ಎಂದು ಅದರ ಹೆಚ್ಚಳವನ್ನು ಹೆಚ್ಚಿಸಿದ್ದಾರೆ. ಅದಕ್ಕೆಂದು ವಿದ್ಯಾರ್ಥಿಗಳು ಆ ಹೆದ್ದಾರಿಯಲ್ಲಿ ನಡೆಯಬೇಕಾಗುತ್ತದೆ. ಮತ್ತೊಂದೆಡೆ ವಿವೇಕಾನಂದರೂ ಸಹ "ವಿದ್ಯಾರ್ಥಿಯ ದೇಹ, ಬುದ್ಧಿ, ಹೃದಯ, ತೋಳು, ತಲೆ, ಎದೆ, ಸಮತೂಕದಿಂದ ಬೆಳೆಯಬೇಕು ಮತ್ತು ವಿದ್ಯಾರ್ಥಿಗಳಿಗೆ ಕಬ್ಬಿಣದ ಸ್ನಾಯು, ಉಕ್ಕಿನ ನರಗಳು ಬೇಕೆಂದು ಎನ್ನುತ್ತಿದ್ದರಂತೆ; ಫುಟ್‌ಬಾಲ್ ಆಡುವದರಿಂದ ಭಗವದ್ಗೀತೆ, ಉಪನಿಷತ್ತುಗಳು ಇನ್ನೂ ಚನ್ನಾಗಿ ಅರ್ಥವಾಗಬಲ್ಲದು. ಏನೇನೋ ಕಗ್ಗವನ್ನು ಕಲಿತು ಅದನ್ನು ಆಚರಿಸಲಾಗದಿದ್ದರೆ ಕಲಿತಾದರೂ ಏನು ಪ್ರಯೋಜನ?" ಎಂದು ಅನ್ನುತ್ತಿದ್ದರಂತೆ. ಬುದ್ಧಿ ಬೆಳೆದಂತೆ ದೇಹವೂ ಬೆಳೆಯಬೇಕು. ವೃತ್ಯ ದೇಹಕ್ಕೆ ಹೊರಗಿನಾಡಂಬರದ ಬುದ್ಧಿವಂತಿಕೆ ಬಂದರೆ ಲೋಕ ಉಳಿಯಲಾರದು. ಪರರಿಗಾಗಿ ಮರಗುವ ಮೃದು ಹೃದಯಬೇಕು. ಅದಕ್ಕಾಗಿಯೇ ದೇಹ–ಬುದ್ಧಿ–ಹೃದಯ, ಈ ಮೂರೂ ಸಮತೂಕದಿಂದ ಬೆಳೆಯಬೇಕು" ಎಂದು ಮುಂತಾಗಿ ವಿದ್ಯಾರ್ಥಿಗಳ ಬಗ್ಗೆ ಮಾರ್ಮಿಕ ಧಾರ್ಮಿಕ ಸಂದೇಶವನ್ನು ನೀಡುತ್ತ–ದುರ್ಬಲತೆಯ ಅಲ್ಪತೆಗಳೆಲ್ಲ ಕೊಚ್ಚಿಹೋಗುವಂತೆ, ಒಂದು ಮಹಾಶಕ್ತಿಯನ್ನು ಹೃದಯದಲ್ಲಿ ಉದ್ದೀಪಿಸುವಂತೆ ಎಚ್ಚರಿಸಿದ್ದಾರೆ,– ಭಾವಪರವಶನಾಗಿ ದಿವ್ಯಾನುಭವವನ್ನು–ಸ್ಫುರಿಸಿದ್ದಾರೆ. "Weakness is the one cause of suffering" ಎಂದು ಕಷ್ಟಗಳಿಗೆ, ಆತ್ಮಶಕ್ತಿಯ ಅಭಾವ ಅಶಕ್ತತೆಯೇ ಮೂಲ ಕಾರಣವೆಂದು ಧೀರೋದಾತ್ತ ಸಿಂಹ ಧೈರ್ಯದೊಡನೆ, ಸರ್ವರಹಸ್ಯಹೃದಯ ಭೇದಿಯಾದ ಯೋಗದೃಷ್ಟಿಯಿಂದ ಚಿತ್ರಿಸುವ ಅವರ ಅದ್ಭುತ ಮೇಧಾ ಶಕ್ತಿ, ಅಧ್ಯಾತ್ಮ ತೇಜಸ್ಸು, ವರ್ಣಿಸಲಸಾಧ್ಯ. ಅದು ಇಂದಿನ ವಿದ್ಯಾರ್ಥಿಗಳಿಗೆ, ಬೀಜರೂಪವಾಗಿಯಾಗಲಿ, ಸಂಸ್ಕಾರರೂಪವಾಗಿಯಾಗಲಿ ಒರುತ್ತ ಹೋದಲ್ಲಿ, ವ್ಯಕ್ತಿತ್ವ ಸಾಧನೆಗೆ ಪ್ರಚಂಡ ಜ್ಯೋತಿ ದೊರೆಯುತ್ತದೆ. ಅದಕ್ಕಾಗಿ ವಿದ್ಯಾರ್ಥಿಗಳಾದವರು ಕೇವಲ ಪಠ್ಯಪುಸ್ತಕಗಳ ಸಂಕುಚಿತ ಸಂಕಲನದಲ್ಲಿ ಮಗ್ನರಾಗಿರದೆ ಅದಕ್ಕೂ ಮಿಗಿಲಾಗಿರುವ, ಗುಪ್ತವಾಗಿರುವ ಆ ಸುಪ್ತಶಕ್ತಿಯನ್ನು ಪ್ರಜ್ವಲಗೊಳಿಸಲು,

ಗುರುಕರುಣೆಯ ದಿವ್ಯ ಶಕ್ತಿಯನ್ನು ಪಡೆಯಲು ಆತುರರಾಗಬೇಕಾಗುತ್ತದೆ. ಈ ಪರೀಕ್ಷೆಯಲ್ಲಿ ತೇರ್ಗಡೆಯಾಗಲು, ಅಹೋರಾತ್ರಿ ಪರಿಶ್ರಮಪಡಬೇಕಾಗುತ್ತದೆ. ಅಂದರೆ ವಿದ್ಯಾರ್ಥಿಗಳಾದವರು ತಪಸ್ವೀಜೀವನ ಸಾಧಿಸಬೇಕಾಗುತ್ತದೆ. ಅಂದಾಕ್ಷಣ, ಕಣ್ಣುಮುಚ್ಚಿ ತಲೆ ಕೆಳಗುಮಾಡಿ ಗುಹೆಯಲ್ಲಿ ಕುಳಿತು ಜಪಮಣಿ ಎಣಿಸುತ್ತ, ಕುಳಿತುಕೊಳ್ಳುವ ತಪಸ್ಸನ್ನು ನಾವೀಗ ಹೇಳುತ್ತಿಲ್ಲ ಮತ್ತು ಶೀಲವೆಂದ ಕೂಡಲೇ ಶರೀರವನ್ನು ಉಜ್ಜಿ ತೊಳೆದು ಮಡಿ ಮೈಲಿಗೆಯ ಹೊರಗಿನ ವಿವರವನ್ನು ಹೇಳುವದು ಇಲ್ಲಿ ಅಪ್ರಾಸಂಗಿಕ.

ಶರೀರದ ಸ್ವಚ್ಛತೆಗೆ ಮಣ್ಣು ನೀರುಗಳು ಸಾಧನವೇ ಹೊರತು ಮುಖ್ಯೋಪಾಯಗಳಲ್ಲ. ಸದ್ಗುಣ ಒಳ್ಳೇ ಸ್ವಭಾವಗಳಿಂದ ಜ್ಞಾನೇಂದ್ರಿಯ ಮತ್ತು ಅಂತಃಕರಣಗಳನ್ನು ತೊಳೆಯುವದೇ ಮಹಾ ಶೀಲ. ಪ್ರವೃತ್ತಿಯನ್ನೇ ತೊರೆದು, ಸದ್‌ವೃತ್ತಿಯನ್ನು ಪಡೆಯುವದೇ ಶೀಲಾಚರಣೆಯ ಮುಖ್ಯ ಗುರಿ. ಶೀಲದ ಆಮೂಲಾಗ್ರವನ್ನು ಅರಿತು ಕಲ್ಪನೆಯ ದವಡೆಯಲ್ಲಿ ಸಿಲುಕಿರುವ ಜ್ಞಾನಾಸ್ತ್ರವನ್ನು ಅರಗಿಸಿಕೊಂಡು ಮೈಗೆ ಹಿಡಿಸಿಕೊಂಡು, ಅನುಭವವನ್ನು ವಿಸ್ತಾರಗೊಳಿಸಿ, ಹೊರಗಿನ ಆವರಣದ ಮನರಂಜನೆಗಳನ್ನು ತ್ಯಾಗಮಾಡಿ, ಸಾಹಿತ್ಯ ತಪೋವನದಲ್ಲಿ ಆತ್ಮಶಕ್ತಿಯನ್ನು ನಿರಂತರ ಪಡೆಯುವದೇ ವಿದ್ಯಾರ್ಥಿಯ ದಿವ್ಯ ತಪಸ್ಸು. ಕಣ್ಣುಮುಚ್ಚಿಕೊಂಡು ಗುಹೆಯಲ್ಲಿ ಕುಳಿತುಕೊಂಡು ತಪಸ್ಸು ಮಾಡುವ ತಪಸ್ವಿಗಿಂತಲೂ ಈ ವಿದ್ಯಾರ್ಥಿಯ ತಪಸ್ಸು ಹೆಚ್ಚಿನದು. ಇದಕ್ಕೆ ಮಿಗಿಲಾದ ಶಕ್ತಿಬೇಕು. ಸಾಹಸ ಧೈರ್ಯ ಬೇಕಾಗುತ್ತದೆ. ಲೋಕ ವ್ಯವಹಾರದಲ್ಲಿದ್ದುಕೊಂಡು, ಅಂತರ್ಮುಖತೆಯ ಅಂತಃಶಕ್ತಿಯನ್ನು ಸತ್ಕಾರ್ಯಗಳ ವಿಚಾರದಲ್ಲಿ ಮನಸ್ಸನ್ನು ಕಳುಹಿಸಿ ಸಾಹಿತ್ಯದ ಅಪಾರವಾದ ಸಾಗರದಲ್ಲಿ ಈಸಿ, ಉದ್ದಾಮ ಕಾವ್ಯಗಳ ರಸಸ್ವಾದನೆ ಮಾಡಿಕೊಂಡು ರಸಸಿದ್ಧಿ ಪಡೆದುಕೊಳ್ಳುವದು, ಪ್ರತಿಭಾಪೂರ್ಣ ವಿದ್ಯಾರ್ಥಿಗೇ ಸಾಧ್ಯವಾದೀತೆ ಹೊರತು, ಅಲ್ಪಾಶೆಯ ಮಳಲಿನಲ್ಲಿ ಹೊರಳಾಡುವ ಬಹಿರ್ಮುಖ ವಿದ್ಯಾರ್ಥಿಗೆ ಸಾಧ್ಯವಾಗದು.

ಎಂತಹ ಕಠಿಣ ಪರಿಸ್ಥಿತಿಯಲ್ಲಿಯೂ, ಮನಸ್ಸನ್ನು ಛಿದ್ರಗೊಳಿಸದೆ ಏಕಾಗ್ರದಿಂದ ಶ್ರದ್ಧೆ ಭಕ್ತಿಯಿಂದ–ನಿಷ್ಠೆಯಿಂದ ಗುರಿ ಮುಟ್ಟುವ ತನಕ ಸಾಧಿಸುವದೇ ನಿಜವಾದ ತಪಸ್ಸು. ಹೆತ್ತಿರುವ ತಂದೆ ತಾಯಿಗಳಿಗೆ, ಗುರು ಹಿರಿಯರಿಗೆ ಮತ್ತು ಸಮಾಜಕ್ಕೆ ದ್ರೋಹ ಬಗೆಯದೆ ಜೀವನ–ನೌಕೆಯನ್ನು ಸುಸೂತ್ರವಾಗಿ ನಡೆಸುತ್ತ, ರಾಷ್ಟ್ರ ನಾಡಿನ ಸೇವೆ, ಸಾಹಿತ್ಯ ಪ್ರಚಾರ, ಜ್ಞಾನಪ್ರಸಾರ ಮುಂತಾದವುಗಳನ್ನು ಒಮ್ಮನಸ್ಸಿನಿಂದ ನಡಿಸಿಕೊಂಡು ಹೋಗುವವೇ ಸತ್‌ಶೀಲ.

ಶೀಲವಿಲ್ಲದ ಜೀವನ ರಸವಿಲ್ಲದ ಹಣ್ಣಿನಂತೆ, ಒಣಗಿರ್ಪ ತರುವಿನಂತೆ. ಶೀಲವೇ ಸಂಸ್ಕೃತಿಗೆ ಕಣ್ಣು. ಶೀಲವೇ ಧರ್ಮ ಸಂಸ್ಕಾರಕ್ಕೆ ಮೂಲಾಧಾರ.

ಶೀಲದಲ್ಲಿ ಶ್ರದ್ಧೆಯುಳ್ಳವರು, ಯಾವದೇ ಹೊರಗಿನ ತಾಮಸಿಯ ಶಕ್ತಿಗೆ ಅಂಜ ಬೇಕಾಗಿಲ್ಲ! ಅಳುಕಬೇಕಾಗಿಲ್ಲ. ಶೀಲವಿದ್ದಲ್ಲಿ ಗಾಳಿ ಹಾರಿಸಿದತ್ತ ಹೋಗಲು ಸಾಧ್ಯವಾಗದು. ಉತ್ತಮಶೀಲ ಜೀವನದಿಂದ ಭಾವ ಪರಿಪೂರ್ಣ-ಪ್ರಜ್ಞೆ ಯುಂಟಾಗಿ, ಸೊಗಸು ಬಾಳಲು ಕಾರಣವಾಗುತ್ತದೆ. ಹೃದಯವನ್ನು ಗೆಲ್ಲಲು ಶೀಲದಷ್ಟು ಉತ್ತಮ ಸಾಧನ ಬೇರೊಂದಿಲ್ಲ. ಶೀಲದಲ್ಲಿ ನಡೆಯುತ್ತ ಹೋದಂತೆ ಅದರ ಶಕ್ತಿ ಹೆಚ್ಚುತ್ತದೆ. ಸತ್ಯಶೀಲವನ್ನು ಆಚರಿಸುವಾಗ, ಕಠಿಣ ಪ್ರಸಂಗಗಳು ಬಂದೊದಗಿದರೂ ಹೆದರದೆ-ಬೆಚ್ಚದೆ, ಮುಂದೆ ಸಾಗಿದರೆ ಫಲ-ಸಿದ್ಧಿ ಕಟ್ಟಿಟ್ಟ ಬುತ್ತಿ. ಔಷಧಿಯ ಸೇವನೆಯು ಕಹಿಯಾದರೂ ಉದರಕ್ಕೆ ಸಿಹಿಯಾಗುವಂತೆ ಶೀಲದ ನಡೆ-ನುಡಿಯು ಬಾಳಿನಲ್ಲಿ ಸವಿಯನ್ನು ನೀಡುವ ದಿವ್ಯೌಷಧ. ಬರಿ ವಿಚಾರವೇ ಬಾಳಿನಲ್ಲಿ ಸಾಲದು; ಆಚಾರವೂ ಕೃತಿಯಲ್ಲಿ ಇಳಿದಾಗ ಮಾತ್ರ ಪರಿಪೂರ್ಣ ಜೀವನ. ಜ್ಞಾನಕ್ಕಾಗಿ ಇರುವ ಜೀವನವು ಪವಿತ್ರವೆಂಬುದು ನಿಜ ವಿದ್ದರೂ ಆ ಜೀವನದ ಹದವು ತಿಳಿಯದ ಜ್ಞಾನವೂ ನಿಷ್ಪ್ರಯೋಜಕ. ಶೀಲವಿಲ್ಲದ ಧರ್ಮ, ಜೀವವಿಲ್ಲದ ದೇಹವಿದ್ದಂತೆ.

"ಧರ್ಮೋ ರಕ್ಷತಿ ರಕ್ಷಿತಃ"

ಎಂಬುಕ್ತಿಯಂತೆ, ಮಾನವ ಕುಲದ ಭವಿಷ್ಯವನ್ನು ನಿರೂಪಣೆ ಮಾಡುವವರಲ್ಲಿ ಧರ್ಮದಷ್ಟು ಪ್ರಬಲವಾದ ಶಕ್ತಿ ಮತ್ತಾವುದರಲ್ಲಿಯೂ ಇರಲಿಕ್ಕಿಲ್ಲವೆಂದು ಹೇಳಲು ಬಹುದು. ಹೃದಯದ ಶೀಲ ಬೆಳೆದಂತೆ, ಧಾರ್ಮಿಕ ಶಕ್ತಿ ಬೆಳೆದು ಆತ್ಮಶಕ್ತಿ ಪ್ರಭೆಯು-ಪ್ರಕಾಶಮಾನವಾಗುವುದು. ತಪ್ಪು ತಡೆಗಳನ್ನು ಹತ್ತಿಕ್ಕಿ, ಸದ್ಗುಣ ರಾಶಿಯನ್ನು, ಹೃದಯ ಚೀಲದಲ್ಲಿ ತುಂಬಿಕೊಳ್ಳುವದೇ ಶೀಲ-ಸಂಸ್ಕೃತಿಯ ಮುಖ್ಯ ಸಾಧನ. ಪಂಪಿನ ಸಹಾಯದಿಂದ ಹೋದ ನೀರು ಬೆಳೆಗಳನ್ನು ಸಂರಕ್ಷಿಸಿ, ಉತ್ತಮ ಫಲ ನೀಡುವಂತೆ, ವಿದ್ಯಾರ್ಥಿಗಳ ವಿದ್ಯೆಯೂ ಸಹ ಜಲಾಶಯದ ರೂಪದಲ್ಲಿರದೆ ಝರಿಯ ರೂಪವಾಗಿ, ಶೀಲಸಂಸ್ಕೃತಿಯೊಡನೆ ಹರಿಯುತ್ತಿದ್ದರೆ ಮಾತ್ರ ಫಲಕಾರಿ ಮತ್ತು ಗುಣಕಾರಿ.

ಜೀವನ ಹೂದೋಟದಲ್ಲಿ ಹೂಗಳಂತೆ ಅರಳುತ್ತಿರುವ ವಿದ್ಯಾರ್ಥಿಗಳ ಆತ್ಮ ಪುಷ್ಟಿಗೆ, ಸದ್ಭಾವಗಳ ಅಮೃತಾಹಾರವನ್ನು ನೀಡುವ ಹಿರಿದಾದ ಹೊಣೆ ಶಿಕ್ಷಕರದು. ಬೀಜಗಳಿದ್ದಂತೆ ವೃಕ್ಷಗಳು ಫಲ ನೀಡುವದು ನಿಸರ್ಗ ನಿಯಮ. ಕಟ್ಟಡಗಳು ಒಮ್ಮೆ ಮಣ್ಣುಪಾಲಾಗಬಹುದು. ಶಿಲೆಯಲ್ಲಿ ಕೆತ್ತಿದ ಚಿತ್ರ ನಾಶ ವಾಗಬಹುದು. ಆದರೆ ವಿದ್ಯಾರ್ಥಿಗಳೆಂಬ ಸಸಿಗಳಿಗೆ ಕರ್ತವ್ಯಾಸಕ್ತಿ, ಸತ್‌ಶೀಲ, ರಾಷ್ಟ್ರಭಕ್ತಿ, ಧ್ಯಾನ, ಭಾವಶ್ರೀ ಮುಂತಾದ ಒಳ್ಳೆದೆಗೆ, ಸ್ಫುರದ್ರೂಪವಾದ ಸಂಸ್ಕಾರದ ಸಿಹಿ ನೀರನ್ನು ಮೇಲಿಂದ ಮೇಲೆ ಹಾಕುತ್ತಿದ್ದರೆ, ಅವುಗಳ ಆತ್ಮದ ಅಮರತ್ವದ ಅಂಶವು ದೇಹಕ್ಕೂ ದೊರೆತು ಅವರ ಜೀವಮಾನವು ದೀರ್ಘಕಾಲದ

ವರೆಗೆ ಬಾಳಿ ಬೆಳಗುವದು. ಅವರ ಅಂತಃಶಕ್ತಿ ಪ್ರಭಾವಶಾಲಿಯಾಗಿ, ನಾಡು ನುಡಿಯ ಸೇವೆಗೆ ಮಾರ್ಗದರ್ಶನ ನೀಡುವದು. ಅದಕ್ಕಾಗಿ ದಿನೇ ದಿನೇ ಬೆಳೆಯುತ್ತಿರುವ ಆಧುನಿಕ ವಿಜ್ಞಾನ ಯುಗದಲ್ಲಿ ಧರ್ಮದ ಅಂತರ್ಗತವಾದ ಶೀಲಕ್ಕೆ ಬೆಲೆ ಕೊಟ್ಟಲ್ಲಿ ಮಾತ್ರ, ನಾಡಿಗೆ, ರಾಷ್ಟ್ರಕ್ಕೆ ಬಲ ಬಂದೀತು. ಕಳೆ ಬೆಳಗಿ, ಆತ್ಮ ಸಾಧನೆಯಿಂದ ಸತ್ವಯುತ ಸಂಸ್ಕಾರದಿಂದ ಕಾಡುಜೀವನ ಪಾವನವಾದೀತು.

ಸರಸ್ವತಿ ದೇವಿಯ ಮಂದಿರದಲ್ಲಿ, ಸಾಹಿತ್ಯಾರಾಧನೆಯನ್ನು ಮಾಡುತ್ತಿರುವ ವಿಶ್ವವಿದ್ಯಾನಿಲಯಗಳ ಆತ್ಮದಂತಿರುವ ವಿದ್ಯಾರ್ಥಿಗಳಿಗೆ ಈ ನುಡಿಗಳು ಪೋಷಕವಾಗಿ ಬಾಳ್ವೆಳಕಿಗೆ ದಾರಿದೀಪವಾಗಲಿ.

ಸತ್ಯದಲ್ಲಿ ನಡೆಯುವದು ಶೀಲ, ಸತ್ಯದಲ್ಲಿ ನುಡಿಯುವದು ಶೀಲ,
ಸಜ್ಜನ ಸದಾಚಾರದಲ್ಲಿ ವರ್ತಿಸಿ, ಸತ್ಯವನರಿವುದೇ ಶೀಲ ಕಾಣಿರೋ
ಮಹಾಲಿಂಗ ಗುರು ಶಿವ ಸಿದ್ಧೇಶ್ವರ ಪ್ರಭುವೆ.

|| ಸತ್ಯಂ ಶಿವಂ ಸುಂದರಂ ||

ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗಾಗಿ ೧೯೬೮ರಂದು ಬೆಂಗಳೂರು, ಭದ್ರಾವತಿ, ಧಾರವಾಡ, ಗುಲಬುರ್ಗ ಬಾನುಲಿ ಕೇಂದ್ರಗಳಿಂದ ಏಕಕಾಲಕ್ಕೆ ಪ್ರಸಾರವಾದ ಆಶೀರ್ವಚನ.

ಶರಣರ ಅಮರ ಜೀವನ

"ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯಾ
ಜ್ಯೋತಿಯ ಬಲದಿಂದ ತಮಂಧದ ಕೇಡು ನೋಡಯ್ಯಾ
ಸತ್ಯದ ಬಲದಿಂದ ಅಸತ್ಯದ ಕೇಡು ನೋಡಯ್ಯಾ
ಪರುಷದ ಬಲದಿಂದ ಅವಲೋಹದ ಕೇಡು ನೋಡಯ್ಯಾ
ಕೂಡಲಸಂಗನ ಶರಣರ ಅನುಭಾವದಿಂದ ಎನ್ನ ಭವದ ಕೇಡು
ನೋಡಯ್ಯಾ."

—ಮಹಾತ್ಮಾ ಬಸವಣ್ಣ

ಪ್ರತಿಯೊಬ್ಬ ವ್ಯಕ್ತಿಯು ಜೀವನದಲ್ಲಿ ಸುಖ–ಶಾಂತಿಯನ್ನು ಪಡೆದು ಕಷ್ಟದ ನೊರೆ–ತೆರೆಗಳನ್ನು ಹೊರಚೆಲ್ಲಿ ಆನಂದಾಂಬುಧಿಯಲ್ಲಿ ಮುಳುಗಿ, ತನ್ನ ಜೀವನವನ್ನು ಸಾಫಲ್ಯಗೊಳಿಸಬೇಕೆಂಬುದೇ ಅವನ ಮಹೋದ್ದೇಶ. ಆ ಉದ್ದೇಶದ ಸಿದ್ಧಿಗಾಗಿ ಅಹೋರಾತ್ರಿ ಕಷ್ಟಪಟ್ಟು ದುಡಿದು ಸಣ್ಣಾಗುತ್ತಾನೆ. ಭವಾರಣ್ಯದಲ್ಲಿ ಸಂಚರಿಸಿ ಬೇಸತ್ತು ಸಿಹಿನೀರಿಗಾಗಿ ನೀರಡಿಸಿ ಬಾಯ್ಬಿಡುತ್ತಾನೆ, ಹಾತೊರೆಯುತ್ತಾನೆ. ಕಲ್ಲು–ಮುಳ್ಳುಗಳನ್ನು ತುಳಿದು, ಬಿರುಗಾಳಿಯ ಹೊಡೆತವನ್ನು ಸಹಿಸಿ, ಚಳಿ–ಮಳೆಯನ್ನು ಲೆಕ್ಕಿಸದೆ ಬಲ್ಗಿಚ್ಚಿನಂದದಿ ಕಾಯ್ದಿರುವ ನೆಲವನ್ನು ತುಳಿದು ಮುಂದಕ್ಕೆ ಸಾಗುತ್ತಾನೆ. ಇದೇ ಸಾಧಕನ ಮೊದಲ ಹೆಜ್ಜೆ. ಇವನು ಶರಣರ ಅಮರಜೀವನದತ್ತ ಧಾವಿಸಿ ಭಾವನೆಯನ್ನು ಪರಿಪಕ್ವಮಾಡಿಕೊಳ್ಳಲು ಪ್ರಯತ್ನಿಸುತ್ತಾನೆ. ಸಾಧನೆ ಸಿದ್ಧಿಸಿದಂತೆ ಶರಣಮಾರ್ಗದಲ್ಲಿ ಕಾಲಿಟ್ಟು ಆನಂದಾನುಭೂತಿಯನ್ನು ಪಡೆಯುತ್ತಾನೆ.ಶರಣರ ಅಮರ ಜೀವನವೇ ಸಾಧಕರಿಗೆ ಸನ್ಮಾರ್ಗಕಾಧಾರ.

ಇಂದಿನ ವಿಜ್ಞಾನಯುಗದಲ್ಲಿ ಎತ್ತನೋಡಿದತ್ತ ಕಾಳರಾತ್ರಿಯ ಕತ್ತಲು ಕವಿದಿದೆ. ದೂರದತ್ತ ನೋಡಿದಾಗ ಮಹಾಯುದ್ಧವೆಂಬ ಘಟಸರ್ಪವು ಬಾಯ್ದೆರೆದು ನಾಲಿಗೆ ಚಾಚಿದೆ. ರಾಷ್ಟ್ರ-ರಾಷ್ಟ್ರಗಳೊಡನೆ ಅಶಾಂತಿಯ ಕೂಗು ಕೇಳಿ ಬರುತ್ತದೆ. ಒಿರಿಕಿರಿದು ಭೇದಭಾವವು ಒಡಮೂಡಿ, ಸಂಗಡಿಗನಂತೆ ಸುಳಿಯುತ್ತಲಿದೆ. ಸಹಕಾರ ಸೌಹಾರ್ದಗಳು ಮಾತಿನ ಮಾಲೆಯಾಗಿವೆ. ಪ್ರತ್ಯೇಕ ವ್ಯಕ್ತಿಯ ನಾಡಿ–ನಾಡಿಯಲ್ಲಿ ಅಹಂಭಾವ–ರಕ್ತ ಚಿಮ್ಮುತ್ತಲಿದೆ. ಸ್ವಾರ್ಥಕ್ಕೆ ಜನ್ರ ಒದ್ದಾಡುತ್ತಿದ್ದಾರೆ. ಯಾವ ವ್ಯಕ್ತಿಯನ್ನು ಕೇಳಿದರೂ ಅಶಾಂತಿಯ ಭಾವನೆಯನ್ನೇ ತೋರ್ಪಡಿಸುತ್ತಾನೆ. ಒಂದೆಡೆ ಪಕ್ಷ–ಪಂಗಡಗಳ ಕೂಗಾದರೆ ಮತ್ತೊಂದೆಡೆ ಹೆಸರಿನ ಕೂಗು. ಯುವಕರಲ್ಲಿಯೂ ಚಳವಳಿಯ ಕಳವಳ

ಬೆಳೆಯುತ್ತಲಿದೆ. ತಾಮಸಗುಣವು ತಾಂಡವವಾಡುತ್ತಲಿದೆ. ಹಿರಿಯರಲ್ಲಿಟ್ಟ ಕಿರಿಯರ ಭಕ್ತಿಬಳ್ಳಿ ಬಾಡುತ್ತ ನಡೆದಿದೆ. ಹಿರಿಯರೂ ತಮ್ಮ ಕರ್ತವ್ಯವನ್ನು ಬಿಟ್ಟು ವಿಮುಖರಾಗುತ್ತಿದ್ದಾರೆ. ವಿಶಾಲಭಾವನೆಯ ನುಡಿಯನ್ನು ನಡೆಯಲ್ಲಿ ತಾರದೇ ಕೇವಲ ಕಿರಿಯರೇ ತಪ್ಪನ್ನು ಮಾಡುತ್ತಾರೆಂಬುವ ಭಾವನೆಯನ್ನು ಮುಂದುಮಾಡಿ ಮತ್ತಿಷ್ಟು ಅವನತಿಗಿಳಿಯಲು ಪ್ರಯತ್ನಿಸುತ್ತಾರೆಯೇ ವಿನಾ ಅವರ ಶಕ್ತಿಯನ್ನು ಸದುಪಯೋಗಮಾಡಿಕೊಳ್ಳದೇ ಕೇವಲ ಹಾಹಾಕಾರ ಎಬ್ಬಿಸುವದರಲ್ಲಿ ಮಗ್ನರಾಗಿದ್ದುದನ್ನು ಕಂಡು ಚಿಕ್ಕವರೇ ಅಚ್ಚರಿಪಡುವಂತಹ ಪ್ರಸಂಗ ಬಂದಂತಾಗಿವೆ. ಕಿರಿಯರನ್ನು ತೀಡುವದು ಮರೆತು ಪೀಡಿಸುವದೇ ಹಿರಿಯರ ಗುರಿಯಾದಂತಾಗಿದೆ. ಲೋಕದ ಮನರಂಜನೆಗಾಗಿ ದೇಹವನ್ನು ಹಣ್ಣುಮಾಡುತ್ತಿದ್ದಾರೆ, ಶಕ್ತಿಹೀನರಾಗುತ್ತಿದ್ದಾರೆ.

ರಾಷ್ಟ್ರ ಮೊದಲು ಮಾಡಿಕೊಂಡು ಮನೆಯುವರೆಗೂ ಅನೈಕ್ಯತೆಯೇ ಎದ್ದು ಕಾಣುತ್ತದೆ. ಅನೇಕ ಧರ್ಮಗಳ ಜಂಜಾಟ, ಹಿಂಸಾತ್ಮಕ ಧಾರ್ಮಿಕ ಆಚರಣೆಗಳ ತಿಕ್ಕಾಟ, ಜಾತೀಯತೆಯ ಸಂಕರೋಗದ ಅಲೆದಾಟ, ಜಗತ್ತಿನಲ್ಲಿಯೇ ಇವುಗಳ ಜೂಜಾಟ ನಡೆದುಬಿಟ್ಟಿದೆ. ಜೀವನದಲ್ಲಿಯ ಅನೇಕ ಬಗೆಯ ಕಾದಾಟ ಕಲೆತು ಬೆಳೆದು ಬೇರ್ಪಟ್ಟಿದೆ. ಈ ರೀತಿಯಾಗಿ ಜಗತ್ತಿನಲ್ಲಿ ಅಜ್ಞಾನದ ಮಬ್ಬು ಹಬ್ಬ ಬೇಕಾದರೆ ಶರಣರ ಅಮರ ಜೀವನದ ನಡೆನುಡಿಗಳನ್ನು ತಮ್ಮ ಹೃದಯದಲ್ಲಿ ಇಳಿಸಿಕೊಳ್ಳದಿರುವುದೇ ಮೂಲ ಕಾರಣವೆಂದು ಹೇಳಬಹುದು. ಯಾರ ಭಾವನೆ ಪರಿಪಕ್ವವಾಗಿ ಆತ್ಮಸಿದ್ಧಿ ಮತ್ತು ಸಮಾಜಸೇವೆಯತ್ತ ಹರಿದಾಡುತ್ತದೆಯೋ, ಅಂಥವರು ಶರಣರು. ಬಸವಣ್ಣ, ಹರೀಶ್ವರ, ಯಾಜ್ಞವಲ್ಕ್ಯ, ವಾಲ್ಮೀಕಿ, ಕಾಳಿದಾಸ, ಕಬೀರದಾಸ, ಪುರಂದರದಾಸ, ಮಹಾತ್ಮಾ ಗಾಂಧಿ ಮುಂತಾದವರೆಲ್ಲರೂ ಶರಣರು. ಮೋಕ್ಷಾಪೇಕ್ಷಿಗಳೂ ಮತ್ತು ತಮ್ಮ ಪವಿತ್ರಜೀವನದಿಂದ ಜನತೆಯನ್ನುದ್ಧರಿಸುವವರೂ ಶರಣರು. ಹಿಂದಿನ ಶರಣರಲ್ಲಿ ಒಂದು ಬಗೆಯ ಸವ್ಯತೆಯು ಭವ್ಯತೆಯೂ ಕಾಣುತ್ತಲಿದೆ. ಅವರಲ್ಲಿ ಸತ್ಯತೆಯ ಹೊಂಗಿರಣ ಹೊರಸೂಸುತ್ತಿದೆ. ಅವರ ಭಾವವೈಖರಿ ನೋಡಿದಾಗ ರೋಮಾಂಚಗಳು ಏಳುತ್ತವೆ. ಅವರ ಪ್ರತಿಯೊಂದು ನುಡಿಯೂ ಹೃದಯಮುಟ್ಟಿ ಬಂದುದಕ್ಕಾಗಿಯೇ ನಮಗಿಂದು ಸಿದ್ಧಿಸಾಧನೆಗೆ ಆ ನುಡಿಗಳು ದಾರಿದೀಪಗಳಾಗಿವೆ.

ನಾವೀಗ ಶರಣ ಶಬ್ದಪ್ರಯೋಗವನ್ನು ಆರೇಳು ರೀತಿಯಲ್ಲಿ ಮಾಡಬಹುದು.

'ಮಾಮೇಕಂ ಶರಣಂ ವ್ರಜ'

—ಭಗವದ್ಗೀತೆ

ಭಗವಂತನು ಅರ್ಜುನನನ್ನು ಕುರಿತು ದುಃಖಗಳು ಬಂದೊದಗಿದಾಗ ನನ್ನನ್ನು ಶರಣುಹೊಂದು ಎಂದು ಅನೇಕ ರೀತಿಯಾಗಿ ಹೇಳುತ್ತಾನೆ. ಇದೇ ಪ್ರಕಾರ ಬೌದ್ಧರು—

ಬುದ್ಧಂ ಶರಣಂ ಗಚ್ಛಾಮಿ
ಧರ್ಮಂ ಶರಣಂ ಗಚ್ಛಾಮಿ
ಸಂಘಂ ಶರಣಂ ಗಚ್ಛಾಮಿ

ಎಂಬುದಾಗಿ ಪ್ರಾರ್ಥಿಸಿದ್ದಾರೆ.

ಭಕ್ತರು ಭಕ್ತರನ್ನು ಕಂಡಾಗ ಭಕ್ತರೊಡನೆ ಪತ್ರವ್ಯವಹಾರ ಮಾಡುವಾಗ ಶರಣರು, ಶರಣಾರ್ಥಿ ಎಂಬುದು ನಮ್ಮ ಕನ್ನಡ ಸಂಸ್ಕೃತಿಯಲ್ಲಿ ಬೆಳೆದುಬಂದಿದೆ.

ಮಹಾಶಿವಯೋಗಿ ನಿಜಗುಣರಾದರೂ "ಶ್ರೀಗುರುವೇ ನೀನೆ ಶರಣಾಗೆನಗೆ" ಎಂದು ಶ್ರೀಗುರುವನ್ನು ಕುರಿತು ರಕ್ಷಿಸಲು ಬೇಡಿದ್ದಾರೆ.

ಮತ್ತೊಬ್ಬರು "ಶಿವನು ಶರಣಾಗತ ರಕ್ಷಕ"ನೆಂದು ಅನನ್ಯ ಭಾವನೆಯಿಂದ ಮೊರೆಹೊಕ್ಕು ಹಾಡಿದ್ದಾರೆ.

"ಶರಣರಗುಣ ಮರಣದಲ್ಲಿ" ಎಂಬ ನಾಣ್ಣುಡಿಯೂ ಉಂಟು. ಹೀಗೆ ಅನೇಕ ಪ್ರಕಾರವಾಗಿ ಶರಣ ಶಬ್ದದ ಮಹತ್ವವನ್ನು ಹಲವು ರೀತಿಯಲ್ಲಿ ತಿಳಿಯಪಡಿಸಿದ್ದಾರೆ. ಶರಣ ಶಬ್ದದ ಅರ್ಥವೇ ಇಷ್ಟು ಮಹತಿಯುಳ್ಳದ್ದಿರುವಾಗ ಅದನ್ನರಿತು ಅರಗಿಸಿಕೊಂಡ ಶರಣರು ಎನಿತು ಮಹಾನುಭಾವಿಗಳಾಗಿರಬಹುದು ಎಂಬುದನ್ನು ಊಹಿಸಬಹುದಾಗಿದೆ.

ಶರಣರು ಕಾಯಾರ್ಪಣ, ಕರಣಾರ್ಪಣ, ಭಾವಾರ್ಪಣ—ಹೀಗೆ ಸರ್ವಾರ್ಪಣ ಭಾವ ಸಂಪನ್ನರಾಗಿ ಹಾಡಿದ 'ಸರ್ವಕರ್ಮಾಣ್ಯಪಿ ಸದಾಕುರ್ವಾಣೋ ಮದ್ವ್ಯಪಾಶ್ರಯಃ.'

"ಮತ್ಪ್ರಸಾದಾದವಾಪ್ನೋತಿ ಶಾಶ್ವತಂ ಪದಮವ್ಯಯಮ್"

ಎಂಬ ಗೀತೆಯ ಶ್ಲೋಕವು ನೆನಪಿಗೆ ಬರುತ್ತದೆ.

ಸೂಕ್ಷ್ಮ ದೃಷ್ಟಿಯಿಂದ ವಿಚಾರ ಮಾಡಿದಾಗ ಸರ್ವ ಋಷಿಗಳೂ ಆಚಾರ್ಯರೂ ಪೈಗಂಬರಾದಿಯಾಗಿ ಸಕಲದೃಷ್ಟಿಯಲ್ಲಿ ಪ್ರಪಂಚವು ದುಃಖಮಯವಾಗಿ ಕಂಡು, ಕೊನೆಗೆ ಸಮರ್ಪಣಬುದ್ಧಿ ಬಂದುದು ಕಂಡುಬರುವದು. ಇದೇ ಚರಮ ಜೀವನ, ಆತ್ಮಸಿದ್ಧಿ ಮಾಡಿಕೊಳ್ಳಲು ಇದೇ ಹೆದ್ದಾರಿ. ಶರಣರ ಇರವ ಅರಿಯಬೇಕಾದರೆ ಅವರ ಜೀವನವನ್ನು ನಿರೀಕ್ಷಿಸಬೇಕು. ಅವರು ನಡೆನುಡಿಗಳಿಗೆ ಎನಿತು ಬೆಲೆಕೊಟ್ಟಿದ್ದರೆಂಬುದನ್ನು ವಿಚಾರಿಸಬೇಕು.

ನೈತಿಕ ಜೀವನ, ಲೌಕಿಕ ಜೀವನ, ಸಾಹಿತ್ಯಕ ಜೀವನ, ಸಾಮಾಜಿಕ ಜೀವನ, ಆಧ್ಯಾತ್ಮಿಕಜೀವನ—ಇವುಗಳ ಸಾಮರಸ್ಯವೇ ಶರಣರ ಅಮರ ಜೀವನ.

ನೈತಿಕ ಜೀವನ

ನೈತಿಕ ಜೀವನವೇ ಶರಣ ಜೀವನದ ಅಡಿಗಲ್ಲು. ವ್ಯಕ್ತಿಯ ವ್ಯಕ್ತಿತ್ವದ ಒಳಗುಟ್ಟೇ ನೈತಿಕ ಜೀವನ. ನೀತಿಗಿದ್ದ ಬೆಲೆ ಮುಕ್ತಿಗೂ ಸಿಗದು. ನೈತಿಕಾ ಚರಣೆಯನ್ನು ಆಚರಿಸುತ್ತಿರುವ ಸಾಧಕ ಮನಸ್ಸು ನಿರಂತರ ಶಾಂತಮಯವಿರುವದು. ನೀತಿಯಿಂದಲೇ ವಿಶ್ವವು ಭದ್ರವಾಗುವದನ್ನರಿತ ಜಗದಣ್ಣ ಬಸವಣ್ಣನವರು ತಂದೆಯು ಮಗುವಿಗೆ ತಿಳಿಸುಡಿ ತಿಳಿಸಿದಂತೆ ಸಮಾಜಕ್ಕೇನೆ ತಿಳಿಭಾಷೆಯಲ್ಲಿ—

"ಕಳಬೇಡ, ಕೊಲಬೇಡ, ಹುಸಿಯ ನುಡಿಯಲುಬೇಡ, ಅನ್ಯರಿಗೆ ಅಸಹ್ಯ ಪಡಬೇಡ, ಇದಿರು ಹಳಿಯಲು ಬೇಡ, ಇದೇ ಅಂತರಂಗಶುದ್ಧಿ; ಇದೇ ಬಹಿರಂಗ ಶುದ್ಧಿ; ಇದೇ ನಮ್ಮ ಕೂಡಲ ಸಂಗಮ ದೇವನ ಒಲಿಸುವ ಪರಿ" ಎಂಬುದಾಗಿ ಅಕ್ಕರತೆಯಿಂದ ತಿಳಿಸಿರುವರು. ನೀತಿಯಿಲ್ಲದೆ ಸಚ್ಚಿದಾನಂದವನ್ನು ಪಡೆಯ ಬೇಕೆಂಬುವವನು ಬಯಲಿನಲ್ಲಿ ಗೋಡೆಕಟ್ಟಿದಂತೆ ವ್ಯರ್ಥ ಪ್ರಯಾಸವಾಗುವದು. ವಿದ್ಯಾಬುದ್ಧಿ, ತೇಜಃಪ್ರಭಾವ, ಗುಣಗೌರವ, ಬಲರೂಪ, ಯೌವನಶ್ರೀ ಇವೆಲ್ಲವೂ ಒಂದುದಿನ ಹುಡಿಯಾಗಿ ಮಣ್ಣುಪಾಲಾಗುವವು.

ಕತ್ತಲೆಯೊಳಿರ್ದು ದೀಪದ
ಬಿತ್ತವರಂ ಬಣ್ಣಿಸಲ್ಕೆ ಬೆಳಕಹುದಂತೈ!
ಸತ್ಯಬ್ರಹ್ಮವ ಬಲುಹೊಗ-
ಳುತ್ತಿರೆ ಸತ್ಕ್ರಿಯೆಗಳಿಲ್ಲದಿರಲದು ವ್ಯರ್ಥಂ॥ —ಪೂಮಾಲೆ

ಜೀವನದ ಶಾಂತತೆಗಾಗಿ ಸತ್ಕ್ರಿಯೆಗಳು ಅತ್ಯಾವಶ್ಯಕ. ಅಂತರಂಗ ಶುದ್ಧಿ ಯನ್ನು ಪಡೆದು ಪರಮಾತ್ಮನನ್ನು ಒಲಿಸಲು ನೀತಿಯೇ ರಾಜ ಮಾರ್ಗವೆಂದು ಶರಣರ ಮತ. ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ ಇವುಗಳೇ ಚಿತ್ತಪಸ್ಸಿಗೆ ಆತಂಕಗಳು, ಇವೆಲ್ಲವುಗಳನ್ನು ಉಪಾಯದಿಂದ ಹೊರದೂಡ ಬೇಕಾಗುತ್ತದೆ. ಎಲ್ಲದಕ್ಕೂ ಹೆಚ್ಚಾಗಿ ಆಶೆಯೇ ಭವಕ್ಕೆ ಬೀಜವೆಂದು ಹಿರಿಯರು ಹೇಳಿರುವರು. ಆ ಆಶೆಯಿಂದಲೇ ಜನ್ಮಗಳನ್ನೆತ್ತಬೇಕಾಗುತ್ತದೆ.

"ಪರೋ ಮೋಕ್ಷೋ ವಿತೃಷ್ಣತಾ"

ಎಂಬ ನೀತಿ ವಾಕ್ಯದಂತೆ ಆಶೆಯಿಲ್ಲದಿರುವುದೇ ಮಹಾ ಮೋಕ್ಷ. ಪಾಶ್ಚಾತ್ಯರ ತತ್ವ ಜ್ಞಾನಿಗಳಾದರೂ Dark night of the soul ಎಂದು ಬಿತ್ತರಿಸಿದ್ದಾರೆ.

ಭಾರತ ರಾಷ್ಟ್ರದ ವಸ್ತು ಸಂಗ್ರಹಾಲಯದಲ್ಲಿ ಪ್ರಧಾನ ಮಂತ್ರಿ ನೆಹರೂ ಇಡಿಸಿದ ಮೂರು ಮಂಗಗಳುಳ್ಳ ವಿಗ್ರಹದಿಂದ ಹೊರಡುವ,

See no evil
Speak no evil
Hear no evil

ಈ ಮೂರು ಮಾತುಗಳನ್ನು ಮಹಾತ್ಮಾ ಗಾಂಧಿಯವರು ಮೇಲಿಂದ ಮೇಲೆ ತಮ್ಮ ಪ್ರವಚನದಲ್ಲಿ ಹೇಳುತ್ತಿದ್ದರಂತೆ. ಇದೇ ಮಾತನ್ನೇ ತಿಳಿಗನ್ನಡದಲ್ಲಿ ಸಾಮಾನ್ಯರಿಗೂ ಅರಿಯುವಂತೆ ಮಹಾಶರಣ ಬಸವಣ್ಣನವರು—

"ಕೊಂಬೆಯ ಮೇಲಣ ಮರ್ಕಟನಂತೆ ಲಂಘಿಸುವುದೆನ್ನ ಮನವು, ಕೂಡಲ ಸಂಗಮದೇವಾ ನಿಮ್ಮ ಚರಣ ಕಮಲದಲ್ಲಿ ಭ್ರಮರನಾಗಿರಿಸು ನಿಮ್ಮ ಧರ್ಮ"

ಮತ್ತು "ಅತ್ತಲಿತ್ತ ಹೋಗದಂತೆ ಹೆಳವನ ಮಾಡಯ್ಯಾ ತಂದೆ, ಸುತ್ತ ಸುಳಿದು ನೋಡದಂತೆ ಅಂಧಕನ ಮಾಡಯ್ಯಾ ತಂದೆ, ಮತ್ತೊಂದು ಕೇಳದಂತೆ ಕಿವುಡನ ಮಾಡಯ್ಯಾ ತಂದೆ" ಎಂದು ಮುಂತಾಗಿ ನುಡಿದಿದ್ದಾರೆ. ಮನೆಯಲ್ಲಿ ಕಸ ಹುಟ್ಟಿ ಹೊಸ್ತಿಲಲ್ಲಿ ಹುಲ್ಲು ಬೆಳೆದಾಗ ಮನೆಯೊಳಗೆ ಯಾರೂ ಇರಲಾರರೆಂಬ ಭಾವನೆ ಹುಟ್ಟುವದು ಸ್ವಾಭಾವಿಕ. ಅಂತೆಯೇ ಪುಣ್ಯ-ಪಾಪಗಳನ್ನು ತಿಳಿಯದೆ ಇಲ್ಲದಿರುವುದು, ಲೋಭಿಯಾಗಿರುವುದು, ಕಿಂಕರಭಾವದಿಂದ ನಡೆಯದಿರುವುದು, ವಿಷಯ ವ್ಯಾಮೋಹದಲ್ಲಿ ಮನಸ್ಸು ಹರಿಯುವುದು ಇವುಗಳು ಕಂಡುಬಂದಲ್ಲಿ ಆತ್ಮಪ್ರಕಾಶ ಇರುವುದಿಲ್ಲ. ಕೇವಲ ಕಾರ್ಗತ್ತಲೆ ಕಾಣುವದು ನಿಶ್ಚಯ. ಸಂತ ತುಳಸೀದಾಸರೂ—

"ನರತನು ಪಾಯಿ ವಿಷಯ ಮನದೇಹಿ
ಪಲಟ್ ಸುಧಾ ತೇ ಸಠ ವಿಷಲೇಹಿ"

ಮಾನವ ದೇಹವನ್ನು ಹೊಂದಿಯೂ ವಿಷಯ ಭೋಗದ ಕಡೆ ಮನಸೆಳೆಸುವ ದೆಂದರೆ ಅಮೃತವನ್ನು ಬಿಟ್ಟು ವಿಷವನ್ನು ಸೇವಿಸಿದಂತೆ ಎಂದು ಸಾರಿದ್ದಾರೆ. ನೈತಿಕ ಜೀವನವೇ ಮುಕ್ತಿಗೆ ಸಾಧನ. ವಿರಕ್ತಿಗೆ ಸೋಪಾನ.

ಲೌಕಿಕ ಜೀವನ:

ಶರಣರಾಗಬೇಕೆನ್ನುವವರು ಬ್ರಹ್ಮಚಾರಿಗಳಾಗಿಯೇ ಇರಬೇಕೆಂಬುದು ನಿಯಮವಿಲ್ಲ. ಗೃಹಸ್ಥರಾದವರಿಗೂ ಸಾಧ್ಯ. ಹಿಂದಿನ ಮಹಾಶರಣರು ಹೆಚ್ಚಾಗಿ ಲೌಕಿಕರಾಗಿಯೇ ಇದ್ದರು. ಲೌಕಿಕ ಜೀವನವಲ್ಲಿ ಸುಖವಾಗಿ ಬಾಳಬೇಕಾದರೆ ಸತಿ-ಪತಿಗಳ ಭಾವ ಒಂದೇ ತೆರನಾಗಿ ಇರಬೇಕಾಗುತ್ತದೆ.

"ಸಮರಸ ಸಂಸಾರ ಸ್ವರ್ಗ, ವಿರಸ ಸಂಸಾರ ನರಕ, ಸಂಸಾರದಲ್ಲಿ ಗಂಡ-ಹೆಂಡಿರು ಅನ್ಯೋನ್ಯವಾಗಿದ್ದರೆ ಅಂಥವರ ಭಕ್ತಿ ಶಿವನಿಗೆ ಮೆಚ್ಚು."

"ಸತಿ-ಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ, ಸತಿ-ಪತಿಗಳೊಂದಾಗ ದವರ ಭಕ್ತಿ ಅಮೃತದೊಳು ವಿಷವ ಬೆರಸಿದಂತೆ ಕಾಣಾ ರಾಮನಾಥಾ."

—ದೇವರ ದಾಸಿಮಯ್ಯ

"ಉಭಯ ದೃಷ್ಟಿಯಿಂದ ದೃಷ್ಟವ ಕಾಂಬಂತೆ, ದಂಪತಿ ಏಕಭಾವವಾಗಿ ನಿಂದಲ್ಲಿ ಗುಹೇಶ್ವರ ಲಿಂಗಕ್ಕೆ ಅರ್ಪಿತವಾಯ್ತು." —ಅಲ್ಲಮಪ್ರಭು

"ಸತಿ-ಪತಿಗಳ ಶರೀರ ಬೇರೆಯಾಗಿದ್ದರೂ ಆತ್ಮ ಒಂದೇ ಆಗಿರಬೇಕು. ಅವರಿಬ್ಬರ ಭಾವ ಒಂದಾಗಿ ಸದ್ಗುಣಭರಿತವಾಗಿ ನಡೆದರೆ, ಅವರ ಜೀವನ ಪಾವನ. ಭೇದಭಾವವಿದ್ದಲ್ಲಿ ಸಂಸಾರದ ಬಳ್ಳಿಯೇ ಒಣಗಿದಂತೆ.

ಇಂದಿನ ಸಮಯದಲ್ಲಿ ಸರಕಾರದವರು ಇಂತಿಷ್ಟೇ ಭೂಮಿ ಇರಬೇಕು. ದ್ವಿಪತ್ನೀ ನಿರೋಧಕ ಇತ್ಯಾದಿ ನಿಯಮಗಳನ್ನು ಹೊರಡಿಸುತ್ತಿರುವಂತೆ ಹಿಂದಿನ ಶರಣ ಜೀವನ ನೋಡಿದಾಗ ಸರಕಾರದ ಧೋರಣ ಇದ್ದಂತೆ ಇತ್ತೆನ್ನಬಹುದು.

ಲೌಕಿಕ ಜೀವನದಲ್ಲಿ ಸಮರಸ ಭಾವಕ್ಕೆ ಪ್ರಾಧಾನ್ಯತೆ ಹೆಚ್ಚು. ಅಂದರೇನೇ ಬಾಳಿಗೆ ಕೆಚ್ಚು ಮೆಚ್ಚು.

ಸಾಹಿತ್ಯಕ ಜೀವನ:

ಇಂದು ಕರುನಾಡು ಉನ್ನತ ಮಟ್ಟಕ್ಕೇರಬೇಕಾದರೆ ಶರಣರ ಸಾಹಿತ್ಯದ ಪ್ರಭಾವದಿಂದಲೇ ಎಂದು ಹೇಳಬಹುದು. ಕನ್ನಡಮ್ಮನ ಗರ್ಭದಲ್ಲಿ ಪಂಪ, ಹರೀಶ್ವರ, ರನ್ನ, ಬಸವಣ್ಣ, ಚನ್ನಬಸವಣ್ಣ, ನಿಜಗುಣಶಿವಯೋಗಿ, ಅಕ್ಕಮಹಾದೇವಿ, ಪುರಂದರದಾಸ ಮುಂತಾದ ದಾಸಕೂಟದವರೂ ಶರಣ ಶರಣೆಯರೂ ಜನಿಸಿ, ಕನ್ನಡ ಸಾಹಿತ್ಯಕ್ಕೆ ಒಂದು ಕಳೆ ತಂದುಕೊಟ್ಟಿದ್ದಾರೆ; ಚೈತನ್ಯವಿತ್ತಿದ್ದಾರೆ. ಅನುಭವಿಸಿ ಹೊರಬಂದ ನುಡಿಯೇ ಸಾಹಿತ್ಯ "ನಾನೃಷಿಃ ಕುರುತೇ ಕಾವ್ಯಂ" ಋಷಿಯಲ್ಲದವ ಕವಿಯಾಗಲಾರ. ಸಾಹಿತಿಯಾಗಲಾರ. ಸಾಹಿತಿಯು ಸಿಹಿಕಹಿಗಳುಂಡು ಅದರ ಪಾಕವನ್ನೇ ಜನರೆದುರು ಇಟ್ಟ ಕ್ರಾಂತಿದರ್ಶಿ, ತತ್ವದರ್ಶಿ, ಸಮಾಜವನ್ನು ಸುಧಾರಿಸಲು ಮೂಲ ಕಾರಣ. ಜನಜೀವನದ ನಡೆ-ನುಡಿಗಳಲ್ಲಿರುವ ಒಪ್ಪು ತಪ್ಪುಗಳನ್ನು ಕಂಡುಹಿಡಿದು ಜನರನ್ನು ಎಬ್ಬಿಸುತ್ತಾನೆ. ಅವರ ನಿದ್ದೆಯನ್ನು ತೊಲಗಿಸುತ್ತಾನೆ. ಸಾಹಿತಿಯ ಕೂಗು ಕಳಕಳಿಯ ಮತ್ತು ಎವೆಬೆಂದ ನುಡಿಯಿದ್ದುದಕ್ಕಾಗಿ ಜನತೆ ಬಾಗುತ್ತದೆ. ಆತ್ಮಸಿದ್ಧಿಗಾಗಿ ಅಹೋರಾತ್ರಿ ಕಷ್ಟಪಟ್ಟು ನೊಂದು ಬೆಂದು ಭಾವಪರವಶನಾಗಿ ಹಾಡಿದ ಸಾಹಿತ್ಯ ಯಾರಿಗೆ ತಾನೆ ರುಚಿಸಲಿಕ್ಕಿಲ್ಲ? ಸತ್ಯ ಸಾಹಿತಿಯು ರಚನೆಯೇ ವಿಚಿತ್ರವಾದದ್ದು,

"ರಸೋ ವೈ ಸಃ", "ಸತ್ಯಂ ಶಿವಂ ಸುಂದರಂ"

ಈ ಭಾವನೆಯನ್ನೇ ಮನದೊಳಗೆ ಇಳಿಸಿ ಬೆಳೆಸಿ, ಗಳಿಸಿ ಉಳಿಸುವವನೇ ನಿಜವಾದ ಸಾಹಿತಿ. ಇಂತಹ ಸುಂದರ ಸಾಹಿತ್ಯವನ್ನು ಶರಣರು ರಚಿಸಿದ್ದಾರೆ. ಕನ್ನಡ ನಾಡಿಗೆ ಬೆಳಕು ನೀಡಿದ್ದಾರೆ. ಶರಣರ ವಚನಗಳು ರಸಭಾವ ಅಲಂಕಾರ

ಗಳಿಂದ ಮತ್ತು ಉದಾತ್ತ ವಿಚಾರಗಳಿಂದ ಕೂಡಿರುವವರಿಂದ ತತ್ತ್ವವೇತ್ತರು ಕನ್ನಡ ಸಾಹಿತ್ಯದ ಉಪನಿಷತ್ತುಗಳೆಂದು ಕರೆದಿದ್ದಾರೆ.

ಒಂದೆಡೆ ಅಲ್ಲಮಪ್ರಭುಗಳು ತೋಟದ ವರ್ಣನೆಯನ್ನು ಈ ಪರಿ ಬಣ್ಣಿಸಿರುವರು.

"ತನುವ ತೋಟವಮಾಡಿ, ಮನವ ಗುದ್ದಲಿಮಾಡಿ, ಅಗೆದು ಕಳೆದೆನಯ್ಯಾ ಭ್ರಾಂತಿಯಾ ಬೇರನು, ಒಡೆದು ಸಂಸಾರದ ಹೆಂಟೆಯ, ಬಗೆದು ಬಿತ್ತಿದೆನಯ್ಯಾ ಬ್ರಹ್ಮದ ಬೀಜವ, ಅಖಂಡ ಮಂಡಲವೆಂಬ ಭಾವಿ, ಪವನವೇ ರಾಟಾಳ, ಸುಷುಮ್ನದಿಂದುದಕವ ತಿದ್ದಿ ಬಸವಗಳೈವರು ಹಸಗೆಡಿಸಿಹವೆಂದು ಸಮತೆ ಸೈರಣೆ ಬೇಲಿಯನಿಕ್ಕಿ ಆವಾಗಳು ಈ ತೋಟದಲ್ಲಿ ಜಾಗರವಿದ್ದು ಸಸಿಯ ಸಲಹಿದೆನು ಕಾಣಾ ಗುಹೇಶ್ವರಾ." ಭಾವವೈವಿಧ್ಯತೆ, ರಸಮಾಧುರ್ಯ ಆಧ್ಯಾತ್ಮಿಕದ ತಪಶ್ಶಕ್ತಿ, ಕಾವ್ಯದ ಲಕ್ಷಣ ಮುಂತಾದವುಗಳು ಇಲ್ಲಿ ಕಂಡುಬರುತ್ತವೆ. ಅಲ್ಲಮಪ್ರಭುವಿನ ವಿರತಿಯ ಕೆಚ್ಚೆದೆಯೇ ಅಂತಹದು. ವ್ಯಾವಹಾರಿಕ ಶಬ್ದದಲ್ಲಿಯೇ ಆಧ್ಯಾತ್ಮಿಕ ಶಕ್ತಿತೋರಿಸಿ ಶಬ್ದ ಸೌಷ್ಠವದ ಶ್ರೇಷ್ಠತೆಯನ್ನು ಎದುರಿಗಿಟ್ಟಿದ್ದಾರೆ. ಶರಣರ ಸಾಹಿತ್ಯದ ಹೊಳೆ ಶಾಂತಮಯವಾಗಿ ಹರಿದಿದೆ. ಎಲ್ಲೆಲ್ಲೂ ಆವೇಶವಿಲ್ಲ. ರಸೋದ್ರೇಕವಿಲ್ಲ. ಭಕ್ತಿಭಾವದ ಬೆಳಕು ಕಾಣುತ್ತಲಿದೆ.

"ನರಕದಲ್ಲಿ ಬೀಳುವ ಮನುಜರಿಗೆ ಶಿವಭಕ್ತಿ ಎಂಬುದು ಕರಗಹಿ"

"ಅನುಭವವಿಲ್ಲದವನ ಭಕ್ತಿ ತಲೆಕೆಳಗಪ್ಪುದಯ್ಯಾ" ಎಂಬುದಾಗಿ ಗಾದೆಗಳಂತೆ ಮಾತುಗಳನ್ನು ಜೋಡಿಸಿ ಅರ್ಥಗರ್ಭಿತವಾಗಿ ಸಾಮಾನ್ಯರಿಗೂ ತಿಳಿಸಿದ್ದಾರೆ,

ವೇದವು "ಮಾ ಹಿಂಸ್ಯಾತ್ ಸರ್ವಭೂತಾನಿ" ಎಂದು

ಹೇಳಿದರೆ ಶರಣರು ಅಚ್ಚಗನ್ನಡದಲ್ಲಿ "ಕೊಲಬೇಡ" ಎಂದು ಚಿಕ್ಕ ಮಾತಿನಲ್ಲಿ ಭಾವಪೂರ್ಣವನ್ನು ತಂದಿದ್ದಾರೆ.

"Beauty is truth, truth beauty" ಎಂದು ಕೀಟ್ಸನು ಹೇಳುವ "ಸತ್ಯಂ ಶಿವಂ ಸುಂದರಂ" ಈ ರುಚಿಯ ಭಾವವು ನಮ್ಮ ಶರಣರ ಸಾಹಿತ್ಯದಲ್ಲಿ ಒಡಮೂಡಿ ಒಂದಾಗಿ ಗಂಗಾ ಪ್ರವಾಹದಂತೆ ಗಂಭೀರವಾಗಿ ಹರಿದಿದೆ. ಈ ಸಾಹಿತ್ಯ ಗಂಗೆಯಲ್ಲಿ ಜೀಕಾದವರು ಮಿಂದು ಮಿನುಗುವುದು, ಶರಣರ ಸಾಹಿತ್ಯಿಕ ಜೀವನವೇ ಅಂತಹದು. ಪ್ರಬುದ್ಧವಾದುದು, ಶುದ್ಧಮಯವಾದುದು.

ಶರಣರ ಸಾಹಿತ್ಯಿಕ ಜೀವನ ನರರಿಗೆ ಆತ್ಮಸಂದರ್ಶನ.

ಸಾಮಾಜಿಕ ಜೀವನ:

ಶರಣರು ಸಮಾಜದೊಡನೆ ಬೆರೆತು ಸಮಾಜದ ದೋಷಗಳನ್ನು ಕಿತ್ತೊಗೆದು ಜಾಗೃತಗೊಳಿಸುವುದಕ್ಕಾಗಿ ನಾವಿಂದು ಅವರ ದಾರಿಯನ್ನು ಹಿಡಿಯಬೇಕಾಗಿದೆ.

ಶರಣರು ಕೇವಲ ವನಕುಸುಮದಂತೆ ಅರಳಿ ಹೋಗಿದ್ದರೆ ನಾವಿಂದು ಅದಾವ ಪರಿಸ್ಥಿತಿಯಲ್ಲಿ ಕಾಲ ಕಳೆಯುತ್ತಿದ್ದೆವೆಂಬುದು ಹೇಳಲಸಾಧ್ಯ. ಅವರ ಅನುಭವ ಒಳ್ನುಡಿಗಳೇ ನಮಗಿಂದು ಹೃದಯ ಕಿರಣಗಳಾಗಿವೆ. ಸಮಾಜದ ಸಂಸ್ಕಾರದ ಹೆಸರಿನಲ್ಲಿ ಧರ್ಮನಾಶದ ದಾವಾನಲ ಪ್ರಜ್ವಲಿಸಿದಾಗ ಶರಣರು ತಮ್ಮ ಪವಿತ್ರ ಜೀವನದಿಂದ ಸಮಾಜದ ಕಣ್ಣು ತೆರೆಸಿದ್ದಾರೆ, ಸಮಾಜಕ್ಕೆ ಬಣ್ಣ ಕೊಟ್ಟಿದ್ದಾರೆ. ಅಲ್ಲಿ ನಡೆದಿರುವ ಅತ್ಯಾಚಾರ, ಅನಾಚಾರ, ಅನೈಕ್ಯತೆ, ಅಂಧಶ್ರದ್ಧೆ, ಸುಳ್ಳು, ಕಳವು, ಮೋಸ ಮುಂತಾದವುಗಳನ್ನು ನೋಡಿ ಕನಿಕರಪಟ್ಟು ಸದುಪದೇಶಮಾಡಿ ಒಳ್ಳೇದಾರಿಗೆ ತಂದು ಉದ್ಧರಿಸಿದ್ದಾರೆ. ಜನಜೀವಾಳವಾಗಿದ್ದಾರೆ. ಸಮಾಜ ಸುಧಾರಕರಾದ ಶರಣರು ಕಷ್ಟದಲ್ಲಿಯೂ ಸಹ ಸಮಾಜ ಸುಧಾರಣೆಯನ್ನೇ ಹಗಲಿರುಳು ಚಿಂತೆಮಾಡಿ ದುಡಿದು ಸಮಾಜದ ವ್ಯಕ್ತಿಗಳಿಗೆ ಮಾರ್ಗದರ್ಶಕರಾಗಿದ್ದಾರೆ. ಅವರ ವ್ಯಕ್ತಿತ್ವದ ಪ್ರಭಾವವೇ ಅಂತಹುದು.

ಉಪನಿಷತ್ಕಾರರು ಹೇಳಿದ

"ಏಕಂ ಸತ್ ವಿಪ್ರಾ ಬಹುಧಾ ವದಂತಿ"

ಎಂಬ ನುಡಿಯ ಭಾವವೇ ಶರಣರು ತಮ್ಮ ವಚನದಲ್ಲಿ "ದೇವನೊಬ್ಬ ನಾಮ ಹಲವು ಪರಮ ಪತಿವ್ರತೆಗೆ ಗಂಡನೊಬ್ಬ, ಮತ್ತೊಂದಕ್ಕೆರಗಿದೊಡೆ ಕಿವಿಮೂಗು ಕೊಯ್ಯುವನು, ಹಲವು ದೈವದ ಎಂಜಲ ತಿಂಬುವರನೇನೆಂಬೆನಯ್ಯ ಕೂಡಲ ಸಂಗಮದೇವ" ಎಂಬುದಾಗಿ ಅಧಿಕಾರವಾಣಿಯಿಂದುಸುರಿದ್ದಾರೆ.

"Ahimsa is the farthest limit of humanity" ಎಂಬುವ ವಿಚಾರವನ್ನು ಗಾಂಧೀಜಿಯವರು ಹೇಳಿದ್ದರೆ "ಅಹಿಂಸಾ ಧರ್ಮವೇ ಧರ್ಮದ ಮೂಲ" ಎಂದು ಶರಣರು ನುಡಿದಿದ್ದಾರೆ. ಶರಣರ ಸಾಮಾಜಿಕ ಜೀವನವು ಸಮತಾಭಾವದಿಂದ ಕೂಡಿದುದಕ್ಕಾಗಿಯೇ ಅವರ ಮಹತ್ವ ಹೆಚ್ಚಿದೆ.

೧. ಪವಿತ್ರ ಭಾವನೆಯಿಂದ ಕೆಲಸ ಮಾಡುವುದೇ ಪ್ರಗತಿಯ ಹಾದಿ.
೨. ಧರ್ಮದ ದೃಷ್ಟಿಯಲ್ಲಿ ಸ್ತ್ರೀ ಪುರುಷರು ಸಮಾನರು.
೩. ಜಾತಿಭೇದಗಳು ಜನತೆಯ ಉನ್ನತಿಗೆ ಕಂಟಕ.
೪. ಸಮಾಜದಲ್ಲಿ ಅಸ್ಪೃಶ್ಯತೆ ಇರಬಾರದು.
೫. ತತ್ವಗಳು ಅನುಭವದ ಒರೆಗಲ್ಲಿಗೆ ನಿಲ್ಲಬೇಕು.
೬. ಮನುಷ್ಯನು ಸದಾ ಅಂತರಂಗ ಬಹಿರಂಗ ಶುದ್ಧನಾಗಿ ವರ್ತಿಸಬೇಕು.
೭. ಪ್ರಪಂಚವು ಅಗತ್ಯವೆಂದೂ, ದೇಹವು ನಶ್ವರವೆಂದೂ, ಉಪೇಕ್ಷಿಸಬಾರದು.
೮. ಶರಣರು ಎಲ್ಲ ಪ್ರಾಣಿಗಳ ಹಿತಸಾಧನೆಗಾಗಿಯೂ ಶ್ರಮಿಸಬೇಕು.

ಎಂದು ಮುಂತಾಗಿ ಶರಣರು ತಮ್ಮ ಅಮರ ಜೀವನದಲ್ಲಿಯ ಸಿದ್ಧಾಂತಗಳನ್ನು ಸಮಾಜದೆದುರಿಗೆ ಇಟ್ಟು ಸಂರಕ್ಷಿಸಿದ್ದಾರೆ. ತಮ್ಮ ವಚನ ಸುಧೆಯನ್ನು ಆನಂದ ಸಾಗರದಲ್ಲಿ ತೇಲಿಸಿದ್ದಾರೆ. ಪಾಶ್ಚಿಮಾತ್ಯರು "Duty is God" ಎಂದು ಹೇಳಿದ್ದಾರೆ. ನಮ್ಮ ಶರಣರು "ಕಾಯಕವೇ ಕೈಲಾಸ" ಎಂದು ಅನುಭವದಿಂದ ಹೇಳಿದ್ದಾರೆ.

"ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ನಮ್ಮ ಕೂಡಲಸಂಗನ ಶರಣರೇ ಕುಲಜರು" ಭಕ್ತಿಭಂಡಾರಿ ಬಸವಣ್ಣನು ಶರಣರ ಸಾಮಾಜಿಕ ಜೀವನದ ಘನತೆಯನ್ನು ತುಂಬಿದ ಹೃದಯದಿಂದ ಮನಸಾರೆ ಹೊಗಳಿದ್ದಾನೆ. ಶರಣರ ಸಾಮಾಜಿಕ ಜೀವನವೇ ಕರುನಾಡಿಗೆ ಚೇತನ.

ಆಧ್ಯಾತ್ಮಿಕ ಜೀವನ:

ಆಧ್ಯಾತ್ಮಿಕ ಜೀವನ ಎಲ್ಲಕ್ಕೂ ಮಹತ್ವದ್ದು. ಆಧ್ಯಾತ್ಮಿಕ ಭಾವನೆ ಇಲ್ಲದ ವ್ಯಕ್ತಿ ಒಣಗಿರುವ ತರುವಿನಂತೆ, ಆಧ್ಯಾತ್ಮಿಕ ವಿಚಾರ ಅಳವಡಿಸಿ ಕೊಂಡಿರುವ ಜೀವನ ಜಗತ್ತಿಗೆ ಚೇತನ. ಜೀವನಕ್ಕೆ ಶಾಂತಿ ಕಾಂತಿಗಳು ದೊರೆಯಲು ಆಧ್ಯಾತ್ಮಿಕ ಭಾವನೆಯೇ ಮೂಲಾಧಾರ. ಈ ಆಧಾರ ಬಲದಿಂದ ಅಂತಸ್ಸತ್ವಯುತವಾಗಿ ಅಂತಃಕರಣಗಳನ್ನು ಪುನೀತಮಾಡಲು ಬರುವುದು. ಮಹಾತ್ಮಾ ಗಾಂಧಿಯವರು ಆಧ್ಯಾತ್ಮಿಕ ಜೀವನಕ್ಕೆ ಹೆಚ್ಚು ಮಹತ್ವ ಕೊಟ್ಟು ಅದರಂತೆ ನಡೆದು ಬಾಳಿನಲ್ಲಿ ಬೆಳಕನ್ನು ಕಂಡರು.

"Life is greater than all art, I would go even further and declare that the man whose life comes neerest to perfection is the greatest artist".

—ಮಹಾತ್ಮ ಗಾಂಧಿ

ಸಾಧನೆ ಬಲಿತು ಸಿದ್ಧಿಯತ್ತ ಸಾಗಿ ಪೂರ್ಣತೆಯನ್ನು ಪಡೆಯುವದೇ ಆಧ್ಯಾತ್ಮಿಕ ಜೀವನದ ಪರಮಗುರಿ. ಆಧ್ಯಾತ್ಮಿಕ ಜೀವನವು ಪ್ರತಿಯೊಬ್ಬರಲ್ಲಿ ಬರಲೆಂದು ಬಗೆದು ಸಮಾಜೋದ್ಧಾರಕ ಮಹಾತ್ಮಾ ಬಸವಣ್ಣನವರು ಅನುಭವ ಮಂಟಪ ಸ್ಥಾಪಿಸಿ ಸರ್ವಮತೀಯರಿಗೂ ಬೆಳಕಿನ ಹಾದಿಯನ್ನು ತೋರಿಸಿ ಕುರುಡರಿಗೆ ಆಧ್ಯಾತ್ಮ ಜ್ಯೋತಿಯನಿಸಿ ಕೊಂಡಿದ್ದಾರೆ.

ಅನುಭವಿಗಳ: ಒಡನಾಟ ಅತ್ಯವಶ್ಯವೆಂದು ಅರಿತು "ಮಡಿಕೆಯ ಮಾಡುವರೇ ಮಣ್ಣೇ ಮೊದಲು, ತೊಡಿಗೆಯ ಮಾಡುವರೇ ಹೊನ್ನೇ ಮೊದಲು, ಶಿವ ಪಥವರಿವಡೆ ಗುರುಪಥವೇ ಮೊದಲು, ಕೂಡಲಸಂಗಮ ದೇವರನರಿವಡೆ ಶರಣರ ಸಂಗವೇ ಮೊದಲು."

"ಶರಣರ ಅನುಭವದಿಂದ ಎನ್ನ ಭವದ ಕೇಡು ನೋಡಯ್ಯಾ"
ಎಂದು ಮುಂತಾಗಿ ನುಡಿದು ಜನವನ್ನು ಚೇತರಿಸಿದ್ದಾರೆ. ಬೀಳತಕ್ಕ ವ್ಯಕ್ತಿಗೆ ಊರುಗೋಲಾಗಿದ್ದಾರೆ. ಸರ್ವಸಮಾಜದವರಿಗೆ ಆಧ್ಯಾತ್ಮದ ತಿಳಿಜಲವಿತ್ತು ಆದರ್ಶ ಮೂರ್ತಿಗಳಾಗಿದ್ದಾರೆ. ಅಂದಿನ ಶರಣರಲ್ಲಿ ಅಂತಹ ಅಂತಃಶಕ್ತಿ ತುಂಬಿತ್ತು, ಭಾವನೆ ವಿಶಾಲವಾಗಿತ್ತು. ಆದುದರಿಂದಲೇ ಶಿವಶರಣರು ವಿಶ್ವ ಕುಟುಂಬಿಗಳು. ವಿಶ್ವವು ಸರ್ವತೋಮುಖ ಕಲ್ಯಾಣವಾಗಲೆಂದು ಹಾರೈಸಿ, ದುಡಿದು ಆಧ್ಯಾತ್ಮಿಕ ಬೀಜಗಳನ್ನು ಸುತ್ತೆಲ್ಲ ಬಿತ್ತಿದ ಕೀರ್ತಿ ನಮ್ಮ ವೀರಶರಣರಿಗೆ ಬರತಕ್ಕದ್ದು.

ಇಂದಿನ ಮೈಸೂರು ರಾಜ್ಯದ ಜನತೆಗೆ ಶರಣರ ಅಮರ ಜೀವನ ಎಷ್ಟು ಅವಶ್ಯವೆಂಬುದು ಬೇರೆ ಹೇಳಬೇಕಾಗಿಲ್ಲ. ಹಿಂದಿನ ಶರಣರು ನಮಗೆ ಮಾಡಿದ; ಉಪಕಾರ ಹೇಳತೀರದಷ್ಟಾಗಿದೆ. ನಾವಿಂದು ಅವರ ಹೆದ್ದಾರಿಯಲ್ಲಿ ಕಾಲಿಟ್ಟರೆ ಸಾಕು. ಅವರ ಉಪಕಾರ ಸ್ಮರಿಸಿದಂತೆ.

ಇಂದು ಎಲ್ಲೆಲ್ಲೂ ಕೇಳಿಬರುತ್ತಿರುವ ಸಹಕಾರ, ಭೂದಾನಯಜ್ಞ, ಗ್ರಾಮ ಸುಧಾರಣೆ, ಅಸ್ಪೃಶ್ಯೋದ್ಧಾರ, ಸರ್ವಸಮಾನ್ಯತೆ ಮುಂತಾದವುಗಳ, ಸಮಾವೇಶವೇ ಶಿವಶರಣರ ಅಮರಜೀವನ.

ಶರಣರ ಅಮರ ಜೀವನಧರಣೆಗದುವೆ ಪಾವನ.

[illegible] ರಂದು ಹುಬ್ಬಳ್ಳಿಯ ಮೂರುಸಾವಿರ ಮಠದ ಕುಮಾರೇಶ್ವರ ಶಿವಯೋಗಿ ಸಂಘದಲ್ಲಿ ಅಪ್ಪಣೆಕೊಡಿಸಿದ ಆಶೀರ್ವಚನ.

ಬಸವಣ್ಣನವರ ವಚನಗಳಲ್ಲಿ ಧರ್ಮ ಮತ್ತು ಭಕ್ತಿ

ಮಹಾತ್ಮಾ ಬಸವಣ್ಣನವರ ವಚನಗಳು ದ್ರಾಕ್ಷಾಫಲಗಳಂತೆ ಮತ್ತು ನಾರಿ ಕೇಳದಂತೆ ಸಿಹಿ ನೀಡತಕ್ಕವುಗಳು. ಅಧರಕ್ಕೆ ಕಹಿಯಾದರೂ ಉದರಕ್ಕೆ ಸಿಹಿ ನೀಡುವ ದಿವ್ಯೌಷಧ. ಈರ್ಷ್ಯಾದ್ವೇಷಗಳ ಕಡು ಬಿಸಿಲಿನಲ್ಲಿ ನೊಂದು ಬೆಂದವರಿಗೆ ಅಮೃತ ಬಿಂದು. ಅಜ್ಞಾನಾಂಧಕಾರದಲ್ಲಿ ನಡೆಯು ತಕ್ಕವರಿಗೆ ದಾರಿದೀಪಗಳು. ಬಸವಣ್ಣನವರ ವಚನ ಸಾಹಿತ್ಯದಿಂದ ಕನ್ನಡ ಭಾಷೆ ಬಹುಮುಖವಾಗಿ ಬೆಳೆಯಲು ಅನುಕೂಲವಾಗಿದೆ. ಧಾರ್ಮಿಕ ವ್ಯಕ್ತಿಗಳಿಗೆ ಚೇತನ ಶಕ್ತಿಯನ್ನೀಡುವ ಆಸರ ಕಂಭವಾಗಿದೆ. ಹಸಿದ ಜಗತ್ತಿಗೆ ಬೇಕಾದ ಸಮಾಜ ಸುಧಾರಣೆ ಈ ವಚನ ಸಾಹಿತ್ಯದಲ್ಲಿ ಅಡಕವಾಗಿದೆ. ಮಲಗಿದ ಮಾನವನನ್ನು ಎಚ್ಚರಿಸಿ, ಹೃನ್ಮಂದಿರಕ್ಕೆ ಬೆಳಕನ್ನೀಡುವ ಅಂತಸ್ಫೂರ್ತಿಯುತ ದಿವ್ಯಶಕ್ತಿ ತುಂಬಿದೆ. ಅರಿಷಡ್ವರ್ಗಗಳನ್ನು ಗೆದ್ದು, ಮಾಯೆಯ ಆವರಣಗಳನ್ನು ಸೀಳಿ, ಇಹ–ಪರಗಳೆರಡರಲ್ಲಿ ಆತ್ಮ ಸಂತುಷ್ಟಿ ಪಡೆದು, ಅಲ್ಲಿಯೂ ನಿರಂತರ ಸಲ್ಲುವಂತೆ ಮಾಡುವ ಧೈರ್ಯ ಸಾಹಸಗಳ ಸಮ್ಮಿಲನ ಈ ವಚನ ರಾಶಿಯಲ್ಲಿ ಹಾಸುಹೊಕ್ಕಾಗಿದೆ.

ಆಧ್ಯಾತ್ಮದ ಅಮೃತ ವಾಹಿನಿಯನ್ನು ಹರಿಸಿ, ಸುವಿಚಾರದ ಮಹಾಕ್ರಾಂತಿ ಯನ್ನೆಸಗಿ, ಭಾವೈಕ್ಯದಲ್ಲಿ ಮಿಂದು ತಮ್ಮ ಜೀವನದುದ್ದಕ್ಕೂ ಅನುಭವಿಸಿದ ಭಕ್ತಿಯ ಸಾಧನೆ ಹಾಗೂ ಧರ್ಮರಕ್ಷಣೆಯ ನಿರೂಪಣೆಯನ್ನು ವಚನ ರಚನೆಯಲ್ಲಿ ತೊಡಗಿಸಿ ಪ್ರಪಂಚವನ್ನೇ ಬೆಳಕಿನತ್ತ ಒಯ್ಯುವಂತೆ ಉಸಿರಿರುವವರೆಗೂ ಸಾಹಸ ಗೈದ ಕೀರ್ತಿ ಮಹಾವಿಭೂತಿ ದ್ವಿತೀಯ ಶಂಭು ಬಸವಣ್ಣನವರಿಗೆ ಸಲ್ಲುವದು.

ಬಸವಣ್ಣನವರ ವಚನಾಂಬುಧಿಯಲ್ಲಿ ಮುಳುಗಿದರೆ ಅನಂತಾನಂತ ಅನರ್ಘ್ಯ ಮುತ್ತು ರತ್ನಗಳು ದೊರಕುವವು. ಆ ಸಾಗರದಲ್ಲಿ ಮುಳುಗಲು ಶಕ್ತಿ ಸಾಮರ್ಥ್ಯ ಗಳು ಬೇಕಾಗುತ್ತದೆ. ಸಾಧನೆ ಬೇಕಾಗುತ್ತದೆ. ನಿರಂತರ ತಪಸ್ಸು ಬೇಕಾಗುತ್ತದೆ. ಮುಖ್ಯವಾಗಿ ಬಸವಣ್ಣನವರ ವಚನ ಸಾಹಿತ್ಯದಲ್ಲಿ ಎದ್ದು ಕಾಣುವದು ಧರ್ಮ ಮತ್ತು ಭಕ್ತಿಯ ಬೆಳಕು. ಮಹಾತ್ಮಾ ಬಸವಣ್ಣನವರು ಬಾಹ್ಯಾಡಂಬರದ, ವಿವೇಕ ಶೂನ್ಯವಾದ ಆಚರಣೆಗೆ ಬೆಲೆಯನ್ನು ನೀಡದೆ ಅಂತರಂಗ ಬಹಿರಂಗ ಶುದ್ಧಿಗೆ ಪ್ರಾಧಾನ್ಯತೆ ನೀಡಿದ್ದಾರೆ. ಧರ್ಮ ಭಾವನೆ ಬೇರೂರ ಬೇಕಾದರೆ, ಸ್ವಾರ್ಥತೆಯನ್ನು ದೂರ ಮಾಡಬೇಕಾಗುತ್ತದೆ. ಶುದ್ಧ ಜೀವನದಿಂದ ನಡೆದು ತೋರಿಸುವದೇ ಧರ್ಮ. ಈ ರೀತಿಯ ಧರ್ಮ ರಕ್ಷಣೆ ಮಾರ್ಗದರ್ಶಕವಾಗುವದು. ಧರ್ಮವೆಂದಾಕ್ಷಣ ಸಂಕುಚಿತ ಸಂಕೋಲೆಗಳ ಮತದ ಪಕ್ಷಿಯಗಳ ನಿರೂಪಣೆಯಲ್ಲ.

ಧರ್ಮವು ಸಂಸ್ಕೃತಿ ನೆಲೆ ಕಲೆಗಳನ್ನು ತಿಳಿಸಿ, ಹೃದ್‌ಭೂಮಿಯಲ್ಲಿ ಒಳ್ಳೇ ವಿಚಾರಗಳನ್ನು ಬಿತ್ತಿ ಸಂಸ್ಕರಣ ಗೊಳಿಸುವದೇ ಧರ್ಮದ ಸ್ವರೂಪ ನೈತಿಕ ಧೈರ್ಯವನ್ನು ನೀಡಿ ಆತ್ಮಿಕ ಸಂಪತ್ತನ್ನು ವೃದ್ಧಿಗೊಳಿಸುವ ಸಾಧನವೇ ಧರ್ಮ. ಧರ್ಮದಲ್ಲಿ ಮತ ದೃಷ್ಟಿಗಿಂತಲೂ, ಮತಿ ದೃಷ್ಟಿಯಿಟ್ಟು ಸೂಕ್ಷ್ಮ ರೀತಿಯಲ್ಲಿ ವಿಚಾರಿಸಿದಾಗ ಅದರ ಹೆಚ್ಚಳ ಕಂಡು ಬರುವದು. ಶುದ್ಧ ಸಾತ್ವಿಕ ಶಕ್ತಿ ಹೊರಚಿಮ್ಮುವದು. ಪರಸ್ಪರ ಸಹಕಾರವು ಪ್ರೇಮದೊಡನೆ ಮೊಳೆತು, ಚಿಗುರೊಡೆದರೆ ಸಮಾಜದಲ್ಲಿ ಶಾಂತಿ ಸಮಾಧಾನಗಳು ನೆಲೆಗೊಳ್ಳುವವು. ದಯೆಯಿಲ್ಲದ ಹೃದಯ ಕಲ್ಲಿನಂತೆ ಕಠೋರವಾದುದು. ಪ್ರಾಣಿ ದಯೆಯನ್ನು ಹೇಳದ ಧರ್ಮ ಒಡೆದ ಗಡಿಗೆಯಂತೆ ಶೋಭಿಸದು. "ದಯಾ ಧರ್ಮಸ್ಯ ಜನ್ಮ ಭೂಮಿಃ" ಎಂಬುದೇ ಚಾಣುಕ್ಯನ ಸೂತ್ರ. ಅಂತೆಯೇ ಮಹಾತ್ಮಾ ಬಸವಣ್ಣನವರು ತಮ್ಮ ವಚನಗಳಲ್ಲಿ ಹೆಚ್ಚು ಪ್ರಾಶಸ್ತ್ಯ ನೀಡಿದ್ದಾರೆ.

"ದಯವಿಲ್ಲದ ಧರ್ಮವಾವುದಯ್ಯ, ದಯವಿರಬೇಕು–
ಸಕಲ ಪ್ರಾಣಿಗಳೆಲ್ಲರಲ್ಲಿ. ದಯವೇ ಧರ್ಮದ
ಮೂಲವಯ್ಯ ಕೂಡಲಸಂಗಯ್ಯ ನಂತಲ್ಲ ದೊಲ್ಲನಯ್ಯ"

ಎಂಬುದಾಗಿ ದಯವೇ ಧರ್ಮದ ಮೂಲವೆಂದು ಸಾರಿದ್ದಾರೆ. ಬಸವಣ್ಣನವರ ಅಭಿಪ್ರಾಯವನ್ನೇ ಎತ್ತಿ ಹಿಡಿದು ಹಿಂದುಸ್ಥಾನದ ಸುಪ್ರಸಿದ್ಧ ಭಗವದ್ ಭಕ್ತರಾದ ತುಲಸೀದಾಸರೂ ಸಹ

"दया धर्मको मूल है पाप मूल है अभिमान ।
तुलसी दया कभी न छोड़िये जबलग घटमें प्राण" ॥

ಈ ದೇಹದಲ್ಲಿ ಪ್ರಾಣ ಇರುವತನಕ ದಯೆಯ ಭಾವವನ್ನು ಬಿಡದಿರಬೇಕೆಂದು ಅಂತರಾತ್ಮನನ್ನೇ ಪ್ರಾರ್ಥಿಸಿಕೊಂಡಿದ್ದಾರೆ. ಬಸವಣ್ಣನವರ ಮತ್ತೊಂದು ವಚನದಲ್ಲಿ—

"ಕೊಲ್ಲುವವನೆ ಮಾದಿಗ, ಹೊಲಸು ತಿಂಬುವವನೇ ಹೊಲೆಯ, ಕುಲವೇನೋ ಅವಂದಿರ ಕುಲವೇನೋ ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ನಮ್ಮ ಕೂಡಲಸಂಗನ ಶರಣರೇ ಕುಲಜರು." ಅವರ ಈ ವಚನದಲ್ಲಿ ಕುರುಡು ನಂಬಿಗೆಯಿಂದ ನಡೆಯು ತಕ್ಕವರಿಗೆ ದಾರಿ ತೋರಿಸಿದೆ. ಸಕಲ ಜೀವಾತ್ಮರಿಗೆ ಲೇಸನೇ ಬಯಸುವದೇ ನಿಜವಾದ ಧರ್ಮ ವೆಂದುಸುರಿ ಮಾನವತಾವಾದವನ್ನೇ ಇದರಲ್ಲಿ ಸಂಪೂರ್ಣ ಪ್ರತಿಬಿಂಬಿಸಿದ್ದಾರೆ.

"ಪುಣ್ಯ ಪಾಪವೆಂಬವು ತಮ್ಮಿಷ್ಟ ಕಂಡಿರೇ.
ಅಯ್ಯ ಎಂದೊಡೆ ಸ್ವರ್ಗ, ಎಲವೊ ಎಂದೊಡೆ ನರಕ

ದೇವ ಭಕ್ತ ಜಯ, ಜೀಯಾ ಎಂಬ ನುಡಿಯೊಳಗೆ
ಕೈಲಾಸವಿದ್ದುದೆ ಕೂಡಲ ಸಂಗಮ ದೇವಾ"
"ತನಗೆ ಮುನಿದವರಿಗೆ ತಾನು ಮುನಿಯಲೇಕಯ್ಯಾ?
ತನಗಾದರೇನು? ಅವರಿಗಾದಡೇನು?
ತನುವಿನ ಕೋಪ ತನ್ನ ಹಿರಿಯ ತನದ ಕೇಡು
ಮನದ ಕೋಪ ತನ್ನ ಅರುಹಿನ ಕೇಡು,
ಮನೆಯೊಳಗಿನ ಕಿಚ್ಚು ಮನೆಯು ಸುಟ್ಟಲ್ಲದೆ
ನೆರೆ ಮನೆಯು ಸುಡದು ಕೂಡಲ ಸಂಗಮದೇವಾ"

ಎಂದು ಮುಂತಾಗಿ ದಯಾನಿಧಿ ಮಹಾತ್ಮಾ ಬಸವಣ್ಣನವರು ಬಲು ಮಾರ್ಮಿಕವಾಗಿ ನುಡಿದಿದ್ದಾರೆ. ಕಾಯಿಕ ವಾಚಕ ಮಾನಸಿಕ ದೃಷ್ಟಿಯಲ್ಲಿಯೂ ಜೀವೋದ್ಧಾರ ಮನಸ್ಸೋಯುದಂತೆ ನಡೆದುಕೊಳ್ಳುವದೇ ಕೂಡಲ ಸಂಗನ ಸಾನಿಧ್ಯ ಪಡೆಯುವ ಮಹತ್ಸಾಧನೆ. ತನ್ನಂತರಂಗವನ್ನು ತಾನು ಶುದ್ಧಮಾಡಿಕೊಂಡು ಪುಣ್ಯ ಪಾಪಗಳ ಮರ್ಮವನ್ನು ಅರಿತುಕೊಂಡು ಕೂಡಲ ಸಂಗನು ಮೆಚ್ಚುವಂತೆ ಕಾಯಕ ಮಾಡಿದರೆ ಅದೇ ಕೈಲಾಸ. ಅದೇ ಧರ್ಮ ಈ ಬಗೆಯ ಧರ್ಮದ ಸಾರವನ್ನೂ ಹಾಗೂ ಅದರ ಅರ್ಥ ಪೂರ್ಣತೆಯನ್ನು ಪಡೆಯುವಂತೆ ಸ್ಫುರಣಾತ್ಮಕವಾದ ವಿಚಾರಗಳೊಡನೆ ವಿವಿಧ ರೀತಿಯಲ್ಲಿ ಬಸವಣ್ಣನವರು ತಮ್ಮ ವಚನಗಳಲ್ಲಿ ವ್ಯಕ್ತಪಡಿಸಿದ್ದಾರೆ. ಬಸವಣ್ಣನವರ ವಚನ ಸಾಹಿತ್ಯವು ಸುಲಭ ರೀತಿಯಲ್ಲಿ ತಿಳಿಯುವಂತೆ ಇದ್ದುದರ ಪರಿಣಾಮವೇ ಜನ ಸಾಮಾನ್ಯರೂ ಸಹ ಅಂತರಂಗದ ಜೀವನ ಸೌಂದರ್ಯವನ್ನು ಪಡೆಯಲು ಮಾರ್ಗದರ್ಶಕವಾಗಿದೆ. ಭಾವ ಬಂಧುರವಾಗಿದೆ.

ಅಣ್ಣನ ವಚನ ಸಾಹಿತ್ಯದಲ್ಲಿ ಎಲ್ಲಕ್ಕಿಂತಲೂ ಮಿಗಿಲಾಗಿ ಭಕ್ತಿಯ ಹಿರಿಮೆ ಉತ್ತುಂಗ ಶಿಖರದಂತೆ ಶೋಭಿಸುತ್ತಿದೆ. ಅಂತೆಯೇ ಬಸವಣ್ಣನವರಿಗೆ ಅನೇಕ ಶರಣ ಶರಣೆಯರು, ಕವಿಗಳು "ಭಕ್ತಿ ಭಾಂಡಾರಿ" "ಭಕ್ತಿಯ ತವನಿಧಿ" "ಸದ್ಭಕ್ತಿ ಸೂರೆಗಾರಂ" ಮತ್ತು "ಬಸವನ ಮಾತೇ ಮಾತು ಬಸವಣ್ಣನ ಭಕ್ತಿಯ ಓಜೆಯೋಜಕೇಳ್" ಎಂದು ಮುಂತಾಗಿ ಬಸವಣ್ಣನವರ ಭಕ್ತಿಯ ಶಕ್ತಿ ಸಾಮರ್ಥ್ಯಕ್ಕೆ ತಲೆಬಾಗಿ ಭಕ್ತಿರಸ ಪ್ರಪೂರಿತರಾಗಿ ಹಾಡಿದ್ದಾರೆ. ಒಂದೆಡೆ ಅಲ್ಲಮ ಪ್ರಭುಗಳು—

"ಕಲ್ಯಾಣವೆಂಬ ಪ್ರಣತೆಯಲ್ಲಿ ಭಕ್ತಿರಸವೆಂಬ ತೈಲವ ನೆರೆದು
ಆಚಾರವೆಂಬ ಬತ್ತಿಯಲ್ಲಿ ಬಸವಣ್ಣನೆಂಬ ಜ್ಯೋತಿ ಮುಟ್ಟಿಸಲು
ತೊಳಗಿ ಬೆಳಗುತ್ತಿರ್ದಿತಯ್ಯಾ ಶಿವನ ಪ್ರತಾಪ.
ಆ ಬೆಳಗಿನೊಳು ಒಪ್ಪುತ್ತಿರ್ದರಯ್ಯಾ ಅಸಂಖ್ಯಾತ ಭಕ್ತಮಹಾ ಗಣಂಗಳು.
ಶಿವಭಕ್ತರಿದ್ದ ಕ್ಷೇತ್ರ ಅವಿಮುಕ್ತಕ್ಷೇತ್ರವೆಂಬುದು ಹುಸಿಯೇ

ಗುಹೇಶ್ವರ ಲಿಂಗದಲ್ಲಿ ಎನ್ನ ಪರಮಾರಾಧ್ಯ ಸಂಗನ ಬಸವಣ್ಣನ
ಮಹಿಮೆಯ ನೋಡಾ ಸಿದ್ಧರಾಮಯ್ಯ"

ಎಂಬುದಾಗಿ ಬಸವಣ್ಣನ ಮಹಿಮೆಯನ್ನು ಹೊಗಳುತ್ತ, ಭಕ್ತಿ, ಶಕ್ತಿ, ಮುಕ್ತಿ ಬಸವಣ್ಣನ ದಯೆಯಿಂದಲೇ ಸಾಧ್ಯವೆಂದು ಹೇಳಿದ್ದಾರೆ. ಮಾನವನು ದಿವ್ಯ ಜೀವನವನ್ನು ಸಾಧಿಸಲು ಭಕ್ತಿಯೇ ಮಹಾದ್ವಾರ. ಭಕ್ತಿಯೋಗವಿಲ್ಲದೇ ಯಾವ ಕಾರ್ಯವೂ ಪೂರ್ತಿಗೊಳ್ಳಲಾರದು. ಮನಸ್ಸಿಗೆ ಶಾಂತಿ ಸಿಗಲಾರದು. ಬಸವಣ್ಣನವರು ಯಾವ ಕಾರ್ಯವನ್ನು ಮಾಡಿದರೂ ಭಕ್ತಿಯ ಬಲದಿಂದಲೇ ಸಾಧಿಸಿದ್ದಾರೆ. ಒಂದೆಡೆ ಬಸವಣ್ಣನವರು —

"ಭಕ್ತಿಯೆಂಬುದು ಮಾಡಬಾರದು, ಅದು ಕರಗಸದಂತೆ
ಹೋಗುತ್ತ ಕೊಯ್ಯುವದು, ಬರುತ್ತ ಕೊಯ್ಯುವದು.
ಘಟಸರ್ಪದಲ್ಲಿ ಕೈ ದುಡುಕಿದರೆ, ಹಿಡಿವುದು ಮಾಬುದೇ
ಕೂಡಲ ಸಂಗಮದೇವಾ."

ಡೊಂಬನು ತಂತಿಯ ಮೇಲೆ ನಡೆದಂತೆ ಭಕ್ತಿಯ ಮಾರ್ಗವು ಅಷ್ಟೇ ಕಷ್ಟವೆಂದು ಭಕ್ತಿಯ ಬಗೆಯನ್ನು ಅದರ ಹೆಚ್ಚಳವನ್ನು ವಿಶದೀಕರಿಸಿದ್ದಾರೆ. ಕರಗಸದಂತೆ ಹೋಗುತ್ತ ಬರುತ್ತ ಕೊಯ್ಯುವದು ಅನ್ನುವ ನುಡಿಮುತ್ತಿನಲ್ಲಿ ಎಷ್ಟು ಭಾವಗರ್ಭಿತ ಅರ್ಥ ಹುದುಗಿಕೊಂಡಿದೆ ಎಂಬುದು ಹೊಳೆಯದಿರದು. ಮನಸ್ಸಿನ ಪಾವಿತ್ರ್ಯತೆ ಕಾಯ್ದುಕೊಂಡು ಸುತ್ತು ಕಡೆ ಸುವಿಚಾರ ಪೂರ್ಣದೊಡನೆ ಕಣ್ಣೆರಿಸಿ ನಡೆಯುವವಗೆ ಮಾತ್ರ ಭಕ್ತಿಯ ಶಕ್ತಿ ಮತ್ತು ಸಿದ್ಧಿ ಸಾಧ್ಯ. ಜ್ಞಾನ ಜ್ಯೋತಿಯಿಂದ ತುಂಬಿರುವ ಭಕ್ತಿಯೇ ಆತ್ಮ ಸಾಕ್ಷಾತ್ಕಾರ ಪಡೆಯಲು ದಿವ್ಯ ಸಾಧನ. ನಾರದರು ತಮ್ಮ ಭಕ್ತಿ ಸೂತ್ರಗಳಲ್ಲಿ ಹೇಳಿದಂತೆ "ಭಕ್ತಿ, ಕರ್ಮಕ್ಕಿಂತಲೂ ಯೋಗಕ್ಕಿಂತಲೂ ಶ್ರೇಷ್ಠವಾದುದು. ಏಕೆಂದರೆ ಕರ್ಮ ಮತ್ತು ಯೋಗಗಳು ಮುಂದಿರುವ ಗುರಿಗೆ ಸಾಧನಗಳು. ಅದರ ಗುರಿಯಾದರೂ ಅದೇ ಮತ್ತು ಭಗವಂತನಿಗಾಗಿ ಮಾಡುವ ಅತಿ ಪ್ರೇಮವೇ ಭಕ್ತಿ" ಎಂದುದಾಗಿ ಭಕ್ತಿಯ ಮಹತಿಯನ್ನು ತೋರಿಸಿದ್ದಾರೆ. ರಸವಿಲ್ಲದ ಜೇಂಗೂಡದಂತೆ ಜ್ಞಾನವಿಲ್ಲದ ಭಕ್ತಿಯು ನಿಷ್ಪ್ರಯೋಜಕ. ಶುದ್ಧ ಭಕ್ತಿಯೊಳಗೆ ಜ್ಞಾನವು ಸಹಜವಾಗಿ ಸಮಾವೇಶವಾಗಿರುತ್ತದೆ. ಬಸವಣ್ಣನವರು ತಮ್ಮದೊಂದು ವಚನದಲ್ಲಿ

"ವಿಷಯವೆಂಬ ಹಸುರನೆನ್ನ ಮುಂದೆ ತಂದು ಪಸರಿಸಿದಿರಯ್ಯ
ಪಶುವೇನು ಬಲ್ಲುದು, ಹಸುರೆಂದೆಳಸುವದಲ್ಲದೆ
ವಿಷಯ ರಹಿತನ ಮಾಡಿ, ಭಕ್ತಿರಸವ ದಣಿಯ ಮೇಯಿಸಿ
ಸುಬುದ್ಧಿಯೆಂಬ ಉದಕವ ನೆರೆದು ನೋಡಿ ಸಲಹಯ್ಯ
ಕೂಡಲ ಸಂಗಮದೇವಾ."

ಕೂಡಲ ಸಂಗನನ್ನು ಕುರಿತು ನನಗೆ ನಿರಂತರ ಭಕ್ತಿಯ ರಸವನ್ನೇ ಕುಡಿಸು ಎಂದು ಮೊರೆ ಹೊಕ್ಕಿದ್ದಾರೆ. ಆ ಭಕ್ತಿಯ ಬಲದಿಂದಲೇ ಸಮಾಜದ ಕೊಳೆಯನ್ನು ಕಳೆದು ಬೆಳಗುವಂತೆ ಮಾಡುವ ಧೈರ್ಯ ಸ್ಥೈರ್ಯ ಬರುತ್ತದೆಂಬುದು ಅರಿದು ಆ ಹಾದಿಯಲ್ಲಿ ನಡೆದು ಸಮಾಜವನ್ನು ಎಚ್ಚರಿಸಿದ್ದಾರೆ. ಅಂತರಂಗದರಿವ ನರಿಯದ ಪ್ರಕಾಂಡ ಪಾಂಡಿತ್ಯ ಪಡೆದಿದ್ದೇವೆಂದು ಅಹಂಕಾರದ ಮದಗಜವನ್ನೇರಿ ಕುಳಿತವರ, ನಿಜವಿಲ್ಲದ ಭಕ್ತಿಯನು ಕಂಡು ಮರುಗಿ ಹೇಳಿದ ಬಸವಣ್ಣನವರ ವಚನಗಳು ಇಂತಿವೆ—

"ಗೀತವ ಹಾಡಿದರೇನು? ಶಾಸ್ತ್ರ ಪುರಾಣಗಳ ಕೇಳಿದರೇನು?
ವೇದ ವೇದಾಂತದ ನೋಡಿದರೇನು? ಮನವೊಲಿದು
ಲಿಂಗ ಜಂಗಮ ಪೂಜಿಸಲರಿಯದವರು ಎಲ್ಲರಲ್ಲಿ
ಅನುಭಾವಿಗಳಾದರೇನು? ಭಕ್ತಿಯಿಲ್ಲದವರನೊಲ್ಲ
ನಮ್ಮ ಕೂಡಲ ಸಂಗಮದೇವ."
"ನಾದಪ್ರಿಯನೂ ಅಲ್ಲ, ವೇದಪ್ರಿಯನೂ ಅಲ್ಲ
ಭಕ್ತಿ ಪ್ರಿಯ ನಮ್ಮ ಕೂಡಲಸಂಗಮದೇವ"
"ಮಾತಿನ ಮಾಲೆಯಲ್ಲಿಪ್ಪುದೇ ಭಕ್ತಿ, ಮಾಡಿ ತನು ಸವೆಯದನ್ನಕ್ಕ
ಮನ ಸವೆಯದನ್ನಕ್ಕ, ಧನ ಸವೆಯದನ್ನಕ್ಕ, ಅಪ್ಪುದೇ ಭಕ್ತಿ?
ಕೂಡಲ ಸಂಗಮದೇವಾ ಎಲುದೋರಿ ಸರಸವಾಡುವನು ಸೈರಿಸದನಕ್ಕ
ಅಪ್ಪುದೇ ಭಕ್ತಿ."

ಧಾಂಬಿಕ ರೀತಿಯಿಂದ ಪೂಜಿಸುವವರನ್ನು ಕಂಡು—

"ಜಲವಿಲ್ಲದ ಪೂಜೆ ನೇಹವಿಲ್ಲದ ಮಾಟ ಆ ಪೂಜೆಯು
ಆ ಮಾಟವು ಚಿತ್ರದ ರೂಹು ಕಾಣಿರಣ್ಣಾ. ಚಿತ್ರದ ಕಬ್ಬು
ಕಾಣಿರಣ್ಣಾ ಅಪ್ಪಿದರೆ ಸುಖವಿಲ್ಲ. ಮೆಲಿದರೆ ಸವಿಯಿಲ್ಲ
ಕೂಡಲ ಸಂಗಮದೇವಾ ನಿಜವಿಲ್ಲದವನ ಭಕ್ತಿ."

ಈ ಎಲ್ಲ ವಚನಗಳಲ್ಲಿ ಮಾತಿನ ಭಕ್ತಿಗಿಂತಲೂ ಕೃತಿಯ ಭಕ್ತಿ ದೇವನಿಗರ್ಪಿತವೆಂದು ಸುಂದರ ಶೈಲಿಯಲ್ಲಿ ವಿವರಿಸಿದ್ದಾರೆ. ಮಹಾತ್ಮಾ ಬಸವಣ್ಣನವರ ದಿವ್ಯ ಜೀವನದ ಭವ್ಯ ಚಿತ್ರವನ್ನು ನಿರುಕಿಸಿದಾಗ ಎತ್ತ ನೋಡಿದಡತ್ತ ಭಕ್ತಿಯ ಹೂಬಳ್ಳಿಗಳೇ ಕಾಣುತ್ತವೆ ಭಕ್ತಿಯ ಪರಾಕಾಷ್ಠತೆಯಲ್ಲಿ ಜೀವನ ಸವೆಸಿದ್ದಾರೆ. ಬಸವಣ್ಣನವರ ಭಕ್ತಿ ಪ್ರಭಾವದ ಬೆಳಕಿನಲ್ಲಿ ಪೂರ್ಣದೆಡೆಗೆ ನಡೆದು ಪರಿಪೂರ್ಣತ್ವವನ್ನು ಕಾಣುವ ಅಂತಃಸ್ಫೂರ್ತಿ ತುಂಬಿದ ಬುದ್ಧಿವಂತ ಮನುಷ್ಯನು ತನ್ನ ಅಂತಿಮ ಗುರಿಯನ್ನು ಕಂಡುಕೊಳ್ಳದಿದ್ದರೆ ಪಶು ಪಕ್ಷಿಗಳಿಗಿಂತಲೂ ಕನಿಷ್ಟನು ಮತ್ತು ಘಟದಲ್ಲಿ ಸಕ್ಕರೆಯ ತುಂಬಿ ಹೊರಗೆ ಸವಿದರೆ ಅದರ ರುಚಿ ತಿಳಿಯದು. ಅದರಂತೆಯೇ ಶರೀರವೆಂಬ

ಘಟವಲ್ಲಿ ವಿಷಯವಾಸನೆಗಳನ್ನು ತುಂಬಿಕೊಂಡಿದ್ದರೆ ಭಕ್ತಿಯ ರಸಾಸ್ವಾದನೆ ಮಾಡಲು ಕಷ್ಟ ಸಾಧ್ಯವೆಂದು ಬಸವಣ್ಣನವರ ವಚನ ಸಾಹಿತ್ಯದಲ್ಲಿ ಕಂಡುಬರುತ್ತಿದೆ. ಶ್ರೇಷ್ಠವಾದ ಭಕ್ತಿಯಿಂದ ಪ್ರಾಪ್ತವಾಗುವ ಪರಮಾನಂದವನ್ನು ಅನುಭವಿಸುತ್ತಿರುವ ಪದವಿಗೆ ಸಮಾನವಾದ ಪದವಿಯು ಬೇರೊಂದಿಲ್ಲವೆಂದು ಒತ್ತಿ ಹೇಳಿದ್ದಾರೆ.

ಒಟ್ಟಿನಲ್ಲಿ ಸಕ್ಕರೆಯು ಮಳಲಿನಂತಿರುವ ಬಸವಣ್ಣನವರ ವಚನಗಳಲ್ಲಿ ಧರ್ಮ ಮತ್ತು ಭಕ್ತಿ ಇವೆರಡೂ ಒಂದಕ್ಕೊಂದು ಕೂಡಿಕೊಂಡು ಗಂಗಾ ಪ್ರವಾಹದಂತೆ ಹರಿದು ಬಂದಿವೆ. ಧರ್ಮವು ದಯೆಯಿಂದ ಕೂಡಿದರೆ ಭಕ್ತಿಯು ಅಂತಃಸ್ಫೂರ್ತಿಯನ್ನೊಳಗೊಂಡಿದೆ. ಇವೆರಡು ಇರದಿದ್ದರೆ ರಾಷ್ಟ್ರ ರಥವು ಸುವ್ಯವಸ್ಥಿತ ರೀತಿಯಿಂದ ಸಾಗುವದು ತುಂಬಾಕಷ್ಟ ಕಡಿವಾಣವಿಲ್ಲದ ಕುದುರೆಗಳಂತೆ ಎತ್ತಹೋಗುವವೋ ತಿಳಿಯಲು ಅಸಾಧ್ಯ, ಧರ್ಮ ಮತ್ತು ಭಕ್ತಿಯ ಬಂಧುರವಾದ ಹಂದರವಿದ್ದರೆ ನಾಡು ಸುಂದರವಾಗಲಾರದು. ವಿಕಸಿತವಾಗದು, ನವ್ಯಸ್ಫೂರ್ತಿ ದೊರೆಯದು. ದೃಢವಿಲ್ಲದ ಭಕ್ತಿ ಒಡೆದ ಕುಂಭದಲ್ಲಿ ಸುಜಲವ ತುಂಬಿದಂತೆ, ತಾಯ ಗರ್ಭದಲ್ಲಿದ್ದ ಶಿಶುವು ತಾಯ ಕುರುಹ ನರಿಯದಂತೆ. ಅಂತರಂಗದ ಶುದ್ಧಿ ಇಲ್ಲದವರ ಹೃದಯ ಕಮಲದಲ್ಲಿ ದೇವನಿರಲಾರ. ಅದಕ್ಕಾಗಿ ಶರೀರವೆಂಬ ಹುತ್ತದೊಳಗಿರುವ ಮನವೆಂಬ ಘಟಸರ್ಪದ ವಿಷಪೂರಿತ ಭ್ರಾಂತಿಯ ಮನೋವಿಕಾರಗಳನ್ನು ನಷ್ಟ ಮಾಡಿ, ಧರ್ಮ ಮತ್ತು ಭಕ್ತಿಯಿಂದ ಕೂಡಲ ಸಂಗನ ಚರಣ ಕಮಲಗಳಲ್ಲಿ ತುಂಬಿಯಾಗಿರಿಸಿ ಆತನ ನಾಮಾಮೃತವನ್ನು, ಕೀರುತಿಯನ್ನು, ಮೂರುತಿಯನ್ನು ಅಲ್ಲದೆ ಸರ್ವಸ್ವವನ್ನು ಆತನಲ್ಲಿ ತುಂಬಿದರೆ ದೇವರು ಎತ್ತಿಕೊಂಡು ಎನ್ನುತ್ತ ಕರೆದುಕೊಳ್ಳುತ್ತಾನೆಂಬುದೇ ಬಸವಣ್ಣನವರ ವಚನಗಳಲ್ಲಿ ತುಂಬಿರುವ ಧರ್ಮ ಮತ್ತು ಭಕ್ತಿಯ ಅಂತರ್ವಾಣಿ.

೧೯೬೮ ರಂದು ಉಡುತಡಿಯಲ್ಲಿ ಶ್ರೀ ಬಸವಣ್ಣನವರ ಅಷ್ಟಶತಮಾನೋತ್ಸವ ಸಂದರ್ಭದಲ್ಲಿ ಅಪ್ಪಣೆ ಕೊಡಿಸಿದ ಆಶೀರ್ವಚನ.

ಶ್ರೀ ರಾಮಕೃಷ್ಣ ಪರಮಹಂಸರು

ಶ್ರೀ ರಾಮಕೃಷ್ಣ ಪರಮಹಂಸರು ಆಧ್ಯಾತ್ಮ ನಭೋಮಂಡಲದಲ್ಲಿ ರಾರಾಜಿಸುವ ದಿವ್ಯಜ್ಯೋತಿ. ಗಾಢಾಂಧಕಾರದಲ್ಲಿ ಮಲಗಿರುವ ಕೋಟ್ಯಂತರ ವ್ಯಕ್ತಿಗಳನ್ನು ಆತ್ಮಪ್ರಭೆಯಿಂದ ಎಚ್ಚರಿಸಿರುವ ಮಹಾ ವಿಭೂತಿ. ಶಾಂತಿಯ ಸತ್ವದ ಆನಂದವನ್ನು ಅನುಭವದೊಡನೆ ಸಾಧಕರಿಗೆ ತಿಳಿಹೇಳಿ ಆಕರ್ಷಿಸಿ ಅವರ ಜೀವನ ಪುಷ್ಪವನ್ನು ಅರಳಿಸಿದ ಜ್ಞಾನಭಾನು. ಸ್ವಾಮಿ ವಿವೇಕಾನಂದರ ವಿವೇಕೋದಯಕ್ಕೆ ಕಾರಣಕರ್ತರಾಗಿ ಹಿಂದೂ ಧರ್ಮ ಧ್ವಜವನ್ನು ಪ್ರಪಂಚದ ತುಂಬೆಲ್ಲ ಹರಡಿರುವ ಆಧ್ಯಾತ್ಮ ಶಕ್ತಿಯನ್ನಿತ್ತ ಮಹಾಶಕ್ತಿ. ವಿಭಿನ್ನ ಮತಗಳ ಗೊಂದಲದಲ್ಲಿ ಬಿದ್ದು ನರಳುವವರಿಗೆ ಸರ್ವಮತಗಳ ಸಿದ್ಧಾಂತವನ್ನು ವಿಚಕ್ಷಣ ಬುದ್ಧಿಯೊಡನೆ ನಿರೀಕ್ಷಿಸಿ, ಪರೀಕ್ಷಿಸಿ ಎಲ್ಲ ಮತಗಳ ಸಿದ್ಧಾಂತವು ಸತ್ಯದೆಡೆಗೆ ಸೇರುವವೇ ಮೂಲ ಗುರಿಯೆಂದು ತಿಳಿಹೇಳಿ ಎಲ್ಲ ಮತಾನುಯಾಯಿಗಳಿಗೆ ಒಳ್ಳೆಯ ದಾರಿ ತೋರಿದ ಸರ್ವಧರ್ಮ ಸಮನ್ವಯಾಚಾರ್ಯ.

ಇಂತಹ ಮಹಾನ್ ವ್ಯಕ್ತಿಯಾದ ಪರಮಹಂಸರು ಬಂಗಾಲ ಪ್ರಾಂತದ ಕಾಮಾರಪುರ ಹಳ್ಳಿ ಜೋಪಡಿಯ ಬಡ ಕುಟುಂಬದಲ್ಲಿಯೆ ಜನಿಸಿ ಬಾಲ್ಯಜೀವನದಲ್ಲಿ ಗದಾಧರನೆಂದು ಹೆಸರು ಪಡೆದು ನೆರೆಹೊರೆಯ ಜನರಿಗೆ ಈ ಶಿಶು ಶಿರೋಮಣಿಯು, ಭವಿಷ್ಯದ ಮಹಾ ಕಾರ್ಯಕ್ಕೆ ಮಹಾ ಕಾರಣಗಳಾಗಿರುವ ಅದ್ಭುತ ಘಟನೆಗಳನ್ನು ಶಿಶು ಜೀವನದಲ್ಲಿಯೆ ತೋರಿಸಿ ಬೆರಗುಗೊಳಿಸಿದರು. ಹಣ್ಣಿನ ಗುಣ ಹೀಚಿನಲ್ಲಿ ಎಂಬಂತೆ ಒಂದು ಸಾರೆ ಪರಮಹಂಸರ ತಾಯಿಯು ಪರಮಹಂಸರು ಎಂಟು ತಿಂಗಳು ಕೂಸಾಗಿದ್ದಾಗ ಹಾಸಿಗೆಯ ಮೇಲೆ ಮಲಗಿಸಿ ತನ್ನ ಕೆಲಸಕ್ಕೆ ಹೋಗಿ ತಿರುಗಿ ಬರುವಷ್ಟರಲ್ಲಿಯೇ ಹಾಸಿಗೆಯ ಮೇಲೆ ಕಂದನ ಬದಲಾಗಿ ಒಬ್ಬ ದೊಡ್ಡ ತೇಜಸ್ವಿ ಮನುಷ್ಯನಂತೆ ಕುಳಿತಿದ್ದುದನ್ನು ಕಂಡು ಬೆರಗಾದಳಂತೆ, ಇಂತಹ ಅನೇಕ ಅನುಭವಗಳನ್ನು ತಂದ ತಾಯಿಗಳು ಪರಮಹಂಸರ ಅಲೌಕಿಕ ಶಕ್ತಿಯನ್ನು ಕಂಡು ಹಿಡಿದು ಈತನು ಧರ್ಮವೇತ್ತನೂ, ಲೋಕ ಕಲ್ಯಾಣಾರ್ಥವಾಗಿ ಜನಿಸಿದ ಮಹಾಪುರುಷನು ಎಂದು ಮನಗಂಡಿದ್ದರು. ಶಶಿಯು ಬೆಳಗುವಂತೆ, ಸಸಿಗೆ ನೀರೆರದಂತೆ ಪಲ್ಲವಿಸಿ ಬೆಳೆಯುವಂತೆ ಧರ್ಮ ಭಾವನೆಗಳು ದೇವರಲ್ಲಿ ಭಕ್ತಿ ವಿಶ್ವಾಸ ಮತ್ತು ವಿಷಯ ವಿರಕ್ತಿ ಮೊದಲಾದವುಗಳು ದಿನ ದಿನವೂ ಹೆಚ್ಚಾಗಿ ಪರಮಹಂಸರಲ್ಲಿ ಬೆಳೆಯುತ್ತಿದ್ದವು. ದೇವರನ್ನು ಕಾಣುವ ಹುಚ್ಚು ಹೆಚ್ಚಿಕೊಂಡು ಬಹು ಕಾಲದವರೆಗೂ ಧ್ಯಾನಸ್ಥರಾಗಿ ಕುಳಿತುಕೊಳ್ಳುತ್ತಿದ್ದರು. ಸತ್ಯದರ್ಶನಕ್ಕಾಗಿ ಮುತ್ತಿದ ಅಜ್ಞಾನದ ಅಂಧಕಾರವನ್ನು ಹೊಡೆದೋಡಿಸಿ ಭಕ್ತಿ ಜ್ಞಾನಗಳ ವಿಹಾರ

ಪೂರ್ಣ ಮಾರ್ಗದಲ್ಲಿ ನಡೆದು ಸಚ್ಚಿದಾನಂದ ಸಾಕ್ಷಾತ್ಕಾರ ಪಡೆಯಲು ಹಾತೊರೆಯುತ್ತಿದ್ದರು. ಸಿದ್ಧಿಗಾಗಿ ಅವಿಶ್ರಾಂತ ಸಾಧನೆ ಅತ್ಯಾವಶ್ಯಕವೆಂದು ಬಗೆದಿದ್ದರು. ಆದರಂತೆ ನಿಸ್ವಾರ್ಥತೆಯಿಂದ, ಏಕಾಗ್ರತೆಯನ್ನು ಸಾಧಿಸಿ, ಸಿದ್ಧಿಪುರುಷರಾಗಿದ್ದರು. ಹೃನ್ಮಂದಿರದ ಬಾಗಿಲವು ತೆರೆಯದಿದ್ದರೆ ಆತ್ಮ ಸಾಕ್ಷಾತ್ಕಾರವು ಅಸಾಧ್ಯವೆಂದು ಅರಿತಿದ್ದರು, ಪರಮಹಂಸರು ವಿವಾಹಿತರಾಗಿದ್ದರೂ ವಿಷಯಾಸಕ್ತರಾಗದೆ ಈಶ್ವರಾಸಕ್ತಿಯಲ್ಲಿದ್ದು ವಿರತಾಗ್ರಗಣ್ಯರಾಗಿದ್ದರು. ಹೊನ್ನು ಹೆಣ್ಣು ಮಣ್ಣು ಈ ಮೂರನ್ನು ಮಾಯೆಯೆಂದು ತಿರಸ್ಕಾರ ದೃಷ್ಟಿಯಿಂದ ಎಂದಿಗೂ ಕಾಣಲಿಲ್ಲ. ಆ ರೀತಿ ಕಾಣುವದೂ ಸಹ ಮೂಢತನವೆಂದು ಬಗೆದಿದ್ದರು. ಭೋಗವಸ್ತುಗಳ ಹತ್ತಿರದಲ್ಲಿದ್ದು ಕೊಂಡು ಮನಸ್ಸನ್ನು ಅಂತರ್ಮುಖವಾಗಿ ಮಾಡಿ, ಹೆಣ್ಣನ್ನು ಮಾತೃಸ್ಥಾನದಲ್ಲಿ ಕಂಡು, ಈ ಕಠಿಣ ಪರೀಕ್ಷೆಯಲ್ಲಿ ಜಯಶೀಲರಾಗಿ ಪೂಜಿಸುವದೇ ನಿಜವಾದ ಸಾಧನ ಗುರಿಯೆಂದು ಹೇಳುತ್ತಿದ್ದರಲ್ಲದೆ ಸಹಧರ್ಮಿಣಿ ಶಾರದಾ ಮಣಿ ದೇವಿಯನ್ನು ಮಾತೆಯಂತೆ ಆರಾಧಿಸಿ, ಅಪಾರ ಶಕ್ತಿ ಸಾಮರ್ಥ್ಯವನ್ನು ಸಂಗೊಳಿಸಿ ಜ್ಯೋತಿ ಸ್ವರೂಪರಾಗಿದ್ದರು. ಪರಮಹಂಸರ ಹತ್ತಿರ ಸತ್ಯಾನ್ವೇಷಣೆಗಾಗಿ ಯಾರೇ ಬರಲಿ, ಅವರನ್ನು ಸಂಪೂರ್ಣ ಪರೀಕ್ಷಿಸಿ ಒರೆಗಲ್ಲಿಗೆ ಹಚ್ಚಿ ಚಿನ್ನವೆಂದು ಪರಿಗ್ರಹಿಸಿದಾಗ ಅವರಿಗೆ ಒಳ್ಳೆಯ ಬೋಧ ಮಾಡಿ ಉತ್ತಮ ಸಂಸ್ಕಾರದ ಸಿಹಿ ನೀರನ್ನೆರದು ಆ ವ್ಯಕ್ತಿಯ ಹೃದಯದಲ್ಲಿದ್ದ ಈಶ್ವರಜ್ಯೋತಿಯು ಪ್ರಕಾಶಿಸುವಂತೆ ಮಾಡುತ್ತಿದ್ದರು.

ಒಂದು ಸಲ ಧರ್ಮಸಂಸ್ಥೆಯಲ್ಲಿದ್ದು ಧರ್ಮ ಜೀವನದಲ್ಲಿ ಕಾಲ ಕಳೆಯುತ್ತಿದ್ದರೂ, ಬೆಳಕು ಕಾಣದೆ ದುಃಖ ಪಡುತ್ತಿದ್ದ ಒಬ್ಬ ಸಾಧುಗಳು ಪರಮಹಂಸರನ್ನು ಕಂಡು "ನನಗೇಕೆ ಇನ್ನೂ ಬೆಳಕು ತೋರುವದಿಲ್ಲ?" ಎಂದು ಪ್ರಶ್ನೆ ಮಾಡಿದ್ದಕ್ಕೆ ಉತ್ತರ ರೂಪವಾಗಿ ಪರಮಹಂಸರು— "ಯಾವಾಗಲೂ ಬೆಳಕಿನಲ್ಲಿಯೇ ಇರುವವರೆಗೆ ಅದರ ಮಹಿಮೆ ಗೊತ್ತಾಗದಿರಬಹುದು. ಕತ್ತಲೆಗೆ ಹೋಗಿ ಬಂದರೆ ಆಗ ಗೊತ್ತಾಗುವದು. ಮೀನು ಒಂದು ಸಾರೆ ದಡಕ್ಕೆ ನೆಗೆದರೆ ಆಗ ಅದಕ್ಕೆ ನೀರಿನ ಕೃಪಾಮಹಿಮೆ ತಿಳಿಯುತ್ತದೆ. ಅವತಾರ ಇತಿಹಾಸವನ್ನು ರಚಿಸುತ್ತದೆ. ಇತಿಹಾಸ ಅವತಾರವನ್ನು ರಚಿಸುವದಿಲ್ಲ" ವೆಂದು ಹೇಳಿ ಕಳಿಸಿದರಂತೆ. ಮತ್ತೊಂದು ಸಲ ವಂಗದೇಶದ ಸುಪ್ರಸಿದ್ಧ ಕಾದಂಬರಿಕಾರರಾದ ಬಂಕಿಮಚಂದ್ರ ಚಟ್ಟೋಪಾಧ್ಯಾಯ ಅವರು ಪರಮಹಂಸರ ದರ್ಶನ ತೆಗೆದುಕೊಂಡು, "ಜನ್ಮಾಂತರ ಅಂದರೆ ಏನು?" ಎಂದು ಪ್ರಶ್ನೆ ಕೇಳಿದಾಗ ಪರಮಹಂಸರು "ಸಿದ್ಧನಾದ ಮೇಲೆ ಜನ್ಮಗಳಿಲ್ಲ. ಅದಕ್ಕೆ ಮೊದಲು ಜನ್ಮ ಜಾಲದಿಂದ ಬಿಡುಗಡೆ ಇಲ್ಲ.... ಕುಂಬಾರನು ಮಡಿಕೆಗಳನ್ನು ಮಾಡಿ ಬಿಸಲಿಗೆ ಹಾಕುತ್ತಾನೆ. ಕೆಲವು ಒಣಗುತ್ತವೆ. ಕೆಲವಿನ್ನೂ ಹಸಿ ಹಸಿಯಾಗಿರುತ್ತವೆ. ಅಕಸ್ಮಾತ್ ಆಗ

ದನಗಳು ಅವುಗಳನ್ನೆಲ್ಲ ತುಳಿದವೆಂದರೆ ಎಲ್ಲವೂ ಚೂರು ಚೂರಾಗಿ ಹೋಗುತ್ತವೆ. ಕುಂಬಾರನು ಒಣಗಿ ಚೂರಾದವುಗಳನ್ನು ಬಿಟ್ಟುಬಿಡುತ್ತಾನೆ. ಹಸಿಹಸಿಯಾದವನ್ನು ಪುನಃ ಚಕ್ರಕ್ಕೆ ಹಾಕಿ ತಿರುಗಿಸುತ್ತಾನೆ. ಅವುಗಳಿಂದ ಹೊಸ ಮಡಿಕೆ ಬಿಡುವದಿಲ್ಲ.... ನೀನು ಹಸಿಯಾಗಿರುವ ತನಕ, ಜ್ಞಾನಿಯಾಗಿರುವ ತನಕ, ಕುಂಬಾರನು ನಿನ್ನನ್ನು ಪುನಃ ಪುನಃ ತಿಗುರಿಗೆ ಹಾಕಿ ತಿರುಗಿಸುತ್ತಾನೆ" ಎಂದು ಮುಂತಾಗಿ ವ್ಯಾವಹಾರಿಕ ಉದಾಹರಣೆಯನ್ನು ಇತ್ತು ಅನುಭವ ಪೂರ್ಣ ವಿಚಾರಗಳನ್ನು ಹೇಳಿದ ನಂತರ ಮತ್ತೆ ಬಂಕಿಮಚಂದ್ರರು "ಈಶ್ವರ ಸಾಕ್ಷಾತ್ಕಾರ ಮಾಡುವದು ಹೇಗೆ?" ಎಂದು ಪ್ರಶ್ನಿಸಿದಾಗ ಪರಮಹಂಸರು "ಪ್ರಾರ್ಥಿಸು ನಿನ್ನಲ್ಲಿ ಸರಳತೆಯಿದ್ದರೆ ಉತ್ತರ ದೊರೆಯುತ್ತದೆ. ಸಜ್ಜನರ ಸಂಗ ಮಾಡಿಸುತ್ತಾನೆ ಅಥವಾ ಯಾವನಾದರೊಬ್ಬನಿಂದ ಮಾರ್ಗ ತೋರಿಸುತ್ತಾನೆ. ಸೂಜಿಗಲ್ಲು ಕಬ್ಬಿಣವನ್ನು ಎಳೆಯುವಂತೆ. ಈಶ್ವರನು ನಮ್ಮನ್ನು ಸದಾ ಎಳೆಯುತ್ತಿದ್ದಾನೆ. ಕಬ್ಬಿಣದ ಸುತ್ತ ಮಣ್ಣು ಮುಚ್ಚಿಕೊಂಡಿದ್ದರೆ ಅದು ಆಕರ್ಷಿತವಾಗುವದಿಲ್ಲ, ಅಶ್ರುಜಲದಿಂದ ಕೊಳೆಯನ್ನು ತೊಳೆದು ಬಿಟ್ಟರೆ ಒಡನೆಯೇ ಈಶ್ವರನು ಆಕರ್ಷಿಸುತ್ತಾನೆ" ಎಂದು ಹೇಳಿ ಅವರ ಸಂಶಯ ನಿವಾರಣೆ ಮಾಡುತ್ತಿದ್ದರು, ಈ ರೀತಿ ವಿದ್ಯಾಸಾಗರರು, ಜ್ಞಾನಿಗಳು, ಯೋಗಿಗಳು, ತ್ಯಾಗಿಗಳು ಎಲ್ಲರೂ ವಿವಿಧ ವಿಚಾರಗಳನ್ನು ಕೇಳುತ್ತಿದ್ದರು. ಅದಕ್ಕೆ ತಕ್ಕ ಉತ್ತರವನ್ನು ತಮ್ಮ ಅನುಭವ ಜ್ಞಾನದಿಂದ ನೀಡಿ ಸನ್ಮಾರ್ಗಕ್ಕೆ ಹಚ್ಚಿ ಎಚ್ಚರಿಸುತ್ತಿದ್ದರು. ಪರಮಹಂಸರು ಲೌಕಿಕವಲ್ಲಿ ಇದ್ದುಕೊಂಡು ಪಾರಲೌಕಿಕವನ್ನು ಸಾಧಿಸಿದ ಸಿದ್ಧಿಪುರುಷರು. ಸಮುದ್ರದೊಳಗೆ ಮುಳುಗಿದರೆ ಮುತ್ತು ರತ್ನಂಗಳು ಕಾಣುವಂತೆ ಪರಮಹಂಸರ ವಚನಾಂಬುಧಿಯಲ್ಲಿ ಈಸುತ್ತ ಹೋದಂತೆ ಮನುಷ್ಯನಿಗೆ ಕೊನೆಯುವರೆಗೆ ಬೆಳಕು ನೀಡುವ ಸಂದೇಶ ಲಭ್ಯವಾಗುವದು. ಪರಮಹಂಸರ ಈ ವಚನಾಮೃತವು ರಾಷ್ಟ್ರದ ತುಂಬೆಲ್ಲ ಪ್ರವಹಿಸಲಿ. ಮನೆ ಮನೆಗೂ ಗುಡಿಸಲು ಗುಡಿಸಲಿಗೂ ಈ ಶಾಂತಿ ಸಂದೇಶ ಮುಟ್ಟಿ ಸಂತುಷ್ಟಪಡಿಸಲಿ. ಮಾನವನಲ್ಲಿ ಮಲಗಿರುವ ಪೂರ್ಣತೆಯನ್ನು ವಿಕಾಸವಾಗುವಂತೆ ಮಾಡಿಲಿ.

ದಿ. ೧–೯–೬೮ ರಂದು ಅ. ಭಾ. ಆಕಾಶವಾಣಿ ಧಾರವಾಡ ಕೇಂದ್ರದಿಂದ ಅಪ್ಪಣೆ ಕೊಡಿಸಿದ್ದು.

ಶ್ರೀ ಚನ್ನಬಸವಣ್ಣ

ಷಟ್‌ಸ್ಥಲ ಚಕ್ರವರ್ತಿ ಚನ್ನಬಸವಣ್ಣನವರು ಅಕ್ಕನಾಗಮ್ಮನವರ ಸತ್ಪುತ್ರರಾಗಿ ಜಗದಣ್ಣ ಬಸವಣ್ಣನವರ ಸೋದರಳಿಯರಾಗಿದ್ದರೂ, ವ್ಯಾವಹಾರಿಕ ಬಾಂಧವ್ಯಕ್ಕೆ ತಿಲಾಂಜಲಿಯನ್ನಿತ್ತ ಆಧ್ಯಾತ್ಮಬಂಧು. ಭಕ್ತಿ ಸಂಬಂಧವನ್ನು ಬೆಳೆಯಿಸಿಕೊಂಡ ನಿರ್ಮಲಾತ್ಮನ ಚೇತನ. ಅಂದಿನ ಅನುಭವಮಂಟಪದ ಶರಣಸಮೂಹದಲ್ಲಿ ಚನ್ನಬಸವಣ್ಣನವರು ಚಿಕ್ಕವರಾಗಿದ್ದರೂ, ಆಧ್ಯಾತ್ಮ ಸರೋವರದೊಳಗೆ ಈಸುವವರಲ್ಲಿ ಘನಮಹಿಮರಾಗಿ, ಚಿತ್‌ಶಕ್ತಿ ಸಂಪನ್ನರಾಗಿ, ಚಿದ್ವಿಭೂತಿಯಾಗಿದ್ದರು. ಚಿನ್ಮಯ ಮೂರ್ತಿಯಾಗಿದ್ದರು. ಅಷ್ಟೇ ಅಲ್ಲ, ಮಹಾತತ್ವಜ್ಞಾನಿಯಾಗಿ "ಲೋಕ ಲೋಕವನತಿಗಳೆದು ನಿಜದಲ್ಲಿ ನಿವಾಸಿಯಾಗಿಪ್ಪ", "ಸ್ವಯಂಭು ಜ್ಞಾನಿ ಗುಹೇಶ್ವರ ಲಿಂಗದಲ್ಲಿ ಚನ್ನಬಸವಣ್ಣನೊಬ್ಬನೇ ಅವಿರಳ ಜ್ಞಾನಿ" ಅನ್ನುವ ಮಹದ್ವ್ಯಕ್ತಿತ್ವವನ್ನು ಯೋಗಿಕುಲಶಿರೋಮಣಿ ಅಲ್ಲಮಪ್ರಭು ದೇವರಿಂದ ಸಂಗಳಿಸಿದ, ಸರ್ವಸಂಸಾರ ವಿರಹಿತರಾಗಿದ್ದರು.

"ಕಿರಿಯರಾದಡೇನು? ಹಿರಿಯರಾದಡೇನು? ಅರಿವಿಂಗೆ ಹಿರಿದು ಕಿರಿದುಂಟೆ? ಆದಿಯನಾದಿ ಇಲ್ಲದಂದು ಅಜಾಂಡ ಬ್ರಹ್ಮಾಂಡ ಕೋಟಿಗಳುದಯವಾಗದಂದು ಗುಹೇಶ್ವರ ಲಿಂಗದಲ್ಲಿ ನೀನೊಬ್ಬನೆ ಮಹಾಜ್ಞಾನಿ ಕಾಣಬಂದಿತ್ತು ಕಾಣಾ, ಚನ್ನಬಸವಣ್ಣಾ".

ಎಂದುದಾಗಿ ವಿರಾಗವಿಭು ಅಲ್ಲಮಪ್ರಭುಗಳು ಹೃದಯ ತುಂಬಿ ಹಾಡಿ ಹರಿಸಿದ್ದಾರೆ. ಚನ್ನಬಸವಣ್ಣನವರ ಮಹಾಜ್ಞಾನದ ಹೆಚ್ಚಳವನ್ನು ಹೆಚ್ಚಿಸಿದ್ದಾರೆ. ಅದೇ ಬಗೆಯಾಗಿ ಸಿದ್ಧಪುರುಷ ಸಿದ್ಧರಾಮ ಶಿವಯೋಗಿಗಳು "ಆಧ್ಯಾತ್ಮ ಆಧ್ಯಾತ್ಮವೆಂದೆಂಬಿರಿ! ಆಧ್ಯಾತ್ಮವಾರಿಗೆ? ಶ್ರೀ ಗುರುಸ್ವಾಮಿ ಬಹಳವಪ್ಪ ಶಿವಲಿಂಗವ ಸೂಕ್ಷ್ಮವ ಮಾಡಿ ಕರಸ್ಥಳಕ್ಕೆ ಕೊಟ್ಟ ಬಳಿಕ ಬೇರೆ ಯೋಗವುಂಟೆ? ತನ್ನ ಹಸ್ತವ ಮಸ್ತಕದಲ್ಲಿಟ್ಟು ವಾಯುಪ್ರಾಣಿಯಾಗಿದ್ದುದಕೊಂದು ಲಿಂಗಪ್ರಾಣಿಯ ಮಾಡಿದ ಬಳಿಕ ಮರಳಿಯೋಗವುಂಟೆ, ಶಿವಯೋಗವಲ್ಲದೆ? ಲಿಂಗಾರ್ಚನೆಯ ಮಾಡಿ ಜಂಗಮಪ್ರಸಾದವ ಕೊಂಡ ಬಳಿಕ ಮರಳಿಯೋಗಕ್ಕೆ ಒಡಂಬಡುವವರೆ ಅರಿವ್ರು? ಇಂತಪ್ಪವನತಿಗಳೆದು ಶುದ್ಧ ಶಿವಯೋಗಿಯ ಮಾಡಿದಾತ ಚನ್ನಬಸವಣ್ಣನು. ಆನು ಚನ್ನಬಸವಣ್ಣನ ಕರುಣದಿಂದ ಅಭ್ಯಾಸಯೋಗವನತಿಗಳೆದು ಶಿವಯೋಗದಲ್ಲಿ ನಿತ್ಯನಾಗಿ, ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣೈಕ್ಯನೆಂಬ ಷಡುಸ್ಥಲಕ್ಕಧಿಕಾರಿಯಾದೆ. ನಿನ್ನವರ ಸಲುಗೆಗೆ ಸಂದೆ" ಎಂದು ಶುದ್ಧಾಂತಃಕರಣಪೂರ್ವಕವಾಗಿ ಮುಕ್ತಕಂಠದಿಂದ ನುತಿಸಿದ್ದಾರೆ. ಚನ್ನಬಸವಣ್ಣನವರ

ಕರುಣೆಯ ಕಂದರಾಗಿ ಶಿವಯೋಗದಲ್ಲಿ ನಿತ್ಯರಾಗಿ ಅಜ್ಞಾನ ಪ್ರಭೆಯ ಬೆಳಗಿನೊಳಗೆ ತಲ್ಲೀನರಾಗಿದ್ದಾರೆ ಸಿದ್ಧರಾಮಶಿವಯೋಗಿಗಳು. "ಸಮಸ್ಥಲಕ್ಷಾಧಿಕಾರಿಯಾದ" ಎನ್ನುವ ಶಬ್ದಪ್ರಯೋಗದಲ್ಲಿ ಚನ್ನಬಸವಣ್ಣನವರ ವ್ಯಕ್ತಿತ್ವಪ್ರಭೆ ಎನಿತು ಪ್ರಭಾವಪೂರ್ಣವಾಗಿತ್ತು? ಎಂಬುದರ ಅರಿವಾಗದಿರದು. ದಿವ್ಯಜ್ಞಾನಿ ಚನ್ನಬಸವಣ್ಣನವರು ಷಟ್‌ಸ್ಥಲ ವಿವೇಚನೆಯನ್ನು ಮಾಡುತ್ತ ಅದರ ನಿರ್ಣಯವನ್ನು ಒಳ್ಳೇ ಮಾರ್ಮಿಕವಾಗಿ ಮಾಡಿದ್ದಾರೆ. ಷಟ್‌ಸ್ಥಲ ಮಾರ್ಗದಲ್ಲಿ ಕ್ರಿಯಾಜ್ಞಾನಗಳ ಸಾಮರಸ್ಯ ಮೊದಲಿನಿಂದ ಹಿಡಿದುಕೊಂಡು ಕೊನೆಯವರೆಗೂ ಇರುತ್ತದೆಂದು ಸೂಕ್ಷ್ಮದಿಂದ ವಿಚಾರಿಸಿ, ಅನುಭವಿಸಿ ತಿಳಿಸಿದ್ದಾರೆ. "ನಿಷ್ಕಲ, ಸಕಲನಿಷ್ಕಲ, ಸಕಲ ಈ ಮೂರು ಅವಸ್ಥೆಗಳ ವರ್ಣನೆ ಆಗಮಗಳಲ್ಲಿ ಕಂಡುಬಂದರೆ ಅದರ ಅತ್ಯಂತ ಸೂಕ್ಷ್ಮಸ್ವರೂಪಗಳಾದ, ಶೂನ್ಯ, ನಿಶ್ಶೂನ್ಯ, ಸರ್ವಶೂನ್ಯ ಮುಂತಾದ ಕಲ್ಪನೆಗಳೆಲ್ಲವನು ಷಟ್‌ಸ್ಥಲದಲ್ಲಿ ವಿನೂತನವಾಗಿ ಚನ್ನಬಸವಣ್ಣನವರು ವಿವರಿಸಿದ್ದಾರೆ". ಈ ವಿಚಾರ ಆರ್. ಸಿ. ಹಿರೇಮಠ ಅವರು ಬರೆದ "ಷಟ್‌ಸ್ಥಲ ಪ್ರಭೆ"ಯಲ್ಲಿ ಪ್ರಕಾಶಿಸಿದೆ. ಅಂಗಕ್ರಿಯೆಗಳು ಲಿಂಗಕ್ರಿಯೆಗಳಾಗಬೇಕೆಂಬುದೇ ಅವರ ಉಸಿರು.

"ಕಂಗಳ ನೋಟ ಹೃದಯಜ್ಞಾನ ಮನದೊಳಗೆ ಮಾತನಾಡುತಿರ್ದೆನಯ್ಯ ಜೇನ ಮಳೆಗಳು ಕರೆದವು, ಅಮೃತಮಳೆಗಳು ಸುರಿದವು. ಕೂಡಲ ಚನ್ನಸಂಗನೆಂಬ ರಸಸಾಗರದೊಳಗೋಲಾಡುತಿರ್ದೆನಯ್ಯ" ಎಂದು ಜ್ಞಾನನಿಧಿ ಚನ್ನಬಸವಣ್ಣನವರು ಬಾಹ್ಯವೆಲ್ಲವನ್ನು ಮರೆತು, ಇಷ್ಟಲಿಂಗಾನುಸಂಧಾನದಲ್ಲಿ, ತಲ್ಲೀನರಾಗಿ, ಅಖಂಡ ತೇಜದೊಡನೆ ಬೆರೆತು ಈ ವಚನ ನುಡಿದಿದ್ದಾರೆ. ಸಾಹಿತ್ಯ ಮೇಗುಲಕ್ಕೆ ಹೊಂಗಳಸವಿಟ್ಟಂತಿದೆ ಈ ವಚನ. ಚನ್ನಬಸವಣ್ಣನವರ ಸಾಹಿತ್ಯಸಾಗರದಲ್ಲಿ ಮುಳುಗಿದರೆ ಅಖಂಡಜ್ಯೋತಿಸ್ವರೂಪದ ಆತ್ಮಸಾಹಿತ್ಯದಿಂದೊಡಗೂಡಿದ ಮುತ್ತುರತ್ನಂಗಳು ದೊರೆಯುವವಲ್ಲದೆ ಮನದ ಕತ್ತಲೆಯನ್ನು ಕಳೆಯುತ್ತವೆ.

"ಜ್ಞಾನಾಮೃತವೆಂಬ ಜಲನಿಧಿಯ ಮೇಲೆ ಸಂಸಾರವೆಂಬ ಹಾವಸೆ ಮುಸುಕಿಹುದು. ನೀರವೊಗೆವರು ಬಂದು ನೂಕಿವಲ್ಲದೆ, ತೆರಳದು. ಮರಳಿ ಮುಸುಕುವದ ಮಾಣಿಸಯ್ಯ" ಎಂತಹ ಅನುಭವಪೂರ್ಣನುಡಿ.

ಸಂಸಾರವೆಂಬ ಹಾವಸೆ ಮೆತ್ತದಂತೆ ನೋಡಿಕೊಳ್ಳಬೇಕಂತೆ. "ಕಾಮಬೇಕು ಲಿಂಗದಲ್ಲಿ, ಕ್ರೋಧಬೇಕು ಕರಣಂಗಳಲ್ಲಿ, ಲೋಭಬೇಕು ಪಾದೋದಕ ಪ್ರಸಾದವಲ್ಲಿ, ಮತ್ಸರಬೇಕು ಹೊನ್ನು ಹೆಣ್ಣು ಮಣ್ಣಿನಲ್ಲಿ" ಎಂದು ಅರಿಷಡ್ವರ್ಗಗಳಿಗೆ ಅರಿಯುವ ಬುದ್ಧಿಯನ್ನಿತ್ತು. ಮರವೆಯ ಪರದೆಯನ್ನು ತೆಗೆಯದ ಹೊರತು ಸಚ್ಚಿದಾನಂದ ಸ್ವರೂಪವು ತಿಳಿಯಲಸಾಧ್ಯವೆಂದು ಚನ್ನಬಸವಣ್ಣನವರು ಒತ್ತಿ ಒತ್ತಿ ಹೇಳಿದ್ದಾರೆ.

ಮತ್ತೊಂದು ಕಡೆ—"ಅಂತರಂಗದ ಅರಿವು, ಬಹಿರಂಗದ ಕ್ರಿಯೆ; ಈ ಉಭಯ ಸಂಪುಟ ಒಂದಾದ ಶರಣಂಗೆ ಹಿಂಗಿತ್ತು ತನುಸೂಚಕ, ಹಿಂಗಿತ್ತು ಮನ ಸೂತಕ ಕೂಡಲ ಚನ್ನಸಂಗಯ್ಯನಲ್ಲಿ ಸಂಗವಾದದ್ದು ಸರ್ವೇಂದ್ರಿಯ."

"ಲಿಂಗವೇ ಮಣ್ಣು, ಲಿಂಗವೇ ಮರನು, ಫಲವೇ ಜಂಗಮನು, ರುಚಿಯೇ ಪ್ರಸಾದ, ಮುತ್ತು ನೀರಿನಲ್ಲಿ ಹುಟ್ಟಿ ಮತ್ತೆ ನೀರಪ್ಪುದೇ?" "ಕಣ್ಣರಿಯ ದಿದ್ದಡೆಯೂ ಕರುಳರಿಯಬೇಡವೆ?" ಇಂತಹ ರಸಭರಿತ; ಅಂತರಂಗದರಿವಿನ ಸೂಳ್ನುಡಿಗಳು ಶ್ರೀ ಚನ್ನಬಸವಣ್ಣನವರ ಸಾಹಿತ್ಯ ಕ್ಷೇತ್ರದಲ್ಲಿ ತಿರುಗಿದಗೆ ನೂರಾರು ಸಿಗುತ್ತವೆ. ಚಿತ್ತಕ್ಕೆ ಶಾಂತಿಯನ್ನು ನೀಡುತ್ತವೆ. ವಚನವಾಙ್ಮಯ ದಲ್ಲಿಯೇ ಚನ್ನಬಸವಣ್ಣನವರ ವಚನಗಳು ಅಗ್ರಸ್ಥಾನ ಪಡೆದಿವೆ ಎಂದು ಹೇಳಿದರೆ ಅತಿಶಯೋಕ್ತಿಯಾಗದಿರದು.

ಇವರ ವಚನಗಳಲ್ಲಿ-ಶಬ್ದಸಂಪತ್ತು, ಕಾವ್ಯಶಕ್ತಿ, ಭಾವಸೌಷ್ಠವ ತುಂಬಿ ತುಳುಕಿವೆ. ಷಟ್‌ಸ್ಥಲ ನಿರೂಪಣೆ ಮಾಡುವವರಲ್ಲಿ ವಚನಕಾರರಲ್ಲಿಯೇ ವಿಶಿಷ್ಟ ಸ್ಥಾನ ಪಡೆದಿದ್ದಾರೆ. ಚನ್ನಬಸವಣ್ಣನವರು ಕೇವಲ ವಚನಗಳಷ್ಟೇ ಬರೆಯದೆ ದಾರ್ಶನಿಕ ಗ್ರಂಥಗಳನ್ನು ಬರೆದಿದ್ದಾರೆ. ಕರುಣಹಸುಗೆ, ಮಿಶ್ರಾರ್ಪಣ, ಪದ ಮಂತ್ರಗೋಪ್ಯ, ಹಿರಿಯ ಮಂತ್ರಗೋಪ್ಯ ಮುಂತಾದವುಗಳನ್ನು ರಚಿಸಿ ತಮ್ಮ ಕಾವ್ಯ ಪ್ರಭೆಯನ್ನು ಪ್ರಕಾಶಿಸಿದ್ದಾರೆ. ತತ್ವವಿವೇಚನೆ ಮತ್ತು ಷಟ್‌ಸ್ಥಲ ಸಿದ್ಧಾಂತದ ಪ್ರತಿಪಾದನೆಯನ್ನು ಈ ಗ್ರಂಥಗಳಲ್ಲಿ ಕಾಣಬಹುದು. ಒಟ್ಟಿನಲ್ಲಿ ಚನ್ನಬಸವಣ್ಣನವರ ಸಾಹಿತ್ಯವು ಪ್ರಪಂಚಕ್ಕೆ ನಿರಂತರ ಉಳಿಯುವ ದೊಡ್ಡ ಕಾಣಿಕೆ. ಇಂತಹ ವಚನ ರಚನೆಗೈದುದರ ಫಲವೇ ಇಂದು ನಾಡು ಇನಿತಾದರೂ ಕಣ್ದೆರೆಯಲು ಕಾರಣವಾಗಿದೆ. ಅಂತೆಯೇ ಅನೇಕ ಶಿವಶರಣ ಶರಣೆಯರ ವಾಣಿ ಯಲ್ಲಿ ಚನ್ನಬಸವಣ್ಣನವರ ಪ್ರತಿಭೆ ಎದ್ದುಕಾಣುತ್ತಿದೆ. ಚನ್ನಬಸವಣ್ಣನವರೇ ಒಂದೆಡೆ ಹೇಳುವಂತೆ— "ಜ್ಞಾನದೀಪ್ತಿಯ ಬೆಳಗುವ ತೈಲವಾವುದೆಂದಡೆ; ಶಿವ ಶರಣರ ನುಡಿಗಡಣದ ಒಸರು" ಇಂದು ಈ ನುಡಿಮುತ್ತು ನಾಡಿಗರ ನಾಡಿಯಲ್ಲಿ ಸೇರಿ ಕೊರಳನ್ನು ಶೋಭಿಸಲಿ. ಆತ್ಮ ಸೌಂದರ್ಯವನ್ನು ಪಡೆಯಲು ಕೈದೀವಿಗೆ ಯಾಗಲಿ. ಚನ್ನಬಸವಣ್ಣನವರ ಸಾಹಿತ್ಯ ಸೌರಭ ಸುತ್ತೆಲ್ಲ ಸಂಚರಿಸಿ ಸ್ವಾನುಭವ ಶಕ್ತಿ ಜನತೆಗೆ ನೀಡಲಿ.

ದಿ. ೧೪-೯-೭೮ ರಂದು ಆಕಾಶವಾಣಿ ಧಾರವಾಡ ಕೇಂದ್ರದಿಂದ ಅಪ್ಪಣೆ ಕೊಡಿಸಿದ್ದು.

ಅಕ್ಕನಾಗಮ್ಮ

ಚಿನ್ಮಯಮೂರ್ತಿ ಚನ್ನಬಸವಣ್ಣನವರ ಜನನಿಯೆ ಅಕ್ಕನಾಗಮ್ಮ. ಆಧ್ಯಾತ್ಮ ತಪಸ್ಸಿನಲ್ಲಿ ಜೀವನವನ್ನು ಸವೆಸಿ, ಕಾಯಕಷ್ಟ ಸಹಿಸಿ, ಮಹಾತ್ಮಾ ಬಸವಣ್ಣನವರ ಕಾರ್ಯ ಚಟುವಟಿಕೆಗಳಿಗೆ ಆಸರ ಕಂಬವಾಗಿ ಬಾಳಿ ಬೆಳಗಿದ ನಿಜಭಕ್ತಿ ಸಂಪನ್ನೆ. ಅಕ್ಕನಾಗಮ್ಮ ಬಸವಣ್ಣನವರಿಗಿಂತಲೂ ಹಿರಿಯಳಾದರೂ ಬಸವತತ್ವವನ್ನು ಬಸವ ಶಕ್ತಿಯನ್ನು ಬೆಳೆಸಲು ತತ್ವನಿಷ್ಠೆಯಿಂದ ಶ್ರಮಿಸಿದ ವೀರ ಮಾತೆ. ಬಸವಣ್ಣನವರಿಗೆ ಅನೇಕ ಎಡರು ತೊಡರುಗಳು ಬಂದಾಗ ಧೈರ್ಯ ಹೇಳಿ, ಆತ್ಮಶಕ್ತಿ ಪ್ರಭಾವವನ್ನು ಬೀರಿ, ಕೊನೆಗೆ ಬಸವಣ್ಣನವರನ್ನೇ ಗುರುವೆಂದು ಭಾವಿಸಿದ ಮಹಾಮಾತೆ. ಆತ್ಮಸಾಧನೆಗಾಗಿ ಕಲ್ಯಾಣದ ಗುಹೆಯಲ್ಲಿದ್ದು, ಆತ್ಮಸಾಕ್ಷಾತ್ಕಾರ ಮಾಡಿಕೊಂಡು, ಸತ್ಕ್ರಿಯಾ ಶೀಲಗಳಿಂದ ಪ್ರಕಾಶಿಸಿದ ಜಗನ್ಮಾತೆ. ಇಂತಹ ಅದ್ಭುತ ಶಕ್ತಿಯನ್ನು ಪಡೆದವಳಾದರೂ, ಬಸವಣ್ಣನನ್ನೇ ಮರೆಹೊಕ್ಕು, ಆತನ ಆತ್ಮಶಕ್ತಿಗೆ ಮಾರು ಹೋಗಿ ನುಡಿದ ನುಡಿಯನ್ನು ಕೇಳಿದರೆ ಕಿವಿ ನಿಮಿರುತ್ತವೆ. ದೇಹವೆಲ್ಲ ರೋಮಾಂಚಕವಾಗುತ್ತದೆ. ಬಸವಣ್ಣನವರನ್ನು ಕುರಿತು ಒಂದೆಡೆ "ಎನ್ನ ಕುಲ ಸೂತಕವ ಕಳೆದಾತ ಬಸವಣ್ಣ, ಎನ್ನ ಛಲಸೂತಕವ ಕಳೆದಾತ ಬಸವಣ್ಣ, ಎನ್ನ ತನುಸೂತಕವ ಕಳೆದಾತ ಬಸವಣ್ಣ, ಎನ್ನ ನೆನಹು ಸೂತಕವ ಕಳೆದಾತ ಬಸವಣ್ಣ, ಎನ್ನ ಭಾವ ಸೂತಕವ ಕಳೆದಾತ ಬಸವಣ್ಣ, ಎನ್ನ ಕುರುಹು ಮರಹಿನ ಸಂದು ಸಂಶಯ ಬಿಡಿಸಿದಾತ ಬಸವಣ್ಣ, ಎನ್ನ ತನ್ನೊಳಗೆ ಇಂಬಿಟ್ಟುಕೊಂಡಾತ ಬಸವಣ್ಣ, ಬಸವಣ್ಣ ಪ್ರಿಯ ಚನ್ನಸಂಗನ ಹೃದಯದಲ್ಲಿ ನಿಜನಿವಾಸಿಯಾಗಿ ಇರಿಸಿದ ಎನ್ನ ತಂದೆ ಸಂಗನಬಸವಣ್ಣ" ಎಂದುಸುರಿದ್ದಾಳೆ. ಎಂತಹ ವಿಶಾಲಭಾವನೆ, ಎಂತಹ ಉದಾತ್ತ ಜೀವನ, ತಾನು ಹಿರಿಯಳಾದರೂ ಬಸವಣ್ಣನವರಿಗೆ "ತಂದೆ" ಎಂದು ಬೋಧಿಸಿದ್ದಾಳೆ ಮತ್ತು ಎಲ್ಲ ಸೂತಕಗಳನ್ನು ನಿನ್ನ ಕೃಪೆಯಿಂದ ಕಳೆದುಕೊಂಡೆ ಎಂದು ನುಡಿದು ಅಹಂಕಾರ ನಿರಸನ ಮಾಡಿಕೊಂಡಿದ್ದಾಳೆ. ಬಸವಣ್ಣನವರನ್ನು ತಾಯಿಯಂತೆ ಲಾಲನೆ-ಪಾಲನೆ ಮಾಡಿ ಪೋಷಿಸಿ ಬೆಳೆಸಿದ ಅಕ್ಕನಾಗಮ್ಮನ ಹೃದಯ, ಮಹಾಸಾಗರದಷ್ಟು ವಿಶಾಲತೆ, ಶಾಂತತೆಗಳನ್ನು ಎದ್ದು ತೋರಿಸುತ್ತದೆ. ಮತ್ತೊಂದು ವಚನದಲ್ಲಿ—"ಬಸವಣ್ಣ, ನೀವು ಮರ್ತ್ಯಕ್ಕೆ ಬಂದು ನಿಂದಿರೆ ಭಕ್ತಿಯ ಬೆಳವಿಗೆ ದೆಸೆದೆಸೆಗೆ ಪಸರಿಸಿತಯ್ಯ, ಸ್ವರ್ಗ ಮರ್ತ್ಯ ಪಾತಾಳದೊಳಗೆಲ್ಲ ನಿಮ್ಮ ಭಕ್ತಿಯ ಬೆಳವಿಗೆಯ ಘನವನಾರು ಬಲ್ಲರು? ಅಣ್ಣಾ! ಶಶಿಧರನ ಮಹಿಮ ಪ್ರಾಪ್ತಿಸಿತ್ತೆಂದು ನೀವು ಲಿಂಗೈಕ್ಯವಾದರೆ, ನಿಮ್ಮೊಡನೆ ಭಕ್ತಿ ಹೋಯಿತ್ತಯ್ಯ, ನಿಮ್ಮೊಡನೆ ಸದಾಚಾರ ಹೋಯಿತ್ತಯ್ಯ, ನಿಮ್ಮೊಡನೆ ಅಸಂಖ್ಯಾತ ಶರಣರು

ಹೋದರು ಅಣ್ಣಾ! ಮರ್ತ್ಯ ಲೋಕದ ಮಹಾಮನೆಯು ಶೂನ್ಯವಾಯಿತ್ತು, ಅಯ್ಯಾ ಬಸವಣ್ಣ! ಎನ್ನನೊಯ್ಯದೆ ಹೋದೆಯಲ್ಲ! ಬಸವಣ್ಣಪ್ರಿಯ ಚನ್ನ ಸಂಗಯ್ಯಂಗೆ ಪ್ರಾಣಲಿಂಗವಾಗಿ ಹೊದೆಯಲ್ಲ ಸಂಗನಬಸವಣ್ಣ!! ಈ ವಚನವನ್ನು ಬಹುಶಃ ಅಕ್ಕನಾಗಮ್ಮನು, ಕಲ್ಯಾಣಕ್ರಾಂತಿಯಾಗಿ ಬಸವಣ್ಣನವರು ಕಪ್ಪಡಿ ಕೂಡಲಸಂಗಮಕ್ಕೆ ತೆರಳಿ, ಲಿಂಗೈಕ್ಯರಾದ ನಂತರ ನುಡಿದಂತೆ ಕಾಣುತ್ತದೆ. ಈ ನುಡಿಗಳು ಕರಳು ಕೊರೈಸುವಂತಿವೆ, ದುಃಖದಿಂದ ನೊಂದು ಬೆಂದು, ಸಮಾಜದ ಭವಿಷ್ಯವನ್ನು ವಿಚಾರಿಸಿ, ವಿವೇಚಿಸಿ, "ಮರ್ತ್ಯಲೋಕದ ಮಹಾಮನೆಯು ಶೂನ್ಯ ವಾಯಿತು" ಎಂದು ಕರಳುಕರಗಿ ಹೊರಸೂಸಿದ; ಶಬ್ದಗಳಿವು. ಬಸವಣ್ಣನವರಂತೆ; ಸಮಾಜವನ್ನು ಸಂಘಟಿಸಿ, ಹೃದಯ ದೌರ್ಬಲ್ಯವನ್ನು ದೂರೀಕರಿಸಿ, ನೀತಿಮಾರ್ಗ ವನ್ನು ತೋರಿಸಿ, ಭಕ್ತಿರಸವದಣಿಯುವೇಯಿಸಿ, ಒಳ್ಳೇ ದಾರಿಗೆ ಹಚ್ಚುವ ಸಮಾಜ ಸುಧಾರಕರಾರು? ಎಂಬುವ ಚಿಂತೆಯಿಂದಲೇ "ಬಸವಾ, ಬಸವಾ, ಎನ್ನನೊಯ್ಯದೆ ಹೋದೆಯಲ್ಲ, ಪಂಚಪರುಷ ಮೂರುತಿ ಬಸವಣ್ಣ" ಎಂದು ಕೊರಗಿದ್ದಾಳೆ. ಪ್ರಾರ್ಥಿಸಿದ್ದಾಳೆ, ಸಂಗನಬಸವಣ್ಣನ ಒಕ್ಕುದಕೊಂಡು, ಭವದ ಬಳ್ಳಿಯನ್ನೇ ಹರಿದುಕೊಂಡ ಅಕ್ಕನಾಗಮ್ಮ ಸಮಾಜದ ಹಿತಚಿಂತನೆಗಾಗಿ ಪರಿತಪಿಸುತ್ತಿದ್ದಾಳೆ. ಅಷ್ಟೇ ಅಲ್ಲ ನಾಡಶಕ್ತಿಯಲಿ ಬಾಡದಂತೆ; ಧೀರಳಂತೆ, ಯೋಗಿನಿಯಂತೆ ಹಿಮಾಚಲ ಪರ್ವತದಷ್ಟು ಭದ್ರವಾಗಿ ನಿಂತು ಬಸವಣ್ಣನವರ ಕಾಯಕವನ್ನು ಮುಂದುವರಿಸಿದ ಚಿತ್ಸ್ವರೂಪಿಣಿ ಅಕ್ಕನಾಗಮ್ಮ. ಆಕೆಯ ಹೃದಯ "ಮೃದೂನಿ ಕುಸುಮಾದಪಿ ವಜ್ರಾದಪಿ ಕಠೋರಾಣಿ." ಅಕ್ಕನಾಗಮ್ಮನ ಸರ್ವಾರ್ಪಣ ಭಾವದ ವಚನವನ್ನು ನಿರೀಕ್ಷಿಸಿದರೆ ನಮಗೆ ಮತ್ತಿಷ್ಟು ಅರಿವಾಗುವದು "ಎನ್ನ ತನು ಚನ್ನಬಸವಣ್ಣನ ಬಯಲ ಬೆರಸಿತ್ತು; ಎನ್ನ ಮನ ಸಂಗನಬಸವಣ್ಣನ ನಿಜ ಪದವ ಬೆರಸಿತ್ತು; ಎನ್ನ ಪ್ರಾಣ ಅಲ್ಲಮ ಪ್ರಭುದೇವರ ಅರಿವ ಬೆರಸಿತ್ತು. ಇಂತೀ ಮೂವರೂ ಒಂದೊಂದ ಹಂಚಿಕೊಂಡ ಕಾರಣ ಎನಗೇನೂ ಇಲ್ಲದೆ ಬಸವಣ್ಣಪ್ರಿಯ ಚನ್ನಸಂಗಯ್ಯನ ಹೃದಯ ಕಮಲದಲ್ಲಿ ನಿಜವಾಸಿಯಾಗಿರ್ದನು!" ಎಂದು ಅಂದಿದ್ದಾಳೆ. ತನು ಮನ ಪ್ರಾಣಂಗಳನ್ನು ಮಹಾಜ್ಞಾನಿ ಚನ್ನಬಸವಣ್ಣ, ದ್ವಿತೀಯ ಶಂಭು ಬಸವಣ್ಣ, ವೈರಾಗ್ಯನಿಧಿ ಅಲ್ಲಮಪ್ರಭುಗಳಿಗೆ ಸಮರ್ಪಿಸಿ, ಭಾರವನ್ನು ಹಗುರು ಮಾಡಿಕೊಂಡಿದ್ದಾಳೆ. ಭಾವವನ್ನು ಎತ್ತರ ಮಾಡಿಕೊಂಡು ಚನ್ನಸಂಗಯ್ಯನ ಹೃದಯಕಮಲದಲ್ಲಿ ಭ್ರಮರವಾಗಿ, ಭ್ರಮಾತ್ಮಕ ಸಂಸಾರ ದಿಂದ ದೂರಾಗಿದ್ದಾಳೆ. ಅಕ್ಕನಾಗಮ್ಮನ ವಚನ ಸಾಹಿತ್ಯ ಸಾಕಷ್ಟು ಸಿಗದಿದ್ದರೂ, ಪುಷ್ಪದಿಂದ ವಾಸನೆ ತಿಳಿಯುವಂತೆ, ಸ್ವಲ್ಪೇ ವಚನಗಳಲ್ಲಿ ಅಕ್ಕನಾಗಮ್ಮನ ಅಂತರ್ವಾಣಿ ಅರ್ಥವಾಗುತ್ತದೆ. ಆಕೆಯ ಮಧುರ ವ್ಯಕ್ತಿತ್ವ, ಹೃದಯ ವೈಶಾಲ್ಯ, ಸಮಾಜದ ಕಳಕಳಿ ಕೈ ಬೀಸಿ ಕರೆಯುತ್ತಿದೆ. ತಿಳಿಭಾಷೆಯಲ್ಲಿಯೇ ಭಾವಗಾಂಭೀರ್ಯ

ವನ್ನು ಇರಿಸಿದ್ದಾಳೆ. ಪ್ರತಿಯೊಬ್ಬರ ಹೃದಯ ಕುಸುಮವರಳುವಂತೆ ವಚನ ಸಾಹಿತ್ಯವನ್ನು ರಚಿಸಿದ್ದಾಳೆ. ಭಕ್ತಿಯ ತಪಸ್ವಿನಿಯಾಗಿದ್ದಾಳೆ. ಮುಕ್ತಿಯ ಸ್ವರದ್ರೂಪಿಣಿಯಾಗಿದ್ದಾಳೆ.

ಅಕ್ಕನಾಗಮ್ಮ ಎಲ್ಲರಿಗೆ ಅಕ್ಕ. ಆಕೆಯ ಭಾಷೆ ಸಕ್ಕರೆಯ ಹಿಡಿ. ಆಕೆಯ ಹೃದಯ ಚೊಕ್ಕ ಚಿನ್ನ.

ಧಾರವಾಡ ಆಕಾಶವಾಣಿ ಕೇಂದ್ರದಿಂದ ಪ್ರಸಾರಿತವಾದ ಅಭಿನಂದನೆ.

ಸ್ವಾಮಿ ವಿವೇಕಾನಂದರ ರಾಜಯೋಗ

ಸ್ವಾಮಿ ವಿವೇಕಾನಂದರು ರಾಮಕೃಷ್ಣ ಪರಮಹಂಸರ ಪರಮ ಶಿಷ್ಯರು. ರಾಮಕೃಷ್ಣ ಪರಮಹಂಸರ ಸಿದ್ಧಿಯ ವಿದ್ಯುತ್‌ಜ್ಯೋತಿಯನ್ನು ಪಡೆದು, ಸಾಧನ ರಂಗದಲ್ಲಿ ಪಳಗಿ, ಜಪ ಧ್ಯಾನ ಮತ್ತು ಯೋಗಸಾಧನೆಗಳಲ್ಲಿ ಮುಳುಗಿ, ಜ್ಞಾನ ರತ್ನವನ್ನು ಗಳಿಸಿದ ಅದ್ಭುತ ಪ್ರತಿಭಾಸಂಪನ್ನ ಮಹಾವ್ಯಕ್ತಿ. ಪ್ರಪಂಚದ ತುಂಬೆಲ್ಲ ಭಾರತೀಯ ಹಿಂದು ಸಂಸ್ಕೃತಿಯನ್ನು, ಅದರ ಹಿರಿಮೆಯನ್ನು ಬೆಳೆಯಿಸಿ, ಬೆಳಗಿಸಿ ತಮೋನಿದ್ರೆಯಿಂದ ಎಚ್ಚರಿಸಿದ ಮಹಾಶಕ್ತಿ. ಈ ದಿವ್ಯವ್ಯಕ್ತಿ ಪ್ರಭಾವ ದಿಂದ ರಾಜಯೋಗದ ಪ್ರತಿಭೆ ಅದರ ಸೂಕ್ಷ್ಮ ವಿವರಣೆ ಹೊರಬಂದು ತತ್ವ ಜಿಜ್ಞಾಸುಗಳಿಗೆ ಮಾರ್ಗದರ್ಶನವಾಯಿತು. ಸ್ವಾಮಿ ವಿವೇಕಾನಂದರು ಪತಂಜಲಿಯ ಯೋಗ ಸೂತ್ರವನ್ನೇ ಮುಖ್ಯ ಆಧಾರವಾಗಿಟ್ಟುಕೊಂಡು, ರಾಜಯೋಗದ ಯೌಗಿಕ ಶಕ್ತಿಯನ್ನು ಮನಗಂಡು ಅಭ್ಯಾಸದೊಡನೆ ಅನುಭವಿಸಿ ಪತಂಜಲಿಯ ಸಿದ್ಧಾಂತದ ಸಾರವನ್ನೇ ಪ್ರಪಂಚಕ್ಕೆ ನೀಡಿ ನುರಿತ ವೈಜ್ಞಾನಿಕರಿಗೆ ದಾರಿದೀಪ ವಾಗಿದ್ದಾರೆ.

ಸ್ವಾಮಿ ವಿವೇಕಾನಂದರು "ರಾಜಯೋಗ" ಈ ಶಿರೋನಾಮದ ತಮ್ಮ ಗ್ರಂಥದಲ್ಲಿ ರಾಜಯೋಗವನ್ನು ಕುರಿತು ಒಂದೆಡೆ—

''The Science of Raja-Yoga, in the first place, proposes to give us such a means of observing the internal states. The instrument is the mind itself. The power of attention, when properly guided, and directed towards the internal world, will analyse the mind and illumine facts for us. The powers of the mind are like rays of light dissipated; when they are concentrated they illumine. This is our only means of knowledge.''

ಈ ರೀತಿ ತಮ್ಮದೇ ಆದ ಪ್ರಭಾವಪೂರ್ಣ ಭಾಷೆಯಲ್ಲಿ, ಹೃದಯಂಗಮ ಶೈಲಿಯಲ್ಲಿ ಅಂತಃಸ್ಫೂರ್ತಿಯಿಂದ ನುಡಿದಿದ್ದಾರೆ. ಅಂದರೆ—"ಅಂತರಂಗದ ಸ್ಥಿತಿಯನ್ನು ಪರೀಕ್ಷಿಸುವ ಮಾರ್ಗವೊಂದು ಕಾಣುತ್ತದೆ. ಗ್ರಹಣಶಕ್ತಿಯನ್ನು ನಾವು ಸರಿಯಾಗಿ ರೂಢಿಸಿ ಆಂತರಿಕ ವಸ್ತುವಿನ ಮೇಲೆ ಬಿಟ್ಟಾಗ, ಅದು ಮನಸ್ಸನ್ನು ವಿಭಜನೆ ಮಾಡಿ ಅದಕ್ಕೆ ಸಂಬಂಧಪಟ್ಟ ವಿಷಯಗಳನ್ನು ನಮಗೆ ಒದಗಿಸುತ್ತದೆ. ನಮ್ಮ ಮನಸ್ಸಿನ ಶಕ್ತಿಯು ಬೆಳಕಿನ ಕಿರಣಗಳಂತೆ ಚದುರಿಹೋಗಿದ್ದು, ಅವುಗಳನ್ನು

ಕೇಂದ್ರೀಕರಣ ಮಾಡಿಕೊಂಡಾಗ ಪ್ರಕಾಶಮಾನವಾಗುತ್ತದೆ. ನಮ್ಮ ಜ್ಞಾನಾರ್ಜನೆಗೆ ಇದೊಂದೇ ದಾರಿ” ಎಂಬುದೇ ಇದರ ಭಾವ.

ಈ ರಾಜಯೋಗದಿಂದ ಅಂತರಂಗ ಪ್ರಪಂಚದಿಂದ ಪ್ರಾರಂಭಿಸಿ ಅಂತರಂಗ ಮತ್ತು ಬಾಹ್ಯಗಳೆರಡನ್ನು ಹತೋಟಿಯಲ್ಲಿಟ್ಟುಕೊಳ್ಳಬಹುದು. ಸತ್ಯವನ್ನು ಮುಟ್ಟುವ ವೈಜ್ಞಾನಿಕ ಪದ್ಧತಿಯನ್ನು ರಾಜಯೋಗವು ಮಾನವನ ಎದುರಿಗೆ ಇಡುತ್ತದೆ. ಹೊರಗಿನ ಪ್ರಪಂಚದ ವಿಚಾರಗಳನ್ನು ನಿರೀಕ್ಷಿಸುವದು ಸುಲಭ. ಆದರೆ ಅಂತರಂಗದ ಸ್ಥಿತಿಯನ್ನು ನಿರೀಕ್ಷಿಸುವ ಸಾಧನಗಳನ್ನು ಒದಗಿಸಲು ಪ್ರಯತ್ನಿಸುತ್ತಿದೆ ಈ ರಾಜಯೋಗ.

ಸ್ವಾಮಿ ವಿವೇಕಾನಂದರು ರಾಜಯೋಗದ ಮರ್ಮವನ್ನರಿಯಲು ಎಂಟು ಮೆಟ್ಟಲುಗಳನ್ನು ಹತ್ತುವದು ಅತಿ ಮಹತ್ವವುಳ್ಳದ್ದೆಂದು ವಿವರಿಸಿದ್ದಾರೆ.

ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣ, ಧ್ಯಾನ ಮತ್ತು ಸಮಾಧಿ. ಇವೇ ಎಂಟು ಮೆಟ್ಟಲುಗಳು. ಈ ಅಷ್ಟಾಂಗಗಳನ್ನು ನಿಯಮ ಪೂರ್ವಕ ಅನುಷ್ಠಾನದಲ್ಲಿ ತಂದುಕೊಂಡರೆ ಮಾತ್ರ ರಾಜಯೋಗದ ಸಂಸಿದ್ಧಿ. ಮೊದಲು ಅಹಿಂಸೆ, ಸತ್ಯಪ್ರಿಯತೆ, ಅಸ್ತೇಯ, ಬ್ರಹ್ಮಚರ್ಯ ಮುಂತಾದವುಗಳನ್ನು ನಿಷ್ಠೆಯಿಂದ ಪರಿಪಾಲನ ಮಾಡುವದೇ ಯಮ.

ಅಭ್ಯಾಸ, ಈಶ್ವರನಲ್ಲಿ ಶರಣಾಗತಿ, ಸಂಯಮ ಜೀವನದಿಂದ ವರ್ತಿಸುವದೇ ನಿಯಮ. “ಸ್ಥಿರಸುಖಮಾಸನಮ್” ಅಂದರೆ ಸದ್ವಿಚಾರಗಳ ಅಧ್ಯಯನದಲ್ಲಿ ನಿರತರಾಗಲು ಆಸನವೇ ಸ್ಥಿರಸುಖವನ್ನು ನೀಡುತ್ತದೆ. ದೇಹವನ್ನು ಶುದ್ಧೀಕರಣ ಮಾಡಿ ಆರೋಗ್ಯವಾಗಿಡುತ್ತದೆ. ಪ್ರಾಣದ ನಿಗ್ರಹವೇ ಪ್ರಾಣಾಯಾಮ. ಅನಂತ ಶಕ್ತಿಯು ಆಗರಕ್ಕೆ ಒಯ್ಯುವ ಮಹತ್ಸಾಧನೆಯೇ ಪ್ರಾಣಾಯಾಮ. ಸಣ್ಣ ಕಣದಿಂದ ಹಿಡಿದು ಅತ್ಯುಚ್ಛ್ರಿತವಾದ ಸೂರ್ಯನವರೆಗೆ, ಪ್ರಪಂಚದಲ್ಲಿರುವ ಸರ್ವವಸ್ತುಗಳನ್ನು ತನ್ನ ಸ್ವಾಧೀನಕ್ಕೆ ತರತಕ್ಕ ಶಕ್ತಿ ಪ್ರಾಣಾಯಾಮದಲ್ಲಿದೆ. ಇದೇ ಪ್ರಾಣಾಯಾಮದ ಗುರಿ. “ಸ್ವಸ್ವವಿಷಯಾ ಸಂಪ್ರಯೋಗೇ ಚಿತ್ತ ಸ್ವರೂಪಾನುಕಾರ ಇವೇಂದ್ರಿಯಾಣಾಂ ಪ್ರತ್ಯಾಹಾರ:” “ನಿಜವಾದ ಆಕಾರ ಚಿತ್ತದಲ್ಲಿದೆ. ಇಂದ್ರಿಯಗಳು ತದೈಕ್ಯ ಭಾವವನ್ನು ತಾಳಿ ತಮಗೆ ಯಾವ ವಸ್ತು ಬಂದರೂ ಅದರ ಆಕಾರವನ್ನು ಧರಿಸುತ್ತದೆ. ಇಂತಹ ಆಕಾರ ಧರಿಸಿದಂತೆ, ಮನಸ್ಸನ್ನು ನಿಗ್ರಹಿಸಿದರೆ ಮನಸ್ಸು ಶಾಂತವಾಗುತ್ತದೆ. ಇದೇ ಪ್ರತ್ಯಾಹಾರ. “ದೇಶಬಂಧಶ್ಚಿತ್ತಸ್ಯಧಾರಣಾ” ಒಂದು ವಸ್ತುವಿನ ಮೇಲೆ ಚಿತ್ತವನ್ನು ನಿಲ್ಲಿಸಬೇಕಾಗುತ್ತದೆ. ಸತ್ಯವನ್ನು ಒಳಗೊಳಿಸಿಕೊಂಡು, ಒಂದನ್ನೇ ಹಿಡಿದು ಸಾಧಿಸಿದ್ದಾದರೆ ಅಲ್ಲಿ ಜ್ಯೋತಿ ಕಾಣುವದೇ ಧಾರಣ. “ತತ್ರ ಪ್ರತ್ಯಯೈಕತಾನತಾಧ್ಯಾನಂ” ಧ್ಯಾನಸ್ಥಿತಿಯೇ ನೈಜಸ್ಥಿತಿಯ ಪರಮಾವಸ್ಥೆ. ಎಲ್ಲಿಯವರೆಗೂ ಆಶೆ ಆಮಿಷಾದಿಗಳು ಇರುವವೋ ಅಲ್ಲಿಯವರೆಗೂ ನಿಜವಾದ

ಸುಖಸಂತೋಷವಾಗಿರುವದಿಲ್ಲ. ಧ್ಯಾನಸ್ಥಿತಿಯು ಮಾತ್ರ ನಿಜವಾದ ಸಂತೋಷ ಮತ್ತು ಶಾಂತಿಯನ್ನು ಕೊಡಬಲ್ಲದು. ಪ್ರಾಣಿಗಳಿಗೆ ಅವುಗಳ ಇಂದ್ರಿಯದಲ್ಲಿ ಸುಖವಿದ್ದರೆ ಮಾನವನಿಗೆ ಬುದ್ಧಿಯಲ್ಲಿದೆ. ಇಂತಹ ಧ್ಯಾನಸ್ಥಿತಿಗೆ ಏರಿದ ಜೀವನಿಗೆ ಮಾತ್ರ ಈ ವಿಶ್ವವು ನಿಜವಾಗಿಯೂ ಸುಂದರ ಕಾಣುತ್ತದೆ. "ತದೇವ ಅರ್ಥ ಮಾತ್ರ ನಿರ್ಭಾಸಂ ಸ್ವರೂಪ ಶೂನ್ಯಮಿವ ಸಮಾಧಿಃ" ಧ್ಯಾನದಲ್ಲಿ ಆಕಾರ ಅಥವಾ ಬಾಹ್ಯವಸ್ತುವಿನ ರೂಪವನ್ನು ತೊರೆದ ಮೇಲೆ ಅದು ಸಿದ್ಧಿಸುತ್ತದೆ. ಆ ರೀತಿ ಧ್ಯಾನಮಾಡಿದರೆ ಅದೇ ಸಮಾಧಿ, ಈ ಸಮಾಧಿಯ ಸಿದ್ಧಿಗಾಗಿ ಪ್ರತಿಯೊಂದು ಮೆಟ್ಟಲನ್ನು, ಪೂರ್ಣ ವಿಚಾರಿಸಿ, ಶ್ರದ್ಧಾಪೂರ್ವಕವಾಗಿ, ಅಭ್ಯಾಸದ ಅನುಭವ ದೊಡನೆ ಕ್ರಮಶಃ ಏರಿ ಸಾಧಿಸಿಕೊಂಡರೆ ಅದೇ ಜೀವನ್ಮುಕ್ತಿ. ಈ ರೀತಿ ಅಷ್ಟಾಂಗಗಳನ್ನು ಅಂಗವಿಸಿಕೊಂಡಿರುವವೇ ಸ್ವಾಮಿ ವಿವೇಕಾನಂದರ ರಾಜಯೋಗ. ಸ್ವಾಮಿ ವಿವೇಕಾನಂದರು ಶಾಸ್ತ್ರಾಧ್ಯಯನವನ್ನು ಮಾಡಿ; ಈ ರಾಜಯೋಗವನ್ನು ತುಲನಾತ್ಮಕ, ಹಾಗೂ ಮನೋವೈಜ್ಞಾನಿಕ ದೃಷ್ಟಿಯೊಡನೆ ವಿಚಾರಿಸಿ, ವಿವೇಚಿಸಿ ಅನುಭವಸಾರವನ್ನೇ ತಮ್ಮ "ರಾಜಯೋಗ"ದಲ್ಲಿ ಇರಿಸಿದ್ದಾರೆ. ಅದಕ್ಕಾಗಿ ಇಂದಿನ ಪ್ರಪಂಚದ ದುರ್ಧರ ಪ್ರಸಂಗದಲ್ಲಿ, ಆಧ್ಯಾತ್ಮ ವಿದ್ಯೆಯಲ್ಲಿ ನಿರತರಾಗಿ, ಆತ್ಮಶಕ್ತಿಯನ್ನು ಪಡೆದು, ಎಲ್ಲ ಶಾಸ್ತ್ರಗಳ ಮೂಲ ಗುರಿಯಾದ ಐಕ್ಯವನ್ನು ಕಂಡು ಹಿಡಿಯುವ ತತ್ವಜ್ಞಾನಿಗಳಿಗೂ, ಸಾಧಕರಿಗೂ, ಯೋಗಿಗಳಿಗೂ ಸ್ವಾಮಿ ವಿವೇಕಾನಂದರ ರಾಜಯೋಗವೇ ರಾಜಮಾರ್ಗ.

ಸನ್ ೧೯೬೮ ರಲ್ಲಿ ಧಾರವಾಡ ಆಕಾಶವಾಣಿ ಕೇಂದ್ರದಿಂದ ಪ್ರಸಾರಿತವಾದದ್ದು

ಗಂಗಾಂಬಿಕೆ

ವಿಶ್ವವಿಭೂತಿ ಮಹಾತ್ಮಾ ಬಸವಣ್ಣನವರ ಧರ್ಮಪತ್ನಿಯೆ ಗಂಗಾಬಿಕೆ. ಗಂಗಾಂಬಿಕೆಯು ವಚನ ಸಾಹಿತ್ಯ ಗಂಗಾ ಪ್ರವಾಹದಂತೆ ಸಾಕಷ್ಟು ವಿಶಾಲವಾಗಿ ಹರಿಯದಿದ್ದರೂ ಗಂಗೆಯಂತೆ ನಿರ್ಮಲ ಮನಸ್ಸಿನವಳು. ಬಸವಣ್ಣನವರ ಸಹ ಧರ್ಮಿಣಿಯಾಗಿ, ಸತ್ಯ ಶುದ್ಧ ಕಾಯಕನಿಷ್ಠೆಯಿಂದ ದಾಸೋಹ ಮಾಡುತ್ತ, ನಿರಂತರ ಇದೇ ಕಾಯಕದಲ್ಲಿ ತೊಡಗಿದುದರ ಕಾರಣವೇ ವಚನ ರಚನೆಗೆ ಅವಕಾಶ ಸಿಕ್ಕಿರಲಿಕ್ಕಿಲ್ಲವೆಂದು ನಮ್ಮ ಕಲ್ಪನೆ ಗಂಗಾಂಬಿಕೆಯು ಸತತವೂ ಗುರುಲಿಂಗಜಂಗಮ ಪೂಜೆಯಲ್ಲಿ ನಿರತಳಾಗಿದ್ದು, ನಿಜಭಕ್ತಿಯಲ್ಲಿ ಕಾಲಕಳೆಯುತ್ತಿದ್ದಳು. "ಕಲ್ಯಾಣ ಕ್ರಾಂತಿಯ ದುರ್ಧರ ಪ್ರಸಂಗದಲ್ಲಿ, ಗಂಗಾಂಬಿಕೆಯು ಬಸವಣ್ಣನವರ ಜೊತೆಯಾಗಿ ಕಪ್ಪಡಿಸಂಗಮಕ್ಕೆ ಹೋಗದೆ, ತನ್ನ ಗುರುಗಳಾದ ರುದ್ರಮುನಿಗಳ ಉಪದೇಶದಂತೆ, ತನ್ನ ಪತಿಯಾದ ಬಸವಣ್ಣನವರ ಸಾಮಾಜಿಕ ಕ್ರಾಂತಿ ಕಿರಣ ಪ್ರಕಾಶಕ್ಕಾಗಿ ಆಧ್ಯಾತ್ಮಶಕ್ತಿಯನ್ನುಳಿಸುವದಕ್ಕಾಗಿ, ಅಹೋರಾತ್ರಿ ಕಲಿತನದಿಂದ ಕಾದಿದಳೆಂದು ಮತ್ತು ಕೊನೆಗೆ ಉಳಿವೆಯತ್ತ ಹೊರಟಿದ್ದ ಶರಣಸಮೂಹದೊಡನೆ ಹೊರಟು, ದಾರಿಯಲ್ಲಿ ಅಂದರೆ ಮುಗಟಖಾನ ಹುಬ್ಬಳ್ಳಿಯಲ್ಲಿ ಐಕ್ಯಳಾದಳೆಂದು ಶ್ರೀ ಸಿದ್ಧಯ್ಯನವರು ಪುರಾಣಿಕ ಅವರು ಬರೆದ ಶರಣಚರಿತಾಮೃತದಿಂದ ನಮಗೆ ಕಂಡು ಬರುತ್ತದೆ.

ಗಂಗಾಂಬಿಕೆಯು ನುಡಿದು ಹೋದ ವಚನಗಳಲ್ಲಿ ಎರಡೇ ವಚನಗಳು ದೊರೆಯುತ್ತವೆ. ವಚನಗಳು ಎರಡೇ ಇದ್ದರೂ ಭಾವಪೂರ್ಣವಾಗಿವೆ. ಬಂಧುರ ವಾಗಿವೆ. ಜ್ಯೋತಿರ್ಮಯವಾಗಿವೆ. ಮಹಾತ್ಮ ಬಸವಣ್ಣನವರ ಪಾವನಮಯ ಜೀವನವನ್ನು ಚಿತ್ರಿಸಿವೆ: ಒಂದು ವಚನದಲ್ಲಿ ಮೃಡಗಣರ ಭಕ್ತಿಯೇ ತುಂಬಿದ್ದರೆ ಇನ್ನೊಂದು ವಚನದಲ್ಲಿ, ಬಸವಣ್ಣನವರ ಸಾಮಾಜಿಕ ಕ್ರಾಂತಿ ಮತ್ತು ಶರಣರಿಗೆ ಬುದ್ಧಿವಾದ ಹೇಳಿದಂತಿದೆ.

"ಸಾಂದ್ರವಾಗಿ ಹರಗಣ ಭಕ್ತಿಯ ಮಾಳ್ಪನೆಂತವ್ವ ಮಾದಲಾಂಬಿಕಾ ನಂದನನು! ಸಾಂದ್ರವಾಗಿ ಬಿಜ್ಜಳನರಮನೆಯ ನ್ಯಾಯವ ಮಾಳ್ಪನೆಂತವ್ವ ಮಾದರಸರ ಮೋಹದ ಮಗನು! ಲಿಂಗಾರ್ಚನೆ ಲಿಂಗ ತೃಪ್ತಿ ಅನುಗ್ರೈವನೆಂತವ್ವ ಗಂಗಾಪ್ರಿಯ ಕೂಡಲಸಂಗನ ಶರಣ" ಎಂದುದಾಗಿ ಗಂಗಾಂಬಿಕೆ ನುಡಿದಿದ್ದಾಳೆ. ಜಗಜ್ಯೋತಿ ಬಸವಣ್ಣನವರ ಭಕ್ತಿಯ ಶಕ್ತಿಯನ್ನು, ತಿಳಿಭಾಷೆಯಲ್ಲಿ ಹೃದಯಂಗಮ ವಾಗಿ ವರ್ಣಿಸಿದ್ದಾಳೆ.

"ನ್ಯಾಯನಿಷ್ಠುರಿ, ದಾಕ್ಷಿಣ್ಯಪರನಾನಲ್ಲ ಲೋಕ ವಿರೋಧಿ ಶರಣನಾನಾರಿಗೂ ಅಂಜುವವನಲ್ಲ ಕೂಡಲ ಸಂಗಮದೇವರ ರಾಜ ತೇಜದಲ್ಲಿಪ್ಪನಾಗಿ" ಎಂದೆನ್ನುವ ಬಸವಣ್ಣನವರ ಈ ನುಡಿ ಗಂಗಾಂಬಿಕೆಗೆ ಒಂದು ಮಹಾಶಕ್ತಿಯಾಗಿದ್ದಿತು. ಬಸವಣ್ಣನವರು ಮಾಡುತ್ತಿರುವ ಮಹಾ ಕಾರ್ಯದಲ್ಲಿ ತಾನು ಊರುಗೋಲಾಗಿ, ನ್ಯಾಯನಿಷ್ಠುರತೆಯಿಂದ, ಬಸವಣ್ಣನವರ ಕರ್ತೃತ್ವ ಶಕ್ತಿಗೆ ಕುಂದು ಬರದಂತೆ ಜೊತೆಗಾರಳಾಗಿ ನೋಡಿಕೊಳ್ಳುತ್ತಿದ್ದಳು. ಗಂಗಾಂಬಿಕೆ ಹಾಗೂ ನೀಲಾಂಬಿಕೆಯರ ಪಾತಿವ್ರತ್ಯದ ಪುಣ್ಯ ಪ್ರಭಾವವೂ ಸಹ ಬಸವಣ್ಣನವರ ಕಾರ್ಯರಂಗಕ್ಕೆ ರನ್ನ ಕಳಸದಂತಿದ್ದಿತ್ತು. ಆ ಆತ್ಮಶಕ್ತಿ ಪ್ರಭಾವದ ಬೆಳಕಿನಲ್ಲಿ ತಾಮಸೀಯ ಶಕ್ತಿಗಳನ್ನು ನಿವಾರಣೆ ಮಾಡುತ್ತಿದ್ದ. ಈ ರೀತಿ ಗಂಗಾಂಬಿಕೆಯು ನೆರಳಿನಂತೆ, ಬಸವಣ್ಣನವರನ್ನು ಅನುಸರಿಸಿ, ಗುರುಲಿಂಗ ಜಂಗಮ ಸೇವೆಯಲ್ಲಿ ಕಾಲಕಳೆದು, ಆತ್ಮಾನುಸಂಧಾನದಲ್ಲಿ ಮುಳುಗಿ "ಕಾಯಕವೇ ಕೈಲಾಸ"ವೆಂಬುದನ್ನರಿತು ನಡೆದು ಹೋದ ಮಹಾ ಮಾತೆ.

ಸಾವಿಲ್ಲದ ಚನ್ನಮಲ್ಲಿಕಾರ್ಜುನನ ಅರ್ಧಾಂಗಿಯಾದ, ಅಕ್ಕ ಮಹಾದೇವಿಯ ಆಧ್ಯಾತ್ಮದ ಅರವಿಂದವನ್ನು ಅರಳಿಸಿ, ಆತ್ಮಶ್ರೀಯ ಸಂವರ್ಧನೆಗೆ ಸಹಾಯಕಳಾದ ಶಿವಶರಣೆ.

ಮಹಾತ್ಮ ಬಸವಣ್ಣನವರ ಮನೆಯೊಡತಿಯಾಗಿ, ಮನದೊಡತಿಯಾಗಿ, ಪ್ರೇರಕಳಾಗಿ ಪರಿಶುದ್ಧ ಬಾಳಿನಲ್ಲಿ ಬೆಳಗಿದ ನಿಜ ಶಕ್ತಿ ಸಂಪನ್ನೆ ಗಂಗಾಂಬಿಕೆ.

೧೯೬೯ರಲ್ಲಿ ಧಾರವಾಡ ಆಕಾಶವಾಣಿ ಕೇಂದ್ರದಿಂದ ಪ್ರಸಾರಿತವಾದ ಆಶೀರ್ವಚನ.

ಸ್ವಾಮಿ ವಿವೇಕಾನಂದ

ಸ್ವಾಮಿ ವಿವೇಕಾನಂದರು ಆತ್ಮಾನಂದಾಬ್ಧಿಯಲ್ಲಿ ಈಜಿದ ಬೃಹದ್ ವ್ಯಕ್ತಿ. ರಾಮಕೃಷ್ಣ ಪರಮಹಂಸರ ದಿವ್ಯವ್ಯಕ್ತಿತ್ವ ಪ್ರಭಾವಕ್ಕೊಳಗಾದ ಪರಮಶಿಷ್ಯಾಗ್ರೇಸರ. ಅಜ್ಞಾನಾಂಧಃಕಾರದಲ್ಲಿ ಮಲಗಿರುವ ಮಾನವಕುಲವನ್ನು ಎಚ್ಚರಿಸಿ, ವಿವೇಕವನ್ನು ನೀಡಿದ ಜ್ಞಾನಭಾಸ್ಕರ. ಕೋಟ್ಯಂತರ ಹೃದಯಗಳಿಗೆ ಹಿಂದೂ ಸಂಸ್ಕೃತಿಯ ಸಿಹಿ ನೀರನ್ನೆರೆದು, ಪ್ರಪಂಚದ ತುಂಬ ಧರ್ಮಧ್ವಜವನ್ನು ಹಾರಿಸಿ, ವ್ಯಕ್ತಿಗಳಿಗೆ ಅಂತಃಶಕ್ತಿಯ ಸ್ಫೂರ್ತಿಯನ್ನಿತ್ತ ದಿವ್ಯಜ್ಯೋತಿ. ಸ್ವಾಮಿ ವಿವೇಕಾನಂದರು ತಮ್ಮ ವಿದ್ವತ್ಪೂರ್ಣ ಹಾಗೂ ತಪಃಪೂರ್ಣ ಧರ್ಮವಾಣಿಯಿಂದ ಸರ್ವಧರ್ಮ ಸಮನ್ವಯ ದೃಷ್ಟಿಯನ್ನು ಪ್ರಚಾರಮಾಡಿ, ಪೂರ್ವ ಪಶ್ಚಿಮ ದೇಶಗಳ ನಡುವೆ ಭಾವೈಕ್ಯತೆಯನ್ನುಂಟುಮಾಡಿ, ಪ್ರಪಂಚದ ಸ್ನೇಹಕ್ಕೆ ಕಾರಣಕರ್ತರಾಗಿ ಮಹಾಮಹಿಮರಾದ ಯುಗಪ್ರವರ್ತಕ. ಸನ್ಯಾಸವನ್ನು ಸ್ವೀಕರಿಸಿ, ಅಖಂಡ ಬ್ರಹ್ಮಚರ್ಯವನ್ನು ನಿಯಮನಿಷ್ಠೆಯಿಂದ ಪರಿಪಾಲಿಸಿ, ಯೋಗಸಿದ್ಧಿಯನ್ನು ಚಿಕ್ಕವಯಸ್ಸಿನಲ್ಲಿಯೇ ಪಡೆದು, ಹೃದಯದೌರ್ಬಲ್ಯವನ್ನು ಕಿತ್ತೊಗೆದು, ಬುದ್ಧಿಗೆ ಪುಷ್ಟಿಯನ್ನಿತ್ತು ಹೃದಯವಿಕಸನಗೊಳಿಸಿದ ಮಹಾವಿಭೂತಿ. ಜೀವನವನ್ನೇ ಪೂರ್ಣತೆಯತ್ತ ಸಾಗಿಸಲು ತಪಸ್ಸನ್ನಾಚರಿಸಿದ ಜಿಜ್ಞಜ್ಯೋತಿ. ಸನ್ಯಾಸಿಗಳಿಗೆ ಆಧ್ಯಾತ್ಮಸಂಸ್ಕಾರವನ್ನು ನೀಡುವ ಮಠಮಂದಿರಗಳನ್ನು ಸಂಸ್ಥಾಪಿಸಿ ಧಾರ್ಮಿಕ ಶಕ್ತಿಯನ್ನು ಪ್ರಜ್ವಲಗೊಳಿಸಿದ ಧರ್ಮೋದ್ಧಾರಕ. ಆತ್ಮ ಮುಕ್ತಿಗಿಂತಲೂ ದೀನದಲಿತರ ಸೇವೆ ಅತ್ಯಧಿಕವೆಂದು ಬಗೆದು, ದರಿದ್ರದೇವೋಭವ ಎಂದುಸುರಿ, ದರಿದ್ರರಿಗೆ ದೇವತ್ವಕಲ್ಪನೆಯನ್ನು ಕಲ್ಪಿಸಿಕೊಟ್ಟು ಅವರ ಆತ್ಮಜ್ಯೋತಿಯನ್ನು ಬೆಳಗಿಸಿದ ಮಹಾಶಕ್ತಿ.

ಇಂತಹ ಮಹಾವ್ಯಕ್ತಿಯನ್ನು ಕಲಕತ್ತೆಯ ಹತ್ತಿರದಲ್ಲಿರುವ "ಸಿಮೂಲಿಯಾ" ಹೆಸರಿನ ಹಳ್ಳಿಯೊಂದರಲ್ಲಿ ಸನ್ ೧೮೬೩ನೆ ಜನವರಿ ೧೨ನೆಯ ಪವಿತ್ರ ಮಕರ ಸಂಕ್ರಾಂತಿಯ ಪ್ರಾತಃಕಾಲದ ಶುಭ ಮುಹೂರ್ತದಲ್ಲಿ ಭುವನೇಶ್ವರಿದೇವಿಯು ಪಡೆದಳು. ಬಹುದಿನಗಳಿಂದ ಬಹುಭಕ್ತಿಯಿಂದ ಕಾಶಿ ವಿಶ್ವೇಶ್ವರನನ್ನು ಸಂತಾನಕ್ಕಾಗಿ ಪೂಜಿಸುತ್ತಿರುವವರ ಪರಿಣಾಮವು ಸಫಲವಾಗಿದ್ದಕ್ಕಾಗಿ, ತಂದೆ ತಾಯಿಗಳಿಗೆ ಮಿತಿಮೀರಿದ ಸಂತಸವಾಗಿ, ವರಪ್ರಸಾದದಿಂದ ಹುಟ್ಟಿದ ಈ ಶಿಶುವಿಗೆ 'ವೀರೇಶ್ವರ' ಎಂದು ನಾಮಕರಣ ಮಾಡಿದರು. ಅನ್ನಪ್ರಾಶನ ಸಮಯದಲ್ಲಿ 'ನರೇಂದ್ರ' ಎಂದು ಕರೆದರು.

ಸಂಸ್ಕಾರವಿದ್ದಂತೆ, ಸಂಸಾರವಿರುವದು ಸಹಜ. ನಿರಂತರವೂ ದಂಪತಿಗಳು ಕಾಶಿ ವಿಶ್ವನಾಥನ ಧ್ಯಾನವನ್ನು ಮಾಡುತ್ತಿದ್ದರಲ್ಲದೆ ರಾಮಾಯಣ, ಮಹಾಭಾರತ ಮುಂತಾದ ಧಾರ್ಮಿಕ ಗ್ರಂಥಗಳ ಪಠಣವನ್ನು ಮನೆಯಲ್ಲಿ ಮಾಡುತ್ತಿದ್ದರು. ಈ ಸಂಸ್ಕಾರ ಬಲದಿಂದ ನರೇಂದ್ರನ ಹೃತ್ಪಟಲದಲ್ಲಿ ಒಳ್ಳೆಯ ವಿಚಾರಗಳು ಸೇರಿ, ಅವನ ಮನಸ್ಸು ಸಂತತವೂ ಆಧ್ಯಾತ್ಮ ವ್ಯೋಮದಲ್ಲಿ ಹಾರಾಡುತ್ತಿತ್ತು. ನರೇಂದ್ರನ ಬಾಲ್ಯಜೀವನದ ವಿಚಕ್ಷಣ ಹಾಗೂ ತಾತ್ವಿಕ ಬುದ್ಧಿಗೆ ಒಂದೇ ಒಂದು ಉದಾಹರಣೆ ಸಾಕು.

ನರೇಂದ್ರನು ೭-೮ ವರ್ಷದ ಹುಡುಗನಿದ್ದಾಗ ಆಗಾಗ ಧ್ಯಾನಮಗ್ನನಾಗಿ ಕುಳಿತುಕೊಳ್ಳುವ ರೂಢಿಯು ಅವನಲ್ಲಿ ಬೆಳೆದುಬಂದಿತ್ತು. ಒಂದುಸಾರೆ ಗೆಳೆಯ ರೊಡನೆ ಆಡುತ್ತಿರುವಾಗ, ನಾಗರಹಾವೊಂದು ಎದುರುಬಂದರೂ, ಎಳ್ಳನಿತೂ ಅಧೈರ್ಯನಾಗದೆ ಧ್ಯಾನಸ್ಥನಾಗಿ ಕುಳಿತುಕೊಂಡುಬಿಟ್ಟಿದ್ದನಂತೆ. ಅವನ ಮುಂದೆ ಆ ನಾಗರಹಾವು ಹೆಡೆ ಎತ್ತಿ ಆಡಿ ಕೆಲವು ನಿಮಿಷಗಳ ನಂತರ ಹೋಯಿತಂತೆ. ಇಷ್ಟೆಲ್ಲ ಧೈರ್ಯ ಬರಲು ನರೇಂದ್ರನ ಆತ್ಮವಿಶ್ವಾಸ ಹಾಗೂ ಆಧ್ಯಾತ್ಮಿಕ ಸಂಸ್ಕಾರವೇ ಮೂಲ ಕಾರಣ. "ಹಣ್ಣಿನ ಗುಣ ಹೀಚಿನಲ್ಲಿ ನೋಡು" ಎಂದೆನ್ನುವ ಗಾದೆ ಇಲ್ಲಿ ಸಾರ್ಥಕವಾಗುವದು.

ವರ್ಷಗಳುರುಳಿದಂತೆ, ನರೇಂದ್ರನ ವಯಸ್ಸು ಬೆಳೆದಂತೆ ತಿಳುವಳಿಕೆಯ ಕಿರಣಗಳು ಹೃದ್ಗಗನದಲ್ಲಿ ಮೂಡಿದವು. ಮೂಢನಂಬಿಕೆಗಳನ್ನು ವಿಚಾರಿಸದೆ ವಿವೇಚಿಸದೆ ನಂಬುತ್ತಿರಲಿಲ್ಲ.

ನರೇಂದ್ರನು ಕಾಲೇಜಿನಲ್ಲಿ ಓದುತ್ತಿರುವಾಗ ಉಪಾಧ್ಯಾಯರು ಅವನ ಅತ್ಯದ್ಭುತ ಸ್ಮರಣಶಕ್ತಿಯನ್ನು ಮತ್ತು ವಿಮರ್ಶಕ ದೃಷ್ಟಿಯನ್ನು ಕಂಡು ಮೆಚ್ಚಿದ್ದರು. ನರೇಂದ್ರನ ಮೇಧಾಶಕ್ತಿಯನ್ನು ಕಂಡ ಅವನ ತಂದೆ ವಿಶ್ವನಾಥದತ್ತನು ಪಾಶ್ಚಾತ್ಯ ತತ್ವಜ್ಞಾನಿಗಳ ಗ್ರಂಥಗಳ ಪರಿಚಯವನ್ನು ಮಾಡಿಕೊಟ್ಟರು. ಆದರ್ಶ ತಪಸ್ವೀ ಜೀವನದಂತೆ ನರೇಂದ್ರನ ವಿದ್ಯಾರ್ಥಿ ಜೀವನವಾಗಿತ್ತು. ಅವನ ಬುದ್ಧಿ ತೀಕ್ಷ್ಣವಿದ್ದಂತೆ ಹೃದಯ ವೈಶಾಲ್ಯವೂ ಇತ್ತು. ಸಂಸ್ಕೃತ, ಇಂಗ್ಲೀಷ, ಇತಿಹಾಸ ದಲ್ಲಿ ಆಸಕ್ತಿಯಿದ್ದಂತೆ ಭಾಷಾವಿಷ್ಟನಾಗಿ, ಸುಲಲಿತವಾಗಿ ಭಾಷಣ ಮಾಡುವದ ರಲ್ಲಿಯೂ ವಿಶೇಷಾಸಕ್ತಿಯನ್ನು ಪಡೆದಿದ್ದನು. ಈ ವಾಗ್ವೈಖರಿಯೇ ಪ್ರಪಂಚ ವನ್ನು ಎಚ್ಚರಿಸಲು ಕಾರಣವಾಯ್ತು. ಅದಕ್ಕಿಂತಲೂ ಮಿಗಿಲಾಗಿ, ಆತ್ಮಶಕ್ತಿ ಯನ್ನು ಪ್ರಬಲಗೊಳಿಸಿ ಜೀವನವನ್ನು ಜ್ಯೋತಿರ್ಮಯ ಮಾಡಿಕೊಂಡು ಸಿದ್ಧಿ ಗೇರಿದ್ದಕ್ಕಾಗಿ ನೂತನ ಚೇತನವನ್ನು ಭಾರತದಲ್ಲಿ ಪುನರುತ್ಥಾನ ಮಾಡಲು ಕಾರಣ ನಾದನು. ನರೇಂದ್ರನು ಜ್ಞಾನ ವೃಕ್ಷವನ್ನು ಹತ್ತಿ ಅನೇಕ ತಾತ್ವಿಕ ವೈಜ್ಞಾನಿಕ ವಿಚಾರದ ಶಾಖೋಪಶಾಖೆಗಳ ಮೇಲೆ ತಿರುಗಾಡುತ್ತಿರುವಾಗ, ಮಾನಸಿಕ

ಸಂಕಷ್ಟದ ಬಿರುಗಾಳಿಗೆ ಸಿಕ್ಕಿ ಹೊಯ್ದಾಡುತ್ತಿರುವಾಗ, ದೇವರಿದ್ದಾನೆಯೋ ಇಲ್ಲವೋ ಎಂಬ ಸಂಶಯದ ಧೂಳು ಎದ್ದು ಎದುರು ಬರುತ್ತಿರುವ ಪ್ರಸಂಗದಲ್ಲಿ ಉಪಾಧ್ಯಾಯರೊಬ್ಬರಿಂದ ರಾಮಕೃಷ್ಣ ಪರಮಹಂಸರ ದಿವ್ಯ ವ್ಯಕ್ತಿತ್ವ ಪ್ರಖ್ಯೆಯನ್ನು ಕೇಳಿದಾಕ್ಷಣವೇ ಅವರ ದರ್ಶನ ಪಡೆಯಬೇಕೆಂದು ನರೇಂದ್ರನಿಗೆ ಕುತೂಹಲವುಂಟಾಯಿತು. ತನ್ನ ಪರೀಕ್ಷೆ ಮುಗಿದನಂತರ ಸಂಶಯ ನಿವಾರಣೆಗಾಗಿ ದಕ್ಷಿಣೇಶ್ವರದಲ್ಲಿರುವ ರಾಮಕೃಷ್ಣ ಪರಮಹಂಸರ ದರ್ಶನಕ್ಕೆ ತೆರಳಿದನು. ಸಮದೃಷ್ಟಿಯ ಬೆಳಕಿನ ಮಳೆಯನ್ನೇ ಸುರಿಸುತ್ತಲಿರುವ ರಾಮಕೃಷ್ಣ ಪರಮಹಂಸರು ಆತ್ಮಶ್ರೀ ಸಮನ್ವಿತ ನರೇಂದ್ರನ ಮುಖಶ್ರೀಯನ್ನು ನೋಡಿ ಮನದಲ್ಲಿ ಆನಂದಪಟ್ಟು, ನರೇಂದ್ರನ ಅಲೌಕಿಕ ಶಕ್ತಿಯನ್ನು, ಆತನಿಂದ ಮುಂದೆ ಲೋಕ ಕಲ್ಯಾಣವಾಗುವದೆಂಬ ನಿಶ್ಚಿತ ಭರವಸೆಯನ್ನು ಯೋಗದೃಷ್ಟಿಯಿಂದ ಕಂಡು, ತಮ್ಮ ತಪಃ ಪ್ರಭಾವದ ಎಲ್ಲ ಶಕ್ತಿಯನ್ನು ಸ್ವೀಕರಿಸುವ ಮತ್ತು ಅಧ್ಯಾತ್ಮದ ಹಸಿವಿನಿಂದ ಬಳಲುತ್ತಿರುವ ಸಚ್ಛಿಷ್ಯನೊಬ್ಬನು ದೊರೆತನೆಂದು ಆನಂದಪಟ್ಟುಕೊಂಡರು.

ಅತೃಪ್ತಿಯ ಜ್ವಾಲಾಮುಖಿಯಂತಿದ್ದ ನರೇಂದ್ರನು ರಾಮಕೃಷ್ಣ ಪರಮಹಂಸರನ್ನು ಕಂಡೊಡನೆಯೇ ಹೆಡೆ ಮುಚ್ಚಿದ ಹಾವಿನಂತಾದನು, ಅವನ ಅಂಗಾಂಗಗಳೆಲ್ಲ ವಿದ್ಯುಜ್ಜ್ಯೋತಿಯ ಪ್ರವಾಹವು ಹರಿದಂತೆ ಆಯಿತು. ರಾಮಕೃಷ್ಣ ಪರಮಹಂಸರ ಅತ್ಯದ್ಭುತ ಆಕರ್ಷಣ ಶಕ್ತಿಯನ್ನು ಹಾಗೂ ಅಭಿಮಾನಶೂನ್ಯವಾದ ಆಚರಣೆಯ ಅಪೂರ್ವ ಅನುಭವವನ್ನು ನೋಡಿ, ಬೆರಗಾಗಿ ತನ್ನ ತೃಷೆಯನ್ನು ದೂರಮಾಡಿ ತೃಪ್ತಿ ನೀಡುವ ಗುರುದೇವನು ಸಿಕ್ಕಂತಾಯ್ತೆಂದು ಮನಸ್ಸಿನಲ್ಲಿ ಬಗೆದು, ಶ್ರೀರಾಮಕೃಷ್ಣ ಪರಮಹಂಸರನ್ನು ಕುರಿತು–ದೇವರಿದ್ದಾನೆಯೇ? ಎಂದು ನರೇಂದ್ರನು ಕೇಳಿದನು. ಅದಕ್ಕೆ ಪರಮಹಂಸರು ದೇವರಿದ್ದಾನೆ ವತ್ಸ ಎಂದು ಉತ್ತರ ಕೊಟ್ಟರು. ಹಾಗಾದರೆ ನೀವುಗಳು ದೇವರನ್ನು ನೋಡಿದ್ದಿರಾ? ಎಂದು ನರೇಂದ್ರನ ಮತ್ತೊಂದು ಪ್ರಶ್ನೆ. ಅದಕ್ಕೆ ಪರಮಹಂಸರು ನೋಡಿದ್ದೇನೆ. ಬೇಕಾದರೆ ನಿನಗೂ ತೋರಿಸುತ್ತೇನೆ. ಹೊನ್ನು ಹೆಣ್ಣು ಮಣ್ಣಿಗಾಗಿ ಜನರು ಅಳುತ್ತಿರುವಂತೆ ದೇವರಿಗಾಗಿ ಯಾರು ಅಳುತ್ತಾರೆ? ನೋಡು? ದೇವರ ಸಲುವಾಗಿ ಕಣ್ಣೀರು ಸುರಿಸಿದರೆ ಕಾಣದೆ ಬಿಡುವನೆ? ಎಂದು ಹೇಳಿದ ನಂತರ ನರೇಂದ್ರನು ಚಿತ್ತ ಭಿತ್ತಿಯಲ್ಲಿ ಪರಮಹಂಸರು ಅರೆ ಮರುಳರಿರಬೇಕೆಂದು ಅಂದುಕೊಂಡರೂ, ಸಮಾಧಾನದಿಂದ ವಿಚಾರಿಸಿದ ನಂತರ ಇನಿತು ದಿನಗಳು ಕಳೆದರೂ ಚಿಂತೆಯಿಲ್ಲ, ಕೊನೆಗೆ ಈ ಜಗತ್ತಿನಲ್ಲಿ ದೇವರನ್ನು ನೋಡಿದ್ದೇನೆಂದು ಎದೆ ತಟ್ಟಿ ಹೇಳುವ ಮಹಾವ್ಯಕ್ತಿಯಾದರೂ ದೊರೆತರೆಂದು ಸಂತೃಪ್ತನಾದನು. ಆದರೂ ಮನಃಶಾಸ್ತ್ರದಲ್ಲಿ ಪರಿಣಿತನಾದ ನರೇಂದ್ರನು ಗುರುದೇವನನ್ನು ಪೂರ್ಣ ಪರೀಕ್ಷಿಸದ

ಬಿಡಲಿಲ್ಲ. ತಮ್ಮನ್ನು ಪರೀಕ್ಷಿಸುವ ನರೇಂದ್ರನ ಧೈರ್ಯವನ್ನು ನೋಡಿ ರಾಮ ಕೃಷ್ಣ ಪರಮಹಂಸರು ಪರಮಹರ್ಷಿತರಾಗಿ ನರೇಂದ್ರನ ಪರಿಶುದ್ಧ ಹೃದಯ ಸರೋವರದಲ್ಲಿ ಜ್ಞಾನ ರತ್ನಗಳನ್ನು ತುಂಬಿ ಕತ್ತಲೆಯಲ್ಲಿ ಮಲಗಿರುವ ಜನರನ್ನು ಎಚ್ಚರಿಸಬೇಕೆಂಬುವ ಹೊಂಗನಸು ಕಾಣುತ್ತಿದ್ದರು. ನರೇಂದ್ರನು ಬಿ. ಎ. ಪಾಸಾದನಂತರ ಆಧ್ಯಾತ್ಮದಾರಿಯನ್ನು ಹಿಡಿಯಲು, ಸಾಂಸಾರಿಕ ವಿಪತ್ತುಗಳು ಸಾಕಷ್ಟು ಬಂದೊದಗಿದರೂ, ಕಸಕಡ್ಡಿಗಳನ್ನು ದೂಡುತ್ತ ಹೋಗುತ್ತಿರುವ ತುಂಬಿದ ಹೊಳೆಯಂತೆ ಎದುರು ಬಂದಿರುವ ಕಷ್ಟಗಳನ್ನು ಚದುರಿಸಿ ಮುಂದೆ ಸಾಗಿ ಪರಮಹಂಸರ ಜ್ಞಾನಭಿಕ್ಷುಕನಾದನು. ಗುರುಶಿಷ್ಯರೀರ್ವರು ಒಬ್ಬರನ್ನೊಬ್ಬರು ಪರಿಪೂರ್ಣ ಪರೀಕ್ಷಿಸಿಕೊಂಡು ಕಾರ್ಯ ಪ್ರವೃತ್ತರಾದರು. ನರೇಂದ್ರನು ರಾಮ ಕೃಷ್ಣ ಪರಮಹಂಸರ ಅತ್ಯದ್ಭುತ ಅಲೌಕಿಕ ದೈವಿಕ ಶಕ್ತಿಯನ್ನು ನೋಡಿ ನಿಬ್ಬೆರ ಗಾದನು. ಅವನ ಸಂಶಯಗಳೆಲ್ಲವೂ ನಿವಾರಣೆಯಾಗಲು ಪ್ರಾರಂಭಿಸಿದವು. ನರೇಂದ್ರನು ಸೇವೆಯನ್ನು ಮನಮುಟ್ಟಿ ಮಾಡಿ ಪರಮಹಂಸರ ಕೃಪೆಗೆ ಪಾತ್ರ ನಾದನು.

ಶ್ರೀ ರಾಮಕೃಷ್ಣ ಪರಮಹಂಸರ ಅಂತಿಮಾವಸ್ಥೆ ಸಮೀಪಿಸಿದ ಕೂಡಲೇ ನರೇಂದ್ರನನ್ನು ಕರೆದು ರಾಮಕೃಷ್ಣ ಪರಮಹಂಸರು ನಿನಗೇನಾಗಬೇಕು? ಎಂದು ಕೇಳಿದರು. ಅದಕ್ಕೆ ನರೇಂದ್ರನು ನಿರ್ವಿಕಲ್ಪ ಸಮಾಧಿಯಾಗಬೇಕೆಂದು ಉತ್ತರ ಕೊಟ್ಟನು. ಅದಕ್ಕಿಂತಲೂ ಹೆಚ್ಚಿನದಾದ ಕಾರ್ಯವು ನಿನ್ನಿಂದಾಗಬೇಕಾಗಿದೆ ಅದಕ್ಕಾಗಿ ಏನು ಮಾಡುವೆ? ಎಂದು ಪರಮಹಂಸರ ಮತ್ತೊಂದು ಪ್ರಶ್ನೆ. ಅದಕ್ಕೆ ನರೇಂದ್ರನು ನಿರ್ವಿಕಲ್ಪ ಸಮಾಧಿಯುಂಟಾಗುವವರೆಗೂ ನನಗೆ ಸಮಾಧಾನ ವಿಲ್ಲ; ಶಾಂತಿಯಿಲ್ಲ ಎಂದು ಉತ್ತರಕೊಟ್ಟನು. ಮತ್ತೆ ಪರಮಹಂಸರು—"ನಿನಗೆ ನಾಚಿಕೆ ಬರುವದಿಲ್ಲವೆ? ದೇಶದ ಕೋಟ್ಯಾವಧಿ ಜನರು ಅಜ್ಞಾನ ಮತ್ತು ದರಿದ್ರ ತನದಿಂದ ಬಳಲುತ್ತಿರುವಾಗ ಅವರ ಉದ್ಧಾರ ಮಾಡುವದು ಬಿಟ್ಟು, ಸ್ವಂತ ಮುಕ್ತಿ ಯನ್ನು ಸಾಧಿಸುವದಕ್ಕಾಗಿ ಹಾತೊರೆದು ಸ್ವಾರ್ಥಿಯಾಗುವದೆ? ಇದು ನಿನಗೆ ಸಲ್ಲದ ಮಾತು. ಸಮಯ ಬಂದಾಗ ನಿನಗೆ ನಿರ್ವಿಕಲ್ಪ ಸಮಾಧಿಯಾಗುವದು ಖಂಡಿತ. ಮೊದಲು ನೀನು ಪ್ರಪಂಚದ ತುಂಬೆಲ್ಲ ಧರ್ಮ ಸಂಸ್ಕೃತಿಯನ್ನು ಹಬ್ಬಿಸು. ಭೋಗ ಭೂಮಿಯಲ್ಲಿ ಯೋಗ ಬೀಜವನ್ನು ಬಿತ್ತು. ಭೋಗವಾದಿಗಳ ಹೃದಯ ದಲ್ಲಿ ಜ್ಞಾನ ಜ್ಯೋತಿಯನ್ನು ಬೆಳಗಿಸು. ಭರತ ಖಂಡವನ್ನು ಮೇಲೆತ್ತು" ಎಂದು ಹೇಳಿ ನಿರ್ವಿಕಲ್ಪ ಸಮಾಧಿಯನ್ನು ಅನುಗ್ರಹಿಸಿ ಮತ್ತೆ ಶ್ರೀ ರಾಮಕೃಷ್ಣ ಪರಮಹಂಸರು—

"ಇಂದು ನನ್ನ ತಪಸ್ಸನ್ನೆಲ್ಲ ನಿನಗೆ ಧಾರೆಯರೆದುಬಿಟ್ಟಿದ್ದೇನೆ. ಇನ್ನು ಮೇಲೆ ನಾನೊಬ್ಬ ದರಿದ್ರ ಫಕೀರ. ಆದರೆ ಆ ತಪಃ ಫಲವನ್ನೆಲ್ಲ ನಿನ್ನ ಮಸ್ತಕ

ದಲ್ಲಿ, ಹೃದಯದಲ್ಲಿತುಂಬಿ ಬಿಟ್ಟಿದ್ದೇನೆ" ಎಂದು ಹೇಳಿದರು ಅಂದಿನಿಂದ ನರೇಂದ್ರನು ಸನ್ಯಾಸವನ್ನು ಸ್ವೀಕರಿಸಿ ಸ್ವಾಮಿ ವಿವೇಕಾನಂದರಾದರು.

ಶ್ರೀ ರಾಮಕೃಷ್ಣ ಪರಮಹಂಸರು ಮಹಾಸಮಾಧಿಯನ್ನು ಹೊಂದಿದ ಮೇಲೆ ಸ್ವಾಮಿ ವಿವೇಕಾನಂದರು ಕಠೋರ ತಪಶ್ಚರ್ಯೆಯನ್ನಾಚರಿಸಿ, ಅಘಟನಾ ಘಟನ ಶಕ್ತಿಯನ್ನು ಪಡೆದರು.

ಸಮಾಜವನ್ನು ಎಚ್ಚರಿಸಲು ಆತ್ಮೋನ್ನತಿಯೇ ಮುಖ್ಯ ಸಾಧನವೆಂದು ಬಗೆದಿದ್ದರು. ಸ್ವಾಮಿ ವಿವೇಕಾನಂದರ ಮನಸ್ಸಿನಲ್ಲಿ ರಾಮಕೃಷ್ಣ ಪರಮಹಂಸರ ಉಪದೇಶಾಮೃತದ ಸವಿನೆನಪು ಆಗಿ ಚಿಂತಾಮಗ್ನರಾಗಿ ಕುಳಿತುಕೊಂಡುಬಿಡುತ್ತಿದ್ದರು. "ಸಮಸ್ತ ಭಾರತವನ್ನು ಸುತ್ತಬೇಕು" ಪರಮಹಂಸರ ಮಹದಿಚ್ಛೆಯಂತೆ, ಜನಜಾಗೃತಿಯನ್ನು ಮಾಡಬೇಕೆನ್ನುವ ಹಂಬಲ ತುಂಬಿಕೊಂಡು ನವಶಕ್ತಿಯನ್ನು, ಸ್ಫೂರ್ತಿಯನ್ನು ಪಡೆದ ಸ್ವಾಮಿ ವಿವೇಕಾನಂದರು ಬಾರೋನಗರ ಮಠದಿಂದ ಹೊರಟು ಕಾಶಿ, ಗಯಾ, ಹರಿದ್ವಾರ, ಕೇದಾರನಾಥ ಮುಂತಾದ ಕ್ಷೇತ್ರಗಳನ್ನು ಸಂದರ್ಶಿಸುತ್ತ, ಜನರ ಹೃದ್ಭೂಮಿಯಲ್ಲಿ ಹಿಂದೂ ದರ್ಶನದ ಅಮೃತಮಯ ತತ್ವವನ್ನು ಬಿತ್ತುತ್ತ ಬೆಳಗಾಂವಿಗೆ ಆಗಮಿಸಿದರು. ಪರದಾಸ್ಯ ಶೃಂಖಲೆಯಿಂದ ಬಳಲುತ್ತಿದ್ದ ಭಾರತವನ್ನು, ಮತ್ತು ದುಃಖ ದಾರಿದ್ರ್ಯವನ್ನು ನೋಡಿ ಕಳವಳಗೊಳ್ಳುತ್ತಿದ್ದರು. ಭಾರತದ ಆರ್ಥಿಕ ಸಮಸ್ಯೆಗಳನ್ನು ಬಗೆಹರಿಸಿ, ಸ್ವಾತಂತ್ರ್ಯವಿತ್ತು ಧರ್ಮ ಜ್ಯೋತಿಯು ಹರಡುವಂತೆ ಸಂಕಲ್ಪ ಮಾಡಿಕೊಂಡು ಹಗಲಿರುಳೂ ಚಿಂತಿಸುತ್ತಿದ್ದರು.

ಸ್ವಾಮಿ ವಿವೇಕಾನಂದರು ಬೆಳಗಾಂವಿಯಿಂದ ಮೈಸೂರಿಗೆ ಬಂದು ಮೈಸೂರ ಮಹಾರಾಜರ ಅರಮನೆಯಲ್ಲಿ ಕೆಲವು ದಿನಗಳ ವರೆಗೆ ಇದ್ದರು. ಇವರ ಪವಿತ್ರ ಚಾರಿತ್ರ್ಯವನ್ನು, ಬುದ್ಧಿಶಕ್ತಿಯನ್ನು ಮೈಸೂರ ಮಹಾರಾಜರು ಕಂಡು ಮುಗ್ಧರಾಗಿ "ಸ್ವಾಮಿ ವಿವೇಕಾನಂದರನ್ನು ಅಮೇರಿಕೆಗೆ ಕಳುಹಿಸಿದರೆ ಭಾರತದ ಭವ್ಯ ಹಿಂದೂ ಸಂಸ್ಕೃತಿಯನ್ನು ಪರಕೀಯರಿಗೆ ತಿಳಿಸಿದರೆ ಭಾರತ ಆಧ್ಯಾತ್ಮಿಕ ಶಕ್ತಿ ಎಷ್ಟು ಪ್ರಬಲತರ ಇರುವದೆಂದು ಅರ್ಥವಾಗುವದು. ಕೆಲವು ದಿನಗಳಲ್ಲಿಯೇ ಚಿಕಾಗೋದಲ್ಲಿ ನಡೆಯಲಿರುವ ವಿಶ್ವಧರ್ಮ ಸಮ್ಮೇಳನದಲ್ಲಿ ಭಾಗವಹಿಸಲು ಸ್ವಾಮಿ ವಿವೇಕಾನಂದರೇ ಯೋಗ್ಯರೆಂದು ಬರೆದು, ತಮ್ಮ ಉತ್ಕಟಾಭಿಮಾನವನ್ನು ವಿವೇಕಾನಂದರಿಗೆ ತಿಳಿಸಿದ ರಲ್ಲದೆ ಅದಕ್ಕಾಗಿ ಧನ ಸಹಾಯಮಾಡಲಾಗುವದೆಂದು ಆಶ್ವಾಸನವಿತ್ತರು. ಅಮೇರಿಕೆಗೆ ಸ್ವಾಮಿ ವಿವೇಕಾನಂದರು ಹೊರಡುವ ಸಂಕಲ್ಪ ಮಾಡಿದ್ದು ಮೈಸೂರು ರಾಜ್ಯದಲ್ಲಿಯೇ ಎಂಬುದು ಹೆಮ್ಮೆಯ ಮಾತು.

ಮುಂದೆ ಸ್ವಾಮಿ ವಿವೇಕಾನಂದರು ದಕ್ಷಿಣ ಭಾರತದ ತುಂಬ ಸಂಚರಿಸಿ ತಪೋನಿದ್ರೆಯಿಂದ ಮಲಗಿರುವ ವ್ಯಕ್ತಿಗಳನ್ನು ಎಚ್ಚರಿಸಿ, ನವಚೈತನ್ಯವನ್ನಿತ್ತರು.

ಸ್ವಾಮಿ ವಿವೇಕಾನಂದರ ಆತ್ಮ ವಿದ್ಯಾ ಜ್ಯೋತಿಯಿಂದ ವ್ಯಕ್ತಿತ್ವ ದೀಪ ಬೆಳಗಿತು. ಆ ಬೆಳಕಿನಲ್ಲಿ ಎನಿತೋ ಜನ ಸಾಧು ಸಂತರು, ಮಹಾರಾಜರು, ವಿದ್ವನ್ಮಣಿಗಳು ಪುನೀತರಾದರು. ದಿನ ಕಳೆದಂತೆ ಸ್ವಾಮಿ ವಿವೇಕಾನಂದರು ಪಾಶ್ಚಾತ್ಯ ಪ್ರಪಂಚಕ್ಕೆ ಹಿಂದೂ ಧರ್ಮದ ಸತ್ಯ ಶಕ್ತಿಯನ್ನು ಬೀರಲು ನಿರ್ಧರಿಸಿದರು. ಅದೇ ಪ್ರಕಾರ ವಿವೇಕಾನಂದರು ೧೮೯೩ನೇ ವರ್ಷದ ಮೇ ತಿಂಗಳಲ್ಲಿ ತ್ಯಾಗಭೂಮಿಯನ್ನು ಬಿಟ್ಟು ಕಡಲನ್ನು ದಾಟಿ ಅಮೇರಿಕೆ ತಲುಪಿದರು. ಅಲ್ಲಿ ಮೊದಲು ಎಷ್ಟೇ ಕಷ್ಟಗಳು ಒಂದೊದಗಿದರೂ ಮಹೋದ್ದೇಶದ ಗುರಿಗಾಗಿ ಅವೆಲ್ಲವುಗಳನ್ನು ಸಹಿಸಿ ಮುಂದೆ ಸಾಗಿದರು ಮತ್ತು ಚಿಕಾಗೋ ನಗರದಲ್ಲಿ ೧೮೯೩ನೆಯ ವರ್ಷದ ಸಪ್ಟಂಬರ ತಿಂಗಳಲ್ಲಿ ಜರುಗಲಿರುವ ಸರ್ವಧರ್ಮ ಸಮ್ಮೇಲನದಲ್ಲಿ ಭಾಗವಹಿಸಿದರು. ಸ್ವಾಮಿ ವಿವೇಕಾನಂದರು ಅಲ್ಲಿ ಭ್ರಾತೃ ಭಾವನೆಯನ್ನು ತೋರಿಸಿ ಅಮೇರಿಕಾ ದೇಶದ ಜನಸ್ತೋಮವನ್ನು ಮಂತ್ರ ಮುಗ್ಧರಂತೆ ಮಾಡಿದರಲ್ಲದೆ ಅವರೆಲ್ಲರ ಹೃದಯಗಳನ್ನು ಗೆದ್ದಿದ್ದರು.

ಸಭೆಗೆ ಬಂದಿದ್ದ ಪ್ರತಿನಿಧಿಗಳು ತಮ್ಮ ತಮ್ಮ ಧರ್ಮದ ವೈಶಿಷ್ಟ್ಯವನ್ನು ವಿವರಿಸಿದರೇ ಹೊರತು ಸರ್ವಧರ್ಮ ಸಮನ್ವಯವನ್ನು ಸೂಚಿಸಿದವರಲ್ಲಿ ಸ್ವಾಮಿ ವಿವೇಕಾನಂದರೊಬ್ಬರೆ ಆಗಿದ್ದರು. ವಿವೇಕಾನಂದರ ವಿವೇಕಶಕ್ತಿ, ಗಾಂಭೀರ್ಯ, ಪ್ರತಿಭೆ, ಆತ್ಮತೇಜಸ್ಸು, ತತ್ವಪೂರ್ಣ ವಿಚಾರಗಳನ್ನು ವಿಮರ್ಶಿಸುವ ದೃಷ್ಟಿ, ಸೋದರಭಾವನೆ ಇವೆಲ್ಲವುಗಳನ್ನು ನೋಡಿ ಪಾಶ್ಚಾತ್ಯ ದೇಶದವರೆಲ್ಲರು ಆಕರ್ಷಿತ ರಾಗಿದ್ದರು.

ಸ್ವಾಮಿ ವಿವೇಕಾನಂದರು ತಮ್ಮ ಅಂದಿನ ಭಾಷಣದಲ್ಲಿ ಸರ್ವಧರ್ಮ ಸಮನ್ವಯವನ್ನು ಕುರಿತು ಶಂಕರಾಚಾರ್ಯರು ಹೇಳಿದ ಶ್ಲೋಕದ ಭಾವವನ್ನು— ಇಲ್ಲಿ ಹೇಳಲಾಗಿದೆ.

ತ್ರಯೀ ಸಾಂಖ್ಯಂ ಯೋಗಃ ಪಶುಪತಿ ಮತಂ ವೈಷ್ಣವಮಿತಿ।
ಪ್ರಭಿನ್ನೇ ಪ್ರಸ್ಥಾನೇಪರಮಿದಮದಃ ಪಥ್ಯಮಿತಿಚ।
ರುಚೀನಾಂ ವೈಚಿತ್ರ್ಯಾದೃಜುಕುಟಿಲ ನಾನಾ ಪಥಜುಷಾಂ।
ನೃಣಾಮೇಕೋಗಮ್ಯಸ್ತ್ವಮಸಿ ಪಯಸಾಮರ್ಣವಇವ॥

ಭಿನ್ನ ಭಿನ್ನವಾದ ಪರ್ವತ ಪ್ರದೇಶಗಳಲ್ಲಿ ಹುಟ್ಟಿದ ಭಿನ್ನ ಭಿನ್ನವಾದ ನದಿಗಳೆಲ್ಲವೂ ಹೇಗೆ ಕೊನೆಗೆ ಸರೋವರವನ್ನು ಸೇರುತ್ತವೆಯೋ ಹಾಗೆ ಮಾನವರ ವಿವಿಧ ಭಾವ ಜನ್ಯವಾದ ವಿವಿಧ ಮಾರ್ಗಗಳು ಬೇರೆ ಬೇರೆಯಾಗಿ ತೋರಿದರೂ ರುಜುಕುಟಿಲ ಗಳಾಗಿ (ವಕ್ರಗತಿಯುಳ್ಳವುಗಳಾಗಿ) ಕಂಡುಬಂದರೂ ಕಟ್ಟಕಡೆಗೆ ನಿನ್ನನ್ನೇ ಸೇರುತ್ತವೆ."

"ಅನೇಕ ಬಣ್ಣದ ಕನ್ನಡಿಯ ಮೂಲಕ ಬರುತ್ತಿರುವ ಬೆಳಕು ಒಂದೇ, ಹೊಂದಿಕೊಳ್ಳುವದಕ್ಕಾಗಿ ಕೆಲವು ಬದಲಾವಣೆ ಅತ್ಯಾವಶ್ಯಕ. ಆದರೆ ಇವರ ಅಂತರಾಳದಲೆಲ್ಲ ಇರುವದು ಒಂದೇ ಸತ್ಯ."

"ಹಲವು ಮಣಿಗಳನ್ನು ಕೂಡಿಸುವ ಒಂದು ದಾರದಂತೆ. ನಾನೇ (ಈಶ್ವರನೇ) ಎಲ್ಲಾ ಧರ್ಮಗಳಲ್ಲಿ ಇರುವೆನು."

"ತತ್ವತಃಆತ್ಮವು ನಿತ್ಯ ಶುದ್ಧವಾದುದು, ನಿತ್ಯ ಮುಕ್ತವಾದುದು, ನಿತ್ಯ ಪವಿತ್ರವಾದುದು. ಸರ್ವ ಜೀವಿಗಳಲ್ಲಿಯೂ ಸಮಸ್ತ ವಿಶ್ವದಲ್ಲಿಯೂ ನೆಲೆಸಿರುವ ಅದು ಏಕವಾದರೂ ಜಡಬಂಧನದ ಉಪಾಧಿಯಿಂದ ಅನೇಕವಾದಂತೆ ತೋರುತ್ತಿದೆ. ಆ ಐಕ್ಯಾನುಭವವೇ ಮಾನವನ ಚರಮ ಲಕ್ಷ್ಯ."

"ಪ್ರತಿಯೊಬ್ಬರೂ ಕೂಡ ಮತ್ತೊಬ್ಬರ ಭಾವವನ್ನು ಹೀರಿಕೊಂಡು ವ್ಯಕ್ತಿತ್ವವನ್ನು ನಾಶಮಾಡಿಕೊಳ್ಳದೆ, ತಮ್ಮ ಬೆಳವಣಿಗೆಯ ನಿಯಮದಂತೆ ಬೆಳೆಯಬೇಕು."

"ಜಗತ್ತಿಗೆ ವಿಶ್ವಧರ್ಮ ಸಮ್ಮೇಲನವು ಏನಾದರೂ ತೋರಿದ್ದರೆ ಅದು ಇದು. ಪವಿತ್ರತೆ, ದಯೆ ಮುಂತಾದವುಗಳು ಜಗತ್ತಿನ ಯಾವ ಒಂದು ಧರ್ಮಸಂಸ್ಥೆಗೂ ಮೀಸಲಾಗಿಲ್ಲ. ಪ್ರತಿಯೊಂದು ಧರ್ಮವೂ ಕೂಡ ಅತ್ಯುತ್ತಮರಾದ ಸ್ತ್ರೀಪುರುಷರನ್ನು ಕೊಟ್ಟಿರುವುದು. ಇಷ್ಟೊಂದು ನಿದರ್ಶನಗಳು ಇರುವಾಗಲೂ, ಯಾರಾದರೂ ತಮ್ಮ ಧರ್ಮ ಒಂದೇ ಬಾಳುವದು. ಉಳಿದ ಧರ್ಮಗಳಾವವೂ ಇರುವದಿಲ್ಲವೆಂದು ತಿಳಿದುಕೊಂಡರೆ ನಾನು ಹೃತ್ಪೂರ್ವಕವಾಗಿ ಮರಗುವೆ. ಪ್ರತಿಯೊಂದು ಧರ್ಮ ಧ್ವಜದ ಮೇಲೂ ಅವರು ಎಷ್ಟು ವಿರೋಧಿಸಿದರೂ, ಹೋರಾಟವಲ್ಲ ಸಹಾಯ, ನಾಶವಲ್ಲ ಸ್ವಿಕಾರ, ವೈಮನಸ್ಸಿಲ್ಲ ಶಾಂತಿ ಮತ್ತು ಸಮನ್ವಯ ಎಂಬುದನ್ನು ತಿಳಿಯಬೇಕು."

ಈ ರೀತಿ ಅಸ್ಖಲಿತ ಶಕ್ತಿವಾಣಿಯಿಂದ ಪ್ರಪಂಚಕ್ಕೆ ಧರ್ಮ ಸಂದೇಶವಿತ್ತು ಜಾಗೃತಗೊಳಿಸಿದರು. ಭಾರತೀಯರನ್ನು ಜುಗುಪ್ಸೆಯಿಂದ ಕಾಣತಕ್ಕವರಿಗೆ ಕಣ್ಣು ತೆರೆಯಿಸಿ, ಸ್ವಾಮಿ ವಿವೇಕಾನಂದರು ಭಾರತದ ಕೀರ್ತಿಧ್ವಜವನ್ನು ಆಕಾಶದೆತ್ತರಕ್ಕೆ ಎತ್ತಿ ಹಿಡಿದರು. "ಸರ್ವ ಧರ್ಮ ಸಮ್ಮೇಲನದಲ್ಲಿ ವಿವೇಕಾನಂದರೇ ಶ್ರೇಷ್ಠತಮ ವ್ಯಕ್ತಿ" ಎಂದೆನ್ನಿಸಿಕೊಂಡರು.

ಸ್ವಾಮಿ ವಿವೇಕಾನಂದರ ಕರ್ತೃತ್ವಶಕ್ತಿಗೆ ಇಂಗ್ಲಂಡ, ಯುರೋಪ ದೇಶದ ಜನಗಳು ಮೆಚ್ಚಿ, ಅವರನ್ನು ಕರೆಯಿಸಿ, ಇವರ ತತ್ವಾಮೃತವನ್ನು ಪಾನಮಾಡಿದರು. ಆ ದೇಶಗಳಲ್ಲಿ, ರಾಜಯೋಗ, ಕರ್ಮಯೋಗ ಮತ್ತು ಯೋಗಸಿದ್ಧಿ ಮುಂತಾದ ವಿಷಯಗಳ ಮೇಲೆ ಮನನೀಯ ಉಪನ್ಯಾಸವಿತ್ತು ಅಂಧಶ್ರದ್ಧೆಯನ್ನು ತೊಲಗಿಸಿದರು.

ಸ್ವಾಮಿ ವಿವೇಕಾನಂದರು ಭಾರತಕ್ಕೆ ಮರಳಿ ಬರುವಾಗ—

"ನಮ್ಮ ದೇಶದವರೇ ಸತ್ಯ, ನಿನ್ನದು ಅಸತ್ಯ. ಇಲ್ಲವೆನ್ನುವಿಯಾದರೆ ಇದು ಕುಸ್ತಿಯಿಂದ, ತೋಳಬಲದಿಂದ ಇತ್ಯರ್ಥವಾಗಲಿ" ಎಂದು ಮಾನವನು ಯಾವದಾದರೊಂದು ದೇವರ ಪಕ್ಷ ಕಟ್ಟಿ ರಣರಂಗಕ್ಕೆ ಹೋಗದೆ ಇರುವದನ್ನು ಭಾರತ ದೇಶದಲ್ಲಿಯೇ ನೋಡಬೇಕು. ದೇವನೊಬ್ಬ, ಬಲ್ಲವರು ಬಹುವಿಧವಾಗಿ ಕರೆಯುತ್ತಾರೆ ಎಂಬ ವಾಣಿಯು ಕೇಳಿ ಬಂದುದು ಭಾರತದಲ್ಲಿಯೇ, ನಾನು ಸಂದರ್ಶಿಸಿದ ಎಲ್ಲ ದೇಶಗಳಲ್ಲೂ ಇನ್ನೂ ಪರಮತ ದ್ವೇಷವು ಇದ್ದೇ ಇದೆ. ಆದರೆ ಪರಮತ ಸಹಿಷ್ಣುತೆಯು ಅಲ್ಪ ಸ್ವಲ್ಪಾದರೂ ಉಳಿದಿರುವದು ಭಾರತ ದಲ್ಲಿಯೇ ಹೊರತು ಮತ್ತೆಲ್ಲಿಯೂ ಕಾಣೆನು. ಮಹಮ್ಮದೀಯರಿಗೆ ಮಸೀದಿ ಗಳನ್ನು, ಕ್ರೈಸ್ತರಿಗೆ ಚರ್ಚುಗಳನ್ನು ಕಟ್ಟಿಕೊಡುವ ಜನರಿರುವದು ಭಾರತದಲ್ಲಿ ಒಂದೇ ಎಂದು ಇಂತು ಪ್ರಪಂಚಕ್ಕೆ ಸಿಂಹವಾಣಿಯಿಂದ ಧೀರೋದಾತ್ತ ಸಂದೇಶ ವನ್ನಿತ್ತು, ಭಾರತದ ಆದರ್ಶವನ್ನು ತೋರಿಸಿಕೊಟ್ಟ ವೀರ ಸನ್ಯಾಸಿ.

ಸ್ವಾಮಿ ವಿವೇಕಾನಂದರು ಭಾರತಕ್ಕೆ ಬಂದನಂತರ ಕೇವಲ ಭಾಷಣದಿಂದ ಭಾವಶುದ್ಧಿ, ಆಧ್ಯಾತ್ಮಿಕ ಪ್ರಗತಿ ಹಾಗೂ ರಾಷ್ಟ್ರ ರಕ್ಷಣೆಯಾಗದೆಂದು ಬಗೆದು ಸರ್ವಧರ್ಮ ಸಮನ್ವಯ ತತ್ವಪ್ರಚಾರಾರ್ಥ ರಾಮಕೃಷ್ಣಾಶ್ರಮವನ್ನು ಸಂಸ್ಥಾಪಿ ಸಿದರು. ಈ ರಾಮಕೃಷ್ಣಾಶ್ರಮದಿಂದ ಹಲವಾರು ಶಾಖೆಗಳು ಪ್ರಪಂಚದ ತುಂಬೆಲ್ಲ ಉದಯಿಸಿ, ಜನರನ್ನು ಉದಯೋನ್ಮುಖವುಳ್ಳವರನ್ನಾಗಿ ಮಾಡಿವೆ, ಮಾಡುತ್ತಲಿವೆ.

ಇದೆಲ್ಲವೂ ಶ್ರೀ ರಾಮಕೃಷ್ಣ ಪರಮಹಂಸರ ಕೃಪಾಬಲ ಮತ್ತು ಸ್ವಾಮಿ ವಿವೇಕಾನಂದರ ಕರ್ತವ್ಯನಿಷ್ಠೆಯ ಛಲ ಹಾಗೂ ಅವರ ಅಚಲ ಶ್ರದ್ಧೆಯ ಫಲ.

ಧಾರವಾಡ ಅ. ಭಾ. ಆಕಾಶವಾಣಿ ಕೇಂದ್ರದಿಂದ ಪ್ರಸಾರವಾದ ಆಶೀರ್ವಚನ.

ಮಹಾತ್ಮಾ ಗಾಂಧೀಜಿ

ಗಾಂಧೀಜಿಯವರ ಶತಮಾನೋತ್ಸವದ ಈ ಸಂದರ್ಭದಲ್ಲಿ ಗಾಂಧೀಜಿ ನಮಗೆ ಬಳುವಳಿಯಾಗಿ ಬಿಟ್ಟುಹೋದ ಅವರ ತತ್ವಗಳ ಸ್ಮರಣೆ ಅವುಗಳ ಅನುಸರಣೆ ಹೆಚ್ಚು ಅವಶ್ಯಕವಿದೆ. ಇಂದಿನ ತ್ರಸ್ತ ಜಗತ್ತಿಗೆ ಗಾಂಧೀಜಿಯವರ ತತ್ವಗಳು ದಿವ್ಯೌಷಧಿ ಇದ್ದಂತೆ. ಅಂತೆಯೇ ಇಂದು ಗಾಂಧೀಜಿ ನಮ್ಮಿಂದ ಕಣ್ಮರೆಯಾಗಿದ್ದರೂ ಅವರ ನುಡಿಯು ಕಿಡಿಗಳು ನಮಗೆ ಮಾರ್ಗದರ್ಶಕಗಳಾಗಿವೆ.

ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯು ಪರದಾಸ್ಯ ಶೃಂಖಲೆಯಲ್ಲಿದ್ದ ಭಾರತಕ್ಕಾಗಿ ಹಗಲಿರುಳು ದುಡಿದು, ಸ್ವಾತಂತ್ರ್ಯವನ್ನಿತ್ತ ಸ್ವಾತಂತ್ರಶಿಲ್ಪಿ. ನೈತಿಕ ಶಕ್ತಿಯಿಂದಲೇ ಆತ್ಮೋನ್ನತಿ ಹಾಗೂ ರಾಷ್ಟ್ರೋದ್ಧಾರವೆಂದು ಬಗೆದು ಆತ್ಮಸಂಶೋಧನೆಗೈದ ಪುಣ್ಯಮೂರ್ತಿ. ಪಾಶ್ಚಾತ್ಯ ಸಂಸ್ಕೃತಿಯು ಭರದಿಂದ ಬೆಳೆಯುತ್ತಿರುವ ಸಮಯದಲ್ಲಿ ಮಹಾತ್ಮಾ ಗಾಂಧಿ ಅವರು ತಮ್ಮ ಆಕರ್ಷಕ ವ್ಯಕ್ತಿತ್ವ ಪ್ರಭಾವದಿಂದ ಮಲಗಿರುವ ಭಾರತವನ್ನು ಎಚ್ಚರಿಸಿ, ಆತ್ಮಶಕ್ತಿಯ ಕಿಡಿಗಳು ಪ್ರತಿಯೊಬ್ಬ ಭಾರತೀಯನಲ್ಲಿಯೂ ಪ್ರಜ್ವಲಿಸುವಂತೆ ಮಾಡಿ ಭಾರತೀಯರ ವೈಶಿಷ್ಟ್ಯವನ್ನು ಪ್ರಪಂಚಕ್ಕೆ ತೋರಿಸಿದ ಮಹಾವಿಭೂತಿ. ಪ್ರಪಂಚಕ್ಕೆ ಸತ್ಯಾಗ್ರಹ ಶಾಸ್ತ್ರದ ಮಹತ್ವವನ್ನು ರವಿಯ ಜ್ಯೋತಿ ಶಕ್ತಿಯಂತೆ ಬೆಳಗಿದ ಮಹಾಮಹಿಮ. ಮಹಾತ್ಮಾ ಗಾಂಧಿಯವರನ್ನು ಕುರಿತು ಲಯಿಫಿಸರ ಎಂಬುವರು ಈ ಬಗೆಯ ಮಹಾಪುರುಷನ ಸರಿಸಮರಾದವರನ್ನು ನಾವು ಎರಡು ಸಾವಿರ ವರುಷಗಳಾಚೆ ನಮ್ಮ ದೃಷ್ಟಿಯನ್ನು ಚಾಚಬೇಕಾಗುವದೆಂದು ತಮ್ಮ ಅನುಭವಪೂರ್ಣ ವಿಚಾರವನ್ನು ಹೇಳಿದ್ದಾರೆ.

ತೀರ್ಥೀಕುರ್ವಂತಿ, ತೀರ್ಥಾನಿ, ಸುಕರ್ಮೀಕುರ್ವಂತಿ ಕರ್ಮಾಣಿ.
ಸಚ್ಛಾಸ್ತ್ರೀ ಕುರ್ವಂತಿ ಶಾಸ್ತ್ರಾಣೀ,
ನಾಸ್ತಿತೇಷು ಜಾತಿ ವಿದ್ಯಾರೂಪ ಕುಲಕ್ರಿಯಾದಿಭೇದಃ

ಅಂದರೆ ತೀರ್ಥವನ್ನು ಪುಣ್ಯ ತೀರ್ಥಗಳನ್ನಾಗಿ ಮಾಡುತ್ತಾರೆ. ಕರ್ಮಗಳನ್ನು ಸುಕರ್ಮಗಳನ್ನಾಗಿ ಮಾಡುತ್ತಾರೆ. ಶಾಸ್ತ್ರಗಳನ್ನು ಸಶಾಸ್ತ್ರಗಳನ್ನಾಗಿ ಮಾಡುತ್ತಾರೆ. ಅವರಲ್ಲಿ ಜಾತಿ, ವಿದ್ಯೆ, ರೂಪ, ಕುಲಕ್ರಿಯಾದಿ ಭೇದಗಳು ಇರಲು ಸಾಧ್ಯವಿಲ್ಲ. ನಾರದ ಮಹರ್ಷಿಗಳ ಈ ಮಾತು ಮಹಾತ್ಮಾ ಗಾಂಧೀಜಿಗೆ ಸಂಪೂರ್ಣವಾಗಿ ಅನ್ವಯಿಸುತ್ತದೆ. ಈ ರೀತಿ ಆಚರಣೆಯಲ್ಲಿ ನಡೆದು ತೋರಿಸಿದ ಫಲವಾಗಿ ಮಹಾತ್ಮರಾದರು, ಮಹಾಶಕ್ತಿ ಪಡೆದರು.

೧೮೬೯ನೇ ಅಕ್ಟೋಬರ, ೨ನೆಯ ತಾರೀಖಿನ ದಿನ ಜನಿಸಿದ

ಮೋಹನದಾಸ ಕರಮಚಂದ ಗಾಂಧಿಯವರು ಬಾಲ್ಯದಲ್ಲಿ ತೇಜಬುದ್ಧಿಯವರೆಂದು ಅನ್ನಿಸಿಕೊಳ್ಳದಿದ್ದರೂ, ಕೆಲವು ದಿನಗಳ ನಂತರ ಕರ್ತವ್ಯನಿಷ್ಠೆಯ ಪರಿಪಾಲನೆಯಿಂದ ದೇವರಲ್ಲಿ ಶ್ರದ್ಧೆ ಶುದ್ಧ ನೈತಿಕ ಆಚಾರ ವಿಚಾರದಿಂದ, ತಂದೆ ತಾಯಿಗಳಿಗೆ ಅಚ್ಚು ಮೆಚ್ಚಿನವರಾಗಿದ್ದರು. ಪರದೇಶಕ್ಕೆ ಹೋದರೂ ಸಹ ತಮ್ಮ ತಾಯಿಯ ವಚನ ದಂತೆ ನಡೆದು, ಆತ್ಮನಿಷ್ಠೆಯಲ್ಲಿ ಪರಿಪೂರ್ಣರಾಗಿದ್ದರು. ಚಿಕ್ಕ ವಯಸ್ಸಿನಲ್ಲಿಯೇ ಬುದ್ಧ ಚರಿತೆ; ಪೈಗಂಬರ ಚರಿತೆ, ಕ್ರೈಸ್ತ ಧರ್ಮದ ಹಳೆ ಮತ್ತು ಹೊಸ ಒಡಂಬಡಿಕೆಯ ವಿಚಾರಗಳನ್ನು ತಿಳಿದುಕೊಂಡಿದ್ದರು. ಹೀಗೆ ಅನೇಕ ಧರ್ಮ ಗ್ರಂಥಗಳನ್ನು ಓದಿ ಅವುಗಳ ಸಾರವನ್ನು ಮನನ ಮಾಡಿಕೊಂಡಿದ್ದರು. ಸರ್ವ ಧರ್ಮ ಸಮಾನತ್ವದ ಭಾವನೆಯು ಗಾಂಧೀಜಿಯವರಿಗೆ ಆಗಿನಿಂದಲೇ ಸಾಧಿಸಿದ್ದಿತು. ಹೀಗಾಗಿ ಅವರು ಎಲ್ಲ ಜಾತಿ ಮತ್ತು ಪಂಥದವರೊಡನೆ ಸಹಕಾರದಿಂದ ಸ್ನೇಹ ದಿಂದ ಬಾಳಿ ಜಗತ್ತಿಗೆ ಆದರ್ಶ ವ್ಯಕ್ತಿತ್ವವನ್ನು ತೋರಿಸಿದರು. ಮೊದಲು ರಾಜ ಕೋಟೆಯಲ್ಲಿ ವಕೀಲ ವೃತ್ತಿಯನ್ನು ಪ್ರಾರಂಭಿಸಿದರು. ಅಲ್ಲಿಂದ ದಕ್ಷಿಣ ಆಫ್ರಿಕೆ ಯನ್ನು ತಲುಪಿದ ಕೂಡಲೇ ಅಲ್ಲಿಯ ಬಿಳಿ ಮತ್ತು ಕಪ್ಪು ಜನರ ಮಧ್ಯೆ ಇರುವ ವರ್ಣದ್ವೇಷದ ಉರಿಬಿಸಿಲು ಇವರಿಗೆ ತಾಗಿ ಅವರು ಅಲ್ಲಿ ಕಟು ಅನುಭವವನ್ನು ಪಡೆದರು. ಅಪಕಾರ ಮಾಡಿದವರಿಗೂ ಗಾಂಧೀಜಿ ಉಪಕಾರ ಮಾಡುವ ಧೋರಣೆ ತಳೆದು ಅಲ್ಲಿಯ ಜನರಿಗೂ ಆದರಣೀಯ ವ್ಯಕ್ತಿಗಳಾಗಿದ್ದರು. ಪಾಶವೀಶಕ್ತಿ ಯಿಂದ ಆತ್ಮಶಕ್ತಿಯು ಎಂದೆಂದಿಗೂ ಕುಗ್ಗಲಾರದೆಂದು ಗಾಂಧಿಯವರ ದೃಢ ಪ್ರತಿಜ್ಞೆಯಾಗಿತ್ತು. ಅದೇ ದೃಷ್ಟಿಯಿಂದಲೇ 'ಸತ್ಯಾಗ್ರಹ' ಪ್ರಾರಂಭಿಸಿದರು. ಈ ಹೊಸ ಕಲ್ಪನೆಯ ಆಚರಣೆಯಿಂದ ಎಷ್ಟೋ ಸಲ ಜೇಲಿನ ಅನುಭವವನ್ನು ಅನುಭವಿಸಿದರೂ ಎದೆಗುಂದದೆ ಜೀವನದ ಆರ್ಥಿಕ ಸಾಮಾಜಿಕ ಧಾರ್ಮಿಕ ರಾಜಕೀಯ ಕ್ಷೇತ್ರಗಳಲ್ಲಿ ಅತ್ಯುತ್ಸಾಹದಿಂದ ಹೋರಾಡಿದರು. ಇದೇ ಪ್ರಸಂಗದಲ್ಲಿ ಗೀತೆಯ ಪ್ರಭಾವವು ಇವರ ಮೇಲಾಗಿ ನೈತಿಕ, ಶಾರೀರಿಕ ಮಾನಸಿಕ ಪ್ರಗತಿಗೆ ಮೂಲ ಕಾರಣವಾಯ್ತು. ಮಹಾತ್ಮಾ ಗಾಂಧೀಜಿಯವರು ಮೇಲಿಂದ ಮೇಲೆ ಆತ್ಮಶಕ್ತಿ ಪಾಶವೀಶಕ್ತಿಗಿಂತ ಮೇಲು ಎಂಬುದನ್ನು ಸಿದ್ಧಮಾಡುವದೇ ಸತ್ಯಾಗ್ರಹದ ಮಾರ್ಗದ ಬಿರುದು ಎಂದು ತಮ್ಮ ಭಾಷಣದಲ್ಲಿ ಹೇಳಿ ಅದನ್ನು ಕಾರ್ಯರೂಪ ದಲ್ಲಿ ತೋರಿಸುತ್ತಿದ್ದರು. ಮಹಾತ್ಮಾ ಗಾಂಧಿಯವರು ದಕ್ಷಿಣ ಆಫ್ರಿಕೆಯಿಂದ ಸ್ವದೇಶಕ್ಕೆ ಮರಳಿದ ನಂತರ ಅಹಮದಾಬಾದದ ಹತ್ತಿರದಲ್ಲಿರುವ ಸಾಬರಮತಿ ಯಲ್ಲಿ ಆತ್ಮಶುದ್ಧಿಗಾಗಿ ಒಂದು ಆಶ್ರಮ ಸ್ಥಾಪಿಸಿದರು. ಸತ್ಯ ಅಹಿಂಸೆ ಬ್ರಹ್ಮ ಚರ್ಯ, ಅಸ್ತೇಯ, ಅಪರಿಗ್ರಹ, ಜಿಹ್ವಾಚಾಪಲ್ಯದಿಂದ ಮುಕ್ತತೆ ಮುಂತಾದ ನಿಯಮಗಳನ್ನು ಪರಿಪಾಲನೆ ಮಾಡುತ್ತ ಜನತಾ ಜನಾರ್ದನನ ಸೇವೆ ಮಾಡುವದೇ ಆಶ್ರಮದ ಮುಖ್ಯ ಗುರಿಯಾಗಿತ್ತು.

ಗಾಂಧೀಜಿಯವರು ೧೯೧೭ಕ್ಕೆ ಚಂಪಾರಣ್ಯಕ್ಕೆ ಹೋಗಿ ಅಲ್ಲಿಯ ರೈತರ ಸುಖ ದುಃಖಗಳನ್ನು ಕೇಳಿ, ಅವರಿಗೆ ಒದಗಿದ್ದ ವಿಪತ್ತನ್ನು 'ಸತ್ಯಾಗ್ರಹದ' ಮೂಲಕ ನಿವಾರಿಸಿ, ಅಶಿಕ್ಷಿತ ಹಳ್ಳಿಯ ಜನರಿಗೆ ಸಂಸ್ಕೃತಿಯ ಒಳ್ಳೆಯ ಬೀಜಗಳನ್ನು ಅವರ ಹೃದ್ಭೂಮಿಯಲ್ಲಿ ಬಿತ್ತಿ, ಸ್ವತಂತ್ರ ಜನಾಂಗವು ತಮ್ಮ ಕಾಲ ಮೇಲೆ ನಿಲ್ಲುವಷ್ಟು ಭದ್ರವುಳ್ಳವರಾಗಬೇಕಲ್ಲದೆ ಪರಾವಲಂಬಿಯಾಗಕೂಡದೆಂದು ತಿಳಿಸಿ, ಎಚ್ಚರಿಸಿದರು.

ಭಾರತದ ಸ್ವಾತಂತ್ರ್ಯ ಪ್ರಾಪ್ತಿಗಾಗಿ, ಅಸಹಕಾರ ಚಳುವಳಿಯನ್ನು ಪ್ರಾರಂಭಿಸಿ, ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೋರಾಡಲು ಜವಾಹರಲಾಲ ನೆಹರು, ರಾಜಗೋಪಾಲಚಾರ್ಯ, ಮೌಲಾನಾ ಅಜಾದ್, ಸುಭಾಸಚಂದ್ರ ಭೋಸ, ರಾಜೇಂದ್ರಪ್ರಸಾದ ಮುಂತಾದ ಮಹಾವ್ಯಕ್ತಿಗಳನ್ನು ಸೇರಿಸಿಕೊಂಡು ಅವರೆಲ್ಲ ರನ್ನೂ ಹುರಿದುಂಬಿಸಿದರು. ಶಿಸ್ತು ಸಂಘಟನೆಯೊಡನೆ ದುಡಿದರು. ಸ್ವಾತಂತ್ರ್ಯ ಕ್ಕಾಗಿ ಎಷ್ಟೋ ಸಲ ಜೇಲನ್ನು ಸೇರಿದರು. ಉಪವಾಸವನ್ನು ಮಾಡಿದರು. ಅಹಿಂಸಾ ಮಾರ್ಗದಿಂದಲೇ ಸ್ವರಾಜ್ಯವನ್ನು ಗಳಿಸುವೆವೆಂಬ ದೃಢನಿರ್ಧಾರವನ್ನು ಮಾಡಿದರು. ಈ ಪ್ರಸಂಗದಲ್ಲಿ ಮೈಸೂರು ರಾಜ್ಯದ ತುಂಬ ತಿರುಗಾಡಿ ರಚನಾತ್ಮಕ ಕಾರ್ಯಕ್ರಮಗಳನ್ನು ಇಟ್ಟುಕೊಂಡು ಅಸ್ಪೃಶ್ಯತಾ ನಿವಾರಣೆ, ಖಾದಿ ಪ್ರಚಾರ ಇತ್ಯಾದಿ ಅನೇಕ ವಿಷಯಗಳ ಮೇಲೆ ಭಾಷಣಗಳನ್ನಿತ್ತು, ಕರ್ನಾಟಕದ ಜನರನ್ನು ಜಾಗೃತಗೊಳಿಸಿದ. ಹರಿಜನೋದ್ಧಾರಕ್ಕಾಗಿ ಹರಿಜನ ನಿಧಿಯನ್ನು ಕೂಡಿಸಿ, ಅವರಿಗಾಗುವ ಶೋಷಣೆಯನ್ನು ನಿಲ್ಲಿಸಿ, ಘೋಷಿಸಿದರು. ಹರಿಜನರ ಆರ್ಥಿಕ ಶೈಕ್ಷಣಿಕ ಅಭಿವೃದ್ಧಿಯನ್ನು ಮಾಡಿ, ಅವರ ಹೃದಯ ಪರಿವರ್ತನೆ ಮಾಡಿದರು. ಸಂಸ್ಕೃತಿಯ ಸಿಹಿನೀರನ್ನೆರೆದು ಸುಸಂಸ್ಕೃತ ನಾಗರಿಕರಂತೆ ಮಾಡಿದರು. ಹರಿಜನೋದ್ಧಾರದ ಜೊತೆಗೆ ಜಾತೀಯ ಐಕಮತ್ಯವನ್ನು ಸಾಧಿಸಿದರು.

"ಚಲೇಜಾವ್ ಘೋಷಣೆ"ಯಲ್ಲಿ ಮುಂದೆ ಹೆಜ್ಜೆ ಇಟ್ಟು ಪೂರ್ಣ ಸ್ವಾತಂತ್ರ್ಯ ಸಿಗುವವರೆಗೂ ಸ್ವಕರ್ತವ್ಯವನ್ನು ಬಿಡಲಾರೆವು ಎಂದು ಬ್ರಿಟಿಷ ಸರಕಾರಕ್ಕೆ ತಿಳಿಸಿ ಶಾಂತಿಮಯ ಹೋರಾಟವನ್ನು ಅಹೋರಾತ್ರಿ ಮಾಡಿದರು. ಎಳ್ಳಷ್ಟೂ ಭೀತ ರಾಗದೇ ಧೈರ್ಯ ಸಾಹಸದಿಂದ ಮುನ್ನುಗ್ಗಿ ಸತ್ಯಾಗ್ರಹಾಸ್ತ್ರದಿಂದ ತಮ್ಮ ಅಂತಃ ಶಕ್ತಿಯನ್ನು ಪ್ರಪಂಚಕ್ಕೆ ತೋರಿಸಿ, ಬೆರಗುಗೊಳಿಸಿದರು. ನೌಖಾಲಿಯಲ್ಲಿ ನಡೆದಿರುವ ಜಾತೀಯ ದಂಗೆಯನ್ನು ತಡೆಗಟ್ಟಲು ಶಾಂತಿಸ್ಥಾಪನೆ ಮಾಡಲು ಶಾಂತಿ ಸಂದೇಶದಿಂದ ಧೀಶಕ್ತಿಯಿಂದ ಪರಿಶ್ರಮವಹಿಸಿದರು. ಮಹಾತ್ಮಾ ಗಾಂಧೀಜಿ ಯವರ ಅತ್ಯದ್ಭುತ ಸಾಹಸದಿಂದ ಪರಿಶುದ್ಧ ಸತ್ಯಾಗ್ರಹದ ಬಲದಿಂದ ಸತ್ಯ, ಅಹಿಂಸೆ, ಧರ್ಮ, ನೀತಿ, ಪ್ರಾರ್ಥನೆ ಮತ್ತು ಮಹಾತ್ಯಾಗ ಮುಂತಾದ ದೈವೀಶಕ್ತಿ ಗಳ ಉದ್ಧಾನದಿಂದ, ಉಜ್ವಲತರ ಭಗವದ್ದೀಪ್ತಿಯ ಪ್ರಭೆಯಿಂದ ೧೯೪೭ ಅಗಸ್ಟ

೧೫ ರಂದು ಭಾರತಕ್ಕೆ ಸ್ವಾತಂತ್ರ್ಯ ಸೂರ್ಯನು ಉದಯವಾದನು. ಮಲಗಿರುವ ಜನತೆಯು ಎಚ್ಚೆತ್ತು ಸ್ವಾತಂತ್ರ್ಯ ಸಂಭ್ರಮವನ್ನು ನೋಡಿತು, ಸ್ವಾತಂತ್ರ್ಯೋ ದಯದಿಂದ ಭಾರತದ ಶಕ್ತಿ ದಿಕ್ಕು ದಿಕ್ಕುಗಳಲ್ಲಿಯೂ ಹರಡಿತು. ಸತ್ಯಾಗ್ರಹವೆಂಬ ಶಸ್ತ್ರದಿಂದ ರಕ್ತರಹಿತ ಕ್ರಾಂತಿ ಮಾಡಿ ಉಪವಾಸಾದಿ ವ್ರತಗಳಿಂದ ಜಾತೀಯ ದಂಗೆಯ ಕರಾಳನೃತ್ಯವನ್ನೂ ನಿಲ್ಲಿಸಿ, ನಿರಂತರವೂ ಜನತಾ ಜನಾರ್ದನನ ಸೇವೆ ಯಲ್ಲಿ ಮಗ್ನನಾಗಿದ್ದ, ಮಾನವ ಕುಲದ ನಂದಾದೀಪದಂತೆ ಬೆಳಗುತ್ತಿದ್ದ ಹೆಜ್ಜೆ ಹೆಜ್ಜೆಗೂ ಕೈಹಿಡಿದು ನಡೆಯನ್ನು ಕಲಿಸುತ್ತಿದ್ದ ಸತ್ಯ ಅಹಿಂಸೆಯ ಪೂಜಾರಿಯಾಗಿ ಸರ್ವಭೂತಹಿತದಲ್ಲಿ ದಯಾಪರನಾದ ಜಗದ್ವಂದ್ಯ ಮಹಾತ್ಮಾ ಗಾಂಧೀಜಿ ನಮ್ಮ ಕಣ್ಣೆದುರಿನಲ್ಲಿ ಇರದಿದ್ದರೂ ಮಹಾನ್ ವ್ಯಕ್ತಿತ್ವದ ದಿವ್ಯಪ್ರಭೆ, ಆ ಆತ್ಮಶಕ್ತಿಯ ದಿವ್ಯ ತೇಜಸ್ಸು ನಮ್ಮೆಲ್ಲರ ಕಣ್ಣಂಚಿನಲ್ಲಿ ಕಟ್ಟಿದಂತಾಗಿದೆ. ಅವರ ಅಮರ ಆತ್ಮದ ಶಾಂತ ಪ್ರಕಾಶವು, ಭಾರತದ ಭೂಮಿಯ ಮೇಲೆ ಪಸರಿಸಿದೆ. ಧಾರ್ಮಿಕ, ಸಾಮಾಜಿಕ, ರಾಜಕೀಯ ಕಾರ್ಯಕರ್ತರಿಗೆ ಗಾಂಧೀಜಿಯ ಅಂತರ್ವಾಣಿ ಸ್ಫೂರ್ತಿ ಕೊಟ್ಟು ದಾರಿ ತೋರಿಸುತ್ತಿದೆ. ನಾವಿಂದು ಅವರು ಹಾಕಿಕೊಟ್ಟ ಮಾರ್ಗದರ್ಶನ ದಲ್ಲಿ ನಡೆದರೆ ಮಾತ್ರ ಸುಖ ಶಾಂತಿ, ಸ್ವಾತಂತ್ರ್ಯ ಸಿಕ್ಕಿದ್ದರೂ ಸಾರ್ಥಕ. ಅಸುರೀ ಶಕ್ತಿಯ ದಮನ ಮಾಡಿ, ಸತ್ಯಶಕ್ತಿಗೆ ಶರಣುಹೋದರೆ ಸಂತೃಪ್ತಿ ಸಂಕೀರ್ತಿ.

ಮಹಾತ್ಮಾ ಗಾಂಧೀಜಿಯವರು ತಮ್ಮ ಆತ್ಮಚರಿತೆಯಲ್ಲಿ ಬರೆದ ನುಡಿಗಳನ್ನು ಇಲ್ಲಿ ಸ್ಮರಿಸಿಕೊಂಡರೆ ಅರ್ಥವಾಗುತ್ತದೆ. ಅವರ ಕರ್ತೃತ್ವ ಶಕ್ತಿಯು ಅರಿವಾಗು ತ್ತದೆ. ಅಹಿಂಸೆ ನನ್ನ ದೇವರು, ಸತ್ಯ ನನ್ನ ದೇವರು, ಅಹಿಂಸೆಯ ಸಾಧನೆಗಾಗಿ ನಾನು ಶ್ರಮಿಸುವಾಗ ಸತ್ಯ ಹೇಳುತ್ತದೆ: "ನನ್ನ ಮೂಲಕವೇ ಅದರ ಸಿದ್ಧಿ ಎಂದು. ಸತ್ಯದ ಸಾಧನೆಗಾಗಿ ನಾನು ಶ್ರಮಿಸುವಾಗ ಅಹಿಂಸೆ ಹೇಳುತ್ತದೆ: ನನ್ನ ಮೂಲಕವೇ ಅದರ ಸಿದ್ಧಿ." "ಮನುಷ್ಯ ಎಷ್ಟರ ಮಟ್ಟಿಗೆ ಪರಾರ್ಥಕ್ಕಾಗಿ ಶ್ರಮಿಸುತ್ತಾನೆಯೋ ಅಷ್ಟರ ಮಟ್ಟಿಗೆ ಅವನು ದೊಡ್ಡವನಾಗುತ್ತಾನೆ." "ಮಾನವ ಜೀವಿತದ ಪರಮೋದ್ದೇಶ ಭಗವತ್ಸಾಕ್ಷಾತ್ಕಾರ. ಅವನ ಕರ್ಮ ಕ್ರಿಯೆಗಳೇನೇ ಇರಲಿ ಸಾಮಾಜಿಕ, ರಾಜಕೀಯ, ಧಾರ್ಮಿಕ, ಎಲ್ಲವೂ ಈ ಈಶ್ವರ ಸಾಕ್ಷಾತ್ಕಾರದ ಪರಮೋದ್ದೇಶದಿಂದಲೇ ನಿಯಂತ್ರಿತವಾಗಿರಬೇಕು. ಮಾನವ ಸೇವೆಯೇ ಈ ಸಾಧನೆಯ ಪ್ರಪ್ರಥಮ ಅನಿವಾರ್ಯಾಂಗವಾಗುತ್ತದೆ."

ಸತ್ಯ ಅಹಿಂಸೆಗಳನ್ನು ಕೇವಲ ವೈಯಕ್ತಿಕ ಅನುಷ್ಠಾನದ ತತ್ವಗಳನ್ನಾಗಿ ಮಾಡಿಕೊಂಡರೆ ಸಾಲದು; ಸಮಾಜ, ಸಮುದಾಯಗಳು, ರಾಷ್ಟ್ರಗಳೂ ಕೂಡ ಅವುಗಳನ್ನು ಅನುಷ್ಠಾನಕ್ಕೆ ತರುವಂತಾಗಬೇಕು. ನಮ್ಮ ಜೀವನದಲ್ಲಿ ನಿಲ್ಲುವದು ಕೃತಿಯೇ ಹೊರತು, ಮಾತಲ್ಲ. ಸಕಲ ಶಾಸ್ತ್ರಗಳೂ ಒಂದು ವೇಳೆ ವಿನಾಶ ಹೊಂದುವದಾದರೂ ಒಂದೂ ಧರ್ಮದ ಸಾರವನ್ನು ತಿಳಿಸಲು ಈಶೋಪನಿಷತ್ತಿನ

ಒಂದೇ ಮಂತ್ರ ಸಾಕು. ನಾನು ಸೋದರಭಾವ ಅಥವಾ ತಾದಾತ್ಮ್ಯವನ್ನು ಸಾಧಿಸಿ ತಿಳಿಸುವದು ಕೇವಲ ಮಾನವಜೀವಿಗಳೊಂದಿಗೆ ಅಷ್ಟೇ ಅಲ್ಲ, ಸಕಲ ಜೀವ ರಾಶಿಯೊಂದಿಗೆ ಭೂಮಿಯ ಮೇಲೆ ಹರಿದಾಡುವ ಕ್ರಿಮಿಕೀಟಗಳೊಡನೆ ಎಂಬುದು ಮರೆಯುವಂತಿಲ್ಲ. ನಾವೆಲ್ಲರೂ ಒಬ್ಬನೇ ಭಗವಂತನಿಂದ ಬಂದವರು ಎಂದು ಹೇಳುವದು ನಿಜ. ಹಾಗಿರುವದರಿಂದ ಯಾವದೇ ರೂಪದಲ್ಲಿ ಗೋಚರಿಸಿದರೂ ಮೂಲತಃ ಎಲ್ಲ ಜೀವವು ಒಂದೇ.

ಇಂದಿನ ಅಶಾಂತಮಯ ವಾತಾವರಣದಲ್ಲಿ ಈ ನುಡಿಮುತ್ತುಗಳು ರಕ್ಷಾ ಸೂತ್ರವಿದ್ದಂತೆ. ಸಾಧಕರಿಗೆ ದಾರಿದೀಪವಿದ್ದಂತೆ. ಪ್ರಪಂಚದಲ್ಲಿರುವ ತಮಸ್ಸು ಹೋಗಲು, ಅಂತಃಸಾಧನೆ, ಸತ್ಯ, ಅಹಿಂಸೆ, ಅಚಲ ಶ್ರದ್ಧೆ ಇಲ್ಲಗಿದ್ದರೆ ಭಗವತ್ಸಾಕ್ಷಾತ್ಕಾರವು ಸಿದ್ಧಿಸವೆಂದು ತಮ್ಮ ಸತ್ಯ ಶುದ್ಧ ಕಾಯಕದಿಂದ ಅನುಭವಿಸಿ ನುಡಿದಿದ್ದಾರೆ. ರಾಜಕಾರಣವೂ ಸಹ ಧಾರ್ಮಿಕ ತತ್ವಗಳ ತಳಹದಿಯ ಮೇಲೆ ನಿಲ್ಲಿಸಬೇಕೆಂದು ಸೂಚಿಸಿದ್ದಾರೆ. ಅದಕ್ಕಾಗಿ ನಮ್ಮ ಬಾಳ್ವಿಕೆಗೆ ಗಾಂಧೀಜಿಯ ಅಮೃತ ಸಂದೇಶ ಅನುಪಮವಾದುದು, ಮಾರ್ಗದರ್ಶಕವಾದುದು

ಗಾಂಧೀಜಿಯವರ ಪಾವನಮಯ ಜೀವನ ರಾಷ್ಟ್ರಕ್ಕೆ ಒಂದು ಮಹಾಶಕ್ತಿ. ಸತ್ಯಾನ್ವೇಷಣದ ಅನುಸಂಧಾನ ಮಾಡಲು ದಿವ್ಯದೀಪ್ತಿ. ಗಾಂಧಿಯವರು ತೋರಿದ ದಾರಿಯಲ್ಲಿ ಸಾಗಿದರೆ ಮಾತ್ರ ರಾಷ್ಟ್ರದ ಪ್ರಗತಿ ಹಾಗೂ ವಿಶ್ವಶಾಂತಿ.

೧೯೬೯ ನೇ ಇಸ್ವಿಯಲ್ಲಿ ಅ. ಭಾ. ಆಕಾಶವಾಣಿ ಧಾರವಾಡ ಕೇಂದ್ರದಿಂದ ಪ್ರಸಾರಿತವಾದ ಸಂದೇಶ.

ಜಾತೀಯತೆಯ ಐಕ್ಯ

ನಮಗಿಂದು ಶಾಂತಿ ಸಮಾಧಾನಗಳು ದೊರಕಬೇಕಾದರೆ ಜಾತೀಯತೆಯ ಐಕ್ಯವನ್ನು ಸಾಧಿಸಿದರೆ ಮಾತ್ರ ಸಾಧ್ಯ. ಜಾತೀಯತೆಯಿಂದ ದ್ವೇಷಾದಿ ದುರ್ಗುಣಗಳು ಉದ್ಭವಿಸಿ, ಮನುಷ್ಯನು ಹಾಳಾಗಿ ಹೋಗುವನಲ್ಲದೆ, ಮನುಷ್ಯತ್ವವೂ ನಷ್ಟವಾಗುವದು. ಜಾತೀಯತೆಯ ಪೆಡಂಭೂತವನ್ನು ಬೆನ್ನುಹತ್ತಿದವರು ನಿರಂತರ ಅಂಧಕಾರದಲ್ಲಿ ತಿರುಗಬೇಕಾಗುತ್ತದೆ. ಶತಪಥವನ್ನು ದೂರೀಕರಿಸಿದಂತಾಗುತ್ತದೆ. ಅನೇಕ ಶತಮಾನಗಳಿಂದ ಪುಣ್ಯ ಪುರುಷರು ತೋರಿದ ಭಾವೈಕ್ಯದ ಸತ್ಯಸೌಂದರ್ಯವನ್ನು ನಾವಿಂದು ಕಾಣದಿದ್ದರೆ, ಆ ಹೆದ್ದಾರಿಯಲ್ಲಿ ನಡೆಯದಿದ್ದರೆ ಕಣ್ಣಿದ್ದೂ ಕುರುಡರಾದಂತೆ, ಜೀವವಿದ್ದರೂ ಶವವಿದ್ದಂತೆ. ಮತ ಮತಗಳ ಧರ್ಮ ಧರ್ಮಗಳ ತಿಕ್ಕಾಟದಲ್ಲಿ ವಿಶ್ವಶಾಂತಿಯು ಕನಸಾಗುತ್ತದೆ. ವೈಮನಸಗಳು ಬಹಿರ್ಮುಖದತ್ತ ಸಾಗಿ ಅಂತರ್ಮುಖತೆಗೆ ಅಡ್ಡಿಯಾಗುತ್ತದೆ. ಅಂತಃಸತ್ವ ಇಲ್ಲದಾಗುತ್ತದೆ. ಅದಕ್ಕಾಗಿ ರಾಷ್ಟ್ರಶಕ್ತಿ ಹೆಚ್ಚಿಸಲು ಜಾತೀಯತೆಯ ಐಕಮತ್ಯವೇ ಭದ್ರ ಬುನಾದಿ. ಸರ್ವಜ್ಞನು ಒಂದೆಡೆ–

ಯಾತರದು ಹೂವೇನು ನಾತರದು ಸಾಲದೇ
ಜಾತಿ ವಿಜಾತಿಯೆನಬೇಡ ದೇವ
ನೊಲಿದಾತನೇ ಜಾತ ಸರ್ವಜ್ಞ–

ಹೀಗೆ ಹೇಳುವಲ್ಲಿ ಬಹು ದೂರದೃಷ್ಟಿಯು ಎದ್ದು ಕಾಣುತ್ತದೆ. ಭಾವೈಕ್ಯದ ಕುಸುಮವರಳಿ ಪರಿಮಳಿಸಿದಂತಿದೆ. ಜಗತ್ತಿನ ಜನರೆಲ್ಲ ಉಸುರಾಡಿಸುವ ವಾಯುವು ಒಂದೇ, ನಡೆಯುವ ನೆಲ ಒಂದೇ, ಹೀಗಿರುವಾಗ ನಾವಿಂದು ಜಾತೀಯತೆಯ ದಾವಾನಲದಲ್ಲಿ ಸುಟ್ಟು ಭಸ್ಮೀಭೂತರಾದರೆ ಆ ಆ ಧರ್ಮಗಳಲ್ಲಿರುವ ಸತ್ಯ ದರ್ಶನವನ್ನು ಸಾಕ್ಷಾತ್ಕಾರ ಮಾಡಿಕೊಳ್ಳದೆ ಕೇವಲ ಕಚ್ಚಾಟದಲ್ಲಿಯೇ ನಮ್ಮ ಜೀವನವನ್ನು ಸವೆಸಿದರೆ ಆತ್ಮಶಾಂತಿಯೆಂದು? ನಾವೆಲ್ಲರೂ ಒಬ್ಬ ದೇವರ ಮಕ್ಕಳು ಎಂಬ ಭಾವನೆ ಬೇರೂರಿಸಿಕೊಳ್ಳದಿದ್ದರೆ ವಿಶ್ವಶಾಂತಿಯೆಂದು? ಪರಧರ್ಮ ಸಹಿಷ್ಣುತೆಯ ವಿಶಾಲ ಮನೋಭಾವನೆಯು ಬೆಳೆಯದಿದ್ದರೆ ಹೃನ್ಮಂದಿರದಲ್ಲಿ ಬೆಳಕು ಬರಲಾರದು. ಜಾತೀಯತೆಯ ಭಾವೈಕ್ಯವನ್ನು ಕೇವಲ ಮಾತಿನಲ್ಲಾಗದೆ ಕೃತಿಯಲ್ಲಿಳಿದರೆ ಸಾರ್ಥಕ. ನುಡಿದಂತೆ ನಡೆದು ನಡೆದಂತೆ ನುಡಿದು ಅದನ್ನು ಅನುಷ್ಠಾನಕ್ಕೆ ತಂದು ರಕ್ತಗತ ಮಾಡಿಕೊಂಡರೆ ಮಾತ್ರ ಅಜರಾಮರವಾಗುವದು. ಇಲ್ಲದಿದ್ದರೆ ಅವೆಲ್ಲವೂ ಹೊಳೆಯಲ್ಲಿ ಹುಣಸೆ ಹಣ್ಣು ತೊಳೆದಂತೆ ನಿರರ್ಥಕ.

ಮಹಾತ್ಮಾ ಗಾಂಧಿಯವರು ಪ್ರತಿಯೊಂದು ಜಾತಿಯೂ ತನ್ನ ವೈಶಿಷ್ಟ್ಯವನ್ನು ಕಾಪಾಡಿಕೊಂಡು ಸಹಿಷ್ಣುತೆಯ ಮೂಲಕ, ಐಕ್ಯವನ್ನು ಗಟ್ಟಿಮಾಡಿಕೊಳ್ಳುವದೇ ಮುಖ್ಯ ಗುರಿ ಎಂದು ಮುಂತಾಗಿ ಹೇಳಿದ್ದಾರೆ. ಇಂದಿನ ದುರ್ಧರ ಪ್ರಸಂಗದಲ್ಲಿ ಅನೈಕ್ಯತೆ ಅಶಾಂತಿಯ ಬೀಜಗಳು ಹುಟ್ಟಿ ಬೆಳೆದು ಹೆಮ್ಮರವಾದರೆ ಅಧಃಪತನಕ್ಕೆ ದಾರಿ ಮಾಡಿಕೊಟ್ಟಂತೆ. ಹಿಂದುಗಳೇ ಇರಲಿ, ಮುಸಲ್ಮಾನರೇ ಇರಲಿ, ಕ್ರೈಸ್ತರೇ ಇರಲಿ ಇನ್ನುಳಿದವರು ಯಾರೇ ಇರಲಿ, ಇವರೆಲ್ಲರಲ್ಲಿ ಸಹೋದರ ಭಾವನೆ ಬೆಳೆದು ಬರಬೇಕು. ಭಾರತದಲ್ಲಿರುವವರೆಲ್ಲರೂ ನಾವು ಭಾರತಮಾತೆಯ ಮಕ್ಕಳು. ಈ ಭಾವನೆಯ ಕಲ್ಪನೆಯ ದವಡೆಯೊಳಗೆ ಅರಗಿಸಿಕೊಂಡರೆ ಅರಿವು ಸ್ಥಿರವಾದೀತು. 'ಸರ್ವೇಜನಾಃ ಸುಖಿನೋಭವಂತು' ಈ ನುಡಿಯು ಪ್ರತಿಯೊಬ್ಬರ ನಾಡಿಯಲ್ಲಿ ಒಡಮೂಡಿ ಹರಿದಾಡಬೇಕು. ಆಗ ಜಾತೀಯತೆಯ ಸಾಮರಸ್ಯ, ಭಾವೈಕ್ಯದ ಬಂಧುರತೆ ಮತ್ತು ಭಾರತಮಾತೆಗೆ ಸಮಾಧಾನವಾಗುವದು. ಅದಕ್ಕಾಗಿ ಭಾರತದ ಎಲ್ಲ ಜಾತಿಯವರೂ ಸ್ನೇಹದಿಂದ ಬಾಳುವದನ್ನು ಕಲಿಯೋಣ. ಅವಿಭಕ್ತಂ ವಿಭಕ್ತೇಷು ಇದರ ಒಳಗುಟ್ಟನ್ನು ಹೃದಯ ಮಂದಿರದಲ್ಲಿ ಇಳಿಸಿಕೊಂಡು ವಿವಿಧತೆಯಲ್ಲಿ ಏಕತೆಯನ್ನು ಕಾಣೋಣ.

ಸಹನಾವವತು ಸಹನೌಭುನಕ್ತು ಸಹವೀರ್ಯಂಕರವಾವಹೈ
ತೇಜಸ್ವಿನಾವಧೀತಮಸ್ತು ಮಾವಿದ್ವಿಷಾವಹೈ
ಓಂ ಶಾಂತಿಃ ಶಾಂತಿಃ ಶಾಂತಿಃ

ನಾವಿಬ್ಬರೂ ಕೂಡಿ ಸಾಮರ್ಥ್ಯವನ್ನು ಪಡೆದುಕೊಳ್ಳೋಣ. ಭೋಗವನ್ನು ಪಡೆಯೋಣ. ನಾವೆಲ್ಲರೂ ತೇಜಸ್ವಿಗಳಾಗೋಣ. ಈ ಮಹಾಮಂತ್ರ ನಮ್ಮೆಲ್ಲರ ಜೀವನಕ್ಕೆ ದಾರಿದೀಪವಾಗಲಿ.

೧೯೬೯ ರಲ್ಲಿ ಧಾರವಾಡ ಅ. ಭಾ. ಆಕಾಶವಾಣಿ ಕೇಂದ್ರದಿಂದ ಪ್ರಸಾರಿತವಾದ ಆಶೀರ್ವಚನ.

ಗಾಂಧೀಜಿ ದೃಷ್ಟಿಯಲ್ಲಿ–

ಮಾನವ ಮತ್ತು ಆತನ ಸಂಪತ್ತು ಇವುಗಳ ಸಂಬಂಧ

ಮಹಾತ್ಮಾ ಗಾಂಧಿಯವರು ಮಾನವ ಮತ್ತು ಅವನ ಆಸ್ತಿಯ ಬಗ್ಗೆ ಆದರ್ಶಯುತ ವಿಚಾರಗಳನ್ನು ಸಮಾಜದೆದುರು ಇರಿಸಿದ್ದಾರೆ. ಮನುಷ್ಯನಲ್ಲಿರುವ ಸ್ವಾರ್ಥಪರ ವಿಚಾರವನ್ನು ದೂರೀಕರಿಸಿದ್ದಾರೆ. ಸ್ವಾರ್ಥದಿಂದ ಆಗುವಷ್ಟು ಹಾನಿ ರಾಷ್ಟ್ರಕ್ಕೆ ಮತ್ತೊಂದಿಲ್ಲವೆಂದು ತಮ್ಮ ಅನುಭವ ಪೂರ್ಣ ನುಡಿಯೊಡನೆ ಒತ್ತಿ ಒತ್ತಿ ತಿಳಿಸಿದ್ದಾರೆ.

"ವ್ಯಕ್ತಿಯು ತನ್ನ ವಸ್ತುಗಳ ಸಂರಕ್ಷಕನೆಂದು ತಿಳಿದುಕೊಂಡು ಅವುಗಳನ್ನು ಚನ್ನಾಗಿ ಜೋಪಾನದಿಂದ ಇಡಬೇಕು. ಆದರೆ ತಾನು ಅವುಗಳ ಒಡೆಯನೆಂದು ಒಂದು ನಿಮಿಷವಾದರೂ ಭಾವಿಸಕೂಡದು. ಆ ವಸ್ತುಗಳು ಯಾರಿಗೆ ಅತ್ಯಂತ ಅವಶ್ಯಕವೊ ಅವರಿಗೆ ಉಪಯೋಗಿಸಲು ಅವರನ್ನು ಯಾವ ಅಡ್ಡಿಯೂ ಇಲ್ಲದೆ ಕೊಡಬೇಕು. ತನ್ನ ಅಥವಾ ತನ್ನ ಮಕ್ಕಳು ಮರಿಗಳ ಉಪಯೋಗಕ್ಕೆ ಬರುವ ದೆಂದು ಭಾವಿಸಿ, ಒಂದು ಚಿಂದಿಯನ್ನು ಕೂಡ ಕಟ್ಟಿಬಿಡುವಂತಹ, ಬೇರೆಯವರಿಗೆ ಅತ್ಯಂತ ಅವಶ್ಯವಾಗಿದ್ದರೂ ಅವನು ಕೊಡದಿರುವಂತಹ ಮನುಷ್ಯನು ಪರ ಗ್ರಹಿಯು, ಆದರೆ ಅಗತ್ಯವಿಲ್ಲದ ವಸ್ತುವನ್ನು ಮುಂದೆ ಬೇಕೆಂದು ಈಗಾಗಲೇ ಕೂಡಿಡಲು ಪ್ರಯತ್ನಿಸಿ ಸಂಗ್ರಹಿಸಲು ಪ್ರಾರಂಭಿಸುವವನೇ ಪರಿಗ್ರಹಿ ಎನ್ನ ಬಹುದು. ಇಂತಹ ಪ್ರವೃತ್ತಿಯಿಲ್ಲದವನು–ಲಕ್ಷಗಟ್ಟಲೆ ರೂಪಾಯಿಗಳ ಒಡೆಯ ನಾಗಿದ್ದರೂ ಅವನು ಅಪರಿಗ್ರಹಿ. ಅವನು ಸಂಗ್ರಹದ ಗೊಡವೆಗೆ ಹೋಗಲಾರ" ಎಂದುದಾಗಿ ಗಾಂಧಿಯವರು ವಿಚಾರಪೂರ್ಣ ವಿವೇಚನೆ ಮಾಡಿದ್ದಾರೆ.

ಪ್ರತಿಯೊಬ್ಬ ವ್ಯಕ್ತಿಯ ಸಾಮಾಜಿಕ ಜೀವನ ಎತ್ತರವಿದ್ದಷ್ಟು ಅವನ ಬಾಳು ಸುಂದರವಿರುತ್ತದೆ. ಆತ್ಮಿಕ ಶಕ್ತಿಯೂ ಅದರ ಜೊತೆಗೆ ಬಲಿತು ಪ್ರಭಾವ ಕಾರಿಯಾಗಿ ಜನತೆಗೆ ಪರಿಣಾಮವನ್ನೀಯುತ್ತದೆ. ಸಂಗ್ರಹಿಸಿದ ಸೊತ್ತು ತನ್ನದು ಅನ್ನುವದಕ್ಕಿಂತಲೂ, ಸಮಾಜದ್ದು ರಾಷ್ಟ್ರದ್ದು ಎಂದುದಾಗಿ ವಿಶಾಲ ಮನೋ ಭಾವನೆ ಬೆಳೆದರೆ, ರಾಷ್ಟ್ರೀಯ ಶಕ್ತಿ ಹೆಚ್ಚುವದಲ್ಲದೆ ಸ್ವದೇಶಾಭಿಮಾನವು ಬಲ ಗೊಳ್ಳುವುದು. ಆದರೆ ಶಕ್ತಿಯಿರುವವರೆಗೆ ಸಾಕಷ್ಟು ಶ್ರಮವನ್ನು ಮಾಡುವವನು ಪೂರ್ಣ ಪರಿಶ್ರಮ ಪಡುವದರಲ್ಲಿಯೇ ಸ್ವಾಭಿಮಾನವೂ ಪ್ರತಿಷ್ಠೆಯೂ ಇರುವ ದೆಂದು ತಿಳಿಯತಕ್ಕವನ ಮತ್ತು ವಸ್ತುಗಳನ್ನು ಕೂಡಿಡುವ ಗೋಜಿಗೆ ಹೋಗದವನ ಭವಿಷ್ಯದ ಚಿಂತೆಯನ್ನು ಪರಮಾತ್ಮನೇ ಮಾಡುವನೆಂದು ರಾಷ್ಟ್ರಪಿತ ಗಾಂಧಿಯವರು

ಒಂದೆಡೆ ತಿಳಿಸಿದ್ದಾರೆ. ಆತ್ಮಶುದ್ಧಿಯೊಡನೆ ಸರ್ವಾರ್ಪಣಭಾವವನ್ನು ದೇವರ ಮೇಲೆ ಇರಿಸಿದರೆ ಪರಮಾತ್ಮನು ನಿರಂತರವೂ ರಕ್ಷಿಸುತ್ತಾನೆ. ಅದರೆ ಭಾವನೆಯಲ್ಲಿ ನಿಷ್ಕಲ್ಮಷವಾದ ಶುದ್ಧಿ ಬೇಕಾಗುತ್ತದೆ.

"ಈಶಾವಾಸ್ಯಮಿದಂ ಸರ್ವಂ ಯತ್ಕಿಂಚ ಜಗತ್ಯಾಂಜಗತ್
ತೇನ ತ್ಯಕ್ತೇನ ಭುಂಜೀಥಾಃ ಮಾಗೃಧಃ ಕಸ್ಯ ಸ್ವಿತ್ ಧನಂ"

ಜಗತ್ತಿನಲ್ಲಿರುವದೆಲ್ಲವೂ ಪರಮಾತ್ಮನ ನಿವಾಸಸ್ಥಾನ. ಎಲ್ಲೆಲ್ಲಿಯೂ ಎಲ್ಲ ವಸ್ತುಗಳಲ್ಲಿಯೂ ಅವನೇ ತುಂಬಿದ್ದಾನೆ. ಜೀವನಕ್ಕೆ ಬೇಕಾದ ವಸ್ತುವನ್ನು ಸ್ವೀಕರಿಸುವಾಗ ತ್ಯಾಗಬುದ್ಧಿಯೊಡನೆ ಯಾರ ಧನವನ್ನೂ ಬಯಸದಂತೆ, ಪರಮಾತ್ಮನ ಪ್ರಸಾದವೆಂಬುವ ಭಾವನೆಯಿಂದ ಸ್ವೀಕರಿಸುವದೇ ಮಾನವನ ಮುಖ್ಯ ಕರ್ತವ್ಯವೆಂದು ಗಾಂಧಿಯವರು ಭಾವಿಸಿದ್ದರು. ಈ ಈಶಾವಾಸ್ಯೋಪನಿಷತ್ತಿನ ಮಂತ್ರದ ವಿಚಾರದಂತೆ ಚಾಚೂ ತಪ್ಪದಂತೆ ಗಾಂಧೀಜಿಯವರು ನಡೆದುಕೊಂಡು ಬಾಳಿನಲ್ಲಿ ಬೆಳಕನ್ನು ಕಂಡರು.

ಆಕಸ್ಮಿಕವಾಗಿ ಪರಂಪರಾಗತವಾಗಿ ತನ್ನೆಡೆಗೆ ಬಂದಿರುವ ಆಸ್ತಿ ಮುಂತಾದವುಗಳಿಗೆ ಮನುಷ್ಯನು ಅದರ ಧರ್ಮದರ್ಶಿಯೇ ಹೊರತು ಅದು ತನ್ನದಾಗಲಾರದು ಮತ್ತು ಆ ಆಸ್ತಿಯಲ್ಲಿ ಮನುಷ್ಯ ಮಾತ್ರರೆಲ್ಲರೂ ಅದರ ಲಾಭವನ್ನು ಪಡೆಯಬಹುದೆಂಬುದೇ ಗಾಂಧೀಜಿಯವರ ತತ್ವ. ವಿಪುಲ ಧನವನ್ನು ಅನೇಕಾನೇಕ ವಸ್ತುಗಳನ್ನು ಹೇಗೆ ಉತ್ಪನ್ನ ಮಾಡಬೇಕು? ಅದನ್ನು ಹೇಗೆ ಸಂಗ್ರಹಿಸಬೇಕು? ಮತ್ತು ಹೇಗೆ ಗಳಿಸಬೇಕು? ಇವೆಲ್ಲವುಗಳು ಗಾಂಧೀಜಿಯವರ ದೃಷ್ಟಿಯಲ್ಲಿ ಗೌಣವಾಗಿದ್ದವು.

"ಆಸ್ತಿ ಉತ್ಪಾದನೆ ಮತ್ತು ವಿತರಣ ಶ್ರಮಜೀವಿಗಳು, ಯಂತ್ರ ಮತ್ತು ಅದರ ಉಪಯೋಗ, ವಸ್ತುಗಳ ಉಪಯೋಗ, ಸ್ವದೇಶಿ ತತ್ವ, ಇವೆಲ್ಲವುಗಳನ್ನು ಗಾಂಧಿಯವರು ವಿಶಾಲ ಮನೋಭಾವನೆಯಲ್ಲಿ ಹಾಗೂ ಮಾನವ ಮಾತ್ರರ ಹಿತ ಸಾಧನೆಯ ದೃಷ್ಟಿಯಲ್ಲಿಯೇ ನೋಡುತ್ತಿದ್ದರು. ಎಂಥದೆ ಕಠಿಣ ಸಮಸ್ಯೆಗಳು ಎದುರು ಬಂದರೂ, ಅದರ ಪರಿಹಾರ ಸಮಸ್ಯೆಯನ್ನು ಉಚ್ಚ ಭೂಮಿಕೆಯ ದೃಷ್ಟಿಯಲ್ಲಿ ನಿವಾರಿಸುತ್ತಿದ್ದರು. ಸಕಲ ಜೀವಾತ್ಮರಿಗೆ ಲೇಸನೆ ಬಯಸುವದೇ ಮುಖ್ಯ ಗುರಿಯಾಗಿದ್ದಿತು.

ಒಂದಾನೊಂದು ಸಮಯ ಒಬ್ಬರು ಗಾಂಧಿಯವರನ್ನು ಕುರಿತು ಧರ್ಮದರ್ಶಿತ್ವದ ತತ್ವ ನಿರೂಪಣೆಯ ಬಗ್ಗೆ ಪ್ರಶ್ನೆ ಕೇಳಿದರು. ಅದಕ್ಕೆ ಮಹಾತ್ಮಾ ಗಾಂಧಿಯವರು "ಎಲ್ಲವೂ ದೇವರಿಗೆ ಸೇರಿದುದು. ದೇವರಿಂದ ಆದುದು ಎಂಬ ತತ್ವಕ್ಕೇ ಅನೇಕ ವರ್ಷಗಳ ಹಿಂದೆಯೇ ತಾವು ಬದ್ಧರಾಗಿರುವದಾಗಿ ತಿಳಿಸಿದರು. ಆದುದರಿಂದ ಆ ತತ್ವ ಎಲ್ಲ ಜನರಿಗಾಗಿಯೇ ಹೊರತು ಕೇವಲ ಒಬ್ಬ ವ್ಯಕ್ತಿಗಾಗಿ ಅಲ್ಲ. ತನ್ನ ಪ್ರಮಾಣಕ್ಕಿಂತ ಹೆಚ್ಚಿನ ಸಂಪತ್ತುಳ್ಳವನಾದರೆ ವ್ಯಕ್ತಿ ದೇವರ

ಜನರಿಗಾಗಿ ಆ ಪ್ರಮಾಣದ ಸಂಪತ್ತಿಗೆ ತಾನು ಧರ್ಮದರ್ಶಿ ಆಗಿರಬೇಕು" ಎಂದು ಹೇಳಿದರು.

"ಸರ್ವಶಕ್ತನಾದ ಭಗವಂತ ಕೂಡಿಡಬೇಕಿಲ್ಲ. ದಿನ ದಿನವೂ ಆತ ಸೃಷ್ಟಿ ಮಾಡುತ್ತಾನೆ. ಆದುದರಿಂದ ಜನರೂ ಸಹ ದಿನಾಲೂ ಕಾಲಕ್ಷೇಪ ಮಾಡುತ್ತಿರ ಬೇಕು; ಕೂಡಿಡತಕ್ಕದ್ದಲ್ಲ. ಜನ ಇದನ್ನು ಸಾರ್ವತ್ರಿಕವಾಗಿ ಅರಿತುಕೊಂಡು ಬಳಕೆಗೆ ತಂದರೆ ಅದೇ ಶಾಸನಬದ್ಧ ವ್ಯವಸ್ಥೆಯಾದೀತು. ಜಗತ್ತಿಗೆ ಇದೇ ಭಾರತದ ಕಾಣಿಕೆಯಾಗಬೇಕೆಂದು ನನ್ನ ಆಶೆ. ಆಗ ಶೋಷಣೆಯೇ ಇರದು" ಎಂದು ವಿಚಾರ ಪೂರ್ಣ ನುಡಿಯೊಡನೆ ಉತ್ತರಿಸಿದರು.

ಮತ್ತೊಂದು ಸಾರೆ ಗುಂಟೂರಿನ ಸುದ್ದಿಗಾರರೊಬ್ಬರು ಮಹಾತ್ಮಾ ಗಾಂಧಿಯವರನ್ನು ಕುರಿತು, ಅವರ ಆಸ್ತಿಯ ಬಗೆಗೆ ಪ್ರಶ್ನಿಸಿದಾಗ ಅದಕ್ಕೆ ಗಾಂಧಿಯವರು–ನನಗೆ ಆಸ್ತಿಯೇನೂ ಇಲ್ಲ. ಆದರೂ ನಾನು ಪ್ರಪಂಚದ ಭಾರೀ ಶ್ರೀಮಂತನಂತೆ ನನಗೆ ಭಾಸವಾಗುತ್ತದೆ. ನನ್ನ ಸ್ವಂತಕ್ಕಾಗಲಿ ಅಥವಾ ನನ್ನ ಸಾರ್ವಜನಿಕ ಕಾರ್ಯಕ್ಕಾಗಲಿ ಎಂದಿಗೂ ನನಗೆ ಕೊರತೆಯಿಲ್ಲ. ದೇವರು ಸಕಾಲದಲ್ಲಿ ನನಗೆ ಅನುಗ್ರಹ ಮಾಡಿದ್ದಾನೆ. ನಾನು ಸಾರ್ವಜನಿಕ ಕಾರಣಗಳಲ್ಲಿ ತೊಡಗಿದಾಗ, ಕೊನೆಯ ಸಮಯದಲ್ಲಿಯೂ ಕೂಡ ಸ್ವಲ್ಪ ಕಾಸು ಇಲ್ಲದ ಪ್ರಸಂಗ ಬಂದಾಗ, ಅನಿರೀಕ್ಷಿತವಾದ ಸ್ಥಳಗಳಿಂದ ಹಣ ಬಂದಿದ್ದು ನನ್ನ ಸ್ಮರಣೆಯಲ್ಲಿದೆ. ಈ ಸಮಯೋಚಿತ ಸಹಾಯದಿಂದ ನಾನು ತಗ್ಗಿ ಹೋಗಿದ್ದೇನೆ. ದೇವನಲ್ಲಿಯೂ ಆತನ ದಯೆಯಲ್ಲಿಯೂ ನನಗೆ ತುಂಬಾ ವಿಶ್ವಾಸವಿದೆ. ಇದರಿಂದ ನನ್ನ ಅದೃಷ್ಟ ದಲ್ಲಿ ಸಂಪೂರ್ಣ ದುರವಸ್ಥೆ ಒದಗುವದಾದರೂ ಅದನ್ನು ತಾಳಬಲ್ಲವನಾಗಿದ್ದೇನೆ; ಈ ರೀತಿಯ ನನ್ನ ಜೀವನವನ್ನು ಪ್ರಪಂಚ ನೋಡಿ ನಗಬಹುದು; ಆದರೆ ನನಗೆ ಮಾತ್ರ, ಇಂತಹ ತ್ಯಾಗದಲ್ಲಿ ನಿಶ್ಚಿತ ಲಾಭವಿದೆ. ಬಡತನವನ್ನೂ ಸರ್ವೋದಯದ ವಿಚಾರವನ್ನು ಬೋಧಿಸಿದರೂ ದೇವರ ದೃಷ್ಟಿಯಲ್ಲಿ ನಾನು ಶ್ರೀಮಂತ ಎಂದುದಾಗಿ ಉತ್ತರ ನೀಡಿದರಂತೆ.

ಮಹಾತ್ಮಾ ಗಾಂಧಿಯವರಲ್ಲಿ ಇಂತಹ ದೃಢ ವಿಶ್ವಾಸ ಬರಲು ದೇವರಲ್ಲಿರುವ ಅಚಲ ಶ್ರದ್ಧೆ, ಪ್ರಪಂಚದಲ್ಲಿರುವ ಎಲ್ಲ ಜನರು ನಿರಂತರವೂ ಸುಖಿಗಳಾಗಿ ಜೀವಿಸ ಬೇಕು ಎನ್ನುವ ವಿಶಾಲ ಮತ್ತು ವಿಚಾರ ಪೂರ್ಣ ಮನೋಭಾವನೆ ತುಂಬಿ ತುಳುಕು ತ್ತಿತ್ತು. ಅವರ ಪ್ರತಿಯೊಂದು ನಾಡಿ ನಾಡಿಯಲ್ಲಿಯೂ ಸಹ ಮಾನವೋದ್ಧಾರದ ಚಿಂತನೆಯೇ ಹಾರುತ್ತಿರುವಾಗ, ಆಸ್ತಿಯ ಸಂಗ್ರಹದ ವಿಚಾರವಂತೂ ಅವರ ಹತ್ತಿರ ಸುಳಿಯುತ್ತಿರಲಿಲ್ಲ.

ಗಾಂಧಿಯವರು ಪ್ರಪಂಚದಲ್ಲಿರುವವನು, ಮಾನವನಾಗಿ ನಮ್ಮ ಕರ್ತವ್ಯ ವನ್ನು ಶುದ್ಧ ಮನಸ್ಸಿನಿಂದ ಮಾಡಿದಾಗ ಮಾತ್ರ ನಮಗೆ ಬಾಳುವ ಹಕ್ಕು ಸಿದ್ಧಿ ಸುತ್ತದೆಂದು ಅನ್ನುತ್ತಿದ್ದರಂತೆ.

ಪ್ರತಿಯೊಬ್ಬರು ತಮಗೆ ಬೇಕಾದಷ್ಟು ಇಟ್ಟುಕೊಂಡು ಪರರ ಹಿತ ಚಿಂತನೆಯಲ್ಲಿ ಭಾಗವಹಿಸಿದರೆ ರಾಷ್ಟ್ರವೇ ಏಕೆ? ಪ್ರಪಂಚವೇ ಸುಖಮಯವಾದೀತೆಂದು ಅವರ ಅಭಿಪ್ರಾಯವಾಗಿತ್ತು.

ಆರ್ಥಿಕ ಸಮಾನತೆಯ ಬಗ್ಗೆಯೂ ಗಾಂಧಿಯವರ ವಿಚಾರ ಬಲು ಎತ್ತರದ್ದು ಇದ್ದಿತು. "ಜನ್ಮ ಜನ್ಮಾಂತರಗಳಿಂದ ನಾವೆಲ್ಲರೂ ಸರಿಸಮಾನರು." ಅಂದರೆ ಸಮಾನ ಅವಕಾಶಕ್ಕೆ ನಮಗೆ ಹಕ್ಕುಂಟು. ಆದರೆ ಎಲ್ಲರಿಗೂ ಒಂದೇ ಬಗೆಯ ಶಕ್ತಿಯಿಲ್ಲ. ಅದು ಅಸಾಧ್ಯ. ಉದಾಹರಣೆಗೆ ಎಲ್ಲರೂ ಒಂದೇ ಎತ್ತರ ಇರಲಾರರು, ಬಣ್ಣ ಅಥವಾ ಬುದ್ಧಿ ಮುಖ್ಯ ಒಂದೇ ಆಗಿರಲಾರದು. ಆದ ಕಾರಣ ಹೆಚ್ಚು ಸಂಪಾದಿಸುವ ಸಾಮರ್ಥ್ಯ, ಕೆಲವರಿಗೆ ಕಡಿಮೆ ಗಳಿಸುವ ಸಾಮರ್ಥ್ಯ, ಪ್ರತಿಭಾ ಸಂಪನ್ನರಿಗೆ ಹೆಚ್ಚು ಶಕ್ತಿ. ಅವರು ತಮ್ಮ ಶಕ್ತಿಯನ್ನು ಈ ಉದ್ದೇಶಕ್ಕಾಗಿ ಬಳಸಿಯಾರು. ಅವರು ತಮ್ಮ ಪ್ರತಿಭೆಯನ್ನು ದಯೆಯಿಂದ ಉಪಯೋಗಿಸಿದರೆ ಅವರು ರಾಜ್ಯದ ಹಾಗೂ ರಾಷ್ಟ್ರದ ಕೆಲಸ ಮಾಡಿದಂತೆಯೇ ಅಂಥವರು ಧರ್ಮದರ್ಶಿಗಳಾಗಿರುತ್ತಾರೆ.

ಗಾಂಧಿಯವರ ಕಲ್ಪನೆಯ ಪ್ರಕಾರ ಪ್ರತಿಯೊಬ್ಬರ ಹತ್ತಿರ ಅಕ್ಷರಶಃ ಒಂದೇ ಪ್ರಮಾಣದಷ್ಟು ಹಣವಿರಬೇಕು ಎಂದಲ್ಲ. ಅವರವರ ಅಗತ್ಯಕ್ಕೆ ಬೇಕಾದಷ್ಟು ಇರಬೇಕೆಂಬುದೇ ಮೂಲತತ್ವ. ಆನೆಗೆ ಇರುವೆಗಿಂತ ಸಾವಿರಾರು ಪಟ್ಟು ಆಹಾರ ಬೇಕು. ಆದರೆ ಅದು ಅಸಮತೆಯ ಸೂಚಕವಲ್ಲ. "ಅವನವನಿಗೆ ಅವನವನ ಅವಶ್ಯಕತೆಯಷ್ಟು" ಎಂಬುದೇ ಆರ್ಥಿಕ ಸಮಾನತೆಯ ನಿಜವಾದ ಅರ್ಥ.

ಸರ್ವೋದಯ ಸಮಾಜದ ನಿರ್ಮಾಣಕ್ಕೆ ಹಗಲಿರುಳು ದುಡಿಯುತ್ತಿದ್ದ ಅಹಿಂಸಾಮೂರ್ತಿಯೆನಿಸಿದ್ದ ಮಹಾತ್ಮಾ ಗಾಂಧಿಯವರು ಆತ್ಮ ವಿಕಾಸಕ್ಕೂ, ಆತ್ಮ ಸ್ವಾತಂತ್ರ್ಯಕ್ಕೂ ಬಹಳ ಮಹತ್ವಕೊಟ್ಟಿದ್ದರು. ಆರ್ಥಿಕ ಸಮಾನತೆಯ ಭದ್ರತೆಗಾಗಿ, ಪರಿಗ್ರಹದ ಸಾಧನೆಗಾಗಿ ಪರರ ಹಿತಚಿಂತನೆಗೆ ನೀಡುವ ಬುದ್ಧಿ ಬರುವದಕ್ಕಾಗಿ ಆತ್ಮೋದ್ಧಾರ ಅವಶ್ಯಕವೆಂದು ಹೇಳುತ್ತಿದ್ದರು. ಈ ಎಲ್ಲ ಸದ್ಗುಣಗಳನ್ನು ಕೃತಿಯಲ್ಲಿ ತರಬೇಕಾದರೆ ಆತ್ಮವಿಕಾಸವೇ ಮೂಲಾಧಾರವೆಂದು ಗಾಂಧಿಯವರು ಬಗೆದಿದ್ದರು. ಕಾಮದ ವಿಷಯದಲ್ಲಿ ಅನಾಸಕ್ತಿ ವಹಿಸಿದರೆ ಮಾತ್ರ ಆತ್ಮಶ್ರೀ ಹೆಚ್ಚುವದಲ್ಲದೆ ಸಮಾಜೋದ್ಧಾರದ ಕಡೆಗೆ ಲಕ್ಷ್ಯ ಹೆಚ್ಚುವದು.

ನಮ್ಮ ದೃಷ್ಟಿಯಲ್ಲಿ ನಾವೀಗ ಜಗದ್ಗುರು ಮೂರುಸಾವಿರಮಠದ ಸೋಲ್ ಟ್ರಸ್ಟೀಯಾಗಿರಬಹುದು. ಆದರೆ ಮಠದ ಸಂಪತ್ತೆಲ್ಲವೂ ಬೇರೊಬ್ಬರದಿರದೆ ನಮ್ಮದು ಎಂದು ಭಾವಿಸಿದರೆ ಗಾಂಧಿಯವರ ದೃಷ್ಟಿಯಲ್ಲಿ ಇದು ತಪ್ಪೆಂದು ಹೇಳಬಹುದು. ಇದೇ ಸೊತ್ತು ಸಮಾಜದ್ದು, ರಾಷ್ಟ್ರದ್ದು, ಸಮಾಜ ಕಲ್ಯಾಣ ಮಾಡುವದಕ್ಕಾಗಿ

ವಿನಿಯೋಗಿಸುವ ಸಂಪತ್ತೆಂದು ಭಾವಿಸುವದೇ ಗಾಂಧೀಜಿಯ ದೃಷ್ಟಿಯಲ್ಲಿ ಮಾನವನಿಗಿರುವ ಆಸ್ತಿಯ ಸಂಬಂಧವೆಂದು ಹೇಳಬಹುದು.

ಅದಕ್ಕಾಗಿ ನಾವಿಂದು ಸಮಾಜದಲ್ಲಿದ್ದುಕೊಂಡು, ಅಪರಿಗ್ರಹ ವ್ರತದ ಪಾಲನೆ ಮಾಡುತ್ತ. ಸತ್ಯ ಶೋಧನೆಯಲ್ಲಿ ಮನಸ್ಸು ಹಾಕಿ, ಆತ್ಮಶ್ರೀ ಸಮನ್ವಿತರಾಗಿ, ರಾಷ್ಟ್ರೋದ್ಧಾರಗೈಯುತ್ತ ವಿಶ್ವಭ್ರಾತೃತ್ವದ ನೆಲೆ ಕಲೆಗಳನ್ನು ದೈವೀ ನಿಯುಮದೊಂದಿಗೆ ಈಡೇರಿಸಬೇಕೆಂಬುದೇ ಮಹಾತ್ಮಾ ಗಾಂಧೀಯವರ ಸಿದ್ಧಾಂತ.

ಬಾಪೂಜಿಯವರ ಬೋಧನೆಗಳನ್ನು ತಿಳಿದು ಅರ್ಥಮಾಡಿಕೊಳ್ಳಲು ಹೊರಟಾಗ ಅವರ ದೃಷ್ಟಿಯಲ್ಲಿ ಆಸ್ತಿಯ ಬಗೆಗೆ ಹಾಗೂ ಆರ್ಥಿಕ ಸಮಾನತೆಯ ವಿಚಾರವಾಗಿ ಅವರ ಬದುಕಿನಲ್ಲಿಯೂ ಹೇಗೆ ಕಾರ್ಯ ಮಾಡಿರುವರೆಂಬುದನ್ನು ಮನನ ಮಾಡಿಕೊಳ್ಳುವದೇ ಮುಖ್ಯಾಂಶವಾಗಿದೆ.

ಅದಕ್ಕಾಗಿ ನಾವುಗಳು ಅಪರಿಗ್ರಹದ ಆದರ್ಶದ ಪೂರ್ಣ ಸಾಧನೆಮಾಡಿ, ಪ್ರಾಮಾಣಿಕ ದುಡಿಮೆಯಲ್ಲಿ ಮನಸ್ಸಿನ ಸಂತೃಪ್ತಿ ಪಡೆದು ಕಾಯಕವೇ ಕೈಲಾಸವೆಂದು ಬಗೆದು ಆಸ್ತಿಪಾಸ್ತಿಗಳಲ್ಲಿಯೂ ಸಹ ಜನಸಾಮಾನ್ಯರಿಗೂ ಹಿತಸಂರಕ್ಷಣೆಯಾಗುವಂತೆ ವಿಶಾಲ ಮನೋಭಾವನೆಯಲ್ಲಿ ಕಾರ್ಯಪ್ರವೃತ್ತರಾದರೆ ಗಾಂಧೀಜಿಯವರು ಕಂಡ ಕನಸು ನನಸಾದೀತು.

೧೯೬೯ ರಂದು ಧಾರವಾಡ ಆಕಾಶವಾಣಿ ಕೇಂದ್ರದವರು ಏರ್ಪಡಿಸಿದ ವಿಶೇಷ ವಿಚಾರಗೋಷ್ಠಿಯಲ್ಲಿ ಅಪ್ಪಣೆ ಕೊಡಿಸಿದ ಭಾಷಣ.

ಸರ್ವಧರ್ಮಸಮನ್ವಯ ದೃಷ್ಟಿ

ಒಂದು ಲಕ್ಷ ತೊಂಬತ್ತಾರುಸಾವಿರ ಗಣ ಇಷ್ಟಲಿಂಗ ಪೂಜಾಮಹೋತ್ಸವದ ಸಂದರ್ಭದಲ್ಲಿ ಈ ಸರ್ವಧರ್ಮ ಪರಿಷತ್ತನ್ನು ನೆರವೇರಿಸಿರುವದು ಸಮಯೋಚಿತವಾದುದು, ಸಮಂಜಸವಾದುದು. ಇಂದಿನ ವಿಜ್ಞಾನ ಯುಗದಲ್ಲಿ, ಹಲವು ಧರ್ಮಗಳ, ಅನೇಕ ವಿಚಾರಗಳ ಮಂಥನವು ಮಥಿಸುತ್ತಿರುವ ಪ್ರಸಂಗದಲ್ಲಿ, ಸರ್ವಧರ್ಮಗಳ ಸಾರವನ್ನರಿತು, ಆ ಆ ಧರ್ಮದಲ್ಲಿರುವ ಬೆಳಕನ್ನು ಹೃದಯಮಂದಿರದೊಳಗೆ ಪ್ರವೇಶಿಸುವಂತೆ ಮಾಡಿಕೊಂಡು, ಧರ್ಮಜ್ಯೋತಿಯನ್ನು ಬೆಳಗಿಸುವದು ಇಂದು ಅತ್ಯಾವಶ್ಯಕ. ಧರ್ಮಶಕ್ತಿಯನ್ನೂ ರಾಷ್ಟ್ರೋತ್ಥಾನಕ್ಕೆ ಪರಿವರ್ತಿಸಿ, ಪೂರ್ಣತ್ವವನ್ನು ಪಡೆಯುವ ಮಹಾವ್ಯಕ್ತಿತ್ವವನ್ನು ಮತ್ತು ದಿವ್ಯ ತೇಜಸ್ಸನ್ನು ನೀಡುವ ಶಕ್ತಿ ಸ್ಫೂರ್ತಿಯನ್ನು ಸಂಗಳಿಸಿ ಸಾಧಿಸಿದರೆ ಮಾತ್ರ ಸಾರ್ಥಕ.

"ಪತಿತಂ, ಪತಂತಂ, ಪತಿಷ್ಯಂತಂ ಧರತೀತಿ ಧರ್ಮಃ"

"ಧಾರಣಾತ್-ಧರ್ಮಃ"

ವಿನಾಶದತ್ತ ಸಾಗಿರುವ ಜಗತ್ತನ್ನು ಮೇಲಕ್ಕೆತ್ತಿ, ಎಚ್ಚರಿಸಿ, ಶಕ್ತಿಯನ್ನಿತ್ತು ಸಂರಕ್ಷಿಸುವದೇ ಧರ್ಮದ ಮೂಲ ಗುರಿ: ಮತ್ತು ಅದರ ಅರ್ಥವೆಂದು ಹೇಳಬಹುದು. ವ್ಯಕ್ತಿಯಲ್ಲಿ ಹುದುಗಿರುವ ತಮಸ್ಸನ್ನು ನಶಿಸಿ, ಆತ್ಮಶಕ್ತಿಯ ದೀಪ್ತಿಯನ್ನು ಜಾಗೃತಗೊಳಿಸುವದೇ ಧರ್ಮ.

"ಅಸತೋ ಮಾ ಸದ್ಗಮಯ|
ತಮಸೋ ಮಾ ಜ್ಯೋತಿರ್ಗಮಯ|
ಮೃತ್ಯೋರ್ಮಾ ಅಮೃತಂಗಮಯ||"

ಪರಮಾತ್ಮ, ನಮ್ಮನ್ನು ಕೆಡುಕಿನ ತೊಡಕನ್ನು ಬಿಡಿಸಿ, ಒಳ್ಳಿಹ ದಾರಿಗೆ ಕರೆದು ಕೊಂಡು ಹೋಗು! ಕತ್ತಲೆಯಿಂದ ಬೆಳಕಿನೆಡೆಗೆ ಕರೆದೊಯ್ಯು, ಸಾವಿನಿಂದ ಸಾವಿಲ್ಲದ ಎಡೆಗೆ ನಮ್ಮನ್ನು ಸಾಗಿಸು ಎಂದು ತಿಳಿಸುವ, ಕಲಿಸುವ ಮಂತ್ರವೇ ಧರ್ಮ.

ಧರ್ಮದ ಬಗ್ಗೆ ಮನುವಿನ ಮಾರ್ಗದ ನಾಲ್ಕು ಲಕ್ಷಣಗಳನ್ನು ಅರ್ಥೈಸಿ ಕೊಂಡರೆ ಮತ್ತಿಷ್ಟು ಸ್ಪಷ್ಟವಾದೀತು.

"ವೇದಃ ಸ್ಮೃತಿಃ ಸದಾಚಾರಃ ಸ್ವಸ್ಯ ಚ ಪ್ರಿಯಮಾತ್ಮನಃ|
ಏತಚ್ಚತುರ್ವಿಧಂ ಪ್ರಾಹುಃ ಸಾಕ್ಷಾತ್ ಧರ್ಮಸ್ಯ ಲಕ್ಷಣಂ"

ವೇದ, ಸ್ಮೃತಿ, ಸದಾಚಾರ ಯಾವುದರಿಂದ ಆತ್ಮಕ್ಕೆ ಸಂತೋಷ ಆಗುತ್ತದೆಯೋ ಅದು ಧರ್ಮದ ಒರೆಗಲ್ಲು.

ವಾಲ್ಮೀಕಿ ರಾಮಾಯಣದಲ್ಲಿ ಧರ್ಮದ ಸಾರವೇ ಜಗತ್ತೆಂದು ವಿವರಿಸಿದೆ.

"ಧರ್ಮೋ ಹಿ ಪರಮೋ ಲೋಕೇ ಧರ್ಮೇ ಪ್ರತಿಷ್ಠಿತಂ"

"ಧರ್ಮಾದರ್ಥಃ ಪ್ರಭವತೇ ಧರ್ಮಾತ್ ಪ್ರಭವತೇ ಸುಖಂ।
ಧರ್ಮೇಣ ಲಭತೇ ಸರ್ವಂ ಧರ್ಮಸಾರಮಿದಂ ಜಗತ್॥
ಆತ್ಮಾನಂ ನಿಯಮೈಸ್ತೈಃ ಕರ್ಶಯಿತ್ವಾ ಪ್ರಯತ್ನತಃ।
ಪ್ರಾಪ್ಯತೇ ನಿಪುಣೈರ್ಧರ್ಮಃ ನಸುಖಾಲ್ಲಭ್ಯತೇ ಸುಖಂ॥"

ಅಂದರೆ ಧರ್ಮಾಚರಣೆಯಿಂದ ಸಿಕ್ಕಷ್ಟು ಸುಖ ಬಹಿಃಪ್ರವೃತ್ತಿಯಿಂದ ದೊರೆಯು ಲಾರದು. ಕುಶಲನಾದವನು ಸಾಧನೆಮಾಡಿ ಅನೇಕ ಬಗೆಯ ವ್ರತ ನಿಯಮಗಳನ್ನು ಸತ್ಯ ನಿಷ್ಠೆಯಿಂದ ಸಾಧಿಸಿ, ದೇಹವನ್ನು ದಂಡಿಸಿ, ಧರ್ಮವನ್ನು ಗಳಿಸಿ, ಬೆಳಕನ್ನು ಕಂಡು ಪುನೀತನಾಗುತ್ತಾನೆ. ದರ್ಶನ ಶಾಸ್ತ್ರದಲ್ಲಿಯೂ ಸಹ—

"ಯತೋಽಭ್ಯುದಯಾ ನಿಃಶ್ರೇಯಸಃ ಸಿದ್ಧಿಃ ಸ ಧರ್ಮಃ"

ಪ್ರಪಂಚದಲ್ಲಿ ಉನ್ನತಿ, ಮೋಕ್ಷಪ್ರಾಪ್ತಿ–ಎರಡನ್ನೂ ಕೊಡುವದು ಧರ್ಮವೆಂದು ಮುಂತಾಗಿ ಹೇಳಿದೆ.

ಇಂತು ವಿಶಾಲವಾದ ಅರ್ಥವುಳ್ಳ ಧರ್ಮಕ್ಕೆ ಸಂಕುಚಿತದ ಕವಚವನ್ನು ಧರಿಸಿದರೆ ಮಾನವ ಧರ್ಮದ ವೈಶಿಷ್ಟ್ಯವನ್ನು ಅದರ ಮಹತಿಯನ್ನು ಕಳೆಗುಂದಿಸಿ ದಂತಾದೀತು. ಭರತ ಖಂಡದಲ್ಲಿ ಅನೇಕ ಧರ್ಮಗಳು ಉದ್ಭವಿಸಿದ್ದರೂ, ಮಾರ್ಗಗಳು ಹಲವು ಇದ್ದರೂ, ಮುಟ್ಟುವ ಕೊನೆಯ ಗುರಿ ಒಂದೇಯಾಗಿದೆ. ಅದನ್ನು ತಿಳಿದುಕೊಳ್ಳುವ ಮತ್ತು ಅರಗಿಸಿಕೊಳ್ಳುವ ವಿಶಾಲ ಹೃದಯವಿದ್ದರೆ ಮಾತ್ರ ಅರ್ಥವಾಗುತ್ತದೆ. ನಿಂತ ನೀರಿನಿಂದ ಕೊಳಚೆಯುಂಟಾಗುವದು ಸಹಜ. ಅಂತೆಯೇ ಧರ್ಮವೂ ಸಹ ನಿಂತ ನೀರಿನಂತಾಗದೆ, ಹರಿಯುವ ತಿಳಿಜಲದಂತೆ ಸದಾ ಹರಿಯುತ್ತಿರಬೇಕು. ಕಾಲಕ್ಕೆ ತಕ್ಕಂತೆ ವಿಕಾಸಗೊಳ್ಳುತ್ತಿದ್ದರೆ ರಾಷ್ಟ್ರದ ಶಕ್ತಿಯನ್ನು ಹೆಚ್ಚಿಸಲು ಅನುಕೂಲವಾಗುತ್ತದೆ. ಭಾವೈಕ್ಯತೆಗೆ ಸಾಧನವಾಗುತ್ತದೆ. ಧರ್ಮವು ಸಂಸ್ಕೃತಿಯನ್ನು ತೋರಿಸುವ ಪ್ರತಿಬಿಂಬದಂತೆ ಇರಬೇಕಲ್ಲದೆ,ಐಶ್ವರ್ಯೋ ಪಾಸನೆಯ ಮೂಲಕ, ಭೋಗದ ಹೆಸರಿನಲ್ಲಿ, ಸ್ವಾರ್ಥತೆಯ ಕಾಳ್ಗಿಚ್ಚಿನಲ್ಲಿ ಬೆಂದು ಹೋಗುವ ಧರ್ಮಪ್ರಚಾರ ಕ್ಷಣಿಕ ಅಷ್ಟೇ ಅಲ್ಲ, ತತ್ವವಿಲ್ಲದ ಧರ್ಮ ಮೂಢ ಶ್ರದ್ಧೆಯಲ್ಲಿ ಕೊನೆಗೊಂಡು, ಒಂದಿಲ್ಲ ಒಂದು ದಿನ ಅದು ನಾಶವಾಗಲೇಬೇಕು.

ಒಂದೆಡೆ ಸ್ವಾಮಿ ವಿವೇಕಾನಂದರು ಧರ್ಮದ ವಿವೇಚನೆಯನ್ನು, ವಿಚಾರ

ಪೂರ್ಣ ಅನುಭವದೊಡನೆ ವಿವರಿಸಿದ್ದನ್ನು ತಿಳಿದುಕೊಂಡರೆ, ಕವಿದ ಕತ್ತಲೆ ದೂರಾದೀತು! ಸತ್ಯ ಧರ್ಮದ ಅರಿವಾದೀತು!

"ಪ್ರತಿಯೊಂದು ಧರ್ಮದಲ್ಲಿಯೂ ಆಧ್ಯಾತ್ಮಿಕತೆಯು ಏಕತೆಯನ್ನು ಕಾಣುವದೇ ಪರಮ ಗುರಿ. ಯಾವ ಧರ್ಮವೂ ಇದನ್ನು ಮೀರಿ ಬೋಧಿಸಲಾರದು. ಪ್ರತಿಯೊಂದು ಧರ್ಮದಲ್ಲಿ ಧರ್ಮದ ಸಾರವಾದ ಸತ್ಯವಿದೆ ಮತ್ತು ಅದನ್ನು ರಕ್ಷಿಸುತ್ತಿರುವ ಗೌಣವಾದ ಕವಚವಿದೆ. ಯಹೂದ್ಯರ ಅಥವಾ ಹಿಂದೂಗಳ ಶಾಸ್ತ್ರವನ್ನು ನಂಬುವದು ಗೌಣ. ಸಮಯ ಸನ್ನಿವೇಶಗಳು ಬದಲಾಗುವವು. ಕವಚ ಬೇರೆ ಬೇರೆಯಾಗಿ ಕಾಣಿಸುವದು. ಆದರೆ ಮುಖ್ಯವಾದ ಸತ್ಯ ಯಾವಾಗಲೂ ಒಂದೇ ಇರುವದು. ಸಾರವಸ್ತು ಎಲ್ಲಾ ಧರ್ಮಗಳಲ್ಲಿಯೂ ಒಂದೇ ಆಗಿರುವದರಿಂದ ವಿದ್ಯಾವಂತರು ಅದನ್ನು ಮಾತ್ರ ಲಕ್ಷ್ಯದಲ್ಲಿಡುವರು.—

"ಎಲ್ಲಾ ಪಥಗಳೂ ಒಬ್ಬನೇ ಆದ ದೇವರೆಡೆಗೆ ಒಯ್ಯುವವು ಎಂಬುದನ್ನು ನೆನೆಸಿಕೊಂಡರೆ ನಮಗೆ ಸಂತೋಷವಾಗುವದು. ಎಲ್ಲರೂ ನನ್ನಂತೆ ದೇವರನ್ನು ನೋಡಿದಾಗ ಮಾತ್ರ ಪ್ರಪಂಚದ ಉದ್ಧಾರವಾಗುವದು ಎಂದು ನಾವು ಭಾವಿಸುವದಿಲ್ಲ. ನಮ್ಮ ಮುಖ್ಯ ಸಿದ್ಧಾಂತವೆ, ನಿನ್ನ ಇಷ್ಟ ನನ್ನ ಇಷ್ಟವಾಗಲಾರದು. ನಾನೇ ಒಂದು ಪಂಗಡ. ಪ್ರಪಂಚದಲ್ಲಿರುವ ಏಕಮಾತ್ರ ವಿಚಾರ ಪರಧರ್ಮವನ್ನು ನಾವು ಭರತಖಂಡದಲ್ಲಿ ಸೃಷ್ಟಿಸಿರುವೆವು ಎಂಬುದು ಸತ್ಯ. ಆದರೆ ಇಲ್ಲಿ ದೇವರನ್ನು ಹಲವು ಬಗೆಗಳಲ್ಲಿ ಹುಡುಕುವವರೆಲ್ಲ ಬರುವರು, ಎಲ್ಲಾ ಉಪಾಸನೆಗಳನ್ನೂ ಸೌಹಾರ್ದದಿಂದ ನೋಡುವರು; ಪ್ರಪಂಚದಲ್ಲಿ ದೇವರೆಡೆಗೆ ಹೋಗುವವರನ್ನೆಲ್ಲಾ ಇದು ಎಂದೆಂದಿಗೂ ಸ್ವಾಗತಿಸುವದು."

ಎಂದುದಾಗಿ ಸ್ವಾಮಿ ವಿವೇಕಾನಂದರು ಅಂದು ನುಡಿದ ನುಡಿ ಇಂದೂ ಬೇಕಾಗಿದೆ. ಎಲ್ಲಿಯ ವರೆಗೆ ಸಾಧಕ ಜೀವನದಲ್ಲಿಯ ಅಂತರ್ಗತವಾಗಿ ಧರ್ಮವು ಒಳಗಿಳಿಯುವದಿಲ್ಲವೋ, ಅಲ್ಲಿಯ ವರೆಗೆ ಅದು ಕೇವಲ ನಿರರ್ಥಕ ಕಾಡುಹರಟೆ. ಬರಿಯ ಕಟ್ಟುಕಥೆಯೆಂದರೆ ತಪ್ಪಾಗಲಿಕ್ಕಿಲ್ಲ. ವಿಚಾರ ಮಾಡಿ ನೋಡಿದಾಗ, ಧಾರ್ಮಿಕ ಜೀವನದಲ್ಲಿ ಮುಂದೆ ಹೋದವರು ಧರ್ಮದ ಹೊರ ಹೊದಿಕೆಗೆ ಕೇವಲ ಪ್ರಯತ್ನಪಡದೆ, ಧರ್ಮದ ಅಂತರಂಗ ಸಾಧನೆಯ ಸಿದ್ಧಿಗಾಗಿ ಪರಿಶ್ರಮಿಸಿ, ಧರ್ಮವನ್ನು ಉಳಿಸಿ ಬೆಳಗಿಸಿದ್ದಾರೆ. ಇಂತಹ ಧರ್ಮವು ಅನಾದಿಕಾಲದಿಂದಲೂ ಬಂದಿದೆ. ಅಂತರ್ಮುಖಿ ಜೀವನದ ಆಧ್ಯಾತ್ಮಿಕತೆಯಿಂದ ಕೂಡಿದ ಧರ್ಮವು ಮುಂದೆಯೂ ಬೆಳಗುತ್ತಲಿದೆ.

"Kingdom of God will be around us" ಧರ್ಮ ವೃಕ್ಷ ಬೆಳೆದಂತೆ, ಆತ್ಮಿಕಶಕ್ತಿ ಪ್ರಬಲವಾದಂತೆ, ರಾಗದ್ವೇಷಗಳು ದೂರಾಗಿ, ಅರಿವಿಲ್ಲದ

ಶುಷ್ಕ ಶಾಸ್ತ್ರ ಪಂಡಿತರ ಮತೀಯುವಾದ ವಿವಾದಗಳು ತೊಲಗಿದಾಗ ಧರ್ಮವು ದಾರಿ ದೀವಿಗೆಯಾಗಿ ಪರಿಣಮಿಸುತ್ತಿದೆ. ಈ ರೀತಿಯ ಧರ್ಮವನ್ನು ಕಾಯ್ದು ಕೊಂಡು ಹೋಗುವದು ಇಂದು ಬೇಕಾಗಿದೆ. "ಧರ್ಮೋ ರಕ್ಷತಿ ರಕ್ಷಿತ" ಇದರ ಭಾವವೂ ಇದೇ ಆಗಿದೆ.

ಮುಖ್ಯವಾಗಿ ಇಂದು ಪ್ರಚಲಿತವಾಗಿರುವ ಧರ್ಮಗಳು ನಾಲ್ಕು. ಹಿಂದು, ಬೌದ್ಧ, ಕ್ರೈಸ್ತ ಮತ್ತು ಇಸ್ಲಾಂ ಧರ್ಮ. ಇವುಗಳಲ್ಲಿ ಒಳಭೇದಗಳು ಸಾಕಷ್ಟಿವೆ. ಪ್ರಚಾರದಲ್ಲಿ ಇವಿಷ್ಟು ಮಾತ್ರ ಎದ್ದು ಕಾಣುತ್ತವೆ. ಇವುಗಳ ಸಂಕ್ಷಿಪ್ತ ವಿವರಣೆ ಯನ್ನು ಮತ್ತು ಅವುಗಳಲ್ಲಿರುವ ಪ್ರಕಾಶವನ್ನು ತೋರಿಸಿದಲ್ಲಿ ಕೂಡಲೇ ಅರ್ಥ ವಾದೀತೆಂದು ನಮ್ಮ ಭಾವನೆ.

ಹಿಂದೂ ಧರ್ಮಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದೆ. ಬಹು ಪ್ರಾಚೀನ ಕಾಲದಿಂದಲೂ ವೇದಗಳಿಗೆ ಪ್ರಾಧಾನ್ಯತೆ ನೀಡುತ್ತ ಬಂದಿವೆ. ವೇದಾ ಗಮ ಉಪನಿಷತ್ತುಗಳೇ ಹಿಂದೂ ಸಂಸ್ಕೃತಿಯ ಬೆಳವಣಿಗೆಗೆ ಮೂಲಾಧಾರ.

ಸ್ವಾಮಿ ವಿವೇಕಾನಂದರು ಒಂದೆಡೆ "ಹಿಂದೂ ಧರ್ಮಕ್ಕೂ ಇತರರ ಧರ್ಮ ಗಳಿಗೂ ಒಂದು ಭಾವನೆಯಲ್ಲಿ ವ್ಯತ್ಯಾಸವಿದೆ. ಯಾವ ಒಂದು ಭಾವನೆಯನ್ನು ವಿವರಿಸುವದಕ್ಕೆ ಹಿಂದುಗಳು ಸಂಸ್ಕೃತ ಭಾಷೆಯ ಭಂಡಾರವನ್ನೇ ಬರಿದು ಮಾಡು ವರೋ ಅದೇ ಮಾನವ ಈ ಜನ್ಮದಲ್ಲಿಯೇ ಭಗವಂತನನ್ನು ಸಾಕ್ಷಾತ್ಕಾರ ಮಾಡಿ ಕೊಳ್ಳಬೇಕೆಂಬುದು. ದೇವರನ್ನು ಅರಿಯುವದೆಂದರೆ ದೇವರಾದಂತೆ" ಎಂದು ಹಿಂದೂ ಧರ್ಮದ ವೈಶಿಷ್ಟ್ಯವನ್ನು ವಿವರಿಸಿದ್ದಾರೆ.

ಮಾಧವಾಚಾರ್ಯರು "ಪರಾಶರ ಸ್ಮೃತಿ"ಯ ವ್ಯಾಖ್ಯಾನದಲ್ಲಿ ದರ್ಶನ ಮತ್ತು ಮತಗಳ ವಿಚಾರಗಳ ಬಗೆಗೆ ಈ ರೀತಿ ತಿಳಿಸಿದ್ದಾರೆ–

ಕಣಾದಸ್ಯಾಽಕ್ಷಪಾದಸ್ಯ ವ್ಯಾಸಸ್ಯ ಕಪಿಲಸ್ಯ ಚ|
ಪತಂಜಲೇರ್ಜೈಮಿನೇಶ್ಚ ದರ್ಶನಾನಿ ಷಡೇವ ಹಿ||
ಶೈವಂ ಚ ವೈಷ್ಣವಂ ಶಾಕ್ತಂ ಸೌರಂ ವೈನಾಯಕಂ ತಥಾ|
ಸ್ಕಾಂದಂ ಚ ಭಕ್ತಿ ಮಾರ್ಗಸ್ಯ ದರ್ಶನಾನಿ ಷಡೇವ ಹಿ||

ಹಿಂದು ಧರ್ಮವೆಂಬ ಮಹಾ ವೃಕ್ಷಕ್ಕೆ ದ್ವೈತ, ಅದ್ವೈತ, ವಿಶಿಷ್ಟಾದ್ವೈತ, ಶೈವ, ಶಕ್ತಿವಿಶಿಷ್ಟಾದ್ವೈತ, ಜೈನ ಮುಂತಾದ ಅನೇಕ ದರ್ಶನಗಳು ಶಾಖೋಪ ಶಾಖೆಯಾಗಿ ಪಲ್ಲವಿಸಿ ಬೆಳೆಯುತ್ತ ಬಂದು ತಮ್ಮ ತಮ್ಮ ಸಿದ್ಧಾಂತವನ್ನು ಪ್ರತಿಪಾದಿಸುತ್ತಲಿವೆ.

ಚಾರ್ವಾಕ ದರ್ಶನ:

ಇದಕ್ಕೆ ಸೂತ್ರಕಾರರು ಬೃಹಸ್ಪತ್ಯಾಚಾರ್ಯರು. ಚಾರ್ವಾಕರು, ಪರಲೋಕ, ಪರಮೇಶ್ವರನನ್ನು ಒಪ್ಪದಿರುವದರಿಂದ ಇವರನ್ನು ನಾಸ್ತಿಕರೆಂದು ಕರೆಯುವದು ಲೋಕ ರೂಢಿಯಾಗಿದೆ, ಈ ಸಿದ್ಧಾಂತದಲ್ಲಿ ಪ್ರತ್ಯಕ್ಷದಿಂದ ತಿಳಿಯಲ್ಪಡುವ ವಸ್ತುಗಳೇ ವಸ್ತುಗಳು. ಇಂದ್ರಿಯಗಳಿಗೆ ಗೋಚರವಿಲ್ಲದ ವಸ್ತುಗಳನ್ನು ಇವರು ನಂಬುವದಿಲ್ಲ. ಪುಣ್ಯಪಾಪಗಳು ಮನುಷ್ಯರ ಸುಖ ದುಃಖಗಳಿಗೆ ಕಾರಣವಲ್ಲ. ಆಯಾ ವಸ್ತುಸ್ವಭಾವವೇ ಮೂಲ ಕಾರಣವೆಂದು ಚಾರ್ವಾಕರ ಮತ.

ದ್ವೈತ ದರ್ಶನ:

ದ್ವೈತ ದರ್ಶನದ ಮೂಲಪ್ರವರ್ತಕರು ಮಧ್ವಾಚಾರ್ಯರು, ವೇದವು ಹೇಗೆ ಅನಾದಿ ಕಾಲದಿಂದ ಬಂದುದೋ ಅದರಂತೆಯೇ ಅಜ್ಞಾನವೂ ಕೂಡಾ ಅನಾದಿ ಕಾಲದಿಂದ ಬಂದುದು. ಆ ಅಜ್ಞಾನದ ಒಂದೊಂದು ಪರಿಷ್ಕರಿಸುವ ದರ್ಶನ ಅಥವಾ ಸಮಯವೂ ಅನಾದಿಯಾದುದು. ಆಯಾ ಕಾಲದಲ್ಲಿ ಆಯಾ ಸನ್ನಿವೇಶವನ್ನು ಪಯೋಗಿಸಿಕೊಂಡು ಆಯಾ ಸಮಯವು ಪ್ರಸಿದ್ಧಿಗೆ ಬರುವದು. ಅದಕ್ಕೆ ಯಾರೂ ಮೊದಲು ಪ್ರವರ್ತಕರಲ್ಲ.

'ಅನಾದಿಕಾಲತೋ ವೃತ್ತಾಃ ಸಮಯಾ ಹಿ ಪ್ರವಾಹತಃ।
ಭ್ರಾಂತಿಮೂಲತ್ವಮೇತೇಷಾಂ॥'

ವಿಷ್ಣು ಭಕ್ತಿಯನ್ನು ಮುಖ್ಯವಾಗಿಟ್ಟುಕೊಂಡು ವಿಷ್ಣುವಿಗೆ ಸರ್ವೋತ್ಕರ್ಷವನ್ನು ಪ್ರತಿಪಾದಿಸುವದರಿಂದ ಈ ದರ್ಶನಕ್ಕೆ ವೈಷ್ಣವ ಸಿದ್ಧಾಂತವೆಂದು ಪ್ರಸಿದ್ಧಿ ಇದೆ. ಸಕಲವೂ ಮನಸ್ಸಿಗೆ ಸೇರಿದುದೆಂದೊಂದು ಮಾರ್ಗ, ಆತ್ಮನಿಗೆ ಸೇರಿದುದೆಂದೊಂದು ಮಾರ್ಗ ಎರಡಕ್ಕೂ ಸೇರಿದುದೆಂದೊಂದು ಮಾರ್ಗ, ಎರಡಕ್ಕೂ ಸೇರಿಲ್ಲವೆಂದೊಂದು ಮಾರ್ಗ. ಹೀಗೆ ಮಾರ್ಗಗಳು ಭಿನ್ನಗಳಾಗಿರುವವೆಂದು ತಿಳಿಸುವದೇ ಮಧ್ವಾಚಾರ್ಯ ಸಿದ್ಧಾಂತ.

ಅದ್ವೈತ ದರ್ಶನ:

ಈ ಸಿದ್ಧಾಂತದ ಪುರಸ್ಕರ್ತರು ಶಂಕರಾಚಾರ್ಯರು,

"ಬ್ರಹ್ಮ ಸತ್ಯಂ, ಜಗನ್ಮಿಥ್ಯಾ; ಜೀವೋ ಬ್ರಹ್ಮೈವನಾಽಪರಃ"

ಎಂಬುದೇ ಶಂಕರಾಚಾರ್ಯರ ಮೂಲ ಸಿದ್ಧಾಂತ. "ಶಂಕರಾಚಾರ್ಯರ" ದೃಷ್ಟಿಯಲ್ಲಿ ಪ್ರಪಂಚಕ್ಕೆ ಎರಡು ಭಾಗಗಳಿವೆ. ಅದರಲ್ಲಿ ಒಂದು ನಾನು, ಮತ್ತೊಂದು ನೀನು. ಅವು ಕತ್ತಲೆ ಬೆಳಕಿನಷ್ಟು ವಿರೋಧ. ಆದಕಾರಣ ಒಂದು ಮತ್ತೊಂದರಿಂದ ಬಂದಿಲ್ಲವೆಂದು ಹೇಳಬೇಕಾಗಿಲ್ಲ. ದೃಗ್ಮೇಲೆ ದೃಶ್ಯವನ್ನು ಆರೋಪ

ಮಾಡಿವೆ. ದೃಗ್ ಒಂದೇ ಸತ್ಯ, ದೃಶ್ಯ ಕೇವಲ ತೋರಿಕೆ, ಇದಕ್ಕೆ ವಿರೋಧ ವಾಗಿರುವದು ಸರಿಯಲ್ಲ. ಪಂಚಭೂತಗಳು ಮತ್ತು ದೃಶ್ಯ ಒಂದು ಸ್ಥಿತಿಯಲ್ಲಿರುವ ಆತ್ಮನೇ. ನಿಜವಾಗಿ ಇರುವದು ಒಂದೇ.

"ಸತ್ಯ ಮಿಥ್ಯಗಳ ಮಿಥುನದಿಂದ ನಮಗೆ ಕಾಣುವ ಪ್ರಪಂಚ ಬರುವದು. ನಮ್ಮ ಮೇಲೆ ವಿರೋಧವಾದ ಶಕ್ತಿಗಳು ಪ್ರತಿಕ್ರಿಯೆಯನ್ನುಂಟುಮಾಡುವದೇ ಸಂಸಾರಕ್ಕೆ ಕಾರಣ. ಶಕ್ತಿಯಲ್ಲಿರುವ ಚೆಂಡಿನ ಚಲನೆಯಂತೆ, ಇದು ಪ್ರಪಂಚ ದೇವರೇ, ಅದು ನಿಜ. ಆದರೆ ನಾವು ನೋಡುವ ಪ್ರಪಂಚವಲ್ಲ. ಅದು ಕಪ್ಪೆ ಚಿಪ್ಪಿನಲ್ಲಿ, ಇಲ್ಲದ ಬೆಳ್ಳಿಯನ್ನು ನೋಡಿದಂತೆ ಇದನ್ನೇ ಅಭ್ಯಾಸ ಎನ್ನುವದು. ಯಾವದೇ ಒಂದು ನಿಜವಾದ ವಸ್ತುವಿನ ಮೇಲೆ ತಾತ್ಕಾಲಿಕವಾಗಿ ಆರೋಪ ಮಾಡಿರುವ ಒಂದು ವಸ್ತುವಿನಂತೆ; ನಾವು ಹಿಂದೆ ಯಾವಾಗಲೋ ಒಮ್ಮೆ ನೋಡಿದ ಚಿತ್ರವನ್ನು ಸ್ಮರಿಸಿಕೊಳ್ಳುವವು. ತತ್ಕಾಲಕ್ಕೆ ಅದು ನಮಗೆ ಇರುವಂತೆ ಭಾಸವಾದರೂ ಅದು ನಿಜವಲ್ಲ ಅಥವಾ ಇತರರು ಹೇಳುವಂತೆ ನಾವು ನೀರಿನಲ್ಲಿ ಶಾಖವನ್ನು ಕಂಡಂತೆ, ಇದು ನೀರಿಗೆ ಸೇರಿದ್ದಲ್ಲ. ನಿಜವಾಗಿ ಮತ್ತಾವುದೋ ವಸ್ತುವನ್ನು ಅದಿಲ್ಲದ ಕಡೆ ಇದೆ–ಎಂದು ಭಾವಿಸಿದಂತೆ. "ಇಲ್ಲದಿರುವದನ್ನು ಇದೆ ಎಂದು ಭಾವಿಸಿದಂತೆ" ನಾವು ಸತ್ಯವನ್ನು ನೋಡುತ್ತೇವೆ. ಆದರೆ ನಾವು ನೋಡುವ ಮಧ್ಯವರ್ತಿಯಿಂದ ಅದು ವಕ್ರವಾಗಿದೆ ಎಂದು ಮುಂತಾಗಿ ಸೈದ್ಧಾಂತಿಕ ವಿಷಯವನ್ನು ವಿಮರ್ಶೆಯೊಡನೆ ಶಂಕರಾಚಾರ್ಯರು ವಿವರಿಸಿದ್ದಾರೆ.

ವಿಶಿಷ್ಟಾದ್ವೈತ:

ವಿಶಿಷ್ಟಾದ್ವೈತ ಸಿದ್ಧಾಂತದ ಪ್ರತಿಪಾದಕರು ರಾಮಾನುಜಾಚಾರ್ಯರು. ವಿಶಿಷ್ಟಾದ್ವೈತ ಅಂದರೆ, ವಿಶೇಷಗಳಿಂದ ಕೂಡಿದ ಅದ್ವೈತ. ಕಲ್ಪಾಂತದಲ್ಲಾಗಲಿ ಪ್ರಳಯಕಾಲದಲ್ಲಾಗಲಿ ಜೀವಾತ್ಮರು ಮತ್ತು ಜಗತ್ತು ಸೂಕ್ಷ್ಮ ರೂಪದಿಂದ ದೇವರ ಹೃದಯದಲ್ಲಿ ತಮ್ಮ ತಮ್ಮ ಪ್ರಾರಬ್ಧ ವಿಶಿಷ್ಟವಾಗಿ ಸೇರಿಕೊಂಡಿರುತ್ತವೆ, ಈ ಜೀವಜಗತ್ತು ಇವುಗಳಿಂದ ವಿಶಿಷ್ಟನಾದ ದೇವರು ಒಬ್ಬನೇ ಹೊರಗೆ ಕಾಣುವದರಿಂದ ವಿಶಿಷ್ಟಾದ್ವೈತವೆನ್ನುವರು. ರಾಮಾನುಜಾಚಾರ್ಯರು ಹಲವು ಸಿದ್ಧಾಂತಗಳನ್ನು ಬರೆಯುವುದಲ್ಲದೆ, ಪ್ರಪಂಚೋದ್ಧಾರ ದೃಷ್ಟಿಯಲ್ಲಿ ದೇವಸ್ಥಾನಗಳ ಪರಿಷ್ಕಾರವನ್ನು ಕೈಕೊಂಡು ಮಾನವ ಕಲ್ಯಾಣ ಮಾಡಲು ಬಹುವಿಧವಾಗಿ ಪರಿಶ್ರಮಿಸಿದ್ದಾರೆ.

"ಸಕಲ ಜೀವಾತ್ಮವಸ್ತುಗಳಿಗೂ ಆವರಣವಾಗಿರುವ ಶರೀರ ಭೇದವೇ ಹೊರತು ಸ್ವರೂಪದಲ್ಲಿ ಪರಸ್ಪರ ಯಾವ ವಿಧವಾದ ಭೇದವಿಲ್ಲ. ಸಕಲಾಂಶಗಳಲ್ಲಿಯೂ ಸಕಲಾತ್ಮವಸ್ತುಗಳೂ ಅತ್ಯಂತ ಸಮಾನವಾಗಿರುವವು. ಇಂತಹ

ಆತ್ಮವಸ್ತುಗಳಿಗೂ ಪರಮಾತ್ಮನಿಗೂ ಕೆಲವು ವಿಷಯಗಳನ್ನು ಬಿಟ್ಟು ಉಳಿದ ವಿಷಯಗಳಲ್ಲೆಲ್ಲಾ ಅತ್ಯಂತ ಸಾಮ್ಯವಿರುವದು, ಇದು ಸಾಮ್ಯದರ್ಶನದ ಪರಾಕಾಷ್ಠೆ." ಈ ಅಭಿಪ್ರಾಯದಿಂದ ಪ್ರತಿಜೀವಾತ್ಮನೂ ಪರಮಾತ್ಮ ಸಾಮ್ಯವೆಂಬ ಪರಮ ಪುರುಷಾರ್ಥವನ್ನು ಹೊಂದಬಹುದು. ಪರಮಾತ್ಮನು ಅಪಾರ ಕರುಣಾನಿಧಿಯಾಗಿರುವದರಿಂದ ಸರ್ವ ಜೀವಾತ್ಮರೂ ತನ್ನ ಪರಮ ಸಾಮ್ಯವನ್ನು ಹೊಂದಿ, ಆನಂದದಲ್ಲಿರಬೇಕೆಂದು ಪ್ರತೀಕ್ಷಿಸುತ್ತ, ಸೃಷ್ಟಿ, ಸ್ಥಿತಿ, ಸಂಹಾರ, ಅವತಾರ, ಉಪದೇಶ ಮೊದಲಾದ ವ್ಯಾಪಾರದಲಿ ಸದಾ ನಿರತನಾಗಿರುವದರಿಂದ ಈ ಸಿದ್ಧಾಂತವು ಎಲ್ಲ ದೃಷ್ಟಿಯಿಂದಲೂ ಸರ್ವಾತ್ಮರೂ ಮೋಕ್ಷವನ್ನು ಹೊಂದಬಹುದೆಂಬುದನ್ನು ತಿಳಿಸುತ್ತದೆ. ವೇದವೆಂಬ ಕ್ಷೀರಸಾಗರದಿಂದ ಮಾನವ ಕೋಟಿಯನ್ನು ಉದ್ಧಾರ ಮಾಡುವದಕ್ಕಾಗಿ ತತ್ವವೆಂಬ ಬೆಣ್ಣೆಯನ್ನು ಕಡೆದಿರುವೆನು" ಎಂದಿದ್ದಾರೆ ರಾಮಾನುಜಾಚಾರ್ಯರು.

ಶಕ್ತಿವಿಶಿಷ್ಟಾದ್ವೈತ:

ವೀರಶೈವ ಸಿದ್ಧಾಂತವು ವೇದ ಮತ್ತು ಶಿವಾಗಮಗಳಿಂದ ಸಿದ್ಧವಾದುದು. ಈ ಸಿದ್ಧಾಂತವು ಇತರ ಸಿದ್ಧಾಂತಗಳನ್ನು ಸಮನ್ವಯ ದೃಷ್ಟಿಯಿಂದ ನೋಡುತ್ತದೆ. ವೀರಶೈವ ಎಂಬಲ್ಲಿ 'ವಿ' ಎಂಬ ಶಬ್ದವು ಶಿವಜೀವೈಕ್ಯವನ್ನು ಹೇಳುವ ವಿದ್ಯಾಪರ, ಈ ವಿದ್ಯೆಯಲ್ಲಿ ರಮಿಸುವ ಶೈವರು ವೀರಶೈವರು. ಇದೇ ಭಾವ–

ವಿ–ಶಬ್ದೇನೋಚ್ಯತೇ ವಿದ್ಯಾ ಶಿವಜೀವಕ್ಯ–ಬೋಧಿನೀ।
ತಸ್ಯಾಂ ರಮಂತೇ ಯೇ ಶೈವಾಃ ವೀರಶೈವಾಸ್ತು ತೇ ಮತಾಃ॥

ಈ ವಚನದಿಂದ ಸಿದ್ಧವಾಗುತ್ತದೆ.

"ಶಕ್ತಿಶ್ಚ, ಶಕ್ತಿಶ್ಚ ಶಕ್ತಾಭ್ಯಾಂ, ವಿಶಿಷ್ಟೌ ಜೀವೇಶೌ।
ತಯೋಃ ಅದ್ವೈತಂ ಶಕ್ತಿವಿಶಿಷ್ಟಾದ್ವೈತಂ"॥

ಎಂದು ಪೂರ್ವಾಚಾರ್ಯರು ಇದರ ವಿವರಣೆ ಮಾಡಿದ್ದಾರೆ.

ಶಕ್ತಿಯು ಸ್ಥೂಲ ಚಿದಚಿದಾತ್ಮಶಕ್ತಿ, ಸೂಕ್ಷ್ಮ ಚಿದಚಿದಾತ್ಮಶಕ್ತಿ ಎಂದು ಎರಡು ಪ್ರಕಾರವಾಗಿರುವದು. ಜೀವನು ಸ್ಥೂಲ ಚಿದಚಿದಾತ್ಮ ಶಕ್ತಿಯುಕ್ತನಾಗಿರುವನು. ಶಿವನು ಸೂಕ್ಷ್ಮ ಚಿದಚಿದಾತ್ಮಶಕ್ತಿಯುಕ್ತನಾಗಿರುವನು. ಜೀವನ ಸ್ಥೂಲ ಚಿಚ್ಛಕ್ತಿಯು ಕಿಂಚಿಜ್ಞತಾರೂಪವಾಗಿರುವದು; ಸೂಕ್ಷ್ಮಚಿಚ್ಛಕ್ತಿಯು ಸರ್ವಜ್ಞತಾರೂಪವಾಗಿರುವದು. ಶಿವನ ಸೂಕ್ಷ್ಮ ಚಿಚ್ಛಕ್ತಿಯು ಸರ್ವಜ್ಞತಾರೂಪವಾಗಿರುವದು. ಈ ದ್ವಿವಿಧಶಕ್ತಿಗಳಿಂದ ಯುಕ್ತರಾದ ಜೀವ ಮತ್ತು ಶಿವ ಇವರ ಅದ್ವೈತವೇ ಶಕ್ತಿವಿಶಿಷ್ಟಾದ್ವೈತ

ವೆನಿಸುವದು. ಶಕ್ತಿಯು ಪರಶಿವನಲ್ಲಿ ಅವಿನಾಭಾವ ಸಂಬಂಧದಿಂದಿದ್ದು ನಿತ್ಯ ವೆನಿಸುವದು. ಇದೇ ವಿಷಯವನ್ನು ಶ್ವೇತಾಶ್ವತರ ಶೃತಿಯು—

ಪರಾಸ್ಯ ಶಕ್ತಿರ್ವಿವಿಧೈವಶ್ರೂಯತೇ|
ಸ್ವಾಭಾವಿಕೀ ಜ್ಞಾನ-ಬಲ-ಕ್ರಿಯಾ ಚ||

ಎಂದು ಅದರ ಮಹತ್ವವನ್ನು ಸ್ಪಷ್ಟಪಡಿಸಿದೆ.

ವೀರಶೈವಾನಂದ ಚಂದ್ರಿಕೆಯೂ ಸಹ—

"ನ ಶಿವೇನ ವಿನಾ ಶಕ್ತಿರ್ನ ಶಕ್ತಿರಹಿತೋ ಶಿವಃ|
ಪುಷ್ಪ ಗಂಧವದನ್ಯೋನ್ಯಂ ಮಾರುತಾಂಬರಯೋರಿವ||"

ಶಿವನನ್ನು ಬಿಟ್ಟು ಶಕ್ತಿಯೂ, ಶಕ್ತಿಯನ್ನು ಬಿಟ್ಟು ಶಿವನು ಇರುವದಿಲ್ಲವೆಂಬುದು ಇಲ್ಲಿ ವ್ಯಕ್ತವಾಗಿದೆ.

ವೀರಶೈವಕ್ಕೆ ಷಟ್‌ಸ್ಥಲವೇ ಹೃದಯ, ಪಂಚಾಚಾರವೇ ಪ್ರಾಣ, ಅಷ್ಟಾವರಣವೇ ದೇಹ, ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಈ ಪರಿವಿಡಿಯಲ್ಲಿ ಸಾಧಕನ ಭಕ್ತಿ, ಶ್ರದ್ಧೆ, ನಿಷ್ಠೆ, ಅವಧಾನ ಅನುಭಾವ, ಆನಂದ, ಸಮರಸ, ಈ ರೂಪ ತಳೆದು ಶಕ್ತಿಯಲ್ಲಿ ಸಮರಸವಾಗುತ್ತ ಹೋಗುತ್ತದೆ. ಸಮತೆಯು ವೀರಶೈವರ ಮುಖ್ಯ ಸೂತ್ರ. ಸಹಸ್ರಾರು ವರ್ಷಗಳಿಂದ ಜಗತ್ತಿನ ಜನತೆಯಲ್ಲಿ, ಬೇರು ಬಿಟ್ಟಿದ್ದ ಮೇಲು ಕೀಳೆಂಬ ಭಾವನೆ ವೀರಶೈವವು ತೊಡೆದು ಹಾಕಿತು. ಅಲ್ಲದೆ "ಎಲ್ಲರೂ ಪರಮಾತ್ಮನ ಸಾಕ್ಷಾತ್ಕಾರಕ್ಕೆ ಸಿದ್ಧರಾಗಿರಿ" ಎಂದು ಹೇಳಿ ಎಚ್ಚರಿಸಿತು ವೀರಶೈವ ಸಿದ್ಧಾಂತ.

ಜೈನಮತ:

ಜಿನನಿಗೆ ಸಂಬಂಧವಿರುವ ಮತಕ್ಕೆ ಜೈನಮತವೆಂದು ಹೆಸರು. ಜಿನನ ಅನುಯಾಯಿಗಳೇ ಜೈನರು. ಜಿನನಿಗೆ ಅರ್ಹನ್ ಜಿನೇಶ್ವರ, ತೀರ್ಥಂಕರ, ಪರಮೇಷ್ಠಿ, ವೀತರಾಗ, ಪರಮಾತ್ಮಾ ಹೆಸರುಗಳುಂಟು. ಇವರು ಮನಸ್ಸು, ವಾಣಿ, ಶರೀರವನ್ನು ಗೆದ್ದವನೇ "ಜಿನ" ಎಂದು ಕರೆಯುವರು. ಇಂತಹ ಜಿನರಲ್ಲಿ ೨೪ ಜಿನರು ಮಾತ್ರ ಕೃತಯುಗದಲ್ಲಿ ತೀರ್ಥಂಕರರೆನಿಸುವರು. ಈ ತೀರ್ಥಂಕರರೇ ಜೈನಮತದ ಪ್ರವರ್ತಕರು. ಮಹಾವೀರನು ೨೪ನೆಯ ತೀರ್ಥಂಕರನು, ಮಹಾವೀರನು ಬುದ್ಧನಿಗಿಂತ ಮೊದಲು ಇದ್ದನೆಂದು ಪ್ರತೀತಿ ಇದೆ. ತೀರ್ಥಂಕರರನ್ನು ಜೈನರು ದೇವರೆಂದು ಭಾವಿಸುವರು.

ಜೈನ ಧರ್ಮಾನುಯಾಯಿಗಳಲ್ಲಿ ಮುಖ್ಯವಾಗಿ "ದಿಗಂಬರ, ಶ್ವೇತಾಂಬರ" ಎಂದು ಎರಡು ಸಂಪ್ರದಾಯಗಳು ಕಂಡುಬಂದರೂ ತತ್ವ ವಿಚಾರಕ್ಕೆ ಸಂಬಂಧಪಟ್ಟ ವಿಷಯದಲ್ಲಿ ಯಾವ ಭೇದವೂ ಕಂಡುಬರುವದಿಲ್ಲವೆಂದು ತಿಳಿದುಬರುತ್ತದೆ.

ಜೈನಧರ್ಮದಲ್ಲಿ ಜಗತ್ತು ಅನಾದಿ ಅನಂತ. ಈ ಜಗತ್ತನ್ನು ಸೃಷ್ಟಿಸಿದವನು ಯಾರೂ ಇಲ್ಲವೆಂದು ಜೈನರು ತಿಳಿಯುತ್ತಾರೆ. ಜಿನ ಅಥವಾ ಅರ್ಹಂತ, ಪರಮಾತ್ಮ ಪ್ರತಿಯೊಂದು ಆತ್ಮವೂ ಪರಮಾತ್ಮ ಆಗಬಲ್ಲುದು. ಸೃಷ್ಟಿಯ ಸಂಚಾಲನೆ ಮಾಡುವ ಶಕ್ತಿ, ಈಶ್ವರನ ಹೆಸರಿನದು ಆರು ದ್ರವ್ಯಗಳ ಸಿದ್ಧಾಂತ ಜೈನಧರ್ಮದಲ್ಲಿ ಎಲ್ಲಕ್ಕಿಂತ ಹೆಚ್ಚಿನ ಸ್ಥಾನವೇ ಅಹಿಂಸೆ—

"ಅಹಿಂಸಾ ಪರಮೋ ಧರ್ಮಃ"

ಮತ್ತು ಆಚಾರ ತಪಸ್ಸು ಜೈನರ ಜೀವನದ ಪರಮಗುರಿ. ಜೈನಧರ್ಮದಲ್ಲಿ, ವ್ರತಗಳೈದು, ಸಮಿತಿಗಳೈದು, ಭಾವನೆಗಳು ನಾಲ್ಕು. ಇವುಗಳ ಬಗೆಗೆ ಒತ್ತಿ ಹೇಳಿದ್ದಾರೆ. ಮಹಾವೀರರ ಭಾಷೆಯಲ್ಲಿ ಹೇಳುವದಾದರೆ—

ಧಮ್ಮೊ ಮಂಗಲ ಮುಕ್ಕಿಟ್ಠ ಅಹಿಂಸಾ ಸಂಜಮೋ ತವೋ।
ದೇವಾ ವಿ ತಂ ನಮಂಸಂತಿ ಜಸ್ಸಧಮ್ಮೇ ಸಯಾ ಮಣೋ॥

ಅಹಿಂಸೆ, ಸಂಯಮ, ತಪಸ್ಸು ಇವುಗಳು ಎಲ್ಲಕ್ಕಿಂತ ಶ್ರೇಷ್ಠ ಶುಭ 'ಧರ್ಮವೆಂದು' ಹೇಳುವದೇ ಮಹಾವೀರನ ವಾಣಿ.

ಹಿಂದು ಧರ್ಮದ ಅಂಗಗಳಾಗಿ ಶೈವ, ದ್ರಾವಿಡಧರ್ಮ, ಯೋಗ, ಸಾಂಖ್ಯ, ಪೂರ್ವ ಮೀಮಾಂಸೆ, ಉತ್ತರ ಮೀಮಾಂಸೆ, ನ್ಯಾಯವೈಶೇಷಿಕ ಹೀಗೆ ಹಲವಾರು ದರ್ಶನಗಳ ಸಾರಸಂಗ್ರಹವಾಗಿ ಶೋಭಿಸುತ್ತ ಹಿಂದೂ ಧರ್ಮವು ವಿಶ್ವಶಾಂತಿಗಾಗಿ ದಾರಿ ತೋರಿಸಿದೆ; ತೋರಿಸುತ್ತಲಿದೆ.

ಬೌದ್ಧ ಧರ್ಮ:

ಬೌದ್ಧಧರ್ಮ ಕ್ರಿಸ್ತ ಪೂರ್ವ ಶತಮಾನಗಳಲ್ಲಿ ಪೂರ್ವದ ಟಿಬೆಟ್, ಬರ್ಮಾ, ನೇಪಾಳ, ಕಾಂಬೋಡಿಯಾ, ಆಸ್ಸಾಮ್, ಚೀನಾ, ಜಪಾನಗಳಲ್ಲಿಯೂ ಪಶ್ಚಿಮದ ಅಫಘಾನಿಸ್ತಾನ, ತುರ್ಕಸ್ತಾನ, ಸಿರಿಯಾ, ಪಾಲಿಸ್ತೈನ ರಾಷ್ಟ್ರಗಳಲ್ಲಿಯೂ ಸ್ವಲ್ಪ ಸಹ ರಕ್ತಪಾತವಿಲ್ಲದ ಇದು ಪ್ರಸಾರವಾಗಿದ್ದು ಕಂಡುಬಂದಿದೆ.

"ಬುದ್ಧ ಸರಣಂ ಗಚ್ಚಾಮಿ
ಧಮ್ಮಂ ಸರಣಂ ಗಚ್ಚಾಮಿ
ಸಂಘಂ ಸರಣಂ ಗಚ್ಚಾಮಿ"

ಈ ಮಂತ್ರವೇ ಬೌದ್ಧ ದೀಕ್ಷೆಗೆ ಮೂಲವಾದುದು.

ನಿರ್ಮಲ ಚಿತ್ತದಿಂದಲೇ ಸತ್ಯ ಸಾಕ್ಷಾತ್ಕಾರವಾಗುವದೆಂಬುದೇ ಇವರ ಗುರಿ. ಬುದ್ಧನ ಸಿದ್ಧಾಂತವಾದರೂ, ಹೊಸ ಬಗೆಯಲ್ಲಿ ಉಪನಿಷತ್ತಿನ ತತ್ವಗಳನ್ನು

ಹೇಳಿದಂತಿದೆ. ಪರಿಪೂರ್ಣತೆಗೆ ದಾರಿಯಾದ ನೀತಿಶೀಲಗಳನ್ನೇ ಬುದ್ಧನು ಧರ್ಮ ಎಂದು ಕರೆಯುತ್ತಾನೆ.

ಯೋಚ ಬುದ್ಧಂಚ, ಧಮ್ಮಂಚ, ಸಂಘಂಚ, ಸರಣಂಗತೋ।
ಚತ್ತಾರಿ ಅರಿಯ ಸಚ್ಚಾನಿ ಸಮ್ಮಪ್ರಜ್ಞಾಯ ಪಸ್ಸತಿ।
ಅತ್ತದೀಪ ಅತ್ತಸರಣಾ ಅನಸ್ಯಸರಣಾ ಧರ್ಮದೀಪಾ
ಧರ್ಮ ಶರಣಾಹೋತ॥

ಬುದ್ಧ ಧರ್ಮ ಸಂಘಗಳಿಗೆ ಶರಣುಬಂದ ಮಾನವನು ಸುಜ್ಞಾನದಿಂದ ನಾಲ್ಕು ಆರ್ಯ ಸತ್ಯಗಳನ್ನು ತಿಳಿದುಕೊಳ್ಳಬೇಕು ಮತ್ತು ಧರ್ಮವನ್ನು ಮಾತ್ರ ದೀಪ ಮಾಡಿಕೊಂಡು ಧರ್ಮಕ್ಕೆ ಶರಣು ಹೋಗುವವೇ ಬೌದ್ಧಧರ್ಮದ ಮೂಲ ಸಿದ್ಧಾಂತ.

"ಬುದ್ಧನ ಆತ್ಮದರ್ಶನ ದಯಾಧರ್ಮದ ಕರುಣೆಗಳಿಂದ ತುಂಬಿದ ಜೀವನದ ರೂಪದಲ್ಲಿ ಮೈದೋರಿದ್ದರಿಂದ ಪ್ರಪಂಚದ ತುಂಬೆಲ್ಲ ಬೌದ್ಧಧರ್ಮ ಹೆಚ್ಚು ಪ್ರಚಾರವಾದಂತೆ ಕಾಣುತ್ತದೆ. ಜೈನ ಬೌದ್ಧಧರ್ಮಗಳು ಅಹಿಂಸಾತತ್ವವನ್ನು ಒಪ್ಪಿದರೂ ಜ್ಞಾನದ ಪ್ರಾಧಾನ್ಯತೆ ಬೌದ್ಧಧರ್ಮಕ್ಕಿದೆ. ಧ್ಯಾನವು ಮನುಷ್ಯ ನನ್ನು ಪೂರ್ಣವಾಗಿ ಮಾರ್ಪಡಿಸುವ ಧ್ಯೇಯವನ್ನು ಒಂದಾಗಿಸುವ ಶಕ್ತಿಯಾಗಿದೆ ಬೌದ್ಧಧರ್ಮ.

ಕ್ರೈಸ್ತಧರ್ಮ:

ಕ್ರಿಸ್ತಶಕದ ಪ್ರಾರಂಭದಿಂದಲೂ ಭಾರತದಲ್ಲಿ ಕ್ರೈಸ್ತಧರ್ಮ ಬೆಳೆದುಬಂದಿದೆ. ಯುರೋಪಿಯನ್ನರ ವಸಾಹತುಗಳು ಸ್ಥಾಪನೆಯಾದಾಗ, ಕ್ರೈಸ್ತಧರ್ಮಕ್ಕೆ ಬೇರೆಯವರನ್ನು ಮತಾಂತರಗೊಳಿಸಲು ಮಿಶನರಿಗಳ ಪ್ರಚಾರ ಭಾರತದಲ್ಲಿ ಆರಂಭ ವಾಗಿದೆ ಎಂದು ಹೇಳಬಹುದು.

ಮಹಾತ್ಮಾ "ಏಸು" ಕ್ರೈಸ್ತಧರ್ಮದ ಪ್ರವರ್ತಕ. "The sun the father and the Holy Ghost" ೧) ಪರಮಪಿತ, ಪರಮಾತ್ಮ. ೨) ದೇವರ ಮಗು ಏಸು. ೩) ಪವಿತ್ರಾತ್ಮ ಇವನ್ನರಿಯುವವೇ ಕ್ರೈಸ್ತ ಮತದ ತತ್ವ. ಈಸಾಯಿ ಧರ್ಮದ ಮೂಲಾಧಾರ ಪ್ರೇಮ, ಅಹಿಂಸೆ, ಅದರ ಅಡಿಗಲ್ಲು: ಸೇವೆ, ತ್ಯಾಗ, ಅದರ ದೀಪಸ್ತಂಭ. ಏಸುವಿನ ಜೀವನ ಪವಿತ್ರ ಜೀವನ. ಬುದ್ಧನಂತೆ ಏಸುವೂ ಎಚ್ಚೆತ್ತವರಲ್ಲಿ, ಜನತೆಯನ್ನು ಎಚ್ಚರಿಸಿದವರಲ್ಲಿ ಅಹೋರಾತ್ರಿ ಪರಿಶ್ರಮ ಪಟ್ಟವರಲ್ಲಿ ಒಬ್ಬನು.

"ಭಗವಂತನ ರಾಜ್ಯವೆಂದರೆ ಮನಸ್ಸಿನ ಒಂದು ಸ್ಥಿತಿ; ಸತ್ತ್ವಯ ಒಂದು ಔನ್ನತ್ಯ. ಜ್ಞಾನ ಭಾಸ್ಕರನ ಉದಯ. ಬೋಧಿ, ವಿದ್ಯಾ, ಸತ್ಯವು ಮುಕ್ತಿ

ಯತ್ತ ಒಯ್ಯುತ್ತದೆ. "ಪಶ್ಚಾತ್ತಾಪಪಡು" ಎಂದು ಏಸು ಹೇಳುವ ಹೃದಯ ವಾಣಿ".

"ನಮ್ಮ ಸ್ವಭಾವ ಅಹಂಕಾರದಿಂದಲೋ, ದ್ವೇಷದಿಂದಲೋ ಎಷ್ಟೇ ವಿಕೃತಗೊಂಡರೂ, ನಮ್ಮಲ್ಲಿರುವ ದಿವ್ಯ ತತ್ವವನ್ನು ತಿಳಿಸಲಾರೆವು. ನಾವು ದೇವರನ್ನು ಎಲ್ಲೆಲ್ಲಿಯೂ ಕಾಣದಿದ್ದರೆ, ಅವನನ್ನು ನಾವು ಎಲ್ಲಿಯೂ ಕಾಣಲಾರೆವು." ಕೆಟ್ಟವರ ಮೇಲೂ ಒಳ್ಳೆಯವರ ಮೇಲೂ, ಸಮವಾಗಿ ಸೂರ್ಯ ಹೊಳೆಯುವಂತೆ ದೇವರು ಮಾಡುತ್ತಾನೆ. ನ್ಯಾಯದ ಮೇಲೂ ಅನ್ಯಾಯಗಳ ಮೇಲೂ ಸಮನಾಗಿ ತನ್ನ ಮಳೆಯನ್ನು ಅವನು ಕರೆಯುತ್ತಾನೆ.

"ದೇವರು ಮನುಷ್ಯನಾದ ಮನುಷ್ಯನು ದೇವರಾಗಬಹುದು" ಇಂತಹ ದೃಷ್ಟಿಯನ್ನು ಹೊಂದಿದ್ದರೂ ಸದಾಚಾರವಂತರಾಗಿರುವವರನ್ನು ಯೇಸು ತನ್ನ ಮಿತ್ರರೆಂದು ಭಾವಿಸುತ್ತಾನೆ. ಇದೇ ಕ್ರಿಸ್ತಮತದ ಸಿದ್ಧಾಂತ.

"Heal the Sick, Cleanse the Lepers, Raise the Dead, Cast out Devils, Freely Ye have received, Freely Give. ರೋಗಿಗಳನ್ನು ಗುಣಪಡಿಸು, ಕುಷ್ಠರನ್ನು ಸ್ವಚ್ಛಮಾಡು, ಸತ್ತವರನ್ನು ಎಬ್ಬಿಸು, ದುಷ್ಟವೃತ್ತಿಗಳನ್ನು ಹೊರಗೆ ಹಾಕು, ಬಿಚ್ಚುಗೈಯಿಂದ ನಿನಗೆ ಲಭಿಸಿದೆ, ಕೈಬಿಟ್ಟು ನೀಡು. ಈ ನುಡಿಗಳು ಏಸುವಿನ ಮುಖ್ಯ ಸಂದೇಶ.

ಇಸ್ಲಾಂಧರ್ಮ:

ಇಸ್ಲಾಂಧರ್ಮದ ಪ್ರವರ್ತಕರು ಹಜರತ್ ಮಹಮ್ಮದ್. ಇಸ್ಲಾಂ ಧರ್ಮದ ಅನುಯಾಯಿಗಳಿಗೆ ಮಕ್ಕಾ ಅರಬ್ಬಿಸ್ಥಾನದ ಪ್ರಸಿದ್ಧ ತೀರ್ಥ.

'ಲಾ ಇಲಾಹ ಇಲ್ಲಲ್ಲಾಹ' ಇದು ಇಸ್ಲಾಂಧರ್ಮದ ಮೂಲ ಸಿದ್ಧಾಂತ, ಅಂದರೆ ಅಲ್ಲಾನ ಹೊರತು ಉಪಾಸನೆ ಮಾಡಲು ಯಾರೂ ಯೋಗ್ಯ ಇಲ್ಲವೆನ್ನುವದೇ ಇದರ ಭಾವ. ಇಸ್ಲಾಂ ಶಬ್ದದ ಅರ್ಥವಾದರೂ "ಶಾಂತಿ". ಇಸ್ಲಾಧರ್ಮ ಸ್ವೀಕರಿಸಿದವನು ಮುಸಲಿಮ್ ಅಥವಾ ಮುಸಲ್ಮಾನ್ ಎಂದು ಕರೆಯುವದು ರೂಢಿಯಲ್ಲಿ ಬಂದಿದೆ. ಯಾರಿಗೆ ಶ್ರದ್ಧೆ ಇಮಾನ್ ಅದೆಯೋ ಅವರೇ ಮುಸಲ್ಮಾನರು. ಎಲ್ಲರೊಡನೆ ಬಂಧುಗಳಂತೆ ವರ್ತಿಸಿ, ಸದಾಚಾರವನ್ನು ಪಾಲಿಸಿ, ಕಾಯಕಷ್ಟದಿಂದ ದುಡಿದು, ಅಲ್ಲಾನನ್ನು ನಂಬಿಕೊಂಡು ಇರುವದೇ ಇಸ್ಲಾಂ ಧರ್ಮದ ಒಳಗುಟ್ಟು.

ಪೈಗಂಬರರ ಹೃದಯ ವಾಣಿಯೇ ಕುರಾನ್. ಈ ಗ್ರಂಥವೇ ಮುಸಲ್ಮಾನರ ಭವಿಷ್ಯ ನಿರ್ಮಾಣಕ್ಕೆ ದಾರಿ ತೋರಿಸುವ ಕೈದೀವಿಗೆಯೆಂದು, ತಮ್ಮ ಧರ್ಮದ

ಸಾಧಾರ ಗ್ರಂಥವೆಂದೂ ನಂಬಿಕೊಂಡು ಆ ಗ್ರಂಥಕ್ಕೆ ಗೌರವ ಸಲ್ಲಿಸುತ್ತಿದ್ದಾರೆ. ಆಲೋಚನೆ ಮಾಡಲಿಕ್ಕೆ, ಅರಿದು ವಿಚಾರಿಸಲಿಕ್ಕೆ, ಅಲ್ಲಾನ ಕಡೆಗೆ ಕರೆಯಲಿಕ್ಕೆ, ಅಲ್ಲಾನ ದಾರಿಯಲ್ಲಿ ನಡೆದು ವಿರೋಧವನ್ನು ಅಳಿಸಲಿಕ್ಕೆ ಕುರಾನ್ ಅವತರಿಸಿದೆ ಯೆಂದು ಮುಸಲ್ಮಾನರ ಅಭಿಮತ.

ಸತ್ಯವನ್ನು ನುಡಿಯಬೇಕು. ಎಲ್ಲರನ್ನೂ ಪ್ರೀತಿಸಬೇಕು. ಬಡವರ ಮೇಲೆ ಕರುಣೆ ಬೇಕು. ಯಾರನ್ನೂ ನಿಂದಿಸಬಾರದು, ಯಾರನ್ನೂ ಹೊಡೆಯಲಾಗದು, ಯಾರೊಡನೆಯೂ ಅತ್ಯಾಚಾರ ಅನ್ಯಾಯ ಮಾಡಲಾಗದು. ಅಲ್ಲಾನ ದೃಷ್ಟಿಯಲ್ಲಿ ಎಲ್ಲರೂ ಒಂದೇ ಸಮಾನ. ಇಸ್ಲಾಂ ಧರ್ಮದಲ್ಲಿ ಇಂತಹ ಸದಾಚಾರದ ಅಗ್ಗಳಿಕೆಗೆ ಹೆಚ್ಚು ಮಹತ್ವ ಕೊಟ್ಟಿದ್ದಾರೆ. ಅಲ್ಲಾನ ನ್ಯಾಯಾಲಯದಲ್ಲಿ ಎಲ್ಲ ಜೀವಿಗಳ ಪಾಪಪುಣ್ಯಗಳ ಪಟ್ಟಿಯನ್ನು ಇಡುತ್ತಾರೆ. ಪುಣ್ಯವಂತರಿಗೆ ಅಲ್ಲಾ, ಒಳ್ಳೆ ಫಲ ಕೊಡುತ್ತಾನೆ. ಕೆಟ್ಟವರಿಗೆ ಕೆಟ್ಟದ್ದು. ಇಸ್ಲಾಂ ಧರ್ಮದಲ್ಲಿ ಹೆಣ್ಣು ಮಕ್ಕಳಿಗೆ ಉನ್ನತಸ್ಥಾನ ಕಲ್ಪಿಸಿಕೊಟ್ಟಿದ್ದಾರೆ.

ರಾಜೀ ಹೈ ಹಮ್ ಉಸೀ ಮೇಂ, ಜಿಸಮೇಂ ತೇರೀ ರಜಾ ಹೈ।
ಯಾಂ ಯೋಂ ಭೀ ವಾಹವಾ ಹೈ ಔ ವೊಂ ಭೀ ವಾಹವಾ ಹೈ॥

ಹೆಚ್ಚಾಗಿ ಇಸ್ಲಾಂ ಧರ್ಮದಲ್ಲಿ ಸರ್ವಾರ್ಪಣ ಭಾವನೆಯನ್ನು ವಿವೇಚಿಸುವದಲ್ಲದೆ ವಿಶ್ವಾತೀತ ದೂರದರ್ಶಿತ್ವ ಇಸ್ಲಾಂ ಧರ್ಮದ ವಿಶಿಷ್ಟ ಲಕ್ಷಣವೆಂದು ತೋರಿಸಿ ದ್ದಾರೆ. ಇದೇ ಈ ಧರ್ಮದ ಮುಖ್ಯ ತತ್ವ.

ಸರ್ವಧರ್ಮ ಸಮನ್ವಯದೃಷ್ಟಿ:

ಈ ವರೆಗೆ ನಾಲ್ಕು ಧರ್ಮಗಳ ಸ್ಥೂಲ ವಿವರಣೆಯನ್ನು ವಿಹಂಗಮ ದೃಷ್ಟಿಯಲ್ಲಿ ನೋಡಿದ್ದಾಗಿದೆ. ಸಿಂಹಾವಲೋಕನ ಮಾಡಿದಂತಾಗಿದೆ. ಎಲ್ಲ ಧರ್ಮಗಳಲ್ಲಿ ಒಳಹೊಕ್ಕು ವಿಚಾರಿಸಿದಾಗ, ಬೆಳಕು ಎಲ್ಲದರಲ್ಲಿಯೂ ತುಂಬಿದೆ ಎಂಬುದು ಅರ್ಥವಾಗುತ್ತದೆ. ಅಂತಃಸತ್ವವು ಹುದುಗಿದೆ ಎಂಬುದು ಅರಿವಾಗು ತ್ತದೆ. ಭಾವಪೂರ್ಣ ಸಾಹಿತ್ಯ ಸಂಕಲನ ಸಂಗ್ರಹಿಸಿದೆ ಎನ್ನುವದು ಗೊತ್ತಾಗುತ್ತದೆ. ಹೀಗಿದ್ದು ನಮ್ಮ ನಮ್ಮಲ್ಲಿ ವಿಭಿನ್ನ ವಿಚಾರಗಳ ತುಮುಲಯುದ್ಧ ನಡೆವೇ ಇದೆ. ಅಂತಃಕಲಹದ ಕಚ್ಚಾಟ, ಸಾಂಕರೋಗದಂತಿರುವ ಜಾತೀಯತೆಯ ಬೆಳವಣಿಗೆ ನಡೆದೇ ಇದೆ. ಭಾವೈಕ್ಯತೆ ಕನಸಾಗಿದೆ. ಘೋರತಮ ಅಸೂಯೆದ್ವೇಷ ಧರ್ಮ ಧರ್ಮಗಳ ವಾದ–ವಿವಾದದಲ್ಲಿ ಹೆಚ್ಚಾಗಿ, ನಾ ಹೆಚ್ಚು, ನೀ ಹೆಚ್ಚು ಎನ್ನುವ ಹುಚ್ಚು ಜೀವನದಲ್ಲಿ ಪರ್ಯವಸಾನವಾದರೆ ಭಾರತದ ಶಕ್ತಿ ಬೆಳೆಯುವದೆಂತು? ಮನುಷ್ಯನ ಹೃದಯವನ್ನು ಮೃದು ಮಾಡುವ ಶಕ್ತಿಯೇ ಧರ್ಮ. ಧರ್ಮದಷ್ಟು ಪ್ರಭಾವ ಮತ್ತಾವುದರಿಂದಲೂ ಸಾಧ್ಯವಿಲ್ಲ, ಸಾಧ್ಯವಾಗಲಾರದು. ಅದಕ್ಕಾಗಿ

ನಾವಿಂದು, ಧರ್ಮಗಳ ಪರಸ್ಪರ ತಿಕ್ಕಾಟಗಳ, ಗೊಂದಲಗಳ, ದ್ವೇಷಾಸೂಯೆಗಳ ದಾವಾನಲದಲ್ಲಿ ಧುಮುಕದೆ, ಸರ್ವಧರ್ಮ ಸಮನ್ವಯ ದೃಷ್ಟಿಯನ್ನು, ಶಾಂತಿ ಸೌಹಾರ್ದಗಳೊಡನೆ ಅಂಗೀಕರಿಸಿಕೊಂಡರೆ ಭಾರತದ ಭವ್ಯ ಪರಂಪರೆ ಮತ್ತಷ್ಟು ಬಲಶಾಲಿಯಾದೀತು.

ಭಾರತವಿಂದು ಎಲ್ಲ ಧರ್ಮದವರಿಗೂ ಆಶ್ರಯ ನೀಡಿದೆ. ಅವರವರ ಧರ್ಮಪ್ರಚಾರಕ್ಕೂ ಪ್ರೋತ್ಸಾಹವನ್ನಿತ್ತಿದೆ. ತನ್ನ ಉದಾರ ಗುಣವನ್ನು ಕೃತಿಯಲ್ಲಿ ತೋರಿಸಿದೆ. ಇದನ್ನರಿತು ಎಲ್ಲ ಧರ್ಮದವರು, ಉದಾರಾಶ್ರಯವನ್ನು ದುರುಪಯೋಗ ಮಾಡಿಕೊಳ್ಳದೆ, ಸಹಕರಿಸಿ, ಮೇಲಕ್ಕೆತ್ತಿದವರನ್ನು ಅನುಸರಿಸಿ, ಅನುಭವದ ಬೆಳಕನ್ನು ಸರ್ವಧರ್ಮ ಸಮನ್ವಯ ದೃಷ್ಟಿಯಲ್ಲಿ ಹೊರಚೆಲ್ಲಿ ಶ್ರದ್ಧಾಪೂರ್ವಕವಾದ ಕಾರ್ಯದಲ್ಲಿ ಪ್ರವೃತ್ತರಾದರೆ ಮಾತ್ರ ಧರ್ಮಪ್ರಕಾಶ. ಇಲ್ಲದಿರೆ ವಿನಾಶದ ಮಾರ್ಗದ ಕಡೆಗೆ ಹೊರಟಂತೆ!

ಸರ್ವಧರ್ಮ ಸಮನ್ವಯ ದೃಷ್ಟಿಯು ಕ್ರಿಯೋತ್ತೇಜನಕಾರಿಯಾಗಬೇಕೆಂದು ತಿಳಿದು ಲಚ್ಯಾಣದಲ್ಲಿ ಶ್ರೀ ಬಂಥನಾಳ ಶಿವಯೋಗಿಗಳು ಲಕ್ಷದ ಮೇಲೆ ತೊಂಬತ್ತಾರು ಸಾವಿರ ಗಣ ಇಷ್ಟಲಿಂಗ ಪೂಜಾ ಮಹೋತ್ಸವದ ಸವಿನೆನಪಿಗಾಗಿ ಧರ್ಮಧರ್ಮ ಪರಿಷತ್ತು ಕರೆದು, ಧರ್ಮದ ಶಕ್ತಿ ತಾತ್ವಿಕವಾಗಿ ನಡೆಯಬೇಕೆಂದು ಚಿಂತಿಸಿ, ಎಲ್ಲ ಧರ್ಮದವರನ್ನು ಕೂಡಿಸಿದ್ದಾರೆ. ಆಯಾ ಧರ್ಮದ ಪಂಡಿತರಿಂದ ವಿವೇಚನಾತ್ಮಕ, ವಿಮರ್ಶಾತ್ಮಕ ವಿಚಾರ ಸಂಕೀರಣವನ್ನು ಪ್ರಕಾಶಿಸಿದ್ದಾರೆ. ಪ್ರಭಾವಕಾರಿ ಕಾರ್ಯಭಾರವನ್ನು ಹೊತ್ತು ಸಮಾಜಸೇವೆ ಸಲ್ಲಿಸುತ್ತಿದ್ದಾರೆ, ಶ್ರೀಗಳವರು ಶಿಕ್ಷಣ ರಂಗದಲ್ಲಿಯೂ ಅಪರಿಮಿತ ಸೇವೆಗೈದಿದ್ದಾರೆ. ಇದು ಕೇವಲ ನಮಗೆ ಸಂತಸ ಅಷ್ಟೇ ಅಲ್ಲ. ಸಮಾಜಕ್ಕೂ ರಾಷ್ಟ್ರಕ್ಕೂ ಭೂಷಣ. ಇವರ ಶಕ್ತಿಸಾಹಸ, ಇನ್ನೂ ಹೆಚ್ಚುಹೆಚ್ಚಾಗಿ ಬೆಳೆಯಲಿ. ಇವರ ಕರ್ತೃತ್ವ ಶಕ್ತಿಯಿಂದ ನಾಡು ಬೆಳಗಲಿ ಎಂದು ಹಾರೈಸಿ ಮುಗಿಸುವ ಮುನ್ನ ಇನ್ನೊಂದು ಮಾತು ಹೇಳಿ ವಿರಮಿಸುತ್ತೇವೆ.

ಇಂದು ನಾವಿಲ್ಲಿ ಸರ್ವಧರ್ಮದವರೂ ಸೇರಿದ್ದೇವೆ. ಅನೇಕ ಧರ್ಮಗಳ ವಿಚಾರವನ್ನೂ ವಿವೇಚಿಸಿದಂತಾಗಿದೆ. "ದೇವನೊಬ್ಬ ನಾಮ ಹಲವು", "ಏಕಂ ಸತ್ ವಿಪ್ರಾ ಬಹುಧಾ ವದಂತಿ", "ದಯವೇ ಧರ್ಮದ ಮೂಲ" ಈ ನುಡಿಗಳ ಭಾವದ ಅರಿವೂ ನಮಗಾಗಿದೆ. ಎಲ್ಲ ಧರ್ಮಗಳಲ್ಲಿರುವ ಸತ್ಯದರ್ಶನ, ಐಕ್ಯತೆ, ದಯಾಧರ್ಮ, ಪ್ರೇಮ, ಅಹಿಂಸೆ ಇವುಗಳು ಮಾತಿನಮಾಲೆಯಾಗದೆ, ಕೃತಿಯಲ್ಲಿ ಬಂದು, ಸರ್ವಧರ್ಮದವರಲ್ಲಿ ಪರಸ್ಪರ ಹಾರ್ದಿಕ ಬಾಂಧವ್ಯ ಬೆಳೆದು, ಆ ಆ ಧರ್ಮದಲ್ಲಿರುವ ಬೆಳಕನ್ನು ಒಬ್ಬರಿಗೊಬ್ಬರು ಸ್ವೀಕರಿಸುವಂತಾದರೆ ರಾಷ್ಟ್ರಕ್ಕೆ ಹಿತ.

ರಾಷ್ಟ್ರದ ಶಕ್ತಿವೃದ್ಧಿಯಾದಂತೆ ಅದಕ್ಕಾಗಿ ನಾವಿಂದು ಸರ್ವಧರ್ಮಗಳ ಭಾವೈಕ್ಯದ ಬೀಜವನ್ನು ಹೃದಯಭೂಮಿಯಲ್ಲಿ ಬಿತ್ತೋಣ. ಬೀಜ ಹುಟ್ಟಿ, ಬೆಳೆದು, ಮಹಾ ವೃಕ್ಷವಾಗಿ, ಅದರ ಫಲದ ರಸಾಸ್ವಾದನೆ ತೆಗೆದುಕೊಂಡು, ಮಹಾವೃಕ್ಷದ ನೆರಳಿನಲ್ಲಿ ಬೇರೆಯವರಿಗೂ ಆಶ್ರಯವಿತ್ತು, ವಿಶ್ವಶಾಂತಿಗೆ ಪರಿಶ್ರಮಿಸೋಣ.

ಮಹಾತ್ಮಾ ಬಸವಣ್ಣನವರ ವಿಶ್ವಧರ್ಮ ತತ್ವಗಳನ್ನು ಪ್ರಪಂಚದ ತುಂಬೆಲ್ಲ ಹರಡುವಂತೆ, ಬಸವಣ್ಣನವರ ಮಹಾ ವ್ಯಕ್ತಿತ್ವದ ದಿವ್ಯಪ್ರಭೆ ಬೆಳಗಿಸಲು ಕಾರಣ ಕರ್ತರಾದ ಪಾಂಡಿಚೇರಿಯ ಲೆಫ್ಟನಂಟ ಗವ್ಹರ್ನರರಾಗಿರುವ ಮಾನ್ಯ ಶ್ರೀ ಬಿ. ಡಿ. ಜತ್ತಿಯವರು ಈ ಸರ್ವಧರ್ಮ ಪರಿಷತ್ತಿಗೆ ಉದ್ಘಾಟಕರಾಗಿ ಬಂದಿರುವದನ್ನು ಈ ಶುಭ ಪ್ರಸಂಗದಲ್ಲಿ ನೆನೆಯದ ಇರಲಾರೆವು.

ಮಹಾಜನಗಳೇ

"ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಾಃ"

ಗೀತೆಯ ಈ ಅಂತರ್ವಾಣಿಯು ಮತ್ತು

"ಯಾತರದು ಹೂವೇನು।
ನಾತರದು ಸಾಲದೇ।
ಜಾತಿ ವಿಜಾತಿಯೆನಬೇಡ।
ದೇವನೊಲಿದಾತನೇ ಜಾತ ಸರ್ವಜ್ಞ॥"

ಸರ್ವಜ್ಞನ ಈ ಅಮರವಾಣಿಯು ನಮ್ಮೆಲ್ಲರಿಗೆ ದಾರಿದೀಪವಾಗಲೆಂದು ಹೃತ್ಪೂರ್ವಕ ಹಾರೈಸುತ್ತೇವೆ.

೨-೫-೧೯೭೯ ರಂದು ಲಖ್ನೌದಲ್ಲಿ ಜರುಗಿದ ಸರ್ವಧರ್ಮ ಪರಿಷತ್ತಿನಲ್ಲಿ ಅಪ್ಪಣೆ ಕೊಡಿಸಿದ ಅಧ್ಯಕ್ಷೀಯ ಭಾಷಣ.

ಸ್ತ್ರೀ ಶಿಕ್ಷಣ

ಶಿಕ್ಷಣವಿಲ್ಲದ ಜೀವನ ಹಾಳುಮನೆಯಂತೆ, ಜಲವಿಲ್ಲದ ತಟಾಕದಂತೆ ಶೋಭಿಸದು. ಭಾವ ಪ್ರಶಸ್ತವಾಗಿ ಬುದ್ಧಿ ಪ್ರೇರಿತವಾಗಬೇಕಾದರೆ ಶಿಕ್ಷಣವು ಅತ್ಯಾವಶ್ಯಕ. ನಮ್ಮ ಜೀವನದಲ್ಲಿ ಏನಾದರೂ ಸಾಧಿಸಬೇಕಾಗಿದ್ದರೆ ಮೊದಲು ಭಾವದಲ್ಲಿ ಬಿತ್ತಬೇಕಾಗುತ್ತದೆ. ನಂತರ ಶರೀರದಲ್ಲಿ ಪರಿವರ್ತನ ಮಾಡಿಕೊಂಡು ಮನದಲ್ಲಿ ತುಂಬಬೇಕಾಗುತ್ತದ. ಬುದ್ಧಿಯನ್ನೂ ಹೃದಯವನ್ನೂ ತಿದ್ದಬೇಕಾಗುತ್ತದೆ. ಸಾಹಿತ್ಯದ ಮುಖ್ಯ ಗುರಿಯಾದ ರಸಾನುಭವವನ್ನು ಹೃದಯ ಪರಿವರ್ತನೆಯಿಂದ ಪಡೆದರೆ ರಸಸಿದ್ಧಿ ಸಾಧ್ಯ. ವ್ಯಕ್ತಿತ್ವದ ಸರ್ವಾಂಗೀಣ ಅಭಿವೃದ್ಧಿಯಾಗಿ ಸಾಹಿತ್ಯ, ಸಂಸ್ಕೃತಿ, ಆಧ್ಯಾತ್ಮಿಕ ಶಕ್ತಿ ಬೆಳೆದು ಬೆಳಗಲು ಶಿಕ್ಷಣವೇ ಮೂಲ ಸಾಧನ ಮತ್ತು ತಾಯಿ ಬೇರು. ಈ ಶಿಕ್ಷಣ ಸಾಧನದಿಂದ ಬುದ್ಧಿಯನ್ನು ಎಚ್ಚರಿಸಿ ಸೂಕ್ಷ್ಮಗೊಳಿಸಿ, ಆತ್ಮವಿಕಾಸ, ಮಾಡಿಕೊಂಡು ನವೀನ ವೈಜ್ಞಾನಿಕ ದೃಷ್ಟಿಯನ್ನು ನೆಲೆಗೊಳಿಸಿಕೊಂಡು ವಿಚಾರ ಪರತೆಯಿಂದ ಕಾರ್ಯತತ್ಪರರಾದರೆ ಮಾತ್ರ ಶಿಕ್ಷಣಶಕ್ತಿ ಬಂಧುರವಾಗುವದಲ್ಲದೆ ಸಾಮಾನ್ಯ ಜನತೆಯ ಉದ್ಧಾರ ಮಾಡಲು ಅನುಕೂಲವಾಗುವದು ಮತ್ತು ರಾಷ್ಟ್ರೋದ್ಧಾರವಾಗುವದು.

ಬುದ್ಧಿ ಶಕ್ತಿಯಿಂದ ತತ್ವ ಬೆಳೆದರೆ, ಭಾವಶಕ್ತಿಯಿಂದ ಕಾವ್ಯ ಬೆಳೆಯುತ್ತದೆ. ಈ ಸಮನ್ವಯ ದೃಷ್ಟಿ ಇಂದಿನ ಶಿಕ್ಷಣದಲ್ಲಿ ಅತ್ಯವಶ್ಯ ಬೇಕು. ಕೇವಲ ಲೌಕಿಕೋದ್ದೇಶದ ಸಾಧನೆಯೇ ಶಿಕ್ಷಣದ ಉದ್ದೇಶವಾಗಬಾರದು. ಲೌಕಿಕೋದ್ದೇಶದ ಜೊತೆಗೆ ಆಧ್ಯಾತ್ಮಿಕದ ಅನುಸಂಧಾನದ ವಿಚಾರಗಳು ಶಿಕ್ಷಣದೊಳಗೆ ಸೇರಿದರೆ ಚೈತನ್ಯವಂತವಾಗಿ ಪೂರ್ಣ ಮಾನವನಾಗಲು ಸಹಾಯ ದೊರೆಯುತ್ತದೆ. ಇತ್ತೀತ್ತಲಾಗಿ ಅಲ್ಲಲ್ಲಿ ನಡೆಯುತ್ತಿರುವ ವಿದ್ಯಾರ್ಥಿಗಳ ಅಶಾಂತಮಯ ಅಶಿಸ್ತಿಗೆ ಈ ನುಡಿಗಳು ಆಸರಕಂಬವಾಗಬಹುದು. ಆತ್ಮವಿಕಾಸ ಮಾಡಿಕೊಳ್ಳಲಾರದ ಶೈಕ್ಷಣಿಕ ಜೀವನ ಸುಗಂಧವಿಲ್ಲದ ಹೂವಿನಂತೆ, ಒಣಗಿರುವ ತರುಲತೆಗಳಂತೆ ಆಗಿ ನಿರರ್ಥಕವಾದುದು. ಅದಕ್ಕಾಗಿ ಇಂದಿನ ಶಿಕ್ಷಣ ರಂಗದಲ್ಲಿ ಅಡಿಯಿಟ್ಟ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಕೇವಲ ಪಠ್ಯಪುಸ್ತಕಗಳ ಅಧ್ಯಯನದಲ್ಲಿ ತತ್ಪರರಾಗದೆ, ಅದರ ಜೊತೆಗೆ ಅದಕ್ಕಿಂತಲೂ ಹೆಚ್ಚಾಗಿ ಸತ್ಯಾರ್ಥಿಗಳಾಗಲು ಕಲಾರಾಧನೆ ಮಾಡಿದರೆ ನಾಡಿಗೂ, ರಾಷ್ಟ್ರಕ್ಕೂ ಕ್ಷೇಮಕರ. ಆ ದೃಷ್ಟಿಯಿಂದ ಅಧ್ಯಯನ ಮಾಡುವದು ಅತ್ಯಗತ್ಯ.

ಪೂರ್ವದಲ್ಲಿ ಪುರುಷರಿಗಷ್ಟೇ ಶಿಕ್ಷಣಕ್ಕೆ ಪ್ರಾಧಾನ್ಯತೆ ನೀಡಿದ್ದರೆ, ಇದೀಗ ಸ್ತ್ರೀ ಶಿಕ್ಷಣವು ಅತ್ಯವಶ್ಯವೂ ಘಟಕಾರಿಯಾಗಿಯೂ, ರಾಷ್ಟ್ರ ಸುಧಾರಣೆ ಮಾಡಲು

ಅನುಕೂಲವಾಗುವವೆಂಬುದು ಎಲ್ಲರ ಗಮನಕ್ಕೆ ಬರುತ್ತಲಿದೆ. ಪುರುಷರಿಗೆ ಶಿಕ್ಷಣ ನೀಡುವದರಿಂದ ಕೇವಲ ವೈಯಕ್ತಿಕವಾಗಿ ಅವರ ಅಭ್ಯುದಯವಾದರೆ, ಸ್ತ್ರೀ ಶಿಕ್ಷಣ ದಿಂದ ತಾವಷ್ಟೇ ಅಲ್ಲವೆ ಬಂಧು ಬಾಂಧವರು ಸಂಸ್ಕಾರಯುತರಾಗಿ ನಾಡಿನ ಕಲ್ಯಾಣವಾಗುವವದರಲ್ಲಿ ಸಂದೇಹವಿಲ್ಲ.

ಯಾವ ದಾರಿಯಲ್ಲಿ ಹೋದರೆ ಸಾರ್ಥಕತೆಯಾಗುವದೆಂಬುದನ್ನು ಅರಿಯಲು ಸ್ತ್ರೀಶಿಕ್ಷಣವು ಸಹಕಾರಿಯಾಗುವದಲ್ಲದೆ, ಭವಿಷ್ಯವನ್ನೂ ರೂಪಿಸಿಕೊಂಡು ಬಾಳ್ವೆಳಕು ಮಾಡಿಕೊಳ್ಳಲು ಅನುಕೂಲವಾಗುವದು. ಸಾಹಿತ್ಯ ಸಂಸ್ಕೃತಿಯ ದೃಷ್ಟಿ ಯಿಂದಲೂ ಅವರಿಗೆ ಅನುಕೂಲವಾಗಿ ಆತ್ಮಸಂಶೋಧನೆ ಮಾಡಿಕೊಂಡು ಹಿರಿ-ಕಿರಿಯರೊಡನೆ ಮನೋವೈಜ್ಞಾನಿಕ ದೃಷ್ಟಿಯಿಂದ ಅರಿಯುವ ಭಾವನೆ ಬರುವದು. ಪ್ರಾಚೀನ ಮಹಾಪುರುಷರ ಸಾಹಿತಿಗಳ ಹಾಗೂ ದಾರ್ಶನಿಕರ ಅನುಭವಸಾರವನ್ನು ಸಂಗಳಿಸಿಕೊಂಡು, ಸಮಾಜಕ್ಕೆ ದೇಶಕ್ಕೆ ಉಪಯೋಗವಾಗುವಂತಹ ಯೋಜನೆ ಯೋಚನೆ ಮಾಡಲು ಸ್ತ್ರೀ ಶಿಕ್ಷಣದಿಂದ ಸಾಧ್ಯ.

ಒಂದೆಡೆ ಸ್ವಾಮಿ ವಿವೇಕಾನಂದರು ಮನು ಮಹರ್ಷಿಯ ವಿಚಾರವನ್ನೇ ಸ್ತ್ರೀಯರಿಗೆ ಗೌರವ ಹಾಗೂ ಶಿಕ್ಷಣ ನೀಡುವದರಿಂದ ಆಗುವ ಲಾಭವನ್ನು ಹೃದಯಂಗಮ ರೀತಿಯಲ್ಲಿ ತಮ್ಮದೇ ಆದ ಸುಂದರ ಭಾಷೆಯಲ್ಲಿ ಈ ರೀತಿ ಬಿತ್ತರಿಸಿದ್ದಾರೆ.

"Where women are respected there the gods delight; and where they are not, there all works and efforts come to naught."

"Educate your women first and leave them to them-selves' then they will tell you what reforms are necessary for them."

ಸ್ವಾಮಿ ವಿವೇಕಾನಂದರ ಈ ಶಕ್ತಿ ಸ್ಫೂರ್ತಿಯುತ ಹಾಗೂ ತಪಃ ಪೂರ್ಣ ವಾದ ಈ ಅಂತರ್ವಾಣಿಯು ಮಲಗಿದವರನ್ನು ಎಚ್ಚರಿಸುವ ಕೈದೀವಿಗೆ ಹೃದಯ ದೌರ್ಬಲ್ಯವಿದ್ದವರಿಗೆ ದಿವ್ಯೌಷಧ. ಬುದ್ಧಿಗೆ ಪುಷ್ಟಿ ಕೊಟ್ಟು ಹೃದಯಕ್ಕೆ ತೃಪ್ತಿ ಕೊಡುತ್ತದೆ.

ಒಟ್ಟಿನಲ್ಲಿ ಸ್ತ್ರೀ ಶಿಕ್ಷಣದಿಂದ ಜೀವನವೃಕ್ಷದ ಶಾಖೋಪ ಶಾಖೆಗಳು ಬೆಳೆದು, ಚಿಗುರೊಡೆದು ಫಲ ಪುಷ್ಪಗಳ ಸುಗಂಧವನ್ನು ಜನಾಂಗಕ್ಕೆ ನೀಡಿ ಸತ್ವಶಾಲಿ ಗಳನ್ನಾಗಿ ಮಾಡಲು ದಾರಿಯಾಗುತ್ತದೆ.

ವಿದ್ಯಾರ್ಥಿನಿಯರು ಸ್ತ್ರೀ ಶಿಕ್ಷಣದ ಮಹತ್ವವನ್ನರಿತು, ನಾಡಿನ, ರಾಷ್ಟ್ರದ ಮಹಾ ವ್ಯಕ್ತಿಗಳ ಆದರ್ಶ ವ್ಯಕ್ತಿತ್ವವನ್ನು ಎದುರಿಗಿಟ್ಟುಕೊಂಡು, ಅವರು ಬಿಟ್ಟು

ಹೋಗಿರುವ ಅನುಭವ ಸಂಪತ್ತನ್ನು, ಜ್ಞಾನ ವೈಭವವನ್ನು ಪಡೆದುಕೊಂಡು ಅವರು ನಡೆದು ಹೋದ ದಾರಿಯನ್ನು ಅನುಸರಿಸುವ ಬುದ್ಧಿಯನ್ನು ವಿದ್ಯಾರ್ಥಿನಿಯವರಿಗೆ ಜಗದೀಶನು ನೀಡಲೆಂದು ಆಶಿಸಿ ಕೆಳಗೆ ಬರೆದ ಆಂಗ್ಲ ಕವಿ ಲಾಂಗಫೆಲೋನ ಕವನಗಳು ಅವರ ಜೀವನದ ದಾರಿದೀಪಗಳಾಗಲೆಂದು ಹಾರೈಸೋಣವಾಗಿದೆ.

''Lives of great men all remind us
we can make our lives sublime,
and, departing, leave behind us
Footprints, on the sonds of time;
Footprints, that perhaps another
Sailing o'er life's solemn main,
A forlorn and shipwrecked brother,
Seeing, shail take heart again.

ಹುಬ್ಬಳ್ಳಿ ಶ್ರೀ ಜಗದ್ಗುರು ಮೂರುಸಾವಿರಮಠ ವಿದ್ಯಾವರ್ಧಕ ಸಂಘದಿಂದ ಪ್ರಾರಂಭವಾಗಿರುವ ಮಹಿಳಾ ಕಾಲೇಜಿನ ಮೊದಲನೇ ಗ್ರಾಜುಏಶನ್ ದಿನದ ಸಮಾರಂಭದಲ್ಲಿ ಮಾಡಿದ ಭಾಷಣದ ಸಾರ.

ಒಳಪಂಗಡಗಳು ಒಂದಾಗಬೇಕು

"ವೀರಶೈವ ಧರ್ಮವು ಬಹು ಪ್ರಾಚೀನ ಕಾಲದಿಂದ ಬಂದುದು ವೀರಶೈವ ಧರ್ಮದಲ್ಲಿ ವೀರಶ್ರೀ ತುಂಬಿರುವದಲ್ಲದೆ ವಿಶ್ವಧರ್ಮಗಳನ್ನೊಳಗೊಂಡಿದೆ. ವಿಶಾಲ ತಳಹದಿಯ ಮೇಲೆ ರೂಪುಗೊಂಡಿದೆ" ವಿಶ್ವಶಕ್ತಿಗೆ ಸಹಾಯಕವಾಗಿದೆ. ಸರ್ವಧರ್ಮಗಳಿಗೆ ಸಹಕಾರಿಯಾಗಿದೆ. "ಕಾಯಕವೇ ಕೈಲಾಸ"ವನ್ನು ಸಾರಿಹೇಳುತ್ತಿದೆ. ಆತ್ಮಶಕ್ತಿಯನ್ನು ಪಡೆದು, ಶಿವಸಾಕ್ಷಾತ್ಕಾರವನ್ನು ಪಡೆಯಲು ಈ ವೀರಶೈವ ಧರ್ಮದಲ್ಲಿ ಸಾಕಷ್ಟು ಸಾಧನಗಳಿವೆ, ವೀರಶೈವ ಧರ್ಮದಲ್ಲಿ ಷಟ್‌ಸ್ಥಲ ಸಿದ್ಧಾಂತ ರಹಸ್ಯವು ಮತ್ತು ನೂರೊಂದು ನಲೆಯ ನಿಲುವನ್ನರಿಯುವ ತತ್ವವು ತುಂಬಿ ತುಳುಕಿದೆ. ಶಿವಾದ್ವೈತ ಸಿದ್ಧಾಂತ ಶಿಖರವನ್ನೇರಲು ವೀರಶೈವ ಧರ್ಮವು ದಾರಿ ದೀಪವಾಗಿದೆ. ನಿತ್ಯ ಸತ್ಯ ಮಾರ್ಗವಾಗಿದೆ. ಮಾನವರು ಅಥವಾ ಭಕ್ತರಾದವರು ಸ್ವರ್ಗಲೋಕವನ್ನು ಮತ್ತು ಸಾಲೋಕ್ಯ, ಸಾರೂಪ್ಯ, ಸಾಮಿಪ್ಯ ಸಾಯುಜ್ಯ ಪದವಿಯನ್ನು ಪಡೆಯುವದು ವೀರಶೈವ ತತ್ವಜ್ಞಾನದ ಮುಖ್ಯ ಗುರಿಯಲ್ಲ.

ಬಯಲಿನಲ್ಲಿ ಬಯಲು ಬೆರೆತಂತೆ ಹಾಲಿನಲ್ಲಿ ಹಾಲು ಬೆರೆತಂತೆ, ನೀರಿನಲ್ಲಿ ನೀರು ಬೆರೆತಂತೆ, ಲಿಂಗಾಂಗಸಾಮರಸ್ಯವನ್ನು, ಶಿವಜೀವೈಕ್ಯವನ್ನು ಪಡೆಯುವದೆ ವೀರಶೈವ ಧರ್ಮದ ಮೂಲ ಗುರಿ. ಶರಣ ಶರಣೆಯರ ವಚನ ಸಾಹಿತ್ಯ ಸಾಗರ ದಲ್ಲಿ ಈಸಿದರೆ ವೀರಶೈವ ಧರ್ಮದ ಪೂರ್ತಿ ಪಾಠವು ಚನ್ನಾಗಿ ಅರಿವಾಗುತ್ತದೆ. ವಚನ ವಾಙ್ಮಯದಲ್ಲಿ ನಿರೂಪಿತವಾಗಿರುವ ಶರಣರ ಅನುಭವವನ್ನು ಅರಿತು ಕೊಂಡರೆ ಮತ್ತು ಅರಗಿಸಿಕೊಂಡರೆ ವೀರಶೈವ ವಿಜ್ಞಾನವು ತಿಳಿಯುತ್ತದೆ.

ಯೋ ಹಸ್ತಪೀಠೆ ನಿಜಮಿಷ್ಟಲಿಂಗಂ ವಿನ್ಯಸ್ಯ ತಲ್ಲೀನಮನಃಪ್ರಸಾದಃ|
ಬಾಹ್ಯಕ್ರಿಯಾ ಸಂಕುಲ ನಿಸ್ಪೃಹಾತ್ಮಾ ಸಂಪೂಜಯತ್ಯಂಗ ಸ ವೀರಶೈವಃ||
ವಿಶಬ್ದೇನೋಚ್ಯತೇ ವಿದ್ಯಾ ಶಿವಜೀವೈಕ್ಯಬೋಧಿನೀ|
ತಸ್ಯಾಂ ರಮಂತೇಯೇ ಶೈವಾ ವೀರಶೈವಾ ಇತಿ ಸ್ಮೃತಾಃ||

ಇದರಲ್ಲಿ ವೀರಶೈವ ಸಿದ್ಧಾಂತದ ಮೂಲ ಅರ್ಥವೇ ವೀರಶೈವ ಶಬ್ದದಲ್ಲಿ ತುಂಬಿದೆ ಎಂದು ಅರಿಯಲು ಈ ಶ್ಲೋಕಗಳೆರಡು ಸಾಕು. ವೀರಶೈವ ಸಿದ್ಧಾಂತ ದಲ್ಲಿ ಅಷ್ಟಾವರಣಗಳನ್ನೊಳಗೊಂಡು ಷಟ್‌ಸ್ಥಲಗಳನ್ನು ಪ್ರತಿಪಾದಿಸಿದೆ.

ಇಂತಹ ವೀರಶೈವ ಧರ್ಮವನ್ನು ನಿಯಮ ನಿಷ್ಠೆಗಳಿಂದ ಕಾಪಾಡಿಕೊಂಡು ಬಂದುದಕ್ಕಾಗಿಯೇ "ಸಜ್ಜನ ಸಮಾಜ"ವೆಂದು ಹಿರಿಯರು ಕರೆದಿರಬಹುದೆಂದು ನಮ್ಮ ಕಲ್ಪನೆ. "ಸಜ್ಜನ"ವೆಂದರೆ ಬೇರೆ ಜಾತಿಯಾಗದೆ ಅದೊಂದು ಅನ್ವರ್ಥಕ ನಾಮವೆಂದು ಕರೆದರೆ ತಪ್ಪಾಗಲಿಕ್ಕಿಲ್ಲ.

ವೀರಶೈವರಲ್ಲಿ ಬಣಜಿಗರು, ಶಿವಶಿಂಪಿಗರು, ಪಂಚಮಸಾಲಿಗರು, ಸಾದರು, ಜಾಡರು ಮುಂತಾದ ಒಳಪಂಗಡಗಳು ಇದ್ದಂತೆ ಅದರಲ್ಲಿಯೇ ಸಜ್ಜನರು, ಗಾಣಿಗರು ಎಂದುದಾಗಿ ಅವರವರ ಉದ್ಯೋಗದಂತೆ ಕರೆದು ಕೊಂಡಿದ್ದಾರೆ. ಇವುಗಳು ಜಾತಿವಾಚಕಗಳೆಂದು ಕರೆಯುವದು ರೂಢಿಯಲ್ಲಿ ಬಂದಿದೆ.

ಈ ಸಜ್ಜನ ಸಮಾಜದಲ್ಲಿಯ ಒಳಭೇದಗಳನ್ನು ಮತ್ತು ಅನೈಕ್ಯತೆಯನ್ನು ದೂರಮಾಡಲು ಈ ಸಮಾಜದಲ್ಲಿ ಒಗ್ಗಟ್ಟು ತಂದು ಸುಂದರ ವ್ಯವಸ್ಥೆ ನಿರ್ಮಾಣ ಮಾಡುವದಕ್ಕಾಗಿ ಶಿವೈಕ್ಯರಾದ ಶ್ರೀ ಹರ್ಡೇಕರ ಮಂಜಪ್ಪನವರು ಮುಂದೆ ಬಂದು ಸಜ್ಜನ ಸಮಾಜದ ಸಂಘಟನೆಗೆ ಮತ್ತು ಉದಯಕ್ಕೆ ಪ್ರೇರಕರಾದರು. ನಿದ್ರೆ ಯಲ್ಲಿದ್ದ ಸಮಾಜವನ್ನು ಜಾಗೃತಗೊಳಿಸಲು ಅಹೋರಾತ್ರಿ ಕಷ್ಟಪಟ್ಟು ಪರಿಶ್ರಮಿಸಿ ದವರಲ್ಲಿ ಹರ್ಡೇಕರ ಮಂಜಪ್ಪನವರೂ ಒಬ್ಬರು.

ಈ ರೀತಿ ಜಾಗೃತ ಮಾಡಿದ ಪರಿಣಾಮದಿಂದ ನಾವಿಂದು ಆರನೆಯ ವೀರಶೈವ ಸಜ್ಜನ ಸುಧಾರಣಾ ಸಭೆಯನ್ನು ನೋಡುತ್ತಿದ್ದೇವೆ, ಈ ಸಜ್ಜನ ಸಮಾಜದಲ್ಲಿ ಕವಿ ಪುಂಗವರೂ, ಆತ್ಮಶಕ್ತಿಸಂಪನ್ನರೂ ಉದಯಿಸಿ ಸಮಾಜವನ್ನು ಎಚ್ಚರಿಸಿದ್ದಾರೆ. ಅನೇಕ ಜನ ಸಜ್ಜನ ಸಮಾಜದವರು ಹಲವು ಬಗೆಯ ಉದ್ಯಮ ಗಳಲ್ಲಿ ಮನಸ್ಸು ಹಾಕಿ ಆದರ್ಶ ಉದ್ಯಮಿಗಳಾಗಿದ್ದಾರೆ. ಕೆಲವರು ವಿದ್ಯಾವಂತ ರಾಗಿ ದೊಡ್ಡ ದೊಡ್ಡ ಅಧಿಕಾರದಲ್ಲಿದ್ದಾರೆ.

ವೀರಶೈವ ಸಜ್ಜನ ಮಹಾಸಭೆಯ ಮುಖಾಂತರ, ವೀರಶೈವ ಸಜ್ಜನ ಸುಧಾರಣಾ ಸಂಘದಿಂದ ವಿದ್ಯಾರ್ಥಿ ವೇತನಗಳನ್ನು ಬಡ ವಿದ್ಯಾರ್ಥಿಗಳಿಗೆ ನೀಡಿ ಸುಸಂಸ್ಕೃತರನ್ನಾಗಿ ಮಾಡಿದ್ದಾರೆ. ಲಗ್ನ ಮುಂತಾದ ಶುಭ ಕಾರ್ಯಗಳಿಗೆ ಧನ ಸಹಾಯ ಮಾಡಿದ್ದಾರೆ. ಇದು ತುಂಬಾ ಸಂತೋಷದ ವಿಷಯ.

ದೀಪವುರಿಯಲು ಎಣ್ಣೆ ಬೇಕು. ಪಾಕವನ್ನು ತಯಾರಮಾಡಲು ಮತ್ತು ಉಣ್ಣಲು ಎಣ್ಣೆ ಬೇಕು. ಎಣ್ಣೆಯಿಲ್ಲದೆ ಜೀವನ ರಥವು ಸಾಗುವದೇ ಕಷ್ಟ. ಎಣ್ಣೆ ಇದ್ದರೇನೇ ಸಮಾಜಕ್ಕೆ ಅಷ್ಟೇ ಅಲ್ಲ, ಪ್ರಪಂಚಕ್ಕೆ ಶಕ್ತಿ, ಭಕ್ತಿ ಬಲ ಬರುತ್ತದೆ. ಜಗತ್ತಿಗೆ ಬೇಕಾಗಿರುವ ಇಂತಹ ಎಣ್ಣೆಯ ಕಾಯಕವನ್ನೇ ಪ್ರಾಧಾನ್ಯವಾಗಿಟ್ಟು ಕೊಂಡು ಭಕ್ತಿ ತೈಲವನ್ನು ಜ್ಞಾನದ ಪ್ರಣತೆಯಲ್ಲಿ ಹಾಕಿ ಬೆಳಗುತ್ತಿರುವ "ಸಜ್ಜನ ಸಮಾಜ"ವೆಂಬ ಹೆಸರಿನ ಅನ್ವರ್ಥಕನಾಮವು ಅರ್ಥಪೂರ್ಣವಾದುದೆಂದು ನಾವು ಬಗೆಯುತ್ತೇವೆ. ಸಜ್ಜನ ಸಮಾಜದವರಿಂದ ತಮ್ಮ ಪಂಗಡದವರಿಗಷ್ಟೇ ಅಲ್ಲ ವೀರಶೈವರಾದ ಇನ್ನುಳಿದ ಜನಾಂಗಕ್ಕೂ ಸಾಕಷ್ಟು ಸಹಾಯ ಸಲ್ಲಿದೆ. ಇದರಿಂದ ಸಜ್ಜನ ಸಮಾಜದ ಉದಾರತೆ ಎತ್ತಿ ತೋರಿಸುತ್ತಿದೆ.

ಮುಖ್ಯವಾಗಿ ಇಂದು ಸಜ್ಜನ ಸಮಾಜದವರು ಎಲ್ಲರೂ ಬಂದಿದ್ದೀರಿ. ಈಗಾಗಲೆ ವೀರಶೈವ ಸಜ್ಜನ ಮಹಾಸಭೆಗಳೈದು ಮುಗಿದಿವೆ. ಆ ಮಹಾಸಭೆಗಳಲ್ಲಿ

ಅನೇಕ ಠರಾವು ಪಾಸು ಮಾಡಿಕೊಂಡಿದ್ದೀರಿ. ಅವೆಲ್ಲವುಗಳು ಕಾರ್ಯ ರೂಪದಲ್ಲಿ ಬಂದಿವೆಯೋ ಹೇಗೆ? ಎಂಬುದನ್ನು ವಿಚಾರಾತ್ಮಕವಾಗಿ ವಿವೇಚಿಸಿ ಇನ್ನೂ ಕಾರ್ಯ ರೂಪಕ್ಕೆ ತರಲಾರದವುಗಳನ್ನು ಈ ಆರನೆಯ ಅಧಿವೇಶನದಲ್ಲಿ ಕಾರ್ಯರೂಪಕ್ಕೆ ತಂದರೆ ಸಾರ್ಥಕವಾದೀತು. ಅದರ ಸ್ಮರಣೆ ನಿರಂತರ ಉಳಿದೀತು.

ಸಜ್ಜನ ಸಮಾಜದಲ್ಲಿಯೂ ಒಳಪಂಗಡಗಳು ಸಾಕಷ್ಟಿವೆ ಎಂದು ಕೇಳಿದ್ದೇವೆ, ಇಂದಿನಿಂದ ಆ ಎಲ್ಲ ಒಳಪಂಗಡಗಳು ಒಂದಾಗುವಂತೆ ಪ್ರಯತ್ನ ಮಾಡುವದಷ್ಟೇ ಅಲ್ಲ, ಪ್ರತಿಜ್ಞೆ ಮಾಡಬೇಕು ಅಂದರೆ ಸಾರ್ಥಕ, ಸಜ್ಜನ ಸಮಾಜಕ್ಕೆ ಭೂಷಣ.

ಇದಕ್ಕಿಂತಲೂ ಹೆಚ್ಚಾಗಿ ಅಂದರೆ, ವೀರಶೈವ ಸಮಾಜದಲ್ಲಿಯ ಎಲ್ಲ ಒಳಪಂಗಡಗಳೂ ಒಂದಾಗಿ, ಲಗ್ನ ಮುಂತಾದ ಕಾರ್ಯಗಳಲ್ಲಿಯೂ ಭಾಗವಹಿಸಿ, ಪರಸ್ಪರ ಕನ್ಯಾದಾನ ಮುಂತಾದವುಗಳನ್ನು ನೋಡಿ, ಆನಂದಪಟ್ಟು, ವೀರಶೈವ ಧರ್ಮದ ಒಗ್ಗಟ್ಟಿನ ಶಕ್ತಿಯನ್ನು ನೋಡಬೇಕೆನ್ನುವ ಕುತೂಹಲವುಳ್ಳವರಾದ ನಮಗೆ, ಕೇವಲ ಸಜ್ಜನ ಸಮಾಜದ ಒಳಪಂಗಡಗಳು ಒಂದಾಗದಿದ್ದರೆ ಹೇಗೆ? ನೀವೆಲ್ಲರೂ ನಿಮ್ಮಲ್ಲಿಯ ಒಳಭೇದಗಳನ್ನು ಮರೆತು ಪರಸ್ಪರ ಕನ್ಯಾದಾನ ಮುಂತಾದವುಗಳಲ್ಲಿ ಭಾಗವಹಿಸಿ ಒಂದಾಗುತ್ತೀರೆಂಬ ಭರವಸೆ ನಮಗಿದೆ. ಆದಷ್ಟು ತೀವ್ರ ಈ ಕಾರ್ಯವು ಪ್ರಗತಿಯಲ್ಲಿ ಸಾಗಿ, ಇನ್ನುಳಿದ ಒಳಪಂಗಡದವರಿಗೆ ಆದರ್ಶರಾಗುತ್ತೀರೆಂದು ನಮ್ಮ ಭಾವನೆ.

ಇಂದಿನ ವಿಜ್ಞಾನ ಯುಗದಲ್ಲಿ ವೀರಶೈವ ಸಮಾಜದ ಎಲ್ಲ ಒಳಪಂಗಡಗಳು ಒಂದಾದರೆ ವೀರಶೈವ ಧರ್ಮದ ಧ್ವಜವು ಗಗನಮಸ್ತಕಕ್ಕೆ ಹಾರಬಲ್ಲದು. ಇಂತಹ ಸುಸಂಧಿಯನ್ನು ಜಗದ್ಗುರು ಗುರುಸಿದ್ಧೇಶ್ವರನು ತಂದು ಕೊಡಲೆಂದು ಅಂತಃಕರಣ ಪೂರ್ವಕ ಹಾರೈಸುತ್ತೇವೆ.

"ದುರ್ಜನಃ ಸಜ್ಜನೋ ಭೂಯಾತ್ ಸಜ್ಜನಃ ಶಾಂತಿಮಾಪ್ನುಯಾತ್।

ಶಾಂತೋ ಮುಚ್ಯೇತ ಬಂಧೇಭ್ಯೋ ಮುಕ್ತಶ್ಚಾನ್ಯಾನ್ ವಿಮೋಚಯೇತ್॥

ದುರ್ಜನರು ಸಜ್ಜನರಾಗಲಿ, ಸಜ್ಜನರಿಗೆ ಶಾಂತಿ ಲಭಿಸಲಿ, ಶಾಂತರು ಬಂಧಮುಕ್ತರಾಗಲಿ, ಮುಕ್ತರು ಇತರರನ್ನೂ ಮುಕ್ತರನ್ನಾಗಿ ಮಾಡಲಿ.

ಈ ಮಂತ್ರ ನಮ್ಮೆಲ್ಲರಿಗೆ ಕೈದೀವಿಗೆಯಾಗಲೆಂದು ಮತ್ತೊಮ್ಮೆ ಹಾರೈಸುತ್ತೇವೆ.

ವೀರಶೈವ ಸಜ್ಜನ ಸಮಾಜ ಸುಧಾರಣಾ ಸಂಘದ ೬ ನೆಯ ಅಧಿವೇಶನದ ಅಧ್ಯಕ್ಷೀಯ ಭಾಷಣದ ಸಾರ.

ಧ್ಯಾನಯೋಗ

ಭಗವದ್ಗೀತೆಯು ದೈವೀಗೀತೆಯಾಗಿದ್ದು ಅಂತಸ್ಸತ್ವದಲ್ಲಿ ಒಂದಾಗಿದೆ. ವೇದಗಳ ಸಾರಗ್ರಹಣವೇ ಭಗವದ್ಗೀತೆ. ಅದರ ವಿಚಾರಗಳು ಅತ್ಯಂತ ಗೂಢವಾಗಿದ್ದುದರಿಂದ ಭಿನ್ನಭಿನ್ನವಾಗಿ ವ್ಯಾಖ್ಯಾನಿಸಲು ಅನುವು ಮಾಡಿಕೊಟ್ಟಿವೆ. ಅವು ಜೀವನದ ಶಾಶ್ವತ ಮೌಲ್ಯಗಳನ್ನು ಹೇಳುತ್ತಿವೆ. ಅಂತೆಯೇ ನಿತ್ಯನೂತನವಾಗಿವೆ. ಅವು ಭಗವಂತನ ಘನತೆಯನ್ನು ಕೊಂಡಾಡುತ್ತವೆ. ಗೀತೆಯು ಕೇವಲ ಸನ್ಯಾಸಿಗಳಿಗೆ ಆಶ್ರಮ ನಿವಾಸಿಗಳಿಗೆ ಮಾತ್ರವಲ್ಲ ಸಕಲ ಜನತೆಗಾಗಿ ಬಾಳಿದೆ. ಕುಟುಂಬಜೀವಿಗಳು ಕೂಡ ಭಗವದ್ಗೀತೆಯಿಂದ ಚಾಲನೆ ಚೈತನ್ಯಗಳನ್ನು ಪಡೆಯಬಲ್ಲರು. ಅದು ಅವರಿಗೆ ಭಕ್ತಿ, ಕಾಯಕ, ಪ್ರಾಮಾಣಿಕತೆಗಳನ್ನು ಹೇಳುತ್ತದೆ. ರಣಮಧ್ಯೆ ಅರ್ಜುನ ಖಿನ್ನ ಮನಸ್ಕನಾಗಿರುತ್ತಾನೆ. ದುಃಖಾರ್ತನಾಗಿರುತ್ತಾನೆ. ಆಗ ಭಗವಾನ್ ಶ್ರೀಕೃಷ್ಣನ ಬೋಧೆಯು ಅವನಿಗೆ ತನ್ನ ಕರ್ತವ್ಯವನ್ನು, ನಿರ್ವೀರ್ಯನಾಗದೇ, ಪೂರೈಸಲು ಚೈತನ್ಯವನ್ನು ನೀಡುತ್ತದೆ. ಪ್ರಾಪಂಚಿಕರಾರೇ ಇರಲಿ ಭಗವದ್ಗೀತೆಯ ಈ ಪವಿತ್ರವಾದ ಆದೇಶವನ್ನು ಅರಿತು ಪಾವನರಾಗಬಲ್ಲರು. ಮಾನವನು ತನ್ನ ಕಾಯಕದಲ್ಲಿ ನಿರತನಾಗಬೇಕೆಂಬುದೇ ಅದರ ಸಂದೇಶವಾಗಿದೆ. ಅವನು ಲೋಕದಲ್ಲಿ ಕರ್ಮಯೋಗಿಯಾಗಬೇಕು. ತನ್ನ ಕರ್ತವ್ಯವನ್ನು ಮಾಡುವದರಿಂದ ಅವನಿಗೆ ಆತ್ಮತೃಪ್ತಿ ಲಭಿಸುತ್ತದೆ. ಅದರಿಂದ ಅವನು ದೈವೀ ಸಹಯೋಗವನ್ನು ಹೊಂದಬಲ್ಲ.

ಗೀತಾಭ್ಯಾಸದಿಂದ ಮಾನವನು ಜಾಗ್ರತ ಪ್ರಾಜ್ಞನಾಗಿ ಸಕಲ ಜೀವಕೋಟಿಯ ಸೇವೆಯನ್ನು ನಿಸ್ವಾರ್ಥಭಾವದಿಂದ ಮಾಡಲಣಿಯಾಗುತ್ತಾನೆ, ಆಗ ಅವನ ಆತ್ಮವು ನಿರಭ್ರವಾಗಿ ಸದಾ ಸತ್ಯಕಾಂಕ್ಷಿಯಾಗುತ್ತದೆ. ಕ್ರಿಯೆಯು ಜೀವನದ ಮೂಲನಾಡಿ. ಆದ್ದರಿಂದ ಒಳ್ಳೆಯ ಕ್ರಿಯೆಯು ಚಿರವಾಗಿ ಬಾಳಬಲ್ಲದು, ಬಾಳಿನ ರಣಭೂಮಿಯಲ್ಲಿ ಮಾನವನು ಪಸನ್ನಮುಖಿಯಾಗಿರಬೇಕೇ ಹೊರತು ಅಂಜುಕುಳಿಯಾಗಬಾರದು. ಅವನು ಕೊನೆಮುಟ್ಟುವವರೆಗೆ ಸೆಣಸುವ ಧುರಂಧರನಾಗಬೇಕು. ಈ ಭೌತಿಕ ಪ್ರಪಂಚದಲ್ಲಿ ಜೀವನವೆಂಬುದು ಕ್ಷಣಿಕ ಇಲ್ಲಿ ಮಾನವನು ವೀರನಾಗಿ ಹೋರಾಡುತ್ತ ತನ್ನ ಕರ್ತವ್ಯವನ್ನು ಮಹಾಸಾಹಸಿಯಾಗಿ ಪೂರೈಸಬೇಕು.

ಮಾನವನು ನಿರಾಶೆ ಹಾಗೂ ನಿರ್ವೀರ್ಯತೆಗಳೊಡನೆ ಸೆಣಸಿ ನಿಲ್ಲಬಲ್ಲವನಾಗಬೇಕೆಂಬುದೇ ಗೀತಾ ಸಂದೇಶವಾಗಿದೆ. ಜೀವನ ಸಂಗ್ರಾಮದಲ್ಲಿ ಅವನು ಧೀರನಾಗಿ ಹೋರಾಡಬೇಕು.

ಪರಿಪೂರ್ಣದೆಡೆಗೆ ಸಾಗುವವೇ ಜೀವನದ ಹೆಗ್ಗುರಿ. ಯೋಗವು ಅದಕ್ಕೊಂದು ಸಾಧನ ಭಗವದ್ಗೀತೆಯಲ್ಲಿ ಕರ್ಮಯೋಗ, ಭಕ್ತಿಯೋಗ ಹಾಗೂ ಜ್ಞಾನಯೋಗಗಳು ಉನ್ನತ ಮಟ್ಟದಲ್ಲಿ ಪ್ರತಿಪಾದಿಸಲ್ಪಟ್ಟಿವೆ. ಇವೆಲ್ಲವುಗಳು ನಮಗೆ ಸರ್ವಕಾಲಿಕವಾದ ಚೈತನ್ಯ. ಶಾಂತಿ, ಸಮಾಧಾನಗಳನ್ನು ಅರುಹುತ್ತವೆ. ಅಂತೆಯೇ ಅವು ದೇಹ ಪ್ರಾಣ–ಮನಗಳ ಸಮನ್ವಯಾಭಿವೃದ್ಧಿಗೆ ಪೂರಕವಾಗಿವೆ. ಅವು ಮಾನವನಲ್ಲಿ ದೈವೀಶಕ್ತಿಯನ್ನು ಆವಿರ್ಭವಿಸುತ್ತವೆ. ಮಾನವನು ಚೈತನ್ಯಾನುಭಾವಿಯಾಗುವನು. ಆಗ ಅವನಲ್ಲಿ ಕ್ಷುದ್ರ ಮನೋಭಾವಗಳು ನಷ್ಟ ವಾಗಿ ವಿಶಾಲ ಆದೇಶಗಳು ಪ್ರಕಟಗೊಳ್ಳುತ್ತವೆ.

ಆದ್ದರಿಂದ ಗೀತೆಯು ಭಗ್ನಮಾನಸನಾದ ಆತ್ಮನಿಗೆ ದಾರಿದೀಪವಾಗಿದೆ. ಅವನು ಜೀವನದಲ್ಲಿ ಗಂಡಾಂತರಗಳಿಂದ ಕೂಡಿದ ಪ್ರಕ್ಷುಬ್ಧವಾರಿಧಿಯನ್ನು ಈಸುವಾಗ ನೆಮ್ಮದಿಯನ್ನೂ ರಕ್ಷಣೆಯನ್ನೂ ನೀಡುತ್ತದೆ.

ಧ್ಯಾನ:

ಚಿತ್ತದ ಏಕಾಗ್ರತೆಯೇ–ಇಚ್ಛಾಶಕ್ತಿಯ ನಿಗ್ರಹವೇ–ಧ್ಯಾನ. ಮನಸ್ಸು ಚಂಚಲವಾಗಿದ್ದು ಕ್ಷಣಕ್ಷಣಕ್ಕೂ ಉಯ್ಯಾಲೆಯಾಡುತ್ತದೆ. ಅದು ಸ್ಥಿರವಲ್ಲ. ಸದಾಕಾಲವೂ ಹೊಯ್ದಾಡುತ್ತದೆ. ಅದನ್ನು ಅಂಕಿತದಲ್ಲಿಡುವದರಿಂದ ಮಾನಸಿಕ ಪಾವಿತ್ರ್ಯತೆಯೂ ಆತ್ಮದ ಪ್ರಶಾಂತತೆಯೂ ನೆಲೆಸುತ್ತದೆ, ಆತ್ಮ ಹಾಗೂ ಮನ ಗಳೆರಡೂ ಉದ್ದೀಪನಗೊಳ್ಳಬೇಕು. ಜ್ಞಾನದಿಂದ ನಮ್ಮ ಅರಿವು ಜಾಗ್ರತ ವಾದಾಗ, ಮನಸ್ಸು ಅನಂತ ಶಾಂತಿಯನ್ನೂ ಸಮಾಧಾನವನ್ನೂ ಹೊಂದುತ್ತದೆ. ಆ ನಂತರ ಭೌತಿಕ ಪಿಪಾಸೆ ಹಾಗೂ ಆಸಕ್ತಿಗಳು ಕಾಣದಾಗುತ್ತವೆ.

"The brilliant presence of Ishwar cannot be perceived in that mental firmament which is disturbed by the gale of desires."

ಸರ್ವೋತ್ಕೃಷ್ಟವಾದ ಈಶ್ವರಾನುಭೂತಿಯು ಆಶೆಯ ಝಂಝಾ ಮಾರುತ ಗಳಿಂದ ತುಳಿಯಲ್ಪಟ್ಟ ಮಾನಸ ಕ್ಷಿತಿಜದಲ್ಲಿ ಎಂದಿಗೂ ದೊರೆಯಲಾರದು ಎಂದು ದಾಗಿ ಶ್ರೀ ರಾಮಕೃಷ್ಣರು ತಿಳಿಸಿದ್ದಾರೆ.

ಆಳವಾದ ಧ್ಯಾನದಿಂದ ಅರಿವಿನ ಜಾಗೃತಿಯಾಗುತ್ತದೆ. ಅದು ಆಶಾವಿರಹಿತ ವಾಗುತ್ತದೆ. ಔಚಿತ್ಯಪೂರ್ಣವಾದ ಧ್ಯಾನವು ಮನಸ್ಸನ್ನು ಸಮತೋಲನದಲ್ಲಿ ಇರಿಸುತ್ತದೆ. ಸಂಕಲ್ಪವು ಸ್ವಾರ್ಥಪರಾಯಣತೆಯಿಂದ ಕೂಡಿದೆ. ಆಶೆ ಹಾಗೂ ಆಮಿಷಗಳ ಪರಿತ್ಯಾಗದಿಂದ ಮನವು ಸ್ವತಂತ್ರವೂ ಸ್ವಚ್ಛವೂ ಆಗುತ್ತದೆ. ಇವು ಗಳನ್ನು ನಿಗ್ರಹಿಸುವವನು ಧ್ಯಾನಮಾರ್ಗಕ್ಕೆ ಅರ್ಹನಾಗುವನು. ದೃಢಚಿತ್ತ ಹಾಗೂ ಸಂಕಲ್ಪಗಳುಳ್ಳ ಮಾನವನು ಧ್ಯಾನಮಗ್ನನಾಗಬಲ್ಲನು. ಅವರೆ

ಮನಸ್ಸಾಂಚಲ್ಯ ಯಾವುದಕ್ಕೂ ಬಾರದು. ಮನಸ್ಸು, ದೇಹ ಹಾಗೂ ಇಂದ್ರಿಯಗಳ ಸಂಯಮವೇ ಧ್ಯಾನಕ್ಕೆ ಅಡಿಗಲ್ಲು. ಅಚ್ಚುಕಟ್ಟಾಗಿ ಸುಸಂಘಟಿತಗೊಂಡ ಮನಸ್ಸು ಪ್ರತಿಕೂಲ ಪರಿಸ್ಥಿತಿಗಳನ್ನು ಅನುಕೂಲ ಪರಿಸ್ಥಿತಿಗಳನ್ನಾಗಿ ಮಾರ್ಪಡಿಸಬಲ್ಲದು. ಪ್ರತಿಜ್ಞಾಬದ್ಧನಾದ ಉಕ್ಕಿನ ಸಂಕಲ್ಪವುಳ್ಳ ಧ್ಯಾನಯೋಗಿಯು ಚಿನ್ನ, ಬೆಳ್ಳಿ ಮೊದಲಾದ ಲೌಕಿಕ ಆಮಿಷಗಳಿಂದ ಅನಾಸಕ್ತನಾಗಿರುತ್ತಾನೆ ಅವನು ಬಹಿರ್ಮುಖಿಯಾಗದೇ ಅಂತರ್ಮುಖಿಯಾಗುತ್ತಾನೆ. ಅವನು ರಾಗಾಸಕ್ತವಾದ ಭೌತಿಕ ವಸ್ತು ಹಾಗೂ ಆಸ್ತಿಗಳಿಂದ ಅತೀತನಾಗಿರುತ್ತಾನೆ. ಅವನು ಅವುಗಳನ್ನು ಪರಿಗಣಿಸುವದೂ ಇಲ್ಲ ಪಡೆಯುವದೂ ಇಲ್ಲ.

ಧ್ಯಾನವನ್ನು ನಿಬಿಡವಾದ ಏಕಾಂತದ ಅನಂತ ಶಾಂತಿಯ ಆವರಣದಲ್ಲಿ, ಕ್ಷೋಭೆಗಳಿಂದ ಪರಿತ್ಯಕ್ತವಾದ ಪ್ರಶಾಂತ ಪರಿಸರದಲ್ಲಿ ಆತ್ಮೀಕರಿಸಿಕೊಳ್ಳಬಹುದು. ಆಶಾವಿರಹಿತತೆ ಧ್ಯಾನಕ್ಕೆ ಅತ್ಯವಶ್ಯಕ. ವನಶಂಕರಿಯ ಗುಡಿಯಲ್ಲಿ, ಅವಳ ಪ್ರಾಕೃತಿಕ ಸೌಂದರ್ಯದಲ್ಲಿ ಮನಸ್ಸು ನಿರ್ಮಾಲಿನ್ಯಗೊಂಡು ಸತ್ಯಾನ್ವೇಷಿಯಾಗುತ್ತದೆ. ಆಗ ಅದು ಅಮರತೆ ಹಾಗೂ ಅನಂತಾನಂದಗಳಲ್ಲಿ ನೆಲೆನಿಲ್ಲುತ್ತದೆ. ಪರಮಾತ್ಮನ ನೆನಹಿನಲ್ಲಿ ಲೀನವಾದಾಗ ಶಾಂತಿ ಇಳಿದಿಳಿದು ಬರುತ್ತದೆ. ಆ ಸರ್ವಾಂತರ್ಯಾಮಿಯಾದ ಸರ್ವಜ್ಞನಾದ ಹಾಗೂ ಸರ್ವಶಕ್ತನಾದ ಪರಮಾತ್ಮನನ್ನು ಕಾಣುವದು ಸುಲಭಸಾಧ್ಯವೇನಲ್ಲ. ಸಿದ್ಧನಾಗಲಿ ಸಾಧಕನಾಗಲಿ ತನ್ನ ಕಾರ್ಯ ಕರ್ಮ ವಿಚಾರಗಳಲ್ಲಿ ಎಳೆ ಹಸುಳೆಯಂತೆ ಮುಗ್ಧನಾಗಬೇಕಾಗುತ್ತದೆ. ಅವನು ಸಂಯಮಿತ ಮಾನಸನಾಗಿ ಭಗವಂತನಾದ ಈಶ್ವರನಿಗೆ ಸರ್ವಾರ್ಪಣೆಯನ್ನು ಗೈಯಬೇಕು. ಇಂಥ ಯೋಗಿಯು ಅನಂತ ಶಾಂತಿಯನ್ನು ಅಥವಾ ನಿರ್ವಾಣವನ್ನು ಇಲ್ಲಿಯೇ ಮೋಕ್ಷವನ್ನು ಹೊಂದುತ್ತಾನೆ. ಆವಶ್ಯಕತೆಗಿಂತ ಅಧಿಕವಾದ ಆಹಾರ ನಿದ್ರೆಗಳು ತಪಸ್ಸಾಧನೆಯಲ್ಲಿ ತೊಡಕನ್ನುಂಟುಮಾಡುತ್ತವೆ. ಸಾಧಕನು ಶ್ರದ್ಧೆಯಿಂದ ದೂರಸರಿಯಬಾರದು.

"The new born calf totters and tumbles down several times before larning to frisk about. Similarly the Sadhaka has to struggle much before he meets with success."

—Shri Ramakrishna

ಅದೇ ತಾನೇ ತಾಯೊಡಲಿನಿಂದ ಉದಿಸಿದ ಕರುವು, ಪುಟನೆಗೆದು ಕುಣಿದಾಡಲು ಕಲಿಯುವದಕ್ಕಿಂತ ಮುನ್ನ, ಹಲವು ಬಾರಿ ತಪ್ಪೆಜ್ಜೆಗಳನ್ನು ತುಳಿದು ಮುಗ್ಗರಿಸಿ ಬೀಳುತ್ತದೆ. ಅದೇ ತೆರನಾಗಿ ಸಾಧಕನಾದರೂ ಗೆಲುವಿನ ಗಡಿಯನ್ನು ಹಿಡಿಯುವದಕ್ಕಿಂತ ಮುನ್ನ ಬಹುವಾಗಿ ಹೋರಾಡಬೇಕಾಗುತ್ತದೆಂದು ಶ್ರೀ ರಾಮಕೃಷ್ಣರು ತಿಳಿಸಿದ್ದಾರೆ.

ಅವನು ದಿವ್ಯಜೀವನ ಯಾತ್ರಿಯಾದ ಯೋಗಿಯು. ಯೋಗಸಾಧನೆಯಲ್ಲಿ

ಪ್ರಗತಿಶೀಲನಾದವನ ಮನಸ್ಸು ಪವಿತ್ರವೂ ಪ್ರಬುದ್ಧವೂ ಆಗುತ್ತದೆ. "ಧ್ಯಾನ, ಧಾರಣ ಹಾಗೂ ಚಿತ್ತದ ಶುದ್ಧೀಕರಣಗಳಲ್ಲಿ ಮನವಿಡುವವನು ಯೋಗ್ಯನಾದ ಯೋಗಿಯು." ಆತ್ಮ ಸಂಯಮದ ಕಲೆಯನ್ನು ಬಲ್ಲ ಭಕ್ತನಿಗೆ ಯೋಗವು ಎಟುಕಬಲ್ಲದು. ಆದರೆ ಅವನು ಆ ಸಂಯಮದಿಂದ ದೂರಾದರೆ ಯೋಗ ಸಿದ್ಧಿಯು ಸಾಧ್ಯವಿಲ್ಲ. ಆದುದರಿಂದ ಯೋಗಸಾಧನೆಯು ಗುರಿಸಾಧಿಸಲು ಸರಿಯಾದ ವಿಚಾರ ಹಾಗೂ ಸುಯೋಗ್ಯವಾದ ಆಚಾರಗಳು ಅತ್ಯಾವಶ್ಯಕ. ಮನವು ಮಂಗನಂತೆ ಚಂಚಲವಾಗಿದೆ. ಗಡಿಬಿಡಿಯು ಅದರ ಗುಣಧರ್ಮ. ಸಾಗರದ ಕಲ್ಲೋಲಗಳಂತೆ ಹೊಯ್ದಾಡುತ್ತದೆ. ಮನಸ್ಸನ್ನು ಸಾಧನೆ ಹಾಗೂ ಅನಾಸಕ್ತಿಯಿಂದ ನಿಗ್ರಹಿಸಬಹುದು. ಆಗ ಯೋಗಿಯು ವಿಶಾಲಮತಿಯೂ ಮಹಾನುಭಾವನೂ ಆಗುತ್ತಾನೆ. ಅವನು ಹಿರಿದು ಕಿರಿದುಗಳಲ್ಲಿ ಸಮಾನಭಾವ ಕಾಣುವನು. ಪ್ರಭುನಿರ್ಮಿತವಾದ ವಿಶ್ವದೆಲ್ಲವನ್ನು ಸಮಭಾವದಿಂದ ದರ್ಶಿಸುವನು. ಅವನು ತನ್ನ ಗುರಿಯನ್ನು ನಿಲುಕಲು, ಸರ್ವವಸ್ತುಗಳು ಒಂದೇ ಬಗೆಯಾಗಿ ತೋರಬಲ್ಲ ವಿಶ್ವವ್ಯಾಪಿ ಸೂರ್ಯಪ್ರಕಾಶದ ಅಡಿದಾವರೆಯಲ್ಲಿ, ಪ್ರಕೃತಿ ರಮಣೀಯತೆಯ ಪರಿಸರದಲ್ಲಿ, ಒಂದು ಹುಲ್ಲಿನ ಹಾಸಿಗೆ ಹಾಗೂ ಪರ್ಣಕುಟೀರವನ್ನು ಆಶ್ರಯಿಸಬೇಕೆಂದು ಶೆಲ್ಲಿ ಹೇಳುತ್ತಾನೆ.

आत्मैव ह्यात्मनो बंधुरात्मैव रिपुरात्मन.
बंधुरात्माऽऽत्मनस्तस्य चैवात्मैवात्मना जित: ॥ ५ ॥

ತನಗೆ ತಾನೆ ಕೆಳೆ; ತನಗೆ ತಾನೆ ಹಗೆ. ಆದುದರಿಂದ ತಾನು ತನ್ನನ್ನು ಸ್ವಪ್ರಯತ್ನದಿಂದಲೇ ಉದ್ಧರಿಸಿಕೊಳ್ಳಬೇಕಲ್ಲದೇ ತನ್ನ ಕೇಡಿಗೆ ತಾನೆ ಮೂಲನಾಗಬಾರದು.

ज्ञानविज्ञानतृप्तात्मा कूटस्थो विजितेंद्रिय: ।
युक्त इत्युच्यते योगी समलोष्टाश्मकांचन: ॥ ८ ॥

ಯಾವನ ಆತ್ಮವು ಜ್ಞಾನ ವಿಜ್ಞಾನಗಳಿಂದ ತೃಪ್ತವೋ ಯಾವನು ಜಿತೇಂದ್ರಿಯನೋ. ಯಾವನ ಆತ್ಮವು ಪರಮಾತ್ಮನಲ್ಲಿ ಸ್ಥಿರವೋ, ಯಾವನು ಕಟ್ಟಿಗೆ ಕಲ್ಲುಕಾಂಚನಗಳನ್ನು ಸಮದೃಷ್ಟಿಯಿಂದ ನೋಡುವನೋ ಅವನು ಯೋಗ ಸಿದ್ಧನೆನ್ನುವರು.

तत्रैकाग्रं मन: कृत्वा यतचित्तेन्द्रियक्रिय: ।
उपविश्यासने युंज्याद्योगमात्मविशुद्धये ॥ १२ ॥

"ಆಸನವೊಂದರ ಮೇಲೆ ಕುಳಿತು, ಮನವನ್ನು ಏಕಾಗ್ರಗೊಳಿಸಿ ಇಂದ್ರಿಯ

ಗಳ ಸಂಬಂಧವನ್ನು ತಡೆದು, ಯೋಗಸಾಧನೆಯನ್ನು ಆತ್ಮ ಪವಿತ್ರತೆಗಾಗಿ ಕೈಕೊಳ್ಳಬೇಕು."

योगिनामपि सर्वेषां मद्गतेनांतरात्मना ।
श्रद्ध वान भजते यो मां स मे युक्ततमो मतः ।४७।

"ಯೋಗಿಗಳೆಲ್ಲಾದರೂ ಯಾವನು ತನ್ನ ಚಿತ್ತವನ್ನು ನನ್ನ ಮೇಲೆ ಸಂಪೂರ್ಣವಾಗಿ ಕೇಂದ್ರೀಕರಿಸಿ ಅತುಲ ಶ್ರದ್ಧೆಯಿಂದ ಆರಾಧಿಸುವನೋ ಅವನು ಸರ್ವೋತ್ಕೃಷ್ಟನೆಂದು ನಾನು ಸ್ವೀಕರಿಸುತ್ತೇನೆ."

ಆದುದರಿಂದ ಆರನೆಯ ಅಧ್ಯಾಯದಲ್ಲಿ ಭಗವಾನ್ ಶ್ರೀಕೃಷ್ಣನು ಅರ್ಜುನನಿಗೆ ಆಧ್ಯಾತ್ಮಯೋಗವನ್ನು ಬೋಧಿಸಿದ್ದಾನೆ. ಇದು ಧ್ಯಾನಯೋಗ ಸಂಬಂಧಿಯಾದ ಸಂಧಿಯಾಗಿದೆ. ಯೋಗಿಗೆ ಇನ್ನೂ ಹಲವಾರು ಮಾರ್ಗದರ್ಶನಗಳನ್ನು ನೀಡಲಾಗಿದೆ. ಯೋಗಿಯು ಈ ಬೋಧೆಗಳನ್ನು ಅತ್ಮೀಕರಿಸಿಕೊಂಡರೆ. ಧ್ಯಾನದ ಏಕಾಗ್ರತೆಯಿಂದ ಮಾತ್ರ ಸಾಧಿಸಬಹುದಾದ ಹಾಗೂ ಮಹಾನಂದಕಾರಿಯಾದ ಅನಂತ ಚೈತನ್ಯವನ್ನೂ ಅನಂತ ಶಾಂತಿಯನ್ನೂ ಅರ್ಜಿಸಬಲ್ಲನು.

ನಾವು ಈ ಮಣ್ಣಿನ ಮಕ್ಕಳಾಗಿದ್ದು, ಜೀವನದ ತೊಟ್ಟಿಲಲ್ಲಿ ಉಯ್ಯಾಲೆಯಾಡುತ್ತಿದ್ದೇವೆ. ಶ್ರೀಕೃಷ್ಣನ ಧರ್ಮೋಪದೇಶವು, ನಮಗೆ ಪರಿಹಾರವೂ ರಕ್ಷಣೆಯೂ ಭೌತಾತೀತವಾದ ಆನಂದಾನುಭೂತಿಯೂ ಆಗಿದ್ದು ಯೋಗಿಯೋರ್ವನನ್ನು ಮಹರ್ಷಿಯನ್ನಾಗಿಸಬಲ್ಲುದಾಗಿದೆ.

ಈ ಗೀತೆಯು ಗಹನವಾದ ಹಾಗೂ ವಿಶಾಲವಾದ ವಿಚಾರಗಳಿಂದ ಯುಕ್ತವಾಗಿದ್ದು, ನಿಕೃಷ್ಟಾತ್ಮರಾದ ಬಳಲಿಬೆಂಡಾದ ಮಾನವ ಜೀವಿಗೆ ದೇವಪ್ರಣೀತ ಸಂದೇಶವಾಗಿದೆ. ಗೀತೆಯು ಹೃದಯವನ್ನು ಆಹ್ಲಾದಗೊಳಿಸಿ, ಚಿಂತನವನ್ನು ನಿರ್ಮಾಲಿನ್ಯಗೊಳಿಸಿ ಅಂತರಂಗದ ಸಿದ್ಧಿಯತ್ತ ಒಯ್ಯುತ್ತದೆ.

ಮದ್ರಾಸಿನಲ್ಲಿ ದಿ. ೨೭-೩-೧೯೬೦ ರಂದು ನಾಲ್ಕನೆಯ ಗೀತಾಜ್ಞಾನ ಯಜ್ಞದ ಪ್ರಾರಂಭೋತ್ಸವದಲ್ಲಿ ಶ್ರೀ ಜಗದ್ಗುರು ಮಹಾಸ್ವಾಮಿಗಳವರು ಇಂಗ್ಲೀಷಿನಲ್ಲಿ ಮಾಡಿದ ಭಾಷಣದ ಕನ್ನಡ ಅನುವಾದ.

ಭಗವಾನ್ ಬುದ್ಧ

ಶ್ರೀ ದಲಾಯಿಲಾಮಾಜಿಯವರ ಆಗಮನದಿಂದ ನಮಗೆ ಮತ್ತು ಹುಬ್ಬಳ್ಳಿಯ ಜನತೆಗೆ ಅತ್ಯಂತ ಆನಂದವಾಗಿದೆ. ಹುಬ್ಬಳ್ಳಿಯ ನಗರವು ಸಾಧು ಸಂತರನ್ನು ತತ್ವಜ್ಞಾನಿಗಳನ್ನು ಆದರಸತ್ಕಾರ ಮಾಡುವವರಲ್ಲಿ ಮೊದಲಿನಿಂದಲೂ ಅಗ್ರಗಣ್ಯ ವಾಗಿದೆ. ಇದರಿಂದ ಹುಬ್ಬಳ್ಳಿ ಜನರ ಹೃದಯ ವೈಶಾಲ್ಯತೆ ಮತ್ತು ಪವಿತ್ರತೆ ಕಂಡುಬರುತ್ತದೆ. ಇಲ್ಲಿಯ ಭಕ್ತರ ಅಭಿಲಾಷೆಯಿಂದ ಹಾಗೂ ನಮ್ಮ ಹಾರ್ದಿಕ ಶುಭೇಚ್ಛೆಯಿಂದ ಶ್ರೀ ದಲಾಯಿಲಾಮಾಜಿಯವರ ಸಮಾಗಮವು ಆಯಿತು. ಈ ಅಮೂಲ್ಯ ಸಮಾಗಮವು ನಮಗೆ ಅತ್ಯಂತ ಆನಂದವನ್ನುಂಟು ಮಾಡಿದೆ.

ಇಂದಿನ ಪರಿಸ್ಥಿತಿಯಲ್ಲಿ ಸಾಧುಸಂತರ ಅವಶ್ಯಕತೆಯು ಬಹಳವಿದೆ. ಇಂದು ನಾನಾ ವಿಚಾರಗಳ ವೈವಿಧ್ಯತೆಯಿಂದ ಮತ್ತು ವಿಜ್ಞಾನದ ಪ್ರಚಾರ ಬಾಹುಲ್ಯದಿಂದ ಮಾನವಕೋಟಿಗೆ ಎಳ್ಳಷ್ಟೂ ಶಾಂತಿಯು ಸಿಗದಾಗಿದೆ. ಮಾನವನು ಅನಾದಿ ಕಾಲದಿಂದಲೂ ತನ್ನ ಜೀವನದಲ್ಲಿ ಧರ್ಮದ ಹೊಂದಾಣಿಕೆಯನ್ನು ಮಾಡಿಕೊಂಡು ವಿಜ್ಞಾನದ ಸಹಾಯದಿಂದ ಉತ್ತರೋತ್ತರ ಪ್ರಗತಿಯನ್ನು ಸಾಧಿಸುತ್ತ ಬಂದಿದ್ದಾನೆ. ಆದರೆ ಇಂದು ಮಾನವನು ಧರ್ಮದ ಉಪೇಕ್ಷೆಯನ್ನು ಮಾಡಲಿಕ್ಕೆ ಹತ್ತಿದ್ದಾನೆ. ಇದರಿಂದ ಅವನ ಆಧ್ಯಾತ್ಮಿಕಶಕ್ತಿಯು ದಿನಂಪ್ರತಿ ಕ್ಷೀಣವಾಗುತ್ತ ಹೊರಟಿದೆ. ಇದರ ಪರಿಣಾಮವಾಗಿ ಅವನ ಹೃದಯವು ಸಂಕುಚಿತವಾಗಿದೆ, ನಿಯಮಿತವಾಗಿದೆ. ಆತ್ಮಪ್ರಕಾಶದ ಅಭಾವದ ಮೂಲಕ ಅವನಿಗೆ ಮಾರ್ಗ ಕಾಣದಾಗಿದೆ. ಅವನು ಸುಖಶಾಂತಿಗಳಿಂದ ದೂರಾಗಿರುವನು. ಆಂತರಿಕ ಶಕ್ತಿಯನ್ನು ಪಡೆಯುವದರ ಸಲುವಾಗಿ ಧರ್ಮದ ಆವಶ್ಯಕತೆ ಇದೆ. ಜ್ಞಾನ ಸಮ್ಮಿಶ್ರಿತ ಧರ್ಮದ ಆಚರಣೆಯಿಲ್ಲದೇ ಜನಜಾಗೃತಿಯು ಆಗಲಾರದು. ಅಜ್ಞಾನಂಧಕಾರವು ಹಬ್ಬುತ್ತಿರುವಾಗ ಜನತೆಯು ಜೀವನದ ಅಶಾಂತಿಯಿಂದ ಬಳಲಿ ಕರುಣೆಯ ಅನ್ವೇಷಣೆ ಮಾಡುತ್ತಿರುವಾಗ ಭಗವಾನ್ ಬುದ್ಧನ ಅವತಾರ ವಾಯಿತು. ಬುದ್ಧನು ಅಜ್ಞಾನಂಧಕಾರದಲ್ಲಿ ಬಿದ್ದು ನಿರಾಶೆಯನ್ನು ಹೊಂದಿದ ಜನತೆಗೆ ಧರ್ಮ, ಜ್ಞಾನ, ಸತ್ಯ ಮತ್ತು ಅಹಿಂಸೆ ಹೀಗೆ ನಾಲ್ಕು ತತ್ವಗಳನ್ನು ಉಪದೇಶಿಸಿ ಆಶಾಕಿರಣಗಳನ್ನು ಹೊತ್ತಿಸಿದನು. ಬೌದ್ಧಧರ್ಮದ ಸಾರವನ್ನು ವಿಶಾಲವಾದ ನಾಲ್ಕು ಸತ್ಯವಚನಗಳಲ್ಲಿ ನೋಡಬಹುದು.

(೧) ಜೀವನನವೇ ದುಃಖದ ಸಾಗರ:

ಭವಸಾಗರದಲ್ಲಿ ಜೀವನನೌಕೆಯನ್ನು ಗುರುರೂಪಿ ಅಂಬಿಗನು ಬಿಚ್ಚಿಬಿಟ್ಟ

ದ್ದಾನೆ. ಜೀವನಿಗೆ ಈ ಭವಸಾಗರದಲ್ಲಿ ಪ್ರತಿಕ್ಷಣ ಬರುವ ಬಿರುಗಾಳಿಗಳನ್ನು ಎದುರಿಸಬೇಕಾಗಿದೆ. ಗುರುದೇವನು ಕೇವಲ ಸೂತ್ರಧಾರನಾಗಿದ್ದಾನೆ. ಜೀವನನ್ನು ದುಃಖದಿಂದ ರಕ್ಷಿಸಲು ಧರ್ಮವು ಮಹಾಸಾಧನವಾಗಿದೆ. ದುಃಖದಿಂದ ಬಿಡುಗಡೆ ಪಡೆಯಲು ಜ್ಞಾನದ ಆ ಬೆಳಕು ಅವಶ್ಯಕ. ಈ ಬೆಳಕಿನಿಂದಲೇ ಜೀವನವು ವಿಕಾಸವನ್ನು ಹೊಂದುತ್ತದೆ. ಆದ್ದರಿಂದ ಜೀವನವೇ ದುಃಖದ ಸಾಗರವಾಗಿದೆ.

(೨) ಜೀವನ ದುಃಖಕ್ಕೆ ಮೂಲ:

"ಭಗವಾನನು ಪ್ರತಿಯೊಂದು ಪ್ರಾಣಿಯ ಜೀವನದಲ್ಲಿ ಆಸೆಗೆ ಪ್ರಾಧಾನ್ಯತೆಯನ್ನು ನೀಡಿದ್ದಾನೆ. ಆಸೆಯ ಬಲದಿಂದಲೇ ಜೀವನವು ಮುನ್ನಡೆಯುತ್ತದೆ. ಈ ಆಸೆಯೇ ಸರ್ವದುಃಖಗಳಿಗೆ ಮೂಲಕಾರಣವಾಗಿದೆ. ಪ್ರಾಚೀನಧರ್ಮದ ಪ್ರತಿಯೊಬ್ಬ ಸಂತರು ಜೀವನದಲ್ಲಿ ಆಸೆಗೆ ತಿಲಾಂಜಲಿ ಕೊಟ್ಟು ತ್ಯಾಗಮಂತ್ರವನ್ನು ಸ್ವೀಕರಿಸಲು ನಾನಾ ಪ್ರಕಾರವಾಗಿ ಉದಾಹರಣೆಕೊಟ್ಟು ಸಮರ್ಥಿಸಿದ್ದಾರೆ. ತ್ಯಾಗ ಭಾವನೆಯಿಂದಲೇ ಮಾನವಜೀವನವು ದುಃಖದ ಸಾಗರವನ್ನು ದಾಟಲು ಸಮರ್ಥವಾಗುತ್ತದೆ. ಆಸೆಯೇ ಮನುಷ್ಯನನ್ನು ಪಶುವೃತ್ತಿಯ ಕಡೆಗೆ ಎಳೆದೊಯ್ಯುತ್ತದೆ.

(೩) ನಿರ್ವಾಣಸುಖದಿಂದ ದುಃಖದ ಮುಕ್ತಿ:

ಮಾನವನು ತನ್ನ ಜೀವನದಲ್ಲಿ ಸಾಧನೆಯ ಬಲದಿಂದ ನಿರ್ವಾಣವನ್ನು ಹೊಂದುತ್ತಾನೆ. ಸಾಧನವೇ ತಪವಾಗಿದೆ. ಜೀವನದಲ್ಲಿ ನಾನಾ ವಿಧವಾಗಿ ತಪಸ್ಸನ್ನು ಮಾಡಲಾಗುತ್ತದೆ. ಅಗ್ನಿಯ ಸಂಪರ್ಕದಿಂದ ಬಂಗಾರದ ಕಾಂತಿಯು ಹೆಚ್ಚಾಗುವಂತೆ ಕಷ್ಟಗಳ ಸಹನಶೀಲತೆಯಿಂದ ಜೀವನವು ಪ್ರಕಾಶಮಯವಾಗುತ್ತದೆ. ಈ ರೀತಿಯ ಸಾಧಕರ ಜೀವನವು ಮುಳ್ಳುಗಳ ಮಧ್ಯದಲ್ಲಿ ಅರಳಿದ ಕುಸುಮದಂತೆ ಸೌರಭರೂಪ ಅಮೃತವನ್ನು ವಿಶ್ವದಲ್ಲಿ ಹರಡಿ ಸುಖಶಾಂತಿಗಳನ್ನು ಕೊಡುತ್ತದೆ. ಈ ನಿರ್ವಾಣಸುಖದಿಂದಲೇ ದುಃಖದ ನಿವೃತ್ತಿಯು ಆಗುತ್ತದೆ.

(೪) ಎಂಟು ಪ್ರಕಾರದ ನಿರ್ವಾಣವು:

ಭಗವಾನ್ ಬುದ್ಧನು ಎಂಟು ಪ್ರಕಾರದ ಸತ್ಯಮಾರ್ಗಗಳಿಂದ ಕಂಟಕಕೀರ್ಣ ಜನಜೀವನವನ್ನು ಬಿಡುಗಡೆಮಾಡಿದ್ದಾನೆ. ಸುವಿಚಾರ, ಸದ್ಭಾವ, ಸುಭಾಷಿತ, ಸುಚಾರಿತ್ರ್ಯ, ಸತ್‌ಜೀವನ, ಸುಪ್ರಯತ್ನ, ಸಹೃದಯ, ಸಂತೋಷ ಮೊದಲಾದ ವಿಚಾರಗಳನ್ನು ಶ್ಲೋಕದಿಂದ ಪ್ರತಿಪಾದನೆಮಾಡಿರುವನು. ಪ್ರತಿಯೊಬ್ಬ ವ್ಯಕ್ತಿಗೆ ಈ ವಿಚಾರವನ್ನು ಮನನ ಮಾಡಿಸುತ್ತ ಜ್ಞಾನಪ್ರಕಾಶವನ್ನು ಬೀರಿ ಜನತೆಯನ್ನೂ ಎಚ್ಚರಿಸಿದ್ದಾನೆ.

ಬುದ್ಧನ ತತ್ವಗಳ ಸಂಕಲನ

ಮಹಾತ್ಮಾ ಬುದ್ಧನು ಅಧಿಕತರವಾಗಿ 'ಅಹಿಂಸಾ ಪರಮೋಧರ್ಮಃ' ಎಂಬ ಉಕ್ತಿಯನ್ನೇ ಮೂಲಮಂತ್ರವನ್ನಾಗಿ ತಿಳಿದಿರುವನು. ಅಹಿಂಸಾ, ಸತ್ಯ, ದಯಾ, ಪ್ರೇಮ ಮೊದಲಾದ ತತ್ವಗಳನ್ನು ಪ್ರಚಾರಮಾಡಿ ವಿಶ್ವದಲ್ಲಿ ಶಾಂತಿಯನ್ನು ಸ್ಥಾಪಿಸಲು ಶಕ್ತಿಮೀರಿ ಪ್ರಯತ್ನ ಮಾಡಿದ್ದಾನೆ.

ಅಹಿಂಸಾ:

ಅಶಾಂತಿಗೆ ಹಿಂಸೆಯೇ ಮೂಲ ಕಾರಣವಾಗಿದೆ. ಮಾನವ ಸೃಷ್ಟಿಯು ಕರುಣೆಗಾಗಿ ಆಗಿದೆ. ಅಹಿಂಸೆಯ ಪರಿಪಾಲನೆಯನ್ನು ಕಾಯಾ, ವಾಚಾ, ಮನಸಾ ಮಾಡಬೇಕು. ಶರೀರದ ಕೊಲೆಯು ಮಹಾಪಾಪವಾಗಿದೆ. ಮಾನವ ವೀರಪ್ರರುಷ ತನ್ನ ವೀರತ್ವದ ಪ್ರದರ್ಶನವನ್ನು ರಕ್ತಪಾತ ಮಾಡಿ ತೋರಿಸುವದರಿಂದ ಮತ್ತಿಷ್ಟು ಹಿಂಸೆಯು ಬೆಳೆಯುತ್ತ ಹೋಗುತ್ತದೆ. ರಕ್ತದ ಮಾರ್ಗವನ್ನು ರಕ್ತದಿಂದ ತೊಳೆಯಲು ಸಾಧ್ಯವಿಲ್ಲ. ವೀರನಿಗೆ ವಿಜಯದ ಆಕಾಂಕ್ಷೆ ಇರಬೇಕು. ಆದರೆ ಕೊಲೆಮಾಡುವ ಅಭಿಲಾಷೆ ಇರಕೂಡದು. ಅಹಿಂಸೆಯ ಪರಿಪಾಲನೆಯು ವಾಣಿಯಲ್ಲಿಯೂ ಇರಬೇಕು. ಕಟೂಕ್ತಿಗಳನ್ನು ಆಡಿ ಎರಡನೆಯವರ ಮನಸ್ಸನ್ನು ನೋಯಿಸುವದೂ ಕೂಡಾ ಒಂದು ರೀತಿಯ ಹಿಂಸೆ, ಪ್ರೇಮದಿಂದ ಮಾತನಾಡಿ ತನ್ನ ಜೀವನದಲ್ಲಿ ನಿಜವಾದ ಆನಂದವನ್ನು ಪಡೆದುಕೊಳ್ಳಬಹುದು. ಪ್ರೇಮದ ವ್ಯವಹಾರದಿಂದ ಕಾಡಪ್ರಾಣಿಗಳೂ ಕೂಡ ವಶೀಭೂತಗಳಾಗುತ್ತವೆ. ಒಮ್ಮೊಮ್ಮೆ ಹಿಂಸಾಜನಕ ಮಾತಿನಿಂದ ಸಮಾಜವು ವಿನಾಶದ ದಾರಿಯಲ್ಲಿ ನಡೆಯಬೇಕಾಗುತ್ತದೆ. ಈ ಅಸಂಯಮದಿಂದಲೇ ಸಮಾಜದಲ್ಲಿ ಅಶಾಂತಿಯ ವಿಷಮವಾತಾವರಣ ಉಂಟಾಗುತ್ತದೆ. ಹಿಂಸೆಯು ತನ್ನ ಪರಾಕಾಷ್ಠೆಗೆ ಮುಟ್ಟುತ್ತದೆ. ಮಧುರ ಮತ್ತು ಸಂಯಮವಾಣಿಯ ವ್ಯವಹಾರದಿಂದ ಮಾನವಕೋಟಿಯು ಕಲ್ಯಾಣವಾಗುವದು, ಅಹಿಂಸೆಯ ಪರಿಪಾಲನೆ ಆಗುವದು. ವಾಕ್‌ಸಂಯಮವೇ ವಿಶ್ವಶಾಂತಿಗೆ ಪ್ರಥಮ ಸೋಪಾನವಾಗಿದೆ. ಆದುದರಿಂದ ವಾಣಿಯನ್ನು ಹಿಂಸೆಯಿಂದ ರಕ್ಷಿಸಬೇಕು.

ಮನಸ್ಸಿನಲ್ಲಿ ಎರಡನೆಯವರಿಗೆ ಅಹಿತವನ್ನು ಮಾಡಬೇಕೆಂದು ವಿಚಾರಿಸುವದೂ ಕೂಡಾ ಹಿಂಸೆಗೆ ಕಾರಣವಾಗಿದೆ. ಮನಸ್ಸಿನ ಮೇಲೆ ಬುದ್ಧಿಯ ನಿಯಂತ್ರಣ ವಿರಬೇಕು. ಸಾತ್ವಿಕಬುದ್ಧಿಯ ಪ್ರೇರಣೆಯಿಂದಲೇ ಮನಸ್ಸು ಸತ್‌ಕರ್ಮದಲ್ಲಿ ಪ್ರವೃತ್ತವಾಗುತ್ತದೆ, ಅಹಿಂಸೆಯ ಪರಿಪಾಲನೆ ಮನಸಾ ಆಗಬೇಕು, ಮನದಲ್ಲಿ ವಿಕಾರಗಳ ಆವಿರ್ಭಾವದಿಂದ ಮಾನವ ಜೀವನವು ದುಃಖ ಮತ್ತು ಅಶಾಂತಿಯಿಂದ ವ್ಯಾಪ್ತವಾಗುತ್ತದೆ, ಹಿಂಸೆಗೆ ಜನಕಗಳಾದ ವಿಕಾರಗಳ ಜಡತೆಯಿಂದ ಕುಕರ್ಮಗಳನ್ನು ಮಾಡಲಿಕ್ಕೆ ಹತ್ತುತ್ತದೆ, ಮನಸ್ಸಿನ ಪವಿತ್ರತೆಯಿಂದ ಮನುಷ್ಯನು ಮಹಾ

ಮಾನವನಾಗುತ್ತಾನೆ. ಆದ್ದರಿಂದ ಮನಸ್ಸನ್ನು ಅಹಿಂಸಾಮಯವನ್ನಾಗಿ ಮಾಡುವದು ಮಾನವನ ಪರಮಕರ್ತವ್ಯವಾಗಿದೆ.

ಸತ್ಯದ ಪರಿಭಾಷೆಯನ್ನು ನಾನಾಬಗೆಯಾಗಿ ಮಾಡಲಾಗುತ್ತದೆ. ವಸ್ತುವಿನ ಯಥಾಸ್ಥಿತಿಯಂತೆ ಮಾತನಾಡುವದೇ ಸತ್ಯವೆನಿಸಿಕೊಳ್ಳುವದು, ಸ್ವಾರ್ಥಕ್ಕಿಂತ ಶ್ರೇಷ್ಠವಾದ ಪರಮಾರ್ಥಕ್ಕೆ ಮನಸ್ಸಿನಲ್ಲಿ ಪ್ರಾಧಾನ್ಯತೆ ಕೊಟ್ಟರೆ ಆವಿರ್ಭವಿಸುವ ಸ್ಥಾಯಿಗುಣಗಳಿಗೆ ಸದ್ಗುಣಗಳೆನ್ನುತ್ತಾರೆ. ಈ ಸದ್ಗುಣಗಳಿಂದಲೇ ವ್ಯಕ್ತಿಯ ಮತ್ತು ಸಮಾಜದ ಕಲ್ಯಾಣವಾಗುತ್ತದೆ, ಸತ್ಯದಿಂದಲೇ ಮನಸ್ಸು ದೃಢತೆ, ಆತ್ಮ ವಿಶ್ವಾಸ ಹಾಗೂ ನಿರ್ಭಯತೆಯನ್ನು ಹೊಂದುತ್ತದೆ, ಅಸತ್ಯದ ಆವರಣದಲ್ಲಿ ಬಹುದಿನಗಳವರೆಗೆ ಸತ್ಯವು ಇರಲಿಕ್ಕೆ ಸಾಧ್ಯವಿಲ್ಲ. ಆದ್ದರಿಂದ ಮನುಷ್ಯನು ತನ್ನ ಜೀವನದಲ್ಲಿ ಮರೆತೂ ಅಸತ್ಯವನ್ನು ಮಾತನಾಡುವ ಅಭ್ಯಾಸವನ್ನು ಇಟ್ಟುಕೊಳ್ಳಬಾರದು. ನೈತಿಕ ಜೀವನದಲ್ಲಿ ಸತ್ಯಕ್ಕೆ ಮಹತ್ವಪೂರ್ಣವಾದ ಸ್ಥಾನವಿದೆ. ಸತ್ಯವು ಎಂದಿಗೂ ನಶಿಸಲು ಸಾಧ್ಯವಿಲ್ಲ. ಸತ್ಯವು ಯಾವಾಗಲೂ ನ್ಯಾಯ, ಪರೋಪಕಾರ ಮತ್ತು ಸಮಾನತೆಯನ್ನು ಸಮರ್ಥಿಸುತ್ತದೆ. ಆದ್ದರಿಂದ ಪ್ರತಿಯೊಬ್ಬ ವ್ಯಕ್ತಿಯು ಸಮಾಜದಲ್ಲಿ ಸುಖವನ್ನು ಹೊಂದುತ್ತಾನೆ. ಸತ್ಯದ ರಕ್ಷಣೆಯಿಂದಲೇ ವ್ಯಕ್ತಿಯು ನಿರ್ಭಯನಾಗಿ ಪುನೀತ ಕರ್ತವ್ಯವನ್ನು ಮಾಡಬಲ್ಲ.

ಮಾನವನ ಹೃದಯಕ್ಕಾಗಿಯೇ ಕರುಣೆ, ಉಪಕಾರ, ಸಮವೇದನೆ ಮತ್ತು ಪವಿತ್ರತೆಗಳು ಉಂಟು. ದಯೆ ಮತ್ತು ಕ್ಷಮೆ ಸೂರ್ಯಚಂದ್ರರಂತೆ ಪ್ರಕಾಶ ಹಾಗೂ ಶೀತಲತೆಯನ್ನು ತಂದು ಹೃದಯವನ್ನು ಪುನೀತವನ್ನಾಗಿ ಮಾಡುತ್ತದೆ. ಕರುಣೆಗೆ (ದಯೆ) ಪ್ರತಿಯೊಂದು ಧರ್ಮದಲ್ಲಿ ಸ್ಥಾನ ಕೊಡಲ್ಪಟ್ಟಿದೆ. ಕರುಣೆಯಿಂದ ಹಿಂಸೆಯು ದೂರಾಗುತ್ತದೆ. ಕರುಣೆಯ ಅಭಾವದಲ್ಲಿ ಸಮಾಜವು ಮತ್ತು ದೇಶವು ಅನೈತಿಕ ಮಾರ್ಗದೆಡೆಗೆ ಮುನ್ನುಗ್ಗುತ್ತದೆ. ಕರುಣೆಯು ಕೇವಲ ಮಾನವ ಜನಾಂಗದಲ್ಲಿ ಕಾಣುತ್ತದೆ. ಕರುಣೆ ವಿಹೀನ ವ್ಯವಹಾರ, ಪಶು ವ್ಯವಹಾರವೆನಿಸಿಕೊಳ್ಳುತ್ತದೆ.

ಪಶುವು ಕೂಡಾ ತನ್ನ ಪ್ರಾಕೃತಿಕ ನಿಯಮಗಳನ್ನು ಮೀರುವದಿಲ್ಲ. ಅತಃ ಮನುಷ್ಯನೂ ತನ್ನ ಸ್ವಾಭಾವಿಕ ಕರುಣಾಪೂರಿತ ನಿಯಮಗಳನ್ನು ಉಲ್ಲಂಘನೆ ಮಾಡಬಾರದು. ಕರುಣೆಯ ಮುಖಾಂತರವೇ ಮಾನವನ ನೈತಿಕ ಚಾರಿತ್ರ್ಯವು ಉಜ್ವಲವಾಗುತ್ತದೆ. ಕರುಣೆಯ ಪರಿಮಾರ್ಜಿತ ಎರಡನೆಯ ರೂಪವೇ ಪ್ರೇಮ. ಪ್ರೇಮದಿಂದ ಅಸಾಧ್ಯವನ್ನು ಸಾಧ್ಯವನ್ನಾಗಿ ಮಾಡಬಹುದು. ಮಾನವನಲ್ಲಿ ಆತ್ಮೀಯತೆಯು ಪ್ರೇಮದಿಂದಲೇ ಬೆಳೆಯುತ್ತದೆ. ಕರುಣೆಯ ಪ್ರಭಾವದಿಂದಲೇ ಸಮಸ್ತ ಪ್ರಾಣಿಗಳಲ್ಲಿ ಸಮದೃಷ್ಟಿಯು ಉಂಟಾಗುತ್ತದೆ.

ಮೇಲೆ ಹೇಳಿದ ಬುದ್ಧನ ಅಹಿಂಸಾ, ಸತ್ಯ, ದಯೆ ಮತ್ತು ಪ್ರೇಮದ

ಪ್ರಭಾವದಿಂದ ಕರ್ನಾಟಕದಲ್ಲಿಯೂ ಪರ್ಯಾಪ್ತವಾಗಿ ಜಾಗ್ರತಿ ಉಂಟಾಗಿತ್ತು. ವೀರಶೈವ ಧರ್ಮೋದ್ಧಾರಕನಾದ ಜಗಜ್ಯೋತಿ ಬಸವೇಶ್ವರರು ಕೂಡಾ ತಮ್ಮ ಅಮೂಲ್ಯತತ್ವಗಳಿಂದ ಮಾನವ ಕಲ್ಯಾಣಕ್ಕಾಗಿ ಅವಿಶ್ರಾಂತವಾಗಿ ಪ್ರಯತ್ನ ಮಾಡಿದ್ದಾರೆ. ಅಹಿಂಸೆ, ಸತ್ಯ ಹಾಗೂ ಕರುಣೆಯ ಸಂಬಂಧವಾಗಿ ವಚನಗಳ ಮುಖಾಂತರ ತಿಳಿಸಿ ಕೊಟ್ಟಿದ್ದಾರೆ. ಅವನ ಕೆಲವು ವಚನಗಳನ್ನು ಇಲ್ಲಿ ಸ್ಮರಿಸ ಬಹುದು—

ಕಳಬೇಡ ಕೊಲಬೇಡ ಹುಸಿಯ ನುಡಿಯಲು ಬೇಡ ಮುನಿಯ ಬೇಡ
ಅನ್ಯರಿಗೆ ಅಸಹ್ಯಪಡಬೇಡ ತನ್ನ ಬಣ್ಣಿಸಬೇಡ ಇದಿರ ಹಳಿಯಲು ಬೇಡ
ಇದೇ ಅಂತರಂಗಶುದ್ಧಿ ಇದೇ ಬಹಿರಂಗ ಶುದ್ಧಿ
ಇದೇ ಕೂಡಲಸಂಗಮದೇವರ ಒಲಿಸುವ ಪರಿ.

ದಯವಿಲ್ಲದ ಧರ್ಮವದಾವುದಯ್ಯಾ
ದಯವೇ ಬೇಕು ಸಕಲಪ್ರಾಣಿಗಳಲ್ಲಿ
ದಯವೇ ಧರ್ಮದ ಮೂಲವಯ್ಯಾ
ಕೂಡಲಸಂಗಯ್ಯನಂತಲ್ಲದೊಲ್ಲನಯ್ಯಾ

ಬುದ್ಧರ ಮತ್ತು ಬಸವೇಶ್ವರರ ಸತ್ಯ, ಅಹಿಂಸಾ ಮುಂತಾದ ತತ್ವಗಳಿಂದ ಜನರ ಉದ್ಧಾರವಾಯಿತು. ಇಂದಿಗೂ ಅವರ ವಚನಗಳನ್ನು ಧ್ಯಾನದಿಂದ ಪರಿಪಾಲನೆ ಮಾಡಿದ್ದಾದರೆ ಮಾನವ ಜನಾಂಗದ ಕಲ್ಯಾಣವು ಆಗುವವೆಂದು ನಿಃಸಂಕೋಚವಾಗಿ ಹೇಳಬಹುದು. ಈ ತತ್ವಗಳು ವಿನಾಶದ ಸಾಗರದಲ್ಲಿ ಮುಳು ಗುವವರಿಗೆ ಆಶ್ರಯಗಳಾಗುವವು. ಉಪರ್ಯುಕ್ತ ತತ್ವಗಳಿಂದಲೇ ಮಾನವಕಲ್ಯಾಣ ಹಾಗೂ ನೈತಿಕ ಆಧ್ಯಾತ್ಮದ ಉದ್ಧಾರವು ಅವಶ್ಯವಾಗಿ ಆಗುವದು. ಚಾರಿತ್ರಿಕ ದೃಷ್ಟಿಯಿಂದ ಬೌದ್ಧ ಧರ್ಮವು ಅತಿ ಮುಖ್ಯ ಧರ್ಮವೆಂದು ಹೇಳಬಹುದು. ಬೌದ್ಧ ಧರ್ಮದಿಂದ ಜಗತ್ತಿನಲ್ಲಿ ಅದ್ಭುತ ಧಾರ್ಮಿಕ ಜಾಗೃತಿಯಾಗಿದೆ. ಇದನ್ನು ತಾತ್ವಿಕ ದೃಷ್ಟಿಯಿಂದ ಹೇಳುವದು. ಈಗ ಅಪ್ರಾಸಂಗಿಕವಾಗುವವೆಂದು ತಿಳಿಯುತ್ತೇವೆ.

ಬುದ್ಧನ ಜಾಗತಿಕ ಸಂದೇಶ

ಭಾರತೀಯ ಸಂಸ್ಕೃತಿಯ ಅಧ್ಯಯನದಿಂದ ತಿಳಿದುಬರುವದೇನಂದರೆ ಸಂಸ್ಕೃತಿಯು ಎಷ್ಟೋಸಾರೆ ಅವನತಿಯನ್ನು ಹೊಂದಿದರೂ ಕೂಡಾ ಪುನಃ ಅದು ಚೇತನವನ್ನು ಪಡೆದುಕೊಂಡಿದೆ ಹೀಗೆ ಅನೇಕ ಅಂಶಗಳು ಒಂದುಸಾರೆ ಉನ್ನತಿಯ ಶಿಖರವನ್ನು ಏರಿ ಮತ್ತೆ ಅವನತಿಯ ಮಡಿಲಲ್ಲಿ ಬಿದ್ದು ನಾಶಗಳಾಗಿವೆ. ಮನುಷ್ಯನ ವಿಕಾಸವು ಒಂದು ಸೀಮೆಯನ್ನು ಮುಟ್ಟಿದನಂತರ ನಿಂತುಬಿಡುತ್ತದೆ. ಜಗತ್ತಿನಲ್ಲಿ

ಶಾಂತಿಯ ಸಂದೇಶವನ್ನು ಪ್ರಸಾರ ಮಾಡುವವರೇ ಧನ್ಯರು. ಅವರು ದೇವತೆಗಳೂ ಅಮರರು. ಬುದ್ಧನು ಅನಾವಶ್ಯಕ ಆಚರಣೆಗಳನ್ನು ಶಾಶ್ವತ ಸತ್ಯದಿಂದ ಬೇರ್ಪಡಿಸುವ ದಾರ ಜ್ಞಾನವನ್ನು ಕೊಟ್ಟಿದ್ದಾನೆ. ಧನಾಗಾರದಲ್ಲಿದ್ದ ನಾಲ್ಕು ವೇದಗಳ ಸಾರವನ್ನು ಸಂಪೂರ್ಣ ಜಗತ್ತಿಗೆ ತೆರೆದಿದ್ದಾನೆ. ಅವನು ಉಪದೇಶಿಸಿದ ಗುಹ್ಯ ವಾದ ಸಂದೇಶದಲ್ಲಿ ಮಾನವತಾವಾದವು ಅಡಕವಾಗಿದೆ. ಉಚ್ಚ ನೀಚರ ತಾರತಮ್ಯವು ಹುಡುಕಿದರೂ ಸಿಗಲಾರದು. ಸಮಾನತೆಯ ಸಂದೇಶವನ್ನು ಬೀರಿ ದವನು ಮಹಾತ್ಮನಾದ ಬುದ್ಧನು. ಪ್ರತಿಯೊಬ್ಬ ಸ್ತ್ರೀಪುರುಷರಿಗೆ ಅಧ್ಯಾತ್ಮಿಕ ಜೀವನದಲ್ಲಿ ಅಗ್ರೇಸರರಾಗಿ ಹೋಗಲು ಸಮಾನಾಧಿಕಾರವಿದೆ. ಅತ್ಯಂತ ನೀಚ ಜಾತಿಯ ವ್ಯಕ್ತಿಗಳೂ ಉನ್ನತಮಟ್ಟಕ್ಕೆ ಹೋಗಲೂ ಯೋಗ್ಯರಾದರು. ನಿರ್ವಾಣದ ಬಾಗಿಲವು ಎಲ್ಲರಿಗೂ ತೆರೆಯಲ್ಪಟ್ಟಿತು. ಭಾರತ ದೇಶದ ಜನರಿಗೂ ಅವನ ಸಂದೇಶ ಸಾಹಸದ ಮಾತಾಗಿ ಕಾಣಿಸಿತು. ವೇದಾಂತವನ್ನು ಎಷ್ಟು ಹೇಳಿದರೂ ಭಾರತೀಯರಿಗೆ ತಿಳಿಯಲು ಕಷ್ಟದಾಯಕವಾಯಿತು.

ನಮ್ಮ ಜೀವನದಲ್ಲಿ ದುಃಖವು ಏಕೆ ಇದೆ ಇದೇ ಅವನ ಸಿದ್ಧಾಂತವಾಗಿತ್ತು. ಈ ದುಃಖಕ್ಕೆ ಕಾರಣ ಸ್ವಾರ್ಥವಾಗಿದೆ. ನಮಗಾಗಿ ವಸ್ತುಗಳನ್ನು ಅಪೇಕ್ಷಿಸುವ ದರಿಂದಲೇ ದುಃಖವಿದೆ. ಇದರಿಂದ ಬಿಡುಗಡೆ ಹೊಂದಬೇಕಾದರೆ ಅಹಂಭಾವ ವನ್ನು ಬಿಡಬೇಕು. ನಮ್ಮಗಳಿಗೆ ಗೋಚರವಾಗುತ್ತಿರುವ ಈ ಜಗತ್ತು ಕೇವಲ ತೋರಿಕೆಮಾತ್ರವಾಗಿದೆ. ಆತ್ಮವು ಕೇವಲ ಆಲೋಚನೆ ಮಾತ್ರವಾಗಿದೆ. ಜನ್ಮ ಮರಣದ ಹಿನ್ನೆಲೆಯಲ್ಲಿ ಆತ್ಮನ ಅಸ್ತಿತ್ವವು ಕೇವಲ ಭ್ರಮೆಯಾಗಿದೆ. ಸ್ವಾರ್ಥ ತ್ಯಾಗದಿಂದ ಅಹಂಕಾರದ ನಿರಸನ. ಅಹಂಕಾರ ನಿರಸನದಿಂದ ಮನುಷ್ಯನು ಸುಖಿ ಯಾಗಿ ಎರಡನೆಯವರನ್ನೂ ಸುಖಿಯನ್ನಾಗಿ ಮಾಡಬಲ್ಲ. ಎಲ್ಲ ಆಚಾರಗಳು ಒಂದು ಭ್ರಮೆಯಾಗಿವೆ. ಪ್ರಪಂಚದಲ್ಲಿ ಒಂದೇ ಆದರ್ಶವಾಗಿದೆ. ಭ್ರಾಂತಿಯ ನಾಶದಿಂದ ಕೇವಲ ಸತ್ಯವು ಉಳಿಯುವದು. ಕಾರ್ಮೋಡಗಳು ಚದುರಿದನಂತರ ಹೇಗೆ ಸೂರ್ಯನು ಪ್ರಕಾಶಿಸುತ್ತಾನೆಯೋ ಹಾಗೆ ಅಹಂಕಾರದ ನಾಶದಿಂದ ನಿಸ್ವಾರ್ಥದ ಉದಯವು ಆಗುತ್ತದೆ. ಆಗ ಮನುಷ್ಯನು ಒಂದು ಇರುವೆಯ ಸಲುವಾಗಿ ತನ್ನ ಪ್ರಾಣವನ್ನು ಕೊಡಲು ಹಿಂಜರಿಯುವದಿಲ್ಲ. ಈ ಸಿದ್ಧಾಂತಗಳು ಬುದ್ಧನಿಂದ ಪ್ರಸಾರಮಾಡಲ್ಪಟ್ಟವು.

ವಿಷಮ ವಾತಾವರಣದಿಂದ ಕೂಡಿದ ಈ ಜಗತ್ತಿಗೆ ಬೌದ್ಧಧರ್ಮದ ಒಳ್ಳೆಯ ತತ್ವಗಳನ್ನು ಸ್ವೀಕರಿಸಲು ಪರ್ಯಾಪ್ತವಾಗಿದೆ. ಬುದ್ಧನ ಅನುಯಾಯಿ ಗಳು ಧರ್ಮಪ್ರಸಾರದಲ್ಲಿ ಅತ್ಯಂತ ಉತ್ಸಾಹಿಗಳಾಗಿದ್ದರು. ಈಗ ಎಲ್ಲ ಕಡೆಗೂ ಮಾನವ ಜನಾಂಗದಲ್ಲಿ ಅತೃಪ್ತಿ ಭಾವನೆಯು ದೃಷ್ಟಿಗೋಚರವಾಗುತ್ತದೆ. ಮನುಷ್ಯನು ತಾಮಸ ಗುಣದಿಂದ ಜಡತನಗಳಿಕ್ಕೆ ಹತ್ತಿದ್ದಾನೆ. ಸ್ವಾರ್ಥದ

ಕಾರಣ ಎಲ್ಲ ಕಡೆಗೂ ಯುದ್ಧದ ಭಯಂಕರ ವಾತಾವರಣವು ಉಂಟಾಗಲಿಕ್ಕೆ ಹತ್ತಿದೆ. ಜನರ ಹೃದಯವನ್ನು ಒಳ್ಳೆಯ ಮಾರ್ಗದ ಕಡೆಗೆ ತರಬೇಕಾಗಿದೆ. ಇದಲ್ಲದೆ ಅವರ ಹೃದಯಗಳನ್ನು ಒಂದುಗೂಡಿಸಬೇಕಾಗಿದೆ. ಜ್ಞಾನ ಭಿಕ್ಷೆಯ ಪಾತ್ರೆಯನ್ನು ಕೊಟ್ಟು ಜನ್ಮವನ್ನು ಸಫಲಗೊಳಿಸುವದೇ ದೊಡ್ಡ ತಪಸ್ಸಾಗಿದೆ. ಯಾವನು ಮನುಷ್ಯನ ಆಂತರಿಕ ದುಃಖಿಗಳನ್ನು ನಿವಾರಣೆ ಮಾಡಿ ಅವನ ಹೃದಯ ವನ್ನು ಪವಿತ್ರವನ್ನಾಗಿ ಮಾಡಿ ಉತ್ತಮ ಸದ್ಗುಣಗಳನ್ನು ಬಿತ್ತುವದರಲ್ಲಿ ಸಾಧನಾ ಮಾರ್ಗದ ಪರಿಚಯವನ್ನು ಮಾಡಿಕೊಡುವನೊ ಅವನೇ ತಪಸ್ವಿ.

ಇಂದು ಜಾಗೃತ ಜಗತ್ತಿನಲ್ಲಿ ಬುದ್ಧನ ಸಂದೇಶವು ಬಹಳ ಅವಶ್ಯಕವಾಗಿದೆ. ಇಂದಿನ ವಿಷಮ ಪರಿಸ್ಥಿತಿಯಲ್ಲಿ ನಾವೆಲ್ಲರೂ ಕೂಡಿಕೊಂಡು ಜ್ಞಾನದ ಪ್ರಚಾರ ಧರ್ಮದ ರಕ್ಷಣೆ ಹಾಗೂ ಮಾನವ ಸಮಾಜದ ಕಲ್ಯಾಣಕ್ಕಾಗಿ ಪ್ರವೃತ್ತರಾಗ ಬೇಕಾಗಿದೆ. ಆಗ ಬುದ್ಧನ ಈ ಸಂದೇಶವು ಸಫಲವಾಗಬಲ್ಲದು.

ಬುದ್ಧಂ ಶರಣಂ ಗಚ್ಛಾಮಿ
ಧರ್ಮಂ ಶರಣಂ ಗಚ್ಛಾಮಿ
ಸಂಘಂ ಶರಣಂ ಗಚ್ಛಾಮಿ

ಭಾರತವಷ್ಟೆ ಅಲ್ಲ ಸಂಪೂರ್ಣ ಜಗತ್ತಿನಲ್ಲಿಯೇ ಶಾಂತಿಯ ವಾತಾವರಣವು ಉತ್ಪನ್ನವಾಗಲಿ. ಇಂದು ನಾವು ಒಂದು ವೇಳೆ ವಿಶ್ವಕಲ್ಯಾಣಕ್ಕಾಗಿ ಪ್ರವೃತ್ತ ರಾಗದಿದ್ದಲ್ಲಿ ಮಾನವ ಜನಾಂಗ ಮತ್ತು ಜಗತ್ತು ಯಾವ ವಿನಾಶದ ಮಡುವಿನ ಕಡೆಗೆ ಹೋಗುವದೆಂಬುದು ಹೇಳಲಾಗದು. ಇಂದು ನಾವೆಲ್ಲರೂ ಕೂಡಿಕೊಂಡು ಜಗತ್ತಿಗೆ ಪ್ರಶಸ್ತವಾದ ಜ್ಞಾನದ ಮಾರ್ಗವನ್ನು ತೋರಿಸೋಣ. ಭಾರತಕ್ಕಷ್ಟೆ ಅಲ್ಲ ಸಂಪೂರ್ಣ ಜಗತ್ತಿಗೆ ಶಾಂತಿ ದೊರೆಯಲಿ ಮತ್ತು ಮಾನವ ಜನಾಂಗವು ಸುಖಿಯಾಗಲೆಂದು ಈಶ್ವರನಲ್ಲಿ ಪ್ರಾರ್ಥಿಸುತ್ತೇವೆ.

ಹುಬ್ಬಳ್ಳಿಯಲ್ಲಿರುವ ಬೌದ್ಧ ವಿಹಾರ ಮಂದಿರದ ಉದ್ಘಾಟನೆಯ ಸಮಾರಂಭ ದಲ್ಲಿ ಹಿಂದಿ ಭಾಷೆಯಲ್ಲಿ ಅಪ್ಪಣೆ ಕೊಡಿಸಿದ ಅಧ್ಯಕ್ಷೀಯ ಭಾಷಣದ ಅನುವಾದ. ೧೦-೧೨-೬೭ ನೆಯ ದಿನ.

ಸತ್ಯವೇ ದೇವರು

ದೇವರನ್ನು ಕಾಣಲು ಸತ್ಯಾರಾಧನೆ ಮಹತ್ಸಾಧನೆಯಾಗಿದೆ, ಸತ್ಯಾರಾಧನೆಯಿಂದ ವ್ಯಕ್ತಿಯಲ್ಲಿ ಹುದುಗಿರುವ ತಮಸ್ಸು ನಷ್ಟವಾಗಿ ಅಂತಃಸ್ಫೂರ್ತಿ ಉದಯವಾಗುವದಲ್ಲದೆ ಆತ್ಮಜ್ಯೋತಿ ಬೆಳಗುತ್ತದೆ. ಸತ್ಯವನ್ನರಿಯಬೇಕಾದರೆ ಒಳಗಣ್ಣು ತೆರೆಯಬೇಕಾಗುತ್ತದೆ. ಸಣ್ಣತನದ ಕ್ಷುದ್ರವಿಚಾರಗಳನ್ನು ತೊರೆಯಬೇಕಾಗುತ್ತದೆ. ಮುಚ್ಚುಮರೆಯ ತೆರೆಯನ್ನು ಸರಿಸಬೇಕಾಗುತ್ತದೆ. ದೇವರನ್ನು ಕುರಿತು ಮೊರೆಯಿಡಬೇಕಾಗುತ್ತದೆ. ಆಗ ಸತ್ಯಸಾಧನೆ ಸಿದ್ಧಿಸುತ್ತದೆ. ಸತ್ಯವನ್ನರಸುತ್ತ ಹೋದಂತೆ ಕವಿದ ಕತ್ತಲು ದೂರಾಗಿ ಸತ್ಯವೇ ದೇವರೆಂದು ಅರಿವಾಗುತ್ತದೆ. ಸತ್ಯದೊಡನೆ ಹೋರಾಡಿದಷ್ಟೂ ಹೊಳೆಯುತ್ತದೆ. ಅಂತರಂಗದಲ್ಲಿ ಹಿತವಾಗುತ್ತದೆ. ಆತ್ಮಾನುಭೂತಿಯನ್ನು ಅನುಭವಿಸಬೇಕಾಗುತ್ತದೆ. ಸತ್ಯವಿದ್ದಲ್ಲಿ ಧೈರ್ಯವು ಸಹಜವಾಗಿಯೇ ಮನೆ ಮಾಡುತ್ತದೆ. ಸತ್ಯ ಸಂಶೋಧನೆಯಿಂದ ಮಾನವನು ಬೇಕಾದ ಕಾರ್ಯವನ್ನು ಮಾಡಬಲ್ಲ ಬೃಹತ್‌ಶಕ್ತಿ ಆವಿರ್ಭವಿಸುತ್ತದೆ. ಅಜ್ಞಾನ, ಅಹಂಕಾರ ಮತ್ತು ಭ್ರಾಂತಿಯನ್ನು ದೂರ ಮಾಡಲು ಸತ್ಯದಂತಹ ಶಸ್ತ್ರ ಮತ್ತೊಂದಿಲ್ಲ. ಸತ್ಯಸೃಷ್ಟಿಯಲ್ಲಿ ಇಳಿದಂತೆ ಉಚ್ಚತಮ ಆದರ್ಶಗಳು ಕಣ್ಣಿಗೆ ಕಾಣಿಸುತ್ತವೆ. ಸತ್ಯದ ಬೆಳಕಿನಲ್ಲಿ ಹೋದಂತೆ ಅಸತ್ಯ ಮತ್ತು ರಾಗದ್ವೇಷಗಳ ಅಂಧಕಾರವು ಸರಿದುಹೋಗುತ್ತದೆ. "ಸತ್ಯಕ್ಕೆ ಸಾವಿಲ್ಲ, ಸುಳ್ಳಿಗೆ ಸುಖವಿಲ್ಲ" ಈ ಸಿರಿನುಡಿಯ ಭಾವವು ಅರಿವಾದಾಗ ಮನಸ್ಸಿಗೆ ಸಮಾಧಾನವಾಗಿ ಶಾಂತಿಯುಂಟಾಗುತ್ತದೆ. "ಸತ್ಯಸಾಧನೆಗೆ ನಿಸ್ಪೃಹವಾದ ಶೀಲ, ನಿರ್ಮಲವಾದ ದೃಷ್ಟಿ, ಸದ್ವಿಚಾರಗಳ ಚಿಂತನ ಬೆಳೆದಾಗ ಸತ್ಯಸಂಸಿದ್ಧಿ. ಆಗ ಈಶ್ವರ ಸಾಕ್ಷಾತ್ಕಾರವು ಸಾಧ್ಯ. ಸುಳ್ಳು ಹೇಳುವದು ಸುಲಭ. ಸತ್ಯನುಡಿಯುವದು ಕಡುತರ ಕಷ್ಟ. ನುಡಿದಂತೆ ನಡೆದರೆ ಅದೇ ಜನ್ಮ ಕಡೆ. ಈ ನುಡಿಯು ನಡೆಯಲ್ಲಿ ಬಂದಾಗ ನಿಜವಾದ ಸತ್ಯಸಾಧನೆ ಮಾಡಿದಂತೆ. ಮಹಾತ್ಮಾ ಬಸವಣ್ಣನವರು ಒಂದೆಡೆ–

"ದೇವಲೋಕ ಮರ್ತ್ಯಲೋಕವೆಂಬುದು ಬೇರಿಲ್ಲ ಕಾಣಿರೋ
ಸತ್ಯವ ನುಡಿಯುವುದೇ ದೇವಲೋಕ, ಮಿಥ್ಯವ ನುಡಿಯುವುದೇ
ಮರ್ತ್ಯಲೋಕ"

ಎಂದು ತಿಳಿಸಿ ಸತ್ಯದ ಮಹತ್ವವನ್ನು ವಿವರಿಸಿದ್ದಾರೆ. "ಸತ್ಯಂ ವದ; ಧರ್ಮಂ ಚರ, ಸತ್ಯಮೇವ ಜಯತೇ ನಾನೃತಂ" ಸತ್ಯವೇ ಗೆಲ್ಲುತ್ತದೆ. ಸುಳ್ಳು ಅಲ್ಲ ಎಂದು ದಾಗಿ ಉಪನಿಷತ್ತು ಸಹ ಸಾರಿದೆ. ಸತ್ಯದ ಹೆದ್ದಾರಿಯಲ್ಲಿ ನಡೆಯುವವರಿಗೆ

ಕಷ್ಟಪರಂಪರೆಗಳು ಅಡ್ಡಿ ಆತಂಕಗಳು ಸಾಕಷ್ಟು ಬಂದರೂ ಸಹ ಅಂಜದೇ ಅಳುಕದೇ ಅಸತ್ಯದ ಧೂಳು ಮುತ್ತದಂತೆ ನೋಡಿಕೊಂಡು ದಾರಿಯನ್ನು ಸಾಗಿದರೆ ಸತ್ಯವೇ ದೇವರು ಎಂಬುದು ಮನಸ್ಸಿನೊಳಗೆ ಒಡಮೂಡಿ ಪರಮಶ್ರೇಯಸ್ಸು ದೊರೆಯುತ್ತದೆ. ಈ ರೀತಿ ಸತ್ಯಾರಾಧನೆ ಮಾಡಿದಂತೆ ಆತ್ಮಕ್ಕೆ ಸುಖದೊರೆತು ಸತ್ಯದ ಸಮ್ಯಕ್ ದರ್ಶನವಾಗುತ್ತದೆ. ಸತ್ಯಾರಾಧಕರಾದ ಮಹಾತ್ಮಾ ಗಾಂಧಿಯವರು ಒಂದೆಡೆ ಈ ರೀತಿ ತಿಳಿಸಿದ್ದಾರೆ.

"Truth is my God. Truth tells that when I am striving to achieve the attainment of Non-Voilence, it is possible through truth only. If we want to see the truth personally which is universal soul and which is universalised it is possible to love the narrow mindedness of the world. It is not possible to run away from any life's centre. There is the reason that truth and faith which have drawn me to political sphere. It is my confidence that God is the strength of life and he is truth and illumination."

ಅಂದರೆ ಸತ್ಯ ನನ್ನ ದೇವರು ಅಹಿಂಸೆಯ ಸಾಧನೆಗಾಗಿ ನಾನು ಶ್ರಮಿಸುವಾಗ ಸತ್ಯ ಹೇಳುತ್ತದೆ. ನನ್ನ ಮೂಲಕವೇ ಅದರ ಸಿದ್ಧಿಯೆಂದು. ವಿಶ್ವಾತ್ಮಕವೂ ವಿಶ್ವವ್ಯಾಪಿಯೂ ಆದ ಸತ್ಯವನ್ನು ಸಾಕ್ಷಾತ್ತಾಗಿ ಸಂದರ್ಶಿಸಬೇಕಾದರೆ ಸೃಷ್ಟಿಯಲ್ಲಿ ಕ್ಷುದ್ರತಮವಾದುದನ್ನು ತನ್ನಂತೆ ಪ್ರೀತಿಸುವದು ಸಾಧ್ಯವಾಗಲೇಬೇಕು. ಆ ಹಂಬಲವನ್ನು ಜೀವನದ ಯಾವ ಕ್ಷೇತ್ರದಿಂದಲೂ ವಿಮುಖನಾಗಲು ಸಾಧ್ಯವಿಲ್ಲ. ನನ್ನ ಸತ್ಯ, ಶ್ರದ್ಧೆ ನನ್ನನ್ನು ರಾಜಕೀಯ ಕ್ಷೇತ್ರಕ್ಕೆ ಎಳೆದುತಂದಿರುವದು ಈ ಕಾರಣದಿಂದಲೇ ಭಗವಂತನೇ ಪ್ರಾಣಶಕ್ತಿ. ಅವನೇ ಸತ್ಯ ಮತ್ತು ಜ್ಯೋತಿ ಎಂಬುದು ನನ್ನ ವಿಶ್ವಾಸ. ಮಹಾತ್ಮಾ ಗಾಂಧಿಯವರ ಈ ನುಡಿಗಳು ಮಾನವನಿಗೆ ಬೆಳಕನ್ನು ನೀಡುವ ಅಮೂಲ್ಯ ರತ್ನಗಳಂತಿವೆ. ಭಗವಂತನೇ ಸತ್ಯವೆಂಬುದನ್ನು ಅವರು ತಿಳಿದವರಾದ್ದರಿಂದಲೇ ಭಾರತದ ಸ್ವಾತಂತ್ರ್ಯ ಪಡೆಯಲು ಸತ್ಯವನ್ನೇ ಕೈದೀವಿಗೆಯನ್ನಾಗಿ ಮಾಡಿಕೊಂಡು ಭಾರತೀಯ ಸಂಸ್ಕೃತಿಯನ್ನು ಎತ್ತಿಹಿಡಿದರು. ಸತ್ಯದ ಪೂಜೆಯನ್ನು ಮಾಡುತ್ತ ಧ್ಯಾನಿಸುತ್ತ ಅಹಿಂಸೆಯೆಂಬ ರತ್ನವನ್ನು ಕಂಡುಹಿಡಿದುಕೊಂಡರು. ಸತ್ಯವಲ್ಲದ ಬೇರೆ ದೇವರಿಲ್ಲವೆಂಬ ತಮ್ಮ ನಿರಂತರ ಅನುಭವದಿಂದ ಗಾಂಧಿಯವರು ತೋರಿಸಿಕೊಟ್ಟಿದ್ದಾರೆ. "Honesty is the best policy" ಪ್ರಾಮಾಣಿಕತೆಯೇ ಉತ್ತಮ ವ್ಯವಹಾರನೀತಿಯೆಂದು ತಿಳಿಸಿ ಸತ್ಯದ ಪೂರ್ಣ ದರ್ಶನವಾಗಬೇಕಾದರೆ ನಿತ್ಯಜೀವನದಲ್ಲಿಯೂ ಪವಿತ್ರ ಕರ್ತವ್ಯವನ್ನು ಪಾಲಿಸಲು ಸಿದ್ಧರಾಗಿರಬೇಕೆಂದು ಸತ್ಯಾಗ್ರಹದ ಮೂಲಕ ಸಮಾಜದಲ್ಲಿ ತಲೆದೋರುವ

ಆರ್ಥಿಕ ಮುಗ್ಗಟ್ಟು, ಅನೀತಿ ಮುಂತಾದ ಎಲ್ಲ ರೋಗಗಳನ್ನು ಹೋಗಲಾಡಿಸಬಹುದೆಂದು ತಿಳಿಸಿದ್ದಾರೆ. ಆದ್ದರಿಂದ ನಾವಿಂದು ಪರಮಾತ್ಮನನ್ನು ಅರಿತುಕೊಳ್ಳಲು ದಿಟವ ನುಡಿದು ಸದ್ವಿಚಾರ ಮತ್ತು ಸದಾಚಾರದಲ್ಲಿ ಮನಸ್ಸನ್ನು ತೊಡಗಿಸಿದರೆ ಸಾರ್ಥಕತೆ ಇಲ್ಲವಾದರೆ ಜೀವನವು ಕಣ್ಮರೆಯಾದಂತೆ ವ್ಯರ್ಥವಾಗುವದು. ಅಂತರಂಗ ಬಹಿರಂಗ ಶುದ್ಧಿಯಾಗಲು ಸತ್ಯಸಾಧನೆಯೇ ಸಂಪೂರ್ಣ ಅರಿವಿನ ಸಾಧನೆ ಮತ್ತು ನಿಜವಾದ ಸತ್ಯಾರಾಧನೆ ಆ ರೀತಿ ಪೂಜಿಸಿದಾಗ ಸತ್ಯದಲ್ಲಿ ಸೌಂದರ್ಯವನ್ನು ಕಾಣಬಹುದು. ಶಿವನನ್ನು ನೋಡಬಹುದು. "ಸತ್ಯಾನ್ನಾಸ್ತಿ ಪರೋಧರ್ಮಃ" ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲವೆಂದು ಆಗ ಅರ್ಥವಾಗುವದು. ಆದಕಾರಣ ನೈತಿಕ ಜೀವನಕ್ಕೂ, ಶಿಕ್ಷಣಕ್ಕೂ, ಸಂಸ್ಕೃತಿಗೂ, ಆತ್ಮಸಾಕ್ಷಾತ್ಕಾರಕ್ಕೂ ಸತ್ಯವೇ ಮೂಲಾಧಾರ.

೧೯೭೦ ರಲ್ಲಿ ಧಾರವಾಡದ ಆ. ವಾ. ಆಕಾಶವಾಣಿ ಕೇಂದ್ರದಿಂದ ಪ್ರಸಾರವಾದ ವಿಚಾರದೀಪಿಕೆ.

ಶಿಸ್ತು, ಸಂಯಮ

ಶಿಸ್ತು, ಸಂಯಮಗಳು ಮಾನವನಿಗೆ ಆತ್ಮೋದ್ಧಾರ ಮಾಡಿಕೊಳ್ಳಲು ಮೈಲುಗಲ್ಲುಗಳಿದ್ದಂತೆ ಕಡುದರ್ಪವೇರಿದ ಒಡಲೆಂಬ ಬಂಡಿಗೆ ಕಡೆಗೀಲುಗಳಿದ್ದಂತೆ ಆತ್ಮಶಕ್ತಿಯನ್ನು ಸಂಪ್ರಾಪ್ತಿಗೊಳಿಸಿಕೊಳ್ಳಲು ಆತ್ಮಸಂಯಮನವೇ ತಾಯಿಬೇರು. ಜ್ಞಾನವೃಕ್ಷವು ಚಿಗುರೊಡೆದು ಸಮೃದ್ಧಿಯಾಗಲು ಶಿಸ್ತು, ಸಂಯಮಗಳೆಂಬ ನೀರು, ಗೊಬ್ಬರಗಳನ್ನು ಹಾಕಿದಾಗ ರಸವತ್ತಾದ ಫಲವನ್ನು ನೀಡುವದು. ಲೌಕಿಕರಿಗೂ ಮತ್ತು ಆಧ್ಯಾತ್ಮಸಾಧಕರಿಗೂ ಶಿಸ್ತು, ಸಂಯಮಗಳು ಅತ್ಯವಶ್ಯ ಬೇಕು. ಇವುಗಳಿಲ್ಲದೆ ಜೀವನಕ್ಕೆ ಶಾಂತಿ ಸಿಗಲಾರದು. ಭಾವ ಶುದ್ಧಿಯಾಗ ಲಾರದು. ಚಿತ್ತವು ನಿಲ್ಲಲಾರದು. ಅದಕ್ಕಾಗಿಯೇ ಷಣ್ಮುಖಸ್ವಾಮಿಗಳು ತಮ್ಮ ದೊಂದು ವಚನದಲ್ಲಿ—

"ಮನವೆಂಬ ಮರ್ಕಟನು ತನುವೆಂಬ ವೃಕ್ಷವನೇರಿ
ಇಂದ್ರಿಯಗಳೆಂಬ ಶಾಖೆ ಶಾಖೆಗೆ ಹಾರಿ ವಿಷಯಂಗ
ಳೆಂಬ ಹಣ್ಣು ಫಲಂಗಳ ಗ್ರಹಿಸಿ ಭವದತ್ತ ಮುಖವಾಗಿ
ಹೋಗುತ್ತಿದೆ ನೋಡಾ, ಈ ಮನವೆಂಬ ಮರ್ಕಟನ
ನಿಮ್ಮ ನೆನೆಹೆಂಬ ಪಾಶದಲ್ಲಿ ಕಟ್ಟಿ ಎನ್ನನುಳುಹಿಕೊಳ್ಳಯ್ಯ
ಅಖಂಡೇಶ್ವರಾ"

ಈ ರೀತಿಯಾಗಿ ತಮ್ಮ ಗುರುಗಳನ್ನು ಬೇಡಿಕೊಂಡಿದ್ದಾರೆ. ಆತ್ಮಸಂಯ ಮನವಿಲ್ಲದೆ ಧ್ಯಾನ ನಿಲ್ಲಲಾರದೆಂದು ತಿಳಿಸಿಕೊಟ್ಟಿದ್ದಾರೆ.

ಆತ್ಮಸಂಯಮವಿಲ್ಲದ ಜೀವನ ಕಡಿವಾಣವಿಲ್ಲದ ಕುದುರೆಯಂತೆ ನಿರರ್ಥಕ. ಆತ್ಮಸಂಯಮನದಿಂದ ಆತ್ಮಕ್ಕೆ ಆನಂದ ದೊರೆಯುವದಲ್ಲದೆ ಮನಸ್ಸಿನಲ್ಲಿ ದೃಢ ನಿರ್ಧಾರ ಉಂಟಾಗುವದು. ಆತ್ಮಸಂಯಮನವೆಂಬ ಆಣೆಕಟ್ಟನ್ನು ಕಟ್ಟದಿದ್ದರೆ ಶರೀರವೆಂಬ ಹೊಲದಲ್ಲಿ ಕಾಮ–ಕ್ರೋಧಾದಿ ದುರ್ಗುಣಗಳೆಂಬ ಕಸಕಡ್ಡಿಗಳು ಹುಟ್ಟಿ ಕ್ರಮಬದ್ಧ ನಿಯಮಗಳಂತಿರುವ ಆಚಾರವಿಚಾರಗಳು ನಿರ್ನಾಮವಾಗಿ ನಿರಂತರ ದುಃಖಕ್ಕೀಡಾಗುವವಲ್ಲದೆ ಇಹಪರ ಸುಖವನ್ನು ಪಡೆಯಲಾರನು. ನೀರನ್ನು ಬಿಟ್ಟ ಮೀನಿನಂತೆ ಅವನ ಗತಿಯಾಗುವದು. ಸಂಯಮ ಶೂನ್ಯ ಜೀವನ ಮತ್ತು ಅಶಿಸ್ತು ಮನುಷ್ಯನ ಭವಿಷ್ಯನಿರ್ಮಾಣಕ್ಕೆ ತೊಂದರೆಯುಂಟಾಗುವದಲ್ಲದೆ ಗಾಳಿಗೊಡ್ಡಿದ ಸೊಡರಿನಂತೆ ಜೀವನವಾಗುವದು. ಶಿಸ್ತು ವಿಧೇಯತೆಗಳೇ ಯಶದ

ಮೊದಲನೆಯ ಮೆಟ್ಟಿಲು ಎಂದು ವಿನೋಬಾ ಭಾವೆಯವರು ತಿಳಿಸಿದರೆ, ಮಹಾತ್ಮಾಗಾಂಧಿಯವರು ನಿಯಮಿತತನ ಮತ್ತು ಶಿಸ್ತು ಸುಸಂಸ್ಕೃತ ಜೀವನಕ್ಕೆ ಒಂದು ಅಲಂಕಾರವೆಂದು ತಿಳಿಸಿದ್ದಾರೆ. ಹಿಂದಿನ ಶರಣರು ಶರಣೆಯರು ಆತ್ಮ ಸಂಯಮ ಮತ್ತು ಮನೋನಿಗ್ರಹಗಳಿಗೆ ಹೆಚ್ಚು ಪ್ರಾಧಾನ್ಯತೆ ನೀಡಿದ್ದಾರೆ. ಆತ್ಮಸಂಯಮವಿಲ್ಲದ ತಪಸ್ಸು ಜ್ಞಾನವು ಮನುಷ್ಯನನ್ನು ಸಫಲಜೀವಿಯನ್ನಾಗಿ ಮಾಡಲಾರವೆಂದು ಶಿವಶರಣರ ಅಭಿಮತ. ಆತ್ಮಜ್ಞಾನಕ್ಕಿಂತ ಹೆಚ್ಚಿನ ಜ್ಞಾನ ಮತ್ತೊಂದು ಇರಲಾರದು. ಆತ್ಮನಿಗ್ರಹಕ್ಕಾಗಿಯೇ ಶರಣರು ಹಗಲಿರುಳು ದುಡಿದು ದೇವರನ್ನು ಧ್ಯಾನಿಸಿ ಮೊರೆಯಿಟ್ಟು ಬೇಡಿಕೊಂಡಿದ್ದಾರೆ. ಆತ್ಮಶಕ್ತಿಯ ದಿವ್ಯ ತೇಜಸ್ಸನ್ನು ಪಡೆದು ಆತ್ಮಸಾಕ್ಷಾತ್ಕಾರ ಮಾಡಿಕೊಂಡಿದ್ದಾರೆ. ಪರಿಪಕ್ವವಾದ ಆತ್ಮಜ್ಞಾನಕ್ಕೆ ಆತ್ಮಸಂಯಮನವೇ ಮೂಲಾಧಾರ. ಆತ್ಮವಂಚನೆಯು ಜ್ಞಾನ ಕ್ರಿಯೆಗಳನ್ನು ಕೊಲ್ಲುತ್ತದೆ. ಅಜ್ಞಾನದ ಕೊಳೆಯನ್ನು ತುಂಬಿ ಆತ್ಮಚ್ಯುತಿಗೆ ಮೂಲಕಾರಣವಾಗುತ್ತದೆ. ಹೃದಯ ದೌರ್ಬಲ್ಯವು ಅಗಾಧವಾದ ಆತ್ಮಶಕ್ತಿ ಸಂಪಾದನೆಗೆ ಕಟ್ಟಿಗೆಯನ್ನು ಕೊರೆಯುತ್ತಿರುವ ಹುಳದಂತೆ ಆತಂಕವೊಡ್ಡುವುದಲ್ಲದೆ ಜೀವನವೃಕ್ಷವನ್ನೇ ನಾಶಮಾಡುವದು. ಆತ್ಮಸಂಯಮವಿರಹಿತರಾಗಿ ಶಕ್ತಿ-ಶೂನ್ಯ ರಾಗುತ್ತಿರುವವರನ್ನು ಕುರಿತು ಒಂದೆಡೆ ಸ್ವಾಮಿ ವಿವೇಕಾನಂದರು ಹೃದಯಂಗಮ ವಾಗಿ ತಿಳಿಸಿದ್ದಾರೆ.

"Weakness is the one cause of suffering we become miserable we are weak we lie steal kill and commit other crimes because we are weak. We die because we are weak. Where there is nothing to weaken us there is no death nor sorrow."

ಅಂದರೆ ನಮ್ಮ ನರಳುವಿಕೆಗೆ ಕಾರಣ ದುರ್ಬಲತೆಯೂ ಒಂದು. ನಾವು ದುರ್ಬಲರಿರುವದರಿಂದಲೇ ದುಃಖಾರ್ತರಾಗುವೆವು. ನಾವು ಹುಸಿ ನುಡಿಯುವದು, ಕಳವು ಮಾಡುವದು ಮತ್ತು ಇತರ ಅಪರಾಧಗಳನ್ನೆಸಗುವದು ನಮ್ಮಲ್ಲಿಯ ದುರ್ಬಲತೆಯಿಂದಾಗಿಯೇ ಬರುವದು. ನಮ್ಮಲ್ಲಿ ದುರ್ಬಲಗೊಳಿಸುವಂತಹದೇನೂ ಇಲ್ಲದಿದ್ದಲ್ಲಿ ಸಾವೂ ಇರುತ್ತಿರಲಿಲ್ಲ. ದುಃಖವೂ ಇರುತ್ತಿರಲಿಲ್ಲವೆಂಬುದಾಗಿ ತಿಳಿಸಿದ ಅಂತಃಸ್ಫೂರ್ತಿಯ ನುಡಿಗಳು ನಮಗೆ ಕೈದೀವಿಗೆಗಳಾಗಿವೆ.

ಆದುದರಿಂದ ನಮ್ಮ ಜೀವನವನ್ನು ಶಿಸ್ತು, ಸಂಯಮಗಳಿಂದ ಇರಿಸಿಕೊಂಡರೆ ಆತ್ಮರಕ್ಷಣೆಯು ಸಹಜವಾಗಿಯೇ ಲಭ್ಯವಾಗುವದು. ಶಿಸ್ತು ಸಂಯಮಗಳನ್ನು ನಿರಂತರ ಸಾಧಿಸಬೇಕಾದರೆ, ಸತತೋದ್ಯೋಗ, ಕಾಯಕನಿಷ್ಠೆ, ಈಶ್ವರಧ್ಯಾನ ಮುಂತಾದವುಗಳನ್ನು ನಿಯಮನಿಷ್ಠೆಯೊಡನೆ ಆಚರಿಸಿದರೆ ಮಾತ್ರ ಸಾಧ್ಯ.

ಇಲ್ಲವಾದರೆ ಹಸನುಮಾಡದ ಹೊಲದಂತೆ ರಸವಿರದ ಹಣ್ಣಿನಂತೆ ನಿಷ್ಪ್ರಯೋಜನವಾಗುವದು.

ಜೀವನದಲ್ಲಿ ಜಯಪಡೆದು ಸುಖಸಾಗರದಲ್ಲಿ ತೇಲಬೇಕಾದರೆ ಶಿಸ್ತು ಸಂಯಮಗಳೇ ಮುತ್ತುರತ್ನಗಳು. ಆತ್ಮಸೌಂದರ್ಯವನ್ನು ಪಡೆದು ಆತ್ಮಜ್ಯೋತಿಯಲ್ಲಿ ಬೆಳಗಬೇಕಾದರೆ ಆತ್ಮಸಂಯಮನವೇ ದಾರಿದೀಪ ಶಿಸ್ತಿನಿಂದಿರುವುದೇ ಜೀವನದ ಭದ್ರಬುನಾದಿ.

೧೯೭೦ ರಲ್ಲಿ ಧಾರವಾಡದ ಆ. ಭಾ. ಆಕಾಶವಾಣಿ ಕೇಂದ್ರದಿಂದ ಪ್ರಸಾರಿತವಾದ ವಿಚಾರದೀಪಿಕೆ.

ಭಾಷಾ ಬಾಂಧವ್ಯ

ಭಾಷೆಯು ಬಾಂಧವ್ಯತೆಗೆ ಹಾಗೂ ರಾಷ್ಟ್ರದ ಶಕ್ತಿಯ ಬೆಳವಣಿಗೆಗೆ ಭಾಷೆಯ ವ್ಯಾಮೋಹವು ಕಾರಣೀಭೂತವಾದಂತಾಗಿದೆ. ರಾಷ್ಟ್ರಕ್ಕೆ ಇದೊಂದು ಮಹತ್ತರವಾದ ಕೊಡುಗೆನಿಸಿದೆ. ಭಾಷೆಯ ಪ್ರಾಚೀನ ಇತಿಹಾಸವನ್ನು ನಿರೀಕ್ಷಿಸಿದರೆ ಅದರ ಪ್ರಭಾವ ಏನು ಕಾಣುತ್ತಿದೆ. ಭಾಷೆಯು ಇಲ್ಲದಿದ್ದರೆ ಮಾನವಕೋಟಿಯು ಬೆಳವಣಿಗೆಯೇ ಆಗುತ್ತಿರಲಿಲ್ಲವೆಂಬುದು ಅಷ್ಟೇ ಅಲ್ಲ, ಪಶುವಿನಂತೆ ಜೀವನವನ್ನು ನಡೆಯಿಸಬೇಕಾಗುತ್ತಿತ್ತು. ಭಾಷೆಯ ಬಲದಿಂದ ಅಂತಃಶುದ್ಧಿಯಾಗುವಲ್ಲದೆ ಪ್ರಾರ್ಥನೆಯನ್ನೂ ಮಾಡಿ ದೇವತ್ವವನ್ನು ಪಡೆಯಲು ಮೂಲ ಸಾಧನವಾಗಿದೆ. ಭಾಷೆಯ ಬಲದಿಂದಲೇ ವಾಗ್ದೇವಿಯ ಪರ್ಯಾಯನಾಮಗಳು ಬೆಳೆದು ಆ ನಾಮಗಳ ಅನುಸಂಧಾನದಿಂದ ಬೆಳಕನ್ನು ಕಾಣಲು ಕಾರಣವಾಗಿದೆ. ಭಾಷಾಜ್ಯೋತಿಯು ಇರದಿದ್ದರೆ ಸಮಸ್ತಲೋಕವೆಲ್ಲ ಅಂಧಕಾರದಲ್ಲಿ ಇರುವುದಾಗಿತ್ತು. ಇದೇ ಮಾತನ್ನು ದಂಡಿಯು ತನ್ನ ಕಾವ್ಯಾದರ್ಶದಲ್ಲಿ—

"ಇದಮಂಧಂತಮಃ ಕೃತ್ಸ್ನಂ ಜಾಯೇತಭುವನ ತ್ರಯಂ।
ಯದಿ ಶಬ್ದಾಹ್ವಯಂ ಜ್ಯೋತಿರಾ ಸಂಸಾರಂ ನ ದೀಪ್ಯತೇ"॥

ಎಂಬುದಾಗಿ ಭಾಷೆಯ ಮಹತ್ವವನ್ನು ಸುಂದರವಾಗಿ ಬಿಂಬಿಸಿದ್ದಾನೆ. ಯಾವ ಭಾಷೆಯನ್ನು ಒಳಹೊಕ್ಕು ನೋಡಿದರೂ ಅದರಲ್ಲಿ ಭಾವ ಬೆಳಕು ತುಂಬಿದ್ದು ಕಂಡುಬರುತ್ತದೆ. ಭಾಷೆಯ ಮೂಲ ಒಂದೇ ಎಂದು ಅನೇಕ ಸಿದ್ಧಾಂತಗಳ ಒಪ್ಪಿಗೆಯ ಮೇಲಿಂದ ಕಂಡುಬರುತ್ತದೆ. ಹೀಗಿದ್ದರೂ ಅನೇಕ ಭಾಷೆಗಳನ್ನು ಈಗ ಜಗತ್ತಿನಲ್ಲಿ ಕಾಣುತ್ತಿದ್ದೇವೆ. ಇದರ ಇಂಗಿತವೇನಿರಬಹುದೆಂದು ತರ್ಕ ಮಾಡಿಕೊಂಡಾಗ ಆ ಆ ದೇಶದ ವಾತಾವರಣ, ಜನ, ನೀರು ವ್ಯಾವಹಾರಿಕ ಸಾಧನ ಅಲ್ಲಿರುವವರ ಧ್ವನಿಗಳ ಸಂಯೋಜನದಿಂದ ಭಾಷೆಯು ಬೇರೆ ಬೇರೆ ತೆರನಾಗಿರಬಹುದೆಂದು ಊಹಿಸಬಹುದು. ಇಂತಹ ಭಾಷೆಗಳು ಜಗತ್ತಿನಲ್ಲಿ ಮೂರು ಸಾವಿರಕ್ಕೂ ಮೇಲ್ಪಟ್ಟು ಗಣತಿಯಾಗಿದೆಯೆಂದು ಭಾಷಾ ಶಾಸ್ತ್ರದ ಇತಿಹಾಸದಿಂದ ತಿಳಿದು ಬರುತ್ತದೆ. ಸಾವಿರಾರು ವರ್ಷಗಳ ಇತಿಹಾಸವನ್ನು ಪಡೆದ ಭಾರತ ದೇಶದಲ್ಲಿಯೂ ಸಾಕಷ್ಟು ಭಾಷೆಗಳು ಸೇರಿ ಈ ಭಾಷೆಯು ಶಕ್ತಿಯನ್ನು ಬೆಳೆಸಿಕೊಂಡಿದೆ. ಭಾಷಾ ಶುದ್ಧಿಯನ್ನು ಭಾಷಾ ವ್ಯುತ್ಪತ್ತಿಯನ್ನೂ ಮತ್ತು ಸಾತ್ವಿಕತ್ವವುಳ್ಳ ಭಾವವನ್ನು ಪಡೆದುಕೊಂಡಿದೆ. ಹೀಗಿದ್ದರೂ ಭಾಷೆಗಳ ಕಿತ್ತಾಟ ಮಾತ್ರ ತಪ್ಪಿಲ್ಲ. ನಮ್ಮ ನಾಡಿನ ಭಾಷೆ ದೊಡ್ಡದು, ನಮ್ಮ ಜನಾಂಗದ ಭಾಷೆ ದೊಡ್ಡದು.

ನಮ್ಮ ಭಾಷೆಯಲ್ಲಿಯೇ ವಿಸ್ತಾರತೆಯಿದೆ. ಮಿಕ್ಕ ಭಾಷೆಗಳಲ್ಲಿ ಸಾಹಿತ್ಯವಿಲ್ಲ, ಭಾವವಿಲ್ಲ, ಸತ್ವವಿಲ್ಲ, ಶಬ್ದ ಸಂಗ್ರಹವಿಲ್ಲ. ನಾವು ಮಾತಾಡುವದು ಶುದ್ಧ, ಇನ್ನೊಬ್ಬರದು ಅಶುದ್ಧ. ಈ ಸಂಕುಚಿತ ವಿಚಾರಗಳೇ ಭಾಷೆಯನ್ನು ಒಡೆಯಲು ಕಾರಣಗಳಾಗಿವೆ ಮತ್ತು ಮಧುರಬಾಂಧವ್ಯ ಭಾವನೆಯನ್ನು ಬೆಳೆಸಲು ಆತಂಕಗಳಾಗಿವೆ. ಹೀಗಾಗಿ ಮನಸ್ಸಿನಲ್ಲಿ ಶುದ್ಧಾಶುದ್ಧತೆಯ ಕಲ್ಪನೆಯ ಭ್ರಮೆಯನ್ನು ತುಂಬಿಕೊಂಡು ನೆರೆಹೊರೆಯವರ ಭಾಷೆಯವರೊಡನೆ ಕಲಹವು ನಡೆಯುತ್ತ ಹೋದರೆ ಭಾಷಾಸೌಂದರ್ಯಕ್ಕೆ ಮತ್ತು ಅದರ ಅಸ್ತಿತ್ವಕ್ಕೆ ಕುಂದುಕೊಟ್ಟಂತೆ. ಮೊದಲು ಪ್ರಾದೇಶಿಕ ಭಾಷೆಯ ಭೇದವನ್ನು ತೊಲಗಿಸಿ ಪರಸ್ಪರ ಭಾಷಾ ಬಾಂಧವ್ಯವನ್ನು ಬೆಳೆಯಿಸಿಕೊಳ್ಳಬೇಕು. ಪ್ರತಿಯೊಂದು ಭಾಷೆಯ ನಾಡಿನವರೂ ತಮ್ಮ ನಾಡಿನಲ್ಲಿರುವ ಶಾಲೆ-ಕಾಲೇಜುಗಳಲ್ಲಿ ಬೇರೆ ಪ್ರಾಂತದ ಭಾಷೆಯ ಬಗೆಗೆ ಆದರವಿತ್ತು ವಿದ್ಯಾರ್ಥಿಗಳಿಗೆ ನೆರೆಹೊರೆಯ ಭಾಷೆಯ ಶಿಕ್ಷಣವನ್ನು ನೀಡಬೇಕು. ಒಂದಕ್ಕಿಂತ ಹೆಚ್ಚು ಭಾಷೆಗಳನ್ನು ಕಲಿಯುವದರಿಂದ ಬುದ್ಧಿ ವಿಕಾಸವಾಗುವದಲ್ಲದೆ ಸಾಹಿತ್ಯವು ಸಮೃದ್ಧಿಯಾಗುವದು. ಇದರಿಂದ ಪರಸ್ಪರ ಪ್ರೇಮ ಸಹಕಾರದೊಡನೆ ಇರಲು ಅನುಕೂಲವಾಗುವದು ವೈಯಕ್ತಿಕತೆ ಕಡಿಮೆಯಾಗಿ ಶಾಶ್ವತವಾದ ಭಾಷಾ ಬಾಂಧವ್ಯಕ್ಕೆ ಅನುವುದೊರೆಯುವುದು. ಪ್ರತಿಯೊಂದು ಭಾಷೆಯವರು ಮತ್ತೊಂದು ಭಾಷೆಯ ಕೃತಿಯನ್ನು ತಮ್ಮ ಭಾಷೆಯಲ್ಲಿ ಪರಿವರ್ತನೆ ಮಾಡಿಕೊಂಡರೆ ಭಾವನೆ, ಕಲ್ಪನೆ ಮತ್ತು ವಿಚಾರಗಳನ್ನು ಹೊಂದಾಣಿಕೆ ಮಾಡಿಕೊಂಡು ಭಾಷಾಬಾಂಧವ್ಯ ಬೆಳೆಸಲು ನಾಂದಿಯಾಗುವದು.

ಪ್ರತಿಯೊಬ್ಬ ವ್ಯಕ್ತಿಯು ಮೊದಲು ತಾಯಿ ಭಾಷೆ ನಂತರ ರಾಷ್ಟ್ರ ಭಾಷೆಯನ್ನು ಕಲಿತು ಆಮೇಲೆ ಸಂಸ್ಕೃತ, ಇಂಗ್ಲೀಷ ಮತ್ತು ಇನ್ನುಳಿದ ನೆರೆಹೊರೆಯ ಭಾಷೆಯನ್ನು ಸಾಹಿತ್ಯಸಂವರ್ಧನೆಗಾಗಿ ಕಲಿತುಕೊಂಡು ಭಾಷಾಮೈತ್ರಿಯನ್ನು ಬೆಳೆಯಿಸಿಕೊಳ್ಳುವದು ಅತ್ಯವಶ್ಯಬೇಕು. ಭಾಷೆ ಭಾಷೆಗಳ ಕಲಹದಿಂದ ಐಕ್ಯತೆಗೆ ಅಡ್ಡಿಯಾಗಿ ಧಾರ್ಮಿಕ ಸಾಮಾಜಿಕ ಹಾಗೂ ರಾಜಕೀಯ ಆದರ್ಶಕ್ಕೆ ಆಘಾತ ವುಂಟಾಗುವದು. ಬೆರಳಿಗೆ ಆದ ನೋವು ಸಂಪೂರ್ಣ ಶರೀರವನ್ನೇ ಆವರಿಸುವಂತೆ ಭಾಷೆ ಭಾಷೆಗಳ ಹೋರಾಟವು ರಾಷ್ಟ್ರವನ್ನೇ ವ್ಯಾಪಿಸಿ ರಾಷ್ಟ್ರೀಯ ಅಭಿವೃದ್ಧಿಗೆ, ಆತ್ಮ ಶಾಂತಿಗೆ ನಿಸ್ಸಂದೇಹವಾಗಿ ಕಷ್ಟವನ್ನೇ ನೀಡಿದಂತಾಗುವದು. ಆದುದರಿಂದ ನಾವು ಮರಾಠಿಗರು, ನಾವು ಕನ್ನಡಿಗರು, ನಾವು ತಮಿಳರು, ನಾವು ತೆಲುಗಿನವರು ಹೀಗೆ ನಮ್ಮ ನಮ್ಮ ಭಾಷೆಗೇನೇ ಮಹತ್ವನೀಡುವ ಅಭಿಮಾನದಲ್ಲಿ ಇನ್ನುಳಿದ ಭಾಷೆಗಳಿಗೆ ಅವಮಾನವಾಗುವಂತೆ ವರ್ತಿಸಿದರೆ ವಿಶಾಲವಾದ ಸಾಹಿತ್ಯ ಮಹಾ ವೃಕ್ಷದ ಟೊಂಗೆಗಳನ್ನೇ ಕಡಿಯುತ್ತಹೋದಂತಾಗುವದು. ಪ್ರಾದೇಶಿಕ ಭಾಷೆ

ಯವರು ಘನವಾದ ಉದ್ದೇಶವನ್ನಿಟ್ಟುಕೊಂಡು ಸರ್ಕಾರ ಮಟ್ಟದಿಂದ ಭಾಷಾ ಬಾಂಧವ್ಯವನ್ನು ಬೆಳೆಸಿದರೆ ರಾಷ್ಟ್ರದ ಶಕ್ತಿಯನ್ನು ಇಮ್ಮಡಿ ಹೆಚ್ಚಿಸಿದಂತಾಗುವುದು. ಇದೇ ರೀತಿಯಾಗಿ ರಾಷ್ಟ್ರಭಾಷೆಯವರೂ ಸಹ ಪ್ರಾದೇಶಿಕ ಭಾಷೆಗಳ ಬೆಳವಣಿಗೆಗೆ ಬೆಂಬಲವನ್ನು ನೀಡಿದರೆ ರಾಷ್ಟ್ರದಲ್ಲಿಯೂ ಐಕ್ಯತೆಯುಂಟಾಗುವುದು.

---

* ೧೯೬೦ರಲ್ಲಿ ಧಾರವಾಡದ ಅ. ಭಾ. ಆಕಾಶವಾಣಿಯಲ್ಲಿ ಪ್ರಸಾರಿತವಾದ ಬಾನುಲಿ ಟೀಕೆ.

ಹೊಂಗಿರಣ

ಸಾಹಿತ್ಯ ಪ್ರಕಾರ : ಗದ್ಯ ಲೇಖನಗಳು
ಮೊದಲ ಮುದ್ರಣ : ೧೯೭೨
ಎರಡನೆಯ ಮುದ್ರಣ : ೧೯೮೪
ರಚನೆಯ ವಯಸ್ಸು : ೪೩
ರಚನಾಸ್ಥಳ : ಹುಬ್ಬಳ್ಳಿ

ಶ್ರೀಜಗದ್ಗುರು ಮೂರುಸಾವಿರ ಮಠದ ಗ್ರಂಥಮಾಲಾ ನಂ. ೪೨

ಹೊಂಗಿರಣ

ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು
ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳು
ಮೂರುಸಾವಿರಮಠ, ಹುಬ್ಬಳ್ಳಿ.

ಮೊದಲನೆಯ ಮುದ್ರಣ : ೧೯೭೨
ಎರಡನೆಯ ಮುದ್ರಣ : ೧೯೮೪

ಪ್ರಕಾಶಕರು :
ಶ್ರೀ ಜಗದ್ಗುರು ಗಂಗಾಧರ ಧರ್ಮಪ್ರಚಾರಕ ಮಂಡಳ
ಮೂರುಸಾವಿರಮಠ, ಹುಬ್ಬಳ್ಳಿ.

ಬೆಲೆ : ೨ ರೂಪಾಯಿ

ಮುದ್ರಣ :
ಪರಂಜ್ಯೋತಿ ಪಾವರ ಪ್ರಿಂಟಿಂಗ್ ಪ್ರೆಸ್, ಹುಬ್ಬಳ್ಳಿ.

ಪರಿವಿಡಿ

ನಂ.		ಪುಟಗಳು
೧.	ಅಸತೋಮಾ ಸದ್ಗಮಯ	೫೭೭
೨.	ತೇನವಿನಾ ತೃಣಮಪಿ ನ ಚಲತಿ	೫೭೯
೩.	ವಿದ್ಯಾದದಾತಿ ವಿನಯಂ	೫೮೧
೪.	ಮೌನಂ ಸರ್ವಾರ್ಥ ಸಾಧನಂ	೫೮೩
೫.	ಸರ್ವೇಂದ್ರಿಯಾಣಾಂ ನಯನಂ ಪ್ರಧಾನಂ	೫೮೫
೬.	ರಸಸಿದ್ಧಾಃ ಕವೀಶ್ವರಾಃ	೫೮೭
೭.	ಉಪಮಾ ಕಾಲಿದಾಸಸ್ಯ	೫೮೯
೮.	ಭಾರವೇರರ್ಥ ಗೌರವಂ	೫೯೧
೯.	ದಂಡಿನಃ ಪದಲಾಲಿತ್ಯಂ	೫೯೩
೧೦.	ಮಾಘೇಸಂತಿ ತ್ರಯೋಗುಣಾಃ	೫೯೫
೧೧.	ಅನ್ನಾನುರೂಪಾ ತನು ರೂಪವೃದ್ಧಿಃ	೫೯೭
೧೨.	ಆತ್ಮಸಂಯಮ ಯೋಗಾಗ್ನೌ ಜುಹ್ವತಿ ಜ್ಞಾನದೀಪಿತೇ	೫೯೯
೧೩.	ಸತ್ಯಾನ್ನಾಸ್ತಿ ಪರೋಧರ್ಮಃ	೬೦೦
೧೪.	ಅಶಾಂತಸ್ಯ ಕುತಃ ಸುಖಮ್	೬೦೨
೧೫.	ಸ್ವಧರ್ಮೇ ನಿಧನಂ ಶ್ರೇಯಃ	೬೦೩
೧೬.	ಪ್ರಜ್ವಾಲಿತೋ ಜ್ಞಾನಮಯ ಪ್ರದೀಪಃ	೬೦೫
೧೭.	ನಾನೃಷಿಃ ಕುರುತೇ ಕಾವ್ಯಂ	೬೦೬
೧೮.	ನ ಸ್ತ್ರೀಸ್ವಾತಂತ್ರ್ಯ ಮರ್ಹತಿ	೬೦೮
೧೯.	ಚಿಂತಾದಹತಿ ಜೀವಿತಂ	೬೧೦
೨೦.	ಕವಿರೇವ ಕವೇರ್ವೇತ್ತಿ	೬೧೨
೨೧.	ಅರ್ಥೋ ಹಿ ಕನ್ಯಾ ಪರಕೀಯ ಏವ	೬೧೪
೨೨.	ಮಧುತಿಷ್ಠತಿ ಜಿಹ್ವಾಗ್ರೇ ಹೃದಯೇತು ಹಾಲಾಹಲಂ	೬೧೬
೨೩.	ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿಗರೀಯಸೀ	೬೧೮
೨೪.	ಕಾಯಕವೇ ಕೈಲಾಸ	೬೨೦
೨೫.	ವಿನಮ್ರತೆ	೬೨೨
೨೬.	ಭಾವೈಕ್ಯ	೬೨೪
೨೭.	ಹರಿಜನೋದ್ಧಾರ	೬೨೬
೨೮.	ಶ್ರಾವಣ ಸಂದೇಶ	೬೨೮

ಹೊಂಗಿರಣದಲ್ಲಿ ಸುಳಿದು ಬಂದ ನುಡಿ

ಹೊಂಗಿರಣ ಎಂಬ ಈ ಕಿರು ಹೊತ್ತಿಗೆ ಮೂರುಸಾವಿರಮಠದ ಪೂಜ್ಯ ಜಗದ್ಗುರು ಗಂಗಾಧರ ರಾಜಯೋಗೀಂದ್ರರ **ತತ್ವಚಿಂತನಗಳ ಮಾಲೆ**; ಜೀವನ ತತ್ವಗಳ **ದೀಪಮಾಲೆ;** ಅವರ ಅಭಿಪ್ರಾಯಗಳು ಇಲ್ಲಿ ಬೆಳೆದು ಬಂದಿವೆ. ಈ ಬಗೆಯ ಹೊತ್ತಿಗೆಗೆ ಮುನ್ನುಡಿ ಬರೆಯುವುದು ಒಂದು ಭಾಗ್ಯ ವಿಶೇಷವೇ ಸರಿ.

ಜಗದ್ಗುರುಗಳ ವಿಶಾಲವಾದ ಹಾಗೂ ಆಳವಾದ ಅಧ್ಯಯನಕ್ಕೆ, ಸಹಜ ಸಾಹಿತ್ಯಾಭಿರುಚಿಗೆ, ಅನುಭವದ ಅಭಿವ್ಯಕ್ತಿಗೆ ಗಾತ್ರದಲ್ಲಿ ಕಿರಿದಾದರೂ ಗುಣದಲ್ಲಿ ಹಿರಿದಾದ ಈ ಹೊತ್ತಿಗೆ ನಿದರ್ಶನವಾಗಿದೆ. ಜೀವನಕ್ಕೆ ಸಂಬಂಧಿಸಿದ, ಸಂಸ್ಕೃತಿಗೆ ಸಂಬಂಧಿಸಿದ, ಸಾಹಿತ್ಯಕ್ಕೆ ಸಂಬಂಧಿಸಿದ ಕೆಲವೊಂದು ತತ್ವೋಕ್ತಿಗಳನ್ನು ಸ್ವಲ್ಪದರಲ್ಲಿ ಆದರೆ ನಿಷ್ಕೃಷ್ಟವಾಗಿ ವಿವರಿಸುವ ವೈಶಿಷ್ಟ್ಯಪೂರ್ಣವಾದ ತತ್ವಯುಕ್ತವಾದ ಬರಹಗಳನ್ನು ಒಳಗೊಂಡಿದೆ. ಅಭಿಪ್ರಾಯಗಳ ಈ ಸಮುದಾಯ; ಬೋಧೋದಯ; ಮನನಕ್ಕೆ ಉತ್ತಮ ವಿಚಾರಗಳಿಲ್ಲಿವೆ; ವಿಚಾರಗಳ ಸಾರವತ್ತಾದ ವಿವರಣೆ ಇಲ್ಲಿದೆ. ವಿವರಣೆ ಉತ್ತಮ ಸಾಹಿತ್ಯ ಸ್ವರೂಪದಲ್ಲಿ ಇಲ್ಲಿ ಮೈದೋರಿದೆ.

ಇದೊಂದು ಚಿಂತನಶೀಲ ಚಿತ್ತದ ಭಾವತರಂಗಮಾಲೆ ಎಂದು ಹೇಳಿದರೆ ಸಮಂಜಸವೀತು. ಯುಗ ಯುಗಗಳಲ್ಲಿ ಜೀವಂತವಾಗಿ ಬೆಳೆದು ಬಂದ ಆಲೋಚನೆಗಳ ಆ ಮೋದ ಸೊಗಸಾಗಿ ಸುಳಿದು ಬಂದಿದೆ. ಈ ಬರಹಗಳ ಆವರಣದಲ್ಲಿ ಒಂದೊಂದು ಹೇಳಿಕೆಯಿಂದ ಆ ಹೇಳಿಕೆಯ ಸೌಗಂಧವೆಂಬ ಭಾವಪೂರ್ಣವಾದ ಅರ್ಥ ಹೊಮ್ಮಿ ಬಂದಿದೆ. ಈ ಬಗೆಯ ಸಾಹಿತ್ಯ ರಚನೆಯು ಸಾರ್ಥಕತೆಯುಳ್ಳದು.

ಈ ಗ್ರಂಥವು **"ತೇನ ವಿನಾ ತೃಣಮಪಿ ನ ಚಲತಿ"** ಎಂಬ ಉಕ್ತಿಯಿಂದ ಮೊದಲಾಗುವುದು ಸಮುಚಿತವೇ ಆಗಿದೆ. "ಸರ್ವಶಕ್ತನಾದ ಪರಮಾತ್ಮನ ಅನುಗ್ರಹದಲ್ಲಿ ತುಂಬ ನಂಬಿಗೆಯಿಟ್ಟು ನಡೆದರೆ ಜೀವನದ ಸಾರ್ಥಕ್ಯ ಸೇರುವುದು" ಎಂಬುದನ್ನು ಮನಮುಟ್ಟುವಂತೆ ಅರುಹಿದ್ದಾರೆ ಜಗದ್ಗುರುಗಳವರು. ನಂಬುಗೆಯ ಬೆಳಕು ಬೇಗ ಮೊದಲಲ್ಲಿಯೇ ಕಾಣಿಸಿ ಬಂದು ಮುನ್ನಡೆಯಲು ನಮ್ಮನ್ನು ಅದು ಅಣಿಗೊಳಿಸಿದೆಯೆನ್ನಬಹುದು.

ಮುಂದಿನ ಬರಹ **'ವಿದ್ಯಾದದಾತಿ ವಿನಯಂ'** ಎಂಬ ಉಕ್ತಿಯ ಮರ್ಮವನ್ನು ಮನೋಹರವಾಗಿ ಬಿಚ್ಚಿ ತೋರಿದೆ; ವಿದ್ಯೆಯಲ್ಲಿ ಶ್ರೀ ಗಂಗಾಧರ ರಾಜಯೋಗೀಂದ್ರರಿಗೆ ತುಂಬ ಆಸಕ್ತಿ: ಅಭಿರುಚಿ, "ವಿದ್ಯೆಯೂ ಆತ್ಮೋನ್ನತಿಗೆ ಬೇಕಾಗುತ್ತದೆ" ಎಂಬ ಮಾತು ಮೌಲ್ಯಯುತವಾಗಿ ಮೂಡಿದೆ. ವಿದ್ಯೆ ಮಾನವನನ್ನು

ಪೂರ್ಣತೆಯತ್ತ ಒಯ್ಯುತ್ತದೆ ಎಂಬ ಮಾತು ಅಷ್ಟೇ ಸತ್ವಯುಕ್ತವಾಗಿದೆ. “ಮೌನವು ಅಂತಸ್ಸಾಧನೆಗೆ ಪವಿತ್ರ ದೇಗುಲವಿದ್ದಂತೆ” ಎಂಬ ಭಾವ “**ಮೌನಂ ಸರ್ವತ್ರ ಸಾಧನಂ**” ಎಂಬ ಬರಹದಲ್ಲಿ ಪ್ರದೀಪ್ತವಾಗಿದೆ. ಮೌನದ ಮಹತಿ ಚೆನ್ನಾಗಿ ಪ್ರತಿಪಾದಿತವಾಗಿದೆ ಇಲ್ಲಿ. ಇದರ ತರುವಾಯ ಬರಹದಲ್ಲಿ ನಯನೇಂದ್ರಿಯದ ಪ್ರಾಧಾನ್ಯ ವಿವರಣೆಯನ್ನು ಪಡೆದಿದೆ. ಕಂಗಳ ಮುಂದಣ ಬೆಳಗಿನ ಬಗೆ ನುಡಿಪಡೆದಿದೆ. ನೇತ್ರವೆಂಬ ಸುವರ್ಣಕೊಡದಲ್ಲಿ ಪರಿಣಾಮ ಉದಕವ ತುಂಬಿ ಅಭಿಷೇಕ ಮಾಡುವೆನಯ್ಯ ಎಂದು ಮೊದಲಾಗುವ ಅಖಂಡೇಶ್ವರ ವಚನ ಈ ಸಂದರ್ಭದಲ್ಲಿ ಉದ್ಧರಿಸಲ್ಪಟ್ಟು ಪರಿಣಾಮದಲ್ಲಿ ಹೆಚ್ಚಿನ ನೆಲೆದೋರಿದೆ.

ಅನಂತರದ ಬರಹಗಳು ಸಾಹಿತ್ಯ ಹಾಗೂ ಕಾವ್ಯಗಳನ್ನು ಬಳಸಿ ಬಂದಿವೆ. ಸುವಿಖ್ಯಾತ ಸಂಸ್ಕೃತ ಕವಿಗಳ ಬಗೆಗೆ ಮೂಡಿ ಬಂದ ‘ರಸಸಿದ್ಧಾಃ ಕವೀಶ್ವರಾಃ’ ‘ಉಪಮಾ ಕಾಲಿದಾಸಸ್ಯ’ ‘ಭಾರವೇರರ್ಥ ಗೌರವಂ’ ‘ದಂಡಿನಃ ಪದಲಾಲಿತ್ಯಂ’ ‘ಮಾಘೇ ಸಂತಿ ತ್ರಯೋಗುಣಾಃ’ ಇವೇ ಮೊದಲಾದ ವಿಮರ್ಶಾಪರ ಉಕ್ತಿಗಳ ಬಗೆಗೆ ಒಂದೊಂದು ಬರಹ ಒಂದೊಂದು ತಿಳಿಯಾದ ವಿವರಣೆಯನ್ನು ವಿಶಿಷ್ಟವಾದ ರೀತಿಯಲ್ಲಿ ಒದಗಿಸಿದೆ. ಬರಿಯ ಮಾತಾಗಿ ಉರುಳಿ ಹೋಗಬಹುದಾದ ಈ ಉಕ್ತಿಗಳಲ್ಲಿ ಜಗದ್ಗುರುಗಳ ಬುದ್ಧಿ ಬೆಳಕಾಗಿ ಆಡಿದೆ. ಈ ಪರಿಯ ಬರಹಗಳು ಅವರ ಸಾಹಿತ್ಯಾಭಿರುಚಿಯನ್ನು ಎತ್ತಿತೋರಿಸಿವೆ.

ಆ ಬಳಿಕ ಸುಳಿದ ಬರಹಗಳಲ್ಲಿ ಆಹಾರ ಶುದ್ಧಿ–ಚಿತ್ತಶುದ್ಧಿ ಶಿಸ್ತು–ಸಂಯಮನ, ಸತ್ಯಧರ್ಮ, ಶಾಂತಿ–ಸುಖ ಇವು ಹೇಗೆ ಒಂದನ್ನೊಂದು ಹೊಂದಿಕೊಂಡು ಅಳವಡುತ್ತವೆ ಎಂಬುದನ್ನು ಆಧ್ಯಾತ್ಮ ತತ್ತ್ವ ಲೇಖಕರು ಮನಂಬುಗುವಂತೆ ತಿಳಿಯಪಡಿಸಿದ್ದಾರೆ. ಸಂಸ್ಕೃತದಲ್ಲಿ ಉಕ್ತವಾದ ಜೀವನ ತತ್ತ್ವಗಳನ್ನು ತಿಳಿಗನ್ನಡದಲ್ಲಿ ಕನ್ನಡ ಓದುಗರಿಗೆ ಮನವರಿಕೆ ಮಾಡಿಕೊಟ್ಟಿದ್ದಾರೆ. ಅವರ ಸರಳ ಹಾಗೂ ಲಲಿತವಾದ ಸರಣಿಯನ್ನು ಕೆಳಗೆ ಕಾಣಿಸಿದ ಒಂದೆರಡು ಉದಾಹರಣೆಗಳಿಂದ ಅರಿಯಬಹುದು.

“ಮೌನವು ಪರಮಾರ್ಥ ಸಾಧನೆಗೆ ಪರಮ ಸಾಧನ; ಆತ್ಮಶುದ್ಧಿಗ, ಆತ್ಮನಿರೀಕ್ಷಣೆಗೆ ಪ್ರಥಮ ಸೋಪಾನ. ಮೌನವು ಮಾನವನನ್ನು ವಿನಾಶದೆಡೆಗೆ ಒಯ್ಯುವ ದಾರಿಯನ್ನು ತಪ್ಪಿಸುತ್ತದೆ. ಭಾವಶುದ್ಧಿಯತ್ತ ಮುಂದೆ ಮುಂದೆ ಕರೆದೊಯ್ಯುತ್ತದೆ; ಮಾನವನ ಮನವನ್ನು ಸಂಸ್ಕರಿಸುತ್ತದೆ.” ಇಲ್ಲಿ ಶೈಲಿ ಬಳ್ಳಿಯಾಗಿ ಹರಡುವ ಬಗೆಯನ್ನು ಕಂಡುಹಿಡಿಯಬಹುದು.

‘ಕಾಯಕ’ದ ವಿಚಾರವನ್ನು ತಿಳುಹಿಕೊಡುವ ಮಾತುಗಳು ಇವೇ ಬಗೆಯಾಗಿ ಮನ ಒಪ್ಪುವಂತೆ ತೆರೆಗೊಂಡು ಬಂದಿವೆ. “ಕಾಯಕ ಅದೊಂದು ಸರ್ವಾಂಗ

ಸುಂದರ ಪರಿಪೂರ್ಣ ದರ್ಶನ; ವ್ಯಕ್ತಿಗತ ಜೀವನವನ್ನು ಪರಿಶುದ್ಧಗೊಳಿಸಲು ಕಾಯಕ ದೊಡ್ಡ ಸಾಧನ; ಆಲಸ್ಯವನ್ನು ನಿವಾರಿಸಿ ಜೀವನವನ್ನು ಬೆಳಕಿನ ದಾರಿಯಲ್ಲಿ ನಡೆಸಿಕೊಂಡು ಹೋಗುವ ನಂದಾದೀಪ. ಅದು ಭಾವ ಭೂಮಿಯ ಮೇಲೆ ಸದ್ಗುಣಗಳೆಂಬ ಬೀಜಗಳನ್ನು ಬಿತ್ತಿ ಸುಮಧುರ ಫಲಗಳನ್ನು ನೀಡುತ್ತದೆ."—ವಾಕ್ಯ ಎಷ್ಟು ಚಿಕ್ಕ ಚಿಕ್ಕವು! ಆದರೆ ಅವು ಕನ್ನಡಿಸುವ ಭಾವಗಳು ಎಷ್ಟೊಂದು ಗಣ್ಯವಾದವುಗಳು! ಹೀಗೆ ಪುಟ ಪುಟದಲ್ಲಿ ಶೈಲಿ ದಿಟಕ್ಕೂ ಸರಳವಾಗಿ ಅಂದವಾಗಿ ವಿಷಯ ವಿವೇಚನೆಯನ್ನು ಸರಿಯಾಗಿ ಅನುಸರಿಸಿ ಬರುತ್ತದೆ; ಬಗೆಯನ್ನು ತೆರೆಯುತ್ತದೆ; ಭಾವವನ್ನು ಅರಳಿಸುತ್ತದೆ.

ಅಲ್ಲಲ್ಲಿ ಉಚಿತವಾದ ಉಪಮೆಗಳು, ದೃಷ್ಟಾಂತಗಳು ಸಹಜವಾಗಿ ಹೊಳೆದು ಬಂದು ಆಚಾರಗಳನ್ನು ಥಳ್ಳನೆ ಬೆಳಗಲು ನೆರವಾಗಿವೆ. "ಪಾತ್ರೆಯಿಲ್ಲದೆ ಹಾಲು ತರಲು ಸಾಧ್ಯವಾಗಲಾರದು; ಹಾಗೆಯೇ ಸತ್ಯವಂತಿಕೆಯಿಲ್ಲದೆ ತತ್ತ್ವ ಕಾಣದು." "ಕೃತ್ರಿಮತೆ ಒಡೆದ ಕನ್ನಡಿಯಂತಾದರೆ ಸಹಜತೆ ಹಾಲ್ಜೇನು ಸವಿದಂತೆ" "ಅರಿವಿಲ್ಲದ ತಾಮಸ ಭಕ್ತಿ ಎಳ್ಳಿಲ್ಲದೆ ಗಾಣವನಾಡಿದಂತೆ" "ಆತ್ಮ ಸ್ವಾತಂತ್ರ್ಯವಿಲ್ಲದ ಸ್ವಾತಂತ್ರ್ಯ ....ಸುಗಂಧವಿಲ್ಲದ ಪುಷ್ಪದಂತೆ" "ಶಾಂತಿಯಿಲ್ಲದ ಜೀವನ ಜಲವಿಲ್ಲದ ತಟಾಕದಂತೆ" ಮಾತು ಮನದಲ್ಲಿ ಇಳಿದು ಸಾರ್ಥಕವಾಗುವದು. ಈ ಬಗೆಯ ಉಪಮೆ ಹಾಗೂ ದೃಷ್ಟಾಂತಗಳಿಂದ.

ಸಂಸ್ಕೃತ ಸುಭಾಷಿತಗಳಲ್ಲಿ ಹುದುಗಿದ ಹುರುಳನ್ನು ವಿವರವಾಗಿ ತಿಳಿಯಪಡಿಸುವ ಸಂದರ್ಭಗಳಲ್ಲಿ ಜಗದ್ಗುರುಗಳು ತತ್ಸಮಾನವಾದ ಕೆಲವು ಕನ್ನಡ ನುಡಿಮುತ್ತುಗಳನ್ನು ಕನ್ನಡ ಸಾಹಿತ್ಯದ ಸಂಪದವನ್ನು ಮನವೆದುರು ಎತ್ತಿ ಹಿಡಿಯುವಂತೆ ಚೆಲು ಮಾತುಗಳ ಸರಣಿಯ ಸರದಲ್ಲಿ ಪವಣಿಸಿದ ಬಗೆ ಬಗೆಗೊಳಿಸುವಂಥದು. ಉದಾಹರಣೆಗಾಗಿ "ಸತ್ಯಾನ್ನಾಸ್ತಿ ಪರೋಧರ್ಮಃ" ಎಂಬ ವಿಚಾರವನ್ನು ವಿವೇಚಿಸುವ ಸಂದರ್ಭದಲ್ಲಿ "ದೇವಲೋಕ ಮರ್ತ್ಯಲೋಕವೆಂಬುದು ಬೇರಿಲ್ಲ ಕಾಣಿರೋ ಸತ್ಯವ ನುಡಿವುದೇ ದೇವಲೋಕ; ಮಿಥ್ಯವ ನುಡಿವುದೇ ಮರ್ತ್ಯಲೋಕ" ಎಂಬ ಬಸವಣ್ಣನವರ ವಚನವನ್ನು ಮುತ್ತಿನ ಸರದ ಮಾಣಿಕದಂತೆ ಬರಹದ ಮಧ್ಯದಲ್ಲಿ ಕಿರಣಿಸಿದ್ದಾರೆ.

ಹೊಂಗಿರಣದಲ್ಲಿ ತತ್ತ್ವ ಚಿಂತನವಿದೆ; ವಿಚಾರ ಮಂಥನವಿದೆ; ಅನುಭಾವದ ಸ್ಫುರಣವಿದೆ. ಈ ರೀತಿಯ ವಿಶಿಷ್ಟ ಬರಹಗಳುಳ್ಳ ಈ ಹೊತ್ತಿಗೆಗೆ 'ಹೊಂಗಿರಣ' ಎಂಬ ಹೆಸರು ಚೆನ್ನಾಗಿ ಒಪ್ಪುತ್ತದೆ. ಸಾಹಿತ್ಯಾಭಿರುಚಿ, ಶುಚಿಗಳನ್ನು ಜಗದ್ಗುರುಗಳವರು ಸಮರಸಗೊಳಿಸಿ, ಹೊಂಗಿರಣದಲ್ಲಿ 'ಹೊಂಗಿರಣ'ವಾಗಿಸಿ ಅನುಗ್ರಹಿಸಿದ್ದಾರೆ. ಬುದ್ಧಿಯ ಕಿರಣಗಳನ್ನು ಹರಿಯಿಸಿ, ವಿಚಾರಗಳನ್ನು ನಿಚ್ಚಳಗೊಳಿಸಿದ್ದಾರೆ. ಭಾವಗಳನ್ನು ಸ್ಫುಟಗೊಳಿಸಿ "ಅಸತೋಮಾ ಸದ್ಗಮಯ" ಮೊದಲು

ಮಾಡಿಕೊಂಡು 'ಪರಾಮರ್ಶೆ' ಎಂಬಂತೆ ಸೂಕ್ತಿಗಳಲ್ಲಿ ಸುಳಿದು ಜೀವನವನ್ನು ಉದಾತ್ತಗೊಳಿಸುವ ಉದ್ಬೋಧಕ ಸುಭಾಷಿತಗಳಲ್ಲಿ ಹೊಳೆದು 'ಭಾವೈಕ್ಯ' 'ಶ್ರಾವಣ ಸಂದೇಶ'ದ ವರೆಗೆ ವಿಚಾರ ಪ್ರಣಾಲಿಯನ್ನು ಕಿರಣಿಸಿದೆ ಹೊಂಗಿರಣ.

ಹುಬ್ಬಳ್ಳಿ. **ಡಿ. ಎಸ್. ಕರ್ಕಿ**

ಪ್ರಕಾಶಕರ ನುಡಿ

(ದ್ವಿತೀಯ ಮುದ್ರಣ)

ದ್ವಿತೀಯ ಆವೃತ್ತಿಯಾಗಿ ಪ್ರಕಟವಾಗುತ್ತಿರುವ ಈ "ಹೊಂಗಿರಣ" ಕಿರು ಹೊತ್ತಿಗೆಯು ಬಹುಜನಪ್ರಿಯಗೊಂಡ ಕೃತಿಯಾಗಿದೆ. ಇದರಲ್ಲಿ ಶ್ರೀಮೂರುಸಾವಿರಮಠದ ಜಗದ್ಗುರು ಶ್ರೀಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳವರು ಸರ್ವರಿಗಾಗಿ-ಜೀವನಕ್ಕೆ, ಸಂಸ್ಕೃತಿಗೆ, ಸಾಹಿತ್ಯಕ್ಕೆ ಸಂಬಂಧಿಸಿದ ಕೆಲವು ತತ್ತ್ವೋಕ್ತಿಗಳನ್ನು ಸಂಕ್ಷಿಪ್ತದಲ್ಲಿ ವಿವರಿಸಿದ್ದಾರೆ. ಒಳ್ಳೆಯ ವಿಚಾರವನ್ನೊಳಗೊಂಡ ಮಾತುಗಳನ್ನೂ ಬಳ್ಳಿಯೋಪಾದಿಯಲ್ಲಿ, ಮಾಲೆಯೋಪಾದಿಯಲ್ಲಿ ರಚಿಸಿ ಹೊನ್ನು-ಕಿರಣ ಅರ್ಥದ "ಹೊಂಗಿರಣ"ವೆಂಬ ನಾಮಾಂಕಿತದಿಂದ ನಮ್ಮ ನಿಮ್ಮೆಲ್ಲರ ಕೈಗೆ ಕೊಟ್ಟಿದ್ದಾರೆ. ಅದನ್ನು ಉಪಯೋಗಿಸಿಕೊಳ್ಳುವುದು ಎಲ್ಲರ ಕರ್ತವ್ಯ.

೫-೬ ವರ್ಷಗಳ ಹಿಂದೆಯೇ ದ್ವಿತೀಯ ಮುದ್ರಣವಾಗಬೇಕಾಗಿದ್ದ ಈ ಕಿರು ಹೊತ್ತಿಗೆ ಕೆಲವು ಕಾರ್ಯ ಬಾಹುಳ್ಯಗಳ ನಿಮಿತ್ತ ಹಾಗೇ ಹಿಂದೆ ಉಳಿಯುತ್ತ ಬಂದಿತ್ತು. ಸಾಹಿತ್ಯಾರಾಧಕರ ಅಭಿರುಚಿಯಂತೆ, ಅವರೆಲ್ಲರ ಒತ್ತಾಯದ ಮೇರೆಗೆ ದ್ವಿತೀಯ ಮುದ್ರಣದ ಸದವಕಾಶ ಈಗ ಒದಗಿ ಬಂದಿತು.

ಅಲ್ಪಾವಧಿಯಲ್ಲಿಯೆ ಈ ಗ್ರಂಥ ಸುಂದರವಾಗಿ ಮುದ್ರಣಗೊಳ್ಳಲು ಕಾರಣರಾದ ಪರಂಜ್ಯೋತಿ ಅಚ್ಚುಕೂಟದವರಿಗೆ ಅಭಿನಂದನೆಗಳು.

ತಾ. ೨೦-೨-೧೯೮೪ —ಪ್ರಕಾಶಕರು

ಹುಬ್ಬಳ್ಳಿ-೫೮೦೦೨೮.

ಅಸತೋ ಮಾ ಸದ್ಗಮಯ

ಬೆಳಕು ಪ್ರತಿಯೊಬ್ಬರಿಗೂ ಬೇಕು. ಪಶುಪಕ್ಷಿಗಳಿಗೂ ಬೇಕು. ತರುಲತೆಗಳಿಗೂ ಬೇಕು. ಬೆಳಕು ಹೃದಯಕ್ಕೆ ತಂಪನ್ನು ನೀಡುತ್ತದೆ. ಶಾಂತಿಯನ್ನೀಯುತ್ತದೆ. ಬೆಳಕು ತುಂಬಿದ ಜೀವನ ನಿರಂತರವೂ ಪಾವನ. ಹೃದ್ವ್ಯೋಮದಲ್ಲಿ ಬೆಳಕು ಪ್ರಕಾಶಿಸಿದರೆ ಅಂತಸ್ಫೂರ್ತಿ ದೊರೆತು ಶಿವ ಸಾಕ್ಷಾತ್ಕಾರವಾಗುತ್ತದೆ. ಅಸತ್ಯವನ್ನು ದೂರಸರಿಸಲು ಬೆಳಕೇ ಮೂಲ ಕಾರಣ. ಸತ್ ಚಿತ್ ಆನಂದಕ್ಕೂ ಬೆಳಕು ಪ್ರಭಾವ ಕಾರಿಯಾಗಿ ಕಾರ್ಯ ಮಾಡುತ್ತದೆ. ತಮಸ್, ಅಸತ್ ಇವೆರಡು ಜೀವಾತ್ಮನನ್ನು ಕಾಡುವ ಮೃಗಗಳಿದ್ದಂತೆ, ಅಂಧಕಾರ, ಅಜ್ಞಾನಗಳು ಮನುಷ್ಯನನ್ನು ಆವರಿಸಿದರೆ ಸದ್ಗತಿ ಶೂನ್ಯವಾಗುತ್ತದೆ. ಶೂನ್ಯವೆಂದಾಕ್ಷಣ ಇಲ್ಲಿ ಬಹುದೊಡ್ಡ ಅರ್ಥವಾಗಿದೆ. ನಿಷ್ಪ್ರಯೋಜನವೆಂದರಿಯಬೇಕು. ಸತ್ಯ ಬಿಟ್ಟು ಅಸತ್ಯವಿದ್ದಂತೆ, ಸತ್ ವಸ್ತುವಿನ ಮತ್ತೊಂದು ರೂಪವೇ ಅಸತ್. ಈ ಅಸತ್, ಸತ್ ವಸ್ತುವನ್ನು ಕಾಣಲು ಬಾಧೆಯನ್ನು ನೀಡಿ ಕಳೆಗುಂದಿಸುತ್ತದೆ. ಭಾವವನ್ನು ಅಶುದ್ಧಿ ಮಾಡುತ್ತವೆ. ಏನೇನು ಇಲ್ಲದಂತೆ ಮಾಡಿ, ಸೋಹಂ, 'ತತ್ವಮಸಿ'ಗೆ ಅಡ್ಡಗೋಡೆಯಾಗುತ್ತದೆ. ಅಸತ್ ಆವರಿಸಿದಾಗ ಚಿತ್ತ-ಮನ ಬುದ್ಧಿಗಳಲ್ಲಿ ಬರಿಗತ್ತಲು ಕಾಣುತ್ತದೆ. ಕರಸ್ಥಲದ ಲಿಂಗವನರ್ಚಿಸಿ, ಪೂಜಿಸಿ, ವರವ ಬೇಡಲು ಹೋದಾಗ ಅಸತ್ ಎದುರಿಗೆ ಬಂದು ಕಾಡುತ್ತದೆ. ಪಾತ್ರೆ ಇಲ್ಲದೆ ಹಾಲು ತರಲು ಸಾಧ್ಯವಾಗದು. ಕಟ್ಟಿಗೆ ಇಲ್ಲದೆ ಅಗ್ನಿ ಕಾಣಲು ಅಸಾಧ್ಯ. ಸತ್ ವಸ್ತುವನ್ನು ಪಡೆಯಲು ಮನವ ನಿಲ್ಲಿಸದಿದ್ದರೆ ಗತ್ಯಂತರವಿಲ್ಲ. ಸತ್ಯವಂತರಾದರೆ ಮಾತ್ರ ತತ್ವವನ್ನು ಕಾಣಲು ಬರುತ್ತದೆ. ಜ್ಯೋತಿಯು ಹುಟ್ಟಿ ಆತ್ಮಕ್ಕೆ ಅಂಟಿದಾಗ ಆತ್ಮಾನಂದವು ಲಭಿಸುವದು ಸಹಜ. ಮಹಾ ಬೆಳಕಿನಲ್ಲಿ ಲೋಲಾಡಿ ಸುಖಿಯಾಗಲು ಕಂಗಳ ಮುಂದಣ ಕತ್ತಲೆಯನ್ನು ದೂರ ಸರಿಸಿದಾಗ ಸಾಧ್ಯ. ಒಂದೆಡೆ "ಕಂಗಳ ಮುಂದಣ ಬೆಳಗ ಕಾಣದೆ, ಕಂಡ ಕಂಡವರ ಹಿಂದೆ ಹರಿದು, ಇನ್ನೂ ಬೇರೆ ಕಂಡೆನೆಂಬ ಭಂಗಿತರ ನೋಡಾ! ತನ್ನಲ್ಲಿ ತಾ ಸುಜ್ಞಾನಿಯಾಗಿ ನೋಡಲರಿಯದೆ, ಭಿನ್ನಗಣ್ಣಲಿ ನೋಡಿಹೆನೆಂದು ತಮ್ಮ ಮರೆದು, ಇನ್ನುಂಟೆಂದು ಅರಸುವ ಅಣ್ಣಗಳಿರಾ ನೀವು ಕೇಳಿರೋ. ಮನವು ಮಹದಲ್ಲಿ ನಿಂದುದೇ ಲಿಂಗ. ಕರಣಂಗಳರತುದೇ ಕಂಗಳ ಮುಂದಣ ಬೆಳಗು ಇದನರಿಯದೆ, ಮುಂದೆ ಘನವುಂಟೆಂದು ತೊಳಲಿ ಬಳಲಿ ಅರಸಿಹೆನೆಂದು ಅರೆಮರುಳಾಗಿ ಹೋದಿರಯ್ಯಾ ನಿಮ್ಮನರಿಯದೆ ಅಪ್ಪಣ್ಣಪ್ರಿಯ ಚನ್ನಬಸವಣ್ಣ" ಕಂಗಳ ಮುಂದಣ ಬೆಳಗು

ಕಂಡು ಸದ್ವಸ್ತುವಿನಲ್ಲಿ ಬೆರೆಯಲು ನಿಜಮುಕ್ತಿ ಲಿಂಗಮ್ಮನ ಈ ವಚನಾಮೃತವು ಅಧ್ಯಾತ್ಮ ಸಾಧಕರಿಗೆ ದೊಡ್ಡ ಸಾಧನ. ರಸಪಾಕವಿದ್ದಂತೆ. ಕತ್ತಲೆಯ ಬಾಗಿಲಿಗೆ ಕದವನ್ನಿಕ್ಕಿ ಬೆಳಗಿನ ಹೃದಯ ಬಾಗಿಲವನ್ನು ತೆಗೆದು ಒಳಗೆ ಹೋದರೆ ಸದ್ವಸ್ತುವಿನ ಪ್ರಕಾಶವು ತಾನೆ ತಾನಾಗಿ ಹರಡಿ ಅಸತ್ ಕಾಣದಂತಾಗುತ್ತದೆ. ಚಿಜ್ಜ್ಯೋತಿಯು ಸಚ್ಚಿತ್ತದಲ್ಲಿ ಒಂದಾಗಿ ಸಮರಸವಾಗುತ್ತದೆ. ಇಂತಹ ಮಹಾಶಕ್ತಿಯನ್ನು ಗಳಿಸಲು "ಅಸತೋ ಮಾ ಸದ್ಗಮಯ" ಎಂದು ಬೇಡಿಕೊಳ್ಳಬೇಕಾಗುತ್ತದೆ.

ತೇನ ವಿನಾ ತೃಣಮಪಿ ನ ಚಲತಿ

ಮುಕ್ತಿಯನ್ನು ಪಡೆಯಲು ಶಿವಾನುಗ್ರಹವು ಊರುಗೋಲು. ಜೀವರಥ ಸಾಗಲೂ ಸಹ ಶಿವಾನುಗ್ರಹವೇ ಕಡೆಗೋಲು. ಈಶ್ವರಾನುಗ್ರಹವಿಲ್ಲದೆ ತೃಣವೂ ಸಹ ಚಲಿಸಲಾರದು. ಸಂಪೂರ್ಣ ಸತ್ಯಸಾಧನೆಗೆ ಆತ್ಮಾನುಭೂತಿಗೆ, ಬಾಳಿನ ಬೆಳಕಿಗೆ ಕೈದೀವಿಗೆಯಿದ್ದಂತೆ. ಅರಲುಗೊಂಡ ಕೆರೆಗೆ ತೊರೆಯಿರಲು, ಬರಲುಗೊಂಡ ಸಸಿಗೆ ಮಳೆ ಸುರಿಯಲು ದೇವ ಕೃಪೆಯಿಂದಲೇ ಸಾಧ್ಯ. ದೇವನಿರವ ನರಿಯದವರು ಜಲವತಪ್ಪಿದ ಮತ್ಸ್ಯದಂತೆ ಅವರ ಗತಿಯಾಗುವದು. ಅಂತರಂಗ ಬಹಿರಂಗಗಳೆರಡನ್ನರಿಯದೆ ತೊಳಲಾಡುವವರು. ಅನರ್ಥಗಳಿಗೀಡಾಗುವರು.

ದೇವರನ್ನು ಮರೆತು ಅಹಂಕಾರದ ಅಂಧಕಾರದಲ್ಲಿ ತಿರುಗುವವರನ್ನು ಕುರಿತು ಶ್ರೀದೇವರ ದಾಸಿಮಯ್ಯನವರು ಈ ರೀತಿ ತಿಳಿಸಿದ್ದಾರೆ.

“ಇಳೆ ನಿಮ್ಮದಾನ, ಬೆಳೆ ನಿಮ್ಮದಾನ ಸುಳಿದು ಬೀಸುವ ಗಾಳಿ ನಿಮ್ಮದಾನ, ನಿಮ್ಮದಾನವನುಂಡು ಅನ್ಯರ ಹೊಗಳುವ ಕುನ್ನಿಗಳನೇನೆಂಬೆನಯ್ಯ ರಾಮನಾಥ” ಈ ಜೀವನದಲ್ಲಿ ಜೀವನ್ಮುಕ್ತಿಯನ್ನು ಹೊಂದಿ, ಇಹಪರ ಸುಖಗಳೆರಡನ್ನು ಅನುಭವಿಸಬೇಕಾದರೆ ಈಶ್ವರ ಕೃಪೆಯೇ ಸಂಜೀವಿನಿ. ಶಿವಸಂಕಲ್ಪವಿಲ್ಲದೆ ಅದಾವ ಕಾರ್ಯವೂ ಸಾಧ್ಯವಾಗದು. ದೇವನೊಲಿದರೆ ಮಾತ್ರ ಕೊರಡು ಕೊನರುವದು, ಬಲು ಬರಡು ಹಯನಾಗುವದಲ್ಲದೆ ವಿಷವೂ ಸಹ ಅಮೃತವಾಗುವದು. ಭೌತಿಕ ಬಾಳು ಸುಂದರವಾಗುವದು. ಅಂತೆಯೇ ವೀರವಿರಾಗಿಣಿ ಅಕ್ಕಮಹಾದೇವಿಯು ಈಶ್ವರಾಸಕ್ತಿಯಲ್ಲಿ ಅಂತಃಕರಣ ಪೂರಿತಳಾಗಿ ಚೆನ್ನಮಲ್ಲಿಕಾರ್ಜುನನ ಬರುವಿಕೆಯನ್ನೇ ಇಂತು ಹಾಡಿದ್ದಾಳೆ. ಹೃದಯ ಹಂಬಲವನ್ನು ದೇವನಿಗರ್ಪಿಸಿದ್ದಾಳೆ.

“ಬಂದಿಹನೆಂದು ಬಟ್ಟೆಯ ನೋಡಿ, ಬಾರದಿರ್ದೊಡೆ ಕರಗಿ ಕೊರಗಿದೆನವ್ವಾ! ತಡವಾದೊಡೆ ಬಡವಾದೆ ತಾಯೆ, ಚೆನ್ನಮಲ್ಲಿಕಾರ್ಜುನನ ಒಂದಿರುಳು ಅಗಲಿದೊಡೆ ತೆಕ್ಕೆಸಡಲಿದ ಚಕ್ಕವಕ್ಕಿಯಂತಾದೆನವ್ವಾ!” ಮುತ್ತಿನಂತಹ ಈ ನುಡಿಯನ್ನು ನುಡಿದು ತನ್ನಂತರಂಗದ ಮಹತ್ಸಾಧನೆಯ ದಿವ್ಯ ಪ್ರಭೆಯನ್ನು ಬೆಳಗಿಸಿದ್ದಾಳೆ. ದೇವರ ಮೇಲೆ ಪೂರ್ಣ ಭಕ್ತಿ ವಿಶ್ವಾಸವಿಟ್ಟರೆ ದೇವರು ತನ್ನಂತೆ ಮಾಡಿಕೊಳ್ಳುವನೆಂಬುವದೇ ಅವಳ ಸತ್ಯ ಸಂಕಲ್ಪ.

ಎಲ್ಲ ಧೈರ್ಯ ಸಾಹಸಗಳಿಗೆ ಮೂಲ ಕಾರಣವಾದ ದೇವರ ನಂಬಿಗೆಯೇ ಕಲ್ಪವೃಕ್ಷವೆಂದು ಬಗೆದು “ಅಳಿಸಂಕುಳವೆ, ಮಾಮರವೆ, ಕೋಗಿಲೆಯೆ ನಿಮ್ಮೆಲ್ಲ

ರನು ಒಂದು ಬೇಡುವೆನು ಎನ್ನೊಡೆಯ ಚನ್ನಮಲ್ಲಿಕಾರ್ಜುನ ದೇವರು ಕಂಡರೆ ಕರೆದು ತೋರಿರೆ" ಎಂಬುದಾಗಿ ಪರಿತಪಿಸಿದ್ದಾಳೆ. "ತೇನ ವಿನಾ ತೃಣಮಪಿ ನ ಚಲತಿ" ಎಂಬುದನ್ನು ಮನವರಿಕೆ ಮಾಡಿಕೊಟ್ಟಿದ್ದಾಳೆ. ಇದುವೆ ಮಾನವ ಕುಲದ ಜೀವನದ ಸಾರ. ಭಾವೈಕ್ಯತೆಗೆ ಮೂಲಾಧಾರ.

ವಿದ್ಯಾ ದದಾತಿ ವಿನಯಂ

ವಿದ್ಯೆಗೆ ವಿನಯವೇ ಭೂಷಣ. ಶೀಲ ಸಂಸ್ಕೃತಿಗೆ ವಿದ್ಯೆಯೇ ಪೋಷಣ. ವಿದ್ಯೆಯು ಪವಿತ್ರ ಜೀವನವನ್ನು ಮಾಡುತ್ತದೆ. ವಿನಯವನ್ನು ನೀಡುತ್ತದೆ. ಆತ್ಮ ಶುದ್ಧಿಗೆ ಉಪಕಾರಿಯಾಗುತ್ತದೆ. ಆತ್ಮ ಶಕ್ತಿಯನ್ನು ಸಂಗೊಳಿಸುತ್ತದೆ. ಬುದ್ಧಿಯನ್ನು ವರ್ಧನಗೈಯುತ್ತದೆ. ಕಷ್ಟ ನಷ್ಟಗಳನ್ನು ದೂರಮಾಡುತ್ತದೆ. ಶುದ್ಧ ಸತ್ಯವನ್ನು ಕಲಿಸುತ್ತದೆ. ಜೀವನ ಪ್ರಶ್ನೆಯನ್ನು ಬಿಡಿಸುತ್ತದೆ. ಕುರುಡು ಜೀವನಕ್ಕೆ ಕಣ್ಣು ನೀಡುತ್ತದೆ. ವಿದ್ಯೆಯು ಜೀವೋನ್ನತಿಗೆ ಬೇಕಾಗುತ್ತದೆ. ವಿದ್ಯೆಯಿಂದ ಜಡಜೀವನಕ್ಕೆ ಮೃಡಶಕ್ತಿ ದೊರೆಯುತ್ತದೆ. ಭಾವ ಶುದ್ಧಿಗಳು ಬಲಿತು, ಧೀವಿವೇಚನೆಗಳು ಬೆಳೆದು, ಆತ್ಮಾನಂದಾಕಾಶದಲ್ಲಿ ಈಜಲು ಶಕ್ತಿಯನ್ನು ನೀಡುತ್ತದೆ. ವಿದ್ಯೆಯು ಬುದ್ಧಿಯನ್ನು ವಿಮರ್ಶಿಸಿ ಪರಿಶೋಧಿಸುತ್ತದೆ. ಅಂತಃಶಕ್ತಿಗೆ ಊರುಗೋಲಾಗುತ್ತದೆ. ಚಿತ್ತ ಸಂಸ್ಕಾರಕ್ಕೆ, ತತ್ತ್ವಾನುಸಂಧಾನಕ್ಕೆ, ಆತ್ಮಚಿಕಿತ್ಸೆಗೆ ಸಾಧನವಾಗುತ್ತದೆ. ಮಹಾನ್ ವ್ಯಕ್ತಿತ್ವವನ್ನು ಪಡೆದು ದೇವಮಂದಿರವನ್ನು ಪ್ರವೇಶಿಸಲು ವಿದ್ಯೆಯೇ ಮಹಾ ದ್ವಾರವಿದ್ದಂತೆ. ವಿದ್ಯೆಯಿಂದ ಆತ್ಮವಿಶ್ವಾಸ, ಆತ್ಮಜ್ಞಾನ, ಆತ್ಮಶುದ್ಧಿ, ಆತ್ಮ ಸಂಯಮ ಇವೆಲ್ಲವುಗಳು ದೊರೆತು ಸಂಕಲ್ಪ ಸಿದ್ಧಿಯಾಗುತ್ತದೆ. ವಿದ್ಯೆಯ ಅಂತರಂಗದ ಅರ್ಥವನ್ನು ಅರಿತುಕೊಂಡು ಆಚರಿಸಿದರೆ ಮಾತ್ರ ಈ ರೀತಿಯ ಆನಂದ ದೊರೆಯುತ್ತದೆ. ಇಲ್ಲದಿದ್ದರೆ ಅದೆಲ್ಲವೂ ಕಬ್ಬಿನ ಸಿಪ್ಪೆಯಂತೆ ರಸಹೀನವಾಗುತ್ತದೆ. ಜೀವವಿದ್ದು ಶವವಾಗುತ್ತದೆ. ಹಾಳೂರ ದೇಗುಲದಂತಾಗುತ್ತದೆ. ಸಕಲ ಗುಣಗಳ ಸಾರವನ್ನು ತನ್ನಂತರಂಗದಲ್ಲಿ ಅರಗಿಸಿಕೊಂಡಾಗ ವಿದ್ಯೆಗೆ ಪ್ರಧಾನತೆ ಬರುತ್ತವೆ. ಹಾಗಾಗದಿದ್ದರೆ ರತ್ನಖಚಿತ ಮಣಿಯನ್ನು ಹೊತ್ತ ಸರ್ಪದಂತಾಗುತ್ತದೆ. ವಿದ್ಯೆ ಬೆಳೆದಂತೆ ಅಂತರಂಗ ಶುದ್ಧಿಯಾದರೆ ಅದರ ಸಾರ್ಥಕತೆ, ಶುಚಿ ತಾನಾಗದೆ ಸರ್ವ ಶಾಸ್ತ್ರ ನಿಪುಣರಾದರೂ ಹೊಳೆಯಲ್ಲಿ ಹುಣಸೆ ಹಣ್ಣು ತೊಳೆದಂತೆ ಅದು ನಿರರ್ಥಕ. ವಿದ್ಯೆಯಿದ್ದಲ್ಲಿ ಅಹಂಕಾರವು ಸುಳಿದರೆ ಮೇಲೇರಿ ಕೆಳಗಿಳಿದಂತೆ. ಅಹಂಕಾರದ ಮಡುವಿನಲ್ಲಿ ಮುಳುಗಿದವರಿಗೆ ವಿದ್ಯೆಯ ಪ್ರಕಾಶ ಅರಿವಾಗದು. ಬುದ್ಧಿಭ್ರಂಶವುಳ್ಳವರಾಗಿ ಗತಿ ಮತಿಹೀನರಾಗುತ್ತಾರೆ. ಜ್ಞಾನಶೂನ್ಯರಾಗಿ ನಃಸೆಂಬ ಕಾರ್ಗತ್ತಲೆಯಲ್ಲಿ ತಿರುಗಿ ಕೇವಲ ವಚನ ಬ್ರಹ್ಮರಾಗುತ್ತಾರೆ. ನಮಗಿಂದು ಇಂತಹ ವಿದ್ಯೆ ಅನಾವಶ್ಯಕ; ಇಷ್ಟೇ ಅಲ್ಲ ಇಂತಹ ವಿದ್ಯೆಯಿಂದ ನಾಡು ಮತ್ತು ಸಮಾಜ ಹಾಳಾಗುವದಲ್ಲದೆ ವ್ಯಕ್ತಿತ್ವಕ್ಕೆ ಕೊಡಲಿ ಪೆಟ್ಟು ಬಿದ್ದಂತಾಗುತ್ತದೆ. ಎಲ್ಲಿಯವರೆಗೆ ವಿದ್ಯೆ ಒಳಗಿಳಿಯುವದಿಲ್ಲವೋ, ಅದರ ಅನುಭವ ಕಿರಣಗಳು ಹೃದ್ವ್ಯೋಮದಲ್ಲಿ

ಪ್ರಕಾಶಿಸುವದಿಲ್ಲವೋ ಅಲ್ಲಿಯವರೆಗೆ ಹುಚ್ಚರಿದ್ದಂತೆ ಕಂಡರೂ ಮೂಗಿದಂತೆ. ಆದಕ್ಕಾಗಿ ಇಂದು ಸಮಾಜಕ್ಕೆ ಬಿಚ್ಚಿಟ್ಟ ದರ್ಪಣದಂತಿರುವ ವಿದ್ಯೆ ಬೇಕಾಗಿದೆ. ಸಾಮಾಜಿಕ ರಂಗದಲ್ಲಿ ಧುಮುಕಿ, ಉತ್ತಮ ಸಂಸ್ಕಾರದ ಸಿಹಿ ನೀರನ್ನೆರೆಯುವಂತಹ ವಿದ್ಯೆ ಬೇಕಾಗಿದೆ. ಅಂತರಂಗದ ಗವಾಕ್ಷಗಳನ್ನು ತೆರೆಯಿಸುವ ವಿದ್ಯೆ ಬೇಕಾಗಿದೆ. ಇಂತಹ ವಿದ್ಯೆಯ ಮಾನವನ್ನು ಪಡೆದ ವಿದ್ವಾಂಸರು ಸರ್ವತ್ರ ಪೂಜಿಸಿಕೊಳ್ಳುತ್ತಾರೆ.

ಮೌನಂ ಸರ್ವಾರ್ಥ ಸಾಧನಂ

ಮೌನವು ಸರ್ವಾರ್ಥ ಸಾಧನೆಗೆ ಪರಮಸಾಧನ. ಆತ್ಮ ಶುದ್ಧಿಗೆ, ಆತ್ಮ ನಿರೀಕ್ಷಣೆಗೆ ಪ್ರಥಮ ಸೋಪಾನ. ವಿಕಾಸದಿಂದೊಡಗೂಡಿದ ಮೌನವು ಮಾನವನನ್ನು ವಿನಾಶದೆಡೆಗೆ ಒಯ್ಯುವದನ್ನು ತಪ್ಪಿಸುತ್ತದೆ. ಆದರ್ಶದತ್ತ, ಭಾವಶುದ್ಧಿಯತ್ತ ಮುಂದೆ ಮುಂದೆ ಕರೆದೊಯ್ಯುತ್ತದೆ. ಮೌನವು ಮಾನವನನ್ನು ಸಂಸ್ಕರಿಸುತ್ತದೆ. ವಿಚಾರ ವಿವೇಚನೆ ಮಾಡುವ ಆಂತರಿಕ ಪ್ರಜ್ಞೆಯನ್ನು ದೊರಕಿಸಿ ಕೊಡುತ್ತದೆ. ಧ್ಯಾನದಲ್ಲಿ ತಲ್ಲೀನರಾಗಲು ಮೌನದಿಂದ ಸಾಧ್ಯ. ಮೌನವು ನಮ್ಮ ಅಂತಸ್ಸಾಧನೆಗೆ ಪವಿತ್ರ ದೇಗುಲವಿದ್ದಂತೆ, ಬಾಳಿನ ಬೆಳಕಿಗೆ ದಾರಿ ದೀಪವಿದ್ದಂತೆ. ಮಾತಿನಿಂದ ಕಲಹ ಬೆಳೆದಷ್ಟು ಮೌನದಿಂದ ಬೆಳೆಯಲಾರದು. ಆತ್ಮಶಕ್ತಿಯಿಂದ ಪ್ರಭಲಗೊಂಡ ಮೌನವು ಮಾನವನನ್ನು ಎಚ್ಚರಿಸುತ್ತದೆ. ಅಂತಃ ಸತ್ವವನ್ನು ತೋರಿಸುತ್ತದೆ. ಮಾತನಾಡುವದು ಸರಳವಾದರೆ ಮೌನದಿಂದ ಇರುವದು ಕಷ್ಟದಾಯಕವಾಗುತ್ತದೆ. ಆದರೆ ಸಾಧನೆ ಬೇಕು. ಸಂಯಮ ಬೇಕು. ಪವಿತ್ರ ಭಾವನೆ ಬೇರೂರಬೇಕಾಗುತ್ತದೆ. ಆದರೆ ಮೌನದಿಂದ ಇದ್ದು ಅಂತರಂಗದಲ್ಲಿ ವಿಷಯವಾಸನೆ, ಮದ, ಮತ್ಸರ್ಯಗಳು ತುಂಬಿ ತುಳುಕಿದ್ದರೆ ಸವೆದ ನಾಣ್ಯದಂತೆ ನಿರೂಪಯೋಗವಾಗುತ್ತದೆ. ಅಪಾಯಕಾರಿಯಾಗುತ್ತದೆ. ಕಾಂತಿಹೀನವಾಗುತ್ತದೆ. ಆ ವ್ಯಕ್ತಿತ್ವ ತೋರಿಕೆಯದಾಗುತ್ತದೆ, ಡಂಭಾಚಾರದ ಮೌನವು ತನ್ನನ್ನು ತಾನೇ ನಷ್ಟಮಾಡಿಕೊಳ್ಳುವದಲ್ಲದೆ, ಅನ್ಯರನ್ನೂ ಹಾನಿಗೀಡು ಮಾಡುತ್ತದೆ. ಇಂತಹ ಮೌನವು ಆಧ್ಯಾತ್ಮಿಕ ಆತ್ಮ ಪ್ರೇರಣೆಗೆ ಆತಂಕವೊಡ್ಡುತ್ತದೆ. "ಮಾತೆಂಬುದು ಜ್ಯೋತಿರ್ಲಿಂಗ" ವಾಗಬೇಕಾದರೆ ಕಣ್ದೆರೆದು ಪ್ರಕಾಶವನ್ನು ಕಂಡರೆ ಮಾತ್ರ ಸಾಧ್ಯ. ಮಾತು ಮಂತ್ರವಾಗಿ ಕೃತಿಗಿಳಿದಾಗ ಮೌನದ ಸಾರ್ಥಕತೆ; ಇಂತಾದಾಗ ಮಾತು ಬೆಳ್ಳಿಯಾಗುತ್ತದೆ, ಮೌನ ಭಂಗಾರವಾಗುತ್ತದೆ. "ಮೌನವು ಸತ್ಯ ಭಕ್ತನ ಆಧ್ಯಾತ್ಮಿಕ ಸಾಧನೆಯಲ್ಲಿ ಒಂದು ಮಹತ್ವದ ಅಂಗ" ಎಂಬುದಾಗಿ ಹೇಳಿರುವದು. ಮಹಾತ್ಮಾಗಾಂಧಿಯವರ ಈ ನುಡಿಮುತ್ತು ಸತ್ಯಪೂರ್ಣವಾಗಿದೆ. ಮಾತು ಮನಸ್ಸಿನ ಪ್ರತಿಬಿಂಬವಾದರೆ, ಮೌನವು ಆತ್ಮ ವಿಕಾಸದ ಅಡಿಗಲ್ಲು. ಮನಸ್ಸಿನ ಪರಿಶುದ್ಧತೆ ಹೆಚ್ಚಿದಂತೆ ಮೌನಶಕ್ತಿ ಬೆಳೆಯುತ್ತದೆ. ಮನಸ್ಸಿನಲ್ಲಿ ಒಳ್ಳಿಹ ಸಂಸ್ಕಾರಗಳು, ನಿಗ್ರಹವು ಬಂದಂತೆ ಮಾತು ಚೊಕ್ಕ ಚೆನ್ನವಾಗುತ್ತದೆ. ಸುವಿಚಾರ, ಸುವಿವೇಕಗಳಿಗೆ ಕನ್ನಡಿಯಾಗುತ್ತದೆ. ಒಂದೆಡೆ ಮಹಾತ್ಮಾಗಾಂಧಿಯವರು—

"ಮಾತಾಡುವದು ಒಂದು ಸುಂದರವಾದ ಕಲೆ. ಮೌನವು ಅದಕ್ಕಿಂತಲೂ ಶ್ರೇಷ್ಠವಾದ ಕಲೆ. ಮೌನದಿಂದ ಕಲಹ ನಾಶವಾಗುತ್ತದೆ. ಮೌನವು ಒಮ್ಮೊಮ್ಮೆ ಅದೆಷ್ಟೋ ಅನರ್ಥಗಳನ್ನು ತಡೆಹಿಡಿಯುವ ಅಮೋಘ ಉಪಾಯವಾಗಿ ಪರಿಣಮಿಸುತ್ತದೆ" ಎಂಬುದಾಗಿ ಮೌನದ ಅಂತಶಕ್ತಿಯ ಮಹಿಮೆಯನ್ನು ಅರುಹಿದ್ದಾರೆ. ಅದಕ್ಕಾಗಿ ಮೌನದ ಅಂತಃಸ್ಸತ್ವವನ್ನು ಅರಿತು ಆಚರಿಸಿದರೆ ಜ್ಞಾನದ ಅಭಿವೃದ್ಧಿ ಮತ್ತು ಪರಮಸಿದ್ಧಿ.

ಸರ್ವೇಂದ್ರಿಯಾಣಾಂ ನಯನಂ ಪ್ರಧಾನಂ

ಮುಕ್ಕಣ್ಣನೊಲಿಸಲು ಕಣ್ಣು ಮೂಲಕಾರಣ. ಸರ್ವೇಂದ್ರಿಯಗಳಿಗೆ ಕಣ್ಣೇ ಪ್ರಧಾನ. ಕಣ್ಣಿನಿಂದಲೆ ಪ್ರಪಂಚಕ್ಕೆ ಪಾರಮಾರ್ಥಿಕ ಶಕ್ತಿ. ಕಣ್ಣಿನಾಟ ನಿಲ್ಲಿಸಿದಂತೆ ಆತ್ಮಶಕ್ತಿ ಪ್ರಬಲವಾಗುವದಲ್ಲದೆ ನಿಜಾನಂದ ದೊರೆಯುತ್ತದೆ. ಕಣ್ಣೇ ಸಕಲ ವಿಸ್ತಾರದ ರೂಹು. ಕಣ್ಣು ಪ್ರಗತಿಗೂ ಮೂಲ, ಅವನತಿಗೂ ಮೂಲ. ಒಳಗಣ್ಣು ತೆರೆದರೆ ಬಾಳು ಬೆಳಕಾಗುತ್ತದೆ. ತನ್ನ ತಾನರಿಯಲು ಕಣ್ಣೇ ಪರಮ ಸಾಧನ. ಕಣ್ಣಿದ್ದು ಕುರುಡರಾದರೆ ಆತ್ಮಹನನ. ಕಣ್ಣಿನಿಂದಲೆ ಶೋಕ, ಮೋಹ, ಮಮತೆ ದುಃಖ ದುಮ್ಮಾನಗಳು ಉದ್ಭವಿಸುತ್ತಿವೆ. ಕಣ್ಣಿನಿಂದಲೇ ಚಿತ್ಕಳೆ, ಚಿಚ್ಛಕ್ತಿ, ಸತ್, ಚಿತ್, ಆನಂದಗಳು ಉಂಟಾಗುತ್ತವೆ. ಆದರೆ ಇಂತಹ ಚಿದ್ಬೆಳಗು ದೊರೆಯಲು ಹೊರಗಣ್ಣಿನಿಂದ ಅಸಾಧ್ಯ. ಅದಕ್ಕೆ ದೃಷ್ಟಿಶುದ್ಧಿ ಅಂತರ್ಗತ ವಾಗಿರಬೇಕು. ನೋಡುವ ನೋಟ ಪವಿತ್ರವಾಗಿರಬೇಕು. ಅಂತಶ್ಚಕ್ಷುಗಳನ್ನು ತೆರೆದರೆ ಮಾತ್ರ ತನ್ನೆದೆಯೊಳಗಿರುವ ಈಶ್ವರ ಸಾಕ್ಷಾತ್ಕಾರ ಸಹಜ ಸಾಧ್ಯ. ಆಗ ಸತ್ಯ ಸೌಂದರ್ಯಗಳ ಅನುಭವಗಳನ್ನು ನಿರಾತಂಕವಾಗಿ ಪಡೆಯಬಹುದು. ನೋಟ ನೆನಹಿಗೆ ಒಳಗಾಗದಿದ್ದರೆ ಲಿಂಗಾನುಭವ ಸಮನಿಸದು. ನಂಬಿಕೆಯ ನೋಟ ದಿಂದಲೇ ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ಪರಬ್ರಹ್ಮ ಇವೆಲ್ಲವು ಗಳು ಲಭ್ಯ. ದೃಷ್ಟಿ ಸಂಯಮದಿಂದ ಪವಿತ್ರ ಜೀವನವಾಗುವದಲ್ಲದೆ, ಕಾಲಕರ್ಮ ಮಾಯೆಗಳನ್ನು ಗೆಲ್ಲುವ ಶಕ್ತಿ ಬರುತ್ತದೆಂದು ಚಾಮರಸ ಕವಿಯು ದೃಷ್ಟಿಯ ಅಖಂಡ ತೇಜವನ್ನು ಬಣ್ಣಿಸಿದ್ದಾನೆ.

"ಆಲಿ ನಿಂದೊಡೆ ಸುಳಿದು ಸೂಸುವ।
ಗಾಳಿ ನಿಲುವದು ಗಾಳಿ ನಿಲೆ ಮನ।
ಮೇಲೆ ನಿಲುವದು ಮನವು ನಿಂದೊಡೆ ಬಿಂದು ನಿಂದಿಹುದು॥
ಲೀಲೆಯಿಂದಾ ಬಿಂದು ನಿಂದೊಡೆ।
ಕಾಲಕರ್ಮವ ಗೆದ್ದು ಮಾಯೆಯ।
ಹೇಳಹೆಸರಿಲ್ಲೆನಿಸಬಹುದೈ ಬಸವ ಕೇಳೆಂದ"॥

ಈ ಅರ್ಥಪೂರ್ಣ ನುಡಿಯನ್ನು ನಡೆಯಲ್ಲಿ ತಂದವರು ಕಂಗಳ ಮುಂದಣ ಬೆಳಗು ಕಾಣುತ್ತಾರಲ್ಲದ, ಅಂತರಂಗದ ಆತ್ಮನೊಳಗೆ ನಿಜೈಕ್ಯ ನಿಜಸ್ಥಿತಿಯನ್ನು ಪಡೆಯು ತ್ತಾರೆ. ಕಂಗಳ ಕೊನೆಯಲ್ಲಿ ಲಿಂಗದ ನೋಟವನ್ನೇ ತಂದುಕೊಳ್ಳುತ್ತಾರೆ. ದೃಷ್ಟಿ ಯಲ್ಲಿ ದಿವ್ಯಶಕ್ತಿಯನ್ನು ಕಾಣುತ್ತಾರೆ. ಒಂದೆಡೆ ಷಣ್ಮುಖ ಶಿವಯೋಗಿಗಳು—

"ನೇತ್ರವೆಂಬ ಸುವರ್ಣಕೊಡದಲ್ಲಿ ಪರಿಣಾಮವೆಂಬ ಉದಕವ ತುಂಬಿ ಅಭಿಷೇಕ ಮಾಡುವೆನಯ್ಯ ನಿಮಗೆ. ನೇತ್ರವೆಂಬ ದಿವ್ಯಪುಷ್ಪದ ಮಾಲೆಯ ಧರಿಸುವೆನಯ್ಯ ನಿಮಗೆ. ನೇತ್ರವೆಂಬ ಅರಮನೆಯಲ್ಲಿ ಪಟ್ಟ ಮಂಚದ ಮೇಲೆ ಸುಷುಪ್ತಿಗೆಂಬ ಹಾಸುಗೆಯ ಮಾಡುವೆನಯ್ಯಾ ನಿಮಗೆ. ನೇತ್ರ ಸೂತ್ರದಿಂದ ಕೊಡುವೆನಯ್ಯ ನಿಮ್ಮ ಅಖಂಡೇಶ್ವರಾ" ಎಂಬುದಾಗಿ ದೃಷ್ಟಿಯೋಗದ ಮಹತಿಯನ್ನು ಮಾರ್ಮಿಕವಾಗಿ ಸ್ವಾನುಭಾವದೊಂದನೆ ವಿವರಿಸಿದ್ದಾರೆ.

"ಹುಬ್ಬಳ್ಳಿ ಪೇಟೆಯೊಳು। ಕಬ್ಬಿನ ಕೈ ಮಾರಾಟ।
ಇಬ್ಬರೊಂದಾಗಿ ಉಬ್ಬಿ ಮಾರಲು।
ಲಾಭ ಹಬ್ಬಿತ್ತೈ ಗುರುವೆ ಕೃಪೆಯಾಗು"॥

ಗೂಢಾರ್ಥದಿಂದೊಡಗೂಡಿದ, ಮೈಲಾರ ಬಸವಲಿಂಗ ಶರಣರ ಶ್ಲೇಷಾಲಂಕಾರದ ಈ ಸುಳಿ ದೃಷ್ಟಿಸಾಧಕರಿಗೆ ಕನ್ನಡಿ.

ರಸಸಿದ್ಧಾಃ ಕವೀಶ್ವರಾಃ

ಸಂಸ್ಕೃತ ಸಾಹಿತ್ಯ ಶಿಖರವನ್ನೇರಿಸಿದ, ವಿರತಶಿರೋಮಣಿ ಭರ್ತೃಹರಿಯ ಅಂತರ್ವಾಣಿಯಿದು. ಕವೀಶ್ವರರೆಲ್ಲರೂ ರಸಸಿದ್ಧರು, ಅಲಂಕಾರ ವಿಶ್ವಪ್ರವೀಣರು. ಶಬ್ದ ಸೌಂದರ್ಯವನ್ನು ಹೆಚ್ಚಿಸಿ, ಭಾವಶಕ್ತಿಯನ್ನು ತುಂಬಿ, ಪ್ರತಿಯೊಬ್ಬರ ಹೃನ್ಮಂದಿರದ ಬಾಗಿಲುಗಳನ್ನು ತೆರೆಯುವ ಶಕ್ತಿ ಕವಿಗಳಲ್ಲಿದೆ. ರಸಮಯ ಕಾವ್ಯದಿಂದ ಚಮತ್ಕಾರಗಳಾದ ರೂಪಕ, ಉಪಮಾ ಮುಂತಾದ ಅರ್ಥಾಲಂಕಾರಗಳ ಬಗೆ ಬಗೆಯ ಪ್ರಯೋಗಗಳಿಂದ ಜನರ ಮನವನ್ನು ಆಕರ್ಷಿಸಿ ನವಚೈತನ್ಯವನ್ನು ನೀಡುತ್ತಾರೆ. ಲೋಕಾನುಭವವನ್ನು ತಮ್ಮ ಸುಂದರ ಕಾವ್ಯ ಶೈಲಿಯಲ್ಲಿ ಬರೆದು ಅನುಭವ ಸಾರವನ್ನೇ ಜನರೆದುರು ತೋರಿಸಿ ಸನ್ಮಾರ್ಗದ ಕಡೆಗೆ ಎಳೆದೊಯ್ಯುತ್ತಾರೆ. ಭಾವತರಂಗಗಳೊಡನೆ ತೇಲಿಸುತ್ತಾರೆ. ಶಿವದರ್ಶನ ಮತ್ತು ಗುರುದರ್ಶನ ಮಾಡಿಸುತ್ತಾರೆ. ಅಷ್ಟೇ ಅಲ್ಲ ಆತ್ಮಸಾಕ್ಷಾತ್ಕಾರ ಮಾಡಿಸುವ ಶಕ್ತಿಯು ಮಹಾ ಕವಿಗಳಲ್ಲಿ ಇರುತ್ತದೆ. ಒಂದೆಡೆ ಆನಂದವರ್ಧನನು ಈ ರೀತಿ ತಿಳಿಸಿದ್ದಾನೆ.—

"ಅಪಾರೇ ಕಾವ್ಯ ಸಂಸಾರೇ ಕವಿರೇವ ಪ್ರಜಾಪತಿಃ।
ಯಥಾಸ್ಮೈ ರೋಚತೇ ವಿಶ್ವಂ ತಥೇದಂ ಪರಿವರ್ತತೇ"॥

ಈ ಕಾವ್ಯ ಪ್ರಪಂಚದಲ್ಲಿ ಕವಿಯೇ ಸೃಷ್ಟಿಕರ್ತ. ಬ್ರಹ್ಮನಿಗಿಂತಲೂ ಒಂದು ಹೆಜ್ಜೆ ಮುಂದೆಹೋಗಿ ಕಲ್ಪನೆಯ ಸೃಷ್ಟಿಮಾಡಿ; ಕಾವ್ಯವನ್ನು ನಿಯಂತ್ರಿಸಿ, ವಿಶ್ವವನ್ನೇ ಬೆರಗುಗೊಳಿಸುವ ಮತ್ತು ಮೆರಗು ನೀಡುವ ಬೃಹತ್ ಶಕ್ತಿ ಕವಿಗಳಲ್ಲಿದೆ. ಅಂತೆಯೇ ಕ್ಷೇಮೇಂದ್ರನೂ ಸಹ

"ಔಚಿತ್ಯಂ ರಸಸಿದ್ಧಸ್ಯ ಸ್ಥಿರಂ ಕಾವ್ಯಸ್ಯ ಜೀವಿತಂ"

ಎಂದು ಮುಂತಾಗಿ ಹೇಳಿದ್ದಾನೆ. ಅಂದರೆ "ಔಚಿತ್ಯ ದೃಷ್ಟಿಯಿಂದ ಪ್ರತಿಯೊಂದು ಮಹಾ ಕಾವ್ಯದಲ್ಲಿಯೂ ಪ್ರಧಾನ ರಸವು ಒಂದೇ ಆಗಿಯೂ ಉಳಿದ ರಸಗಳು ಗೌಣವಾಗಿಯೂ ಬರುತ್ತವೆ. ಈ ಪ್ರಧಾನ ರಸ ಮೂಲಕವೇ ಕವಿಯ ಜೀವನದ ಮೀಮಾಂಸೆಯು ಅಭಿವ್ಯಕ್ತವಾಗುತ್ತದೆ" ಕವಿಗೆ ರಸದೃಷ್ಟಿ ಪ್ರೇರಕವಾದರೆ, ಆ ರಸವೇ ಕಾವ್ಯದ ಆತ್ಮವಾಗುತ್ತದೆ. ತುಷ್ಟಿಪುಷ್ಟಿಗೆ ಸಹಾಯಕವಾಗುತ್ತದೆ. ತತ್ವಜ್ಞಾನಿಯು ಸತ್ಯವನ್ನು ಕಠಿಣತರವಾಗಿ ತಿಳಿಸಿದರೆ ಕವಿಯು ಸತ್ಯದ ಸಮ್ಯಕ್ ದರ್ಶನವನ್ನು ಸಮಗ್ರ ಸ್ವರೂಪವನ್ನು ಹೃದಯ ಮುಟ್ಟುವಂತೆ ತಿಳಿಸುತ್ತಾನೆ. ಅರ್ಥ ಸೌಂದರ್ಯಕ್ಕಿಂತಲೂ, ಪದಸೌಷ್ಠವಕ್ಕಿಂತಲೂ ಆತ್ಮ ಸೌಂದರ್ಯವನ್ನು ಹೆಚ್ಚಿಸಿಕೊಂಡ ಕವಿಗಳಿಗೆ ಹೆಚ್ಚಿನ ಬೆಲೆ, ಬಲಬರುವದು ಸಹಜ. ಅವರ

ಸಾಹಿತ್ಯ ಅಮರವಾಗುತ್ತದೆ. ಮಾನವರ ಮನವನ್ನು ನಿರಂತರವೂ ನಿರ್ಮಲ ಮಾಡುತ್ತದೆ.

"ಮಹಾಕವಿಯೆಂಬ ತರುವಿಗೆ ಪ್ರತಿಭೆಯೇ ಬೇರಾಗಬೇಕು. ಗುಣಗಳೇ ಉನ್ನತ ಕಾಂಡಗಳಾಗಬೇಕು. ವಾಕ್ಕೇ ಚಿಂದಳಿರಾಗಬೇಕು. ಆಗ ಉತ್ಪನ್ನ ಅವರ ಕುಸುಮ ಮಂಜರಿ" ಇಂತಾದಾಗ—

"ಜಯಂತಿ ತೇ ಸುಕೃತಿನೋ ರಸಸಿದ್ಧಾಃ ಕವೀಶ್ವರಾಃ"

ಭರ್ತೃಹರಿಯ ಈ ಸಿರಿನುಡಿ ಸಾರ್ಥಕ. ಸಾಹಿತ್ಯ ಸಾಧಕರಿಗೆ ಪ್ರೇರಕ.

ಉಪಮಾ ಕಾಲಿದಾಸಸ್ಯ

ಸಂಸ್ಕೃತಿಯ ಪುನರುತ್ಥಾನಕ್ಕೆ ಸಂಸ್ಕೃತ ಸಾಹಿತ್ಯವು ಮಹಾ ಸಾಧನ. ದಿವ್ಯ ಶಕ್ತಿಗೆ ಚೈತನ್ಯದಾಯಕ. ಸಾಹಿತ್ಯಸಂವರ್ಧನೆಗೆ ಸ್ಫೂರ್ತಿದಾಯಕ ಹಾಗೂ ಪೋಷಕ. ಸಂಸ್ಕೃತ ಭಾಷೆ ದೇವ ಭಾಷೆಯೆಂದು ಪರಿಗಣಿತವಾಗಿದೆಯಲ್ಲದೆ ಅದಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದ್ದು, ಪಾಶ್ಚಾತ್ಯ ವಿದ್ವಾಂಸರು ವಿಶ್ವದ ಮಾನವ ಕುಲಕ್ಕೆ ಮೂಲಭೂತವಾದ ಭಾಷೆಗಳಲ್ಲಿ ಇದು ಅಗ್ರಸ್ಥಾನ ಪಡೆದಿದೆಯೆಂದು ಸಿದ್ಧಮಾಡಿದ್ದಾರೆ. ಭಾಷೆಯ ಬಂಧುರತೆ, ಶುದ್ಧತೆ, ಮಾಧುರ್ಯಾದಿ ಕಾವ್ಯಗುಣಗಳು ಸಂಸ್ಕೃತ ಸಾಹಿತ್ಯದಲ್ಲಿ ಛಂದೋಬದ್ಧವಾಗಿ ಅಂತರ್ಗತವಾದಷ್ಟು ಬೇರೆ ಭಾಷೆಗಳಲ್ಲಿ ಇರಲಿಕ್ಕಿಲ್ಲವೆಂದು ನಮ್ಮ ಭಾವನೆ. ವಿಜ್ಞಾನದ ವಿಲಕ್ಷಣ ಪ್ರಗತಿಯ ವಿಚಾರ ಕಿರಣಗಳೂ ಸಹ ಸಂಸ್ಕೃತ ಸಾಹಿತ್ಯ ನಭೋಮಂಡಲದಲ್ಲಿ ತುಂಬಿವೆ. ಸಂಸ್ಕೃತ ಸಾಹಿತ್ಯ ಸಾಗರದಲ್ಲಿ ಮುಳುಗುತ್ತ ಹೋದಂತೆ ವಜ್ರವೈಡೂರ್ಯಗಳು ಮುತ್ತು-ರತ್ನಗಳು ದೊರೆಯುತ್ತವಲ್ಲದೆ, ಅವರವರ ಶಕ್ತಿ ಸಾಹಸದಂತೆ ಬೆಳಕಿಗೆಡೆ ನೀಡುತ್ತವೆ. ಅಂತಹ ಮಹಾನ್ ಶಕ್ತಿಯನ್ನು ಪಡೆದು, ಸಾಹಿತ್ಯಸಿದ್ಧಿಗೇರಿದ ರಸಋಷಿಗಳಲ್ಲಿ ಮಹಾಕವಿ ಕಾಲಿದಾಸನು ಅಗ್ರಗಣ್ಯ. ಕಾಲಿದಾಸನ ಕಾವ್ಯಶಕ್ತಿಯನ್ನು ಹೃದಯಾಂತರಾಳಕ್ಕೆ ಒಯ್ದು, ಮಾನವ ಕೋಟಿಯು ಉದ್ಧಾರವಾಗುವಂತಹ ಸಾಹಿತ್ಯವನ್ನು ರಚಿಸಿ, ಅತೃಪ್ತ ಜೀವಿಗಳ ಹೃದಯವನ್ನು ಸಂತೃಪ್ತಿಪಡಿಸಿ, ಜಾಗೃತ ಚೈತನ್ಯವನ್ನು ನೀಡಿದ ಮಹಾಕವಿಕುಲತಿಲಕ. ಕಾವ್ಯಾಕಾಶದಲ್ಲಿ ಭಾರವಿ, ಶ್ರೀಹರ್ಷ, ಮಾಘ, ದಂಡಿ ಮೊದಲಾದ ಕವಿ ಪುಂಗವರು ಪಾಂಡಿತ್ಯ ಪ್ರತಿಭೆಯಿಂದ ಬೆಳಗಿದರೆ, ಕಾಲಿದಾಸನು ಮಾತ್ರ ಕಾವ್ಯಶಕ್ತಿಯ ಹಾಗೂ ಹೃದಯವಂತಿಕೆಯ ದಿವ್ಯ ಪ್ರಭೆಯಿಂದ ಬೆಳಗಿದ್ದಾನೆ. ಈತನ ಕಾವ್ಯಪ್ರವಾಹದಲ್ಲಿ ಉಪಮೆಗಳು, ಸಹಜವಾಗಿ, ಸರಸವಾಗಿ, ನಿರರ್ಗಳವಾಗಿ ಹರಿದಿವೆ. ಉಪಮೆಯಾದರೂ ಸಹ ಸಹೃದಯದವರನ್ನು ಕೂಡಲೇ ತೃಪ್ತಿಪಡಿಸುವಂತಹವಾಗಿವೆ. ಆತ್ಮಸಾಧನೆಯಿಂದ ಕೂಡಿಕೊಂಡಿವೆ. ಉಪಮೆಯಿಂದಲೇ ಕಾಲಿದಾಸನು ಜನಾನುರಾಗಿಯಾಗಿದ್ದಾನೆ. ಕವಿಕುಲ ಗುರುವಾಗಿದ್ದಾನೆ. ಅಂತೆಯೇ ಕಾಳಿದಾಸನಿಗೆ

ಪುರಾಕವಿನಾಂ ಗಣನಾಪ್ರಸಂಗೇ ಕನಿಷ್ಠ ಕಾಧಿಷ್ಠಿತ ಕಾಳಿದಾಸಃ

ಎಂಬುದಾಗಿ ವರ್ಣಿಸಿದ್ದಾರೆ. ಕಾಲಿದಾಸನ ಕಲ್ಪನಾ ವಿಲಾಸವನ್ನು, ಉಪಮಾ ಸೌಂದರ್ಯವನ್ನು, ಅವನು ಬರೆದ ಅಭಿಜ್ಞಾನ ಶಾಕುಂತಲ ನಾಟಕವನ್ನು ಓದಿಯೇ ಆನಂದ ಪಡೆಯಬೇಕು. ಕಾಲಿದಾಸನ ಪದಪ್ರಯೋಗದಲ್ಲಿಯೂ ಒಂದು ಅದ್ಭುತ

ಶಕ್ತಿಯಿದೆ. ಶಬ್ದಾಡಂಬರದ ಗೋಜಿಗೆ ಹೋಗದೆ, ಭಾವಪೂರ್ಣವಾಗಿ. ವೀರ ರೌದ್ರಾದಿ ಸನ್ನಿವೇಶಗಳಲ್ಲಿಯೂ ಓಜಸ್ವಿಯಾಗಿ ಪರಿಶೋಧಿಸಿದ್ದಾನೆ. ಯೋಗಿಗಳಿಗೆ, ತ್ಯಾಗಿಗಳಿಗೆ, ಭೋಗಿಗಳಿಗೆ, ಬಂಧು-ಬಾಂಧವರಿಗೆ ಬೇಕಾಗುವಂತಹ ಹಿತ ನುಡಿಗಳು ಸುಮಧುರ ಶೈಲಿಯಲ್ಲಿ ಕಾಳಿದಾಸನ ಕಾವ್ಯದಲ್ಲಿ ಹೆಣೆಯಲ್ಪಟ್ಟಿವೆ. ಕಾಳಿದಾಸನ ಕಾವ್ಯಸೃಷ್ಟಿಯು ನಿರಂತರವೂ ಚಿರನೂತನವೇ. ಆತನ ಕಾವ್ಯವೃಷ್ಟಿಯು ಸತತವೂ ಆಹ್ಲಾದಕರವಾದದ್ದೇ ಆಗಿ ಪರಿಣಮಿಸುತ್ತದೆ. ಕಾಳಿದಾಸನ ಪದಮಾಡಿದ ಉಪಮೆ, ರೂಪಕ, ಉತ್ಪ್ರೇಕ್ಷೆ ಕಾವ್ಯದ ಸೌಂದರ್ಯ ಸಂವರ್ಧನೆಗೆ ಸಾಧನಗಳಾಗಿವೆ. ಅಂತೆಯೇ ಮಹಾ ಕವಿಗಳೂ ಸಹ ಕಾಳಿದಾಸನಿಗೆ ಸರಸ್ವತಿಯ ಅವತಾರವೆಂದು ಬಣ್ಣಿಸಿದ್ದಾರೆ. ಕಾಳಿದಾಸನ ಅದ್ಭುತ ಕಾವ್ಯಶಕ್ತಿಯನ್ನು ಪರಿಚಯ ಮಾಡಿಕೊಡುವದೂ ಸಹ

ತಿತೀರ್ಷುರ್ದುಸ್ತರಂ ಮೋಹಾದುಡುಪೇನಾಸ್ಮಿ ಸಾಗರಂ

ಕಾಳಿದಾಸನ ಈ ಉಪಮೆಯ ನುಡಿಗಳಲ್ಲಿಯೇ ಹೇಳಿದರೆ ಸಾರ್ಥಕವಾದೀತು.

ವಾಗರ್ಥಾ ವಿವಸಂಪೃಕ್ತೌ ವಾಗರ್ಥಃ ಪ್ರತಿಪತ್ತಯೇ।
ಜಗತಃ ಪಿತರೌ ವಂದೇ ಪಾರ್ವತೀ ಪರಮೇಶ್ವರೌ॥

ಲೌಕಿಕ ಪಾರಮಾರ್ಥಿಕ ವಿಷಯಗಳನ್ನೊಳಗೊಂಡ ಈ ಶ್ಲೋಕವು ಮಹಾಕವಿ ಕಾಳಿದಾಸನ ಕಾವ್ಯ ಪ್ರತಿಭೆಗೆ, ನಿರೂಪಣೆಯ ಶೈಲಿಗೆ ಇದೊಂದೇ ಸಾಕು. ಉಪಮಾಲಂಕಾರಕ್ಕೆ ಇದೊಂದೇ ಸಾಕ್ಷಿ. ಕಾಳಿದಾಸನ ಸಾಹಿತ್ಯ ಸಮುದ್ರ ಗರ್ಭದಲ್ಲಿ ಇಂತಹವು ಸಹಸ್ರಾರು ತುಂಬಿವೆ.

ಭಾರವೇರರ್ಥಗೌರವಂ

ಸಾಹಿತ್ಯಾಕಾಶದಲ್ಲಿ ರವಿಯಂತೆ ಬೆಳಗಿದ, ಬೆಳಗುತ್ತಿರುವ ಭಾರತೀಯ ಕವಿತ್ವ ಶಕ್ತಿಯು ಅಪ್ರತಿಮವಾದುದು. ಅರ್ಥಗೌರವಪೂರ್ಣವಾದುದು. ಶಬ್ದಾಲಂಕಾರಗಳಿಂದ ಕೂಡಿದುದು. ಸರಸ್ವತಿಯ ಭಾಂಡಾರವನ್ನೇ ತನ್ನ ಸಾಹಿತ್ಯದಲ್ಲಿ ತುಂಬಿಕೊಂಡಿರುವ ಮಹಾಶಕ್ತಿ ಭಾರವಿಯದು. ಶಬ್ದ ಶುದ್ಧಿ, ಅರ್ಥಸಂಪತ್ತು ಭಾರವಿಯ ಸಾಹಿತ್ಯ ಕ್ಷೇತ್ರದಲ್ಲಿ ಎತ್ತ ನೋಡಿದತ್ತ ದೊರೆಯುತ್ತವೆ. ಅಂತರಂಗ ಶುದ್ಧಿಗೆ ಸಾಧನವಾಗಿರುವ ನುಡಿಮುತ್ತುಗಳು ಭಾರವಿಯ ಸಾಹಿತ್ಯ ಸಾಗರದಲ್ಲಿ ತುಂಬಿವೆ. ಉದಾಹರಣೆಗಾಗಿ—

"ಹಿತಂ ಮನೋಹಾರಿಚ ದುರ್ಲಭಂ ವಚಃ"
"ವಿಚಿತ್ರ ರೂಪಾಃ ಖಲು ಚಿತ್ತವೃತ್ತಯಃ"
"ಅವಿವೇಕಃ ಪರಮಾ ಪದಾಂ ಪದಂ"

ಉಪಯುಕ್ತವಾದ ಇಂತಹ ಸೂಕ್ತಿಕಿರಣಗಳು ಭಾರವಿಯ ಸಾಹಿತ್ಯಾಕಾಶದಲ್ಲಿ ಮಿನುಗಿವೆ. ಕೃಷ್ಣ ಕವಿಯು ಒಂದೆಡೆಯಲ್ಲಿ, ಭಾರವಿಯ ಪಾಂಡಿತ್ಯ ಪ್ರಭೆಯನ್ನು ನೋಡಿ—

ಪ್ರದೇಶವೃತ್ತ್ಯಾಪಿ ಮಹಾಂತ ಮರ್ಥಂ ಪ್ರದರ್ಶಯಂತೀರ ಸಮಾದಧಾನ।
ಸಾ ಭಾರವೇಃ ಸತ್ಪಥದೀಪಿಕೇವ ರಮ್ಯಾಕೃತಿಃ ಕೈರಿವನೋಪ ಜೀವ್ಯಾ॥

ಭಾರವಿಯ ಕಾವ್ಯವು ಒಂದೇ ಕಡೆ ಇದ್ದರೂ ವಸ್ತು ಸಮೂಹವನ್ನೆಲ್ಲ ಪ್ರಕಾಶಿಸುತ್ತ ಆನಂದವನ್ನು ತರುವ ದಾರಿದೀಪದಂತೆ ರಮಣೀಯ ಮತ್ತು ಸಕಲರಿಗೂ ಉಪಜೀವ್ಯವಾದುದೆಂದು ಮುಂತಾಗಿ ಹೊಗಳಿದ್ದಾನೆ. ಭಾರವಿಯು ರಾಜನೀತಿಯ ತತ್ವಗಳನ್ನು ತನ್ನ ಕೃತಿಯಲ್ಲಿ ತಿಳಿಸಿ ಗುಪ್ತಚಾರರ ಹೊಣೆಯನ್ನು ವಿವರಿಸಿದ್ದಾನೆ. ಗೂಢಚಾರರೇ ರಾಷ್ಟ್ರದ ಕಣ್ಣುಗಳೆಂದು ಬಣ್ಣಿಸಿದ್ದಾನೆ. ಪ್ರಸಾದ ರಮ್ಯವಾದರೂ ಓಜಸ್ವಿ, ಗರೀಯವಾದರೂ ಲಾಘವಾನ್ವಿತ, ಅರ್ಥಸಂಪತ್ತಿಯು ಔದಾರ್ಯವಿದ್ದರೂ ಋಷಿಯ ಚಿತ್ತದಂತೆ ಶಾಂತ. ಇವುಗಳೇ ಭಾರವಿಯಲ್ಲಿ ಕಾಣತಕ್ಕ ಮುಖ್ಯ ಗುಣಗಳು. ವರ್ಣನಾಚಾತುರ್ಯವನ್ನು, ಶೃಂಗಾರಾದಿ ರಸವನ್ನು ಹೃದಯ ಮುಟ್ಟುವಂತೆ ಚಿತ್ರಿಸಿದ್ದಾನೆ. ಇಂದ್ರಿಯಾಧೀನರಾದವರ ಕಷ್ಟವನ್ನು ಆತ್ಮ ಸೌಂದರ್ಯಾನುಭೂತಿಯನ್ನು ಪಡೆದ ಜಿತೇಂದ್ರಿಯ ವ್ಯಕ್ತಿಗಳ ಸುಖವನ್ನೂ, ಯೋಗಸಿದ್ಧಿಯ ಹಿರಿಮೆಯನ್ನೂ, ತತ್ವದರ್ಶನವನ್ನೂ ಭಾರವಿಯು ತನ್ನ ಕಾವ್ಯದಲ್ಲಿ ಸರ್ವಾಂಗಸುಂದರವಾಗುವಂತೆ ಬರೆದು ಸರ್ವರ ಗೌರವಕ್ಕೆ

ಪಾತ್ರನಾಗಿದ್ದಾನೆ. ಪಂಡಿತ ಮಲ್ಲಿನಾಥನ ಮಾತಿನಲ್ಲಿಯೇ ಹೇಳುವುದಾದರೆ ಮತ್ತಿಷ್ಟು ಅರ್ಥಗರ್ಭಿತವಾದೀತು.

ನಾರಿಕೇಲಫಲಸಂಮಿತಂ ವಚೋ ಭಾರವೇಃ
ಸಪದಿ ತದ್ವಿಭಜ್ಯತೇ।
ಸ್ವಾದಯಂತು ರಸಗರ್ಭನಿರ್ಭರಂ
ಸಾಮರಸ್ಯ ರಸಿಕಾ ಯಥೇಪ್ಸಿತಂ॥

ಕಾಳಿದಾಸನ ಕಾವ್ಯವು ದ್ರಾಕ್ಷಾಪಾಕದಂತೆ ಇದ್ದರೆ, ಭಾರವಿಯ ಕಾವ್ಯವು ನಾರಿಕೇಲ ಫಲದಂತೆ ರುಚಿಯಾಗಿದೆ. ಭಾರವಿಯ ಭಾವವು ಗಂಭೀರವಾಗಿದ್ದು ನುಡಿಗಳು ಪ್ರಕೃತಿ-ಮಧುರವಾಗಿವೆ. ಚಿತ್ತಾಕರ್ಷಕಗಳಾಗಿವೆ. ಅಂತೆಯೇ ಭಾರವಿಯು ಸಂಸ್ಕೃತ ಸಾಹಿತ್ಯದ ಸಾರ್ವಭೌಮ.

ದಂಡಿನಃ ಪದಲಾಲಿತ್ಯಂ

ಸಂಸ್ಕೃತ ಸಾಹಿತ್ಯದಲ್ಲಿ ದಂಡಿಯು ನುಡಿಗಡಣದ ಬೆಡಗು ಅಮೋಘವಾದುದು. ಪದಲಾಲಿತ್ಯವು ಬಂಧುರವಾದುದು. ಶಬ್ದ ಸಂಪತ್ತನ್ನು ದಂಡಿಯ ಕಾವ್ಯ ಕ್ಷೇತ್ರದಲ್ಲಿ ಹುಡುಕಿಯೇ ಅದರ ರಸಾನುಭವವನ್ನು ಪಡೆದು ಆನಂದಿಸಬೇಕು. ಶಬ್ದಗಳು ರಾಶಿ ರಾಶಿಯಾಗಿ ಕಾರಂಜಿಯಂತೆ ಪುಟಿದಿದ್ದಿವೆ. ಮನಸ್ಸಿಗೆ ಅಲ್ಹಾದವನ್ನು ನೀಡುವಂತಿವೆ. ದಂಡಿಯ ವರ್ಣನಾ ವೈಚಿತ್ರ್ಯವು ವರ್ಣನೀಯವಾಗಿದೆ. ಆದರೆ ಅಂಗಕ್ಕೆ ಆಭರಣಗಳು ಸುಂದರವಾದರೂ ಸಹ ಮೈತುಂಬ ಆಭರಣಗಳನ್ನೇ ಧರಸಿದರೆ, ಸೌಂದರ್ಯಕ್ಕೆ ಒಪ್ಪೊಪ್ಪ ಭಂಗ ಬರಬಹುದೇನೋ ಅನ್ನಿಸುತ್ತದೆ. "ಭಿನ್ನರುಚಿರ್ಹಿಲೋಕಃ" ಎಂಬುದನ್ನೇ ಸಂಸ್ಮರಿಸಿ ಸಮಾಧಾನ ಪಡಬೇಕಾಗಿದೆ.

ಮುಖ್ಯವಾಗಿ ದಂಡಿಯ ಗದ್ಯಸಾಹಿತ್ಯದಲ್ಲಿ ಕಾಣುವದು ಶಬ್ದಾರ್ಥಗಳ ಚಮತ್ಕಾರ ಮತ್ತು ಕಥೆಗಳ ಸಂಯೋಜನೆ. ದಂಡಿಯು ಬರೆದ ಗದ್ಯಕಾವ್ಯದಲ್ಲಿ "ದಶಕುಮಾರ ಚರಿತೆ"ಯು ಪ್ರಸಿದ್ಧವಾದುದು, ದಶಕುಮಾರ ಚರಿತೆಯಲ್ಲಿ ಅದ್ಭುತ ಘಟನೆಗಳನ್ನು ಚಿತ್ರಿಸುವ ಕಥಾನಕ ಶೈಲಿಯು ಮನಮೋಹಕವಾಗಿದೆ. ದಂಡಿಯು ವಾಸ್ತವಿಕ ವಿಷಯದೊಡನೆ ಕೂಡಿದ ಹತ್ತು ಕಥೆಗಳನ್ನು ಮನಮುಟ್ಟುವಂತೆ ಚಿತ್ರಿಸಿದ್ದಾನೆ. ಅಲ್ಲಲ್ಲಿ ವೀರ ರೌದ್ರ, ಹಾಸ್ಯ ಮತ್ತು ಶೃಂಗಾರ ರಸವನ್ನು ಸೇರಿಸಿ ಕಥೆಗೆ ಒಂದು ಕಳೆ ನೀಡಿದ್ದಾನೆ. ದಂಡಿಯು ಸಮಾಜದಲ್ಲಿ ಒಡೆದು ಕಾಣುವ ದೋಷಗಳನ್ನು ತನ್ನ ಕೃತಿಯಲ್ಲಿ ಎತ್ತಿ ತೋರಿಸಿದ್ದಾನೆ. ಕಥಾ ಸ್ವಾರಸ್ಯವನ್ನು ನೀಡುವದರಲ್ಲಿ ದಂಡಿಯು ಸಿದ್ಧಹಸ್ತ, ಒಂದೇ ವಾಕ್ಯದಲ್ಲಿ ಅನೇಕ ಅರ್ಥಗಳು ಆಗುವಂತೆ ಬರೆದಿದ್ದಾನೆ. ಕಾಲ್ಪನಿಕ ಪ್ರಪಂಚದ ಸೃಷ್ಟಿಯನ್ನೇ ಮಾಡಿದ್ದಾನೆ. ಅಂತೆಯೇ "ಕವಿರ್ದಂಡೀ, ಕವಿರ್ದಂಡೀ ಕವಿರ್ದಂಡೀ ನ ಸಂಶಯಃ" ಎನ್ನುವ ಪ್ರಶಸ್ತಿ ದೊರೆತಿವೆ. ಯಾವುದೇ ವಾಸ್ತವಿಕ ಚಿತ್ರವನ್ನು ನೋಡಬೇಕಾದರೆ ದಂಡಿಯ ಸಾಹಿತ್ಯದಲ್ಲಿಯೇ ಕಂಡರಿಯಬೇಕು. ದಂಡಿಯು ಒಳ್ಳೆಯ ವಿಚಾರಗಳನ್ನು ಎದುರಿಗಿಡುವಂತೆ, ನೀಚವರ್ಗದವರ ಸ್ಥಿತಿಗಳನ್ನು ಪ್ರತ್ಯಕ್ಷ ಪ್ರಮಾಣವಾಗುವಂತೆ ತೋರಿಸಿ ಅವರ ಸುಧಾರಣೆಯ ರೀತಿ ನೀತಿಗಳನ್ನು ತಿಳಿಸಿದ್ದಾನೆ. ದಂಡಿಯ ಕಾವ್ಯದಲ್ಲಿ ಬಾಣಕವಿಯಂತೆ ಶಬ್ದ ಪ್ರೌಢಿಮೆಯು ವಿಸ್ತಾರರೂಪದಲ್ಲಿ ಬಿಗುವಿನೊಡನೆ ಕಾಣದಿದ್ದರೂ, ವ್ಯವಹಾರಿಕ ಜೀವನ ಚಿತ್ರವನ್ನು ಚಿತ್ರಿಸುವದರಲ್ಲಿ ಕುಶಲತೆ ಕಂಡುಬರುತ್ತದೆ. ಅಲ್ಲಲ್ಲಿ ಉಪಮಾಲಂಕಾರಗಳು ಕಂಗೊಳಿಸುತ್ತವೆ. ದಂಡಿಯ ಕಾವ್ಯದಲ್ಲಿ ಚೋರಶಾಸ್ತ್ರ, ರಾಜನೀತಿ ಮತ್ತು ಕಾಮಶಾಸ್ತ್ರವನ್ನು

ನಿಪುಣತೆಯೊಡನೆ ವಿವರಿಸಿದ್ದಾನೆ. ಸಂಧ್ಯಾ ವಸಂತಾದಿ ವರ್ಣನೆಯನ್ನು ಸಹ ಪ್ರತಿಭಾಪೂರ್ಣವಾದ ಶೈಲಿಯಲ್ಲಿ ಬರೆದಿದ್ದಾನೆ. "ಗದ್ಯಂ ಕವಿನಾಂ ನಿಕಷಂ ವದಂತಿ" ಗದ್ಯವೇ ಕವಿಗಳ ಕವಿತ್ವಸಿದ್ಧಿಯನ್ನಳೆಯುವ ಒರೆಗಲ್ಲು. ಈ ದೃಷ್ಟಿಯಿಂದ ದಂಡಿಯ ಗದ್ಯಕಾವ್ಯವು ಉನ್ನತಮಟ್ಟದ್ದಿರುವದಲ್ಲದೆ, ಗದ್ಯದಲ್ಲಿರಬೇಕಾದ ನೂರಾರು ವಿಶೇಷಣಗಳಿಂದ ಕೂಡಿದ ಪದಲಾಲಿತ್ಯವನ್ನು ಪಡೆದಿದೆ. ಸಂಸ್ಕೃತ ಗದ್ಯ ಕಾವ್ಯ ಸಾಮ್ರಾಜ್ಯದ ಮಹಾ ವೈಭವವನ್ನು ದಂಡಿಯ ಕೃತಿಯಲ್ಲಿ ನೋಡಿ ಆನಂದ ಪಡಬಹುದಾಗಿದೆ.

ಮಾಘೇ ಸಂತಿ ತ್ರಯೋ ಗುಣಾಃ

ಕಾಳಿದಾಸನ ಉಪಮೆ, ಭಾರವಿಯ ಅರ್ಥಗೌರವ, ದಂಡಿಯ ಪದಲಾಲಿತ್ಯ, ಇವೆಲ್ಲವುಗಳೂ ಮಾಘನ ಕೃತಿಯಲ್ಲಿ ಕಾಣಿಸಿಕೊಂಡಿರುವವೆಂದು ಪ್ರಾಚೀನ ಪಂಡಿತರ ಅಭಿಮತ. ಅಲ್ಲಲ್ಲಿ ಸ್ವಲ್ಪ ಕಂಡರೂ ಅವರವರ ದಿವ್ಯ ಪ್ರತಿಭೆ ಮಾಘನಲ್ಲಿ ತುಂಬಿದೆ ಎಂದು ಹೇಳಲು ಕಷ್ಟಸಾಧ್ಯ. ಶಾಸ್ತ್ರ ಪಾಂಡಿತ್ಯದ ದೃಷ್ಟಿಯಿಂದ ಇನ್ನುಳಿದ ಕವಿಗಳಿಗಿಂತ ಹೆಚ್ಚಿನವನಾಗಿ ಕಾಣಬಹುದು. ಆದರೆ ಕಾಳಿದಾಸ, ಭಾರವಿಯಂತೆ, ಹೃದಯಕ್ಕೆ ತಂಪನ್ನು, ಆತ್ಮಕ್ಕೆ ಸತ್ವವನ್ನು ಮತ್ತು ಸ್ಫೂರ್ತಿಯನ್ನು ನೀಡಬಲ್ಲ ಕಾವ್ಯರಚನೆ ಕಾಣುವದು ದುರ್ಲಭ. ತಿಳಿಭಾಷೆಯಲ್ಲಿ ಭಾವವನ್ನು ತುಂಬಿ ಜನಸಾಮಾನ್ಯರಿಗೂ ಅರ್ಥವಾಗುವಂತೆ ಬರೆದು ಹೃದಯಾರವಿಂದವನ್ನು ಅರಳಿಸಿ, ಸುಮಧುರ ಕಾವ್ಯ ಮಧುವಿನಿಂದ ತೃಪ್ತಿಪಡಿಸುವ ವಿಶೇಷ ಶಕ್ತಿ ಕಾಳಿದಾಸನದು. ಮಾಘ ಮಾತ್ರ ವಿದ್ವತ್ಕವಿ. ಸಶಾಸ್ತ್ರೀಯ ವಿಚಾರಗಳನ್ನು ತರ್ಕಬದ್ಧವಾಗಿ ಬರೆದು, ಪಾಂಡಿತ್ಯ ಪ್ರಭೆಯನ್ನು ಬೆಳಗಿಸಿ ಮೆರೆದ ಮಹಾಕವಿ.

> ಮಾಘೋ ಮಾಘ ಇವಾಶೇಷಂ ಕ್ಷಮಃ
> ಕಂಪಯಿತಾಂ ಜಗತ್

ಮಾಘನು ಮಾಘಮಾಸದಂತೆ ಜಗತ್ತನ್ನೇ ಕಂಪಿಸುವ ಶಕ್ತಿಯನ್ನು ಪಡೆದಿದ್ದಾನೆಂದು ಸುಭಾಷಿತ ಕಾರರ ನುಡಿ. "ಶಿಶುಪಾಲ ವಧ"ವು ಮಾಘನ ಕೃತಿ. ಭಾರವಿಗಿಂತ ಕಾವ್ಯವನ್ನು ಹೆಚ್ಚು ಸುಂದರವಾಗಿ ಬರೆದು, ಹೆಚ್ಚಿನ ಕಾವ್ಯಶಕ್ತಿಯುಳ್ಳದುದನ್ನಾಗಿ ಪಂಡಿತರೆದುರಿನಲ್ಲಿ ತೋರಿಸುವ ಮನೀಷೆಯಿಂದ ಈ ಕಾವ್ಯ ರಚನೆಯಾಗಿದೆಯೆಂದೂ ತತ್ಸಮಾನ ಕವಿಗಳ ಅಭಿಪ್ರಾಯವಿದೆ. ಅಂತೆಯೇ

> ತಾವದ್ಭಾ ಭಾರವೇರ್ಭಾತಿ ಯಾವನ್ಮಾಘಸ್ಯ ನೋದಯಃ।
> ಉದಿತೇ ಚ ಪುನರ್ಮಾಘೇ ಭಾರವೇರ್ಭಾರವೇರಿವ॥

ಮಾಘನು ಜನಿಸುವತನಕ ಭಾರವಿಯ ಪ್ರಕಾಶ. ಮಾಘನು ಹುಟ್ಟಿದಮೇಲೆ ಅದೆಲ್ಲವೂ ಚಳಿಗಾಲದ ಸೂರ್ಯತಾಪದಂತೆ ಅಡಗಿಯೇ ಹೋಗುತ್ತದೆಂದು ಚಮತ್ಕಾರಿಕವಾಗಿ ನುಡಿದಿದ್ದಾರೆ. ಪ್ರಾಚೀನ ಕವಿಗಳ ರೀತಿ ನೀತಿಗಳ ಮೇಲೆ ವಿಹಂಗಮ ದೃಷ್ಟಿಯನ್ನು ಹಾಯಿಸಿದರೆ ಅಲ್ಲಿಯೂ ದ್ವೇಷಾಸೂಯೆಗಳ ತಾಕಲಾಟ ಕಾಣದಿರದು. ಮಾಘನು ಅಶ್ವಶಾಸ್ತ್ರ, ಗಜಶಾಸ್ತ್ರ, ಬೌದ್ಧ ಸಿದ್ಧಾಂತ, ಸಾಂಖ್ಯಾದಿ ದರ್ಶನಗಳು, ಸಂಗೀತ ಶಾಸ್ತ್ರ, ನಾಟ್ಯಶಾಸ್ತ್ರ ಮುಂತಾದ ಚತುರ್ದಶ ವಿದ್ಯೆಗಳಲ್ಲಿ ತನ್ನ ಪಾಂಡಿತ್ಯ ಪ್ರತಿಭೆಯನ್ನು ತೋರಿಸಿದ್ದಾನೆ. ಅವನ ಕಾವ್ಯದಲ್ಲಿ ಪದ ಮಾಧುರ್ಯವೂ ತುಂಬಿದೆ. ಇಂದಿನ ವಿಮರ್ಶಕರೂ ಸಹ "ಮಾಘನದು ಮೂಲ

ಪ್ರತಿಭೆಯಾಗದೆ ಪ್ರತಿಬಿಂಬ ಪ್ರಭೆ"ಯೆಂದು ಸುಮ್ಮ ಟೀಕಿಸಿದ್ದಾರೆ. ಒಟ್ಟಿನಲ್ಲಿ ಮಾಘ ಕವಿಯು ಸಂಸ್ಕೃತ ಸಾಹಿತ್ಯದಾಳವನ್ನು ಚೆನ್ನಾಗಿ ತಿಳಿದುಕೊಂಡು ಸಾಹಿತ್ಯ ಶೈಲಿಯಲ್ಲಿ ಮಾರ್ದವ ಗೌರವಗಳು ಬರುವಂತೆ ಪ್ರಯತ್ನಿಸಿ ಸಾಹಿತ್ಯಾರಾಧಕರಿಗೆ ಮಾರ್ಗದರ್ಶಕನಾಗಿದ್ದಾನೆ. ಪ್ರಕೃತಿ ಸೂಕ್ಷ್ಮ ನಿರೀಕ್ಷಣೆಯಲ್ಲಿಯೂ ಮಹಾಕವಿ ಮಾಘಕವಿಯ ದೂರದರ್ಶಿತ್ವ ಕಂಡು ಬರುತ್ತದೆ. "ಮೇಘೇ ಮಾಘೇ ಗತಂ ವಯಃ" ಸಂಸ್ಕೃತ ವಿದ್ವಾಂಸರೊಬ್ಬರು ಈ ಶ್ಲೋಕವನ್ನು ಬರೆದು ಮಾಘನ ಮಹತಿಯನ್ನು ಸ್ಪಷ್ಟೀಕರಿಸಿದ್ದಾರೆ. ಕೀರ್ತಿ ಶಿಖರಕ್ಕೇರಿಸಿದ್ದಾರೆ.

ಅನ್ನಾನುರೂಪಾತನುರೂಪವೃದ್ಧಿಃ

ಆಹಾರ ಶುದ್ಧಿಯು ಮಾನವನ ಬೆಳವಣಿಗೆಗೆ ಮಹಾಸಾಧನ. ಆಹಾರ ಶುದ್ಧಿಯಲ್ಲಿಯೇ ಸತ್ವ ಶುದ್ಧಿ, ಚಿತ್ತ ಶುದ್ಧಿ. ಆಹಾರ ಸೇವನೆಯ ಮೇಲಿಂದ ವ್ಯಕ್ತಿಯ ಅಂತರಂಗವರಿಯಬಹುದು. ಬುದ್ಧಿಯ ಶಕ್ತಿಯನ್ನು, ವ್ಯಾಪಕತೆಯನ್ನು, ಸಂಕುಚಿತವನ್ನು ಅವರವರ ಆಹಾರದ ಮೇಲಿಂದ ಅರ್ಥವಾಗುವದು. ತಾಮಸೀಯ ಆಹಾರವು ಕ್ಷಣಿಕ ಸುಖವನ್ನು ನೀಡಿದರೆ, ಸಾತ್ವಿಕ ಆಹಾರವು ನಿರಂತರವೂ ಸುಖ ವನ್ನು ನೀಡುವದಲ್ಲದೆ ಜೀವನ ವಿಕಾಸವನ್ನೂ ಮಾಡಿ ಶರೀರಕ್ಕೆ ಚೈತನ್ಯವನ್ನು ಕೊಡುತ್ತದೆ. ಆಹಾರ ಶುದ್ಧಿಯು ಚಿತ್ತ ಚಾಂಚಲ್ಯವನ್ನೂ ದೂರ ಮಾಡುತ್ತದೆ. ಒಳ್ಳೇ ಆಹಾರ ಸೇವನೆಯಿಂದ ರಾಗದ್ವೇಷಾದಿ ದುರ್ಗುಣಗಳು ದೂರಾಗುವದಲ್ಲದೆ ಆತ್ಮ ಸಂಯಮನಕ್ಕೆ ಕಾರಣವಾಗುತ್ತದೆ. ಅಂತೆಯೇ ಪ್ರಾಚೀನ ಋಷಿಮುನಿಗಳು ಗಡ್ಡೆಗೆಣಸು ಫಲ ಮುಂತಾದ ಸಾತ್ವಿಕ ಆಹಾರದಿಂದಿರುತ್ತಿದ್ದರು. ಅಂತರಂಗ ಶುದ್ಧಿ ಮಾಡಿಕೊಂಡು ಸ್ಮೃತಿ ಶಕ್ತಿಯ ಸಿದ್ಧಿಗೇರುತ್ತಿದ್ದರು. ಸದ್ಗತಿಯನ್ನು ಪಡೆಯುತ್ತಿದ್ದರು. ಒಂದೆಡೆ ಬಸವಣ್ಣನವರು–

ಮೌನದಲುಂಬುದು ಆಚಾರವಲ್ಲ
ಲಿಂಗಾರ್ಪಿತವಾದಬಳಿಕ
ತುತ್ತಿಗೊಮ್ಮೆ ಶಿವಶರಣೆನ್ನುತ್ತಿರಬೇಕು.
ಕರಣವೃತ್ತಿಗಳಡಗುವವು
ಕೂಡಲಸಂಗಮದೇವನ ನೆನೆಯುತ್ತ ಉಂಡರೆ

ಎಂಬುದಾಗಿ ಲಿಂಗಾರ್ಪಿತದ ಮಹತ್ವವನ್ನು ವಿವರಿಸಿದ್ದಾರೆ. ಅನ್ನವಿದ್ದಂತೆ ಮನಸ್ಸು, ಬುದ್ಧಿ, ಪ್ರಸಾದ ಸೇವಿಸುವಾಗ ಕ್ರೋಧಾನ್ವಿತರಾಗಿದ್ದರೆ ದಿನವೆಲ್ಲವೂ ಮನಸ್ಸು ಕೋಪಾವಿಷ್ಟವಾಗಿರುತ್ತದೆ. ಚಿಂತೆಯಲ್ಲಿ ಮಗ್ನರಾಗಿ ಸೇವಿಸಿದರೆ, ಆ ದಿನವನ್ನು ಚಿಂತೆಯಲ್ಲಿಯೇ ಕಾಲಕಳೆಯ ಬೇಕಾಗುತ್ತದೆ. ದಿನ ನಿತ್ಯದ ಕಾರ್ಯ ಅಡೆ ತಡೆಯುಂಟಾಗಿ ಅಂಧಕಾರದಲ್ಲಿ ಬಿದ್ದು ತೊಳಲಬೇಕಾಗುತ್ತದೆ. ಅದಕ್ಕಾಗಿ ಆಹಾರ ಶುಚಿ ಅತ್ಯವಶ್ಯ ಬೇಕು. ಆಹಾರವು ಅತಿಯಾದರೆ ವಿಷವಂತ ಪರಿಣಾಮ ವಾಗಿ ರೋಗರುಜಿನಗಳಿಗೆ ತವರ್ಮನೆಯಾಗುತ್ತದೆ. ಸುಷುಮ್ನಾದಾರಿಯಲ್ಲಿ ಸಾಗಿ ಆತ್ಮ ಪ್ರಗತಿಯನ್ನು ಮಾಡಿಕೊಂಡು, ಭಾವಶುದ್ಧಿಯನ್ನು ಪಡೆದು ನಿಜಾನಂದ ವನ್ನು ಹೊಂದಲು ಸಾತ್ವಿಕಾಹಾರವೇ ಮೊದಲನೆಯ ಮೆಟ್ಟಲು. ಜಿಹ್ವಾ ಚಾಪಲ್ಯ ಹೆಚ್ಚಿದಂತೆ ವಿಷಯ ವಾಸನೆಯೂ ಹೆಚ್ಚಿ ಮಾನವನ ವ್ಯಕ್ತಿತ್ವವೇ ಹಾಳಾಗಿ

ಕೀಳಂತಸ್ತಿಗೆ ಇಳಿಯಬೇಕಾಗುತ್ತದೆ. ತಾಮಸೀಯ ಆಹಾರದಿಂದ ದೇಹ ಬಲವು ಬೆಳೆದರೆ ಸಾತ್ವಿಕಾಹಾರದಿಂದ ಆತ್ಮದಲ್ಲಿ ದಿವ್ಯ ತೇಜಸ್ಸು ಹೊಳೆಯುವದು. ಬುದ್ಧಿಯಲ್ಲಿ ಅದ್ಭುತಶಕ್ತಿಯುಂಟಾಗಿ ಎಂತಹ ಸತ್ಕಾರ್ಯವನ್ನಾದರೂ ಮಾಡುವ ನೂತನ ಚೈತನ್ಯ ಶಕ್ತಿಯು ಅಭಿವೃದ್ಧಿಯಾಗುವದು. ಸಾತ್ವಿಕಾಹಾರದಿಂದ ತನುವಿನ ರೂಪದಲ್ಲಿ ಬದಲಾವಣೆಯಾಗಿ, ದೇಹಾಲಸ್ಯವು ದೂರಾಗಿ ಕೋಮಲತೆ ಕಂಡು ಬರುವದು. ಆದಕಾರಣ ಸಾತ್ವಿಕಾಹಾರವು ಶೀಲಾಚರಣೆಗೆ, ಆತ್ಮವಿಕಾಸಕ್ಕೆ, ಆತ್ಮ ಸಂಶೋಧನೆಗೆ ಸಿದ್ಧೌಷಧ ಮತ್ತು ಸಿದ್ಧಿಸಾಧನೆಗೆ ಕಾಯಕಲ್ಪ.

ಆತ್ಮಸಂಯಮಯೋಗಾಗ್ನೌ ಜುಹ್ವತಿ ಜ್ಞಾನದೀಪಿತೇ

ಶಿಸ್ತು ಸಂಯಮಗಳು ಮಾನವನಿಗೆ ಆತ್ಮೋದ್ಧಾರ ಮಾಡಿಕೊಳ್ಳಲು ಮೈಲುಗಲ್ಲುಗಳಿದ್ದಂತೆ. ಕಡುದರ್ಪವೇರಿದ ಒಡಲೆಂಬ ಬಂಡಿಗೆ ಕಡಗೀಲುಗಳಿದ್ದಂತೆ. ಆತ್ಮಶಕ್ತಿಯನ್ನು ಸಂಪ್ರಷ್ಟಿಗೊಳಿಸಿಕೊಳ್ಳಲು ಆತ್ಮಸಂಯಮನವೇ ತಾಯಿಬೇರು. ಜ್ಞಾನವೃಕ್ಷವು ಚಿಗುರೊಡೆದು ಸಮೃದ್ಧಿಯಾಗಲು ಶಿಸ್ತು, ಸಂಯಮಗಳೆಂಬ ನೀರು ಗೊಬ್ಬರಗಳನ್ನು ಹಾಕಿದಾಗ ರಸವತ್ತಾದ ಫಲವನ್ನು ನೀಡುವದು. ಲೌಕಿಕರಿಗೂ ಮತ್ತು ಅಧ್ಯಾತ್ಮ ಸಾಧಕರಿಗೂ ಶಿಸ್ತು ಸಂಯಮಗಳು ಅತ್ಯವಶ್ಯಬೇಕು.

ಆತ್ಮಸಂಯಮವಿಲ್ಲದ ಜೀವನ ಕಡಿವಾಣವಿಲ್ಲದ ಕುದುರೆಯಿದ್ದಂತೆ. ಆತ್ಮ ಸಂಯಮನದಿಂದ ಆತ್ಮಕ್ಕೆ ಆನಂದ ದೊರೆಯುವದಲ್ಲದೆ ಮನಸ್ಸಿನಲ್ಲಿ ದೃಢನಿರ್ಧಾರ ಉಂಟಾಗುವದು. ಆತ್ಮಸಂಯಮನವೆಂಬ ಆಣೆಕಟ್ಟನ್ನು ಕಟ್ಟದಿದ್ದರೆ ಶರೀರವೆಂಬ ಹೊಲದಲ್ಲಿ ಕಾಮ-ಕ್ರೋಧಾದಿ ದುರ್ಗುಣಗಳೆಂಬ ಕಸಕಡ್ಡಿಗಳು ಹುಟ್ಟಿ ಕ್ರಮಬದ್ಧ ನಿಯಮಗಳಂತಿರುವ ಆಚಾರ ವಿಚಾರಗಳು ನಿರ್ನಾಮವಾಗಿ ನಿರಂತರ ದುಃಖಿ ಕ್ಕೀಡಾಗುವದಲ್ಲದೆ ಇಹಪರ ಸುಖವನ್ನು ಪಡೆಯಲಾರನು. ನೀರನ್ನು ಬಿಟ್ಟ ಮೀನಿನಂತೆ ಅವನ ಗತಿಯಾಗುವದು. ಸಂಯಮ ಶೂನ್ಯಜೀವನ ಮತ್ತು ಅಶಿಸ್ತು ಮನುಷ್ಯನ ಭವಿಷ್ಯ ನಿರ್ಮಾಣಕ್ಕೆ ತೊಂದರೆಯುಂಟಾಗುವದಲ್ಲದೆ, ಗಾಳಿಗೊಡ್ಡಿದ ಸೊಡರಿನಂತೆ ಜೀವನವಾಗುವದು. ಶಿಸ್ತು ವಿಧೇಯತೆಗಳೇ ಯಶದ ಮೊದಲನೆಯ ಮೆಟ್ಟಲು ಎಂದು ವಿನೋಬಾ ಭಾವೆಯವರು ತಿಳಿಸಿದರೆ ಮಹಾತ್ಮಾ ಗಾಂಧಿಯವರು ನಿಯಮಿತತನ ಶಿಸ್ತು ಸುಸಂಸ್ಕೃತ ಜೀವನಕ್ಕೆ ಒಂದು ಅಲಂಕಾರವೆಂದು ತಿಳಿಸಿದ್ದಾರೆ. ಹಿಂದಿನ ಶರಣ ಶರಣೆಯರು ಆತ್ಮಸಂಯಮ ಮತ್ತು ಮನೋನಿಗ್ರಹಗಳಿಗೆ ಹೆಚ್ಚು ಪ್ರಾಧಾನ್ಯತೆ ನೀಡಿದ್ದಾರೆ. ಆತ್ಮಸಂಯಮವಿಲ್ಲದ ತಪಸ್ಸು, ಜ್ಞಾನವು ಮನುಷ್ಯ ನನ್ನು ಸಫಲಜೀವಿಯನ್ನಾಗಿ ಮಾಡಲಾರವೆಂದು ಶಿವಶರಣರ ಅಭಿಮತ, ಆತ್ಮ ಜ್ಞಾನಕ್ಕಿಂತ ಹೆಚ್ಚಿನಜ್ಞಾನ ಇರಲಾರದು.

ನಮ್ಮ ಜೀವನವನ್ನು ಶಿಸ್ತು, ಸಂಯಮಗಳಿಂದ ಇರಿಸಿಕೊಂಡರೆ ಆತ್ಮ ರಕ್ಷಣೆಯು ಸಹಜವಾಗಿಯೇ ಲಭ್ಯವಾಗುವದು. ಶಿಸ್ತು ಸಂಯಮಗಳನ್ನು ನಿರಂತರ ಸಾಧಿಸಬೇಕಾದರೆ ಸತತೋದ್ಯೋಗ, ಕಾಯಕ ನಿಷ್ಠೆ, ಈಶ್ವರ ಧ್ಯಾನ ಮುಂತಾದವು ಗಳನ್ನು ನಿಯಮ ನಿಷ್ಠೆಯೊಡನೆ ಆಚರಿಸಿದರೆ ಮಾತ್ರ ಸಾಧ್ಯ. ಇಲ್ಲವಾದರೆ ಹಸನುಮಾಡದ ಹೊಲದಂತೆ ರಸವಿರದ ಹಣ್ಣಿನಂತೆ ನಿಷ್ಪ್ರಯೋಜನವಾಗುವದು. ಆತ್ಮ ಸೌಂದರ್ಯವನ್ನು ಪಡೆದು ಆತ್ಮಜ್ಯೋತಿಯಲ್ಲಿ ಬೆಳಗಬೇಕಾದರೆ ಆತ್ಮಸಂಯಮ ನವೇ ದಾರಿದೀಪ, ಶಿಸ್ತಿನಿಂದಿರುವದೇ ಜೀವನದ ಭದ್ರ ಬುನಾದಿ.

ಸತ್ಯಾನ್ನಾಸ್ತಿ ಪರೋಧರ್ಮಃ

ದೇವರನ್ನು ಕಾಣಲು ಸತ್ಯಾರಾಧನೆ ಮಹತ್ಸಾಧನೆಯಾಗಿದೆ. ವ್ಯಕ್ತಿಯಲ್ಲಿ ಹುದುಗಿರುವ ತಮಸ್ಸು ನಷ್ಟವಾಗಿ ಅಂತಃಸ್ಫೂರ್ತಿ ಉದಯವಾದಲ್ಲದೆ ಆತ್ಮ ಜ್ಯೋತಿ ಬೆಳಗದು. ಸತ್ಯವನ್ನರಿಯಬೇಕಾದರೆ ಒಳಗಣ್ಣು ತೆರೆಯಬೇಕಾಗುತ್ತದೆ. ಮುಚ್ಚು ಮರೆಯ ತೆರೆಯನ್ನು ಸರಿಸಬೇಕಾಗುತ್ತದೆ, ದೇವರನ್ನು ಕುರಿತು ಮೊರೆಯಿಡಬೇಕಾಗುತ್ತದೆ. ಆಗ ಸತ್ಯಸಾಧನೆ ಸಿದ್ಧಿಸುತ್ತದೆ. ಸತ್ಯದ ಬೆಳಕಿನಲ್ಲಿ ಹೋದಂತೆ ಅಸತ್ಯ ಮತ್ತು ರಾಗದ್ವೇಷಗಳ ಅಂಧಕಾರವು ಸರಿದು ಹೋಗುತ್ತದೆ. "ಸತ್ಯಕ್ಕೆ ಸಾವಿಲ್ಲ ಸುಳ್ಳಿಗೆ ಸುಖವಿಲ್ಲ" ಈ ಸಿರಿ ನುಡಿಯ ಭಾವವು ಅರಿವಾದಾಗ ಮನಸ್ಸಿಗೆ ಸಮಾಧಾನವಾಗಿ ಶಾಂತಿಯುಂಟಾಗುತ್ತದೆ. ಸತ್ಯಸಾಧನೆಗೆ ನಿಸ್ಪೃಹವಾದ ಶೀಲ, ನಿರ್ಮಲವಾದ ದೃಷ್ಟಿ, ಸದ್ವಿಚಾರಗಳ ಚಿಂತನ ಬೆಳೆದಾಗ ಸತ್ಯ ಸಂಸಿದ್ಧಿ. ಆಗ ಈಶ್ವರ ಸಾಕ್ಷಾತ್ಕಾರವು ಸಾಧ್ಯ. ಸುಳ್ಳು ಹೇಳುವದು ಸುಲಭ, ಸತ್ಯ ನುಡಿಯುವದು ಕಡುತರ ಕಷ್ಟ. ನುಡಿದಂತೆ ನಡೆದರೆ ಅದೇ ಜನ್ಮ ಕಡೆ ಈ ನುಡಿಯು ನಡೆಯಲ್ಲಿ ಬಂದಾಗ ನಿಜವಾದ ಸತ್ಯಸಾಧನೆ ಮಾಡಿದಂತೆ. ಮಹಾತ್ಮಾ ಬಸವಣ್ಣನವರು ಒಂದೆಡೆ—

ದೇವಲೋಕ ಮರ್ತ್ಯಲೋಕವೆಂಬುದು ಬೇರಿಲ್ಲ ಕಾಣಿರೋ
ಸತ್ಯವ ನುಡಿವುದೇ ದೇವಲೋಕ, ಮಿಥ್ಯವ ನುಡಿವುದೇ ಮರ್ತ್ಯಲೋಕ

ಎಂದು ತಿಳಿಸಿ ಸತ್ಯದ ಮಹತ್ವವನ್ನು ವಿವರಿಸಿದ್ದಾರೆ.

ಸತ್ಯಂ ವದ ಧರ್ಮಂ ಚರ, ಸತ್ಯಮೇವ ಜಯತೆ ನಾನೃತಂ

ಸತ್ಯವೇ ಗೆಲ್ಲುತ್ತದೆ. ಸುಳ್ಳು ಅಲ್ಲ ಎಂಬುದಾಗಿ ಉಪನಿಷತ್ತು ಸಹ ಸಾರಿದೆ. ಸತ್ಯದ ದಾರಿಯಲ್ಲಿ ಸಾಗಿದರೆ ಸತ್ಯವೇ ದೇವರೆಂದು ಒಡಮೂಡಿ ಪರಮ ಶ್ರೇಯಸ್ಸು ದೊರೆಯುತ್ತದೆ. ಮಹಾತ್ಮಾ ಗಾಂಧಿಯವರು ಹೇಳಿದಂತೆ "ಸತ್ಯ ನನ್ನ ದೇವರು ಅಹಿಂಸೆಯ ಸಾಧನೆಗಾಗಿ ನಾನು ಶ್ರಮಿಸುವಾಗ ಸತ್ಯ ಹೇಳುತ್ತೇನೆ. ನನ್ನ ಮೂಲಕವೇ ಅದರ ಸಿದ್ಧಿ" ಎಂದು ವಿಶ್ವಾತ್ಮವೂ ವಿಶ್ವವ್ಯಾಪ್ತಿಯೂ ಆದ ಸತ್ಯವನ್ನು ಸಾಕ್ಷಾತ್ತಾಗಿ ಸಂದರ್ಶಿಸಬೇಕಾದರೆ ಸೃಷ್ಟಿಯಲ್ಲಿ ಕ್ಷುದ್ರವಾದುದನ್ನು ತನ್ನಂತೆ ಪ್ರೀತಿಸುವದು ಸಾಧ್ಯವಾಗಲೇಬೇಕು. ಆ ಹಂಬಲವನ್ನು ಜೀವನದ ಯಾವ ಕ್ಷೇತ್ರದಿಂದಲೂ ವಿಮುಖನಾಗಲು ಸಾಧ್ಯವಿಲ್ಲ. ನನ್ನ ಶ್ರದ್ಧೆ ನನ್ನನ್ನು ರಾಜಕೀಯ ಕ್ಷೇತ್ರಕ್ಕೆ ಎಳೆದು ತಂದಿರುವದು ಈ ಕಾರಣದಿಂದಲೇ. ಭಗವಂತನೇ ಪ್ರಾಣಶಕ್ತಿ ಅವನೇ ಸತ್ಯ ಮತ್ತು ಜ್ಯೋತಿ ಎಂಬುದು ನನ್ನ ವಿಶ್ವಾಸ ಎಂಬ ಅವರ

ನುಡಿಗಳು ಅಮೂಲ್ಯ ರತ್ನಗಳಂತಿವೆ. ಅಲ್ಲದೆ "Honesty is the best Policy" ಎಂದು ಸತ್ಯದ ದರ್ಶನ ಮಾಡಿದ್ದಾರೆ.

ನಾವಿಂದು ಪರಮಾತ್ಮನನ್ನು ಅರಿತುಕೊಳ್ಳಲು ದಿಟವ ನುಡಿದು ಸದ್ವಿಚಾರ ಸದಾಚಾರದಲ್ಲಿ ಮನಸ್ಸು ತೊಡಗಿಸದಿದ್ದರೆ ಸರ್ವವೂ ವ್ಯರ್ಥ. ಅಂತರಂಗ ಬಹಿರಂಗ ಶುದ್ಧಿಯಾಗಲು ಸತ್ಯ ಸಾಧನೆಯೇ ಸಂಪೂರ್ಣ ಅರಿವಿನ ಸಾಧನೆ, ಅದೇ ನಿಜವಾದ ಸತ್ಯಾರಾಧನೆ. ಈ ರೀತಿ ಪೂಜಿಸಿದಾಗ ಸತ್ಯದಲ್ಲಿ ಸೌಂದರ್ಯವನ್ನು ಕಾಣಬಹುದು. ಶಿವನನ್ನು ನೋಡಬಹುದು.

ಸತ್ಯಾನ್ನಾಸ್ತಿ ಪರೋಧರ್ಮಃ

ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲವೆಂದು ಆಗ ಅರ್ಥವಾಗುವದು. ಆದ ಕಾರಣ ನೈತಿಕ ಜೀವನಕ್ಕೂ, ಶೀಲಕ್ಕೂ, ಸಂಸ್ಕೃತಿಗೂ, ಆತ್ಮಸಾಕ್ಷಾತ್ಕಾರಕ್ಕೂ ಸತ್ಯವೇ ಮೂಲಾಧಾರ.

ಅಶಾಂತಸ್ಯ ಕುತಃ ಸುಖಮ್

ಶಾಂತಿಯು ಪ್ರತಿಯೊಬ್ಬರಿಗೂ ಅವಶ್ಯಕ. ನಾಡು, ರಾಷ್ಟ್ರ, ಪ್ರಪಂಚವು ಶಾಂತಿಯ ಭದ್ರ ಬುನಾದಿಯ ಮೇಲೆ ನಿಂತರೆ ಸುಖ ಸಮೃದ್ಧಿ ಸಾಧ್ಯ. ಇಲ್ಲವಾದರೆ ಪ್ರಪಂಚವೇ ವಿಮುಚನೆಗೀಡಾಗುತ್ತದೆ. ಪ್ರಪಂಚದಲ್ಲಿ ಶಾಂತಿ ನೆಲೆಸಬೇಕಾದರೆ, ಪರಸ್ಪರ ಸಹಕಾರ, ಸತತೋದ್ಯೋಗ, ಪ್ರಾಮಾಣಿಕತೆ ಇವೆಲ್ಲವುಗಳು ಪ್ರತಿಯೊಬ್ಬ ರಲ್ಲಿ ಒಡಮೂಡಿದರೆ ಮಾತ್ರ ಶಾಂತಿ. ಶಾಂತಿಯಿಲ್ಲದ ಜೀವನ ಮರುಭೂಮಿ ಯಂತೆ ನಿರರ್ಥಕ. ಶಾಂತಿಯಿಲ್ಲದ ಬಾಳು ಜಲವಿಲ್ಲದ ತಟಾಕವಿದ್ದಂತೆ, ಗಂಧವಿಲ್ಲದ ಪುಷ್ಪವಿದ್ದಂತೆ ಆಗುವದಲ್ಲದೆ ಬೆಳಕಿರದ ಕತ್ತಲೆಯ ಗವಿಯಂತೆ ವ್ಯರ್ಥವಾಗುವದು. ವ್ಯಕ್ತಿಯಲ್ಲಿ ಶಕ್ತಿಯುಂಟಾಗಿ, ಅಂತಶ್ಚಕ್ಷುಗಳನ್ನು ತೆರೆದು, ತಾಮಸೀಯ ಬಹಿಃ ಪ್ರವೃತ್ತಿಯ ವಿಚಾರಗಳನ್ನು ತೊರೆದು, ಹೃದಯ ಮಂದಿರದ ಬಾಗಿಲನ್ನು ತೆಗೆದರೆ ಈಶ್ವರ ಸಾಕ್ಷಾತ್ಕಾರವು ದೊರೆತು ಶಿವಶಾಂತಿ ಸುಖವುಂಟಾಗುವದು. ಈ ಶಾಂತಿ ಸುಖಕ್ಕಾಗಿಯೇ ಸಂತರು, ಋಷಿಪುಂಗವರು, ಯೋಗಿಗಳು, ತ್ಯಾಗಿಗಳು ಮೊದಲಾದ ಮಹದ್ವ್ಯಕ್ತಿಗಳು ಅಹೋರಾತ್ರಿ ಕಷ್ಟಪಡುತ್ತಾರೆ. ಅಂತರಂಗ ಶುದ್ಧಿಯನ್ನು ಮಾಡಿಕೊಳ್ಳುತ್ತಾರೆ. ಅಂತರಂಗ ಶುದ್ಧಿಯೇ ಪ್ರಪಂಚದ ಶಾಂತಿಗೆ ಮೂಲ ಕಾರಣ. ಜನಜೀವನವು ಅಂತರಂಗ ಶುದ್ಧಿಯತ್ತ ಮನಸ್ಸು ಹಾಕಿದರೆ ಪ್ರಪಂಚದ ಶಾಂತಿಗೆ ನಾಂದಿಯಾಗುವದು. ಮನೋಭಾವನೆಗಳು ವಿಕಾರದತ್ತ, ಅಸುರೀ ಪ್ರವೃತ್ತಿಯತ್ತ ಸಾಗುತ್ತಿದ್ದರೆ ಶಾಂತಿಯು ಕನಸಿನ ಗಂಟಾಗುವದು. ಅನ್ಯರನ್ನು ತನ್ನವರಂತೆ ಕಂಡು, ಅವರ ಸುಖ ದುಃಖಗಳಲ್ಲಿ ಪಾಲುಗೊಂಡು ಸಹಕರಿಸಿದರೆ ದೈವೀಯ ಶಕ್ತಿ ಉದ್ಭವಿಸುತ್ತದೆ. ಆ ದೈವೀಯ ಶಕ್ತಿಯಿಂದ ನಾಡು ಎಚ್ಚರ ವಾಗುತ್ತದೆ. ನಾಡಿನ, ರಾಷ್ಟ್ರದ ಜನತೆಯು ವಿವೇಕದ ಅರುಣೋದಯದಿಂದ ಪ್ರಪಂಚಕ್ಕೆ ಶಾಂತಿ ಲಭಿಸುತ್ತದೆ. ಎಲ್ಲ ಮತ ಧರ್ಮಗಳ ಅಂತರಾಳದಲ್ಲಿ ಶಾಂತಿ ಸಂದೇಶ ತುಂಬಿದ್ದರೂ, ಅದು ಕೃತಿಯಲ್ಲಿ ಬಾರದಿದ್ದರೆ, ಪ್ರಪಂಚದ ಶಾಂತಿಗೆ ಸಹಾಯಕವಾಗದಿದ್ದರೆ, ಅಂತರಂಗ ಶುದ್ಧಿಗೆ ಸಾಧ್ಯವಾಗದಿದ್ದರೆ, ಆತ್ಮ ವಿಕಾಸಕ್ಕೆ ದಾರಿದೀಪವಾಗದಿದ್ದರೆ ಬರೀ ಮೋಡ ಕವಿದ ಆಕಾಶದಂತೆ ವ್ಯರ್ಥವಾಗುವದು. ಇಂತಾದಾಗ "ಅಶಾಂತಸ್ಯ ಕುತಃ ಸುಖಮ್" ಈ ಉಕ್ತಿ ಅನುಭವಕ್ಕೆ ಬರುತ್ತದೆ.

ಸ್ವಧರ್ಮೇ ನಿಧನಂ ಶ್ರೇಯಃ

ಧರ್ಮವು ಮಾನವನನ್ನು ಉಳಿಸುತ್ತದೆ. ಬೆಳಸುತ್ತದೆ. ಭೂಮಿಯಲ್ಲಿ ಬಿತ್ತಿದ ಬೀಜಕ್ಕೆ ನೀರು ಬೇಕಾದಂತೆ; ಹೃದ್ಭೂಮಿಯು ಹಸನಾಗಿ ಸಂಪದ್ಭರಿತವಾಗ ಬೇಕಾದರೆ ಧರ್ಮವು ಅವಶ್ಯಕ. ಧರ್ಮಭಾವನೆ ಬೇರೂರಿದಂತೆ ಆತ್ಮಕ್ಕೆ ಶಾಂತಿ, ಕಾಂತಿ, ಸನ್ಮತಿಯುಂಟಾಗಿ ಸದ್ಗತಿಯುಂಟಾಗುತ್ತದೆ. ಧರ್ಮದಿಂದ ದೈವೀಯ ಗುಣಗಳು ಬೆಳೆಯುತ್ತವೆ. ಒಂದೆಡೆ ಮಹಾತ್ಮಾ ಗಾಂಧಿಯವರು—

ಧರ್ಮವಿಲ್ಲದ ಮನುಷ್ಯನು ಚುಕ್ಕಾಣಿ ಇಲ್ಲದ ಹಡಗಿದ್ದಂತೆ.

"ಧರ್ಮವು ಹೃದಯಕ್ಕೆ ಸಂಬಂಧಪಟ್ಟ ವಿಷಯ. ಎಷ್ಟೇ ಬಾಹ್ಯ ತೊಂದರೆ ಬಂದರೂ ಸ್ವಧರ್ಮವು ತ್ಯಜಿಸತಕ್ಕದ್ದಲ್ಲ. ಧರ್ಮದ ನಿಜವಾದ ಜ್ಞಾನವು ಧರ್ಮ ಧರ್ಮಗಳ ನಡುವೆ ಇರುವ ಬೇಲಿಗಳನ್ನು ಕೆಳಗುರುಳಿಸುತ್ತದೆ. ಪರಧರ್ಮ ಸಹಿಷ್ಣುತೆಯನ್ನು ಬೆಳೆಸಿಕೊಳ್ಳುವದು ಸ್ವಧರ್ಮದ ನಿಜವಾದ ಜ್ಞಾನವನ್ನು ವೃದ್ಧಿ ಗೊಳಿಸುತ್ತವೆ" ಎಂದು ಮುಂತಾಗಿ ನಿಜಧರ್ಮದ ಮರ್ಮವನ್ನು ತಿಳಿಸಿರುವರು. ಮತಾಚಾರಗಳ ಸಂಕುಚಿತ ಧರ್ಮ ಬುದ್ಧಿಯಿಂದ ಮನಸ್ಸಿಗೆ ಕತ್ತಲೆ ಕವಿದಂತಾಗುವ ದಲ್ಲದೆ, ನೈತಿಕ ಸಾಧನ ಮತ್ತು ಹೃದಯ ಶುದ್ಧಿಗೆ ಆತಂಕವುಂಟಾಗುತ್ತದೆ. ಪ್ರಪಂಚದ ಧರ್ಮಗಳೆಲ್ಲವೂ ಸತ್ಯ, ಅಹಿಂಸೆ, ದಯೆ ಮುಂತಾದವುಗಳನ್ನೇ ಹೇಳಿ ಮಾನವನನ್ನು ಜಾಗೃತಗೊಳಿಸುತ್ತ ಬಂದಿದೆ.

"ಪತಿತಂ ಪತಂತಂ ಪತಿಷ್ಯಂತಂ ಧರತೀತ ಧರ್ಮಃ"

"ಧಾರಣಾತ್ ಧರ್ಮಃ"

ವಿನಾಶದತ್ತ ಸಾಗಿರುವ ಜಗತ್ತನ್ನು ಮೇಲಕ್ಕೆತ್ತಿ, ಎಚ್ಚರಿಸಿ ಶಕ್ತಿಯನ್ನಿತ್ತು ಸಂರಕ್ಷಿ ಸುವದೇ ಧರ್ಮದ ಮೂಲ ಗುರಿ. ವ್ಯಕ್ತಿಯಲ್ಲಿ ಹುದುಗಿರುವ ತಮಸ್ಸನ್ನು ನಶಿಸಿ, ಆತ್ಮಶಕ್ತಿಯ ದಿವ್ಯ ದೀಪ್ತಿಯನ್ನು ನೀಡುವದೇ ಧರ್ಮ. ಧರ್ಮವು ಮಾನವನ ಹೃದಯವನ್ನು ಮೃದು ಮಾಡುವದಲ್ಲದೆ ಬೆಳಕನೆಡೆಗೆ ಕರೆದೊಯ್ಯುತ್ತದೆ.

"ಧೃತಿಃ ಕ್ಷಮಾ ದಮೋಽಸ್ತೇಯಂ ಶೌಚಮಿಂದ್ರಿಯನಿಗ್ರಹಃ।

ಧೀರ್ವಿದ್ಯಾ ಸತ್ಯಮಕ್ರೋಧೋ ದಶಕಂ ಧರ್ಮ ಲಕ್ಷಣಂ॥"

ಈ ರೀತಿಯಾಗಿ ಮನುಸ್ಮೃತಿಯಲ್ಲಿ ಧರ್ಮದ ಹತ್ತು ಲಕ್ಷಣಗಳನ್ನು ವಿವರಿಸಿದೆ. ಅದಕ್ಕಾಗಿ ಧರ್ಮದ ಹತ್ತು ಲಕ್ಷಣಗಳನ್ನು ವಿವರಿಸಿದೆ. ಅದಕ್ಕಾಗಿ ಧರ್ಮದ ಮೂಲ ತತ್ವವಾದ ಅಂತಃಕರಣಾದಿ ಸದ್ಗುಣಗಳನ್ನು ಅಂತರಂಗದಲ್ಲಿ ಅಳವಡಿಸಿ ಕೊಂಡರೆ ಇಹಪರದಲ್ಲಿ ಸುಖ ಮತ್ತು ಪರಮಾನಂದ.

"Kingdom of God will be around us" ಧರ್ಮದ ಪ್ರವೃತ್ತಿ ಬೆಳೆದಂತೆ, ಆತ್ಮಿಕ ಶಕ್ತಿ ಪ್ರಬಲವಾದಂತೆ ರಾಗದ್ವೇಷಗಳು ದೂರಾಗಿ ಅರಿವಿಲ್ಲದ ಶುಷ್ಕಶಾಸ್ತ್ರ ಪಂಡಿತರ ಮತೀಯ ವಾದ ವಿವಾದಗಳು ತೊಲಗಿದಾಗ ಧರ್ಮವು ದಾರಿ ದೀವಿಗೆಯಾಗಿ ಪರಿಣಮಿಸಬಲ್ಲುದು. ಇಂತಾದಾಗ "ಸ್ವಧರ್ಮೇ ನಿಧನಂ ಶ್ರೇಯಃ" ಈ ನುಡಿಯು ಸಾರ್ಥಕವಾಗುತ್ತದೆ.

ಪ್ರಜ್ವಾಲಿತೋ ಜ್ಞಾನಮಯಃ ಪ್ರದೀಪಃ

ಜ್ಞಾನದೀಪವು ಅಂಧಕಾರವನ್ನು ಕಳೆಯುತ್ತದೆ. ಅಂತರಾತ್ಮನನ್ನು ತೋರಿಸುತ್ತದೆ. ಆ ಅರಿವಿನ ಬೆಳಗಿನಲ್ಲಿ ಮಿಂದವರು ಪೂತಾತ್ಮರು. ನಿತ್ಯತೃಪ್ತರು. ಜ್ಞಾನವಿಲ್ಲದೆ ಭಕ್ತಿ ಪ್ರಕಾಶವಾಗಲಾರದು. ಭಕ್ತಿಗೆ ಜ್ಞಾನವೆ ಆಹಾರ.

ಜ್ಞಾನಾದೇವ ಹಿ ಮೋಕ್ಷಃ ಸ್ಯಾತ್

ಜ್ಞಾನದಿಂದಲೆ ಆತ್ಮಶಕ್ತಿ ಮತ್ತು ಮುಕ್ತಿ. ಅರಿವಿಲ್ಲದ ತಾಮಸ ಭಕ್ತಿ ಎಳ್ಳಿಲ್ಲದೆ ಗಾಣವನಾಡಿದಂತೆ, ರೆಕ್ಕೆಯಿಲ್ಲದ ಪಕ್ಷಿಯಂತೆ, ವ್ಯಕ್ತಿತ್ವ ವಿಕಾಸವಾಗಬೇಕಾದರೆ ಜ್ಞಾನಜ್ಯೋತಿ ಹೃನ್ಮಂದಿರದಲ್ಲಿ ಬೆಳಗಬೇಕಾಗುತ್ತದೆ. ಅಲ್ಪ ವಸ್ತುಗಳನ್ನು ಹೆಚ್ಚು ಹೆಚ್ಚು ಚಿಂತಿಸುತ್ತ ಹೋದಂತೆ ಮೃತ್ಯುವಿನ ಕಡೆಗೆ ಧಾವಿಸಬೇಕಾಗುತ್ತದೆ. ರಜಸ್ಸಿನಿಂದ ಪ್ರವೃತ್ತಿ, ತಮಸ್ಸಿನಿಂದ ಮೋಹ ಹುಟ್ಟಿದಂತೆ ಜ್ಞಾನದಿಂದ ಅಂತಃಸತ್ವ ಪ್ರಕಾಶವಾಗುತ್ತದೆ. ಮಂಜು ಮುಚ್ಚಿದಾಗ ಸೂರ್ಯನು ಕಾಣನು. ಅಂತೆಯೇ ಮರವೆ, ಅವಿವೇಕ ಅಜ್ಞಾನಗಳೆಂಬ ಮಂಜು ಮುತ್ತಿದಾಗ ಹೃದ್ವ್ಯೋಮದಲ್ಲಿರುವ ಈಶ್ವರನು ಕಾಣನು ಆ ಮಾಯೆಯ ಕಾರ್ಮೋಡಗಳು ಸರಿದಾಗ, ಭಾನು ಬಂದಡೆ ಕತ್ತಲೆ ಹರಿವಂತೆ, ಈಶ್ವರ ಸಾಕ್ಷಾತ್ಕಾರವು ಸಹಜಸಾಧ್ಯ. "ಜ್ಞಾನ ದೀಪ್ತಿಯು ಬೆಳಗುವ ತೈಲವಾವುದೆಂದೊಡೆ, ಶಿವಶರಣರ ನುಡಿಗಣದ ಒಸರು ಆ ಒಸರಿಂಗಲ್ಲದೆ ಜ್ಞಾನ ಪ್ರಕಾಶವಿಲ್ಲ" ಎಂದು ಷಟ್‌ಸ್ಥಲ ಜ್ಞಾನಚಕ್ರವರ್ತಿ ಚೆನ್ನಬಸವಣ್ಣನವರ ಸಿದ್ಧಾಂತ. ಜ್ಞಾನ ವಿರಹಿತಕ್ರಿಯೆ, ಕಣ್ಣಿಲ್ಲದವನ ನಡಿಗೆಯಂತೆ, ಕ್ರಿಯೆಯಿಲ್ಲದ ಜ್ಞಾನ ಕಾಲಿಲ್ಲದ ಹೆಳವನಂತೆ ಶೋಭಿಸದು. ಪ್ರಣತಿಯೂ ಇದ್ದು ಬತ್ತಿಯೂ ಇದ್ದು ಜ್ಯೋತಿ ಬೆಳಗಲು ತೈಲವಿಲ್ಲದಿರ್ದೊಡೆ ನಿರರ್ಥಕವಾಗುವಂತೆ, ಜ್ಞಾನೋದಯವಾಗದ ಕ್ರಿಯೆಯೂ ಪ್ರಾಣವಿಲ್ಲದ ಕಾಯದಂತೆ ವ್ಯರ್ಥವಾಗುವದು. ಇದೇ ಭಾವವನ್ನು ತೋಂಟದ ಸಿದ್ಧಲಿಂಗಯತಿಗಳು– "ಕ್ರಿಯೆಯಿಲ್ಲದ ಜ್ಞಾನ ಪ್ರಯೋಜನವಲ್ಲವಯ್ಯ, ಅದು ಹೇಗೆಂದಡೆ, ದೇಹವಿಲ್ಲದ ಪ್ರಾಣಕ್ಕೆ ಆಶ್ರಯವುಂಟೇ ಅಯ್ಯ? ಆ ಪ್ರಾಣವಿಲ್ಲದೆ ಕಾಯಕ್ಕೆ ಚೈತನ್ಯವುಂಟೆ ಅಯ್ಯ? ಅದು ಕ್ರಿಯೆಯಿಲ್ಲದ ಜ್ಞಾನಕ್ಕೆ ಆಶ್ರಯವಿಲ್ಲ, ಕ್ರಿಯಾಜ್ಞಾನ ಪ್ರಕಾಶವಿಲ್ಲದ ಲಿಂಗಕ್ಕೆ ಆಶ್ರಯವಿಲ್ಲ, ಇದು ಕಾರಣ ಜ್ಞಾನ ಕ್ರಿಯೋಪಚಾರಂಗಳಿರಬೇಕೆಂದನಯ್ಯ ಮಹಾಲಿಂಗ ಗುರುಶಿವ ಸಿದ್ಧೇಶ್ವರ ಪ್ರಭುವೆ" ಎಂಬುದಾಗಿ ಕ್ರಿಯಾಸಮನ್ವಿತ ಜ್ಞಾನದೀಪ್ತಿಗೆ ಪ್ರಾಧಾನ್ಯತೆ ನೀಡಿದ್ದಾರೆ. ಅದಕ್ಕಾಗಿ ಜ್ಞಾನಾನುಭವದ ಹಿರಿಜೇನನ್ನು ಹಚ್ಚಿದರೆ ತಾಮಸೀಯ ಆಸುರಿಶಕ್ತಿಗಳು ಚದುರಿ ಹೋಗಿ ಹೃದ್ಗಗನವು ಜ್ಞಾನಪ್ರಭೆಯಿಂದ ಬೆಳಗುವದು. ಪ್ರಜ್ವಲಿಸುತ್ತಿರುವ ಜ್ಞಾನನೇತ್ರವೆ ಪಥಿಕರಿಗೆ ದಾರಿದೀಪ. ಕ್ರಿಯೆಯೆ ಜ್ಞಾನ, ಆ ಜ್ಞಾನವೆ ಕ್ರಿಯೆ, ಇವೆರಡನ್ನರಿದು ಆಚರಿಸುವದೆ ಸಾಧಕರಿಗೆ ಪ್ರಪ್ರಥಮ ಸೋಪಾನ.

ನಾನೃಷಿಃ ಕುರುತೇ ಕಾವ್ಯಂ

ಋಷಿಯಾಗದವರು ಕವಿಯಾಗಲಾರರು. ಕವಿ ಜೀವನವೆಂದರೆ ಅದೊಂದು ತಪಸ್ವೀ ಜೀವನ. ಭಾವವನ್ನು ಎತ್ತರಕ್ಕೆ ಒಯ್ದು, ಮಹದಾಲೋಚನೆಗಳನ್ನು ಕಲ್ಪನೆಯ ದವಡೆಯಲ್ಲಿ ಸಿಲುಕಿಸಿ, ಆತ್ಮಾನುಭೂತಿಯೊಡನೆ ಬರೆದ ಕಾವ್ಯವು ರಸವತ್ಕಾವ್ಯವಾಗಬಲ್ಲುದು. ಕಾವ್ಯಕ್ಕೆ ಕೇವಲ ಶಬ್ದಭಾಂಡಾರವಿದ್ದರೆ ಸಾಲದು. ಕಲ್ಪನೆ ಮತ್ತು ಭಾವವಿದ್ದರೆ ಮಾತ್ರ ಓದುಗರ ಹೃದಯವನ್ನು ಮುಟ್ಟುತ್ತದೆ, ತಟ್ಟುತ್ತದೆ. ಅವರ ಆತ್ಮವನ್ನು ಪರಿಶುದ್ಧಗೊಳಿಸುತ್ತದೆ. ಉತ್ತಮ ಕಾವ್ಯವನ್ನು ಬರೆಯಲು ಧ್ಯಾಸ ಮತ್ತು ತಪಸ್ಸು ಅತ್ಯಾವಶ್ಯಕ. ಕಷ್ಟ ನಷ್ಟಗಳ ಅನುಭವವಿಲ್ಲದೆ, ಆತ್ಮಾನಂದದ ಅನುಸಂಧಾನವಿಲ್ಲದೆ ಬರೆದ ಕಾವ್ಯ ಶುಷ್ಕವಾಗುವದಲ್ಲದೆ ಬೂರುಲದ ಅರಳೆಯಂತೆ ಹಗುರವಾಗುವದು. ವಜ್ರದಂತೆ ಘನತೆ ಬರಲಾರದು. ಕಾವ್ಯದ ಶರೀರವು ಬಹಿರಂಗದಲ್ಲಿ ಸುಂದರವಾದರೆ ಪ್ರಯೋಜನವಿಲ್ಲ. ಅಂತರಂಗದಲ್ಲಿ ಸತ್ಯಂ ಶಿವಂ ಸುಂದರಂ ಸಮನ್ವಿತವಾಗಿರಬೇಕು. ಅಂತಃಶ್ಚಕ್ಷು ತೆರೆದಿರಬೇಕು. ಭಾವವು ಹೂಬಳ್ಳಿಯಂತೆ ಬೆಳೆಯುತ್ತಿರಬೇಕು. ಸೌಗಂಧವನ್ನು ಬೀರುತ್ತಿರಬೇಕು. ಜ್ಞಾನ ಜ್ಯೋತಿಯಿಂದ ಬೆಳಗಿರಬೇಕು. ಅನುಭವ ಸಾಗರದಾಳದಲ್ಲಿ ಮುಳುಗಿ ಮುಳುಗಿ ಮುತ್ತು ರತ್ನಗಳನ್ನು ತರುವಂತಹ ಆತ್ಮ ಶಕ್ತಿಯನ್ನು ಪಡೆದಿರಬೇಕು. ಅಂದಾಗ ಕಾವ್ಯ ಪ್ರತಿಭೆ ಎದ್ದು ಕಾಣುತ್ತದೆ. ಬಹುದಿನ ಬಾಳುತ್ತದೆ. ಜನರ ಮನವನ್ನು ಆಕರ್ಷಿಸುತ್ತದೆ. ಹೃದಯ ಪಾವಿತ್ರ್ಯದಿಂದೊಡಗೂಡಿದ ಕಾವ್ಯವು ಪಥಿಕರಿಗೆ ದಾರಿ ತೋರಿಸುತ್ತದೆ. ಅಂತರ್ಮುಖಿಗಳನ್ನಾಗಿ ಮಾಡುತ್ತದೆ. ವಿಜ್ಞಾನದಿಂದ ಬುದ್ಧಿ ಶಕ್ತಿಯು ಚೇತನಗೆಯಾದರೆ ಸತ್ಕಾವ್ಯದಿಂದ ಆತ್ಮಶಕ್ತಿಯು ವೃದ್ಧಿಯಾಗಿ ರಸಾನುಭವವುಂಟಾಗುತ್ತದೆ. ಕಾವ್ಯಾರಾಧನೆ ಮಾಡುತ್ತ ಹೋದಂತೆ; ಹೃದಯ ದೌರ್ಬಲ್ಯ ದೂರಾಗಿ ಆತ್ಮಸಾಕ್ಷಾತ್ಕಾರದ ಅನುಭವವಾಗುತ್ತದೆ. ಇಂತು ಆತ್ಮಸಿದ್ಧಿಗೇರಲು ಸುಖ ದುಃಖ ಕಣ್ಣೀರು ಸುರಿಸಬೇಕಾಗುತ್ತದೆ. ಈಶ್ವರಾಸಕ್ತಿಯಲ್ಲಿ ತಾನೇ ತಾನಾಗಿ ಮೈಮರೆಯಬೇಕಾಗುತ್ತದೆ. ಜಗತ್ಪ್ರಸಿದ್ಧ ಮಹಾಕವಿಗಳೆಲ್ಲರೂ ಈ ತೆರನಾಗಿ ಪರಿಶ್ರಮಿಸಿದ್ದಾರೆ. ಕಾವ್ಯ ನಭೋಮಂಡಲದಲ್ಲಿ ನಕ್ಷತ್ರಗಳಂತೆ ಬೆಳಗಿದ್ದಾರೆ. ಕಾವ್ಯಶ್ರೀಯನ್ನು ಗಳಿಸಿ, ಮುಂಬರುವ ಸಾಧಕರಿಗೆ, ಜನತನವು ಬಿಟ್ಟು ಹೋಗುವಂತೆ, ಸಾಹಿತ್ಯ ಸಂಪತ್ತನ್ನು ಇಟ್ಟು ಹೋಗಿದ್ದಾರೆ. ಕೀರ್ತಿ ಶಿಖರವನ್ನು ಮುಟ್ಟಿದ್ದಾರೆ. ನಮಗಿಂದು ಬೇಕಾಗಿರುವ ಸಾಹಿತ್ಯ ಅಂತಹದು. ಹಿಂದಿನ ಕವಿಪುಂಗವರಂತೆ, ಆತ್ಮ ಸಂಸ್ಕಾರಕ್ಕೆ ಆತ್ಮೋನ್ನತಿಗೆ ಜಾಗತಿಕ ಶಾಂತಿಗೆ ಕಾವ್ಯ ಬರೆದರೆ ಸಾರ್ಥಕ.

ಕೀರ್ತಿಗಾಗಿ, ಹಣದಾಶೆಗಾಗಿ ಬರೆದ ಕಾವ್ಯವು ರಸವಿರದ ಹಣ್ಣಿನಂತೆ, ತಂತಿಯಿಲ್ಲದ ವೀಣೆಯಂತೆ, ಒಲವಿಲ್ಲದ ಪೂಜೆಯಂತೆ ಶೋಭಿಸುವುದು. ಅದಕ್ಕಾಗಿ ನಿಷ್ಕಲ್ಮಷ ತೆರೆದ ಸರಸ ಹೃದಯದಿಂದ ಹೊರಗೆ ಬಂದ ಕಾವ್ಯವು ನಿರಂತರವೂ ಭವ್ಯ ಗೋಪುರದಂತೆ ಸುಂದರ ಕಾಣುತ್ತದೆ. ಬುದ್ಧಿ ಸೂಕ್ಷ್ಮತೆಯನ್ನು ವಿಸ್ತಾರಗೊಳಿಸಿ ಚಿರಕಾಲ ಉಳಿಯುತ್ತದೆ, ಬೆಳಗುತ್ತದೆ.

ನ ಸ್ತ್ರೀ ಸ್ವಾತಂತ್ರ್ಯ ಮರ್ಹತಿ

"ಸ್ತ್ರೀಯು ಸ್ವಾತಂತ್ರ್ಯಕ್ಕೆ ಅನರ್ಹಳು" ಮನುಸ್ಮೃತಿಯ ಈ ನುಡಿಮುತ್ತು ಇಂದಿನ ಜನಾಂಗಕ್ಕೆ ಬೇಸರವನ್ನುಂಟು ಮಾಡುವುದು. ವ್ಯಕ್ತಿ ಸ್ವಾತಂತ್ರ್ಯ ಪ್ರತಿಯೊಬ್ಬರಿಗೂ ಅವಶ್ಯಕವೆಂಬುದು ರೂಢಿಯ ಮಾತಾಗಿದೆ. ಸ್ವಾತಂತ್ರ್ಯವಿಲ್ಲದ ವ್ಯಕ್ತಿ ಮತ್ತು ರಾಷ್ಟ್ರವು ಬದುಕಲಾರದು: ಬೆಳಗಲಾರದು. ಸ್ವಾತಂತ್ರ್ಯದಿಂದಲೇ ಇಹಪರಸುಖ ಸ್ವಾತಂತ್ರ್ಯವೇ ಮಾನವನ ಜನ್ಮಸಿದ್ಧ ಹಕ್ಕು. ಸ್ವಾತಂತ್ರ್ಯ ವಿಲ್ಲದ ಜೀವನ ಬರಡು ಜೀವನ; ಕುರುಡು ಜೀವನ; ಈ ಮಾತು ಸತ್ಯ. ಆದರೆ ನಿಜವಾದ ಸ್ವಾತಂತ್ರ್ಯವು ಉಳಿದು ಜನತೆಗೆ ಕಲ್ಯಾಣಪ್ರದವಾಗಲು ಅದು ಮರ್ಯಾದಿತವಾಗಿರಬೇಕು: ನೀತಿಯ ತಳಹದಿಯ ಮೇಲೆ ಬಂಧಿತವಾಗಿರಬೇಕು; ಆತ್ಮ ಸಾಕ್ಷಾತ್ಕಾರಕ್ಕೆ ಅನುಗುಣವಾಗಿರಬೇಕು. ಆತ್ಮ ಸ್ವಾತಂತ್ರ್ಯವಿಲ್ಲದ ಸ್ವಾತಂತ್ರ್ಯ ನಿಜವಾಗಿಯೂ ತಳವಿಲ್ಲದ ಗಡಿಗೆಯಂತೆ, ಸುಗಂಧವಿಲ್ಲದ ಪುಷ್ಪದಂತೆ, ತತ್ವ ವಿಲ್ಲದ ಶಾಸ್ತ್ರದಂತೆ ನಿರರ್ಥಕ. ಸ್ವಾತಂತ್ರ್ಯವು ಸ್ವೈರಾಚಾರಕ್ಕೆಳೆಯದೆ, ಮಾತಿನ ಬಂಡೆಗಲ್ಲುಗಳನ್ನುರುಳಿಸದೆ, ಆತ್ಮ ಸಾಧನೆಗೆ, ಆತ್ಮ ಪ್ರಕಾಶಕ್ಕೆ ಸಹಾಯಕವಾದರೆ ಸಾರ್ಥಕ ಇಲ್ಲವಾದರೆ ಕತ್ತಲು ಕವಿದ ಮನೆಯಂತೆ.

''Liberty is not merely a privilege to be conferred, it is a habit to be acquired.''

ಸ್ವಾತಂತ್ರ್ಯವು ಕೇವಲ ಎರಡನೆಯವರಿಂದ ಪಡೆದುಕೊಂಡ ವಿಶೇಷಾಧಿಕಾರ ಮಾತ್ರವಾಗದೆ, ಅದು ಸ್ವಭಾವದಿಂದ, ಅಭ್ಯಾಸ ಬಲದಿಂದ, ಆತ್ಮ ವಿಕಾಸದಿಂದ ಕೂಡಿಕೊಂಡಿರಬೇಕಾದ ಸಹಜಗುಣವಾಗಿರಬೇಕೆಂದು Lioyod George ರು ತಿಳಿಸಿದ್ದಾರೆ. ಸ್ಮೃತಿಕಾರರ ಕಾಲದಲ್ಲಿ ಸ್ತ್ರೀ ಸ್ವಾತಂತ್ರ್ಯಕ್ಕೆ, ಸ್ತ್ರೀಕುಲೋದ್ಧಾರಕ್ಕೆ ಹಲವು ಬಗೆಯ ಅಡ್ಡಿ ಆತಂಕಗಳು ಬಂದೊದಗಿರಬಹುದು. ಆದರೆ ೧೨ ನೆಯ ಶತಮಾನದ ಕಾಲಾವಧಿಯಲ್ಲಿ ಶಿವಶರಣರು ಸ್ತ್ರೀಯರಿಗೆ ಸಮತ್ವ ಪಡೆಯುವ ಪೂರ್ಣ ಹಕ್ಕನ್ನು ಒದಗಿಸಿಕೊಟ್ಟರು. ಮಹಿಳೆಯರೂ ಸಹ ಆದರ್ಶವಾದ ಬಾಳಿನಿಂದ ಬೆಳಗಲು ಕ್ರಿಯಾತ್ಮಕ ರೀತಿಯಲ್ಲಿ ಕಾಯಕ ತತ್ತ್ವವನ್ನು ತಿಳಿ ಹೇಳಿ ಸ್ತ್ರೀ ಕುಲೋದ್ಧಾರಗೈದರು. ಶಿವಶರಣರು ಅಂತರಂಗದ ಪ್ರಭೆ ಬೆಳಗುವಂತೆ ಶೀಲ: ಸಂಸ್ಕೃತಿ. ಆತ್ಮ ಸಂಯಮನ ಮುಂತಾದ ಆಚಾರ ವಿಚಾರಗಳು ನಿಷ್ಠೆಯಿಂದ ನಿಯಮ ಪೂರ್ವಕವಾಗಿ ನಡೆದು ಆಧ್ಯಾತ್ಮಿಕ ಶಕ್ತಿಯನ್ನು ಸಂಗೊಳಿಸಿ ಕೂಡಲ ಸಂಗನನ್ನು ಕೂಡುವ ದಾರಿಯನ್ನು ತೋರಿಸಿದರೆ ಹೊರತು, ಮನಬಂದಂತೆ ವರ್ತಿಸಲು ನಾನೆಂಬ ಅಜ್ಞಾನಾಹಂಕಾರದ ಶಿಖರವನ್ನೇರಲು, ಬಹಿರಂಗಾಡಂಬರದ

ಮೋಹಕ್ಕೆ ಬೀಳುವಂತೆ ಮಾಡಲಿಲ್ಲ. ಶಿವಶರಣರು ಸ್ತ್ರೀಯರಿಗೆ ಅತ್ಯುನ್ನತ ಆತ್ಮಿಕ ಶಕ್ತಿಯನ್ನು ನೀಡಿ ಅವರ ಜೀವನವನ್ನೇ ಪಾವನಗೊಳಿಸಿದರು. ಅದಕ್ಕಾಗಿ ಇಂದು ಕೇವಲ ಸ್ತ್ರೀಯರು ಭೌತಿಕ ವಿಚಾರಗಳನ್ನೇ ಮನದಲ್ಲಿ ತುಂಬುತ್ತಿರುವಂತೆ, ಪರಿಪಕ್ವತೆಯಿಂದ, ವಿಶುದ್ಧತೆಯಿಂದ ಕೂಡಿರುವ ಶರಣೆಯರ ಸೂಕ್ತಿಗಳನ್ನು ಆತ್ಮ ಸಂತುಷ್ಟಿಗಾಗಿ ಅಂತರಂಗದಲ್ಲಿಳಿಸಿಕೊಳ್ಳುವದು ಅತ್ಯಾವಶ್ಯಕ. ಆತ್ಮ ಸ್ವಾತಂತ್ರ್ಯವಿಲ್ಲದ ಸ್ತ್ರೀ ಸ್ವಾತಂತ್ರ್ಯ ನಿಷ್ಪ್ರಯೋಜಕ. ಆತ್ಮಶ್ರೀ ಸಮನ್ವಿತ ಸ್ತ್ರೀ ಸ್ವಾತಂತ್ರ್ಯ ತೃಪ್ತಿದಾಯಕ.

ಚಿಂತಾದಹತಿ ಜೀವಿತಂ

ಚಿಂತೆ ಮಾನವನಿಗೆ ಅದೊಂದು ದೊಡ್ಡ ಶಾಪವಿದ್ದಂತೆ. ಅಂತರಂಗದ ಸಾಧನೆಗೆ ಆತಂಕವುಂಟಾಗುವದಲ್ಲದೆ ಬೆಳಕಿರದ ಗವಿಯಂತೆ ಜೀವನವಾಗುವದು. ನಿರಂತರವೂ ಮನಸ್ಸಿನಲ್ಲಿ ಕಳವಳ. ಕಾರ್ಯ ಮಾಡಲು ನಿರುತ್ಸಾಹವುಂಟಾಗುವದಲ್ಲದೆ ಜೀವನವೇ ಬೇಸರವಾಗುವದು. ಲೌಕಿಕ ಜೀವನದಲ್ಲಿ ಇದ್ದವರಿಗೆ ಚಿಂತೆ ಬಂದು ಮುತ್ತಿದರೆ ದುಃಖದ ಮಡುವಿನಲ್ಲಿಯೇ ಬಿದ್ದಂತೆ ಆಗುವದು. ತಾಮಸೀಯ ಪ್ರವೃತ್ತಿಯಲ್ಲಿ ತೊಳಲಬೇಕಾಗುವದು. ಅಂತಃಸತ್ವದ ಬೆಳವಣಿಗೆಗೆ ಕೊಡಲಿಯ ಪೆಟ್ಟು ಬಿದ್ದಂತಾಗುವದು. ಬೇಕಾದಷ್ಟು ವೈಭವವಿದ್ದರೂ, ವಿದ್ಯೆಯಲ್ಲಿ ಪಾರಂಗತವಾಗಿದ್ದರೂ ಸಹ ಚಿಂತೆಯು ಭೂತ ಬೆನ್ನು ಬಿದ್ದರೆ ಕಣ್ಣಿಗೆ ಏನೂ ಕಾಣಿಸದು. ಆಗ ವಿದ್ಯೆ ಮಂಕಾಗುತ್ತದೆ. ವೈಭವವು ಒಯ್ಯದ ಶವದಂತೆ ಕಾಣುತ್ತದೆ. ದಾರಿ ತಪ್ಪಿ ದಿಕ್ಕು ಕಾಣಿಸದಂತಾಗುತ್ತದೆ. ಜೀವನ ಹೂದೋಟವು ಬಾಡಿದಂತಾಗುತ್ತದೆ. ನೂರಾರು ಕಲ್ಪನೆಗಳೆಂಬ ಪಕ್ಷಿಗಳು ಹೃದಯಾಕಾಶದಲ್ಲಿ ಹಾರಿ ಮೋಡ ಕವಿದ ಸೂರ್ಯನಂತೆ ನಿಸ್ತೇಜಮಾಡಿ ಬಿಡುತ್ತವೆ. ಭಾವನೆಗಳಲ್ಲಿ ಸಂಶಯ ಪಿಶಾಚಿಗಳು ತುಂಬಿ ಕೆಸರಿನಲ್ಲಿ ಸಿಕ್ಕು ಒದ್ದಾಡುತ್ತಿರುವ ಗೋವಿನಂತೆ ಜೀವನವೆಲ್ಲವೂ ನಿರರ್ಥಕವೆನಿಸುತ್ತದೆ. ಮುಖ ಬಾಡುತ್ತದೆ. ಮನಸ್ಸು ಓಡುತ್ತದೆ. ನಾನಾ ವಿಚಾರಗಳ ಗೊಂದಲಗಳಲ್ಲಿ ಬೀಳುತ್ತದೆ. ಬಾಳ್ಬೆಳಕಿಗೆ ಚಿಂತೆಯು ಚಿತೆಯಾಗುತ್ತದೆ. ಬಾಳನ್ನೂ ಹಾಳು ಮಾಡುತ್ತದೆ. ಮುಪ್ಪಿಗೆ ದಾರಿ ನೀಡುತ್ತದೆ. ಊಟ ವಿಷವಾಗುತ್ತದೆ. ಮನಸ್ಸು ಕಸದಂತಾಗುತ್ತದೆ. ನಿದ್ರೆ ಇಲ್ಲದಂತಾಗುತ್ತದೆ, ಚಿಂತೆ ಹೆಚ್ಚಾದರೆ ಹುಚ್ಚು ಹಿಡಿಯುತ್ತದೆ. ಚಿತೆಯಲ್ಲಿದ್ದವರಿಗೆ ಯಾರ ಉಪದೇಶವೂ ನಾಟದು. ಪೋಟು ಮರದಂತೆ ವ್ಯರ್ಥವಾಗುತ್ತದೆ. ಚಿಂತೆಯ ವೇಗದಲ್ಲಿ ಬುದ್ಧಿ ಶಕ್ತಿಯ ಆಟ ನಡೆಯದು. ಪ್ರಪಂಚವು ಬೇಡಾಗುತ್ತದೆ. ಒಮ್ಮೊಮ್ಮೆ ಆತ್ಮಹತ್ಯೆಗೂ ಚಿಂತೆ ಕಾರಣವಾಗುತ್ತದೆ. ಆತ್ಮಶ್ರದ್ಧೆ, ದೇವರಲ್ಲಿ ವಿಶ್ವಾಸವನ್ನು ದೂರ ಮಾಡುತ್ತದೆ. ಮನಸ್ಸು ಕಲುಷಿತವಾಗಿ ಜಲವಿಲ್ಲದ ಕೆರೆಯಂತಾಗುತ್ತದೆ. ಬಲವಿಲ್ಲದ ಶರೀರವಾಗುತ್ತದೆ. ಹಾಳು ದೇಗುಲದಂತೆ ಜೀವನವಾಗುತ್ತದೆ. ಆಯುಷ್ಯ ನಶಿಸುತ್ತದೆ. ಭವಿಷ್ಯ ಹಾಳಾಗುತ್ತದೆ. ವ್ಯಕ್ತಿಗತ ಜೀವನದಲ್ಲಿ ಸ್ವಾರಸ್ಯವಿಲ್ಲದಂತಾಗುತ್ತದೆ. ಸೊಗಸಿನ ಬಾಳೆಲ್ಲವೂ ಒಡೆದ ಕನ್ನಡಿಯಂತಾಗುತ್ತದೆ. ಜೀವನ ವೃಕ್ಷವು ಬಾಗಿ ಲೌಕಿಕ ಪಾರಮಾರ್ಥಿಕಗಳೆರಡಕ್ಕೂ ನಿರುಪಯೋಗವಾಗುತ್ತದೆ. ಕೆಡುಕಿನ ತೊಡಕನ್ನು

ಬಿಡಿಸಲು ಕಠಿಣವಾಗುತ್ತದೆ. ಜ್ವರ ಬಾಧೆಗಿಂತಲೂ ಚಿಂತಾಜ್ವರಬಾಧೆಯು ಸಹಿಸಲಸದಳ. ಆದಕ್ಕಾಗಿ ಚಿಂತೆ ಪ್ರಾರಂಭವಾಗುವ ಮುನ್ನವೆ ಎಚ್ಚರವಹಿಸಿ ಧೈರ್ಯತಾಳಿ ಚಿಂತೆಯಿಂದ ದೂರವಾಗುವ ಬುದ್ಧಿಯನ್ನು ನೀಡೆಂದು ದೇವರನ್ನು ಪ್ರಾರ್ಥಿಸಿ, ದೇವರ ಚಿಂತೆಯಲ್ಲಿ ಮಗ್ನರಾದರೆ, ಸತತೋದ್ಯೋಗದಲ್ಲಿ ತೊಡಗಿದರೆ, ಬರುವ ವಿಘ್ನಗಳೆಲ್ಲವೂ ದೂರ ಸರಿದು ನಿತ್ಯಾನಂದ ದೊರೆಯುವದು, ಭಾನುವಿನುದಯ ತಾವರೆಗೆ ಜೀವಾಳವಿದ್ದಂತೆ, ಚಿಂತೆ ನಿವಾರಣೆಗೆ ಧ್ಯಾನವೇ ಕೈದೀವಿಗೆ.

ಕವಿರೇವ ಕವೇರ್ವೇತ್ತಿ

ಕವಿಯ ನೋವು ನಲಿವು ಕವಿಗೆ ಅರ್ಥವಾದಷ್ಟು ಬೇರೊಬ್ಬರಿಗೆ ಅರ್ಥವಾಗದು. ಬಂಜೆಯು ಬೇನೆಯನರಿಯಳೆಂಬಂತೆ ಅವರ ಸ್ಥಿತಿ. ಕವಿಯು ಅಂತರಂಗದಲ್ಲಿ ಕೊರಗುತ್ತಾನೆ. ಕಾವ್ಯ ಪ್ರವಾಹದಲ್ಲಿ ಆ ಭಾವವನ್ನು ತೇಲಿಸುತ್ತಾನೆ. ಭಾವಜೀವಿಯಾದರೂ ಕಷ್ಟ ನಷ್ಟಗಳನ್ನು ತೋರಿಸಲು ಹಿಂದು ಮುಂದು ನೋಡುತ್ತಾನೆ. ಕವಿಯ ಪರಿಶ್ರಮವು ಆನಂದವನ್ನು ನೀಡಿದರೆ ಒಮ್ಮೆ ಅವನಿಗೆ ದುಃಖವನ್ನು ನೀಡುತ್ತದೆ. ಕವಿಯ ಜೀವನವೇ ಹುಚ್ಚು ಜೀವನವಿದ್ದಂತೆ. ಬೇಕಾದಾಗ ಹಾಡಿ ಬಿಡುವ ಶಕ್ತಿ ತುಂಬಿರುತ್ತದೆ. ಸಮುದ್ರದಾಳದಲ್ಲಿ ಹೋಗಿ ಮುತ್ತು ರತ್ನಗಳನ್ನು ತರುತ್ತಾನೆ. ದೀಪ್ತಿಯನ್ನು ತೋರಿಸುತ್ತಾನೆ. ದುರ್ಬಲರನ್ನು ಸಬಲರನ್ನಾಗಿ ಮಾಡುತ್ತಾನೆ. ಮಲಗಿದವರನ್ನು ಎಚ್ಚರಿಸುತ್ತಾನೆ. ಚೈತನ್ಯವನ್ನು ಮತ್ತು ಸ್ಫೂರ್ತಿಯನ್ನು ಕೊಡುತ್ತಾನೆ. ಕಲ್ಪನಾ ಲೋಕದಲ್ಲಿ ವಿಹರಿಸುತ್ತಾನೆ. ಕಲ್ಪಿತ ವಸ್ತುಗಳನ್ನು ತೋರಿಸುತ್ತಾನೆ. ಕವಿಯದು ಸಹಜ ಜೀವನ. ಅವನಿಗೆ ಕೃತ್ರಿಮತೆ ಸೇರದು. ಕವಿಯು ವಿಲಾಸಿಯೂ ಅಹುದು. ವಿಕಾಸವಾದಿಯೂ ಅಹುದು. ಕವಿಯ ದೃಷ್ಟಿ ವಿಶಾಲವಾದುದು. ಆತನ ಕಾವ್ಯ ಸೃಷ್ಟಿ ಮನಮೋಹಕವಾದುದು. ಬ್ರಹ್ಮ ಸೃಷ್ಟಿಗಿಂತ ಭಿನ್ನವಾದುದು. ಕವಿಯ ಸೃಷ್ಟಿಯಲ್ಲಿ ಅಮರತ್ವವನ್ನು ಪಡೆಯುವ ಶಕ್ತಿ ತುಂಬಿದೆ. ಈತನದು ಅಳಿಯುವ ಸೃಷ್ಟಿಯಲ್ಲ ನಿರಂತರ ಚಿರನೂತನವಾಗಿ ಉಳಿಯುವ ಸೃಷ್ಟಿ, ಪಕ್ಷಿಗಳಂತೆ ಗಗನಕ್ಕೆ ಹಾರುತ್ತಾನೆ. ಚುಕ್ಕಿಗಳಂತೆ ಪ್ರಕಾಶಿಸುತ್ತಾನೆ. ಹಸಿದವರಿಗೆ ಅನ್ನವನ್ನು ನೀಡುವ ಶಕ್ತಿಯೂ ಇವನಲ್ಲಿದೆ. ಒಮ್ಮೆ ಭಿಕ್ಷುಕನಾದರೆ ಮತ್ತೊಮ್ಮೆ ಮಹಾರಾಜನಾಗುತ್ತಾನೆ. ಸ್ವಾತಂತ್ರ್ಯ ಇವನ ಜನ್ಮಸಿದ್ಧ ಹಕ್ಕು. ಸ್ವಾತಂತ್ರ್ಯವಿದ್ದರೂ ಅತ್ಯ ಸ್ವಾತಂತ್ರ್ಯಕ್ಕೆ ಚ್ಯುತಿ ತರಲಾರ. ಮೊಗ್ಗೆಯನ್ನು ಅರಳಿಸುತ್ತಾನೆ. ಸುಗಂಧವನ್ನು ಬೀರುತ್ತಾನೆ. ಕಲ್ಲಿನೆದೆಯ ಕರಗಿಸುತ್ತಾನೆ. ಬಲ್ಲವರಿಗೂ ಬುದ್ಧಿ ಹೇಳುತ್ತಾನೆ. ಕವಿಶಕ್ತಿ ಮಹೋನ್ನತವಾದದ್ದು. ಪ್ರಭಾವಕಾರಿಯಾದುದು. ಭಾವಪೂರ್ಣವಾದುದು. ಕವಿಯು ಧ್ಯಾನ ಬಲದಿಂದಲೂ ತಪಸ್ಸಿನಿಂದಲೂ, ಬಿಕ್ಕಿಬಂದ ಹೂ ಹೊರಬರುವಂತೆ ಕವಿತೆ ರಚಿಸುತ್ತಾನೆ. "ಕವಿರ್ಮನೀಷೀಪರಿಭೂಃ ಸ್ವಯಂಭೂಃ" ಕವಿ ಅಮರ ಜೀವನವನ್ನು ಚಿತ್ರಿಸುವ ಸೃಷ್ಟಿಕರ್ತ. ಯೋಗಿಗಳಿಗೆ ತ್ಯಾಗಿಗಳಿಗೆ ಆನಂದವನ್ನು ನೀಡುವನಲ್ಲದೆ ಮಸಣದಲ್ಲಿ ರುದ್ರಾಗ್ನಿ ಜ್ವಾಲೆಗಳನ್ನು ಎಬ್ಬಿಸುತ್ತಾನೆ. ಮಾನವಕೋಟಿಗೆ ಸಂಸ್ಕೃತಿಯ ಸಿಹಿನೀರನ್ನೆರೆಯುತ್ತಾನೆ. ಕವಿಯ ಚಿತ್ತವು ವಸಂತ ವನದಂತೆ ಹಲವು ಬಗೆಯ ಬಣ್ಣಗಳಿಂದ ಕೂಡಿ ಕೊಂಡಿರುತ್ತದೆ. ಕಲ್ಪನೆಯ

ಪಾತ್ರೆಯಲ್ಲಿ ಅನೇಕ ರಸಭರಿತ ಜ್ಞಾನದ ಕಾಳುಗಳನ್ನು ತುಂಬುವಶಕ್ತಿ ಕವಿಗಿರುತ್ತದೆ. ರಾಷ್ಟ್ರವನ್ನು ಕಟ್ಟುವ ಶಕ್ತಿಯೂ ಕವಿಗಿದೆ. ಅಂತೆಯೇ ಶೆಲ್ಲಿಯು–"Poets are unacknowledged legislators of the world" ಎಂದುದಾಗಿ ಕವಿಗಳ ಮಹತ್ವವನ್ನು ತಿಳಿಸಿದ್ದಾನೆ. ಫ್ರಾನ್ಸಿನಲ್ಲಿ ಕ್ರಾಂತಿಯುಂಟಾಗಲು ಕವಿಗಳೇ ಕಾರಣರಾದರಂತೆ; ಕವಿಯು ಜಡತನವನ್ನು ನೀಗಿಸಿ ಮೃತ ಶಕ್ತಿಯು ಬರುವಂತೆ ಪ್ರೇರೇಪಿಸುತ್ತಾನೆ. ಕವಿಯರಸ ತಪಸ್ಸಿಗೆ ಜಗತ್ತು ಬಾಗುತ್ತದೆ. ಹೃದಯವಂತಿಕೆಯನ್ನು ಪಡೆಯದ, ಬುದ್ಧಿ ಸೂಕ್ಷ್ಮತೆಯನ್ನರಿಯದ ಪ್ರತಿಭೆಯಿಂದೊಡಗೂಡದ ಆಲೋಚನೆ ಮತ್ತು ಕಲ್ಪನೆಗಳನ್ನು ಮೆಲುಕುಹಾಕದ ಕವಿಜೀವನ ಹೂಗಳಿಲ್ಲದ ಉದ್ಯಾನವನದಂತೆ ನಿರರ್ಥಕ.

ಅರ್ಥೋ ಹಿ ಕನ್ಯಾ ಪರಕೀಯ ಏವ

ರಸವಿರಸಗಳ ಸಮರಸವೇ ಪ್ರೇಮದ ರಹಸ್ಯ. ಸುಖದುಃಖ ಇವು ಜೀವ ಗುಣಗಳು. ಚಿತ್ತವೃತ್ತಿಯು ಪ್ರವೃತ್ತಿಯಿಂದ ದುಃಖಪ್ರಾಪ್ತವಾಗುವದು ಸಹಜ. ಒಂದರಿಂದ ಅಂತರಂಗ ವಿಶುದ್ಧಿ. ಮತ್ತೊಂದರಿಂದ ಅಂತರಂಗ ಅಶುದ್ಧಿ. ಸುಖ ದುಃಖಗಳಲ್ಲಿ ಅದ್ವೈತ ಭಾವವು ಬರಲು ಎಡೆಬಿಡದ ತಪಸ್ಸು, ಸಾಧನೆ, ಪರಿಶ್ರಮ ಬೇಕು. ಎಂತಹ ಮಹಾನ್ ತಪಸ್ವಿಗಳಿಗೂ, ಯೋಗಿಗಳಿಗೂ, ಮಮತೆ ಮೋಹ ಒಮ್ಮೊಮ್ಮೆ ಬಿಡುವದು ಕಷ್ಟಸಾಧ್ಯವಾಗುತ್ತದೆ. ಮಮತಾ ವಿಷಯವು ಎದುರಿಗೆ ಬಂದು ಕಾಡುತ್ತದೆ. ಭಾವೋದ್ರೇಕಗೊಳಿಸುತ್ತದೆ.

ಹುಟ್ಟಿದೊಡನೆಯೇ ತಾಯಿ – ತಂದೆಗಳನ್ನು ಬಿಟ್ಟು ತಬ್ಬಲಿಯಾದ ಶಕುಂತಲೆಯು ತಪೋಧನರಾದ ಕಣ್ವಋಷಿಗಳ ಮಮತೆಯ ಸಾಕು ಮಗಳಾಗುತ್ತಾಳೆ. ಕಣ್ವಋಷಿಗಳು ತಮ್ಮ ಆಶ್ರಮದಲ್ಲಿ ಶಕುಂತಲೆಯನ್ನು ಮಮತೆಯೊಡನೆ ಸಾಕಿ ಸಲುಹಿ ದೊಡ್ಡವಳನ್ನಾಗಿ ಮಾಡುತ್ತಾರೆ. ಋಷ್ಯಾಶ್ರಮದಲ್ಲಿಯೇ ಬೆಳೆದ ಶಕುಂತಲೆಯು ಪತಿಯ ಮನೆಗೆ ಹೋಗಲು ಸಿದ್ಧಳಾದಾಗ, ಶಕುಂತಲೆಯನ್ನು ಕುರಿತು ಕಣ್ವಋಷಿಗಳು ಪಾತಿವ್ರತ್ಯ ಧರ್ಮವನ್ನು ಕಾಯ್ದುಕೊಂಡು ಹೋಗಲು ಕೆಲವು ಹಿತ ವಚನಗಳನ್ನು ಹೇಳುತ್ತಾರೆ.

ಶುಶ್ರೂಷಸ್ವಗುರೂನ್ ಕುರುಪ್ರಿಯ ಸಖೀ
ವೃತ್ತಿಂ ಸಪತ್ನೀಜನೇ|
ಭರ್ತೃರ್ವಿಪ್ರಕೃತಾಪಿ ರೋಷಣತಯಾ
ಮಾಸ್ಮ ಪ್ರತೀಪಂಗಮಃ|
ಭೂಯಿಷ್ಠಂ ಭವದ ಕ್ಷಿಣಾ ಪರಿಜನೇ
ಭಾಗ್ಯೇಷ್ವ ನುತ್ಸೇಕಿನೀ|
ಯಾಂತ್ಯೇವಂ ಗೃಹಿಣೀಪದಂ
ಯುವತಯೋ ವಾಮಾಃ| ಕುಲಸ್ಯಾಧಯಃ|

ಗುರುಹಿರಿಯರನ್ನು ಮನ ಮುಟ್ಟಿ ಸೇವೆಮಾಡು, ಸವತಿಯರಲ್ಲಿ ಪ್ರಿಯ ಸಖಿಯರೆಂಬ ಭಾವನೆಯನ್ನು ತಂದುಕೋ, ಪತಿಯು ಕೋಪಿಸಿದರೂ ಎದುರಿಗೆ ಬರುವಂತೆ ಮಾಡಬೇಡ. ತಿರುಗಿ ಬೀಳಬೇಡ. ಸವತಿಯ ಮನೋಭಾವವನ್ನು ನೋಡಿಕೊಂಡು ನಡೆ: ಪರಿಜನರಲ್ಲಿ ಆದರವಿರಲಿ. ಭಾಗ್ಯ ಬಂದಿದೆ ಎಂದು ಗರ್ವದಲ್ಲಿ ಕುಳಿತುಕೊಳ್ಳಬೇಡ. ಹೀಗಿರುವ ಯುವತಿಯರೇ ಉತ್ತಮ ಗೃಹಿಣಿಯರೆನಿಸುತ್ತಾರೆ. ಇದಕ್ಕೆ ಹೊರತಾದವರು ಕುಲಕ್ಕೆ ಪೀಡೆಗಳೆಂದು ತಿಳಿ. ಇಂತು ಹೇಳಿದ

ಕಣ್ವರ್ಷಿಗಳು ತಪೋವನದಿಂದ ಹೊರಹೋಗುತ್ತಿರುವ ಶಕುಂತಲೆಯನ್ನು ಕಂಡು ಮಮತೆಯ ಬಂಧನದಿಂದ ಬಾಧೆಗೊಳಗಾಗುತ್ತಾರೆ. ಪರ್ಣಶಾಲೆಯ ಬಾಗಿಲಲ್ಲಿ ಶಕುಂತಲೆಯು ಪೂಜಿಸಿಟ್ಟ ಚಿಗಿತ ನವಣೆಕಾಳನ್ನು ತಿರುಗಿನೋಡುತ್ತ, ಅವರ ಜೊತೆಗೆ ಶಕುಂತಲೆಯು ಅಗಲುತ್ತಿರುವದನ್ನು ಕಂಡು, ದುಃಖಿತಪ್ತರಾಗಿ ಕಣ್ವರ್ಷಿಗಳು "ಹೋಗಮ್ಮ ನಿನ್ನ ಪ್ರಯಾಣವು ಸುಖಕರವಾಗಲಿ" ಎಂದು ಹರಸಿ, ಆಶೀರ್ವದಿಸಿ ಕಳಿಸಿದ ನಂತರ, ಚಿಂತೆಯಿಂದ ನೋಟವನ್ನು ಜಡಮಾಡಿಕೊಂಡು, ಸುರಿಯುವ ಕಣ್ಣೀರನ್ನು ಒತ್ತಿಕೊಂಡು "ಸಂನ್ಯಾಸಿಗಳಾದ ಹಾಗೂ ಸಂಯಮಧನರಾದ ನಮ್ಮಂಥವರಿಗೆ ಮಮತೆಯ ಪರಿಣಾಮದಿಂದ ಇಷ್ಟು ಸಂಕಟವಾಗುತ್ತಿರುವಾಗ, ಮೊದಲು ಬಾರಿ ಹೆಣ್ಣು ಮಕ್ಕಳನ್ನು ಪತಿಯ ಮನೆಗೆ ಕಳಿಸುವ ಗೃಹಸ್ಥರಿಗೆ ಎಷ್ಟು ದುಃಖವಾಗುತ್ತಿರಬಹುದೆಂದು" ನಿಟ್ಟುಸಿರೆಳೆದು—

"ಅರ್ಥೋ ಹಿ ಕನ್ಯಾ ಪರಕೀಯ ಏವ" ಅರ್ಥ ಮತ್ತು ಕನ್ಯೆ ಇವೆರಡನ್ನು ಎಷ್ಟು ಜೋಪಾನವಾಗಿಟ್ಟುಕೊಂಡರೂ, ಲಾಲನೆ ಪಾಲನೆ ಮಾಡಿದರೂ ಸಹ ಒಂದಾನೊಂದು ದಿನ ಇವುಗಳು ಪರರ ವಶದಲ್ಲಿಯೇ ಇರತಕ್ಕವುಗಳೆಂದು ಭಾವಿಸಿ, ಮುಡುಪಿಟ್ಟ ಒಡವೆಯನ್ನು ತಿರುಗಿ ಮುಟ್ಟಿಸಿದಂತೆ, ಕರ್ತವ್ಯದ ಭಾರವು ಪೂರ್ತಿಯಾಯಿತೆಂದು ಬಗೆದು, ಸುಖದುಃಖಗಳ ಭಾರವನ್ನು ಹೊತ್ತ ಮಹರ್ಷಿಗಳು ಪರ್ಣಕುಟೀರಕ್ಕೆ ಪೂಜೆಗೆಂದು ತೆರಳುತ್ತಾರೆ.

ಮಧು ತಿಷ್ಠತಿ ಜಿಹ್ವಾಗ್ರೇ ಹೃದಯೇತು ಹಾಲಾಹಲಂ

"ಅಧರಕ್ಕೆ ಕಹಿ ಉದರಕ್ಕೆ ಸಿಹಿ" ಈ ನುಡಿ ಮಾನವನ ಮನೋವೃತ್ತಿಗೆ ಸಂಜೀವಿನಿಯಾದ್ದಂತೆ. ಜೀವನ ವಿಕಾಸಕ್ಕೆ ರಸಭರಿತ ಫಲವಿದ್ದಂತೆ. ಬೇವ ಸವಿದಂತೆ ಹಿತಕಾರಿ. ಆದರೆ ಹೃದಯದೊಳು ವಿಷ ತುಂಬಿ ಮಾತಿನೊಳು ಮಧು ತುಂಬಿದರೆ ಅದು ಬಲು ಅಪಾಯಕಾರಿ. ಜೀವನ ಬಳ್ಳಿಯನ್ನೇ ಕತ್ತರಿಸುವ ಸಾಹಸ ಮಾಡಿದಂತೆ. ಮಾತು ಮಾಧುರ್ಯವಾದಾಗ ಆ ಮಾತಿಗೆ ದೀಪ್ತಿ ಮತ್ತು ಶಕ್ತಿಯುಂಟಾಗುತ್ತದೆ. ಇಲ್ಲದಿರೆ ಆ ನುಡಿ ಒಣಗಿರುವ ಎಲೆಗಳಂತೆ ರಸಹೀನವಾಗುತ್ತದೆ. ಕಸುವಿಲ್ಲದ ಹೆಂಟೆಯಾಗುತ್ತದೆ. ಮಾತಿನಿಂದ ಮನುಷ್ಯನನ್ನು ಗೆಲ್ಲಲೂ ಬಹುದು, ಕೊಲ್ಲಲೂ ಬಹುದು. ಬೇವಿನ ಹನಿ ಒಳಗಿಳಿದರೆ ಮಾತ್ರ ದೇಹಕ್ಕೆ ರಕ್ತ ಶುದ್ಧಿಯನ್ನು ನೀಡುತ್ತದೆ. ಅದರ ಹೊರತಾಗಿ ಜೇನು ತುಟಿಯಲ್ಲಿದ್ದು, ಹೃದಯದಲ್ಲಿ ಪಾರಜ ಹೋದರೆ ವಿನಾಶಕಾರಿ. ಅಷ್ಟೇ ಅಲ್ಲ ಮನುಷ್ಯನು ಸತ್ತು ಹೋಗುತ್ತಾನೆ. ಅಂತೆಯೇ ಮನುಷ್ಯನಲ್ಲಿರಬೇಕಾದ ಸದ್ಗುಣಗಳು ಹೃದಯ ಚೀಲದಲ್ಲಿ ತುಂಬಿದ್ದರೆ ಪರರಿಗೂ, ತನಗೂ ಒಳಿತು. ಭಾವಶುದ್ಧಿಯುಂಟಾಗಿ ಅಂತರಂಗವು ವಿಕಾಸಮಯವಾಗಿರುತ್ತದೆ. ಬೆಳೆದ ಬುದ್ಧಿಗೆ ಬೆಳಕು ಬರುತ್ತದೆ. ಜೀವನವೆಲ್ಲವೂ ಮೃದು ಮಧುರವಾಗುತ್ತದೆ. ಮಾನವೀಯತೆಯು ಎದ್ದು ಕಾಣುತ್ತದೆ. ಇಲ್ಲದಿರೆ, ಒಳಗೊಂದು ಹೊರಗೊಂದಾದರೆ ರಾಕ್ಷಸೀಯ ಜೀವನವನ್ನು ಅನುಭವಿಸಬೇಕಾಗುತ್ತದೆ. ಮನಸ್ಸಿಗೆ ಸಂತೃಪ್ತಿ ಸಿಗದು. ನಿರಂತರವೂ ಕಳವಳ. ಅನೇಕ ಕುವಿಚಾರಗಳ ಗೊಂದಲಮಯ ಜೀವನದಲ್ಲಿ ತೊಡಗಿ ಆತ್ಮ ಹೀನವಾಗುತ್ತದೆ. ಒಳಗೆ ಕುಟಿಲ ಹೊರಗೆ ವಿನಯವಾಗಿದ್ದರೆ ಮನುಷ್ಯನೂ ಮೆಚ್ಚಲಾರ. ದೇವರಿಗೂ ಸಲ್ಲದು, ತೋರಿಕೆಯ ಕೋಟ್ಯಂಚಿನಂತೆ ಕಂಡರೂ, ಕೊನೆಗೆ ಭದ್ರವಾದ ಸುಸ್ಥಿರವಾದ ನಿಷ್ಕಲ್ಮಷವಾದ ಹೃದಯವೊಂದೇ ಉಳಿಯುವದು. ತೆರೆದ ಹೃದಯವು ಸುಲಿದ ಬಾಳೆಯಹಣ್ಣಿನಂತೆ ರುಚಿಕರ. ಒಮ್ಮೊಮ್ಮೆ ಕಟುತರ ಕಷ್ಟ ಸಂಭವಿಸಿದರೂ ಹೃದಯದೊಳಗೆ ಅದರ [illegible]. ಆತ್ಮಾನುಭೂತಿಗೆ ಅನುಕೂಲವಾಗಿ ಶಾಂತಿ ದೊರೆಯುವದು. ಪ್ರಾತಃಕಾಲ [illegible]. ತೆರೆದ ಹೃದಯದಿಂದ ಆಗುವಷ್ಟು ಲಾಭ ಮುಚ್ಚಿದ ಹೃದಯದಿಂದ ಆಗಲಾರದು. ಭಾವೈಕ್ಯ [illegible] ಸಹ ಪ್ರೇಮಮಯಿ ಪ್ರಾರ್ಥನೆಯಿಂದಲೇ ಸಾಧ್ಯ. ಎಂದೇ ಪಾಂಡಿಚೇರಿಯ ಅರವಿಂದಾಶ್ರಮದ ಮಾತಾಜಿಯವರು—

"ಭಗವತ್ಪ್ರೇಮದ ಮಾಧುರ್ಯಕ್ಕೆ ನಿನ್ನ ಹೃದಯವನ್ನು ಮುಚ್ಚಬೇಡ.

ಪ್ರಾಣಾಂತಿಕ ವಿಷವಾದ ಅಸೂಯೆಯು ಆತ್ಮಕ್ಕೆ ಮೃತ್ಯುಪ್ರಾಯವಾಗಿರುವದು. ಹೇಯ ವಿಚಾರಗಳು ಹೇಯ ಭಾವನೆಗಳನ್ನು ತರುತ್ತವೆ. ಹೇಯ ಭಾವನೆಗಳು ಪರಮೇಶ್ವರನಿಂದ ದೂರ ಎಳೆದೊಯ್ಯುತ್ತವೆ. ಅದುವೆ ಕೊನೆಯಿಲ್ಲದ ದುಃಖ ಹಾಗೂ ನೋವುಗಳ ತವರುಮನೆ" ಎಂದು ಮುಂತಾಗಿ ಪ್ರತಿಯೊಬ್ಬ ವ್ಯಕ್ತಿಗೂ ಹೃದಯ ಶುದ್ಧಿಯೆಡೆಯು ಎಚ್ಚರಿಕೆ ನೀಡಿದ್ದಾರೆ. ಕೆಟ್ಟ ವಿಚಾರಗಳು ಭೀಕರರೂಪ ತಾಳಿದರೆ ಒಳ್ಳೆಯ ವಿಚಾರಗಳು ಸುಂದರ ಹೂಗಳಂತೆ ಸುಗಂಧ ನೀಡುತ್ತವೆ. ಪಾವಿತ್ರ್ಯತೆಗೆ ಬಂಧುರ ಮೈಲುಗಲ್ಲುಗಳಾಗುತ್ತವೆ. ಬಾಳ ದೇಗುಲಕ್ಕೆ ಭದ್ರ ಬುನಾದಿಯಾಗುತ್ತವೆ. ಕೃತ್ರಿಮತೆ ಒಡೆದ ಕನ್ನಡಿಯಂತಾದರೆ ಸಹಜತೆ ಹಾಲ್ಜೇನು ಸವಿದಂತೆ.

'ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿಗರೀಯಸೀ'

ಮಾತೆಗಿಂತ, ಸ್ವರ್ಗಕ್ಕಿಂತ ಸ್ವದೇಶ ಪ್ರೇಮ ಹೆಚ್ಚಿನದು. ಎಂತಹ ಕಡುತರ ಕಷ್ಟ ಸಂಭವಿಸಿದರೂ ಮಾತೃಭೂಮಿಯಲ್ಲಿರುವ ಅಪಾರ ಅಭಿಮಾನ ಯಾರೂ ಬಿಡಲಾರರು. ಮಾತೃಭೂಮಿಯ ನಿಂದೆ ಸಹಿಸಲಾರರು. ಬಲಿದಾನ ಮಾಡಲೂ ಸಹ ಸಿದ್ಧರಿರುತ್ತಾರೆ. ಈ ಸ್ವದೇಶ ಪ್ರೇಮವು ಮಾನವನನ್ನು ಮೇಲಕ್ಕೆತ್ತುವದಲ್ಲದೆ, ವ್ಯಕ್ತಿಗತ ಅಂತಶುದ್ಧಿಯನ್ನು ಸಿದ್ಧಿಗೊಳಿಸುತ್ತದೆ. ಇದೇ ಮಾನವೀಯತೆಯ ಲಕ್ಷಣ. "ಮಾತೃಭೂಮಿಯ ಸ್ವಾಧೀನತೆಯು ವಿಕಾಸದ ಪ್ರಥಮ ಚರಣ"ವೆಂದು ಸ್ವಾಮಿ ವಿವೇಕಾನಂದರು ನುಡಿದಿದ್ದಾರೆ.

ಸುನೂಂಗೀ ಮಾತಾಕೀ ಆವಾಜ, ರಹೂಂಗೀ ಮರನೇಕೋ ತೈಯಾರ,
ಕಭೀಭೀ ಲಾಸ್ ವೇದೀಪರ್‌ದೇವ, ನ ಹೋನೇದೂಂಗೀ ಅತ್ಯಾಚಾರ।
ನ ಹೋನೇದೂಂಗೀ ಅತ್ಯಾಚಾರ, ಚಲೋ ಮೈ ಹೋ ಜಾವೂ ಬಲಿದಾನ,
ಮಾತೃಮಂದಿರಮೆ ಹುಯಿ ಪುಕಾರ, ಚಢಾದೋ ಮುಝಕೋ ಹೇ ಭಗವಾನ್!

ಎಂತಹ ಹೃದಯಸ್ಪರ್ಶಿ ನುಡಿಯಿದು! ಮಾತೃಭೂಮಿಯ ಮೇಲೆ ಅನುಪಮ ಶ್ರದ್ಧೆಯನ್ನು ವ್ಯಕ್ತಮಾಡುತ್ತ, ಕವಯಿತ್ರಿ ಸುಭದ್ರಾಕುಮಾರಿ ಚೌಹಾನರು ಬರೆದ ನುಡಿಗಳು ಮಲಗಿದವರನ್ನು ಎಚ್ಚರಿಸುತ್ತವೆ. ಅಭಿಮಾನ ಶೂನ್ಯರಿಗೆ ಬಲನೀಡುವಂತಹ ಧೀರವಾಣಿ ಈ ಶಬ್ದಗಳಲ್ಲಿ ಅಡಗಿದೆ. ಹುಟ್ಟಿದ ನಾಡಿಗೆ ತಾಯಿ ಭಾವನೆಯ ಕಲ್ಪನೆಯನ್ನು ತಾರದಿದ್ದ ವ್ಯಕ್ತಿಯ ಹೃದಯವು ಕಲ್ಲಿನಂತಿರುವದಲ್ಲದೆ, ಪ್ರಾಣವಿಲ್ಲದ ಶರೀರದಂತೆ ಅವನ ಸ್ಥಿತಿಗತಿಯಾಗುತ್ತದೆ. ಭಾವ ಶೂನ್ಯವಾಗುತ್ತದೆ. ಇದ್ದು, ಇಲ್ಲದ ಜೀವನವಾಗುತ್ತದೆ. ಯಾವ ದೇಶದ ನೆಲದ ಮೇಲೆ ತಿರುಗಾಡಿ, ಜಲವಾಯುಗಳನ್ನು ಸೇವಿಸಿ, ಅನ್ನದಿಂದ ಶರೀರ ವಿಕಾಸ ಮಾಡಿಕೊಂಡ ನಾವುಗಳು ಸ್ವದೇಶ ಪ್ರೇಮವನ್ನು ಮಾಡದೆ ಹೋದರೆ, ಈ ಭಾವನೆ ಬಾರದೆ ಹೋದರೆ ಪಶುಪಕ್ಷಿಗಳಿಗಿಂತಲೂ ಕಡೆ ಎಂದು ಹೇಳಬಹುದು. ರಾಷ್ಟ್ರೋದ್ಧಾರ ಮಾಡಬಯಸುವವರಿಗೆ ಸ್ವಾರ್ಥ ತ್ಯಾಗದಿಂದೊಡಗೂಡಿದ ಸ್ವದೇಶ ಪ್ರೇಮವೇ ಮೊದಲ ಹೆಜ್ಜೆ. ಜಪಾನ, ಜರ್ಮನ, ಇಂಗ್ಲಂಡ ಮುಂತಾದ ರಾಷ್ಟ್ರಗಳು ಇಂದು ಪ್ರಪಂಚದಲ್ಲಿ ಸಮೃದ್ಧಿ ಶಿಖರವನ್ನು ಮುಟ್ಟಲು ಸ್ವದೇಶ ಪ್ರೇಮವೇ ಮೂಲ ಕಾರಣ. ಮಹಾತ್ಮಾ ಗಾಂಧಿ, ಪಂ. ಜವಾಹರಲಾಲ ನೆಹರು, ಬಾಬು ರಾಜೇಂದ್ರಪ್ರಸಾದ ಮುಂತಾದವರು ಭಾರತಕ್ಕಾಗಿ ಸರ್ವಸ್ವ ಸಮರ್ಪಣ ಮಾಡಿರುವವರ ಪರಿಣಾಮವೇ ನಮಗಿಂದು ಸ್ವಾತಂತ್ರ್ಯದ ಬೆಳಕನ್ನು ಕಾಣುತ್ತಿದ್ದೇವೆ. ಎಳೆಯ ಮಕ್ಕಳು ಮೊದಲುಮಾಡಿಕೊಂಡು ಹಿರಿಯರೆಲ್ಲರಲ್ಲಿ ದೇಶಪ್ರೇಮದ ತೆರೆಗಳು ಏಳುತ್ತಲಿವೆ.

ಪ್ರಧಾನಮಂತ್ರಿ ಇಂದಿರಾ ಗಾಂಧಿಯವರ ದಿಟ್ಟ ನಿಲುವು ಹಾಗೂ ಪರಿಪೂರ್ಣ ಸಾಹಸದ ಫಲದಿಂದಲೇ ಇಂದು ಬಂಗ್ಲಾ ದೇಶದಲ್ಲಿ ಸ್ವಾತಂತ್ರ್ಯ ಸೂರ್ಯ ಬೆಳಗಿದ್ದಾನೆ.

"ಆಮಾರ್ ಸೋನಾರ್ ಬಾಂಗ್ಲಾ ಆಮಿ, ತೋಮಾಯ್ ಭಾಲೋಬಾಸಿ।
ಚಿರದಿನ್ ತೋಮಾರ್ ಆಕಾಶ್, ತೋಮಾರ್ ಬಾತಾಸ್,
ಆಮಾರ್ ಪ್ರಾಣೇಬಾಜಾಯ್ ಬಾಂಸಿ॥"

ಎಂದು ಅಂದು ಕವೀಂದ್ರ ರವೀಂದ್ರರು ಹಾಡಿದ ಭಾವಪೂರ್ಣ ಬಂಗಾಲಿ ಗೀತ ನಮಗಿಂದು ನೆನಪಿಗೆ ಬಂದು ಹೃದಯ ಕರಗುತ್ತದೆ. ರಾಷ್ಟ್ರಪ್ರೇಮಕ್ಕೆ ಆಹ್ವಾನ ನೀಡುತ್ತದೆ. "ಬಂಗಾರದಂತಹ ಬಂಗ್ಲಾ ದೇಶವೆ! ನಿರಂತರವೂ ನನ್ನೆದೆಯಲ್ಲಿ ನುಡಿಸುತಿರುವ ಹೃದ್ವೀಣೆಯಾಗಿರುವೆ" ಎಂಬುದೇ ಈ ಪಲ್ಲವಿಯ ಭಾವ.

ರಾಷ್ಟ್ರವು ಸಂಪದ್ಭರಿತವಾಗಿರಲು, ಚೈತನ್ಯಪೂರ್ಣ, ಪರಿಶುದ್ಧ ಸ್ವದೇಶ ಪ್ರೇಮವು ಜೀವನದುಸಿರಾದರೆ ಮಾತ್ರ ಸಾರ್ಥಕ.

ಕಾಯಕವೇ ಕೈಲಾಸ

(Work is Worship)

ಕಾಯಕ ಅದೊಂದು ಸರ್ವಾಂಗಸುಂದರ ಪರಿಪೂರ್ಣಾರಾಧನ. ವ್ಯಕ್ತಿಗತ ಜೀವನವನ್ನು ಪರಿಶುದ್ಧಗೊಳಿಸಲು ಕಾಯಕವು ದೊಡ್ಡ ಸಾಧನ. ಆಲಸ್ಯವನ್ನು ನಿವಾರಣೆ ಮಾಡಿ ದೇಹವ ದಾರಿಯತ್ತ ಕೊಂಡೊಯ್ಯುವ ಸಾಧನವಿದು. ಭಾವ ಭೂಮಿಯ ಮೇಲೆ ಸದ್ಗುಣಗಳೆಂಬ ಬೀಜಗಳನ್ನು ಬಿತ್ತಿ ಸುಮಧುರ ಫಲಗಳನ್ನು ನೀಡುತ್ತದೆ ಕಾಯಕ. ಕಾಯಕದಿಂದ ದೇಹವು ನಿರೋಗಿಯಾಗುತ್ತದೆ. ಕತ್ತಲು ದೂರ ಸರಿಯುತ್ತದೆ. ಮನಸ್ಸು ನಿರ್ಮಲವಾಗುತ್ತದೆ. ಭವಬಂಧನ ಹರಿಯುತ್ತದೆ, ಭಾವಶುದ್ಧಿಯಾಗಿ ಮಧುರ ಅಧ್ಯಾತ್ಮ ಬಾಂಧವ್ಯ ಬೆಳೆಯುತ್ತದೆ. ಬೌದ್ಧಿಕ, ಸಾಮಾಜಿಕ ಕಾರ್ಯಗಳಲ್ಲಿ ಶಕ್ತಿಯನ್ನಿತ್ತು ಪ್ರೋತ್ಸಾಹಿಸುತ್ತದೆ ಮಧುರ ಕಾಯಕ. ಕಾಯಕದಿಂದ ಕಾಡುವ ಅವಗುಣಗಳು ನಷ್ಟವಾಗಿ, ಧೀ ವಿವೇಚನೆಗಳು ಬಲಿತು ಜೀವನವು ಪವಿತ್ರವಾದ್ದಾಗಿರುತ್ತದೆ. ಮಾನವನಿಗೆ ವ್ಯವಹಾರದಲ್ಲಿ ಎಷ್ಟೇ ಕಷ್ಟಗಳು ಬಂದೊದಗಿದರೂ ಸತ್ಯ ಶುದ್ಧ ಕಾಯಕದಿಂದ ಅವೆಲ್ಲವುಗಳು ದೂರಾಗಿ ಆತ್ಮ ಪ್ರಗತಿಗೆ ರಾಜಮಾರ್ಗವಾಗುತ್ತದೆ. ಸತ್ಯತನ ಪ್ರಾಮಾಣಿಕತೆ ಒಂದಾಗಿ ಕುಂಠಿತ ಜೀವನಕ್ಕೆ ಆಸರೆಗಂಬವಾಗುತ್ತದೆ. ಆಗ ಕಾಯಕ ಸಾರ್ಥಕವಾಗುತ್ತದೆ. ಅಂತೆಯೇ ಶಿವಶರಣ ಶಿವಶರಣೆಯರು ಕಾಯಕದಿಂದ ಕೈಲಾಸ ಕಂಡರು. ಪರಿಶುದ್ಧ ನಡೆನುಡಿಯಿಂದ ದೇವರನ್ನು ಕಂಡರು. ಕಾಯಕದಿಂದಲೇ ಜೀವನ್ಮುಕ್ತಿ ಎಂದು ತಮ್ಮ ಅಮರವಾಣಿಯಿಂದ ತಿಳಿಸಿದರಲ್ಲದೆ ಸತ್ ಚಿತ್ ಆನಂದವನ್ನು ಪಡೆದು ಕಾಯಕದ ಮಹತ್ವವನ್ನು ತೋರಿಸಿದರು.

ಕಾಯಕ ಅನೇಕ ಪ್ರಕಾರದ್ದಾಗಿದೆ. ಒಬ್ಬೊಬ್ಬರಿಗೆ ಒಂದೊಂದು ಕಾಯಕ. ಎಲ್ಲರೂ ಕಾಯಕವನ್ನು ಮಾಡುತ್ತ ನಡೆದರೆ ನಾಡಿನಲ್ಲಿ ಬಡತನದ ಪ್ರಶ್ನೆಯೇ ಉದ್ಭವಿಸಲಾರದು. ಮತ್ತು ರಾಷ್ಟ್ರದಲ್ಲಿ ಆರ್ಥಿಕ ಭದ್ರತೆ ತನ್ನಿಂದ ತಾನೇ ನೆರೆಗೊಳ್ಳುವುದು. ದುಡಿಯದವನಿಗೆ ಉಣ್ಣುವ ಹಕ್ಕಿಲ್ಲ. ಇದನ್ನೇ ಏಸುಕ್ರಿಸ್ತ "Eat they bread by the sweet of thy brow" ಬೆವರು ಸುರಿಸಿ ನಿಮ್ಮ ಅನ್ನವನ್ನು ಸಂಪಾದಿಸಿರಿ ಎಂದು ಬೋಧನೆಯಾಗಿ ಬೈಬಲ್ಲಿನಲ್ಲಿ ಹೇಳಿದ್ದಾನೆ.

ಕಾಯಕವು ಆಯುಷ್ಯ, ಆರೋಗ್ಯವನ್ನು ಅಭಿವೃದ್ಧಿಗೊಳಿಸಲು ಪರಮ ಸಾಧನವಾಗಿದೆ. ನಿರಸ ಜೀವನಕ್ಕೆ ರಸವನ್ನು ನೀಡುತ್ತದೆ. ಬುದ್ಧಿ ಶಕ್ತಿಯನ್ನಿತ್ತು ಚಿತ್ತವನ್ನು ಸ್ಥಿರಗೊಳಿಸುತ್ತದೆ. ಕಾಯಕವಿಲ್ಲದ ಜ್ಞಾನ ನಿರರ್ಥಕ. ಹಾಗು

ಹಾಳಾಗುವದಲ್ಲದೆ ತಾಳ್ಮೆ ಕಡಿಮೆಯಾಗಿ ಜೀವನವೆಲ್ಲವೂ ಕೆಸರಿನಲ್ಲಿ ಬಿದ್ದ ಪಶುವಿನಂತೆ ಅನರ್ಥಕ್ಕೀಡಾಗುತ್ತದೆ. ಅದಕ್ಕಾಗಿಯೇ ಕ್ರಿಯಾಶಕ್ತಿ ಹೊರಹೊಮ್ಮಿದರೆ ನವಚೈತನ್ಯವುಂಟಾಗಿ ಸ್ಫೂರ್ತಿ ದೊರೆಯುತ್ತದೆ. ಶರಣರ ನುಡಿ ಗಡಣದಲ್ಲಿ ಕಾಯಕವೇ ಕ್ರಿಯೆಯಾಗಿದೆ.

"ಕ್ರಿಯಾ ಮಥನವಿಲ್ಲದೆ ಕಾಣಬಂದುದೇ ಇಕ್ಷುವಿನೊಳಗಣ ಮಧುರ ಕ್ರಿಯಾ ಮಥನವಿಲ್ಲದೆ ಕಾಣಬಂದುದೇ ತಿಲದೊಳಗಣ ತೈಲ? ಕ್ರಿಯಾ ಮಥನವಿಲ್ಲದೆ ಕಾಣಬಂದುದೇ ಕಾಷ್ಠದೊಳಗಣ ಅಗ್ನಿ? ಎಂದು ಮುಂತಾಗಿ ಅಲ್ಲಮಪ್ರಭುದೇವರು ಸತ್ಕ್ರಿಯಾಚರಣೆಯ ಮಹಿಮೆಯನ್ನು ಅರುಹಿದ್ದಾರೆ. ಕ್ರಿಯೆಯಿಲ್ಲದ ಜ್ಞಾನವು ನಿಷ್ಪ್ರಯೋಜಕವೆಂದು ತಿಳಿಸಿದ್ದಾರೆ. ಜ್ಞಾನದಲ್ಲಿ ಬಲ್ಲಿದರೆಂಬ ಭಾವನೆ ಬಲಿತಿದ್ದರ ಪರಿಣಾಮವೆ ಕ್ರಿಯಾಜ್ಞಾನಗಳ ಸಾಮರಸ್ಯ. ಒಂದಿಲ್ಲದಿದ್ದರೆ ಒಂದಾಗದು. ಜ್ಞಾನವಿಲ್ಲದ ಕ್ರಿಯೆ ಜಡವು, ಕ್ರಿಯೆಯಿಲ್ಲದ ಜ್ಞಾನ ಭ್ರಾಂತು ಪ್ರಾಣವಿಲ್ಲದ ದೇಹವಿದ್ದಂತೆ.

"ಗುರುವಾದಡೂ ಕಾಯಕದಿಂದಲೇ ಜೀವನ್ಮುಕ್ತಿ, ಲಿಂಗವಾದಡೂ ಕಾಯಕದಿಂದಲೇ ವೇಷದ ಪಾಶವು ಹರಿವುದು. ಇದು ಚನ್ನಬಸವಣ್ಣಪ್ರಿಯ ಚಂದೇಶ್ವರಲಿಂಗದ ಅರಿವು" ಎಂದು ಮುಂತಾಗಿ ಶಿವಶರಣರು ಕಾಯಕದಿಂದಲೇ ವೇಷದ ಪಾಶ, ಶಿಲೆಯ ಕುಲ ಹರಿಯುವದೆಂದು ಎಚ್ಚರಿಸಿದ್ದಾರೆ.

ಕಾಯಕ ಅದೊಂದು ಪ್ರಾಯೋಗಿಕ ತಪಸ್ಸು. ಈ ತಪಸ್ಸಿನಲ್ಲಿ ಮಿಂದವರಿಗೆ ಮುಮ್ಮಲಗಳು ದೂರಾಗಿ, ಕಾಯ ಕೇವಲ ನಶಿಸಿ ತನು ಮನಗಳು ಮಂಗಳಕರವಾಗುತ್ತವೆ. ಅಂಗವೆಂಬ ಭೂಮಿಯಲ್ಲಿ ಲಿಂಗವೆಂಬ ಬೆಳೆಯಾಗುತ್ತದೆ. ಇಂತಹ ಪಾರಮಾರ್ಥಿಕಕೃಷಿಕಾಯಕದಿಂದ ಅವಗುಣಗಳೆಂಬ ಕಸಕಡ್ಡಿಗಳು ಕಿತ್ತುತ್ತವೆ. ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳೆಂಬ ಕಾಡು ಪ್ರಾಣಿಗಳು ಓಡುತ್ತವೆ. ಶಮೆ ವಿವೇಕಾತ್ಮ ಪಕ್ಷಿಗಳು ಕೂಡುತ್ತವೆ. ಕಾಯಕದಲ್ಲಿ ಕಾರ್ಯ ಗೌರವ ತತ್ತ್ವ (Dignity of labour) ಬೆಸೆದುಕೊಂಡಿದೆ. ಗೀತೆಯಲ್ಲಿಯೂ ಸಹ "ಯೋಗಃ ಕರ್ಮಸು ಕೌಶಲಂ" ಇದೇ ಭಾವನೆ ವ್ಯಕ್ತವಾಗಿದೆ. ಈ ತೆರನಾಗಿ ನಿಜಾನುಭವದ ಕಾಯಕ ಮಾಡುವವರಿಗೆ ಕೈಲಾಸ ಹತ್ತಿರವಿರುತ್ತದೆ. ಇಂತಹ ಕಾಯಕದಿಂದ ಬಂದುದೇ ದೇವರಿಗೆ ಹಾಗೂ ಸಾಮಾಜಿಕ ಕಾರ್ಯಕ್ಕೆ ಅರ್ಪಿತವಾಗುತ್ತದೆ. ಅವರಿಗೆ ಕಾಯಕವೇ ಸದ್ಗುಣಗಳ ಕವಚವಾಗುತ್ತದೆ.

ಆಗ ಕಾಯಕವೇ ಕೈಲಾಸವಾಗುತ್ತದೆ.

ಧಾರವಾಡ "ಆಕಾಶವಾಣಿ" ಕೃಪೆಯಿಂದ

ವಿನಮ್ರತೆ

(Humility)

ವಿನಮ್ರತೆ ಸತ್ಯತೆಯ ಕುರುಹು. ಬಾಳ್ವಿಕೆಗೆ ಅರುಹು. ಜೀವನದ ಪೌಷ್ಟಿಕಾಹಾರ. ಸರ್ವಧರ್ಮಗಳ ಸಾರ. "ಬಿದಿರಿದವರ ಮುಕ್ತಿ" ಇದು ಬಸವಣ್ಣನವರ ನುಡಿ. ಬಿದಿರಿನಂತೆ ಬಾಗಿಕೊಂಡಿರದವರ ಮೇಲೆ ಪರಮಾತ್ಮನ ಒಲುಮೆಯಾಗುವದಿಲ್ಲ. ಅಂದರೆ ಬಾಳಿನಲ್ಲಿ ವಿನಯಶೀಲರಾಗಿ ನಡೆಯುವವರ ಮೇಲೆ ದೇವರ ಪ್ರೀತಿ ಹೆಚ್ಚಿರುತ್ತದೆ. ಇದಕ್ಕೆಲ್ಲ ಬಸವಣ್ಣನವರು ಬೇರೊಂದೆಡೆ, ಮೃದು ವಚನಂಗಳೇ ಸಕಲ ಜಪಂಗಳಯ್ಯ ಮೃದು ವಚನವೇ ಸಕಲ ತಪಂಗಳಯ್ಯ ಸದುವಿನಯವೇ ಸದಾಶಿವನ ಒಲುಮೆಯಯ್ಯಾ ಎಂದು ಸ್ಪಷ್ಟೀಕರಿಸಿದ್ದಾರೆ. ಬಾಗಿ ಬೆಳೆದ ಗೊನೆ ಬಾಳೆಯಂತೆ ಬಾಗಿಕೊಂಡಿದ್ದರೆ ಬೇಡಿದ ಪದವಿಯನೀವ ನಮ್ಮ ಕೂಡಲಸಂಗಮದೇವಾ ಎಂದು ನುಡಿದು ವಿನಯಶೀಲತೆಯ ಫಲಿತಾಂಶವನ್ನು ಸಾರಿದ್ದಾರೆ. ವಿನಯವು ಪರಸ್ಪರರಲ್ಲಿ ಪ್ರೇಮ ಹುಟ್ಟಿಸುತ್ತದೆ. ಭಾವೈಕ್ಯವನ್ನು ನೀಡುತ್ತದೆ. ದ್ವೇಷಾಸೂಯೆಗಳನ್ನು ನಿವಾರಣೆಮಾಡುತ್ತದೆ. ಸುಂದರ ಜೀವನವನ್ನು ರೂಪಿಸುತ್ತದೆ. ಮಾನವನನ್ನಾಗಿ ಮಾಡುತ್ತದೆ. ವಿನಯವಿಲ್ಲದ ವಿದ್ಯೆ ರಸವಿಲ್ಲದ ಹಣ್ಣಿನಂತೆ, ಕಾಲಿಲ್ಲದ ಹೆಳವನಂತೆ, ಪುಷ್ಪಗಳಿಲ್ಲದ ಹೂದೋಟದಂತೆ ಶೋಭಿಸದು. ವಿದ್ಯಾವಂತರಿಗೆ ವಿನಯವೇ ಅಲಂಕಾರ ಅಂಗಕ್ಕೆ ವಸ್ತ್ರಗಳನ್ನು ಧರಿಸಿದಂತೆ. ವಿನಯವಿಲ್ಲದವನ ವಿದ್ಯೆಗೆ ಸಮಾಜದಲ್ಲಿ ಅಷ್ಟು ಬೆಲೆಯಿಲ್ಲ, ಬಲವಿಲ್ಲ ಮತ್ತು ನೆಲೆಯಿಲ್ಲ. ಅಹಂಕಾರಿಯಾದ ವಿದ್ಯಾವಂತನು ಅಸಂಸ್ಕೃತನೇ ಸರಿ. ಅವನಿಗೆ ಅಶಿಕ್ಷಿತನೆಂದು ಕರೆದರೂ ಒಳಿತಾದೀತು. ಕಲಿತಷ್ಟು ವಿದ್ಯೆ ಪರಿಪೂರ್ಣವಾಗಿ ಅರ್ಥೈಸಿಕೊಂಡಿರುವದಕ್ಕೆ ವಿನಯವು ಜೋಡಾದುದೇ ಸಾಕ್ಷಿ. ನಮ್ರತೆ ಬೆಳೆದಷ್ಟು ಸಂಕಲ್ಪಸಿದ್ಧಿಯಾದೀತು. ಸತ್ಯ ಸಂಶೋಧನೆ ಬೆಳೆದೀತು. ಅಹಂಕಾರ, ಮಮಕಾರಗಳನ್ನಳಿಯಲು ವಿನಯ ಶೀಲತೆಯೇ ಪರಮ ಸಾಧನ. ಎನಗಿಂತ ಕಿರಿಯರಿಲ್ಲ ಎಂಬುದನ್ನು ಅನುಷ್ಠಾನಕ್ಕೆ ತರುತ್ತಾ ಹೋದಲ್ಲಿ ಸ್ವರ್ಗಲೋಕವನ್ನು ಮರ್ತ್ಯಲೋಕದಲ್ಲಿಯೇ ಕಾಣಬಹುದು. ವಿನಯ ಗುಣದ ಸಾಧನೆ ಬೆಳೆಯುತ್ತ ಹೋದಂತೆ ವ್ಯಕ್ತಿತ್ವ ವಿಕಾಸವಾಗುತ್ತ ಹೋಗುವದು. ವಿನಯವಿಲ್ಲದ ಜೀವನ ಹಾಳೂರ ದೇಗುಲದಂತೆ ವ್ಯರ್ಥವಾಗುವದು. ಆತ್ಮಶ್ರೀ ಗಳಿಸಲು ವಿನಯವೇ ಅಡಿಗಲ್ಲು. ಅಹಂಕಾರ, ಮಮಕಾರದಿಂದ ವಿಕೃತಿ ಹೆಚ್ಚಿದರೆ ವಿನಯದಿಂದ ಸುಕೃತಿ ಹೆಚ್ಚುತ್ತದೆ. ಸತ್ಕೀರ್ತಿ ಬೆಳೆಯುತ್ತದೆ. ಪ್ರಕೃತಿ ಸೌಂದರ್ಯ ಪ್ರಾಪ್ತವಾಗುತ್ತದೆ.

ಪೂರ್ಣತೆಯು ವೈಗೂಡಿ ಬರುತ್ತದೆ. ದೊಡ್ಡವರಾದವರೆಲ್ಲರ ಜೀವನವನ್ನು ನಿರುಕಿಸಿದರೆ ಅವರಲ್ಲಿ ವಿನಯುವು ಮಧ್ಯಮಣಿಯಂತೆ ಪರಿಶೋಭಿಸುತ್ತದೆ. ಅವರ ವಿನಮ್ರತೆಯೇ ಜನಸೇವೆಯತ್ತ, ಲೋಕಸಂಗ್ರಹ ಕಾರ್ಯದತ್ತ ಕರೆದೊಯ್ಯುತ್ತದೆ. ಅಂತೆಯೇ ಅವರು ಆಳಿನ ಆಳಾಗಿ ದುಡಿದು ಶರೀರವನ್ನು ಗಂಧದಂತೆ ತೇಯ್ದು ಲೋಕೋದ್ಧಾರ ಮಾಡುತ್ತಾರೆ. ಒಂದೆಡೆ ಮಹಾತ್ಮಾಗಾಂಧಿಯವರು–ನಮ್ರತೆಯು ಬುದ್ಧಿಮತ್ತೆಗಿಂತ ಶ್ರೇಷ್ಠವಾದುದು ಮತ್ತು ಮಾನವರಿಗಿರಬೇಕಾದ ಸಹಜ ಗುಣ. ಆದರೆ ಅದನ್ನು ಹೇಡಿತನವೆಂದು ಭ್ರಮಿಸುವಷ್ಟು ಕೀಳುಮಟ್ಟಕ್ಕಿಳಿಯಬಾರದೆಂದು ತಿಳಿಸಿ ಎಚ್ಚರಿಸಿದ್ದಾರೆ. ಪಾವಿತ್ರ್ಯವಿಲ್ಲದ ಅತಿವಿನಯುವೂ ಸಹ ಒಮ್ಮೊಮ್ಮೆ ದುಃಖಕ್ಕೀಡು ಮಾಡುತ್ತದೆ. ಅಂತಹ ಕೃತ್ರಿಮ ವಿನಯದಿಂದ ಸಹಜತೆಗೆ ಕೊಡಲಿ ಏಟು ಕೊಟ್ಟಂತಾಗುವದು. ವಿನಯುವು ಕೃತ್ರಿಮತೆಗೆಳಿದರೆ ಅಸಹ್ಯವಾದಂತಾಗಿ ಲೌಕಿಕ ಪಾರಮಾರ್ಥಿಕಗಳೆರಡಕ್ಕೂ ನಿಷ್ಪ್ರಯೋಜನವಾಗುವದು. ಸಕಲ ಸದ್ಗುಣಗಳ ತಳಹದಿಯಾದ ವಿನಯುವನ್ನು ಮೈಗೂಡಿಸಿಕೊಂಡಷ್ಟು ಆನಂದ ಮತ್ತಾವ ಸಾಧನೆಯಿಂದಲೂ ಸಾಧಿಸದು. ಕಲ್ಯಾಣ ಸಾಧನೆಗೆ ವಿನಯವೇ ಕಿರಣ ಪ್ರಕಾಶ. ಮಾನವನ ಅಂತರಂಗ ಬಹಿರಂಗ ಶುದ್ಧೀಕರಿಸಲು ಇದೊಂದು ದೊಡ್ಡ ಸಾಧನ. ಇಂತಹ ತಳಹದಿಯ ಮೇಲೆ ಪ್ರಗತಿಪರ ಜೀವನದ ಕಟ್ಟಡವನ್ನು ಕಟ್ಟಿದರೆ ಸಾರ್ಥಕ. ಇಲ್ಲದಿದ್ದರೆ ಕಾಳಿಲ್ಲದ ಚೀಲದಂತೆ, ನೀರಿಲ್ಲದ ಕೆರೆಯಂತೆ, ತಾಳಿಲ್ಲದ ಬಾಳಿನಂತೆ ನಿರರ್ಥಕ. ವಿನಯಶ್ರೀಗೆ ಭಾವ ಬಂಧುರತೆಯೇ ಹೆಗ್ಗುರುತು. ನೈತಿಕ ಬಲ, ಆತ್ಮ ವಿಶ್ವಾಸ, ಮನೋ ಧೈರ್ಯ ಇವುಗಳೇ ಕಾರುಣ್ಯ ಕಂಗಳಲ್ಲಿ ಕಾಣುವ ಹೊಂಜೆಳಗು, ಭಾವದ ನಿಬ್ಬೆರಗು. ಇಂತಾದಾಗ ವಿನಯವೇ ಸಂಸ್ಕೃತಿ, ಸಂಸ್ಕೃತಿಯೇ ವಿನಯವಾಗಿ ಪರಿಣಮಿಸುತ್ತದೆ.

ಧಾರವಾಡ "ಆಕಾಶವಾಣಿ" ಕೃಪೆಯಿಂದ.

ಭಾವೈಕ್ಯ

(Emotional Integration)

ಭಾವೈಕ್ಯ ಅಂದರೆ ಭಾವಗಳ ಸುಮಧುರ ಬಾಂಧವ್ಯ. ಭಾವಭಾವಗಳು ಒಂದರೊಡನೆ ಒಂದು ಹೊಂದಿಕೊಂಡಿರಬೇಕು. ಭಾವಗಳಲ್ಲಿ ನೂತನ ಚೈತನ್ಯ ತುಂಬಿಕೊಂಡಿರಬೇಕು. ಸಾಮರಸ್ಯಕ್ಕೆ ಸಹಕಾರಿಯಾಗಿರಬೇಕು. ಧಾರ್ಮಿಕತೆ ಹಾಸು ಹೊಕ್ಕಾಗಿರಬೇಕು. ಮಾರ್ದವತೆ ತುಂಬಿರಬೇಕು. ವಿಶಾಲ ಮನೋಭಾವನೆ, ಪರಸ್ಪರ ಪ್ರೇಮ, ಸಹಜತೆಯಲ್ಲಿ ಕೂಡಿಕೊಂಡಿರಬೇಕು. ರಾಷ್ಟ್ರೋತ್ಥಾನಕ್ಕೆ ಕಾರಣವಾಗಿರಬೇಕು. Unity in diversity ಅಂದರೆ ವಿವಿಧತೆಯಲ್ಲಿ ಏಕತ್ವ ಕಾಣಬೇಕು. ಆಗ ಅದು ಭಾವೈಕ್ಯ. ಭಾವಜೀವಿಯಾಗಿ ಏಕತ್ವ ಪಡೆಯದೆ ವ್ಯಕ್ತಿಗೆ ಶಕ್ತಿ ಬರಲು ಅಸಾಧ್ಯ, ರಾಷ್ಟ್ರ ಪ್ರಗತಿಯೂ ಕಂಟಕ. ಇಂದು ಭಾವೈಕ್ಯದ ಅಭಾವದಿಂದಾಗಿ ಪ್ರಪಂಚದ ತುಂಬೆಲ್ಲ ಒಂದಿಲ್ಲೊಂದು ಅನಾಹುತ ತಲೆದೋರಿ ಅನೇಕಾನೇಕ ಕಷ್ಟಪರಂಪರೆಗೆ ಗುರಿಯಾಗುತ್ತಿದ್ದೇವೆ. ಭಾವೈಕ್ಯಕ್ಕಾಗಿ ಧರ್ಮ ಧುರೀಣರು, ರಾಷ್ಟ್ರದ ಮುಖಂಡರು ಪರಿಶ್ರಮಿಸುತ್ತಿದ್ದಾರೆ. ರಾಷ್ಟ್ರದ ಸಮಸ್ಯೆ ಪರಿಹಾರ ಮಾಡುವಲ್ಲಿ ಸಮಾಜದ ಭದ್ರತೆ ಕಾಪಾಡಿಕೊಂಡು ಹೋಗುವಲ್ಲಿ ಜನತೆಯಲ್ಲಿ ಏಕತೆ ಸದಾ ಸ್ಥಿರವಾಗುಳಿಯುವಲ್ಲಿ ಭಾರತೀಯರೆಲ್ಲರ ಭಾವಗಳು ಅರಳಿ ಗಮಗಮಿಸಬೇಕು. ರಾಷ್ಟ್ರೀಯತೆಯತ್ತ ಹೊರಳಿ ಏಕಾಗಬೇಕು. ಅಂದರೆ ಭಾರತೀಯರೆಲ್ಲರ ಸಮಯೋಚಿತ ಸಮಗ್ರ ಸ್ಫೂರ್ತಿಯಲ್ಲಿ ಭಾರತದ ಸಮಗ್ರ ಕೀರ್ತಿ ಪ್ರತಿಫಲಿಸಬೇಕು. ಸೌಹಾರ್ದತೆಯು ಕೃತ್ರಿಮವಾಗದೆ ವಾಸ್ತವಿಕತೆಯೊಡಗೂಡಿದರೆ ಭಾವೈಕ್ಯದ ಬೆಳಕು ಕಂಡು ಬರುತ್ತದೆ. ಭಾವೈಕ್ಯ ಪದ ಹೊಸದಾದರೂ ಅದರಲ್ಲಿ ಅಡಗಿದ ಅರ್ಥ ಹಳೆಯದು. ಪ್ರಾಚೀನ ಪರಂಪರೆಯ ಋಷಿಪುಂಗವರು, ಹಿರಿಯರು ಭಾವೈಕ್ಯವನ್ನು ಉಳಿಸಿಕೊಂಡು ಹೋಗಲು ಅವರು ಹಮ್ಮಿಕೊಂಡಿದ್ದ ಹಬ್ಬ ಹುಣ್ಣಿಮೆಗಳಲ್ಲಿ, ಸಭೆ ಸಮಾರಂಭಗಳಲ್ಲಿ ಪರಿಶ್ರಮಿಸಿ ಮಸಕು ಮಸಕಾಗಿರುವ ಏಕರೂಪತೆಗೆ ಸಂಘಟನೆಯ ಶಕ್ತಿಯುಕ್ತ ಹೃದಯಗಳನ್ನು ಒಂದು ಮಾಡಿ ಒಡೆದ ಭಾವ ಕನ್ನಡಿಗಳನ್ನು ಒಂದುಗೂಡಿಸುತ್ತಿದ್ದರು. ಆ ಪರಂಪರೆ ನಮಗಿಂದು ದಾರಿದೀಪವಾಗಿದೆ. ಹಿರಿ ಹೊನಲಾಗಿ ಹರಿಯುತ್ತಿದೆ. ಸತ್ಯ ಹೃದಯದಿಂದ ಹೃದಯ ಬಾಗಿಲ ತೆರೆದರೆ ಅಲ್ಲಿ ಕಾಣುವುದು ಭಾವೈಕ್ಯ. ಭಾವೈಕ್ಯವ ಒಮ್ಮೊಮ್ಮೆ ಧರ್ಮಸಂಘಟನೆಯಲ್ಲಿ ಕಾಣಿಸಿದರೆ ರಾಷ್ಟ್ರೈಕ್ಯ ಹಾಗೂ ಆತ್ಮ ಪ್ರಗತಿ ಅಭಿವೃದ್ಧಿಯಾಗುತ್ತದೆ. ಒಂದೆಡೆ ಮಹಾತ್ಮಾ ಬಸವಣ್ಣನವರು ಭಾವೈಕ್ಯ ಇಲ್ಲದ

ಜೀವನ ಕಾಗೆ ಕೋಳಿಗಳಿಗಿಂತ ಕರಕಷ್ಟವೆಂದು ತಮ್ಮ ಅನುಭವವಾಣಿಯಲ್ಲಿ ಅರುಹಿದ್ದಾರೆ. "ಕಾಗೆ ಒಂದಗಳು ಕಂಡರೆ ಕರೆಯದೆ ತನ್ನ ಬಳಗವನು? ಕೋಳಿ ಯೊಂದು ಗುಟುಕು ಕಂಡರೆ ಕರೆಯದೇ ತನ್ನ ಕುಲವನೆಲ್ಲನನು? ಶಿವಭಕ್ತನಾಗಿ ಭಕ್ತಿ ಪಕ್ಷವಿಲ್ಲದಿದ್ದರೆ ಆ ಕಾಗೆ ಕೋಳಿಗಿಂತ ಕರಕಷ್ಟ ಕೂಡಲ ಸಂಗಮ ದೇವಾ."

ಭಾವಭೂಮಿಯ ಮೇಲೆ ಏಕತೆಯ ಕಾಳುಗಳನ್ನು ಬಿತ್ತಿ ಪ್ರೇಮವೆಂಬ ಸಿಹಿ ನೀರನ್ನು ಹಾಕಿ ಬೆಳೆದರೆ ರಾಷ್ಟ್ರದ ಶಕ್ತಿ ನೂರ್ಮಡಿ ಹೆಚ್ಚಾಗಿ ಪ್ರತಿಯೊಬ್ಬರ ಭಾವಕುಸುಮಗಳು ವಿಕಸನಗೊಂಡು ಸೌಗಂಧ ಬೀರಬಲ್ಲವು. ರಾಷ್ಟ್ರೀಯ ಭಾವನೆ ಗಳ ಬೆಳವಣಿಗೆಗೆ ಅಡ್ಡಗೋಡೆಯಾಗಿರುವ ಜಾತೀಯತೆಗಳ ತಿಕ್ಕಾಟ, ಭಾಷಾ ಸಮಸ್ಯೆಗಳ ಕಚ್ಚಾಟ, ನಾ ಹೆಚ್ಚು ನೀ ಹೆಚ್ಚೆನ್ನುವ ಹುಚ್ಚಾಟ ಇವೆಲ್ಲವುಗಳು ನಿವಾರಣೆಯಾಗಿ ಸೌಹಾರ್ದತೆಯು ಬೆಳೆದು ನಾವೆಲ್ಲರೂ ಭಾರತ ಮಾತೆಯ ಮಕ್ಕಳೆಂಬ ಭಾವನೆ ಬೇರೂರಿದರೆ ಭಾರತ ಮಾತೆಯು ನಮ್ಮೆಲ್ಲರನ್ನೂ ಮಮತೆ ಯಿಂದ ಎತ್ತಿಕೊಂಡು ಪೋಷಿಸುತ್ತಾಳೆ. ಅದಕ್ಕಾಗಿ ನಮಗಿಂದು ಭಾವೈಕ್ಯವು ನರನಾಡಿಯಲ್ಲಿ ಹರಿದು ಬರಬೇಕಾಗಿದೆ. ಒಂದೆಡೆ ಮಹಾತ್ಮಾ ಗಾಂಧಿಯವರು- "ನನಗೆ ಯಾವದೇ ಪ್ರತಿಷ್ಠೆಯ ಆಸೆಯಿಲ್ಲ. ಅದು ಓಲಗದಲ್ಲಿ ಬೇಕಾಗುವ ವಸ್ತು. ನಾನು ಹಿಂದೂಗಳ ಸೇವಕನಿರುವಂತೆ ಮುಸಲ್ಮಾನ, ಕ್ರಿಸ್ತ, ಪಾರಶಿ ಹಾಗೂ ಯಹೂದಿ ಬಾಂಧವರ ಸೇವಕನೂ ಇರುವೆ. ಸೇವಕನಿಗೆ ಬೇಕಾದುದು ಪ್ರೇಮ, ಪ್ರತಿಷ್ಠೆ ಅಲ್ಲ ನಾನು ಏಕನಿಷ್ಠ ಸೇವಕನಿರುವವರೆಗೆ ಆ ಪ್ರೇಮ ನನಗೆ ಕಟ್ಟಿಟ್ಟ ಗಂಟಿನಂತೆ. ನನ್ನ ಜೀವನವೆಂದರೆ ಒಂದು ಅವಿಭಾಜ್ಯವಾದ ಪ್ರವಾಹ. ನನ್ನ ವಿವಿಧ ಚಟುವಟಿಕೆಗಳು ಹಾಸುಹೊಕ್ಕಿನಂತೆ ಹೊಂದಿಕೊಂಡಿರುವವು. ಮಾನವ ಕುಲದ ಅಪಾರ ಪ್ರೇಮವೇ, ಭಾವೈಕ್ಯವೇ ನನ್ನ ವಿವಿಧ ಕಾರ್ಯಕಲಾಪಗಳ ಮೂಲ ವೆಂದು ಪ್ರತಿಯೊಬ್ಬರ ಹೃದಯ ಮುಟ್ಟುವಂತೆ ತಮ್ಮ ಅನುಭವವನ್ನು ವಿವರಿಸಿ ದ್ದಾರೆ. ಜೀವ ಸಮಸ್ತದೊಂದಿಗೆ ಅನನ್ಯತೆಯನ್ನು ಸಾಧಿಸಲು ಕರೆ ನೀಡಿದ್ದಾರೆ. ಭಾರತದ ವೈಭವವನ್ನು ಹೆಚ್ಚಿಸಲು ಅನೇಕ ಪಕ್ಷ ಪಂಗಡಗಳೆಂಬ ಕಸಸನ್ನು ಕಿತ್ತಿ ಭಾವೈಕ್ಯದ ಮಹಾ ವೃಕ್ಷವನ್ನು ಪೋಷಿಸಿ ಬೆಳಸಿ ಭಾರತ ಮಾತೆಯ ಕೃಪೆಗೆ ಪಾತ್ರ ರಾಗೋಣ. ಮುತ್ತಿದ ಕತ್ತಲೆಯನ್ನು ಸರಿಸಿ ಬಾಳ್ಬೆಳಕಿಗೆ ದಾರಿ ಮಾಡಿಕೊಳ್ಳೋಣ.

ಧಾರವಾಡ "ಆಕಾಶವಾಣಿ" ಕೃಪೆಯಿಂದ.

ಹರಿಜನೋದ್ಧಾರ

ಹರಿಜನೋದ್ಧಾರವು ಭಾರತದ ಪ್ರಗತಿಗೆ ಮಹಾಸಾಧನ. ಹರಿಜನೋದ್ಧಾರದಿಂದ ವ್ಯಕ್ತಿಗತ ಅಂತಸ್ಸತ್ವ ವಿಕಾಸಿತಗೊಂಡು, ಮೇಲು ಕೀಳು ದೂರಾಗಿ, ಭಾವೈಕ್ಯವುಂಟಾಗಲು ಮೂಲ ಕಾರಣವಾಗುವದು. ಭಾವನೆ ಉದಾರವಾದರೆ, ಪ್ರೇಮವು ತನ್ನಿಂದ ತಾನೇ ಉದ್ಭವಿಸುವುದು: ಮುಟ್ಟಬೇಕು ಮುಟ್ಟಬಾರದು ಈ ಸಮಸ್ಯೆ ಪರಿಹಾರವಾಗಲು ಎಲ್ಲರೊಡನೆ ಪ್ರೇಮದಿಂದ ವರ್ತಿಸಿದರೆ ಸಾಧ್ಯ. ಪವಿತ್ರವಾದ ವಸ್ತು ಅಪವಿತ್ರವಾದದ್ದನ್ನು ಮುಟ್ಟಿದರೆ, ತನ್ನ ಪವಿತ್ರತೆಯನ್ನು ಎಂದಿಗೂ ಕಳೆದುಕೊಳ್ಳಲಾರದು. ಸಂಸ್ಕೃತಿಯ ಗಂಧವಿಲ್ಲದ ಹರಿಜನರು, ಅವನತಿಯ ಕಂದಕದಲ್ಲಿ ಬಿದ್ದು ತೊಳಲುತ್ತಿರುವಾಗ, ಸಂಸ್ಕೃತಿಯ ಸಿಹಿ ನೀರನ್ನೆರೆದು ಮೇಲಕ್ಕೆತ್ತಿದರೆ ಅವರ ಜೀವನವು ಸುಧಾರಿಸುವುದಲ್ಲದೆ ಹಿಂದೂ ಸಮಾಜದ ಮೇಲ್ಮೆಯನ್ನು ತೋರಿಸಿದಂತಾಗುವದು. ಹಿಂದೂ ಸಮಾಜದ ಉನ್ನತಿಗೆ ದಾರಿಯಾಗುವದು. ಹಿಂದುಳಿದವರನ್ನು ಎಲ್ಲಿಯವರೆಗೆ ತಮ್ಮಂತೆ ಬಗೆಯುವದಿಲ್ಲವೋ ಅಲ್ಲಿಯವರೆಗೆ ಹಿಂದೂ ಸಮಾಜದ ಸಂಘಟನೆ ಕಂಟಕವುಂಟಾಗುವುದು; ಭಾವೈಕ್ಯ ಕನಸಾಗುವದು. ಜಾತೀಯತೆಯ ಪೆಡಂಭೂತವೇ ಹಿಂದೂ ಧರ್ಮದ ಬೆಳವಣಿಗೆಗೆ ಅಡ್ಡ ಗೋಡೆಯಾಗಿದೆ. ನಾ ಹೆಚ್ಚು ನೀ ಹೆಚ್ಚು ಎನ್ನುವ ಈ ಬಣವಾದವು ಹಿಂದೂ ಸಮಾಜವನ್ನು ಹಿಂಡಿ ಹಿಪ್ಪೆಮಾಡುತ್ತಲಿದೆ. ಹಿಂದುಳಿದವರು ಮುಂದುವರೆಯಲು ಬಂಧನಕಾರಿಯಾಗಿದೆ. ಇದರಿಂದ ಹಿಂದೂ ಸಮಾಜದ ಶಕ್ತಿಯು ಕ್ಷೀಣವಾಗಿ ರಕ್ತವಿಲ್ಲದ ಶರೀರದಂತಾಗಿದೆ. ಹಿಂದುಳಿದವರಾರೆಂಬುದನ್ನು ತಿಳಿದುಕೊಳ್ಳಲು ಒಮ್ಮೊಮ್ಮೆ ಕಷ್ಟ ಸಾಧ್ಯವಾದಂತಾಗಿದೆ. ಮಹಾತ್ಮಾ ಬಸವಣ್ಣನವರ ದೃಷ್ಟಿಯಲ್ಲಿ "ಅಸ್ಪೃಶ್ಯ" ವ್ಯಾಖ್ಯೆಯನ್ನು ವಿವರಿಸಿದರೆ ಮತ್ತಿಷ್ಟು ಅರ್ಥವಾದೀತು. "ಕೊಲ್ಲುವನೇ ಮಾದಿಗ, ಹೊಲಸು ತಿಂಬುವನೇ ಹೊಲೆಯ, ಕುಲವೇನೋ ಆವದಿರ ಕುಲವೇನೋ ನಮ್ಮ ಕೂಡಲ ಸಂಗನ ಶರಣರೆ ಕುಲಜರು" ಎಂದುದಾಗಿ ಕುಲಕ್ಕಿಂತಲೂ, ಗುಣಕ್ಕೆ ಹೆಚ್ಚು ಮಹತ್ವ ನೀಡಿದ್ದಾರೆ. ಸದಾಚಾರ, ನೀತಿ-ನಿಯಮ ಇವುಗಳೇ ಕುಲಜನ ಲಕ್ಷಣಗಳು. ಅನಾಚಾರ, ಅತ್ಯಾಚಾರ, ಹಿಂಸೆಗಳೇ ಅಸ್ಪೃಶ್ಯತೆ. ಇದೀಗ ಮೊದಲು ಅಸ್ಪೃಶ್ಯತೆಯ ಅರ್ಥವನ್ನು ಅರಿತುಕೊಂಡು ಹರಿಜನೋದ್ಧಾರದ ಕಡೆಗೆ ಗಮನವೀಯುವದು ಸಾಮಾಜಿಕೈಕ್ಯತೆಯ ದೃಷ್ಟಿಯಿಂದ ಹಿತಕರ ಜನತೆಯಲ್ಲಿ ಭಾವೈಕ್ಯತೆಯನ್ನು ಸಾಧಿಸುವದು ಮುಖ್ಯವೆನಿಸಿದರೂ, ಜಾತಿ ಜಾತಿಗಳಲ್ಲಿರುವ ಸಂಕುಚಿತ ಸಂಕೋಲೆ ಮುರಿದಾಗ ಹರಿಜನೋದ್ಧಾರವನ್ನು ಮಾಡಲು ಅನುಕೂಲವಾಗುವದು. ವಿಚಾರಕ್ರಾಂತಿ ವಿಶಾಲವಾಗಿದೆಯಾದರೂ ಸಹ, ಕ್ರಾಂತಿಯಾತ್ರೆ

ಕೃತಿಯಿಲ್ಲ, ಒಳಗೆ ಶಾಂತಿಯಿಲ್ಲ, ಸಹಜತೆ ಇಲ್ಲ. ಕೃತ್ರಿಮತೆಯು ಸುತ್ತೆಲ್ಲ ತಾಂಡವಾಡುತ್ತಲಿದೆ; ಅದು ನಿವಾರಣೆಯಾಗಲು ಜಾತೀಯತೆಯ ವೈಷಮ್ಯ ತೊಲಗಿ, ಪರಸ್ಪರರಲ್ಲಿ ಪ್ರೇಮಭಾವನೆ ಉಂಟಾದರೆ ಸಾಧ್ಯ. ಇಲ್ಲವಾದರೆ ಹಿಂದೂ ಸಮಾಜದ ಮಹಾವೃಕ್ಷದ ಶಾಖೋಪಶಾಖೆಗಳು ಮುರಿದು ಛಿನ್ನವಿಚ್ಛಿನ್ನವಾದರೆ ಹಿಂದೂ ಸಮಾಜ ವೃಕ್ಷಕ್ಕೆ ಧಕ್ಕೆಯುಂಟಾಗುವದಲ್ಲದೆ, ಹಿಂದೂ ಸಂಸ್ಕೃತಿಯೆ ಅಳಿಯುತ್ತದೆ. ಹಿಂದುಳಿದವರೆನ್ನುವವರಲ್ಲಿ ವಿಚಾರವು ಒದಲಾಗಿ ಹಿಂದೂ ಸಮಾಜದಿಂದ ದೂರ ಸರಿದು ಹೋಗುವ ಸಂಭವವೂ ಬರಬಹುದು: ಈಗಾಗಲೇ ಅನೇಕ ಹರಿಜನರು ಬೇರೆ ಧರ್ಮವನ್ನು ಸೇರಿಲ್ಲವೆ? ಅದಕ್ಕಾಗಿ ಹರಿಜನೋದ್ಧಾರ ಅತ್ಯವಶ್ಯ ಬೇಕಾಗಿದೆ. ನೀತಿ, ಸಹಶಿಕ್ಷಣ, ಸಂಸ್ಕೃತಿ ಇವೆಲ್ಲವುಗಳನ್ನು ಹರಿಜನರ ಹೃದಯ ಭೂಮಿಯಲ್ಲಿ ಬಿತ್ತಿದರೆ; ಅವರ ಜನ್ಮ ಸಾರ್ಥಕವಾಗುವದಲ್ಲದೆ, ಅವರು ತಮ್ಮ ಬಾಳನ್ನು ಪವಿತ್ರವನ್ನಾಗಿ ಮಾಡಿಕೊಳ್ಳುವರು. ಅದಕ್ಕಾಗಿ ಮಹಾತ್ಮಾ ಗಾಂಧಿಯವರು ಅಹೋರಾತ್ರಿ ಪರಿಶ್ರಮಿಸಿದರು. ಹರಿಜನರ ಹಿತಚಿಂತನೆಯನ್ನು ಮಾಡಿ ಬಹುದಿನದಿಂದ ಹಿಂದೂ ಧರ್ಮಕ್ಕೆ ಅಂಟಿಕೊಂಡಿದ್ದ ಅಳಿಸಲಾರದ ಕಲಂಕವನ್ನು ನಿವಾರಣೆ ಮಾಡಲು ಪ್ರಯತ್ನಿಸಿದರು. ಅಸ್ಪೃಶ್ಯತೆಯೆಂಬ ಭೂತವನ್ನು ಬಿಡಿಸಿ, ಅವರ ಹೀನ ದೀನ ಸ್ಥಿತಿಗಳನ್ನು ಸುಧಾರಿಸಿದರು. ಹರಿಜನೋದ್ಧಾರಕ್ಕಾಗಿ ಮಹಾತ್ಮಾ ಗಾಂಧಿಯವರು ಉಪವಾಸವನ್ನೂ ಮಾಡಿದರಲ್ಲದೆ, ಸೆರೆಮನೆಯನ್ನು ಸಹ ಸೇರಿದರು. ಮಹಾತ್ಮಾ ಗಾಂಧಿಯವರ ತಪಸ್ಸು, ಸಾಹಸಗಳ ಫಲವಾಗಿ ಇಂದು ಹರಿಜನರು ಅನೇಕ ಸಾಮಾಜಿಕ-ಶೈಕ್ಷಣಿಕ ಕಾರ್ಯಕ್ಷೇತ್ರದಲ್ಲಿ ಮುಂದುವರಿಯುತ್ತಿದ್ದಾರೆ. ಮುಂದುವರಿಯುತ್ತಿರುವ ಹಿಂದುಳಿದವರಲ್ಲಿ, ಮುಂದುವರಿದ ಜನಾಂಗದವರೊಡನೆ ಅಸಹಕಾರ, ಅಹಂಕಾರ ತಲೆದೋರಿದರೂ ಸಹ ಹಿಂದೂ ಸಮಾಜಕ್ಕೆ ದೊಡ್ಡ ಆಘಾತವುಂಟಾಗುವದು ಸಹಜ. ಪರಸ್ಪರರಲ್ಲಿ ಹಾರ್ದಿಕತೆಯ ಪ್ರೇಮಭಾವವು ಅಂಕುರಿಸಿದರೆ ರಾಷ್ಟ್ರದ ಶಕ್ತಿಯು ಸ್ಫೂರ್ತಿ ಹೆಚ್ಚುವದಲ್ಲದೆ ಪ್ರಪಂಚದಲ್ಲಿ ಆದರ್ಶ ರಾಷ್ಟ್ರವಾಗುವದು. ಅಸ್ಪೃಶ್ಯರೊಳಗಿರುವ ಅಸ್ಪೃಶ್ಯತೆಯೂ ಕಡಿಮೆಯಾಗಿ, ಕೆಡುಕಿನ ತೊಡಕನ್ನು ಬಿಡಿಸಿಕೊಳ್ಳಬೇಕು. ಆ ಭಾವನೆ ಬೇರೂರಬೇಕಾದರೆ ಸದಾಕಾಲಗಳಲ್ಲಿಯೂ, ಎಲ್ಲರೊಡನೆ ಸೋದರ ಭಾವನೆಗಳನ್ನು ತಾಳಿ, ಅವರ ಜೀವನ ಶುಚಿಯಾಗುವಂತೆ ಪ್ರಯತ್ನಿಸಿದರೆ ಮಾತ್ರ ಹರಿಜನೋದ್ಧಾರ. ಅಸ್ಪೃಶ್ಯತೆಯ ಅಂಟು ರೋಗವನ್ನು ನಿವಾರಣೆ ಮಾಡಲು ನಿಷ್ಕಲ್ಮಷ ಪ್ರೇಮವೇ ದಿವ್ಯೌಷಧ.

ಶ್ರಾವಣ ಸಂದೇಶ

ನಾಡಿನ ತುಂಬೆಲ್ಲ ಶ್ರಾವಣದ ಸಂಭ್ರಮ ನಡೆದು ಹೋಯ್ತು. ಧಾರ್ಮಿಕ ಜಾಗೃತಿಯಿಂದೊಡಗೂಡಿದ ಶ್ರಾವಣವು ಕಿವಿಗೆ ಇಂಪನ್ನು ನೀಡಿತು. ಕೇವಲ ಶ್ರವಣವಾದರೆ ಪ್ರಯೋಜನವಾಗದು. ಮನವಿಲ್ಲದ ಶ್ರವಣವು ಸುಮ್ಮನೆ ಕಾಲಹರಣ ಮಾಡಿದಂತೆ, ಧಾರ್ಮಿಕ ವಿಚಾರಗಳು ಹೃದಯದೊಳಗೆ ಇಳಿದಾಗ, ನಡೆ ನುಡಿಯೊಂದಾದಾಗ ಶ್ರವಣದ ಸಾರ್ಥಕತೆ; ಅಂತರಂಗ ಬಹಿರಂಗ ಶುದ್ಧಿಯನ್ನು ಮಾಡಿಕೊಂಡರೆ ಒಂದು ತಿಂಗಳವರೆಗೆ ಶ್ರವಣ ಮಾಡಿದ್ದು ಅದರ ಉಪಯೋಗವಾದೀತು. ಒಂದು ಕಿವಿಯಿಂದ ಕೇಳಿ ಮತ್ತೊಂದು ಕಿವಿಯಲ್ಲಿ ಬಿಟ್ಟರೆ ಗಾಳಿಗೋಪುರದಂತೆ ನಿರರ್ಥಕವಾದೀತು. ಅದಕ್ಕಾಗಿ ಮನನ, ನಿಧಿಧ್ಯಾಸ, ಆತ್ಮಶಾಂತಿಗೆ ಅತ್ಯವಶ್ಯ ಬೇಕು. ಶರಣ ಶರಣೆಯರ ಸೂಳ್ನುಡಿಗಳು ಮನನವಾಗುತ್ತ ಹೋದಂತೆ ಹೃದಯ ಕುಸುಮ ಅರಳುತ್ತ ಹೋಗುವದು. ಧ್ಯಾನಯೋಗವನ್ನು ಸಾಧಿಸಿದರೆ ಆತ್ಮಾನಂದ ದೊರೆಯುವದು. ಮಹಾತ್ಮಾ ಬಸವಣ್ಣನವರು ಒಂದೆಡೆ "ಮರ್ತ್ಯ ಲೋಕವೆಂಬುದು ಕರ್ತಾರನ ಕಮ್ಮಟವಯ್ಯ, ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರಯ್ಯ, ಕೂಡಲ ಸಂಗಮದೇವಾ" ಎಂದುದಾಗಿ ತಿಳಿಸಿದ್ದಾರೆ. ಶ್ರವಣ ಮನನದಿಂದ ಜೀವನ ವಿಕಾಸವಾಗುವದಲ್ಲದೆ ಚಾರಿತ್ರ್ಯ ಬಲವು ಸಹಜವಾಗಿ ಸಂವರ್ಧನೆಯಾಗುವದು, ಬೆಳಕಿನ ದಾರಿ ಕಾಣುವದು. ತಾಮಸೀಯ ಶಕ್ತಿಯು ಹ್ರಾಸವಾಗಿ, ಸಾತ್ವಿಕ ಭಾವನೆಯು ತಲೆದೋರುವದು. ವ್ಯಕ್ತಿಯಲ್ಲಿ ಚೈತನ್ಯ ದೊರೆತು ಕಾರ್ಯ ಮಾಡಲು ಉತ್ಸಾಹ ಪೂರ್ಣನಾಗುವನು. ಶ್ರವಣ, ಮನನಗಳೇ ಜೀವನದ ಪುಷ್ಟಿಗೆ,ಸಂತುಷ್ಟಿಗೆ ದಿವ್ಯೌಷಧ. ಬಾಳಿನಲ್ಲಿ ಬರುವ ಕಷ್ಟಗಳೆಲ್ಲವನ್ನು ಎದುರಿಸಲು ಶ್ರವಣಮನನಗಳು ದಿವ್ಯ ಸಾಧನ. ಶ್ರವಣ ಮಾಡಿದ್ದು ಮನಃಪೂರ್ವಕವಾಗಿ ಎದೆದಾಣದಲ್ಲಿ ಸೇರಿದರೆ ದಿವ್ಯಶಕ್ತಿಯು ಬಲಿತು, ಮಹದಾನಂದವನ್ನು ಇಹ ಪರದಲ್ಲಿಯೂ ಪಡೆಯಬಹುದು. ಅದಕ್ಕಾಗಿ ತನುವೆಂಬ ತೋಟದಲ್ಲಿರುವ ಭಕ್ತಿ ಶ್ರದ್ಧೆ, ವಿಶ್ವಾಸಗಳೆಂಬ ಹೂವುಗಳ ಸುಗಂಧವನ್ನು ಸೇವಿಸಿ, ಈಶ್ವರನಲ್ಲಿ ತನ್ಮಯರಾಗಬೇಕೆಂಬುದೇ ಶ್ರಾವಣದ ಕೊಡುಗೆ.

(ಸಂದೇಶ)

ಹುಬ್ಬಳ್ಳಿ: ಜಗದ್ಗುರು ಗುರುಸಿದ್ಧೇಶ್ವರ ಅಷ್ಟೋತ್ತರ ಶತನಾಮಾವಳಿ

ಸಾಹಿತ್ಯ ಪ್ರಕಾರ	:	ನಾಮಾವಳಿ
ಮೊದಲ ಮುದ್ರಣ	:	೧೯೭೩
ಎರಡನೆಯ ಮುದ್ರಣ	:	೧೯೮೦
ಮೂರನೆಯ ಮುದ್ರಣ	:	೧೯೮೬
ರಚನೆಯ ವಯಸ್ಸು	:	೪೪
ರಚನಾಸ್ಥಳ	:	ಹುಬ್ಬಳ್ಳಿ

ಶ್ರೀ ಜಗದ್ಗುರು ಗುರುಸಿದ್ಧೇಶ್ವರ ಗ್ರಂಥಮಾಲೆ–೫೫

ಹುಬ್ಬಳ್ಳಿ ಮೂರುಸಾವಿರ ಮಠದ ಕರ್ತೃ

ಶ್ರೀ ಜಗದ್ಗುರು ಗುರುಸಿದ್ಧೇಶ್ವರ ಅಷ್ಟೋತ್ತರ ಶತನಾಮಾವಳಿ

ರಚಿಸಿದವರು :

ಶ್ರೀ ಮೂಜಗಂ

೧೯೮೬

ಪ್ರಕಾಶಕರು :
ಶ್ರೀ ಜಗದ್ಗುರು ಗಂಗಾಧರ ಧರ್ಮಪ್ರಚಾರಕ ಮಂಡಳ,
ಮೂರುಸಾವಿರಮಠ, ಹುಬ್ಬಳ್ಳಿ.

ತೃತೀಯ ಮುದ್ರಣ : ೧೯೮೬

ಬೆಲೆ: ೫೦ ಪೈಸೆ

ಮುದ್ರಕರು:
ಪರಂಜ್ಯೋತಿ ಪಾವರ ಪ್ರಿಂಟಿಂಗ ಪ್ರೆಸ್, ಹುಬ್ಬಳ್ಳಿ.

ಮುನ್ನುಡಿ

ಶ್ರೀ ಮೂರುಸಾವಿರಮಠದ ಮೂಲ ಕರ್ತೃ ಜಗದ್ಗುರು ಗುರುಸಿದ್ಧೇಶ್ವರನನ್ನು ಕುರಿತು–ಮಠದ ಪ್ರಸ್ತುತ ಪೀಠಾಧಿಕಾರಿಗಳಾಗಿರುವ ಶ್ರೀ ಮನ್ಮಹಾರಾಜ ನಿರಂಜನ ಜಗದ್ಗುರು ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳವರಲ್ಲಿ ಉದ್ಗಮಿಸಿದ ಭಕ್ತಿಯ ಪುಳಕಾವಳಿ ಇದು; ಕರ್ತೃವಿನ ಪಾದಪದ್ಮಂಗಳಿಗೆ ಅರ್ಪಿತವಾದ ಭಾವಪುಷ್ಪಾವಳಿ ಇದು; ಗುರುಸಿದ್ಧೇಶ್ವರನ ಭಕ್ತಸ್ತೋಮಕ್ಕೆ ನಿತ್ಯ ಪಠನೀಯವಾದ ಅಷ್ಟೋತ್ತರ ಶತನಾಮಾವಳಿ ಇದು.

ಭಕ್ತಿ, ಶ್ರದ್ಧೆ, ವಿಶ್ವಾಸ ಇವು ಮನುಷ್ಯನ ಜೀವನ ವಿಕಾಸಕ್ಕೆ ಅತ್ಯಂತ ಅವಶ್ಯಕವಾದವುಗಳು. ನಂಬಿ ಕರೆದರೆ ಓ ಎನ್ನನೆ ಶಿವನು? ಎಂಬ ಬಸವಣ್ಣನವರ ವಾಕ್ಯದಲ್ಲಿ ಶ್ರದ್ಧೆಯ ಮಹತ್ವವೇ ಧ್ವನಿತವಾಗುತ್ತದೆ. ಮನುಷ್ಯನ ಬುದ್ಧಿ, ವಿದ್ಯೆ, ಜ್ಞಾನ ಮೊದಲಾದ ಯಾವ ಸದ್ಗುಣಗಳಾದರೂ ಫಲಕಾರಿಯಾಗಿ ಪರಿಣಮಿಸಬೇಕಾದರೆ ಶ್ರದ್ಧೆಯ ಬಲ ಬೇಕೇಬೇಕು. ಅದನ್ನು ಮನಗಂಡು ಪಾಶ್ಚಾತ್ಯ ವೈಚಾರಿಕರೂ ಸಹ Faith moves mountains ಶ್ರದ್ಧೆ ಕುತ್ಕೀಲಗಳನ್ನೂ ಕಿತ್ತಿ ಇಡಬಲ್ಲದು ಎಂದಿದ್ದಾರೆ. ಶ್ರದ್ಧೆ ಪ್ರಬಲವಾಗಿ ಬೆಳೆಯಬೇಕಾದರೆ ಕ್ರಮಬದ್ಧವಾದ ಸಾಧನೆ ಪ್ರತಿನಿತ್ಯವೂ ನಡೆಯಬೇಕು. ಸಾಧನೆಯ ಸತತ ಕೃಷಿಯಿಂದಲೇ ಸಿದ್ಧಿಯ ಸುರಲತೆಯು ಜೀವನದ ಹಂದರವ ತುಂಬೆಲ್ಲ ಚೆಲ್ಲವರಿದು ವಿಪುಲವಾಗಿ ಫಲಪ್ರದವಾಗುವುದು ಸಾಧ್ಯ.

ಸದ್ಭಕ್ತರ ಶ್ರದ್ಧೆಯ ಆನಂದದ ಅಡುಂಬೊಲ, ಹುಬ್ಬಳ್ಳಿಯ ಮೂರುಸಾವಿರಮಠ. ಸಾಮಾನ್ಯವಾಗಿ ನಗರದ ಎಲ್ಲ ಜಾತಿ–ಮತ–ಪಂಥಗಳ ಜನರೂ ಈ ಮಠದ ಕರ್ತೃ ಗದ್ದುಗೆಗೆ ನಡೆದುಕೊಳ್ಳುತ್ತಾರೆ. ಸಮಾಜದಲ್ಲಿರುವ ಸುಶಿಕ್ಷಿತರು, ನಿರಕ್ಷರಿಗಳು, ಶಿಕ್ಷಕರು, ವಿದ್ಯಾರ್ಥಿಗಳು, ವರ್ತಕರು, ಕೃಷಿಕರು, ಕಾರ್ಮಿಕರು, ಅಧಿಕಾರಿಗಳು ಮುಂತಾದ ಎಲ್ಲ ವರ್ಗಗಳವರೂ ಈ ಮಹಾ ಮಠದ ಭಕ್ತಸ್ತೋಮದಲ್ಲಿ ಸಮಾವಿಷ್ಟರಾಗಿದ್ದಾರೆ.

ಮೂರುಸಾವಿರಮಠದ ಪ್ರಾಂಗಣ ಹೃದಯಾಕರ್ಷಕವಾದುದು. ಪ್ರಸ್ತುತ ಗಂಗಾಧರ ಜಗದ್ಗುರುಗಳವರ ಕರ್ತೃತ್ವ ಶಕ್ತಿಯಿಂದ, ಕಲಾಸಕ್ತಿಯಿಂದ ಮಠವು ನವೀಕರಣಗೊಂಡಿದೆ. ಮಠದ ಮೊದಲ ಸಿಂಹದ್ವಾರದ ಉತ್ತುಂಗ ಗೋಪುರವು ಭವ್ಯತೆಯನ್ನು ಇಮ್ಮಡಿಗೊಳಿಸಿದೆ.

ಈ ಮಠದ ಪವಿತ್ರವಾದ ಸನ್ನಿವೇಶದಲ್ಲಿ ಸ್ನಾನಶುಚಿರ್ಭೂತರಾಗಿ, ಭಸ್ಮ

ಭೂಷಿತಾಂಗರಾಗಿ, ತ್ರಿಪುಂಡ್ರಧಾರಿಗಳಾಗಿ, ಮಡಿ ವಸ್ತ್ರ ಹೊದ್ದು, ದೈವಭಕ್ತಿಯೇ ಮನುಷ್ಯಾಕೃತಿಯಾಗಿರುವಂತೆ ಕಂಗೊಳಿಸುವ ಎಷ್ಟೋ ಜನ ಭಕ್ತರು, ಪ್ರತಿನಿತ್ಯ ಕರ್ತೃಗದ್ದುಗೆಗೆ ಪುಷ್ಪಾದಿಗಳನ್ನು ಅರ್ಪಿಸಿ ಪುನೀತರಾಗಿ, ನೂತನ ಜೀವನೋತ್ಸಾಹ ಪಡೆದುಕೊಂಡು ತಮ್ಮ ತಮ್ಮ ಕಾಯಕಗಳಿಗೆ ಹೊರಡುವರು. ತಮ್ಮ ತಮ್ಮ ಮನದ ಅಭೀಷ್ಟಗಳು ಕೈಗೂಡಿದ ಸಂತೋಷಭರದಲ್ಲಿ ಕರ್ತೃ ಗುರುಸಿದ್ಧೇಶ್ವರನ ಗದ್ದುಗೆಗೆ ಅಭಿಷೇಕ ಮಾಡಿಸುವವರು, ಮಂಟಪಕ್ಕೆ ಎಲೆಪೂಜೆ ಕಟ್ಟಿಸುವವರು. ಫಲ-ಪುಷ್ಪಾದಿಗಳನ್ನು ಅರ್ಪಿಸಿ ಪ್ರದಕ್ಷಿಣೆ ಹಾಕುವವರು, ಮಂಗಲಗೀತೆ ಹಾಡುವವರು, ಕರ್ಪೂರ ಜ್ಯೋತಿಯನ್ನು ಬೆಳಗುವವರು—ಹೀಗೆ ಕೃತ-ಕೃತ್ಯರಾಗಿ, ಆನಂದತುಂದಿಲರಾಗಿರುವ ಅಸಂಖ್ಯ ಭಕ್ತ ಗಣವನ್ನು ಕರ್ತೃ ಗದ್ದುಗೆಯ ಪೌಳಿಯಲ್ಲಿ ಕಾಣಬಹುದು, ಕರ್ತೃ ಗದ್ದುಗೆಯ ಪೌಳಿ ಪ್ರಶಾಂತಿಯ ಸ್ಥಾನ.

ಕರ್ತೃ ಶ್ರೀ ಗುರುಸಿದ್ಧೇಶ್ವರನ ಅಚ್ಚುಮೆಚ್ಚಿನ ಸುಪುತ್ರರಾದ ಶ್ರೀ ಗಂಗಾಧರ ಜಗದ್ಗುರುಗಳವರು ಲಿಂಗಪೂಜಾನಿಷ್ಠರು, ಕನ್ನಡ, ಸಂಸ್ಕೃತ, ಆಂಗ್ಲ, ಹಿಂದೀ ಭಾಷಾ ಪರಿಣತರು, ಕವಿತಾ ಗುಣೋಪೇತರು, ವೀರಶೈವ ಸಂಸ್ಕೃತಿಯ ಮಂದಾರದಂತಿರುವವರು, ತಮ್ಮ ವಿಶಾಲವಾದ ಹೃದಯವಂತಿಕೆಯಿಂದ ಎಲ್ಲ ಧರ್ಮಬಾಂಧವರ ಗೌರವಾದರಗಳಿಗೆ ಪಾತ್ರರಾದವರು. ನಗರದ ಧಾರ್ಮಿಕ, ಸಾಂಸ್ಕೃತಿಕ, ಸಾಹಿತ್ಯಿಕ ಮೊದಲಾದ ಚಟುವಟಿಕೆಗಳಿಗೆ ವಿಶೇಷ ಚೈತನ್ಯದಾತರು-ಇಂಥ ಅನೇಕ ಸೃಜನಶೀಲ ಸದ್ಗುಣಶಕ್ತಿಯ ಪುಂಜದಂತಿರುವ ಶ್ರೀ ಗಂಗಾಧರ ಜಗದ್ಗುರುಗಳನ್ನು ಪಡೆದ ಕನ್ನಡನಾಡು, ವಿಶೇಷವಾಗಿ ವೀರಶೈವ ಸಮಾಜ ಧನ್ಯ!

ಶ್ರೀ ಗಂಗಾಧರ ಜಗದ್ಗುರುಗಳವರು ತಮ್ಮ ಹೃದಯದ ಕನ್ನಡಿಯಲ್ಲಿ ಕರ್ತೃವಿನ ದೈವೀಗುಣಗಳನ್ನು ಭಾವದೃಷ್ಟಿಯಲ್ಲಿ ಕಂಡಿದ್ದಾರೆ, ಕೊಂಡು ಕೊನೆದಿದ್ದಾರೆ. ಅವುಗಳಲ್ಲಿ ಕೆಲವನ್ನು ಇಲ್ಲಿ ನೆನೆಯಬಹುದು. ಅವರ ಭಾವದೃಷ್ಟಿಯಲ್ಲಿ ಕರ್ತೃ ಗುರುಸಿದ್ಧೇಶ್ವರನು—ದಿವ್ಯಜ್ಯೋತಿ; ನಿತ್ಯ ಸ್ಫೂರ್ತಿ; ಚಿತ್ಪ್ರಕಾಶ; ಚಿದ್ವಿಭೂತಿ; ಭಕ್ತಸೂಲಿ; ನಿರ್ವಿಕಾರಿ; ಚಾರುಚರಿತ; ಭಾವಭರಿತ; ಲಿಂಗಸಂಗ; ಮಂಗಲಾಂಗ; ಪರುಷಹಸ್ತ ಹರುಷಚಿತ್ತ; ಪಾಪಲೋಪ; ಶಾಂತಿದೀಪ ಹೀಗೆ ಅನಂತ ಸದ್ಗುಣಸಾರನಾಗಿದ್ದಾನೆ. ಗುರುಸಿದ್ಧೇಶ್ವರನು ಅಸಾಧಾರಣ ಮಹಿಮಾಶಕ್ತಿ ಸಮನ್ವಿತನು. ಅವನ ಅನೇಕ ಮಹಿಮೆಗಳನ್ನು, ಲೀಲೆಗಳನ್ನು ಆದರ್ಶ ಆಚರಣೆಗಳನ್ನು ಈ ನಾಮಾವಳಿಯಲ್ಲಿ ಗಂಗಾಧರ ಜಗದ್ಗುರುಗಳವರು ಸರ್ವರಿಗೂ ಸುಲಭವಾಗುವಂತೆ ಸರಳ ಶೈಲಿಯಲ್ಲಿ ಭಕ್ತಿರಸಭರಿತವಾಗಿ ಬಿಂಬಿಸಿದ್ದಾರೆ.

ಇದರಲ್ಲಿ ಸ್ವತಃ ಗಂಗಾಧರ ಜಗದ್ಗುರುಗಳವರ ಹೃದಯದಲ್ಲಿ ಉಕ್ಕುತ್ತಿರುವ ಭಕ್ತಿರಸದ ತರಂಗಿಣಿಯನ್ನು ಕಾಣಬಹುದು. "ಎನ್ನ ಕಣ್ಣಿನಲ್ಲಿ ಬಂದು ನಿಲ್ಲು ನೀನು ಗುರುಸಿದ್ಧೇಶ; ಎನ್ನ ಜಿಹ್ವೆಯಲ್ಲಿ ಬಂದು ಕುಳಿತುಕೊಳ್ಳು ಗುರುಸಿದ್ಧೇಶ.

ಎನ್ನ ಚಿತ್ತದಲ್ಲಿ ನಿತ್ಯ ವಾಸಮಾಡು; ಎನ್ನ ಭಾವದಲ್ಲಿ ನೆಲೆಸಿ ನಲಿಯೊ ಗುರುಸಿದ್ಧೇಶ ಎಂಬ ಪ್ರಾರ್ಥನೆಯನ್ನು—ಹೊರಗೆ ಬಾಧೆ, ಒಳಗೆ ಬಾಧೆ ತಾಳಲಾರೆ ಗುರುಸಿದ್ಧೇಶ; ಮರಪೆ ಮತ್ತೆ ಬಾರದಂತೆ ಕರುಣಿಸಯ್ಯ ಗುರುಸಿದ್ಧೇಶ; ಎಂಬ ಆಧ್ಯಾತ್ಮಿಕ ಹೋರಾಟದಲ್ಲಿ ಉಂಟಾಗುವ ತಳಮಳವನ್ನು ಕಂಡುಕೊಳ್ಳಬಹುದು. ತರಳನಾನು ತಪ್ಪು ಕ್ಷಮಿಸಿ ತೋರು ನಿಜವ ಗುರುಸಿದ್ಧೇಶ; ಪ್ರಣತೆಯುಂಟು ಜ್ಯೋತಿಸಯ್ಯ ಗುರುಸಿದ್ಧೇಶ; ಕಣ್ಣ ತಿಮಿರ ಕಳೆದು ಮನದ ಮಾಯೆ ಹರಿಸು ಗುರುಸಿದ್ಧೇಶ" ಎಂಬ ಸ್ವಾತ್ಮ ಪರಿಶೋಧನೆಯ ರೀತಿಯನ್ನು ತಿಳಿಯಬಹುದು. ಭಕ್ತಿರಸಪರಿಪ್ಲುತವಾದ ಈ ನಾಮಾವಳಿಯಲ್ಲಿ ಬಸವಣ್ಣನವರ ಆರ್ತಭಾವವನ್ನೂ, ಹರಿಹರದೇವನ ಭಕ್ತಿ ಕಾವ್ಯೋತ್ಸಾದದ ಛಾಯೆಯನ್ನೂ ಕಾಣಬಹುದು.

ಜೀವನದ ಎಲ್ಲ ಕ್ಷೇತ್ರಗಳಲ್ಲಿಯೂ ಪ್ರೋನ್ನತಿಯನ್ನು ಸಾಧಿಸಿಕೊಳ್ಳಬೇಕೆಂಬ ಅಭೀಷ್ಟವುಳ್ಳವರೆಲ್ಲರಿಗೂ—"ತರಳನಾನು ತಪ್ಪು ಕ್ಷಮಿಸಿ ತೋರು ನಿಜವ, ಅರಿವಿನಾರತಿಯನು ಬೆಳಗುವುದನು ಕಲಿಸು" ಎಂದು ಗುರುಸಿದ್ಧೇಶ್ವರನನ್ನು ಪ್ರಾರ್ಥಿಸಿ ಜೀವನ ಪಥದಲ್ಲಿ ಮುಂದೆ ಮುಂದೆ ಸಾಗಲು ಭಕ್ತರಿಗೆ ಸ್ಫೂರ್ತಿಯನ್ನಿತ್ತಿದ್ದಾರೆ—ನಮ್ಮ ಶ್ರೀ ಗಂಗಾಧರ ಜಗದ್ಗುರುಗಳು.

ಈ ನಾಮಾವಳಿಯ ಬಗೆಗೆ ನನಗೆ ಅನಿಸಿದ ಒಂದೆರಡು ಮಾತುಗಳನ್ನು ಬರೆಯಬೇಕೆಂದು **"ಮೂಜಗಂ"** ಅಪ್ಪಣೆ ಮಾಡಿದರು. ಅದಕ್ಕಾಗಿ ಈ ನುಡಿದಾವರೆ ಅವರ ಅಡಿದಾವರೆಗೆ ಅರ್ಪಿತ.

ಸಂಕ್ರಾಂತಿ
೧೪-೧-೧೯೭೩

—ಗಂಗಪ್ಪ ವಾಲಿ.

ಪ್ರಕಾಶಕರ ಮಾತು

ಕನ್ನಡನಾಡಿನ ಇತಿಹಾಸದ ಪುಟಗಳಲ್ಲಿ ಮೂರುಸಾವಿರಮಠದ ಹೆಸರು ಚಿರಸ್ಮರಣೀಯವಾಗಿದೆ. ಶತ-ಶತಮಾನಗಳಿಂದ ಸಮಾಜದ ಸರ್ವೋನ್ನತಿಯ ಕಾಯಕವನ್ನು ಅದು ವಿವಿಧ ರೀತಿಯಲ್ಲಿ ಗೈಯ್ಯುತ್ತ ಸಾಗಿದೆ. ವೀರಶೈವ ಧರ್ಮದ ಮಹಾಕೇಂದ್ರವಾದ ಈ ಮಠದ ಕಾರ್ಯ ಕ್ಷೇತ್ರದ ಹರವು ಇಂದು ದೇಶ–ವಿದೇಶಗಳವರೆಗೆ ಸಾಗಿದೆ. ಘನತರವಾದ ಚೈತನ್ಯದಿಂದ ಚಿತ್ಪ್ರಕಾಶವನ್ನು ಹರಡಿ ನಾಡಿನ ಶಾಂತಿ, ಸಮತೆ, ಧರ್ಮವನ್ನು ಕಾಪಾಡುತ್ತ ಬಂದಿದೆ. ವಿಶ್ವಕಲ್ಯಾಣಕ್ಕೆ ಅಂತಃಶಕ್ತಿಯನ್ನು ಅನುಗ್ರಹಗೈದಿದೆ. ಮೂಲ ಕರ್ತೃ ಜಗದ್ಗುರು ಗುರುಸಿದ್ಧೇಶ್ವರರ ಪ್ರೇರಣೆಯಿಂದ ಈ ಕಾಯಕ ಮುನ್ನಡೆಯುತ್ತ ಸಾಗಿದೆ. ಆತನ ಹೆಸರು ನಾಡವರ ಉಸುರಾಗಿದೆ. ಆತನ ಗದ್ದುಗೆ ಜಾಗ್ರತೆಯ ಮಹಾಸ್ಥಾನವಾಗಿದೆ; ಪೂಜ್ಯನೀಯವಾಗಿದೆ.

ಕರ್ತೃ ಜಗದ್ಗುರು ಗುರುಸಿದ್ಧೇಶ್ವರ ಅಷ್ಟೋತ್ತರ ಶತನಾಮಾವಳಿಯನ್ನು **ಶ್ರೀಮೂಜಗಂ** ಅಂದರೆ ಸದ್ಯದ ಮೂರುಸಾವಿರಮಠದ ಶ್ರೀಮನ್‌ಮಹಾರಾಜ ನಿರಂಜನ ಜಗದ್ಗುರು ಶ್ರೀ ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳವರು ರಚಿಸಿ, ಅತ್ಯವಶ್ಯ ಕಾರ್ಯವನ್ನು ಪೂರೈಸಿಕೊಟ್ಟಿದ್ದಾರೆ. ಕಿರುಹೊತ್ತಿಗೆಯ ರೂಪದಲ್ಲಿ ಈ ಗ್ರಂಥವನ್ನು ಪ್ರಕಟಿಸಲು ತುಂಬ ಸಂತೋಷವಾಗುತ್ತದೆ.

ಮಾಡುವ ಕೃತಿಯು ಮೃಡನೊಲಿಯುವಂತಿರಬೇಕು;
ಆಡುವ ಭಾಷೆ ಜನ ಮೆಚ್ಚುವಂತಿರಬೇಕು;
ಬೇಡುವ ಧನ ಪರಹಿತಕಾಗಿರಬೇಕು;
ನೀಡುವ ದಾನ ಸಾರ್ಥಕವಾಗಿರಬೇಕು, ನೋಡಾ!
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ,
ನನ್ನ ಮನ ನಿನಗಾಗಿ ಮೀಸಲಾಗಿರಬೇಕು.

—**ಶ್ರೀಮೂಜಗಂ**

ಪ್ರಕಾಶಕರ ನುಡಿ

ತೃತೀಯ ಮುದ್ರಣ

ಭಕ್ತಿ-ಜ್ಞಾನ-ವೈರಾಗ್ಯದ ಸಾಧನೆಯ ಸಿದ್ಧಿಗಾಗಿ ಭಕ್ತಿಯ ಭಾವ ತುಂಬಿರುವ ಕಂದರಾಗಿ "ಕಂದ" ಪದ್ಯದಿಂದ ಪ್ರಾರಂಭವಾಗಿದ್ದು, ಅದೇ ಕಂದ ಪದ್ಯದಿಂದ ಮುಗಿಯುವ ಫಲಶ್ರುತಿ ಒಳಗೊಂಡಿರುವ "ಉತ್ಸಾಹ ರಗಳೆ"ಯ ಛಂದದಲ್ಲಿರುವ ನೂರೆಂಟು ನಾಮಗಳನ್ನು ಉತ್ಸಾಹ ಭರಿತರಾಗಿ ಓದಿ, ಹಾಡಿ, ಪಠಿಸಿ ಪಾರಾಯಣ ಮಾಡಿ ಆತ್ಮೋದ್ಧಾರ ಮಾಡಿಕೊಂಡು ಆಧ್ಯಾತ್ಮಿಕ ಶಾಂತಿಯನ್ನು ಭಕ್ತಾದಿಗಳೆಲ್ಲರೂ ಪಡೆಯಬಲ್ಲವರಾಗಲೆಂದು ಸಂಕಲ್ಪಿಸಿರುವ ಶ್ರೀ ಮೂಜಗಂ ಅವರು ಅಧಿಕೃತ ಲೇಖನಿಯಿಂದ ಲಿಖಿಸಿರುವ "ಹುಬ್ಬಳ್ಳಿ ಮೂರುಸಾವಿರಮಠದ ಕರ್ತೃ ಶ್ರೀ ಜಗದ್ಗುರು ಗುರುಸಿದ್ಧೇಶ್ವರರ ಅಷ್ಟೋತ್ತರ ಶತನಾಮಾವಳಿ"ಯ ತೃತೀಯ ಮುದ್ರಣ ಮಾಡಿಸಿ ಪ್ರಕಾಶಕರಾಗಿರುವ ಹುಬ್ಬಳ್ಳಿ ಮೂರುಸಾವಿರಮಠದ ಶ್ರೀ ಜಗದ್ಗುರು ಗಂಗಾಧರ ಧರ್ಮಪ್ರಚಾರಕ ಮಂಡಳವು ಹೆಮ್ಮೆ ಪಡುವ ಸಂತಸದ ವಿಷಯವಾಗಿದೆ.

—ಪ್ರಕಾಶಕರು

|| ಕಂದ || ಶ್ರೀಗುರುಸಿದ್ಧ ಜಗದ್ಗುರು
ಯೋಗಿಯ ನೂರೆಂಟು ನಾಮಗಳನನುದಿನದೊಳ್ |
ರಾಗದಿ ಪಠಣಂ ಗೈಯಲ್
ಯೋಗೀಶ್ವರನೀವನೊಲ್ದು ಚಿರಸುಖನಿಧಿಯಂ ||

ಭ್ರೂಲತಾಪ್ರರೀಶ ಕರ್ತೃ ಜಗದ್ಗುರುವೆ ಗುರುಸಿದ್ಧೇಶ ೧
ಕಾಲನಾಶ, ಭವವಿನಾಶ ಚಿತ್ಪ್ರಕಾಶ ಗುರುಸಿದ್ಧೇಶ ೨
ದಿವ್ಯಜ್ಯೋತಿ ಸತ್ಯಕೀರ್ತಿ ನಿತ್ಯಸ್ಫೂರ್ತಿ ಗುರುಸಿದ್ಧೇಶ ೩
ಭವ್ಯಮೂರ್ತಿ ಚಿದ್ವಿಭೂತಿ ಪರಂಜ್ಯೋತಿ ಗುರುಸಿದ್ಧೇಶ ೪
ಸತ್ತು ಚಿತ್ತಾನಂದರೂಪ ತ್ಯಕ್ತಕೋಪ ಗುರುಸಿದ್ಧೇಶ ೫
ಚಿತ್ತಜಾರಿ ಭಕ್ತಿಸೂರಿ ನಿರ್ವಿಕಾರಿ ಗುರುಸಿದ್ಧೇಶ ೬
ಯೋಗತೇಜ ಯೋಗಿರಾಜ ರಾಗವರ್ಜ್ಯ ಗುರುಸಿದ್ಧೇಶ ೭
ಭೋಗದೂರ ಕರ್ಮದೂರ ಧರ್ಮಪೂರ ಗುರುಸಿದ್ಧೇಶ ೮
ವೀರ ವಿರತಿಬೀಜ ಭಕ್ತಕಲ್ಪಭೂಜ ಗುರುಸಿದ್ಧೇಶ ೯
ಚಾರುಚರಿತ ರಾಗರಹಿತ ಭಾವಭರಿತ ಗುರುಸಿದ್ಧೇಶ ೧೦
ಮದನಭಂಗ ಗುಣೋತ್ತುಂಗ ಲಿಂಗಸಂಗ ಗುರುಸಿದ್ಧೇಶ ೧೧
ಸವಮಲಾಂಗ ಸದ್ಗುಣಾಂಗ ಮಂಗಲಾಂಗ ಗುರುಸಿದ್ಧೇಶ ೧೨
ಪರುಷಹಸ್ತ ಪರುಷಚಿತ್ತ ವಿಬುಧವಿನುತ ಗುರುಸಿದ್ಧೇಶ ೧೩
ವರವಿರಕ್ತ ಭವವಿಮುಕ್ತ ಸರ್ವಶಕ್ತ ಗುರುಸಿದ್ಧೇಶ ೧೪
ತ್ರಿಮಲನಾಶ ಚಿದ್ವಿಕಾಶ ಭಕ್ತಿಕೋಶ ಗುರುಸಿದ್ಧೇಶ ೧೫
ಶಮೆವಿವೇಕಪೂರ್ಣ ಶಾಂತಿ ಕಾಂತಿಭರಣ ಗುರುಸಿದ್ಧೇಶ ೧೬
ಶಿವಸ್ವರೂಪಪಾಪಲೋಪ ಶಾಂತಿದೀಪ ಗುರುಸಿದ್ಧೇಶ ೧೭
ಶಿವಸಿದ್ಧಾಂತ ಚಕ್ರವರ್ತಿ ಜ್ಞಾನಜ್ಯೋತಿ ಗುರುಸಿದ್ಧೇಶ ೧೮
ಜಗಜ್ಜ್ಯೋತಿ ಜಗದ್ಗುರುವೆ ಮೂಲಕರ್ತೃ ಗುರುಸಿದ್ಧೇಶ ೧೯
ಯೋಗಿನಮಿತ ತ್ಯಾಗಭರಿತ ನಿತ್ಯಮುಕ್ತ ಗುರುಸಿದ್ಧೇಶ ೨೦
ಬಾಲ್ಯದಲ್ಲಿ ತಪವ ಗೈದು ಲೀಲೆ ತೋರ್ದೆ ಗುರುಸಿದ್ಧೇಶ ೨೧
ಫಾಲನೇತ್ರನನ್ನು ನೆನೆದು ಮನವ ಗೆಲ್ದೆ ಗುರುಸಿದ್ಧೇಶ ೨೨
ಕಾಲಕರ್ಮ ಮಾಯಿಗಳನು ಗೆದ್ದೆ ನೀನು ಗುರುಸಿದ್ಧೇಶ ೨೩

ಶೀಲವರುಹಿ ಸಾಧಕರಿಗೆ ದಾರಿ ತೋರ್ದೆ ಗುರುಸಿದ್ಧೇಶ ೨೪
ಮೂರುಸಾವಿರಮಠ ಪೀಠನೊಡೆಯನಾಗಿ ಗುರುಸಿದ್ಧೇಶ ೨೫
ಮೂರು ಮುರಿದು ಮೂಲಕರ್ತೃವಾಗಿ ಮೆರೆದೆ ಗುರುಸಿದ್ಧೇಶ ೨೬
ಮೂರು ಸಮಯದಲ್ಲಿ ಮೂರು ತತ್ತ್ವ ತೋರ್ದೆ ಗುರುಸಿದ್ಧೇಶ ೨೭
ಆರನಳಿದು ಆರು ಸ್ಥಲವ ತಿಳಿಸಿದೆಯ್ಯ ಗುರುಸಿದ್ಧೇಶ ೨೮
ಹುಚ್ಚನೆಂದು ಕರೆಯುತಿಹರು ನಿನ್ನ ಕರ್ತೃ ಗುರುಸಿದ್ಧೇಶ ೨೯
ಹುಚ್ಚುಬಿಡಿಸುತಿರುವೆ ನೀನು ಲೀಲೆಯಿಂದ ಗುರುಸಿದ್ಧೇಶ ೩೦
ಸರ್ವಧರ್ಮದವರಿಗೊಲಿದು ವರವನಿತ್ತೆ ಗುರುಸಿದ್ಧೇಶ ೩೧
ಸರ್ವ ಜನಕೆ ಸಮತೆ ತೋರಿ ಸುಖವನಿತ್ತೆ ಗುರುಸಿದ್ಧೇಶ ೩೨
ಸರ್ವಧರ್ಮದವರು ನಿನ್ನ ನೋಡಿ ಪಾಡಿ ಗುರುಸಿದ್ಧೇಶ ೩೩
ಸರ್ವಪಾಪಮುಕ್ತರಾಗಿ ನಲಿಯುತಿಹರು ಗುರುಸಿದ್ಧೇಶ ೩೪
ಭಕ್ತನೊಬ್ಬ ನದಿಯೊಳೀಸಿ ಮುಳುಗುತಿರಲು ಗುರುಸಿದ್ಧೇಶ ೩೫
ಭಕ್ತಿಯಿಂದ ನಿನ್ನ ನೆನೆದೊಡವನ ಪೊರೆದೆ ಗುರುಸಿದ್ಧೇಶ ೩೬
ಪುತ್ರರಿಲ್ಲದವರಿಗೆ ನೀನು ಪುತ್ರರಿತ್ತೆ ಗುರುಸಿದ್ಧೇಶ ೩೭
ಸತ್ಯಧರ್ಮ ನಡೆಸುವವರಿಗೆ ವಿತ್ತವಿತ್ತೆ ಗುರುಸಿದ್ಧೇಶ ೩೮
ಚಿಂತೆಯಲ್ಲಿ ಬಳಲಿ ಬೆಂದವರ್ಗೆ ನೀನು ಗುರುಸಿದ್ಧೇಶ ೩೯
ಚಿಂತಿತಾರ್ಥವಿತ್ತು ಸಂತಸವನು ಗೈಯ್ಯು ಗುರುಸಿದ್ಧೇಶ ೪೦
ನ್ಯಾಯನಿಲಯದಲ್ಲಿ ಕೊರಗುತಿರುವ ಜನರು ಗುರುಸಿದ್ಧೇಶ ೪೧
ನ್ಯಾಯನಿಲಿಸುತಿಹರು ನಿನ್ನ ಆಣೆಮಾಡಿ ಗುರುಸಿದ್ಧೇಶ ೪೨
ಸುಳ್ಳಿನಾಣೆಮಾಡಿ ನಿನ್ನ ನಾಮದಲ್ಲಿ ಗುರುಸಿದ್ಧೇಶ ೪೩
ಕೊಳ್ಳಕಂಡು ಸಾಯುತಿಹರು ಕೊರಗಿ ಕೊನೆಗೆ ಗುರುಸಿದ್ಧೇಶ ೪೪
ನಿನ್ನ ನಂಬಿ ಭಜಿಸುತಿರುವ ಜನರ ನೋಡಿ ಗುರುಸಿದ್ಧೇಶ ೪೫
ಉನ್ನತಿಯನು ನೀಡಿ ಸಲಹುತಿರುವೆ ನೀನು ಗುರುಸಿದ್ಧೇಶ ೪೬
ಕಷ್ಟಪಡುತಲಿದ್ದ ಕುಷ್ಠರೋಗಿಯೊಬ್ಬ ಗುರುಸಿದ್ಧೇಶ ೪೭
ನಿಷ್ಠೆಯಿಂದ ಭಜಿಸಿ ರೋಗಮುಕ್ತನಾದ ಗುರುಸಿದ್ಧೇಶ ೪೮
ಭಾವಶುದ್ಧಿಯಿಲ್ಲದವರ ಕಂಡು ಮರುಗಿ ಗುರುಸಿದ್ಧೇಶ ೪೯
ಭಾವಶುದ್ಧಿ ನೀಡಿ ಬೆಳಕನಿತ್ತೆ ನೀನು ಗುರುಸಿದ್ಧೇಶ ೫೦
ಹೊನ್ನು–ಹೆಣ್ಣು–ಮಣ್ಣು ಹುಚ್ಚು ಹಿಡಿದವರಿಗೆ ಗುರುಸಿದ್ಧೇಶ ೫೧

ಜ್ಞಾನನಯನವಿತ್ತು ಸಲುಹಿ ಸುಮತಿಯಿತ್ತೆ ಗುರುಸಿದ್ಧೇಶ ೪೨

ಷಡುಸ್ಥಲಜ್ಞಾನವನ್ನು ಮುದದಿ ಪೇಳ್ದೆ ಗುರುಸಿದ್ಧೇಶ ೪೩
ಷಡ್ರಿಪುಗಳ ಗೆಲವಪರಿಯ ಪೇಳ್ದೆ ಜವದಿ ಗುರುಸಿದ್ಧೇಶ ೪೪

ಜ್ವರದಬಾಧೆಯಿರುವ ಜನಕೆ ತೀರ್ಥವಿತ್ತೆ ಗುರುಸಿದ್ಧೇಶ ೪೫
ಕರುಣೆಯಿಂದ ನೋವನಳಿಸಿ ಭವವಹರಿವೆ ಗುರುಸಿದ್ಧೇಶ ೪೬

ಶಿವನ ಪೂಜೆ ರೋಗಹರಣಗೈವುವೆಂದೆ ಗುರುಸಿದ್ಧೇಶ ೪೭
ಶಿವನ ಪೂಜೆ ಸರ್ವಸಿದ್ಧಿ ಕೊಡುವುವೆಂದೆ ಗುರುಸಿದ್ಧೇಶ ೪೮

ಶಿವನಧ್ಯಾನ ಶಿವನಜ್ಞಾನ ನಿನಗೆ ಶಕ್ತಿ ಗುರುಸಿದ್ಧೇಶ ೪೯
ಶಿವ ಸಮಾಧಿಯಲ್ಲಿ ಲೀನನಾಗುತಿರ್ದೆ ಗುರುಸಿದ್ಧೇಶ ೫೦

ಶಿವನ ಪೂಜೆಗೈದು ಪರಮಶಾಂತಿ ಪಡೆವೆ ಗುರುಸಿದ್ಧೇಶ ೫೧
ಶಿವನ ಸುಖದ ಬೆಳಗು ಬೆಳೆದೆಯಯ್ಯ ನೀನು ಗುರುಸಿದ್ಧೇಶ ೫೨

ಜ್ಞಾನಕುಸುಮ ಲತೆಯಕುಂಜದಲ್ಲಿ ಕುಳಿತು ಗುರುಸಿದ್ಧೇಶ ೫೩
ಧ್ಯಾನಗೈದೆ ವಿರತಿಗಂಧ ತೀಡಿದಯ್ಯ ಗುರುಸಿದ್ಧೇಶ ೫೪

ಭಾವಸಿಂಹ ಪೀಠವೇರಿ ತೃಪ್ತಿಬೀರಿ ಗುರುಸಿದ್ಧೇಶ ೫೫
ನೋವು ಸಾವನಳಿಯುವಂಥ ಸಿದ್ಧಿಪಡೆದೆ ಗುರುಸಿದ್ಧೇಶ ೫೬

ಭಕ್ತಿಯಿಂದ ನಡೆದು ಬೆಳಕುಕಾಣಿರೆಂದು ಗುರುಸಿದ್ಧೇಶ ೫೭
ಭಕ್ತತತಿಗೆ ಮಮತೆಯಿಂದ ತಿಳಿಸಿ ಪೇಳ್ದೆ ಗುರುಸಿದ್ಧೇಶ ೫೮

ನಿರ್ವಿಕಲ್ಪ ಸಮಾಧಿಯೊಳು ಕುಳಿತೆ ನೀನು ಗುರುಸಿದ್ಧೇಶ ೫೯
ನಿರ್ವಿಕಾರಿಯಾದೆ ಭಕ್ತರನ್ನು ತೊರೆವೆ ಗುರುಸಿದ್ಧೇಶ ೬೦

ಸರ್ವಜನರ ಪಾಪಹರಣಗೈವರಾರು? ಗುರುಸಿದ್ಧೇಶ ೬೧
ನಿರ್ವಿಕಲ್ಪದಿಂದ ಎದ್ದು ಮುಖವತೋರು ಗುರುಸಿದ್ಧೇಶ ೬೨

ಎನ್ನ ಕಣ್ಣಿನಲ್ಲಿ ಬಂದು ನಿಲ್ಲು ನೀನು ಗುರುಸಿದ್ಧೇಶ ೬೩
ಎನ್ನ ಜಿಹ್ವೆಯಲ್ಲಿ ಬಂದು ಕುಳಿತುಕೊಳ್ಳು ಗುರುಸಿದ್ಧೇಶ ೬೪

ಎನ್ನ ಚಿತ್ತದಲ್ಲಿ ನಿತ್ಯ ವಾಸಮಾಡು ಗುರುಸಿದ್ಧೇಶ ೬೫
ಎನ್ನ ಭಾವದಲ್ಲಿ ನೆಲೆಸಿ ನಲಿಯೋನಿರತ ಗುರುಸಿದ್ಧೇಶ ೬೬

ಸತ್ಯನಿಧಿಯು ನಿತ್ಯನಿಧಿಯು ಭಾಗ್ಯನಿಧಿಯು ಗುರುಸಿದ್ಧೇಶ ೬೭
ತತ್ತ್ವನಿಧಿಯು ಪುಣ್ಯನಿಧಿಯು ನನಗೆ ನೀನು ಗುರುಸಿದ್ಧೇಶ ೬೮

ನಿನ್ನ ಧ್ಯಾನಯೋಗ ಕರಣತ್ರಯಕೆ ಶಕ್ತಿ ಗುರುಸಿದ್ಧೇಶ ೬೯

ನಿನ್ನ ಜ್ಞಾನಯೋಗ ಜೀವಕಿದುವೆ ಮುಕ್ತಿ ಗುರುಸಿದ್ಧೇಶ ೮೦
ನಿನ್ನ ಶಕ್ತಿ ನಿನ್ನ ಮಹಿಮೆ ನಿನ್ನಯಿರವು ಗುರುಸಿದ್ಧೇಶ ೮೧
ನಿನ್ನ ನೆನೆದು ಭಾವಬಲಿಸಿದವಗೆ ಅರಿವು ಗುರುಸಿದ್ಧೇಶ ೮೨

ಮೂರುಮಲಂಗಳೆಂಬ ಘೋರ ಶರಧಿಯಿಂದ ಗುರುಸಿದ್ಧೇಶ ೮೩
ಪಾರುಮಾಡಿ ಅರುಹುನೀಡಿ ಸಲಹು ತಂದೆ ಗುರುಸಿದ್ಧೇಶ ೮೪

ಹೊರಗೆ ಬಾಧೆ ಒಳಗೆ ಬಾಧೆ ತಾಳಲಾರೆ ಗುರುಸಿದ್ಧೇಶ ೮೫
ಮರವೆ ಮತ್ತೆ ಬಾರದಂತೆ ಕರುಣಿಸಯ್ಯ ಗುರುಸಿದ್ಧೇಶ ೮೬

ಕಾಮ–ಕ್ರೋಧ ಲೋಭ–ಮೋಹ ಮದಗಳುಂಟೆ ಗುರುಸಿದ್ಧೇಶ ೮೭
ನೇಮ ಬಿಡಿಸಿ ನಾಮ ಕೆಡಿಸಿ ಕಾಡುತಿಹವು ಗುರುಸಿದ್ಧೇಶ ೮೮

ಪ್ರಣವನಾದ ಕಿವಿಯಲಿರಿಸಿ ಮಾಯೆಮರೆಸಿ ಗುರುಸಿದ್ಧೇಶ ೮೯
ತ್ರಿಣಯನೊಳಗೆ ಬೆರೆಸು ನಿನ್ನ ಚರಣದಿರಿಸಿ ಗುರುಸಿದ್ಧೇಶ ೯೦

ತರಳ ನಾನು ತಪ್ಪು ಕ್ಷಮಿಸಿ ತೋರು ನಿಜವ ಗುರುಸಿದ್ಧೇಶ ೯೧
ಅರಿವಿನಾರತಿಯನು ಬೆಳಗುವದನು ಕಲಿಸು ಗುರುಸಿದ್ಧೇಶ ೯೨

ಸಿರಿಯುಹರಿಯು ಕರಿಯುಹಿರಿಮೆ ಗರಿಮೆಬೇಡ ಗುರುಸಿದ್ಧೇಶ ೯೩
ಮರಹುಬಿಡಿಸಿ ನಿನ್ನ ಸ್ಮರಣಕವಚ ತೊಡಿಸು ಗುರುಸಿದ್ಧೇಶ ೯೪

ಭವದ ತೃಷೆಯತವಿಸು ಮರಳಿಬಾರದಂತೆ ಗುರುಸಿದ್ಧೇಶ ೯೫
ಶಿವಾನುಭಾವ ನಿತ್ಯ ನೆಲೆಸುವಂತೆಮಾಡು ಗುರುಸಿದ್ಧೇಶ ೯೬

ಅಹಂಕಾರದುರಗ ಕಚ್ಚದಂತೆ ಇರಿಸು ಗುರುಸಿದ್ಧೇಶ ೯೭
ಸೋಹವೆಂಬುದನ್ನು ಚಿತ್ತದಲ್ಲಿ ತುಂಬು ಗುರುಸಿದ್ಧೇಶ ೯೮

ಕಾವಭಾರ ನಿನ್ನದೆಂದು ಬೇಡುತಿರುವೆ ಗುರುಸಿದ್ಧೇಶ ೯೯
ಭಾವಬಲಿಸಿ ಸಿಂಚಿಸೆನಗೆ ಭಕ್ತಿಜಲವ ಗುರುಸಿದ್ಧೇಶ ೧೦೦

ನೀನೆ ತಂದೆ–ತಾಯಿ ಬಂಧು–ಬಳಗ ನೀನೆ ಗುರುಸಿದ್ಧೇಶ ೧೦೧
ನಾನು ಎಂಬುದೆಲ್ಲ ನಶಿಸಿ ನೀನೆಯಾಗು ಗುರುಸಿದ್ಧೇಶ ೧೦೨

ಎಣ್ಣೆ–ಬತ್ತಿ ಪ್ರಣತೆಯುಂಟು ಜ್ಯೋತಿಸಯ್ಯ ಗುರುಸಿದ್ಧೇಶ ೧೦೩
ಕಣ್ಣತಿಮಿರ ಕಳೆದು ಮನದಮಾಯೆ ಹರಿಸು ಗುರುಸಿದ್ಧೇಶ ೧೦೪

ಇಷ್ಟಪ್ರಾಣ ಭಾವಲಿಂಗದಲ್ಲಿ ನನ್ನ ಗುರುಸಿದ್ಧೇಶ ೧೦೫
ನಿಷ್ಠೆಬಲಿಸಿ ಕರುಣವೃಷ್ಟಿ ಸುರಿಸು ಗುರುಸಿದ್ಧೇಶ ೧೦೬

ಭವವಿರುದ್ಧ ಯೋಗಸಿದ್ಧ ಸುಪ್ರಸಿದ್ಧ ಗುರುಸಿದ್ಧೇಶ ೧೦೭
ತವಸುಪುತ್ರ "ಮೂಜಗಂ" ಸುತಾಂಘ್ರಿಪದ್ಮ ಗುರುಸಿದ್ಧೇಶ ೧೦೮

ಮಂಗಲ

ಜಯ ಮಂಗಲಂ ನಿತ್ಯ ಶುಭ ಮಂಗಲಂ
ಜಯ ಜಯತು ಗುರುಸಿದ್ಧ ಶಿವಯೋಗಿಗೆ || ಪಲ್ಲವಿ ||

ವೀರವಿರತಿಯ ಪಡೆದು ಕಾಲಕರ್ಮವ ತೊಡೆದು
ಭೂರಿ ಮಹಿಮೆಯ ತಳೆದ ಕರುಣಾ ನಿಧಿಗೆ
ಮಾರಮರ್ದನಗೈಯುತ್ತು ಆರು ತತ್ತ್ವವ ತಿಳಿಸಿ
ಮಾರಾರಿರೂಪ ಶ್ರೀ ಪರಂಜ್ಯೋತಿಗೆ || ೧ ||

ನಿರ್ವಿಕಲ್ಪದೊಳಿರ್ದು ದುರ್ಮಲವನಳಿಗಳೆದು
ನಿರ್ವಿಕಾರವ ತಳೆದ ಸಿದ್ಧ ಯತಿಗೆ
ಸರ್ವಭಕ್ತರ ಭಕ್ತಿಗಿಷ್ಟಾರ್ಥವೀಯುತ್ತ
ಉರ್ವಿಯೊಳು ಮೆರೆವ ಶ್ರೀ ಜಗದ್ಗುರುವಿಗೆ || ೨ ||

ಗುರುಸಾರ್ವಭೌಮನಿಗೆ ವೀರವೀರತಾಗ್ರಣಿಗೆ
ವರವೀರಶೈವ ಮತ ಜಲಧಿ ಚಂದ್ರನಿಗೆ
ಪರಮಶಕ್ತಿಯ ಪಡೆದು ಧರೆಯೊಳಗೆ ಮೆರೆಯುತಿಪ
ವರ ಮೂರುಸಾವಿರ ಮಠಾಧಿಪತಿಗೆ || ೩ ||

|| ೧ || ನೀನಿರುವೆ ಜಗದ್ಗುರು ಸಾರ್ವಭೌಮ!
ನೀನಿರುವೆ ಸಾಧಕರಿಗೆ ಧ್ಯಾನಧಾಮ!!
ನೀನಿರುವೆ ನಿರ್ವಿಕಲ್ಪ ಸಮಾಧಿಸ್ಥ ತಾತ!
ನೀನಿರುವೆ ಇಷ್ಟಾರ್ಥ ಸಿದ್ಧಿಪ್ರದಾತ!!
ನೀನಿರುವೆ ಮುಕ್ತಿ ಪುರಕೆ ಅಧಿಪತಿಯು!
ನೀನಿರುವೆ ಸದ್ಭಕ್ತರಿಗೆ ಗತಿಯು ಮತಿಯು!!
ನೀನಿರುವೆ ಚಿತ್‌ಕಲಾ ಪರಿಪೂರ್ಣನು!
ನೀನಿರುವೆ ಶೂನ್ಯ ಸಿಂಹಾಸನಾಧೀಶನು!!
ನೀನಿರುವೆ ಸರ್ವ ಧರ್ಮದ ಜನಕೆ ಸಂಜೀವನ!
ನೀನಿರುವೆ ಸಮಸ್ತ ಮಹದ ತತ್ತ್ವಕ್ಕೆ ಸಂಭಾವನ!!

ನೀನಿರುವೆ ನನ್ನ ಪಾಲಿಗೆ ಪರಂಜ್ಯೋತಿ!
ನೀನಿರುವೆ ಶಿವಯೋಗ ಮೆರೆದ ವಿಭೂತಿ!!
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ!
ನೀನೆನ್ನ ಹೃದಯ ಸಿಂಹಾಸನದಲ್ಲಿ ಮಂಡಿಸಿರುವ
ಸನ್ಮೂರ್ತಿ! ಚಿನ್ಮೂರ್ತಿ!

|| ೨ || ಕರೆದರು ಕೆಲವರು ನಿನ್ನನ್ನು ಹುಚ್ಚನೆಂದು;
ಕರೆವರು ಕೆಲಬರು ನಿನ್ನನ್ನು ಸಿದ್ಧನೆಂದು;
ಕರೆವರು ಕೆಲವರು ಸಿದ್ಧಗುರುವೆಂದು;
ಕರೆವರು ಕೆಲಬರು ಗುರುಸಿದ್ಧನೆಂದು:
ನಾನಿನ್ನೆಂತು ಕರೆಯಲಿ, ಗುರುದೇವಾ!
ಭ್ರೂಲತಾಪುರೀಶಕರ್ತೃ ಜಗದ್ಗುರು ಗುರುಸಿದ್ಧೇಶ್ವರಾ
ನಾನಿನ್ನ ಕರೆವೆನು,
ಹಗಲಿರುಳು ನನ್ನ ಮನದಲ್ಲಿ ಮನೆಮಾಡಿಕೊಂಡಿರೆಂದು.

ಚಿತ್ಸುಮನ

ಸಾಹಿತ್ಯ ಪ್ರಕಾರ	:	ವಚನಗಳು
ಮೊದಲ ಮುದ್ರಣ	:	೧೯೭೩
ಎರಡನೆಯ ಮುದ್ರಣ	:	೧೯೭೭
ಮೂರನೆಯ ಮುದ್ರಣ	:	೧೯೮೩
ರಚನೆಯ ವಯಸ್ಸು	:	೪೪
ರಚನಾಸ್ಥಳ	:	ಹುಬ್ಬಳ್ಳಿ

ಶ್ರೀ ಜಗದ್ಗುರು ಗುರುಸಿದ್ಧೇಶ್ವರ ಗ್ರಂಥಮಾಲೆ–೫೭

ಚಿತ್ಸುಮನ

(ವಚನ ಸಂಕಲನ)

ಕರ್ತರು :

ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು

ಶ್ರೀ ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳು

ಮೂರುಸಾವಿರಮಠ, ಹುಬ್ಬಳ್ಳಿ.

೧೯೮೩

ಪ್ರಕಾಶಕರು :
ಶ್ರೀ ಜಗದ್ಗುರು ಗಂಗಾಧರ ಧರ್ಮಪ್ರಚಾರಕ ಮಂಡಳ,
ಮೂರುಸಾವಿರಮಠ, ಹುಬ್ಬಳ್ಳಿ.

ಪ್ರಥಮ ಮುದ್ರಣ–೧೯೭೩
ದ್ವಿತೀಯ ಮುದ್ರಣ–೧೯೭೭
ತೃತೀಯ ಮುದ್ರಣ–೧೯೮೩

ಪ್ರತಿಗಳು : ಒಂದು ಸಾವಿರ

ಬೆಲೆ : ಎಂಟು ರೂಪಾಯಿಗಳು.

ಮುದ್ರಕರು :
"ಪರಂಜ್ಯೋತಿ" ಪಾವರ ಪ್ರಿಂಟಿಂಗ್ ಪ್ರೆಸ್,
ಮೂರುಸಾವಿರಮಠ, ಹುಬ್ಬಳ್ಳಿ.

ಮುನ್ನುಡಿ

ವಚನ ಭಾಂಡಾರದ ಶಾಂತರಸರು ಇದೀಗ ತಮ್ಮ ಅಸಂಖ್ಯಾತಗಳಾದ ವಚನಕಾರರ ಭಾಂಡಾರದಲ್ಲಿ ಶ್ರೀಮೂಜಗಂ ಈ ಹೆಸರನ್ನು ಸೇರಿಸಿಕೊಳ್ಳ ಬೇಕಾಗುತ್ತದೆ. ಅಲೇಖನಾದ ಶೂನ್ಯದಲ್ಲಿ ಅವರ ಪರವಾಗಿ ನಾವೇ ಇಂದು ಆ ಕಾರ್ಯವನ್ನು ಪೂರೈಸಲೇಬೇಕಾಗಿದೆ. ವಚನ ಸಾಹಿತ್ಯ ಅವುದೊಂದು ಕಾಲ, ದೇಶಗಳಿಗೆ ಮಾತ್ರ ಪರಿಮಿತವಾದುದಲ್ಲ. ಅನುಪಮ ಅರಳಿದಲ್ಲಿ ವಚನ ಸಾಹಿತ್ಯದ ಸೌರಭ ಸೂಸುತ್ತದೆ. ಅದು ಬೆಳಗಿನೊಳಗಿನ ಮಹಾ ಬೆಳಗಿನ ಸಾಕ್ಷಾತ್ಕಾರದ ತಿರುಳು, ಅನಿರ್ವಚನೀಯವಾದ ಪರಮಾನಂದವನ್ನು ಸ್ಫುಟ ಗೊಳಿಸುವ ನಿಶ್ಶಬ್ಧ ಸ್ವರೂಪ; ನುಡಿ ಅದರ ಹೊರಮೈ ಮಾತ್ರ. ಅನುಭಾವದ ಮಿಂಚು ಪಳಂಚಿ ವಚನ ಸಾಹಿತ್ಯ ವರ್ಷಾಕಾರವಾಗಿ ಸುರಿಯುತ್ತಿದೆ. ಇಂತಹ ಸಾಹಿತ್ಯವನ್ನು ಅಮರ ಸಾಹಿತ್ಯ, ಅಮೃತ ಸಾಹಿತ್ಯವೆಂದು ಕರೆಯಬೇಕಾಗುತ್ತದೆ.

ಇಂತಹ ವಚನ ಸಾಹಿತ್ಯದ ಮೂಲವೆಲ್ಲಿ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಉಪಲಬ್ಧವಿದ್ದ ವಚನಕಾರರಲ್ಲಿ ದೇವರ ದಾಸಿಮಯ್ಯನವರು ಪ್ರಾಚೀನರೆಂದು ತೋರುತ್ತದೆ. ಆದರೆ ದೇವರ ದಾಸಿಮಯ್ಯನವರ ವಚನಗಳು ಅನುಭಾವ, ಭಾವ, ಭಾಷೆ, ತಾಳ, ಲಯಗಳ ದೃಷ್ಟಿಯಿಂದ ಅತ್ಯಂತ ಪರಿಪೂರ್ಣ ಸ್ಥಿತಿಯಲ್ಲಿ ದ್ದಂತೆ ತೋರುತ್ತದೆ. ಒಂದು ಸಾಹಿತ್ಯ ಪ್ರಕಾರ ಇಂತಹ ಪರಿಪೂರ್ಣ ಸ್ಥಿತಿಯನ್ನು ಮುಟ್ಟಬೇಕಾದರೆ ಅದರ ಹಿಂದೆ ಹಲವು ಶತಮಾನಗಳ ಕೃಷಿ ಇರಬೇಕಾಗುತ್ತದೆ. ಪಂಪಭಾರತದಂತಹ ಉತ್ಕೃಷ್ಟ ಕೃತಿ ಮೈದೋರಬೇಕಾದರೆ ಕ್ರಿ. ಶ. ೪–೫ ನೆಯ ಶತಮಾನಗಳಿಂದ ಚಂಪೂವಿನ ಕೃಷಿ ನಡೆದಿತ್ತು. ಈ ಅನುಭಾವದ ಕೊನೆಯಲ್ಲಿ ಪಂಪ ನಂತಹ ಮಹಾ ಕವಿ ಅವತರಿಸಿ; ಚಂಪೂ ಸಂಪ್ರದಾಯ ಪ್ರತಿಷ್ಠಾಪನಾಚಾರ್ಯರಾದ ಹರಿಹರ ರಾಘವಾಂಕರು, ರಗಳೆ ಷಟ್ಪದಿಗಳಲ್ಲಿ ಸಂಪ್ರದಾಯಕ್ಕೆ ಆಚಾರ್ಯ ಪುರುಷರಾಗಬೇಕಾದರೆ, ವಚನ ಸಾಹಿತ್ಯದ ಅಪಾರವಾದ ಅನುಭವದ ಆಸರ ವಿದ್ದಿತು. ದೇವರ ದಾಸಿಮಯ್ಯನವರ ಹಿಂದೆ ಇನ್ನೂ ಕೆಲ ಶತಮಾನಗಳಿಂದ ವಚನ ವಾಹಿನಿ ಪ್ರವಹಿಸಿರುವ ಸಂಭವವಿರುತ್ತದೆ. ಆ ಪ್ರವಾಹ ಗುಡ್ಡಬೆಟ್ಟ ಗಳನ್ನು ಕೊರೆದು, ಹರಿ ಕಂದರಗಳನ್ನು ದಾಟಿ, ಬೈಲು ಪ್ರದೇಶಕ್ಕೆ ಬಂದು ಶಾಂತ ಗಂಭೀರವಾಗಿ ಪ್ರವಹಿಸಿರಬೇಕಾಗುತ್ತದೆ. ಭಾಷೆ ಹದಗೊಳ್ಳಬೇಕಾದರೆ, ರೂಪಕ ಪರಂಪರೆ ಸಿದ್ಧಿಯಾಗಬೇಕಾದರೆ, ಅನುಭಾವದ ಎತ್ತರ ಬಿತ್ತರ ಆಳಗಳನ್ನು ಸೆರೆಗೈಯುವ ತ್ರಾಣ ಅದಕ್ಕೆ ಬರಬೇಕಾದರೆ, ಹನ್ನೊಂದನೆಯ ಶತಮಾನದ ಹಿಂದೆ ನಾಲ್ಕೈದು ಶತಮಾನಗಳ ವರೆಗಿನ ಕೃಷಿ ನಡೆದಿರಬೇಕು.

ದಕ್ಷಿಣ ಭರತ ಖಂಡದಲ್ಲಿ ಶೈವ ಧರ್ಮ ಅತಿ ಪ್ರಾಚೀನ ಕಾಲದಿಂದಲೂ ರೂಢವಾಗಿದ್ದಿತು. ಜೈನ, ಬೌದ್ಧ ಧರ್ಮಗಳ ಪ್ರಾಬಲ್ಯದಿಂದ ಶೈವ ಧರ್ಮ್ಮಗಳ ಪ್ರಗತಿಗೆ ವಿಶೇಷವಾದ ತಡೆಯುಂಟಾಯಿತು. ಈ ಕಾರ್ಯ ಕ್ರಿ.ಶ. ಪೂರ್ವ ಸುಮಾರು ಮೂರನೆಯ ಶತಮಾನದಿಂದ ಕ್ರಿ. ಶ. ಮೂರು ನಾಲ್ಕನೆಯ ಶತಮಾನಗಳವರೆಗೆ ಅವಿಚ್ಛಿನ್ನವಾಗಿ ನಡೆದಂತೆ ತೋರುತ್ತದೆ. ಕ್ರಿ. ಶ. ಐದನೆಯ ಶತಮಾನದಿಂದ ದಕ್ಷಿಣ ಭರತ ಖಂಡದಲ್ಲಿ ಒಮ್ಮೆಲೆ ಈ ನಾಸ್ತಿಕ ಪಂಥಗಳಿಗೆ ವಿರೋಧ ತಲೆದೋರಿದೆ. ತಮಿಳನಾಡಿನ ನಾಯನಾರ್ಯರು ಈ ಕಾರ್ಯವನ್ನು ಪ್ರಥಮತಃ ಕೈಕೊಂಡರು. ಇವರನ್ನು ೬೩ ಪುರಾತನರೆಂದು ಕರೆಯಲಾಗುತ್ತದೆ. ಅವರ ತೇವಾರಂ ಸಾಹಿತ್ಯ ತಮಿಳ ದೇಶದಲ್ಲಿ ಅನುಭವ ಸಾಹಿತ್ಯದ ಅಗ್ರಸ್ಥಾನದಲ್ಲಿದೆ ಈ ಜೈನ, ಬೌದ್ಧ ಮತಗಳ ವಿರುದ್ಧ ಹೋರಾಟ ಕನ್ನಡ ನಾಡಿನಲ್ಲಿಯೂ ಅದೇ ಕಾಲಕ್ಕೆ ನಡೆದಿರುವ ಸಂಭವವಿದೆ. ತೇವಾರಂ ಇದಕ್ಕೆ ಸಮವಾದ ಸಾಹಿತ್ಯ ಕನ್ನಡದಲ್ಲಿಯೂ ಉದಯವಾಗಿರಬೇಕು. ಶಿವಶರಣರು ಹಾಡುಗಳನ್ನು ರಚಿಸಿರುವರೆಂದು ತಿಳಿದುಬರುತ್ತದೆ. ನಮಗೆ ಉಪಲಬ್ಧವಿದ್ದ ವಚನ ಸಾಹಿತ್ಯದಲ್ಲಿ ೧೦ನೆಯ ಶತಮಾನದ ವಚನಕಾರರ ಕೆಲವು ಅನುಭಾವದ ಹಾಡುಗಳು ದೊರೆಯುತ್ತವೆ. ಈ ಹಾಡುಗಳು ತಮಿಳಿನ ತೇವಾರು ಸಾಹಿತ್ಯಕ್ಕೆ ಹೊವ್ವ ಕೈಯಾಗಿವೆ. ಮೊದಮೊದಲು ಕ್ರಿ. ಶ. ೪-೫ ಶತಮಾನಗಳಿಂದ ಈ ಹಾಡಿನ ರೂಪದ ಅನುಭಾವ ಸಾಹಿತ್ಯ, ಕನ್ನಡದಲ್ಲಿಯೂ ಮೈದೋರಿ, ಒಳಬಳಗೆ ಅದು ಗದ್ಯದ ತಾಳ ಲಯಗಳ ಸ್ವರೂಪವನ್ನು ಪಡೆಯುತ್ತ ನಡೆದಿರಬೇಕು. ಅಂದರೆ ವಚನ ಸಾಹಿತ್ಯದ ಕೃಷಿಯು ಕ್ರಿ. ಶ. ೪-೫ನೇ ಶತಮಾನದ ಹಿಂದಿನಿಂದ ನಡೆದಂತೆ ಊಹಿಸಬೇಕಾಗುತ್ತದೆ. ಈ ದಿಶೆಯಲ್ಲಿ ಸಂಶೋಧನೆ ಇನ್ನೂ ಅಗತ್ಯವೆಂದು ಬೇರೆ ಹೇಳುವ ಅವಶ್ಯಕತೆಯಿಲ್ಲ.

ವಚನಸಾಹಿತ್ಯ ಚರಿತ್ರೆಯಲ್ಲಿ ಷಟ್‌ಸ್ಥಲಗಳನ್ನು ರೂಪಿಸಬೇಕಾಗುತ್ತದೆ. ಮೊದಲನೆಯದು ದೇವರ ದಾಸಿಮಯ್ಯನವರ ಹಿಂದಿನಕಾಲ. ಎರಡನೆಯದು ಬಸವಾದಿ ಪ್ರಮಥರ ಕಾಲದ ೧೨ನೆಯ ಶತಮಾನ. ಮೂರನೆಯದು ೧೫ನೆಯ ಶತಮಾನದ ಪುನರುತ್ಥಾನ ಯುಗ. ನಾಲ್ಕನೆಯದು ಶೂನ್ಯ ಸಂಪಾದನೆಗಳ ರಚನೆಯಕಾಲ. ಐದನೆಯದು ವಚನಗಳ ವ್ಯಾಖ್ಯಾನಕ್ಕೆ ಪ್ರಸಿದ್ಧವಾದ ೧೭ನೆಯ ಶತಮಾನ. ಆರನೆಯದು ತೋಂಟದ ಸಿದ್ಧಲಿಂಗ ಶಿವಯೋಗಿ, ಷಣ್ಮುಖ ಶಿವಯೋಗಿಗಳ ಕಾಲದ ಸೃಜನಯುಗ. ಈ ಕೊನೆಯ ಯುಗವು ಇಂದಿಗೂ ಮುಂದುವರಿದು ಕೊಂಡು ಬಂದಿದೆ. "ಶ್ರೀ ಮೂಜಗಂ" ವಚನಗಳು ಈ ಕೊನೆಯ ಸ್ಥಲಕ್ಕೆ ಸಂಬಂಧ ಪಟ್ಟವು.

ಇತ್ತೀಚೆಗೆ ಕೆಲವು ಜನ ಸಾಹಿತ್ಯಜ್ಞರು ವಚನ ರೂಪದಲ್ಲಿ ಬರೆದವನ್ನಲ್ಲಿ

ವಚನ ಸಾಹಿತ್ಯವೆಂದು ಕರೆಯತೊಡಗಿರುವರು. ರಂಗಣ್ಣನವರ ವಚನಗಳು, ಸಾಮಾಜಿಕ ಸಂವಚನಗಳು ಮುಂತಾದವನ್ನು ವಚನ ಸಾಹಿತ್ಯದ ಚರಿತ್ರೆಗೆ ಸೇರಿಸುವ ಸಾಹಸ ಕಾರ್ಯ ನಡೆದಿರುತ್ತದೆ. ವಚನ ಸಾಹಿತ್ಯಕ್ಕೆ ಮೂಲ ನಿಧಿ ಅದರ ಬಾಹ್ಯ ರೂಪವಲ್ಲ, ಅದರ ಧಾರೆಯಲ್ಲ, ಅನುಭಾವವೆ ಅದರ ಅಂತರಂಗ ಆ ಶಿವಾನುಭಾವ ತಂತಾನೆ ಅರಳಿ ವಚನ ಸಾಹಿತ್ಯವಾಗುತ್ತದೆ. ಆದುದರಿಂದ ಇದು ವಚನ ಎಂದು ಹೇಳಬೇಕಾದರೆ ಮೊದಲು ಅದರ ಸ್ಥಾಯಿ ಏನೆಂಬುದನ್ನು ನೋಡಬೇಕಾಗುತ್ತದೆ. ಮೂಜಗಂ ವಚನಗಳು ನಿಃಸ್ಸಂದೇಹವಾಗಿ ನಮ್ಮ ವಚನ ಸಾಹಿತ್ಯದ ಉಜ್ವಲ ಪರಂಪರೆಯಲ್ಲಿ ದೇದಿಪ್ಯಮಾನವಾಗಿ ಬೆಳಗುತ್ತವೆ.

ಮೂಜಗಂ ಪರಕರುಣೋದಯದಿಂದ ಜನ್ಮವೆತ್ತವರು. ಮಹಾ ತಪಸ್ವಿಗಳಾದ ಇಲಕಲ್ಲ ಶ್ರೀ ವಿಜಯಮಹಾಂತ ಶಿವಯೋಗಿಗಳವರ ಸದ್ವಂಶದಲ್ಲಿ; ಹಾನಗಲ್ಲ ಕುಮಾರಸ್ವಾಮಿಗಳ ಪರಮಾಶೀರ್ವಾದ ಹಾಗೂ ಪವಿತ್ರ ಸಂಕಲ್ಪದಿಂದ ಜನಿಸಿದ ಪುಣ್ಯಶಿಶು. ಮೂರು ನಾಲ್ಕು ವರುಷಗಳ ಶೈಶವದಲ್ಲಿಯೇ ಶಿವಯೋಗ ಮಂದಿರದ ಪವಿತ್ರ ವಾತಾವರಣ ಪ್ರಾಪ್ತವಾಯಿತು. ಮಗುವಿಗೆ ಧೂಳಕ್ಕರದ ಶಿಕ್ಷಣ ಮೊದಲ್ಗೊಂಡು ಆಧ್ಯಾತ್ಮ ಶಿಕ್ಷಣದವರೆಗಿನ ಎಲ್ಲ ವಿದ್ಯೆ ಶಿವಯೋಗ ಮಂದಿರದ ಬಯಲಿನಲ್ಲಿ ದೊರೆಯಿತು. ಆ ಬಯಲು ಅವರಿಗೆ ಬೆಳಕಾಯಿತು. ಹರಿಯುವ ಮಲಪ್ರಭೆ, ಎದ್ದುನಿಂತ ಬೆಟ್ಟ, ಗಿಡಗಂಟಿಗಳ ಕೊರಳೊಳಗಿಂದ ಬರುವ ಉಲಿವು, ಇವೆಲ್ಲ ಶ್ರೀಗಳ ಕಾವ್ಯದಲ್ಲಿ ಕಣ್ದೆರೆದು ಮುಂದೆ ಕಾಶಿಗೆ ಹೋಗಿ ಸಂಸ್ಕೃತ ಹಾಗೂ ಇಂಗ್ಲೀಷಿನಲ್ಲಿ ಉಚ್ಚ ಅಭ್ಯಾಸಮಾಡಿ ಉನ್ನತ ಪದವಿಗಳನ್ನು ಪಡೆದರೂ ಶಿವಾನುಭಾವ, ಕಾವ್ಯಾನುಭಾವಗಳು ಅವರನ್ನು ಕೈಬಿಡಲಿಲ್ಲ. ಇವೆರಡೂ ಅವರಿಗೆ ಎರಡು ಕಣ್ಣುಗಳಾಗಿಯೆ ಬೆಳೆದವು. ಶ್ರೀಗಳು ಮೊದಮೊದಲು ಒಂದು ಕೈ ಬರಹದ ಪತ್ರಿಕೆಯಲ್ಲಿ ಸುಂದರವಾದ ಅಕ್ಷರಗಳಿಂದ, ಬಂಧುರವಾದ ಕವನಗಳನ್ನು ರಚಿಸಿ ಅದನ್ನು ಸಾರ್ವಜನಿಕರ ಅವಗಾಹನೆಗೆ ತಂದುದು; ಶ್ರೀಗಳವರ ದ್ವಾದಶ ವರ್ಷದ ಬಾಲ್ಯದಲ್ಲಿ ಬೆಳೆಯು ಸಿರಿ ಮೊಳಕೆಯಲ್ಲಿ ಎಂಬಂತೆ ಸಾಹಿತ್ಯ, ಸಂಘಟನೆ, ಶಿವಯೋಗ ಸಾಧನೆ ಮುಂತಾದವೆಲ್ಲ ಬಾಲ್ಯದಲ್ಲಿ ಅಂಕುರಿಸಿದವು. ಹಾನಗಲ್ಲ ಕುಮಾರ ಮಹಾಸ್ವಾಮಿಗಳವರ ಕನಸು ನನಸಾಗುವ ಸಾಕಾರ ಸ್ವರೂಪವೆ ಮೈವೆತ್ತು ಬಂದಂತಾಗಿದ್ದಿತು. ಶ್ರೀಗಳವರ ಬಾಲ್ಯದ ಆಟ, ಅವರ ಸಾಹಿತ್ಯ ಪ್ರೇಮ, ನಿಸರ್ಗದ ನೋಟ, ಅವರ ಮಾಟ ಕೂಟಗಳನ್ನು ಕಂಡವರಿಗೆ ಇವು ಕಾರಣಿಕರೆಂದು ಸಹಜವಾಗಿಯೆ ವೇದ್ಯವಾಗುತ್ತಿದ್ದಿತು. ಅಂದಿನ ಭರವಸೆಗಳು ಅವರನ್ನು ಅಲ್ಲಮಪ್ರಭು ಸಂಪ್ರದಾಯದ ಜಗದ್ಗುರು ಪೀಠಕ್ಕೇರಿಸಿತು. ಮುಕ್ತಮನಸ್ಸು, ಔದಾರ್ಯ, ಸಮಾಜದ ಕಳಕಳಿ, ಕಾವ್ಯಾರಾಧನೆ, ಅಧ್ಯಾತ್ಮದ ಹಂಬಲ, ಸಾಧನೆ ಇವೆಲ್ಲವುಗಳಿಂದ ಅವರ ವ್ಯಕ್ತಿತ್ವ

ಸಹಸ್ರಶೀರ್ಷ, ಸಹಸ್ರಾಕ್ಷರರಂತೆ ಬೆಳೆಯುತ್ತದೆ. ಜಗದ್ಗುರು ಪೀಠವನ್ನಲಂಕರಿಸಿದ ಮಹಾ ಶಿವಯೋಗಿಗಳು ನಮ್ಮ ದೇಶದ ಎಲ್ಲೆಯನ್ನು ದಾಟಿ ವಿದೇಶಕ್ಕೆ ಹೋಗಿ ವೀರಶೈವ ದರ್ಶನ, ಹಿಂದೂ ಸಂಸ್ಕೃತಿಗಳ ಪ್ರತ್ಯಕ್ಷ ನಿದರ್ಶನವಾಗಿ ತೋರಿದರು. ಕೆಲವರಂತೂ ತುಂಬಿದ ಸಭೆಯಲ್ಲಿ ಇವರ ಗಂಭೀರವಾದ ಶಾಂತಪ್ರಸನ್ನ ವ್ಯಕ್ತಿತ್ವವನ್ನು ಕಂಡು ನಮ್ಮ ಹಿಂದಿನ ಬುದ್ಧ, ಬಸವೇಶ್ವರಾದಿಗಳನ್ನು ಸ್ಮರಿಸಿಕೊಂಡರಂತೆ! ಇಂದಿಗೂ ಮೂರುಸಾವಿರಮಠಕ್ಕೆ ಹೋದರೆ ಹಿಂದಿನ ಜಗದ್ಗುರುಗಳವರ ಶಿಕ್ಷಣದ ಪರಂಪರೆಯನ್ನು ಮುಂದುವರಿಸಿಕೊಂಡು ಹೋದುದಲ್ಲದೆ ಇಂದು ನಾಡಿಗೆ ಅವಶ್ಯವಿದ್ದ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದರು. ಎಲ್ಲಿದ್ದರೂ, ಏನಾದರೂ, ಜಗದ್ಗುರುಗಳವರು ಸಾಹಿತ್ಯವನ್ನು ಕೈ ಬಿಡಲಿಲ್ಲ, ಶಿವಾನುಭವ ಮರೆಯಲಿಲ್ಲ, ಇಲ್ಲಿ ಪ್ರಕಟವಾಗುತ್ತಿರುವ ಚಿತ್ಸುಮನವೆ ಇದಕ್ಕೆ ನಿದರ್ಶನವಾಗಿದೆ.

ಚಿತ್ಸುಮನ ಎರಡುನೂರಾ ಮೂವತ್ತು ವಚನಗಳ ಸಂಗ್ರಹ. ಅದರಲ್ಲಿ ಷಟ್‌ಸ್ಥಲಗಳನ್ನು ಹೀಗೆ ಕಲ್ಪಿಸಬಹುದು:—

೧) ಈ ಪ್ರಪಂಚದ ಇರವು.
೨) ಗುರುವಿನ ನೆನಹು.
೩) ಸಾಧನೆಯ ಸ್ಥಿತಿ.
೪) ಸಿದ್ಧಿಯ ಹಂತ.
೫) ವ್ಯಷ್ಟಿ ಸಮಷ್ಟಿಗಳ ಐಕ್ಯ.
೬) ಪರಮಾನಂದದ ಸ್ಥಿತಿ.

ನಿಜ ಸುಖವೆಂಬುದು ಕನಸಿನ ಗಂಟಾಗಿಹುದಯ್ಯಾ
ಅರಿವಿನ ಇರವನರಿಯದೆ ಕೊರಗುತ್ತಲಿದ್ದೇನೆ
ತಾಪತ್ರಯದ ತಾಕಲಾಟದಿಂದ
ಬಸವಳಿದು, ಬಾಯಾರಿ, ಕಸವಿಸಿಕೊಳ್ಳುತ್ತಲಿದ್ದೇನೆ....

ಈ ಭಾವನೆಯಲ್ಲಿ ಜಗದ್ಗುರುತ್ವದ ಉಪಾಧಿ ದೂರ ಸರಿದಿದೆ. ಆತ್ಮದ ಹಂಬಲ ಪ್ರಕಟನೆಗೆದು ನಿಂತಿದೆ. ಪೂಜನೆಗಳ ಇವು ಅಪಾರವಾಗಿದ್ದರೂ ನಿಜ ಸುಖವು ಅಲ್ಲಿಲ್ಲವೆಂಬುವರ ಅರಿವಾಗಿದೆ. ಅಂತೆಯೆ ನಿಜಸುಖವೆಂಬುದು ಕನಸಿನ ಗಂಟಾಗಿಹುದಯ್ಯಾ ಎಂದು ಉದ್ಗಾರ ತೆಗೆದಿರುವರು. ಇದು ಸಾಧಕನಲ್ಲಿ ಉಂಟಾಗುವ ಮೊದಲ ಸ್ಥಿತಿ ಇದ್ದು ಇರವಿನ ಬಗೆಗೆ ಅತೃಪ್ತಿ, ಅಸಮಾಧಾನ, ಕೊರತೆಗಳ ಭಾವನೆ, ಸಂವೇದನೆ, ಉಂಟಾಗದೆ ಹೋದರೆ ಅಲ್ಲಿ ಗತಿ ಇಲ್ಲ, ಪ್ರಗತಿ ಇಲ್ಲ. ಚಿತ್ಸುಮನದ ಪ್ರಾರಂಭದ ವಚನಗಳಲ್ಲಿ ಸಾಧಕನ ಪ್ರಥಮ ಹಂತದ ಈ ಕೊರಗು ಸ್ಪಷ್ಟವಾಗಿ ಕೇಳಿಬರುತ್ತದೆ. ಬಸವಳಿದು ಬಾಯಾರಿ, ಕಳವಳಗೊಳ್ಳುತ್ತಲಿದ್ದೇನೆ ಎಂಬ ನುಡಿಯಲ್ಲಿ ನಿಜವಾದ ಆರ್ತಧ್ವನಿ ಇದೆ. ಕೊನೆಗೆ ತರಳನ ತಪ್ಪ

ಮನ್ನಿಸಿ ತಾತನು ಮೊಮ್ಮಗನನ್ನು ಅಪ್ಪಿಕೊಳ್ಳುವಂತೆ ನೀನೆನ್ನಪ್ಪಿಕೊಳ್ಳಬೇಕೆಂದು ಕರ್ತೃ ಗುರುಸಿದ್ಧೇಶನನ್ನು ಭಕ್ತಿಭಾವದಿಂದ ಪ್ರಾರ್ಥಿಸಿದ್ದಾರೆ. ಈ ಕಳವಳಕ್ಕೆ ಕಾರಣ ಮೋಹದ ಪಂಜರ ಮಾಯೆಯ ಬಂಧನವೆಂಬುದನ್ನು ಅರಿತಿರುವರು. ಮೋಹ ಮಾಯೆಗಳು ಪ್ರಪಂಚದಲ್ಲಿ ಯಾರನ್ನೂ ಬಿಟ್ಟಿಲ್ಲ. ಪ್ರಪಂಚಕರಿಗೆ ಒಂದು ರೀತಿಯಿಂದ ಕಾಡಿದರೆ ವೈರಾಗ್ಯಶೀಲರನ್ನು ಮತ್ತೊಂದು ರೀತಿಯಿಂದ ಕಾಡುತ್ತವೆ. ಬಂಧನ ಹರಿದು, ಆತ್ಮ ನಿತ್ಯಸುಖದಲ್ಲಿ ಲೋಲಾಡುವ ವರೆಗೆ ಈ ಮಾಯೆ ಇದ್ದೇ ಇರುತ್ತದೆ ಆಗ ಮಾತಿನ ಚಪಲತೆಗೆ ಮನ ಮೆಚ್ಚುತ್ತದೆ. ಮೈಮರೆಯುತ್ತದೆ. ವೇಷ ಭಾಷೆಯ ಮೋಡಿಗೆ ಮೋಸ ಹೋಗುತ್ತನೆ. ಸಂಚು ತಿಳಿಯದ ಮಾತಿನ ಮಿಂಚಿಗೆ ಮನ ಮರಳಾಗುತ್ತದೆ. ಈ ಮಾತು ಜ್ಯೋತಿರ್ಲಿಂಗವಾಗಬೇಕೆಂಬುದು ಶ್ರೀಗಳವರ ಹಾರೈಕೆ. ತಮ್ಮ ಮನವನ್ನು ಪದರು ಪದರಾಗಿ ಹಿಂಜಿ ಹಿಂಜಿ ಲೋಕದ ಮುಂದೆ ಇಡುತ್ತಾರೆ. ಗೋಪುರವ ಕಟ್ಟಿಸಿದೆನೆಂದು ಗೌಪ್ಯ ಅಹಂಕಾರವೇತಕಯ್ಯಾ ಎಂದು ತಮಗೆ ತಾವೆ ಪ್ರಶ್ನಿಸುವರು ಗೋಪುರದ ಸುತ್ತು ದೀಪಗಳಿರಬೇಕೆಂದು ರೂಪಕ ಕಾವ್ಯದಲ್ಲಿ ಅನುಭಾವದ ಆಳವನ್ನು ಚಿತ್ತರಿಸಿರುವರು. ಅದಿಲ್ಲದೆ ಮಾಡಿದರೆ ಗೋಪುರ ಗಾಳಿಗೋಪುರವೆಂದು ಎಷ್ಟು ಸ್ಫುಟವಾಗಿ, ಕಾವ್ಯಮಯವಾಗಿ ಹೇಳಿರುವರು! ಹೃದಯವೆಂಬ ಕಾಸಾರದಲ್ಲಿ ಮನೋವಿಕಾರವೆಂಬ ಮೀನಗಳಂತೆ ಈ ರೂಪಕವನ್ನು ಕವಿ ಸಂಪೂರ್ಣವಾಗಿ ವಿವರಿಸಿರುವರು. ಆ ಮೀನುಗಳು ಗಾಳವ ಬಿಟ್ಟರೆ ಹೊರಗೆ ಬರದಾಗಿವೆ, ಮನೋವಿಕಾರದ ಸ್ಥಿತಿಯನ್ನು ಇದಕ್ಕಿಂತಲೂ ಹೆಚ್ಚು ಸ್ಫುಟವಾಗಿ ಹೇಳಲು ಸಾಧ್ಯವಿಲ್ಲ. ಇದಕ್ಕೆಲ್ಲ ಕಾರಣ ಮೋಹ. ಆ ಮೋಹದಿಂದ ಮರೆವು ಆವರಿಸಿ ಸ್ಮೃತಿವಿಭ್ರಮ ಉಂಟಾಗುತ್ತದ. ತಾವಾರೆಂಬುದನ್ನು ಮರೆತು ಹೋಗುತ್ತದೆ. ಜೀವಿಗಳು ದೀಪದ ಹುಳುಗಳಂತೆ ಸಾಯುತ್ತವೆ. ಪ್ರಪಂಚದ ಈ ಕಷ್ಟಗಳನ್ನು ಕಂಡು ಕವಿಯ ಮನ ನೊಂದಿದೆ, ಬೆಂದಿದೆ. ಜೀವನ ಯಾತ್ರೆಯಲ್ಲಿ ನೊಂದು ಬೆಂದಿರುವೆನಯ್ಯಾ ಎಂಬ ಉದ್ಗಾರ ಇದಕ್ಕಾಗಿ ಬಂದಿದೆ. ಕಷ್ಟ ನಷ್ಟಗಳನ್ನು ಸಹಿಸಿರುವರು. ದಡವ ಮುಟ್ಟಿಸುವ ಅಂಬಿಗರು ನಡು ನೀರಿನಲ್ಲಿ ಕೈಬಿಟ್ಟು ಹೋಗಿರುವರು. ಕರ್ತೃ ಗುರುಸಿದ್ಧೇಶನ ಧ್ಯಾನವೆಂಬ ನೌಕೆ ದಡವನ್ನು ಮುಟ್ಟಬೇಕಾಗಿದ. ಆಸೆಯೆಂಬ ರಕ್ಕಸಿಯು ಗುರುವಿನ ಧ್ಯಾನ್ಯವನ್ನು ಬಿಡಿಸಿ ನಾಶಪಡಿಸುತ್ತಿಹುದು ಅದ ಕಂಡು ಮನ ಮರುಕಪಡುತ್ತಿಹುದು. ಮಂಜು ತುಂಬಿದ ಮುಂಜಾವದಂತೆ ಮನವು ಮಬ್ಬಾಗಿಹುದು. ಶಿವಧ್ಯಾನವೆ ಅದಕ್ಕೆ ತಾರಕವೆಂದು ಧ್ಯಾನಸಕ್ತರಾದರೆ ಮನವು ನಿಲ್ಲಲೊಲ್ಲದು. ಮನ-ಏವ ಮನುಷ್ಯಾನಾಂ ಕಾರಣಂ ಬಂಧ ಮೋಕ್ಷಃ. ಚಂಚಲವಾದ ಮನಸ್ಸನ್ನು ಹಿಡಿದು ನಿಲ್ಲಿಸಬೇಕೆಂಬುದೆ ಸಾಧಕನ ಆಶೆಯಾಗಿದೆ. ಎನ್ನ ಚಿತ್ತ ಬಿತ್ತಿಯ ಮೇಲೆ ನಿನ್ನ ಚಿತ್ರವನೊತ್ತದಿದ್ದರೆ ನಾನೆಂತು ಬದುಕುವೆ ಹೇಳಾ

ಎಂದು ಸದ್ಗುರುವನ್ನು ಕೇಳುವರು. ಈಗ ಬದುಕುವ ದಾರಿ ಹೊಳೆದಿದೆ. ಮನದ ಡೋಲಾಯಮಾನ ಸ್ಥಿತಿ ಅಳಿದಿದೆ. ಆರಂತಸ್ತಿನ ಮಹಾದ್ವಾರದ ಕಟ್ಟಿಸಿದೆನೆಂದು ಅರಿವುದ ಮರೆಯಿಸದಿರು ದೇವಾ, ಆರಳಿದು ಮೂರು ಕಳೆವ ಧೀರತನವ ಪಾಲಿಸಯ್ಯ ಎಂದು ಕೇಳುವರು. ಅರಿಷಡ್ವರ್ಗಂಗಳನ್ನು, ಸತ್ವ, ತಮ, ರಜತ್ವ ಗುಣ ವಿಕೃತಿಯನ್ನು ಕಳೆವ ಧೀರತನವನ್ನು ಪಾಲಿಸಬೇಕೆಂದು ಕೇಳಿಕೊಳ್ಳುತ್ತಾರೆ. ಭಕ್ತಿ ನಿಷ್ಠೆಯಾದುದರ ಕುರುಹು ಇದು. ಈಗ ಶಿವಪೂಜೆಯ ಅರ್ಥ ಸಾಧಕನಿಗೆ ವಿವರ ವಿವರವಾಗಿ ಹೊಳೆಯತೊಡಗಿದೆ. ಶಿವಪೂಜೆ ಮಾಡುವನಯ್ಯ ಮನ ನಿಲ್ಲದೆಂದು ಹೇಳಿ ಶಿವಪೂಜೆಯ ರಹಸ್ಯ ಆಡಂಬರಕ್ಕಲ್ಲ, ಮನಸ್ಸನ್ನು ಸ್ಥಿರವಾಗಿ ನಿಲ್ಲಿಸಲು, ವಿಷಯವನ್ನು ಗೆಲ್ಲಲು, ಭಕ್ತಿಯನ್ನು ಬೆಳೆಸಲು, ಲಿಂಗವನ್ನು ಅರಿಸಲು, ಅತಿ ಸುಂದರವಾದ ನಾಲ್ಕು ಮಾತುಗಳಲ್ಲಿ ಶಿವಪೂಜೆಯ ರಹಸ್ಯವನ್ನು ಚಿತ್ರಿಸಿರುವರು. ಈ ವಿವರಣೆಯಲ್ಲಿ ಕೃತ್ರಿಮತೆ ಸೋಂಕಿಲ್ಲ. ಏಕೆಂದರೆ ಈ ಶಿವಪೂಜೆ ಅವರ ನಿತ್ಯ ಜೀವನದ ಉಸಿರು. ಆ ಉಸಿರು ಪರಿಮಳವಾಗಿ ಸೂಸುತ್ತದೆ. ಈ ಲಿಂಗದ ನೆನಹಿನ ಧ್ಯಾನದಲ್ಲಿ ಕಾಯಕವೆ ಕೈಲಾಸವೆಂದು ನಂಬಿ ಸದ್ಗುರುವಿನ ಸೇವೆಯಲ್ಲಿ ನಿರತರಾಗಿರುವರು. ಲೋಕದಲ್ಲಿ ಇದ್ದು ಇಲ್ಲದಂತಿರುವ ಹಾದಿಯನ್ನು ಅರಸುತ್ತಿರುವರು. ಈ ಅಂತರಂಗದ ಸಾಧನೆ, ನಿರಂತರ ನಡೆದು ಹೊಯ್ದಾಟದ ಮನಕ್ಕೆ ಶಾಂತಿ ತರುತ್ತದೆ. ಆ ಪರಮಾನಂದದಲ್ಲಿ ಶರಣನು ಸುತ್ತಲಿನ ಸಮಾಜವನ್ನು ನೋಡುತ್ತಾನೆ, ಅಲ್ಲಿ ಕಾಣುವ ಡಾಂಭಿಕತನ ಶ್ರೀಗಳವರ ಮನಸ್ಸಿಗೆ ವ್ಯಥೆಯನ್ನುಂಟು ಮಾಡಿದೆ. ಭಿಕ್ಷೆಯನ್ನು ಕೇಳಿದರೆ ಕೊಡಲೊಲ್ಲದು ಈ ಜನ, ಮೋಸದಿಂದ ಲಕ್ಷ ಲಕ್ಷ ಹಾಳುಮಾಡುತ್ತಿರುವ ಹಣ ಸತ್ಪಾತ್ರ ಸಲ್ಲದು, ಲಿಂಗಪೂಜೆಗೆ ಹೊಲ್ಲದೆಂದು ಸ್ಪಷ್ಟವಾಗಿ ನುಡಿದಿರುವರು. ಕಜ್ಜ ಎಸಗದೆ ಜನವ ಬಯಸುತ್ತಿಹರನಾ ಕಂಡು; ಕಾಯಿ ಹಣ್ಣಾದರೇನಂತೆ ಸಿಹಿ ಇರದನ್ನಕ್ಕರ ಎಂದು ಕೇಳುವರು.

ಶ್ರೀಗಳವರಿಗೆ ಸಮಾಜ ಸೇವೆಯೆ ಲಿಂಗಪೂಜೆ, ಸಮಾಜದೊಳಗಿನ ಕುಂದು ಕೊರತೆಗಳನ್ನು ಕಂಡು ಬಹಳ ನೊಂದಿರುವರು ತಲೆಗೊಂದು ಪಕ್ಷದ ಕಟ್ಟಿ ಸಮಾಜ ಮಂದಿರದ ಸಂಹರಿಸುತ್ತಿಹರು ನೋಡಯ್ಯ ಎಂದು, ಪ್ರತಿಷ್ಠಾಭೂತದ ಬೆನ್ನು ಹತ್ತಿದವರನ್ನು ಕುರಿತು ನುಡಿದಿರುವರು. ಜನ, ದಿನಕ್ಕೊಂದು ಸಂಪ್ರದಾಯ, ವಾರಕ್ಕೊಂದು ಪಕ್ಷ ಪಂಗಡ ಬದಲಾಯಿಸುತ್ತಿರುವದನ್ನು ಕಂಡು ಶಿವ ಸಮಾಜ ನಶಿಸುತ್ತಿಹುದು ಕಣ್ದೆರೆಯ ಬಾರದೆ ಎಂದು ಸಮಾಜ ಬಾಂಧವರನ್ನು ಕೇಳಿರುವರು. ಗುರು ವಿರಕ್ತರೆಂಬುವರು ಸಮಾಜ ಪುರುಷರಿಗೆ ಎರಡು ಕಣ್ಣುಗಳೆಂದು ಹೇಳುವಲ್ಲಿ, ಕವಿಯ ಆದರ್ಶ, ಕಾವ್ಯ ಆದರ್ಶಗಳೆರಡೂ ತುತ್ತತುದಿಯನ್ನು ಮುಟ್ಟಿವೆ. ಈ ಕಣ್ಣುಗಳಿಗೆ ಪರೆ ಬಂದರೆ ಸಮಾಜವೆ ಅಂಧವಾಗುವದು. ಹೀಗಾಗಿದೆ ಈ ಗುರು ವಿರಕ್ತರ ಕಲಹ. ನಾ ಹೆಚ್ಚು ನೀ ಹೆಚ್ಚು ಎಂಬುದು ಮಂತ್ರವಾಗಬಾರದೆಂದು

ಎಚ್ಚರಿಕೆ ನೀಡಿರುವರು. ಸಮಾಜದ ಹಿತಚಿಂತನೆಗಳನ್ನೆಸೆದರೆ ಕಿರಿಯನೆ ಹಿರಿಯ ನಾಗುತ್ತಾನೆಂದು ತಿಳಿಸಿರುವರು.

ಸಮಾಜವು ಒಡೆದ ಗಡಿಗೆಯಂತಾಗಿರುವದಯ್ಯಾ
ಸಮಾಜವು ಬಲವಿಲ್ಲದ ರೋಗಿಯಂತಾಗಿರುವದಯ್ಯಾ
ಸಮಾಜವು ತಂತಿ ಇಲ್ಲದ ವೀಣೆಯಂತಾಗಿರುವದಯ್ಯಾ....

ಎಂದು ಸಮಾಜದ ಸ್ಥಿತಿಯನ್ನು ಕಂಡು ಅದನ್ನು ತಿದ್ದಹೊರಟರೆ ಎಷ್ಟೋ ಸಲ ಸಮಾಜವು ಅದರ ಅಪಾರ್ಥವನ್ನು ಮಾಡಿಕೊಂಡುದನ್ನು ಕಂಡು ಅತ್ಯಂತ ಮಾರ್ಮಿಕವಾಗಿ ಚಿತ್ರಿಸಿರುವರು ಮುಕ್ತಿ ಕಂಠಾಭರಣಕ್ಕೆ ಕಂಟಕ ಬಾರದಿರಲು ಶ್ರಮಿಸಿದರೆ ಜನ ಪಂಗಡ, ದ್ವೇಷ, ಸಾಧಿಸ ಹೊರಟಿರುವವನ್ನು ಕಂಡು ಊರು ಉಪಚಾರವರಿಯದು, ಹೆಣ ಶೃಂಗಾರವರಿಯದೆಂಬ ನಾಡ ಗಾದೆಯನ್ನು ಹೇಳಿ ಶ್ರೀಗಳು ತಮ್ಮ ನಿಲುವನ್ನು ವ್ಯಕ್ತಪಡಿಸಿರುವರು. ಇದೀ ವಚನವು ಆ ಸನ್ನಿವೇಶದ ಪ್ರಖರತೆಯನ್ನು ಅವರ ಮನನೊಂದುಕೊಂಡುದುದನ್ನು ಸ್ಪಷ್ಟಪಡಿಸುತ್ತದೆ. ಇದಕ್ಕೆಲ್ಲ ವ್ಯಕ್ತಿದ್ವೇಷ, ವರ್ಗ ದ್ವೇಷಗಳಿಂದ ಸಮಾಜದ ಭಾವೈಕ್ಯ ಭಂಗವಾಗುತ್ತಿರುವದನ್ನು ಕಂಡು ಶ್ರೀಗಳ ಮನನೊಂದುಕೊಂಡಿರುವದು. ಸಮಾಜದ ಉದ್ಧಾರಕ್ಕಾಗಿಯೆ ಮೈವೆತ್ತ ಸಾಕಾರ ಶಿವಸ್ವರೂಪವಾಗಿರುವದರಿಂದ ಅವರಿಗೆ ಈ ನೋವು ನಲಿವುಗಳೆಲ್ಲ ಬಾಹ್ಯ ಉಪಾಧಿಯಾಗಿವೆ.

ಚಿತ್ಸುಮನದ ವಚನಗಳು ಸಾಹಿತ್ಯ ದೃಷ್ಟಿಯಿಂದ ಅತ್ಯಂತ ವೈಶಿಷ್ಟ್ಯಪೂರ್ಣವಾಗಿವೆ. ಕವಿತಾಶಕ್ತಿಗೆ ಕಲ್ಪನೆಯೊಂದೆ ಸಾಲದು ನೋಡಾ, ಅಂಗ ಸೌಂದರ್ಯಕ್ಕೆ ಅಲಂಕಾರವೊಂದು ಸಾಲದು ನೋಡಾ, ಧ್ಯಾನ ವಿವೇಚನೆ ಭಾವಂಗಳು ಕವಿತಾ ಶಕ್ತಿಗೆ ಪ್ರೇರಕವಾಗಿಹವೆಂದು; ಕಾವ್ಯ, ಕಲ್ಪನೆ, ಆಲೋಚನೆ ಭಾವಗಳ ವಿದ್ಯುದಾಲಿಂಗನವೆಂಬ ವ್ರತವಾಕ್ಯವನ್ನು ನುಡಿದಿರುವರು. ವಚನ ಸಾಹಿತ್ಯದ ರಹಸ್ಯವನ್ನು ತಿಳಿದುಕೊಂಡಿರುವರು. ವಚನ ಸಾಹಿತ್ಯವು ಆತ್ಮಾನಂದಕ್ಕಾಧಾರವೆಂದು ವಚನ ರಚನಾ ಸಾಗರದಲ್ಲಿ ಧುಮುಕಿರುವೆನಯ್ಯಾ ಎಂಬ ನುಡಿಯಲ್ಲಿ ವಚನ ಸಾಹಿತ್ಯದ ಉದ್ದೇಶವೇನೆಂಬುದನ್ನು ಅರಿತುಕೊಂಡಿರುವರು. ವಿಶಾಲವಾಗಿದ್ದರೂ ಅದನ್ನು ಈಸಬೇಕೆಂಬ ಆಶೆ ಇರುವದನ್ನು ವ್ಯಕ್ತಪಡಿಸಿರುವರು. ಆ ಸಾಗರದಲ್ಲಿ ಮುಳುಗಿ ಎದ್ದು ನೀಡಿದ ರತ್ನಗಳೇ ಚಿತ್ಸುಮನದ ವಚನಗಳು.

ಶ್ರೀಗಳವರ ಉಕ್ತಿಗಳಲ್ಲಿ ಕಾವ್ಯದ ಮಿಂಚು ಸದಾ ಝಳಪಿಸುತ್ತಿರುವದನ್ನು ಕಾಣಬಹುದಾಗಿದೆ.

೧) ಮಾನವತೆ ಇಲ್ಲದ ಬ್ರಹ್ಮಚರ್ಯ ಕಾನನದ ಕುಸುಮದಂತೆ, ಸಾಗರದ ಮೇಲಿನ ಮಳೆಯಂತೆ.

೨) ನಿರಹಂಕಾರವಿಲ್ಲದ ಪಾಂಡಿತ್ಯ ಹರಿಗಡೆವ ಉಗ್ಗಿನಂತೆ.
೩) ಮಾತು ಮಾಣಿಕ್ಯವಾದರೆ ಓತು ಬಂದ ಕತ್ತಲೆ ಸೋತು ಹೋದೀತು.
೪) ಪತಿತರನ್ನು ಪಡೆಯುವುದೆ ಪರಮ ಧರ್ಮ.
೫) ಸಮಾಜವು ಒಡೆದ ಗಡಿಗೆ........
೬) ಬೇಡುವ ಧನ ಪರಹಿತಕಾಗಿರಬೇಕು.
೭) ಬೇಲಿ ಎದ್ದು ಹೊಲ ಮೇಯ್ವಲ್ಲಿ ಬೆಳೆ ಬರುವದೆಂತು.

ಇಂತಹ ಮಾತುಗಳು ಕವಿಯ ಕಾವ್ಯ ಶಕ್ತಿಯನ್ನು, ಸಾಹಿತ್ಯ ಸೌರಭವನ್ನು ಸ್ಫುಟಗೊಳಿಸುತ್ತದೆ. ವೀರಶೈವ ಧರ್ಮದ ರಹಸ್ಯವನ್ನರಿತು ಅವರ ತತ್ವ ಆಚರಣೆಗಳನ್ನು ಚಿತ್ರಿಸಿರುವರು. ವಿಶ್ವಮಾನವ ಧರ್ಮವನ್ನರಿತು ಅದನ್ನು ಹೇಳಿರುವರು. ಚಿತ್ಸುಮನ ಮಾನವತೆಯ ಬಳ್ಳಿಗರಳಿದ ಮಂದಾರ ಪುಷ್ಪ, ದೇವತ್ವದ ಹಂದರವನ್ನು ಹತ್ತಿದ ದಿವ್ಯಪುಷ್ಪ.

"ಶ್ರೀ ಮೂಜಗಂ" ನಮ್ಮ ಮೂರುಸಾವಿರಮಠದ ಜಗದ್ಗುರು ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳೆಂದು ಖ್ಯಾತನಾಮರಾಗಿ ವೀರಶೈವ ಸಮಾಜದ, ಕನ್ನಡ ನಾಡಿನ ಕಣ್ಮಣಿಯಾಗಿರುವರು. ಜಗದ್ಗುರು ಪೀಠದ ಸತ್ ಪರಂಪರೆಯನ್ನು ಸಾವಿರ ಮಡಿ ಹಿಗ್ಗಿಸಿ, ಸಮಾಜದ ಕಾರ್ಯದಲ್ಲಿ ವಿಶೇಷ ಆಸಕ್ತಿಯನ್ನು ವಹಿಸಿ, ಅದಕ್ಕಾಗಿ ನಿರಂತರ ಪರಿಶ್ರಮಿಸುತ್ತಿರುವರು. ಬಿಡುವಿಲ್ಲದ ಕಾರ್ಯದಲ್ಲಿ ಸಾಹಿತ್ಯ ಶಕ್ತಿ ನುಗ್ಗಿ ಮುಂದಕ್ಕೆ ಒರುತ್ತದೆ. ಅದರ ಫಲವಾಗಿ ಈ ವಚನಗಳು ಬಂದಿವೆ. ಇಲ್ಲಿ ಅಧ್ಯಾತ್ಮದ ಹೊನಲಿದೆ, ಸಾಹಿತ್ಯದ ಪ್ರವಾಹವಿದೆ. ತತ್ವಜ್ಞಾನದ ಮಡುವಿದೆ, ಸಮಾಜ ವಿಮರ್ಶೆಯ ಕಣವಿದೆ. ಇಂತಹ ಅನರ್ಘ್ಯ ರತ್ನಗಳನ್ನು ಸೂರೆಗೈದ ಜಗದ್ಗುರುಗಳವರ ದಿವ್ಯ ಸನ್ನಿಧಿಗೆ ಭಕ್ತಿಪುರಸ್ಸರ ಪ್ರಣಾಮಗಳು.

ಡಾ|| ಆರ್. ಸಿ. ಹಿರೇಮಠ

ನಮ್ಮ ನುಡಿ

ವಚನ ಬರೆಯಬೇಕೆಂಬಾಶೆ ಬಹುದಿನಗಳಿಂದ ಹಾಗೆಯೇ ಉಳಿದಿತ್ತು. ಅದು ಇದೀಗ ಫಲಿಸಿದಂತಾಯ್ತು. ಅದರಲ್ಲಿಯೂ ಇತ್ತಿತ್ತಲಾಗಿ ಸಾಮಾಜಿಕ ರಂಗದಲ್ಲಿ ಕಾಲಕಳೆಯುತ್ತಿರುವದರಿಂದ ಬರವಣಿಗೆಗೆ ಬಿಡುವಿಲ್ಲದಾಗಿದೆ. ಹದಿನಾಲ್ಕು ವರ್ಷ ಗಳ ನಂತರ ಮತ್ತೆ ಸಾಹಿತ್ಯ ಸರೋವರದಲ್ಲಿ ಈಸಲು ಪ್ರಾರಂಭಿಸಿದ್ದೇವೆ. ಇನಿತು ದಿನಗಳ ವರೆಗೆ ಶಿಲಾಸೌಧದ ನಿರ್ಮಾಣ ಕಾರ್ಯದಲ್ಲಿ ತೊಡಗಿರುವ ನಾವು ಇದೀಗ ಸಾಹಿತ್ಯ ಸೌಧದತ್ತ ಮನವಳಸಿದ್ದೇವೆ.

ಭಾವಕುಸುಮವನ್ನು ಅರಳಿಸಲು ವಚನವು ಮಹತ್ಸಾಧನ. ಹೃದಯ ದಂತರಂಗವನ್ನು ಜನಸಾಮಾನ್ಯರಿಗೂ ತಿಳಿಯಪಡಿಸಿ ಮಹದ್ವಿಚಾರವನ್ನು ತಿಳಿ ಭಾಷೆಯಲ್ಲಿರಿಸಿ, ಅಂತರ್ಭಾವಗಳನ್ನು ಆಳವಾಗಿ ವಿಚಾರಿಸಿ, ವಿವೇಚಿಸಿ, ಅನುಭವಿಸಿ ಬರೆಯುವದೇ ವಚನ. ವಚನರಚನೆಗೆ ಹೆಚ್ಚಾಗಿ ಹೃದಯ ಬೇಕಾಗುತ್ತದೆ. ತೆರೆದ ಹೃದಯದಿಂದ ಬರೆಯದ ವಚನ ಬೋರ್ಗಲ್ಲ ಮೇಲೆ ನೀರೆರೆದಂತೆ ವ್ಯರ್ಥ. ಭಾಷೆ ಗಿಂತಲೂ ಭಾವಕ್ಕೆ ಹೆಚ್ಚು ಮಹತ್ವ ನೀಡಿದರೆ ವಚನಕ್ಕೆ ಸೊಬಗು. ನೋವು ನಲಿವುಗಳನ್ನು ಹಾಗೂ ಸಾಮಾಜಿಕ ಜೀವನದ ಚಿತ್ರವನ್ನು ಚಿತ್ರಿಸಲು ವಚನ ರಚನೆ ಬಹುಮುಖ್ಯವಾದುದು. ಆ ದೃಷ್ಟಿಯಿರಿಸಿ ವಚನ ರಚನೆಗೆ ಮನಸ್ಸು ಹಾಕಲಾಗಿದೆ. ಈ "ಚಿತ್ಸುಮನ" ನಮ್ಮ ಪ್ರಪ್ರಥಮ ವಚನ ಸಂಕಲನ. ಇದರಲ್ಲಿರುವ ಹಲಕೆಲವು ವಚನಗಳು ಈಗಾಗಲೇ "ಕರ್ಮವೀರ" 'ಪರಂಜ್ಯೋತಿ' ಮುಂತಾದ ಪತ್ರಿಕೆಗಳಲ್ಲಿ ಬೆಳಕು ಕಂಡಿವೆ. ಅಂತರ್ಗತ ವಿಚಾರಗಳನ್ನೊಳಗೊಂಡ ಈ ಚಿತ್ಸುಮನ (ವಚನ ಸಂಕಲನ)ದಲ್ಲಿ ಸಾಮಾಜಿಕ ಜನಜೀವನದತ್ತ ದೃಷ್ಟಿ ಹಾಯಿಸಲಾಗಿದೆ.ಸಾಧ್ಯವಾದಷ್ಟು ಷಟ್‌ಸ್ಥಲ ಸಿದ್ಧಾಂತದ ವಿವರಣೆಯುಳ್ಳ ವಚನಗಳನ್ನು ಅಲ್ಪಸ್ವಲ್ಪ ಬರೆಯಲಾಗಿದೆ.

ಮುಂದೆ ಮತ್ತೆ ಬರೆಯಲಿರುವ "ವಚನ ವಾರಿಧಿ"ಯಲ್ಲಿ ಸವಿಸ್ತಾರವಾಗಿ, ಸಿದ್ಧಾಂತ ಪರಿಪೂರ್ಣವಾಗಿ ಬರೆಯಬೇಕೆಂಬಾಶೆ ತುಂಬಿಕೊಂಡಿದ್ದೇವೆ. ಇದೀಗ ಕನ್ನಡಿಗರ ಕೈಯಲ್ಲಿ ಈ "ಚಿತ್ಸುಮನ"ವನ್ನು ಕೊಡಲಾಗಿದೆ. ಇದರ ಸದುಪ ಯೋಗವನ್ನು ವಾಚಕ ವೃಂದವು ತೆಗೆದುಕೊಳ್ಳಬಹುದೆಂದು ಆಶಿಸಲಾಗಿದೆ.

ದಿ. ೧೫–೨–೭೩ **ಶ್ರೀಮೂಜಗಂ**

ಹುಬ್ಬಳ್ಳಿ.

ಪ್ರಕಾಶಕರ ನುಡಿ

(ದ್ವಿತೀಯ ಮುದ್ರಣ)

‘ಚಿತ್ಸುಮನ’ ಅಲ್ಪಾವಧಿಯಲ್ಲಿಯೆ ಪುನಃಮುದ್ರಣಗೊಂಡು ಪ್ರಕಾಶಗೊಳ್ಳುತ್ತಿರುವದು ಸಂತೋಷದ ಸಂಗತಿಯಾಗಿದೆ. ಸಮಕಾಲೀನ ವಚನಸಾಹಿತ್ಯಕ್ಕೆ ದೊರೆತ ಜನಪ್ರಿಯತೆಯೂ ಇದಾಗಿದೆ.

ಶ್ರೀ ಜಗದ್ಗುರು ಮೂರುಸಾವಿರಮಠದ ಗ್ರಂಥಮಾಲೆಯು ಇಲ್ಲಿಯವರೆಗೆ ಸುಮಾರು ಐವತ್ತಕ್ಕೂ ಮಿಕ್ಕಿ ಸದ್‌ಗ್ರಂಥಗಳನ್ನು ಪ್ರಕಟಿಸಿ ವೀರಶೈವ ಧರ್ಮ, ಸಾಹಿತ್ಯ, ಸಂಸ್ಕೃತಿಗಳಿಗೆ ಮಹದುಪಕಾರವೆಸಗಿದೆ. ಕಳೆದ ವರ್ಷ ಗ್ರಂಥಮಾಲೆ ತನ್ನ ಸುವರ್ಣಮಹೋತ್ಸವವನ್ನಾಚರಿಸಿತು. ಈಗ ಗ್ರಂಥಮಾಲೆಯು ಐವತ್ತಾರನೆಯ ಗ್ರಂಥ ಕುಸುಮವಾಗಿ ಹೊರಬರುವ ‘ಚಿತ್ ಸುಮನ’ ಶ್ರೀ ಮೂಜಗಂರವರ ಮೊದಲ ವಚನಸಂಗ್ರಹ. ಶ್ರೀ ಮೂಜಗಂ ಎಂಬುದು ಮೂರುಸಾವಿರಮಠದ ಜಗದ್ಗುರು ಶ್ರೀ ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳವರ ಸಂಕ್ಷಿಪ್ತ ರೂಪ, ಕಾವ್ಯನಾಮ. ವಚನ ಸಾಹಿತ್ಯವು ಕನ್ನಡದ ವಿಶಿಷ್ಟ ರಚನೆ. ಮಾನವನು ತನ್ನ ಆತ್ಮ ಸಾಕ್ಷಾತ್ಕಾರಕ್ಕಾಗಿ ಪಡುವ ಉತ್ಕಟವಾದ ಹಂಬಲ ಹಾಗೂ ಅದಕ್ಕಾಗಿ ನಡೆಸಿದ ಆತ್ಮನ ಹೋರಾಟವನ್ನು ಒಳಗೊಂಡುದು. ಬಿಂದುವಿನಲ್ಲಿ ಸಿಂಧು ಸಮಾನ ಅನುಭವವನ್ನು ಹಿಡಿದಿಡುವ ಸುಲಭವಾದ ಮಾಧ್ಯಮ. ಮುನ್ನಿನ ಪುರಾತನರಿಂದ ಹಿಡಿದು ಇಂದಿನ ಶ್ರೀ ‘ಮೂಜಗಂ’ರವರೆಗೆ ಹರಿದು ಬಂದ ವಚನಗಂಗೆ ಕನ್ನಡದ ಬಹುಮೂಲ್ಯ ಆಸ್ತಿ. ವಿಶ್ವಕ್ಕೆ ಕನ್ನಡ ಕೊಟ್ಟ ಅಪೂರ್ವ ಕಾಣಿಕೆ.

ಚಿತ್‌ಸುಮನದ ಹೆಸರಿನಲ್ಲಿಯೇ ಗ್ರಂಥದ ಉಸಿರಡಗಿದೆ, ಇದರಲ್ಲಿ ಕಾಣುವುದು ಹೃತ್‌ಕಪಾಟೋದ್ಘಾಟ. ಇಲ್ಲಿಯ ವಚನಗಳು ಸಾಹಿತ್ಯ ಸೃಷ್ಟಿಗಾಗಿ ಬರೆದವುಗಳಲ್ಲ. ಬದುಕಿನ ಹೋರಾಟದಲ್ಲಿ ತಾವು ಅನುಭವಿಸಿದ ಅನುಭವಗಳ ಅಮರವಾಣಿ ಈ ಚಿತ್‌ಸುಮನ. ಅನುಭವ ಇರುವಲ್ಲಿ ಅಮೃತತ್ವ ಇದೆ. ಅಮೃತತ್ವವನ್ನು ಸವಿದವರು ಅಮರರು. ಚಿತ್‌ಸುಮನದಲ್ಲಿಯ ವಚನಗಳು ಪಾರಮಾರ್ಥಿಕ, ಲೌಕಿಕ, ಸಾಂಸ್ಕೃತಿಕ, ಸಾಹಿತ್ಯಿಕ ಸಂಪತ್ತಿನಿಂದ ಹಾಸುಹೊಕ್ಕಾಗಿವೆ. ಇಲ್ಲಿ ಬುದ್ಧಿಶ್ರೀ, ಭಾವಶ್ರೀ, ಆತ್ಮಶ್ರೀಗಳ ತ್ರಿವೇಣಿ ಸಂಗಮ ಸಮನಿಸಿದೆ. ಬೆಳಗಿನಿಂದ ಬೈಗಿನವರೆಗೆ ಸದಾ ಸಾಮಾಜಿಕ ಕಾರ್ಯಗಳಲ್ಲಿ ಮಗ್ನರಾಗಿರುವ ಪೂಜ್ಯ

ಪಾದರು, ತಮ್ಮ ಈ ಪ್ರಥಮ ವಚನ ಸಂಕಲನದಲ್ಲಿಯೇ ತಾವು ಯಶಸ್ವಿವಚನಕಾರರೆಂಬುದನ್ನು ತೋರಿಸಿ ಕೊಟ್ಟಿದ್ದಾರೆ.

ಈ ಗ್ರಂಥಕ್ಕೆ ಒಪ್ಪವಾದ ಮುನ್ನುಡಿ ಬರೆದುಕೊಟ್ಟ ಡಾ। ಆರ್. ಸಿ. ಹಿರೇಮಠರು ಕರ್ನಾಟಕ ವಿಶ್ವವಿದ್ಯಾಲಯದ, ಕನ್ನಡ ಅಧ್ಯಯನ ಸಂಸ್ಥೆಯ ಮುಖ್ಯಸ್ಥರು: ಸದ್ಯಕ್ಕೆ ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಗಳು. ಬಿಡುವಿಲ್ಲದ ಜವಾಬಾರಿಗಳು ಬದುಕು ಬರಹಗಳಲ್ಲಿ ಶರಣರ ನಿಲುವನ್ನು ಅಳವಡಿಸಿಕೊಂಡವರು ಹಾಗೂ ಟೀಕೆ ಬರೆದು ಕೊಟ್ಟ ಪ್ರಾಣಾತ್ವಕಾರರಾದ ಡಾ। ಕೆಳದಿ ಪಟ್ಟಾಧ್ಯಕ್ಷರು ಅವರನ್ನು ನೆನೆಯದೆ ಇರಲಾರೆವು.

ಅಲ್ಪಾವಧಿಯಲ್ಲಿಯೇ ಈ ಗ್ರಂಥ ಸುಂದರವಾಗಿ ಮುದ್ರಣಗೊಳ್ಳಲು ಕಾರಣರಾದ ಪರಂಜ್ಯೋತಿ ಅಚ್ಚುಕೂಟದವರಿಗೆ ಅಭಿನಂದನೆಗಳು.

ದಿ. ೧೫-೯-೭೭ ಪ್ರಕಾಶಕರು
ಹುಬ್ಬಳ್ಳಿ

ಪೀಠಿಕೆ

ಸತ್, ಚಿತ್, ಆನಂದ, ನಿತ್ಯ ಪರಿಪೂರ್ಣರೂಪವಾದ ಪರಶಿವನ ನಾಮ ರೂಪ ಕ್ರಿಯೆಯೊಂದಿಗೆ ಅವನ ಪಂಚ ಲಕ್ಷಣ ಸಮನ್ವಿತವಾದಂಥ ಸ್ಥಾನಾಪನ್ನ-ನಾಮವಾದ "ಭ್ರೂಲತಾಪುರೀಶ ಕರ್ತೃ ಜಗದ್ಗುರು ಗುರುಸಿದ್ಧೇಶ್ವರ" ಎಂಬ ಮುದ್ರಿಕೆಯಿಂದ ವಚನಗಳನ್ನು ರಚಿಸಿರುವವರು "ಶ್ರೀ ಮೂ. ಜ. ಗಂ" ಅವರು.

ಇವರು ರಚಿಸಿದ ಸಹಸ್ರಾರು ವಚನಗಳಿರುವ ಬೃಹದ್ ಗ್ರಂಥವಾದ "ವಚನ ವಾರಿಧಿ" ಗ್ರಂಥದಲ್ಲಿಯ ಒಂದು ಭಾಗಮಾತ್ರವಾಗಿದೆ ಈ ಚಿತ್‌ಸುಮನ.

'ಚಿತ್‌ಸುಮನ'ವೆಂದರೆ ವಚನ ಸಂಕಲನ ಎಂಬುದಾಗಿ ವಚನ ಸಾಹಿತ್ಯದ ಸಾಲಿನಲ್ಲಿ ಸೇರಿರುವ ಒಂದು ಗ್ರಂಥವಾಗಿದೆಯಾದರೂ ಈ ವಚನಕಾರರಾದ 'ಶ್ರೀ ಮೂ. ಜ. ಗಂ.' ಅವರು ಈ ಗ್ರಂಥಕ್ಕೆ "ಚಿತ್‌ಸುಮನ" ಎಂಬ ನಾಮಕರಣ ಮಾಡಿರುವುದು ಸಕಾರಣವಾಗಿದೆ: 'ಚಿತ್ತಂ ತು ಚೇತೋ ಹೃದಯಂಸ್ವೈನ್ ಮಾನಸಂ ಮನಃ, ಎಂಬಲ್ಲಿಯ 'ಮನ'ವುಳ್ಳ ವ್ಯಕ್ತಿಯು ಯಮ ನಿಯಮಾದಿ ಸಾಷ್ಟಾಂಗ ಯೋಗದ ಸಹಾಯದೊಂದಿಗೆ ಸಹಕರಿಸಿದ ಶಿವಯೋಗದ ಸಾಧನೆಯಿಂದ 'ಸುಮನ'ನಾಗುತ್ತಾನೆಂದೂ, ಅವನು **ಚಿತ್**ಸ್ವರೂಪನೆಂದೂ 'ಚಿತ್ ಸುಮನ' ಎಂಬ ನಾಮವನ್ನು ಈ ವಚನ ಸಂಕಲನ ಗ್ರಂಥದ ಅಂಕಿತನಾಮವನ್ನು ಅನ್ವರ್ಥಕಗೊಳಿಸಿದ್ದಾರೆ. ಇಲ್ಲಿಯ ಚಿತ್‌ಸುಮನ ಶಬ್ದದಲ್ಲಿ ಚಿತ್ - ಸುಮನ ಎಂಬುದು ಗೋಚರವಾಗುತ್ತಿದೆ. ಇದು ಸತ್ **ಚಿತ್** ಆನಂದ ನಿತ್ಯ ಪರಿಪೂರ್ಣ ಲಕ್ಷಣಗಳಲ್ಲಿ ಎರಡನೆಯದು.

ಚಿತ್ದ ಚಿಂತನೆಯಿಂದ **ಸುಮನ**ರಾದವರು ಅಂದರೆ **ಚಿತ್**ದಿಂದ ಚಿತ್-ಸ್ವಾಸ್ಥ್ಯ ಪಡೆದವರಾಗಬೇಕಾದರೆ ಈ 'ಚಿತ್‌ಸುಮನ' ಗ್ರಂಥದಲ್ಲಿಯ ವಚನಗಳಂತೆ ಆಚಾರ-ವಿಚಾರವುಳ್ಳವರಾಗಬೇಕು.

ಈ ಆಚಾರ-ವಿಚಾರ ಪ್ರಚೋದಕಗಳಾದ ವಚನಗಳ ರಚನೆ ಮಾಡಿರುವ "ಶ್ರೀ ಮೂಜಗಂ" ಅವರು ತಮ್ಮ ವಚನ ರಚನೆಯ ಮುಂಚೆ ಮಾಡಿದ ತಮ್ಮ ಸಾಧನೆಯನ್ನು ತಮ್ಮ ಒಂದು ವಚನದಲ್ಲಿ ಸ್ಮರಿಸಿಕೊಂಡಿದ್ದಾರೆ: 'ಶ್ರೀಮೂಜಗಂ' ಅವರು ಜನಿಸಿದ್ದು, ಹಾನಗಲ್ ಕುಮಾರೇಶನ ವರದಿಂದ: ವಟುವಾಗಿ ತ್ರಿಕರಣದಿಂದ ಓದಿದ್ದು, ಶ್ರೀಮದ್ ವೀರಶೈವ ಶಿವಯೋಗಮಂದಿರದಲಿ: ಶಿವಪೂಜೆ-ಶಿವಾನುಭವದ ಪರಿಯನರಿದುಕೊಂಡದ್ದು, ಶ್ರೀಮದ್‌ವೀರಶೈವ ಶಿವಯೋಗ ಮಂದಿರದ ಯತಿಗಳಿಂದ: ತಾವು ಕಲಿತ ವಿದ್ಯೆಯನ್ನು ಕಾಶೀ ಕ್ಷೇತ್ರದೊಳು ಬೆಳೆಸಿಕೊಂಡದ್ದು, ವಿಜಯ ಮಹಾಂತೇಶನ ಹಾಗೂ ಸದ್ಭಕ್ತರ ಸಹಾಯದಿಂದ:

ಮತ್ತು ಇವರು ಜಗದ್ಗುರು ಪೀಠವನ್ನೇರಿದ್ದು ಕರ್ತೃ ಜಗದ್ಗುರು ಗುರುಸಿದ್ಧೇಶ್ವರನ ಹಾಗೂ ಗುರುಸಿದ್ಧಕುಮಾರನ ಕರುಣೆಯಿಂದ. ಇಂಥ 'ಶ್ರೀ ಮೂಜಗಂ' ಅವರು ಅದೇ ವಚನದ ಕೊನೆಯಲ್ಲಿಯ ಪ್ರತಿಜ್ಞೆಯಿದು; "ಭೂಲತಾ ಪ್ರರೀಶ ಕರ್ತೃ ಜಗದ್ಗುರು ಗುರುಸಿದ್ಧೇಶ್ವರಾ ನಿರಂತರ ಸಮಾಜ ಸೇವೆಯು ಮಾಡುತ್ತಿರುವೆನಯ್ಯಾ ತವ (ಗುರುಸಿದ್ಧೇಶ್ವರನ) ಕೃಪಾ ವಿಶೇಷದಿಂದ"

ಅಂತೆಯ 'ನಿರಂತರ ಸಮಾಜ ಸೇವೆಯು ಮಾಡುತ್ತಿರುವ' ಶ್ರೀಮೂಜಗಂ ಇವರ "ವಚನವಾರಿಧಿ"ಯ ಇತರ ಭಾಗಗಳೂ ಪುನಃ ಪುನಃ ಹೆಚ್ಚಿನ ಆವೃತ್ತಿ ಹೊಂದಿ "ಚಿತ್‌ಸುಮನ"ದಂತೆ ಜನಸಾಮಾನ್ಯರ ಚಿತ್ತ–ಸುಮನಗಳಾಗಲಿ.

ಡಾ॥ ಕೆಳದಿ ಪಟ್ಟಾಧ್ಯಕ್ಷರು M.A.Ph.D.
ರಾಜಗುರು ಹಿರೇಮಠ, ಕೆಳದಿ

೧

ನೀನಿರುವೆ ಜಗದ್ಗುರು ಸಾರ್ವಭೌಮ!
ನೀನಿರುವೆ ಸಾಧಕರಿಗೆ ಧ್ಯಾನ ಧಾಮ!!
ನೀನಿರುವೆ ನಿರ್ವಿಕಲ್ಪ ಸಮಾಧಿಸ್ಥ ತಾತ!
ನೀನಿರುವೆ ಇಷ್ಟಾರ್ಥ ಸಿದ್ಧಿ ಪ್ರದಾತ!!
ನೀನಿರುವೆ ಹುಬ್ಬಳ್ಳಿ ಪುರಕೆ ಅಧಿಪತಿಯು!
ನೀನಿರುವೆ ಸದ್ಭಕ್ತರಿಗೆ ಗತಿಯು ಮತಿಯು!!
ನೀನಿರುವೆ ಚಿತ್‌ಕಲಾ ಪರಿಪೂರ್ಣನು!
ನೀನಿರುವೆ ಶೂನ್ಯ ಸಿಂಹಾಸನಾಧೀಶನು!!
ನೀನಿರುವೆ ಸರ್ವ ಧರ್ಮದ ಜನಕೆ ಸಂಜೀವನ!
ನೀನಿರುವೆ ಸಮನ್ವಯದ ತತ್ತ್ವಕೆ ಸಂಭಾವನ!!
ನೀನಿರುವೆ ನಮ್ಮ ಪಾಲಿಗೆ ಪರಂಜ್ಯೋತಿ!
ನೀನಿರುವೆ ಶಿವಯೋಗ ಮೆರೆದ ವಿಭೂತಿ!!

ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ!

ನೀನ್ನೆ ಹೃದಯ ಸಿಂಹಾಸನದಲ್ಲಿ ಮಂಡಿಸಿರುವ
ಸನ್ಮೂರ್ತಿ! ಚಿನ್ಮೂರ್ತಿ!!

೨

ಕರೆವರು ಕೆಲವರು ನಿನ್ನನು ಹುಚ್ಚನೆಂದು,
ಕರೆವರು ಕೆಲಬರು ನಿನ್ನನು ಸಿದ್ಧನೆಂದು;
ಕರೆವರು ಕೆಲವರು ಸಿದ್ಧ ಗುರುವೆಂದು,
ಕರೆವರು ಕೆಲಬರು ಗುರುಸಿದ್ಧನೆಂದು;
ನಾನಿನ್ನೆಂತು ಕರೆಯಲಿ, ಗುರುದೇವಾ!

ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ,

ನಾ ನಿನ್ನ ಕರೆವೆನು;
ಹಗಲಿರುಳು ನನ್ನ ಮನದಲ್ಲಿ ಮನೆ ಮಾಡಿಕೊಂಡಿರೆಂದು!

೩

ಮಾನವ ಕೋಟಿಗೆ ನೀನೆ ಕಲ್ಪತರು, ನೋಡಾ!
ಭವರೋಗದಿಂದ ಬಳಲುವ ಜನತೆಗೆ
ಭವರೋಗ–ವೈದ್ಯನಾಗಿರುವೆ, ನೋಡಾ!
ನಿತ್ಯವೂ ನಿನ್ನ ಭಕ್ತಿಯಿಂ ಪೂಜಿಸಿ,
ಚಿತ್ಪ್ರಕಾಶವೆಂಬ ಭಸ್ಮವ ಧರಿಸಿ,
ಚಿತ್ಕರಣಂಗಳೆಂಬ ಸುಮಸಂಗಳ
ಸುರಿಸುತಿಹರಯ್ಯಾ!
ಸುಜ್ಞಾನವೆಂಬ ದೀಪವ ಬೆಳಗಿ,
ಓಂಕಾರವೆಂಬ ಘಂಟೆಯ ಬಾರಿಸಿ,
ಜ್ಞಾನ-ತೀರ್ಥವ ಬಯಸುತಿಹರಯ್ಯಾ!!
ಭೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೪

ಬಸವಾ ನಿನ್ನ ದಯದಿಂದ
ವೀರಶೈವ ಧರ್ಮವು ವಿನೂತ್ನ ಯೋಜನೆಯಲ್ಲಿ
ವಿಕಸಿತವಾಗಿ ವಿವರ್ಧನೆಗೊಂಡಿದೆ, ನೋಡಾ!
ಬಸವಾ, ನಿನ್ನ ಕೃಪೆಯಿಂದ
ಅಷ್ಟಾವರಣಗಳು ಅಂಗವಾಗಿ
ಅಲೌಕಿಕ ಪರಿಣಾಮವ ತೋರುತಿವೆ, ನೋಡಾ;
ಬಸವಾ, ನಿನ್ನ ಕರುಣೆಯಿಂದ
ಪಂಚಾಚಾರಂಗಳು ಪ್ರಾಣವಾಗಿ
ಪರಮ ಪುರುಷಾರ್ಥಕ್ಕೆ ಕಾರಣವಾಗಿವೆ, ನೋಡಾ;
ಬಸವಾ, ನಿನ್ನ ಅನುಗ್ರಹದಿಂದ
ಷಟ್‌ಸ್ಥಲಂಗಳು ಆತ್ಮವಾಗಿ

ಷಟ್ಸ್ಥಲ ಮಹಿಮೆಯು ಉಗ್ಗಡಿಸುತಿದೆ, ನೋಡಾ;
ಬಸವಾ, ನಿನ್ನ ಅಂತಃಕರುಣದಿಂದ
ಗುರುಜಂಗಮರು ಸಂಪುಜ್ಯರಾಗಿ
ಗುಣಾತಿಶಯವ ಬೀರುತಿಹರು, ನೋಡಾ;
ಬಸವಾ, ನಿನ್ನ ಕಾರುಣ್ಯದಿಂದ
ಲಿಂಗವು ಸರ್ವಾಂಗ ಲಿಂಗವಾಗಿ
ಲಿಂಗದ ಕಳೆ ಅಪೂರ್ವವಾಗಿ ಬೆಳಗುತ್ತಿದೆ. ನೋಡಾ;
ಇಂತಪ್ಪ ಕಾರಣಿಕ ಕಾರುಣ್ಯಮೂರ್ತಿ
ಬಸವನ ಮರೆತು ಮೆರೆಯುವವರಮೆಚ್ಚ
    ನಮ್ಮ ಭ್ರೂಲತಾ ಪುರೀಶ ಕರ್ತೃ
    ಜಗದ್ಗುರು ಗುರುಸಿದ್ಧೇಶ್ವರಾ.

ಸಸಿವಾಳದಲಿ ಹುಟ್ಟಿ
ಕಲ್‌ಬೆಟ್ಟವನು ಮುಟ್ಟಿ
ಘೋರ ತಪವನು ತಟ್ಟಿ
ಷಡ್ ವೈರಿಗಳ ಮೆಟ್ಟಿ,
ಬಾಲ ಶಿವಯೋಗಿಯಾದನಯ್ಯಾ!
ಕರಡೀಶನಲಿ ನಿಂದು,
ಅಮರ ವಿದ್ಯೆಗೆ ಸಂದು,
ಆಶೆ ಆಮಿಷ ಕೊಂದು,
ವಿರತಿ ಮಾರ್ಗಕೆ ಬಂದು
ಆತ್ಮಶ್ರೀಯನು ಸಂಪಾದಿಸಿದನಯ್ಯಾ!!
ಚಿತ್ತರಗಿ ಪೀಠವನೇರಿ
ಬಸವ ತತ್ತ್ವವ ಬೀರಿ
'ಮಂದಿರ'ಕೆ ಸ್ಥಳ ತೋರಿ
ಭಕ್ತರಿಗೆ ಸುಖ ಕೋರಿ
ಜಗದೊಳು ಮಹಾಬೆಳಗಾದನಯ್ಯಾ!!!
ಚಿತ್ತರಗಿ ಶ್ರೀವಿಜಯ ಮಹಾಂತೇಶನಿರವಿದು, ಕೇಳಿರೊ!

ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೬

ಕಾಮಾದಿಗಳ ಜಯಿಸಿದ ಮಹಾ ವೀರ,
ನಿಯಮಾದಿಗಳ ಪಾಲಿಸಿದ ಪರಮ ಧೀರ;
ವೈರಾಗ್ಯ ಶಿಖರವೇರಿದ ಪಾವನ ಮೂರ್ತಿ,
ಶಾಪಾನುಗ್ರಹ ಶಕ್ತಿ ಪಡೆದ ಚಿನ್ಮೂರ್ತಿ;
ಚಿತ್ತರಗಿ ಚಿಜ್ಜ್ಯೋತಿಯಾಗಿ,
ಗುರುಗಳಿಗೆ ಮಹಾ ಗುರುವಾಗಿ ಮೆರೆದ
ಶ್ರೀ ವಿಜಯ ಮಹಾಂತೇಶನ ಮಹಿಮೆ
ಅಪಾರವಾದುದು, ನೋಡಾ!

ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೭

ನುಡಿಗಲಿಸಿದ ನಮ್ಮ ಕುಮಾರ
ನಡೆಗಲಿಸಿದ ನಮ್ಮ ಕುಮಾರ
ಶೀಲ ಸಂಸ್ಕೃತಿಯನುಳಿಸಿದನು ನಮ್ಮ ಕುಮಾರ;
ಶಿವಯೋಗಮಂದಿರವ ಸ್ಥಾಪಿಸಿದನಯ್ಯಾ
ಶಿವಯೋಗದನುಭವವ ರೂಪಿಸಿದನಯ್ಯಾ,
ವಿರತಿ ಶಿಖಾಮಣಿ ಸುಕುಮಾರ
ಇಂತಪ್ಪ ಹಾನಗಲ್ ಕುಮಾರನ ಮರೆತು,
ಕಂಡಂತ ನಡೆವವರ ಕಂಡು ನಗುವನಯ್ಯಾ

ನಮ್ಮ ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೮

ಸಪ್ತ ಶರಧಿಯೊಳು ಜನಿಸಿ
ಸಪ್ತ ವ್ಯಸನಗಳನಳಿಸಿ
ಸರ್ಪಭೂಷಣನೊಲಿಸಿ
ಹಾವೇರಿ ಹುಕ್ಕೇರಿ ಮಠದಧಿಪತಿಯಾದ
ಶಿವಬಸವನ ವ್ಯಕ್ತಿತ್ವ
ಅಗಾಧವಾಗಿಹುದು ನೋಡಾ!
ಶಿವಯೋಗ ಶಕ್ತಿಯ ಪಡೆದು
ಶಿವಯೋಗ ನಿಲಯಕೆ ದುಡಿದು
ಶಿವಯೋಗಾನಂದದೊಳಿರ್ದು
ಶಿವಯೋಗಿವರೇಣ್ಯನಾಗಿ ಮೆರೆದ
ಶಿವಬಸವನ ಹೆದ್ದಾರಿ
ನಮ್ಮೆಲ್ಲರಿಗೆ ಕೈದೀವಿಗೆ, ನೋಡಾ!

ಭೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೯

ಜನಿಸಿದೆನಯ್ಯಾ ನಾನು
ಹಾನಗಲ್ ಕುಮಾರೇಶನ ವರದಿಂದ;
ವಟುವಾಗಿ ಓದಿವೆನಯ್ಯ,
ಶ್ರೀಮದ್ ವೀರಶೈವ ಶಿವಯೋಗ ಮಂದಿರದಲಿ
ತ್ರಿಕರಣದಿಂದ;
ಶಿವಪೂಜೆ ಶಿವಾನುಭವದ ಪರಿಯನರಿದುಕೊಂಡೆನಯ್ಯಾ
ಶ್ರೀಮದ್‌ವೀರಶೈವಶಿವಯೋಗಮಂದಿರದ ಯತಿಗಳಿಂದ;
ವಿದ್ಯಾಧ್ಯಯನವ ಬೆಳೆಸಿಕೊಂಡೆನಯ್ಯಾ
ಕಾಶೀ ಕ್ಷೇತ್ರದೊಳು; ವಿಜಯ: ಮಹಾಂತೇಶನ,
ಸದ್ಭಕ್ತರ ಸಹಾಯದಿಂದ;
ಜಗದ್ಗುರು ಪೀಠವನೇರಿರುವೆನಯ್ಯಾ
ನಿನ್ನ, ಗುರುಸಿದ್ಧ–ಕುಮಾರನ ಕರುಣೆಯಿಂದ.

ಭ್ಯೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ
ನಿರಂತರ ಸಮಾಜ ಸೇವೆಯ ಮಾಡುತಿರುವೆನಯ್ಯಾ
ತವ ಕೃಪಾ ವಿಶೇಷದಿಂದ.

೧೦

ತನುವೆಂಬ ತೋಟದಲ್ಲಿ
"ಚಿತ್‌ಸುಮನ" ಅರಳುತ್ತಿಹುದು, ನೋಡಾ;
ವಿಷಯೇಂದ್ರಿಯಂಗಳೆಂಬ ಭ್ರಮರಂಗಳು
ಬಂಡುಣ್ಣಲು ಹಾರಿ ಬರುತ್ತಿಹವು, ನೋಡಾ!
ಷಡೂರ್ಮಿಗಳೆಂಬ ಹರಿಣಂಗಳು
ಹೂ ಹರಿಯಲು ಓಡಿ ಬರುತ್ತಿಹವು, ನೋಡಾ!
ಅಷ್ಟ ಮದಂಗಳೆಂಬ ಕಾಡು ಕೋಣಂಗಳು
ಹೂದೋಟ ಮುರಿಯಲು
ಹವಣಿಸುತ್ತಿಹವು, ನೋಡಾ!
ತ್ರಿಮಲಗಳೆಂಬ ಹುಳುಗಳು
ಅಲರಿನೆಸಳು ಕಡಿಯಲು
ಧಾವಿಸುತ್ತಿಹವು ನೋಡಾ!
ಷಡ್‌ವೈರಿಗಳೆಂಬ ಕೋತಿಗಳು
ಹಣ್ಣು ತಿನ್ನಲು ಗುಂಪುಗೂಡಿ
ಬರುತ್ತಿಹವು ನೋಡಾ!
ಅದು ಕಾರಣ,
ವಿವೇಕವೆಂಬ ಬೇಲಿಯ ಹಚ್ಚಿ
ಸುಜ್ಞಾನವೆಂಬ ಚಪ್ಪರ ಹಾಕಿ
ಓಡಿ ಬರುತ್ತಿರುವ ವೈರಿಗಳನೋಡಿಸಿ
'ಚಿತ್‌ಸುಮನ'ವನು ಸಂರಕ್ಷಿಸಿ
ಸಲಹುವುದು ನಿನ್ನ ಧರ್ಮವೆಂದು
ನಿನ್ನನೇ ಮೊರೆ ಹೊಕ್ಕಿರುವೆನಯ್ಯಾ
ಭ್ಯೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೧೧

ಬಗೆಯ ಹೂಬಳ್ಳಿಯೊಳು
ಆತುಮದ ಕೋಗಿಲೆ ಕೂಗುತ್ತಿಹುದು, ನೋಡಾ!
ಧ್ಯಾನದಾ ತನಿರಸದ ಸವಿಯ
ಬಯಸುತ್ತಿಹುದು, ನೋಡಾ!
ಭಾವ ಸಮಾಧಿಯಲ್ಲಿದ್ದು
ಆತ್ಮ-ದೀಪ್ತಿಯ ಪಡೆವಾಸೆ, ನೋಡಾ!
ನನ್ನೀ ಮುದ್ದು ಕೋಗಿಲೆ
ನಿತ್ಯವೂ ನಿನ್ನತ್ತ ಹಾರುವಂತೆ ಕರುಣಿಸಾ!
ಭೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೧೨

ಹುಬ್ಬಳ್ಳಿ ಪೇಟೆಯೊಳು
ವಜ್ರ ವೈಡೂರ್ಯಂಗಳ ಕೊಳ್ಳಲು
ಬಂದಿರುವೆನಯ್ಯಾ!
ಸುತ್ತೆಲ್ಲ ತಿರು-ತಿರುಗಿ
ನಾಮ ರೂಪೀ ಧನವನ್ನು ಬಿಚ್ಚಿಡಲು
ತಂದಿರುವೆನಯ್ಯಾ!
ಇಂತಿರುವ ಪೇಟೆಯೊಳು
ನಾವೀರ್ವರು ಒಂದಾದರೆ,
ಬಡವಂಗೆ ಭಾಗ್ಯ ಬಂದತ್ತಾಯಿತ್ತಯ್ಯಾ
ಭೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೧೩

ಮೋಹದ ಕಾಳ್ಗಿಚ್ಚಿನಲಿ ಬಿದ್ದು,
ಪಂಚೇಂದ್ರಿಯಂಗಳು ಕಳವಳಿಸುತ್ತಿಹವು, ನೋಡಾ!
ಸಂಮೋಹ ಭೂತವು ಬೆಂಬತ್ತಿ

ದಟ್ಟಡವಿಗೆ ದಬ್ಬುತ್ತಿಹುದು, ನೋಡಾ!
ವ್ಯಾಮೋಹ ಶಾರ್ದೂಲವು ಬಾಯ್‌ದೆರೆದು ನಿಂತು
ಸಣ್ಣನ್ನ ಬಾಳನ್ನು ನುಂಗುತ್ತಿಹುದು, ನೋಡಾ!
ಇದು ಕಾರಣ,
ಬಂದ ಕ್ಲೇಶಂಗಳನಳಿಸಿ, ಎನ್ನನುಳುಹಿಕೊಳ್ಳಾ,
ಭೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೧೪

ಮೋಹವು ಧೃತಿಗೆಡಿಸುತ್ತಿಹುದಯ್ಯಾ,
ಮೋಹವು ಕೃತಿಗೆಡಿಸುತ್ತಿಹುದಯ್ಯಾ,
ಮೋಹವು ಗತಿ–ಮತಿಯಿಲ್ಲದಂತೆ
ತಿರುಗಿಸುತ್ತಿಹುದು, ನೋಡಯ್ಯಾ!
ಭೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೧೫

ಸಾಕಾಯ್ತು, ಈ ಜೀವನಕೆ
ಸಮಾಜ ಸೇವೆಯ ಚಿಂತನೆ!
ಬೇಕಾಯ್ತು ನನಗೀಗ
ನಿನ್ನ ಧ್ಯಾನದ ಚಿಂತನ!!
ಸರ್ವರ ಸಹಕಾರ ಸ್ನೇಹ ಹಸ್ತವಿಲ್ಲದೆ
ಸಮಾಜ ಸುಧಾರಣೆ ಗೈಯುವುದೆಂತು, ಪೇಳಾ?
ಭೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೧೬

ಜೀವನ ವ್ಯೋಮದಲ್ಲಿ
ಕಾರ್ಮೋಡಗಳು ಕವಿಯುತಿಹವು, ನೋಡಯ್ಯಾ!
ಬಗೆ–ಬಗೆಯಾಗಿ ಬಂದು,
ಬೆಳಕಿಗೆ ಅಡ್ಡಯಿಸುತಿಹವು, ನೋಡಯ್ಯಾ!
ಈ ಅರುಣ ಕಿರಣಂಗಳು
ನಿನ್ನನ್ನೇ ಬೆಳಗುವಂತೆ ಕೃಪೆದೋರಾ,
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೧೭

ತಾಪತ್ರಯದೊಳು
ಬಳಲಿ ಬೆಂದಿಹೆನಯ್ಯಾ,
ಕೋಪಾದಿ ವಿಕಾರಂಗಳು ಕಾಡುತ್ತಿಹವಯ್ಯಾ,
ಆಶಾ ಪಾಶದಿಂದ ಘಾಸಿಯಾಗಿಹೆನಯ್ಯಾ,
ಈ ಕಷ್ಟಗಳನೆಲ್ಲ ಕಡೆಹಾಯಿಸಿ,
ಜ್ಞಾನ ದೃಷ್ಟಿಯನಿತ್ತು
ಭಕ್ತಿ ಕೋಶದಲ್ಲಿರಿಸಾ!
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೧೮

ಸಾಮಾಜಿಕ ರಂಗದಲಿ ಓಡಾಡಿ
ಬೇಸತ್ತಿಹುದಾ ನೋಡಾ, ಈ ಮನ!
ಸಿಹಿ ಕಹಿಗಳನನುಭವಿಸಿ
ಬರತ ಕರಗುತ ಆಗಿಹುದಾ ನೋಡಾ, ಈ ಮನ!
ಸಹಕಾರ ಸಂಘಟನೆಗಳ ಸವಿ ನೀರಿಲ್ಲದೆ,
ಸಮಾಜ ವೃಕ್ಷವು ಒಣಗುತ್ತಿಹುದು, ನೋಡಾ!

ನಿನ್ನ ಕಾರುಣ್ಯವ ಕರುಣಿಸಿ,
ಬುದ್ಧಿಯ ಉದಕವನೆರೆದು
ಸಲಹಬಾರದೆ, ಅಯ್ಯಾ!!
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೧೯

ಮೋಹದ ಪಂಜರದೊಳಗೆ ಸಿಲುಕಿ,
ತರಪರಿಸಿ ತಳಮಳಗೊಳ್ಳುತ್ತಿಹೆನಯ್ಯಾ!
ಮಾಯಾ–ಬಂಧನವ ಬಿಡಿಸಿ,
ಆಧ್ಯಾತ್ಮಿಕ ಆಕಾಶದಲ್ಲಿ ಹಾರಾಡುವಂತೆ
ಪ್ರೇರೇಪಿಸಯ್ಯಾ!
ನಿನ್ನನೇ ನೆನೆಯುತಿರುವೆನಯ್ಯಾ!
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೨೦

ಹದಿನಾಲ್ಕು ಸಂವತ್ಸರಗಳು
ಹದಿನಾಲ್ಕು ದಿನಗಳಂತೆ ಉರುಳಿದುವು, ನೋಡಾ!
ಸಾಹಿತ್ಯ–ತರು ಬೆಳೆಯುದೆ,
ಜೀವಹಿಡಿಸಿಕೊಂಡು ನಿಂತಿಹುದು, ನೋಡಾ!
ಧೀ–ವಿವೇಚನೆಗಳ ನೀರೆರೆಯದೆ,
ಸಹಕಾರ-ಪ್ರೋತ್ಸಾಹನೆಗಳ
ಸಿಹಿ ನೀರನು ಚಿಮುಕಿಸುತ್ತಿಹೆವು, ನೋಡಾ!
ಸಾಹಿತ್ಯ ಸಂವರ್ಧನೆಯು ಸಮಾಜ ಸೇವೆಗೆ
ಕಾರಣವಾಗಿದೆಯಲ್ಲದೆ,
ಬೇರೆ ಮತ್ತೇನುಂಟು, ಹೇಳಾ!
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೨೧

ಶಿಲಾ ಸೌಧದ ಸೃಷ್ಟಿ ಬೇಡಾಯಿತು, ನೋಡಾ!
ಸಾಹಿತ್ಯ ಸೌಧದ ನಿರ್ಮಾಣದತ್ತ ಮನವೆಳಸಿದೆ, ನೋಡಾ
ಶಬ್ದ-ಭಾವ-ಕಲ್ಪನೆಗಳೆ
ಇದಕೆ ಕಡೆದ ಕಲ್ಲುಗಳು, ನೋಡಾ.
ನಿರ್ಮಿಸುತ್ತ ನಡೆದಂತೆ
ಶಿಲ್ಪಿಯ ಕಲೆ ಕಳೆಗೊಂಡು,
ಬೆಳಗುವುದು, ನೋಡಾ!

ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೨೨

ಸಾಹಿತ್ಯಾರಾಧನೆಯನು
ಮೈ ಮನಗೂಡಿಸಿ ಮಾಡಲೆಳಸಿಹುದು,
ನೋಡಾ ಈ ಮನ
ಸಾಹಿತ್ಯ ಮಂಗಿರವನು
ಹೃದಯ ಸಂಭೂತಿಯೊಡನೆ ಕಟ್ಟಲೆಳಸುತ್ತಿಹುದು,
ನೋಡಾ ಈ ಮನ!!
ಭಾವ ವೈಭವದ ಗೋಪುರವನು ಕಟ್ಟಿ
ಮೆರೆಯಿಸಲೆಳಸಿಹುದು,
ನೋಡಾ ಈ ಮನ!
ನಿಜಾನಂದದ ಶಿಖರವನು, ಇರಿಸಿ
ಶಿವ ಸುಖವ ಹೊಂದಲೆಳಸಿಹುದು,
ನೋಡಾ ಈ ಮನ!!

ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೨೩

ಮಾತಿನ ಚಪಲತೆಗೆ ಮೆಚ್ಚಿ
ಮೈ ಮರೆತೆನಯ್ಯಾ!
ಮನದ ಕುಹಕತನವನರಿಯದೆ
ಮನ ಸೋತೆನಯ್ಯಾ!
ಮೋಹಕ ವೇಷ–ಭಾಷೆಯ ಮೋಡಿಗೆ
ಮೋಸಹೋದೆನಯ್ಯಾ
ಸಂಚು ತಿಳಿಯದೆ, ಮಾತಿನ ಮಿಂಚಿಗೆ
ಮರುಳಾದೆನಯ್ಯಾ!
ಎಲ್ಲೆಲ್ಲು, ಮಾತಿನ ಮಲ್ಲರು
ಆತ್ಮೀಯತೆಯ ಕರುಳಿಲ್ಲದ ಸಾವಿರ ನುಡಿ
ಹುರುಳಿಲ್ಲದ ಬೀಜದಂತೆ
ಜೊಳ್ಳು ಕಾಣಯ್ಯಾ!
ನಮ್ಮ ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೨೪

ನಿಜ ಸುಖವೆಂಬುದು ಕನಸಿನ ಗಂಟಾಗಿಹುದಯ್ಯಾ:
ಅರಿವಿನ ಇರವನರಿಯದೆ, ಕೊರಗುತ್ತಲಿದ್ದೇನೆ!
ತಾಪತ್ರಯದ ತಾಕಲಾಟದಿಂದ
ಬಸವಳಿದು ಬಾಯಾರಿ ಕಸವಿಸಿಗೊಳ್ಳುತ್ತಲಿದ್ದೇನೆ!
ಇದು, ನಿನ್ನಡಿಯ ಕಾಣಲು,
ಕಾಲ್ತೊಡಕಾಗಿಹುದು! ನೋಡಾ
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ
ತರಳನ ತಪ್ಪ ಮನ್ನಿಸಿ
ತಾತನು ತನ್ನತ್ತ ಕರೆದು ತಬ್ಬಿಕೊಳ್ಳುವಂತೆ,
ನಿನ್ನತ್ತ ಕರೆದು ತಬ್ಬಿಕೊಳ್ಳದಿರುವೆಯಾ?

೨೫

ಹಸನಾದ ಭೂಮಿಗೆ ಕಸುವಿನ ಬೀಜ ಬಿತ್ತಿದೊಡೆ,
ಅದರ ಸೊಬಗಿನ ಪರಿಯ, ನೋಡಾ!
ಅದಕೆ ಕಾಲ ಕಾಲಕ್ಕೆ ಮಳೆ ಸುರಿಯುತಿದ್ದೊಡೆ,
ಅದರ ಸೊಗಸಿನ ಸಿರಿಯ, ನೋಡಾ!
ಹೃದಯವೆಂಬ ಹೊಲದೊಳಗೆ
ಸದ್ಗುಣವೆಂಬ ಬೀಜ ಬಿತ್ತಿದರೆ
ಅದರ ಫಲ ರುಚಿಯು ಬಣ್ಣಿಸಲೆಂತಯ್ಯ!
ಭೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೨೬

ಓಡುವ ಮನಸಿಗೆ ಬೇಡಿಯ ಹಾಕದಿರೆ,
ಮನಸಿನ ಮೋಡಿ ತಪ್ಪಲಾರದು, ನೋಡಾ!
ಓಡುವ ಕುದುರೆಗೆ ಕಡಿವಾಣವಿರದಿರೆ,
ಒಡೆಯನ ಮಾತು ಕೇಳಲಾರದು, ನೋಡಾ!
ಇದು ಕಾರಣ,
ಒಡೆಯ ನೀನು ವಿರತಿ–ವಿವೇಕಗಳನಿತ್ತು
ಸಲಹಬಾರದೆ?
ಭೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೨೭

ಒಳಿತು ಕೆಡಕಿನ ಅರಿವಿದ್ದರೇನು?
ಮತ್ತೆ ಮತ್ತೆ ಓಡುತಿಹುದು, ನೋಡಾ ಈ ಮನ!
ಘನ ಸುಖವ ಪಡೆವುದಿದ್ದರೇನು?
ಸುತ್ತೆಲ್ಲ ತಿರುಗುತ್ತಿಹುದು, ನೋಡಾ ಈ ಮನ!
ಕಸ್ತೂರ ವಸ್ತ್ರಿಪೊಳಿಪ ಕಸ್ತೂರವ ಹೊರಗಿಟ್ಟರೇನು?
ವಾಸನೆ ಹೋಗದಂತಿಹುದು, ನೋಡಾ!

ನಿನ್ನ ನೆನಪೆಂಬ ಪಾಶದಿಂದ ಕಟ್ಟಿ ಕಟ್ಟಿ,
ಪರಮಾನುಭವವೆಂಬ ಬೋಧೆಯ ಕೊಟ್ಟು,
ಕರುಣಾಮೃತವನುಣಿಸಿ
ಕಾಪಾಡಯ್ಯಾ!
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೨೮

ಪಂಜರದ ಗಿಳಿಯು ವನಾಂತರವ ನೆನೆವಂತೆ
ಮನವಿದು ವಿಷಯದ ಕಡೆ ಏಪರಿಸುತ್ತಿರುವುದಯ್ಯಾ!
ಮನವಿದು ಅತ್ತಿತ್ತ ಚಲಿಸುತ್ತಿರುವುದಯ್ಯಾ!
ಮಾಯಾ ಬಂಧನವ ಬಿಡಿಸಿ,
ನಿರ್ಮಾಯೆಯ ದಾರಿ ಹಿಡಿಸಿ
ಕಾಯಯ್ಯಾ.
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೨೯

ನಾನೆಂಬುದು ಕಾಯಗುಣ:
ನೀನೆಂಬುದು ದೇವ ಗುಣ.
'ನಾ' ಸತ್ತು "ನೀನಾ"ದಾಗ
ಆ ಬೆಳಗ ಬಣ್ಣಿಸಲೆಂತು?
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೩೦

ಗೋಪುರವ ಕಟ್ಟಿಸಿದೆನೆಂದು
ಗೌಪ್ಯಾಽಹಂಕಾರವೇತಕಯ್ಯಾ?

ಗೋಪುರದ ಸುತ್ತೆಲ್ಲ ದೀಪಗಳಿರದಿರೆ,
ಗಾಳಿಗೋಪುರವಾದಂತಾಯಿತ್ತಯ್ಯಾ!
　　ಭ್ರೂಲತಾ ಪುರೀಶ ಕರ್ತೃ
　　ಜಗದ್ಗುರು ಗುರುಸಿದ್ಧೇಶ್ವರಾ.

೩೧

ಹೃದಯವೆಂಬ ಕಾಸಾರದೊಳು
ಮನೋವಿಕಾರಂಗಳೆಂಬ ಮೀನಂಗಳು
ಅತ್ತಿತ್ತ ಅಲೆದಾಡುತ್ತಲಿಹವು, ನೋಡಾ!
ಮೇಲೊಮ್ಮೆ ನೋಡುವವು;
ಕೆಳಗೊಮ್ಮೆ ಮುಳುಗುವವು
ಇದೇ ಅವುಗಳ ಪರಿಯಾಗಿದೆ, ನೋಡಾ!
ಚಿತ್ರ ವಿಚಿತ್ರ ಮೀನಂಗಳು
ಹಾರಾಡುತಿಹವೊ? ಹೋರಾಡುತಿಹವೊ!
"ತಿಮಿ–ತಿಮಿಂಗಿಲನ್ಯಾಯ"
ಸಬಲರು ದುರ್ಬಲರ ನುಂಗುವರು, ನೋಡಾ!
ದಾರಕ್ಕೆ ಕಟ್ಟಿ, ಗಾಳವ ಬಿಟ್ಟರೆ,
ಬಾಯಿಗೆ ಬರಲೊಲ್ಲವು ನೋಡಾ!
　　ಭ್ರೂಲತಾ ಪುರೀಶ ಕರ್ತೃ
　　ಜಗದ್ಗುರು ಗುರುಸಿದ್ಧೇಶ್ವರಾ,
ಮನೋವಿಕಾರಂಗಳ ಮಾಣಿಸಿ,
ಮನವಲ್ಲಿ 'ಮೀನ್‌ಕಣ್' ಮಿನುಗುವಂತೆ ದಯದೋರಾ!

೩೨

ಮೋಹದಿಂದ ಮರೆವು ಆವರಿಸಿ
ಸ್ಮೃತಿ ವಿಭ್ರಮವುಂಟಾಗುವುದಲ್ಲದೆ,
ಅರೆ–ಹುಚ್ಚರಂತೆ ಗತಿಗೆಡುವರಯ್ಯಾ!
ತಾವಾರೆಂಬುದ ಮರೆತು

ವಿಷಯ ಸಂಸಾರದ ಬೇಗೆಗೆ ಸಿಲುಕಿ,
ದೀಪದ ಹುಳುಗಳಂತೆ ಸಾಯುತ್ತಿಹರಯ್ಯಾ
ಭೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೩೩

ಈ ಜೀವನ-ಯಾತ್ರೆಯಲಿ
ನೊಂದು ಬೆಂದಿರುವೆನಯ್ಯಾ,
ಕಷ್ಟನಷ್ಟಗಳನೆಷ್ಟೋ ಸಹಿಸಿರುವೆನಯ್ಯಾ!
ಆ ದಂಡೆಯ ಮುಟ್ಟಿಸುವ ಅಂಬಿಗರು
ನಡು ನೀರಲಿ ಕೈ ಬಿಟ್ಟು ಹೋಗಿರುವರಯ್ಯಾ!
ಕೃತ್ರಿಮ ಪ್ರೇಮವ ತೋರುವ ಓರಿಯರು
ಮತ್ಸರಾಗ್ನಿಯೊಳು ಸುಮ್ಮನೆ ಬೇಯುತಿಹರಯ್ಯಾ!
ಭೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ,
ನಿನ್ನ ಧ್ಯಾನ-ಬಲವೆಂಬ ನೌಕೆಯು
ಎಡರು-ತೊಡರೆಂಬ ತೆರೆಗಳು ತಾಕದಂತೆ-
ಎನ್ನ ಕರೆದೊಯ್ಯುತಿಹುದು, ನೋಡಯ್ಯಾ!

೩೪

ಈ ಜೀವನವೆಂಬುದು ಮಹಾ ಸಾಗರವಯ್ಯಾ,
ಅದರಾಳವನಳೆವುದು ಕಠ ಕಷ್ಟವಯ್ಯಾ!
ತೆರೆಗಳು ಬಂದು ಅಪ್ಪಳಿಸುತ್ತಿಹವಯ್ಯಾ!
ನೀರ್‌ಗುರುಳೆಗಳು ಕಣ್‌ಮುಚ್ಚಿ ತೆರೆವಂತೆ,
ಕ್ಷಣದಲ್ಲಿ ಕಣ್‌ಮರೆಯಾಗುತ್ತಿಹವಯ್ಯಾ!
ಈ ಸಾಗರದ ಸಕಲ ಸಿಹಿ-ಕಹಿಯನುಂಡು
ಈಸಿ-ಈಸಿ ಬಲು ಸೋತಿರುವೆನಯ್ಯಾ!
ಸಾಗರದಾಚೆಯ ತೀರವ ಮುಟ್ಟಿಸಲು
ನಿನ್ನನೆ ಆಲ್ಪರಿದು ಬೇಡುತಿರುವೆನಯ್ಯಾ,

ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೩೫

ಕೆರೆಯ ದಂಡೆಯಲಿರುವ ಕರಡಕಲ್ಲು,
ಮೇಲೊಂದು ಕರಿಯ ಬಣ್ಣದ ಹಕ್ಕಿ
ಕರೆಯುತಿಹುದು, ನೋಡಯ್ಯಾ!
ಕರಿಗೊಂಡ ಕರಿ ಪಕ್ಷಿ
ಆರು ವರ್ಣವ ತೋರಿ
ಹಾರಾಡುತಿಹುದು ನೋಡಯ್ಯಾ!
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೩೬

ಸ್ರಕ್-ಚಂದನಾದಿ ವಿಷಯಂಗಳು
ಮನುಜರನು ಮರವೆಯಲಿ ತಿರುಗಿಸುತಿಪವಯ್ಯಾ!
ಆಶೆಯೆಂಬ ರಕ್ಕಸಿಯು
ನಿನ್ನ ಧ್ಯಾನವ ಬಿಡಿಸಿ
ನಾಶಪಡಿಸುತ್ತಿಹಳಯ್ಯಾ!
ಮಾಯಾ-ಮರೀಚಿಯೊಡನೆ ಓಡುವರ ಕಂಡು
ಮನ ಮರುಕಪಡುವುದಯ್ಯಾ!
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೩೭

ಮಂಜು ತುಂಬಿದ ಮುಂಜಾವವಂತೆ
ಮನವು ಮಬ್ಬಾಗಿಹುದು, ನೋಡಾ!
ಧ್ಯಾನವೆಸಗಲು ಕುಳಿತರೆ

ಮನವು ನಿಲ್ಲಲೊಲ್ಲದು, ನೋಡಾ!
ತ್ರಾಣವಿಲ್ಲದ ರೋಗಿಯಂತೆ
ಮನದ ಪರಿಯಾಗಿಪುದಯ್ಯಾ!
ಎನ್ನ ಚಿತ್ತ-ಭಿತ್ತಿಯ ಮೇಲೆ
ನಿನ್ನ ಚಿತ್ರವನೊತ್ತದಿದ್ದರೆ,
ನಾನೆಂತು ಬದುಕುವೆ, ಹೇಳಾ?
　　ಭ್ರೂಲತಾ ಪುರೀಶ ಕರ್ತೃ
　　ಜಗದ್ಗುರು ಗುರುಸಿದ್ಧೇಶ್ವರಾ.

೩೮

ಅಂತರಂಗದಿರವನರಿಯದೆ ದೂಷಿಸುತ್ತಿಹರ ಕಂಡು!
ಮನ ನೊಂದಿತ್ತಯ್ಯಾ!
ಹಣ್ಣಿನ ರುಚಿಯ ನೋಡದೆ
ಆ ಹಣ್ಣಿನ ಬಣ್ಣವ ನೋಡಿದರೇನು,
ಸವಿ ದೊರೆಕೊಳ್ವುದೆ?
　　ಭ್ರೂಲತಾ ಪುರೀಶ ಕರ್ತೃ
　　ಜಗದ್ಗುರು ಗುರುಸಿದ್ಧೇಶ್ವರಾ.

೩೯

ಕಾರ್ಯವ ನೋಡಿ ಹರುಷ ಪಡಬೇಕಲ್ಲದೆ,
ಮತ್ಸರಿಸುವದೇತಕಯ್ಯಾ?
ಅಲ್ಲ ಸಲ್ಲದ ನುಡಿಗಳನಾಡಿ
ಕುತ್ಸಿತರಾಗುವುದೇತಕಯ್ಯಾ?
ಬೆಂಕಿಯ ಬಾಯಿಗೆ ರವದಿಯ ತುರುಕಿದಂತೆ
ಮತ್ಸರಾಗ್ನಿಗೆ ಮನವನ್ನಿತ್ತರೆ,
ಆತ್ಮ ಶಾಂತಿಯೆಲ್ಲಿಯದಯ್ಯಾ?
　　ಭ್ರೂಲತಾ ಪುರೀಶ ಕರ್ತೃ
　　ಜಗದ್ಗುರು ಗುರುಸಿದ್ಧೇಶ್ವರಾ.

೪೦

ದೂಷಿಸುವವರು ದೂಷಿಸಲಿ,
ಅದು ಅವರ ಕರ್ಮವಯ್ಯಾ!
ಸ್ತುತಿಸುವವರು ಸ್ತುತಿಸಲಿ,
ಅದು ಅವರ ಧರ್ಮವಯ್ಯಾ!
ಕುಗ್ಗಿ ಕರ್ತವ್ಯ ಬಿಡದಂತೆ,
ಹಿಗ್ಗಿ ಹಮ್ಮು ಪಡದಂತೆ
ಕರುಣಿಸಿ ಕಾಪಾಡಯ್ಯಾ,
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೪೧

ಸಂಪತ್ತೆಂಬುದು ಆಪತ್ತು, ನೋಡಾ!
ಸಂಪತ್ತು ಹೆಚ್ಚಿದಂತೆ
ಕಾಯುವ ಚಿಂತೆ ಹೆಚ್ಚುವುದಯ್ಯಾ!
ಸಂಪತ್ತು ಹೆಚ್ಚಿದಂತೆ
ಶಾಂತಿಯ ಬಾಗಿಲು ಮುಚ್ಚುವುದಯ್ಯಾ!!
ಸಂಪತ್ತು ಅವಗುಣಕ್ಕೆ ಆಹ್ವಾನ, ನೋಡಾ
ಆದು ಕಾರಣ, ಭೌತಿಕ ಸಂಪತ್ತಿಗೆ ಬಾಯ್ದೆರೆಯದೆ,
ಆತ್ಮ ಸಂಪತ್ತನ್ನು ಅರ್ಜಿಸಿಕೊಂಡರೆ,
ಕಾಣುವ ವೈರಿಗಳ ಕಾಟ ತಪ್ಪುವುದಯ್ಯಾ,
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ,

೪೨

ಕಾಡುವವರು ಕಾಡಲಿ!
ಬೇಡುವವರು ಬೇಡಲಿ!!
ಓಡುವವರು ಓಡಲಿ!!!

ನೀಡುವವರು ನೀಡಲಿ!
ತೀಡುವವರು ತೀಡಲಿ!!
ಕೂಡುವವರು ಕೂಡಲಿ!!!
ಭ್ಯೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ,
ನಿನ್ನಡಿಯ ಪಿಡಿಯುವುದೊಂದೆ, ಸದಾ
ನನ್ನ ಸ್ಮರಣೆಯಲ್ಲಿರಲಿ.

೪೩

ತೆಗಳಿ ತೆಗಳಿ ಬಾಯಿ ಕೆಡಿಸಿಕೊಂಡು,
ಪಾಪದ ಮಡುವಿನಲ್ಲಿ ಮುಳುಮುಳುಗಿ ಪಳುತಿಪರಯ್ಯಾ
ಹಲ ಕೆಲವರು!
ಮತ್ಸರಾಗ್ನಿಯೊಳು ಬೇಯುತಿಪರ ಕಂಡು,
ಮನ ಬಲು ಕಳವಳಗೊಳ್ಳುತಿಹುದಯ್ಯಾ!
ಪಾಪದರಿವು ಮನದಲ್ಲಿದ್ದರೆ,
ಈ ಪರಿ ಕುತ್ಸಿತ ಭಾವನೆ ಬರುವುದುಂಟೇನಯ್ಯಾ?
ಚಿನ್ನದೊಡವೆಗೆ ಮಣ್ಣೆರಚಿದರೆ,
ತನ್ನ ಬಣ್ಣವ ಬಿಡುವುದುಂಟೇನಯ್ಯಾ?
ಭ್ಯೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೪೪

ಕೇರಿ ಶುಚಿಯಾಗಿರಲು
ಕಿರಿ–ನಿಕರವಿರಬೇಕಯ್ಯಾ!
ಹೃದಯ–ಕಲ್ಮಷ ನಿವಾರಿಸಲು
ನಿಂದಕರಿರಬೇಕಯ್ಯಾ!!

ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೪೫

'ಶ್ರೇಯಾಂಸಿ ಬಹು-ವಿಘ್ನಾನಿ' ಎಂಬಂತೆ
ಪ್ರಗತಿಯತ್ತ ಸಾಗಿದವರನು
ಅಡೆತಡೆಗಳು ಬಂದು ಆವರಿಸುವವಯ್ಯಾ!
ನಡೆವರಿಗೆ ಕಲ್ಮುಳ್ಳು ತಾಗುವುದಲ್ಲದೆ,
ಕುಳಿತವರಿಗೆ ತಾಗುವುದೇನಯ್ಯಾ!!
ವಿಘ್ನದ ಪರ್ವತ ಶ್ರೇಣಿ ಎದುರು ಬಂದರೂ
ಧೈರ್ಯಗುಂದದ ಧ್ಯಾನಬಲವ ನೀಡಿ,
ರಕ್ಷಿಪುದು ನಿನ್ನ ಧರ್ಮವಯ್ಯಾ,
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೪೬

ಅತ್ತಿತ್ತ ಹರಿದಾಡುತ್ತಿಹುದು ನೋಡಾ, ಈ ಮನ!
ಕತ್ತೆತ್ತಿ ನೋಡುತ್ತಿಹುದು ನೋಡಾ, ಈ ಮನ!!
ಮನಬಂದಂತೆ ಕುಣಿ-ಕುಣಿವ ಮಂಗನಂತೆ
ಆಶಿಸುತ್ತಿಹುದು ನೋಡಾ, ಈ ಮನ!!!
ಎನ್ನ ಈ ಮನವ ನಿನ್ನತ್ತ ಹರಿವಂತೆ ಹರಸಿ,
ಎನ್ನನುಳುಹಿಕೊಳ್ಳಾ,
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೪೭

ಆರಂಭ್ಯನ ಮಹಾ ದ್ವಾರವ ಕಟ್ಟಿದನೆಂದು
ಅರಿವುದ ಮರೆಯಿಸುವರು, ದೇವಾ!
ಆರಳಿದು ಮೂರ್ ಕಳೆವ ಧೀರತನವ ದಯಪಾಲಿಸಯ್ಯ

ಭ್ಯೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೪೮

ಶಿವ ಪೂಜೆ ಮಾಡುವೆನಯ್ಯಾ
ಮನ ನಿಲಲೆಂದು;
ವಿಷಯ ಗೆಲ್ಲಲೆಂದು.
ಶಿವ ಪೂಜೆ ಮಾಡುವೆನಯ್ಯಾ
ಭಕ್ತಿ ಬಲಿಯಲೆಂದು;
ನೀನೊಲಿಯಲೆಂದು.
ಶಿವ ಪೂಜೆ ಮಾಡುವೆನಯ್ಯಾ
ಜನ ಏಳಲೆಂದು;
ಎದ್ದು ಬಾಳಲೆಂದು!

ಭ್ಯೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೪೯

ಬಿಡುವಿಲ್ಲದಿಹ ಜೀವನದೊಳು
ನಿನ್ನ ನೆನೆವುದು ಕಡು ಕಷ್ಟ, ಕಾಣಯ್ಯಾ!
"ಕಾಯಕವೆ ಕೈಲಾಸ"ವೆಂದು ನಂಬಿ
ನಿನ್ನ ಸೇವೆಯ ಮಾಡುತಿಹೆನಯ್ಯಾ!!

ಭ್ಯೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೫೦

ಮಳೆ-ಮಳೆಯೆಂದು ಜನ ಬಳಲುತಿಪರು, ನೋಡಾ!
ಮಳೆಯಾಗದೆ, ಬದುಕುವುದೆಂತು, ದೇವಾ?
ಮಕ್ಕಳ ಅಜ್ಞಾನವ ಕಂಡು ಕೋಪಿಸಿರುವೆಯಾ?

"ನಡೆವರು ಎಡಹುವರಲ್ಲದೆ,
ಕುಳಿತವರು ಎಡಹುವರೆ?"
ಮಕ್ಕಳ ತಪ್ಪನು ತಂದೆಯು ಮನ್ನಿಸುವಂತೆ
ದಯಾ–ಘನಾ, ನೀನು ಮನ್ನಿಸದಿರುವೆಯಾ?
ಮಳೆ ಸುರಿಸಿ,
ಬೆಳೆ ತರಿಸಿ,
ಕಳೆಯಿತ್ತು ಕಾಪಾಡಯ್ಯಾ!
ಭೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೫೧

ಇದ್ದು ಇಲ್ಲದಂತೆ ಇರಬೇಕು, ನೋಡಾ
ಈ ಪ್ರಪಂಚದೊಳಗೆ!
ಕಾರ್ಯ ಮಾಡಿ ತೋರಿಸಲು ಮುಂದಾದರೆ,
ಹೊಗಳಿಗೆ ತೆಗಳಿಕೆಗಳ ಹೊರೆ ಹೊರಲು
ಸಿದ್ಧರಿರಬೇಕು, ನೋಡಾ
ಈ ಪ್ರಪಂಚದೊಳಗೆ!!
ಭೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೫೨

ಭಿಕ್ಷೆಯನು ಕೇಳಿದರೆ ಕೊಡಲೊಲ್ಲರು
ನೋಡಾ ಈ ಜನ!
ಮೋಸದಿಂ ಮರುಳುಗೊಳಿಸುತ್ತಿಹರ ಕಂಡು,
ನೀರಿನಂತೆ ಧನವ ಸೂರೆಗೈಯುತ್ತಿಹರು
ನೋಡಾ ಈ ಜನ!!
ಕಾದು ಕಷ್ಟದಿಂದ ಗಳಿಸಿದಿಹ ಹಣವು ಹಾಳೇನೋ!
ಸತ್‌ಪಾತ್ರಕ್ಕೆ ಸಲ್ಲದಿಹ ಹಣವು ಹಾಳೇನೋ!!

ನೀತಿಯಿಂ ರೂಪುಗೊಳ್ಳದುದು
ಲಿಂಗ ಪೂಜೆಗೆ ಸಲ್ಲದು, ನೋಡಾ

ಭ್ಯೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೫೩

ಹುಬ್ಬಳ್ಳಿಯೆಂಬುದು ಹೂಬಳ್ಳಿಯ ತವರ್ಮನೆಯ
ತೆರನಿಹುದಯ್ಯಾ!
ಮನವರಳಿದಂತೆ ಮನೆ ಬೆಳಗಿ,
ತನು ಶುದ್ಧಿಯಾಗುವುದಯ್ಯಾ!!
ಬಾಳಿನ ಹೂಬಳ್ಳಿಗೆ
ಅಳಿಯಾಸೆಯ ಗೆದ್ದಲು ಹತ್ತದಂತಿದ್ದರೆ,

ಭ್ಯೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ,

ತನ್ನತ್ತ ಕರೆದು ಎತ್ತಿಕೊಳ್ಳದೆ ಬಿಡನೆ?

೫೪

ವ್ಯಕ್ತಿತ್ವ ವ್ಯಕ್ತಿತ್ವ ಎಂದೆಂಬಿರಿ,
ವ್ಯಕ್ತಿತ್ವದಿರವನರಿಯಿರಯ್ಯಾ!
ವ್ಯಕ್ತಿತ್ವವೆಂದೊಡೆ;
ಅಹಂಕಾರವಳಿದು, ಅರುಹು ಅಳವಟ್ಟಿರಬೇಕು,
ಕತ್ತಲೆ ಕರಗಿ, ಅರುಣ ಬರುವಂತೆ;
ಆತ್ಮ ಶಕ್ತಿಯ ದಿವ್ಯ ದೀಪ್ತಿಯು
ತೊಳಗಿ ಬೆಳಗುತ್ತಿರಬೇಕು,
ಸೂರ್ಯನುದಯಿಸಿ ಬೆಳಗುವಂತೆ;
ಸದ್‌ಭಾವ–ಸದ್‌ಭಕ್ತಿ, ಸುವಿಚಾರ–ಸುವಿವೇಕಂಗಳ
ಸೂಸುತ್ತಿರಬೇಕು,
ಶ್ರೀಗಂಧ ಸುಗಂಧವ ಸೂಸುವಂತೆ;

ದುರ್ಮೋಹ-ಮದ-ಮತ್ಸರಾದಿಗಳು ಜಾರದಂತಿರಬೇಕು,
ನದಿಯೊಳು ಹರಿದು ಹೋದ ಕೊಳೆ ಜಾರದಿರುವಂತೆ,
ಇಂತಪ್ಪ ಭಾವ ಶುದ್ಧಿಯೊಳು ಮಿಂದು,
ವಾಯು ವೇಗದಂತಿರುವ ಮನವ ನಿಲಿಸಿ,
ಆತ್ಮ ಪ್ರಕಾಶವ ಪಡೆವುದೇ
ವ್ಯಕ್ತಿತ್ವದ ಒಳಗುಟ್ಟು ನೋಡಾ!
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೫೫

"ಕೋಪವೆಂಬುದು ಪಾಪದ ನೆಲಗಟ್ಟು," ನೋಡಯ್ಯಾ!
ಕೋಪ ಕೆಸರು ತುಂಬಿದ ಕೂಪ, ಕಂಡಯ್ಯಾ!
ಕೋಪವೆಂಬುದು ಮುಕ್ತಿ ಕಂಠಾಭರಣಕೆ
ಕಂಟಕ, ಕಾಣಯ್ಯಾ!
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ
ಎದೆಯ ಬಟ್ಟಲಲ್ಲಿ ಶಾಂತಿ ಸುಧೆಯನು ಸುರಿದು,
ಕೋಪಿಗಳ ಧಗಿಧಗಿಪ ಕೋಪಾಗ್ನಿಯ ಆರಿಸಿ,
ಕೃಪೆದೋರಾ ಪ್ರಭುವೆ!

೫೬

ವೃದ್ಧರಾದರು, ಬುದ್ಧಿ ಬರಲೊಲ್ಲದು, ನೋಡಾ!
ಕಜ್ಜ ಹಸಗೆಡೆ ಜಗವ ಬಾಧಿಸುತಿಹರು, ನೋಡಾ!!
ಕಾಯಿ ಹಣ್ಣಾದರೇನಂತೆ, ಸಿಹಿ ಇರದನ್ನಕ್ಕರ?
ಮಾಗಿತ ತೆಂಗಿನಕಾಯಿಯಂತಿಪ್ಪವರ ಮೆಚ್ಚಿ,
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೫೭

ತಲೆಗೊಂದು ಪಕ್ಷವ ಕಟ್ಟಿ,
ಸಮಾಜ ಮಂದಿರವ ಸಂಹರಿಸುತ್ತಿಹರು, ನೋಡಯ್ಯಾ!
ಪ್ರತಿಷ್ಠಾ ಭೂತದ ಬೆನ್ನು ಹತ್ತಿ,
ಶಕ್ತಿ-ಸಾಮರ್ಥ್ಯವ ಕಳೆದುಕೊಳ್ಳುತಿಹರು, ನೋಡಯ್ಯಾ!
ಸಮಾಜದ ಕಳಕಳಿಯನು ಕೋಲ್ಮಿಂಚಿನಂತೆ
ತೋರುತಿಹರಯ್ಯಾ!
ಆತ್ಮ ಶುದ್ಧಿಯಿಲ್ಲದವರ ಕಳಕಳಿಯು
ಬೂರಗದ ಅರಳೆಯಂತಪ್ಪುದಯ್ಯಾ!

ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೫೮

ದಿನಕೊಂದು ಸಂಪ್ರದಾಯವ ಸೇರುತಿಹರು, ನೋಡಯ್ಯಾ,
ಶಿವ ಸಮಾಜವು ನಶಿಸುತ್ತಿಹುದು, ಕಣ್ದೆರೆಯಬಾರದೆ?
ತನ್ನ ತೋಂಟದ ತರುಗಳ ತೊರೆದು,
ಅನ್ಯರ ತೋಂಟಕೆ ನೀರುಣಿಸುತಿಪ್ಪವರ ಒಲ್ಲನಯ್ಯಾ!

ನಮ್ಮ ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೫೯

ಶೀಲವಿಲ್ಲದ ನಿಯಮು ಅದೆಂತಹದೋ!
ಕಾಲವಿಲ್ಲದ ಚರಿತೆ ಅದೇತರದೋ!!
ತಾಳವಿಲ್ಲದ ಬಾಳು ಅದೆಂತಹದೋ!
ಮೇಳವಿಲ್ಲದ ಭಜನೆ ಅದೇತರದೋ!!
ಜ್ಞಾನವಿಲ್ಲದ ತಪವು ಅದೆಂತಹದೋ!
ತಾನವಿಲ್ಲದ ಗಾನ ಅದೇತರದೋ!!

ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರನ
ನೆನೆಯದ ಮನದವನು
ಎಲ್ಲಿದ್ದರೇನು; ಎಂತಿದ್ದರೇನು?

೬೦

ಬುದ್ಧಿ ಬೆಳೆದಂತೆ ಹೃದಯವರಳಬೇಕು, ನೋಡಾ!
ಆತ್ಮ ಶುದ್ಧಿಯಿಲ್ಲದ ಬುದ್ಧಿ ವ್ಯರ್ಥ, ಕಂಡಯ್ಯಾ!
ಭಾಂಡವನು ಒಳಗೆ ತೊಳೆಯದೆ,
ಮೇಲೆ ತಿಕ್ಕಿದರೇನು, ಹೇಳಾ?
ಕಡಿವಾಣವಿಲ್ಲದ ಕುದುರೆಯಂತೆ,
ಹೃದಯವಿಲ್ಲದ ಬುದ್ಧಿಯದೇವುದಯ್ಯಾ?
ಸಾಕು, ಸಾಕು!
ಇಂತಪ್ಪ ಬುದ್ಧಿವಂತಿಕೆಗೆ
ಹೃದಯವಂತಿಕೆಯು ಜೋಡಾಗಿಸಯ್ಯಾ?

ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೬೧

ಶೀಲ–ಶೀಲವೆಂದು ದೂರ–ದೂರ ಸರಿಯುತಿಹಿರಿ!
ನೀರಿನಿಂದ ಮೈದೊಳೆವುದು ಶೀಲವೆ?
ಮನದ ಮಾಲಿನ್ಯವ ತೊಳೆಯದೆ,
ತನು–ವಿಕಾರವ ಕಳೆಯದೆ,
ಘನ ಮಹಿಮನ ಪಡೆವುದೆಂತಯ್ಯಾ?
ಮರವೆಯ ತುಳಿಯದೆ,
ಅಹಂಕಾರವ ಅಳಿಯದೆ,
ಚಿತ್–ಪ್ರಭೆಯ ಕಾಣುವುದೆಂತಯ್ಯಾ?
ಮೈಮನಂಗಳ ಮಡಿಮಾಡಿ,
ಕಾಮಾದಿಗಳ ಹುಡಿ ಮಾಡಿ,

ಮೈದೊಳೆವ
ಮನದೊಳೆವ
ಶೀಲವೇ ಶೀಲ ಕಾಣಯ್ಯಾ
ಭೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೬೨

ಸತ್ಯಾರಾಧನೆಯ ಮಾಡಿದೊಡೆ,
ಅಹಿಂಸೆಯೆಂಬ ರತ್ನ ದೊರಕೊಂಬುದು, ನೋಡಾ!
ನಿತ್ಯ ನಿಷ್ಠೆಯಲಿ ಭಜಿಸಿದೊಡೆ,
ಜ್ಞಾನವೆಂಬ ವೃಕ್ಷ ಚಿಗುರಿಡುವುದು, ನೋಡಾ!
ತನ್ನ ತಾನರಿದು ಶಿವ ಸುಖವ ಪಡೆಯಲು,
ಆತ್ಮ ಸಂಯಮನವೇ ದಾರಿ ದೀಪ, ಕಾಣಾ!
ಭೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೬೩

ಕರುಣಿಕರೆಂಬವರು, ಪ್ರಾಮಾಣಿಕರಿರಬೇಕು, ನೋಡಯ್ಯಾ!
ಪೂರ್ವ ಪುಣ್ಯವಿಲ್ಲದೆ,
ಪ್ರಾಮಾಣಿಕರು ಸಿಗುವುದು ದುರ್ಲಭ, ನೋಡಯ್ಯಾ
ಕರ್ತವ್ಯದರಿವೇ ಪ್ರಾಮಾಣಿಕತೆಯ ಒರೆಗಲ್ಲು, ನೋಡಯ್ಯಾ
ಭೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೬೪

ಪ್ರವಚನ ಶ್ರವಣವು ಮೋಹಾಂಧಕಾರಕೆ
ಜ್ಯೋತಿಯಂತಿಹುದು, ನೋಡಯ್ಯಾ!

ಪ್ರವಚನ ಶ್ರವಣವು ದುರಹಂಕಾರಕೆ
ಮುದ್ಗರದಂತಿಹುದು, ನೋಡಯ್ಯಾ!
ಪ್ರವಚನ ಶ್ರವಣವು ಅಜ್ಞಾನ ಕಲ್ಬಿಷಕೆ
ಗಂಗೋದಕ, ನೋಡಾ!
ಪ್ರವಚನ ಶ್ರವಣವು ಭವರೋಗಕೆ
ದಿವ್ಯೌಷಧಿ, ನೋಡಾ!
ಮನಸವಿಲ್ಲದ ಶ್ರವಣವು ಕಾಲಹರಣವಲ್ಲದೆ,
ಜೀರ್ಣವಾಗದ ಆಹಾರ, ಕಾಣಾ!
ಭೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೬೫

ಅರ್ಥವಿಲ್ಲದ ಮಾತು,
ಬಿತ್ತಲಾರದ ಭೂಮಿ
ಒಂದೇ ಕಂಡಯ್ಯಾ!
ನೀರಿಲ್ಲದ ತಟಾಕ,
ಹಾರದಿರುವ 'ಪಟಾಕಿ'
ಒಂದೇ ಕಾಣಯ್ಯಾ!
ರೆಕ್ಕೆಯಿಲ್ಲದ ಪಕ್ಷಿ,
ಅನ್ನವಿಲ್ಲದ ಕುಕ್ಷಿ
ಒಂದೇ ನೋಡಯ್ಯಾ!
ಕ್ರಿಯೆಯಿಲ್ಲದ ಜ್ಞಾನ,
ಸಂಯಮವಿಲ್ಲದ ಧ್ಯಾನ,
ಮುಕ್ತಿಗೆ ಕಂಟಕ ಕಾಣಾ!!
ನಮ್ಮ ಭೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೬೬

ಶಿವಶರಣರ ಸಾಹಿತ್ಯ ಸೃಷ್ಟಿ
ಆತ್ಮ ತುಷ್ಟಿಗೆ ಆಹಾರ, ನೋಡಯ್ಯಾ!

ಶಿವಶರಣರ ವಚನಾಮೃತ
ಭಾವ ಪುಷ್ಟಿಗೆ ರಸಪಾಕ, ನೋಡಯ್ಯಾ!
ಶಿವಶರಣರ ಶಿವ ಸಿದ್ಧಾಂತ
ಶಿವೋಪಾಸಕರಿಗೆ ಕಲ್ಪತರು, ನೋಡಾ!!
ಶಿವಶರಣರ ಶಿವಾನುಭವ
ಸದ್‌ಭಕ್ತರಿಗೆ ಸದ್‌ದರ್ಪಣ, ನೋಡಾ!!
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.
ನಿನ್ನ ಶರಣರು
ಒರೆದುದು, ಬರೆದುದು
ಏನಿದ್ದರೂ
ಹಾಲ್‌ಜೇನು ಸವಿದಂತೆ!

೬೭

ಗುರು–ವಿರಕ್ತರೆಂಬವರು
ಸಮಾಜ ಪುರುಷಂಗೆ ಕಣ್ಣೆರಡು, ನೋಡಾ!
ಪರೆ ಬಂದ ಕಂಗಳಂತೆ,
ಇವರೀರ್ವರ ಪರಿ ಆಗಬಾರದು, ನೋಡಾ!
ಕಂಗಳ ಪರೆ ಹರಿದು,
ತಿಂಗಳ ಸಿರಿ, ಅಂಗವಿಸಿ,
ಮಂಗಳ ಭಾವೈಕ್ಯವಾದಾಗಳೆ
ಸಮಾಜದ ಅಂಗಳ ಬೆಳಗುವುದು, ನೋಡಾ!
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೬೮

‘ನಾ ಹೆಚ್ಚು, ನೀ ಹೆಚ್ಚು’ ಎನ್ನುವುದೆ,
ಗುರು ವಿರಕ್ತರ ಮಂತ್ರವಾಗಬಾರದು, ನೋಡಾ!
ಹೆಚ್ಚಿನ ಹೆಚ್ಚಳವರಿಯದೆ,

ಇಚ್ಛೆಗೆ ಬಂದಂತೆ ಮೆರೆವುದೆ
ತಂತ್ರವಾಗಬಾರದು, ನೋಡಾ!
ಆತ್ಮ ಸೌಂದರ್ಯವನು ಗಳಿಸದೆ,
ಸಮಾಜ ಹಿತಚಿಂತನೆಗೆಳಿಸದೆ,
ಬರೀ ಅಹಂಕಾರದ ಗಿರಿಯನೇರಿ ಕುಳಿತವರ
ಕಣ್ಣೆತ್ತಿ ನೋಡನಯ್ಯಾ
ಭ್ಯೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೬೯

ತನುವೆಂಬ ತೋಟದಲಿ
ಸದ್‌ಗುಣವೆಂಬ ಬೀಜವ ಬಿತ್ತಿ,
ಅವಗುಣವೆಂಬ ಕಸವ ಕಿತ್ತು,
ಭವಪಾಶವ ಹರಿಯಬೇಕು, ನೋಡಾ!
ಅಷ್ಟ ಮದಂಗಳ ದೂರ ಮಾಡಿ,
ಸೃಷ್ಟಿಯೊಡೆಯನ ಧ್ಯಾನ ಮಾಡಿ,
ಕಷ್ಟ ಪರಿಹಾರ ಮಾಡಿಕೊಳ್ಳಬೇಕು. ನೋಡಾ!
ಭ್ಯೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೭೦

ಆಧ್ಯಾತ್ಮವಿಲ್ಲದ ಸಾಹಿತ್ಯ
ಪ್ರಾಣ ಹೋದ ಶರೀರದಂತೆ, ನೋಡಾ!
ಧರ್ಮವಿಲ್ಲದ ರಾಜಕಾರಣ
ಔಷಧಿ ಸೇವಿಸದ ರೋಗಿಯಂತೆ, ಕಾಣಾ!
ಧ್ಯಾನವಿಲ್ಲದ ಪೂಜೆ
ತೈಲ ತೀರಿದ ದೀವಿಗೆಯಂತೆ, ನೋಡಾ!
ಭ್ಯೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೭೧

ಹಲವಾರು ಗ್ರಂಥಗಳ ಬರೆದು ಫಲವೇನು,
ಬರೆದಂತೆ ಮನವಿರದನ್ನಕ್ಕರ?
ಬೀಜಗಳ ಬಿತ್ತಿದರೆ ಫಲವೇನು?
ಹೊಲವು ಹಸನಾಗಿರದನ್ನಕ್ಕರ?
ಲಿಂಗವ ಪೂಜಿಸಿ ಫಲವೇನು,
ಆಶೆ ಹರಿಯದನ್ನಕ್ಕರ;
ಮೋಸ ತರಿಯದನ್ನಕ್ಕರ?
    ಭ್ರೂಲತಾ ಪುರೀಶ ಕರ್ತೃ
    ಜಗದ್ಗುರು ಗುರುಸಿದ್ಧೇಶ್ವರಾ.

೭೨

ತತ್ತ್ವವು ಮಾತಿನಲಿ ತುಂಬಿದ್ದರೇನು,
ಕೃತಿಯೊಳಗೆ ಇಳಿಯದನ್ನಕ್ಕರ?
ಮಧು ರಸವ ಅಧರದಲಿ ಇರಿಸಿದ್ದರೇನು,
ಉದರದೊಳಗೆ ಇಳಿಯದನ್ನಕ್ಕರ?
ಮಾತು–ಕೃತಿ ಒಂದಾದಲ್ಲಿ
ಬಂಗಾರಕ್ಕೆ ಕುಂದಣವಿಟ್ಟಂತೆ, ನೋಡಾ,
    ಭ್ರೂಲತಾ ಪುರೀಶ ಕರ್ತೃ
    ಜಗದ್ಗುರು ಗುರುಸಿದ್ಧೇಶ್ವರಾ.

೭೩

ಮಾತಿನಲಿ ಸಿಹಿ ತುಂಬಿ
ಎದೆಯೊಳಗೆ ಕಹಿ ತುಂಬಿ
ಸಾಸಿರ ನುಡಿದರೇನು ಫಲ?
ಹಿರಿಯರ ಕುಂದಿಸಿ,
ಗುರುಗಳ ನಿಂದಿಸಿ,
ಅಭಿಮಾನ ತಾಳಿದರೇನು ಫಲ?

ಭೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೭೪

ಚಿಂತನವಿಲ್ಲದ ಅಧ್ಯಯನ
ಕಡೆಯಲಾರದ ಮೊಸರಿನಂತಿಹುದಯ್ಯಾ!
ಕಡೆದಂತೆ ಹೊರಡುವುದು, ತತ್ತ್ವದ ಬೆಣ್ಣೆ, ನೋಡಾ!

ಭೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

'ವಾದೇ ವಾದೇ ಜಾಯತೇ ತತ್ತ್ವ -ಬೋಧಃ'
ಎಂಬುದು ಸತ್ಯ, ನೋಡಾ.

೭೫

'ಹಿತ್ತಲ ಗಿಡ ಮದ್ದಲ್ಲ'ವೆಂಬುದು
ನಿಜವಾದಂತಾಗಿ, ದುಡಿವವರಿಗೆ ಬೆಲೆಯಿಲ್ಲ, ನೋಡಾ!
ಬೆಳಕಿನರಮನೆಯ ತೊರೆದು
ಕತ್ತಲು ಮನೆಯ ಸೇರುತಿಹರು, ನೋಡಾ!
ಪ್ರೋತ್ಸಾಹನವಿಲ್ಲದ ದುಡಿಮೆ
ಪರಿಮಳವಿಲ್ಲದ ಪುಷ್ಪ, ನೋಡಾ!
'ಸೌಂದರ್ಯವಿಲ್ಲದ' ಸೌಧ, ನೋಡಾ!

ಭೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೭೬

ಸದ್‌ವಿಚಾರವಿಲ್ಲದ ಆಚಾರ,
ಸದಾಚಾರವಿಲ್ಲದ ವಿಚಾರ
ಇವೆರಡು ಭವ್ಯ ಬುನಾದಿಯಿಲ್ಲದ
ಭವನದಂತೆ ಕಾಂಬುವು, ಕಾಣಾ!

ಸದ್ ವಿಚಾರದ ಸದಾಚಾರ ಸಾಹಿತ್ಯವು
ಉದ್ದೀಪನಗೊಳ್ಳುತ್ತ ಹೋದಂತೆ
ಹೃದ್‌ದರ್ಪಣದೊಳಗೆ ತಾನೆ ತಾನು
ಕಾಣುತಲಿಹನು, ನೋಡಾ

ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೭೭

ಮನವ ಕಟ್ಟವೆ, ಮತವ ಕಟ್ಟುವುದೆಂತು?
ಬೇಲಿಯನಿಕ್ಕದೆ, ತರು-ಲತೆಗಳ ಬೆಳೆಸುವುದೆಂತು?
ಕ್ರಿಯೆಯಿಲ್ಲವೆ, ಜ್ಞಾನವ ಗಳಿಸುವುದೆಂತು?
ಮನವು ನಿಲ್ಲಿಸಲು ಮತವು ಸಾಧನವಾಗಿಹುದು, ನೋಡಾ!

ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೭೮

ವಿಶ್ವಾಸ ಹುಟ್ಟಿಸದ ಆಶ್ವಾಸನೆ
ಮರುಭೂಮಿಯಲ್ಲಿ ತರುಪಿಟ್ಟಂತಾಯಿತ್ತಯ್ಯಾ!
ಹೃದಯವಂತಿಕೆಯಿಲ್ಲದ ಬುದ್ಧಿ
ಬಚ್ಚಲು ನೀರಿನಂತೆ ವ್ಯರ್ಥವಾಯಿತ್ತಯ್ಯಾ!

ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ
ನಿನ್ನ ಶಕ್ತಿಯರಿದಾಚರಿಸದ ಜೀವನ
ಗುಡ್ಡಕ್ಕೆ ಕಲ್ಲು ಹೊತ್ತಂತಾಯಿತ್ತಯ್ಯಾ!

೭೯

ಭೃತ್ಯರಾದವರು ಇಂತಿರಬೇಕು,
ಕರ್ತವ್ಯದರಿವೆ ಜೀವಾಳವಾಗಿರಬೇಕು;

ಸತ್ಯವ ಪರಿಪಾಲಿಸುತ್ತಿರಬೇಕು;
ಒಡೆಯನ ಗುಟ್ಟನೊಡೆಯದಂತಿರಬೇಕು;
ನೆರಳಿನಂತೆ ಹಿಂಬಾಲಿಸುತ್ತಿರಬೇಕು.
ವೈಗಳ್ಳರೆಂದಿಗೂ ಆಗದಿರಬೇಕು.
ಇದೇ ಭೃತ್ಯಾಚಾರ, ನೋಡಾ!
ಇಂತಪ್ಪ ನಿಜವಾದ ಭೃತ್ಯರೇ
ನಿಜಸುಖದ ನಿಚ್ಚಣಿಕೆ, ನೋಡಾ!

ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೮೦

ವಿದ್ಯೆಯಿದ್ದೊಡೆ, ವಿನಯವಂತನಾಗಿರಬೇಕು ನೋಡಾ!
ಬುದ್ಧಿಯಿದ್ದೊಡೆ, ಹೃದಯವಂತಿಕೆಯುಳ್ಳವನಾಗಿರಬೇಕು, ನೋಡಾ!
ಯೋಗಿಯಾದೊಡೆ, ಸಂಯಮ ಜೀವಿಯಾಗಿರಬೇಕು, ನೋಡಾ!
ತ್ಯಾಗಿಯಾದೊಡೆ, ರಾಗ–ರಹಿತನಾಗಿರಬೇಕು, ನೋಡಾ!
ತಪಸ್ವಿಯಾದೊಡೆ, ಕೋಪದ ಲವಲೇಶವಿಲ್ಲದಿರಬೇಕು, ನೋಡಾ!
ಕವಿಯಾದೊಡೆ, ರಸ–ಋಷಿಯಾಗಿರಬೇಕು ನೋಡಾ!

ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೮೧

ವೀರಶೈವನಾದೊಡೆ, ಅಂಗದ ಮೇಲೆ ಲಿಂಗವ ಧರಿಸಿರಬೇಕು;
ವೀರಶೈವನಾದೊಡೆ, ಪ್ರಾಣವೇ ಲಿಂಗವಾಗಿ,
ಲಿಂಗವೇ ಪ್ರಾಣವಾಗಿರಬೇಕು;
ವೀರಶೈವನಾದೊಡೆ, ಗುರುವಿಗೆ ತನುವನ್ನು
ಲಿಂಗಕ್ಕೆ ಮನವನ್ನು
ಜಂಗಮನಿಗೆ ಧನವನ್ನು ಸಮರ್ಪಿಸಬೇಕು;
ವೀರಶೈವನಾದೊಡೆ, ಅಷ್ಟಾವರಣ–ನಿಷ್ಠನಾಗಿರಬೇಕು;
ವೀರಶೈವನಾದೊಡೆ, ಪಂಚಾಚಾರ ಪಾರಾಯಣನಾಗಿರಬೇಕು;

ವೀರಶೈವನಾದೊಡೆ, ಷಟ್‌ಸ್ಥಲದಲ್ಲಿ ಶ್ರದ್ಧೆಯಿಟ್ಟಿರಬೇಕು:
ವೀರಶೈವನಾದೊಡೆ, "ಕಾಯಕವೆ ಕೈಲಾಸ"ವೆಂದು
ಕಾರ್ಯವೆಸಗುತ್ತಿರಬೇಕು;
ವೀರಶೈವನಾದೊಡೆ, ಸಕಲ ಜೀವಾತ್ಮರಿಗೆ ಲೇಸನೇ
ಬಯಸುತ್ತಿರಬೇಕು!
ಇಂತಪ್ಪ ವೀರಶೈವನು ಸಂಸಾರ ಸಾಗರವ ದಾಂಟಿ,
ಮುಕ್ತಿ ಮಂದಿರವ ಮುಟ್ಟುವನಯ್ಯಾ,
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೮೨

ಸತಿಯಾದೊಡೆ, ಪತಿಯನಗಲದಂತಿರಬೇಕು;
ಶಿವ ಮೆಚ್ಚಿ 'ಅಹುದಹುದು'! –ಎನ್ನುವಂತಿರಬೇಕು.
ಸತಿ–ಪತಿಗಳ ಸಮರಸ ಜೀವನವೇ
ಸಂಸಾರ ವೃಕ್ಷಕ್ಕೆ ಫಲಕಾರಿ, ನೋಡಯ್ಯಾ!
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೮೩

ವಚನ ಸಾಹಿತ್ಯವು ಆತ್ಮಾನಂದಕ್ಕಾಧಾರವೆಂದು
ವಚನ ರಚನಾ ಸಾಗರದಲ್ಲಿ ಧುಮುಕಿರುವೆನಯ್ಯಾ!
ವಿಶಾಲವಾಗಿದ್ದರೂ ಈಸುವಾಸೆ ತುಂಬಿಹುದಯ್ಯಾ!
ಮುಳುಗೆದ್ದು, ರತ್ನಂಗಳ ನೀಡಿ,
ಆತ್ಮ ಸೌಂದರ್ಯವ ಬೆಳೆಸುವ ಹಂಬಲವಿದೆಯಯ್ಯಾ!
ನನ್ನೀವಚನ ರಚನೆಗೆ
ಮಹಾನುಭಾವಿಗಳ ವಚನ ಸಾಹಿತ್ಯವೇ
ಮಾರ್ಗದರ್ಶಿಕೆ, ಕೇಳಾ
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೮೪

ಶರೀರ ಸೌಷ್ಠವಕಿಂತ, ಚಿತ್ತ ಸೌಷ್ಠವ ಹೆಚ್ಚಿನದಯ್ಯಾ;
ಆ ಚಿತ್ತ ಸೌಷ್ಠವಕಿಂತ, ಬುದ್ಧಿ ಸೌಷ್ಠವ ಮಿಗಿಲಾದುದಯ್ಯಾ;
ಆ ಬುದ್ಧಿ ಸೌಷ್ಠವಕಿಂತ, ಭಾವ ಸೌಷ್ಠವ ಮೇಲಾದುದಯ್ಯಾ;
ಆ ಭಾವ ಸೌಷ್ಠವಕಿಂತ, ಆತ್ಮ ಸೌಷ್ಠವ ಹೆಚ್ಚಿನದಯ್ಯಾ.
ಇದು ಕಾರಣ, ಆತ್ಮ ಸೌಷ್ಠವ ಸಂಪಾದನೆಯು
ಮಾನವನ ಅಂತಿಮ ಧ್ಯೇಯವಾಗಿರಬೇಕಯ್ಯಾ!
ಇದುವೆ, ಅನುಭಾವ ಸಂಪತ್ತು ಕಾಣಾ!

ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೮೫

ಕವಿತಾ ಶಕ್ತಿಗೆ ಕಲ್ಪನೆಯೊಂದೇ ಸಾಲದು ನೋಡಾ!
ಅಂಗ ಸೌಂದರ್ಯಕ್ಕಲಂಕಾರವೊಂದೆ ಸಾಲದು ನೋಡಾ!
ಅನ್ನ-ಅರಿವೆ-ಆಭರಣಂಗಳು ಅಂಗಕ್ಕೆ ಪೂರಕವಾದಂತೆ,
ಧ್ಯಾನ, ವಿವೇಚನೆ, ಭಾವಂಗಳು
ಕವಿತಾ ಶಕ್ತಿಗೆ ಪ್ರೇರಕವಾಗಿಹವು ಕಾಣಾ,

ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೮೬

ಹೃದಯದ ಸಿರಿ ಸಂಗಳಿಸಲು
ಮೃದು ಹೃದಯವೆ ಮೂಲವಯ್ಯಾ!
ತಿಳಿ ಮನದೊಂದಿಗೆ ತೆರೆದಷ್ಟು
ಹೃದಯವು ಥಳಥಳನೆ ತೊಳಗುವುದಯ್ಯಾ!

ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೮೭

ಮಾತಿನೊಳು ಮಾಧುರ್ಯ,
ಹೊಟ್ಟೆಯೊಳು ಮಾತ್ಸರ್ಯ,
ಇದೇತರ ಚಾತುರ್ಯ?
ಒಳಗಿಹುದು ಕುಟಿಲ ಕುಯುಕ್ತಿ,
ಹೊರಗಿಹುದು ವಿನಯ–ವಿರಕ್ತಿ,
ಇದೆಂತಹ ಭಕ್ತಿ?
ಮೇಲೆ ಮೇಲೆ ಥಳಕು,
ಒಳಗೊಳಗೆ ಕೊಳಕು,
ಇದೇತರ ಬೆಳಕು?
ಅಂತರಂಗ ಶುದ್ಧಿಯಿಲ್ಲದೆ,
ಅಭಿಮಾನ ತೋರುವರ ಒಲ್ಲನೊಲ್ಲನು

ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೮೮

ಬಳ್ಳಿಯಿಂದ ಹೂ ಹುಟ್ಟಿ
ಹೊಗರೇರಿ, ಕಂಪು ಹೊರ ಚಿಮ್ಮುವಂತೆ,
ತಪದಿಂದ ಕವಿತೆ ಕೊನರಿ,
ಬೆಳೆ ಬೆಳೆದು ಕಾವ್ಯಾನಂದ ಹೊರ ಹೊಮ್ಮಬೇಕು!
ತಪವಿಲ್ಲದ ಕಾವ್ಯ ತೇಜವಿಲ್ಲದ ಗಾಜಿನ ಮಣಿಯಂತೆ ನೋಡಾ!
“ನಾನೃಷಿಃ ಕುರುತೇ ಕಾವ್ಯಮ್” ಎಂದುದಾಗಿ
ಋಷಿಯಾಗದವನು ಕವಿಯಾಗಲಾರನೆಂಬುದು ಸತ್ಯ ನೋಡಾ!

ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೮೯

ನುಡಿಯುವುದು ಸರಳ, ನಡೆವುದು ಕರಕಷ್ಟ ಕಾಣಯ್ಯಾ!
ಮನೆಯ ಕೆಡಹುವುದು ಸುಲಭ,

ಅದನು ಕಟ್ಟುವುದು ಕಡುಕಷ್ಟ, ಕಾಣಯ್ಯಾ!
ಬೆಂಕಿಯು ಹಚ್ಚುವುದು ಸುಲಭ,
ಅದನಾರಿಸುವುದು ಕರಕಷ್ಟ, ಕಾಣಯ್ಯಾ!
ಕೋಪವ ತಾಳುವುದು ಸುಲಭ,
ಸೈರಣೆಗೆ 'ಸೈ'ಗುಡುವುದು ಕಡುಕಷ್ಟ ಕಾಣಯ್ಯಾ!
ಸ್ವೈರ ವೃತ್ತಿಯಿಂದಿರುವುದು ಸುಲಭ,
ಸಂಯಮವ ಸಾಧಿಸುವುದು ಕರಕಷ್ಟ ಕಾಣಯ್ಯಾ!
ಬಂಧುಗಳನಗಲಿಸುವುದು ಸುಲಭ,
ಅವರ ಕೂಡಿಸುವುದು ಕಡುಕಷ್ಟ ಕಾಣಯ್ಯಾ!
ಗಿಡ–ಮರಗಳ ನಾಶಗೊಳಿಸುವುದು ಸುಲಭ,
ಉಳಿಸಿ ಬೆಳೆಸುವುದು ಕಡು ಕರಕಷ್ಟ ಕಾಣಯ್ಯಾ!
ಭ್ಯೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.
'ನುಡಿದಂತೆ ನಡೆದರೆ, ಇದೇ ಜನ್ಮ ಕಡೆ' ಕಾಣಯ್ಯಾ.

೯೦

ಕಾಯದಲ್ಲಿ ಮಾಯೆಯ ತುಂಬಿ
ವಚನದಲ್ಲಿ ಕ್ರೋಧವ ತುಂಬಿ
ಮನದಲ್ಲಿ ಮೋಹವ ತುಂಬಿ
ಭಾವದಲ್ಲಿ ಭ್ರಾಂತಿಯ ತುಂಬಿ
ಭವ ತಿಮಿರದಲ್ಲಿ ತಿರುಗುವ ಭಕ್ತರನು
ಭವಗೇಡಿನ್ನದೆ ಮತ್ತೇನೆಂದು ಕರೆಯಬೇಕು, ಹೇಳಾ
ಭ್ಯೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೯೧

ನಾನೊಂದು ಬಗೆದರೆ
ತಾನೊಂದು ಪರಿಯಾಗಿಹುದು ನೋಡಾ
ಮುಕ್ತಿಕಂಠಾಭರಣಕೆ, ಕಂಟಕ ಬಾರದಿರಲು ಶ್ರಮಿಸಿದರೆ

ಪಂಗಡ ದ್ವೇಷ ಸಾಧಿಸುತ್ತಿಹರು ನೋಡಾ
"ಊರು ಉಪಕಾರವರಿಯದು
ಹೆಣ ಶೃಂಗಾರವರಿಯದಂತಾ"ಯಿತ್ತಯ್ಯಾ
ಅಂತರಂಗದಿಂಗಿತವನರಿಯದೆ ಜಾತಿ ದ್ವೇಷವ ಸಾಧಿಸಿದರೆ
ಬಸವ ತತ್ತ್ವ ಪ್ರಚಾರವೆಂತಾಗುವದಯ್ಯಾ
ಗಾಳಿ ಗುದ್ದಿ ಮೈ ನೋಯಿಸಿಕೊಂಡಂತೆ ವ್ಯರ್ಥವಾಗಿಪ್ಪುದಯ್ಯಾ
ಹೃದಯದೊಳಗೆ ಭಕ್ತಿಯು ತುಂಬದೆ
ಬರಿ ಯುಕ್ತಿಯು ಮಾತು ತುಂಬಿದರೆ ಮುಕ್ತಿಯೆಂತಪ್ಪುದಯ್ಯಾ
ಬಸವ ತತ್ತ್ವದ ಪರಿಮಳ ಬೀರಲು ಅಭಿಮಾನೋತ್ಸಾಹವಿದ್ದರೆ
ಪರಿಪೂರ್ಣ ವಿಚಾರಿಸಿ, ವಿವೇಚಿಸಿ
ತಿದ್ದಿಕೊಂಡು ಮುಂದಡಿಯಿಡಬೇಕಲ್ಲದೆ
ಸದ್ದು ಗದ್ದಲ ಮಾಡುತ್ತ ಹೋದಲ್ಲಿ
ನಮ್ಮ ಕಾಲ ಮೇಲೆ ನಾವೇ ಕಲ್ಲು ಹಾಕಿಕೊಂಡಂತಾಯಿತ್ತಯ್ಯಾ
"ಸಿಟ್ಟಿನಲ್ಲಿ ಕೊಯ್ದ ಮೂಗು ಶಾಂತಿಯಲ್ಲಿ ಬಂದೀತೆ"?
ಅನ್ಯರ ಅಪಹಾಸ್ಯಕ್ಕೀಡೆಯಾಗದಿರಲೆಂದು
ಸಮಾಜ ಹಿತವ ಬಯಸಿದರೆ
ಅಂಗೈ ತೋರಿಸಿ ಅವಲಕ್ಷಣ ಕೇಳಿಕೊಂಡಂತಾಯಿತ್ತಯ್ಯಾ
ಜಾತಿ ಪಂಗಡಗಳೆಂಬ ಭೇದಂಗಳ ನಿವಾರಿಸಿ
ನಾವೆಲ್ಲರೂ ಒಂದೇ ವೃಕ್ಷದ ಹೂಗಳೆಂದು ತೋರಿಸಿ
ಭಾವೈಕ್ಯದ ವಿಶಾಲ ಮನೋಭಾವನೆಯನ್ನು ಕರುಣಿಸಿ
ಎಲ್ಲರನು ಹಿರಿಗುರಿಯತ್ತ ಸಾಗಿಸಿ,
ಬೆಳಕಿನ ದಾರಿಯತ್ತ ನಡೆಯಿಸಿ ಸಲಹಯ್ಯ

ಭೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೯೨

ಬಸವ ತತ್ತ್ವದರ್ಥವನರಿಯದೆ
ಅರ್ಥಕ್ಕಪಾರ್ಥವ ಮಾಡಿಕೊಂಡು
ಸ್ವಾರ್ಥ ಸಾಧಿಸುತ್ತಿಹರು ನೋಡಯ್ಯಾ,
ಸಮಾಜದಲ್ಲಿ ಭೇದ ಪ್ರಭೇದಂಗಳು

ಬೆಳೆಸುತ್ತಿಹರು ನೋಡಯ್ಯಾ,
ಸಮಾಜದಲ್ಲಿ ಭಾವೈಕ್ಯದ ಸಿರಿ ಬೆಳೆಸುವದ ಮರೆತು
ಅಡ್ಡಗೆರೆ ಕೊರೆಯುತ್ತಿಹರು ನೋಡಯ್ಯಾ,
ಹೃದಯದೊಲವಿನ ಶಿಲೆಯೊಡೆಯದೆ
ಭಾವೈಕ್ಯವು ಮಾತಿನಿಂದ ಸಾಧಿಸದು, ಸಾಧಿಸದಯ್ಯಾ

ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೯೩

ವ್ಯಕ್ತಿ ದ್ವೇಷವು ಆ ವ್ಯಕ್ತಿಗಷ್ಟೆ ಸೀಮಿತವಲ್ಲದೆ,
ಸಮಾಜಕ್ಕೂ ಹಾನಿಕಾರಕವಯ್ಯಾ,
ವರ್ಗ-ದ್ವೇಷವು ಸಮಾಜವ ಭಗ್ನಗೊಳಿಸುವುದಲ್ಲದೆ,
ಭಾವೈಕ್ಯಕ್ಕೆ ವಿಘ್ನವ ತಂದೊಡ್ಡುವುದಯ್ಯಾ!
ವನಕ್ಕೆ ತಗಲಿದ ಬೆಂಕಿ, ವನವೆಲ್ಲವ ಸುಡದಿಪ್ಪುದೆ, ಅಯ್ಯಾ?

ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೯೪

ಸಾಹಿತ್ಯವೆಂದರೆ, ಶಬ್ದದ ಪೋಣಿಕೆಯಲ್ಲ;
ಸಾಹಿತ್ಯವೆಂದರೆ, ಕಲ್ಪನೆಯ ರೆಕ್ಕೆಯಲ್ಲ;
ಸಾಹಿತ್ಯವೆಂದರೆ, ಶುಷ್ಕ ಭೂಮಿಯಲ್ಲ:
ಸಾಹಿತ್ಯವೆಂದರೆ, ಬರಿಯ ಬುದ್ಧಿಯ ಬುಗ್ಗೆಯಲ್ಲ
ನಿಜ ಸಾಹಿತ್ಯವೆಂದರೆ;
ಸರ್ವ ರಸ ಪರಿಪೂರ್ಣ,
ಸದ್‌ಭಾವ ವಿಸ್ತೀರ್ಣ,
ಅನುಭವ–ಅನುಭಾವಗಳ ಅಮೃತಪಾಕ, ನೋಡಾ!

ನಮ್ಮ ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೯೫

ಮಾನವತೆಯಿಲ್ಲದ ಬ್ರಹ್ಮಚರ್ಯವು
ಕಾನನದ ಕುಸುಮದಂತೆ ವ್ಯರ್ಥ ಕಂಡಯ್ಯಾ!
ರೋಗಿಯ ಬಾಧೆಯ ನೀಗಿಸದ ಔಷಧಿಯು
ಸಾಗರದ ಮೇಲಣ ಮಳೆಯಂತೆ ವ್ಯರ್ಥ ಕಂಡಯ್ಯಾ!
ನಿರಹಂಕಾರವಿಲ್ಲದ ಪಾಂಡಿತ್ಯವು
ಹರಿಗಡಿದ ಒಡ್ಡಿನಂತೆ ವ್ಯರ್ಥ ಕಂಡಯ್ಯಾ
ಭ್ಯೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೯೬

"ಮಾತೆಂಬುದು ಜ್ಯೋತಿರ್ಲಿಂಗ"ವಯ್ಯಾ!
ಅದೆಂತೆಂದೊಡೆ,
ಮಾತು ಹಿತವಾಗಿರಬೇಕು,
ಮಾತು ಮಿತವಾಗಿರಬೇಕು;
ಮಾತು ಉಚಿತವಾಗಿರಬೇಕು,
ಮಾತು ಖಚಿತವಾಗಿರಬೇಕು,
ಮಾತು ಸತ್ಯವಾಗಿರಬೇಕು,
ಮಾತು ಸತ್ತ್ವಯುತವಾಗಿರಬೇಕು;
ಮಾತು ಸ್ವಾರಸ್ಯವಾಗಿರಬೇಕು,
ಮಾತು ಸ್ವಾನುಭವಯುಕ್ತವಾಗಿರಬೇಕು ಕಾಣಾ
ಭ್ಯೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೯೭

ಮಾತು ಕೆಡಸಿತ್ತು ಬಂಧು-ಪ್ರೇಮವನು;
ಮಾತು ಕೆಡಸಿತ್ತು ಕ್ರಿಯಾ-ಶೀಲತೆಯನು;
ಮಾತು ಕೆಡಸಿತ್ತು ರಾಜ್ಯ-ಸಾಮ್ರಾಜ್ಯವನು;

ಮಾತು ಕೆಡಿಸಿತ್ತು ನಿತ್ಯಾನಂದ ಸುಖವನು.
ಮಾತು ಮುತ್ತಾದರೆ
ಮಾತು ಮಾಣಿಕ್ಯವಾದರೆ
ಓತು ಬಂದ ಕತ್ತಲೆ ಸೋತು ಹೋದಿತು, ನೋಡಾ
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೯೮

ಅಗಳಿನಿಂದ ಅನ್ನದ ಪರೀಕ್ಷೆ
ಎಳೆಯಿಂದ ವಸ್ತ್ರದ ಪರೀಕ್ಷೆ
ಮಾತಿನಿಂದ ಮನದ ಪರೀಕ್ಷೆ
ಮುಖದಿಂದ ಹೃದಯದ ಪರೀಕ್ಷೆ
ನಾದದಿಂದ ಘಂಟೆಯ ಪರೀಕ್ಷೆ
ಪರಾಗದಿಂದ ಪುಷ್ಪದ ಪರೀಕ್ಷೆ
ಒರೆಗಲ್ಲಿನಿಂದ ಚಿನ್ನದ ಪರೀಕ್ಷೆ
ವಿಜ್ಞಾನದಿಂದ ನಿಸರ್ಗದ ಪರೀಕ್ಷೆ
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ,
ನಿನ್ನಿಂದ ನನ್ನ ಪರೀಕ್ಷೆ, ಕಾಣಾ!
ನಿನ್ನ ಪರೀಕ್ಷೆಯಲಿ ಪಾರಾಗಿ ನಿಲ್ಲುವ ನಿಲುವು
ನೀಡಾ, ನಿಮ್ಮ ಧರ್ಮ!
ನಿನ್ನ ಈ ಪರೀಕ್ಷೆಯಲಿ ಪಾರಾದವರು ವಿರಳ, ಕಾಣಾ!!

೯೯

ಹೃದಯವೆಂಬ ಹಣತೆಯಲ್ಲಿ
ಸಮತೆ-ಸಹಕಾರದ ಬತ್ತಿಯನಿರಿಸಿ
ಸೌಹಾರ್ದತೆಯ ಎಣ್ಣೆಯನೆರೆದರೆ,
ಭಾವೈಕ್ಯವೆಂಬ ಬೆಳಗಿನಲ್ಲಿ ಸಂಘಟನೆ ಸಂಜನಿಸುವುದಯ್ಯಾ!

ಸಮಯ ಕಳೆಯದೆ
"ಸಮಯ" –ಪರಂಪರೆಗಳೆಲ್ಲವೂ ಕೂಡಿಕೊಂಡರೆ,
ಸಮಾಜದ ಪುನರ್ಘಟನೆಗೆ ಪುರಸ್ಕಾರ ಸಿಗುವುದಯ್ಯಾ!
ಸಮಯ–ಭೇದದಲ್ಲಿ ಹುರುಳಿಲ್ಲ;
ಗುರು–ವಿರಕ್ತ–ಭೇದದಲ್ಲಿ ತಿರುಳಿಲ್ಲ;
ಒಳ ಪಂಗಡಂಗಳ ಭೇದದಲ್ಲಿ ಕರುಳಿಲ್ಲ,
—ಈ ಭೇದ–ತ್ರಯದ ನಿರಸನವಾದಾಗಳೆ,
ವೀರಶೈವ ಷಟ್‌ಸ್ಥಲ ಧ್ವಜವು ಮರಳಿ–ಮರಳಿ,
ಆಗಸದೆತ್ತರಕೆ ಹಾರಾಡುವುದಯ್ಯಾ

ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೧೦೦

ಪತಿತರನು ಪೊರೆಯುವುದೇ ಪರಮ ಧರ್ಮವಯ್ಯಾ,
ಎದೆ ಕರಗಿ ಎತ್ತಿಕೊಳ್ಳುವುದೆ ಧರ್ಮದ ಸಾರ, ನೋಡಾ!
ಬೆಳಕಿನತ್ತ ಕರೆದೊಯ್ಯುವುದೆ
ಧರ್ಮದ ಮರ್ಮ, ನೋಡಾ!
ಆತ್ಮ ದೀಪ್ತಿಯ ಜಾಗ್ರತಗೊಳಿಸುವುದೆ
ಧರ್ಮದ ಗುಟ್ಟುನೋಡಾ!
ಇಂತೀ ಧರ್ಮದ ಮರ್ಮವ ತಿಳಿದಾಚರಿಸುವಂತೆ
ಕರುಣೆದೋರಾ,

ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೧೦೧

ದಯೆಯಿರದ ಧರ್ಮ, ಕ್ರಿಯೆಯಿರದ ಜ್ಞಾನ
ಕಳಸವಿರದ ತೇರಿನಂತೆ, ಕಾಣಯ್ಯಾ!

ವ್ಯಕ್ತಿತ್ವವಿರದ ಶಕ್ತಿ, ತೇಜವಿರದ ಸ್ಫೂರ್ತಿ
ಲಿಂಗವಿಲ್ಲದ ವೇಗುಲದಂತೆ, ನೋಡಯ್ಯಾ!!

ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೧೦೨

ಸಮಾಜವು ಒಡೆದ ಗಡಿಗೆಯಂತಾಗಿಹುದಯ್ಯಾ
ಸಮಾಜವು ಬಲವಿಲ್ಲದ ರೋಗಿಯಂತಾಗಿಹುದಯ್ಯಾ
ಸಮಾಜವು ತಂತಿಯಿಲ್ಲದ ವೀಣೆಯಂತಾಗಿಹುದಯ್ಯಾ
ಸಮಾಜವು ಧೂಳು ಮುಸುಕಿದ ಕನ್ನಡಿಯಂತಾಗಿಹುದಯ್ಯಾ
ಇದು ಕಾರಣ,
ಒಲವು ಒಗ್ಗಟ್ಟಿಲ್ಲದ ಸಮಾಜವು
ಬರಿ ಮಾತಿಗರ ಮಾಲೆಯಾಗಿಹುದು, ನೋಡಾ

ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೧೦೩

ಭಾವಕ್ಕೆ ಭಾಷೆಯು ಹೊದಿಕೆ;
ಅಂಗಕ್ಕೆ ಬಟ್ಟೆಯು ಹೊದಿಕೆ;
ಲಿಂಗಕ್ಕೆ ಕಂತಿಯು ಹೊದಿಕೆ;
ಆತ್ಮಕ್ಕೆ ಅರುವಿನ ಹೊದಿಕೆ.

ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ,
ನಿನ್ನಡಿಯ ಅಸರೆಗೆ ನಿನ್ನ ನಾಮಸ್ಮರಣೆಯು ಹೊದಿಕೆ!

೧೦೪

ಬೆಂಕಿಯು ಮೇಲೆ ತುಪ್ಪವ ಹಾಕಿದರೆ,
ಭಗ್ಗನೆ ಉರಿಯೇಳದೆ ಬಿಡುವುದೆ?

ಬಿಸಿಲಿಗೆ ಬೆಣ್ಣೆಯಿಟ್ಟರೆ,
ಮೆಲ್ಲಗೆ ಕರಗದೆ ಬಿಡುವುದೆ?
ಮಂಗನಿಗೆ 'ಹೆಂಡ' ಕುಡಿಸಿದರೆ,
ಹುಚ್ಚೆದ್ದು ಕುಣಿಯದೆ ಬಿಡುವುದೆ?
ಚಿತ್ತ-ವೃತ್ತಿಯೆಂಬ ಹೊನಲಿಗೆ
ಸಂಯಮವೆಂಬ ಆಣೆಕಟ್ಟು ಕಟ್ಟದಿದ್ದರೆ,
ಆರ್ಭಟಿಸಿ ಮೇಲ್ ಬೀಳದಿರಬಹುದೆ

ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೧೦೫

ಮಾತು ಮತಿಯು ಕೆಡಸಿತ್ತು;
ಮಾತು ಧೃತಿಯು ಕೆಡಿಸಿತ್ತು;
ಮಾತು ಕತೆಯು ಕೆಡಿಸಿತ್ತು;
ಮಾತು ಜೊತೆಯು ಕೆಡಿಸಿತ್ತು;
ಇಂತಪ್ಪ ಮಾತು ಮುತ್ತಾದರೆ,
ಕಲಹವೆಲ್ಲಿಂದ ಬಪ್ಪದಯ್ಯಾ?
ಮಾತರಿಯದವನು ಜಗಳ ತರುವಂತೆ
ಮಾತು ಬಲ್ಲವ ಮಾಣಿಕವ ತರುವನಯ್ಯಾ

ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೧೦೬

ಮಾತಿನಿಂದ ಪ್ರೀತಿ, ಭೀತಿ;
ಮಾತಿನಿಂದ ಸ್ಫೂರ್ತಿ, ಕೀರ್ತಿ;
ಮಾತಿನಿಂದ ಹಗೆತನ, ಕೆಳೆತನ;
ಮಾತಿನಿಂದ ಬಡತನ, ಸಿರಿತನವಯ್ಯಾ!

ಇದು ಕಾರಣ, ಮಾತೇ ಸುಖ-ದುಃಖಂಗಳಿಗೆ
ಕಾರಣ ನೋಡಾ,
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೧೦೭

ವಿರತಿಯ ಮಹತಿಯು ವಿರಾಗಿಗಲ್ಲದೆ,
ಅನ್ಯರಿಗೆ ಅರ್ಥವಾಗುವುದೆಂತಯ್ಯಾ?
ಕೃಷಿಯ ಕಾಯಕ ಕೃಷಿ-ಖುಷಿಗಲ್ಲದೆ
ಮತ್ತೊಬ್ಬರಿಗೆ ಮನವರಿಕೆಯಾಗುವುದೆಂತಯ್ಯಾ?
ಯಂತ್ರದ ಪರಿಚಯ ಯಂತ್ರಚಾಲಕಗಲ್ಲದೆ
ಇನ್ನೊಬ್ಬರಿಗೆ, ಇರುವುದೆಂತಯ್ಯಾ?
ದಾಸೋಹದ ಪರಿಜ್ಞಾನ ತ್ರಿವಿಧ ದಾಸೋಹಿಗಲ್ಲದೆ
ಹೊನ್ನು-ಹೆಣ್ಣು-ಮಣ್ಣು ಬೇಕೆಂಬ
ಆಸೆಬುರುಕರಿಗಾಗುವುದುಂಟೆ?
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೧೦೮

ಮಾಡುವ ಕೃತಿಯು ಮೃಡನೊಲಿಯುವಂತಿರಬೇಕು;
ಆಡುವ ಭಾಷೆ ಜನ ಮೆಚ್ಚುವಂತಿರಬೇಕು;
ಬೇಡುವ ಧನ ಪರಹಿತಕಾಗಿರಬೇಕು;
ನೀಡುವ ದಾನ ಸಾರ್ಥಕವಾಗಿರಬೇಕು, ನೋಡಾ!
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ,
ನನ್ನ ಮನ ನಿನಗಾಗಿ ಮೀಸಲಾಗಿರಬೇಕು.

೧೦೯

ಗುರುವು ಭವಾರಣ್ಯದೊಳಿರ್ದೊಡೆ
ಶಿಷ್ಯನುದ್ಧಾರವೆಂತು?
ಭವದ ಸೋಂಕಿಂದ, ಗುರುವಿಗೆ ಚಿಚ್ಛಕ್ತಿ ಮೂಡುವುದೆಂತು?
ಶಿಷ್ಯನಿಗೆ ಭಕ್ತಿ ಹುಟ್ಟುವುದೆಂತು?
ಮಿಡಿಗಾಯಿ ಹಣ್ಣಾದಂತಾದಲ್ಲಿ
ಆ ಹಣ್ಣಿನ ರುಚಿ ಬರುವುದೆಂತು?
ಬೇಲಿ ಎದ್ದು ಹೊಲ ಮೇಯ್ದಲ್ಲಿ
ಬೆಳೆ ಬರುವುದೆಂತು, ಹೇಳಾ?
　　ಭ್ಯೂಲತಾ ಪುರೀಶ ಕರ್ತೃ
　　ಜಗದ್ಗುರು ಗುರುಸಿದ್ಧೇಶ್ವರಾ.

೧೧೦

ಗುರುಗಳಾದವರು ದೀಕ್ಷೆಯೊಂದನ್ನೆ ಮಾಡಬೇಕಲ್ಲದೆ,
ಅನುಗ್ರಹವ ಮಾಡುವುದು ಸಲ್ಲದು, ನೋಡಾ;
ಜಂಗಮರಾದವರು ಅನುಗ್ರಹವೊಂದನ್ನೆ ಮಾಡಬೇಕಲ್ಲದೆ,
ದೀಕ್ಷೆ ಮಾಡುವುದುಸಲ್ಲದು, ನೋಡಾ:
ಅವರವರ ಕರ್ತವ್ಯ, ಅವರವರಿಗೆ;
ಕ್ರಿಯಾಭಾಗವು ಗುರುಗಳಿಗಾಗಿ,
ಜ್ಞಾನಭಾಗವು ಜಂಗಮರಿಗಾಗಿ—
ಗುರು–ಜಂಗಮರೀರ್ವರು ಈ ರೀತಿ ನಡೆದರೆ,
ಗುರು–ವಿರಕ್ತರ ಸಾಮರಸ್ಯಕ್ಕೆ ನಾಂದಿಯಾಗಿ,
ಅಷ್ಟಾವರಣ ಕ್ರಮ ಸಿದ್ಧಿಪ್ರದು ನೋಡಾ
　　ಭ್ಯೂಲತಾ ಪುರೀಶ ಕರ್ತೃ
　　ಜಗದ್ಗುರು ಗುರುಸಿದ್ಧೇಶ್ವರಾ.

೧೧೧

ಕೋಟಿ ಲಿಂಗಂಗಳ ಸ್ಥಾಪಿಸಿ,
ಕೋಟಲೆಗೊಳ್ಳಲೇಕೆ?

ಕೋಟಿ ಹೃದಯಂಗಳಿಗೆ ಲಿಂಗವಧರಿಸಿ,
ಸಂತಸಗೊಂಡರೆ ಸಾಲದೆ?
ಎದೆಯ ಮೇಲೆ ಲಿಂಗವಿರದಿದ್ದರೂ
ಲಿಂಗವಂತರೆಂದು ಹೇಳಿಕೊಳ್ಳುವರ ಕಂಡು
ಎಷ್ಟು ಮನ ಕಳವಳಗೊಳ್ಳುತಿಹುದಯ್ಯಾ!
ಮರುಭೂಮಿಯ ಮಳಲಿನೊಳು
ಸಸಿಯು ನೆಟ್ಟೊಡೆ ಹಾಸ್ಯಾಸ್ಪದವಲ್ಲವೆ
ಮತ್ತೇನು ಹೇಳಾ,
ಭ್ಯೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೧೧೩

ಮರೆಯುವುದ ಮರೆದು
ಧರ್ಮದಾ ನಿಜ ತತ್ತ್ವವ ಮರೆಯಿಸಿರೋ!
ತಳಕೆಟ್ಟ ಸುವರ್ಣದ ಘಟದಂತೆ
ಧರ್ಮದಾ ಗತಿಯಾಗಿಪ್ಪದು, ಕೇಳಿರೋ!
ಧರ್ಮವ ತೊರೆದು ಮುಚ್ಚಿದವರಿಂದ
ಮುಚ್ಚಿರಂತೆ ತಿರುಗುತ್ತಿಹರು, ಕೆಲಬರು ನೋಡಿರೋ!
ಗಿಡಕ್ಕೆ ನೀರೆರೆದರೆ,
ಪಲ್ಲವಿಸಿ ಫಲ–ಪುಷ್ಪ ನೀಡುವುದಲ್ಲದೆ,
ನೀರೆರೆಯದೆ ಮೇಲೇರಿ ಕುಳಿತರೆ,
ಬಾಡದೇ ಬಿಟ್ಟೀತೆ?
ಭ್ಯೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೧೧೪

ಹೃದಯವರಳದೆ, ಕದವ ತೆಗೆಯದೆ
ಸದು ಮನವ ಪಡೆವುದೆಂತಯ್ಯಾ?
ಮದವ ಮುರಿಯದೆ, ಮದನನ ಜಯಿಸದೆ

ಸದು ಹೃದಯುವ ಪಡೆವುದೆಂತಯ್ಯಾ?
ಭಾವ ತುಂಬದೆ, ಜ್ಞಾನ ಬಲಿಯದೆ
ಸದು ಭಕುತಿಯು ಪಡೆವುದೆಂತಯ್ಯಾ?
ಇದು ಕಾರಣ, ತನುವ ಸವೆಯಿಸಿ, ಮನವ ನಿಲ್ಲಿಸಿ
ಸದು ವಿನಯುವ ಬೆರಸಿದೊಡೆ
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೧೧೪

ತಪ್ಪುವುದು ಪ್ರಕೃತಿಯು ಸಹಜ ಗುಣ;
ತಪ್ಪೊಪ್ಪಿ ಮುನ್ನಡೆವುದು ಸತ್‌ಕೃತಿಯು ಗುಣವಯ್ಯಾ!
ತಪ್ಪಿಯೂ ಒಪ್ಪಿಕೊಳದಿರುವುದು
ವಿಕೃತಿಯು ಕಾನನವ ಹೊಕ್ಕಂತೆ, ನೋಡಾ
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೧೧೫

ತಿಳಿದವರು ತಿಳಿಯದವರನು
ತಿಳಿಯದಂತೆ ಮರಳುಗೊಳಿಸುತಿಪರು,
ಬೆಲೆಯಿಲ್ಲದೀ ತಿಳುವಳಿಕೆಯುವರು
'ಪಯೋಮುಖಿವ ವಿಷಕುಂಭ'ದಂತೆ, ನೋಡಾ
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೧೧೬

ಗುರುನಿಂದೆ-ಜಂಗಮನಿಂದೆಗಳ ಕೇಳಿಸದಿರಯ್ಯಾ?
ದೋಷವನು ದೂಷಿಸಬೇಕಲ್ಲದೆ
ಸ್ಥಾನವ ದೂಷಿಸಿದೊಡೆ ಬರುವುದೇನಯ್ಯಾ?

ದಾರಿಯಲ್ಲಿಹ ಕಸವ ತೆಗೆಯಬೇಕಲ್ಲದೆ
ದಾರಿದೀಪಂಗಳ ತೆಗೆದೊಡೆ
ಕತ್ತಲೆಯು ನಂಟಲ್ಲದೆ, ಮತ್ತೇನು ಕಾಣ್ಬುದು ಹೇಳಾ
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೧೧೭

ಶರಣರ ಸೊಳ್ನುಡಿಯು ಪರಸಡಿವಿಡಿಯುಲು
ಚನ್ನುಡಿ ನೋಡಾ!
ಶರಣರ ಸಹವಾಸವು ಮರೆವನು ಹುರಿಯಲು
ಚಿದ್ವಿಕಾಸ, ನೋಡಾ!
ಶರಣರ ಪ್ರೇಮವು ಶಿವಾನುಭವವನರಿಯಲು
ನಿಜಧಾಮ ನೋಡಾ!
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ,
ನಿನ್ನ ಕರುಣೆಯೆನಗೆ ಮರುಜೀವಣ, ನೋಡಾ ಪ್ರಭುವೆ!

೧೧೮

ಹೃದಯ-ಶ್ರೀ ಇಲ್ಲದ ಸಂಪದವು
ಪರಿಮಳವ ಬೀರದ ಪೂಮಾಲೆ, ನೋಡಾ!
ಆತ್ಮ-ಶ್ರೀ ಇಲ್ಲದ ವಿದ್ಯೆ
ಗುರುವಿಲ್ಲದ ಮಠ, ನೋಡಾ!
ಭಾವ-ಶ್ರೀ ಇಲ್ಲದ ಪೂಜೆ
ನಾದ ಹೊರಡದ ಗಂಟೆ, ನೋಡಾ!
ಇಂತಿ ಶ್ರೀ-ತ್ರಯುವ ಕರುಣಿಸಯ್ಯಾ
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೧೧೯

ಹಿರಿಯರು ಹಿರಿಯರೆಂದೆನ್ನುತಿಹರು
ಕಿರಿಯರನು ತುಳಿಯುತಕ್ಕವರು ಹಿರಿಯರೆ?
ಗುರುಗಳು ಗುರುಗಳೆಂದೆನ್ನುತಿಹರು
ಶರಣರನು ಜರೆಯುತಕ್ಕವರು ಗುರುಗಳೆ?
ವಿರತರು ವಿರತರೆಂದೆನ್ನುತಿಹರು
ರತಿ ಮೋಹ ಇದ್ದವರು ವಿರತರೆ?
ತಪಸಿಗಳು ತಪಸಿಗಳೆಂದೆನ್ನುತಿಹರು
ರಾಗ ಕೋಪ ಬಿಡದವರು ತಪಸಿಗಳೆ?
ಭಕ್ತರು ಭಕ್ತರೆಂದೆನ್ನುತಿಹರು
ಭಕ್ತಿಯಿಂ ಪೂಜಿಸದವರು ಭಕ್ತರೆ?
        ಭ್ರೂಲತಾ ಪುರೀಶ ಕರ್ತೃ
        ಜಗದ್ಗುರು ಗುರುಸಿದ್ಧೇಶ್ವರಾ.
ನಿನ್ನ ನೆನೆಯುದ ಇವರೆಲ್ಲರು
ಮತಿಗೆಟ್ಟ ಭವಭಾರಿಗಳಲ್ಲವೆ, ಹೇಳಾ!

೧೨೦

ತಾನಾರೆಂಬುದನರಿಯದೆ,
ಮನದ ಮಾಲಿನ್ಯವ ಕಳೆಯದೆ,
ಮತ್ತೊಬ್ಬರ ಮನವ ಮರುಗಿಸಿದರೇನಯ್ಯಾ?
ಜವುಳುವಿನಲಿ ಬಿತ್ತಿದ ಬೀಜ
ಫಲವ ನೀಡುವುದೆಂತಯ್ಯಾ?
'ಮುಕ್ತಿ–ಮುಕ್ತಿ' ಎಂದು
ಬಡಬಡಿಸಿದರೇನಯ್ಯಾ?
ಆತ್ಮ ಶಕ್ತಿಯಿಲ್ಲದೆ
ಮುಕ್ತಿ ದೊರೆವುದೆಂತಯ್ಯಾ,
        ಭ್ರೂಲತಾ ಪುರೀಶ ಕರ್ತೃ
        ಜಗದ್ಗುರು ಗುರುಸಿದ್ಧೇಶ್ವರಾ.

೧೨೧

ಮಾಡುವ ಕೃತಿಯಲ್ಲಿ ನಿಃಸ್ವಾರ್ಥವಿದ್ದರೆ,
ಅದೇತರ ಅಳುಕಯ್ಯಾ?
ನೋಡುವ ದೃಷ್ಟಿಯಲ್ಲಿ ನಿರ್ಮಲತೆಯಿದ್ದರೆ,
ಅದೇತರ ಭಯವಯ್ಯಾ?
ಆಡುವ ವಚನದಲ್ಲಿ ನಿರ್ವಂಚನೆಯಿದ್ದರೆ,
ಅದೇತರ ಭೀತಿಯಯ್ಯಾ?
ನೀಡುವ ದಾನದಲ್ಲಿ ನಿರಾಶೆಯಿದ್ದರೆ
ಅದೇತರ ಅಂಜಿಕೆಯಯ್ಯಾ?
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೧೨೨

ಹೃದಯ-ಕ್ಷೇತ್ರವ ಹಸನುಗೊಳಿಸದೆ
ಸದ್‌ಗುಣ-ಬೀಜವ ಬಿತ್ತುವ ಪರಿಯಂತೋ?
ಅಹಂಕಾರ-ಮಮಕಾರಗಳ ಕರಿಕೆಯ ಬೆಳೆಸಿದೊಡೆ,
ಪರತತ್ತ್ವದ ಬೆಳೆಯನುಣ್ಣುವ ಪರಿಯಂತೋ?
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೧೨೩

ನಿನ್ನ ಮರೆತವರು ಮರುಳಾಗುವರಯ್ಯಾ;
ನಿನ್ನ ಜರೆದವರು ಜಂಜಾಟಕೀಡಾಗುವರಯ್ಯಾ;
ನಿನ್ನ ನೆನೆದವರು ನೆಮ್ಮದಿ ಹೊಂದುವರಯ್ಯಾ,
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೧೨೪

ವಿದ್ಯಾರ್ಥಿಯು ಸತ್ಯಾರ್ಥಿಯಾಗಲು
ಸತ್ಯದ ಪೆದ್ದಾರಿಯಲಿ ಸಾಗಬೇಕಯ್ಯಾ;
ಕೈ ಮುಗಿದು ಪ್ರಾರ್ಥಿಸಿದೊಡೆ
ಗುರು ಪ್ರೇಮ ದೊರೆಕೊಳ್ಳುವದಲ್ಲದೆ,
ಎದೆ ಸೆಟೆಯಿಸಿ ಕುಳಿತರೆ,
ಗುರು ಕರುಣೆ ದೊರಕೊಳ್ಳುವದೇನಯ್ಯಾ?
ಒಳ-ಹೊರಗಿನ ಸುಧಾರಣೆಯೆ
ವಿದ್ಯೆಯ ಒಳಗುಟ್ಟಲ್ಲದೆ
ಪದವಿ-ಸೇವೆಗಳ ಸಂಪಾದನೆಸಂಪಾದನೆಯಲ್ಲ!
ವಿನಯವಿಲ್ಲದ ದೇಹದಂತೆ;
ಭಾವವಿಲ್ಲದ ಪದ್ಯದಂತೆ, ನೋಡಾ
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೧೨೫

ಸಂಸ್ಕೃತಿಗೆ ಶೀಲವೆ ಮೂಲ, ಕಾಣಿರೋ!
ಸತ್ಕೃತಿಗೆ ಭಾವವೇ ಮೂಲ, ಕಾಣಿರೋ!
ಸದ್ವಿದ್ಯೆಗೆ ವಿನಯವೆ ಮೂಲ, ಕಾಣಿರೋ!
ಸದ್ಧರ್ಮಕೆ ದಯವೇ ಮೂಲ, ಕಾಣಿರೋ!
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರನ ಕೃಪೆಗೆ
ಸದ್ಭಕ್ತಿಯೇ ಮೂಲ ಕಾಣಿರೋ!

೧೨೬

ಆರು ಮೆಟ್ಟಲು ಮುಟ್ಟಲು
ಆರು ಅರಾತಿಗಳ ಮೆಟ್ಟಿ ನಿಲ್ಲಬೇಕು. ನೋಡಾ!
ಆತ್ಮ-ಶುದ್ಧಿಯ ಲೌಕಿಕ ಬುದ್ಧಿ ಅವಿರ್ಭವಿಸಿದವಗಲ್ಲದೆ,

ಷಟ್‌ಸ್ಥಲದ ಸಿದ್ಧಿ ಅದಾರಿಗೂ ಅಳವಡದು, ನೋಡಾ!
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೧೨೭

ತ್ಯಾಗಂಗಳಲಿ ಸ್ವಾರ್ಥ-ತ್ಯಾಗವೆ ಹೆಚ್ಚಿನದು, ಕಾಣಾ!
ರಾಗಂಗಳಲಿ ಶಿವಾನುರಾಗವೆ ಮಿಗಿಲು, ಕಾಣಾ!
ಭೋಗಂಗಳಲಿ ಲಿಂಗೋಪಭೋಗವೆ ಮೇಲು, ಕಾಣಾ!
ಯೋಗಂಗಳಲ್ಲಿ ಶಿವಯೋಗವೆ, ಅಧಿಕ, ಕಾಣಾ!
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೧೨೮

ಜ್ಞಾನವಿಡಿದು ನಡೆವುದೆ ಕ್ರಿಯಾ-ಯೋಗವಯ್ಯಾ!
ಕ್ರಿಯೆವಿಡಿದು ನುಡಿವುದೆ ಜ್ಞಾನ ಯೋಗವಯ್ಯಾ!
ಜ್ಞಾನಬಿಟ್ಟು ಕ್ರಿಯೆಯಿಲ್ಲ; ಕ್ರಿಯೆಬಿಟ್ಟು ಜ್ಞಾನವಿಲ್ಲ;
ಜ್ಞಾನ-ಕ್ರಿಯೆಗಳೆರಡು ಅಧ್ಯಾತ್ಮ-ಸಾಮ್ರಾಜ್ಯದ
ಇಮ್ಮೃಲ, ನೋಡಾ!
ಅನ್ಯೋನ್ಯ-ಅವಿನಾಭಾವ ಸಂಬಂಧದಿಂದ
ಅವೆರಡರದು ಒಮ್ಮೃಲ, ನೋಡಾ!
ಜ್ಞಾನ-ಕ್ರಿಯೆಗಳ ಸಮರಸವೆ
ಪ್ರದೀಪ್ತಿಯ ಪ್ರವಾಳ;
ಜೀವನ್ಮುಕ್ತಿಗೆ ಜೀವಾಳ, ಕಾಣಾ
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೧೨೯

ಸಂಸ್ಕಾರವಿಲ್ಲದ ಮನುಜನು ಗುರುವಾದನೇನು?
ಜಂಗಮನಾದಡೇನು?

ಭಯ ಹೋಗದು; ಭವ ನೀಗದು!
ಸಂಸ್ಕಾರವಿಲ್ಲದ ಶಿಲೆ ಲಿಂಗವೆಂತಾಗುವುದೋ?
ಸಂಸ್ಕಾರಗೊಳ್ಳದ ಲಿಂಗವು
ಲಿಂಗವಂತನದೆಂತಾಗುವದೊ?
ನೀತಿಯ ತಳಪದಿಯ ಮೇಲೆ ನಿಲ್ಲದ ರಾಜ್ಯಮಂದಿರ
ಎನಿತು ಹಿರಿದಾದರೇನು?
ಹೆಸಗಾದರೇನು?
ಕಾಲ ಕಾಲಕೆ ಕುಸಿಯದೆ ಬಿಟ್ಟೀತೆ?
ಭ್ಕೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೧೩೦

ನ್ಯಾಯಾಲಯಂಗಳು
ಸತ್ಯಕ್ಕೆ ಜಯ ನೀಡುವಂತಿರಬೇಕು;
ಪ್ರಾಮಾಣಿಕತೆಗೆ ಒರೆಗಲ್ಲಿನಂತಿರಬೇಕು;
ನಿಜ ನಿರ್ಣಯದ ಟಂಕಸಾಲೆಗಳಂತಿರಬೇಕು
ನ್ಯಾಯಾಲಯವೊಂದಾದರೂ
ಮಾಯಾಲಯವಾಗಿರಬಾರದು;
ಅನ್ಯಾಯದಾಲಯ ಆಗಿರಬಾರದು, ನೋಡಾ!
ಸಟೆಗೆ ದಿಟದ ಬಟ್ಟೆಯ ಹೊದಿಸಿ,
ದಿಟಕೆ ಸಟೆಯ ವಸ್ತ್ರವ ಹೊದಿಸಿ
ಅಯಥಾರ್ಥವನುಕರಿಸಿ
ವಿಲಂಬವಾಗಿ ನಿರ್ಣಯವ ನೀಡುವ
ನ್ಯಾಯಾಲಯಂಗಳು
ನ್ಯಾಯ-ನಟನಾ-ನಿಲಯಂಗಳಲ್ಲದೆ
ಮತ್ತೇನು, ಹೇಳಾ
ಭ್ಕೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೧೩೧

ಸುಂದರ ಬಂಧುರ ಕಲ್ಗಳನಿಟ್ಟು
ಕುಟ್ಟಿದ ಗಚ್ಚನು ತೇಪೆಯೊಳಿಟ್ಟು
ಶ್ರೀಮಠ ಗೋಪುರವ ಕಟ್ಟುತಿಹೆನು, ನೋಡಾ!
ಕಂಬಗಳಾರನು ಮಧ್ಯದಲ್ಲಿಟ್ಟು
ತೊಲೆ ಮೂವತ್ತಾರನು ಮೇಲಿಟ್ಟು
ನೂರೊಂದಡಿಯನು ತಲುಪುವ ತೆರದಿ
ರಮಣೀಯ ದ್ವಾರವ ರಚಿಸುತಿಹೆನು, ನೋಡಾ!
ಕತ್ತೆತ್ತಿ ನೋಡಿದೊಡೆ
ಕಾಂಬುದು ಕಮನೀಯ ಶಿಖರ, ನೋಡಾ!
ಈ ದ್ವಾರದೊಳೇರಲು ಶಕ್ತಿ-ಸಾಮರ್ಥ್ಯವ
ಪಡೆದಿರಬೇಕಯ್ಯಾ!
ಬಾಗುತ ನಡೆದಂತೆ, ಬಾಗಿಲು ತೆರೆದಂತೆ
ಮಹಡಿಗಳಾರರ ಮೆಟ್ಟಿಲವೇರುತ
ಹಿರಿ ಗುರಿ ಮುಟ್ಟಲು ಸಾಧ್ಯವಾಗುವುದಯ್ಯಾ!
ಶಿವ ಸಿದ್ಧಾಂತವು ಸಿದ್ಧಿಸದವರಿಗೆ 'ಮಹಾದ್ವಾರ'ದ ಮಹತಿ
ಮನದಟ್ಟಾಗುವುದೆಂತಯ್ಯಾ?
ಭೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೧೩೨

ಸಮತೆ-ಸಮತೆ ಎಂದೆಂಬಿರಿ,
ಸಮತೆಯ ರಹಸ್ಯವನರಿಯದೆ ಹೋದಿರಲ್ಲ!
ಸಮತೆಯೆಂತೆಂದೊಡೆ, ಹೊಗ್ಗರಳ ಹೂವಾದಂತೆ;
ಅರಳಿದ ಹೃದಯದಿಂದ ಉಕ್ಕಿ ಬರಬೇಕು, ಸಮತೆ!
ತೋರಿಕೆಗಾದ ಸಮಾನತೆ
ನಾಟಕದ ಪಾತ್ರಧಾರಿಯಂತಹುದಯ್ಯಾ!
ಅಂತಃಕರಣ ಕಾರಂಜಿ ಪುಟಿದಂತೆ
ಸಮತ್ವದ ಸೊಬಗು ಶೋಭಿಸಬೇಕಯ್ಯಾ!

ಕೃತ್ರಿಮತೆಯು ಸಮತೆ
ಕೋಲ್ಮಿಂಚಿನಂತೆ ತೋರಿ ಮಾಯವಾಗುವುದಯ್ಯಾ!
ಹೃದಯ–ವೈಶಾಲ್ಯವಿಲ್ಲದ ಸಮತ್ವ
ಪದಗೊಳಿಸದ ಪೊಲದಂತೆ ವ್ಯರ್ಥ, ಕಾಣಯ್ಯಾ!
ಭಾವೈಕ್ಯವಿಲ್ಲದ ಸಮಾನತೆ
ಶುದ್ಧವಾಗದ ಲಿಂಗವಂತೆ ನಿರರ್ಥಕ, ನೋಡಯ್ಯಾ!
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೧೩೩

ವಂಚಕರಿಗೆ ವಂಚಿಸುವುದೆ ಗುರಿಯಲ್ಲವೆ,
ನಿರ್ವಂಚನೆಯು ಪರಿ ತಲೆದೋರುವುದೆಂತಯ್ಯಾ!
ಭಾವೈಕ್ಯದ ಭಯಕೆಯು
ಬುದ್ಧಿಗೆ ವಿಭ್ರಮಗೊಳಿಸುತಿಪುದಯ್ಯಾ!
ಸಮತೆಯೆಂಬ ಬೇಲಿಯನಿಕ್ಕಿ
ಭಾವೈಕ್ಯವೆಂಬ ಹಣ್ಣು ತೋರಿ
ಮಾತಿನಲಿ ಮರುಳುಗೊಳಿಸುವವರ ಕಂಡು,
ಬೆರಗಾದೆನಯ್ಯಾ.
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೧೩೪

ಮಾತಿನಂತೆ ಮನವಿಲ್ಲದ ಮನುಜರ ಕಂಡು
ಮನ ಮರುಗಿತ್ತಯ್ಯಾ!
ಮೈ–ಮನ ತೊಳೆಯಲು, ಮಾತೇ ಮೂಲ ಕಾಣಯ್ಯಾ!
ಮನ–ಮೈ ತೊಳೆಯಲು ಮಾತೇ ಶೂಲ ಕಾಣಯ್ಯಾ!
“ಮಾತು ಆಡಿದರೆ ಹೋಯ್ತು
ಮುತ್ತು ಒಡೆದರೆ, ಹೋಯ್ತು”

ಮಾತು ಅಧರಕ್ಕೆ ಕಹಿಯಾದರೂ
ಉದರಕ್ಕೆ ಸಿಹಿ ಆಗಿರಬೇಕಯ್ಯಾ!
ಇಂತಪ್ಪ "ಮಾತೆ ಜ್ಯೋತಿರ್ಲಿಂಗ"ವಪ್ಪುದಯ್ಯಾ
ಭ್ಯೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೧೩೫

ಒಳಗೊಂದು ಹೊರಗೊಂದು ನೀತಿ ರೀತಿಯಾದೊಡೆ
ಭಾವೈಕ್ಯ ಸಾಧಿಸುವುದೆಂತಯ್ಯಾ?
ಪಕ್ವವಾಗದ ಹಣ್ಣ ಹರಿಸುಕೊಂಡೊಡೆ
ಮಧುರ ರುಚಿ ಬರ್ಪುದೆಂತಯ್ಯಾ!
ಹೃದಯ ಪರಿಶುದ್ಧಿಯ ಮಾಡಿಕೊಂಡವಗೆ
ಭಾವೈಕ್ಯ ಸಂಸಿದ್ಧಿ ನಿಶ್ಚಿತ ಕಾಣಾ
ಭ್ಯೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೧೩೬

ಹೃದಯ-ಹೃದಯ ಕೂಡಲು
ಮತ್ತೊಬ್ಬರೇಕೆ ಬೇಕಯ್ಯಾ!
ತಾನುಂಬ ಊಟ ರುಚಿಸಲು
ತಾ ಮಾಡಬೇಕಲ್ಲದೆ,
ಮತ್ತೊಬ್ಬರೇಕೆ ಬೇಕಯ್ಯಾ?
ತನ್ನಂತರಂಗವ ತಾನರಿಯಲು
ಬೇರೊಬ್ಬರೇಕೆ ಬೇಕಯ್ಯಾ?
ತನ್ನ ತಪ್ಪು ತಾ ತಿದ್ದಿಕೊಳ್ಳಲು
ಬೇರೊಬ್ಬರೇಕೆ ಬೇಕಯ್ಯಾ?
ಗುರು-ವಿರಕ್ತರೀರ್ವರು ತಾವ್-ತಾವೆ ಒಂದಾಗಿ
ಸಮಾಜ ವೃಕ್ಷವ ಬೆಳೆಸುತಿರೆ,
ಇನ್ನೊಬ್ಬರದೆಲ್ಲಿಯ, ಆತಂಕವಯ್ಯಾ?

ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೧೩೭

ಮೇಲು ಕೀಳೆಂಬ ಬೇಲಿಯು ತೆಗೆದು
ಸಂಪ್ರದಾಯವೆಂಬ ಗೋಡೆಯನೊಡೆದು
ಜಾತಿ-ವಿಜಾತಿಯೆಂಬ ಕೀಲಿಯು ಮುರಿದು
ಧರ್ಮದ ಬಾಗಿಲ ತೆರೆಯಬೇಕೆಂಬರು, ನೋಡಾ ಕೆಲವರು!
ಸತ್ಯತೆಯನು ಮಾತಿನಲ್ಲಿಟ್ಟು
ಜಾತಿಯನು ಮತಿಯೊಳಗಿಟ್ಟು
ಧರ್ಮದಾ ವೇಷವನು ತೊಟ್ಟು
ಮುಗ್ಧ ಜನರ ಮನ ಸೆಳೆವ
ಡಾಂಭಿಕರ ಕಂಡು ನಗುವನಯ್ಯಾ

ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ!

೧೩೮

ಕೂಡಿದರೆ ಕೂಡಬೇಕು,
ವೈರಿ ವೈರವ ತೊರೆದಪ್ಪಿಕೊಳ್ಳುವಂತೆ;
ಹಾಡಿದರೆ ಹಾಡಬೇಕು,
ಪಶುವಾದರು ನಿಂತು ಆಲಿಸುವಂತೆ;
ಇಷ್ಟಾರ್ಥ ಬೇಗ ಸಿದ್ಧಿಸುವಂತೆ;
ನೆನೆದರೆ ನೆನೆಯಬೇಕು

ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರನು
ಒಲಿದು ಬಂದು ಹರಿಸುವಂತೆ!!

೧೩೯

ದೀಪಾವಳಿಯ ಸಂಭ್ರಮವ ನೋಡ ಬನ್ನಿರಯ್ಯಾ;
ಎತ್ತ ನೋಡಿದಡತ್ತ ಸಾಲು ದೀವಿಗೆ ಕಾಣುತಿಹವಯ್ಯಾ;
ಒಳಗೊಳಗೆ ಹೋದಡೆ,
ತೈಲ ದೀಪಂಗಳು ತೋರುತಿಹವಯ್ಯಾ
ನಿಜ ಭಕ್ತಿ ತೈಲವನೆರೆದು, ಜ್ಞಾನಬತ್ತಿಯ ಹಚ್ಚಿದೊಡೆ
ಗರ್ಭಗುಡಿಯೊಳಗಿಹ
    ಭೂಲತಾ ಪುರೀಶ ಕರ್ತೃ
    ಜಗದ್ಗುರು ಗುರುಸಿದ್ಧೇಶ್ವರನ ಚಿತ್‌ಸೂರ್ಯ
ತಾನೆ ತಾನಾಗಿ ಬೆಳಗುತಿಹನಯ್ಯಾ!

೧೪೦

ಆತ್ಮ ಶುದ್ಧಿಯಿಲ್ಲದ ಭಾವೈಕ್ಯವು
ನೀರೆರೆಯದ ತರುವಿನಂತೆ, ನೋಡಾ!
ಆತ್ಮ ಶುದ್ಧಿಯಿಲ್ಲದ ಸಮತೆ
ಛಪ್ಪರವಿಲ್ಲದ ಸ್ತಂಭದಂತೆ, ನೋಡಾ!
ಆತ್ಮ ಶುದ್ಧಿಯಿಲ್ಲದ ಜೀವನ
ಕಸವ ತೆಗೆಯದ ಹೊಲದಂತೆ, ನೋಡಾ
    ಭೂಲತಾ ಪುರೀಶ ಕರ್ತೃ
    ಜಗದ್ಗುರು ಗುರುಸಿದ್ಧೇಶ್ವರಾ.

೧೪೧

ಶಿವಯೋಗ ಮಂದಿರವೆಂಬುದೊಂದು,
ಅಧ್ಯಾತ್ಮ-ಕೇಂದ್ರವಾಗಿಹುದಯ್ಯಾ:
ಹೃದಯಾರವಿಂದವನರಳಿಸಿ ಕೊಳ್ಳುವರಿಗೆ
ಜ್ಞಾನಭಾನುವಿನಂತಿಹುದು, ನೋಡಾ!
ಮನದ ಮಾಲಿನ್ಯವ ಕಳೆದುಕೊಳ್ಳುವರಿಗೆ
'ಧ್ಯಾನ ಧಾಮ'ವಾಗಿಹುದು, ನೋಡಾ!

ತನು ಮೋಹವಳಿದವರಿಗೆ
ಶಿವಯೋಗ ಮಂದಿರ ವಾಸ ಸಾರ್ಥಕ–ಸಾರ್ಥಕವಯ್ಯಾ
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೧೪೨

ಬಹಿರ್ಮುಖದರಿವೆ, ಅಂತರ್ಮುಖದ ಕುರುಹು, ಕಾಣಾ!
ಚಂದನದ ಪರಿಮಳ ಜ್ಞಾನವಿರದವನು
ಗಂಧವ ಲೇಪಿಸುವುದೆಂತು?
ವ್ಯವಹಾರ ಜ್ಞಾನ ಶೂನ್ಯನು
ವ್ಯಾಪಾರ ಮಾಡುವುದೆಂತು?
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ!
ಬಹಿರ್ಮುಖ ನಿವೃತ್ತಿಯೆ ಪರಮ ಸಾಧನ, ನೋಡಾ!

೧೪೩

ಮೋಹವು ಮಾನವನ ಮರುಳುಗೊಳಿಸುತಿಹುದು ನೋಡಾ!
ಮೋಹವು ಒಳಗೊಳಗೆ ಕರುಳ ಕೊರೆಯುತಿಹುದು ನೋಡಾ!
ಮೋಹವು ಪರಿಪರಿಯಲಿ ಕಾಡುತಿಹುದು ನೋಡಾ!
ಮೋಹವು ಅರಿವಿನರಮನೆಯ ಬಿಡಿಸುತಿಹುದು, ನೋಡಾ!
ಮೋಹವು ಸತ್ಯವನು ಮರೆಮಾಚುತಿಹುದು, ನೋಡಾ!
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ,
ನಿನ್ನ ಮೋಹದಲಿರುವವರನಾರನು, ಕಾಣೆನಯ್ಯಾ!!

೧೪೪

ಮೌನವು ಬುದ್ಧಿ–ಶ್ರೀಯ ಬೆಳೆಯಿಸುವುದಯ್ಯಾ;
ಮೌನವು ವೀರ–ಶ್ರೀಯ ಹೆಚ್ಚಿಸುವುದಯ್ಯಾ;

ಮೌನವು ಆತ್ಮ-ಶ್ರೇಯ ಅರಳಿಸುವುದಯ್ಯಾ:
ಇದು ಕಾರಣ, ಬಟ್ಟೆ ತೊಳೆದಂತೆಲ್ಲ
ಮಾಲಿನ್ಯ ಕೊಚ್ಚಿಕೊಂಡು ಹೋಗುವಂತೆ,
ಮೌನವು ಬೆಳೆ-ಬೆಳೆದು
ಹೃದ್‌ದರ್ಪಣ ಬೆಳಗುತ್ತ ಹೋಗುವುದು, ನೋಡಾ!
ಆತ್ಮ-ಶುದ್ಧಿಯಿಲ್ಲದ ಮೌನ
ಬಕ ಪಕ್ಷಿಯ ಧ್ಯಾನದಂತೆ, ಕಾಣಾ!

ಭೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ!

೧೪೫

ಅರಿವು ಆಚಾರಕ್ಕಿಳಿದರೆ
ಮರೆವು ನಷ್ಟವಾಗುವುದಲ್ಲವೆ,
ಆತ್ಮಕ್ಕೆ ಶಾಂತಿ ಸಿಕ್ಕು
ನಿಜ ಸುಖ ನಿಲುಕುವುದಯ್ಯಾ!
ಆಚಾರವಿಲ್ಲದ ಅರಿವು
ತಿಕ್ಕಲಾರದ ಪಾತ್ರೆಯಂತೆ, ನೋಡಾ!

ಭೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ!

೧೪೬

ಯೋಚನೆ ಬುದ್ಧಿಯ ಕೆಲಸವಾದರೆ
ಯೋಜನೆ ಹೃದಯದ ಕೆಲಸವಯ್ಯಾ!
ಯೋಚನೆ-ಯೋಜನೆಗಳೆರಡು ಜೋಡಾದರೆ,
ನೆಲವಗಿದು ಸಸಿಯನೂರಿ
ನೀರುಣಿಸಿ ಬೆಳೆದಂತೆ ಸೊಗಸಾದುದಯ್ಯಾ,

ಭೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ!!

೧೪೭

ವಿದ್ಯೆಯಿದ್ದಲ್ಲಿ ವಿನಯವಿರುವುದಯ್ಯಾ!
ತುಂಬಿದಕೊಡ ತುಳುಕದು, ನೋಡಾ!
ವಿನಯವಿಲ್ಲದ ವಿದ್ಯೆ ಒಣಗಿರ್ಪ ಮರವನೇರಿದಂತೆ,
ಒಡೆದಿರ್ಪ ಮುತ್ತ ಧರಿಸಿದಂತೆ, ಕಾಣಾ!
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ!!

೧೪೮

ಮಾತೆಲ್ಲ ಮುತ್ತು;
ಮನವೆಲ್ಲ ಕತ್ತಲು.
ಹೊರಗೆಲ್ಲ ಬೆಳಕು;
ಒಳಗೆಲ್ಲ ಕೊಳಕು.
ಮುತ್ತು-ಬೆಳಕೊಂದಾಗಿ
ಮಾತು ಮನವೊಂದಾಗಿ
ಜ್ಯೋತಿರ್ಲಿಂಗವಾದರೆ
ಅಂತಪ್ಪ ಮೂರ್ತಿಯ
ಕೀರ್ತಿಯನು ಹೊಗಳಲಳವಲ್ಲ, ಕಾಣಾ
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ!!

೧೪೯

ವೀರಶೈವ ಸಮಾಜವೆಂಬ ವೃಕ್ಷವು
ಪಲ್ಲವಿಸಿ ಫಲವ ನೀಡದಂತೆ
ಒಳಪಂಗಡಗಳೆಂಬ ಕಸ-ಕಡ್ಡಿಗಳು
ಬೆಳೆದು ಬೇರ ಬಿಟ್ಟಿಹವಯ್ಯಾ!
ಸುಧಾರಕರೆಂಬವರು ಪಂಗಡವ ಬೆಳೆಸುತ್ತ

ಮರದ ಬೇರಿಂಗೆ ಬಿಸಿನೀರ ಸುರಿಯುತಿಪರಯ್ಯಾ!
ಮಾತಿನಲಿ ವೃಕ್ಷದಾ ಪರವುದೋರಿ
ಕೃತಿಯಲ್ಲಿ ಪಂಗಡವ ಬೆಳೆಸುತಿಹ
ಜಾಣ್ಮೆ ತೋರುವರಯ್ಯಾ!
ಇದೆಂತಹ ವಿಶಾಲತೆ, ಇದೆಂತಹ ಸಮಾನತೆ!
ಇದೆಂತಹ ಮಾರ್ಗಾನುಸರಣೆ,
ಇದೆಂತಹ ಸಮಾಜ ಸುಧಾರಣೆ!!
ಇಂತಪ್ಪವರ ನೋಡಿ ಭೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರನು
ಗಹ ಗಹಿಸಿ ನಗುತಿಹನಯ್ಯಾ!

೧೫೦

ಧರ್ಮ–ಗುರುಗಳೆಲ್ಲರು ರಾಜಕಾರಣ ಸೇರಿದರೆ,
ಧರ್ಮ ಬೆಳಗುವುದೆಂತಯ್ಯಾ?
ರಾಜ್ಯ ಸೂತ್ರವ ನಡೆಸುತಿಪ್ಪವಗೆ ಧರ್ಮ ಸೇರದಿದ್ದರೆ,
ರಾಜ್ಯ ಬೆಳಗುವುದೆಂತಯ್ಯಾ?
ಒಂದು ಬಿಟ್ಟು, ಒಂದು ಬೆರೆತರೆ
ವಿಶ್ವ ಶಾಂತಿ ಸಾಧ್ಯವಯ್ಯಾ
ಭೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೧೫೧

ತ್ರಿದಳವಲ್ಲದ ಪತ್ರಿ,
ಹಿಡಿಕೆಯಿಲ್ಲದ ಛತ್ರಿ,
ಅದೆಂತಹುದಯ್ಯಾ!
ಸೊಂಪಿರದ ಕಾಡು,
ಇಂಪಿರದ ಹಾಡು,

ಅದೆಂತದಹುಯ್ಯಾ!
ಸುಗುಣವಿಲ್ಲದ ವನಿತೆ,
ಪ್ರತಿಭೆಯಿಲ್ಲದ ಕವಿತೆ,
ಅದೆಂತಹುದಯ್ಯಾ!
ಸತ್ಯವಿರದ ಚರಿತೆ,
ಸತ್ತ್ವವಿರದ ಘನತೆ,
ಅದೆಂತಹುದಯ್ಯಾ!
ವಿತರಣವಿರದ ವಿತ್ತ,
ಸಂಯಮವಿರದ ಚಿತ್ತ,
ಅದೆಂತಹುದಯ್ಯಾ,

ಭೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ!!

೧೫೨

ಶಾಂತಿಯಿಲ್ಲದ ವ್ಯಕ್ತಿ
ಶಾಂತಿಯಿಲ್ಲದ ರಾಷ್ಟ್ರ
ಜಲವಿಲ್ಲದ ತಟಾಕದಂತೆ ವ್ಯರ್ಥ, ಕಾಣಯ್ಯಾ!
ಶಾಂತಿಯಿಲ್ಲದೇ ಧರ್ಮವಿಲ್ಲ;
ಧರ್ಮವಿಲ್ಲದೇ ಶಾಂತಿಯಿಲ್ಲ
ಇವೆರಡು ಓತ-ಪ್ರೋತವಾಗಿ
ಹೆಣೆದುಕೊಂಡಿಪ್ಪವು, ನೋಡಾ!

ಭೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ!!

೧೫೩

ಸಮಯ್ಯಭೇದಂಗಳಿಂದ
ಸಮಯ-ಭಿತ್ತಿ ಹಾಳಾಗುವುದಲ್ಲದೆ,
ಸಮಾಜ-ಭವನ ಸಡಿಲಾಗುವುದು, ನೋಡಯ್ಯಾ!

ಸತ್ಯವೆಂಬ ಸಮಯದ ಮೇಲೆ
ಸಮತೆಯೆಂಬ ಪ್ರಣತೆಯನಿರಿಸಿ,
ಪ್ರೇಮವೆಂಬ ಎಣ್ಣೆಯನೆರೆದು,
ಸಹಕಾರವೆಂಬ ಬತ್ತಿಯನಿಟ್ಟು
ಜ್ಞಾನವೆಂಬ ದೀಪವ ಹಚ್ಚಿದರೆ
ಸಮಯ ಭೇದ ನಿರಸನದ ಬೆಳಕು ತೋರಿ
ಬೆಳಗಿನೊಳಗಣ ಬೆಳಗಾಗಿ ಪ್ರಜ್ವಲಿಸುವುದಯ್ಯಾ,
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ!!

೧೫೪

ಮೂರು ಲೋಕಂಗಳಲಿ
ಮೂರು ಕಾಲಂಗಳಲಿ
ಮೂರವಸ್ಥೆಗಳಲಿ
ಸಾವು ಇರದ ಮಠವೆ
"ಮೂರು ಸಾವಿರದ ಮಠ" ವಯ್ಯಾ!
ಮೂರಳಿದು ಮೂರರಿದರೆ
ಮಠ 'ದ್ವಾರ' ದೊರೆವುದಯ್ಯಾ!
ತನು–ಮನ–ಭಾವ ಶುದ್ಧರಿಗೆ
ಮಠದೊಳಗಣ ಜ್ಯೋತಿ ಕಾಂಬುದಯ್ಯಾ!
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ!!

೧೫೫

ನ್ಯಾಯವ ನೀಡುವ ನ್ಯಾಯಾಧೀಶರು
ನ್ಯಾಯ–ನಿಷ್ಠುರರಾಗಿರಬೇಕಲ್ಲದೆ,
ಅಸತ್ಯ–ಅನ್ಯಾಯಂಗಳಿಗವಕಾಶವೀಯಬಾರದು, ನೋಡಾ!
ನೀಡಿದ ನಿರ್ಣಯವು ಸುವರ್ಣಾಕ್ಷರದಲಿ

ಸಾದರದಿಂದ ಬರೆದಿಡುವಂತಿರಬೇಕಯ್ಯಾ
ದೇವ ಬಂದರೂ, ಅಹುದಹುದೆಂದು
ಮೆಚ್ಚುವಂತಿರಬೇಕಯ್ಯಾ
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೧೫೬

ಜಾತಿಗಾರರಂತೆ ವೇಷವ ಹಾಕಿ
ಮತ್ತೊಬ್ಬರನ್ನು ಮೋಸಗೊಳಿಸುವರ ನೋಡಿ
ಅಚ್ಚರಿಯಾಗುತಿಹುದಯ್ಯಾ!
ನಿಚ್ಚಳ ನಡೆ–ನುಡಿಯ ಮನವ ತೋರದವರ
ಮೆಚ್ಚನಯ್ಯಾ
ನಮ್ಮ ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರನು.

೧೫೭

'ಆರೇನಂದರೂ ಓರಂತಿಪ್ಪದೇ ಸಮತೆ' ಎಂದುದಾಗಿ
ಹಿರಿಯರಾವ ಪರಿಯಲಿ ಕರೆದರೂ
ಅದೇ ಮಮತೆ!
ಒಳ–ಹೊರಗಿರುವ ಹಗೆಗಳನಳಿದು
ಬೆಳಗುವುದೆ ಚಿನ್ಮಯತೆ!
ಲಿಂಗದೊಳಗೇಕಾಗ್ರ ದೃಷ್ಟಿಯನಿರಿಸಿ
ಬೆರೆಯುವುದೆ ತನ್ಮಯತೆ, ಕಾಣಾ
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೧೫೮

ದೊಡ್ಡ ಮೀನು ಸಣ್ಣ ಮೀನವ ನುಂಗುವಂತೆ
ದೊಡ್ಡವರೆಂದು ಹೇಳಿಕೊಳ್ಳುವವರು
ಸಣ್ಣವರನು ನುಗ್ಗು-ನುಸಿ ಮಾಡುತಿಹರಯ್ಯಾ!
ಅಧಿಕಾರದ ದರ್ಪವ ತೋರಿ
ಅನಧಿಕೃತ ಚೇಷ್ಟೆಯಮಾಡುವರ ಬಾಯಲಿ
        ಭ್ರೂಲತಾ ಪುರೀಶ ಕರ್ತೃ
        ಜಗದ್ಗುರು ಗುರುಸಿದ್ಧೇಶ್ವರನು
ಮಡಿಮಣ್ಣ ಹೊಯ್ಯದೆ ಮಾಣ್ಬನೆ?

೧೫೯

ವಿಶೇಷ ರಕ್ತವುಳ್ಳವರು ವಿರತರೆಂದರೆ, ವಿರತರಪ್ಪರೆ?
ಆಶೆಯ ಹರಿಯದೆ, ರೋಷವ ತರಿಯದೆ
ವಿರತರೆಂದರೆ, ವಿರತರಪ್ಪರೆ?
ಕರಣವ ಖಂಡಿಸದೆ, ದೇಹವ ದಂಡಿಸದೆ
ವಿರತರೆಂದರೆ, ವಿರತರಪ್ಪರೆ?
ಲಿಂಗವನರ್ಚಿಸದೆ, ಭಾವವ ಪೆರ್ಚಿಸದೆ
ವಿರತರೆಂದರೆ, ವಿರತರಪ್ಪರೆ?
ಲೌಕಿಕದಲಿಪ್ಪಂತೆ ತೋರಿದರು
ಕಮಲ-ಪತ್ರದಂತೆ ನಿರ್ಲಿಪ್ತರಾಗಿಹ
ವಿಗತ-ರಕ್ತಿಯುಳ್ಳ ವಿರತರೆ, ವಿರತರು ನೋಡಾ
        ಭ್ರೂಲತಾ ಪುರೀಶ ಕರ್ತೃ
        ಜಗದ್ಗುರು ಗುರುಸಿದ್ಧೇಶ್ವರಾ!

೧೬೦

ಬೇಕೆಂದಾಗ ಮೇಲೆತ್ತುವುದು
ಬೇಡೆಂದಾಗ ನೆಲಕೊತ್ತುವುದಿದು ಪತ್ರಿಕಾ ಧರ್ಮವೇನಯ್ಯಾ!

ಸಮದೃಷ್ಟಿ ಸಮಭಾವ ಕಂಡರಿದು
ಮನಮೆಚ್ಚಿ ಬರೆಯುವುದೇ ಪತ್ರಿಕಾ-ಧರ್ಮವಯ್ಯಾ
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೧೬೧

ಅನುಭವವಿಲ್ಲದ ಭಾಷೆ,
ಅನುಭವವಿಲ್ಲದ ಜ್ಞಾನ
ಅನುಭವವಿಲ್ಲದ ಧ್ಯಾನ
ಅನುಭವವಿಲ್ಲದ ಮೌನ
ಗುಡ್ಡಕ್ಕೆ ಕಲ್ಲು ಹೊತ್ತಂತೆ: ಕಾಣಯ್ಯಾ,
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೧೬೨

ಧರ್ಮ ರಕ್ಷಣೆಯು ಶಾಲೆ 'ಕಾಲೇಜು'ಗಳಿಂದಾಗದೆಂದು
ನುಡಿಯುತಿಹರು, ಕೆಲಬರು!
ಧರ್ಮ ರಕ್ಷಣೆಯು
ಪಾಠ ಪ್ರವಚನಗಳಿಂದಾಗದೆಂದಾಡುತಿಹರು ಕೆಲಬರು!
ಧರ್ಮ ರಕ್ಷಣೆಯು
ಜಪ ತಪಾದಿಗಳಿಂದಾಗದೆಂದೆನ್ನುತಿಹರು ಕೆಲಬರು!
ಮಾಡುವ ಮಾಟ
ನೋಡುವ ನೋಟ
ಕೂಡುವ ಕೂಟ, ಪರಿಶುದ್ಧವಿರಬೇಕಲ್ಲದೆ,
ಮೂರನೂ ಬೇರೆ ವಿಂಗಡಿಸಿದೊಡೆ
ಧರ್ಮದ ರಕ್ಷಣೆ ಸಾಧ್ಯವದಂತಯ್ಯಾ
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ,

ಹೇಳುವ ಪರಿ ಬೇರೆಯಾದರೂ
ಗುರಿಯು ಗುರಿಯೊಂದೇ ಕಾಣಯ್ಯಾ!

೧೬೩

ಅಧ್ಯಯನ, ಅಧ್ಯಾಪನ, ಅಭ್ಯಾಸಂಗಳು
ಒಂದ ಬಿಟ್ಟು, ಒಂದ ಮಾಡಲು ಸಲ್ಲದು ನೋಡಯ್ಯಾ,
ಮನೆಯು ಕಟ್ಟಲು ಕಲ್ಲು-ಕಬ್ಬಿಣ,
ಗಚ್ಚು-ಗಾರೆ ಬೇಕಾಗುವಂತೆ
ಧರ್ಮ ಸೌಧವ ತಿದ್ದಿ ರಕ್ಷಿಸಲು
ಶಿಕ್ಷಣ-ಪ್ರಶಿಕ್ಷಣ, ಪಾಠ-ಪ್ರವಚನ, ಜಪ-ತಪಂಗಳು
ಅವಶ್ಯವಿರಬೇಕಯ್ಯಾ,
ಭೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೧೬೪

ಭೂಮಿಯಿದೆ ನೀರಿಲ್ಲ;
ನೀರಿದೆ ಭೂಮಿಯಿಲ್ಲ-
ಇದು ದೇಶ ವೈಚಿತ್ರ್ಯ ನೋಡಾ!
ಕಡಲೆಯಿವೆ ಹಲ್ಲಿಲ್ಲ,
ಹಲ್ಲಿವೆ ಕಡಲೆಯಿಲ್ಲ,
ಧನವಿದೆ ದಾನವಿಲ್ಲ,
ದಾನವಿದೆ ಧನವಿಲ್ಲ,
ಇದು ಜೀವನ ವೈಚಿತ್ರ್ಯ, ನೋಡಾ!
ಇದು ಸ್ವಭಾವ ವೈಚಿತ್ರ್ಯ, ನೋಡಾ!
ಭೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ,
ನಿನ್ನ ನೆನೆಯಲು ಮನವಿದೆ;
ಮನದ ನೆಲೆ ತಿಳಿಯಲಾರದು, ನೋಡಾ!

೧೬೪

ಮಂಜುನಾಥನಾದ ನೀನು ಶಿವಲಿಂಗರೂಪವಂತೆ;
ನಿನ್ನ ಪೂಜೆಗೆ ತುಳಸಿ ಪತ್ರಿ ಗಂಧ ಬೇಕಂತೆ;
ನಿನ್ನ ನಿತ್ಯದರ್ಚಕರು ಮಾಧ್ವರಂತೆ;
ನಿನ್ನ ಸ್ಥಳದೊಡೆತನದ ಧರ್ಮಾಧಿಕಾರಿಗಳು ಜೈನರಂತೆ,
ಇದೆಂತಹ ವಿಚಿತ್ರವಯ್ಯಾ!
ಯಾರಾದರೇನಂತೆ?
ಭಕ್ತಿಗೆ ಭಿನ್ನ-ಭೇದವುಂಟೇನಯ್ಯಾ,
    ಭ್ರೂಲತಾ ಪುರೀಶ ಕರ್ತೃ
    ಜಗದ್ಗುರು ಗುರುಸಿದ್ಧೇಶ್ವರಾ!!

೧೬೫

ಅನ್ನವ ನೀಡುವುದನು ಧರ್ಮಸ್ಥಳದಲಿ ನೋಡಿ
ಸಂತಸ ಪಡಬೇಕಯ್ಯಾ!
ಭಕ್ತಿ ಸಂಪದವನು ಧರ್ಮಸ್ಥಳದಲಿ ಕಂಡು
ಕಲಿಯಬೇಕಯ್ಯಾ!
ಸರ್ವ ಧರ್ಮ ಸಮನ್ವಯವನು ಧರ್ಮಸ್ಥಳದಲಿ ತಿಳಿದು
ನಲಿಯಬೇಕಯ್ಯಾ,
    ಭ್ರೂಲತಾ ಪುರೀಶ ಕರ್ತೃ
    ಜಗದ್ಗುರು ಗುರುಸಿದ್ಧೇಶ್ವರಾ!!

೧೬೬

ತನ್ನ ಸತಿಯ ಬಿಟ್ಟು, ಪರ ಸತಿಯ ಬಯಸಿದೊಡೆ,
ಜೀವನಕೆ ಸಮರಸವೆಂತಯ್ಯಾ!
ಹಾಲಿನಲಿ ಉಪ್ಪ ಬೆರೆಸಿದೊಡೆ,
ಕೆಡುವುದಲ್ಲದೆ ರುಚಿ ಬರುವುದೆಂತಯ್ಯಾ!
ಹೂ-ಬಳ್ಳಿಗೆ ಹುಳು ಹತ್ತಿದೊಡೆ
ಒಣಗುವುದಲ್ಲದೆ ಹೂಬಿಡುವುದೆಂತಯ್ಯಾ

ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೧೬೮

ಪ್ರಪಂಚವೆಂಬುದೊಂದು ಬೀಸುವ ಕಲ್ಲು;
ಅದರೊಳು ತಿರುಗುವ ಕಾಳುಗಳೆ ಜೀವರಾಶಿ;
ಒಳಗಿರುವ ಕಿರುಗೂಟವೆ ಪರಶಿವ ವಸ್ತು;
ಅಂತಪ್ಪ ಕಿರುಗೂಟದಾಸರೆ ಪಡೆದು
ಬಾಳುತಿಹ ಕಾಳುಗಳೆ ಜೀವನ್ಮುಕ್ತರು. ನೋಡಾ

ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ!!

೧೬೯

ವಿಷಯಧ್ಯಾನದಿಂದ,
ವಿಷಕಂಠನ ಮರೆತು
ವಿಷಮ ಸಂಸಾರದಲಿ ಬೆರೆತು
ದುಸ್ಸಂಗಿಗಳಾಗಿ ತಿರುಗುತ್ತಿಹರು, ನೋಡಯ್ಯಾ!
ದುಸ್ಸಂಗದಿಂದ ಕಾಮದ ಬೀಜವು ಹುಟ್ಟಿ
ಕಾಮದಿಂದ ಕ್ರೋಧವು ಚಿಗುರೊಡೆದು
ಕ್ರೋಧದಿಂದ ಸಂಮೋಹವು ಬೆಳೆದು
ಸಂಮೋಹದಿಂದ ಸ್ಮೃತಿಭ್ರಂಶವು ಹಿಡಿದಾಗಿ
ಸ್ಮೃತಿ ಭ್ರಂಶದಿಂದ ಬುದ್ಧಿಹೀನನಾಗಿ
ಈಪರಿ ಕಾಮದ ಮಹಾಮರವು ಫಲಿಸಿ,
ಬುದ್ಧಿನಾಶದಿಂದ ಸರ್ವನಷ್ಟವಾಗಿ
ಗತಿಮತಿಯಿಲ್ಲದಂತೆ, ತಲೆಕೆಟ್ಟ ಹುಚ್ಚರಂತೆ,
ಮನುಷ್ಯಕುಲದ ಕಪಿಗಳಂತೆ ತಿರುಗುತ್ತಿಹರು ನೋಡಾ
ಕಾಮವೆಂಬ ವೃಕ್ಷವನು
ಜ್ಞಾನವೆಂಬ ಕೊಡಲಿಯಿಂದ ಕಡಿದೊಗೆದರೆ
ಕಾಲಕರ್ಮಂಗಳು ಬಿಟ್ಟೋಡಿ
ಶಿವಪಾದದಿ ಕೃತಾರ್ಥನಾಗುವನಯ್ಯಾ

ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.
[ಗೀತಾ ಶ್ಲೋಕದ ಆಧಾರ]

೧೭೦

ಗುರುವು ಅಜ್ಞಾನ ತಿಮಿರವ ತೊಲಗಿಸುತಿಪ ಚಿತ್‌ಸೂರ್ಯನು;
ಗುರುವು ಭವಸಾಗರವ ದಾಟಿಸುವ ನಾವಿಕನು;
ಗುರುವು ಜೀವ-ಭಾವವ ಕಳೆದು,
ಶಿವಭಾವ ತುಂಬುವ ಪರಶಿವನು;
ಗುರುವು, ಇಷ್ಟಾರ್ಥವ ಈಡೇರಿಸುತಿಪ ಚಿಂತಾಮಣಿಯು;
ಗುರುವು "ಲಿಂಗ-ಮಧ್ಯೇ ಜಗತ್ ಸರ್ವಂ" ಎಂದು
ಸಾರುವ ಬೋಧಕನು;
ಗುರುವು ಸದ್‌ಭಕ್ತಿ ನೆಲೆಗೊಳ್ಳುವಂತೆ
ಕೃಪೆದೋರುತಿಪ ಕಾರುಣ್ಯಮೂರ್ತಿಯು
ಇಂತಪ್ಪ ಗುರುವನು "ನ ಗುರೋರಧಿಕಂ" ಎಂದು
ಶ್ರುತಿ ಹೊಗಳುತಿದೆ, ನೋಡಾ

ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ!!

೧೭೧

ಗುರುವನ್ನು ನರನೆಂದು ಭಾವಿಸಿದರೆ
ಅರಿಷ್ಟ ತಪ್ಪದು, ಕಾಣಾ!
ಗುರುದೇವನನು ಮರೆದರೆ
ಅಧ್ವಾನ ತಪ್ಪದು, ಕಾಣಾ!
ಗುರುದೇವನನು ಜರೆದರೆ
ಅನುತಾಪ ತಪ್ಪದು, ನೋಡಾ!
ಗುರು ಕರುಣೆಯ ಪಡೆಯದಿರೆ
ಭವ-ಬಾಧೆ ತಪ್ಪದು, ನೋಡಾ!

ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ!!

೧೭೨

ತನ್ನ ಸತ್‌ಸ್ವರೂಪವ ತೋರುವನಯ್ಯಾ, ಶ್ರೀಗುರುವು:
ತನ್ನ ಚಿತ್‌ಸ್ವರೂಪವ ತೋರುವನಯ್ಯಾ, ಶ್ರೀಗುರುವು:
ತನ್ನ ನಿಜಾನಂದವ ತೋರುವನಯ್ಯಾ, ಶ್ರೀಗುರುವು:
ತನ್ನ ನಂಬಿದ ಶಿಷ್ಯರನು ಮುಕ್ತಿ ಪಥಕೆ
ಕರೆದೊಯ್ಯುವನಯ್ಯಾ, ಶ್ರೀಗುರುವು
ಇಂತಪ್ಪ ಗುರುವಾಗಿ ಸರ್ವರನು ಸಲುಹಯ್ಯಾ
ಭೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ!

೧೭೩

ಶ್ರೀಗುರುವಿನ ಉಪದೇಶದಿಂದ
ಭವಮಾಲೆ ಹರಿವುದು, ನೋಡಾ!
ಶ್ರೀಗುರುವಿನ ಉಪದೇಶದಿಂದ
ನರ–ಜನ್ಮ ಸಮನಿಸದು, ನೋಡಾ!
ಶ್ರೀಗುರುವಿನ ಉಪದೇಶದಿಂದ
ಒಳ–ಹೊರಗು ಬೆಳಗುವುದು, ನೋಡಾ!
ಶ್ರೀಗುರುವಿನ ಉಪದೇಶದಿಂದ
ಲಿಂಗಾಂಗ ಸಾಮರಸ್ಯ ಸಿದ್ಧಿಪ್ಪುದು, ನೋಡಾ
ಭೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೧೭೪

ಗುರುವಾದವನು ದುರಹಂಕಾರ–ದುರ್ಮದವ
ದೂರೀಕರಿಸಿರಬೇಕು;
ಗುರುವಾದವನು ಆಶೆ–ಆಮಿಷವ
ಅಳಿದಿರಬೇಕು;
ಗುರುವಾದವನು ಮಾಯಾ–ಮೋಹವ
ಮೆಟ್ಟಿರಬೇಕು;

ಗುರುವಾದವನು ಸರ್ವ ಸಂಗ-ಪರಿತ್ಯಾಗವ
ಸಾಧಿಸಿರಬೇಕು.
ಇಂತಪ್ಪ ಸದ್‌ಗುರುವೆ ಶಿಷ್ಯನ ಭವ-ಬಂಧನವ
ಬಿಡಿಸುವನಯ್ಯಾ,
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ,
ಅಜ್ಞಾನಾಂಧಕಾರದಲಿ ಅಲೆಯುತಿಪ ಗುರುಗಳಂತಪರು
ಕುರುಡರಂತೆಯೆ ಕುರುಡು ದಾರಿಯಲಿ
ಶಿಷ್ಯರನೆಳೆಯುತಿಹರಯ್ಯಾ!!

೧೭೫

ಲಿಂಗವ ಧರಿಸಿದವರಿಗೆ ಭಯ-ಭಯಂಗಳಿಲ್ಲ;
ಲಿಂಗವ ಧರಿಸಿದವರಿಗೆ ಕೋಪ-ತಾಪಂಗಳಿಲ್ಲ.
ಲಿಂಗವ ಧರಿಸಿದವರಿಗೆ ಪಾಪ-ಸೂತಕಗಳಿಲ್ಲ;
ಇದು ಕಾರಣ, ಲಿಂಗವ ಧರಿಸಿ, ಲಿಂಗ ಪ್ರಾಣವಾಗಿ
ಭಾವಲಿಂಗದಲಿ ಸಮರಸವ ಹೊಂದಬಲ್ಲವರಿಗೆ
ಪುನರ್ಜನ್ಮ ಮರಣಂಗಳಿಲ್ಲ, ನೋಡಾ,
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ!!

೧೭೬

ಮನದ ಮೈಲಿಗೆಯು ಕಳೆಯಲು
ಶರಣರ ನುಡಿಗಡಣವೆ ಮೂಲವಯ್ಯಾ!
ತನುವಿನ ಮೋಹವನಳಿಸಲು
ಅನುಭಾವಿಗಳ ಸಹವಾಸವೆ ಮೂಲವಯ್ಯ!
ಲಿಂಗಾಂಗ ಸಮರಸವನರಿಯಲು,
ಇಷ್ಟಲಿಂಗದರ್ಚನೆಯೆ ಮೂಲವಯ್ಯಾ

ಭ್ಯೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ!

೧೭೭

ವೀರಶೈವರಿಗೆ ಲಿಂಗವೇ ಪಂಚಪ್ರಾಣವಾಗಿಹುದಯ್ಯಾ:
ತನ್ನ ತಾನರಿತುಕೊಳ್ಳಲು ಬಗೆಗನ್ನಡಿಯಾಗಿಹುದಯ್ಯಾ!
ಲಿಂಗವಿಲ್ಲದ ಹೃದಯವು ರವಿಯಿರದ ಆಗಸವಂತೆ!
ಪತಿಯಿರದ ಸತಿಯಂತೆ, ಕಾಣಯ್ಯಾ

ಭ್ಯೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ!

೧೭೮

ವಿಶ್ವವನೊಳಕೊಂಡ ಲಿಂಗವು ಕರಸ್ಥಲದಲಿ ಬಂದು
ಚುಳುಕಾಗಿಹುದಯ್ಯಾ!
ಗುರು ಕರುಣಿಸಿದ ಲಿಂಗವು
ಚಿತ್‌ಕಲಾ ಪರಿಪೂರ್ಣವಾಗಿಹುದಯ್ಯಾ!
ಮಾಂಸ ಪಿಂಡವು ಹೋಗಿ, ಮಂತ್ರಪಿಂಡವಾಗಲು
ಲಿಂಗವೆ ಮೂಲ ಕಾರಣವಯ್ಯಾ,

ಭ್ಯೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೧೭೯

ಲಿಂಗವಿದ್ದವರು ಅಂಗಗುಣಗಳ ದಹಿಸುತಿರಬೇಕು:
ಲಿಂಗವಿದ್ದವರು ಗುರು. ಲಿಂಗ-ಜಂಗಮ
ದಾಸೋಹದಲಿ ನಿಷ್ಠರಾಗಿರಬೇಕು.
ಲಿಂಗವಿದ್ದು ಮಂಗ ಗುಣ ಹಿಂಗಿರದಿದ್ದೊಡೆ

ಭ್ಯೂಲತಾ ಪುರೀಶ ಕರ್ತೃ—
ಜಗದ್ಗುರು ಗುರುಸಿದ್ಧೇಶ್ವರನೆಂತೊಲಿವನಯ್ಯಾ!

೧೮೦

ಲಿಂಗವ ಧರಿಸದೆ, ಲಿಂಗತತ್ತ್ವವ ತಿಳಿಸಿದರೇನು!
ಗಿಳಿಯೋದಿದ ಪಾಠವನೊಪ್ಪಿಸಿದಂತಲ್ಲವೇ, ಹೇಳಾ!
ತತ್ತ್ವದ ಬಿತ್ತಿಯನು ಮಾತಿನಲಿ ತುಂಬಿದರೇನು?
ಒಳಗೆ ಶುದ್ಧಿಸದೆ, ಘಟವ ಹೊರಗೆ
ತೊಳೆದಂತಲ್ಲವೆ?
ಅಂತರಂಗ ಪ್ರಕಾಶವಿಲ್ಲದೆ
ಬಹಿರಂಗ ಪ್ರಕಾಶವನೆಷ್ಟು ಪಡೆದರೇನು?
ಗಂಧವಿಲ್ಲದ ಚಂದನದಂತೆ,
ತೈಲವಿಲ್ಲದ ತಿಲದಂತೆ ನಿರರ್ಥಕ, ಕಾಣಾ
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ!!

೧೮೧

ಜಂಗಮನು ಜಗದ್‌ಭರಿತನೆಂಬುದು ನಿಜ, ನೋಡಾ
ಜಂಗಮನು ಚಿತ್‌ಕಲಾ ಮೂರ್ತಿಯು, ನೋಡಾ!
ಜಂಗಮನು ಷಟ್‌ಸ್ಥಲ ಸ್ವರೂಪನು, ನೋಡಾ!
ಇಂತಪ್ಪ ಜಂಗಮನಿದ್ದ ಸ್ಥಾನವೆ
ಅವಿಮುಕ್ತ ಕ್ಷೇತ್ರ, ನೋಡಾ!
"ಗುರುವಿನ ಗುರು ಜಂಗಮ" ಎಂದುದಾಗಿ
ಶರಣರ ಅನುಭವೋಕ್ತಿಯಿಹುದಯ್ಯಾ,
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ!

೧೮೨

ಜಂಗಮನಾದವನು ಜಗದ ಜಂಜಡವನಳಿದಿರಬೇಕು;
ಜಂಗಮನಾದವನು ಅರಿವಿನರಿವೆಯ ಹೊದ್ದಿರಬೇಕು;

ಜಂಗಮನಾದವನು ಪಂಚಕ್ಲೇಶಗಳಿಂದ ಪಾರಾಗಿರಬೇಕು;
ಪಂಚ ಮುಖನನು ಧ್ಯಾನದೊಳಿರಿಸಿರಬೇಕು,
ಇಂತಪ್ಪ ಜಂಗಮನು ಸಕಲ ಜೀವಾತ್ಮರಿಗೆ
ಲೇಸನೇ ಬಯಸುತಿರ್ದು
ಭಕ್ತರ ಹೃತ್‌ಕಮಲದಲ್ಲಿರುತಿಹನು, ನೋಡಾ,
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ!

೧೮೩

ಜಂಗಮನ ಶಕ್ತಿಯನರಿಯದೆ
ಜಂಗಮ-ನಿಂದೆಯ ಮಾಡುತಿಹರಯ್ಯಾ, ಕೆಲಬರು!
ಆತ್ಮೋದ್ಧಾರವನೆಳಸುವ ಭಕ್ತರು
ಜಂಗಮ-ತತ್ತ್ವವ ಜರೆದರೆ,
ಫಲವೀವ ತರುವನ್ನು ಕತ್ತೆಸೆದಂತೆ, ಕಾಣಾ
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ!

೧೮೪

ಜಂಗಮನ ಪಾದೋದಕವು
ಮನವ ಮಾಲಿನ್ಯವ ತೊಳೆವುದಯ್ಯಾ!
ಜಂಗಮನ ಪಾದೋದಕವ ಸಿಂಪಡಿಸಲು
ಭಕ್ತನ ಹೃದ್‌ಭೂಮಿಯೊಳು
ತತ್ತ್ವವೆಂಬ ವೃಕ್ಷ ಬೆಳೆವುದಯ್ಯಾ!
ನಿಷ್ಠೆಯಿಂ ಸೇವಿಸಲು, ಇಷ್ಟಾರ್ಥ ಸಿದ್ಧಿಯಪ್ಪುದಯ್ಯಾ
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ!

೧೮೫

ಭಯ-ಭಕ್ತಿಯಿಂದೊಡಗೂಡಿ
ಜಂಗಮನ ಪಾದೋದಕವ ಸೇವಿಸಿದ ಫಲವು
ಕೋಟಿ ತೀರ್ಥಯಾತ್ರೆಗಿಂತ ಮಿಗಿಲಾಮುದಯ್ಯಾ!
ಚರಣದಂಗುಷ್ಠದಲ್ಲೆರೆದ ಗುರುಪಾದೋದಕವೆ
ಕ್ರಿಯಾ-ಪಾದೋದಕವಾಗಿ,
ಜ್ಞಾನ-ಪಾದೋದಕವಾಗಿ,
ಲಿಂಗ ಮುಖದಿಂ ಭಕ್ತನ ಅಂಗವ ಸೇರಿ,
ಇಷ್ಟ-ಪ್ರಾಣ-ಭಾವ ಲಿಂಗಂಗಳ ಸಂಬಂಧವಾದರೆ,
ಮುಕ್ತಿಯು ಹತ್ತಿರವೆ, ಕಾಣಾ
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ!

೧೮೬

ಶ್ರೀಗುರುವಿಂದ ಪಡೆದ ಪ್ರಸಾದವು
ಶುದ್ಧ ಪ್ರಸಾದವಾಗುವುದಯ್ಯಾ!
ಲಿಂಗ ಮುಖದಿಂದ ಪಡೆದ ಪ್ರಸಾದವು
ಸಿದ್ಧ ಪ್ರಸಾದವಾಗುವುದಯ್ಯಾ!
ಜಂಗಮನಿಂದ ಪಡೆದ ಪ್ರಸಾದವು
ಪ್ರಸಿದ್ಧ ಪ್ರಸಾದವಾಗುವುದಯ್ಯಾ!
ಈ ಕ್ರಮವರಿತು ಪ್ರಸಾದವ ಸೇವಿಸಿದೊಡೆ
ತನು-ಮನ-ಭಾವಂಗಳು
ಪರಿಶುದ್ಧಿಗೊಂಡು ಪ್ರಸಾದಮಯವಾಗುವವು ಕಾಣಾ,
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೧೮೭

ಗುರು ಮುಟ್ಟಿ ನೀಡಿದ ಪ್ರಸಾದವನು
ಲಿಂಗ ತ್ರಯಕೆ ಸಮರ್ಪಿಸಿದರೆ

ತನು-ತ್ರಯ ಪರಿಶುದ್ಧವಾಗಿ
ಮಲ ತ್ರಯ-ಪರೆ ದೂರವಾಗಿ
ಚಿತ್ ಸಾಗರದೊಳು ಚಿದ್‌ರಸ ಕೂಡಿದಂತೆ
ಸಮರಸ ಹೊಂದಿದ ಪ್ರಸಾದಿಯು
ಚಿತ್ ಸುಖಿಯಾಗುವನಯ್ಯಾ,
 ಭ್ರೂಲತಾ ಪುರೀಶ ಕರ್ತೃ
 ಜಗದ್ಗುರು ಗುರುಸಿದ್ಧೇಶ್ವರಾ.

೧೮೮

ಭಸ್ಮ ಧಾರಣದಿಂದ ಗುಣತ್ರಯಂಗಳ ಪರಿಹಾರವಯ್ಯಾ!
ಭಸ್ಮ ಧಾರಣದಿಂದ ಮಲತ್ರಯಂಗಳ ಸಂಹಾರವಯ್ಯಾ!
ಭಸ್ಮ ಧಾರಣದಿಂದ ಈಷಣತ್ರಯಂಗಳ ನಿವಾರಣೆಯಯ್ಯಾ!
ಭಸ್ಮ ಧಾರಣದಿಂದ ತ್ರಿವಿಧ ಕರ್ಮಂಗಳ
ವಿಮೋಚನೆಯಯ್ಯಾ!
ಭಸ್ಮ ಧಾರಣದಿಂದ ಪಾಪ ಪಲ್ಲಟವಾಗಿ,
ಸರ್ವಾಂಗ ಶುದ್ಧವಾಗಿ
ನಿನ್ನನೊಲಿಸಲು ಸುಲಭವಾಗುವುದಯ್ಯಾ
 ಭ್ರೂಲತಾ ಪುರೀಶ ಕರ್ತೃ
 ಜಗದ್ಗುರು ಗುರುಸಿದ್ಧೇಶ್ವರಾ!

೧೮೯

ಗೋಮಯದಿಂದ ಮಾಡಿದ ಭಸ್ಮವ
ಲಲಾಟದಲಿ ಧರಿಸಿದೊಡೆ,
ವಿಧಿಲಿಖಿತದ ದುರಕ್ಷರುಗಳು
ದೂರಾಗುವವಯ್ಯಾ!
ಪಾದೋದಕದಿಂದ ಶುದ್ಧಗೊಳಿಸಿದ ಭಸ್ಮವ
ಮೂವತ್ತೆರಡು ಸ್ಥಾನಂಗಳಲಿ
ಮಹಾ ಮಂತ್ರವ ಪಠಿಸುತ್ತ ಧರಿಸಿದೊಡೆ

ಆಧಿ–ವ್ಯಾಧಿಗಳು ನಶಿಸಿ
ಶಿವ ಸೌಂದರ್ಯದ ಕಳೆ ಬೆಳಗುವುದಯ್ಯಾ

ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ!!

೧೯೦

ಭಸ್ಮವಿಲ್ಲದ ಹಣೆಯು
ಎಲೆಗಳಿಲ್ಲದ ತರುವಿನಂತೆ ನೋಡಯ್ಯಾ!
ಗೋಮಯದ್ದಲ್ಲದ ಭಸ್ಮ
ಹಾಲು ಕರೆಯುದ ಗೋವಿನಂತೆ, ನೋಡಯ್ಯಾ

ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ!
"ಶಿವನ ಮೈ ಬೆಳಗು" ಭಸ್ಮ ಕಾಣಾ!

೧೯೧

ರುದ್ರನ ಜ್ಞಾನ ನೇತ್ರದಿಂದುದಯಿಸಿದ ರುದ್ರಾಕ್ಷವನು
ಶಿರದೊಳು ಧರಿಸಿದೊಡೆ,
ಉರಗಭೂಷಣ ತಾನಾಗುವನಯ್ಯಾ!
ಕೋಟಿ ಯಜ್ಞವ ಗೈದ ಫಲವು
ರುದ್ರಾಕ್ಷ ಧಾರಣದಿಂದ ದೊರೆಕೊಂಬುದಯ್ಯಾ!
ದೀರ್ಘ ಕಾಲ ತಪಗೈದ ಫಲವು
ರುದ್ರಾಕ್ಷ ಧಾರಣದಿಂದ ಪ್ರಾಪ್ತವಾಗುವುದಯ್ಯಾ!
"ರುದ್ರಾಕ್ಷ ಮಾಲೆಯು ಕೊರಳಲಿ ನಿರಂತರ ಕಂಗೊಳಿಸಿದರೆ
ಕೈಲಾಸದೊಳು ಕುಳಿತಂತೆಂ"ದು
ಆಗಮಂಗಳು ಸಾರುತಿಹವು, ನೋಡಾ

ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ!

೧೯೨

ರುದ್ರಾಕ್ಷ ಸ್ಪರ್ಶದಿಂದ
ಪಾಪ ಪಲ್ಲಟಗೊಳ್ಳುವುದಯ್ಯಾ!
ರುದ್ರಾಕ್ಷ ಧಾರಣದಿಂದ
ರೋಗ-ರುಜಿನಂಗಳು ಬಿಟ್ಟೋಡುವವಯ್ಯಾ!
ರುದ್ರಾಕ್ಷ ಪೂಜೆಯಿಂದ
ಕರ್ಮಂಗಳು ಕಾಲ್ದೆಗೆಯುವವಯ್ಯಾ!
ಇಂತಾದ ಬಳಿಕ ರುದ್ರಾಕ್ಷಧಾರಕರು
ಪೂತಾತ್ಮರಾಗಿ ಪೂಜೆಗೊಳ್ಳುವರಯ್ಯಾ
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ!

೧೯೩

ರುದ್ರಾಕ್ಷ ಮಾಲೆಯು ಧರಿಸಿದೊಡೆ
ಭವ ಮಾಲೆ ಪರಿವುದು, ನೋಡಾ!
ರುದ್ರಾಕ್ಷ ಮಾಲೆಯು ಚಿದಂಗದಾಭರಣವಾಗಿಹುದು,
ನೋಡಾ!
ರುದ್ರಾಕ್ಷ ಮಾಲೆಯಿಂದ ಜಪಿಸಿದ ಸದ್‌ಭಕ್ತರು
ನಿತ್ಯ ತೃಪ್ತರಾಗಿರ್ಪರು, ನೋಡಾ
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ!

೧೯೪

ಭಕ್ತನಿಗೆ ಪಂಚಾಕ್ಷರ ಮಂತ್ರವೆ
ಪಂಚ ಪ್ರಾಣವಾಗಿಹುದು, ನೋಡಾ!
ಪಂಚಾಕ್ಷರ ಮಂತ್ರ-ಧ್ಯಾನವೆ
ಸಂಚಿತ ಕರ್ಮಂಗಳ ಸವೆಯಿಡೆವುದು, ನೋಡಾ
ಪಂಚಾಕ್ಷರ ಮಂತ್ರವ ಜಪಿಸಿದವನು
ಸಾಕ್ಷಾತ್ ಪರಶಿವನೆ ತಾನಾಗುವನು ನೋಡಾ!

ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ!

೧೯೫

ಪಂಚಾಕ್ಷರಕ್ಕೆ ಮೊದಲು ಪ್ರಣವ ಕೂಡಿದರೆ
ಷಡಕ್ಷರ ಮಂತ್ರವಾಗುವುದಯ್ಯಾ!
ಇಂತಪ್ಪ ಷಡಕ್ಷರ ಮಂತ್ರವ ಜಪಿಸಿದರೆ
ಷಡ್ವೈರಿಗಳು ಪಲಾಯನಗೊಂಡು
ಪರಮಾತ್ಮನ ಸಾನ್ನಿಧ್ಯ ಸಾಧ್ಯವಾಗುವುದಯ್ಯಾ!
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೧೯೬

ಜಪಂಗಳಲಿ
ಮಾನಸಿಕ ಜಪವೆ ಮಿಗಿಲು, ನೋಡಯ್ಯಾ!
ತಪಂಗಳಲಿ
ಸತ್ಯಾಚರಣೆಯು ತಪವೆ ಮಿಗಿಲು, ನೋಡಯ್ಯಾ!
ಮಂತ್ರಂಗಳಲಿ
ಷಡಕ್ಷರ ಮಹಾ ಮಂತ್ರವೆ ಮಿಗಿಲು, ನೋಡಯ್ಯಾ!
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೧೯೭

ಭಕ್ತಿಯೆಂಬ ಪತ್ರಿಯ ಧರಿಸಿ
ಹರುಷವೆಂಬ ಧೂಪವ ಸಲಿಸಿ
ಲಿಂಗವನರ್ಚಿಸಿ
ನಿಷ್ಠೆಯ ಬಲಿಸಿ, ಸದಾನಂದವ ಪಡೆಯಬೇಕಯ್ಯಾ!
ಲಿಂಗಕೆ ರುಚಿಯನರ್ಪಿಸಿ

ಅಂಗದವಗುಣವಳಿಸಿ, ಚಿದಾನಂದವ ಪಡೆಯಬೇಕಯ್ಯಾ!
ಭಾವವೆಂಬ ಹಾಲಿಗೆ ಸುಜ್ಞಾನವೆಂಬ ಸಕ್ಕರೆ ಬೆರೆಸಿ,
ಅನುಭವಾಮೃತ ಸವಿದು, ಸಂಪೂರ್ಣಾನಂದವ
ಪಡೆಯಬೇಕಯ್ಯಾ,

ಭೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ!

೧೯೮

ಅಷ್ಟ ಮದಂಗಳ ಕೊರೆದು,
ಅಷ್ಟ ಭೋಗಂಗಳ ತೊರೆದು,
ಅಷ್ಟ ಸಿದ್ಧಿಗಳ ಮರೆದು,
ಅಷ್ಟ ಐಸಿರಿಗಳ ಜರೆದು,
ಅಷ್ಟಾವರಣಂಗಳ ಹೊಂದಿ
ಪೂಜಿಸುವುದೆ, ಅಷ್ಟವಿಧಾರ್ಚನೆ, ನೋಡಾ,

ಭೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ!

೧೯೯

ಭಕ್ತನಾದೊಡೆ ಭಯ-ಭಕ್ತಿ ತುಂಬಿರಬೇಕು;
ಭಕ್ತನಾದೊಡೆ ನಡೆ-ನುಡಿ ಶುದ್ಧವಾಗಿರಬೇಕು;
ಭಕ್ತನಾದೊಡೆ ತ್ರಿವಿಧ ಭಕ್ತಿಯನಾಂತಿರಬೇಕು:
ಭಕ್ತನಾದೊಡೆ ಸದಾಚಾರಸಂಪನ್ನನಾಗಿರಬೇಕು;
ಭಕ್ತನಾದೊಡೆ ಸದ್ವಿಚಾರ ಪರಿಪೂರ್ಣನಾಗಿರಬೇಕು:
ಭಕ್ತನಾದೊಡೆ ಗುರು-ಲಿಂಗ-ಜಂಗಮ ಪ್ರೇಮಿಯಾಗಿರಬೇಕು,
ಇಂತಪ್ಪ ಭಕ್ತನೆ ಸದ್ಭಕ್ತನು, ನೋಡಾ

ಭೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ!

೨೦೦

ಭಕ್ತಿಯಿಲ್ಲದ ಭಕ್ತನು
ಮಧುವಿಲ್ಲದ ಜೇಂಗೊಡದಂತೆ, ಕಾಣಯ್ಯಾ!
ಶಕ್ತಿಯಿಲ್ಲದ ಭಕ್ತನು
ಗೊಬ್ಬರವಿಲ್ಲದ ಹೊಲ ಗದ್ದೆಯಂತೆ, ಕಾಣಯ್ಯಾ!
ಮುಕ್ತಿಯ ಪಥ ಹಿಡಿಯದ ಭಕ್ತನು
ಬೆಳಕಿಲ್ಲದ ಮನೆಯಂತೆ, ಕಾಣಯ್ಯಾ!
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ!

೨೦೧

ಭವಿಯು ಭಕ್ತನಾಗುವ ಬಗೆಯೆಂತೆಂದೊಡೆ:
ಕಾಮ-ಕ್ರೋಧಂಗಳ ಗೆದ್ದಿರಬೇಕು;
ಮದ-ಮಾತ್ಸರ್ಯಂಗಳ ಮುರಿದಿಕ್ಕಬೇಕು;
ರಾಗ-ದ್ವೇಷಂಗಳ ವರ್ಜಿಸಬೇಕು ನೋಡಾ!
ಅಷ್ಟ ಮದಂಗಳ ಮೆಟ್ಟಿರಬೇಕು;
ಮಾಯಾದಿ ಮಲಂಗಳ ಬಿಟ್ಟಿರಬೇಕು;
ಅಹಂಕಾರಾದಿ ದುರ್ಗುಣಂಗಳ ಸುಟ್ಟಿರಬೇಕು, ನೋಡಾ
ಸದಾಚಾರ ಸದ್ವರ್ತನೆಯೇ
ಭಕ್ತನ ಜೀವನದ ಜೀವಾಳವಾಗಿರಬೇಕು!
ಇಂತಪ್ಪ ಭಕ್ತನಿಗೆ ಭವಬಂಧನವೆಲ್ಲಿಯದಯ್ಯಾ
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ!

೨೦೨

ಹೃದಯ-ಶುದ್ಧಿಯಿಲ್ಲದ ಭಕ್ತನವನೆಂತಹ ಭಕ್ತನಯ್ಯಾ?
ಭಾವ-ಶುದ್ಧಿಯಿಲ್ಲದ ಭಕ್ತನವನೆಂತಹ ಭಕ್ತನಯ್ಯಾ?
ಕುಹಕ-ಕುಭಾಷೆ ತೊರೆಯದ ಭಕ್ತನವನೆಂತಹ ಭಕ್ತನಯ್ಯಾ?

ಭೌತಿಕ ಸೌಖ್ಯವ ಮರೆಯದ ಭಕ್ತನವನೆಂತಹ ಭಕ್ತನಯ್ಯಾ?
ಭವರೋಗಕ್ಕೀಡಾಗಿ ಬಳಲುವ ಭಕ್ತನವನೆಂತಹ ಭಕ್ತನಯ್ಯಾ?
        ಭ್ರೂಲತಾ ಪುರೀಶ ಕರ್ತೃ
        ಜಗದ್ಗುರು ಗುರುಸಿದ್ಧೇಶ್ವರನ
ಕೃಪೆಯಿಲ್ಲದ ತೊಳಲುವ ಭಕ್ತನವನೆಂತಹ ಭಕ್ತನಯ್ಯಾ?

೨೦೩

ಭಕ್ತನಾದವನು ಗುರು-ಲಿಂಗ-ಜಂಗಮರಲ್ಲಿ
ಭೇದವನೆಣಿಸಬಾರದು, ನೋಡಾ!
ಭಕ್ತಿಯಲಿ ಹಿರಿ-ಕಿರಿಯದೆಂದು ಭೇದಿಸಿ
ಯುಕ್ತಿಯ ತೋರಬಾರದು, ನೋಡಾ!
ಭಕ್ತನಾದವಗೆ ಭಕ್ತಿಯೊಂದೆ ಜೀವಾಳವಯ್ಯಾ,
        ಭ್ರೂಲತಾ ಪುರೀಶ ಕರ್ತೃ
        ಜಗದ್ಗುರು ಗುರುಸಿದ್ಧೇಶ್ವರಾ!

೨೦೪

ಭಕ್ತಿಯುಳ್ಳ ಭಕ್ತನ ನಿವಾಸವೆ ಕೈಲಾಸವಯ್ಯಾ!
ಭಕ್ತಿಯುಳ್ಳ ಭಕ್ತನ ಶಿರವೆ ಹೊಂಗಳಸವಯ್ಯಾ!
ಭಕ್ತಿಯುಳ್ಳ ಭಕ್ತನ ಭಾವದಲ್ಲಿ ಕುಳಿತು,
        ಭ್ರೂಲತಾ ಪುರೀಶ ಕರ್ತೃ
        ಜಗದ್ಗುರು ಗುರುಸಿದ್ಧೇಶ್ವರನು ನಲಿದಾಡುತಿಹನಯ್ಯಾ!

೨೦೫

ಭಕ್ತರೆಮಗೆ ಪ್ರಾಣ-ಸ್ವರೂಪರು, ನೋಡಾ!
ಭಕ್ತರೆಮಗೆ, ಆತ್ಮ-ಬಂಧುಗಳು, ನೋಡಾ!
ಭಕ್ತರೆ ಸಮಾಜಾಭಿವೃದ್ಧಿಗೆ, ಆಧಾರ-ಸ್ತಂಭರು, ನೋಡಾ!
ಗುರು-ಶಿಷ್ಯರ ಸು-ರುಚಿರ ಬಾಂಧವ್ಯವೆ
ಮಧು-ರಸದಂತೆ ಸುಮಧುರವಾಗಿಪ್ಪುದು ನೋಡಾ!

ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ!

೨೦೬

ಮೋಹವಳಿದಾತನೆ ಮಾಹೇಶ್ವರನು, ನೋಡಾ!
ತನು-ಮನ-ದಾಹವ ಕಳೆದಾತನೆ ಮಾಹೇಶ್ವರನು, ನೋಡಾ!
ಸದ್‌ವಿಚಾರವನು ಸದಾಚಾರದಲ್ಲಿಳಿಸಿದಾತನೆ, ಮಾಹೇಶ್ವರನು, ನೋಡಾ!
ಶಿವ ಸೌಂದರ್ಯವನು ಸತ್ಯವನ್ನಾಗಿಸಿದಾತನೆ, ಮಾಹೇಶ್ವರನು ನೋಡಾ
ಸೋಹಮೆಂಬುದನರಿದು ಮಹಾ ಬೆಳಗ ಕಂಡಾತನೆ,
ಮಾಹೇಶ್ವರನು, ನೋಡಾ
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ!

೨೦೭

ಮಾಹೇಶ್ವರನಾದವನು
ಪರನಾರೀ ಸಹೋದರನಾಗಿರಬೇಕು!
ಮಾಹೇಶ್ವರನಾದವನು
ಪರದ್ರವ್ಯವನಪಹರಿಸದಿರಬೇಕು;
ಮಾಹೇಶ್ವರನಾದವನು
ಲಿಂಗ ನಿಷ್ಠೆಯನು ಬಲಿಸಿಕೊಂಡಿರಬೇಕು;
ನಡೆ ನುಡಿಯಲ್ಲಿ ಪರಿಶುದ್ಧನಾಗಿರದೆ,
ಮನಬಂದಂತೆ ತಿರುಗುವಾತನು
ಮಾಹೇಶ್ವರನಲ್ಲ ನೋಡಾ
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೨೦೮

ಹಿಡಿದಿರ್ದ ವ್ರತಂಗಳ ಬಿಡದಾತನೆ
ಮಾಹೇಶ್ವರನು, ನೋಡಾ!

ಕೆಡುತಿರ್ಪ ದೇಹವನು ನೆಚ್ಚದಾತನೆ
ಮಾಹೇಶ್ವರನು ನೋಡಾ!
ಸಕಲ ಪ್ರಾಣಿಗಳಲಿ ದಯೆ ತೋರಿ
ಶಿವ ಸುಖದಲ್ಲಿ ಮನವಿಟ್ಟಾತನೆ
ವೀರ ಮಾಹೇಶ್ವರನು, ನೋಡಾ
ಭೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ!

೨೦೯

ಸಂಸಾರ-ಸಾಗರದೊಳು ತಾನಪ್ಪಳಿಸಿ ಬರುತಿಪ
ವಿಷಯಂಗಳೆಂಬ ತರಂಗಗಳ ಹೊಡೆತಕ್ಕೆ
ಸಿಲುಕದಿಪ್ಪಾತನೆ ಮಾಹೇಶ್ವರನಯ್ಯಾ!
ಮಾಯೆಯೆಂಬ ಬಲೆಯೊಳಗೆ ಬೀಳದಿರುವಾತನೆ
ಮಾಹೇಶ್ವರನಯ್ಯಾ!
ಪಂಚ ಕ್ಲೇಶಂಗಳೆಂಬ ಪಂಜರದೊಳಗೆ
ಕೊಂಚವೂ ಹೋಗದಾತನೆ ಮಾಹೇಶ್ವರನಯ್ಯಾ
ಅಹಂಕಾರ-ಮಮಕಾರಂಗಳನಳಿದು
ಮದ-ಮಾತ್ಸರ್ಯಂಗಳಂ ತುಳಿದು
ಹೃದಯ ದ್ವಾರವಂ ತೆರೆದು
ಪ್ರಪಂಚಕ್ಕೆ ಸತ್ಯ ಸಂದೇಶವ ಬೀರಿ
ಜಡ-ಭಾವಂಗಳಂ ಹಾರಿಸಿ
ಮೃಡನಡಿಯ ತೋರಿಸಿ
ಚಿದ್‌ರಸಾನಂದದನುಭವವ ನೀಡುವ ವೀರ ಮಾಹೇಶ್ವರನ
ಮಹಾಗುಣವು ಸತ್ಯ ಸತ್ತ್ವವಾದುದು, ನೋಡಾ
ಭೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ!

೨೧೦

ಗುರುವಿಗರ್ಪಿಸದಿಹ ಪದಾರ್ಥವು
ಪ್ರಸಾದವೆಂತಾಗುವುದಯ್ಯಾ?

ಲಿಂಗಕ್ಕರ್ಪಿಸದಿಹ ಪದಾರ್ಥವು
ಪ್ರಸಾದವೆಂತಾಗುವುದಯ್ಯಾ!
ಜಂಗಮಕ್ಕರ್ಪಿಸದಿಹ ಪದಾರ್ಥವು
ಪ್ರಸಾದವೆಂತಾಗುವುದಯ್ಯಾ?
ತ್ರಿವಿಧ ಭಕ್ತಿಯೊಡನೆ ಗುರು-ಲಿಂಗ-ಜಂಗಮಕ್ಕೆ
ಪ್ರಸಾದವ ಸಮರ್ಪಿಸಿಕೊಂಡಾತನೆ
ಪ್ರಸಾದಿ, ನೋಡಾ

ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ!

೨೧೧

ಬಟ್ಟಲ ಬೆಳಗದೆ
ಒಳಗೆ ತಾ ತೊಳೆಯದೆ
ಎಡೆ-ಬಟ್ಟಲದೊಳಗೆ ಎಡೆಯ ನೀಡಿದೊಡೆ,
ಶುದ್ಧವಾಗುವದೆಂತಯ್ಯಾ?
ಹೃದಯದ ಬಟ್ಟಲವನು
ಸುಬುದ್ಧಿಯುದಕದಿಂದ
ತೊಳೆದು ಬೆಳಗಿಸಿ
ಲಿಂಗಕ್ಕರ್ಪಿಸಿ ಪದಾರ್ಥವ ಸೇವಿಸಿದೊಡೆ,
ಶುದ್ಧ ಪ್ರಸಾದವಾಗುವದಯ್ಯಾ

ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ!

೨೧೨

ಶುದ್ಧ-ಸಿದ್ಧ-ಪ್ರಸಿದ್ಧ ಪ್ರಸಾದಂಗಳ ಪರಿಯ ಕೇಳಿರೊ!
ಶುದ್ಧ ಪ್ರಸಾದಿಯಾದೊಡೆ
ಇಷ್ಟಲಿಂಗಕ್ಕೆ ರೂಪವನರ್ಪಿಸಬೇಕು;
ಸಿದ್ಧ ಪ್ರಸಾದಿಯಾದೊಡೆ
ಪ್ರಾಣಲಿಂಗಕ್ಕೆ ರುಚಿಯನರ್ಪಿಸಬೇಕು;

ಪ್ರಸಿದ್ಧ ಪ್ರಸಾದಿಯಾದೊಡೆ
ಭಾವಲಿಂಗಕ್ಕೆ ತೃಪ್ತಿಯನರ್ಪಿಸಬೇಕು,
ಇಂತೀ ತ್ರಿವಿಧ ಪ್ರಸಾದವನು
ತ್ರಿವಿಧ ಲಿಂಗಕ್ಕೆ ಸಮರ್ಪಿಸಿದ
ಶಿವಶರಣರು ನಿತ್ಯ ಮುಕ್ತರಾದರು, ನೋಡಾ
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ!

೨೧೩

ತುತ್ತಿಗೊಮ್ಮೆ ಶಿವ–ಧ್ಯಾನಗೈಯುತ್ತ
ಸೇವಿಸಿದ ಪ್ರಸಾದವು ಶಿವ ಪ್ರಸಾದವಾಗುವುದಲ್ಲದೆ,
ಮತ್ತೆ ಅನ್ನವೆಂದು ಬಗೆಯಬಹುದೇ?
ಅಕ್ಕಿ ಸಂಸ್ಕಾರದಿಂದನ್ನವಾದ ಮೇಲೆ
ಮತ್ತೆ ಅದು ಅಕ್ಕಿಯಾಗಬಲ್ಲುದೆ?
ನೀಡಿದ ಸಕಲ ಪದಾರ್ಥಂಗಳು
ಜಂಗಮನ ಹಸ್ತ–ಸ್ಪರ್ಶದಿಂದ
ಪರಿಶುದ್ಧವಾದ ಮೇಲೆ
ಮತ್ತೆ, ಆ ಪದಾರ್ಥವ ಶುದ್ಧವಪ್ಪುದೆ,
ಹೇಳಯ್ಯಾ
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ!

೨೧೪

ಪ್ರಸಾದದ ಮಹಿಮೆಯನರಿಯದೆ
ಕೈ ಬಾಯಿ ತೊಳೆಯದೆ
ಕಂಡ ಕಂಡಂತೆ ಉಂಡು, ತಿರುಗುತಿಪ್ಪವರ ಕಂಡು
ಮನ ನೊಂದಿತ್ತಯ್ಯಾ!
ಜಗತ್ಕಾಧಾರವಾಗಿರ್ಪ ಪ್ರಸಾದದನ್ನವನು
ಸಿಕ್ಕ–ಸಿಕ್ಕಲ್ಲಿ ಚಲ್ಲಿ

ಕರ್ಮದ ಕತ್ತಲೆಯಲ್ಲಿ ಬೀಳುತಿಪ್ಪವರ ಕಂಡು
ಮನ ಬೆಂದಿತ್ತಯ್ಯಾ!
ಪ್ರಸಾದಕ್ಕೆ ವಿಶ್ವಾಸವ ತೋರದೊಡೆ
ಮೂಜಗವೊಡೆಯನು ಮಳೆ ಬೆಳೆಯನೆಂತು
ನೀಡುವನಯ್ಯಾ?
ಪ್ರಸಾದದಿಂದ ಅರಿವು;
ಪ್ರಸಾದದಿಂದ ಕ್ರಿಯಾ-ಶುದ್ಧಿ;
ಪ್ರಸಾದದಿಂದ ತ್ರಿಕರಣ ಶುದ್ಧಿಯಾಗಿ
ಜನನ ಮರಣಂಗಳು ದೂರಾಗುತಿಪವಯ್ಯಾ,

ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ!

೨೧೫

ಆರೋಗ್ಯ ಸಂವರ್ಧನೆಗೆ ಪ್ರಸಾದವೆ ಮೂಲವಯ್ಯಾ!
ಕಾಯಕ ವೃದ್ಧಿಗೆ ಪ್ರಸಾದವೆ ಮೂಲವಯ್ಯಾ!
ಮಾಯಾ-ಮರ್ದನಕೆ ಪ್ರಸಾದವೆ ಮೂಲವಯ್ಯಾ!
ತನು ತ್ರಯ ತಾಪತ್ರಯಂಗಳ ಕಳೆದು,
ತನ್ನ ತಾನರಿದುಕೊಳ್ಳಲು
ಪ್ರಸಾದವೆ ಮೂಲವಯ್ಯಾ,

ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ!

೨೧೬

ಜಂಗಮನಿಂದನುಗ್ರಹವ ಪಡೆದು
ತೊಡೆಯ ಮೇಲೆ ತಟ್ಟೆಯನಿಟ್ಟು
ಪ್ರಸಾದವ ಸೇವಿಸಿದರೆ, ಪ್ರಸಾದಿಯಾಗುವನೇನಯ್ಯಾ?
ಇದು ಹೊರಗಣ ನೋಟವಲ್ಲದೆ, ಮತ್ತೇನುಂಟಯ್ಯಾ?
ಪ್ರಸಾದಿಯಾದೊಡೆ ಹೃದಯದ ತಟ್ಟೆಯಲಿಪ

ಕಲ್ಮಷವ ತೊಳೆದು
ತ್ರಿಮಲವ ತಿಕ್ಕಿ–ತಿಕ್ಕಿ ಒರಸುತ್ತ ಹೋದಂತೆ
ಆತ್ಮ ಶುದ್ಧಿಯಾಗಿ ಬೆಳಗು ಕಂಡು
ಅಚ್ಚ ಪ್ರಸಾದಿಯಾಗಿ ಮೆರೆಯುವನಯ್ಯಾ
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ!

೨೧೭

ಪ್ರಾಣಲಿಂಗಿಯಾದೊಡೆ
ಪ್ರಾಣವೆ ಲಿಂಗವಾಗಿರಬೇಕು
ಲಿಂಗವೆ ಪ್ರಾಣವಾಗಿರಬೇಕು,
ಸತ್‌ಚಿತ್ ಆನಂದದ ಪರಿಜ್ಞಾನ
ಪರಿಪೂರ್ಣವುಳ್ಳಾತನೆ
ಪ್ರಾಣಲಿಂಗಿ ನೋಡಾ
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೨೧೮

ಜೀವಭಾವವಳಿಯದೆ
ಅಂಗವೆಂತಾಗುವದೋ?
ನಿತ್ಯ ಅರ್ಚನೆಗೊಳ್ಳದೆ
ಲಿಂಗವೆಂತಾಗುವದೋ?
ಪ್ರಾಣಸ್ವರೂಪವೆನಿಸಿಕೊಳ್ಳದೆ
ಪ್ರಾಣಲಿಂಗವೆಂತಾಗುವದೋ
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ!

೨೧೯

ಪ್ರಾಣಲಿಂಗದ ಘನವನರಿತವರು
ಸ್ಥಾವರಲಿಂಗಗಳಿಗೆ ಮನವೆಳಸದಂತಿರಬೇಕು;
ಜ್ಞಾನಾಚಾರದಲ್ಲಿ ನಿರತರಾಗಿರಬೇಕು;
ಪ್ರಪಂಚ ಭ್ರಾಂತಿಯ ತೊರೆದಿರಬೇಕು;
ಅರುಹಿನ ರೂಹು ಅರಿದಿರಬೇಕು;
ನಿತ್ಯ ಲಿಂಗದಲ್ಲಿ ಚಿತ್ತವಡಗಿರಬೇಕು;
ಎರಡಳಿದು ಒಂದಾಗಿ ಸಾಮರಸ್ಯ ಪಡೆದಾತನೆ
ನಿಜ ಪ್ರಾಣಲಿಂಗಿ ನೋಡಾ
    ಭ್ರೂಲತಾ ಪುರೀಶ ಕರ್ತೃ
    ಜಗದ್ಗುರು ಗುರುಸಿದ್ಧೇಶ್ವರಾ.

೨೨೦

ಒಳ ಹೊರಗೆಂಬ ಸಂಶಯವನಳಿಯದೆ
ಅಹಂಕಾರ ತ್ರಯಂಗಳನು ಕಳೆಯದೆ
ದೇಹ ದೇಗುಲದೊಳಗೆ
ಭಾವಸಿಂಹಾಸನ ಮಾಡದೆ
ಪ್ರಾಣಲಿಂಗಾರ್ಚನಸ್ಥಲವನರಿಯದೆ
ಪೂಜಿಸುತ್ತಿರುವವರೆಂತು
ಪ್ರಾಣಲಿಂಗಿಗಳಾಗುವರಯ್ಯಾ?
    ಭ್ರೂಲತಾ ಪುರೀಶ ಕರ್ತೃ
    ಜಗದ್ಗುರು ಗುರುಸಿದ್ಧೇಶ್ವರಾ.

೨೨೧

ಕರಣೇಂದ್ರಿಯಂಗಳ ಗುಣ ಕಳೆದು
ಅಷ್ಟಮದಂಗಳನು ತುಳಿದು
ಸಪ್ತವ್ಯಸನಂಗಳನು ಅರೆದು
ಮರವೆಯೆಂಬ ಮಾಯೆಯನು ಮುರಿದು

ಬೇಕು ಬೇಡೆಂಬುದನಳಿದು
ಲೋಕದ ಹಂಗು ಹರಿದು
ಭವಬಾಧೆಯನತಿಗಳೆದು
ನಡೆ ನುಡಿಯೊಂದಾಗಿರುವ ಶರಣನು
    ನಮ್ಮ ಭ್ರೂಲತಾ ಪುರೀಶ ಕರ್ತೃ
    ಜಗದ್ಗುರು ಗುರುಸಿದ್ಧೇಶ್ವರನಲ್ಲಿ
ನಿಜ ಶರಣನು ನೋಡಾ.

೨೨೩

ಕಾಮಶರನ ಹೊಡೆತಕ್ಕೆ ಸಿಗುವಾತನಲ್ಲ ಶರಣನು,
ಹಿಡಿದ ನಿಯಮವ ಬಿಡುವಾತನಲ್ಲ ಶರಣನು,
ನಿಂದಕರ ನುಡಿಗೆ ಕುಂದುವವನಲ್ಲ ಶರಣನು,
ಸ್ತುತಿಯನ್ನಾಲಿಸಿ ಹಿಗ್ಗುವವನಲ್ಲ ಶರಣನು,
ಸಂದೇಹ ಸಂಮೋಹದಲ್ಲಿರುವವನಲ್ಲ ಶರಣನು,
ಶರಣಸತಿ ಲಿಂಗಪತಿಯೆಂದು
ಪೂಜಿಸುವ ಶರಣನಿಗೆ
ಭವಭಯವುಂಟೇನಯ್ಯಾ?
    ಭ್ರೂಲತಾ ಪುರೀಶ ಕರ್ತೃ
    ಜಗದ್ಗುರು ಗುರುಸಿದ್ಧೇಶ್ವರಾ.

೨೨೪

ಹಣೆಯಲ್ಲಿ ವಿಭೂತಿ
ಕರದಲ್ಲಿ ಜಪಮಾಲೆ
ಮನದಲ್ಲಿ ಭವಮಾಲೆ ಧರಿಸಿಕೊಂಡು
ತಿರುಗುತ್ತಿರುವವರಿಗೆ ಶರಣರೆನ್ನಬಹುದೆ?
ಅಲ್ಲಲ್ಲ—
ಕಾಮನ ಭಸ್ಮವಮಾಡಿ
ಷಡಕ್ಷರ ಮಂತ್ರವ ಜಪಿಸಿ

ಷಡ್ವಿಧ ಲಿಂಗವನರ್ಚಿಸಿ
ಭವಮಾಲೆಯ ಹರಿದು
ಭವಹರನ ಸಮರಸವನರಿದವರೆ
ನಿಚ್ಚ ಶರಣರು ನೋಡಾ
ಭೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೨೨೪

ಶರಣನು ನುಡಿದು ತಪ್ಪುವನಲ್ಲ
ಶರಣನು ನಡೆದು ತಪ್ಪುವನಲ್ಲ
ಶರಣನಾರ ಹಂಗಿನಲ್ಲಿರುವವನಲ್ಲ
ಶರಣನು ನಡೆ ನುಡಿಯಲ್ಲಿ ಪರಿಶುದ್ಧನಿದ್ದು
ಜಗದಾಟವ ಮರೆದು
ಬಹಿರಂಗದಾಡಂಬರಕ್ಕಾಶೆ ಮಾಡದೆ
ನಿಜ ಸುಖದಲ್ಲಿರ್ದು
ಆರೂಢನಾದ ಘನವ ನೋಡುವನಯ್ಯಾ
ಭೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೨೨೫

ಶರಣರಿದ್ದ ವಾಸವೆ ಕೈಲಾಸವಯ್ಯಾ
ಶರಣರಿದ್ದ ಕ್ಷೇತ್ರವೆ ಅವಿಮುಕ್ತ ಕ್ಷೇತ್ರವಯ್ಯಾ;
ಶರಣರಿರ್ದಲ್ಲಿಯೆ ಸಕಲ ತೀರ್ಥಂಗಳಯ್ಯಾ;
ಶರಣರ ದಾರಿಯೆ ಸನ್ಮಾರ್ಗಕಾಧಾರ ನೋಡಯ್ಯಾ;
ಶರಣರ ಸಹವಾಸವೆ ಭವಪಾಶನಾಶವಯ್ಯಾ;
ಶರಣರ ನೋಟವೆ ಜನುಮ ಪಾವನವಯ್ಯಾ
ಭೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ,

ಚಿನ್ನದಂತೆ ಪರಿಶುದ್ಧರಿರುವ
ಶರಣರ ಸಂಗವು
ಪರುಷಮುಟ್ಟಿದ ಲೋಹದಂತೆ ಕಾಣಯ್ಯಾ.

೨೨೬

ಭಾವೈಕ್ಯವೆಂದೊಡೆ
ನಿರ್ಮಲ ಜಲದಂತೆ ಪ್ರವಹಿಸುತ್ತಿರಬೇಕು;
ಭಾವೈಕ್ಯವೆಂದೊಡೆ
ಸಾಗರದಂತೆ ಪ್ರಶಾಂತವಾಗಿರಬೇಕು;
ಭಾವೈಕ್ಯವೆಂದೊಡೆ
ನೀರು ನೀರನು ಬೆರತಂತಿರಬೇಕು;
ಭಾವೈಕ್ಯವೆಂದೊಡೆ
ಹೂವಿನಲ್ಲಿ ಮಕರಂದ ಮರೆಯಾದಂತಿರಬೇಕು;
ಭಾವೈಕ್ಯವೆಂದೊಡೆ
ಕ್ಷೀರದಲಿ ಕ್ಷೀರ ಒಂದಾದಂತಿರಬೇಕು;
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೨೨೭

ತಾನೇ ತಾನಾದವಂಗೆ
ಸುಖದುಃಖಗಳ ಲೇಪವೆಲ್ಲಿಯದೋ?
ಹಿರಿಕಿರಿದು ಭೇದಂಗಳ ಪರಿಯೆಲ್ಲಿಯದೋ?
ಅಹಂಕಾರ ಮಮಕಾರಂಗಳ ಮೋಹವೆಲ್ಲಿಯದೋ?
ಅಂಗ ಗುಣಂಗಳನಳಿದು
ಲಿಂಗಭಾವವ ತಳೆದು
ನಿಃಕಳಂಕ ನಿರಂಜನನಾದ ಲಿಂಗೈಕ್ಯಂಗೆ
ಜನನ ಮರಣಂಗಳ ಬಾಧೆಯೆಲ್ಲಿಯದೋ?
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

೨೨೮

ಲಿಂಗೈಕ್ಯನು ನಿತ್ಯಮುಕ್ತನು ನೋಡಾ,
ಲಿಂಗೈಕ್ಯನು ಕರ್ಮವಿರಹಿತನು ನೋಡಾ,
ಲಿಂಗೈಕ್ಯನು ನಿರ್ವಿಕಾರನು ನೋಡಾ,
ಲಿಂಗೈಕ್ಯನು ಪರಿಪೂರ್ಣನು ನೋಡಾ,

ಭೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ,

ನಿಜಲಿಂಗೈಕ್ಯ ನಿರವನರಿಯುವದು
ಭವಭಾರಕರಿಗೆಂತು ಸಾಧ್ಯವಯ್ಯಾ?

೨೨೯

ಲಿಂಗಾಂಗ ಸಾಮರಸ್ಯವು
ಸುಮ್ಮನೆ ಕುಳಿತು ಲಿಂಗವ ಪೂಜಿಸಿದೊಡೆ
ಬರುವುದೇನಯ್ಯಾ?
ಭಾವಭ್ರಮೆಯಡಗದೆ
ಮಾಯೆ ಮೋಹವಳಿಯದೆ
ಸಾಕಾರವಿಲ್ಲದ ಬಯಲಿನೊಳು ಕೂಡುವೆನೆಂದೊಡೆ
ಆಗುವುದೇನಯ್ಯಾ?

ಭೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರನ

ಮಹಾ ಬಯಲೊಳಗೆ ಬಯಲಾಗಲು
ನಿರ್ಭಯು ಬೇಕಯ್ಯಾ!

೨೩೦

ಹೃನ್ಮಂದಿರ ಗೋಪುರದೊಳು
ಪ್ರಣವಾಕಾರದ ಘಂಟೆ
ಓಂಕಾರ ಸ್ವರದೊಡನೆ

ನಿನದಿಸುತ್ತಿಹುದು ಆಲಿಸಿರೊ;
ಒಂದು ನೂರೊಂದಾಗಿ
ನೂರೊಂದು ಒಂದಾಗಿ
ನಾದಮಯವಾಗಿ
ಕಿವಿಗಿಂಪಾಗಿಹುದು ಆಲಿಸಿರೊ;
ಶಿವಸಿದ್ಧಾಂತವು ಮೂಡಿ
ಮೂವತ್ತಾರು ತತ್ತ್ವವು ಕೂಡಿ
ಪಿಂಡಾಂಡ ಬ್ರಹ್ಮಾಂಡಗಳೆರಡು
ಸುಂದರ ಸಮನ್ವಯವಾಗಿ
ಒಳ ಹೊರಗು ಉಲಿಯಾಗಿ
ಮನಕಿಂಪಾಗಿ ಮೊಳಗುತಿಹುದು ಆಲಿಸಿರೊ!
ಓಂಕಾರ ಝೇಂಕಾರ
ಸುತ್ತೆಲ್ಲ ತುಂಬಿದಡೆ
ಸಮರಸ ಸವಿಸೊಗ ಸಾಧ್ಯವಯ್ಯಾ
ಭ್ಯೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

ಪಾರಿಭಾಷಿಕ ಶಬ್ದಗಳು

೧) **ತ್ರಿವಿಧ ಗುರು:** ೧. ದೀಕ್ಷಾಗುರು, ೨. ಶಿಕ್ಷಾಗುರು, ೩. ಮೋಕ್ಷಗುರು.

೨) **ತ್ರಿವಿಧ ದೀಕ್ಷೆ:** ೧. ಕ್ರಿಯಾದೀಕ್ಷೆ, ೨. ಮಂತ್ರದೀಕ್ಷೆ, ೩. ವೇದದೀಕ್ಷೆ.

೩) **ತ್ರಿವಿಧ ಮಲ:** ೧. ಕಾರ್ಮಿಕಮಲ, ೨. ಮಾಯಾಮಲ, ೩. ಆಣವಮಲ.

೪) **ತ್ರಿವಿಧ ಪ್ರಸಾದ:** ೧. ಶುದ್ಧಪ್ರಸಾದ, ೨. ಸಿದ್ಧಪ್ರಸಾದ, ೩. ಪ್ರಸಿದ್ಧಪ್ರಸಾದ.

೫) **ತ್ರಿವಿಧ ಪ್ರಸಾದಗಳು:** ೧. ಸಮಯಪ್ರಸಾದಿ, ೨. ನಿಚ್ಚಪ್ರಸಾದಿ, ೩. ಅಚ್ಚಪ್ರಸಾದಿ.

೬) **ತ್ರಿವಿಧಾರ್ಪಣ:** ೧. ಕಾಯಾರ್ಪಣ, ೨. ಕರಣಾರ್ಪಣ, ೩. ಭಾವಾರ್ಪಣ.

೭) **ತ್ರಿವಿಧ ತನು:** ೧. ಸ್ಥೂಲತನು, ೨. ಸೂಕ್ಷ್ಮತನು, ೩. ಕಾರಣತನು.

೮) **ಅಂಗತ್ರಯ:** ೧. ತ್ಯಾಗಾಂಗ, ೨. ಭೋಗಾಂಗ, ೩. ಯೋಗಾಂಗ.

೯) **ಭುವನತ್ರಯ:** ೧. ಸ್ವರ್ಗ, ೨. ಮರ್ತ್ಯ, ೩. ಪಾತಾಳ.

೧೦) **ಮೂರ್ತಿತ್ರಯ:** ೧. ಬ್ರಹ್ಮ, ೨. ವಿಷ್ಣು, ೩. ಮಹೇಶ್ವರ.

೧೧) **ಜೀವತ್ರಯ:** ೧. ವಿಶ್ವ, ೨. ತೈಜಸ, ೩. ಪ್ರಾಜ್ಞ.

೧೨) **ಈಷಣತ್ರಯ:** ೧. ದಾರೇಷಣ, ೨. ಪುತ್ರೇಷಣ, ೩. ವಿತ್ತೇಷಣ.

೧೩) **ಗುಣತ್ರಯ:** ೧. ಸತ್ವಗುಣ, ೨. ರಜೋಗುಣ, ೩. ತಮೋಗುಣ.

೧೪) **ಅಂತಃಕರಣಚತುಷ್ಟಯ:** ೧. ಮನ, ೨. ಬುದ್ಧಿ, ೩. ಚಿತ್ತ, ೪. ಅಹಂಕಾರ.

೧೫) **ಚತುರ್ವಿಧ ಅನುಭವ:** ೧. ಧ್ಯಾನ, ೨. ಮೌನ, ೩. ನಿತ್ಯ, ೪. ನೇಮ.

೧೬) **ಪಂಚವಿಧವಿಭೂತಿ:** ೧. ಭಸಿತ, ೨. ಭೂತಿ, ೩. ಭಸ್ಮ, ೪. ಕ್ಷಾರ, ೫. ರಕ್ಷೆ.

೧೭) **ಪಂಚಕರ್ಮೇಂದ್ರಿಯ:** ೧. ಪಾದ, ೨. ಪಾಣಿ, ೩. ಗುದ, ೪. ಗುಹ್ಯ, ೫. ವಾಕ್.

೧೮) **ಪಂಚಜ್ಞಾನೇಂದ್ರಿಯ:** ೧. ಮೂಗು, ೨. ನಾಲಿಗೆ, ೩. ಕಣ್ಣು, ೪. ತ್ವಚೆ, ೫. ಕಿವಿ.

೧೯) **ಪಂಚವಾಯುಗಳು:** ೧. ಪ್ರಾಣ, ೨. ಅಪಾನ, ೩. ಉದಾನ, ೪. ಸಮಾನ, ೫. ವ್ಯಾನ.

೨೦) **ಪಂಚವಿಷಯಗಳು:** ೧. ಗಂಧ, ೨. ರೂಪ, ೩. ರಸ, ೪. ಸ್ಪರ್ಶ, ೫. ಶಬ್ದ.

೨೧) **ಪಂಚಭೂತಗಳು:** ೧. ಪೃಥ್ವಿ, ೨. ಅಪ್ಪು, ೩. ತೇಜ, ೪. ವಾಯು, ೫. ಆಕಾಶ.

೨೨) **ಷಟ್‌ಸ್ಥಲಗಳು:** ೧. ಭಕ್ತ, ೨. ಮಹೇಶ, ೩. ಪ್ರಸಾದಿ, ೪. ಪ್ರಾಣಲಿಂಗಿ, ೫. ಶರಣ, ೬. ಐಕ್ಯ.

೨೩) **ಷಡ್ವಿಧಭಕ್ತಿ:** ೧. ಶ್ರದ್ಧಾ, ೨. ನಿಷ್ಠಾ, ೩. ಅವಧಾನ, ೪. ಅನುಭವ, ೫. ಆನಂದ, ೬. ಸಮರಸ.

೨೪) **ಅಷ್ಟಾವರಣ:** ೧. ಗುರು, ೨. ಲಿಂಗ, ೩. ಜಂಗಮ, ೪. ಪಾದೋದಕ, ೫. ಪ್ರಸಾದ, ೬. ವಿಭೂತಿ, ೭. ರುದ್ರಾಕ್ಷಿ, ೮. ಮಂತ್ರ.

೨೫) **ಅಷ್ಟವಿಧಾರ್ಚನೆ:** ೧. ಭಸ್ಮ, ೨. ಗಂಧ, ೩. ಅಕ್ಷತೆ, ೪. ಪತ್ರಿ, ೫. ಪುಷ್ಪ, ೬. ಧೂಪ, ೭. ದೀಪ, ೮. ನೈವೇದ್ಯ.

೨೬) **ಅಷ್ಟೈಶ್ವರ್ಯ:** ೧. ರಾಜ್ಯ, ೨. ಭಾಂಡಾರ, ೩. ಸೈನ್ಯ, ೪. ಆನೆ, ೫. ಕುದುರೆ, ೬. ಛತ್ರ, ೭. ಚಾಮರ, ೮. ಆಂದೋಲನ.

೨೭) **ಅಷ್ಟಸಿದ್ಧಿಗಳು:** ೧. ಅಣಿಮಾ, ೨. ಮಹಿಮಾ, ೩. ಗರಿಮಾ, ೪. ಲಘಿಮಾ, ೫. ಪ್ರಾಪ್ತಿ, ೬. ಪ್ರಾಕಾಮ್ಯ, ೭. ಈಶತ್ವ, ೮. ವಶಿತ್ವ.

೨೮) **ಅಷ್ಟಭೋಗಗಳು:** ೧. ಮನೆ, ೨. ಹಾಸಿಕ, ೩. ವಸ್ತ್ರ, ೪. ಆಭರಣ, ೫. ಸ್ತ್ರೀ, ೬. ಪುಷ್ಪ, ೭. ಗಂಧ, ೮. ತಾಂಬೂಲ.

೨೯) **ದಶವಿಧ ಪಾದೋದಕ:** ೧. ಗುರುಪಾದೋದಕ, ೨. ಲಿಂಗೋದಕ, ೩. ಜಂಗಮ ಪಾದೋದಕ, ೪. ಸ್ಪರ್ಶನೋದಕ, ೫. ಅವಧಾನೋದಕ, ೬. ಆಪ್ಯಾಯನೋದಕ, ೭. ಹಸ್ತೋದಕ, ೮. ಪರಿಣಾಮೋದಕ, ೯. ನಿರ್ನಾಮೋದಕ, ೧೦. ಸತ್ಯೋದಕ.

೩೦) **ಪಂಚವಿಂಶ–ತತ್ವ:** ೧. ಪಂಚ ಕರ್ಮೇಂದ್ರಿಯ, ೨. ಪಂಚ

ಜ್ಞಾನೇಂದ್ರಿಯ, ೩. ಪಂಚ ವಿಷಯಗಳು, ೪. ಪಂಚ ವಾಯುಗಳು, ೫. ಪಂಚ ಕರಣಂಗಳು=೨೫.

೩೧) **ಮೂವತ್ತಾರು ತತ್ತ್ವಗಳು**: ೧. ಶಿವ, ೨. ಶಕ್ತಿ, ೩. ಸದಾಶಿವ, ೪. ಈಶ್ವರ, ೫. ಶುದ್ಧ ವಿದ್ಯಾ, ೬. ಮಾಯಾ, ೭. ಕಲಾ, ೮. ವಿದ್ಯಾ, ೯. ರಾಗ, ೧೦. ಕಾಲ, ೧೧. ನಿಯತಿ, ೧೨. ಪುರುಷ, ೧೩. ಪ್ರಕೃತಿ, ೧೪. ಬುದ್ಧಿ, ೧೫. ಅಹಂಕಾರ, ೧೬. ಮನ, ೧೭. ಶ್ರೋತ್ರ, ೧೮. ತ್ವಕ್, ೧೯. ನೇತ್ರ, ೨೦. ಜಿಹ್ವಾ, ೨೧. ಘ್ರಾಣ, ೨೨. ವಾಕ್, ೨೩. ಪಾಣಿ, ೨೪. ಪಾದ, ೨೫. ಪಾಯು, ೨೬. ಉಪಸ್ಥ, ೨೭. ಶಬ್ದ, ೨೮. ಸ್ಪರ್ಶ, ೨೯. ರೂಪ, ೩೦. ರಸ, ೩೧. ಗಂಧ, ೩೨. ಆಕಾಶ, ೩೩. ವಾಯು, ೩೪. ಅಗ್ನಿ, ೩೫. ಜಲ, ೩೬. ಪೃಥ್ವಿ.

೩೨) **ಸಪ್ತ ವ್ಯಸನಗಳು**: ೧. ತನುವ್ಯಸನ, ೨. ಮನೋವ್ಯಸನ, ೩. ಕ್ರೋಧವ್ಯಸನ, ೪. ವಿಷಯ ವ್ಯಸನ, ೫. ಧನವ್ಯಸನ, ೬. ರಾಜ್ಯವ್ಯಸನ, ೭. ಸೇವಕ ವ್ಯಸನ.

೩೩) **ಅಷ್ಟ ಮದಗಳು**: ೧. ಕುಲಮದ, ೨. ಶೀಲಮದ, ೩. ಧನ ಮದ, ೪. ರೂಪಮದ, ೫. ಯೌವನಮದ, ೬. ವಿದ್ಯಾಮದ, ೭. ತಪೋಮದ, ೮. ರಾಜ್ಯಮದ.

೩೪) **ಷಡ್ವೈರಿಗಳು**: ೧. ಕಾಮ, ೨. ಕ್ರೋಧ, ೩. ಲೋಭ, ೪. ಮೋಹ, ೫. ಮದ, ೬. ಮತ್ಸರ.

೩೫) **ಪಂಚ ಕ್ಲೇಶಗಳು**: ೧. ಅವಿದ್ಯೆ, ೨. ಅಸ್ಮಿತ, ೩. ರಾಗ, ೪. ದ್ವೇಷ, ೫. ಅಭಿನಿವೇಶ.

೩೬) **ತಾಪತ್ರಯ**: ೧. ಆಧ್ಯಾತ್ಮಿಕ, ೨. ಆದಿಭೌತಿಕ, ೩. ಆದಿ ದೈವಿಕ.

೩೭) **ಪಂಚಾಚಾರಗಳು**: ೧. ಲಿಂಗಾಚಾರ, ೨. ಸದಾಚಾರ, ೩. ಶಿವಾಚಾರ, ೪. ಗಣಾಚಾರ, ೫. ಭೃತ್ಯಾಚಾರ.

೩೮) **ಕರಣತ್ರಯ**: ೧. ಮನಸ್ಸು, ೨. ವಚನ, ೩. ಕಾಯ.

೩೯) **ಷಡೂರ್ಮಿಗಳು**: ೧. ಜನ್ಮ, ೨. ಮರಣ, ೩. ಕ್ಷುಧಾ, ೪. ತೃಷಾ, ೫. ಹರ್ಷ, ೬. ಶೋಕ.

೪೦) **ಲಿಂಗತ್ರಯ**: ೧. ಇಷ್ಟಲಿಂಗ, ೨. ಪ್ರಾಣಲಿಂಗ, ೩. ಭಾವ ಲಿಂಗ.

೪೧) **ತ್ರಿವಿಧಕರ್ಮ**: ೧. ಸಂಚಿತಕರ್ಮ, ೨. ಆಗಾಮಿಕರ್ಮ, ೩. ಪ್ರಾರಬ್ಧಕರ್ಮ.

೪೨) **ಏಕೋತ್ತರ ಶತಸ್ಥಲ:** ೧. ಪಿಂಡಸ್ಥಲ, ೨. ಪಿಂಡಜ್ಞಾನ-ಸ್ಥಲ, ೩. ಸಂಸಾರ ಹೇಯಸ್ಥಲ, ೪. ಗುರುಕಾರುಣ್ಯಸ್ಥಲ, ೫. ಲಿಂಗಧಾರಣ ಸ್ಥಲ, ೬. ಭಸ್ಮಧಾರಣಸ್ಥಲ, ೭. ರುದ್ರಾಕ್ಷಿಧಾರಣ ಸ್ಥಲ, ೮. ಮಂತ್ರ ಜಪಸ್ಥಲ, ೯. ಭಕ್ತಮಾರ್ಗ ಕ್ರಿಯಾಸ್ಥಲ, ೧೦. ಉಭಯಸ್ಥಲ, ೧೧. ತ್ರಿವಿಧಸಂಪತ್ತಿಸ್ಥಲ, ೧೨. ಚತುರ್ವಿಧ ಸಾರಾಯ ಸ್ಥಲ, ೧೩. ಸೋಪಾಧಿ ದಾನ (ಉಪಾಧಿಮಾಟ) ಸ್ಥಲ, ೧೪. ನಿರುಪಾಧಿದಾನ (ನಿರುಪಾಧಿ ಮಾಟ) ಸ್ಥಿತಿ, ೧೫. ಸಹಜದಾನ (ಸಹಜಮಾಟ)ಸ್ಥಲ, ೧೬ ದೀಕ್ಷಾ ಗುರುಸ್ಥಲ, ೧೭. ಶಿಕ್ಷಾ ಗುರುಸ್ಥಲ, ೧೮. ಜ್ಞಾನ ಗುರುಸ್ಥಲ, ೧೯. ಕ್ರಿಯಾ ಲಿಂಗಸ್ಥಲ, ೨೦. ಭಾವಲಿಂಗಸ್ಥಲ, ೨೧. ಜ್ಞಾನಲಿಂಗಸ್ಥಲ, ೨೨. ಸ್ವಯ ಜಂಗಮ ಸ್ಥಲ, ೨೩. ಚರ ಜಂಗಮಸ್ಥಲ, ೨೪. ಪರ ಜಂಗಮ ಸ್ಥಲ, ೨೫. ಮಹೇಶ ಪ್ರಶಂಸಾ ಸ್ಥಲ, ೨೬. ಲಿಂಗ ನಿಷ್ಠಾ ಸ್ಥಲ, ೨೭. ಪೂರ್ವಾಶ್ರಯ ನಿರಸನ ಸ್ಥಲ, ೨೮. ಸರ್ವಾದ್ವೈತ ನಿರಸನ ಸ್ಥಲ, ೨೯. ಆಹ್ವಾನ ವಿಸರ್ಜನ ನಿರಸನ ಸ್ಥಲ, ೩೦. ಅಷ್ಟಮೂರ್ತಿ ನಿರಸನ ಸ್ಥಲ, ೩೧. ಸರ್ವ ತತ್ವ ನಿರಸನ ಸ್ಥಲ, ೩೨. ಶಿವ ಜಗನ್ಮಯ ಸ್ಥಲ, ೩೩. ಭಕ್ತ ದೇಹಿಕ ಲಿಂಗ ಸ್ಥಲ, ೩೪. ಕ್ರಿಯಾಗಮ ಸ್ಥಲ, ೩೫. ಭಾವಾಗಮ ಸ್ಥಲ, ೩೬. ಜ್ಞಾನಾಗಮ ಸ್ಥಲ, ೩೭. ಸಕಾಯ ಸ್ಥಲ, ೩೮. ಅಕಾಯ ಸ್ಥಲ, ೩೯. ಪರಕಾಯ ಸ್ಥಲ, ೪೦. ಧರ್ಮಾಚಾರ ಸ್ಥಲ, ೪೧. ಭಾವಾಚಾರ ಸ್ಥಲ, ೪೨. ಜ್ಞಾನಾಚಾರ ಸ್ಥಲ, ೪೩. ಪ್ರಸಾದ ಸ್ಥಲ, ೪೪. ಗುರುಮಹಾತ್ಮ್ಯ ಸ್ಥಲ, ೪೫. ಲಿಂಗಮಹಾತ್ಮ್ಯ ಸ್ಥಲ, ೪೬. ಜಂಗಮ ಮಹಾತ್ಮ್ಯ ಸ್ಥಲ, ೪೭. ಭಕ್ತ ಮಹಾತ್ಮ್ಯ ಸ್ಥಲ, ೪೮. ಶರಣ ಮಹಾತ್ಮ್ಯ ಸ್ಥಲ, ೪೯. ಪ್ರಸಾದ ಮಹಾತ್ಮ್ಯ ಸ್ಥಲ, ೫೦. ಕಾಯಾನುಗ್ರಹ ಸ್ಥಲ, ೫೧. ಇಂದ್ರಿಯಾನುಗ್ರಹ ಸ್ಥಲ, ೫೨. ಪ್ರಾಣಾನುಗ್ರಹ ಸ್ಥಲ, ೫೩. ಕಾಯಾರ್ಪಣ ಸ್ಥಲ, ೫೪. ಕರಣಾರ್ಪಣ ಸ್ಥಲ, ೫೫. ಭಾವಾರ್ಪಣ ಸ್ಥಲ, ೫೬. ಶಿಷ್ಯ ಸ್ಥಲ, ೫೭. ಶುಶ್ರೂಷಾಸ್ಥಲ, ೫೮. ಸೇವ್ಯ ಸ್ಥಲ, ೫೯. ಪ್ರಾಣಲಿಂಗಿ ಸ್ಥಲ, ೬೦. ಪ್ರಾಣಲಿಂಗಾರ್ಚನಾ ಸ್ಥಲ, ೬೧. ಶಿವಯೋಗ ಸಮಾಧಿ ಸ್ಥಲ, ೬೨. ಲಿಂಗನಿಜಸ್ಥಲ, ೬೩. ಅಂಗ ಲಿಂಗಸ್ಥಲ, ೬೪. ಆತ್ಮಸ್ಥಲ, ೬೫. ಅಂತರಾತ್ಮ ಸ್ಥಲ, ೬೬. ಪರಮಾತ್ಮ ಸ್ಥಲ, ೬೭. ನಿರ್ದೇಹಾಗಮ ಸ್ಥಲ, ೬೮. ನಿರ್ಭಾವಾಗಮ ಸ್ಥಲ, ೬೯. ನಷ್ಟಾಗಮಸ್ಥಲ, ೭೦. ಆದಿ ಪ್ರಸಾದಿ ಸ್ಥಲ, ೭೧. ಅಂತ್ಯ ಪ್ರಸಾದಿ ಸ್ಥಲ, ೭೨. ಸೇವ್ಯ ಪ್ರಸಾದಿ ಸ್ಥಲ, ೭೩. ಶರಣಸ್ಥಲ, ೭೪. ತಾಮಸ ನಿರಸನಸ್ಥಲ, ೭೫. ನಿರ್ದೇಶಸ್ಥಲ, ೭೬. ಶೀಲ ಸಂಪಾದನ ಸ್ಥಲ, ೭೭. ದೀಕ್ಷಾಪಾದೋದಕ ಸ್ಥಲ, ೭೮. ಶಿಕ್ಷಾ ಪಾದೋದಕ ಸ್ಥಲ, ೭೯. ಜ್ಞಾನಪಾದೋದಕ ಸ್ಥಲ, ೮೦. ಕ್ರಿಯಾ ನಿಷ್ಪತ್ತಿಸ್ಥಲ, ೮೧. ಭಾವ ನಿಷ್ಪತ್ತಿಸ್ಥಲ, ೮೨. ಜ್ಞಾನ ನಿಷ್ಪತ್ತಿಸ್ಥಲ, ೮೩. ಪಿಂಡಾಕಾಶ ಸ್ಥಲ,

೮೪. ಬಿಂದ್ವಾಕಾಶಸ್ಥಲ, ೮೫. ಮಹಾಕಾಶಸ್ಥಲ, ೮೬. ಕ್ರಿಯಾಪ್ರಕಾಶಸ್ಥಲ, ೮೭. ಭಾವ ಪ್ರಕಾಶಸ್ಥಲ, ೮೮. ಜ್ಞಾನಪ್ರಕಾಶ ಸ್ಥಲ, ೮೯. ಐಕ್ಯಸ್ಥಲ, ೯೦. ಆಚಾರ ಸಂಪತ್ತಿಸ್ಥಲ, ೯೧. ಏಕ ಭಾಜನ ಸ್ಥಲ, ೯೨. ಸಹಭಾಜನಸ್ಥಲ, ೯೩. ಸ್ವೀಕೃತಿ ಪ್ರಸಾದ ಸ್ಥಲ, ೯೪. ಶಿಷ್ಟಾದನಸ್ಥಲ, ೯೫. ಚರಾಚರಲಯಸ್ಥಲ ೯೬. ಭಾಂಡ ಸ್ಥಲ, ೯೭. ಭಾಜನಸ್ಥಲ, ೯೮. ಅಂಗಾಲೇಪನ ಸ್ಥಲ, ೯೯. ಸ್ವಪರಾಜ್ಞಸ್ಥಲ, ೧೦೦. ಭಾವಾಭಾವ ಲಯ ಸ್ಥಲ, ೧೦೧. ಜ್ಞಾನ ಶೂನ್ಯಸ್ಥಲ.

ವಚನಗಳ ಅಕಾರಾದಿ

ಅಗಳಿನಿಂದ ಅನ್ನದ ಪರೀಕ್ಷೆ,	೯೮
ಅತ್ತಿತ್ತ ಪರಿದಾಡುತಿಹುದು ನೋಡಾ ಈ ಮನ!	೪೬
ಅರ್ಥವಿಲ್ಲದ ಮಾತು, ಬಿತ್ತಲಾರದ ಭೂಮಿ	೬೫
ಅಧ್ಯಯನ, ಅಧ್ಯಾಪನ, ಅಭ್ಯಾಸಂಗಳಲಿ, ಒಂದ ಬಿಟ್ಟು	೧೬೩
ಅನುಭವವಿಲ್ಲದ ಭಾಷೆ, ಜ್ಞಾನಂಗಳು	೧೬೧
ಅನ್ನವ ನೀಡುವವನು ಧರ್ಮಸ್ಥಳದಲಿ ನೋಡಿ	೧೬೬
ಹೃದಯ-ಹೃದಯ ಕೂಡಲು	೧೭೬
ಅರಿವು ಆಚಾರಕ್ಕಿಳಿದರೆ	೧೪೫
ಅಷ್ಟ ಮದಂಗಳ ಕೊರೆದು	೧೯೮
ಅಂತರಂಗದಿರವನರಿಯದೆ	೨೮
ಆತ್ಮ ಶುದ್ಧಿಯಿಲ್ಲದ ಭಾವೈಕ್ಯವು	೧೪೦
ಆಧ್ಯಾತ್ಮವಿಲ್ಲದ ಸಾಹಿತ್ಯ	೬೦
ಆರಂತಸ್ತಿನ ಮಹಾದ್ವಾರವ ಕಟ್ಟಿಸಿದನೆಂದು	೪೭
ಆರನೆಯ ಮೆಟ್ಟಿಲವ ಮುಟ್ಟಲು	೧೫೬
"ಆರೇನಾದರೂ ಓರಂತಿಪ್ಪುದೇ ಸಮತೆ"ಯೆಂಬುದಾಗಿ	೧೫೭
ಆರೋಗ್ಯ-ಸಂವರ್ಧನೆಗೆ	೨೦೫
ಇದ್ದು ಇಲ್ಲದಂತೆ ಇರಬೇಕು ನೋಡಾ, ಈ ಪ್ರಪಂಚದೊಳಗೆ!	೫೧
ಈ ಜೀವನ ಯಾತ್ರೆಯಲಿ ನೊಂದು	೩೩
ಈ ಜೀವನವೆಂಬುದು ಮಹಾ ಸಾಗರವಯ್ಯಾ!	೩೪
ಒಳಗೊಂದು ಹೊರಗೊಂದು ನೀತಿ-ರೀತಿಯಾದೊಡೆ	೧೩೫
ಒಳಿತು ಕೆಡಕಿನ ಅರಿವಿದ್ದರೇನು?	೨೭
ಓಡುವ ಮನಸಿಗೆ ಬೇಡಿಯ ಹಾಕದಿರೆ,	೨೬
ಕರಣಿಕರೆಂಬುವರು ಪ್ರಾಮಾಣಿಕರಿರಬೇಕು,	೬೩
ಕರೆವರು ಕೆಲವರು ನಿನ್ನನು ಹುಚ್ಚನೆಂದು	೨
ಕವಿತಾ-ಶಕ್ತಿಗೆ ಕಲ್ಪನೆಯೊಂದೆ ಸಾಲದು,	೬೫
ಕಾಡುವವರು ಕಾಡಲಿ	೪೨
ಕಾಮಾದಿಗಳ ಜಯಿಸಿದ ಮಹಾ ವೀರ	೪೨೬
ಕಾಯದಲ್ಲಿ ಮಾಯೆಯ ತುಂಬಿ	೯೦

ವಿಶ್ವಪ್ರಭೆ ೭೬೭

ಕಾರ್ಯವ ನೋಡಿ, ವರುಷ ಪಡಬೇಕಲ್ಲದೆ, ೩೯
ಕೂಡಿದರೆ ಕೂಡಬೇಕು ೧೩೮
ಭೂಮಿಯಿದೆ ನೀರಿಲ್ಲ; ನೀರಿದೆ ಭೂಮಿ ಇಲ್ಲ! ೧೬೪
ಕೆರೆಯ ದಂಡೆಯಲಿರುವ ಕರಡು ಕಲ್ಲು ೩೫
ಕೇರಿ ಶುಚಿಯಾಗಿರಲು ಕಿರಿ–ಸಿಕರವಿರಬೇಕಯ್ಯಾ! ೪೪
ಕೋಟಿ ಲಿಂಗವ ಸ್ಥಾಪಿಸಿ ಕೋಟಲೆಗೊಳ್ಳಲೇಕೆ? ೧೧೧
ಕೋಪವೆಂಬುದು ಪಾಪದ ನೆಲೆಗಟ್ಟು, ೫೫
ಗುರುಗಳಾದವರು ದೀಕ್ಷೆಯೊಂದನ್ನೆ ಮಾಡಬೇಕಲ್ಲದೆ, ೧೧೦
ಗುರುನಿಂದೆ–ಜಂಗಮನಿಂದೆಗಳ ಕೇಳಿಸದಿರಯ್ಯಾ! ೧೧೭
ಗುರು ಮುಟ್ಟಿ ನೀಡಿದ ಪ್ರಸಾದವು ೧೮೭
ಗುರುವನ್ನು ನರನೆಂದು ಭಾವಿಸಿದರೆ ೧೭೧
ಗುರುವಾದವನು ದುರಹಂಕಾರ ದುರ್ಮತವ ದೂರೀಕರಿಸಬೇಕು. ೧೭೪
ಗುರುಗರ್ಪಿಸದಿಹ ಪದಾರ್ಥವು ೨೧೦
ಗುರು–ವಿರಕ್ತರೆಂಬುವರು ಸಮಾಜ–ಪುರುಷಂಗೆ ಕಣ್ಣೆರಡು ೭೭
ಗುರುವು ಭವಾರಣ್ಯದೊಳಿರ್ದೊಡೆ ೧೦೯
ಗುರುವು ಅಜ್ಞಾನ ತಿಮಿರವ ತೊಲಗಿಸುತಿಹ ಚಿತ್‌ಸೂರ್ಯ ೧೭೦
ಗೋಪುರವ ಕಟ್ಟಿಸಿದೆನೆಂದು ೩೦
ಗೋಮಯದಿಂದ ಮಾಡಿದ ಭಸ್ಮವ ೧೮೯
ಭಸ್ಮವಿಲ್ಲದ ಹಣೆಯು ೧೯೦
ಚಿಂತನವಿಲ್ಲದ ಅಧ್ಯಯನ ೭೪
ಜಂಗಮನ ಪಾದೋದಕವು ೧೮೪
ಜಂಗಮನ ಶಕ್ತಿಯನರಿಯದೆ ೧೮೬
ಜಂಗಮನಾದವನು ಜಗದ ಜಂಜಡವನಳಿದಿರಬೇಕು. ೧೮೩
ಜಂಗಮನಿಂದನುಗ್ರಹವ ಪಡೆದು ೨೧೭
ಜಂಗಮನು ಜಗದ್‌ಭರಿತನೆಂಬುದು ನಿಜ, ೧೮೧
ಜನಿಸಿದೆನಯ್ಯಾ ನಾನು ಹಾನುಗಲ್ ಕುಮಾರೇಶನ ೯
ಜಪಂಗಳಲಿ ಮಾನಸಿಕ ಜಪವೆ ಮಿಗಿಲು ೧೯೭
ಜಾತಿಗಾರರಂತೆ ವೇಷವ ಹಾಕಿ ೧೫೭
ಜೀವನ–ವ್ಯೋಮದಲಿ ೧೭
ಜ್ಞಾನವಿಡಿದು ನಡೆವುದೆ ಕ್ರಿಯಾ–ಯೋಗವಯ್ಯಾ! ೧೨೮
ತತ್ತ್ವವು ಮಾತಿನಲಿ ತುಂಬಿದ್ದರೇನು, ೭೨

ತನುವೆಂಬ ತೋಟದಲಿ "ಚಿತ್‌ಸುಮನ" ೧೦
ತನುವೆಂಬ ತೋಟದಲಿ "ಸದ್‌ಗುಣ"ವೆಂಬ ಬೀಜ ೬೯
ತನ್ನ ಸತಿಯ ಬಿಟ್ಟು, ಪರಸತಿಯ ಬಯಸಿದೊಡೆ, ೧೬೭
ತನ್ನ ಸತ್‌ಸ್ವರೂಪವ ತೋರುವನಯ್ಯಾ, ಶ್ರೀಗುರುವು! ೧೬೩
ತಪ್ಪುವುದು ಪ್ರಕೃತಿಯ ಸಹಜ ಗುಣ; ೧೧೪
ತಲೆಗೊಂದು ಪಕ್ಷವ ಕಟ್ಟಿ ೧೫೭
ತಾನಾರೆಂಬುದನರಿಯದೆ, ೧೨೦
ತಾಪತ್ರಯದೊಳು ಬಳಲಿ ಬೆಂದಿಹೆನಯ್ಯಾ! ೧೭
ತಿಳಿದವರು ತಿಳಿಯದವರನು ತಿಳಿಯದಂತೆ ೧೧೫
ತುತ್ತಿಗೊಮ್ಮೆ ಶಿವ-ಧ್ಯಾನಗೈಯ್ಯುತ್ತ ೨೧೬
ತೆಗಳಿ-ತೆಗಳಿ ಬಾಯಿ ಕೆಡಿಸಿಕೊಂಡು. ೪೩
ತ್ರಿದಳವಲ್ಲದ ಪತ್ರಿ, ೧೫೧
ತ್ಯಾಗಂಗಳಲಿ ಸ್ವಾರ್ಥ-ತ್ಯಾಗವೆ ಹೆಚ್ಚಿನದು, ಕಾಣಾ! ೧೨೭
ದಯೆಯಿಲ್ಲದ ಧರ್ಮ, ಕ್ರಿಯೆಯಿರದ ಜ್ಞಾನ ೧೦೧
ದಿನಕೊಂದು ಸಂಪ್ರದಾಯವ ಸೇರುತಿಹರು, ನೋಡಾ! ೫೮
ದೀಪಾವಳಿಯ ಸಂಭ್ರಮವ-ನೋಡ ಬನ್ನಿರಯ್ಯಾ! ೧೪೯
ದೂಷಿಸುವವರು ದೂಷಿಸಲಿ! ೪೦
ದೊಡ್ಡ ಮೀನು ಸಣ್ಣ ಮೀನವ ನುಂಗುವಂತೆ! ೧೫೮
ಧರ್ಮ-ಗುರುಗಳೆಲ್ಲರು ರಾಜಕಾರಣವ ಸೇರಿದರೆ, ೧೫೦
ಧರ್ಮರಕ್ಷಣೆಯು ಶಾಲೆ-ಕಾಲೇಜುಗಳಿಂದಾಗದೆಂದು ೧೬೩
ನಮ್ಮ ವಿಜಯ ಮಹಾಂತೇಶನು ೬
ನಾನೆಂಬುದು ಕಾಯ-ಗುಣ, ೨೯
ನಾ ಹೆಚ್ಚು, ನೀ ಹೆಚ್ಚು ೬೮
ನಿಜಸುಖವೆಂಬುದು ಕನಸಿನ ಗಂಟಾಗಿಹುದಯ್ಯಾ! ೨೪
ನಿನ್ನ ಮರೆತವರು ಮರುಳಾಗುವರಯ್ಯಾ! ೧೩೬
ನೀನಿರುವೆ ಜಗದ್ಗುರು ಸಾರ್ವಭೌಮ! ೧
ನುಡಿಗಲಿಸಿದ ನಮ್ಮ ಕುಮಾರ! ೮
ನುಡಿಯುವುದು ಸರಳ, ನಡೆಯುವುದು ಕಡುಕಷ್ಟ ೬೯
ನ್ಯಾಯವ ನೀಡುವ ನ್ಯಾಯಾಧೀಶನು, ೧೫೫
ನ್ಯಾಯಾಲಯಂಗಳು ಸತ್ಯಕ್ಕೆ ಜಯ ನೀಡುವಂತಿರಬೇಕು! ೧೫೧
ಪಂಚಾಕ್ಷರಕ್ಕೆ ಮೊದಲು ಪ್ರಣವ ಕೂಡಿದರೆ ಷಡಕ್ಷರ ೧೯೫

ಪಂಜರದ ಗಿಳಿಯು ವನಾಂತರವ ನೆನೆವಂತೆ, ೨೮
ಪತಿತರನು ಪೊರೆಯುವುದೆ ಪರಮ ಧರ್ಮವಯ್ಯಾ! ೧೦೦
ಪ್ರಪಂಚವೆಂಬುದೊಂದು ಬೀಸುವ ಕಲ್ಲು! ೧೬೮
ಪ್ರವಚನ–ಶ್ರವಣವು ಮೋಹಾಂಧಕಾರಕೆ ಜ್ಯೋತಿ ೬೪
ಪ್ರಸಾದದ ಮಹಿಮೆಯನರಿಯದೆ, ೨೧೪
ಬಗೆಯ ಹೂ–ಬಳ್ಳಿಯೊಳು ೧೧
ಬಟ್ಟಲ ಬೆಳಗವೆ, ಒಳಗೊಳಗೆ ತೋಳೆಯುವೆ, ೨೧೧
ಬಸವಾ, ನಿನ್ನ ದಯದಿಂದ ವೀರಶೈವ ಧರ್ಮವು ೪
ಬಳ್ಳಿಯಿಂದ ಹೂ ಹುಟ್ಟಿ, ಹೊಗರೇರಿ, ೧೪೨
ಬಹಿರ್ಮುಖದರಿವೆ, ಅಂತರ್ಮುಖದ ಕುರುಹು, ನೋಡಾ! ೧೪೨
ಬಿಡುವಿಲ್ಲದಿಹ ಜೀವನದೊಳು ೪೯
ಬುದ್ಧಿ ಬೆಳೆದಂತೆ ಹೃದಯವರಳಬೇಕು, ನೋಡಾ! ೬೦
ಬೆಂಕಿಯ ಮೇಲೆ ತುಸು ತುಪ್ಪವ ಹಾಕಿದರೆ, ೧೦೪
ಬೇಕೆಂದಾಗ ಮೇಲೆತ್ತುವುದು ೧೬೦
ಭಕ್ತನಾದವನು ಗುರು ಲಿಂಗ–ಜಂಗಮರಲ್ಲಿ ೨೦೩
ಭಕ್ತನಾದೊಡೆ ಭಯ–ಭಕ್ತಿ ತುಂಬಿರಬೇಕು! ೧೯೯
ಭಕ್ತನಿಗೆ ಪಂಚಾಕ್ಷರ ಮಂತ್ರವೆ ಪಂಚಪ್ರಾಣ ೧೯೪
ಭಕ್ತರೆಮಗೆ ಪ್ರಾಣಸ್ವರೂಪರು, ನೋಡಾ! ೨೦೫
ಭಕ್ತಿಯಿಲ್ಲದ ಭಕ್ತನು ಮಧುವಿಲ್ಲದ ಜೇಂಗೊಡದಂತೆ, ೨೦೦
ಭಕ್ತಿಯುಳ್ಳ ಭಕ್ತನ ನಿವಾಸವು ಕೈಲಾಸವಯ್ಯಾ! ೨೦೪
ಭಕ್ತಿಯೆಂಬ ಪತ್ರಿಯ ಧರಿಸಿ, ೧೯೭
ಭಯ–ಭಕ್ತಿಯಿಂದೊಡಗೂಡಿ ೧೮೫
ಭವಿಯು ಭಕ್ತನಾಗುವ ಬಗೆಯೆಂತೆಂದೊಡೆ: ೨೧೧
ಭಸ್ಮಧಾರಣದಿಂದ ಗುಣತ್ರಯಂಗಳ ಪರಿಹಾರವಯ್ಯಾ! ೧೮೮
ಭಾವಕ್ಕೆ ಭಾಷೆಯ ಹೊದಿಕೆ, ೧೦೩
ಭಿಕ್ಷೆಯನು ಬೇಡಿದರೆ ಕೊಡಲೊಲ್ಲರು, ನೋಡಾ! ೫೨
ಭೃತ್ಯರಾದವರು ಇಂತಿರಬೇಕು: ೭೯
ಮನದ ಮೈಲಿಗೆಯ ಕಳೆಯಲು ೧೭೬
ಮನವ ಕಟ್ಟದೆ, ಮಠವ ಕಟ್ಟುವುದೆಂತು? ೭೭
ಮಂಜು ತುಂಬಿದ ಮುಂಜಾವದಂತೆ ೬೨

ಮಂಜುನಾಥನಾದ ನೀನು ೧೬೫
ಮಳೆ-ಮಳೆಯೆಂದು ಜನ ಬಳಲುತಿಹರು, ನೋಡಾ! ೫೦
ಮಾಡುವ ಕೃತಿಯಲ್ಲಿ ನಿಃಸ್ವಾರ್ಥವಿದ್ದರೆ, ೧೨೧
ಮಾಡುವ ಕೃತಿಯು ಮೃಡನೊಲಿಯುವಂತಿರಬೇಕು. ೧೦೮
ಮಾತಿನ ಚಪಲತೆಗೆ ಮೆಚ್ಚಿ, ೨೩
ಮಾತಿನಲಿ ಸಿಹಿ ತುಂಬಿ, ಎದೆಯೊಳಗೆ ಕಹಿ ತುಂಬಿ ೭೩
ಮಾತಿನಿಂದ ಪ್ರೀತಿ, ಭೀತಿ; ೧೦೭
ಮಾತಿನೊಳು ಮಾಧುರ್ಯ, ೮೭
ಮಾತಿನಂತೆ ಮನವಿಲ್ಲದ ಮನುಜರ ಕಂಡು ೧೩೪
ಮಾತು ಕೆಡಿಸಿತ್ತು ಬಂಧು–ಪ್ರೇಮವನು, ೯೭
ಮಾತು ಮತಿಯು ಕೆಡಿಸಿತ್ತು; ೧೦೫
"ಮಾತೆಂಬುದು ಜ್ಯೋತಿರ್ಲಿಂಗ"ವಯ್ಯಾ, ಅದೆಂತೆಂದೊಡೆ: ೯೬
ಮಾತೆಲ್ಲ ಮುತ್ತು; ಮನವೆಲ್ಲ ಕತ್ತಲು. ೧೪೮
ಮಾನವ–ಕೋಟಿಗೆ ನೀನೆ ಕಲ್ಪತರು ನೋಡಾ! ೩
ಮಾನವತೆಯಿಲ್ಲದ ಬ್ರಹ್ಮಚರ್ಯವು ೯೫
ಮಾಹೇಶ್ವರನಾದವನು ಪರನಾರೀ ಸಹೋದರನಾಗಿರಬೇಕು. ೨೦೭
ಮೂರು ಲೋಕಂಗಳಲಿ ೧೫೪
ಮೆರೆಯುವುದು ಮರೆದು ೧೦೨
ಮೇಲು–ಕೀಳೆಂಬ ಬೇಲಿಯು ತೆಗೆದು. ೧೩೭
ಮೋಹದ ಕಾಳ್ಗಿಚ್ಚಿನಲಿ ಬಿದ್ದು, ೧೩
ಮೋಹದ ಪಂಜರದೊಳಗೆ ಸಿಲುಕಿ, ೧೯
ಮೋಹದಿಂದ ಮರೆವು ಆವರಿಸಿ, ೩೨
ಮೋಹವಳಿದಾತನೆ ಮಾಹೇಶ್ವರನು ನೋಡಾ! ೨೦೬
ಮೋಹವು ಧೃತಿಗೆಡಿಸುತಿಹುದಯ್ಯಾ! ೧೪
ಮೋಹವು ಮಾನವನ ಮರುಳುಗೊಳಿಸುತಿಹುದಯ್ಯಾ! ೧೪೩
ಮೌನವು ಬುದ್ಧಿ-ಶ್ರೀಯ ಹೆಚ್ಚಿಸುವುದಯ್ಯಾ! ೧೪೪
ಯೋಚನೆ ಬುದ್ಧಿಯ ಕೆಲಸವಾದರೆ, ೧೪೬
ರುದ್ರನ ಜ್ಞಾನ ನೇತ್ರದಿಂದುದಯಿಸಿದ ರುದ್ರಾಕ್ಷವನು ೧೯೦
ರುದ್ರಾಕ್ಷ ಮಾಲೆಯ ಧರಿಸಿದೊಡೆ, ೧೯೩
ರುದ್ರಾಕ್ಷ ಸ್ಪರ್ಶದಿಂದ ಪಾಪ ಪಲ್ಲಟಗೊಳ್ಳುವುದಯ್ಯಾ! ೧೯೨
ಲಿಂಗವ ಧರಿಸದೆ, ಲಿಂಗ–ತತ್ತ್ವವ ತಿಳಿಸಿದರೇನು! ೧೯೧

ಲಿಂಗವ ಧರಿಸಿದವರಿಗೆ ಭವ-ಭಯಂಗಳಿಲ್ಲ. ೧೭೫
ಲಿಂಗವಿದ್ದವರು ಅಂಗಗುಣಗಳ ದಹಿಸುತಿರಬೇಕು. ೧೭೯
ವಚನ-ಸಾಹಿತ್ಯವು ಆತ್ಮಾನಂದಕ್ಕಾಧಾರವೆಂದು ೮೩
ವಂಚಕರಿಗೆ ವಂಚಿಸುವುದೇ ಗುರಿಯಲ್ಲದೆ, ೧೩೩
ವಿದ್ಯಾರ್ಥಿಯು ಸತ್ಯಾರ್ಥಿಯಾಗಲು ೧೨೪
ವಿದ್ಯೆಯಿದ್ದಲ್ಲಿ ವಿನಯವಿರುವುದಯ್ಯಾ! ೧೪೭
ವಿದ್ಯೆಯಿದ್ದೊಡೆ, ವಿನಯವಂತನಾಗಿರಬೇಕು, ೮೦
ವಿರತಿಯು ಮಹತಿಯು ವಿರಾಗಿಗಲ್ಲದೆ, ೧೦೭
ವಿಶೇಷ ರಕ್ತವುಳ್ಳವರು ವಿರತರೆಂದರೆ, ೧೫೯
ವಿಶ್ವವನೊಳಕೊಂಡ ಲಿಂಗವು ೧೭೮
ವಿಶ್ವಾಸ ಹುಟ್ಟಿಸಿದ ಆಶ್ವಾಸನೆ ೭೮
ವೀರಶೈವನಾದೊಡೆ, ಅಂಗದ ಮೇಲೆ ಲಿಂಗವ ಧರಿಸಿ ೮೧
ವೀರಶೈವರಿಗೆ ಲಿಂಗವೆ ಪಂಚ ಪ್ರಾಣವಾಗಿದುದಯ್ಯಾ ೧೭೬
ವೀರಶೈವ ಸಮಾಜವೆಂಬ ವೃಕ್ಷವು ೧೪೯
ವೃದ್ಧರಾದರು ಬುದ್ಧಿ ಬರಲೊಲ್ಲದು, ನೋಡಾ! ೫೬
ವ್ಯಕ್ತಿತ್ವ-ವ್ಯಕ್ತಿತ್ವ ಎಂದೆಂಬಿರಿ, ೫೪
ವ್ಯಕ್ತಿ-ದ್ವೇಷವು, ಆ ವ್ಯಕ್ತಿಗಷ್ಟೆ ಸೀಮಿತ ೯೩
ಶರಣರ ಸುಳ್ನುಡಿಯು ಹರನಡಿಪಿಡಿಯಲು ಚೆನ್ನುಡಿ ೧೧೭
ಶರೀರ-ಸೌಷ್ಠವಕ್ಕಿಂತ, ಚಿತ್ತ-ಸೌಷ್ಠವ ಹೆಚ್ಚಿನದಯ್ಯಾ! ೮೪
ಶಾಂತಿಯಿಲ್ಲದ ವ್ಯಕ್ತಿ, ಶಾಂತಿಯಿಲ್ಲದ ರಾಷ್ಟ್ರ ೧೫೨
ಶಿಲಾ-ಸೌಧದ ಸೃಷ್ಟಿ ಬೇಡಾಯಿತು, ನೋಡಾ! ೨೧
ಶಿವಪೂಜೆ ಮಾಡುವೆನಯ್ಯಾ, ಮನ ನಿಲಲೆಂದು! ೪೮
ಶಿವಯೋಗಮಂದಿರವೆಂಬುದೊಂದು, ಅಧ್ಯಾತ್ಮ ಕೇಂದ್ರ ೧೪೧
ಶಿವ-ಶರಣರ ಸಾಹಿತ್ಯ-ಸೃಷ್ಟಿ ೬೬
ಶೀಲವಿಲ್ಲದ ನಿಯಮ ಅದೆಂತಹುದೋ! ೫೯
ಶೀಲ-ಶೀಲವೆಂದು ದೂರ-ದೂರ ಸರಿಯುತಿಹಿರಿ. ೬೧
ಶುದ್ಧ-ಸಿದ್ಧ ಪ್ರಸಿದ್ಧ ಪ್ರಸಾದಂಗಳ ಪರಿಯ ಕೇಳಿರೋ! ೨೧೨
ಶ್ರೀ ಗುರುವಿನ ಉಪದೇಶದಿಂದ ಭವಮಾಲೆ ಹರಿವುದು ೧೭೩
ಶ್ರೀಗುರುವಿನಿಂದ ಪಡೆದ ಪ್ರಸಾದವು ೧೮–
'ಶ್ರೇಯಾಂಸಿ ಬಹು-ವಿಘ್ನಾನಿ' ಎಂಬಂತೆ ೪೫
ಸತಿಯಾದೊಡೆ ಪತಿಯನಗಲದಂತಿರಬೇಕು. ೮೨

ಸತ್ಯಾರಾಧನೆಯ ಮಾಡಿಮೊಡೆ ೬೨
ಸದ್‌ವಿಚಾರವಿಲ್ಲದ ಆಚಾರ, ೭೬
ಸಪ್ತ ಶರಧಿಯೊಳು ಜನಿಸಿ, ೮
ಸಮತೆ–ಸಮತೆ ಎಂದೆಂಬಿರಿ, ೧೩೨
ಸಮಯ–ಭೇದಂಗಳಿಂದ ೧೫೩
ಸಮಾಜವು ಒಡೆದ ಗಡಿಗೆಯಂತಾಗಿಹುದಯ್ಯಾ! ೧೦೨
ಸಂಪತ್ತೆಂಬುದು ಆಪತ್ತು ನೋಡಾ! ೪೧
ಸಂಸ್ಕಾರವಿಲ್ಲದ ಮನುಜನು ಗುರುವಾದಡೇನು? ೧೨೯
ಸಂಸ್ಕೃತಿಗೆ ಶೀಲವೇ ಮೂಲ, ಕಾಣಿರೋ! ೧೨೫
ಸಂಸಾರ–ಸಾಗರದೊಳು ತಾನಪ್ಪಳಿಸಿ ೨೦೯
ಸಾಕಾಯ್ತು, ಈ ಜೀವನಕೆ ಸಮಾಜ–ಸೇವೆಯ ಚಿಂತೆ! ೧೫
ಸಾಮಾಜಿಕ ರಂಗದಲಿ ಓಡಾಡಿ ೧೫
ಸಾಹಿತ್ಯವೆಂದರೆ ಶಬ್ದದ ಪೋಣಿಕೆಯಲ್ಲ; ೯೪
ಸಾಹಿತ್ಯಾರಾಧನೆಯನು ಮೈ–ಮನಗೂಡಿಸಿ ೨೨
ಸುಂದರ ಬಂಧುರ ಕಲ್‌ಗಳನಿಟ್ಟು, ೧೭೧
ಸ್ರಕ್–ಚಂದನಾದಿ ವಿಷಯಂಗಳು ೩೬
ಹದಿನಾಲ್ಕು ಸಂವತ್ಸರಗಳು ೨೦
ಹಲವಾರು ಗ್ರಂಥಗಳ ಬರೆದು ಫಲವೇನು? ೭೧
ಹಸನಾದ ಭೂಮಿಗೆ ಕಸುವಿನ ಬೀಜ ಬಿತ್ತಿದೊಡೆ, ೨೫
ಹಿಡಿದಿರ್ದ ವ್ರತಂಗಳ ಬಿಡದಾತನೆ ಮಾಹೇಶ್ವರನು ನೋಡಾ ೨೦೮
ಹಿರಿಯರು–ಹಿರಿಯರೆಂದವನ್ನುತಿಹರು, ೧೧೯
'ಹಿತ್ತಲ ಗಿಡ ಮದ್ದಲ್ಲ'ವೆಂಬುದು ನಿಜವಾದಂತಾಗಿ ೭೫
ಹುಬ್ಬಳ್ಳಿ ಪೇಟೆಯೊಳು ೧೨
ಹುಬ್ಬಳ್ಳಿಯೆಂಬುದು ಹೂಬಳ್ಳಿಯು ತವರ್ಮನೆಯ ತೆರ ೫೭
ಹೃದಯ–ಕ್ಷೇತ್ರವ ಹಸನುಗೊಳಿಸದೆ ೧೨೨
ಹೃದಯದ ಸಿರಿ ಸಂಗಳಿಸಲು ೮೬
ಹೃದಯವರಳದೆ, ದಯವ ತೋರದೆ ೧೧೭
ಹೃದಯವೆಂಬ ಕಾಸಾರದೊಳು ೩೧
ಹೃದಯವೆಂಬ ಹಣತೆಯಲ್ಲಿ ೯೯
ಹೃದಯ–ಶುದ್ಧಿಯಿಲ್ಲದ ಭಕ್ತನವನೆಂತಹ ಭಕ್ತನಯ್ಯಾ! ೨೦೨
ಹೃದಯ–ಶ್ರೀ ಇಲ್ಲದ ಸಂಪದವು ೧೧೮
ಹೃನ್ಮಂದಿರ ಗೋಪುರದೊಳಿ ೨೩೦

ಅಮೃತಬಿಂದು

ಸಾಹಿತ್ಯ ಪ್ರಕಾರ : ಗದ್ಯ ಲೇಖನಗಳು
ಮೊದಲ ಮುದ್ರಣ : ೧೯೭೭
ರಚನೆಯ ವಯಸ್ಸು : ೪೮
ರಚನಾಸ್ಥಳ : ಹುಬ್ಬಳ್ಳಿ

ಅಮೃತಬಿಂದು

ಜಗದ್ಗುರು ಶ್ರೀಮನ್ಮಹಾರಾಜನಿರಂಜನ
ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳು
ಮೂರುಸಾವಿರಮಠ, ಹುಬ್ಬಳ್ಳಿ

(ಶ್ರೀಜಗದ್ಗುರು ಮೂರುಸಾವಿರಮಠ ಗ್ರಂಥಮಾಲೆ ನಂ. ೩೪)

ಪ್ರಕಾಶಕರು:
ಶ್ರೀ ಜಗದ್ಗುರು ಗಂಗಾಧರ ಧರ್ಮಪ್ರಚಾರಕ
ಮಂಡಳ ಮೂರುಸಾವಿರಮಠ,
ಹುಬ್ಬಳ್ಳಿ

ಮುದ್ರಕರು:
ಶ್ರೀ ಬಿ. ಜಿ. ಗುತ್ತಲ ಬಿ.ಎ.ಎಲ್.ಎಲ್.ಬಿ.
ಸಂಯುಕ್ತ ಕರ್ನಾಟಕ ಮುದ್ರಣಾಲಯ
ಹುಬ್ಬಳ್ಳಿ

ಮುನ್ನುಡಿ

ನೀರು ಹನಿಗೆ ಸವಿಯ ಸೇರಿಸಬಹುದು; 'ಅಮೃತಬಿಂದು'ವಿಗೆ ಸವಿಯ ಸೇರಿಸಬೇಕೆ? ಎಂದು ನೆನೆಯಿತು ಮನ. ಸರಿಯಲ್ಲ ಎನಿಸಿದರೂ ಬರೆಯಹಚ್ಚಿತು. 'ಸುಂದರವಾದ ಮುನ್ನುಡಿಯನ್ನು ಬರೆದು ಕಳಿಸಬೇಕೆಂದು ಹುಬ್ಬಳ್ಳಿ ಮೂರು ಸಾವಿರ ಮಠದ ಶ್ರೀ ಜಗದ್ಗುರು ಸನ್ನಿಧಿಯವರ ಅಪ್ಪಣೆಯಾಗಿದೆ' ಎಂಬ ಮಠದ ಕರಣಿಕರಾದ ಶ್ರೀ ಹುಲ್ಯಾಳರ ಹಾರ್ದಿಕ ಪತ್ರ. ಮುನ್ನುಡಿ ಅಮೃತಕ್ಕೆ ಬೆರಸುವ ರುಚಿಯಲ್ಲ; ಆ ಅಮೃತರಸವನ್ನು ತನ್ನೊಡಲೊಳಗೆ ಇರಿಸಿಕೊಳ್ಳುವ ಪಾತ್ರೆ ಮಾತ್ರ. ಪಾತ್ರೆಯ ಪಾತ್ರತೆಗೆ ಇಲ್ಲಿ ಇಂಬಿಲ್ಲ.

ಸಿಂಧು ಬಾಳಿಗೆ ನೇರವಾಗಿ ನೆರವಾಗದು. ಇದಕ್ಕೆ ಕಾರಣ ಎರಡು: ಒಂದು ಬೃಹತ್ತತೆ, ಇನ್ನೊಂದು ಉಪ್ಪಾಗಿರುವಿಕೆ. ಅಲ್ಲದೆ ಅದು ಎಲ್ಲರಿಗೆ ಎಲ್ಲ ಕಾಲದಲ್ಲಿ ಎಟಕುವ ಬಗೆಯಲ್ಲಿರುವುದಿಲ್ಲ.

ಬಿಂದು ಬೀಳಲ್ಲ; ಚಿಕ್ಕದೂ ಅಲ್ಲ, ಗಾತ್ರ ಚಿಕ್ಕದಾದರೂ ಗುಣ ಚಿಕ್ಕದಲ್ಲ. ಅದರಲ್ಲಿಯೂ ಈ ಬಿಂದು ಅಂಬುಬಿಂದುವಲ್ಲ; ಶುಕ್ಕ; ಸತ್ವವನ್ನು ತರುವ ಶುಕ್ರ. ಅಪೂರ್ಣ ಜೀವನವನ್ನು ಪೂರ್ಣವಾಗಿಸುವ ಶೂನ್ಯ. ಜಿಜ್ಞಾಸುಗಳಿಗೆ ಸೇವ್ಯರಸ.

ಇದೊಂದು ಹೊಸಬಗೆಯ ಹೊತ್ತಿಗೆ! ಇದರಲ್ಲಿರುವ ವಿಚಾರಗಳು ಹೊಸವೆಂದಲ್ಲ; ಅಮೃತ ಬಿಂದುಗಳನ್ನು ಸಂಚಯಿಸಿರುವ ಬಗೆ ಹೊಸದು. ಸಂವಿಧಾನ ಹೊಸದು. 'ಪರಂಜ್ಯೋತಿ' ಪತ್ರಿಕೆಗೆ ಪ್ರತಿ ತಿಂಗಳ ಬರೆದ ಒಂದೊಂದು ಬಿಂದುವಿನ ಸಂಚಯನ. ಇದು ಗ್ರಂಥಕರ್ತರಾದ ಹುಬ್ಬಳ್ಳಿ ಮೂರುಸಾವಿರ ಮಠದ ಜಗದ್ಗುರುಗಳವರ ವಿಚಾರಗಳ ಚಿಂತನ. ಅವರ ಅರಿವಿಗೆ ಬರೆಹದ ಉಡಿಗೆಯನ್ನು ಉಡಿಸಿದ್ದಾರೆ. ಸುಂದರ ಶೈಲಿಯ ತೊಡಿಗೆಯನ್ನು ತೊಡಿಸಿದ್ದಾರೆ. ಇದು ತೃಣದ ತುದಿಯ ಕಣವಲ್ಲ. ಮಾನವೀಯ ಉಜ್ಜೀವನದ ಹೊಂಗಿರಣ. ತಿಳಿಗಣ್ಣನ್ನು ತೆರೆಯಿಸುವ ಹೊಂಗಿರಣ; ಚಲುವ ಚಿತ್ಕಿರಣ.

ಜೀವನದಲ್ಲಿ ಎದುರಿಸುವ ಸಂಶಯಗಳಿಗೆ ಎಣಿಕೆಯಿಲ್ಲ. ಇವಿದ್ದರೆ ಮುನ್ನಡೆಯಲು ಸಾಧ್ಯವಿಲ್ಲ. ಶಿವಪಥ ಸಮನಿಸದು. ಈ ದೆಸೆಯಲ್ಲಿ ಈ ಹೊಂಗಿರಣದ ಈ ಚಿತ್ಕಿರಣದ ಬೆಳಕು ಬೇಕೇಬೇಕು.

ಸ್ವಾರ್ಥ ಸಂಕುಚಿತ ಸ್ವಭಾವದ ರೋಗಕ್ಕೆ ಸಿಕ್ಕದವರು ವಿರಳ. ಸಿಕ್ಕು ಕೃಶರಾದವರು ಬಹಳ. ಕ್ಲೇಶಗೊಂಡವರು ಬಹಳ. ಇಂಥವರಿಗೆ ಈ ಅಮೃತ ಬಿಂದು ಅವಶ್ಯ. ಇದು ಬೀರುತ್ತದೆ ವಿಶ್ವಕೌಟುಂಬಿಕ ಭಾವನೆಯನ್ನು, ಜೀವನವನ್ನು!

'ರಾಗದಿಂ ಬೇರಿನ್ನು ಭವಬೀಜವುಂಟೆ?' ಎಂದು ನಿಜಗುಣರ ಕೇಳಿಕೆ? ಭವಬೀಜ ಕುಠಾರಭಕ್ತಿ: ಜೀವನದ ಪುನರುತ್ಥಾನದ ಶಕ್ತಿ. ಕಾಮದ ಕತ್ತಲೆಯಲ್ಲಿ ತತ್ತರಿಸುವವರಿಗೆ ದಿವ್ಯದೀಪ್ತಿ.

ಎಣ್ಣೆಯ ಸೊಡರಿನ ಕಿರಿಬೆಳಕು ಸಾಲದು. ಹಿರಿದು ಬಾಳನ್ನು ಬಾಳಬೇಕಾದರೆ ಹೆಬ್ಬೆಳಕು ಬೇಕು. ವಿದ್ಯುದ್ದೀಪವಾಗಬೇಕು. ಅಂತೆಯೇ ಜ್ಞಾನ ಎಣ್ಣೆಯ ಕಿರುಸೊಡರು. ಮಹಾಜ್ಞಾನ ಅಂದರೆ ಅನುಭವ ವಿದ್ಯುದ್ದೀಪ. ಅದು ಶಿವ ಪಿಂಡವಾದಲ್ಲಿ ಜ್ಯೋತಿಗಳಿಗೆ ಜ್ಯೋತಿಯಾಗಿ ಪರಂಜ್ಯೋತಿಯೆನಿಸುತ್ತದೆ. ಪರಾಶಕ್ತಿ ಪ್ರದರ್ಶಕವಾಗುತ್ತದೆ. ನಾಲ್ಕನೆಯದಾಗಿ ಅದನ್ನು ಕುರಿತು ಇಲ್ಲಿ ಪ್ರಸ್ತಾಪಿಸಲಾಗಿದೆ. ಅದರ ದೇದೀಪ್ಯತೆಯತ್ತ ಓದುಗರನ್ನು ಕರೆದೊಯ್ಯುತ್ತಾರೆ ಕೃತಿಕರ್ತರು.

ಸಂಯಮವಿಲ್ಲದ ಸಂಗತವಾಗದ ಜೀವನರಥ ಪಥದಿಂದ ಪಲ್ಲಟವಾಗುತ್ತದೆ; ತಗ್ಗಿಗೆ ಮುಗ್ಗರಿಸುತ್ತದೆ. ಬಾಹ್ಯಾಡಂಬರದಲ್ಲಿಯೆ ಬಿದ್ದು ನುಚ್ಚುನೂರಾಗುತ್ತದೆ. ಅದರಲ್ಲಿಯೂ ಇಂದಿನ ಈ ನವನಾಗರಿಕತೆಯಲ್ಲಿ ಅಂತರ್ದೃಷ್ಟಿ ಅಪರೂಪ; ಸಂಯಮಶೀಲತೆ ಅತ್ಯಲ್ಪ ಮನಸ್ವಿ ಜೀವನಕ್ಕೆ ಉಚ್ಛೃಂಖಲ ವೃತ್ತಿಗೆ ಪ್ರಲೋಭನ ಶಕ್ತಿಗೆ ಕ್ಷಿಪ್ತ; ಮೂಢಚಿತ್ತಕ್ಕೆ ಯೋಗಸಿದ್ಧಪಥವೆಂದು ಐದನೆಯ ಅಮೃತಬಿಂದು ಅರುಹಿದೆ.

ಚಂದ್ರಲೋಕ ಇಂದ್ರಲೋಕಗಳನ್ನು ಸಾಧಿಸಬಹುದು. ಆದರೆ ತನ್ನನ್ನು ತಾನು ಸಾಧಿಸುವುದು ಸಾಹಸದ ಕಾರ್ಯ. ಜಗತ್ತನ್ನು ಸಾಧಿಸುವುದು ಹೆಮ್ಮರವನ್ನು ಹೊತ್ತು ತರುವ ಸಾಹಸ. ಅದೇ ಹೆಮ್ಮರದ ಬೀಜವನ್ನು ತರಲು ಸಾಹಸಬೇಕಿಲ್ಲ; ಶ್ರಮವಿಲ್ಲ. ಅಂತೆಯೇ ವಿಶ್ವವೃಕ್ಷವನ್ನು ಒಳಗೊಂಡಲಿಂಗವನ್ನು ಧಾರಣಮಾಡುವುದು ಅತಿ ಸುಲಭ: ಅತಿ ಲಾಭ. ಅಷ್ಟಾಂಗಯೋಗಕ್ಕಿಂತ ಇಷ್ಟಲಿಂಗಯೋಗ ಸರ್ವಶ್ರೇಷ್ಠ. ಇದೇ ಶಿವಯೋಗ; ಇದೇ ಯೋಗರಾಜ; ಇದರಿಂದ ದಿವ್ಯತೇಜ.

ಮಾನವೀಯ ಜೀವನವೃದ್ಧಿಗೆ ಬುದ್ಧಿಯೇ ಸಾರಥಿ. ಬುದ್ಧಿಯಿಲ್ಲದ ಪ್ರಗತಿ ಸಿದ್ಧಿಸದು. ಬುದ್ಧಿಸಾಮ್ಯಕ್ಕಿಂತ ಬೇರಿಲ್ಲ ಜೀವನ್ಮುಕ್ತಿ! ಎಂದು ಎಂಟನೆಯ ಅಮೃತಬಿಂದು ಸಾರುತ್ತದೆ.

ಧರ್ಮದ ಜೀವಾಳ ದಯೆ. ವಿಶ್ವಮೈತ್ರಿಯ ಸೂತ್ರ ಅಹಿಂಸೆ. ಸಕಲ ಜೀವಾತ್ಮರಿಗೆ ಲೇಸಬಯಸುವ ಗಂಗೋತ್ರಿ ಕರುಣಾವೃತ್ತಿ ಎಂಬುದನ್ನು ಒಂಬತ್ತು ಹತ್ತು ಅಂಕೆಯ ಅಮೃತಬಿಂದುಗಳಲ್ಲಿ ಆಸ್ವಾದಿಸಬಹುದು.

ಹೀಗೆಯೇ ಮುಂದೆ ಮುಂದೆ ಏನಿದೆಯೆಂಬುದನ್ನು ಕಂಡುಕೊಳ್ಳುವ ಕುತೂಹಲವುಳ್ಳವರು ಈ 'ಅಮೃತಬಿಂದು'ಗಳನ್ನು ಪೂರ್ತಿ ಪಠಿಸಬೇಕು. ಅಮೃತ ಪಾನ ಮಾಡಿ ಅಮರರಾಗಬೇಕು. ಹಸಿವು ನೀರಡಿಕೆಗಳನ್ನು ನೀಗಬೇಕು. ನೀಗಿದರೆ ಶೋಕ ಮೋಹಗಳಿಲ್ಲ. ಹುಟ್ಟು ಸಾವುಗಳ ಸೂತಕವಿಲ್ಲ.

ನೀರಡಿಸಿದವರಿಗೆ ಇದು ಉತ್ತಮ ಪಾನೀಯ. ಸ್ವಲ್ಪದರಲ್ಲಿ ನಿಜವರಿಯ ಬೇಕೆನ್ನುವವರಿಗೆ ಇದು ಲೇಸಾದ ಕೊಡುಗೆ. ಇದರಿಂದ ಜೀವನಸತ್ವ ಮೈಗೂಡು ತ್ತದೆ. ಅರವಿನ ಸಂಪತ್ತು ಹೆಚ್ಚುತ್ತದೆ. ಅನುಭವಾಮೃತ ಅಳವಡುತ್ತದೆ. ಸತ್ಯ ಶುದ್ಧ ಉದ್ಯಮದಲ್ಲಿ ಉತ್ಸಾಹ ಉಂಟಾಗುತ್ತದೆ. ಮಂಗಳ ಮಹಿಮೆ ಮೈಗೂಡು ತ್ತದೆ. ಇದಕ್ಕೆ ಈ 'ಅಮೃತಬಿಂದು'ವೇ ಒಂದು ಉತ್ತಮ ನಿದರ್ಶನ.

ಸೂರ್ಯಸಿಂಹಾಸನಾಧೀಶ್ವರ

ಶ್ರೀ ಜ. ಚ. ನಿ.

ತಮಸೋ ಮಾ ಜ್ಯೋತಿರ್ಗಮಯ

‘ಕತ್ತಲೆಯಿಂದ ಬೆಳಕಿನೆಡೆ ಎನ್ನನು ಕರೆದೊಯ್ಯು’ ಎಂದು ಉಪನಿಷತ್ಕಾರರು ಒಂದೆಡೆ ಪ್ರಾರ್ಥಿಸಿದ್ದಾರೆ. ಆತ್ಮವಿಕಾಸಕ್ಕೆ ಅಂತರಂಗಶುದ್ಧಿಯೇ ಪ್ರಥಮ ಸೋಪಾನ. ಅಜ್ಞಾನವೆಂಬ ಕತ್ತಲೆಯನ್ನು ದೂರ ಸರಿಸಿ ಜ್ಞಾನಪ್ರಭೆಯನ್ನು ಬೆಳಗಿಸಿದರೆ ಆತ್ಮಜ್ಯೋತಿ ಸಹಜವಾಗಿ ಪ್ರಕಾಶಿಸುವದು. ಆ ಬೆಳಗನ್ನು ಒಳಗಿಳಿಸಲು ಅಂತಸ್ಸಾಧನೆ, ಸಂಯಮಜೀವನ, ನಿರಂತರ ಧ್ಯಾನ ಇವುಗಳ ಭದ್ರ ಬುನಾದಿಯ ಮೇಲೆ ಆಧ್ಯಾತ್ಮಿಕ ಮಂದಿರವನ್ನು ಕಟ್ಟಿದರೆ ಒಳಗಿರುವ ಜ್ಯೋತಿ ತಾನೆ ಬೆಳಗುವದು. ಭಾವಶುದ್ಧಿಯಾಗಿ ಪ್ರಗತಿಗೆ ಚೇತನವೊದಗುವದು. ಸದ್ಗತಿಗೆ ಮೂಲ ಕಾರಣವಾಗುವುದು.

ನೇತ್ರದಾಟವನ್ನು ನಿಲ್ಲಿಸಿದಂತೆ, ತ್ರಿಮಲಗಳನ್ನು ನಷ್ಟ ಮಾಡಿದಂತೆ ಹರಿದಾಡುವ ಮನಸ್ಸು ಸುಸ್ಥಿರವಾಗುವುದು; ಶಾಂತಿ ಲಭಿಸುವುದು; ಮನಸ್ತಾಪಗಳು ದೂರಾಗುವುವು. ಮಾನಸಿಕ ಪಾಪಗಳು ನಿವಾರಣೆಯಾಗುತ್ತವೆ. ಚಿಜ್ಜ್ಯೋತಿಯ ಬೆಳಗಿನ ಆನಂದವು ದೊರೆಯುತ್ತದೆ. ದೃಶ್ಯ ದೀಪ್ತಿಗಿಂತಲೂ ಮಾತು ಮನಂಗಳಿಂದತ್ತತ್ತ ಮೀರಿದ ಜ್ಯೋತಿಗಳಿಗೆ ಜ್ಯೋತಿಯಾದ ಆ ಪರಂಜ್ಯೋತಿಯ ಮಹಾ ಬೆಳಗು ತೊಳಗಿ ಬೆಳಗುತ್ತದೆ.

"ಬೆಳಗು ಕತ್ತಲೆಯ ಸುಳಿ ಒಳಗೆ ತಾನೊಬ್ಬನೆಯಾಗಿ ಕಾಂಬ ಕತ್ತಲೆಯ ಕಳೆದುಳಿದು, ನಿಮಗೆ ಗುರಿಯಾದ ಗುಹೇಶ್ವರಾ" ಎಂದೆನ್ನುವ ತಿಳಿಬೆಳಗಿನ ಹೊಂಗಿರಣಗಳನ್ನು ಸೂಸುವ ಅಲ್ಲಮಪ್ರಭುವಿನ ಈ ಅಂತರ್ವಾಣಿಯಿಂದ ನಮಗೆ ಅಂತಃಸ್ಫೂರ್ತಿ ದೊರೆತು ಎಂದೆಂದಿಗೂ ಬೆಳಗುವ ಆ ಪರಂಜ್ಯೋತಿಯ ಅಚ್ಚಳಿಯದ ಬೆಳಕಿನ ದಾರಿ ಕಾಣುತ್ತದೆ.

ಅದಕ್ಕಾಗಿ ನಾವಿಂದು ಶ್ರವಣ, ಮನನ, ನಿಧಿಧ್ಯಾಸಾದಿ ಅನುಸಂಧಾನದಿಂದ ಬೆಳಕಿನ ಮನೆಯನ್ನು ಸೇರೋಣ. ಆ ಪರಂಜ್ಯೋತಿಯ ಚಿನ್ನಾದ ಚಿದ್ಬಿಂದು ಚಿತ್ಕಲಾಸ್ವರೂಪಗಳ ನೆಲೆ ಕಲೆಗಳನ್ನರಿತು, ಸಂಸ್ಕೃತಿ ಸೌರಭವನ್ನು ಪಡೆದು, ಸ್ಥಿತಪ್ರಜ್ಞರಾಗಿ, ಸತ್ಯಶುದ್ಧ ಕಾಯಕನಿಷ್ಠರಾಗಿ, ಬಾಳಿನಲ್ಲಿ ಬೆಳಕನ್ನು ಕಂಡು, ನಾಡು, ನುಡಿ ಹಾಗೂ ಸಮಾಜವೆಂಬ ಮಹಾವೃಕ್ಷಕ್ಕೆ ಉತ್ತಮ ಸಂಸ್ಕಾರದ ಸಿಹಿನೀರನ್ನೆರೆದು ಸಂವರ್ಧನೆಗೆ ಸಹಕಾರಿಯಾಗೋಣ; ಆ ಪರಂಜ್ಯೋತಿಯ ಪ್ರಕಾಶ ಪ್ರಾಪ್ತಿಗಾಗಿ ಹಗಲಿರುಳೂ ಪ್ರಯತ್ನಿಸೋಣ.

ಆ ‘ಪರಂಜ್ಯೋತಿ’ಯು ನಮ್ಮೆಲ್ಲರನ್ನು ಎಚ್ಚರಿಸಿ ಸುರಕ್ಷಿಸಲಿ.

ವಸುಧೈವ ಕುಟುಂಬಕಂ

ಜಾಗತಿಕ ಬಾಂಧವ್ಯ ಬಂಧುರವಾಗಿ ಉಳಿದು ಬೆಳಗಬೇಕಾದರೆ ಜಾತೀಯತೆಯ ಸಾಮರಸ್ಯ ಅವಶ್ಯಕ. ಲೋಕವೇ ನನ್ನ ಮನೆ, ಮಾನವಕುಲವೇ ನನ್ನ ಬಳಗ ಎಂಬ ಭಾವನೆ ಬೆಳೆದಾಗ ಜಗತ್ತಿಗೆ ಶಾಂತಿ-ಸುಖಗಳು ಸಿಗುತ್ತವೆ. ಒಂದೆಡೆ ರಾಮಕೃಷ್ಣ ಪರಮಹಂಸರು "ಎಲ್ಲಿ ಎಲ್ಲರೂ ಒಟ್ಟಾಗಿ ಭಕ್ತಿಭಾವದಿಂದ ಭಗವಂತನನ್ನು ಪ್ರಾರ್ಥಿಸುತ್ತಾರೆಯೋ ಅಲ್ಲಿ ದೇವರು ಆವಿರ್ಭವಿಸುತ್ತಾನೆ. ಆತನು ಯಾವುದೇ ರೂಪದಿಂದ ಆಗಲಿ, ಬಂದು ಸಂತಸ ನೀಡುತ್ತಾನೆ. ಆದ್ದರಿಂದ ನಮ್ಮ ಅಲ್ಪತ್ವದ ಎಲ್ಲೆಯನ್ನು ದೇವರ ರೂಪಗಳಿಗೆ ಕಲ್ಪಿಸುವದು ಬೇಡ. ಇಂತಹ ವಿಶಾಲ ತತ್ತ್ವದ ಮೇಲೆ ನಿಂತಿರುವ, ಇಂತಹ ಉದಾತ್ತ ದೃಷ್ಟಿಯನ್ನು ತಾಳಿರುವ ಭಾರತದಲ್ಲಿ ಎಲ್ಲ ಜಾತಿಯವರೂ ಸ್ನೇಹದಿಂದ ಬಾಳಿದರೆ, ಎಲ್ಲ ಮತದವರೂ ಭಕ್ತಿಯಿಂದ, ಶ್ರದ್ಧೆಯಿಂದ ತಮ್ಮ ತಮ್ಮ ದಾರಿಯಲ್ಲಿ ಸದ್ವಿಚಾರದೊಡನೆ ಮುಂದುವರಿದರೆ ಗುರಿಯನ್ನು ಮುಟ್ಟುವದು ಸಾಧ್ಯ"ವೆಂದು ಒಳ್ಳೆಮಾರ್ಮಿಕವಾಗಿ ಅನುಭವದೊಡನೆ ವಿವರಿಸಿದ್ದಾರೆ. ಇಂತಹ ಉದಾತ್ತ ದೃಷ್ಟಿಯಿಂದ ಮುನ್ನಡೆದರೆ ಯಾವ ಚ್ಯುತಿಯೂ ಬರಲಾರದು. ಆದರೆ ಧೈರ್ಯ-ಸ್ಥೈರ್ಯವು ಹಿಮಾಚಲ ಪರ್ವತದಷ್ಟು ಭದ್ರವಾಗಿರಬೇಕಾಗುತ್ತದೆ. ಜಾಗತಿಕ ಬಾಂಧವ್ಯಕ್ಕೆ ಕೇವಲ ನಾಗರಿಕತೆ ಬೆಳೆದರೆ ಸಾಲದು,ಅದರ ಜೊತೆಯಲ್ಲಿ ಆಧ್ಯಾತ್ಮಿಕತೆ ಬೆಳೆದು ಬರಬೇಕು.ಆಗ ನಾಗರಿಕತೆಗೆ ಕಳೆ ಮತ್ತು ಬಲ ಬಂದಂತೆ. ವೇಷ-ಭೂಷಣದಿಂದ ಮನುಷ್ಯನ ಬದುಕು ಪ್ರಧಾನವಾಗಿರಬಾರದು. ಸದ್ವಿಚಾರಗಳ ಶುಭ್ರವಸ್ತ್ರಗಳನ್ನು ತೊಟ್ಟು ಆತ್ಮಶ್ರೀ ಸಮನ್ವಿತನಾದರೆ ಮನುಷ್ಯನಾಗಲು ಆಗ ಅರ್ಹತೆ ಬರುತ್ತದೆ. ಮನುಷ್ಯನಿಗೆ ಬುದ್ಧಿಶಕ್ತಿ, ಹೃದಯಶಕ್ತಿ, ಭಾವಶಕ್ತಿ, ಎಲ್ಲವನ್ನೂ ದೇವರು ಕೊಟ್ಟಿದ್ದಾನೆ. ಆದರೆ ಅದು ವಿಕಾಸವಾಗಿ ಭಾವೈಕ್ಯ ಸಂಪದ್ಭರಿತವಾದರೆ ಸಾರ್ಥಕ. ಇಲ್ಲದಿದ್ದರೆ ಅದು ಪಶುಜೀವನ....

ಈ ಜೀವನ ಸಾರ್ಥಕಮಾಡಿಕೊಳ್ಳಲು ಪ್ರಗತಿ ದಾರಿಯಲ್ಲಿ ನಡೆಯುವದೇ ಮುಖ್ಯ ಗುರಿಯಾಗಿರಬೇಕು. "ವಸುಧೈವ ಕುಟುಂಬಕಂ" ಈ ಭಾವನೆ ಬೇರೂರಿ ಬೆಳೆದುಬಂದಾಗ ಧಾರ್ಮಿಕ ಐಕ್ಯತೆಯು ಸಾಧ್ಯ. ದೇವನೊಬ್ಬ ನಾಮ ಹಲವು ಎನ್ನುವ ಈ ವಿಚಾರ ಮನನಮಾಡಿಕೊಂಡು ಜೀರ್ಣಿಸಿಕೊಂಡರೆ ಮಾತ್ರ ವಿಶ್ವಶಾಂತಿ........

ಸಿದ್ಧರಾಮ ಶಿವಯೋಗಿಗಳು ತಮ್ಮದೊಂದು ವಚನದಲ್ಲಿ 'ಮನದಲ್ಲಿ ಭೇದ, ವಸ್ತುವಿನಲ್ಲಿ ಭೇದವಿಲ್ಲವಯ್ಯ, ಕ್ರಿಯೆ-ಕ್ರಿಯೆಯಲ್ಲಿ ಭೇದವಲ್ಲದೆ ಜ್ಞಾನದಲ್ಲಿ ಭೇದವಿಲ್ಲವಯ್ಯ, ರೂಪ-ರೂಪದಲ್ಲಿ ಭೇದವಲ್ಲದೆ ಚೈತನ್ಯದಲ್ಲಿ ಭೇದವಿಲ್ಲ ನೋಡಾ ಕಪಿಲ ಸಿದ್ಧ ಮಲ್ಲಿಕಾರ್ಜುನಾ" ಎಂದು ನೂತನ ಜಗತ್ತಿಗೆ ಬೇಕಾಗುವ, ಅಂತಃಶಕ್ತಿಯು ಸ್ಫುರಿಸಿ ಚೇತನವು ಅರಳುವಂತೆ ಭೇದಾ-ಭೇದ ವಿಚಾರಗಳನ್ನು ಬಹು ದೂರದೃಷ್ಟಿಯಿಂದ ವಿಮರ್ಶಿಸಿ, ವಿವೇಚಿಸಿ, ರೂಪ-ರೂಪದಲ್ಲಿ

ಭೇದವಲ್ಲದೆ ಚೈತನ್ಯದಲ್ಲಿ ಭೇದವಿಲ್ಲವೆಂದು ಸಿದ್ಧಮಾಡಿದ್ದಾರೆ. ಜಾಗತಿಕ ಬಾಂಧವ್ಯಕ್ಕೆ ದಾರಿ ತೋರಿಸಿದ್ದಾರೆ. ಜಾತೀಯತೆಯ ಸಾಮರಸ್ಯಕ್ಕೆ ನಾಂದಿ ಹಾಕಿದ್ದಾರೆ. ನಾವಿಂದು ಇಂತಹ ಸೂಳ್ನುಡಿಗಳನ್ನು ಕಲ್ಪನೆಯ ದವಡೆಯೊಳಗೆ ಅರಗಿಸಿಕೊಂಡು ಭಾವವನ್ನು ವಿಸ್ತರಿಸಿಕೊಂಡಿದ್ದಾದರೆ ವಿಶ್ವಪ್ರಜ್ಞೆ ವಿಕಾಸವಾಗಿ, ವಿವಿಧತೆಯಲ್ಲಿ ಏಕತೆಯನ್ನು ಸಾಧಿಸಿಕೊಂಡಂತಾಗುವದು. "ಸರ್ವೇಜನಾಃ ಸುಖಿನೋ ಭವಂತು" ಈ ಆತ್ಮೀಯ ಆದರ್ಶಭಾವನೆ ಸುತ್ತೆಲ್ಲ ಹರಡಿ ಪ್ರತಿಯೊಬ್ಬ ವ್ಯಕ್ತಿಯ ಹೃದಯಮಂದಿರದಲ್ಲಿ ಕುಳಿತರೆ, ಜಾಗತಿಕ ಬಾಂಧವ್ಯ ಸ್ಥಿರವಾಗುಳಿಯುತ್ತದೆ. ಇದಕ್ಕಾಗಿ ಹಗಲಿರುಳು ದುಡಿಯುವದನ್ನು ಹಂಬಲಿಸಿದರೆ ಅದೇ ಮಹತ್ಸಾಧನೆ. ಇದೇ ಭಾರತೀಯ ಸಂಸ್ಕೃತಿ.

(ಧಾರವಾಡ ಆಕಾಶವಾಣಿಯವರ ಕೃಪೆಯಿಂದ)

ಭಕ್ತೇರಸಾಧ್ಯಂ ನಹಿ ಕಿಂಚಿದಸ್ತಿ

ಭಕ್ತಿಯೇ ಮುಕ್ತಿಗೆ ಮೂಲ ಕಾರಣ. ಮುಖ್ಯ ಸಾಧನ. ಆತ್ಮ ಪ್ರಗತಿಗೆ ಪ್ರಪ್ರಥಮ ಸೋಪಾನ ಅಸಾಧ್ಯವಾದುದೆಲ್ಲವೂ ಭಗವದ್ಭಕ್ತಿಯಿಂದ ಸಾಧ್ಯ. ನಿಷ್ಕಾಮಭಕ್ತಿಯಿಂದ ನಂಬಿ ಕರೆದಾಗ ದೇವರು ಪ್ರತ್ಯಕ್ಷನಾಗಿ ಯೋಗಕ್ಷೇಮವನ್ನು ಕೇಳಿ ನಿಜಾನಂದವನ್ನು ನೀಡುವನು. ಮೊದಮೊದಲು ದೇವರು ವ್ಯಕ್ತಿಯ ಅಂತರಂಗವನ್ನು ಅರಿದು, ನಿರೀಕ್ಷಿಸಿ ಪರೀಕ್ಷಿಸುವನು. ಸುವರ್ಣದಂತೆ ಒರೆದು ನೋಡುವನು. ಮಣ್ಣು ಮಾಡುವ, ಮಸಿಯು ಮಾಡುವ ಚಿನ್ನದಂತೆ ಪರಿಶುದ್ಧ ಹೃದಯವನ್ನು ಕಂಡಾಗ, ಕೊನೆಗೆ ತನ್ನಂತೆ ಮಾಡಿಕೊಳ್ಳುವನು.

ಕರಗಸದಂತೆ ಕಠೋರವಾದ ಭಕ್ತಿಗೆ ನಿಷ್ಕಲ್ಮಷವಾದ ತೆರೆದ ಹೃದಯ ಹೊಂದಿದ್ದರೆ ಸಾಕು. ಅದಕ್ಕಾಗಿಯೇ ಬಸವಣ್ಣನವರು "ಭಕ್ತಿರಸವ ದಣಿಯ ಮೇಯಿಸಿ ಸುಬುದ್ಧಿಯೆಂಬ ಉದಕವನೆರೆದು ನೋಡಿ ಸಲಹಯ್ಯ" ಎಂದು ಕೂಡಲಸಂಗನನ್ನೇ ಕೇಳಿಕೊಂಡಿದ್ದಾರೆ.

ತರ್ಕಜ್ಞಾನಕ್ಕಿಂತಲೂ ಶ್ರೇಷ್ಠವಾದ ಭಕ್ತಿ ಮಿಗಿಲಾದುದು. ತರ್ಕಬುದ್ಧಿಯು ಬಾಹ್ಯಪ್ರವೃತ್ತಿಯಾದರೆ ಬೆಳ್ದಿಂಗಳಂತಹ ನಿರ್ಮಲ ಭಕ್ತಿಯು, ಕತ್ತಲೆಯನ್ನು ಕಳೆವ ನಿವೃತ್ತಿ ಕಲೆಯೆನಿಸುವುದು. ಅದು ಪ್ರತಿಷ್ಠೆಯಾಗಿ ಮುಂದುವರಿದು ಚಿದ್ವೃತ್ತಿಯ ಸಾಮರಸ್ಯವನ್ನು ಸಂಪಾದಿಸುತ್ತದೆ. ಅದಕ್ಕೆ ಆತ್ಮಸಮರ್ಪಣ ಭಾವವು ಮಾತ್ರ ಬಗೆದುಂಬಿ ಬರಬೇಕಾಗುತ್ತದೆ. ತಾನೇ ತಾನಾಗಿ ಭಕ್ತಿಸರೋವರದಲ್ಲಿ ಮಿಂದು ತಲ್ಲೀನನಾಗಬೇಕಾಗುತ್ತದೆ. ಈ ರೀತಿಯ ಭಕ್ತಿಯು ಸಾಧಕರ ಹೃದ್ವ್ಯೋಮದಲ್ಲಿ ತುಂಬಿದರೆ ಅಚಿಂತ್ಯಾನಂದವು ನಿರಂತರವಾಗಿ ಉಳಿದು ಬೆಳಗುವದು. ಪತಂಗಗಳು ಬೆಂಕಿಯಲ್ಲಿ ಬಿದ್ದು ಸತ್ತುಹೋಗುವಂತೆ, ವಿಷಯವಾಸನೆಗಳು

ಭಕ್ತಿಯ ಬೆಳಕಿನಲ್ಲಿ ಅಳಿದುಹೋಗುವವು. ಅರಿವಿನ ಭಕ್ತಿಯು ಹೂ-ಬಳ್ಳಿಯಿಂದ ಜ್ಞಾನದ ಮಕರಂದವನ್ನು ಹೀರಿ ಅನುಭವಾಮೃತವನ್ನು ಪಡೆಯುವುದು. ಆಧ್ಯಾತ್ಮಿಕ ಪ್ರೇಮವನ್ನು ಮಸಗಾಣುವುದು. ಭಕ್ತಿಯ ಶಕ್ತಿಯೇ ಅಂತಹುದು. ವಿಷವನ್ನೂ ಸಹ ಅಮೃತವನ್ನಾಗಿ ಮಾಡಬಲ್ಲುದು. ಕೊರಡು ಕೊನರುವದು, ಭಾವಕುಸುಮವರಳಿಸುವ ಶಕ್ತಿ, ಜ್ಞಾನಜ್ಯೋತಿ ಬೆಳಗಿಸುವ ದೀಪ್ತಿ ಭಕ್ತಿಯಲ್ಲಿದೆ. ಭಕ್ತಿಯಷ್ಟು ಸುಲಭ ಸಾಧ್ಯಯೋಗ ಮತ್ತಾವುದರಲ್ಲಿಯೂ ಕಾಣದು. ಭಗವದ್ವಾಣಿಯನ್ನು ಆಲಿಸಿದರೂ ಸಹ ಸಿಗತಕ್ಕ ಶಕ್ತಿಯೇ ಭಕ್ತಿ.

"ಅನನ್ಯಾಶ್ಚಿಂತಯಂತೋ ಮಾಂ ಯೇ ಜನಾಃ ಪರ್ಯುಪಾಸತೇ|
ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಮ್"||

(ಗೀತಾ ೯-೨೨)

ಅಂತೆಯೇ ಭಗವಂತ ಭಕ್ತಿಪ್ರಿಯ.

ಜ್ಯೋತಿಷಾಮಪಿ ತಜ್ಜ್ಯೋತಿಃ

ಇದು ಗೀತೆಯ ಅಂತರ್ವಾಣಿ, ಅಮರವಾಣಿ. ಕತ್ತಲೆಯ ಆಚೆಗಿರುವ ಜ್ಯೋತಿಗಳಿಗೆ ಜ್ಯೋತಿಯಾಗಿರುವ ಆ ಪರಬ್ರಹ್ಮಸ್ವರೂಪವು ಎಲ್ಲರ ಹೃದಯದಲ್ಲಿ ತುಂಬಿದೆ. ಹೃದ್ದೇಶದಲ್ಲಿ ನಿರಂತರ ಆ ಜ್ಯೋತಿಯು ಬೆಳಗುತ್ತಿದ್ದರೆ ತಾಮಸೀಯ ಶಕ್ತಿಗಳು ಹತ್ತಿರ ಬರಲಾರವು. ಈ ಚಿಜ್ಜ್ಯೋತಿಯನ್ನು ಕಾಣಲು ಹೃದಯ, ಕಣ್ಣು ತೆರೆದಿರಬೇಕಾಗುತ್ತದೆ. ಅಂತಃಶುದ್ಧಿಯಾಗಿರಬೇಕಾಗುತ್ತದೆ. ಆತ್ಮಸಾಧನೆ ಅತ್ಯಧಿಕವಾಗಿರಬೇಕಾಗುತ್ತದೆ. ಆಗ ತಾನಾರೆಂಬುದರ ಅರಿವಾಗಿ ಸತ್ಯಸ್ವರೂಪ ತೋರುತ್ತದೆ.

"ಸಮಸ್ತ ಕತ್ತಲೆಯ ಮಸಕವ ಕಳೆದಿಪ್ಪ ಇರವ ನೋಡಯ್ಯ, ಬೆಳಗಿಂಗೆ ಬೆಳಗು ಸಿಂಹಾಸನವಾಗಿ, ಬೆಳಗು ಬೆಳಗು ಕೂಡಿದ ಕೂಟವ ಕೂಡಲಸಂಗಯ್ಯ ತಾನೇಬಲ್ಲ" ಈ ಶರಣವಾಣಿಯು ಹೃದಯ ಮುಟ್ಟಿದಾಗ ಶಬ್ದ ಮುಗ್ಧವಾಗುತ್ತದೆ. ಕತ್ತಲೆ ಬೆಳಗೆಂಬುವ ಭೇದ ಶೂನ್ಯವಾಗುತ್ತದೆ. ನಿತ್ಯ ಅನಿತ್ಯವೆಂಬುದು ಇಲ್ಲದಾಗುತ್ತದೆ.

ಮೋಳಿಗೆಯ ಮಾರಯ್ಯನವರು ಒಂದೆಡೆ "ಚಿಪ್ಪಿನ ಮಂದಿರದಲ್ಲಿ ಮುತ್ತು ಬೆಳೆದ ಭೇದದಂತೆ, ವೃತ್ತಿಕೆಯ ಸಾರದಲ್ಲಿ ಹೊಮ್ಮಿದ ಪ್ರೊಂಗಲು ಪರಿಯಂತೆ, ಕಾಯದಲ್ಲಿ ಬೆಳಗಿ ತೋರುವ ಮಹದಿರವಿನ ಕೊನೆಯಲ್ಲಿ ಪ್ರಜ್ವಲಿತ ಪ್ರಭಾಕರ ನೀನೆ ನಿಃಕಳಂಕ ಮಲ್ಲಿಕಾರ್ಜುನಾ" ಎಂದು ಕಾಯದಲ್ಲಿ ಬೆಳಗಿ ತೋರುವ ಮಹದಿರವಿನ ಮಹತ್ವವನ್ನು ಸುಂದರ ಉಪಮೆಯೊಡನೆ ವಿವರಿಸಿದ್ದಾರೆ. ಅದಕ್ಕಾಗಿ ಆ ಮಹಾಬೆಳಗನ್ನು ಪೈಗೂಡಿಸಿಕೊಳ್ಳಲು ಅಂಗಭಾವವನ್ನು ತೊಲಗಿಸಿ, ಲಿಂಗಭಾವಗಳನ್ನು ಅಂಗವಿಸಿಕೊಂಡರೆ ಮಂಗಳದ ಬೆಳಗಿನಲ್ಲಿ ಲೋಲಾಡಿ

ಸುರಿಸುವುದು. ಆ ತೆರನಾಗಿ ಸದ್ಭಕ್ತಿ ತೈಲವನ್ನು ಹೃದಯ ಹಣತೆಯೊಳಗೆ ಹಾಕಿ, ಏಕೋಭಾವವೆಂಬ ಬತ್ತಿಯನ್ನು ಹೊಸೆದಿಟ್ಟು ಸುವಿಚಾರಜ್ಯೋತಿಯ ಹಚ್ಚಿದರೆ, ಕಂಗಳ ಮುಂದಣ ಕತ್ತಲೆ ಹರಿದುಹೋಗುವವಲ್ಲದೆ ಗರ್ಭಗುಡಿಯೊಳಗೆ ಕುಳಿತಿರುವ ಜ್ಯೋತಿಸ್ವರೂಪಿ ತಜ್ಜ್ಯೋತಿಯಾಗಿರುವ ಪರಶಿವನ ಸಾಕ್ಷಾತ್ಕಾರ ವಾಗುವದು. ಇಂತಹ ದೀಪಗಳ ಸಾಲು, ಆತ್ಮಪ್ರಭೆಯನ್ನು ಪ್ರಕಾಶಿಸಿ ಒಳಬೆಳಕಿಗೆ ದಾರಿದೀಪವಾಗಲಿ.

ಈ ದೀಪಾವಳಿಯು ದೇಹದೇಗುಲವನ್ನು ದೇದೀಪ್ಯಮಾನವುಳ್ಳದ್ದನ್ನಾಗಿ ಮಾಡಲೆಂಬುದೇ ನಮ್ಮ ಹೃದ್ವಾಣಿ.

ಯೋಗಶ್ಚಿತ್ತ ವೃತ್ತಿನಿರೋಧಃ

ಬಂಧಮೋಕ್ಷಗಳಿಗೆ ಮೂಲಕಾರಣವಾಗಿರುವ ಮನಸ್ಸಿನ ನಿರೋಧಕ್ಕೆ ಯೋಗಸಾಧನೆಯೇ ಮೊದಲು ಮೆಟ್ಟಲು. ಅದೇ ಜೀವನಕ್ಕೆ ಕಮನೀಯಕುಡ್ಮಲ. ಮುಮ್ಮಲ ತೊಳೆಯುವ ನಿರ್ಮಲ ಗಂಗಾಜಲ. ಈ ಯೋಗಸಾಧನೆಯಿಂದ ಪವಿತ್ರ ಜೀವನಮಾಡಿಕೊಳ್ಳಲು ಪರಮಸಾಧನವಾಗುವದಲ್ಲದೆ ದೀರ್ಘಕಾಲದವರೆಗೆ ಬದುಕಲು ಹಾಗೂ ಆರೋಗ್ಯದಿಂದಿರಲು ಸಹಾಯಕವಾಗುವದು. ಯೋಗಶಕ್ತಿ ಯಿಂದ ಅಣಿಮಾದಿ ಅಷ್ಟಸಿದ್ಧಿಗಳ ಸಂಪ್ರಾಪ್ತಿಯಾಗಿ, ಇದಕ್ಕಿಂತಲೂ ಮಿಗಿಲಾಗಿ ಆತ್ಮಾನುಭೂತಿಯಾಗಿ, ಆತ್ಮಾನಂದವನ್ನು ಪಡೆದು ಆತ್ಮಸಾಕ್ಷಾತ್ಕಾರವಾಗುವ ಮಹಾಶಕ್ತಿ ಈ ಯೋಗಶಕ್ತಿಯಲ್ಲಿ ಹುದುಗಿದೆ.

ಒಂದೆಡೆ ಸ್ವಾಮಿ ವಿವೇಕಾನಂದರು–

"Yoga is the Science which teaches us how to get these perceptions" ಎಂದು ಯೋಗದ ಮಹತಿಯನ್ನು ವಿವರಿಸಿದ್ದಾರೆ.

ಜ್ಞಾನವಿಲ್ಲದ ಯೋಗ, ಯೋಗವಿಲ್ಲದ ಜ್ಞಾನ ಇವೆರಡೂ ನಿಷ್ಪ್ರಯೋಜಕ. ಇವೆರಡರ ಬಲದಿಂದ ಶಿವಯೋಗಿಗಳು ಯೋಗಸಿದ್ಧಿಯನ್ನು ಪಡೆಯುವರಲ್ಲದೆ, ಚೈತನ್ಯವನ್ನು ಗಟ್ಟಿಗೊಳಿಸುತ್ತಾರೆ. ಶಿವಯೋಗ ಪ್ರದೀಪಿಕೆಯಲ್ಲಿ ಇದೇ ವಿಷಯ ವನ್ನು ಕುರಿತು:

"ಯೋಗಾತ್ ಸಂಜಾಯತೆ ಜ್ಞಾನಂ ಜ್ಞಾನಾತ್ ಯೋಗಃ ಪ್ರವರ್ತತೇ|
ದ್ವಯೋಃ ಸಂಸಿದ್ಧಯೇ ಭೂಮನ್ ಶರೀರಂ ರಕ್ಷಯೇತ್ ಬುಧಃ"||

ಎಂದು ಜ್ಞಾನಯೋಗಗಳ ಸಂಸಿದ್ಧಿಯನ್ನು ಸ್ಪಷ್ಟೀಕರಿಸಿದ್ದಾರೆ.

ಯೋಗದಲ್ಲಿ ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣ ಸಮಾಧಿ ಈ ರೀತಿ ಎಂಟು ತೆರನಾಗಿ ವಿಂಗಡಿಸಿದ್ದಾರೆ. ಈ

ಯೋಗಾಂಗಗಳ ಸಾಧನೆಯಿಂದ ದೇಹ ಶುಚಿಯಾಗಿ, ಚಿತ್ತಚಾಂಚಲ್ಯ ದೂರಾಗಿ, ಜ್ಞಾನೋದಯುವಾಗುವದಲ್ಲದೆ, ಆತ್ಮಜ್ಞಾನ ಸ್ಫುರಿಸಿ ಮಹಾಘನ ಸಿದ್ಧಿ ಸಾಧ್ಯವಾಗುವದು. ಯಮ, ನಿಯಮ, ಆಸನ, ಇವುಗಳು ಬಾಹ್ಯಾಂಗಗಳನ್ನು ಪವಿತ್ರ ಮಾಡಿದರೆ ಪ್ರಾಣಾಯಾಮ ಪ್ರತ್ಯಾಹಾರಗಳು ಪಂಚಪ್ರಾಣಗಳನ್ನು ಪರಿಶುಭ್ರಗೊಳಿಸುವುವು; ಧ್ಯಾನ, ಧಾರಣ, ಸಮಾಧಿ ಅಂತರಂಗಶುದ್ಧಿಗೆ ಭದ್ರಬುನಾದಿ. ಶಿವಯೋಗಕ್ಕೆ ಹಠಯೋಗ ಸಾಧನಮಾತ್ರವಾಗುವದಲ್ಲದೆ ಪೂರ್ಣ ಸಂಸಿದ್ಧಿಯತ್ತ ಸಾಗಿಸುವ ವಿಧಾನವಾಗಲಾರದು. ಶಿವಯೋಗದ ಚರಮಗುರಿಯೇ "ಲಿಂಗಾಂಗ ಸಾಮರಸ್ಯ"ವೆಂದು ವೀರಶೈವ ಸಿದ್ಧಾಂತದಲ್ಲಿ ಪ್ರತಿಪಾದಿಸಲ್ಪಟ್ಟಿದೆ. ಚಿತ್ತವೃತ್ತಿ ನಿರೋಧವಾಗುತ್ತ ಹೋದಂತೆ ಶಿವನಲ್ಲಿ ಯೋಗವಾಗುವದೇ ಶಿವಯೋಗ. "ಸಮತ್ವಂ ಯೋಗ ಉಚ್ಯತೇ" ಗೀತೆಯ ಈ ನುಡಿಯೂ ಇದನ್ನೇ ಹೇಳುತ್ತಿದೆ. ಈ ಸಿದ್ಧಸ್ಥಿತಿಗೆ ಏರಲು ಸಾಧನೆ, ಸಂಯಮ ಜೀವನದಲ್ಲಿರಬೇಕಾದುದು ಸಾಧಕನ ಮೊದಲ ಕಾರ್ಯ ಹಾಗೂ ಮುಖ್ಯ ಗುರಿ.

"ಅಳಿದು ಕೂಡುವುದೊಂದು ಯೋಗ, ಅಳಿಯದೆ ಕೂಡುವುದೊಂದು ಯೋಗ, ಈ ಎರಡು ಯೋಗದೊಳಗೆ ಅಳಿಯದೆ ಕೂಡುವ ಯೋಗವರಿವುದು ಗುಹೇಶ್ವರಾ" ಪರಶಿವನ ಪ್ರಭೆಯಿಂದ ಬೆಳಗಿ, ಅಂಗಕರಣಗಳನ್ನೆಲ್ಲ ಲಿಂಗಕಿರಣಗಳನ್ನಾಗಿ ಮಾಡಿಕೊಂಡು ಎರಡೆಂಬುದುಳಿದು, ಶಿವಯೋಗ ರಹಸ್ಯದ ಸೂಕ್ಷ್ಮ ವಿವರಣೆ ತಿಳಿಹೇಳಿದ ಅಲ್ಲಮ ಪ್ರಭುವಿನ ಈ ಒಳನುಡಿ ಯೋಗಸಾಧಕರಿಗೆ ದಾರಿದೀಪ.

ಲಿಂಗಮಧ್ಯೇ ಜಗತ್ಸರ್ವಂ

ವೀರಶೈವರಿಗೆ ಲಿಂಗವೇ ಪಂಚಪ್ರಾಣ. ಆತ್ಮಾನುಸಂಧಾನಕ್ಕೆ ಜೀವಂತ ದರ್ಪಣ. ಮುಮುಕ್ಷುಗಳಿಗೆ ಚಿಂತಾಮಣಿ. ಲಿಂಗವಿಲ್ಲದವರ ವಕ್ಷಸ್ಥಲ ಜಲವಿಲ್ಲದ ತಟಾಕದಂತೆ, ಸೂರ್ಯನಿಲ್ಲದ ಆಕಾಶದಂತೆ, ಪತಿಯಿಲ್ಲದ ಸತಿಯಂತೆ ಶೋಭಿಸದು. "ಲಿಂಗವಿಲ್ಲದವರನು ಭವಿ ಎಂಬೆ" ಎನ್ನುವ ಮಹಾತ್ಮಾ ಬಸವಣ್ಣನವರ ನುಡಿಯಲ್ಲಿ ತತ್ತ್ವವಿದೆ, ಸತ್ವವಿದೆ. ಮುಕ್ತಿಗೆ ಮೂಲಸಾಧನವಾಗಿರುವ ಈ ಲಿಂಗವು ವಿಶ್ವವನ್ನೊಳಗೊಂಡು ಕರಸ್ಥಲದಲ್ಲಿ ಚಿಕ್ಕ ಗೋಲಾಕಾರವಾಗಿ ಬಂದು ಕುಳಿತಿದೆ. ಚಿತ್ಕಲಾ ಪರಿಪೂರ್ಣವಾಗಿ ರೂಪುಗೊಂಡಿದೆ. ಅರ್ಚನೆಗೆ ಅನುಕೂಲವಾಗಿದೆ. ಮಾಂಸಪಿಂಡ (ಶರೀರ)ವನ್ನು ಮಂತ್ರಪಿಂಡ (ಶರೀರ)ವನ್ನಾಗಿ ಮಾಡಲು ಕಾರಣವಾಗಿದೆ. ನಿರಾಳ-ನಿರಾಕಾರವಾದ, ಬಯಲು ಸಾಕಾರವಾಗಿರುವ ಮನದ ಅಜ್ಞಾನವನ್ನು

ಪರಿದು, ನಿಜಾನಂದವನೀಯುವ ನಿತ್ಯನಿರಂಜನವಾಗಿ, ಸೃಷ್ಟಿಸ್ಥಿತಿ ಲಯಕ್ಕೆ ಕಾರಣ ವಾಗಿರುವ ಈ ಚಿಲ್ಲಿಂಗವನ್ನು ಕುರಿತು ಜಗದ್ವಿಭೂತಿ ಬಸವಣ್ಣನವರು—

"ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ ಪಾತಾಳದಿಂದತ್ತತ್ತ ನಿಮ್ಮ ಶ್ರೀಚರಣ, ಬ್ರಹ್ಮಾಂಡದಿಂದತ್ತತ್ತ ನಿಮ್ಮ ಶ್ರೀಮುಕುಟ, ಅಗಮ್ಯ ಅಗೋಚರ ಅಪ್ರತಿಮ ಲಿಂಗವೆ, ಕೂಡಲಸಂಗಮದೇವಯ್ಯ ಎನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಯ್ಯ" ಎಂಬುದಾಗಿ ವಾಙ್ಮನಕ್ಕಗೋಚರವಾಗಿರುವ ನಿರುಪಾಧಿಕ ಪರಂಜ್ಯೋತಿಯಾದ ಲಿಂಗದ ಮಹಿಮೆಯನ್ನು ಒಳ್ಳೇ ಸ್ವಾರಸ್ಯವಾಗಿ ತಿಳಿಸಿದ್ದಾರೆ.

ಇದೇ ಭಾವವನ್ನೇ ಸರ್ವಜ್ಞ ಕವಿಯೂ ಸಹ—

"ಲಿಂಗಕ್ಕೆ ಕಡೆಯೆಲ್ಲಿ। ಲಿಂಗಿಲ್ಲದೆಡೆಯಲ್ಲಿ?।
ಲಿಂಗದೊಳು ಜಗವು ಅಡಗಿಹುದು।
ಲಿಂಗವನು ಹಿಂಗಿದವರುಂಟೆ ಸರ್ವಜ್ಞ!"

ಈ ರೀತಿ ಜನಸಾಮಾನ್ಯರಿಗೂ ತಿಳಿಯುವ ತಿಳಿ ಭಾಷೆಯಲ್ಲಿ ಸುಂದರವಾಗಿ ತಿಳಿಸಿದ್ದಾನೆ.

ಶಿವಾನುಭಾವಿಗಳಾದ ಶಿವಯೋಗಿ ಶಿವಾಚಾರ್ಯರು ನೂರೊಂದು ನೆಲೆ-ಕಲೆಗಳನ್ನು ವಿವರಿಸುವ ತಮ್ಮ ಸಿದ್ಧಾಂತ ಶಿಖಾಮಣಿಯಲ್ಲಿ—

"ಜ್ಯೋತಿರ್ಮಯಂ ಪರಂ ಲಿಂಗಂ ಶೃತಿರಾಹ ಶಿವಾತ್ಮಕಂ।
ಸತ್ಯ ಭಾಸಾ ಸರ್ವಮಿದಂ ಪ್ರತಿಭಾತಿ ನ ಸಂಶಯಃ॥"

ಎಂದುದಾಗಿ ಜ್ಯೋತಿಸ್ವರೂಪವಾದ ಲಿಂಗದ ಮಹತ್ವವನ್ನು ಅರುಹಿದ್ದಾರೆ. ಅದಕ್ಕಾಗಿ ಸೃಷ್ಟಿಗೆ ತಾನೇ ಕಾರಣವಾಗಿ, ಪರಮಾನಂದ ಮಹೀರುಹವು ಫಲಿಸಿ ತೃಪ್ತಿರೂಪವಾಗಿ ಆ ಪ್ರಪಂಚಕ್ಕೆ ಕಾರಣವಾಗಿರುವ ಈ ಇಷ್ಟಲಿಂಗಧಾರಣೆ ಎಲ್ಲರಿಗೆ ಅತ್ಯಾವಶ್ಯಕ. ಬೀಜವೃಕ್ಷದಂತಿರುವ ಈ ಲಿಂಗವು ಭವಸಮುದ್ರವನ್ನು ದಾಟಿಸುವ ನಾವೆ. "ತನಗೆ ಲಿಂಗವಾಗಿ ಲಿಂಗಕ್ಕೆ ತಾನಾಗಿ ಹೆಚ್ಚು ಬೇರಿಲ್ಲದಿರ್ದೊಡೆ ಮಾತ್ರ ಲಿಂಗಾಂಗ ಸಾಮರಸ್ಯ, ಇದುವೇ ಭಾವೈಕ್ಯದ ರಹಸ್ಯ."

"ಲಿಂಗದೊಳಿರ್ದು ಲಿಂಗಮನೆ ತಾಳ್ದು
ನಿರಂತರ ಲಿಂಗಪೂಜೆಯಿಂ
ಲಿಂಗದಿನೊಲ್ದು ವಿಸ್ತರಿಸಿ ಲಿಂಗಕೆ
ಲಿಂಗಮನರ್ಪಿಸುತ್ತಮಾ।
ಲಿಂಗಪದಾರ್ಥಮಂ ಸವಿದು
ಲಿಂಗಸುಖಾಸ್ಪದನಾಗಿ ರಾಜಿಪಂ।
ಲಿಂಗನಿಜೈಕ್ಯನಯ್ಯ ಪರಮಪ್ರಭುವೇ
ಮಹದೈಪುರೀಶ್ವರಾ॥"

ನಿರ್ಮಲಾಂತಃಕರಣವುಳ್ಳ ಸತ್ಯಸಾಧಕರಿಗೆ ಈ ಸಿರಿ ನುಡಿ ಕೈಗನ್ನಡಿ. ಲಿಂಗನಿಜೈಕ್ಯ ಜ್ಞಾನದ ಸಿಹಿ ಜೇನು ತುಂಬಿಕೊಂಡಿರುವ ಜೇಂಗೊಡ.

ಮಾನವಃ ಶಿವಯೋಗೇನ ಶಿವೋಭವತಿ ಕೇವಲಂ

ಎಲ್ಲ ಯೋಗಗಳಲ್ಲಿ ಶಿವಯೋಗವೇ ಮಿಗಿಲು. ಶಿವಯೋಗದ ಹೃದಯವೇ ಷಟ್‌ಸ್ಥಲ. ಲಿಂಗತ್ರಯಗಳನ್ನು ಅಂಗವಿಸಿಕೊಂಡು ಲಿಂಗಾಂಗ ಸಾಮರಸ್ಯವನ್ನು ಪಡೆಯುವುದೇ ಶಿವಯೋಗ. ಶಿವಜೀವರ ಐಕ್ಯವಾಗಿ ಬೇರಿಲ್ಲದಿರ್ಪುದೇ ಶಿವಯೋಗ, ಉಳಿದ ಯೋಗಗಳು ಸಾಧನಮಾತ್ರ. ಗಾತ್ರತ್ರಯವಳಿದು ಚಿತ್ತದ ಚಿಗ್ಬಿಂದು ತೋರಿದಾಗ, ನಾದಬ್ರಹ್ಮವ ಶೋಧಿಸಿ, ಸದ್ವ್ರತಚಿತ್ತನಾದಾಗ ಶಿವಯೋಗ ಸಾಧ್ಯ. ರಾಜಯೋಗವು ಜೀವಶುದ್ಧಿಗೆ ಸಾಧನವಾದರೆ ಶಿವಯೋಗವು ಶಿವಸಾಮರಸ್ಯಕ್ಕೆ ಸುವಿಧಾನ.

ಒಂದೆಡೆ ತೋಂಟದ ಸಿದ್ಧಲಿಂಗ ಯತಿಗಳು—

"ಬ್ರಹ್ಮರಂಧ್ರದಲ್ಲಿಪ್ಪನಾದ ಚೈತನ್ಯವಪ್ಪ ಪರಮ ಚಿತ್ಕಳೆಯೇ ಭಾವ-ಮನ-ಕರದಲ್ಲಿ ಶ್ರೀಗುರು ತಂದು ಸಾಹಿತ್ಯವ ಮಾಡಿದನಾಗಿ, ಭಾವದಲ್ಲಿ ಸತ್ ಸ್ವರೂಪ ವಪ್ಪ ಇಷ್ಟಲಿಂಗವೆಂದೆನಿಸಿ, ಒಂದೇ ವಸ್ತು ತನು-ಮನ-ಭಾವಂಗಳಲ್ಲಿ ಇಷ್ಟಪ್ರಾಣ ಭಾವವಾದ ಭೇದವನರಿಯದೆ ಇಷ್ಟಲಿಂಗವ ದೃಷ್ಟಿಯಿಂದ ಗ್ರಹಿಸಿ, ಪ್ರಾಣಲಿಂಗವ ಮನಜ್ಞಾನದಿಂದ ಗ್ರಹಿಸಿ ತೃಪ್ತಿಲಿಂಗವ ಭಾವಜ್ಞಾನದಿಂದ ಗ್ರಹಿಸಿ ಈ ಲಿಂಗ ತ್ರಯ ಏಡಿದು ಆಚರಿಸಿ, ಲಿಂಗದೊಡನೆ ಕೂಡಿ, ಲಿಂಗವೇ ತಾನು ತಾನಾಗಿ ವಿರಾಜಿಸುತಿರ್ಪುದೀಗ ಶಿವಯೋಗ ನೋಡಾ ಮಹಾಲಿಂಗ ಗುರುಶಿವಸಿದ್ಧೇಶ್ವರ ಪ್ರಭುವೇ" ಎಂದುದಾಗಿ ಶಿವಯೋಗದ ಸಂಪೂರ್ಣ ವಿವರಣೆಯನ್ನು ಸ್ಪಷ್ಟಪಡಿಸಿದ್ದಾರೆ. ಬಾಹ್ಯವನ್ನು ಸಂಪೂರ್ಣ ಮರೆತು, ತನ್ನ ಹೃದಯಕಮಲವನ್ನು ಅರಳಿಸಿಕೊಂಡು, ಜ್ಞಾನತೇಜದ ಇಷ್ಟಲಿಂಗಾನುಸಂಧಾನದಲ್ಲಿ ಬೆರೆತರೆ, ಶಿವಯೋಗ ಸಾಧನೆಯು ಸಾಫಲ್ಯ ದೊರಕುವುದು. ಅದಕ್ಕಾಗಿ ಶಿವಜ್ಞಾನ, ಶಿವಭಕ್ತಿ, ಶಿವಧ್ಯಾನ, ಶಿವವ್ರತ, ಶಿವಾರ್ಚನೆಗಳನ್ನು ನಿಯಮಪೂರ್ವಕವಾಗಿ ನಿಷ್ಠೆಯಿಂದ ಮಾಡಿದರೆ ಸುಳಿದು ಸೂಸುವ ಗಾಳಿಯು ಸ್ಥಿರವಾಗಿ ನಿಲ್ಲುವದಲ್ಲದೆ ಮನಸ್ಸಿನ ಪರಿದಾಟ ಹೋಗಿ ಕಾಲಕರ್ಮವ ಗೆದೆಯಲು ಅನುಕೂಲವಾಗುವದು. ನಿರ್ಮಲ ಶರೀರಿಯಾಗಿ ಬೆಳಗಿನೊಳು ಬೆಳಗು ಒಡಗೂಡಿದಂತೆ, ಕ್ಷೀರದೊಳು ಕ್ಷೀರಕೂಡಿದಂತೆ ತಾನೇ ತಾನಾಗಿ ಶಿವಮಯನಾಗುವನು.

ಕಾರಣ, ಹೃನ್ಮಂದಿರದಲ್ಲಿ ಶಿವಶಕ್ತಿ ಶಿವಭಾವವನ್ನು ಒಳಗಿಳಿಸಿ, ಬೆಳೆಸಿ,

ಬೆಳಗಿಸಿಕೊಂಡು ತಿಮಿರಾ ವೃತದಂತಿರುವ ಮರೆಯನ್ನು ಮರೆಯುವುದೇ ಶಿವಯೋಗಸಾಧಕರ ಪರಮ ಗುರಿ.

"ಕೀಟೋ ಭ್ರಮರಯೋಗೇನ ಭ್ರಮರೋ ಭವತಿ ಧ್ರುವಂ।
ಮಾನವಃ ಶಿವಯೋಗೇನ ಶಿವೋ ಭವತಿ ಕೇವಲಂ॥"

ಮಾನವನು ಈ ರೀತಿ ಅಂತರಂಗನಿರೀಕ್ಷಣೆ ಮಾಡಿ ಸಾಧಿಸಿದಾಗ ಈ ನುಡಿ ಮುತ್ತು ಸಾರ್ಥಕ; ಬಾಳ್ಬೆಳಕಿಗೆ ತಾರಕ.

ಬುದ್ಧಿನಾಶಾತ್ ಪ್ರಣಶ್ಯತಿ

ಆತ್ಮೋನ್ನತಿಗೆ ಕಾಮದಹನವೇ ಪರಮಸಾಧನ. ಶೀಲಸಂವರ್ಧನೆಗೆ ಪ್ರಥಮ ಸೋಪಾನ. ಕಾಮಾಗ್ನಿಯಿಂದ ಕ್ರೋಧಾದಿ ದುರ್ಗುಣಗಳು ಜನಿಸಿ, ಸ್ಮೃತಿ ಭ್ರಂಶವಾಗುವದಲ್ಲದೆ ಬುದ್ಧಿ ನಷ್ಟವಾಗಿ ಜೀವನದ ಮಹಾವೃಕ್ಷವೇ ಸುಟ್ಟು ಭಸ್ಮವಾಗುತ್ತದೆ. ಕೆಸರಿನಲ್ಲಿ ಸಿಕ್ಕ ಪಶುವಿನಂತೆ ದುಃಖಕ್ಕೀಡಾಗುತ್ತದೆ. ಕೋಲತುದಿಯ ಕೋಡಗನಂತೆ; ಸರ್ಪದ ನೆರಳಿನಲ್ಲಿರುವ ಕಪ್ಪೆಯಂತೆ ಗತಿಯಾಗುತ್ತದೆ. ಆತ್ಮಶಕ್ತಿಯ ದಿವ್ಯ ತೇಜಸ್ಸು ನಶಿಸಿ, ಕಣ್ಣಿಗೆ ಕತ್ತಲಿಯ ಪೊತ್ತವು ಮುತ್ತುತ್ತದೆ.

ಭಗವದ್ಗೀತೆಯ ಎರಡನೆಯ ಅಧ್ಯಾಯದಲ್ಲಿ ಇದೇ ಭಾವವನ್ನೇ ಕಾಣಬಹುದು.

"ಧ್ಯಾಯತೋ ವಿಷಯಾನ್ ಪುಂಸಃ ಸಂಗಸ್ತೇಷೂಪಜಾಯತೇ।
ಸಂಗಾತ್ ಸಂಜಾಯತೇ ಕಾಮಃ ಕಾಮಾತ್
ಕ್ರೋಧೋಽಭಿಜಾಯತೇ ॥ ೬೨ ॥
ಕ್ರೋಧಾದ್ಭವತಿ ಸಂಮೋಹಃ ಸಂಮೋಹಾತ್ ಸ್ಮೃತಿವಿಭ್ರಮಃ।
ಸ್ಮೃತಿಭ್ರಂಶಾತ್ ಬುದ್ಧಿನಾಶೋ ಬುದ್ಧಿನಾಶಾತ್ ಪ್ರಣಶ್ಯತಿ" ॥ ೬೩ ॥

ಶ್ರೀಕೃಷ್ಣನು ಹೇಳಿರುವ ಈ ಅಮರವಾಣಿ ಸಂಸಾರಸಾಗರದಲ್ಲಿ ಮುಳುಗಿದವರಿಗೆ ಆಸರಗಂಬವಿದ್ದಂತಿದೆ.

ಶ್ರೀ ನಿಜಗುಣಶಿವಯೋಗಿಗಳು "ಕರಣ ವಿಜಯದಿಂದ ಕಲಿತನಮುಂಟೆ" ಎಂದು ನುಡಿದು ಇಂದ್ರಿಯ ನಿಗ್ರಹದ ಮಹತ್ವವನ್ನು ತಿಳಿಸಿದ್ದಾರೆ. ಇಂದ್ರಿಯ ನಿಗ್ರಹ ಮಾಡುತ್ತ ಹೋದಂತೆ, ದೋಷಗಳೆಲ್ಲವೂ ದೂರಾಗಿ, ಸುತ್ತಿದ ಮಾಯಾ ಪ್ರಪಂಚವೂ ಬಿಟ್ಟು, ಪರಮ ಸುಖಪ್ರಾಪ್ತಿಯಾಗುವದಲ್ಲದೆ ಆತ್ಮಜ್ಞಾನವು ಲಭಿಸುವದು. ಅದಕ್ಕಾಗಿ ಕಡಿವಾಣವಿಲ್ಲದ ಕುದುರೆಯಂತಿರುವ ಮನಸ್ಸನ್ನು ಅತ್ತಿತ್ತ ಹರಿಯದಂತೆ ಒಂದೆಡೆಗೆ ನಿಲ್ಲಿಸಿ, ಏಕಾಗ್ರತೆಯನ್ನು ಸಾಧಿಸುವದೇ ಸಾಧಕರ ಆದ್ಯ ಕರ್ತವ್ಯ.

ಮಹಾತ್ಮಾ ಬಸವಣ್ಣನವರು ತಮ್ಮದೊಂದು ವಚನದಲ್ಲಿ—

"ಅತ್ತಲಿತ್ತ ಹೋಗದಂತೆ ಹೆಳವನ ಮಾಡಯ್ಯ ತಂದೆ, ಸುತ್ತಿಸುಳಿದು ನೋಡದಂತೆ ಅಂಧಕನ ಮಾಡಯ್ಯ ತಂದೆ, ಮತ್ತೊಂದು ಕೇಳದಂತೆ ಕಿವುಡನ ಮಾಡಯ್ಯ ತಂದೆ, ನಿಮ್ಮ ಶರಣರ ಪಾದವಲ್ಲದೆ ಅನ್ಯ ವಿಷಯಕ್ಕೆಳಸದಂತಿರಿಸು ಕೂಡಲಸಂಗಮದೇವಾ" ಎಂದುದಾಗಿ ಗಾಳಿಯಂತೆ ವೇಗವುಳ್ಳ ಮನಸ್ಸನ್ನು ಸ್ವಾಧೀನಪಡಿಸಿಕೊಳ್ಳಲು ಕೂಡಲಸಂಗಮನಾಥನನ್ನೇ ಪ್ರಾರ್ಥಿಸಿದ್ದಾರೆ. ತುಪ್ಪದ ಸವಿಗೆ ಅಲಗನೆಕ್ಕುವ ಸೊಣಗನಂತಿರುವ ಚಿತ್ತದ ಚಾಂಚಲ್ಯವನ್ನು ದೂರಮಾಡಲು ಮೊರೆ ಇಟ್ಟಿದ್ದಾರೆ.

ಲಿಂ. ಹಾನಗಲ್ಲ ಕುಮಾರಶಿವಯೋಗಿಗಳೂ ಸಹ "ಚಿತ್ತದರಾಗ ಭ್ರಾಂತಿಯು ಪೋಗ, ವೃತ್ತಿಯು ಜಾಲ ಚಿಂತೆಯ ಮೂಲ" ಎಂದು ಚಿಂತೆಗೆ ತಾಯಿಬೇರಾದ ಚಿತ್ತದ ರಾಗವನ್ನು ಕಿತ್ತೊಗೆದಾಗ ಚಿತ್ತವು ಸುಸ್ಥಿರಗೊಂಡು, ಆತ್ಮಸಾಕ್ಷಾತ್ಕಾರಕ್ಕೆ ಆಧಾರವಾಗುವುದೆಂದು ಮಾರ್ಗದರ್ಶನ ನೀಡಿದ್ದಾರೆ.

ಹರಿದಾಡುತ್ತಿರುವ ಮನಸ್ಸಿನ ಪ್ರವಾಹಕ್ಕೆ ಆತ್ಮಸಂಯಮನದ ಅಣೆಕಟ್ಟು ಕಟ್ಟುವುದೇ ಆತ್ಮಸಾಧನೆಯ ಅಡಿಗಲ್ಲು. ಆತ್ಮಸಿದ್ಧಿಗೆ ಮೈಲುಗಲ್ಲು.

ಅಹಿಂಸಾ ಪರಮೋ ಧರ್ಮಃ

ಕೊಲ್ಲದಿರ್ಪುದೇ ಮಾನವಧರ್ಮದ ಮೂಲ ಮಂತ್ರ. ಸಕಲ ಪ್ರಾಣಿಗಳಲ್ಲಿ ಆತ್ಮೀಯಭಾವನೆಯಿಂದ ನಡೆದರೆ ಮಾತ್ರ, ಆತ್ಮ-ಸ್ವಾತಂತ್ರ್ಯ, ಇದೇ ಮಾನವ ಸಂಸ್ಕೃತಿ; ದೇವನಿಗೆ ಸಂಪ್ರೀತಿ.

ಹಿಂಸಾಚರಣೆಯಿಂದ ಮನುಷ್ಯನು ವಿನಾಶದತ್ತ ಸಾಗುವನಲ್ಲದೆ, ಅವನ ತಾಮಸೀಪ್ರವೃತ್ತಿಗಳು ಬೆಳೆದು, ಆತ್ಮಶಕ್ತಿಯು ಕುಗ್ಗಿ, ಬೆಳಕಿರದ ಮನೆಯಂತೆ ಅವನ ಜೀವನವಾಗುತ್ತದೆ; ಅಂತಃಸತ್ವವು ನಶಿಸಿ, ಅಂತಃಕಲಹಗಳು ಹೆಚ್ಚಾಗುತ್ತವೆ. ಇದರಿಂದ ತನ್ನ ಅಸ್ತಿತ್ವವನ್ನು ಕಳೆದುಕೊಂಡು ಅವನು ನಿರಂತರ ಅಂಧಕಾರದಲ್ಲಿ ತಿರುಗಬೇಕಾಗುತ್ತದೆ; ನಿಶ್ಚೇಷ್ಟಿತನಾಗಿ ಇದ್ದಲ್ಲಿಯೇ ಕೊರಗಬೇಕಾಗುತ್ತದೆ. ಹಿಂಸೆಯಿಂದಲೇ ರಾಗದ್ವೇಷಾದಿ ದುರ್ಗುಣಗಳು ಉದ್ಭವಿಸುತ್ತವೆ. ಅದರಿಂದಲೇ ಮನುಷ್ಯನು ದೇವರಿಲ್ಲದ ಹಾಳು ದೇಗುಲದಂತೆ ಹಾಳಾಗುತ್ತಾನೆ. ಅದಕ್ಕಾಗಿ ಅಹಿಂಸೆ ಮುಂತಾದ ದೈವೀ ಗುಣಗಳ ವಿಕಾಸವು ಅತ್ಯಾವಶ್ಯಕ.

ವೇದವು "ಮಾ ಹಿಂಸ್ಯಾತ್ ಸರ್ವಾಭೂತಾನಿ" ಎಂದು ಹೇಳಿದೆ. ಹಿಂಸೆಯು ಬಾಹ್ಯ ಮತ್ತು ಆಭ್ಯಂತರವೆಂದು ಎರಡು ತೆರನಾಗಿರುತ್ತದೆ, ದೈಹಿಕ ಮತ್ತು

ವಾಚಿಕವೆಂಬ ಬಾಹ್ಯಹಿಂಸೆಗಿಂತಲೂ ಮಾನಸಿಕ ಹಿಂಸೆಯು ತುಂಬ ಕೆಟ್ಟದ್ದು. ಮಾನಸಿಕ ಹಿಂಸೆ ಕೊಡುವವದರಿಂದ ಮನೋರೋಗಕ್ಕೆ ದಾರಿ ಮಾಡಿದಂತೆ; ಪಾಪದ ಕೊಡವನ್ನು ತುಂಬಿಕೊಂಡಂತೆ; ತನ್ನತನವನ್ನು ನಷ್ಟ ಮಾಡಿಕೊಂಡು ತನ್ನ ವ್ಯಕ್ತಿತ್ವ ವಿಕಾಸಕ್ಕೆ ತಾನೇ ಕುಠಾರಾಘಾತ ಮಾಡಿಕೊಂಡಂತಾಗುವುದು,

"ಆತ್ಮವತ್ ಸರ್ವ-ಭೂತಾನಿ ಯಃ ಪಶ್ಯತಿ ಸ ಪಶ್ಯತಿ" ಎಂಬ ನುಡಿಯು ಅರ್ಥಗರ್ಭಿತವಾದುದು; ಭಾವಪೂರ್ಣವಾದುದು, ಮಹಾತ್ಮಾ ಗಾಂಧಿಯವರು– "Ahimsa is the farthest limit of humanity" ಎಂದುದಾಗಿ ಅಹಿಂಸೆಯ ಮಹತ್ತ್ವವನ್ನು ತಿಳಿಸಿದ್ದಾರೆ. ಪತಂಜಲಿಯ ಯೋಗಸೂತ್ರವು "ಅಹಿಂಸಾಪ್ರತಿಷ್ಠಾಯಾಂ ತತ್‌ಸನ್ನಿಧೌ ವೈರತ್ಯಾಗಃ" ಎಂದು ಅಹಿಂಸೆಯ ಲಕ್ಷಣ ವನ್ನು ಹೇಳಿ, "ವೈರತ್ವವನ್ನು ದೂರೀಕರಿಸುವುದೇ ಅಹಿಂಸೆಯ ಮೂಲ ಗುರಿ" ಯೆಂದು ಸ್ಪಷ್ಟಪಡಿಸಿದೆ. ಕೊಲ್ಲದಿರ್ಪ ಧರ್ಮವೆಲ್ಲರಿಗೂ ಸಮ್ಮತವು! ಅಲ್ಲದನು ಮೀರಿ ಕೊಲ್ಲುವನು ನರಕಕ್ಕೆ! ನಿಲ್ಲದಲೆ ಹೋಹ ಸರ್ವಜ್ಞ" ಎಂದು ಮುಂತಾಗಿ ಹೇಳಿ, ಸರ್ವಜ್ಞನು ಹಿಂಸೆ ಮತ್ತು ಅಹಿಂಸೆಯ ಫಲವನ್ನು ಸ್ಪಷ್ಟಗೊಳಿಸಿದ್ದಾನೆ. ಹಿಂಸೆ ಎಲ್ಲ ದೃಷ್ಟಿಯಿಂದಲೂ ತ್ಯಾಜ್ಯವಾದುದು; ಅಹಿಂಸೆ ಮಾತ್ರ ಎಲ್ಲರಿಗೂ ಸಮ್ಮತವು. ಅಂತೆಯೇ ಕಾಯಾ, ವಾಚಾ, ಮನಸಾಽಪಿ ಹಿಂಸೆಯಾಗದಂತೆ ನಡೆದು ಕೊಳ್ಳುವಲ್ಲಿಯೇ ಜಾಗತಿಕ ಶಾಂತಿ ನೆಲಸುತ್ತದೆ.

ಮಹಾತ್ಮಾ ಬಸವಣ್ಣನವರು ಸಹ ತಮ್ಮ ಸಂದೇಶದಲ್ಲಿ–"ಕೊಲ್ಲುವವನೇ ಮಾದಿಗ; ಹೊಲಸು ತಿಂಬುವವನೇ ಹೊಲೆಯ. ಕುಲವೇನೋ ಅವದಿರ ಕುಲ ವೇನೋ? ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ಕೂಡಲ ಸಂಗನ ಶರಣರೇ ಕುಲಜರು", "ದಯವಿರಬೇಕು ಸಕಲ ಪ್ರಾಣಿಗಳಲ್ಲಿ. ದಯವೇ ಧರ್ಮದ ಮೂಲ ವಯ್ಯಾ!" ಎಂದುದಾಗಿ ಜಗತ್ತಿಗೆ ಅಹಿಂಸೆಯ ಮಹತಿಯನ್ನು ಚಿತ್ರಿಸಿ, ಮಾನವ ಕುಲವನ್ನೇ–ಸಕಲ ಜೀವಿಗಳನ್ನೇ–ಜಾಗ್ರತಗೊಳಿಸಿದ್ದಾರೆ. ವಿಶಾಲ ಹಾಗೂ ವಿಚಾರಪೂರ್ಣವಾದ ಈ ವಚನಗಳು ಮಾನವಕಲ್ಯಾಣಸಾಧನೆಗೆ ರಕ್ಷಾಮಂತ್ರ; ಜೀವನದ ತಾಪತ್ರಯಗಳಿಂದ ನೊಂದವರಿಗೆ ಆತಪತ್ರ.

ಸರ್ವೇಜನಾಃ ಸುಖಿನೋಭವಂತು

ಸಮಗ್ರಿಂದು ಶಾಂತಿ ಸಮಾಧಾನಗಳು ದೊರಕಬೇಕಾದರೆ ಜಾತೀಯತೆಯು ಐಕ್ಯವನ್ನು ಸಾಧಿಸಿದರೆ ಮಾತ್ರ ಸಾಧ್ಯ. ಜಾತೀಯತೆಯ ಪೆಡಂಭೂತವನ್ನು ಬೆನ್ನು ಹತ್ತಿದವರು ನಿರಂತರ ಅಂಧಕಾರದಲ್ಲಿ ತಿರುಗಬೇಕಾಗುತ್ತದಲ್ಲದೆ, ಸತ್ಯಪಥವನ್ನು ದೂರೀಕರಿಸಿದಂತಾಗುತ್ತದೆ. ಅನೇಕ ಶತಮಾನಗಳಿಂದ ಪುಣ್ಯ-ಪುರುಷರು ತೋರಿದ

ಭಾವೈಕ್ಯದ ಸತ್ಯಸೌಂದರ್ಯವನ್ನು ನಾವಿಂದು ಕಾಣದಿದ್ದರೆ, ಆ ಹೆದ್ದಾರಿಯಲ್ಲಿ ನಡೆಯದಿದ್ದರೆ ಕಣ್ಣಿದ್ದು ಕುರುಡರಾದಂತೆ, ಜೀವವಿದ್ದರೂ ಶವವಿದ್ದಂತೆ. ಮತ ಮತಗಳ ಧರ್ಮ ಧರ್ಮಗಳ ತಿಕ್ಕಾಟದಲ್ಲಿ ವಿಶ್ವಶಾಂತಿಯು ಕನಸಾಗುತ್ತದೆ. ಮೈ ಮನಗಳು ಬಹಿರ್ಮುಖದತ್ತ ಸಾಗಿ ಅಂತರ್ಮುಖತೆಗೆ ಅಡ್ಡಿಯಾಗುತ್ತದೆ. ಅಂತಃಸತ್ವ ಇಲ್ಲದಾಗುತ್ತದೆ. ಅದಕ್ಕಾಗಿ ರಾಷ್ಟ್ರದ ಶಕ್ತಿ ಹೆಚ್ಚಿಸಲು ಜಾತೀಯತೆಯ ಐಕ್ಯತೆಯೇ ಭದ್ರ ಬುನಾದಿ.

ಸರ್ವಜ್ಞನು ಒಂದೆಡೆ—

"ಯಾತರದು ಹೂವೇನು। ನಾತರದು ಸಾಲದೇ। ಜಾತಿ-ವಿಜಾತಿಯೆನಬೇಡ। ದೇವನೊಲಿದಾತನೇ ಜಾತ ಸರ್ವಜ್ಞ॥" ಹೀಗೆ ಹೇಳುವಲ್ಲಿ ಸರ್ವಜ್ಞನ ದೂರ ದೃಷ್ಟಿ ಎದ್ದು ಕಾಣುತ್ತದೆ. ಭಾವೈಕ್ಯದ ಕುಸುಮ ಅರಳಿ ಪರಿಮಳಿಸಿದಂತಿದೆ. ಜಗತ್ತಿನ ಜನರೆಲ್ಲ ಉಸುರಾಡಿಸುವ ವಾಯುವು ಒಂದೇ, ಜಗತ್ತಿಗೆ ಬೆಳಕನ್ನು ಕೊಡುವ ಸೂರ್ಯನು ಒಬ್ಬನೇ, ಕುಡಿಯುವ ಜಲ ಒಂದೇ, ನಡೆಯುವ ನೆಲ ಒಂದೇ, ಹೀಗಿರುವಾಗ ನಾವಿಂದು ಜಾತೀಯತೆಯ ದಾವಾ–ನಲದಲ್ಲಿ ಸುಟ್ಟು ಭಸ್ಮೀಭೂತರಾದರೆ, ಆ ಆ ಧರ್ಮಗಳಲ್ಲಿರುವ ಸತ್ಯದರ್ಶನವನ್ನು ಸಾಕ್ಷಾತ್ಕಾರ ಮಾಡಿಕೊಳ್ಳದೆ ಕೇವಲ ಕಚ್ಚಾಟದಲ್ಲಿಯೇ ನಮ್ಮ ಜೀವನವನ್ನು ಸವೆಸಿದರೆ ಆತ್ಮ ಶಾಂತಿಯೆಂದು? ನಾವೆಲ್ಲರೂ ಒಬ್ಬ ದೇವರು ಮಕ್ಕಳು ಎಂಬ ಭಾವನೆ ಬೇರೂರಿ ಕೊಳ್ಳದಿದ್ದರೆ ವಿಶ್ವಶಾಂತಿ ಎಂದು?... ....

ಮಹಾತ್ಮಾ ಗಾಂಧಿಯವರು "ಪ್ರತಿಯೊಂದು ಜಾತಿಯೂ ತನ್ನ ವೈಶಿಷ್ಟ್ಯತೆ ವನ್ನು ಕಾಪಾಡಿಕೊಂಡು ಸಹಿಷ್ಣುತೆಯ ಮೂಲಕ ಐಕ್ಯವನ್ನುಂಟು ಮಾಡಿಕೊಳ್ಳು ವದೇ ಮುಖ್ಯ ಗುರಿ" ಎಂದು ಮುಂತಾಗಿ ಒತ್ತಿ ಒತ್ತಿ ಹೇಳಿದ್ದಾರೆ...."ಮಾನವ ಕುಲವೆಲ್ಲವೂ ಒಂದು, ಈ ಭಾವನೆಯನ್ನು ಕಲ್ಪನೆಯ ದವಡೆಯೊಳಗೆ ಅರಗಿಸಿ ಕೊಂಡರೆ ಅರಿವು ಸ್ಥಿರವಾದೀತು." ಸರ್ವೇಜನಾಃ ಸುಖಿನೋಭವಂತು" ಈ ನುಡಿ ಪ್ರತಿಯೊಬ್ಬರ ನಾಡಿ ನಾಡಿಯಲ್ಲಿ ಒಡಮೂಡಿ ಹರಿದಾಡಿದರೆ ಸಾರ್ಥಕ. ಆಗ ಭಾವೈಕ್ಯದ ಬಂಧುರತೆ ಮತ್ತು ಭಾರತಮಾತೆಗೆ ಸಮಾಧಾನವಾಗುವದು; ಅದಕ್ಕಾಗಿ ಭಾರತದ ಎಲ್ಲ ಧರ್ಮದವರೂ ಸ್ನೇಹದಿಂದ ಬಾಳುವವನ್ನು ಕಲಿಯೋಣ, "ಅವಿಭಕ್ತಂ ವಿಭಕ್ತೇಷು" ಇವರ ಒಳಗುಟ್ಟನ್ನು ಹೃದಯಮಂದಿರ ದಲ್ಲಿ ಇಳಿಸಿಕೊಂಡು, ವಿವಿಧತೆಯಲ್ಲಿ ಏಕತೆಯನ್ನು ಕಾಣೋಣ. ಇದೇ ಮಹಾತ್ಮಾ ಬಸವಣ್ಣನವರ ಹಾಗೂ ಮಹಾತ್ಮಾ ಗಾಂಧಿಯವರ ಅಮರ ಸಂದೇಶ.

(ಧಾರವಾಡ ಆಕಾಶವಾಣಿಯವರ ಕೃಪೆಯಿಂದ)

ಧರ್ಮೋ ರಕ್ಷತಿ ರಕ್ಷಿತಃ

ಧರ್ಮಬುದ್ಧಿಯಿಂದ ನಡೆದರೆ ಅಂತಃಶುದ್ಧಿ ಮತ್ತು ಕ್ರಿಯಾಶುದ್ಧಿ, ಧರ್ಮ ಜೀವನವು ಮಾನವನನ್ನು ವಿಕಾಸದತ್ತ ಸಾಗಿಸಿ ಕೃತಕೃತ್ಯವನ್ನು ನೀಡುವುದಲ್ಲದೆ ಆತ್ಮಸಾಕ್ಷಾತ್ಕಾರಕ್ಕೆ ಮೂಲಸಾಧನವಾಗುವುದು. ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಸಹಾಯವಾಗುವುದು. ವಿಪತ್ಕಾಲದಲ್ಲಿಯೂ ಧರ್ಮಾಚರಣೆಯುಳ್ಳ ವ್ಯಕ್ತಿಗೆ ಕಷ್ಟವಾಗದು. ಧರ್ಮದೃಷ್ಟಿಯಿಂದ ಬೆಳೆದ ಸಮಾಜ, ನಾಡು ಬಹುದಿನ ಬದುಕ ಬಲ್ಲದು.

"ಅನಿತ್ಯಾನಿ ಶರೀರಾಣಿ ವಿಭವೋ ನೈವ ಶಾಶ್ವತಃ
ನಿತ್ಯಂ ಸನ್ನಿಹಿತೋ ಮೃತ್ಯುಃ ಕರ್ತವ್ಯೋ ಧರ್ಮಸಂಗ್ರಹಃ॥"

ಸಾವು ಬರುವುದಕ್ಕಿಂತ ಮುಂಚಿತವೇ ಧರ್ಮಸಂಗ್ರಹ ಮಾಡಿ, ಆತ್ಮಶಕ್ತಿ ಬೆಳೆಸಿ ಕೊಳ್ಳಬೇಕೆಂಬುದೇ ಈ ನುಡಿಯ ಭಾವ.

"ಧೃತಿಃ ಕ್ಷಮಾದಮೋಽಸ್ತೇಯಂ ಶೌಚಮಿಂದ್ರಿಯ ನಿಗ್ರಹಃ
ಧೀರ್ವಿದ್ಯಾ ಸತ್ಯಮಕ್ರೋಧೋ ದಶಕಂ ಧರ್ಮ ಲಕ್ಷಣಂ॥"

ವಿಪತ್ತಿನಲ್ಲಿ ಧೈರ್ಯ, ತಪ್ಪು ಮಾಡಿದವರನ್ನು ಮನ್ನಿಸುವದು, ಕೆಟ್ಟಕಾರ್ಯ ಮಾಡದಂತೆ ಮನಸ್ಸನ್ನು ತಡೆಯುವದು, ಕಳ್ಳತನ ಮಾಡದೆ ಇರುವದು, ಒಳ ಹೊರಗೂ ಶುಚಿಯಿಂದಿರುವದು, ಇಂದ್ರಿಯನಿಗ್ರಹ ಮಾಡುವದು, ಸುಬುದ್ಧಿ, ವಿದ್ಯೆ, ಸತ್ಯ, ಕೋಪ ತಾಳದಿರುವದು ಈ ಮುಂತಾದ ಸದ್ಗುಣಗಳನ್ನು ಮನಃ ಪೂರ್ವಕ ಪರಿಪಾಲಿಸುವುದೇ ಧರ್ಮದ ಒಳಗುಟ್ಟು.

ಇಂದು ರಾಷ್ಟ್ರೋದ್ಧಾರಕ್ಕೆ ಧರ್ಮದ ವಿಕಾಸವೇ ಹೆದ್ದಾರಿ; ಆದರೆ ವಿವೇಚನೆ ಹಾಗೂ ಜ್ಞಾನೋದಯದ ಸಹಕಾರವಿಲ್ಲದ ಧರ್ಮವು ನಿಷ್ಫಲವಾಗುವು ದಲ್ಲದೆ, ನಿಸ್ಸತ್ವದಿಂದಲೇ ಮರಣ ಹೊಂದಬೇಕಾಗುತ್ತದೆ.

ಒಂದೆಡೆ ಮಹಾತ್ಮಾಗಾಂಧಿಯವರು–

"ವಿಚಾರಪರತೆಯನ್ನು ಕೋರದ, ನೀತಿಗೆ ವಿರುದ್ಧವಾದ ಎಂಥ ಧಾರ್ಮಿಕ- ತತ್ವವನ್ನಾಗಲಿ ನಾನು ತಳ್ಳಿಬಿಡುತ್ತೇನೆ."

"ವಿಚಾರಪ್ರಧಾನವಾದ ಈ ಯುಗದಲ್ಲಿ ಪ್ರತಿಯೊಂದು ಧರ್ಮದ ಪ್ರತಿ ಯೊಂದು ಸಿದ್ಧಾಂತವೂ ಬುದ್ಧಿ ವಿವೇಚನೆಯ ವಿಷಪರೀಕ್ಷೆಗೂ ಸಾರ್ವತ್ರಿಕ ಒಪ್ಪಿಗೆಗೂ ಬದ್ಧವಾಗಲೇಬೇಕು" ಎಂದುದಾಗಿ ಅನುಭವಪೂರ್ಣ ವಿಚಾರವನ್ನು ಮುಂದಿರಿಸಿ ಧರ್ಮದ ಪರಿಮಳವು ಸುತ್ತಲೂ ಬೀರುವಂತೆ, ಬಹು ಸುಂದರವಾಗಿ ಮತ್ತೆ ಧರ್ಮದ ಮಹತ್ವದ ಸತ್ಯ ಸಂದೇಶವನ್ನು ನೀಡಿದ್ದಾರೆ. ಅದಕ್ಕಾಗಿ ನಮಗಿಂದು ಧರ್ಮದರ್ಶನವೇ ಆತ್ಮೋನ್ನತಿಗೆ ರಕ್ಷಾಮಂತ್ರ.

ಹಿತಂ ಮನೋಹಾರಿ ಚ ದುರ್ಲಭಂ ವಚಃ

ಇದು ಮಹಾಕವಿ ಭಾರವಿಯ ಹಿತವಚನ ಮಾತಿನಿಂದ ಮಾನವನ ಆತ್ಮ ವಿಕಾಸದ ಅರಿವು ಅರ್ಥವಾಗುತ್ತದೆ. ಅಂತಃಶಕ್ತಿಯ ಕುರುಹು ತೋರಿಸುತ್ತದೆ. ಆಧ್ಯಾತ್ಮಸಾಧನೆಗೆ ದಾರಿ ತೋರಿಸುತ್ತದೆ. ವ್ಯಕ್ತಿಯ ಅಂತರಂಗವನ್ನು ಶುದ್ಧೀಕರಿಸಿ ಮಲಿನತೆಯನ್ನು ದೂರಗೊಳಿಸುತ್ತದೆ. ಮಾತು ಭಾವಶುದ್ಧಿಯನ್ನು ಮಾಡಿ, ಆತ್ಮಸಿದ್ಧಿಗೇರಿಸಿ, ಅಂತರಾತ್ಮನನ್ನು ಪೂತಾತ್ಮನನ್ನಾಗಿ ಮಾಡುವದಲ್ಲದೆ ದೇವನಡಿ ಸೇರಿಸುತ್ತದೆ. ಸಂಸ್ಕೃತಿಯ ಕಲ್ಪವೃಕ್ಷಕ್ಕೆ ನಿರ್ಮಲ ಜಲವನ್ನೀಡುತ್ತದೆ. ಆದರೆ ಆ ಮಾತಿನಲ್ಲಿ ಮಾಣಿಕ್ಯದಂತೆ ದೀಪ್ತಿ ಇರಬೇಕು. ಮಹಾಶಕ್ತಿ ಇರಬೇಕು. ಮುತ್ತಿನ ಹಾರದಂತೆ ತಿಳಿಬೆಳಕನ್ನು ತೋರಿಸುತ್ತಿರಬೇಕು. ಲಿಂಗ ಮೆಚ್ಚಿ ಅಹುದಹುದೆನುವಂತೆ ಅಂತರಾತ್ಮನಿಗೆ ತಿಳಿದಿರಬೇಕು. ಮಾತೆಂಬುದು ಜ್ಯೋತಿರ್ಲಿಂಗವೇ ಆಗಿರಬೇಕು. ಅಂದರೆ ಅದರ ಸಾರ್ಥಕತೆ, ಬಾಳ್ವೆಳಕಿಗೆ ದಾರಿದೀಪ, ಭಾವೋತ್ಕರ್ಷಕ್ಕೆ ನಂದಾದೀಪ. ಮನೋಹಾರಿಯಾದ ಹಿತನುಡಿ ಅಧರಕ್ಕೆ ಕಹಿಯಾದರೂ ಉದರಕ್ಕೆ ಸಿಹಿಯಾಗುತ್ತದೆ. ಆದರೆ ಅರ್ಥವಿಲ್ಲದ ಒಡೆದ ಮಾತಿನಿಂದ ಮುತ್ತು ಒಡೆದಂತೆ, ಜ್ಞಾನಲತೆ ಕಡಿದಂತೆ, ಧ್ಯಾನಶಕ್ತಿಯನ್ನು ಕುಗ್ಗಿಸಿದಂತೆ, ಕೃತಿಯಲ್ಲಿ ಸೊಬಗಿರದ ಮಾತು ನಿರರ್ಥಕ. ಒಳಹೊರಗೂ ಒಂದಾಗಿ, ಮೈಮನಗಳು ಶುದ್ಧಿಯಿರುವ ಮಾತಿಗೆ ಬೆಲೆ ಹೆಚ್ಚುವದಲ್ಲದೆ, ಬಲವು ಬೆಳೆದು ಬೆಳಗುತ್ತದೆ. ಹಿಂದಿನ ಶಿವಶರಣರು ಆ ಹೆದ್ದಾರಿಯಲ್ಲಿ ನಡೆದರು ಮತ್ತು ನುಡಿದರು.

ಸಕಲ ಜಪಂಗಳಿಗೆ ಹಾಗೂ ಸಕಲ ತಪಂಗಳಿಗೆ ಶಕ್ತಿ ಬರಬೇಕಾದರೆ ಸಮ ವಿನಯದಿಂದೊಡಗೂಡಿದ ಮೃದುವಚನವೇ ಮೂಲಾಧಾರವೆಂದು ಶರಣರು ತಿಳಿ ಹೇಳಿದ್ದಾರೆ.

ಒಂದೆಡೆ ಅರವಿಂದರು—

"ಈ ವಿಶ್ವದಲ್ಲಿ ಮೌನ ಮತ್ತು ಮಾತು ಇವೆರಡು ಮಹಾಶಕ್ತಿಗಳು. ಮೌನವು ಸಿದ್ಧತೆ ಮಾಡುವದು, ಮಾತು ಸೃಷ್ಟಿಮಾಡುವದು. ಮೌನವು ಕಾರ್ಯ ಮಾಡುತ್ತದೆ, ಮಾತು ಕಾರ್ಯಕ್ಕೆ ಪ್ರೇರಣೆ ಕೊಡುತ್ತದೆ. ಮೌನವು ಒತ್ತಾಯ ಮಾಡುತ್ತದೆ, ಮಾತು ಮನವೊಲಿಸುತ್ತದೆ" ಎಂದುದಾಗಿ ಮಾತಿನ ವಿಶಾಲ ದೃಷ್ಟಿಯ ವಿವರವನ್ನು ಸುಂದರವಾಗಿ ನಿರೂಪಿಸಿದ್ದಾರೆ.

"ಮಾತಿನ ಮಾಲೆಯಲ್ಲಿಪ್ಪುದೇ ಭಕ್ತಿ? ಮಾಡಿ ತನುಸವೆಯದನ್ನಕ್ಕ, ಮನಸವೆಯದನ್ನಕ್ಕ, ಧನಸವೆಯದನ್ನಕ್ಕ, ಅಪ್ಪುದೇ ಭಕ್ತಿ? ಕೂಡಲ ಸಂಗಮ ದೇವ ಎಲುದೋರಿ ಸರಸವಾಡುವನು, ಸೈರಿಸದನ್ನಕ್ಕ ಅಪ್ಪುದೇ ಭಕ್ತಿ?" ಎಂದು ಜಗದ್ವಿಭೂತಿ ಬಸವಣ್ಣನವರೂ ಸಹ ಅಂತರಂಗ ಶುದ್ಧಿಯಿಲ್ಲದ ಮಾತಿನ ಮಾಲೆ

ಯಿಂದ ಮಾನವನಿಗೆ ಯಾವ ಘನ ವ್ಯಕ್ತಿತ್ವವೂ ಬರಲಾರದೆಂದು ತಿಳಿಸಿದ್ದಾರೆ. ಮಾತಿನಿಂದಲೇ ನೋವು, ನಲಿವು ಕಾಣಬಹುದು.

ಶುದ್ಧ ಹೃದಯದಲ್ಲಿ ದೇವರ ನಾಮಾಮೃತವನ್ನು ತುಂಬುವದೇ ಮಾನವನ ಪರಮಗುರಿ ಮತ್ತು ಮನೋಹಾರಿ.

ಸತ್ಯಮೇವ ಜಯತೆ ನಾನೃತಂ

ಸತ್ಯವು ಮನುಷ್ಯನನ್ನು ಅಂತರ್ಮುಖಿದತ್ತ ಒಯ್ಯುತ್ತದೆ. ಸತ್ಯದರ್ಶನ ದಿಂದ ನಿತ್ಯವೂ ಪರಿಪೂರ್ಣದೆಡೆಗೆ ಹೋಗಲು ದಾರಿ ದೊರೆಯುತ್ತದೆ. ಸತ್ಯ ಸಂಶೋಧನೆಯಿಂದ ಆತ್ಮಕ್ಕೆ ಶಕ್ತಿ ಬರುವದಲ್ಲದೆ ತುಷ್ಟಿ-ಪುಷ್ಟಿಗಳು ದೊರೆತು ಭಾವಶುದ್ಧಿಯಾಗುತ್ತದೆ. ಚಿತ್ತವನ್ನು ಸುತ್ತಿಕೊಂಡಿರುವ ಅಜ್ಞಾನದ ಕಾರ್ಮೋಡ ಗಳು ದೂರ ಸರಿದು ಪ್ರಕಾಶವುಂಟಾಗುತ್ತದೆ. ಶಾಶ್ವತವಾದ ಸತ್ಯದರ್ಶನವಾದರೆ ವಿನೂತನ ಚೇತನಶಕ್ತಿಯುಂಟಾಗಿ ಆಧ್ಯಾತ್ಮಿಕ ಆದರ್ಶದಿಂದ ಅಂತಃಸತ್ವವು ಬಲಿತು ಪ್ರತಿಯೊಂದರಲ್ಲಿಯೂ ಜಯವನ್ನು ಗಳಿಸುವದು ಸಾಧಿಸುತ್ತದೆ.

ಈ ಸತ್ಯ ಸಾಕ್ಷಾತ್ಕಾರವು ಸುಲಭದಿಂದ ಸಾಧ್ಯವಾಗದು. ಈ ದಾರಿ ಅಸಿ ಧಾರೆಯಂತೆ ಹರಿತವಾದುದು. "ವಜ್ರಾದಪಿ ಕಠೋರಾಣಿ ಮೃದೂನಿ ಕುಸುಮಾದಪಿ" ಈ ತೆರನಾಗಿರುವದೇ ಸತ್ಯಮಾರ್ಗ. ಇದಕ್ಕಾಗಿ ತಪಸ್ಸು, ಆತ್ಮದಂಡನೆ ಮಾಡಬೇಕಾಗುವದು. ಸತ್ಯಾರಾಧನೆಯಿಂದಲೇ ಗಾಂಧಿಯವರು ಮಹಾತ್ಮರಾದರು. ಸತ್ಯಸಾಗರದಲ್ಲಿ ಈಸಿ ಸತ್ಯದರ್ಶನಮಾಡಿಕೊಂಡರು. ಭಾರತ ಸ್ವಾತಂತ್ರ್ಯವನ್ನು ಸತ್ಯಾಗ್ರಹದ ಸತ್ಯವ್ರತನಿಷ್ಠೆಯಿಂದಲೇ ಗಾಂಧೀಜಿ ದೊರಕಿಸಿ ಕೊಟ್ಟರು. "ಸತ್ಯಾನ್ನಾಸ್ತಿ ಪರೋಧರ್ಮಃ" ಸತ್ಯಕ್ಕೆ ಮಿಗಿಲಾದ ಧರ್ಮವಿಲ್ಲ. ದೇವಲೋಕವನ್ನು ಸೇರಲೂ ಸಹ ಸತ್ಯವ ನುಡಿವುದೇ ದಾರಿದೀಪವೆಂದು ಮಹಾತ್ಮಾ ಬಸವಣ್ಣನವರು ತಿಳಿಸಿದ್ದಾರೆ. ನೈತಿಕ ಜೀವನಕ್ಕೂ ಶೀಲಕ್ಕೂ ಸತ್ಯವೇ ಮೂಲಾಧಾರ.

ಒಂದೆಡೆ ಮಹಾತ್ಮಾ ಗಾಂಧಿಯವರು—

"ಬಾಲ್ಯದಿಂದಲೂ ನಾನೊಬ್ಬ ಸತ್ಯಾರಾಧಕ ಎಂಬುದು ನನ್ನ ವಿಶ್ವಾಸ. ಅದು ನನ್ನ ಅತ್ಯಂತ ಸಹಜಪ್ರವೃತ್ತಿ. ಉಪಾಸನಾಪೂರ್ವಕವಾದ ಶೋಧನೆಯಿಂದ ಭಗವಂತನೇ ಸತ್ಯ ಎಂಬ ರೂಢಿಯ ನಂಬಿಕೆಯ ಬದಲು ಸತ್ಯವೇ ಭಗವಂತ ಎಂಬ ಸೂತ್ರ ನನಗೆ ಸ್ಫುರಣವಾಯ್ತು. ಭಗವಂತನನ್ನು ಪ್ರತ್ಯಕ್ಷವೋ ಎಂಬಂತೆ ಕಾಣಲು ಈ ಸೂತ್ರದಿಂದ ನನಗೆ ಸಾಧ್ಯವಾಗಿದೆ. ನನ್ನ ಚೇತನ ಸಮಸ್ತವನ್ನು ಆತ ವ್ಯಾಪಿಸಿದ್ದಾನೆ" ಎಂಬುದು ನನ್ನ ಅನುಭವ.

"ಭಾರತ ಸ್ವಾತಂತ್ರ್ಯ ಸಾಧನೆಯೇ ನನ್ನ ಜೀವಿತೋದ್ದೇಶ. ಅದಕ್ಕಾಗಿ ನಾನು ಸಾಯಲು ಸಿದ್ಧ. ಏಕೆಂದರೆ ಭಾರತದ ಸ್ವಾತಂತ್ರ್ಯ ಸತ್ಯದ ಒಂದು ಅಂಶ. ಬಂಧಮುಕ್ತವಾದಾಗಲೇ ಭರತಖಂಡ ಸತ್ಯಸ್ವರೂಪನಾದ ಭಗವಂತನನ್ನು ಪೂಜಿಸ ಬಲ್ಲದು" ಎಂದುದಾಗಿ ಜೀವನದುದ್ದಕ್ಕೂ ವಿಶ್ವಾತ್ಮಕವಾದ ಸತ್ವಸಾಕ್ಷಾತ್ಕಾರಕ್ಕಾಗಿ ಹಗಲಿರುಳು ಪರಿಶ್ರಮವಹಿಸಿ, ಅನುಭವಿಸಿ ಮುಂಬರುವ ಜನೋದ್ಧಾರಕ್ಕಾಗಿ ಈ ರೀತಿ ನುಡಿದಿದ್ದಾರೆ:

"ಸತ್ಯೇನ ಧಾರ್ಯತೇ ಪೃಥ್ವೀ ಸತ್ಯೇನ ತಪತೇ ರವಿಃ|
ಸತ್ಯೇನ ವಾಯುವೋ ವಾಂತಿ ಸರ್ವಂ ಸತ್ಯೇ ಪ್ರತಿಷ್ಠಿತಂ||"

ಆತ್ಮಸ್ವಾತಂತ್ರ್ಯಕ್ಕೂ, ಆತ್ಮಶಾಂತಿಗೂ ಸತ್ಯತೆಯು ಉತ್ತಮತ್ವವನ್ನು ಪ್ರತಿಷ್ಠಿಸಿ ಕೊಂಡು ಕಾಪಾಡಿಕೊಳ್ಳುವದೇ ಮಾನವನ ಮುಖ್ಯೋದ್ದೇಶ. ಅದೇ ಸತ್ಯ ಅವನಿಗೆ ರಕ್ಷಾಕವಚ.

ಯದ್ಭಾವಸ್ತದ್ಭವತಿ

ಭಾವವಿದ್ದಂತೆ ಸಿದ್ಧಿ. ವ್ಯಕ್ತಿಯು ಅಂತರಂಗವನ್ನರಿಯಲು ಬೆರೆಯಲು ಭಾವವೇ ಮುಖ್ಯ ಸಾಧನ. ಶಿವಾರ್ಚನೆಗೂ ಭಾವವೇ ಮೂಲಕಾರಣ. ಭಾವನೆ ಯಲ್ಲಿ ನಿಷ್ಕಲ್ಮಷವಾದ ಆತ್ಮಶುದ್ಧಿ ಯೊಡಗೂಡಿದ್ದರೆ ಅದೇ ದೇವರಿಗೆ ಸಮರ್ಪಣ. ಈ ಸರ್ವಾರ್ಪಣ ಭಾವನೆಯೇ ಮಾನವನನ್ನು ದೇವನತ್ತ ಒಯ್ಯುವ ಅತ್ಯುತ್ತಮ ಸತ್ಪಥ. ಈ ಅರಿವು ಆಚಾರದಲ್ಲಿ ಸಮಾವೇಶವಾದರೆ, ಅಂತರಂಗ ಬಹಿರಂಗವೆಂಬ ಭೇದ ಕಳೆದು ಒಂದುಗೂಡಿಸಿ ಒಂದುಮಾಡಿದರೆ ಮತ್ತು ಒಳಹೊರಗೆ ಅರಿವು ಅಡಿಯಿಟ್ಟು ಒಂದೆಂಬ ಭಾವನೆಯಲ್ಲಿ ಕೂಡಿಕೊಂಡರೆ ನಿಜಲಿಂಗೈಕ್ಯ ಸಾಧನೆಗೆ ಅಚ್ಚಳಿಯದ ನಿಚ್ಚ ಪೂಜೆಯಾಗುವದು. ಭಾವಸಿದ್ಧಿಯಾಗಿ ಅರಿವಿನ ಬೆಳಗು ಅರಿವಾಗಿಯೇ ಬೆಳಗುವದು; ಕರಿಗೊಳ್ಳುವುದು.

ಇದೇ ಭಾವವನ್ನು ಗೀತೆಯ ಅಂತರ್ವಾಣಿಯಲ್ಲಿ ಕಾಣಬಹುದು.

"ಯೋ ಯೋ ಯಾಂ ಯಾಂ ತನುಂ ಭಕ್ತಃ ಶ್ರದ್ಧಯಾರ್ಚಿತುಮಿಚ್ಛತಿ|
ತಸ್ಯ ತಸ್ಯಾಚಲಾಂ ಶ್ರದ್ಧಾಂ ತಾಮೇವ ವಿಧಧಾಮ್ಯಹಂ||"

ಭಕ್ತನಾದವನು ಯಾವ ರೀತಿಯಲ್ಲಿ, ಯಾವ ಭಾವದೊಡನೆ ಪೂಜಿಸುವನೋ, ಅದೇ ತೆರನಾಗಿ ಅವನ ಆ ಶ್ರದ್ಧೆಯನ್ನು ಸ್ಥಿರಗೊಳಿಸುವನೆಂಬ ಭಾವನೆಯನ್ನು ತೋರಿಸುವದೇ ಈ ಗೀತೋಕ್ತಿಯ ಒಳಗುಟ್ಟು.

ದುಷ್ಟ ಭಾವನೆಯ ಸೆಳವಿನಲ್ಲಿ ಸಿಕ್ಕಿರುವವನು ಮರವೆಯ ಕತ್ತಲಲ್ಲಿ ತಿರುಗಿ ಸಣ್ಣಾಗಿ ಹೋಗುವನಲ್ಲದೆ, ಮಿತಿಮೀರಿ ಬೆಳೆದ ದುರ್ವಾಸನೆಗಳಿಂದ ಅಧೋಗತಿ

ಗೀಡಾಗುವನು. ನಾಲಗೆಯು ಯಾವ ಯಾವ ಅಕ್ಷರಕ್ಕೆ ಎಲ್ಲೆಲ್ಲಿ ಮುಟ್ಟಬೇಕೋ ಅಲ್ಲಿಗೆ ಮುಟ್ಟಿಸುವ ಪಟುತ್ವವಿಲ್ಲದವರಿಗೆ ಭಾವಶುದ್ಧಿ ಸಾಧ್ಯವಾಗದು. ಸದ್ಭಾವನೆಯೇ ಪ್ರಗತಿಗೆ ದಾರಿದೀಪ.

ಒಂದೆಡೆ ಮಹಾತ್ಮಾ ಬಸವಣ್ಣನವರೂ ಸಹ "ಭಾವಶುದ್ಧವಾದೊಡೆ ಕೂಡಲಸಂಗಮ ದೇವನೆ ತನ್ನತ್ತ ಕರೆದುಕೊಳ್ಳುವ"ನೆಂದು ಅನುಭವಪೂರ್ಣ ನುಡಿಯೊಡನೆ ಬಿತ್ತರಿಸಿದ್ದಾರೆ.

"ಕೆಲಕ್ಕೆ ಶುದ್ಧನಾದೆನಲ್ಲದೆ, ಮನಕ್ಕೆ ಶುದ್ಧನಾಗೆನಯ್ಯ, ಕೈಮುಟ್ಟಿ ಪೂಜಿಸುವೊಡೆ ಕೈಶುದ್ಧಿ ಇಲ್ಲವಯ್ಯ, ಮನಮುಟ್ಟಿ ಪೂಜಿಸುವೊಡೆ ಎನ್ನ ಮನ ಶುದ್ಧವಿಲ್ಲವಯ್ಯಾ, ಭಾವಶುದ್ಧವಾದೊಡೆ ಕೂಡಲಸಂಗಮದೇವಯ್ಯನಿತ್ತ ಬಾ ಎಂದೆತ್ತಿಕೊಳ್ಳನೇಕಯ್ಯ" ವಿಶ್ವವಿಭೂತಿ ಬಸವಣ್ಣನವರ ಅನುಭಾವದ ಈ ಅಮರವಾಣಿ ನಮ್ಮನ್ನು ಬೆಳಕಿನ ಲೋಕಕ್ಕೆ ಎಳೆದೊಯ್ಯುತ್ತದೆ. ಮನಮುಟ್ಟಿ ಪೂಜಿಸಲು ಹೇಳುತ್ತದೆ. ಕತ್ತಲೆಯ ಕಾಳಿಕೆಯು ಕಳೆದು ಜ್ಯೋತಿಯು ಸೀಮೆಯನ್ನು ಮುಟ್ಟಿಸುತ್ತದೆ. ಸರ್ವಾತ್ಮತೆಗೆ ಪರಮಾತ್ಮ ಪರವಶತೆಗೆ ನಿಲುಕಿಸುತ್ತದೆ. ಅಂತೆಯೇ—

"ಯಾದೃಶೀ ಭಾವನಾ ಯಸ್ಯ ಸಿದ್ಧಿರ್ಭವತಿ ತಾದೃಶೀ"

ಈ ಉಕ್ತಿಯು ನಮ್ಮ ಕಣ್ಣಮುಂದೆ ನಿಲ್ಲುತ್ತದೆ. ಭಾವಶಕ್ತಿಯು ಹಾಗೂ ಅದರ ಅಂತಃಸತ್ವದ ಬೆಳಕನ್ನು ಎದುರು ಚೆಲ್ಲುತ್ತದೆ. ಇದೇ ಭಾವಸೌರಭ ಹಾಗೂ ಭಾವಲಿಂಗಪೂಜೆ.

ಮಹಾಜನೋ ಯೇನ ಗತಃ ಸ ಪಂಥಾಃ

ದೊಡ್ಡವರು ನಡೆದುಬಂದ ದಾರಿ ಮಾನವರಿಗೆ ಕೈದೀವಿಗೆ. ಭವಸಾಗರವನ್ನು ದಾಟಿಸುವ ನೌಕೆ. ಆತ್ಮಾನುಸಂಧಾನ ಮಾಡಲು ಆಸರಗಂಬವಿದ್ದಂತೆ. ಮಹಿಮರು ಜಡವನ್ನು ಜಯಿಸಿ, ಜ್ಞಾನದೃಷ್ಟಿಯಿಂದ ಸತ್ಯವನ್ನು ಕಂಡು, ಬಹಿರಂಗದ ಚೆಲುವಿನೊಂದಿಗೆ ಅಂತರಂಗದ ಸುಂದರತೆಯನ್ನು ಪಡೆದು ಸತ್ಯಂ ಶಿವಂ ಸುಂದರಂ ಈ ಮೂರನ್ನು ಒಂದೆಡೆಯಲ್ಲಿಯೇ ಕಾಣುತ್ತಾರೆ ಮತ್ತು ದುಃಖ ದುರವಸ್ಥೆಗಳನ್ನು ತೊರೆದು ದೇವರೆಡೆಗೆ ಸೇರಿ ಆತ್ಮಶಕ್ತಿ ಪ್ರಭಾವವನ್ನು ಜನತೆಯ ಮೇಲೆ ಬೀರಿ, ವ್ಯಕ್ತಿಗಳ ಅಂತರಂಗವನ್ನು ಪರಿಶುದ್ಧಮಾಡಿ, ಆತ್ಮಶಕ್ತಿಯನ್ನು ಸಮಾಜಕಲ್ಯಾಣಕ್ಕಾಗಿ ವಿನಿಯೋಗಿಸಿ, ಜನರ ಕಣ್ಣುಗಳನ್ನು ತೆರೆಯಿಸಿ ಸನ್ಮಾರ್ಗ ದರ್ಶನ ಮಾಡಿಸುತ್ತಾರೆ. ಅಂತೆಯೇ ಇಂತಹ ಗುಣಗಳನ್ನು ಗರ್ಭೀಕರಿಸಿಕೊಂಡ

ಮಹಾಜನರಿಗೆ ಮಹಾತ್ಮರು, ಶರಣರು, ತಪಸ್ವಿಗಳು, ಯೋಗಿಗಳು, ತ್ಯಾಗಿಗಳೆಂದು ಕರೆಯುತ್ತೇವೆ. ಅವರ ಹೆಜ್ಜೆಯಲ್ಲಿ ನಡೆಯಲು ಪ್ರಯತ್ನಿಸುತ್ತೇವೆ.

ದೊಡ್ಡವರು ಬಿಟ್ಟು ಹೋಗಿರುವ ಅನುಭವ ಸಂಪತ್ತನ್ನು ಸಂಗಳಿಸಿಕೊಂಡರೆ ಆ ಹೆದ್ದಾರಿಯಲ್ಲಿ ನಡೆದರೆ ಆಗುವ ಆತ್ಯಂತಿಕ ಆನಂದವನ್ನು ಆಂಗ್ಲ ಕವಿಯಾದ ಲಾಂಗಫೆಲೋನ ಭಾಷೆಯಲ್ಲಿ ಓದಿದರೆ ಮತ್ತಿಷ್ಟು ಅರ್ಥವಾದೀತು. ಭಾವಶುದ್ಧಿಯಾದೀತು.

"Lives of great men all remind us
We can make our lives sublime
And departing, leave behind us
Foot-prints, on the sands of time:
Foot-prints that perhaps another,
Sailing o'cr life's solemn main,
A forlorn and shipwrecked brother,
Seeing, shall take heart again.

ಕರಾಳ ಕಾರ್ಗತ್ತಲೆಯಲ್ಲಿ ತಿರುಗುತ್ತಿರುವ ಜನತೆಯು ಜೀವನಪಥವನ್ನು, ಸುಜ್ಞಾನದಲ್ಲಿ ಒಯ್ಯುವ ಕಿಡಿ ನುಡಿಗಳಿವು. ಆಧ್ಯಾತ್ಮ ವಿದ್ಯಾರ್ಥಿಗಳಿಗೆ ದಾರಿ ದೀಪಗಳಿದ್ದಂತೆ.

ಒಂದೆಡೆ ಮಹಾತ್ಮಾ ಬಸವಣ್ಣನವರು—

ಶರಣ ನಡೆದುದೆ ಪಾವನಕಾಣಿರೋ, ಶರಣ ನುಡಿದುದೆ ಶಿವತತ್ವಕಾಣಿರೋ, ಕೂಡಲಸಂಗನ ಶರಣರ ಕಾಯವೇ ಕೈಲಾಸ ಕಾಣಿರೋ, ಎಂದುದಾಗಿ ಶರಣರ ನಡೆನುಡಿಯ ಮಹತ್ವವನ್ನು ವಿವರಿಸಿದ್ದಾರೆ. ಅದಕ್ಕಾಗಿ ಒಂದಿನವರು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ನಡೆದರೆ ಮಾತ್ರ ವಿಶ್ವಕ್ಕೆ ಶಾಂತಿ, ಕಾಂತಿ.

"ಯದ್ಯದಾಚರತಿ ಶ್ರೇಷ್ಠಸ್ತತ್ತದೇವೇತರೋ ಜನಃ
ಸ ಯತ್ಪ್ರಮಾಣಂ ಕುರುತೇ ಲೋಕಸ್ತದನುವರ್ತತೇ॥"

ಗೀತೆಯ ಈ ಅಂತರ್ವಾಣಿ ನಮಗಿಂದು ತಾರಕ ಮಂತ್ರ.

ಧ್ಯಾನಂ ನಿರ್ವಿಷಯಂ ಮನಃ

ಆತ್ಮವಿಕಾಸಕ್ಕೆ ಧ್ಯಾನವು ಮುಖ್ಯ ಸಾಧನ. ಮುಕ್ತಿಗೆ ಮೂಲಕಾರಣ, ಮನೋನಿಗ್ರಹಕ್ಕೆ ಆಣೆಕಟ್ಟು ಇದ್ದಂತೆ. ಅಂತರಂಗ ಮತ್ತು ಬಾಹ್ಯಗಳೆರಡನ್ನು ಹತೋಟಿಯಲ್ಲಿಟ್ಟುಕೊಳ್ಳಲು ಧ್ಯಾನವೇ ಹೆದ್ದಾರಿ. ಧ್ಯಾನದ ಬಲದಿಂದ ಜೀವನ

ವಿಕಾಸವಾಗುವದಲ್ಲದೆ, ವಿಶ್ವಪ್ರಕಾಶಗೊಳಿಸುವ ಮಹಾಬೆಳಗು ಇದರಲ್ಲಿ ತುಂಬಿದೆ. ಕತ್ತಲೆ ದೂರಾಗಿ, ಆತ್ಮಶಕ್ತಿ ಪ್ರಾದುರ್ಭವಿಸಿ, ಅಂಗಾಂಗಗಳಲ್ಲೆಲ್ಲ ಚೈತನ್ಯವುಂಟಾಗಿ ಕಾಂತಿಯುಂಟಾಗುತ್ತದೆ. ಶಾಂತಿ ಸಮಾಧಾನಗಳು ದೊರೆತು ಅಂಗ ಆತ್ಮಗಳೆರಡೂ ತುಷ್ಟಿಪುಷ್ಟಿಗೊಳ್ಳುತ್ತವೆ. ಭಾವಶುದ್ಧಿಯಾಗಿ ಆತ್ಮಸಿದ್ಧಿಯಾಗುತ್ತದೆ. ಧ್ಯಾನ ಯೋಗದಷ್ಟು ಸುಲಭವಾದ ರಾಜಮಾರ್ಗ ಮತ್ತೊಂದಿಲ್ಲ. ಕಟ್ಟಳೆಗಳ ಕಟ್ಟು ನಿಟ್ಟುಗಳಿಗಿಂಬಿಲ್ಲ. ಮತಾಚಾರಗಳ ವಿವೇಚನೆಯ ಗೊಂದಲವಿಲ್ಲ. ತೆರೆದ ಹೃದಯ, ನಿರ್ಮಲ ಮನಸ್ಸು, ಅಚಲಶ್ರದ್ಧೆ ಇವುಗಳೇ ಧ್ಯಾನಕ್ಕೆ ಬೇಕಾಗುವ ಸಾಧನಗಳು. ವಿಶ್ವಪ್ರೇಮ, ಆತ್ಮಸಮರ್ಪಣಕ್ಕೆ ಧ್ಯಾನವೇ ದಾರಿ ಮಾಡಿಕೊಡುತ್ತದೆ. ಎಂತಹ ಸಂಕಟ ಬಂದರೂ ಧ್ಯಾನಶಕ್ತಿಯ ಬಲದಿಂದ ಪಾರಾಗಬಹುದು. ಪರ ಮಾತ್ಮನು ಸಾಧಕರ ಸರ್ವಾರ್ಪಣ ಭಾವಕ್ಕೆ ಮೆಚ್ಚಿ ಆನಂದವನ್ನು ನೀಡುವನಲ್ಲದೆ ಪ್ರತ್ಯಕ್ಷನಾಗುವನು. ಇದೇ ಭಾವವನ್ನು ಮಹಾತ್ಮಾ ಬಸವಣ್ಣನವರು—

"ಭಕ್ತನಾಗಿ ತನ್ನ ಹಿಡಿವೆನೆಂದು ಹೋದರೆ, ಸುಗ್ಗಿ ಮಾಡುವ, ಸುಸಿಯು ಮಾಡುವ, ಮಣ್ಣು ಮಾಡುವ, ಮಸಿಯು ಮಾಡುವ ಕೂಡಲ ಸಂಗಮ ದೇವರ ನೆರೆನಂಬಿದನಾದರೆ ಕಡೆಗೆ ತನ್ನಂತೆ ಮಾಡುವ" ಈ ತೆರನಾಗಿ ಸರ್ವಾರ್ಪಣ ಭಾವದ ಮಹತ್ವವನ್ನು ವಿವರಿಸಿದ್ದಾರೆ.

ಶ್ರೀ ಮುಪ್ಪಿನ ಷಡಕ್ಷರಿ ಸ್ವಾಮಿಗಳು ಧ್ಯಾನವನ್ನು ಕರುಣಿಸೆಂದು ಪ್ರಾರ್ಥಿಸಿದ್ದಾರೆ.

"ತಾನೆಂದರಿಯದೆ ಇದಿರೆಂದರಿಯದೆ।
ಏನೂ ಇಲ್ಲದೆ ಇರುತಿಹ ಶಿವತಾ–।
ನಾನಂದದಿ ವರ ಮೂರುತಿಯಾದನ
ಧ್ಯಾನದೊಳೆಂದಿಹನೋ ॥ ಪ ॥
ಘನಮಹಿಮನ ನೆನೆದಾಕ್ಷಣ ಮಾತ್ರದಿ।
ಜನಿಯಿಸಿ ಗತಿಸುತಿರುವ ಬ್ರಹ್ಮಾಂಡಂ।
ವನಜೋದ್ಭವ ವನಜಾಕ್ಷರು
ಜನಿಸಲು ಕರೆದರೊಲುವಿನಲಿ।
ವನಜೋದ್ಭವ ನಿ ಸೃಜಯಿಸು ಲೋಕವ।
ವನಜಾಕ್ಷನೆ ನೀ ರಕ್ಷಿಸು ಎನುತಲಿ॥
ಅನುವಿತ್ತವರಿಂ ವಂದಿಸಿಕೊಂಬನ
ಧ್ಯಾನದೊಳೆಂದಿಹನೋ॥"

ಹೊರಗಿನ ಬಾಗಿಲನ್ನು ಮುಚ್ಚಿ, ಒಳಗಿನ ಕಪಾಟನ್ನು ತೆರೆಯಲು ಇಂದ್ರಿಯ

ಬಾಹ್ಯವ್ಯವಹಾರಗಳನ್ನು ನಿಲ್ಲಿಸಿ, ದೇವನಲ್ಲಿ ಮನಸ್ಸಿಡಲು ಧ್ಯಾನವೇ ದಿವ್ಯೌಷಧ.

"ಶ್ರೇಯೋ ಹಿ ಧ್ಯಾನಮಭ್ಯಾಸಾತ್–ಜ್ಞಾನಾದ್ಧ್ಯಾನಂ ವಿಶಿಷ್ಯತೇ|
ಧ್ಯಾನಾತ್ಕರ್ಮ ಫಲತ್ಯಾಗಸ್ತ್ಯಾಗಾಚ್ಛಾಂತಿರನಂತರಂ||"

ಜ್ಞಾನದಿಂದ ಧ್ಯಾನ, ಧ್ಯಾನದಿಂದ ಕರ್ಮಫಲ ತ್ಯಾಗವೆಂದು ಗೀತೆಯಲ್ಲಿಯೂ ಹೇಳಿದ ಈ ಅಂತರ್ವಾಣಿ ಮುಮುಕ್ಷುಗಳಿಗೆ ಕೈದೀವಿಗೆ.

ನಹಿ ಜ್ಞಾನೇನ ಸದೃಶಂ

ಜ್ಞಾನಕ್ಕೆ ಸಮಾನವಾದ ಶಕ್ತಿ ಮತ್ತೊಂದಿಲ್ಲ. ಜ್ಞಾನರೂಪ ಪ್ರಕಾಶವಿಲ್ಲದೆ ಚಿತ್ತಶುದ್ಧಿಯಿಲ್ಲ. ಆತ್ಮಶಾಂತಿಯಿಲ್ಲ. ಕವಿದ ಕತ್ತಲೆ ದೂರಗೊಳಿಸಲು ಜ್ಞಾನೋದಯದಿಂದಲೇ ಸಾಧ್ಯ. ಜ್ಯೋತಿಯ ಬಲದಿಂದ ತಮಂಧದ ಕೇಡಾದಂತೆ, ಜ್ಞಾನದ ಬಲದಿಂದ ಅಜ್ಞಾನದ ಕೇಡು. ಪ್ರಾಣವಿಲ್ಲದ ದೇಹ ವ್ಯರ್ಥವಿದ್ದಂತೆ, ಜ್ಞಾನವಿಲ್ಲದ ಕ್ರಿಯೆಯೂ ನಿರರ್ಥಕ. ಕ್ರಿಯೆಯೇ ಜ್ಞಾನ, ಆ ಜ್ಞಾನವೆ ಕ್ರಿಯೆ, ವ್ಯಕ್ತಿಗೆ ಕ್ರಿಯಾಶಕ್ತಿ ಕಣ್ಣಾದರೆ, ಜ್ಞಾನಶಕ್ತಿಯು ಸೂರ್ಯ. ಒಂದು ಬಿಟ್ಟು ಒಂದಿಲ್ಲ. ಜ್ಞಾನಕ್ರಿಯೆಗಳು ಎರಡೂ ಕೂಡಿಕೊಂಡು ಸಾಗಿದರೆ ಮಾತ್ರ ಜೀವನ್ಮುಕ್ತಿ. ಸದಾಚಾರ ಸತ್ಕ್ರಿಯೆಯಿದ್ದಲ್ಲಿ ಸಮ್ಯಜ್ಞಾನೋದಯ, ಅದೇ ಮಾನವನಿಗೆ ಜೀವನಾಭ್ಯುದಯ. ಜ್ಞಾನಾಗ್ನಿಯಿಂದ ದುರಿತ ಕರ್ಮಗಳು ಸುಟ್ಟು ಭಸ್ಮವಾಗುವದಲ್ಲದೆ, ಪ್ರಪಂಚದಿಂದ ಪರಮಾರ್ಥತೆಯನ್ನು ಪಡೆಯಲು ಅನುಕೂಲವಾಗುತ್ತದೆ. ಬಹಿರಂಗಕ್ಕೆ ಕ್ರಿಯೆ ಅವಶ್ಯವೆನಿಸಿದರೆ, ಅಂತರಂಗಕ್ಕೆ ಜ್ಞಾನ ಅತ್ಯಾವಶ್ಯಕ. ಜ್ಞಾನಪ್ರಭೆಯಿಂದ ಕಾಯಕಕ್ಕೆ ಶಕ್ತಿ ದೊರಕುತ್ತದೆ. ಸತ್ಯ ಶುದ್ಧವಾಗುತ್ತದೆ. ಆತ್ಮ ಶಕ್ತಿ ಪ್ರಜ್ವಲಿಸಿ ಪ್ರಭಾವಪೂರ್ಣ ವ್ಯಕ್ತಿತ್ವ ವಿಕಾಸವಾಗುತ್ತದ. ಆದರೆ ಅಂತಹ ಜ್ಞಾನಪಥದಲ್ಲಿ ನಡೆಯಲು ಮೈತುಂಬ ಕಣ್ಣೇರಬೇಕಾಗುತ್ತದೆ. ಆತ್ಮ ಸಾಧನೆ ಮಾಡಬೇಕಾಗುತ್ತದೆ, ಆಗ ದಿವ್ಯಜ್ಞಾನ ತನ್ನೊಳಗೆ ತಾನೇ ಗೋಚರಿಸುತ್ತದೆ.

ಇದೇ ಭಾವವನ್ನು ಅಲ್ಲಮಪ್ರಭುದೇವರು—

"ನಿಮ್ಮಲ್ಲಿ ನೀವು ತಿಳಿದು ನೋಡಿರೇ, ಅನ್ಯವಿಲ್ಲ ಕಾಣಿರಣ್ಣಾ, ಅರಿವು ನಿಮ್ಮಲ್ಲಿಯೇ ತದ್ಗತವಾಗಿದೆ. ಅನ್ಯಭಾವನೆನೆಯದ, ತನ್ನೊಳಗೆ ತಾನೆ ಎಚ್ಚರ ವಿರಬಲ್ಲರೆ, ತನ್ನಲ್ಲಿಯೇ ತನ್ಮಯ ಗುಹೇಶ್ವರ ಲಿಂಗವು" ಎಂದು ಹೃದಯಂಗಮಯವಾಗಿ ಅರುಹಿದ್ದಾರೆ. ಜ್ಞಾನದೃಷ್ಟಿಯಲ್ಲಿ ಅಂತರ್ಮುಖವಾಗಿ ನಿರೀಕ್ಷಿಸಿದರೆ "ಅನ್ಯವಿಲ್ಲ ಕಾಣಿರಣ್ಣಾ" ಎಂದುದಾಗಿ ಸಂಬೋಧಿಸಿದ್ದಾರೆ. ಅರಿವಿನ

ಬೆಳಗು ಹೃನ್ಮಂದಿರದೊಳಗೆ ಬೆಳಗಿದರೆ ಮರವೆಯೆಂಬುದೇ ಕಾಣದು. ಅಂತರಂಗ ಜ್ಯೋತಿ ಪ್ರದೀಪ್ತವಾಗಿ ಥಳಥಳಿಸುವದು. ಇಂತಹ ಅಂತರಂಗದ ಸುಜ್ಞಾನದ ಅರಿವು ಪಡೆಯಲು ಪುಣ್ಯ ಬೇಕು, ತಪಸ್ಸು ಬೇಕು, ಶರಣರ ಸಹವಾಸ ಬೇಕೆಂದು ಚೆನ್ನಬಸವಣ್ಣನವರು ಒಂದೆಡೆ— "ಜ್ಞಾನದೀಪ್ತಿಯು ಬೆಳಗುವ ತೈಲವಾವು ದೆಂದೊಡೆ ಶಿವಶರಣರ ನುಡಿ ಗಡಣದ ಒಸರು; ಆ ಒಸರಿಂಗಲ್ಲದೆ ಜ್ಞಾನ ಪ್ರಕಾಶವಿಲ್ಲ. ಅದು ತಾನೆಂಬ ನಿಶ್ಚಯವ ತೋರುವದು. ಓಸ ಜಡತೆಯ ಮುಸುಕಿನ ಗ್ರಂಥಿಯನಳಿವುದು. ಭಾನು ಬಂದಡೆ ಕತ್ತಲೆ ಹರಿವಂತೆ ಬುಧ ರೊಳು ನೀನಿರಲು ಕರ್ಮ ಹರಿವುದು ಕೂಡಲ ಚೆನ್ನಸಂಗಮ ದೇವಾ" ಎಂದು ಮುಂತಾಗಿ ತಮ್ಮ ಅನುಭವವಾಣಿಯಿಂದ ತಿಳಿಹೇಳಿದ್ದಾರೆ. ಜ್ಞಾನಮಹತ್ವವನ್ನು ಕುರಿತು ಜಗದ್ವಿಭೂತಿ ಬಸವಣ್ಣನವರು ಸಹ ಈ ರೀತಿ ಹೇಳಿದ್ದಾರೆ. "ಶ್ವಾನ ಜ್ಞಾನ, ಗಜಜ್ಞಾನ, ಕುಕ್ಕುಟಜ್ಞಾನವೆಂಬ ಜ್ಞಾನತ್ರಯಂಗಳೇನಾದವು? ಅಂತು ತ್ರಿಕಾಲಜ್ಞಾನಂಗಳಿದೇನಹದು? ಕೂಡಲ ಸಂಗಮದೇವಾ ನಿಮ್ಮನರಿಯದ ಜ್ಞಾನವೆಲ್ಲಾ ಅಜ್ಞಾನ" ಅದಕ್ಕಾಗಿ ಇಂದು ಮುಂದುವರಿಯುತ್ತಿರುವ ವಿಜ್ಞಾನಯುಗದಲ್ಲಿ ಮಾನವ ಕಲ್ಯಾಣಕ್ಕಾಗಿ ಮಹಾತ್ಮಾ ಬಸವಣ್ಣನವರು ನುಡಿದಿರುವ ಈ ವಚನ ಮಹಾಜ್ಞಾನ ಪ್ರಕಾಶವನ್ನು ತೋರಿಸುವ ದಾರಿದೀಪ.

ಉದ್ಯೋಗಿನಂ ಪುರುಷಸಿಂಹಮುಪೈತಿ ಲಕ್ಷ್ಮೀಃ

ಸತ್ಯಶುದ್ಧ ಕಾಯಕದಿಂದೊಡಗೂಡಿದ ಸತತೋದ್ಯೋಗವು ಮಾನವ ನನ್ನು ಆಧ್ಯಾತ್ಮದತ್ತ ಒಯ್ಯುತ್ತದೆ. ಆತ್ಮವಿಕಾಸ ಮಾಡುತ್ತದೆ. ವ್ಯಕ್ತಿಯಲ್ಲಿ ಅಂತಃಸ್ಫೂರ್ತಿಯನ್ನಿತ್ತು ಬೆಳಕಿಗೆಡೆ ಮಾಡುತ್ತದೆ. ಒಳಹೊರಗಿನ ಸಂಪತ್ತು ಅಭಿವೃದ್ಧಿಯಾಗಿ ದೈವೀಶಕ್ತಿಯನ್ನು ಪಡೆಯಲು ಉದ್ಯೋಗವೇ ಕಲ್ಪತರು. ಉತ್ತಮ ಸಂಸ್ಕೃತಿಯನ್ನು ನೀಡಿ, ನಿತ್ಯನೂತನ ಚೇತನಶಕ್ತಿಯನ್ನು ಕೊಡುತ್ತಿ ರುವ ಶಾಂತಿಸಾಗರ. ದಾರಿದ್ರ್ಯವನ್ನು ನಿವಾರಣೆ ಮಾಡುವ ಕಾಮಧೇನು. ಮನದಲ್ಲಿ ಕವಿದ ಕತ್ತಲೆಯನ್ನು ದೂರಮಾಡುವ ಜ್ಞಾನದ ಬೆಳಕನ್ನು ಕೊಡು ತ್ತದೆ. ಆದರೆ ಉದ್ಯೋಗದಲ್ಲಿ ಪಾವಿತ್ರ್ಯತೆ, ಪ್ರಾಮಾಣಿಕತೆ ಒಡಮೂಡಿರ ಬೇಕಾಗುತ್ತದೆ. ಆ ಉದ್ಯೋಗದಿಂದ ಸ್ವಹಿತ ಪರಹಿತಗಳು ಕೂಡಿದ್ದರೆ ಮತ್ತಿಷ್ಟು ಹಿತಕಾರಿ. ಇಂತಹ ಉದ್ಯೋಗದಿಂದ ನಾಡು ಬೆಳೆಯುತ್ತದೆ, ಬೆಳಗು ತ್ತದೆ. ರಾಷ್ಟ್ರಶಕ್ತಿ ಇಮ್ಮಡಿ ಹೆಚ್ಚಾಗುತ್ತದೆ. ಅನೇಕ ನೂರ್ಮಡಿ ಬೆಳೆದು ಪ್ರಪಂಚಕ್ಕೆ ಆದರ್ಶವಾಗುತ್ತದೆ. ಈದೀಗ ನಿರಂತರ ನಡೆಯುತ್ತಿರುವ ತಾವು

ಸೀಯ ಕಚ್ಚಾಟಗಳು ತಪ್ಪುತ್ತವೆ. ದ್ವಿವಿಧ ಭಾವನೆಗಳಲ್ಲಿ ಒಂದೆಂಬ ಭಾವನೆ ಬರುತ್ತದೆ.

ಆದರೆ ಇಂದು ನಿರುದ್ಯೋಗವೇ ಅಂತಃಶತ್ರುವಾಗಿ ಪರಿಣಮಿಸಿದೆ. ನಿರುದ್ಯೋಗವೇ ಸಮಾಜಕ್ಕೆ ಅಂಟಿಕೊಂಡಿರುವ ಮಹಾರೋಗವಾಗಿದೆ. ನಿರುದ್ಯೋಗಿಯ ಜೀವನ ಹಾಳು ದೇಗುಲವಿದ್ದಂತೆ ನಿರರ್ಥಕ, ನಿರುದ್ಯೋಗದಿಂದ ವ್ಯಕ್ತಿಯು ಹಾನಿಯಾಗುವದಲ್ಲದೆ ದೇಶವೂ ಹಾಳಾಗಿಹೋಗುತ್ತದೆ. ಈಗ ಯಾವದೇ ರಾಷ್ಟ್ರವು ಮುಂದುವರಿದಿದ್ದರೆ, ಅದು ಸತತೋದ್ಯೋಗದ ಪ್ರಭಾವದಿಂದ ಎಂದು ಹೇಳಿದರೆ ತಪ್ಪಾಗದು.

"ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇಚ್ಛತಗ್ಂ ಸಮಾಃ"

ಶತಾಯುಷಿಗಳಾಗಬೇಕದ್ದರೆ, ಆತ್ಮಾನಂದದಲ್ಲಿ ನಿಜ ಸುಖವನ್ನು ಪಡೆದು, ಪೂರ್ಣತೆಯನ್ನು ಪೈಗೂಡಿಸಿಕೊಳ್ಳಲು, ನಿರಂತರವೂ ಚಿತ್ತಶುದ್ಧಿಯಿಂದೊಡಗೂಡಿದ ಪರಿಶ್ರಮವೇ ಪರಮ ಸಂಜೀವಿನಿ.

"ಕಾಯಕವಳಿದ ಠಾವಿನಲ್ಲಿ ಜೀವನದ ಸುಳಿವುಂಟೆ? ದಾಸೋಹವಳಿದ ಠಾವಿನಲ್ಲಿ ದೇವರ ಕೃಪೆಯುಂಟೆ? ಕಾಯಕ ದಾಸೋಹಗಳು ಕೂಡಿದರೆ ಅದೇ ಶಿವಜೀವೈಕ್ಯವು ಮಾರಯ್ಯಪ್ರಿಯ ಅಮಳೇಶ್ವರ ಲಿಂಗದಲ್ಲಿ" ಎಂದುಸುರುವ ಈ ಸಿರಿನುಡಿ ಕಾಯಕದ ಅಗ್ಗಳಿಕೆಯನ್ನು ಹೆಚ್ಚಿಸಿದೆ. ಶಿವಜೀವೈಕ್ಯ ಸ್ಥಿತಿಗೇರಲು ಕಾಯಕ, ದಾಸೋಹಗಳು ಕೂಡಿದಲ್ಲಿ ಸಾರ್ಥಕವೆಂದು ಸ್ಪಷ್ಟಪಡಿಸಿದ್ದಾರೆ. ಇವೇ ವಚನಕಾರರು ಮತ್ತೊಂದು ವಚನದಲ್ಲಿ "ಕಾಯಕದಲ್ಲಿ ನಿರತರಾದಡೆ ಗುರು ದರ್ಶನವಾದರೂ ಮರೆಯಬೇಕು. ಲಿಂಗಪೂಜೆಯಾದರೂ ಮರೆಯಬೇಕು, ಜಂಗಮ ಮುಂದಿದ್ದಡೆಯೂ ಹಂಗು ಹರಿಯಬೇಕು" ಎಂದು ಕಾಯಕದ ಮಹತ್ವವನ್ನು ವಿವರಿಸುತ್ತ "ಕಾಯಕವೇ ಕೈಲಾಸ"ವೆಂದು ತಿಳಿಸಿದ್ದಾರೆ.

"ದುಡಿತವೇ ದುಡ್ಡಿನ ತಾಯಿ", "ಖಾಲಿ ಕೂಡ್ರುವದಕ್ಕಿಂತ ಕೂಲಿ ಮಾಡುವದು ಲೇಸು" ಎನ್ನುವ ನಾಣ್ನುಡಿಯೇ ಇಂದಿನ ವಾತಾವರಣದಲ್ಲಿ ನಮಗಿಂದು ಅಮೃತಬಿಂದು ಮತ್ತು ಆತ್ಮಬಂಧು.

ಶರೀರಮಾದ್ಯಂ ಖಲು ಧರ್ಮಸಾಧನಂ

ಶರೀರಸಂಪತ್ತು ಧರ್ಮಸಾಧನೆಗೆ ಮೂಲಾಧಾರ. ಶರೀರಾಭಿವೃದ್ಧಿಗೆ ಆತ್ಮ ಸಂಯಮನವೇ ಪೌಷ್ಟಿಕಾಹಾರ. ಶರೀರಬಲವು ಮಾನಸಿಕ ಹಾಗೂ ಶಾರೀರಿಕ

ಸೋಮಾರಿತನವನ್ನು ಕಳೆದು ಚೈತನ್ಯವನ್ನೀಡುತ್ತದೆ. ಸನ್ಮಾರ್ಗದರ್ಶನಕ್ಕೆ ಮೈಲುಗಲ್ಲು. ಆತ್ಮವಿಕಾಸಕ್ಕೆ ಅಡಿಗಲ್ಲು. ಆರೋಗ್ಯವಿಲ್ಲದ ಶರೀರವು ಚಿಂತಾಕ್ರಾಂತರನ್ನಾಗಿ ಮಾಡಿ, ಕಳೆಗುಂದಿಸಿ, ಜೀವನದಲ್ಲಿ ಬೆಳಕನ್ನು ಕಾಣದಂತೆ ಮಾಡುತ್ತದೆ. ಅನಾರೋಗ್ಯದಿಂದ ಆಹಾರಶುದ್ಧಿ ನಷ್ಟವಾಗಿ, ಶೀಲಸಂವರ್ಧನೆಯು ಕುಂದಿ ಆತ್ಮಶ್ರೀ ಗಳಿಸಲು ಬಾಧೆಯನ್ನು ನೀಡುತ್ತದೆ. ಜಪತಪಾದಿಗಳಿಗೆ ಆತಂಕವನ್ನು ಒಡ್ಡುತ್ತದೆ. ಬುದ್ಧಿವೃದ್ಧಿಗೆ ಮತ್ತು ಸಾಮಾಜಿಕ ಸೇವೆಗೈಯ್ಯಲು ಸಂದಿಗ್ಧರನ್ನಾಗಿ ಮಾಡುತ್ತದೆ.

ಶರೀರ ಪೋಷಣೆಗೆ ಸತ್ವಾಹಾರವೂ ಅತ್ಯಾವಶ್ಯಕವಾಗಿದೆ. "ದೇಹೋ ಹ್ಯಾಹಾರ ಸಂಭವಃ" ಎಂದುದಾಗಿ ಚರಕಸಂಹಿತೆಯಲ್ಲಿ ಹೇಳಿರುವದು ಸಾರ್ಥಕವಾಗಿದೆ. ಆಹಾರವು ಶರೀರದ ಜೀವನ ಮತ್ತು ಸ್ವಾಸ್ಥ್ಯದ ಸರ್ವಪ್ರಮುಖ ಸಾಧನವಾಗಿರುವದಲ್ಲದೆ ಪುಷ್ಟಿತುಷ್ಟಿಗೆ ಸಹಾಯಕವಾಗಿದೆ. ಅನ್ನದಿಂದ ರಸವಾಗಿ, ರಸದಿಂದ ರಕ್ತವಾಗಿ, ರಕ್ತದಿಂದ ವೀರ್ಯವಾಗಿ, ವೀರ್ಯಧಾರಣದಿಂದ ಜೀವನವಾಗುತ್ತದೆ. ಇಂತಹ ಶುದ್ಧ ಸಾತ್ವಿಕ ಜೀವನದಿಂದ ಅಂತಃಸ್ಫೂರ್ತಿಯುಂಟಾಗಿ ನವನಿರ್ಮಾಣ ಮಾಡುವ ಶಕ್ತಿ ಉದ್ಭವಿಸುತ್ತದೆ. ಧರ್ಮಸಂಸ್ಕೃತಿಯನ್ನು ಚಿರಕಾಲ ಉಳಿಸಿ ಬೆಳೆಸಲು ಧೈರ್ಯ ಬರುತ್ತದೆ. ಆದರೆ ಶರೀರ ಬಲವು ತಾಮಸೀಯ ಆಹಾರದಿಂದ ಪುಷ್ಟವಾಗಿರದೆ ಆತ್ಮಶಕ್ತಿಯಿಂದ ಸಮೃದ್ಧವಾಗಿದ್ದರೆ ಮಾತ್ರ ಎಲ್ಲ ಬಾಹ್ಯಶಕ್ತಿಗಳಿಗಿಂತ ಕೈ ಮೇಲಾಗುತ್ತದೆ. ಇಂತಹ ವ್ಯಕ್ತಿಗಳು ಕತ್ತಲೆಯಲ್ಲಿ ತಿರುಗುವವರಿಗೆ ಊರುಗೋಲಾಗುತ್ತಾರೆ. ಚಿತ್ತವೃತ್ತಿಯ ನಿರೋಧದಿಂದ ಶರೀರ ಬಲ ಬೆಳೆದಷ್ಟು ಮತ್ತಾವ ಶಕ್ತಿಯಿಂದಲೂ ಬೆಳೆಯಲು ಅಸಾಧ್ಯ ಮತ್ತು ಅಸಂಭವ.

"What I want is muscles of iron and nerves of steel, inside which dwells a mind of the same material as that of which the thunderbolt is made. Strength, Manhood Kshatra Virya, Brahma, Teja.

Strength is life, weakness is death; strength is felicity life eternal, immortali Weakness is constant strain and misery, weakness is death. Let positive, strong, helpful thoughts enter into your brains from very child-hood."

ಶ್ರೀ ಸ್ವಾಮಿವಿವೇಕಾನಂದರ ಅನುಭವದ ಈ ಅಂತರ್ವಾಣಿ ಅಶಕ್ತರನ್ನು ಸಶಕ್ತರನ್ನಾಗಿ ಮಾಡುತ್ತದೆ. ಮಲಗಿದವರನ್ನು ಎಚ್ಚರಿಸುತ್ತದೆ. ವಜ್ರದೇಹಿಗಳನ್ನಾಗಿ ಮಾಡುತ್ತದೆ. ಮಹೋನ್ನತ ವಿಚಾರದಿಂದೊಡಗೂಡಿದ ಈ ವಾಣಿಯು

ಯಲ್ಲಿ ಅಂತಃಶ್ಶಕ್ತಿಯಿದೆ. ಸ್ಫೂರ್ತಿ ತುಂಬಿದೆ. ದೇಹಶುದ್ಧಿಗೆ ದಿವ್ಯೌಷಧವಾಗಿದೆ.

"ಶರೀರವೆಂತೆಂಬ ಹೊಲವ ಹಸನ ಮಾಡಿ। ಪರತತ್ವ ಬೆಳೆಯನು ಬೆಳೆದುಣ್ಣಿರೋ" ಎಂದುದಾಗಿ ಹೇಳಿರುವ ಶ್ರೀ ಸರ್ಪಭೂಷಣ ಶಿವಯೋಗಿಗಳವರ ಈ ಅಮರವಾಣಿಯಲ್ಲಿ ಸತ್ಯಾಂಶ ತುಂಬಿದೆ. ಆತ್ಮೋದ್ಧಾರ ಮಾಡಿಕೊಳ್ಳಲು ಪರಮ ಸಾಧನವಾಗಿದೆ.

ಅದಕ್ಕಾಗಿ ದೇಹವು ದೇಗುಲವಾದಾಗ ಧರ್ಮ ಸಾಧನ ಮತ್ತು ಆತ್ಮ ಕಲ್ಯಾಣ.

ವಿನಾಶಕಾಲೇ ವಿಪರೀತ ಬುದ್ಧಿಃ

ವಿನಾಶಕಾಲದಲ್ಲಿ ವಿಪರೀತ ಬುದ್ಧಿಯುಂಟಾಗುವದು ಸಹಜ. ಆಗ ಸದ್ವಿಚಾರವನ್ನು ಯಾರು ತಿಳಿಸಿದರೂ ಅರ್ಥವಾಗದು. ಮನದಲ್ಲಿ ಹೋಗದು. ಶಿವಭಕ್ತಿಯನ್ನು ದೂರಮಾಡುತ್ತದೆ. ಆಗ ಕ್ರಿಯೆ ಕಾಯಕವಾಗಲಾರದು. ಪರಮಾನಂದವೆಂಬ ಜಲವು ಕಾಯವೆಂಬ ಕೆರೆಯಲ್ಲಿ ನಿಲ್ಲದು. ಪುರಾತನರ ಚರಿತ್ರೆಯನರಿಯದೆ ಪ್ರಾಚೀನ ಸಂಸ್ಕೃತಿಯನ್ನು ತೊರೆದು ಅಜ್ಞಾನಕ್ರಿಯೆಯಲ್ಲಿ ವರ್ತಿಸುತ್ತದೆ. ವಿಪರೀತ ಬುದ್ಧಿಗೆ ಇಹಪರ ಸಿದ್ಧಿಯಂತೂ ದೂರ ಉಳಿದು, ದಾರಿಯನು ಮೀರಿ, ಪಶುವೃತ್ತಿಯನು ಪಡೆದು ಸುತ್ತಿದ ಅಜ್ಞಾನ ಪ್ರಪಂಚವನ್ನು ಬಿಡದೆ ಲಿಂಗ ಸಂಗದಿ ಲೀಯವಾಗದೆ, ತ್ಯಾಗಾಂಗ ಯೋಗಾಂಗಗಳಲ್ಲಿ ಮನವನ್ನಿಡದೆ, ಶಿವಪೂಜೆ ಸತ್ಕ್ರಿಯೆಗಳಲ್ಲಿ, ಸಮ್ಯಕ್ ಜ್ಞಾನ ಗಳಿಸುವದರಲ್ಲಿ, ತನ್ನ ತಾನರಿಯುವದರಲ್ಲಿ ಚಿತ್ತಭ್ರಂಶವದಾಗುತ್ತದೆ. ಇದೇ ವಿಪರೀತ ಬುದ್ಧಿಯ ಕಾರ್ಯ. ಅಮೃತವನ್ನು ತೊರೆದು, ಹೆಂಡ ಕುಡಿದ ಮಂಗನಂತೆ, ತಲೆ ಕೆಡಿಸಿಕೊಂಡ ಹುಚ್ಚನಂತೆ ಗುರು ಹಿರಿಯರ ನುಡಿಯಂತೆ ನಡೆಯದಿದ್ದವರು ಅಜ್ಞಾನದ ಕಿಚ್ಚಿನಲ್ಲಿ ಬಿದ್ದು ಸುಟ್ಟು ಭಸ್ಮೀಭೂತರಾಗುತ್ತಾರೆ. ಮರವೆಯ ಕೂಪದಲ್ಲಿ ಬಿದ್ದು ತೊಳಲಾಡುತ್ತಾರೆ. ಕುರುಡರಂತೆ, ಹೆಳವರಂತೆ ಜೀವನ ಸಾಗಿಸುತ್ತಾರೆ. ಕ್ರಿಯಾಶಕ್ತಿಗೆ ಸಹಕಾರಿಯಾಗಿರುವ ಬುದ್ಧಿಶಕ್ತಿಯನ್ನೂ ದುರುಪಯೋಗ ಮಾಡಿಕೊಂಡು ಗತಿ–ಮತಿ ಕಾಣದಂತೆ, ಒಡಕ ಮನದಲ್ಲಿ ತೊಳಲಿ ಘಾಸಿಗೊಳಗಾಗಿ ಬೆಂದುಬೆಂಡಾಗುತ್ತಾರೆ. ಕೊನೆಗೆ ದೇವರಿಗೂ ಬೇಡಾಗುತ್ತಾರೆ. ಕಾಡುಜೀವನದಲ್ಲಿ ಮಡಿದು ಹೋಗುತ್ತಾರೆ.

"ದೀಪನಿರ್ವಾಣಗಂಧಂಚ ಸುಹೃದ್ವಾಕ್ಯ ಮರುಂಧತೀಂ।
ನ ಜಿಘ್ರಂತಿ ನ ಶೃಣ್ವಂತಿ ನ ಪಶ್ಯಂತಿ ಗತಾಯುಷ್ಯಃ॥"

ಆಯುಷ್ಯ ತೀರಿದವರು ದೀಪದ ಕಮರಿನ ವಾಸನೆಯನ್ನೂ ತೆಗೆದುಕೊಳ್ಳಲಾರರು

ಮತ್ತು ಪಿತೃಪಿಗಳ ಮಾತನ್ನೂ ಕೇಳಲಾರರು. ಅರುಂಧತಿ ನಕ್ಷತ್ರವನ್ನೂ ನೋಡ ಲಾರರು ಎಂದುದಾಗಿ ಈ ಶ್ಲೋಕದಿಂದ ತಿಳಿದುಬರುತ್ತದೆ.

ಅದಕ್ಕಾಗಿ ವಿನಾಶಕಾಲ ಬರುವ ಪೂರ್ವದಲ್ಲಿಯೇ ಸತ್‌ಶ್ರವಣ, ಮನನ, ನಿಧಿದ್ಯಾಸ, ಶಿವಾರ್ಚನೆ ಮುಂತಾದವುಗಳನ್ನೂ ಅಂತಃಕರಣಪೂರ್ವಕ ಮಾಡಿ ಚಿತ್ತ ಶುದ್ಧಿಯನ್ನೂ ಬುದ್ಧಿಶಕ್ತಿಯೊಡನೆ ಬಲಪಡಿಸಿಕೊಂಡರೆ ಬಾಳಿನಲ್ಲಿ ಬೆಳಕನ್ನೂ ಕಾಣಬಹುದು. ಅಂತಾದಾಗ ದೃಷ್ಟಿಯಲ್ಲಿ ದಿವ್ಯದೀಪ್ತಿಯನ್ನೂ ಕಾಣುತ್ತೇವೆ. ದುಡಿಮೆಯಲ್ಲಿ ದಿವ್ಯ ಶಕ್ತಿಯನ್ನು ಅನುಭವಿಸುತ್ತೇವೆ. ಕಾಯಕ ಮಾಡುವವರಿಗೆ ಇದೇ ಪರಮಗುರಿ. ಬುದ್ಧಿವೃದ್ಧಿಗೆ, ಆತ್ಮಸಾಕ್ಷಾತ್ಕಾರಕ್ಕೆ ಅಂತರಂಗ ಬಹಿರಂಗಗಳೆ ರಡರ ಸತ್ವಸಾಧನೆಯೇ ಅದರ ಗುಟ್ಟು ಗುರಿ.

ಯುಗಪುರುಷ ಯೋಗಿಕುಮಾರ

ಸಾಹಿತ್ಯ ಪ್ರಕಾರ	:	ಗದ್ಯ
ಮೊದಲ ಮುದ್ರಣ	:	೧೯೭೮
ಎರಡನೆಯ ಮುದ್ರಣ	:	೧೯೮೦
ಮೂರನೆಯ ಮುದ್ರಣ	:	೧೯೮೧
ರಚನೆಯ ವಯಸ್ಸು	:	೪೯
ರಚನಾಸ್ಥಳ	:	ಹುಬ್ಬಳ್ಳಿ

ಶ್ರೀ ಜಗದ್ಗುರು ಮೂರುಸಾವಿರಮಠ ಗ್ರಂಥಮಾಲೆ–೬೩

ಯುಗಪುರುಷ ಯೋಗಿಕುಮಾರ

ಶ್ರೀಮೂಜಗಂ

ಪ್ರಕಾಶಕರು:

ಶ್ರೀ ಜಗದ್ಗುರು ಗಂಗಾಧರ ಧರ್ಮಪ್ರಚಾರಕ ಮಂಡಳ,

ಮೂರುಸಾವಿರಮಠ, ಹುಬ್ಬಳ್ಳಿ.

೧೯೮೧

ಪ್ರಕಾಶಕರು:
ಸಂಸ್ಕೃತಿ ಪ್ರಸಾರೋಪನ್ಯಾಸ ಪುಸ್ತಕ ಪ್ರಕಾಶನ

ಪ್ರಕಟನಾಂಗ:
ಶ್ರೀ ಜಗದ್ಗುರು ಗಂಗಾಧರ ಧರ್ಮಪ್ರಚಾರಕ ಮಂಡಳ
ಮೂರುಸಾವಿರಮಠ, ಹುಬ್ಬಳ್ಳಿ.

ಪ್ರತಿಗಳು: ೨೦೦೦

ಬೆಲೆ: ೨-೦೦ ರೂಪಾಯಿ

ಮುದ್ರಕರು:
ಪರಂಜ್ಯೋತಿ ಪಾವರ ಪ್ರಿಂಟಿಂಗ್ ಪ್ರೆಸ್,
ಮೂರುಸಾವಿರಮಠ, ಹುಬ್ಬಳ್ಳಿ.

ಪ್ರಕಾಶಕರ ನುಡಿ

ಶ್ರೀ ಮೂಜಗಂ ಅವರು ಬರೆದ "ಯುಗಪ್ರುರುಷ ಯೋಗಿಕುಮಾರ" ಈ ಪುಸ್ತಕವು ಎರಡನೆಯ ಮುದ್ರಣವು ಮುಗಿದು ಒಂದು ವರ್ಷ ಆಗಿದೆ. ಈ ಪುಸ್ತಕಕ್ಕಾಗಿ ಜನರ ಬೇಡಿಕೆ ಹೆಚ್ಚಾಗಿರುವದರಿಂದ ಮತ್ತೆ ಮೂರನೆಯ ಸಲ ಮುದ್ರಣಗೊಂಡು ಪ್ರಕಾಶನಗೊಳ್ಳುತ್ತಿರುವದು ಸಂತೋಷದ ಸಂಗತಿಯಾಗಿದೆ. ಇತ್ತಿತ್ತಲಾಗಿ "ಶ್ರೀ ಜಗದ್ಗುರು ಗಂಗಾಧರ ಧರ್ಮಪ್ರಚಾರಕ ಮಂಡಳ"ದ ಸಂಸ್ಕೃತಿ ಪ್ರಸಾರೋಪನ್ಯಾಸ ಪುಸ್ತಕ ಪ್ರಕಾಶನಗಳು ಹೆಚ್ಚು ಹೆಚ್ಚು ಜನಪ್ರಿಯ ವಾಗಿ ಜನಜಾಗೃತಿ ಮಾಡುತ್ತಿರುವದು ಹೆಮ್ಮೆಯ ವಿಷಯ.

ಶ್ರೀ ಜಗದ್ಗುರು ಮೂರುಸಾವಿರಮಠದ ಗ್ರಂಥಮಾಲೆಯು ಇಲ್ಲಿಯವರೆಗೆ ಸುಮಾರು ೧೨೦ಕ್ಕೂ ಹೆಚ್ಚು ಮಿಕ್ಕ ಸದ್ಗ್ರಂಥಗಳನ್ನು ಪ್ರಕಟಿಸಿ ವೀರಶೈವ ಧರ್ಮ ಸಾಹಿತ್ಯ, ಸಂಸ್ಕೃತಿಗಳಿಗೆ ಮಹದುಪಕಾರವೆಸಗಿದೆ. ಇಂಥ ಪ್ರಕಾಶನದ ಫಲವಾಗಿ ನಾಡಿನ ಜನತೆಯಲ್ಲಿ ಧರ್ಮಕಲೆ, ಸಾಹಿತ್ಯ ಆರೋಗ್ಯಾದಿಗಳ ಅರಿವು ತುಂಬಿ ಸೂಸಲಿ. ಇಂದಿನಂತೆ ಮುಂದೆಯೂ ನಮ್ಮ ಗ್ರಂಥ ಪ್ರಕಾಶನಗಳನ್ನು ಕನ್ನಡಿ ಗರು ಅಭಿಮಾನವಿರಿಸಿ ಓದಿ ತೃಪ್ತಿಪಡಲಿ. ಅಂದರೆ ನಮ್ಮ ಪರಿಶ್ರಮ ಸಾರ್ಥಕ ವಾಗುವದು. ರಾಷ್ಟ್ರದಲ್ಲಿ ಧಾರ್ಮಿಕ ಜಾಗೃತಿಯನ್ನುಂಟು ಮಾಡಿದ ಕಾರಣಿಕ ಕುಮಾರ ಯೋಗಿಯ ಆತ್ಮಜ್ಯೋತಿಯ ಬೆಳಕಿನಲ್ಲಿ ಎಲ್ಲರೂ ಮುನ್ನಡೆಯೋಣ. ಸಕಾಲಕ್ಕೆ ಸುಂದರವಾಗಿ ಮುದ್ರಿಸಿಕೊಟ್ಟ ಪರಂಜ್ಯೋತಿ ಪಾವರ್ ಪ್ರಿಂಟಿಂಗ್ ಪ್ರೆಸ್ಸಿನವರಿಗೂ ಧನ್ಯವಾದಗಳು.

ಹುಬ್ಬಳ್ಳಿ
೧-೪-೮೧

— ಪ್ರಕಾಶಕರು

ನಮ್ಮ ನುಡಿ

ನಾಡಿನ ಸಾಹಿತ್ಯ ಸಂಸ್ಕೃತಿ ಪ್ರಚಾರ ಪ್ರಭಾವಲಯದೊಳಗೆ; ಹುಬ್ಬಳ್ಳಿ ಮೂರುಸಾವಿರಮಠದ ಲಿಂಗೈಕ್ಯ ಶ್ರೀ ಜಗದ್ಗುರು ಗಂಗಾಧರ ಶಿವಯೋಗಿಗಳ ಕಾಲದಲ್ಲಿ ಕ್ರಿ. ಶ. ೧೯೦೭ ರಲ್ಲಿ 'ವಿಶೇಷಾರ್ಥ ಪ್ರಕಾಶಿಕೆ' ಗ್ರಂಥದೊಂದಿಗೆ ಸಂಸ್ಕೃತ ಗ್ರಂಥ ಸಂಶೋಧನದ ಮತ್ತು ಪ್ರಕಾಶನದ ಕಾರ್ಯವು ಬೀಜವನ್ನು ನೆಟ್ಟಿತು; ಇನ್ನೇನು? ಜಗದ್ಗುರು ಗಂಗಾಧರ ಗ್ರಂಥ ಪ್ರಕಾಶನ ತಲೆಯೆತ್ತಿ ನಿಂತೀತೆಂಬ ಮಾತಿಗೆ ಇಂಬು ಕೊಟ್ಟಿತು; ಮುಂದೆ ಸಾಮಾಜಿಕ, ಶೈಕ್ಷಣಿಕ ರಂಗದಲ್ಲಿ ಅದ್ಭುತ ಕ್ರಾಂತಿಯನ್ನು ಮಾಡಿದ ಲಿಂ. ಜಗದ್ಗುರು ಗುರುಸಿದ್ಧ ರಾಜಯೋಗೀಂದ್ರರ ಮಠಾಧಿಪತ್ಯ ಒರುತ್ತಲೇ ಕ್ರಿ. ಶ. ೧೯೩೬ಕ್ಕೆ ಮೂರು–ನಾಲ್ಕು ವರುಷ ಮುಂಚೆಯೇ "ಶ್ರೀ ಜಗದ್ಗುರು ಮೂರುಸಾವಿರ ಮಠ ಗ್ರಂಥ ಮಾಲೆ"ಯು ರೂಪುಗೊಂಡು, ಹಿಂದಿನ ಹೊತ್ತಿಗೆ ಮೂರರ ಜೊತೆಗೆ, ಅದರಲ್ಲಿ ಮತ್ತೆ ಹನ್ನೊಂದು ಪುಸ್ತಕ ಪುಷ್ಪಗಳು ಅರಳಿದುವಷ್ಟೇ ಅಲ್ಲ, ಅವರ ಅಂತ್ಯ ಸಮಯಕ್ಕೆ ಎಂದರೆ ೧೯೫೮ರ ಆರಂಭದಲ್ಲಿ ಬೃಹನ್ನಿಧಿಯೊಂದಿಗೆ "ಜಗದ್ಗುರು ಗಂಗಾಧರ ಧರ್ಮ ಪ್ರಚಾರಕ ಮಂಡಲ" ಸಂಸ್ಥಾಪಿತವಾದ ಮೇಲಂತೂ ಶ್ರೀ ಮಠದ "ಮಾಲೆ"ಗೆ ಎಂದಿಲ್ಲದಷ್ಟು ಮಹತ್ವ ಬಂದುಬಿಟ್ಟಿತು; ಧಾರ್ಮಿಕ ಜಾಗೃತಿಗೆ ನವಚೇತನದ ನವನೀತವನ್ನೇ ಕಡೆದು ಇಟ್ಟಿತು.

ಈಗಿನ ಜಗದ್ಗುರು ಶ್ರೀ ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳವರ ಅಗಾಧ ಕರ್ತೃತ್ವ ಶಕ್ತಿಯಿಂದ ೧೯೬೦ ರಿಂದೀಚೆಗೆ "ಮಂಡಲ"ದ ಯೋಜನೆಗೆ ವ್ಯಾಪ್ತಿ–ದೀಪ್ತಿಗಳೆರಡೂ ಜೋಡಾಗಿ, ಧರ್ಮ ಪ್ರಚಾರ ಕಾರ್ಯವು ವೇಗವಾಗಿ ಸಾಗುತ್ತ ಅನೇಕ ಉದ್ಬೋಧಕ–ಉತ್ಕೃಷ್ಟ ಬೃಹದ್ ಗ್ರಂಥಗಳ ಪ್ರಕಟನೆಯಾಗುತ್ತಿದ್ದು, ಅವಕ್ಕೆ ವಿದ್ವಜ್ಜನಗಳ ವಿಮರ್ಶಕರ ಮನ್ನಣೆಯೂ ದೊರೆಯಿತು. ಈಗಾಗಲೇ ನಮ್ಮ "ಮಾಲೆ"ಯಿಂದ ಅರವತ್ತುಮೂರು ಗ್ರಂಥಗಳು ಬೆಳಕಿಗೆ ಬಂದಿರುವುದು ನಮ್ಮೆಲ್ಲರ ಭಾಗ್ಯವಿಶೇಷವೆನ್ನಬೇಕು. ಮಹಾಸನ್ನಿಧಿಯವರ ಮತ್ತೊಂದು ಮಹತ್ ಸಂಕಲ್ಪದಲ್ಲಿ ಮೆರೆಯಾದ ಮಹೋದ್ದೇಶವೆಂದರೆ: ಅರಿವಿನ ಸಿರಿಯನ್ನು ಹಂತಹಂತವಾಗಿ ದೇಶದ ತುಂಬೆಲ್ಲ ಸಾಮಾನ್ಯ ಜನತೆಗೆ ಹಂಚುವದು. ನಮ್ಮಲ್ಲಿಯ ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯ ಮುಂತಾದ ಮೂರು ವಿಶ್ವ ವಿದ್ಯಾನಿಲಯಗಳು ಹಮ್ಮಿಕೊಂಡಂತೆ, ಅನುಭವಿಕ ವಿದ್ವಾಂಸರಿಂದ ಶ್ರೀ ಮೂರುಸಾವಿರಮಠದ ತತ್ವಾವಧಾನದಲ್ಲಿ ಅಲ್ಲಲ್ಲಿ ಆಗಾಗ ಉಪನ್ಯಾಸ ಶಿಬಿರಗಳನ್ನು ಏರ್ಪಡಿಸಿ, ಆಯಾ ಉಪನ್ಯಾಸಗಳನ್ನು ಪುಟ್ಟ ಪುಸ್ತಕಗಳ ರೂಪದಲ್ಲಿ

ಹೊರಗೆಡಹಿ, ಜನಸಾಮಾನ್ಯರ ಹೃದಯವನ್ನು ಬೆಳಗಿಸಲು ಪೂಜ್ಯ ಶ್ರೀಜಗದ್ಗುರುಗಳವರು ಇದೀಗ ಮುಂದಾಗಿದ್ದಾರೆ.

ನಮ್ಮ 'ಮಂಡಳ'ದ ಪ್ರೇರಕ ಅಂಗವಾಗಿ 'ಮಾಲೆ'ಯ ಪೂರಕ ರಂಗವಾಗಿ ಜಗದ್ಗುರು ಮಹಾಸನ್ನಿಧಿಯವರೇ ಕೃಪೆಗೈದ "ಯುಗಪುರುಷ ಯೋಗಿಕುಮಾರ" ಎಂಬ ಪ್ರಪ್ರಥಮ ಉಪನ್ಯಾಸದ ಪ್ರಾರಂಭೋತ್ಸವವು ಹುಬ್ಬಳ್ಳಿಯ ಶ್ರೀಮೂರು ಸಾವಿರ ಮಠದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿ ಡಾ|| ಆರ್. ಸಿ. ಹಿರೇಮಠ ಅವರಿಂದ ಜರಗಿತು.

ಬಳಿಕ ಮಹಾಸನ್ನಿಧಿಯವರ, ಧಾರವಾಡದಲ್ಲಿಯ ಶಾಖಾ ಮೂರುಸಾವಿರ ಮಠದಲ್ಲಿ ನೆರವೇರಿದ ಎರಡನೆಯ ಉಪನ್ಯಾಸ ಶಿಬಿರದ ಕಾಲಕ್ಕೆ ಅಲ್ಲಿಯ ಮುರುಘಾ ಮಠದ ತ್ರಿವಿಧ ದಾಸೋಹಮೂರ್ತಿ ಶ್ರೀ ಮ.ನಿ.ಪ್ರ. ಮಹಾಂತಮಹಾಸ್ವಾಮಿಗಳವರಿಂದ ನಮ್ಮ "ಸಂಸ್ಕೃತಿ ಪ್ರಸಾರೋಪನ್ಯಾಸ ಪುಸ್ತಕ ಪ್ರಕಾಶನ"ದ ಪರವಾಗಿ 'ಶ್ರೀ ಮೂಜಗಂ' ಅವರ 'ಯುಗಪುರುಷ ಯೋಗಿಕುಮಾರ' ಪುಸ್ತಕದ ಉದ್ಘಾಟನೆ ಯಾಯಿತು. ಇಂತಹ ಪ್ರಕಾಶನದ ಫಲವಾಗಿ ನಾಡಿನ ಜನತೆಯಲ್ಲಿ ಧರ್ಮ, ಕಲೆ, ಸಂಸ್ಕೃತಿ, ಸಾಹಿತ್ಯ, ಆರೋಗ್ಯಾದಿಗಳ ಅರಿವು ತುಂಬಿ ಸೂಸಲಿ! ನಮ್ಮೀ ಹೊಸ ಯೋಜನೆ ಎಂದೆಂದಿಗೂ ಹಸಿರಾಗಿರುವಂತೆ ನಾಡಿನ ಜನರೆಲ್ಲರಿಂದ ಉತ್ತೇಜನದ ಗಾಳಿ ಬೀಸಲಿ!! ಅದರಂತೆ, ಈ ದಿಶೆಯಲ್ಲಿ ಅನುಭವ ಸಂಪನ್ನರಾದ ಮೇಧಾವಿಗಳು ಹೃತ್ಪೂರ್ವಕ ಸಹಕಾರದಿಂದ ಈ ಪ್ರಕಾಶನ ಶಿಶುವನ್ನು ಪೋಷಿಸಲಿ.

ಹುಬ್ಬಳ್ಳಿ
೧೯೭೮

ಪ್ರಕಾಶಕರು
ಪ್ರಕಟನಾಂಗ,
ಜ.ಗಂ. ಧರ್ಮಪ್ರಚಾರಕ ಮಂಡಳ
ಮೂರುಸಾವಿರಮಠ, ಹುಬ್ಬಳ್ಳಿ.

ಶ್ರೀವಾಣಿ

ಅರಿವೆ ಗುರು; ಬಾಳಬಟ್ಟೆಯ ಮೇಲಣ ಕಲ್ಪತರು. ಅನ್ನದಿಂದ ಹೊಟ್ಟೆಯಷ್ಟೆ ತುಂಬಿದರೆ ಸಾಲದು; ಅರಿವಿಂದ ನೆತ್ತಿಯೂ ತುಂಬಿದರೆ ಮೇಲದು! ಸಾಹಿತ್ಯಿಕ ಸಾಧನದಿಂದ ಸಾಧ್ಯವಾದಷ್ಟು ಜನ ಸಾಮಾನ್ಯರ ಅರಿವಿನ ಹಸಿವನ್ನು ಹಿಂಗಿಸಲು ಸಾಹಸಪಡಬೇಕೆಂದು ನಾವು ಎಂದೋ ಬಯಸಿದ್ದೆವು. ಬಹುದಿನದಿಂದ ಮರೆಗೆ ನಿಂದ ಬಯಕೆಯಿದು. ಈಗೀಗ ಮರು ಕಳಿಸಿ ಬಂದ ಬಯಕೆಯಿದು. ಬಯಕೆ ಬರಡಾಗಿ ಸುಣ್ ಸೊನ್ನೆಯಾಗಲಿಲ್ಲ; "ಬಯಕೆ ಬರುವುದರ ಕಣ್‌ಸನ್ನೆ" ಯಾಯಿತು. ಅಂತೆಯೇ ನಮ್ಮ ಬಯಕೆ ಹಣ್ಣಾಯಿತು. ಅರಿವಿನ ಕಣ್ಣಾಯಿತು. ಹಲವು ಬಗೆಯ ಸಾಮಾಜಿಕ ಕಾರ್ಯನಿಮಿತ್ತವಾಗಿ ಬಿಡುವಿಲ್ಲದ ಈ ಜೀವನದಲ್ಲಿ ಸಾಹಿತ್ಯ ಕ್ಷೇತ್ರದತ್ತ ಹೊರಳಿ, ಸಾಹಿತ್ಯ–ಸಂಸ್ಕೃತಿಗಳ ಮೇಲೆ ಮೊದಲಿಗಿದ್ದ ಹಂಬಲವನ್ನು ಉಳಿಸಿಕೊಳ್ಳುವುದಕ್ಕಾಗಿಯೇ ಸಮಯ ಕಲ್ಪಿಸಿಕೊಂಡು, ಮತ್ತೆ ಇದೀಗ ಬರವಣಿಗೆಯ ಕಾಯಕಕ್ಕೆ ತೊಡಗಿದ್ದೇವೆಂದು ತಿಳಿಸಲು ಸಂತಸವೆನಿಸುತ್ತದೆ.

ಸಿದ್ಧರಿಗೆ ಸಿದ್ಧನಾಗಿದ್ದ, ಬುದ್ಧನಿಗೆ ಬುದ್ಧನಾಗಿದ್ದ ಕರ್ತೃ ಶ್ರೀ ಜಗದ್ಗುರು ಗುರುಸಿದ್ಧೇಶ್ವರರ ಅಂತಃಪ್ರೇರಣೆಯಿಂದಾಗಿ, ನಮ್ಮ "ಸಂಸ್ಕೃತಿ ಪ್ರಸಾರೋಪನ್ಯಾಸ ಪುಸ್ತಕ ಪ್ರಕಾಶನ"ದ ಶುಭ ನಾಂದಿ ತಾನೆ "ಯುಗಪುರುಷ ಯೋಗಿಕುಮಾರ"ನ ಮಧುರ ಸಂಸ್ಮರಣದಿಂದಾದುದರಲ್ಲಿಯೂ:ಮತ್ತದರೊಳಗೆ, ಆ ಕಾರಣಿಕರ ಕಣ್ಮಣಿ ಕುಮಾರೇಶನ ಕಾರುಣ್ಯದ ಕಂದರಾದ ಆತನ ಮಣಿಹದ ಮಾಮನೆ–ಶಿವಯೋಗಮಂದಿರ ಗರಡಿಯಲ್ಲಿಯ ಸಾಧಕರಾದ ನಾವೇ ಈ ಕಾರ್ಯಾರಂಭದ ಸಂಸ್ಫುರಣಕ್ಕೆ ಕಾರಣರಾದುದರಲ್ಲಿಯೂ ಏನೋ ಒಂದು ಔಚಿತ್ಯ ಅಡಗಿರಬೇಕು! ಯೋಗಿಗಳಿಗೆ ಮಹಾಯೋಗಿಯಾಗಿದ್ದ ಕುಮಾರ ಶಿವಯೋಗಿಯ ಸರ್ವತೋಮುಖ ವ್ಯಕ್ತಿತ್ವವನ್ನು ಬಲ್ಲವರೇ ಬಲ್ಲರು. ವಿಶ್ವಧರ್ಮವಾಗಬಲ್ಲ ಶರಣಧರ್ಮವನ್ನು ಅಲ್ಲ, ಮಾನವಧರ್ಮವನ್ನು ಮತ್ತೆ ಎತ್ತಿ ಹಿಡಿದು ಎತ್ತರಕ್ಕೆ ನಿಲ್ಲಿಸಿ, ಎಲ್ಲ ತೆರನಾದ ಏಳಿಗೆಗೆ ಹೆಣಗಾಡಿ ಎಲ್ಲರ ಲಕ್ಷ್ಯಸೆಳೆದ ಆ ಯೋಗಿಯನ್ನು ನೆನೆಸದವರಾರು? ಶರಣ ಘಟ್ಟಿವಾಳಯ್ಯನ ಕಾಲಜ್ಞಾನದಲ್ಲಿ ನಿಂತ ಶಾಂತ ಮಹಾಂತನಾತ; ಇಪ್ಪತ್ತನೆಯ ಶತಮಾನದ ಅಣ್ಣ ಬಸವಣ್ಣನಾತ. ಮಹಾಸಭೆಮಂದಿರ–ಮಹಾಶಾಲೆಗಳ ಸಂಸ್ಥಾಪಕ; ನಿತ್ಯ ನೂತನ ಸಮಾಜ ನಿರಮಾಪಕ; ಸರ್ವಜನ ಹೃದಯ ಸುವ್ಯಾಪಕ ಮೇಲಾಗಿ ಉದಾತ್ತ ತತ್ತ್ವಪ್ರಚಾರ ಉದ್ದೀಪಕನಾತ.

ವಿಜ್ಞಾನ ಯುಗದಲ್ಲಿಯೂ ಸುಜ್ಞಾನ ತಲೆದೋರಬೇಕಷ್ಟೆ? ಎಲ್ಲರಿಗೂ

ಸಂಸ್ಕೃತಿಯ ಹುರುಳು ಹೊಳೆಯುವಂತಾಗಲಿ ಎಂದು ನಾವೀ ಸಂಸ್ಕೃತಿ ಪ್ರಸಾರೋಪನ್ಯಾಸ ಮಾಲೆಯನ್ನು ಹೆಣೆದು ಹಮ್ಮಿಕೊಂಡಿದ್ದೇವೆ; ಅದರ ಮುಖಾಂತರ ಚಿಕ್ಕ ಹೊತ್ತಿಗೆಗಳನ್ನು ಹೊರಡಿಸುವ ಹೊಳವನ್ನು ಹಮ್ಮಿಕೊಂಡಿದ್ದೇವೆ; ಸ್ವಲ್ಪದರಲ್ಲಿ ಸ್ವಾರಸ್ಯ–ಎಂಬಂತೆ ನಾವು ನಮ್ಮ ಯೋಜನೆಯನ್ನು ಕಾರ್ಯಗತಗೊಳಿಸಿ ಮುನ್ನಡೆಯಿಸುವಲ್ಲಿ ಹಾಗೂ ಅದನ್ನು ನಿರಂತರವಾಗಿ–ನಿರಾಂತಕವಾಗಿ ಮುಂದುವರೆಸಿಕೊಂಡು ಬರುವಲ್ಲಿ ಸಹೃದಯ ವಾಚಕರ–ಅನುಭವಿ ವಿದ್ವಜ್ಜನರ ಸಹಕಾರವನ್ನು ಸದಾ ಹಾರೈಸೋಣವಾಗಿದೆ.

ಹುಬ್ಬಳ್ಳಿ ಶ್ರೀಮೂಜಗಂ

ಪರಿವಿಡಿ

ಮುಂಬೆಳಗು	೮೧೫
ಜನನ–ಬಾಲ್ಯ	೮೨೨
ಅಧ್ಯಾಪನ–ಮಾಯಾನಿರಸನ	೮೨೯
ಸಾಧಕ ಜೀವನ–ಗುರು ಸಂದರ್ಶನ	೮೩೨
ಆತ್ಮಾನುಸಂಧಾನ	೮೩೮
ಮಠಾಧಿಕಾರ–ಮಠೋದ್ಧಾರ	೮೪೫
ಅ. ಭಾ. ವೀರಶೈವ ಮಹಾಸಭೆ ಸ್ಥಾಪನೆ	೮೫೩
ಶಿವಯೋಗಮಂದಿರ ಸ್ಥಾಪನೆ	೮೬೧
ಬೆಳಗಿನೊಳು ಬೆಳಗು	೮೬೮
ಅಮರ ಚೇತನ	೮೮೦

ಮುಂಬೆಳಗು

ಜೋಯಿಸರ ಹರಳಹಳ್ಳಿಯಲಿ ಜನಿಸಿ,
ಮಾಯಾ-ಮೋಹವ ತ್ಯಜಿಸಿ,
ಶಂಭುಲಿಂಗ ಬೆಟ್ಟದೊಳು ತಪಿಸಿ,
ಷಟ್‌ಶಾಸ್ತ್ರವನಭ್ಯಸಿಸಿ,
ಆತ್ಮ-ಜ್ಞಾನವ ಪರಿಯನರಿದುಕೊಂಡನಯ್ಯ, ತಾನು!
ಯೆಳೆಂದೂರು ಯತಿಗಳ ಪಡೆದು,
ಮನ ಮುಟ್ಟಿ ಸೇವೆಯಗೈದು,
ಭವ-ಬೀಜಂಗಳ ಹುರಿದು,
ಷಟಸ್ಥಲ-ತತ್ತ್ವವ ತಿಳಿದು;
ಶಿವಾನುಭವ-ಸಾರವ ಸವಿದು
ಯೋಗ ವಿದ್ಯೆಯೊಳು ಪರಿಪೂರ್ಣನಾದನಯ್ಯ, ತಾನು!
ಬಿದರೆ ಕುಮಾರಸ್ವಾಮಿಗಳಿಂದ
ಚಿನ್ಮಯಾನುಗ್ರಹವ ಪಡೆದು,
ಹಾನುಗಲ್ಲ ವಿರಕ್ತಮಠಕ್ಕಧಿಪತಿಯಾಗಿ,
ವಿರಕ್ತರಿಗೆ ತಾ ಶಿಖಾಮಣಿಯಾಗಿ
ಮಠದ ಪ್ರಭಾವವ ಬೆಳಗಿಸಿದನಯ್ಯ, ತಾನು!
ದೇಶ-ಸೇವೆಯೇ ಈಶ-ಸೇವೆ' ಯೆಂದು
ಧರ್ಮಧುರೀಣರಿಂದನುಮತಿ ಪಡೆದು,
"ಅಖಿಲ ಭಾರತ ವೀರಶೈವ ನಾಮದ
ಮಹಾಸಭೆ"ಯ ಸಂಸ್ಥಾಪಿಸಿದನಯ್ಯ, ತಾನು!
ವೈರಾಗ್ಯದ ಮಲ್ಲಣಾರ್ಯರ
ಮನದಿಚ್ಛೆಯಂ ಪೂರೈಸಲು
ಶೀಲ ಸಂಸ್ಕೃತಿಯನುಳಿಸಲು,
ಶೂಲಪಾಣಿಯ ಸ್ಮರಿಸಲು
ಯೋಗ-ವಿದ್ಯೆಯ ಬೆಳೆಸಲು
ತ್ಯಾಗ-ಬುದ್ಧಿಯ ಕಲಿಸಲು
ಗುರು-ವಿರಕ್ತರೊಳು

ಭಾವೈಕ್ಯ ಬಲಿಸಲು
ಚಿತ್ತರಗಿ ಚಿಜ್‌ಜ್ಯೋತಿ–
ವಿಜಯ ಮಹಾಂತೇಶನು
ತೋರಿಸಿದ ತಾಣದೊಳು
ಶಿವಯೋಗಮಂದಿರವ ಸ್ಥಾಪಿಸಿದನಯ್ಯ, ತಾನು!
ವಿರಕ್ತಿಯಲ್ಲಿ ಅಲ್ಲಮಪ್ರಭುವಾಗಿ,
ಜ್ಞಾನದಲ್ಲಿ ಚನ್ನಬಸವಣ್ಣನಾಗಿ,
ಭಕ್ತಿಯಲ್ಲಿ ಬಸವಣ್ಣನಾಗಿ,
ಇಪ್ಪತ್ತನೆಯ ಶತಮಾನದ **ಯುಗ ಪುರುಷನಾಗಿ,**
ಸಮಾಜವನುದ್ಧರಿಸಿ
ಜನ–ಜಾಗೃತಿಗೈದ ದಯಾಮೂರ್ತಿ ತಾನಯ್ಯ!!
ಇದುವೆ ಹಾನುಗಲ್ ಕುಮಾರೇಶನ
ಮಹಾಮಹಿಮೆ ಕೇಳಿರಯ್ಯ!

ಭ್ಯೂಲತಾಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ.

ಈ ಯುಗ–ಪುರುಷ ಯೋಗಿಕುಮಾರನ ಬಗೆಗೆ, ೧೨ನೆಯ ಶತಮಾನದಲ್ಲಿದ್ದ ಮಹಾ ಶಿವಶರಣರಾದ ಘಟ್ಟಿವಾಳಯ್ಯನವರು ನುಡಿದ ಕಾಲಜ್ಞಾನದ ಮಾತು ಹೀಗಿದೆ:

"ಗಿಡಮಾಗಡಿಯೆಂಬ ಪುರದಿ ಜಂಗಮದೇವ:
ಮೃಡಕಣಾ, ಭಿಕ್ಷವ ಬೇಡ್ಯಾನು
ಪೊಡವಿಯೆ ಬಾಗಿ ನೀಡಲು ಆತನು
ದೃಢದಿಂದ ನೀಡಿಸಿಕೊಂಡಾನು.
ಮಲಾಪಹಾರಿಯ ತೀರದಿ ವಿರಕ್ತ ಜಂಗಮನೊಬ್ಬ
ನಲವಿಂದೆ ಹುಚ್ಚನೆನಿಸ್ಯಾನು.
ಲೋಲ ಜನಗಳು ಹೆಸರನೆ ಇಟ್ಟಾರು.
ಸ್ಥಲದೊಳು ಹೊಳಿಸಿಕೊಂಡಾನು."

—ಹೀಗೆ ನುಡಿದ, ೧೨ನೆಯ ಶತಮಾನದ ಘಟಿವಾಳಯ್ಯನವರು, ೨೦ನೆಯ ಶತಮಾನದಲ್ಲಿ ಕರ್ನಾಟಕದೊಳಗೆ ಧರ್ಮ ಕ್ರಾಂತಿಯಾಗಿ ಜನ–ಜಾಗ್ರತಿಯಾಗುವ ಮುನ್‌ಸೂಚನೆಯ ಭವಿಷ್ಯ ನುಡಿದಿದ್ದಾರೆ. ಇದು ಅಕ್ಷರಶಃ ಸಾರ್ಥಕಗೊಂಡಿದೆ, ಯುಗಪುರುಷ ಯೋಗಿಕುಮಾರನ ಲೀಲೆಯಿಂದ.

ಈ ಕಾಲಜ್ಞಾನದ ಮಾತಿನಿಂದ ಶರಣರ ಇರುವು, ಅವರ ಲೀಲೆ, ಅವರ ದೂರ-ದೃಷ್ಟಿಯು ಮಹತಿಯು ಎದ್ದು ಕಾಣುತ್ತಿದೆ; ಶರಣವಾಣಿ ಚಿಂತಾಮಣಿಯಾಗಿ ಪರಿಣಮಿಸಿದೆ.

ಹನ್ನೆರಡನೆಯ ಶತಮಾನ ಅದೊಂದು ಉತ್ಕ್ರಾಂತಿಯ ಕಾಲ, ತಮವು ತುಂಬಿದ ನಾಡಿನಲ್ಲಿ ಬೆಳಕು ಬರಿಸಿ, ಶಿವಾನುಭವ ಮಂಟಪ ರಚಿಸಿ, ಸಾಹಿತ್ಯ ಸುಧೆಯನ್ನು ಸುರಿಸಿ, ಸಕಲ ಜೀವಾವಳಿಗೆ ಲೇಸನೆ ಬಯಸಿ, ಭಾಗ್ಯೋದಯವನ್ನು ತಂದ ಕಾಲವದು.

ಈ ಭಾಗ್ಯೋದಯಕ್ಕೆ ಮೂಲ ಕಾರಣ ಪುರುಷಃ ಜಗಜ್ಜ್ಯೋತಿ ಮಹಾತ್ಮಾ ಬಸವೇಶ್ವರ. ಈತನ ಈ ಕಾಯಕ ನಿಷ್ಠೆಯ ಧಾರ್ಮಿಕ ವಿಚಾರಾತ್ಮಕ ಕ್ರಾಂತಿಯು ಕೆಲವು ಶತಮಾನದವರೆಗೆ ಸಾಗಿದ ನಂತರ ಮತ್ತೆ, ನಾಡಿಗೆ ಅಂಧಕಾರ ಆವರಿಸಿದಂತಾಯಿತು. ಅದು ೧೯ನೆಯ ಶತಮಾನ.

ಆವರಿಸಿದ ಅಜ್ಞಾನಾಂಧಕಾರದಿಂದಾಗಿ ಆಗ ಆಚಾರ-ವಿಚಾರಗಳು ಕೊಚ್ಚಿ ಹೋಗಿದ್ದವು. ಯೋಗ-ಶಕ್ತಿಯು ಕುಂದಿಹೋಗಿತ್ತು. ಮಠ-ಮಾನ್ಯಗಳಲ್ಲಿ ಸಾತ್ತ್ವಿಕ ಶಕ್ತಿ ನಷ್ಟವಾಗಿ, ತಾಮಸೀಯ ಪ್ರವೃತ್ತಿಯು ತಾಂಡವವಾಡುತ್ತಿತ್ತು. 'ನಾ-ಹೆಚ್ಚು ನಾ-ಹೆಚ್ಚು' ಎನ್ನುವ ಹುಚ್ಚು ಹೆಚ್ಚಾಗಿತ್ತು. ಲಿಂಗನಿಷ್ಠೆ ಕಡಿಮೆಯಾಗಿತ್ತು. ಶಾಸ್ತ್ರೋಕ್ತ ಲಿಂಗಗಳನ್ನು ಧರಿಸದೆ ಬರಿ ಎದೆಯಿಂದ ಜನ ತಿರುಗುತ್ತಿದ್ದರು. ಪರಕೀಯರ ಆಳಿಕೆಯಿಂದ ಭಾರತೀಯ ಸಂಸ್ಕೃತಿಯ ಮನೋಭಾವವು ಕುಗ್ಗಿ, ಸಮಾಜವು ಮುಂಗುರಿ ಕಾಣದೆ, ದಿಗ್ಭ್ರಾಂತ ಸ್ಥಿತಿಯಲ್ಲಿತ್ತು. ಪಾಶ್ಚಿಮಾತ್ಯ ನಡೆವಳಿಕೆಯ ಶಿಕ್ಷಣದ ಅಂಧಾನುಕರಣದಿಂದ ಭಾರತೀಯ ಗುರು-ಕುಲ ಪರಂಪರೆಗೆ ಆಘಾತ-ಪ್ರತ್ಯಾಘಾತಗಳು ಒದಗಿ, ಇಲ್ಲಿಯ ಯೋಗ-ವಿದ್ಯೆ, ಆಧ್ಯಾತ್ಮಶಾಸ್ತ್ರ, ಸಂಸ್ಕೃತಾಧ್ಯಯನ, ಸಾಹಿತ್ಯ-ಶಿಲ್ಪ-ಸಂಗೀತ ಮೊದಲಾದ ಕಲಾರಾಧನೆಗೆ ಪ್ರೇರಣೆ ಪ್ರೋತ್ಸಾಹಗಳು ತಪ್ಪಿ ಹೋಗಿದ್ದವು; ಇದರಿಂದ ನಮ್ಮತನ ತಪ್ಪಿಹೋಗಿ, ಹೊಸತನದ ರೂಪದಲ್ಲಿ ಪರಕೀಯತೆ ಕಾಲೂರಿತ್ತು; ಧಾರ್ಮಿಕ ಅಶಾಂತಿ ಅವಿದ್ಯೆಯ ಪ್ರಾಬಲ್ಯ, ಆರ್ಥಿಕ ಅಧೋಗತಿ ತಲೆ ದೋರಿದ್ದವು. ಮೂಢನಂಬಿಕೆ, ಡಾಂಭಿಕಾಚಾರ ಹೆಚ್ಚುತ್ತಲಿದ್ದವು. ಶಿವ-ಸಂಸ್ಕೃತಿಯು ಮಸಕಾಗಿ, ವಿಕೃತಿಯು ಬೆಳೆದಿತ್ತು. ಎತ್ತ ನೋಡಿದಡತ್ತ ಅಜ್ಞಾನ-ಅನಾಚಾರಗಳು ತಾಂಡವವಾಡುತ್ತಿದ್ದವು. ಅಂತರಂಗ ಶುದ್ಧಿ ಬಹಿರಂಗಶುದ್ಧಿಗಳೆರಡೂ ಅಪರೂಪದ ಮಾತಾಗಿದ್ದವು. ಕೃತ್ರಿಮತೆ ಹೆಚ್ಚಾಗಿ ಸಾತ್ವಿಕತೆಗೆ ತಾತ್ವಿಕತೆಗೆ ಬೆಲೆ ಇಲ್ಲದಾಗಿತ್ತು. ಕಲಾವಿದರನ್ನು ಪ್ರೋತ್ಸಾಹಿಸಲು ಕೈಹಿಡಿದೆತ್ತುವವರಿದ್ದಿಲ್ಲ. ಧರ್ಮಶಕ್ತಿಯು ಹ್ರಾಸವಾಗಿತ್ತು. ಕಾಲಿಲ್ಲದ ಹೆಳವನಂತೆ, ಕಣ್ಣಿಲ್ಲದ ಕುರುಡನಂತೆ ವೀರಶೈವ ಸಮಾಜದ ಪರಿಸ್ಥಿತಿಯಾಗಿತ್ತು. ಅಲ್ಲಲ್ಲಿ ಅಂತಃ ಕಲಹಗಳು ಹೆಚ್ಚಿ ಜನಜೀವನವು ಹದಗೆಟ್ಟಿತ್ತು.

ಸತ್ಯದ ಶೋಷಣೆಯಾಗಿ, ಮಿಥ್ಯದ ಪೋಷಣೆಯಾಗುತ್ತಿತ್ತು. ಜನತೆಯು ಅಂತಃಸತ್ವವನ್ನು ಕಳೆದುಕೊಂಡಿದ್ದರಿಂದ ಸತ್ಯಶುದ್ಧ-ಕಾಯಕವು ಮೂಲೆಗುಂಪಾಗಿತ್ತು. ಮೋಹ ಮಾಯೆಯಲ್ಲಿ ಮಾತ್ಸರ್ಯಮಡುವಿನಲ್ಲಿ ಜನರು ಮುಳುಗಿದ್ದರು. ರಾಷ್ಟ್ರ-ರಾಷ್ಟ್ರಗಳಲ್ಲಿಯೂ ಅಶಾಂತಿಯ ಕೂಗು ಕೇಳಿ ಬರುತ್ತಿತ್ತು. ಪ್ರತ್ಯೇಕ ವ್ಯಕ್ತಿ-ವ್ಯಕ್ತಿಯ ನಾಡಿಯಲ್ಲಿ ಅಹಂಭಾವದ ರಕ್ತ ಚಿಮ್ಮುತ್ತಿತ್ತು. ಪ್ರತಿಯೊಬ್ಬರು ಸ್ವಾರ್ಥಕ್ಕೆ ಬಿದ್ದು ಒದ್ದಾಡುತ್ತಿದ್ದರು. ಸಹಕಾರ-ಸೌಹಾರ್ದತೆಗಳು ಮಾತಿನ ಮಾಲೆಯಾಗಿದ್ದವು. ಜೀವನದಲ್ಲಿ ಸುಖ-ಶಾಂತಿ ಪಡೆಯದೆ, ಜನರು ಕೇವಲ ಬಾಹ್ಯಾಡಂಬರದಲ್ಲಿಯೇ ಕಾಲಕಳೆಯುತ್ತಿದ್ದರು. ಅವರ ವ್ಯಕ್ತಿತ್ವ ತೋರಿಕೆಯದಾಗಿತ್ತಲ್ಲದೆ, ಹೃದಯ-ಪರಿಶುದ್ಧಿಯಿಲ್ಲದೆ ಗೋಳಾಡುತ್ತಿದ್ದರು. ಯಾವ ಕ್ಷೇತ್ರವನ್ನು ನಿರುಕಿಸಿದರೂ ಅಲ್ಲೆಲ್ಲ ಕತ್ತಲೆಯೇ ಕತ್ತಲೆ. ಸಮಾಜದಲ್ಲಿ ಸಂಘಟನೆ ಲೋಪವಾಗಿದ್ದುದರಿಂದ ಬಹಿರ್ಮುಖತೆ ಸುತ್ತೆಲ್ಲ ಗೋಚರಿಸುತ್ತಿತ್ತು; ಅಂತರ್ಮುಖತೆ ನಶಿಸಿತ್ತು; ಅನೈತಿಕತೆ ಅರಾಜಕತೆಗಳ ಧೂಳಿ ಮುಸುಕಿತ್ತು; ಗುರು-ಜಂಗಮರ ನಡೆ-ನುಡಿಗಳು ತತ್ತ್ವ-ಹೀನವಾಗಿದ್ದವು; ಲಿಂಗನಿಷ್ಠೆ ಭಕ್ತಿ ಶ್ರದ್ಧೆಗಳು ಗಾಳಿಗೋಪುರಗಳಾಗಿದ್ದವು; ಅಷ್ಟಾವರಣಗಳ ಮಹಿಮೆ ನಷ್ಟವಾಗಿತ್ತು; ಕ್ರಿಯಾ-ಜ್ಞಾನಗಳೆರಡರಲ್ಲಿ ಅಂತಃಸತ್ತ್ವವಿರಲಿಲ್ಲ; ಭಸ್ಮಧರಿಸುವ ಕಲೆಗೆ ಕಾರ್ಮೋಡ ಕವಿದಂತಾಗಿತ್ತು ಪ್ರತಿಯೊಬ್ಬರಲ್ಲಿಯೂ ಭೇದಭಾವ ಒಡಮೂಡಿ, ಮಾನವತೆ ಎಂಬುದು ಕನಸಿನ ಗಂಟಾಗಿತ್ತು; ದಾನವತೆ ಹರಡಿತ್ತು. ಒಟ್ಟಿನಲ್ಲಿ ಸಮಾಜವು ಶವದಂತೆ ನಿಸ್ತೇಜವಾಗಿತ್ತು. ಹಿಂಸಾತ್ಮಕ ಆಚರಣೆಗಳ ಧಾರ್ಮಿಕ ತಿಕ್ಕಾಟಗಳು ಬೆಳೆದು ಬೇರು ಬಿಟ್ಟಿದ್ದವು; ಭಾವೈಕ್ಯತೆಗೆ ಬರ ಬಂದಂತಾಗಿತ್ತು. ಧರ್ಮ-ದರ್ಶನಗಳು ಕೃಶವಾಗಿ ಕರುಳು ಕೊರೆಯುವಂತಿತ್ತು; ಸ್ವೈರ ವೃತ್ತಿ ಹೆಚ್ಚಾಗಿತ್ತು. ಮಹಿಳೆಯರ ಮುನ್ನಡೆ ಮುಗ್ಗಿ ಕುಗ್ಗಿತ್ತು; ಮಠ-ಮಂದಿರಗಳಲ್ಲಿ ವಚನ-ಸಾಹಿತ್ಯದ ತಾಳೆಗರಿಗಳು ಹುಳು ಹತ್ತಿ ಹಾಳಾಗ ತೊಡಗಿದ್ದವು. ಸಮಾಜದ ಅಪಾರ ಸಂಪತ್ತು ದುರ್ವಿನಿಯೋಗವಾಗುತ್ತಿತ್ತು. ಬೋಧಕರು ತತ್ತ್ವ-ಚಿಂತನೆ ಮಾಡುವ ಪದ್ಧತಿಯನ್ನು ಕಳೆದುಕೊಂಡಿದ್ದರು. ಒಟ್ಟಿನಲ್ಲಿ ಸಮಾಜವು ಕಳಾಹೀನವಾಗಿ, ರೋಗ ತಗುಲಿದ ಮಹಾರೋಗಿಯಂತಾಗಿ ಕೃಶವಾಗಿತ್ತು.

ಮಾರ್ಗ-ದರ್ಶಕರಿಲ್ಲದೆ ಬಳಲಿ ಬೆಂದ ಜನತೆಯು ಭವಾರಣ್ಯದಲ್ಲಿ ಸಂಚರಿಸಿ ಬೇಸತ್ತು ಸಿಹಿನೀರಿಗಾಗಿ ಅತ್ರಿಯಕ್ಕಾಗಿ ಬಾಯ್‌ಬಿಡುತ್ತಿರುವ ಸಮಯದಲ್ಲಿಯೇ ಯುಗಪುರುಷರ ಉದಯವಾಗುತ್ತಿರುವುದು ಪ್ರಾಚೀನ ಕಾಲದಿಂದಲೂ ಕಂಡು ಬರುತ್ತದೆ. ಕಾರಣ, ನಾಡ ಜನ-ಜೀವನವು ಸುಭದ್ರವಾಗಿ ಬೆಳೆದು ಬೆಳಗಬೇಕಾದರೆ, ಶಿವಯೋಗಿಗಳೇ ಮೂಲ ಕಾರಣರು. ಅವರ ಅಂತಃಶಕ್ತಿಯ ಕಿರಣಗಳು ನಾಡಿನ ಮೂಲೆ-ಮೂಲೆಯಲ್ಲಿಯೂ ಪ್ರಸರಿಸಿ, ಜನ-ಜೀವನವನ್ನು ಚೇತರಿಸುತ್ತವೆ.

ಅವರು ತಮ್ಮ ಅನುಭವ ಸಂಪತ್ತನ್ನು ಜನತೆಯ ಉದ್ಧಾರಕ್ಕಾಗಿ ಬಿಟ್ಟು ಹೋಗುತ್ತಾರೆ. ಅಂದರೆ, ಯೋಗಿಗಳು, ತ್ಯಾಗಿಗಳು, ಮಹಾಪುರುಷರು ಮಾನವನ ಸರ್ವತೋಮುಖ ಉನ್ನತಿಗಾಗಿ ಅಹೋ ರಾತ್ರಿ ಕಷ್ಟಪಟ್ಟು ತಮ್ಮ ಜೀವನವನ್ನು ಪಾವನಮಾಡಿಕೊಂಡಿದ್ದಾರೆ; ಆದರ್ಶರಾಗಿದ್ದಾರೆ. ಅವರಲ್ಲಿ ಭಾವಶುದ್ಧಿ ಇದ್ದುದಕ್ಕಾಗಿಯೇ ಜಗತ್ತು ಅವರಿಗೆ ಬಾಗುತ್ತದೆ. ಸಾಧಕರಿಗೆ ಅವರು ದಾರಿದೀಪವಾಗಿದ್ದಾರೆ; ಕುರುಡರಿಗೆ ಕೈ ಗೋಲಾಗಿದ್ದಾರೆ. ಅವರು ಅಂದು ತಂದುಕೊಟ್ಟ ಅನುಭವಾಮೃತವನ್ನು ಇಂದಿಗೂ ಜನತೆ ಅಪೇಕ್ಷಿಸುತ್ತದೆ. ಅವರ ಆ ಶಕ್ತಿ-ಸ್ಫುರಿತ ವಚನ-ರಾಶಿಯು, ಗಾಢತರವಾದ ಕಾಳರಾತ್ರಿಯಲ್ಲಿ ಮುಗ್ಗರಿಸುತ್ತಿರುವ ಮನುಷ್ಯನನ್ನು ಎಚ್ಚರಿಸಿ, ಕೈಹಿಡಿದು ಸನ್ಮಾರ್ಗ ತೋರಿಸುತ್ತದೆ; ಬಾಳ-ಬಂಡಿಗೆ ಕಡೆಗೀಲಾಗುತ್ತದೆ; ಎಡರಡಸಿದ ವೇಳೆಯೊಳು ಧೈರ್ಯವನ್ನು ನೀಡುತ್ತದೆ. ಕಾಪಟ್ಯವಿಲ್ಲದ ಆಶ್ರಮ-ಧರ್ಮ-ರತಿಯನ್ನು, ಪರತರ ಮುಕುತಿದೋರುವ ಶಾಸ್ತ್ರವನ್ನು ತೋರಿಸುವ ಮಹಾಶಕ್ತಿಯು ಅವರ ಅಮೃತ-ವಾಕ್ಯದಲ್ಲಿರುತ್ತದೆ. ಅವರ ಇಂತಹ ಅಮರವಾಣಿಯನ್ನು ಆಲಿಸಿದಾಗ ರೋಮಾಂಚನ ಏಳುತ್ತವೆ, ಕಿವಿ ನಿಮಿರುತ್ತವೆ. ಇದರಿಂದಾಗಿ ಮಾನವನಿಗೆ ತಾಮಸೀಯ ಭಾವನೆಯು ನಶಿಸಿ, ಮತ್ತೊಂದು ಈಶ್ವರೀಯ ಶಕ್ತಿಯನ್ನು ಪಡೆದಂತೆ ಸ್ಪಷ್ಟವಾಗಿ ಭಾಸವಾಗುತ್ತದೆ; ಪರಮಾತ್ಮನ ಪರಿಜ್ಞಾನಕ್ಕಿಂತಲೂ ಮತ್ತೊಂದು ಜ್ಞಾನವಿಲ್ಲೆಂದು ಮನಸ್ಸಿಗೆ ವೇದ್ಯವಾಗುತ್ತದೆ. ಅಂದರೆ, ಮಹಾತ್ಮರ ತಪಃಪ್ರಭಾವವು ಲೋಕದ ಬದುಕಿನ ಮೇಲೆ ತನ್ನ ಚಿರಮುದ್ರೆಯನ್ನೊತ್ತುತ್ತಿದೆ; ದಾರಿ ತೋರಿ, ಸದ್ಗತಿಯನ್ನು ನೀಡುತ್ತದೆ. ಅವರ ಆತ್ಮಶಕ್ತಿಯು ಲಕ್ಷಾಂತರ ತಪ್ತ ಜೀವಿಗಳಿಗೆ ಸುಖಶಾಂತಿಯನ್ನೀಯುತ್ತದೆ. ಏಕೆಂದರೆ, ಮಹಾತ್ಮರ ಜೀವನವು ನಿರಾಡಂಬರ. ಒಮ್ಮೊಮ್ಮೆ ಅವರ ಇರವು ಲೋಕದ ಅಜ್ಞಾನಿಗಳಿಗೆ ತಿಳಿಯದೆ ಇರಬಹುದು ಅವರಲ್ಲಿ ಅಘಟಿತ ಘಟನಾ ಸಾಮರ್ಥ್ಯವಿದ್ದು, ಜನತೆಗೆ ಅವರು ಹುಚ್ಚರಂತೆ ಕಾಣಬಹುದು ಆದರೆ, ಅವರ ಬದುಕಿನ ಬಹುಭಾಗವು ಬಹಿರ್ಮುಖಿ ವ್ಯಕ್ತಿಗಳಿಗೆ ಅರಿವಾಗದಿದ್ದರೂ, ಹೊರನೋಟಕ್ಕೆ ಕಾಣದಿದ್ದರೂ, ಕಾಲಾನಂತರ ಅವರ ಬಹುಮುಖಿ ವ್ಯಕ್ತಿತ್ವವು ಆತ್ಮ-ಪ್ರಭೆ ಪಡೆದ ಸಾಧಕರಿಗೆ ಅರ್ಥವಾಗುತ್ತದೆ. ಅದು ಒಮ್ಮೊಮ್ಮೆ ಲೋಕ-ದೃಷ್ಟಿಗೆ ಸಣ್ಣದಾಗಿ ಕಂಡರೂ, ಆತ್ಮದೃಷ್ಟಿ ಉಳ್ಳವರಿಗೆ ಹಿರಿದಾಗಿ ಕಾಣುವುದಲ್ಲದೆ, ಆ ಶಕ್ತಿಯ ಮುಂದೆ ಹೊರಗಿನ ನೊರೆ-ತೆರೆಯು ಕೊಚ್ಚಿಕೊಂಡು ಹೋಗಿ ತಿಳಿ ಜಲ ಕಂಡು, ಆ ಕರುಣಾ ಸಮುದ್ರದಲ್ಲಿ ಮುತ್ತು-ರತ್ನಗಳನ್ನು ಪಡೆಯಬಹುದು. ಅದಕ್ಕೆ ನೋಡುವ ದೃಷ್ಟಿಯು ವಿಶಾಲವಾಗಿರಬೇಕಾಗುತ್ತದೆ; ಬಹುದಿನಗಳವರೆಗೆ ಸಾಧನೆ ಮಾಡಿರಬೇಕಾಗುತ್ತದೆ.

ಮಾಯೆಯ ಆವರಣವನ್ನು ಸೀಳಿ, ಅರಿಷಡ್-ವರ್ಗವನ್ನು ದಾಟಿ, ಈ

ಲೌಕಿಕದಿಂದ ಆ ಪಾರಲೌಕಿಕದತ್ತ ಮನನೆಳಸಿ, ಆತ್ಮ ಸಾಕ್ಷಾತ್ಕಾರ ಪಡೆದ ಮಹಾ ವ್ಯಕ್ತಿಗಳ ಸಾಧನೆ-ಸಿದ್ಧಿಗಳು ಕೂಡಲೇ ದೃಗ್‌ಗೋಚರವಾಗಬೇಕೆಂದರೆ, ಅದು ಅಲ್ಪಮತಿಗಳಿಗೆ ಸಾಧ್ಯವಾಗದ ಮಾತು. ಕವಲ ತೆರೆಯು ಹೊಡೆತಕ್ಕೆ ಕಸ-ಕಡ್ಡಿ ಸರಿದು ಹೋಗಿ, ಭೂಮಿ ಸ್ವಚ್ಛವಾಗುವಂತೆ, ಮಹಾ ವ್ಯಕ್ತಿಗಳ ಚಿತ್ ತಪಸ್ಸಿನ ಬೆಳಕಿನ ಕಿರಣಗಳು ಹೃದ್‌ವ್ಯೋಮದಲ್ಲಿ ಹೋಗೊಡನೆಯೇ ವ್ಯಕ್ತಿ-ವ್ಯಕ್ತಿಯ ಹೃದಯವು ಅರಳುತ್ತದೆ; ಸೌಗಂಧ ಬೀರುತ್ತದೆ. ಅಂಥ ಮಹಾಪುರುಷರ ಭವ್ಯ ವ್ಯಕ್ತಿತ್ವದ ವಿರಾಟ್ ಸ್ವರೂಪದ ದರ್ಶನವಾಗುತ್ತದೆ. ಆಗ ಅಜ್ಞಾನ ಸಾಗರದಲ್ಲಿ ಮುಳುಗಿದ್ದರೂ ಮಾನವನಿಗೆ ಒಂದು ರೀತಿಯ ಶಕ್ತಿಯು ಉದ್ಭವವಾಗಿ ಅವನಿಗೆ ಆನಂದವು ತಲೆದೋರುತ್ತದೆ. "ಅಸತೋಮಾ ಸದ್‌ಗಮಯ"ದ ಸಾರವನ್ನೇ ತಿಳಿಸುತ್ತದೆ.

ಯೋಗಿಗಳ ಕಾಯವು ಚಿಕ್ಕದಾಗಿದ್ದರೂ, ಮಾನವರಂತೆ ಕಾಣುತ್ತಿದ್ದರೂ ಅವರಲ್ಲಿ ಸಾಮಾನ್ಯನ ಹೊರಗಣ್ಣಿಗೆ ಗೋಚರವಾಗದ ಆತ್ಮ-ಸ್ಫೂರ್ತಿಯ ಶಕ್ತಿ-ಸಾಮರ್ಥ್ಯವು ತುಂಬಿರುವುದರಿಂದ ಇತರರ ಹೃದಯದ ತಮಸ್ಸನ್ನು ಪರಿಹರಿಸಿ, ಅಲ್ಲಿ ಬೆಳಕನ್ನು ಚೆಲ್ಲುವ ದಿವ್ಯತೆ ಅವರಿಗಿರುವುದರಿಂದ ಆ ದಿವ್ಯ ವ್ಯಕ್ತಿತ್ವಕ್ಕೆ ಶಿರ ಬಾಗಿಸಬೇಕಾಗುತ್ತದೆ. ಅವರಿಂದ ಅಂತಃಪ್ರೇರಣೆಯನ್ನು ಪಡೆಯಬೇಕಾಗುತ್ತದೆ.

ಯೋಗಿ-ಪುಂಗವರು ಮುರುಕು ಗುಡಿಸಲದಲ್ಲಿ ವಾಸವಾಗಿದ್ದರೂ ಅವರ ಆಧ್ಯಾತ್ಮಿಕ ಪ್ರಕಾಶದಿಂದ ಆ ಮುರುಕು ಗುಡಿಸಲು ಸುವರ್ಣ ಮಂದಿರಕ್ಕಿಂತಲೂ ಹೆಚ್ಚಾಗಿ ಸುಂದರವಾಗಿ ಕಾಣುತ್ತದೆ. ಅವರ ಜೀವನವು ಅಧ್ಯಾತ್ಮದ ಅಮೃತ ಕಲಶವಿದ್ದಂತೆ; ಶಾಂತಿಯ ಸಾಗರವಿದ್ದಂತೆ; ಮುಮುಕ್ಷುಗಳಿಗೆ ಕಲ್ಪತರುವಿದ್ದಂತೆ.

ಈ ತೆರನಾಗಿ ಅಮರತ್ವದ ಭವ್ಯ ಕಲ್ಪನೆಯನ್ನು ವ್ಯವಹಾರಿಕವಾಗಿ ಶ್ರೀ ಸಾಮಾನ್ಯರಲ್ಲಿ ಮೂಡಿಸಿ ಕಾಡಾಗಿದ್ದ ನಾಡನ್ನು ಉಚ್ಚ ಪರಂಪರೆಯ ಮಾನವತೆಯ ಸುಸ್ಕೃತಿಯುತ್ತ ಹೊರಳಿಸಿ, ನಂದನವನದಂತೆ ಸರ್ವ-ಸುಂದರ ರೂಪಗೊಳಿಸಿ, ರಕ್ತ-ರಹಿತ ಕ್ರಾಂತಿಯನ್ನು ಮಾಡಿ, ಪ್ರಶಾಂತವಾತಾವರಣದೊಂದಿಗೆ ಆಧ್ಯಾತ್ಮಿಕ ನವ-ಚೈತನ್ಯವನ್ನು ನೀಡಿ ನೆಮ್ಮದಿಯನ್ನು ಸ್ಥಾಪಿಸಿದ ಮಹಾಯೋಗಿ ಪುಂಗವರಲ್ಲಿ ಯುಗಪುರುಷರಾದ ಲಿಂಗೈಕ್ಯ ಹಾನಗಲ್‌ಕುಮಾರ ಶಿವಯೋಗಿಗಳು ಅಗ್ರಗಣ್ಯರು.

ಈ ಕುಮಾರ ಶಿವಯೋಗಿಗಳು ತಮ್ಮ ಜೀವನದ ಕಷ್ಟಕಾರ್ಪಣ್ಯಗಳನ್ನು ತಮ್ಮ ಆತ್ಮ-ಶಕ್ತಿಯ ಪ್ರಭಾವದಿಂದ ವಿಚ್ಛೇದಿಸಿ, ನಾಡಿನಲ್ಲಿ ಮುಚ್ಚಿದ ಅಜ್ಞಾನದ ಕಾರ್ಮೋಡಗಳನ್ನು ಚದುರಿಸಿ, ಸಮಾಜದಲ್ಲಿ ವಿದ್ಯುತ್ ವೇಗದಂತೆ ಆತ್ಮ ವಿದ್ಯುತ್ ಪ್ರಭೆಯನ್ನು ಪ್ರಕಾಶಿಸಿದರು; ಮಾನವ ಜನಾಂಗಕ್ಕೆ ಚೇತನವನ್ನಿತ್ತರು. ಸಮಾಜ-ವೃಕ್ಷಕ್ಕೆ ಹತ್ತಿದ್ದ ರೋಗವನ್ನು ಕಂಡು ಅದನ್ನು ಕಳೆದು ಅವರು ಆ ವೃಕ್ಷದ ಬೇರಿಗೆ

ಮುಟ್ಟುವಂತೆ ಪರಿಶುದ್ಧ ಜಲವನ್ನು ನೀಡಿ, ಬೆಳವಣಿಗೆಯನ್ನು ಸತ್ವಯುತವಾಗಿ ಮಾಡಿದರು; ನಾಡಿನ ತುಂಬೆಲ್ಲ ಸುವಿಚಾರ ಸುಗಂಧವನ್ನು ಬೀರಿದರು.

ಇಂತಹ ಮಹಾ ವ್ಯಕ್ತಿಗಳ ಚರಿತ್ರವನ್ನು ಚಿತ್ರಿಸಲು ಹೊರಟಾಗ ಅವರ ಮೊದಲ ಜೀವನದ ಕಡು ಬಡತನವನ್ನು ಸಂಸ್ಮರಿಸಿದರೆ ಎಲ್ಲರ ಹೃದಯವೂ ಕಂಪಿಸುತ್ತದೆ; ಕಣ್ಣೀರು ಬರುತ್ತವೆ. ಇತಿಹಾಸದ ಪುಟಗಳನ್ನು ತೆರೆದು ನೋಡಿದರೆ, ಮಹಾತ್ಮರು, ಸಾಧು-ಸಂತರು, ಯೋಗಿಗಳು, ಸಮಾಜ ಧುರೀಣರು ಪ್ರಾಯಶಃ ಬಡವರ ಮನೆಯಲ್ಲಿಯೇ ಹುಟ್ಟಿ, ಬೆಳೆದು ಬಾಳಿದ್ದು, ಬಡತನದ ಬೇಗೆಯಲ್ಲಿ ಬೆಂದಿದ್ದು ಕಂಡು ಬರುತ್ತದೆ.

ಬಡತನವು ಅಳ್ಳೆದೆಯ ಮಾನವನ ಧೈರ್ಯವನ್ನು ಹಿಂಡಿಹಿಪ್ಪಿ ಮಾಡುವುದಲ್ಲದೆ, ಅವನನ್ನು ಶೋಕ-ಸಾಗರದಲ್ಲಿ ಮುಳುಗಿಸಿ, ಚಿತ್ತ-ವಿಭ್ರಮ ಮಾಡಿಸುತ್ತದೆ. ಆದರೆ, ಎಂತಹ ಬಡತನವಿದ್ದರೂ, ಯೋಗಿಗಳು ಎದೆಗುಂದದೆ ಧೈರ್ಯದಿಂದ ಮುಂದೆ ಸಾಗುತ್ತಾರೆ. ಸಾಮಾನ್ಯವಾಗಿ ಆಧ್ಯಾತ್ಮಿಕ ಶಕ್ತಿಯಿದ್ದಲ್ಲಿ ಬಡತನದ ನಂಟು ಇರುತ್ತದೆಯೆನ್ನಿಸುತ್ತದೆ. "ಜೀವನದ ಸ್ವಾಭಾವಿಕ ಗುರಿಯ ಅಳತೆಗೋಲಿನಿಂದ ನೋಡಿದಾಗ, ಬಡತನವೇ ದೊಡ್ಡ ನಿಧಿ. ಅಪಾರ ಐಶ್ವರ್ಯವೇ ಕಡು ಬಡತನ" ಎಂದು ತತ್ತ್ವಜ್ಞಾನಿಯಾದ ಎಪಿಕ್ಯೂರಸ್ ಹೇಳಿದ್ದಾನೆ. ಸಿರಿತನ-ಬಡತನಗಳೆರಡನ್ನೂ ಸಮದೃಷ್ಟಿಯಿಂದ ನೋಡುವವನೇ ಮಹಾಯೋಗಿ.

ಜನನ–ಬಾಲ್ಯ

ನಾಡಿನ ಪುಣ್ಯ ವಿಶೇಷದಿಂದ ಯುಗ–ಪುರುಷರು ಉದಯವಾಗಿ, ನಾಡಿನ ಪ್ರಗತಿಗೆ ಕಾರಣರಾಗಿರುತ್ತಾರೆಂಬುದು ಸತ್ಯದ ಸಂಗತಿ. ಭಾರತಮಾತೆಯ ತನು–ಜಾತೆಯಾದ ಕರ್ನಾಟಕ ಮಾತೆಯ ಒಡಲಲ್ಲಿ ಆಚಾರ್ಯರು, ಶಿವಶರಣರು, ಶಿವಯೋಗಿಗಳು, ಕವಿಗಳು, ಧರ್ಮಧುರೀಣರು, ರಾಷ್ಟ್ರೋದ್ಧಾರಕರು ಹುಟ್ಟಿ ತೇಜೋಮೂರ್ತಿಗಳಾಗಿ ಕಾಣಿಸಿಕೊಳ್ಳುತ್ತಾ ಬಂದಿದ್ದಾರೆ. ಅಂತೆಯೇ ೧೯ನೆಯ ಶತಮಾನದ ಅವಧಿಯಲ್ಲಿ ಭಾರತದ ಮೂಲೆ ಮೂಲೆಯಲ್ಲಿ ಅನೇಕ ಜನ ವೀರವಿರಾಗಿಗಳು, ಕವಿ–ಪುಂಗವರು,ವಿಜ್ಞಾನಿಗಳು ಹುಟ್ಟಿ ಬೆಳಗಿ, ರಾಷ್ಟ್ರೋದ್ಧಾರ ಮಾಡಲಿದ್ದು, ಅಪೂರ್ವ ದೈವೀ ಪ್ರತಿಭೆ ಪಡೆದ ಸೀಮಾಪುರುಷರಲ್ಲಿ ಅಗ್ರಗಣ್ಯರಾದ ಹಾನಗಲ್ ಕುಮಾರಯೋಗಿಗಳು ಪ್ರಕೃತಿಸೌಂದರ್ಯ ಹಾಗು ಆಧ್ಯಾತ್ಮಿಕ ಸಂಪತ್ತಿನಿಂದ ಕೂಡಿದ ಕನ್ನಡ ನಾಡಿನ ಧಾರ್ಮಿಕ ಮುಖ್ಯ ಕೇಂದ್ರವಾದ ಧಾರವಾಡ ಜಿಲ್ಲೆಯ ರಾಣೇಬೆನ್ನೂರು ತಾಲೂಕ ಜೋಯಿಸರ ಹರಳ್ಳಿಯಲ್ಲಿ ಸಾಲಿಮಠದ ಬಸವಯ್ಯನವರ ಧರ್ಮಪತ್ನಿ ಸಾಧ್ವೀ ಶಿರೋಮಣಿಯಾದ ಶ್ರೀಮತಿ ನೀಲಮ್ಮನವರ ಎರಡನೆಯ ಸಲದ ಪವಿತ್ರ ಗರ್ಭದಲ್ಲಿ ಕ್ರಿಸ್ತಶಕ ೧೮೬೭ರ ಪ್ರಭವನಾಮ ಸಂವತ್ಸರದ ಶುಭಸಮಯದಲ್ಲಿ ಜನ್ಮತಾಳಿದರು.

ಇವರ ತಂದೆಯಾದ ಸಾಲಿಮಠದ ಬಸವಯ್ಯನವರು ಧರ್ಮದಲ್ಲಿ ತುಂಬಾ ನಿಷ್ಠಾವಂತರು; ಸುಸಂಸ್ಕೃತರು; ತ್ರಿಕಾಲಲಿಂಗ–ಪೂಜಾ ಲೋಲರು; ಅಲ್ಲದೆ ತುಂಬಾ ಬಡವರೂ ಆಗಿದ್ದರು.

ಈ ಬಸವಯ್ಯ–ನೀಲಮ್ಮರ ದಾಂಪತ್ಯ ಜೀವನವು ಆದರ್ಶಮಯವಾಗಿತ್ತು. ಆ ಊರಿನ ಜನರು ಇವರೀರ್ವರ ಧರ್ಮನಿಷ್ಠೆ ಆಚಾರ–ವಿಚಾರಗಳನ್ನು ನೋಡಿ ಭಯಭಕ್ತಿಯಿಂದ ನಡೆದು ಕೊಳ್ಳುತ್ತಿದರು. ತಾಯಿ ನೀಲಮ್ಮನ ಕನಸಿನಲ್ಲಿ ಜಂಗಮನೋರ್ವನು ಕಾಣಿಸಿಕೊಂಡು ಆಶೀರ್ವದಿಸಿದಂತಹ ಸತ್ಪುತ್ರನ ಜನನವಾದುದಕ್ಕೆ ಸತಿಪತಿಗಳಿಬ್ಬರೂ ಹಿಗ್ಗಿನ ಕಡಲಿನಲ್ಲಿ ಮುಳುಗಿದ್ದರು. ಹೆಚ್ಚಾಗಿ, ಮಹಾಪುರುಷರ ಜನನ–ಲೀಲೆ ಇದೇ ತೆರನಾಗಿರುತ್ತದೆ.

ಹುಟ್ಟಿದ ಶಿಶುವಿನ ಲಿಂಗಧಾರಣೆಗೆ, ನಿರ್ದಿಷ್ಟ ದಿನದಂದು ವ್ಯವಸ್ಥೆ ನಡೆದಿದ್ದಾಗ ಕೋರುಧಾನ್ಯದ ಭಿಕ್ಷೆಗಾಗಿ ಆಗಮಿಸಿದ್ದ ವೃದ್ಧ ಜಂಗಮರೊಬ್ಬರು "ಭವತಿ! ಭಿಕ್ಷಾಂದೇಹಿ" ಅಂದರು. ಅದನ್ನು ಕೇಳಿ ಅಲ್ಲಿಯೇ ಈ ಮನೆಯ ಮುಂಬಾಗಿಲಿನಲ್ಲಿ ಕೆಲಸದಲ್ಲಿ ತೊಡಗಿದ್ದ ಮುದುಕಿಯೊಬ್ಬಳು ಮುನಿಸಿನಿಂದೆಯಂತೆ

"ಈ ಮನೆಯಲ್ಲಿ ಹಡೆದಿದ್ದಾರೆ ಮುಂದಿನ ಮನೆಗೆ ಹೋಗಿರೆಂದು ತಿಳಿಸಿದಳು. 'ಹುಟ್ಟಿದ ಮಗು ಗಂಡೋ, ಹೆಣ್ಣೋ' ಎಂದು ಕೇಳಿದರು. 'ಗಂಡು ಮಗು' ಎಂದು ಉತ್ತರಿಸಿದಳು, ಆ ಮುದುಕಮ್ಮ. ಅದನ್ನು ತಿಳಿದ ಜಂಗಮರು ಒಳ್ಳೆಯದೇ ಆಯಿತು. ಗಂಡು ಹುಟ್ಟಿದರೆ, ಆನಂದದಿಂದ ಮನೆಯವರು ಸಕ್ಕರೆ ಹಂಚುತ್ತಾರೆ. ಅದಿರಲಿ, ಭಿಕ್ಷೆಯನ್ನೂ ನೀಡದೆ 'ಮುಂದಿನ ಮನೆಗೆ ಹೋಗಿರಿ' ಎಂದೆನ್ನುವುದು, ಇದೆಂತಹ ಪದ್ಧತಿ!" ಎಂದುದಾಗಿ ತಮ್ಮ ಅಸಮ್ಮತಿಯನ್ನು ಸೂಚಿಸಿದರು. "ಅದೆಲ್ಲ ದುಡ್ಡಿದ್ದವರ ಮಾತು. ನಮ್ಮಂಥ ಬಡ-ಬಗ್ಗರಿಗೆ ದೇವರು ಸಾಕುಸಾಕೆಂದರು ಮಕ್ಕಳನ್ನು ಕೊಡುತ್ತಿರುವಾಗ ದಾನ–ಧರ್ಮ ಮಾಡಿದರೆ ಮತ್ತಿಷ್ಟು ಹೆಚ್ಚಿಗೆ ಮಕ್ಕಳನ್ನು ಕೊಡಬಹುದಲ್ಲವೇ ದೇವರು?" ಎಂದಳು ಮುದುಕಿ. "ಹಾಗಾದರೆ ನಿಮಗೆ ಈ ಕೂಸು ಬೇಸರವಾಗಿದ್ದರೆ, ಬೇಡವಾಗಿದ್ದರೆ ಅದನ್ನು ನಮಗೆ ಕೊಟ್ಟುಬಿಡಿರಲ್ಲ!" ಎಂದು ಆ ಮಹೇಶ್ವರನೆಂದಾಗ, ಮುದುಕಿಯು "ಯಾರು ಬೇಡೆನ್ನುವರು ನನ್ನೊಡೆಯ! ಅಗತ್ಯವಾಗಿ ತೆಗೆದುಕೊಂಡು ಹೋಗಿರಿ" ಎಂದು ವ್ಯಂಗ್ಯವಾಗಿ ನುಡಿದಳು. "ಆಗಲಿ, ಅವನನ್ನು ಸಾಮಾಜಿಕ ಸೇವೆಗೆ ಅಣಿಗೊಳಿಸಿದರಾಯಿತು" ಎನ್ನುತ್ತ ಮುಂದಿನ ಮನೆಯತ್ತ ಸಾಗಿದನು, ಜಂಗಮ ಮಹಾತ್ಮಾ.

ಮಹಾತ್ಮರ ಭವಿಷ್ಯವು ಮಹಾತ್ಮರಿಗೆ ಅರ್ಥವಾಗಬಲ್ಲುದೆ ವಿನಹ, ಚರ್ಮ-ಚಕ್ಷುಗಳಿಗೆ ಅದು ಕಷ್ಟ ಸಾಧ್ಯವಾಗುತ್ತದೆ. ವೈಚಿತ್ರ್ಯಗಳಲ್ಲಿ ಮತ್ತೊಂದು ವೈಚಿತ್ರ್ಯ ಜರುಗುತ್ತದೆ: ಹುಟ್ಟಿದ ಕೂಸು ಮೊಲೆ ಹಾಲು ಕುಡಿಯಲೊಲ್ಲದಾಯಿತು. ಎಲ್ಲರೂ ಚಿಂತಾಕ್ರಾಂತರಾಗಿದ್ದಾರೆ; ಭಯಭೀತರಾಗಿದ್ದಾರೆ. ಹಳ್ಳಿಯ ವೈದ್ಯರು ಬಂದು ಆ ಕೂಸನ್ನು ನೋಡಿ, ಕೂಸಿಗೆ ಯಾವ ರೋಗವು ಇಲ್ಲದಿರುವುದನ್ನು ತಿಳಿಸಿದರು. ಅನೇಕರ ಅನೇಕ ಉಪಚಾರಗಳೂ ಉಪಯೋಗಕ್ಕೆ ಬರಲಿಲ್ಲ. ಗ್ರಾಮದೇವತೆಯ 'ಅಂಗಾರ' ಹಚ್ಚಿದರೂ ಕೂಸು ಹಾಲು ಕುಡಿಯಲಿಲ್ಲ. ಮಾಂತ್ರಿಕದಾರರಿಂದಲೂ ಏನೂ ಪ್ರಯೋಜನವಾಗದಾಯಿತು. ತಾಯಿ ನೀಲಮ್ಮನು ಮನೆತನದ ಗುರುಗಳನ್ನು ಕರೆಯಿಸಿ, ಕೂಸಿಗೆ ಲಿಂಗಧಾರಣೆ ಮಾಡಿಸಿ, ಅದರ ಹಣೆಗೆ ಭಸ್ಮವನ್ನು ಧರಿಸಿದಳು. ಕೂಡಲೇ ಆ ಕೂಸು ಹಾಲು ಕುಡಿಯಿತು. ಈ ಕೂಸು ಯುಗಪುರುಷನಾಗಬಲ್ಲನೆಂಬುದನ್ನು ಆಗಲೇ ತಿಳಿಸಿದಂತಾಯಿತಲ್ಲವೆ?

ಬಿದಗಿಯ ಚಂದ್ರನಂತೆ ಬೆಳೆಯಲಾರಂಭಿಸಿದ ಮಗುವು ದಿನಗಳೆದಂತೆ ಎಳೆತನದ ಲೀಲೆಗಳನ್ನು ತೋರಹತ್ತಿದನು. ಗುರು-ಹಿರಿಯರೆಲ್ಲರೂ ಕೂಡಿ ಮಗು ಹುಟ್ಟಿದ ಹನ್ನೊಂದನೆಯ ದಿನದಲ್ಲಿ ಆ ಮಗುವಿಗೆ 'ಹಾಲಯ್ಯ'ನೆಂದು ಹೆಸರನ್ನು ಮುತ್ತೈದೆಯರೆಲ್ಲರೂ ಕೂಡಿ ಜೋಗುಳ ಪಾಡಿ ಹರಸಿದರು.

ಹಾಲಯ್ಯನು ಎಲ್ಲರ ಮುದ್ದು ಮಗುವಾಗಿ ಬೆಳೆಯಲಾರಂಭಿಸಿದನು. ಬಾಲ್ಯದಲ್ಲಿಯೇ ಅವನಿಗಿದ್ದ ಅಸಾಧಾರಣ ಬುದ್ಧಿಯನ್ನು ಕಂಡು, ಆ ಊರಿನ ಜನರೆಲ್ಲ ಬೆರಗಾಗಿದ್ದರು. ಅವನ ದೃಷ್ಟಿ-ಶುದ್ಧಿ ವಿಚಿತ್ರವಾಗಿತ್ತು. ಇನ್ನುಳಿದ ಆಟಪಾಟಗಳು ಅವನಿಗೆ ಅಷ್ಟೊಂದು ಸೇರುತ್ತಿರಲಿಲ್ಲ. ಆತನಿಗೆ ಗೋಲಿಯಾಟ ದೊರಕಿದ್ದರೆ ಸಾಕು. ಅದರಲ್ಲಿಯೇ ಹೆಚ್ಚು ಸಮಯವನ್ನು ಆತ ಕಳೆಯುತ್ತಿದ್ದ; ಗೋಲಿಯಾಟದಲ್ಲಿ ಗುರಿ ತಪ್ಪಿ ಎಂದೂ ಹೊಡೆಯುತ್ತಿರಲಿಲ್ಲ. ದೃಷ್ಟಿಯೋಗದಲ್ಲಿ ಪರಿಣತಿ ಪಡೆಯಬೇಕೆನ್ನುವವರಿಗೆ ಗೋಲಿಯಾಟವೇ ಮೊದಲ ಸಾಧನೆ. ಆದರೆ, ಚಂಚಲ ಮನಸ್ಸಿನವರಿಗೆ ಗೋಲಿಯಾಟ ಸೇರದು. ಈ ಆಟಕ್ಕೆ ಹೆಚ್ಚು ಏಕಾಗ್ರತೆ ಬೇಕಾಗುತ್ತದೆ.

ಹಾಲಯ್ಯನು ೬ ನೆಯ ವಯಸ್ಸಿನಲ್ಲಿಯೇ ಶಾಲೆ ಸೇರಿ ವಿದ್ಯೆ ಕಲಿಯಲು ಪ್ರಾರಂಭಿಸಿದ. ಅವನು ಜೋಯಿಸರ ಹರಳಳ್ಳಿಯಲ್ಲಿಯೇ ತನ್ನ ಅಜ್ಜನ ಗಾವಠೀ ಶಾಲೆಯಲ್ಲಿದ್ದು ಕಲಿಯುತ್ತಿದ್ದ. 'ತೆಳ್ಳನ್ನ' ಶರೀರದ, ಸಾತ್ವಿಕ ಕೋಮಲ ಕಳೆ ತುಂಬಿದ ಮುಖದ, ಅಗಲ ಹಣೆಯ, ಜ್ಯೋತಿಃಪುಂಜದಂತಹ ನೇತ್ರದ ಆತನನ್ನು ನೋಡಿ, ಶಾಲೆಯ ಮಾಸ್ತರರೆಲ್ಲರೂ ಹೃದಯಾರೆ ಮೆಚ್ಚಿದ್ದರು. ಅವನ ವ್ಯಕ್ತಿದಂತೆಯೇ ಅವನ ಬುದ್ಧಿ ಒಳ್ಳೆ ಪ್ರಶಂಸನೀಯವಾಗಿತ್ತು, ಜ್ಞಾಪಕ-ಶಕ್ತಿ ಹಿರಿದಾಗಿತ್ತು. ಸಣ್ಣ ವಯಸ್ಸಿನಲ್ಲಿಯೂ ಸತ್‌ಸಹವಾಸದ ಕಡೆಗೆ ಅವನ ಲಕ್ಷ್ಯ. ಅಧ್ಯಾಪಕರು ಹೇಳಿದ ಪಾಠವನ್ನು ನಿತ್ಯವೂ ಅವನು ಸರಿಯಾಗಿ ಒಪ್ಪಿಸುತ್ತಿದ್ದ. ಅವನ ಸಕ್ರಮ-ಜೀವನ ಹಾಗೂ ವಿಧೇಯತನವನ್ನು ನೋಡಿ ಅಧ್ಯಾಪಕರು ಮನಸ್ಸಿನಲ್ಲಿಯೇ ಆನಂದ ಪಡುತ್ತಿದ್ದರು.

ಮುಂದೆ ೪-೫ ವರ್ಷಗಳ ವರೆಗೆ ಹಾಲಯ್ಯನ ಅಭ್ಯಾಸ ಕ್ರಮ ಹೀಗೆಯೇ ಮುಂದುವರಿಯುವಷ್ಟರಲ್ಲಿ ಕಷ್ಟ-ಪರಂಪರೆಯ ಕಲ್ಲು-ಬಂಡೆಗಳು ಎದುರು ಬರಹತ್ತಿದವು. ವಯಸ್ಸು ಬೆಳೆದಂತೆ ಅವನ ಬಡತನದ ಅನುಭವವೂ ವಿರಾಟ್ ಸ್ವರೂಪ ತಾಳಿತ್ತು ೧೦-೧೨ ವರ್ಷ ವಯಸ್ಸಿನ ಹಾಲಯ್ಯನು ನಿತ್ಯವೂ ಮನೆ-ಮನೆ ತಿರುಗಿ ಭಿಕ್ಷೆ ಮಾಡಿಕೊಂಡು ಬಂದ ನಂತರ ಮಧ್ಯಾಹ್ನ ಅವನ ಶಾಲೆಯ ಓದು, ಇದು ಅವನ ನಿತ್ಯದ ಕಾರ್ಯ. ಅವನು ಭಿಕ್ಷೆಗೆ ಹೋಗದ ಮನೆಯು ಚರಿತಾರ್ಥವೆ ಸಾಗುವಂತಿದ್ದಿಲ್ಲ. ಮನೆಯ ಕುಟುಂಬ ದೊಡ್ಡದು; ಮನೆಯಲ್ಲಿ ಧಾನ್ಯದ ಕೊರತೆ; ಪಾತ್ರೆ ಬರಿದು.

ಇಂಥ ಸಮಯದಲ್ಲಿಯೇ ಹಾಲಯ್ಯನ ತಂದೆ ಬಸವಯ್ಯನವರು ಶಿವಾಧೀನರಾದರು. ಅವನ ಅಜ್ಜಂದಿರಾದ ೧೦೫ ವರ್ಷ ವಯಸ್ಸಿನ ಕೊಟ್ರಪ್ಪಯ್ಯನವರೂ ನಿತ್ಯವೂ ಅಡವಿಗೆ ಹೋಗಿ ಹುಲ್ಲು ತರದೆ ಮನೆಯ ಆಕಳಿಗೋಸ್ಕರ ಗತ್ಯಂತರವಿದ್ದಿಲ್ಲ. ವಿಶೇಷ ಆಸ್ತಿ-ಪಾಸ್ತಿ ಏನೂ ಇದ್ದಿಲ್ಲವಾದ್ದರಿಂದ ಭಿಕ್ಷಾಟನವೇ ಅವರಿಗೆಲ್ಲ

ದೊಡ್ಡ ಆಸ್ತಿಯಾಗಿತ್ತು. ಇದರಿಂದಾಗಿಯೇ ಹಾಲಯ್ಯನ ಒಪ್ಪತ್ತಿನ ಶಾಲೆಯು ಓದನ್ನೂ ಬಿಡುವ ಪ್ರಸಂಗವೊದಗಿತು. ಮನೆಯಲ್ಲಿಯ ೧೦-೧೨ ಜನರಂತೆ ಒಮ್ಮೊಮ್ಮೆ ಹಾಲಯ್ಯನೂ ಒಪ್ಪತ್ತೇ ಉಣ್ಣುವ ಪ್ರಸಂಗವೂ ಬರುತ್ತಿತ್ತು. ಹೀಗಿದ್ದರು ಹಾಲಯ್ಯನು ಎಲ್ಲರೊಡನೆ ಸಹಕರಿಸಿ ತಾಳ್ಮೆಯಿಂದಿದ್ದು, ಜೀವನ ಸಾಗಿಸುತ್ತಿದ್ದನು. ತಿಳುವಳಿಕೆ ಬಂದಂತೆಲ್ಲ ಅವನು ಬಡತನದ ಬೇಗೆಯಲ್ಲಿ ಬೆಂದರೂ ಅದನ್ನು ಧೈರ್ಯದಿಂದ ಎದುರಿಸುತ್ತಿದ್ದನು. ಮನೆಯವರೆಲ್ಲರಿಗೂ ಅವನೇ ಸಾಂತ್ವನೆಯ ಬುದ್ಧಿ ಹೇಳುತ್ತಿದ್ದನು. ಅವನು ಸ್ವಯಂ ಬಡವನಿದ್ದರೂ ಇತರ ಬಡವರನ್ನು ನೋಡಿ ಮರುಗುತ್ತಿದ್ದನು.

ಹೀಗಿರುವಾಗ, ಕರುಳು ಕೊರೆಯುವಂತಹ ಘಟನೆಯೊಂದು ಸಂಭವಿಸಿತು: ಒಂದು ಸಲ ಹಾಲಯ್ಯನು ನಿತ್ಯದ ಕಾಯಕದಂತೆ ಸನಿಹದ ಒಂದು ಹಳ್ಳಿಗೆ ಭಿಕ್ಷೆಗೆ ಹೋದಾಗ ಒಬ್ಬ ವಯೋವೃದ್ಧ ಮನುಷ್ಯನು "ಏನೋ, ಅಯ್ಯಪ್ಪಾ! ನೀನು ಹೀಗೆಯೇ ಅದೆಷ್ಟು ದಿವಸ ಭಿಕ್ಷೆಯನ್ನು ಬೇಡುತ್ತಿರುವವನು? ನೀನೇನು ಮುದು ಕನೇ ಈ ಚಿಕ್ಕವಯಸ್ಸಿನಲ್ಲಿಯೇ ವಿದ್ಯಾಭ್ಯಾಸವನ್ನು ಮಾಡಿ ಬುದ್ಧಿವಂತನಾಗುವ ಬದಲು ದಿನಾಲು ಹೀಗೆ ಭಿಕ್ಷೆ ಬೇಡಿದರೆ ಆಗುವುದೇನು? ಮನೆ-ಮನೆ ತಿರುಗಿ ಹೀಗೆಯೇ ಎಷ್ಟು ದಿನ ಬೇಡುವುದು?" ಎಂದು ಮುಂತಾಗಿ, ಇನ್ನೂ ಅನೇಕ ಅವಾಚ್ಯ ಪದ-ಸುರಿಮಳೆಯನ್ನೇ ಸುರಿಸಿದ್ದನ್ನು ಕೇಳಿದ ಹಾಲಯ್ಯನ ಮನಸ್ಸು ಕಸವಿಸಿಗೊಂಡಿತು; ಅವನಿಗೆ ದಿಕ್ಕು ತೋಚದಂತಾಯಿತು. ದುಃಖವುಕ್ಕಿ ಬಂದು ಕಣ್ಣೀರು ಧಾರಾಕಾರವಾಗಿ ಹರಿಯತೊಡಗಿತು. ಅನಾಥ-ರಕ್ಷಕನಾದ ಪರಮಾತ್ಮ ನನ್ನು ಮನದಲ್ಲಿ ನೆನೆದು, ತನ್ನ ವಿದ್ಯಾರ್ಜನೆಯನ್ನು ಮುಂದುವರಿಸುವುದೇ ಒಳ್ಳೆಯದೆಂದು ಪ್ರತಿಜ್ಞೆಮಾಡಿ, ಆ ಎಚ್ಚರಿಸಿದ ಮುದುಕನ ಮನೆಯಿಂದ ನೇರವಾಗಿ ತನ್ನ ಮನೆಗೆ ಬಂದನು ಹಾಲಯ್ಯ.

ಅಂದು ಸ್ವಲ್ಪೇ ಭಿಕ್ಷೆಯನ್ನು ತಂದ ಹಾಲಯ್ಯನ ಜೋಳಿಗೆಯನ್ನು ನೋಡಿದ ಅವನ ಅಣ್ಣ ಶಿವಬಸಯ್ಯನು "ತಮ್ಮನು ಭಿಕ್ಷೆಯ ಕಾಳನ್ನು ದಾರಿಯಲ್ಲಿ ಮಾರಿ ಫಲಾಹಾರ ಮಾಡಿರಬಹುದೆಂದು" ತಾಯಿಗೆ ತಿಳಿಸಿದನು. ಹಿರಿಮಗನ ಮಾತನ್ನು ಕೇಳಿದ ತಾಯಿ ನೀಲಮ್ಮನು ಹಾಲಯ್ಯನ ಜೋಳಿಗೆಯನ್ನು ನೋಡಿದಳು. ನಿಜಕ್ಕೂ ಜೋಳಿಗೆಯಲ್ಲಿ ಭಿಕ್ಷೆಯು ಹಿಟ್ಟು ಕಡಿಮೆ ಇತ್ತು. ತಾಯಿಗೆ ಹಾಲಯ್ಯನು ಮಮತೆಯ ಕಿರಿಮಗನಾಗಿದ್ದರೂ ಬಡತನದ ಬೆಂಬೊಡಲಾಗಿದ್ದರಿಂದ ಅವಳು ಆಗ ಹಾಲಯ್ಯನ ಮೇಲೆ ಸಿಟ್ಟಿಗೆದ್ದಳು.

ಭಿಕ್ಷೆ ನೀಡಿದ ಆ ಮುದುಕನ ಬಿರುಸು ನುಡಿಯಿಂದಲೂ, ಮನೆಯಲ್ಲಿ ತಾಯಿಯ ಸಿಟ್ಟಿನಿಂದಲೂ ಹಾಲಯ್ಯನ ಮನಸ್ಸು ಚಿಂತಾಂಬುಧಿಯಲ್ಲಿ ಮುಳುಗಿ ದಂತಾಯಿತು. ಎಂದಿಗೂ ಎದುರು ವಾದಿಸದ ಅವನ ಮೃದು ಹೃದಯಕ್ಕೆ ಬೆಂಕಿ

ಎರಚಿದಂತಾಯ್ತು! ಈ ಭಿಕ್ಷಾ-ಧಾನ್ಯದ ಬಗೆಗಿನ ಅಪವಾದದ ನೋಟದಿಂದ ಹಾಲಯ್ಯನು ಉಣ್ಣದೇ ಮಲಗಿಬಿಟ್ಟನು. ಆಗ ಅಣ್ಣನು ಬಂದು ಸುಮ್ಮನೆ ಮಲಗಿದರೇನು ಬಂತು? "ನೀನು ದನದ ಮನೆಯ ಕಸಗೂಡಿಸುತ್ತೀಯೋ ಅಥವಾ ಮೈಲಿಗೆಯ ಬಟ್ಟೆಗಳನ್ನು ತೊಳೆಯುತ್ತೀಯೋ" ಎಂದು ಕೇಳಿದನು. ಮೈಲಿಗೆ ಬಟ್ಟೆಗಳನ್ನು ತೊಳೆಯುತ್ತೇನೆಂದುದಾಗಿ ಹೇಳಿದ ಹಾಲಯ್ಯನು ಆ ಬಟ್ಟೆಗಳನ್ನು ತೆಗೆದುಕೊಂಡು ಊರ ಹೊರಗಿನ ಭಾವಿಗೆ ಹೋಗಿ, ಮನೆಯಿಂದ ತಂದ ಎಲ್ಲ ಬಟ್ಟೆಗಳನ್ನು ಸ್ವಚ್ಛವಾಗಿ ತೊಳೆದು, ಅವುಗಳನ್ನು ತನ್ನ ಮನೆಗೆ ಮುಟ್ಟಿಸುವಂತೆ ತಿಳಿಸಿ, ಬೇರೆಯವರ ಕೈಯಲ್ಲಿ ಆ ಬಟ್ಟೆಗಳನ್ನೆಲ್ಲ ಕಳಿಸಿಕೊಟ್ಟನು.

ಹೆಚ್ಚಿನ ವಿದ್ಯಾಭ್ಯಾಸವನ್ನು ಮುಂದುವರಿಸಬೇಕೆಂದುಕೊಂಡಿದ್ದ ಹಾಲಯ್ಯನು ತೋಟದಿಂದ ಮನೆಗೆ ಹೋಗದೆ ಕಜ್ಜುರಿ ಗ್ರಾಮಕ್ಕೆ ಹೋದನು. ಮನಮುಟ್ಟಿ ಅಧ್ಯಯನ ಮಾಡಬೇಕು. ಕಾಯ-ಕಷ್ಟದಿಂದ ದುಡಿಯಬೇಕು. ಕಾಯಕದಿಂದ ಗಳಿಸಿ ಸಂಪಾದಿಸಿದ ಹಣವನ್ನು ತಾಯಿಗೆ ನೀಡಿ ಮಾತೃ-ಋಣದಿಂದ ಮುಕ್ತನಾಗಬೇಕೆಂಬ ಚಿಂತೆ ಮಾಡುತ್ತ ಪ್ರಯಾಣ ಮಾಡಿದ ಹಾಲಯ್ಯನು ಕಜ್ಜುರಗಿ ಊರಲ್ಲಿ ಬೇವಿನ ಕಟ್ಟೆಯ ಮೇಲೆ ಕುಳಿತಿದ್ದನು. ಅವನ ಮೈಮೇಲಿದ್ದುದು ಹರಿದ ಅಂಗಿ; ತುಂಡು ಧೋತರ. ಹೊಟ್ಟೆಗೆ ಬೆಳಗಿನಿಂದ ಊಟವಿಲ್ಲ. ತಾಯಿಯನ್ನು ಕೇಳದೆ ಮನೆಯಿಂದ ದೂರನಾಗಿ ಬಂದ ಚಿಂತೆಯೊಂದು ಒಳಗೊಳಗೇ ಕೊರೆಯುತ್ತಿತ್ತು. ಹಸಿವಿನ ಬಾಧೆಯೊಂದು ಕಡೆಯಾದರೆ ಮುಂದಿನ ವಿದ್ಯಾಭ್ಯಾಸಕ್ಕೆ ಆಶ್ರಯ ಪಡೆಯುವ ಚಿಂತೆಯೊಂದು ಕಡೆ. ಒಳಗೂ ಸಂಕಟ! ಹೊರಗೂ ಸಂಕಟ!! ಇವರಡರ ಬಾಧೆ ತಾಳದ ಹಾಲಯ್ಯನ ಕಣ್ಣುಗಳಿಂದ ನೀರು ಹರಿಯತೊಡಗಿತು.

ಬೇವಿನ ಕಟ್ಟೆಯ ಮೇಲೆ ಕುಳಿತು ದುಃಖಿಸುತ್ತಿದ್ದ ಹಾಲಯ್ಯನನ್ನು ನೋಡಿದಂಥ ಅದೇ ಕಜ್ಜುರಿ ಹಿರೇಮಠದ ರಾಚಯ್ಯನವರು ಹಾಲಯ್ಯನಿಂದ ಎಲ್ಲ ಸಂಗತಿಯನ್ನು ತಿಳಿದು, ಅವನ ಇಚ್ಛೆಯಂತೆ ಮುಂದಿನ ಅವನ ವಿದ್ಯಾಭ್ಯಾಸದ ವ್ಯವಸ್ಥೆ ಮಾಡುವುದಾಗಿ ತಿಳಿಸಿ ಅವನನ್ನು ತಮ್ಮ ಮನೆಗೆ-ಕರೆದುಕೊಂಡು ಹೋಗಿ ಸರಿಯಾಗಿ ಆತ್ಮೀಯತೆಯಿಂದ ಉಪಚರಿಸಿದರು. ನಂತರ ಶಾಲೆಗೆ ಕರೆದೊಯ್ದು ಅಲ್ಲಿಯ ಪ್ರಧಾನಾಧ್ಯಾಪಕರಿಗೆ ಎಲ್ಲವನ್ನೂ ತಿಳಿಪಡಿಸಿ ಹಾಲಯ್ಯನನ್ನು ಶಾಲೆಗೆ ಸೇರಿಸಿದರು. ತಾವು ಸ್ವತಃ ಹಾಲಯ್ಯನ ಜೀವನೋಪಾಯಕ್ಕೆ ಬೇಕಾಗುವ ಅನ್ನ-ಅರಿವೆ ಹಾಗೂ ಅವನ ಅಧ್ಯಯನಕ್ಕೆ ಬೇಕಾಗುವ ಗ್ರಂಥಾದಿಗಳ ವ್ಯವಸ್ಥೆಯನ್ನೂ ಮಾಡಿ, ಅವನ ಅಧ್ಯಯನವು ಸುಗಮವಾಗಿ ಮುಂದುವರಿಸುವ ಹಾಗೆ ಸಕಲ ಅನುಕೂಲಗಳನ್ನೂ ಒದಗಿಸಿ ಕೊಟ್ಟರು, ಪುಣ್ಯಾತ್ಮ ರಾಚಯ್ಯನವರು.

ನಿರಾತಂಕವಾಗಿ ಸಾಗಿದ ತನ್ನ ಅಧ್ಯಯನದಿಂದ ತನ್ನ ಹಿಂದಿನ ಎಲ್ಲ ದುಃಖ

ಗಳನ್ನು ಬದಿಗೊತ್ತಿದ ಹಾಲಯ್ಯನು ಯಶಸ್ವೀ ವಿದ್ಯಾರ್ಥಿ-ಜೀವನ ಸಾಗಿಸ ತೊಡಗಿದನು.

ವಿದ್ಯಾರ್ಥಿ–ಜೀವನವೆಂಬುದೊಂದು ತಪಸ್ವಿ–ಜೀವನ. ಪವಿತ್ರ ಭಾವನೆ ಗಳು ವಿದ್ಯಾರ್ಥಿ ಜೀವನದಲ್ಲಿ ಸಹಜವಾಗಿ ಹುಟ್ಟುತ್ತವೆ. ಈ ಅವಸ್ಥೆಯಲ್ಲಿದ್ದವ ನಿಗೆ ಸಜ್ಜನರ ಸಹವಾಸವು ಅತ್ಯಗತ್ಯ. ಹದವಾದ ಭೂಮಿಗೆ ಒಳ್ಳೆಯ ಬೀಜ ವನ್ನು ಸಕಾಲಕ್ಕೆ ಹಾಕದರೆ ಚೆನ್ನಾಗಿ ಅಂಕುರಿಸಿ ಅದು ಫಲಕೊಡುವಂತೆ, ವಿದ್ಯಾರ್ಥಿ ಜೀವನವೂ ಸಫಲವಾಗಬೇಕು. ವಿದ್ಯಾರ್ಥಿ–ಜೀವನದಲ್ಲಿ ಯಾವ ವೈಷಯಿಕ ಗಾಳಿಯೂ ಸೋಂಕದೆ ಇರುವುದರಿಂದ ಆ ವಿದ್ಯಾರ್ಥಿಯು ಸತ್ಯಾರ್ಥಿಯಾಗಲೂ ಸಾಧ್ಯವಾಗುತ್ತದೆ. ವಿದ್ಯಾರ್ಥಿಗೆ ನಿತ್ಯವೂ ಮಹಾಪುರುಷರ ಆಚಾರ–ವಿಚಾರ ಗಳೆಂಬ ಬೀಜದ ಕಾಳುಗಳನ್ನು ಅವನರಿವಿಗೆ ಒದಗಿಸುವುದರಿಂದ ಅವನ ಭವಿಷ್ಯವು ಉಜ್ವಲವಾಗಲು ಅನುಕೂಲವಾಗುತ್ತದೆ. ಸರ್ವಾದರಣೀಯವಾದ ವಿದ್ಯಾರ್ಥಿ– ಜೀವನದಲ್ಲಿ ಯಾರು ಅಂತರ್ಮುಖಿಗಳಾಗಿ, ಗುರು–ಹಿರಿಯರ ಉಪದೇಶದಂತೆ ನಡೆದುಕೊಳ್ಳುತ್ತಾರೋ ಅವರೇ ಮುಂದೆ ಆದರ್ಶ ಪುರುಷರಾಗುತ್ತಾರೆ. ಅವರು ತಮ್ಮ ವಿದ್ಯಾರ್ಥಿ ಜೀವನದಿಂದಲೂ ಕಷ್ಟ ಸಹಿಸಿಕೊಳ್ಳುವ ಗುಣವನ್ನು ಕಲಿತಿರುವು ದರಿಂದ, ಇತರರ ಏಳ್ಗೆಗಾಗಿ ಹೋರಾಡುವ ಅವರಿಗೆ ಆ ಸಹನ-ಶಕ್ತಿಯು ಸಹಜ ವಾಗಿ ಬೆಳೆದು ಬಂದಿರುತ್ತದೆ. 'ಆತ್ಮಶ್ರೀಯಿಲ್ಲದ ವಿದ್ಯೆಯು ಗುರುವಿಲ್ಲದ ಮಠ' ದಂತೆ ಎಂದು ತಿಳಿದ ಅವರು ತಮ್ಮ ಅಧ್ಯಯನ-ತಪಸ್ಸಿನಲ್ಲಿ ನಿರತರಾಗಿ, ಸಾಹಿತ್ಯ ಸಂಶೋಧನೆಯಲ್ಲಿ ಮಗ್ನರಾಗಿ ಕಲಾರಾಧನೆಯನ್ನು ಮಾಡುತ್ತಿರುತ್ತಾರೆ; ಗುರು– ಹಿರಿಯರ ಸೇವೆಗೈಯುತ್ತ ಉದಾತ್ತ ಜೀವನ ಸಾಗಿಸುತ್ತಾರೆ. ಇದುವೇ ನಿಜವಾದ ವಿದ್ಯಾಧ್ಯಯನವು.

ಈ ರೀತಿಯಾಗಿ ತಿಳಿದು ವಿದ್ಯಾಧ್ಯಯನವನ್ನು ಸಾಗಿಸುತ್ತಿದ್ದ ಹಾಲಯ್ಯನು ತನ್ನ ಅಭ್ಯಾಸವಾಯ್ತು, ತಾನಾಯ್ತು; ಜೊತೆಗೆ ಗುರುಗಳ ಸೇವೆ. ಅವನು ಇವೆಲ್ಲ ವನ್ನು ಮನಮುಟ್ಟಿ ಮಾಡುತ್ತಿದ್ದು, ಬಡತನದ ಬವಣೆಯಲ್ಲಿದ್ದರೂ ಉಜ್ವಲದ ಆಧ್ಯಾತ್ಮಿಕ ಭವಿಷ್ಯದ ಹೊಂಗನಸನ್ನು ನಿತ್ಯವೂ ಕಾಣುತ್ತಿದ್ದನು. ಅಧ್ಯಯನ ವನ್ನು ಮನಮುಟ್ಟಿ ಮಾಡುತ್ತಿದ್ದನು. ಅಧ್ಯಾಪಕ ವೃಂದದ ಮೆಚ್ಚಿಗೆಗೆ ಪಾತ್ರ ನಾಗಿದ್ದನು. ಆ ಕಜ್ಜರಗಿ ಹಿರೇಮಠದ ರಾಚಯ್ಯನವರಂತೂ ಹಾಲಯ್ಯನ ಹಾಲಿನಂತಹ ಸುಸ್ವಭಾವಕ್ಕೆ ಹಿರಿ–ಹಿರಿ ಹಿಗ್ಗಿದರು. ಅವರು ತಮ್ಮಿಂದ ಹಾಲಯ್ಯ ನಂತಹ ಒಳ್ಳೆಯ ವ್ಯಕ್ತಿಗೆ ಸಹಾಯ ದೊರೆಯಿತಲ್ಲ ಎಂದು ಮನಸ್ಸಿನಲ್ಲಿಯೇ ಆನಂದಪಡುತ್ತಿದ್ದರು. ಹಾಲಯ್ಯನ ವ್ಯಕ್ತಿತ್ವಕ್ಕೆ ಕಜ್ಜರಗಿ ಊರೇ ಮರುಳಾಗಿ ತ್ತೆನ್ನಬಹುದು.

ಹೀಗೆಯೇ ಹಾಲಯ್ಯನು ಎಲ್ಲರ ಪ್ರೀತಿಗೆ ಪಾತ್ರನಾಗಿದ್ದು, ಕಜ್ಜರಗಿಯಲ್ಲಿ

ಸಮಗ್ರ ನಾಲ್ಕು ವರ್ಷ ಅಧ್ಯಯನ ಮಾಡಿ, ಏಳನೆಯ ಇಯತ್ತೆಯ ಅಭ್ಯಾಸವನ್ನು ಮುಗಿಸಿದನು. ವಾರ್ಷಿಕ ಪರೀಕ್ಷೆಗೆ ಕಟ್ಟಬೇಕಾಗಿತ್ತು.

ಆಗಿನ ಕಾಲಕ್ಕೆ ಏಳನೆಯ ಇಯತ್ತೆಯ (ಮುಲ್ಕೀ ಪರೀಕ್ಷೆಯ) ವಾರ್ಷಿಕ ಪರೀಕ್ಷಾ–ಕೇಂದ್ರವು ಕಜ್ಜರಗಿ ಗ್ರಾಮದಲ್ಲಿರದೆ, ಆ ಊರ ಜಿಲ್ಲೆಯ ಕೇಂದ್ರ ಸ್ಥಳವಾದ ಧಾರವಾಡದಲ್ಲಿಯೇ ಪರೀಕ್ಷೆಯು ಏರ್ಪಟಿತ್ತು. ಅದಕ್ಕಾಗಿ ಹಾಲಯ್ಯನು ಮುಲ್ಕೀ ಪರೀಕ್ಷೆಯ (ಏಳನೆಯ ಇಯತ್ತೆಯ) ವಾರ್ಷಿಕ ಪರೀಕ್ಷೆ ಕೊಡಲು ತನ್ನ ಸಹಾಧ್ಯಾಯಿಯಾದ ಅಸುಂಡಿ ಶಿವನಗೌಡ ಎಂಬುವನೊಡನೆ ಕಜ್ಜರಗಿಯಿಂದ ಕಾಲುನಡಿಗೆಯಿಂದಲೇ ಧಾರವಾಡಕ್ಕೆ ಬಂದು ಸಕಾಲಕ್ಕೆ ಪರೀಕ್ಷೆಕೊಟ್ಟನು.

ಆದರೆ, ಆ ಪರೀಕ್ಷೆಯ ಫಲಿತಾಂಶವನ್ನು ನೋಡಿದರೆ, ಅದು ಫಲಕಾರಿಯಾಗಿರಲಿಲ್ಲ! ಹಾಲಯ್ಯನ ಹೆಸರಿನ ನಂಜರು ಪಾಸಾದವರ ಸಾಲಿನಲ್ಲಿರಲಿಲ್ಲ! ಉತ್ತೀರ್ಣನಾಗಿರಲಿಲ್ಲ!!

ಹಾಲಯ್ಯನಂತಹ ಜಾಣ ವಿದ್ಯಾರ್ಥಿಯು ಅನುತ್ತೀರ್ಣನಾಗಿದ್ದುದು ಎಲ್ಲರಿಗೂ ಅಚ್ಚರಿ. ಅವನು ಬಗೆದದ್ದು ಒಂದು. ಆದದ್ದೇ ಮತ್ತೊಂದು, ಇದುವೆ ದೈವ ಲೀಲೆ. ಈಶ್ವರೇಚ್ಛೆಯು ಎಂದಿಗೂ ಕಲ್ಪನೆಗೆ ಬರಲಾರದ್ದು. ಯಾವುದಾದರೂ ಘಟಿಸಬೇಕಾದರೆ, ಅದರೊಳಗೆ ಏನಾದರೂ ಅದ್ಭುತ ಶಕ್ತಿ ಇರಲೇ ಬೇಕಾಗುತ್ತದೆಂಬುದು ಸರ್ವ–ಸಮ್ಮತವಾದುದು. ಅಂತೆಯೇ, ಮಹಾತ್ಮರ ಭವಿಷ್ಯವು ಮಾನವರಿಗಾರಿಗೂ ಕೂಡಲೇ ಅರ್ಥವಾಗುವದು ಕಷ್ಟ.

ಅಧ್ಯಾಪನ-ಮಾಯಾನಿರಸ

ಹಾಲಯ್ಯನವರ ಮನಸ್ಸಿನಲ್ಲಿ ಆಧ್ಯಾತ್ಮಿಕದತ್ತ ದೃಢವಾದ ಪರಿವರ್ತನೆಯ ಭಾವನೆಗಳು ಒಡಮೂಡತೊಡಗಿದವು. ಅವರ ಭಾವನೆಯಲ್ಲಿಯ ವಿಶಾಲತೆ, ಆಧ್ಯಾತ್ಮಿಕತೆ ಬೆಳೆಯತೊಡಗಿದವು. ಸಂಸಾರವೆಂಬುದೊಂದು ಗಾಳಿಯ ಸೊಡರೆಂಬುದು ಅವರಿಗೆ ನಿಶ್ಚಿತವಾಯಿತು. ಅದೇ ಸಂದರ್ಭದ ನಿಮಿತ್ತವಾಗಿ ಮೊದಲಿನಿಂದ ಇದ್ದ ಅವರ ಆಧ್ಯಾತ್ಮಿಕ ಒಲವು ನಿಜಗುಣರ ಷಟ್‌ಶಾಸ್ತ್ರದ ಕಡೆಗೆ ಈಗ ಬಲವಾಯಿತು. ತುಂಬು ಯೌವ್ವನದಲ್ಲಿಯೂ ಸತ್ಯ ಸಂಶೋಧನೆಯ ಆತ್ಮಾನಾತ್ಮ ವಿಚಾರಗಳು ಅವರಲ್ಲಿ ತುಂಬಿ ಬೆಳೆದವು. ತುಂಬಿಯು ಹೂವಿನಂತೆ ಅವರ ಹೃದಯ ವರಳಿತು, ಅವರ ಪವಿತ್ರ ಭಾವನೆಯು ಮತ್ತೂ ದೃಢಗೊಂಡಿತು. ಆತ್ಮಸಿದ್ಧಿಗೇರುವ ಹಂಬಲ ಹೆಚ್ಚಾಯಿತು. ಅಂತೆಯೇ ಸಾಧನೆಯ ಸಸಿಯೊಂದು ಉದಯಿಸಿತು. ಕಾರಣ, ಭ್ರಾಂತಿಯ ಬೇರುಗಳನ್ನು ಅಗೆದಗೆದು ತೆಗೆಯುವ ಯೋಚನೆ-ಯೋಜನೆಯಲ್ಲಿ ಹಾಲಯ್ಯನವರು ತೊಡಗಿದರು. ವಿರತಿ ಹೊಂದುಡಿಗೆಯನುಡಲು ಅವರಿಗೆ ಆತುರತೆಯುಂಟಾಯಿತು. ಲೋಕ-ಕಲ್ಯಾಣಕ್ಕೆ ಆತ್ಮಶುದ್ಧಿಯೇ ಭದ್ರ ಬುನಾದಿಯೆಂದರಿದ ಅವರು ಆತ್ಮ ಶುದ್ಧಿಯ ವೃದ್ಧಿಗಾಗಿ ತಪಿಸಹತ್ತಿದರು. "ಲೋಕದಲ್ಲಿ ಅತ್ಯಾಚಾರ-ಅನಾಚಾರಗಳು ಬೆಳೆಗೊಡದಂತೆ ಹೇಗೆ ಪ್ರಯತ್ನಿಸಬೇಕು? ಜನಜೀವನದಲ್ಲಿ ಜಾಗೃತಶಕ್ತಿಯನ್ನು ಹೇಗೆ ಮೂಡಿಸಬೇಕು ಶ್ರೀಸಾಮಾನ್ಯರಿಗೂ ಒಳ್ಳೆಯದಾಗುವ ಬಗೆ ಹೇಗೆ?" ಇವೇ ಮುಂತಾದ ವಿಚಾರಗಳ ಸುರುಳಿಯು ಅವರ ತಲೆಯೊಳಗೆ ಸುತ್ತ ತೊಡಗಿತ್ತು. ಇತ್ತ ಈ ಭಾವನೆಗಳು ಮನದಲ್ಲಿ ಹೊಳೆದರೆ, ಅತ್ತ ಮನೆಯಲ್ಲಿ ಬಡತನದ ಪೆಡಂಭೂತ ಬಾಯ್ದೆರೆದು ನಿಂತಿದೆ. ಒಂದು ಕಡೆ ಬಂಧುಗಳನ್ನು ಸಲಹುವ ಮೋಹ, ಮತ್ತೊಂದು ಕಡೆ ತ್ಯಾಗದ ಬಗ್ಗೆ ಒಲವು. ಇವೆರಡರ ತುಮುಲ ಯುದ್ಧದಲ್ಲಿ ಮನಸ್ಸು ವ್ಯಗ್ರಗೊಳ್ಳುತ್ತಿತ್ತಾದ್ದರಿಂದ ಕೊನೆಗೆ ಹಾಲಯ್ಯನವರು ಒಂದು ನಿರ್ಧಾರಕ್ಕೆ ಬಂದರು. ವಿದ್ಯೆಯ ಪ್ರಾಧಾನ್ಯತೆಯಿಂದ ದುಡಿಯಬೇಕು. ದುಡಿದ ಹಣವನ್ನು ತಾಯಿಗೊಪ್ಪಿಸಿ, ಆಕೆಯ ಋಣ ತೀರಿಸಿ, ಶಿವಯೋಗಿಯಾಗಿ ಶಿವ-ಸುಖವನ್ನು ಹೊಂದಬೇಕೆಂದು ನಿಶ್ಚಯಿಸಿ, ತಾವು ಲಿಂಗದಹಳ್ಳಿ ಗ್ರಾಮದಲ್ಲಿ ಪ್ರಾಥಮಿಕ ಶಾಲೆಯೊಂದನ್ನು ಪ್ರಾರಂಭಿಸಿದರು.

ಆ ಶಾಲೆಯ ಅಧ್ಯಾಪಕರಾಗಿ ಸೇವೆ ಸಲ್ಲಿಸಲು ಹಾಲಯ್ಯನವರು ಮುಂದಾದರು. ಅಲ್ಲಿಯ ಮಕ್ಕಳಿಗೆಲ್ಲ ಅಚ್ಚು-ಮೆಚ್ಚಿನವರಾದರು, ತಾವು ಕಲಿಸುವ ಶಾಲೆಯಿಂದ ಬಂದ ಹಣವನ್ನು ತಾಯಿಗೆ ಕಳಿಸಹತ್ತಿದರು. ಅಧ್ಯಾಪಕರಾದ

ಹಾಲಯ್ಯನವರು ಶಾಲೆಯಲ್ಲಿ ಮಕ್ಕಳಿಗೆ ನಿತ್ಯದ ಪಾಠವನ್ನು ಹೇಳಿಕೊಡುವುದಲ್ಲದೆ ಅವರ ಮನಸ್ಸನ್ನು ಪವಿತ್ರಗೊಳಿಸಿ ಗುರು-ಹಿರಿಯರ ಸೇವೆ ಮಾಡುತ್ತಿರುವಂತೆ ಆಧ್ಯಾತ್ಮ-ಸಂಸ್ಕೃತಿಯ ಸಿಹಿ ನೀರನ್ನು ಕುಡಿಸುತ್ತಿದರು.

ಜೀವನ-ಹೂದೋಟದಲ್ಲಿ ಹೂಗಳಂತೆ ಅರಳುತ್ತಿರುವ ವಿದ್ಯಾರ್ಥಿಗಳ ಆತ್ಮ-ಪುಷ್ಟಿಗೆ ಅಮೃತಹಾರವನ್ನು ನೀಡುವ ಹಿರಿದಾದ ಹೊಣೆಯು ಶಿಕ್ಷಕರದು. ಪಾಲಕರು ತಮ್ಮ ಮಕ್ಕಳನ್ನು ಶಿಕ್ಷಕರ ನಿರೀಕ್ಷಣೆಯಲ್ಲಿ ಕಲಿಸಲು ಒಪ್ಪಿಸುವುದೂ ಇದೆ ಮಹದುದ್ದೇಶದಿಂದ. ಪಾಲಕರ ಅಪೇಕ್ಷೆಯಂತೆ ಅಧ್ಯಾಪಕರು ವಿದ್ಯಾರ್ಥಿಗಳನ್ನು ಆಧ್ಯಾತ್ಮಿಕದೊಂದಿಗೆ ರಾಷ್ಟ್ರಾಭಿಮಾನದತ್ತ ಅವರನ್ನು ಎಳೆದೊಯ್ಯಬೇಕು. ಮಕ್ಕಳನ್ನು ಸುಧಾರಿಸಿದರೆ ರಾಷ್ಟ್ರವನ್ನು ಸುಧಾರಿಸಿದಂತೆ. ಬೀಜಗಳಿದ್ದಂತೆ ವೃಕ್ಷಗಳು ಫಲ ನೀಡುವುದು ಸಹಜ. ಅಕ್ಷರಜ್ಞಾನ ಬೆಳೆದಂತೆ ಅಂತರ್ಜ್ಞಾನ ಬೆಳೆದು ಸ್ವಾವಲಂಬನ ಜೀವನವನ್ನು ಸಾಗಿಸುವ ಹೊಣೆ ಹೊತ್ತುಕೊಳ್ಳುವ ಶಕ್ತಿ ಸಂಪನ್ನರಾದ ಸಮರ್ಥ ಮಕ್ಕಳನ್ನು ರೂಪಿಸಬೇಕು. ವಿದ್ಯಾರ್ಥಿಗಳಿಗೆ ಈಶ್ವರಾಶಕ್ತಿ, ಸತ್‌ಶೀಲ, ಧ್ಯಾನ, ಆತ್ಮ-ಶ್ರೀ, ಭಾವ-ಶ್ರೀ ಮುಂತಾದ ಒಳ್ನಡೆಗೆ ಸ್ಫುರದ್ರೂಪವಾದ ಸಂಸ್ಕಾರದ ಬೆಳಕನ್ನು ಮಕ್ಕಳ ಹೃದಯಾಕಾಶದಲ್ಲಿ ತುಂಬಿದರೆ ಅವರ ವಂಶೋದ್ಧಾರದ ಜೊತೆಗೆ ರಾಷ್ಟ್ರಕ್ಕೆ ಕಲ್ಯಾಣ ಮಾಡಿದಂತಾಗುವುದು.

ಈ ದೃಷ್ಟಿಯಿರಿಸಿದ ಹಾಲಯ್ಯನವರು ಆದರ್ಶ ಶಿಕ್ಷಣ ಪದ್ಧತಿಯಿಂದ ಶಾಲೆಯ ಮಕ್ಕಳನ್ನು ಬೆಳೆಸಿದರು. ತಾವು ಕಲಿಸುವ ಶಾಲೆಯಿದ್ದ ಲಿಂಗದಹಳ್ಳಿಯಲ್ಲಿ ಇಷ್ಟ-ಲಿಂಗೋಪಾಸನೆಯ ತತ್ವವನ್ನು ಕಾರ್ಯಗತಗೊಳಿಸಿದರು ಹಾಲಯ್ಯನವರು. ಅವರ ಕಾರ್ಯದಿಂದ ಆ ಊರು ಪವಿತ್ರ ವಾತಾವರಣದಲ್ಲಿ ಮೆರೆಯ ತೊಡಗಿತು. ಆದರೂ ಆಧ್ಯಾತ್ಮಿಕ ನಭೋಮಂಡಲದಲ್ಲಿ ಹಾರಾಡುವ ಅವರಿಗೆ ಇಷ್ಟರಿಂದಲೇ ತೃಪ್ತಿಯಿರಲಿಲ್ಲ.

ಆ ಲಿಂಗದಹಳ್ಳಿ ಊರಲ್ಲಿ ಸಮಾಳದ ಬಸವಪ್ಪಯ್ಯನೆಂಬವರು ವೇದಾಂತ ಶಾಸ್ತ್ರದಲ್ಲಿ ಬಲ್ಲಿದವರಾಗಿದ್ದರು. ಅವರ ಹತ್ತಿರ ನಿತ್ಯವೂ ಹಾಲಯ್ಯನವರು ಹೋಗಿ ವೇದಾಂತ ಸಿದ್ಧಾಂತಗಳ ಪಾಠ ಪ್ರವಚನ ಮಾಡಿಕೊಂಡು, ಅದರಿಂದ ಸಂಶಯ-ನಿವಾರಣೆಯಾಗಿ, ಸಿದ್ಧಾಂತದ ಅನುಭವ ಪಡೆದುಕೊಂಡು ಬರುತ್ತಿದ್ದರು. ಅವರಿಗೆ ಜ್ಞಾನ-ಸಂಪಾದನೆಯು ಹಸಿವಿನ ಮುಂದೆ ಬಡಿಸಿರುವ ಲೌಕಿಕ ಬೇಸರವೆನಿಸಿತು. ಪರಿಣಾಮವಾಗಿ, ನಿಜಗುಣರ ಕೈವಲ್ಯ ಪದ್ಧತಿಯನ್ನು ಚನ್ನಾಗಿ ಅಧ್ಯಯನ ಮಾಡಿ, ಅದರ ಒಳ ಇಂಗಿತಾರ್ಥವನ್ನು ಅರಿತರು. ಅವರಿಗೆ ನಿಜಗುಣರ ಷಟ್‌ಶಾಸ್ತ್ರದ ಅಭಿರುಚಿ ಹೆಚ್ಚಾದಂತೆಯೇ ಅವರ ಮನಸ್ಸು ವೈರಾಗ್ಯದ ಕಡೆಗೆ ವೇಗವಾಗಿ ಹರಿಯುತ್ತಿತ್ತು. ಲಿಂಗ ಪೂಜೆ, ಅನುಷ್ಠಾನ,

ಧ್ಯಾನಾದಿಗಳ ಚಿನ್ನಿಧಿಯಲ್ಲಿ ಆಸಕ್ತಿ ಬೆಳೆದ ಅವರಿಗೆ ಸಂಸಾರದ ಕಹಿ-ರಸ ಜೀವನವು ಬೇಸರವೆನಿಸಿತು.

ಇಷ್ಟರಲ್ಲಿಯೇ ಮಗನ ಕೀರ್ತಿವಾರ್ತೆ ಕೇಳಿದ ತಾಯಿ ನೀಲಮ್ಮನು ಲಿಂಗದ ಹಳ್ಳಿಗೆ ಬಂದು ಹಾಲಯ್ಯನವರನ್ನು ಕಂಡು, ಒಬ್ಬ ಕನ್ಯೆಯನ್ನು ಲಗ್ನವಾಗುವಂತೆ ಹಾಲಯ್ಯನವರಿಗೆ ಪರಿಪರಿಯಾಗಿ ತಿಳಿ ಹೇಳಿದಳು. ಆದರೆ, "ಮದುವೆ ಮಾಡಿ ಕೊಳ್ಳಬಾರದೆಂದು ನಾನು ನಿಶ್ಚಯಿಸಿದ್ದೇನೆ ಆ ವಿಷಯದ ಬಗ್ಗೆ ನನಗೆ ತಿಳಿಸ ಬೇಡ. ಕ್ಷಣಿಕವಾದ ಭೋಗಲಾಲಸೆಗಳನ್ನು ಧಿಕ್ಕರಿಸಿದ್ದೇನೆ. ಅದಕ್ಕಾಗಿ ನನ್ನ ಮನಸ್ಸನ್ನು ಬದಲಿಸಲು ವ್ಯರ್ಥ ಸಾಹಸ ಪಡಬೇಡ" ಎಂದು ಮುಂತಾಗಿ ಹಾಲಯ್ಯನವರು ಹೇಳಿದ ಮಾತನ್ನು ಕೇಳಿ ತಾಯಿ ನೀಲಮ್ಮ ಕಸವಿಸಿಗೊಂಡು ದುಃಖಿತಳಾದಳು. ಮದುವೆಗಾಗಿ ಹಾಲಯ್ಯನನ್ನು ಒಪ್ಪಿಸಬೇಕೆಂದು ತಾಯಿ ಒಬ್ಬ ಕನ್ಯೆಯನ್ನು ನೋಡಿ, ಎಷ್ಟುಸಲ ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ. ಕೊನೆಗೂ ಹಾಲಯ್ಯನವರು ಮದುವೆಯಾಗಲು ಒಪ್ಪಲಿಲ್ಲ.

ಕೊನೆಗೆ ಹಾಲಯ್ಯನವರು ತಾಯಿ ನೀಲಮ್ಮನವರನ್ನು ಕುರಿತು "ಅಮ್ಮಾ, ನನಗಾಗಿ ಇನ್ನು ಶೋಕಿಸಬೇಡ. ಪಡೆದ ಕರುಳಿನಿಂದ ಮಾತೆಯಲ್ಲಿ ಮಮತೆ ಹುಟ್ಟುವದು ಸಹಜ. ನನ್ನನ್ನು ಮಾಯಾಮೋಹದಲ್ಲಿ ಸಿಲುಕಿಸಬೇಡ. ಇಷ್ಟು ದಿನಗಳವರೆಗೆ ಓದಲು, ಓದಿಸಲು ಅವಕಾಶ ಕಲ್ಪಿಸಿಕೊಟ್ಟು ಧನ್ಯನನ್ನಾಗಿ ಮಾಡಿ ರುವೆ. ನಿನ್ನ ಋಣ ಭಾರವನ್ನು ತೀರಿಸಲು ಮೂರುವರ್ಷದಿಂದ ಶಿಕ್ಷಕನಾಗಿ ದುಡಿದು ಸಂಗ್ರಹಿಸಿದ ಈ ಮುನ್ನೂರು ರೂಪಾಯಿಗಳನ್ನು ನಿನ್ನ ಉಡಿ ಯಲ್ಲಿ ಹಾಕುತ್ತೇನೆ. ಇಷ್ಟರಿಂದ ಸಮಾಧಾನಳಾಗು. ಇನ್ನು ಮುಂದೆ ತಾಯಿ ಯೆಂಬ ಮೋಹವು ನನ್ನಲ್ಲಿಯೂ, ಮಗನೆಂಬ ಮೋಹವು ನಿನ್ನಲ್ಲಿಯೂ ಖಂಡಿತ ವಾಗಿ ಇರಕೂಡದು. ನನ್ನ ಧ್ಯೇಯ ಧೋರಣೆ, ಸಿದ್ಧಿಗಳು ಫಲಪ್ರದವಾಗುವಂತೆ ಹರಸು" ಎಂದು ಹೇಳಿ ತಾಯಿಯ ಪಾದಕ್ಕೆ ನಮಸ್ಕರಿಸಿದರು. ಪ್ರಪಂಚದ ಸಂಬಂಧವನ್ನೆಲ್ಲ ಕಡಿದುಕೊಂಡು, ಹೃದಯಕ್ಕೆ ಬೆಳಕನ್ನು ಕೊಡುವ ವಿದ್ಯೆಯನ್ನು ಪಡೆಯಲು ಹುಬ್ಬಳ್ಳಿಯತ್ತ ಹೊರಟರು.

ಸಾಧಕ ಜೀವನ ಗುರು-ಸಂದರ್ಶನ

ಯಾರಿಗೆ ನವಯೌವನದಲ್ಲಿ ಜ್ಞಾನದ ಹಸಿವು ಹೆಚ್ಚಾಗಿ ಸತ್ಯ ಸಾಕ್ಷಾತ್ಕಾರ ಮಾಡಿಕೊಳ್ಳಬೇಕೆಂಬ ಬಯಕೆಯುಂಟಾಗುತ್ತದೆಯೋ ಅವರಿಗೆ ಹೊರಗಿನ ವ್ಯವಹಾರವು ಏನೂ ಅಂಟಿಕೊಳ್ಳಲಾರದು. ಧ್ಯಾನ, ಪ್ರಾರ್ಥನೆ, ಆತ್ಮಸಂಶೋಧನೆ, ಗುರುಕರುಣೆ, ಇವೇ ಮುಂತಾದವುಗಳು ಅವರಿಗೆ ಆಸರವಾಗಿರುತ್ತವೆ. ಸಂಸಾರವು ಬೇಸರವಾಗುತ್ತದೆ. ನಿರಂತರವೂ ಅಂತರಂಗವನ್ನು ಸಂಧಾನದ ಹುಚ್ಚು ಹಿಡಿದಿರುತ್ತದೆ. ವಿಚಾರ ಬುದ್ಧಿ ಪ್ರಬುದ್ಧವಾಗುತ್ತದೆ. ಶಿವಭಾವದಲ್ಲಿ ತನ್ಮಯರಾಗುತ್ತಾರೆ. ಯಾವ ಸಾಧಕನ ಬುದ್ಧಿಯು ತಾತ್ವಿಕ ವಿಚಾರದಲ್ಲಿ ಹೋಗಿ, ತನ್ನ ಜೀವನದ ಕೊನೆಯ ಉದ್ದೇಶದ ಕಡೆಗೆ ತಿರುಗುತ್ತದೆಯೋ ಆತನ ಆತ್ಮಶ್ರೀ ಬೆಳೆದು ನಳನಳಿಸುತ್ತದೆ. ಆತನು ಅಂತರಾಳದ ಗೂಢ ಪ್ರಶ್ನೆಗಳಿಗೆ ತಾನೇ ಉತ್ತರಿಸಿಕೊಂಡು ಮುಂದೆ ಸಾಗುತ್ತಾನೆ. ಕುರುಡು ನಂಬಿಗೆಯತ್ತ ಮನವಿರಸಲಾರ. ಸತ್ಯವು ಕೊಂಕಿದಂತಲ್ಲ, ವಿಶಾಲವಾಗುತ್ತದೆಂಬ ಭಾವನೆಯು ಅವನಿಗೆ ಗೋಚರವಾಗುತ್ತದೆ. ಸಂದಿಗ್ಧತೆಯ ಆಘಾತಗಳು ಬಂದು ಮುತ್ತುತ್ತಿದ್ದರೂ, ಜಗ್ಗದೆ ಬೆದರದೆ, ಜ್ಞಾನ ಖಡ್ಗದಿಂದ ಅವೆಲ್ಲವುಗಳನ್ನು ಖಂಡಿಸುತ್ತ, ಸತ್ಯ ಸೌಂದರ್ಯದ ಕಡೆಗೆ ಗಮನ ಹರಿಸುತ್ತಾನೆ. ಭಾವ ಶುದ್ಧಿಯನ್ನು ಹೆಚ್ಚಿಸಿಕೊಳ್ಳುತ್ತಾನೆ. ಆತ್ಮಕ್ಕೆ ಪುಷ್ಟಿ ನೀಡುವ ಗ್ರಂಥಗಳ ಅಧ್ಯಯನ ಮಾಡುತ್ತಾನೆ. ತನ್ನ ವ್ಯಕ್ತಿತ್ವವನ್ನು ವಿಕಾಸ ಮಾಡಬಲ್ಲ ಗುರುಗಳನ್ನು ಹುಡುಕುತ್ತಾನೆ. ಆ ಆತ್ಮ ಸಂಪತ್ತನ್ನು ಗಳಿಸಲು ಎಂತಹ ಕಠಿಣ ಪ್ರಸಂಗ ಬಂದರೂ, ಸಹಿಸುವ ಶಕ್ತಿ, ಮನೋದಾರ್ಢ್ಯ ಅವನಿಗಿರುತ್ತದೆ. ಆತನ ಶರೀರದಲ್ಲಿ ಮಿಂಚಿನ ಸಂಚಯವಾಗಿ ಬೆಳಕನ್ನು ಕಾಣುವ ಕಾತರತೆ ಮಿಗಿಲಾಗುತ್ತದೆ. ಅನೇಕ ಮಹಾವ್ಯಕ್ತಿಗಳ ಜೀವನ ಚರಿತ್ರವನ್ನು ಓದಿದಂತೆಲ್ಲ ಆದರ್ಶ ಉದ್ದೀಪನವಾಗುತ್ತದೆ.

ಇಂತಹ ಆಧ್ಯಾತ್ಮಿಕ ತೃಷೆಯನ್ನು ಹೆಚ್ಚಿಸಿಕೊಂಡು, ಹೃದಯವನ್ನು ಪಕ್ವ ಮಾಡಿಕೊಂಡು ಹುಬ್ಬಳ್ಳಿ ಸಿದ್ಧಾರೂಢರಬಳಿ ಹಾಲಯ್ಯನವರು ಬಂದರು. ಆ ಸಮಯದಲ್ಲಿ ಸಿದ್ಧಾರೂಢರು, ಅದ್ವೈತ ಸಿದ್ಧಾಂತದಲ್ಲಿ ದಿವ್ಯ ಶಕ್ತಿ ಪಡೆದಿದ್ದಾರೆಂದು. ನಾಡಿನ ತುಂಬೆಲ್ಲ ಪ್ರಖ್ಯಾತಿ ಹಬ್ಬಿತ್ತು. ಈ ಸುದ್ದಿ ಹಾಲಯ್ಯನವರಿಗೆ ಮುಟ್ಟಿತ್ತು. ಅದಕ್ಕಾಗಿ ಶ್ರೀ ಸಿದ್ಧಾರೂಢರಲ್ಲಿ ಪಂಚದಶಿ, ಪರಮಾನುಭವ ಬೋಧೆ, ವಿಚಾರ ಸಾಗರ, ಮುಂತಾದ ತಾತ್ವಿಕ ಗ್ರಂಥಗಳ ಅಧ್ಯಯನವನ್ನು ಪ್ರಾರಂಭಿಸಿದರು. ನಿತ್ಯವೂ ಹುಬ್ಬಳ್ಳಿಯ ರುದ್ರಾಕ್ಷಿಮಠದಲ್ಲಿ ಲಿಂಗಾರ್ಚನೆ ಅರ್ಪಿತ

ಮಾಡಿಕೊಂಡು, ಸಿದ್ಧಾರೂಢಮಠಕ್ಕೆ ಕೇವಲ ಪಾಠಪ್ರವಚನಕ್ಕೆ ಬರುತ್ತಿದ್ದರು. ಇವರ ಕುಶಾಗ್ರ ಬುದ್ಧಿಗೆ ಸಿದ್ಧಾರೂಢರು ಮೆಚ್ಚಿಕೊಂಡಿದ್ದರು. ಆದರೆ ಹಾಲಯ್ಯ ನವರಿಗೆ, ಮಠದಲ್ಲಿ ನಡೆಯುತ್ತಿರುವ ಬಾಹ್ಯಾ ದ್ವೈತದ ಪಾಠವು ಹಿಡಿಸಲಿಲ್ಲ. ಮತ್ತೆ ತಲೆಯಲ್ಲಿ ಹಲವು ಬಗೆಯ ಸಂಶಯ ವಿಚಾರಗಳು ಸುಳಿಯ ಹತ್ತಿದವು. ಆರೂಢರಂತೆ ಇಷ್ಟಲಿಂಗ ಪರಿತ್ಯಾಗಮಾಡಬೇಕೆ? ಈ ಆಲೋಚನೆಯ ಗುಂಗಿನಲ್ಲಿ ಕುಳಿತು ಚಿಂತಿಸುತ್ತಿರುವಾಗ ಹುಬ್ಬಳ್ಳಿಯ ಎರಡೆತ್ತಿನ ಮಠದ ಶ್ರೀಗಳು ಹಾಲಯ್ಯ ನವರನ್ನು ಕುರಿತು "ನಿನ್ನ ಸಂಶಯ ನಿವಾರಣೆಗಾಗಿ, ಬಳ್ಳಾರಿ ಭಾಗದಲ್ಲಿರುವ ಎಮ್ಮಿಗನೂರು ಜಡೆಸಿದ್ಧರ ಹತ್ತಿರ ಹೋಗು. ಅವರನ್ನು ಸಂದರ್ಶಿಸಿದ ನೀನು ಇಷ್ಟ ಲಿಂಗವನ್ನು ಬಿಡಬೇಡ" ಎಂದು ಹೇಳಿ ಕಳಿಸಿದರು. ಅದೇ ಪ್ರಕಾರ ಕಾಲು ನಡಿಗೆಯಿಂದ ಎಮ್ಮಿಗನೂರಿಗೆ ಹಾಲಯ್ಯನವರು ಹೋದರು. ಅನಿತರೊಳಗೆ ಜಡೆ ಸಿದ್ಧರು ಇವರ ವ್ಯಕ್ತಿತ್ವ ಪ್ರತಿಭೆಯನ್ನು ಅಂತಶ್ಶಕ್ತಿಯಿಂದಲೇ ಅರಿತುಕೊಂಡು, ಇವರು ಇಲ್ಲಿಗೆ ಬರುವ ಮುನ್ಸೂಚನೆಯನ್ನೂ ಅಲ್ಲಿಯ ಭಕ್ತರಿಗೆ ಮೊದಲೇ ತಿಳಿಸಿಟ್ಟಿದ್ದರು. ಹಾಲಯ್ಯನವರ ಲಿಂಗನಿಷ್ಠೆಯನ್ನು ಅರಿತುಕೊಂಡು, ತಾವೂ ಸಹ, ಅವರಂತೆ ಲಿಂಗಾಕಾರದ ಸಜ್ಜಿಕೆಯನ್ನು ಮಾಡಿಕೊಂಡು, ಕೊರಳಲ್ಲಿ ಕಟ್ಟಿ ಕೊಂಡು ಅವರು ಬರುವದನ್ನು ಬಯಸುತ್ತಿರುವಷ್ಟರಲ್ಲಿಯೇ ಹಾಲಯ್ಯನವರು ಜಡೆಸಿದ್ಧರಲ್ಲಿಗೆ ಆಗಮಿಸಿದರು. ಸಿದ್ಧ ಪುರುಷರಾದ ಜಡೆಸಿದ್ಧರು, ಈ ರೀತಿ ಇವರಿಗಾಗಿ ಮಾಡುತ್ತಾರೆಂದ ಮೇಲೆ, ಹಾಲಯ್ಯನವರು ಎಂತಹ ಅದ್ಭುತ ಶಕ್ತಿ ಸಂಪನ್ನರಿರಬಹುದೆಂದು ತರ್ಕಿಸುತ್ತ ಅಲ್ಲಿಯ ಭಕ್ತರು ಅಚ್ಚರಿಪಟ್ಟರು ಶಿವಯೋಗ ತೇಜಪುಂಜದಂತೆ ಹೊಳೆಯುತ್ತಿದ್ದ, ಧ್ಯಾನಾಸಕ್ತರಾದ, ಕವಿಯ ಶಾಟಿಯನ್ನು ಹೊತ್ತಿದ್ದ ಯುವಕ ಹಾಲಯ್ಯನವರನ್ನು ಜಡೆಸಿದ್ಧರು "ಬನ್ನಿ ಶಿವಯೋಗಿಗಳೇ" ಎಂದು ಅಂತಃಕರಣದಿಂದ ಕರೆದು ಹತ್ತಿರ ಕುಳ್ಳಿರಿಸಿಕೊಂಡರು. ಸ್ವಾಮಿ ವಿವೇಕಾನಂದರು ರಾಮಕೃಷ್ಣ ಪರಮಹಂಸರಿದ್ದಲ್ಲಿಗೆ ಹೋದ ಅನುಭವದಂತೆ ಹಾಲಯ್ಯನವರಿಗೂ ಆಯಿತು. ಜಡೆಸಿದ್ಧರ ಸಹಜಾಚರಣೆ, ಅವರ ಆರೂಢ ಸ್ಥಿತಿ ಸಿದ್ಧಿಯ ಅದ್ಭುತ ಶಕ್ತಿಯನ್ನು ಕಂಡು ಬೆರಗಾದರು. ಹಾಲಯ್ಯನವರು ತಮಗೆ ಸಂಶಯ ಕಂಡ ವಿಚಾರಗಳೆಲ್ಲವನ್ನೂ ಅವರ ಮುಂದಿಟ್ಟು ನಿವಾರಣೆ ಮಾಡಿ ಕೊಳ್ಳುತ್ತಿದ್ದರು. ಹೀಗೆಯೇ ಕೆಲವು ದಿನಗಳು ಗತಿಸಿದ ನಂತರ, ಮತ್ತೆಲ್ಲಿಗೆ ಹೋಗಬೇಕೆಂದು ವಿಚಾರಿಸುತ್ತ, ಹುಬ್ಬಳ್ಳಿಗೆ ಸಿದ್ಧಾರೂಢರ ಹತ್ತಿರ ಹೋದರೆ ಲಿಂಗನಿಷ್ಠೆಯ ಆಚಾರವು ಅಲ್ಲಿ ದೊರಕಲಾರದೆಂದು ಚಿಂತಿಸುತ್ತಿರುವ ಹಾಲಯ್ಯನವ ರನ್ನು ಜಡೆಸಿದ್ಧರು ನೋಡಿ "ಚಿಂತೆಯನ್ನೇಕೆ ಮಾಡುತ್ತೀ? ಎಲ್ಲಿದ್ದರೆಯೂ ಅಲ್ಲಿಗೆ ಹೋದರಾಯ್ತು" ಎಂದು ಮೂರು ನಾಲ್ಕು ಸಲ ಅಂದೊಡನೆಯೇ ಅಲ್ಲಿಂದ

ಹೊರಟು ಹುಬ್ಬಳ್ಳಿಯ ಸಿದ್ಧಾರೂಢರ ಮಠಕ್ಕೆ ಮತ್ತೆ ಬಂದು ಅಧ್ಯಯನವನ್ನು ಪ್ರಾರಂಭಿಸಿದರು. ಬಾಹ್ಯ ಲಿಂಗದ ಅಗತ್ಯವಿಲ್ಲವೆಂಬುದನ್ನು ಬೋಧಿಸುವ ಸಿದ್ಧಾರೂಢರ ತತ್ವವು ಹಾಲಯ್ಯನವರ ಕಿವಿಗೆ ಕಾದ ಕಬ್ಬಿಣ ಸುರಿದಂತೆ ಆಗುತ್ತಿತ್ತು. ಸಿದ್ಧಾರೂಢರು ವೇದಾಂತ ತತ್ತ್ವವನ್ನು ಪ್ರತಿಪಾದಿಸುವುದರಲ್ಲಿ ಮಾತ್ರ ತುಂಬಾ ನಿಷ್ಣಾತರೆಂಬುದನ್ನು ಮೆಚ್ಚಿಕೊಂಡಿದ್ದರು. ಇವರಿಗೆ ಬೇಕಾದುದು ಲಿಂಗಾನುಸಂಧಾನ, ಅದು ಇಲ್ಲದಾಗಿತ್ತು. ನಿಜಗುಣರ ಷಟ್‌ಶಾಸ್ತ್ರಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ, ಆಚರಣೆಯನ್ನು ಪರಿಶುದ್ಧವಾಗಿಟ್ಟುಕೊಂಡ ಗುರುವಿನ ಬಯಕೆಯನ್ನು ಚಾತಕ ಪಕ್ಷಿಯಂತೆ ಹಂಬಲಿಸುತ್ತಿದ್ದರು. ಅವರ ಮನೀಷೆ ಫಲಕಾರಿಯಾಗದೆ ಬಿಟ್ಟೀತೆ? "ಯಾದೃಶೀ ಭಾವನಾಯಸ್ಯ ಸಿದ್ಧಿರ್ಭವತಿ ತಾದೃಶೀ" ಎಂಬಂತೆ ಅವರಲ್ಲಿಗೆ ಘನ ವೈರಾಗ್ಯಶಾಲಿಗಳೂ, ಮಹಾಮಹಿಮರಾದ ಎಳಂದೂರ ಬಸವಲಿಂಗ ಶಿವಯೋಗಿಗಳು ಆಗಮಿಸಿದರು. ಇವರ ನಡೆ-ನುಡಿ ನೋಡಿ ಅಮಿತ ಆನಂದವಾಯಿತು. ಎಳಂದೂರ ಬಸವಲಿಂಗ ಶಿವಯೋಗಿಗಳ ಅಧ್ಯಾತ್ಮಿಕ ಅನುಭವವನ್ನು ಸಿದ್ಧಾರೂಢರು ನೋಡಿ ತುಂಬಾ ಮೆಚ್ಚಿಕೊಂಡರು. ಬಸವಲಿಂಗ ಸ್ವಾಮಿಗಳಿಗೆ ಬರಿ ವಾದ–ವಿವಾದ ಸರಿ ಬರುತ್ತಿದ್ದಿಲ್ಲ. ತತ್ವವು ಕೇವಲ ಮಾತಿನಲ್ಲಿರದೆ ಕೃತಿಯಲ್ಲಿರಬೇಕೆಂಬುದೇ ಎಳಂದೂರು ಸ್ವಾಮಿಗಳವರ ಸಿದ್ಧಾಂತ. ಇವರ ಪಕ್ವ ವಿಚಾರ, ವಿಶಾಲ ಮನೋಭಾವನೆ ಹಾಗೂ ಯೋಗ್ಯ ಶಕ್ತಿ ಇವುಗಳು ಹಾಲಯ್ಯನವರನ್ನು ಆಕರ್ಷಿಸಿದವು. ಯೋಗ್ಯ ಗುರುಗಳು ದೊರೆತಂತಾಯ್ತೆಂದು ಆನಂದಾಶ್ರುಗಳು ಉದುರಿದವು. ಬಹು ದಿನದ ಬಯಕೆ ಈಡೇರಿದಂತಾಯ್ತು ಏನೋ ಒಂದು ಹೊಸ ಬೆಳಕು, ಹೊಸ ಚೇತನ, ಕಂಡಂತಾಯ್ತು. ಮನಸ್ಸು ಅರಳಿ ಘಮಘಮಿಸಲು ಹತ್ತಿತು. ಎಳಂದೂರು ಶಿವಯೋಗಿಗಳ ಸಂಗಡ ಹೋಗಿ, ಅವರ ಸೇವೆ ಮಾಡಿ, ದಿವ್ಯಾನುಭವ ಪಡೆಯುವ ಆಸಕ್ತಿ ಹೆಚ್ಚಾಗಿ ಅವರನ್ನು ತಮ್ಮೊಡನೆ ಬರುವೆನೆಂದು ಕೇಳಿಯೇ ಬಿಟ್ಟರು. ಅದಕ್ಕೆ ಎಳಂದೂರ ಬಸವಲಿಂಗ ಸ್ವಾಮಿಗಳು "ನಮ್ಮ ಸೇವೆ ಬಹು ಕಠಿಣವಾದುದು. ನಮ್ಮ ಪುರಾತನ ಆಚಾರಗಳ ಕಟ್ಟಿನಲ್ಲಿ ನೀನು ಸಿಕ್ಕು ನರಳ ಬೇಕಾದೀತು, ನಮ್ಮಲ್ಲಿ ಶಿಥಿಲಾಚಾರ ನಡೆಯದು" ಎಂದು ಅನ್ನುವಷ್ಟರಲ್ಲಿಯೇ ಹಾಲಯ್ಯನವರು "ಆ ಧಾರ್ಮಿಕ ಕಟ್ಟುಗಳು ಎಷ್ಟೇ ಕಠಿಣವಾಗಿದ್ದರೂ, ಅವೆಲ್ಲವುಗಳನ್ನು ತಪ್ಪದೇ ಆಚರಿಸುತ್ತೇನೆ" ಎಂದು ಅವರ ಸೇವೆಗೆ ಹಾಲಯ್ಯನವರು ಸಿದ್ಧರಾಗಿಯೇ ಬಿಟ್ಟರು. ಅವರ ಜೊತೆಯಲ್ಲಿ ಹೊರಟೇ ಬಿಟ್ಟರು.

ರಾಮಕೃಷ್ಣ ಪರಮಹಂಸರಿದ್ದಲ್ಲಿಗೆ ಸ್ವಾಮಿ ವಿವೇಕಾನಂದರು ಹೋಗಿ ಗುರುವನ್ನು ಪಡೆದರೆ; ಹಾಲಯ್ಯನವರಿದ್ದಲ್ಲಿಗೆ ಮಹಾ ತಪಸ್ವಿ ಎಳಂದೂರು ಬಸವಲಿಂಗ ಸ್ವಾಮಿಗಳು ಹೋಗಿ ಯೋಗ್ಯ ಶಿಷ್ಯನನ್ನು ಪಡೆದುದು, ಶಿಷ್ಯನ ಘನತೆ,

ಗುರು ಶಿಷ್ಯರ ಅವಿನಾಭಾವ ಸಂಬಂಧವು ಎನಿತೆಂಬುದನ್ನು ಎತ್ತಿತೋರಿಸುತ್ತದೆ. ಶಿಷ್ಯನ ಎತ್ತರದ ಜೀವನ ಅರ್ಥವಾಗುತ್ತದೆ. ಹಾಲಯ್ಯನವರು ಗುರುಗಳನ್ನು ಹುಡುಕಲಿಲ್ಲ. ಗುರುಸೇವೆ ಬೇಕೆಂದು ಆಶೆ ಪಟ್ಟೊಡನೆಯೇ ಗುರುಗಳೇ ಇವರಿದ್ದೆಡೆಗೆ ಬಂದು, ಇವರ ವ್ಯಕ್ತಿತ್ವವನ್ನು ಕಂಡು ಹಿಡಿದು, ತಮ್ಮ ಸೇವೆಗೆ ಇಟ್ಟುಕೊಂಡು ಜ್ಞಾನೋಪದೇಶ ಮಾಡಿದರು. ಯೋಗಾಭ್ಯಾಸದ ರಹಸ್ಯವನ್ನು ತಿಳಿಸಿದರು. ಸಾಧನವಿಲ್ಲದೆಂದು ಸಿದ್ಧಿಸಾಧ್ಯವಿಲ್ಲವೆಂದು ಅರುಹಿ ಪೂಜಾಕ್ರಮವನ್ನು ವಿವರಿಸಿದರು. ಶಿವಾನುಭವವನ್ನು ಬೋಧಿಸಿದರು. ಮನೋನಿಗ್ರಹವಾಗುವ ಪರಿಯನ್ನು ಪ್ರಾಣಾಯಾಮ ಮಾಡುವ ಪದ್ಧತಿಯನ್ನು ಹೇಳಿ, ಹಠಯೋಗಕ್ಕಿಂತಲೂ, ಶಿವಯೋಗ ಹೆಚ್ಚಿನದೆಂದು ತಿಳಿಸಿಕೊಟ್ಟರು. ಬಾಹ್ಯ ಶುದ್ಧಿ, ಅಂತರಂಗ ಶುದ್ಧಿ, ಮಾಡಿಕೊಳ್ಳದೆ ಯೋಗದ ಗುರಿಯು ಅರಿವಾಗದು, ಯೋಗ ಅಂದರೆ ಯಾವುದರಲ್ಲಿ ಕೂಡಬೇಕು? ಹೇಗೆ ಕೂಡಬೇಕು? ಶಿವನೊಡನೆ ಸಮರಸವಾಗಿ ಶಿವಸಾನ್ನಿಧ್ಯ ಪಡೆಯಲು ಯಾವ ಶಕ್ತಿ ಆದರ್ಶಗಳನ್ನು ಮುಂದಿಟ್ಟುಕೊಂಡಿರಬೇಕು? ಇವೆಲ್ಲವುಗಳ ಬಗೆಗೆ ತಮ್ಮ ಅನುಭವವನ್ನು ತಂದೆ ಮಕ್ಕಳಿಗೆ ತಿಳಿಸುವಂತೆ ಬೋಧಿಸುತ್ತಿದ್ದರು. ಸದ್ಭಾವ, ಸದ್ಬುದ್ಧಿಗಳ ವೃದ್ಧಿಗೆ ಕ್ರಿಯಾಚರಣೆ ಅತ್ಯಾವಶ್ಯ. ವೀರಶೈವ ಸಿದ್ಧಾಂತದಲ್ಲಿ ಬ್ರಹ್ಮವೂ ನಿರ್ವಿಶೇಷವಾಗಿರದೆ ಸವಿಶೇಷವಾಗಿರುವದು. ಪರಬ್ರಹ್ಮವು ಶಕ್ತಿ ವಿಶಿಷ್ಟವಾದುದರಿಂದ ಸವಿಶೇಷವೆನಿಸಿಕೊಳ್ಳುವದು. ಬ್ರಹ್ಮವು ಸವಿಶೇಷವಾದುದರಿಂದಲೇ ಚರಾಚರಾತ್ಮಕ ಜಗದುತ್ಪತ್ತಿಗೆ ಕಾರಣೀಭೂತವಾಗಿರುವದು. ಶಕ್ತಿ ವಿಶಿಷ್ಟ ಬ್ರಹ್ಮದಿಂದುತ್ಪನ್ನವಾದ ಜಗತ್ತೂ ಕೂಡಾ ಶಕ್ತಿ ವಿಶಿಷ್ಟವಾಗುವದು. ಈ ಜಗತ್ತಿನಲ್ಲಿರತಕ್ಕ ಪ್ರತಿಯೊಂದು ಪದಾರ್ಥವನ್ನು ಪರ್ಯಾಲೋಚಿಸಿದರೆ ಪ್ರತಿಯೊಂದು ಪದಾರ್ಥದಲ್ಲಿಯು ಒಂದೊಂದು ವಿಧವಾದ ಶಕ್ತಿಯಿರುವದಾಗಿ ಕಂಡುಬರುವದು. ಈ ಯೋಗಾನುಷ್ಠಾನ, ಕಾಯಕ, ಜಪ, ಧ್ಯಾನ, ಶಿವಾನುಭವ ಈ ಐದು ವೀರಶೈವ ಪಂಚಯಜ್ಞಗಳೆಂದು ಶಾಸ್ತ್ರದಲ್ಲಿ ನಿರೂಪಿಸಿರುವರು.

ಯಥಾಮತೇಷು ಸರ್ವೇಷು ತುರಿಯತ್ವೇನ ಕಥ್ಯತೇ।
ಸನ್ಯಾಸ ಇತ್ಯಯಂ ದೇವಿ ವೀರಶೈವಸ್ತದಾಶ್ರಮಃ॥

ಅಂದರೆ ಬೇರೆ ಮತದವರ ಅಂತಿಮ ಮೆಟ್ಟಲು ವೀರಶೈವರ ಪ್ರಥಮ ಮೆಟ್ಟಲು ಎಂದು ಆಗಮವು ಉದ್ಘೋಷಿಸಿದೆ.

ವಿಶ್ವಧರ್ಮವನ್ನೊಳಗೊಂಡ ಶಿವಾದ್ವೈತ ಸಿದ್ಧಾಂತವು ಉನ್ನತೋನ್ನತ ಸಿದ್ಧಿಗೆ ಕೊಂಡೊಯ್ಯುವ ಹೆದ್ದಾರಿ. ಅನ್ಯ ಧರ್ಮವನ್ನು ತಿರಸ್ಕರಿಸದೇ, ಸ್ವಧರ್ಮದಲ್ಲಿ ನಿಷ್ಠೆಯಿಟ್ಟು ಪರಿಪಾಲಿಸಬೇಕು. ಶಿವಯೋಗ ರಹಸ್ಯವನ್ನು ಶಿವಯೋಗ

ಸಿದ್ಧಾಂತವನ್ನು ತಿಳಿಯಬಿಚ್ಚಿಸುವವರು ಮೊದಲು ಅಷ್ಟಾವರಣ, ಪಂಚಾಚಾರ, ಹಾಗೂ ಷಟ್‌ಸ್ಥಲಗಳ ಹೊಂದಾಣಿಕೆಯನ್ನು ಕಂಡುಕೊಳ್ಳಬೇಕು. ಶರಣ ಜೀವಿಗೆ ಅಷ್ಟಾವರಣವು ಅಂಗವಾದರೆ ಪಂಚಾಚಾರ ಹಾಗೂ ಷಟ್‌ಸ್ಥಲಗಳು ಪ್ರಾಣ ಮತ್ತು ಆತ್ಮವಾಗಿವೆ. ಅಂಗ ಕ್ರಿಯೆಗಳೆಲ್ಲವೂ ಲಿಂಗ ಕ್ರಿಯೆಗಳಾಗುತ್ತವೆಂಬುವ ವೀರಶೈವ ಸಿದ್ಧಾಂತವನ್ನು ಅಲ್ಲಮ ಪ್ರಭುದೇವರ, ಮಹಾತ್ಮಾ ಬಸವಣ್ಣನವರ, ಚೆನ್ನಬಸವಣ್ಣನವರ, ವಚನಗಳ ಉದಾಹರಣೆ ಕೊಟ್ಟು ತಿಳಿಸಿ ಹೇಳಿ, ಶೀಲ, ಶುಚಿ, ಸಂಸ್ಕೃತಿಯ ಬಗೆಗೆ ಒತ್ತಿ ಒತ್ತಿ ಚಿತ್ರಿಸಿದರು. ಆತ್ಮನಿಗೆ ಅರುಹಿನ ಬೆಳಗು ಒಂದೆ ಸಾಲದು. ಬಾಹ್ಯ ಪ್ರಪಂಚದ ಪರಿಶುದ್ಧತೆಯೂ ಅತ್ಯಗತ್ಯ ನಿತ್ಯವೂ ಮಾಡುವ ಕ್ರಿಯಾಚರಣೆಯ ವಿವರಣೆಯನ್ನು ನೀಡಿದರು.

ಹದವಾದ ಭೂಮಿಗೆ ಸಮಯಕ್ಕೆ ಸರಿಯಾಗಿ ಬೀಜವನ್ನು ಬಿತ್ತಿದಂತಾಯ್ತು. ಜ್ಞಾನಪಿಪಾಸುಗಳಾದ ಹಾಲಯ್ಯನವರು ಎಳಂದೂರ ಬಸವಲಿಂಗ ಶಿವಯೋಗಿಗಳ ತತ್ವಬೋಧಾಮೃತವನ್ನು ಪಾನಮಾಡಿ ಪರಮಾನಂದಭರಿತರಾದರು. ಬಾಲ್ಯದಿಂದಲೂ ಸಹಜವಾಗಿ ಬೆಳೆದು ಬಂದ ವೈರಾಗ್ಯ, ತ್ಯಾಗ ಬುದ್ಧಿಗಳು ಅಭಿವೃದ್ಧಿಗೊಂಡು ವಿಕಸಿತವಾದವು. ಉತ್ತಮ ಶಿಷ್ಯನನ್ನು ಪಡೆದುದಕ್ಕೆ ಎಳಂದೂರ ಶ್ರೀಗಳಿಗೆ ಹಿಡಿಸಲಾರದಷ್ಟು ಹಿಗ್ಗು. ಗುರುಶಿಷ್ಯರ ಸಂಬಂಧವು ಹಾಲು ಸಕ್ಕರೆ ಬೆರೆತಂತಾಯ್ತು ಹಾಲಯ್ಯನವರ ಅಹೇತುಕ ಭಕ್ತಿ, ಸುತೀಕ್ಷ್ಣ ಬುದ್ಧಿ, ಗಂಭೀರ ಸಿದ್ಧಿಗಳು ಸ್ವಾಮಿಗಳವರನ್ನು ಆಕರ್ಷಿಸಿದವು. ಬಸವಲಿಂಗ ಸ್ವಾಮಿಗಳು ಹಾಲಯ್ಯನವರನ್ನು ಹಳ್ಳಿ ಹಳ್ಳಿಗೆ ಕರೆದುಕೊಂಡು ಹೋಗಿ, ಅಲ್ಲಿಯ ವಾತಾವರಣವನ್ನು ತೋರಿಸಿ ಹಳ್ಳಿಗಳನ್ನು ಒಳ್ಳೇ ಸಂಸ್ಕೃತಿಯತ್ತ ಒಯ್ಯುವ ಬಗೆಯನ್ನು ಬೋಧಿಸುತ್ತಿದ್ದರು. ಹುಟ್ಟಿದ ಮೇಲೆ ಕೇವಲ ವೈಯಕ್ತಿಕ ಆಧ್ಯಾತ್ಮಿಕ ಶಕ್ತಿಯನ್ನು ಪಡೆಯದೆ ಸಾಮಾಜಿಕ ಸೇವೆಗಾಗಿ ಅದನ್ನು ಬಳಸಿ ಜನ ಜಾಗೃತಿ ಮಾಡಬೇಕೆಂದು ಹೇಳಿ, ಇದಕ್ಕೆ ಮೊದಲು ಅನುಷ್ಠಾನವನ್ನು ಬಲಿಸಿಕೊಳ್ಳಬೇಕೆಂದು ಕಳಕಳಿಯಿಂದ ಹೇಳುತ್ತಿದ್ದರು. ಹೀಗೆಯೇ ಕೆಲವು ವರ್ಷಗಳು ಗತಿಸಿದವು. ಹಾಲಯ್ಯನವರ ಆಧ್ಯಾತ್ಮಿಕ ಶಕ್ತಿಯ ಪ್ರಭಾವ ಬೆಳೆಯುತ್ತಿರುವಷ್ಟರಲ್ಲಿಯೇ ಎಳಂದೂರ ಬಸವಲಿಂಗ ಸ್ವಾಮಿಗಳಿಗೆ ಅಸ್ವಸ್ಥತೆಯುಂಟಾಯ್ತು. ಪ್ರವಾಸ ಪ್ರಯಾಸವೆನಿಸಿತು. ಬಕ್ತೋದ್ಧಾರ ಮಾಡುತ್ತ ಗುರು-ಶಿಷ್ಯರೀರ್ವರೂ ಧಾರವಾಡ ಜಿಲ್ಲೆಯ ಅಣ್ಣಿಗೇರಿಗೆ ಬಂದು ತಲುಪಿದರು. ಅವರಿಗೆ ಬಂದ ಜ್ವರಬಾಧೆಯನ್ನು ಕಳೆವ ಪ್ರಯತ್ನಗಳೆಲ್ಲವೂ ನಿಷ್ಫಲವಾದವು. ಕೊನೆಯ ಗಳಿಗೆಯಲ್ಲಿ ಬಸವಲಿಂಗ ಶಿವಯೋಗಿಗಳು ಹಾಲಯ್ಯನವರನ್ನು ಹತ್ತಿರ ಕುಳ್ಳಿರಿಸಿಕೊಂಡು "ಹಾಲಯ್ಯ ನಿನ್ನಿಂದ ಸಮಾಜವು ಬೆಳಗಬೇಕಾಗಿದೆ. ಸಮಾಜದಲ್ಲಿ ಒಕ್ಕಟ್ಟಿಲ್ಲದೆ ಶಿಕ್ಷಾಟ ಹೆಚ್ಚಾಗಿದೆ. ಅನಿತ್ಯವಾದ ಸಂಸಾರದ ಸುಖ ಲಾಲಸೆಗಳಿಗಾಗಿ ಅತ್ತಿತ್ತ ಅಲೆದಾಡಿ ಜನರು ಅಜ್ಞಾನಾಂಧಕಾರದಲ್ಲಿ

ಮುಳುಗಿದ್ದಾರೆ. ಧರ್ಮ ಶಕ್ತಿಯು ಕುಗ್ಗಿ ಹೋಗಿದೆ. ಅಧರ್ಮವು ತಾಂಡವಾಡುತ್ತಿದೆ. ಯೋಗ ಭೂಮಿಯು ಭೋಗ ಭೂಮಿಯಾಗಿದೆ. ದುರ್ಭೇದ್ಯವಾದ ಮಾಯಾ ಬಂಧನಗಳ ಕಾಡಾರಣ್ಯವನ್ನು ಕಡಿದುರುಳಿಸಿ, ಅರಿವಿನ ಬೆಳಕನ್ನು ಮೂಡಿಸಲು ನಿನ್ನ ಆತ್ಮಶಕ್ತಿಯು ದಿವ್ಯ ಪ್ರಭೆಯು ಈಗ ಸಮಾಜಕ್ಕೆ ಬೇಕಾಗಿದೆ. ಅದಕ್ಕಾಗಿ ನನ್ನ ಎಲ್ಲ ಆಧ್ಯಾತ್ಮಿಕ ತಪಃಶಕ್ತಿಯನ್ನು ಸಮಾಜದ ಏಳ್ಗೆಗಾಗಿ ನಿನ್ನ ಹೃದಯಮಂದಿರದಲ್ಲಿ ಧಾರೆಯೆರೆದಿದ್ದೇನೆ. ಓ ಕಂದಾ, ಮಲಗಿರುವ ಸಮಾಜವನ್ನು ಎಚ್ಚರಿಸು, ಎಚ್ಚರಿಸು. ಸಮಾಜದ ಮಕ್ಕಳೇ ನಿನ್ನ ಮಕ್ಕಳು" ಎಂದೆನ್ನುತ್ತ ಬಸವಲಿಂಗ ಶಿವಯೋಗಿಗಳು ಉರಿ-ಕರ್ಪೂರ ಸಂಯೋಗದಂತೆ ಲಿಂಗದೊಳಗಾದರು. ಆಧ್ಯಾತ್ಮಜ್ಯೋತಿ ನಂದಿತು.

ಆತ್ಮಾನುಸಂಧಾನ

ಪರಮ ತಪಸ್ವಿ ಎಳಂದೂರು ಬಸವಲಿಂಗ ಶಿವಯೋಗಿಗಳನ್ನು ಕಳೆದುಕೊಂಡ ಹಾಲಯ್ಯನವರು ಶೋಕಸಾಗರದಲ್ಲಿ ಮುಳುಗಿದರು. ಅವರ ಕಣ್ಣಿಗೆ ಕಾರ್ಮೋಡ ಕವಿದಂತಾಯಿತು. ದಿಕ್ಕು ತೋಚದಂತಾಯಿತು. ಅಧ್ಯಾತ್ಮಗಗನದಲ್ಲಿ ಅವರ ಮನಸ್ಸು ಹಾರಾಡುತ್ತಿರುವಾಗ, ಗುರುಗಳು ಕಣ್ಮರೆಯಾಗಿದ್ದು ಮತ್ತಷ್ಟು ದುಃಖಕ್ಕೀಡು ಮಾಡಿತ್ತು. ಆದರೆ, ಗುರುಗಳು ನೀಡಿದ ಕೊನೆಯ ಸಂದೇಶ ಹಾಲಯ್ಯನವರ ಹೃದಯದಲ್ಲಿ ಚಿರಮುದ್ರಿತವಾಗಿತ್ತು. ತಮ್ಮ ಗುರುಗಳ ಆ ಅಂತರ್ವಾಣಿಯನ್ನು ಅನುಷ್ಠಾನಕ್ಕೆ ತರಬೇಕೆಂಬುವ ಹಂಬಲವು ಅವರದಾಗಿತ್ತು. ಕೆಲವು ದಿನಗಳ ನಂತರ ಹಾಲಯ್ಯನವರು ಒಂದು ನಿರ್ಧಾರಕ್ಕೆ ಬಂದರು. ಸಮಾಜದಲ್ಲಿ ನವಚೈತನ್ಯವನ್ನು ಹುಟ್ಟಿಸಿ ಜನ ಜಾಗೃತಿ ಮಾಡಬೇಕಾದರೆ ಮೊದಲು ಆತ್ಮಶಕ್ತಿಯನ್ನು ಪಡೆದುಕೊಳ್ಳಬೇಕು. ಸಮಾಜ ಸೇವೆಗೆ ಆತ್ಮಶಕ್ತಿಯೇ ಭದ್ರಬುನಾದಿ. ಅಧ್ಯಾತ್ಮ ಶಕ್ತಿಯಿಲ್ಲದೆ ಯಾವ ಕಾರ್ಯಗಳೂ ಸಫಲವಾಗಲಾರವು. ಅಧ್ಯಾತ್ಮಶಕ್ತಿಯ ಬಲವೇ ಬಾಳ್-ಬೆಳಕಿಗೆ ದಾರಿದೀಪ. ಈ ಜಗತ್ತು ಆತ್ಮದ ಸಾಧನ ರಂಗ. ಇಲ್ಲಿ ಪ್ರತಿಯೊಬ್ಬರೂ ಲೌಕಿಕ ವಿದ್ಯೆ, ಅಧ್ಯಾತ್ಮ ವಿದ್ಯೆ ಎರಡನ್ನೂ ಸಾಧಿಸಬೇಕಾಗುತ್ತದೆ. ಇವು ಪರಸ್ಪರ ವಿರುದ್ಧವಾಗದಂತೆ ಸಮನ್ವಯ ದೃಷ್ಟಿಯಿಂದ ಎರಡನ್ನೂ ಸಾಗಿಸಿಕೊಂಡು ಅದರಲ್ಲಿ ದಿವ್ಯದೃಷ್ಟಿಯನ್ನು ಕಾಣತಕ್ಕವರೇ ಸುಖವನ್ನು ಪಡೆಯುತ್ತಾರೆ. ಅಂತಸ್ಸತ್ವ ಚೇತನಗೊಂಡು ಅರುಹಿನ ಕಣ್ಣು ತೆರೆದರೆ ಅಧ್ಯಾತ್ಮ ಶಕ್ತಿಯು ಸಾಧ್ಯ. ಅಂತರ್‌ಜ್ಞಾನ ಬೆಳೆದು ಸ್ವಾವಲಂಬನ ಜೀವನವನ್ನು ಸಾಗಿಸುವ ಹೊಣೆ ಹೊತ್ತುಕೊಳ್ಳುವ ಶಕ್ತಿ ಸಂಪನ್ನರಾದರೆ ಗುರಿಸಾಧಿಸಿದಂತಾಗುವದು. ಅಂದರೆ ಆತ್ಮಶ್ರೀ ಸಮನ್ವಿತರಾಗಬೇಕಾಗುತ್ತದೆ.

ಶರೀರ ಸ್ವಚ್ಛತೆಗೆ ಮಣ್ಣು ನೀರುಗಳು ಸಾಧನವೇ ಹೊರತು ಮುಖ್ಯೋಪಾಯಗಳಲ್ಲ. ಸದ್ಗುಣ ಹಾಗೂ ಒಳ್ಳೇ ಸ್ವಭಾವಗಳಿಂದ ಜ್ಞಾನೇಂದ್ರಿಯ ಮತ್ತು ಅಂತಃಕರಣಗಳನ್ನು ತೊಳೆಯುವದೇ ಮಹಾಶೀಲ. ಪ್ರವೃತ್ತಿಯನ್ನು ತೊರೆದು ಸದ್‌ವೃತ್ತಿಯನ್ನು ಪಡೆಯುವುದೇ ಶೀಲಾಚರಣೆಯ ಮುಖ್ಯ ಗುರಿ. ಶೀಲದ ಆ ಮೂಲಾಗ್ರವನ್ನು ಅರಿತು ಕಲ್ಪನೆಯ ದವಡೆಯಲ್ಲಿ ಸಿಲುಕಿರುವ ಜ್ಞಾನಾನ್ನವನ್ನು ಅರಗಿಸಿಕೊಂಡು, ಮೈಗೆ ಹಿಡಿಸಿಕೊಂಡು, ಅನುಭವಗಳನ್ನು ವಿಸ್ತಾರಗೊಳಿಸಿ, ಹೊರಗಿನ ಆಡಂಬರದ ಮನರಂಜನೆಗಳನ್ನು ತ್ಯಾಗ ಮಾಡಿ ಅಧ್ಯಾತ್ಮ ತಪೋವನದಲ್ಲಿ ಆತ್ಮಶಕ್ತಿಯನ್ನು ನಿರಂತರ ಪಡೆದು ಆತ್ಮಾನುಸಂಧಾನಮಾಡಿದರೆ ಅಂತಃಶಕ್ತಿಯು ನಿಚ್ಚಳಿಸುವದು. ಎಂತಹ ಕಠಿಣ ಪರಿಸ್ಥಿತಿಯಲ್ಲಿಯೂ ಮನಸ್ಸನ್ನು ಕಲುಷಿತಗೊಳಿಸದ

ಏಕಾಗ್ರದಿಂದ ಶ್ರದ್ಧೆ ಭಕ್ತಿಯಿಂದ ನಿಷ್ಠೆಯಿಂದ ಗುರಿಮುಟ್ಟುವತನಕ ಸಾಧಿಸುವವೇ ನಿಜವಾದ ತಪಸ್ಸು.

ಹಾಲಯ್ಯನವರು ಈ ಬಗೆಯ ವಿಚಾರವನ್ನು ಮನಸ್ಸಿನಲ್ಲಿ ತಂದು ಆತ್ಮಾನು ಸಂಧಾನಕ್ಕಾಗಿ ಎತ್ತ ಹೋಗಬೇಕೆಂಬುವ ವಿಚಾರದಲ್ಲಿ ಮಗ್ನರಾದರು. ಮನಸ್ಸಿನಲ್ಲಿ ಜಡತನವನ್ನು ತಾರದೇ ಧೈರ್ಯವನ್ನು ತಂದುಕೊಂಡು ಷಟ್‌ಶಾಸ್ತ್ರವನ್ನು ರಚಿಸಿದ ನಿಜಗುಣ ಶಿವಯೋಗಿಗಳ ತಪೋಭೂಮಿಗೆ ಹೋರಡಬೇಕೆಂದು ನಿರ್ಧರಿಸಿ, ಶಂಭು ಲಿಂಗನ ಬೆಟ್ಟಕ್ಕೆ ಪಾದಯಾತ್ರೆಯಿಂದ ನಿರ್ಗಮಿಸಿದರು. ಬೆಟ್ಟದ ನಿಸರ್ಗ ಸೌಂದರ್ಯ, ಶಾಂತವಾತಾವರಣ ಹಾಗೂ ಅಲ್ಲಿಯ ಗುಹೆಗಳನ್ನು ನೋಡಿ ಹಾಲಯ್ಯನವರು ಆನಂದ ಭರಿತರಾದರು. ಈ ನಿರ್ಜನ ಪ್ರದೇಶವು ಗುರೂಪದೇಶದಂತೆ ನಡೆಯಲು ಆತ್ಮಾನುಸಂಧಾನಕ್ಕೆ ಯೋಗ್ಯವಾದುದೆಂದು ಬಗೆದು ತಪಸ್ಸನ್ನಾಚರಿಸಲು ಪ್ರಾರಂಭಿಸಿ ದರು. ಹಾಲಯ್ಯನವರ ತಪಸ್ಸು ಆದರ್ಶವಾದುದು ಅನುಕರಣೀಯವಾದುದು. ನೇತ್ರದಾಟವನ್ನು ನಿಲ್ಲಿಸಿದರು. ಕಣ್ಣಿನ ಬೇಕನ್ನು ಎದೆಯ ಬೆಳಕನ್ನಾಗಿ ಮಾಡಿ ಕೊಂಡರು. ನಿತ್ಯ ನಿಯಮಾನುಷ್ಠಾನಗಳಲ್ಲಿ ತಲ್ಲೀನರಾದರು. ಜಪಧ್ಯಾನದಲ್ಲಿ ತೊಡಗಿದರು. ಗುರುವಿನ ಪವಿತ್ರ ಪ್ರೇಮವನ್ನು ಸ್ಮೃತಿಯ ತೊಟ್ಟಿಲಲ್ಲಿಟ್ಟುಕೊಂಡು ಸಾಧನೆ ಮಾಡಲಣಿಯಾದರು. ಭಿಕ್ಷೆಯಿಂದ ಬಂದ ಪದಾರ್ಥಗಳಿಂದಲೇ ಅವರ ಜೀವನ ನಿರ್ವಹಣೆ. ಕಲ್ಲುಮುಳ್ಳುಗಳೆನ್ನದೆ, ಹಗಲು ರಾತ್ರಿಗಳೆನ್ನದೆ, ತಮ್ಮ ಆಚಾರ ವಿಚಾರಕ್ಕೆ ಏನೇನೂ ಕುಂದು ತಂದುಕೊಳ್ಳದಂತೆ ಸ್ವಯಂಪಾಕಿಗಳಾಗಿ ಜೀವನ ಸಾಗಿಸುತ್ತಿದ್ದರು. ಕಷ್ಟ ಪರಂಪರೆಯ ದೊಡ್ಡ ದೊಡ್ಡ ಬಂಡೆಗಳನ್ನು ಲೆಕ್ಕಿಸದೆ ಧೈರ್ಯದಿಂದ ಮುಂದೆ ಸಾಗುತ್ತಿದ್ದರು.

ಸಾಧಕಾವಸ್ಥೆಯಲ್ಲಿ ಯಾರು ಜ್ಞಾನ ಭಕ್ತಿ ವೈರಾಗ್ಯಗಳಲ್ಲಿ ಜಯಶೀಲರಾಗಿ, ಮುತ್ತಿದ ಅಜ್ಞಾನ ಕತ್ತಲೆಯನ್ನು ದೂಡಿ ಅಖಂಡವಾದ ಆತ್ಮಶಕ್ತಿಯನ್ನು ಪಡೆದು ಲಿಂಗಪೂಜೆಯಲ್ಲಿ ತಲ್ಲೀನರಾಗುವರೋ ಅವರ ಜೀವನವು ಸಾರ್ಥಕವಾಗುವದಲ್ಲದೇ ಅವರಿಂದ ಸಮಾಜಕ್ಕೆ ಕಲ್ಯಾಣವುಂಟಾಗುವದು. "ಸಾಧನೆಯೇ ಚೇತನದ ಚಿಸ್ಲೆ" ಸಾಧನೆ ಬಲಿತು ಸಿದ್ಧಿಯತ್ತ ಸಾಗಿ ಪೂರ್ಣತೆಯನ್ನು ಪಡೆಯುವದೇ ಆಧ್ಯಾತ್ಮಿಕ ಜೀವನದ ಪರಮ ಗುರಿ. ಪವಿತ್ರ ಸಾಧಕ ಜೀವನವನ್ನು ಸಾಗಿಸುತ್ತಿದ್ದ ಹಾಲಯ್ಯ ನವರಿಗೆ ಹಲವು ರೀತಿಯ ಸಂಶಯದ ಬಿರುಗಾಳಿ ಬೀಸಿದಾಗ ನಿಜಗುಣರ ಷಟ್‌ಶಾಸ್ತ್ರ ಗಳನ್ನು ಓದುವರು. ತಮ್ಮ ಸಂಶಯವನ್ನು ನಿವಾರಣೆ ಮಾಡಿಕೊಳ್ಳುವರು. ಪರಿ ಪರಿಯಾಗಿ ಪರಮಾತ್ಮನನ್ನು ಪ್ರಾರ್ಥಿಸುವರು. ಚಿತ್ತವು ಚಂಚಲವಾಗದಂತೆ ಶಿವ ನತ್ತ ನಿರಂತರವೂ ನಿಲ್ಲಿಸುವಂತೆ ಕರುಣಿಸೆಂದು ಮೊರೆಯಿಡುವರು:

"ಬೇಡುವೆನಭವ! ನಿಮ್ಮನುಭವ ಭವದೊಳು
ಮಾಡೆನಗೊಲಿದು ಸುಗುಣ ಸಂತತಿಯನಿಂತು

ಎದರದಸಿದ ವೇಳೆಯೊಳು ಧೈರ್ಯವನ್ನು, ಹಿರಿ–
ವಡೆದು ಜೀವಿಸುವಡೆಯೊಳು ವಿನಯವನು
ಕಡುಜವ್ವನದೊಳು ವಿಕೃತಿತೋರದಿಹುದನು,
ಪಿಡಿದ ನೇಮವನೆಡೆವಿಡದತಿ ಛಲವನು

ಅಸುವಳಿಯಲು ದೇಹಿಯೆನಲೊಲ್ಲದಘಟನು,
ಹುಸಿಯನೆಲ್ಲಿಯು ನುಡಿಯದ ಸತ್ಯವಿದನು,
ಮುಸುಳಿಸದಿಹ ಪುಣ್ಯಮಯ ಕೀರ್ತಿಯನು, ಶಾಂತ–
ರೊಸೆದಹುದೆಂದು ಬಣ್ಣಿಸುವ ವರ್ತನೆಯನು

ವಿತರಣದೊಡನೆ ಭೋಗಿಸುವರ್ಥದೊದವನು,
ಹಿತವಚನವೆ ತೊಡವೆನಿಪ ದಾನವನು,
ಶ್ರುತಿ ಬೋಧನೆಯೊಳು ಪರತಿಯಿಲ್ಲದರಿವನು
ನುತಿವೆತ್ತು ಕೈಸಾರುತಿಹ ಮನೋರಥವನು

ಕೋಪವಂಟದ ತಾಪವನು ಪರವಧುವಿನ
ರೂಪುಗಂಡೆಳಸದ ಕರಣವಿಜಯವನು,
ತಾಪವಡರಿ ಕೆಡಿಸದ ಸಾರಸುಖವನು.

ಕಾಪಟ್ಯವಿಲ್ಲದಾಶ್ರಮವೆ ಧರ್ಮರತಿಯನು
ಧರೆಯೊಳತ್ಯಧಿಕವೆನಿಪ ಶಾಂತಿಮತವನು,
ಕರುಣವಿದ್ಯೆಗಳುಳ್ಳ ಗುರುಭಜನೆಯನು
ಪರತರ ಮುಕುತಿದೋರುವ ಶಾಸ್ತ್ರವನು, ಕಂತು
ಹರ ಶಂಭುಲಿಂಗ ನಿಮ್ಮಡಿಯ ಭಕ್ತಿಯನು

ನಿಜಗುಣವನ್ನು ನಿಡುವ ನಿಜಗುಣರ ಈ ಪದ್ಯವನ್ನು ಮತ್ತೆ ಮತ್ತೆ ಹಾಲಯ್ಯನವರು ಹಾಡುವರು; ಬೇಡುವರು, ಮನಸ್ಸಿಗೆ ಶಾಂತಿಯನ್ನು ತಂದು ಕೊಳ್ಳುವರು. ಮಹಾತ್ಮಾ ಬಸವಣ್ಣನವರ ವಚನವನ್ನು ಕೈಗೆತ್ತಿಕೊಂಡು "ಅತ್ತ ಇತ್ತ ಹೋಗದಂತೆ ಹೆಳವನ ಮಾಡಯ್ಯ ತಂದೆ! ಸುತ್ತು ಸುಳಿದು ನೋಡದಂತೆ ಅಂಧಕನ ಮಾಡಯ್ಯ ತಂದೆ!" ಎಂದು ಪ್ರಾರ್ಥಿಸಿ "ನಾನೊಂದು ನೆನೆದೊಡೆ ತಾನೊಂದು ನೆನೆವುದು. ನಾನಿತ್ತಲೆಳದೊಡೆ ತಾನತ್ತ ಲೆಳೆವುದು. ತಾ ಬೇರೆ ಎನ್ನನಳಲಿಸಿ ಕಾಡಿತ್ತು. ತಾ ಬೇರೆ ಎನ್ನ ಬಳಲಿಸಿ ಕಾಡಿತ್ತು...." ಎಂದು ಮಾಯೆಯನ್ನು ದೂಷಿಸುವರು. ಮರಗುವರು, ಕೊರಗುವರು. ಭಾವಶುದ್ಧಿಯನ್ನು ನೀಡೆಂದು ಕೂಡಲಸಂಗಮನಾಥನನ್ನು ಮೊರೆಯಿಡುವರು. ಹೃದಯ ಭೂಮಿಯಲ್ಲಿ ಸದ್ಗುಣ ಬೀಜಗಳನ್ನು ಬಿತ್ತಿ ಭಕ್ತಿ ಜಲಧಿಯಲ್ಲಿ ಮುಳುಗಿಸೆಂದು ಕಳಕಳಿಯಿಂದ ಕೇಳುವರು

ಕಣ್ಣೀರು ಸುರಿಸುವರು. ನಿಜಗುಣ ಶಿವಯೋಗಿಗಳು ಶಂಭುಲಿಂಗನನ್ನು, ಸ್ವಾಮಿ ವಿವೇಕಾನಂದರು ರಾಮಕೃಷ್ಣ ಪರಮಹಂಸರನ್ನು ನೆನೆಯುವಂತೆ ಹಾಲಯ್ಯನವರು ಗುರುಗಳಾದ ಬಸವಲಿಂಗ ಸ್ವಾಮಿಗಳವರನ್ನು ಸ್ಮರಿಸುವರು. "ನಿನ್ನ ಆಧ್ಯಾತ್ಮಿಕ ಸಂಪತ್ತನ್ನು ಸಂಪಾದಿಸುವ ಶಕ್ತಿಯನ್ನು ಆಶೀರ್ವದಿಸಿ ಉದ್ಧರಿಸು, ಆತ್ಮಜ್ಯೋತಿಯನ್ನು ಬೆಳಗಿಸು" ಎಂದು ಪ್ರಾರ್ಥನೆಗೈಯುವರು. ಭಾವಪರವಶರಾಗುವರು. ಮತ್ತೆ ಎಚ್ಚೆತ್ತು ವೀರಶೈವ ಸಿದ್ಧಾಂತದ ಹಲವು ಗ್ರಂಥಗಳನ್ನು ಓದುವರು. ಮನನ ಮಾಡಿಕೊಳ್ಳುವರು. ಯೋಗಸಾಧನೆ ಮಾಡುವರು. ಎಲ್ಲ ಯೋಗಗಳಲ್ಲಿ ಶಿವಯೋಗವೇ ಶ್ರೇಷ್ಠವೆಂದು ತಿಳಿದು ಶಿವಯೋಗದಲ್ಲಿ ತನ್ಮಯರಾಗುವರು. "ನಾನೆಂಬ ಜೀವಭಾವ, ನೀನೆಂಬ ಶಿವಭಾವ ಇವೆರಡೂ ಇಲ್ಲದ ಶೂನ್ಯ ಸ್ಥಿತಿಯನ್ನು ಸಂಪಾದಿಸುವದೇ ನಿಜವಾದ ಯೋಗ. ಇದುವೇ ಶಿವಯೋಗ" ಈ ಶಿವಭಾವವನ್ನು ಒಲಿಸಲು ಬ್ರಾಹ್ಮಿ ಮುಹೂರ್ತದಲ್ಲಿ ಎದ್ದು ತದೇಕಚಿತ್ತದಿಂದ ಶಿವಧ್ಯಾನದಲ್ಲಿ ನಿರತರಾಗುವರು. ಲಿಂಗಪೂಜೆ ಮಾಡುತ್ತ ಹಾಲಯ್ಯನವರ ಬಾಹ್ಯಸ್ಮೃತಿಯೇ ತಪ್ಪಿಹೋಗುತ್ತಿತ್ತು. ಸಾಧನ ಸಿದ್ಧಿಗಳ ಶಕ್ತಿಯಿಂದ ಅವರು ತೇಜಸ್ವಿಯಾಗಿ ಹೊಳೆಯುತ್ತಿದ್ದರು. ಸ್ವಾಮಿ ವಿವೇಕಾನಂದರು ಧ್ಯಾನಾಸಕ್ತರಾದಾಗ ನಿರ್ವಿಕಲ್ಪ ಸಮಾಧಿಯು ಹತ್ತುವಂತೆ, ಹಾಲಯ್ಯನವರಿಗೂ ಆ ಸ್ಥಿತಿಯು ಬಂದು ಎಚ್ಚರ ತಪ್ಪಿ ಅಂತರ್ಮುಖಿಗಳಾಗಿ ಬಿಡುತ್ತಿದ್ದರು. ಅದರಲ್ಲಿ ಒಳ ಹೊರಗೂ ಲಿಂಗಪ್ರಭೆಯೇ ವ್ಯಾಪಿಸಿತ್ತು.

"ಕಂಗಳ ನೋಟ ಹೃದಯ ಜ್ಞಾನ ಮನದೊಳಗೆ ಮಾತನಾಡುತಿರ್ದೆನಯ್ಯ, ಜೇನಮಳೆಗಳು ಕರೆದವು. ಅಮೃತ ಮಳೆಗಳು ಸುರಿದವು. ಕೂಡಲ ಚೆನ್ನಸಂಗನೆಂಬ ರಸಸಾಗರದೊಳಗೋಲಾಡುತಿರ್ದೆನಯ್ಯ" ಎಂದುದಾಗಿ ಜ್ಞಾನನಿಧಿ ಚೆನ್ನಬಸವಣ್ಣನವರು ಬಾಹ್ಯವೆಲ್ಲವನ್ನು ಮರೆತು ಒರೆದ ಈ ಅನುಭವಪೂರ್ಣ ನುಡಿಯಂತೆ ಹಾಲಯ್ಯನವರ ಪೂಜೆಯಾಗಿತ್ತು. ಅವರು ಸಾಧಕಾವಸ್ಥೆಯಲ್ಲಿ ಸಂಸಾರವೆಂಬ ಹಾವಸೆ ಮತ್ತದಂತೆ ನೋಡಿಕೊಂಡು ಇಷ್ಟಲಿಂಗಾನುಸಂಧಾನದಲ್ಲಿ ತಲ್ಲೀನರಾಗಿದ್ದರು, ಶಿವಯೋಗದ ಮಹಿಮೆಯನ್ನು ಅರಿತು ಆಚರಿಸುತ್ತಿದ್ದರು.

"ವೀರಮಾಹೇಶ್ವರರುಗಳ ಲಿಂಗಾನುಸಂಧಾನವೆಂತೆಂದೊಡೆ ಬ್ರಹ್ಮರಂಧ್ರದಲ್ಲಿಪ್ಪನಾದ ಚೈತನ್ಯವಪ್ಪ ಪರಮ ಚಿತ್ಕಳೆಯೇ ಭಾವಮನಕರದಲ್ಲಿ ಶ್ರೀಗುರು ತಂದು ಸಾಹಿತ್ಯವ ಮಾಡಿದನಾಗಿ ಭಾವದಲ್ಲಿ ಸತ್ಸ್ವರೂಪವಪ್ಪ ಇಷ್ಟಲಿಂಗವೆಂದೆನಿಸಿ ಒಂದೇ ವಸ್ತು ತನುಮನ ಭಾವಂಗಳಲ್ಲಿ ಇಷ್ಟಪ್ರಾಣ ಭಾವವಾದ ಭೇದವನರಿಯದೆ ಇಷ್ಟಲಿಂಗವ ದೃಷ್ಟಿಯಿಂದ ಗ್ರಹಿಸಿ, ಪ್ರಾಣಲಿಂಗವ ಮನಜ್ಞಾನದಿಂದ ಗ್ರಹಿಸಿ, ತೃಪ್ತಿಲಿಂಗವ ಭಾವಜ್ಞಾನದಿಂದ ಗ್ರಹಿಸಿ, ಈ ಲಿಂಗತ್ರಯವಿಡಿದು ಆಚರಿಸಿ ಲಿಂಗದೊಡನೆ ಕೂಡಿ ಲಿಂಗವೇ ತಾನುತಾನಾಗಿ ವಿರಾಜಿಸುತಿರ್ಪುದೆ ಶಿವಯೋಗ ನೋಡಾ

ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೆ" ಎಂದಿರುವ ವೈರಾಗ್ಯ ನಿಧಿಯಾದ ಯಡೆಯೂರ ತೋಂಟದ ಸಿದ್ಧಲಿಂಗ ಶಿವಯೋಗಿಗಳ ಈ ಅನುಭವಾಮೃತವನ್ನು ಹೃದಯದಲ್ಲಿರಿಸಿಕೊಂಡು ಹಾಲಯ್ಯನವರು ಆನಂದದಿಂದ ನಲಿನಲಿದಾಡುವರು; ಲಿಂಗದ ಅಂತಃಪ್ರಭೆಯ ಬೆಳಕನ್ನು ಅನುಭವಿಸುವರು.

ಹಾಲಯ್ಯನವರು ಕರ್ಮ ಜ್ಞಾನ ಭಕ್ತಿ ಈ ಮೂರು ಯೋಗಗಳನ್ನು ಸಮನ್ವಯ ಮಾಡಿಕೊಂಡು ಆತ್ಮಾನುಸಂಧಾನದ ತಪೋವನದಲ್ಲಿ ವಿಹರಿಸುತ್ತ, ಚಿತ್ತವೃತ್ತಿ ನಿರೋಧ ಮಾಡಿಕೊಂಡಿದ್ದರು. ಚೇತನವನ್ನು ಅಧ್ಯಾತ್ಮಿಕ ದೃಷ್ಟಿಯಲ್ಲಿ ಅರಳಿಸಿಕೊಂಡಿದ್ದರು. ಕಠೋರ ತಪಸ್ಸನ್ನು ಆಚರಿಸಿ ಸಂಪೂರ್ಣ ಸಿದ್ಧಿಯನ್ನು ಮಾಡಿಕೊಂಡರು. ವ್ಯಕ್ತಿತ್ವ ವಿಕಾಸದಿಂದ ಶಕ್ತಿಸಂಪನ್ನರಾದರು. ಸಮತೆ ಅವರಲ್ಲಿ ಮನೆಮಾಡಿತ್ತು. ಸೊಡರಿಲ್ಲದ ಹೊಯ್ದಾಡದ ನಂದಾದೀಪದಂತೆ, ಅವರ ಚಿತ್ತವು ನಿಶ್ಚಲವಾಗಿತ್ತು. ದಿವ್ಯಪ್ರಭೆಯಿಂದ ಕಂಗೊಳಿಸುತ್ತಿತ್ತು. ಅಖಂಡ ಬ್ರಹ್ಮಚರ್ಯವನ್ನು ನಿಯಮ ನಿಷ್ಠೆಯಿಂದ ಪರಿಪಾಲಿಸಿ ಯೋಗಸಿದ್ಧಿಯನ್ನು ಪಡೆದವರಾಗಿದ್ದರು. ಹಾಲಯ್ಯನವರ ತಪೋಜ್ವಾಲೆಯ ಕಿರಣ ಪ್ರಕಾಶವು ಬೆಟ್ಟದ ಸುತ್ತಲಿನ ಹಳ್ಳಿಗಳಲ್ಲಿ ಪ್ರಸರಿಸಿತು. ಮೊಗ್ಗೆಯರಳಿ ಸುಗಂಧ ಬೀರುವಂತೆ ಅವರ ಕೀರ್ತಿಲತೆ ಹಬ್ಬಿತು. ಜ್ಞಾನಪಿಪಾಸುಗಳಾದ ಭಕ್ತರು ತಂಡೋಪತಂಡವಾಗಿ ಬಂದು, ಮಿಂಚಿನುಂಡೆಯಂತೆ ತಳತಳಿಸುತ್ತಿರುವ ಇವರ ಸಾತ್ವಿಕ ಮುಖಮಂಡಲದ ದಿವ್ಯತೇಜಸ್ಸನ್ನು ಕಂಡು, ನಿಬ್ಬೆರಗಾಗಿ ಪುನೀತರಾಗುತ್ತಿದ್ದರು. ಶಿವಕಳೆಯೇ ಮೈವೆತ್ತು ಬಂದಂತೆ ಭಾಸವಾಗುತ್ತಿತ್ತು. ಶಿವಾತ್ಮವಿದ್ಯಾನಿಧಿಯಾದ ಹಾಲಯ್ಯನವರ ಸಂದರ್ಶನ ಸಂಭಾಷಣೆಯಿಂದಲೇ ಭಕ್ತರು ಮನೋಭಿಲಾಷೆ ಪೂರೈಸಿಕೊಂಡು ತೃಪ್ತಿಗೊಳ್ಳುತ್ತಿದ್ದರು. ದೂರ ದೂರದಿಂದ ಜಿಜ್ಞಾಸುಗಳು ಬಂದು ತಮ್ಮ ಸಂಶಯವನ್ನು ನಿವಾರಣೆ ಮಾಡಿಕೊಂಡು ಹೋಗುತ್ತಿದ್ದರು. ಅಧ್ಯಾತ್ಮದಲ್ಲಿ ದಾರಿಗಾಣದೆ ಮುಗ್ಗರಿಸುತ್ತಿರುವವರನ್ನು ಕಂಡು, ತಮ್ಮ ಅನುಭವ ಸುಧೆಯನ್ನು ಅವರ ಹೃದಯಬಟ್ಟಲದಲ್ಲಿ ಸುರಿದು, ಅವರಲ್ಲಿರುವ ಸ್ವಾರ್ಥ ಸಂಕುಚಿತ ಮನೋಭಾವನೆಗಳನ್ನು ಬಿಡಿಸಿ, ಸಾರ್ಥಕ ಜೀವಿಗಳನ್ನಾಗಿ ಮಾಡಿ ಕಳುಹಿಸುತ್ತಿದ್ದರು. ಶಿವಾನುಭವದ ಮಹತಿಯನ್ನು ವಿವರಿಸಿ ಶಿವಶರಣರ ಹೆದ್ದಾರಿಯಲ್ಲಿ ನಡೆಯಲು ಕಲಿಸುತ್ತಿದ್ದರು. ವೈರಾಗ್ಯ ಚಕ್ರವರ್ತಿ ಅಲ್ಲಮಪ್ರಭು, ಭಕ್ತಿಭಂಡಾರಿ ಬಸವಣ್ಣ, ಜ್ಞಾನಸಿಂಧು ಚನ್ನಬಸವಣ್ಣ, ಅಕ್ಕಮಹಾದೇವಿ, ಗಂಗಾಂಬಿಕೆ, ನೀಲಾಂಬಿಕೆ ಮುಂತಾದ ಶಿವಶರಣ-ಶರಣೆಯರ ಆದರ್ಶ ವ್ಯಕ್ತಿತ್ವವನ್ನು ತಿಳಿಹೇಳಿ, ತಮೋನಿದ್ರೆಯಿಂದ ಎಚ್ಚರಿಸಿ ನೂತನ ಚೇತನವನ್ನು ನೀಡುತ್ತಿದ್ದರು.

ಮಾನವನು ಮಾನವನಾಗುಳಿಯಬೇಕಾದರೆ, ಸುಸಂಸ್ಕೃತನಾಗಿ, ನೈತಿಕ ಜೀವನದಲ್ಲಡಿಯಿಟ್ಟು, ಸದ್ಗುಣಶಾಲಿಯಾಗಿ ಬಾಳಿದರೆ ಮಾತ್ರ ಸುಖಜೀವಿಯಾಗಬಲ್ಲನು; ಆತ್ಮಶಾಂತಿ ಪಡೆಯಬಲ್ಲನು. ಅಹಂಕಾರ ಮಮಕಾರಗಳನ್ನು ತೊರೆದು,

ಕಪಟ ಮೋಸಗಳನ್ನು ಮರೆದು "ಕಾಯಕವೇ ಕೈಲಾಸ"ವೆಂದರಿದು ನಿತ್ಯವೂ ಕ್ರಿಯಾಜ್ಞಾನದಲ್ಲಿ ಮನವಿರಿಸಿ ಕಾರ್ಯತತ್ಪರರಾದರೆ ಬದುಕಿನಲ್ಲಿ ಸತ್ಯತೆಯನ್ನು ಕಾಣಬಹುದೆಂದು ದರ್ಶನಾಪೇಕ್ಷಿಗಳಾಗಿ ಬಂದ ಜನರಿಗೆ ಬೋಧಿಸುತ್ತಿದ್ದರು. ವೀರಶೈವರು ತ್ರಿವಿಧ ದರ್ಶನವನ್ನು ತ್ರಿವಿಧ ಕ್ರಮಗಳಲ್ಲಿ ಜೋಡಣೆಗೊಳಿಸಬೇಕು. ಶಿವಯೋಗ ರಹಸ್ಯವನ್ನು ಶಿವಸಿದ್ಧಾಂತವನ್ನು ತಿಳಿಯಲಿಚ್ಛಿಸುವ ಸಹೃದಯಿಗಳು ಮೊದಲು ಅಷ್ಟಾವರಣ, ಪಂಚಾಚಾರ ಹಾಗೂ ಷಟ್‌ಸ್ಥಲಗಳ ಹೊಂದಾಣಿಕೆಯನ್ನು ಅರಿತುಕೊಂಡು ನಡೆಯಬೇಕು. ವೀರಶೈವ ಸಿದ್ಧಾಂತದಲ್ಲಿ ಅನುಭಾವಕ್ಕೆ ಬಹಳ ಮಹತ್ವ ನೀಡಿದ್ದಾರೆ. ಸಮನ್ವಯಪರ ಸಿದ್ಧಾಂತಕ್ಕೆ ವೀರಶೈವ ಪರಿಭಾಷೆಯಲ್ಲಿ "ಅನುಭಾವ" ಎಂದು ಹೆಸರು.

"ಅನುಭಾವವಿಲ್ಲದ ಭಕ್ತಿ ಅರಿವಿಂಗೆ ಬಾರದು. ಅನುಭಾವವಿಲ್ಲದ ಸಂಗ ಸಮರಸ ಸುಖಕ್ಕೆ ನಿಲುಕದು. ಅನುಭಾವವಿಲ್ಲದ ಪ್ರಸಾದ ಪರಿಣಾಮ ಕೊಡದು. ಅನುಭಾವವಿಲ್ಲದೆ ಏನೇನು ಅರಿಯಬಾರದು. ಕೂಡಲಸಂಗಮದೇವಯ್ಯ ನಿಮ್ಮ ಅನುಭಾವ ಮಾತಿನ ಮಥನವೆಂದು ನುಡಿಯಬಹುದೆ?" ಎಂದು ಮುಂತಾಗಿ ಬಂದ ಭಕ್ತ ಸಮೂಹಕ್ಕೆ ನಿತ್ಯವೂ ಶಿವಾನುಭವದ ಮಹಿಮೆಯನ್ನು ಹೇಳಿ ಭಕ್ತಿ ಮಾರ್ಗಕ್ಕೆ ತರುತ್ತಿದ್ದರು. ಹೀಗೆಯೇ ಹನ್ನೆರಡು ವರ್ಷಗಳು ಕಳೆದವು. ಅವರ ಆತ್ಮಾನು ಸಂಧಾನದ ಪ್ರಭಾವವು ತೊಳಗಿ ಬೆಳಗಿತು.

ಹೃದಯದಿಂದ ಬಂದ ನುಡಿಯು ಹೃದಯಕ್ಕೆ ಮುಟ್ಟುವಂತೆ, ನಡೆನುಡಿ ಗಳಿಂದ ಪರಿಶುದ್ಧರಾಗಿ, ಪರಿಪೂರ್ಣರಾದ ಹಾಲಯ್ಯನವರ ಶಿವಾನುಭವವು ಜನರ ಕಣ್ಣುಗಳನ್ನು ತೆರೆಯಿಸಿತು, ಹೃದಯಕಮಲಗಳನ್ನು ಅರಳಿಸಿತು. ಇಷ್ಟಕ್ಕೂ ಹಾಲಯ್ಯನವರಿಗೆ ತೃಪ್ತಿಯಾಗಲಿಲ್ಲ. ಅಜ್ಞಾನಾವಸ್ಥೆಯಲ್ಲಿ ಮಲಗಿರುವ ಸಮಾಜವನ್ನು ಎಚ್ಚರಿಸಲು ಅಲ್ಲಲ್ಲಿ ಸಂಚರಿಸಿ ಸಮಾಜೋದ್ಧಾರ ಮಾಡಬೇಕೆಂದು ಬೋಧಿಸಿದ ಗುರುಗಳ ಅಂತಿಮವಾಣಿಯು ನೆನಪಾಗಿ "ವೈಯಕ್ತಿಕ ಮುಕ್ತಿ ಸಾಧನೆ ಸಾಕು. ದೀನ ದರಿದ್ರರ ಸೇವೆ ಮಾಡಬೇಕು. ಜನಜಾಗೃತಿ ಮಾಡಿ ಸಮಾಜ ವನ್ನು ಮೇಲಕ್ಕೆತ್ತಬೇಕು, ಮಠಮಾನ್ಯಗಳ ಉದ್ಧಾರ ಮಾಡಿ, ಯೋಗ ಶಿಕ್ಷಣ ವನ್ನು ನೀಡಬೇಕು. ಸುತ್ತೆಲ್ಲ ತಾಂಡವಾಡುತ್ತಿರುವ ಅತ್ಯಾಚಾರ ಅನಾಚಾರಗಳ ಬೇರುಗಳನ್ನು ಕಿತ್ತೊಗೆದು ಸತ್ಯ ಸದಾಚಾರಗಳನ್ನು ಬಿತ್ತಬೇಕು. ದಾಂಭಿಕ ವರ್ತನೆ ಯನ್ನು ದೂರ ಸರಿಸಿ, ಧರ್ಮಕ್ಕೆ ಆಗುತ್ತಿರುವ ಅನಾಹುತವನ್ನು ತಪ್ಪಿಸಬೇಕೆಂದು ನಿರ್ಧರಿಸಿ, ಸತ್ಯದ ಶಾಶ್ವತ ಜ್ಯೋತಿಯನ್ನೇ ಮಿಂಚಿನ ಹೊನಲನ್ನಾಗಿ ಹರಿಯಿಸಿ ಕೊಂಡ ಹಾಲಯ್ಯನವರು ಏಕಾಗ್ರತೆಯಿಂದ ತಪಸ್ಸುಮಾಡಿ ಅದ್ಭುತ ಶಕ್ತಿಯನ್ನು ಪಡೆದು, ತಮ್ಮ ನೇತ್ರಗಳಿಂದ ದಿವ್ಯದೃಷ್ಟಿಯನ್ನು ಹರಿಸಿ, ಅಲ್ಲಿಗೆ ಬಂದ ಭಕ್ತರೆಲ್ಲ ರನ್ನು ಹರಿಸಿ, ಶಂಭುಲಿಂಗ ಬೆಟ್ಟವನ್ನು ಬಿಟ್ಟು, ಹಳ್ಳಿಹಳ್ಳಿಗೆ ಹೋಗಿ ಸದ್ಗುಣ

ಬೀಜಗಳನ್ನು ಅವರ ಮುಗ್ಧ ಹೃದಯ ಭೂಮಿಯಲ್ಲಿ ಬಿತ್ತಿ, ಸಂಸ್ಕಾರದ ಸಿಹಿ ನೀರನ್ನು ಸುರಿದು, ಸನ್ಮಾರ್ಗವನ್ನು ತೋರಿಸುತ್ತ, ನಿರುತ್ಸಾಹದ ನಿಟ್ಟಿರಗಳಲ್ಲಿರುವ ಈ ಗ್ರಾಮೀಣ ಜನರಿಗೆ ಹೊಸ ಜೀವರಸವನ್ನು ತುಂಬಿ, ಸೊರಬಕ್ಕೆ ಆಗಮಿಸಿದರು.

ಆಗ ಸೊರಬ ಪ್ರಾಂತದಲ್ಲಿ ಪ್ರಮುಖರಾಗಿದ್ದ ಸದ್ಗುಣ ಪಂಡಿತರಾದ ಉಳವಿಮಠದ ಗುರುಬಸವಯ್ಯನವರ ಹಾಗೂ ಮಳಗದ್ದಿ ಕೆಂಚಪ್ಪಗೌಡರ ಪ್ರಾರ್ಥನೆಯ ಮೇರೆಗೆ, ಕೆಳದಿ ರಾಜರ ಪಂಚಮಠಗಳಲ್ಲೊಂದಾದ ಕ್ಯಾಸನೂರು ಮಠದಲ್ಲಿರುವ ಷಟ್ಕಾವ್ಯದ ಗುರುಬಸವಸ್ವಾಮಿಗಳವರ ಗದ್ದುಗೆಯಲ್ಲಿದ್ದು ಲಿಂಗಾರ್ಚನೆ ಮಾಡುತ್ತ ಭಕ್ತವೃಂದವನ್ನು ಶಿವಾನುಭವ ಬೋಧೆಯಿಂದ ತಿದ್ದಿ, ಅವರ ಅಜ್ಞಾನ ತಿಮಿರವನ್ನು ಹೊಡೆದೋಡಿಸಿ ಭಕ್ತೋದ್ಧಾರದಲ್ಲಿ ಕಾಲಕಳೆಯುತ್ತ ಲಿಂಗಾನಂದದಲ್ಲಿ ತಪೋಮೂರ್ತಿ ಹಾಲಯ್ಯನವರು ತೇಜಸ್ವಿಯಂತೆ ದೇದೀಪ್ಯಮಾನರಾಗಿ ಭಕ್ತಪ್ರಿಯರಾಗುತ್ತಾರೆ. ಅವರ ಆತ್ಮಪ್ರಭೆಗೆ ಎಲ್ಲರೂ ಮೆಚ್ಚುತ್ತಾರೆ. ಹರುಷವುಕ್ಕಿ ಆನಂದಸಾಗರದಲ್ಲಿ ತೇಲುತ್ತಾರೆ.

ಮಠಾಧಿಕಾರ-ಮಠೋದ್ಧಾರ

ಮಠಗಳು ಮಹದರಿವಿನ ಬೆಳಕನ್ನೀಯುವ ದೀಪಸ್ತಂಭಗಳು, ಚಿತ್ತಚಾಂಚಲ್ಯವನ್ನು ದೂರಮಾಡುವ ಶಾಂತಿಧಾಮಗಳು ತಪೋವೈಭವದೊಡನೆ ಶಿವಯೋಗ ಶಕ್ತಿಯನ್ನು ನೀಡಿ ಪರಿಶುದ್ಧಗೊಳಿಸುವ ಜ್ಞಾನದಾಗರಗಳು, ನಾಸ್ತಿಕತೆಯನ್ನು ಹೊಡೆದೋಡಿಸಿ, ಮಾನವತೆಯನ್ನು ಬಿತ್ತಿ ಸಂಸಾರಸಾಗರದಲ್ಲಿ ಬಿದ್ದು ಬಳಲುವ ವ್ಯಕ್ತಿಗಳಿಗೆ ಕಲ್ಪತರುಗಳು. ಭಕ್ತರ ಭಕ್ತಿಯ ಚಿಂತಾಮಣಿಗಳು. ಮಠಗಳು ಛಾತ್ರಾದಿ ನಿಲಯಗಳಿಂದ, ತ್ಯಾಗಸೇವೆಗಳಿಂದ ಧರ್ಮ ಪ್ರಸಾರದೊಂದಿಗೆ ಸದಾಚಾರ ಸತ್ ಶೀಲಗಳನ್ನು ಜನತೆಯಲ್ಲಿ ಬೋಧಿಸಿ, ಧಾರ್ಮಿಕ ಸಾಮಾಜಿಕ ಶೈಕ್ಷಣಿಕ ಜಾಗೃತಿಯನ್ನು ಸಾಧಿಸಿ ಕಂಗೊಳಿಸುವ ಹಾಗೂ ಪಾರಮಾರ್ಥ ಕೈವಲ್ಯವನ್ನು ತೋರಿಸಿ ವಿಶ್ವಶಾಂತಿಯನ್ನು ಬೀರುವ ವಿಶುದ್ಧ ತತ್ವಾನ್ವೇಷಣಕ್ಕೆ ಮೂಲ ಕೇಂದ್ರಬಿಂದುಗಳು ಧ್ಯಾನಧಾಮಗಳು.

"ಭಾರತದ ಇತಿಹಾಸದಲ್ಲಿ ಮಠಗಳು ಒಂದು ಉಜ್ವಲ ಪರಂಪರೆಯನ್ನು ಕಾಯ್ದುಕೊಂಡು ಬಂದಿವೆ" ಎಂದು ಭಾರತದ ರಾಷ್ಟ್ರಪತಿಗಳಾಗಿದ್ದ ಡಾ. ರಾಜೇಂದ್ರಪ್ರಸಾದರು ನುಡಿದಿದ್ದಾರೆ.

ಭಾರತದ ಪ್ರಾಚೀನ ಇತಿಹಾಸವನ್ನು ನೋಡಿದರೆ ಮಠಗಳ ಪಾತ್ರವು ಹಿರಿದಾಗಿದೆ. ಮಠಾಧಿಕಾರಿಗಳು ಮಠಗಳ ಬೆಳವಣಿಗೆಗಾಗಿ ಪರಿಶ್ರಮವಹಿಸಿದ್ದು ಕಂಡುಬರುತ್ತವೆ. ನೀತಿಯುತ ಸಾಮಾಜಿಕ ಪ್ರಗತಿಯನ್ನು ಮಾಡಿದವರೇ ಮಠಾಧಿಪತಿಗಳು. ಸರ್ವಧರ್ಮಗಳ ಮಠಾಧಿಪತಿಗಳು ತಮ್ಮ ತಪಃಶಕ್ತಿಯಿಂದ ಅಜ್ಞಾನವೆಂಬ ಕಾರ್ಮೋಡಗಳನ್ನು ಹೊಡೆದೋಡಿಸಿ ರಾಷ್ಟ್ರ ಜೀವನವನ್ನೇ ಮುನ್ನಡೆಸಿ ಬೆಳಗಿಸಿ ಆದರ್ಶ ಆಧ್ಯಾತ್ಮದ ಸ್ಥಿರತೆಗೆ ಕಾರಣಪುರುಷರಾಗಿದ್ದಾರೆ.

ಅವರ ಜೀವನವೇ ಸತ್ಯಸೌಂದರ್ಯದ ಸಂಗೀತ. ಸಾಹಿತ್ಯ ಸಂಸ್ಕರಣದ ನಂದಾದೀಪ. ತ್ಯಾಗ-ಸಾಹಸಗಳ ಬಲದಿಂದ ನಾಡನ್ನು ನಂದನವನವನ್ನಾಗಿ ಮಾಡಿದ್ದಾರೆ. ಸುಂದರಗೊಳಿಸಿದ್ದಾರೆ. ಶಿವಭಾವವನ್ನು ಬಿತ್ತಿ ಜನಜಾಗೃತಿಗೈದಿದ್ದಾರೆ. ರಕ್ತ ರಹಿತ ಕ್ರಾಂತಿ ಮಾಡಿ ಶಾಂತಿಯು ತಲೆದೋರಲು ಮಠಾಧಿಕಾರಿಗಳೇ ಮೂಲ ಕಾರಣರೆಂದರೆ ತಪ್ಪಾಗಲಿಕ್ಕಿಲ್ಲ. ಮಠಾಧಿಕಾರಿಗಳೇ ಮಠೋದ್ಧಾರ ಮಾಡಲು ಅರ್ಹರು. ಆದರೆ ಮಠಾಧಿಕಾರಿಗಳಲ್ಲಿ ಅದ್ಭುತ ಆತ್ಮ ಸಾಮರ್ಥ್ಯ, ಸಾಮಾಜಿಕ ಕಳಕಳಿ, ಲಿಂಗಪೂಜಾನಿಷ್ಠೆ. ಧರ್ಮ ಪ್ರೇಮ ಇವುಗಳು ಅವರಲ್ಲಿ ಮನೆಮಾಡಿಕೊಂಡಿದ್ದರೆ ಮಾತ್ರ ಅದು ಸಾಧ್ಯ. ಹೀಗಿದ್ದಲ್ಲಿ ಅವರು

ಮೆಟ್ಟಿದ ಧರೆ ಪವಿತ್ರ ಕ್ಷೇತ್ರವಾಗುತ್ತದೆ. ಮುಟ್ಟಿದ್ದು ಚಿನ್ನವಾಗುತ್ತದೆ. ಅವರ ವಾಣಿ ಅಮರವಾಣಿಯಾಗುತ್ತದೆ.

ಸದ್ಗುಣ ಸದ್ಧರ್ಮಗಳಿಗೆ ನಿಧಿಯಾಗಿ ಬೆಳಗುತ್ತಿದ್ದ ಹಾಲಯ್ಯ ದೇಶಿಕರು ಮಲೆನಾಡಿನ ಸೊರಬ ಪ್ರಾಂತಕ್ಕೆ ಬಂದಂದಿನಿಂದ ಅವರ ಕೀರ್ತಿವಾರ್ತೆಯು ನಾಡಿನ ಮೂಲೆ ಮೂಲೆಯಲ್ಲಿ ಹರಡಿತು. ಅವರ ನಿಯಮ-ನಿಷ್ಠೆ, ಆಚಾರ-ವಿಚಾರಗಳನ್ನು ನೋಡಿ ಭಕ್ತರು ಬೆರಗಾಗಿದ್ದರು. ಸಮಾಜದ ಭಾಗ್ಯವಿಶೇಷದಿಂದ ಇಂತಹರು ಜನ್ಮತಾಳಿ ನಮಗೆ ದೊರೆತಿದ್ದಾರೆಂದು ಅನ್ನುತ್ತಿದ್ದರು.

ಈ ಮೊದಲು ಚಿಕ್ಕೆಂದೂರು ಬಸವಲಿಂಗ ಶಿವಯೋಗಿಗಳಿಂದ ಚಿದುಪದೇಶವನ್ನು ಪಡೆದು ಪಕ್ವಗೊಂಡ ಹಾಲಯ್ಯ ದೇಶಿಕರ ಹೃದಯವು ಆಸೆ-ಆಮಿಷಗಳಿಂದ ಬಹುದೂರ ಸರಿದಿದ್ದಿತು. ಮತ್ತೆ ಹಾಲಯ್ಯ ದೇಶಿಕರು ಕಠೋರ ಅನುಷ್ಠಾನವನ್ನು ಆರಂಭಿಸಿದರು. ಈ ಅನುಷ್ಠಾನದಲ್ಲಿ ಕೇವಲ ಹಣ್ಣು ಹಾಲು ಸೇವಿಸುತ್ತಿದ್ದರು. ಪ್ರವಚನ ವೇಳೆಯೊಂದನ್ನು ಬಿಟ್ಟರೆ ಉಳಿದ ಸಮಯದಲ್ಲಿ ಮೌನವ್ರತಾಚರಣೆಯಲ್ಲಿರುತ್ತಿದ್ದರು. ಹೀಗೆಯೇ ಕೆಲವು ದಿನಗಳು ಗತಿಸಿದವು. ಅನಿತರಲ್ಲಿಯೇ ಪುರಾತನ ಕಾಲದಿಂದ ಬಹಳ ಪ್ರಸಿದ್ಧವಾಗಿದ್ದ, ಆಧ್ಯಾತ್ಮ ಶಕ್ತಿಯ ಆಗರವೆನಿಸಿಕೊಂಡ ಹಾನಗಲ್ಲ ವಿರಕ್ತಮಠಕ್ಕೆ ಒಬ್ಬರು ಉತ್ತರಾಧಿಕಾರಿಗಳು ಬೇಕಾಗಿದ್ದರು. ಆ ವಿರಕ್ತಮಠದ ಅಧಿಪತಿಗಳು ವೈರಾಗ್ಯದಲ್ಲಿ ಗಟ್ಟಿಗೊಂಡವರು, ದಾಸೋಹ ಮೂರ್ತಿಗಳು, ಸಮಾಜ ಪ್ರೇಮಿಗಳೆಂದು ಅಖಿಲ ವೀರಶೈವ ಸಮಾಜದಲ್ಲಿ ಇವರ ಹೆಸರು ವ್ಯಾಪಿಸಿತ್ತು. ಇವರು ವಯೋವೃದ್ಧರಾದುದರಿಂದ ತಮಗೆ ಮರಿದೇವರು ಬೇಕೆಂಬುವ ಮನೀಷೆಯನ್ನು ದರ್ಶನಕ್ಕೆ ಬಂದ ಭಕ್ತರಿಗೆ ತಿಳಿಸುತ್ತಿದ್ದರು. ಒಂದು ಸಲ ಶ್ರೀ ಉಳುವಿ ಗುರುಬಸವಯ್ಯನವರು ಮತ್ತು ಕೆಂಚಪ್ಪಗೌಡರು ತಪೋಧನರಾದ ಫಕೀರಸ್ವಾಮಿಗಳವರ ಸಂದರ್ಶನಕ್ಕೆ ಬಂದಾಗ, ಸ್ವಾಮಿಗಳವರು ತಮ್ಮ ಮಠಕ್ಕೆ ಯೋಗ್ಯ ಮರಿದೇವರನ್ನು ಹುಡುಕಿಕೊಡಲು ತಿಳಿಸಿದ ಕೂಡಲೇ ಕೆಂಚಪ್ಪ ಗೌಡರು ಹಾಲಯ್ಯ ದೇಶಿಕರೆಂಬುವರು, ಆಚಾರ-ವಿಚಾರ ಸಂಪನ್ನರಾದ ವೈರಾಗ್ಯ ಮೂರ್ತಿಗಳು ನಮ್ಮೂರಲ್ಲಿ ಅನುಷ್ಠಾನ ಮಾಡುತ್ತಿದ್ದಾರೆ. ಅವರನ್ನು ಕೇಳಿ ತಿಳಿಸುತ್ತೇವೆಂದು ಸ್ವಾಮಿಗಳವರಿಗೆ ನಮಸ್ಕರಿಸಿ ಹೋದರು.

ಉಳುವಿ ಗುರುಬಸವಯ್ಯನವರು ಹಾಗೂ ಕೆಂಚಪ್ಪಗೌಡರು ಹಾಲಯ್ಯ ದೇಶಿಕರ ಹತ್ತಿರ ಬಂದು "ನಿಮ್ಮಂಥವರು ಪರಮ ತಪಸ್ವಿಗಳಾದ, ವಯೋವೃದ್ಧರೂ ಹಾಗೂ ಜ್ಞಾನವೃದ್ಧರೂ ಆದ ಹಾನಗಲ್ಲ ಫಕೀರಸ್ವಾಮಿಗಳವರ ದರ್ಶನವನ್ನು ಪಡೆದುಕೊಂಡರೆ ನೀವು ಮಾಡುತ್ತಿರುವ ಅನುಷ್ಠಾನಕ್ಕೆ ಮತ್ತಿಷ್ಟು ಶಕ್ತಿ ಸಹಾಯ ದೊರೆತು ಅನುಕೂಲವಾದೀತೆಂದು" ಹೇಳಿದೊಡನೆಯೇ ಫಕೀರಸ್ವಾಮಿಗಳವರ ಹತ್ತಿರ ಹೋಗಿ ಸಂದರ್ಶನ ಪಡೆಯುತ್ತಾರೆ. ಅವರ ಘನ ತಪಸ್ತೇಜವನ್ನು ಕಂಡು

ಹಾಲಯ್ಯ ದೇಶಿಕರಿಗೆ ಎಳೆಂದೂರು ಬಸವಲಿಂಗ ಶಿವಯೋಗಿಗಳ ಸಂಸ್ಮರಣೆಯಾಗುತ್ತದೆ. ಅವರಂತಹ ಯೋಗ್ಯತಾಸಂಪನ್ನ ಮಹಾವಿರಕ್ತರನ್ನು ಮತ್ತೆ ದೇವರು ಕೃಪೆ ಮಾಡಿದ್ದಕ್ಕೆ ಸಂತೋಷಭರಿತರಾಗುತ್ತಾರೆ. ಹಾಲಯ್ಯ ದೇಶಿಕರು ಕೆಲವು ದಿನಗಳವರೆಗೆ ಫಕೀರಸ್ವಾಮಿಗಳವರ ಸೇವೆಯಲ್ಲಿಯೇ ಕಾಲಕಳೆಯುತ್ತ ಹಾನಗಲ್ಲಿನಲ್ಲಿರುತ್ತಾರೆ. ಫಕೀರಸ್ವಾಮಿಗಳವರು ಹಾಲಯ್ಯ ದೇಶಿಕರ ಗುಣಶೀಲಾದಿಗಳನ್ನು ನಿರೀಕ್ಷಿಸಿ ಮನಸ್ಸಿನಲ್ಲಿ ಆನಂದಪಟ್ಟು, ಇಂತಹ ಸಾಧಕರು ಈ ಮಠಕ್ಕಾದರೆ, ಮಠಕ್ಕೂ, ಸಮಾಜಕ್ಕೂ ಕಲ್ಯಾಣವಾದೀತೆಂದು ಬಗೆದು, ಇವರನ್ನು ಮರಿದೇವರನ್ನಾಗಿ ಮಾಡಿಕೊಳ್ಳಬೇಕೆಂದು ನಿರ್ಧಾರಮಾಡಿಕೊಂಡು ಹಾಲಯ್ಯ ದೇಶಿಕರನ್ನು ಕರೆಯಿಸಿ ಭಕ್ತರ ಸಮ್ಮುಖದಲ್ಲಿ ತಮ್ಮ ಮನೋಭಿಲಾಷೆಯನ್ನು ಪ್ರಕಟಿಸುತ್ತಾರೆ. ಭಕ್ತರೂ ಒಪ್ಪುತ್ತಾರೆ. ಇದೇ ಭಾವವನ್ನು ಕವಿರತ್ನ ದ್ಯಾಂಪುರ ಚನ್ನಕವಿಗಳ ರಸವಾಣಿಯಲ್ಲಿ ಕೇಳಿದರೆ ಮತ್ತಿಷ್ಟು ಆನಂದವಾಗುತ್ತದೆ.

"ಎಲೆ ಸುಕೃತ ಮತಿಯೆ ನಿನಗೀವೆನವಿಮ್ಮ ಮಠದ
ವಿಲಸವಧಿಕಾರಮಂ ಕೈಕೊಳ್ಳುವೈ ಬಿಡದೆ
ಸಲುವುದಿದು ಸರ್ವರನುಮತಿಯಿಷ್ಟ ದೈವಮ್ಮಲಿಂಗಕ್ಕೊಡಂಬಡಿಕೆಯುಂಟು।
ಅಲಸಬೇಡಾಲೋಚಿಸದಿರು ಸದ್ಭಕ್ತಸಂ-
ಕುಲವೆಲ್ಲ ನಿನ್ನಿಂ ಪುನೀತಮಾದಪುದೆಂದು-
ತಿಳಿದುಸುರಲೀಕ್ಷ್ವರಗಿ ಕೈಮುಗಿದು ಮಹನೀಯು ಕೇಳೆನ್ನ ಬಿನ್ನಪವನು॥"

ಇದಕ್ಕೆ ಉತ್ತರ ರೂಪವಾಗಿ ಹಾಲಯ್ಯ ದೇಶಿಕರು ಈ ರೀತಿ ನುಡಿಯುತ್ತಾರೆ:

"ಅತಿಶಿಥಿಲತೆಯನು ಪೊಂದಿರುವ ಶಿವಧರ್ಮದು-
ನ್ನತಿಗಾಗಿ ಮೀಸಲಿರಿಸಿದ ಜನ್ಮವಿದನೋರ್ವ
ಯತಿಪನ ಮಠಾಧಿಕಾರಕ್ಕೆ ನೀಡುವದು ಸಂಕುಚಿತದೃಷ್ಟಿಯಿದೆನಿಸದೆ।
ಮಠರೂಪ ಮಠವೆನ್ನದೆಂಬ ವಿಸ್ತೃತಮಾದ
ಮತಿಯುಳ್ಳ ನನಗಿದೆಂತೊಪ್ಪಿದಪ್ಪುದೆನ್ನಿಂದ
ಹಿತಮಪ್ಪ ಬಗೆಯಾವುದೀ ಮಠಕ್ಕದರಿಂದ ಸರ್ವಥಾ ನಾನೊಲ್ಲೆನು॥"

"ತಮ್ಮ ಕೃಪಾಶೀರ್ವಾದ ಪಡೆದು ಸಮಾಜ ಸೇವೆಮಾಡಬೇಕೆಂದು ಬಂದ ನನಗೆ ಮಠದ ಮೋಹಪಾಶದಲ್ಲಿ ಕಟ್ಟಿ ಹಾಕಬಾರದು.

"ಆಶೆಯು ಬಲೆಯೊಳು ಮನುಜನು ಸಿಕ್ಕರೆ ಕಾಲಿಗೆ ಪಾಶವನೊಗೆದಂತೆ।
ಘಾಸಿಯು ಮಾಳ್ಪುದು ಯತಿಗಳನಾಶೆಯು ಪೇಸಿಕೆ ಕೆಸರೊಳು ಸಿಕ್ಕಂತೆ।
ಅಧಿಕಾರವು ತಾ ದುರಹಂಕಾರಕೆ ಉಪಕಾರ ಕೊಡುವದು ನೋಡುವದೈ।
....ನಾಮಕೆ ಅಧಿಕಾರವದ್ಯ ವಿತರಗೆ ಭಾರವ ಮಾಡಿ ದೂಡುವದೈ।
ಧಾಮವ ಪಡೆಯಲು ಮುಕ್ತಿಯ ಭಕ್ತಿಯ ಎದುರಿಗೆ ಕಂಟಕ ನೀಡುವದೈ॥"

* ಹಾನಗಲ್ಲ ಕುಮಾರೇಶ್ವರ ಪುರಾಣ (೫ನೆಯ ಸಂಧಿ-ಪದ್ಯ ೨೯-೩೦)

ಎಂದು ಮುಂತಾಗಿ ಅತ್ಯಂತ ವಿನಯದಿಂದ ಪ್ರಾರ್ಥಿಸಿಕೊಂಡನೆಯೇ ಅದಕ್ಕೆ ಧೀರ ಸ್ವಾಮಿಗಳು "ಮಠವು ಭೋಗಪಾತ್ರವಾಗಲಾರದು. ಮಠಗಳನ್ನು ಸಮಾಜೋದ್ಧಾರ ಹಾಗೂ ಆತ್ಮೋನ್ನತಿಗಾಗಿಯೇ ಸ್ಥಾಪಿಸಿದ್ದಾರೆ. ಕರ್ಮ ಜ್ಞಾನ ಸಮುಚ್ಚಯದಿಂದ ಜೀವನ ಸಾಫಲ್ಯ ಪಡೆದು, ಆಧ್ಯಾತ್ಮ ಸಾಧನೆಯಲ್ಲಿ ಪರಿಣತರಾಗಿ, ವಿಕಾರಗಳ ಸೆಳವಿಗೆ ಸಿಕ್ಕ ಮನಸ್ಸಿಗೆ ನೈತಿಕ, ಧಾರ್ಮಿಕ ಬೋಧೆಯನ್ನು ನೀಡಿ, ಜ್ಞಾನದ ಪ್ರಕಾಶದತ್ತ ಕರೆದೊಯ್ಯುವದಕ್ಕೆ ಹೊರತು ಸುಖಲೋಲುಪತೆಯಲ್ಲಿ ಮೆರೆಯುವದಕ್ಕಲ್ಲ ಮಠಗಳಿರುವುದು" ಎಂದು ಸ್ವಲ್ಪ ಮುನಿಸಿನಿಂದ ಹೇಳಿ ಮತ್ತೆ ನುಡಿಯುತ್ತಾರೆ:

"ತನಯ ಕೇಳೆಮಗೆ ಮತೇವೆ ಬೇಡಾದುದೇ
ನಿನಗದರ ಲವಲವಿಕೆಯುಳ್ಳೊಡೊಳ್ಳಿತು
ಯತಿಗಳನುದಿನಂ ಮತಸುಧಾರಣೆಯ ಹೊಣೆಯುಂ
ಪೊತ್ತು ಬಾಳ್ವುದುಚಿತಮಿದಾದೊಡೆ।
ಅನಧಿಕಾರಿಗಳಾಗಿ ಮತಸೇವೆಯನು
ಮಾಳ್ಪುದನಿತುಚಿತಮಲ್ಲಮಧಿಕಾರಮಂ ಕೈಕೊಂಡು
ಜನಹಿತವನೆಸಗುವದ ತಕ್ಕುದದರಿಂ ಪರಿಗ್ರಹಿಸೆಂದವರ್ನುಡಿಯುಲು॥*

"ವೃದ್ಧಾಪ್ಯದಲ್ಲಿರುವ ನಮಗೆ ನೀನು ಈ ರೀತಿ ನುಡಿಯಬಾರದು. ಅಧಿಕಾರವು ಎಂದೂ ದುರಹಂಕಾರಕ್ಕೆಡೆಕೊಡಲಾರದು. ದುರಹಂಕಾರದಲ್ಲಿ ಬಿದ್ದರೆ ಅವರು ಹಾಳಾಗಿ ಹೋಗುವರು. ಮನೋಧೈರ್ಯವೊಂದಿದ್ದು, ಅಹಂಕಾರದ ಸೆಳವಿಗೆ ಸಿಕ್ಕದಿದ್ದರೆ ಮಠಾಧಿಕಾರವು ಅದೇನು ಮಾಡಲಾರದು. ಘಟದಂತೆ ಮಠ. ವ್ಯರ್ಥ ಪ್ರತಿಷ್ಠೆಯಲ್ಲಿ ಮನಸ್ಸು ಹಾಕದೆ, ಶಿವಾರ್ಚನೆಯಲ್ಲಿ ಮನಸ್ಸನ್ನು ತೊಡಗಿಸಿ, ಭಕ್ತೋದ್ಧಾರ ಮಾಡುತ್ತ ನಮ್ಮ ಇರುವಿಕೆಯನ್ನು ಚೆನ್ನಾಗಿಟ್ಟುಕೊಂಡರೆ ಯಾವ ಕಂಟಕವೂ ಬರಲಾರದು. ಹೃದಯ ದೌರ್ಬಲ್ಯವಿದ್ದವರಿಗೆ ಮಾತ್ರ ಮಠವು ಪ್ರಯೋಜನವಾಗಲಾರದು. ನಿನ್ನಂತಹ ಪ್ರತಿಭಾವಂತರು, ಸತ್ಯ ಸಂಶೋಧಕರು ಅಧಿಕಾರ ವಹಿಸದಿದ್ದರೆ ಸಮಾಜವು ಸುಧಾರಿಸುವದೆಂತು? ಅಲ್ಲದೆ ಒಂದು ಸ್ಥಾನದ ಅಧಿಕಾರಿಯಾಗದ ವಿನಹ ಬೋಧನಾಶಕ್ತಿಯಲ್ಲಿ ಅಧಿಕಾರವು ಬರಲಾರದು. ಅದ್ದರಿಂದ ನಮ್ಮ ಮನೋ ಬಯಕೆಯಂತೆ ಅಧಿಕಾರಾರೂಢನಾದರೆ ನಿನ್ನ ಹಾಗೂ ನಿನ್ನ ಗುರುಗಳ ಇಚ್ಛೆಯನ್ನು ಈಡೇರಿಸಿದಂತೆ ಆಗುವದು. ಅಂತಿಮಾವಸ್ಥೆಯಲ್ಲಿರುವ ನಮ್ಮ ಈ ಮಾತಿಗೆ ಒಪ್ಪಿ ಅಧಿಕಾರ ವಹಿಸಿಕೊಂಡರೆ ಆನಂದದಿಂದ ಶಿವಸಾನ್ನಿಧ್ಯವನ್ನು ಸೇರುವೆವು" ಎಂದಾಕ್ಷಣವೇ ಹಾಲಯ್ಯ ದೇಶಿಕರು ಕಂಬನಿಗರೆಯುತ್ತ

* ಹಾ. ಕು. ಪು. (ಸಂ. ೫, ಪ. ೩೨)

ಫಕೀರಸ್ವಾಮಿಗಳವರ ಪಾದಕ್ಕೆರಗಿ— "ಮಹಾಪ್ರಭುವೆ! ತಮ್ಮ ಅಪ್ಪಣೆಯಂತೆ ಮಠಾಧಿಕಾರಿಯಾಗುವೆ. ನಾನು ಮಾಡಲಿರುವ ಧಾರ್ಮಿಕ ಹಾಗೂ ಸಾಮಾಜಿಕ ಸೇವೆಗೆ ನಿರಂತರವೂ ತಮ್ಮ ಕೃಪೆಯೊಂದಿರಲಿ" ಎಂದು ನುಡಿದೊಡನೆಯೇ ಫಕೀರ ಸ್ವಾಮಿಗಳು ಆನಂದಾಶ್ರುಗಳೊಡನೆ ಹಾಲಯ್ಯ ದೇಶಿಕರನ್ನು ಅಪ್ಪಿಕೊಂಡು, ದೇಶಿಕೋತ್ತಮರ ಒಪ್ಪಿಗೆಯನ್ನು ಭಕ್ತರೆದುರಿಗೆ ಇಟ್ಟರು. ಭಕ್ತರೆಲ್ಲರೂ ಜಯ ಘೋಷ ಮಾಡುತ್ತ ಕರ್ತೃ ಗದ್ದುಗೆಗೆ ಹೋಗಿ, ಮಂಗಳಾರತಿ ಎತ್ತಿ ಹಾಡಿ ಹರಸಿದರು.

ಹಾಲಯ್ಯ ದೇಶಿಕರು ಫಕೀರಸ್ವಾಮಿಗಳವರ ಸೇವೆಯನ್ನು ಮನಮುಟ್ಟಿ ಮಾಡುತ್ತ ಅವರ ಅನುಜ್ಞೆಯಂತೆ ನಡೆಯುತ್ತಿದರು. ಹಾಲಯ್ಯ ದೇಶಿಕರು ಮಲೆನಾಡ ಭಾಗದಲ್ಲಿ ಸಂಚರಿಸಿ, ಧನ-ಧಾನ್ಯ ಸಂಗ್ರಹಿಸಿ ದಾಸೋಹ ಹಾಗೂ ಪಾಠಶಾಲೆಗಳ ಅಭಿವೃದ್ಧಿಗೊಳಿಸಿದರು. ಫಕೀರಸ್ವಾಮಿಗಳಿಗೆ ಯಾವ ತೊಂದರೆ ಯಾಗದಂತೆ ನೋಡುತ್ತಿದ್ದರು, ಕಾರ್ಯ ಮಾಡುತ್ತಿದ್ದರು. ಫಕೀರಸ್ವಾಮಿಗಳು ಇವರ ಕರ್ತವ್ಯದಕ್ಷತೆಯನ್ನು ಕಂಡು ಮನದೊಳಗೆ ಆನಂದಪಡುತ್ತಿದ್ದರು. ಗುರು ಧ್ಯಾನ-ಗುರುಸೇವೆಯೇ ಹಾಲಯ್ಯ ದೇಶಿಕರ ನಿತ್ಯ ಕಾಯಕವಾಗಿತ್ತು. ಮರಿದೇವ ರಾದರೆ ಇಂತಹರಿರಬೇಕೆಂದು ಭಕ್ತರ ಮುಂದೆ ಫಕೀರಸ್ವಾಮಿಗಳು ಮೇಲಿಂದ ಮೇಲೆ ಹೇಳುತ್ತಿದ್ದರು. ಹಾಲಯ್ಯ ದೇಶಿಕರು ಸಹ ಗುರುಗಳಾಜ್ಞೆಯನ್ನು ಮಂತ್ರಸ್ವರೂಪವೆಂದು ಭಾವಿಸಿದ್ದರು. ಇದರಿಂದ ಗುರುಶಿಷ್ಯರ ಪ್ರೇಮ ಭಾವವು ಚಿಗುರೊಡೆದು ಹೂವಾಗಿ ಸುಗಂಧ ಬೀರುತ್ತಿತ್ತು.

ಒಂದು ಸಲ ಹಾಲಯ್ಯ ದೇಶಿಕರು ಮಠದ ಭಿಕ್ಷೆಯ ಸಲುವಾಗಿ ಮಲೆ ಸೀಮೆಯ ಕಡೆಗೆ ಬಹುದೂರ ಪ್ರಯಾಣ ಬೆಳೆಸಿದರು. ಅಷ್ಟರಲ್ಲಿಯೇ ಇಲ್ಲಿ ಫಕೀರಸ್ವಾಮಿಗಳವರಿಗೆ ಅಸ್ವಾಸ್ಥ್ಯವುಂಟಾಗಿ ವಯೋವಾರ್ಧಕ್ಯದಿಂದ ಗುಣಮುಖ ವಾಗಲು ಕಷ್ಟವಾಯಿತು. ಎಷ್ಟು ಉಪಚರಿಸಿದರೂ ಫಲಕಾರಿಯಾಗಲಿಲ್ಲ. ಫಕೀರಸ್ವಾಮಿಗಳು ಸುತ್ತಲಿನ ಗ್ರಾಮದ ಸಮಸ್ತ ಭಕ್ತರನ್ನು ಹಾಗೂ ಅಲ್ಲಿಯೇ ಹತ್ತಿರದ ಹಳ್ಳಿಯಲ್ಲಿರುವ ವೀರವಿರಾಗಿಗಳಾದ ಜವಳಿಯ ಕುಮಾರಸ್ವಾಮಿಗಳವ ರನ್ನು ಕರೆಯಿಸಿ "ನಮಗೆ ಈಶೇಚ್ಛೆಯಾಗಿದ್ದರಿಂದ ಇನ್ನು ಇಹಲೋಕದಲ್ಲಿರಲು ಅಸಾಧ್ಯವಾಗಿದೆ. ಕಾರಣ ನಾವು ನಿಯಮಿಸಿದ ಮರಿದೇವರಾದ ಹಾಲಯ್ಯ ದೇಶಿಕ ರನ್ನು ಈ ನಮ್ಮ ಹಾನಗಲ್ಲ ವಿರಕ್ತಮಠಕ್ಕಧಿಕಾರಿಗಳನ್ನಾಗಿ ಮಾಡಿ ಸಮಾಜ ಸೇವೆಗೆ ಹಚ್ಚಿದರೆ ನಮ್ಮ ಆತ್ಮಕ್ಕೆ ಸಂತೃಪ್ತಿಯಾಗುವ"ದೆಂದು ಹೇಳಿ ಲಿಂಗೈಕ್ಯ ರಾದರು.

ಲಿಂ. ಫಕೀರಸ್ವಾಮಿಗಳವರ ಇಚ್ಛೆಯಂತೆ ಬಿದರಿ ಕುಮಾರ ಶ್ರೀಗಳವರು ಭಕ್ತರೊಡಗೂಡಿ ಹಾಲಯ್ಯ ದೇಶಿಕರಿಂಗೆ ಸದಾಶಿವ ಸ್ವಾಮಿಗಳೆಂದು ಕರೆದು, ಹಾನಗಲ್ಲ ವಿರಕ್ತಮಠಕ್ಕೆ ಅಧಿಕಾರಿಗಳನ್ನಾಗಿ ಮಾಡಿದರು. ಇವರೇ ಕುಮಾರ ಸ್ವಾಮಿಗಳೆಂಬಭಿದಾನದಿಂದ ಕಾರ್ಯ ನಿರ್ವಹಿಸುತ್ತ ಸಮಾಜ ಸೇವೆಯಲ್ಲಿ ತೊಡಗಿದರು.

ಬಿದರಿ ಕುಮಾರ ಶಿವಯೋಗಿಗಳ ವ್ಯಕ್ತಿತ್ವ ಪ್ರಭಾವದಿಂದ ಅನ್ನಸಂತರ್ಪಣೆ, ಪಟ್ಟಾಭಿಷೇಕೋತ್ಸವಾದಿ ಮಂಗಲಕಾರ್ಯಗಳು ಒಳ್ಳೇ ವೈಭವದಿಂದ ಜರುಗಿದವು. ಭಕ್ತರು ಹೃದಯಪಲ್ಲಕ್ಕಿಯಲ್ಲಿ ಹಾನಗಲ್ಲ ಕುಮಾರ ಸ್ವಾಮಿಗಳವರನ್ನು ಭಕ್ತಿಯಿಂದ ತೂಗಿದರು. ಹಾನಗಲ್ಲ ಕುಮಾರ ಶಿವಯೋಗಿಗಳು ಪಟ್ಟಾಭಿಷಿಕ್ತರಾದೊಡನೆಯೇ ನಿಯಮದಂತೆ ಗುರುಗಳು ಕೊಟ್ಟ ಭಸ್ಮ ತೀರುವವರೆಗೆ ಹಾನಗಲ್ಲಿನಲ್ಲಿಯೇ ಇದ್ದು ತಪಗೈದರು. ವಿಶಾಲ ಜಗತ್ತಿನತ್ತ ದೃಷ್ಟಿ ಹರಿಸಿದರು. ವೀರಶೈವರಾದವರು ಲಿಂಗವಿಲ್ಲದೆ ಭವಿಗಳಂತೆ ತಿರುಗುವದನ್ನು ಕಂಡು ಮರುಗಿದರು. ಅವರನ್ನು ಒಳ್ಳೇ ಸಂಸ್ಕೃತಿಯತ್ತ ತರುವ ಬಗ್ಗೆ ಚಿಂತಿಸಹತ್ತಿದರು. ಹಳ್ಳಿಯಲ್ಲಿರುವ ಮುಗ್ಧ ಭಕ್ತರ ಮನೆಗೆ ಹೋಗಿ ಶುದ್ಧ ವಾತಾವರಣವನ್ನು ಕಲ್ಪಿಸಿ, ಆಚಾರ-ವಿಚಾರಗಳ ಕಲ್ಪನೆಯನ್ನು ಕೊಟ್ಟು ಸನ್ಮಾರ್ಗದಲ್ಲಿ ನಡೆಯುವಂತೆ ಮಾಡಿದರು. ಎಷ್ಟೋ ಹಳ್ಳಿಗಳು ಕುಮಾರ ಶಿವಯೋಗಿಗಳ ತಪಃಪ್ರಭಾವದ ಬೆಳಕಿನಲ್ಲಿ ಎಚ್ಚೆತ್ತು ಶುದ್ಧ ಸುಸ್ಕಾರವನ್ನು ಪಡೆದು ಪಾವನಗೊಂಡವು. ಗಿಡದ ಬುಡಕ್ಕೆ ನೀರೆರೆದರೆ ಶಾಖೋಪಶಾಖೆಗಳು ಪಲ್ಲವಿಸಿ ಬೆಳೆಯುವಂತೆ, ಸಮಾಜದ ಆಧಾರಸ್ಥಂಭವಾಗಿರುವ ಮಾಹೇಶ್ವರ ವರ್ಗವನ್ನು ಸುಧಾರಿಸಿದರು, ಅವರಿಗೆ ತಿಳುವಳಿಕೆಯ ಸಿಹಿ ನೀರನ್ನು ನೀಡಿದರು.

ಮಠಗಳು ಸಮಾಜದ ಸಂಪತ್ತು. ಅವುಗಳು ಭದ್ರವಾಗಿದ್ದರೆ ನಾಡು ಸುಭದ್ರವಾಗಿ ಕಂಗೊಳಿಸುವದು. ಧರ್ಮದ ಮುಖವೇ ಮಠಗಳು-ಎಂದು ಭಾವಿಸಿ ಮಠದ ಜೀರ್ಣೋದ್ಧಾರಗೈದರು, ಸುಂದರಗೊಳಿಸಿದರು. ಮಠದಲ್ಲಿದ್ದ ಪಾಠಶಾಲೆಗೆ ನವಚೈತನ್ಯವನ್ನಿತ್ತರು. ಪಾಠಶಾಲೆಯ ವಿದ್ಯಾರ್ಥಿಗಳ ನಿತ್ಯನಿಯಮ ಪ್ರವಚನಗಳ ಕಡೆಗೆ ಹೆಚ್ಚು ಲಕ್ಷ್ಯವಹಿಸಿ ಅವರನ್ನು ಸತ್ಯಾರ್ಥಿಗಳನ್ನಾಗಿ ಮಾಡಿದರು. ಜನರಲ್ಲಿ ಅಷ್ಟಾವರಣ ನಿಷ್ಠೆಯನ್ನು ಗಟ್ಟಿಗೊಳಿಸಿದರು. ಅವನತಿಯನಾಂತ ಶಿವಮತವನ್ನುದ್ಧರಿಸಿದರು, ಧರ್ಮದೇಳ್ಗೆಯನೆಸಗಿದರು. ಕಾಶಿಯಲ್ಲಿಯ ವಿದ್ಯಾಸಂಸ್ಥೆಗಳಲ್ಲಿ ಓದುವ ಕುಶಲ ವಿದ್ಯಾರ್ಥಿಗಳಿಗೆ ಆರ್ಥಿಕ ಸಹಾಯವನ್ನು ಮಾಡಿದರು. ಸಹಾಯ ಪಡೆದವರಲ್ಲಿ ಇಬ್ಬರು ಜಗದ್ಗುರು ಪೀಠವನ್ನೇರಿದ್ದಾರೆ. ಕುಮಾರ ಶಿವಯೋಗಿಗಳು ಅಲ್ಲಲ್ಲಿ ಸಭೆಗಳನ್ನು ಕರೆದರು. ಸಂಘಟನೆಗಾಗಿ ಹೋರಾಡಿದರು. ಸದ್ಬೋಧನೆಯನ್ನು ಬೀರಿದರು. "ಕಾಯಕವೇ ಕೈಲಾಸ"

ವೆಂದು ಸಾರಿದರು. ಆ ನಾಡಿಗೆ ಬರಬಂದಾಗ ಅಹೋರಾತ್ರಿ ಪರಿಶ್ರಮ ವಹಿಸಿದರು. ಮಠದಲ್ಲಿ ಅನ್ನಛತ್ರವನ್ನಿರಿಸಿ ಬಡವರನ್ನು ಸಲುಹಿದರು. ಮಠಾಧಿಕಾರವಾದೊಡನೆಯೇ ಮಠಾಧಿಪತಿಗಳ ಆದ್ಯಕರ್ತವ್ಯವನ್ನು ಅರಿತು, ಆ ರೀತಿ ಜನಜಾಗೃತಿಯತ್ತ ಮನವೆಳಸಿ ಕಾರ್ಯವೆಸಗಿದರು. ಇನ್ನುಳಿದ ಮಠಾಧಿಪತಿಗಳಂತೆ ಅಂದೋಲಿಕೋತ್ಸವದ ಮೋಹದಲ್ಲಿ ಬೀಳಲಿಲ್ಲ. ಐಷಾರಾಮದಲ್ಲಿ ಜೀವನ ಸಾಗಿಸಲಿಲ್ಲ. ವ್ಯರ್ಥಪ್ರತಿಷ್ಠೆಯ ಕಡೆಗೆ ಗಮನವಿರಿಸಲಿಲ್ಲ, ಕೀರ್ತಿಕಾಮಿನಿಗಾಗಿ ಆಶಪಡಲಿಲ್ಲ, ನಾಲಿಗೆಯ ರುಚಿಗಾಗಿ ಆತುರಪಡಲಿಲ್ಲ, ಹೊರಗಿನ ವೈಭವಕ್ಕೆ ಮನ ಬೆಳೆಸಲಿಲ್ಲ; ಆತ್ಮವೈಭವವನ್ನು ಕಡೆಗಣಿಸಲಿಲ್ಲ, ಹಂಗುಹಮ್ಮಿಗೆ ಬೀಳಲಿಲ್ಲ, ಸಮಾಜಸೇವೆ ಬಿಡಲಿಲ್ಲ, ಗುರುನಿಂದೆ ಗೈಯಲಿಲ್ಲ, ಲಿಂಗಪೂಜೆ ತ್ಯಜಿಸಲಿಲ್ಲ, ಸಮಯಭೇದ ಮಾಡಲಿಲ್ಲ, ಪೂರ್ವಾಶ್ರಮವ ನೋಡಲಿಲ್ಲ, ಅಹಂಕಾರವಿದ್ದಿಲ್ಲ, ಓಂಕಾರ ತೊರೆದಿದ್ದಿಲ್ಲ, ಸ್ತುತಿಗೆ ಹಿಗ್ಗಲಿಲ್ಲ, ನಿಂದೆಗೆ ಕುಗ್ಗಲಿಲ್ಲ, ಪಕ್ಷಪಂಗಡವೆಸಗಲಿಲ್ಲ, ಧರ್ಮರಕ್ಷಣೆ ಮರೆಯಲಿಲ್ಲ.

ಕುಮಾರ ಯೋಗಿಗಳು ತಮ್ಮ ವೈರಾಗ್ಯದ ರನ್ನದೀವಿಗೆಗೆ ಬಿರುಗಾಳಿ ಸೋಂಕದಂತೆ ಅಚಲವಾಗಿದ್ದು ಮಹಾತೇಜಃಪುಂಜ ಜ್ಯೋತಿಯಾಗಿದ್ದರು. ಒಮ್ಮೆ ದುರುಳ ವೇದಾಂತಿಗಳು ಕುಮಾರ ಯೋಗಿಗಳು ಮಾಡುವ ಸಾಮಾಜಿಕ, ಧಾರ್ಮಿಕ ಕಾರ್ಯಕ್ಕೆ ಅಡ್ಡಿಯನ್ನುಂಟು ಮಾಡಿದರೂ ಅದಕ್ಕೆ ಬೆದರದೆ ಬೆಚ್ಚದೆ ಧೈರ್ಯೋತ್ಸಾಹದೊಡನೆ ಮುಂದೆ ಸಾಗುತ್ತಿದ್ದರು. ಈ ತೆರನಾಗಿ ಮಠಾಧಿಕಾರವಹಿಸಿ ತಮ್ಮ ತ್ಯಾಗಮಯ ಜೀವನದಿಂದ ವಿಶಾಲವಾದ ಮಾನವೀಯ ವಿಚಾರ ಸ್ವಾತಂತ್ರ್ಯದಿಂದ ಹಾನಗಲ್ಲ ಮಠದ ಕೀರ್ತಿಕಲಶವನ್ನು ಸ್ಥಿರವಾಗುಳಿಸಿ ಮಠೋದ್ಧಾರ ಮಾಡುತ್ತಿರುವ ಸಮಯದಲ್ಲಿ ಸಮಾಜದ ಮುಖ್ಯ ವಿರಕ್ತಮಠಗಳಲ್ಲಿ ಒಂದಾದ ಚಿತ್ರದುರ್ಗದ ಬೃಹನ್ಮಠಕ್ಕೆ ಯೋಗ್ಯ ಉತ್ತರಾಧಿಕಾರಿಗಳು ಬೇಕಾಗಿತ್ತು. ಕುಮಾರ ಯೋಗಿಗಳಿಗೆ ಗಂಭೀರ ಅಂತರ್ದೃಷ್ಟಿ ವಿಪುಲಜ್ಞಾನಗಳಿರುವದನ್ನು ಕೇಳಿ ಚಿತ್ರದುರ್ಗ ಪೀಠದ ಭಕ್ತವೃಂದವು ಇವರಿದ್ದಲ್ಲಿಗೆ ಬಂದು "ನೀವು ನಮ್ಮ ಜಗದ್ಗುರು ಪೀಠದ ಉತ್ತರಾಧಿಕಾರಿಗಳಾಗಿ ಭಕ್ತರನ್ನು ಉದ್ಧರಿಸಬೇಕು. ತಮ್ಮ ತೇಜೋಮಯ ವ್ಯಕ್ತಿತ್ವದಿಂದ ಅಲೌಕಿಕ ದೈವಿಶಕ್ತಿಯಿಂದ ಸಮಾಜವನ್ನು ಜಾಗೃತಗೊಳಿಸಬೇಕೆಂದು" ಪರಿಪರಿಯಿಂದ ಬೇಡಿಕೊಂಡರು. ಅಪೂರ್ವ ಗಾಂಭೀರ್ಯದಿಂದೊಡಗೂಡಿದ ಪ್ರಶಾಂತ ಮುಖಮುದ್ರೆಯುಳ್ಳ ಕುಮಾರ ಯೋಗಿಗಳು ಅದಕ್ಕೆ ಒಪ್ಪದೇ ಮತ್ತೊಬ್ಬರ ಹೆಸರನ್ನು ಸೂಚಿಸಿದರು. ಅವರೇ ಲಿಂ. ಜಗದ್ಗುರು ಜಯದೇವ ಮುರುಘರಾಜೇಂದ್ರ ಸ್ವಾಮಿಗಳು.

ಶ್ರೀ ಕುಮಾರ ಯೋಗಿಗಳ ಮನೀಷೆಯಂತೆ ಭಕ್ತರು ಇವರನ್ನು ಚಿತ್ರದುರ್ಗದ ಬೃಹನ್ಮಠಕ್ಕೆ ಪೀಠಾಧಿಕಾರಿಗಳನ್ನಾಗಿ ಮಾಡಿದರು.

ಚಿತ್ರದುರ್ಗ ಬೃಹನ್ಮಠದ ಲಿಂ. ಶ್ರೀ ಜಗದ್ಗುರು ಜಯದೇವ ಮುರುಘ ರಾಜೇಂದ್ರಸ್ವಾಮಿಗಳು ಲಿಂ. ಹಾನಗಲ್ಲ ಕುಮಾರ ಶಿವಯೋಗಿಗಳವರ ದೂರ ದರ್ಶಿತ್ವದ ಬಗೆಗೆ "ಸ್ಮಾರಕ ಚಂದ್ರಿಕೆ"ಯಲ್ಲಿ ಈ ರೀತಿ ಬರೆದಿದ್ದಾರೆ. ಅದು ಇಂತಿದೆ:

"ಹಾನಗಲ್ಲ ಶ್ರೀ ಕುಮಾರಸ್ವಾಮಿಗಳವರ ಪರಿಚಯವು ನಾವು ಕಾಶಿಯಲ್ಲಿ ಅಭ್ಯಾಸ ಮಾಡುತ್ತಿದ್ದ ಕಾಲದಿಂದಲೂ ಇವರು ದೂರದರ್ಶಿಗಳು, ಶಿವಾನುಭವಿ ಗಳು, ಆಧ್ಯಾತ್ಮಿಕ ಉಂಟು, ವಿಚಾರದಲ್ಲಿ ಸುಜ್ಞರು ಮತ್ತು ಸಮಾಜದ ಹಿತಕ್ಕೋಸ್ಕರ ಅವಿಶ್ರಾಂತ ಶ್ರಮವನ್ನು ವಹಿಸಿ ಕಾರ್ಯನಿರ್ವಹಿಸುವವರಲ್ಲಿ ಮೊದಲನೆಯವರು ಎಂದು ಶ್ಲಾಘಿಸಿಕೊಳ್ಳಲು ಅರ್ಹರಾಗಿದ್ದರು.

ಲೌಕಿಕ ಮತ್ತು ಪಾರಮಾರ್ಥಿಕ ಅಭ್ಯಾಸವನ್ನು ಮಾಡುತ್ತಿದ್ದ ನಮ್ಮ ಜನಾಂಗದವರಿಗೆ ಕೈಲಾದ ಮಟ್ಟಿಗೆ ಮೊದಲಿನಿಂದಲೂ ಸಹಾಯ ಮಾಡುತ್ತಿದ್ದ ರೆಂಬುದಕ್ಕೆ ಕಾಶಿಯಲ್ಲಿ ಅಭ್ಯಾಸ ಮಾಡುವಾಗ ನಮಗೂ ಇನ್ನಿತರರಿಗೂ ಸಹಾಯ ಮಾಡಿದುದೇ ನಿದರ್ಶನವಾಗಿದೆ.

ನಮ್ಮನ್ನು ಶ್ರೀ ೧೦೮ ಶ್ರೀ ಜಗದ್ಗುರು ಪೀಠಾಧಿಕಾರಕ್ಕೆ ಬರಮಾಡಿದವರು ಇವರೇ ಆಗಿದ್ದರು."

ಇದರ ಮೇಲಿಂದ ಕುಮಾರ ಶಿವಯೋಗಿಗಳ ಭವ್ಯ ವ್ಯಕ್ತಿತ್ವವು ಎಷ್ಟು ಪ್ರಭಾವಶಾಲಿಯಾಗಿತ್ತೆಂಬುದು ವ್ಯಕ್ತವಾಗುವದು.

ಅ. ಭಾ. ವೀರಶೈವ ಮಹಾಸಭೆ ಸ್ಥಾಪನೆ

ಪರಮ ವಿರಾಗಿ ಹಾನಗಲ್ಲ ಕುಮಾರ ಶಿವಯೋಗಿಗಳು ಹಳ್ಳಿ ಹಳ್ಳಿ ಸಂಚರಿಸಿದರು. ಜನರಲ್ಲಿಯ ಸಂಚಿತ ಕರ್ಮವನ್ನು ಹೊಡೆದೋಡಿಸಿದರು. ಕ್ರಿಯಾ ಜ್ಞಾನಗಳ ಅರಿವಿನ ಬೆಳಕನ್ನು ಅವರಲ್ಲಿ ಮೂಡಿಸಿದರು. ಭಕ್ತಿಯ ಬಳ್ಳಿ ಬೆಳೆಯುವಂತೆ ಬಹು ಶ್ರಮವಹಿಸಿದರು. ಜಗುಲಿಯ ಮೇಲಿದ್ದಲಿಂಗಗಳನ್ನು ಕೊರಳಲ್ಲಿ ಕಟ್ಟಿಸಿದರು. ಸಣ್ಣ ಸಣ್ಣ ವಿಷಯಕ್ಕೆ ಕಲಹವುಂಟಾಗಿ, ರಾಗ ದ್ವೇಷಗಳು ಬೆಳೆದು ಕೊಲೆ ಸುಲಿಗೆಗಳಾಗುವದನ್ನು ನಿಲ್ಲಿಸಿದರು. ದ್ಯಾಮವ್ವ-ದುರ್ಗವ್ವ ಗುಡಿಗಳ ಮುಂದೆ ಕುರಿ-ಕೋಣಗಳ ಕೊಲೆಯಾಗುವದನ್ನು ತಡೆದರು. ಊರೂರಿಗೆ ಪುರಾಣಿಕರನ್ನು ಕಳುಹಿಸಿ ನೀತಿ ಮಾರ್ಗವನ್ನು ಬೋಧಿಸಿ ಆಚಾರ-ವಿಚಾರವಂತರನ್ನಾಗಿ ಮಾಡಿದರು, ದುಶ್ಚಟಗಳಿಗೆ ಜೀಳದಂತೆ ಕಡಿವಾಣ ಹಾಕಿಸಿದರು. ಅಂದರೆ ಅವರ ಜೀವನದಲ್ಲಿ ಹೊಸಬಗೆಯ ವಾತಾವರಣ ಹುಟ್ಟಿಸಿದರು. ದುಷ್ಟರನ್ನು ಶಿಷ್ಟರನ್ನಾಗಿ ಮಾಡಿದರು. ನಡೆನುಡಿಯಲ್ಲಿ ಪರಿಶುದ್ಧತೆಯನ್ನು ತುಂಬಿದರು. ಮಠಾಧಿಕಾರಿಯಾಗಿ ಮಾಡುವ ಕರ್ತವ್ಯವನ್ನು ಮನಮುಟ್ಟಿ ಮಾಡಿ ಭಕ್ತರ ಹೃನ್ಮೂರ್ತಿಯಾದರು. ಭಕ್ತಪ್ರಿಯರಾಗಿ ಭಕ್ತೋದ್ಧಾರಕರಾದರು.

ಇನ್ನಿತರಿಂದಲೇ ಕುಮಾರಯೋಗಿಗಳಿಗೆ ಸಮಾಧಾನವಿಲ್ಲದಾಗಿದೆ, ಸಂತೃಪ್ತಿಯಿಲ್ಲದಾಗಿದೆ. ಬಹುದೂರ ನಿಟ್ಟಿಸಿದರು. ಅಖಿಲ ಭಾರತ ವೀರಶೈವ ಜನಾಂಗವನ್ನು ಕಣ್ಣು ಮುಂದೆ ತಂದುಕೊಂಡರು. ಅಖಿಲ ವೀರಶೈವ ಜನರ ದುರವಸ್ಥೆಯಿಂದ ದುಃಖಿತರಾಗುವರು. ನಿಂತಲ್ಲಿಯೇ ಧ್ಯಾನಾಸಕ್ತರಾಗುವರು. ಎವೆಯಿಕ್ಕದೆ ಭೂದೇವಿಯನ್ನು ನೋಡುವರು. ಮತ್ತೆ ಗಗನದತ್ತ ದೃಷ್ಟಿ ಹಾಯಿಸುವರು. ವಿಚಾರಮಗ್ನರಾಗುವರು. ಉಸುರ್ಗರೆಯುವರು. ಕಲ್ಪನಾಲೋಕದಲ್ಲಿ ವಿಹರಿಸುವರು. ಸಾಕಿನ್ನು ಈ ಆತ್ಮೋದ್ಧಾರದ ಪೂಜೆ. ಲಕ್ಷೋಪಲಕ್ಷ ವೀರಶೈವರು ಹಾಗೂ ಮಾನವ ಜನಾಂಗವು ಅಜ್ಞಾನಾಂಧಕಾರದ ತಗ್ಗಿನಲ್ಲಿ ಬಿದ್ದು ವಿಲಿವಿಲಿ ಒದ್ದಾಡುತ್ತಿರುವಾಗ ಮಠದಲ್ಲಿ ಕುಳಿತರೆ ಬರುವದೇನು? ಏಕಾಂತದಲ್ಲಿ ಗುಹೆಯಲ್ಲಿ ಕುಳಿತು ಪೂಜಿಸಿ ಫಲವೇನು? ಗುರುವಿನಾಜ್ಞೆಯಂತೆ ಅದೆಲ್ಲವೂ ಸಾಧಿಸಿದಂತಾಗಿದೆ. ಅಖಿಲ ವೀರಶೈವ ಜನಾಂಗಕ್ಕೆ ಅಷ್ಟೇ ಏಕೆ ಮಾನವ ಕುಲಕ್ಕೆ ನೂತನ ಚೇತನವನ್ನು ನೀಡುವ ಶಕ್ತಿಯನ್ನು ಗುರುಕೃಪೆಯಿಂದ ಪಡೆದು ಧೈರ್ಯ ಸಾಹಸದಿಂದ ಮುನ್ನುಗ್ಗಬೇಕಾಗಿದೆ. ಹಾಗೆಯೇ ಕುಳಿತರೆ ಸಮಾಜವೇ ಹಾಳಾಗಿ ಹೋಗುವದು. ಕಷ್ಟದಲ್ಲಿರುವ ಜನವನ್ನು ನೋಡಿ ಕುಳಿತರೆ, ಕಷ್ಟವನ್ನು ಪರಿಹರಿಸದಿದ್ದರೆ ಆ ಪಾಪ ನಮಗೆ ತಟ್ಟದೆ ಬಿಟ್ಟೀತೆ? ಇಂತಹ ಮಹಾಕಾರ್ಯಕ್ಕೆ ಧುಮುಕದಾಗ

ವಿಘ್ನಗಳ ರಾಶಿಯೇ ಎದುರು ಬರುವುದು. ಒಳ್ಳೆಯ ಉದ್ದೇಶಕ್ಕೆ ಹೊರಟಿದ್ದರೆ ದೇವರೇ ಒಂದು ಕೈಹಿಡಿದು ಮುನ್ನಡೆಸುತ್ತಾನೆ. ಅದಕ್ಕಾಗಿ ಹೃದಯ ದೌರ್ಬಲ್ಯವನ್ನು ದೂರುವದೇ ತಕ್ಕುದು ನಿರ್ಧರಿಸಿಕೊಂಡು, ಶಾಂತ ಚಿತ್ತರಾಗಿ ಸಿದ್ಧಾಸನ ಹಾಕಿಕೊಂಡು ಕುಳಿತು ನಯನ ನಿಮೀಲಿತರಾಗಿ ಧ್ಯಾನಾವಿಷ್ಟರಾಗುತ್ತಾರೆ. ಅನೇಕ ವಿಚಾರಗಳ ತೆರೆಗಳು ಚಿತ್ತಜಲಧಿಯಲ್ಲಿ ಮೂಡಿ ಮಾಯವಾಗುತ್ತ ಹೋಗುತ್ತವೆ.

ಬಹುದಿನಗಳ ಹಿಂದೆ ಭಾರತದಲ್ಲಿ, ಅದರಲ್ಲಿಯೂ ವೀರಶೈವ ಸಮಾಜವು ಅತ್ಯಂತ ವೈಭವದಿಂದ ಮೆರೆಯುತ್ತಿತ್ತು. ಸಾಮಾಜಿಕ ಕಾರ್ಯಕರ್ತರಿಂದ, ಸಾಹಿತಿಗಳಿಂದ, ವಾಗ್ಮಿಗಳಿಂದ, ಕವಿಗಳಿಂದ, ಆತ್ಮಸಂಶೋಧಕರಾದ ಯೋಗಿಗಳಿಂದ ಯಾವ ದೃಷ್ಟಿಯಿಂದಲೂ ಕೊರತೆಯಿದ್ದಿಲ್ಲ. ಇಂತಹ ಪ್ರಗಲ್ಭ ಬೆಳವಣಿಗೆಯಲ್ಲಿದ್ದ ಭಾರತದಲ್ಲಿ ಕೋಟಿ ಜನಸಂಖ್ಯೆಯುಳ್ಳ ವೀರಶೈವ ಸಮಾಜವು ಸ್ವತಂತ್ರ ಅಸ್ತಿತ್ವವನ್ನು ಕಳೆದುಕೊಂಡು ಕಂದನಂತಾಗಿತ್ತು. ಉಜ್ವಲಶಾಂತಿ ಮಹೋನ್ನತ ಕ್ರಾಂತಿಯ ಸಂಸ್ಕೃತಿಯು ತನಗಿದ್ದರೂ ಕಳಾಹೀನವಾಗಿತ್ತು. ಅನೈಕ್ಯತೆಯು ಸುತ್ತೆಲ್ಲ ಕಾಣುತ್ತಿತ್ತು. ಮಹಾತ್ಮಾ ಬಸವಣ್ಣನವರ ಸಂಸ್ಕೃತಿಯ ಪ್ರಕಾರ ಕಿರಣಗಳು ಕಾಣದಂತಾಗಿದ್ದವು. ಸಂಘ ಶಕ್ತಿ ಅತ್ಯವಶ್ಯ ಬೇಕಾಗಿತ್ತು. ಕಾದು ಸ್ಥಿತಿಯಲ್ಲಿದ್ದ ವೀರಶೈವ ಸಮಾಜಕ್ಕೆ ಸಂಘದ ಶಕ್ತಿಯನ್ನಿತ್ತು ಶಕ್ತಿಯುತವಾಗಲೆಂದು ಕುಮಾರ ಯೋಗಿಗಳು ಹಗಲಿರುಳು ಯೋಚಿಸಿದರು. ಶೈಕ್ಷಣಿಕ, ಧಾರ್ಮಿಕ, ನೈತಿಕ, ಔದ್ಯೋಗಿಕ, ಸಾಂಸ್ಕೃತಿಕ ಚಟುವಟಿಕೆಗಳನ್ನು ಕಾರ್ಯ ರೂಪದಲ್ಲಿ ತರಬೇಕಾದರೆ ಅಖಿಲಭಾರತೀಯ ದೃಷ್ಟಿಯಿಂದ ವೀರಶೈವ ಮಹಾಸಭೆ ಸಂಸ್ಥಾಪಿಸಿ, ಬೃಹತ್ಪ್ರಮಾಣದಲ್ಲಿ ವೀರಶೈವ ಸಮಾಜವನ್ನು ಸಂಘಟಿಸಬೇಕು, ಪಾಶ್ಚಿಮಾತ್ಯವಿದ್ಯೆಯ ಗಂಧವನ್ನು ಈ ಜನರಿಗೆ ಆಘ್ರಾಣಿಸಬೇಕು. ಪ್ರತಿಯೊಬ್ಬರೂ ಸುಶಿಕ್ಷಿತರಾಗಿ ತಮ್ಮ ಕರ್ತವ್ಯನಿಷ್ಠೆಯಿಂದ ಕಾಯಕನಿರತರಾಗಿ ಸಮಾಜದಲ್ಲಿ ಬೆಳಗಬೇಕು. ಇವರು ದೇಶವಿದೇಶಗಳಲ್ಲಿ ಹೋಗಿ ಧಾರ್ಮಿಕ ಜಾಗೃತಿ ಮಾಡಿ, ಬಸವತತ್ವವು (ವೀರಶೈವ ಧರ್ಮವು) ವಿಶ್ವಶಾಂತಿಗೆ ಪೂರಕವಾಗಬಲ್ಲದು ಎಂಬುದನ್ನು ಬಿತ್ತರಿಸಬೇಕು. ಸಮಾಜದ ಪ್ರತಿಯೊಂದು ವ್ಯಕ್ತಿಯು ಸುಧಾರಿಸಬೇಕು. ಪ್ರತಿಯೊಂದು ಕಲೆಗಳಲ್ಲಿ ಮುಂದಾಗಿ ಭಾರತಕ್ಕೆ ಆದರ್ಶಪ್ರಾಯವಾಗಬೇಕೆಂಬುವ ಸಂಕಲ್ಪ ಸಿದ್ಧಿಯನ್ನು ಮಾಡಿಕೊಂಡಿರಬೇಕು. ಪಕ್ಷ ಪಂಗಡಗಳನ್ನು ತೊರೆದು, ಅವರಿವರೆನ್ನುವ ಭೇದ ಭಾವವನ್ನೇ ಬಿಸುಟು, ನಾವೆಲ್ಲರೂ ವೀರಶೈವರು, ಲಿಂಗಾಯತರು, ಈ ವಿಶಾಲ ಮನೋಭಾವನೆಯನ್ನು ಮೂಡಿಸುವ ಮಹೋದ್ದೇಶದಿಂದಲೇ ಅಖಿಲ ಭಾರತ ವೀರಶೈವ ಮಹಾಸಭೆಯನ್ನು ಸಂಸ್ಥಾಪಿಸಿ ಸಂಘಟಿಸುವದನ್ನು ಕುಮಾರ ಯೋಗಿಗಳು ನಿರ್ಧರಿಸಿಕೊಂಡರು. ಯೋಚಿಸಿದ್ದು ಕಾರ್ಯ ರೂಪದಲ್ಲಿ ಬರಬೇಕಾದರೆ

ಭಕ್ತರ ಸಹಕಾರವು ಅತ್ಯವಶ್ಯವೆಂದು ಬಗೆದರು. ಇವರೆಲ್ಲರ ಬೆಂಬಲದಿಂದಲೇ ಸಮಾಜದ ಸಂಘಟನೆ ಸಾಧ್ಯ. ಸಮಾಜದ ಅಭಿಮಾನ ಹುಟ್ಟಿಸಲು ಅಲ್ಲಲ್ಲಿ ಸಣ್ಣಸಣ್ಣ ಆಲೋಚನಾ ಸಭೆಗಳನ್ನು ಏರ್ಪಡಿಸಿ ಜನರನ್ನು ಒಂದುಗೂಡಿಸ ಹತ್ತಿದರು. ಈ ಹೊತ್ತಿನಲ್ಲಿ ಕುಮಾರ ಯೋಗಿಗಳಿಗೆ ಬೆಂಬಲಿಗರಾಗಿ ಕೊಂಗ ವಾಡದ ಚನ್ನಪ್ಪಗೌಡರು, ಕಿತ್ತೂರು ರೇವಣ ಸಿದ್ಧಪ್ಪನವರು, ಮರೇವಾಡದ ಸಿದ್ಧಲಿಂಗಯ್ಯನವರು ಮುಂತಾದವರು ಕಾರ್ಯಮಾಡಲು ಪ್ರಾರಂಭಿಸಿದರು. ಕುಮಾರ ಶಿವಯೋಗಿಗಳು ಈ ಸಂಘಟನೆಗೆ ನಿದ್ದೆ ನೀರಡಿಕೆಗಳೆನ್ನದೆ ಅತ್ತಿತ್ತ ಸಂಚರಿಸಿದರು. ನಗರಗಳಿಗೂ ಹೋದರು. ಪ್ರತಿಯೊಬ್ಬರೂ ಇವರ ಮುಂಧೋರಣೆಯನ್ನು ಮೆಚ್ಚಿಕೊಂಡು ಸಹಕರಿಸಿದರು. ಅವರೊಡನೆ ಸಮಾಜ ಸೇವೆ ಮಾಡಲು ಸಿದ್ಧರಾದರು. ಶ್ರೀಗಳು ಹೇಳಿದಲ್ಲಿ ಹೋಗಿ ಕಾರ್ಯವನ್ನು ನೆರವೇರಿಸಲು ಸನ್ನದ್ಧರಾದರು. ಹಾನಗಲ್ಲಕುಮಾರ ಶಿವಯೋಗಿಗಳು ಹೀಗೆಯೇ ಸಂಚರಿಸುತ್ತ, ಸಂಘಟಿಸುತ್ತ, ಧನ ಸಂಗ್ರಹಿಸುತ್ತ, ಜನರನ್ನು ಹುರಿದುಂಬಿಸುತ್ತ ಧಾರವಾಡಕ್ಕೆ ಆಗಮಿಸಿದರು. ಅಲ್ಲಿ ಅನೇಕ ಪ್ರಮುಖ ವ್ಯಕ್ತಿಗಳೊಡನೆ ಸಮಾ ಲೋಚಿಸಿದರು. ಒಂದು ವರ್ಷದವರೆಗೆ ಮಹಾಸಭೆಗಾಗಿ ಅಹೋರಾತ್ರಿ ಪರಿ ಶ್ರಮಿಸಿ ಎಲ್ಲರ ಬೆಂಬಲ ಪಡೆದು ೧೯೦೪ನೆಯ ಇಸ್ವಿಯ ಮೇ ತಿಂಗಳಲ್ಲಿ ಕೈ. ಶ್ರೀಮಂತ ಲಿಂಗಪ್ಪ ಜಾಯಪ್ಪ ಸರ್‌ದೇಸಾಯಿ ಶಿರಸಂಗಿ ಇವರ ಅಧ್ಯಕ್ಷತೆಯಲ್ಲಿ ಧಾರವಾಡದಲ್ಲಿ ಅಖಿಲ ಭಾರತ ವೀರಶೈವ ಮಹಾಸಭೆಯನ್ನು ಸಂಸ್ಥಾಪಿಸಿದರು. ಬಹುದಿನಗಳವರೆಗೆ ಪಟ್ಟ ಪರಿಶ್ರಮವು ಸಾರ್ಥಕವಾದಂತಾಯಿತು. ವೀರಶೈವರ ಪುನರುತ್ಥಾನವಾದಂತಾಯಿತು. ಮಲಗಿದವರನ್ನು ಎಚ್ಚರಿಸಿದಂತಾಯಿತು. ಕುಮಾರ ಶಿವಯೋಗಿಗಳವರ ಕರ್ತೃತ್ವ ಶಕ್ತಿಯಿಂದ ಕೆಲವೇ ದಿನಗಳಲ್ಲಿ ಲಕ್ಷಾಂತರ ಹಣವು ಶೇಖರಣೆಯಾಯಿತು. ವಿದ್ಯೆಯ ವಿದ್ಯುಲ್ಲತೆ ಬೆಳೆಯ ಹತ್ತಿತು. ಸಂಗ್ರಹಿಸಿದ ಹಣವನ್ನು "ಲಿಂಗಾಯತ ಎಜ್ಯುಕೇಶನಲ್ ಫಂಡ್" ಈ ಹೆಸರಿನಿಂದ ಇರಿಸಿದರು. ಅದರ ಬಡ್ಡಿಯ ಹಣದಿಂದ ಬಡವರು ಸುಶಿಕ್ಷಿತರಾಗಹತ್ತಿದರು. ಆಂಗ್ಲ ವಿದ್ಯಾಲಯಗಳಲ್ಲಿ ವೀರಶೈವರು ಸುಳಿದಾಡಹತ್ತಿದರು. ಸ್ವಭಾಷೆಯ ಅಧ್ಯಯನದ ಜೊತೆಗೆ ಪರಭಾಷೆಯ ಅಧ್ಯಯನವು ಅತ್ಯವಶ್ಯವಿರಬೇಕು. ಅದ ರಿಂದ ನಮ್ಮ ಜನಾಂಗದ ಸಂಸ್ಕೃತಿ ಸಾಹಿತ್ಯ ವಿಜ್ಞಾನ ಹಾಗೂ ಇನ್ನಿತರ ಸಂಸ್ಕೃತಿ ಸಾಹಿತ್ಯ ವಿಜ್ಞಾನವನ್ನು ತುಲನಾತ್ಮಕ ದೃಷ್ಟಿಯಿಂದ ಅಧ್ಯಯನ ಮಾಡಿದರೆ ಭಾರತದ ಬೆಳವಣಿಗೆಗೆ ಸಹಕಾರಿಯಾಗುತ್ತದೆ, ಅಲ್ಲದೆ ಭಾಷಾ ಬಾಂಧವ್ಯ ಬೆಳೆದು ಪರಸ್ಪರ ಪ್ರೇಮದಿಂದಿರಲು ಅನುಕೂಲವಾಗಿ ವೀರಶೈವ ಸಾಹಿತ್ಯವು ಭಾರತದ ತುಂಬ ಹರಡುವದಲ್ಲದೆ ವಿದೇಶಗಳಲ್ಲಿಯೂ ಪ್ರಚಾರ ಮಾಡಲು ಸಹಾಯಕ ವಾಗುತ್ತದೆಂದು ಕುಮಾರ ಶಿವಯೋಗಿಗಳವರ ಅಪೇಕ್ಷೆಯಿತ್ತು.

ಅಖಿಲ ಭಾರತ ವೀರಶೈವ ಮಹಾಸಭಾ ಸಂಸ್ಥಾಪನೆಯ ಪ್ರಭಾವದಿಂದ ಕರ್ನಾಟಕ, ಆಂಧ್ರ, ಮಹಾರಾಷ್ಟ್ರ ಮುಂತಾದ ಪ್ರಾಂತಗಳ ಪದವೀಧರರು, ಪಂಡಿತರು, ಪರಗುರುಚರಮೂರ್ತಿಗಳು, ಶ್ರೀಮಂತರು, ಸಂಸ್ಥಾನಿಕರು, ವೀರಶೈವ ಸಮಾಜದೇಳ್ಗೆಗಾಗಿ ಅತ್ಯುತ್ಸಾಹದಿಂದ ಸಂಘಟನೆಗಾಗಿ ಮುಂದೆ ಬಂದು ಕಾರ್ಯ ಪ್ರಾರಂಭಿಸಿದರು. ಕುಮಾರ ಶಿವಯೋಗಿಗಳ ತತ್ವವನ್ನು ಪ್ರಚಾರ ಮಾಡಲಣಿಯಾದರು. ಶ್ರೀಗಳವರ ತೀಕ್ಷ್ಣ ಬುದ್ಧಿ ಹಾಗೂ ತಪಃಸಾಮರ್ಥ್ಯವನ್ನು ಕಂಡು ಅಖಿಲ ವೀರಶೈವ ಸಮಾಜವಷ್ಟೇ ಅಲ್ಲದೇ ಅನ್ಯ ಸಮಾಜದವರು ಬೆರಗಾಗಿದ್ದರು. ಇವರ ಆತ್ಮ ಶಕ್ತಿ ಸಾಮರ್ಥ್ಯದಿಂದೊಡಗೂಡಿದ ಕರ್ತೃತ್ವ ಶಕ್ತಿಗೆ ಮಾರುಹೋಗಿದ್ದರು. ಶ್ರೀಗಳ ಸಾಹಸದ ಫಲವಾಗಿ ಎನಿತೋ ಜನರು ತಮ್ಮ ಧರ್ಮ ಸಂಸ್ಕೃತಿಯನ್ನು ಬಿಡದೆ ಆಗ ಆಂಗ್ಲ ವಿದ್ಯಾ ವಿಭೂಷಿತರಾದರು. ಸಮಾಜದೇಳ್ಗೆಗಾಗಿ ದುಡಿದರು. ಇತ್ತಿತ್ತಲಾಗಿ ಆಂಗ್ಲ ವಿದ್ಯಾವಿಭೂಷಿತರು ಧರ್ಮ ಸಂಸ್ಕೃತಿಯನ್ನು ಮರೆತಿದ್ದಾರೆ. ಹೊರಗಿನಾಡಂಬರಕ್ಕೆ ಬಿದ್ದು ಆಸ್ತಿಕ್ಯಭಾವನೆಗೆ ತಿಲಾಂಜಲಿಯಿತ್ತು, ಕೇವಲ ಬುದ್ಧಿಯ ಬೆಳವಣಿಗೆಗೆ ಮಹತ್ವ ನೀಡುತ್ತಿರುವವನ್ನು ಕಂಡಾಗ ವೀರಶೈವಾಭಿಮಾನವುಳ್ಳವರು ಕಂಬನಿ ಸುರಿಸದೆ ಬಿಡರು. ಬುದ್ಧಿಯನ್ನು ದುರುಪಯೋಗದತ್ತ ಎಳೆದೊಯ್ದು ಸ್ವಾರ್ಥಸಾಧನೆಯನ್ನು ಬಲಿಸಿಕೊಂಡು ಸಮಾಜವನ್ನು ಸಂಕುಚಿತ ದೃಷ್ಟಿಯಿಂದ ನೋಡಿ ಅಲ್ಲಗಳೆಯುತ್ತಿರುವದು ಹಾಗೂ ಯಾವ ತಪಸ್ವಿಯ ಸಾಹಸದ ಹಣದ ಫಂಡಿನಿಂದ ವಿದ್ಯಾರ್ಥಿನಿಲಯಗಳಲ್ಲಿ ಓದಿದರೋ ಆ ತಪಸ್ವಿಯ ಮತ್ತು ಆ ಸಂಸ್ಥೆಯ ಸಂಸ್ಕೃತಿಯ ತಿರುಳನ್ನು ತಿಳಿದುಕೊಳ್ಳದೇ ತಿರಸ್ಕಾರ ಭಾವನೆಯಲ್ಲಿ ಮನಸ್ಸನ್ನು ಓಡಿಸುತ್ತ, ಒಳ್ಳೆಯ ಸಂಸ್ಕಾರವನ್ನು ಹೃದಯದಲ್ಲಿ ಮೂಡಿಸದಿದ್ದರೆ ಕಸತುಂಬಿದ ಘಟದಂತೆ ವ್ಯರ್ಥವಾಗುವದಲ್ಲವೇ?

ಸಮಾಜದ ಸಾಂಪತ್ತಿಕ ಸ್ಥಿತಿ ಸರಿಯಾಗಿದ್ದು, ಒಳ ಪಂಗಡಗಳು ದೂರಾಗಿ ಭಾವೈಕ್ಯತೆಯುಂಟಾಗಿ, ಸಾಹಿತ್ಯಶೀಲ ಸಂಸ್ಕೃತಿಯನ್ನು ಸಂಗೋಳಿಸಿ ಧರ್ಮನಿಷ್ಠ ಪೂತಾತ್ಮರಾಗಿ ಆತ್ಮ ಜ್ಯೋತಿಯನ್ನು ಬೆಳಿಸಲೆಂಬುವ ಮಹೋದ್ದೇಶವೇ ಕುಮಾರ ಶಿವಯೋಗಿಗಳವರ ಮಹದಾಕಯಾಗಿತ್ತು. ಈ ಗುರಿಯ ಸಾಧನೆಗಾಗಿಯೇ ಮಹಾಸಭೆಯ ಸಂಸ್ಥಾಪನೆ.

ಶರಣಾಗ್ರಗಣ್ಯರಾದ ಲಿಂ. ಹರ್ಡೇಕರ ಮಂಜಪ್ಪನವರು ಈ ಮಹಾಸಭೆಯನ್ನು ಕುರಿತು ಈ ರೀತಿ ಬರೆದಿದ್ದಾರೆ:

*"ವೀರಶೈವ ಸಮಾಜದಲ್ಲಿ ಈಗ ತೋರುತ್ತಿರುವ ಶೈಕ್ಷಣಿಕ, ಧಾರ್ಮಿಕ ಮೊದಲಾದ ಎಲ್ಲ ಚಟುವಟಿಕೆಗಳಿಗೆ ಅಖಿಲ ಭಾರತ ವೀರಶೈವ ಮಹಾಸಭೆಯು ಬಹುಮಟ್ಟಿಗೆ ಕಾರಣವಾಗಿದೆ ಎಂದು ಧಾರಾಳವಾಗಿ ಹೇಳಬಹುದು.

* ಶಿವಯೋಗಮಂದಿರದ ಬೆಳಗು, ಪುಟ–೨೪

ಇಂತಹ ಸಮರ್ಥ ಮಹಾಸಭೆಯನ್ನು ಪಾಶ್ಚಾತ್ಯ ಶಿಕ್ಷಣ ವಿಶಾರದರು ಅಥವಾ ಆಧುನಿಕ ರಾಜಕಾರಣದಲ್ಲಿ ನುರಿತವರು ಸ್ಥಾಪಿಸಿದ್ದರೆ ಅದೇನೂ ಕೌತುಕಾಸ್ಪದವೆನಿಸುತ್ತಿರಲಿಲ್ಲ; ಈಗಿನಂತೆ ಜನಜಾಗೃತಿಯುಂಟಾದ ಕಾಲದಲ್ಲಿ ಅದನ್ನು ಯಾರಾದರೂ ಏರ್ಪಡಿಸಿದ್ದರೆ ಅದೇನೂ ಆಶ್ಚರ್ಯಕರವಾಗಿ ತೋರುತ್ತಿರಲಿಲ್ಲ. ಆದರೆ ಪಾಶ್ಚಿಮಾತ್ಯ ಶಿಕ್ಷಣದ ಗಾಳಿಯನ್ನು ಕೂಡ ಸೋಂಕಿಸಿಕೊಂಡಿರದ ಮತ್ತು ಆಧುನಿಕ ರಾಜಕಾರಣದ ಸಂಬಂಧವಿಲ್ಲದ ಪರಮ ಪೂಜ್ಯ ಹಾನಗಲ್ಲ ಮಹಾಸ್ವಾಮಿಗಳವರು ಕರ್ನಾಟಕದಲ್ಲಿಯೇ ಯಾವ ಸಮಾಜದವರ ಯಾವ ವಿಧವಾದ ಸಾರ್ವಜನಿಕ ಸಮ್ಮೇಲನಗಳು ಜರುಗದಿದ್ದ ಕಾಲದಲ್ಲಿ, ೫೫ ವರ್ಷಗಳ ಹಿಂದೆ ಜನಾಂಗವು ನಿದ್ದೆ ಹೋಗಿದ್ದ ಕಾಲದಲ್ಲಿ ಅಖಿಲ ಭಾರತೀಯ ವೀರಶೈವ ಮಹಾಸಭೆಯನ್ನು ಸ್ಥಾಪಿಸಿದುದು ನಿಜವಾಗಿಯೂ ಕೌತುಕಾಸ್ಪದವಾದುದು. ಆ ಮಹಾ ಸ್ವಾಮಿಗಳವರಲ್ಲಿದ್ದ ಅದ್ವಿತೀಯವಾದ ಮುಂದಾಲೋಚನೆಯ ದ್ಯೋತಕವಾದುದು."

ಇವರ ಈ ನುಡಿಯು ಮೇಲಿಂದ ಕುಮಾರಯೋಗಿಗಳ ಶಕ್ತಿ ಸಾಮರ್ಥ್ಯವನ್ನು, ಮುಂಧೋರಣೆಯನ್ನು ಅರಿತುಕೊಂಡು ಇಂದು ಅವರು ತೋರಿದ ದಾರಿಯಲ್ಲಿ ಕಾರ್ಯ ಪ್ರವೃತ್ತರಾದರೆ ಸಮಾಜದ ಕಲ್ಯಾಣ ಸಾಧ್ಯ.

ಇದೀಗ ದೇಶದಲ್ಲಿ ಕಾಣತಕ್ಕ ವೀರಶೈವ ವಿದ್ಯಾರ್ಥಿ ನಿಲಯಗಳು, ವಿದ್ಯಾರ್ಥಿವೇತನ ನಿಧಿಗಳು, ಸ್ಕೂಲು ಕಾಲೇಜುಗಳು ಶಿವಯೋಗಮಂದಿರದಂತಹ ಮಹಾಸಂಸ್ಥೆಗಳು, ಪಾಠಶಾಲೆಗಳು ಜನ್ಮತಾಳಿ ಬೆಳಗುತ್ತಿರುವದು ಅಖಿಲ ಭಾರತ ವೀರಶೈವ ಮಹಾ ಸಭೆಯಿಂದ ಜನಜಾಗೃತಿಯುಂಟಾಗಿ ಶಿಕ್ಷಣ ಪ್ರಸಾರ ಸಾಮಾಜಿಕ ಚಟುವಟಿಕೆಗಳು ದಿನೇ ದಿನೇ ಪ್ರವರ್ಧಮಾನವಾಗಹತ್ತಿದವು. ಇದಕ್ಕಾಗಿ ಶಿರಸಂಗಿ ಲಿಂಗರಾಜರು, ರಾವಬಹೂದ್ದೂರ್ ಅರಟಾಳ ರುದ್ರಗೌಡರು, ಮ. ಮೋಟಿನ ಕಾಯಿ ಸಾಹೇಬರು, ಕಿತ್ತೂರು ಸಾಹೇಬರು, ಸರ್. ಕೆ. ಪಿ. ಪುಟ್ಟಣ್ಣಶೆಟ್ಟರು, ಸೊನ್ನಲಾಪುರದ ವಾರದಮಲ್ಲಪ್ಪನವರು, ಹಂದಿಗನೂರು ಬುಳ್ಳಪ್ಪ ಬಸವಂತಪ್ಪ ದೇಸಾಯಿಯವರು, ಧಾರವಾಡದ ಸವದತ್ತಿ ಮೂಗಪ್ಪನವರು, ದೇವಿಹೊಸೂರು ಶೆಟ್ಟರು ಮುಂತಾದ ಪ್ರಮುಖರು ಟೊಂಕಕಟ್ಟಿ ನಿಂತರು. ಇತ್ತ ಹಾನಗಲ್ಲ ಕುಮಾರ ಸ್ವಾಮಿಗಳವರು ಹುಬ್ಬಳ್ಳಿ, ಬಾಗಲಕೋಟೆ, ಹಾವೇರಿ, ರೋಣ, ಹುಕ್ಕೇರಿ, ಅನಂತಪುರ, ಕೆಳದಿ, ಅಬ್ಬಿಕೇರಿ, ನೀರಲಗುಂಭ, ಚಿತಾಪುರ ಮುಂತಾದ ಊರುಗಳಲ್ಲಿ ಪಾಠಶಾಲೆಗಳನ್ನು ತೆರೆದು ಸಂಸ್ಕೃತ ಹಾಗೂ ಧಾರ್ಮಿಕ ವಿದ್ಯಾ ಪ್ರಚಾರವನ್ನು ಮಾಡಹತ್ತಿದರು. ಅವುಗಳಿಗಾಗಿ ನಿಧಿಯನ್ನು ಸಹ ಸಂಗ್ರಹಿಸಿದರು. ಅಖಿಲ ಭಾರತ ವೀರಶೈವ ಮಹಾಸಭೆಯ ಅಧಿವೇಶನವನ್ನು ದೊಡ್ಡ ದೊಡ್ಡ ನಗರಗಳಲ್ಲಿ ಯಶಸ್ವಿಯಾಗಿ ನೆರವೇರಿಸಿ ಒಕ್ಕಟ್ಟು ಹಾಗೂ ಧೈರ್ಯೋತ್ಸಾಹಗಳು

ಮೂಡಿ ಬರುವಂತೆ ಪ್ರಯತ್ನ ಮಾಡಿ ಜನರನ್ನು ಚೇತರಿಸಿದರು. ದಾನವೀರ ಲಿಂಗರಾಜರನ್ನು ತಮ್ಮ ಸರ್ವ ಸಂಪತ್ತನ್ನು ಸಾರ್ವಜನಿಕ ಕಲ್ಯಾಣಕ್ಕಾಗಿ ಧಾರೆಯೆರೆಯಲು ಪ್ರೇರೇಪಿಸಿದವರು ಕುಮಾರ ಯೋಗಿಗಳೇ. ವಚನಶಾಸ್ತ್ರ ಪಿತಾಮಹ ಲಿಂ. ಡಾ. ಫ. ಗು. ಹಳಕಟ್ಟಿಯವರಿಗೆ ವಚನಸಾಹಿತ್ಯವನ್ನು ಬೆಳಕಿಗೆ ತರಲು ಪ್ರೇರಣೆ ನೀಡಿದವರು ಕುಮಾರಶಿವಯೋಗಿಗಳೇ.

ಜನ್ಮಾಂಧರಾದ ಲಿಂ. ಗಾನಯೋಗಿ ಶ್ರೀ ಪಂಚಾಕ್ಷರ ಗವಾಯಿಗಳನ್ನು ಮಠದಾಶ್ರಯದಲ್ಲಿ ಸಾಕಿ ಸಲುಹಿ, ೮–೧೦ ಸಹಸ್ರ ರೂಪಾಯಿಗಳನ್ನು ತಂಜಾವೂರಿನ ಸಂಗೀತ ನಿಪುಣರು ಹಾಗೂ ಇನ್ನುಳಿದ ಗಾನಪಂಡಿತರಿಗೆ ನೀಡಿ ಗಾನವಿದ್ಯೆಯನ್ನು ಕಲಿಸಿ ಸಂಗೀತ ವಿದ್ಯೆಯಲ್ಲಿ ಪರಿಪೂರ್ಣ ಪಂಡಿತರನ್ನಾಗಿ ಮಾಡಿ, ವೈರಾಗ್ಯದ ದಾರಿಯನ್ನು ತೋರಿಸಿ, ಪ್ರಜ್ಞಾಚಕ್ಷುಗಳನ್ನಾಗಿ ಮಾಡಿ, ಕುರುಡ–ಕುಂಟರಾದ ಸರ್ವಧರ್ಮದವರಿಗೆ ಉಚಿತಗಾನ ವಿದ್ಯೆಯನ್ನು ನೀಡಿ ಜನಹಿತ ಗೈವಂತೆ ಬೋಧಿಸಿ, ಜಗದ್ವಿಖ್ಯಾತರಾಗುವಂತೆ ಆಶೀರ್ವದಿಸಿ ಪ್ರೇರಣೆ ನೀಡಿದವರು ಕುಮಾರ ಯೋಗಿಗಳೇ. ಪಂ. ಪಂಚಾಕ್ಷರ ಗವಾಯಿಗಳವರ ಅಪಾರ ಶಿಷ್ಯ ಸಂಪತ್ತು ಸಹಸ್ರಾರು ಸಂಖ್ಯೆಯಲ್ಲಿ ಇದೀಗ ಭಾರತದ ತುಂಬ ಹರಡಿ ಗಾನ ವಿದ್ಯೆಯನ್ನು ಪ್ರಚಾರ ಮಾಡುತ್ತ ಜೀವನ ಸಾಗಿಸುತ್ತಿರುವದನ್ನು ನಾವಿಂದು ಕಣ್ಣಾರೆ ಕಾಣುತ್ತಿದ್ದೇವೆ, ಪಂಚಾಕ್ಷರ ಪ್ರಕಾಶವನ್ನು ನೋಡಿ ನಲಿಯುತ್ತಿದ್ದೇವೆ. ಉಭಯ ಗಾಯನಾಚಾರ್ಯ ಲಿಂ. ಪಂಚಾಕ್ಷರ ಗವಾಯಿಗಳಿಗೆ ಕುಮಾರ ಯೋಗಿಗಳೆಂದರೆ ಪಂಚಪ್ರಾಣ. ಲಿಂ. ಕುಮಾರ ಯೋಗಿಗಳ ಆದೇಶದಂತೆ ಚಾಚೂ ತಪ್ಪದಂತೆ ನಡೆದು ಅವರ ಪ್ರಭೆಯನ್ನು ಬೆಳಗಿಸಿದವರು ನೈಷ್ಠಿಕ ಬ್ರಹ್ಮಚಾರಿ, ಶಿವಲಿಂಗಾನಂದ ವಿಹಾರಿ ಪಂಚಾಕ್ಷರ ಗವಾಯಿಗಳು.

ಇಂದು ಲಿಂ. ಪಂಚಾಕ್ಷರ ಗವಾಯಿಗಳ ಪಟ್ಟಶಿಷ್ಯರಾದ ಕವಿರತ್ನ, ಸಂಗೀತ ಸಾಹಿತ್ಯ ವಿಶಾರದರಾದ ಪಂ. ಪುಟ್ಟರಾಜ ಕವಿಗಳು ಗುರುವಿನ ಕಾರ್ಯವನ್ನು ಮುಂದುವರೆಸಿಕೊಂಡು ಬಂದಿದ್ದಾರೆ. "ಹಾನಗಲ್ಲ ಕುಮಾರೇಶ್ವರ ಕೃಪಾಪೋಷಿತ ಸಂಗೀತ ವಿದ್ಯಾಲಯ" ಹಾಗೂ ವೀರೇಶ್ವರ ಪುಣ್ಯಾಶ್ರಮವು ನಾಡಿನ ತುಂಬ ಬೆಳಗುವಂತೆ ಮಾಡಿದ್ದಾರೆ. ಜನ್ಮಾಂಧರಿಗೂ ಕೀರ್ತನ ಕಲಾವಂತರಿಗೂ ಆಶ್ರಯದಾತರಾಗಿದ್ದಾರೆ. ಅವರು ರಾಷ್ಟ್ರಪ್ರಶಸ್ತಿಯನ್ನು, ಕರ್ನಾಟಕ ವಿಶ್ವವಿದ್ಯಾಲಯದಿಂದ ಡಾಕ್ಟರೇಟ ಪದವಿಯನ್ನು ಪಡೆದು, ಲಿಂಗಪೂಜಾನಿಷ್ಠರಾಗಿ ಕಂಗೊಳಿಸುತ್ತಿರುವದನ್ನು ನೋಡಿ ಯಾರಿಗೆ ತಾನೇ ಆನಂದವಾಗಲಿಕ್ಕಿಲ್ಲ? ಇವೆಲ್ಲವೂ ಕುಮಾರೇಶನ ಅಂತಃಕರುಣೆ.

ಅಖಂಡ ಕರ್ನಾಟಕದಲ್ಲಿ ಬಹು ದೊಡ್ಡ ಶಿಕ್ಷಣ ಸಂಸ್ಥೆಯಾದ ಕೆ.ಎಲ್.ಇ. ಸೊಸೈಟಿಯ ಸ್ಥಾಪನೆಗೆ ಪ್ರೇರಕರು ಕುಮಾರ ಯೋಗಿಗಳೇ. ಹೀಗೆ ಅವರು

ಒಂದಲ್ಲ ಎರಡಲ್ಲ ಹತ್ತಾರು ಸಂಸ್ಥೆಗಳ ಪ್ರೇರಕರು ಮತ್ತು ಪೋಷಕರು ಆಗಿದ್ದರು.

ಪತ್ರಿಕೆಗಳು ಜನಜೀವನದ ಪ್ರತಿಬಿಂಬ. ಧಾರ್ಮಿಕ ಜಾಗೃತಿ ಹಾಗೂ ಸಮಾಜೋದ್ಧಾರ ಮಾಡಲು ಪತ್ರಿಕೆಗಳು ಅತ್ಯಗತ್ಯವೆಂದು ಭಾವಿಸಿ "ಧರ್ಮ ತರಂಗಿಣಿ" ಮಾಸಿಕ ಮತ್ತು "ಶಿವಪ್ರತಾಪ" ಎಂಬ ವಾರ ಪತ್ರಿಕೆಯನ್ನೂ ಪ್ರಾರಂಭಿಸಲು ಪ್ರೋತ್ಸಾಹಿಸಿದ್ದರು, ಪೋಷಿಸಿದ್ದರು. ಅಚ್ಚುಕೂಟವನ್ನು ಸಹ ಸಹಕಾರ ಪದ್ಧತಿಯಲ್ಲಿ ನಿಧಿಸಂಗ್ರಹಿಸಿ ಸಂಸ್ಥಾಪಿಸಿದ್ದರು. ಸಮಾಜದ ಬಗ್ಗೆ ಯಾವ ಮೂಲೆಯಲ್ಲಿಯೇ ಯಾವದೇ ಕೊರತೆಯುಂಟಾಗಲಿ, ಅಲ್ಲಿಗೆ ಧಾವಿಸುತ್ತಿದ್ದರು, ಅದರ ಕೊರತೆಯನ್ನು ನೀಗಿಸುತ್ತಿದ್ದರು. ಸಮಾಜದ ಏಳಿಗೆಗೆ ಕಾರಣರಾಗುತ್ತಿದ್ದರು. ಪ್ರಕಾಂಡ ಪಂಡಿತರೂ ಪರಮ ತಪಸ್ವಿಗಳೂ ಆದ ಲಿಂ. ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಗಂಗಾಧರ ಮಹಾಸ್ವಾಮಿಗಳು ಮೂರುಸಾವಿರ ಮಠ ಹುಬ್ಬಳ್ಳಿ ಅವರ ಘನ ಅಧ್ಯಕ್ಷತೆಯಲ್ಲಿಯೇ ಬಂಕಾಪುರದಲ್ಲಿ ಧರ್ಮೋತ್ತೇಜಕ ನಾಮಾಂಕಿತ ಸಭೆಯೊಂದನ್ನು ೧೯೦೪ ರಲ್ಲಿ ನೆರವೇರಿಸಿ ಧಾರ್ಮಿಕ ಜಾಗೃತಿಗೈದರು. ಮತ್ತಿಷ್ಟು ಸುಂದರ ಸುವ್ಯವಸ್ಥಿತ ರೀತಿಯಲ್ಲಿ ಸಮಾಜದ ರಥವು ಸಾಗಬೇಕಾದರೆ ಅಖಿಲ ಭಾರತ ವೀರಶೈವ ಮಹಾಸಭೆಯ ಅಂಗವಾಗಿ ಅಖಿಲ ಭಾರತ ವೀರಶೈವ ಮಹಿಳಾಪರಿಷತ್ತು, ವೀರಶೈವ ತರುಣ ಪರಿಷತ್ತು, ಶಿಕ್ಷಣ ಸಮ್ಮೇಲನ, ವೈದ್ಯ ಸಮ್ಮೇಲನ ಮುಂತಾದ ಮಹತ್ವಪೂರ್ಣ ಸಮ್ಮೇಲನಗಳನ್ನು ಸ್ಥಾಪಿಸಿ, ಸಮಾಜದಲ್ಲಿ ವಿದ್ಯಾಭಾಸ್ಕರನು ಪ್ರಕಾಶಿಸುವಂತೆ ಕಾರ್ಯಗೈದವರಲ್ಲಿ ಕುಮಾರ ಯೋಗಿಗಳೇ ಮೊದಲಿಗರು. ಅಲ್ಲಲ್ಲಿ ವಾಚನ ಮಂದಿರಗಳನ್ನು ಸ್ಥಾಪಿಸಿದರು. ಅನೇಕ ಸಂಸ್ಕೃತ ಪಂಡಿತರನ್ನು ಮದ್ರಾಸ ತ್ರಾವಣಕೋರ ನಗರಗಳಿಗೆ ಕಳುಹಿಸಿ ಪ್ರಾಚೀನ ಗ್ರಂಥ ಸಂಶೋಧನೆಗೆ ಸಹಾಯ ಮಾಡಿದರು. ಕುಮಾರಯೋಗಿಗಳ ಪರಿಶ್ರಮದಿಂದ ಹುಳದ ಬಾಯಿಗೆ ಹಾಳಾಗಿ ಹೋಗುತ್ತಿದ್ದ ವಾಙ್ಮಯ ಬದುಕಿ ಬೆಳಕಿಗೆ ಬಂದಿತು.

ಅಖಿಲ ಭಾರತ ವೀರಶೈವ ಮಹಾಸಭೆಯಿಂದ ನಿದ್ರಿಸುತ್ತಿದ್ದ ವೀರಶೈವ ಸಮಾಜವು ಜಾಗೃತಗೊಂಡಿತು. ಜನಜೀವನದಲ್ಲಿ ಅಭಿಮಾನಾಂದಕರ ಹುಟ್ಟಿತು. ಲಿಂ. ಹಾನಗಲ್ಲ ಕುಮಾರ ಸ್ವಾಮಿಗಳು ಇರುವವರೆಗೆ ಬೆಳೆಯಿತು ಬೆಳಗಿತು. ಹೆಮ್ಮರವಾಯಿತು. ಫಲವನ್ನು ನೀಡಿತು.

ಅದು ಇದೀಗ ಏನಾಗಿದೆ? ಏನಾಗುತ್ತಿದೆ? ಬರೆಯಲು ದುಃಖವಾಗುತ್ತದೆ. ಕುಮಾರ ಯೋಗಿಗಳು ಲಿಂಗೈಕ್ಯರಾದ ನಂತರ ಎನಿತೋ ಸಭೆಗಳು ಜರುಗಿದವು. ಆ ಸಭೆಗಳಿಂದ ಸಮಾಜದ ಕಲ್ಯಾಣವೆಂತು ಸಾಧಿಸಿದೆ? ಬರೆಯುವರು ಈ ವಿಚಾರವನ್ನು ಪ್ರಶ್ನಿಸಿದರೆ ಮುಖ ತಗ್ಗಿಸಬೇಕಾಗುತ್ತದೆ. ಒಕ್ಕಟ್ಟು ಸಾಧಿಸುವ ಬದಲು ಪಕ್ಷ-ಪಂಗಡಗಳು ಬೆಳೆಯ ಹೊರಟಿವೆ. ಭಾವೈಕ್ಯವು ಮಾತಿನ ಮಾಲೆಯಾಗಿದೆ. ಮಾತಿನಲ್ಲಿ ಮಾನವತೆ ಹೆಚ್ಚಾಗಿದೆ. ಆದರೆ ಹೃದಯದಲ್ಲಿ ದಾನವತೆ ತಾಂಡವಾಡು

ತ್ತಿದೆ. ಕೃತಿಯಲ್ಲಿ ಕೃತ್ರಿಮತೆ ಬೆಳೆದು ಕೃತಘ್ನತೆ ತಲೆದೋರುತ್ತಿದೆ. ಒಬ್ಬರು ಒಂದು ಸಾಧಿಸಿದರೆ, ಮತ್ತೊಬ್ಬರು ಮತ್ತೊಂದನ್ನು ಸಾಧಿಸುತ್ತಿದ್ದಾರೆ. ಪ್ರತಿಯೊಬ್ಬರಿಗೂ ಪ್ರತಿಷ್ಠೆಯ ಪೆಡಂಭೂತ ಬೆನ್ನುಹತ್ತಿದೆ. ಸಮಾಜ ಕಳಕಳಿಯು ಅಳಿದಿದೆ. ಎಲ್ಲರೂ ಅಭಿಮಾನ ಶೂನ್ಯರಾಗಿದ್ದಾರೆ. ದುರಭಿಮಾನಕ್ಕೆ ಒಡಿದಾಡುತ್ತಿದ್ದಾರೆ. ನೆರೆ-ಹೊರೆಯವರ ಬೆಳವಣಿಗೆಯನ್ನು ನೋಡಿಯೂ ಕಣ್ಣು ಮುಚ್ಚಿಕೊಂಡಿದ್ದಾರೆ. ಕಾರ್ಯಕರ್ತರನ್ನು ಕಂಡು ವ್ಯಂಗ್ಯೋಕ್ತಿಯಿಂದ ನುಡಿಯುತ್ತಿದ್ದಾರೆ, ಅಲ್ಲಗಳೆಯುತ್ತಿದ್ದಾರೆ. ಕುಮಾರ ಯೋಗಿಗಳು ಹಚ್ಚಿದ ವೃಕ್ಷಕ್ಕೆ ಸಿಹಿ ನೀರೆರೆಯುವ ಬದಲು ಉಪ್ಪು ನೀರು ಹಾಕುತ್ತಿದ್ದಾರೆ. ಹೀಗಾಗಿ ಪ್ರತಿಯೊಂದು ಕ್ಷೇತ್ರದಲ್ಲಿ ಅಸಹಕಾರದ ಬೇರುಗಳು ಬೆಳೆಯುತ್ತಿವೆ. ತಿಳಿವಳಿಕೆಯುಳ್ಳವರೆನ್ನುವವರು ಸಮಾಜದ ಬೆಳೆಗೆ ಮೌಢ್ಯದ ಭಿನ್ನ ಭಾವನೆಗಳ ಕಸವನ್ನು ಬಿತ್ತುತ್ತಿದ್ದಾರೆ. ಆ ಕಸದ ಕೊಳೆಯನ್ನು ಕಳೆಯ ಹೋದರೆ, ಬರದಂತೆ ಮುಳ್ಳು ಬೇಲಿ ಹಚ್ಚಿ ಸ್ವಾರ್ಥ ಸಾಧಿಸುತ್ತಿದ್ದಾರೆ. ಸಮಾಜದ ದುಡ್ಡು ದುರ್ವಿನಿಯೋಗದ ಕಡೆ ದಾರಿ ಹಿಡಿದಿದೆ. ಧರ್ಮ-ಸಂಸ್ಕೃತಿಯ ಅಭಿವೃದ್ಧಿಗೆ ನೀಡೆಂದರೆ ದೂರೀಕರಿಸುತ್ತಾರೆ. ಒಳಪಂಗಡಗಳು ಬೆಳೆದು ಬೇರ್ಬಿಟ್ಟಿವೆ. ಸಮಾಜವು ಒಡೆದ ಗಡಿಗೆಯಾದಂತಾಗಿದೆ.

ಯಾವ ಶಿವಯೋಗಿಯು ಘನತರ ಮುಕ್ತಿಗಿಂತ ಸ್ವಸಮಾಜದ ಸೇವೆಯೇ ಶ್ರೇಷ್ಠವೆಂದು ಬಗೆದು ಗಂಧದ ಕೊರಡಿನಂತೆ ದೇಹವನ್ನು ಸವೆಯಿಸಿ, ಅಖಿಲ ಭಾರತ ವೀರಶೈವ ಮಹಾಸಭೆಯನ್ನು ಸಂಸ್ಥಾಪಿಸಿ, ತನ್ಮುಖಾಂತರ ಧಾರ್ಮಿಕ, ಶೈಕ್ಷಣಿಕ, ಸಾಮಾಜಿಕ ಕ್ಷೇತ್ರಗಳಲ್ಲಿ ಒಕ್ಕಟ್ಟನ್ನು ಸಾಧಿಸಿ ಸಮಾಜವನ್ನು ಪುನಶ್ಚೇತನಗೊಳಿಸಿದನೋ, ಉತ್ತಮ ಸಂಸ್ಕೃತಿಯ ಪ್ರಭಾವ ಅಳಿಯದಂತೆ ಭದ್ರ ಬುನಾದಿಯನ್ನು ಹಾಕಿರುವನೋ ನುಡಿಯಲು, ನಡೆಯಲು ಕಲಿಸಿ ಶಕ್ತಿ ಕೊಟ್ಟಿರುವನೋ, ಅಂತಹ ಕಾರಣಿಕ ಮಹಾಪುರುಷನನ್ನು ಮರೆತರೆ, ಮಹಾಸಭೆಯ ಧ್ಯೇಯ ಧೋರಣೆಯನ್ನು ಕೃತಿಯಲ್ಲಿ ತಾರದಿದ್ದರೆ ಸಮಾಜಕ್ಕೆ, ಮಾತೃ ಸಂಸ್ಥೆಗೆ ದ್ರೋಹ ಬಗೆದಂತಲ್ಲವೇ? ಕುಮಾರೇಶನ ಆತ್ಮಕ್ಕೂ, ಅಂದು ದುಡಿದ ವೀರಶೈವ ಸಮಾಜದ ಅಭಿಮಾನಿಗಳ ಆತ್ಮಕ್ಕೆ ಅಸಂತೃಪ್ತಿ ಮಾಡಿದಂತಲ್ಲವೆ? ಅಖಿಲ ವೀರಶೈವ ಸಮಾಜದ ಪ್ರಮುಖರು ಹಾಗೂ ಸ್ವಾಮಿಗಳು ಇತ್ತ ಗಮನಿಸಬಹುದೆ? ಮಾತೃ ಸಂಸ್ಥೆಯಾದ ಮಹಾಸಭೆಯ ಬಗ್ಗೆ ಅಭಿಮಾನ ವಹಿಸಿದುಡಿಯಬಹುದೆ?

ಶಿವಯೋಗಮಂದಿರ ಸ್ಥಾಪನೆ

ಹಾನಗಲ್ಲ ಕುಮಾರ ಶಿವಯೋಗಿಗಳು ಅಖಿಲ ಭಾರತ ವೀರಶೈವ ಮಹಾ ಸಭೆಯನ್ನು ಸಂಸ್ಥಾಪಿಸಿದರು. ಅದರಿಂದ ಸಾಮಾಜಿಕ ಕ್ರಾಂತಿಯನ್ನು ಮಾಡಿ ಜನ ಜಾಗೃತಿಗೈದರು. ಸಮಾಜದಲ್ಲಿರುವ ಅನೈಕ್ಯತೆಯನ್ನು ತೊಲಗಿಸಿದರು. ಅಶಿಕ್ಷಿತರನ್ನು ಸುಶಿಕ್ಷಿತರನ್ನಾಗಿ ಮಾಡಿದರು. ಅವರ ಹೃದಯ ಭೂಮಿಯಲ್ಲಿ ಸದ್ಗುಣಗಳೆಂಬ ಉತ್ತಮ ಬೀಜಗಳನ್ನು ಬಿತ್ತಿದರು. ಸಮಾಜದ ಕುಂದು ಕೊರತೆಗಳನ್ನು ದೂರಮಾಡಿ ಸಮಾಜೋತ್ಕರ್ಷದ ಸಮಾಲೋಚನೆಯಲ್ಲಿ ನಿರಂತರವೂ ಮಗ್ನರಾಗಿರುತ್ತಿದ್ದರು. ಕುಮಾರ ಯೋಗಿಗಳು ಇಷ್ಟೆಲ್ಲ ಸಮಾಜೋದ್ಧಾರದ ಕಾರ್ಯವನ್ನೆಸಗಿದರೂ ಮನಸ್ಸಿಗೆ ಸಂತುಷ್ಟಿಯಿರಲಿಲ್ಲ, ಸಂತೃಪ್ತಿಯಿರಲಿಲ್ಲ. ಕಲ್ಪನೆಯ ದವಡೆಯಲ್ಲಿ ಸತ್ಯ ಸಂಕಲ್ಪ ಸಿದ್ಧಿಗಾಗಿ ಮೆಲಕು ಹಾಕುತ್ತಿದ್ದರು. ಹಲವು ಬಗೆಯ ವಿಚಾರಗಳ ಸುರುಳಿಯನ್ನು ಸುತ್ತಿಕೊಂಡು ಚಿಂತಾಂಬುಧಿಯಲ್ಲಿ ಮುಳುಗುತ್ತಿದ್ದರು. ಭಕ್ತೋದ್ಧಾರಕ್ಕೆ ತಾಯಿ ಬೇರಿನಂತಿರುವ ಗುರುವಿರಕ್ತರ ಹೀನಾವಸ್ಥೆಯನ್ನು ಕಂಡು ಮರುಗುತ್ತಿದ್ದರು. ಸಮಾಜದ ಕಣ್ಣುಗಳಂತಿರುವ ಗುರುವಿರಕ್ತರು ಸುಧಾರಿಸದಿದ್ದರೆ ಸಮಾಜದಲ್ಲಿ ಭದ್ರತೆ, ಭವ್ಯತೆ ಬರಲಾರದೆಂದು ಬಗೆಯುತ್ತಿದ್ದರು. ಕುಳಿತಲ್ಲಿಯೇ ಧ್ಯಾನಾಸಕ್ತರಾಗಿ ಬಾಹ್ಯ ಪ್ರಪಂಚವನ್ನು ಮರೆಯುತ್ತಿದ್ದರು. ಕಾಳಿಕೆಯನ್ನು ಕಳೆದುಕೊಂಡ ಕನಕನಂತೆ ಕಂಗೊಳಿಸುತ್ತಿದ್ದರು.

ಹಾನಗಲ್ಲ ವಿರಕ್ತಮಠದಲ್ಲಿ ನಿತ್ಯ ನಿಯಮದಂತೆ ಬೆಳಗಿನ ನಾಲ್ಕು ಘಂಟೆಗೆ ಕುಮಾರಯೋಗಿಗಳು ಅನುಷ್ಠಾನದಲ್ಲಿ ಕುಳಿತು ಶಿವಧ್ಯಾನ ಶಿವಚಿಂತನೆಯಲ್ಲಿ ತನ್ಮಯರಾಗಿದ್ದಾರೆ. ಮನಸ್ಸನ್ನು ಅಂತರ್ಮುಖಿಯನ್ನಾಗಿ ಮಾಡಿದ್ದಾರೆ. ತದೇಕ ಚಿತ್ತದಿಂದ ಭಾವಾವಿಷ್ಟರಾಗಿದ್ದಾರೆ. ಧ್ಯಾನಮಗ್ನ ಶಿವನಂತೆ ಪರಿಶೋಭಿಸುತ್ತಿದ್ದಾರೆ. ಪಿಂಡಾಂಡದಲ್ಲಿಯ ಸೂರ್ಯ-ಚಂದ್ರ ನಾಡಿಗಳ ಗತಿಯನ್ನು ತಡೆದು, ಕೇವಲ ಕುಂಭಕದಲ್ಲಿದ್ದು ಶಿವಾರ್ಚನ ಶಿವಾರ್ಪಣ ಶಿವಾನಂದದಲ್ಲಿ ತಲ್ಲೀನರಾಗಿದ್ದಾರೆ. ಮೂರು ಲಿಂಗಗಳನ್ನರಿದು, ಲಿಂಗಕ್ಕೆ ಭಕ್ತಿಜಲವನ್ನೆರೆದು, ಹರುಷವೆಂಬ ಧೂಪವನ್ನು ಸಮರ್ಪಿಸಿ ಜ್ಞಾನದಾರ್ತಿಯನ್ನು ಹಚ್ಚಿದ್ದಾರೆ. ಜೀವಭಾವವನ್ನು ಮರೆತು ಪರತರ ಪ್ರಸಾದ ಸುಖವನ್ನುಂಡು ನಲಿದಿದ್ದಾರೆ. ಇಂತು ಕುಮಾರ ಶಿವಯೋಗಿಗಳು ಪೂಜೆ ಮಾಡಿ ಮುಗಿಸಿ ಕಣ್ದೆರೆದೊಡನೆಯೇ ಎತ್ತ ನೋಡಿದಡತ್ತ ಬೆಳಕಿನ ಮಿಂಚಿನ ಹೊನಲು ಹರಿದಂತಾಗಿ ಯೋಚನಾಪರರಾಗುತ್ತಾರೆ. ಶಿವಪೂಜಾ ಮಂದಿರದಲ್ಲಿಯೇ ಕುಳಿತುಕೊಂಡು ಅಂದೇ ಒಂದು ನಿರ್ಧಾರಕ್ಕೆ ಬರುತ್ತಾರೆ.

ಧಾರ್ಮಿಕಾಚರಣೆಗಳಲ್ಲಿದೇ ನಡೆಸುತ್ತಿರುವ ಮಠ ಮಂದಿರಗಳ ಶ್ರೇಯೋಭಿವೃದ್ಧಿಗಾಗಿ, ಸಂಯಮ ಜೀವನವನ್ನು ಪರಿಪಾಲಿಸುವ, ತ್ಯಾಗ ಹಾಗೂ ಯೋಗನಿಷ್ಠ ವಟುಗಳಿಗೆ ಒಳ್ಳೆಯ ಸಂಸ್ಕಾರನೀಡಿ, ಅವಿದ್ಯೆಯೆಂಬ ನೆರಳನ್ನು ಕಳೆದು, ಯೋಗ ವಿದ್ಯಾಕಿರಣವನ್ನು ಪ್ರಕಾಶಿಸುವ ಯೋಗ ಸಂಸ್ಥೆಯೊಂದನ್ನು ಸ್ಥಾಪಿಸಿ, ಧರ್ಮ ರಕ್ಷಣೆ ಮಾಡಬೇಕೆಂದು ಮನಸ್ಸಿನಲ್ಲಿ ಮೂಡಿಸಿಕೊಂಡು, ಶಿವಪೂಜಾಗೃಹದಿಂದ ಹೊರಗೆ ಬಂದು ಆಸನದಲ್ಲಿ ಆಸೀನರಾಗುತ್ತಾರೆ. ಪ್ರತಿನಿತ್ಯದಂತೆ ಶಿವಾನುಭವ ಪ್ರವಚನವನ್ನು ಪ್ರಾರಂಭಿಸುತ್ತಾರೆ. ಅಂದಿನ ಶಿವಾನುಭವವು ಶಿವಯೋಗವನ್ನು ಕುರಿತು ನಡೆಯುತ್ತದೆ. ಶ್ರೀ ನಿಜಗುಣರ "ಪಾರಮಾರ್ಥಪ್ರಕಾಶಿಕೆ"ಯನ್ನು ಕೈಯಲ್ಲಿ ಹಿಡಿದುಕೊಂಡು ಶಿವಯೋಗದ ವಿವರಣೆಯನ್ನು ಹೀಗೆ ನೀಡುತ್ತಾರೆ:

"ಪುರುಷ ಸಾಕ್ಷಾತ್ಕಾರವೇ ರಾಜಯೋಗವೆಂದು ಪೇಳ್ವರಾಗಿ, ಆ ರಾಜಯೋಗಂ ಶಿವಯೋಗವೆನಿಸಲರಿಯದು. ಆ ಶಿವಯೋಗವಾವುದೆಂದೊಡೆ– ಶಿವಶಕ್ತಿ ಸಂಪುಟಾಧಾರವಾದ ಮಹಾಕುಂಡಲಿ ಜನಿತಂಗಳಾದ ತಾರಕತ್ರಯ ಸಾಕ್ಷಾತ್ಕಾರ ದ್ವಾರದಿಂದಾ ಶಕ್ತಿಯಲ್ಲಿ ವೃತ್ತಿಜ್ಞಾನವಳಿದು, ಸರ್ವತೋಮುಖವಾಗಿ ನಿಂದ, ನಿಜಶಿವತತ್ವಾಭಿವ್ಯಕ್ತಿಯೆ ಶಿವಯೋಗವೆನಿಪ್ಪುದು."

ಎಲ್ಲ ಯೋಗಗಳಿಗಿಂತ ಶಿವಯೋಗ ಹೆಚ್ಚಿನದು. ಶಿವನಲ್ಲಿ ಕೂಡುವದೆ ಶಿವಯೋಗ, ಹಠಯೋಗದಿಂದ ಶರೀರ ಶುದ್ಧಿಯಾದರೆ, ಮಂತ್ರಯೋಗದಿಂದ ನುಡಿ ಶುದ್ಧವಾಗುತ್ತದೆ. ಲಯಯೋಗದಿಂದ ಉಸುರಿನ ಶುದ್ಧಿಯಾದರೆ, ರಾಜಯೋಗದಿಂದ ಚಿತ್ತವೃತ್ತಿನಿರೋಧವಾಗಿ ಜೀವನ ಶುದ್ಧಿಯಾಗುತ್ತದೆ. ಆದರೆ ಶಿವಯೋಗದಿಂದ ಜೀವಾತ್ಮನೆ ಶುದ್ಧಾತ್ಮನಾಗಿ ಪರಮಾತ್ಮನಾಗುತ್ತಾನೆ. ಯೋಗವು ಕೇವಲ ದೇಹ, ಮನಸ್ಸು ಬುದ್ಧಿಗಾಗಿ ಮೀಸಲಾಗಿರದೆ, ಅವೆಲ್ಲವುಗಳನ್ನು ಒಳಗೊಂಡು ಅವುಗಳಿಗೆ ಅತೀತವಾಗಿ ಚೈತನ್ಯ ಸ್ವರೂಪವಾಗಿ ವ್ಯಾಪಿಸಿರುತ್ತದೆ. "ನಾನು" ಎಂಬುದೆಲ್ಲವು ಅಳಿದಾಗ, ಶಿವಾರ್ಪಣ ಭಾವವು ಬಲಿದು ಸಮರಸವಾದಾಗ ಯೋಗಸಂಪ್ರಾಪ್ತಿ. ದೃಷ್ಟಿಶುದ್ಧಿಗೆ ಶಿವಯೋಗವೇ ಮೂಲ ಸಾಧನ. ಶಿವಯೋಗದ ಚರಮಗುರಿಯೇ ಲಿಂಗಾಂಗ ಸಾಮರಸ್ಯ. ಶಿವಜೀವರ ಐಕ್ಯವಾಗಿ ಬೇರಿಲ್ಲದಿರ್ಪುದೇ ಶಿವಯೋಗ. ಉಳಿದ ಯೋಗಗಳ ಸಾಧನ ಮಾತ್ರ, ಗಾತ್ರತ್ರಯವಳಿದು ಚಿತ್ರದ ಚಿದ್ಬಿಂದು ತೋರಿದಾಗ ನಾದಬ್ರಹ್ಮವ ಶೋಧಿಸಿ ಸುದೃಢ ಚಿತ್ತನಾದಾಗ ಶಿವಯೋಗ ಸಾಧ್ಯ. "ಅಳಿದು ಕೂಡುವುದೊಂದು ಯೋಗ. ಅಳಿಯದೇ ಕೂಡುವುದೊಂದು ಯೋಗ. ಈ ಎರಡು ಯೋಗಗಳಿಗೆ ಅಳಿಯದೇ ಕೂಡುವ ಯೋಗವರಿವುದು ಗುಹೇಶ್ವರಾ." ಪರಶಿವನ ಪ್ರಭೆಯಿಂದ ಅಂಗಕರಣಗಳನ್ನೆಲ್ಲ ಲಿಂಗಕರಣಗಳನ್ನಾಗಿ ಮಾಡಿಕೊಂಡು ಎರಡೆಂಬುದಳಿದು, ಶಿವಯೋಗ ರಹಸ್ಯದ ಸೂಕ್ಷ್ಮ ವಿವರಣೆಯನ್ನು ವೈರಾಗ್ಯ

ಚಕ್ರವರ್ತಿ ಅಲ್ಲಮಪ್ರಭುವಿನ ವಚನ ಹಾಗೂ ವೀರಶೈವ ಸಿದ್ಧಾಂತ ಗ್ರಂಥಗಳ ಆಧಾರದೊಡನೆ ವಿವರಿಸಿದರು. "ಇಂತಹ ಯೋಗಶಕ್ತಿಯನ್ನು ಪ್ರತಿಯೊಬ್ಬ ಮಠಾಧೀಶರು ಸಾಧನೆಯಿಂದ ಕಂಡುಕೊಂಡರೆ ಭಕ್ತೋದ್ಧಾರ ಸಾಧ್ಯ" ಎಂದು ಕುಮಾರ ಶಿವಯೋಗಿಗಳು ಹೇಳಿ ನಂತರ "ನಾವು ಇನ್ನು ಮುಂದೆ ಶಿವಯೋಗ ಸಂಪತ್ತನ್ನು ಹೆಚ್ಚಿಸುವ ಮತ್ತು ಚಿತ್ತಚಾಂಚಲ್ಯವನ್ನು ಅಡಗಿಸುವ, ಮನಸ್ಸಿಗೆ ಮಂಗಳ ಪ್ರಾಪ್ತಿ ನೀಡುವ ಯೋಗ ಸಂಸ್ಥೆಯನ್ನು ನಿರ್ಜನವಾದ ಪ್ರದೇಶದಲ್ಲಿ ಸ್ಥಾಪಿಸಬೇಕೆಂದು ಇಂದು ಶಿವಪೂಜೆಯಲ್ಲಿ ಕುಳಿತುಕೊಂಡಾಗ ನಿರ್ಧರಿಸಿಕೊಂಡಿದ್ದೇವೆ. ಇಷ್ಟು ದಿನಗಳವರೆಗೆ ನಿಮ್ಮೆಲ್ಲರ ಭಕ್ತಿ, ವಿಶ್ವಾಸ ಪ್ರೋತ್ಸಾಹದಿಂದ ಸಾಮಾಜಿಕ ಕಾರ್ಯವನ್ನು ಮಾಡಿದ್ದಾಯಿತು. ಭೌತಿಕ ಶಕ್ತಿಗಿಂತಲೂ ಆಧ್ಯಾತ್ಮಿಕ ಶಕ್ತಿಯು ಹೆಚ್ಚಿನದು. ಈ ದೈವಿಶಕ್ತಿಯನ್ನು ಹೆಚ್ಚಿಸುವುದಕ್ಕಾಗಿ ಆಚಾರ ವಿಚಾರ ದಿಂದ ಪರಿಪೂರ್ಣರಾದ ತೇಜಸ್ವೀ ವಟುಗಳನ್ನು ಪ್ರತಿಯೊಂದು ಮಠಗಳಿಗೆ ನೀಡಿದರೆ ಮಠಗಳು ಸುವರ್ಣಘಟಕಗಳಂತೆ ಬೆಳಗಿ ಸಮಾಜೋದ್ಧಾರ ಮಾಡಲು ಸಹಾಯವಾಗಬಲ್ಲುದು. ಈ ಹಿಂದೆ ನಮಗೆ ಪ್ರೋತ್ಸಾಹ ನೀಡಿದಂತೆ, ಈ ಸಂಸ್ಥೆಯ ಸ್ಥಾಪನೆಗಾಗಿ, ಅದರ ಸ್ಥಿರತೆಗಾಗಿ ನಿಮ್ಮೆಲ್ಲರ ಸಹಾಯ ಸಹಕಾರ "ಅತ್ಯಗತ್ಯ" ಎಂದು ಈ ಪ್ರವಚನವನ್ನು ಮುಗಿಸುವಷ್ಟರಲ್ಲಿಯೇ, ಧನವೈರಾಗ್ಯ ಶಾಲಿಗಳಾಗಿದ್ದ ಬಾಗಲಕೋಟೆಯ ಮಲ್ಲಣಾರ್ಯರು ಹಾನಗಲ್ಲ ವಿರಕ್ತಮಠದೊಳಗೆ ಪ್ರವೇಶ ಮಾಡಿ, ಕುಮಾರಸ್ವಾಮಿಗಳವರಿಗೆ ನಮಸ್ಕರಿಸಿ, ಅಲ್ಲಿಯೇ ಎದ್ದು ನಿಂತು ಕೆಲವು ಪ್ರಶ್ನೆಗಳನ್ನು ಕೇಳಲು ಪ್ರಾರಂಭಿಸುತ್ತಾರೆ:

ಇಂದು ಧಾರ್ಮಿಕ ಕ್ರಾಂತಿಯಾಗಬೇಕಾದರೆ ತಪಸ್ಸು ಅತ್ಯವಶ್ಯ. ಅಧರ್ಮ ವೃತ್ತಿಯು ಅಳಿದು, ಸ್ವಧರ್ಮವೃತ್ತಿಯು ಬೆಳೆದು ಜಾಗ್ರತಾವಸ್ಥೆಗೆ ಬರಬೇಕಾದರೆ ರಾಜಸತ್ತೆಯು ಇದೀಗ ಇಲ್ಲದಾಗಿದೆ ರಾಜಸತ್ತೆಗಿಂತಲೂ ಪ್ರಬಲವಾದ ತಪೋ ಬಲದಿಂದ ಧರ್ಮದ ಜೀರ್ಣೋದ್ಧಾರವನ್ನು ಮಾಡಲು ಸಾಧ್ಯವಿದೆ. ಬಂಧ ಮೋಕ್ಷ ಗಳಿಗೆ ಮೂಲಕಾರಣವಾಗಿರುವ ಮನಸ್ಸಿನ ನಿರೋಧಕ್ಕೆ ಯೋಗಸಾಧನೆಯೇ ಮೊದಲ ಮೆಟ್ಟಲು. ಈ ಯೋಗಸಾಧನೆಯು ಪವಿತ್ರ ಜೀವನ ಪಡೆದುಕೊಳ್ಳಲು ಪರಮ ಸಾಧನವಾಗುವದಲ್ಲದೆ ಧರ್ಮಧ್ವಜವನ್ನು ಎತ್ತರದಲ್ಲಿ ಹಾರಿಸಲು ಸಹಾಯವಾಗುತ್ತದೆ. ತತ್ವಾಧಿಕ್ಯದಿಂದ-ತಪೋಬಲದ ಮೇಲ್ಮೆಯಿಂದ ಅಹಿಂಸೆ, ಸತ್ಯ, ಬ್ರಹ್ಮಚರ್ಯ ಅಸ್ತೇಯಾದಿಗಳ ತಳಹದಿಯ ಮೇಲೆ ಸ್ಥಾಪಿತವಾದ ಧರ್ಮವು ಬಹುಕಾಲ ಬಾಳಬಲ್ಲುದು, ಬೆಳಗಬಲ್ಲುದು. ವೀರಶೈವ ಧರ್ಮದ ಹೆಚ್ಚಳವನ್ನು ಹೆಚ್ಚಿಸ ಬೇಕಾದರೆ ಆತ್ಮ ಬಲವೇ ದಾರಿದೀಪ. ತಾವೊಬ್ಬರೇ ಆತ್ಮೋದ್ಧಾರ ಮಾಡಿಕೊಂಡು ಜನಜಾಗೃತಿ ಮಾಡುತ್ತಿದ್ದೀರಿ. ಆತ್ಮ ಸಾಮರ್ಥ್ಯ ದಿಂದೊಡಗೂಡಿದ ತಮ್ಮ ಮಹಾನ್ ವ್ಯಕ್ತಿತ್ವವನ್ನು ಕೇಳಿ ಸಂತಸಗೊಂಡಿದ್ದೇನೆ.

ಇಷ್ಟರಿಂದಲೇ ವೀರಶೈವ ಸಮಾಜಕ್ಕೆ ತೃಪ್ತಿಯಾಗದು. ತಾವುಗಳು ಇನ್ನುಳಿದ ಮಠಗಳತ್ತ ಕಣ್ಣು ಹಾಯಿಸಿದರೆ ಅರ್ಥವಾಗುತ್ತದೆ. ಅವರೆಲ್ಲರೂ ಅಹಂಕಾರ ಮಮಕಾರದ ಸಂಕೋಲೆಗಳಲ್ಲಿ ಸಿಲುಕಿಕೊಂಡು, ಬಂಧು–ಬಾಂಧವರನ್ನು ತುಂಬಿ ಕೊಂಡು, ಆತ್ಮಬಲವನ್ನು ಕಳೆದುಕೊಂಡು, ಲಿಂಗನಿಷ್ಠೆ, ಆಚಾರ–ವಿಚಾರ ಹಾಗೂ ಭಕ್ತೋದ್ಧಾರವನ್ನು ಮರೆತು ಸುಮ್ಮನೆ ವ್ಯರ್ಥ ಕಾಲಹರಣ ಮಾಡುತ್ತಿದ್ದಾರೆ. ಅಂಥವರನ್ನು ಶೀಲ ಸಂಸ್ಕೃತಿಯತ್ತ ಕರೆದೊಯ್ದು ಶಿವಾನುಭವಿಗಳನ್ನಾಗಿ ಮಾಡಲು ಶಿವಯೋಗ ಶಿಕ್ಷಣವನ್ನು ನೀಡುವ ಒಂದು ಯೋಗ ಸಂಸ್ಥೆಯನ್ನು ಸಂಸ್ಥಾಪಿಸಿದರೆ, ಅದರಿಂದ ಸಮಾಜದ ಹಾಗೂ ಮಠಗಳ ಕಲ್ಯಾಣವಾದೀತು. ಇಲ್ಲದಿದ್ದರೆ ಶಿವಯೋಗಿ ಸಂಸ್ಕೃತಿಯು ಹಾಳಾಗಿ ದುರುಳ ವೇದಾಂತಿಗಳ ಪ್ರಚಾರ ಹೆಚ್ಚಾದೀತು! ಅದಕ್ಕಾಗಿ ತಾವುಗಳು ನನ್ನ ಮಾತಿನತ್ತ ಲಕ್ಷ್ಯ ವಹಿಸಿ, ಮನೋಧೈರ್ಯವನ್ನು ತಂದುಕೊಂಡು, ಯೋಗ ಸಂಸ್ಥೆಯನ್ನು ಸಂಸ್ಥಾಪಿಸಿ ಸಮಾಜ ಸೇವೆಯನ್ನು ಮಾಡುವ ಶಿವಯೋಗದ ಬೀಜವನ್ನು ಬಿತ್ತಿ ಯೋಗ ಸಂಸ್ಕೃತಿಯನ್ನುಳಿಸುವ ಸತ್ಯಸಂಕಲ್ಪ ಮಾಡಿರಿ. ಧಾರ್ಮಿಕ ಶಸ್ತ್ರಗಳಾದ ಜೋಳಿಗೆ ಬೆತ್ತಗಳನ್ನು ಹಿಡಿದು, ಆಚಾರ ನಿಷ್ಠೆಯೆಂಬ ಕುದುರೆಯನ್ನೇರಿ ಪ್ರಯಾಣ ಬೆಳಸಿದರೆ ಲಕ್ಷಾಂತರ ರೂಪಾಯಿಗಳ ರಾಶಿಯು ತಮ್ಮೆದುರಿಗೆ ಬಂದು ಬೀಳುವದು. ಆದುದರಿಂದ ಮಠಮಾನ್ಯಗಳನ್ನು ಬಿಟ್ಟು ಹೊರಡಲು ಸಿದ್ಧರಾಗಬೇಕು.

ಸಮಾಜದ ಕಳಕಳಿಯುಳ್ಳ ಹಾನಗಲ್ಲ ಕುಮಾರ ಶ್ರೀಗಳು ವೈರಾಗ್ಯನಿಧಿ ಮಲ್ಲಣಾರ್ಯರ ಈ ನುಡಿಯನ್ನು ಕೇಳಿದೊಡನೆಯೇ ಅತೀವ ಸಂತಸಗೊಂಡು, ಮತ್ತಿಷ್ಟು ಹುರುಪು ಉತ್ಸಾಹ ಹುಟ್ಟಿ ಮನಸ್ಸಿಗೆ ಸಮಾಧಾನವನ್ನುಂಟು ಮಾಡಿ ಕೊಂಡರು. ಶೂರನಿಗೆ ವೀರಗರ್ಜನೆ ಕೇಳಿದಂತಾಯ್ತು. ಮಲ್ಲಣಾರ್ಯರ ಮಾತಿಗೆ ಉತ್ತರರೂಪವಾಗಿ ಹಾನಗಲ್ಲ ಕುಮಾರಸ್ವಾಮಿಗಳು.

"ವೈರಾಗ್ಯಮೂರ್ತಿಗಳಾದ ಮಲ್ಲಣಾರ್ಯರೇ! ನೀವು ಯೋಚಿಸಿ ನಮಗೆ ತಿಳಿಸಿದ ಈ ವಿಚಾರವನ್ನು ಇಂದು ಮುಂಜಾನೆ ಶಿವಪೂಜಾಮಂದಿರದಲ್ಲಿಯೇ ನಿರ್ಧರಿಸಿಕೊಂಡು, ಇಂದಿನ ಪ್ರವಚನದಲ್ಲಿ ಅದೇ ವಿಷಯವನ್ನು ಪ್ರಸ್ತಾಪಿಸಿ ಹೇಳುತ್ತಿರುವಾಗ ನೀವು ಬಂದು ನಮಗೆ ಮತ್ತಿಷ್ಟು ಧೈರ್ಯವನ್ನು ನೀಡಿ, ನಮ್ಮ ಚಿಂತೆಯನ್ನು ದೂರ ಮಾಡಿದಿರಿ. ನಿಮ್ಮ ಸತ್ಯ ಸಂಕಲ್ಪವಾಗಿದೆ. ನಡೆಯುವವರಿಗೆ ಸುಗಮವಾದ ದಾರಿ ಸಿಕ್ಕಂತಾಯ್ತು. ಬಲವು ಬಂದಂತಾಯ್ತು. ನಮ್ಮ ಯೋಜನೆಯು ಫಲಕಾರಿಯಾದಂತಾಯ್ತು. ಇಂದೇ ಈ ಮಠದಿಂದ ಯೋಗ ಸಂಸ್ಥೆಯ ಸಂಸ್ಥಾಪನೆಗಾಗಿ ಹೊರಡುತ್ತೇವೆ. ಚಿಂತೆ ಮಾಡದಿರಿ" ಎಂದು ನುಡಿದು ಮಲ್ಲಣಾರ್ಯರಿಗೆ ಸ್ನಾನ ಶಿವಪೂಜಾದಿ ಕ್ರಿಯೆಗಳನ್ನು ತೀರಿಸಿಕೊಂಡು ಪ್ರಸಾದ

ಸೇವಿಸಲು ತಿಳಿಸಿದರು. ಆಧ್ಯಾತ್ಮದ ಹಸಿವಿನಲ್ಲಿ ಕೊರಗಿದ ಮಲ್ಲಣಾರ್ಯರಿಗೆ ಹಸಿದ ಹೊಟ್ಟೆಗೆ ಅನ್ನ ಸಿಕ್ಕಷ್ಟು ಆನಂದವಾಯ್ತು. ಇಂತಹ ಕಾರುಣಿಕ ಮೂರ್ತಿ ಮಹಾ ಶಿವಯೋಗಿಗಳನ್ನು ಕಂಡು ಕಣ್ಣು ಪಾವನಗೊಂಡವು. ಅವರೊಡನೆ ಸಂಭಾಷಿಸಿ ಧನ್ಯನಾದೆನು." ಎಂದೆನ್ನುತ್ತ ಮಲ್ಲಣಾರ್ಯರು ಮಠದಲ್ಲಿ ಶಿವಪೂಜೆ ತೀರಿಸಿಕೊಂಡು ಹಿಗ್ಗಿನ ಕಡಲಿನಲ್ಲಿ ಮುಳುಗಿದರು.

ಹಾನಗಲ್ಲ ಕುಮಾರ ಸ್ವಾಮಿಗಳು ಹಾನಗಲ್ಲಿನಿಂದ ಬಾಗಲಕೋಟೆಗೆ ದಯಮಾಡಿಸಿ, ಅಖಿಲ ಭಾರತ ವೀರಶೈವ ಮಹಾಸಭೆಯ ನಾಲ್ಕನೆಯ ಅಧಿವೇಶನವನ್ನು ಬಾಗಲಕೋಟೆಯಲ್ಲಿಯೇ ಜರುಗಿಸಬೇಕೆಂದು, ಸಮಾಜದವರ ಒಪ್ಪಿಗೆಯನ್ನು ಪಡೆದುಕೊಂಡು ಕಾರ್ಯಪ್ರವೃತ್ತರಾದರು. ಮಹಾಸಭೆಯ ವ್ಯವಸ್ಥೆಗಾಗಿ ಹಗಲಿರುಳು ಹಣವನ್ನು ಸಂಗ್ರಹಿಸಿದರು. "ಶ್ರೇಯಾಂಸಿ ಬಹುವಿಘ್ನಾನಿ" ಎಂಬಂತೆ ಇವರಿಗೆ ಸಹಾಯ ಸೌಕರ್ಯಗಳನ್ನು ಒದಗಿಸಿಕೊಡುತ್ತಿದ್ದ ಶ್ರೀ ಮಲ್ಲಣಾರ್ಯರಿಗೆ ದೀರ್ಘ ಅನಾರೋಗ್ಯವಾಗಿ ಮಲಗಿಬಿಟ್ಟರು. ಎಷ್ಟು ಉಪಚರಿಸಿದರೂ ಗುಣಮುಖವಾಗದೆ ಕೊನೆಗೆ ಆ ಅಜಾರಿಯಲ್ಲಿಯೇ ಲಿಂಗೈಕ್ಯರಾದರು.

ಈ ಘಟನೆಯಿಂದ ಹಾನಗಲ್ಲ ಕುಮಾರಸ್ವಾಮಿಗಳವರಿಗೆ ವಜ್ರಾಘಾತವಾದಂತಾಯ್ತು. ಆದರೂ ಎದೆಗುಂದದೆ ಸತ್ಯ ಸಂಕಲ್ಪವನ್ನು ಈಡೇರಿಸಲು ಸನ್ನದ್ಧರಾದರು. ಕ್ರಿಸ್ತಾಬ್ದ ೧೯೦೮ ರಂದು ಬಾಗಲಕೋಟೆಯಲ್ಲಿಯ ಅಖಿಲ ಭಾರತ ವೀರಶೈವ ಮಹಾಸಭೆಯನ್ನು ಕರೆಯಿಸಿ, ಆ ಸಭೆಯಲ್ಲಿ ಶಿವಯೋಗ ಮಂದಿರ ಸಂಸ್ಥೆಯ ಸ್ಥಾಪನೆಯ ವಿಷಯವನ್ನು ಇಡಿಸಿದರು. ಈ ವಿಚಾರವನ್ನು ಜನಾಂಗದಲ್ಲಿ ಪ್ರಚುರಪಡಿಸಿದರು. ಈ ಮಹಾಸಭೆಯು ಶ್ರೀಮಂತ ಲಖಮಗೌಡ ಬಸವಪ್ರಭು ಸರ್‌ದೇಸಾಯಿ ವಂಟಮುರಿ ಅವರ ಅಧ್ಯಕ್ಷತೆಯಲ್ಲಿ ಬಹು ವೈಭವದಿಂದ ಜರುಗಿತು. ಮರುದಿನ ಕಾರ್ಯಕಾರಿ ಸಮಿತಿಯು ಸೊನ್ನಲಾಪುರದ ಶ್ರೀಮಂತ ರಾವಬಹಾದ್ದೂರ ವಾರದ ಅಪ್ಪಾಸಾಹೇಬರ ಅಧ್ಯಕ್ಷತೆಯಲ್ಲಿ ಮಹಾತಪಸ್ವಿಗಳಾದ 'ವಿರಕ್ತ ಶಿಖಾಮಣಿ' ಚಿತ್ತರಗಿಯ ಶ್ರೀ ನಿ. ಪ್ರ. ವಿಜಯ ಮಹಾಂತ ಸ್ವಾಮಿಗಳು ಇಳಕಲ್ಲ ಅವರು ತೋರಿಸಿದ ಸ್ಥಾನದಲ್ಲಿ ಶಿವಯೋಗಮಂದಿರವನ್ನು ಸ್ಥಾಪಿಸಬೇಕೆಂದು ನಿಶ್ಚಿತವಾಯಿತು.

ಅಖಿಲ ಭಾರತ ವೀರಶೈವ ಮಹಾಸಭೆಯಲ್ಲಿ ತೀರ್ಮಾನವಾದ ವಿಷಯವನ್ನು ಹಾನಗಲ್ಲ ಕುಮಾರಸ್ವಾಮಿಗಳು ಭಕ್ತರೊಡಗೂಡಿ ಇಲ್ಲಕಲ್ಲಿಗೆ ಹೋಗಿ ಶ್ರೀ ವಿಜಯ ಮಹಾಂತ ಸ್ವಾಮಿಗಳಿಗೆ ಈ ಎಲ್ಲ ವಿಷಯವನ್ನು ಅರಿಕೆ ಮಾಡಿಕೊಂಡರು. ಅದಕ್ಕೆ ಅವರು ಒಪ್ಪಿಕೊಂಡರು. ಕೂಡಲೇ ಶ್ರೀ ಶಿವಯೋಗ ಮಂದಿರ ಸ್ಥಾಪಿಸುವ ಸ್ಥಾನದ ಸಂಶೋಧನೆಗಾಗಿ ಇಳಕಲ್ಲ ಶ್ರೀವಿಜಯ ಮಹಾಂತಸ್ವಾಮಿಗಳು, ಹಾನಗಲ್ಲ

ಕುಮಾರಸ್ವಾಮಿಗಳು ಹಾಗೂ ಅರಟಾಳ ರುದ್ರಗೌಡರು, ಅಂದು ಜಿಲ್ಲಾಧಿಕಾರಿಗಳಾಗಿದ್ದ ಕಿತ್ತೂರು ರೇವಣಸಿದ್ದಪ್ಪನವರು, ಜಿಗ್ಳಿ ಮುರುಗೆಪ್ಪನವರು ಮತ್ತು ಧಾರವಾಡ, ಗದಗ, ಬಾಗಲಕೋಟೆ ಮುಂತಾದ ನಗರಗಳ ೩೦–೪೦ ಭಕ್ತರೊಡಗೂಡಿ ಹುನಗುಂದ ಮಾರ್ಗವಾಗಿ ಐತಿಹಾಸಿಕ ಸ್ಥಾನವಾದ ಐಹೊಳೆಗೆ ಬಂದರು. ಇದು ಏಕಾಂತ ವಾಸಕ್ಕೆ ಯೋಗ್ಯವಾದ ಸ್ಥಾನವಲ್ಲವೆಂದು ಶ್ರೀ ವಿಜಯ ಮಹಾಂತಸ್ವಾಮಿಗಳವರ ಅನುಮತಿಯಂತೆ ಮತ್ತೆ ಮುಂದೆ ಪಟ್ಟದಕಲ್ಲಿನತ್ತ ನಡೆದರು. ಅಲ್ಲಿಯೂ ಶ್ರೀ ವಿಜಯ ಮಹಾಂತಸ್ವಾಮಿಗಳಿಂದ ಸಮ್ಮತಿ ದೊರೆಯಲಿಲ್ಲ. ಹಾಗೆಯೇ ಶ್ರೀ ವಿಜಯ ಮಹಾಂತಸ್ವಾಮಿಗಳವರು ಹೋದ ದಾರಿಯನ್ನು ಹಿಡಿದು ಈಗಿದ್ದ ಶಿವಯೋಗಮಂದಿರದ ಹತ್ತಿರ ಬಂದು ಕುಳಿತಿದ್ದನ್ನು ನೋಡಿ ಎಲ್ಲರೂ ಬೆರಗಾದರು. ಈಗಿನ ಶಿವಯೋಗಮಂದಿರದಂತೆ ಆಗ ಅದು ಇರಲಿಲ್ಲ. ಎತ್ತ ನೋಡಿದಡತ್ತ ಡಬಗಳ್ಳಿಯ ಸಾಲೇ ಸಾಲು, ಭಕ್ತರೆಲ್ಲರೂ ಭಯಭೀತರಾದರು. ಭಕ್ತರ ಭಯಗ್ರಸ್ತ ಮುಖವನ್ನು "ಶ್ರೀ ವಿಜಯ ಮಹಾಂತಸ್ವಾಮಿಗಳು ನೋಡಿ "ನೀವೇನು ಭಯಪಡುವ ಕಾರಣವಿಲ್ಲ. ನೊಂದವೆಯ ತಣಿಸಲು ಮಗ್ಗಲಲ್ಲಿ ಮಲಾಪಹಾರಿಣಿಯು ಹರಿದಿದ್ದಾಳೆ. ರಮಣೀಯ ವಾತಾವರಣವಿದೆ. ದಫ ದಫೆಯ ಧ್ವನಿಯು ಕಿವಿಗೆ ಇಂಪನ್ನು ನೀಡುತ್ತಿದೆ. ಬೆಟ್ಟದಾವರೆ ತರುಗಳಿವೆ. ಕಾಡುಮಲ್ಲಿಗೆಗಳು ಕಂಪು ಬೀರುತ್ತಿವೆ. ಹತ್ತಿರದಲ್ಲಿಯೇ ಬಿಲ್ವವನವಿದೆ. ಕೊಟ್ಟೂರ ಬಸವೇಶ್ವರನ ದೇವಸ್ಥಾನವಿದೆ. ಅನುಷ್ಠಾನಕ್ಕೆ ಆ ಸ್ಥಾನವು ಅನುಕೂಲವಾಗಿದೆ. ಪ್ರಕೃತಿ ಸೌಂದರ್ಯದ ಸೊಬಗು ತುಂಬಿದೆ. ಅಲ್ಲಲ್ಲಿ ಮಂಟಪಗಳಿವೆ. ಈ ಸ್ಥಾನದ ಸುತ್ತ – ಮುತ್ತ ಜಕ್ಕಣಾಚಾರ್ಯರ ಶಿಲ್ಪಕಲೆಯಿಂದೊಡಗೂಡಿದ ಐಹೊಳೆ, ಪಟ್ಟದಕಲ್ಲು, ಮಹಾಕೂಟ, ನಾಗನಾಥಮಂದಿರ ಮುಂತಾದವುಗಳು ಸಂಸ್ಕೃತಿಯ ಗೂಡಾಗಿ ನಿಂತಿವೆ. ಅದಕ್ಕಾಗಿ ಶಿವಯೋಗಮಂದಿರವನ್ನು ಸ್ಥಾಪಿಸಲು ಇದುವೆ ಯೋಗ್ಯ ತಾಣ" ಎಂದು ಅಪ್ಪಣೆಕೊಡಿಸಿದರು. ಭಕ್ತರು ಸ್ವಲ್ಪ ಸಂಕೋಚಪಟ್ಟರು. ಆದರೆ ಹಾನಗಲ್ಲ ಕುಮಾರ ಮಹಾಸ್ವಾಮಿಗಳು ಎಳ್ಳನಿತೂ ಸಂಕೋಚಕ್ಕೆ ಆಸ್ಪದ ಕೊಡಲಿಲ್ಲ. "ಶ್ರೀ ವಿಜಯ ಮಹಾಂತಸ್ವಾಮಿಗಳು ತೋರಿಸಿದ ಸ್ಥಾನವೆ ನಮಗೆ ಯೋಗ್ಯವಾದುದು, ಪರಮ ಪವಿತ್ರವಾದುದು. ಅವರ ಇಚ್ಛೆಯಂತೆ ನಡೆಯುವದೆ ನಮ್ಮೆಲ್ಲರ ಕರ್ತವ್ಯ" ಎಂದು ಭಕ್ತರಿಗೆ ತಿಳಿಹೇಳಿ ಕ್ರಿ. ಶಕ ೧೯೦೯, ಕೀಲಕನಾಮ ಸಂವತ್ಸರದ ಮಾಘ ಶುದ್ಧ ಸಪ್ತಮಿಯ ಶುಭ ದಿನದಂದು ಚಿತ್ತರಗಿ, ಇಳಕಲ್ಲ ಶ್ರೀ ವಿಜಯ ಮಹಾಂತಸ್ವಾಮಿಗಳವರ ಪವಿತ್ರ ಹಸ್ತದಿಂದ ಹಾನಗಲ್ಲ ಕುಮಾರಸ್ವಾಮಿಗಳವರು ಲಿಂಗ ಮುದ್ರೆಯ ಅಡಿಗಲ್ಲನ್ನಿರಿಸಿದರು. ಬಂದ ಭಕ್ತರೆಲ್ಲರೂ ಮಂಗಲವ ಹಾಡಿದರು. ಶಿವಯೋಗದ ಶುಭೋದಯಕ್ಕೆ ನಾಂದಿಯಾಯಿತು. ಶಿವಯೋಗ ಮಂದಿರವು ಸ್ಥಾಪಿತವಾಯಿತು. ಧರ್ಮಕ್ಕೆ ಕವಚ

ಕತ್ತಲೆಯನ್ನು ಪರಿಹರಿಸಲು ಕುಮಾರಸ್ವಾಮಿಗಳವರ ಸತ್ಯಸಂಕಲ್ಪದ ಸಿದ್ಧಿಯಾಯಿತು; ಅರುಣೋದಯವಾಯಿತು.

ಅಂದಿನಿಂದ ಕಾಡು ಪಶುಗಳು ಕೂಡ ಕ್ರೂರತನವನ್ನು ಬಿಟ್ಟು ಸಾತ್ವಿಕವಾದವು. ಅಲ್ಲಿದ್ದ ಕಾಡಿಗೆ ಮೆರಗು ಬಂದಿತು. ಕಾಡುಯೋಗದ ಬೀಡಾಯ್ತು. ಅಲ್ಲಲ್ಲಿ ಪರ್ಣಕುಟೀರಗಳು, ಗುಹೆಗಳು ನಿರ್ಮಾಣಗೊಂಡವು. ಶಿವಯೋಗ ಮಂದಿರವು ಋಷ್ಯಾಶ್ರಮದಂತೆ ಕಂಗೊಳಿಸಹತ್ತಿತು. ಎತ್ತ ನೋಡಿದಡತ್ತ ಯೋಗ ಸಾಧನೆಗಾಗಿ ಬಂದ ವಟುಗಳು, ಸಾಧಕರು, ಸಾಲುಸಾಲಾಗಿ ಹೋಗುವ ದೃಶ್ಯ ರಮಣೀಯವಾಗಿತ್ತು. ವನ ಸಂಪತ್ತಿನಿಂದ ಶೋಭಿಸುವ ಶಿವಯೋಗ ಮಂದಿರವು ಆತ್ಮ ಸಂಪತ್ತಿನಿಂದ ಕಂಗೊಳಿಸುವ ಯೋಗ ಸಾಧಕರಿಂದ, ಸ್ವಾಮಿಗಳಿಂದ ನಯನ ಮನೋಹರವಾಗಿ ಕಾಣಹತ್ತಿತು. ಇಲ್ಲಿ ನಡೆ ನುಡಿಗೆ ಹೆಚ್ಚು ಮಹತ್ವ ನೀಡುತ್ತಿದ್ದರು. ಇಲ್ಲಿ ಗುರು–ವಿರಕ್ತರೆಂಬ ಭೇದ-ಭಾವವಿಲ್ಲ. ಇವರೀರ್ವರ ಭಾವೈಕ್ಯವು ಇಲ್ಲಿ ನೋಡುವಂತಹುದು. ಇಲ್ಲಿ ಸಮಯಭೇದಗಳಿಲ್ಲ. 'ನಾ ಹೆಚ್ಚು ನೀ ಹೆಚ್ಚು' ಎನ್ನುವ ಬಿಂಕವಿಲ್ಲ, ಬಿರುನುಡಿಯಿಲ್ಲ. ನಡೆ ಶುದ್ಧ, ನುಡಿ ಶುದ್ಧ. ಪ್ರತಿಯೊಬ್ಬರಿಗೂ ಒಂದೇ ಆಹಾರ ಅದು ಸಹ ಸಾತ್ವಿಕವಾದುದು. ಆಹಾರದಲ್ಲಿ ಉಪ್ಪಿಲ್ಲ, ಹುಳಿಯಿಲ್ಲ. ಸಾತ್ವಿಕಾಹಾರದಿಂದ ಇರುವವರಿಗೆ ಮಾತ್ರ ಮಂದಿರದಲ್ಲಿ ಪ್ರವೇಶ. ಯೋಗಸಾಧನೆಗೆ ಸಾತ್ವಿಕಾಹಾರವೆ ಮೊದಲ ಸಾಧನ. ಇಲ್ಲಿ ರುಚಿಗಿಂತ ಶುಚಿಗೆ ಬೆಲೆ. ಶುಚಿಯಿದ್ದಲ್ಲಿ ಆತ್ಮಬಲ ಸಾಧ್ಯ. ಸಾತ್ವಿಕಾಹಾರವನ್ನು ಸೇವಿಸುವವರಿಗೆ ರೋಗವಿಲ್ಲ, ರಾಗವಿಲ್ಲ. ವಿರಾಗಕ್ಕೆ ಮೂಲ ಬೀಜವೇ ಸಾತ್ವಿಕಾಹಾರ.

ಶಿವಯೋಗಮಂದಿರ ಸ್ಥಾಪನೆಗಾಗಿ ಹಾನಗಲ್ಲ ಕುಮಾರಸ್ವಾಮಿಗಳು ಮೊದಲು ಸಂಗ್ರಹಿಸಿದ ಹಣವೆಲ್ಲವೂ ತೀರಿ ಹೋದುದರಿಂದ ಮತ್ತೆ ಮಂದಿರದ ಅಭ್ಯುದಯಕ್ಕಾಗಿ, ಚಿರಕಾಲ ಉಳಿಯುವುದಕ್ಕಾಗಿ ಹಣವನ್ನು ಶೇಖರಿಸಲು ಹಳ್ಳಿ ಹಳ್ಳಿಗೆ ಹೋದರು. ಶರೀರ ಸುಖದ ಕಡೆಗೆ ಲಕ್ಷ್ಯಗೊಡದೆ ದುಡಿದರು. ಇವರೊಡನೆ ಪರಮ ತಪಸ್ವಿ ಹಾವೇರಿಯ ಶ್ರೀ ಬಸವ ಮಹಾಸ್ವಾಮಿಗಳವರು ಜೊತೆಗೂಡಿದರು. ಇಬ್ಬರ ಪರಿಶ್ರಮದ ಫಲವಾಗಿ ಧನ ಸಂಗ್ರಹವಾಗಹತ್ತಿತ್ತು. ಹೋದಲ್ಲೆಲ್ಲ ವಟುಗಳನ್ನು ಶಿವಯೋಗ ಮಂದಿರಕ್ಕೆ ಕಳಿಸಲು ತಿಳಿಸುತ್ತಿದ್ದರು. ಮಂದಿರಕ್ಕೆ ಬಂದ ವಟುಗಳಿಗೆ ತಂದೆ–ತಾಯಿಗಳಿಗಿಂತಲೂ ಹೆಚ್ಚಿನ ವ್ಯವಸ್ಥೆಯಿರುತ್ತಿತ್ತು. ಅವರಿಗೆ ಒಳ್ಳೆಯ ಸಂಸ್ಕಾರ ನೀಡಿ ಉತ್ತಮ ಯೋಗಿಗಳನ್ನಾಗಿ ಮಾಡುವದೇ ಶಿವಯೋಗಮಂದಿರದ ಮುಖ್ಯ ಧ್ಯೇಯವಾಗಿತ್ತು. ವಟುಗಳ ಶಿಕ್ಷಣಕ್ಕಾಗಿ ಇಂಗ್ಲೀಷ, ಸಂಸ್ಕೃತ, ಸಂಗೀತ, ಕನ್ನಡ ಪಂಡಿತರನ್ನು ನಿಯಮಿಸಿದರು. ಅಲ್ಲಿಯ

ವಟುಗಳ ವಯಸ್ಸು ೪ ರಿಂದ ೧೨ರ ವರೆಗೆ* ೧೨ ವರ್ಷಕ್ಕಿಂತ ಮೇಲಿನವರಿಗೆ ಸಾಧಕರೆಂದು ಕರೆಯುವ ರೂಢಿಯುಂಟು. ವಟುಗಳಿಗೆ ಸಾಧಕರಿಗೆ ಯಾವ ಕೊರತೆಯಾಗಬಾರದೆಂಬುದೇ ವ್ಯವಸ್ಥಾಪಕರಿಗೆ ಕುಮಾರಸ್ವಾಮಿಗಳವರ ಕಟ್ಟಾಜ್ಞೆ.

೧) ಬಿದರಿ ಸವದತ್ತಿ ಅಪ್ಪಯ್ಯಸ್ವಾಮಿಗಳು. ೨) ನವಲಗುಂದ ಗವಿಮಠದ ಬಸವಲಿಂಗಮಹಾಸ್ವಾಮಿಗಳು. ೩) ಕುಷ್ಟಗಿ ಪಟ್ಟದ ದೇವರು. ೪) ಕುರವತ್ತಿಯ ಮಹಾದೇವಸ್ವಾಮಿಗಳು. ೫) ಬಾಗಲಕೋಟೆಯ ಶಿವಮೂರ್ತಿಸ್ವಾಮಿಗಳು. ೬) ಕೊಪ್ಪದ ಮಹಾಂತಸ್ವಾಮಿಗಳು. ೭) ಮುಮ್ಮಡಾಪುರದ ಮರಿದೇವರು. ಈ ಏಳು ಜನ ಸಾಧಕರಿಂದ ಶಿವಯೋಗ ಮಂದಿರವು ಪ್ರಾರಂಭವಾಗಿ ವರ್ಷಗಳು ಗತಿಸಿದಂತೆ ೧೦೦ಕ್ಕಿಂತ ಹೆಚ್ಚು ಜನ ಸಾಧಕರು ಇಲ್ಲಿ ಸೇರಿದರು. ಎಲ್ಲಿ ನೋಡಿದಲ್ಲಿ ಶಿವಯೋಗ ಮಂದಿರದ ಬೆಳಕು ಪಸರಿಸಿತು. ಪ್ರತಿಯೊಂದು ಮಠದ ಸ್ವಾಮಿಗಳು ಶಿವಯೋಗ ಮಂದಿರದ ಸಾಧಕರೇ ತಮ್ಮ ಮಠಕ್ಕೆ ಬೇಕೆಂದು ಅಪೇಕ್ಷಿಸುತ್ತಿದ್ದರು.

ಶ್ರೀ ಕುಮಾರಸ್ವಾಮಿಗಳವರ ವಟುವಾತ್ಸಲ್ಯವು ಮೆಚ್ಚುವಂತಹದು. ಮಮತೆ ಅಪಾರವಾದುದು. ಅವರ ಭವಿಷ್ಯ ನಿರ್ಮಾಣಕ್ಕಾಗಿ ಹಗಲಿರುಳೂ ಚಿಂತಿಸುತ್ತಿದ್ದರು. ಭಕ್ತರು ಶ್ರೀಗಳಿಗಾಗಿ ತಂದುಕೊಟ್ಟ ಬಗೆಬಗೆಯ ಪದಾರ್ಥಗಳು ಹಾಗೂ ಹಣ್ಣು-ಹಂಪಲುಗಳನ್ನು ಮೊದಲು ವಟುಗಳಿಗೆ ಕೊಟ್ಟು ಅವರಿಗೆ ತೃಪ್ತಿಯಾದ ನಂತರ ಮುಂದೆ ಅವರು ತೆಗೆದುಕೊಳ್ಳುತ್ತಿದ್ದರು. ವಟುಗಳಿಗೆ ತಾವೇ ಆಸನ ಹಾಕಿಸಿ ಯೋಗಾಸನಗಳ ರೀತಿ-ನೀತಿಗಳನ್ನು ತಿಳಿಸಿ, ಅವುಗಳ ಕಡೆಗೆ ಒಲವು ಬರುವಂತೆ ಮಾಡುತ್ತಿದ್ದರು. ಅವರ ಆಟ-ಪಾಟದಲ್ಲಿಯೂ ಅವರೊಡನಿದ್ದು, ಆಟದಲ್ಲಿಯೂ ಒಳ್ಳೆಯ ಸಂಸ್ಕಾರವನ್ನಿತ್ತು ಕಥೆಯನ್ನು ಹೇಳುತ್ತ ನೀತಿಯ ಹೆದ್ದಾರಿಯತ್ತ ಕರೆದೊಯ್ಯುತ್ತಿದ್ದರು. ವಟುಗಳಿಗೆ ಯಾವ ದೃಷ್ಟಿಯಲ್ಲಿಯೂ ನೋವಾಗದಂತೆ ನೋಡಿಕೊಳ್ಳುತ್ತಿದ್ದರು. ವಟುಗಳಿಗೆ ತಂದೆ-ತಾಯಿ, ಬಂಧು-ಬಳಗ ಸರ್ವಸ್ವವೂ ಕುಮಾರಸ್ವಾಮಿಗಳೇ ಆಗಿದ್ದರು. ಅಂತೆಯೇ ಇಂದಿನವರೆಗೂ ಅಂದಿನ ವಟುಗಳು ಕುಮಾರಸ್ವಾಮಿಗಳವರನ್ನು ನಿತ್ಯವೂ ನೆನೆಯದೆ ಇರಲಾರರು.

ಸಾಧಕರಿಗೂ ಯೋಗ ಸಾಧನೆಯ ರೀತಿಯನ್ನು ತಿಳಿಸುತ್ತಿದ್ದರು. ಸಾಧಕರು ನಿಷ್ಠಾವಂತ ಬ್ರಹ್ಮಚಾರಿಗಳಾಗಿ, ಆದರ್ಶ ಧರ್ಮಪ್ರಚಾರಕರಾಗಬೇಕೆಂಬುವ ಹಿರಿಯಾಸೆ ಸ್ವಾಮಿಗಳವರದಿತ್ತು. ಯಮಾದಿ ಅಷ್ಟಾಂಗಯೋಗದ ಮಹತ್ವವನ್ನು ಮನವರಿಕೆಯಾಗುವಂತೆ ವಿವರಿಸಿ, ತಿಳಿಸಿಕೊಡುತ್ತಿದ್ದರು. ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಇವು ಐದು ಬಾಹ್ಯಾಂಗ. ಧ್ಯಾನ, ಧಾರಣ, ಸಮಾಧಿ, ಇವು ಮೂರು ಅಂತರಂಗ. ಇವುಗಳನ್ನು ಚನ್ನಾಗಿ ತಿಳಿಸಿ

* (ಈ ಪುಸ್ತಕದ ಬರಹಗಾರರು ನಾಲ್ಕನೆಯ ವಯಸ್ಸಿನಲ್ಲಿಯೇ ಶಿವಯೋಗಮಂದಿರದಲ್ಲಿ ಪ್ರವೇಶ ಪಡೆದು ೧೫ ವರ್ಷಗಳ ಕಾಲ ಅಧ್ಯಯನ ಮಾಡಿದವರು.

ಕೊಡುವದಲ್ಲದೆ, ನಡೆದು ತೋರಿಸುತ್ತಿದ್ದರು. ಧ್ಯಾನಕ್ಕೆ ಹೆಚ್ಚು ಮಹತ್ವ ಕೊಡುತ್ತಿದ್ದರು. ಅನುಷ್ಠಾನ ಮಾಡುವವರನ್ನು ಕಂಡು ಬಹಳ ಆನಂದ ಪಡುತ್ತಿದ್ದರು. ಅವರಿಗೆ ಅನುಕೂಲತೆಗಳನ್ನು ಒದಗಿಸುತ್ತಿದ್ದರು. ಯೋಗದಲ್ಲಿ ಬಲ್ಲಿದವರಾದ "ಯೋಗರಾಜ" ಎಂದು ಬಿರುದು ಪಡೆದ ಕಂಚುಗಲ್ ಬಿದರೆ ದೊಡ್ಡಮಠದ ಲಿಂ. ಶ್ರೀ ಪ್ರಭುಕುಮಾರ ಪಟ್ಟದ್ದೇವರನ್ನು ಯೋಗ ಶಿಕ್ಷಣಕ್ಕಾಗಿ ನಿಯಮಿಸಿದ್ದರು. ಶ್ರೀಗಳು ಸಾಧಕರು ಎಲ್ಲ ಬಗೆಯ ಏಳ್ಗೆಗಾಗಿ ಚಿಂತಿಸಿ ಅವರ ಉದ್ಧಾರಕ್ಕಾಗಿ ಹೆಣಗುತ್ತಿದ್ದರು. ಅವರಿಗೆ ಸಂಸ್ಕೃತ, ಕನ್ನಡ, ಇಂಗ್ಲೀಷ ಭಾಷೆಗಳ ಪ್ರೌಢ ಶಿಕ್ಷಣ ಕೊಡಿಸಿ ಪುರಾಣ ಪ್ರವಚನಗಳಲ್ಲಿ ನಿಪುಣರನ್ನಾಗಿ ಮಾಡುತ್ತಿದ್ದರು. ಅವರವರ ನಡೆನುಡಿಗಳನ್ನು ಮನೋ ವೈಜ್ಞಾನಿಕ ದೃಷ್ಟಿಯೊಡನೆ ನಿರೀಕ್ಷಿಸಿ ಪರೀಕ್ಷಿಸಿ, ಅವರನ್ನು ಆಯಾಯ ಕಲೆಗಳಲ್ಲಿ ಬಲ್ಲಿದವರನ್ನಾಗಿ ಮಾಡುತ್ತಿದ್ದರು. ಪಾಶ್ಚಾತ್ಯ ದೇಶಗಳಿಗೂ ಶಿವಯೋಗ ಮಂದಿರದ ಸಾಧಕರು ಹೋಗಿ ಧರ್ಮ ಪ್ರಚಾರ ಮಾಡಬೇಕೆಂಬುವ ಮನೀಷೆ ಶ್ರೀಗಳ ಮನದಲ್ಲಿ ಬಲವಾಗಿತ್ತು.*

ಪ್ರತಿನಿತ್ಯವೂ ಸಾಧಕರು ದಿನಚರಿಯನ್ನು ಬರೆಯುವ ಪದ್ಧತಿಯನ್ನು ಆಚರಣೆಯಲ್ಲಿ ತಂದಿದ್ದರು. ಯಾರಾದರೂ ಸಾಧಕರು ಒಬ್ಬರೇ ಕುಳಿತು ಯೋಚಿಸುತ್ತಿದ್ದರೆ, ಅವರನ್ನು ಕಂಡು ಅವರ ಮನದ ಮನೀಷೆಯನ್ನರಿತು, ಯೋಗ್ಯ ಸಲಹೆಯನ್ನು ನೀಡಿ, ಸದ್ಭಾವನೆಗಳನ್ನು ಅವರ ಹೃದಯದಲ್ಲಿ ತುಂಬುತ್ತಿದ್ದರು. ಪ್ರತಿಯೊಂದು ದೃಷ್ಟಿಯಿಂದಲೂ ಅವರನ್ನು ತಿದ್ದಿ, ಆದರ್ಶ ಸಮಾಜ ಸೇವಕರನ್ನಾಗಿ ಮಾಡುತ್ತಿದ್ದರು. ಆದರ್ಶ ವ್ಯಕ್ತಿತ್ವ ಬರುವಂತೆ ರೂಪಿಸುತ್ತಿದ್ದರು.

ಹಾನಗಲ್ಲ ಶ್ರೀಗಳವರ ಜೀವದಯ ಅದ್ಭುತವಾದುದು. ಶಿವಯೋಗ ಮಂದಿರ ಕ್ಷೇತ್ರದಲ್ಲಿ ಯಾರೂ ಯಾವ ಕಾಲದಲ್ಲಿಯೂ ಪಶುಪಕ್ಷಿಗಳನ್ನು ಕೊಲ್ಲಲಾರದಂತೆ ಸರಕಾರದಿಂದ ಸನದು ಸಹ ಪಡೆದುಕೊಂಡಿದ್ದರು. ಜೀವದಯಾ ಸಂಘಗಳಿಗೆ ಪ್ರೋತ್ಸಾಹವನ್ನು ಕೊಡುತ್ತಿದ್ದರು. "ದಯೆಯೆ ಧರ್ಮದ ಮೂಲವಯ್ಯಾ" "ಅಹಿಂಸಾಪರಮೋ ಧರ್ಮಃ" ಈ ಮಾತನ್ನು ಚಾಚೂ ತಪ್ಪದೆ ನಡೆಸಿಕೊಂಡು ಬಂದರು. 'ಪರಮಾತ್ಮನನ್ನು ಕಾಣುವ ಪರಮ ಸಾಧನವೆ ದಯೆ' ಎಂದು ಹೇಳುತ್ತಿದ್ದರು.

ಕುಮಾರ ಶ್ರೀಗಳು ಸತ್ಯ-ಶುದ್ಧ ಕಾಯಕದಿಂದ ನಡೆಯುವವರನ್ನು ಕಂಡು ಬಲು ಆನಂದಪಡುತ್ತಿದ್ದರು. ಶಿವಯೋಗ ಮಂದಿರದಲ್ಲಿ ಭಸ್ಮದ ಕಾರಖಾನೆಯನ್ನು ಸ್ಥಾಪಿಸಿ, ಪರಿಶುದ್ಧವಾದ ಭಸ್ಮಗಳನ್ನು ತಯಾರು ಮಾಡಿಸಿದರು. ಪಂಚ

---

* (ಅವರ ಇಚ್ಛೆಯೂ ಈ ಬರಹಗಾರರಿಂದ ಅಲ್ಪ ಸ್ವಲ್ಪ ಪೂರ್ತಿಯಾದಂತಾಗಿದೆ.)

ಸೂತ್ರಕ್ಕೆ ಸರಿಯಾದ ಲಿಂಗಗಳನ್ನು ಶಾಸ್ತ್ರೋಕ್ತವಾಗಿ ನಿರ್ಮಿಸಲು ಕಲಿಸಿ ಕೊಟ್ಟರು. ಕಾಯಕದ ಕಲೆಯಲ್ಲಿ ಪಾವಿತ್ರ್ಯವನ್ನು ಕಾಪಾಡುತ್ತಿದ್ದರು. "ಖಾದಿ ಯಂತಹ ಶುದ್ಧವಸ್ತುವು ಇನ್ನೊಂದಿಲ್ಲ; ಖಾದಿಯೇ ರಾಷ್ಟ್ರಕಲ್ಯಾಣದ ಭದ್ರ ಬುನಾದಿ" ಎಂದು ಸಾರಿ ಖಾದಿಗೆ ಪ್ರೋತ್ಸಾಹ ನೀಡುತ್ತಿದ್ದರು. ಸ್ವತಃ ತಾವು ಖಾದಿಯನ್ನು ಧರಿಸುತ್ತಿದ್ದರು. ಸ್ವಯಂ ಸೇವಾ ಶಿಕ್ಷಣಕ್ಕೆ ಶಿವಯೋಗಮಂದಿರ ದಲ್ಲಿ ಪ್ರಾಧಾನ್ಯತೆಯನ್ನಿತ್ತಿದ್ದರು. ಸಾಧಕರು ತಮ್ಮ ಬಟ್ಟೆ–ಬರೆಗಳನ್ನು ಒಗೆದು ಕೊಳ್ಳುವುದು, ಹೂಪತ್ರಿಗಳನ್ನು ಎತ್ತುವುದು, ಪ್ರಸಂಗ ಬಂದರೆ ಸ್ವಯಂ ಪಾಕವನ್ನು ಹಾಗೂ ಲಿಂಗದ ಕಂತೆಯನ್ನು ಮಾಡಿಕೊಳ್ಳುವದು ಇವೆಲ್ಲವುಗಳನ್ನು ಆಚರಣೆಯಲ್ಲಿ ತಂದರು. ಸ್ವಯಂ ಸೇವೆಗೆ ಸಿದ್ಧರಾಗದವರು ಸಮಾಜ ಸೇವೆಗೆ ಅನರ್ಹರು, ಸೇವಾ ಬುದ್ಧಿ ಅವರಿಗೆ ಬರಲಾರದು ಮತ್ತು ಕಾಯಕಷ್ಟ ಸಹಿಸ ದವರು ಮಾಯೆಯ ಮದವನ್ನು ಮುರಿಯಲಾರರು. ಅಂತರಂಗ ಬಹಿರಂಗ ಶುದ್ಧಿ ಯನ್ನು ಮಾಡಿಕೊಳ್ಳಲಾರರು. ಆಧ್ಯಾತ್ಮ ಸಾಧನೆಗೆ ಈ ಸತ್ಯ–ಶುದ್ಧ ಕಾಯಕವು ಅತ್ಯವಶ್ಯವಿರಬೇಕೆಂಬುದೇ ಕುಮಾರ ಶ್ರೀಗಳವರ ಸಿದ್ಧಾಂತ.

ಕುಮಾರ ಶ್ರೀಗಳವರ ವಿಚಾರಶಕ್ತಿಯು ಬಹುಮುಖವಾಗಿ ಹರಿದಿತ್ತು. ಪ್ರತಿಯೊಂದು ಕ್ಷೇತ್ರದಲ್ಲಿಯೂ ಸುಧಾರಣೆಯಾಗಬೇಕು, ಜನಜಾಗೃತಿಯಾಗ ಬೇಕು. ದೇಹ ಮತ್ತು ಬುದ್ಧಿ ಶಕ್ತಿಯನ್ನು ಸತ್ಕಾರ್ಯದಲ್ಲಿ ಬಳಸಬೇಕು. ಆತ್ಮ ಶಕ್ತಿಯನ್ನು ಬೆಳೆಸಬೇಕು. ಭಕ್ತರಲ್ಲಿಯ ಒಳಪಂಗಡಗಳು ದೂರಾಗಬೇಕು. ಸಮಾಜದಲ್ಲಿ ನವಚೈತನ್ಯವು ಹುಟ್ಟಿ ಒಕ್ಕಟ್ಟು ಬರಬೇಕೆಂದು ಹಗಲಿರುಳು ಚಿಂತಿಸಿ ಕೊರಗುತ್ತಿದ್ದರು. ಯಾವ ಕಾಯಕದವರೇ ಇರಲಿ ಅವರನ್ನು ಒಳ್ಳೆದಾರಿಗೆ ತರು ತ್ತಿದ್ದರು. "ಆಡು ಮುಟ್ಟದ ಗಿಡವಿಲ್ಲ, ಹಾನಗಲ್ಲ ಕುಮಾರ ಸ್ವಾಮಿಗಳು ಚಿಂತಿಸದ ಸಾಮಾಜಿಕ ಕಾರ್ಯವಿಲ್ಲ." ಎನ್ನುವ ಈ ನುಡಿ ಅವರಿಗೆ ಸಲ್ಲುತ್ತು. ಸಮಾಜದ ಪ್ರಗತಿಗಾಗಿ ಕರ್ತವ್ಯ ದಕ್ಷತೆಯಿಂದ ವಿಚಕ್ಷಣ ಬುದ್ಧಿಯಿಂದ ಅತುಲ ಸಾಹಸ ದೊಡನೆ, ಕಷ್ಟಗಳೆಲ್ಲವನ್ನು ಬದಿಗೊತ್ತಿ ಮುಂದೆ ಸಾಗುತ್ತಿದ್ದರು. ಸಮಾಜ ಸೇವೆಯೇ ಶಿವಪೂಜೆಯೆಂದು ಭಾವಿಸಿದ್ದರು. ತಲೆ ತುಂಬ ಸಮಾಜೋದ್ಧಾರ ವಿಚಾರಗಳನ್ನೇ ತುಂಬಿಕೊಂಡಿರುತ್ತಿದ್ದರು.

ಹಾನಗಲ್ಲ ಶಿವಯೋಗಿಗಳವರ ದೃಷ್ಟಿ ಬಲು ಎತ್ತರದ್ದು. ಅವರ ದೃಷ್ಟಿ ಹರಿಯದ ವಿಷಯವೇ ಇಲ್ಲ. ಔದ್ಯೋಗಿಕ, ಆರ್ಥಿಕ, ಧಾರ್ಮಿಕ, ಸಾಂಸ್ಕೃತಿಕ, ಸಾಹಿತ್ಯಿಕ, ನೈತಿಕ, ಯೌಗಿಕ, ಆಧ್ಯಾತ್ಮಿಕ, ಕಲಾತ್ಮಕ, ವೈದಿಕ, ವೈದ್ಯಕ ಮುಂತಾದ ಎಲ್ಲ ಕ್ಷೇತ್ರಗಳಲ್ಲಿಯೂ ಅವರ ದೃಷ್ಟಿ ಹರಿದಿತ್ತು; ಕೃತಿ ಸಾಗಿತ್ತು. ಶಿವಯೋಗ ಮಂದಿರದ ಆರ್ಥಿಕ ಭದ್ರತೆಯನ್ನು ಬಲಗೊಳಿಸಲು ಫಲವತ್ತಾದ ನೂರಾರು ಎಕರೆ ಭೂಮಿಯನ್ನು ತೆಗೆದುಕೊಂಡು ಕಾರ್ಯರೂಪಕ್ಕೆ ನೀರಾವರಿ ಮಾಡುವ ಯೋಜನೆ

ಯನ್ನು ತಂದಿದ್ದರು. ಸಾಧಕರಿಗೆ ಕೃಷಿಕಾಯಕವನ್ನು ಕಲಿಸಿದ್ದರು. ಆಧ್ಯಾತ್ಮಿಕ ಕೃಷಿಯೊಡನೆ ಕೃಷಿಯ ವ್ಯವಸಾಯವು ಚಿತ್ತಕ್ಕೆ ಚೇತನವನ್ನು ಕೊಡುವಂತಹ ದೆಂದು ಬೋಧಿಸುತ್ತಿದ್ದರು. ಸಾಧಕರ ಜೀವನೋಪಾಯಕ್ಕೆ ಮತ್ತು ಭಸ್ಮಗಳನ್ನು ತಯಾರು ಮಾಡಲು ೨೦೦ ಗೋವುಗಳನ್ನು ಸಾಕಿ ಸಲುಹಿದ್ದರು. ಬಾಗಲಕೋಟೆ ಯಲ್ಲಿ ಶಿವಾನಂದ ಜಿನ್ನಿಂಗ್ ಪ್ರೆಸ್ ಮತ್ತು ಫ್ಯಾಕ್ಟರಿಯನ್ನು ಸ್ಥಾಪಿಸಿದ್ದರು. ಇದರಿಂದ ಬಡ ಕುಟುಂಬಗಳ ಉದ್ಧಾರ ಹಾಗೂ ಶಿವಯೋಗ ಮಂದಿರದ ಆರ್ಥಿಕ ಪ್ರಗತಿಯಾಗಲು ಸಹಕಾರಿಯಾಯ್ತು. ಇವರ ಉದ್ಯೋಗ ಪ್ರಗತಿಯ ಕಾರ್ಯ ದಕ್ಷತೆಯನ್ನು ಅಸಾಧಾರಣ ಶಕ್ತಿಯನ್ನು, ಮುಂಧೋರಣೆಯನ್ನು ಕಂಡು, ಭಕ್ತ ವೃಂದಕ್ಕೆ ಅಪರಿಮಿತ ಆನಂದವಾಯಿತು.

ಶಿವಯೋಗಮಂದಿರದ ಸಾಹಿತ್ಯ ಶಕ್ತಿಯು ಯಾವ ವಿಧದಲ್ಲಿಯೂ ಕಡಿಮೆ ಆಗಿರಲಿಲ್ಲ. ಪುರಾತನ ಸಾಹಿತ್ಯಸಂಗ್ರಹ ಕಾರ್ಯದಲ್ಲಿ ಬೇರಾವ ಸಂಸ್ಥೆಗಿಂತಲೂ ಹಿಂದುಳಿದಿರಲಿಲ್ಲ. ಸಮಾಜದ ಮಠಗಳಲ್ಲಿ ಮೂಲೆಗುಂಪಾಗಿ ಹೋಗುತ್ತಿದ್ದ ಸಾಹಿತ್ಯ ಸಂಸ್ಕೃತಿಗಳ ಜೀವಾಳವಾದ ಓಲೆಗರಿ–ಕೋರಿ ಕಾಗದ ಗ್ರಂಥಗಳನ್ನು ಹುಡುಕಿಸಿ, ಶಿವಯೋಗಮಂದಿರದಲ್ಲಿ ಸಂಗ್ರಹಿಸಿಟ್ಟರು. ಅಲ್ಲದೆ ಅಂದು ೮–೧೦ ಸಾವಿರ ಪುಸ್ತಕಗಳ ದೊಡ್ಡ ಗ್ರಂಥ ಭಾಂಡಾರವನ್ನು ಸಂಸ್ಥಾಪಿಸಿ ಸಾಧಕರಿಗೆ ಅನು ಕೂಲ ಮಾಡಿಕೊಟ್ಟರು.

ಅನೇಕ ಕನ್ನಡ ಹಾಗೂ ಸಂಸ್ಕೃತ ಪಂಡಿತರನ್ನು ಮದ್ರಾಸ ತ್ರಾವಣಕೋರ ನಗರಗಳಿಗೆ ಕಳುಹಿಸಿ, ಪ್ರಾಚೀನ ಗ್ರಂಥ ಸಂಶೋಧನೆಗೆ ಸಹಾಯ ಮಾಡಿದರು. ವೀರಶೈವ ವಾಙ್ಮಯವನ್ನು ಪ್ರಕಟಮಾಡಿ ಪ್ರಚುರಪಡಿಸಲು ಮನಸ್ಸು ಮಾಡಿ, ಹುಬ್ಬಳ್ಳಿ ಜಗದ್ಗುರು ಮೂರುಸಾವಿರ ಮಠದಲ್ಲಿದ್ದ ಮುದ್ರಣ ಮಂದಿರವನ್ನು ಧಾರವಾಡದ ಶಿವಲಿಂಗ ಶಾಸ್ತ್ರಿಗಳಿಗೆ ದೊರಕುವಂತೆ ಮಾಡಿದರು. ಅದರಿಂದ ಪತ್ರಿಕೆ, ಸಣ್ಣ ಸಣ್ಣ ವೀರಶೈವ ಧರ್ಮ ಗ್ರಂಥಗಳನ್ನು ಪ್ರಕಾಶಪಡಿಸಿದರು. ೨೦ ನೆಯ ಶತಮಾನದಲ್ಲಿ ವಚನ ವಾಙ್ಮಯವನ್ನು ಮೊದಲು ಸಂಗ್ರಹಿಸಿದ ಕೀರ್ತಿಯು ಶಿವಯೋಗ ಮಂದಿರ ಸಂಸ್ಥೆಯದೆಂದರೆ ತಪ್ಪಾಗಲಿಕ್ಕಿಲ್ಲ.

ಶ್ರೀ ಕುಮಾರ ಸ್ವಾಮಿಗಳು ಕೇವಲ ಸಾಹಿತ್ಯ ಪ್ರೇಮಿಗಳು ಅಷ್ಟೇ ಅಲ್ಲ, ಅವರು ಕವಿಗಳೂ ಸಹ ಆಗಿದ್ದರು. ಅವರಿಗೆ ಕವಿತ್ವ ಶಕ್ತಿಯು ಸಹಜವಾಗಿ ಮೂಡಿ ಬಂದಿದ್ದಿತು. ಸತತವೂ ಸಾಮಾಜಿಕ ಸೇವೆಯಲ್ಲಿದ್ದರೂ ೨೮ ಪದ್ಯ ಗಳನ್ನು ರಚಿಸಿದ್ದಾರೆ. ಅವೆಲ್ಲವುಗಳು ತತ್ವ ಹಾಗೂ ಸತ್ವದಿಂದ ಪರಿಪೂರ್ಣ ವಾಗಿವೆ. ಕುಮಾರ ಶ್ರೀಗಳವರ ಪ್ರೇರಣೆಯಿಂದಲೇ ಲಿಂ. ದ್ಯಾಂಪುರದ ಚನ್ನ ಕವಿಗಳು ಲಿಂ. ಹುಕ್ಕೇರಿಯ ಸದಾಶಿವಶಾಸ್ತ್ರಿಗಳು, ದ್ಯಾಂಪುರದ ಮಹಾಲಿಂಗಯ್ಯ ನವರು, ಲಿಂ. ಲಿಂಗಪ್ಪನವರು ಕನ್ನಡನಾಡಿನಲ್ಲಿ ಮಹಾ ಕವಿಗಳಾಗಿ ಕನ್ನಡಮ್ಮನ

ಕಿರೀಟದಲ್ಲಿ ಹೊಳೆಯುವ ರತ್ನಗಳಾದರು. ಅನೇಕರನ್ನು ಕೀರ್ತನಕಾರರನ್ನಾಗಿ ಮಾಡಿದರು, ಸಂಶೋಧಕರನ್ನಾಗಿ ಬೆಳೆಸಿದರು. ಕರ್ನಾಟಕದಲ್ಲಿ ಕಂಡುಬರುವ ಕೀರ್ತನಕಾರರು ಹೆಚ್ಚಾಗಿ ಅವರ ಶಿಷ್ಯ ಪ್ರಶಿಷ್ಯರೆ. 'ಸದ್ಧರ್ಮ ದೀಪಿಕೆ' ಸಂಪಾದಕರಾಗಿದ್ದ ಲಿಂ. ಚೆನ್ನಮಲ್ಲಪ್ಪ ದೇಶಪ್ರ ಇವರ ಕೃಪೆಯಿಂದ ಸಂಶೋಧನಾಗ್ರೇಸರರಾಗಿದ್ದರು.

ಶ್ರೀ ಕುಮಾರಯೋಗಿಗಳು ವೈದ್ಯಕೀಯ ರಂಗದಲ್ಲಿಯೂ ಪಳಗಿದವರಾಗಿದ್ದರು. ಶ್ರೀಗಳವರಿಗೆ ಆಯುರ್ವೇದ ಚಿಕಿತ್ಸೆಯಲ್ಲಿ ಅಪಾರ ಶ್ರದ್ಧೆಯಿತ್ತು. "ಧೃತಿ" ಮೊದಲಾದ ಸಿದ್ಧ ಔಷಧಿಗಳನ್ನು ತಯಾರಿಸಿ, ಪ್ರಸಿದ್ಧ ವೈದ್ಯರಿಂದಲೂ ಗುಣಪಡಿಸಲು ಸಾಧ್ಯವಾಗದ ಚರ್ಮವ್ಯಾಧಿಯನ್ನು ನಿರ್ಮೂಲನ ಮಾಡಿದ ಸಿದ್ಧಹಸ್ತ ಶ್ರೀಗಳವರದಾಗಿತ್ತು. ಮಹಾರೋಗಿಗಳಿಗೂ ಕೂಡ ಸ್ವಯಂ ಚಿಕಿತ್ಸೆ ಮಾಡುತ್ತಿದ್ದರು. ಹಳೆಯ ತುಪ್ಪದಿಂದ ಒಂದು ಮಲಾಮುವನ್ನು ತಯಾರು ಮಾಡಿದ್ದರು. "ಅದು ಎಂತಹ ವಿಷಾಕ್ತವ್ರಣಕ್ಕೂ ಸಂಜೀವಿನಿಯಾಗಿತ್ತು." ಶಿವಯೋಗ ಮಂದಿರದ ಸುತ್ತಲ ಪ್ರದೇಶವು ವನಸ್ಪತಿಯ ಗಿಡಗಳಿಂದ ಕೂಡಿರುವದರಿಂದ ಇಂತಹ ಸ್ಥಾನದಲ್ಲಿ "ಆಯುರ್ವೇದ ವಿದ್ಯಾಲಯ"ವೊಂದನ್ನು ಸ್ಥಾಪಿಸಬೇಕೆಂದು ಕಟ್ಟಿದ ಅವರ ಕನಸು ಎಂದು ನನಸಾಗುತ್ತದೆಯೋ ನೋಡಬೇಕಾಗಿದೆ.

ಶ್ರೀಗಳು ಭಜನಾಸಂಘ, ತರುಣಸಂಘ, ಗಾಂವಠಿ ಶಾಲೆ, ವೈದಿಕ-ಜ್ಯೋತಿಷ್ಯ ಪಾಠಶಾಲೆ, ವಾಚನಾಲಯ ಮುಂತಾದವುಗಳನ್ನು ಅಲ್ಲಲ್ಲಿ ಸ್ಥಾಪಿಸಿ ಉತ್ತಮ ಸಂಸ್ಕೃತಿಯು ಬೆಳೆಯುವಂತೆ ಮಾಡಿದ್ದರು.

ಕುಮಾರ ಶ್ರೀಗಳು ಸತ್ಯಸಂಶೋಧನೆಗಾಗಿ ಸತತವೂ ಶ್ರಮಿಸತಕ್ಕವರು. ಸತ್ಯ ನಿರ್ಣಯಕ್ಕೆ ಎಷ್ಟೇ ಎಡರುತೊಡರು ಬಂದರೂ ಲೆಕ್ಕಿಸದೆ ಧೈರ್ಯದಿಂದ ಮುಂದೆ ಸಾಗುತ್ತಿದ್ದರು. ನ್ಯಾಯ-ನಿಷ್ಠುರರಾಗಿದ್ದರು. ಹೈದರಾಬಾದ ಸಂಸ್ಥಾನದಲ್ಲಿದ್ದ ಪರಳಿಯ ವೈಜನಾಥ ಮಂದಿರವು ವೀರಶೈವ ಧರ್ಮದವರಿಗೆ ಸಂಬಂಧಪಟ್ಟಿಲ್ಲವೆಂದು ವ್ಯಾಜ್ಯವು ಕೋರ್ಟಿಗೆ ಹೋದಾಗ, ನಾಡಿನ ಪ್ರಕಾಂಡ ಪಂಡಿತರನ್ನು, ನ್ಯಾಯಮೂರ್ತಿಗಳನ್ನು, ಕಾಶಿಯಿಂದ, ಪುಣೆಯಿಂದ ಹಲವು ಜನ ಅನುಭವಿಕರನ್ನು ಕರೆಯಿಸಿ ಚರ್ಚಿಸಿದರು. ಅದರ ಖರ್ಚಿನ ವ್ಯವಸ್ಥೆಗಾಗಿ ಜೋಳಿಗೆ ಹಾಕಿದರು; ಹಣ ಸಂಗ್ರಹಿಸಿದರು. ನಿದ್ದೆ-ನೀರಡಿಕೆಯೆನ್ನದೆ ದುಡಿದರು, ಬೆವರು ಸುರಿಸಿದರು. ಕೊನೆಗೆ ಜಯವನ್ನೂ ಗಳಿಸಿದರು. ವೀರಶೈವರಿಗೆ ವೈಜನಾಥಮಂದಿರದಲ್ಲಿ ಅಧಿಕಾರವಿದೆ ಎಂದು ನಾಲ್ಕುನೂರು ಪುಟದಷ್ಟು ವಿಶೇಷ ನ್ಯಾಯಾಧೀಶರಿಂದ ನಿರ್ಣಯ ಬಂದೊಡನೆಯೆ ಎಲ್ಲರಿಗೂ ಹಿಡಿಸಲಾರದಷ್ಟು ಆನಂದವಾಯಿತ್ತು. ಅಪಾರ ಪರಿಶ್ರಮವು ಸಾರ್ಥಕವಾದಂತಾಯ್ತು.

ಗುರು ವಿರಕ್ತರ ಭಾವೈಕ್ಯಕ್ಕೂ, ಸಮಯ–ಸಮಯಗಳ ಸಾಮರಸ್ಯಕ್ಕೂ, ಕುಮಾರ ಶ್ರೀಗಳು ಉಸಿರು ಇರುವವರೆಗೂ ಪರಿಶ್ರಮಿಸಿದರು.

ಕುಮಾರ ಶಿವಯೋಗಿಗಳವರಲ್ಲಿ ಸ್ವಧರ್ಮ ನಿಷ್ಠೆಯಿದ್ದಂತೆ ಪರಧರ್ಮ ಸಹಿಷ್ಣುತೆಯು ಅಪಾರವಾಗಿತ್ತು. ಪರಧರ್ಮಿಯರಿಗೆ ವಿದ್ಯಾರ್ಜನೆಗಾಗಿ ಹಣ ಸಂಗ್ರಹಿಸಿ ನೀಡಿದ್ದುಂಟು. ಅಲ್ಲದೆ ಲಿಂ. ಪಂಚಾಕ್ಷರಿ ಗವಾಯಿಗಳಿಗೆ ಸಂಗೀತ ಪಾಠಶಾಲೆಯಲ್ಲಿ ಎಲ್ಲ ಧರ್ಮದವರಿಗೆ ಅನ್ನ, ವಿದ್ಯೆಯನ್ನು ಕೊಡಬೇಕೆಂದು ತಿಳಿಸಿ, ಅದನ್ನು ಕಾರ್ಯರೂಪದಲ್ಲಿ ತಂದಿದ್ದರು. ಇಂದಿನವರೆಗೂ ಅದು ಅದೇ ಪರಂಪರೆಯಲ್ಲಿ ನಡೆದು ದರ್ಶನವಾಗಿದೆ. ಶ್ರೀಗಳು ಮಾತಿಗಿಂತ ಕೃತಿಗೆ ಹೆಚ್ಚು ಬೆಲೆಕೊಡುತ್ತಿದ್ದರು. ದುರಭ್ಯಾಸ, ದುಂದುಗಾರಿಕೆಗಾಗಿ ಹಣವು ವ್ಯಯವಾಗುವವನ್ನು ನಿಲ್ಲಿಸಿದ್ದರು. ಕುಮಾರ ಶ್ರೀಗಳು ಮಾನವತಾ ವಾದಿಗಳು, ಮಾನವೀಯತೆಗೆ ಹಿರಿಮೆ ಗರಿಮೆ ನೀಡುತ್ತಿದ್ದರು. ಸರ್ವಧರ್ಮಸಮನ್ವಯದ ದೃಷ್ಟಿ ಪ್ರತಿಯೊಬ್ಬರ ಮನಸ್ಸಿನಲ್ಲಿ ಮೂಡುವಂತೆ ಬೋಧಿಸುತ್ತಿದ್ದರು. ದೃಷ್ಟಿಯಂತೆ ಸೃಷ್ಟಿ ಪರಸ್ಪರ ಸೌಹಾರ್ದತೆಯಿರದೆ ಸಮಾನತೆ ಬರಲಾರದೆಂದೆನ್ನುತ್ತಿದ್ದರು. ಕ್ರಮ ತಪ್ಪಿ ನಡೆಯುವವರನ್ನು ಕಂಡು ಕೋಪಾವಿಷ್ಟರಾಗುತ್ತಿದ್ದರು. ಅವರನ್ನು ದಾರಿಗೆ ತರುತ್ತಿದ್ದರು. ಹೊತ್ತಿನ ಮಹತ್ವವನ್ನರಿದು ನಡೆಯುತ್ತಿದ್ದರು. ನುಡಿಯುತ್ತಿದ್ದರು. ಸ್ವೈರಪ್ರಿಯರನ್ನು ಕಂಡರೆ ಮೆಚ್ಚುತ್ತಿದ್ದಿಲ್ಲ. ಆದರೆ ಬಡವರ ಭಕ್ತಿಗೆ ಮೆಚ್ಚಿ ಹಿಗ್ಗಿ ಹಿರೇಕಾಯಿಯಾಗುತ್ತಿದ್ದರು. ಭಕ್ತಿ ಹಾಗೂ ಸದ್ಗುಣಗಳಿದ್ದಲ್ಲಿ ಜಾತಿಯನ್ನು ನೋಡುತ್ತಿದ್ದಿಲ್ಲ.

ಒಂದು ಸಲ ಕುರುಬನೋರ್ವನು ಶ್ರೀಗಳವರ ಪೂಜೆಗಾಗಿ ಜಿಟಿ ಜಿಟಿ ಹತ್ತಿದ ಮಳೆಯಲ್ಲಿ ತುಂಬಿದ ಹೊಳೆಯನ್ನು ಈಜಿ ಚರಿಗೆಯ ತುಂಬ ಹಾಲನ್ನು ತಂದು ಸೇವಕರ ಕೈಯಲ್ಲಿ ಕೊಡಲು ಹೋದಾಗ, ಸೇವಕರು ಅವನನ್ನು "ಮೈಲಿಗೆಯವನು ಮತ್ತು ಅನ್ಯ ಜಾತಿಯವನು" ಎಂದು ತಿರಸ್ಕರಿಸಿ ಬೆದರಿಸಿ ತಿರುಗಿ ಕಳಿಸುತ್ತಿರುವಾಗ, ಆ ದೃಶ್ಯವನ್ನು ಸ್ವಾಮಿಗಳವರು ಕಂಡು ಮನನೊಂದುಕೊಂಡು, ಮೂಢರೆ, ಭಕ್ತಿಯಿಂದ ತಂದ ಹಾಲು ಎಂದಾದರೂ ಮೈಲಿಗೆಯಾದೀತೆ? ಆ ಹಾಲನ್ನು ತೆಗೆದುಕೊಳ್ಳಿರಿ. ದೇವರು ಭಕ್ತಿ ಪ್ರಿಯನೆಂದು ಹೇಳಿ ಆ ಹಾಲನ್ನು ಶಿವಾರ್ಚನೆಗೆ ಇಡಿಸಿದರು. ಬಂದ ಭಕ್ತರು ಸಂತೋಷಭರಿತರಾಗಿ 'ಮಹಾತ್ಮರಮಹಿಮೆಯು ಅಗಾಧವಾದುದು' ಎಂದೆನ್ನುತ್ತ ಮನೆಯತ್ತ ಹೊರಟರು. ಇದರಿಂದ ಶ್ರೀಗಳವರ ವಿಶಾಲ ಹೃದಯವನ್ನು ಅರ್ಥಮಾಡಿಕೊಳ್ಳಬಹುದು.

ಶಿವಯೋಗಮಂದಿರದಲ್ಲಿ ಸಾಧಕರು ಅರ್ಜನ, ಅರ್ಪಣ ಅನುಭವ ನಿತ್ಯವೂ ನಡೆಯಲೇಬೇಕು. ಇದು ಯಾವ ಕಾಲಕ್ಕೂ ತಪ್ಪಬಾರದೆಂಬ ನಿಯಮವಿದ್ದುದರಿಂದ, ಇಂದಿಗೂ ಹಾಗೆಯೇ ನಡೆಯುತ್ತ ಬಂದಿದೆ.

ಒಂದು ದಿನ ಬೆಂಗಳೂರಿನಿಂದ ಕೆಲವು ಪ್ರಮುಖ ಭಕ್ತರು ಹಾನಗಲ್ಲ ಕುಮಾರ ಶಿವಯೋಗಿಗಳ ಸಂದರ್ಶನಕ್ಕಾಗಿ ಬಂದಾಗ, ಶ್ರೀಗಳು ಸಾಧಕ ಸಮೂಹದೊಡನೆ ಶಿವಾನುಭವಗೋಷ್ಠಿಯಲ್ಲಿದ್ದರು. ಬಂದ ಭಕ್ತರು ಶ್ರೀಗಳವರೆದುರಿಗೆ ಹಣ್ಣಿನ ಬುಟ್ಟಿಯಿಟ್ಟು ನಮಸ್ಕರಿಸಿ, ಕರ್ಪೂರವನ್ನು ಹಚ್ಚಿ ಅಲ್ಲಿಯೇ ಕುಳಿತರು. ಕರ್ಪೂರದ ಉರಿ ಅಲ್ಲಾಡತೊಡಗಿತು. ಗಾಳಿ ಹೆಚ್ಚಾಗುತ್ತಿತ್ತು. ಕರ್ಪೂರದ ಉರಿ ಆರಬಹುದೆಂದು ಅಲ್ಲಿಯ ಭಕ್ತರೊಬ್ಬರು ಎದ್ದು ಬಂದು ಕರ್ಪೂರದ ಉರಿಯ ಸುತ್ತ ಕೈಹಿಡಿದರು. ಅಲ್ಲಿಂದ ಮತ್ತೊಬ್ಬರು ಸನ್ನೆ ಮಾಡಿ "ಸ್ವಾಮಿಗಳವರಲ್ಲಿ ಶಕ್ತಿ ಇದ್ದರೆ ಗಾಳಿಗೆ ಕರ್ಪೂರದ ಉರಿ ಆರದಿರಲಿ" ಎಂದುಸುರಿ ಕೈಬಿಟ್ಟರು. ಇವೆಲ್ಲವನ್ನು ಶ್ರೀಗಳವರು ನೋಡಿದರು. ಅವರ ಅಂತರಂಗದ ಅಭಿಪ್ರಾಯವನ್ನು ಅರಿತುಕೊಂಡರು. ಕೂಡಲೇ "ಶ್ರೀಗಳವರು ತಮ್ಮ ಎಡಗೈ ತೋರುಬೆರಳನ್ನು ಎಡಗಣ್ಣಿನ ಕೊನೆಯಲ್ಲಿರಿಸಿ ನೆಟ್ಟ ನೋಟದಿಂದ ಉರಿವ ಕರ್ಪೂರವನ್ನು ನಿರೀಕ್ಷಿಸಿದರು. ಅಲ್ಲಾಡುತ್ತಿರುವ ಆ ಉರಿ ಅಲ್ಲಾಡದಂತಾಯ್ತು" ದೊಡ್ಡಗಾಳಿ ಬೀಸುತ್ತಿದ್ದರೂ ಅದು ಆರಲಿಲ್ಲ. ಅಲ್ಲಿಗೆ ಬಂದ ಭಕ್ತರು ಬೆರಗಾದರು. ಇವರ ಅದ್ಭುತ ಶಕ್ತಿಯನ್ನು ಮೆಚ್ಚಿಕೊಂಡು ಕ್ಷಮೆ ಕೇಳಿದರು.

"ಆಲಿನಿಂದೊಡೆ ಸುಳಿದು ಸೂಸುವ ಗಾಳಿ ನಿಲುವದು. ಗಾಳಿ ನಿಂದೊಡೆ ಮನವು ನಿಲುವದು. ಮನವು ನಿಂದೊಡೆ ಮಾಯೆ ಹೇಳ ಹೆಸರಿಲ್ಲದಂತಹುದು ಬಸವ ಕೇಳೆಂದ" ಈ ಅನುಭವದ ನುಡಿಯನ್ನು ನಿರಂತರವೂ ಸಾಧಕರಿಗೆ ತಿಳಿಹೇಳುತ್ತಿದ್ದರು. ಇದನ್ನು ಅರಗಿಸಿಕೊಳ್ಳಲು ಉಪದೇಶಿಸುತ್ತಿದ್ದರು. ಮನೋನಿಗ್ರಹಕ್ಕೆ ದೃಷ್ಟಿ ಸಾಧನೆ ಅತ್ಯವಶ್ಯ. ದೃಷ್ಟಿ ಸಾಧನೆಯ ಬಲದಿಂದ ದಿವ್ಯ ಜ್ಯೋತಿಯನ್ನು ಕಾಣಬಹುದು. ಸತ್-ಚಿತ್ ಆನಂದದಲ್ಲಿ ತನ್ಮಯರಾಗಬಹುದೆಂದು ಅರುಹುತ್ತಿದ್ದರು.

ಶ್ರೀಕುಮಾರ ಶ್ರೀಗಳವರ ಅನುಭವವು ಅಸಾಧಾರಣವಾದುದು. ಇವರಿಗೆ ಅನುಭವವು ಪಾಂಡಿತ್ಯದಿಂದ ಬಂದುದಲ್ಲ. ಆತ್ಮಶಕ್ತಿಯ ಪ್ರಭೆಯಿಂದ ಬಂದಿತ್ತು. ಎಂತೆಂತಹ ಪಂಡಿತರನ್ನು ತಮ್ಮ ಅನುಭವದಿಂದ ಮರುಳು ಮಾಡುತ್ತಿದ್ದರು. ಪಂಡಿತರಿಗೆ ತಿಳಿಯದ ವಿಷಯವನ್ನು ಸಹಜವಾಗಿ ತಿಳಿಭಾಷೆಯಲ್ಲಿ ತತ್ವಶಾಸ್ತ್ರದ ಅರ್ಥವನ್ನು ರಸವತ್ತಾಗಿ ತಿಳುಹಿ ಕೊಡುತ್ತಿದ್ದರು. ಜಟಿಲ ಪ್ರಶ್ನೆಗೆ ಉತ್ತರ ನೀಡುತ್ತಿದ್ದರು. ಒಣ ತರ್ಕದವರ ಬುದ್ಧಿಗೆ ಮೆಚ್ಚುತ್ತಿದ್ದಿಲ್ಲ. ಭಾಷಾ ಪಾಂಡಿತ್ಯದ ಜೊತೆಗೆ ಅನುಷ್ಠಾನಬೇಕೆಂದು ಅನ್ನುತ್ತಿದ್ದರು.

ಕುರುಡರಿಗೆ, ಕುಂಟರಿಗೆ ಆಶ್ರಯ ನೀಡುತ್ತಿದ್ದರು. ಬೇಡಿದವರಿಗೆ ಬೇಡಿದಿಷ್ಟಾರ್ಥವ ಪೂರೈಸುವ ಮಹಾಶಕ್ತಿ ಇವರಲ್ಲಿತ್ತು. ಅವರಲ್ಲಿ ವಾಕ್‌ಸಿದ್ಧಿಯು ತಪಸ್ಸಿನ ಪ್ರಭಾವದಿಂದ ಸಹಜವಾಗಿ ಬೆಳೆದು ಬಂದಿತ್ತು. ಬೇಗಿ ಪರಿತೋಷಿಸು

ತ್ತಿತ್ತು. ಅವರ ಅಂದ ನುಡಿಯು ಹುಸಿಯಾಗುತ್ತಿದ್ದಿಲ್ಲ. ಕಾಡಿದವರಿಗೂ ಸುಮತಿಯನ್ನು ಕೊಟ್ಟು ಪೊರೆಯುತ್ತಿದ್ದರು. ಪುತ್ರರಿಲ್ಲವೆ ಮರಗುವವರಿಗೆ ಕಾಯಿ ಆಶೀರ್ವಾದ ಮಾಡಿ ಮಕ್ಕಳಾಗುತ್ತವೆ ಎಂದು ಧೈರ್ಯ ಹೇಳಿದವರಿಗೆಲ್ಲರಿಗೂ, ಮಕ್ಕಳಾಗಿದ್ದು, ಅವರೆಲ್ಲರೂ ಆನಂದದಿಂದ ಇದ್ದು, ಲಿಂಗಪೂಜಾ ನಿಷ್ಠೆಯಲ್ಲಿ, ಸಮಾಜ ಸೇವೆಯಲ್ಲಿ, ಶೈಕ್ಷಣಿಕ ರಂಗದಲ್ಲಿ ಕಾಲ ಕಳೆಯುತ್ತಿರುವದನ್ನು ನಾವೆಲ್ಲರೂ ಇಂದು ಕಾಣುತ್ತಿದ್ದೇವೆ.*

ಸ್ತ್ರೀಯರ ಸುಧಾರಣೆಗಾಗಿ ಬಹುಪರಿಶ್ರಮ ಪಡುತ್ತಿದ್ದರು. ಸಾಧಕರಾದವರು ಮಹಿಳೆಯರ ಮುಖವನ್ನು ನೋಡಬಾರದೆಂಬ ನಿಯಮವನ್ನು ಮಾಡಿದ್ದರೂ, ಮಹಿಳಾ ಮುಖಜೀವನವನ್ನು ಕಂಡಿದ್ದರು. ಅದು ಕಳಾಹೀನವಾಗಿದೆ ಎಂದು ಅರಿತಿದ್ದರು. ಮಹಿಳೆಯರ ಮುನ್ನಡೆಗೆ, ಮಂಗಳ ಜೀವನಕ್ಕೆ ಬೇಕಾದ ಕಾರ್ಯ ಚಟುವಟಿಕೆಗಳನ್ನು ಕಲ್ಪಿಸಿ ಕೊಡುತ್ತಿದ್ದರು. ಉದಾಹರಣೆಗೆ ಸೊನ್ನಲಾಪುರದಲ್ಲಿರುವ ಆಧುನಿಕ ಶಿವಶರಣೆಯರೂ, ಶಿವಪೂಜಾನಿಷ್ಠರೂ ಮಾತೃಸಮಾನರೂ ಆದ ಶ್ರೀ ರುದ್ರಮ್ಮನವರ ಸ್ತ್ರೀತ್ವ ಮತ್ತು ಶರಣಸ್ಥಲ ರಕ್ಷಣೆಯ ಹೊಣೆ ಶ್ರೀಗಳವರದಾಗಿತ್ತೆಂಬುದನ್ನು ಅರಿತುಕೊಂಡರೆ ಅವರಲ್ಲಿರುವ ಮಹಿಳಾಮಂಡಳದ ಉದ್ಧಾರದ ಉದ್ದೇಶದ ಘನತೆ ಗೊತ್ತಾಗುತ್ತದೆ. ಪ್ರತಿಯೊಬ್ಬರೂ ಆದರ್ಶ ಮಹಿಳಾಮಣಿಗಳಾಗಬೇಕು. ಗುಣಗಳ ಶೃಂಗಾರದಿಂದ ಕೂಡಿಕೊಂಡು ಪತಿವ್ರತೆಯರಾಗಿ ಶೀಲ ಸಂಸ್ಕೃತಿಯನ್ನು ಳಿಸಿಕೊಳ್ಳಬೇಕೆಂಬುದೇ ಅವರ ಅಭಿಲಾಷೆ. ಮಹಿಳೆಯರ ಪ್ರಗತಿಗಾಗಿ ಪ್ರತಿವರ್ಷ ಶಿವಯೋಗಮಂದಿರದ ಜಾತ್ರೆಯಲ್ಲಿ ಮಹಿಳಾ ಸಮ್ಮೇಲನವನ್ನು ಕರೆದು ಅವರಲ್ಲಿ ಧಾರ್ಮಿಕಭಾವನೆಗಳನ್ನು ಒಡಮೂಡಿಸುತ್ತಿದ್ದರು.

ಕುಮಾರ ಶ್ರೀಗಳು ಧರ್ಮ ಜಾಗೃತಿಗಾಗಿ ಶ್ರೀ ಶಿವಯೋಗಮಂದಿರದ ವತಿಯಿಂದ ಕಪನಹಳ್ಳಿ, ರಾಮಗಡಿ, ನಿಡಗುಂದಿ, ಕೊಪ್ಪ, ಹಿರೇಹಾಳ, ಬದಾಮಿ ಮುಂತಾದ ಊರುಗಳಲ್ಲಿ ಶಾಖಾ ಮಂದಿರಗಳನ್ನು ಸ್ಥಾಪಿಸಿದರು. ಅಲ್ಲಿರುವ ವ್ಯಕ್ತಿಗಳ ವ್ಯಕ್ತಿತ್ವವನ್ನು ರೂಪಿಸಿದರು. ಧರ್ಮ ಜಾಗೃತಿ ಗೈದರು.

ಶಿವಯೋಗಮಂದಿರದ ಪ್ರರೋಭಿವೃದ್ಧಿಗಾಗಿ ಹಾಗೂ ಅದಕ್ಕೆ ಮುಂದೆ ತೊಂದರೆ ಬರದಿರುವಂತೆ ನೋಡಿಕೊಳ್ಳಲು ಹತ್ತೊಂಬತ್ತು ನಿಯಮಗಳುಳ್ಳ ವಿಶ್ವಸ್ತ ಸಮಿತಿಯೊಂದನ್ನು ರಚಿಸಿ, ಚಿರಕಾಲ ಉಳಿದು ನಿಲ್ಲುವಂತೆ ಮಾಡಿದರು. ಆಧ್ಯಾತ್ಮ ಹಸಿವಿನಿಂದ ಬಂದ ಭಕ್ತರಿಗೂ ಅಲ್ಲಿ ಆಶ್ರಯ ನೀಡಿದರು. ನಾಡಿನ ತುಂಬ ಧರ್ಮ ಪ್ರಚಾರ ಮಾಡುತ್ತ, ಭಿಕ್ಷೆ ಬೇಡುತ್ತ ಧನ ಸಂಗ್ರಹಿಸಿದರು. ಶಿವಯೋಗಮಂದಿರದಲ್ಲಿ ೬೧೦ ಭವ್ಯ ಭವನಗಳ ನಿರ್ಮಾಣ ಮಾಡಿದರು. ಸಾಧಕರಿಗಾಗಿ ಒಂದೆಡೆ ಯೋಗ

* (ಈ ಪುಸ್ತಕದ ಬರಹಗಾರರು ಸಹ ಕುಮಾರ ಶ್ರೀಗಳವರ ಕೃಪೆಯಿಂದ ಜನಿಸಿ ಸಮಾಜ ಸೇವೆಯನ್ನು ಮಾಡುತ್ತಲಿರುವರು.)

ಶಾಲೆ, ಮತ್ತೊಂದೆಡೆ ಸಂಸ್ಕೃತ ಪಾಠಶಾಲೆ, ಕನ್ನಡ ಪ್ರಾಥಮಿಕ ಶಾಲೆ, ಶಿವಧ್ಯಾನ ಮಂದಿರ, ಶಿವಾನುಭವ ಮಂಟಪ ಮುಂತಾದವುಗಳನ್ನು ಕಟ್ಟಿಸಿದರಲ್ಲದೆ ದರ್ಶನಾರ್ಥಿಗಳಿಗಾಗಿ ಬಂದ ಅತಿಥಿಗಳಿಗೆ, ದಾಸೋಹ, ಪ್ರಸಾದ ನಿಲಯವನ್ನು ಕಟ್ಟಿಸಿದರು. ಭಸ್ಮದ ಕಾರಖಾನೆ ಹಾಗೂ ಗೋಶಾಲೆಯನ್ನು ಕಟ್ಟಿಸಿ, ಸರ್ವಕಾರ್ಯಗಳು ಸುಗಮವಾಗಿ ಜರುಗುವಂತೆ ವ್ಯವಸ್ಥೆ ಮಾಡಿದರು.

ಶಿವಯೋಗಿ ವೃಂದಕ್ಕೆ ಶಿಸ್ತು ಸಂಘಟನೆ ಕಲಿಸಿದರು. ಮಂದಿರದ ಸಾಧಕರ ದಿನಚರಿಯು ವೈಶಿಷ್ಟ್ಯಪೂರ್ಣವುಳ್ಳದ್ದಾಗಿದೆ. ಪ್ರತಿನಿತ್ಯ ಬ್ರಾಹ್ಮೀಮುಹೂರ್ತದಲ್ಲಿ ಮುಂಜಾನೆ ೪ ಘಂಟೆಗೆ ಸರಿಯಾಗಿ ಎದ್ದು, ಮುಖಮಾರ್ಜನ ಭಸ್ಮ ಧಾರಣ ಮಾಡಿಕೊಂಡು, ಸಾಲಾಗಿ ಕುಳಿತು ಪ್ರಾರ್ಥನೆ ಮಾಡುವರು. ಎಲ್ಲ ಕಾರ್ಯಕ್ರಮಗಳಲ್ಲಿಯೂ ಪ್ರಾರ್ಥನೆಗೆ ಅಲ್ಲಿ ಹೆಚ್ಚು ಮಹತ್ವ ನೀಡಲಾಗಿದೆ. ೪-೧೫ ರಿಂದ ೬ರ ವರೆಗೆ ಅಧ್ಯಯನ, ೬ ರಿಂದ ೬-೩೦ರ ವರೆಗೆ ಶೌಚಾದಿ ನಿತ್ಯಕರ್ಮ, ೬-೩೦ ರಿಂದ ೭ರ ವರೆಗೆ ಯೋಗಾಸನ, ೭ ರಿಂದ ೯-೩೦ರ ವರೆಗೆ ಶಾಲೆಯಲ್ಲಿ ಪಾಠ ಪ್ರವಚನಗಳು, ೯-೩೦ ರಿಂದ ೧೧ರ ವರೆಗೆ ಸ್ನಾನ ಶಿವಪೂಜೆ, ೧೧ ರಿಂದ ೧೨ರ ವರೆಗೆ ಅರ್ಪಿತ (ಪ್ರಸಾದ), ೧೨ ರಿಂದ ೧೨-೩೦ ರ ವರೆಗೆ ಶಿವಾನುಭವ, ೧೨-೩೦ ರಿಂದ ೨ರ ವರೆಗೆ ವಿಶ್ರಾಂತಿ, ದಿನ ಪತ್ರಿಕೆ ವಾಚನ ಹಾಗೂ ಶುದ್ಧ ಬರೆಹ. ೨ ರಿಂದ ೪-೩೦ ರ ವರೆಗೆ ಪಾಠ ಪ್ರವಚನ. ೪-೩೦ ರಿಂದ ೫ರ ವರೆಗೆ ನಿತ್ಯಕರ್ಮ, ೫ ರಿಂದ ೫-೩೦ರ ವರೆಗೆ ಪುರಾಣ ಶ್ರವಣ, ೫-೩೦ ರಿಂದ ೬-೩೦ರ ವರೆಗೆ ಕೈತೋಟಗಳಿಗೆ ನೀರು ಹಾಕುವದು. ಸಾಯಂಕಾಲ ೬-೩೦ ರಿಂದ ೭ರ ವರೆಗೆ ಸಾಮೂಹಿಕ ಪ್ರಾರ್ಥನೆ. ೭ ರಿಂದ ೯ರ ವರೆಗೆ ಸ್ನಾನ, ಪೂಜೆ, ಅರ್ಪಿತ, ರಾತ್ರಿ ೯ ರಿಂದ ೧೦ರ ವರೆಗೆ ಅಧ್ಯಯನ, ೧೦ ಘಂಟೆಗೆ ವೈಯಕ್ತಿಕ ಪ್ರಾರ್ಥನೆಯೊಂದಿಗೆ ಮಲಗುವದು.

ಈ ರೀತಿಯ ನಿಯಮಗಳನ್ನು ಹಾಕಿಕೊಟ್ಟು, ಆಚರಣೆಯಲ್ಲಿ ತಂದಿರಿಸಿದರು. ಇದರಿಂದ ವಟುಗಳು, ಸಾಧಕರು ಆತ್ಮ ಸಂಯಮದಿಂದ ಇರಲು ಸಾಧ್ಯವಾಯಿತು. ಸಾಧಕರ ಆಚಾರ-ವಿಚಾರ ರೀತಿ-ನೀತಿಗಳ ಬಗ್ಗೆ ಹೆಚ್ಚು ಲಕ್ಷ್ಯವಹಿಸಿ ಅವರ ಬಾಳು ಬಂಗಾರದಂತೆ ಸುಂದರವಾಗಲು ಕುಮಾರ ಶ್ರೀಗಳು ಯೋಚಿಸಿದರು.

ಒಟ್ಟಿನಲ್ಲಿ ಆತ್ಮಾನುಭೂತಿಯ ಆಧ್ಯಾತ್ಮ ಕೇಂದ್ರವಾದ ಶ್ರೀ ಮದ್ವೀರಶೈವ ಶಿವಯೋಗಮಂದಿರ ಸಂಸ್ಥೆಯು ಸಂಸ್ಥಾಪಿತವಾದಂದಿನಿಂದ ಸಾವಿರಾರು ಜನ ಸಾಧಕರು ಅಧ್ಯಯನ ಮಾಡಿದ್ದಾರೆ. ಷಟ್‌ಕರ್ಮಗಳ ಸಿದ್ಧಿಯನ್ನು, ಷಟ್‌ಸ್ಥಲಗಳ ಶುದ್ಧಿಯನ್ನು ಬುದ್ಧಿವೈಭವದೊಡನೆ, ಭಾವಜೀವಿಗಳಾಗಿ, ಆತ್ಮಾನುಸಂಧಾನ ಮಾಡಿಕೊಂಡು ಅಷ್ಟಾಂಗ ಯೋಗಗಳಲ್ಲಿ ಪರಿಣತರಾಗಿ, ಇಷ್ಟಲಿಂಗ ಪ್ರಾಣನಿಷ್ಠರಾಗಿ, ಅಂತಃಶಕ್ತಿ ಪ್ರಭೆಯಿಂದ ನಾದವನ್ನು ಜಾಗೃತಗೊಳಿಸಿದ್ದಾರೆ. ಪಾದೋದಕ

ಪ್ರಸಾದಗಳ ಸಂವಿಧಾನದಲ್ಲಿ ಸಕ್ರಮತೆಯನ್ನು ತಂದಿದ್ದಾರೆ. ಕರ್ನಾಟಕ, ಮಹಾರಾಷ್ಟ್ರ, ಆಂಧ್ರಗಳಲ್ಲಿಯೂ ಶಿವಯೋಗದ ಬೆಳಕನ್ನು ನೀಡಿದ ಎನಿತೋ ಜನ ಸ್ವಾಮಿಗಳು ಶಿವಯೋಗಮಂದಿರದ ಸಾಧಕರಾಗಿ ಸಾಧನೆ ಮಾಡಿದವರಾಗಿದ್ದಾರೆ. ಶಿವಯೋಗ ಮಂದಿರದಲ್ಲಿಯೇ ಸಾಧಕರಾಗಿ ಜಗದ್ಗುರುಪೀಠವನ್ನು ಅಲಂಕರಿಸಿದ ಕೆಲವರು ನಾಡಿನ ರಾಷ್ಟ್ರದ ಶೈಕ್ಷಣಿಕ, ಸಾಹಿತ್ಯಿಕ, ಸಾಮಾಜಿಕ ಕ್ರಾಂತಿಯನ್ನು ಮಾಡಿದ್ದಾರೆ. ಜನರಲ್ಲಿ ಧರ್ಮ ಜಾಗೃತಿಯನ್ನು ಮೂಡಿಸಿದ್ದಾರೆ. ಶಿವಯೋಗ ಮಂದಿರದಿಂದ ಸಮಾಜಕ್ಕೆ ಆದ ಅನುಕೂಲತೆಗಳು ಒಂದಲ್ಲ ಎರಡಲ್ಲ ಅನಂತವಾಗಿವೆ. ಧಾರ್ಮಿಕವಾಗಿ ಅದೆಷ್ಟೋ ಪ್ರಗತಿಯಾಗಿವೆ. ಲಿಂಗ–ಭಸ್ಮಗಳಲ್ಲಿ ಶಾಸ್ತ್ರೋಕ್ತತೆ–ಶುದ್ಧತೆಯನ್ನು ತಂದಿದೆ. ಧರ್ಮಾಧಿಕಾರಿಗಳ ಆಚರಣೆಯನ್ನು ನಿರೂಪಿಸಿದೆ. ಮಂತ್ರ ಮಹಿಮೆಯನ್ನುಗ್ಗಡಿಸಿದೆ. ಕಾಯಕವೇ ಕೈಲಾಸವೆಂದು ಸಾರಿದೆ. ಲೌಕಿಕ ಉದ್ಧಾರಕ್ಕೆ ರಾಷ್ಟ್ರೀಯ ಭಾವನೆಯನ್ನು ತುಂಬಿದೆ. ಸರ್ವ ಧರ್ಮದವರನ್ನು ಪುರಸ್ಕರಿಸಿದೆ. ಇಲ್ಲಿಂದ ತಯಾರಾದವರು ದಕ್ಷಿಣ ಭಾರತದಲ್ಲಿಯ ಮಠ–ಮಾನ್ಯಗಳಿಗೆ ಅಧಿಕಾರಿಗಳಾಗಿ ಸಮಾಜದಲ್ಲಿ ನಾನಾ ರೀತಿ ಸೇವೆ ಸಲ್ಲಿಸಿದ್ದಾರೆ, ಪ್ರಗತಿ ಸಾಧಿಸಿದ್ದಾರೆ. ಈ ಸಂಸ್ಥೆಯಿಂದ ಶಿವಯೋಗಿಗಳು ಕವಿಗಳು, ಭಾಷಣಕಾರರು, ಲೇಖಕರು, ಕೀರ್ತನಕಾರರು, ಪುರಾಣಿಕರು, ಪಂಡಿತರು, ಸಂಶೋಧಕರು, ವೈದಿಕರು, ಸಂಗೀತ ವಿಶಾರದರು, ವೈದ್ಯರು ಹೀಗೆ ಅನೇಕರು ಅನೇಕ ಕಲೆಗಳಲ್ಲಿ ಯಶವನ್ನು ಸಂಪಾದಿಸಿದ್ದಾರೆ. ನಾಡಿನಲ್ಲಿ ಕುಮಾರ ಶಿವಯೋಗಿಗಳ ಶಿಷ್ಯರೇ ಹೆಚ್ಚಾಗಿ ಇದ್ದಾರೆಂದು ಹೇಳಿದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ.

ಡಾ. ಶ್ರೀ ಜ. ಚ. ನಿ. ಅವರು 'ಶಿವಯೋಗ ಮಂದಿರ ಸೃಷ್ಟಿ, ದೃಷ್ಟಿ' ಈ ಲೇಖನವನ್ನು ಬರೆಯುತ್ತ ಶಿವಯೋಗ ಮಂದಿರ ಬಗೆಗೆ ಈ ರೀತಿ ಅಭಿಪ್ರಾಯ ವ್ಯಕ್ತಮಾಡಿದ್ದಾರೆ.

"ವೀರಶೈವರಿಗೆ ಕೊಂಡಲುಪಾಕಿ, ಶ್ರೀಶೈಲ, ಹಿಮವತ್ಕೇದಾರ, ಉಜ್ಜಯಿನಿ, ಕಾಶಿ, ಕಲ್ಯಾಣ, ಕೂಡಲಸಂಗಮ, ಬಸವನಬಾಗೇವಾಡಿ ಮುಂತಾದವುಗಳು ಹೇಗೆ ಮಾನ್ಯ ಮತ್ತು ಪೂಜ್ಯ ಸ್ಥಾನಗಳಾಗಿವೆಯೋ ಹಾಗೆ ಶಿವಯೋಗ ಮಂದಿರವೂ ಇಂದು ಮಾನ್ಯ ಸ್ಥಾನವಾಗಿದೆ, ಪುಣ್ಯಸ್ಥಾನವಾಗಿದೆ.

ಈ ನುಡಿ ಅರ್ಥಪೂರ್ಣವಾದುದು. ತತ್ವಭರಿತವಾದುದು.

ಬೆಳಗಿನೊಳು ಬೆಳಗು

ಶ್ರೀ ಕುಮಾರ ಶ್ರೀಗಳವರು ೬೪ನೆಯ ವಯಸ್ಸಿನಲ್ಲಿ ಅಡಿಯಿಟ್ಟಿದ್ದಾರೆ. ವರ್ಷಗಳು ಅರವತ್ತುಮೂರಾದರೂ, ಸಮಾಜ ಸೇವೆಯನ್ನು ಮಾಡುವ ಹುರುಪು ನಶಿಸಿಲ್ಲ. ಮತ್ತಿಷ್ಟು ಪಕ್ವಗೊಂಡಿದೆ. ಇಷ್ಟು ವಯೋವಾರ್ಧಕ್ಯದಲ್ಲಿಯೂ ಯುವಕರಿಗಿಂತ ಚಟುವಟಿಕೆ ಹುರುಪು ಉತ್ಸಾಹ ತುಂಬಿ ತುಳುಕಿದೆ. ನಿತ್ಯದಲ್ಲಿ ನಡೆಯುವ ಅರ್ಚನ ಅರ್ಪಣ ಅನುಭವಕ್ಕೆ ಚ್ಯುತಿಯಿಲ್ಲದೆ ಕಾರ್ಯಸಾಗಿದೆ. ಸಂಸ್ಥಾಪಿಸಿದ ಸಂಸ್ಥೆಗಳ ಭದ್ರತೆಗೆ ಸುವ್ಯವಸ್ಥೆಯನ್ನು ಮಾಡಿದ್ದಾರೆ. ಗುರುವಿರಕ್ತರ ಭಾವೈಕ್ಯವು ಇನ್ನೂ ಪರಿಪೂರ್ಣವಾಗದೆ ಉಳಿದದ್ದು ಮನೋವ್ಯಥೆಗೆ ಕಾರಣವಾಗಿದೆ. ನಿದ್ದೆ–ನೀರಡಿಕೆಗಳನ್ನು ಕಡೆಗಣಿಸಿ, ಸಮಯಕ್ಕೆ ಸರಿಯಾಗಿ ಆಹಾರವಿಲ್ಲದೆ ಸಮಾಜ ಸೇವೆಯನ್ನು ಮಾಡಿ ಮಾಡಿ ಕಾಯವು ಕೃಶವಾಗಿದೆ. ಶರೀರವು ಎತ್ತನೋಡಿದರೂ ಎಲುಬಿನ ಹಂದರದಂತೆ ಕಾಣುತ್ತದೆ. ಶರೀರವು ಎಲುಬಿನ ಹಂದರದಂತಿದ್ದರೂ ಆ ಹಂದರದಲ್ಲಿಯ ಸೌಗಂಧ್ಯವನ್ನು ಸೇವಿಸಿದವರು ಇಂದಿಗೂ ಹೇಳುತ್ತಿದ್ದಾರೆ. ಆ ತೇಜಸ್ಸು, ಆ ಓಜಸ್ಸು ಬಾಳಿನ ಬೇಸರಿಕೆಯನ್ನು ಕಳೆಯುವ ಆಕರ್ಷಕ ವ್ಯಕ್ತಿತ್ವ ಉಪಮಾತೀತವಾದುದೆಂದು ಅವರ ಸೇವೆಗೈದವರು ಬಣ್ಣಿಸುತ್ತಿದ್ದಾರೆ.

ಸಂಗಮೇಶ್ವರ ದೇವಸ್ಥಾನದ ಪೂಜಾ ವ್ಯವಸ್ಥೆಗಾಗಿ ಮುದೇನೂರಿಗೆ ದಯಮಾಡಿಸಿದ ಕುಮಾರ ಶಿವಯೋಗಿಗಳಿಗೆ ಒಮ್ಮೆಲೆ ಅನಾರೋಗ್ಯ ಆವರಿಸಿತು. ಜೀವನ ಸಂಧ್ಯೆ ಸಮೀಪಿಸಿತು. ಅನಾರೋಗ್ಯ ಸಂಭವಿಸಿದರೂ ಆಚಾರ-ವಿಚಾರಕ್ಕೆ ಎಳ್ಳನಿತೂ ಭಂಗ ತಂದುಕೊಳ್ಳಲಿಲ್ಲ. ವೈದ್ಯರು ಬಂದರು. ಪರಿಶುದ್ಧ ಚಿನ್ನದಂತಿರುವ ಶ್ರೀಗಳವರ ದೇಹವನ್ನು ಪರೀಕ್ಷಿಸಿದರು; ಬೆರಗಾದರು. ಆಚಾರಕ್ಕೆ ವಿರೋಧವಿದ್ದ ಔಷಧಗಳನ್ನು ಸೇವಿಸಲು ಒಪ್ಪದಾದರು. ಜ್ವರದ ಬಾಧೆ ಮಿತಿಮೀರಿತು. ಎಲ್ಲರ ಚಿಂತೆಗೆ ಕಾರಣವಾಯ್ತು. ಕೂಡಲೇ ಹಾವೇರಿಗೆ ಶ್ರೀಗಳವರನ್ನು ಕರೆದುಕೊಂಡು ಬಂದರು. ಪ್ರತಿಷ್ಠಿತರನೇಕರು ದರ್ಶನಕ್ಕೆ ಬಂದರು. ಚಿತ್ರದುರ್ಗ ಬೃಹನ್ಮಠದ ಜಗದ್ಗುರು ಜಯದೇವಸ್ವಾಮಿಗಳು ಮುಂತಾದವರು ಬಂದು ಆರೋಗ್ಯ ವರ್ಧನೆಗಾಗಿ ಅನೇಕ ಸಲಹೆಸೂಚನೆ ನೀಡಿದರು. ಎಲ್ಲರಿಗೂ ಕುಮಾರ ಶ್ರೀಗಳವರದು ಒಂದೇ ಒಂದು ಉತ್ತರ.

"ನನ್ನ ಆರೋಗ್ಯದ ಕಡೆಗೆ ಲಕ್ಷ ಕೊಡಬೇಡಿರಿ. ಗುರು ವಿರಕ್ತರ ಭಾವೈಕ್ಯವು ಅಂತಃಕರಣ ಪೂರ್ವಕವಾಗಿ ನಡೆಯಬೇಕು. ಬಸವತತ್ವ–ಪ್ರಚಾರವು ವಿಶ್ವದ

ತುಂಬ ಹರಡಬೇಕು. ಶಿವಯೋಗ ಮಂದಿರದ ಮಹೋದ್ದೇಶಗಳು ಸಫಲವಾಗ ಬೇಕು. ಇದೇ ನಮ್ಮ ಕೊನೆಯಾಶೆ. ಇದಕ್ಕೆ ಒಪ್ಪಿದರೆ ಆನಂದದಿಂದ ಶಿವಸಾನ್ನಿಧ್ಯ ಸೇರುವೆವು. ಇಲ್ಲವಾದರೆ ಮತ್ತೆ ಸಮಾಜ ಸೇವೆಗೆ ಹುಟ್ಟಿ ಬರಬೇಕಾಗುವದು" ಎಂದೊಡನೆಯೇ ಎಲ್ಲರೂ ಆಶ್ಚರ್ಯಚಕಿತರಾದರು. ಯಾರಿಂದಲೂ ಸರಿಯಾದ ಉತ್ತರ ದೊರೆಯಲಿಲ್ಲ.

ಮತ್ತೆ ಪರಮ ತಪಸ್ವಿ ಹಾವೇರಿಯ ಶಿವಬಸವಸ್ವಾಮಿಗಳವರನ್ನು ಹತ್ತಿರ ಕರೆದು "ಆಚಾರ ತಪ್ಪಿದರೆ, ಧ್ಯಾನ ತಪ್ಪಿದರೆ ನಮ್ಮ ದೋಷ. ನೀವಿರುವವರೆಗೂ ಶಿವಯೋಗ ಮಂದಿರ ಸಂಸ್ಥೆಯನ್ನು ಚನ್ನಾಗಿ ನಡೆಯಿಸಿಕೊಂಡು ಹೋಗುವಿರಾ? ವಚನ ಕೊಡಿರಿ" ಎಂದೊಡನೆಯೇ "ಆಗಲಿ" "ತಮ್ಮ ವಚನವನ್ನು ಪಾಲಿಸುವೆ" ಎಂದೆನ್ನುತ್ತ ಹಾವೇರಿ ಶ್ರೀಗಳು ಚಿಕ್ಕ ಹುಡುಗರಂತೆ ಗಳಗಳನೆ ಅತ್ತುಬಿಟ್ಟರು.

ಶ್ರೀ ಕುಮಾರ ಶ್ರೀಗಳವರ ದೇಹದಲ್ಲಿ ಅಸ್ವಾಸ್ಥ್ಯವು ಹೆಚ್ಚಾದೊಡನೆಯೇ ಶ್ರೀಗಳು "ಶಿವಯೋಗ ಮಂದಿರಕ್ಕೆ ನಮ್ಮನ್ನು ಕರೆದುಕೊಂಡು ಹೋಗಬೇಕು" ಎಂದರು.

ಒಡನೆಯೇ ಭಕ್ತವೃಂದವು ಕಾರಿನಲ್ಲಿ ಕುಮಾರ ಶ್ರೀಗಳವರನ್ನು ಕರೆದು ಕೊಂಡು ಬಂದರು. ಅನಿತರಲ್ಲಿಯೇ ನಾಡಿನ ತುಂಬ ಶ್ರೀಗಳ ಅನಾರೋಗ್ಯದ ವಾರ್ತೆ ಹರಡಿತ್ತು. ಸಹಸ್ರಾರು ಜನರು ಶಿವಯೋಗ ಮಂದಿರಕ್ಕೆ ಬಂದರು. ಕೊನೆಯ ದರ್ಶನ ಪಡೆದುಕೊಂಡರು.

(ಸನ್ ೧೯೩೦) ಶಕೆ ೧೮೫೨ ನೆಯ ಮಾಘ ಬಹುಳ ಸಪ್ತಮಿ ಬುಧವಾರ ಸಂಜೆ ಹಾನಗಲ್ಲ ಕುಮಾರ ಶಿವಯೋಗಿಗಳು ಶಿವಾರ್ಚನೆ ತೀರಿಸಿಕೊಂಡು, ಶಿವಪೂಜಾ ಮಂದಿರದಲ್ಲಿ ಶಿವಧ್ಯಾನ ಮಾಡುತ್ತ ಪಾದೋದಕವನ್ನು ಸೇವಿಸಿ ದೊಡನೆಯೇ ಪ್ರಾಣ ಪಕ್ಷಿಯು ಕಣ್ಣಿನಲ್ಲಿ ಹಾರಿಹೋಯ್ತು. ಬೆಳಕಿನೊಳಗೆ ಬೆಳಕು ಸೇರಿತು. ಹಾಲಿನೊಳು ಹಾಲು ಬೆರೆದಂತೆ ಲಿಂಗದೊಳು ಬೆರೆದರು. ಬಯಲೊಳಗೆ ಬಯಲಾದರು. ೨೦ನೆಯ ಶತಮಾನದ ಯುಗಪುರುಷ ಕುಮಾರಯೋಗಿಗಳು ನಮ್ಮೆಲ್ಲರನ್ನು ಬಿಟ್ಟು ಇಹರಂಗದಿಂದ ಕಣ್ಮರೆಯಾದರು. ಕಾಯವು ಮಾಯ ವಾಯ್ತು. ಆದರೆ ಹೃದಯ ಮಂದಿರದಲ್ಲಿ ನಿರಂತರವೂ ಕುಳಿತು ಕೊಂಡಿದ್ದಾರೆ. ಜ್ಯೋತಿಯಾಗಿ ಉಳಿದಿದ್ದಾರೆ. ಪರಂಜ್ಯೋತಿಯಾಗಿ ಬೆಳಗುತ್ತಿದ್ದಾರೆ.

ಅಮರ ಚೇತನ

ಕುಮಾರ ಶಿವಯೋಗಿಗಳ ಸಾಹಸಮಯ ಜೀವನ ಅಸದೃಶವಾದುದು; ಅಗಾಧವಾದುದು. ಅವರ ದಿವ್ಯ ಚೇತನ ಅಮರವಾದುದು. ಅವರ ಅಂತಃಪ್ರಕಾಶ ಅಂತಃಸ್ಫೂರ್ತಿಯನ್ನು ನೀಡುವಂತಹದು. ಅವರ ಅನುಭಾವವು ಅರಿವಿನ ಹಸಿವನ್ನು ಹಿಂಗಿಸುವಂತಹದು. ಅವರು ಮಾನವರ ಹಿತಕ್ಕಾಗಿ ಜ್ಞಾನ ಜ್ಯೋತಿಯನ್ನು ಹೊತ್ತಿಸಲು ಜನ್ಮವೆತ್ತವರು. ಯುಗಪ್ರವರ್ತಕರು. ವಿಲಕ್ಷಣವಾದ ದೂರದರ್ಶಿತ್ವ ಅತ್ಯಧಿಕ ಶ್ರಮ ಸಹಿಷ್ಣುತೆಯಿಂದೊಡಗೂಡಿದ ಅವರ ವ್ಯಕ್ತಿತ್ವವು ಕಂಗೆಟ್ಟವರಿಗೆ ಕಣ್ಬೆಳಕಾಗಿತ್ತು. ಅವರ ಅಖಂಡ ಧೈರ್ಯವು ಹೊಸ ಸೃಷ್ಟಿಯನ್ನೇ ನಿರ್ಮಿಸಿತು. ಒಬ್ಬೊಬ್ಬರು ಒಂದೊಂದು ಶಕ್ತಿಯಲ್ಲಿ ಮುಂದುವರಿದವರಿದ್ದರೆ, ಕುಮಾರಯೋಗಿಗಳು ಸಮಾಜವನ್ನು ಪ್ರತಿಯೊಂದು ದೃಷ್ಟಿಯಲ್ಲಿಯೂ, ಸಂಘಟಿಸುವದರಲ್ಲಿ, ಸುಧಾರಿಸುವದರಲ್ಲಿ ಅಗ್ರಸ್ಥಾನ ಪಡೆದ ಯುಗಾವತಾರಿಗಳು.

೧೨ನೆಯ ಶತಮಾನದಲ್ಲಿ ಮಹಾತ್ಮ ಬಸವಣ್ಣನವರು ಅನುಭವಮಂಟಪ ರಚಿಸಿದಂತೆ, ವಿಶ್ವಕವಿ ರವೀಂದ್ರನಾಥ ಠಾಕೂರರು ಶಾಂತಿಸಾಧಕರಿಗೆ ಶಾಂತಿನಿಕೇತನ ನಿರ್ಮಿಸಿದಂತೆ, ವಿವೇಕಾನಂದರು ಧರ್ಮಪ್ರಚಾರ ಮಾಡಲು ರಾಮಕೃಷ್ಣಾಶ್ರಮವನ್ನು ಸ್ಥಾಪಿಸಿದಂತೆ, ಮಹಾತ್ಮಗಾಂಧೀಜಿಯವರು ಭಾರತದ ಕಲ್ಯಾಣಕ್ಕಾಗಿ ಪರಿಶ್ರಮ ವಹಿಸಿದಂತೆ, ಸಮಾಜ ಪುರುಷನಿಗಾಗಿ, ಆಧ್ಯಾತ್ಮದ ಅಮೃತ ಫಲವನ್ನೀಯಲು ಜೀವಂತ ಶಕ್ತಿಗಳು ನಾಡಿನ ತುಂಬೆಲ್ಲ ಕ್ರಿಯಾತ್ಮಕ ರೀತಿಯಲ್ಲಿ ಸಾಂಸ್ಕೃತಿಕ, ಸಾಹಿತ್ಯಿಕ, ಶೈಕ್ಷಣಿಕ, ಧಾರ್ಮಿಕ ಕಾರ್ಯಗಳನ್ನು ನೆರವೇರಿಸಲು, ಮಾನವರನ್ನು ಮಾದೇವರನ್ನಾಗಿ ಮಾಡಲು ಶಿವಯೋಗ ಮಂದಿರವನ್ನು ಸ್ಥಾಪಿಸಿ, ಜನಾಂಗದಲ್ಲಿ ನೂತನ ಚೇತನವನ್ನು ನೀಡಿದ ಹಾನಗಲ್ಲ ಕುಮಾರ ಶಿವಯೋಗಿಗಳು ಯುಗಪುರುಷರಲ್ಲದೆ ಮತ್ತೇನು? ಯುಗಪುರುಷರೂ ಅಹುದು. ಕಾರಣಿಕ ಪುರುಷರೂ ಅಹುದು. ಅಷ್ಟೇ ಅಲ್ಲ, ಇತಿಹಾಸ ಪುರುಷರೂ ಅಹುದು.

ಭಕ್ತಭಾಂಡಾರಿ ಬಸವಣ್ಣನವರ ತರುವಾಯ ಶಿವಾನುಭವ ರಸದೂಟವನ್ನು ಸರ್ವರಿಗೂ ನೀಡಿ, ತತ್ವಪ್ರಚಾರಕರಿಗೆ ದಾರಿಯನ್ನು ತೋರಿಸಿ, ಶಿವಾನಂದ ಸಾಗರದಲ್ಲಿ ತೇಲಿಸಿದ ಚಿದ್ವಿಭೂತಿ ಈಗ ಎಲ್ಲಿಯೇ ಶಿವಾನುಭವ ಪ್ರಚಾರ ನಡೆದಿರಲಿ ಅದೆಲ್ಲವೂ ಕುಮಾರೇಶನ ಕೃಪಾ ವಿಶೇಷವೇ!

ಅಖಿಲ ಭಾರತ ವೀರಶೈವ ಮಹಾಸಭೆ, ಶಿವಯೋಗ ಮಂದಿರ ಇವು ಅವರ ಜೀವನಾಕಾಶದ ಸೂರ್ಯ–ಚಂದ್ರ ಸ್ವರೂಪಗಳಿದ್ದಂತೆ. ಆ ಪ್ರಕಾಶದಿಂದ

ಪ್ರೇರಿತರಾದವರು ಅಂದರೆ ಎಚ್ಚೆತ್ತವರು ಅದೆಷ್ಟೋ ಜನ. ಮಿರಿ-ಮಿರಿ ಮಿನುಗಿದವರು, ಮಿನುಗುತ್ತಿರುವವರು, ಇನ್ನೂ ಮಿನುಗುವವರು ಅದೆನಿತೋ?

ಸ್ವಾಮಿ ವಿವೇಕಾನಂದರ ಮತ್ತು ಕುಮಾರಯೋಗಿಗಳ ಚರಿತ್ರೆಯನ್ನು ನಿರೀಕ್ಷಿಸಿದರೆ, ಎರಡೂ ಹೃದಯಗಳು ಒಂದೇ ತೆರನಾಗಿವೆ. ಇಬ್ಬರಲ್ಲಿಯೂ ಅದ್ಭುತ ಸಾಮರ್ಥ್ಯವು ತುಂಬಿತ್ತು. ಇಬ್ಬರೂ ದೀನದರಿದ್ರರಿಗಾಗಿ, ಯೋಗ ಸಾಧಕರಿಗಾಗಿ, ದುಡಿದವರು. ಮಾನವೋನ್ನತಿಗಾಗಿ ತಮ್ಮ ಜೀವನವನ್ನು ಸಮರ್ಪಿಸಿ ಲೋಕೋದ್ಧಾರಗೈದವರು.

ನಾಡಿನಲ್ಲಿ ಅನೇಕ ಮಹಾತ್ಮರು, ಸಾಧುಸಂತರು ನಾನಾ ಬಗೆಯ ಪವಾಡಗಳನ್ನು ತಮ್ಮ ನೈತಿಕಶಕ್ತಿಯ ಪ್ರಭಾವದಿಂದ ಮಾಡಿರಬಹುದು. ಜಲವನ್ನೇ ತುಪ್ಪವನ್ನಾಗಿ ಮಾಡಿರಬಹುದು. ವೈದ್ಯರಿಂದಲೂ ಗುಣಪಡಿಸಲಾರದ ರೋಗಗಳನ್ನು ಮಂತ್ರಶಕ್ತಿಯಿಂದ ಕಳೆದಿರಬಹುದು. ಹುಲಿಯನ್ನು ಚಿಗರೆಯಂತೆ ಸ್ವಾಧೀನ ಮಾಡಿಕೊಂಡಿರಬಹುದು. ಇವೆಲ್ಲವುಗಳು ಪವಾಡಗಳಾಗಿದ್ದರೂ ಇಂತಹ ಪವಾಡಗಳೇನೂ ಶ್ರೀಗಳ ಜೀವನದಲ್ಲಿ ಕಂಡುಬರುವದಿಲ್ಲ. ಆದರೆ ಸತ್ವಹೀನವಾದ ದುರ್ಬಲವಾದ ಸಾವಿನ ದವಡೆಯಲ್ಲಿ ಸಿಕ್ಕು ಜರ್ಜರಿತವಾಗಿ ಘನಘೋರ ಕಷ್ಟದಲ್ಲಿ ತಾಮಸೀಯ ವೃತ್ತಿಯಿಂದ ಬೆಂದು ಬಳಲುತ್ತಿದ್ದ ಸಮಾಜವನ್ನು ಚೇತರಿಸುವಂತೆ ಸತ್ವಯುತ ಹಾಗೂ ಕಾಂತಿಯುತವಾಗುವವರೆಗೂ ಹಗಲಿರುಳೆನ್ನದೆ ತಮ್ಮ ದೇಹವನ್ನೇ ಗಂಧದಂತೆ ಸವೆಯಿಸಿ, ಜೀವಂತವನ್ನಾಗಿ ಮಾಡಿದ ಮಹಾಯೋಗಿ ಕುಮಾರನ ಶಕ್ತಿಯು ಮಹಾಪವಾಡವಲ್ಲದೆ ಮತ್ತೇನು?

ಒಟ್ಟಿನಲ್ಲಿ ಕುಮಾರ ಶ್ರೀಗಳವರ ಜೀವನವು ಗೌರೀಶಂಕರ ಶಿಖರದಂತೆ ಎತ್ತರವಾದುದು. "ಮಹಾತ್ಮಾನಾಂ ಹಿ ಚೇತಾಂಸಿ ವಜ್ರಾದಪಿ ಕಠೋರಾಣಿ ಮೃದೂನಿ ಕುಸುಮಾದಪಿ" ಈ ಉಕ್ತಿಯಂತೆ ಅವರ ಹೃದಯವು ಇದ್ದು, ಸುವರ್ಣದಂತೆ ನಿಷ್ಕಳಂಕವಾದ ಅವರ ಆದರ್ಶ ವ್ಯಕ್ತಿತ್ವವನ್ನು ಭಾಷೆಯಿಂದ ಬಣ್ಣಿಸಲು ಅಸಾಧ್ಯ.

ಕುಮಾರ ಜ್ಯೋತಿಯಿಂದ ನಾಡು ಬೆಳಗಿತು. ಸಾಹಿತ್ಯ ಸೃಷ್ಟಿಯಾಯ್ತು. ಶೀಲ ಸಂಸ್ಕೃತಿ ಉಳಿಯಿತು. ಸ್ವಾಮಿಗಳು, ಧರ್ಮ ಗುರುಗಳು ಎಚ್ಚೆತ್ತರು. ಮಾನವ ಲೋಕವೇ ಜಾಗೃತವಾಯ್ತು.

೮೦. ಕುಮಾರ ಶಿವಯೋಗಿಗಳ ಸವಿನೆನಪಿಗಾಗಿ ಅನೇಕರು ಅನೇಕ ರೀತಿಯ ಕಾರ್ಯಗಳನ್ನು ರೂಪಿಸಿಕೊಂಡು ಸೇವೆಸಲ್ಲಿಸಿದ್ದಾರೆ, ಅವುಗಳಲ್ಲಿ ಕೆಲವರು ಸಾಹಿತ್ಯ ಕ್ಷೇತ್ರದಲ್ಲಿ ದುಡಿದು ಸಂಸ್ಮರಿಸಿದ್ದಾರೆ, ಅಗ್ರಗಣ್ಯರೆನಿಸಿದ್ದಾರೆ.

ಮುಖ್ಯವಾಗಿ ಸ್ಮಾರಕ ಚಂದ್ರಿಕೆ, ಹಾನಗಲ್ಲ ಕುಮಾರೇಶ್ವರ ಪುರಾಣ, ಕಾರಣಿಕಕುಮಾರಯೋಗಿ, ಕುಮಾರೇಶ್ವರವಚನಗಳು ಸದಾಶಿವಲೀಲೆ, ಶ್ರೀಮತ್ಕುಮಾರಗೀತಾ, ಯುಗಪುರುಷ ಯೋಗಿಕುಮಾರ, ಹಿಂದಿ, ಇಂಗ್ಲೀಷ, ಸಂಸ್ಕೃತದಲ್ಲಿ ಕುಮಾರ ಶಿವಯೋಗಿಗಳ ಜೀವನ ಚರಿತ್ರ, ಶಿವಯೋಗ ಮಂದಿರದ ಬೆಳಗು, ಅಲ್ಲದೆ ಕಥೆ, ಕವನ, ನಾಮಾವಳಿ, ಅಷ್ಟಕ, ನಾಟಕ, ಪ್ರತ್ಯೇಕವಾಗಿ ಲೇಖನಗಳು, ಈ ತೆರನಾಗಿ ಬರೆದು ಹೃದಯಶುದ್ಧಿ ಮಾಡಿಕೊಂಡಿದ್ದಾರೆ. "ಸುಕುಮಾರ" ಪತ್ರಿಕೆಯ ಮುಖಾಂತರ, ಮತ್ತೆ ಕುಮಾರ ವಿಜಯನಾಟ್ಯ ಸಂಘ ಚಿತ್ತರಗಿ, ಕುಮಾರೇಶ್ವರ ಕೃಪಾಪೋಷಿತ ನಾಟ್ಯಸಂಘ ಗದಗ, ಕುಮಾರೇಶ್ವರ ನಾಟ್ಯಸಂಘ ಶಿವಯೋಗ ಮಂದಿರ, ಈ ಹೆಸರನಿರಿಸಿ ಪ್ರಚಾರಗೈದಿದ್ದಾರೆ. ಮತ್ತೆ ಕೆಲವರು ಮಂದಿರದಲ್ಲಿ ಶ್ರೀಗಳ ಸಮಾಧಿಗೆ ಶಿಲ್ಪಕಲೆಯಿಂದೊಡಗೂಡಿದ ನೂತನ ಕಟ್ಟಡ ಹಾಗೂ ಗೋಪುರ, ಹೊಸಮಠ, ಶಿವಪೂಜಾಮಂದಿರ, ಧ್ಯಾನಧ್ಯಾಮ, ಗುಹೆಗಳನ್ನು ಕಟ್ಟಿಸಿ, ಪುಣ್ಯತಿಥಿ, ಜಯಂತಿ, ಶತಮಾನೋತ್ಸವಗಳನ್ನು ಆಚರಿಸಿ ಸಂಸ್ಕೃತಿಯನ್ನು ಉಳಿಸಿಕೊಂಡು ಬಂದಿದ್ದಾರೆ.

ಮತ್ತೆ ಕೆಲವರು ಸಂಘ, ಸಂಸ್ಥೆ, ಆಶ್ರಮ, ಶಿಕ್ಷಣ ಸಂಸ್ಥೆ, ಜ್ಯೋತಿಷ್ಯ ಪಾಠಶಾಲೆ, ಸಂಗೀತ ಪಾಠಶಾಲೆ, ವಿದ್ಯಾರ್ಥಿ ನಿಲಯಗಳನ್ನು ಸಂಸ್ಥಾಪಿಸಿ ಸಾಧ್ಯವಾದಷ್ಟು ಮಟ್ಟಿಗೆ ಕುಮಾರೇಶನ ಧ್ಯೇಯಧೋರಣೆಗಳನ್ನು ಮುಂದುವರಿಸಿಕೊಂಡು ಬಂದಿದ್ದಾರೆ.

ಅವುಗಳ ಹೆಸರು ಇಂತಿವೆ—

ಹುಬ್ಬಳ್ಳಿಯಲ್ಲಿ ಕುಮಾರೇಶ್ವರ ಶಿವಯೋಗಿ ಸಂಘ, ಕುಮಾರೇಶ್ವರ ವೈದಿಕ ಜ್ಯೋತಿಷ್ಯ ಪಾಠಶಾಲೆ ಮತ್ತು ಕುಮಾರೇಶ್ವರ ವಿದ್ಯಾರ್ಥಿನಿಲಯ, ಗದಗದಲ್ಲಿ ಕುಮಾರೇಶ್ವರ ಕೃಪಾಪೋಷಿತ ಸಂಗೀತ ಪಾಠಶಾಲೆ, ಕುಮಾರೇಶ್ವರ ವೈದಿಕ ಜ್ಯೋತಿಷ್ಯ ಪಾಠಶಾಲೆ, ಗಿರಿಯಾಪುರದಲ್ಲಿ ಶ್ರೀಗುರು ಕುಮಾರಾಶ್ರಮ, ಬೇಗಾಲ ಪೇಟೆಯಲ್ಲಿ ಶ್ರೀ ಕುಮಾರೇಶ್ವರ ಯುವಕಮಂಡಲ, ಹಾವೇರಿ, ಸಿಂದಗಿ, ಶಿವಮೊಗ್ಗಾದಲ್ಲಿ, ಕುಮಾರೇಶ್ವರ ವೈದಿಕ ಜ್ಯೋತಿಷ್ಯ ಪಾಠಶಾಲೆ, ಹಾರನಹಳ್ಳಿಯಲ್ಲಿ ಕುಮಾರೇಶ್ವರ ತೀರ್ಥ, ಧಾರವಾಡದಲ್ಲಿ ಕುಮಾರೇಶ್ವರ ಆಯುರ್ವೇದ ದವಾಖಾನೆ, ಹೊಸಪೇಟೆಯಲ್ಲಿ ಹಾಗೂ ಸವದತ್ತಿಯಲ್ಲಿ ಕುಮಾರೇಶ್ವರ ಶಿವಾನುಭವ ಮಂಟಪ, ಶಿವಯೋಗ ಮಂದಿರ, ಹಾಗೂ ರಟ್ಟಿಹಳ್ಳಿಯಲ್ಲಿ ಕುಮಾರೇಶ್ವರ ಮಾಧ್ಯಮಿಕ ಶಾಲೆ, ಬೇಗುಂದಿಯಲ್ಲಿ ಕುಮಾರೇಶ್ವರ ವಿದ್ಯಾರ್ಥಿ ಪ್ರಸಾದ ನಿಲಯ, ಬಾಗಲಕೋಟೆಯಲ್ಲಿ ಸುಕುಮಾರ ಮುದ್ರಣಾಲಯ, ಶಿವಯೋಗ ಮಂದಿರದಲ್ಲಿ ಸದಾಶಿವ ಮುದ್ರಣಾಲಯ, ಇನ್ನೂ ಅನೇಕ ಸ್ಥಾನಗಳಲ್ಲಿ ಅವರ ನಾಮವಿರಿಸಿ

ಹಲವು ಬಗೆಯ ಕಟ್ಟಡ ಕಟ್ಟಿಸಿ, ಕೃತಜ್ಞತೆ ಸಲ್ಲಿಸಿ ಕೃತಾರ್ಥರಾಗಿದ್ದಾರೆ. ಇದರಿಂದ ಕೃತಜ್ಞತೆ ವ್ಯಕ್ತಪಟ್ಟರೂ ಇಷ್ಟರಿಂದಲೇ ಕುಮಾರೇಶ್ವರರ ಆತ್ಮಕ್ಕೆ ಶಾಂತಿ ಸಿಗದು. ಒಮ್ಮೆ ನಿರ್ಮಿಸಿದ ಸ್ಮಾರಕಗಳು ನಶಿಸಬಹುದು. ಆದರೆ ಮಾನವರ ಮನೋಭೂಮಿಯಲ್ಲಿ ಕುಮಾರೇಶ್ವರರ ತತ್ವಬೋಧನೆಗಳಾದ ಈಶ್ವರ ಭಕ್ತಿ, ರಾಷ್ಟ್ರಭಕ್ತಿ, ಸತ್‌ಶೀಲ, ಆತ್ಮಸಂಯಮನ ಧ್ಯಾನ, ಯೋಗ, ಸ್ವಾರ್ಥತ್ಯಾಗ, ಜಪ, ತಪ, ದಯೆ, ಸಮಾಜಸೇವಾ ಬುದ್ಧಿ, ಕಾಯಕನಿಷ್ಠೆ ಮುಂತಾದ ಸದ್ಗುಣ ಬೀಜಗಳನ್ನು ಬಿತ್ತಿ, ಸಂಸ್ಕಾರದ ಸಿಹಿನೀರನ್ನು ಹಾಕುತ್ತಿದ್ದರೆ ಅದು ಫಲಕಾರಿಯಾಗುವದಲ್ಲದೆ ಸಮಾಜಕ್ಕೆ ಹಿತಕಾರಿಯಾಗುವದು. ಜನತೆಯ ಅಂತಃಶಕ್ತಿಯು ಪ್ರಭಾವಶಾಲಿಯಾಗಿ ನಾಡುನುಡಿಯ ಸೇವೆಗೆ ಮಾರ್ಗದರ್ಶನ ನೀಡುವದು. ನಮಗೀಗ ಬೇಕಾಗಿರುವದು ಇದು. ಜನತೆಯನ್ನು ಬಹಿರ್ಮುಖದತ್ತ ಹರಿಯ ಬಿಟ್ಟರೆ, ಕಡಿವಾಣವಿಲ್ಲದ ಕುದುರೆಯಂತೆ ಎತ್ತಸಾಗುತ್ತದೆಯೋ ಹೇಳಲು ಅಸಾಧ್ಯ. "ಸಮಾಜ ಸಮಾಜ"ವೆಂದೇ ಕೊನೆಯುಸಿರೆಳೆದ, ರುಗ್ಣಶಯ್ಯೆಯಲ್ಲಿಯೂ ತತ್ವ ಬೋಧಿಸುತ್ತ, ಸಮಾಜ ಚಿಂತನೆ ಮಾಡುತ್ತ, ಆಧ್ಯಾತ್ಮಲೋಕಕ್ಕೇ ಮೇರುವೆನಿಸುತ್ತಿದ್ದ, ಸಮಾಜ ಸಂಜೀವಿನಿಯಾದ ಕುಮಾರೇಶ್ವರ ಆತ್ಮಕ್ಕೆ ಶಾಂತಿ ಸಿಗಬೇಕಾದರೆ, ವೀರಶೈವ ಸಮಾಜದ ಮಾತೃ ಸಂಸ್ಥೆಯಾದ ಶಿವಯೋಗ ಮಂದಿರದ ಅಭಿವೃದ್ಧಿಗಾಗಿ, ಧ್ಯೇಯಸಿದ್ಧಿಗಾಗಿ, ಎಲ್ಲ ಶಿಷ್ಯ ಕೋಟಿಯು ಒಗ್ಗಟ್ಟಿನಿಂದ ಅಭಿಮಾನ ವಹಿಸಿ ದುಡಿದರೆ ಸಾರ್ಥಕ ಇಲ್ಲದಿದ್ದರೆ ಕುಮಾರೇಶ್ವರರಿಗೆ ಅಹಿತ ಬಗೆದಂತೆ, ಧರ್ಮ ನದಿಯನ್ನು ಬತ್ತಿಸಿದಂತೆ, ಶೀಲ ಸಂಸ್ಕೃತಿಗೆ ಭಂಗ ತಂದಂತಾಗುವದು.

ಸಮಾಜದಲ್ಲಿ ಸಂಪತ್ತಿದೆ, ವಿದ್ವತ್ತಿದೆ, ಬುದ್ಧಿಯಿದೆ, ಶಕ್ತಿಯಿದೆ, ಯುಕ್ತಿಯಿದೆ. ಆದರೆ ಉದಾರ ಹೃದಯದ ಸಮರಸ ಭಾವನೆಯ ಸಂಘಟನೆಯೊಂದಿಲ್ಲದೆ ವ್ಯರ್ಥವಾದಂತಾಗಿದೆ. ಭಾವೈಕ್ಯ ಮಾತಿನ ಮಾಲೆಯಾಗಿದೆ. ಜಾಪ್ರತಿಷ್ಠೆಯು ಮತ್ತು ಭೌತಿಕ ಭೂತದ ಬೆನ್ನುಹತ್ತಿ ವ್ಯಕ್ತಿಯು ಪರಿಶುದ್ಧಿಯನ್ನು ಕಳೆದುಕೊಂಡಿದ್ದೇವೆ. ಅದಕ್ಕಾಗಿ ನಾವಿಲ್ಲಿ ಕುಮಾರೇಶನ ಕಳಕಳಿಯ ಅಮರವಾಣಿಯನ್ನು ಆಲಿಸೋಣ.

"ಶಿವಶಂಭೋ ಶಂಕರಸಾಂಬ। ತವಪಾವನಗು ಪೊರೆಯೆಮ್ಮನು।
ಅಜ್ಞಾನದೆಶೆಯರು ನಾವು। ಸುಜ್ಞಾನವನು ಕೊಟ್ಟೀಗ।
ಸರ್ವಜ್ಞ ಮೂರ್ತಿಯೆ ಕಾಯ್ವೈ ॥ ೧ ॥
ಕ್ಷಿತಿಯೊಳು ವೀರಶೈವ ಮತಮೇಲಾಗುವ ತೆರದಿ
ಶಿತಿಕಂಠ ಕೃಪೆಯನು ಮಾಡೈ ॥ ೨ ॥
ಶಿವಯೋಗ ವರ್ಧನಗೈವ ಶಿವಯೋಗ ಮಂದಿರವನ್ನು
ತವಬೇಗ ವೃದ್ಧಿಗೆ ತಾರೈ ॥ ೩ ॥

ಈ ನುಡಿಯು ನಮ್ಮೆಲ್ಲರ ಹೃದಯ ಮಂದಿರವನ್ನು ಸೇರಲಿ. ಈ ವಾಣಿ ಪ್ರದೀಪಿಕೆಯಾಗಲಿ, ಜಡತೆಯನ್ನು ನಿವಾರಿಸಲಿ, ಸೇವಾಧರ್ಮವನ್ನು ಕೈಕೊಳ್ಳುವಂತೆ ಉತ್ಸಾಹಭರಿತರನ್ನಾಗಿ ಮಾಡಲಿ. ಅಭಿಮಾನ ಶೂನ್ಯತೆಯನ್ನು ಹೊಡೆದೋಡಿಸಲಿ. ಅಭಿಮಾನ ವರ್ಧನಕ್ಕೆ ಸದ್ಬುದ್ಧಿಯನ್ನು ಕರುಣಿಸಲಿ. ಲೋಪದೋಷಗಳೇನೆ ಇದ್ದರೂ, ಮರೆಯುವ ಬುದ್ಧಿಯನ್ನಿತ್ತು, ತಿದ್ದಿಕೊಂಡು ಸಂಘಟನೆಯ ಸುಗಮ ದಾರಿಯತ್ತ ಸಾಗುವ ಶಕ್ತಿಯನ್ನು ನೀಡಲಿ. ಯುಗಪುರುಷ ಯೋಗಿಕುಮಾರನ ಸ್ಥಿರಸಂಕಲ್ಪವನ್ನು ಕಿವಿಗೊಟ್ಟು ಕೇಳಿ, ಆತನ ಚಿತ್ರವನ್ನು ಕಣ್ತೆರೆದು ನೋಡಿ, ಆತನ ಧ್ಯೇಯಸಾಧನೆಗಳನ್ನು ಕೃತಿಯಲ್ಲಿಳಿಸಿದರೆ ಮುತ್ತಿದ ಕತ್ತಲೆ ದೂರಾಗುವದು. ಎತ್ತೆತ್ತಲೂ ಹೊಸ ಚೇತನವು ಮೂಡುವದು.

ಆ ದಿನಗಳು ಬೇಗ ಬರಲಿ. ಆ ಅಮರ ಚೇತನವು ನಮ್ಮನ್ನು ಎಚ್ಚರಿಸಲಿ.

ಸತ್ಯಂ ಶಿವಂ ಸುಂದರಂ

ಮರುಳ ಶಂಕರ ದೇವರು

ಸಾಹಿತ್ಯ ಪ್ರಕಾರ : ಗದ್ಯ
ಮೊದಲ ಮುದ್ರಣ : ೧೯೨೮
ರಚನೆಯ ವಯಸ್ಸು : ೪೯
ರಚನಾಸ್ಥಳ : ಹುಬ್ಬಳ್ಳಿ

ಶ್ರೀ ಜಗದ್ಗುರು ಮೂರುಸಾವಿರಮಠ ಗ್ರಂಥಮಾಲೆ ೮೩

ಪರಮ ಪ್ರಸಾದಿ ಮರುಳ ಶಂಕರ ದೇವರು

ಬರೆದವರು:
ಶ್ರೀ ಮೂಜಗಂ

ಪ್ರಕಾಶಕರು:
ಶ್ರೀ ಮೂರುಸಾವಿರಮಠದ ಕುಮಾರೇಶ್ವರ
ಶಿವಯೋಗಿ ಸಂಘದ
ದ್ವಾದಶ ವಾರ್ಷಿಕ ಮಹೋತ್ಸವ ಸಮಿತಿ ಹುಬ್ಬಳ್ಳಿ
೧೯೭೮

ಒಂದನೆಯ ಮುದ್ರಣ : ೧೯೭೮

ಪ್ರತಿಗಳು : ೧೦೦೦

ಗ್ರಂಥ ಪ್ರಕಟನೆಗೆ ಸೇವೆ ಸಲ್ಲಿಸಿದವರು
ಶ್ರೀ ಚಂದ್ರಶೇಖರಯ್ಯನವರು ಚನ್ನಯ್ಯನವರು
ಎಮ್ಮೆಟ್ಟಿಹಿರೇಮಠ,
ಕಾಳಿನ ವ್ಯಾಪಾರಸ್ಥರು ಗಾಂಧಿ ಮಾರ್ಕೆಟ ಹುಬ್ಬಳ್ಳಿ.

ಬೆಲೆ : ೫೦ ಪೈಸೆ

ಮುದ್ರಕರು :
ಪರಂಜ್ಯೋತಿ ಪಾವರ ಪ್ರಿಂಟಿಂಗ್ ಪ್ರೆಸ್,
ಮೂರುಸಾವಿರಮಠ, ಹುಬ್ಬಳ್ಳಿ.

ಪ್ರಕಾಶಕರ ನುಡಿ

ಇಂದು ಚಿಕ್ಕ ಚಿಕ್ಕ ಪುಸ್ತಿಕೆಗಳು ಅತ್ಯಾವಶ್ಯಕ. ಚಿಕ್ಕ ಪುಸ್ತಿಕೆಗಳ ಪ್ರಕಟನೆಯಿಂದ, ಸಹಜವಾಗಿ ಸಾಮಾನ್ಯ ಜನತೆಗೂ ಅನುಕೂಲವಾಗುತ್ತವೆ. ಬೆಲೆ ಕಡಿಮೆ ಭಾಷೆ ಹಗುರು ಇರುವವರಿಂದ ಇಂತಹ ಪುಸ್ತಿಕೆಗಳನ್ನು ಜನರು ಕೈಗೆತ್ತಿಕೊಂಡು ಓದುತ್ತಾರೆ.

ಬೃಹದ್ ಗ್ರಂಥಗಳು ಕೇವಲ ಕೆಲವುಗಳು ಗ್ರಂಥಾಲಯಕ್ಕೆ ಸೇರುತ್ತವೆ. ಇನ್ನುಳಿದವುಗಳು ಪ್ರಕಾಶಕರ ಮನೆಯಲ್ಲಿಯೇ ಬಿದ್ದು ಹುಳು ಹತ್ತಿ ಹೋಗುತ್ತವೆ. ಇದೆಲ್ಲವನ್ನು ಕಂಡರಿದು ನಮ್ಮ ಹುಬ್ಬಳ್ಳಿ ಮೂರುಸಾವಿರಮಠದ ಶ್ರೀ ಮನ್ಮಹಾರಾಜ ನಿರಂಜನ ಜಗದ್ಗುರು ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳು ಇತ್ತಿತ್ತಲಾಗಿ ಚಿಕ್ಕ ಚಿಕ್ಕ ಪುಸ್ತಿಕೆಗಳನ್ನು ಜಗದ್ಗುರು ಧರ್ಮ ಪ್ರಚಾರಕ ಮಂಡಳದಿಂದ ಪ್ರಕಟಿಸುತ್ತಿರುವದು ಸಮಾಜಕ್ಕೆ ಶುಭೋದಯದ ಲಕ್ಷಣವಾಗಿದೆ.

ಈ ಸಲ ನಮ್ಮ ಕುಮಾರೇಶ್ವರ ಶಿವಯೋಗಿ ಸಂಘದ ದ್ವಾದಶ ವಾರ್ಷಿಕ ಮಹೋತ್ಸವ ನಿಮಿತ್ತ ಕೆಲವು ಚಿಕ್ಕ ಚಿಕ್ಕ ಪುಸ್ತಿಕೆಗಳನ್ನು ಪ್ರಕಟಿಸುವ ಧೋರಣೆಯನ್ನು ಶ್ರೀ ಜಗದ್ಗುರುಗಳಿಗೆ ತಿಳಿಸಿದೆವು ಮತ್ತು ಕೆಲವು ಶರಣರ ಚರಿತ್ರವನ್ನು ಬರೆದು ಕೊಡಲು ಶ್ರೀ ಸನ್ನಿಧಿಯವರನ್ನೇ ಕೇಳಿಕೊಂಡೆವು. ಅದಕ್ಕೆ ನಮ್ಮೆಲ್ಲರ ಪ್ರಾರ್ಥನೆಗೆ ಮೆಚ್ಚಿ ತಮಗೆ ಬಿಡುವಿಲ್ಲದ ಜೀವನದಲ್ಲಿಯೂ ಎರಡು ಚಿಕ್ಕ ಹೊತ್ತಿಗೆಗಳನ್ನು ಬರೆದು ಕೊಟ್ಟಿದ್ದಾರೆ, ನಮಗೆ ತುಂಬಾ ಆನಂದವಾಗಿದೆ.

ಪ್ರಸ್ತುತ ಪರಮ ಪ್ರಸಾದಿ ಶ್ರೀ ಮರುಳ ಶಂಕರ ದೇವರು ಈ ಪುಸ್ತಿಕೆಯು ಸುಂದರವಾಗಿ ಹೆಣೆದಿದ್ದು, ಅದು ಹೃದಯಂಗಮವಾಗಿದೆ. ಸಾಧಕ ಜೀವನಕ್ಕೆ ಆದರ್ಶವಾಗಿದೆ. ಭಾಷೆ, ವಿಚಾರ, ವಿವೇಚನೆ ಪ್ರಸಾದದ ಮಹಿಮೆ ಇವೆಲ್ಲವುಗಳನ್ನು ಈ ಪುಸ್ತಕದಲ್ಲಿ ಕಾಣುತ್ತೇವೆ. ಶರಣರ ಆದರ್ಶ ಜೀವನ ಹೇಗಿರುತ್ತದೆಂಬುದನ್ನು ಶ್ರೀ ಜಗದ್ಗುರುಗಳು ಮನೋಜ್ಞವಾಗಿ, ರಸಮಯ ಶೈಲಿಯಲ್ಲಿ ವಿವರಿಸಿದ್ದಾರೆ.

ಈ ಪುಸ್ತಕದ ಉಪಯೋಗವನ್ನು ನಾಡಿಗರು ತೆಗೆದುಕೊಂಡರೆ ಶ್ರಮ ಸಾರ್ಥಕವಾಯಿತೆಂದು ಭಾವಿಸುತ್ತೇವೆ. ವೇಳೆಗೆ ಸರಿಯಾಗಿ ಸುಂದರ ಮುದ್ರಣವನ್ನು ಮಾಡಿಕೊಟ್ಟ ಮೂರುಸಾವಿರಮಠದ ಪರಂಜ್ಯೋತಿ ಮುದ್ರಣದೊಡೆಯರಿಗೂ ಧನ್ಯವಾದಗಳು.

ಇದು ಬೆಳಕಿಗೆ ಬರಲು ಸಹಾಯ ನೀಡಿದ, ಉದಾರಹೃದಯಿಗಳೂ, ಸಹೃದಯ ಸಂಪನ್ನರೂ ಆದ ಶ್ರೀ ಚಂದ್ರಶೇಖರಯ್ಯನವರು ಚನ್ನಯ್ಯನವರು ಹಮ್ಮಟ್ಟಹಿರೇಮಠ. ಕಾಳಿನ ವ್ಯಾಪಾರಸ್ಥರು ಹುಬ್ಬಳ್ಳಿ ಇವರಿಗೆ ನಮ್ಮ ಕೃತಜ್ಞತೆಗಳು.

ಪ್ರಕಾಶಕರು
ಶ್ರೀ ಮೂರುಸಾವಿರಮಠದ
ಕುಮಾರೇಶ್ವರ ಶಿವಯೋಗಿ ಸಂಘದ
ದ್ವಾದಶವಾರ್ಷಿಕ ಮಹೋತ್ಸವ ಸಮಿತಿ
ಹುಬ್ಬಳ್ಳಿ.

ಪರಮ ಪ್ರಸಾದಿ ಮರುಳ ಶಂಕರ ದೇವರು

ಅಂಗವನಾಚಾರಕ್ಕರ್ಪಿಸಿ ಆಚಾರವನಂಗಕ್ಕರ್ಪಿಸಿ ಆಚಾರಲಿಂಗ
ಪ್ರಸಾದಿಯಾದ.
ಪ್ರಾಣವ ಲಿಂಗದಲ್ಲಿ ಅರ್ಪಿಸಿ ಆ ಲಿಂಗವ ಪ್ರಾಣಕ್ಕೆ ಅರ್ಪಿಸಿ ಪ್ರಾಣಲಿಂಗ
ಪ್ರಸಾದಿಯಾದ.
ದೇಹ ಭಾವದ ಅಹಂಕಾರ ದಾಸೋಹ ಭಾವದೊಳಗಲ್ಲದೆ ಅಳಿಯದೆಂದು
ಲಿಂಗ ಜಂಗಮಕ್ಕೆ ತೊತ್ತುವೊಕ್ಕು ಲಿಂಗ ಜಂಗಮ ಪ್ರಸಾದಿಯಾದ
ಸತ್ಯಶರಣರ ಅಂಗಳದೊಳಗೆ ಬಿದ್ದ ಅಗುಳನೆತ್ತಿಕೊಂಡಿಪ್ಪೆನೆಂದು, ನಿಮ್ಮ
ಪ್ರಸಾದ ಕುಳಿಯೊಳಗೆ
ಹನ್ನೆರಡು ವರುಷ ಪರಿಯಂತರ ಪ್ರಸಾದಿಯಾಗಿರ್ದ ಕೂಡಲ
ಚೆನ್ನಸಂಗಮದೇವರಲ್ಲಿ
ಮರುಳ ಶಂಕರದೇವರ ಶ್ರೀಪಾದ ಘನವ ನಿಮ್ಮಿಂದ ಕಂಡು ಬದುಕಿದೆನು
ಕಾಣಾ ಸಂಗನಬಸವಣ್ಣ
—ಚೆನ್ನಬಸವರಾಜ ದೇವರು

೧೨ ನೆಯ ಶತಮಾನ ಅದೊಂದು ಅದ್ಭುತ ಕ್ರಾಂತಿಯ ಕಾಲ "ಕಾಯಕವೇ ಕೈಲಾಸ"ವೆಂದು ಸಾರಿ, ದ್ವೇಷಾಸೂಯೆಗಳು ಮೀರಿ, ಮೇಲು ಕೀಳುಗಳನ್ನು ದೂಡಿ, ಧರ್ಮದ ಹೆಸರಿನಲ್ಲಿ ನಡೆದ ಶೋಷಕ ಸಂಸ್ಕಾರಗಳನ್ನು ಕಿತ್ತೆಸೆದು, ದಯೆಯೇ ಧರ್ಮದ ಮೂಲವೆಂದು, ತಿಳಿಹೇಳಿ ಜನಜಾಗೃತಿ ಮಾಡಿದ ಶತಮಾನ ಹನ್ನೆರಡ ನೆಯ ಶತಮಾನದ ವೈಚಾರಿಕ ಕ್ರಾಂತಿಯಲ್ಲಿ ಧಾರ್ಮಿಕ, ಸಾಮಾಜಿಕ, ಆರ್ಥಿಕ, ರಾಜಕೀಯ ಹಾಗೂ ಸಾಹಿತ್ಯಿಕ ಕ್ರಾಂತಿಗಳೂ ಒಳಗೊಂಡು ಮಹಾಕ್ರಾಂತಿಯ ಸ್ವರೂಪವನ್ನು ಹೊಂದಿ, ಆ ಮಹಾಕ್ರಾಂತಿಗೆ ಯುಗಪುರುಷನೂ, ಮಹಾಸಾಮರ್ಥ್ಯ ಶಾಲಿಯೂ ಆದಂಥ ಬಸವಣ್ಣನವರನ್ನು ಅಗ್ರಗಣ್ಯರನ್ನಾಗಿ ಪಡೆದು ವೀರಶೈವ ಸಿದ್ಧಾಂತವು ವಿವೇಕಬದ್ಧವಾಗಿ ನಿರ್ಮಾಣಗೊಂಡಿತು. ಈ ಸಮಗ್ರ ಕ್ರಾಂತಿಯು ಪ್ರತಿಯೊಬ್ಬರ ನಾಡಿನಾಡಿಯಲ್ಲಿ ಪ್ರವಹಿಸಿ ಬಂದ ಚೈತನ್ಯ ಶಕ್ತಿಯೆಂದರೆ ಮಹಾತ್ಮಾ ಬಸವಣ್ಣನವರು. ಅವರೊಬ್ಬರು ವ್ಯಕ್ತಿಗಳಲ್ಲ, ಆದರೆ ಅನೇಕ ಶಕ್ತಿಗಳ ಕೇಂದ್ರ ಮೂರ್ತಿ ಕಾರಣ, ಅವರಲ್ಲಿ ದಯೆಯೊಂದಿಗೆ ಕಾಠಿಣ್ಯ ಭಾವುಕತೆಯೊಂದಿಗೆ ದಾರ್ಶನಿಕತೆ, ಭಕ್ತಿಯೊಂದಿಗೆ ವಿಮರ್ಶೆ, ಶಾಂತಿಯೊಂದಿಗೆ ಕ್ರಾಂತಿ, ಮುಗ್ಧತೆಯೊಂದಿಗೆ ಪ್ರಬುದ್ಧತೆ, ರಾಜತ್ವದೊಂದಿಗೆ ಕಿಂಕರತ್ವ, ಹೀಗೆ ಎಲ್ಲ ಶಕ್ತಿಗಳೂ ಸಮಯೋಚಿತ

ವಾಗಿ ಕಂಡು ಬರುತ್ತಿದ್ದವು. ಬಸವಣ್ಣನವರು ತಮ್ಮ ಧರ್ಮವನ್ನು ಯಾವ ದೊಂದು ಸಂಕುಚಿತವಾದ ಮನೋವೃತ್ತಿಯಲ್ಲಿ ಕಂಡವರಲ್ಲ.

ಬಸವಣ್ಣನವರ ಧರ್ಮವನ್ನು ಡಾ|| ಸಿದ್ಧಯ್ಯನವರು ಪುರಾಣಿಕ ಅವರ ಮಾತಿನಲ್ಲಿಯೇ ಹೇಳಿದರೆ ಮತ್ತಿಷ್ಟು ಅರ್ಥವಾದೀತು, ಸ್ಪಷ್ಟವಾದೀತು.

"ಬಸವಣ್ಣನವರ ಧರ್ಮ ಉಳ್ಳವರ ಧರ್ಮವಲ್ಲ, ಇಲ್ಲದವರ ಧರ್ಮ, ಸ್ಥಾವರ ದೇವಾಲಯಗಳ ಧರ್ಮವಲ್ಲ, ಜಂಗಮ ದೇವಾಲಯಗಳ ಧರ್ಮ. ನಿರ್ಜೀವಕ್ಕೆ ಜೀವ ಬಲಿಯಾಗುವ ಧರ್ಮವಲ್ಲ, ಜೀವಿ ಕರೆದರೆ ದೇವ, 'ಓ' ಎಂದು ಓಡಿ ಬರುವ ಧರ್ಮ; ಪ್ರಾಯಶ್ಚಿತ್ತಗಳ ದುಬಾರಿ ಧರ್ಮವಲ್ಲ, ಪಶ್ಚಾತ್ತಾಪದ ಸರಳ ಧರ್ಮ. "ಅಯ್ಯೋ ಪಾಪಿ ಎನ್ನುವ ಧರ್ಮವಲ್ಲ" ಅಯ್ಯೋ ಪಾಪ ಎನ್ನುವ ಧರ್ಮ, ಪಂಡಿತ ಪುರೋಹಿತರ ಕಪಿ ಮುಷ್ಟಿಯಲ್ಲಿರುವ ಧರ್ಮವಲ್ಲ, ಕಾಯಕ ಯೋಗಿಗಳ ಬಾಳ ದೇಗುಲದಲ್ಲಿ ಬೆಳಗುವ ಧರ್ಮ: ಸತ್ತ ಮೇಲೆ ಸ್ವರ್ಗ ನರಕಗಳನ್ನು ತೋರಿಸುವ ಧರ್ಮವಲ್ಲ, "ಅಯ್ಯಾ ಎಂದೊಡೆ ಸ್ವರ್ಗ, ಎಲವೋ ಎಂದೊಡೆ ನರಕ, ಆಚಾರವೇ ಸ್ವರ್ಗ, ಅನಾಚಾರವೇ ನರಕ"ವೆಂದು ಸಾರಿ ಇದೇ ಲೋಕದಲ್ಲಿ ಸ್ವರ್ಗವನ್ನು ತೋರಿಸಬಲ್ಲ ಧರ್ಮ, ದೇವಲೋಕ, ಮರ್ತ್ಯಲೋಕ ವೆಂಬ ಸೀಮೆಗಳ ರಚಿಸುವ ಧರ್ಮವಲ್ಲ, 'ಸತ್ಯನುಡಿವುದೇ ದೇವಲೋಕ, ಮಿಥ್ಯವ ನುಡಿವುದೇ ಮರ್ತ್ಯಲೋಕವೆಂದು ಘೋಷಿಸಿ ದೇವಲೋಕವನ್ನು ಮರ್ತ್ಯಲೋಕ ದಲ್ಲಿಯೇ ಮೂಡಿಸಬಲ್ಲ ಧರ್ಮ, ಜಗತ್ತು ಮಿಥ್ಯೆ, ಮಾಯೆ, ದುಃಖದಾಗರ, ಭವದ ಸಾಗರ ಕಂಬನಿಯ ಕಣಿವೆ, ಬಂಧನದ ಬಲೆಯೆನ್ನುವ ಧರ್ಮವಲ್ಲ. "ಮರ್ತ್ಯವೆಂಬುದು ಕರ್ತಾರನ ಕಮ್ಮಟವಯ್ಯ. ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರಯ್ಯ. ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯ, ಎಂದು ಉದ್ಘೋಷಿಸಿ ಈ ಜಗತ್ತಿನಲ್ಲಿಯ ಜೀವನಕ್ಕೆ ಮಹಾಮೌಲ್ಯವನ್ನಿತ್ತ ಧರ್ಮ. "ಕಲ್ಲನಾಗರ ಕಂಡರೆ ಹಾಲನೆರೆಯೆಂಬ, ದಿಟನಾಗರ ಕಂಡರೆ ಕೊಲ್ಲೆಂಬ, ಉಣ್ಣುವ ಜಂಗಮ ಬಂದರೆ ನಡೆಯೆಂಬ, ಉಣ್ಣದ ಲಿಂಗಕ್ಕೆ ಬೋನವ ಹಿಡಿಯೆಂಬ ಧರ್ಮವಲ್ಲ. ಜಂಗಮಕ್ಕೆರೆದರೆ ಸ್ಥಾವರ ನೆನೆಯಿತ್ತು. "ಜಂಗಮ ವಾಪ್ಯಾಯನವಾದರೆ ಲಿಂಗ ಸಂತುಷ್ಟ (೧೯೭) ವೆಂದು ಬೋಧಿಸಿ ಕಲ್ಲದೇವರಿಗಿಂತ ಜೀವಂತ ದೇಹಿಗಳಿಗೆ ಪ್ರಾಧಾನ್ಯ. (೧೯೬) ಪಿತ್ರ ಉದಾತ್ತ ಧರ್ಮ, ಪೂಜೆಗೆ ಆ ಫಲವುಂಟು, ಈ ಲಾಭವುಂಟೆಂದು ವಂಚಿಸಿ ದೇವ ಪೂಜೆ ಮಾಡಹಚ್ಚಿದ ಧರ್ಮವಲ್ಲ, ಭಕ್ತಿಗೆ ಭಕ್ತಿಯೇ ಫಲ, ಅದಕ್ಕೆ ಫಲ ಬೇಡಿದರೆ ಕೂಲಿ ಬೇಡಿದಂತೆ, 'ಚಂದ್ರನಕ್ಷತ್ರದಲ್ಲಿ ಬೆಳೆದ ಕಾಯಕ್ಕೆ ಬೆಳುದಿಂಗಳ ಬಯಸುವ ದಂಗೇಕಯ್ಯ? ಶರಣರ ಸಂಗದಲ್ಲಿರ್ದು ಶಿವನ ಬೇಡುವ ದಂಗೇಕಯ್ಯ? ಕೂಡಲ ಸಂಗನ ಶರಣರು ಬಂದು ತಮ್ಮವನೆಂದರೆ ಸಾಲದೆ ಅಯ್ಯ? (೮೪೨) ಎಂದು ಪ್ರಶ್ನಿಸಿ ಶಿವನನ್ನೇ ಬೇಡದಂತೆ ಮಾಡಿ, ಶಿವನಿಂದ ಅನ್ನು

ಕೊಡಿಸುವೆ, ಇದನ್ನು ಕೊಡಿಸುವೆನೆಂಬ ಆಶೆ ಹಚ್ಚಿ ದುಡ್ಡು ದೋಚುತ್ತಿದ್ದವರ ಸುಲಿಗೆ ನಿಲ್ಲಿಸಿದ ಧರ್ಮ....ಆಜ್ಞಾಪ್ರಧಾನ ಅಧಿಕಾರೀ ಧರ್ಮವಲ್ಲ, ಅನುಭವ ಪ್ರಧಾನ ಜನತಾಂತ್ರಿಕ ಧರ್ಮ; ಸ್ವಮುಕ್ತಿ ಸಾಧನ ಬೋಧಕ ವೈಯಕ್ತಿಕ ಧರ್ಮವಲ್ಲ, ಸ್ವವಿಮೋಚನೆಯೊಡನೆ ಸಾಮೂಹಿಕ ವಿಮೋಚನೆಯನ್ನು ಸಾಧಿಸಲು ಹಚ್ಚಿದ ಸಮಷ್ಟಿಧರ್ಮ, ಪರೋಪಜೀವಿತ್ವವನ್ನು ಪೋಷಿಸುವ ಪ್ರೋತ್ಸಾಹಿಸುವ ಧರ್ಮವಲ್ಲ, ಸ್ವಾವಲಂಬನವನ್ನು ಬೀಜ ಮಂತ್ರವನ್ನಾಗಿ ಮಾಡಿದ ವ್ಯಾವಹಾರಿಕ (Pragmatic) ಧರ್ಮ,....... ನಾನು ಜ್ಞಾನ ನೀನು ಜ್ಞಾನಿಯೆಂದು ವಾದಿಸ ಹಚ್ಚಿದ ಧರ್ಮವಲ್ಲ, "ನಿಮ್ಮನರಿಯದ ಜ್ಞಾನವೆಲ್ಲಾ ಅಜ್ಞಾನ (೭೯೮) ಎಂದು ಸಾರಿ ಹೇಳಿದ ಧರ್ಮ" ಎಂದು ಮುಂತಾಗಿ ಬಸವ ಧರ್ಮದ ಅಂತರಂಗದಿಂಗಿತವನ್ನು ವಿವರ ವಿವರವಾಗಿ ಮನಂಬುಗುವಂತೆ ತಿಳಿಸಿದ್ದಾರೆ.

ಇಂತಹ ಧಾರ್ಮಿಕ ಜಾಗೃತಿಗಾಗಿ ಬಸವಣ್ಣನವರು ಅಹೋರಾತ್ರಿ ಪರಿಶ್ರಮಿಸಿದರು. ಇಹಲೋಕದ ಕುಂದುಕೊರತೆಗಳನ್ನು ಅಪೂರ್ಣವಾದ ಆಶೆಗಳನ್ನು ಪೂರೈಸುವದಕ್ಕೆ ಮುಂದಿನ ಲೋಕ ಒಂದಿದೆ ಎಂದು ಭಾವಿಸುವ ಮಾಯಾನಿರಸನವನ್ನು ಮಾಡಲೆತ್ನಿಸಲು ವೀರಶೈವ ಮತೋದ್ಧಾರಕರಾದ ವಿಶ್ವವಿಭೂತಿ ಮಹಾತ್ಮಾ ಬಸವಣ್ಣನವರು, ವೀರಶೈವ ಧರ್ಮದಲ್ಲಿ ಅಡಗಿದ್ದ ಭಕ್ತಿ ಜ್ಞಾನ ವೈರಾಗ್ಯಗಳ ತ್ರಿವೇಣಿ ಸಂಗಮಕ್ಕೆ ಒಂದು ಶಾಶ್ವತ ನಿಲುವನ್ನು ಕೊಡಲು, ಅದರಿಂದ ಸಾಮಾಜಿಕ ಕಲ್ಯಾಣವಾಗಲು ಶಿವಾನುಭವ ಮಂಟಪವನ್ನು ಕಲ್ಯಾಣದಲ್ಲಿ ಸಂಸ್ಥಾಪಿಸಿದರು. ಈ ಅನುಭವ ಮಂಟಪದ ಪ್ರಚಾರ ಸುತ್ತೆಲ್ಲ ಹಬ್ಬಿತು. ಇದರಿಂದ ಭಾರತದ ನಾಲ್ಕೂ ದಿಕ್ಕಿನಲ್ಲಿರುವ ಶರಣರು ಬರಲು ಅನುಕೂಲವಾಯಿತು. ತಮ್ಮ ಆಧ್ಯಾತ್ಮಿಕ ಹಸಿವನ್ನು ಹಿಂಗಿಸಲು ಪ್ರಸಾದ ಭವನವಾಯಿತು. ಈ ಅನುಭವ ಮಂಟಪದ ವಿದ್ಯುತ್ ಶಕ್ತಿಯ ಆಗರದಲ್ಲಿ ಹುಟ್ಟಿದ ಶಕ್ತಿಯ ಮೂಲಕ ಇಡೀ ಸಮಾಜದಲ್ಲಿ ಒಂದು ತರಹದ ಹೊಸ ಜೀವ, ಹೊಸ ಬೆಳಕು, ಹೊಸ ತೇಜಸ್ಸು, ಮಿಂಚತೊಡಗಿತು. ಇದು ಕನ್ನಡ ವಾಙ್ಮಯದಲ್ಲಿ ವಿನೂತನ ಜೀವ ಕಳೆಯನ್ನು ತಂದುಕೊಟ್ಟಿತು. ವಿವಿಧ ಅನುಭವ ಪುಷ್ಪಗಳಿಂದ ಶೋಭಿಸುವ ಪ್ರದರ್ಶನ ಮಂದಿರದಂತಿತ್ತು. ಶಿವಾನುಭವ ಮಂಟಪ, ಇದರ ಸೌಗಂಧಮಯ ವಾಸನೆ ಬಹುದೂರ ಸಾಗಿತು. ಕರ್ನಾಟಕದಿಂದ ಹೊರಗೆ ಅಂದರೆ ಬರ್ಬರ ದೇಶದ ವರೆಗೆ ಹಬ್ಬಿತು.[೧] ಬರ್ಬರ ದೇಶದಲ್ಲಿರುವ ಮರುಳ ಶಂಕರ ದೇವರಿಗೆ ಈ ಅನುಭವ ಮಂಟಪದ ಪ್ರಸಾದ ಮಹಿಮೆಯು ವರ್ಣನೆಯು, ಜನರಿಂದ ಇವರ ಕಿವಿಗೂ ತಾಕಿತು. ಮೊದಲಿಗೇನೇ

---

೧ ಕವಿಚರಿತೆಕಾರರು ಕಾಳಿಂಗದಿಂದ ಕಲ್ಯಾಣಕ್ಕೆ ಬಂದರೆಂದು ಹೇಳಿದರೆ; ಫ. ಗು. ಹಳಕಟ್ಟಿಯವರು ಅಫಗಾನಿಸ್ಥಾನದಿಂದ ಬಂದರೆಂದು ಹೇಳುತ್ತಾರೆ. ಈ ಬಗ್ಗೆ ಇನ್ನೂ ಸಂಶೋಧನೆಯಾಗಬೇಕು.

ಪ್ರಸಾದವಲ್ಲಿ ಬಲ್ಲಿದರಾಗಿದ್ದ ಮರುಳ ಶಂಕರ ದೇವರಿಗೆ ಹಿಡಿಸಲಾರದಷ್ಟು ಆನಂದವಾಯ್ತು. ಬರ್ಬರ ದೇಶದಲ್ಲಿರುವ ಕಣ್ಣೂರು ಗ್ರಾಮದಲ್ಲಿ ವಿರಕ್ತ ಜೀವನವನ್ನು ಪಡೆದುಕೊಂಡು ಮರುಳ ಶಂಕರ ದೇವರು ಇರುತ್ತಿದ್ದರು. ಅವರ ವ್ಯಕ್ತಿತ್ವ ಅಲ್ಲಿಯೇ ವಿಕಾಸಗೊಳ್ಳುತ್ತಲಿತ್ತು. ಆದಾಗ್ಯೂ ಅವರ ಮನಸ್ಸು ಶರಣರ ಸಹವಾಸದಲ್ಲಿದ್ದು, ಆಧ್ಯಾತ್ಮಿಕ ಶಕ್ತಿಯನ್ನು, ಅಗಾಧವಾಗಿರತಕ್ಕ ಪ್ರಸಾದ ಮಹಿಮೆಯನ್ನು ಪಡೆಯಬೇಕೆಂಬುವ ಆತುರ ಹೆಚ್ಚಿತ್ತು. ಕಲ್ಯಾಣದತ್ತ ಹೋಗಲು ಮರುಳ ಶಂಕರ ದೇವರು ನಿರ್ಧಾರ ಮಾಡಿಕೊಳ್ಳುತ್ತಾರೆ. ಪ್ರಸಾದ ಸಿದ್ಧಿಯನ್ನು ಪಡೆದುಕೊಂಡು ಬರುವೆನೆಂದು ತಮ್ಮ ಆಶ್ರಯದ ಎಲ್ಲ ಜನರಿಗೆ ತಿಳಿಸಿ ಕಲ್ಯಾಣಕ್ಕೆ ಬರುತ್ತಾರೆ. ಕಲ್ಯಾಣದಲ್ಲಿರುವ, ಎಲ್ಲ ಶಿವಶರಣರನ್ನು ನೋಡಿ, ಅಚ್ಚರಿಯಾಗಿ ಆನಂದಭರಿತರಾಗುತ್ತಾರೆ. ಈ ಅನುಭವ ಮಂಟಪದಲ್ಲಿ ನಿತ್ಯ ನಡೆಯುವ ಶಿವಾನುಭವಗೋಷ್ಠಿ, ಬಸವಣ್ಣನವರ ಮಹಾಮನೆಯ ದಾಸೋಹ ದಲ್ಲಿ ಲಕ್ಷಾಂತರ ಶಿವಭಕ್ತರು ಪಡೆಯುವದನ್ನು ನೋಡಿ, ಬರ್ಬರ ದೇಶದಿಂದ ಬಂದಿದ್ದಕ್ಕೂ ಸಾರ್ಥಕವಾಯಿತೆಂದು ಮನದಲ್ಲಿ ಬಗೆದು, ಅಲ್ಲಿ ಯಾರಿಗೂ ಅರಿಯ ದಂತೆ, ಎಲೆಯ ಮರೆಯ ಹೂವಿನಂತೆ ಇದ್ದುಕೊಂಡು ಪ್ರಸಾದದ ಮಹಿಮೆಯನ್ನು ತಿಳಿದುಕೊಳ್ಳಲು, ಕಾಯಕ ನಿಷ್ಠೆಯಲ್ಲಿ ಪ್ರವೃತ್ತರಾಗುತ್ತಾರೆ. ಅನುಭವ ಮಂಟಪ ದಲ್ಲಿಯ ಶಿವಶರಣರ ಕಾಯಕ ಶಕ್ತಿ ಇವರ ಮನಸ್ಸಿಗೆ ಬಲು ಹಿಡಿಸುತ್ತದೆ. ಪ್ರಸಾದಿ ಸ್ಥಲ ಸಿದ್ಧಿಯನ್ನು ಪ್ರಸನ್ನತೆಯನ್ನು ಪಡೆದು ಶಿವಾನುಭವಿಗಳ ಗುಂಪು ಎತ್ತ ನೋಡಿದಡತ್ತ ಕಾಣುವದನ್ನು ನೋಡಿ ಅಚ್ಚರಿಪಡುತ್ತಾರೆ.

"ತ್ರಿವಿಧ ಮತ್ತು ಷಡ್ವಿಧ ಲಿಂಗಗಳಿಗೆ ಅರ್ಪಿಸಲು ಉಚಿತವಾದ ಆ ಆ ಪದಾರ್ಥಗಳನ್ನು ತನ್ನ ತ್ರಿಕರಣಗಳಿಂದ ಅರ್ಪಣ ಅನುಸಂಧಾನ ಅವಧಾನಗಳಿಂದ ಕ್ರಮ ಕ್ರಿಯೆಯಿಂದ ಸುಜ್ಞಾನದಿಂದ, ಆ ಪ್ರಸಾದವನ್ನು ಜಡದೆ ಅನುಭೋಗಿಸಿದಲ್ಲಿ ದಿಟವಾಗಿ ಪ್ರಸಾದಿಸ್ಥಲ ಸಿದ್ಧಿ ಪ್ರಸನ್ನತೆಯ ಪ್ರಾಪ್ತಿ."

ಶುದ್ಧ–ಸಿದ್ಧ–ಪ್ರಸಿದ್ಧ ಪ್ರಸಾದಂಗಳ ಪರಿಯು "ಚಿತ್ಸುಮನ"ದಲ್ಲಿ ಇಂತು ಬರೆಯಲಾಗಿದೆ.

ಶುದ್ಧ–ಸಿದ್ಧ–ಪ್ರಸಿದ್ಧ ಪ್ರಸಾದಂಗಳ ಪರಿಯ ಕೇಳಿರೋ!
ಶುದ್ಧ ಪ್ರಸಾದಿಯಾದೊಡೆ,
ಇಷ್ಟಲಿಂಗಕ್ಕೆ ರೂಪವನರ್ಪಿಸಬೇಕು;
ಸಿದ್ಧ ಪ್ರಸಾದಿಯಾದೊಡೆ.
ಪ್ರಾಣಲಿಂಗಕ್ಕೆ ರುಚಿಯನರ್ಪಿಸಬೇಕು:
ಪ್ರಸಿದ್ಧ ಪ್ರಸಾದಿಯಾದೊಡೆ.

ಭಾವಲಿಂಗಕ್ಕೆ ತೃಪ್ತಿಯನರ್ಪಿಸಬೇಕು;
ಇಂತೀ ತ್ರಿವಿಧ ಪ್ರಸಾದವನು
ತ್ರಿವಿಧ ಲಿಂಗಕ್ಕೆ ಸಮರ್ಪಿಸಿದ, ಶಿವಶರಣರು
ನಿತ್ಯ ಮುಕ್ತರಾದರು ನೋಡಾ,
ಭ್ರೂಲತಾ ಪುರೀಶ ಕರ್ತೃ ಜಗದ್ಗುರು ಗುರುಸಿದ್ಧೇಶ್ವರಾ!!

ಪ್ರಸಾದ ಮಹಿಮೆ ಅಗಾಧವಾದುದು ಅನ್ನವನ್ನು ಪ್ರಸಾದ ಭಾವನೆಯಲ್ಲಿ ಸೇವಿಸಿ ಶಿವಚಿಂತನೆಯಲ್ಲಿ ಕಾಲಕಳೆದರೆ ಅದು ಸಿದ್ಧಿಯಾಗುವದು.

"ಬಟ್ಟಲ ಬೆಳಗದೆ,
ಒಳಗೆ ತಾತೊಳೆಯದೆ
ಎಡೆ-ಬಟ್ಟಲಮೊಳಗೆ ಎಡೆಯು ನೀಡಿಮೊಡೆ
ಶುದ್ಧವಾಗುವದೆಂತಯ್ಯ?
ಹೃದಯದ ಬಟ್ಟಲವನು
ಸುಬುದ್ಧಿಯುದಕದಿಂದ
ತೊಳೆದು ಬೆಳಗಿಸಿ
ಲಿಂಗಕ್ಕರ್ಪಿಸಿ ಪದಾರ್ಥವ ಸೇವಿಸಿಮೊಡೆ
ಶುದ್ಧ ಪ್ರಸಾದವಾಗುವದಯ್ಯ,
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ"

ಪ್ರಸಾದಿ ಶರಣಂಗೆ ಅಂತರಂಗ ಬಹಿರಂಗವೆಂಬ ಉಭಯಾಂಗವಿರಲಾರದು. ಆತನು ಆತ್ಮಶುದ್ಧಿಗೆ ಪ್ರಾಧಾನ್ಯತೆ ನೀಡಿ ಸೇವಿಸುತ್ತಾನೆ. ಪ್ರಸಾದವನ್ನು ಸಶಾಸ್ತ್ರೀಯವಾಗಿ ಸೇವಿಸಿದರೆ ಆರೋಗ್ಯ ವರ್ಧನೆಗೆ ಹಿತಕರ. ವ್ಯಕ್ತಿತ್ವ ವಿಕಾಸಕ್ಕೆ ಪ್ರಸಾದವೇ ಭದ್ರಬುನಾದಿ ಸಂಕಲ್ಪ ವಿಕಲ್ಪ ವಿರಹಿತವಾಗುತ್ತದೆ. ಪ್ರಸಾದದಿಂದ ಸಚ್ಚಿದಾನಂದ ಸಮತ್ವ ಸ್ಥಿತಿಯು ಪ್ರಾಪ್ತಿಯಾಗುತ್ತದೆ. ವಿಕಾರತ್ರಯಗಳು ನಿವೃತ್ತಿಯಾಗುತ್ತವೆ. ಮಾಯಾ ಮರ್ದನಕ್ಕೆ ಪ್ರಸಾದವೇ ಮೂಲ. ಕಾಯಕ ವೃದ್ಧಿಗೂ ಪ್ರಸಾದವೇ ಮೂಲ. ತನುತ್ರಯ ತಾಪತ್ರಯಂಗಳ ಕಳೆದು ತನ್ನ ತಾನರಿದು ಕೊಳ್ಳಲು ಪ್ರಸಾದವೇ ಮೂಲ. ಪ್ರಸಾದಿಗೆ ಅರಿವು ಮರೆವುಗಳಿರಲಾರವು ಅಖಂಡಿತ ಜ್ಞಾನಿಯಾದ ಪ್ರಸಾದಿಗೆ ಇದು, ಕಾಯ, ಇವು ಇಂದ್ರಿಯ, ಇವು ಕರಣ, ಈ ಆತ್ಮ ನಾನು ಎಂಬ ಖಂಡಿತ ಜ್ಞಾನವಿರದು. "ಪರಮ ಪ್ರಸಾದಿಯ ಕಾಯ ಅದು ಕಾಯವಲ್ಲ. ಅದು ಪರಕಾಯ."

"ತುತ್ತಿಗೊಮ್ಮೆ ಶಿವ-ಧ್ಯಾನಗೈಯುತ್ತ
ಸೇವಿಸಿದ ಪ್ರಸಾದವು ಶಿವಪ್ರಸಾದವಾಗುವುದಲ್ಲವೆ,

ಮತ್ತೆ ಅನ್ನವೆಂದು ಬಗೆಯಬಹುದೆ?
ಅಕ್ಕಿ ಸಂಸ್ಕಾರದಿಂದನ್ನ ವಾದ ಮೇಲೆ
ಮತ್ತೆ ಅದು ಅಕ್ಕಿಯಾಗಬಲ್ಲುದೆ?
ನೀಡಿದ ಸಕಲ ಪದಾರ್ಥಂಗಳು
ಜಂಗಮನ ಹಸ್ತ-ಸ್ಪರ್ಶದಿಂದ
ಪರಿಶುದ್ಧವಾದ ಮೇಲೆ
ಮತ್ತೆ, ಆ ಪದಾರ್ಥವ ಶುದ್ಧವಪ್ಪುದೆ,
ಹೇಳಯ್ಯಾ
    ಭ್ರೂಲತಾ ಪುರೀಶ ಕರ್ತೃ
    ಜಗದ್ಗುರು ಗುರುಸಿದ್ಧೇಶ್ವರಾ!!"

ಪ್ರಸಾದಿಯಾದ ಮೇಲೆ ಮೊದಲಿಗೆ ಹೃದಯ ತಟ್ಟೆಯೊಳಗಿರುವ ಕಲ್ಮಷ ತೊಳೆಯಬೇಕಾಗುತ್ತದೆ. ತ್ರಿಮಲವ ತಿಕ್ಕಿ ತಿಕ್ಕಿ ಒರಸುತ್ತ ಹೋದಂತೆ ಆತ್ಮಶುದ್ಧಿಯಾಗಿ ಬೆಳಗು ಕಂಡು ಅಚ್ಚ ಪ್ರಸಾದಿಯಾಗಲು ಬರುತ್ತದೆ.

"ಅಗ್ನಿ ಮುಟ್ಟಲು ತೃಣವಗ್ನಿಯಪ್ಪುದು ತಪ್ಪದಯ್ಯಾ, ಗುರುಪ್ರಸಾದವಂಗ ಸೋಂಕಿದಲ್ಲಿ ಸರ್ವಾಂಗ ಗುರುವಪ್ಪುದು ತಪ್ಪದಯ್ಯಾ, ಲಿಂಗಪ್ರಸಾದ ಮನ ಸೋಂಕಿದಲ್ಲಿ ಮನಲಿಂಗವಪ್ಪುದು ತಪ್ಪದಯ್ಯಾ, ಜಂಗಮ ಪ್ರಸಾದ ಅರಿವ ಸೋಂಕಿದಲ್ಲಿ ಅಖಂಡಿತ ಪ್ರಸನ್ನ ಪ್ರಸಾದಿಯಪ್ಪುದು ತಪ್ಪದಯ್ಯಾ. ಶಿವಶಿವಾ! ಪ್ರಸಾದದ ಮಹಿಮೆಯನೇನೆಂದುಪಮಿಸುವೆ? ಪ್ರಸಾದವೆ ಗುರು, ಪ್ರಸಾದವೆ ಲಿಂಗ, ಪ್ರಸಾದವೆ ಜಂಗಮ, ಪ್ರಸಾದವೆ ಪರಾಪರ, ಪ್ರಸಾದವೆ ಪರಮಾನಂದ, ಪ್ರಸಾದವೆ ಪರಮಾಮೃತ, ಪ್ರಸಾದವೆ ಪರಮಜ್ಞಾನ, ಪ್ರಸಾದವೇ ವಾಙ್ಮನೋತೀತ, ಪ್ರಸಾದವೇ ನಿತ್ಯಪೂರ್ಣ ಇಂತಪ್ಪ ಪ್ರಸಾದವಕೊಂಡು ನಾನು ಬದುಕಿದೆನಯ್ಯಾ, ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ!!"

ಪ್ರಸಾದದ ಪ್ರಭಾವವು ಬಹಳ ಪರಿಣಾಮಕಾರಿಯಾದುದಲ್ಲದೆ, ಚರಮ ಸಂಸ್ಕಾರ ಹಾಗೂ ಪರಮಾನುಗ್ರಹ ನೀಡುವಂತಹದು.

"ಅರ್ಪಿತದ ಪ್ರಸಾದದ ಸುಸೂಕ್ಷ್ಮಕಳಾ ವ್ಯವಧಾನಯೋಗ ಮಂ
ತಿರ್ಪುದೊ ವಾಙ್ಮನಕ್ಕನುಪಮಂ ಗುರುವಾಕ್ಯ ನಿರೂಪದಿಂ ಕರಂ।
ತೋರ್ಪುದನನ್ಯಭಾವಮನುಭೂತಿಪದೈಕಸುಸಾಧ್ಯಮಾತ್ಮವಿತ್
ಕರ್ಪುರವಗ್ನಿಯಂತೆಸೆವ ಲಿಂಗನಿಜೈಕ್ಯತೆಯಿಂ ಶಿವಾಧವಾ!"

ಆತ್ಮಾನುಭೂತಿ ಪಡೆದವರಿಗೆ ಪ್ರಸಾದಿಸ್ಥಲ ಸಿದ್ಧಿ ಸಾಧ್ಯ. ಇವರು ಪ್ರಸಾದ ಗೌಪ್ಯಕಳೆಯನ್ನು ಗುರುವಾಕ್ಯ ನಿರೂಪದಿಂದ ಚೆನ್ನಾಗಿ ಅರಿತು

ಆಚರಿಸುತ್ತಾರೆ ಮತ್ತು ಉರಿಗೊಂಡ ಕರ್ಪೂರದಂತೆ, ಲಿಂಗ ನಿಜೈಕ್ಯತೆಯಿಂದ ಅನನ್ಯಭಾವವನ್ನು ಅನುಭೂತಿ ಪದ್ಯೈಕ ಸಾಧ್ಯತೆಯೊಡನೆ ತೋರ್ಪಡಿಸುತ್ತಾರೆ.

ಇಂತಹ ಪ್ರಸಾದ ಪ್ರಸಿದ್ಧಿಯನ್ನು ಮರುಳ ಶಂಕರ ದೇವರು, ಪಡೆಯುವ ತವಕದಲ್ಲಿದ್ದು ಸಾಧನೆಯಲ್ಲಿಯೇ ಕಾಲಕಳೆಯುತ್ತಾರೆ. ಅವರು ಕಲ್ಯಾಣದಲ್ಲಿದ್ದರೂ ಯಾರಿಗೂ ತಮ್ಮ ನಿಜಸ್ಥಿತಿಯನ್ನು ತೋರ್ಪಡಿಸದೇ ಕಾಯಕರಣ ಭಾವಾರ್ಪಿತದಲ್ಲಿಯೇ ಮಗ್ನರಾಗಿರುತ್ತಿದ್ದರು. ಪ್ರಸಾದದ ಸೂಕ್ಷ್ಮತೆಯನ್ನು ಅರಿತುಕೊಂಡಿದ್ದರು. ವ್ಯಕ್ತಿತ್ವ ವಿಕಾಸಕ್ಕೆ ಇದು ದೊಡ್ಡ ಸಾಧನವೆಂದು ಬಗೆದು ಆಚರಿಸುತ್ತಿದ್ದರು. ಮರುಳ ಶಂಕರದೇವರದೊಂದು ನಿಯಮವಿತ್ತು. ಅದೇನೆಂದರೆ ಶಿವಲಿಂಗ ಭಕ್ತರು ಸೇವಿಸಿದ ಶೇಷಪ್ರಸಾದವನ್ನು ತಾವು ಸ್ವೀಕರಿಸಿ, ನಿಜಾನಂದದಲ್ಲಿ ಕಾಲಕಳೆಯುತ್ತಿದ್ದರು. ಈ ಭಾವ, ಈ ಶಕ್ತಿ ಪಡೆಯಲು ಅದ್ಭುತ ಸಾಮರ್ಥ್ಯ ಬೇಕಾಗುತ್ತದೆ. ಶೇಷ ಪ್ರಸಾದದ ಸೇವನೆಯೇ ಘನಸೌಖ್ಯವನ್ನು ನೀಡುವಂತಹದೆಂದು ಬಗೆದು ಕ್ರಿಯಾತ್ಮಕ ರೀತಿಯಲ್ಲಿ ನಡೆಯುತ್ತಿದ್ದರು. ಇದರಿಂದ ಅವರ ಹೃದಯ ಪಕ್ವತೆ, ವಿಶಾಲತೆ, ಸೇವಾ ಮನೋಭಾವನೆ, ಕಿಂಕರತ್ವವು ಅರ್ಥವಾಗುತ್ತದೆ. ಶ್ರೀ ಮರುಳ ಶಂಕರ ದೇವರು, ಶಿವಾನುಭವ ಮಂಟಪದ ಶಿವಶರಣರು ಉಂಡುಳಿದ ಪ್ರಸಾದವನ್ನು ೧೨ ವರ್ಷದಿಂದಲೂ ಸೇವಿಸುತ್ತಿದ್ದರು. ಆದರೆ ಅವರ ಈ ಕಾಯಕ ಅಲ್ಲಿಯ ಶರಣರಿಗೂ, ಮಹಾತ್ಮ ಬಸವಣ್ಣನವರಿಗೂ ಅರಿಯದಂತೆ ಇತ್ತು. ಮರುಳ ಶಂಕರದೇವರು ಸಿಕ್ಕ ಪ್ರಸಾದದಲ್ಲಿ ಸಂತೃಪ್ತಿ ಪಡೆದು, ಭೋಗಲಾಲಸೆಗಳಿಸದೆ, ಸಮಾಧಾನವುಳ್ಳವರಾಗಿ, ಪ್ರಸಿದ್ಧ ಪ್ರಸನ್ನ ಭಾವದಲ್ಲಿ ತಾವೇ ತಾವಾಗಿ, ಅವಿರಳ ಶಿವಾವಧಾನಿಯಾಗಿ ಕಾಲಕಳೆಯುತ್ತಿದ್ದರು. ಈ ಸಾಧನೆಯಿಂದ ಅವರಿಗೆ ಅಂಗಸಿದ್ಧಿ ಕರಣಸಿದ್ಧಿ ಭಾವಸಿದ್ಧಿ ಲಿಂಗಸಿದ್ಧಿಗಳು ಸಾಧಿಸಿದ್ದವು. "ಲಿಂಗವಂತನ ಪ್ರಸಾದಸ್ಥಲಿಯ ಮನಸ್ಸು ಎಲ್ಲಿ ವಿಶ್ರಾಂತಿಗೊಳ್ಳುವದೋ ಅಲ್ಲಿ ಲಿಂಗ ಸುಸಿದ್ಧಿ" ಅನ್ನುವ ಮೋಗ್ಗೆಯ ಮಾಯಿದೇವರ ಮಾತಿನಂತೆ ಅವರ ಸ್ಥಿತಿ ಆ ಮಟ್ಟಕ್ಕೆ ಮುಟ್ಟಿತ್ತು. ಕಾಯದೊಳಗೆ ಮಾಯವಿಲ್ಲದಂತೆ, ಮನದೊಳಗೆ ಅಹಂಕಾರವಿಲ್ಲದಂತೆ, ಜಂಗಮದ ಒಕ್ಕುಮಿಕ್ಕ ಪ್ರಸಾದವಕೊಂಡು ಮಿಕ್ಕು ಮೀರಿನಿಂದ ಮಹಾಪ್ರಸಾದಿಯಾಗಿದ್ದರು.

ಒಂದು ದಿನ ಅಲ್ಲಮ ಪ್ರಭುದೇವರು ಅನುಭವ ಮಂಟಪದ ಸುತ್ತೆಲ್ಲ ಸಂಶೋಧನಾರ್ಥವಾಗಿ ಹೊರಟಾಗ, ಮಹಾಮನೆಯ ಅಂಗಳದಲ್ಲಿದ್ದು, ಶೇಷ ಪ್ರಸಾದದಲ್ಲಿ ತನ್ಮಯರಾಗಿದ್ದ ಶ್ರೀ ಮರುಳ ಶಂಕರದೇವರನ್ನು ನೋಡಿ ಆಶ್ಚರ್ಯ ಚಕಿತರಾಗುತ್ತಾರೆ. ತಮ್ಮ ದಿವ್ಯದೃಷ್ಟಿಯಿಂದ ನಿರೀಕ್ಷಿಸುತ್ತಾರೆ, ಪರೀಕ್ಷಿಸುತ್ತಾರೆ.

ಪ್ರಭುದೇವರು ಸಹ ಲಿಂಗದ ಜ್ಞಾನಜ್ಯೋತಿಯ ನಿಲವನ್ನು ಕಂಡು ಆನಂದಭರಿತ ರಾಗುತ್ತಾರೆ.

ಈ ವಿಚಾರವನ್ನು ಶೂನ್ಯ ಸಂಪಾದನೆಯಲ್ಲಿ ಸಿದ್ಧ ವೀರಣ್ಣೊಡೆಯರು ಸಂಭಾಷಣೆಯ ರೂಪದಲ್ಲಿ, ಕಾವ್ಯ ಶೈಲಿಯಲ್ಲಿ ಬರೆದಿರುವದನ್ನು ನಾವಿಲ್ಲಿ ನೋಡ ಬಹುದು.

“ಅದೆಂತೆಂದೊಡೆ ಆ ಪ್ರಭುದೇವರು ಬಸವರಾಜ ದೇವರು ಮಾಡುವ ಸ್ತೋತ್ರಕ್ಕಂ ಮೆಚ್ಚಿ ಮುಂದಕ್ಕಂ ಗಮಿಸುತ್ತಿರಲು; ಅಲ್ಲಿ ಪ್ರಮಥರ ತಿಂಥಿಣಿಯುಂ ಅನುಭಾವ ಸದ್ಗೋಷ್ಠಿಯಿಂ ಉಘೇ ಚಾಂಗು ಭಲಾ ಎಂಬ ಶಬ್ದ ಸಡಗರದಿಂ ಬಸವ ರಾಜ ದೇವರ ರಾಜಭವನಕ್ಕಂ ಈ ಸಡಗರದಿಂ ಪೋಪ ಪ್ರಸ್ತಾವದೊಳು ಮುಂದೆ ಪ್ರಸಾದದ ಕೊಂಡ ಸಮೀಪಸ್ಥ ಮಾಗಲು ಅಲ್ಲಿರ್ದ ಮರುಳಶಂಕರ ದೇವರು ಶರಣ ತಿಂಥಿಣಿಯುಂ ಪ್ರಭುದೇವರ ಶ್ರೀ ಮೂರ್ತಿಯುಂ ಕಂಡು ಮೆಲ್ಲನೆ ಆ ಪ್ರಸಾದದ ಕೊಂಡದಿಂ ಪೊರಮಡುತಿರ್ದ್ದರದೆಂತೆನೆ.

“ವಸಂತ ಮಾರುತಂ ಬರಲು ಚೂತದಿಂದಂಕುರ ಪೊರಮಡುವಂತೆ, ಸ್ವಾತಿಯ ವರುಷದ ದಿನಕ್ಕೆ ಅಂಬುಧಿಯೊಳಗಿರ್ದ ಮೌಕ್ತಿಕಶಂಬುಕ ಅಂಬುಧಿ ಯೊಳಗಿರ್ದು ಕಾಣಬಪ್ಪಂತೆ, ನಲಿದು ಸೂಜಿಕಲ್ಲ ಕಾಣುತ್ತ ಸೂಜಿಮೆಲ್ಲನೆ ತನ್ನ ಸ್ಥಾನದಿಂದೇಳುವಂತೆ; ಶಿವಯೋಗಾಂಗದಲ್ಲಿ ತನುವ ಮರೆದಿರ್ದ್ದ ಶಿವಯೋಗಿ ತನಗೆ ಶಿವ ಪ್ರಸನ್ನ ಮಾಗಲು ಮುಂದೆ ಶಿವನ ಶ್ರೀ ಚರಣಕಮಲಮಂ ಕಂಗಳಿಂದೊತ್ತಿ ಕೊಂಬೆನೆಂಬ ತೆರನಂತೆ. ಪೌರ್ಣಿಮೆಯ ಚಂದ್ರನುದಯಕ್ಕೆ ಸಿಂಧು ಮೆಲ್ಲಗೆ ಮುಂದುಕ್ಕುಬ್ಬಿ ನಡೆದು ಬಪ್ಪಂತೆ ಮರುಳಶಂಕರ ದೇವರು ಪ್ರಸಾದದ ಕೊಂಡದಿಂ ಪೊರಮಡುತಿರ್ದ್ದ ಪ್ರಸ್ತಾವದೊಳು ಅಲ್ಲಿ ಅಲ್ಲಮ ಪ್ರಭುದೇವರಿಗೆ ಅವರ ನಿಲವು ತೋರಿತ್ತದೆಂತೆನೆ:

ಜ್ಞಾನಚಕ್ಷುವಿಗೆ ಆತ್ಮನ ನಿಲವು ತೋರಿದಂತೆ, ಅಂಜನಪ್ರತ್ಯಕ್ಷನಂಗೆ ಕಡವರ ದಿರವು ತೋರಿದಂತೆ, ಅಲ್ಲಮ ಪ್ರಭುದೇವರಿಗೆ ಮರುಳ ಶಂಕರದೇವರ ನಿಲುಕಡೆ ಪೋಗಿ ತೋರುತ್ತಿರಲು. ಅಲ್ಲಿ ಪ್ರಭುದೇವರು ಬಸವರಾಜದೇವರಿಗೆ ಮರುಳ ಶಂಕರ ದೇವರು ಗೌಪ್ಯದೊಳಿರ್ದ್ದು ಪೊರಮಡುವದಂ ಕಂಡು ಆಶ್ಚರ್ಯಂ ಬಟ್ಟು ಅನುಭಾವದ ಬೆಡಗಿನಿಂ ನುಡಿದ ಪ್ರಸ್ತಾವದ ವಚನ.”

ಓಹೋ! ನಮಃ ಶಿವಾಯ!

ಮಹದಾಕಾಶದ ಮರೆಯಲಿರ್ದ ಶಾಂತಕ್ಯಾನಿಲವೊ. ದಶಮರುತನ ಮೊ[illegible] ಲಿಲ್ಲನೆ ತಾನೆನಿಂದ ಜ್ಞಾನಜ್ಯೋತಿ ನಿಲವೊ,

ತನ್ನಿಂದ ತಾನಾಗಿ ಮುಕ್ತಿಯ ಕರಿಗೊಂಡ

ಮುಕ್ತಿಯ ಮುತ್ತಿನ ಧವಳದ ಕಾಂತಿಯ ನಿಲವೊ,
ರುದ್ರಾಕ್ಷಿಯ ಹಂಗು ಬೇಡವೆಂದು ಹೊದ್ದ ಚರ್ಮದ ಹೊದಕೆಯಂ
ತೆಗೆದಗಿಟಿಗಿಟಿ ಜಂತ್ರದ ನಿಲವೊ,
ಅಲ್ಲಾ, ತನ್ನ ನಿಲವನರಿಯದೆ ವಾದಿಸುತ್ತಿರಲು
ಉರಿಲಿಂಗೋದ್ಭವವಾದ ಉರಿಲಿಂಗದ ನಿಲವೊ.
ಆವನಿಲವೆಂದರಿಯ ಬಾರದು!
ಗುಹೇಶ್ವರನ ಕಂಗಳಿಗೆ ಒಂದಾಶ್ಚರ್ಯ ತೋರಿತ್ತು.
ಕಾಣಾ ಸಂಗನಬಸವಣ್ಣಾ.

ಎಂದುದಾಗಿ ಮಹಾತ್ಮಾ ಬಸವಣ್ಣನವರನ್ನು ಕುರಿತು, ಮರುಳ ಶಂಕರ ದೇವರ ವ್ಯಕ್ತಿತ್ವ ವಿಕಾಸವನ್ನು ಬಣ್ಣಿಸುತ್ತಾರೆ. ಸಾಕ್ಷಾತ್ ಶಂಕರನ ಅವತಾರವೇ ಭುವಿಗಿಳಿದು ಬಂದು, ಪ್ರಸಾದದ ಪ್ರಸನ್ನ ಪ್ರಕಾಶವನ್ನು ಪ್ರಕಟಿಸುತ್ತಿರುವ ಅಗಾಧ ಮಹಿಮೆಯ ಮೂರ್ತಿ ಎಂದು ಹೇಳುತ್ತಾರೆ. ಹತ್ತುಗಾಳಿಗಳ ಹೊಡೆತಕ್ಕೂ ಅಲುಗದಂತೆ ಇದ್ದು, ಸ್ವಯಂ ಲಿಂಗದ ಚಿಜ್ಜ್ಯೋತಿಯ ನಿಲುವಾಗಿ ಮತ್ತು ತನ್ನಿಂದ ತಾನಾಗಿಯೆ ಕರಿಗೊಂಡ. ಮುತ್ತಿನ ಧವಳದ ಕಾಂತಿಯ ನಿಲುವಾಗಿರುವ ಮರುಳ ಶಂಕರ ದೇವರ ಕಾಯಕನಿಷ್ಠೆ ಅಗಾಧವಾದುದು. ಅನುಪಮವಾದುದು ತಮ್ಮ ದೇಹವನ್ನೇ ಕೃಶಮಾಡಿಕೊಂಡು, ನಿರಂತರ ಸಾಧನೆಯಲ್ಲಿ ತೊಡಗಿ, ಚರ್ಮದ ಹೊದಿಕೆಯನ್ನು ತೆಗೆದ ಗಡಗಡಿಯ ಜಂತ್ರದಂತಿರುವ ಮೈಮಾಟವಿದ್ದರೂ ಘನ ಗಂಭೀರ ಉರುಲಿಂಗ ನಿಲುವಿನ ಪ್ರಕಾಶದಲ್ಲಿ ಕಂಗೊಳಿಸುತ್ತಿದ್ದಾರೆ. ಎಂದು ಹೇಳುತ್ತ ಮತ್ತೆ ಅವರ ನಿಲುವನ್ನು ಈ ರೀತಿ ಪ್ರಭುದೇವರು ವಿವರಿಸುತ್ತಾರೆ.

"ಬೀದಿಯಲ್ಲಿ ಬಿದ್ದ ಮಾಣಿಕ್ಯವ, ಮೂಳರ್ದ ನಿಧಾನವನಾರಿಗೂ ಕಾಣ ಬಾರದು ನೋಡಾ. ಮರಣ ವೃಕ್ಷವಲಿಗೆ ಮರುಜವಣಿಸಿಕ್ಕುವವೇ? ಪಾಪಿಯ ಕಣ್ಣಿಂಗೆ ಪರುಷ ಕಲ್ಲಾಗಿಪ್ಪಂತೆ. ಇಪ್ಪರಯ್ಯಾ ಶಿವಶರಣರು. ನಮ್ಮ ಗುಹೇಶ್ವರನ ಶರಣ ಮರುಳ ಶಂಕರದೇವರ ನಿಲವ ನೋಡಾ ಸಂಗನಬಸವಣ್ಣಾ! ನಿನ್ನ ಭಕ್ತಿ ವೃಕ್ಷದ ಪಸರಣೆಯನ್ನು ಆಶ್ರಯಿಸಬೇಕೆಂದು ಒಸೆದ ಬಂದ ಮಹಾತ್ಮರು ಅಗಣಿತ ಅವರಲ್ಲಿ ಈತನಿಗೆ ವಸುಮತಿಯಲ್ಲಿ ಎಣೆಯಿಲ್ಲ. ಇಂತಪ್ಪ ಅಸಮರೆಲ್ಲರೂ ನಿನ್ನ ಬಾಗಿಲವನ್ನು ಮುಸುರಿಕೊಂಡಿಪರಾಗಿ ನೀನೇ ಕೃತಾರ್ಥನಲ್ಲವೆ?

ಮತ್ತೆ:—ಅಂಗಳ ಬಾಗಿಲಲ್ಲಿ ನೆಲೆನಿಂದಿದ್ದ ಲಿಂಗವ ನರಿದುದಿಲ್ಲವೆ? ಸುಸಂಗಿ ನಿರಂಗ ನಿಃಕಲ ಬ್ರಹ್ಮ ಮರುಳ ಶಂಕರ ಲಿಂಗದ ಪ್ರಸಾದದ ಕುಳಿಯಲ್ಲಿ ನಿಜನಿವಾಸ ದಂಗವ ನೋಡು, ಗುಹೇಶ್ವರ ಲಿಂಗದಲ್ಲಿ ಸಂಗನಬಸವಣ್ಣಾ!"

ಈ ಶರಣ ತಿಂಥಿಣಿಯಲ್ಲಿ ಮರುಳ ಶಂಕರ ದೇವರೊಬ್ಬರು ಮರುಜವಣಿ. ಬೀದಿಯಲ್ಲಿರುವ ಮಾಣಿಕ್ಯ, ಇವರ ಶಕ್ತಿ ಅಂತರಂಗದ ಕಣ್ಣು ತೆರೆದವರಿಗೆ ಮಾತ್ರ

ಅರ್ಥವಾಗುತ್ತೆ. ಬಹಿರ್ಮುಖದೃಷ್ಟಿ ಸಾಗಿದವರಿಗೆ ಇವರ ಪ್ರಸಾದದ ಮಹಿಮೆ ಅರಿಯದು ಇದಕ್ಕೆ ಅರಿವಿನ ಕಣ್ಣು ಬೇಕು. ಹಿತಾನುಭವ ಬೇಕು.

ಮರುಳ ಶಂಕರ ದೇವರು ಪ್ರಸಾದ ಕಾಯದಿಂದ ಬಿದ್ದು ಬರುತ್ತಿರುವ ದೃಶ್ಯವನ್ನು ಸಿದ್ಧರಾಮದೇವರು ಮುಂತಾದ ಶಿವಶರಣರಿಗೆ ತೋರಿಸುತ್ತ, ಮರುಳ ಶಂಕರ ದೇವರ ಅರಿವಿನ ತಿರುಳನ್ನು ಲಿಂಗಾಗಮದ ಹೊಳಹಿನ ಮರುಳನ್ನು ಪ್ರಭುದೇವರು ಮತ್ತೆ ಈ ಪರಿ ತಿಳಿಸುತ್ತಾರೆ.

"ಮರುಳ ಶಂಕರ ದೇವನು ಅರಿವಿನ ತಿರುಳು, ಲಿಂಗಾಗಮದ ಹೊಳಹಿನ ಮರುಳು, ನಿರ್ಮಳ ಧರ್ಮ ಮರ್ಮದ ಚಾರು ಚಾರಿತ್ರ್ಯ, ಶಾಂತಿಯ ಚಿತ್ತವೃತ್ತಿಯ ಪರಮ ಪಾವನ ಮೂರ್ತಿ. ಶರಣಾಶ್ರಿತ ಶರಣ ಅಂತಃಕರಣ ಶುದ್ಧಿಯ ಮನೆಯ, ಶಂಕರನ ಸಾಧಕರೊಕ್ಕು ಮಿಕ್ಕುದನುಂಡು, ಕಾಮದಲಿ ಕಂಗೆಡದೆ, ಕ್ರೋಧಸ್ತೋಮದಲಿ ಮುಂಗೆಡದ ಲೋಭದ ಸೀಮೆಯಲಿ ಸಿಕ್ಕದೆ, ವಿಮೋಹದ ಬಲೆಗೆ ಬಗೆಗುಡದ ಆ ಮದೋನ್ನತ ಮತ್ಸರಂಗಳ ನೀಮಿಸದೆ ಲಿಂಗಪ್ರಸಾದದ ಪ್ರೇಮಿಯಾದ ಮಹಾತ್ಮನೀತ. ಕೇಳುವ, ಆಲೋಕಿಸುವ, ರುಚಿಸುವ, ಕಂಪುವ ಸೋಂಕುವ, ತಾಳು ವಿಷಯೇಂದ್ರಿಯದ ತವಕವ ತೆಗೆದು ತರಹರಿಸಿ, ಬಾಹ್ಯಕೆ ನಿರ್ಬಾಧಕದ ಸರ್ವೇಳವೆಂದು ಈಶ ಪ್ರಸಾದವ ಮೆಚ್ಚಿದ ಮಹಿಮನೀತ, ಇಂದ್ರಿಯ ವಾಸಿತಗಳೆದು, ಅಳುಪಿನ ದಂದುಗುವ ಧಿಕ್ಕರಿಸಿ, ಭವ ಬಂಧನದ ಬೇರಿಗೆ ಕಿಚ್ಚಿಕ್ಕಿದ ಅಚ್ಚ ಶರಣ ನೀತ." ಪ್ರಭುದೇವರ ಈ ವರ್ಣನೆ ಎಲ್ಲ ಶರಣರಿಗೂ ಕೌತುಕವನ್ನು ನೀಡುತ್ತದ. ಶರಣರೆಲ್ಲರೂ ಆನಂದಭರಿತರಾಗುತ್ತಾರೆ, ಮರುಳ ಶಂಕರದೇವರ ದಿವ್ಯ ಶಕ್ತಿಗೆ ತಲೆಬಾಗುತ್ತಾರೆ, ಅಚ್ಚರಿಪಡುತ್ತಾರೆ.

ಮರುಳಶಂಕರ ದೇವರ ವ್ಯಕ್ತಿತ್ವ ಮಹೋನ್ನತವಾದುದು. ಅವರ ಇರುವಲ್ಲಿ ನಿಜ ಪ್ರಸಾದ. ಅವರು ಅರ್ಜನ, ಅರ್ಪಣ, ಅನುಭವದಲ್ಲಿ ಬಲ್ಲಿದವರಾಗಿ, ಶುದ್ಧ ಸಿದ್ಧ ಪ್ರಸಿದ್ಧ ಪ್ರಸಾದಿಯಾಗಿದ್ದಾರೆ. ಪ್ರಸಾದ ಬಿಟ್ಟು ಪ್ರಾಣವಿಲ್ಲ, ಕಾಯವಿಲ್ಲ, ಜ್ಞಾನವಿಲ್ಲ, ಧ್ಯಾನವಿಲ್ಲ ಎಂಬುದೇ ಅವರ ಧೃಢವಿಶ್ವಾಸ. ಆ ಬಗೆಯಾಗಿ ನಡೆದಿದ್ದಾರೆ. ಶರಣ ಸಂದೋಹದಲ್ಲಿ ಆದರ್ಶ ವ್ಯಕ್ತಿಯಾಗಿದ್ದಾರೆ. ಪ್ರಸಾದಿಕ ಅನುಭವವನ್ನು ಬಹುದೂರ ದೃಷ್ಟಿಯಲ್ಲಿ, ಅನುಭವಿಸಿ, ಪರಿಣಾಮ ಪ್ರಸಾದದಲ್ಲಿ ತಲ್ಲೀನರಾಗಿದ್ದಾರೆ. ಅವರಿಗೆ ಪ್ರಸಾದವೇ ಸ್ಥಿತಿ ಗತಿ, ಅವರಲ್ಲಿಯೇ ಸುಸ್ಥಿರವಾದ ನಿಜಾನಂದದ ನಿಲುವು ಪಡೆದು ಪರಮ ಪಾವನರಾಗಿದ್ದಾರೆ. ಎಷ್ಟೇ ಕಷ್ಟ ಬಂದರೂ ಹಿಡಿದವ್ರತ ಬಿಡದಂತೆ, ಲಿಂಗ ಭೋಗೋಪಭೋಗಿಯಾಗಿ ನಿಜ ಪ್ರಸಾದಿಯಾಗಿದ್ದಾರೆ. ಅಂತೆಯೇ ಪ್ರಭುದೇವರು ಅಚ್ಚ ನಿಲುವು ಕಂಡು ಬೆರಗಾಗಿದ್ದಾರೆ. ಬಸವಣ್ಣನವರಿಗೆ, ಮಹಾಮನೆಯ ಶರಣರ ಇರವನ್ನು ತೋರಿಸಿ

ಆನಂದಪಡಿಸಿದ್ದಾರೆ. ಅಲ್ಲಮಪ್ರಭುದೇವರು ಆನಂದವಕ್ಕೆ ಮತ್ತೆ ಈ ರೀತಿ ತಮ್ಮ ಪ್ರಾಸಾದಿಕ ವಾಣಿಯಿಂದ ನಿರೂಪಿಸುತ್ತಾರೆ. ಅದು ಇಂತಿದೆ.

"ಆದಿಯಸಂಗ ಮುಖದಲ್ಲಿ ಅರ್ಪಿತವ ಮಾಡಿ,
ಅನಾದಿಯ ಪ್ರಾಣಮುಖದಲ್ಲಿ ಅರ್ಪಿತವ ಮಾಡಿ,
ಮನವೆಂಬುದ ಅರಿವಿನ ಮುಖದಲ್ಲಿ ಅರ್ಪಿಸಿ,
ತಾನೆಂಬುದ ನಿರಾಕಾರದಲ್ಲಿ ನಿಲಿಸಿ,
ಪರಿಣಾಮ ಪ್ರಸಾದದಲ್ಲಿ ತದುಗತನಾಗಿ,
ಪ್ರಸಾದವೆ ಪ್ರಾಣ, ಪ್ರಸಾದವೆ ಕಾಯ, ಪ್ರಸಾದವೆ ಜ್ಞಾನ
ಪ್ರಸಾದವೆ ಧ್ಯಾನ.
ಪ್ರಸಾದವೆ ಲಿಂಗಭೋಗೋಪಭೋಗಿಯಾಗಿಪ್ಪ
ನಮ್ಮ ಗುಹೇಶ್ವರ ಲಿಂಗದಲ್ಲಿ ನಿಜ ಪ್ರಸಾದಿ
ಮರುಳ ಶಂಕರ ದೇವರ ನಿಲವ ನೋಡಾ ಸಂಗನಬಸವಣ್ಣಾ!

ಶ್ರೀ ಮರುಳ ಶಂಕರ ದೇವರು ಈ ಸಂಭಾಷಣೆ ಕೇಳಿ, ಆನಂದ ತುಂದಿಲರಾಗುತ್ತಾರೆ. ಮಹಾಮಹಿಮರ ದರ್ಶನವಾಯಿತೆಂದು ಹಿಗ್ಗಿನ ಕಡಲಿನಲ್ಲಿ ಮುಳುಗುತ್ತಾರೆ. ಆ ಸಮಯದಲ್ಲಿ ಮರುಳ ಶಂಕರ ದೇವರ ಪ್ರಸಾದ ಕುಂಡದಿಂದ ನಲಿನಲಿದು ಬಂದು ಪ್ರಭುದೇವರಿಗೆ ನಮಸ್ಕಾರಮಂ ಮಾಡಿ, "ಬಸವರಾಜ ದೇವರು ದಯದಿಂದ ಪ್ರಭುದೇವರ ಶ್ರೀ ಮೂರ್ತಿಯಂ ಕಂಡು ಬದುಕಿದೆನು, ಎನ್ನುತ್ತ ಈ ರೀತಿ ವಚನ ಹಾಡುತ್ತಾರೆ.

"ಜಯಜಯ, ತ್ರಾಹಿ ತ್ರಾಹಿ ಗರ್ಭದೊಳಗಣ ಶಿಶು
ನವಮಾಸವ ಹಾರಿಕೊಂಡಿರ್ದಂತೆ ಇರ್ದೆನಯ್ಯಾ!
ಎನ್ನ ಜನ್ಮ ಸಫಲವಾಯಿತ್ತಯ್ಯಾ!
ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ,

ಶಾಂತ ಮಲ್ಲಿಕಾರ್ಜುನದೇವಯ್ಯಾ, ಬಸವರಾಜ ದೇವರ ದಯದಿಂದ ಪ್ರಭುದೇವರ ಶ್ರೀ ಮೂರ್ತಿಯ ಕಂಡು

ಬದುಕಿದೆನು; ನಿಮ್ಮ ಧರ್ಮ, ನಿಮ್ಮ ಧರ್ಮ!
ಶರಣು ಶರಣಾರ್ಥಿ ಸಕಲ ಪುರಾತನರಿಗೆ!
ಮತ್ತಂ—ಎನಗೆ ಹರಿಯಿತ್ತು ಭ್ರಮೆಯೆಂಬ ಸಂಸಾರ ಬಂಧ,
ಬಯಲಾಯಿತ್ತು ಅದಗಿ ಉಡುಗಿ ಕಂಡೆನೆಂಬ ಭ್ರಮೆ ಭಾವಕ್ಕೆ,
ಪ್ರಕಾಶವಾಯಿತ್ತು ನಿತ್ಯ ನಿರಂಜನ ಪರಂಜ್ಯೋತಿ
ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ,

ಶಾಂತ ಮಲ್ಲಿಕಾರ್ಜುನದೇವಯ್ಯಾ,
ಪ್ರಭುದೇವರ ಕಾರುಣ್ಯದಿಂದ ಬದುಕಿದೆನು.

ಈ ನುಡಿಯನ್ನು ಆಲಿಸಿ ಎಲ್ಲ ಶಿವಶರಣರು ಆನಂದಾಂಬುಧಿಯಲ್ಲಿ ಮುಳುಗಿದರು.

ಮರುಳ ಶಂಕರ ದೇವರ ಭಾಷೆ, ಭಾವ ಮನೋಜ್ಞವಾದುದು. ಅವರ ಮಾತೃ ಭಾಷೆ ಕನ್ನಡವಾಗಿರದಿದ್ದರೂ, ಅನುಭವ ಮಂಟಪದಲ್ಲಿ ೧೨ ವರ್ಷವಿದ್ದು, ಕನ್ನಡ ಕಲಿತು ಈ ಪರಿ ತತ್ವಪರಿಪೂರ್ಣ ಶಿವಾನುಭವ ನಿವೇದನೆ ಹಾಗೂ ಭ್ರಾಂತಿ ಭಾವ ಬಯಲಾದ ಪಕ್ವಹೃದಯವಂತಿಕೆಯ ವಿಚಾರ ಇಲ್ಲಿ ಸ್ಮರಿಸುವಂತಹುದು. ಪ್ರಭುವಿನ ಸಂದರ್ಶನದಿಂದ ಸಂತಸವುಕ್ಕ ತ್ರಾಹಿ ತ್ರಾಹಿ ಎಂದು ಪ್ರಾರ್ಥಿಸಿದ್ದಾರೆ. ಅವರ ಜೀವನ ಪಾವನವಾಗಿದೆ. ಬಸವಣ್ಣನವರ ದಯದಿಂದ ಪ್ರಸನ್ನರಾಗಿದ್ದಾರೆ. ಆಧ್ಯಾತ್ಮಿಕ ನಭೋಮಂಡಲದಲ್ಲಿ ಹಾರಾಡುತ್ತಿರುವವರ ಜೀವನವೆ ಇಂತಹುದು. ಅವರ ಆಶೆ ಈಡೇರಿದೆ, ಫಲ ಬಿಟ್ಟಿದೆ, ಜನ್ಮ ಸಫಲವಾಗಿದೆ. ನಿತ್ಯ ನಿರಂಜನ ಪರಂಜ್ಯೋತಿ ಸ್ವರೂಪರನ್ನು ಕಂಡು "ಗರ್ಭದೊಳಗಣ ಶಿಶು ನವಮಾಸವ ಹಾರಿ ಕೊಂಡಿರ್ದಂತೆ ಇರ್ದೆನಯ್ಯಾ! ಎನ್ನ ಜನ್ಮ ಸಫಲವಾಯಿತ್ತಯ್ಯಾ" ಆಡಿ, ಹಾಡಿ ನಲಿನಲಿದಾಡುತ್ತಾರೆ. ಅವರ ಆನಂದಕ್ಕೆ ಮಿತಿಯಿಲ್ಲ ಅವರ ಕಾಯಕ ನಿಷ್ಠೆಯಿಂದ ಜಂಗಮ ದರ್ಶನವಾಯ್ತು, ಸಂತೃಪ್ತಿಯಾಯಿತು. ಪ್ರಸನ್ನ ಪ್ರಕಾಶ ದೊರೆಯಿತೆಂದು ಧನ್ಯರಾಗಿದ್ದಾರೆ. ತಮವೆಂಬ ಸಂಸಾರ ಬಂಧನ ಹರಿದುಕೊಂಡಿದ್ದಾರೆ. ಅಂತಃಕರಣ ಶುದ್ಧಿಯ ಮಾಡಿಕೊಂಡಿದ್ದಾರೆ. ಲಿಂಗ ಪ್ರಸಾದದ ಪ್ರೇಮಿಯಾಗಿ, ನಿರ್ಮಲ ಚಿತ್ತರಾಗಿದ್ದಾರೆ. ಮರುಳ ಶಂಕರ ದೇವರು ಹೊರಗೆ ಸಾಮಾನ್ಯರಂತೆ ಕಂಡರೂ, ಒಳಗೆ ಅಸಮಾನ್ಯ ಚೈತನ್ಯ ಶಕ್ತಿಯನ್ನು ಪಡೆದು, ಜಡತ್ವವನ್ನು ಪರಮ ಪ್ರಸಾದದಿಂದ, ಕಳೆದುಕೊಂಡ ಮಹಾಚೇತನ ಮೂರ್ತಿ.

ಬೆಳಗಿನೊಳಗೆ ಮಹಾ ಬೆಳಗಾಗಿ ನಿಂತಿರುವ ಮರುಳ ಶಂಕರ ದೇವರ ನಿಲವನ್ನು ಮತ್ತೆ ಸಂಗನಬಸವಣ್ಣನವರಿಗೆ, ಬೆಳಗನರಿಯದ ಜ್ಯೋತಿಯ ಕಂಡೆಯಾ ಎಂದು ಸಂಬೋಧಿಸುತ್ತ ಈ ತೆರನಾಗಿ ಶ್ರೀ ಪ್ರಭುದೇವರು ನುಡಿಯುತ್ತಾರೆ.

ಕಂಡೆಯಾ ಬಸವಣ್ಣ?
ಕಣ್ಣೊಳಗಣ ಬೊಂಬೆಯ ಸೂತ್ರದ ಇರುವಿನಂತೆ
ಕುಂದಣದೊಳಡಗಿ ತೋರುವ ಮೃದು ಛಾಯದಂತೆ,
ನವನೀತದೊಳಡಗಿಹ ಸಾರದ ಸವಿಯಂತೆ,
ಅಂಗವಿಲ್ಲದ ಕುರುಹು; ಭಾವವಿಲ್ಲದ ಬಯಲು;
ಬೆಳಗನರಿಯದ ಜ್ಯೋತಿಯ ಕಂಡೆಯಾ,
ಗುಹೇಶ್ವರ ಲಿಂಗದಲ್ಲಿ ಮರುಳ ಶಂಕರ ದೇವರ ಸಂಗನಬಸವಣ್ಣಾ?

ಇಲ್ಲಿ ಮರುಳ ಶಂಕರ ದೇವರ ಆತ್ಮಶಕ್ತಿಯನ್ನು ಸೂಕ್ಷ್ಮ ದೃಷ್ಟಿಯಿಂದ

ನೋಡಿ ಪರಿಪರಿಯಾಗಿ ಬಣ್ಣಿಸಿದ್ದಾರೆ. ಬೆಣ್ಣೆಯೊಳಗಿನ ರುಚಿ ಕಣ್ಣಿಗೆ ಕಾಣ ಬಲ್ಲುದೆ? ಹಾಗೆಯೆ ಮರುಳ ಶಂಕರ ದೇವರ ಇರವು "ಈ ಹಿಂಗೆಂದು ಪ್ರಭು ದೇವರು ಬಸವರಾಜ ದೇವರಿಗೆ ಕೊಂಡಾಡಿ ಹೇಳುತ್ತಿರಲು ಆ ಮರುಳ ಶಂಕರ ದೇವರು ನಿರಹಂಭಾವದಿಂದ ಬಿನ್ನವಿಸಿದ ಪ್ರಸ್ತಾವದ ವಚನ.

"ಸಿಂಬೆಗೆ ರಂಭೆತನ ಉಂಟೆ?
ಸಂಭ್ರಮವಳಿದುದಕ್ಕೆ ನವರಸದಂಗದ ಕಳೆ ಉಂಟೆ?
ಡಿಂಗರಿಗಂಗೆ ಸಮವೆಂಬ ಸಂಭ್ರಮವುಂಟೆ?
ಪರುಷದ ದರೆಯಿಂದ ಪಾಷಾಣದ ಕುಲಹರಿವಂತೆ ನೀ ಬಂದೆಯಲ್ಲಾ!
ಶುದ್ಧ ಸಿದ್ಧ ಪ್ರಸಿದ್ಧ ಪ್ರಭುವೆ,
ಶಾಂತ ಮಲ್ಲಿಕಾರ್ಜುನದೇವಯ್ಯಾ,
ಪ್ರಭುದೇವರ ಕಾರುಣ್ಯದಿಂದ ಬದುಕಿದೆ!"

ನೀವು ಪರುಷ, ನಾನು ಪಾಷಾಣ. ನಿಮ್ಮ ದರ್ಶನ ಮಾತ್ರದಿಂದ ಪುನೀತ ನಾಗಿದ್ದೇನೆ. ಸೂರ್ಯನ ಮುಂದೆ ಕೈದೀವಿಗೆ ಏಷ್ಟರದು? ನಿಮ್ಮ ಅಗಾಧ ಶಕ್ತಿಯ ಮುಂದೆ, ನನ್ನದೆಷ್ಟು? ನೀವು ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವು ನಾನು ದಾಸ. ನಿಮ್ಮಾಜ್ಞೆಯಂತೆ ನಡೆಯುತಕ್ಕವ. ನಿಮ್ಮ ಉದಾತ್ತತೆ, ದಯೆ, ನನ್ನನ್ನು ಉದ್ಧರಿಸಿದೆ. ಬೆಳಕಿನ ದಾರಿಯತ್ತ ಕರೆದೊಯ್ದಿದೆ. "ಡಿಂಗರಿಗಂಗೆ ಸಮವೆಂಬ ಸಂಭ್ರಮವುಂಟೆ? ಪ್ರಭುದೇವಾ? ನಾನು ಬಡವ ನೀನು ಬಲ್ಲಿದವ ನಿನ್ನ ಜ್ಯೋತಿಯ ಮುಂದೆ ನನ್ನದೇನು ಗುರುವ? ನಿಮ್ಮ ಕಾರುಣ್ಯ ಕಿರಣವೆ ನನ್ನ ಆತ್ಮಕ್ಕೆ ಬೆಳಕು. ನಿಮ್ಮನುಗ್ರಹವೆ ನನಗೆ ಆಸರ ಕಂಭ, ನಾನು ಭಿಕ್ಷುಕ, ನೀನು ನೀಡುವವ ಎಂದು ಮುಂತಾಗಿ ಹೇಳುವ ಮರುಳ ಶಂಕರ ದೇವರ ವಿನಯಭರಿತ ಕರುಳ ನುಡಿಯನ್ನು ಅಲ್ಲಿಯೆ ನಿಂತಿದ್ದ ಬಸವಣ್ಣನವರು ಕೇಳಿ, ಆಶ್ಚರ್ಯಭರಿತರಾಗಿ, ಆನಂದ ಸಾಗರ ದಲ್ಲಿ ತೇಲಿ, ಇಂತುಸುರುತ್ತಾರೆ.

"ಅಯ್ಯಾ ನಿಮ್ಮ ಶರಣರು ಬಂದೆನ್ನ ಅಂಗದೊಳಗೆ
ರಕ್ಷಿಸಿಹನೆಂದಿರಲು, ನಾನು ತೆರಹುಮರಹಾಗಿದ್ದು ಕೆಟ್ಟೆನಯ್ಯಾ!
ನಾನು ಕೆಟ್ಟಕೇಡಿಂಗೆ ಕಡೆಯಿಲ್ಲವಯ್ಯಾ!"......
ನಿಮ್ಮ ಶರಣರ ಇರವನರಿಯದೆ ಭವಮಾಲಿಯಾದೆನಯ್ಯಾ....
ನಡುದೊರೆಯೊಳಗೆ ಹರಿಗೋಲನಿಳಿದಂತಾಯಿತೆನ್ನ ಭಕ್ತಿ!
ಕೂಡಲ ಸಂಗಮದೇವಾ ಮರುಳ ಶಂಕರ ದೇವರ ಕೃಪೆ
ಎನಗಿನ್ನೆಂದಪ್ಪುದು ಹೇಳಾ ಪ್ರಭುವೆ?

ಮಹಾತ್ಮಾ ಬಸವಣ್ಣನವರ ಹೃದಯವೆಂದರೆ ತಾಯಿಯ ಹೃದಯವಿದ್ದಂತೆ. "ಇಷ್ಟು ಕಾಲದ ವರೆಗೆ ಈ ಮಹಾಮನೆಯಲ್ಲಿ ಇಂತಹ ಜ್ಯೋತಿಯಿದ್ದರೂ, ನಾನು

ತಿಳಿದುಕೊಳ್ಳಲಿಲ್ಲವಲ್ಲಾ" ಎಂದು ಉಸುರ್ಗರೆಯುತ್ತಾರೆ, ಮರುಗುತ್ತಾರೆ. "ನಾನು ಮೂರೆರೊಳಗೆ ಹರುಗೋಲಸಿದಂತಾಯಿತ್ತು ಭಕ್ತಿ" ಎಂದು ಪಶ್ಚಾತ್ತಾಪ ಪಡುತ್ತಾರೆ.

ಮಹಾತ್ಮಾ ಬಸವಣ್ಣನವರ ಭಕ್ತಿ ನಿಷ್ಕಪಟ ಭಕ್ತಿ, ಪ್ರೇಮರಸ ಪರಿಪ್ಲಾವಿತ ಭಕ್ತಿ, ದಯಾಭರಿತ ಭಕ್ತಿ, ಹೃದಯ ತುಂಬಿದ ಭಕ್ತಿ. ಅವರ ಭಕ್ತಿಯು ಮತ್ತಾ ಇನ್ನಾರದೂ ಸಾಟಿಯಾಗದು. "ಶಿವನಿಗಿಂತ ಹಿರಿಯರಿಲ್ಲ ಶಿವಭಕ್ತರಿಗಿಂತ ಹಿರಿಯರಿಲ್ಲ" ಎನ್ನುವ ಭಕ್ತಭಂಡಾರಿ. "ಬಸವನ ಮಾತೆ ಮಾತು, ಬಸವನ ಭಕ್ತಿಯೆ ಭಕ್ತಿ" ಎನ್ನುವ ಹರಿಹರನ ಉಕ್ತಿಯುಕ್ತವಾದುದು.

ಇಲ್ಲಿ ಮರುಳ ಶಂಕರ ದೇವರ ಅಗಾಧ ಮಹಿಮೆಯನ್ನು ಕಂಡು, "ಮರುಳ ಶಂಕರ ದೇವರ ಕೃಪೆ ಇನ್ನೆಂದಿಗಪ್ಪುದೋ? ಎಂದು ಬಸವಣ್ಣನವರು ಪ್ರಭುದೇವರನ್ನು ಕೇಳುತ್ತಿದ್ದಾರೆ. ಮಹಾತ್ಮಾ ಬಸವಣ್ಣನವರು ಶಿವಶರಣರ ಮೇಲಿಟ್ಟಿರುವ ಭಕ್ತಿ ವಿಶ್ವಾಸ ಎಷ್ಟು ಎತ್ತರದ್ದು ಎಂಬುದು ಇಲ್ಲಿ ಅರ್ಥವಾಗುತ್ತದೆ. ಕರುಳು ಕರಗಿ ಕೂಗಿದ್ದಾರೆ, ಹೃದಯ ತುಂಬಿ ಹಾಡಿದ್ದಾರೆ. ಹೃದಯವಂತಿಕೆಯು ಮಾನವತೆಯ ಲಕ್ಷಣ. ಮಾನವತಾವಾದಿ ಬಸವಣ್ಣನವರು ಮರುಳ ಶಂಕರ ದೇವರ ಕೃಪೆಯೆ ಪ್ರಸಾದ. ಆ ಪ್ರಸಾದವೆ ಶಿವನ ಬೆಳಕು ಭಾವಶುದ್ಧಿಗ ಅಂಬು ಆಚಾರಗಳೆ ಹೆದ್ದಾರಿ."

ಮರುಳ ಶಂಕರ ದೇವರ ವ್ಯಕ್ತಿತ್ವವನ್ನು ಹಲವು ರೀತಿಯಿಂದ ವರ್ಣಿಸುತ್ತ, ನೋವು ನಲಿವುಗಳಲ್ಲಿ ತೊಳಲಾಡುತ್ತಿರುವ ಬಸವಣ್ಣನವರನ್ನು ಕಂಡು ಅಲ್ಲಮ ಪ್ರಭುದೇವರು—

"ಹೂಮಿಡಿಯಾಗಿರ್ದು ಒತ್ತಿ ಹಣ್ಣ ಮಾಡಿಹೆನೆಂದಡೆ ಹಣ್ಣಾಗಬಲ್ಲುದೆ?
ಪರಿಮಳವಿಲ್ಲದ ನನೆಯನರಳಿಸಿ ಮುಡಿದಿಹೆನೆಂದಡೆ ಸೌರಭವುಂಟೆ?
ಶಿವಶರಣರ ನಿಲವು ಕಾಂಬಕಾಲಕೆ ಕಾಣಬಹುದಲ್ಲದೆ,
ಎಲ್ಲಾ ಹೊತ್ತು ಕಾಣಬಹುದೆ?
ಆಹ ಕಾಲಕ್ಕೆ ತಾನೆಯಪ್ಪುದು!
ಗುಹೇಶ್ವರನ ಶರಣರ ನಿಲವ ಕಂಡ ಬಳಿಕ
ಮರಹು ಬೆಳಗ ಕಂಡು ಕತ್ತಲೆಯಂತೆ ನೋಡ ನೋಡ
ಹರಿವುದು ನೋಡಾ ಸಂಗನಬಸವಣ್ಣಾ"

ಈ ಪರಿಯಾಗಿ ಸಂತೈಸುತ್ತಾರೆ. ಗುಹೇಶ್ವರನ ಶರಣರ ನಿಲವ ಕಂಡ ಕತ್ತಲೆಯಂತೆ ಉಪಮೆಯೊಡನೆ ತಿಳಿ ಹೇಳುತ್ತಾರೆ. ಪ್ರಸಾದಲಿಂಗದ ಶರಣರನ್ನು ಕಂಡ ಬಳಿಕ ಮತ್ತೆಲ್ಲಿ ಮರಹು? ಅಲ್ಲಿ ಅರಿವಿನ ಬೆಳಕು ಕೂಡಿಕೊಂಡು ಶೋಭಿಸುತ್ತಿರುವಾಗ

ಮತ್ತೆಲ್ಲಿ ಕತ್ತಲೆ? ನಿನ್ನ ನೋವು ಅರ್ಥವಾಗಿದೆ. ನಿನ್ನ ಆತ್ಮವಿಕಾಸದ ಕುರುಹು ಇದೆಂದು ಬಣ್ಣಿಸುತ್ತಾರೆ.

ಈ ರೀತಿ ಪ್ರಭುದೇವರು ನಿರೂಪಿಸಿದ ನಂತರ ಮತ್ತೆ ಇದಕ್ಕೆ ಬಸವರಾಜ ದೇವರು ಮರುಳ ಶಂಕರ ದೇವರ ಶ್ರೀಪಾದಕ್ಕೆ ಶರಣೆಂಬ ಪ್ರಸ್ತಾವದ ವಚನ.

"ಮುಗಿಲ ಮರೆಯ ಮಿಂಚಿನಂತೆ, ಒಡಲ ಮರೆಯ ಆತ್ಮನಂತೆ.
ನೆಲದ ಮರೆಯ ನಿಧಾನದಂತೆ ಇಪ್ಪ ನಿಮ್ಮ ನಿಲವನಾರು ಬಲ್ಲರು?
ದೇವಾ, ನಿಮ್ಮ ನಿಲವ ಹಲಕಾಲದಿಂದ ಕಂಡುಕಂಡು ಕಡೆಗಾಣಿಸಿ ಮರೆದು
ಮತಿಗೆಟ್ಟು ಮರುಳಾದೆನು. ಎನ್ನ ತಪ್ಪಿಂಗೆ ಕಡೆಯಿಲ್ಲ ಕಾಣಾ!
ತ್ರಾಹಿ ತ್ರಾಹಿ ಕಾಯಯ್ಯ ಕೂಡಲ ಸಂಗಮದೇವಾ.

ಎಂದು ದುಃಖಿಸುತ್ತಾರೆ. ಒಮ್ಮೆ ಆನಂದ, ಮತ್ತೊಮ್ಮೆ ದುಃಖ ಹೀಗಾಗಿ ಅವರ ಮನಸ್ಸು ಕಸಿವಿಸಿಯಾಗುತ್ತಲಿದೆ. ಭಾವಜೀವಿ ಹಾಗೂ ವಿಶಿಷ್ಟ ವ್ಯಕ್ತಿತ್ವವುಳ್ಳ ಮಹಾತ್ಮಾ ಬಸವಣ್ಣನವರ ಮಹಾತ್ಮೆ ಎಷ್ಟು ಉದಾತ್ತವಾಗಿದೆ. ಕರುಣೆಯಿಂದ ಕೂಡಿದೆ ಎಂಬುದು ಒಳಗಣ್ಣಿನಿಂದ ಅರಿತುಕೊಂಡರೆ ಅರಿವಾಗುತ್ತದೆ. ತಪ್ಪೊಪ್ಪಿ ಕೊಳ್ಳುವ ಬಗೆಯನ್ನು ಉಪಮೆಯೊಡನೆ ವರ್ಣಿಸಿದ್ದುದನ್ನು ನೋಡಿದರೆ ಅವರ ಘನತೆ ಎದ್ದು ತೋರುತ್ತದೆ. "ಮುಗಿಲಮರೆಯ ಮಿಂಚಿನಂತೆ, ಒಡಲ ಮರೆಯ ಆತ್ಮನಂತೆ; ನೆಲದ ಮರೆಯ ನಿಧಾನದಂತೆ ಇಪ್ಪ ನಿಮ್ಮನಿಲವನಾರು ಬಲ್ಲರು? ಎಂದು ಪ್ರಶ್ನಿಸಿ "ಎನ್ನತಪ್ಪಿಂಗೆ ಕಡೆಯಿಲ್ಲ ಕಾಣಾ" ಎನ್ನುತ್ತಾರೆ. ದೊಡ್ಡವರಾದವರ ಗುಣ ಎಷ್ಟು ಉನ್ನತವಾದುದು, ಹೃದಯಂಗಮವಾದುದು. ಇಲ್ಲಿ ನಿರುಕಿಸಿದರೆ ಗೊತ್ತಾಗುತ್ತದೆ. ಆನೆ ಆ ದಾರಿ ಹೋದರೆ ಆಡು ಆ ದಾರಿಯತ್ತ ಹೋಗಬಲ್ಲುದೆ? ಬೆಳಕಿನಿರವು ಬೆಳಕಿನವರಿಗೆ ಗೊತ್ತಿಲ್ಲವೆ? ಹೃದಯವಂತಿಕೆಯ ಮಾನವತೆ ತುಂಬಿದಾಗ ಅಲ್ಲಿ ತಪ್ಪಿರದು ಅದೆಲ್ಲವೂ ಒಪ್ಪ ಹಾಕಿದ ಚಿನ್ನವಲ್ಲವೆ? ಮಹಾತ್ಮಾ ಬಸವಣ್ಣನವರ ವ್ಯಕ್ತಿತ್ವ ಅಗಾಧವಾದುದು, ಉಪಮಾತೀತವಾದುದು ಸಣ್ಣವರನ್ನು ಮೇಲಕ್ಕೆತ್ತುವ ಹಿರಿದಾದ ಗುಣ, ಶರಣ ಸಂಸ್ಕೃತಿ, ಮಹಾತ್ಮಾ ಬಸವಣ್ಣನವರಲ್ಲಿ ತಾನೆ ತಾನಾಗಿ ಮೂಡಿ ಬಂದಿದೆ. ಅದು ನಿಂತಿದೆ. ಅದು ಅವರ ವೈಶಿಷ್ಟ್ಯ.

"ನಿಮ್ಮ ಶರಣರ ನಿಲವನರಿಯೆನೆಂದು ಬಸವರಾಜ ದೇವರು ನೊಂದು ಪ್ರಭುದೇವರಿಗೆ ಬಿನ್ನೈಸುತ್ತಿರಲು, ಅಲ್ಲಿ ಮರುಳ ಶಂಕರ ದೇವರು ಬಸವರಾಜ ದೇವರು ಕೊಂಡಾಡಿದ ವಚನ.

"ಏಕಬೀಜ ಸಮಂ ವೃಕ್ಷಂ ಏಕಲಿಂಗಂತು ಪೂಜನಂ
ಏಕ ಧ್ಯಾನ ಸಮಂ ಚಿತ್ತಂ ಊರ್ಧ್ವಲಿಂಗಂತು ಪೂಜನಂ
ಏಕಾಕ್ಷರಂ ತು ಪೂಜಾನಾಂ ಮಹಾಲಿಂಗಂತು ದರ್ಶನಂ ಇಂತೆಂಬುದಾಗಿ

ಇದು ಕಾರಣ ನಿಮ್ಮ ಶರಣ ಬಸವಣ್ಣನ
ಲೋಕದ ಮರ್ತ್ಯಜನೆಂದಡೆ ಅಘೋರ ನರಕ ಕಾಣಾ!
ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ,
ಶಾಂತ ಮಲ್ಲಿಕಾರ್ಜುನದೇವಯ್ಯಾ
ನಿಮ್ಮ ಶರಣ ಬಸವಣ್ಣನ ನಿಲವಿನ ಪರಿಯ ನೀವೇ ಬಲ್ಲಿರಲ್ಲದೆ ನಾನೆತ್ತ ಬಲ್ಲೆನಯ್ಯ?
ನಿಮ್ಮ ಧರ್ಮ ನಿಮ್ಮ ಧರ್ಮ.

ಬಸವಣ್ಣನವರ ಪರಿಯೆ ಬೇರೆ ನನ್ನ ಪರಿಯೆ ಬೇರೆ. ಬಸವ ಮಹಾನುಭಾವನು ಮಹಾಶರಣ. ಶುದ್ಧ ಸಿದ್ಧ ಪ್ರಸಿದ್ಧ ಪ್ರಸಾದಗಳಿಂದ ಪರಿಶುದ್ಧಾಂಗ. ಸಕಲರಿಗೆ ಲೇಸನೆಬಯಸುವ ದಿವ್ಯ ವಿಭೂತಿ. ಆತನ ಮಹಿಮೆಯಿಂದ, ಮಾರ್ಗದರ್ಶನದಿಂದ, ಎನಿತೋ ಶರಣರು ಜಾಗ್ರತರಾಗಿದ್ದಾರೆ. ತಮ್ಮ ಜೀವನವನ್ನು ಸಾರ್ಥಕಗೊಳಿಸಿಕೊಂಡಿದ್ದಾರೆ. ಬಸವಣ್ಣನವರು ಅರ್ಥ ಪ್ರಾಣಾಭಿಮಾನದಲ್ಲಿ ಲೋಭದ ಲೇಪವಿಲ್ಲದ ಪವಿತ್ರಮೂರ್ತಿ. ಬೀಜವೊಂದಾಗಿರುವಾಗ ತರುಗಳಲ್ಲಿ ಭಿನ್ನವುಂಟೆ? ಲಿಂಗವೊಂದಾಗಿದ್ದಾಗ ಅಂಗಗಳು ಭಿನ್ನಗಳೆನ್ನಬಹುದೆ? ಮಹಾಲಿಂಗ ದರ್ಶನವಾದ ಬಳಿಕ, "ಶರಣ ಬಸವಣ್ಣನವರಿಗೆ ಲೋಕದ ಮರ್ತ್ಯನೆಂದರೆ ಅಘೋರ ನರಕವಲ್ಲದೆ" ಮತ್ತೇನು? ಆತನ ಕರ್ತೃತ್ವ ಶಕ್ತಿಯೇ ಬೇರೆ, ಆತನ ಭಕ್ತಿಯೇ ಬೇರೆ. ಆತನದು ಕುರುಡು ಭಕ್ತಿಯಲ್ಲ, ಆತನು ವೀರಶೈವ ನಿರ್ಣಯ ಪರಮಾವತಾರ. ಶಾಂತ ಮಲ್ಲಿಕಾರ್ಜುನದೇವನ ಶರಣನಾದ ಮಹಾಮಹಿಮ. ಶರಣನಾದ ಬಸವಣ್ಣನ ನಿಲವಿನ ಪರಿಯನ್ನು ನಾನೆಂತರಿಯಲಿ? ಎಂದುದಾಗಿ ಹೃದಯ ತೆರೆದು ಮರುಳ ಶಂಕರದೇವರು ಬಸವರಾಜ ದೇವರ ಕೊಂಡಾಡುತ್ತಿರಲು, ಮತ್ತಂ ಬಸವರಾಜ ದೇವರು ಮರುಳ ಶಂಕರ ದೇವರ ಘನವನು ಚನ್ನಬಸವರಾಜ ದೇವರಿಗೆ ನುಡಿದು ತೋರುವ ಹಾಂಗೆ ಕೊಂಡಾಡಿದ ಪ್ರಸ್ತಾವದ ವಚನ.

"ಕಂಗಳೊಳಗೆ ಕರುಳಿಲ್ಲ; ಕಾಯದೊಳಗೆ ಮಾಯವಿಲ್ಲ,
ಮನದೊಳಗೆ ಅಹಂಕಾರವಿಲ್ಲ;
ದೇಹವೆಂದರಿಯ, ನಿರ್ದೇಹವೆಂದರಿಯ;
ಜಂತ್ರದ ಸೂತ್ರದಂತಿಪ್ಪ ನಿಬ್ಬೆರಗಿನ ಮೂರ್ತಿಯ ನೋಡಾ!
ಲಿಂಗಜಂಗಮದ ಒಕ್ಕಮಿಕ್ಕ ಪ್ರಸಾದವಕೊಂಡು ಮಿಕ್ಕು ಮೀರಿನಿಂದ
ಮಹಾಪ್ರಸಾದಿಯ ನೋಡಾ!
ತನ್ನನರಿದಿಹರೆಂದು ಜಗದ ಕಣ್ಣಿಗೆ ಮಾಯದ ಮಂಜಕವಿಸಿ,
ನಿತ್ಯ ನಿಜಪದದಲ್ಲಿ ತದುಗತನಾದನು.
ಕೂಡಲ ಸಂಗಮ ದೇವರಲ್ಲಿ ಮರುಳ ಶಂಕರ ದೇವರ
ನಿಲವ ನೋಡಾ ಚನ್ನಬಸವಣ್ಣಾ!

ಮರುಳ ಶಂಕರ ದೇವರ ಕಾಯುವು ಮಾಯುವಿಲ್ಲದ ಲಿಂಗ ಕಾಯ. ಲೋಕಕ್ಕೆ ಮರುಳಾದರೆ ಆತ್ಮಕ್ಕೆ ಅರಿವಿನ ಕರುಳು. ಜಡಕ್ಕೆ ಸಿಲುಕದ ವ್ಯಕ್ತಿತ್ವ ಅವರದು "ಜಂತ್ರದ ಸೂತ್ರದಂತಿಪ್ಪ ನಿಬ್ಬೆರಗಿನ ಮೂರ್ತಿಯಾಗಿದ್ದು, ಮಹಾಪ್ರಸಾದಿ ಯಾದ ಪ್ರಸನ್ನ ಪರಿಣಾಮಿ ಚನ್ನಬಸವಣ್ಣನವರ ಕಡೆಗೆ ಮುಖ ಮಾಡಿ ಬಸವಣ್ಣ ನವರು ಬಣ್ಣಿಸಿದ ನಂತರ, ಮತ್ತೆ ಮರುಳ ಶಂಕರ ದೇವರು ಚನ್ನಬಸವಣ್ಣ ನವರನ್ನು ಕುರಿತು ಈ ರೀತಿ ಸ್ತುತಿಸುತ್ತಾರೆ.

"ಭಕ್ತ ಮಾಹೇಶ್ವರ ಪ್ರಸಾದಿ ಪ್ರಾಣಲಿಂಗಿ ಶರಣ ಐಕ್ಯ,
ಇಂತೀ ಷಟ್‌ಸ್ಥಲ ಚಕ್ರವರ್ತಿಯಯ್ಯಾ ಚನ್ನಬಸವಣ್ಣನು!
ಷಡಾಧಾರಂ ಸರ್ವಭೇದಂ ಸರ್ವಾಚಾರಂತು ಲಿಂಗಯೋಃ
ಷಡೂರ್ಮಿಂ ತ್ರಿವಿಧಂಚೈಕಂ ತಸ್ಮಾಲ್ಲಿಂಗಂ ಪ್ರಪೂಜನಂ!
ಇಂತೆಂದುದಾಗಿ, ಇಂತಪ್ಪ ಲಿಂಗಾಂಗಿಯಯ್ಯಾ ಚನ್ನಬಸವಣ್ಣನು,
ಆಚಾರವೆ ಕಾಯ, ಆಚಾರವೆ ಪ್ರಾಣ;
ಆಚಾರವೆ ಲಿಂಗ, ಆಚಾರವೆ ಸಂಗ–ಇಂತಪ್ಪ
ಆಚಾರ ಸನ್ನಿಹಿತನಯ್ಯಾ ನಮ್ಮ ಚನ್ನಬಸವಣ್ಣನು
ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ,
ಶಾಂತ ಮಲ್ಲಿಕಾರ್ಜುನದೇವಯ್ಯಾ
ನಿಮ್ಮ ಚನ್ನಬಸವಣ್ಣನು ಸರ್ವಾಚಾರ ಸಂಪನ್ನನು,
ಇಂತಪ್ಪ ಚನ್ನಬಸವಣ್ಣನ ನಿಲವ ನೀವೇ ಬಲ್ಲಿರಲ್ಲದೆ
ನಾನೆತ್ತ ಬಲ್ಲೆನಯ್ಯಾ? ನಿಮ್ಮ ಧರ್ಮ! ನಿಮ್ಮ ಧರ್ಮ!

ಷಟ್‌ಸ್ಥಲ ಚಕ್ರವರ್ತಿ ಚನ್ನಬಸವಣ್ಣನವರ ಆತ್ಮಶಕ್ತಿ ಅಗಾಧವಾದುದು. ವೀರಶೈವ ಸಿದ್ಧಾಂತವನ್ನು ಸಶಾಸ್ತ್ರೀಯವಾಗಿ ತಾತ್ವಿಕ ದೃಷ್ಟಿಯಿಂದ ನಿರೂಪಿಸ ಬಲ್ಲ ಮಹಾವ್ಯಕ್ತಿ. ಅಪರಳಜ್ಞಾನಿ ಚನ್ನಬಸವಣ್ಣನವರು ಸರ್ವ ಸಂದೇಹವ ಕಳೆದಿಪ್ಪನಾಗಿ, ಸರ್ವಸಂಸಾರ ವಿರಹಿತನಾಗಿ ಮೆರೆಯುವ ಚಿನ್ಮಯಮೂರ್ತಿ ವಯಸ್ಸಿನಿಂದ ಕಿರಿಯರಾಗಿದ್ದರೂ "ಅರಿವಿಂಗೆ ಹಿರಿದು ಕಿರಿದುಂಟೆ? ಮಾಯೆಗೆ ಹೊರಗಾದ ನಿರ್ಮಾಯ ರೂಪು ಚನ್ನಬಸವಣ್ಣ ಆಚಾರವಿರದೆ ವಿಚಾರಹೊಳೆಯದು. ಜ್ಞಾನ ಕ್ರಿಯೆಗಳು ಸಮರಸವಾಗಿದ್ದರೆ ಸರ್ವಾಚಾರ ಸಂಪನ್ನನಾಗಲು ಸಾಧ್ಯ. ಅಂತೆಯೆ ಚನ್ನಬಸವಣ್ಣನವರ ಕಾಯ ಪ್ರಾಣಗಳಲ್ಲಿ ಭಾವಜೀವಗಳಲ್ಲಿ ಆಚಾರ ತುಂಬಿ ತುಳುಕದೆ ಆಚಾರವೇ ಚೇತನ, ಆಚಾರವೆ ಅರಿವು, ಆಚಾರದಿಂದಲೆ ಗುರು ಲಿಂಗ, ಜಂಗಮ ಪಾದೋದಕ, ಪ್ರಸಾದಗಳಿಗೆ ಅರ್ಹತೆ ಬರುತ್ತದೆ.

ಎಂದು ಮುಂತಾಗಿ ದಿವ್ಯಜ್ಞಾನಿ ಚನ್ನಬಸವಣ್ಣನವರ ಮಹತಿಯನ್ನು ಹೃದಯಂಗಮವಾಗಿ ಮರುಳ ಶಂಕರ ದೇವರು ಚಿತ್ರಿಸಿದ ನಂತರ, ಮತ್ತೆ ಚನ್ನ

ಬಸವಣ್ಣನವರು, ಪ್ರಭುದೇವರನ್ನು ಹಾಗೂ ಬಸವಣ್ಣನವರನ್ನು ಕುರಿತು ಮರುಳ ಶಂಕರ ದೇವರ ನಿಲವನ್ನು ಬಣ್ಣಿಸಿದ ವಚನ.

“ತುದಿ ಮೊದಲಿಲ್ಲದ ಘನವ ನೋಡಾ!
ಒಳ ಹೊರಗಿಲ್ಲದವನ ನೋಡಾ!
ಗುರುಲಿಂಗ ಜಂಗಮ ತಾನೆಯಾಗಿ.
ಮತ್ತೆ ತಾನೆಂಬುದೇನೂ ಇಲ್ಲದೆ ಇಪ್ಪ ಪರಿಯ ನೋಡಾ!
ತನ್ನ ತಾ ನಿರ್ದೇಶಮಂ ಮಾಡಿಕೊಂಡು.
ನಿಜಪದವನೆಯ್ದಿಪ್ಪ ಪರಿಯ ನೋಡಾ!
ಕೂಡಲ ಚನ್ನ ಸಂಗಮದೇವರಲ್ಲಿ ಪರಮ ಪ್ರಸಾದಿಯಾಗಿಪ್ಪ
ಮರುಳ ಶಂಕರ ದೇವರ ನೋಡಾ ಪ್ರಭುವೆ!
ಮತ್ತಂ,
“ಸತ್ಯ ಶರಣರ ಅಂಗಳದೊಳಗೆ ಬಿದ್ದ ಅಗುಳ ನೆತ್ತಿಕೊಂಡಿ
ಪ್ಪೆನೆಂದು, ನಿಮ್ಮ ಪ್ರಸಾದದ ತುಳಿಯೊಳಗೆ
ಹನ್ನೆರಡು ವರುಷ ಪರಿಯಂತರ ಪ್ರಸಾದಿಯಾಗಿರ್ಪ
ಕೂಡಲ ಚನ್ನ ಸಂಗಮ ದೇವರಲ್ಲಿ ಮರುಳ ದೇವರ
ಶ್ರೀಪಾದದ ಘನವನು ನಿಮ್ಮಿಂದ ಕಂಡು ಬದುಕಿದೆನು ಕಾಣಾ
ಸಂಗನ ಬಸವಣ್ಣಾ”

ಶ್ರೀ ಮರುಳ ಶಂಕರ ದೇವರು ಪರಮ ಪ್ರಸಾದಿ ತುದಿ ಮೊದಲಿಲ್ಲದ ಘನ. ಕಾಲಕರ್ಮ ಮಾಯೆಗಳನ್ನು ಗೆದ್ದಾತ ಮರುಳ ಶಂಕರ ದೇವರ ಅದ್ಭುತ ಸಾಧನೆ ಅನುಪಮವಾದುದು ಅಂಗದ ಕಳವಳ, ಮನದ ಸಂಚಲ, ಭಾವದ ಭ್ರಾಂತು, ಅರುಹಿನ ಮರಹು, ತಾಪತ್ರಯಗಳ ಸುಳಿ ಬುಳಿ, ಅಷ್ಟಮದಂಗಳ ಘಟ್ಟಿ, ಷಡೂರ್ಮಿಗಳ ವಿಕಾರ, ಇವೆಲ್ಲವುಗಳ ಸೋಂಕು ಸಿಲುಕದಂತೆ ಜ್ಞಾನ ಸಮತೆಯಿಂದ ಕೂಡಿದ ಸಮಾಧಾನಿ.

ಸಪ್ತ ವ್ಯಸನಂಗಳನ್ನು ಕಳೆದು ಲಿಂಗ ವ್ಯಸನಿಯಾಗಿ ನಿತ್ಯ ತತ್ವದ ಇರವ ನರಿದು, ಸತ್ಯ ಶರಣರ ಅಂಗಳದೊಳಗೆ ಬಿದ್ದ ಅಗುಳಗಳನ್ನು ಪ್ರಸಾದ ಭಾವನೆಯಿಂದ ಹನ್ನೆರಡು ವರ್ಷಗಳ ವರೆಗೆ ಸೇವಿಸಿ, ಇದ್ದೂ ಇಲ್ಲದಂತವನಾಗಿದ್ದು, ನಿತ್ಯ ನಿರಂಜನ ಪರಂಜ್ಯೋತಿ ಸ್ವರೂಪನಾಗಿ, ಮೂರು ಅವಸ್ಥೆಗಳನ್ನು ಮೀರಿದ ಮರುಳ ಶಂಕರ ದೇವರ ಮಹಿಮ ವರ್ಣನಾತೀತವಾದುದೆಂದು ಬಣ್ಣಿಸುತ್ತ, ನಿಮ್ಮೀರ್ವರ ಕೃಪೆಯಿಂದ ಇವರ ಘನವನು ಕಂಡು ಬದುಕಿದೆನೆಂದು ಸ್ತುತಿಸುತ್ತಿರಲು, ಅಲ್ಲಿಯೆ ಸುತ್ತುವರಿದ ಶಿವಶರಣರು ಒಬ್ಬೊಬ್ಬರಾಗಿ, ಮರುಳ ಶಂಕರ ದೇವರ ನಿಲವನು ತಮ್ಮ ತಮ್ಮ ಮತಿಗೆ ಹೊಳೆದಂತೆ ಕಾವ್ಯವಾಣಿಯೊಡನೆ ಕಲು ಕರಗುವಂತೆ ನುತಿಸುತ್ತಾರೆ.

ಅದು ಇಂತಿದೆ, "ಆದಿಯ ಮೂರ್ತಿಯಲ್ಲಿ, ಅನಾದಿ ಬಚ್ಚಬರಿಯ ಶೂನ್ಯನಲ್ಲ. ಅಂಗವಿದ್ದು ಅಂಗವಿಲ್ಲ.

ಸಂಗನ ಘನಪದದಲ್ಲಿ ವೇದ್ಯವಾದ
ಮರುಳ ಶಂಕರ ದೇವರ ನಿಲವ
ಪ್ರಭು ಬಸವಣ್ಣನಿಂದ ಕಂಡು ಬದುಕಿದೆನು ಕಾಣಾ
ಕಪಿಲಸಿದ್ಧ ಮಲ್ಲಿಕಾರ್ಜುನಾ!

ಅಂಗಕ್ಕಿರುವ ಗುಣಕರ್ಮಗಳನ್ನು ತೊರೆದು, ಸಂಗನ ಘನಪದದಲ್ಲಿ ವೇದ್ಯವಾದ ಮರುಳ ಶಂಕರ ದೇವರ ಬದುಕು ಭಂಗಾರದಂತಿಹುದೆಂದು ಶ್ರೀ ಸಿದ್ಧರಾಮ ದೇವರು ವರ್ಣಿಸಿದ್ದಾರೆ.

"ಯುಗ ಜುಗಂಗಳ ಅಳಿವುಳಿವನರಿಯದೆ,
ಹಗಲಿರುಳೆಂಬುವ ನೆನಹಿನಲ್ಲೂ ಅರಿಯದೆ,
ಲಿಂಗದಲ್ಲಿ ಪರವಶನಾಗಿರ್ದ ಪರಿಣಾಮಿಯ ನೇನೆಂದುಪಮಿಸುವೆನಯ್ಯ,
ಅಹಾ! ಎನ್ನ ಮುಕ್ತಿಯ ಮುಕುರದ ಇರವ ನೋಡಾ!
ಅಹಾ! ಎನ್ನ ಸತ್ಯದ ಸ್ವಾನುಭವದ ಕಳೆಯ ನೋಡಾ!
ಅಹಾ! ಅಷ್ಟಮದಂಗಳ ಹಂಗನುಳಿದು,
ನಿಷ್ಠೆ ನಿಬ್ಬೆರಗಾಗಿ ನಿಂದ ಚಿತ್‌ಸುಖಿಯ ನೋಡಾ!
ಬಸವಪ್ರಿಯ ಕೂಡಲ ಚೆನ್ನಸಂಗಮದೇವಯ್ಯಾ,
ಪರಮ ಪ್ರಸಾದಿ ಮರುಳ ಶಂಕರ ದೇವರ ನಿಲವ
ಪ್ರಭು, ಬಸವಣ್ಣನಿಂದ ಕಂಡು ಬದುಕಿದೆನು, ಬದುಕಿದೆನು.

ಈ ವಚನ ಷಡಪದಪ್ಪಣ್ಣನವರದು. ಮರುಳ ಶಂಕರ ದೇವರನ್ನು ಹೃದಯಾರೆ ಹಾಡಿದ್ದಾರೆ. ಸತ್ಯದ ಸ್ವಾನುಭವದ ಕಳೆ, ಮುಕ್ತಿಯ ಮುಕುಂದ ಇರವು ನಿಷ್ಠೆ ನಿಬ್ಬೆರಗಾಗಿನಿಂದ ಚಿತ್‌ಸುಖಿ; ಎಂದು ಸಂಬೋಧಿಸಿದ್ದಾರೆ.

"ಮೂರನೊಳಕೊಂಡ, ಆರು ಮೀರಿ ನಿಂದ ಘನವನೇನೆಂಬೆನಯ್ಯಾ?
ನುಡಿವಡೆ ವಾಚಾತೀತ, ನೋಡುವಡೆ ಕಂಗಳೆರಡೆಯ್ದುವಯ್ಯಾ!
ಮಹದ ಬೆಳಗೆ ತಾನಾಗಿನಿಂದ ಮರುಳ ಶಂಕರ ದೇವರ ನಿಲವ
ಬಸವಣ್ಣನಿಂದ ಕಂಡು ಬದುಕಿದೆನು
ಕಾಣಾ ಕಲಿದೇವರ ದೇವಾ!

ಮರುಳ ಶಂಕರ ದೇವರು, ಮಹದ ಬೆಳಗೆ ತಾನಾಗಿ ನಿಂದವರೆಂದು ಮಡಿವಾಳಯ್ಯನವರು ಪರಮ ಪರಿತೋಷರಾಗಿ ತೋರಿಸುತ್ತಾರೆ.

"ಆಕಾರವೆಂಬೆನೆ?–ನಿರಾಕಾರವಾಗಿದೆ
ನಿರಾಕಾರವೆಂಬೆನೆ?–ಅತ್ತತ್ತ ತೋರುತ್ತದೆ

ತನ್ನ ನಳಿದು ನಿಜ ಉಳಿದ ಮಹಾಲಿಂಗ ತ್ರಿಪುರಾಂತಕನ
ನಿಲವ ಕಂಡು ಒಳಕೊಂಡ ಮರುಳ ಶಂಕರ ದೇವರ ಮೂರ್ತಿಯು
ನಿನ್ನಿಂದ ಕಂಡು ಬದುಕಿದೆನು ಕಾಣಾ ಸಂಗನಬಸವಣ್ಣಾ!"

ಆಕಾರದಲ್ಲಿಯೂ ನಿರಾಕಾರತ್ವವನ್ನು ಮರುಳ ಶಂಕರ ದೇವರ ಅಪೂರ್ವ ಮೂರ್ತಿತ್ವದಲ್ಲಿ ಕಾಣಬಹುದೆಂದು ಕಿನ್ನರ ಬ್ರಹ್ಮಯ್ಯಗಳು ಇಲ್ಲಿ ಕೊಂಡಾಡುತ್ತಾರೆ. ಗುಣಗ್ರಾಹಿಯಾದ ಮಹಾತ್ಮಾ ಬಸವಣ್ಣನವರಿಗೆ ಮರುಳ ಶಂಕರ ದೇವರ ವ್ಯಕ್ತಿತ್ವವನ್ನು ಎನಿತು ಬಣ್ಣಿಸಿದರೂ ಸಮಾಧಾನವಾಗದು. ಅವರ ನಿಲವನ್ನು ಅರಿಯುತ್ತ ಹೋದಂತೆ ತೋರುತ್ತದೆ. ಯುಗ ಯುಗಗಳಲ್ಲಿಯೂ ಇಂತಪ್ಪ ನಿಲವನ್ನು ಕಾಣಲು ಅಸಾಧ್ಯವೆಂದು ಕಿನ್ನರಿ ಬ್ರಹ್ಮಯ್ಯನವರನ್ನು ಸಂಬೋಧಿಸಿ ತಿಳಿಸುತ್ತಾರೆ. ಅದೇ ತೆರನಾಗಿ ಷಟ್‌ಸ್ಥಲ ಚಕ್ರವರ್ತಿ ಚನ್ನಬಸವಣ್ಣನವರೂ ಸಹ ಮರುಳ ಶಂಕರ ದೇವರ ಅಂಗ ಪ್ರಸಾದ, ಮನಪ್ರಸಾದ, ಭಾವಪ್ರಸಾದ, ಇವೆಲ್ಲವುಗಳೂ ಅವರಲ್ಲಿ ಒಳಕೊಂಡು. ಮಂಗಳಾತ್ಮಕವಾಗಿ, ದೀಪ್ತಿಯನ್ನೂ, ಸಚ್ಚೈತನ್ಯವನ್ನೂ ನೀಡುವಂತಹವಾಗಿದ್ದವೆಂದು ಬಗೆದುಂಬಿ ಬಣ್ಣಿಸಿದ ನಂತರ, ಮರುಳ ಶಂಕರ ದೇವರು ತಮ್ಮನ್ನು ಸ್ತುತಿಸಿದ ಎಲ್ಲಾ ಗಣಂಗಳನ್ನು ಒಂದೇ ವಚನದಲ್ಲಿ, ಅವರವರು ಜ್ಞಾನರೂಪವನ್ನು, ಮಹಾತನವನ್ನು, ಕೊಂಡಾಡಿ ಭಕ್ತಿಯಿಂದ ನಮಸ್ಕರಿಸುತ್ತಾರೆ.

"ಎನ್ನ ಜ್ಞಾನಾತ್ಮನ ಚೇತನನಯ್ಯಾ ಪ್ರಭುದೇವರು
ಎನ್ನ ಪರಮಾತ್ಮನ ಚೇತನನಯ್ಯಾ ಸಿದ್ಧರಾಮಯ್ಯ ದೇವರು.
ಎನ್ನ ಚಿನ್ಮಯಾತ್ಮನ ಚೇತನನಯ್ಯಾ ಸಂಗನಬಸವಣ್ಣನು.
ಎನ್ನ ನಿರ್ಮಳಾತ್ಮನ ಚೇತನನಯ್ಯಾ ಷಡುಸ್ಥಲಬ್ರಹ್ಮಿ ಚನ್ನಬಸವಣ್ಣನು
ಎನ್ನ ಮಹಾತ್ಮನ ಚೇತನನಯ್ಯಾ ಬಸವಣ್ಣನ ನಿಜಸುಖಿ ಅಪ್ಪಣ್ಣನು.
ಎನ್ನ ಜೀವಾತ್ಮನ ಚೇತನನಯ್ಯಾ ಮಡಿವಾಳ ಮಾಚಯ್ಯನು.
ಎನ್ನರಿವಿನ ಚೇತನಾತ್ಮಕನಯ್ಯಾ ಕಿನ್ನರ ಬ್ರಹ್ಮಯ್ಯನು.
ಇಂತಪ್ಪ ಪ್ರಮಥರ ಕರುಣದಿಂದ
ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ,
ಶಾಂತ ಚನ್ನಮಲ್ಲಿಕಾರ್ಜುನದೇವಯ್ಯಾ ಬದುಕಿದೆನು ಕಾಣಾ,
ನಿಮ್ಮ ಧರ್ಮ ನಿಮ್ಮ ಧರ್ಮ."

ನನಗೆ ಈ ಏಳು ಜನ ಶಿವಶರಣರೆ ನನ್ನಾತ್ಮಶಕ್ತಿ ವೃದ್ಧಿಗೆ ಕೈದೀವಿಗೆ ಹಾಗೂ ಚೇತನ ಸ್ವರೂಪರೆಂದು ವರ್ಣಿಸುತ್ತ, ಮತ್ತಂ ಸಂಸಾರ ಸಾಗರವ ದಾಟಿದ ಬಗೆಯನ್ನು ಈ ರೀತಿ ವಿವರಿಸುತ್ತಾರೆ.

"ಸಂಸಾರವೆಂಬ ಸಾಗರವ ದಾಂಟುವಡೆ
ಅರಿವೆಂಬ ಹರಿಗೋಲನಿಕ್ಕಿ

ಜ್ಞಾನವೆಂಬ ಅಂಬಿಗ ಈ ಹರಿಗೋಲೊಳಗೆ ಕುಳ್ಳಿರ್ದು,
ಸುಜ್ಞಾನವೆಂಬ ಸಟ್ಟುಗವ ಪಿಡಿದು,
ಮಹಾಜ್ಞಾನವೆಂಬ ಘಾತದಗಳೆಯುಂ ಪಿಡಿದು
ನಾನೀ ಹೊಳೆಯುಂ ಕಂಡು ಅಂಬಿಗನ ಕೇಳಿದಡೆ
ನಾ ನಿನ್ನ ಹಾಯಿಸಿ ಕೊಟ್ಟೇನೆಂದನು.
ನಾನು ನಿನ್ನ ನಂಬಿ ಹರಿಗೋಲನೇರಿದೆನು ಕಾಣಾ ಅಂಬಿಗರಣ್ಣಾ.
ಇಂದು ನಾನು ಹರಿಗೋಲಲ್ಲಿ ಕುಳ್ಳಿರ್ದು ನಡು ಹೊಳೆಯಲ್ಲಿ
ಹೋಗಲಿಕೆ ಕಾಮವೆಂಬ ಕೊರಡು ಅಡ್ಡ ಬಿದ್ದಿತ್ತು.
ಕ್ರೋಧವೆಂಬ ಸುಳುಹಿನೊಳಗೆ ಸಿಕ್ಕಿತ್ತು.
ಅಹಂಕಾರವೆಂಬ ಮೀನು ಬಂದು ನಿಂದಿತ್ತು.
ಮಾಯವೆಂಬ ಮೊಸಳೆ ಬಾಯ ಬಿಡುತ್ತಿದ್ದಿತ್ತು.
ಮೋಹವೆಂಬ ನೊರೆತೆರೆ ಹೆಚ್ಚಿ ಬರುತ್ತಿದ್ದಿತ್ತು.
ಲೋಭವೆಂಬ ಕಡಲಸೆಳಹು ಎಳೆದೊಯ್ಯುತ್ತಿದ್ದಿತ್ತು.
ಮದವೆಂಬ ಮರಹು ನೂಕುತ್ತಿದ್ದಿತ್ತು.
ಮತ್ಸರವೆಂಬ ಗಾಳಿ ತಲೆಕೆಳಗೆ ಮಾಡುತ್ತಿದ್ದಿತ್ತು.
ಇವೆಲ್ಲವನ್ನೂ ಪರಿಹರಿಸಿ ಎನ್ನ ಹೊಳೆಯ
ದಾಂಟಿಸಿದನು ಅಂಬಿಗರಣ್ಣನು.
ಈ ಹೊಳೆಯ ದಾಂಟಿಸಿದ ಕೂಲಿಯ ನನ್ನ ಬೇಡಿದಡೆ
ಕೂಲಿಯ ಕೊಡಲೇನೂ ಇಲ್ಲಾ ಎಂದೆಡೆ
ಕೈಸೆರೆಯಾಗಿ ಎನ್ನನೆಳೆದೊಯ್ದನಯ್ಯಾ!
ಅರುವೆಯ ಕೊಟ್ಟ ಕೂಲಿಗೆ ಕರುವ ಕಾಯಿಸಿ ಕೊಂಡನಯ್ಯಾ.
ಅರಿಯದೆ ಹರಿಗೋಲನೇರಿ ತೊರೆಯ ದಾಂಟಿದ ಕೂಲಿಗೆ
ಕರುವ ಕಾದೆ ಕಾಣಾ! ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ,
ಶಾಂತ ಮಲ್ಲಿಕಾರ್ಜುನದೇವಯ್ಯಾ,
ನಿಮ್ಮ ನಂಬಿ ನಾನು ಕೆಟ್ಟು ಬಟ್ಟಬಯಲಾಗಿ ನಿಂದೆನಯ್ಯಾ,
ನಿಮ್ಮ ಧರ್ಮ ನಿಮ್ಮ ಧರ್ಮ!"

ಅಲ್ಲಿಯೆ ನಿಂತಿದ್ದ ಎಲ್ಲ ಶಿವಶರಣರು ಮರುಳ ಶಂಕರ ದೇವರ ಆಧ್ಯಾತ್ಮದ ಅನುಭವವನ್ನು ಆಲಿಸಿ ಆಶ್ಚರ್ಯಚಕಿತರಾದರು. ಸಾಧನೆಯ ಮಾರ್ಗದಲ್ಲಿ ಬರುವ ಅಡೆತಡೆಗಳನ್ನು, ಏರಿಳಿತಗಳನ್ನು, ಕಾಮಕ್ರೋಧಗಳನ್ನು, ಶಾರೀರಿಕ ಮಾನಸಿಕ ನೋವುಗಳನ್ನು ಸ್ವಯಂ ಪ್ರಜ್ಞೆಯಿಂದ ಎದುರಿಸಿ, ಮುಂದೆ ಸಾಗಿದರೆಂಬುದು ಇಲ್ಲಿ ಮನೋಜ್ಞವಾಗಿ ವಿವರಿಸಿದ್ದಾರೆ. ಬಟ್ಟಬಯಲಾದ ಬಗೆಯನ್ನು, ಅಂದರೆ ದ್ವಿಭಾವ

ಇಲ್ಲದಿರುವಿಕೆಯನ್ನು ತಮ್ಮ ಕ್ರಿಯಾಜ್ಞಾನಗಳ ಸಮರಸದೊಡನೆ ಹೇಗೆ ಸಮನಿಸಿ ಕೊಂಡರೆಂಬುದನ್ನು ಹೃದಯಂಗಮವಾಗಿ ಚಿತ್ರಿಸಿದ್ದಾರೆ. ಇಲ್ಲಿ ಸ್ವಯಂಪ್ರಜ್ಞೆಯು ಪರಿಗೋಲಿನಲ್ಲಿ ಕುಳಿತು, ಭವಸಾಗರವ ದಾಟಿದ್ದಾರೆ. ಬಟ್ಟಬಯಲಾಗಿದ್ದಾರೆ.

ಮತ್ತಂ, ಮರುಳ ಶಂಕರ ದೇವರ ಉಕ್ತಿ:
ಮರುಳ ಶಂಕರ ದೇವರು ಅಲ್ಲಮಪ್ರಭುವಿನ ವಿಭುತ್ವವನ್ನು
ಪ್ರಭಾವಪೂರ್ಣವಾಗಿ ವರ್ಣಿಸಿದ ನಂತರ, ಕೊನೆಯದಾಗಿ ವಿಶ್ವವಿಭೂತಿ,
ಬಸವಣ್ಣನವರನ್ನು ಇಂತು ಕೊಂಡಾಡುತ್ತಾರೆ.
ಮಹಾಲಿಂಗಂತ್ರಯೋಲಿಂಗಂ ತ್ರಿವಿಧಂ ಷಡ್ವಿಧಂ ಮುಖಂ।
ತ್ರಿಷಷ್ಟ್ಯೈಕ ಮುಖಂ ಲಿಂಗಂ ಮಹಾಲಿಂಗಂತು ದರ್ಶನಂ" ಇಂತೆಂಬುದಾಗಿ,
ಒಂದ ಮೂರ ಮಾಡಿಕೊಂಡನಯ್ಯಾ ನಮ್ಮ ಬಸವಣ್ಣ.
ಮೂರ ಆರ ಮಾಡಿಕೊಂಡನಯ್ಯಾ ನಮ್ಮ ಬಸವಣ್ಣ.
ಆರ ಮೂರ ಮಾಡಿಕೊಂಡನಯ್ಯಾ ನಮ್ಮ ಬಸವಣ್ಣ.
ಮೂರ ಒಂದ ಮಾಡಿಕೊಂಡನಯ್ಯಾ ನಮ್ಮ ಬಸವಣ್ಣ.
ಇಂತಪ್ಪ ಸರ್ವಾವಧಾನಿಯಯ್ಯಾ ನಮ್ಮ ಬಸವಣ್ಣ.
ಇಂತಪ್ಪ ಸರ್ವಸಂಗ ಪರಿತ್ಯಾಗಿಯಯ್ಯಾ ನಮ್ಮ ಬಸವಣ್ಣ.
ಇಂತಪ್ಪ ಸರ್ವಕರಣ ನಿರ್ಮುಕ್ತನಯ್ಯಾ ನಮ್ಮ ಬಸವಣ್ಣ.
ಇಂತಪ್ಪ ಕಾರುಣ್ಯ ಪ್ರಸಾದಿಯಯ್ಯಾ ನಮ್ಮ ಬಸವಣ್ಣ.
ಇಂತಪ್ಪ ಸರ್ವಾಂಗ ಲಿಂಗಿಯಯ್ಯಾ ನಮ್ಮ ಬಸವಣ್ಣ.
ಇಂತಪ್ಪ ಸರ್ವನಿರ್ವಾಣಿಯಯ್ಯಾ ನಮ್ಮ ಬಸವಣ್ಣ.
ಇಂತಪ್ಪ ಬಸವಣ್ಣನ ಮಹಿಮೆಯನು ನೀವೆ ಬಲ್ಲಿರಿ
ಅಸಂಖ್ಯಾತ ಮಹಾಪುರಾತನರು ಪ್ರಭುದೇವರು ಮುಖ್ಯವಾದ
ನಿಲವಿನ ಶ್ರೀ ಚರಣಕ್ಕೆ ನಾನು ಶರಣಾರ್ಥಿ ಶರಣಾರ್ಥಿ.
ಎಂದು ಶಬ್ದ ಮುಗ್ಧವಾಗಿ,
ಉರಿಯುಂಡ ಕರ್ಪುರದಂತೆ ನಿಮ್ಮ ಶ್ರೀ ಚರಣವನೈದಿದೆನಯ್ಯಾ!
ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ,
ಶಾಂತ ಮಲ್ಲಿಕಾರ್ಜುನದೇವಯ್ಯಾ
ನಿಮ್ಮ ಶರಣ ಬಸವಣ್ಣನ ಪ್ರಸಾದವ ಕೊಂಡು ನಾನು
ಬಸವಣ್ಣನ ಮುಂದೆ ಬಯಲಾಗಿ ಹೋದೆನಯ್ಯಾ!
ನಿಮ್ಮ ಧರ್ಮ ನಿಮ್ಮ ಧರ್ಮ.

ಇಲ್ಲಿ ಮರುಳ ಶಂಕರ ದೇವರು ವೀರಶೈವ ಸಿದ್ಧಾಂತದ ಮರ್ಮವನ್ನು, ಸೂಕ್ಷ್ಮವಾಗಿ ವಿವರಿಸುತ್ತ, ಬಸವಣ್ಣನವರ ಭವ್ಯ ವ್ಯಕ್ತಿತ್ವವನ್ನು ಹೃದಯ ತುಂಬಿ

ಹಾಡಿದ್ದಾರೆ. ತಾವು ಈ ಅನುಭವ ಮಂಟಪಕ್ಕೆ ಬಂದುದರ ಸಾರ್ಥಕತೆಗೆ ಬಸವಣ್ಣನವರ ಕರುಣೆಯೇ ಕಾರಣವೆಂದು ಅಂತಃಕರಣಪೂರ್ವಕವಾಗಿ ಸಂಸ್ಮರಿಸಿದ್ದಾರೆ. ಇದೇ ಮಾನವತೆ, ಇದೇ ಹೃದಯವಂತಿಕೆ.

ಮೂರಾರನೊಳಗೊಂಡ ಜಗಜ್ಜ್ಯೋತಿ ಬಸವಣ್ಣನು ನನಗೆ ಮಹಾಲಿಂಗ ದರ್ಶನ ಮಾಡಿಸಿದ್ದಾನೆ. ಆತನ ಉಪಕೃತಿ ಹೇಳಲಸದಳ ಆತ್ಮದರಿವಿನ ಬೆಳಕನ್ನು ನೀಡಿದ್ದಾನೆ. ಮಹಾಪ್ರಸಾದವನ್ನು ಕರುಣಿಸಿದ್ದಾನೆ. ಪ್ರಸಾದಿಯನ್ನಾಗಿ ಮಾಡಿದ್ದಾನೆ. ಜ್ಯೋತಿ ಮುಟ್ಟಿದ ಬತ್ತಿಯಂತೆ, ಸಾಗರವ ಮುಟ್ಟಿದ ನದಿಗಳಂತೆ, ಪ್ರಸಾದವ ಮುಟ್ಟಿದ ಪದಾರ್ಥಗಳಂತೆ, ನನ್ನನ್ನು ಈ ತೆರನಾಗಿ ಮಾಡಿದ ಲಿಂಗ ಪ್ರಸಾದಿ ಬಸವಣ್ಣನವರ ಮಹಿಮೆ ಅಗಮ್ಯವಾದುದು, ಅಗಾಧವಾದುದು. ಘನಕ್ಕೆ ಘನವಾದ ಮಹಾಘನ, ಚಿದ್ಘನ, ಚಿದಾನಂದ, ಚಿರಂತನ, ಚೇತನ ಶ್ರೀ ಮಹಾ ಶರಣನೆ ಮಹಾತ್ಮಾ ಬಸವಣ್ಣ. ಸತ್, ಚಿತ್, ಆನಂದ ಜ್ಯೋತಿಯಾದ ಮಹದ್ವಿಭೂತಿಯೆ ಬಸವಣ್ಣ. ಸರ್ವಸಂಗ ಪರಿತ್ಯಾಗಿ, ಸರ್ವಾಂಗಲಿಂಗಿ, ಶರಣಾಗತರಕ್ಷಕ, ಕೃಪಾನಿಧಿ ಬಸವಣ್ಣ ಎಂದು ಮುಂತಾಗಿ ಪರುಷವೃಕ್ಕೆ ಹಾಡುತ್ತ, ಪ್ರಭುದೇವರು ಮುಂತಾದ ಯೋಗಿವರೇಣ್ಯರಿಗೆ ನಮಸ್ಕರಿಸಿ, ಅಲ್ಲಿಯೇ ಮರುಳ ಶಂಕರ ದೇವರು ಉರಿಯುಂಡ ಕರ್ಪೂರದಂತೆ ಬಯಲಾಗುತ್ತಾರೆ.

ಇಂತು ಮರುಳ ಶಂಕರದೇವರು ನಿರವಯವಾಗಲು,
ಮಾಡಬಾರದ ಭಕ್ತಿಯನೆ ಮಾಡಿ,
ನೋಡಬಾರದ ನೋಟವನೆ ನೋಡಿ,
ಕೂಡಬಾರದ ಕೂಟವನೆ ಕೂಡಿ,
ಸ್ತುತಿಸುವವರ ಸ್ತುತಿಗೆ ಬಾರದೆ, ಮುಟ್ಟುವರಿಗೆ ಮುಟ್ಟಬಾರದೆ.
ಬಟ್ಟಬಯಲಾಗಿ ಹೋದ ಮರುಳ ಶಂಕರ ದೇವರ
ಮಹಾತ್ಮೆಗೆ ನಮೋ ನಮೋ ಎಂದು ಬದುಕಿದೆನು
ಕಾಣಾ ಕೂಡಲ ಚನ್ನಸಂಗಮದೇವಾ!

ಎಂದುದಾಗಿ ಮರುಳ ಶಂಕರ ದೇವರ ಮಹಾಘನತೆಯನ್ನು, ಚನ್ನಬಸವಣ್ಣನವರು ಕೊಂಡಾಡಿದ ನಂತರ ಅನುಭವ ಮಂಟಪದ ಸರ್ವಶಿವಶರಣರು, ಚರಮ ಗೀತೆಯನ್ನು ಪಾಡಿ ಶಬ್ದಮುಗ್ಧರಾಗುತ್ತಾರೆ.

ನಾವಿಲ್ಲಿ ಪ್ರಸಾದದ ಪ್ರಭಾವದಿಂದ ಏನೆಲ್ಲವನ್ನು ಸಾಧಿಸಬಹುದೆಂಬುದಕ್ಕೆ, ಮಹಾ ಪ್ರಸಾದಿ ಮರುಳ ಶಂಕರ ದೇವರೆ ನಿದರ್ಶನ. ಇವರು ಅಫಗಾನಿಸ್ತಾನದಿಂದ ಅನುಭವ ಮಂಟಪಕ್ಕೆ ಹಸಿದು ಬಂದವರು. ಹಸನಾದ ಜೀವನವನ್ನು ಸಾಗಿಸಿ ಶಿವಶರಣರ, ಬಸವಣ್ಣನವರ ಕೃಪೆಗೆ ಪಾತ್ರರಾದವರು ಜ್ಞಾನದ ಹಸಿವನ್ನು ಹಿಂಗಿಸಿ

ಕೊಂಡವರು. ನಿರಂತರವೂ ಕಾಯಕ ನಿರತರಾಗಿ, ಸೇವಾ ಧರ್ಮದಲ್ಲಿ ಬಳ್ಳಿದವರಾಗಿದ್ದವರು ಅವರ ವಚನಗಳನ್ನು ಓದಿದಾಗ ಇವರು ಸಂಸ್ಕೃತ ಪಂಡಿತರಿರಬಹುದೆಂದು ಅನ್ನಿಸುತ್ತದೆ. ಇವರ ವಚನಗಳೆಲ್ಲವೂ ಆಧ್ಯಾತ್ಮದ ರಸಘಟ್ಟಿಗಳಂತಿವೆ. ಇನ್ನುಳಿದ ಶಿವಶರಣರಿಗಿಂತಲೂ, ಪ್ರಸಾದದ ಮಹತ್ವವನ್ನು ವಿಲಕ್ಷಣವಾಗಿ ಅರಿತುಕೊಂಡಿದ್ದರು. ಇವರಿಗೆ ಪ್ರಸಾದವೆ ಗುರು, ಪ್ರಸಾದವೆಲಿಂಗ, ಪ್ರಸಾದವೆ ಜಂಗಮ, ಪ್ರಸಾದವೆ ಪರಮಜ್ಞಾನ, ಪ್ರಸಾದವೆ ನಿತ್ಯ ಪೂರ್ಣವೆಂದು ಅರ್ಥೈಸಿಕೊಂಡು ಕೃತಿಯಲ್ಲಿ ಆದರ ಸೊಬಗನ್ನು ಪಡೆದವರಾಗಿದ್ದರು. ಪ್ರಸಾದವೆ ಕಾಯ, ಪ್ರಸಾದವೆ ಪ್ರಾಣವಾಗಿ, ಪರಿಣಾಮ ಪ್ರಸಾದವಲ್ಲಿ ತದ್ಗತರಾಗಿದ್ದರು. ಇದುವೆ ಅವರಿಗೆ ವೈಶಿಷ್ಟ್ಯವಾಗಿತ್ತು. ಪರಿಪೂರ್ಣವಾಗಿತ್ತು. ಅದರಲ್ಲಿಯೇ ಶಾಂತಿ ಕಾಂತಿಯನ್ನು ಕಂಡವರಾಗಿದ್ದರು. ಪ್ರಾಸಾದಿಕ ಪ್ರಜ್ಞೆ ಪಡೆದು, ಪರಮ ಪ್ರಸಾದಿಯಾಗಿ, ಕಲ್ಯಾಣದನುಭವಮಂಟಪದ ಆದರ್ಶ ಶಿವಶರಣ ಶಿರೋಮಣಿಯಾಗಿದ್ದರು. ಇವರ ಜೀವನ ಪ್ರಾಸಾದಿಕ ಜೀವನ. ಪವಿತ್ರ ಜೀವನ. ಆದರ್ಶ ಜೀವನ.

ಹನ್ನೆರಡನೆಯ ಶತಮಾನದ ಮಹಾ ಚೇತನ ನೋಡಾ ನಮ್ಮ ಮರುಳ
ಶಂಕರ ದೇವ
ಶರಣರಿಗೆ ಸತ್ಯ ಮುಕ್ತಿಯ ಕಳೆಯಾಗಿದ್ದನು ನೋಡಾ ಲೋಕಕ್ಕೆ ಮರುಳ
ನಂತೆ ಕಂಡ
ಅನುಭವ ಮಂಟಪದ ಅನುಸಂಧಾನಿ ನೋಡಾ
ನಮ್ಮ ಮರುಳ ಶಂಕರ ದೇವ!
ಸಂಕಲ್ಪ ವಿಕಲ್ಪ ವಿರಹಿತನು ನೋಡಾ ನಮ್ಮ ಮರುಳ ಶಂಕರ ದೇವ!
ಕಾಲ ಕರ್ಮ ಮಾಯೆಗಳನು ಗೆದ್ದಿಹನು ನೋಡಾ
ನಮ್ಮ ಮರುಳ ಶಂಕರ ದೇವ!
ನಿಬ್ಬೆರಗಿನ ನಿಜ ಮೂರ್ತಿ ನೋಡಾ ನಮ್ಮ ಮರುಳ ಶಂಕರ ದೇವ!
ತ್ರಿವಿಧ ಪ್ರಸಾದಿ ತ್ರಿವಿಧ ದಾಸೋಹಿ ನೋಡಾ
ನಮ್ಮ ಮರುಳ ಶಂಕರ ದೇವ!
ಇಂತಪ್ಪ ಪರಮ ಪ್ರಸಾದಿ ಮಹಾಶರಣನ
ಮಹಾಘನವನೇನೆಂದು ವರ್ಣಿಸಲಿ ದೇವಾ!
ಭೂಲತಾ ಪ್ರರೀಶ ಕರ್ತೃ ಜಗದ್ಗುರು ಗುರುಸಿದ್ಧೇಶ್ವರಾ!

ಹಾರ್ಟ್ಸ್ ಬ್ಲಾಸಮ್ಸ್: ಇಂಗ್ಲೀಷ

ಸಾಹಿತ್ಯ ಪ್ರಕಾರ: ಅನುವಾದಿತ ವಚನಗಳು
ಮೊದಲ ಮುದ್ರಣ: ೧೯೭೪
ರಚನೆಯ ವಯಸ್ಸು: ೪೫
ರಚನಾಸ್ಥಳ: ಹುಬ್ಬಳ್ಳಿ

Jagadguru Gurusiddheshwara Publication-Series No. 61

HEART'S BLOSSOMS

Author:

Srimanmaharaja Niranjana Jagadguru
Sri Gangadhara Rajayogindra Mahaswamiji
of
Murusaviramath,
HUBLI (Karnataka State) INDIA

□

Translated from Kannada into English

by

Prof. ARMANDO MENEZES
Shri S. M. ANGADI

Publishers:

Sri Jagadguru Gangadhara
Dharma Pracharaka Mandala
Murusaviramath,
HUBLI, (Karnataka State)
INDIA

Copies: One Thousand (1974)
Price: Rs. FIVE

Printers:

Shri M. H. BELGAUMKAR
Samyukta Karnataka Press,
Koppikar Road, HUBLI

CONTENTS

			Page
1.	Author's Note	....	920
2.	Scheme of Transliteration	....	921
3.	About the Author	....	923
4.	Text	....	929
5.	Notes in Brief	....	1020

AUTHOR'S NOTE

This recent collection of poems is offered to readers in English version also for wider circulation. This excellent rendering of the original Kannada is the work of Prof. Armando Menezes and Shri. S. M. Angadi, who are already well known as translators and editors of vachana literature.

For this and for the editorial note prefaced to this volume I am thankful to them and also to the Samyukta Karnatak Printing Press for a good job promptly done.

Hubli
August 9, 1974

J.G.Murusaviramath

SCHEME OF TRANSLITERATION

vowels	Kannada	ಅ	ಆ	ಇ	ಈ	ಉ	ಊ	ಋ	ೠ
	Roman	a	a	i	i	u	u	r	r
	Kannada	ಎ	ಏ	ಐ	ಒ	ಓ	ಔ		
	Roman	e	e	ai	o	o	au		
anusvara	Kannada	ಅಂ							
	Roman	am							
visarga	Kannada	ಅಃ							
	Roman	ah							
consonants	vellars (gutturals)	ಕ	ಖ	ಗ	ಘ	ಙ			
		ka	kha	ga	gha	na			
	palatals	ಚ	ಛ	ಜ	ಝ	ಞ			
		ca	cha	ja	jha	na			
	retroflex (cerebrals)	ಟ	ಠ	ಡ	ಢ	ಣ			
		ta	tha	da	dha	na			
	dentals	ತ	ಥ	ದ	ಧ	ನ			
		ta	tha	da	dha	na			
	labials	ಪ	ಫ	ಬ	ಭ	ಮ			
		pa	pha	ba	bha	ma			
	semi-vowels	ಯ	ರ	ಱ	ಲ	ವ			
		ya	ra	ra	la	va			
	sibilant	ಶ (palatal)							
		sa							
	sibilant	ಷ (retroflex)							
		sa							
	sibilant	ಸ (dental)							
		sa							

aspirate	ಹ ha
lateral	ಳ la
conjunct	ಕ್ಷ ksa
	ಜ್ಞ jna

ABOUT THE AUTHOR

The author of this volume of vachanas, Sri Manmaharaj Niranjan Jagadguru Gangadhar Rajayogindra Mahaswamiji of Murusavira Math, Hubli was born at Sasivala, in Hassan district of Karnataka State in 1927, by the grace of the late Sri Hangal Kumar Sivayogi. He had his elementary education at the Sivayoga Mandir, in Bijapur district, showed, quite early, a talent for drawing and composing verse and edited the Mandir's manuscript journal, 'Sukumar'. As successor-designate to the Chittaragi Vijaya Mahantesa Matha, Ilkal, he went to Varanasi for further studies in philosophy and religion, and successively obtained the degrees of Kavya Tirth from the Bengal Sanskrit Association in 1951. of Sahitya Ratna from Dacca University in 1954, and of Vedant Sastracarya from Varanasi Hindu University in 1957. While yet a student, he published a brochure in English entitled 'Yoga Raja of Karnatak', besides contributing articles in Hindi to Varanasi periodical, Aaj.

Swamiji had hardly completed his university course when he was called to assume charge of the Jagadguru Murusaviramath of Hubli, whose origin harks back to the 12th century, when it sheltered the 3,000 Saranas on their flight from-Kalyana; and he has since made history by his varied munificence and gift for organisation, mainly in the fields of religion and education. He became President of Sivayoga Mandir in 1959 and it was under his lead that the 17th session of All-India Virasaiva Sabha was held there, and the Mandir's Golden Jubilee celebrated. It was under his inspiration, again, that the Jagadguru Gangadhar Dharmapracaraka Research Institute has already published the following volumes:

—Viveka Cintamani
—Ksetrajna Sumanovada
—Vacana Sastra Rahasya
—Mani Vacanagalu
—Sanskrta Pravesh
—Sanskrta Prakasa
—Vyakarana Pradeepa
—Huvu-Hannu
—Virasaiva Sadacara Sangraha
—Kumara Gita
—Cidanandada Cilume
—Hombelagu
—Gurusiddhesvara Suprabhata
—Jagadguru Gurusiddesvara Carite, etc.

In addition, the Jagadguruji brought out the following works of his own, written since his assumption of the Pitha:—

—Jivan Vikasa (addresses)
—Amrta Bindu (prose)
—Asirvani (addresses)

The author of this book is also the sponsor of Paranyoti, a Kannada monthly devoted to religious and literary matters. He has also founded two institutions of inestimable value:

1. Kumareswara Sivayogi Sangha,
2. Sivanubhava Mantapa, a forum for philophical discussions after the original Anubhava Mantapa of Kalyana.

Realising that the highest spirtual idelas have to be channelled to the mass of the people through education, the Swamiji has, under the auspices of the Murusavirmath Vidya Vardhaka Sangha, which he founded, established a Women's College at Hubli at great expense, besides lavishing large sums of money on Arts and Science Colleges at Hubli and elsewhere. He also runs a Higher

Secondary School, Girls' High School and a Primary School for boys and girls. He has extended financial aid to poets, playwrights and other writers. and instituted scholarships for promising students in Arts, Science and Medical Colleges. In addition, he maintains a free boarding home for poor students and other hostels at Hubli and Belgaum, which are open to all communities, castes and creeds. Under his patronage, two Ayurvedic dispensaries are run at Dharwar, besides a co-operative hospital at Ghataprabha.

Devoted to social and humanitarian causes, the Swamiji, not content to loosen his purse, has pleaded social and spiritual causes from platfrom and radio. His stature as a spiritual leader gained universal recognition when he was invited to the Conference on World Peace, held in Delhi in 1968; and he so impressed the delegates that he was, again, asked to participate in a similar conference at Kyoto, Japan. Here he proposed, among other things, a World Parliament of Religions, which has since become a facts; one session of it he is shortly going to attend at Brussels.

* * *

The present collection of poems, significantly couched in the form of vachanas, is not the author's first. The latter poems, however, differ from the earlier in expressing a more mature personality in language that has achieved greater expressiveness. The title of the collection, Heart's Blossoms, is particularly meaningful, for 'blossoms' commemorates the origin of the name of the tow r that contains the Math over which the poet presides, and 'heart' points to one of the many themes of the poems. Again and again, the poet refers to the primacy of the heart, in social as well as spiritual matters. Literature is not, to him, a matter of mind and imagination only. Behold, he sings.

'behold, the mind desires
To build the temple of literature
With the hearts' riches'.

It is in the heart that sympathy is born, and sympathy is what he desires:

'A thousand words without
A sense of sympathy is as
A hollow seed, mere chaff....'

Or 'If you should sow a seed

Of virtue in the field of heart,
How could I tell how will
Its harvest be?....'

To keep the heart clean, he is ready to welcome censure:

'To purge the fifth out the heart
You need some one to criticise.'

Plagued by the agitations of this world, he prays for a claim, unruffled heart:

'Pour Thou the nectra of Thy peace upon
The platter of my heart'.

The intellect is ineffectual without a pure heart, he says; the intellect without the heart is like a horse without a bridle. However great the intellect, it is vain without a sympathetic heart.
Again:

'What price a thousand words
With sweetness in the words
And in the heart but bitterness?'

He does not care for bhaktas who have a glamorous body but anger on their lips, infatuation in their mind and vain illusion in their heart; nor for the men who

'....now roam about
Forsaking religion, with their hearts
Shut down!'

The equality that Virashaivism proclaims must not be 'like a part in a play':

'The splenderous beauty of equality
Must leap up like a spring
Right from your heart.'

You must clean your heart as you clean the plate you eat from; then alone will it be Prasada. The heart is the temple of God:

'In the heart-temple's tower
The Ohm-shaped bell
Peals with the tone of Ohm.'

But the theme is not the whole of poerty. The soul of poetry is in the metaphor, as Aristotle said long ago; and the poems in this collection blossom into images at every step. Some of them are, understandably, drawn from the oldest vachanas-metaphors embedded in our national life-like the wishing tree and the life-reviving plant; or the comparison of life to a forest or the ocean. But most of them are original and drawn from such homely sources as farming and gardening. The body of man is a garden; its senses are bees or moths around a light; the mind as well as the passions are monkeys or fishes that prey on one another; the human spirit is a cuckoo; good thoughts are like the scent of the sandal-tree; anger is a mud-choked well. Sometimes, there is a succession of images without a pause: words without sense are like soil that cannot be sown, a waterless well, a cracker that will not go, a stomach without food; politics without righteousness is like a sick man that will not drink his medicine; literature without spirituality is a body without a head; worship without meditation, a lamp without oil; labour without encouragement, a flower without fragrance; action without thought and thought without action is a building without foundation; the poet is a pearl-diver; to stir hatred is like kicking the air and hurting oneself;

religion without worship is like a festival chariot without a pinnacle. Society today is like a broken pot, a mirror clouded over with dust And there is the unwatered tree; the tree fed with hot water; the leafless tree; the honeyless beehtve; the ghost of hallucination, the tiger or anger. And many more And there are, besides, the lovely images of the arati and the temple gong, redolent of the age-old spirituality of our holy land.

* * *

The overall impression that this verse collection leaves upon one is of a man, sensitive and benevolent, who, disillusioned with his social activity, is now turning inwards, into a stock-taking of his life's work, into a truer understanding of his life's mission, towards ruthless reflection upon the social scene. Literature, it has been said, is a cry. Here we have a cry of pain, but also a cry of joy; for we have here disillusionment without despair.

Heart's Blossoms

1

You are the sovereign emperor
Of universal teachers all;
You are for seekers the abode
Of meditation; the Father dwelling in
The indeterminate trance; the one who grants
The much desired accomplishment;
The supreme master of the Hubli Town,
The sincere seekers' ground and goal you are,
Fulfilled of light of Consciousness;
Lord of the throne of the absolute;
The life-restoring plant you are
For people following all faiths;
The origin of the principle where
All things are made in one; the sovereign light
That shines upon me; holy one
That have made Sivayoga manifest;
O Lord of
The blossoming-creeper town,
World-teacher, Founder Gurusiddhesvara,
Seated on my heart's throne,
O real image, image of the heart!

2

Some call you lunatic;
Some call you an accomplished one;
Some call you accomplished master and
Some call you accomplished among such;
How shall I call you, Guru divine?
O Lord of

The blossoming-creeper town,
World-teacher, Founder Gurusiddhesvara,
I call you, that you may come
Into my heart, both night and day!

3

You are the wishing-tree
For all the billions of mankind;
The spiritual physician for
All people suffering from
The malady of Birth.
Worshipping you daily with love,
Applying holy ash
Of light of Consciousness,
They scatter flowers
Of the spiritual senses;
Waving the light of higher knowledge,
They ring the gong of Ohm,
And seek the water of knowledge,
O Lord of
The blossoming-creeper town,
World-teacher, Founder Gurusiddhesvara!

4

Your mercy, Basava, it was
That the Virasaiva faith evolved,
Developing upon a new design;
Your blessing, Basava, it was
That the eight aids to faith,
As its body, showed unearthly fruit;
Your mercy, Basava, it was
That the five disciplines, as its breath.
Have built the highest life-values;
Your blessing, Basava, it was
That the six stages, as its soul,
Proclaimed the glory of

The sixfold hierarchy;
Your compassion, Basava, it was
That Guru and Jangama became
Worthy of worship and glowed
With passing virtues;
Your grace, Basava, it was
That Linga pervaded every limb,
And Linga's light unprecedentedly shone.
Our Lord of the blossoming-creeper town
World's teacher, Founder Gurusiddhesvara
Abhors those who parade themselves, forgetting
Basava, this epoch-making
Compassion incarnate!

5

Born at Sasivala,
He came to Kalbetta,
Performed severe penance,
And trampling the six enemies,
Became a young Sivayogi,
Staying at Karadi's house,
He mastered the immortal lore,
And slaying greed and lust,
He took renunciation's path,
And so acquired soul-glory.
Mounting the seat of Cittaragi,
He spread Basava's principles;
And showing the site for a temple,
Gave joy to devotees; and then
Became the great light within the Light.
This is the life of
Sri Vijaya Mahantesa,
Lord of
The blossoming-creeper town,
World-teacher, Founder Gurusiddhesvara.

6

Boundlessly blossomed the glory of
Sri Vijaya Mahatesa,
The nero who conquered the passions;
Supremely brave, who kept the norms;
The wholy person who scaled
Renunciation's peak and won
The power to curse as well as bless;
And as the light of Conciousness
At Cittaragi, shown
As the great Guru of all Gurus:
O Lord of
The blossoming-creeper town,
World-teacher, Founder Gurusiddhesvara.

7

Our lord of
The blossoming-creeper town,
World-teacher Gurusiddhesvara,
Laughs when he sees those
Who act just as they please,
Forgetting such a Kumara from Hangal:
Our Kumara who taught me speech,
Our Kumara who taught me to walk,
Our Kumara who saved culture and discipline;
Our Kumara who set up a Sivayoga shrine;
Who gave shape to Sivayoga experience;
The good Kumara who was
The jewel of renunciation's crest!

8

The personality of Sivabasava,
Who, born at Saptasagara,
Effacing the seven vices,
Endearing himself to Him

Whose ornament is the snake;
Master of the Hukkerimath
At Haveri, is wonderful!
Obtaining the power of Sivayoga,
Striving for the shrine of Sivayoga,
Dwelling in the bliss of Sivayoga,
He shone as the pre-eminent Sivayogi,
The great path of Sivabasava
Is a lantern to us all,
O Lord of
The blossoming-creeper town,
World-teacher, Founder Gurusiddhesvara!

9

By the grace of Kumaresa
Of Hanagal was I born;
As a student, I lived
In the glorious Virasaiva
Sivayoga temple
And studied in all three senses;
From monks of the glorious Virasaiva
Sivayoga shrine I learnt the way
Of Siva worship and Siva experience;
I advanced in my studies
At Kasi, centre of pilgrimage,
With the help of true devotees
Of Vijaya Mahantesa,
I mounted the pontifical seat,
By the grace of our Gurusiddhesvara's son.
O Lord of
The blossoming-creeper town.
World-teacher, Founder Gurusiddhesvara,
I serve society all the time
By your special grace.

10

In the body's garden, there blooms,
Behold, the flower of Consciousness;
The bees of organs of sense
Swoop down to sip its honey!
Deer, the six billows of grief,
Come running up to pluk the flower;
Bisons of the eight prides
Are eager to destroy the flower garden!
Worms of the three impurities
Rush to gnaw the flower-petals;
Monkeys of the six passions come,
In crowds, to eat the fruit;
Therefore, fixing the hedge of conscience,
Putting the roof of right knowledge,
Routing the enemies that rush up,
Protecting the flower of consciousness,
Because to do so is your grace,
I have sought shelter in you,
O Lord of
The blossoming-creeper town,
World-teacher, Founder Gurusiddhesvara!

11

Within the blossoming creeper of the heart,
Behold, the spirit's cuckoo coos;
It yearns for the sweet taste
Of meditation's esence; and
It is a lodging for the spirit's light
Dwelling in the ecatasy of love.
O my beloved cuckoo-bird,
Grant that I fly
Ever toward Thee!
O Lord of the blossoming-creeper town,
World-teacher, Founder Gurusiddhesvara!

12

Lo, I have come
To Purchase diamonds and lapis-lazuli
In the Hubli bazaar;
Roaming and roaming all around,
I've brought this wealth
Of name and form to sell.
If you and I in this bazaar
Are one, it's like
A fortune coming to the poor,
O Lord of the blossoming-creeper town,
World-teacher, Founder Gurusiddhesvara!

13

Falling into the blazing fire
Of lust, my fivefold sense
Is troubled, lo!
Hallucination's ghost is chasing me
And drives me to a thick wood.
The tiger of infatuation stands
With gaping mouth
To swallow my happy life.
Therefore, ward off
My present distress,
O Lord of the blossoming-creeper town,
World-teacher, Founder Gurusiddhesvara!

14

Illusion has cowed me down;
Unnerved me; and I wander about
With neither reason nor goal,
O Lord of the blossoming-creeper town.
World-teacher, Founder Gurusiddhesvara!

15

A truce now to this care
Of service to society!
What I now want is care
Of meditating upon Thee!
How can I reform society
Without the friendly hand
Of general Co-operation, pray,
O Lord of the blossoming-creeper town.
World-teacher, Founder Gurusiddhesvara!

16

Black clouds are gathering, behold.
Upon the firmament of life!
They rush from several ways
And lo, they block the light!
Grant that the rays of this dawn
Illumine Thee alone,
O Lord of the blossoming-creeper town,
World-teacher, Founder Gurusiddhesvara!

17

I toil and burn
In the triple pain,
While passions such as anger plague me;
I'm bruised with the noose of greed.
Make that I go beyond
All these vexation, pray;
Grant me the eye of knowledge and
Place me within the treasure-house
Of piety.
O Lord of the blossoming-creeper town,
World-teacher, Founder Gurusiddhesvara!

18

Bustling about society's field,
Lo, weary is this mind of mine!
Experiencing both sweet and bitter,
It's as a dried-up tank,
This mind of mine!
Without the sweet water of
Co-operation and organisation, lo,
Society's tree is withering!
Could you not, Lord,
Grant me Thy mercy, that I,
Pouring the water of understanding,
Be saved,
O Lord of the blossoming-creeper town,
World-teacher, Founder Gurusiddhesvara?

19

Caught in hallucination's cage,
In dire distress, I toss and fret!
Pray, break the bonds of Maya and inspire
That I may fly into
The metaphysical heavens!
I have remembered none but Thee,
O Lord of the blossoming-creeper town.
World-teacher, Founder Gurusiddhesvara!

20

Twice-seven years have rolled away
Look you, like fourteen days!
The literary sapling has not grown;
It only stands and keeps alive!
I do not pour the water of
Talent or of discernment unto it;
I but sprinkle the sweet
Water of help and encouragement!
My literary growth has turned

To service of society:
What else is there,
O Lord of the blossoming-creeper town,
World-teacher, Founder Gurusiddhesvara!

21

Look you, my mind rejects
The building of edifices of stone
And sways to building of
Literary edifices.
Words, feelings, thoughts are
Thereto the chiselled stones.
As this creation grows,
The art of the architect shines out,
O Lord of the blossoming-creeper town,
World-teacher, Founder Gurusiddhesvara!

22

Behold, this mind desires
The cult of literature
With body and mind together!
Behold, this mind desires
To build a temple of literature
With the heart's riches;
Behold, this mind desires
To stand out by putting up
A tower that is radiant with thought;
Behold, this mind desires
To set up the pinnacle
Of spiritual bliss and so enjoy
The joy of the Lord,
O Lord of the blossoming-creeper town,
World-teacher, Founder Gurusiddhesvara!

23

Fooled by the tricks of words,
I quite forgot myself;
Not understanding the fraud of mind,
I was bewitched;
I was deceived
By an attractive garb,
A trick of speech;
Not seeing through the fraud,
I made myself a fool
Of the flash of words.
Everywhere, the jugglers of words!
A thousand words without
A sense of sympathy are as
A hollow seed, mere chaff, look you,
Lord of the blossoming-creeper town,
World-teacher, Founder Gurusiddhesvara!

24

What is called spiritual joy seems now
A treasure seen in a dream!
Not knowing the truth of knowledge, I pine!
By stress of the tripple pain
I've lost my strength, my lips
Are parched, I feel uncomfortable
That's what, look you,
Fetters me in arriving at Thy feet,
Lord of the blossoming-creeper town,
World-teacher, Founder Gurusiddhesvara!
O call me and embrace me, Lord,
As father, forgiving his son's faults,
Would call him to his arms!

25

If you should sow a robust seed
In a clean field, behold,
The way it grows up lush!
If it rains at the proper time,
How rich its lustiness!
If you should sow a seed
Of virtue in the field of heart,
How could I tell how will
Its harvest taste,
O Lord of the blossoming-creeper town,
World-teacher, Founder Gurusiddhesvara?

26

Unless you chain the fugitive mind,
You can't escape the mind-born's magic tricks;
Unless you bridle a running horse,
He won't obey his master's bidding;
Therefore, vouchsafe to me
Renunciation and conscience, Lord
And thereby save me,
Lord of the blossoming-creeper town,
World-teacher, Founder Gu·usiddesvara!

27

What if you have
Knowledge of good and ill?
This mind, look you, will run away
Again and again!
What if you wish to get great happiness?
This mind, look you, will roam and prowl!
What if you take
Camphor out of a camphor-box?
Its smell, mark you, remains!
Bind me with bonds of love for Thee,
Instruct me in divine Experience,

feed me upon compassion's nectar and
Save me,
Lord of the blossoming-creeper town,
World-teacher, Founder Gurusiddhesvara!

28

As a caged parrot yearns towards the forest, so
The mind runs to all things of sense.
The mind is frisking about this way and that.
Loosen from me illusion's bonds,
Keep me upon the path illusion-free
And so save me,
Lord of the blossoming-creeper town,
World-teacher, Founder Gurusiddhesvara!

29

The 'I' is body's trait;
The 'Thou' is trait divine.
When 'I' is dead and
Has been transformed to 'Thee',
How can one tell how bright
The ensuing light,
O Lord of the blossoming-creeper town,
World-teacher, Founder Gurusiddhesvara!

30

What need now of the secret pride
Of having built a tower?
Unless lights be around the tower,
It's as a castle in the air,
Lord of the blossoming-creeper town,
World-teacher, Founder Gurusiddhesvara!

31

In the heart's lake
Passions are fish. Look you,

They move about this way and that.
Sometimes they upward look;
Sometimes they sink beneath.
That is, look you, their way!
These strange-shaped fish—
Do they roam or wage war?
It is the law that fish eat fish:
The strong consume the weak.
If you should tie a string and drop a bait,
They will not rise to it!
O Lord of the blossoming-creeper town,
World-teacher, Founder Gurusiddhesvara,
Pray, rid me of
The passions of the mind
And pity me, so that
The fishes' winkless eye glow in my mind!

32

When ignorance enveloped me,
My brain was topsy-turvy and
Like a half-wit I lost my way;
Caught in the conflagration of
The world of sense, forgetting what it is,
Like moths around a light, they die,
Lord of the blossoming-creeper town,
World-teacher, Founder Gurusiddhesvara!

33

Upon this pilgrimage of life
I have been wounded, have been burnt;
How many a pain and loss have I endured!
The oarsman taking me
To the other shore, has left
Me mid-stream and has gone!
The great ones who
Pretended love to me,

Now for no reason burn in jealousy,
Lord of the blossoming-creeper town,
World-teacher, Founder Gurusiddhesvara!
That is, the boat, my strength
Of meditation upon Thee,
Alone takes me across,
Nor lets the opposing waves
Dash upon me!

34

This life is a vast ocean; difficult
To measure its depths;
The waves come and they dash;
The bubbles, like the waves,
Vanish within the winking of the eye.
Tasting this ocean's bitter and its sweet,
I swim and swim until
My strength is spent.
Take me across to the ocean's other shore,
I cry and pray to Thee,
Lord of the blossoming-creeper town,
World-teacher, Founder Gurusiddhesvara!

35

A rough stone is
Upon the border of a tank.
Above it, a black-coloured bird
Is calling, list!
The seasoned black-hued bird
Displaying six hues,
Is flying, look,
Lord of the blossoming-creeper town,
World-teacher, Founder Gurusiddhesvara!

36

Men, in forgetfulness, move around
The pleasures of the sense—

Like garland and perfume.
The ogress Greed
Distracts me from meditating upon Thee
And is destroying me.
My heart is sorry to see them chase
This mirage of illusion,
Lord of the blossoming-creeper town,
World-teacher, Founder Gurusiddhesvara!

37

My mind is misted like
An early morning thick with dew:
It won't keep still
Whenever I sit to meditate;
Its strength is drained
Like a sick man's;
Unless you stamp
Your image on its walls,
How can I live, tell me,
Lord of the blossoming-creeper town,
World-teacher, Founder Gurusiddhesvara!

38

At sight of persons who condemn,
Ignorant of what goes in my heart,
I writhe with pain.
What if one looks at a fruit's hue,
Not seeing how it tastes?
How will he know how sweet it is,
Lord of the blossoming-creeper town,
World-teacher, Founder Gurusiddhesvara?

39

One must be glad to see a piece of work:
What means this jealousy?
Why should men be so mean

To talk improper things?
If you should lend your mind
To jealousy, like shovelling dry leaves
Into the mouth of fire,
Where is your peace of mind,
Lord of the blossoming-creeper town,
World-teacher, Founder Gurusiddhesvara?

40

Let them damn me who damn;
That is their sin!
Let them praise me who praise:
That is their goodness!
Be merciful and save me,
Lest my heart faint and leave
What must be done;
Lest my heart swell with pride,
Lord of the blossoming-creeper town,
World-teacher, Founder Gurusiddhesvara!

41

Wealth is calamity, look you!
The bother of looking after it
Increases! As wealth grows,
The door of peace is closed!
Wealth is an invitation unto vice;
So, if you gape not at material wealth,
And earn the treasure of the soul,
The enemies that plague you will desist,
Lord of the blossoming-creeper town,
World-teacher, Founder Gurusiddhesvara!

42

Let the importunate importune,
And let the beggars beg!

Let the evasive ones evade,
And let the servers serve!
And let them clean who wish to clean,
Let cooperators cooperate,
Lord of the blossoming-creeper town,
World–teacher, Founder Gurusiddhesvara!
Let my remembrance every day
Be only this-to hold Thy feet!

43

Some foul their mouth with censuring,
Sinking and rising in the eddy of sin.
At sight of those who burn in jealousy,
My heart is greatly moved.
If consciousness of sin is in the heart,
This sordid thought could never come.
If you throw dust upon
An ornament of gold,
Does the gold colour leave,
Lord of the blossoming-creeper town,
World–teacher, Founder Gurusiddhesvara?

44

For a lane to be clean,
You need a herd of swine;
To purge the filth out of the heart,
You need some one to criticise,
Lord of the blossoming–creeper town,
World-teacher, Founder Gurusiddhesvara!

45

They speak of 'blessings in disguise';
Just so, impediments
Block up all progress and
Embarrass it; splinters and thorns
Strike those who walk; they do not strike

Such as but sit.
A mountain-range of obstacles
Stands in my way: grant me
The strength not to lose heart!
Be kind enough to tend on me,
Lord of the blossoming-creeper town,
World-teacher, Founder Gurusiddhesvara!

46

Look, how this mind runs here and there!
Look, how it lifts its head and peers!
Its cravings are
Like monkey frisking as it wills.
Pray, let my mind run after Thee,
And save me,
Lord of the blossoming-creeper town,
World-teacher, Founder Gurusiddhesvara!

47

O God! because I have built
A gate six storeys high,
Do not let me forget the Six!
Grant me the courage to destroy
The Six, eliminate the Three,
Lord of the blossoming-creeper town,
World-teacher, Founder Gurusiddhesvara!

48

I worship Siva so that my mind
Be still;
That I may conquer sense;
So that may piety may grow;
That I may win Thy love.
I worship Siva
So that the people may awake
And, waking up, may live,

Lord of the blossoming-creeper town,
World-teacher, Founder Gurusiddhesvara!

49

In this our life of everyday,
That will not know respite,
The thonght of Thee is irksome, Lord!
Believing that 'Work is Heaven',
I have been serving Thee,
Lord of the blossoming creeper town,
World-teacher, Founder Gurusiddhesvara!

50

People are pining, praying for rain;
How could one live if there's no rain, O Lord?
Do you get angry at
The ignorance of the young?
'They stumble who would walk;
Do they who merely sit?'
As a father forgives his children's faults,
Will Thou not pardon me,
Compassion absolute?
Pray, make rain fall,
Make the crop grow,
And give me light
So I may live,
Lord of the blossoming-creeper town,
World-teacher, Founder Gurusiddhesvara!

51

In this world's round, one must
Be as one is and yet is not;
As you come forward to display
A piece of work, one must
Be ready to undergo
Both praise and blame

In this world's round,
Lord of the blossoming-creeper town,
World-teacher, Founder Gurusiddhesvara!

52

If I send round the begging bowl,
These people refuse to give.
Meeting the people who rook and fool them,
These people pour out money like water!
Is money money that is not earned
By labour of one's hands?
Is money money that does not go
To a right cause?
The structure that is not built
On right foundations, is not fit
For Linga worship, look you,
Lord of the blossoming-creeper town,
World-teacher, Founder Gurusiddhesvara!

53

Hubli is like an arbour of
The blossoming creeper.
The blossoming mind lights up the house,
The body is purified!
If I forbid the white ant of vile greed
To touch life's blossoming creeper,
Will the Lord of the blossoming-creeper town,
World-teacher, Founder Gurusiddhesvara
Not call me to himself
And lift me in his arms?

54

You often talk of personality:
Who knows what personality means?
This is what it is:
As the sun rises as the dark dissolves,

One has to shed one's pride
And master knowledge;
As the sun, rising, shines,
So, the resplendent light
Of the soul's power shines forth;
One must exhale
Good feelings and goodwill,
Good thoughts and pure conscience, as
The sandal-tree exhales perfume;
Filth washed into a river does not come back,
So evil passion, pride and jealousy
Never return.
Bathing in purity of heart,
Steadying the mind that moves
With the wind's speed,
To gain the light of soul-that is
The secret of personality,
Lord of the blossoming-creeper town,
World-tearcher, Founder Gurusiddhesvara!

55

Anger is sin's foundation-stone;
It is a mud-choked well;
It is a tarnish to the orna:nent
On Liberation's neck.
O Lord of the blossoming-creeper town.
World-teacher, Founder Gurusiddhesvara,
Pour Thou the nectar of peace upon
The platter of my heart,
And, putting out the conflagration of
Anger, show me Thy mercy, Lord!

56

Intelligence does not always come
To those grown old in years;
They seek for fame without
Making an effort. What if

A ftuit be ripe, unless it's sweet?
The Lord of the blossoming-creeper town,
World-teacher, Founder Gurusiddhesvara!
Detests those who are like
Stale coconuts!

57

By each one forming a party, they destroy
The very home of society!
Chasing the phantom of prestige,
They lose their strength and energy!
Those who have interest in society
Show like a lightning flash!
The interest of those who are
Not pure of heart is like
The cotton of silk cotton tree,
Lord of the blossoming-creeper town,
World-teacher, Founder Gurusiddhesvara!

58

Each day they follow one
Fashion! The Saiva society
Is now declining—can you not
Open your eyes and see?
The Lord of the blossoming-creeper town,
World-teacher, Founder Gurusiddhesvara!
Abhors such as
Neglect the plants in their own farm
To water others' farms!

59

What is a vow without good character?
What is one's life without a sense of time?
What is existence bereft of rule?
What is a hymn without
Harmonious response?

What is penance that goes not
With knowledge? What is song
Without a tuneful voice?
Where does he stand—the man
Whose mind forgets
The Lord of the blossoming-creeper town,
World-teacher, Founder Gurusiddhesvara?

60

The heart must blossom as the intellect grows;
And intellect without pure heart is vain!
What if you rub the outside of a pot
Unless you wash it inside?
Like horse without a bridle, what can
The intellect do without the heart?
Enough of this!
Pray, do Thou joint to such an intellect
A sympathetic heart,
Lord of the blossoming-creeper town,
World-teacher, Founder Gurusiddhesvara!

61

You draw away for holiness sake!
To wash your body, is that holiness?
Unless you wash the filthiness of mind
And shed the body's passions, how
Can you attain the great and glorious one?
Unless you crush your ignorance
And shed your pride,
How can you find
The light of Consciousness?
The holiness that purifies
The body and the mind,
That pounds your lust and such to dust,
That washes bcdy and mind,
That is true holiness,

Lord of the blossoming-creeper town,
World–teacher, Founder Gurusiddhesvara!

62

Whenever you perform
Worship of Truth, the jewel of
Non–violence shall appear;
Whenever you daily intone
Hymns with true faith,
The tree of Knowledge shall sprout;
When, knowing yourself,
You get delight in Siva,
Your self-restraint shall be
A lantern on your road,
Lord of the blossoming-creeper town,
World-teacher, Founder Gurusiddhesvara!

63

Accountants must be honest men.
To find these honest men without
A former merit, it's difficult!
A sense of duty is
The touchstone of an accountant,
Lord of the blossoming-creeper town,
World–teacher, Founder Gurusiddhesvra!

64

To listen to a sermon is
Light to the night of lust
To listen to a sermon is
A hammer to evil pride;
To listen to a sermon is
As Ganga's water to
The poison of ignorance;
To listen to a sermon is
Miraculous remedy for

The malady of Birth.
To listen and not to understand
Is waste of time,
Or indigestible food, look you,
Lord of the blossoming-creeper town,
World-teacher, Founder Gurusiddhesvara!

65

Words without sense
And soil that can't be sown
Are just the same!
A waterless pond,
A cracker that won't go
Are just the same!
A wingless bird
A stomach without food
Are just the same!
Knowledge apart from deeds
And meditation without self-control
Are an impediment
Unto Deliverance,
Lord of the blossoming-creeper town,
World-teacher, Founder Gurusiddhesvara!

66

The literature of the saranas
Is food for self-delight;
The nectarous vacanas
Are a rich cake
For nurturing love;
The Siva doctrine of
The Sivasaranas
Is wishing-tree
For Siva-worship;
The Experience of
The Sivasaranas

Is a true mirror to
True devotees,
Lord of the blossoming-creeper town,
World-teacher, Founder Gurusiddhesvara!
Whatever Thy Saranas do,
Whether they speak or write,
Is sweet as milk and honey!

67

Gurus and Viraktas are
Twin eyes for members of society;
The manner of these twe
Should never be like eyes
Affected by the cataract.
Only when the film is taken from the eyes
And moonlight kisses them, and
They realise a happy unity,
The courtyard of society shall have light,
Lord of the blossoming-creeper town,
World-teacher, Founder Gurusiddhesvara!

68

To say, 'I'm higher you are higher'
Should never be the motto of
Gurus and Viraktas.
To preen just as they please,
Not knowing what
The greatness of the great ones is,
Ought not to be their policy,
The Lord of the blossoming-creeper town,
World-teacher, Founder Gurusiddhesvara,
Does not lift up his eyes to see
Such as will sit
Without achieving the beauty of the soul
And, unconcerned about

The benefit of society, will only climb
The mouutaiu of their vanity!

69

In the garden of the body, lo!
We, rooting out the weed of vice,
Must sow the seed of virtue, and
Tear off the noose of Birth.
Banishing the eightfold pride,
We ought to meditate upon
Creation's lord, abolishing
Afflictions, look you,
Lord of the blossoming-creeper town,
World-teacher, Founder Gurusiddhesvara!

70

Literature devoid of spirituality
Is like a body reft of breath;
Politics without righteousness
Is like a sick man who will not
Drink medicine;
Worship without meditation is
Like lamp whose oil is spent,
Lord of the blossoming-creeper town,
World–teacher, Faunder Gurusiddhesvara!

71

What does it profit if you have
Written a couple of books, unless
Your heart's in what you worte?
What does it profit if you have
Sown seed, unless the soil is cleared?
What profit if you have
Done Linge worship unless you've shed
Greed, and stripped yourself of fraud

Lord of the blossoming-creeper town,
World-teacher, Fouuder Gurusiddhesvara?

72

What if your words are packed
With principles, unless
They come into your acts?
What if you have
Essential honey on your lips,
Unless it goes down to your stomach?
When word and deed are one,
It's like a jewel set in gold,
Lord of the blossoming-creeper town,
World-teacher, Founder Gurusiddhesvara!

73

What price a thousand words,
With sweetness in the words
And in the heart but bitterness?
What price to show respect
To elders whom you damn
And teachers whom you rail against,
Lord of the blossoming-creeper town,
World-teacher, Founder Gurusiddhesvara?

74

Mere study without thought
Is like the curds that can't be churned;
As they are churned,
The butter of principles comes out,
Lord of the blossoming-creeper town,
World-teacher, Founder Gurusiddhesvara!
It's true that out of argument
Doctrine is born.

75

The proverb, 'the backyard tree isn't medicine'
Has come true: there is no esteem
For those who really work!
They leave the palace of the light
To enter the mansion of the dark
Labour without encouragement
Is like a flower without perfume,
Is like a mansion without beauty,
Lord of the blossoming-creeper town,
World-teacher, Founder Gurusiddhesvara!

76

Action without right thought
And thought without right action
Look like a building that has not
A firm foundation!
Even as the weapons of
Right action and right thought
Get inspiration as they go,
One sees oneself
In the heart's mirror, look you,
Lord of the blossoming-creeper town,
World-teacher, Founder Gurusiddhesvara!

77

How can you build a monastery
Unless you first build up the mind?
How can you grow creepers and plants
Without first putting up a hedge?
How can you know unless you act?
A monastery is a means
To steady is a means
Lord of the blossoming-creeper town,
World-teacher, Founder Gurusiddhesvara!

78

A promise that does not
Breed confidence is like
A plant put in a desert soil;
Intelligence without a feeling heart
Is useless, like water from a drain,
World-teacher, Founder Gurusiddhesvara!
The life that's lived without
A knowledge of Thy strength
Is even as carrying stones
Up to a hill!

79

Servants should be like this:
A sense of duty ought to be
Their breath of life;
They should be followers of Truth;
They ought not to betray
Their master's secrets, but
Follow him like his shadow;
They ought not to be indolent:
Now, this is service, mark!
This kind of real servant alone
Is ladder of the real Bliss, look you,
Lord of the blossoming-creeper town,
World-teacher, Founder Gurusiddhesvara!

80

If you have learning, you must have
Politeness; if you have
Intelligence, you must have
A feeling heart; if you should be
A yogi, you must live with self-restraint;
If you should have renounced the world,
You should be unattached;
If you are vowed to penance, you should have

No trace of anger; if you are
A poet, you should have
Poetic genius, look you,
Lord of the blossoming-creeper town,
World-teacher, Founder Gurusiddhesvara!

81

If you are a Virasaiva, you must have
The Linga on your person; you must live
With breath as Linga, and Linga as breath;
If you are a Virasaiva, you must yield
Your body to Guru, to Linga your mind,
Your wealth to Jangama; you must believe
In the eight aids of faith;
You must be loyal to the five disciplines;
Must have firm faith in the sixfold hierarchy:
If you are a Virasaiva, you must do
Your duty in the spirit of 'Work is Heaven';
You must wish every creature well;
This kind of Virasaiva shall cross
The ocean of this world
And reach the mansion of Deliverance,
Lord of the blossoming-creeper town,
World-teacher, Founder Gurusiddhesvara!

82

A wife must never leave
Her husband, so shall Siva approve.
A life of harmony between
Husband and wife bears fruit
For the world's tree, look you,
Lord of the blossoming-creeper town,
World-teacher, Founder Gurusiddhesvara!

83

The vacana literature sustains
The soul's delight.

I've plunged into the ocean of
Composing vacanas!
Although it's wide,
There's plenty of hope of my success.
I dive and rise again
And offer gems. I have
A longing for increasing
The beauty of the soul.
In the composition of these my vacanas
My guide
Is the collection of the vacanas
Of the great saints,
Lord of the blossoming-creeper town,
World-teacher, Founder Gurusiddhesvara!

84

The excellence of the mind is higher than
The body's excellence;
The excellence of reason is higher than
The excellence of the mind;
The excellence of the heart is higher than
The reason's excellence;
The excellence of the soul is higher than
The excellence of the heart.
Therefore, the attainment of such excellence
Should be the ultimate
Ideal of a man; look you,
That is the riches of experience,
Lord of the blossoming-creeper town,
World-teacher, Founder Gurusiddhesvara!

85

For a poem's quality
Imagination alone is not enough;
For the body's loveliness

Ornament alone is not enough;
Just as food, knowledge, ornament
Are but the body's supplements,
So thought and conscience, feeling are
Incitements to a poem's quality,
Lord of the blossoming-creeper town,
World-teacher, Founder Gurusiddhesvara!

86

To glean the riches of the heart
A tender heart is root;
In the proportion as you make it clean,
The heart shall glow and glitter,
Lord of the blossoming-creeper town,
World-teacher, Founder Gurusiddhesvara!

87

Sweetness in words,
But jealousy in your breast:
What sort of cleverness is this?
A crooked wickedness within,
But modesty and austerity without:
What sort of piety is this?
A glitter on the outside,
But filth within:
What sort of light is this?
The Lord of the blossoming-creeper town,
World-teacher, Founder Gurusiddhesvara,
Abhors such men as show respect
Without a heart that's clean!

88

Just as a flower
That burgeons from a creeper, glows,
And its perfume is given out,
Even so, a poem sprouts

From austere discipline,
And the delight of poesy,
Growing and growing, doth emerge.
Poetry without austerity
Is like an opaque bead of glass!
The saying, 'One without vision is no bard',
That is, one who is not a seer
Can't be a poet, is true, look you,
Lord of the blossoming-creeper town,
World-teacher, Founder Gurusiddhesvara!

89

To talk is easy, but to act,
Quite difficult; easy it is
Demolishing a house, but difficult
To build one: easy to set a thing on fire,
But difficult to put it out.
To burst into anger is easy; but
To practise patience, difficult;
To live intemperately is easy; but
To exercise restraint is difficult;
To sow dissensions among kin
Is easy; but difficult
To reconcile them again;
To cut down trees and shrubs is easy; but
Conserving them and nurturing them,
Is difficult, look you,
Lord of the blossoming-creeper town,
World-teacher, Founder Gurusiddhesvara!
If you can live according to your words,
That shall be your last birth.

90

What shall I call
The devotees who roam abut
Amid the darkness of this world,

With body full of glamour,
But anger on their lips,
Infatuation in their mind
And vain illusion in their heart,
But worldings, tell me,
Lord of the blossoming-creeper town,
World-teacher, Founder Gurusiddhesvara!

91

If I intend one thing,
It turns out quite another!
Because I strove to ward off
The scandal about 'Muktikanthabharana',
They whip up factional animus!
'The city knows no gratitude, even as
A corpse knows not its ornaments'——
It's just like this!
If, ignorant of the secret of the heart,
You stir caste hatred, how can you
Propagate Basava's principles?
It is as vain as if
You kicked the air and only hurt yourself!
If, without filling your heart with piety.
You fill it with specious words,
How can there be Deliverance?
If there's regard and enthusiasm
To spread the perfume of Basava's principles,
You must think carefully and weigh,
Must make amends and go ahead!
However, if you raise a hue and cry,
It is like dropping a stone yourselves
Upon your feet. 'Will a nose chopped
In anger, heal when you have cooled?'
If, lest you should give scope
For ridicule by others, you desire
The profit of society, only to get

A picture of dark days to come!
Abolish the differences of caste and faction,
Show that we are all blossoms of one tree,
Vouchsafe a broad outlook
Of emotional unity, and lead us all
Towards a high ideal, make us walk
Along the path of light, and so save us,
Lord of the blossoming-creeper town,
World-teacher, Founder Gurusiddhesvara!

92

Ignorant of Basava's principles
And misinterpreting them,
They seek their selfish ends;
Divisons and subdivisions grow
In our society; forgetting the wealth
Of emotional unity in society,
They set each other by the ears;
Unless the spring of heartfelt love
Jets up, emotional unity
Cannot, can never be achieved.
Lord of the blossoming-creeper town,
World-teacher, Founder Gurusiddhesvara!
Make pure the impure wind that blows!

93

Personal hatred is not confined
To individuals; it can play
Havoc, too, with society.
Class-hatred can destroy society.
Setting up hurdles to
Emotional unity. Where fire
Is set unto a tree, does it not
Destroy the entire forest, sir,
Lord of the blossoming-creeper town,
World-teacher, Founder Gurusiddhesvara?

94

Literature is not a threading of words,
It's not imagination's wings;
It is not a dry soil;
It's not the fount of intellect;
True literature is packed
With all the essences;
It is a spread of happy thoughts;
It is a nectarous dish
Of worldly and spiritual experience,
Lord of the blossoming-creeper town,
World-teacher, Founder Gurusiddhesvara!

95

Celibacy without humanity
Is useless, like a forest flower;
It's useless, like a remedy
Inefficacious for a patient's ill;
It's useless, like the rain on sea;
Not disinterested scholarship
Is useless, like a broken dam,
Lord of the blossoming-creeper town,
World-teacher, Founder Gurusiddhesvara!

96

The word is Jyotirlinga-
That is:
The word must be of benefit;
It must be proper, must be terse;
It must be lucid, must be true;
It must have substance and have interest;
It must be rich in experience,
Lord of the blossoming-creeper town,
World-teacher, Founder Gurusiddhesvara!
A word may spoil the love of kin;
A word may spoil one's dutifulness;

A word may spoil states and empires;
Or spoil the joy of everlasting bliss;
But if a word is ruby or pearl,
The darkness that comes wooing you
Retreats defeated, look you,
Lord of the blossoming-creeper town,
World–teacher, Founder Gurusiddhesvara!

97

The test of rice is in the grain;
The test of cloth is in the thread;
The test of mind is in the world;
The test of heart is in the face;
The test of bell is in the sound;
The test of flower is in the scent;
The test of gold is in the touchstone;
The test of nature is in science.
Lord of the blossoming-creeper town,
World-teacher, Founder Gurusiddhesvara,
My test is in Thy hands;
Pray, grant me the strenght to stand my test:
Those who have past Thy test are rare!

98

If you could place the wick
Of cooperation and equality
Upon the platter of the heart;
If you could pour the oil of sympathy—
That's how an institution is begot,
In the light of emotional unity.
If you, without a waste of time,
Can bring together
All the traditional lineages,
Encouragement shall be found
To restoration of society.
There is no sense in differences

Between one lineage and another;
No substance in the differences
Between a Guru and Virakta;
There is no fellowship in differences
Between sub-castes;
When you abolish these three differences,
The flag of Virasaiva sixfold hierarchy
Shall once more fly sky-high,
Lord of the blossoming-creeper town,
World-teacher, Founder Gurusiddhesvara!

99

To save the fallen is great charity;
To lift them with a melting heart
Is essence of religion;
To lead towards the light
Is substance of religion;
To kindle the light of soul
Is secret of religion;
Vouchsafe to me thy grace
That I may understand the secret of these
Religions, and live accordingly,
Lord of the blossoming-creeper town,
World teacher, Founder Gurusiddhesvara!

100

Religion without compassion and
Without action knowledge is
A festival chariot without a pinnacle;
Strength reft of individuality,
And inspiration without light
Are like a temple without Linga,
Lord of the blossoming-creeper town,
World-teacher, Founder Gurusiddhesvara!

101

Society is like a broken pot;
Like a sick man bereft of strength;
It is like a veena without strings;
Like mirror clouded over with dust.
Therefore, Society without
Or love or unity
Is like a bunch of garrulous men,
Lord of the blossoming-creeper town,
World-teacher, Founder Gurusiddhesvara!

102

Language is garment of the heart,
As cloth is garment for the body,
And coating for the Linga;
Knowledge is garment for the soul.
Lord of the blossoming-creeper town,
World-teacher, Founder Gurusiddhesvara,
Semembrance of Thy name
Is shelter of Thy feet!

103

If you cast ghee into the fire,
Shall it not suddenly blaze?
If you place butter in the sun,
Shall it not gradually melt?
If you should make a monkey drunk,
Shall he not dance like mad?
If you don't build a dam
Of faith across
The stream of consciousness,
Will it not fall
Upon you with a crash,
Lord of the blossoming-creeper town,
World-teacher, Founder Gurusiddhesvara?

104

The word spoils intellect;
The word spoils courage too;
The word spoils the tale;
The word can spoil companionship;
But if a word should be a pearl,
How can, then, quarrels be?
As one who's ignorant of the word
Is source of quarrels, so
One who knows it shall bring a ruby,
Lord of the blossoming-creeper town,
World-teacher, Founder Gurusiddhesvara!

105

Through word, you have both love and fear;
Through word, both inspiration and a name;
Through word, both friendship and enmity;
Through word, both poverty and wealth.
Therfore, the word is source
Of sorrow as well as joy, look you,
Lord of the blossoming-creeper town,
World-teacher, Founder Gurusiddhesvara!

106

The importance of
Renunciation is for one
Who has renounced the world:
What worth is it to any other man?
A farmer's work is for
The agricultural specialist:
How can it be mastered by another man?
Knowledge of a machine is for
Its driver: what is it
For any other man?
The detailed knowledge of Dasoha
Is for the triple dasohi; is it

For greedy ones who ask
For woman, gold and land,
Lord of the blossoming-creeper town,
World-teacher, Founder Gurusiddhesvara?

107

The work you do has to be such
That Siva is pleased with it;
The word you use has to be such
That people will approve of it;
The money you ask has to be such
That works for others' good;
The gift you make has to be such
That the recipient is worthy of it.
Lord of the blossoming-creeper town,
World-teacher, Founder Gurusiddhesvara,
My mind must be surrendered unto Thee.

108

If the Guru be himself
In the forest of this world,
How can the disciple be uplifted by him?
How can the Conscious Energy be
In the Guru if there is in him
Contagion of this world?
Can piety emerge
In the disciple, pray?
If a raw fruit is forced
To ripen, will it have
The savour of the fruit itself?
If the hedge rises and begins
To browse upon the crop,
How can the crop increase? Tell me,
Lord of the blossoming-creeper town,
World-teacher, Founder Gurusiddhesvara!

109

Gurus must only give
Initiation; it is not for them
To administer grace;
Jangamas must only administer grace;
It's not for them to give
Initiation; for each one his taks:
The ritual part for the Guru;
The part of knowledge for the Jangama.
If Gurus and Jangamas behave like this
It will be the prelude to the unity
Of Gurus and Viraktas, and
The order of eight aids to faith
Shall be observed, look you,
Lord of the blossoming-creeper town
World teacher, Founder Gurusiddhesvara!

110

Why should I toil
To establish a billion Lingas?
If I am glad because
I have placed Lingas on a billion hearts,
If they are happy, is it not enough?
At sight of men who have
No Linga on their heart, yet claim
That they are Lingavants, I am perterbed.
If I should put a plant
In desert sands, it is ridiculous—
What else is it? Tell me,
Lord of the blossoming-creeper town,
World-teacher, Founder Gurusiddhesvara!

111

Forgetting ostentation, do you display
Religion's real principles!
Religion's plight is now

Like pot of gold
Whose bottom has been cracked!
Look you, some men now roam about
Forsaking religion, with their hearts
Shut down! If you should water a tree,
'Twill sprout and yield you fruit;
But it is bound to wither if you,
Instead of watering it, just climb and sit on it,
Lord of the blossoming-creeper town,
World-teacher, Founder Gurusiddhesvara!

112

Unless your heart blooms and its doors
Are opened, how can you attain
A healthy mind? Unless you break
Your pride and conquer the God of Love,
How can you have a healthy heart?
Unless you brim with love
And knowledge grows in strength,
How can you have a healthy piety?
Therefore, if you can spend
Your body, steady your mind
And add modesty thereto,
Shall the Lord of the blossoming-creeper town,
World-teacher, Founder Gurusiddhesvara!
Be surely pleased with you!

113

It is an innate property
Of nature that you err;
But to admit your fault
Is a virtuous quality;
To err and not to admit
Is like the plunging into
A forest of vice, look you,

Lord of the blossoming-creeper town,
World-teacher, Founder Gurusiddhesvara!

114

Those who know are making fools
Of those who do not, unperceived;
The worthless ones who know are like
A pot of poison that looks like
Nectar, look you,
Lord of the blossoming-creeper town,
World-teacher, Founder Gurusiddhesvara!

115

Let me not listen to
Censure of Guru and Jangama;
One must condemn a fault;
But if you blame the office,
What profit do you have?
One must sweep off
The rubbish from the street;
But if you take off the lights
Along the street, you're kin
Of darkness: nought else can you see,
Lord of the blossoming-creeper town,
World-teacher, Founder Gurusiddhesvara!

116

The Sarana's true wisdom is
Fair speech for holding Hara's feet;
The Sarana's fellowship is
Flowering consciousness
For scorching ignorance;
The Sarana's love is true abode
For realising Experience, look you,
Lord of the blossoming-creeper town,
World-teacher, Founder Gurusiddhesvara!

Thy mercy is to me, look you, Prabhu,
Like to the life-restoring plant!

117

Wealth without the riches of the heart
Is garland of flowers without scent;
Learning without the riches of the soul
Is like a math without a Guru;
Worship without the wealth of piety
Is bell that gives no sound;
Vouchsafe to me the triple wealth,
Lord of the blossoming-creeper town,
World-teacher, Founder Gurusiddhesvara!

118

They call themselves important men:
Are they important who
Trample upon the small?
They call themselves Gurus:
Are they Gurus who mock at Saranas?
They brag they have renounced:
Have they, as long as infatuation and
Attachment dwells in them?
They claim to be ascetics: do not such
Give up their lust and anger, pray?
They claim to be devotees: do devotees
Not worship with devotion, pray?
O Lord of the blossoming-creeper town,
World-teacher, Founder Gurusiddhesvara,
All those who do not realise Thee
Are men who've lost their wits
And are a burden to the world!

119

What though, being ignorant of who he is,
Not cleansing the mind's impurity,

You hurt another man?
How can the seed sown in the marsh
Yield fruit? What though
You babble of Deliverance?
Deliverance cannot be won
Unless there's strength of soul,
Lord of the blossoming-creeper town,
World-teacher, Founder Gurusiddhesvara!

120

What cause to fear provided you are
Disinterested in what you do?
What cause to fear if you are pure
In what you see?
What cause for fear if you are sincere
In what you say?
What cause for fear if you don't have
Ulterior motives when you give,
Lord of the blossoming-creeper town,
World-teacher, Founder Gurusiddhesvara?

121

Unless you clear up your heart's field,
How can you sow there virtue's seed?
If you grow tares of 'I' and 'mine',
How can you eat the harvest of
The Absolute,
Lord of the blossoming-creeper town,
World-teacher, Founder Gurusiddhesvara?

122

Those who forget Thee fool themselves;
Those who deride Thee fall into cares;
Those who remember Thee win happiness,
Lord of the blossoming-creeper town,
World-teacher, Founder Gurusiddhesvara!

123

That a student should become
A scholar of Truth,
He must proceed along
The royal road of Truth;
If he should pray with folded hands,
He'll win the Guru's love;
But if he just puff himself
And sit in idleness,
Can he get Guru's grace?
The secret of scholarship
Is purity, in and out;
On the other hand,
The mere attainment of a degree
And service is futile.
Learning, devoid of modesty,
Ii like a body without life;
It's like a pome without thought, look you,
Lord of the blossoming-creeper town,
World-teacher, Founder Gurusiddhesvara!

124

Look you, the root
Of culture is character;
Look you, the root
Of virtue is the heart;
Look you, the root
Of learning is modesty;
Look you, mercy is
The true Faith's root.
For the grace of
The Lord of the blossoming-creeper town,
World-teacher, Founder Gurusiddhesvara,
True purity is the root!

125

To go up the six steps
You have to trample on the six enemies
And stand; except for those
Who've cultivated in themselves
Practical wisdom born of a pure soul,
No one can master the
Attainment of the sixfold hierarchy, look you,
Lord of the blossoming-creeper town,
World-teacher, Founder Gurusiddhesvara!

126

Among ascetics, renunciation of the self
Is best;
Among attachments, attachment to Siva
Is best;
Among enjoyments, enjoyment of
What has been left by Linga, is best;
Among the yogas, Sivayoga is the best, look you,
Lord of the blossoming-creeper town,
World- teacher, Founder Gurusiddhesvara!

127

To live with aid of knowledge is
Yoga of action; while to speak
With thouht of action is
Yoga of knowledge.
There is no action without knowledge, nor
Knowledge divorced from action; these two—
Knowledge and action—are two sides
Of the same coin—mystic experience.
These two, by mutual and inseparable link,
Are one; the essential union of
Knowledge and action is
The tender shoot of the Great Light;
It is the sap

Of one who enjoys
Deliverance in this life, look you,
Lord of the blossoming-creeper town,
World-teacher, Founder Gurusiddhesvaral

1?8

What if a man without the stamp of grace
Becomes a Guru or a Jangama?
He's not exempt from fear or death!
How can a stone without the stamp of grace
Become a Linga? How can a Lingavanta
Have anything to do with it?
A parliament that does not stand
On a foundation of morality—
What signifies how large it is,
Or what big name it has?
Will it not surely collapse
From time to time,
Lord of the blossoming-creeper town,
World-teacher, Founder Gurusiddesvara?

129

A court of law has to uphold the Truth;
It must be like
A touchstone of honesty;
Or like a mint that sets
The fiyal stamp of truth;
It shold not be a palace of deceit;
It shonld not be
A palace of injustice;
The court of law
Dispensing justice after long delays,
And dressing up untruth as truth
And truth as untruth,
Is only a house
Of bogus justice, nothing else,

Lord of the blossoming creeper town,
World-teacher, Founder Gurusiddhesvara!

130

Piling up stones both neat and strong
And joining them with mortar pounded well,
I've built a tower for the holy House;
Setting six pillars at the nub,
And placing six-and-thirty beams on them
So as to mount a hundred-and-one steps,
I ve planned a lovely gate.
If you should raise your eyes and look,
The top is comely to behold!
To climb up through the gate
One needs to have both power and energy!
If you walk bent and, as the doors
Open, you go up the steps
Of the six storeys, you will reach
The lofty goal!
How can those not accomplished in
The Sive doctrine, realise
The majesty of that mighty gate,
Lord of the blosscming-creeper town,
World-teacher, Founder Gurusiddhesvara.

131

You chatter of equality:
However, you fail to know
Its secret! If you would have equality,
It must spring from a blooming heart,
Like bud that burgeons into flower.
An ostentatious equality
Is like a part played in a play!
The splendorous beauty of equality
Must leap up like a spring
Right from your heart!

An artificial equality
Shows like a lightning flash
And vanishes!
Equality without
Largeness of heart
Is useless, as a field
That is not tilled!
Equality without emotional unity
Is useless, as a Linga not purified,
Lord of the blossoming-creeper town,
World-teacher, Founder Gurusiddhesvara?

132

The purpose of a cheat is just to cheat:
How can he show the way
Of one who will not cheat?
Desire for emotional unity
Deludes the reason. At sight of
Such as deceive with words,
Laying a hedge of equality
And pointing to a fruit of
Emotional unity,
I was amazed,
Lord of the blossoming-creeper town,
World-teacher, Founder Gurusiddhesvara!

133

At sight of men who have no mind
According with their words, my mind is grieved.
To wash the body and mind, the word is key;
To wash the mind and body, the word
Is bane, "The word you speak
Goes off; the pearl you break is gone."
Although the word be bitter to the lips,
Unto the belly it must be sweet;
Such word shall be the Effulgent Linga,

Lord of the blossoming-creeper:town,
World-teacher, Founder Gurusiddhesvara!

134

If your designs and policies
Are different within and without,
How could you get
Emotional unity?
If you should pluck an unripe fruit,
The sweet taste shall escape you!
For one who purifies his heart
Attainment of emotional unity is sure, look you,
Lord of the blossoming-creeper town,
World-teacher, Founder Gurusiddhesvara!

135

When heart meets heart,
What needs a middleman?
When you relish the food you eat,
What needs a middleman?
When you know your own heart,
What needs a middleman?
When you mend your own fault,
What needs a middleman?
When Gurus and Viraktas become one
Of their own accord,
And nurture society's plant,
Can there be impediment
From anybody else,
Lord of the blossoming-creeper town,
World-teacher, Founder Gurusiddhesvara?

136

Some say, removing the hedge of high and low,
Demolishing tradition's wall,
Breaking the lock of this caste and that,

They'll throw open
Religion's gate. At sight of
Impostors who, putting truth in words
And castes within their mind,
Donning religion's garb,
Influence the minds of simple men,
Laughs the Lord of
The blossoming-creeper town,
World-teacher, Founder Gurusiddhesvara!

137

If you would join, you must
Like enemies who hug
Forgetting their enmity!
If you would sing, you must
So every beast listens to you!
If you would beg, you must
As you should soon attain life's wish.
If you would love, you must
The Lord of the blossoming-creeper town,
World-teacher, Founder Gurusiddhesvara,
So he will come with love and bless!

138

Come ye and see
The splendour of the row of lights!
Wherever you look, a row of lights
Is visiblel and if you go inside,
And farther in, oil-lamps appear.
If you pour the oil
Of true devotion and
Kindle the wick of knowiedge, the Conscious Sun
Of the Lord of the blossoming-creeper town,
World-teacher, Founder Gurusiddhesvara,
Who dwells in the temple sanctuary,
Shall shine all by Himself!

139

Emotional unity without pure soul
Is like unwatered tree;
Equality without pure soul
Is like a pillar that's not firm;
A life without a soul that's pure
Is like an untilled field, look you,
Lord of the blossoming-creeper town,
World-teacher, Founder Gurusiddhesvara!

140

A Sivayoga shrine
Is a centre of spirituality:
For those who would make bloom
The lotus of their heart, it is
The sun of knowledge; for those
Who would purge off
The mind's impurites
It's meditation's home;
For those who've shed
The body's infatuations, to stay
At a Sivayoga temple
Is perfect fulfilment,
Lord of the blossoming-creeper town,
World teacher, Founder Gurusiddhesvara!

141

The knowledge of the outer world
Is index of the inner one;
How can the man who has
No knowledge of the sandal scent
Apply the sandal-paste?
How can the man who's void
Of practical knowledge, embrace a trade,
Lord of the blossoming-creeper town,

World-teacher, Founder Gurusiddhesvara?
Withdrawing from the outer world, look you,
Is the highest means!

142

Infatuation dupes a man;
It secretly gnaws the heart;
It vexes you in several ways;
It makes you quit
The palace of knowledge; and
It screens the Truth,
O Lord of the blossoming-creeper town,
World-teacher, Founder Gurusiddhesvara!
I see no one who is
Infatuated with Thee!

143

Silence swells the wealth of intellect;
Raises the wealth of manliness;
Makes bloom the wealth of soul.
Therefore, as when garments are washed,
All dirt is cleaned away,
So, silence, growing, cleans
The mirror of the heart;
Silence, without the purity of soul,
Is like the meditation of a crane, look you,
Lord of the blossoming-creeper town,
World-teacher, Founder Gurusiddhesvara!

144

If knowledge is translated into act,
Ignorance disappears
And the soul's peace is found,
And you get real joy;
Knowledge divorced from action is like
Unpolished plate, look you,

Lord of the blossoimng-creeper town,
World-teacher, Founder Gurusiddhesvara!

145

Thinking is function of the intellect:
Planning, the function of the heart.
If thought and planning can be joined,
It, like, when you have dug the soil,
Planted the tree and watered it,
There is the glory of the crop,
Lord of the blossoming-creeper town,
World-teacher, Founder Gurusiddhesvara!

146

Where learning is, there is modesty:
A full pot does not overflow!
Learning divorced from modesty
Is like climbing a withered tree,
Like wearing a broken pearl,
Lord of the blossoming-creeper town,
World-teacher, Founder Gurusiddhesvara!

147

All words are pearls;
All minds are dark!
Outside, all bright;
Inside, all fith!
If pearl and light are one,
If word and mind should join
And grow into Effulgent Linga,
The glory of such a person shall
Exceed all praise, look you,
Lord of the blossoming-creeper town,
World-teacher, Founder Gurusiddhesvara!

148

The tree of Virasaiva society
Being overgrown with sub-castes like weeds
That have taken deep roots
And will not let the tree sprout and yield fruit,
So-called reforners are
Encouraging factions and pour
Hot water on root of the tree.
While spreading the tree in words,
They increase the factions in deeds!
This is the wisdom that they show!
What sort of growth is this?
What sort of equlity?
What way to follow the Path?
What way to mend society!
At sight of these,
The Lord of the blossoming-creeper town,
world-teacher, Founder Gurusiddhesvara
Laughs in contempt!

149

If all religious teachers enter politics,
How can religion still be bright?
Unless the people who hold
The reins of government
Enter religion, how can
Politics gain enlightenment?
If, leaving the one, you join
The other, world peace is possible,
Lord of the blossoming-creeper town,
World-teacher, Founder Gurusiddhesvara!

150

A bilva leaf
Without three petals,
An umbrella without a handle—

How can they be?
A forest without beauty,
A song without truth,
How can they be?
A woman without virtue,
A poet without spark—
How can they be?
A biography without truth of life
A diganity without substance—
How can they be?
wealth without generosity,
A will without restraint—
How can they be,
Lord of the blossoming creeper town,
World-teacher, Founder Gurusiddhesvara?

151

A person without peace,
A nation without peace,
Is useless, like a well
That has no water!
Religion without peace,
And peace without religion
Are interwoven mutually,
Like warp and woof, look you,
Lord of the blossoming-creeper town,
World-teacher, Founder Gurusiddhesvara!

152

Society's wall is broken
Through differences of pedigree;
Society's house is shaken!
If you, upon the lampstand
Of Truth, should place
The lamp of equality,
Pour into it the oil of love

And put co-operation's wick,
And kindle the light of knowledge,
The light shall show and dispel
The differences in society
And blaze like light in light,
Lord of the blossoming-creeper town,
World-teacher, Founder Gurusiddhesvara!

153

In the three worlds,
In the three tenses,
In the three states,
The deathless matha
Is the 'matha of
Three thousand', sir!
If, shedding the three,
You know the three,
You'll reach the matha's door!
He whose body, mind and heart
Are pure, shall see
The light within the matha, sir,
Lord of the blossoming-creeper town,
World-teacher, Founder Gurusiddhesvara!

154

The judge who administers justice
Must mete it ruthlessly;
He must not give any scope, look you,
To injustice and untruth!
The verdict that he gives
Ought to be such as to deserve
To be written in letters of gold,
With reverence; so that,
Should God arrive, He must
Be pleased and give assent,

Lord of the blossoming-creeper town,
World-teacher, Founder Gurusiddhesvara!

155

I am amazed to see
Men who deceive others,
Donning the costume of a clown!
Those who do not display
A mind according with
Clean words and deeds,
Are hateful to
The Lord of the blossoming-creeper town,
World-teacher, founder Gurusiddhesvara!

156

It's said, 'Whatever comes,
To remain as before
Is equanimity'.
Whatever the elders call
In any way they please,
That is their love!
To shine, having defeated
The enemies within and without,
That's full consciousness!
To set one-pointed eyes
On Linga and be oned with Him,
That is identification, look you,
Lord of the blossoming-creeper town,
World-teacher, Founder Gurusiddhesvara!

157

A big fish devours small fish;
So they call themselves big,
Trample upon and crush the small;
Will the Lord of the blossoming-creeper town,
World-teacher, Founder Gurusiddhesvara,

Fail to cast dust into the mouths
Of those who display
The arrogance of authority
And crack their libellous Jokes?

158

If those who have
Too much attachment, claim
To have renounced the world,
Are they ascetics?
If they claim to be ascetics,
without conquering greed,
without controlling anger,
Are they ascetics?
If they claim to be ascetics,
Without supressing their senses,
Without mortifying their bodies,
Are they ascetics?
If they claim to be ascetics,
Without worshipping Linga,
Without enhancing their hearts,
Are they ascetics?
Although they may appear to be
Popular, the ascetics who live
Withdrawn like lotus, but are
Attached to other
Things than self,
Are true ascetics, look you.
Lord of the blossoming-creeper town,
World-teacher, Founder Gurusiddhesvara!

159

To flatter when they want something,
To crush you when they don't,
Is that the ethics of editors?
To see things and understand

With an impartial eye and heart,
And write for joy of writing,
That is the ethics of editors!
Lord of the blossoming-creeper town,
World-teacher, Founder Gurusiddhesvara!

160

Talk without experience,
Knowledge without experience,
Meditation without experience,
Silence without experience
Are like the carrying of a stone
Unto a hill, look you,
Lord of the blossoming-creeper town,
World-teacher, Founder Gurusiddhesvara!

161

Some say it will not do
To foster one's religion through
Schools and colleges;
Others say it won't do
To foster one's religion through
Lessons and lectures;
Still others say it will not do
To foster one's religion through
Telling of beads and penances.
Your acts, your outlook and
Your company must be
Perfectly pure. If you
Should separate the three,
How is the fostering
Of religion possible?
O Lord of the blossoming-creeper town,
World-teacher, Founder Gurusiddhesvara,
Although the way of saying it differs,
The goal they aim at is the same!

162

Of learning, teaching, training, if
You leave one, practising
Another, it is no good!
As for the building of a house,
You need both stones and iron,
Mortar and rubble, so
For keeping in repair
Religion's house, you needs must have
Learning and higher learning,
Lessons and lectures too,
Telling of beads and penances,
O Lord of the blossoming-creeper town,
World-teacher, Founder Gurusiddhesvara!

163

When there is soil, there is
No water; when water, there's no soil–
This is a paradox of earth,
When there is gram, there are no teeth;
When there are teeth, no gram—
This is the paradox of life,
When you have wealth, you lack
The will to give; and when
You have the will to give, no grain—
This is the paradox of nature,
O Lord of the blossoming-creeper town,
World-teacher, Founder Gurusiddhesvara,
I have a mind to love Thee,
But cannot sound its depth!

164

They say that Thou
Who art Manjunatha,
Art Sivalinga incarnate;

They say that for Thy worship one does need
Sweet basil petals, sandal-paste;
They say that those who worship Thee
Are Madhvas; and that
The religious authorities
Who look after Thy seat
Are Jains: how strange!
What matters who they are?
Devotion knows not
Distinctions and differences,
O Lord of the blossoming-creeper town,
World-teacher, Founder Gurusiddhesvara!

165

You must be glad to see
Those who serve food
At Dharmasthala; you must learn
From seeing the wealth of Piety
At Dharmasthala; you must be glad
To know the synthesis of all faiths
At Dharmasthala,
O Lord of the blossoming-creeper town,
World-teacher, Founder Gurusiddhesvara!

166

If you should leave your wife,
Desiring another, how can there be
A harmony in life?
If you add salt to milk,
It's spoilt: can it taste sweet?
If a worm bores a flowering creeper,
It withers: can it bloom,
O Lord of the blossoming-creeper town,
World-teacher, Founder Gurusiddhesvara?

167

The cycle of this world
Is as a grinding-stone.
The grains that are ground therein
Are all the creatures of this world;
The peg that is in it
Is Parasiva; the grains
Surviving in its shelter are
Souls delivered in this life, look you,
Lord of the blossoming-creeper town,
World-teacher, Founder Gurusiddhesvara!

168

Behold, they go about,
Forgetting Him with poison in His throat,
By concentration in the things of sense,
Engrossed in this miserable world,
Attached to sinful things.
Through such attachment, the seed of Lust is born,
Through lust does anger sprout,
Through anger does illusion grow,
And through illusion grows
The memory's destruction; thus,
The tree of lust bears fruit,
And through the loss of intellect
All things are lost,
Without way or goal,
Like madman bereft of brain
Or monkey drunk with wine.
If you could chop and throw away
The tree of lust with knowledge as your axe,
Both death and fate shall run away
And there will be grace of Him
Who wields the trident with his hand,
O Lord of the blossoming-creeper town,
World-teacher, Founder Gurusiddhesvara!

169

The Guru is the Sun of Consciousness
Who drives away the dark of ignorance;
He is the boatman taking you across
The ocean of rebirth;
He is the Parasiva who has destroyed
The sense of life and is filled with
The spirit divine. He is
The wishing-gem that can fulfil
Whatever you desire; he is
The teacher who declares
'The entire world is in the Linga';
He is compassion personified,
Who vouchsafes grace so that
True pity is confirmed; this kind of Guru
The revelations praise, saying, 'There's nought
Greater than Guru', look you,
Lord of the blossoming-creeper town,
World-teacher, Founder Gurusiddhesvara!

170

If you regard the Guru as a man,
You cannot escape calamity;
If you forget the holy Guru,
Misfortune is assured for you;
If you mock at the Gurudeva,
Sorrow is sure to be your lot;
If you do not obtain the Guru's grace,
The curse of birth is sure for you,
Lord of the blossoming-creeper town,
World-teacher, Founder Gurusiddhesvara!

171

The holy Guru shows you
The nature that is his;

He shows his higher Consciousness;
He shows his Real bliss;
He leads to Liberation's way
The disciple who believes in him.
As Guru of this kind, he saves all
O Lord of the blossoming-creeper town,
World-teacher, Founder Gurusiddhesvara!

172

Instructed by the holy Guru, you break
The cycle of rebirth;
Instructed by the holy Guru, you avert
A human birth;
Instructed by the holy Guru, you are
Illumined in and out;
Instructed by the holy Guru, you achieve
The consubstantial union of
Linga and anga, look you,
Lord of the blossoming-creeper town,
World-teacher, Founder Gurusiddhesvara!

173

One who has become a Guru must
Keep perverse pride and egotism away;
One who has become a Guru must
Destrory all greed and lust of flesh;
One who has become a Guru must
Crush all illusion and infatuation;
One who has become a Guru must
Renounce attachment to all things;
Such a holy Guru can rid
His disciple of his bonds of birth.
O Lord of the blossoming-creeper town,
World-teacher, Founder Gurusiddhesvara,
The so-called Gurus who go about
In darkness of ignorance

Are like blind men who drag
Their disciples along a blind path!

174

Wearers of Linga are above
The fear of birth;
Above both anger and pain;
Above pollution and sin;
Therefore, those who wear Linga
And, living with Linga as their very breath,
Are oned with Bhavalinga,
Know neither birth nor death, look you,
Lord of the blossoming creeper town,
World-teacher, Gurusiddhesvara!

175

To purge the mind's impurity,
Converse with Saranas is the key;
To raze the bodg's infatuation,
The company of mystics is the key;
To know the union of Linga and anga,
Worship of Istalinga is the key,
O Lord of the blossoming-creeper town,
World-teacher, Founder Gurusiddhesvara!

176

For Virasaivas, Linga is
The fivefold breath;
In order to know oneself
The mirror is the heart;
The heart devoid of Linga is
Like sky without the sun,
Like wife without her lord, look you,
Lord of the blossoming-creeper town,
World-teacher, Founder Gurusiddhesvara!

177

Linga, that holds the universe within Himself
Came to the palm, reduced to a speck.
The Linga vouchsafed by the Guru is
Filled with the spark of Consciousness.
To shed the body of flesh
And become a divinised body
Linga is the key,
O Lord of the blossoming-creeper town,
World-teacher, Founder Gurusiddhesvara!

178

Those who have the Linga must
Keep burning the body's traits;
Those who have Linga must
Have a strong faith
In service to Guru, Linga and Jangama.
If, having the Linga,
Those monkey traits persist,
How can the Lord of the blossoming creeper town,
World-teacher, Founder Gurusiddhesvara,
Be pleased with you?

179

What if you understand
The Linga principles, unless
You wear the Linga? Is it not
Just reproducing like
A parrot's lesson, pray?
What if you cram your words
With sap of principles?
It is like washing a pot outside
Without washing it inside.
What if you have an outer sheen, unless
You have the light within?

It will be useless, like
A scentless sandal-tree,
Or sesamum that has no oil,
Lord of the blossoming-creeper town,
World-teacher, Founder Gurusiddhesvara!

180

It is a fact that Jangama, mark you,
Pervades the world:
He is the embodied spark of Consciousness!
The sixfold hierarchy incarnate, too;
The place where such a Jangama
Abides, is holiest centre
Of pilgrimage; the Jangama
Is Guru's Guru; so says
The experience of the Saranas,
O Lord of the blossoming-creeper town,
World-teacher, Founder Gurusiddhesvara!

181

The man who has become a Jangama
Must have shed all attachments, and put on
The garment of Consciousness;
Must be free from
The five afflictions; must engage himself
In meditation on the Five-faced one;
This kind of Jangama wishes well
Of every creature, and he dwells
Within the Devotees' lotus-heart
O Lord of the blossoming-creeper town,
World-teacher, Founder Gurusiddhesvara!

182

Some people, ignorant
Of Jangama's strenght, speak ill of him;

If devotes who seek
To realise themselves, should mock
At the Jangama principle, it is like
Uprooting trees that yield us fruit,
Look you. Lord of the blossoming-creeper town,
World-teacher, Founder Gurusiddhesvara!

183

The Jangama's Padodaka
Washes the mind's impurities;
When Jangama's Padodaka
Is sprinkled,
The tree of principles shall grow
In the soil of the Devotees' heart;
When you taste it with faith,
What you desire shall be attained,
O Lord of the blossoming-creeper town,
World-teacher, Founder Gurusiddhesvara!

184

The meed of sipping the Jangama's
Padodaka with fear and love
Is greater than one-billion pilgrimages
To holy centres; if Guru-Padodaka,
Poured on the Jangamas' big toes,
Becomes Kriya-Padodaka and Jnana-Padodaka,
And, penetrating the Devotee through Linga,
Is then related to
Ista, Prana and Bhavalinga,
It shall bring you close to
Deliverance, look you,
Lord of the blossoming-creeper town,
World-teacher, Founder Gurusiddhesvara!

185

The Prasada obtained from the holy Guru
Is Pure Prasada;
The Prasada obtained through Linga
Is Perfect Prasada;
The Prasada obtained through Jangama
Is Absolute Prasada;
If, knowing this order, you taste Prasada,
Your body, mind and heart
Shall be made pure, and be
Fulfilled of grace, look you,
Lord of the blossoming-creeper town,
World-teacher, Founder Gurusiddhesvara!

186

If you should offer to the triple Linga
Prasada which the Guru has touched and given,
Your triple body will be purified,
The screen of triple impurity
Shall be withdrawn,
And, as the essence of Consciousness
Joins with the sea of Consciousness,
The Prasadi who is oned
Shall taste the joy of Consciousness,
O Lord of the blossoming-creeper town,
World-teacher, Founder Gurusiddhesvara!

187

By wearing holy ashes you shall be
Free from the triple natural traits;
You shall destroy the tree impurities;
You shall be rid of
The three desires;
You shall be delivered from
The triple Karma.
When sin has been averted through

The holy ashes, and all of you is pure,
It shall be easy to please Thee,
Lord of the blossoming-creeper town,
World teacher, Founder Gurusiddhesvara!

188

If you apply the holy ash,
(Made of the dung of cow) upon your brow,
The evil letters of the writ of fate
Shall disappear! If you apply
The holy ash, by Padodaka made pure,
In the two-and-thirty spots,
Reciting the great spell,
The mind's and body's maladies
Shall be destroyed,
And the spark of divine Consciousness
Shall shine,
O Lord of the blossoming-creeper town,
World-teacher, Founder Gurusiddhesvara!

189

The forehead without the holy ash
Is like a leafless tree;
The holy ash that is not made
Of dung of cow is like
A cow that yields no milk.
O Lord of the blossoming-creeper town,
World-teacher, Founder Gurusiddhesvar,
The holy ash is Siva's body's light!

190

If you wear on your head
Rudraksa that was born
In Rudra's enlightened eye,
You will yourself become
He whose adornment is a snake!

By wearing Rudraksa, you can acquire
The meed of doing a million sacrifices;
By wearing Rudraksa, you can attain
The meed of doing penance a long time;
'Should a Rudraksa garland shine
Around your neck, it is
As good as sitting in Kailasa'–
The Agmas proclaim, look you,
Lord of the blossoming-creeper town,
World-teacher, Founder Gurusiddhesvara!

191

By contact with Rudraksa
Sin is disloged;
If you should wear Rudraksa,
Diseases and maladaies of mind
Take flight;
By worshipping Rudraksa, you make
Karmas take to their heels!
This being so, the wearers of Rudraksa
Get worship as pure souls,
O Lord of the blossoming-creeper town,
World-teacher. Founder Gurusiddhesvara!

192

Should you wear garlands of Rudraksa,
Your chain of births shall be curtailed;
A garland of Rudraksa is an ornament
Of the body glorified;
The real devotees who tell
The Rudraksa rosary, are
Eternally content, look you
Lord of the blossoming-creeper town,
World-teacher, Founder Gurusiddhesvara!

193

For a Devotee, the five-syllabled spell
Is fivefold breath;
Meditation on the fivefold spell
Tramples upon the accumulated karmas;
To tell your beads with the five-syllabled spell
Is verily your transformation into
Parasiva Himself, look you,
Lord of the blossoming-creeper town,
World-teacher, Founder Gurusiddhesvara!

194

If you prefix the Ohm
To the five-syllabled spell,
You get the six-syllabled spell;
If you recite the six-syllabled spell,
The six fold passion runs away
And Parasiva's presence is possible,
Lord of the blossoming-creeper town,
World-teacher, Founder Gurusiddhesvara!

195

Among the ways of telling beads,
The mental recitation is the best;
Among the penances,
The highest penance is
To walk according to the Truth;
Among the various spells,
The greatest is the six-syllabled one,
O Lord of the blossoming-creeper town,
World-teacher, Founder Gurusiddhesvara!

196

By wearing the bilva-leaf
Of Piety, by offering the incense of joy,
By worshipping Linga and making strong one's faith,

One must attain the everlasting Bliss;
By offering tasty food to Linga,
By shedding the body's weaknesses,
One must attain the joy of Consciousness;
By adding to the milk of love
The sugar of Enlightenment,
By tasting the nectar of Experience,
One must attain
The perfect Bliss,
O Lord of the blossoming-creeper town,
World-teacher, Founder Gurusiddhesvara!

197

To worship, crushing the eightfold pride,
Giving the eight enjoyments up,
Forgetting the aight accomplishments
And eight fortunes,
Acquiring the eight aids to Faith,
Is the eightfold mode of worship, look you,
Lord of the blossoming-creeper town,
World-teacher, Founder Gurusiddhesvara!

198

If one is a Devotee, one must
Be full of fear and piety;
One must be pure in word and deed,
And know the triple piety;
One must be perfect in
Right discipline;
Must be fulfilled
Of the right thoughts;
One must be a lover of
Guru, Linga and Jangama.
This kind of Devotee, look you,
Is the true Devotee,

Lord of the blossoming-creeper town,
World–teacher, Founder Gurusiddhesvara!

199

A devotionless Devotee
Is like a honeyless beehive;
A Devotee who has no strength
Is like a field without manure;
A Devotee who does not take
The path of Deliverance
Is like a house that has no lamp,
O Lord of the blossoming-creeper town,
World-teacher, Founder Gurusiddhesvara!

200

This is the manner how
A worldling becomes a Devotee:
He has to overcome anger and lust;
Both pride and jealousy he must crush;
He must avoid
Attachment and aversion both;
He has to trample down the eightfold pride
Shed all impurities such as Maya;
Must burn the ego and other infirmities;
Right conduct and right discipline
Must be a devotee's breath of life.
This kind of Devotee is free
From bandage of rebirth,
O Lord of the blossoming–creeper town,
World–teacher, Founder Gurusiddhesvara!

201

What kind of Devotee is he,
Lacking in purity of heart?
What kind of Devotee, whose mind
Is still unclean?

What kind of Devotee, who has not shed
All fraud and evil speech?
What kind of Devotee is he whose heart
Is in material joys?
What kind of Devotee, who is
A miserable prey unto
The malady of birth?
What kind of wretched Devotee is he
Who lacks the grace
Of the Lord of the blossoming-creeper town,
World-teacher, Founder Gurusiddhesvara?

202

A Devotee should never think
Of differences between
Guru, Linga and Jangama;
He should not discriminate
Between high and low in Piety,
Only to show how smart he is!
For one who is a Devotee,
All piety is breath of life,
O Lord of the blossoming-creeper town,
World-teacher, Founder Gurusiddhesvara!

203

The dwelling of the pious devotee is Heaven;
His head is a golden pinnacle;
The Lord of the blossoming-creeper town,
World-teacher, Founder Gurusiddhesvara,
Sits in the heart of such a one,
And dances with joy!

204

For me the devotees are
As dear as life; they are
The brothers of my soul;

The devotees, for social growth,
Are the mainstay; the sweet
Relationship between
Guru and disciples is honey-like,
Look you, Lord of the blossoming-creeper town,
World-teacher, Founder Gurusiddhesvara!

205

He is a Mahesvara who has shed
Infatuation; who has destroyed
The ardour of body and mind;
Who has translated good thoughts
Into right deeds; who turns
The good and beautiful into the true;
He is a Mahesvara who knows
That 'He is I' and has seen
The great Light, look you,
O Lord of the blossoming-creeper town,
World-teacher, Founder Gurusiddheshvara!

206

The Mahesvara must befriend
No woman who's not his wife;
He will not steal
Another's property;
He must make strong
His faith in Linga;
He is no Mahesvara who goes about,
Not being pure in word and deed,
At his sweet will, look you,
O Lord of the blossoming-creeper town,
World-teacher, Founder Gurusiddhesvara!

207

Behold the Mahsvara- he never breaks
The vow he has taken;
Behold the Mahesvara- he never trusts
The perishable body of flesh;
The man who shows compassion towards
All living creatures, and concentrates
His mind upon spiritual joy,
Is the brave Mahesvara, look you,
Lord of the blossoming-creeper town,
World-teacher, Founder Gurusiddhesvara!

208

The Mahesvara is not caught
Among the waves of sense that dash,
Viciously, in the ocean of this world;
He is not one to fall
Into the net of Maya;
He will not step into
The five afflictions' cage;
The great virtue of the Mahesvara,
Who, shedding the 'I' and 'Mine',
Trampling upon both pride and jealousy,
Opening the portals of the heart,
Spreadling the message of the Truth
Unto the world,
Erasing all gross thoughts,
Shows the Lord's feet
And serves the experience of
The joy of Consciousness,
Is very essence of the Truth, look you,
Lord of the blossoming-creeper town,
World-teacher, Founder Gurusiddhesvara!

209

How can the substances
Not offered to Guru become Prasada?
How can the substances
Not offered to Linga become Prasada?
How can the substances
Not offered to Jangama beome Prasada?
He is the Prasadi who
Offers Prasada to Guru, Ling and Jangama
And thence receives it, look you,
Lord of the blossoming-creeper town,
World-teacher, Founder Gurusiddhesvara!

210

If you serve food upon a plate
Not rubbing it bright
Nor washing it inside,
How can it be clean?
If you should taste the food
After you have washed and shined
The platter of your heart
With the right intellect,
It will be pure Prasada,
O Lord of the blossoming-creeper town,
World-teacher, Founder Gurusiddhesvara!

211

Three are the modes of Prasada-
The Pure, the Perfect, the Absolute.
If you are a Pure-Prasadi, you must
Offer the form to Istalinga;
If you are a Perfect-Prasadi, you must
Offer the taste to Pranalinga;
If you are an Absolute Prasadi, you must
Offer your satisfaction to Bhavalinga
The Sivasaranas who

Offered three kinds of Prasada
To the three modes of Linga,
Have won Deliverance, look you,
Lord of the blossoming-creeper town,
World-teacher, Founder Gurusiddhesvara!

212

The Prasada eaten while you repeat
The Siva-mantra with every morsel you eat,
Is the true Prasada: can it be, afterwards, just food?
Once rice has been processed to food,
Can it be, afterwards, just rice?
When any food has once been served,
Made pure by touch of the Jangama's hand,
Can it be, afterwards, just food,
O Lord of the blossoming-creeper town,
World-teacher, Founder Gurusiddhesvara?

213

At sight of those who go about
In ignorance of the glory of Prasada,
Not washing their hands or mouth
And eating as they please,
My heart is pained.
At sight of those who fall into
The darkness of Karma,
Letting drop anywhere
The blessed food which is
The world's support,
My spirit burns.
Unless you have faith in Prasada,
How shall the Lord of the three worlds
Bestow on you both rain and crop?
Knowledge by way of Prasada?
By Prasada, the purity of act,
When your three inner senses are made pure,

By way of Prasada, you shall be free from birth and death,
O Lord of the blossoming-creeper town,
World-teacher, Founder Gurusiddhesvara!

214

For betterment of health,
Prasada is the source;
For growth of dedicated work,
Prasada is the source;
To shed the triple body's triple pain
And know oneself,
Prasada is the source,
O Lord of the blossoming-creeper town,
World-teacher, Founder Gurusiddhesvara!

215

If, having got the grace through a Jangama,
You place the platter on your lap
And eat Prasada,
Will you be a Prasadi, pray?
It is an outward show,
And nothing more!
If you are a Prasadi, you have to wash
The sin that is the platter of your heart,
And clean the triple impurity
As if offering it;
And being pure of soul, you'll see the Light,
O Lord of the blossoming-creeper town,
World-teacher, Founder Gurusiddhesvara!

216

If you are a Pranalingi, then
Your breath must be Linga
And Linga your breath.
One who has perfect knowledge of

Truth-Consciousness-Bliss
Is a Pranalingi, look you,
Lord of the blossoming-creeper town,
World-teacher, Founder Gurusiddhesvara!

217

Unless one sheds the sense of life,
How can one be an anga?
Unless it has worship done,
How can it be Linga?
Unless it is the soul-incarnate,
How can it be Pranalinga,
Lord of the blossoming-creeper town,
World-teacher, Founder Gurusiddhesvara?

218

Those who know the glory of Pranalinga
Have to be such as will not be swayed in mind
Towards the Static Linga.
One has to be engrossed in
Enlightened discipline;
One has to have shed
The illusion of this world;
One has to know
The symbol of Knowledge. He who,
Transcending the twain, is made
Consubstantially one with Linga
Is the true Pranalingi, look you,
Lord of the blossoming-creeper town,
World-teacher, Founder Gurusiddhesvara!

219

Unless they shed the doubt
Of In and Out; unless they transcend
The triple ego; unless
They place the throne of Love

Within their body's temple;
Unless they know
The Pranalingi-sthala itself,
How can the men who worship be
Pranalingis, pray,
O Lord of the blossoming-creeper town,
World-teacher, Founder Gurusiddhesvara?

220

The Sarana who has
Erased his sensual traits,
Trampled upon his eightfold pride;
Cancelled the seven vices and broken
The illusion of ignorance;
Who has transcended Will and Won't,
And, freeing himself
From obligation to this world,
Gone past the curse of birth
And made his acts in harmoney with his word,
Behold the real Sarana.
In the Lord of the blossoming-creeper town,
World-teacher, Founder Gurusiddhesvara!

221

The Sarana is immune
To Cupid's arrow; never breaks
The vow he has taken; never quails
Before censorious speech,
Nor swells with joy to hear his praise;
He is not overwhelmed by doubts;
He worships as if the Sarana is wife
And Linga Lord: is there in him
Fear of rebirth,
O Lord of the blossoming-creeper town,
World-teacher, Founder Gurusiddhesvara?

222

Would you call them Saranas
Who go about
With sacred ash upon their brows,
A rosary in their hand,
And drag a chain of births within their hearts?
No, not at all!
Look you, the constant Saranas are those
Who, having reduced
To ashes the god of lust,
Repeat the six-syllable spell,
Worship the Linga in six modes,
And, tearing up the garland of rebirth,
Are consubstantially united with
The destroyer of rebirth, look you,
Lord of the blossoming-creeper town,
World-teacher, Founder Gurusiddhesvara!

223

The Sarana never fails
In word or deed;
He never depends on whomsoever he be;
The Sarana, being pure in word and deed,
Heedless of the world's play,
Nor caring for outer pomp and circumstance,
Dwelling in joy of the Reality,
Shall see the Absolute none else can see,
O Lord of the blossoming-creeper town,
World-teacher, Founder Gurusiddhesvara!

224

The Saranas' dwelling is very Heaven;
The place where Saranas are
Is the most holy centre of pilgrimage;
Where they are, are all

The sacred waters; their way
Is the foundation of the virtuous path;
Their fellowship destroys
The noose of birth; their look
Renders life holy.
O Lord of the blossoming-creeper town,
World-teacher, Founder Gurusiddhesvara,
The company of the Saranas
Is pure as gold, like iron touched
By the alchemic stone!

225

Emotional unity means
That it must flow like stainless water;
Must be as ocean calm;
Must mingle as waters together mix;
Must be as perfume hid in flower;
Like milk that blends with milk,
O Lord of the blossoming-creeper town,
World-teacher, Founder Gurusiddhesvara!

226

What needs the smear of joy and grief
One who has realised himself?
What needs he the difference
Of high and low?
What needs he the infatuation of
The I and Me?
The Lingaikya, who, having shed
The corporal traits,
And gained the sense divine,
Is spotless and immaculate—
What needs he the curse
Of birth and death,
Lord of the blossoming-creeper town,
World-teacher, Founder Gurusiddhesvara?

227

The Lingaikya is for ever free;
From karma and passion free;
A perfect one, if you would know,
O Lord of the blossoming-creeper town,
World-teacher, Founder Gurusiddhesvara!
Is it possible for any one
Who bears the burden of this earth to know
The nature of the true Lingaikya?

228

Shall you attain
The consubstantial union of Linga and anga
By simply sitting and worshipping Linga?
Unless you cancel the
Hallucination of the will
And shed the illusion of Maya,
Shall you succeed
If you just seek to be made one
With the formless Absolute?
O Lord of the blossoming-creeper town,
World-teacher, Founder Gurusiddhesvara,
In order to become a void
In the Great Void,
You must have shed all fear!

229

In the heart-temple's tower,
The Ohm-shaped bell
Peals with the tone of Ohm.
Do listen, you!
Listen you, how,
One turned to a hundred-and-one,
And hundred-and-one to one,
It carries sweetness to the ear!
It reverberates so sweetly to the heart,

As Siva–doctrine issues forth
With the six–and–thiry principles,
And both the microcosm and macrocosm,
In dulect harmony,
Resound both in and out!
Do listen, you!
If the harmony of the Ohm
Permeates everything,
It will be possible to taste
The consubstantial union,
Lord of the blossoming-creeper town,
World–teacher, Founder Gurusiddhesvara!

Brief Notes

P. 1, V. 1.

Hubli Town:—A town in the Dharwar district of Karnataka State. Its literal meaning is blossoming creeper, (hu+balli) which it seems to have acquired from its setting when it was, centuries ago, a tiny village. It became a town of repute after His Holiness Gurusiddhesvara, one of the great Lingavanta saints and an accomplished Sivayogi founded the monastery of which the author is now the Head. Hence the *ankita* or name of deity which each vacana in the present collection bears. He is following the tradition in this regard of Lingavanta saints, like Basavanna, Allamaprabhu, Siddharamesvara etc. who lived in the 12th century. 'World's guru' (=Jagadguru) is the title commonly appended to Swamis of big Niranjana Sunya Pitha (Big Pithas).

P. 2, V. 4.

Basava:—Reformer of the Virasaiva or more precisely, the Lingayata Faith, great saint, poet, philosopher of Karnataka was one of the great Indian mystics and religious reformers. He was born at Bagewadi, now a Taluka town in Bijapur district, in the latter half of the 12th century, when society was riven by political upheavals, social schisms and religious animosities. He revolted against the man-made distinctions of caste perpetuated by the 'Varnasrama Dharma' and conceived in his new religion a casteless and classless society, where everybody irrespective of age, sex and material position, was treated as equal. He preached the message of universal love and brotherhood, right conduct and devotion to God and spread the doctrine of social equality against untouchability.

He is also esteemed as the father of Kannada prose and his vacanas started a new genre of literature in Kannada.

He enunciated the principle of 'Kayakave Kailasa' or work itself is Heaven, through which he upheld the dignity of labour. He rallied under the banner of his new religion many saints of his time.

P. 3, V. 4.

The eight aids to faith: Guru, Linga, Jangama, Padodaka, Prasada, Vibhuti, Rudraksa and Mantra. They are known as Astavarana or eight coverings, which protect the follower of the Lingavanta religion.

i) *Guru:* One who initiates the seeker into the Lingavanta religion.
ii) *Linga:* an emblem of the Divinity that abides in the heart of man as well as in the universe.
iii) *Jangama:* the Divine Consciousness personified or embodied.
iv) *Padodaka:* the holy water from the feet of the Guru or Jangama, which is charged with spiritual power and in turn charges one who drinks it.
v) *Prasada:* food offered to Guru, Linga and Jangama and received in return as their grace.
vi) *Vibhuti:* sacred ashes symbolising the inner intuition.
vii) *Rudraksa:* berry of *eloeocarpus janitrus*, symbolising the right vision or the inner enlightened eye.
viii) *Mantra:* repetition of sacred syllables in honour of Siva, the Godhead.

The five disciplines: Lingacara, Sadacara, Sivacara, Bhrutyacara and Ganacara. They are the social disciplines to be strictly followed by every Lingavanta.

i) *Lingacara:* enjoins upon a Lingavanta the obligation to wear and worship the Istalinga.

ii) *Sadacara:* enjoins upon a Lingavanta the obligation of leading a strictly virtuous life.

iii) *Sivacara:* enjoins upon a Lingavanta the obligation to look upon all devotees of Siva as equal and to help them work for the common good.

iv) *Bhrutyacara:* enjoins upon a Lingavanta the obligation to imbibe a spirit of humility and submission ro his Faith and society.

v) *Ganacara:* enjoins upon a Lingavanta the obligation to evince the spirit of sacrifice in defence of the Faith and Community and their vindication when the Faith is menaced.

The six-fold hierarchy-technically known as Satsthala siddhanta is the Soul of the Lingavanta Religion. It represents an ascent to the Divine, comprising six sthalas or steps, of gradually increasing Divine awareness, known as Bhakta, Mahesa, Prasadi, Pranalingi, Sarana and Aikya. Sthala means, metaphysically, the Ultimate Reality or the Absolute, psychologically, a stage on the pilgrim's path to the Divine.

P. 3, V. 5.

Sasivala–a village in the Hasan district of Karnataka State.

Kalbetta–another place in the same district, convenient for yogic meditation.

The six enemies–the six passions, namely, lust, greed, infatuation, anger, pride and jealousy.

Karadi–a rich Lingavanta family of Bellary, noted for its philanthropy and religious spirit.

Chittaragi–the pontifical seat of His Holiness Vijaya Mahanta Swamiji.

The site for a temple-He showed the site ror Sivayoga Mandir, which was established and developed by H. H. Kumar Swamiji of Hanagal with the help of several Swamis of the same order and other Lingavanta followers. It is an

institution for the training of neophytes to be Swamis of different Mathas. The author is one such.

P. 4, V. 7.

Kumara from Hanagal:

His Holiness Kumar Swamiji of Hanagal, a Taluka place in Dharwar District, by whose grace the author was born.

P. 5, V. 8.

Sivabasava: H. H. Sivabasava Swamiji of Hukkeri-math at Haveri in Dharwar District, one of the great Lingavanta yogis.

Saptasagar: a village in Athani Taluka, Belgaum District, where Sivabasava Swamiji was born.

P. 5, V. 9.

The author's biographical details. He was born by the grace of Kumar Swamiji of Hanagal, in the family of Vijaya Mahanta Swamiji; received his early education at Sivayoga Mandir and joined Kasi Vidyapith, at Banares, in Northern India, a place noted for sanskrit learning.

With... devotees-the author, before becoming the Head of the Hubli Matha, was the authorised head of the Vijaya Mahantesa Matha at Ilkal, in Bijapur District. Hence the help for his studies at Kasi by devotees of that Matha.

By Gurusiddhesvara's son—

It refers to the Swamiji who immediately preceded the author and made him his successor.

P. 6, V. 10.

Organs of sense:

Five organs of action and five organs of perception.

Six billows of grief: birth, death, hunger, thirst, infatuation and grief.

Three Impurities: anava, maya, and karmika.

Six Passions: please vide notes V. 5. above.

P. 8, V. 17.

The triple pain: celestial, terrestrial and organic.

P. 10, V. 20.

Twice-seven years: refers to the duration to date of the author's Headship of the present Matha.

P. 13, V. 30.

A tower: a tower gate of the Matha recently built by the author, to represent the six stages of the spiritual ascent to the Divine.

P. 20, V. 47.

Forget the six: six passions.

The six: six billows of grief.

The Three: three qualities, satva, raja and tama or light, motion and inertia, the equilibrium of which is known as Prakruti. Their imbalance is the cause of creation.

P. 20, V. 49.

Work is heaven:

One of the fundamental tenets of the Lingavanta religion, which is popularly known as Kayakave Kailasa and enjoins upon every Lingavanta the obligation of doing some good work for his maintenance so that the work itself should be a form of worship and its fruit should be enjoyed, after offering it to God and received back as His Prasada. It must not be hoarded for the morrow. A Lingavanta, in short, must not be a parasite. A vacana by Cendayya, one of the Lingavanta saints of the 12th century who was a rope-maker deserves to be quoted in this context:

"A Kare[1] leaf
Come from dedicated work,
Is worthy to be offered

1. Kare : The spinous shrub Webera tentendra Willd.

To Linga. But one that comes
Of covetousness is not.
Therefore, the timeless thing.
That comes of dedicated work,
Righteous and pure, is
To Candesvaralinga
Consecrated food''[2]

P. 27, V. 66

The literature of the Saran s:- The prose-poems known as Vacanas by Basavanna and other Lingavanta saints of of the 12th century, and, in the subsequent centuries, by Tontada Siddhalingesvara, Akhandesvara etc. The form has been revived, after a break of nearly two hundred years, in our own times by writers like H. H. Swamiji of Nidumamidi, H. H. Mate Mahadevi of Dharwar, Sri Jirige Katti Basappa, Shri M. Mahadeva Banakar and the present author.

P. 27, V. 67

*Gurus and Viraktas:-*Two orders of Lingavanta Swamis representing two of the eight aids to Faith, namely, Guru and Jangama respectively.

P. 37, V. 91

Muktikanthabharana·– An anthology of Vacanas published by Karnatak University, Dharwar, which sparked off a good deal of controversy over its questionable authenticity, interpolated matter etc., as a result the University decided to stop its sales and reprint.

P. 39, V. 96

The word is Jyotirlinga: It is not mere sound, but Pranava, or Logos, or embodied Consciousness, which is Supreme light.

P. 45, V. 110

Initiation - Into the Lingavanta Faith which is of three modes, namely, Kriya, Mantra and Vedha, generally given

2. Sunya Sampadane I, pub. by Karnataka University, Dharwar.

by Guru. To administer grace it refers to the transmission of grace, or Saktipata.

P. V, 126

Six-steps:- On the ascent to the Divine, namely, Bhakta, Mahesa, Prasadi, Pranalingi, Sarana and Aikya.

Six enemies:- Six passions: lust, anger, greed, infatuation, pride and jealousy.

P.V, 131

Pillars six:- represent six sthalas, or steps on the flight to the Divine.

Six and thirty beams.- represent the thirty six permutations of the six sthalas, or steps.

Hundred and one steps:- represent further subdivisions of the six sthalas.

P. 63, V. 154

The matha of three thousand:- It refers to the author's Matha. It has been established by the inscription found at Sirsi, that in twelfth century A. D. Shree Jagadguru Murusaviramath of Hubli was a centre of Veerashaiva faith.

After the revolution of Kalyan 3000 spiritual preceptors received shelter under the roof of the Math and at the command of their spiritual leader, Shri Jagadguru Gurusiddheshwara, founded Maths all over India for the propagation of their faith and established the importance of the spiritual centres.

P. 67, V. 165 and 166

Manjunath:- a famous shrine in Chickmagalur district of Karnataka, noted for its unique combination- of the Saiva Linga, Madhava Brahmin worshippers and Jain authorities and also for its synthesis of all faiths.

P. 69, V. 169

*Him with poison in His throat:-*Siva.

P. 71, V. 173

The consubstantial union of Linga and anga:–represents the ultimate goal of the Lingavanta religion, or its concept of salvation.

P. 73, V. 178

Linga that holds....to a speak:– It means that the Godhead which harbours the universes as well as transcends them, has come to the palm of the bhakta as Istalinga, the pivot of the Lingavanta religion and philosophy. It can transform a bhakta's body of flesh into a divinised body.

P. 76, V. 186

Possim:– It refers to one of the fundamental concepts of Lingavanta religion. It enjoins upon a Lingavanta the obligation of offering the fruit of his honest work to Guru, Linga and Jangama, the triple aspect of God and receive it back as Prasada.

P. 76, V. 187

The triple Linga:– Istalinga, Pranalinga and Bhavaling.

The triple body:– gross, subtle and causal.

P. 76, V. 188

The triple natural traits:– vide notes on vacana 47 above.

The three impurities:– vide notes on V. 10 above.

The three desires:– for wife, son, and wealth.

The triple Karma:– *Sanchita*, or accumulated from birth, *prarabdha*, or that which is being experienced now, and *agami*, or that which ensues.

P. 77, V. 189

The great spell, i.e., 'Om namah Sivaya', or salutation to Siva.

P. 80, V. 198

The eight fold pride – of clan, character, wealth, beauty, youth, learning, penance and kingdom.

The eight enjoyments:– house, bed, clothes, ornaments women, flowers, scent and betel-leaf.

The eight accomplishments:– the eight occulet powers.

Eight fortunes:– kingdom, treasury, army, elephant, horse, umbrella, fans and palanquin.

The eight fold mode of worship:–

i) Smearing of holy ash.
ii) Smearing of sandal-paste.
iii) Sprinkling of unbroken rice-grains.
iv) Offering of bilva.
v) Offering of flowers.
vi) waving of incense.
vii) waving of light.
viii) offering of food.

P. 90, V. 222

He....Linga Lord:- It refers to the bridal love of a bhakta.

P. 90, V. 223

The Linga in six modes:–

i) Acaralinga in the Adhara cakra, or the Pelvic plexus.
ii) Gurulinga in the Svadhisthana cakra, or the Aortic plexus.
iii) Sivalinga in the Manipuraka cakra, or the solar plexus.
iv) Jangamalinga in the Anahata cakra, or the Cardiac plexus.
v) Prasadalinga in the Visuddhi cakra, or the Cervical plexus.
vi) Mahalinga in the Ajna cakra, or the Plexus of Command.

P. 91, V. 227

The Lingaikya:– one whose anga is consubstantially united with Linga.

P. 93, V. 230

One....one.

And hundred........to one

–refers to the One evolving into many and many reducing themselves to the One.

ಶಿವಯೋಗಮಂದಿರ

ಸಾಹಿತ್ಯ ಪ್ರಕಾರ : ಗದ್ಯ
ಮೊದಲ ಮುದ್ರಣ : ೧೯೭೮
ಎರಡನೆಯ ಮುದ್ರಣ : ೧೯೯೦
ರಚನೆಯ ವಯಸ್ಸು : ೫೦
ರಚನಾಸ್ಥಳ : ಹುಬ್ಬಳ್ಳಿ

ಶ್ರೀ ಜಗದ್ಗುರು ಮೂರುಸಾವಿರಮಠ ಗ್ರಂಥಮಾಲೆ ೮೨

ಶಿವಯೋಗಮಂದಿರ

ಬರೆದವರು:

ಶ್ರೀ ಮೂಜಗಂ

ಪ್ರಕಾಶಕರು:

ಶ್ರೀ ಮೂರುಸಾವಿರಮಠದ ಕುಮಾರೇಶ್ವರ
ಶಿವಯೋಗಿ ಸಂಘದ
ದ್ವಾದಶ ವಾರ್ಷಿಕ ಮಹೋತ್ಸವ ಸಮಿತಿ,
ಹುಬ್ಬಳ್ಳಿ.

೧೯೬೦

SHIVAYOGAMANDIR Written by: Shree Mujagam.
Published by: J. G. D. P. M. Moorusavirmath, HUBLI.

ಒಂದನೆಯ ಮುದ್ರಣ: ೧೯೭೮

ಪ್ರತಿಗಳು: ೧೦೦೦

ದ್ವಿತೀಯ ಮುದ್ರಣ: ೧೯೯೦

ಪ್ರತಿಗಳು: ೧೦೦೦

ಬೆಲೆ: ರೂ. ೨-೦೦

ಮುದ್ರಕರು:
ಪರಂಜ್ಯೋತಿ ಪಾವರ್ ಪ್ರಿಂಟಿಂಗ್ ಪ್ರೆಸ್
ಮೂರುಸಾವಿರಮಠ, ಹುಬ್ಬಳ್ಳಿ.

ಪ್ರಕಾಶಕರ ನುಡಿ

ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಶ್ರೀ ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳು ಮೂರುಸಾವಿರಮಠ, ಹುಬ್ಬಳ್ಳಿ ಅವರು ಸಾಮಾಜಿಕ ಹಾಗೂ ಶೈಕ್ಷಣಿಕ ರಂಗದಲ್ಲಿ ಕಾರ್ಯಕರ್ತರಿದ್ದಂತೆ; ಕವಿಗಳು ಮತ್ತು ಲೇಖಕರೂ ಆಗಿದ್ದಾರೆ. ಈಗಾಗಲೇ ೨೦ ಗ್ರಂಥಗಳನ್ನು ರಚಿಸಿದ್ದಾರೆ. ಅವರ ಸಾಹಿತ್ಯ ಹೃದಯ ಮುಟ್ಟುವಂತಹದು. ಜೀವನದ ಸಿಹಿ-ಕಹಿಗಳನ್ನುಂಡು, ಅನುಭವಿಸಿ ಬರೆಯುತ್ತಾರೆ. ಅವರ ವಚನ ರಚನೆ ಅನುಭವದ ರಸಪಾಕವಿದ್ದಂತೆ, ಪ್ರತಿನುಡಿಯಲ್ಲಿ ಮಹತ್ತತೆ ತುಳುಕಿರುತ್ತದೆ. ಭಾವಪರಿಪೂರ್ಣವಿರುತ್ತದೆ.

ಅವರು ಬರೆದ "ಯುಗಪುರುಷ ಯೋಗಿಕುಮಾರ" ಈ ಪುಸ್ತಕದ ಕೆಲವು ಭಾಗಗಳನ್ನು ಆಯ್ದುಕೊಂಡು "ಶಿವಯೋಗ ಮಂದಿರ" ಶಿರೋನಾಮದಲ್ಲಿ ಕಿರುಹೊತ್ತಿಗೆಯೊಂದನ್ನು ಮೂರುಸಾವಿರಮಠದ ಕುಮಾರೇಶ್ವರ ಶಿವಯೋಗಿ ಸಂಘದ ದ್ವಾದಶ ವಾರ್ಷಿಕೋತ್ಸವದ ಸವಿನೆನಪಿಗಾಗಿ ಹೊರತರುತ್ತಿದ್ದೇವೆ. ಶ್ರೀ ಜಗದ್ಗುರುಗಳವರಿಗೆ ಶಿವಯೋಗ ಮಂದಿರವೆಂದರೆ ಅಪಾರ ಅಭಿಮಾನ ಹೃದಯವೇ ಶಿವಯೋಗಮಂದಿರವಾಗಬೇಕೆಂಬುವದೇ ಅವರ ಹೆಬ್ಬಯಕೆ ಅ.ಭಾ. ವೀರಶೈವ ಮಹಾಸಭೆ ಹಾಗೂ ಶಿವಯೋಗ ಮಂದಿರ ಇವೆರಡು ಸಮಾಜದ ಕಣ್ಣುಗಳಿದ್ದಂತೆ. ಈ ಸಂಸ್ಥೆಗಳು ಜೀವನಾಕಾಶದ ಸೂರ್ಯ ಚಂದ್ರ ಸ್ವರೂಪಗಳು ಈ ಎರಡು ಸಂಸ್ಥೆಗಳನ್ನು ಲಿಂಗೈಕ್ಯ ಹಾನಗಲ್ಲ ಕುಮಾರ ಶಿವಯೋಗಿಗಳು ಸಂಸ್ಥಾಪಿಸಿ ನಾಡಿಗೆ ಮಹದುಪಕಾರ ಮಾಡಿದ್ದಾರೆ. ಈ ಸಂಸ್ಥೆಗಳಿಂದ ಬೆಳಗಿದವರು, ಪ್ರೇರಿತರಾದವರು ಅಂದರೆ ಎಚ್ಚೆತ್ತವರು ಅದೆಷ್ಟೋ ಜನ, ಮಿರಿ ಮಿರಿ ಮಿಣುಗಿದವರು ಮಿಣುಗುವವರು ಅದೆನಿತೋ ಜನ ಅಂತಹ "ಶಿವಯೋಗಮಂದಿರ" ಸಂಸ್ಥೆಯು ಮಾಡಿದ ಮಹತ್ಕಾರ್ಯಗಳು ಜನತೆಗೆ ತಿಳುವಳಿಕೆಯುಂಟಾಗುವಂತೆ ಶ್ರೀ ಮಹಾಸನ್ನಿಧಿಯವರು ಬರೆದು ನಾಡಿಗೆ ಮಹದುಪಕಾರಗೈದಿದ್ದಾರೆ. ಮತ್ತೆ ಇವರೇ ಬರೆದ ಕೆಲವು ವಿಚಾರಗಳನ್ನು ಈ ಪುಸ್ತಕದಲ್ಲಿ ಜೋಡಿಸಿ ಪ್ರಕಟಿಸಿದ್ದೇವೆ. ಕುಮಾರೇಶ್ವರ ಶಿವಯೋಗಿ ಸಂಘದ ದ್ವಾದಶ ವಾರ್ಷಿಕೋತ್ಸವ ಶುಭ ಸಂದರ್ಭದಲ್ಲಿ ಈ ಕಿರುಹೊತ್ತಿಗೆ ಸಮಯೋಚಿತ, ಸಮರ್ಪಕ ಹಾಗೂ ಸದುಪಯೋಗವಾದೀತೆಂದು ಆಶಿಸಿದ್ದೇವೆ. ಈ ಹೊತ್ತಿಗೆ ಕಿರಿಯದಾದರೂ ಗಮನಿಸತಕ್ಕ ವಿಷಯಗಳು ಅನಂತವಿರುತ್ತವೆ. ಕುಮಾರೇಶ್ವರನ ಧ್ಯೇಯ ಧೋರಣೆಗಳನ್ನು ಅರಗಿಸಿಕೊಳ್ಳ

ಜೇಕೆನ್ನವವರಿಗೆ ಈ "ಶಿವಯೋಗ ಮಂದಿರ" ಕೃತಿಯಿಗೆ, ನಮ್ಮ ಈ ಕಿರುಕಾಣಿಕೆಯ ಉಪಯೋಗವನ್ನು ಸಾಧಕರು, ಸಮಾಜಾಭಿಮಾನಿಗಳು ಪಡೆಯುವಂತಾದರೆ ನಮ್ಮ ಶ್ರಮ ಸಾರ್ಥಕ.

ವೇಳೆಗೆ ಸರಿಯಾಗಿ ಮುದ್ರಿಸಿಕೊಟ್ಟ "ಪರಂಜ್ಯೋತಿ" ಮುದ್ರಣಾಲಯದವರಿಗೂ ನಮ್ಮ ಧನ್ಯವಾದಗಳು.

—ಪ್ರಕಾಶಕರು

ಶಿವಯೋಗಮಂದಿರ

೧

ಹೃದಯವೇ ನಿಜನಿಲಯ ಶಿವಯೋಗಮಂದಿರಕೆ
ಜ್ಞಾನದಾನೇತ್ರವನು ತೆರೆದರದು ಕಾಣುವದು
ಎಲ್ಲಿದ್ದರೇನಂತೆ ಆ ಭವ್ಯಭವನವನು
ತೊರೆಯದಲೆ ಮರೆಯದಂತೆ ಪೂಜಿಪದೆ ಸೊಗಸಿಹುದು.

೨

ಮಂದಿರದ ಸುತ್ತಲೂ ಸತ್ಯದಾಗೋಡೆಯನು
ಕಟ್ಟಿದೊಡೆ ಒಳಗಿರುವ ಶಿವಯೋಗ ದೊರಕುವುದು.
ಭಕುತಿಯಿಂ ಕೈಮುಗಿದು ಹಾಡಿನೊಡೆ ಬೇಡಿದೊಡೆ
ಹೃದಯದಾ ಮಂದಿರ ಥಳಥಳನೆ ಹೊಳೆಯುವದು.

೩

ಮುಸುಕಿರುವ ಅಜ್ಞಾನ ಭ್ರಮೆಯನ್ನು ದೂಡಿದೊಡೆ
ಶಿವಯೋಗದೊಳಗಿರುವ ಶಿವತೇಜ ಕಾಣುವದು
ಹೃದಯದೊಳು ಶಿವಜ್ಞಾನ ಶಿವಭಾವ ಬಲಿಸಿದೊಡೆ
ಶಿವಯೋಗಮಂದಿರವೆ ಹೃದಯ ತಾನಾಗುವದು.

—ಸ್ವರಚಿತ"ಪಥಿಕ"ದಿಂದ.

ಬಂಧ ಮೋಕ್ಷಗಳಿಗೆ ಮೂಲ ಕಾರಣವಾಗಿರುವ ಮನಸ್ಸಿನ ನಿರೋಧಕ್ಕೆ ಯೋಗ ಸಾಧನೆಯೇ ಮೊದಲ ಮೆಟ್ಟಿಲು. ಅದೇ ಜೀವನಕ್ಕೆ ಕಮನೀಯ ಕುಡ್ಮಲ, ಮುಮ್ಮಲ ತೊಳೆಯುವ ನಿರ್ಮಲ ಗಂಗಾಜಲ. ಈ ಯೋಗಸಾಧನೆಯಿಂದ ಪವಿತ್ರ ಜೀವನ ಮಾಡಿಕೊಳ್ಳಲು ಪರಮ ಸಾಧನವಾಗುವದಲ್ಲದೆ ದೀರ್ಘ ಕಾಲದ ವರೆಗೆ ಬದುಕಲು ಹಾಗೂ ಆರೋಗ್ಯದಿಂದಿರಲು ಯೋಗ ಶಕ್ತಿಯಿಂದ ಅಣಿಮಾದಿ ಅಷ್ಟ ಸಿದ್ಧಿಗಳ ಸಂಪ್ರಾಪ್ತಿಯಾಗಿ ಇದಕ್ಕಿಂತಲೂ ಮಿಗಿಲಾಗಿ ಆತ್ಮಾನುಭೂತಿಯಾಗಿ ಆನಂದವನ್ನು ಪಡೆದು ಆತ್ಮಸಾಕ್ಷಾತ್ಕಾರವಾಗುವ ಮಹಾಶಕ್ತಿ ಈ ಯೋಗಶಕ್ತಿಯಲ್ಲಿ ಹುದುಗಿದೆ.

ಒಂದೆಡೆ ಸ್ವಾಮಿ ವಿವೇಕಾನಂದರು: "yoga is the science which teaches us how to get these perceptions" ಎಂದು ಯೋಗದ

ಮಹತಿಯನ್ನು ವಿವರಿಸಿದ್ದಾರೆ. ಜ್ಞಾನವಿಲ್ಲದ ಯೋಗ ಯೋಗವಿಲ್ಲದ ಜ್ಞಾನ ಇವೆರಡೂ ನಿಷ್ಪ್ರಯೋಜಕ ಇವೆರಡರ ಬಲದಿಂದ ಶಿವಯೋಗಿಗಳು ಯೋಗಸಿದ್ಧಿಯನ್ನು ಪಡೆಯುವರಲ್ಲದೆ ಚೈತನ್ಯವನ್ನು ಗಟ್ಟಿಗೊಳಿಸುತ್ತಾರೆ. ಶಿವಯೋಗ ಪ್ರದೀಪಿಕೆಯಲ್ಲಿ ಇದೇ ವಿಷಯವನ್ನು ಕುರಿತು:

"ಯೋಗಾತ್ ಸಂಜಾಯತೆ ಜ್ಞಾನಂ ಜ್ಞಾನಾತ್ ಯೋಗಃ ಪ್ರವರ್ತತೇ। ದ್ವಯೋಃ ಸಂಸಿದ್ಧಯೇ ಭೂಮೌ ಶರೀರಂ ರಕ್ಷಯೇತ್ ಬುಧಃ॥ ಎಂದು ಜ್ಞಾನ ಯೋಗಗಳ ಸಂಸಿದ್ಧಿಯನ್ನು ಸ್ಪಷ್ಟೀಕರಿಸಿದ್ದಾರೆ.

ಯೋಗದಲ್ಲಿ ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣ, ಸಮಾಧಿ ಈ ರೀತಿ ಎಂಟು ತರನಾಗಿ ವಿಂಗಡಿಸಿದ್ದಾರೆ. ಈ ಯೋಗಾಂಗಗಳ ಸಾಧನೆಯಿಂದ ದೇಹಶುದ್ಧಿಯಾಗಿ ಚಿತ್ತಚಾಂಚಲ್ಯ ದೂರಾಗಿ ಜ್ಞಾನೋದಯವಾಗುವದಲ್ಲದೆ, ಆತ್ಮಜ್ಞಾನ ಸ್ಫುರಿಸಿ ಮಹಾಘನಸಿದ್ಧಿ ಸಾಧ್ಯವಾಗುವದು. ಯಮ, ನಿಯಮ, ಆಸನ, ಇವುಗಳು ಬಾಹ್ಯಾಂಗಗಳನ್ನು ಪವಿತ್ರ ಮಾಡಿದರೆ ಪ್ರಾಣಾಯಾಮ, ಪ್ರತ್ಯಾಹಾರಗಳು ಪಂಚಪ್ರಾಣಗಳನ್ನು ಪರಿಶುದ್ಧಗೊಳಿಸುವವು. ಧ್ಯಾನ ಧಾರಣ ಸಮಾಧಿ ಅಂತರಂಗ ಶುದ್ಧಿಗೆ ಭದ್ರಬುನಾದಿ. ಶಿವಯೋಗಕ್ಕೆ ಹಠಯೋಗ ಸಾಧನ ಮಾತ್ರವಾಗುವದಲ್ಲದೆ ಪೂರ್ಣ ಸಂಸಿದ್ಧಿಯತ್ತ ಸಾಗಿಸುವ ವಿಧಾನವಾಗಲಾರದು. ಶಿವಯೋಗದ ಪರಮಗುರಿಯೇ "ಲಿಂಗಾಂಗ ಸಾಮರಸ್ಯ"ವೆಂದು ವೀರಶೈವ ಸಿದ್ಧಾಂತದಲ್ಲಿ ಪ್ರತಿಪಾದಿಸಲ್ಪಟ್ಟಿದೆ. ಚಿತ್ತ ವೃತ್ತಿ ನಿರೋಧವಾಗುತ್ತ ಹೋದಂತೆ ಶಿವನಲ್ಲಿ ಯೋಗವಾಗುವದೇ ಶಿವಯೋಗ, ಎಲ್ಲ ಯೋಗಗಳಲ್ಲಿ ಶಿವಯೋಗವೇ ಮಿಗಿಲು. ಶಿವಯೋಗದ ಹೃದಯವೇ ಷಟ್‌ಸ್ಥಲ. ಲಿಂಗತ್ರಯಗಳನ್ನು ಅಂಗವಿಸಿಕೊಂಡು ಲಿಂಗಾಂಗ ಸಾಮರಸ್ಯವನ್ನು ಪಡೆಯುವದೇ ಶಿವಯೋಗ. ಶಿವಜೀವರ ಐಕ್ಯವಾಗಿ ಬೇರಿಲ್ಲದಿರ್ಪುದೇ ಶಿವಯೋಗ. ಉಳಿದ ಯೋಗಗಳು ಸಾಧನ ಮಾತ್ರ. ಗಾತ್ರತ್ರಯವಳಿದು ಚಿತ್ತದಚಿಬ್ಬಿಂದು ತೋರಿದಾಗ ನಾದಬ್ರಹ್ಮವ ಶೋಧಿಸಿ ಸುದೃಢ ಚಿತ್ತನಾದಾಗ ಶಿವಯೋಗ ಸಾಧ್ಯ. ರಾಜಯೋಗವು ಜೀವಶುದ್ಧಿಗೆ ಸಾಧನವಾದರೆ ಶಿವಯೋಗವು ಶಿವಸಾಮರಸ್ಯಕ್ಕೆ ಸುವಿಧಾನ.

ಒಂದೆಡೆ ತೋಂಟದ ಎಡೆಯೂರ ಸಿದ್ಧಲಿಂಗಯತಿಗಳು ಬ್ರಹ್ಮರಂಧ್ರದಲ್ಲಿಪ್ಪ ನಾದ ಚೈತನ್ಯವಪ್ಪ ಪರಮ ಚಿತ್ಕಳೆಯೇ ಭಾವ ಮನಕರದಲ್ಲಿ ಶ್ರೀ ಗುರು ತಂದು ಸಾಹಿತ್ಯವ ಮಾಡಿದನಾಗಿ, ಭಾವದಲ್ಲಿ ಸತ್‌ಸ್ವರೂಪವಪ್ಪ ಇಷ್ಟಲಿಂಗವೆಂದೆನಿಸಿ ಒಂದೇ ವಸ್ತು ತನುಮನ ಭಾವಂಗಳಲ್ಲಿ ಇಷ್ಟಪ್ರಾಣಭಾವವಾದ ಭೇದವನರಿಯದೆ ಇಷ್ಟಲಿಂಗವ ದೃಷ್ಟಿಯಿಂದ ಗ್ರಹಿಸಿ, ತೃಪ್ತಿಲಿಂಗವ ಭಾವಜ್ಞಾನದಿಂದ ಗ್ರಹಿಸಿ ಈ

ಲಿಂಗ ತ್ರಯವಿಡಿದು ಆಚರಿಸಿ, ಲಿಂಗದೊಡನೆ ಕೂಡಿ ಲಿಂಗವೇ ತಾನುತಾನಾಗಿ ವಿರಾಜಿಸುತಿರ್ಪುದೀಗ ಶಿವಯೋಗ ನೋಡಾ ಮಹಾಲಿಂಗ ಗುರು ಶಿವಸಿದ್ದೇಶ್ವರ ಪ್ರಭುವೇ" ಎಂದುದಾಗಿ ಶಿವಯೋಗದ ಸಂಪೂರ್ಣ ವಿವರಣೆಯನ್ನು ಸ್ಪಷ್ಟಪಡಿಸಿದ್ದಾರೆ. ಬಾಹ್ಯವನ್ನು ಮರೆತು, ತನ್ನ ಹೃದಯ ಕಮಲವನ್ನು ಅರಳಿಸಿಕೊಂಡು ಜ್ಞಾನತೇಜದ ಇಷ್ಟಲಿಂಗಾನುಸಂಧಾನದಲ್ಲಿ ಬೆರೆತರೆ ಶಿವಯೋಗ ಸಾಧನೆಯ ಸಾಫಲ್ಯ ದೊರಕುವದು. ಅದಕ್ಕಾಗಿ ಶಿವಜ್ಞಾನ, ಶಿವಭಕ್ತಿ, ಶಿವಧ್ಯಾನ, ಶಿವವ್ರತ, ಶಿವಾರ್ಚನೆಗಳನ್ನು ನಿಯಮಪೂರ್ವಕವಾಗಿ ನಿಷ್ಠೆಯಿಂದ ಮಾಡಿದರೆ ಸುಳಿದು ಸೂಸುವ ಗಾಳಿಯು ಸ್ಥಿರವಾಗಿ ನಿಲ್ಲುವದಲ್ಲದೆ ಮನಸ್ಸಿನ ಪರಿದಾಟ ಪೋಗಿ ಕಾಲ ಕರ್ಮವಗೆದೆಯಲು ಅನುಕೂಲವಾಗುವದು.

೭೦ ವರ್ಷಗಳ ಹಿಂದಿನ ಮಾತು. ಸಮಾಜದಲ್ಲಿ ಶಿವಯೋಗಶಕ್ತಿ ಕಡಿಮೆಯಾಗಿ, ಅಂಧಕಾರ ಆವರಿಸಿತ್ತು. ಮುನ್ನಡೆವ ಬಲ ಮುನ್ನೋಡುವ ನೋಟ ಸಮಾಜಕ್ಕಿರಲಿಲ್ಲ. ನೈತಿಕ ತಾತ್ವಿಕ ರಕ್ತನಾಳಗಳ ಹರದಾಟವೆ ಕಡಿಮೆಯಾಗಿತ್ತು. ಭಾವೈಕ್ಯ ಮಾತಿನ ಮಾಲೆಯಾಗಿತ್ತು. ಅಷ್ಟಾವರಣಗಳಲ್ಲಿ ನಿಷ್ಠೆಯಿಲ್ಲದಾಗಿತ್ತು. ಷಟ್‌ಸ್ಥಲದ ಸುವಾಸನೆಯು ಇಲ್ಲದಾಗಿತ್ತು. ವ್ಯಕ್ತಿ ವ್ಯಕ್ತಿಗಳಲ್ಲಿ ಸಮರಸ ಭಾವನೆ ಕುಂದಿ, ಅಹಂಕಾರ ಮಮಕಾರಗಳು ಹೆಚ್ಚಾಗಿದ್ದವು. "ಕೈಕಾಲು ಕಣ್ಣುಗಳಿಲ್ಲದ ಕಂದನಂತಾಗಿತ್ತು, ವೀರಶೈವ ಸಮಾಜ.

ಎಳೆ ಮಕ್ಕಳ ತಿಳಿಮನಸ್ಸಿನಲ್ಲಿ ಶಿವಯೋಗವನ್ನು ಎರಕಹೊಯ್ದು ಅವರನ್ನು ಮಂಗಳಮೂರ್ತಿಗಳನ್ನಾಗಿ, ಶಿವಯೋಗಿಗಳನ್ನಾಗಿ, ಸಮಾಜ ಸುಧಾರಕರನ್ನಾಗಿ, ಮಾಡುವ ಆಧ್ಯಾತ್ಮಿಕ ಶಕ್ತಿಗೆ ಕೇಂದ್ರವಾಗುವಂತಹ ಸಂಸ್ಥೆಯ ಉದಯ ಅಂದು ಆಗಬೇಕಾಗಿತ್ತು. ಅಗತ್ಯವೂ ಇತ್ತು.

ಈ ಅಗತ್ಯವನ್ನು ಪೂರೈಸಲು ಹಾನಗಲ್ಲ ಶ್ರೀ ಕುಮಾರ ಶಿವಯೋಗಿಗಳು ಅವತರಿಸಿದರು ಅವರು ಬಡತನದ ಬಾಳಿನಿಂದ ಬೆಳಗಿ ಮುಂದೆ ಬಂದರು. ಬಹು ಪರಿಶ್ರಮದಿಂದ ವಿದ್ಯೆ, ಯೋಗ, ನಿಜಗುಣರ ಶಾಸ್ತ್ರಗಳನ್ನು ಕಲಿತರು, ಮನನ ಮಾಡಿದರು. ನಿಜಗುಣರ ಪವಿತ್ರ ತಪೋಭೂಮಿಯಲ್ಲಿ ತಪವನ್ನಾಚರಿಸಿದರು. ಪರಿಚಯೋಗಗಳಲ್ಲಿಯೂ ಪರಿಣತರಾದರು. ಸಿದ್ಧ ಪುರುಷರಾದರು. ಇದರ ಫಲವಾಗಿ ಎಳಂದೂರು ಶ್ರೀ ಬಸವಲಿಂಗ ಸ್ವಾಮಿಗಳವರಿಂದ ಯೋಗದಂಡವನ್ನು ಹೊಂದುವ ಸುಯೋಗವು ಅವರದಾಯ್ತು. ಲಿಂ, ಬಿದರೀ ಶ್ರೀ ಕುಮಾರ ಶ್ರೀಗಳವರ ಭಾವಪೂರ್ಣ ಅನುಗ್ರಹಕ್ಕೆ ಪಾತ್ರರಾದರು. ಹಾನಗಲ್ಲ ವಿರಕ್ತಮಠಕ್ಕೆ ಅಧಿಕಾರಿಗಳಾಗಿ, ವಿರತಾಗ್ರಗಣ್ಯರಾಗಿ, ಭಕ್ತೋದ್ಧಾರ ಮಾಡಿದರು. ಹಾನಗಲ್ಲ ಕುಮಾರ ಶಿವಯೋಗಿಗಳು ಅಖಿಲಭಾರತ ವೀರಶೈವ ಮಹಾಸಭೆಯನ್ನು ಸಂಸ್ಥಾಪಿಸಿದರು.

ಆದರಿಂದ ಸಾಮಾಜಿಕ ಕ್ರಾಂತಿಯನ್ನು ಮಾಡಿ ಜನಜಾಗೃತಿ ಮಾಡಿದರು. ಸಮಾಜದಲ್ಲಿರುವ ಅನೈಕ್ಯತೆಯನ್ನು ತೊಲಗಿಸಿದರು. ಸುಶಿಕ್ಷಿತರನ್ನಾಗಿ ಮಾಡಿದರು. ಅವರ ಹೃದಯ ಭೂಮಿಯಲ್ಲಿ ಸದ್ಗುಣಗಳೆಂಬ ಉತ್ತಮ ಬೀಜಗಳನ್ನು ಬಿತ್ತಿದರು. ಸಮಾಜದ ಕುಂದುಕೊರತೆಗಳನ್ನು ದೂರ ಮಾಡಿ ಸಮಾಜೋತ್ಕರ್ಷದ ಸಮಾಲೋಚನೆಯಲ್ಲಿ ನಿರಂತರವೂ ಮಗ್ನರಾಗಿರುತ್ತಿದ್ದರು. ಕುಮಾರ ಯೋಗಿಗಳು ಇಷ್ಟೆಲ್ಲ ಸಮಾಜೋದ್ಧಾರದ ಕಾರ್ಯವನ್ನೆಸಗಿದರೂ ಮನಸ್ಸಿಗೆ ಸಂತುಷ್ಟಿಯಿರಲಿಲ್ಲ. ಸಂತೃಪ್ತಿಯಿರಲಿಲ್ಲ. ಕಲ್ಪನೆಯ ಹಾದಿಯಲ್ಲಿ ಸತ್ಯ ಸಂಕಲ್ಪ ಸಿದ್ಧಿಗಾಗಿ ಮೊಲಕು ಹಾಕುತ್ತಿದ್ದರು. ಹಲವು ಬಗೆಯ ವಿಚಾರಗಳ ಸುರುಳಿಯನ್ನು ಸುತ್ತಿಕೊಂಡು ಚಿಂತಾಂಬುಧಿಯಲ್ಲಿ ಮುಳುಗುತ್ತಿದ್ದರು. ಭಕ್ತೋದ್ಧಾರಕ್ಕೆ ತಾಯಿಯೆನಿಸಿಂತಿರುವ ಗುರುವಿರಕ್ತರ ಹೀನಾವಸ್ಥೆಯನ್ನು ಕಂಡು ಮರುಗುತ್ತಿದ್ದರು. ಸಮಾಜದ ಕಣ್ಣುಗಳಂತಿರುವ ಗುರುವಿರಕ್ತರು ಸುಧಾರಿಸದಿದ್ದರೆ ಸಮಾಜದಲ್ಲಿ ಭದ್ರತೆ ಬರಲಾರದೆಂದು ಬಗೆಯುತ್ತಿದ್ದರು. ಕುಳಿತಲ್ಲಿಯೇ ಧ್ಯಾನಾಸಕ್ತರಾಗಿ ಬಾಹ್ಯ ಪ್ರಪಂಚವನ್ನು ಮರೆಯುತ್ತಿದ್ದರು. ಕಾಳಿಕೆಯನ್ನು ಕಳೆದುಕೊಂಡು ಕನಕದಂತೆ ಕಂಗೊಳಿಸುತ್ತಿದ್ದರು.

ಹಾನಗಲ್ಲ ವಿರಕ್ತಮಠದಲ್ಲಿ ನಿತ್ಯ ನಿಯಮದಂತೆ ಬೆಳಗಿನ ನಾಲ್ಕು ಗಂಟೆಗೆ ಕುಮಾರ ಯೋಗಿಗಳು ಅನುಷ್ಠಾನದಲ್ಲಿ ಕುಳಿತು ಶಿವಧ್ಯಾನ ಶಿವಚಿಂತನೆಯಲ್ಲಿ ತನ್ಮಯರಾಗಿದ್ದಾರೆ. ಮನಸ್ಸನ್ನು ಅಂತರ್ಮುಖಿಯನ್ನಾಗಿ ಮಾಡಿದ್ದಾರೆ. ತದೇಕ ಚಿತ್ತದಿಂದ ಭಾವಾವಿಷ್ಟರಾಗಿದ್ದಾರೆ. ಧ್ಯಾನಮಗ್ನ ಶಿವನಂತೆ ಪರಿಶೋಭಿಸುತ್ತಿದ್ದಾರೆ. ಪಿಂಡಾಂಡದಲ್ಲಿಯ ಸೂರ್ಯ ಚಂದ್ರನಾಡಿಗಳ ಗತಿಯನ್ನು ತಡೆದು, ಕೇವಲ ಕುಂಭಕದಲ್ಲಿದ್ದು ಶಿವಾರ್ಚನೆ ಶಿವಾರ್ಪಣ ಶಿವಾನಂದದಲ್ಲಿ ತಲ್ಲೀನರಾಗಿದ್ದಾರೆ. ಮೂರು ಲಿಂಗಗಳನ್ನರಿದು ಲಿಂಗಕ್ಕೆ ಭಕ್ತಿ ಜಲವನೆರೆದು, ಹರುಷವೆಂಬ ಧೂಪವನ್ನು ಸಮರ್ಪಿಸಿ ಜ್ಞಾನದಾರತಿಯನ್ನು ಹಚ್ಚಿದ್ದಾರೆ. ಜೀವಭಾವವನ್ನು ಮರೆದು ಪ್ರಸಾದ ಸುಖವನುಂಡು ನಲಿದಿದ್ದಾರೆ. ಇಂತು ಕುಮಾರ ಶಿವಯೋಗಿಗಳು ಪೂಜೆ ಮಾಡಿ ಮುಗಿಸಿ ಕಣ್ತೆರೆದೊಡನೆಯೆ ಎತ್ತ ನೋಡಿದತ್ತ ಬೆಳಕಿನ ಮಿಂಚಿನ ಹೊನಲು ಹರಿದಂತಾಗಿ ಯೋಚನಾಪರರಾಗುತ್ತಾರೆ. ಶಿವಪೂಜಾ ಮಂದಿರದಲ್ಲಿಯೇ ಕುಳಿತುಕೊಂಡು ಅಂದೇ ಒಂದು ನಿರ್ಧಾರಕ್ಕೆ ಬರುತ್ತಾರೆ. ಧಾರ್ಮಿಕಾಚರಣೆಗಳಿಲ್ಲದ ನಶಿಸುತ್ತಿರುವ ಮಠಮಂದಿರಗಳ ಶ್ರೇಯೋಭಿವೃದ್ಧಿಗಾಗಿ, ಸಂಯಮ ಜೀವನವನ್ನು ಪರಿಪಾಲಿಸುವ, ತ್ಯಾಗ ಹಾಗೂ ಯೋಗನಿಷ್ಠ ವಟುಗಳಿಗೆ ಒಳ್ಳೆಯ ಸಂಸ್ಕಾರ ನೀಡಿ, ಅವಿದ್ಯೆಯೆಂಬ ನೆರಳನ್ನು ಕಳೆದು, ಯೋಗ ವಿದ್ಯಾಕಿರಣವನ್ನು ಪ್ರಕಾಶಿಸುವ ಯೋಗ ಸಂಸ್ಥೆಯೊಂದನ್ನು ಸ್ಥಾಪಿಸಿ, ಧರ್ಮ ರಕ್ಷಣೆ ಮಾಡಬೇಕೆಂದು, ಮನಸ್ಸಿನಲ್ಲಿ ಮೂಡಿಸಿಕೊಂಡು, ಶಿವಪೂಜಾಗೃಹದಿಂದ ಹೊರಗೆ ಬಂದು ಆಸನದಲ್ಲಿ ಆಸೀನರಾಗುತ್ತಾರೆ. ಪ್ರತಿನಿತ್ಯದಂತೆ ಶಿವಾನುಭವ ಪ್ರವಚನವನ್ನು ಪ್ರಾರಂಭಿಸುತ್ತಾರೆ.

ಅಂದಿನ ಶಿವಾನುಭವವು ಶಿವಯೋಗವನ್ನು ಕುರಿತು ನಡೆಯುತ್ತದೆ. ನಿಜಗುಣರ "ಪಾರಮಾರ್ಥ ಪ್ರಕಾಶಿಕೆ"ಯನ್ನು ಕೈಯಲ್ಲಿ ಹಿಡಿದುಕೊಂಡು ಶಿವಯೋಗದ ವಿವರಣೆಯನ್ನು ಹೀಗೆ ನೀಡುತ್ತಾರೆ.

"ಪುರುಷ ಸಾಕ್ಷಾತ್ಕಾರವೇ ರಾಜಯೋಗವೆಂದು ಪೇಳ್ವರಾಗಿ, ಆ ರಾಜ ಯೋಗಂ ಶಿವಯೋಗವೆನಿಸಲರಿಯದು. ಆ ಶಿವಯೋಗವಾವುದೆಂದೊಡೆ-ಶಿವ ಶಕ್ತಿ ಸಂಪುಟಾಧಾರವಾದ ಮಹಾಕುಂಡಲಿ ಜನಿತಂಗಳಾದ ತಾರಕ ತ್ರಯ ಸಾಕ್ಷಾ ತ್ಕಾರ, ದ್ವಾರದಿಂದಾ ಶಕ್ತಿಯಲ್ಲಿ ವೃತ್ತಿಜ್ಞಾನವಳಿದು, ಸಮತೋಮುಖಿವಾಗಿನಿಂದ, ನಿಜಶಿವ ತತ್ವಾಭಿವ್ಯಕ್ತಿಯೆ ಶಿವಯೋಗವೆನಿಪ್ಪದು" ಎಲ್ಲ ಯೋಗಗಳಿಗಿಂತ ಶಿವ ಯೋಗ ಹೆಚ್ಚಿನದು. ಹಠಯೋಗದಿಂದ ಶರೀರ ಶುದ್ಧಿಯಾದರೆ, ಮಂತ್ರಯೋಗ ದಿಂದ ನುಡಿ-ಶುದ್ಧವಾಗುತ್ತವೆ. ಲಯ ಯೋಗದಿಂದ ಉಸಿರಿನ ಶುದ್ಧಿಯಾದರೆ, ರಾಜಯೋಗದಿಂದ ಚಿತ್ತ ವೃತ್ತಿ ನಿರೋಧವಾಗಿ ಜೀವಾತ್ಮನೆ ಶುದ್ಧಾತ್ಮನಾಗಿ ಪರಮಾತ್ಮನಾಗುತ್ತಾನೆ. ಯೋಗವು ಕೇವಲ ದೇಹ, ಮನಸ್ಸು, ಬುದ್ಧಿಗಾಗಿ ಮೀಸಲಾಗಿರದೆ, ಅವೆಲ್ಲವುಗಳನ್ನು ಒಳಗೊಂಡು, ಅವುಗಳಿಗೆ ಅತೀತವಾಗಿ ಚೈತನ್ಯ ಸ್ವರೂಪವಾಗಿ ವ್ಯಾಪಿಸಿರುತ್ತದೆ. "ನಾನು" ಎಂಬುದೆಲ್ಲವು ಅಳಿದಾಗ ಶಿವಾರ್ಪಣ ಭಾವವು ಬಲಿದು ಸಮರಸವಾದಾಗ ಯೋಗಸಂಪ್ರಾಪ್ತಿ. ದೃಷ್ಟಿಶುದ್ಧಿಗೆ ಶಿವ ಯೋಗವೇ ಮೂಲ ಸಾಧನ. "ಅಳಿದು ಕೂಡುವುದೊಂದು ಯೋಗ ಈ ಎರಡು ಯೋಗದೊಳಗೆ ಅಳಿಯದೆ ಕೂಡುವ ಯೋಗವರಿವುದು ಗುಹೇಶ್ವರಾ" ಪರಶಿವನ ಪ್ರಭೆಯಿಂದ ಅಂಗಕರಣಂಗಳನ್ನೆಲ್ಲ ಲಿಂಗ ಕಿರಣಗಳನ್ನಾಗಿ ಮಾಡಿಕೊಂಡು ಎರ ಡೆಂಬುದಳಿದು, ಶಿವಯೋಗ ರಹಸ್ಯದ ಸೂಕ್ಷ್ಮ ವಿವರಣೆಯನ್ನು ವೈರಾಗ್ಯ ಚಕ್ರ ವರ್ತಿ ಅಲ್ಲಮಪ್ರಭುವಿನ ವಚನ ಹಾಗೂ ವೀರಶೈವ ಸಿದ್ಧಾಂತ ಗ್ರಂಥಗಳ ಆಧಾರ ದೊಡನೆ ವಿವರಿಸಿದರು. ಇಂತಹ ಯೋಗ-ಶಕ್ತಿಯನ್ನು ಪ್ರತಿಯೊಬ್ಬ ಮಠಾ ಧೀಶರು ಸಾಧನೆಯಿಂದ ಕಂಡು ಕೊಂಡರೆ ಭಕ್ತೋದ್ಧಾರ ಸಾಧ್ಯ ಎಂದು ಕುಮಾರ ಶಿವಯೋಗಿಗಳು ಹೇಳಿ ನಂತರ "ನಾವು ಇನ್ನು ಮುಂದೆ ಶಿವಯೋಗ ಸಂಪತ್ತನ್ನು ಹೆಚ್ಚಿಸುವ ಮತ್ತು ಚಿತ್ತ-ಚಾಂಚಲ್ಯವನ್ನು ಅಡಗಿಸುವ, ಮನಸ್ಸಿಗೆ ಮಂಗಳ ಪ್ರಾಪ್ತಿ ನೀಡುವ ಯೋಗ ಸಂಸ್ಥೆಯನ್ನು ನಿರ್ಜನವಾದ ಪ್ರದೇಶದಲ್ಲಿ ಸ್ಥಾಪಿಸ ಬೇಕೆಂದು ಇಂದು ಶಿವಪೂಜೆಯಲ್ಲಿ ಕುಳಿತುಕೊಂಡಾಗ ನಿರ್ಧರಿಸಿದ್ದೇವೆ. ಇಷ್ಟು ದಿನಗಳವರೆಗೆ ನಿಮ್ಮೆಲ್ಲರ ಭಕ್ತಿ ವಿಶ್ವಾಸ ಪ್ರೋತ್ಸಾಹದಿಂದ ಸಾಮಾಜಿಕ ಕಾರ್ಯ ವನ್ನು ಮಾಡಿದ್ದಾಯ್ತು. ಭೌತಿಕ ಶಕ್ತಿಗಿಂತಲೂ ಆಧ್ಯಾತ್ಮಿಕ ಶಕ್ತಿ ಹೆಚ್ಚಿನದು. ಈ ದೈವೀಯ ಶಕ್ತಿಯನ್ನು ಹೆಚ್ಚಿಸುವದಕ್ಕಾಗಿ ಆಚಾರ ವಿಚಾರದಿಂದ ಪರಿಪೂರ್ಣರಾದ ತೇಜಸ್ವೀ ವಟುಗಳನ್ನು ಪ್ರತಿಯೊಂದು ಮಠಗಳಿಗೆ ನೀಡಿದರೆ ಮಠಗಳು ಸುವರ್ಣ ಘಟದಂತೆ ಬೆಳಗಿ ಸಮಾಜೋದ್ಧಾರ ಮಾಡಲು ಸಹಾಯವಾಗಬಲ್ಲದು ಈ ಹಿಂದೆ

ನಮಗೆ ಪ್ರೋತ್ಸಾಹ ನೀಡಿದಂತೆ: ಈ ಸಂಸ್ಥೆಯ ಸ್ಥಾಪನೆಗಾಗಿ ಅದರ ಸ್ಥಿರತೆಗಾಗಿ ನಿಮ್ಮೆಲ್ಲರ ಸಹಾಯ ಸಹಕಾರ ಅಗತ್ಯ" ಎಂದು ಈ ಪ್ರವಚನವನ್ನು ಮುಗಿಸುವನಿತರಲ್ಲಿಯೇ ಧನವೈರಾಗ್ಯಶಾಲಿಗಳಾಗಿದ್ದ ಬಾಗಲಕೋಟೆಯ ಮಲ್ಲಣಾರ್ಯರು ಹಾನಗಲ್ಲ ವಿರಕ್ತಮಠದೊಳಗೆ ಪ್ರವೇಶ ಮಾಡಿ ಕುಮಾರ ಸ್ವಾಮಿಗಳವರಿಗೆ ನಮಸ್ಕರಿಸಿ, ಅಲ್ಲಿಯೇ ಎದ್ದು ನಿಂತು ಕೆಲವು ಪ್ರಶ್ನೆಗಳನ್ನು ಕೇಳಲು ಪ್ರಾರಂಭಿಸುತ್ತಾರೆ.

"ಇಂದು ಧಾರ್ಮಿಕ ಕ್ರಾಂತಿಯಾಗಬೇಕಾದರೆ ತಪಸ್ಸು ಅತ್ಯವಶ್ಯ. ಅಧರ್ಮ ವೃತ್ತಿಯು ಅಳಿದು ಸ್ವಧರ್ಮ ವೃತ್ತಿಯು ಬೆಳೆದು ಜಾಗ್ರತಾವಸ್ಥೆಗೆ ಬರ ಬೇಕಾದರೆ ರಾಜಸತ್ತೆಯು ಇದೀಗ ಇಲ್ಲದಾಗಿದೆ. ರಾಜಸತ್ತೆಗಿಂತಲೂ ಪ್ರಬಲವಾದ ತಪೋಬಲದಿಂದ ಧರ್ಮದ ಬೆಳವಣಿಗೆಯನ್ನು ಮಾಡಲು ಸಾಧ್ಯವಿದೆ." ಬಂಧಮೋಕ್ಷಗಳಿಗೆ ಮೂಲ ಕಾರಣವಾಗಿರುವ ಮನಸ್ಸಿನ ನಿರೋಧಕ್ಕೆ ಯೋಗ ಸಾಧನೆಯೇ ಮೊದಲ ಮೆಟ್ಟಲು. ಈ ಯೋಗ ಸಾಧನೆಯು ಪವಿತ್ರ ಜೀವನ ಪಡೆದುಕೊಳ್ಳಲು ಪರಮ ಸಾಧನವಾಗುವದಲ್ಲದೆ, ಧರ್ಮಧ್ವಜವನ್ನು ಎತ್ತರದಲ್ಲಿ ಹಾರಿಸಲು ಸಹಾಯವಾಗುತ್ತದೆ. ತತ್ವಾಧಿಕ್ಯದಿಂದ ತಪೋಬಲದ ಮೇಲ್ಮೆಯಿಂದ ಅಹಿಂಸೆ, ಸತ್ಯ, ಬ್ರಹ್ಮಚರ್ಯ, ಅಸ್ತೇಯಾದಿಗಳ ತಳಹದಿಯ ಮೇಲೆ ಸ್ಥಾಪಿತವಾದ ಧರ್ಮವು ಬಹುಕಾಲ ಬಾಳಬಲ್ಲುದು, ಬೆಳಗಬಲ್ಲುದು. ವೀರಶೈವಧರ್ಮದ ಹೆಚ್ಚಳವನ್ನು ಹೆಚ್ಚಿಸಬೇಕಾದರೆ ಆತ್ಮಬಲವೇ ದಾರಿದೀಪ. ತಾವೊಬ್ಬರೆ ಆತ್ಮೋದ್ಧಾರ ಮಾಡಿಕೊಂಡು ಜನ ಜಾಗೃತಿ ಮಾಡುತ್ತಿದ್ದೀರಿ. ಆತ್ಮ ಸಾಮರ್ಥ್ಯದಿಂದೊಡಗೂಡಿದ ತಮ್ಮ ಮಹಾನ್ ವ್ಯಕ್ತಿತ್ವವನ್ನು ಕೇಳಿ ಸಂತಸಗೊಂಡಿದ್ದೇನೆ. ಇಷ್ಟರಿಂದಲೇ ವೀರಶೈವ ಸಮಾಜಕ್ಕೆ ತೃಪ್ತಿಯಾಗದು. ತಾವುಗಳು ಇನ್ನುಳಿದ ಮಠಗಳತ್ತ ಕಣ್ಣು ಹಾಯಿಸಿದರೆ ಅರ್ಥವಾಗುತ್ತದೆ. ಅವರೆಲ್ಲರೂ ಅಹಂಕಾರ ಮಮಕಾರದ ಸಂಕೋಲೆಯಲ್ಲಿ ಸಿಲುಕಿಕೊಂಡು, ಬಂಧು ಬಾಂಧವರನ್ನು ತುಂಬಿಕೊಂಡು, ಆತ್ಮಬಲವನ್ನು ಕಳೆದುಕೊಂಡು ಲಿಂಗನಿಷ್ಠೆ, ಆಚಾರ ವಿಚಾರ ಹಾಗೂ ಭಕ್ತೋದ್ಧಾರವನ್ನು ಮರೆತು ಸುಮ್ಮನೆ ವ್ಯರ್ಥ ಕಾಲಹರಣ ಮಾಡುತ್ತಿದ್ದಾರೆ. ಅಂಥವರನ್ನು ಶೀಲ ಸಂಸ್ಕೃತಿಯುತ್ತ ಕರೆದೊಯ್ದು ಶಿವಾನುಭವಿಗಳನ್ನಾಗಿ ಮಾಡಲು ಶಿವಯೋಗ ಶಿಕ್ಷಣವನ್ನು ನೀಡುವ ಒಂದು ಯೋಗ ಸಂಸ್ಥೆಯನ್ನು ಸಂಸ್ಥಾಪಿಸಿದರೆ, ಅದರಿಂದ ಸಮಾಜವ ಹಾಗೂ ಮಠಗಳ ಕಲ್ಯಾಣವಾದೀತು. ಇಲ್ಲದಿದ್ದರೆ ಶಿವಯೋಗ ಸಂಸ್ಕೃತಿಯು ಹಾಳಾಗಿ ದುರುಳ ವೇದಾಂತಿಗಳ ಪ್ರಚಾರ ಹೆಚ್ಚಾದೀತು. ಅದಕ್ಕಾಗಿ ತಾವುಗಳು ನನ್ನ ಮಾತಿನತ್ತ ಲಕ್ಷ್ಯವಹಿಸಿ ಮನೋಧೈರ್ಯವನ್ನು ತಂದುಕೊಂಡು, ಯೋಗ ಸಂಸ್ಥೆಯನ್ನು ಸಂಸ್ಥಾಪಿಸಿ, ಸಮಾಜ ಸೇವೆಯನ್ನು ಮಾಡುವ, ಶಿವಯೋಗದ ಬೀಜವನ್ನು ಬಿತ್ತಿ ಯೋಗ ಸಂಸ್ಕೃತಿಯನ್ನುಳಿಸುವ ಸತ್ಯಸಂಕಲ್ಪ ಮಾಡಿರಿ ಧಾರ್ಮಿಕ ಶಾಸ್ತ್ರಗಳಾದ ಜೋಳಿಗೆ ಬೆತ್ತಗಳನ್ನು ಹಿಡಿದು ಆಚಾರ ನಿಷ್ಠೆಯೆಂಬ ಕುದುರೆಯನ್ನೇರಿ ಪ್ರಯಾಣ ಬೆಳೆಸಿದರೆ ಲಕ್ಷಾಂತರ ರೂಪಾಯಿಗಳ ರಾಶಿಯು ತಮ್ಮೆದುರಿಗೆ

ಬಂದು ಬೀಳುವದು. ಆದುದರಿಂದ ಮಠಮಾನ್ಯಗಳನ್ನು ಬಿಟ್ಟು ಹೊರಡಲು ಸಿದ್ಧರಾಗಬೇಕು.

ಸಮಾಜದ ಕಳಕಳಿಯುಳ್ಳ ಹಾನಗಲ್ಲ ಕುಮಾರ ಶ್ರೀಗಳು ವೈರಾಗ್ಯನಿಧಿ ಮಲ್ಲಣಾರ್ಯರ ಈ ನುಡಿಯನ್ನು ಕೇಳಿದೊಡನೆಯೇ ಅತೀವ ಸಂತಸಗೊಂಡು, ಮತ್ತಿಷ್ಟು ಹುರುಪು ಉತ್ಸಾಹ ಹುಟ್ಟಿ ಮನಸ್ಸಿಗೆ ಸಮಾಧಾನವನ್ನುಂಟು ಮಾಡಿಕೊಂಡರು. ಶೂರನಿಗೆ ವೀರಗರ್ಜನೆ ಕೇಳಿದಂತಾಯ್ತು. ಮಲ್ಲಣಾರ್ಯರ ಮಾತಿಗೆ ಉತ್ತರರೂಪವಾಗಿ ಹಾನಗಲ್ಲ ಕುಮಾರ ಸ್ವಾಮಿಗಳು–

"ವೈರಾಗ್ಯ ಮೂರ್ತಿಗಳಾದ ಮಲ್ಲಣಾರ್ಯರೇ! ನೀವು ಯೋಚಿಸಿ ನಮಗೆ ತಿಳಿಸಿದ ಈ ವಿಚಾರವನ್ನು ಇಂದು ಮುಂಜಾನೆ ಶಿವಪೂಜಾ ಮಂದಿರದಲ್ಲಿಯೇ ನಿರ್ಧರಿಸಿಕೊಂಡು, ಇಂದಿನ ಪ್ರವಚನದಲ್ಲಿ ಅದೇ ವಿಷಯವನ್ನು ಪ್ರಸ್ತಾಪಿಸಿ ಹೇಳುತ್ತಿರುವಾಗ ನೀವು ಬಂದು ನಮಗೆ ಮತ್ತಿಷ್ಟು ಧೈರ್ಯವನ್ನು ನೀಡಿ, ನಮ್ಮ ಚಿಂತೆಯನ್ನು ದೂರ ಮಾಡಿದಿರಿ. ನಿಮ್ಮ ಸತ್ಯಸಂಕಲ್ಪವೇ ನಮ್ಮ ಸತ್ಯ ಸಂಕಲ್ಪವಾಗಿದೆ. ನಡೆಯುವವರಿಗೆ ಸುಗಮವಾದ ದಾರಿ ಸಿಕ್ಕಂತಾಯ್ತು. ಬಲವು ಬಂದಂತಾಯ್ತು. ನಮ್ಮ ಯೋಜನೆಯು ಫಲಕಾರಿಯಾದಂತಾಯ್ತು. ಇಂದೇ ಈ ಮಠದಿಂದ ಯೋಗಸಂಸ್ಥೆಯ ಸ್ಥಾಪನೆಗಾಗಿ ಹೊರಡುತ್ತೇವೆ. ಚಿಂತೆ ಮಾಡದಿರಿ!" ಎಂದು ನುಡಿದು ಮಲ್ಲಣಾರ್ಯರಿಗೆ ಸ್ನಾನ ಶಿವಪೂಜಾದಿ ಕ್ರಿಯೆಗಳನ್ನು ತೀರಿಸಿಕೊಂಡು ಪ್ರಸಾದ ಸೇವಿಸಲು ತಿಳಿಸಿದರು. ಆಧ್ಯಾತ್ಮದ ಹಸಿವಿನಲ್ಲಿ ಕೊರಗಿದ ಮಲ್ಲಣಾರ್ಯರಿಗೆ ಹಸಿದ ಹೊಟ್ಟೆಗೆ ಅನ್ನ ಸಿಕ್ಕಷ್ಟು ಆನಂದವಾಯ್ತು. "ಇಂತಹ ಕಾರಣಿಕ ಮೂರ್ತಿ ಮಹಾಶಿವಯೋಗಿಗಳನ್ನು ಕಂಡು ಕಣ್ಣು ಪಾವನಗೊಂಡವು. ಅವರೊಡನೆ ಸಂಭಾಷಿಸಿ ಧನ್ಯನಾದೆನು" ಎಂದೆನ್ನುತ್ತ ಮಲ್ಲಣಾರ್ಯರು ಮಠದಲ್ಲಿ ಶಿವಪೂಜೆ ತೀರಿಸಿಕೊಂಡು ಹಿಗ್ಗಿನ ಕಡಲಿನಲ್ಲಿ ಮುಳುಗಿದರು.

ಹಾನಗಲ್ಲ ಕುಮಾರಸ್ವಾಮಿಗಳು ಹಾನಗಲ್ಲಿನಿಂದ ಬಾಗಲಕೋಟೆಗೆ ದಯಮಾಡಿಸಿ ಅಖಿಲಭಾರತ ವೀರಶೈವ ಮಹಾಸಭೆಯ ನಾಲ್ಕನೆಯ ಅಧಿವೇಶನವನ್ನು ಬಾಗಲಕೋಟೆಯಲ್ಲಿಯೇ ಜರುಗಿಸಬೇಕೆಂದು, ಸಮಾಜದವರ ಒಪ್ಪಿಗೆಯನ್ನು ಪಡೆದುಕೊಂಡು ಕಾರ್ಯಪ್ರವೃತ್ತರಾದರು. ಮಹಾಸಭೆಯ ವ್ಯವಸ್ಥೆಗಾಗಿ ಹಗಲಿರುಳು ದುಡಿದು ಹಣವನ್ನು ಸಂಗ್ರಹಿಸಿದರು. "ಶ್ರೇಯಾಂಸಿ ಬಹು ವಿಘ್ನಾನಿ" ಎಂಬಂತೆ ಇವರಿಗೆ ಸಹಾಯ ಸೌಕರ್ಯಗಳನ್ನು ಒದಗಿಸಿಕೊಡುತ್ತಿದ್ದ ಶ್ರೀ ಮಲ್ಲಣಾರ್ಯರಿಗೆ ದೀರ್ಘ ಅನಾರೋಗ್ಯವಾಗಿ ಮಲಗಿಬಿಟ್ಟರು. ಎಷ್ಟು ಉಪಚರಿಸಿದರೂ ಗುಣಮುಖವಾಗದೆ ಕೊನೆಗೆ ಆ ಅಜಾರಿಯಲ್ಲಿಯೇ ಲಿಂಗೈಕ್ಯರಾದರು.

ಈ ಘಟನೆಯಿಂದ ಹಾನಗಲ್ಲ ಕುಮಾರ ಸ್ವಾಮಿಗಳವರಿಗೆ ವಜ್ರಾಘಾತವಾದಂತಾಯ್ತು. ಆದರೂ ಎದೆಗುಂದದೆ ಸತ್ಯ ಸಂಕಲ್ಪವನ್ನು ಈಡೇರಿಸಲು

ಸನ್ನದ್ಧರಾದರು. ಕ್ರಿಸ್ತಾಬ್ದ ೧೯೦೮ ರಂದು ಬಾಗಲಕೋಟೆಯಲ್ಲಿ ಅಖಿಲಭಾರತ ವೀರಶೈವ ಮಹಾಸಭೆಯನ್ನು ಕರೆಯಿಸಿ ಆ ಸಭೆಯಲ್ಲಿ ಶಿವಯೋಗಮಂದಿರ ಸಂಸ್ಥೆಯ ಸ್ಥಾಪನೆಯ ವಿಷಯವನ್ನು ಇಟಿಸಿದರು. ಈ ಮಹಾಸಭೆಯು ಶ್ರೀಮಂತ ಲಖಿಮಗೌಡ ಬಸವಪ್ರಭು ಸರ್‌ದೇಸಾಯಿ ವಂಟಮುರಿ ಅವರ ಅಧ್ಯಕ್ಷತೆಯಲ್ಲಿ ಬಹು ವೈಭವದಿಂದ ಜರುಗಿತು. ಮರುದಿನ ಕಾರ್ಯಕಾರಿ ಸಮಿತಿಯು ಸೊನ್ನಲಾಪುರದ ಶ್ರೀಮಂತ ರಾವಬಹಾದ್ದೂರ ವಾರದ ಅಪ್ಪಾಸಾಹೇಬರ ಅಧ್ಯಕ್ಷತೆಯಲ್ಲಿ ಮಹಾ ತಪಸ್ವಿಗಳಾದ "ವಿರಕ್ತ ಶಿಖಾಮಣಿ" ಚಿತ್ತರಗಿ ಶ್ರೀ ವಿಜಯ ಮಹಾಂತಸ್ವಾಮಿಗಳು ಇಳಕಲ್ಲ ಇವರು ತೋರಿಸಿದ ಸ್ಥಾನದಲ್ಲಿ ಶಿವಯೋಗ ಮಂದಿರವನ್ನು ಸ್ಥಾಪಿಸ ಬೇಕೆಂದು ನಿಶ್ಚಿತವಾಯ್ತು. ಈ ವಿಷಯವನ್ನು ಹಾನಗಲ್ಲ ಕುಮಾರ ಸ್ವಾಮಿಗಳು ಹೇಳಿದೊಡನೆಯೇ ಶ್ರೀ ವಿಜಯ ಮಹಾಂತಸ್ವಾಮಿಗಳು ಒಪ್ಪಿಕೊಂಡು, ಇಲಕಲ್ಲ ಶ್ರೀ ವಿಜಯ ಮಹಾಂತಸ್ವಾಮಿಗಳು, ಹಾನಗಲ್ಲ ಸ್ವಾಮಿಗಳು, ಅರಟಾಳ ರುದ್ರ ಗೌಡರು, ಅಂದು ಜಿಲ್ಲಾಧಿಕಾರಿಗಳಾಗಿದ್ದ ಕಿತ್ತೂರ ರೇವಣ ಸಿದ್ದಪ್ಪನವರು, ಮತ್ತು ಜಿರ್ಲಿ ಮುರಿಗೆಪ್ಪನವರು ಹಾಗೂ ಧಾರವಾಡ, ಗದಗ ಬಾಗಲಕೋಟೆ ಮುಂತಾದ ನಗರಗಳ ೪೦-೫೦ ಸದ್ಭಕ್ತರು ಕೂಡಿಕೊಂಡು ಹುನಗುಂದ ಮಾರ್ಗ ವಾಗಿ ಐತಿಹಾಸಿಕ ಸ್ಥಾನವಾದ ಐಹೊಳೆಗೆ ಬಂದರು. ಇದು ಏಕಾಂತ ವಾಸಕ್ಕೆ ಯೋಗ್ಯವಾದ ಸ್ಥಾನವಲ್ಲವೆಂದು ಶ್ರೀ ವಿಜಯ ಮಹಾಂತಸ್ವಾಮಿಗಳ ಅನುಮತಿ ಯಂತೆ, ಈಗಿದ್ದ ಶಿವಯೋಗ ಮಂದಿರ ಹತ್ತಿರ ಬಂದು ಕುಳಿತುಕೊಂಡರು. ಈಗಿನ ಶಿವಯೋಗಮಂದಿರದಂತೆ ಆಗ ಅದು ಇರಲಿಲ್ಲ. ಎತ್ತ ನೋಡಿದಡತ್ತ ಡಬಗಳ್ಳಿಯ ಸಾಲೇ ಸಾಲು. ಭಕ್ತರೆಲ್ಲರೂ ಭಯಭೀತರಾದರು. ಭಕ್ತರ ಭಯಗ್ರಸ್ಥ ಮುಖ ವನ್ನು ಶ್ರೀ ವಿಜಯ ಮಹಾಂತಸ್ವಾಮಿಗಳು ನೋಡಿ "ನೀವೇನು ಭಯಪಡುವ ಕಾರಣವಿಲ್ಲ. ನೊಂದನೆಯ ತಣಿಸಲು ಮಗ್ಗುಲಲ್ಲಿ ಮಲಾಪಹಾರಿಣಿಯು ಹರಿದಿ ದ್ದಾಳೆ. ರಮಣೀಯ ವಾತಾವರಣವಿದೆ. ದಭದಭೆಯ ಧ್ವನಿಯು ಕಿವಿಗೆ ಇಂಪನ್ನು ನೀಡುತ್ತಿದೆ. ಬೆಟ್ಟವಾದರೆ ತರುಗಳಿವೆ. ಕಾಡುಮಲ್ಲಿಗೆಗಳು ಕಂಪು ಬೀರುತ್ತಿವೆ. ಪ್ರಕೃತಿಯ ಸೌಂದರ್ಯದಿಂದ ಈ ಸ್ನಾನವು ಶೋಭಿಸುತ್ತಲಿದೆ. ಲತೆ ಲತೆ ಜತೆ ಗೂಡಿ ನೆಳಲ ನೆಯ್ದಿಕ್ಕಿವೆ ಹತ್ತಿರದಲ್ಲಿಯೇ ಬಿಲ್ವವನವಿದೆ. ಕೊಟ್ಟೂರು ಬಸವೇಶ್ವರನ ದೇವಸ್ಥಾನವಿದೆ. ಅನುಷ್ಠಾನಕ್ಕೆ ಈ ಸ್ಥಾನವು ಅನುಕೂಲವಾಗಿದೆ. ಈ ಸ್ಥಾನದ ಸುತ್ತ ಮುತ್ತ ಜಕ್ಕಣಾಚಾರ್ಯರ ಶಿಲ್ಪಕಲೆಯಿಂದೊಡಗೂಡಿದ ಐಹೊಳೆ, ಪಟ್ಟದಕಲ್ಲು, ಮಹಾಕೂಟ, ನಾಗನಾಥಮಂದಿರ ಮುಂತಾದವುಗಳು ಯತಿಯ ಗೂಡಾಗಿ ನಿಂತಿವೆ. ಆದಕ್ಕಾಗಿ ಶಿವಯೋಗ ಮಂದಿರವನ್ನು ಸ್ಥಾಪಿಸಲು ಇದುವೆ ಯೋಗ್ಯತಾಣ" ಎಂದು ಅಪ್ಪಣೆ ಕೊಡಿಸಿದರು. ಭಕ್ತರು ಸ್ವಲ್ಪ ಸಂಕೋಚ ಪಟ್ಟರು. ಆದರೆ ಹಾನಗಲ್ಲ ಕುಮಾರ ಸ್ವಾಮಿಗಳು ಎಳ್ಳನಿತೂ ಸಂಕೋಚಕ್ಕೆ

ಆಸ್ಪದ ಕೊಡಲಿಲ್ಲ. "ಶ್ರೀ ವಿಜಯ ಮಹಾಂತಸ್ವಾಮಿಗಳು ತೋರಿಸಿದ ಸ್ಥಾನವೆ ನಮಗೆ ಯೋಗ್ಯವಾದುದು,ಪರಮ ಪವಿತ್ರವಾದುದು. ಅವರ ಇಚ್ಛೆಯಂತೆ ನಡೆಯುವದೆ ನಮ್ಮೆಲ್ಲರ ಕರ್ತವ್ಯ!" ಎಂದು ಭಕ್ತರಿಗೆ ತಿಳಿಹೇಳಿ ಕ್ರಿ. ಶಕ ೧೯೦೯ ಕೀಲಕ ನಾಮ ಸಂವತ್ಸರದ ಮಾಘಶುದ್ಧ ಸಪ್ತಮಿಯ ಶುಭ ದಿನದಂದು ಚಿತ್ತರಗಿ ಇಲಕಲ್ಲ ವಿಜಯ ಮಹಾಂತಸ್ವಾಮಿಗಳವರ ಪವಿತ್ರ ಹಸ್ತದಿಂದ ಹಾನಗಲ್ಲ ಕುಮಾರ ಸ್ವಾಮಿಗಳು ಲಿಂಗಮುದ್ರೆಯ ಅಡಿಗಲ್ಲನ್ನಿರಿಸಿದರು. ಬಂದ ಭಕ್ತರೆಲ್ಲರೂ ಮಂಗಲ ಪಾಡಿದರು. ಶಿವಯೋಗಮಂದಿರವು ಸ್ಥಾಪಿತವಾಯ್ತು. ಧರ್ಮಕ್ಕೆ ಕವಿದ ಕತ್ತಲೆಯನ್ನು ಪರಿಹರಿಸಲು ಕುಮಾರ ಸ್ವಾಮಿಗಳ ಸತ್ಯಸಂಕಲ್ಪದ ಸಿದ್ಧಿಯಾಯಿತು.

ಅಂದಿನಿಂದ ಕಾಡುಪಶುಗಳು ಕೂಡ ಕ್ರೂರತನವನ್ನು ಬಿಟ್ಟು ಸಾತ್ವಿಕವಾದವು. ಕಾಡಿಗೆ ಮೆರಗು ಬಂದಿತು. ಕಾಡು ಯೋಗದ ಬೀಡಾಯ್ತು. ಅಲ್ಲಲ್ಲಿ ಪರ್ಣಕುಟೀರಗಳು,ಗುಹೆಗಳು ನಿರ್ಮಾಣಗೊಂಡವು.ಶಿವಯೋಗ ಮಂದಿರವು ಋಷ್ಯಾಶ್ರಮದಂತೆ ಕಂಗೊಳಿಸ ಹತ್ತಿತು. ಎತ್ತ ನೋಡಿದತ್ತ ಯೋಗ ಸಾಧನೆಗಾಗಿ ಬಂದ ವಟುಗಳು, ಸಾಧಕರು ಸಾಲು ಸಾಲಾಗಿ ಹೋಗುವ ದೃಶ್ಯ ರಮಣೀಯವಾಗಿತ್ತು. ವನ ಸಂಪತ್ತಿನಿಂದ ಶೋಭಿಸುವ ಶಿವಯೋಗಮಂದಿರವು ಆತ್ಮ ಸಂಪತ್ತಿನಿಂದ ಕಂಗೊಳಿಸುವ ಯೋಗ ಸಾಧಕರಿಂದ, ಸ್ವಾಮಿಗಳಿಂದ ನಯನ ಮನೋಹರವಾಗಿ ಕಾಣಹತ್ತಿತು. ಇಲ್ಲಿ ನಡೆ ನುಡಿಗೆ ಹೆಚ್ಚು ಮಹತ್ವ ನೀಡುತ್ತಿದ್ದರು. ಇಲ್ಲಿ ಗುರು ವಿರಕ್ತರೆಂಬ ಭೇದಭಾವವಿಲ್ಲ. ಇವರೀರ್ವರ ಭಾವೈಕ್ಯವು ಇಲ್ಲಿ ನೋಡುವಂತಹದು. ಇಲ್ಲಿ ಸಮಯ ಭೇದಗಳಿಲ್ಲ. "ನಾ ಹೆಚ್ಚು ನೀ ಹೆಚ್ಚು" ಎನ್ನುವ ಬಿಂಕವಿಲ್ಲ, ಬಿರುನುಡಿಯಿಲ್ಲ. ನಡೆಶುದ್ಧ, ನುಡಿಶುದ್ಧ, ಪ್ರತಿಯೊಬ್ಬರಿಗೂ ಒಂದೇ ಆಹಾರ. ಅದು ಸಾತ್ವಿಕವಾದುದು. ಆಹಾರದಲ್ಲಿ ಉಪ್ಪಿಲ್ಲ, ಹುಳಿಯಿಲ್ಲ. ಸಾತ್ವಿಕಾಹಾರದಿಂದ ಇರುವವರಿಗೆ ಮಾತ್ರ ಮಂದಿರವಲ್ಲಿ ಪ್ರವೇಶ. ಯೋಗ ಸಾಧನೆಗೆ ಸಾತ್ವಿಕಾಹಾರವೆ ಮೊದಲ ಸಾಧನ. ಇಲ್ಲಿ ರುಚಿಗಿಂತ ಶುಚಿಗೆ ಬೆಲೆ. ಶುಚಿಯಿದ್ದಲ್ಲಿ ಆತ್ಮಬಲ ಸಾಧ್ಯ. ಸಾತ್ವಿಕಾಹಾರವನ್ನು ಸೇವಿಸುವವರಿಗೆ ರೋಗವಿಲ್ಲ, ರಾಗವಿಲ್ಲ. ವಿರಾಗಕ್ಕೆ ಮೂಲಬೀಜ ಸಾತ್ವಿಕಾಹಾರ.

ಶಿವಯೋಗ ಮಂದಿರ ಸ್ಥಾಪನೆಗಾಗಿ ಹಾನಗಲ್ಲ ಕುಮಾರ ಸ್ವಾಮಿಗಳು ಮೊದಲು ಸಂಗ್ರಹಿಸಿದ ಹಣವೆಲ್ಲವೂ ತೀರಿ ಹೋದುದರಿಂದ ಮತ್ತೆ ಮಂದಿರದ ಅಭ್ಯುದಯಕ್ಕಾಗಿ, ಚಿರಕಾಲ ಉಳಿಯುವದಕ್ಕಾಗಿ ಹಣವನ್ನು ಕೂಡಿಸಲು ಹಳ್ಳಿ ಹಳ್ಳಿಗೆ ಹೋದರು. ಶರೀರ ಸುಖದ ಕಡೆಗೆ ಲಕ್ಷ್ಯಗೊಡದೆ ದುಡಿದರು. ಇವರೊಡನೆ ಪರಮ ತಪಸ್ವಿ ಹಾವೇರಿಯ ಶ್ರೀ ಶಿವಬಸವ ಸ್ವಾಮಿಗಳು ಜೊತೆಗೂಡಿದರು. ಇಬ್ಬರ ಪರಿಶ್ರಮದ ಫಲವಾಗಿ ಧನಸಂಗ್ರಹವಾಗಹತ್ತಿತು. ಹೋದಲ್ಲೆಲ್ಲ ವಟುಗಳನ್ನು ಶಿವಯೋಗ ಮಂದಿರಕ್ಕೆ ಕಳಿಸಲು ತಿಳಿಸುತ್ತಿದ್ದರು. ಮಂದಿರಕ್ಕೆ ಬಂದ

ವಟುಗಳಿಗೆ ತಂದೆ ತಾಯಿಗಳಿಗಿಂತಲೂ ಹೆಚ್ಚಿನ ವ್ಯವಸ್ಥೆಯಿರುತ್ತಿತ್ತು. ಅವರಿಗೆ ಒಳ್ಳೆಯ ಸಂಸ್ಕಾರ ನೀಡಿ ಉತ್ತಮ ಯೋಗಿಗಳನ್ನಾಗಿ ಮಾಡುವದೇ ಶಿವಯೋಗ ಮಂದಿರದ ಮುಖ್ಯ ಧ್ಯೇಯವಾಗಿತ್ತು. ವಟುಗಳ ಶಿಕ್ಷಣಕ್ಕಾಗಿ ಇಂಗ್ಲೀಷ, ಸಂಸ್ಕೃತ, ಸಂಗೀತ, ಕನ್ನಡ ಪಂಡಿತರನ್ನು ನಿಯಮಿಸಿದರು. ಅಲ್ಲಿಯ ವಟುಗಳ ವಯಸ್ಸು ೪ ರಿಂದ ೧೨ ರ ವರೆಗೆ* ೧೨ ವರ್ಷಕ್ಕಿಂತ ಮೇಲಿನವರಿಗೆ ಸಾಧಕರೆಂದು ಕರೆಯುವ ರೂಢಿಯುಂಟು. ವಟುಗಳಿಗೆ, ಸಾಧಕರಿಗೆ ಯಾವ ಕೊರತೆಯಾಗಬಾರದೆಂಬುದೇ ವ್ಯವಸ್ಥಾಪಕರಿಗೆ ಕುಮಾರ ಸ್ವಾಮಿಗಳ ಕಟ್ಟಾಜ್ಞೆ.

೧) ಜಿಡರಿ ಸವದತ್ತಿ ಅಪ್ಪಯ್ಯ ಸ್ವಾಮಿಗಳು. ೨) ನವಿಲುಗುಂದ ಗವಿ ಮಠದ ಬಸವಲಿಂಗಸ್ವಾಮಿಗಳು. ೩) ಕುಷ್ಟಗಿ ಪಟ್ಟದದೇವರು. ೪) ಕುರವತ್ತಿಯ ಮಹಾದೇವ ಸ್ವಾಮಿಗಳು. ೫) ಬಾಗಲಕೋಟೆಯ ಶಿವಮೂರ್ತಿ ಸ್ವಾಮಿಗಳು. ೬) ಕೊಪ್ಪದ ಮಹಾಂತ ಸ್ವಾಮಿಗಳು. ೭) ಮಮದಾಪ್ಪುರದ ಮರಿ ದೇವರು ಈ ಏಳು ಜನ ಸಾಧಕರಿಂದ ಶಿವಯೋಗ ಮಂದಿರವು ಪ್ರಾರಂಭವಾಗಿ ವರ್ಷಗಳು ಗತಿಸಿದಂತೆ ೧೦೦ ಕ್ಕಿಂತ ಹೆಚ್ಚು ಜನ ಸಾಧಕರು ಇಲ್ಲಿ ಸೇರಿದರು. ಎಲ್ಲಿ ನೋಡಿದಲ್ಲಿ ಶಿವಯೋಗ ಮಂದಿರದ ಬೆಳಕು. ಪ್ರತಿಯೊಂದು ಮಠದ ಸ್ವಾಮಿಗಳು ಶಿವಯೋಗ ಮಂದಿರದ ಸಾಧಕರೇ ತಮ್ಮ ಮಠಕ್ಕೆ ಬೇಕೆಂದು ಅಪೇಕ್ಷಿಸುತ್ತಿದರು.

ಶ್ರೀ ಕುಮಾರ ಸ್ವಾಮಿಗಳ ವಟು ವಾತ್ಸಲ್ಯವು ಮೆಚ್ಚುವಂತಹದು. ಮಮತೆ ಅಪಾರವಾದುದು, ಅವರ ಭವಿಷ್ಯ ನಿರ್ಮಾಣಕ್ಕಾಗಿ ಹಗಲಿರುಳೂ ಚಿಂತಿಸುತ್ತಿದ್ದರು. ಸಾಧಕರಿಗೂ ಯೋಗ ಸಾಧನೆಯ ರೀತಿಯನ್ನು ತಿಳಿಸುತ್ತಿದ್ದರು. ಸಾಧಕರು ನಿಷ್ಠಾವಂತ ಬ್ರಹ್ಮಚಾರಿಗಳಾಗಿ ಆದರ್ಶ ಧರ್ಮಪ್ರಚಾರಕರಾಗಬೇಕೆಂಬುವ ಹಿರಿಯಾಸೆ ಸ್ವಾಮಿಗಳವರದಿತ್ತು. ಯಮಾದಿ ಅಷ್ಟಾಂಗಯೋಗದ ಮಹತ್ವವನ್ನು ಮನವರಿಕೆಯಾಗುವಂತೆ ವಿವರಿಸಿ ತಿಳಿಸಿಕೊಡುತ್ತಿದ್ದರು. ಧ್ಯಾನಕ್ಕೆಹೆಚ್ಚು ಮಹತ್ವಕೊಡುತ್ತಿದ್ದರು. ಅನುಷ್ಠಾನ ಮಾಡುವವರನ್ನು ಕಂಡು ಬಹಳ ಆನಂದ ಪಡುತ್ತಿದ್ದರು.

ಅವರಿಗೆ ಅನುಕೂಲತೆಗಳನ್ನು ಒದಗಿಸಿ ಕೊಡುತ್ತಿದ್ದರು. ಯೋಗದಲ್ಲಿ ಬಲ್ಲಿದವರಾದ 'ಯೋಗಿರಾಜ' ಎಂದು ಬಿರುದು ಪಡೆದ ಕಂಚುಗಲ್, ಬಿದರೆ ದೊಡ್ಡ ಮಠದ ಲಿಂ. ಶ್ರೀ ಪ್ರಭುಕುಮಾರ ಪಟ್ಟದ್ದೇವರನ್ನು ಯೋಗ ಶಿಕ್ಷಣಕ್ಕಾಗಿ ನಿಯಮಿಸಿದ್ದರು. ಶ್ರೀಗಳು ಸಾಧಕರ ಎಲ್ಲ ಬಗೆಯ ಏಳ್ಗೆಗಾಗಿ ಚಿಂತಿಸಿ ಅವರ ಉದ್ಧಾರಕ್ಕಾಗಿ ಹೆಣಗುತ್ತಿದ್ದರು. ಅವರಿಗೆ ಸಂಸ್ಕೃತ, ಕನ್ನಡ, ಇಂಗ್ಲೀಷ ಭಾಷೆಗಳ ಪ್ರೌಢ ಶಿಕ್ಷಣ ಕೊಡಿಸಿ ಪುರಾಣ ಪ್ರವಚನಗಳಲ್ಲಿ ನಿಪುಣರನ್ನಾಗಿ ಮಾಡುತ್ತಿದ್ದರು. ಅವರವರ ನಡೆನುಡಿಯನ್ನು ಮನೋವೈಜ್ಞಾನಿಕ ದೃಷ್ಟಿಯೊಡನೆ ನಿರೀಕ್ಷಿಸಿ, ಪರೀಕ್ಷಿಸಿ ಅವರನ್ನು ಆಯಾ ಕಲೆಯ ಬಲ್ಲಿದರನ್ನಾಗಿ ಮಾಡುತ್ತಿದ್ದರು ಪಾಶ್ಚಾತ್ಯ

---

* ಈ ಪುಸ್ತಕದ ಬರಹಗಾರರು ಬಾಲ್ಯದ ವಯಸ್ಸಿನಲ್ಲಿಯೇ ಶಿವಯೋಗಮಂದಿರದಲ್ಲಿ ಪ್ರವೇಶ ಪಡೆದು ೧೫ ವರ್ಷಗಳ ಕಾಲ ಅಧ್ಯಯನ ಮಾಡಿದರು.

ದೇಶಗಳಿಗೂ ಶಿವಯೋಗ ಮಂದಿರದ ಸಾಧಕರು ಹೋಗಿ ಧರ್ಮಪ್ರಚಾರ ಮಾಡ ಬೇಕೆಂಬುವ ಮನೀಷೆ ಶ್ರೀಗಳವರ ಮನದಲ್ಲಿ ಬಲವಾಗಿತ್ತು.*

ಪ್ರತಿನಿತ್ಯವೂ ಸಾಧಕರು ದಿನಚರಿಯನ್ನು ಬರೆಯುವ ಪದ್ಧತಿಯನ್ನು ಆಚರಣೆ ಯಲ್ಲಿ ತಂದಿದ್ದರು. ಯಾರಾದರೂ ಸಾಧಕರು ಒಬ್ಬರೇ ಕುಳಿತು ಯೋಚಿಸುತ್ತಿ ದ್ದರೆ, ಅವರನ್ನು ಕಂಡು, ಅವರ ಮನೀಷೆಯನ್ನರಿತು ಯೋಗ್ಯ ಸಲಹೆಯನ್ನು ನೀಡಿ ಸದ್ ಭಾವನೆಗಳನ್ನು ಅವರ ಹೃದಯದಲ್ಲಿ ತುಂಬುತ್ತಿದ್ದರು. ಪ್ರತಿಯೊಂದು ದೃಷ್ಟಿಯಿಂದಲೂ ಅವರನ್ನು ತಿದ್ದಿ, ಆದರ್ಶ ಸಮಾಜ ಸೇವಕರನ್ನಾಗಿ ಮಾಡುತ್ತಿ ದ್ದರು. ಆದರ್ಶ ವ್ಯಕ್ತಿತ್ವ ಬರುವಂತೆ ರೂಪಿಸುತ್ತಿದ್ದರು.

ಹಾನಗಲ್ಲ ಶ್ರೀಗಳವರ ಜೀವದಯೆ ಅದ್ಭುತವಾದುದು. ಶಿವಯೋಗಮಂದಿರ ಕ್ಷೇತ್ರದಲ್ಲಿ ಯಾರೂ ಯಾವ ಕಾಲದಲ್ಲಿಯೂ ಪಶುಪಕ್ಷಿಗಳನ್ನು ಕೊಲ್ಲಲಾರದಂತೆ ಸರಕಾರದಿಂದ ಸನದು ಸಹ ಪಡೆದುಕೊಂಡಿದ್ದರು. ಜೀವದಯಾ ಸಂಘಗಳಿಗೆ ಪ್ರೋತ್ಸಾಹವನ್ನು ಕೊಡುತ್ತಿದ್ದರು. "ದಯೆಯೇ ಧರ್ಮದ ಮೂಲವಯ್ಯ" "ಅಹಿಂಸಾ ಪರಮೋಧರ್ಮಃ" ಈ ಮಾತನ್ನು ಚಾಚೂ ತಪ್ಪದಂತ ನಡೆಸಿಕೊಂಡು ಬಂದರು. ಪರಮಾತ್ಮನನ್ನು ಕಾಣುವ ಪರಮ ಸಾಧನವೇ ದಯೆ ಎಂದು ಹೇಳುತ್ತಿದ್ದರು.

ಶ್ರೀ ಕುಮಾರ ಶ್ರೀಗಳು ಸತ್ಯಶುದ್ಧ ಕಾಯಕದಿಂದ ನಡೆಯುವವರನ್ನು ಕಂಡು ಬಲು ಆನಂದಪಡುತ್ತಿದ್ದರು. ಶಿವಯೋಗ ಮಂದಿರದಲ್ಲಿ ಭಸ್ಮದ ಕಾರಖಾನೆ ಯನ್ನು ಸ್ಥಾಪಿಸಿ ಪರಿಶುದ್ಧವಾದ ಭಸ್ಮಗಳನ್ನು ತಯಾರು ಮಾಡಿಸಿದರು. ಪಂಚ ಸೂತ್ರಕ್ಕೆ ಸರಿಯಾದ ಲಿಂಗುಗಳನ್ನು ಶಾಸ್ತ್ರೋಕ್ತವಾಗಿ ನಿರ್ಮಿಸಲು ತೋರಿಸಿ ಕೊಟ್ಟರು. ಕಾಯಕದ ಕೃತಿಯಲ್ಲಿ ಪಾವಿತ್ರ್ಯವನ್ನು ಕಾಣಬಯಸಿದ್ದರು. ಖಾದಿ ಯಂತಹ ಶುದ್ಧವಸ್ತುವು ಇನ್ನೊಂದಿಲ್ಲ. "ಖಾದಿಯೇ ರಾಷ್ಟ್ರ ಕಲ್ಯಾಣದ ಭದ್ರ ಬುನಾದಿ" ಎಂದುಸುರಿ ಖಾದಿಗ ಪ್ರೋತ್ಸಾಹ ನೀಡಿದ್ದರು. ಸ್ವತಃ ತಾವು ಖಾದಿ ಯನ್ನು ಧರಿಸುತ್ತಿದ್ದರು. ಸ್ವಯಂ ಸೇವಾ ಶಿಕ್ಷಣಕ್ಕೆ ಶಿವಯೋಗ ಮಂದಿರದಲ್ಲಿ ಪ್ರಾಧಾನ್ಯತೆಯನ್ನಿತ್ತಿದ್ದರು. ಸಾಧಕರು ತಮ್ಮ ಬಟ್ಟೆಬರೆಗಳನ್ನು ತೊಳೆದುಕೊಳ್ಳು ವದು. ಹೂ ಪತ್ರಿಗಳನ್ನು ಎತ್ತುವದು, ಪ್ರಸಂಗ ಬಂದರೆ ಸ್ವಯಂ ಪಾಕವನ್ನು ಹಾಗೂ ಲಿಂಗದ ಕಂತೆಯನ್ನು ಮಾಡಿಕೊಳ್ಳುವದು, ಇವೆಲ್ಲವುಗಳನ್ನು ಆಚರಣೆ ಯಲ್ಲಿ ತಂದರು. ಸ್ವಯಂ ಸೇವೆಗೆ ಸಿದ್ಧರಾಗದವರು ಸಮಾಜ ಸೇವೆಗೆ ಅನರ್ಹರು. ಸೇವಾ ಬುದ್ಧಿ ಅವರಿಗೆ ಬರಲಾರದು ಮತ್ತು ಕಾಯಕಷ್ಟ ಸಹಿಸದವರು ಮಾಯೆಯ ಮದವನ್ನು ಮುರಿಯಲಾರರು. ಅಂತರಂಗ ಬಹಿರಂಗ ಶುದ್ಧಿಯನ್ನು ಮಾಡಿಕೊಳ್ಳ ಲಾರದು. ಆಧ್ಯಾತ್ಮ ಸಾಧನೆಗೆ ಈ ಸತ್ಯ ಶುದ್ಧ ಕಾಯಕವು ಅತ್ಯವಶ್ಯವಿರ ಬೇಕೆಂಬುದೇ ಕುಮಾರ ಶ್ರೀಗಳವರ ಸಿದ್ಧಾಂತ.

* ಅವರ ಇಚ್ಛೆಯಂತೆ ಈ ಬರಹಗಾರರಿಂದ ಪೂರ್ತಿಯಾಗಿದೆ.

ಕುಮಾರ ಶ್ರೀಗಳವರ ವಿಚಾರ ಶಕ್ತಿಯು ಬಹುಮುಖವಾಗಿ ಹರಿದಿತ್ತು. ಪ್ರತಿಯೊಂದು ಕ್ಷೇತ್ರದಲ್ಲಿಯೂ ಸುಧಾರಣೆಯಾಗಬೇಕು. ಜನಜಾಗೃತಿಯಾಗಬೇಕು. ದೇಹ ಮತ್ತು ಬುದ್ಧಿಶಕ್ತಿಯನ್ನು ಸತ್ಕಾರ್ಯದಲ್ಲಿ ಬೆಳೆಸಬೇಕು. ಆತ್ಮಶಕ್ತಿಯನ್ನು ಬೆಳೆಸಬೇಕು. ಭಕ್ತರಲ್ಲಿಯ ಒಳ ಜಗಳಗಳು ದೂರಾಗಬೇಕು. ಸಮಾಜದಲ್ಲಿ ನವಚೈತನ್ಯವು ಹುಟ್ಟಿ ಒಕ್ಕಟ್ಟು ಬರಬೇಕೆಂದು ಹಗಲಿರುಳು ಚಿಂತಿಸಿ ಕೊರಗುತ್ತಿದ್ದರು. ಯಾವ ಕಾಯಕದವರೇ ಇರಲಿ, ಅವರನ್ನು ಒಳ್ಳೇ ದಾರಿಗೆ ತರುತ್ತಿದ್ದರು. "ಆಡು ಮುಟ್ಟದ ಗಿಡವಿಲ್ಲ ಹಾನಗಲ್ಲ ಕುಮಾರ ಸ್ವಾಮಿಗಳು ಚಿಂತಿಸದ ಸಾಮಾಜಿಕ ಕಾರ್ಯಗಳಿಲ್ಲ" ಎನ್ನುವ ಈ ನುಡಿ ಅವರಿಗೆ ಸಲ್ಲಿತ್ತು. ಸಮಾಜದ ಪ್ರಗತಿಗಾಗಿ ಕರ್ತವ್ಯ ದಕ್ಷತೆಯಿಂದ ವಿಚಕ್ಷಣ ಬುದ್ಧಿಯಿಂದ ಅತುಲ ಸಾಹಸದೊಡನೆ, ಕಷ್ಟಗಳೆಲ್ಲವನ್ನು ಬದಿಗೊತ್ತಿ ಮುಂದೆ ಸಾಗುತ್ತಿದ್ದರು. ಸಮಾಜ ಸೇವೆಯೇ ಶಿವಪೂಜೆಯೆಂದು ಭಾವಿಸಿದ್ದರು.

ಹಾನಗಲ್ಲ ಶಿವಯೋಗಿಗಳವರ ದೃಷ್ಟಿ ಬಲು ಎತ್ತರದ್ದು. ಅವರ ದೃಷ್ಟಿ ಹರಿಯದ ವಿಷಯವೇ ಇಲ್ಲ. ಔದ್ಯೋಗಿಕ, ಆರ್ಥಿಕ, ಧಾರ್ಮಿಕ, ಸಾಂಸ್ಕೃತಿಕ, ನೈತಿಕ, ಸಾಹಿತ್ಯಿಕ, ಯೌಗಿಕ, ಆಧ್ಯಾತ್ಮಿಕ, ಕಲಾತ್ಮಕ, ವೈದಿಕ, ವೈದ್ಯರ ಮುಂತಾದ ಎಲ್ಲ ಕ್ಷೇತ್ರಗಳಲ್ಲಿಯೂ ಅವರ ದೃಷ್ಟಿ ಹರಿದಿತ್ತು. ಕೃಷಿ ಸಾಗಿತ್ತು. ಶಿವಯೋಗ ಮಂದಿರದ ಆರ್ಥಿಕ ಭದ್ರತೆಯನ್ನು ಬಲಗೊಳಿಸಲು ಫಲವತ್ತಾದ ನೂರಾರು ಎಕರೆ ಭೂಮಿಯನ್ನು ತೆಗೆದುಕೊಂಡು ನೀರಾವರಿ ಮಾಡುವ ಯೋಜನೆಯನ್ನು ಕಾರ್ಯರೂಪಕ್ಕೆ ತಂದಿದ್ದರು. ಸಾಧಕರಿಗೆ ಕೃಷಿಕಾಯಕವನ್ನು ಕಲಿಸಿದ್ದರು ಆಧ್ಯಾತ್ಮಿಕ ಕೃಷಿಯೊಡನೆ ಕೃಷಿಯ ವ್ಯವಸಾಯವು ಚಿತ್ತಕ್ಕೆ ಚೇತನವನ್ನು ಕೊಡುವಂತಹುದೆಂದು ಬೋಧಿಸುತ್ತಿದ್ದರು. ಸಾಧಕರ ಜೀವನೋಪಾಯಕ್ಕೆ ಮತ್ತು ಭಸ್ಮಗಳನ್ನು ತಯಾರು ಮಾಡಲು ೨೦೦ ಗೋವುಗಳನ್ನು ಸಾಕಿ ಸಲುಹಿದ್ದರು. ಬಾಗಲಕೋಟೆಯಲ್ಲಿ ಶಿವಾನಂದ ಜಿನ್ನಿಂಗ್ ಪ್ರೆಸ್ ಮತ್ತು ಫ್ಯಾಕ್ಟರಿಯನ್ನು ಸ್ಥಾಪಿಸಿದ್ದರು. ಇದರಿಂದ ಬಡ ಕುಟುಂಬಗಳ ಉದ್ಧಾರ ಹಾಗೂ ಶಿವಯೋಗಮಂದಿರ ಆರ್ಥಿಕ ಪ್ರಗತಿಯಾಗಲು ಸಹಕಾರಿಯಾಯ್ತು.

ಶಿವಯೋಗಮಂದಿರದ ಸಾಹಿತ್ಯ ಶಕ್ತಿಯು ಯಾವ ವಿಧದಲ್ಲಿಯೂ ಕಡಿಮೆಯಾಗಿರಲಿಲ್ಲ. ಪುರಾತನ ಸಾಹಿತ್ಯ ಸಂಗ್ರಹ ಕಾರ್ಯದಲ್ಲಿ ಬೇರಾವ ಸಂಸ್ಥೆಗಿಂತಲೂ ಹಿಂದುಳಿದಿರಲಿಲ್ಲ. ಸಮಾಜದ ಮಠಗಳಲ್ಲಿ ಮೂಲೆ ಗುಂಪಾಗಿ ಹೋಗುತ್ತಿದ್ದ ಸಾಹಿತ್ಯ ಸಂಸ್ಕೃತಿಗಳ ಜೀವಾಳವಾದ ಓಲೆಗರಿ-ಕೋರಿ ಕಾಗದ ಗ್ರಂಥಗಳನ್ನು ಹುಡುಕಿಸಿ ಶಿವಯೋಗಮಂದಿರದಲ್ಲಿ ಸಂಗ್ರಹಿಸಿಟ್ಟರು. ಅಲ್ಲದೆ ಅಂದು ೮-೧೦ ಸಾವಿರ ಪುಸ್ತಕಗಳ ಗ್ರಂಥ ಭಾಂಡಾರವನ್ನು ಸಂಸ್ಥಾಪಿಸಿ ಸಾಧಕರಿಗೆ ಅನುಕೂಲ ಮಾಡಿಕೊಟ್ಟರು.

ವೀರಶೈವ ವಾಙ್ಮಯವನ್ನು ಪ್ರಕಟಮಾಡಿ ಪ್ರಚುರಪಡಿಸಲು ಶ್ರೀಗಳವರು

ಹುಬ್ಬಳ್ಳಿ ಜಗದ್ಗುರು ಮೂರುಸಾವಿರಮಠದಲ್ಲಿದ್ದ ಮುದ್ರಣ ಮಂದಿರವನ್ನು ಧಾರವಾಡದ ಶಿವಲಿಂಗ ಶಾಸ್ತ್ರಿಗಳಿಗೆ ದೊರಕುವಂತೆ ಮಾಡಿದರು. ಅದರಿಂದ ಪತ್ರಿಕೆ, ಸಣ್ಣ ಸಣ್ಣ ವೀರಶೈವ ಧರ್ಮ ಗ್ರಂಥಗಳನ್ನು ಪ್ರಕಾಶಪಡಿಸಿದರು. ೨೦ನೆಯ ಶತಮಾನದಲ್ಲಿ ವಚನ ವಾಙ್ಮಯವನ್ನು ಮೊದಲು ಸಂಗ್ರಹಿಸಿದ ಕೀರ್ತಿಯು ಶಿವಯೋಗಮಂದಿರದ ಸಂಸ್ಥೆಯದೆಂದರೆ ತಪ್ಪಾಗಲಿಕ್ಕಿಲ್ಲ.

ಕುಮಾರ ಶಿವಯೋಗಿಗಳವರಲ್ಲಿ ಸ್ವಧರ್ಮ ನಿಷ್ಠೆಯಿದ್ದಂತೆ ಪರಧರ್ಮ ಸಹಿಷ್ಣುತೆಯು ಅಪಾರವಾಗಿತ್ತು. ಪರಧರ್ಮೀಯರಿಗೆ ವಿದ್ಯಾರ್ಜನೆಗಾಗಿ ಹಣ ಸಂಗ್ರಹಿಸಿ ನೀಡಿದ್ದುಂಟು. ಅಲ್ಲದೆ ಪಂ. ಪಂಚಾಕ್ಷರಿ ಗವಾಯಿಗಳಿಗೆ ಸಂಗೀತ ಪಾಠಶಾಲೆಯಲ್ಲಿ ಎಲ್ಲ ಧರ್ಮದವರಿಗೆ ಅನ್ನ ವಿದ್ಯೆಯನ್ನು ಕೊಡಬೇಕೆಂದು ತಿಳಿಸಿ, ಅದನ್ನು ಕಾರ್ಯರೂಪದಲ್ಲಿ ತಂದಿದ್ದರು. ಇಂದಿನವರೆಗೂ ಅದು ಅದೇ ಪರಂಪರೆಯಲ್ಲಿ ನಡೆದು ಆದರ್ಶವಾಗಿದೆ.

ಕುಮಾರ ಯೋಗಿಗಳು ವೈದ್ಯಕೀಯ ರಂಗದಲ್ಲಿ ಪಳಗಿದವರಾಗಿ, "ಧೃತಿ" ಮೊದಲಾದ ಸಿದ್ಧೌಷಧಿಗಳನ್ನು ತಯಾರಿಸಿ, ಪ್ರಸಿದ್ಧ ವೈದ್ಯರಿಂದಲೂ ಗುಣ ಪಡಿಸಲು ಸಾಧ್ಯವಾಗದ ಚರ್ಮವ್ಯಾಧಿಯನ್ನು ನಿರ್ಮೂಲನ ಮಾಡಿದ ಸಿದ್ಧಹಸ್ತ ಶ್ರೀಗಳವರದಾಗಿತ್ತು. ಶಿವಯೋಗಮಂದಿರದ ಸುತ್ತಲೂ ವನಸ್ಪತಿಯ ಗಿಡಗಳಿಂದ ಕೂಡಿರುವದರಿಂದ ಇಂತಹ ಸ್ಥಾನದಲ್ಲಿ "ಆಯುರ್ವೇದ ಮಹಾವಿದ್ಯಾಲಯ" ವೊಂದನ್ನು ಸ್ಥಾಪಿಸುವ ಬಯಕೆ ಬಯಕೆತ್ತು.

ಕ್ರಮತಪ್ಪಿ ನಡೆಯುವವರನ್ನು ಕಂಡು ಕೋಪಾವಿಷ್ಟರಾಗುತ್ತಿದ್ದರು. ಹೊತ್ತಿನ ಮಹತ್ವವನ್ನರಿದು ನಡೆಯುತ್ತಿದ್ದರು, ನುಡಿಯುತ್ತಿದ್ದರು. ಸ್ವೈರ ಪ್ರಿಯರನ್ನು ಕಂಡರೆ ಮೆಚ್ಚುತ್ತಿದ್ದಿಲ್ಲ. ಆದರೆ ಬಡವರ ಭಕ್ತಿಗೆ ಮೆಚ್ಚಿ ಹಿಗ್ಗು ತ್ತಿದ್ದರು. ಭಕ್ತಿ ಸದ್ಗುಣಗಳಿದ್ದಲ್ಲಿ ಜಾತಿಯನ್ನು ನೋಡುತ್ತಿದ್ದಿಲ್ಲ.

ಒಂದು ಸಲ ಕುರುಬನೋರ್ವನು ಶ್ರೀಗಳವರ ಪೂಜೆಗಾಗಿ ಜಿಟಿ ಜಿಟಿ ಹತ್ತಿದ ಮಳೆಯಲ್ಲಿ ತುಂಬಿದ ಹೊಳೆಯನ್ನು ಈಸಿ, ಶಿವಯೋಗಮಂದಿರಕ್ಕೆ ಬಂದು, ಚರಿಗೆಯ ತುಂಬ ಹಾಲನ್ನು ತಂದು ಸೇವಕರ ಕೈಯಲ್ಲಿ ಕೊಡಲು ಹೋದಾಗ ಸೇವಕರು ಅವನನ್ನು "ಮೈಲಿಗೆಯವನು ಮತ್ತು ಅನ್ಯ ಜಾತಿಯವನು" ಎಂದು ತಿರಸ್ಕರಿಸಿ ಬೆದರಿಸಿ ತಿರುಗಿ ಕಳಿಸುತ್ತಿರುವಾಗ ಆ ದೃಶ್ಯವನ್ನು ಸ್ವಾಮಿ ಗಳವರು ಕಂಡು ಮನ ನೊಂದುಕೊಂಡು, "ಮೂಢರೆ, ಭಕ್ತಿಯಿಂದ ತಂದ ಹಾಲು ಎಂದಾದರು ಮೈಲಿಗೆಯಾದೀತೆ? ಆ ಹಾಲನ್ನು ತೆಗೆದುಕೊಳ್ಳಿರಿ, ದೇವರು ಭಕ್ತ ಪ್ರಿಯನೆಂದು ಹೇಳಿ ಆ ಹಾಲನ್ನು ಶಿವಾರ್ಚನೆಗೆ ಇಡಿಸಿದರು. ಬಂದ ಭಕ್ತನು ಸಂತೋಷಭರಿತನಾಗಿ ಮಹಾತ್ಮರ ಮಹಿಮೆಯು ಅಗಾಧವಾದುದು." ಎಂದೆನ್ನುತ್ತ ಮನೆಯತ್ತ ಹೊರಟನು, ಇದರಿಂದ ಶ್ರೀಗಳವರ ವಿಶಾಲ ಹೃದಯವನ್ನು ಅರ್ಥ ಮಾಡಿಕೊಳ್ಳಬಹುದು.

ಶಿವಯೋಗಮಂದಿರದಲ್ಲಿ ಸಾಧಕರು ಅರ್ಚನ ಅರ್ಪಣ ಅನುಭವ ನಿತ್ಯವೂ ನಡೆಯಬೇಕು ಇದು ಯಾವ ಕಾಲಕ್ಕೂ ತಪ್ಪಬಾರದೆಂದು ನಿಯಮವಿದ್ದುದರಿಂದ ಇಂದಿಗೂ ಹಾಗೆಯೇ ನಡೆಯುತ್ತ ಬಂದಿದೆ. ಇದನ್ನು ಕಟ್ಟುನಿಟ್ಟಾಗಿ ಶಿವಯೋಗಮಂದಿರದ ಸಂಚಾಲಕರಾದ ಶ್ರೀ ಸಿ. ಪ್ರ. ಸದಾಸ್ವಾಮಿಗಳವರು ಹಾನಗಲ್ಲ ಅವರು ನಡೆಯಿಸಿಕೊಂಡು ಬಂದಿದ್ದಾರೆ.

ಒಂದು ದಿನ ಬೆಂಗಳೂರಿನಿಂದ ಕೆಲವು ಪ್ರಮುಖ ಭಕ್ತರು ಹಾನಗಲ್ಲ ಕುಮಾರ ಶಿವಯೋಗಿಗಳ ಸಂದರ್ಶನಕ್ಕಾಗಿ ಮಂದಿರಕ್ಕೆ ಬಂದಾಗ, ಶ್ರೀಗಳು ಸಾಧಕ ಸಮೂಹಗಳೊಡನೆ ಶಿವಾನುಭವ ಗೋಷ್ಠಿಯಲ್ಲಿದ್ದರು. ಬಂದ ಭಕ್ತರು ಶ್ರೀಗಳವರೆದುರಿಗೆ 'ದಣ್ಣನೆ ಬಿಟ್ಟಿಯಿಟ್ಟು' ನಮಸ್ಕರಿಸಿ ಕರ್ಪೂರವನ್ನು ಹಚ್ಚಿ, ಅಲ್ಲಿಯೇ ಕುಳಿತು. ಕರ್ಪೂರದ ಉರಿ ಅಲ್ಲಾಡತೊಡಗಿತು. ಗಾಳಿ ಹೆಚ್ಚಾಗುತ್ತಿತ್ತು. ಕರ್ಪೂರದ ಉರಿ ಆರಬಾರದೆಂದು ಅಲ್ಲಿಯ ಭಕ್ತರೊಬ್ಬರು ಎದ್ದು ಬಂದು ಕರ್ಪೂರದ ಉರಿಯ ಸುತ್ತ ಕೈಹಿಡಿದರು. ಅಲ್ಲಿದ್ದ ಮತ್ತೊಬ್ಬರು ಸನ್ನೆ ಮಾಡಿ "ಸ್ವಾಮಿಗಳಲ್ಲಿ ಶಕ್ತಿ ಇದ್ದರೆ ಗಾಳಿಗೆ ಕರ್ಪೂರದ ಉರಿ ಆರದಿರಲಿ" ಎಂದು ಹೇಳಿ ಕೈಬಿಡಿಸಿದರು. ಇದೆಲ್ಲವನ್ನು ಶ್ರೀಗಳವರು ನೋಡಿದರು. ಅವರ ಅಂತರಂಗದ ಅಭಿಪ್ರಾಯವನ್ನು ಅರಿತುಕೊಂಡರು, ಕೂಡಲೇ "ಶ್ರೀಗಳವರು ತಮ್ಮ ಎಡಗೈ ತೋರು ಬೆರಳನ್ನು ಎಡಗಣ್ಣಿನ ಕೊನೆಯಲ್ಲಿರಿಸಿ ನಟ್ಟ ನೋಟದಿಂದ ಉರಿವ ಕರ್ಪೂರವನ್ನು ನಿರೀಕ್ಷಿಸಿದರು. ಅಲ್ಲಾಡುತ್ತಿರುವ ಆ ಉರಿ ಅಲ್ಲಾಡದಂತಾಯ್ತು. "ದೊಡ್ಡ ಗಾಳಿ ಬೀಸುತ್ತಿದ್ದರೂ ಅದು ಆರಲಿಲ್ಲ. ಅಲ್ಲಿಗೆ ಬಂದ ಭಕ್ತರು ಬೆರಗಾದರು. ಇವರ ಅದ್ಭುತ ಶಕ್ತಿಯನ್ನು ಮೆಚ್ಚಿಕೊಂಡು ಕ್ಷಮೆ ಕೇಳಿದರು.

"ಅಲಿನಿಂದೊಡೆ ಸುಳಿದು ಸೂಸುವ ಗಾಳಿ ನಿಲುವದು. ಗಾಳಿ ನಿಂದೊಡೆ ಮನವು ನಿಲುವದು. ಮನವು ನಿಂದೊಡೆ ಮಾಯೆ ಹೇಳಹೆಸರಿಲ್ಲದಂತಹುದು ಬಸವ ಕೇಳೆಂದ" ಈ ಅನುಭವ ನುಡಿಯನ್ನು ನಿರಂತರವೂ ಸಾಧಕರಿಗೆ ತಿಳಿ ಹೇಳುತ್ತಿದ್ದರು. ಮನೋನಿಗ್ರಹಕ್ಕೆ ದೃಷ್ಟಿ ಸಾಧನೆ ಅತ್ಯವಶ್ಯ. ದೃಷ್ಟಿ ಸಾಧನೆಯ ಬಲದಿಂದ ದಿವ್ಯ ಜ್ಯೋತಿಯನ್ನು ಕಾಣಬಹುದು. ಸತ್ ಚಿತ್ ಆನಂದದಲ್ಲಿ ತನ್ಮಯರಾಗಬಹುದೆಂದು ಅರಹುತ್ತಿದ್ದರು.

ಶ್ರೀಕುಮಾರ ಶ್ರೀಗಳ ಅನುಭವವು ಅಸಾಧಾರಣವಾದುದು. ಇವರಿಗೆ ಅನುಭವವು ಪಾಂಡಿತ್ಯದಿಂದ ಬಂದುದಲ್ಲ. ಆತ್ಮಶಕ್ತಿಯ ಪ್ರಭೆಯಿಂದ ಬಂದಿತ್ತು.

ಎಂಥೆಂಥ ಪಂಡಿತರನ್ನು ತಮ್ಮ ಅನುಭವದಿಂದ ಮರುಳು ಮಾಡುತ್ತಿದ್ದರು. ಪಂಡಿತರಿಗೆ ತಿಳಿಯದ ವಿಷಯವನ್ನು ಸಹಜವಾಗಿ ತಿಳಿ ಭಾಷೆಯಲ್ಲಿ ತತ್ವಶಾಸ್ತ್ರದ ಅರ್ಥವನ್ನು ರಸವತ್ತಾಗಿ ತಿಳಿಸಿ ಕೊಡುತ್ತಿದ್ದರು. ಬರಿತರ್ಕದವರಬುದ್ಧಿಗೆ ಮೆಚ್ಚುತ್ತಿದ್ದಿಲ್ಲ. ಭಾಷಾಪಾಂಡಿತ್ಯದ ಜೊತೆಗೆ ಅನುಭಾವ್ಯವೇಕೆಂದು ಅನ್ನುತ್ತಿದ್ದರು.

ಕುರುಡರಿಗೆ ಕುಂಟರಿಗೆ ಆಶ್ರಯ ನೀಡುತ್ತಿದ್ದರು. ಬೇಡಿದವರಿಗೆ ಬೇಡಿದ ಪ್ರಾರ್ಥನೆ ಪೂರೈಸುವ ಮಹಾಶಕ್ತಿ ಇವರಲ್ಲಿತ್ತು. ಅವರಲ್ಲಿ ವಾಕ್ ಸಿದ್ಧಿಯು ತಪಸ್ಸಿನ ಪ್ರಭಾವದಿಂದ ಸಹಜವಾಗಿ ಬೆಳೆದುಬಂದಿತ್ತು. ಅವರು ನುಡಿದ ನುಡಿಯು ಹುಸಿಯಾಗುತ್ತಿದ್ದಿಲ್ಲ. ಕಾಡಿದವರಿಗೂ ಸುಮತಿಯನ್ನು ಕೊಟ್ಟು ಪೊರೆಯುತ್ತಿದ್ದರು. ಪುತ್ರರಿಲ್ಲದೆ ಮರುಗುವವರಿಗೆ ತಾಯಿ ಆಶೀರ್ವಾದ ಮಾಡಿ ಮಕ್ಕಳಾಗುತ್ತವೆ ಎಂದು ಧೈರ್ಯ ಹೇಳಿದವರೆಲ್ಲರಿಗೂ ಮಕ್ಕಳಾಗಿದ್ದು, ಅವರೆಲ್ಲರೂ ಆನಂದದಿಂದ ಇದ್ದು, ಲಿಂಗಪೂಜಾನಿಷ್ಠೆಯಲ್ಲಿ, ಸಮಾಜ ಸೇವೆಯಲ್ಲಿ, ಶೈಕ್ಷಣಿಕ ರಂಗದಲ್ಲಿ ಕಾಲ ಕಳೆಯುತ್ತಿರುವದನ್ನು ನಾವೆಲ್ಲರೂ ಇಂದು ಕಾಣುತ್ತಿದ್ದೇವೆ.*

ಸ್ತ್ರೀಯರ ಸುಧಾರಣೆಗಾಗಿ ಬಹು ಪರಿಶ್ರಮ ಪಡುತ್ತಿದ್ದರು. ಸಾಧಕರಾದವರು ಮಹಿಳೆಯರ ಮುಖವನ್ನು ನೋಡಬಾರದೆಂಬ ನಿಯಮವನ್ನು ಮಾಡಿದ್ದರೂ ಮಹಿಳಾ ಮುಖ ಜೀವನವನ್ನು ಕಂಡಿದ್ದರು.

ಮಹಿಳೆಯರ ಮುನ್ನಡೆಗೆ, ಮಂಗಳ ಜೀವನಕ್ಕೆಬೇಕಾದ ಕಾರ್ಯ ಚಟುವಟಿಕೆಗಳನ್ನು ಕಲ್ಪಿಸಿಕೊಡುತ್ತಿದ್ದರು. ಉದಾಹರಣೆಗೆ ಸೊನ್ನಲಾಪುರದ ಆಧುನಿಕ ಶಿವಶರಣೆಯರಂತೆ ಇದ್ದ, ಲಿಂ|| ಶ್ರೀ ರುದ್ರಮ್ಮನವರ ಸ್ತ್ರೀತ್ವ ಮತ್ತು ಶರಣಸ್ಥಲ ರಕ್ಷಣೆಯ ಹೊಣೆ ಶ್ರೀಗಳವರದಾಗಿತ್ತೆಂಬುದನ್ನು ಅರಿತುಕೊಂಡರೆ ಅವರಲ್ಲಿರುವ ಮಹಿಳಾ ಮಂಡಳದ ಉದ್ಧಾರದ ಉದ್ದೇಶದ ಘನತೆ ಗೊತ್ತಾಗುತ್ತದೆ. ಪ್ರತಿಯೊಬ್ಬರೂ ಆದರ್ಶ ಮಹಿಳಾ ಮಣಿಗಳಾಗಬೇಕು. ಗುಣಗಳ ಶೃಂಗಾರದಿಂದ ಕೂಡಿಕೊಂಡು ಪತಿವ್ರತೆಯರಾಗಿ ಶೀಲ ಸಂಸ್ಕೃತಿಯನ್ನು ಉಳಿಸಿಕೊಳ್ಳಬೇಕೆಂಬುದೇ ಅವರ ಅಭಿಲಾಷೆ. ಮಹಿಳೆಯರ ಪ್ರಗತಿಗಾಗಿ ಪ್ರತಿವರ್ಷ ಶಿವಯೋಗಮಂದಿರ ಜಾತ್ರೆಯಲ್ಲಿ ಮಹಿಳಾ ಸಮ್ಮೇಳನವನ್ನು ಕರೆದು ಅವರಲ್ಲಿ ಧಾರ್ಮಿಕ ಭಾವನೆಗಳನ್ನು ಒಡಮೂಡಿಸುತ್ತಿದ್ದರು.

ಕುಮಾರ ಶ್ರೀಗಳವರ ಧರ್ಮಜಾಗೃತಿಗಾಗಿ ಶ್ರೀ ಶಿವಯೋಗಮಂದಿರದ ವತಿಯಿಂದ ಕವನಹಳ್ಳಿ, ರಾಮಗಡ್ಡಿ, ಸಿದಗುಂಡಿಕೊಪ್ಪ, ಹಿರೇಹಾಳ, ಬದಾಮಿ ಮುಂತಾದ ಊರುಗಳಲ್ಲಿ ಶಾಖಾ ಮಂದಿರಗಳನ್ನು ಸ್ಥಾಪಿಸಿದರು. ಅಲ್ಲಿರುವ ವ್ಯಕ್ತಿಗಳ ವ್ಯಕ್ತಿತ್ವವನ್ನು ರೂಪಿಸಿದರು. ಧರ್ಮ ಜಾಗೃತಿ ಗೈದರು.

ಶಿವಯೋಗಮಂದಿರದ ಅಭಿವೃದ್ಧಿಗಾಗಿ ಹಾಗೂ ಅದಕ್ಕೆ ಮುಂದೆ ತೊಂದರೆ ಬರದಿರುವಂತೆ ನೋಡಿಕೊಳ್ಳಲು ಹತ್ತೊಂಬತ್ತು ನಿಯಮಗಳುಳ್ಳ ವಿಶ್ವಸ್ತಸಮಿತಿಯೊಂದನ್ನು ರಚಿಸಿ ಚಿರಕಾಲ ಉಳಿದು ನಿಲ್ಲುವಂತೆ ಮಾಡಿದರು. ಆಧ್ಯಾತ್ಮ ಹಸಿವಿನಿಂದ ಬಂದ ಭಕ್ತರಿಗೂ ಅಲ್ಲಿ ಆಶ್ರಯ ನೀಡಿದರು. ನಾಡಿನ

---

* ಈ ಪುಸ್ತಕದ ಬರಹಗಾರರು ಸಹ ಲಿಂ|| ಹಾನಗಲ್ಲ ಕುಮಾರ ಶ್ರೀಗಳವರ ಕೃಪೆಯಿಂದ ಜನಿಸಿ ಸಮಾಜ ಸೇವೆಯನ್ನು ಮಾಡುತ್ತಲಿರುವರು.

ತುಂಬ ಧರ್ಮ ಪ್ರಚಾರ ಮಾಡುತ್ತ, ಭಿಕ್ಷೆ ಬೇಡುತ್ತ ಧನ ಸಂಗ್ರಹಿಸಿದರು. ಶಿವಯೋಗಮಂದಿರದಲ್ಲಿ ೮-೧೦ ಭವ್ಯ ಭವನಗಳ ನಿರ್ಮಾಣ ಮಾಡಿದರು. ಸಾಧಕರಿಗಾಗಿ ಒಂದೆಡೆ ಯೋಗಶಾಲೆ ಮತ್ತೊಂದೆಡೆ ಸಂಸ್ಕೃತ ಪಾಠಶಾಲೆ, ಕನ್ನಡ ಪ್ರಾಥಮಿಕ ಶಾಲೆ, ಶಿವಪೂಜಾ ಮಂದಿರ, ಶಿವಾನುಭವ ಮಂಟಪ, ಮುಂತಾದವುಗಳನ್ನು ಕಟ್ಟಿಸಿದರಲ್ಲದೆ, ದರ್ಶನಾರ್ಥಿಗಳಿಗಾಗಿ ಬಂದ ಅತಿಥಿಗಳಿಗೆ ದಾಸೋಹ ಪ್ರಸಾದನಿಲಯವನ್ನು ಕಟ್ಟಿಸಿದರು. ಭಸ್ಮದ ಕಾರಖಾನೆ, ಹಾಗೂ ಗೋಶಾಲೆಯನ್ನು ಕಟ್ಟಿಸಿ ಸರ್ವಕಾರ್ಯಗಳು ಸುಗಮವಾಗಿ ಜರಗುವಂತೆ ವ್ಯವಸ್ಥೆ ಮಾಡಿದರು.

ಶಿವಯೋಗಿ ವೃಂದಕ್ಕೆ ಶಿಸ್ತು ಸಂಘಟನೆ ಕಲಿಸಿದರು. ಮಂದಿರದ ಸಾಧಕರ ದಿನಚರಿಯು ವೈಶಿಷ್ಟ್ಯ ಪೂರ್ಣವುಳ್ಳದಾಗಿದೆ. ಪ್ರತಿನಿತ್ಯ ಬ್ರಾಹ್ಮೀ ಮುಹೂರ್ತದಲ್ಲಿ ಮುಂಜಾನೆ ೪ ಘಂಟೆಗೆ ಸರಿಯಾಗಿ ಎದ್ದು, ಮುಖಮಾರ್ಜನ ಭಸ್ಮಧಾರಣ ಮಾಡಿಕೊಂಡು ಸಾಲಾಗಿ ಕುಳಿತು ಪ್ರಾರ್ಥನೆ ಮಾಡುವರು. ಎಲ್ಲ ಕಾರ್ಯಕ್ರಮಗಳಲ್ಲಿಯೂ ಪ್ರಾರ್ಥನೆಗೆ ಅಲ್ಲಿ ಹೆಚ್ಚು ಮಹತ್ವ ನೀಡಲಾಗಿದೆ. ೪-೧೫ ರಿಂದ ೬ ರ ವರಗೆ ಅಧ್ಯಯನ ೬ ರಿಂದ ೬-೩೦ ರ ವರೆಗೆ ಶೌಚಾದಿ ನಿತ್ಯ ಕರ್ಮ. ೬-೩೦ ರಿಂದ ೭ ರ ವರೆಗೆ ಯೋಗಾಸನ. ೭ ರಿಂದ ೯-೩೦ ರ ವರೆಗೆ ಶಾಲೆಪಾಠ ಪ್ರವಚನಗಳು, ೯-೩೦ ರಿಂದ ೧೧ ರ ವರೆಗೆ ಸ್ನಾನ ಶಿವಪೂಜೆ ೧೧ ರಿಂದ ೧೨ರ ವರೆಗೆ ಅರ್ಪಿತ (ಪ್ರಸಾದ) ೧೨ ರಿಂದ ೧೨-೩೦ ರ ವರೆಗೆ ಶಿವಾನುಭವ. ೧೨-೩೦ ರಿಂದ ೨ರ ವರೆಗೆ ವಿಶ್ರಾಂತಿ. ದಿನಪತ್ರಿಕೆ, ಮಾಸಿಕಪತ್ರಿಕೆ ವಾಚನ ಹಾಗು ಶುದ್ಧ ಬರಹ. ೨ ರಿಂದ ೪-೩೦ ರ ವರೆಗೆ ಪಾಠ ಪ್ರವಚನ, ೪-೩೦ ರಿಂದ ೫ರ ವರೆಗೆ ನಿತ್ಯಕರ್ಮ, ೫ ರಿಂದ ೫-೩೦ರ ವರೆಗೆ ಪುರಾಣಶ್ರವಣ, ೫-೩೦ ರಿಂದ ೬-೩೦ರ ವರೆಗೆ ಕೈದೋಟಗಳಿಗೆ ನೀರು ಹಾಕುವದು. ಸಾಯಂಕಾಲ ೬-೩೦ ರಿಂದ ೭ರ ವರೆಗೆ ಸಾಮೂಹಿಕ ಪ್ರಾರ್ಥನೆ, ೭ ರಿಂದ ೯ರ ವರೆಗೆ ಸ್ನಾನ ಪೂಜೆ ಅರ್ಪಿತ. ರಾತ್ರಿ ೯ ರಿಂದ ೧೦ರ ವರೆಗೆ ಅಧ್ಯಯನ, ೧೦ ಘಂಟೆಗೆ ವೈಯಕ್ತಿಕ ಪ್ರಾರ್ಥನೆಯೊಂದಿಗೆ ಮಲಗುವದು.

ಈ ರೀತಿಯ ನಿಯಮಗಳನ್ನು ಹಾಕಿಕೊಟ್ಟು, ಆಚರಣೆಯಲ್ಲಿ ತಂದಿರಿಸಿದರು. ಇದರಿಂದ ವಟುಗಳು, ಸಾಧಕರು, ಆತ್ಮ ಸಂಯಮದಿಂದ ಇರಲು ಸಾಧ್ಯವಾಯ್ತು. ಸಾಧಕರ ಆಚಾರ ವಿಚಾರ ರೀತಿ ನೀತಿಗಳ ಬಗ್ಗೆ ಹೆಚ್ಚು ಲಕ್ಷ್ಯವಹಿಸಿ, ಅವರ ಬಾಳು ಬಂಗಾರದಂತೆ ಸುಂದರವಾಗಲು ಕುಮಾರ ಶ್ರೀಗಳು ಯೋಜಿಸಿದರು.

ಒಟ್ಟಿನಲ್ಲಿ ಆತ್ಮಾನುಭೂತಿಯ ಅಧ್ಯಾತ್ಮ ಕೇಂದ್ರವಾದ ಶ್ರೀ ಮದ್ವೀರಶೈವ ಶಿವಯೋಗಮಂದಿರ ಸಂಸ್ಥೆಯು ಸ್ಥಾಪಿತವಾದಂದಿನಿಂದ ಸಾವಿರಾರು ಜನ ಸಾಧಕರು ಅಧ್ಯಯನ ಮಾಡಿದ್ದಾರೆ. ಷಟ್‌ಕರ್ಮಗಳ ಸಿದ್ಧಿಯನ್ನು, ಷಟ್‌ಸ್ಥಲಗಳ ಶುದ್ಧಿಯನ್ನು ಬುದ್ಧಿ ವೈಭವದೊಡನೆ, ಭಾವಜೀವಿಗಳಾಗಿ ಆತ್ಮಾನುಸಂಧಾನ ಮಾಡಿ

ಕೊಂಡು ಅಷ್ಟಾಂಗ ಯೋಗಗಳಲ್ಲಿ ಪರಿಣಿತರಾಗಿ, ಇಷ್ಟಲಿಂಗ ಪೂಜಾನಿಷ್ಠರಾಗಿ, ಅಂತಃಶಕ್ತಿ ಪ್ರಭೆಯಿಂದ ನಾಡನ್ನು ಜಾಗೃತ ಮಾಡಿದ್ದಾರೆ. ಪಾದೋದಕ ಪ್ರಸಾದಗಳ ಸಂವಿಧಾನದಲ್ಲಿ ಸಕ್ರಮತೆಯನ್ನು ತಂದಿದ್ದಾರೆ. ಕರ್ನಾಟಕ, ಮಹಾರಾಷ್ಟ್ರ, ಆಂಧ್ರಗಳಲ್ಲಿಯೂ ಶಿವಯೋಗದ ಬೆಳಕನ್ನು ನೀಡಿದ ಎನಿತೋ ಜನಸ್ವಾಮಿಗಳು ಶಿವಯೋಗಮಂದಿರದ ಸಾಧಕರಾಗಿ ಸಾಧನೆ ಮಾಡಿದವರಾಗಿದ್ದಾರೆ. ಶಿವಯೋಗಮಂದಿರದಲ್ಲಿಯೇ ಸಾಧಕರಾಗಿ ಜಗದ್ಗುರು ಪೀಠವನ್ನು ಅಲಂಕರಿಸಿದ ಕೆಲವರು ನಾಡಿನ ರಾಷ್ಟ್ರದ ಶೈಕ್ಷಣಿಕ, ಸಾಹಿತ್ಯಿಕ, ಸಾಮಾಜಿಕ ಕ್ರಾಂತಿಯನ್ನು ಮಾಡಿದ್ದಾರೆ. ಜನರಲ್ಲಿ ಧರ್ಮ ಜಾಗೃತಿಯನ್ನು ಮೂಡಿಸಿದ್ದಾರೆ. ಶಿವಯೋಗಮಂದಿರದಿಂದ ಸಮಾಜಕ್ಕೆ ಆದ ಅನುಕೂಲತೆಗಳು ಒಂದಲ್ಲ, ಎರಡಲ್ಲ ಅನಂತವಾಗಿವೆ. ಧಾರ್ಮಿಕವಾಗಿ ಅದೆಷ್ಟೋ ಪ್ರಗತಿಯಾಗಿದೆ. ಲಿಂಗ ಭಸ್ಮಗಳಲ್ಲಿ ಶಾಸ್ತ್ರೋಕ್ತತೆ, ಶುದ್ಧತೆಯನ್ನು ತಂದಿದೆ. ಧರ್ಮಗುರುಗಳ ಆಚರಣೆಯನ್ನು ರೂಪಿಸಿದೆ. ಮಂತ್ರ ಮಹಿಮೆಯನ್ನೊಗ್ಗೂಡಿಸಿದೆ. ಕಾಯಕವೇ ಕೈಲಾಸವೆಂದು ಸಾರಿದೆ. ಲೌಕಿಕ ಉದ್ಧಾರಕ್ಕೆ ರಾಷ್ಟ್ರೀಯ ಭಾವನೆಯನ್ನು ತುಂಬಿದೆ. ಸರ್ವಧರ್ಮದವರನ್ನು ಪುರಸ್ಕರಿಸಿದೆ. ಇಲ್ಲಿಂದ ತಯಾರಾದವರು ದಕ್ಷಿಣ ಭಾರತದ ಮಠಮಾನ್ಯಗಳಿಗೆಲ್ಲ ಅಧಿಕಾರಿಗಳಾಗಿ ಸಮಾಜದಲ್ಲಿ ನಾನಾ ರೀತಿ ಸೇವೆ ಸಲ್ಲಿಸಿದ್ದಾರೆ, ಪ್ರಗತಿ ಸಾಧಿಸಿದ್ದಾರೆ. ಈ ಸಂಸ್ಥೆಯಿಂದ ಶಿವಯೋಗಿಗಳು, ಕವಿಗಳು, ಭಾಷಣಕಾರರು, ಲೇಖಕರು, ಕೀರ್ತನಕಾರರು, ಪುರಾಣಿಕರು, ಪಂಡಿತರು, ಸಂಶೋಧಕರು, ವೈದಿಕರು, ಸಂಗೀತ ವಿಶಾರದರು, ವೈದ್ಯರು ಹೀಗೆ ಅನೇಕರು ಅನೇಕ ಕಲೆಗಳಲ್ಲಿ ಯಶವನ್ನು ಸಂಪಾದಿಸಿದ್ದಾರೆ. ನಾಡಿನಲ್ಲಿ ಕುಮಾರ ಶಿವಯೋಗಿಗಳ ಶಿಷ್ಯ ಸಂಪತ್ತು ಹೆಚ್ಚಿದೆಯೆಂದು ಹೇಳಿದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ.

ಶಿವಯೋಗಮಂದಿರ ಸಂಸ್ಥೆಯ ಗುರಿ ಆ ಹೆಸರಿನಲ್ಲಿಯೇ ಅರ್ಥವಾಗುತ್ತಿದೆ. ಸದುದ್ದೇಶದಿಂದ ಸಂಸ್ಥಾಪಿತವಾದ ಈ ಸಂಸ್ಥೆಗೆ, ಚ್ಯುತಿಯಿಲ್ಲ ಇಂತಹ ಸಂಸ್ಥೆಯನ್ನು ಹೋಲುವ ಮತ್ತೊಂದು ಸಂಸ್ಥೆ ನಾಡಿನಲ್ಲಿ ಕಾಣಲಾರದು. ಆಶ್ರಮಗಳ ಧ್ಯೇಯ ಧೋರಣೆಗಿಂತಲೂ ವಿಶಿಷ್ಟವಾದ ಯೋಗ್ಯತೆ ವಿಶಾಲತೆಯನ್ನು ಪಡೆದಿದೆ. ಈ ಸಂಸ್ಥೆ ೧೬ನೆಯ ಶತಮಾನದಲ್ಲಿದ್ದ ಮಹಾಶಿವಶರಣರಾದ ಘಟ್ಟಿವಾಳಯ್ಯಗಳು ತಮ್ಮ ಕಾಲಜ್ಞಾನದಲ್ಲಿ ಭವಿಷ್ಯ ನುಡಿದಂತೆ, ಈ ಸಂಸ್ಥೆ ಜನ್ಮ ತಾಳಿದೆ, ಕಾರ್ಯ ಮಾಡಿದೆ. ಜೀವಂತ ವ್ಯಕ್ತಿಗಳನ್ನು ಶಕ್ತಿರೂಪದಲ್ಲಿ ನಾಡಿನ ತುಂಬೆಲ್ಲ ಹರಿಬಿಟ್ಟು, ಸಮಾಜವನ್ನು ಜಾಗೃತಗೊಳಿಸಿದೆ.

ಆ ಕಾಲಜ್ಞಾನ ಇಂತಿದೆ.

"ಗಿಡಮಾಗಡಿ ಎಂಬ ಪುರದ ಜಂಗಮದೇವ
ಮೃಡಕಣಾ ಭಿಕ್ಷವ ಬೇಡ್ಯಾನು.

ಪೊಡವಿಯೆ ಬಾಗಿ ನೀಡಲು ಆತನು
ದೃಢದಿಂದ ನೀಡಿಸಿಕೊಂಡಾನು.
ಮಲಾಪಹಾರಿಯು ತೀರದಿ ವಿರಕ್ತ ಜಂಗಮನೊಬ್ಬ
ನಲಿವಿಂದೆ ಹುಚ್ಚನೆನಿಸ್ಯಾನು
ಲೋಲಜನಗಳು ಹೆಸರನೆ ಇಟ್ಟಾರು
ಸ್ಥಲದೊಳು ಹೊಳಿಸಿಕೊಂಡಾನು.

ಇದರಿಂದ ಶಿವಯೋಗಮಂದಿರ ಸ್ಥಾಪನೆಯು ಸಿದ್ಧರ, ವಿಶ್ವ ಮಹತ್ವ ಹಾಗೂ ಈಶ್ವರೀಯ ಸಂಕೇತ ಮತ್ತು ಪುರಾತನರ ಅಪೇಕ್ಷೆಯೊಡನೆ ಕೂಡಿಕೊಂಡಿದೆ ಎಂಬುದು ಅರ್ಥವಾಗುವದಿಲ್ಲವೆ?

*ಶಿವಯೋಗಮಂದಿರದ ಮುಖ್ಯ ಉದ್ದೇಶಗಳು

೧. ಶಕ್ತಿ ವಿಶಿಷ್ಟಾದ್ವೈತ ಸಿದ್ಧಾಂತ (ವೀರಶೈವ) ಮತದ ಶಿವಯೋಗ ಸಾಧಕರು ಯೋಗ್ಯರಾದವರಿಗೆ ಅಧ್ಯಾತ್ಮೋನ್ನತಿಯಾಗುವಂಥ ಮಂತ್ರ, ಲಯ, ಹಠ, ರಾಜ ಮತ್ತು ಶಿವಯೋಗ ಮುಂತಾದ ಸಾಧನಗಳ ಶಿಕ್ಷಣವನ್ನು ಅಧಿಕಾರ ವರಿತು ಕೊಡುವದು.

೨. ವೇದಾಗಮೋಪನಿಷತ್ತುಗಳಿಂದಲೂ ಅವುಗಳನ್ನನುಸರಿಸಿದ ಸಂಸ್ಕೃತ ಪುರಾತನೋಕ್ತಿಗಳಿಂದಲೂ, ಭಾಷಾಪ್ರಬಂಧಾದಿ ಕನ್ನಡ ಗ್ರಂಥಗಳಿಂದಲೂ ಶಿವಾನುಭವ ಶಾಸ್ತ್ರಜ್ಞಾನವನ್ನು ಮಾಡಿಕೊಡುವದು.

೩. ಸ್ವಮತ ಸಿದ್ಧಾಂತ ಜ್ಞಾನವನ್ನು ಮಾಡಿಕೊಡುವದಲ್ಲದೆ ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಮುಂತಾದ ಇತರ ವೈದಿಕ ಮತಗಳ ಜ್ಞಾನವನ್ನು ಸಹ ತುಲನಾತ್ಮಕ ದೃಷ್ಟಿಯಿಂದ ಮಾಡಿಕೊಡುವದು. ಇದಕ್ಕಾಗಿ ಬೇಕಾಗುವ ಗ್ರಂಥಗಳ ಜ್ಞಾನವನ್ನೂ, ನ್ಯಾಯ, ವ್ಯಾಕರಣ, ಸಾಂಖ್ಯ, ಯೋಗ ಮೀಮಾಂಸಾದಿ ಶಾಸ್ತ್ರಾಧ್ಯಯನವನ್ನೂ ಸಾಧ್ಯವಾದ ಮಟ್ಟಿಗೆ ಮಾಡಿಸುವದು.

೪. ವಿರಕ್ತಮಠದ ಸಿಂಹಾಸನಾಧಿಕಾರಕ್ಕೂ, ಗುರುಸ್ಥಲದ ಮಠದ ಪಟ್ಟ ಚರಂತಿ ಅಧಿಕಾರಕ್ಕೂ ಯೋಗ್ಯವಾಗುವಂತೆ ಯೋಗ್ಯ ವಟುಗಳಿಗೆ ಶಿಕ್ಷಣ ಕೊಡುವದು.

೫. ಸ್ವಮತ, ಪರಮತ, ಧಾರ್ಮಿಕ ಹಾಗೂ ತಾತ್ವಿಕ ಹಸ್ತಲಿಖಿತ ಹಾಗೂ ತಾಡವೋಲೆ ಮುಂತಾದ ಗ್ರಂಥಗಳ ಸಂಗ್ರಹಾಲಯವನ್ನು ಸ್ಥಾಪಿಸುವದು.

೬. ಧರ್ಮಗ್ರಂಥಗಳ ಪರಿಶೋಧನ ಮಾಡುವದು, ಮುದ್ರಿಸುವದು ಮತ್ತು ಪ್ರಸಾರ ಮಾಡುವದು.

೭. ಪೂರ್ವ ಪರಂಪರೆಗನುಸರಿಸಿದ ಶಾಸ್ತ್ರಸಮ್ಮತವಾದ ವೀರಶೈವರ

---

* ಶ್ರೀ ವೀರಶೈವ ಶಿವಯೋಗಮಂದಿರ ಪ್ರಥಮ ನಿಯಮಾವಳಿ ([illegible])

ಧರ್ಮಾಚರಣೆಗಳು ಹಾಗೂ ಮೂಲತತ್ವಗಳು ಪ್ರಚಾರದಲ್ಲಿ ಬರುವಂತೆ ಯೋಗ್ಯವಾದ ಗ್ರಂಥಗಳನ್ನು ಬರೆಯಿಸುವದು ಮತ್ತು ಅಂಥ ಗ್ರಂಥಗಳನ್ನು ಬರೆಯುವಂಥವರಿಗೆ ಉತ್ತೇಜನ ಕೊಡುವದು.

೮. ಉಪದೇಶಕರಿಂದ ಧರ್ಮಜಾಗೃತಿಯನ್ನುಂಟು ಮಾಡುವದು ಮತ್ತು ಪ್ರಮಥರ ಚರಿತ್ರೆ ಅವರ ವಚನ ಹಾಗೂ ಅವರ ಗದ್ಯಪದ್ಯಾತ್ಮಕ ಗ್ರಂಥಗಳನ್ನು ಪ್ರಸಿದ್ಧಿಸುವದು.

೯. ಶಾಸ್ತ್ರೋಕ್ತ ರೀತಿಯಿಂದ ಶುದ್ಧವಾದ ಲಿಂಗ ಭಸ್ಮಗಳನ್ನು ತಯಾರಿಸುವದು ಮತ್ತು ಹಾಗೆ ತಯಾರು ಮಾಡುವವರಿಗೆ ಉತ್ತೇಜನ ಕೊಡುವದು. ಭಸ್ಮದ ಕೆಲಸಕ್ಕೆ ಬೇಕಾಗುವ ಗೋಮಯದ ಸಂಗ್ರಹದ ದೆಸೆಯಿಂದ ಗೋವುಗಳ ರಕ್ಷಣೆ ಕೊಡುವದು.

ಸಾಮಾನ್ಯ ಉದ್ದೇಶಗಳು:

೧೦. ಶಿವಧರ್ಮಕ್ಕನುಸರಿಸಿದ ಭಜನೆ, ಕೀರ್ತನ, ಪುರಾಣಾದಿಗಳಿಗೆ ಅನುಕೂಲವಾಗುವ ಸಂಗೀತ ಶಿಕ್ಷಣ ಕೊಡುವವರ ದೆಸೆಯಿಂದ ಸಂಗೀತ ಶಾಲೆಯನ್ನು ಸ್ಥಾಪಿಸುವದು; ಇದರಲ್ಲಿ ಸದ್ಗುಣಿ ಸದಾಚಾರಿಗಳಾದ ವಿದ್ಯಾರ್ಥಿಗಳನ್ನು ತೆಗೆದುಕೊಂಡು ಶಿಕ್ಷಣ ಕೊಡುವದು: ಅಂಗಹೀನರಿಗೆ ಶಕ್ತ್ಯಾನುಸಾರವಾಗಿ ಸಂಗೀತ ಶಿಕ್ಷಣ ಕೊಡುವದು: ಅನುಕೂಲವರಿತು ಪರ ಮತಸ್ಥರಿಗೆ ಸಹ ಸಂಗೀತ ಶಿಕ್ಷಣ ಕೊಡುವದು.

೧೧. ಅಧ್ಯಕ್ಷರಾದ ಸ್ವಾಮಿಗಳ ಅಥವಾ ಟ್ರಸ್ಟ ಕಮೀಟಿಯವರ ಅನುಕೂಲವರಿತು ಸಂಸಾರಿಗಳಾಗತಕ್ಕ ವೀರಶೈವ ಬ್ರಹ್ಮಚಾರಿಗಳಿಗೂ, ಭಕ್ತ ಮಾಹೇಶ್ವರರ ಮಕ್ಕಳಿಗೂ, ನೈತಿಕ, ಧಾರ್ಮಿಕ ಮತ್ತು ಆಧ್ಯಾತ್ಮಿಕ ಜ್ಞಾನವಾಗುವಂಥ ಶಿಕ್ಷಣ ಕೊಡುವದು.

೧೨. ಗೃಹಸ್ಥಾಶ್ರಮದಿಂದ ನಿವೃತ್ತಿಯನ್ನು ಪಡೆದು ಸ್ವಧರ್ಮಾಚರಣೆಗೆ ಸರಿಯಾಗಿ ನಡೆಯಬೇಕೆಂಬ ಇಚ್ಛೆಯುಳ್ಳ ಮುಮುಕ್ಷುಗಳಿಗೆ ಸಾಧ್ಯವಾದ ಮಟ್ಟಿಗೆ ಅನುಕೂಲ ಮಾಡುವದು.

೧೩. ನಿಜವಾದ ಧರ್ಮತತ್ವಗಳಿಗನುಸರಿಸಿ ಗ್ರಂಥಗಳನ್ನು ಪ್ರಸಿದ್ಧ ಮಾಡುವವರಿಗೂ ವೀರಶೈವ ಧರ್ಮತತ್ವಗಳನ್ನು ಜನರ ಮನಸ್ಸಿನ ಮೇಲೆ ಪರಿಣಾಮವಾಗುವಂತೆ ವಕ್ತೃತ್ವ ಕಲಾಸಂಪಾದನ ಮಾಡತಕ್ಕವರಿಗೂ ಪರೀಕ್ಷಿಸಿ ಅನುಕೂಲವರಿತು ಉತ್ತೇಜನ ಕೊಡುವದು.

೧೪. ವೀರಶೈವರಲ್ಲಿ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಮತ್ತು ನೈತಿಕ ವಿಷಯಗಳ ಜಾಗೃತಿಯಾಗುವಂತೆ ಮಾಸಿಕ, ಸಾಪ್ತಾಹಿಕ ಮತ್ತು ದೈನಿಕ ಪತ್ರಗಳನ್ನು ಹೊರಡಿಸುವದು.

೧೫. ಸ್ವಧರ್ಮ, ಸ್ವಮತಗಳ ಇತಿಹಾಸದ ಪರಿಶೋಧನಕ್ಕೆ ಉಪಯೋಗವಾಗುವಂತೆ ಅನುಕೂಲವರಿತು ಶಿಲಾಲೇಖ, ತಾಮ್ರಪಟ ಮುಂತಾದವುಗಳನ್ನು ಶೋಧ ಮಾಡಿ ಸಂಗ್ರಹಿಸುವದು.

೧೬. ಹಿಂದುಸ್ತಾನದ ಆಯಾಯ ಭಾಗಗಳಲ್ಲಿ ಮತ್ತು ಇಂಗ್ಲಂಡ, ಅಮೇರಿಕಾ, ಜರ್ಮನಿ, ಫ್ರಾನ್ಸ ಮುಂತಾದ ಪರರಾಷ್ಟ್ರಗಳಲ್ಲಿ ಆಗಾಗ್ಗೆ ಕೂಡುವ ಧಾರ್ಮಿಕ ಪರಿಷತ್ತುಗಳಿಗೆ ಹಾಗೂ ಅಲ್ಲಿರುವ ಧಾರ್ಮಿಕ ಸಂಸ್ಥೆಗಳಿಗೆ ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತದ ತತ್ವಗಳನ್ನು ಪ್ರಸಾರ ಮಾಡುವದಕ್ಕೋಸ್ಕರ ಈ ಸಂಸ್ಥೆಯ ವತಿಯಿಂದ ಪ್ರತಿನಿಧಿಗಳನ್ನು ಅಥವಾ ಲೇಖನಗಳನ್ನು ಕಳುಹಿಸುವದು ಮತ್ತು ಹೋಗಲಿಚ್ಛಿಸುವ ಯೋಗ್ಯ ಜನರಿಗೆ ಸಾಧ್ಯವಿದ್ದ ಮಟ್ಟಿಗೆ ಅನುಕೂಲವರಿತು ಅನುಕೂಲತೆಗಳನ್ನು ಒದಗಿಸಿಕೊಡುವದು.

೧೭. ಶಿವಯೋಗ ಸಾಧಕರ ವಸತಿಸ್ಥಾನವೆಂದು ಗೊತ್ತು ಮಾಡಲ್ಪಟ್ಟ ಸ್ಥಾನದಲ್ಲಿ ಕುಟುಂಬಸ್ಥ ಸಂಸಾರಿಗಳ ವಸತಿಗೆ ಆಸ್ಪದ ಕೊಡದಂತೆ ನಿರ್ಬಂಧಿಸುವದು.

ಈ ಎಲ್ಲ ಉದ್ದೇಶಗಳ ಪೂರ್ತಿಗಾಗಿ ಶಿವಯೋಗ ಮಂದಿರವು ಐವತ್ತು ವರ್ಷಗಳಿಂದ ಸಾಧ್ಯವಿದ್ದ ಮಟ್ಟಿಗೂ ಕಾರ್ಯಮಾಡಿದೆ. ಈಗ ಸಮಾಜದಲ್ಲಿ ಕಂಡು ಬರುತ್ತಿರುವ ಜಾಗ್ರತಿಗೆ ಬಹುಮುಖವಾಗಿ ಶಿವಯೋಗಮಂದಿರವೇ ಕಾರಣವಾಗಿದೆ. ಇಲ್ಲಿಂದ ತಯಾರಾದ ಮಠಾಧಿಕಾರಿಗಳು, ಸಂಗೀತಗಾರರು, ಶಿವಕೀರ್ತನಕಾರರು, ಶಿಕ್ಷಕರು, ಶಾಸ್ತ್ರಿಗಳು ಸಮಾಜದಲ್ಲಿ ಅನೇಕ ಮುಖವಾಗಿ ಸೇವೆ ಸಲ್ಲಿಸಿ ಈ ಉದ್ದೇಶಗಳನ್ನು ಕಾರ್ಯಗತಗೊಳಿಸಿ ಮಂದಿರಕ್ಕೆ ಕೀರ್ತಿಯನ್ನು ತಂದವರುಂಟು.

ಶಿವ ಶಂಭೋ ಶಂಕರ

ಶಿವ ಶಂಭೋ ಶಂಕರ ಸಾಂಬ। ತವೆಯಾವಗಂ ಪೊರೆಯೆಮ್ಮನು ||ಪ||


ಅಜ್ಞಾನದೆಸೆಯುರು ನಾವು। ಸುಜ್ಞಾನವನು ಕೊಟ್ಟೀಗ
ಸರ್ವಜ್ಞ ಮೂರ್ತಿಯೆ ಕಾಯ್ವೆ ||೧||

ಕ್ಷಿತಿಯೊಳು ವೀರಶೈವ ಮತಮೇಲಾಗುವ ತೆರದಿ
[illegible]ಪೆಯನು ಮಾಡೈ ||೨||


ಶಿವಯೋ[illegible]ನಸ್ಥೈವ ಶಿವಯೋಗ ಮಂದಿರವನ್ನು
ತವೆ ಬೇಗ ವೃದ್ಧಿಗೆ ತಾರೈ ||೩||

—ಶ್ರೀ. ಕುಮಾರ ಶಿವಯೋಗಿಗಳು, ಹಾನಗಲ್ಲ.

ಶ್ರೀ ಜಗದ್ಗುರು ಮೂ



ರಮಠ,



ವಿಶ್ವಕಾರುಣ್ಯಕ್ಕೆ, ವಿಶ್ವಕಲ್ಯಾಣಕ್ಕೆ
ವಿಶ್ವಸಮತೆಗೆ ಬಸವ ನೀಡಿರುವ ತತ್ತ್ವ
ವಿಶ್ವಕ್ಕೆ ಜ್ಯೋತಿ ಪೂರ್ಣಜ್ಞ.

ಕೊಲ್ಲುವದು ಪಶುಧರ್ಮ ಬಲ್ಲವರು ಪೇಳಿಪರು
ಕೊಲ್ಲದಲೆ ಇರುವ ಧರ್ಮವದು ನಿಜಧರ್ಮ
ಎಲ್ಲಕ್ಕು ಮಿಗಿಲು! ಪೂರ್ಣಜ್ಞ.

ಆರು ವರ್ಣದ ಪಕ್ಷಿ ಮೂರು ವರ್ಣದ ಗೂಡ
ಭಾರಿ ಮರದಲ್ಲಿ ಕಟ್ಟಿ ಮರಿ ಇಟ್ಟಿಹುದು
ಪಾರಮಾರ್ಥವಿದು! ಪೂರ್ಣಜ್ಞ.

ಆಧುನಿಕ ಅಣ್ವಸ್ತ್ರ ಮೇದಿನಿಯ ತುತ್ತಲಿದೆ
ಸಾಧುಗುಣ ಬೆಳೆಯದಿರೆ, ವಿಜ್ಞಾನದೊಡನೆ
ಮೇದಿನಿಗೆ ಪ್ರಳಯ! ಪೂರ್ಣಜ್ಞ.

ಬಿದ್ದವರನೆತ್ತುವದು ಶುದ್ಧಮಾನವಧರ್ಮ
ತಿದ್ದಿ ಜನಮನದ ಸಂಸ್ಕಾರ ಕೊಡುವವನು
ಸದ್ಧರ್ಮಿಯಯ್ಯಾ ಪೂರ್ಣಜ್ಞ.

ಶ್ರೀ ಮೂ.ಜ.ಗಂ.